1948

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 9—1—1948 [ಸಂಚಿಕೆ 52]

ಕಾಶ್ಮೀರ ಪ್ರಶ್ನೆಯಲ್ಲಿ ೩ನೇ ಪಕ್ಷದ ಕೈವಾಡ

ಭದ್ರತಾ ಮಂಡಳದಲ್ಲಿ ನ್ಯಾಯ ತೀರ್ಮಾನ

ಕಾಶ್ಮೀರದ ಪ್ರಶ್ನೆ ಈಗ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಲಕ್ಕೊಯ್ಯಲ್ಪಟ್ಟಿದೆ. ಭಾರತದ ಅತಿ ಸುಂದರ ಕಣಿವೆ ಪ್ರದೇಶ ಭೀಕರ ನರಕಯಾತನೆಗೊಳಗಾಗಿದೆ. ಪ್ರಕೃತಿ ಸೌಂದರ್ಯದ ಬೀಡೆನಿಸಿದ ಆ ನಾಡು ಮಾನವನ ಸ್ವಭಾವದ ಕ್ರೌರ್ಯ ಕಾಠಿಣ್ಯತೆಗೆ ಈಡಾಗಿದೆ. ಭಾರತೀಯರ ಅಂತಃ ಕಲಹವು ಮೂರನೇ ಪಕ್ಷದವರ ಕೈವಾಡವಿಲ್ಲದೆ ತೀರ್ಮಾನಗೊಳ್ಳಲಾರದೆಂಬುದಕ್ಕೆ ಮತ್ತೊಂದು ನಿದರ್ಶನವು ಜಗತ್ತಿನ ಕಣ್ಣ ಮುಂದಿಟ್ಟಂತಾಯಿತು.

ಇದಕ್ಕೆ ಮಹಾತ್ಮರು ತಮ್ಮ ಪ್ರಭಾವಶಾಲಿ ವಿರೋಧವನ್ನು ಸುಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ "ಪಾಕಿಸ್ತಾನ ಮತ್ತು ಭಾರತಗಳು ಸದಾ ಇನ್ನೊಬ್ಬರ ಮೇಲೆ ಹೊಂದಿಕೊಂಡಿರುವಂತಾಗಬೇಕೆ? ಅದೆಷ್ಟು ಕಾಲದ ತನಕ ಇವರು ಕಚ್ಚಾಡಿಕೊಂಡಾರು?" ಎಂದು ಮಹಾತ್ಮರು ದುಃಖೋದ್ಗಾರವನ್ನು ಹೊರಡಿಸಿದ್ದಾರೆ.

ಪಾಕಿಸ್ತಾನ ಸಾಧಕರು ತಮ್ಮ ಆಶೆ ಕೈಗೂಡಿದ ಮರುದಿನದಿಂದಲೇ ನೆರೆಯವರ ಮೇಲೆ ಉರಿದುಬೀಳುವ ಧೋರಣೆಯನ್ನಾರಂಭಿಸಿದರು. ಮೊದಲು ಭೋಪಾಲದ ಕುರಿತು ಬಲವಾದ ದ್ವೇಷ ಪ್ರಚಾರ ನಡೆಯಿತು. ಆದರೆ ಅಲ್ಲಿನ ನವಾಬರಲ್ಲಿ ಸಕಾಲದಲ್ಲಿ ವಿವೇಕೋದಯವಾಯಿತು. ಅದ್ದರಿಂದ ಬಹುಸಂಖ್ಯಾಕ ಜನತೆಯ ಕೋರಿಕೆಯಂತೆಯೂ ಭೌಗೋಳಿಕ ಸ್ಥಾನ ಸಂಬಂಧದ ಸತಾರ್ಕಿಕ ನೈಜತೆಯ ನೈತಿಕ ಒತ್ತಾಯಕ್ಕೂ ನವಾಬರು ಭಾರತದ ಒಕ್ಕೂಟಕ್ಕೆ ಸೇರಿ ಒಂದು ದುರಂತವನ್ನು ತಪ್ಪಿಸಿದರು.

ಮತ್ತೆ ಪಾಕಿಸ್ತಾನ ಜಗಳಗಳ ಗಂಟಿನಕ್ಕೆ ಜುನಾಗಡದಲ್ಲಿ ಉತ್ತಮ ಕ್ಷೇತ್ರ ಕಂಡುಕೊಂಡಿತು. ತನಗೂ ಆ ಸಂಸ್ಥಾನಕ್ಕೂ ೩೦೦ ಮೈಲಿನ ವಿದೇಶಿ ಪ್ರದೇಶವಿದ್ದರೂ ಚಾಣಾಕ್ಷತನದ ಕುತರ್ಕದಿಂದ ಜುನಾಗಡದ ಮೇಲೆ ತನಗಿರುವ ಘಟನಾತ್ಮಕ ಸ್ವಾಮಿತ್ವದ ಹಕ್ಕನ್ನು ಪಾಕಿಸ್ತಾನವು ಪ್ರತಿಪಾದಿಸಿತು. ಕೊನೆಗೆ ಅಲ್ಲಿನ ಜನತೆಯೇ ಸ್ಥೈರ್ಯದಿಂದ ಹೋರಾಡಿತೆಂಬಂತೆ ಆ ಸಂಸ್ಥಾನವನ್ನು ಯಾರ ಸಹಾಯವಿಲ್ಲದೆ ವಶಪಡಿಸಿಕೊಂಡಾಗ ಎರಡನೇ ಸಮಸ್ಯೆಯೊಂದು ಶಾಂತ ರೀತಿಯಲ್ಲಿ ತೀರ್ಮಾನವಾಯಿತು.

ಆದರೆ ಕಾಶ್ಮೀರದಲ್ಲಿ ಪಾಕಿಸ್ತಾನದ ಕಲಹಪ್ರಿಯ ಧುರೀಣರಿಗೆ ಇನ್ನಷ್ಟು ಹೆಚ್ಚಿನ ಅನುಕೂಲತೆಗಳು ತೋರಿದವು. ಭೌಗೋಳಿಕವಾಗಿ ಕಾಶ್ಮೀರ ಪಾಕಿಸ್ತಾನದ ನೆರೆಕರೆಯ ಸಂಪರ್ಕವುಳ್ಳದ್ದು, ಪಾಕಿಸ್ತಾನಿಗಳ ಸಹಧರ್ಮೀಯರು ಅಲ್ಲಿ ಬಹುಸಂಖ್ಯಾಕರಾಗಿರುವರು ಪಾತ್ರವಲ್ಲ ಒಂದು ಕಾಲದಲ್ಲಿ ಆಳುವ ಮಹಾಸ್ವಾಮಿಯಿಂದಲೇ ಪ್ರೋತ್ಸಾಹಿಸಲ್ಪಟ್ಟ ಅಲ್ಲಿನ ಮುಸ್ಲಿಂ ಪರಿಷತ್ತಿನ ಬೆಂಬಲಿಗರು ವಿಶಾಲ ಸಂಖ್ಯೆಯಲ್ಲಿದ್ದು ಅವರು ತಮ್ಮ ಪ್ರತಿಬಿಂಬ ಸಂಸ್ಥೆಯಾದ ಮುಸ್ಲಿಂ ಲೀಗಿನ ಆಪ್ತ ಹಿತೈಷಿಗಳಾಗಿದ್ದರು. ಇದುದರಿಂದ ಪಾಕಿಸ್ತಾನಕ್ಕೆ ವಿಧೇಯವಾದ ಒಂದು ಪಂಚಮ ದಳವು ಅತ್ಯಂತ ಸಹಕಾರಿಯಾದ ಸೌಕರ್ಯವೇ ಆಯಿತು.

ಇಂದು ಕಾಶ್ಮೀರವನ್ನು ಕೆಲವು ದಾಳಿಗಾರರು ಆಕ್ರಮಣ ಮಾಡಿದರೆಂದು ಹೇಳಲಾಗಿದೆ. ಆದರೆ ಸಮಯ ನೋಡುವಂತೆ ಇವರ ಹಿಂದೆ ಪಾಕಿಸ್ತಾನದ ಫೌಜು ಭುಜ ಕೊಟ್ಟು ನಿಂತಿರುವುದು ಸುವ್ಯಕ್ತವಾಯಿತು.

ಸಹಧರ್ಮೀಯರ ರಕ್ಷಣೆಗೆ ಬಹಿರಂಗವಾದ ಸೈನ್ಯ ಸಜ್ಜತೆ ನಡೆಯಿತು. ಅಪಹೃತ ಸ್ತ್ರೀಯರೂ ಅವರಿಂದ ಒಡವೆ ಆಭರಣಗಳೂ ಬಹಿರಂಗ ಸಂತೆಗಳಲ್ಲಿ ಪ್ರದರ್ಶನಕ್ಕಿಡಲ್ಪಟ್ಟು ಭಾವೀ ದಾಳಿಗಾರರಿಗೆ ಬಲವಾದ ಮನಾಕರ್ಷಣೆ ಮಾಡಲಾಯಿತು. ಶಸ್ತ್ರಾಸ್ತ್ರಗಳೆನೋ ಹೇರಳ ಸಂಖ್ಯೆಯಲ್ಲಿ ಪಾಕಿಸ್ತಾನದ ಸೈನ್ಯ ಶಿಬಿರದಲ್ಲಿವೆ. ಅಂದ ಮೇಲೆ ಪವಿತ್ರ ಯುದ್ಧ ಮಾಡಲೇನಡ್ಡಿ? ಪೇಶಾವರದ ರಸ್ತೆಯ ಬದಿಗಳಲ್ಲಿ ಬೇಕಾದ ಶಸ್ತ್ರಾಸ್ತ್ರಗಳು ಲೈಸೆನ್ಸ್ ಇಲ್ಲದ ಮಾರಲ್ಪಡುತ್ತಿದ್ದವು.

ದಾಳಿಗಾರರ ಮತ್ತವರ ಆಂತರಿಕ ಹಿತೈಷಿಗಾರರ ಉಪಟಳವು ಮಿತಿಮೀರಿದಾಗ ಕಾಶ್ಮೀರ ರಾಜರು ಭಾರತ ಒಕ್ಕೂಟಕ್ಕೆ ಸೇರಿ ಸೈನ್ಯ ಸಹಾಯವನ್ನು ಕೋರಿದರೂ ಶೇಖ ಅಬ್ದುಲ್ಲರು ತಾತ್ಕಾಲಿಕ ಸರಕಾರದ ಮುಖ್ಯ ಪ್ರಧಾನರಾಗಿಯೂ ಮಾಡಲ್ಪಟ್ಟರು. ಕಾಶ್ಮೀರದ ಮುಸ್ಲಿಂ ಜನತೆಯ ಮೇಲೆ ಅಬ್ದುಲ್ಲರಿಗಿರುವಷ್ಟು ಹಿಡಿತ ಮತ್ತಾರಿಗೂ ಇಲ್ಲವೆಂಬುದಕ್ಕೆ ಅವರ ಕೈಕೆಳಗೆ ದಾಳಿಗಾರರನ್ನು ವಿರೋಧ ಏರ್ಪಡಿಸಲ್ಪಟ್ಟ ಪ್ರತಿಭಟಕ ಫೌಜುಗಳೇ ಸಾಕ್ಷಿಯಾಗಿವೆ.

ಪಾಕಿಸ್ತಾನದ ಪ್ರದೇಶವನ್ನು ನಿರಾತಂಕವಾಗಿ ದಾಟಿ ಬರುವ ದಾಳಿಗಾರರನ್ನು ತಡೆಯಬೇಕೆಂದು ಮೊದಲು ಭಾರತ ಸರಕಾರ ಭಿನ್ನವಿಸಿಕೊಂಡಿತು. "ಅವರು ತಮ್ಮ ಸಹಧರ್ಮೀಯರ ಮೇಲೆ ಡೋಗ್ರಾ ರಜಪೂತರಿಂದ ನಡೆಸಲ್ಪಡುವ ದಬ್ಬಾಳಿಕೆಯಿಂದ ಉದ್ರೇಕರಾಗಿ ತಡೆಲಸಾಧ್ಯವಾಗದಷ್ಟು ದೊಡ್ಡ ಹಿಂಡಾಗಿ ಹರಿಯುತ್ತಿರುವರು" ಎಂದು ಪಾಕಿಸ್ತಾನ ತನ್ನ ಅಸಮರ್ಥತೆಯನ್ನು ತೋರಿಸಿತು. ಜಗತ್ತಿನ ಅತಿ ದೊಡ್ಡ ಇಸ್ಲಾಮಿ ರಾಷ್ಟ್ರವು ಈ ತರದ ಅಂತರ್ಗತ ಪಕ್ಷಪಾತ ತೋರಿದ್ದು ಯಾರಿಗೂ ಕೌತುಕವನ್ನುಂಟುಮಾಡಲಿಲ್ಲ.

ಶೇಕ್ ಅಬ್ದುಲ್ಲರು ಪಾಕಿಸ್ತಾನವು ಕಾಶ್ಮೀರದ ಮೇಲೆ ಕೈಕೊಂಡದ್ದೊಂದು ಯುದ್ಧವೇ ಎಂದು ತಿಳಿಸುತ್ತಾ "ಕಾಶ್ಮೀರಿಗಳು ಪಾಕಿಸ್ತಾನಕ್ಕೆ ಸೇರುವರೋ ಇಲ್ಲವೆ ಹಿಂದುಸ್ತಾನಕ್ಕೆ ಸೇರುವರೋ ಎಂಬುದು ಇತ್ಯರ್ಥಿಸಲು ಬಾರಾಮುಲ್ಲಾದಲ್ಲಾದ ಮಸೀದಿಗಳ ನಾಶವನ್ನೂ, ಅಲ್ಲಿ ಸುಟ್ಟು ಕೊರಾನಗಳನ್ನೂ ನೋಡಿದರೆ ಸಾಕು" ಎಂದು ಗದ್ಗದ ಕಂಠದಿಂದ ನುಡಿದರು. ಇಸ್ಲಾಮ ಧರ್ಮ ರಕ್ಷಣೆಯ ಸ್ಥೂಲ ನಿದರ್ಶನವೊಂದನ್ನವರು ಜಗತ್ತಿಗೆ ತೋರಿಸಿಕೊಟ್ಟರು.

ಹಿಂದೀ ಸೈನ್ಯಗಳು ತಮ್ಮ ಕರ್ತವ್ಯವನ್ನು ಯಥಾಸಾಧ್ಯವಾಗಿ ನೆರವೇರಿಸಿ ದಾಳಿಗಾರರನ್ನು ಉರಿಗಡಿಯ ತನಕ ಹಿಮ್ಮೆಟ್ಟಿಸಿದಾಗ ಚಳಿಗಾಲವು ಪ್ರಾಪ್ತವಾಗಿ ಅಪ್ರಾಕೃತಿಕ ಮನೋಲಕ್ಷಣದ ಕ್ರೂರ ಗದ್ದಿಗಾರರುಂಡ ಸಂಗಡಿಗರಿಗೆ ಪ್ರಕೃತಿದತ್ತ ವಿಷಯ ಅಸದೃಶವಾದ ರಕ್ಷಣೆ ಸಿಕ್ಕಿತು. ಹಿಮದಿಂದ ಭಾರತದ ಸೈನ್ಯದ ಚಟುವಟಿಕೆ ನಿಲ್ಲಿಸಲ್ಪಟ್ಟಿತು. ದಾಳಿಗಾರರಿಗೆ ಉಸಿರು ಬಿಡಲು ಸಾಕಷ್ಟು ಸಮಯವು ಶಸ್ತ್ರಾಸ್ತ್ರ ಪಡಕೊಳ್ಳಲು ಬೇಕಾದಷ್ಟು ಪುರುಸೊತ್ತೂ ಸಿಕ್ಕಿತು. ಈ ಹವಾಮಾನದಲ್ಲಿ ದರೋಡೆ ಮಾಡಲು ನಿಷ್ಣಾತರಾದ ಆ ಜನರು ಪಾಕಿಸ್ತಾನಿಗಳ ಸಹಾನುಭೂತಿ ಪರ ಸಹಾಯ ಹೊಂದಿ ಅತ್ಯಾಧುನಿಕ ಶಸ್ತ್ರಾಸ್ತ್ರ ಸುಸಜ್ಜಿತರಾಗಿ ಪುರುದಾಳಿಯನ್ನಾರಂಭಿಸಿದರು.

ಪಾಕಿಸ್ತಾನದ ಪಾತ್ರವು ಈ ದಾಳಿಯಲ್ಲಿ ಸಾಕಷ್ಟು ಸ್ಪಷ್ಟವಾಗಿ ಯೋಗ್ಯ ದಾಖಲೆಗಳು ಸಿಕ್ಕಿದಾಗ ಕಳೆದ ತಿಂಗಳಲ್ಲಿ ಎರಡು ಬಾರಿ ಭಾರತ ಸರಕಾರವು ಪಾಕಿಸ್ತಾನಕ್ಕೆ ಬರೆಕೊಂಡಿತು. "ನಾವಿರ್ವರೂ ಕೂಡಿ ದಾಳಿಗಾರರನ್ನು ತಡೆಯೋಣ" ಎಂದವರ ಸೂಚನೆಯಿತ್ತು. ಆದರೆ ಈ ಅರಿಕೆಗಳು ಪಾಕಿಸ್ತಾನದ ಕಿವುಡು ಕಿವಿಯ ಮೇಲೆ ಬಿದ್ದು ಒಂದಕ್ಕೂ ಪ್ರತ್ಯುತ್ತರವೇ ಸಿಗದಿದ್ದಾಗ, ಭಾರತ ಸರಕಾರ ನೇರವಾಗಿ ತನ್ನ ಪ್ರತಿನಿಧಿಯ ಮೂಲಕ ಭದ್ರತಾ ಮಂಡಲಕ್ಕೆ ದೂರನ್ನೊಯ್ಯಿತು. ಬ್ರಿಟಿಷರು ಈ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿದ್ದಷ್ಟು ಸಹಾಯ ಮಾಡುವುದಾಗಿ ಆಶ್ವಾಸನ ಕೊಟ್ಟರು. ಬ್ರಿಟಿಷ್ ಸರಕಾರ ಪಾಕಿಸ್ತಾನಕ್ಕೆ 'ಕಾಶ್ಮೀರದಿಂದ ಅಲ್ಲಿ ಸೈನ್ಯವಿದ್ದರೆ ಹಿಂತೆಗೆದುಕೊಳ್ಳಿ' ಎಂದೂ ವಿನಂತಿಸಿದೆಯಂತೆ.

ಭದ್ರತಾ ಮಂಡಳದಲ್ಲಿ ಸಾಕ್ಷ್ಯ ಕೊಡಲು ಸ್ವತಃ ಕಾಶ್ಮೀರಸಿಂಹ ಅಬ್ದುಲ್ಲರು ಹೋಗಿರುವರು. ಜಮ್ಮು ಮತ್ತು ಕಾಶ್ಮೀರದ ಪ್ರಾಂತ್ಯಗಳಲ್ಲಿ ದಾಳಿಗಾರರು ಪಾಕಿಸ್ಥಾನದಿಂದ ನುಗ್ಗುತ್ತಿರುವರೆಂದೂ ಇದನ್ನು ತಡೆಯುವ ಬಗ್ಗೆ ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಭದ್ರತಾ ಮಂಡಳದ ಅಧ್ಯಕ್ಷ ಫೆರ್ನಾಂಡ್ ವಾಂಗನ ಹೋಮರು ಸಾರಿರುವರು. ಬ್ರಿಟಿಷ ಮಂತ್ರಿಮಂಡಳದ ಪ್ರಮುಖ ಸದಸ್ಯ ಫಿಲಿಪ್ ನೋಯೆಲ್ ಬೇಕರು ಕಾಶ್ಮೀರದ ಪರಿಸ್ಥಿತಿ ಚೆನ್ನಾಗಿ ಬಲ್ಲವರಿದ್ದುದರಿಂದ ಬ್ರಿಟಿಷ್ ಸರಕಾರ ಅವರನ್ನು ತಮ್ಮ ಪರವಾಗಿ ಕಳುಹಿಸಿದೆ.

ಈ ಮಂಡಳದ ಸಾಮರ್ಥ್ಯದಲ್ಲಿ ಭಾರತಕ್ಕೆ ವಿಶ್ವಾಸವಿದೆಯೆಂದರ್ಥವಲ್ಲ. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯರಾಷ್ಟ್ರವಾಗಿರುವುದರಿಂದ ಭಾರತವು ಅದು ತನ್ನ ಕರ್ತವ್ಯವೆಂದೆಣಿಸಿ ಈ ಘಟನೆಯನ್ನನುಸರಿಸಿದೆ. ವಿಶ್ವರಾಜಕಾರಣಿಗಳಿವರು ತನ್ನ ನಿರ್ದೋಷವನ್ನು ರುಜುವಾತು ಮಾಡಬೇಕೆಂಬ ಆತುರವೂ ಭಾರತ ಸರಕಾರಕ್ಕಿದೆ.

ಇಂದು ಕಾಶ್ಮೀರ ಸೈನ್ಯ ಚಟುವಟಿಕೆಗಳಿಗಾಗಿ ದಿನಂಪ್ರತಿ 4 ಲಕ್ಷ ರೂಪಾಯಿ ವ್ಯಯಿಸಲ್ಪಡುತ್ತಿದೆ. ಭಾರತೀಯ ತೆರಿಗೆದಾರರ ಮೇಲೊಂದಿದು ಹೊರೆಯೇ. ಸರಿ ಸಮರ್ಪಕ ತೀರ್ಮಾನವಾದರೆ ಇತ್ತಂಡದವರಿಗೂ ಹಿತಕರ.

ಕಾಶ್ಮೀರ ವಿಭಾಗ

ಇತ್ತೀಚೆಗೆ ಕಾಶ್ಮೀರವನ್ನು ಪಾಕಿಸ್ತಾನ ಹಿಂದೂಸ್ತಾನಗಳೊಳಗೆ ಹಂಚಿ ಹಾಕಬೇಕೆಂಬ ಮಾತುಕತೆ ನಡೆದಿದ್ದು ಅದು ಮಹಾತ್ಮರ ಕಿವಿಗೂ ಮುಟ್ಟಿದೆ. ಹಾಗೆ ಮಾಡದಿದ್ದರೆ ಯುದ್ಧ ಅನಿವಾರ್ಯವೆಂದೂ, ಮೌಂಟ್ ಬ್ಯಾಟನ್ನರೂ ರಾಜನಾಮೆ ಈಯುವರೆಂದೂ ಊಹಾಪೋಹೆಗಳೆದ್ದಿವೆ. "ಭಾರತವನ್ನು ವಿಭಾಗಿಸಿದ್ದೇ ಸಾಕು. ಕಾಶ್ಮೀರವನ್ನು ವಿಭಾಗಿಸಿದರೆ ಇತರ ಸಂಸ್ಥಾನಗಳನ್ನು ಹಾಗೆ ಮಾಡಬೇಡವೆ? ಹಾಗಾದರೆ ಈ ತುಂಡರಿಸುವಿಕೆಗೊಂದು ಅಂತ್ಯವಿಲ್ಲವಾಗುತ್ತದೆ" ಹೀಗೆಂದು ಮಹಾತ್ಮರು ನುಡಿದಿರುವರು.

ಮನೋಶ್ವಾಸದೊಂದು ಸ್ವರೂಪ ದರ್ಶನ

ಮಾನಸೀಕ ನಟನೆಯನ್ನು ತ್ಯಜಿಸಿರಿ

ಗೊತ್ತಿಲ್ಲವೆಂದರೆ ಪರಮ ಸುಖ

ನಾವೆಲ್ಲರೂ ನಟಪ್ರವೀಣರೆಂದಾಗ ನಿಮಗೆ ಆಶ್ಚರ್ಯವಾಗಬಹುದು. ನಟನೆ ನಮ್ಮ ಸ್ವಭಾವದ ಒಂದು ವಿಶಿಷ್ಟ ಲಕ್ಷಣವೇ ಆಗಿದೆ. ಬಡವರು ಶ್ರೀಮಂತರಂತೆ ನಟಿಸುವುದೂ, ಅಧಿಕಾರಿಗಳು ವಿಚಾರವಂತರಂತೆ ನಟಿಸುವುದೊ, ಮೂರ್ಖರು ವಿವೇಕಿಗಳಂತೆ ಭಾವಿಸುವುದು, ಅಪೂರ್ಣರು ಸಂಪೂರ್ಣರಂತೆ ವರ್ತಿಸುವುದು, ಎಲ್ಲವೂ ನಮ್ಮನ್ನು ನಟನಾ ಪ್ರವೀಣರನ್ನಾಗಿ ಮಾಡುತ್ತವೆ. ಈ ಅರ್ಥದಲ್ಲಿ ನಮ್ಮ ನಟಶಿರೋಮಣಿಗಳೂ ಇರುವರೆಂದರೆ ಅತಿಶಯವಿಲ್ಲ.

ಜೀವನ ಹೇಗೆ ಮಾಡುತಿದ್ದೀರಿ ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ನೀವು ಕೊಡುವ ಉತ್ತರಕ್ಕೂ ನಿಜ ಪರಿಸ್ಥಿತಿಗೂ ಅದೆಷ್ಟು ವ್ಯತ್ಯಾಸವಿದೆಯೆಂಬುದನ್ನು ಸ್ವಲ್ಪ ತುಲನೆ ಮಾಡಿರಿ! ನಿಮ್ಮ ಮಾಲಕರೊಡನೆ ವಿಚಾರಿಸಿದರೆ ಅವರ ಉತ್ತರವೆ ಬೇರೆ ಇರುತ್ತದೆ.

ಆಟ, ರಾಜಕೀಯ ರೇಶನ್, ಹವಾಮಾನ ಮೊದಲಾದುವುಗಳ ಕುರಿತು ನಡೆಯುವ ಚರ್ಚೆಗೆ ಸ್ವಲ್ಪ ಕಿವಿಕೊಡಿರಿ. ಈ ಚರ್ಚೆಯಲ್ಲಿ ಭಾಗವಹಿಸುವವನು ಅವುಗಳಲ್ಲಿನ ಪ್ರತಿಯೊಂದು ವಿಷಯದ ಕುರಿತೂ ತನಗೆ ಇನ್ನೊಬ್ಬನಿಗಿಂತ ಹೆಚ್ಚು ತಿಳಿದಿದೆಯೆಂದು ತೋರಿಸಲು ಪ್ರಯತ್ನಿಸುವುದನ್ನು ನೀವು ಕಾಣುವಿರಿ. 'ನನಗೆ ಆ ವಿಷಯ ಗೊತ್ತಿಲ್ಲ'ವೆಂದು ಒಬ್ಬರೂ ಹೇಳಲು ಸಿದ್ಧರಿಲ್ಲ. ನೀವು ಕೂಡಾ ನಿಮ್ಮ ಅಜ್ಞಾನ ಬಹಿರಂಗಪಡಿಸುವ ಇಷ್ಟಪಡುವುದಿಲ್ಲ.

ಇತರರಿಂದ ಮೆಚ್ಚುಗೆ ಪಡೆಯಲು ನಾವೆಲ್ಲರೂ ಆತುರಪಡುತ್ತೇವೆ. ಅದಕ್ಕಾಗಿಯೇ ನಾವು ಪ್ರವೀಣ ಆಟಗಾರರಂತೆಯೂ ಚತುರ ರಾಜಕೀಯ ವಿಷಯ ತಜ್ಞರಂತೆಯೂ ನಿಪುಣ ಆರ್ಥಿಕ ಶಾಸ್ತ್ರಗಾರರಂತೆಯೂ, ಅನುಭವಸ್ಥ ಹವಾಮಾನ ಜ್ಯೋತಿಷಗಳಂತೆಯೂ ನಾವು ನಟಿಸುವುದು, ನಾವು ಮೊದಲು ನಮಗೇ ಮೆಚ್ಚುಗೆಯಾಗುವ ಪಾತ್ರವೊಂದನ್ನು ಚುನಾಯಿಸಿ ಅದನ್ನು ಸಂಪೂರ್ಣವಾದ ಕೃತಕ ವರ್ತನೆಯಿಂದ ನಟಿಸಿ ಇತರರನ್ನೂ ಮೆಚ್ಚಿಸಲು ಪ್ರಯತ್ನಿಸುತ್ತೇವೆ.

'ಇತರರನ್ನು ಮಂಕು ಮಾಡಿದ್ದೇನೆಂದು ತಿಳಕೊಳ್ಳುವ ನಮ್ಮ ಸ್ವಂತ ಮಂಕುತನದಿಂದ ಉಂಟಾಗುವ ವಿನೋದವನ್ನು ನಾವೀ ಕೃತಕ ನಟನೆಯಿಂದ ಪಡೆಯುವ ಒಂದು ಆತ್ಮ ಸಂತೋಷವಲ್ಲದೆ ಬೇರೆ ಇಲ್ಲ"ವೆಂದು ಓರ್ವ ಪ್ರಖ್ಯಾತ ಮನೋಶಾಸ್ತ್ರಜ್ಞರು ತಿಳಿಸುತ್ತಾರೆ.

ನಮ್ಮ ನಿಜಾವಸ್ಥೆಯನ್ನು ಎದುರಿಸಿ ನೋಡಲು ನಾವೇ ಸಿದ್ಧರಿಲ್ಲವಾದುದರಿಂದಲೇ ನಾವೀ ನಟನಾ ಕಾರ್ಯಕ್ಕೆ ಹಿಡಿದು ತೂಗಾಡುತ್ತೇವೆ. ಯಾರೋ ಒಬ್ಬರು ಆಕರ್ಷಕ ಜೀವನ ಧ್ಯೇಯವುಳ್ಳವರೆಂದೂ, ಕಾರ್ಯನಿಷ್ಠೆಯವರೆಂದೂ ಪ್ರಾಮುಖ್ಯ ವ್ಯಕ್ತಿಗಳಾಗಿರುವರೆಂದೂ ಮತ್ತವರು ಮಾನವಕೋಟಿಯ ಕಡೆ ಉದಾರ ಮನಸ್ಕರಾಗಿರುವರೆಂದೂ ನಾವು ಕೆಲವು ಅಸತ್ಯವಾದ ಕಲ್ಪನೆಗಳನ್ನು ಮಾಡಿಕೊಂಡು ಅದೇ ಸತ್ಯವೆಂದು ತಿಳಿದು ನಂಬಿ ಅಂಥವುಗಳನ್ನು ಅನುಕರಿಸಲು ನಾವೂ ನಮ್ಮ ಚೈತನ್ಯವನ್ನು ಕ್ಷೀಣಿಸಿಕೊಳ್ಳುತ್ತೇವೆ.

ಆದರೆ ನಿಜವಾಗಿ ನಾವಿದರಿಂದ ಸುಖಿಗಳಾಗಲಾರೆವು. ಯಾವ ಕ್ಷಣದಲ್ಲೂ ನಮ್ಮ ಗುಟ್ಟು ರಟ್ಟಾದೀತೆಂಬ ಹೆದರಿಕೆಯಿಂದ ಒಂದು ಕ್ಷಣವಾದರೂ ನಮಗೆ ಮಾನಸೀಕ ಶಾಂತಿ ದೊರೆಯಲಾರದು. ಇದರಿಂದ ನಮ್ಮಲ್ಲಿ ನರ ದುರ್ಬಲತೆಯುಂಟಾಗುತ್ತದೆ.

ನಿಮ್ಮ ನಟನೆಗಳನ್ನು ಒಂದೊಂದಾಗಿ ಕಡಿಮೆ ಮಾಡುತ್ತ ಬಂದರೆ ಅದೆಷ್ಟೊ ಆನಂದೋತ್ಸಾಹಗಳುಂಟಾಗುತ್ತವೆ. ಕೃತಕ ನಟನೆಗಳಿಂದ ತಾತ್ಕಾಲಿಕವಾಗಿ ಸಿಗುವ ಆನಂದವು ಅವುಗಳನ್ನು ತೊಡೆದುಹಾಕುವುದರಿಂದ ಅಷ್ಟೇ ಶಾಶ್ವತವಾದ ಆತ್ಮಾನಂದವುಂಟಾಗುವುದು. ಹೀಗೆಂದು ವಿಲ್ಲಿಯಂ ಜೇಮ್ಸ್ ಎಂಬ ಮನಶಾಸ್ತ್ರಜ್ಞರು ಹೇಳುತ್ತಾರೆ.

ನೀವಿರುವ ಜಗತ್ತು ಅತ್ಯಂತ ಗೊಂದಲದ ಸಮಸ್ಯೆಗಳಿಂದೊಡಗೂಡಿದೆಂದು ಮೊದಲು ಜ್ಞಾಪಕಕ್ಕೆ ತಿಳಿದುಕೊಳ್ಳಿರಿ. ಅದರ ಕುರಿತು ನಿಮಗೆ ತಿಳಿದಿರುವುದು ಅತ್ಯಲ್ಪವೆಂದು ಒಪ್ಪಿಕೊಳ್ಳಿರಿ. ಈ ಅರಿವು ಮಾಡಿಕೊಂಡ ಕೂಡಲೇ ನಿಮ್ಮ ಮನಸ್ಸಿನ ಮೇಲಿನ ದೊಡ್ಡದೊಂದು ಹೊರೆ ಇಳಿದಂತಾಗುವುದು. ಆ ಮೇಲೆ ಕ್ರಮೇಣ ನಿಮ್ಮ ಸಾಮರ್ಥ್ಯದ ನಿಜ ಜ್ಞಾನ ನಿಮಗುಂಟಾಗುವುದು. ಎಷ್ಟಾದರೂ ನೀವು ಒಬ್ಬ ದೊಡ್ಡ ಸಂತ ಪುರುಷರಾಗಲಿ, ಪ್ರತಿಭಾವಂತರಾಗಲಿ ಅಲ್ಲವೆಂಬುದೇನೊ ಖಂಡಿತ. ನೀವು ಇತರರಂತೇ ಪುಟ್ಟದ್ವೇಷಾನುರಾಗಗಳ ದುರ್ಬಲತೆಗಳಿರುವ ವ್ಯಕ್ತಿಯಾಗಿದ್ದಿರಲ್ಲವೆ? ನಿಮ್ಮ ಮನಸ್ಸು ನಟನಾವಳಿಗಳ ಕೃತಕ ಚೌಕಟ್ಟಿನಲ್ಲಿ ಬಿಗಿಯಲ್ಪಟ್ಟು ಮುಗ್ಗರಿಸಿ ಹೋದಾಗ ಸಿಕ್ಕಿಯವಗಿತ್ತು. ಈಗದು ಅಂತರ್ಗತವಾದ ಆತ್ಮ ದೃಷ್ಟಿಯನ್ನು ಪಡೆದು ಸುತ್ತುಮುತ್ತಲಿನ ವಿಷಯ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ತಿಳಕೊಳ್ಳಲು ಸಮರ್ಥವಾಗಿ ಅವುಗಳನ್ನು ನಿರೂಪಿಸಲೂ ನಿರರ್ಗಳವಾದ ಶಕ್ತಿ ಸ್ಫೂರ್ತಿಯನ್ನು ಪಡೆಯುತ್ತಿದೆ.

ನಮ್ಮ ನಿಜವಾದ ಆತ್ಮ ಸಾಮರ್ಥ್ಯವನ್ನು ನಾವರಿತುಕೊಂಡಾಗ ಅದರ ಸಂಪೂರ್ಣ ಉಪಯೋಗವನ್ನು ಮಾಡಿಕೊಳ್ಳಲು ನಮಗೆ ಸಾಧ್ಯವಾಗುತ್ತಿದೆ. ನಟನೆಗಳನ್ನು ಊರ್ಜಿತವಾಗಿರಿಸಲು ಆ ಸಂಬಂಧವಾದ ಅಳುಕು ಅಂಜಿಕೆಗಳನ್ನು ತಡೆಹಿಡಿಯಲು ಉಪಯೋಗಿಸಲ್ಪಡುವ ಚೈತನ್ಯವು ಅನಾವಶ್ಯಕವಾಗಿ ಅದನ್ನು ಬೇರೆ ವಿಧಾನದಲ್ಲಿ ವ್ಯಯಿಸಲಸುವಾಗುತ್ತದೆ. ನಮ್ಮ ಒರಟುತನ, ತೀಕ್ಷ್ಣ ಕೋಪಾಗ್ರತೆಗಳು ಕಡಿಮೆಯಾಗಿ ನಮ್ಮಲ್ಲಿ ಸಹಾನುಭೂತಿಗಳೂ, ಇತರರಲ್ಲಿ ಅಭಿರುಚಿಯೂ ಹೆಚ್ಚಾಗುವುದು. ಇವು ನಮ್ಮ ಜನಪ್ರಿಯತೆಯನ್ನು ಅಭಿವೃದ್ಧಿಪಡಿಸುವವು. ಅದೇ ನಮ್ಮ ಮುಖ್ಯೋದ್ದೇಶವಲ್ಲವಾದರೂ ಅದು ನಮ್ಮ ಹೊಸ ಲಾಭದ ಉಪಫಲವಾಗಿರುತ್ತದೆ.

'ನನಗೆಲ್ಲ ಗೊತ್ತಿದೆ' ಎಂದರೆ ಕಷ್ಟದಾಯಕ. "ಯಾವುದೂ ಗೊತ್ತಿಲ್ಲ" ಎಂದರೆ ಪರಮ ಸುಖ. "ಅದು ನನ್ನಿಂದ ತಪ್ಪಿದ ತಪ್ಪು" ಎನ್ನಬೇಕು. ಇಲ್ಲವೆ "ನಾನದನ್ನು ಕಂಡಾಬಿಟ್ಟು ಮಾಡಿಬಿಟ್ಟೆ. ಅಲ್ಲವೆ" ಎನ್ನಬೇಕು.

ನಮ್ಮಲ್ಲಿ ಹಲವು ಸುಧಾರಣೆಗಳಾಗಬೇಕೇನೊ ನಿಜ. ಆದರೆ [illegible] ವನ್ನು ಬಿಡದೆ [illegible] ಸ್ಥಾನವನ್ನು ಪಾಟಿಲ್ಲ. ಅದುದರಿಂದ ಒಂದೊಂದಾಗಿ ಪ್ರಯತ್ನ ಮಾಡಿರಿ. ನಮಗೆ ಸುಖ ಪ್ರಯಾಣ ಬಯಸುವೆವು.

(ಲ್ಯಾಫ್ ಪತ್ರಿಕೆಯಿಂದ ಸಂಕ್ಷೇಪಿಸಿದುದು.)

—ಅನಾಮಿಕ.

ಭೂತ ಪೀಡೆ ಮತ್ತು ಕ್ವಿನಿನ್

ಹಿಂದೂ ಸಾಗರದಲ್ಲಿ ಸುಮಾತ್ರಾ ದ್ವೀಪದ ವಾಯುವ್ಯದಲ್ಲಿ ನಿಕೋಬರ್ ದ್ವೀಪಗಳಿವೆ. ಎಲ್ಲಾ ಮೂಲ ನಿವಾಸಿಗಳಂತೆ ನಿಕೋಬರ ದ್ವೀಪ ನಿವಾಸಿಗಳ ಜೀವನದಲ್ಲಿ ಉಚ್ಚ ನೀಚ ಭೂತ ಪ್ರೇತ ವಿಶ್ವಾಸಗಳು ಪ್ರಾಮುಖ್ಯದ ಸಂಗತಿಯಾಗಿದೆ. ಐವಿಸ್ ಎಂಬ ಇವರ ಮೃತಾತ್ಮಗಳು ಜೀವಂತ ಶರೀರಗಳಿಗಾಗಿ ಬಹಳ ಯಾಚನೆ ಮಾಡುತ್ತ ಇನ್ನೂ ಬದುಕಿರುವವರ ಶರೀರಗಳನ್ನು ಪ್ರವೇಶಿಸಲು ಸಾಧ್ಯವಿದ್ದಷ್ಟು ಪ್ರಯತ್ನಿಸುತ್ತವೆ. ತಮ್ಮೀ ಪ್ರಯತ್ನದಲ್ಲಿ ಆ ದೆವ್ವಗಳು ಯಶಸ್ವಿಯಾದರೆ ಅವುಗಳಿಂದ ಬಾಧಿತರಾದವರಲ್ಲಿ ಎಲ್ಲಾ ತರದ ಅವಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮೈಲಿ ಜ್ವರವುಂಟಾಗುವುದು ಈ ಲಕ್ಷಣಗಳಲ್ಲೊಂದು. ಶೇಕಡಾ ೯೯ರಷ್ಟು ಸಂದರ್ಭಗಳಲ್ಲಿ ಈ ಐವಿಸ್ ಎಂಬ ದೆವ್ವವು ಮಲೇರಿಯದ ಒಂದು ಅವತಾರವೇ ಆಗಿರುತ್ತದೆ.

ಈ ದ್ವೀಪಗಳಲ್ಲಿ ಮಲೇರಿಯಾಜ್ವರವು ಭೀಕರ ಹಾವಳಿ ಮಾಡುತ್ತದೆ. ಈ ದ್ವೀಪಗಳಲ್ಲೊಂದಾದ ನಾಗ ಕೊವರಿ ಎಂಬ ಬಂದರು ಸ್ಥಳ ಇದಕ್ಕೆ ಪ್ರಖ್ಯಾತಿ ಪಡೆದಿದೆ. ಮುಂಚೆ ಇಲ್ಲಿದ್ದೊಂದು ಇಂಗ್ಲಿಷ ಖೂನಿ ಕೈದಿಗಳ ದ್ವೀಪಾಂತರ ವಸಾಹತನ್ನು ಈ ಜ್ವರ ಪೀಡೆಯಿಂದಾಗಿ ಮುಚ್ಚಬೇಕಾಯಿತು. ನಿಕೋಬರ ನಿವಾಸಿಗಳು ನಾನಾ ಮಂತ್ರ ಮೋಡಿಗಳಿಂದ ಈ ದೈವಗಳ ಹಾವಳಿಯಿಂದ ತಮ್ಮ ನಾಡು, ಜೀವನಿತ್ತಗಳನ್ನು ರಕ್ಷಿಸಲು ಪ್ರಯತ್ನಿಸುವರು. ಕೊಳ್ಳೆಯನ್ನು ಹುಡುಕಿಕೊಂಡು ಬರುವ ಈ ನೀಚ ಪ್ರೇತಗಳು ನಿರಾತಂಕವಾಗಿ ತಮ್ಮ ಕೊಳ್ಳೆಯನ್ನು ಹುಡುಕಿ ಬರುತ್ತವೆ.

ನಿಕೋಬರ ನಿವಾಸಿಗಳು ತಮ್ಮ ಜ್ವರಕ್ಕೆ ಕ್ವಿನಿನನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಲ್ಪಟ್ಟರೆ ಕೆಲಸವು ಅದೆಷ್ಟು ಸುಲಭವಾಗುವುದು! ಮಲೇರಿಜ್ವರ ತಜ್ಞರಿಂದೊಡಕೂಡಿದ ಜನಾಂಗ ಸಂಘದ ಮಲೇರಿಯಾ ಕಮಿಶನಿನ ವರದಿಯಲ್ಲಿ "ಮಲೇಜ್ವರ ವಿರೋಧಕ ಔಷಧಿಗಳಲ್ಲಿ ಕ್ವಿನಿನು ಈಗ ಪ್ರಧಾನ ಸ್ಥಾನ ಪಡೆಯುತ್ತದೆ. ಅದು ನಿರ್ಬಲ ಧಾತುರಹಿತವಾಗಿದ್ದು ಸಂಪೂರ್ಣ ಗುಣಕಾರಿ, ಹಾಗೂ ಅದರ ಕುರಿತಾದ ಪರಿಚಯ ಮತ್ತು ಉಪಯೋಗಗಳು ವಿಶಾಲ ಪ್ರಮಾಣದವುಗಳೂ ಆಗಿವೆ" ಹೀಗೆಂದು ಒತ್ತಿ ಹೇಳಲಾಗಿದೆ.

ವ್ಯಾಧಿ ಶುಶ್ರೂಷೆಗೆ ಈ ಕೆಳಗಿನ ಪ್ರಮಾಣಗಳು ಕೊಡಲ್ಪಡುತ್ತವೆ: 5ರಿಂದ 7 ದಿನಗಳ ತನಕ ದಿನಂಪ್ರತಿ ಕ್ವಿನೀನಿನ 15ರಿಂದ 20 ಕಾಳುಗಳಷ್ಟು. ಜ್ವರಾನಂತರದ ಸೇವನೆ ಆವಶ್ಯವಿಲ್ಲ. ಆದರೆ ಜ್ವರ ಪುನಃ ಪ್ರಾರಂಭವಾದಲ್ಲಿ ಮೊದಲಿನಂತೇ ಮತ್ತೊಮ್ಮೆ ಪ್ರಾರಂಭಿಸುವುದು. ಜ್ವರ ಹಾವಳಿಯಿರುವ ಋತುವಿನಲ್ಲಿ ದಿನಂಪ್ರತಿ 6 ಕಾಳುಗಳಷ್ಟು ಕ್ವಿನೀನನ್ನು ಸೇವಿಸಿದರೆ ಯೋಗ್ಯ ಪ್ರತಿಬಂಧಕವಾಗಿದ್ದು, ಉತ್ತಮ ಸಂರಕ್ಷಣೆಯ ವಿಧಾನವಾಗಿದೆ. ಇದನ್ನೂ ಮೇಲ್ಕಂಡ ತಜ್ಞ ಸಮಿತಿ ಶಿಫಾರಸು ಮಾಡಿದೆ.

ಖಚಿತ ಗುಣಕಾರಿಯಾದ ಈ ಪಾಶ್ಚಾತ್ಯ ಪರಿಹಾರ ವಿಧಾನವನ್ನನುಸರಿಸುವ ಬದಲು ದುರ್ದೈವವಶಾತ್ ಇನ್ನೂ ಮೂಲ ನಿವಾಸಿಗಳು ಭೂತ ಪ್ರೇತ ಆಚ್ಛಾದನೆಗಳಲ್ಲೀ ತಮ್ಮ ಗಾಢ ವಿಶ್ವಾಸವನ್ನಿರಿಸುತ್ತಿರುವರು. ಇಂತಹ ಕನಿಕರಾಸ್ಪದ ವಿಷಯ ಪರಿಸ್ಥಿತಿಯನ್ನು ಬದಲಾಯಿಸಲಾಗುತಿದ್ದರೆ ಉಷ್ಣವಲಯದ ದೇಶಗಳಲ್ಲಿ ಮಲೇರಿಯವು ಈಗಿನಷ್ಟು ಅಪಾಯಕಾರಕ ವ್ಯಾಧಿಯಾಗಲಾರದು.

ಇದೇ ತಾ. 8-2-1948ನೇ ಆದಿತ್ಯವಾರ ಸಾಯಂಕಾಲ ಘಂ 6ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇವರ ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ—ಇವರ ಪಿಟೀಲು

ಶ್ರೀ ಕಲ್ಪಾತಿ ರಮಾನಾಥನ್—ಇವರ ಮೃದಂಗ

ಶ್ರೀ ಅಲಂಗುಡಿ ರಾಮಚಂದ್ರನ್—ಇವರ ಘಟವಾದ್ಯ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಟಿಕೇಟು ದರ: ಪೋಷಕ ವರ್ಗ: ರೂ. 100, I 25, II 10, III 5.

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಗುರಗಾವಿನ ಒಂದು ಹಳ್ಳಿಯ ಸಂದರ್ಶನ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಸಭಿಕರಿಗೆ ಗಾಂಧಿಯವರು ನಿರ್ವಾಸಿತರಾದ ಮಿಯೋ ಜನರನ್ನು ತಾವು ನೋಡಲು ಹೋದುದಾಗಿ ಹೇಳಿದರು. ಅನೇಕರು ಅಲ್ವಾರ ಮತ್ತು ಭರತಪುರ ಸಂಸ್ಥಾನಗಳಿಂದ ಹೊರದೂಡಲ್ಪಟ್ಟಿದ್ದಾರೆ ಕೆಲವರು ಪಾಕಿಸ್ಥಾನಕ್ಕೆ ಹೋಗಿದ್ದಾರೆ; ಉಳಿದವರು ತಾವು ಹೋಗಬೇಕೋ ಬೇಡವೋ ಎಂಬ ಸಂಶಯದಲ್ಲಿ ತೊಳಲಾಡುತ್ತಿದ್ದಾರೆ ತಮ್ಮ ಜೊತೆಗೆ ಬಂದ ಡಾ ಗೋಪೀಚಂದ ಭಾರ್ಗವರು ಅವರಲ್ಲಿ ಯಾರಿಗೆ ಇರಲು ಇಷ್ಟವಿದೆಯೋ ಅವರಿಗೆ ಅಲ್ಲಿರಲು ಹಕ್ಕಿದೆಯೆಂದ ಆಶ್ವಾಸನವಿತ್ತರೆಂದು ಗಾಂಧಿಯವರೆಂದರು. ಅವರ ವಿತ್ತ ಜೀವಿತಗಳನ್ನು ಸರಕಾರ ರಕ್ಷಿಸುವುದೆಂದು ಗೋಪೀಚಂದರು ವಚನವಿತ್ತರು ಜನವಿನಿಮಯ ತಮಗೆಂದೂ ಹಿತವಾಗದೆಂದರು ಗಾಂಧಿಯವರು. ಲಕ್ಷೋಪಲಕ್ಷ ಹೆಂಗಸರು ಗಂಡಸರು ಮಕ್ಕಳನ್ನು ಕಿತ್ತೊಡಿಸುವುದೆಂದರೊಂದು ಭೂತ ಲೀಲೆಯೋ ಸರಿ ಈ ದುಃಖ ಸಂದರ್ಭದಲ್ಲಿ ಯಾರು [illegible] ಹಿಂಸೆಗಾ[illegible] ಭಿಸಿದರು, [illegible] ಹೆಚ್ಚು ಹಿಂಸೆ[illegible] [illegible] ಹೇಡಿತನವೇ ಸರಿ [illegible] ತರ್ಕಿಸುವುದು [illegible] ಸ್ವಯಿಚ್ಛೆಯಿಂದ ಪಾಕಿಸ್ತಾನಕ್ಕೆ ಹೋಗಬಯಸುವವರಿಗೆ ಹೋಗಲಾಗ [illegible] ಯಾರೂ ಅವರನ್ನು ತಡೆಯ[illegible] ಅವರನ್ನು ಬಲಾತ್ಕಾರದಿಂದ [illegible] [illegible] ಮಿಯೋಗಳು [illegible] ಅವರು [illegible] — [illegible] ಅವರನ್ನು [illegible] ಯೋಗ್ಯ ನಾಗರಿಕರಾಗುವಂತೆ ಅವರನ್ನು [illegible] ಸದ್ಬೋಧ [illegible]

ಬೆಲೆಗಳು ಮತ್ತು ವಿನಿಯಂತ್ರಣ

[illegible] ಎಂದು [illegible] ಎಂದು ವರದಿ ಬಂದಿರುವುದಾಗಿ ಗಾಂಧಿಯವರೆಂದರು [illegible] ಕಾರಣವಿದ್ದೀತು [illegible]

ಪೆಟ್ರೋಲಿನ ನಿಯಂತ್ರಣ

ಯುಕ್ತ ವಿತರಣದ [illegible] ರಾಟದ ತೊಂದರೆ ಅಷ್ಟು [illegible] ವ್ಯದಾಯಿಸುವರಿಗೆ [illegible] ತೊಂದರೆಗಳಿದ್ದವು ಕಲ್ಲಿದ್ದಲು ಮತ್ತು ಡಬ್ಬಿಗಳ ಅಭಾವ ಆಗ [illegible] ಇದಷ್ಟು ಬೇಗ ಅವುಗಳನ್ನು ಸುಧಾರಿಸಲು ಮಂತ್ರಿಗಳು ಪ್ರಯತ್ನಪಡುತ್ತಿದ್ದಾರೆ ರೇಲ್ವೆ ಇಲ್ಲದ್ದಾಗ ಭಾರತವು ವ್ಯಾಪಾರ ನಡೆಸುತ್ತಿತ್ತು. ಈಗ ಅದಿರುವಾಗ ವಾಹನಗಳ ನ್ಯೂನತೆ ನಿಜವಾದ ತೊಂದರೆಯನ್ನು ತಂದಿತು ರೇಲ್ವ ಸಾರಿಗೆಯ ಬದಲು ಇಲ್ಲವೆ ಅದರ ಮೇಲೆ ಯಾವುದು ಉತ್ತಮ ವಾಹನ? ಮೋಟಾರು ಸಾರಿಗೆ ಕೂಡಲೆ ನೆನಪಾಯಿತು. ಆದರೆ ಪೆಟ್ರೋಲಿಲ್ಲದಿದ್ದರೆ ಆ ಸಾರಿಗೆ ನಡೆಯಲಾರದು. ಇದರಿಂದ ಪೆಟ್ರೋಲಿನ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂಬುದು ಮುಂದೆ ಬರುತ್ತದೆ. ಅದೇಕೆ ಹಾಗೆ ಮಾಡಲು ಕಷ್ಟವಾಗುವದೆಂಬುದನ್ನು ತಾವು ತಿಳಿಯಲಾರದಾಗಿರುವುದಾಗಿ ಗಾಂಧಿಯವರೆಂದರು. ಅರ್ಧ ಅರ್ಧ ಕೆಲಸವನ್ನು ಯಾರೂ ಮಾಡಲಾರರು. ನಿಯಂತ್ರಣವು ಹೋಗಲೇಬೇಕಾಗಿದ್ದರೆ ಅದು ಕಡೆಯ ಪಕ್ಷ ಪೆಟ್ರೋಲಿನ ಮೇಲಿಂದಾದರೂ ಹೋಗಬೇಕು. ಪೆಟ್ರೋಲು ಪ್ರತಿಯೊಬ್ಬನಿಗೂ ಬೇಕಾದ ವಸ್ತುವಲ್ಲ ತನ್ನ ಬಳಕೆಗೆ ಬೇಕಾದಷ್ಟನ್ನು ಸರಕಾರವು ಇಟ್ಟುಕೊಳ್ಳಬಹುದು. ಅವರು ಎಂದು ಬೇಕಾದರಂದು ತೆರದ ಸಂತೆಯಲ್ಲಿ ಕಳ್ಳಪೇಟೆಯ ಮಿತಿಯ ಪೆಟ್ರೋಲನ್ನು ಕೊಳ್ಳಬಹುದು. ಮೋಟಾರು ಸಾರಿಗೆ ಸುಲಭಸಾಧ್ಯವೆನಿಸಿದರೆ, ಉಪ್ಪಿನ ಬೆಲೆಯಲ್ಲಿ ಏರಿಕೆಯಿಲ್ಲದಾಗುವುದು ಉಪ್ಪಿನ ಉತ್ಪಾದನೆ ಸಾಧಾರಣ ಸಾಕಷ್ಟಿದೆ, ಆದರೆ ಸಾರಿಗೆಯ ತೊಂದರೆ ಅಷ್ಟು ಒಂತು ಎಂದು ಗಾಂಧಿಯವರು ತಾವು ಕೇಳಿದುದಾಗಿ ಹೇಳಿದರು.

ಮಲದ ಗೊಬ್ಬರ

ಉತ್ಪಾದನೆಯ ನ್ಯೂನತೆಯಿಂದಲೇ [illegible] ಗೊಬ್ಬರ [illegible] ಉತ್ಪಾದನ [illegible] [illegible] ವಿದು.

ಗಾಂಧಿಯವರ, [illegible] ಬೆಹನರು ([illegible]) [illegible] ಪರಿಷತ್ತಿನ [illegible] ಡಾ ರಾಜೇಂದ್ರ ಪ್ರಸಾದರು [illegible] ಮತ್ತು ಇತರರು ಅದರಲ್ಲಿ [illegible] ಅಲ್ಲಿಗೆ [illegible] ಅವರು [illegible] ಮಲ ಮತ್ತು ಹೊಲಸುಗಳಿಂದ ಗೊಬ್ಬರವನ್ನು ತಯಾರು ಮಾಡುವ ವಿಧಗಳನ್ನು ಅವುಗಳಲ್ಲಿ ವಿವರಿಸಲಾಗಿದೆ. ಆದರಿಂದ ಲಕ್ಷಗಟ್ಟಲೆ ರೂಪಾಯಿಗಳು ಉಳಿಯುವವುವಲ್ಲದೆ ದುರ್ಬಲಹೊಂದದೆ ನೆಲದ ಫಲವತ್ತೆ ಹೆಚ್ಚುತ್ತದೆ ಉತ್ಪಾದನೆ ಹೆಚ್ಚಿಸುವುದೇ ಪರಿಷತ್ತಿನಲ್ಲಿ ಭಾಗಿಗಳಾದವರ ಮುಖ್ಯೋದ್ದೇಶವಾಗಿತ್ತು ಇಂದು ಶ್ರೀಮತಿ ಮೀರಾ ಬೆಹನಳು ಋಷಿಕೇಶಕ್ಕೆ ಪಯಣ ಬೆಳೆಸಿದಳು, ಅವಳು ದನಕರುಗಳ ಪರಿಸ್ಥಿತಿಯ ಸುಧಾರಣ ಮತ್ತು ಮಲದ ಗೊಬ್ಬರವನ್ನು ಹಿಂದುಸ್ತಾನದಲ್ಲಿ ಎಲ್ಲೆಡೆಯೂ ತಯಾರಿಸುವಂತೆ ಮಾಡುವುದು ಈ ಕೆಲಸವನ್ನು ಮುಂಬರಿಸುವಳು ಅದೊಂದು ಕಷ್ಟದ ಕೆಲಸ, ಅದರ ಸಾಫಲ್ಯವು ಜನರ ಸಹಕಾರದ ಮೇಲೆ ಅವಲಂಬಿಸಿದೆ

ಬಿರ್ಲಾಭವನ ಹೊಸದಿಲ್ಲಿ, ೨೦ ೧೨—೪೭

ಹೇಡಿತನ ಬೇಡ

ಸಣ್ಣದಾಗಿಯೇ ಆಗಲಿ ದಿಲ್ಲಿಯಲ್ಲಿ ಮತ್ತೆ ದೊಂಬಿಯಾದುದಕ್ಕ ನನಗೆ ತುಂಬ ನೋವ[illegible] ದಿಲ್ಲಿಯ ಹಿಂದುಗಳಾಗಲಿ ಶಿಖರಾಗಲೀ ಅಥವಾ ಪಾಕಿಸ್ತಾನದಿಂದ ಬಂದ [illegible]ಗಳಾಗಲೀ ದಿಲ್ಲಿಯಲ್ಲಿ ಮುಸಲ್ಮಾನರನ್ನು [illegible] [illegible] ಅವರು ದಿಟ್ಟತನದಿಂದ ಮುಕ್ತಕಂಠದಿಂದ ಹೇಳಬೇಕು. ಇದರಂತೆ ಸರಕಾರವು [illegible] ಮುಸಲ್ಮಾನರನ್ನು ರಕ್ಷಿಸುವದಿಲ್ಲವೆಂದು [illegible] ಹೀಗೆ ಮಾಡುವದೆಂದರೆ ಸರಕಾರ[illegible] [illegible] ಈ [illegible] ಅದಲ್ಲಿ ಅದು ಹಿಂದುಗಳ ಮತ್ತು [illegible] ಇದರಂತೆ ಪಾಕಿಸ್ತಾನದಲ್ಲಿ ಹಿಂದುಗಳು [illegible] ಸುಖವಾಗಿ ಮರ್ಯಾದೆಯಿಂದ [illegible] ವದು" ದುಸ್ತರವಾದರೆ ಹಿಂದುಸ್ಥಾನದಲ್ಲಿ ಮುಸಲ್ಮಾನ ಧರ್ಮವನ್ನು ಅಳಿದು ಬಿಟ್ಟಂತೆಯೋ. ಈ ಹೇಡಿತನವೇಕೆ? ಅದನ್ನು ಬಿಸುಟು ಬಿಡಿರಿ. ಯಾರನ್ನಾಗಲೀ ಪರ್ಯಾಯವಾಗಿ ಹೊರ ನೂಕುವ ಹಣಿಕೆಯು ಹೇಡಿತನವೆಂದೇ ನಾನು ತಿಳಿಯುತ್ತೇನೆ. ಮುಸಲ್ಮಾನರು ಕೆಡುಕರಾಗಿದ್ದರೆ ಶೀಖರೂ ಹಿಂದೂಗಳೂ, ಒಳ್ಳೆಯವರಾಗಿ ಉದಾರಿಗಳಾದರೆ ಕೆಡುಕರು ಖಂಡಿತ ಒಳ್ಳೆಯರಾಗುವರು ಇದೇ ನೀವು ಭಜನೆಯಲ್ಲಿ ಕೇಳಿರಬೇಕು ಮೀರಾದೇವಿ ಹೇಳಿದಳು, ದೇವಭಕ್ತನನ್ನು ಕಾಣುತ್ತಲೇ ತನಗೆ ಸುಖವೆನಿಸಿತೆಂದು ಅದೇ ಸಂಸಾರಿಗಳನ್ನು ಕಂಡಾಗ ಆಕೆಗೆ ತುಂಬ ದುಃಖವಾಯಿತಂತೆ ದೇವಸಮರನ್ನು ಕಂಡಾಗ ಆಕೆಗೆ ದೈವೀಕ ಅನುಭವವಾಯ್ತು ಕೆಡುಕರ ಕೂಡ ನ್ಯವಹರಿಸುವದೆಂದರೆ ಅವರನ್ನು ತಿದ್ದುವದು. ಅವರನ್ನು ಹೊರದೂಡೂವದಲ್ಲ ಅಥವಾ ಕೊಲ್ಲುವದಲ್ಲ

ಬಿರ್ಲಾ ಭವನ ಹೊಸದಿಲ್ಲಿ ೨೦—೧೨—೪೭.

—ಕರ್ಮವೀರ

ವಾರದ ವಿಜ್ಞಾನ ವರದಿಗಳು

ಜೀವರಕ್ಷಣೀಯ ಬೊಂಬು

ಯುದ್ಧಕಾಲದ ಸ್ಫೋಟಕಗಳನ್ನು ಶಾಂತಿ ಕಾಲಿಕ್ಕ ಪರಿವರ್ತಿಸಿಕೊಳ್ಳುವುದರ ಕುರಿತು ಪ್ರಯೋಗಗಳನ್ನು ನಡಸಿದ ವಿಜ್ಞಾನಿಗಳು ಬೊಂಬುಗಳಿಗ ಹೊಸ ಉಪಯೋಗವನ್ನು ಕಂಡುಹಿಡಿದಿರುವರು ಈಗ ಜೀವನಾಶದ ಬದಲಿಗೆ ಜೀವರಕ್ಷಣಗಾಗಿ ಪರಿವರ್ತಿಸಬಹುದು. ದಂಗೆಯ ಸ್ಥಳವೊಂದರಲ್ಲಿ ಸಿಕ್ಕಿ ಬಿದ್ದವರಿಗೆ, ಸಮುದ್ರ ಮಧ್ಯದ ದ್ವೀಪವೊಂದರಲ್ಲಿರುವವರಿಗೆ ಇಲ್ಲವೆ ನೆರೆಯ [illegible] ಸಹಾಯ ರಹಿತ ಸ್ಥಳದಲ್ಲಿರ [illegible] [illegible] ವಸ್ತುಗಳನ್ನೂ, ಬಟ್ಟೆ [illegible] ಔಷಧಿಯ ವಸ್ತುಗಳನ್ನೂ ಸರಬರಾಜು ಮಾಡಬಹುದು. ಒಂದು ಪ್ರಯೋಗದಲ್ಲಿ 12 ಪೆಟ್ಟಿಗೆಗಳು [illegible] ಇದರಿಂದ ಹೊರಬಿದ್ದುವು.

ಸೂಜಿಕಲ್ಲಿನ ಅದ್ಭುತ

[illegible] ಸೂಜಿಕಲ್ಲ[illegible] ಅಮೇರಿಕ[illegible] ಹುಡುಗನ ಪ್ರಾಣ ರಕ್ಷಣ[illegible] ಶಸ್ತ್ರ ಚಿಕಿತ್ಸೆಯಿಂದ [illegible] ಕೆಲಸವನ್ನು ಈ [illegible] ಮಾಡಿದರು. [illegible] ಹುಡುಗನು ಒಂದು ಮೊಳೆಯನ್ನು ನುಂಗಿದ್ದನು ಅದು ಅವನ ಕರುಳಲ್ಲಿ ಸೇರಿಕೊಂಡಿತು. [illegible] ಹುಡುಗನು ಬದುಕುವುದು ಕಷ್ಟ [illegible] [illegible] ಸೂಜಿಕಲ್ಲನ್ನು [illegible] [illegible] ಹುಡುಗನಿಗೆ ಕಿನ್ನಲಿಕ್ಕೆ ಕೊಟ್ಟರು. ಹುಡುಗನಿಗೆ ನಿದ್ದೆಯ ಔಷಧಿ ಕೊಟ್ಟಿದ್ದರು ಐದು ಗಂಟೆಯ ನಂತರ ಸೂಜಿಕಲ್ಲು ಮೊಳೆಯನ್ನು ಸಂಪರ್ಕಿಸಿತು. ಸೂಜಿಕಲ್ಲಿಗೆ ಕಟ್ಟಿ ಬಾಯಿಯ ಹೊರಗೆ ಹಿಡಿದ ದಾರವೊಂದನ್ನು ಚಾತುರ್ಯದಿಂದೆಳೆಯುವುದರ ಮೂಲಕ ಮೊಳೆಯನ್ನು ನಿರಪಾಯವಾಗಿ ಹೊರತರಲಾಯಿತು.

ಬ್ರಿಟನಿನ ಅರ್ಸ್ನಿಸ್ಟ್ಯಾಡ್ ಎಂಬಲ್ಲಿ ನಡೆದೊಂದು ಕಸೂತಿ ಕೆಲಸದ ಸ್ಪರ್ಧೆಯಲ್ಲಿ ವಿಲ್ಲಿಯಂ ಹಾತರ್ನ್‌ವೈಟ್ ಎಂಬ 20 ವರ್ಷದ ವೃದ್ಧನು ಎಲ್ಲಾ ಮಹಿಳೆಯರನ್ನು ಸೋಲಿಸಿ ಪ್ರಥಮ ಬಹುಮಾನ ಪಡೆದನು.

ರಾತ್ರೆ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು, ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯಲ್ಪಡುವುವು ಅಲ್ಲಿ ಊದಿಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು. ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ.

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುದು.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 9—1—1948 [ಸಂಚಿಕೆ 52]

ಕಾಶ್ಮೀರ ಪ್ರಶ್ನೆಯಲ್ಲಿ ೩ನೇ ಪಕ್ಷದ ಕೈವಾಡ

ಭದ್ರತಾ ಮಂಡಳದಲ್ಲಿ ನ್ಯಾಯ ತೀರ್ಮಾನ

ಕಾಶ್ಮೀರದ ಪ್ರಶ್ನೆ ಈಗ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಲಕೊಯ್ಯಲ್ಪಟ್ಟಿದೆ. ಭಾರತದ ಅತಿ ಸುಂದರ ಕಣಿವೆ ಪ್ರದೇಶ ಭೀಕರ ನರಕಯಾತನೆಗೊಳಗಾಗಿದೆ. ಪ್ರಕೃತಿ ಸೌಂದರ್ಯದ ಬೀಡೆನಿಸುವ ಆ ನಾಡು ಮಾನವ ಸ್ವಭಾವದ ಕ್ರೌರ್ಯ ಕಾಠಿಣ್ಯತೆಗೊಳಗಾಗಿದೆ. ಭಾರತೀಯರ ಅಂತಃ ಕಲಹವು ಮೂರನೇ [illegible]ದವರ ಕೈವಾಡವಿಲ್ಲದ ತೀರ್ಮಾನ [illegible]ಗಲಾರದೆಂಬುದಕ್ಕೆ ಮತ್ತೊಂದು ನಿದರ್ಶನವು ಜಗತ್ತಿನ ಕಣ್ಣು ಮುಂದಿಟ್ಟಂತಾಯಿತು.

ಇದಕ್ಕೆ ಮಹಾತ್ಮರು ತಮ್ಮ ಪ್ರಭಾವಶಾಲಿ ವಿರೋಧವನ್ನು ಸುಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. **"ಪಾಕಿಸ್ತಾನ ಮತ್ತು ಭಾರತಗಳು ಸದಾ ಇನ್ನೊಬ್ಬರ ಮೇಲೆ ಹೊಂದಿಕೊಂಡಿರುವಂತಾಗಬೇಕೆ? ಅದೆಷ್ಟು ಕಾಲದ ತನಕ ಇವರು ಕಚ್ಚಾಡಿಕೊಂಡಾರು?"** ಎಂದು ಮಹಾತ್ಮರು ದುಃಖೋದ್ಗಾರವನ್ನು ಹೊರಡಿಸಿದ್ದಾರೆ.

ಪಾಕಿಸ್ತಾನ ಸಾಧಕರು ತಮ್ಮ ಆಶೆ [illegible] ಈಡೇರಿದ ಮರುದಿನದಿಂಬಂತೆ ನೆರೆಯವರ ಮೇಲೆ ಉರಿದುಬೀಳುವ ಧೋರಣೆಯನ್ನಾರಂಭಿಸಿದರು. ಮೊದಲು ಭೋಪಾಲದ ಕುರಿತು ಬಲವಾದ ದ್ವೇಷ ಪ್ರಚಾರ ನಡೆಯಿತು. ಆದರೆ ಅಲ್ಲಿನ ನವಾಬರಲ್ಲಿ ಸಕಾಲದಲ್ಲಿ ವಿವೇಕೋದಯವಾಯಿತು. ಆದ್ದರಿಂದ ಬಹು ಸಂಖ್ಯಾಕ ಜನತೆಯ ಕೋರಿಕೆಯಂತೆಯೂ ಭೌಗೋಳಿಕ ಸ್ಥಾನ ಸಂಬಂಧದ ಸತಾರ್ಕಿಕ ಸ್ವಾಭಾವಿಕತೆಯ ನೈತಿಕ ಒತ್ತಾಟಕ್ಕೂ ನವಾಬರು ಭಾರತದ ಒಕ್ಕೂಟಕ್ಕೆ ಸೇರಿ ಒಂದು ದುರಂತವನ್ನು ತಪ್ಪಿಸಿದರು.

ಮತ್ತೆ ಪಾಕಿಸ್ತಾನ ಜಗಳಗಳ ಗಂಟಿಕನಕ್ಕೆ ಜುನಾಗಢದಲ್ಲಿ ಉತ್ತಮ ಕ್ಷೇತ್ರ ಕಂಡುಕೊಂಡಿತು. ತನಗೂ ಆ ಸಂಸ್ಥಾನಕ್ಕೂ ೩೦೦ ಮೈಲಿನ ವಿದೇಶಿ ಪ್ರದೇಶವಿದ್ದರೂ ಚಾಣಾಕ್ಷತನದ ಕುತರ್ಕದಿಂದ ಜುನಾಗಢದ ಮೇಲೆ ತನಗಿರುವ ಘಟನಾತ್ಮಕ ಸ್ವಾಮಿತ್ವದ ಹಕ್ಕನ್ನು ಪಾಕಿಸ್ತಾನವು ಪ್ರತಿಪಾದಿಸಿತು. ಕೊನೆಗೆ ಅಲ್ಲಿನ ಜನತೆಯೇ ಸ್ಥೈರ್ಯದಿಂದ ಹೋರಾಡಿತೆಂಬಂತೆ ಆ ಸಂಸ್ಥಾನವನ್ನು ಯಾರ ಸಹಾಯವಿಲ್ಲದೆ ವಶಪಡಿಸಿಕೊಂಡಾಗ ಎರಡನೇ ಸಮಸ್ಯೆಯೊಂದು ಶಾಂತ ರೀತಿಯಲ್ಲಿ ತೀರ್ಮಾನವಾಯಿತು.

ಆದರೆ ಕಾಶ್ಮೀರದಲ್ಲಿ ಪಾಕಿಸ್ತಾನದ ಕಲಹಪ್ರಿಯ ಧುರೀಣರಿಗೆ ಇನ್ನಷ್ಟು ಹೆಚ್ಚಿನ ಅನುಕೂಲತೆಗಳು ತೋರಿದವು. ಭೌಗೋಳಿಕವಾಗಿ ಕಾಶ್ಮೀರ ಪಾಕಿಸ್ತಾನದ ನೆರೆಕರೆಯ ಸಂಪರ್ಕವುಳ್ಳದ್ದು, ಪಾಕಿಸ್ತಾನಿಗಳ ಸಹಧರ್ಮೀಯರು ಅಲ್ಲಿ ಬಹು ಸಂಖ್ಯಾಕರಾಗಿರುವರು ಮಾತ್ರವಲ್ಲ ಒಂದು ಕಾಲದಲ್ಲಿ ಆಳುವ ಮಹಾ ಸ್ವಾಮಿಯಿಂದಲೇ ಪ್ರೋತ್ಸಾಹಿಸಲ್ಪಟ್ಟ ಅಲ್ಲಿನ ಮುಸ್ಲಿಂ ಪರಿಷತ್ತಿನ ಬೆಂಬಲಿಗರೂ ವಿಶಾಲ ಸಂಖ್ಯೆಯಲ್ಲಿದ್ದು ಅವರು ತಮ್ಮ ಪ್ರತಿಬಿಂಬ ಸಂಸ್ಥೆಯಾದ ಮುಸ್ಲಿಂ ಲೀಗಿನ ಆಪ್ತ ಹಿತೈಷಿಗಳಾಗಿದ್ದರು. ಆದುದರಿಂದ ಪಾಕಿಸ್ತಾನಕ್ಕೆ ವಿಧೇಯವಾದ ಒಂದು ಪಂಚಮ ದಳವು ಅತ್ಯಂತ ಸಹಕಾರಿಯಾದ ಸೌಕರ್ಯವೇ ಆಯಿತು.

ಮೊದಲು ಕಾಶ್ಮೀರವನ್ನು ಕೆಲವು ದಾಳಿಗಾರರು ಅತಿಕ್ರಮ ಮಾಡಿದರೆಂದು ಹೇಳಲಾಗಿದೆ. ಆದರೆ ಸಮಯ ಹೋದಂತೆ ಇವರ ಹಿಂದೆ ಪಾಕಿಸ್ತಾನದ ಫೌಜು ಭುಜ ಕೊಟ್ಟು ನಿಂತಿರುವುದು ಸೂಚ್ಯವಾಯಿತು. ಸಹಧರ್ಮೀಯರ ರಕ್ಷಣೆಗೆ ಬಹಿರಂಗವಾದ ಸೈನ್ಯ ಸಜ್ಜತೆ ನಡೆಯಿತು. ಅಪಹೃತ ಸ್ತ್ರೀಯರೂ ಅಪಾರವಾದ ಒಡವೆ ಆಭರಣಗಳೂ ಬಹಿರಂಗ ಸಂತೆಗಳಲ್ಲಿ ಪ್ರದರ್ಶನಕ್ಕಿಡಲ್ಪಟ್ಟು ಭಾವೀ ದಾಳಿಗಾರರಿಗೆ ಬಲವಾದ ಮನಾಕರ್ಷಣೆ ಮಾಡಲಾಯಿತು. ಶಸ್ತ್ರಾಸ್ತ್ರಗಳನ್ನೋ ಹೇರಳ ಸಂಖ್ಯೆಯಲ್ಲಿ ಪಾಕಿಸ್ತಾನದ ಸೈನ್ಯ ಶಿಬಿರದಲ್ಲಿವೆ. ಅಂದ ಮೇಲೆ ಪವಿತ್ರ ಯುದ್ಧ ಮಾಡಲೇನಡ್ಡಿ? ಪೇಶಾವರದ ರಸ್ತೆಯ ಬದಿಗಳಲ್ಲಿ ಬೇಕಾದ ಶಸ್ತ್ರಾಸ್ತ್ರಗಳು ಲೈಸೆನ್ಸ್ ಇಲ್ಲದೆ ಮಾರಲ್ಪಡುತ್ತಿದ್ದವು.

ದಾಳಿಗಾರರ ಮತ್ತವರ ಆಂತರೀಕ ಹೊಂಚುಗಾರರ ಉಪಟಳವು ಮಿತಿಮೀರಿದಾಗ ಕಾಶ್ಮೀರ ರಾಜರು ಭಾರತ ಒಕ್ಕೂಟಕ್ಕೆ ಸೇರಿ ಸೈನ್ಯ ಸಹಾಯವನ್ನು ಕೋರಿದರೂ ಶೇಖ ಅಬ್ದುಲ್ಲರೇ ತಾತ್ಕಾಲಿಕ ಸರಕಾರದ ಮುಖ್ಯ ಪ್ರಧಾನರಾಗಿಯೂ ಮಾಡಲ್ಪಟ್ಟರು. ಕಾಶ್ಮೀರದ ಮುಸ್ಲಿಂ ಜನತೆಯ ಮೇಲೆ ಅಬ್ದುಲ್ಲರಿಗಿರುವಷ್ಟು ಹಿಡಿತ ಮತ್ತಾರಿಗೂ ಇಲ್ಲವೆಂಬುದಕ್ಕೆ ಅವರ ಕೈ ಕೆಳಗೆ ದಾಳಿಗಾರರನ್ನು ವಿರೋಧ ಏರ್ಪಡಿಸಲ್ಪಟ್ಟು ಪ್ರತಿಭಟಕ ಫೌಜುಗಳೇ ಸಾಕ್ಷಿಯಾಗಿವೆ.

ಪಾಕಿಸ್ತಾನದ ಪ್ರದೇಶವನ್ನು ನಿರಾತಂಕವಾಗಿ ದಾಟಿ ಬರುವ ದಾಳಿಗಾರರನ್ನು ತಡೆಯಬೇಕೆಂದು ಮೊದಲು ಭಾರತ ಸರಕಾರ ಭಿನ್ನವಿಸಿಕೊಂಡಿತು. "ಅವರು ತಮ್ಮ ಸಹಧರ್ಮೀಯರ ಮೇಲೆ ಡೋಗ್ರಾ ರಜಪೂತರಿಂದ ನಡೆಸಲ್ಪಡುವ ದಬ್ಬಾಳಿಕೆಯಿಂದ ಉದ್ರೇಕರಾಗಿ ತಡೆಯಸಾಧ್ಯವಾಗದಷ್ಟು ದೊಡ್ಡ ಹಿಂಡಾಗಿ ಹರಿಯುತ್ತಿರುವರು." ಎಂದು ಪಾಕಿಸ್ತಾನ ತನ್ನ ಅಸಮರ್ಥತೆಯನ್ನು ತೋರಿಸಿತು. ಜಗತ್ತಿನ ಅತಿ ದೊಡ್ಡ ಇಸ್ಲಾಮಿ ರಾಷ್ಟ್ರವು ಈ ತರದ ಅಂತರ್ಗತ ಪಕ್ಷಪಾತ ತೋರಿದ್ದು ಯಾರಿಗೂ ಕೌತುಕವನ್ನುಂಟುಮಾಡಲಿಲ್ಲ.

ಶೇಕ್ ಅಬ್ದುಲ್ಲರು ಪಾಕಿಸ್ಥಾನವು ಕಾಶ್ಮೀರದ ಮೇಲೆ ಕೈಕೊಂಡದ್ದೊಂದು ಯುದ್ಧವೇ ಎಂದು ತಿಳಿಸುತ್ತಾ **"ಕಾಶ್ಮೀರಿಗಳು ಪಾಕಿಸ್ತಾನಕ್ಕೆ ಸೇರುವರೋ ಇಲ್ಲವೆ ಹಿಂದುಸ್ತಾನಕ್ಕೆ ಸೇರುವರೊ ಎಂಬುದು ಇತ್ಯರ್ಥಿಸಲು ಬಾರಾಮುಲ್ಲಾದಲ್ಲಾದ ಮಸೀದಿಗಳ ನಾಶವನ್ನೂ, ಅಲ್ಲಿ ಸುಟ್ಟು ಕೊರಾನಗಳನ್ನೂ ನೋಡಿದರೆ ಸಾಕು"** ಎಂದು ಗದ್ಗದ ಕಂಠದಿಂದ ನುಡಿದರು. ಇಸ್ಲಾಮ ಧರ್ಮ ರಕ್ಷಣೆಯ ಸ್ಥೂಲ ನಿದರ್ಶನವೊಂದನ್ನವರು ಜಗತ್ತಿಗೆ ತೋರಿಸಿಕೊಟ್ಟರು.

ಹಿಂದೀ ಸೈನ್ಯಗಳು ತಮ್ಮ ಕರ್ತವ್ಯವನ್ನು ಯಥಾಸಾಂಗವಾಗಿ ನೆರವೇರಿಸಿ ದಾಳಿಗಾರರನ್ನು ಉರಿಗಡಿಯ ತನಕ ಹಿಮ್ಮೆಟ್ಟಿಸಿದಾಗ ಚಳಿಗಾಲವು ಪ್ರಾಪ್ತವಾಗಿ ಅಪ್ರಾಕೃತಿಕ ಮನೋ ಲಕ್ಷಣದ ಕ[illegible]ರ ಗಡಿನಾಡಿನ ಸಂಗಡಿಗರಿಗೆ ಪ್ರಕೃತಿ ದೇವಿಯ ಅಸದೃಶವಾದ ರಕ್ಷಣೆ ಸಿಕ್ಕಿತು. ಹಿಮದಿಂದ ಭಾರತದ ಸೈನ್ಯದ ಚಟುವಟಿಕೆ ನಿಲ್ಲಿಸಲ್ಪಟ್ಟಿತು. ದಾಳಿಗಾರರಿಗೆ ಉಸಿರು ಬಿಡಲು ಸಾಕಷ್ಟು ಸಮಯವೂ ಶಸ್ತ್ರಾಸ್ತ್ರ ಪಡಕೊಳ್ಳಲು ಬೇಕಾದಷ್ಟು ಪ್ರಶುನೆಸ್ತ್ರೋ ಸಿಕ್ಕಿತು. ಈ ಹವಾಮಾನದಲ್ಲಿ ದಗೋಡೆ ಮಾಡಲು ನಿಷ್ಣಾತರಾದ ಆ ಜನರು ಪಾಕಿಸ್ತಾನಿಗಳ ಸಹಾನುಭೂತಿ ಪರ ಸಹಾಯ ಹೊಂದಿ ಅತ್ಯಾಧುನಿಕ ಶಸ್ತ್ರಾಸ್ತ್ರ ಸುಸಜ್ಜಿತರಾಗಿ ಪುನಃದಾಳಿಯನ್ನಾರಂಭಿಸಿದರು.

ಪಾಕಿಸ್ತಾನದ ಪಾತ್ರವು ಈ ದಾಳಿಯಲ್ಲಿ ಸಾಕಷ್ಟು ಸ್ಪಷ್ಟವಾಗಿ ಯೋಗ್ಯ ದಾಖಲೆಗಳು ಸಿಕ್ಕಿದಾಗ ಕಳೆದ ತಿಂಗಳಲ್ಲಿ ಎರಡ್ಮೂರು ಬಾರಿ ಭಾರತ ಸರಕಾರವು ಪಾಕಿಸ್ತಾನಕ್ಕೆ ಬರಕೊಂಡಿತು. "ನಾವಿರ್ವರೂ ಕೂಡಿ ದಾಳಿಗಾರರನ್ನು ತಡೆಯೋಣ" ಎಂದವರ ಸೂಚನೆಯಿತ್ತು ಆದರೆ ಈ ಅರಿಕೆಗಳು ಪಾಕಿಸ್ತಾನದ ಕಿವುಡು ಕಿವಿಯ ಮೇಲೆ ಬಿದ್ದು, ಒಂದಕ್ಕೂ ಪ್ರತ್ಯುತ್ತರವೇ ಸಿಗದಿದ್ದಾಗ, ಭಾರತ ಸರಕಾರ ನೇರವಾಗಿ ತನ್ನ ಪ್ರತಿನಿಧಿಯ ಮೂಲಕ ಭದ್ರತಾ ಮಂಡಲಕ್ಕೆ ದೂರನ್ನೊಯ್ಯಿತು. ಬ್ರಿಟಿಷರು ಈ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿದ್ದಷ್ಟು ಸಹಾಯ ಮಾಡುವುದಾಗಿ ಆಶ್ವಾಸನ ಕೊಟ್ಟರು. ಬ್ರಿಟಿಷ್ ಸರಕಾರ ಪಾಕಿಸ್ತಾನಕ್ಕೆ ಕಾಶ್ಮೀರದಿಂದ "ಅಲ್ಲಿ ಸೈನ್ಯವಿದ್ದರೆ ಹಿಂತೆಗೆದುಕೊಳ್ಳಿ" ಎಂದೂ ವಿನಂತಿಸಿದಂತೆ.

ಭದ್ರತಾ ಮಂಡಳದಲ್ಲಿ ಸಾಕ್ಷ್ಯಕೊಡಲು ಸ್ವತಃ ಕಾಶ್ಮೀರಸಿಂಹ ಅಬ್ದುಲ್ಲರು ಹೋಗಿರುವರು. ಜಮ್ಮು ಮತ್ತು ಕಾಶ್ಮೀರ ಪ್ರಾಂತ್ಯಗಳಲ್ಲಿ ದಾಳಿಗಾರರು ಪಾಕಿಸ್ಥಾನದಿಂದ ನುಗ್ಗುತ್ತಿರುವರೆಂದೂ ಇದನ್ನು ತಡೆಯುವ ಬಗ್ಗೆ ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಭದ್ರತಾ ಮಂಡಳದ ಅಧ್ಯಕ್ಷ ಫೆರ್ನಾಂಡ್ ವಾಂಗನ್ ಹೋಮರು ಸಾರಿರುವರು. ಬ್ರಿಟಿಷ್ ಮಂತ್ರಿಮಂಡಳದ ಪ್ರಮುಖ ಸದಸ್ಯರೊಬ್ಬರಾದ ಸಿ. ನೋಯೆಲ್ ಬೇಕರು ಕಾಶ್ಮೀರ ಪರಿಸ್ಥಿತಿ ಚೆನ್ನಾಗಿ ಬಲ್ಲವರಿದ್ದುದರಿಂದ ಬ್ರಿಟಿಷ್ ಸರಕಾರ ಅವರನ್ನು ತಮ್ಮ ಪರವಾಗಿ ಕಳುಹಿಸಿದೆ.

ಈ ಮಂಡಳದ ಸಾಮರ್ಥ್ಯದಲ್ಲಿ ಭಾರತಕ್ಕೆ ವಿಶ್ವಾಸವಿದೆಯೆಂದರ್ಥವಲ್ಲ ಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವಾಗಿರುವುದರಿಂದ ಭಾರತವು ಅದು ತನ್ನ ಕರ್ತವ್ಯವೆಂದೆಣಿಸಿ ಈ ಧೋರಣೆಯನ್ನನುಸರಿಸಿದೆ. ವಿಶ್ವ ರಾಜಕಾರಣಗಳೆದುರು ತನ್ನ ನಿರ್ದೋಷವನ್ನು ರುಜುವಾತು ಮಾಡಬೇಕೆಂಬ ಆತುರವೂ ಭಾರತ ಸರಕಾರಕ್ಕಿದೆ.

ಇಂದು ಕಾಶ್ಮೀರ ಸೈನ್ಯ ಚಟುವಟಿಕೆಗಳಿಗಾಗಿ ದಿನಂಪ್ರತಿ 1 ಲಕ್ಷ ರೂಪಾಯಿ ವ್ಯಯಿಸಲ್ಪಡುತ್ತಿದೆ ಭಾರತೀಯ ತೆರಿಗೆದಾರರ ಮೇಲೊಂದಿದು ಹೊರೆಯೇ ಸರಿ. ಸಮರ್ಪಕ ತೀರ್ಮಾನವಾದರೆ ಇತ್ತಂಡದವರಿಗೂ ಹಿತಕರ.

ಕಾಶ್ಮೀರ ವಿಭಾಗ

ಇತ್ತೀಚೆಗೆ ಕಾಶ್ಮೀರವನ್ನ ಪಾಕಿಸ್ತಾನ ಹಿಂದೂಸ್ತಾನಗಳೊಳಗೆ ಹಂಚಿ ಹಾಕಬೇಕೆಂಬ ಮಾತುಕತೆ ನಡೆದಿದ್ದು ಅದು ಮಹಾತ್ಮರ ಕಿವಿಗೂ ಮುಟ್ಟಿದೆ. ಹಾಗೆ ಮಾಡದಿದ್ದರೆ ಯುದ್ಧ ಅನಿವಾರ್ಯವೆಂದೂ, ಮೌಂಟ್ ಬೇಟನ್ನರೂ ರಾಜನಾಮೆ ಈಯುವರೆಂದೂ ಊಹಾಪೋಹಗಳೆದ್ದಿವೆ. **"ಭಾರತವನ್ನು ವಿಭಾಗಿಸಿದ್ದೇ ಸಾಕು. ಕಾಶ್ಮೀರವನ್ನು ವಿಭಾಗಿಸಿದರೆ ಇತರ ಸಂಸ್ಥಾನಗಳನ್ನು ಹಾಗೆ ಮಾಡಬೇಡವೆ? ಹಾಗಾದರೆ ಈ ತುಂಡರಿಸುವಿಕೆಗೊಂದು ಅಂತ್ಯವಿಲ್ಲವಾಗುತ್ತದೆ"** ಹೀಗೆಂದು ಮಹಾತ್ಮರು ನುಡಿದಿರುವರು.

MISSING
2 - JANUARY

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 9—1—1948 [ಸಂಚಿಕೆ 52]

ಕಾಶ್ಮೀರ ಪ್ರಶ್ನೆಯಲ್ಲಿ ೩ನೇ ಪಕ್ಷದ ಕೈವಾಡ

ಭದ್ರತಾ ಮಂಡಳದಲ್ಲಿ ನ್ಯಾಯ ತೀರ್ಮಾನ

ಕಾಶ್ಮೀರದ ಪ್ರಶ್ನೆ ಈಗ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಲಕ್ಕೊಯ್ಯಲ್ಪಟ್ಟಿದೆ. ಭಾರತದ ಅತಿ ಸುಂದರ ಕಣಿವೆ ಪ್ರದೇಶ ಭೀಕರ ನರಕಯಾತನೆಗೊಳಗಾಗಿದೆ. ಪ್ರಕೃತಿ ಸೌಂದರ್ಯದ ಬೀಡೆನಿಸಿದ ಆ ನಾಡು ಮಾನವ ಸ್ವಭಾವದ ಕ್ರೌರ್ಯ ಕಾಠಿಣ್ಯತೆಗೊಳಗಾಗಿದೆ. ಭಾರ[illegible]ರ ಅಂತಃ ಕಲಹವು ಮೂರನೇ [illegible]ದವರ ಕೈವಾಡವಿಲ್ಲದೆ ತೀರ್ಮಾನ[illegible]ಗಲಾರದೆಂಬುದಕ್ಕೆ ಮತ್ತೊಂದು ನಿದರ್ಶನವು ಜಗತ್ತಿನ ಕಣ್ಣ ಮುಂದಿಟ್ಟಂತಾಯಿತು.

ಇದಕ್ಕೆ ಮಹಾತ್ಮರು ತಮ್ಮ ಪ್ರಭಾವಶಾಲಿ ವಿರೋಧವನ್ನು ಸುಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. **“ಪಾಕಿಸ್ತಾನ ಮತ್ತು ಭಾರತಗಳು ಸದಾ ಇನ್ನೊಬ್ಬರ ಮೇಲೆ ಹೊಂದಿಕೊಂಡಿರುವಂತಾಗಬೇಕೆ? ಅದೆಷ್ಟು ಕಾಲದ ತನಕ ಇವರು ಕಚ್ಚಾಡಿಕೊಂಡಾರು?”** ಎಂದು ಮಹಾತ್ಮರು ದುಃಖೋದ್ಗಾರವನ್ನು ಹೊರಡಿಸಿದ್ದಾರೆ.

ಪಾಕಿಸ್ತಾನ ಸಾಧಕರು - ತಮ್ಮ ಆಶೆ[illegible] ಈಡೇರಿದ ಮರುದಿನದಿಂಬಂತೆ ನೆರೆಯವರ ಮೇಲೆ ಉರಿದುಬೀಳುವ ಧೋ[illegible]ಯನ್ನಾರಂಭಿಸಿದರು. ಮೊದಲು ಭೋಪಾಲದ ಕುರಿತು ಬಲವಾದ ದ್ವೇಷ ಪ್ರಚಾರ ನಡೆಯಿತು. ಆದರೆ ಅಲ್ಲಿನ ನವಾಬರಲ್ಲಿ ಸಕಾಲದಲ್ಲಿ ವಿವೇಕೋದಯವಾಯಿತು. ಆದ್ದರಿಂದ ಬಹುಸಂಖ್ಯಾಕ ಜನತೆಯ ಕೋರಿಕೆಯಂತೆಯೂ ಭೌಗೋಳಿಕ ಸ್ಥಾನ ಸಂಬಂಧದ ಸತಾರ್ಕಿಕ ನೈಜತೆಯ ನೈತಿಕ ಒತ್ತಾಟಕ್ಕೂ ನವಾಬರು ಭಾರತದ ಒಕ್ಕೂಟಕ್ಕೆ ಸೇರಿ ಒಂದು ದುರಂತವನ್ನು ತಪ್ಪಿಸಿದರು.

ಮತ್ತೆ ಪಾಕಿಸ್ತಾನ ಜಗಳಗಳ ಗಂಟತನಕ್ಕೆ ಜುನಾಗಡದಲ್ಲಿ ಉತ್ತಮ ಕ್ಷೇತ್ರ ಕಂಡುಕೊಂಡಿತು. ತನಗೂ ಆ ಸಂಸ್ಥಾನಕ್ಕೂ ೫೦೦ ಮೈಲಿನ ವಿದೇಶಿ ಪ್ರದೇಶವಿದ್ದರೂ ಚಾಣಾಕ್ಷತನದ ಕುತರ್ಕದಿಂದ ಜುನಾಗಡದ ಮೇಲೆ ತನಗಿರುವ ಘಟನಾತ್ಮಕ ಸ್ವಾಮಿತ್ವದ ಹಕ್ಕನ್ನು ಪಾಕಿಸ್ತಾನವು ಪ್ರತಿಪಾದಿಸಿತು. ಕೊನೆಗೆ ಅಲ್ಲಿನ ಜನತೆಯೇ ಸ್ಥೈರ್ಯದಿಂದ ಹೋರಾಡಿತೆಂಬಂತೆ ಆ ಸಂಸ್ಥಾನವನ್ನು ಯಾರ ಸಹಾಯವಿಲ್ಲದೆ ವಶಪಡಿಸಿಕೊಂಡಾಗ ಎರಡನೇ ಸಮಸ್ಯೆಯೊಂದು ಶಾಂತ ರೀತಿಯಲ್ಲಿ ತೀರ್ಮಾನವಾಯಿತು.

ಆದರೆ ಕಾಶ್ಮೀರದಲ್ಲಿ ಪಾಕಿಸ್ತಾನದ ಕಲಹಪ್ರಿಯ ಧುರೀಣರಿಗೆ ಇನ್ನಷ್ಟು ಹೆಚ್ಚಿನ ಅನುಕೂಲತೆಗಳು ತೋರಿದವು. ಭೌಗೋಳಿಕವಾಗಿ ಕಾಶ್ಮೀರ ಪಾಕಿಸ್ತಾನದ ನೆರೆಯ ಸಂಪರ್ಕವುಳ್ಳದ್ದು, ಪಾಕಿಸ್ತಾನಿಗಳ ಸಹಧರ್ಮೀಯರು ಅಲ್ಲಿ ಬಹುಸಂಖ್ಯಾಕರಾಗಿರುವರು ಮಾತ್ರವಲ್ಲ ಒಂದು ಕಾಲದಲ್ಲಿ ಆಳುವ ಮಹಾಸ್ವಾಮಿಯರಿಂದಲೇ ಪ್ರೋತ್ಸಾಹಿಸಲ್ಪಟ್ಟ ಅಲ್ಲಿನ ಮುಸ್ಲಿಂ ಪರಿಷತ್ತಿನ ಬೆಂಬಲಿಗರೂ ವಿಶಾಲ ಸಂಖ್ಯೆಯಲ್ಲಿದ್ದು ಅವರು ತಮ್ಮ ಪ್ರತಿಬಿಂಬ ಸಂಸ್ಥೆಯಾದ ಮುಸ್ಲಿಂ ಲೀಗಿನ ಆಪ್ತ ಹಿತೈಷಿಗಳಾಗಿದ್ದರು. ಆದುದರಿಂದ ಪಾಕಿಸ್ತಾನಕ್ಕೆ ವಿಧೇಯವಾದ ಒಂದು ಪಂಚಮ ದಳವು ಅತ್ಯಂತ ಸಹಕಾರಿಯಾದ ಸೌಕರ್ಯವೇ ಆಯಿತು.

ಮೊದಲು ಕಾಶ್ಮೀರವನ್ನು ಕೆಲವು ದಾಳಿಗಾರರು ಅಭಿಕ್ರಮ ಮಾಡಿದರೆಂದು ಹೇಳಲ್ಪಾಗಿದೆ. ಆದರೆ ಸಮಯ ಹೋದಂತೆ ಇವರ ಹಿಂದೆ ಪಾಕಿಸ್ತಾನದ ಫೌಜು ಭುಜಕೊಟ್ಟು ನಿಂತಿರುವುದು ಸೂಚ್ಯವಾಯಿತು.

ಸಹಧರ್ಮೀಯರ ರಕ್ಷಣೆಗೆ ಬಹಿರಂಗವಾದ ಸೈನ್ಯ ಸಜ್ಜತೆ ನಡೆಯಿತು. ಅಪಹೃತ ಸ್ತ್ರೀಯರೂ ಅಪಾರವಾದ ಒಡವೆ ಆಭರಣಗಳೂ ಬಹಿರಂಗ ಸಂತೆಗಳಲ್ಲಿ ಪ್ರದರ್ಶನಕ್ಕಿಡಲ್ಪಟ್ಟು ಭಾವೀ ದಾಳಿಗಾರರಿಗೆ ಬಲವಾದ ಮನಾಕರ್ಷಣೆ ಮಾಡಲಾಯಿತು. ಶಸ್ತ್ರಾಸ್ತ್ರಗಳಿನೋ ಹೇರಳ ಸಂಖ್ಯೆಯಲ್ಲಿ ಪಾಕಿಸ್ತಾನದ ಸೈನ್ಯ ಶಿಬಿರದಲ್ಲಿವೆ. ಅಂದ ಮೇಲೆ ಪವಿತ್ರ ಯುದ್ಧ ಮಾಡಲೇನಡ್ಡಿ? ಪೇಶಾವರದ ರಸ್ತೆಯ ಬದಿಗಳಲ್ಲಿ ಬೇಕಾದ ಶಸ್ತ್ರಾಸ್ತ್ರಗಳು ಲೈಸೆನ್ಸ್ ಇಲ್ಲದೆ ಮಾರಲ್ಪಡುತ್ತಿದ್ದವು

ದಾಳಿಗಾರರ ಮತ್ತವರ ಅಂತರೀಕ ಹೊಂಚುಗಾರರ ಉಪಟಳವು ಮಿತಿಮೀರಿದಾಗ ಕಾಶ್ಮೀರ ರಾಜರು ಭಾರತ ಒಕ್ಕೂಟಕ್ಕೆ ಸೇರಿ ಸೈನ್ಯ ಸಹಾಯವನ್ನು ಕೋರಿದರೂ ಶೇಖ ಅಬ್ದುಲ್ಲರು ತಾತ್ಕಾಲಿಕ ಸರಕಾರದ ಮುಖ್ಯ ಪ್ರಧಾನರಾಗಿಯೂ ಮಾಡಲ್ಪಟ್ಟರು. ಕಾಶ್ಮೀರದ ಮುಸ್ಲಿಂ ಜನತೆಯ ಮೇಲೆ ಅಬ್ದುಲ್ಲರಿಗಿರುವಷ್ಟು ಹಿಡಿತ ಮತ್ತಾರಿಗೂ ಇಲ್ಲವೆಂಬುದಕ್ಕೆ ಅವರ ಕೈಕೆಳಗೆ ದಾಳಿಗಾರರನ್ನು ವಿರೋಧ ಏರ್ಪಡಿಸಲ್ಪಟ್ಟು ಪ್ರತಿಭಟಕ ಫೌಜುಗಳೇ ಸಾಕ್ಷಿಯಾಗಿವೆ.

ಪಾಕಿಸ್ತಾನದ ಪ್ರದೇಶವನ್ನು ನಿರಾತಂಕವಾಗಿ ದಾಟಿ ಬರುವ ದಾಳಿಗಾರರನ್ನು ತಡೆಯಬೇಕೆಂದು ಮೊದಲು ಭಾರತ ಸರಕಾರ ಭಿನ್ನವಿಸಿಕೊಂಡಿತು. "ಅವರು ತಮ್ಮ ಸಹಧರ್ಮೀಯರ ಮೇಲೆ ಡೋಗ್ರಾ ರಜಪೂತರಿಂದ ನಡೆಸಲ್ಪಡುವ ದಬ್ಬಾಳಿಕೆಯಿಂದ ಉದ್ರೇಕರಾಗಿ ತಡೆಲಸಾಧ್ಯವಾಗದಷ್ಟು ದೊಡ್ಡ ಹಿಂಡಾಗಿ ಹರಿಯುತ್ತಿರುವರು.” ಎಂದು ಪಾಕಿಸ್ತಾನ ತನ್ನ ಅಸಮರ್ಥತೆಯನ್ನು ತೋರಿಸಿತು. ಜಗತ್ತಿನ ಅತಿ ದೊಡ್ಡ ಇಸ್ಲಾಮಿ ರಾಷ್ಟ್ರವು ಈ ತರದ ಅಂತರ್ಗತ ಪಕ್ಷಪಾತ ತೋರಿದ್ದು ಯಾರಿಗೂ ಕೌತುಕವನ್ನುಂಟುಮಾಡಲಿಲ್ಲ.

ಶೇಕ್ ಅಬ್ದುಲ್ಲರು ಪಾಕಿಸ್ಥಾನವು ಕಾಶ್ಮೀರದ ಮೇಲೆ ಕೈಕೊಂಡದೊಂದು ಯುದ್ಧವೇ ಎಂದು ತಿಳಿಸುತ್ತಾ **“ಕಾಶ್ಮೀರಿಗಳು ಪಾಕಿಸ್ತಾನಕ್ಕೆ ಸೇರುವರೋ ಇಲ್ಲವೆ ಹಿಂದುಸ್ತಾನಕ್ಕೆ ಸೇರುವರೊ ಎಂಬದು ಇತ್ಯರ್ಥಿಸಲು ಬಾರಾಮುಲ್ಲಾದಲ್ಲಾದ ಮಸೀದಿಗಳ ನಾಶವನ್ನೂ, ಅಲ್ಲಿ ಸುಟ್ಟ ಕೊರಾನಗಳನ್ನೂ ನೋಡಿದರೆ ಸಾಕು”** ಎಂದು ಗದ್ಗದ ಕಂಠದಿಂದ ನುಡಿದರು. ಇಸ್ಲಾಮ ಧರ್ಮ ರಕ್ಷಣೆಯ ಸ್ಥೂಲ ನಿದರ್ಶನವೊಂದನ್ನವರು ಜಗತ್ತಿಗೆ ತೋರಿಸಿಕೊಟ್ಟರು.

ಹಿಂದೀ ಸೈನ್ಯಗಳು ತಮ್ಮ ಕರ್ತವ್ಯವನ್ನು ಯಥಾಸಾಂಗವಾಗಿ ನೆರವೇರಿಸಿ ದಾಳಿಗಾರರನ್ನು ಉರಿಗಡಿಯ ತನಕ ಹಿಮ್ಮೆಟ್ಟಿಸಿದಾಗ ಚಳಿಗಾಲವು ಪ್ರಾಪ್ತವಾಗಿ ಅಪ್ರಾಕೃತಿಕ ಮನೋಲಕ್ಷಣದ ಕ್ರೂರ ಗಡಿನಾಪುಂಡ ಪಂಗಡಿಗರಿಗೆ ಪ್ರಕೃತಿ ದೇವಿಯ ಅಸದೃಶವಾದ ರಕ್ಷಣೆ ಸಿಕ್ಕಿತು. ಹಿಮದಿಂದ ಭಾರತದ ಸೈನ್ಯದ ಚಟುವಟಿಕೆ ನಿಲ್ಲಿಸಲ್ಪಟ್ಟಿತು. ದಾಳಿಗಾರರಿಗೆ ಉಸಿರುಬಿಡಲು ಸಾಕಷ್ಟು ಸಮಯವೂ ಶಸ್ತ್ರಾಸ್ತ್ರ ಪಡಕೊಳ್ಳಲು ಬೇಕಾದಷ್ಟು ಪುರುಸೊತ್ತೂ ಸಿಕ್ಕಿತು. ಈ ಹವಾಮಾನದಲ್ಲಿ ದರೋಡೆ ಮಾಡಲು ನಿಷ್ಣಾತರಾದ ಆ ಜನರು ಪಾಕಿಸ್ತಾನಿಗಳ ಸಹಾನುಭೂತಿ ಪರ ಸಹಾಯ ಹೊಂದಿ ಅತ್ಯಾಧುನಿಕ ಶಸ್ತ್ರಾಸ್ತ್ರ ಸುಸಜ್ಜಿತರಾಗಿ ಮರುದಾಳಿಯನ್ನಾರಂಭಿಸಿದರು.

ಪಾಕಿಸ್ತಾನದ ಪಾತ್ರವು ಈ ದಾಳಿಯಲ್ಲಿ ಸಾಕಷ್ಟು ಸ್ಪಷ್ಟವಾಗಿ ಯೋಗ್ಯ ದಾಖಲೆಗಳು ಸಿಕ್ಕಿದಾಗ ಕಳೆದ ತಿಂಗಳಲ್ಲಿ ಎರಡ್ನೇ ಬಾರಿ ಭಾರತ ಸರಕಾರವು ಪಾಕಿಸ್ತಾನಕ್ಕೆ ಬರಕೊಂಡಿತು. “ನಾವಿರ್ವರೂ ಕೂಡಿ ದಾಳಿಗಾರರನ್ನು ತಡೆಯೋಣ” ಎಂಬವರ ಸೂಚನೆಯಿತ್ತು. ಆದರೆ ಈ ಅರಿಕೆಗಳು ಪಾಕಿಸ್ತಾನದ ಕಿವುಡು ಕಿವಿಯ ಮೇಲೆ ಬಿದ್ದು ಒಂದಕ್ಕೂ ಪ್ರತ್ಯುತ್ತರವೇ ಸಿಗದಿದ್ದಾಗ, ಭಾರತ ಸರಕಾರ ನೇರವಾಗಿ ತನ್ನ ಪ್ರತಿನಿಧಿಯ ಮೂಲಕ ಭದ್ರತಾ ಮಂಡಲಕ್ಕೆ ದೂರನ್ನೊಯ್ಯಿತು. ಬ್ರಿಟಿಷರು ಈ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿದ್ದಷ್ಟು ಸಹಾಯ ಮಾಡುವುದಾಗಿ ಆಶ್ವಾಸನ ಕೊಟ್ಟರು. ಬ್ರಿಟಿಷ್ ಸರಕಾರ ಪಾಕಿಸ್ತಾನಕ್ಕೆ ಕಾಶ್ಮೀರದಿಂದ “ ಅಲ್ಲಿ ಸೈನ್ಯವಿದ್ದರೆ ಹಿಂತೆಗೆದುಕೊಳ್ಳಿ ” ಎಂದೂ ವಿನಂತಿಸಿದೆಯಂತೆ.

ಭದ್ರತಾ ಮಂಡಳದಲ್ಲಿ ಸಾಕ್ಷ್ಯಕೊಡಲು ಸ್ವತಃ ಕಾಶ್ಮೀರಸಿಂಹ ಅಬ್ದುಲ್ಲರು ಹೋಗಿರುವರು. ಜಮ್ಮು ಮತ್ತು ಕಾಶ್ಮೀರ ಪ್ರಾಂತ್ಯಗಳಲ್ಲಿ ದಾಳಿಗಾರರು ಪಾಕಿಸ್ಥಾನದಿಂದ ನುಗ್ಗುತ್ತಿರುವರೆಂದೂ ಇದನ್ನು ತಡೆಯುವ ಬಗ್ಗೆ ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಭದ್ರತಾ ಮಂಡಳದ ಅಧ್ಯಕ್ಷ ಫೆರ್ನಾಂಡ್ ಲಾಂಗನ್ ಹೋಮರು ಸಾರಿರುವರು. ಬ್ರಿಟಿಷ ಮಂತ್ರಿಮಂಡಳದ ಪ್ರಮುಖ ಸದಸ್ಯರಲ್ಲೊಬ್ಬರಾದ ಮಿ। ನೋಯೆಲ್ ಬೇಕರರು ಕಾಶ್ಮೀರ ಪರಿಸ್ಥಿತಿ ಚೆನ್ನಾಗಿ ಬಲ್ಲವರಿದ್ದುದರಿಂದ ಬ್ರಿಟಿಷ್ ಸರಕಾರ ಅವರನ್ನು ತಮ್ಮ ಪರವಾಗಿ ಕಳುಹಿಸಿದೆ.

ಈ ಮಂಡಳದ ಸಾಮರ್ಥ್ಯದಲ್ಲಿ ಭಾರತಕ್ಕೆ ವಿಶ್ವಾಸವಿದೆಯೆಂದರ್ಥವಲ್ಲ. ಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವಾಗಿರುವುದರಿಂದ ಭಾರತವು ಅದು ತನ್ನ ಕರ್ತವ್ಯವೆಂದೆಣಿಸಿ ಈ ಧೋರಣೆಯನ್ನನುಸರಿಸಿದೆ. ವಿಶ್ವ ರಾಜಕಾರಣಿಗಳೆದುರು ತನ್ನ ನಿರ್ದೋಷವನ್ನು ರುಜುವಾತು ಮಾಡಬೇಕೆಂಬ ಆತುರವೂ ಭಾರತ ಸರಕಾರಕ್ಕಿದೆ.

ಇಂದು ಕಾಶ್ಮೀರ ಸೈನ್ಯ ಚಟುವಟಿಕೆಗಳಿಗಾಗಿ ದಿನಂಪ್ರತಿ 4 ಲಕ್ಷ ರೂಪಾಯಿ ವ್ಯಯಿಸಲ್ಪಡುತ್ತಿದೆ. ಭಾರತೀಯ ತೆರಿಗೆದಾರರ ಮೇಲೊಂದಿದು ಹೊರೆಯೇ ಸರಿ. ಸಮರ್ಪಕ ತೀರ್ಮಾನವಾದರೆ ಇತ್ತಂಡದವರಿಗೂ ಹಿತಕರ.

ಕಾಶ್ಮೀರ ವಿಭಾಗ

ಇತ್ತೀಚೆಗೆ ಕಾಶ್ಮೀರವನ್ನ ಪಾಕಿಸ್ತಾನ ಹಿಂದೂಸ್ತಾನಗಳೊಳಗೆ ಹಂಚಿ ಹಾಕಬೇಕೆಂಬ ಮಾತುಕತೆ ನಡೆದಿದ್ದು ಅದು ಮಹಾತ್ಮರ ಕಿವಿಗೂ ಮುಟ್ಟಿದ್ದೆ. ಹಾಗೆ ಮಾಡದಿದ್ದರೆ ಯುದ್ಧ ಅನಿವಾರ್ಯವೆಂದೂ, ಮೌಂಟ್ ಬೇಟನ್ನರೂ ರಾಜಿನಾಮೆ ಈಯುವರೆಂದೂ ಊಹಾಪೋಹೆಗಳೆದ್ದಿವೆ. **“ಭಾರತವನ್ನು ವಿಭಾಗಿಸಿದ್ದೇ ಸಾಕು. ಕಾಶ್ಮೀರವನ್ನು ವಿಭಾಗಿಸಿದರೆ ಇತರ ಸಂಸ್ಥಾನಗಳನ್ನು ಹಾಗೆ ಮಾಡಬೇಡವೆ? ಹಾಗಾದರೆ ಈ ತುಂಡರಿಸುವಿಕೆಗೊಂದು ಅಂತ್ಯವಿಲ್ಲವಾಗುತ್ತದೆ”** ಹೀಗೆಂದು ಮಹಾತ್ಮರು ನುಡಿದಿರುವರು.

ಮನೋವಿಶ್ಲೇಷಣದಿಂದು ಸ್ವರೂಪ ದರ್ಶನ

ಮಾನಸಿಕ ನಟನೆಯನ್ನು ತ್ಯಜಿಸಿರಿ

ಗೊತ್ತಿಲ್ಲವೆಂಧರೆ ಪರಮ ಸುಖ

ನಾವೆಲ್ಲರೂ ನಟಪ್ರವೀಣರೆಂದಾಗ ನಿಮಗೆ ಆಶ್ಚರ್ಯವಾಗಬಹುದು. ನಟನೆ ನಮ್ಮ ಸ್ವಭಾವದ ಒಂದು ವಿಶಿಷ್ಟ ಲಕ್ಷಣವೇ ಆಗಿದೆ. ಬಡವರು ಶ್ರೀಮಂತರಂತೆ ನಟಿಸುವುದೂ, ಅವಿಚಾರಿಗಳು ವಿಚಾರವಂತರಂತೆ ನಟಿಸುವುದೂ, ಮೂರ್ಖರು ವಿವೇಕಿಗಳಂತೆ ಭಾವಿಸುವುದು, ಅಪೂರ್ಣರು ಸಂಪೂರ್ಣರಂತೆ ವರ್ತಿಸುವುದು, ಎಲ್ಲವೂ ನಮ್ಮನ್ನು ನಟನಾ ಪ್ರವೀಣರನ್ನಾಗಿ ಮಾಡುತ್ತವೆ. ಈ ಅರ್ಥದಲ್ಲಿ ನಮ್ಮ ನಟಶಿರೋಮಣಿಗಳೂ ಇರುವರೆಂದರೆ ಅತಿಶಯವಿಲ್ಲ.

ಜೀವನ ಹೇಗೆ ಮಾಡುತಿದ್ದೀರಿ ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ನೀವು ಕೊಡುವ ಉತ್ತರಕ್ಕೂ ನಿಜ ಪರಿಸ್ಥಿತಿಗೂ ಅದೆಷ್ಟು ವ್ಯತ್ಯಾಸವಿದೆಯೆಂಬುದನ್ನು ಸ್ವಲ್ಪ ತುಲನೆ ಮಾಡಿರಿ! ನಿಮ್ಮ ಪಾಲಕರೊಡನೆ ವಿಚಾರಿಸಿದರೆ ಅವರ ಉತ್ತರವೆ ಬೇರೆ ಇರುತ್ತದೆ.

ಆಟ, ರಾಜಕೀಯ ರೇಶನ್, ಹವೆ ಮೊದಲಾದುವುಗಳ ಕುರಿತು ನಡೆಯುವ ಚರ್ಚೆಗೆ ಸ್ವಲ್ಪ ಕಿವಿಕೊಡಿರಿ ಈ ಚರ್ಚೆಯಲ್ಲಿ ಭಾಗವಹಿಸುವವನು ಅವುಗಳಲ್ಲಿನ ಪ್ರತಿಯೊಂದು ವಿಷಯದ ಕುರಿತೂ ತನಗೆ ಇನ್ನೊಬ್ಬನಿಗಿಂತ ಹೆಚ್ಚು ತಿಳಿದಿದೆಯೆಂದು ತೋರಿಸಲು ಪ್ರಯತ್ನಿಸುವುದನ್ನು ನೀವು ಕಾಣುವಿರಿ. 'ನನಗೆ ಆ ವಿಷಯ ಗೊತ್ತಿಲ್ಲ'ವೆಂದು ಒಬ್ಬರೂ ಹೇಳಲು ಸಿದ್ಧರಿಲ್ಲ. ನೀವು ಕೂಡಾ ನಿಮ್ಮ ಅಜ್ಞಾನ ಬಹಿರಂಗ ಪಡಿಸುವ ಇಷ್ಟಪಡುವುದಿಲ್ಲ

ಇತರರಿಂದ ಮೆಚ್ಚುಗೆ ಪಡೆಯಲು ನಾವೆಲ್ಲರೂ ಆತುರಪಡುತ್ತೇವೆ ಆದಕ್ಕಾಗಿಯೇ ನಾವು ಪ್ರವೀಣ ಆಟಗಾರರಂತೆಯೂ ಚತುರ ರಾಜಕೀಯ ವಿಷಯ ತಜ್ಞರಂತೆಯೂ ನಿಪುಣ ಆರ್ಥಿಕ ಶಾಸ್ತ್ರಗಾರರಂತೆಯೂ, ಅನುಭವಸ್ಥ ಹವಾಮಾನ ಜ್ಯೋತಿಷಗಳಂತೆಯೂ ನಾವು ನಟಿಸುವುದು, ನಾವು ಮೊದಲು ನಮಗೇ ಮೆಚ್ಚುಗೆಯಾಗುವ ಪಾತ್ರವೊಂದನ್ನು ಚುನಾಯಿಸಿ ಅದನ್ನು ಸಂಪೂರ್ಣವಾದ ಕೃತಕ ವರ್ತನೆಯಿಂದ ನಟಿಸಿ ಇತರರನ್ನು ಮೆಚ್ಚಿಸಲು ಪ್ರಯತ್ನಿಸುತ್ತೇವೆ

"ಇತರರನ್ನು ಮಂಕು ಮಾಡಿದ್ದೇವೆಂದು ತಿಳಕೊಳ್ಳುವ ನಮ್ಮ ಸ್ವಂತ ಮಂಕುತನದಿಂದ ಉಂಟಾಗುವ ವಿನೋದವನ್ನು ನಾವೀ ಕೃತಕ ನಟನೆಯಿಂದ ಪಡೆಯುವ, ಒಂದು ಆತ್ಮ ಸಂತೋಷವಲ್ಲದೆ ಬೇರೆ ಇಲ್ಲ"ವೆಂದು ಓರ್ವ ಪ್ರಖ್ಯಾತ ಮನೋಶಾಸ್ತ್ರಜ್ಞರು ತಿಳಿಸುತ್ತಾರೆ

ನಮ್ಮ ನಿಜಾವಸ್ಥೆಯನ್ನು ಎದುರಿಸಿ ನೋಡಲು ನಾವೇ ಸಿದ್ಧರಿಲ್ಲವಾದುದರಿಂದಲೇ ನಾವೀ ನಟನಾ ಕಾರ್ಯಕ್ಕೆ ಹಿಡಿದು ತೂಗಾಡುತ್ತೇವೆ ಯಾರೋ ಒಬ್ಬರು ಆಕರ್ಷಕ ಜೀವನ ಧ್ಯೇಯವುಳ್ಳವರೆಂದೂ, ಕಾರ್ಯನಿಷ್ಠೆಯವರೆಂದೂ ಪ್ರಾಮುಖ್ಯ ವ್ಯಕ್ತಿಗಳಾಗಿರುವರೆಂದೂ ಮತ್ತವರು ಮಾನವಕೋಟಿಯ ಕಡೆ ಉಧಾರ ಮನಸ್ಕರಾಗಿರುವರೆಂದೂ ನಾವು ಕೆಲವು ಅಸತ್ಯವಾದ ಕಲ್ಪನೆಗಳನ್ನು ಮಾಡಿಕೊಂಡು ಅದೇ ಸತ್ಯವೆಂದು ತಿಳಿದು ನಂಬಿ ಅಂಥವುಗಳನ್ನು ಅನುಕರಿಸಲೂ ನಾವೂ ನಮ್ಮ ಚೈತನ್ಯವನ್ನು ಕ್ಷೀಣಿಸಿಕೊಳ್ಳುತ್ತೇವೆ

ಆದರೆ ನಿಜವಾಗಿ ನಾವಿದರಿಂದ ಸುಖಿಗಳಾಗಲಾರೆವು ಯಾವ ಕ್ಷಣವಲ್ಲೂ ನಮ್ಮ ಗುಟ್ಟು ರಟ್ಟಾದೀತೆಂಬ ಹೆದರಿಕೆಯಿಂದ ಒಂದು ಕ್ಷಣವಾದರೂ ನಮಗೆ ಮಾನಸಿಕ ಶಾಂತಿ ದೊರೆಯಲಾರದು ಇದರಿಂದ ನಮ್ಮಲ್ಲಿ ನರ ದುರ್ಬಲತೆಯುಂಟಾಗುತ್ತದೆ

ನಿಮ್ಮ ನಟನೆಗಳನ್ನು ಒಂದೇ ಸಂದಾಗಿ ಕಡಿಮೆ ಮಾಡುತ್ತ ಬಂದರೆ ಅದೆಷ್ಟು ಆನಂದೋತ್ಸಾಹಗಳು ಉಂಟಾಗುತ್ತವೆ ಕೃತಕ ನಟನೆಗಳಿಂದ ತಾತ್ಕಾಲಿಕವಾಗಿ ಸಿಗುವ ಆನಂದವು ಅವುಗಳನ್ನು ತೊಡೆದುಹಾಕುವುದರಿಂದ ಅಷ್ಟೇ ಶಾಶ್ವತವಾದ ಆತ್ಮಾನಂದವುಂಟಾಗುವುದು ಹೀಗೆಂದು ವಿಲ್ಲಿಯಂ ಜೇಮ್ಸ್ ಎಂಬ ಮನಶಾಸ್ತ್ರಜ್ಞರು ಹೇಳುತ್ತಾರೆ

ನೀವಿರುವ ಜಗತ್ತು ಅತ್ಯಂತ ಗೊಂದಲದ ಸಮಸ್ಯೆಗಳಿಂದೊಡಗೂಡಿದೆಂದು ಮೊದಲು ಜ್ಞಾಪಕಕ್ಕೆ ತಿಳಿದುಕೊಳ್ಳಿರಿ ಅದರ ಕುರಿತು ನಿಮಗೆ ತಿಳಿದಿರುವುದು ಅತ್ಯಲ್ಪವೆಂದು ಒಪ್ಪಿಕೊಳ್ಳಿರಿ ಈ ಅರಿವು ಮಾಡಿಕೊಂಡ ಕೂಡಲೇ ನಿಮ್ಮ ಮನಸ್ಸಿನ ಮೇಲಿನ ದೊಡ್ಡದೊಂದು ಹೊರೆ ಇಳಿದಂತಾಗುವುದು. ಆ ಮೇಲೆ ಕ್ರಮೇಣ ನಿಮ್ಮ ಸಾಮರ್ಥ್ಯದ ನಿಜ ಜ್ಞಾನ ನಿಮಗುಂಟಾಗುವುದು. ಎಷ್ಟಾದರೂ ನೀವು ಒಬ್ಬ ದೊಡ್ಡ ಸಂತ ಪುರುಷರಾಗಿಲಿ, ಪ್ರತಿಭಾವಂತರಾಗಲಿ ಅಲ್ಲವೆಂಬುದೇನೊ ಖಂಡಿತ. ನೀವು ಇತರರಂತೇ ಪುಟ್ಟದ್ವೇಷಾನುರಾಗಗಳ ದುರ್ಬಲತೆಗಳಿರುವ ವ್ಯಕ್ತಿಯಾಗಿದ್ದಿರಲ್ಲವೆ? ನಿಮ್ಮ ಮನಸ್ಸು ನಟನಾವಳಿಗಳ ಕೃತಕ ಚೌಕಟ್ಟಿನಲ್ಲಿ ಬಿಗಿಯಲ್ಪಟ್ಟು ಮುಗ್ಗುರಿಸಿ ಹೋದಾಗ ಸಿಕ್ಕಿಯವಾಗಿತ್ತು ಈಗದು ಅಂತರ್ಗತವಾದ ಆತ್ಮ ದೃಷ್ಟಿಯನ್ನು ಪಡೆದು ಸುತ್ತುಮುತ್ತಲಿನ ವಿಷಯ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ತಿಳಕೊಳ್ಳಲು ಸಮರ್ಥವಾಗಿ ಅವುಗಳನ್ನು ನಿರೂಪಿಸಲೂ ನಿರರ್ಗಳವಾದ ಶಕ್ತಿ ಸ್ಫೂರ್ತಿಯನ್ನು ಪಡೆಯುತ್ತಿದೆ

ನಮ್ಮ ನಿಜವಾದ ಆತ್ಮ ಸಾಮರ್ಥ್ಯವನ್ನು ನಾವರಿತುಕೊಂಡಾಗ ಅದರ ಸಂಪೂರ್ಣ ಉಪಯೋಗವನ್ನು ಮಾಡಿಕೊಳ್ಳಲು ನಮಗೆ ಸಾಧ್ಯವಾಗುತ್ತದೆ ನಟನೆಗಳನ್ನು ಊರ್ಜಿತವಾಗಿ [illegible] ಸಂಬಂಧವಾದ [illegible] ತಡೆಹಿಡಿಯಲು [illegible] ಚೈತನ್ಯವು [illegible] ವಿದಾನದಲ್ಲಿ [illegible] ನಮ್ಮ [illegible] ಗಳು ಕಡಿಮೆ [illegible] ನಮ್ಮಲ್ಲಿ [illegible] ಗಳೂ ಇತರರಲ್ಲಿ [illegible] ಗುವುದು [illegible] ನಮ್ಮ [illegible] ದರೂ ಅದ [illegible]

[illegible] ಪರಮ ಸುಖ [illegible] ತಪ್ಪು [illegible] ದನ್ನು [illegible] ಅನ್ನ [illegible]

ನಮ್ಮಲ್ಲಿ [illegible] ಸವಿತ್ತ [illegible] ಯಾಣ [illegible]

(ಲ್ಯಾಪ್ ಪತ್ರಿಕೆಯಿಂದ [illegible])

[illegible]

ಭೂತ ಪೀಡೆ ಮತ್ತು ಕ್ವಿನಿನ್

ಹಿಂದೂ ಸಾಗರದಲ್ಲಿ ಸುಮಾತ್ರಾ ದ್ವೀಪದ ವಾಯುವ್ಯದಲ್ಲಿ ನಿಕೋಬರ್ ದ್ವೀಪಗಳಿವೆ. ಎಲ್ಲಾ ಮೂಲ ನಿವಾಸಿಗಳಂತೆ ನಿಕೋಬರ್ ದ್ವೀಪ ನಿವಾಸಿಗಳ ಜೀವನದಲ್ಲಿ ಉಚ್ಚ ನೀಚ ಭೂತ ಪ್ರೇತ ವಿಶ್ವಾಸಗಳು ಪ್ರಾಮುಖ್ಯದ ಸಂಗತಿಯಾಗಿದೆ. ಐವಿಸ್ ಎಂಬ ಇವರ ಮೃತಾತ್ಮಗಳು ಜೀವಂತ ಶರೀರಗಳಿಗಾಗಿ ಬಹಳ ಯಾತ್ರೆ ಮಾಡುತ್ತ ಇನ್ನೂ ಬದುಕಿರುವವರ ಶರೀರಗಳನ್ನು ಪ್ರವೇಶಿಸಲು ಸಾಧ್ಯವಿದ್ದಷ್ಟು ಪ್ರಯತ್ನಿಸುತ್ತವೆ. ತಮ್ಮೀ ಪ್ರಯತ್ನದಲ್ಲಿ ಆ ದೆವ್ವಗಳು ಯಶಸ್ವಿಯಾದರೆ ಅವುಗಳಿಂದ ಬಾಧಿತರಾದವರಲ್ಲಿ ಎಲ್ಲಾ ತರದ ಅವಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಮೇಲೆ ಜ್ವರವುಂಟಾಗುವುದು ಈ ಲಕ್ಷಣಗಳಲ್ಲೊಂದು ಶೇಕಡಾ ೯೯ರಷ್ಟು ಸಂದರ್ಭಗಳಲ್ಲಿ ಈ ಐವಿಸ್ ಎಂಬ ದೆವ್ವವು ಮಲೇರಿಯದ ಒಂದು ಅವತಾರವೇ ಆಗಿರುತ್ತದೆ.

ಈ ದ್ವೀಪಗಳಲ್ಲಿ ಮಲೇರಿಯಾಜ್ವರವು ಭೀಕರ ಹಾವಳಿ ಮಾಡುತ್ತದೆ ಈ ದ್ವೀಪಗಳಲ್ಲೊಂದಾದ ನಾಗ ಕೊವರಿ ಎಂಬ ಒಂದರು ಸ್ಥಳ ಇದಕ್ಕೆ ಪ್ರಖ್ಯಾತಿ ಪಡೆದಿದೆ ಮುಂಚೆ ಇಲ್ಲಿದ್ದೊಂದು ಇಂಗ್ಲಿಷ ಖೂನಿಕೈದಿಗಳ ದ್ವೀಪಾಂತರ ವಸಾಹತನ್ನು ಈ ಜ್ವರ [illegible]ದಾಗಿ ಮುಚ್ಚಬೇಕಾ[illegible]ತು.

[illegible] ವಾಸಿಗಳು ನಾನಾ ಮಂತ್ರ ಮೋಡಿಗಳಿಂದ ಈ ದೈವಗಳ [illegible] ಯಿಂದ ತಮ್ಮ ನಾಡು, ಜೀವಚಿತ್ರಗಳನ್ನು [illegible] ಪ್ರಯತ್ನಿಸುವರು. ಕೊಳ್ಳೆಯನ್ನು [illegible] ಪ್ರೇತ [illegible] ತಮ್ಮ ಕೊಳ್ಳೆಯನ್ನು [illegible] ಬರುತ್ತವೆ

[illegible] ವಾಸಿಗಳು ತಮ್ಮ ಜ್ವರಕ್ಕೆ [illegible] ತೆಗೆದುಕೊಳ್ಳುವ [illegible] ಕೆಲಸವು ಅದೆಷ್ಟು ಸುಲಭವಾಗ [illegible] ಜ್ವರ ತಜ್ಞರಿಂದೊಡಗೂಡಿದ [illegible] ಮಲೇರಿಯಾ ಕಮಿಶನ್ [illegible] "ಮಲೇರಿಯಾ ಜ್ವರ ನಿರೋಧಕ ಔಷಧಿಗಳಲ್ಲಿ ಕ್ವಿನಿನು ಈಗ [illegible] ಸ್ಥಾನ ಪಡೆಯುತ್ತದೆ ಅದು ನಿರ್ಬಲಿ[illegible] ಧಾತ ರಹಿತವಾಗಿದ್ದು ಸಂಪೂರ್ಣ [illegible] ಹಾಗೂ ಅದರ ಕುರಿತಾದ [illegible] ಮತ್ತು ಉಪಯೋಗಗಳು ವಿಶಾಲ [illegible]ವುಗಳೂ ಆಗಿವೆ" ಹೀಗೆಂದು [illegible]ಲಾಗಿದೆ

[illegible] ಈ ಕೆಳಗಿನ ಪ್ರಮಾಣಗಳ ಕೊಡಲ್ಪಡುತ್ತವ 5ರಿಂದ 7 ದಿನಗಳ ವರೆಗೆ ದಿನಂಪ್ರತಿ ಕ್ವಿನೀನಿನ 15ರಿಂದ 20 [illegible]ಗಳಷ್ಟು ಜ್ವರಾನಂತರದ ಸೇವನ ಅವಶ್ಯವಿಲ್ಲ ಆದರೆ ಜ್ವರ ಪುನಃ [illegible] ದಲ್ಲಿ ಮೊದಲಿನಂತೇ ಮತ್ತೊಮ್ಮೆ [illegible]ಸುವುದು ಜ್ವರ ಹಾವಳಿಯ [illegible] ದಿನಂಪ್ರತಿ 6 ಕಾಳುಗ [illegible] ನ್ನು ಸೇವಿಸಿದರೆ ಯೋಗ್ಯ ಪ್ರತಿಬಂಧಕವಾಗಿದ್ದು, ಉತ್ತಮ ಸಂರಕ್ಷಣೆಯ ವಿಧಾನವಾಗಿದೆ ಇದನ್ನೂ ಮೇಲ್ಕಂಡ ತಜ್ಞ ಸಮಿತಿ ಶಿಫಾರಸು ಮಾಡಿದೆ

ಉಚಿತ ಗುಣಕಾರಿಯಾದ ಈ ಪಾಶ್ಚಾತ್ಯ ಪರಿಹಾರ ವಿಧಾನವನ್ನನುಸರಿಸುವ ಬದಲು ದುರ್ದೈವವಶಾತ್ ಇನ್ನೂ ಮೂಲ ನಿವಾಸಿಗಳು ಭೂತ ಪ್ರೇತ ಆಚ್ಛಾದನೆಗಳಲ್ಲೇ ತಮ್ಮ ಗಾಢ ವಿಶ್ವಾಸವನ್ನಿರಿಸುತ್ತಿರುವರು. ಇಂತಹ ಕನಿಕರಾಸ್ಪದ ವಿಷಯ ಪರಿಸ್ಥಿತಿಯನ್ನು ಬದಲಾಯಿಸಲಾಗುತಿದ್ದರೆ ಉಷ್ಣವಲಯದ ದೇಶಗಳಲ್ಲಿ ಮಲೇರಿಯವು ಈಗಿನಷ್ಟು ಅಪಾಯಕಾರಕ ವ್ಯಾಧಿಯಾಗಲಾರದು

ಇದೇ ತಾ 8-2-1948ನೇ ಆದಿತ್ಯವಾರ ಸಾಯಂಕಾಲ ಘಂ 6ಕ್ಕೆ
ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ
ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ
ಇವರ ಸಂಗೀತ ಕಚೇರಿ
ಆಸ್ಥಾನ ವಿದ್ವಾನ್ ಶ್ರೀ। ಚೌಡಯ್ಯ–ಇವರ ಪಿಟೀಲು
ಶ್ರೀ। ಕಲ್ಪಾತಿ ರಮಾನಾಥನ್–ಇವರ ಮೃದಂಗ
ಶ್ರೀ। ಆಲಂಗುಡಿ ರಾಮಚಂದ್ರನ್–ಇವರ ಘಟವಾದ್ಯ
ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಟಿಕೇಟು ದರ ಪೋಷಕ ವರ್ಗ. ರೂ 100, I 25, II 10, III 5

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಗುರಗಾವಿನ ಒಂದು ಹಳ್ಳಿಯ ಸಂದರ್ಶನ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಸಭಿಕರಿಗೆ ಗಾಂಧಿಯವರು ನಿರ್ವಾಸಿತರಾದ ಮಿಯೋ ಜನರನ್ನು ತಾವು ನೋಡಲು ಹೋದುದಾಗಿ ಹೇಳಿದರು. ಅನೇಕರು ಅಲ್ವಾರ ಮತ್ತು ಭರತಪುರ ಸಂಸ್ಥಾನಗಳಿಂದ ಹೊರದೂಡಲ್ಪಟ್ಟಿದ್ದಾರೆ ಕೆಲವರು ಪಾಕಿಸ್ತಾನಕ್ಕೆ ಹೋಗಿದ್ದಾರೆ ಉಳಿದವರು ತಾವು ಹೋಗಬೇಕೋ ಬೇಡವೋ ಎಂಬ ಸಂಶಯದಲ್ಲಿ ತೊಳಲಾಡುತ್ತಿದ್ದಾರೆ ತಮ್ಮ ಜೊತೆಗೆ ಬಂದ ಡಾ ಗೋಪೀಚಂದ ಭಾರ್ಗವರು ಅವರಲ್ಲಿ ಯಾರಿಗೆ ಇರಲು ಇಷ್ಟವಿದೆಯೋ ಅವರಿಗೆ ಅಲ್ಲಿರಲು ಹಕ್ಕಿದೆಯೆಂದ ಆಶ್ವಾಸನವಿತ್ತರೆಂದು ಗಾಂಧಿಯವರೆಂದರು ಅವರ ಘಿತ್ತ ಜೀವಿತಗಳನ್ನು ಸರಕಾರ ರಕ್ಷಿಸುವುದಾಗಿ ಗೋಪೀಚಂದರು ವಚನವಿತ್ತರು ಜನವಿಸಿಮಯ. ತಮಗೆಂದೂ ಹಿತವಾಗದೆಂದರು ಗಾಂಧಿಯವರು ಲಕ್ಷೋಪಲಕ್ಷ ಹೆಂಗಸರು, ಗಂಡಸರು ಮಕ್ಕಳನ್ನು ಕಿತ್ತೂಡಿಸುವುದೆಂದರೊಂದು ಭೂತ ಲೀಲೆಯೋ ಸರಿ ಈ ದು ಪಿ ಸಂದರ್ಭದಲ್ಲಿ ಯಾರು ಪಂದಿ ಹಿಂಸಗಾರಿ ಬಿಸಿದರು, ಯಾರು ಹೆಚ್ಚು ಹಿ ಸೆ ಮಾಡಿ ... ಎಂಬುದನ್ನ ವಿವೇಚಿಸುವುದು ಕಠಿಸ ... ಡಿತನವೇ ಸರಿ ... ತರ್ಕಿಸುವುದ ... ಶಾಂತಿಗೋಷ್ಠಿ ... ಸ್ವಬುದ್ಧಿಯಿಂದ ಪಾಕಿಸ್ತಾನಕ್ಕೆ ಹೋಗಬಯಸುವವರಿಗೆ ಹೋಗಲಾವ ಅಡ್ಡಿಯೂ ಇಲ್ಲ ಯಾರೂ ಅವರನ್ನು ... ಅವರನ್ನು ಒಕ್ಕಲೆಬ್ಬಿಸುವ ... ಸ್ವಧರ್ಮರಾಗಲಾರರು ... ಯೋಧಕರಾದವರು ... ರು ಅಪರಾಧಿಗಳ ... ಎಂದು ಈ ಆನಂದನ ... ಸ ಸ್ಥಾನ ಅವರನ್ನು ... ಸಂಯಾದ ಮಾರ್ಗವೆಂದರೆ ... ಗರಿಕರಾಗುವಂತೆ ಅವರನ್ನು ... ಸದ್ಭೋಧ ... ವುದು

ಬೆಲಗಳು ಮತ್ತು ವಿನಿಯಂತ್ರಣ

ಒಬ್ಬ ಗೆಳೆಯ ಹೇಳಿದ ... ವಿನಿಯಂತ್ರಣದಿಂದ ಸಕ್ಕರೆಯ ಬೆಲೆ ಏರಿದೆ ಎಂದು ... ಬೆಲೆ ಇಳಿದಿದೆ ಎಂದು ವರದಿ ಬಂದಿರುವುದಾಗಿ ಗಾಂಧಿಯವರೆಂದರು ... ಯಾದ ಕಾರಣವಿದ್ದೀತು ...

ಪೆಟ್ರೋಲಿನ ನಿಯಂತ್ರಣ

... ರಾಟವದೊಂದರೆ ಅತ್ಯ ಬಾಧಿತ ... ವ್ಯಾಧಾಯಿಯವರಿಗೆ ... ತೊಂದರೆಗಳಿದ್ದವು ಕಲ್ಲಿದ್ದಲಿ ಮತ್ತು ಡಬ್ಬಿಗಳ ಅಭಾವ ಆಗ ಬಹಳವಾಗಿತ್ತು ಆದಷ್ಟು ಬೇಗ ಅವುಗಳನ್ನು ಸುಧಾರಿಸಲು ಮಂತ್ರಿಗಳು ಪ್ರಯತ್ನಪಡುತ್ತಿದ್ದಾರೆ ರೇಲ್ವೆ ಇಲ್ಲದ್ದಾಗ ಭಾರತವು ವ್ಯಾಪಾರ ನಡೆಸುತ್ತಿತ್ತು ಈಗ ಅದಿರುವಾಗ ವಾಹನಗಳ ನ್ಯೂನತೆ ನಿಜವಾದ ತೊಂದರೆಯನ್ನು ತಂದಿತು ರೇಲ್ವೆ ಸಾರಿಗೆಯ ಬದಲು ಇಲ್ಲದೆ ಅದರ ಮೇಲೆ ಯಾವುದು ಉತ್ತಮ ವಾಹನ? ಮೋಟಾರು ಸಾರಿಗೆ ಕೂಡಲೆ ನೆನಪಾಯಿತು ಆದರೆ ಪೆಟ್ರೋಲಿಲ್ಲದಿದ್ದರೆ ಆ ಸಾರಿಗೆ ನಡೆಯಲಾರದು ಇದರಿಂದ ಪೆಟ್ರೋಲಿನ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂಬುದು ಮುಂದೆ ಬರುತ್ತದೆ. ಅದೇಕೆ ಹಾಗೆ ಮಾಡಲು ಕಷ್ಟವಾಗುವದೆಂಬುದನ್ನು ತಾವು ತಿಳಿಯಲಾರದಾಗಿರುವುದಕ್ಕಾಗಿ ಗಾಂಧಿಯವರೆಂದರು. ಅರ್ಥ ಅರ್ಥ ಕೆಲಸವನ್ನು ಯಾರೂ ಮಾಡಲಾರರು ನಿಯಂತ್ರಣವು ಹೋಗಲೇಬೇಕಾಗಿದ್ದರೆ ಅದು ಕಡೆಯ ಪಕ್ಷ ಪೆಟ್ರೋಲಿನ ಮೇಲಿಂದಾದರೂ ಹೋಗಬೇಕು ಪೆಟ್ರೋಲು ಪ್ರತಿಯೊಬ್ಬನಿಗೂ ಬೇಕಾದ ವಸ್ತುವಲ್ಲ ತಮ್ಮ ಬಳಕೆಗೆ ಬೇಕಾದಷ್ಟನ್ನು ಸರಕಾರವು ಇಟ್ಟುಕೊಳ್ಳಬಹುದು ಅವರು ಎಂದು ಬೇಕಾದರಂದು ತೆರೆದ ಸಂತೆಯಲ್ಲಿ ಕಳ್ಳಪೇಟೆಯ ಮುಖೇನ ಪೆಟ್ರೋಲನ್ನು ಕೊಳ್ಳಬಹುದು ಮೋಟಾರು ಸಾರಿಗೆ ಸುಲಭಸಾಧ್ಯವೆನಿಸಿದರೆ, ಉಪ್ಪಿನ ಬೆಲೆಯಲ್ಲಿ ಪರಿಕೆಯಿಲ್ಲದಾಗುವುದು ಉಪ್ಪಿನ ಉತ್ಪಾದನೆ ಸಾಧಾರಣ ಸವಕಷ್ಟಿದೆ, ಆದರೆ ಸಾರಿಗೆಯ ತೊಂದರೆ ಅದ್ದ ಬಂತು ಎಂದು ಗಾಂಧಿಯವರು ತಾವು ಕೇಳಿದುದಾಗಿ ಹೇಳಿದರು.

ಮಲದ ಗೊಬ್ಬರ

ಉತ್ಪಾದನೆಯ ನ್ಯೂನತೆಯಿಂದಲೇ ಆಹಾರದ ಕೊರತೆಯುಂಟಾದದ್ದು ... ಉತ್ಪಾದನ ... ಸಮರ್ಥ ಮಾರ್ಗ ... ನಾಲ್ಕೈ ... ಗಾಂಧಿಯವರು ... ದರು

ಗಾಂಧಿಯವರ ... ಒಕ್ಕ ... ಬೆಹನ್ (... ವ್ರ) ... ಸುಪುಟ ... ಪ್ರಸಾದ ... ಮತ್ತು ... ಅಲ್ಲಿಗೆ ನಡೆದ ... ದಿನಗಳ ಸಭೆಯ ನಂತರ ಅವರ ... ನಾಲಕ ... ಮಲ ಮತ್ತು ಹೊಲಸುಗಳಿಂದ ಗೊಬ್ಬರವನ್ನು ತಯಾರು ಮಾಡುವ ವಿಧಗಳನ್ನು ಅವುಗಳಲ್ಲಿ ವಿವರಿಸಲಾಗಿದೆ. ಆದರಿಂದ ಲಕ್ಷಗಟ್ಟಲೆ ರೂಪಾಯಿಗಳು ಉಳಿಯುವವುವಲ್ಲದೆ ದುರ್ಬಲಹೊಂದದೆ ನೆಲದ ಫಲವತ್ತೆ ಹೆಚ್ಚುತ್ತದೆ ಉತ್ಪಾದನೆ ಹೆಚ್ಚಿಸುವುದೇ ಪರಿಷತ್ತಿನಲ್ಲಿ ಭಾಗಿಗಳಾದವರ ಮುಖ್ಯೋದ್ದೇಶವಾಗಿತ್ತು ಇಂದು ಶ್ರೀಮತಿ ಮೀರಾ ಬೆಹನಳು ಋಷಿಕೇಶಕ್ಕೆ ಪಯಣ ಬೆಳೆಸಿದಳು, ಅವಳು ದನಕರುಗಳ ಪರಿಸ್ಥಿತಿಯ ಸುಧಾರಣೆ ಮತ್ತು ಮಲದ ಗೊಬ್ಬರವನ್ನು ಹಿಂದುಸ್ತಾನದಲ್ಲಿ ಎಲ್ಲೆಡೆಯೂ ತಯಾರಿಸುವಂತೆ ಮಾಡುವುದು ಈ ಕಲಸವನ್ನು ಮುಂಬರಿಸುವಳು ಅದೊಂದು ಕಷ್ಟದ ಕೆಲಸ, ಅದರ ಸಾಫಲ್ಯವು ಜನರ ಸಹಕಾರದ ಮೇಲೆ ಅವಲಂಬಿಸಿದೆ

ಬಿರ್ಲಾಭವನ ಹೊಸದಿಲ್ಲಿ, ೨೦ ೧೨—೪೭

ಹೇಡಿತನ ಬೇಡ

ಸಣ್ಣದಾಗಿಯೇ ಆಗಲಿ ದಿಲ್ಲಿಯಲ್ಲಿ ಮತ್ತೆ ದೊಂಬಿಯಾದುದಕ್ಕೆ ನನಗೆ ತುಂಬ ನೋವೆನಿಸುತ್ತದೆ ದಿಲ್ಲಿಯ ಹಿಂದುಗಳಾಗಲೀ ಸಿಖರಾಗಲೀ ಆದವರ ಪಾಕಿಸ್ತಾನದಿಂದ ಬಂದ ದುಃಖಿಗಳಾಗಲೀ ... ಮುಸಲ್ಮಾನರನ್ನು ಇರಗೊಡೆವು ಎಂದು ನಿರ್ಧರಿಸಿದ್ದರೆ ... ಅವರ ದಿಟ್ಟತನ ... ಮುಕ್ತಕಂಠದಿಂದ ಹೇಳಿಬಿಡಬೇಕು ಇದರಂತೆ ಸರಕಾರವು ... ಮುಸಲ್ಮಾನರನ್ನು ರಕ್ಷಿಸಲಿಲ್ಲವೆಂದ ... ಹೀಗೆ ಮಾಡುವುದರ ... ಒಂದಂತೆಯೇ ಈ ... ಗ ಪಸರಿಸಿದ್ದೇ ಅವಲ್ಲ ಅದು ಹಿಂದುಗಳ ಮತ್ತು ... ಕುಲವನ್ನೇ ... ನಾಶವು ಮಾಡಿ ಬಿಡುವದು ಇದರಂತೆ ಪಾಕಿಸ್ತಾನದಲ್ಲಿ ಹಿಂದುಗಳು ... ಸವಾಗಿ ಮರ್ಯಾದೆಯಿಂದ ಬಾಳುವದು ದುಸ್ತರವಾದರೆ ಹಿಂದುಸ್ತಾನದಲ್ಲಿ ಮುಸಲ್ಮಾನ ಧರ್ಮವನ್ನು ಅಳಿದು ಬಿಟ್ಟಂತೆಯೇ ಈ ಹೇಡಿತನವೇಕೆ? ಅದನ್ನು ಬಿಸುಟು ಬಿಡಿರಿ ಯಾರನ್ನಾಗಲೀ ಪರ್ಯಾಯವಾಗಿ ಹೊರ ನೂಕುವ ಹವಣಿಕೆಯು ಹೇಡಿತನವೆಂದೇ ನಾನು ತಿಳಿಯುತ್ತೇನೆ ಮುಸಲ್ಮಾನರು ಕೆಡುಕರಾಗಿದ್ದರೆ ಶೀಖರೂ ಹಿಂದೂಗಳೂ ಒಳ್ಳೆಯವರಾಗಿ ಉದಾರಿಗಳಾದರೆ ಕೆಡುಕರು ಖಂಡಿತ ಒಳ್ಳೆಯರಾಗುವರು ಇದೇ ನೀವು ಭಜನೆಯಲ್ಲಿ ಕೇಳಿರಬೇಕು ಮೀರಾದೇವಿ ಹೇಳಿದಳು, ದೇವಭಕ್ತನನ್ನು ಕಾಣುತ್ತಲೇ ತನಗೆ ಸುಖವೆನಿಸಿತೆಂದು. ಅದೇ ಸಂಸಾರಿಗಳನ್ನು ಕಂಡಾಗ ಆಕೆಗೆ ತುಂಬ ದುಃಖವಾಯಿತಂತೆ ದೇವಸಮರನ್ನು ಕಂಡಾಗ ಆಕೆಗೆ ದೈವೀಕ ಅನುಭವವಾಯ್ತು ಕಡುಕರ ಕೂಡ ವ್ಯವಹರಿಸುವದೆಂದರೆ ಅವರನ್ನು ತಿದ್ದುವದು ಅವರನ್ನು ಹೊರದೂಡೂವದಲ್ಲ ಅಥವಾ ಕೊಲ್ಲುವದಲ್ಲ

ಬಿರ್ಲಾ ಭವನ ಹೊಸದಿಲ್ಲಿ ೨೦—೧೨—೪೭

—ಕರ್ಮವೀರ

ರಾತ್ರಿ ಶೀತದಿಂದ ಶ್ವಾಸಕೋಶಕ್ಕೆ ಅಪಾಯ

ರಾತ್ರಿ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು. ಕೆಮ್ಮು ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯಲ್ಪಡುವುವು ಅಲ್ಲ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು. ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ

PEPS



ಶ್ವಾಸನೀಯ-ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುದು.

ನಾರದ ವಿಜ್ಞಾನ ವರದಿಗಳು

ಜೀವರಕ್ಷಣೀಯ ಬೂಂಬು

ಯುದ್ಧಕಾಲದ ಸ್ಫೋಟಕಗಳನ್ನು ಶಾಂತಿ ಕಾಲಕ್ಕೆ ಪರಿವರ್ತಿಸಿಕೊಳ್ಳುವುದರ ಕುರಿತು ಪ್ರಯೋಗಗಳನ್ನು ನಡೆಸಿದ ವಿಜ್ಞಾನಿಗಳು ಬಾಂಬುಗಳಿಗೆ ಹೊಸ ಉಪಯೋಗವನ್ನು ಕಂಡುಹಿಡಿದಿರುವರು ಈಗ ಜೀವನಾಶದ ಬದಲಿಗೆ ಜೀವರಕ್ಷಣೆಗಾಗಿ ಪರಿವರ್ತಿಸಬಹುದು. ದೂರದ ಸ್ಥಳವೊಂದರಲ್ಲಿ ಸಿಕ್ಕಿ ಬಿದ್ದವರಿಗೆ ಸಮುದ್ರ ಮಧ್ಯದ ದ್ವೀಪವೊಂದರಲ್ಲಿ ಇರುವವರಿಗೆ ಇಲ್ಲವೆ ನೆರೆಯ ಸಂಕಷ್ಟದಿಂದ ಸಹಾಯ ರಹಿತ ಸ್ಥಳದಲ್ಲಿರುವವರಿಗೆ ಈ ಬಾಂಬನ್ನು ಹಾರಿಸುವುದರ ಮೂಲಕ ಆಹಾರ ವಸ್ತುಗಳನ್ನು, ಔಷಧಿ ಉಪಯುಕ್ತ ವಸ್ತುಗಳನ್ನೂ ಸರಬರಾಜು ಮಾಡಬಹುದು. ಒಂದು ಪ್ರಯೋಗದಲ್ಲಿ 12 ವ್ಯಕ್ತಿಗಳು ... ಹಾನಿಯಿಲ್ಲದೆ ಇದರಿಂದ ಪ್ರೇರಿಸಿದ್ದರು

ಸೂಜಿಕಲ್ಲಿನ ಅದ್ಭುತ

... ಕ ... ಗಿಸಿ ... ಶಕ್ತಿಯಿಂದ ... ಚಿಕಿತ್ಸೆಯಿಂದ ... ಕೆಲಸವನ್ನು ಈ ... ದಿಂದ ಮಾಡಿದರೆ ಒಬ್ಬ ಹುಡುಗ ಒಂದು ಮೊಳೆಯನ್ನು ನುಂಗಿದ್ದನು ಅದು ಅವನ ಕರುಳಲ್ಲಿ ಸಿಕ್ಕಿಕೊಂಡಿತು ... ಹುಡುಗನು ಬದುಕುವುದು ಕಷ್ಟ ... ಒಂದು ವಿಶೇಷವಾದ ಸೂಜಿಕಲ್ಲನ್ನು ಮೀರಾಯಿಯಲ್ಲಿ ಹಾಕಿ ಹುಡುಗನಿಗೆ ... ಕೊಟ್ಟರು ಹುಡುಗನಿಗೆ ನಿದ್ದೆಯ ಔಷಧಿ ಕೊಟ್ಟಿದ್ದರು ಐದು ಗಂಟೆಯ ನಂತರ ಸೂಜಿಕಲ್ಲು ಮೊಳೆಯನ್ನು ಸಂಪರ್ಕಿಸಿತು. ಸೂಜಿಕಲ್ಲಿಗೆ ಕಟ್ಟಿ ಬಾಯಿಯ ಹೊರಗೆ ಹಿಡಿದ ದಾರವೊಂದನ್ನು ಚಾತುರ್ಯದಿಂದ ಎಳೆಯುವುದರ ಮೂಲಕ ಮೊಳೆಯನ್ನು ನಿರಪಾಯವಾಗಿ ಹೊರತರಲಾಯಿತು

ಬ್ರಿಟನಿನ ಅರ್ನ್ಸ್ಟಾಡ್ ಎಂಬಲ್ಲಿ ನಡೆದೊಂದು ಕಸೂತಿ ಕೆಲಸದ ಸ್ಪರ್ಧೆಯಲ್ಲಿ ವಿಲ್ಲಿಯಂ ಹಾತರ್ನ್‌ವೈಟ್ ಎಂಬ 20 ವರ್ಷದ ವೃದ್ಧನು ಎಲ್ಲಾ ಮಹಿಳೆಯರನ್ನು ಸೋಲಿಸಿ ಪ್ರಥಮ ಬಹುಮಾನ ಪಡೆದನು.

ಸ್ವದೇಶಾಭಿಮಾನಿ

ತಾರೀಕು 9-1-1948

ನೆಹರೂ ಸರಕಾರಕ್ಕೆ ಬೆಂಬಲ ಕೊಡಿರಿ.

ಕರ್ನಾಟಕ ಏಕೀಕರಣ ಪರಿಷತ್ತಿನಿಂದ ಹಿಂತೆರಳಿದ ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿ ಶ್ರೀ ಮಂಗಳವೇಡೆ ಶ್ರೀನಿವಾಸರಾಯರು ಕರ್ನಾಟಕ ಪ್ರಾಂತವನ್ನು ಕೂಡಲೇ ನಿರ್ಮಾಣ ಮಾಡುವುದಿಲ್ಲವಾದರೆ "ಡ್ಯಾರೆಕ್ಟ್ ಎಕ್ಶನ್" ತೆಗೆದುಕೊಳ್ಳುವುದಾಗಿ ಭಾಷಣ ಮಾಡಿ ಪ್ರಚಾರ ಕಾರ್ಯಕ್ಕೆ ಆರಂಭ ಮಾಡಿರುವರೆಂದು ಪತ್ರಿಕಾ ವಾರ್ತೆಗಳಿಂದ ತಿಳಿದುಬರುತ್ತದೆ. "ಡ್ಯಾರೆಕ್ಟ್ ಎಕ್ಶನ್" ಎಂದರೆ ಕಾಯಿದೆಭಂಗ ಚಳುವಳಿ ಎಂದರ್ಥ. ಈ ಬಗೆಯ ಬೇಜವಾಬ್ದಾರಿ ಪ್ರಚಾರ ಕಾರ್ಯವನ್ನು ಮೊಳಕೆಯಲ್ಲಿಯೇ ಮುರಿಯುವುದು ಅತ್ಯಾವಶ್ಯಕವಿರುವುದರಿಂದ ಈ ಕುರಿತು ನಾವು ಪುನಃ ಒತ್ತಿ ಬರೆಯಬೇಕಾಗಿದೆ.

ಈಗ ಭಾರತ ರಾಷ್ಟ್ರಸಭೆಯ ಅಧ್ಯಕ್ಷರಾಗಿರುವ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ನಮ್ಮ ರಾಜ್ಯದ ಭಾವೀ ಘಟನೆಯನ್ನು ರೂಪಿಸುವ ಘಟನಾ ಸಮಿತಿ ಕೆಲಸ ಮಾಡುತ್ತಿದೆ. ಈ ಘಟನಾ ಸಮಿತಿಯವರು ರೂಪಿಸುವ ರಾಜ್ಯ ಘಟನೆಯಲ್ಲಿ ಕರ್ನಾಟಕ ಪ್ರಾಂತ್ಯ ನಿರ್ಮಾಣ ಮಾಡಿಕೊಡುವುದಿಲ್ಲವಾದರೆ ಈ ಸಮಿತಿಯವರು ರಚಿಸುವ ಘಟನೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂದು ಏಕೀಕರಣ ಪರಿಷತ್ತು ನಿರ್ಣಯ ಮಾಡಿತು.

ಇಷ್ಟರಿಂದ ತೃಪ್ತರಾಗದೆ ಏಕೀಕರಣ ಸಂಘದ ಕಾರ್ಯದರ್ಶಿಯವರು "ಡ್ಯಾರೆಕ್ಟ್ ಎಕ್ಶನ್ನಿ"ಗೆ ಹೊರಡುವುದಾಗಿ ಸಾರಲು ಆರಂಭಿಸಿದ್ದಾರೆ. "ಡ್ಯಾರೆಕ್ಟ್ ಎಕ್ಶನ್" ಚಳವಳ ಯಾರ ವಿರುದ್ಧವಾಗಿ ಎಂಬುದನ್ನು ಸ್ಪಷ್ಟಪಡಿಸಬೇಕಷ್ಟೆ? ಇದು ಪಂಡಿತ ಜವಾಹರಲಾಲರು ಪ್ರಧಾನ ಮಂತ್ರಿಯವರಾಗಿ ಸರದಾರ ವಲ್ಲಭಭಾಯಿ ಪಟೇಲರು ಉಪಪ್ರಧಾನ ಸಚಿವರಾಗಿ ನಡೆಸುತ್ತಿರುವ ಕೇಂದ್ರ ಸರಕಾರದ ವಿರುದ್ಧವಾಗಿ "ಡ್ಯಾರೆಕ್ಟ್ ಎಕ್ಶನ್" ಹೂಡುವ ಯೋಜನೆಯೆಂಬುದನ್ನು ಎಲ್ಲ ಮಹಾಜನರೂ ತಿಳಿದುಕೊಳ್ಳುವಂತೆ ಸ್ಪಷ್ಟವಾಗಿ ಹೇಳುವುದು ಒಳ್ಳೆಯದು.

ಈ ಏಕೀಕರಣ ಸಂಘದವರು ತಾವು ಈ ಬಗೆಯ ಚಳವಳ ನಡೆಸುವುದು ಮಾತ್ರವಲ್ಲ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೂ ಇದರಲ್ಲಿ ಭಾಗವಹಿಸಬೇಕೆಂಬುದು ಏಕೀಕರಣ ಪರಿಷತ್ತಿಗೆ ಬಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರನ್ನು ಕೂಡಾ ಸೇರಿಸಿಕೊಂಡಿರುವುದನ್ನು ಪರಿಷತ್ತಿಗೆ ಹೋದವರೆಲ್ಲ ಬಲ್ಲರು. ಭಾರತ ರಾಷ್ಟ್ರಸಭೆಯ ವಿರುದ್ಧ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಹೋರಾಡಬೇಕಂತೆ! ಶ್ರೀ ನಿಜಲಿಂಗಪ್ಪನವರಾದರೂ ಈ ಕುರಿತು ವಿಚಾರಿಸಲಿಕ್ಕೆ ಬೇಗನೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆ ಸೇರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಬೇಗನೆ ಸೇರಲಿರುವ ಈ ಸಭೆಯಲ್ಲಾದರೂ ಯಾವ ರೀತಿ ವರ್ತಿಸುವದೆಂದು ಕುತೂಹಲದಿಂದ ನಾವು ಇದಿರುನೋಡುತ್ತಿದ್ದೇವೆ.

ಏಕೀಕರಣದ ಮುಂದಾಳುಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕೊಟ್ಟಿರುವ ಒಂದು ಮುಖ್ಯ ಸಲಹೆಯೆಂದರೆ ಶಾಸನ ಸಭೆಗಳಲ್ಲಿ ಮತ್ತು ಘಟನಾಸಮಿತಿಗಳಲ್ಲಿ ಕರ್ನಾಟಕದ ಕಾಂಗ್ರೆಸ್ ಸಂಸ್ಥೆಯ ಪರವಾಗಿ ಇರುವ ಪ್ರತಿನಿಧಿಗಳಿಂದ ನಮ್ಮ ನಿಷೇಧ ಸೂಚಿಸಲು ರಾಜೀನಾಮೆ ಕೊಡಿಸಬೇಕು ಎಂಬುದು. ಅಂದರೆ ಪಂಡಿತ ನೆಹರು ಸರಕಾರದ ಧೋರಣೆಗೆ ಆಕ್ಷೇಪ ಅಥವಾ ನಿಷೇಧ ಸೂಚಿಸಲು ಅಥವಾ ಆ ಧೋರಣೆಯನ್ನು ಪ್ರತಿಭಟಿಸಲು ಹಾಗೂ ಘಟನಾ ಸಮಿತಿಯವರು ರೂಪಿಸುವ ಘಟನೆಗೆ ವಿರೋಧ ತೋರಿಸಲು ಇದು ಒಂದು ಸಾಧನವೆಂದು ಕಲ್ಪಿಸಲಾಗಿದೆ.

ನಮ್ಮ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಇಂಥ ಆಜ್ಞೆಯನ್ನು ಕೊಡುವಷ್ಟು ಮೂರ್ಖತನ ತೋರಿಸಲಿಕ್ಕಿಲ್ಲವೆಂದು ನಾವು ನಂಬುತ್ತೇವೆ. ಯಾಕೆಂದರೆ ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ನಮ್ಮ ಶಾಸನಸಭೆಯ ಪ್ರತಿನಿಧಿಗಳು ರಾಜೀನಾಮೆ ಕೊಟ್ಟು ಪುನಃ ಚುನಾವಣೆಗೆ ನಿಂತರೆ ಅವರು ಪುನಃ ಆರಿಸಿ ಬರುವಂತಿಲ್ಲವೆಂದು ನಾವು ಕಂಠೋಕ್ತವಾಗಿ ಸಾರಿ ಎಚ್ಚರಿಕೆ ಕೊಡಲು ಬಯಸುತ್ತೇವೆ.

ಕನ್ನಡಿಗರಿಗೆ ಪಂಡಿತ ಜವಾಹರಲಾಲರೆಂದರೆ ಯಾರೆಂಬ ಪರಿಚಯ ಚೆನ್ನಾಗಿರುತ್ತದೆ. ಸರದಾರ ವಲ್ಲಭಭಾಯಿ ಪಟೇಲರ ಕಾರ್ಯದಕ್ಷತೆಯನ್ನು ಅವರೀಗ ಕಣ್ಣಾರೆ ನೋಡುತ್ತಿದ್ದಾರೆ. ಘಟನಾ ಸಮಿತಿಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರಿಗಿಂತ ಸಮಬುದ್ಧಿಯ ಕಾಂಗ್ರೆಸ್ ಮುಂದಾಳುಗಳು ಇಂದು ಭಾರತದಲ್ಲಿ ಬೇರೊಬ್ಬರಿಲ್ಲವೆಂಬುದರ ಅರಿವು ಕನ್ನಡಿಗರಿಗೆ ಮಾತ್ರವೇಕೆ ಅಖಿಲ ಭಾರತಕ್ಕೆ ಗೊತ್ತಿದೆ. ಇಂಥ ಭಾರತ ಸ್ವಾತಂತ್ರ್ಯ ಸಮರದ ಮುಂದಾಳುಗಳ ಮೇಲೆ ವ್ಯರ್ಥ ಆರೋಪಗಳನ್ನು ಹೊರಿಸಿ ಬಂಡಾಯವೆಬ್ಬಿಸಿದರೆ ಇದಕ್ಕೆ ಕರ್ನಾಟಕದಲ್ಲಿ ಬೆಂಬಲ ದೊರಕೀತೆಂದು ಯಾರಾದರೂ ಭಾವಿಸಿದರೆ ಅವರು ಅದನ್ನು ಪ್ರತ್ಯಕ್ಷ ಪರೀಕ್ಷೆ ಮಾಡಿ ನೋಡುವುದೇ ಹಿತಕರವೆನ್ನಬಹುದು.

ಇಂದು ಶಾಸನ ಸಭೆಗಳಿಗೆ ಕಾಂಗ್ರೆಸಿನ ಹೆಸರಲ್ಲಿ ಚುನಾವಣೆ ಹೊಂದಿದ ನಮ್ಮ ಪ್ರತಿನಿಧಿಗಳಿಗೆ ಜನರು ಚುನಾವಣೆಯಲ್ಲಿ ಬೆಂಬಲ ಕೊಟ್ಟುದು ಕಾಂಗ್ರೆಸ್ ಸಂಸ್ಥೆಯ ಮೇಲಿನ ಭಕ್ತಿ ವಿಶ್ವಾಸಗಳಿಂದಲ್ಲದೆ ಈ ಪ್ರತಿನಿಧಿಗಳ ವ್ಯಕ್ತಿತ್ವದ ಕಡೆಗೆ ನೋಡಿ ಅಲ್ಲವೆಂಬುದನ್ನು ಈ ಪ್ರತಿನಿಧಿಗಳಾದರೂ ಇಷ್ಟು ಬೇಗನೆ ಮರೆಯಬಾರದು. ಕಾಂಗ್ರೆಸ್ ಸಂಸ್ಥೆಯ ಮೇಲೆ ಜನರಿಗೆ ಭಕ್ತಿ ವಿಶ್ವಾಸಗಳು ಅಷ್ಟೊಂದು ಇರುವುದಾದರೂ ಪಂಡಿತ ಜವಾಹರಲಾಲರಂಥ ಉಜ್ವಲ ರತ್ನಗಳು ಆ ಸಂಸ್ಥೆಯ ಮುಂದಾಳುಗಳಾಗಿರುವುದರಿಂದ ಎಂಬುದನ್ನು ಮರೆಯುವುದು ಬೇಡ.

ಕರ್ನಾಟಕ ಏಕೀಕರಣದ ಮುಂದಾಳುಗಳಾದರೂ ಇಷ್ಟೊಂದು ಗಲಾಟೆ ಮಾಡುವುದಾದರೂ ಏತಕ್ಕೆಂದು ನಮಗಂತೂ ಅರ್ಥವಾಗುವುದಿಲ್ಲ. ಕರ್ನಾಟಕ ಪ್ರಾಂತ್ಯ ನಿರ್ಮಾಣವು ಸ್ವಲ್ಪ ಜಟಿಲ ಪ್ರಶ್ನೆ ಇರುವುದರಿಂದ ಇದನ್ನು ಬಿಡಿಸಲು ಸಮಯ ಬೇಕಾಗುತ್ತದೆಂದು ಪಂಡಿತ ನೆಹರು ಅವರು ಸಹಜವಾಗಿ ಹೇಳಿದ ಮಾತಿಗೆ ಇಷ್ಟೆಲ್ಲ ಗಲಾಟೆ-ಪ್ರತಿಭಟನೆ. ಆಂಧ್ರ ಪ್ರಾಂತ ರಚನೆ ಸರಳ ಸಂಗತಿ ಇರುವುದರಿಂದ ಈಗಲೇ ಕೈಕೊಳ್ಳಬಹುದೆಂದು ಹೇಳಿದ್ದು ಇನ್ನಷ್ಟು ಇವರನ್ನು ರೇಗಿಸಿರುತ್ತದೆ. ಪಂಡಿತ ಜವಾಹರಲಾಲರ ಮಾತುಗಳಲ್ಲಿ ಸತ್ಯಾಂಶವಿದೆಯೋ ಇಲ್ಲವೋ ಎಂಬುದನ್ನು ವಿವೇಚಿಸದೆ ಈ ಬಗೆಯ ಬರಿ ಗುಲ್ಲಿನಿಂದ ಯಾವ ಸಾರ್ಥಕತೆಯೂ ಇಲ್ಲ.

ಕರ್ನಾಟಕ ಪ್ರಾಂತ್ಯ ನಿರ್ಮಾಣವು ಎಷ್ಟು ಜಟಿಲ ಪ್ರಶ್ನೆಯೆಂಬುದನ್ನು ಸಾಹಿತ್ಯ ಸಮ್ಮೇಲನದಲ್ಲಿ ಶ್ರೀ ತಾತಾಚಾರ್ಯರು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಈ ಕುರಿತು ಹೇಳಿರುವ ಮಾತುಗಳನ್ನು ಓದಿದರೆ ಯಾರಿಗೂ ಸ್ಪಷ್ಟವಾಗುವುದು. ಕೆಲವು ಮಾತುಗಳನ್ನು ಕೆಳಗೆ ಕೊಟ್ಟಿರುತ್ತದೆ.

"ಕಾರ್ಯಾರಂಭದ ವಿಚಾರ ಬಂದ ಕೂಡಲೆ ಹತ್ತಾರು ಸಮಸ್ಯೆಗಳ ಕಾರ್ಮೋಡಗಳು ನಮ್ಮೆಲ್ಲರ ಮನೋಲೋಕವನ್ನು ಕವಿಯುತ್ತವೆ. ಅವುಗಳಲ್ಲಿ ಹಲವನ್ನು ಕೂಡಲೆ ಬಿಡಿಸಲು ಸಾಧ್ಯ. ಮತ್ತೆ ಕೆಲವನ್ನು ಕಾಲಪುರುಷನೇ ಬಗೆಹರಿಸಬೇಕು . . . ಮೊದಲ ಗುಂಪಿನ ಸಮಸ್ಯೆಗಳಿಗೆ "ಕರ್ನಾಟಕ ಸಬ್ ಫೆಡರೇಶನ್" ಪರಿಹಾರೋಪಾಯ . . . . ಎರಡನೆ ಗುಂಪಿನ ಸಮಸ್ಯೆಗಳಲ್ಲಿ ಸಂಸ್ಥಾನಗಳ ಮಾತು ದೊಡ್ಡದು."

ಈ ರೀತಿ ಪ್ರಶ್ನೆಗಳ ಸ್ವರೂಪ ಹೇಳಿ ಶ್ರೀ ಶರ್ಮರು ಮೈಸೂರಲ್ಲಿ ಪ್ರಜಾ ಸರಕಾರ ಸ್ಥಾಪನೆಯಾಗಿರುವದರಿಂದ ಅಲ್ಲಿಯ ಮಹಾರಾಜರು ಶಾಸನಬದ್ಧ ರಾಜರಾಗಿದ್ದಾರೆ. ಅವರು ಅಖಿಲ ಕರ್ನಾಟಕದ ಶಾಸನಬದ್ಧ ರಾಜರಾಗಿ ಮುಂದೆ ವ್ಯವಸ್ಥೆ ಮಾಡಬಹುದೆಂದು ಸೂಚಿಸಿದ್ದಾರೆ. ಹೈದರಾಬಾದು ಸಂಸ್ಥಾನಕ್ಕೆ ಸೇರಿದ ಮೂರು ಕನ್ನಡ ಜಿಲ್ಲೆಗಳ ಪ್ರಶ್ನೆ ಹಾಗೂ ಉತ್ತರ ಕರ್ನಾಟಕದ ಹದಿನಾಲ್ಕು ಚಿಕ್ಕ ಸಂಸ್ಥಾನಗಳ ಪ್ರಶ್ನೆಯನ್ನು ಎತ್ತಿ ಹೇಳಿದ್ದಾರೆ. ಗಡಿ ನಿರ್ಣಯಗಳ ಸಮಸ್ಯೆಯನ್ನು ಸೌಹಾರ್ದದಿಂದ ತೀರ್ಮಾನಿಸುವ ಆವಶ್ಯಕತೆಯನ್ನು ಹೇಳಿದ್ದಾರೆ. ಮತ್ತೆ ಅವರು ಈ ಪ್ರಶ್ನೆಗಳನ್ನೆಲ್ಲ ಹೇಗೆ ಬಿಡಿಸಬಹುದೆಂದು ತಮ್ಮ ಸೂಚನೆ ಕೊಟ್ಟು ಕರ್ನಾಟಕ ಏಕೀಕರಣ ಮಹಾಸಭೆಯು ಈ ಪ್ರಶ್ನೆಗಳ ಕಡೆಗೆ ಗಮನ ಕೊಡಬಹುದೆಂದು ಸೂಚಿಸಿದ್ದಾರೆ.

ಪಂಡಿತ ಜವಾಹರಲಾಲರು ಸರಕಾರ ವಹಿಸಿಕೊಂಡು ಕೇವಲ ಐದು ತಿಂಗಳುಗಳು ಇನ್ನೂ ಪೂರ್ತಿಯಾಗಿಲ್ಲ. ಕೇಂದ್ರ ಸರಕಾರದ ಮುಂದೆ ಜನಾಂಗದ ಜೀವನ ಮರಣದ ಮಹತ್ವದ ಜಟಿಲ ಸಮಸ್ಯೆಗಳಿವೆ. ಅವನ್ನು ಎಷ್ಟು ಉತ್ತಮ ರೀತಿಯಲ್ಲಿ ಬಗೆಹರಿಸಬಹುದೋ ಅಷ್ಟು ಉತ್ತಮ ರೀತಿಯಲ್ಲಿ ಕೇಂದ್ರ ಸರಕಾರವು ತಮ್ಮ ಮುಂದಿನ ಪ್ರಶ್ನೆಗಳನ್ನು ಎದುರಿಸುತ್ತಿದೆ. ಕೇಂದ್ರ ಸರಕಾರ ನಡೆಸಲು ಈಗ ಇರುವ ಜನರು ಭಾರತದ ಮುಂದಾಳುಗಳಲ್ಲಿ ಆರಿಸಿ ತೆಗೆದ ಅತ್ಯುತ್ತಮ ಮುಂದಾಳುಗಳೆಂಬುದು ನಿರ್ವಿವಾದ. ಇಂಥವರಿಗೆ ಅಖಿಲ ಹಿಂದುಸ್ಥಾನವು ಸಂಪೂರ್ಣ ಬೆಂಬಲ ಕೊಡುವುದು ದೇಶದ ದೃಷ್ಟಿಯಿಂದ ಅತ್ಯಂತ ಮಹತ್ವದ ಆವಶ್ಯಕತೆ ಇರುತ್ತದೆ. ಇಂಥ ಪ್ರಸಂಗದಲ್ಲಿ ತಮ್ಮ ಸಂಕುಚಿತ ಬುದ್ಧಿ ತೋರಿಸಿ ಸಲ್ಲದ ಚಳವಳಗಳನ್ನು ಯಾರೂ ಎಬ್ಬಿಸಕೂಡದಾಗಿಯೂ ಯಾರಾದರೂ ತಿಳಿಗೇಡಿತನದಿಂದ ತಪ್ಪು ದಾರಿಯಲ್ಲಿ ಮುಂದರಿದರೆ ಅವರಿಗೆ ಯಾವ ಬಗೆಯ ಬೆಂಬಲವನ್ನೂ ಕೊಡದೆ ತಿದ್ದುವುದು ಅಗತ್ಯವೆಂದೂ ಎಲ್ಲ ಕನ್ನಡಿಗರಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ. ಅಖಿಲ ಕರ್ನಾಟಕದ ಕನ್ನಡಿಗರೆಲ್ಲರೂ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನೆಹರೂ ಸರಕಾರಕ್ಕೆ ಪೂರ್ಣ ಬೆಂಬಲ ಕೊಡುವರೆಂದು ನಂಬುತ್ತೇವೆ.

ಟೀಕೆ-ಟಿಪ್ಪಣಿಗಳು

ಕಾಶ್ಮೀರಕ್ಕಾಗಿ ಯುದ್ಧವೆ?

ಕಾಶ್ಮೀರದಲ್ಲಿ ಪಾಕಿಸ್ಥಾನ ಸರಕಾರ ನಡೆಸುವ ಕಾರ್ಯಭಾರ ಎಲ್ಲರಿಗೂ ತಿಳಿದ ವಿಚಾರ. ಕಾಶ್ಮೀರ ಸರಕಾರಕ್ಕೆ ವಿರುದ್ಧವಾಗಿ ದಂಗೆ ನಡೆಸುವವರು ಕಾಶ್ಮೀರದಲ್ಲಿ ಈಗ ಐವತ್ತು ಸಾವಿರ ಮಂದಿ ಇದ್ದಾರೆಂದು ಇನ್ನೂ ಒಂದು ಲಕ್ಷ ಮಂದಿ ಪಾಕಿಸ್ಥಾನದ ಗಡಿಯೊಳಗೆ ತರ್ಬೇತಿ ಹೊಂದುತ್ತಿದ್ದಾರೆಂದೂ ಪಂಡಿತ ನೆಹರೂರವರು ಹೇಳುತ್ತಾರೆ. ಕಾಶ್ಮೀರ ಪ್ರಕರಣ ಪಾಕಿಸ್ಥಾನದವರೇ ನಡೆಸುತ್ತಿರುವದೆಂಬುದು ಇಲ್ಲಿ ಎಲ್ಲರಿಗೂ ಗೊತ್ತಿದೆ.

ಕಾಶ್ಮೀರದಲ್ಲಿ ಯುದ್ಧ ಮಾಡುವವರೊಡನೆ ಹಿಂದೀ ಸರಕಾರ ಹೋರಾಡುತ್ತಾ ಇದೆ. ಪಾಕಿಸ್ಥಾನದ ಗಡಿಯೊಳಗೆ ನಡೆಯುವ ಸನ್ನಾಹದ ಗೊಡವೆಗೆ ಇನ್ನು ಹೋಗಿಲ್ಲ. ಗಡಿಯನ್ನು ಪ್ರವೇಶಿಸಿ ಈ ಸನ್ನಾಹಗಳನ್ನು ನಿಲ್ಲಿಸಲು ಯತ್ನಿಸುವುದು ಆತ್ಮರಕ್ಷಣೆಗಾಗಿ ಎಂಬುದರಿಂದ ತಪ್ಪಾಗುವದಿಲ್ಲವೆಂದು ನೆಹರೂರವರು ಹೇಳುತ್ತಾ[illegible]

ಆದರೂ ಈ ರೀತಿ ವರ್ತಿಸದೆ ಪಾಕಿಸ್ಥಾನದ ವರ್ತನವನ್ನು ಕುರಿತು ಹಿಂದೀ ಸರಕಾರವು ಸಂಯುಕ್ತ ರಾಷ್ಟ್ರ ಸಭೆಯ ಸೆಕ್ಯೂರಿಟೀ ಕೌನ್ಸಿಲಿಗೆ ದೂರು ಕೊಟ್ಟಿರುತ್ತದೆ. ಯುದ್ಧ ನಿವಾರಣೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಈ ಸಂಸ್ಥೆಗೆ ಈ ಪ್ರಶ್ನೆಯನ್ನು ಒಪ್ಪಿಸಿ ಕೊಟ್ಟುದು ಹಿತಕರವಾಯಿತೆನ್ನಲು ಅಡ್ಡಿಯಿಲ್ಲ.

ಪಾಕಿಸ್ಥಾನ ಹಿಂದೂಸ್ಥಾನಗಳೊಳಗೆ ಯುದ್ಧವಾಗದೆ ಈ ಜಟಿಲ ಪ್ರಶ್ನೆಯು ಶಾಂತಿಯಿಂದ ತೀರ್ಮಾನವಾಗುವಂತಾಗ್ಲಲೆಂದು ಹಾರೈಸುತ್ತೇವೆ.

ಬರ್ಮಾ ಸ್ವಾತಂತ್ರ್ಯ

ಬರ್ಮಾ ದೇಶದ ಸ್ವಾತಂತ್ರ್ಯ ಸಮಾರಂಭವು ಅತ್ಯಂತ ವಿಜೃಂಭಣೆಯಲ್ಲಿ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಭಾರತ ಪ್ರತಿನಿಧಿಯಾಗಿ ನಮ್ಮ ರಾಷ್ಟ್ರ ಸಭೆಯ ಅಧ್ಯಕ್ಷ ಬಾಬುರಾಜೇಂದ್ರ ಪ್ರಸಾದರು ಭಾರತದ ಪ್ರತಿನಿಧಿಯಾಗಿ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದರು. ಸ್ವತಂತ್ರ ಭಾರತ ಮತ್ತು ಸ್ವತಂತ್ರ ಬರ್ಮಾ ದೇಶಗಳು ಪರಸ್ಪರ ಬಾಂಧವ್ಯದಿಂದ ಮುಂದೆ ವರ್ತಿಸಿ ಏಷಿಯಾದ ಜನರ ಮುನ್ನಡೆಯನ್ನು ಸಾಧಿಸುವಂತಾಗಲೆಂದು ಈ ಸಂದರ್ಭದಲ್ಲಿ ಎಲ್ಲರೂ ಹಾರೈಸಬೇಕು.

ಸೀಲೋನು

ಸೀಲೋನಿನ ಮುಖ್ಯ ಮಂತ್ರಿಯವರೂ ಹಿಂದೂಸ್ಥಾನಕ್ಕೆ ಬಂದು ನಮ್ಮ ಪ್ರಧಾನ ಮಂತ್ರಿಯವರೊಡನೆ ಮಾತುಕತೆಗಳನ್ನು ನಡೆಸಿ ಹಿಂದುಸ್ಥಾನ ಮತ್ತು ಸೀಲೋನಿನೊಳಗೆ ಇರತಕ್ಕ ಪ್ರಶ್ನೆಗಳನ್ನು ಚರ್ಚಿಸಿ ಬಂದ ತೀರ್ಮಾನಗಳ ಕಡೆಗೆ ತಮ್ಮ ಪೂರ್ಣ ತೃಪ್ತಿಯನ್ನು ಸೂಚಿಸಿದ್ದಾರೆ. ಭಾರತವೂ ಸೀಲೋನೂ ಪರಸ್ಪರ ಮೈತ್ರಿಯಲ್ಲಿ ಮುಂದೆ ವರ್ತಿಸುವ ವಿಚಾರದಲ್ಲಿಯೂ ಸಂಶಯ

ಶ್ರೀಮತಿ ಅನುಸೂಯಾಬಾಯಿ ಕಾಳೆಯವರ ವಿನಂತಿ.

ಇದೇ ಕಳೆದ ದಶಂಬರ ತಾರೀಕು 29ಕ್ಕೆ ಮದರಾಸಿನಲ್ಲಿ ಅಖಿಲಭಾರತ ಮಹಿಳಾ ಪರಿಷತ್ತು ಸೇರಿತ್ತು. ಇದರ ಅಧ್ಯಕ್ಷೆಯರಾದ ಶ್ರೀಮತೀ ಅನುಸೂಯಾಬಾಯಿ ಕಾಳೆಯವರೂ, ಈ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯರಾದ ಶ್ರೀಮತಿ ಊರ್ಮಿಳಾ ಮೆಹತಾ ಮತ್ತು ಶ್ರೀಮತಿ [illegible]ರಾದ ಕಾಮೇಶ್ವರಿಯಮ್ಮ ಆಪಾಬಾಯಿ ವಾಡಿಯಾ ಮತ್ತು ನೆಲ್ಲೀ ಕಾರ್ಟ್‌ರ್ಯಾಟ್ ಇವರೂ ಶ್ರೀಮತೀ ಕಮಲಾದೇವಿಯವರ ಜೊತೆಯಲ್ಲಿ ಮಂಗಳೂರನ್ನು ಸಂದರ್ಶಿಸಲು ಬಂದಿದ್ದು ತಾರೀಕು 7ನೇ ಸಾಯಂಕಾಲ ಕೇಂದ್ರ ಮೈದಾನಿನಲ್ಲಿ ಇವರದೊಂದು ಸಾರ್ವಜನಿಕ ಸಭೆ ಸೇರಿತು.

ಈ ಸಭಾಧ್ಯಕ್ಷ ಸ್ಥಾನವನ್ನು ಕೈಕೊಂಡು ಶ್ರೀಮತಿ ಕಮಲಾದೇವಿಯವರು ಶ್ರೀಮತೀ ಅನುಸೂಯಾ ಬಾಯಿ ಕಾಳೆಯವರ ಪರಿಚಯ ಮಾಡಿಕೊಡುತ್ತ ಇವರು ಬೆಳಗಾವಿಯಲ್ಲಿ ಹುಟ್ಟಿದವರೆಂಬುದರಿಂದ ಕನ್ನಡಿಗರಿದ್ದರೂ ಇವರ ಮುಖ್ಯ ಕಾರ್ಯಕ್ಷೇತ್ರವು ಮಧ್ಯ ಪ್ರಾಂತ್ಯದ ನಾಗಪುರವೆಂದೂ ಇವರು ಇದುವರೆಗೆ ಮಾಡಿದ ದೇಶಸೇವೆ ಮತ್ತು ಮಧ್ಯಪ್ರಾಂತ್ಯದ ಶಾಸನಸಭೆಯ ಡೆಪ್ಯೂಟಿ ಸ್ಪೀಕರ್ ಆಗಿ ಮಾಡಿದ ಕೆಲಸ ಇತ್ಯಾದಿಗಳನ್ನು ವಿವರಿಸಿದರು. ಇದೇ ರೀತಿ ಶ್ರೀಮತಿ ಜವಂಬ್ಮಾ ವಾಡಿಯಾರವರು ಮಹಿಳಾ ಪರಿಷತ್ತಿನ ಮುಂಬಾಯಿಯಲ್ಲಿರುವ ಕೇಂದ್ರ ಆಫೀಸಿನ ಮುಖ್ಯ ಕಾರ್ಯಕರ್ತರೆಂದು ಪರಿಚಯ ಮಾಡಿಕೊಟ್ಟರು.

ಆ ಬಳಿಕ ಶ್ರೀಮತಿ ವಾಡಿಯಾರವರು ಮಹಿಳಾ ಪರಿಷತ್ತಿನ ಕಾರ್ಯಗಳನ್ನು ವಿವರಿಸಿ ಮಾತನಾಡಿದರು. ಈ ಸಂಸ್ಥೆಯು ಇಪ್ಪತ್ತು ವರ್ಷಗಳ ಕೆಳಗೆ ಮಿಸೆಸ್ ಮಾರ್ಗರೆಟ್ ಕಜಿನ್ಸ್ ಮೊದಲಾದವರ ಪ್ರಯತ್ನದಿಂದ ಸ್ಥಾಪಿತವಾಯಿತು. ಮದ್ರಾಸಿನಲ್ಲಿ ಸೇರಿದ್ದ ಪರಿಷತ್ತಿನ 20ನೇ ಅಧಿವೇಶನ ಅಖಿಲಭಾರತದಿಂದ 210 ಮಂದಿ ಪ್ರತಿನಿಧಿಗಳು ಸುಮಾರು 200 ಮಂದಿ ಪ್ರೇಕ್ಷಕರೂ ಬಂದಿದ್ದರು. ಪರಿಷತ್ತಿಗೆ ಈಗ 45 ಶಾಖೆಗಳಿವೆ. ಪ್ರಾಂತಿಕ ಪರಿಷತ್ತುಗಳು ಸೇರಿ ವಿಷಯಗಳನ್ನು ಚರ್ಚಿಸಿ ಕೇಂದ್ರ ಸಭೆಗೆ ಕಳುಹಿಸುತ್ತವೆ. ಒಂದು ಸ್ಥಾಯೀ ಸಮಿತಿಯು ಇವನ್ನು ಸಿದ್ಧಪಡಿಸಿ ಕೇಂದ್ರ ಪರಿಷತ್ತಿಗೆ ಒಪ್ಪಿಸುತ್ತದೆ. ಕೇಂದ್ರ ಪರಿಷತ್ತು ಚೆನ್ನಾಗಿ ವಿಚಾರಿಸಿಯೇ ನಿರ್ಣಯಗಳನ್ನು ಮಾಡುತ್ತದೆ.

ಈ ಬಾರಿಯ ಪರಿಷತ್ತಿಗೆ ಇಂಡೋನೇಶಿಯದಿಂಥ ಮೂವರು ಮಹಿಳೆಯರು ಪ್ರಯಾಣದ ಕಷ್ಟಗಳನ್ನು ಎಣಿಸದೆ ಬಂದಿದ್ದರು.

ಪರಿಷತ್ತಿನ ಬೊಂಬಾಯಿಯ ಕೇಂದ್ರ ಸಂಸ್ಥೆ ಮೂರು ವರ್ಷಗಳ ಕೆಳಗೆ ಸ್ಥಾಪಿಸಲ್ಪಟ್ಟಿತು. ಸ್ತ್ರೀಯರ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಿ ಇಲ್ಲಿಂದ ಹಲವು ಚಿಕ್ಕ ಪುಸ್ತಕಗಳನ್ನು ಪ್ರಕಟಿಸಲಾಗುತ್ತದೆ. ಒಂದು ಮಾಸ ಪತ್ರಿಕೆಯನ್ನು ಇಂಗ್ಲೀಷು ಹಿಂದುಸ್ಥಾನೀ ಮತ್ತು ಉರ್ದು ಭಾಷೆಗಳಲ್ಲಿ ಪ್ರಕಟಿಸಲಾಗುತ್ತದೆ.

ಈ ಕೇಂದ್ರ ಆಫೀಸು ಪರದೇಶಗಳ ಸ್ತ್ರೀಯರೊಡನೆ ಸಂಬಂಧ ಬೆಳೆಸಲಿಕ್ಕೆ ಯತ್ನಿಸುವುದು ಇದರ ಇನ್ನೊಂದು ಕೆಲಸ. ಸಂಯುಕ್ತ ರಾಷ್ಟ್ರಗಳ ಸಭೆಯ ಸಾಮಾಜಿಕ ಮತ್ತು ಆರ್ಥಿಕ ಸ್ಪೆಶ್ಯಲ್ ಕೌನ್ಸಿಲಿನವರು ಈ ಪರಿಷತ್ತನ್ನು ಇಲ್ಲಿಯ ಮಾಹಿತಿ ಕೊಡುವ ಸಂಸ್ಥೆಯನ್ನಾಗಿ ಸ್ವೀಕರಿಸಿದ್ದಾರೆ. [illegible] ಅಖಿಲಭಾರತ ಮಹಿಳಾ ಪರಿಷತ್ತಿನ ಹಲವು ಚಟವಟಿಕೆಗಳ ಮಾಹಿತಿ ಮಾಡಿಕೊಟ್ಟರು.

ಅನಂತರ ಅಖಿಲಭಾರತ ಪರಿಷದದ ಈ ವರ್ಷದ ಅಧ್ಯಕ್ಷೆಯಾದ ಶ್ರೀಮತಿ ಅನುಸೂಯಾಬಾಯಿ ಕಾಳೆಯವರು ಮಾತನಾಡುತ್ತ ತಾನು ಬೆಳಗಾವಿಯಲ್ಲಿ ಹುಟ್ಟಿದ್ದು [illegible]ದ್ದರೂ ತನ್ನ ಬಾಲ್ಯದಲ್ಲಿ ಹೆಚ್ಚಿನ ಅಂಶ ಕಳೆದುದು ಬರೋಡಾದಲ್ಲಿ. ಈಗಿನ ಕಾರ್ಯಕ್ಷೇತ್ರ ನಾಗಪುರ. ಹೀಗಿದ್ದು ಕನ್ನಡದಲ್ಲಿ ಮಾತನಾಡಲು ಅಸಮರ್ಥಳಾಗಿದ್ದೇನೆ.

ಅಖಿಲಭಾರತ ಮಹಿಳಾ ಪರಿಷದದ ಆರಂಭದಿಂದ ಈ ಸಂಸ್ಥೆಯನ್ನು ಕಟ್ಟಲು ಶ್ರೀಮತಿ ಕಮಲಾದೇವಿಯವರು ಮಾಡಿದ ಸಾಹಸ ಸ್ವಲ್ಪವಲ್ಲ. ಇದರ ವ್ಯವಸ್ಥಾಪಕ ಕಾರ್ಯದರ್ಶಿಯರಾಗಿ ಇವರು ಅಖಿಲ ಭಾರತವನ್ನು ಅನೇಕ ಬಾರಿ ಸುತ್ತಾಡಿ ಇದರ ಶಾಖೆಗಳನ್ನು ಅಲ್ಲಲ್ಲಿ ಸ್ಥಾಪಿಸಿ ನಿಜವಾಗಿ ಈ ಸಂಸ್ಥೆಯನ್ನು ಕಟ್ಟಿದವರು. ಇವರ ಯತ್ನಗಳಿಲ್ಲದಿದ್ದರೆ ಈ ಸಂಸ್ಥೆ ಇಂದಿನ ಸ್ಥಿತಿಗೆ ಬರುತ್ತ ಇರಲಿಲ್ಲ ಮಾತ್ರವಲ್ಲ ನಾನೂ ಪ್ರಾಯಶಃ ನಿಮ್ಮ ಮುಂದೆ ಇಂದು ಬಂದು ನಿಲ್ಲುವ ಪ್ರಸಂಗವೂ ಬರುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಅಂತೂ ಅಂಥ ಉಜ್ವಲ ಕೆಲಸಗಾರರನ್ನು ಭಾರತಕ್ಕೆ ಕೊಟ್ಟ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಅಖಿಲಭಾರತದ ಋಣವನ್ನು ಹೇಳಿಕೊಳ್ಳುವುದು ನನ್ನ ಪ್ರಥಮ ಕರ್ತವ್ಯ.

ಈ ಪರಿಷದವು ವರ್ಷಕ್ಕೊಮ್ಮೆ ಸೇರಿ ಕೆಲವು ಠರಾವುಗಳನ್ನು ಮಾಡುತ್ತದಲ್ಲದೆ ಮತ್ತೇನೂ ನೋಡುವುದಿಲ್ಲವೆಂದು ಆಕ್ಷೇಪಿಸುವವರಿದ್ದಾರೆ. ಇದು ತಪ್ಪು ಅಭಿಪ್ರಾಯ. ಅಖಿಲ ಭಾರತದಿಂದ ಸ್ತ್ರೀಯರು ಒಂದೆಡೆ ಸೇರಿ ವಿಚಾರವಿನಿಮಯ ಮಾಡಿ ಪರಸ್ಪರ ಸಂಬಂಧ ಬೆಳೆಸುವುದಾದರೂ ಮಹತ್ವದ ಸಂಗತಿಯೇ ಇರುತ್ತದೆ. ಆದರೆ ಪರಿಷದದ ಕಾರ್ಯ ಇಲ್ಲಿಗೇನೆ ಮುಗಿಯುವುದಿಲ್ಲ. ನಮ್ಮ ಬೊಂಬಾಯಿಯಲ್ಲಿಯ ಕೇಂದ್ರ ಕಚೇರಿಯಲ್ಲಿ ನಡೆಯುತ್ತಲಿರುವ ಕಾರ್ಯವನ್ನು ಶ್ರೀಮತಿ ವಾಡಿಯಾರವರು ನಿಮಗೆ ತಿಳಿಸಿರುವರು.

ಡೆಲ್ಲಿಯಲ್ಲಿ ಲೇಡಿ ಇರ್ವಿನ್ ಕಾಲೇಜು ಎಂಬ ಸ್ತ್ರೀಯರ ಕಾಲೇಜನ್ನು ನಮ್ಮ ಸಂಸ್ಥೆಯು ನಡೆಸುತ್ತಿದೆ. ಇಲ್ಲಿ ಹುಡುಗಿಯರು ಗೃಹಕೃತ್ಯದ ಜವಾಬ್ದಾರಿ ಹೊರಲು ಸಿದ್ಧರಾಗುವಂತೆ ಮಾಡುವ ಶಿಕ್ಷಣ ಕೊಡಲಾಗುತ್ತಿದೆ. ಇದು ಪೂರ್ಣ ಯಶಸ್ವಿಯಾಗಿ ನಡೆಯುತ್ತಿರುವುದನ್ನು ಕಂಡು ಬೆಂಗಳೂರಿನ ಕೆಲವು ಮಂದಿ ಸ್ನೇಹಿತರು ಇಂಥ ಕಾಲೇಜು ತಮ್ಮಲ್ಲಿಯೂ ನಡೆಸಬೇಕೆಂದೂ ಇದಕ್ಕೆ ಬೇಕಾಗುವ ಹಣವನ್ನು ತಾವು ಒದಗಿಸುವುದಾಗಿಯೂ ಪರಿಷದವನ್ನು ಕೇಳಿಕೊಂಡಿದ್ದಾರೆ.

ಗ್ರಾಮಸ್ಥ ಜನರಿಗೆ ವೈದ್ಯಕೀಯ ಸಹಾಯ ಒದಗಿಸುವ ನಾಲ್ಕು ವೇನುಗಳ ಏರ್ಪಾಡೂ ಈಗ ಇರುತ್ತದೆ. ಸತಾರಾ ಜಿಲ್ಲೆಯಲ್ಲಿ, ರತ್ನಾಗಿರಿ ಜಿಲ್ಲೆಯಲ್ಲಿ ಬೊಂಬಾಯಿಯಲ್ಲಿ ಮತ್ತು ಡೆಲ್ಲಿಯಲ್ಲಿ ಹೀಗೆ ಈಗ ನಾಲ್ಕು ಕೇಂದ್ರಗಳಲ್ಲಿ ಈ ಕಾರ್ಯ ನಡೆಯುತ್ತಿದೆ. ಐದನೆಯದಾಗಿ ನನ್ನ ಮಧ್ಯಪ್ರಾಂತ್ಯದಲ್ಲಿ ಇದನ್ನು ಆರಂಭಿಸಬೇಕೆಂಬ ಆಸೆ ನನ್ನಲ್ಲಿದೆ.

ಇವಲ್ಲದೆ ಗುಡಿಕೈಗಾರಿಕೆಗಳ ಶಿಕ್ಷಣ ಕೊಡುವ ಸಂಸ್ಥೆಯೊಂದನ್ನು ಸ್ತ್ರೀಯರಿಗಾಗಿ ಏರ್ಪಡಿಸುವ ಯೋಜನೆಯೊಂದನ್ನು ಕೈಕೊಂಡಿದ್ದೇವೆ. ಇದೂ ಯಶಸ್ವಿಯಾದರೆ ಎಷ್ಟು ಉಪಯೋಗವಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಘಟನಾಸಮಿತಿಗೆ ಸ್ತ್ರೀಯರ ಹಕ್ಕುಗಳ ಒಂದು 'ಚಾರ್ಟರ್' ಅಧಿಕಾರ ಪತ್ರ ಒಪ್ಪಿಸಿದ್ದೇವೆ. ನಮಗೆ ಶಾಸನ ಸಭೆಗಳಲ್ಲಿ ಪ್ರತ್ಯೇಕ ಸ್ಥಾನಗಳನ್ನು [illegible]ಕೆಂದು ನಾವು ಕೇಳಿಲ್ಲ. ರೌಂಡ್ ಟೇಬಲ್ ಪರಿಷತ್ತಿನ ದಿನಗಳಿಂದ ನಾವು ಇಂಥ ಕಾದಿಟ್ಟ ಸ್ಥಳಗಳನ್ನು ಅಪೇಕ್ಷಿಸಲಿಲ್ಲ. ನಮ್ಮ ಯೋಗ್ಯತೆಯಿಂದ ಈ [illegible] ಸ್ಥಾನಗಳನ್ನು ಹೊಂದಬಹುದೆಂದು ನಮಗೆ ಗೊತ್ತಿದೆ. ಮಜೂರ ವರ್ಗದ ಸ್ತ್ರೀಯರ ಪ್ರಶ್ನೆಯನ್ನೂ ಕೈಕೊಂಡಿದ್ದೇವೆ. ಗಂಡು ಹೆಣ್ಣು ಕೆಲಸಗಾರರಿಗೆ ಒಂದೇ ಬಗೆಯ ಕೆಲಸಕ್ಕೆ ಮಜೂರಿಯಲ್ಲಿ ತಾರತಮ್ಯವಿರಲಾಗದೆಂದು ಸಾಧಿಸುತ್ತಿದ್ದೇವೆ. ಇತ್ತೀಚೆಗೆ ಇತರ ಉದ್ಯೋಗಗಳಲ್ಲಿಯೂ ಸ್ತ್ರೀಯರ ಸಂಖ್ಯೆ ಅಧಿಕವಾಗುತ್ತಿದೆ. ಇವರ ಹಕ್ಕುಗಳನ್ನೆಲ್ಲ ಕಾಪಾಡುವುದು ನಮ್ಮ ಪರಿಷದದ ಪವಿತ್ರ ಕಾರ್ಯವೆಂದಿಟ್ಟುಕೊಂಡಿದ್ದೇವೆ.

ಹಿಂದೂಸ್ಥಾನವು ಈಗ ಸ್ವತಂತ್ರ ರಾಷ್ಟ್ರವಾಗಿದೆ. ಮುಂದೆ ಪ್ರತಿಯೊಬ್ಬ ಪ್ರಾಯಕ್ಕೆ ಬಂದ ಸ್ತ್ರೀಪುರುಷರಿಗೆ ಮತದಾನದ ಹಕ್ಕು ಇರುವ ರಾಜ್ಯ ಘಟನೆ ಜಾರಿಗೆ ಬರುತ್ತಿದೆ. ಇಂಥ ಸಂದರ್ಭದಲ್ಲಿ ಸ್ತ್ರೀಯರ ಜವಾಬ್ದಾರಿಯು ಇನ್ನು ಹೆಚ್ಚಾಗುತ್ತದೆ. ಮಾಹಿತಿಯುಳ್ಳ ಸ್ತ್ರೀ/ಕೆಲಸಗಾರರನ್ನು ತರ್ಬೇತಿಗೊಳಿಸುವುದು ನಮ್ಮ ಕೆಲಸ.

ಕಾಂಗ್ರೆಸ್ ಸಂಸ್ಥೆಯಾದರೂ ಮುಂದೆ ಸರ್ವರಿಗೂ ಸಮಾನ ಸಂದರ್ಭಗಳನ್ನೊದಗಿಸುವ ಸಮತಾವಾದೀ ರಾಷ್ಟ್ರವನ್ನು ನಿರ್ಮಿಸುವ ಧ್ಯೇಯವಿಟ್ಟುಕೊಂಡಿದೆ. ನಾವಾದರೂ ಇದೇ ಧ್ಯೇಯದಿಂದ ದುಡಿಯುತ್ತೇವೆ. ರಾಜಕೀಯ ವಿಚಾರಗಳಲ್ಲಿ ಬೇಕಾಗಿದ್ದಾರೆ ಪುರುಷರು ಪ್ರಮುಖ ಭಾಗ ವಹಿಸಬಹುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪ್ರಮುಖ ಭಾಗವು ನಮಗೆ ಸೇರಿದುದು. ಭಾರತ ರಾಷ್ಟ್ರ ಸಭೆಯು ಇಟ್ಟುಕೊಂಡಿರುವ ವಿಧಾಯಕ ಕಾರ್ಯಕ್ರಮವನ್ನೇ ನಾವು ಅನುಸರಿಸುತ್ತೇವೆ.

ಇಂಥ ಈ ಸಂಸ್ಥೆಯ ವಿಷಯ ತಪ್ಪು ಅಭಿಪ್ರಾಯ ಇಟ್ಟುಕೊಳ್ಳಲಾಗದು. ಸ್ತ್ರೀಯರು ತಮ್ಮ ಚಿನ್ನಾಭರಣ ಮೊದಲಾದ ಅಲಂಕಾರಗಳನ್ನು ಪ್ರದರ್ಶಿಸಲು ವರ್ಷಕ್ಕೊಮ್ಮೆ ಸೇರುವರೆಂದು ದೂರಬಾರದು. ಸ್ತ್ರೀಯರು ಅಲಂಕೃತರಿರುವುದು ತಪ್ಪಲ್ಲ. ಎಲ್ಲ ಸಾರ್ವಜನಿಕ ಕಾರ್ಯಕ್ಕೂ ಗೃಹವೇ ಕೇಂದ್ರವಿದ್ದು ಸ್ತ್ರೀಯರು ಸಾಲಂಕೃತರಿದ್ದು ಗೃಹಣಿಯ ಕಾರ್ಯಗಳನ್ನು ಸಾಂಗವಾಗಿ ನೆರವೇರಿಸಲೇ ಬೇಕು. ನನ್ನ ಪರಿಷದದ ಕುರಿತು ಪುರುಷರಲ್ಲಿ ಮಾತ್ರವಲ್ಲ ಅನೇಕ ಸ್ತ್ರೀಯರಲ್ಲಿಯೂ ತಪ್ಪು ಅಭಿಪ್ರಾಯಗಳಿವೆ. ಇವನ್ನೆಲ್ಲ ದೂರಪಡಿಸಿ ಪ್ರತಿಯೊಬ್ಬ ಸ್ತ್ರೀಯೂ ಈ ಸಂಸ್ಥೆಗೆ ಬೆಂಬಲ ಕೊಡಬೇಕು. ಈ ರೀತಿ ಕಾಳೆಯವರು ವಿನಂತಿ ಮಾಡಿದರು.

ಕೊನೆಗೆ ಶ್ರೀಮತಿ ಲೀಲಾಬಾಯಿ ಏಕಾಂಬರರಾವ್ ಇವರು ಇಲ್ಲಿಯ ಸ್ತ್ರೀಯರ ಪರವಾಗಿ ಅಭ್ಯಾಗತರಿಗೆ ಧನ್ಯವಾದ ಸಮರ್ಪಿಸಿದರು. ಶ್ರೀಮತಿ ಲೀಲಾಬಾಯಿ [illegible] "ಜನಗಣಮನ" ಹಾಡಿನೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಪರಿಷದದ ಕಡೆಯಿಂದ ಬಂದ ಈ ಸ್ತ್ರೀಯರು [illegible] ಮಂಗಳೂರಲ್ಲಿ ನಡೆಯುತ್ತಲಿರುವ ಸ್ತ್ರೀಯರ ಎಲ್ಲ ಚಟುವಟಿಕೆಗಳನ್ನೂ ಸಂಸ್ಥೆಗಳನ್ನೂ ಪರಿಶೀಲಿಸಿದರು.

ವಿಲ್ಲ. ಈ ರೀತಿ ನೆರೆಹೊರೆಯ ಜನರು ಸ್ನೇಹದಿಂದ ವರ್ತಿಸಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಒಂದು ಉದಾಹರಣೆ ತೋರಿಸಿಕೊಡುತ್ತಿರುವುದು ಏಸಿಯದ ಜಾಗ್ರತಿಯಿಂದ ಭಾವೀ ಜಗತ್ತಿನ ಮೇಲೆ ಮುಂದೆ ಯಾವ ಬಗೆಯ ಪರಿಣಾಮವಾದೀತೆಂಬುದನ್ನು ಸೂಚಿಸುತ್ತಿದೆ. ಮುಂದೆ ಜಗತ್ತಿನ ಶಾಂತಿಯನ್ನು ರಕ್ಷಿಸುವ ಮುಖ್ಯ ಜವಾಬ್ದಾರಿ ಏಸಿಯದ ಜನರ ಮೇಲೆ ಹೊಂದಿಕೊಂಡಿದೆಯೆಂಬುದನ್ನು ಯಾರೂ ಮರೆಯಬಾರದು.

ಸ್ವೀಕಾರ

ಕ್ರಾಂತಿ ಪಥದಲ್ಲಿ: ಜಯಪ್ರಕಾಶ ನಾರಾಯಣ. ಸಂಪಾದಕರು, ಯೂಸುಫ್ ಮೆಹರ್ ಅಲಿ. ಕನ್ನಡಿಸಿದವರು: ಶ್ರೀ ನಗಲೂರು ಶ್ರೀನಿವಾಸರಾಯರು ಎಂ ಎ, ಬಿ ಟಿ ಶ್ರೀ ಮ ಗ ಶೆಟ್ಟಿ. ಪ್ರಕಾಶಕರು ಸಾಹಿತ್ಯ ಭಂಡಾರ ಹುಬ್ಬಳ್ಳಿ ಬೆಲೆ ೩-೮-೦

ವರ್ಧಾ ಶಿಕ್ಷಣ ಯೋಜನೆ: ಶಿಕ್ಷಣವನ್ನು ಕುರಿತು ಡಾಕ್ಟರ್ ಝಾಕೀರ್ ಹುಸೇನ್ ಸಮಿತಿಯ ವರದಿ. ಪ್ರಕಾಶಕರು ಸಾಹಿತ್ಯ ಭಂಡಾರ ಹುಬ್ಬಳ್ಳಿ ಬೆಲೆ ೦-೧೨-೦

ಸಂಪಿಗೆ: (ಪ್ರಣಯದ ಕುಚ್ಚಾಟ) ಶ್ರೀ ಶ್ರೀನಿವಾಸ, ಬಾ ವ ಬೆಲೆ ೦-೧೦-೦

ಕೋದಂಡನ ಉಪನ್ಯಾಸಗಳು: ಶ್ರೀ ಜಿ ವಾಮನ ಭಟ್ಟ, ಮಿತ್ರ ಮಂಡಲಿ, ಇವರಿಂದ. ಪ್ರಕಾಶಕರು ಬಾಳಿಗಾ ಎಂಡ್ ಸನ್ಸ್ ಸ್ಟೋರ್ ಡಿಟ್ಟೈಲ್ ಪೌರ ಪುಸ್ತಕ ಮಾಲೆಯ ಎರಡನೇ ಭಾಗ ಕ್ರೌನ್ ೧೬ನೇ ಆಕೃತಿ. ಬೆಲೆ ಒಂದು ಕಾಲು ರೂಪಾಯಿ

The Winter Maidens and Other Short Stories: Edited by Uma Devi. Publishers The Indo Polish Library Price Rs. 4-8-0.

ಜಿಲ್ಲಾ ಪ್ರಪಂಚ

ಮಹಿಳಾ ಸಭೆ: ಕಳೆದ ತಾ. 28ರಂದು ಸೆಂಟ್ರಲ್ ಮೈದಾನದಲ್ಲಿ ಇಲ್ಲಿಯ ಭಗಿನಿ ಸಮಾಜದ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅ. ಭಾ. ಮಹಿಳಾ ಪರಿಷತ್ತಿನ ಅಧ್ಯಕ್ಷೆ ಶ್ರೀ ಅನುಸೂಯಾ ಬಾಯಿ ಕಾಳೆಯವರು ಭಾಷಣವಿತ್ತರು. ಶ್ರೀಮತಿ ಕಮಲಾ ದೇವಿಯವರೂ ಸಭೆಗೆ ಚಿತ್ತೈಸಿದ್ದರಲ್ಲದೆ ಅನೇಕ ಮಹಿಳಾ ಪ್ರತಿನಿಧಿಗಳೂ ನೆರೆದಿದ್ದರು. ಅ. ಭಾ. ಮಹಿಳಾ ಪರಿಷತ್ತು ಬೊಂಬಾಯಿಯಲ್ಲಿ ಜರಗಿದಾಗ ನಿರ್ಣಯಿಸಲ್ಪಟ್ಟ ಗೊತ್ತುವಳಿಗಳನ್ನು ಶ್ರೀಮತಿ ಕಾಳೆಯವರು ವಿವರಿಸಿದರು. ಭಾರತ ಮಹಿಳೆಯರ ಉದ್ಧಾರ ಅಭಿವೃದ್ಧಿಗಳನ್ನು ಸಾಧಿಸಲು ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನವರು ಸೂಚಿಸಿದರು.

ಹೊಸ ಹೋಟೇಲು: ಹಂಪನಕಟ್ಟೆಯ ಬಳಿ ಶ್ರೀ ಟಿ. ನರ್ಸಪ್ಪಯ್ಯನವರ ನೆಹರು ಲಂಚ್ ಹೋಮ್ ಎಂಬ ಫಲಹಾರ ಮಂದಿರದ ತೆರೆಯೋಣ ಸಮಾರಂಭವನ್ನು ನಗರ ಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಸ್ ಎಂ. ಎಲ್ ಎ. ಅವರು ಜರಗಿಸಿದರು.

ಸಿಲೆಕ್ಷನ್ ಪರೀಕ್ಷೆ ನಗರದ ಹೈಸ್ಕೂಲುಗಳ ಎಸ್. ಎಸ್. ಎಲ್. ಸಿ. ಸಿಲೆಕ್ಷನ್ ಪರೀಕ್ಷೆಯ ಫಲಿತಾಂಶಗಳು ಪ್ರಕಟವಾಗಿವೆ. ಕೆನರಾ ಹೈಸ್ಕೂಲುಗಳ ಮತ್ತು ಮಿಶನ್ ಹೈಸ್ಕೂಲುಗಳಲ್ಲಿ ಈ ಸಲ ಎಲ್ಲಾ ವಿದ್ಯಾರ್ಥಿಗಳನ್ನು ಆರಿಸಲಾಗಿದೆಯೆಂದು ತಿಳಿದುಬರುತ್ತದೆ.

ಹವಾಮಾನ—ಬೇಸಿಗೆ ಕಾಲವು ಪ್ರಾರಂಭವಾದಂತೆ ಚಳಿಯ ಅನುಭವವು ಕಡಿಮೆಯಾಗಿ ಬಿಸಿಲಿನ ಭರವು ಹೆಚ್ಚಾಗುತ್ತಿದೆ. ಜಿಲ್ಲೆಯ ಹಲವು ಕಡೆಗಳಲ್ಲಿ ಸುಗ್ಗಿ ಬೆಳೆಗೆ ಈ ಸಲದ ವಿಪರೀತ ಬಿಸಿಲಿನಿಂದ ಸ್ವಲ್ಪ ಮಟ್ಟಿಗೆ ಹಾನಿಯಾಗಿದೆಯೆಂದು ತಿಳಿದು ಬರುತ್ತದೆ.

ಸಕ್ಕರೆ—ನಾಗರೀಕರಿಗೆ ಐದು ತಿಂಗಳ ಕೋಟಾವನ್ನು ರಾತ್ಲಿಗೆ 0—8—2 ಪ್ರಕಾರ ಕೊಡಲಾಗುವುದೆಂದು ಪ್ರಕಟವಾಗಿದೆ. ಈ ಪ್ರಮಾಣಕ್ಕೆ ಮಿಕ್ಕಿ ಉಳಿದ ಸಕ್ಕರೆ ಗೋಣಿಗಳು ಏಲಂ ಮಾಡಲ್ಪಟ್ಟಾಗ ಅತಿ ಹೆಚ್ಚಿನ ಬೆಲೆಗಳಿಗೆ ಅವು ಮಾರಿ ಹೋಗಿವೆ ಎಂದು ತಿಳಿದು ಬರುತ್ತದೆ.

ಸಮ್ಮೇಳನ—ಜಿಲ್ಲಾ ಪ್ರೆಸ್ ಕೆಲಸಗಾರರ ಸಮ್ಮೇಳನವೊಂದು ಸೆಂಟ್ರಲ್ ಮೈದಾನಿನಲ್ಲಿ ತಾ. 4ರಂದು ಶ್ರೀ ಕೆ. ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ ಪ್ರೆಸ್ ಕೆಲಸಗಾರರ ಹಿತಾಭಿವೃದ್ಧಿಗೈಯ್ಯುವ ಕಾರ್ಯಕ್ರಮಗಳ ಕುರಿತು ಪರ್ಯಾಲೋಚಿಸಲಾಯಿತೆಂದು ತಿಳಿದು ಬರುತ್ತದೆ.

ಮಂತ್ರಿದ್ವಯರ ಜಿಲ್ಲಾ ಸಂಚಾರ

ಇದೇ ತಾ. 7ರಿಂದ 11ರ ವರೆಗೆ ದ. ಕ. ಜಿಲ್ಲೆಯಲ್ಲಿ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದ ಮಾನ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀ ಭಕ್ತವತ್ಸಲಂ ಅವರು ಅನಿರೀಕ್ಷಿತವಾಗಿ ಇತರ ಜರೂರು ಕೆಲಸಗಳಿಂದಾಗಿ ಸದ್ಯಕ್ಕೆ ತಮ್ಮ ಸಂಚಾರ ಕಾರ್ಯಕ್ರಮವನ್ನು ನಿಲ್ಲಿಸಿರುವರು. ಇವರು ~~ತಾ. 11ರಂದು ಸಾಯಂಕಾಲ ಇಲ್ಲಿಯ~~ ಕೆನರಾ ಹೈಸ್ಕೂಲಿನಲ್ಲಿ ಜರಗುವ ವಾಣಿಜ್ಯ ಸಂಘದ ದಿನಾಚರಣೆಗೆ ಮಾತ್ರ ಬರಲಿರುವರೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ವತಿಯಿಂದ ಅಧಿಕೃತವಾಗಿ ತಿಳಿಸಲಾಗಿದೆ.

ಉಡುಪಿ ರೈತ ಸಂಘಕ್ಕೂ ಕಾಂಗ್ರೆಸ್ ಕೃಷಿಕ ಸಂಬಂಧವಿಲ್ಲ: ದ. ಕ. ಜಿಲ್ಲಾ ಕಾಂಗ್ರೆಸ್ ಆಶ್ರಯದಲ್ಲಿ ಇಡೀ ಜಿಲ್ಲೆಯ ಕೃಷಿಕರ ಸಂಘವೊಂದನ್ನು ಸ್ಥಾಪಿಸುವ ಪ್ರಯತ್ನವನ್ನು ನಡಿಸುತ್ತಿದ್ದೇವೆ. ಇಷ್ಟರಲ್ಲಿ ನಾವು ಕೆಲವು ಕಡೆಗಗಳಲ್ಲಿ ತಿರುಗಿ ಕೃಷಿಕ ಸಂಘಗಳನ್ನು ತಾತ್ಕಾಲಿಕವಾಗಿ ಸ್ಥಾಪಿಸುತ್ತೇವೆ. ಈ ಸಂಬಂಧವಾದ ರಶೀದಿಗಳನ್ನೂ ಅಲ್ಲಿ ಕೊಟ್ಟಿರುತ್ತೇವೆ. ಬರುವ ಫೆಬ್ರವರಿ ತಿಂಗಳಲ್ಲಿ ಇಡೀ ಜಿಲ್ಲೆಗಳ ಕೃಷಿಕ ಪ್ರತಿನಿಧಿಗಳ ಪರಿಷತ್ತೊಂದನ್ನು ಮಂಗಳೂರಲ್ಲಿ ನಡಿಸಿ, ದ. ಕ. ಜಿಲ್ಲಾ ಕೃಷಿಕ ಸಂಘವು ಸ್ಥಾಪಿಸಲ್ಪಡುತ್ತದೆ. ಕೃಷಿಕ ಸಂಘಕ್ಕೂ ಉಡುಪಿಯಲ್ಲಿ ಸ್ಥಾಪಿತವಾಗಿರುವ ರೈತ ಸಂಘಕ್ಕೂ ಯಾವ ಸಂಬಂಧವೂ ಇಲ್ಲ.

ಕೆ. ಕೆ. ಶೆಟ್ಟಿ.
ಪ್ರಧಾನ ಕಾರ್ಯದರ್ಶಿ

ಹೋಟೇಲು ಪ್ರವೇಶ ಚಳವಳಿ: ಉಳ್ಳಾಲದಲ್ಲಿನ ಹರಿಜನರಿಗೆ ಅಲ್ಲಿಯ ಕೆಲವು ಹೋಟೇಲುಗಳವರು ಪ್ರವೇಶ ಕೊಡಲು ಆಕ್ಷೇಪಿಸುತ್ತಿರುವರೆಂದೂ, ಮತ್ತೆ ಈ ಚಳವಳವನ್ನು ಹೆಚ್ಚು ಮಾಡಿದಾಗ ಪ್ರವೇಶ ಕೊಡಲಾಯಿತೆಂದೂ ಆದರೆ ಕೆಲ ಹೋಟೇಲುಗಳ ಮಾಲಕರು ಹೀಗೆ ಪ್ರವೇಶ ಮಾಡಿದ ಹರಿಜನರನ್ನು ನಿರುತ್ಸಾಹಗೊಳಿಸಲು ಮಾದಿಗ ಹುಡುಗರಿಂದ ನೀರು ಕಾಫಿಯನ್ನೂ ತೊಳೆಯದ ಪ್ಲೇಟಿನಿಂದ ತಿಂಡಿಯನ್ನೂ ಕೊಟ್ಟು ಇಮ್ಮಡಿ ಬೆಲೆಗಳನ್ನು ಬೆದರಿಕೆಯಿಂದ ವಸೂಲು ಮಾಡಿದರೆಂದೂ, ಆ ಕುರಿತು ದೂರುಗಳು ಜಿಲ್ಲಾ ಮೆಜಿಸ್ಟ್ರೇಟರಿಗೂ ಪೋಲೀಸ್ ಸುಪರಿಂಟೆಂಡರಿಗೂ ತಿಳಿಸಲಾಗಿದೆಯೆಂದೂ, ಈ ಚಳವಳವು ಹರಿಜನ ಮುಖಂಡ ಶ್ರೀ ಗೋಪಾಲ ಸಾಲಿನ್ಸರ ನೇತೃತ್ವದಲ್ಲಿ ನಡೆಯಿತೆಂದೂ ಉಳ್ಳಾಲ ಭಜನೆ ಸಂಘದ ಕಡೆಯಿಂದ ಬರೆದು ಬಂದೊಂದು ಬಾತ್ಮಿಯಲ್ಲಿ ತಿಳಿಸಲಾಗಿದೆ.

ವಿಚಿತ್ರ ಜಾನುವಾರು ರೋಗ: ಕಂಜೆ ಗ್ರಾಮದಲ್ಲಿ ಅದೊಂದು ವಿಚಿತ್ರ ರೀತಿಯ ರೋಗವು ಹರಡಿ ಇಷ್ಟರಲ್ಲೇ ಹಲವು ಜಾನುವಾರುಗಳನ್ನು ಆಹುತಿ ಪಡೆದಿರುತ್ತದೆಂದು ಪ್ರಕಟವಾಗಿದೆ. ಈ ಕುರಿತು ಶೀಘ್ರ ನಿವಾರಣೋಪಾಯಗಳನ್ನು ಕೈಕೊಳ್ಳಬೇಕೆಂದು ಗ್ರಾಮಸ್ಥರು ವಿನಂತಿ ಹೊರಡಿಸಿದ್ದಾರೆ.

ಅರುಣ: ಸಾಹಿತ್ಯ ಸಂಚಿಕೆ. ಕ್ರಾನ್ 1/8 ಆಕೃತಿಯ ೫೦ ಪುಟಗಳ ವಿವಿಧ ಸಾರಸ್ಯ ಲೇಖನ, ಕತೆ ಕವಿತೆಗಳನ್ನೊಳಗೊಂಡ ಸಚಿತ್ರ ಮಾಸ ಪತ್ರಿಕೆ. ಬೆಲೆ ೬ ಆಣೆ.

ಧರ್ಮ ಸಂದೇಶ: ಧಾರ್ಮಿಕ ವಿಚಾರ ಸಂಬಂಧವಾದ ಮಾಸ ಪತ್ರಿಕೆ. ಸಂಪಾದಕರು. ಸಂಪಾದಕರು ಜಿ. ಜಿನ್. ಕೃಷ್ಣ ರಾವ್. ಕ್ರಾನ್ 1/8 ಆಕೃತಿ. ವಾರ್ಷಿಕ ಚಂದಾ ೫-೦-೦.

ಉಡುಪಿ—ಆತ್ಮಶಾಂತಿಗಾಗಿ ಹಾಗೂ ಶಾಶ್ವತ ಕೃಷ್ಣ ಸಾಯುಜ್ಯ ಪ್ರಾಪ್ತಿಗಾಗಿ ಪರ್ಯಾಯ ಶ್ರೀ ಶಿರೂರು ಮಠದ ಶ್ರೀ ಸ್ವಾಮಿಜಿಯವರು ಕೀರ್ತಿಶೇಷ ಫಲಿಮಾರು ಸ್ವಾಮಿಜಿಗಳ ಆತ್ಮಶಾಂತಿಗಾಗಿ ಗುರುಡೋತ್ಸವ ಸೇವೆ ಜರಗಿಸಿದರು.

ಸ್ಥಳೀಯ ವಕೀಲ ಶ್ರೀ ಟಿ. ಗಣಪಯ್ಯ ಸೆಟ್ರು ಧರ್ಮಪತ್ನಿಯವರು ಕಳೆದ ತಾ. 29 ರಲ್ಲಿ ಬಾವಿಗೆ ಹಾರಿ ಪ್ರಾಣ ತ್ಯಾಗಮಾಡಿ ಶೋಚನೀಯದ ವರದಿ ಪ್ರಕಟವಾಗಿದೆ. ಶ್ರೀಮತಿಯವರು ಕೆಲವು ದಿವಸಗಳಿಂದ ಉನ್ಮಾದಾವಸ್ಥೆಯಲ್ಲಿದ್ದರಂತೆ.

ಹೊಸ ಶಾಲೆ ಹೊಸ್ಮಾರ ಗ್ರಾಮದಲ್ಲಿ ಒಂದು ಎಲಿಮೆಂಟರಿ ಶಾಲೆಯು ಸ್ಥಾಪಿಸಲ್ಪಟ್ಟಿದ್ದು ಕಾರ್ಕಳ ರೇಂಜಿನ ಡಿಪ್ಟಿ ಇನ್ಸ್‌ಪೆಕ್ಟರು ಅಧ್ಯಕ್ಷ ಸಭೆಯೊಂದರಲ್ಲಿ ಅದ ಉದ್ಘಾಟನೆ ಮಾಡಿದರೆಂದು ತಿಳಿದು ಬಂದಿದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ನವಜೀವನ ಹೈಸ್ಕೂಲ್, ಪೆರಡಾಲ

ವರ್ಧಂತ್ಯುತ್ಸವ—ಪೆರಡಾಲ ನವಜೀವನ ಹೈಸ್ಕೂಲಿನ ವರ್ಧಂತ್ಯುತ್ಸವವು ತಾರೀಕು 4—1—48ನೇ ಭಾನುವಾರ ಮಂಗಳೂರಿನ ಸುಪ್ರಸಿದ್ಧ ಡಾಕ್ಟರರಾದ ರಾವ್ ಬಹದ್ದೂರ್ ಯಂ. ಕೇಶವ ಪೈ ಬಿ. ಎ. ಇ. ಯಂ. ಡಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಪ್ರಭಾತಫೇರಿ ನಡೆದು ಶಾಲಾ ಮೈದಾನದಲ್ಲಿ ಶ್ರೀ ಬಿ. ನಾರಾಯಣ ಶೆಣೈಯವರಿಂದ ಧ್ವಜವು ಏರಿಸಲ್ಪಟ್ಟಿತು. ತಿಂಡಿ ವಿತರಣವಾಗಿ ಬೆಳಗಿನ ಕಾರ್ಯಕ್ರಮವು ಮುಕ್ತಾಯವಾಯಿತು. ಸಾಯಂಕಾಲ 3-30ಕ್ಕೆ ಸರಿಯಾಗಿ ಸಭೆಯು ಪ್ರಾಥಮಿಕ ಶಾಲಾ ಭವನದಲ್ಲಿ ಆರಂಭವಾಯಿತು.

ಪ್ರಾರ್ಥನಾನಂತರ ಹೆಡ್ಮಾಸ್ತರ್ ಶ್ರೀ ಪಿ. ಸುಬ್ರಾಯಭಟ್ಟರು ಶಾಲಾ ವರದಿಯನ್ನೋದಿದರು. ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಎಡೆಕೊಡಬೇಕೆಂದೂ; ಸಂಸ್ಕೃತ ಭಾಷೆಯನ್ನು ಕಲಿಸಬೇಕೆಂದೂ ಮಕ್ಕಳು ಶಿಸ್ತು ಪಾಲಿಸುವ ರೀತಿಯಲ್ಲಿ ಅವರಿಗೆ ತರಬೇತಿ ಕೊಡಬೇಕೆಂದೂ ಹೇಳಿ, ಮಹಾತ್ಮ ಗಾಂಧಿಯವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕೆಂದೂ ಹೇಳಿದರು.

ಆರಂಭದಲ್ಲಿ ಶಾಲಾ ಮೆನೇಜಿಂಗ್ ಸಮಿತಿಯ ಅಧ್ಯಕ್ಷರಾದ ಮಾಯಿಪಾಡಿಯ ಅರಸರಾದ ಶ್ರೀಮಂತ ರಾಜಾ ಶ್ರೀ ರಾಮವರ್ಮ ರಾಜರು ಸ್ವಾಗತ ಭಾಷಣ ಮಾಡಿದರು. ಕೊನೆಗೆ ವಿವಿಧ ವಿನೋದಾವಳಿಗಳು ನಡೆದುವು.

ಪೆರಡಾಲಿನಲ್ಲಿ ಜಾನುವಾರು ಪ್ರದರ್ಶನ

ತಾ. 4-1-48ನೇ ಪೂರ್ವಾಹ್ನ ಡಾ. ಪಿ. ಯಸ್. ಶಾಸ್ತ್ರಿಗಳವರ ಆಸ್ಪತ್ರೆಯಲ್ಲಿ ಪ್ರೇಮ ಕೂಟದ ಆಶ್ರಯದಲ್ಲಿ ಸ್ಥಳೀಯ ಮಹನೀಯರ ಸಭೆಯೊಂದು ಜರಗಿತು. ಶ್ರೀ ಕೆ. ಕೆ. ಕೈಕಿವಾನ್ ಇವರು ಅಧ್ಯಕ್ಷತೆ ವಹಿಸಿದ್ದರು. ಪೆರಡಾಲ (ಬದಿಯಡ್ಕ) ಗ್ರಾಮದಲ್ಲಿ ಜಾನುವಾರು ಪ್ರದರ್ಶನವನ್ನು ಇದೇ ತಾ. 31-1-48ಕ್ಕೆ ಜರಗಿಸಬೇಕೆಂದು ನಿರ್ಧಾರವಾಯಿತು. ಪಾರಿತೋಷಕಗಳನ್ನು ಕೊಡುವ ಒಗ್ಗೆ ಮದ್ರಾಸು ಸರಕಾರದವರಿಂದ ರೂ. 200—0—0 ಮಂಜೂರಾಗಿದೆ. ಮಿಕ್ಕ ವೆಚ್ಚಗಳಿಗೆ ಬೇಕಾದ ಹಣವನ್ನು ವಂತಿಗೆ ಮೂಲಕ ಸಂಗ್ರಹಿಸಬೇಕೆಂದಾಯಿತು. ಪ್ರದರ್ಶನವನ್ನು ಯಶಸ್ವಿಗೊಳಿಸುವರೆ ಬೇಕಾದ ವ್ಯವಸ್ಥೆಗಳನ್ನು ಮಾಡಲು ಈ ಕೆಳಗಿನ ಮಹನೀಯರಿಂದ ಕೂಡಿದ ಸಮಿತಿಯೊಂದರ ನೇಮಕವಾಯಿತು. ಶ್ರೀಗಳವರಾದ ಕೆ. ಕೆ. ಕೈಗಳು (ಅಧ್ಯಕ್ಷರು); ಕೆ. ಬಾಬು ಶೆಟ್ಟರು; (ಫಿರ್ಕಾ ಡೆವಲಪ್‌ಮೆಂಟ್ ಆಫೀಸರ್, ಕುಂಬಳೆ) (ಕಾರ್ಯದರ್ಶಿಗಳು ಮತ್ತು ಕೋಶಾಧಿಕಾರಿಗಳು); ಬಿ. ಯನ್. ಶೆಣೈ; ಜಿ. ಕೃಷ್ಣಭಟ್ಟರು; ಮತ್ತು ಕೆ. ಕೃಷ್ಣರಾಯರು ಉತ್ತಮ ತರದ ಗೂಳಿ, ಗಾಡಿ ಎತ್ತು, ಎಮ್ಮೆ, ಕೋಣ, ಗಂಡು ಮತ್ತು ಹೆಣ್ಣು ಕರುಗಳು, ಉತ್ತಮ ತರದ ಕೋಳಿಗಳು, ಆಡುಗಳು—ಇವು ಪ್ರದರ್ಶಿಸಲಿರುವ ಪ್ರಾಣಿಗಳು, ಇವುಗಳಲ್ಲಿ ಉತ್ತಮವಾದವುಗಳಿಗೆ ಪಾರಿತೋಷಕಗಳು ಕೊಡಲ್ಪಡುವುವು. ಪ್ರದರ್ಶನದ ಅಧ್ಯಕ್ಷತೆಯನ್ನು ವಹಿಸಿ ಪಾರಿತೋಷಕಗಳನ್ನು ಹಂಚುವರೆ ಮಾನ್ಯ ಜಿಲ್ಲಾ ಕಲೆಕ್ಟರ್‌ರವರನ್ನು ಕೇಳಿಕೊಳ್ಳಬೇಕೆಂಬ ಅಭಿಪ್ರಾಯವು ಸಮಿತಿಯವರಿಗಿದೆ. 31-1-48ರ ಪೂರ್ವಾಹ್ನ ಜಾನುವಾರು ಪ್ರದರ್ಶನವೂ, ಅಪರಾಹ್ನ ಪ್ರೇಮ ಕೂಟದ ವಾರ್ಷಿಕೋತ್ಸವವೂ ಜರಗಲಿರುವವು. ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಲು ಶ್ರೀ ಶಿವರಾಮಕಾರಂತರು ಒಪ್ಪಿರುವರು.

ಹಿಡಿಸುದ್ದಿ ಸಂಗ್ರಹ

ಎಲ್ಲಾ ತರದ ಯಂತ್ರೋಪಕರಣ ಔಷಧಿ, ರಾಸಾಯನಿಕ ವಿಶ್ರಣಗಳೆ ಅಧಿಕೃತ ಶೋಧಗಳು ಜಗತ್ತಿನಲ್ಲಿ ಪ್ರತಿ ವರ್ಷ 2 ಲಕ್ಷದಷ್ಟಾಗುತ್ತದೆ.

✠

ಭೌತಿಕ ಶಾಸ್ತ್ರದಲ್ಲಿ ಬ್ರಿಟಿಷ್ ವಿಜ್ಞಾನಿಗಳು ಇದು ತನಕ 12 ನೊಬೆಲ್ ಬಹುಮಾನಗಳನ್ನು ಗೆದ್ದಿರುವರು

✠

ಬೊಂಬಾಯಿಯಲ್ಲಿ ಸ್ಯಾಕಲ್ ರಿಕ್ಷಾ ಗಾಡಿಗಳನ್ನು ಬಾಡಿಗೆಗೆ ಇಡುವುದನ್ನು ಬರುವ ಎಪ್ರಿಲ್ ತಿಂಗಳಿನಿಂದ ರದ್ದು ಮಾಡುವರು.

✠

ಫೀಜಿ ದ್ವೀಪಗಳ ಸರಕಾರವು ಸುಭಾಸ್ ಭೋಸರ ಚಟುವಟಿಕೆಗಳ ಕುರಿತಾಗಿ ಬರೆದ ಐದು ಪ್ರಕಟಣೆಗಳ ಮೇಲೆ ನಿರ್ಬಂಧವನ್ನು ಹಾಕಿರುವರು

✠

ದೈವೀಕ ಶ್ರದ್ಧಾವಂತನಲ್ಲವೆಂದೂ, ನಾಸ್ತಿಕನೆಂದೂ ಪ್ರಖ್ಯಾತಿಪಟ್ಟ ಪ್ರಸಿದ್ಧ ಗ್ರಂಥಕಾರ ಬರ್ನಾರ್ಡ್ ಶೊ ಅವರು ಎಲ್ಲಿ ಹೋಗಾಗಲೂ ತಮ್ಮ ಬಳಿಯೊಂದು ಬ್ಯಾಬ ಧರ್ಮಗ್ರಂಥವನ್ನೊಯ್ಯುವರೆಂದು ತಿಳಿಸಿದ್ದಾರೆ

✠

ಡೆನ್ವರ್ ನಗರದ ಒರ್ವ ಮೋಟರ್ ವ್ಯಾಲಕನು ತನ್ನ ಕಾರು ಓಡುವಾಗ ಚೆಕ್ಕು ಕಿರಚುವ ಶಬ್ದವಾಗುತ್ತದೆಂದು ರಿಪೇರಿಗಾಗಿ ಒಂದು ಕಾರುಗಾರಿ ಸ್ಥಳಕ್ಕೆ ಕಾರನ್ನು ತದನು ದುರುಸ್ತಿಗಾರರು ಯಂತ್ರ ಪರಿಶೋಧನೆ ಮಾಡುವಾಗ ಅದರೊಳಗೊಂದು ಬೆಕ್ಕಿನ ಮರಿ ಅವಿತಿದ್ದದನ್ನು ಕಂಡರು'

ꕥ

ಜಗತ್ತಿನ ಅತೀ ದೊಡ್ಡ ಪಟ್ಟಣವಾದ ಲಂಡನಿನ ನಗರಾಡಳಿತಕ್ಕಾಗಿ ಅಲ್ಲಿನ ನಗರ ಸಭೆಗೆ ಪ್ರತಿದಿನ 155 ಸಾವಿರ ಪವನು ಖರ್ಚಾಗುತ್ತದೆ

✠

ಬೆಂಜ್ಯಾನ್ ಎಂಬ ರಾಸಾಯನಿಕ ಧಾತುವಿನಿಂದ 1 ಲಕ್ಷ ಉಪ ವಸ್ತುಗಳನ್ನು ತಯಾರಿಸಲಾಗುತ್ತದೆಂದು ವಿಜ್ಞಾನಿಗಳು ತಿಳಿಸುತ್ತಾರೆ

✠

"ಹಿಟ್ಲರನ ಮಗನ ಶಿಕ್ಷಣಕ್ಕಾಗಿ" ಎಂದು ಹೆಲ್ಮಟ್ ರೀಗ್ ಎಂಬ ಜರ್ಮನನು 12 ಸಾವಿರ ಪವನು ಶೇಖರಿಸಿರುವನು ಹಿಟ್ಲರನ ಮತ್ತು ಈವಾಬ್ರೌನ್ ಎಂಬ ಮಗುಹಿಡಿದು ನಿಂತ ಮಹಿಳೆಯ ಫೋಟೋವೊಂದನ್ನು ಚಮತ್ಕಾರಿಕವಾಗಿ ಒಟ್ಟುಮಾಡಿ ಅದು ಹಿಟ್ಲರನ ಮಗುವೆಂದು ಈ ಹಣವನ್ನು ಒಟ್ಟುಗೂಡಿಸಿರುವನು

✠

ಅಮೇರಿಕದ ಎಲ್ಲಾ ಕೈಗಾರಿಕೆಯ ಕಾರ್ಖಾನೆಗಳು 24 ತಾಸು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಮಗ್ನವಾಗಿವೆ ಎಂಬ ಯುದ್ಧ ಭಯದ ವರ್ತಮಾನವೊಂದು ಆ ದೇಶದಲ್ಲಿ ಹರಡಿತು

✠

ಸಂಯುಕ್ತ ಅಮೇರಿಕದಲ್ಲಿ 5 ಲಕ್ಷ ವ್ಯಾಪಾರಿ ಸಂಸ್ಥೆಗಳು ಮೋಟಾರು ಸಂಬಂಧವಾದ ಬಿಡಿಭಾಗದಲ್ಲೊಂದು ವಹಿವಾಟು ನಡೆಸುತ್ತವೆ

ಗವರ್ನರನು ತಾಯಿ-ಆಡಳಿತ ಮಗು
ಗವರ್ನರೋತ್ತಮ
ರಾಜಾಜಿಯ ಉದ್ಗಾರ

ಪಶ್ಚಿಮ ಬಂಗಾಲ ಗವರ್ನರರಾದ ರಾಜಾಜಿಯವರು ವೀರಭೂಮ್ ಜಿಲ್ಲೆಯ ಸಂಚಾರಕ್ಕೆ ಹೋದಾಗ ಅಲ್ಲಿಯ ಬಹುಮಾನ ಪತ್ರಕ್ಕೆ ಉತ್ತರ ಕೊಡುತ್ತ ಗವರ್ನರುಗಳ ಕರ್ತವ್ಯಗಳೇನೆಂದು ವಿವರಿಸಿದರು.

ಗವರ್ನರರು ದೇವಸ್ಥಾನದಲ್ಲಿನ ಕಲ್ಲಿನ ಮೂರ್ತಿಗಳು ಮುಖ್ಯಪ್ರಧಾನರು ಉತ್ಸವದ ವಿಗ್ರಹಗಳು ಕಲ್ಲಿನ ಮೂರ್ತಿಗೆ ದೊರಿವ ಆದರ ನನಗೆ ದೊರೆತಿದೆ ಉತ್ಸವ ಮೂರ್ತಿಯು ಆದರ ಮುಖ್ಯ ಪ್ರಧಾನ ಘೋಷರಿಗೆ ಸಿಕ್ಕಿದೆ

ಇಂದಿನ, ಹಿಂದಿನ ಗವರ್ನರರು

"ಇಷ್ಟು ದಿನ ಗವರ್ನರರು ಆಡಳಿತೆಯ ಜನಕನಾಗಿದ್ದನು. ಅವನನ್ನು ಸಿಟ್ಟಿನ ತಂದೆಯೆಂದೂ ಹೇಳಬಹುದಿತ್ತು ಆದರೆ ಇಂದವನು ಆಡಳಿತೆಯ ಜನನಿಯಾಗಿದ್ದು ಮುಖ್ಯ ಪ್ರಧಾನರು ಜನಕನಾಗಿರುವನು ಆದ್ದರಿಂದ ಎಲ್ಲಾ ದೂರುಗಳನ್ನು ಮುಖ್ಯ ಪ್ರಧಾನರಿಗೇ ತಿಳಿಸಬೇಕು.

"ಇಂಗ್ಲಿಷ್ ಸರಕಾರವು ಹೋಗಿ ಈಗ ಹಿಂದೂಸ್ಥಾನೀ ಸರಕಾರವು ಬಂದಿರುವುದರಿಂದ ಎಲ್ಲರೂ ಹಿಂದೂಸ್ಥಾನಿ ಕಲಿಯಬೇಕು ಪಶ್ಚಿಮ ಬಂಗಾಲದವರು ಶಾಂತತೆ ಕಾಯ್ದುಕೊಳ್ಳುವುದು ಅಭಿನಂದನೀಯ ನನಗೂ ಇಲ್ಲಿ ಗವರ್ನರರಾಗಿರಲು ಹೆಮ್ಮೆಯೆನಿಸುತ್ತದೆ

ಕಾಶ್ಮೀರ ಧಾಳಿಗಾರರ ಸುಸಜ್ಜಿತತೆ

ಎಸೋಸಿಯೇಟೆಡ್ ಪ್ರೆಸ್ ಬಾತ್ಮಿ

ಜಮ್ಮುವಿನಲ್ಲಿಯ ಯುದ್ಧರಂಗ ಬದಲಾಗಿದೆ ಇದು ತನಕ ಅಲ್ಲಿಗೆ ಬರುತ್ತಿದ್ದ ದಾಳಿಗಾರರು ಬಿಡಿಬಿಡಿಯಾಗಿ ಬರುತ್ತಿದ್ದು ಅನೇಕ ಕ್ಷೇತ್ರಗಳಲ್ಲಿ ದಾಳಿ ಮಾಡುತ್ತಿದ್ದರು ಆದರೆ ಈಚೆಗೆ ಅವರ ಬಳಿ ಆಧುನಿಕ ಶಸ್ತ್ರಾಸ್ತ್ರಗಳು ಹೆಚ್ಚಿವೆ ಅವರು ಚೆನ್ನಾಗಿ ಸಂಘಟಿತ ಪಂಗಡಗಳಾಗಿಯೂ ಇರುವರು

ತಾವು ನಿಪುಣರೆಂದು ತೋರಿಸಿಕೊಳ್ಳಲು ಅವರು ರಾತ್ರಿ ವೇಳೆಗಳಲ್ಲಿ ದಾಳಿ ಮಾಡುತ್ತಾರೆ ಪಾಕಿಸ್ತಾನ ಸೈನ್ಯದಿಂದ ಬಂದ ಅಧಿಕಾರಿಗಳ ಸಂಖ್ಯೆ ದಿನಂಪ್ರತಿ ಹೆಚ್ಚುತ್ತಿದೆ ಹಿಂದೀ ವೈಮಾನಿಕರೂ ತಮ್ಮ ಚಟುವಟಿಕೆಗಳನ್ನು ಹೆಚ್ಚು ಚುರುಕು ಮಾಡಿರುವರು ಅವರ ನೈತಿಕ ವರ್ತನೆಯು ಉಚ್ಚತರದ್ದೆಂದೂ ಎಲ್ಲರೂ ಶ್ಲಾಘಿಸುತ್ತಿರುವರು

ಮಿಲಿಟರಿ ಗಾಡಿಯಲ್ಲಿ ಮದ್ದಿನ ಸ್ಫೋಟ
ಕಲ್ಕತ್ತಾ ಮದ್ರಾಸ್ ಮಾರ್ಗದಲ್ಲಿ

ವಿಜಯ ನಗರಂ ಹಾಗೂ ವಾಲ್ಟೇರ ಸ್ಟೇಶನುಗಳ ನಡುವಿರುವ ಕಂಟಕದ ಸ್ಟೇಶನದಲ್ಲಿ ಮೊನ್ನಿನ ದಿವಸ ಮದ್ದು ಹೇರಿಕೊಂಡು ನಡೆದ ಮಿಲಿಟರಿ ಸ್ಪೆಶಲ್ ಉಗಿಬಂಡಿಯಲ್ಲಿ ಸ್ಫೋಟ ಸಂಭವಿಸಿದ್ದು ಬಿ. ಎನ್. ರೈಲ್ವೆ ಕಲ್ಕತ್ತಾ ಮದ್ರಾಸ್ ಮಾರ್ಗದಲ್ಲಿಯ ಉಗಿಬಂಡಿಗಳ ಓಡಾಟವು ಕೆಲವು ತಾಸುಗಳ ವರೆಗೆ ಕಟ್ಟಾಗಿತ್ತು ಪ್ರವಾಸಿಕರ ಹಾಗೂ ರೈಲ್ವೇ ನೌಕರರ ಸುರಕ್ಷಿತತೆಯ ಬಗ್ಗೆ ಶಕ್ಯವಿದ್ದ ಉಪಾಯಗಳನ್ನು ಕೈಕೊಂಡ ಮೇಲೆ ಗಾಡಿಗಳ ಓಡಾಟ ಪುನಃ ಶುರುವಾಗಿದೆ

ಕಲ್ಕತ್ತದಲ್ಲಿ ಮಂತ್ರಿಮಂಡಲ ನಿರೋಧ
ಫಾರ್‌ವರ್ಡ್ ಬ್ಲೋಕಿನವರ ಬಂಧನ

ಇಲ್ಲಿಗೆ ಸಮೀಪವಿರುವ ನೌಬತಪುರದ ರೈತರ ಚಳವಳದಲ್ಲಿ ಬಾಗವಹಿಸಿದಕ್ಕಾಗಿ ಪಾಟನಾ ಜಿಲ್ಲೆಯ ಫಾರ್‌ವರ್ಡ್ ಬ್ಲೋಕಿನ ಕಾರ್ಯದರ್ಶಿ ಹರಿನಂದ ಸಿಂಗ್ ಮತ್ತು ಐದು ಜನರನ್ನು ಬಿಹಾರ ಸಾರ್ವಜನಿಕ ಸುರಕ್ಷಿತ ಕಾಯಿದೆಯನ್ವಯ ಬಂಧಿಸಿ ಸ್ಥಾನಬದ್ಧತೆಯಲ್ಲಿಡಲಾಗಿದೆ

ಕಡಿತ, ಘಾಯ, ಚರ್ಮ ಘಾತಗಳಿಗೆ ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



ಕುಟಿಕೂರಾ ಮುಲಾಮು
CUTICURA OINTMENT

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ಯೊಂಟ್ ಮೆನೇಜರ್ಸ್,

ಮಂಗಳೂರು.
23-12-1947.

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ಬ್ರಿಟಿಷ್ ಕಿರೀಟದ ಇನ್ನೊಂದು ರತ್ನ ಕಳಚಿತು

ಬರ್ಮಾ ದೇಶದ ಸ್ವಾತಂತ್ರ್ಯ ದುರಂತ

ಭಾರದದೊಡನೆ ಸಾಂಸ್ಕೃತಿಕ ಸಂಬಂಧ

ಕಳೆದ ಜನವರಿ ತಾರೀಕು 4ರಂದು ಬರ್ಮಾ ದೇಶವು ಸ್ವಾತಂತ್ರ ಪದವಿಯನ್ನು ಹೊಂದಿತು. ಅವರೊಂದಿಗೆ ಬ್ರಿಟಿಷ್ ಸಾಮ್ರಾಜ್ಯದ ಕಿರೀಟದ ಮತ್ತೊಂದು ಉಜ್ವಲ ರತ್ನವು ಕಳಚಿಹೋದಂತಾಯಿತು. ಬ್ರಿಟಿಷರಿಗೆ ನಷ್ಟ, ಉಂಟಾದದ್ದು ಭಾರತಕ್ಕೆ ಅತ್ಯಂತ ಲಾಭದಾಯಕವೇ ಆಯಿತು. ಕಾರಣ, ಸ್ವಾತಂತ್ರ್ಯಕ್ಕೆ ಕೆಲವೇ ದಿನಗಳ ಮುಂಚೆ ಬರ್ಮಾದ ಮುಖ್ಯ ಮಂತ್ರಿ ಥಾಕಿನ್‌ನು ಅವರು ಭಾರತದೊಡನೆ ನಮ್ಮ ದೇಶವು ಅತ್ಯಂತ ಸಹಕಾರ ಸೌಹಾರ್ದಗಳ ಧೋರಣೆಯನ್ನನುಸರಿಸಿ ಪ್ರಾಚೀನ ಕಾಲದಿಂದುಂಟಾದ ಭಾರತ ಬರ್ಮಾಗಳ ಸಾಂಸ್ಕೃತಿಕ ಸಂಬಂಧವನ್ನು ಪುನರಭಿವೃದ್ಧಿಗೊಳಿಸುವುದಾಗಿ ವಚನವಿತ್ತರು. ಮಹಾತ್ಮರಿಗೆ ಅವರು ತಮ್ಮ ಹಳ್ಳಿ ಕೈಗಾರಿಕೆಯ ದ್ಯೋತಕವಾದ 'ಹೇಟನ್ನು' ಕೊಟ್ಟರು

ಬರ್ಮಾದ ಸ್ವಾತಂತ್ರ ಬ್ರಿಟಿಷ್ ಸರಕಾರದ ಪ್ರಗತಿಪರ ಧೋರಣೆಯ ಇನ್ನೊಂದು ನಿದರ್ಶನ ಚರ್ಚಿಲ್ ಎಮೆರಿ ಕಂಪೆನಿಯವರು ಅಧಿಕಾರದಲ್ಲಿರುತ್ತಿದ್ದರೆ ಭಾರತ ಬರ್ಮಾಗಳೆರಡರ ಸ್ವಾತಂತ್ರ್ಯಕ್ಕೂ ಸೊನ್ನೆಯೇ ಆಗುತ್ತಿತ್ತು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ರಕ್ತ ಶೋಷಣೆಯ ಗಾಣಕ್ಕೆ ಈ ಎರಡು ದೇಶಗಳು ನಿರ್ಬಲ ಎತ್ತುಗಳಂತೆ ಸುತ್ತಬೇಕಾಗುತಿತ್ತು. ಅದೇ ಸಮಯಕ್ಕೆ ಈ ಎರಡು ದೇಶಗಳು ಮೂಕ ಮೌನದಿಂದ ತಮ್ಮ ಹೊರೆಯನ್ನು ಹೊರುತ್ತಿರಲಿಲ್ಲವೆಂಬುದೂ ಖಂಡಿತವೆ ಈಗ ಕೈಯೆತ್ತಿ ಕೊಟ್ಟ ಸ್ವಾತಂತ್ರ್ಯ ಕೊಳ್ಳೆತ್ತಿ ಪಡೆಯುವ ದುರಂತ ಪ್ರಸಂಗ ಒದಗುತಿತ್ತು

ಇಷ್ಟಾದರೂ ಇತಿಹಾಸದ ಅತ್ಯಂತ ಶಾಂತಿದಾಯಕ ಕ್ರಾಂತಿಯು ದುರಂತಗಳಿಲ್ಲದೆ ಸಂಭವಿಸಲಿಲ್ಲ ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಮೊದಲೂ ಮತ್ತಾನಂತರವೂ ಕೋಮು ಕಲಹದ ಕಾಡ್ಕಿಚ್ಚು ಜನ ಜೀವನದ ಸುಂದರ ನಂದನ ವನವನ್ನು ದಹಿಸಿಬಿಟ್ಟಿತು ಬರ್ಮಾದಲ್ಲಾದರೋ ಪ್ರಜಾಪ್ರಭುತ್ವಪ್ರಿಯ ಮುಖಂಡರನ್ನು ನಿರಂಕುಶ ಸರ್ವಾಧಿಕಾರ ಪ್ರಿಯರು ತಮ್ಮ ನೀಚ ರಾಜಕಾರಣದ ಕ್ರೂರ ಕೋವಿ ಗುಂಡಿಗೆ ಬಲಿಕೊಟ್ಟರು ಇಡೀ ಬ್ರಹ್ಮ ಸೃಷ್ಟಿಯು ಈ ಅಮಾನುಷಿಕ ಅತ್ಯಾಚಾರಕ್ಕೆ ಅನುತಾಪಗೊಂಡಿತು

ಬರ್ಮಾವೂ, ಭಾರತವೂ

ಒಂದು ದಶಮಾನದ ಹಿಂದಿನ ತನಕ ಭಾರತ ಬರ್ಮಾಗಳು ಏಕಮಾತ್ರ ಸಾಮ್ರಾಜ್ಯವತ್ಯಕ್ಕೊಳಪಟ್ಟಿದ್ದುವು ಈ ರಾಜಕೀಯ ಸಂಬಂಧವು ಮತ್ತೆ ಕಡಿದು ಹೋದರೂ ಸಾವಿರಾರು ವರ್ಷಗಳಿಂದ ಬರ್ಮಾ ಭಾರತಗಳೊಳಗಿದ್ದ ಸಾಂಸ್ಕೃತಿಕ ಮತ್ತು ಭೌಗೋಳಿಕ ಬಾಂಧವ್ಯವು ಲವಶ್ಯಾದರೂ ಸಡಿಲಾಗಲಿಲ್ಲ ಅಲ್ಲಿರುವ 17 ಮಿಲಿಯ ಜನಸಂಖ್ಯೆಯಲ್ಲಿ 5 ಮಿಲಿಯದಷ್ಟು ಜನರು ಪರದೇಶಸ್ಥರು ಅವರಲ್ಲಿ ಹೆಚ್ಚಿನವರು ಹಿಂದೀ ವ್ಯಾಪಾರಿಗಳೂ ಮತ ಪ್ರಚಾರಕರೂ ಇರುವರು

ಬರ್ಮಾ ಮುಖಂಡರು ತಮ್ಮ ದೇಶವು ಭಾರತದೊಡನೆ ಸೌಹಾರ್ದದಿಂದಿರುವ ಧೋರಣೆಯನ್ನು ವ್ಯಕ್ತಪಡಿಸಿದಂತೆ ಭಾರತ ಮುಖಂಡರಾದರೂ ಅವರಿಗಿಂತ ಇನ್ನೊಂದು ಹೆಜ್ಜೆ ಮುಂದರಿದು ಬರ್ಮಾದಲ್ಲಿ ಭಾರತೀಯ ಬಂಡವಾಳ ಶಾಹಿ ಹಿತಗಳು ಮಾಡುವ ಯಾವ ಅನರ್ಥಕ್ಕೂ ತಾವು ಬೆಂಬಲ ಕೊಡದೆ ದೇಶದ ಸಾಮಾನ್ಯ ಜನರ ಹಿತಾಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟು ತಮ್ಮ ಭಾವಿ ಧೋರಣೆಗಳನ್ನು ರೂಪಿಸಲಾಗುವುದೆಂದು ಸ್ಪಷ್ಟಪಡಿಸಿವರು ಬರ್ಮಾವು ದ ಆಫ್ರಿಕದ ಸ್ಮಟ್ಸರ ಧೋರಣೆಯನ್ನೆಂದಿಗೂ ಅನುಸರಿಸ ವುದಿಲ್ಲವೆಂಬ ಭರವಸೆ ನಿರೀಕ್ಷೆಗಳೂ ಭಾರತೀಯ ಮುಖಂಡರಿಗಿವೆ

ಬರ್ಮಾದೊಂದಿಗೆ ಸ್ನೇಹ ಸೌಹಾರ್ದದಿಂದಿರಬೇಕೆಂಬುದೂ ಅತ್ಯಾವಶ್ಯಕವಾಗಿಯೇ ಇದೆ ಚೀನಾ ಬರ್ಮಾಗಳೊಳಗೆ ವೈಮನಸ್ಸು ಕಟ್ಟಿಕೊಂಡಿದ್ದರೆ ಮುಂದೆ ಯಾವ ಕಾರಣದಿ ದಾಡರೂ ಉಂಟಾಗಬಹುದಾದ ಯುದ್ಧ ಸಂದರ್ಭದಲ್ಲಿ ಭಾರತಕ್ಕೆ ಆ ಕಡೆಗಳಿಂದ ಸಂಭವಿಸಬಹುದಾದ ಅಪಾಯಗಳನ್ನು ನಾವು ಊಹಿಸಿಕೊಳ್ಳಬಹುದು ಅದಲ್ಲದೆ ನಾವು ಆಹಾರದ ದೊಡ್ಡ ಪ್ರಮಾಣಗಳಿಗಾಗಿ, ಮುಖ್ಯವಾಗಿ ಅಕ್ಕಿಗಾಗಿ, ಈ ದೇಶ ದೂರ ಪೂರ್ವ ದೇಶಗಳ ಮೇಲೆ ಹೊಂದಿಕೊಂಡಿರಬೇಕಾಗುತ್ತದೆ ಅಲ್ಲದೆ ಬರ್ಮಾ ದೇಶದ ಮಹತ್ತರವಾದ ಕಾಡು ಉತ್ಪತ್ತಿ, ಪೆಟ್ರೋಲ್ ಮತ್ತು ರಬ್ಬರುಗಳು ಅತಿ ಮಹತ್ವದ ಕೈಗಾರಿಕೆ ವಸ್ತುಗಳು

ಇತ್ತೀಚೆಗಿನ ಇತಿಹಾಸ

ಮಹಾತ್ಮರ ಅತ್ಯಮೋಘ ಆದರ್ಶದಿಂದಲೂ, ತ್ಯಾಗ ಬಲಿದಾನ ಕಷ್ಟ ಸಹಿಷ್ಣುತೆಗಳಿಂದಲೂ ನಾವೇನೊ ಸ್ವಾತಂತ್ರ್ಯ ಸಂಪಾದಿಸಿದೆವು ಆದರೂ ಜಾತಿ ಕಲಹಾಗ್ನಿ ನಮ್ಮ ದೇಶದ ಭಾಗಗಳನ್ನು ದಹಿಸದಿರಲಿಲ್ಲ ಬರ್ಮಾವಾದರೋ ಕಳೆದ ಯುದ್ಧದ ಪ್ರಮುಖ ರಂಗವಾಗಿ ಪರಿವರ್ತನ ಹೊಂದಿತ್ತು ಜಪಾನರು ಅದನ್ನು ವಶಪಡಿಸಿಕೊಂಡಾಗ ಒಂದು ದೊಡ್ಡ ಗಲ್ಲಾಂತರವೇ ಭಾಗಲ್ಲಿ ನಿಂತಂತಾಯಿತು ಈ ಸಮಯದಲ್ಲೇ ಅಲ್ಲಿ ದಿವಂಗತ ಅಂಗ್‌ಸೇನರ ನಾಯಕತ್ವದಲ್ಲಿ ನಿರಂಕುಶ ಸರ್ವಾಧಿಕಾರದ ವಿರೋಧ ಅಪ್ರತಿಹತವಾದ ಗುಪ್ತ ಕಾರಸ್ಥಾನವು ನಡೆಸಲ್ಪಟ್ಟದ್ದರಿಂದ ಆಕ್ರಮಣಗಾರರಿಗೆ ನಿತ್ಯ ಭಯವೊಂದು ಅಂಟಿಕೊಳ್ಳುವಂತಾಯಿತು

ಭಾರತದಲ್ಲಿ ಜಾತಿ ವೈಷಮ್ಯದ ವಿಷ ಹರಡುವಿಕೆಯು ಸರಕಾರದ ಅವಿಶ್ರಾಂತ ಪ್ರಯತ್ನಗಳಿಂದಾಗಿ ತಡೆಗಟ್ಟಲ್ಪಟ್ಟಿರುತ್ತದೆ ಆದರೆ ಬರ್ಮಾದಿಂದ ಈಚೀಗೆ ನ್ಯಾಯದ ಹಿತ ಪ್ರತಿಕೂಲ ವರದಿಗಳು ಬಹಳ ವಾಗಿ ಬರುತ್ತಿವೆ. [illegible] ಅಲ್ಲಿನ ಸರಕಾರದವರು [illegible] ಅದನ್ನು ಪ್ರತಿಭಟಿಸಿ ದಮನಿಸಲಾಗಿ [illegible] ತ್ತದೆ ಅಂಗ್‌ಸೇನ್ ಮತ್ತವರ ಆರು ಮಂತ್ರಿಗಳು 'ಪಕ್ಷ ಫೆಸಿಸ್ಟ' [illegible] ಆಹುತಿ ಮಾಡಲ್ಪಟ್ಟಾಗ ಪ್ರಜಾ ಸಭೆ [illegible] ಜಗತ್ತೇ ಆಶ್ಚರ್ಯಗೊಂಡಿತು ಈ ಅಮಾನುಷ ಅತ್ಯಾಚಾರಗಳು ಇದರ ಮೇಲೆ [illegible] ಕೆಲವು ಭಗ್ನ ಮನೋರಥ ರಾಜಕೀಯ ಪುಢಾರಿಗಳಿಂದ ನಡೆಸಲ್ಪಡುತ್ತಿವೆ. ಕೊನೆಗೆ ಅವರ ತಂಡವನ್ನು [illegible] ಅವರ [illegible] ಕಡಿಮೆಯಾದುವು

ಆಕ್ರಮಣ ಮತ್ತು ಪ್ರತಿಭಟನೆ

ಅಂಗಸೇನರ ಪೆಸಿಸ್ಟ್ ವಿರೋಧ ಪಕ್ಷವು ಯುದ್ಧಪೂರ್ವದಿಂದಲೇ ಕಾರ್ಯಮಗ್ನವಾಗಿದ್ದುದರಿಂದ 1942ರಲ್ಲಿ ಜಪಾನರ ಆಕ್ರಮಣದ ಕ್ರೂರ ಸ್ವಭಾವವು ಕಮ್ಮಿಯಾಯಿತು. ಇಂದು ಈ ಸಂಸ್ಥೆ ದೇಶದ ರಾಜಕೀಯದಲ್ಲಿ ಮುಂದಾಳುತನ ವಹಿಸಿದೆ. ಅಂಗ್‌ಸೇನರು ಪ್ರಾಯದಲ್ಲಿ ತರುಣರಾಗಿದ್ದರೂ ಶ್ರೇಷ್ಠ ಬೌದ್ಧಿಕ ವಿಚಾರವಂತರಾಗಿದ್ದರು. ಅವರು ಟೋಕಿಯೋದಲ್ಲಿ ಮಿಲಿಟರಿ ಶಿಕ್ಷಣ ಪಡೆದಿದ್ದರು. ಬರ್ಮಾದ ಸ್ವಾತಂತ್ರ್ಯ ಸೈನ್ಯವೆಂಬ ಪಕ್ಷ ಸಮೇತರಾಗಿ ಅವರು ಅಲ್ಲಿ ರಾಜಕೀಯ ರಂಗವನ್ನು ಪ್ರವೇಶಿ ಸರ್ವಾಧಿಕಾರದ ಒಲವು ತೋರಿಸುತ್ತಿದ್ದ ಕೆಲ ಯುವಕ ಚಳವಳಿಗಳ ಪ್ರಭಾವವನ್ನು ಪ್ರತಿಭಟಿಸಿದರು ಇವರು ಸ್ವಲ್ಪ ಮಟ್ಟಿಗೆ ಬ್ರಿಟಿಷರ ವಿರೋಧವಾಗಿ ಜಪಾನಿಯರಿಗೆ ಸಹಾಯ ಮಾಡಿದ್ದರೂ ಕೊನೆಗೆ ತಮ್ಮ ತಪ್ಪಿಗಾಗಿ ಮರುಕಪಟ್ಟರು ಆ ತನಕ ಅವರೊಡನಿದ್ದ ಕೊಮ್ಯುನಿಸ್ಟರೂ ಅವರಿಂದ ದೂರವಾದರು

ಅಂಗ್‌ಸೇನರು ಪರಿವರ್ತನ ಹೊಂದಿದಾಗ ಅಲ್ಲಿನ ಕಮ್ಯುನಿಸ್ಟರು ಅವರನ್ನು ದಬ್ಬಾಳಿಕೆಯ ಪ್ರತಿಭಟನೆಯ ನಾಯಕತ್ವ ವಹಿಸಲು ಕೇಳಿಕೊಂಡರು ಅಂತೆ ಅವರು ಒಂದು ಗೆರಿಲ್ಲಾ ದಳವನ್ನು ಸಜ್ಜುಗೊಳಿಸಿದರು ಅದೇ ಸಮಯಕ್ಕೆ ಜಪಾನರು ಶರಣು ಬಂದು ಬ್ರಿಟಿಷರ ಪುನರಾಗಮನವಾಯಿತು

ಬರ್ಮಾ ವಿಮೋಚನೆ ನಂತರ ಅಲ್ಲಿನ ದೇಶ ಪ್ರೇಮಿಗಳನ್ನು ತಡೆಗಟ್ಟುವುದು ಬ್ರಿಟಿಷರಿಗೆ ಅಸಾಧ್ಯವೆನಿಸಿತು. ಎಲ್ಲಾ ದೇಶ ಪ್ರೇಮಿಗಳು ಅಂಗಸೇನರ ಧ್ವಜದಡಿ ಸೇರಿದರು ಸಂಪೂರ್ಣ ಸ್ವಾತಂತ್ರ್ಯವೇ ಅವರ ತನ್ನ [illegible] ಗುರಿಯಾಗಿ ಸಾರಿದರು [illegible] ಗ್ಲೇಯ ಪಕ್ಷದ ಶ್ರೇಷ್ಠ ನಾಯಕರಾಗಿದ್ದ [illegible] ಅಂಗಸೇನರೊಡನೆ ಒಪ್ಪಂದ ಮಾಡಿಕೊಂಡರು. ಅವರ [illegible] ಒಂದು [illegible] ಗವನ್ನು ತಮ್ಮ ಸ್ವಾರ್ಥ [illegible] ವೆಂದ ಮತ್ತು ಬ್ರಿಟಿಷ [illegible] ಪಕ್ಷ ಧೋರಣೆ ಬರ್ಮಾದಲ್ಲಿ ಬಿಗುವಾದಾಗ ಅಂಗಸೇನ ವಿರೋಧ ಪಕ್ಷ ತಳೆದರು ಪರಿಣಾಮವಾಗಿ ಬರ್ಮಾವು ಒಂದು ಕ್ರಾಂತಿಯ [illegible] ಎದುರಿಸಿತು

ಯುದ್ಧಾನಂತರದ ಸ್ಪರ್ಧೆ

1946ರಲ್ಲಿ ಅಲ್ಲಿ ಒಂದು ಸರ್ವ ಪಕ್ಷೀಯ ಮಂತ್ರಿ ಮಂಡಲವಾಗಿ ಬ್ರಿಟಿಷ್ [illegible] ರೊಳಗೆ ಒಂದು ಒಪ್ಪಂದವಾಯಿತು ಈ ಸಮಯಕ್ಕೆ ಅಲ್ಲಿನ ಕಮ್ಯೂನಿಸ್ಟರಲ್ಲಿ ಕೆಂಪು ಧ್ವಜ ಮತ್ತು ಕೆಂಪು ಶರ್ಟು [illegible] ಪಕ್ಷಗಳೆಂದೂ ಅಂಗಸೇನರ ಪಕ್ಷವು [illegible] ದವಾಳಿಶಾಹಿ ಹಿತವಾಗಿದೆಂದವರು [illegible] ಅಂಗಸೇನರ ಕೊಲೆ [illegible] ನಂತರ ಕೆಂಪು ಶರ್ಟಿನ ಪಕ್ಷ ರಾಜಕೀಯ [illegible] ಕೆಂಪು ಧ್ವಜದವರ ಮೇಲೆ ನಿರ್ಬಂಧ ಬಿತ್ತು ಇವರೀ ದ್ರೋಹಿಗಳೆಂದೆನಿಸಲ್ಪಟ್ಟರು

1947ರಲ್ಲಿ ಎಂಗ್ಲೊ ಬರ್ಮಾ ಒಪ್ಪಂದ ಪ್ರಕಾರ ನಡೆದ ಚುನಾವಣೆಯಲ್ಲಿ ಅಂಗಸೇನರ ಪಕ್ಷಕ್ಕೆ ಬಹುಮತ ಸಿಕ್ಕಿತು ಶೇಕಡಾ 95 ವೋಟುಗಳು ಅವರಿಗೆ ದೊರಿತುದು ಅವರ ಜನಪ್ರಿಯತೆಯ ಸಾಕ್ಷ್ಯ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಮತಾವಾದಿ ಪ್ರಜಾ ಪ್ರಭುತ್ವ ರಾಜ್ಯ ಘಟನೆಯೇ ತಮ್ಮ ಗುರಿಯೆಂದು ಅಲ್ಲಿನ ಘಟನಾ ಸಮಿತಿ ಅಧ್ಯಕ್ಷರು ಸಾರಿದರು ಆ ಮೇಲೆ ಸಂಭವಿಸಿದ ಕಷ್ಟಕಾರಕ ರಾಜಕೀಯದಲ್ಲಿ

(೭ನೇ ಪುಟ ನೋಡಿ)

ಇದೇ ತಾ 8 2-1948ನೇ ಆದಿತ್ಯವಾರ ಸಾಯಂಕಾಲ ಘಂ 6ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇವರ ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ- ಇವರ ಪಿಟೀಲು

ಶ್ರೀ ಕಲ್ಪಾತಿ ರಮಾನಾಥನ್-ಇವರ ಮೃದಂಗ

ಶ್ರೀ ಅಲಂಗುಡಿ ರಾಮಚಂದ್ರನ್-ಇವರ ಘಟವಾದ್ಯ

ಟಿಕೇಟು ದರ ಪೋಷಕ ವರ್ಗ ರೂ 100, I 25, II 10, III 5.

ಟಿಕೇಟುಗಳು. (1) ಶ್ರೀ ಪಿ. ಶ್ರೀನಿವಾಸರಾವ್ ಬಿ ಎ ಬಿ ಯಲ್ ಕೆ ಯಸ್, ರಾವ್ ರಸ್ತೆ, ಮಂಗಳೂರು ಮತ್ತು

(2) ಶ್ರೀ ಬಿ ರಾಮಚಂದ್ರರಾವ್, ಎಂ. ಎ ಬಿ ಎಲ್. ಅಡ್ವಕೇಟ್ ಪುತ್ತೂರು, ಇವರಲ್ಲಿ ದೊರಕುವವು.

ಸಾಮಾನ್ಯ ಮಾನವನ ಕಾಲವಿದು

ಆಧುನಿಕ ಕಾಲದ ವಿಚಾರ ಒಲವುಗಳು

ಸಿ ಪಿ ರಾಮಸ್ವಾಮಯ್ಯರರ ಎಚ್ಚರಿಕೆ

[ಉದಕ ಮಂಡಲದ ರೋಟರಿ ಕ್ಲಬ್ಬಿನಲ್ಲಿ ಕೊಟ್ಟ ಒಂದು ವಿಚಾರ ಪರಿಪ್ಲುತ 'ಭಾಷಣದಲ್ಲಿ ಸರ್ ಸಿ. ಪಿ. ರಾಮಸ್ವಾಮಯ್ಯರರು ಆಧುನಿಕ ಮಾನವಕೋಟಿಯ ವಿಚಾರವು ಹೇಗೆ ರೂಪುಗೊಂಡಿವೆ, ಅವುಗಳ ಒಲವು ನಿಲುವುಗಳೇನು ಎಂಬ ವಿಷಯಗಳನ್ನು ತಮ್ಮ ಅನನು ಕರಣೀಯವಾದ ಭಾಷಾಶೈಲಿಯಲ್ಲಿ ವಿವರಿಸಿದರು. ಅವರ ಭಾಷಣದ ಸಾರಾಂಶ ಇಲ್ಲಿ ಕೊಡಲಾಗಿದೆ.]

ಕಮ್ಯುನಿಸ್ಟ್ ತತ್ವವನ್ನು ಮತ್ತು ದರ ಭಾರತೀಯ ಹಿಂಬಾಲಕರನ್ನು ದೂಷಣೆ ಮಾಡುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಅವರಲ್ಲಿನೇಕರನ್ನು ನಾನು ಕಂಡಿದ್ದೇನೆ, ಅವರ ಮಧ್ಯದಲ್ಲಿಯೂ ನಾನಿದ್ದೆ. ಅವರ ರಾಜಕೀಯ ತತ್ವವನ್ನು ನಾನು ಹೃತ್ಪೂರ್ವಕವಾಗಿ ಮೆಚ್ಚುವುದಿಲ್ಲ. ಆದರೆ ಈ ಕಮ್ಯೂನಿಸ್ಟರು ತಮ್ಮ ನಂಬಿದ್ದ ತತ್ವಗಳಿಗಾಗಿ ಪ್ರಾಣಾರ್ಪಣ ಮಾಡಲೂ ಸಿದ್ಧರಾಗಿರುವರು. ಆದುದರಿಂದ ಇದರಷ್ಟೇ ಉತ್ತಮವಾದ ಬೇರೊಂದು ಸಮಾನ ಕಾರ್ಯಕ್ರಮವನ್ನೂ ಸಿದ್ಧಗೊಳಿಸಿ ಜನತೆಯೊಳಗದನ್ನು ಪ್ರಚಾರ ಮಾಡಬೇಕು. ಆದರಲ್ಲಿ ಜಾತಿಮತ, ಜನಾಂಗ ಇಲ್ಲವೆ ಪಕ್ಷಭೇದವಿಲ್ಲದೆ ರಾಜಕೀಯವೂ ಪರಿಪೂರ್ಣವೂ ಆದ ಸರ್ವ ಸಮಾನತೆಗಳ ಸಂದರ್ಭಗಳಿರಬೇಕು ಮತ್ತು ಅದರಲ್ಲಿ ಇದು ತನಕ ನಾವು ಮಾಡಿದ ಯಾವ ಕೃತ್ಯದ [illegible] ಗಾದರೆ ಮಾತ್ರ ನಾವು ಕಮ್ಯೂನಿಸಮನ್ನು ಪ್ರತಿಬಟಿಸಬಹುದು.

[illegible]

ಭಾರತ ಪಾಕಿಸ್ತಾನ ಸಮಸ್ಯೆಗಳು

ಕೆಲವು ದಿನಗಳ ಹಿಂದೆ ಜಗತ್ತು ಎರಡು ಸಂಗತಿಗಳನ್ನು ರೇಡಿಯೋದ ಮೂಲಕ ಕೇಳಿತು. [illegible] ಬರ್ಮಾ ದೇಶವು ಬ್ರಿಟಿಷ್ ಸಾಮ್ರಾಜ್ಯದ ಗಣದಿಂದ ತಪ್ಪಿಸಿಕೊಂಡು ತನ್ನ ಭವಿಷ್ಯ ವಿಧಿಯನ್ನು ಸ್ವಂತವಾಗಿ ರೂಪುಗೊಳಿಸಲೋಸುಗ ಸ್ವತಂತ್ರವಾಯಿತೆಂದು ಇದೊಂದು. ಅತೀ ಗಣನೀಯವು ಮಹತ್ವದ್ದೂ ಸಂಗತಿಯಾಗಿದ್ದರೂ ಸ್ವತಂತ್ರವಾದ ಭಾರತ ಪಾಕಿಸ್ತಾನಗಳಂತೆ ಈ ದೇಶಕ್ಕೂ ರಕ್ಷಣ, ನ್ಯಾಯ ಶಿಸ್ತು ಮತ್ತು ಪುಂಡ ಜನರ ಕುರಿತಾದ ಸಮಸ್ಯೆಗಳು ಅತಿ ಜರೂರಿಯದಾಗಿವೆ (ಭಾರತ ಪಾಕಿಸ್ತಾನಗಳೊಳಗಿನ ಜಗಳ ಆಗಲೇ ಭದ್ರತಾ ಮಂಡಳದ ನ್ಯಾಯಸ್ಥಾನದ ಮೆಟ್ಟಲು ಹತ್ತಿದೆ.)

ದೇಶ ವಿಶಾಲದ ವಿರೋಧವಿದ್ದರೂ ಭಾರತದ ವಿಭಾಗೀಕರಣವು ಪರಿಪೂರ್ಣಗೊಳಿಸಲ್ಪಟ್ಟದ್ದೊಂದು ಭೀಕರ ದುರಂತವೇ ಸರಿ. ಎರಡೂ ಪಾಕ್ಷಗಳಿಗೂ ಎದುರಿಸಿರುವ ಅನೇಕ ಬೃಹತ್ ಸಮಸ್ಯೆಗಳಲ್ಲಿದೆ ಹೊಸದಾದ ನಿರಾಶ್ರಿತರ ವಲಸೆಗಳನ್ನೇ ರ್ಘಟಿಸುವ ದುರ್ಗಮ ಕಾರ್ಯವೊಂದು

ಸಂಧಿಸಿದೆ. ಮಿಲಿಯಾವಧಿ ಜನರು ಮನೆ ಮಾರು ಕಳಕೊಂಡವರಾಗಿ ತಮ್ಮ ಸಂಕಷ್ಟಮಯ ಭವಿಷ್ಯಕ್ಕಾಗಿ ಗಡಿಯಾಚೆಯ ತಮ್ಮ ಸ್ನೇಹಿತ ಬಂಧುಗಳ ಅಸಹಾಯಕಾರಿ ಉದಾರತೆ ಮತ್ತು ಸಿಕ್ಕಷ್ಟು ಕರ್ತವ್ಯ ಪರಾಯಣತೆಯ ಕರುಣೆಯ [illegible] ವೇದನೆ [illegible]

ಬ್ರಿಟಿಷ ರಾಷ್ಟ್ರ ವಿರೋಧ

ರೇಡಿಯೋದಲ್ಲಿ ನಾವು ಕೇಳಿದ ಇನ್ನೊಂದು ಅತೀ ಮಹತ್ವದ ಸಂಗತಿಯೆಂದರೆ ಬ್ರಿಟಿಷ ಪ್ರಧಾನರು [illegible]

[illegible] ಇದಾಗಿದೆ ಶತಮಾನಗಳು ಅಳಿದುವು ಆದರೆ ಅವುಗಳ ಧ್ಯೇಯ, ಅರ್ಥಿಕ ಮತ್ತು ನೈತಿಕ ಶ್ರೇಷ್ಠತೆಗಳು ಉಳಿದಿವೆ."

ವಿರೋಧ ಧ್ಯೇಯಗಳು

ಇಂದು ಒಂದವಾಳ ಬಾಹಿಯಿಂದ ಕಮ್ಯೂನಿಸಂ ತನಕವೂ ಒಂದು ಕಡೆಯಾಗಿ ಯೂ ಆತ್ಮ ಪ್ರಧಾನ ರಾಷ್ಟ್ರೀಯತೆಯಿಂದ ಸಹಾನುಭೂತಿಪರ ಅಂತರಾಷ್ಟ್ರೀಯತೆಯ ತನಕ ಇನ್ನೊಂದು ಕಡೆಯಾಗಿಯೂ ಪರಸ್ಪರ ವಿರೋಧಾತ್ಮಕವಾದ ಧ್ಯೇಯ ವಿಚಾರಗಳು ನಮ್ಮಲ್ಲಿ ಎದ್ದಿವೆ. ಈಗ ವಿಜ್ಞಾನದ ಇಷ್ಟೊಂದು ಸೌಕರ್ಯವು ಮಾನವಕೋಟಿಗೆ ಕೊಡಲ್ಪಟ್ಟಿದ್ದರೂ ಜನತೆಯು ಸುಖ ಎಂದಿನಂತೆ ಸಂಕಷ್ಟಮಯವಾಗಿಯೇ ಉಳಿದಿದೆ. ಆರ್ಥಿಕ ಮತ್ತು ರಾಜಕೀಯ ಭಯವಿಷ್ಟಂತೆಯೊಂದು ಕಡೆಯಿಂದ ಜದರಿಸುತ್ತಿರುವಾಗ ಪತಿದಿನವೆಂಬಂತೆ ಆಹಾರ ಕೊರತೆಯ ಸಂಕಷ್ಟ ಜನತೆಯನ್ನು ಗದರಿಸುತ್ತಿದೆ.

ಸರಿಯಾದ ಇತಿಹಾಸ ಜ್ಞಾನದಿಂದಲೂ ಮತ್ತು ಇಂದಿನ ಅನುಭವದಿಂದಲೂ ಅವಗಡಿಸಿಕೊಂಡ ಸಮಾನತೆಯ ವಿಧಾನವು ಇಂದಿನ ಎಲ್ಲಾ ವ್ಯಾಧಿಗಳಿಗೂ ಪರಮೌಷಧವಾಗಿದೆಂದು ನನ್ನ ಅಭಿಪ್ರಾಯ. ಈ ವಿಧಾನವನ್ನು ಜಾಗರೂಕತೆಯ ಪರಿಶೋಧನೆಯಿಂದಲೂ ಮತ್ತು ವಿವೇಚನೆಯಿಂದಲೂ ಕಾರ್ಯರೂಪಕ್ಕೆ ತರಬೇಕು. ಈ ವಿಧಾನವನ್ನನುಸರಿಸಿ ಸಂಪೂರ್ಣ ಸಮಾನತೆಯನ್ನನ್ನುಂಟುಮಾಡದಿದ್ದರೆ ಕೆಳಗೆ ಮೇಲಾದ ಈಗಿನ ತಕ್ಕಡಿಯು ಎಂದೂ ಸರಿದೂಗದು.

ಈ ಸಮಾನತೆಯನ್ನುಂಟುಮಾಡಲು [illegible]

ಈಗಿನ ರಾಷ್ಟ್ರೀಯತೆ ಮತ್ತು ಸಮತಾವಾದದೊಳಗಿನ [illegible] ಯತ್ನವಂತಾಯಿತು.

ಪಾಶ್ಚಾತ್ಯ ಸಂಪರ್ಕ

ಕಳೆದೆರಡು ಶತಮಾನಗಳಿಂದ ಪಾಶ್ಚಾತ್ಯ ದೇಶಗಳ ರೀತಿನೀತಿಗಳ ಸಂಪರ್ಕದಿಂದ ಭಾರತವು ತನ್ನ ಆತ್ಮವನ್ನು ಕಳಕೊಂಡಿದೆ. ಪರಿಣಾಮವಾಗಿ ಕೆಲವು ವರ್ಷಗಳ ಹಿಂದಿನ ತನಕ ಭಾರತೀಯವಾದ ಪ್ರತಿಯೊಂದು ವಿಷಯವನ್ನು ಕೀಳುಗಣಿಸುವುದು ಒಂದು ರೂಢಿಯೇ ಆಗಿತ್ತು. ಆದರೆ ಈಗಿನ ಪರಿಸ್ಥಿತಿಯು ಸಂಪೂರ್ಣ ಬದಲಾಗಿದೆ. ಈಗ [illegible] ಯನ್ನೂ ನಾವು ಮರೆಯಬಾರದು.

ಧರ್ಮನವನಾತ್ 1819ನೇ ಶತಮಾನಗಳಲ್ಲಿ ಧನವೇ ಪೂರ್ಣವೆಂದೂ ಸ್ವಾಭಿವೃದ್ಧಿಯೇ ಜೀವನ ಧ್ಯೇಯವೆಂದೂ ತಿಳಕೊಳ್ಳಲ್ಪಟ್ಟಿತು. ಆನಂತರ ಜೀವನ ಮಾರ್ಗಗಳು ವಿಜ್ಞಾನ ತತ್ವಜ್ಞಾನಗಳು [illegible]

ಗ್ರಾಮ ಜೀವನ

ಹಳ್ಳಿಯ ಜೀವನ [illegible] ಆದರೆ ಈಗ ರಾಷ್ಟ್ರೀಯತ್ವವೆಂಬ ಎಲ್ಲಾ ತರದ ಭೀಕರ ಕ್ರೌರ್ಯ ಕಾಂಗ್ರೆಸ್ಸುಗಳ ಘೋರಣವಾಗಿದ್ದು ಅದು ಎಲ್ಲಾ ತರದ ಸಿಕ್ಕಷ್ಟವೂ ನಿರ್ಬಲವೂ ಮತ್ತು ಕುತ್ಸಿತ ಮನೋಭಾವನ್ನೂ ಆದೆಲ್ಲಾ ಧ್ಯೇಯಗಳನ್ನೂ ಪ್ರೋತ್ಸಾಹಿಸುವಂತಾಗಿದೆ. ಇದರ ಪರಿಣಾಮವಾಗಿ ಜಗತ್ತು ಅನರ್ಥದ ಹೆಬ್ಬಾಗಿಲೆಡೆ ಸಾಗುವಂತಾಗಿದೆ. ಇಂದಿನ ರಾಜಕೀಯ ತತ್ವಗಳಿಂದ ಇಂತಹ ವಿನಾಶಕಾರಕವೂ ನಿಷ್ಪ್ರಯೋಜನಕವೂ ಆದ ಪ್ರಭಾವಗಳನ್ನು ಕಿತ್ತೊಗೆಯಬೇಕಾದರೆ ಜಗತ್ತಿನ ಜನಾಂಗಗಳೊಳಗೆ ವಿಶ್ವ ಭಾತೃತ್ವದ ಉದಾತ್ತ ಭಾವಗಳನ್ನು ಪೋಷಿಸುವುದತ್ಯಾವಶ್ಯಕವೆಂದು ಒತ್ತಿ ಹೇಳಬೇಕಾಗಿದೆ.



ಕೂಸಿನ ಮೈ ತಂಪಗಿಡುವ ದಗ್ಗನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ಕೆಲ್ಲಿ ನುಣ್ಣಗಿರುವ ಈ ಪೌಡರು ಎಳೆ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ.
556
ಕ್ಯುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ಸ್ವದೇಶಾಭಿಮಾನಿ

ತಾರೀಕು 16-1-1948

ಮಹಾತ್ಮಾ ಗಾಂಧಿಯವರ ಉಪವಾಸ

ಇದೇ ಜನವರಿ ತಾರೀಕು 13ನೇ ಮಂಗಳವಾರ ಬೆಳಿಗ್ಗೆ ಗಂಟೆ 11ಕ್ಕೆ ಮಹಾತ್ಮಾ ಗಾಂಧಿಯವರು ಪುನಃ ಉಪವಾಸ ಕೈಕೊಂಡಿರುವರು.

ಪಾಕಿಸ್ತಾನದಲ್ಲಿ ಹಿಂದು ಮತ್ತು ಸೀಖ ಜನರನ್ನು ಯಾವ ಪೀಡೆಗೆ ಒಳಪಡಿಸಿದರೂ ಅದರಿಂದ ಉದ್ವೇಗಗೊಳ್ಳದೆ ಭಾರತೀಯ ಸರಕಾರಕ್ಕೊಳಪಟ್ಟ ಪ್ರದೇಶದಲ್ಲಿರುವ ಮುಸ್ಲಿಮರನ್ನು ಯಾವ ತೊಂದರೆಗೂ ಒಳಪಡಿಸದೆ ಅವರನ್ನು ಸಂರಕ್ಷಿಸುವುದು ಭಾರತೀಯ ಪ್ರಜೆಗಳ ಕರ್ತವ್ಯವೆಂಬುದನ್ನು ಇಲ್ಲಿಯ ಜನರು ಮನಗಾಣುವಂತೆ ಮಾಡುವುದೇ ಈ ಉಪವಾಸದ ಉದ್ದೇಶವೆಂದು ತಿಳಿದುಬರುತ್ತದೆ

ಪಾಕಿಸ್ತಾನದಿಂದ ದೇಶ ತ್ಯಾಗ ಮಾಡಿ ಬಂದ ಹಿಂದೂ ಸೀಖ ಜನರು ಡೆಲ್ಲಿಯಲ್ಲಿ ಮೊದಲಾದ ಇತರೆಡೆಗಳಲ್ಲಿ ಕೂಡಾ ಮುಸ್ಲಿಮ ಪ್ರಜೆಗಳನ್ನು ಅವರ ಮನೆಗಳಿಂದ ಬಲಾತ್ಕಾರದಿಂದ ಹೊರಡಿಸಿ ಆ ಮನೆಗಳಲ್ಲಿ ತಾವು ನೆಲಸುವರೆಂಬಿತ್ಯಾದಿ ದೂರುಗಳು ಗಾಂಧಿಯವರಲ್ಲಿಗೆ ಬರುತ್ತ ಇದ್ದವು ಇಂಥ ಕಡೆಗಳಲ್ಲಿ ಮುಸ್ಲಿಮ ಪ್ರಜೆಗಳು ಸುರಕ್ಷಿತರಾಗಿ ಜೀವಿಸುವುದೇ ಕಷ್ಟವೆಂಬ ಪರಿಸ್ಥಿತಿ ಬಂದಿರಬೇಕು

ಇತ್ತೀಚೆಗೆ ಕರಾಚಿಯಲ್ಲಿ ಹಿಂದೂ ಸೀಖ ಜನರ ಮೇಲೆ ಅತ್ಯಾಚಾರ ನಡೆಯಿತು ಇದರ ಪರಿಣಾಮ ಡೆಲ್ಲಿಯಲ್ಲಿಯೂ ಕಂಡುಬಂದು ಇಲ್ಲಿಯ ಪರಿಸ್ಥಿತಿಯು ಕೈಮೀರುವಷ್ಟಕ್ಕೆ ಬಂದಿರಬೇಕು ಮತ್ತು ಇದಕ್ಕಾಗಿಯೇ ಮಹಾತ್ಮಾ ಗಾಂಧಿಯವರು ಉಪವಾಸ ಕೈಕೊಂಡಿರಬೇಕು

ಡೆಲ್ಲಿಯಲ್ಲಿ ಮುಸ್ಲೀಮರಲ್ಲಿ ವಿಶ್ವಾಸ ಹುಟ್ಟಿಸುವ ಪರಿಸ್ಥಿತಿ ಬಂದು ಹಿಂದೂ ಸೀಖ ಮುಸ್ಲೀಮರು ಪರಸ್ಪರ ಮೈತ್ರಿಯಲ್ಲಿ ಜೀವಿಸುವಂತಾದರೆ ಉಪವಾಸ ಬಿಡುವುದಾಗಿ ಮಹಾತ್ಮಾ ಗಾಂಧಿಯವರು ಹೇಳಿರುವರಾಗಿ ತಿಳಿದುಬರುತ್ತದೆ

ಕಲ್ಕತ್ತಾ ನಗರದಲ್ಲಿ ಇದೇ ಪರಿಸ್ಥಿತಿ ಬಂದಾಗ ಮಹಾತ್ಮಾ ಗಾಂಧಿಯವರು ಉಪವಾಸ ಕೈಕೊಂಡುದರ ಪರಿಣಾಮವಾಗಿ ಅಲ್ಲಿಯ ಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿತು. ಮಾತ್ರವಲ್ಲ ಇದರಿಂದಾಗಿ ಬಂಗಾಳವು ಬಹು ಮಟ್ಟಿಗೆ ರಕ್ಷಿಸಲ್ಪಟ್ಟಿತು.

ಡೆಲ್ಲಿಯಲ್ಲಿಯೂ ಇದೇ ರೀತಿಯ ಸತ್ಪರಿಣಾಮವು ಬೇಗನೆ ತೋರಿಬಂದು ಮಹಾತ್ಮರು ಉಪವಾಸ ಬಿಟ್ಟು ಬೇಗನೆ ಶಾಂತಿಯು ಸ್ಥಾಪಿಸಲ್ಪಡಲೆಂದು ಆಶಿಸಬೇಕಾಗಿಯದೆ.

ಪಾಕಿಸ್ತಾನದಲ್ಲಿ ಹಿಂದೂ ಸೀಖ ಜನರ ಮೇಲೆ ವಿಪರೀತ ಅತ್ಯಾಚಾರಗಳಾಗುತ್ತಲಿವೆಯೆಂಬುದು ನಿಜವಿರುತ್ತದೆ. ಮೊನ್ನೆಯ ಕರಾಚಿಯ ಗಲಾಟೆಯ ಬಳಿಕ ಸಿಂಧ ಪ್ರಾಂತ್ಯದಿಂದ ಕೂಡಾ ಅಲ್ಲಿಯ ಹಿಂದೂ ಸೀಖ ಪ್ರಜೆಗಳನ್ನು ಪಾಕಿಸ್ತಾನದ ಹೊರಗೆ ವರ್ಗಾಯಿಸಲು ಹಿಂದೀ ಸರಕಾರವು ಬೇಕಾದ ಏರ್ಪಾಡು ಮಾಡುತ್ತಲಿದ್ದಾರೆ ಅಲ್ಪಸಂಖ್ಯಾಕರನ್ನು ತಾವು ರಕ್ಷಣೆ ಮಾಡುವವರಿದ್ದೇವೆಯೆಂದು ಪಾಕಿಸ್ತಾನ ಸರಕಾರದ ಅಧಿಕಾರಿಗಳು ಹೇಳುವ ಮಾತುಗಳಲ್ಲಿ ವಿಶ್ವಾಸವಿಟ್ಟು ಫಲವಿಲ್ಲವೆಂದು ಈ ವಾಗ್ದಾನಗಳನ್ನು ಪಡೆಯಲು ದುಡಿದ ಸುಹ್ರವರ್ದಿಯವರೇ ಹೇಳುತ್ತಿದ್ದಾರೆ ಹೀಗೆ ಪಾಕಿಸ್ತಾನದಲ್ಲಿ ಪರಿಸ್ಥಿತಿಯು ಬಹಳ ಕೆಟ್ಟದ್ದಿದೆಯೆಂಬುದು ಅತ್ಯಂತ ಸ್ಪಷ್ಟವಾಗಿರುತ್ತದೆ ಇದಕ್ಕೆ ಏನು ಮಾಡತಕ್ಕದ್ದೆಂಬುದನ್ನು ಶಾಂತರೀತಿಯಿಂದ ವಿಚಾರಿಸಬೇಕು ಬರೀ ಉದ್ವೇಗದಿಂದ ಯಾರಿಗೂ ಯಾವ ಪ್ರಯೋಜನವಿಲ್ಲ ಮಾತ್ರವಿಲ್ಲ ಹಾನಿಯಾಗುವ ಸಂಭವನವೇ ಹೆಚ್ಚು.

ಶಾಂತಚಿತ್ತದಿಂದ ವಿಚಾರಿಸಿದರೆ ಈ ಪರಿಸ್ಥಿತಿಯಲ್ಲಿ ಅಗತ್ಯವುಳ್ಳ ಯಾವ ಕಾರ್ಯವನ್ನಾದರೂ ಕೈಕೊಳ್ಳುವ ಹೊಣೆಯನ್ನು ಭಾರತೀಯ ಸರಕಾರಕ್ಕೆ ಒಪ್ಪಿಸಿಕೊಡಬೇಕಲ್ಲದೆ ಇಲ್ಲಿಯ ಪ್ರಜೆಗಳು ಉದ್ವೇಗಗೊಂಡು ಇಲ್ಲಿಯ ಮುಸ್ಲೀಮರ ಮೇಲೆ ಅತ್ಯಾಚಾರ ಮಾಡುವುದು ಸರಿಯಲ್ಲವೆಂದ ಯಾರೂ ಒಪ್ಪಬೇಕಾಗುತ್ತದೆ ಇಲ್ಲಿಯೂ ಅತ್ಯಾಚಾರಗಳು ಆರಂಭವಾದರೆ ಭಾರತೀಯ ಸರಕಾರದವರು ಪಾಕಿಸ್ತಾನದಲ್ಲಿಯೂ ಹಿಂದೂ ಸೀಖ ಪ್ರಜೆಗಳ ಬಗ್ಗೆ ಮಾಡಬಹುದಾದ ಕೆಲಸ ಕೂಡಾ ಮಾಡಲು ತೊಂದರೆ ಮಾಡಿದ ಪರಿಣಾಮ ಮಾತ್ರ ಉಂಟಾಗುತ್ತದೆಂಬುದನ್ನು ಸ್ವಲ್ಪ ವಿಚಾರಿಸಿದರೆ ತಿಳಿಯಬಹುದು

ಇದು ಮಾತ್ರವಲ್ಲ ಪಾಕಿಸ್ತಾನವು ಮುಸ್ಲೀಮರ ರಾಜ್ಯವಾಗಿಯೇ ರಚಿಸಲ್ಪಟ್ಟಿರುತ್ತದೆ ಭಾರತೀಯ ರಾಷ್ಟ್ರವಾದರೂ ಜಾತೀಯತೆಯ ಮೇಲೆ ಕಟ್ಟಲ್ಪಡುವ ರಾಷ್ಟ್ರವಲ್ಲವೆಂದು ಸಾರಿ ಹೇಳಲಾಗುತ್ತದೆ ಭಾರತೀಯ ರಾಷ್ಟ್ರದ ಎಲ್ಲ ಪ್ರಜೆಗಳೂ ಜಾತಿಮತ ಭೇದವಿಲ್ಲದೆ ಸಮಾನ ಹಕ್ಕುಗಳುಳ್ಳವರಿದ್ದು ಇಲ್ಲಿ ಮುಸ್ಲೀಮರನ್ನು ರಕ್ಷಿಸುವುದು ನಮ್ಮ ಸರಕಾರದ ಹಾಗೂ ನಮ್ಮೆಲ್ಲರ ಕರ್ತವ್ಯವಿರುತ್ತದೆ

ಪಾಕಿಸ್ತಾನದಲ್ಲಿಯ ಸ್ಥಿತಿ ಸುಧಾರಿಸಲು ನಿಜವಾದ ದಾರಿಯೆಂದರೆ ನಮ್ಮ ರಾಜ್ಯದಲ್ಲಿ ಮುಸ್ಲೀಮರ ಕಡೆಗೆ ಪೂರ್ಣ ನ್ಯಾಯದಿಂದ ವರ್ತಿಸುವುದೊಂದೇ ದಾರಿಯಿರುತ್ತದೆ ನಮ್ಮ ನಡತೆಯ ಉದಾಹರಣೆಯಿಂದ ಮಾತ್ರ ಪಾಕಿಸ್ತಾನದ ಪ್ರಜೆಗಳಲ್ಲಿ ಜ್ಞಾನೋದಯ ವಾಗುವಂತೆ ಮಾಡಬಹುದಲ್ಲದೆ ಇದಕ್ಕೆ ಬೇರೆ ಯಾವ ದಾರಿಯೂ ಫಲವಿಲ್ಲ

ಪಾಕಿಸ್ತಾನದಲ್ಲಿಯ ಹಿಂದೂ ಸೀಖ ಪ್ರಜೆಗಳಿಗೆ ನಮ್ಮ ಸರಕಾರವು ಎಷ್ಟು ಸಹಾಯ ಮಾಡುವುದು ಸಾಧ್ಯವಿದೆಯೋ ಅಷ್ಟನ್ನು ನಮ್ಮ ಸರಕಾರವು ಖಂಡಿತವಾಗಿಯೂ ಮಾಡುತ್ತದೆ ಅಲ್ಲಿಂದ ಈ ಪ್ರಜೆಗಳನ್ನು ನಮ್ಮಲ್ಲಿಗೆ ವರ್ಗಾಯಿಸಲು ಎಲ್ಲ ಏರ್ಪಾಡುಗಳನ್ನೂ ಮಾಡುತ್ತಿದ್ದಾರೆ. ಆದರೆ ಇಷ್ಟರಿಂದ ಮಾತ್ರ ಈ ಪ್ರಶ್ನೆ ಬಿಡಿಸುವಂತಿಲ್ಲ.

ನಮ್ಮಲ್ಲಿಯ ಬಹುಸಂಖ್ಯಾಕ ಪ್ರಜೆಗಳಾದ ಹಿಂದೂ ಸೀಖ ಜನರು ಇಲ್ಲಿ ಅಲ್ಪಸಂಖ್ಯಾಕರಿರುವ ಮುಸ್ಲೀಮರನ್ನು ನ್ಯಾಯದಿಂದ ನಡೆಸಿ ಅವರಲ್ಲಿ ವಿಶ್ವಾಸವನ್ನುಂಟು ಮಾಡುವುದು ಅತ್ಯಂತ ಮಹತ್ವದ ಸಂಗತಿ ಭಾರತೀಯ ರಾಷ್ಟ್ರವು ಇಲ್ಲಿಯ ಬಹುಸಂಖ್ಯಾಕ ಜನರಂತೆ ಇಲ್ಲಿಯ ಮುಸ್ಲೀಮ ಜನರಿಗೂ ಸೇರಿದ ರಾಷ್ಟ್ರವೆಂಬುದನ್ನು ನಾವು ಮರೆತು ವರ್ತಿಸುವುದು ಸರಿಯಲ್ಲ

ಪಾಕಿಸ್ತಾನದಲ್ಲಿ ಅತ್ಯಾಚಾರಕ್ಕೊಳಪಟ್ಟು ಇಲ್ಲಿ ಬಂದು ನೆಲಸುವ ಜನರಲ್ಲಿ ಇಂಥ ನ್ಯಾಯ ಬುದ್ಧಿಯನ್ನು ಹುಟ್ಟಿಸುವುದು ಬಹಳ ಕಷ್ಟದ ಕೆಲಸ ಆದರೂ ಅವರು ತಮ್ಮ ಕಷ್ಟಗಳನ್ನು ಎಣಿಸಿ ಅದೇ ರೀತಿ ಇತರರೂ ಕಷ್ಟಕ್ಕೊಳಗಾಗಬಾರದೆಂದು ಎಣಿಸಬೇಕಾದುದೇ ಅವರ ಪವಿತ್ರ ಕರ್ತವ್ಯವಿರುತ್ತದೆ ಈ ಬಗೆಯ ಜಾಗ್ರತಿಯನ್ನು ಅವರಲ್ಲಿ ಹುಟ್ಟಿಸುವುದಾದರೂ ಹೇಗೆ? ಮಹಾತ್ಮಾ ಗಾಂಧಿಯವರ ದಾರಿಯೆಂದರೆ ತನ್ನ ಆತ್ಮಯಜ್ಞದಿಂದ ಇಂಥವರಲ್ಲಿ ಧರ್ಮ ಜಾಗ್ರತಿಯಾಗುವಂತೆ ಸಾಧಿಸುವುದು ಇದೇ ಈ ಉಪವಾಸ ವ್ರತದ ಅರ್ಥ

ಮಹಾತ್ಮಾ ಗಾಂಧಿಯವರು ಈ ರೀತಿ ಆಗಾಗ ಉಪವಾಸ ಕೈಕೊಳ್ಳುವುದು ಸರಿಯಲ್ಲವೆಂದು ವಾದಿಸುವವರೆಷ್ಟೊ ಮಂದಿ ಇದ್ದಾರೆ ಇಂದ ವರ್ತನದಿಂದ ಇವರು ಮುಸ್ಲೀಮರಿಗೆ ಸಹಾಯ ಮಾಡುತ್ತಾರೆಂದು ದೂರುವವರಿದ್ದಾರೆ ಇಂದಿನ ಪರಿಸ್ಥಿತಿಯಲ್ಲಿ ಮುಸ್ಲೀಮರನ್ನು ರಕ್ಷಿಸುವುದಕ್ಕಾಗಿ ತನ್ನ ಪ್ರಾಣ ಕೂಡಾ ಕೊಡಲು ಸಿದ್ಧನಾದ ಒಬ್ಬ ಮಹಾತ್ಮನಾದರೂ ದೇಶದಲ್ಲಿರುವನೆಂಬುದು ಭಾರತಕ್ಕೆ ಒಂದು ಗೌರವದ ವಿಷಯವೆಂಬುದು ಸ್ವಲ್ಪ ವಿಚಾರಿಸಿದರೆ ಯಾರಿಗೂ ತಿಳಿಯುವುದು

ಮಹಾತ್ಮಾ ಗಾಂಧಿಯವರು ಈಗ ಹಿಂದಿನ ತ್ರಾಣವುಳ್ಳವರಲ್ಲ ಇವರ ಉಪವಾಸವೆಂದರೆ ಈಗ ನಿಜವಾಗಿಯೂ ಮೃತ್ಯುವಿನೊಡನೆ ಒಂದು ಆಟವೆಂಬುದಕ್ಕೆ ಸಂಶಯವಿಲ್ಲ ಆದ ಪರಿಂದ ಈ ಉಪವಾಸ ಎಷ್ಟು ಶೀಘ್ರದಲ್ಲಿ ಮುಗಿಯುವಂತಾಗುವುದೋ ಅಷ್ಟು ಶ್ರೇಯಸ್ಕರ ಡೆಲ್ಲಿಯಲ್ಲಿಯ ಮುಂದಾಳುಗಳು ಅವಶ್ಯವುಳ್ಳ ಸಹಸವಾದಿ ಇಲ್ಲಿಯ ಹಿಂದೂ ಮುಸ್ಲೀಮರಲ್ಲಿ ನಿಜವಾದ ಮೈತ್ರಿಯನ್ನು ತಂದೊಡ್ಡಿ ಈ ಘೋರ ತಪಸ್ಸು ಬೇಗನೆ ಮುಕ್ತಾಯವಾಗುವಂತೆ ಸಾಧಿಸಬೇಕಾಗಿದೆ

ಅಖಿಲ ಭಾರತದ ಎಲ್ಲೆಡೆಗಳಲ್ಲಿಯೂ ಬಹುಸಂಖ್ಯಾಕರಾದ ಹಿಂದುಗಳು ಮಹಾತ್ಮಾಜೀಯವರ ಉಪವಾಸದ ನಿಜವಾದ ಅಭಿಪ್ರಾಯ ತಿಳಿದು ಅವರ ಆಶಯದಂತೆ ವರ್ತಿಸಿ ಡೆಲ್ಲಿಯಲ್ಲಿಯೂ ಬೇಗನೆ ಶಾಂತಿ ನೆಲಸಿ ಮಹಾತ್ಮಾ ಗಾಂಧಿಯವರು ಉಪವಾಸ ನಿಲ್ಲಿಸಿ ಇನ್ನು ಈ ದೇಶದ ಸೇವೆ ಸಲ್ಲಿಸುವಂತಾಗಲೆಂದು ಎಲ್ಲರೂ ಈಗ ಪ್ರಾರ್ಥಿಸಬೇಕಾಗಿರುತ್ತದೆ.

ಟೀಕೆ-ಟಿಪ್ಪಣಿಗಳು

ದಕ್ಷಿಣ ಕನ್ನಡ ಜಿಲ್ಲೆಗೆ ರಸ್ತೆಗಳು

ಸಾರ್ವಜನಿಕ ಕಾಮಗಾರಿಕೆಗಳು ಮಂತ್ರಿಯವರಾದ ಶ್ರೀ ಭಕ್ತವತ್ಸಲಂ ಮತ್ತು ಆರೋಗ್ಯ ಖಾತೆಯ ಮಂತ್ರಿಯವರಾದ ನಮ್ಮ ಮಾನ್ಯ ಶ್ರೀ ಎ ಬಿ ಶೆಟ್ಟರು ಈ ಜಿಲ್ಲೆಯನ್ನು ಸಂದರ್ಶಿಸಿ ಹಿಂತೆರಳಿದರು ತಾ ೧೨ಕ್ಕೆ ದಿನ ಜಿಲ್ಲಾ ಬೋರ್ಡಿನ ಸಭಾಭವನದಲ್ಲಿ ಈ ಜಿಲ್ಲೆಯ ರಸ್ತೆಗಳ ಅಭಿವೃದ್ಧಿ ಮತ್ತು ಇಲ್ಲಿಯ ಕೃಷಿಯ ಅಭಿವೃದ್ಧಿಗಾಗಿ ಕೈಕೊಳ್ಳಲಿರುವ ನೀರಾವರಿ ಕಾಮಗಾರಿಕೆಗಳ ವಿಷಯ ಆಲೋಚಿಸಲು ಮಂತ್ರಿಗಳು ಒಂದು ಚಿಕ್ಕ ಸಭೆಯನ್ನು ಸೇರಿಸಿದರು ಇದರಲ್ಲಿ ಚರ್ಚಿಸಲ್ಪಟ್ಟ ವಿಷಯಗಳು ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ ವಿಷಯಗಳಿರುತ್ತದೆ

ಮೊದಲಾಗಿ ಎತ್ತಿದ ವಿಚಾರವೆಂದರೆ ರಸ್ತೆಗಳ ಅಭಿವೃದ್ಧಿ ಈ ಖಾತೆಯ ಸುಪರಿಂಟೆಂಡಿಂಗ್ ಇಂಜಿನಿಯರರಾದ ಶ್ರೀ ಬಿ ಎನ್ ಶೆಣೈಯವರು ಈ ಬಗ್ಗೆ ತಾವು ತಯಾರಿಸಿದ ಯೋಜನೆಯ ಮಾಹಿತಿಯನ್ನು ಸಭೆಯ ಮುಂದಿಟ್ಟರು ಯುದ್ಧಾನಂತರದ ಐದ ವರ್ಷಗಳ ರಸ್ತೆಗಳ ಅಭಿವೃದ್ಧಿಯ ಯೋಜನೆಯಂತೆ ಈ ಜಿಲ್ಲೆಗೆ ಈ ಮೊದಲಿನ ಐದು ವರ್ಷಗಳಲ್ಲಿ ರಸ್ತೆಗಳ ಬಗ್ಗೆ ೩೬ ಲಕ್ಷ ರೂಪಾಯಿ ಸಿಕ್ಕುತ್ತದೆ ಶೆಣೈಯವರು ಸುಮಾರು ೪೫ ಲಕ್ಷ ರೂಪಾಯಿ ತಗಲುವಷ್ಟು ಯೋಜನೆಯನ್ನು ಇಲ್ಲಿಗೆ ತಯಾರಿಸಿದ್ದಾರೆ ಆರಂಭಿಸಿದ ಮಾರ್ಗವೊಂದರೂ ಕಾಲ ...ದು ವರ್ಷಗಳೊಳಗೆ ಪೂರ್ಣವಾಗದೆ ಸಿಕ್ಕುವ ಹಣ ಉಳಿದು ನಷ್ಟವಾಗದಂತಾಗಬೇಕೆಂಬುದೇ ಹೀಗೆ ಹೆಚ್ಚಿಗೆ ಅಂದಾಜಿನ ಕೆಲಸದ ಕಾರ್ಯಕ್ರಮ ತಯಾರಿಸಲು ಕಾರಣ

ಇವರ ಯೋಜನೆಯಲ್ಲಿ ಪ್ರಾಮುಖ್ಯ ಕಾರ್ಯಕ್ರಮವೆ ದರೆ ಕಣ್ಣಾನೂರಿನಿಂದ ತವ ತೀರ ಬರುವ ರಸ್ತೆಯನ್ನು ಮುಂದರಿಸಿ ಹೊಸದುರ್ಗ ಕಲ್ಲಡ್ಕ ಬಂಟ್ವಾಳ, ಪುಚ್ಚಮೊಗರು ಕಾರ್ಕಳ, ಹೆಬ್ರಿ, ಹಾಲಾಡಿ ಜಡಕಲ್ಲು ಬೈಂದೂರಿಗಾಗಿ ಉತ್ತರ ಕನ್ನಡ ಜಿಲ್ಲೆಗೆ ಮುಟ್ಟಿಸುವ ರಸ್ತೆ ಇದಕ್ಕೆ ಪ್ರಾಂತಿಕ ಹೈವೇ ಎನ್ನುತ್ತಾರೆ ಈ ರಸ್ತೆಯಲ್ಲಿ ಬರುವ ಹೊಳೆಗಳಿಗೆಲ್ಲ ಸಂಕಗಳನ್ನು ಹಾಕುತ್ತಾರೆ ಇದಕ್ಕೆ ತಗಲುವ ಖರ್ಚಿನ ಅಂದಾಜು ೨೩ ಲಕ್ಷ ರೂಪಾಯಿ

ಕೇಂದ್ರ ಸರಕಾರದವರು ಮಾಡಿಸುವ ನೇಶನಲ್ ಹೈವೇಯಾಗಿ ಅವರೇ ಈ ರಸ್ತೆಯನ್ನು ಮಾಡಿಸಬೇಕಾಗಿ ಮದ್ರಾಸು ಸರಕಾರವು ಕೇಂದ್ರ ಸರಕಾರವನ್ನು ಒತ್ತಾಯ ಪಡಿಸುತ್ತಿದೆ ಇದಕ್ಕೆ ಕೇಂದ್ರ ಸರಕಾರವು ಒಪ್ಪಲಿಲ್ಲ ಇನ್ನು ಮುಂದಾದರೂ ಒಪ್ಪಿದರೆ ಇದಕ್ಕೆ ತಗಲುವ ೨೩ ಲಕ್ಷ ರೂಪಾಯಿಯನ್ನು ಇತರ ರಸ್ತೆಗಳ ಬಗ್ಗೆ ಉಪಯೋಗಿಸಬಹುದು

ಈ ರಸ್ತೆಯು ಜಿಲ್ಲೆಯ ದೃಷ್ಟಿಯಿಂದ ಬಹಳ ಮುಖ್ಯವಿರುತ್ತಾರೆ ನಮ್ಮ ಮೂಡ

ಲಾಗಿನ ಹಳ್ಳಿಗಳಲ್ಲಿ ಇದ್ದು ಹಾದು ಹೋಗುವುದರಿಂದ ಅಲ್ಲಿಯು ಪರಿಸ್ಥಿತಿ ಸುಧಾರಿಸಲು ಇದರಿಂದ ಬಹಳ ಸಹಾಯವಾದೀತು. ಇಲ್ಲಿ ಸಾಗುವಳಿ ಮಾಡಬಹುದಾದ ತುಂಬಾ ಭೂಮಿಯಿದ್ದರೂ ಈಗ ಆಗುತ್ತ ಇಲ್ಲ. ಮುಂದೆ ಇಲ್ಲಿ ಸಾಗುವಳಿ ಆಗುವಂತಾದರೆ ನಮ್ಮ ಜಿಲ್ಲೆಯ ಆಹಾರ ಪ್ರಶ್ನೆ ಬಿಡಿಸಲು ಮತ್ತೆ ಕಷ್ಟವಿಲ್ಲ.

ಮಂಗಳೂರಿನಿಂದ ಕರಾಳಿ ರಸ್ತೆಯಲ್ಲಿ ಉಡುಪಿಗೆ ಹೋಗಲು ನಡುವಿನ ನಾಲ್ಕು ಹೊಳೆಗಳಿಗೆ ಸಂಕ ಹಾಕಿದರೆ ತುಂಬಾ ಪ್ರಯೋಜನವಿದೆ

ಕಾರ್ಕಳಕ್ಕಾಗಿ ಉಡುಪಿಗೆ ಹೋಗುವ ಬಸ್ಸು ಲಾರಿ ಮತ್ತು ಕಾರುಗಳಿಗೆ ಹತ್ತಿರದ ಈ ದಾರಿಯಲ್ಲಿ ಹೋಗುವುದರಿಂದ ತಿಂಗಳೊಂದರ ರೂ ೧೨,೦೦೦ದ ಪೆಟ್ರೋಲು ಉಳಿಸಬಹುದೆಂದು ಶ್ರೀ ಶೆಣೈಯವರು ಅಂದಾಜು ಮಾಡಿದ್ದಾರೆ. ಈ ಸಂಕಗಳನ್ನು ಅರ್ಧಾಂಶ ಸರಕಾರೀ ಸಹಾಯ ಮತ್ತು ಅರ್ಧಾಂಶ ಸರಕಾರೀ ಸಾಲದಿಂದ ಕಟ್ಟಿಸುವುದು ಉತ್ತಮವೆಂದು ಇವರು ಸೂಚಿಸಿದರು ಮತ್ತೆ ಈ ಸಂಕಗಳಲ್ಲಿ ಸುಂಕ ವಸೂಲು ಮಾಡಿ ಸಾಲ ಸಂದಾಯ ಮಾಡಬಹುದೆಂದರು ಈಗ ಈ ನಾಲ್ಕು ಹೊಳೆಗಳಲ್ಲಿ ಕಡವಿನಿಂದ ರೂ ೩೬,೦೦೦ ಸಿಕ್ಕುತಿದೆ ಇದೇ ದರದ ಸುಂಕ ವಸೂಲಿ ಮಾಡಿ ಬಸ್ಸು ಲಾರಿಗಳಿಂದಲೂ ಸುಂಕ ವಸೂಲು ಮಾಡಿದರೆ ಸಾಲ ಸಂದಾಯ ೨೫ ವರ್ಷಗಳಲ್ಲಿ ಮಾಡಿ ಆ ಮೇಲೆ ಸುಂಕ ತೆಗೆಯಬಹುದೆಂದು ಲೆಕ್ಕ ಹಾಕಿ ತೋರಿಸಿದರು

ಅಂತೂ ಈ ಸಂಕಗಳ ಕೆಲಸ ಕೈಕೊಳ್ಳಲು ಹಣವಿಲ್ಲ ಆದರೂ ಕುಳಾಯಿಗೆ ಈಗಲೆ ಸಂಕ ಹಾಕಿಸಿ ಉಳಿದ ಸಂಕಗಳಿಗೆ ಎಷ್ಟು ಖರ್ಚು ಬೇಕಾಗುತ್ತದೆಂದು ಈಗಲೆ ವಿಚಾರಣೆ ನಡೆಸಬೇಕೆಂದು ಸಭೆಯವರ ಒತ್ತಾಯದಿಂದ ತೀರ್ಮಾನವಾಯಿತು

ಈ ಮುಖ್ಯ ಕಾರ್ಯಕ್ರಮಗಳಲ್ಲದೆ ಎಕ್ಕಾರು ಸಂಕ, ಕಲ್ಮಾಡಿ ಸಂಕಗಳನ್ನು ಈಗಲೇ ಕೈಕೊಳ್ಳಲಾಗುತ್ತದೆ ಸುಳ್ಯ ಪಂಬೆತ್ತಾಡಿ ರಸ್ತೆಗಳಂಥ ಕಲವು ಚಿಕ್ಕ ಹೊಸ ರಸ್ತೆಗಳನ್ನು ಮಾಡಲಾಗುತ್ತದೆ ಮತ್ತು ಹ್ಯಾವೇ ರಸ್ತೆಗಳ ಕೆಲವು ಭಾಗಗಳಿಗೆ ಅಂದರೆ ಮಂಗಳೂರು ಮುನಿಸಿಪಾಲಿಟಿಯಲ್ಲಿ ಹಾದು ಹೋಗುವ ರಸ್ತೆಯ ೩½ ಮೈಲಿನ ಅಂಶಕ್ಕೆ ಹಾಗೂ ಬಂಟ್ವಾಳದ ಬಳಿ ಮಾರ್ಗಕ್ಕೆ ದಾಮಾರು ಹಾಕುವ ಕಾರ್ಯವನ್ನು ಕೈಕೊಳ್ಳಲಾಗುತ್ತದೆ

ಶ್ರೀ ಶೆಣೈಯವರು ತಯಾರಿಸಿರುವ ಯೋಜನೆಯು ಜಿಲ್ಲೆಯ ದೃಷ್ಟಿಯಿಂದ ಉಪಯುಕ್ತವಿದ್ದು ಇದಕ್ಕೆ ಸಭೆಯು ಸಮ್ಮತಿಯನ್ನು ಕೊಟ್ಟಿತು ಈ ಕಾರ್ಯಕ್ರಮವು ನಿಜವಾಗಿಯೂ ಉಪಯುಕ್ತವೇ ಇದೆಯೆಂದು ನಾವೂ ಅಭಿಪ್ರಾಯ ವ್ಯಕ್ತಪಡಿಸಲು ಇಚ್ಛಿಸುತ್ತೇವೆ.

ನೀರಾವರಿ ಯೋಜನೆಗಳು

ನಮ್ಮ ಜಿಲ್ಲೆಯಲ್ಲಿ ಕೃಷಿಯ ಅಭಿವೃದ್ಧಿಯನ್ನು ಸಾಧಿಸಲು ಯಾವ ನೀರಾವರಿ ಯೋಜನೆಗಳನ್ನು ಕೈಕೊಳ್ಳಬಹುದೆಂದು ವಿಚಾರಿಸಲು ಇಲ್ಲಿ ಒಂದು ನೀರಾವರಿ ಇಂಜಿನಿಯರಿಂಗ್ ಶಿಬಂದಿಯನ್ನು ನೇಮಿಸಿದ ಸಂಗತಿ ಹೆಚ್ಚಿನವರಿಗೆ ಗೊತ್ತಿರಬಹುದು. ಇವರು ವಿಚಾರಿಸಲು ೩೩ ಕಾರ್ಯಗಳನ್ನು ಇಟ್ಟುಕೊಂಡಿದ್ದಾರೆ. ಮತ್ತೆ ಇವೆಲ್ಲದಕ್ಕೆ ಸುಮಾರು ೬೦ ಲಕ್ಷರೂಪಾಯಿಗಳು ಬೇಕಾಗಬಹುದೆಂಬ ಥೋರವಾಟ್ಟಿನ ಅಂದಾಜು ಮಾಡಿದ್ದಾರೆ

ಇದರ ಪೈಕಿ ಈಗ ಶಿರಿಯಾ ಹೊಳೆಗೆ ಬಾಡೂರು ಸಮೀಪ ಕಟ್ಟೆ ಹಾಕಿ ನೀರನ್ನು ಒದಗಿಸುವ ಒಂದು ಯೋಜನೆ ಮತ್ತು ಗುರ್ಪುರ ಆಣೆಕಟ್ಟಿನ ಒಂದು ಯೋಜನೆ ಇವುಗಳ ವಿಚಾರಣೆ ಪೂರ್ಣವಾಗಿರುತ್ತದೆಂದು ಈ ಖಾತೆಯ ಇಂಜಿನೀಯರ್ ಶ್ರೀ ಎನ್ ಜಿ ಜೊಸೆಫರು ಮಂತ್ರಿಗಳ ಸಮಕ್ಷಮದಲ್ಲಿ ಸೇರಿದ ಮೇಲಿನ ಸಭೆಯಲ್ಲಿ ಹೇಳಿದರು ಇವಲ್ಲದೆ ಚಾಂತಾರು ಮದಗವೇ ಮೊದಲಾದ ನಾಲ್ಕು ಕರೆಗಳ ದುರಸ್ತಿಯ ವಿಚಾರಣೆಯೂ ಕೊನೆಗೊಂಡಿದೆಯೆಂದೂ ಇವನ್ನು ಮಂಜೂರು ಮಾಡಿದಲ್ಲಿ ಕೂಡಲೇ ಕೈಕೊಳ್ಳಲಾಗುವುದೆಂದ ಹೇಳಿದರು

ಶ್ರೀ ಜೊಸೆಫರು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಗುಡ್ಡಗಳಿದ್ದು ಇಲ್ಲಿ ನೀರಾವರಿ ಯೋಜನೆಗಳಿಗೆ ಮೈಸೂರಿನಲ್ಲಿಗಿಂತ ಹೆಚ್ಚು ಖರ್ಚು ತಗಲುತ್ತದೆಂದು ಹೇಳಿದರು ಉದಾಹರಣೆಗೆ ಶಿರಿಯಾ ಯೋಜನೆಯಂತೆ ನೀರು ಒದಗಿಸಲು ಒಂದು ಎಕ್ರೆ ಭೂಮಿಗೆ ರೂ ೧೦೦೦ದಷ್ಟು ಖರ್ಚು ತಗಲುತ್ತದೆ ಗುರ್ಪುರ ಆಣೆ ಕಟ್ಟಿನ ಯೋಜನೆಗೆ ಎಕ್ರೆಗೆ ರೂ ೬೬೬ರ ಖರ್ಚು ತಗಲುತ್ತದೆ ಈ ಖರ್ಚನ್ನು ಹೀಗೆ ನೀರು ಒದಗಿಸಿ ಪ್ರಯೋಜನ ಪಡೆಯುವ ಆಸ್ತಿಗಳಿಗೆ ನೀರ ತೆರಿಗೆ ಹಾಕಿ ವಸೂಲು ಮಾಡಬೇಕಾಗುತ್ತದೆಂದರು

ಈ ಜಿಲ್ಲೆಯಲ್ಲಿ ನೀರನ್ನು ಆಯಾ ಸ್ಥಳಗಳಿಗೆ ಹಂಚುವ ಪ್ರಶ್ನೆಗಿಂತ ನೀರನ್ನು ದಾಸ್ತಾನು ಮಾಡಿಡುವ ರಿಜರ್ವಾಯರುಗಳನ್ನು ತಯಾರಿಸುವುದೇ ಮುಖ್ಯ ಕೆಲಸವೆಂದು ಶ್ರೀ ಜೊಸೆಫರು ಪಡುವ ಅಭಿಪ್ರಾಯವು ಸರಿಯಾದುದು ನಮ್ಮ ಸಂಕಷ್ಟ ಮಳೆಯಿದೆ ಆದರೆ ಆ ಮಳೆಯ ನೀರೆಲ್ಲ ಬೇಗನೆ ಹರಿದು ಹೋಗಿ ಮಳೆನಿಂತ ಮೇಲೆ ನೀರಿಲ್ಲ ಮಳೆಯ ನೀರನ್ನು ಉಳಿಸುವುದೇ ಇಲ್ಲಿಯಮುಖ್ಯ ಪ್ರಶ್ನೆಯೆಂಬುದು ನಿರ್ವಿವಾದ

ನೀರನ್ನು ಹಂಚಲು ಅಲ್ಲಲ್ಲಿ ಕಟ್ಟಗಳನ್ನು ಹಾಕುವ ಪದ್ಧತಿ ಈಗಲೂ ಜಾರಿಯಲ್ಲಿದೆ ಇವನ್ನು ಮಣ್ಣಿನ ಕಟ್ಟಗಳನ್ನಾಗಿ ಪ್ರತಿ ವರ್ಷ ಹಾಕುವುದಕ್ಕಿಂತ ಕಾಯಂ ಕಟ್ಟಗಳನ್ನಾಗಿ ಮಾರ್ಪಡಿಸುವುದು ಅಗತ್ಯವಾದರೂ ಈ ಕಾರ್ಯವನ್ನು ಕ್ರಮೇಣ ಸಾಧಿಸಬಹುದು. ಕೂಡಲೇ ಕೈಕೊಳ್ಳಬೇಕಾದ ಕಾರ್ಯಕ್ರಮವೆಂದರೆ ನೀರು ದಾಸ್ತಾನಿನ ಕಾರ್ಯ.

ಹಾಲಾಡಿಯಲ್ಲಿ ಇಂಥ ಒಂದು ರಿಜರ್ವಾಯರ್ ತಯಾರಿಸುವ ಒಂದು ಯೋಜನೆಯೂ ಇವರ ಪಟ್ಟಿಯಲ್ಲಿದೆ ಇದು ಈ ಪಟ್ಟಿಯಲ್ಲಿಯ ಎಲ್ಲಕ್ಕೂ ದೊಡ್ಡ ಯೋಜನೆ. ಇದರಿಂದ ಸುಮಾರು 7ರಿಂದ 10 ಸಾವಿರ ಎಕ್ರೆಗಳಿಗೆ ನೀರು ಒದಗಿಸಬಹುದಂತೆ ಇದಕ್ಕೆ ಸುಮಾರು ೧೨ ಲಕ್ಷ ರೂಪಾಯಿ ಖರ್ಚು ತಗಲುವುದೆಂದು ಥೋರವಾಟ್ಟಿನ ಅಂದಾಜು.

ಈ ಕಾರ್ಯಕ್ರಮವನ್ನು ಈ ಇಲಾಖೆಯವರು ಆದಷ್ಟು ಬೇಗನೆ ವಿಚಾರಿಸಿ ಇದರ ಸರಿಯಾದ ಖರ್ಚನ್ನು ಎಣಿಸಿ ಇದನ್ನು ಆದಷ್ಟು ಬೇಗನೆ ಕೈಕೊಳ್ಳುವ ಏರ್ಪಾಡು ಮಾಡಬೇಕಾಗಿ ನಾವು ಆಗ್ರಹಪೂರ್ವಕ ಕೇಳಿ ಕೊಳ್ಳುತ್ತೇವೆ

ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕೋತ್ಸವವು ಕೆನರಾ ಹ್ಯಾಸ್ಕೂಲಿನ ವಠಾರದಲ್ಲಿ ತಾ ೧೧ ನೇ ದಿನ ಮಾನ್ಯ ಶ್ರೀ. ಭಕ್ತವತ್ಸಲಮ್ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಮಾನ್ಯ ಶ್ರೀ ಎ ಬಿ ಶೆಟ್ಟರೇ ಮೊದಲಾದ ಅನೇಕ ಮಂದಿ ಅತಿಥಿಗಳೂ ಹಾಜರಿದ್ದರು

ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ ವಿ ಎಸ್ ಕುಡ್ವರು ಅತಿಥಿ ಅಭ್ಯಾಗರವನ್ನೆಲ್ಲ ಸ್ವಾಗತಿಸುತ್ತ ವ್ಯಾಪಾರೀ ಶಿಕ್ಷಣದ ಅವಶ್ಯಕತೆ, ರಹದಾರಿಗಳ ಅಭಿವೃದ್ಧಿ, ಮಜೂರರ ಪ್ರಶ್ನೆ, ನಿಯಂತ್ರಣಗಳ ವಿಚಾರ, ಕೈಗಾರಿಕೆಗಳನ್ನು ಸರಕಾರದವರೇ ವಹಿಸಿಕೊಂಡು ನಡೆಸುವ ಧೋರಣೆ, ರಾಷ್ಟ್ರೀಯ ಯೋಜನೆಯ ಆವಶ್ಯಕತೆ, ನಮ್ಮ ಜಿಲ್ಲೆಗೆ ಸಂಬಂಧಿಸಿದ ಮುಖ್ಯ ಪ್ರಶ್ನೆಗಳು, ಇಲ್ಲಿಗೆ ವಿದ್ಯುಚ್ಛಕ್ತಿಯ ಸರಬರಾಯಿ, ಮಂಗಳೂರು ಬಂದರವನ್ನು ದೊಡ್ಡ ಬಂದರವನ್ನಾಗಿ ಮಾರ್ಪಡಿಸುವುದರ ಆವಶ್ಯಕತೆ, ನಮ್ಮ ವ್ಯಾಪಾರೀ ವ್ಯವಹಾರದ ರೀತಿಗಳ ವಿಚಾರ ಇತ್ಯಾದಿ ಹಲವು ವಿಷಯಗಳನ್ನೆತ್ತಿ ಭಾಷಣವಿತ್ತರು

ಆ ಬಳಿಕ ಕೊಡಗಿನಿಂದ ಬಂದಿದ್ದ ಶ್ರೀ ಐ ಸಿ ಸುಬ್ಬಯ್ಯನವರು ಮಾತನಾಡುತ್ತ ಕೊಡಗು ಮತ್ತು ದಕ್ಷಿಣ ಕನ್ನಡಗಳ ಪರಸ್ಪರ ಸಂಬಂಧವನ್ನು ಸ್ಪಷ್ಟಗೊಳಿಸಿ ಇಲ್ಲಿಯ ಬಂದರವನ್ನು ದೊಡ್ಡ ಬಂದರವನ್ನಾಗಿ ಮಾಡಿದರೆ ತಮಗೂ ತುಂಬಾ ಪ್ರಯೋಜನವಾಗುತ್ತದೆಂದರು

ಅನಂತರ ನಮ್ಮ ಇಂಪೀರಿಯಲ್ ಬ್ಯಾಂಕಿನ ಏಜಂಟರಾದ ಶ್ರೀ ಸಿ ಜಿ ಕೌಲ್ಗನರೂ ಈ ಜಿಲ್ಲೆಯ ಆವಶ್ಯಕತೆಗಳನ್ನು ಒತ್ತಿ ಹೇಳಿದರು

ಅಂದಿನ ಸಮಾರಂಭದ ಅಧ್ಯಕ್ಷರಾದ ಶ್ರೀ ಭಕ್ತವತ್ಸಲಮರು ಇದಕ್ಕೆಲ್ಲ ಉತ್ತರ ಕೊಡುತ್ತ ನಮಗೆ ವಿದ್ಯುಚ್ಛಕ್ತಿಯನ್ನು ಗೆರಸೊಪ್ಪೆಯಿಂದ ಒದಗಿಸಲು ಮೈಸೂರು ಸರಕಾರದವರು ಇದುವರೆಗೆ ಒಪ್ಪಿಲ್ಲವೆಂದೂ ಈಗಿನ ಪ್ರಜಾಸರಕಾರದೊಡನೆ ಪುನಃ ಮಾತುಕತೆ ನಡೆಸುವುದಾಗಿಯೂ ಹೇಳಿದರು ಮಜೂರ ಪ್ರಶ್ನೆಯನ್ನೆತ್ತಿ ಜಿಲ್ಲೆಯಲ್ಲಿ ಎಲ್ಲರೂ ಸೇರಿ ಇನ್ನೂ ಮೂರು ವರ್ಷಗಳ ತನಕ ಮುಷ್ಕರಗಳಾಗಬಾರದೆಂಬ ನಿರ್ಣಯವಾದುದನ್ನು ಹೇಳಿ ಇದರ ಬಳಿಕವೂ ಅಲ್ಲಲ್ಲಿ ಮುಷ್ಕರಗಳಾಗುತ್ತಿರುವುದು ಶೋಚನೀಯವೆಂದರು

ಈ ದೇಶದ ಜನರಲ್ಲಿ ಹೆಚ್ಚಿನವರು ಹಳ್ಳಿಗಳಲ್ಲಿರುತ್ತಾರೆ ಅವರ ಜೀವನದ ಮಟ್ಟವು ಅತೀ ನಿಕೃಷ್ಟಾವಸ್ಥೆಯಲ್ಲಿದೆ ಇದನ್ನು ಅಭಿವೃದ್ಧಿಪಡಿಸುವುದು ಸರಕಾರದ ಹಾಗೂ ಎಲ್ಲರ ಪ್ರಥಮ ಕರ್ತವ್ಯ ಉತ್ಪತ್ತಿಯನ್ನು ಹೆಚ್ಚುಮಾಡುವುದೇ ನಿಜವಾದ ಈಗಿನ ಆವಶ್ಯಕತೆ, ಇದನ್ನು ಎಲ್ಲರೂ ಮನಸ್ಸಿಗೆ ತೆಗೆದುಕೊಂಡು ವ್ಯರ್ಥ ಮುಷ್ಕರಗಳಲ್ಲಿ ದೇಶದ ಕಾರ್ಯ ಸಾಧನೆ ಹಾಳುಮಾಡಬಾರದೆಂದು ವಿನಂತಿ ಮಾಡಿಕೊಂಡರು

ಸರಕಾರೀ ನೌಕರರ ಮುಷ್ಕರದ ವಿಚಾರವೆತ್ತಿ ಈ ನೌಕರರಿಗಾಗಿ ಸರಕಾರ ನಡೆಯುವುದಲ್ಲವೆಂದೂ ಹಳ್ಳಿಗಳ ಬಡಜನರ ಸ್ಥಿತಿ ಇವರೂ ಮನಸ್ಸಿಗೆ ತೆಗೆದುಕೊಳ್ಳುವುದು ಅಗತ್ಯವೆಂದೂ ಹೇಳಿದರು ಮುಷ್ಕರಕ್ಕೆ ಸೇರಿದವರನ್ನು ಸರಕಾರವು ಬಹಳ ರಿಯಾಯತಿಯಿಂದಲೇ ನಡೆಸಿದೆ ಆದರೂ ಶಿಸ್ತನ್ನು ಕಾಪಾಡುವ ದೃಷ್ಟಿಯಿಂದ ಕೆಲವರ ಮೇಲೆ ತಕ್ಕ ಕಾರ್ಯವನ್ನು ಕೈಕೊಳ್ಳದೆ ನಿವೃತ್ತಿ ಇಲ್ಲವೆಂದರು ಇಲ್ಲಿಗಾಗಿ ಕೈಕೊಳ್ಳಲಿರುವ ರಸ್ತೆಗಳ ಅಭಿವೃದ್ಧಿ ವಿಚಾರ, ನೀರಾವರಿ ಯೋಜನೆಗಳ ವಿಷಯ ಮೊದಲಾದುವನ್ನು ವಿವರಿಸಿ ಮುಂದೆ ಬಂದರದ ವಿಚಾರವೆತ್ತಿ ಮಂಗಳೂರು ಬಂದರವನ್ನೇ ದೊಡ್ಡ ಬಂದರವನ್ನಾಗಿ ಮಾಡಲು ಮದ್ರಾಸು ಸರಕಾರವು ಒತ್ತಾಯ ಮಾಡುವುದಾಗಿ ಭರವಸೆಯಿತ್ತರು

ಕೊನೆಗೆ ಆಹಾರ ಧಾನ್ಯಗಳ ನಿಯಂತ್ರಣ ತೆಗೆಯಲಾಗಿದೆ ನಿಮ್ಮ ಅಕ್ಕಿಯಲ್ಲಿ ಅಗತ್ಯ ಬಿದ್ದುದರಿಂದ ಸ್ವಲ್ಪ ಅಂಶ ಈಗ ಮಲಬಾರಿಗೆ ಒಯ್ಯಲಾಗುತ್ತಿದೆ. ಇದಕ್ಕಾಗಿ ಬೇಸರಪಡಬಾರದು. ನಿಮಗೆ ಬೇಕಾಗುವಾಗ ಸರಕಾರವು ಅಕ್ಕಿಯನ್ನು ಒದಗಿಸುತ್ತದೆ ಆದುದರಿಂದ ಆಹಾರ ಪ್ರಶ್ನೆ ಬಿಡಿಸುವ ಮಹತ್ಕಾರ್ಯಕ್ಕೆ ಎಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡಿದರು

ಅಧ್ಯಕ್ಷರ ಭಾಷಣದ ಬಳಿಕ ಒಂದು ಊಟದ ಏರ್ಪಾಡೂ ಇತ್ತು ಪಾಶ್ಚಾತ್ಯರ ಪದ್ಧತಿಯಂತೆ ಓಸ್ಟು ಕುಡಿಯುವ ಅಭ್ಯಾಸವನ್ನು ಏತಕ್ಕೆ ಇನ್ನು ಇಟ್ಟುಕೊಂಡಿದ್ದಾರೋ ನಮಗೆ ತಿಳಿಯದು ಅಂತೂ ಇದರ ಹಲವು ಭಾಷಣಗಳು ಪ್ರತ್ಯುತ್ತರಗಳು ಸಾಂಗವಾಗಿ ನೆರವೇರಿದವು ಈ ತನ್ಮಧ್ಯೆ ಬೊಂಬಾಯಿಯ ಫೋರಮ್ ಪತ್ರಿಕೆಯ ಸಂಪಾದಕರಾದ ಶ್ರೀ ಜೋಕಿಮ್ ಆಳ್ವರೂ ಒಂದು ಭಾಷಣ ಕೊಟ್ಟರು.

ಅಂತೂ ಈ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆದು ಮಧ್ಯ ರಾತ್ರೆಗೆ ಮುಕ್ತಾಯವಾಯಿತು

ಜಿಲ್ಲಾ ರೈತ ಸಮ್ಮೇಳನ

ಈ ಜಿಲ್ಲೆಯ ಯಾವತ್ತೂ ರೈತರ ಸಮ್ಮೇಳನವು ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಬೇಗನೇ ಪುತ್ತೂರಿನಲ್ಲಿ ಕೇಂದ್ರ ಮಂತ್ರಿ ಮಾನ್ಯ ಕಲಾ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆಯೆಂದು ವಿಶ್ವಾಸನೀಯವಾಗಿ ತಿಳಿದುಬರುತ್ತದೆ.

ಜಿಲ್ಲೆಯ ಆಹಾರ ಪರಿಸ್ಥಿತಿ

ಪ್ರಾಂತ ಮಂತ್ರಿಗಳೂ, ಶಾಸನ ಸಭಾ ಸದಸ್ಯರೂ ಆಗಿರುವ ಶ್ರೀ ಕೆ. ಆರ್. ಕಾರಂತರು ದ. ಕ. ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಸರಕಾರವು ತೋರಿಸುತ್ತಿರುವ ಅಸಡ್ಡೆ ಮತ್ತು ಕೆಲವೊಂದು ಅಸಮ್ಮತ ಧೋರಣೆಗಳ ಕುರಿತು ಟೀಕಿಸಿರುವರು. ಕೃಷಿಕರಿಗೆ ಮುಂಚೆ 8 ತಿಂಗಳ ಉಳಿತಾಯ ಬಿಟ್ಟಿದ್ದರೆ ಈ ಸಲ ಕೇವಲ ತಿಂಗಳಷ್ಟು ಬಿಡಲಾಗಿದೆ. ಆಹಾರ ಸಂಗ್ರಹದ ಕುರಿತು ಇನ್ನೂ ಉಗ್ರ ರೀತಿಯ ಕಾರ್ಯಕ್ರಮ ಕೈಕೊಳ್ಳಲಾಗುತ್ತಿದೆ. ಇದರ ಪರಿಣಾಮವಾಗಿ ಈ ವರ್ಷ 25-20 ಸಾವಿರ ಟನ್ನುಗಳಷ್ಟು ಕೊರತೆಯುಂಟಾಗಬಹುದು. ಕಳೆದ ವರ್ಷ ವರೀ 14-15 ಟನ್ನುಗಳಷ್ಟು ಕೊರತೆಯಿತ್ತು. ಇದರ ಮೇಲೆ ಮಲಬಾರಿಗೆ ಇಲ್ಲಿಂದ 10 ಸಾವಿರ ಟನ್ ಅಕ್ಕಿ ಕಳುಹಿಸುವ ಯೋಜನೆಯಾಗಿ ಆಗಲೇ 2600 ಟನ್ ಹೋಗಿರುತ್ತದೆ. ಜಿಲ್ಲೆಯ 799 ಹಳ್ಳಿಗಳಲ್ಲಿದ್ದ 201 ಸಹಕಾರಿ ಸ್ಟೋರುಗಳನ್ನು ಮುಚ್ಚುವ ಪ್ರಸಂಗ ಬಂದಿದೆ. ಈಗಲೇ 76 ಮುಚ್ಚಿವೆ. ಹಳ್ಳಿ ಹಸುಗೆ ರಪ್ತಿಯಿಂದ ಉಪವಾಸ, ಸಾವು ಮತ್ತು ಕ್ಷಾಮಸಂತೆಗಳಿಗೆ ಕಾರಣವೆನಿಸಿದ ಅಂಶಗಳು ತಲೆಯೆತ್ತಲಾರಂಭಿಸಿವೆ. ಹಳ್ಳಿಗಳಲ್ಲಿನ ದಾಸ್ತಾನನ್ನು ನೂರು ರೇಶನ್ ನಗರಗಳಿಗಾಗಿ ಬರಿದು ಮಾಡಲ್ಪಡುತ್ತವೆ. ಈ ಕುರಿತು ಮಹಾತ್ಮರೂ ವಿರೋಧ ಸೂಚಿಸಿರುವರು. ಹಳ್ಳಿಗಳಲ್ಲಿನ ವೈಯುಕ್ತಿಕವಾಗಿ ಮಾರಾಟಕ್ಕಾಗಿ ದಾಸ್ತಾನು ಇರುವುದೆಂದರೆ 2 ಸಾವಿರ ಟನ್ನು ಮಾತ್ರ. ಸರಕಾರ ಬೆಲೆ ನಿಶ್ಚಯಿಸದಿದ್ದ ಕಾರಣ ಇದರ ಕೊಳ್ಳುಕೊಡುಗಳಾಗಿಲ್ಲ. ಈ ಅಂಶಗಳನ್ನು ಪರಿಶೀಲಿಸುವಾಗ ಶೀಘ್ರ ಜಿಲ್ಲೆಯ ಬಡ ಜನತೆಯ ಭವಿಷ್ಯ ಉಪವಾಸ ಸಾವುಗಳೆಂದು ಹೇಳಿದರೆ ತಪ್ಪಾಗದು. "ಸರಕಾರವು ಜಿಲ್ಲೆಯ ಪರಿಸ್ಥಿತಿಯನ್ನು ಅನುಲಕ್ಷಿಸಿ ನಿವಾರಣೋಪಾಯಗಳನ್ನು ಕೈಕೊಳ್ಳುವುದೆ? ಒಂದೇ ಒಂದು ದಿನ ವಿಳಂಬಿಸಲು ಬರುವಂತಿಲ್ಲ."

ದ. ಕ. ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕೋತ್ಸವ

ಮೇಲ್ಕಂಡ ವಾರ್ಷಿಕೋತ್ಸವವು ಕಳೆದ ತಾ 11ನೇ ಆದಿತ್ಯವಾರ ರಾತ್ರಿ 8 ಗಂಟೆಗೆ ಕೆನರಾ ಹೈಸ್ಕೂಲಿನ ವಠಾರದಲ್ಲಿ ಮದ್ರಾಸು ಸರಕಾರದ "ಪಬ್ಲಿಕ್ ವರ್ಕ್ಸ್" ಶಾಖೆಯ ಸಚಿವ ಶ್ರೀ ಎಂ ಭಕ್ತವತ್ಸಲಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಲೆಕ್ಟರ್ ಮೊದಲಾದ ಅಧಿಕಾರಿ ವರ್ಗದವರೂ, ಮತ್ತು ವರ್ತಕರೂ ಪುರ ಪ್ರಮುಖರೂ ಅಲ್ಲದೆ ನಮ್ಮ ಸರಕಾರದ ಆರೋಗ್ಯ ಶಾಖಾ ಮಂತ್ರಿ ಶ್ರೀ ಎ ಬಿ ಶೆಟ್ಟರೂ ಶಾಸನ ಸಭಾ ಎಸೆಂಬ್ಲಿ ಸದಸ್ಯ ಶ್ರೀ ಯು. ಶ್ರೀನಿವಾಸ ಮಲ್ಯರೂ ಸಭೆಗೆ ಬಂದಿದ್ದರು.

ರಾಷ್ಟ್ರಗೀತೆಯಿಂದ ಆರಂಭಿಸಿದ ಈ ಮಹೋತ್ಸವದಲ್ಲಿ ಈ ಸಂಘದ ಅಧ್ಯಕ್ಷರಾದ ಶ್ರೀ ಎ ಎಸ್ ಕುಡ್ವರು ಸ್ವಾಗತ ಭಾಷಣ ಮಾಡಿದರು. ಈ ವಾರ್ಷಿಕೋತ್ಸವದ ಯಶಸ್ಸನ್ನು ಹಾರೈಸಿ ಬಂದ ಸಂದೇಶಗಳನ್ನು ಓದಲಾಯಿತು. ಅತಿಥಿಗಳಲ್ಲಿ ಮಡಿಕೇರಿಯ ಶ್ರೀ ಐ ಸಿ ಸುಬ್ಬಯ್ಯ ಅವರೂ, ಇಲ್ಲಿಯ ಇಂಪೀರಿಯಲ್ ಬೆಂಕ್ ಏಜೆಂಟ್ ಮಿ ಕಾರ್ಲಸನ್ ಅವರೂ, ಬೊಂಬಾಯಿಯ "ಫೋರಮ್" ಪತ್ರಿಕಾ ಸಂಪಾದಕ ಶ್ರೀ ಜೋಕಿಂ ಆಳ್ವ ಅವರೂ ಭಾಷಣ ಮಾಡುತ್ತ ಹಲವಾರು ಹಿತಸೂಚನೆಗಳನ್ನು ಕೊಟ್ಟರು. ಅಧ್ಯಕ್ಷರು ಅಂದು ಬೆಳಗ್ಗೆ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ, ಸ್ವಾಗತ ಭಾಷಣದಲ್ಲಿಯೂ ಇತರರ ಅಂದಿನ ಭಾಷಣಗಳಲ್ಲಿಯೂ ಪ್ರಸ್ತಾವಿಸಲಾದ ಕೆಲವೊಂದು ಮುಖ್ಯಾಂಶಗಳಿಗೆ ಉತ್ತರ ಹೇಳಿದರು. ಡಿನ್ನರ್ ಸಮಾರಂಭ ಕಾಲದಲ್ಲಿ ಶ್ರೀ. ಜಿ ವಾಸುದೇವ ಪೈ ಅವರು "ನಮ್ಮ ಸಂಘ"ದ ಕುರಿತು ಮಾತಾಡಲಾಗಿ ಅದಕ್ಕೆ ಶ್ರೀ ಟಿ. ದಾಮೋದರ ಪೈ ಅವರು ಉತ್ತರ ಕೊಟ್ಟರು. ಶ್ರೀ. ಬಿ ವೈಕುಂಠ ಬಾಳಿಗರ "ನಮ್ಮ ಅತಿಥಿ"ಗಳ ಕುರಿತಾದ ಭಾಷಣಕ್ಕೆ ಅಂದಿನ ಮುಖ್ಯ ಅತಿಥಿ ಶ್ರೀ. ಭಕ್ತವತ್ಸಲಂ ಅವರು ಮಾನ್ಯ ಮಾಡಿದರು. ಕಾರ್ಯದರ್ಶಿಗಳು ವಂದಿಸಿದರು. ಅಂದು ಬೆಳಗ್ಗೆ ಸಂಘದ ಕಡೆಯಿಂದ ಧ್ವಜಾರೋಹಣ, ಅಲ್ಪಾಹಾರ ಆಟಪಾಟ ಸಂಘದ ಮೆಂಬರರ ಕೂಟ ಇತ್ಯಾದಿಗಳಿದ್ದವು.

ಜಿಲ್ಲಾ ಸಮಾಚಾರ

ಜೀವನ ಮಟ್ಟ

"ಸ್ವರಾಜ್ಯದ ಸುಫಲವನ್ನುಣ್ಣಲನುವಾಗುವಂತೆ, ಏರಿದ ಬೆಲೆಗಳ ಜೀವನ ಖರ್ಚನ್ನು ಪೂರೈಸುವರೆ ಸಾಧ್ಯವಾಗುವಂತೆ ಇಲ್ಲಿಯ ರೆ ಬೆಲ್ಲೊ ಎಂಡ್ ಸನ್ಸ್ ರ ಹಂಚಿನ ಕಾರ್ಖಾನೆಯವರು ಹೊಸ ವರ್ಷದಿಂದ ತಮ್ಮ ಕೆಲಸಗಾರರಿಗೆ ತುಟ್ಟಿಭತ್ತೆಯನ್ನು ಶೇಕಡಾ 25-30ರ ವರೆಗೆ ಏರಿಸಿರುವರು. ಇದು ತನಕ ಹೆಚ್ಚಿಸಿದ ಪ್ರಮಾಣ ಯುದ್ಧ ಪೂರ್ವದ ಮೂಲ ಮಜೂರಿಯ ಶೇಕಡಾ 400ರಷ್ಟು ಆಗಿದೆ. ಯುದ್ಧದ ಮುಂಚೆ 8 ಆಣೆ ಸಂಪಾದಿಸುವ ಮಜೂರ ಈಗ ದಿನಕ್ಕೆ 2¼ ರೂಪಾಯಿ ಗಳಿಸುತ್ತಾನೆ. ಮೂಲ ಮಜೂರಿಯಲ್ಲೂ ಶೇಕಡಾ 25ರಷ್ಟು ಹೆಚ್ಚಿಸಲಾಗಿದೆ. ತಮ್ಮ ಈ ಆದರ್ಶವನ್ನು ಎಲ್ಲಾ ಸಹಕಾರಕರೂ ಅನುಸರಿಸುವರೆಂದು ಸದ್ರಿ ಕಾರ್ಖಾನೆಯವರು ಹಾರೈಸುವರು" ಹೀಗೆಂದು ಮೇಲ್ಕಂಡ ಕಾರ್ಖಾನೆಯವರು ಪ್ರಕಟಿಸುತ್ತಾರೆ.

ರಾಮಾಯಣ ವಾಚನ

ಕುದ್ರೋಳಿಯ ಶ್ರೀ ಗೀತಾ ಮಂದಿರದಲ್ಲಿ ಕಳೆದ ತಾ 11ರಂದು ಆದಿತ್ಯವಾರ ಶ್ರೀಮದ್ರಾಮಾಯಣ ವಾಚನ ವ್ಯಾಖ್ಯಾನಗಳ ಕಾರ್ಯಕ್ರಮಗಳು ಬ್ರಹ್ಮ ಶ್ರೀ ರಾಮ ಕೃಷ್ಣಾಚಾರ್ಯರಿಂದ ಪ್ರಾರಂಭಿಸಲ್ಪಟ್ಟಿವೆ. ಇನ್ನು ಮುಂದೆ ಪ್ರತಿ ಆದಿತ್ಯವಾರ ಇದು ನಡೆಯುವುದೆಂದೂ ಎಲ್ಲರಿಗೂ ಸುಸ್ವಾಗತವಿದ್ದು ಎಲ್ಲರೂ ಪ್ರೋತ್ಸಾಹಿಸಬೇಕೆಂದೂ ವ್ಯವಸ್ಥಾಪಕರು ಅರಿಕೆ ಮಾಡಿಕೊಳ್ಳುತ್ತಾರೆ.

ವಿವಿಧ ವಿನೋದಾವಳಿಗಳು

ಈ ತಿಂಗಳಾಂತ್ಯದಿಂದ ಒಂದು ತಿಂಗಳ ತನಕ ಇಲ್ಲಿಯ ಸೆಂಟ್ರಲ್ ಮೈದಾನಿನ ವಿಶಾಲ ಸ್ಥಳದಲ್ಲಿ ಭಾರತ ಕ್ಷೇಮನಿಧಿಯ ಸಹಾಯಕ್ಕಾಗೆಂದು ಹೇಳಲ್ಪಟ್ಟ ನಿಪುಣತೆಯ ಆಟಪಾಟಗಳನ್ನೊಳಗೊಂಡ ವಿವಿಧ ವಿನೋದಾವಳಿಗಳು ಜರಗಿಸಲ್ಪಡಲು ಆಗಲೇ ಏರ್ಪಾಡುಗಳಾಗುತ್ತಿವೆ.

ಹವಾಮಾನ

ಕಳೆದ ವಾರದಲ್ಲಿ ಬೆಳಗ್ಗಿನ ಹೊತ್ತಿನಲ್ಲಿ ತೀವ್ರವಾದ ಚಳಿಯ ಅನುಭವವಾಗಿದೆ. ಬಿಸಿಲೂ ಚೆನ್ನಾಗಿ ಬರಿಯುವುದರಿಂದ ಧೂಳಿನ ಹಾರಾಟ, ಮಾರ್ಗ ಬಿಸಿಯಾಗುವಿಕೆಗಳಿಗಾರಂಭವಾಗಿರುವುದರಿಂದ ನಗರ ಸಭೆಯವರು ಮಾರ್ಗ ನೀರಿನ ಏರ್ಪಾಡನ್ನು ಇನ್ನಷ್ಟು ವಿಶಾಲ ಪ್ರಮಾಣದಲ್ಲಿ ಕೈಕೊಳ್ಳಬೇಕಾಗಿ ನಿರೀಕ್ಷಿಸಲಾಗಿದೆ.

ಕ್ಲಬ್ಬಿನ ಸ್ಥಳಾಂತರ

ಸುಮಾರು 50 ವರ್ಷಗಳಿಂದ ಇಲ್ಲಿಯ ಬಾವಟೆಗುಡ್ಡೆಯಲ್ಲಿದ್ದ "ಮಂಗಳೂರು ಕ್ಲಬ್ಬು ಅಥವಾ ಯುರೋಪಿಯನ್ ಕ್ಲಬ್ಬು" ಜನವರಿ 1ರಿಂದ ಜೆಪ್ಪುವಿನಲ್ಲಿ ನದಿ ಬಳಿಯಲ್ಲಿರುವ ಒಂದು ಬಂಗಲೆಗೆ ವರ್ಗಾಯಿಸಲ್ಪಟ್ಟಿದೆಯೆಂದು ತಿಳಿದು ಬರುತ್ತದೆ.

ಚಳವಳಿ ತ್ಯಾಗಿಗಳಿಗೆ

ರಾಜಕೀಯ ಚಳವಳಿಯಿಂದ ನಷ್ಟಕ್ಕೆ ಗುರಿಯಾಗಿದವರ ತಮ್ಮ ಹೆಸರು ವಿಳಾಸ ಶಿಕ್ಷೆ ವಿಧಿಸಲಾದ ತಾರೀಕ ಬಿಡುಗಡೆಯಾದ ತಾರೀಕು ಮತ ಪಕ್ಷ ಮುಂತಾದುವುಗಳನ್ನು ವಿವರವಾಗಿ ಕಾಣಿಸಿ ಸರಕಾರ ಕೊಡಲಿರುವ ಪರಿಹಾರ ದ್ರವ್ಯವನ್ನು ದೊರಕಿಸಿಕೊಳ್ಳುವ ದಕ್ಷಿಣ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬೇಗನೆ ಅರ್ಜಿ ಕಳುಹಿಸತಕ್ಕದ್ದೆಂದು ವಿನಂತಿಸಲಾಗಿದೆ.

ಶುದ್ಧೀ ಸಮಾಚಾರ

ಇದೇ ತಿಂಗಳ ಕಳೆದ ತಾ. [illegible] ಸಾಂತೂರಕ್ಕೆ ಕಿನ್ನಿಗೋಳಿ ಸಮೀಪ ದಾಮ[illegible] ಕಟ್ಟೆ [illegible] ಮಂದಿಯ [illegible] ಲ್ಮಾನ ಪರಿವಾರವನ್ನು ಶುದ್ಧಿಗೊಳಿಸಿ ಹಿಂದೂ ಸಮಾಜಕ್ಕೆ ಸೇರಿಸಲಾಯಿತು. ಈ ಪರಿವಾರವು ಸುಮಾರು ಹತ್ತು ವರ್ಷಗಳ ಮೊದಲು ಬಿಲ್ಲವ ಸಮಾಜದಿಂದ ಮುಸಲ್ಮಾನ ಮತವನ್ನು ಸ್ವೀಕರಿಸಿತ್ತು. ಕಿನ್ನಿಗೋಳಿ ಸಮೀಪ ಬಗ್ಗಲ್ ತೋಟದ ಶ್ರೀ. ಕಾಂತಪ್ಪ ಕೋಟ್ಯಾನರವರ ವಿಶೇಷ ಪ್ರಯತ್ನದಿಂದ ಈ ಕಾರ್ಯವು ನೆರವೇರಿತು.

ಶುದ್ಧೀಸಂಸ್ಕಾರವು ಮಂಗಳೂರು ಆರ್ಯ ಸಮಾಜದ ನೇತೃತ್ವದಿಂದ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಮತ್ತು ಶ್ರೀ ಬಿ. ರಾಮಕೃಷ್ಣ ರಾವ್ ಇವರ ಪೌರೋಹಿತ್ಯದಲ್ಲಿ ಜರಗಿತು. ಇದೇ ಪರಿವಾರದ ಉಳಿದ ಇಬ್ಬರನ್ನೂ ಕಳೆದ 26-12 47ರಲ್ಲಿ ಮುಂಬಾಯಿಯಲ್ಲಿ ಫೋರ್ಟ್ ಆರ್ಯ ಸಮಾಜದ ಆಶ್ರಯದಲ್ಲಿ ಶ್ರೀಗಳಾದ ಲಕ್ಷ್ಮಣದೇವ ವಿದ್ಯಾರ್ಥಿ, ಯು ಕೆ ಅಮೀನ್, ಯಂ ಚಂದ್ರೇಶ್ವರ ಇವರುಗಳ ಪೌರೋಹಿತ್ಯದಲ್ಲಿ ಶುದ್ಧಿಗೊಳಿಸಲಾಗಿದೆ.

ಹರಿಕತೆ

ಇದೇ ತಿಂಗಳ ಕಳೆದ ತಾ 7, 8, 11ರಲ್ಲಿ ಕಿನ್ನಿಗೋಳಿ, ಬೆದ್ರಾಡಿ ಈ ಸ್ಥಳಗಳಲ್ಲಿ ಮಂಗಳೂರಿನಿಂದ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಗಳು 3 ಹರಿಕತೆಗಳನ್ನು ಮಾಡಿ ವರ್ತಮಾನ ಪರಿಸ್ಥಿತಿಯಲ್ಲಿ "ಹಿಂದುಗಳು ಆತ್ಮರಕ್ಷಣೆಗಾಗಿ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳಬೇಕೆಂದು ಬೋಧಪ್ರದವಾಗಿ ವಿವರಿಸಿದರು. ಈ ಸಮಾರಂಭಗಳಲ್ಲಿ ಇಲ್ಲಿಯ ಉತ್ಸಾಹಿ ಮಹನೀಯರಾದ ಶ್ರೀ ಕಾಂತಪ್ಪ ಕೋಟ್ಯಾನ, ಶ್ರೀ ವಾಸು ಪೂಜಾರಿಗಳು, ಶ್ರೀ ನಾರಾಯಣ ಕಾನಡ, ಗೋಪಾಲರೇ ಮೊದಲಾದವರು ವಿಶೇಷ ಪರಿಶ್ರಮ ವಹಿಸಿದ್ದುದು ಅಭಿನಂದನೀಯ.

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

R E P 315/47 (O S 3[illegible]/46)

ರಾವ ಕೈ ಯಾನ ಚಂದ್ರಾವತಿ (ವಾದಿ) ಅರ್ಜಿದಾರಳು

ಬಿಲ್ಲ ಕಂ ಇ ಒಬ್ಬ ಕೃಷ್ಣನ ಅಳಿಯ ವ ಬೋಗ ಹೆಂಗಿನ ಮಗ ಈಗ ಪುತ್ತೂರು ತಾಲೂಕ [illegible]ಟ್ಟಿನ ಗ್ರಾಮ [illegible] ದ ವ [illegible] ಬಲ್ಲ ಇರುತ್ತಾನೆ

ಎದಿ (ಪ್ರತಿವಾದಿ)

ಸದಿ ಎದ್ರಿಗೆ ಈ ಮೂಲಕ ತಿಳಿಸುವದೇನೆಂದರೆ —

ವಾದಿ ಅರ್ಜಿದಾರಳು ನಿಮ್ಮ ಮೇಲೆ ಪಡೆದ O S 339/46ನೇ ಡಿಕ್ರಿ ಕುರಿತು ನಿಮ್ಮನ್ನು ಕೈದಿ ವಾರಂಟಿನಲ್ಲಿ ಹಿಡಿದು ತರಿಸಿ ಸ್ಪೆಷ್ಲ ಐವೆಜ ತ್ವರದಿದೆ ಸಿವಿಲ ಜೈಲಿಗೆ ರವಾನಿಸಬೇಕೆಂತ ನಮ್ಮ ಮೇಲೆ ನಡಿಸಿದ ಮೇಲ್ಕಂಡ ಅಪ್ಲಿಕೇಶನ್ ತಾ 19-1-48ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ವ್ಯಾದೆ ದಿನ ಪೂರ್ವಾರ್ಹ್ನ ಗಂಟೆ 11ಕ್ಕೆ ಕೋರ್ಟ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿವ್ಯಾವಾದಿ ಅಪ್ಲಿಕೇಶನ್ ಜಾರಿ ಮುಂದರಿಸಲಾದೀತು.

By order of the Court

ಪುತ್ತೂರು M Sadashiva Rao,

30 12-47 Pleader for Petr

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು. ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

NOTICE

The Firm of Mizar Krishna Annappa Pai & Co, was dissolved by the retirement of Sri Mizar Krishna Pai on 25-11 47 and by the partition of the assets between Sri Mizar Devadasa Pai and Sri Mizar Govinda Pai on 17-12-1947. The right of collecting all outstandings due to the said Firm and also the responsibility of payment of the liabilities of the Firm if any has been taken over by Sri Mizar Govinda Pai.

Mizar Devadasa Pai,
Partner

(೩ನೇ ಪುಟದಿಂದ)

ಆಂಗಸೇನರು ಕೊಲೆ ಮಾಡಲ್ಪಟ್ಟ ನಂತರ ಥಾಕಿನ್‌ನೂ ಅವರು ಪ್ರಧಾನರಾಗಿ ಧೈರ್ಯದಿಂದ "ಬ್ರಿಟಿಷ್ ಸಾಮ್ರಾಜ್ಯದ ಹೊರಗೆ ಸಂಪೂರ್ಣ ಸ್ವಾತಂತ್ರ್ಯ" ವೆಂದು ಸಾರಿದರು.

ಜನಾಂಗೀಕ ದ್ವೇಷ

ಈಚೀಗೆ ಬರ್ಮಾದಲ್ಲಿ ಜನಾಂಗೀಕ ದ್ವೇಷವೆದ್ದಿದೆ ಶುದ್ಧ ಬರ್ಮಿಯರು ಶ್ರೇಷ್ಠರೆಂಬ ಪ್ರಚಾರ ಹರಡಲ್ಪಡುತ್ತಿತೆ ಬರ್ಮಾದ ಉತ್ತರ ಮತ್ತು ಪೂರ್ವ ಗಡಿಗಳಲ್ಲಿ ಅನೇಕ ಗುಡ್ಡ ಕಾಡು ಮೂಲನಿವಾಸಿಗಳಿರುವರು ಇವರೆಲ್ಲರೂ ಈಗ ಸ್ವತಂತ್ರ ಬರ್ಮಾ ಸರಕಾರದ ಕೈಕೆಳಗೆ ಬಂದಿರುವರು. ಇವರನ್ನೆಲ್ಲ ಐಕ್ಯ ಮಾಡಿ ಸಾಮರಸ್ಯದಿಂದ ಆಡಳಿತ ನಿರ್ವಹಿಸುವ ಅಪಾರ ಹೊಣೆ ಈಗಿನ ಪ್ರಧಾನ ಥಾಕಿನ್‌ನೂ ಅವರ ಮೇಲೆ ಬಿದ್ದಿದೆ. ಸ್ವಾರ್ಥಿ ರಾಜಕೀಯ ಮುಖಂಡರು ಹಿಂದುಳಿದ ಮೂಲ ನಿವಾಸಿಗಳನ್ನು ದೊಂಬಿಗೆಬ್ಬಿಸದಂತೆ ನೋಡಿಕೊಳ್ಳಬೇಕಾದುದು ಪ್ರಥಮ ಕರ್ತವ್ಯ. ಈ ಗುಡ್ಡ ನಿವಾಸಿಗಳಿಂದಾಗುವಷ್ಟು ತೊಂದರೆ ಬರ್ಮಾದಲ್ಲಿ ಮತ್ತಾರಿಂದಲೂ ಆಗುವದಿಲ್ಲ ವಿಶಾಲ ಸಹಾನುಭೂತಿಯ ಧೀರ ಧೋರಣೆಯಿಂದ ಇವರನ್ನು ಸಂತೃಪ್ತಗೊಳಿಸಬೇಕಾಗಿದೆ

ಸಮತಾವಾದ ಪ್ರಜಾ ಪ್ರಭುತ್ವ

ಇಂದು ದಾಸ್ಯ ವಿಮೋಚನಯಾದ ದೇಶಗಳು ಸಮತಾವಾದದ ಕಡೆ ವಾಲಿರುತ್ತವೆ ಆಂಗ್‌ಸೇನರ ಪಕ್ಷದ ಧ್ಯೇಯವೂ ಸಮತಾವಾದವೇ ಆಸ್ಯದಲ್ಲಿ ಕಮ್ಯೂನಿಸ್ಟ್ ತತ್ವವನ್ನು ತಡೆಗಟ್ಟಲು ಅದೊಂದೇ ಉಪಾಯ ಅಲ್ಲಿನ ಈಗಿನ ಸರಕಾರವಾದರೂ ಕೆಂಪು ತತ್ವವನ್ನು ನಿರುತ್ಸಾಹಗೊಳಿಸುವ ಯತ್ನದಲ್ಲೇ ಇದೆ ದೇಶ ಸಂಪತ್ತು ಪ್ರಜಾಪಭುತ್ವ ವಿಧಾನದಲ್ಲಿ ಜನತೆಗೆ ಹಂಚಲ್ಪಡಬೇಕೆಂಬುದಕ್ಕೆ ಆಂಗಸೇನರ ಪಕ್ಷ ಮತ್ತು ಕೋಂಗ್ರೆಸ್ ಕೂಡಾ ಏಕಾಭಿಪ್ರಾಯದಾಗಿವೆ ಅವರಿಗೆ ಪ್ರಜಾಪ್ರಭುತ್ವ ನೀತಿಯ ಮೇಲೆ ಗೌರವವಿರುವುದೊಂದು ಶುಭ ಲಕ್ಷಣವೇ ಸರಿ ಸುಲಿಗೆ ಶೋಷಣೆಗಳ ಯಾವ ರೂಪಾಂತರವನ್ನು ದೃಢ್ಢಯಿಂದ ನಿರ್ವಹಿಸಿದರೆ ಬಾರತ ಬರ್ಮಾಗಳೆರಡರಲ್ಲೂ ಪ್ರಜಾಪ್ರಭುತ್ವವನ್ನು ಧಕ್ಕೆಗೊಳಪಡಿಸುವ ಕಮ್ಯೂನಿಸ್ಟ್ ಸೂತ್ರವು ತನ್ನ ಸಹಜ ಅಂತ್ಯವನ್ನು ಸೇರುವುದರಲ್ಲಿ ಸಂದೇಹವಿಲ್ಲ.

Houses For Sale at Udipi

Udipi Municipality-Kadabettu Ward, Survey No , 127 Sub Division Nos 5, 6 A and 6 B - about an acre in extent containing houses 4582, 4583, 4590 and 4591-Perennial. Supply of water in the three wells

If desired (a) entire vacant possession will be given. (b) Up to date repaires to suit the convenience of the purchaser will be effected for all the houses and all the wells for which ample supply of cement has been obtained on permit.

Write to- U. N. Krishna Rao.,
Berty Garden,
P. O. Kankanady.

ಪುಸ್ತಕ ವಿಮರ್ಶೆ

ವರ್ಧಾ ಶಿಕ್ಷಣ ಯೋಜನೆ

ವಿಸ್ತೃತ ಪ್ರಸ್ತಾಪನೆಯಿಂದೊಡಗೂಡಿರುವ ಝಾಕೀರ್ ಹುಸೇನ್ ಮಂಡಲದ ವರದಿಯ ಈ ಕನ್ನಡ ಪರಿಚಯ ರೂಪವಾದ ಭಾಷಾಂತರವು ನಮ್ಮ ದೇಶದ ನೂತನ ಶೈಕ್ಷಣೀಕ ವಿಧಾನದ ಗೊತ್ತು ಗುರಿಗಳನ್ನೂ, ಅದನ್ನು ನಿರ್ವಹಣೆಗೆ ತರುವಾಗ ಉಂಟಾಗುವ ತೊಡಕು ತೊಂದರೆಗಳನ್ನೂ ಅವುಗಳ ಪರಿಹಾರೋಪಾಯಗಳನ್ನು ಸುಸ್ಪಷ್ಟವಾಗಿ ವಿವರಿಸುತ್ತದೆ ಪುಸ್ತಕೀಯ ಶಿಕ್ಷಣದ ಕುಂದು ಕೊರತೆಗಳನ್ನು ಹೋಗಲಾಡಿಸಿ ಭಾವೀ ಜನಾಂಗವು ಎಲ್ಲಾ ಶರೀರೇಂದ್ರಿಯಗಳ ಸಮರಸ ತರಭೇತಿಯಿಂದ ಶರೀರಾತ್ಮೋನ್ನತಿಗೈಯ್ಯಲು ಸಾಧಕವಾದ ಶಿಕ್ಷಣ ಪದ್ಧತಿಯು ಸದ್ಯದಲ್ಲೇ ನಮ್ಮ ದೇಶದಲ್ಲಿ ರೂಢಿಗೆ ಬಂದಿತ. ಬರುವ ಕಾಲದಲ್ಲಿ ಆ ಕುರಿತು ಯೋಗ್ಯವಾದ ಪೂರ್ವ ಪರಿಚಯವನ್ನು ಎಲ್ಲರೂ ಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ ಶಿಕ್ಷಣವು ಸರಕಾರದ ಮೇಲೆ ಒಂದು ಅನಾವಶ್ಯಕ ಹೊರೆಯಾಗದಂತೆ ಸ್ವಾವಲಂಬಿಯಾಗಿ ಜರಗಿಸಲ್ಪಡುವ ಕ್ರಾಂತಿಕಾರಕ ವಿಚಾರ ಪರಿಷ್ಕೃತವಾದ ಈ ರಾಷ್ಟ್ರಾಭಿವೃದ್ಧಿಯ ಯೋಜನೆಯನ್ನನುಸರಿಸುವುದರಿಂದ "ಪಾಶ್ಚಾತ್ಯ ಅನುಕರಣೆಯಿಂದ ಭಾರತವು ಕಳೆಕೊಂಡ ಆತ್ಮವು ಪುನಃ ಸಂಪಾದಿಸಿಕೊಳ್ಳಲನುವಾಗುತ್ತದೆಂದು ಇದರ ಕರ್ತೃಗಳಿಗೆ ಆಳವಾದ ವಿಶ್ವಾಸ ಭರವಸೆಗಳಿವೆ ಶರೀರ ಮನಸ್ಸುಗಳನ್ನು ಧ್ಯೇಯ ಒಂದಾಗಿ ಕ್ರಿಯಾ ಮಗ್ನಗೊಳಿಸಿ ತನ್ಮೂಲಕ ವ್ಯಕ್ತಿಯ ಪರಿಪೂರ್ಣ ವಿಕಾಸಕ್ಕೆ ಅನುಬಂಧಿತವಾದ ಸಂದರ್ಭಗಳನ್ನು ಒದಗಿಸಿ ಅವನನ್ನು ಉದಾತ್ತ ವಿಶ್ವ ನಾಗರೀಕನನ್ನಾಗಿ ಮಾಡುವುದು ಈ ಯೋಜನೆಯ ಮೂಲತತ್ವವಾಗಿರುವುದರಿಂದ ಜಾಗೃತ ಭಾರತದ ಪ್ರತಿಯೊಂದು ಪಾತ್ರದಲ್ಲೂ ಈ ಯೋಜನೆಯ ನೈಜ ಒಳಕೆಗೆ ತರುವುದತ್ಯಾವಶ್ಯಕವಾಗಿದೆ ಈ ಚಿಕ್ಕ ಗ್ರಂಥದಲ್ಲಿ ವರ್ಧಾ ಶಿಕ್ಷಣ ಯೋಜನೆಯ ಮೂಲತತ್ವಗಳು ಉದ್ದೇಶಗಳು, ಶಿಕ್ಷಕರ ಶಿಕ್ಷಣ ಮೇಲ್ವಿಚಾರಣೆ, ಆಡಳಿತ ವಿದ್ಯಾರ್ಥಿಗಳ ಪಾಠಕ್ರಮ ಈ ವಿಷಯ ವಿಭಾಗಗಳನ್ನು ಸರಳ ಶೈಲಿಯಲ್ಲಿ ವಿವರಿಸಲಾಗಿದೆ ಪ್ರಯೋಗಾರ್ಥ ನಡೆಸಿದ ಈ ಯೋಜನೆಯ ಅಭ್ಯಾಸಕ್ರಮಗಳ ಅಂಕೆ ಸಂಖ್ಯೆಗಳೂ ಕೊಡಲ್ಪಟ್ಟಿರುವುದರಿಂದ ಮುಂದೆ ಇದನ್ನು ಕೈಕೊಳ್ಳುವವರಿಗೆ ಎಚ್ಚರಿಕೆಯು ಮಾರ್ಗದರ್ಶಕವಾಗಿದೆ. ನಮ್ಮ ನಾಡಿನ ಶಿಕ್ಷಣ ಪ್ರೇಮಿಗಳೂ, ಶಿಕ್ಷಣ ಸಂಸ್ಥೆಗಳೂ ಇಂತಹ ಪುಸ್ತಕವೊಂದರ ಪ್ರತಿಗಳನ್ನಿಟ್ಟುಕೊಳ್ಳಬೇಕಾದುದು ಸಮಂಜಸವೆನಿಸುತ್ತದೆ. ಕೇವಲ ಹದಿನೆರಡಾಣೆ ಬೆಲೆಗೆ ಕ್ರೌನ್ ⅛ನೇ ಆಕೃತಿಯ ೫೦ ಪುಟಗಳಲ್ಲಿ ಅತ್ಯಂತ ವಿಚಾರಣೀಯ ವಿಷಯಗಳನ್ನೊಳಗೊಂಡ ಈ ಪ್ರಕಟನೆಯನ್ನು ಮಾಡಿದ ಹುಬ್ಬಳ್ಳಿಯ ಸಾಹಿತ್ಯ ಭಂಡಾರದವರು ಅಭಿನಂದನೀಯರು 'ನಾಭ'

ಒದ್ದೆ ನೀರು

ನೀರು ಒದ್ದೆ ಸ್ವಭಾವವುಳ್ಳದ್ದು. ಆದರೆ ಕೆಲವೊಂದು ರಾಸಾಯನಿಕ ಪದಾರ್ಥಗಳನ್ನೂ ಸೇರಿಸುವುದರ ಮೂಲಕ ಅದನ್ನು ಇನ್ನಷ್ಟು ಒದ್ದೆಯಾಗಿ ಮಾಡಬಹುದೆಂದು ಕೆಲ ಅಮೇರಿಕನ್ ವಿಜ್ಞಾನಿಗಳು ತಿಳಿಸುತ್ತಾರೆ ಈ ಅತಿ ಒದ್ದೆ ನೀರು ನೆಲದ ಹೆಚ್ಚು ವಿಸ್ತಾರವಾದ ಮತ್ತು ಆಳವಾದ ಪ್ರಮಾಣವನ್ನು ಒದ್ದೆ ಮಾಡಬಲ್ಲುದಾದುದರಿಂದ ಕೃಷಿಗಾರಿಕೆಗೆ ಮಹತ್ವದ ಉಪಕಾರಿ ಎಂದು ಹೇಳಲ್ಪಟ್ಟಿದೆ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨[illegible]
೪ರಿಂದ ೫ ತಿಂಗಳು	,,	,,	೨[illegible]
೬ರಿಂದ ೯ ತಿಂಗಳು	,,	,,	೨[illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ್ದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು,
23-12-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SCASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months . . . 2½% p. a.
5 & 6 months . . . . 2¾% p a

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

★ ಹೊಸ ವರ್ಷದ ಶುಭಾಶಯ ★

ನಮ್ಮೆಲ್ಲಾ ಪೊಲಿಸಿದಾರರಿಗೂ, ಏಜೆಂಟರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಮತ್ತು ಹಿತಾಕಾಂಕ್ಷಿಗಳಿಗೂ ಸ್ವತಂತ್ರ ಭಾರತದ ಮೊದಲ ಹೊಸ ವರ್ಷದಲ್ಲಿ ಸುಖ ಸಮೃದ್ಧಿಗಳಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನ, ಮೈಸೂರು, ಟ್ರಾವನ್ಕೂರ್, ಕೊಚ್ಚಿನ್ ಮತ್ತು ಪುದುಕೋಟೆ ಸಂಸ್ಥಾನಗಳ ಚೀಫ್ ಏಜಂಟರು

ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಬೊಂಬ್ಬಾ, ಬೆಂಗಳೂರು, ಕಲ್ಕತ್ತ, ಮಧುರಾ,
ಮಂಗಳೂರು, ಟ್ರಿವೆಂಡ್ರಮ್, ಮದ್ರಾಸು.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff.

A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಹೆಚ್ಚು ಪರಿಣತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಹೊಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ-ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 23—1—1948 [ಸಂಚಿಕೆ 3]

ಉಪವಾಸದ ಮಹೋಗ್ರ ತಪಸ್ಸುಗಳ ಮರ್ಮ

ಆತ್ಮ ಬಲಿದಾನದಿಂದ ಹೃದಯ ಪರಿವರ್ತನೆ

ಪುರಾಣೇತಿಹಾಸಗಳ ನಿದರ್ಶನಗಳು

ಗಾಂಧೀಯ ಉಪವಾಸ ಪ್ರಾರಂಭದಿಂದ ಮುಕ್ತಾಯವಾಗುವ ತನಕದ ಐದೇ ದಿವಸಗಳಲ್ಲಿ ದೇಶದ ಆದ್ಯಂತ್ಯದಲ್ಲಿ ಅಸಾಮಾನ್ಯವಾದ ಸಾಂಸ್ಕೃತಿಕ ಹಾಗೂ ನೈತಿಕ ಪರಿವರ್ತನೆಯುಂಟಾದುದು ನಮ್ಮ [illegible] ಕ್ಕೆ ಬಂದಿರುತ್ತದೆ. ಕಾಶ್ಮೀರದಲ್ಲಿನ ಕ್ರೂರ ಧಾಳಿಗಾರರಿಗೆ ಗುಪ್ತ ಸಹಾಯ ಮಾಡಿ ಪಾಶವೀ ಕೃತ್ಯಗಳಲ್ಲಿ ಸಹಕರಿಸುತ್ತಿದ್ದವರೆಂದು ಹೇಳಲ್ಪಡುತ್ತಿರುವ, ಅಲ್ಪಸಂಖ್ಯಾಕರನ್ನು ಹಿಂಸಿಸುವುದರಲ್ಲಿ ಅಪ್ರತ್ಯಕ್ಷ ಸಹಾನುಭೂತಿ ತೋರಿಸುತ್ತಿರುವರೆಂದು ಆಪಾದಿಸಲ್ಪಡುತ್ತಿರುವ ಪಾಕಿಸ್ತಾನ ಸರಕಾರ ಪ್ರಮುಖರೂ, ಬಹುಸಂಖ್ಯಾಕರನ್ನು ಅರಬ ಸೈನಿಕರ ಮೂಲಕ ಪೀಡಿಸುತ್ತಿರುವರೆಂದು ಆರೋಪಿಸಲ್ಪಡುತ್ತಿರುವ ಕಾಶ್ಮೀರದ ಭಾವಿ ಪ್ರತಿರೂಪಿಗಳಾಗಿರುವ ಹೈದರಾಬಾದಿನ ನಿಜಾಮರೂ ಮಹಾತ್ಮರ ಉಪವಾಸ ಮುಕ್ತಾಯಕ್ಕಾಗಿ ಶುಭ ಸಂದೇಶವನ್ನು ಸೌಹಾರ್ದದ ಆಶ್ವಾಸನೆಯನ್ನು ಕಳುಹಿಸಿರುವರು. ತಮ್ಮ ಸಹಧರ್ಮಿಗಳು ಅಮಾನುಷಿಕ ಅತ್ಯಾಚಾರಕ್ಕೀಡಾಗಿ [illegible] ಕರಾಚಿಯ ಅತ್ಯಾಚಾರದಿಂದ ಉದ್ರೇಕಿತರಾದ ಸೀಖ್ ಮುಖಂಡರೂ ಮಹಾತ್ಮರಲ್ಲಿ ಶಾಂತಿ ಸ್ಥಾಪನೆಯ ವಚನವನ್ನು ಕೊಟ್ಟಿರುವರು.

ಕಲ್ಕತ್ತಾದಲ್ಲಿ [illegible] ವನ್ನು ಕೈಕೊಂಡ [illegible] ವಿಶೇಷ ಘಟನೆಗಳು [illegible] ಲಿಯ ಸಂಚಾರದ [illegible] ಗಳಲ್ಲುಂಟಾದ ಹೃದಯ ಪರಿವರ್ತನೆ [illegible] ಣಾಮವಾಗಿ ಮುಸ್ಲಿಮ [illegible] ಧ್ವಂಸ ಮಾಡಿ [illegible] ಸಲ್ಪಟ್ಟ ಹಿಂದೂಗಳ ಈಶ್ವರ ಮಂದಿರವನ್ನು ಪುನಃ ಕಟ್ಟಿಕೊಟ್ಟಿರುವರು. ಈ ಹಿಂದೆ ಮಹಾತ್ಮರು ಉಪವಾಸ ಕೈಕೊಂಡಾಗ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸೂತ್ರಧಾರರಾಗಿದ್ದು ಈ ದೇಶದಲ್ಲಿ ಜಾತಿ ಭೇದಗಳನ್ನುಂಟುಮಾಡಿ ಅದನ್ನು ಹೆಚ್ಚಿನ ಅನಾಹುತವನ್ನು ಗೈಯ್ಯಲು ಧೋರಣ ಬದ್ಧರಾಗಿದ್ದ ಬ್ರಿಟಿಷ್ ಪ್ರಧಾನ ಮೆಕ್ ಡೊನಾಲ್ಡರು ಪೂನಾದಲ್ಲಾದ ಗಾಂಧಿ ಅಂಬೇಡಕರ್ ಒಪ್ಪಂದಕ್ಕೆ ಲಂಡನಿನಿಂದ ತಂತಿ ಮೂಲಕ ಸಕಾಲದಲ್ಲಿ ತಮ್ಮ ಸಮ್ಮತಿ ಕೊಟ್ಟದ್ದು ಒಂದು ದೈವೀಕ ಚಮತ್ಕೃತಿಯೇ ಸರಿ. ಆದರಿಂದ ಮಹಾತ್ಮರ ಜೀವವು ಗಂಡಾಂತರದಿಂದ ಪಾರಾಯಿತು. ಕೊಂಗ್ರೆಸಿನ ಮತ್ತು ಮೇಲ್ತರಗತಿಯ ಸ್ಪೃಶ್ಯ

ಹಿಂದೂಗಳ ಬದ್ಧ ವೈರಿಗಳ ತಿಪ್ಪ [illegible] ಕರರು ಬ್ರಿಟಿಷ್ [illegible] ತಮ್ಮ [illegible] ವನ್ನು ಒದಗಿಸಿ [illegible] ವಿಧಿ ಕೃತಜ್ಞರಾಗಿ ಮಣಿಗಿದ ಮಹತ್ತರಿಗೆ ಒಂದು ಒಪ್ಪಂದಕ್ಕೆ ಸಹಿ [illegible]

ಇದೆಲ್ಲ ಆತ್ಮ ಮತಸ್ಸಿನ ಪರಿಣಾಮ. ಮಹಾತ್ಮರ ಪ್ರಭಾವದ ಕುರಿತು [illegible] ದು ಆಗಲೆ [illegible] ಕನ ಪತ್ರಿಕೆ [illegible] ಶಕ್ತಿ [illegible] ಲೌಕಿಕ ದೃಷ್ಟಿ [illegible]

[illegible] ಆಧ್ಯಾತ್ಮ ಶಕ್ತಿ [illegible] ಪತಿಯನ್ನು [illegible] ಪ್ರತ್ಯಕ್ಷ [illegible] ಪ್ರಾಣೇಶ್ವರ [illegible] ರಾಜರ್ಷಿ [illegible]

ಮಹಾತ್ಮರು ಪರಮಾತ್ಮನನ್ನು ಒಲಿಸಿಕೊಂಡಿರುವರು. ಅದೆಷ್ಟೋ ಸತ್ವಶಾಲಿಗಳೇ ಅಸಹನೀಯವಾದ ದುರಿತಗಳಿಂದ ಪಾರು [illegible] ಡಿರುವರು. ಸೀತಾದೇವಿಯ ಆತ್ಮ ಶೀಲತೆಯ ಪ್ರಚಂಡ ಶಕ್ತಿಯಿಂದಾಗಿ ಅಮಾನುಷಿಕ ಶಕ್ತಿ ಸಂಪನ್ನನಾದ ರಾವಣನು ಕೂಡ ಅವಳ ಹತ್ತಿರ ಬರಲು ನಿರ್ಬಲನಾದನು. ಪರಮ ಪತಿವ್ರತೆಯಾದ ಸಾವಿತ್ರಿಯು [illegible] ಕಷ್ಟ ಸಹಿಷ್ಣುತೆಯಿಂದ [illegible] ಧರ್ಮವನ್ನು [illegible] ಅರ್ಧಾಂಗನ ಜೀವಾತ್ಮನನ್ನು ಪುನಃ ಸಂಪಾದಿಸಿದಳು. ತನ್ನ [illegible] ಭಗೀರಥನು [illegible] ಆಕಾಶ ಗಂಗೆಯನ್ನು ಭೂಲೋಕ್ಕಿಳಿಸಿ ಶಾಪ ಭಸ್ಮರಾದ ತನ ಸಹೋದರನನ್ನು ಮೋಕ್ಷಪಡಿಸಿದನು.

[illegible] ಕೋಟಿಯು ಅದೃಶ್ಯವಾದೊಂದು [illegible] ನೈತಿಕ ಶಕ್ತಿಯ ಸಾಮಾನ್ಯ [illegible] ಒಟ್ಟುಗೂಡಿಸಲ್ಪಟ್ಟಿದೆ [illegible] ಸುತ್ತ [illegible] ವಾಕ್ಯಗಳನ್ನು [illegible] ಮಾಡುವಂತೆ, [illegible] ಶಕ್ತಿ [illegible] ವನ್ನು ತನ್ನ [illegible] ಹಿಡಿತದಲ್ಲಿ [illegible] ಸಂಭವಿಸಿದೆ.

[illegible] ಪ್ರಗತಿಯ [illegible] ಉದಾತ್ತತೆಯ [illegible] ಅದು ತನ್ನ [illegible] ಮಾಡುವ ಪಾಶ [illegible] ಸ್ವಾಭಾವಿಕವಾಗಿ [illegible] ಅತ್ಯಾಚಾರವನ್ನೆಸಗುವ ದುಷ್ಟ ಪ್ರವೃತ್ತಿ [illegible] ಸ್ವಾಭಾವಿಕವಾಗಿ [illegible] ಮೇಲೆ ನಮ್ಮ ದೇಶದಲ್ಲಿ [illegible] ತಿರುವ ಈ ತಾಳ ತಪ್ಪಿದ [illegible] ಸ್ವಭಾವ ಪ್ರದರ್ಶ [illegible] ಇದರಲ್ಲಿ ತದ್ವಿರೋಧವೆಂದರೆ [illegible] ತತ್ವಗಳ ಘರ್ಷಣೆಯು [illegible] ನಡೆಯುತ್ತದೆ. ಅಶಿಕ್ಷಿತವಾದ ಮುಗ್ಧ ಮನಸ್ಸನ್ನು ಉದ್ರೇಕ [illegible] ಪಕ್ಷಿ [illegible] ಫತೆ [illegible] ಪ್ರಮ [illegible] ಸ್ವಾರ್ಥದ ರಾಜಕೀಯ ಗುರಿಯನ್ನು ಹೊಂದ ಬಯಸುವವರ ಅಶಾಶ್ವತ ಸಾಹಸವೆಂದಿಗೂ ಸಫಲವಾಗದು.

ಇಂತಹ ಪರಿತಪ್ತ ಪರಿಸ್ಥಿತಿಯಲ್ಲೂ ತಮ್ಮ ಅತ್ಮ ಸಾಂಸ್ಕೃತಿಕ ಮನೋಭಾವವನ್ನು ಉದಾತ್ತ ನಿಷ್ಪಕ್ಷಪಾತ ದೃಷ್ಟಿಯಿಂದ ಸಮನ್ವಯಗೊಳಿಸಿ ಉನ್ನತ ಧ್ಯೇಯ

(೬ನೇ ಪುಟ ನೋಡಿ)

THE

UNITED INDIA LIFE ASSURANCE CO, LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore

ಭಾರತೀಯ ರೈತನ ಬಡತನದ ಇತಿಹಾಸ

ಕೃಷಿಕನೋದ್ಧಾರವೇ ಸ್ವರಾಜ್ಯದ ಗುರಿ

ಕೃಷಿ ತಜ್ಞರೊಬ್ಬರ ಕಳಕಳಿಯ ಬಿನ್ನಹ

ಡಾ। ಅಪ್ಪುರಿ ಪ್ರಸಾದ್ ಎಂಬೀ ಲೇಖನದ ಮೂಲ ಕೃತ್ಯಗಳು ಅನೇಕ ವರ್ಷಗಳಿಂದ ಕೃಷಿಕರ ಮಧ್ಯದಲ್ಲೇ ಎಂಬತ್ತಿದ್ದರು. ನಮ್ಮ ಕೃಷಿಕನನ್ನುದ್ಧರಿಸಲು ಕೇವಲ ಶಬ್ದಾಂಡಬರದ ಸಮ್ಮತವಾದ ಶಕ್ತ ನಿರೂಪಣೆಗಳು ಸಾಲವು, ಅದಕ್ಕೆ ಶ್ರೇಷ್ಠತರ ರಾಜನೀತಿಜ್ಞತೆಯು ದೂರದೃಷ್ಟಿಯ ಅವಶ್ಯಕತೆಯಿದೆಂದವರ ಅಭಿಪ್ರಾಯ. ರೈತನ ಅಭಿವೃದ್ಧಿಯೇ ದೇಶದ ಮೇಲ್ಮೆಗೆ ಕಾರಣವೆಂದವರು ತಿಳಿಸುವ ಈ ಲೇಖನದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ಮೊಗಲರ ಕಾಲದ ರೈತನ ಮತ್ತು ಬ್ರಿಟಿಷರ ಕಾಲದ ರೈತನ ಜೀವನದ ತುಲಾನಾತ್ಮಕ ವಿಮರ್ಶೆ ಮಾಡಲು ನಮಗೆ ಬೇಕಾದ ಅಂಕಿಗಳು ಸರಿಯಾಗಿ ಸಿಕ್ಕುವುದಿಲ್ಲ. ಆದರೂ ನಮ್ಮ ವಶದಲ್ಲಿರುವ ಬೇರೆ ಕೆಲವು ಸಂಗತಿಗಳ ಅಭಾವದಿಂದ ಬ್ರಿಟಿಷರ ಕಾಲದ ರೈತನಿಗಿಂತಲೂ ಮೊಗಲರ ಕಾಲದವನು ಮತ್ತವನಿಗಿಂತಲೂ ಹಿಂದಿನವನು ಸುಖೋಪವೃದ್ಧಿಯಲ್ಲಿದ್ದನೆಂದು ಸಿದ್ಧಾಂತವಾಗಿ ತಿಳಿದು ಬರುತ್ತದೆ.

ಪಾರಂಪರ್ಯಗತವಾದ ಜಮೀನ್ದಾರಿ ಪದ್ಧತಿಯನ್ನು ಸ್ಥಾಪಿಸಿ ಲೋರ್ಡ್ ಕೋರ್ನ್‌ವಾಲೀಸರು ಯಶಸ್ವಿಯಾದಾಗಲೇ ಭಾರತೀಯ ರೈತನ ಅಧಃಪತನಕ್ಕಾರಂಭವಾಯಿತೆನ್ನಬಹುದು. ಭೂ ವ್ಯವಸಾಯದ ವ್ಯವಹಾರವು ನೇರವಾಗಿ ಜಮೀನ್ದಾರನೊಡನೆ ಮಾಡಲ್ಪಡುವ ವಿಧಾನದಿಂದ ನಮ್ಮ ರೈತನನ್ನು ಮಗುವಿಗೆ ಮಾತೆಯಂತಿರುವ ಸರಕಾರವು ಅವರ್ಣನೀಯ ಅಲಕ್ಷವನ್ನು ತಾಳುವಂತಾಯಿತು. ಮತ್ತೆ ಅಂದಿನಿಂದಿನವರೆಗೆ ರೈತನದು ಕರುಣಾಜನಕವಾದ ಗೋಳಿನ ಬಾಳಾಗಿಯೇ ಉಳಿದಿದೆ.

ಹೀಗೆ ಭೀಕರ ಅಲಕ್ಷಗೊಳಗಾದ ರೈತ ತನ್ನ ಸುತ್ತಲಿನ ಜಗತ್ತು ಕೃಷಿ ಉದ್ಯಮಗಳಲ್ಲೂ ವ್ಯಾಪಾರ ವ್ಯವಹಾರಗಳಲ್ಲೂ ವೈಜ್ಞಾನಿಕ ವಿಧಾನಗಳಿಂದ ಮುಂದೊತ್ತುತ್ತಿರುವಾಗ, ಈತ ಮಾತ್ರ ತನ್ನ ಹಳೇ ಕಾಲದ ಹೊಂಡದಲ್ಲೇ ನರಳುವವನಾದ. ಬಂಡವಾಳಶಾಹಿ ಸಾಮ್ರಾಜ್ಯಶಾಹಿತ್ವದ ಬಲವತ್ತರವಾದ ಶೋಷಣೆಯೇ ಅವನನ್ನು ಮತ್ತಷ್ಟು ನಿಕೃಷ್ಟಾವಸ್ಥೆಗೆ ತಳ್ಳಿತು. ಹೀಗೆ ದರಿದ್ರಾವಸ್ಥೆಯ ಕೊನೆಯ ಹಂತಕ್ಕಿಳಿದ ಕೃಷಿಕ ಅಲ್ಪ ಸ್ವಲ್ಪ ಆಹಾರ ಕೊರತೆಯು ತಲೆ ಯೆತ್ತುವಿಕೆಯಿಂದ ವಿನಾಶಕಾರಿಯಾದ ಬರಗಾಲದ ದುರಂತಕ್ಕೇ ತುತ್ತಾಗುವೆನೆಂದು ದಿವಂಗತ ರಮೇಶಚ್ಚಂದ್ರ ದತ್ತರು ಲಾರ್ಡ್ ಕರ್ಜನ್‌ರಿಗೆ ಸ್ಪಷ್ಟ ತಿಳಿಸಿದ್ದರು. ಬ್ರಿಟಿಷ್ ಸರಕಾರವನ್ನು ಮುಖ್ಯವಾಗಿ ಕರ್ಜನ್ ಸಾಹೇಬರನ್ನು ಕೊನೆತನಕ ಪ್ರಬಲವಾಗಿ ನಿರ್ಭೀತವಾಗಿ ಈ ವಿಷಯದಲ್ಲಿ ಪ್ರತಿಭಟಿಸಿದ ಪ್ರಥಮ ಸಾಹಸದ ಕೀರ್ತಿ ರಮೇಶ್ಚಂದ್ರರಿಗೇ ಸಲ್ಲುವುದು.

ಭಾರತೀಯ ಜನತೆ ಅದೆಷ್ಟು ಅಂಧ ವಿಶ್ವಾಸಗಳುಳ್ಳವರಿದ್ದರೂ ಪ್ರಾಚೀನ ಕಾಲದ ವೇದಗಳ ಸ್ಫೂರ್ತಿಯಿಂದವರು ಸೃಷ್ಟಿಕರ್ತನಲ್ಲಿ ನಿರರ್ಗಳವಾದ ಭಕ್ತಿ ವಿಶ್ವಾಸದಿಂದಲೂ ಸರಳ ಜೀವನದ ಉತ್ತಮ ತಾತ್ವಿಕ ಪರಿಜ್ಞಾನದಿಂದಲೂ ಇದು ತನಕವೂ ತಮ್ಮೀ ನರಕ ಜೀವನದಲ್ಲೂ ಅತಿಶಯ ಆನಂದ ಸ್ಫೂರ್ತಿಗಳನ್ನು ಪಡೆದು ಪದೇ ಪದೇ ತಮ್ಮ ಮೇಲಾದ ಶೋಷಣೆಯ ಕ್ರೌರ್ಯವನ್ನೆದುರಿಸಿ ಇಂದು ಇದೀಗ ಮೂಖ ಮಿಲಿಯಾವಧಿಗಳಾಗಿ ಬಾಳಿ ಬಂದಿರುವರು. ಹಳ್ಳಿ ನಾಡಿನ ರೈತ ಜನತೆಯ ಪುನರುದ್ಧಾರದ ಹಾದಿಗಳನ್ನು ಕಂಡುಹಿಡಿಯಬೇಕಾದರೆ ಆ ಜನರ ಜೀವನ ಸ್ಥಿತಿಗತಿಗಳನ್ನು ಪ್ರತ್ಯಕ್ಷ ನೋಡಬೇಕಾದುದು ಅತ್ಯಾವಶ್ಯಕ, ಆವಾಗಲೇ ಆ ದೀನ ಸ್ಥಿತಿಯ ಸನ್ನಿವೇಶವು ದೃಷ್ಟಿಗೋಚರವಾಗುವುದು.

ದೇಶದಲ್ಲಿ ಸಂಪತ್ತು ತುಂಬಿ ತುಳುಕುವಾಗ ಅದರ ಸದುಪಯೋಗವನ್ನು ನಿರಂತರವಾಗಿ ಕೈಮುಚ್ಚಿಯಷ್ಟು ಜನ ಉಪಯೋಗಿಸುವುದು ಮತ್ತವರನ್ನು ಹೀಗೆ ಉಪಯೋಗಿಸಲು ಬಹು ಕಾಲದ ವರೇಗೆ ಅನಿರ್ಬಂಧವಾಗಿ ಬಿಡುವುದೂ ವಿವೇಕವಲ್ಲ. ನಾಗರಿಕತೆಯ ಸತ್ಫಲ (ದುಷ್ಫಲ?)ಗಳನ್ನುಣ್ಣಲು ಪ್ರತಿಯೊಬ್ಬನೂ ಹಕ್ಕುಳ್ಳವನೆಂದು ಪ್ರತಿಪಾದಿಸಲ್ಪಡುವ ಪ್ರಜಾ ರಾಜ್ಯದ ಕಾಲದಲ್ಲಿ ಒಂದು ದೇಶದ ಸರ್ವತೋಮುಖ ಆರ್ಥಿಕ ಅಭಿವೃದ್ಧಿಯ ಅಡಿಗಟ್ಟಿನಂತಿರುವ ಕೃಷಿ ಉದ್ಯಮಸ್ಥರನ್ನು ಮಾನವೀಯತೆ ರಹಿತವಾದ ಅಲಕ್ಷಗೊಳಪಡಿಸುವುದು ಉಚ್ಚ ಸಂಸ್ಕೃತಿಗೆ ತದ್ವಿರುದ್ಧವಾದ ಘೋರಣೆಯೇ ಸರಿ. ಇನ್ನು ಈ ಜನತೆಯ ಬಾಳು ಹೇಗಿದೆಂಬುದನ್ನು ಪರಿಚಯ ಮಾಡಿಕೊಳ್ಳೋಣ.

ಇಂದಿನ ರೈತ ಶತಮಾನಗಳ ನಿರ್ಲಕ್ಷದಿಂದ ಅಜ್ಞಾನ, ಅನಾರೋಗ್ಯ ಮತ್ತು ಅಂಧ ವಿಶ್ವಾಸಗಳಿಂದ ತುಂಬಿರುವ, ಮಾನವ ಲಕ್ಷಣಗಳನ್ನು ಕಳೆದುಕೊಂಡಿರುವ ಓರ್ವ ಪಾಶ ಸಮಾನ ವ್ಯಕ್ತಿಯಾಗಿರುವುದು ಮಾನವ ಕೋಟಿಗೇ ಲಜ್ಜಾಸ್ಪದವಾದ ಸಂಗತಿ. ಇಂಗ್ಲೆಂಡ್, ಯುರೋಪ್, ಅಮೇರಿಕಾ ದೇಶಗಳಲ್ಲಿ ಬೇಡುವಿಕೆ, ದರಿದ್ರ ತರದ ನಗ್ನಾವಸ್ಥೆಗಳನ್ನು ಶಾಸನಗಳ ಮೂಲಕ ಪ್ರತಿಬಂಧಿಸಿ ಅವುಗಳ ಪರಿಹಾರಕ್ಕೆ ಸರಕಾರ ಖಜಾನೆಯ ಸಹಾಯವನ್ನು ತೆರುವ ವ್ಯವಸ್ಥೆಗಳನ್ನೇರ್ಪಟಿಸಿರುವಾಗ ನಮ್ಮ ದೇಶದ ಜನತೆ ಅವರ್ಣನೀಯವಾದ ಕಸಿಕರಾವಸ್ಥೆಯಲ್ಲಿ ತೊಳಲುತ್ತಿದ್ದರೂ ಅವರನ್ನುದ್ಧರಿಸುವ ಕಾರ್ಯವು ಪೂರ್ಣ ಹೃದಯದಿಂದ ಇನ್ನು ಕೈಕೊಳ್ಳಲ್ಪಡದಿರುವುದು ಜನಾಂಗದ ದುರ್ವಿಧಿಯೇ ಸರಿ.

ಬಾಲ ವಿವಾಹ, ಅಂಧ ಆಚಾರ, ಮೂಢ ವಿಶ್ವಾಸಗಳು ನಮ್ಮ ಕೃಷಿಕ ವರ್ಗಗಳಲ್ಲಿ ಹೆಚ್ಚಿನ ಅನಾಹುತವನ್ನುಂಟು ಮಾಡುತ್ತವೆ. ಇದರಿಂದ ಸಾಮಾಜಿಕ ಜೀವನವು ದುರ್ಬಲವಾಗುವುದಲ್ಲದೆ ಅರ್ಥ ರಹಿತವಾದ ಆಚಾರ ವಿಶ್ವಾಸಗಳಿಂದ ವಿಪುಲವಾದ ಧನ ವ್ಯಯವು ಅನಿವಾರ್ಯವಾಗಿ ಹೋಗುವುದು. ಇವುಗಳ ಹಿಡಿತದಿಂದ ತಪ್ಪಿಸಲು ಕೂಡಲೇ ವಯಸ್ಕರ ಶಿಕ್ಷಣ ಮತ್ತು ಕಡ್ಡಾಯ ಶಿಕ್ಷಣ ಯೋಜನೆಗಳು ಜಾರಿಗೆ ತರಲ್ಪಡಬೇಕು.

ಕೃಷಿಕರ ಮಾನಸಿಕ ವಿಕಾಸದ ಪ್ರಯತ್ನದೊಡನೆ ಅವನ ಶಾರೀರಿಕ ಧೃಢತೆಯ ಕುರಿತೂ ಯೋಗ್ಯ ಯತ್ನಗಳಾಗಬೇಕಾದುದತ್ಯಾವಶ್ಯಕ. ಕಾರಣ ಯಾವ ತರದ ಪೌಷ್ಟಿಕ ಆಹಾರ ಸೇವನೆಯ ಅನುಕೂಲತೆ ಇಲ್ಲದೆ ಕೃಷನಾಗಿರುವ ಕೃಷಿಕ ಮಾನಸಿಕ ವಿಕಾಸದ ಯತ್ನಗಳನ್ನು ಬಹು ಕಾಲದ ತನಕ ಸಫಲವಾಗಲು ಬಿಡಲಾರ. ಆದುದರಿಂದ ಪುಷ್ಟಿಕರವಾದ ಆಹಾರವನ್ನುಪಯೋಗಿಸುವ ಮತ್ತದನ್ನವನಿಗೆ ಕಮ್ಮಿ ಬೆಲೆಗ ಪೂರೈಸಿ ಕೊಡುವ ಕಾರ್ಯವು ಕೈಗೂಡುವಂತಾಗಬೇಕು. ಬೆಳೆಯುವ ಜನಾಂಗಕ್ಕಾದರೂ ಶಾಲೆಗಳಲ್ಲಿ ಹಾಲು, ಮಧ್ಯಾಹ್ನದ ಊಟದ ಸರಬರಾಯಿ ಮಾಡುವುದರಿಂದ ಯೋಗ್ಯ ದಾರಿಗೆ ಹಚ್ಚಬಹುದು. ಸುಲಭವಾಗಿ ಸಿಗಬಹುದಾದ ಮತ್ತು ಧರ್ಮಾರ್ಥವಾದ ವೈದ್ಯಕೀಯ ಸಹಾಯವು ಅತೀ ಶೀಘ್ರದಲ್ಲಿ ವ್ಯವಸ್ಥಾಪಿಸ ಬೇಕು.

ಇಂದಿನ ಭೂವ್ಯವಸಾಯಗಾರ ಕಬ್ಬು, ಬೆಲ್ಲ, ಮತ್ತು ಗೆಣ್ಣೆ ಗೆಣಸುಗಳಿಂದಲೇ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಸತ್ವ ರಹಿತವಾದ ಆಹಾರಗಳಿಂದ ಅವನ ಚಟುವಟಿಕೆಗಳಿಗೆ ಸಾಕಾವಷ್ಟು ಚೈತನ್ಯವು ದೊರಕುವುದಿಲ್ಲವೆಂಬುದು ಸ್ವಸ್ಪಷ್ಟ. ಅವನು ಹೊಟ್ಟೆ ಸಾಯಸಗಳನ್ನು ತಿನ್ನುವುದು ಹಬ್ಬದ ಸಮಯದಲ್ಲಿ. ಪುಷ್ಟಿಕರವಾದ ಮಾಂಸ ಮೀನುಗಳನ್ನು ಕೊಳ್ಳಲೂ, ಇತರ ಭಕ್ಷಗಳನ್ನು ತಯಾರಿಸಲು ಅವನಲ್ಲಿ ಸಾಕಷ್ಟು ಆರ್ಥಿಕ ಅನುಕೂಲತೆಗಳಿಲ್ಲ. ಇದ್ದುದನ್ನು ಆರೋಗ್ಯಕರ ವಿಧಾನಗಳಲ್ಲಿ ಮಾಡಿ ತಿನ್ನಲು ಬೇಕಾದ ಪರಿಪಕ್ವ ಜ್ಞಾನವೂ ಅವನಿಗಿರುವುದಿಲ್ಲ. ಆಹಾರದ ಅಭಾವದ ನಿರ್ಬಲತೆ ಮತ್ತು ಒತ್ತಾಯಪೂರ್ವಕವಾದ ಮತ್ತು ನಿರ್ವಾಹವಿಲ್ಲದ ಶ್ರಮ ಸಂಕಷ್ಟಗಳನು ಶಮನಗೊಳಿಸಲು ಅವನು ಅನಾಹುತಕಾರಿಯಾದ ಅಮಲು ಸೇವನೆಗಳಿಗೆ ಮರೆಹೊಕ್ಕಿರುವುದು ಈ ದುರ್ವಿಧಿಯ ಇನ್ನೊಂದು ಅವಾಂತರ. ಪಾನನಿರೋಧದೊಡನೆ ಆರೋಗ್ಯವಂತ ಆಹಾರಾಭ್ಯಾಸಗಳನ್ನು ಬೆಳೆಸಲು ಬಲವಾದ ಪ್ರಚಾರವೂ ಆ ಕುರಿತು ಉತ್ತಮ ಸೌಕರ್ಯಗಳೂ ಒದಗಿಸಲ್ಪಡಬೇಕಾದುದು ಮತ್ತೊಂದು ಜರೂರಿನ ಆವಶ್ಯಕತೆ.

ನಮ್ಮ ರೈತನ ಉಡುಪು ತೊಡುಪುಗಳ ಶೈಲಿಯನ್ನು ನೋಡಬೇಕಾದರೆ ಸ್ವತಃ ಮಹಾತ್ಮ ಗಾಂಧಿಯವರನ್ನಾಗಲಿ ಅವರ ಭಾವ ಚಿತ್ರವನ್ನಾಗಲಿ ನೋಡಿದರೆ ಸಾಕು. ಮಹಾತ್ಮರ ಉಡುಪು ನಮ್ಮ ದರಿದ್ರ ರೈತನ ವೇಷ ಭೂಷಣದ ಪ್ರತಿ ಬಿಂಬವೇ ಆಗಿದೆ. ಮೊಣಕಾಲ ಮೇಲಿನ ಧೋತಿ, ಗೇಣುದ್ದ ಶಾಲು, ಹರಕು ಮುರುಕು ಬಟ್ಟೆಯದೊಂದು ತಲೆ ವಸ್ತ್ರ. ಈ ತಲೆ ವಸ್ತ್ರವೇ ಅವರ 'ಹ್ಯಾಟು' ಬಟ್ಟೆಗಳನ್ನು ಒಗೆಯುವುದು ಸಂಕ್ರಾಂತಿಗೊಂದು ಸಾರಿ ಎಂದರೂ ಅತಿಶಯವಾಗಲಾರದ ಸಂದರ್ಭಗಳಿವೆ. ಮತ್ತೆ ಹೆಚ್ಚಿನ ರೈತನ ಶಯನ ಸೌಕರ್ಯವೆಂದರೆ ಒಂದು ಹರಕು ಮುರುಕು ಚಾಪೆ ಒಂದು ಕಂಬಳಿ. ಹಗ್ಗದ ಮಂಚವೊಂದಿದ್ದರೆ ಅದು ಪಲ್ಲಂಗಕ್ಕೆ ಸಮಾನ.

ಕಡಿತ, ಗಾಯ, ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ. ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ.

ಕುಟಿಕೂರಾ ಮುಲಾಮು
CUTICURA OINTMENT

ಇದೇ ತಾ. 8-2-1948ನೇ ಆದಿತ್ಯವಾರ ಸಾಯಂಕಾಲ ಘಂ. 6ಕ್ಕೆ
ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ
ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ
ಇವರ ಸಂಗೀತ ಕಚೇರಿ
ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ–ಇವರ ಪಿಟೀಲು
ಶ್ರೀ ಕಲ್ಪಾತಿ ರಮಾನಾಥನ್–ಇವರ ಮೃದಂಗ
ಶ್ರೀ ಅಲಂಗುಡಿ ರಾಮಚಂದ್ರನ್–ಇವರ ಘಟವಾದ್ಯ.
ಟಿಕೇಟು ದರ: ಪೋಷಕ ವರ್ಗ: ರೂ. 100, I 25, II 10, III 5.
ಟಿಕೇಟುಗಳು: (1) ಶ್ರೀ ಪಿ. ಶ್ರೀನಿವಾಸರಾವ್ ಬಿ. ಎ. ಬಿ. ಯಲ್. ಕೆ. ಯಸ್. ರಾವ್ ರಸ್ತೆ, ಮಂಗಳೂರು ಮತ್ತು
(2) ಶ್ರೀ ಬಿ. ರಾಮಚಂದ್ರರಾವ್, ಎಂ. ಎ. ಬಿ. ಎಲ್. ಅಡ್ವಕೇಟ್ ಪುತ್ತೂರು, ಇವರಲ್ಲಿ ದೊರಕುವವು.

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಒಕ್ಕೂಟದ ಮುಸ್ಲಿಮರ ಕರ್ತವ್ಯ

"ಇತ್ತೀಚೆಗೆ ಕರಾಚಿಯಲ್ಲಿ ಸೇರಿದ ಮುಸ್ಲಿಂ ಲೀಗು ಅಂಗೀಕರಿಸಿದ ನಿರ್ಣಯವನ್ನನುಲಕ್ಷಿಸಿ, ಮೌಲಾನಾ ಆಜಾದರ ಕೇಳಿಕೆಯಂತೆ ಲಕ್ನೋದಲ್ಲಿ ಕೂಡಲಿರುವ ಸಭೆಯನ್ನು ಗಮನದಲ್ಲಿಟ್ಟುಕೊಂಡು, ಕೆಲವು ಮುಸ್ಲಿಂ ಗೆಳೆಯರು ತಾವು ಮುಸ್ಲಿಂ ಲೀಗಿನ ಸದಸ್ಯರಿದ್ದರೆ ಲಕ್ನೋದ ಸಭೆಗೆ ಹೋಗಬೇಕೇ? ಮದ್ರಾಸಿನಲ್ಲಿ ನಡೆವ ಲೀಗ ಸದಸ್ಯರ ಸಭೆಗೂ ಹೋಗಬೇಕೇ? ಹೇಗೇ ಆಗಲಿ, ಒಕ್ಕೂಟದಲ್ಲಿಯ ಮುಸ್ಲಿಂ ಲೀಗ ಸದಸ್ಯರ ಧೋರಣವೇನಿರಬೇಕು — ಎಂದು ನನ್ನನ್ನು ಕೇಳಿದ್ದಾರೆ. ಅವರನ್ನು ವಿಶೇಷವಾಗಿ ಇಲ್ಲವೆ ಸಾರ್ವಜನಿಕವಾಗಿ ನಿಮಂತ್ರಿಸಿದಲ್ಲಿ ಲಕ್ನೋದ ಸಭೆಗೂ ಮದ್ರಾಸಿನ ಸಭೆಗೂ ಹೋಗತಕ್ಕದ್ದೆಂಬಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಪ್ರತಿಯೊಂದು ಸಭೆಯಲ್ಲೂ ಅವರು ತಮ್ಮ ಅಭಿಪ್ರಾಯಗಳನ್ನು ಧೈರ್ಯಾರ್ಜವದಿಂದ ಪ್ರಕಾಶಪಡಿಸಬೇಕು. ಭಾರತದಲ್ಲಿಯ ಮುಸ್ಲಿಂ ಅಲ್ಪಸಂಖ್ಯಾಕರು ಪಾಕಿಸ್ತಾನದ ಬಹುಸಂಖ್ಯಾಕರ ರಕ್ಷಣೆಯಿಲ್ಲದೆ ಇರುವದೇನ- ನಷ್ಟದ ಸಂಗತಿಯಲ್ಲ. ಯಾವಾಗ? ಅವರು ಕಳೆದ ೩೦ ವರ್ಷಗಳಿಂದ ಅಹಿಂಸಾ ತತ್ವವನ್ನು ಅನುಸರಿಸುತ್ತಿದ್ದವರಿದ್ದಾಗ ಎಷ್ಟೇ ಸಣ್ಣದಿರಲಿ, ಒಂದು ಅಲ್ಪಸಂಖ್ಯಾಕ ಪಂಗಡವು ತನ್ನ ಮಾನ ಮತ್ತು ಮಾನವನಿಗೆ ಪ್ರಿಯವೂ ಹಕ್ಕಿನದ್ದೂ ಎನಿಸಿದ ಇತರ ವಸ್ತುಗಳನ್ನುಳಿಸಿಕೊಳ್ಳಲು ಭಯಪಡಲು ಕಾರಣವಿಲ್ಲವೆಂಬುದನ್ನು ತಿಳಿಯಲು ಅವರಿಗೆ ಅಹಿಂಸೆಯಲ್ಲಿ ಶ್ರದ್ಧೆಯಿರಬೇಕೆಂಬ ನಿಯಮವಿಲ್ಲ. ಅಲ್ಪಸಂಖ್ಯಾಕ ಪಂಗಡದವನೊಬ್ಬನು ತನ್ನನ್ನೂ ತನ್ನ ಸೃಷ್ಟಿಕರ್ತನನ್ನೂ ತನ್ನಂತೆಯೇ ಆತನು ತನ್ನನ್ನು (ಮಾನವನನ್ನು) ನಿರ್ಮಿಸಿದ್ದಾನೆಂಬಷ್ಟು ತಿಳಿದುಕೊಂಡರೆ ತಾನಲ್ಲದೆ ಅವನ ಸ್ವಾಭಿಮಾನವನ್ನು ಜಗತ್ತಿನ ಯಾವ ಶಕ್ತಿಯೂ ಕಸಿದುಕೊಂಡು ಹೋಗಲಾರದು. ಟ್ರಾನ್ಸವಾಲಿನ ಬಲಿಷ್ಠ ಸರಕಾರದೊಡನೆ ನಾನು ಹೋರುತ್ತಿದ್ದಾಗ, ಜೋಹಾನ್ಸಬರ್ಗಿನ ಒಬ್ಬ ಪ್ರಮುಖ ಇಂಗ್ಲಿಷ್ ಗೆಳೆಯನು ತಾನು ಯಾವಾಗಲೂ ಅಲ್ಪಸಂಖ್ಯಾಕರಕಡೆಗೇ ಇರುವವನು ಎಂದು ನನ್ನ ಹತ್ತಿರ ಹೇಳಿದನು. ಏಕೆಂದು ಕೇಳಿದರೆ, ಅವರು ಎಂದೂ ತಪ್ಪುವುದಿಲ್ಲ, ಒಂದು ವೇಳೆ ತಪ್ಪು ಮಾಡಿದರೆ ಅದರಿಂದ ಅವರನ್ನು ಶೀಘ್ರ ಮತ್ತು ಅತಿ ಸುಲಭ ದಾರಿಗಿಡಬಹುದು, ಆದರೆ ಬಹುಸಂಖ್ಯಾಕರ ಬಗ್ಗೆ ಹಾಗಲ್ಲ. ಏಕೆಂದರೆ, ಅವರಿಗೆ ಅಧಿಕಾರ ಮದವಿರುತ್ತದೆ ಎಂದು ಉತ್ತರಿಸಿದ ಆ ಗೆಳೆಯನು ಒಂದು ಮಹಾ ಸತ್ಯವನ್ನು ಹೇಳಿದ್ದಾನೆ. ಬಹುಸಂಖ್ಯಾಕರೆಂದರೆ ಒಂದು ಜನಾಂಗ ಗುಂಪಿಗೆ ವಿಶೇಷತಃ ವಿನಾಶಕ ಆಯುಧಗಳನ್ನಿಟ್ಟುಕೊಂಡು ಸಮರ್ಥರಾಗಿರುವ ಹಕ್ಕು ಸಿಕ್ಕಿದಾಗ, ಇದನ್ನು ನಾವು ನಮ್ಮ ಕಟು ಅನುಭವದಿಂದ ತಿಳಿದಿದ್ದೇವೆ. ಒಂದು ಹಿಡಿಯಲ್ಲದಗುವಷ್ಟು ಆಂಗ್ಲರು ಬಹುಸಂಖ್ಯಾಕರೆನಿಸಿ ಕೋಟಿಗಟ್ಟಲೆ ಭಾರತೀಯರನ್ನು ತಮ್ಮ ಪಾದಾಕ್ರಾಂತರನ್ನಾಗಿ ಮಾಡಿಟ್ಟುಕೊಂಡರು ಹೇಗೆ? ಆಯುಧದ ಬಲದಿಂದ. ಆ ಆಯುಧಗಳು ಭಾರತೀಯರಿಗಿದ್ದಿಲ್ಲ, ಇದ್ದಿದ್ದರೂ ಅವುಗಳ ಬಳಕೆಯನ್ನವರು ಅರಿತಿದ್ದಿಲ್ಲ. ಆಂಗ್ಲರ ಅಧಿಕಾರ ನಮ್ಮ ದೇಶದಲ್ಲಿದ್ದಾಗ ಹಿಂದುಗಳಾಗಲಿ, ಮುಸಲ್ಮಾನರಾಗಲಿ ಈ ಪಾಠವನ್ನು ಕಲಿಯಲಿಲ್ಲವೆಂಬುದು ಅತ್ಯಂತ ಖೇದಕರವಾದುದು. ಒಕ್ಕೂಟದ ಮುಸಲ್ಮಾನರಿಂದು ಹಿಂದಿನಂತೆ ದಮನಕ್ಕೊಳಪಡದೆ ಮುಕ್ತರಾಗಿ ಬಾಳುತ್ತಿದ್ದಾರೆ. ಆದರೆ ಪಶ್ಚಿಮ ಮತ್ತು ಪೂರ್ವದಲ್ಲಿ ಮುಸ್ಲಿಮರಿಗೆ ಬಹುಸಂಖ್ಯಾಕತ್ವವಿದೆಯೆಂದು ಸುಳ್ಳು ಜಂಬ ಕೊಚ್ಚುತ್ತಿದ್ದಾರೆ. ಅವರು ಅಲ್ಪಸಂಖ್ಯಾಕರಾಗಿರುವುದರ ಗುಣವನ್ನು ತಿಳಿದರೆ ತಮ್ಮ ಜೀವಿತಗಳ ಮೂಲಕ ಅವರಿಗೆ ಇಸ್ಲಾಮಿನಲ್ಲಿರುವ ಅತ್ಯುತ್ತಮ ತತ್ವಗಳನ್ನು ಪ್ರಕಾಶಪಡಿಸಬಹುದೆಂಬುದನ್ನು ಅರಗಿಸಿಕೊಳ್ಳುತ್ತಾರೆ. ಪ್ರವಾದಿಯು ಮಕ್ಕಾದಲ್ಲಿ ಮುಂತಿಯಾಗಿದ್ದಾಗ ಇಸ್ಲಾಂ ತನ್ನಲ್ಲಿಯ ಅತ್ಯಂತ ಮಹತ್ವದ ತತ್ವಸಾರವನ್ನು ಜಗತ್ತಿಗೆ ನೀಡಿತೆಂಬುದನ್ನು ಅವರು ಬಲ್ಲರೆ? ಕಾನ್‌ಸ್ಟಂಟಾಯಿನ ಬಂದ ನಂತರ ಕ್ರೈಸ್ತ ಧರ್ಮದ ಅವನತಿ ಆರಂಭವಾಯಿತು. ಆದರೆ ಇಲ್ಲಿ ಈ ವಾದವನ್ನು ನಾನು ಮುಂದೊಯ್ಯಬಾರದು. ಅದರಲ್ಲಿಯೂ ಅಂತರ್ಗತ ಶ್ರದ್ಧೆಯ ಮೇರೆಯೇ ನನ್ನ ಬುದ್ಧಿವಾದ ನಿಂತಿದೆ. ಆದ ದರಿಂದ ನನ್ನ ಮುಸ್ಲಿಂ ಗೆಳೆಯರು ಈ ವಿಶ್ವಾಸದಲ್ಲಿ ಭಾಗಿಗಳಾಗದಿದ್ದಲ್ಲಿ ಅವರು ಈ ಬುದ್ಧಿವಾದವನ್ನು ಬಹುಶಃ ತ್ಯಜಿಸುವದೇ ಉತ್ತಮವೆನಿಸುವುದು.

ಕಾಂಗ್ರೆಸಿನವರಾಗಿರಿ

ನನ್ನ ಮತದ ಕೈ ಕಾಂಗ್ರೆಸಿಗೆ ಸೇರಲು ಸಿದ್ಧರಾಗಬೇಕು. ಆದರೆ ಸಂಪೂರ್ಣ ಸಮಾನ ಸ್ಪಂದತೆಯಿಂದ ತೆರೆದಿರುವ ಸ್ವಾಗತ ಸಿಕ್ಕುವವರೆಗೆ ಅವರು ಪ್ರವೇಶಕ್ಕಾಗಿ ಅರ್ಜಿ ಹಾಕುವದನ್ನು ತಡೆಹಿಡಿಯಬೇಕು. ತತ್ವದಲ್ಲಾದರೂ ಕಾಂಗ್ರೆಸಿಗೆ ಅಲ್ಪಸಂಖ್ಯಾಕ ಜನಾಂಗಗಳೆಂಬುದಿಲ್ಲ. ಅದಕ್ಕೆ ಧರ್ಮವಿಲ್ಲ — ಇರುವುದು ಒಂದೇ ಮಾನವ ಧರ್ಮವೊಂದೇ. ಕಾಂಗ್ರೆಸಿಗೆ ಪ್ರತಿಯೊಬ್ಬ ಗಂಡಸು ಇಲ್ಲವೆ ಹೆಂಗಸು ಉಳಿದ ಯಾವ ಗಂಡಸು ಇಲ್ಲವೆ ಹೆಂಗಸಿಗೂ ಕಡಿಮೆಯಾಗಿ ಕಾಣಲಿಲ್ಲ. ಅದು ಶುದ್ಧ ಧರ್ಮೇತರ ರಾಜಕೀಯ ರಾಷ್ಟ್ರೀಯ ಸಂಘಟಕ. ಅದರಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಪಾರಸಿ ಯೆಹೂದಿ ಎಲ್ಲರೂ ಸಮಾನರು. ಏಕೆಂದರೆ, ಕಾಂಗ್ರೆಸ್ಸು ಅನೇಕ ವೇಳೆ ತನ್ನ ತತ್ವದಂತೆ ನಡೆದುಕೊಳ್ಳುವಲ್ಲಿ ಸಮರ್ಥವಾಗಿಲ್ಲ! ಅದರಿಂದ ಅನೇಕ ಮುಸ್ಲಿಮರಿಗೆ ಅದೊಂದು ಸವರ್ಣ ಹಿಂದುಗಳ ಘಟಕವೆಂದು ತೋರುವಂತಾಯಿತು.

ಹೇಗೆ ಆಗಲಿ ಬಿಗುವಿರುವವರೆಗೆ ಮುಸ್ಲಿಮರು ಗಂಭೀರವಾಗಿ ದೂರವಿರುವುದು ಉತ್ತಮ. ಅವರ ಸೇವೆ ಕಾಂಗ್ರೆಸಿಗೆ ಬೇಕಾದಾಗ ಅವರು ಕಾಂಗ್ರೆಸ್ಸಿನಲ್ಲಿ ಪ್ರತಿಷ್ಠಿತರಾಗುವರು. ಈ ನಡುವೆ ನನ್ನಂತೆಯೇ ಅವರು ಕಾಂಗ್ರೆಸ್ಸಿನವರಾಗಬೇಕು. [illegible] ಸದಸ್ಯನೂ ಅಲ್ಲದೆ ನನಗೆ ವರ್ಚಸ್ಸಿರಲು ಕಾರಣವೇನೆಂದರೆ, ೧೯೧೫ರಲ್ಲಿ ದಕ್ಷಿಣ ಆಫ್ರಿಕದಿಂದ ಬಂದಾಗಿನಿಂದ ನಾನು ಪ್ರಾಮಾಣಿಕವಾಗಿ ಅದಕ್ಕೆ ಸೇವೆ ಸಲ್ಲಿಸಿರುವುದೇ ಆಗಿದೆ. ಈಗಿನಿಂದಲೇ ಪ್ರತಿಯೊಬ್ಬ ಮುಸ್ಲಿಮನೂ ಹಾಗೆ ಮಾಡಬಲ್ಲನು, ಆಗ ನನ್ನ ಸೇವೆಯಷ್ಟೇ ತನ್ನ ಸೇವೆಗೂ ಬೆಲೆ [illegible] ಎಂಬುದನ್ನು ಅವನು ಅರಿತುಕೊಳ್ಳುವನು. ಇಂದು ಪ್ರತಿಯೊಬ್ಬ ಮುಸ್ಲಿಮನೂ ಲೀಗಿನವನೆಂದು ತಿಳಿದುಕೊಳ್ಳಲಾಗಿದೆ. ಆದುದರಿಂದ ಅವನು ಕಾಂಗ್ರೆಸಿನ ಶತ್ರುವೆಂದು ಅರ್ಥ. ಲೀಗಿನ ಉಪದೇಶ, ದುರದೃಷ್ಟವಶಾತ್ ಅಂಥದ್ದಾಗಿದೆ. ಈಗ ಶತ್ರುತ್ವಕ್ಕೆ ಸ್ವಲ್ಪವೂ ಕಾರಣವಿಲ್ಲ. [illegible] ನಿಯಮ ವಿಷದ್ವಂದ್ವ ನಿಕ್ಷಿಪ್ತವೆಂದಲು [illegible] ತಿಗಳು ಒಡಲೆ ಕವಿದೆ. ಈ ನಾಡಿನ ದುರ್ಭಾಗ್ಯವಶದಿಂದ ಹಿಂದು ಮತ್ತು ಸಿಖರು ವಿಷವನ್ನಮೃತವೆಂದು ತಿಳಿದು ಭಾರತದ ಮುಸ್ಲಿಮರ ಶತ್ರುಗಳಾಗಿ, ನಿರ್ಲಜ್ಜತೆಯಿಂದ ಪ್ರತೀಕಾರವೆಸಗಿ ಪಾಕಿಸ್ತಾನದ ಮುಸ್ಲಿಮರಿಗೂ ಹಗೆಗಳೆನಿಸಿಬಿಟ್ಟಿರು. ಆದುದರಿಂದ ವಿಷಮ ವಾತಾವರಣವನ್ನು ಮೀರಿ ನಿಲ್ಲಬೇಕೆಂದು ನಾನು ಮುಸ್ಲಿಂ ಅಲ್ಪಸಂಖ್ಯಾಕರಿಗೆ ಆಗ್ರಹಪೂರ್ವಕ ಬಿನ್ನವಿಸಿಕೊಳ್ಳುತ್ತೇನೆ. ಮಾನಸಿಕವಾದ ಹಿಡಿತಾಯವಿಲ್ಲದೆ ತಾವು ಒಕ್ಕೂಟದ ಸಂಪೂರ್ಣ ನಾಗರಿಕರೆಂದು ತಮ್ಮ ಆದರ್ಶ ನಡತೆಯಿಂದ ತೋರಿ, ಹುಚ್ಚು ಪೂರ್ವಗ್ರಹಗಳನ್ನು ಬಿಟ್ಟು ಬಿಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಅದೊಂದೇ ಮಾನ್ಯ ಮಾರ್ಗ. ಹಿಂದೂ ಮಹಾ ಸಭೆ, ಸಿಖ್ಖ ಸಭೆ ಇಲ್ಲದೆ ಪಾರಸಿ ಸಭೆ ಹೇಗೋ ಹಾಗೆ, ಈ ಕಾರಣದಿಂದ, ಲೀಗೊಂದು ರಾಜಕೀಯ ಸಂಘವಾಗಿ ಉಳಿಯಲಾರದು. ಧಾರ್ಮಿಕ ಅಂತಃಸುಧಾರಣೆಗಳನ್ನು, ತಮ್ಮ ಧರ್ಮಗಳಲ್ಲಿಯ ಅತ್ಯುತ್ತಮಾಂಶಗಳನ್ನು ಸಂಶೋಧಿಸಲು, ಅತ್ಯುತ್ತಮಾಂಶಗಳನ್ನು ಅರಗಿಸಿಕೊಳ್ಳಲು ಅವು ಧಾರ್ಮಿಕ ಸಂಸ್ಥೆಗಳಾಗಿ ಕೆಲಸ ಮಾಡಬಹುದು. ಆಗ ಅವರು ವಾತಾವರಣದ ವಿಷವನ್ನು ತೊಳೆದು ತೆಗೆದು ಶುದ್ಧಪಡಿಸುವರಲ್ಲದೆ ಸತ್ಕಾರ್ಯದಲ್ಲಿ ಒಬ್ಬರನ್ನೊಬ್ಬರ ಸ್ಪರ್ಧಿಸುತ್ತಾರೆ. ಅವರು ಪರಸ್ಪರ ಗೆಳೆಯರಾಗಿ ತನ್ಮೂಲಕ ಸರಕಾರಕ್ಕೆ ನೆರವಾಗುವರು. ಅವರು ಅದರಲ್ಲಿರಲಿ, ಇಲ್ಲದಿರಲಿ — ಅವರ ರಾಜಕೀಯ ಮಹತ್ವಾಕಾಂಕ್ಷೆಗಳು ಕಾಂಗ್ರೆಸ್ಸಿನ ಮೂಲಕವೇ ಸಾಧಿಸಲು ಸಾಧ್ಯ. ತನ್ನಲ್ಲಿದ್ದವರಷ್ಟು ಜನರನ್ನೇ ದೃಷ್ಟಿಯಲ್ಲಿಟ್ಟು ಕೊಂಡರೆ ಕಾಂಗ್ರೆಸ್ಸೊಂದು ಪ್ರಜಾತಂತ್ರದಲ್ಲಿ ಕೈಹಾಕಿದ ಸ್ವಾರ್ಥ ಸಾಧಕರ ಸಭೆಯೆನಿಸೀತು. ಈಗಲಾದರೂ ಅಂಥವರು ಅದರಲ್ಲಿ ಬಹುಸ್ವಲ್ಪ ಜನರಿದ್ದಾರೆ. ಇಲ್ಲಿಯ ವರೆಗೆ ಅದಕ್ಕೆ ಅಪ್ರತಿಹತ ಸ್ಥಾನವಿತ್ತು. ಈಗ ಇದೆ. ಏಕೆಂದರೆ, ನಿರಪವಾದವಾಗಿ ಅದು ಇಡಿಯ ಹಿಂದುಸ್ಥಾನವನ್ನು ಪ್ರತಿನಿಧಿಸಲು ಪ್ರಯತ್ನಿಸುತ್ತದೆ. ಈ ತುತ್ತ ತುದಿಯವರೆಗೂ ಅದು ಸೇವೆ ಮಾಡುವ ಗುರಿಯುಳ್ಳದಾಗಿದೆ.

ಬಿರ್ಲಾಭವನ ಹೊಸದಿಲ್ಲಿ ತಾ ೨೩-೧-೪೮

— ಕರ್ಮವೀರ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ. ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨[illegible]
೪ರಿಂದ ೫ ತಿಂಗಳು	,,	,,	೨[illegible]
೬ರಿಂದ ೯ ತಿಂಗಳು	,,	,,	೨[illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

Houses For Sale at Udipi

Udipi Municipality-Kadabettu Ward, Survey No, 127 Sub Division Nos 5, 6 A and 6 B about an acre in extent containing houses 4582, 4583, 4590 and 4591 Perennial supply of water in the three wells —

If desired (a) entire vacant possession will be given (b) Up to date repairs to suit the convenience of the purchaser will be effected for all the houses and all the wells for which ample supply of cement has been obtained on permit.

Write to— U. N Krishna Rao,
Betty Garden,
P O Kankanady

ಸ್ವದೇಶಾಭಿಮಾನಿ

ತಾರೀಕು 23-1-1948

ಕರ್ನಾಟಕ ಪ್ರಾಂತ್ಯ ಸ್ಥಾಪನೆಗೆ ಗಾಂಧೀಜಿಯವರ ಬೆಂಬಲ

ಕರ್ನಾಟಕದ ವೃದ್ಧ ಮುಂದಾಳು ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಮಹಾತ್ಮಾ ಗಾಂಧಿಯವರಿಗೆ ಇಲ್ಲಿಯ ಏಕೀಕರಣ ಚಳವಳದ ವಿಚಾರ ತಿಳಿಸಿ ಪಂಡಿತ ಜವಾಹರಲಾಲರು ಕರ್ನಾಟಕ ಪ್ರಾಂತ್ಯರಚನೆ ಮುಂದೆ ಹಾಕಬೇಕಾಗುತ್ತದೆಂದು ಮಾಡಿದ ಹೇಳಿಕೆ ಸರಿಯಾಗಲಿಲ್ಲವೆಂದು ಬರೆದದ್ದಕ್ಕೆ ಇದರ ನಿಜವಾದ ಅರ್ಥವೇನೆಂದರೆ ಕರ್ನಾಟಕ ಪ್ರಾಂತ್ಯ ರಚನೆಯು ಕುರಿತು ಇರುವ ಸಮಸ್ಯೆಗಳನ್ನು ಕನ್ನಡಿಗರೇ ಬಿಡಿಸಿ ಪ್ರಾಂತ್ಯ ಸ್ಥಾಪನೆಯು ಸುಗಮವಾಗುವಂತೆ ಸಾಧಿಸಿದರೆ ಕೇಂದ್ರ ಸರಕಾರವು ಇದಕ್ಕೆ ಒಪ್ಪಿಗೆ ಕೊಡುವುದಕ್ಕೆ ಆಕ್ಷೇಪವಿಲ್ಲವೆಂಬುದಿಷ್ಟೇ ಇದೆಯೆಂದು ಮಹಾತ್ಮಾಜಿಯವರು ಹೇಳಿರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ.

ಭಾಷಾವಾರು ಪ್ರಾಂತ್ಯ ರಚನೆಯನ್ನು ಮುಂದೆ ಹಾಕದೆ ಆದಷ್ಟು ತ್ವರ್ಯದಲ್ಲಿ ಸಾಧಿಸಬೇಕೆಂದು ಗಾಂಧೀಜಿಯವರು ಹೇಳಿದ್ದು ಇದೇ ಮೊದಲ ಬಾರಿ ಅಲ್ಲ ಇತ್ತೀಚೆಗೆ ಇದೇ ಅಭಿಪ್ರಾಯವನ್ನೇ ಅವರು ಹಲವು ಬಾರಿ ಹೇಳಿ ಅದರ ಜೊತೆಯಲ್ಲಿ ಇದು ವ್ಯವಹಾರ್ಯವಾಗುವಂತೆ ಆಯಾ ಪ್ರಾಂತ್ಯದವರು ಸೌಹಾರ್ದತೆಯಿಂದ ಸಾಧಿಸತಕ್ಕದ್ದೆಂಬುದನ್ನು ಹೇಳಿರುವರು. ಗಾಂಧೀಜಿಯವರ ಈ ಅಭಿಪ್ರಾಯಗಳ ಕಡೆಗೆ ನಮ್ಮ ಕರ್ನಾಟಕ ಏಕೀಕರಣದ ಮುಂದಾಳುಗಳು ಸಾಕಷ್ಟು ಲಕ್ಷ್ಯ ಕೊಡಲಿಲ್ಲ. ಏಕೀಕರಣ ಪರಿಷತ್ತಿನ ಅಧಿವೇಶನದಲ್ಲಿ ಏಕೀಕರಣದ ಕುರಿತು ಬರುವ ಪ್ರಶ್ನೆಗಳ ವಿಚಾರ ಮಾಡುವ ಗೊಡವೆಗೇ ಇವರು ಹೋಗಲಿಲ್ಲ. ಆದಷ್ಟು ತ್ವರ್ಯದಲ್ಲಿ ಪ್ರಾಂತ್ಯರಚನೆ ಆಗಬೇಕೆಂದು ಗಾಂಧೀಜಿಯವರೂ ಹೇಳುತ್ತಾರೆ ಎಂದು ಮಾತ್ರ ಹೇಳಿದರೆ ಸಾಕೆ? ಅದಕ್ಕಾಗಿ ಏನು ಮಾಡಬೇಕೆಂದು ಅವರು ಹೇಳುತ್ತಾರೊ ಆ ಮಾತುಗಳನ್ನು ಬಿಟ್ಟುಬಿಟ್ಟರೆ ಗಾಂಧೀಜಿಯವರ ಬೆಂಬಲವೂ ತಮಗಿದೆ ಎಂಬ ಮಾತಿಗೆ ಹೆಚ್ಚು ಅರ್ಥ ಉಳಿಯುವುದಿಲ್ಲ.

ಭಾಷಾವಾರು ಪ್ರಾಂತ್ಯರಚನೆ ಆದಷ್ಟು ತ್ವರ್ಯದಲ್ಲಿ ಸಾಧಿಸಲ್ಪಡಬೇಕೆಂಬ ಬಗ್ಗೆ ನಿಜವಾಗಿ ಭಿನ್ನಾಭಿಪ್ರಾಯವೇ ಇರುವುದಿಲ್ಲ. 1921ರಿಂದ ಕಾಂಗ್ರೆಸು ಈ ತತ್ವವನ್ನು ಒಪ್ಪಿ ತನ್ನ ಘಟನೆಯಲ್ಲಿ ಇದನ್ನು ಜಾರಿಗೆ ತಂದಿರುತ್ತದೆಂದ ಬಳಿಕ ಕಾಂಗ್ರೆಸಿಗರ್ಯಾರೂ ಇದನ್ನು ಅಲ್ಲಗಳೆಯುವಂತಿಲ್ಲ. ಹೀಗಿರುವಾಗ ಪಂಡಿತ ಜವಾಹರಲಾಲರಾದರೂ ಕರ್ನಾಟಕ ಏಕೀಕರಣವು ಆದಷ್ಟು ತ್ವರ್ಯದಲ್ಲಿ ಆಗಬೇಕೆಂಬುದಕ್ಕೆ ಯಾಕೆ ಆಕ್ಷೇಪ ಹೇಳಿಯಾರು? ತತ್ವವು ಸರ್ವಮಾನ್ಯವಿದ್ದರೂ ಇದನ್ನು ಜಾರಿಗೆ ತರುವುದು ವ್ಯವಹಾರದ ಪ್ರಶ್ನೆಯೆಷ್ಟೆ?

ಕರ್ನಾಟಕ ಪ್ರಾಂತ್ಯ ಸ್ಥಾಪನೆ ಕೂಡಲೇ ಸಾಧಿಸಲ್ಪಡುವಂತೆ ಅದು ವ್ಯವಹಾರ್ಯವಾಗುವಂತೆ ನಿಜವಾಗಿ ಸಾಧಿಸಬೇಕಾದುದು ಕನ್ನಡಿಗರು. ಗುಲಾಮಗಿರಿಯಲ್ಲಿ ಬೆಳೆದು, ಪರರ ಮೋರೆ ನೋಡಿಯೇ ಅಭ್ಯಾಸವಿದ್ದ ನಮಗೆ ಇದು ಥಟ್ಟನೆ ಸ್ಪಷ್ಟವಾಗುವುದಿಲ್ಲ. ಇತರರು ಇದನ್ನು ಸಾಧಿಸಿ ಕೊಡಬೇಕೆಂದೇ ನಮಗನ್ನಿಸುತ್ತದೆ. ಅವರು ಮಾಡುವುದಿಲ್ಲವಾದರೆ ನಾವು ತಾಳ್ಮೆಗೆಟ್ಟು ಕ್ರೋಧಕ್ಕೆ ವಶರಾಗಿ ಅವರನ್ನು ದೂರಲು ಹೊರಡುತ್ತೇವೆ. ಇದು ಬ್ರಿಟಿಷ ಸರಕಾರವನ್ನು ದೂರುತ್ತ ಬಂದ ಅಭ್ಯಾಸ ಮಾತ್ರ. ಈಗ ನಾವು ಸ್ವತಂತ್ರ ಹಿಂದು ಸ್ಥಾನದಲ್ಲಿದ್ದೇವೆ. ಕೇಂದ್ರದಲ್ಲಿರುವ ಸರಕಾರ ನಮ್ಮದು. ನಮಗೆ ಬೇಕಾದುದನ್ನು ನಾವೇ ಸಾಧಿಸುವವರು ಎಂಬಿತ್ಯಾದಿಯನ್ನು ನಾವು ಸ್ಮರಣೆಗೆ ತಂದುಕೊಳ್ಳುವುದು ಅಗತ್ಯ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಕೂಡಾ ಕರ್ನಾಟಕ ಪ್ರಾಂತ್ಯ ರಚನೆಯನ್ನು ಕೂಡಲೆ ಜಾರಿಗೆ ತರದಿದ್ದರೆ ನಮ್ಮ ಶಾಸನ ಸಭೆಗಳ ಪ್ರತಿನಿಧಿಗಳಿಗೆ ರಾಜಿಕೊಡುವಂತೆ ಹೇಳಬೇಕಾಗುತ್ತದೆಂಬ ಎಚ್ಚರಿಕೆ ಕೊಡಲು ನಿರ್ಣಯಿಸಿತೆಂದು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಇದು ನಿಜವಿದ್ದರೆ ಇಂಥ ನಿರ್ಣಯವು ನಿಜವಾಗಿಯೂ ಶೋಚನೀಯ ಪರಿಸ್ಥಿತಿಯನ್ನೇ ಸೂಚಿಸುತ್ತದೆಯೆಂದು ನಾವು ಹೇಳದೆ ನಿವೃತ್ತಿ ಇಲ್ಲ.

ಈ ರೀತಿ ಕೇಂದ್ರ ಸರಕಾರದೊಡನೆ ಜಗಳ ಕಟ್ಟಿಕೊಳ್ಳುವ ಧೋರಣೆಯಿಂದ ಯಾವ ಫಲವೂ ಇಲ್ಲ. ಇದಕ್ಕೆ ಬದಲು ಕರ್ನಾಟಕದ ಮುಂದಾಳುಗಳು ಏಕೀಕರಣಕ್ಕೆ ಸಂಬಂಧಪಟ್ಟ ಹಲವು ಪ್ರಶ್ನೆಗಳ ಇತ್ಯರ್ಥಕ್ಕೆ ಮಹಾತ್ಮಾ ಗಾಂಧೀಜಿಯವರು ಸೂಚಿಸುವಂತೆ ಕೂಡಲೆ ಗಮನ ಕೊಟ್ಟರೆ ಪ್ರಾಂತ್ಯರಚನೆಯನ್ನು ಅನತಿ ದೂರದಲ್ಲಿಯೇ ಸಾಧಿಸಬಹುದು.

ನಾವು ಈಗ ಮುಖ್ಯವಾಗಿ ವಿಚಾರಿಸಿ ತೀರ್ಮಾನಕ್ಕೆ ಬರಬೇಕಾದ ಪ್ರಶ್ನೆಗಳನ್ನು ಇಲ್ಲಿ ದಿಗ್ದರ್ಶನ ಮಾಡುವುದು ಅಗತ್ಯ. ಸಂಸ್ಥಾನಗಳ ಪ್ರಶ್ನೆಯನ್ನು ಈಗಲೇ ತೀರ್ಮಾನಿಸಬೇಕೆ? ಅಥವಾ ಹಿಂದೀ ಸರಕಾರಕ್ಕೆ ಸೇರಿದ ಜಿಲ್ಲೆಗಳನ್ನು ಮಾತ್ರ ಸೇರಿಸಿ ಪ್ರಾಂತ್ಯ ಮಾಡಿದರೆ ಸಾಕೊ ಎಂಬುದು ಮೊದಲ ಪ್ರಶ್ನೆ, ಇದಕ್ಕೆ ಏಕೀಕರಣ ಪರಿಷತ್ತಿನವರು ನಿಶ್ಚಯವಾದ ಉತ್ತರ ಕೊಡಬೇಕು. ಕೊಡಗು ಈ ಪ್ರಾಂತ್ಯಕ್ಕೆ ಸೇರುವಂತೆ ಕೊಡಗರ ಸಮ್ಮತಿ ಪಡೆಯಬೇಕು. ಇತರ ಭಾಷೆಯ ಪ್ರಾಂತ್ಯಗಳ ಮುಂದಾಳುಗಳೊಡನೆ ಮಾತುಕತೆ ನಡೆಸಿ ಗಡಿಗಳ ತೀರ್ಮಾನಕ್ಕೆ ಬರಬೇಕು. ಸಂಸ್ಥಾನಗಳನ್ನು ಈಗಲೇ ಸೇರಿಸಿಕೊಂಡು ಮುಂದರಿಯಬೇಕೆಂದರೆ ಆಯಾ ಸಂಸ್ಥಾನದವರೊಡನೆ ಅವಶ್ಯವುಳ್ಳ ಸಂಧಾನ ನಡೆಸಬೇಕು. ಮುಖ್ಯವಾಗಿ ಮೈಸೂರನ್ನು ಸೇರಿಸಿಕೊಳ್ಳಲು ಯಾವ ವಿಧದಲ್ಲಿ ಸಾಧ್ಯವಿದೆಯೆಂಬುದನ್ನು ನೋಡಬೇಕು. ಇದನ್ನೆಲ್ಲ ಪ್ರಯತ್ನಿಸಿ ನಿಶ್ಚಿತ ಯೋಜನೆಯನ್ನು ಸಿದ್ಧಗೊಳಿಸಿ ಇದಕ್ಕೆ ಸಂಬಂಧಪಟ್ಟವರ ಸಮ್ಮತಿ ಪಡೆದು ಕೇಂದ್ರ ಸರಕಾರದ ಬಳಿಗೆ ಹೋದರೆ ಅವರಾದರೂ ಯಾವ ಆಕ್ಷೇಪವನ್ನು ಹೇಳದೆ ನಮ್ಮ ತೀರ್ಮಾನಗಳನ್ನು ಮನ್ನಿಸಲೇಬೇಕಾಗುತ್ತದೆ. ಮಾತ್ರವಲ್ಲ ಖಂಡಿತವಾಗಿಯೂ ಮನ್ನಿಸುವರೆಂಬ ಬಗ್ಗೆ ಯಾವ ಸಂಶಯವೂ ಬೇಡ.

ಆಂಧ್ರ ಪ್ರಾಂತ್ಯರಚನೆ ಇದೇ 1948ನೇ ಎಪ್ರಿಲ್ ತಾ. 1ರಲ್ಲಿ ಜಾರಿಗೆ ಬರುತ್ತದೆಂದು ಶ್ರೀ ಪ್ರಕಾಶಮರು ಪ್ರಕಟಿಸಿರುತ್ತಾರೆ. ಕರ್ನಾಟಕದ ಮುಂದಾಳುಗಳು ಈಗಲಾದರೂ ಈ ಪ್ರಶ್ನೆಗಳ ತೀರ್ಮಾನ ಸಾಧಿಸಿದರೆ ನಮ್ಮ ಪ್ರಾಂತ್ಯವನ್ನು ಅದೇ ಸಮಯ ಸ್ಥಾಪಿಸಲು ಯಾವ ತೊಂದರೆಯೂ ಇಲ್ಲದೆ ಸಾಧ್ಯವಾಗುವುದು. ನಮ್ಮ ಮುಂದಿರುವ ಕಾರ್ಯ ಸಾಧಿಸಬಲ್ಲ ಮುಂದಾಳುಗಳು ಕರ್ನಾಟಕಕ್ಕೆ ಇದ್ದಾರೆಯೆ? ಎಂಬುದೇ ಮುಖ್ಯ ಪ್ರಶ್ನೆ. ಮುಂದಾಳುಗಳೆನ್ನಿಸುವ ನಮ್ಮವರು ವ್ಯರ್ಥ ಚಳವಳದಲ್ಲಿ ಕಾಲಕಳೆಯುತ್ತಿರುವುದನ್ನು ನೋಡುವಾಗ ನಮ್ಮ ಕಾರ್ಯವು ಕ್ಷಿಪ್ರದಲ್ಲಿ ಕೈಗೂಡುವ ಲಕ್ಷಣಗಳು ಕಾಣುವುದಿಲ್ಲವೆಂದು ನಾವು ಬೇಸರದಿಂದ ಹೇಳಬೇಕಾಗಿದೆ. ನಮ್ಮ ಮುಂದಾಳುಗಳು ಇನ್ನಾದರೂ ಮಹಾತ್ಮಾ ಗಾಂಧೀಜಿಯವರು ಹೇಳಿದ ಮಾತುಗಳ ಕಡೆಗೆ ಗಮನ ಕೊಡುವಂತ್ಯಾಗಲೆಂದು ನಾವು ಹಾರೈಸುತ್ತೇವೆ.

ಟೀಕೆ-ಟಿಪ್ಪಣಿಗಳು

ದೇಶದ ವಿದ್ಯಾಭ್ಯಾಸದ ಪ್ರಶ್ನೆ

ಶಾಲೆಗೆ ಹೋಗತಕ್ಕ ಪ್ರಾಯದ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸ ಕೊಡಬೇಕಾದರೆ ಒಂಭತ್ತು ಲಕ್ಷ ಮಂದಿ ಉಪಾಧ್ಯಾಯರು ಬೇಕಾಗುವರೆಂದು ಕೇಂದ್ರ ಸರಕಾರದ ವಿದ್ಯಾ ಖಾತೆಯ ಮಂತ್ರಿ ಮೌಲಾನಾ ಅಬುಲ್ ಕಲಮ್ ಅಜಾದರು ಹೇಳಿರುವರು. ಇಷ್ಟೊಂದು ಮಂದಿ ಉಪಾಧ್ಯಾಯರನ್ನು ಎಲ್ಲಿಂದ ತರಬೇಕು? ಮೆಟ್ರಿಕ್ಯುಲೇಶನ್ ಸರ್ಟಿಫಿಕೇಟು ಕೊಡುವಾಗ ಇಂಥವರು ಒಂದು ವರ್ಷ ಮತ್ತು ಬಿ. ಎ. ಇತ್ಯಾದಿ ಸರ್ಟಿಫಿಕೇಟು ಪಡೆಯಲಿರುವವರು ಎರಡು ವರ್ಷ ಉಪಾಧ್ಯಾಯರಾಗಿ ದುಡಿಯುವುದನ್ನು ಕಡ್ಡಾಯವಾಗಿ ಮಾಡಬಹುದೆಂಬ ಒಂದು ಸೂಚನೆಯೂ ಮುಂದೆ ಬಂದಿರುತ್ತವೆ. ಇವರಿಗೆ ಉಪಾಧ್ಯಾಯ ವೃತ್ತಿ ನಡೆಸಲು ಸ್ವಲ್ಪ ಮಟ್ಟಿನ ಶಿಕ್ಷಣ ಕೊಡುವ ಆವಶ್ಯಕತೆಯನ್ನೂ ಕೆಲವರು ಎತ್ತಿ ಹೇಳಿರುತ್ತಾರೆ. ಒಂದು ತಾತ್ಕಾಲಿಕ ಪ್ರಯೋಗವನ್ನಾಗಿಯಾದರೂ ಇದನ್ನು ಆಚರಿಸಿ ನೋಡಬಹುದೆಂದು ಹೇಳಲಾಗುತ್ತಿದೆ.

ಉಪಾಧ್ಯಾಯರು ಮಾತ್ರವಲ್ಲ ವಿದ್ಯಾಭ್ಯಾಸಕ್ಕೆ ಬೇಕಾದ ಇತರ ಸಲಕರಣೆಗಳನ್ನು ಒದಗಿಸುವುದಾದರೂ ಸುಲಭ ಸಾಧ್ಯವಲ್ಲ. ಇದಕ್ಕೆಲ್ಲ ಬೇಕಾಗುವ ಹಣವನ್ನೆಲ್ಲಿಂದ ತರಬೇಕೆಂಬುದೂ ಮಹತ್ವದ ಪ್ರಶ್ನೆ ಇರುತ್ತದೆ.

ಇದರ ಜೊತೆಯಲ್ಲಿ ಪ್ರಾಯಸ್ಥರ ಶಿಕ್ಷಣದ ಪ್ರಶ್ನೆಯೂ ತುಂಬಾ ಪ್ರಾಮುಖ್ಯತೆಯುಳ್ಳ ಪ್ರಶ್ನೆ ಇರುತ್ತದೆಂಬ ಬಗ್ಗೆ ಸಂಶಯವಿಲ್ಲ. ಎಷ್ಟು ತೊಂದರೆಗಳಿದ್ದರೂ ಈ ವಿದ್ಯಾಭ್ಯಾಸದ ಪ್ರಶ್ನೆಯನ್ನು ಬಾಕಿ ಇಡಲು ಸಾಧ್ಯವಿಲ್ಲವೆಂದು ಶ್ರೀ ಅಜಾದರು ಹೇಳುತ್ತಾರೆ.

ಜನರನ್ನು ವಿದ್ಯಾವಂತರನ್ನಾಗಿ ಮಾಡದೆ ಪ್ರಜಾಸತ್ತಾತ್ಮಕ ರಾಜ್ಯಭಾರವಾದರೂ ಹೇಗೆ ಸುಗಮವಾದೀತು? ಆದರೂ ವಿದ್ಯಾಭ್ಯಾಸವೆಂದರೆ ಕೇವಲ ಅಕ್ಷರಾಭ್ಯಾಸವೆಂಬ ತಪ್ಪು ತಿಳುವಳಿಕೆ ಕಟ್ಟಿಕೊಳ್ಳಬಾರದೆಂದು ಮಾತ್ರ ಕುರಿತು ನಾವು ಸೂಚಿಸಬೇಕಾಗಿದೆ.

ಭದ್ರತಾ ಸಮಿತಿಯಲ್ಲಿ ಹಿಂದೀ ಸರಕಾರದ ದೂರು

ಕಾಶ್ಮೀರದಲ್ಲಿ ಪಾಕಿಸ್ಥಾನ ಸರಕಾರವು ಮಾಡುವ ಅನ್ಯಾಯದ ಕುರಿತು ಹಿಂದೀ ಸರಕಾರವು ಸಂಯುಕ್ತ ರಾಷ್ಟ್ರಗಳ ಸಂಘದ ಭದ್ರತಾ ಸಮಿತಿಗೆ ದೂರು ಕೊಟ್ಟಿತ್ತಷ್ಟೆ. ಈ ಕುರಿತು ವಿವರಿಸಲು ಹಿಂದೀ ಸರಕಾರದ ಕಡೆಯಿಂದ ಕೇಂದ್ರ ಸರಕಾರದ ಮಂತ್ರಿಗಳಾದ ಹಿಂದೆ ಕಾಶ್ಮೀರ ದಿವಾನ ಪದವಿಯಲ್ಲಿದ್ದ ಮಾನ್ಯ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಲೇಕ್ ಸಕ್ಸೆಸ್ಸಿಗೆ ಹೋಗಿರುವರು. ಕಾಶ್ಮೀರದ ಪ್ರಜಾ ಮುಂದಾಳು ಶೇಕ್ ಅಬ್ದುಲ್ಲಾರವರೂ ಹೋಗಿರುವರು. ಪಾಕಿಸ್ಥಾನದ ಪರವಾಗಿ ವಾದಿಸಲು ಸರ್ ಜಫರುಲ್ಲಾ ಖಾನರು ತೆರಳಿರುವರು. ಆಜಾದ್ ಪಾಕಿಸ್ಥಾನ ಸರಕಾರದ ಅಂದರೆ ದಂಗೆಗಾರರ ಮುಂದಾಳುವೊಬ್ಬರೂ ಹೋಗಿದ್ದಾರೆ. ಅಲ್ಲಿ ಇತ್ತಂಡದ ಹೇಳಿಕೆಗಳೂ ಆದವು. ಬ್ರಿಟಿಷ ಸರಕಾರದ ಪ್ರತಿನಿಧಿಯೂ ಬಂದಿದ್ದರು. ಕೊನೆಗೆ ಇವರ ಸೂಚನೆಯಂತೆ ಇತ್ತಂಡದವರೂ ಭದ್ರತಾ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತಮ್ಮೊಳಗೆ ಪಂಚಾಯತಿ ನಡೆಸುವ ಪ್ರಯತ್ನವೂ ಜರಗಿತು. ಇದರ ವರದಿಯನ್ನು ಭದ್ರತಾ ಸಮಿತಿ ವಿಚಾರಿಸಲಿಕ್ಕಿದೆ. ಭದ್ರತಾ ಸಮಿತಿಯವರು ಒಂದು ಸೌಹಾರ್ದ ಸಮಿತಿಯವರನ್ನು ಇತ್ತಂಡದ ಒಪ್ಪಿಗೆ ಪಡೆದು ಇಲ್ಲಿಗೆ ಕಳುಹಿಸುವ ಸಂಭವವಿದೆಯೆಂದು ಹೇಳಲಾಗುತ್ತಿದೆ. ಮುಂದೇನಾಗುವುದೊ ನೋಡಲಿಕ್ಕಿದೆ. ಅಂತೂ ಈ ಪ್ರಶ್ನೆ ಯುದ್ಧವಿಲ್ಲದೆ ನ್ಯಾಯ ತಪ್ಪದೆ ನಡೆಯುವಂತಾಗಲೆಂದು ಎಲ್ಲರೂ ಆಶಿಸಬೇಕಾಗಿದೆ.

ಪಾಕಿಸ್ಥಾನಕ್ಕೆ 55 ಕೋಟಿ ರೂಪಾಯಿ ಕೊಟ್ಟರು

ಪಾಕಿಸ್ಥಾನ ಮತ್ತು ಹಿಂದೀ ಸರಕಾರಗಳೊಳಗೆ ಆರ್ಥಿಕ ವಿಚಾರದ ಮಾತುಕತೆಗಳು ನಡೆದು ಕಳೆದ ಅಗೋಸ್ತು ತಾ.15ರಲ್ಲಿ ಭಾರತ ಸರಕಾರದೊಡನಿದ್ದ ನಗದಿ ಶಿಲ್ಕಿನಲ್ಲಿ 55 ಕೋಟಿ ರೂಪಾಯಿ ಪಾಕಿಸ್ಥಾನದ ಪಾಲೆಂದು ತೀರ್ಮಾನವಾಗಿತ್ತು. ಆದರೆ ಎರಡು ಸರಕಾರಗಳೊಳಗಿದ್ದ ಎಲ್ಲ ಪ್ರಶ್ನೆಗಳ ಅಂದರೆ ಕಾಶ್ಮೀರ ಪ್ರಶ್ನೆಯು ಕೂಡಾ ತೀರ್ಮಾನವಾಗದೆ ಇದೊಂದು ತೀರ್ಮಾನ ಮಾತ್ರ ಜಾರಿಗೆ ತರುವುದು ನ್ಯಾಯವಲ್ಲವೆಂದು ಹಿಂದೀ ಸರಕಾರ ಸಾಧಿಸುತ್ತಿತ್ತು. ಕಾಶ್ಮೀರ ಪ್ರಶ್ನೆ ತೀರ್ಮಾನವಾಗದೆ ಈ ಹಣಕೊಟ್ಟಲ್ಲಿ ಅದನ್ನು ಹಿಂದೀ ಸರಕಾರದ ವಿರುದ್ಧ ಯುದ್ಧಕ್ಕೆ ಉಪಯೋಗಿಸುವ ಸಂಭವವಿರುವುದರಿಂದ ಅದನ್ನು ಈಗ ಕೇಳುವುದು ನ್ಯಾಯವಿಲ್ಲವೆಂಬ ಹಿಂದೀ ಸರಕಾರದ ವಾದದಲ್ಲಿ ತಪ್ಪೇನೂ ಇದ್ದಿಲ್ಲ.

ಆದರೆ ಮಹಾತ್ಮಾ ಗಾಂಧಿಯವರು ಹಿಂದೂ ಮುಸ್ಲೀಮ ಐಕ್ಯಕ್ಕಾಗಿ ಉಪವಾಸ ಕೈಕೊಂಡುದರಿಂದ ಈ ಐಕ್ಯ ಸಾಧ

ನೆಗೆ ಸಹಾಯವಾಗುವ ವಾತಾವರಣ ಕಲ್ಪಿಸುವ ಉದ್ದೇಶದಿಂದ ಈ ಹಣವನ್ನು ಹಿಂದೀ ಸರಕಾರವು ಕೊಟ್ಟುಬಿಟ್ಟಿತು. ಈ ಉದಾರ ವರ್ತನವು ಪಾಕಿಸ್ಥಾನದವರಲ್ಲಿಯೂ ಔದಾರ್ಯವನ್ನುಂಟುಮಾಡಲೆಂದು ಹಾರೈಸಬೇಕಾಗಿದೆ.

ಹೈದರಾಬಾದಿನ ಆಕ್ರಮಣ

ಹೈದರಾಬಾದು ಸರಕಾರದವರು ತಮ್ಮ ಗಡಿದಾಟಿ ಮದ್ರಾಸ್ ಪ್ರಾಂತ್ಯದ ಗಡಿಯೊಳಗೆ ಬಂದು ಆಕ್ರಮಣ ಮಾಡಿದ ವಿಚಾರ ಖೇದಜನಕವಿರುತ್ತದೆ; ಇದರ ಕೂಲಂಕೂಶ ವಿಚಾರ ನಡೆಸಲು ಹೈದರಾಬಾದಿನಲ್ಲಿ ಕೇಂದ್ರ ಸರಕಾರದ ಏಜಂಟಾಗಿ ಇರುವ ಶ್ರೀ ಕೆ ಎಮ್ ಮುನ್ಶಿಯವರನ್ನು ಕೇಂದ್ರ ಸರಕಾರವು ನಿಯೋಜಿಸಿದ್ದು ಅವರು ಈ ಕುರಿತು ವಿಚಾರ ನಡೆಸುತ್ತಿದ್ದಾರೆ ಹೈದರಾಬಾದು ಸರಕಾರವು ಈ ಕುರಿತು ಇನ್ನೂ ದುಡುಕದೆ ತಮ್ಮ ಅನ್ಯಾಯಕ್ಕೆ ತಕ್ಕ ನಿವೃತ್ತಿ ಮಾಡುವರೆಂದು ಆಶಿಸುತ್ತೇವೆ

ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ಹೊಸ ರಾಜಕೀಯ ಪಂಗಡ

ಅಮೇರಿಕದ ರಾಜಕೀಯ ಧುರೀಣರಾದ ಹೆನ್ರೀ ವಾಲ್ಲೇಸರು ಇಲ್ಲಿಯ ಡೆಮೊಕ್ರೆಟಿಕ್ ಮತ್ತು ರಿಪಬ್ಲಿಕನ್ ಎಂಬ ಎರಡು ಪ್ರಮುಖ ರಾಜಕೀಯ ಪಂಗಡಗಳಿಂದ ಭಿನ್ನವಾದ ಮೂರನೆಯ ರಾಜಕೀಯ ಪಂಗಡವೊಂದನ್ನು ವ್ಯವಸ್ಥೆಗೊಳಿಸುತ್ತಿದ್ದಾರೆ ಮುಂದೆ ಬರಲಿರುವ ಪ್ರಸಿಡೆಂಟ್ ಚುನಾವಣೆಯಲ್ಲಿ ಇವರೂ ಒಬ್ಬ ಉಮೇದ್ವಾರರಿದ್ದಾರೆ

ಈಗಿನ ಪ್ರೆಸಿಡೆಂಟರಾದ ಟ್ರೂಮೆನರು ಕೈಕೊಂಡಿರುವ ಧೋರಣೆಯಿಂದ ಮೂರನೆ ಮಹಾ ಯುದ್ಧವಾಗುವ ಸಂಭವವಿದೆಯೆಂದೂ ಅಮೇರಿಕದ ಶ್ರೀಮಂತ ಜನರು ಈ ಧೋರಣೆಯನ್ನು ತಮ್ಮ ಸ್ವಾರ್ಥಕ್ಕಾಗಿ ಮುಂದೆ ತಳ್ಳುತ್ತಿರುವರೆಂದೂ ಹೆನ್ರೀ ವಾಲ್ಲೇಸರು ಹೇಳುತ್ತಾರೆ ಯುರೋಪಿನ ರಾಷ್ಟ್ರಗಳಿಗೆ ಸಹಾಯ ಒದಗಿಸುವ ಯೋಜನೆ ರಶ್ಯದ ವಿರುದ್ಧ ಯುದ್ಧ ಸನ್ನಾಹ ಮಾತ್ರವೆಂಬುದು ಇವರ ಅಭಿಪ್ರಾಯ

ತನ್ನ ಹೊಸ ಪಂಗಡವು ಈ ಧೋರಣೆ ವಿರೋಧಿಸಿ ಜಗತ್ತಿನ ಶಾಂತಿ ಕಾಪಾಡಲು ಯತ್ನಿಸುವುದೆಂದು ಇವರು ಹೇಳುತ್ತಿದ್ದಾರೆ ಯುದ್ಧ ವಿರೋಧಿಯಾದ ಇವರು ಮುಂದಿನ ಚುನಾವಣೆಯಲ್ಲಿ ಗೆಲ್ಲುವಂತಾದರೆ ಜಗತ್ತಿಗೆ ಕಲ್ಯಾಣವಾದೀತು

ಆದರೆ ಅಮೇರಿಕದ ರಾಜಕೀಯ ಅನುಭವವುಳ್ಳವರ ಅಭಿಪ್ರಾಯದಂತೆ ಇವರ ಉಮೇದ್ವಾರಿಕೆಯಿಂದ ಟ್ರೂಮೆನರು ಸೋಲುವಂತಾಗಬಹುದಲ್ಲದೆ ಇವರು ಗೆಲ್ಲುವಂತಿಲ್ಲವೆಂದೇ ಅಭಿಪ್ರಾಯಪಡುತ್ತಾರೆ ಅಂದರೆ ಮೂರು ಪಂಗಡಗಳಾದರೆ ರಿಪಬ್ಲಿಕನ್ ಪಂಗಡವೇ ಗೆಲ್ಲುವ ಸಂಭವವಿದೆಯೆನ್ನುತ್ತಾರೆ ಅಂತೂ ಯಾರು ಗೆದ್ದರೂ ಅಮೇರಿಕದವರು ಇನ್ನೊಂದು ಮಹಾಯುದ್ಧವನ್ನು ಜಗತ್ತಿನ ಮೇಲೆ ಹೊರಿಸುವಂತಾಗದಿರಲೆಂದೇ ನಾವು ಆಶಿಸಬೇಕಾಗಿದೆ.

ಯುದ್ಧವಾಗದಂತೆ ನಿಜವಾಗಿ ಸಾಧಿಸಬೇಕಾದರೆ ಅಮೇರಿಕದ ರಾಜಕೀಯ ಪಂಗಡಗಳನ್ನು ಮಾತ್ರ ನಂಬಿ ಇರುವುದು ಮೂರ್ಖತನವಿರುತ್ತದೆ ಏಸಿಯದ ಮುಂದಾಳುತನ ಹಿಂದುಸ್ಥಾನ ಸರಿಯಾಗಿ ವಹಿಸಿ ತಕ್ಕ ಯತ್ನ ಮಾಡಿದರೆ ಮಾತ್ರ ಜಗತ್ತಿನ ಶಾಂತಿ ರಕ್ಷಣೆಯನ್ನು ಸಾಧಿಸಬಹುದೆಂಬುದರಿಂದ ನಾವು ಇದರ ಕಡೆ ಹೆಚ್ಚಿನ ಲಕ್ಷ್ಯ ಕೊಡುವುದೇ ನಿಜವಾದ ಶ್ರೇಯಸ್ಸಿನ ದಾರಿ ಇರುತ್ತದೆ.

ಮಹಾತ್ಮರ ಉಪವಾಸದ ಮುಕ್ತಾಯ

ತಾ. ೧೩-೧-೪೮ನೇ ಬೆಳಿಗ್ಗೆ ೧೧ ಗಂಟೆಗೆ ಆರಂಭಿಸಿದ ಉಪವಾಸವನ್ನು ಮಹಾತ್ಮಾಗಾಂಧಿಯವರು ತಾ ೧೮-೧-೪೮ನೇ ಮಧ್ಯಾಹ್ನ ಗಂಟೆ ೧೨-೪೫ಕ್ಕೆ ಮುಕ್ತಾಯಗೊಳಿಸಿದರು

ಮಹಾತ್ಮಾಗಾಂಧಿಯವರು ಈ ಉಪವಾಸವನ್ನು ಏತಕ್ಕಾಗಿ ಮಾಡಿದರು? ಇದರ ಪರಿಣಾಮವೇನು? ಈ ಪ್ರಶ್ನೆಗಳನ್ನು ಪ್ರತಿಯೊಬ್ಬನೂ ವಿಚಾರಿಸಿ ಸರಿಯಾಗಿ ತಿಳಿದುಕೊಳ್ಳುವುದು ಆವಶ್ಯಕವಿರುತ್ತದೆ

ಹಿಂದುಸ್ಥಾನ ಸರಕಾರದವರು ಪಾಕಿಸ್ಥಾನದೊಡನೆ ವರ್ತಿಸುವ ಧೋರಣೆ ಗಾಂಧೀಜಿಯವರಿಗೆ ಒಪ್ಪಿಗೆಯಾಗಲಿಲ್ಲ ಅದರಲ್ಲೂ ಶ್ರೀ ವಲ್ಲಭಭಾಯಿ ಪಟೇಲರ ವರ್ತನವು ಅವರಿಗೆ ಸರಿ ಬೀಳಲಿಲ್ಲ ಇವರಿಗೆ ಬುದ್ಧಿ ಕಲಿಸುವುದಕ್ಕಾಗಿ ಮಹಾತ್ಮಾಗಾಂಧಿಯವರು ಈ ಉಪವಾಸ ಮಾಡಿದರು ಪಾಕಿಸ್ಥಾನಕ್ಕೆ ೫೫ ಕೋಟಿ ರೂಪಾಯಿ ಪಾವತಿ ಮಾಡಿದ್ದರಿಂದ ಗಾಂಧಿಯವರಿಗೆ ಸಮಾಧಾನವಾಯಿತು ಈ ರೀತಿ ರಾಜ್ಯದ ಆಡಳಿತೆ ವಹಿಸಿ ನಡೆಸುವವರ ಮೇಲೆ ಮಹಾತ್ಮಾಗಾಂಧಿಯವರು ತನ್ನ ಜನ[illegible]ತೆಯ ದುರುಪಯೋಗ ಮಾಡಿ ಒತ್ತಾಯ ಹೊರಿಸುವುದು ಎಷ್ಟು ಮಾತ್ರ ಕ್ಕ ನ್ಯಾಯವಲ್ಲ ಪಾಕಿಸ್ಥಾನವನ್ನು ಹೀಗೆ ಪರಿಸಿಕ್ಕಿರೆ ಪರಿಣಾಮವು ಎಂದೂ ಒಳ್ಳೆಯದಾಗ ಮಾತಿಲ್ಲ ಹಿಟ್ಲರನನ್ನು ಚೇಂಬರ್ ಲೇನರು ಪರಿಸಿಟ್ಟಂತೆಯೇ ಸರಿ ಪ್ರಜಾಸತ್ತಾತ್ಮಕ ತತ್ವಕ್ಕೆ ಗಾಂಧಿಯವರ ಈ ವರ್ತನ ಕೇವಲ ವಿರೋಧವಾದುದು ಅಜ್ಞ ಜನರಿಗೆ ಅವರಲ್ಲಿ ಪ್ರೀತಿ ಇದೆ ಎಂಬುದರಿಂದ ಅವರು ಇದನ್ನುಪಯೋಗಿಸಿ ಒಂದು ಬಗೆಯ ಡಿಕ್ಟೇಟರ್ ಆಗಲು ಯತ್ನಿಸುವುದು ಸರಿಯಲ್ಲ ಇತ್ಯಾದಿಯಾಗಿ ಮಹಾತ್ಮಾಗಾಂಧಿಯವರನ್ನು [illegible] ಟೀಕಿಸುವವರೆಷ್ಟು ಮಂದಿ ಇದ್ದಾರೆ ಮಹಾತ್ಮಾಗಾಂಧಿಯವರು ಅಂತರಾತ್ಮನ ಪ್ರೇರಣೆ ಆತ್ಮ ಶುದ್ಧಿ ಇತ್ಯಾದಿ [illegible] ತನಗೆ ಇದರಲ್ಲಿ [illegible] ದೇವರಿಗಿದ್ದ ಅರ್ಥ[illegible] ತ್ಯತಪಡುವ್ಯ ಅಜ್ಞ ಜನರನ್ನು ಮಂಕುಗೊಳಿಸ [illegible] ಇದರ ಪರಿಣಾಮ ವೆಂದು ಇವರು ಸಾರುತ್ತಾರೆ

ಈ ರೀತಿ ಟೀಕಿಸುವ ಜನರಿಗೆ ಮಹಾತ್ಮಾಗಾಂಧಿಯವರ ವಿಚಾರ ಸರಣಿಯ ಅಪಾರ ನತತೆಯ ಯಾವ ಪರಿಚಯವೂ ಇಲ್ಲವೆಂದು ಪ್ರತ್ಯೇಕ ಹೇಳುವ ಆಗತ್ಯವೇ ಇಲ್ಲ ಮಾತ್ರವಲ್ಲ ಇವರಿಗೆ ಹಿಂದೀ ರಾಜಕಾರಣದ ಪರಿಚಯವೂ ಹೆಚ್ಚಿಗೆ ಇಲ್ಲವೆಂದೂ ಹೇಳಬೇಕಾಗುತ್ತದೆ

ರಾಜಕಾರಣದಲ್ಲಿ ಈ ಬಗೆಯ ಉಪವಾಸವನ್ನು ಕೈಕೊಳ್ಳುತ್ತಿರುವುದು ಸರಿಯಲ್ಲವೆಂದು ಹೆಚ್ಚಿನವರು ಅಭಿಪ್ರಾಯಪಡುವವರಿದ್ದಾರೆ ಪಾಶ್ಚಾತ್ಯ ರಾಜಕೀಯ ಶಿಕ್ಷಣವಿದ್ದವರಿಗೆ ಗಾಂಧಿಯವರ ವರ್ತನ ಅರ್ಥವೇ ಆಗುವುದಿಲ್ಲ

ಮಹಾತ್ಮಾಗಾಂಧೀಯವರ ಜೀವನವು ಧರ್ಮಪ್ರಧಾನವಾದುದು ಧರ್ಮವೆಂದರೆ ಸಂಕುಚಿತ ಮತವೆಂಬ ಅಭಿಪ್ರಾಯವಲ್ಲ. ಸತ್ಯ, ನ್ಯಾಯ, ನೀತಿಗಳಿಂದ ಕೂಡಿದ ವಿಶ್ವಧರ್ಮವನ್ನು ಅವರು ಅಕ್ಷರಶಃ ಪಾಲಿಸಲು ಯತ್ನಿಸುತ್ತಾರೆ ಅವರ ರಾಜಕಾರಣವೂ ಧರ್ಮದ ಹಾದಿಯಲ್ಲೇ ಹೋಗುವಂಥಾದ್ದು. ಈ ಮೂಲ ತತ್ವವನ್ನು ಗ್ರಹಿಸದೆ ಅವರ ವರ್ತನ ಅರ್ಥವಾಗುವಂತಿಲ್ಲ

ತಾನು ಉಪವಾಸ ಕೈಕೊಂಡದ್ದು ಶ್ರೀ ವಲ್ಲಭಭಾಯಿಯವರ ಧೋರಣೆಯ ನಿಷೇಧ ಸೂಚಿಸಲಿಕ್ಕಲ್ಲವೆಂದು ಮಹಾತ್ಮಾಗಾಂಧಿಯವರು ಹೇಳಿದರೆ ಅದನ್ನು ನಂಬದಿರಲು ಯಾವ ಕಾರಣವೂ ಇಲ್ಲ, ಯಾಕೆಂದರೆ ಗಾಂಧಿಯವರು ಇದ್ದುದನ್ನು ಇದ್ದಂತೆ ಮುಚ್ಚುಮರೆ ಇಲ್ಲವೆ ಹೇಳುವ ಸತ್ಯ ನಿಷ್ಠೆ ಉಳ್ಳವರು

ವಲ್ಲಭ ಭಾಯಿಯವರ ಅಥವಾ ಪಂಡಿತ ಜವಾಹರಲಾಲರ ಮಾತ್ರವಲ್ಲ ಕಾಂಗ್ರೆಸ್ ಸಂಸ್ಥೆಯ ಇಂದಿನ ಧೋರಣೆ ಮಹಾತ್ಮಾಗಾಂಧಿಯವರ ಧೋರಣೆ ಅಲ್ಲವೆಂಬುದು ನಿಜವಿರುತ್ತದೆ ಆದರೆ ವಲ್ಲಭಭಾಯಿಯವರಾಗಲಿ, ಜವಾಹರಲಾಲರಾಗಲಿ ಅಥವಾ ಕಾಂಗ್ರೆಸ್ ಸಂಸ್ಥೆಯಾಗಲಿ ತನ್ನ ಧೋರಣೆಯನ್ನೇ ಕೈಕೊಳ್ಳಬೇಕೆಂದು ಗಾಂಧಿಯವರು ಎಂದು ಒತ್ತಾಯ ಮಾಡುವ ಸ್ವಭಾವದವರಲ್ಲ ಅದರ ಬದಲು ಇವರೆಲ್ಲ ತಮಗೆ ಸರಿ ಕಂಡಂತೆ ವರ್ತಿಸುವುದೇ ನ್ಯಾಯವಾದುದೆಂದು ಒತ್ತಾಯ ಮಾಡುವುದೇ ಗಾಂಧಿಯವರ ಅಭ್ಯಾಸವೆಂದು ಇವರ ಪರಿಚಯವುಳ್ಳವರೆಲ್ಲ ತಿಳಿದಿದಾರೆ ಇಂದು ಹಿಂದೀ ಸರಕಾರ ನಡಸುವವರು ತಮ್ಮ ತಮ್ಮ ಸ್ವಭಾವಕ್ಕೆ ಅಭಿಪ್ರಾಯಕ್ಕೆ ಸರಿಯಾಗಿ ತಮ್ಮ ಕರ್ತವ್ಯವನ್ನು ಅತ್ಯಂತ ದಕ್ಷತೆಯಿಂದ ಅತ್ಯಂತ ನಿಷ್ಠೆಯಿಂದ ನಡೆಸುತ್ತಿದ್ದಾರೆ ಎಂದೇ ಗಾಂಧಿಯವರ ಅಭಿಪ್ರಾಯವಿರುತ್ತದೆ ಅವರಿಗೆ ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರಬಹುದು ಆದರೆ ತನ್ನ ಅಭಿಪ್ರಾಯಗಳನ್ನು ಇತರರ ಮೇಲೆ ಒತ್ತಾಯದಿಂದ ಹೇರಿಸಲು ಅವರು ಎಂದೂ ಯತ್ನಿಸುವವರಲ್ಲ. ತನ್ನ ಲೋಕ ಪ್ರಿಯತೆಯನ್ನು ಉಪಯೋಗಿಸಿ ಭಿನ್ನಾಭಿಪ್ರಾಯವುಳ್ಳವರೊಡನೆ ಜಗಳಾಡುವುದೂ ಅವರ ಸ್ವಭಾವವಲ್ಲ ಭಿನ್ನಾಭಿಪ್ರಾಯವುಳ್ಳವರು ತಮ್ಮ ಅಭಿಪ್ರಾಯಗಳಂತೆ ವರ್ತಿಸಿ ಅವುಗಳ ಸತ್ಯಾಸತ್ಯತೆ ತಿಳಿದ ಅಭಿಪ್ರಾಯ ತಿದ್ದಿಕೊಳ್ಳುವ ತನಕ ಕಾಯಬೇಕೆಂಬುದೇ ಅವರ ದಾರಿ

ಅಂಥ ವೇಳೆ ಈ ಉಪವಾಸ ಮಾಡಿದ್ದಾದರೂ ಏಕೆ? ಇದು [illegible] ಸರಕಾರದ ಮೇಲೆ [illegible] ಉಪವಾಸವಲ್ಲ ಹಿಂದೂಸ್ಥಾನದಲ್ಲಿ [illegible] ಇರುವ ಹಿಂದೂ [illegible] ವಶರಾಗಿ ಕಡವೆ [illegible] ಮುಸ್ಲಿಮರ ಮೇಲೆ ಅತ್ಯಾಚಾರ ನಡೆಸುವುದನ್ನು [illegible] ಈ ಉಪವಾಸದ ಮುಖ್ಯ [illegible] ಪಾಕಿಸ್ಥಾನದಲ್ಲಿ ಬಹುಸಂಖ್ಯಾತರಾದ ಮುಸ್ಲಿಮರು ಅಲ್ಲಿ ಕಡಿಮೆ ಸಂಖ್ಯಾತರಾಗಿರುವ ಹಿಂದೂ ಸಿಖರ ಮೇಲೆ ಅತ್ಯಾಚಾರ ನಡೆಸುವುದನ್ನು ತಡೆಗಟ್ಟುವುದೂ ಈ ಉಪವಾಸದ ಉದ್ದೇಶವಾದರೆ ತಪ್ಪಲ್ಲ. ಅಂದರೆ ಎರಡು ರಾಜ್ಯಗಳಲ್ಲಿಯೂ ಒಬ್ಬರಿಗೊಬ್ಬರು ಅಪರಾಧಿ ಜನರ ಮೇಲೆ ನಡೆಯುತ್ತಿರುವ ಅಮಾನುಷ ಅತ್ಯಾಚಾರಗಳನ್ನು ನಿಲ್ಲಿಸಬೇಕು ಎಂದೇ ಈ ಉಪವಾಸದ ನಿಜವಾದ ಅರ್ಥವಿರುತ್ತದೆ

ಎರಡು ರಾಜ್ಯಗಳಲ್ಲಿಯೂ ಇಂದು ಅನ್ಯಾಯ ಮಾಡುತ್ತಿರುವ ಈ ಜನರಲ್ಲಿ ಧರ್ಮ ಜಾಗೃತಿಯನ್ನು ಅಥವಾ ಮನುಷ್ಯತ್ವವನ್ನು ಎಚ್ಚರಗೊಳಿಸುವುದಕ್ಕೆ ಇದು ಮಹಾತ್ಮಾಗಾಂಧಿಯವರ ದಾರಿ ಹಿಂದೀ ಸರಕಾರವು ಈ ಅತ್ಯಾಚಾರಗಳಿಗೆ ಯಾವ ವಿಧದಿಂದಲೂ ಸಹಾಯ ಮಾಡುತ್ತಾ ಇಲ್ಲ ಇದನ್ನು ನಿಲ್ಲಿಸಲು ತನಗೆ ತಿಳಿದಂತೆ ಸರ್ವ ಪ್ರಯತ್ನ ಮಾಡುತ್ತಿದೆ ಹೀಗಿರುವಾಗ ಉಪವಾಸವು ಅವರ ವಿರುದ್ಧವೆಂದು ಯಾವ ಅರ್ಥದಲ್ಲಿಯೂ ಹೇಳುವಂತಿಲ್ಲ. ಪಾಕಿಸ್ಥಾನ ಸರಕಾರ ನಡೆಸುವ ಮುಂದಾಳುಗಳಾದರೋ ಅತ್ಯಾಚಾರಕ್ಕೆ ಬಲು ಮಟ್ಟಿಗೆ ತಾವೇ ಕಾರಣರಿರುವರೆಂಬುದರಿಂದ ಇದು ಅವರ ವಿರುದ್ಧವೆಂದು ಬೇಕಿದ್ದರೆ ಹೇಳಬಹುದು.

ಹಿಂದೂಸ್ಥಾನದಲ್ಲಿರುವ ಮುಸ್ಲೀಮರ ರಕ್ಷಣೆ ಮೊದಲ ಉದ್ದೇಶವೆಂದು ಮೇಲೆ ಹೇಳಲಾಗಿದೆ. ಇದು ನಿಜವೆಂಬುದನ್ನು ಉಪವಾಸವನ್ನು ನಿಲ್ಲಿಸಲು ಅವರು ಹಾಕಿದ ಏಳು ಶರ್ತಗಳನ್ನು ಕಂಡರೆ ಯಾರಿಗೂ ಸ್ಪಷ್ಟವಾಗುವುದು. ಮುಸ್ಲಿಮರಿಂದ ಕಿತ್ತುಕೊಂಡ ಮನೆಗಳನ್ನು ಅವರಿಗೆ ಹಿಂದೆ ಕೊಡಬೇಕು ಅವರ ಮಸೀದಿಗಳನ್ನು ಅವರಿಗೆ ಕೊಡಬೇಕು ಅವರ ಉತ್ಸವ ಸಾಂಗವಾಗಿ ನೆರವೇರಿಸಲು ಬಿಡಬೇಕು ಇತ್ಯಾದಿ ಮುಸ್ಲೀಮರ ಕಡೆಗೆ ಇಲ್ಲ ಇತರರು ನ್ಯಾಯದಲ್ಲಿ ವರ್ತಿಸಬೇಕು ಇದಾದರೆ ಉಪವಾಸ ಬಿಡುವುದಾಗಿ ಹೇಳಿದರು ಇಷ್ಟನ್ನು ಸಾಧಿಸಿಯೇ ಉಪವಾಸ ನಿಲ್ಲಿಸಿದರು ಈ ಮುಸ್ಲೀಮರನ್ನು ಗಾಂಧಿಯವರು ರಕ್ಷಿಸಿದರೆಂಬ ಬಗ್ಗೆ ಯಾರಲ್ಲಿಯೂ ಸಂಶಯವಿರಲು ಕಾರಣವಿಲ್ಲ ಹಿಂದೂಸ್ಥಾನದಲ್ಲಿ ಮುಸ್ಲೀಮರನ್ನು ಈ ರೀತಿ ಸಂಪೂರ್ಣ ನ್ಯಾಯದಿಂದ ನಡೆಸಿದರೆ ಪಾಕಿಸ್ಥಾನದ ಮುಸ್ಲೀಮರ ಮೇಲೆಯೂ ಸತ್ಪರಿಣಾಮವಾಗಿ ಅವರೂ ಅಲ್ಲಿಯ ಕಡಮೆ ಸಂಖ್ಯಾಕರಾದ ಹಿಂದೂ ಸಿಖರನ್ನು ನ್ಯಾಯದಿಂದ ನಡೆಸುವಂತಾದೀತೆಂಬುದು ಗಾಂಧಿಯವರ ದೂರದ ಆಸೆ ಅಂತೂ ಪಾಕಿಸ್ಥಾನದ ಹಿಂದುಗಳನ್ನು ರಕ್ಷಿಸಲು ಇದೇ ಅವರ ದಾರಿ ಇದರಲ್ಲಿಯೂ ಅವರು ಯಶಸ್ವಿಯಾಗುವರೆಂಬುದು ನಮ್ಮ ವಿಶ್ವಾಸ

ಈ ಉಪವಾಸದಿಂದಾಗಿ ಹಿಂದೂಸ್ಥಾನ ಪಾಕಿಸ್ಥಾನಗಳೊಳಗೆ ಬೆಳೆಯುತ್ತ ಬರುವ ವೈಮನಸ್ಸು ದೂರವಾಗಿ ಎರಡು ಕಡೆಗಳಲ್ಲಿಯೂ ಹಿಂದೂ ಮುಸ್ಲೀಮ ಐಕ್ಯವು ಸಾಧಿಸಲ್ಪಟ್ಟು ಎರಡು ರಾಷ್ಟ್ರಗಳೂ ಪರಸ್ಪರ ಸ್ನೇಹದಿಂದ ವರ್ತಿಸುವಂತಾಗಬೇಕೆಂಬುದೇ ಅವರ ಆಸೆ ಹಿಂದಿ ಸರಕಾರವು ರೂ ೫೫ ಕೋಟಿಯನ್ನು ಪಾಕಿಸ್ಥಾನಕ್ಕೆ ಕೊಟ್ಟದ್ದು ಅವರಿಗೆ ಸಂತೋಷವನ್ನುಂಟುಮಾಡಲು ಇದೇ ಕಾರಣ

ಗಾಂಧಿಯವರ ಉಪವಾಸವೆಂಬುದು ಅವರ ಅಹಿಂಸೆಯ ದಾರಿ ಪಾಶ್ಚಾತ್ಯ ರಾಜಕಾರಣಕ್ಕೆ ಅಹಿಂಸೆ ಹೊಸ ವಿಷಯವಾಗುವುದರಿಂದ ಅವರಿಗದು ಅರ್ಥವಾಗದಿದ್ದರೆ ಆಶ್ಚರ್ಯವಿಲ್ಲ ಗಾಂಧಿಯವರ ಜೀವನವು ಧರ್ಮ ಪ್ರಧಾನವೆಂದು ಮೊದಲೇ ಹೇಳಿಯದೆ ದೇವರಲ್ಲಿ ಅವರಿಗೆ ಅಚಲವಾದ ವಿಶ್ವಾಸವಿರುತ್ತದೆ ಅವರು ಉಪವಾಸ ಮಾಡುವುದೆಂದರೆ ತನ್ನ ದೇವರೊಡನೆ ನಡೆಸುವ ಒಂದು ಸೆಣಸಾಟವೆಂದು ಬೇಕಿದ್ದರೆ ಹೇಳಬಹುದು ಅಮಾನುಷ ಅತ್ಯಾಚಾರಗಳನ್ನು ನೋಡಿ ಸಹಿಸಿಕೊಂಡಿರಲು ಅಸಾಧ್ಯ ಒಂದೆ ಇದನ್ನು ನಿಲ್ಲಿಸಬೇಕು ಇಲ್ಲವೆ ತನ್ನ ಜೀವವಾದರೂ ಹೋಗಬೇಕು ದೈವೇಚ್ಛೆ ಹೇಗಿದೆಯೋ ಹಾಗೆ ಆಗಲಿ ಎಂಬುದು ಅವರ ವಿಚಾರ ಸರಣಿ ಇರುತ್ತದೆ ಇದು ಆಧುನಿಕ ರಾಜಕಾರಣಪಟುಗಳಿಗೆ ಅರ್ಥವಾಗಲಾರದಾದರೂ ಹಿಂದೂಸ್ಥಾನದ ಸಾಮಾನ್ಯ ಜನರಿಗೆ ಸರಿಯಾಗಿ ಅರ್ಥವಾಗುತ್ತದೆ ಇದರಿಂದಾಗಿಯೇ ಮಹಾತ್ಮಾಗಾಂಧಿಯವರು ಹಿಂದೂಸ್ಥಾನದ ಜನರ ಜೀವಾಳವಾಗಿದ್ದಾರೆ. ಅವರು ಹಿಂದೂಸ್ಥಾನ ಹಾಗೂ ಪಾಕಿಸ್ಥಾನಗಳಲ್ಲಿ ಹಿಂದೂ ಮುಸ್ಲೀಮ ಐಕ್ಯ ಸಾಧಿಸಿದರೆ ಇಡೀ ಜಗತ್ತಿಗೆ ಅಹಿಂಸೆಯ ಪರಿಚಯ ಮಾಡಿಕೊಟ್ಟಂತಾಗುತ್ತದೆಂಬುದಕ್ಕೆ ಸಂಶಯವಿದೆಯೇ? ಇದರಿಂದಾಗಿ ಲೋಕ ಕಲ್ಯಾಣವೇ ಸಾಧಿಸಲ್ಪಡುವುದು.

ದ. ಕ. ಪಂಡಿತ ಸಂಘದ

ಆಶ್ರಯದಲ್ಲಿ ಪ್ರತಿವರ್ಷದಂತೆ ಈವರುಷವೂ ಮುದ್ದಣನ ಜಯಂತಿಯು ಸದ್ಯವೇ ಜರಗುವುದು. ಮುದ್ದಣನ ಕಾವ್ಯಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿದವರು ಈ ಕಾರ್ಯಕ್ಕೆ ನೆರವಾಗಬೇಕಾಗಿದೆ. ಉತ್ಸವಕ್ಕೆ ಬಂದು ಭಾಷಣ ಮಾಡಬಿಚ್ಛಿಸುವವರು ಭಾಷಣದ ವಿಷಯ, ಬೇಕಾದ ಸಮಯ ಮೊದಲಾದುದನ್ನು ಫೆಬ್ರವರಿ ತಿಂಗಳ ೧೫ರೊಳಗೆ ದ. ಕ. ಪಂಡಿತ ಸಂಘಕ್ಕೆ ತಿಳಿಸಬೇಕು. ಇದೇ ಸಂದರ್ಭದಲ್ಲಿ ಮುದ್ದಣನ ಕಾವ್ಯಗಳ ವಿಚಾರವಾಗಿ ಪ್ರೌಢ ವಿದ್ಯಾರ್ಥಿಗಳಿಂದ ಬರೆಯಲ್ಪಡುವ ಉತ್ತಮ ಪ್ರಬಂಧಕ್ಕೆ ಬಹುಮಾನವನ್ನು ಕೊಡುವ ಏರ್ಪಾಡನ್ನೂ ಮಾಡಿರುವರು. ಇದರಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು "ರಾಮಾಶ್ವಮೇಧದ ಹಿರಿಮೆ" ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆದು ದ. ಕ. ಪಂಡಿತ ಸಂಘದ ಕಾರ್ಯದರ್ಶಿ ಎದುರ್ಕಳ ಶಂಭುಭಟ್ಟ, ಲೇಡಿಹಿಲ್ ವಿಕ್ಟೋರಿಯಾ ಹೈಸ್ಕೂಲು ಮಂಗಳೂರು ಈ ವಿಳಾಸಕ್ಕೆ ಫೆಬ್ರವರಿ ತಿಂಗಳ ತಾ ೧೫ರೊಳಗೆ ತಲಪುವಂತೆ ಕಳುಹಿಸಿ ಕೊಡುವದು. ಉತ್ತಮವೆಂದು ನಿರ್ಣಯಿಸಲ್ಪಡುವ ಪ್ರಬಂಧಕ್ಕೆ ಉತ್ಸವದ ದಿನ ಬಹುಮಾನವನ್ನು ಕೊಡಲಾಗುವುದು.

ಅ. ಭಾ. ಅಡಿಕೆ ಪರಿಷತ್ತು

ಕಳೆದ ತಾ ೧೧ರಂದು ಮಂಗಳೂರಲ್ಲಿ ಶ್ರೀ ಎಂ ಎಸ್. ಒಡೆಯರವರ ಅಧ್ಯಕ್ಷತೆಯಲ್ಲಿ ಅ ಭಾ ಅಡಿಕೆ ಫೆಡರೇಶನಿನ ಕಾರ್ಯಕಾರಿ ಸಭೆ ಜರಗಿ ಅಡಿಕೆ ಸುಂಕದ ವಿಷಯ, ಪರದೇಶಕ್ಕೆ ರಫ್ತು ಮಾಡುವ ವಿಷಯ, ಅಡಿಕೋನ ನಿವಾರಣೆಗೆ ಸರಕಾರದ ಕರ್ತವ್ಯವನ್ನು ಒತ್ತಿ ಹೇಳುವ ವಿಷಯ, ಸಾಗಿಸುವ ವ್ಯವಸ್ಥೆಯ ವಿಷಯ, ಬೇಸಾಯಗಾರರಿಗೆ ಸಾಹಾಯ್ಯ ಮಾಡುವ ವಿಷಯ ನಿರ್ಣಯಗಳು ಸ್ವೀಕರಿಸಲ್ಪಟ್ಟವು.

ಒಂದು ನಿರ್ಣಯದ ಪ್ರಕಾರ ಇದೇ ಜನವರಿ 31ರಂದು ಅಡಿಕೆ ಬೆಳೆಯುವ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಅ ಭಾ ಅಡಿಕೆ ದಿನವು ಆಚರಿಸಲ್ಪಡುವುದು.

ನಗರಾರೋಗ್ಯ

ನಗರದ ಕೆಲವು ಬಡಾವಣೆಗಳಲ್ಲೂ ಕಿಕ್ಕಿರಿದ ವಸತಿ ಪ್ರದೇಶದಲ್ಲೂ ಕೋಟ್ಲೆ, ಸಿಡುಬು ಮತ್ತು ಆಮಶಂಕೆಗಳ ಕೇಸುಗಳು ಗಮನಕ್ಕೆ ಬಂದಿರುವುದಾಗಿ ಸುದ್ದಿ.

ಹವಾಮಾನ

ಆಶ್ಚರ್ಯವೆಂಬಂತೆ ಕಳೆದ ವಾರದಲ್ಲಿ ಎರಡು ದಿನ ಮಳೆಯು ಕಾಣಿಸಿಕೊಂಡಿತ್ತು. ಅದರಲ್ಲೊಂದು ದಿನದ ಮಳೆಯು ಮಾರ್ಗ ಚರಂಡಿಗಳನ್ನು ಚೆನ್ನಾಗಿ ತೊಳೆಯುವಷ್ಟು ಸುರಿದಿರುತ್ತದೆ. ಮತ್ತೆ ಇತರ ದಿನಗಳಲ್ಲಿ ಸ್ವಲ್ಪ ಚಳಿಯೂ ಬಲವಾದ ಬಿಸಿಲೂ ಬಿದ್ದಿವೆ. ಸುಗ್ಗಿ ಬೆಳೆಯ ಕಟಾವು ಹಲವು ಕಡೆಗಳಲ್ಲಿ ಮುಗಿದಿದೆ. ಈ ಸಲ ನಿರೀಕ್ಷಿಸಿದಷ್ಟು ಹಾನಿಯಿಲ್ಲವೆಂದು ಹೇಳಲ್ಪಟ್ಟಿದೆ.

ಮೋಟಾರು ಕೆಲಸಗಾರರ ಸಮ್ಮೇಳನ

ದ ಕ ಒಟೊಮೊಬೈಲ್ ವರ್ಕರ್ಸ್ ಯೂನಿಯನ್ ಇದರ ಪ್ರಥಮ ವಾರ್ಷಿಕ ಸಮ್ಮೇಳನವು ಇದೇ ತಾ 25ನೇ ರವಿವಾರ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ, ಮದ್ರಾಸು ಪ್ರಾಂತೀಯ ಮೋಟಾರು ಮತ್ತು ಜನರಲ್ ವರ್ಕರ್ಸ್ ಫೆಡರೇಶನಿನ ಅಧ್ಯಕ್ಷ ಶ್ರೀ ಯಂ. ಸೀತಾರಾಮ ನಾಯ್ಡು ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಡಾ ಕೆ. ಬಿ. ಮೆನನ್, ಅ ಭಾ ಸೋಶಿಯಲಿಸ್ಟ್ ಪಕ್ಷದ ಜತೆಕಾರ್ಯದರ್ಶಿಯವರು ಉದ್ಘಾಟನೆ ಮಾಡುವರು.

ದಂತವೈದ್ಯ ಸಂಘ

ಅಖಿಲ ಭಾರತ ಸಂಘದವರ ಆಡಳಿತ ಸಮಿತಿಗೆ ಮಂಗಳೂರಿನಿಂದ ಮೂವರು ಡಾಕ್ಟರರು ಆರಿಸಲ್ಪಟ್ಟಿರುವರು. ಈ ಸಂಘದ ಮೂರು ಉಪಾಧ್ಯಕ್ಷರಲ್ಲಿ ಡಾ॥ ಡಬ್ಲ್ಯು. ಎಸ್. ಮಥ್ಯಾಸ್ ಮತ್ತು ಡಾ॥ ಎಸ್. ಆರ್. ಭಟ್ಟ್ ಇವರು ಮಂಗಳೂರಿನವರು. ಉಪಕಾರ್ಯದರ್ಶಿಯಲ್ಲೊಬ್ಬರು ಡಾ॥ ಎಚ್. ಎ. ಫೆರ್ನಾಂಡಿಸ್‌ರವರು.

ಜಿಲ್ಲಾ ಸಮಾಚಾರ

ಸಾರ್ವಜನಿಕ ಕಾಮಗಾರಿ

ಮಂಗಳೂರಿಗೆ ಇತ್ತೀಚೆಗೆ ದಯಮಾಡಿಸಿದ ಪಬ್ಲಿಕ್ ವರ್ಕ್ ಮಂತ್ರಿ ಮಾನ್ಯ ಭಕ್ತವತ್ಸಲಂ ಅವರು ಇಂಜಿನಿಯರುಗಳೊಂದಿಗೆ ಜಿಲ್ಲಾ ಬೋರ್ಡು ಮಂದಿರದಲ್ಲಿ ನಡೆಸಿದ ಪರ್ಯಾಲೋಚನೆಯಲ್ಲಿ ಈ ಕೆಳಗಿನ ಕಾಮಗಾರಿಗಳು ನಿಯೋಜಿಸಲ್ಪಟ್ಟಿರುವುವೆಂದು ತಿಳಿದು ಬರುತ್ತದೆ.

ಚರ್ವತ್ತೂರು ಕಾರ್ಕಳ ಬೈಂದೂರಿಗೊಂದು ಹೆದ್ದಾರಿ (೨೫ ಲಕ್ಷ ರೂಪಾಯಿ ವೆಚ್ಚ) ಜಿಲ್ಲೆಯ ಹೆದ್ದಾರಿಗಳ ಕೆಲವಂಶಕ್ಕೆ ಡಾಮರು (ರೂ ೪ ಲಕ್ಷ) ಕೂಳೂರು ನದಿಗೆ ಸೇತುವೆ (೨ ಲಕ್ಷ ರೂ) ಕಲ್ಯಾಡಿ, ಎಕ್ಕಾರು, ಶಿರೂರು, ಪುತ್ತಿಗೆ ಹೊಳೆಗಳ ಸೇತುವೆ ವಿಚಾರ ಬೇಗನೆ ಕಾರ್ಯ ಕೈಕೊಳ್ಳಲಾಗುವುದು. ಗುರ್ಪುರ ಹೊಳೆಗೆ ಅಣೆಕಟ್ಟು (೬ ಲಕ್ಷ ರೂಪಾಯಿ) ಇದರಿಂದ ೧೫೦೦ ಎಕ್ರೆಗಳಲ್ಲಿ ಎರಡನೆಯ ಬೆಳೆಯೂ, ೫೦೦ ಎಕ್ರೆಗಳಲ್ಲಿ ಮೂರನೆ ಬೆಳೆಯೂ ಸಾಧ್ಯವಾಗುವುದು. ಸಿರಿಯಾ ನದಿಗೆ ಅಣೆಕಟ್ಟು (ರೂ ೬ ಲಕ್ಷ, ೧೯ ಸಾವಿರ) ೫೫೦ ಎಕ್ರೆ ಇದರಿಂದ ಫಲವತ್ತಾಗುವುದು. ಕುಂದಾಪುರ ತಾಲೂಕಿನ ೩ ಕೆರೆಗಳಿಗೆ ರೂ ೫೪ ಸಾವಿರ. ಬ್ರಹ್ಮಾವರದ ಚಂದ್ರನು ನಗರಕ್ಕೆ ರೂ ೨೪ ಸಾವಿರದ ವೆಚ್ಚ.

ಜಾನುವಾರು ನೀರು

ಪಿಯರ್ಸ್‌ಲೆಸ್ಲಿ ಕಂಪೆನಿಯ ಉದ್ಯೋಗಸ್ಥರಾದ ಶ್ರೀ ಟಿ ಥಿಯೊಫಿಲ್ಲರು ಬೋಳಾರದಲ್ಲಿ ತಮ್ಮ ಮನೆ ಮುಂದೆ ದನಕರು ಜಾನುವಾರುಗಳಿಗೆ ಕುಡಿಯಲು ನೀರಿನ ಟಾಂಕಿ ಇಡಿಸಿದ್ದರು. ಮುನ್ಸಿಪಾಲಿಟಿಯು ಮಾರ್ಗ ವಿಸ್ತರಣದಿಂದನ್ನೀಗ ಅವರ ಮನೆ ಒಳಗಡೆ ಇಡಿಸಿದ್ದಾರೆ. ತಾ ೧೬ರಂದು ಅನೇಕ ಪ್ರಮುಖ ಗೃಹಸ್ಥರ ಸಮ್ಮುಖದಲ್ಲಿ ಡಾ॥ ಕೆ ನರಸಿಂಹ ಭಂಡಾರಿಯವರು ಆರಂಭೋತ್ಸವವನ್ನು ನೆರವೇರಿಸಿದರು.

ಜಿಲ್ಲಾ ಕಾಂಗ್ರೆಸ್ ಕಮಿಟಿ

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಮಂಡಲಿಯ ಸಭೆಯು ಇದೇ ತಾ ೧೪ನೇ ಪೂರ್ವಾಹ್ನ ಗಂಟೆ ೧೦ಕ್ಕೆ ಶ್ರೀ ಎಚ್ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲೆಯಲ್ಲಿ ಕೃಷಿಕರ ಸಂಘಟನೆಯನ್ನು ಸ್ಥಾಪಿಸುವ ಕುರಿತು ದೀರ್ಘ ಚರ್ಚೆ ನಡೆಯಿತು. ಆ ಮೇಲೆ ದ. ಕ ಕೃಷಿಕ ಸಂಘದ ಘಟನೆ ಮತ್ತು ನಿಯಮಗಳನ್ನು ತಯಾರಿಸುವರೆ ಶ್ರೀಗಳಾದ ಎಚ್ ನಾರಾಯಣ ರಾವ್, ಕೆ ಕೆ ಶೆಟ್ಟಿ, ಎಂ ಉಮೇಶ ರಾವ್ ಮತ್ತು ಎಂ ಡಿ ಅಧಿಕಾರಿಗಳಿಂದ ಕೂಡಿದ ಒಂದು ಉಪ ಸಮಿತಿಯನ್ನು ನೇಮಿಸಲಾಯಿತು. ಉಡುಪಿ ತಾಲೂಕು ರೈತ ಸಂಘವು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಮಾಡಿಕೊಂಡಿದ್ದ ಅರ್ಜಿಯ ವಿಷಯದಲ್ಲಿ ಬಹಳ ಚರ್ಚೆ ನಡೆಯಿತು. ನಡೆದು ಅದನ್ನು ಜಿಲ್ಲಾ ಕೃಷಿಕ ಸಂಘವಾಗಿ ಅಂಗೀಕರಿಸಲಾಯಿತು. ಅಲ್ಲದೆ ಅವರು ದ ಕ ರೈತ ಪರಿಷತ್ತನ್ನು ಹಿರಿಯಡ್ಕದಲ್ಲಿ ನಡೆಸುವರೆ ಒಪ್ಪಿಕೊಳ್ಳಲಾಯಿತು. ಸದ್ರಿ ಪರಿಷತ್ತಿಗೆ ದ ಕ ಜಿಲ್ಲಾ ಸಂಘಗಳಿಂದ ಮತ್ತು ಉಡುಪಿ ತಾಲೂಕು ರೈತ ಸಂಘಗಳಿಂದ ೨೫ ಸದಸ್ಯರಿಗೆ ಒಬ್ಬರಂತೆ ಆರಿಸಲ್ಪಡುವವರು ಪ್ರತಿನಿಧಿಗಳಾಗಬೇಕೆಂದು ನಿರ್ಧಾರವಾಯಿತು.

ಮಧ್ಯಾಹ್ನ ಸೇರಿದ ಸಭೆಯಲ್ಲಿ ಮಹಾತ್ಮಾ ಗಾಂಧೀಜಿಯವರು ಉಪವಾಸವನ್ನು ನಿಲ್ಲಿಸಿದ ಕುರಿತು ಆನಂದ ಸೂಚಿಸಲಾಯಿತು. ಕಾಂಗ್ರೆಸ್ ಸೇವಾದಳ ಮತ್ತು ಕಾಂಗ್ರೆಸ್ ಮಜದೂರ್ ಸಂಘಟನೆಗಳಿಗಾಗಿ ಚರ್ಚೆ ನಡೆದು ಅದನ್ನು ಮುಂದಿನ ಸಭೆಗೆ ಮುಂದುವರಿಸಲಾಯಿತು. ಗ್ರಾಮ ಕಾಂಗ್ರೆಸ್ ಕಮಿಟಿಗಳ ರಚನೆಯಾದ ಕಡೆಗಳಲ್ಲಿ ಪ್ರಧಾನ ಕಾರ್ಯದರ್ಶಿಗಳ ಇದನ್ನು ವಿಮರ್ಶಿಸಿ ಅಂಗೀಕರಿಸಬಹುದೆಂದು ನಿರ್ಣಯವಾಯಿತು.

ಸ್ವಾತಂತ್ರ್ಯ ದಿನಾಚರಣೆ

ಕಾಂಗ್ರೆಸ್ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರ ಅನುಜ್ಞೆಯಂತೆ ಇದೇ ತಾ ೨೬ನೇ ಸೋಮವಾರ ದಿನವನ್ನು ಜಿಲ್ಲೆಯ ಸರ್ಕಲ್ ಮತ್ತು ಇತರ ಕಮಿಟಿಗಳು ಸ್ವಾತಂತ್ರ್ಯ ಹೋರಾಟದ ಸ್ಮಾರಕ ದಿನವಾಗಿ ಆಚರಿಸಬೇಕಾಗಿ ವಿನಂತಿ. ಈ ಸಂದರ್ಭದಲ್ಲಿ ಬೆಳಿಗ್ಗೆ ಧ್ವಜವಂದನೆ ಮತ್ತು ಸಂಜೆ ಸಾರ್ವಜನಿಕ ಸಭೆ ನಡೆಸತಕ್ಕದ್ದು ಹೀಗೆಂದು ಪ್ರಧಾನ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟಿ ತಿಳಿಸುತ್ತಾರೆ.

ಗಾಯನ ಪಟುಗಳು

ಸಂಗೀತ ರತ್ನ ಸವಾಯಿ ಗಂಧರ್ವರ ಶಿಷ್ಯರೂ ರೇಡಿಯೊ ಗಾಯಕರೂ ಆದ ಶ್ರೀ ಭೀಮಸೇನ ಜೋಶಿಯವರು ಸದ್ಯದಲ್ಲೇ ಮಂಗಳೂರಿನಲ್ಲಿ ಗಾಯನ ಕಛೇರಿ ನಡೆಸಲಿರುವರೆಂದು ತಿಳಿದು ಬರುತ್ತದೆ.

ವಾಣಿಜ್ಯ ನೌಕರರ ಸಭೆ

ವಾಣಿಜ್ಯ ನೌಕರರ ಮೂಲ ವೇತನ ತುಟ್ಟಿ ಭತ್ತೆ ವಿಷಯ ಪರ್ಯಾಲೋಚಿಸಿ, ನಿಷ್ಕರ್ಷಿಸಿ ಮಾಲಕರಿಂದದನ್ನು ಪಡೆಯುವ ಕಾರ್ಯಕ್ರಮನಿಯೋಜಿಸಲು ಒಂದು ಸಭೆ ತಾ. ೧೬ರಂದು ಸೇರಿತ್ತು.

ಉಡುಪಿ

ಇಲ್ಲಿಯ ನಗರ ಸಭೆಯವರು ತಮ್ಮೂರಿನವರಾಗಿದ್ದು ಈಗ ಬೊಂಬಾಯಿಯಲ್ಲಿ ಪೂರಂ ಪತ್ರಿಕೆಯ ಸಂಪಾದಕರಾಗಿರುವ ಜೋಕಿಮ್ ಆಳ್ವ ಮತ್ತವರ ಧರ್ಮಪತ್ನಿಯವರಿಗೊಂದು ಮಾನಪತ್ರವಿತ್ತು ಸನ್ಮಾನಿಸಿದರು.

ಶ್ರೀಕೃಷ್ಣ ಸನ್ನಿಧಿಯಲ್ಲಿ ವರ್ಷಾವಧಿ ನಡೆಯುತಕ್ಕ ಸಪ್ತೋತ್ಸವವು ಕಳೆದ ತಾ 15ರಲ್ಲು ಹಗಲು ತೇರು ಅವಭೃತ ಸ್ನಾನಾದಿಗಳಿಂದ ಕೊನೆಗೊಂಡಿತು. ಪರ್ಯಾಯ ಶಿರೂರು ಮಠಾಧೀಶರು ಆ ದಿನ ನಾಲ್ಕೈದು ಸಹಸ್ರರಿಗೆ ಭೋಜನ ವ್ಯವಸ್ಥೆ ಮಾಡಿದ್ದರು.

ವೃಂದಾವನಸ್ಥ ಫಲಿಮಾರು ಮಠ ಸ್ವಾಮಿಜಿಯವರ ಉತ್ತರಾಧಿಕಾರಿಯಾಗಿ ಮಿ ಜಾ ರು ... ಪುತ್ರ ಶ್ರೀ ಲಕ್ಷ್ಮೀ... ಪಟ್ಟವಿಗೆ ಕಳೆದ ತಾ 17ರಂದು ದ್ವಂದ್ವ ಮಠಾಧಿಪತಿಗಳಾದ ಅದಮಾರು ಶ್ರೀಗಳವರು ಆಶ್ರಮ ಕೊಟ್ಟಿದ್ದಾರೆ.

ನೇಮಕ

ಉಡುಪಿ ತಹಶಿಲ್ದಾರರಾಗಿದ್ದ ಶ್ರೀ ವಿ ಸದಾನಂದ ಪೈ ಅವರು ಕುಂದಾಪುರ ಡಿವಿಜನಿನ ರೆವಿನ್ಯೂ ಡಿವಿಜನಲ್ ಆಫೀಸರರಾಗಿ ನೇಮಕ ಹೊಂದಿದ್ದಾರೆ.

ಪುತ್ತೂರು

ಕೆಲವು ವಿದ್ಯಾರ್ಥಿಗಳನ್ನು ಸಿಲೆಕ್ಷನ್ ಪರೀಕ್ಷೆಯಲ್ಲಿ ನಾಪಾಸ್ ಮಾಡಿದರೆಂಬ ಸಹಾನುಭೂತಿಯಿಂದ ಮತ್ತು ಎಲ್ಲರನ್ನು ಸರಕಾರಿ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕಳುಹಿಸಬೇಕೆಂದು ಇಲ್ಲಿಯ ಡಿ ಬೋ ಹೈಸ್ಕೂಲಿನ ಮೆಟ್ರಿಕ್ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೆಂದೂ ಕೊನೆಗೆ ಪ್ರಭಾವಿತ ಪಟ್ಟಣಿಗರ ಮಧ್ಯಸ್ಥಿಕೆಯಿಂದ ಕಲಹವು ಇತ್ಯರ್ಥಸಲ್ಪಟ್ಟಿತ್ತೆಂದೂ ತಿಳಿದು ಬರುತ್ತದೆ.

"ಪದ್ಮಶಾಲಿ ಸಮಾಜ ಸೇವಾ ಸಂಘ" ಮುಂಬಯಿ

ಈ ಮೇಲ್ಬರೆದ ಸಂಘದ ೧೨ನೇ ವರ್ಷದ ವಾರ್ಷಿಕೋತ್ಸವವು ಇದೇ ಜನವರಿ ತಿಂಗಳ ತಾ ೨೫ನೇ ರವಿವಾರ ಅಪರಾಹ್ನ ಘಂಟೆ ೨ಕ್ಕೆ ಸರಿಯಾಗಿ "ಮೇತ್ರಾ ಕಟ್ಟೋಣ"ದಲ್ಲಿ ಶ್ರೀ ಕೆ ಸಿ ಶೆಟ್ಟಿಗಾರರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಸ್ವಜಾತಿ ಬಾಂಧವರೆಲ್ಲರೂ ಬಂದು ಸಭಾಕಾರ್ಯಗಳನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ರಾತ್ರೆ ಹವೆಯು ಅಪಾಯಕರವಿರಬಹುದು. ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು ಕೆಮ್ಮು, ವಿಷಮ ಜ್ವರಗಳುಂಟಾಗಬಹುದು. ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ.

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯ್ಯಲ್ಪಡುವವು. ಅಲ್ಪ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲಿಸುವುದು. ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು. ರೋಗಾಣು ನಾಶವಾದಿ ಭಾವಿ ಸಂಕಷ್ಟವನ್ನು ತಡೆಯುವುದು.

ಕೆಮ್ಮು, ಶೀತ, ಗಂಟಲು ನೋವು ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ

PEPS



ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುದು

ಸಿಹಿಸುದ್ದಿ ಸಂಗ್ರಹ

ಸೈನ್ಯಕ್ಕೆ ಸೇರಿದರೆ ತಮ್ಮ ತರುಣರು ಕ್ರೈಸ್ತ ಸಂಸ್ಕೃತಿಯ ಪ್ರಶಾಂತ ಮತೀಯ ವಾತಾವರಣ ಬಿಟ್ಟು ಮದ್ಯ ಕುಡಿತದ ಕೀಳು ಕೂಟದಲ್ಲಿ ಸೇರುವರೆಂದು ಅಮೇರಿಕದ ಕೌನ್ಸಾಸ್ ನಗರದವರು ಸಾರ್ವತ್ರಿಕ ಸೈನ್ಯ ಭರತಿಯ ವಿರೋಧ ಒಂದು ಠರಾವು ಮಾಡಿರುವರು

✠

ನ್ಯೂಯೋರ್ಕ್ ವಿಶ್ವವಿದ್ಯಾಲಯದಲ್ಲಿ ವಾಸನೆ-ಸುವಾಸನೆಗಳ ವೈಜ್ಞಾನಿಕ ಅಭ್ಯಾಸವನ್ನು ಕಲಿಸಲು ಹೊಸತೊಂದು ಡಿಗ್ರಿ ಕ್ಲಾಸನ್ನು ತೆರೆಯಲಾಗಿದೆ

✠

ರಶ್ಯದ ಬಳಿಯ ಅಲ್ಟೇ ಪರ್ವತ ಪ್ರದೇಶದಲ್ಲಿದ್ದ ೨೦೦೦ ವರ್ಷ ಹಿಂದಿನ ಸಮಾಧಿಯೊಂದನ್ನು ಐತಿಹಾಸಿಕ ಪರಿಶೋಧಕರು ಅಗೆದು ತೆರೆದಾಗ ಅದರಲ್ಲಿ "ಈಗಲೂ ತಿನ್ನಲು ಯೋಗ್ಯವಾದ" ಒಣ್ಣೆಯ ಗಿಣ್ಣೊಂದು ಸಿಕ್ಕಿರುತ್ತದೆ

✠

ಜೇನು ತುಪ್ಪವನ್ನು ಬೇಕಾದ ಒಣ್ಣ ದಲ್ಲೂ ಬೇಕಾದ ಸ ವಾಸನೆಯನ್ನುಳ್ಳ ಗೊಂಡಿರುವಂತೆ [illegible] ಜೇನು ಪೋಷಣೆಯ ವಿಧಾನವೊಂದನ್ನು ಅಮೇರಿಕನ್ ಜೇನು ಸಾಕಣೆ [illegible] ಕಂಡು ಹಿಡಿದಿರುವರು ಜೇನ [illegible] ಬೇಕಾದ ಮಕರ [illegible] ಸಕ್ಕರೆ [illegible] ಬೆರಸಿ ಗಾಜಿನ [illegible] ಒಳಗಿರುವ ಜೇನು [illegible] ವಿಡಲಾಗುವುದು ಇದರಿಂದ ಜೇನುಗಳಿಗೆ [illegible] ಕಡಿಮೆಯಾಗುವುದು

✠

ಈಗಿನ ಡಿಸೆಲ್ [illegible] ಇಂಜಿನುಗಳಿಗೆ ಉಪಯೋಗಿಸಲ್ಪಡುವ [illegible] ಇಲ್ಲವೆ ಪೆಟ್ರೋಲ್ [illegible] ಗಳ ಬದಲು [illegible] ಉಪಯೋಗಿಸಬಹುದೆಂದು [illegible] ಯಂತ್ರ [illegible] ತಿಳಿಸುತ್ತಾರೆ

✠

ಜಗತ್ತಿನ ಅತಿ [illegible] ವರ್ಷ [illegible] ದೀರ್ಘಾಯುಷ್ಯಕ್ಕೆ ಪ್ರಖ್ಯಾತ ಪಟ್ಟಿ [illegible] ದೇಶದಲ್ಲಿರುವನು

✠

ಈಜಿಪ್ತಿನ ಅತಿ [illegible] ಮಹಿಳೆಯು ಅಲ್ಲಿಯ ಅರಸನ [illegible] ಸಂಬಂಧಿಯೂ ಆಗಿರುವ [illegible] ಅವಳ್ಳಾ [illegible] ತನ್ನ [illegible] ರಾಜ ಸಂಬಂಧವನ್ನು ತ್ಯಜಿಸಿ ಓರ್ವ ಅಮೇರಿಕನನ್ನು ವಿವಾಹವಾದಳು

✠

೧೩೦೦ನೇ ಇಸವಿಯಲ್ಲಿ ಕನ್ನಡಕಗಳ ಶೋಧವಾಗಿದೆ

✠

ಹೊಸ ವರ್ಷದಿಂದ ಪೂರ್ವ ಪಂಜಾಬದ ಸರಕಾರಿ ಅಧಿಕಾರಿಗಳು "ಜೈ ಹಿಂದ್" ಎಂಬುದನ್ನು ಪರಸ್ಪರ ವಂದನಗಾಗಿ ಉಪಯೋಗಿಸಬೇಕೆಂದು ಆಜ್ಞೆ ಹೊರಡಿಸಲ್ಪಟ್ಟಿದೆ

✠

ಒಂದು ಮಗುವನ್ನು ಹದಿನೆಂಟು ವರ್ಷಗಳಾಗುವ ತನಕ ಪೋಷಿಸಲು ೧೫೦೦೦ ಪವನುಗಳ ಖರ್ಚು ಬೇಕಾಗುವುದೆಂದು ಅಲ್ಲಿನೊಂದು ವಿಶ್ವವಿದ್ಯಾಲಯದವರು ಲೆಕ್ಕ ಹಾಕಿರುವರು.

ಪುಸ್ತಕ ವಿಮರ್ಶೆ

ಸೂರ್ಯ ಕಾಂತಿ

ಕೊಡಗಿನ ನುಡಿ ಸೇವಕರಾದ ವಿದ್ವಾನ್ ಐ ಮಾ ಮುತ್ತಣ್ಣನವರ 'ನನ್ನ ಸಾಧನೆಯ ಪ್ರಥಮ ಪ್ರಯತ್ನ'ವಿದು ವಿವಿಧ ವಿಚಾರಾತ್ಮಕವೂ, ಅಭಿರುಚಿದಾಯಕವೂ, ಸ್ಫೂರ್ತಿದಾಯಕವೂ ಆದ ೩೪ ವಿಷಯಗಳ ಕುರಿತಾಗಿ ಬರೆದ ಕವನಗಳ ಸಂಗ್ರಹ ಅತ್ಯಂತ ವಾಚನೀಯವಾಗಿದೆ ತರುಣ ಕವಿಗಳು ಕವಿತ್ವಾಕೃತಿಗಳಲ್ಲಿ ಉಜ್ವಲ ಭವಿಷ್ಯದ ಚಿಹ್ನೆಗಳನ್ನು ತೋರಿಸಿದ್ದಾರೆ ಆಂಗ್ಲರ ಪ್ರಖ್ಯಾತ ನಿಸರ್ಗ ಕವಿ ವರ್ಡ್ಸ್‌ವರ್ತನಿಗಿದ್ದ ಸ್ಫೂರ್ತಿದಾಯಕ ಪ್ರಕೃತಿ ಸೌಂದರ್ಯದ ಸನ್ನಿವೇಶದಲ್ಲಿ ಹುಟ್ಟಿ ಬೆಳೆದ ವಿದ್ವಾನ್ ಮುತ್ತಣ್ಣನವರೂ ಆಕರ್ಷಕವಾದ ನಿಸರ್ಗ ರಮ್ಯತೆಯನ್ನು ತಮ್ಮ ಕವಿತೆಗಳಲ್ಲಿ ರೂಪಿಸಿದ್ದಾರೆ ಇವರು ಆರಿಸಿಕೊಂಡ ವಿಷಯಗಳಿಂದ ಇವರು ಉದಾತ್ತ ರಾಷ್ಟ್ರೀಯ ವಾದಿಗಳೂ, ಸಾಂಸ್ಕೃತಿಕ ಭಕ್ತರೂ ಎಂದು ಸ್ಪಷ್ಟವಾಗುತ್ತದೆ ಕವಿತೆಗಳಾದರೂ ಎಳೆ ವಯಸ್ಸಿನವರಿಂದ ಹಿಡಿದು ಪ್ರೌಢರ ತನಕದ ಶಿಕ್ಷಣ ತರಗತಿಗಳಲ್ಲಿ ಮೆಚ್ಚುಗೆಗಾಗಿಯೂ, ಪಾಠ ವಿಷಯಕ್ಕಾಗಿಯೂ ಇಡಲು ಅರ್ಹವಾಗಿರುವಂತಹುಗಳು ಇವರ ಸಾಹಸಕ್ಕೆ ಉತ್ತರೋತ್ತರ ಅಭಿವೃದ್ಧಿ ಕೋರಿ ನಾಡಲ್ಲಿ ಇವರ ರವಿಪಥ ಬೆಳಗೀರಲೆಂದು ಹಾರೈಸುತ್ತೇವೆ 'ನಾಭ'

ಅ ತರ್ ಕವಿ ಪಿ ದ ಸೌಂದರ್ಯತೆಯ [illegible] ಕೊಳ್ಳಬಹುದು ವನಸ್ಪತಿ [illegible] ಗಳಿ [illegible] ಸಿದ ಈ ಔಷಧಿಯ ದಿನನಿತ್ಯ [illegible] ವನ್ನು ಹೊರ ಹಾಕಿ ರಕ್ತ ಸ ಚಲನೆಯ [illegible] ಜೀರ್ಣ ಕಾರ್ಯವು ಸರಿಯಾಗುವಂತೆ ಮಾಡುವುದು

ವನಸ್ಪತಿ ಔಷಧಗಳಿಂದ ತಯಾರಿಸಿದ

BILE BEANS.

ಬೈಲ್ ಬೀನ್ಸ್ ಆರೋಗ್ಯ ಮತ್ತು ಶಕ್ತಿ ಪ್ರದರ್ಶಕ

(೧ನೇ ಪುಟದಿಂದ)

ವಿಚಾರಗಳಿಗೆ ಯಾವ ರೀತಿಯಲ್ಲೂ ಭಂಗ ಬಾರದಂತೆ ಮಹಾತ್ಮರು ಭಾರತದಲ್ಲಿ ಅಲ್ಪಸಂಖ್ಯಾಕರಿಗಾದ, ಆಗುತ್ತಿರುವ ಮತ್ತು ಆಗಬಹುದಾದ ಯಾವ ತರದೇ ಅನ್ಯಾಯಗಳನ್ನು ಸಂಪೂರ್ಣ ನಿಲ್ಲಿಸಲು ಉಪವಾಸಕ್ಕೆ ಪಥವನ್ನು ಅನುಸರಿಸಿದರು. ಈ ಕುರಿತು ಅವರಲ್ಲಿ ಅವಿವೇಕದ ಪಕ್ಷಪಾತದ ದೋಷಾರೋಪಣೆ ಗೈದವರೂ ಇದ್ದಾರೆ ಅವರು ಮೃತ್ಯುವನ್ನೆಯ್ದುವುದೇ ಸಾಧುವೆಂದು ಘೋಷಿಸಿದವರಿದ್ದಾರೆ ಈ ಯಾವದೊಂದು ದೂಷಣೆಗೂ ನಿರುತ್ಸಾಹಗೊಳ್ಳುವವರು ಮಹಾತ್ಮರಲ್ಲ ಅವರ ಆತ್ಮ ವಿಶ್ವಾಸವು ಅಚಲವಾದುದು ನಮ್ಮ ದೇಶದ ರಾಜಕೀಯ ಸಾಗರವನ್ನು ತಮ್ಮ ಏಕಮಾತ್ರ ಆತ್ಮ ಬಲದಿಂದ ಕದಡಿ ಅದರಿಂದ ಹೊರಬಂದ ವಿಷ ಪ್ರಭಾವವನ್ನು ಕುಡಿದು ಅಮೃತ ಸಮಾನಪರಿಸ್ಥಿತಿಯನ್ನವರು ತರಿಸಲು ಸಮರ್ಥರಾಗಿರುವರು ಅವರ ಈ ಮಹೋಗ್ರ ತಪಸ್ಸಿನ ಯಶಸ್ಸು ಭಾರತ ಭಾವೀ ಇತಿಹಾಸದ ಮೇಲೆ ಶಾಶ್ವತ ಪರಿಣಾಮವನ್ನುಂಟುಮಾಡುತ್ತದೆಂಬುದು ನಿರ್ವಿವಾದ.

ಮೊಗಲರ ದಬ್ಬಾಳಿಕೆಯನ್ನೆದುರಿಸಿ ಸನ್ಯಾಸಿ ಜೀವನದ ಧ್ಯೇಯಕ್ಕೆ ಬದ್ಧಕಂಕಣ ನಾದ ಪ್ರತಾಪಸಿಂಹನ ಅಮರ ಕೀರ್ತಿಯ ಪ್ರತಿಜ್ಞೆಯ ಪರಿಣಾಮದಿಂದ ಅಜೇಯವಾದ ಮೊಗಲ್ ಸಾಮ್ರಾಜ್ಯಶಾಹಿಯ ಬಲವು ಕುಂದಿ ಕಂದಿ ಹೋಗುವಂತಾಯಿತು ಇನ್ನು ಮಹಾತ್ಮರ ಮುಂದಿನ ಹೆಜ್ಜೆಯು ಪಾಕಿಸ್ತಾನದ ಜಾತಿ ಪ್ರಧಾನ ನೀತಿ ಧೋರಣೆಯನ್ನು ಶಮನಗೊಳಿಸುವುದಕ್ಕೆ ಕೈಕೊಳ್ಳಲ್ಪಡುವುದೆಂದು ನಿಸ್ಸಂದೇಹವಾಗಿ ನಿರೀಕ್ಷಿಸಬಹುದು ಈಗಿನ ದಕ್ಷಿಣ ಆಫ್ರಿಕದಲ್ಲೂ ಭೀಕರವಾದ ಆತ್ಮ ಶೋಷಣೆ [illegible] ಅತೀವ ಕಳವಳಕ್ಕೀಡಾದ [illegible] ದೇಶದಲ್ಲೇ ಕೈಕೊಳ್ಳಲ್ಪಡುವುದು ಮತ್ತು [illegible] ವಿಶ್ವಾದರ್ಶ [illegible] ಉಜ್ವಲ ಪ್ರಕಾಶದಿಂದ ಮೆರೆಯುವುದೆಂದು ವಿಶ್ವಾಸಪೂರ್ವಕವಾಗಿ ಭಾವಿಸಬಹುದು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕೆ ಅನ್ವಯಿಸಿ R I O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಆರಭ್ಯ ಘಾಟಿ ಸೆಕ್ಷನುಗಳಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0-1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ವಾಯಿಂಟ್ ಮ್ಯಾನೇಜರ್ಸ್,

ಮಂಗಳೂರು.
23-12-1947

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs 5,000/- and over are now accepted at all Offices of the Bank at the following rates:-

3 & 4 months . . . . 2¼% p. a.

5 & 6 months . . . . 2½% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೆಗಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

★ ಹೊಸ ವರ್ಷದ ಶುಭಾಶಯ ★

ನಮ್ಮೆಲ್ಲಾ ಪೋಲಿಸಿದಾರರಿಗೂ, ಏಜೆಂಟರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಮತ್ತು ಹಿತಾಕಾಂಕ್ಷಿಗಳಿಗೂ ಸ್ವತಂತ್ರ ಭಾರತದ ಮೊದಲ ಹೊಸ ವರ್ಷದಲ್ಲಿ ಸುಖ ಸಮೃದ್ಧಿಗಳಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನ, ಮೈಸೂರು, ಟ್ರಾವನ್ಕೂರ್, ಕೊಚ್ಚಿನ್ ಮತ್ತು ಪುದುಕೋಟೆ ಸಂಸ್ಥಾನಗಳ ಚೀಫ್ ಏಜಂಟರು

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಬೊಂಬಾಯಿ, ಬೆಂಗಳೂರು, ಕಲ್ಕತ್ತ, ಮಧುರಾ, ಮಂಗಳೂರು, ಟ್ರಿವೆಂಡ್ರಮ್, ಮದ್ರಾಸು.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶ್ರೀಕಟಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

... Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 30—1—1948 [ಸಂಚಿಕೆ 4]

★ ಮಹಾತ್ಮಾ ಗಾಂಧಿಯವರ ನಿಧನ ★

ಇದೇ ಜನವರಿ ತಾ. ೩೦ನೇ ಶುಕ್ರವಾರ ಸಾಯಂಕಾಲ ೫ ಗಂಟೆಯ ಸ್ವಲ್ಪ ಬಳಿಕ ಮಹಾತ್ಮಾ ಗಾಂಧಿಯವರು ಎಂದಿನಂತೆ ಪ್ರಾರ್ಥನಾ ಸಭೆಗೆ ಹೋಗಿ ವೇದಿಕೆಯನ್ನೇ ರಲ್ಲಿಕೊಂಡೂ ತರುಣನೊಬ್ಬನು ಅವರ ಮೇಲೆ ಮೂರು ಬಾರಿ ಗುಂಡು ಹೊಡೆದನು. ಒಂದು ಅವರ ಎದೆಗೂ ಎರಡು ಅವರ ಉದರಕ್ಕೂ ತಗಲಿದುವು. ಅವರು ಅಲ್ಲಿಯೇ ಬಿದ್ದರು. ಅಲ್ಲಿಂದೆತ್ತಿ ಅವರನ್ನು ಕೊಂಡೊಯ್ಯುತ್ತಿರುವಾಗಲೇ ಅವರು ಮೃತವಶರಾದರು. ಈಶ್ವರೇಚ್ಛೆ.

ಈ ರೀತಿ ಅದೇ ಸಂಜೆ ಗಂಟೆ ೬ಕ್ಕೆ ಆಲ್ ಇಂಡಿಯಾ ರೇಡಿಯೋದವರು ವಾರ್ತೆಯನ್ನು ಪ್ರಕಟಿಸಿದರು. ಅಖಿಲ ಜಗತ್ತಿನಲ್ಲಿ ಅಲ್ಲಲ್ಲಿಯ ರೇಡಿಯೋಗಳು ಬೇರೆ ಕಾರ್ಯಕ್ರಮಗಳನ್ನೆಲ್ಲ ನಿಲ್ಲಿಸಿ ಈ ವಾರ್ತೆಯನ್ನು ಪ್ರಕಟಿಸಿದುವು. ಮಹಾತ್ಮರ ನಿಧನದಿಂದ ಇಡೀ ಜಗತ್ತೇ ಸಂತಾಪಕ್ಕೊಳಗಾಯಿತು.

ಮಾರನೆಯ ದಿನ ಬೆಳಗ್ಗೆ 11½ ಗಂಟೆಗೆ ಬಿರ್ಲಾ ಗೃಹದಿಂದ ಸ್ಮಶಾನ ಯಾತ್ರೆಯು ರಾಜವೈಭವದಿಂದ ಹೊರಟಿತು. ಯಮುನಾ ನದಿಯ ತೀರದಲ್ಲಿ ರಾಜಘಾಟಿನಲ್ಲಿ ಸಂಜೆ ಗಂಟೆ ೪ಕ್ಕೆ ಅವರ ದೇಹವನ್ನು ಅಗ್ನಿಗೆ ಆಹುತಿ ಕೊಟ್ಟರು. ಇಡೀ ಭಾರತದಲ್ಲಿ ಎಲ್ಲೆಡೆಗಳಲ್ಲಿಯೂ ಎಲ್ಲಾ ಬಗೆಯ ವ್ಯವಹಾರಗಳು ನಿಲ್ಲಿಸಲ್ಪಟ್ಟು ಈ ದಿನವನ್ನು ಜನರೆಲ್ಲರೂ ಮೌನದಲ್ಲಿಯೇ ಕಳೆದರು.

ಇಲ್ಲಿಗೆ ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆ ಮುಕ್ತಾಯವಾಯಿತು. ಹಿಂದುಸ್ಥಾನದ ಇತಿಹಾಸದಲ್ಲಿ ಒಂದು ಮಹಾ ಅಧ್ಯಾಯವೂ ಮುಗಿಯಿತು.

ಮಹಾತ್ಮಾ ಗಾಂಧಿಯವರು ಭಗವದ್ಗೀತೆಯ ಭಕ್ತರು. ದೇಹಾತ್ಮ ವಿಭೇದವನ್ನು ಚೆನ್ನಾಗಿ ತಿಳಿದು ದೇಹಾಭಿಮಾನವನ್ನು ತೊರೆದವರು. ಮರಣಕ್ಕಾಗಿ ದುಃಖಪಡುವುದು ಸರಿಯಲ್ಲವೆಂದು ಅವರು ಎಷ್ಟೋ ಬಾರಿ ಉಪದೇಶಿಸಿದ್ದಾರೆ. ಈ ದೇಹದಿಂದ ಎಲ್ಲಿ ತನಕ ಸೇವೆ ಸಲ್ಲಿಸಬೇಕೆಂದು ಈಶ ಸಂಕಲ್ಪವಿದೆಯೋ ಅಲ್ಲಿ ತನಕ ತನ್ನ ಮರಣವನ್ನು ಯಾರೂ ತಂದೊಡ್ಡಲಾರರೆಂದೂ ತನ್ನ ಸೇವೆ ಸಾಕೆಂದು ದೈವೇಚ್ಛೆ ಇದ್ದಾಗ ಯಾರೂ ತನ್ನನ್ನು ಒಂದು ಕ್ಷಣವಾದರೂ ಬದುಕಿಸಲಾರರೆಂದೂ ಮಹಾತ್ಮ ಗಾಂಧಿಯವರು ಕೆಲವೇ ದಿನಗಳ ಹಿಂದೆ ಅವರ ಮೇಲೆ ಬಾಂಬು ಎಸೆಯುವ ಯತ್ನ ನಡೆದಾಗ ಹೇಳಿದ್ದರು. ಅಂದ ಮೇಲೆ ಗಾಂಧೀ ನಿಧನವನ್ನು ಈಶ್ವರೇಚ್ಛೆಯೆಂದು ಹೇಳಿದ ಮಾತು ಅಕ್ಷರಶಃ ಸತ್ಯವಿರುತ್ತದೆ.

2-10-1869 — 30-1-1948

ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞ ವರ್ಣನೆಯನ್ನು ಗಾಂಧೀಜಿಯವರು ಪ್ರತಿನಿತ್ಯದ ಪ್ರಾರ್ಥನೆಯಲ್ಲಿ ಹೇಳುತ್ತಿದ್ದರು. ಈ ಬಗೆಯ ಸ್ಥಿತಪ್ರಜ್ಞನಾಗಲು ಅವರು ಪೂರ್ಣ ಯತ್ನಮಾಡುತ್ತಿದ್ದರು. ಆ ವರ್ಣನೆಯ ಕೊನೆಯ ಶ್ಲೋಕದಲ್ಲಿ ಹೇಳಿದ ಬ್ರಹ್ಮನಿರ್ವಾಣವನ್ನು ಅವರು ಸಿದ್ಧಿಸಿದರೆಂಬ ಬಗ್ಗೆ ಸಂಶಯವಿಲ್ಲ. ಅವರ ಮೃತ ಶರೀರದ ಮುಖದಲ್ಲಿ ಪೂರ್ಣ ಶಾಂತಿ ಕಾಣುತ್ತಿತ್ತೆಂದು ಕಂಡವರು ಹೇಳಿದ್ದಾರೆ.

ಇಂಥ ವಿಭೂತಿ ಪುರುಷರು ತನ್ನ ಅಂಶಸಂಭೂತರೆಂದು ಅದೇ ಗೀತೆಯಲ್ಲಿ ಹೇಳಿದಂತೆ ಮಹಾತ್ಮಾ ಗಾಂಧಿಯವರು ನಿಜವಾಗಿಯೂ ಅವತಾರ ಪುರುಷರೆಂದರೆ ಅತಿಶಯೋಕ್ತಿಯಲ್ಲ. ಯಾವ ಉದ್ದೇಶಕ್ಕಾಗಿ ಅವರು ಅವತಾರ ತಾಳಿದರೋ ಆ ಲೋಕ ಸಂಗ್ರಹ ಕಾರ್ಯಕ್ಕೆ ಅವರು ಇದುವರೆಗೆ ಸಾಧಿಸಿದ ಕಾರ್ಯ ಸಾಕಾಗಿರುವುದರಿಂದ ಅವರ ಅವತಾರದ ಅವಸಾನ ವಿಂಧಿಗೆ ಆಯಿತೆಂದೇ ತಿಳಿದುಕೊಳ್ಳಬೇಕು.

ತನಗೆ ಸ್ವರಾಜ್ಯವು ಬೇಡ. ಮೋಕ್ಷವೂ ಬೇಡ. ದುಃಖಿತರ ದುಃಖನಿವಾರಣೆಯೇ ತನಗೆ ಬೇಕಾದುದು. ಈ ರೀತಿ ಅರ್ಥದ ಒಂದು ಶ್ಲೋಕವನ್ನು ಮಹಾತ್ಮಾ ಗಾಂಧಿಯವರು ಪ್ರತಿನಿತ್ಯದ ಬೆಳಗಿನ ಜಾವದ ಪ್ರಾರ್ಥನೆಯಲ್ಲಿ ಹೇಳುತ್ತಿದ್ದರು. ಇದೇ ಅವರ ಜೀವನದ ಸೂತ್ರವಿದ್ದಿತು. ಅವರ ಪ್ರೀತಿಯ ಹಾಡಾಗಿದ್ದ "ವೈಷ್ಣವ ಜನತೋ" ಎಂಬ ಹಾಡು ಜನಸಾಮಾನ್ಯರಿಗೆ ಕೂಡಾ ತಿಳಿಯುವಂತೆ ಗಾಂಧಿ ಸಂದೇಶವನ್ನು ಸಾರುತ್ತಿದೆ.

ಸತ್ಯ ಮತ್ತು ಅಹಿಂಸಾಧರ್ಮಗಳ ಪುನರುತ್ಥಾನವೇ ಅವರ ಧ್ಯೇಯ. ಈ ಧರ್ಮವನ್ನು ಸ್ವಲ್ಪ ಮಾತ್ರ ಆಚರಿಸಿದ ಭಾರತವು ಇತಿಹಾಸದಲ್ಲೇ ಆಶ್ಚರ್ಯಕರವೆಂಬ ರೀತಿಯಲ್ಲಿ ಬಂಧವಿಮೋಚನೆಯನ್ನು ಪಡೆಯಿತು.

ಧರ್ಮಗ್ಲಾನಿಯಲ್ಲಿದ್ದ ಭಾರತವು ಆಚರಿಸಿದ ಅಹಿಂಸಾ ಧರ್ಮವು ತುಂಬಾ ದೋಷಯುಕ್ತವಾಗಿತ್ತು. ಆದಕಾರಣದಿಂದಲೇ ಭಾರತವು ಸ್ವಾತಂತ್ರ್ಯ ಪಡೆದಂದಿನಿಂದಲೇ ಜೊತೆಯಲ್ಲಿ ಜಾತೀಯ ದ್ವೇಷಾಗ್ನಿಯ ಜ್ವಾಲೆಯು ಭಯಾನಕ ರೀತಿಯಲ್ಲಿ ಎದ್ದಿತು. ಈ ಜ್ವಾಲೆಯನ್ನಡಗಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ಪೂರ್ಣಾಹುತಿಯಾಗಿ ತನ್ನ ದೇಹವನ್ನೇ ಇದಕ್ಕೆ ಈಗ ಬಲಿಕೊಟ್ಟರುವರು. ಇದರಿಂದಾಗಿಯಾದರೂ ಇದು ಶಾಂತವಾಗುವುದೇ? ಶಾಂತವಾಗುವುದು. ಭಾರತವು ಧರ್ಮಜಾಗೃತನಾಗಿ ಎದ್ದರೆ ಜಗತ್ತಿಗೆ ಮತ್ತೆ ಆಸೆ ಇದೆಯೇ?

ಕಳೆದ ಮೂವತ್ತು ವರ್ಷಗಳಿಂದ ಮಹಾತ್ಮಾ ಗಾಂಧಿಯವರು ಈ ದೇಶದ ಏಳಿಗೆಗಾಗಿ ಎಡೆಬಿಡದೆ ದುಡಿದಿದ್ದಾರೆ. ಮನುಷ್ಯತ್ವವನ್ನು ಕಳೆದುಕೊಂಡು ಗುಲಾಮರಾಗಿದ್ದವರಲ್ಲಿ ಮನುಷ್ಯತ್ವವನ್ನು ತುಂಬಿಸಿ ನಮ್ಮನ್ನು ಒಂದು ಸ್ವತಂತ್ರ ಜನಾಂಗವನ್ನಾಗಿ ಮಾಡುವುದರಲ್ಲಿ ಅವರು ಕೃತಕೃತ್ಯರಾಗಿದ್ದಾರೆ.

ಗಳಿಸಿದ ಸ್ವಾತಂತ್ರ್ಯವನ್ನು ಹೇಗೆ ಬಳಸಬೇಕೆಂಬ ಬಗ್ಗೆ ಅವರು ಸಜ್ಜನಗಿಯೂ

(೬ನೇ ಪುಟ ನೋಡಿ)

(ಗನೇ ಪುಟದಿಂದ)

ಮಹಾತ್ಮಾ ಗಾಂಧೀಜಿಯವರ ನಿಧನ

ಹೇಳಿಕೊಡಬೇಕಾದ ಅವಶ್ಯಕತೆ ಉಳಿದಿಲ್ಲ. ಅವರ ವಿಶಿಷ್ಟ ರೀತಿಯಲ್ಲಿ ಸಾಧ್ಯಸಾಧನಗಳೆರಡೂ ಒಂದೇ ಇದ್ದು ಸ್ವಾತಂತ್ರ್ಯ ಸಂಪಾದನೆಯ ದಾರಿಯಲ್ಲಿಯೂ ಸ್ವಾತಂತ್ರ್ಯ ಅನುಭವಿಸಬೇಕಾದ ದಾರಿಯಲ್ಲಿಯೂ ಭೇದವಿಲ್ಲ.

ಆಧುನಿಕ ಜಗತ್ತಿನ ಪರಿಸ್ಥಿತಿಯಲ್ಲಿ ಧಾರ್ಮಿಕ ಜೀವನ ಕ್ರಮದ ಒಂದು ಗಾಂಧೀ ದರ್ಶನ ಶಾಸ್ತ್ರವನ್ನೇ ಅವರು ನಮ್ಮ ಜನಾಂಗಕ್ಕೆ ಏಕೆ ಇಡೀ ಲೋಕಕ್ಕೆ ದಾನವಾಗಿ ಕೊಟ್ಟಿದ್ದಾರೆ ಜೀವನದ ಎಲ್ಲಾ ಬಗೆಯ ಪ್ರಶ್ನೆಗಳಿಗೆ ಆ ದರ್ಶನ ಶಾಸ್ತ್ರವನ್ನುಪಯೋಗಿಸಿ ಹೇಗೆ ಉತ್ತರ ಕೊಡಬಹುದೆಂಬುದನ್ನೂ ಅವರು ಸ್ವಂತ ಆಚಾರ ಮತ್ತು ವಿಚಾರಗಳಿಂದ ತೋರಿಸಿದ್ದಾರೆ. ಅಂದ ಮೇಲೆ ಈ ಶಾಸ್ತ್ರದ ಅನುಷ್ಠಾನವು ನಮ್ಮ ಪಾಲಿನ ಕರ್ತವ್ಯ ಅದು ನಮ್ಮಿಂದಲೇ ಆಗಬೇಕಾದುದು ಗಾಂಧೀಜೀಯವರು ಅದಕ್ಕೆ ಬೇಡ.

ಮಹಾತ್ಮಾ ಗಾಂಧಿಯವರು ಸ್ವರ್ಗಸ್ಥರಾದರು ಗಾಂಧೀಜಿಯವರು ಚಿರಾಯುವಾಗಲಿ ಈ ಬಗೆಯ ಘೋಷಗಳನ್ನು ನಾವು ಕೇಳುತ್ತಿದ್ದೇವೆ ಇದರ ಅರ್ಥವು ಇಷ್ಟೇ ಇರುತ್ತದೆ ಗಾಂಧೀ ಸಂದೇಶದಂತೆ ಈ ದೇಶದ ಜನರು ವರ್ತಿಸುವಂತಾಗಲಿ ಮತ್ತು ತನ್ಮೂಲಕ ಭಯಾನಕವಾದ ಎಟಂ ಬಾಂಬಿನ ಮೂರನೇ ಮಹಾಯುದ್ಧದತ್ತ ಕಡೆ ಧಾವಿಸುವ ಜಗತ್ತನ್ನು ಭಾರತವು ಉದ್ಧರಿಸುವಂತಾಗಲಿ ಎಂದೇ ಇರುತ್ತದೆ ಈ ರೀತಿ ಆಗುತ್ತದೆಂಬುದು ನಮ್ಮ ವಿಶ್ವಾಸ

ಸ್ವಾತಂತ್ರ ಪ್ರಾಪ್ತಿಯಾಗುವ ತನಕ ಗಾಂಧಿಯವರನ್ನು ಇಲ್ಲಿಯ ಜನರು ಅನುಸರಿಸಿದರು ಆಗ ತೋರಿದ ತ್ಯಾಗ, ಸೇವಾ ಭಾವ, ಇವೆಲ್ಲ ಈಗ ಎಲ್ಲಿ? ಅಧಿಕಾರದ ಲಾಲಸೆ ನಮ್ಮವರ ತಲೆ ಕೆಡಿಸುತ್ತಿದೆ ಎಂಬ ದೂರು ಎಲ್ಲೆಡೆಗಳಿಂದಲೂ ಕೇಳಿಬರುತ್ತಿದೆ ಇಲ್ಲದ ಅಧಿಕಾರ ಕೈಗೆ ಬಂದೊಡನೆ ಒಮ್ಮೆ ಇಂಥ ಮತ್ತತೆ ಬರಬಹುದು ಆದರೆ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಎಚ್ಚೆತ್ತ ಭಾರತವು ಪುನಃ ನಿದ್ರಿಸಲಾರದು ಸ್ವಾರ್ಥ ಸಾಧಕರ ಆಟ ಕೇವಲ ಕ್ಷಣಿಕವಾಗಿ ಮಾತ್ರ ನಡೆಯಬಹುದು ಇನ್ನು ಮುಂದೆ ಬಹಳ ಕಾಲ ಇಂಥ ಆಟ ಸಾಗಲಾರದು ಗಾಂಧಿ ಶಕ್ತಿಯು ಇಲ್ಲಿ ದೀರ್ಘ ಕಾಲದ ತನಕ ಜೀವಂತ ಶಕ್ತಿಯಾಗಿಯೇ ಉಳಿಯುವುದೆಂಬ ಬಗ್ಗೆ ಸಂಶಯ ಬೇಡ

ಗಾಂಧೀಜೀಯವರ ಮೇಲೆ ನಡೆಸಿದ ಈ ಅತ್ಯಾಚಾರದ ವಿಚಾರದಲ್ಲಿ ಒಂದು ಮಾತನ್ನಾದರೂ ಹೇಳಲೇಬೇಕು ಮಹಾತ್ಮಾ ಗಾಂಧಿಯಂಥವರಿಗೆ ಈ ದುರಂತ ಪ್ರಾಪ್ತಿ ನ್ಯಾಯವೇ? ಎಂಬ ಶಂಕೆ ಬರುವುದು ಸಹಜ. ಇದಕ್ಕಾಗಿ ದುಃಖಿಸಬೇಕಾಗಿಲ್ಲ ಹಿಂದೂ ಮುಸ್ಲಿಂ ಸಹೋದರರು ಹೊಡೆದಾಡಿಕೊಳ್ಳುವಾಗ ನಡುವೆ ಶಾಂತಿ ಸ್ಥಾಪನೆಗಾಗಿ ನುಗ್ಗಿ ಪ್ರಾಣವರ್ಪಿಸಿದರೆ ಧನ್ಯನಾಗುವೆನೆಂಬ ಭಾವನೆಯನ್ನು ಅವರೇ ಹಲವು ಬಾರಿ ವ್ಯಕ್ತಪಡಿಸಿದ್ದಾರೆ. ಗಣೇಶ ಶಂಕರ ವಿದ್ಯಾರ್ಥಿಯಂಥವರ ಮರಣಕ್ಕಾಗಿ ಅವರು ಹಿಗ್ಗಿದ್ದಾರೆ. ಎಂಬುದರಿಂದ ಅವರ ದೃಷ್ಟಿಯಲ್ಲಿ ಇದು ಉತ್ತಮ ರೀತಿಯ ಮರಣವೆಂಬ ಮಾತು ಸ್ಪಷ್ಟವಿರುತ್ತದೆ. ಕ್ರಿಸ್ತನ ಮರಣದಂಥ ಮರಣಕ್ಕೆ ದುರಂತವೆನ್ನುತ್ತಾರೆಯೆ?

ಗಾಂಧೀಜಿಯವರ ಮೇಲೆ ಗುಂಡು ಹಾರಿಸಿದ ಆ ಹಿಂದೂ ಯುವಕನಾದರೂ ತಾನು ಹಿಂದೂಜನರ ಶ್ರೇಯಸ್ಸಿಗಾಗಿ ಈ ಕಾರ್ಯವನ್ನು ಮಾಡುತ್ತಿರುವನೆಂದು ಬಗೆದಿರಬೇಕೆಂಬುದು ಸ್ಪಷ್ಟ. ತಾನು ಪ್ರಾಣ ಕೊಡಬೇಕಾದ ಪ್ರಸಂಗ ಬರುತ್ತದೆಂದು ಇವನಿಗೆ ಗೊತ್ತಿಲ್ಲದೆ ಇರಲಿಕ್ಕಿಲ್ಲ ಮಾತ್ರವಲ್ಲ ಗಾಂಧೀಜಿಯವರ ಕೊಲೆ ಮಾಡಿದ ಪಾತಕಿ ಎಂದು ಇಡೀ ಜಗತ್ತೇ ತನ್ನನ್ನು ನಿಂದಿಸುವುದೆಂಬುದನ್ನು ಇವನು ಊಹಿಸಿರಬಹುದು. ಇಷ್ಟಿದ್ದೂ ಇವರನ್ನು ತೆಗೆಯದೆ ಹಿಂದುಗಳ ಉದ್ಧಾರವಾಗಲಾರದೆಂಬ ದೃಢನಿರ್ಧಾರದಿಂದ ಫಲದತ್ತ ನೋಡದೆ ತಾನು ಗೀತಾ ಬೋಧೆಯಂತೆ ವರ್ತಿಸುತ್ತಿರುವೆನೆಂಬ ಭಾವನೆ ಇವನಲ್ಲಿ ಮೂಡಿರಬಹುದು ಈ ಭಾವನೆಗಳಲ್ಲಿ ನಿಜವಾದ ದೋಷವೆಂದರೆ ಅಹಂಭಾವ ಮತ್ತು ಅಭಿಮಾನ ಇವುಗಳಿಂದ ಕಲುಷಿತವಾದ ದೃಷ್ಟಿಗೆ ಕೊಲೆಪಾತಕವು ಧರ್ಮವೆಂದಿಗೂ ಆಗಲಾರದೆಂಬ ಸತ್ಯವು ಗೋಚರಿಸಲಿಲ್ಲ ಇದು ಎಂದೂ ಅನಾಸಕ್ತ ಕರ್ಮವಾಗಲು ಸಾಧ್ಯವಿಲ್ಲವೆಂಬುದು ಅವನಿಗೆ ತಿಳಿಯಲಿಲ್ಲ ಹೀಗೆ ಜ್ಞಾನರಹಿತ ಕಾರ್ಯವಿದ್ದು ಇದು ಕೇವಲ ತಾಮಸ ಕಾರ್ಯವೆಂಬ ಬಗ್ಗೆ ಯಾವ ಸಂಶಯವೂ ಬೇಡ ಹಿಂದುಗಳ ಉದ್ಧಾರದ ಹೆಸರಲ್ಲಿ ಶುದ್ಧ ಸನಾತನ ಹಿಂದೂ ಧರ್ಮವೇ ಮೂರ್ತಿವೆತ್ತಂತಿದ್ದ ಮಹಾತ್ಮಾ ಗಾಂಧಿಯವರ ಕೊಲೆ ಮಾಡುವಂಥ ಭಯಂಕರ ಕೆಲಸ ಇವನ ಕೈಯಿಂದ ನಡೆಯಿತು ಅಂಧಜಾತೀಯತಾ ಭಾವನೆಯ ಪರಿಣಾಮವಿದು ಇಂದು ಮಹಾತ್ಮಾ ಗಾಂಧಿಯವರ ನಿಧನಕ್ಕಾಗಿ ಇದೊಬ್ಬ ಯಃಕಶ್ಚಿತ್ ಯುವಕನನ್ನು ಮಾತ್ರ ದೂರಿದರೆ ಸರಿಯಲ್ಲ ಹಿಂದೂ ಮುಸ್ಲೀಮರ ಇತ್ತಂಡಗಳಲ್ಲಿಯೂ ಈ ಅಂಧಜಾತೀಯತೆಯ ಪಾಶಕ್ಕೆ ಸಿಕ್ಕಿ ವರ್ತಿಸಿದವರೆಲ್ಲರೂ ಈ ಘೋರಕೃತ್ಯದಲ್ಲಿ ಸಹಭಾಗಿಗಳೆಂಬುದನ್ನು ನಾವು ಸ್ಪಷ್ಟಪಡಿಸುವುದು ಅಗತ್ಯ ಅಕ್ಷತೂ ಈ ಯುವಕನ ಹೆಸರೂ ಇತಿಹಾಸದಲ್ಲಿ ಸೇರುವುದೆಂಬುದು ನಿಜ ಪರಮಾತ್ಮನೊಡನೆ ಕಾದಾಡಿದ ರಾಕ್ಷಸರಿಗೆ ಮುಕ್ತಿಯಿತ್ತಂತೆ ಗಾಂಧೀಯವರ ಕೊಲೆ ಮಾಡಿದನೆಂದ ಮೇಲೆ ಇವನಿಗೆ ಇತಿಹಾಸದಲ್ಲಿ ಹೀನ ಸ್ಥಾನ ದೊರೆಯುವುದು ಆಶ್ಚರ್ಯವಲ್ಲ

ಹಿಂದೂ ಮುಸ್ಲಿಮರೊಳಗಿನ ದ್ವೇಷವು ಇನ್ನಾದರೂ ಶಾಂತವಾಗಿ ದೇಶದಲ್ಲಿ ಶಾಂತಿಯು ನೆಲಸಲಿ ಭಾರತವು ಗಾಂಧೀಜಿಯವರು ತೋರಿಸಿಕೊಟ್ಟ ಮಾರ್ಗದಲ್ಲಿ ನಡೆದು ಲೋಕಸ ಗ್ರಹವನ್ನು ಸಾಧಿಸುವಂತಾಗಲಿ ಇದಕ್ಕಾಗಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಗಾಂಧಿಯಂತಾಗಲು ಯತ್ನಿಸಲಿ ಗಾಂಧೀಜಿಯವರು ಚಿರಾಯುವಾಗಲಿ ಎಂದು ಎಲ್ಲರೂ ಪ್ರಾರ್ಥಿಸೋಣ

ಕಿರುಸುದ್ದಿ ಸಂಗ್ರಹ

ಈಗ ಯುರೋಪ್, ಅಮೇರಿಕಾ ಇಂಗ್ಲೆಂಡುಗಳಲ್ಲಿ ಬೇಟೆ ನಾಯಿ ಓಟದ ಪಂದ್ಯಾಟಗಳು ಬಹಳ ಜನ ಪ್ರಿಯವಾಗಿದೆ. ಇವು ಮೊತ್ತ ಮೊದಲು ಇಂಗ್ಲೆಂಡಿನಲ್ಲಿ 1927ರಲ್ಲಿ ಪ್ರಾರಂಭವಾದುವು

✠

ಕಟಕ್ ನಗರದಲ್ಲಿ ಆರು ಮರಿಗಳ ತಾಯಿಯಾದ ಒಂದು ಹೆಣ್ಣು ನಾಯಿಯು ಒಂದು ದಿಕ್ಕಿಲ್ಲದ ಬೆಕ್ಕಿನ ಮರಿಯನ್ನು ಸಾಕುವ ಹೊಣೆಗಾರಿಕೆ ವಹಿಸಿದೆ ಬೆಕ್ಕಿನ ಮರಿಗೆ ಅದು ಹಾಲುಣ್ಣಿಸಿ ಪಾಲನೆ ಮಾಡುತ್ತಿರುವುದು

✠

ಲಂಡನ್ ನಗರದ ಜನ ಸಂಖ್ಯೆ 1947 ರಲ್ಲಿ 1 ಕೋಟಿ ಎರಡು ಲಕ್ಷದಷ್ಟಾಗಿದೆ. ಯುದ್ಧ ಪೂರ್ವದಲ್ಲಿ ಅದು ಕೇವಲ 80 ಲಕ್ಷದಷ್ಟಿತ್ತು

✠

ಲೆಂಕೆ ಶಾಯರಿನ ಓರ್ವ 30 ವರ್ಷದ ಗರ್ಭಿಣಿ ಮಹಿಳೆಗೆ ಆವೆ ಮಣ್ಣಿನ ಸಿಗರೇಟು ನಳಿಗೆಯನ್ನು ತಿನ್ನುವ ವಿಚಿತ್ರ ಬಯಕೆಯುಂಟಾಗಿದೆ ನಳಿಗೆ ಸಿಗದಿದ್ದಾಗ ಅವಳು ಪಾತ್ರೆ ತಿಕ್ಕಲು ಉಪಯೋಗಿಸುವ ಬರಿ ಆವೆ ಮಣ್ಣನ್ನು ತಿನ್ನುವಳೆಂದು ಬ್ರಿಟಿಷ್ ಮೆಡಿಕಲ್ ಜರ್ನಲಿನ ಒಂದು ಲೇಖನದಲ್ಲಿ ತಿಳಿಸಲಾಗಿದೆ

✠

ಮದನಪಳ್ಳಿಯ ಹತ್ತಿರ ಎರಡು ಮೈಲು ದೂರದ ಒಂದು ಸ್ಥಳದಲ್ಲಿ ಪ್ರತಿ ಶುಕ್ರವಾರ ದಿವಸ ಅನೇಕ ವ್ಯಾಧಿ ಗ್ರಸ್ತರು ನೆರೆಯುತ್ತಿರುವರು ಅವರ ವ್ಯಾಧಿಗಳು ಅಲ್ಲಿ ಸುತ್ತು ತೆಗೆದಾದ ಗುಣಹೊಂದುತ್ತವೆಯಂತೆ ಓರ್ವ ಹಿಂದೂ ಮಹಿಳೆಯು ಅಲ್ಲಿ ಕುರಾನವನ್ನು ಪಠಿಸುತ್ತಿರುವಳಂತೆ ಅವಳಿಗೆ ಉರ್ದು ಭಾಷೆ ಗೊತ್ತಿರುವುದಿಲ್ಲ

✠

ಡಿಲ್ಲಿಯಲ್ಲಿ ಖಾಲಿಯಿರುವ ಎಲ್ಲಾ ಮನೆಗಳನ್ನು ನಿರಾಶ್ರಿತರಿಗೆ ಒದಗಿಸುವ ಯೋಜನೆ ನಡೆದಿದೆ.

✠

ಇಂಗ್ಲೆಂಡಿನಲ್ಲಿ ತರುಣ ಕೃಷಿಕರ 1300 ಸಂಘಗಳಿವೆ 70 ಸಾವಿರ ಕೃಷಿಕರು ಅದರ ಸದಸ್ಯರಾಗಿರುವರು

✠

ಲಂಡನಿನ ಓರ್ವ ಮಹಿಳೆಗೆ ಐದನೇ ಸಲಕ್ಕೆ ಅವಳಿ ಜವಳಿ ಮಕ್ಕಳು ಹುಟ್ಟಿವೆ. ಇವಳ ಪ್ರಾಯ 40 ವರ್ಷ. ಇವಳ ದಾಖಲೆಯನ್ನು ದರ್ಬಾರಿನಲ್ಲಿರುವ 30 ವರ್ಷದ ಹಿಂದೀ ಮಹಿಳೆಯೊಬ್ಬಳು 2 ವರ್ಷಕ್ಕೆ ಹಿಂದೆಯೇ ಮುರಿದಿದ್ದಾಳೆ ಅವಳಿಗೂ ಐದು ಅವಳಿ ಜವಳಿ ಜೊತೆಗಳು ಹುಟ್ಟಿವೆ

✶

NOTICE

In the District Court of South Kanara

O P No 11 of 1948

Between

P B Pakirappa — Petitioner

and

1 Laxmi 2 Achanna Moili
3 Muthaya Moili — Respts

The above named Petitioner has made the above application for the grant of a Succession Certificate in respect of a debet due under a Fixed Deposit Receipt of Canara Bank Mulki to Petitioner s uncle K raga Moili who has left a last will dated 14 5-47 in respect of the said debt and wt 1e1 n 8 6 47 at Pavanje llagr ih said petitioner is post d r hearing on 24 2 1948 at 11 A M in the above Court Those wh are concerned to oppose the above petition may appear in person or by Vakil and file the r objections if any on the said gate Otherwise the detit 101 will be decided in their absence

(By order of Court)

Mangalore 25 11 1948 — M P. Kini, Vakil for Petitioner



ಇದೇ ತಾ 8 2-1948ನೇ ಆದಿತ್ಯವಾರ ಸಾಯಂಕಾಲ ಘಂ 6ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇವರ ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ - ಇವರ ಪಿಟೀಲು

ಶ್ರೀ ಕಲ್ಪಾತಿ ರಮಾನಾಥನ್ - ಇವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರನ್ - ಇವರ ಘಟವಾದ್ಯ

ಟಿಕೇಟು ದರ ಪೋಷಕ ವರ್ಗ ರೂ 100, I 25, II 10, III 5.

ಟಿಕೇಟುಗಳು: (1) ಶ್ರೀ ಪಿ. ಶ್ರೀನಿವಾಸರಾವ್ ಬಿ ಎ. ಬಿ. ಯಲ್ ಕೆ. ಯಸ್. ರಾವ್ ರಸ್ತೆ, ಮಂಗಳೂರು ಮತ್ತು
(2) ಶ್ರೀ ಬಿ. ರಾಮಚಂದ್ರರಾವ್, ಎಂ. ಎ ಬಿ ಎಲ್ ಅಡ್ವಕೇಟ್ ಪುತ್ತೂರು, ಇವರಲ್ಲಿ ದೊರಕುವವು.

ಮಜೂರರೊಡನೆ ೩ ವರ್ಷಗಳ ಒಪ್ಪಂದ

ದೇಶದ ಸಂಪತ್ತು ಹೆಚ್ಚಿಸಿ ಹಂಚಬೇಕು

ಮುಷ್ಕರಗಳಿಂದ ದೇಶಕ್ಕೆ ಹಾನಿಯಿದೆ

ಪಟೇಲ ನೆಹರುರವರ ಭಾಷಣಗಳು

"ಸ್ವತಂತ್ರ ಜನಾಂಗದ ಇತಿಹಾಸದಲ್ಲಿ ಮುಷ್ಕರಗಳನ್ನೂ ಕಾರ್ಖಾನೆಗಳ ಮುಚ್ಚುವಿಕೆಗಳನ್ನೂ ಮಾಡದೆ ಇರಬೇಕಾದ ಕಾಲವೊಂದು ಇರುವುದು. ಈಗ ಆ ಕಾಲವು ನಮ್ಮ ದೇಶಕ್ಕೆ ಬಂದಿದೆ ಆದುದರಿಂದ ಇನ್ನು ಮೂರು ವರ್ಷಗಳ ತನಕ, ನಮ್ಮ ರಾಷ್ಟ್ರದ ಪುನರ್ರಚನೆಯಾಗುವ ತನಕ ನಮ್ಮ ಮಜೂರ ಮ್ಹಾಲಕ ಮತ್ತು ಸರಕಾರಗಳು ಒಂದು ಶಾಂತಿ ಒಪ್ಪಂದವನ್ನು ಮಾಡಿ ತಯಾರಿಕೆಯನ್ನು ಹೆಚ್ಚಿಸಿ ದೇಶದ ಸಂಪತ್ತನ್ನು ಹೆಚ್ಚಿಸಲು ನಿರ್ಧಾರ ಬದ್ಧರಾಗಬೇಕು ಹಾಗಾದರೆ ಮಾತ್ರ ಸುವ್ಯವಸ್ಥಿತವಾದ ಆರ್ಥಿಕ ವಿಧಾನವೊಂದರಿಂದ ಈ ಸಂಪತ್ತನ್ನೂ ತೃಪ್ತಿಕರವಾಗಿ ಹಂಚಿಕೊಳ್ಳಬಹುದು." ಹೀಗೆಂದು ಪಂಡಿತ ನೆಹರೂರವರು ಹೃದಯಂಗಮವಾದ ತಮ್ಮ ಆಕಾಶವಾಣಿ ಭಾಷಣದಲ್ಲಿ ತಿಳಿಸಿದರು ಅವರ ಭಾಷಣದ ಸಾರಾಂಶ ಹೀಗಿದೆ —

ರಾಷ್ಟ್ರಾಭಿವೃದ್ಧಿ

ದಾಸ್ಯ ವಿಮುಕ್ತವಾದ ರಾಷ್ಟ್ರ ಅಭಿವೃದ್ಧಿ ಹೊಂದಲು ದೇಶದಲ್ಲಿ ಆಂತರೀಕ ಶಾಂತಿಯೂ, ಕೈಗಾರಿಕೆ ಶಾಂತಿಯೂ, ಮಜೂರ ಶಾಂತಿಯೂ ಅಂತರ್ರಾಷ್ಟ್ರೀಯ ಶಾಂತಿಯೂ ಅತ್ಯಾವಶ್ಯಕ ಒಂದು ನಿರ್ದಿಷ್ಟ ಅವಧಿಯ ತನಕ ನಮ್ಮ ಕೈಗಾರಿಕೆ ಕೃಷಿಗಾರಿಕೆಗಳು ಅವ್ಯಾಹತವಾದ ಉತ್ಪನ್ನ ಚಟುವಟಿಕೆಗಳಲ್ಲಿ ಮಗ್ನವಾಗಿರಬೇಕು ಅಂದ ಮಾತ್ರಕ್ಕೆ ಹೀಗೆ ಉತ್ಪತ್ತಿಸಲ್ಪಡುವ ಸಂಪತ್ತು ಯಾವ ವ್ಯಕ್ತಿಕ ಲಾಭಕ ಉಪಯೋಗಿಸಲ್ಪಡದೆ ಸಂಪೂರ್ಣ ರಾಷ್ಟ್ರ ಪುನರ ನಿರ್ಮಾಣಕ್ಕೇ ಉಪಯೋಗಿಸಲ್ಪಡುವುದು ತಯಾರಿ ಎಂದರೆ ಸಂಪತ್ತು ನಮಗೀಗ ಹೆಚ್ಚಿನ ಸಂಪತ್ತಿಲ್ಲ ಸಂಪತ್ತನ್ನು ಸಮಾನವಾಗಿ ಹಂಚುವ ಯೋಚನೆ ಮಾಡುವ ಮೊದಲು ಅದನ್ನು ತಯಾರಿಸುವ ಯೋಜನೆಗಳಿಂಗೆ ಕೊಡುದ

ಸಂಪದ್ಪ್ರವಾಹ

ನಮ್ಮ ಗದ್ದೆ ಹೊಲಗಳಿಂದಲೂ ಸರಂಜಾಮು ಕಾರ್ಖಾನೆಗಳಿಂದಲೂ ಸಂಪತ್ತಿನ ಪ್ರವಾಹವು ಹರಿ ಯುತ್ತಿರಬೇಕು ಅದು ನಮ್ಮ ಬಡ ಮಿಲಿಯಾವಧಿ ಜನರಿಗೆ ಸಿಗುವಂತಾಗಬೇಕು ಹಾಗಾದರೆ ಮಾತ್ರ ನಮ್ಮ ಇದುತನಕದ ಕನಸು ನೆನಪಾಗುವುವು

ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ನಿಷ್ಪ್ರಯೋಜಕ ಅರೆ ಹೊಟ್ಟೆಯ ವ್ಯಕ್ತಿಗೆ ಸಂಪತ್ತಿಲ್ಲದ ದೇಶಕ್ಕೆ ಸ್ವಾತಂತ್ರ್ಯವೆಂದರೇನು? ದರಿದ್ರ ವ್ಯಕ್ತಿಗೆ ಹೇಗೋ ಹಾಗೇ ದರಿದ್ರ ಜನಾಂಗಕ್ಕೂ ಎಲ್ಲಿಯೂ ಸ್ಥಾನ ಮಾನಗಳಿಲ್ಲ ಆದುದರಿಂದ ಸಾಮಾನ್ಯ ಮನುಷ್ಯನಿಗೆ ತಲಪುವಂತಾಗಲು ನಾವು ಉತ್ಪತ್ತಿ ಹೆಚ್ಚಿಸಬೇಕು ಆಗ ಕೋಟ್ಯಾವಧಿ ಜನರು ಶ್ರೇಯಸ್ಸು ಪಡೆಯುವರು ಮಾತ್ರವಲ್ಲ ದೇಶವೂ ಶ್ರೀಮಂತವೂ ಶಕ್ತಿಯುಕ್ತವೂ ಆಗುವುದು

ನಿರ್ಧಾರಯುಕ್ತ ಕಾರ್ಯ

ನಾವು ಸದಾ ಸಾಲಮಾಡಿ ಜಯಿಸಲಾರೆವು ಸಾಲ ಪಡೆಯಲು ನಮ್ಮಲ್ಲಿ ಆ ಯೋಗ್ಯತೆ ಇರಬೇಕು ನಮ್ಮಲ್ಲಿ ಇಂದಿನ ಜರೂರಿನ ಆವಶ್ಯಕತೆಗಳನ್ನು ಪೂರೈಸಲು ಉತ್ಪತ್ತಿಯನ್ನು ಹೆಚ್ಚಿಸಬೇಕಾದುದು ಅತ್ಯಾವಶ್ಯಕ.

ಉತ್ಪತ್ತಿಸುವುದೆಂದರೆ ಕಠಿಣ ಶ್ರಮ, ತಡೆಯಿಲ್ಲದ ಕಾರ್ಯ ಸಾಧನೆ ಉತ್ಪತ್ತಿ ಎಂದರೆ ನಿಲ್ಲಿಸದೆ ಕೆಲಸ ಗೈಯುವುದು. ಮುಷ್ಕರಗಳನ್ನು ಹೂಡುವುದು, ಕಾರ್ಖಾನೆ ಮುಚ್ಚುವುದು ಹಾನಿಕರ. ಅಂದ ಮಾತ್ರಕ್ಕೆ ಮಜೂರರಿಗೆ ಮುಷ್ಕರ ಹೂಡುವ ಅಧಿಕಾರವಿರಬಾರದೆಂದು ನಾನು ಹೇಳುವುದಿಲ್ಲ ಈ ಅಸ್ತ್ರದಿಂದಲೇ ಇಂದು ಮಜೂರ ವರ್ಗವು ಬಲಿಷ್ಠವಾಗಿದೆ ಆದರೆ ಮುಷ್ಕರಗಳಿಂದ ಅಪಾಯ ತಟ್ಟುವ ಕಾಲವು ಇದೆ ಜನಾಂಗದ ಶ್ರೇಯಸ್ಸಿಗೆ ಹಾನಿತಟ್ಟದಂತೆ ಮುಷ್ಕರ ರಹಿತ ಉತ್ಪತ್ತಿ ಕಾರ್ಯ ನಡೆಯಬೇಕಾದ ಕಾಲ ನಮಗೆ ಬಂದಿದೆ ಇದಕ್ಕಾಗಿಯೇ ನಾವು ಮಜೂರ, ಮ್ಹಾಲಕ ಮತ್ತು ಸರಕಾರ ಪ್ರತಿನಿಧಿಗಳ ಸಮ್ಮತಿಯಾದೊಂದು "ಕೈಗಾರಿಕ ಒಪ್ಪಂದ ಮಾಡಿಕೊಳ್ಳಲು ಯೋಚಿಸಿದ್ದೇವೆ ಈ ಯೋಜನೆಯು ನಿರ್ಯಂಚನೆಯಿಂದಲೂ ನಿಷ್ಪಕ್ಷಪಾತದಿಂದ ಜಾರಿ ಹಿಸಲ್ಪಟ್ಟರೆ ನಮ್ಮ ದೇಶದಲ್ಲೆಂದಿಗೂ ಮುಷ್ಕರ ಮುಚ್ಚಿತಗಳು ನಡೆಯಲಾರವು

ನಮ್ಮ ಆರ್ಥಿಕ ವ್ಯವಸ್ಥೆ

ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಅನೇಕ ದೊಡ್ಡ ತಪ್ಪುಗಳಿವೆ ಇದನ್ನು ನಾವು ಒಪ್ಪಿಕೊಳ್ಳಬೇಕು ಆದರೆ ಅದನ್ನು ಸುಧಾರಿಸಲು ಪ್ರಯತ್ನಿಸುವಾಗ ನಾವು ಇದುತನಕ ಪಡೆದುದನ್ನು ವಿನಾಶಕ್ಕೆ ಒಳಪಡಿಸಲೂ ಬಾರದು

ದೇಶಾಭಿವೃದ್ಧಿಯ ಅದೆಷ್ಟೂ ಯೋಜನೆಗಳನ್ನು ನಾವು ತಯಾರಿಸಿಟ್ಟಿದ್ದೇವೆ ಆದರೆ ಹೆಚ್ಚಿನವುಗಳೆಲ್ಲವೂ ಕೇವಲ ಕಾಗದದಲ್ಲೇ ಉಳಿದಿವೆ ಭಾರತವು ಬಡ ಜನತೆಯ ದೇಶ ಇಷ್ಟಾದರೂ ಜನ ನಿವಾಸಕ ಯೋಗ್ಯವಿಲ್ಲದ ಅದೆಷ್ಟೋ ಜವುಗು ಪ್ರದೇಶಗಳು ನಮ್ಮ ದೇಶದಲ್ಲಿವೆ ಈ ಪ್ರದೇಶಗಳ ಮಣ್ಣನ್ನು ಉತ್ತಮಗೊಳಿಸುವುದರಿಂದಲೂ, ಅಲ್ಲಿನ ವ್ಯಾಧೀ ಪೀಡೆಗಳನ್ನು ಬಗೆಹರಿಸುವುದರಿಂದಲೂ ಅವುಗಳನ್ನು ವಾಸ ಯೋಗ್ಯವಾಗಿ ಮಾಡಬಹುದು ಇದಕ್ಕಾಗಿ ಆರ್ಥಿಕ ಮತ್ತು ಮಜೂರ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುವ ಹೋರಾಟಗಳನ್ನು ಸ್ವಲ್ಪ ಕಾಲದ ತನಕ ನಿಲ್ಲಿಸಬೇಕು.

ಅಪಾರ ಬುದ್ಧಿ ಕೌಶಲ್ಯಗಳಿವೆ

ನಮ್ಮ ದೇಶದಲ್ಲಿ ಬೇಕಾದಷ್ಟು ಜನಬಲವಿದೆ ಅದ್ವಿತೀಯ ಬುದ್ಧಿ ಶಕ್ತಿಯೂ, ಅಸಾಮಾನ್ಯ ಶ್ರಮ ಸಹಿಷ್ಣುತೆಯೂ ನಮ್ಮಲ್ಲಿದೆ ಇವನ್ನುಪಯೋಗಿಸಿ ನಾವು ಸಹಕಾರದಿಂದ ವರ್ತಿಸಿದರೆ ದೀನ ಮಾನವಕೋಟಿಯು ಉದ್ಧರಿಸಲ್ಪಡುವುದು

ನಮ್ಮ ಜನರೆಲ್ಲರನ್ನು ಉದ್ಯೋಗಕ್ಕೆ ಹಚ್ಚುವ ಆ ಉದ್ಯೋಗವನ್ನು ಕಲಿಸುವ ಅದಕ್ಕೆ ಬೇಕಾಗುವ ಎಲ್ಲಾ ಸಂದರ್ಭಗಳೂ ಈ ದೇಶದಲ್ಲಿ ಹೇರಳವಾಗಿವೆ ಕೆಲಸಗಾರನಿಗೆ ಅವನ ನ್ಯಾಯವಾದ ಪಾಲು ದೊರಕಿದರೆ ಅವನನ್ನು ಯಾರೂ ಶೋಷಣೆಗೊಳಪಡಿಸದಿದ್ದರೆ ನಮ್ಮ ಅಭಿವೃದ್ಧಿಯು ಕಟ್ಟಿಟ್ಟದ್ದು ನಾವಿದಕ್ಕೆ ಶೀಘ್ರದಲ್ಲೇ ಉಪಾಯಗಳನ್ನು ಯೋಜಿಸುವೆವು

ಇಂದು ನಾವೀ ಉತ್ಪತ್ತಿಯ ತಳವಳ [illegible] ಈ ಉತ್ಪತ್ತಿ [illegible] ಶ್ರೀಮಂತರನ್ನಾಗಿ ಮಾಡಲಿಕ್ಕಲ್ಲ ದೇಶವನ್ನು ಸಂಪತ್ತಿನ [illegible] ಸೇವೆಮ್ಮೆಲ್ಲರಿಗೂ ಸಂಪತ್ಪ್ರಾಪ್ತಿಯಾಗುವಂತೆ ಮಾಡುವುದು ನಮ್ಮ ಗುರಿಯಾಗಿದೆ.

ಕಾರಣ ಭಾರತವು ಜೀವಂತವಾಗಿದ್ದರೆ ನಾವು ಜೀವಿಸಬಲ್ಲೆವು. ಮುಷ್ಕರಗಳಿಂದ ದೇಶ ಕುಂಟಿತವಾದರೆ ಮಿಲಿಯಾವಧಿ ನಮ್ಮ ಜನತೆ ಕುಂಟಿತವಾಗುವುದು. ನಾವೀ ದಿಶೆಯಲ್ಲಿ ಪ್ರಗತಿ ಹೊಂದಿದಾಗ ನಾವು ಸತ್ಯದಿಂದಲೂ ಶಕ್ತಿಯಿಂದಲೂ ವ್ಯವಹರಿಸಬಲ್ಲೆವು

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿತವಾದದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೫೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

NOTICE

In The District Court of South Kanara

A S No 360 of 1946.

Between

Uchiramma and others — Appellants

and

A C Kanna Nair & others — Respts

To The Respondents

(18) Krishna Nair (Unsound Mind) by guardian mother Uthamma Kuttikal of Balla Village Kasargode Taluk

(22) Govindamma daughter of Uthamma Pallikere of Neleshwar Village Kasargode Taluk

(28) S marthiniamma duather of Madhav Amma, Cherpadi Bhavai Udma Village, Kasargode Taluk

(44 K I Meenakshiamma widow of A C Korai Nair

(46 K I Govindan Nambiar son of A C Koran Nair

(47 K I Raman amma Grand daughter of A C Koran Nair and dauther of Madhavi Amma 44 46 4 reside at Kodal Amsha Desh a n of Kottayam Taluk North Malabar

Take notice that the above appeal from decree of Sub Court South Kanara in O S No 64 1945 has been filed by the Appellant and that 2 2 48 at 11 A M has been fixed for hearing of the above appeal If no appearance is made on your behalf by your pleader it will be heard and decided in your absence

By Order of Court

26-1 1948 — M Keshava Nair
Counsel for Appellant

NOTICE

THE BOMBAY LIFE ASSURANCE COMPANY, LIMITED

Notice having been given of the Loss of Policy No 104638 on the Life of Mr Gurpur Hanumantha Prabhu a duplicate policy will be issued unless objection is lodged with us within one month from this date

Bombay, 30-1-1948 — K Balasubrahmanyam
Manager & Actuary

ಸ್ವದೇಶಾಭಿಮಾನಿ

ತಾರೀಕು 30-1-1948

ಸಂಯುಕ್ತರಾಷ್ಟ್ರ ಸಭೆಯಲ್ಲಿ ಕಾಶ್ಮೀರದ ಪ್ರಶ್ನೆ

ಸಂಯುಕ್ತ ರಾಷ್ಟ್ರ ಸಭೆಯ ಭದ್ರತಾ ಸಮಿತಿಗೆ ಭಾರತ ಸರಕಾರವು ಪಾಕಿಸ್ಥಾನದ ಮೇಲೆ ಕಾಶ್ಮೀರದ ಕುರಿತು ದೂರು ಕೊಟ್ಟಿತ್ತಷ್ಟೆ. ಪ್ರತಿಯಾಗಿ ಪಾಕಿಸ್ಥಾನ ಸರಕಾರವು ಭಾರತ ಸರಕಾರದ ಮೇಲೆ ಅನೇಕ ಆರೋಪಗಳನ್ನು ಹೊರಿಸಿ ಎಲ್ಲ ಪ್ರಶ್ನೆಗಳ ತೀರ್ಮಾನವಾಗಬೇಕೆಂದು ಹಟತೊಟ್ಟಿತು ಭದ್ರತಾ ಸಮಿತಿಯ ಮುಂದೆ ಇದ್ದ ಕಾಶ್ಮೀರ ಪ್ರಶ್ನೆಯ ಕುರಿತು ತಮ್ಮ ಪಕ್ಷದ ದೌರ್ಬಲ್ಯ ಮುಚ್ಚಲು ಪಾಕಿಸ್ಥಾನವು ಈ ಹಂಚಿಕೆಯನ್ನು ಹೂಡಿತ್ತೆಂಬುದು ಸ್ಪಷ್ಟ.

ಕಾಶ್ಮೀರ ಪ್ರಶ್ನೆಯ ಕುರಿತು ಕೂಡಾ ಪಾಕಿಸ್ಥಾನ ಸರಕಾರವು ಭದ್ರತಾ ಸಮಿತಿಯನ್ನು ಮಂಕುಗೊಳಿಸುವ ಯತ್ನವನ್ನು ಯಶಸ್ವಿಯಾಗಿಯೇ ಮಾಡುತ್ತಿದೆಯೆಂದು ಕಾಣುತ್ತದೆ ಬಹಳ ನ್ಯಾಯಸ್ಥರಂತೆ ಕಾಶ್ಮೀರದಿಂದ ಪರಸೈನ್ಯಗಳೆಲ್ಲ ಹಿಂದೆ ಹೋಗಬೇಕು— ಅಂದರೆ ಹಿಂದೀ ಸರಕಾರದ ಸೈನ್ಯಗಳೆಂದು ಅರ್ಥವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಪಾಕಿಸ್ಥಾನದ ಕಡೆಯವರೆಲ್ಲ ಕಾಶ್ಮೀರ ನಿವಾಸಿಗಳೇ ಎಂದು ಸಾಧಿಸಲಾಗುತ್ತಿದೆ ಶೇಕ್ ಅಬ್ದುಲ್ಲಾನ ಸರಕಾರ ತೆಗೆಯಬೇಕು ಭದ್ರತಾ ಸಮಿತಿಯ ಆಶ್ರಯದಲ್ಲಿ ನಿಷ್ಪಕ್ಷಪಾತ ಸರಕಾರ ಅಂದರೆ ಸ್ಥಳೀಕ ಮಾಹಿತಿ ಇಲ್ಲದವರ ಕೈಗೆ ಆಡಳಿತೆ ಕೊಡಬೇಕು ಕಾಶ್ಮೀರ ಬಿಟ್ಟುಹೋದವರೆಲ್ಲ ಪುನಃ ಬರಲು ಬಿಡಬೇಕು ಅಂದರೆ ಕಾಶ್ಮೀರಕ್ಕೆ ಆದಷ್ಟು ಹೆಚ್ಚಿನ ಪಾಕಿಸ್ಥಾನಿಗಳನ್ನು ತುಂಬಿಸಲು ಬಿಡಬೇಕು ಆ ಮೇಲೆ ಜನಮತ ತೆಗೆದು ಕಾಶ್ಮೀರ ಯಾರಿಗೆಂದು ತೀರ್ಮಾನಿಸಬೇಕು ಎಂಬುದು ಪಾಕಿಸ್ಥಾನದವರ ಸೂಚನೆ ವಸ್ತುಸ್ಥಿತಿಯನ್ನು ತಿಳಿಯದವರಿಗೆ ಇದಲ್ಲ ಬಹಳ ನ್ಯಾಯವೆಂದೇ ಕಂಡರೆ ಆಶ್ಚರ್ಯ ಪಡಬೇಕಾಗಿಲ್ಲ

ಭಾರತ ಸರಕಾರವು ಇದನ್ನೆಲ್ಲ ಎಂದಿಗೂ ಒಪ್ಪಿಕೊಳ್ಳುವುದು ಶಕ್ಯವಿಲ್ಲ ಇದಕ್ಕೆ ಒಪ್ಪಿಗೆ ಕೊಡುವುದೆಂದರೆ ಕಾಶ್ಮೀರವನ್ನು ಪಾಕಿಸ್ಥಾನದ ತಂತ್ರಕ್ಕೆ ಬಲಿಕೊಡುವುದೆಂದೇ ಸ್ಪಷ್ಟವಾದ ಅರ್ಥವಿರುತ್ತದೆ

ಭದ್ರತಾ ಸಮಿತಿಯಾದರೋ ಇದನ್ನು ಹೇಗೆ ತೀರ್ಮಾನಿಸುವುದೆಂದು ನಾವು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇವೆ ಕಾಶ್ಮೀರ ಸರಕಾರವು ಹಿಂದೀ ಸರಕಾರದ ಆಶ್ರಯ ತಾನಾಗಿ ಬಂದು ಸ್ವೀಕರಿಸಿರುತ್ತದೆ ಅಲ್ಲಿ ಹೊರಗಿನ ಗಡಿನಾಡವರು ಬಂದು ಉಪಟಳ ಮಾಡುತ್ತಿದ್ದಾರೆ ಇದನ್ನು ಅಡಗಿಸುವುದು ಭಾರತ ಸರಕಾರದ ಹಕ್ಕು ಮತ್ತು ಕರ್ತವ್ಯ ಹೀಗೆ ದಂಡೆತ್ತಿ ಬಂದವರಿಗೆ ಪಾಕಿಸ್ಥಾನ ಸರಕಾರವು ಸಹಾಯಮಾಡಲು ಅದಕ್ಕೆ ಯಾವ ನ್ಯಾಯವೂ ಇಲ್ಲ. ಪಾಕಿಸ್ಥಾನವು ಸಹಾಯ ಮಾಡುತ್ತಿರುವುದು ನಿಜವೆ? ನಿಜವಾದರೆ ಹಾಗೆ ಮಾಡುವುದನ್ನು ನಿಲ್ಲಿಸಬೇಕೆಂದು ಆಜ್ಞೆ ಕೊಡುವುದು ಭದ್ರತಾ ಸಮಿತಿಯ ಕರ್ತವ್ಯ. ಪಾಕಿಸ್ಥಾನವು ಈ ಕುರಿತು ನಿರ್ದೋಷಿಯೆಂದು ಕಂಡರೆ ಹಾಗೆ ಹೇಳಬಹುದು. ಇಷ್ಟೇ ಭದ್ರತಾ ಸಮಿತಿಯ ಮುಂದಿರುವ ಕೆಲಸವಲ್ಲದೆ ಕಾಶ್ಮೀರದ ಆಡಳಿತೆಗೆ ಅಥವಾ ಅಲ್ಲಿಯ ಒಳಗಿನ ಪ್ರಶ್ನೆಯಲ್ಲಿ ಭದ್ರತಾ ಸಮಿತಿಯು ಕೈಹಾಕಲು ಯಾವ ನ್ಯಾಯವೂ ಇರುವುದಿಲ್ಲ.

ಭದ್ರತಾ ಸಮಿತಿಯ ಅಧ್ಯಕ್ಷರು, ಬ್ರಿಟಿಷ್ ಸರಕಾರದ ಪ್ರತಿನಿಧಿ ಮೊದಲಾದವರು ಇತ್ತಂಡಗಳೊಳಗೆ ರಾಜಿಮಾಡಲು ಯತ್ನಿಸುವಂತೆ ಇತ್ತಂಡದ ಪ್ರತಿನಿಧಿಗಳು ಸೇರಿ ಯತ್ನಿಸುವಂತೆ ಸಾಧಿಸಿದರು. ಈ ಪ್ರಯತ್ನ ಯಶಸ್ವಿಯಾದಂತೆ ಕಂಡುಬರುವುದಿಲ್ಲ ರಾಜಿಯಾಗುವುದಿದ್ದರೆ ಭಾರತ ಸರಕಾರ ಮತ್ತು ಪಾಕಿಸ್ಥಾನ ಸರಕಾರದ ಪ್ರತಿನಿಧಿಗಳೇ ತಮ್ಮೊಳಗೆ ಇದನ್ನು ತೀರ್ಮಾನಿಸತಕ್ಕದ್ದೆಂಬುದು ನ್ಯಾಯ ಮೂರನೆಯವರು ರಾಜಿಯನ್ನು ಒತ್ತಾಯದಿಂದ ಹೊರಿಸುವುದು ಸಾಧ್ಯವಿಲ್ಲ ರಾಜಿಯಾಗುವುದಿಲ್ಲವೆಂದಾದರೆ ಭದ್ರತಾ ಸಮಿತಿಯವರು ತಮ್ಮ ಮುಂದೆ ಪಾಕಿಸ್ಥಾನ ಸರಕಾರದವರ ಮೇಲೆ ಬಂದ ದೂರು ನಿಜವೆ ಎಂದು ವಿಚಾರಿಸಿ ನಿಜವೆಂದಾದರೆ ತಕ್ಕ ಕಾರ್ಯ ಕೈಕೊಳ್ಳಲೇಬೇಕು

ಮತ್ತೆ ಬೇಕಿದ್ದರೆ ಪಾಕಿಸ್ಥಾನದವರು ಹಿಂದುಸ್ಥಾನದ ಮೇಲೆ ದೂರು ಹೊರಿಸಿದರೆ ಅದರ ವಿಚಾರಣೆಯೂ ನಡೆಯಲಿ ಬೇಡವೆನ್ನುವುದು ಸರಿಯಲ್ಲ ಕಾಶ್ಮೀರ ಪ್ರಶ್ನೆಯಲ್ಲಿ ಇದನ್ನು ಬೆರೆಸಿ ಆ ಪ್ರಶ್ನೆಯ ತೀರ್ಮಾನ ತಡೆಗಟ್ಟಲು ಯಾವ ನ್ಯಾಯವೂ ಇಲ್ಲ

ಭದ್ರತಾ ಸಮಿತಿಯ ಪಕ್ಷ ಪರೀಕ್ಷೆಯೂ ಇದರಲ್ಲಿ ಆಗುತ್ತದೆಂಬ ಬಗ್ಗೆ ಸಂಶಯವಿಲ್ಲ ಭಾರತ ಸರಕಾರವು ಪಾಕಿಸ್ಥಾನದೊಡನೆ ರಾಜಿಮಾಡಲು ಸಮರ್ಥವಾದರೆ ಇದನ್ನು ನಮ್ಮೊಳಗೇನೆ ತೀರಿಸುವುದು ಉತ್ತಮ, ದಾರಿಯಿತ್ತು

ಪಾಕಿಸ್ಥಾನದ ಧೋರಣೆ ನೋಡಿ ಇದು ಸಾಧ್ಯವಲ್ಲವೆಂದು ಕಂಡುದರಿಂದ ಮಾತ್ರ ಭಾರತ ಸರಕಾರವು ಯುದ್ಧಹೂಡುವ ಬದಲು ಪ್ರಶ್ನೆಯನ್ನು ಶಾಂತರೀತಿಯಿಂದ ತೀರ್ಮಾನಿಸುವ ಉದ್ದೇಶದಿಂದ ಭದ್ರತಾ ಸಮಿತಿಗೆ ಹೋಗಬೇಕಾಯಿತು. ಜಗತ್ತಿನಲ್ಲಿ ಯುದ್ಧ ನಿವಾರಿಸಿ ಶಾಂತಿ ಸ್ಥಾಪಿಸುವ ಸಂಸ್ಥೆ ಭದ್ರತಾ ಸಮಿತಿಯಾಗಬೇಕೆಂಬ ಆತುರವೂ ಈ ವರ್ತನೆಯಲ್ಲಿದೆಯೆಂದರೆ ತಪ್ಪಿಲ್ಲ

ಜಗತ್ತಿನ ದೊಡ್ಡ ರಾಷ್ಟ್ರಗಳ ರಾಜಕೀಯ ಸ್ಪರ್ಧೆಯ ಕಾರ್ಯರಂಗವಾಗಿ ರೂಪಿಸಲ್ಪಟ್ಟಿರುವ ಭದ್ರತಾ ಸಮಿತಿಯು ಭಾರತ ಸರಕಾರವೂ ಅದರ ಮೇಲಿಟ್ಟ ವಿಶ್ವಾಸವನ್ನು ನಿರರ್ಥಕಗೊಳಿಸುವುದೇ ಸಾರ್ಥಕಗೊಳಿಸುವುದೇ ಎಂದು ನೋಡಲಿಕ್ಕಿದೆ

ಅಂತೂ ಭದ್ರತಾ ಸಮಿತಿಯು ತಪ್ಪು ಹಾದಿಗೆ ಒಯ್ಯಲ್ಪಟ್ಟರೆ ಭಾರತ ಸರಕಾರವು ತನ್ನ ದೂರನ್ನು ಹಿಂತೆಗೆದು ಈ ಪ್ರಶ್ನೆಯನ್ನು ಸ್ವತಂತ್ರವಾಗಿ ತೀರ್ಮಾನಿಸಿಕೊಳ್ಳದೆ ಬೇರೆ ಮಾರ್ಗವಿಲ್ಲ ನ್ಯಾಯ ರಕ್ಷಣೆಗಾಗಿ ಯುದ್ಧವನ್ನೇ ಹೂಡಬೇಕಾಗಿ ಬಂದರೂ ಭಾರತ ಸರಕಾರವು ಹಿಂದೆಗೆಯುವುದು ಸರಿಯಲ್ಲ ಶಾಂತಿಯಿಂದ ತೀರಿಸಿದರೆ ಉತ್ತಮ ಅಗತ್ಯಬಿದ್ದರೆ ನ್ಯಾಯಕ್ಕಾಗಿ ಯುದ್ಧ ಮಾಡಿದರೂ ದೋಷವಿಲ್ಲ ನ್ಯಾಯವನ್ನು ಬಿಟ್ಟುಕೊಟ್ಟರೆ ಮಾತ್ರ ಸರ್ವನಾಶಕ್ಕೆ ಕಾರಣವಾಗುವುದು ಇದನ್ನು ಇಂದಿನ ಭಾರತ ಸರಕಾರದ ಸಂಚಾಲಕರು ಚೆನ್ನಾಗಿ ಅರಿತವರೇ ಇದ್ದಾರೆಂದು ನಂಬಲು ಯಾವ ಅಡ್ಡಿಯೂ ಇಲ್ಲ

ಟೀಕೆ-ಟಿಪ್ಪಣಿಗಳು

ಜಮೀನ್ದಾರೀ ಮಸೂದೆ

ಮಾನ್ಯ ಶ್ರೀ ಕಾಳ ವೆಂಕಟ್ರಾಯರ ಜಮೀನ್ದಾರೀ ಮಸೂದೆಯನ್ನು ಶಾಸನ ಸಭೆಯು ಕೂಲಂಕುಶ ವಿಚಾರಕ್ಕಾಗಿ ಸಿಲೆಕ್ಟ್ ಕಮಿಟಿಗೆ ಒಪ್ಪಿಸಿರುತ್ತದೆ ಜಮೀನ್ದಾರಿಗೆ ನ್ಯಾಯವಾದ ಪ್ರತಿಫಲ ಕೊಡಬೇಕೆಂಬುದು ಕಾಂಗ್ರೆಸ್ ಸಂಸ್ಥೆಯ ಅಭಿಪ್ರಾಯ ಎಲ್ಲ ಪ್ರಾಂತ್ಯಗಳಲ್ಲಿಯೂ ಈ ರೀತಿ ನ್ಯಾಯವಾದ ಪ್ರತಿಫಲ ಕೊಡಲಾಗುತ್ತಿದೆ ಮದ್ರಾಸಿನಲ್ಲಿ ಮಾತ್ರ ಅನ್ಯಾಯವಾಗುತ್ತಿದೆ ಎಂಬ ದೂರು ಬಹಳ ಬಲವತ್ತರವಾಗಿ ಪ್ರಚಾರದಲ್ಲಿದೆ ಇದರ ಸರಿಯಾದ ವಿಚಾರ ಆ ಸಿಲೆಕ್ಟ್ ಕಮಿಟಿಯಲ್ಲಾದರೂ ಆಗುವುದೆಂದು ನಾವು ಆಶಿಸುತ್ತೇವೆ

ಜಮೀನ್ದಾರರಿಗೆ ಅವರ ಜಮೀನನ್ನೆಲ್ಲ ಸ್ವಾಧೀನಪಡಿಸಿಕೊಳ್ಳುವಾಗ ಪ್ರತಿಫಲಕೊಡುವ ಅಗತ್ಯವೇ ಇಲ್ಲವೆಂಬ ರಾಜಕೀಯ ಪಕ್ಷಗಳಿವೆ ಸಾಮ್ಯವಾದಿಗಳು ಈ ರೀತಿ ಅಭಿಪ್ರಾಯಪಡುತ್ತಿದ್ದಾರೆ ಆದರೆ ಈಗಿನ ಮಂತ್ರಿಮಂಡಲವು ಸಾಮ್ಯವಾದೀ ಪಂಗಡದ ಸರಕಾರವಲ್ಲ ಅದು ಕಾಂಗ್ರೆಸ್ ಸರಕಾರ ಕಾಂಗ್ರೆಸ್ ಸಂಸ್ಥೆಯು ಜಮೀನ್ದಾರರಿಗೆ ನ್ಯಾಯವಾದ ಪ್ರತಿಫಲ ಕೊಡಬೇಕೆನ್ನುತ್ತದೆ ಅಂದಮೇಲೆ ಮದ್ರಾಸು ಸರಕಾರದವರು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವುದು ಎಂದೂ ಸರಿಯಾಗಲಾರದೆಂಬುದನ್ನು ಈಗಿನ ಸರಕಾರಕ್ಕೆ ಸಂಬಂಧವಿದ್ದವರೆಲ್ಲ ತಿಳಿದುಕೊಳ್ಳಬೇಕು

ಇಡೀ ಪ್ರಾಂತ್ಯದಲ್ಲಿ ಪಾನನಿರೋಧ

ಪ್ರಾಂತ್ಯದ ಉಳಿದ ಎಂಟು ಜಿಲ್ಲೆಗಳಲ್ಲಿಯೂ ಬರುವ ಅಕ್ಟೋಬರ ತಾ. 1ರಿಂದ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಮದ್ರಾಸಿನ ಕಾಂಗ್ರೆಸ್ ಪಕ್ಷದ ಶಾಸನಸಭೆಯ ಸದಸ್ಯರು ತಮ್ಮ ಸಭೆಯಲ್ಲಿ ನಿರ್ಣಯಿಸಿದ ಬಗ್ಗೆ ನಾವು ಅವರನ್ನು ಹೃತ್ಪೂರ್ವಕ ಅಭಿನಂದಿಸಬೇಕು

ಸರಕಾರವು ಈ ರೀತಿ ಕೈಕೊಂಡ ಈ ಸುಧಾರಣೆಯನ್ನು ಪೂರ್ಣಗೊಳಿಸಿದರೆ ಅದು ಬೇರೆ ಯಾವ ಕಾರ್ಯ ಸಾಧಿಸದಿದ್ದರೂ ಅದು ಕೃತಕೃತ್ಯವಾಯಿತೆಂದೇ ಹೇಳಬಹುದು

ಈ ವಿಚಾರದಲ್ಲಿ ಎಷ್ಟು ಹಣದ ಅಡಚಣೆ ಇದ್ದರೂ ಇದನ್ನು ಜಾರಿಗೆ ತರುವುದರಿಂದ ಮದ್ರಾಸು ಪ್ರಾಂತ್ಯವು ಅಖಿಲ ಭಾರತಕ್ಕೇನೇ ಆದರ್ಶವಾಗುವುದೆಂಬ ಬಗ್ಗೆ ಸಂಶಯ ಬೇಡ

ಮದ್ರಾಸು ಸರಕಾರದ ಈ ಕಾರ್ಯಕ್ರಮ ಪೂರ್ಣ ಯಶಸ್ವಿಯಾಗುವಂತೆ ಮಹಾಜನರೆಲ್ಲರೂ ಎಲ್ಲಾ ವಿಧಗಳಲ್ಲಿ ಸಹಕರಿಸಬೇಕು

ಸಹಕಾರೀ ಸಂಘಗಳಿಂದ ಆಡಿಟ್ ಫೀಸು ವಸೂಲಿ

ಸಹಕಾರೀ ಆಕ್ಟಿನನ್ವಯ ಸರಕಾರದವರು ಮಾಡಿರುವ ನಿಯಮಗಳಿಗೆ ಮದ್ರಾಸು ಸರಕಾರದವರು ಒಂದು ತಿದ್ದುಪಡಿ ಸೂಚನೆಯನ್ನು ಪ್ರಕಟಿಸಿ ಆಕ್ಷೇಪಗಳಿದ್ದರೆ ಇದೇ ಫೆಬ್ರವರಿ ತಾ. 15ರ ಒಳಗೆ ಸರಕಾರದ ಡೆವಲಪ್‌ಮೆಂಟ್ ಖಾತೆಯ ಕಾರ್ಯದರ್ಶಿಯವರಿಗೆ ಮುಟ್ಟುವಂತೆ ಕಳುಹಿಸಬೇಕಾಗಿ ತಿಳಿಸಲಾಗಿದೆ. ಈ ತಿದ್ದುಪಡಿಯಂತೆ ಮುಂದೆ ಎಲ್ಲಾ ಸಹಕಾರೀ ಸಂಘಗಳಿಂದ ಆಡಿಟ್ ಫೀಸನ್ನು ವಸೂಲು ಮಾಡಲಾಗುತ್ತದೆ

ಇದುತನಕ ಸ್ಟೋರ್ಸ್ ಇತ್ಯಾದಿ ದೊಡ್ಡ ವ್ಯಾಪಾರದ ಸಹಕಾರೀ ಸಂಘಗಳು, ಪೇಟೆಯ ಸಹಕಾರೀ ಬೇಂಕುಗಳು, ಇತ್ಯಾದಿ ಸಂಸ್ಥೆಗಳಿಂದ ಮಾತ್ರ ಆಡಿಟ್ ಫೀಸು ವಸೂಲಾಗುತಿತ್ತು ಮುಂದೆ ಹಳ್ಳಿಯ ಲೇವಾದೇವಿ ಸಂಘಗಳು ಕೂಡಾ ಎಲ್ಲಾ ಸಂಘಗಳಿಂದ ಫೀಸು ವಸೂಲು ಮಾಡಲಾಗುತ್ತದೆ

ಹಣದ ಅಡಚಣೆಯುಳ್ಳಿದ್ದ ಸರಕಾರಕ್ಕೆ ಸಾಧ್ಯವಿದ್ದ ಸಂಘಗಳೆಲ್ಲ ಫೀಸು ಕೊಡತಕ್ಕದೆಂಬುದು ನಿರ್ವಿವಾದ ಆದರೆ ಹಳ್ಳಿಯ ಲೇವಾದೇವಿ ಸಂಘಗಳೆಲ್ಲವುಗಳಿಂದ ವಸೂಲು ಮಾಡಲು ಹೊರಟರೆ ಈ ಸಂಘಗಳು ಇದನ್ನು ಹೊರಲಾರದೆ ಅವುಗಳಲ್ಲಿ ಹೆಚ್ಚಿನ ಸಂಘಗಳನ್ನು ಮುಚ್ಚಬೇಕಾಗುವ ಸಂಭವವೇ ಹೆಚ್ಚು ಸಹಕಾರೀ ಸಂಘಗಳಿಗೆ ಧರ್ಮಾರ್ಥ ಆಡಿಟಿನ ಈ ಅನುಕೂಲತೆ ಇನ್ನು ಸ್ವಲ್ಪ ಸಮಯ ಕೊಟ್ಟು ಈ ಚಳವಳವನ್ನು ಸರಕಾರದವರು ಪ್ರೋತ್ಸಾಹಿಸುವುದು ಅತ್ಯಗತ್ಯವಿರುತ್ತದೆ

ಆದುದರಿಂದ ಮುಂದಿನ ಈ ತಿದ್ದುಪಡಿಯನ್ನು ಜಾರಿಗೆ ತರಬಾರದೆಂದು ನಾವು ಆತ್ಯಾಗ್ರಹದಿಂದ ಸೂಚಿಸುತ್ತೇವೆ. ಎಲ್ಲ ಸಹಕಾರೀ ಸಂಸ್ಥೆಗಳೂ ಈ ಕುರಿತು ತಮ್ಮ ಅಭಿಪ್ರಾಯವನ್ನು ತಕ್ಕ ಸಮಯದ ಒಳಗೆ ಸರಿಯಾಗಿ ವ್ಯಕ್ತಗೊಳಿಸುವರೆಂದು ನಿರೀಕ್ಷಿಸುತ್ತೇವೆ

ಏಕೀಕರಣ ಧುರೀಣರ ಧಿಲ್ಲಿ ಪ್ರಯಾಣ

ಆಂಧ್ರ ಕರ್ನಾಟಕ ಏಕೀಕರಣದ ಧುರೀಣರು ಧಿಲ್ಲಿಗೆ ಹೋಗಿ ಮಹಾತ್ಮಾ ಗಾಂಧಿಯವರನ್ನು ಕಂಡು ತಮ್ಮ ಹಂಬಲವನ್ನಿತ್ತ ಹೇಳಿಕೊಂಡರು ಆ ಮೇಲೆ ಭಾರತ ರಾಷ್ಟ್ರಸಭೆಯ ವರ್ಕಿಂಗ್ ಕಮಿಟಿ ಮುಂದೆಯೂ ಹೋಗಿ ತಮ್ಮ ಮನವಿ ಒಪ್ಪಿಸಿದರು ಇವರಲ್ಲಿ ಕೂಡಲೆ ಪ್ರಾಂತ್ಯರಚನೆಯಾಗವುದಿಲ್ಲವೆಂದರ ರಾಜಿ ಕೊಡುವುದಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ನಿರ್ಣಯವನ್ನು ಕಾಣಿಸಲಾಗಿದೆ

ಗಾಂಧೀಜಿಯವರ ಗಡಿ ನಿರ್ಣಯ ಕಮಿಶನ್ ನೇಮಿಸುವುದು ಸರಿಯಲ್ಲವೆಂದು ತಮ್ಮ ಪ್ರಾರ್ಥನಾ ಸಭೆಯಲ್ಲಿ ಹೇಳಿದರು

ಅಂತೂ ಮಾನ್ಯ ಶ್ರೀ ಪ್ರಕಾಶಮರು ಎಪ್ರಿಲ್ ತಾ 1ಕ್ಕೆ ಆಂಧ್ರ ಪ್ರಾಂತ್ಯ ನಿರೀಕ್ಷಣೆಯಲ್ಲಿದ್ದವರು ಪುನಃ ಧಿಲ್ಲಿಗೆ ಓಡುವಂತೆ ಮಾಡಲು ಇವರು ಸಮರ್ಥರಾದರೆಂಬ ಬಗ್ಗೆ ಸಂಶಯವಿಲ್ಲ ಈ ಕುರಿತು ಶ್ರೀ ನಿಜಲಿಂಗಪ್ಪನವರು ಶ್ರೀ ವಲ್ಲಭಭಾಯಿ ಪಟೇಲರಿಗೆ ತಂತಿ ಕೊಟ್ಟಲ್ಲಿ ಪಂಡಿತ ಜವಾಹರಲಾಲರು ಎಪ್ರಿಲ್ ತಾ 1ಕ್ಕೆ ಆಂಧ್ರ ಪ್ರಾಂತ ಕೊಡುವುದಾಗಿ ಹೇಳಿದ ವಿಚಾರ ತನಗೇನೂ ಗೊತ್ತಿಲ್ಲವೆಂದು ಉತ್ತರಕೊಟ್ಟರು. ಇದರಿಂದಾಗಿಯೇ ಪ್ರಕಾಶಮರು ಧಿಲ್ಲಿಗೆ ಹೋಗುವಂತಾಯಿತು.

ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಸಮಯ ತಗಲುತ್ತದೆಂದಾದರೆ ಆಂಧ್ರ

ಸ್ವಾತಂತ್ರ್ಯ ಕೊಡ ಸ್ವಲ್ಪ ವಿಳಂಬವಾಗಿಯೇ ಆಗಲಿ ಎಂಬುದು ನಮ್ಮವರ ವಾದ.

ನಮ್ಮ ಧುರೀಣರು ರಾಜೀನಾಮೆ ಕೊಡುವ ಪ್ರಸಂಗ ಬಾರದೇನೇ ಕರ್ನಾಟಕ ಪ್ರಾಂತ್ಯ ರಚನೆ ಬೇಗನೆ ಆಗಲೆಂದು ನಾವೂ ಹಾರೈಸೋಣ. ಭಾರತ ಸರಕಾರಕ್ಕೆ ಸೇರಿದ ಜಿಲ್ಲೆಗಳಷ್ಟನ್ನೇ ಈಗ ಕೂಡಿಸಿರೆಂಬ ಮೈಸೂರಿನ ಹಿರಿಯಣ್ಣಯ್ಯನವರು ಮಾಡಿದ ಸೂಚನೆಯಂತೆ ಈಗ ತತ್ಕಾಲಕ್ಕೆ ಮುಂದರಿಯುವುದು ಲೇಸು ಸಂಸ್ಥಾನಗಳ ಪ್ರಶ್ನೆ ಹಿಂದಿನಿಂದ ವಿಚಾರಿಸಬಹುದು

ಗಾಂಧೀಜಿಯವರ ಮೇಲೆ ಬಾಂಬಿನ ಎಸೆತ

ಬಾಂಬಿನ ಎಸೆತದಿಂದ ಮಹಾತ್ಮಾಜೀಯವರಿಗೆ ಯಾವ ತೊಂದರೆಯೂ ಆಗದೆ ಅವರು ಸುರಕ್ಷಿತರಾಗಿ ಉಳಿದ ಬಗ್ಗೆ ನಾವೂ ಸಂತೋಷ ವ್ಯಕ್ತಗೊಳಿಸುತ್ತೇವೆ. ಗಾಂಧೀಜೀಯವರು ಇನ್ನೂ ಈ ದೇಶದ ಸೇವೆ ಸಲ್ಲಿಸುವಂತಾಗಲೆಂದು ಎಲ್ಲರೂ ಪ್ರಾರ್ಥಿಸೋಣ

ವಿದ್ಯಾದಾಯಿನೀ ಹ್ಯಾಸ್ಕೂಲು ಸುರತ್ಕಲ್

ಈ ಪ್ರೌಢ ಪಾಠಶಾಲೆಯು ಇದೀಗ 30 ವರುಷಗಳಿಗೂ ಮಿಕ್ಕಿ ಹಳ್ಳಿಯ ಭಾಗದಲ್ಲಿ ವಿದ್ಯಾ ಸಂಸ್ಥೆಗಳನ್ನು ಉತ್ತಮ ರೀತಿಯಿಂದ ನಡೆಸುತ್ತಿರುವ ಹಿಂದು ವಿದ್ಯಾದಾಯಿನೀ ಸಂಘದಿಂದ 1944ರಲ್ಲಿ ಸ್ಥಾಪಿಸಲ್ಪಟ್ಟಿತು ಅಂದಿನಿಂದ ಇದು ವರ್ಷ ವರ್ಷವೂ ಅಭಿವೃದ್ಧಿ ಹೊಂದುತ್ತಾ ಬಂದು ಇದೇ 1947ನೇ ಜೂನಿನಿಂದ ಒಂದು ಸಂಪೂರ್ಣ ಹ್ಯಾಸ್ಕೂಲು ಆಗಿರುತ್ತದೆ ಮಂಗಳೂರಿನಿಂದ ಕಠಾವ್ಲಿ ಮಾರ್ಗದಲ್ಲಿ ಬರೇ 10 ಮೈಲು ದೂರದಲ್ಲಿ ಈ ಶಾಲೆಯ ಸ್ಥಳ ಸನ್ನಿವೇಶಗಳೂ ಭವ್ಯವಾದ ಕಟ್ಟಡಗಳೂ ಕಾಣಸಿಗುವವು ಶಾಲಾ ಆಡಳಿತೆಯವರೂ ವಿದ್ಯಾಭಿಮಾನಿಗಳೂ ಉದಾರಿಗಳೂ ಆದ ಮಹನೀಯರ ಬೆಂಬಲವನ್ನು ಪಡೆದು ಇದುವರೆಗೆ ಶಾಲೆಗಾಗಿ ಸುಮಾರು ಒಂದು ಲಕ್ಷಕ್ಕೂ ಮಿಕ್ಕಿ ಹಣವನ್ನು ವೆಚ್ಚ ಮಾಡಿರುವದು ಮುಂದಿನ ವಿದ್ಯಾಭಿವೃದ್ಧಿಯ ಸುಧಾರಣೆಗಳಿಗೂ ಶಾಶ್ವತನಿಧಿ, ವೇತನ ನಿಧಿ, ಕಟ್ಟಡ ಮೊದಲಾದವುಗಳಿಗೂ ಈ ಸಂಸ್ಥೆಗೆ ಇನ್ನು ಹೆಚ್ಚಿನ ಧನಸಂಗ್ರಹವು ಅಗತ್ಯವಾಗಿದೆ ಈ ಉದ್ದೇಶದಿಂದ ಇದೇ ತಾರೀಕು 8-2 1948ರಲ್ಲು ಅಖಿಲಭಾರತ ಖ್ಯಾತಿಯನ್ನು ಪಡೆದ ಸುಪ್ರಸಿದ್ಧ ಗಾಯಕಿ ಶ್ರೀಮತಿ ಎಮ್ ಎಸ್ ಸುಬ್ಬುಲಕ್ಷ್ಮಿ ಮತ್ತು ಇವರ ಹೆಸರಾಂತ ಹಿಮ್ಮೇಳನದವರಿಂದ ಈ ಶಾಲಾ ಸಹಾಯಾರ್ಥವಾಗಿ ಮಂಗಳೂರಲ್ಲಿ ಒಂದು ಗಾಯನ ಸಮಾರಂಭವು ನಡೆಯಲಿದೆ ಅತಿ ಅಪೂರ್ವವೂ ಸತ್ಕಾರ್ಯ ಸಹಾಯಕವೂ ಆದ ಈ ಸಂಗೀತ ಸಮಾರಂಭಕ್ಕೆ ಸರ್ವರೂ ಪ್ರೋತ್ಸಾಹವನ್ನಿತ್ತು ಸುಶ್ರಾವ್ಯ ಗಾಯನವನ್ನು ಕೇಳಿದ ಸಂತೋಷದೊಂದಿಗೆ ವಿದ್ಯಾಸಂಸ್ಥೆಗೆ ನೆರವನ್ನಿತ್ತ ಪುಣ್ಯಕ್ಕೂ ಭಾಗಿಗಳಾಗಬೇಕಾಗಿ ಕೋರಿಕೆ.

ಅಟ್ಲಿ ಮತ್ತು ಕಮ್ಯೂನಿಜಂ

ಸಾಮಾನ್ಯ ವಾಚಕನೊಬ್ಬನು ಈ ಮೇಲಿನ ಶಿರೋನಾಮೆ ಓದಿದರೆ ಇದೇನೆಂದು ಆಶ್ಚರ್ಯಪಡುವುದು ಸಹಜ ಅಟ್ಲಿಯೆಂದರೆ ಈಗ ಬ್ರಿಟಿಷ್ ಸಾಮ್ರಾಜ್ಯವನ್ನಾಳುವ ಸರಕಾರದ ಪ್ರಧಾನ ಸಚಿವರು. ಬ್ರಿಟನ್ನಿನ ಮಜೂರ ಪಕ್ಷದ ಮುಂದಾಳು ಕಮ್ಯೂನಿಜಮ್ ಎಂದರೆ ರಶ್ಯಾ ದೇಶದಲ್ಲಿ ಈಗ ಪ್ರಚಾರದಲ್ಲಿರುವ ಸಾಂಘಿಕ ಜೀವನ ಕ್ರಮಕ್ಕೆ ಸಂಬಂಧಪಟ್ಟ ತತ್ವ

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿದೇಶಾಂಗ ಧೋರಣೆಯ ಕುರಿತು ಎರಡು ದಿನಗಳ ಚರ್ಚೆ ನಡೆಯಿತು ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನರು ಯುರೋಪ ಖಂಡದ ಪಶ್ಚಿಮ ಭಾಗದ ರಾಷ್ಟ್ರಗಳನ್ನೆಲ್ಲ ಐಕ್ಯಗೊಳಿಸುವ ಯೋಜನೆ ವಿವರಿಸಿ ಇದರ ಆವಶ್ಯಕತೆಯನ್ನು ಒತ್ತಿ ಹೇಳಿದರು ಕಳೆದ ಯುದ್ಧ ಕಾಲದ ಬ್ರಿಟಿಷ್ ಮುಖ್ಯ ಮಂತ್ರಿ ಚರ್ಚಿಲರು ಈ ಕಾರ್ಯಕ್ರಮದ ಆವಶ್ಯಕತೆ ತಾನು ಹಲವು ಸಮಯ ಹಿಂದೆಯೇ ಸಾರುತ್ತ ಬಂದಿದ್ದೇನೆಂದು ಸಮರ್ಥಿಸಿದರು. ಅಟ್ಲಿಯವರು ಪಾಶ್ಚಾತ್ಯ ಯುರೋಪಿನ ಐಕ್ಯ ಸಾಧನೆ ರಶ್ಯದ ಪ್ರಭಾವ ಬೆಳೆಯದಂತೆ ತಡೆಗಟ್ಟುವುದಕ್ಕಾಗಿ ಎಂದು ಸ್ಪಷ್ಟವಾಗಿ ವಿವರಿಸಿ ರಶ್ಯದಲ್ಲಿಯ ಕಮ್ಯೂನಿಜಮಿನ ಮೇಲೆ ಒಂದು ಉಪನ್ಯಾಸವನ್ನೇ ಮಾಡಿಬಿಟ್ಟರು.

ಅಮೇರಿಕದ ಮಾರ್ಶಲರ ಯಾವ ಯೂರೋಪಿನ ರಾಷ್ಟ್ರಗಳಿಗೆ ಬೇಕಾದ ಸಾಲ ಕೊಟ್ಟು ಅವುಗಳ ಪುನರುತ್ಥಾನಕ್ಕೆ ಹೊರಟಿರುವರೋ ಅದೇ ರಾಷ್ಟ್ರಗಳ ಐಕ್ಯ ಸಾಧನೆಗಾಗಿ ಬ್ರಿಟನು ಯತ್ನಿಸಲು ಹೊರಟಿರುತ್ತದೆ

ಇದು ಪೂರ್ವ ಯುರೋಪಿನ ರಾಷ್ಟ್ರಗಳನ್ನು ಒಳಪಡಿಸಿ ಅವುಗಳೊಳಗಿನ ಐಕ್ಯ ಸಾಧನೆಗಾಗಿ ರಶ್ಯ ದೇಶವೂ ಪ್ರಯತ್ನ ಮಾಡುತ್ತಿರುವುದು ಪ್ರತ್ಯೇಕ ಹೇಳಬೇಕಾಗಿಲ್ಲ

ರಶ್ಯದ ಕಮ್ಯೂನಿಜಮ್ ತತ್ವಗಳನ್ನು ಬ್ರಿಟನು ಎಂದಿಗೂ ಒಪ್ಪುವಂತಿಲ್ಲವೆಂದು ಮಜೂರ ಮುಂದಾಳ ಅಟ್ಲಿಯವರು ಕಠೋರೋಕ್ತವಾಗಿ ಹೇಳಿದರು ಕಮ್ಯೂನಿಜಮ್ ಸಂಕುಚಿತ ಏಕನಾಯಕ ಮಾನಸಿಕತೆಯಿದ್ದಲ್ಲಿ ಮಾತ್ರ ಸಾಧ್ಯ ಇಲ್ಲಿ ವ್ಯಕ್ತಿಸ್ವಾತಂತ್ರ್ಯವೆಂಬುದೇ ಇಲ್ಲ ಎಲ್ಲರೂ ಪೋಲೀಸ್ ಗುಲಾಮರು ಇತ್ಯಾದಿಯಾಗಿ ಅಟ್ಲಿಯವರು ವರ್ಣಿಸಿ ಬ್ರಿಟನಿನಲ್ಲಿ ಮಜೂರ ಪಕ್ಷಕ್ಕೆ ಸಿಕ್ಕಿದ ಬೆಂಬಲ ನೋಡಿ ಇದನ್ನು ತಮ್ಮ ಪಕ್ಷಕ್ಕೆ ಸೇರಿಸಬಹುದೆಂದು ಆಶಿಸುವುದು ಬೇಡವೆಂದು ಅಟ್ಲಿಯವರು ಸಾರಿದರು

ಇದೆಲ್ಲದರ ನಿಜವಾದ ಅರ್ಥವೆಂದರೆ ಅಮೇರಿಕವಿಲ್ಲದೆ ಬ್ರಿಟನಿಗೆ ಬೇರೆ ಗತಿ ಇಲ್ಲವೆಂಬುದೇ ಇರುತ್ತದೆ ಯುರೋಪಿನ ರಾಷ್ಟ್ರಗಳು ಈಗ ಹೇಗೆ ಯುದ್ಧಾನಂತರ ಬರಿದಾಗಿ ಸಂಕಷ್ಟದಲ್ಲಿವೆಯೋ ಅದೇ ರೀತಿ ಬ್ರಿಟನೂ ಇದೆ ಮಾರ್ಶಲರ ಯೋಜನೆಯಲ್ಲಿ ಮಾತ್ರ ಬ್ರಿಟನನ್ನು ಸೇರಿಸಿಲ್ಲ ಮಾತ್ರ

ಅಮೇರಿಕ ಮತ್ತು ರಶ್ಯಾ ರಾಷ್ಟ್ರಗಳು ಪರಸ್ಪರ ಸ್ಪರ್ಧೆಗೆ ಇಳಿದಿರುತ್ತವೆ ಇಡೀ ಜಗತ್ತನ್ನು ಎರಡು ತಂಡಗಳನ್ನಾಗಿ ವಿಭಾಗಿಸಲು ಹಲವು ಬಗೆಯ ಯತ್ನಗಳು ನಡೆಯುತ್ತಿವೆ. ಯೂರೋಪು ಎರಡು ಪಾಲಾಗುತ್ತಿದೆ, ಇದೇ ರೀತಿ ಏಸ್ಯಾ ಖಂಡದ ದೇಶಗಳಲ್ಲಿಯೂ ಇತ್ತಂಡದವರ ಕೈವಾಡಗಳೂ ನಡೆಯುತ್ತಲೇ ಇವೆ.

ಮಜೂರ ವರ್ಗದಿಂದ ಆಳಲ್ಪಡುತ್ತಿರುವ ಬ್ರಿಟನು ಇತ್ತಂಡಗಳೊಳಗೆ ಸಂಧಾನ ನಡೆಸಬಲ್ಲ ಸ್ವತಂತ್ರ ರಾಷ್ಟ್ರವಾಗಬಹುದೆಂದು ಹಲವರು ಆಶಿಸುತ್ತಿದ್ದರು. ಇದೀಗ ಸಾಧ್ಯವಿಲ್ಲವೆಂದೇ ಬ್ರಿಟಿಷ್ ವಿದೇಶಾಂಗ ಧೋರಣೆಯ ಎರಡು ದಿನಗಳ ಈ ಚರ್ಚೆ ಸ್ಪಷ್ಟಪಡಿಸಿತು.

ಬ್ರಿಟನು ಅಮೇರಿಕವನ್ನು ಬಿಟ್ಟು ಸ್ವತಂತ್ರ ಧೋರಣೆ ಕೈಕೊಳ್ಳುವ ಪರಿಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟವಾಯಿತು

ಇದೆಲ್ಲ ಮೂರನೇ ಮಹಾ ಯುದ್ಧದ ಪೂರ್ವ ಸಿದ್ಧತೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ

ಇದರಿಂದ ಇನ್ನೂ ಒಂದು ಸಿದ್ಧವಾಗುತ್ತದೆ ಭಾರತವು ಬ್ರಿಟಿಷ್ ಸಾಮ್ರಾಜ್ಯದಿಂದ ಹೊರಗೆ ಹೋಗದೆ ನಿವೃತ್ತಿ ಇಲ್ಲವೆಂಬುದು ಬ್ರಿಟಿಷ್ ಡೊಮಿನೀಯನ್ ಆಗಿ ನಾವು ಮುಂದರಿದರೆ ಈಗಿನ ಎರಡು ಪಕ್ಷಗಳೊಳಗೆ ಒಂದನ್ನು ನಾವು ಕಟ್ಟಿಕೊಂಡಂತೆಯೇ ಸರಿ ನಮ್ಮ ಪ್ರಧಾನ ಸಚಿವರು ನಾವು ಈ ಸ್ಪರ್ಧೆಯಲ್ಲಿ ಯಾರ ಹಿಂದೆಯೂ ಹೋಗ ಬಯಸುವುದಿಲ್ಲವೆಂದು ಮೇಲಿಂದ ಮೇಲೆ ಸಾರಿದ್ದಾರೆ ಅಂದ ಮೇಲೆ ನಾವು ಬ್ರಿಟಿಷ ಸಾಮ್ರಾಜ್ಯದ ಹೊರಗೆ ನಿಲ್ಲದೆ ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂಬುದು ಸ್ಪಷ್ಟ

ಮೂರನೆ ಮಹಾ ಯುದ್ಧವನ್ನು ಬ್ರಿಟನು ತಡೆಗಟ್ಟಲು ಯತ್ನಿಸುವಂತಿದ್ದರೆ ನಾವೂ ಜೊತೆಯಲ್ಲಿ ಇರಬಹುದಿತ್ತು

ಇನ್ನು ಒಂದ ಮಾತನ್ನು ವಿಚಾರಿಸಬೇಕು ನಮ್ಮ ಪಾಕಿಸ್ತಾನದ ಬಂಧುಗಳು ದರೇ ಬ್ರಿಟನನ್ನು ಕಟ್ಟಿಕೊಳ್ಳುವುದು ನಿಶ್ಚಯ ಇದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು ಮಧ್ಯ ಏಸ್ಯಾದ ಇತರ ಮುಸ್ಲಿಮ ರಾಷ್ಟ್ರಗಳು ಅಮೇರಿಕ ಬ್ರಿಟನುಗಳಿಗೆ ಬೇಕು ಪಾಕಿಸ್ತಾನದವರು ಪ್ರತ್ಯೇಕ ಹೋಗಲಾರರು ಇದಕ್ಕೂ ಅಮೇರಿಕ ಬ್ರಿಟನುಗಳ ಬೆಂಬಲಬೇಕು

ಈಗಿನ ಜಗತ್ತಿನಲ್ಲಿ ಸ್ವತಂತ್ರರಾಗಿ ವರ್ತಿಸುವ ಕಾರ್ಯವಾದರೂ ಸುಲಭ ಸಾಧ್ಯವಲ್ಲ ಇತರರ ಹಂಗಿಲ್ಲದೆ ಜೀವಿಸಲು ಸಾಧ್ಯವಿದ್ದರೆ ಮಾತ್ರ ಈ ಧೋರಣೆಯನ್ನು ಯಶಸ್ವಿಯಾಗಿ ಕೈಕೊಳ್ಳಬಹುದು

ನಮ್ಮಲ್ಲಿಯ ಕಮ್ಯೂನಿಸ್ಟ್ ಬಂಧುಗಳಾದರೋ ನಾವು ರಶ್ಯದ ಪಕ್ಷ ಕಟ್ಟಿಕೊಳ್ಳೋಣವೆಂದು ಹೇಳಬಹುದು ಕಮ್ಯೂನಿಜಮ್ ಅಟ್ಲಿಯವರಿಗೆ ಹೇಗೆ ಬೇಡವೋ ಹಾಗೆಯೇ ನಮಗೂ ಬೇಡ ನಮಗೀಗ ಬೇಕಾದುದೆಂದರೆ ನಮ್ಮ ಶಕ್ತಿ ಬೆಳೆಯಬೇಕು ನಮ್ಮ ಶಕ್ತಿ ಬೆಳೆಯಬೇಕಾದರೆ ನಮ್ಮಲ್ಲಿ ಉತ್ಪತ್ತಿ ಹೆಚ್ಚಾಗಬೇಕು ನಾವು ಇತರರ ಹಂಗಿಲ್ಲದೆ ಬದುಕುವಂತಾಗಬೇಕು ಇದಕ್ಕೆ ಕಮ್ಯೂನಿಸ್ಟ್ ಬಂಧುಗಳ ತಡೆ ಹಾಕಿದರೆ ಅವರು ನಿಜವಾಗಿಯೂ ದೇಶಕ್ಕೆ ದ್ರೋಹವನ್ನು ಮಾಡುವರು

ಬಲಿಷ್ಠ ಹಾಗೂ ಸ್ವತಂತ್ರ ಭಾರತವು ಏಸ್ಯದ ಮುಂದಾಳ್ತನ ವಹಿಸಿ ಯತ್ನಿಸಿದರೆ ಮೂರನೇ ಮಹಾ ಯುದ್ಧವನ್ನು ತಡೆಗಟ್ಟಲು ನಾವು ಸಮರ್ಥರಾಗಬಹುದು ಇದೇ ನಮ್ಮ ರಾಷ್ಟ್ರದ ವಿದೇಶಾಂಗ ನೀತಿ

ಭಾರತವು ಸಾಕಷ್ಟು ಬಲಿಷ್ಠ ರಾಷ್ಟ್ರವಾದರೆ ಪಾಕಿಸ್ತಾನವು ಮಾತ್ರವಲ್ಲ ಇತರ ಮುಸ್ಲಿಮ ರಾಷ್ಟ್ರಗಳು ಕೂಡಾ ನಮ್ಮೊಡನೆ ಮೈತ್ರಿಯಲ್ಲಿದ್ದು ಇಲ್ಲಿ ಅಮೇರಿಕ ಬ್ರಿಟನುಗಳ ಹಿಂದೆ ಹೋಗುವ ಅಗತ್ಯ ಇವರಿಗೂ ಬೀಳಲಿಕ್ಕಿಲ್ಲ.

ಸ್ವೀಕಾರ ಮತ್ತು ವಿಮರ್ಶೆ

ಕ್ರಾಂತಿ ಪಥದಲ್ಲಿ

ಸಾಹಿತ್ಯ ಭಾಂಡಾರ, ಹುಬ್ಬಳ್ಳಿ ಇವರ ಹತ್ತೊಂಬತ್ತನೆಯ ಪ್ರಕಟಣೆ ಜಯಪ್ರಕಾಶ ನಾರಾಯಣರ ಬರವಣಿಗೆಗಳು ಸಂಪಾದಕರು -ಯುಸುಫ್ ಮೆಹರ್ ಅಲ್ಲಿ-ಕನ್ನಡಿಸಿದವರು ಶ್ರೀ ನೆಗಳೂರು ಶ್ರೀನಿವಾಸರಾಯರು ಎಂ ಎ ಬಿ ಟಿ ಮತ್ತು ಶ್ರೀ ಮ ಗ ಶೆಟ್ಟಿ -ಬೆಲೆ ರೂ ೩-೮ ೦

ಶ್ರೀ ಜಯಪ್ರಕಾಶ ನಾರಾಯಣರ ಪ್ರಕಟನೆ, ಭಾಷಣ ಮತ್ತು ಲೇಖಗಳ ಈ ಸಂಗ್ರಹವನ್ನು ಯುಸುಫ್ ಮೆಹರಲ್ಲಿಯವರು ೧೯೪೨ರ "ಭಾರತದಿಂದ ತೊಲಗಿರಿ" ಬಂಡಾಯದ ನಾಲ್ಕನೇ ಸಾಂವತ್ಸರಿಕೋತ್ಸವದ ದಿನ ಅಂದರೆ ೧೯೪೬ನೇ ಆಗೋಸ್ತು ತಾ ೯ರಲ್ಲಿ ಪ್ರಕಟಿಸಿದರೆಂದೂ ಇದರ ಕನ್ನಡ ಅನುವಾದವಾದ ಈ ಗ್ರಂಥವನು ಕರ್ನಾಟಕ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ರಂ ರಾ ದಿವಾಕರರು ಸಮಾಜವಾದಿ ಪಕ್ಷದ ಕರ್ನಾಟಕ ಶಾಖೆಯ ಪರವಾಗಿ ಪ್ರಕಾಶ ಪಡಿಸಿದರೆಂದೂ ಇದರಲ್ಲಿ ಹೇಳಲಾಗಿದೆ

ಗಾಂಧೀ ಸಾಹಿತ್ಯವನ್ನು ಕುರಿತು ಹಲವು ಗ್ರಂಥಗಳನ್ನು ಓದಿದ ಕನ್ನಡ ಜನಕ್ಕೆ ಜಯಪ್ರಕಾಶರಂಥ ಒಬ್ಬ ಚೊಕ್ಕ ಸಾಮ್ಯವಾದಿಯ ವಿಚಾರ ಸರಣಿ ತಿಳಿಯುವುದು ಅಗತ್ಯವೆಂದು ಕಂಡುದರಿಂದ ಈ ಉದ್ದೇಶದಿಂದ ಈ ಪ್ರಕಾಶನ ಕೈಕೊಳ್ಳಲಾಯಿತೆಂದು ಪ್ರಕಾಶಕರು ಹೇಳಿದ್ದಾರೆ

ಈ ಸಂಕಲನದಲ್ಲಿ ಸೇರಿದ ಬರಹಗಳ ಆಯ್ಕೆ ಮತ್ತು ಪದ್ಧತಿಯ ಹೊಣೆ ತನ್ನದೆಂದು ಯುಸುಫ್ ಮೆಹರ್ ಅಲ್ಲಿಯವರು ಸ್ಪಷ್ಟ ಪಡಿಸಿದ್ದಾರೆ ಮಾತ್ರವಲ್ಲ ಇದರಲ್ಲಿ ಮೊದಲಾಗಿ ಕೊಟ್ಟಿರುವ ಜಯಪ್ರಕಾಶ್ ಎಂಬ ವ್ಯಕ್ತಿ ಚಿತ್ರವನ್ನು ಮೆಹರಲ್ಲಿಯವರ "ಭಾರತದ ಮುಂದಾಳುಗಳು" ಎಂಬ ಗ್ರಂಥದ ಪ್ರಥಮ ಸಂಪುಟದಿಂದ ಆಯ್ದುಕೊಳ್ಳಲಾಗಿದೆ

"ಕ್ರಾಂತಿ ಪಥದಲ್ಲಿ" ಎಂಬ ಈ ಗ್ರಂಥದ ವಿಮರ್ಶೆಗೆ ತೊಡಗಿದ ನಾವು ಇದರ ಮೂಲವಾದ ಯುಸುಫ್ ಮೆಹರ್ ಅಲ್ಲಿಯವರ ಪ್ರಕಟಣೆಯ ಕುರಿತು ಕೂಡ ಒಂದೆರಡು ಮಾತು ಹೇಳಬೇಕು ತಾವು ಕೈಕೊಂಡಿರುವ ಕಾರ್ಯವನ್ನು ಅವರು ಅತ್ಯಂತದಕ್ಷತೆಯಿಂದ ನೆರವೇರಿಸಿದ್ದಾರೆ ಜಯಪ್ರಕಾಶರ ವ್ಯಕ್ತಿ ಚಿತ್ರದಿಂದ ಆರಂಭಿಸಿ ಇವರು ೧೯೪೬ನೇ ಆಗೋಸ್ತು ೯ರಲ್ಲಿ ಬರೆದ "ಸ್ವಾತಂತ್ರ್ಯ ಯೋಧರಿಗೆ ಮೂರನೇ ಓಲೆ" ಎಂಬಲ್ಲಿಗೆ ನಿಲ್ಲಿಸಿದ ಈ ಲೇಖನಸಂಗ್ರಹವು ಭಾರತದಲ್ಲಿ ಸಾಮ್ಯವಾದೀ ಪಕ್ಷದ ಆರಂಭದಿಂದ ೧೯೪೬ನೇ ಆಗೋಸ್ತು ತಾ. ೯ರ ವರೆಗಿನ ಸಾಮ್ಯವಾದೀ ಪಕ್ಷದ ಇತಿಹಾಸವನ್ನೇ ಕಣ್ಣೆದುರು ನಿಲ್ಲಿಸುತ್ತದೆ ಮಾತ್ರವಲ್ಲ ಇದರ ತತ್ವಗಳು-ಇದರ ಕಾರ್ಯಕ್ರಮಗಳು ಮೊದಲಾದ ಈ ಪಕ್ಷದ ಕುರಿತು ಅವಶ್ಯವಾಗಿ ತಿಳಿಯಬೇಕಾದ ಸಕಲ ಮಾಹಿತಿಯೂ ಇದರಲ್ಲಿ ಅಡಕವಾಗುವಂತೆ ಲೇಖನಗಳನ್ನು ಸಂಗ್ರಹಿಸಲಾಗಿದೆ,

ಕೊನೆಯದಾಗಿ "ಜಯಪ್ರಕಾಶರು ಚಿತ್ರಿಸಿದ ಚಿತ್ರ" ಎಂಬ ಮಹಾತ್ಮಾಗಾಂಧಿಯ "ಹರಿಜನ" ಲೇಖನವೊಂದನ್ನು ಗ್ರಂಥದ ಪರಿಶಿಷ್ಟವಾಗಿ ಕೊಡಲಾಗಿದೆ ಸಾಮ್ಯವಾದೀ ಪಕ್ಷದ ಕಾರ್ಯಕ್ರಮದ ಕುರಿತ

ಗಾಂಧೀಜಿಯವರ ಅಭಿಪ್ರಾಯವನ್ನೂ ಇದರಲ್ಲಿ ಕೊಡಲಾಗಿದೆ.

ಸಾಮ್ಯವಾದೀ ಪಕ್ಷದ ತತ್ವಗಳು ಅಥವಾ ಅದರ ಕಾರ್ಯಕ್ರಮಗಳ ಕುರಿತು ಟೀಕಿಸುವುದು ಈ ಗ್ರಂಥ ವಿಮರ್ಶಕನ ಕಾರ್ಯವಲ್ಲ. ಮಾತ್ರವಲ್ಲ ಅದರ ಕುರಿತು ಮಹಾತ್ಮಾಜಿಯವರ ಅಭಿಪ್ರಾಯಗಳನ್ನೇ ಪರಿಶಿಷ್ಟದಲ್ಲಿ ಕೊಟ್ಟಿರುವರಿಂದ ಮೇಲೆ ಬೇರೆ ಟೀಕೆಯ ಆವಶ್ಯಕತೆಯೂ ಉಳಿದಿಲ್ಲ. ಅಂತೂ ಈ ಗ್ರಂಥದ ನಿಜವಾದ ಮಹತ್ವವನ್ನು ತಿಳಿಸುವುದಕ್ಕಾಗಿ ಒಂದೆರಡು ಮಾತುಗಳನ್ನು ಹೇಳದೆ ನಿವೃತ್ತಿ ಇಲ್ಲ. ಇಂದು ಭಾರತದಲ್ಲಿಯ ಎಡ ಪಕ್ಷಗಳೆನ್ನಿಸುವ ಕಮ್ಯೂನಿಸ್ಟ್, ರ್ಯಾಯಿಸ್ಟ್ ಮತ್ತು ಸಾಮ್ಯವಾದೀ ಪಕ್ಷಗಳಲ್ಲಿ ಈ ಸಾಮ್ಯವಾದೀ ಪಕ್ಷವೇ ಅತ್ಯಂತ ಪ್ರಮುಖವಾದುದೆಂದು ನಮ್ಮ ಓದುಗರಿಗೆ ನಾವು ತಿಳಿಸುವುದು ಅಗತ್ಯ. ರ್ಯಾಯಿಸ್ಟ್ ಸಂಗಡವು ಈ ದೇಶದಲ್ಲಿ ನಿಜವಾಗಿ ಬೇರೂರಿಲ್ಲ ಕಮ್ಯೂನಿಸ್ಟರ ಚಟುವಟಿಕೆಗಳನ್ನು ನಾವು ತುಂಬಾ ಕಾಣುತ್ತಿರುವೆವಾದರೂ ಇದು ವಿಚಾರವಂತ ದೇಶಪ್ರೇಮಿಗಳಿಂದ ಕೂಡಿದ ಪಕ್ಷವಲ್ಲವೆಂಬುದರಿಂದ ಇದಕ್ಕೆ ನಿಜವಾಗಿಯೂ ಹೆಚ್ಚಿನ ಭವಿಷ್ಯವಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಆದರೆ ಸಾಮ್ಯವಾದೀ ಪಕ್ಷದ ಮಾತು ಬೇರೆ ಇದರಲ್ಲಿ ಜಯಪ್ರಕಾಶರಂಥ ಉಜ್ವಲ ದೇಶ ಸೇವಕರು ದುಡಿಯುತ್ತಿದ್ದಾರೆ ಕಾಂಗ್ರೆಸಿನ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಇವರು ಪರಿಣಾಮಕಾರಿಯಾದ ಭಾಗವಹಿಸಿದ್ದಾರೆ ಇದಕ್ಕೂ ವಿಶೇಷವೆಂದರೆ ಜಯಪ್ರಕಾಶರ ಸಾಮ್ಯವಾದವು ಮಾರ್ಕ್ಸ್ ತತ್ವದ ಅಂಧಾನುಕರಣವಲ್ಲವೆಂಬುದು ಮಾರ್ಕ್ಸನ ಶಾಸ್ತ್ರವನ್ನು ಚೆನ್ನಾಗಿ ಅರಿತು ಅದನ್ನು ಇಂದಿನ ಭಾರತದ ಪರಿಸ್ಥಿತಿಗೆ ಅನ್ವಯಿಸಲು ಇವರು ಸಮರ್ಥರಿದ್ದಾರೆ ಇದು ನಿಜವಾಗಿ ದೋಷ ರಹಿತವಾದ ಸಶಾಸ್ತ್ರೀಯ ದಾರಿಯಿರುತ್ತದೆ

ಜಯಪ್ರಕಾಶರು ಆಶಿಸುವುದಾದರೂ ಏನು! ಅವರು ಈ ರೀತಿ ಹೇಳಿದ್ದಾರೆ "ಸರಕಾರದ ಗುರಿ ಪ್ರತಿಯೊಬ್ಬನ ನೆಮ್ಮದಿಯಾದ ಬಾಳುವೆ, ನೈತಿಕ ಬೌದ್ಧಿಕ ಉನ್ನತಿ ಸಾಮಾಜಿಕ ಸಮತೆಯ ಈ ಧ್ಯೇಯ ಸಾಧನೆಗಾಗಿ ಸರಕಾರವು ವೈಯಕ್ತಿಕ ಅಥವಾ ಸಹಕಾರೀ ಪದ್ಧತಿಯ ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಸರಿಯಾದ ಲಾಭ ದೊರೆಯುವಂತೆ ಏರ್ಪಡಿಸುವುದು ಪ್ರಮುಖ ಉದ್ಯಮಗಳನ್ನೆಲ್ಲ ಕೊನೆಯಲ್ಲಿ ಸಾಂಘಿಕ ಆಡಳಿತಕ್ಕೂ ಸಾಂಘಿಕ ನಿಯಂತ್ರಣಕ್ಕೂ ಒಳಪಡಿಸಲು ಯತ್ನಿಸುವುದು ಇದಕ್ಕಾಗಿ ಸರಕಾರವು ವಾಹನ, ಜಲಮಾರ್ಗ, ಗಣಿ ಮತ್ತು ಇನ್ನಿತರ ಪ್ರಮುಖ ಉದ್ಯೋಗಗಳನ್ನು ರಾಷ್ಟ್ರೀಕರಣ ಮಾಡುವದು. ಬಟ್ಟೆಯ ಉದ್ಯೋಗವನ್ನು ತ್ವರಿತದಲ್ಲಿಯೇ ವಿಕೇಂದ್ರೀಕರಿಸಲಾಗುವುದು

"ಹಳ್ಳಿಯ ಜೀವನವನ್ನು ಪುನರ್ವ್ಯವಸ್ಥಿತಗೊಳಿಸಿ ಹಳ್ಳಿಗಳು ಸ್ವಯಂ ಪ್ರಭುತ್ವವನ್ನು ಪಡೆಯುವಂತೆ, ಹೆಚ್ಚು ಹೆಚ್ಚು ಸ್ವಯಂ ಪೂರ್ಣವಾಗುವಂತೆ ಮಾಡಲಾಗುವುದು ಸಾಗುವಳಿದಾರನೇ ಹೊಲದ ಒಡೆಯನಾಗುವಂತೆ ಮತ್ತು ತನ್ನ ಕುಟುಂಬದ ಸುಖಜೀವನಕ್ಕೆ ಬೇಕಾದುದಕ್ಕಿಂತ ಹೆಚ್ಚಿನ ಭೂಮಿ ಒಡೆಯನ ಕೈ ಸೇರದಂತೆ ಭೂಸುಧಾರಣೆಯ ಕಟ್ಟಳೆಯಲ್ಲಿ ಏರ್ಪಾಡು ಮಾಡಲಾಗುವುದು. ಇದರಿಂದ ತರತರದ ಜಮೀನುದಾರೀ ಪದ್ಧತಿಯ ನಿರ್ಮೂಲನವಾಗಿ ಬ್ಯಾಂಕಲಿಗರ ದಾಸ್ಯ ವಿಮೋಚನೆಯಾಗುವುದು.

"ಸರಕಾರವು ವರ್ಗಗಳ ಹಿತ ಸಂರಕ್ಷಣೆ ಮಾಡುವುದು. ಆದರೆ ಮೇಲ್ವರ್ಗವು ಬಡವರ, ದಲಿತರ ಹಕ್ಕು ಬಾಧ್ಯತೆಗಳನ್ನು ಕಡೆಗಣಿಸತೊಡಗಿದಾಗ ಸರಕಾರವು ದುರ್ಬಲರ ಪಕ್ಷವನ್ನು ವಹಿಸಿ ಸಾಮಾಜಿಕ ಸಮತೆಯನ್ನು ಕಾಯ್ದುಕೊಳ್ಳುವುದು."

ಜಯಪ್ರಕಾಶರು ಚಿತ್ರಿಸಿದ ಚಿತ್ರದ ಒಂದಂಶವನ್ನು ಎತ್ತಿ ಮೇಲೆ ಕೊಡಲಾಗಿದೆ. ಇದಕ್ಕೆ ಯಾವ ನಿಜವಾದ ಕಾಂಗ್ರೆಸಿಗನಾದರೂ ಆಕ್ಷೇಪಿಸುವಂತಿಲ್ಲವೆಂಬುದರಿಂದ ಜಯಪ್ರಕಾಶರ ಸಾಮ್ಯವಾದವು ಎಲ್ಲ ಜನರ ಮೆಚ್ಚಿಗೆಗೆ ಪಾತ್ರವಾಗುವಂತಹದು ಕಾಂಗ್ರೆಸು ಈ ಧ್ಯೇಯಗಳಿಂದ ಹಿಮ್ಮೆಟ್ಟಿದ ಲಕ್ಷಣಗಳು ಕಂಡು ಬಂದರೆ ಈ ಸಾಮ್ಯವಾದೀ ಸಂಗಡವೇ ಅದರ ಸ್ಥಾನವನ್ನು ಪಡೆಯಲು ಅರ್ಹತೆಯುಳ್ಳದ್ದೆಂಬ ಬಗ್ಗೆ ಸಂಶಯವಿಲ್ಲ ಈ ಸಂಗಡಕ್ಕೆ ನಿಜವಾಗಿಯೂ ಉಜ್ವಲ ಭವಿಷ್ಯವಿರುವಂತೆ ಕಾಣುತ್ತದೆ ಒಂದೇ ಇದು ಕಾಂಗ್ರೆಸಿನ ಸ್ಥಾನವನ್ನು ಪಡೆಯುವುದು ಇಲ್ಲವೆ ಕಾಂಗ್ರೆಸೇ ಈ ಧ್ಯೇಯಗಳನ್ನು ಸಾಧಿಸುವಂತಾಗುವುದು. ಇವೆರಡೂ ಒಂದೇ ಇರುತ್ತದೆ

ಪ್ರಕಾಶರು ಈ ಗ್ರಂಥವನ್ನು ಕನ್ನಡಿಗರ ಕೈಯಲ್ಲಿರಿಸಿ ಉಪಕಾರ ಮಾಡಿದ್ದಾರೆ, ಎಲ್ಲ ಕನ್ನಡಿಗರೂ ಇದರ ಪೂರ್ಣ ಉಪಯೋಗ ಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ಸಾಹಸ

ಐದಂಕದ ನಾಟಕ– ಬರೆಹಗಾರ– ಶ್ರೀ ಬಿ ಭುಜಂಗರಾವ್, ಬಿ. ಎ. ವಿದ್ವಾನ್. ಪ್ರಕಾಶಕರು ಹಿಂದ್ ಕಿತಾಬ್ಸ್, ಲಿಮಿಟೆಡ್

ಕದಂಬವಂಶದ ರಾಜ ಚಂದ್ರವರ್ಮನು ಬಹುಕಾಲ ಮಕ್ಕಳಿಲ್ಲದ್ದರಿಂದ ತಮ್ಮನಾದ ನಾಗವರ್ಮನನ್ನು ಯುವರಾಜನಾಗಿ ಮಾಡುತ್ತಾನೆ ಕೊನೆಗೆ ಚಂದ್ರವರ್ಮನಿಗೆ ಮಯೂರವರ್ಮ ಹುಟ್ಟುತ್ತಾನೆ. ಮಗುವು ಚಿಕ್ಕದಿರುವಾಗಲೆ ಚಂದ್ರವರ್ಮನು ಸಾಯುತ್ತಾನೆ ನಾಗವರ್ಮನು ದುರಾಸೆಗೆ ಒಳಪಟ್ಟು ತಾನೇ ಸಾರ್ವಭೌಮನಾಗಿ ಮೆರೆಯುತ್ತಾನೆ ಮಗುವನ್ನು ಮಹಾರಾಣಿ ತವರುಮನೆಗೆ ಒಯ್ಯುತ್ತಾಳೆ ಇವರನ್ನು ನಿಗ್ರಹಿಸಲು ನಾಗವರ್ಮನು ತಂತ್ರ ಹೂಡುತ್ತಾನೆ ರಾಜ ಪುರೋಹಿತ ವೀರಶರ್ಮನು ಮಯೂರವರ್ಮನ ಬೆಂಬಲಕ್ಕೆ ನಿಂತು ರಾಜನಿಷ್ಠೆಯುಳ್ಳ ನಾಯಕರ ಬೆಂಬಲ ಪಡೆದೂ ಪುನಃ ಮಯೂರವರ್ಮನನ್ನು ರಾಜ್ಯಪದವಿಗೆ ಏರಿಸುವ ಅಂಶವೇ ನಾಟಕದ ಕಥಾವಸ್ತು

ನಂದಿದುರ್ಗದ ಅಧಿಪತಿ ವಿಶಾಖದತ್ತನು ರಾಜನಿಷ್ಠ ನಾಯಕರಲ್ಲಿ ಶ್ರೇಷ್ಠನಾದವ. ಈತನ ಮಗಳು ಪ್ರೇಮಾವತಿ ಮತ್ತು ಮಯೂರವರ್ಮರ ಪ್ರಣಯ ಕಥೆಯನ್ನೂ ಸೇರಿಸಿ ಇದರಲ್ಲಿ ಸ್ವಲ್ಪ ಶೃಂಗಾರವನ್ನೂ ಮಿಶ್ರಮಾಡಿರುತ್ತದೆ. ಪ್ರೇಮಾವತಿಯು ಸಾಕಿದ ಒಂದು ಮಂಗಕ್ಕೂ ಕಥಾನಕದಲ್ಲಿ ಸ್ವಲ್ಪ ಭಾಗ ಕಲ್ಪಿಸಿ ಕದಂಬ ವಂಶಸ್ಥರು ಕಪಿಧ್ವಜರಾದುದಕ್ಕೆ ಒಂದು ಕಾರಣವನ್ನು ಕೊಡಲಾಗಿದೆ ಇದೆಲ್ಲ ಕಥೆಯು ಕಾಲ್ಪನಿಕ ಭಾಗವೆಂದು ಮುಂದಾಗಿ ಹೇಳಲಾಗಿದೆ.

ವೀರಶರ್ಮನ ಭೇದೋಪಾಯ ಚತುರತೆ ಮುದ್ರಾರಾಕ್ಷಸದಲ್ಲಿಯ ಚಾಣಕ್ಯನ ಸ್ಮರಣೆ ಮಾಡುತ್ತದೆ.

ಕನ್ನಡನಾಡಿನ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆರಿಸಿ ಈ ಬಗೆಯ ನಾಟಕ ಅಥವಾ ಕಾದಂಬರಿ ಮೊದಲಾದವುಗಳನ್ನು ಬರೆಯುವ ರೂಢಿಯು ಇನ್ನೂ ಹೆಚ್ಚಾಗಿ ನಮ್ಮಲ್ಲಿ ಬೆಳೆಯುವುದು ಅಗತ್ಯವೆನ್ನಬಹುದು

ಈ ಐತಿಹಾಸಿಕ ಗದ್ಯ ನಾಟಕದ ಭಾಷೆ ಸರಳವಾದ ಗ್ರಂಥಸ್ಥಭಾಷೆ ಇದ್ದು ಈ ಗ್ರಂಥವು ಹ್ಯಾಸ್ಕೂಲು ತರಗತಿಯ ವಿದ್ಯಾರ್ಥಿಗಳಿಗೆ ಸಾರಪುಸ್ತಕವಾಗಿರಿಸಲು ಯೋಗ್ಯವಿರುತ್ತ

ಹಿಂದ್ ಕಿತಾಬ್ಸಿನಂಥ ಪ್ರಸಿದ್ಧ ಪ್ರಕಾಶಕರು ಕನ್ನಡದಲ್ಲಿಯೂ ಈ ರೀತಿ ಗ್ರಂಥ ಪ್ರಕಟಣೆಗೆ ಕೈಹಚ್ಚಿದ್ದು ಸಂತೋಷದ ವಿಚಾರ ಇವರು ಇದೇ ರೀತಿ ಅನೇಕ ಕನ್ನಡ ಗ್ರಂಥಗಳನ್ನು ಪ್ರಕಟಿಸುವಂತಾಗಲೆಂದು ಹಾರೈಸುತ್ತೇವೆ

ಸೌಂದರ್ಯ ಸಾಧನೆ
ಪ್ರತಿ ಸಲ ಕುಟಿಕೂರಾದಿಂದ
ತಿಕ್ಕಿ ತೊಳೆದಾಗ

ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ವೌಲ್ಯವಿದೆ ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತದೆ

555

ಕುಟಿಕೂರಾ ಸಾಬೂನು
CUTICURA SOAP

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ.

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.
ಪ್ರಾಣಿಕೊಬ್ಬು ವಿರಹಿತವಾದ್ದು.

NOTICE

CANARA HIGH SCHOOL, MANGALORE

The preliminary list of voters for election of one representative of Old Boys to the Canara High School Council has been put up on the Notice Board of the Canara High School Main on 23-12-1947 Objections are invited till the forenoon of 4-3 1948 after which a final list will be prepared.

The following dates have been fixed in connection with the election of a member of the Canara High School Council from the Old Boys Constituency

Day of Nomination (10 A M. to 5 P M) on 14 4-1948

Nominations to be received by the Headmaster, Canara High School Main

Day of Scrutiny 5 P M on 15 4 1948

Day for withdrawal By 5 P M. on 16 4-48

Day for issue of voting papers: 1 5-1948

Last day for receipt of voting papers 5 P M on 1-7-1948.

Counting of votes and declaration of result Commencing at 5-30 P M on 3-7-1948.

All nomination papers have to be accompanied by a nonreturnable deposit of Rs. 10/- (Rupees Ten only).

Mangalore, 24-1-1948

M. Madhava Rau, Manager. CANARA HIGH SCHOOL.

ಮಹಾತ್ಮರ ಸ್ಮಶಾನ ಯಾತ್ರೆ

ಧ್ವಜ ಹಾಗೂ ಪುಷ್ಪಾಲಂಕೃತ ರಥದಲ್ಲಿ

ಅವಶೇಷದ ಮೆರವಣಿಗೆ

ಆಕಾಶದಿಂದ ಪುಷ್ಪವೃಷ್ಟಿ

ಬಿರ್ಲಾ ಭವನದಿಂದ ಜಮುನಾಘಾಟದ ವರೆಗೆ ಪೋಲೀಸರ ಬಂದೋಬಸ್ತು ತೀರ ಜನ್ನಾಗಿತ್ತು. ಆಲ್ಬುಕರ್ಕ ಬೀದಿಯಲ್ಲಿ ಜನರನ್ನೇ ಬಿಡುತ್ತಿರಲಿಲ್ಲ. ಬಿರ್ಲಾ ಭವನದ ಹತ್ತಿರವಂತೂ ಪೋಲೀಸರ ಸೈನಿಕರ ವ್ಯೂಹವನ್ನೇ ರಚಿಸಲಾಗಿತ್ತು. ನಗರದಲ್ಲಿಯು ಎಲ್ಲ ವ್ಯವಹಾರವಿಂದು ಕಟ್ಟಾಗಿತ್ತು. ಎಲ್ಲ ಸಿನೇಮಾ ಗೃಹಗಳೂ ಮುಚ್ಚಿದ್ದುವು. ಯಾವ ಕಾರ್ಯಕ್ರಮಕ್ಕೂ ಎಡೆಯಿರಲಿಲ್ಲ.

ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಗಂಭೀರವಾಗಿ ಬಿರ್ಲಾ ಭವನದ ಹತ್ತಿರ ಎಲ್ಲ ವ್ಯವಸ್ಥೆಯನ್ನು ನೋಡುತ್ತ ಸಂಚರಿಸುತ್ತಿದ್ದರು ಹೂಗಳ ಹಾಸಿಗೆಯ ಸಿದಿಗೆಯ ಮೇಲೆ ಮಹಾತ್ಮರು ಪವಡಿಸಿದ್ದರು ಅವರ ಕಳೇಬರವಿದ್ದ ಕೋಣೆಯ ಕಿಟಕಿಯ ಬಾಗಿಲುಗಳನ್ನು ತೆಗೆದಡಲಾಗಿತ್ತು. ಸಂದರ್ಶಿಸಿದವರು ಅವರ ದರ್ಶನ ಪಡೆದುಕೊಂಡು ಹೋಗುವಾಗ ಅವರಲ್ಲಿದ್ದ ಹೂ ಗೊಂಚಲುಗಳನ್ನು ಮಹಾತ್ಮರ ಪಾದಕ್ಕೆ ಅರ್ಪಿಸುತ್ತಿದ್ದರು

ಶೀಖ, ಗುರ್ಖಾ, ರಜಪುತಾನಾ ಹೀಗೆ ಹಿಂದುಸ್ಥಾನದ ಸೈನ್ಯ ಶಾಖೆಯ ಎಲ್ಲ ದಳಗಳು ದುಃಖಸೂಚಕ ಸಮ ವಸ್ತ್ರಗಳನ್ನು ಧರಿಸಿ ಬಿರ್ಲಾ ಭುವನದೆದುರು ನಿಂತಿದ್ದವು ಸಶಸ್ತ್ರ ಮೋಟಾರುಗಳೂ ಹಿಂದೀ ವೈಮಾನಿಕ ನಾವಿಕ ದಲದವರೂ ಬಂದಿದ್ದರು

ಬಿರ್ಲಾ ಭವನದಲ್ಲಿ ಮಹಾತ್ಮರನ್ನು ಶುಭ್ರ ಖಾದಿಯಿಂದ ಪಾದದಿಂದ ಎದೆಯ ವರೆಗೆ ಮುಚ್ಚಿ ಮಲಗಿಸಲಾಗಿದೆ ಗುಂಡಿನ ಗಾಯದ ಕಪ್ಪು ಕಲೆಗಳನ್ನು ಅವರ ದೇಹದಲ್ಲಿ ಕಾಣಬಹುದು ಅವರ ಮುಖವಿನ್ನೂ ಪ್ರಾರ್ಥನಾ ಮಗ್ನರಾದವರಂತಿದೆ ಅವರ ತಲೆಯ ಹತ್ತಿರ ಚಂದನದ ಧೂಪವಿದೆ ದೇವದಾಸ ಗಾಂಧಿಯವರು ಇಡೀ ರಾತ್ರಿ ತಮ್ಮ ತಂದೆಯ ಹತ್ತಿರ ಇದ್ದರು ಸರದಾರ ಪಟೇಲರು ನೆಲದಲ್ಲಿಯೆ ನೆಟ್ಟ ದೃಷ್ಟಿಯಿಂದ ನಿಮೀಷದಲ್ಲಿಯೆ ಕುಳಿತಿದ್ದರು ಅಮೃತ ಕೌರರು ಗಾಂಧೀಜಿಯವರ ಪಾದದ ಬಳಿಯಲ್ಲಿ ಕುಳಿತಿದ್ದಾರೆ ಪಂಜಾಬಿನವರು ವಿಶೇಷ ವಿಮಾನದಿಂದ ಬಂದರು

ಗಾಂಧೀಜಿಯವರ ಸಲುವಾಗಿ ಭವ್ಯ ಸ್ಮಾರಕ ಕಟ್ಟಿಸಲು ಅನುಕೂಲವಾದ ಸ್ಥಳ ಬೇಕೆಂದು ಗಾಂಧೀಜಿಯವರ ಅಂತ್ಯ ವಿಧಿಯನ್ನು ರಾಜಘಾಟದಲ್ಲಿ ನೆರವೇರಿಸಬೇಕೆಂದು ನಿರ್ಧಾರವಾಯಿತು

ಗಾಂಧಿಜಿಯವರ ಶವವನ್ನು ಅವರ ಮೊಮ್ಮಕ್ಕಳು, ಪ್ಯಾರೇಲಾಲ ಮುಂತಾದ ಅವರ ಭಕ್ತರು ಸೇರಿ ಬಿರ್ಲಾ ಭವನದಿಂದ ಎತ್ತಿ ಒಯ್ದು ಪುಷ್ಪಾಲಂಕೃತವಾದ ಸೈನ್ಯಶಾಖೆಯ ವಾಹನವೊಂದರ ಮೇಲಿರಿಸಿದರು ಸರದಾರ ಪಟೇಲರು ಮಹಾತ್ಮರ ಪಾದದ ಹತ್ತರ ಆ ವಾಹನದಲ್ಲಿ ಕುಳಿತರು ರಾಮದಾಸ ಗಾಂಧಿ ಮತ್ತು ಸರದಾರ ಬಲದೇವ ಸಿಂಗರೂ ಅದೇ ವಾಹನವನ್ನೇರಿದರು

ಲಾರ್ಡ ಮೌಂಟ್‌ಬ್ಯಾಟನರು ತಮ್ಮಿಬ್ಬರು ಮಕ್ಕಳೊಡನೆ ಬಂದಿದ್ದರು, ಶ್ರೀಮತಿ ಸರೋಜಿನಿ ನಾಯ್ಡು, ಸರ್ ಚಂದುಲಾಲ ತ್ರಿವೇದಿಯವರು ಸಕಾಲಕ್ಕೆ ಆಗಮಿಸಿದರು

೧೧ ೪೫ ಗಂಟೆಗೆ ಮಹಾತ್ಮರ ಸ್ಮಶಾನ ಯಾತ್ರೆಯ ಮೆರವಣಿಗೆಯು ಬಿರ್ಲಾ ಭವನದಿಂದ ಹೊರಟಿತು

ಇಡೀ ವಾಹನವೇ ಹೂಗಳಿಂದ ಮುಚ್ಚಿ ಹೋಗಿತ್ತು ಮಹಾತ್ಮಾಗಾಂಧಿಯವರ ಮುಖ ಮಾತ್ರ ಕಾಣುತ್ತಿತ್ತು ಮೆರವಣಿಗೆ ಹೊರಟ ಕೂಡಲೆ ಪಂ ನೆಹರೂರವರೂ ದೇವದಾಸ ಗಾಂಧಿಯವರೂ ಮಹಾತ್ಮರ ಎಡಬಲ ಪಕ್ಕಗಳಲ್ಲಿದ್ದರು ಸರದಾರ ಪಟೇಲರು ಪಂಡಿತ ನೆಹರುರವರ ಹಿಂಬದಿಯಲ್ಲಿದ್ದರು ದೇವದಾಸ ಗಾಂಧಿಯವರು ಮುಂದೆ ಆಸೀನರಾಗಿದ್ದರು

ಗಾಂಧಿಜಿಯವರ ಆಪ್ತೇಷ್ಟರೂ ಆಶ್ರಮವಾಸಿಗಳೂ ವಾಹನದ ಮುಂದೆ ಮುಂದೆ ನಡೆದರು

'ಮಹಾತ್ಮಾ ಗಾಂಧೀಕೀ ಜೈ' ಎಂದು ಉದ್ಘೋಷಿಸುತ್ತಿದ್ದ ಜನಸಾಗರದಲ್ಲಿ ಗುರ್ಖಾ ಮತ್ತು ಕೊಡೆ ವೈಮಾನಿಕರೂ ಈ ಜನರಿಗೆ ದಾರಿಮಾಡಿಕೊಡುತ್ತಿದ್ದರು

ಈ ಮೆರವಣಿಗೆ ಅರ್ಧಗಟ್ಟೆಯಲ್ಲಿ ಸ್ಮಾರಕ ಮಂಟಪಕ್ಕೆ ಬಂತು ರಾಜಮಾರ್ಗದ ಇಕ್ಕೆಲದಲ್ಲಿದ್ದ ಹೆಮ್ಮರಗಳು ಮಹಾತ್ಮರ ಅಂತ್ಯದರ್ಶನಕ್ಕಾಗಿ ಮೇಲೇರಿ ಕುಳಿತವರ ಭಾರದಿಂದ ಬಾಗಿದ್ದವು ಸಾವಿರಾರು ಸಾಯಕಲ್ಲುಗಳು ದಿಕ್ಕಿಲ್ಲದೆ ಬೀದಿಗಳ ಪಕ್ಕದಲ್ಲಿ ಬಿದ್ದುಕೊಂಡಿದ್ದವು ಗುರ್ಖಾ ಸೈನಿಕರು ಮೈತುಂಬ ಕಣ್ಣಿಟ್ಟುಕೊಂಡು 'ಸಾವಧಾನದಿಂದ ಮಾರ್ಗ ಮಾಡಿಕೊಡುತ್ತ ಮುಂದೆ ಸಾಗಿದ್ದರು ಆಗಾಗ ಸೈನಿಕರ ವಾಹನವೂ ಕಾಣಿಸಿಕೊಳ್ಳುತ್ತಿತ್ತು

ಈ ಪ್ರಕಾರ ಮೆರವಣಿಗೆಯಲ್ಲಿ ಹಿಂದೂ, ಶೀಖ, ಪಾರಸಿ ಬೌದ್ಧ, ಕ್ರಿಶ್ಚನ, ಹರಿಜನ ಮುಸ್ಲಿಂ ಹೀಗೆ ಸರ್ವರೂ ಸೇರಿಕೊಂಡಿದ್ದರು ದುಃಖಸೂಚಕ ಕಪ್ಪು ಪತಾಕೆಗಳು ಕಾಣಿಸುತ್ತಿದ್ದವು ಮಹಾತ್ಮಾಜೀಕೀ ಜಯ ಎಂದು ಆಗಾಗ ಶಾಂತತಾ ಭಂಗವಾಗುತ್ತಿತ್ತು ಮಾರ್ಗದಲ್ಲಿದ್ದ ಐದನೇ ಜಾರ್ಜರ ಪುತ್ಥಳಿಯ ಪೀಠದ ಮೇಲೆಯೂ ಜನರು ಮುಕರಿ ಕಲ್ಲುಗಂಬಗಳಿಗೆ ಜೋತುಬಿದ್ದು ಮಹಾತ್ಮರ ದರ್ಶನದ ಲಾಭ ಪಡೆದರು

ಬಿರ್ಲಾ ಭವನದಿಂದ ರಾಜಘಾಟ ೫ ಮೈಲು ದೂರವಿದೆ ಕೆಂಪುಕೋಟೆಯ ದಕ್ಷಿಣಕ್ಕೆ ಯಮುನಾ ಪೂಲಿನ ದಕ್ಷಿಣಕ್ಕೆ ಈ ಘಾಟ ಇದೆ

ರಾಜಘಾಟದಲ್ಲಿ ಮಹಾತ್ಮರ ಅಂತ್ಯವಿಧಿಗೆಂದೇ ಇಟ್ಟಂಗಿಯಿಂದ ಒಂದು ಎತ್ತರದ ಕಟ್ಟೆಯನ್ನು ಕಟ್ಟಲಾಗಿತ್ತು

ಈ ಮೆರವಣಿಗೆಯು ಹಾರ್ಡಿಂಜ ಅವೆನ್ಯೂದ ಹತ್ತಿರ ಬಂದ ಕೂಡಲೆ ಹಿಂದೀ ವೈಮಾನಿಕ ಶಾಖೆಯ ಮೂರು ವಿಮಾನಗಳು ಭರನೆ ಬಂದು ಮಹಾತ್ಮರ ಕಳೇಬರದ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದವು ಸುಮಾರು ೩೦೦ ೪೦ ಮಹಿಳೆಯರು ಮಹಾತ್ಮರಿಗೆ ಪ್ರಿಯವಾದ ಪ್ರಾರ್ಥನೆಯನ್ನು ಅನ್ನುತ್ತ ಮೆರವಣಿಗೆಯ ಮುಂಭಾಗದಲ್ಲಿ ಶಾಂತರೀತಿಯಿಂದ ಸಾಗಿದರು

ಈ ಮೆರವಣಿಗೆಯು ಡಿಸ್ಟ್ರಿಕ್ಟ ಜೇಲಿನ ಹತ್ತಿರ ಬಂದಕೂಡಲೆ ಆಕಾಶದಿಂದ ಪುಷ್ಪವೃಷ್ಟಿ ಅದಂತಾಯಿತು ಜನಸಮೂಹವಿನ್ನೂ ಹೆಚ್ಚುತ್ತಲೇ ಇದೆ, ಎಷ್ಟು ಲಕ್ಷ ಜನ ಸೇರಿತ್ತು ಎಂದು ಹೇಳಲು ಸಾಧ್ಯವಿಲ್ಲ

ಮೆರವಣಿಗೆಯು ರಾಜಘಾಟದ ಹತ್ತಿರಕ್ಕೆ ಬಂದಿದೆ ಯಮುನಾನದಿ ದಡದಲ್ಲಿ ಜನಗಳ ತಲೆಗಳೇ ಕಾಣಿಸುತ್ತವೆ ಮಹಾತ್ಮಾ ಗಾಂಧೀಕಿ ಜಯ ಎಂಬ ಘೋಷಗಳಿಂದ ಆಕಾಶ ಬಿರಿಯುವಂತಿದೆ

ಮೆರವಣಿಗೆಯು ರಾಜಘಾಟವನ್ನು ೪-೨೦ಕ್ಕೆ ಮುಟ್ಟಿತು ೪½ ಗಂಟೆಗೆ ಮಹಾತ್ಮರ ಕಳೇಬರವನ್ನು ಚಿತೆಯ ಮೇಲಿಡಲಾಯಿತು ಹಿಂದೀ ವೈಮಾನಿಕ ದಳದವರು ಈ ಚಿತೆಯನ್ನು ಕಾಯುತ್ತಿದ್ದಾರೆ ಇವರ ಹಿಮ್ಮಗ್ಗಲಿಗೆ ಜನ ಸಾಗರ ಭೋರ್ಗರೆಯುತಿದೆ

ಮೂರು ಫೂಟು ಎತ್ತರದ ೧೨ ಅಡಿ ಚಚ್ಚೌಕ ಪೀಠದ ಮೇಲೆ ಚಿತೆಯನ್ನು ರಚಿಸಲಾಗಿದೆ. ೪-೫೫ಕ್ಕೆ ಮಹಾತ್ಮರ ಚಿತೆಗೆ ದೇವದಾಸ ಗಾಂಧಿಯವರು ಅಗ್ನಿಯಿಟ್ಟರು ಒಂದೆರಡು ನಿಮಿಷಗಳಲ್ಲಿಯೆ ಅಗ್ನಿನಾರಾಯಣನು ತನ್ನ ಜ್ವಾಲೆಗಳಿಂದ ರಾಷ್ಟ್ರಪಿತನ ಅವಶೇಷಗಳನ್ನು ಭಕ್ಷಿಸಹತ್ತಿದನು

ಲಾರ್ಡ ಮೌಂಟಬ್ಯಾಟನರೂ ಸಪತ್ನೀಕರಾಗಿ ಉಪಸ್ಥಿತರಿದರು ಲೇಡಿ ಮೌಂಟಬ್ಯಾಟನರು ಮದ್ರಾಸದಿಂದ ಇಂದೇ ವಿಮಾನದಲ್ಲಿ ಸಕಾಲಕ್ಕೆ ಆಗಮಿಸಿದ್ದರು

ಮಹಾತ್ಮಾ ಗಾಂಧಿಜಿಯವರ ಅಕಾಲ ಮೃತ್ಯುವಿನಿಂದಾಗಿ ತಾ 30 1 48ರ ಸಂಚಿಕೆಯು ತಾ 2-2 48 ರಲ್ಲಿ ಪ್ರಕಟವಾಗಿದೆ.

ಶ್ರೀ ಶಿದ್ಧಾರೂಢ ಸ್ವಾಮಿ, ಶ್ರೀ ಗುರುನಾಥಾರೂಢ ಸ್ವಾಮಿ

ಸರ್ವಜಿತು ಸಂವತ್ಸರದ ಕೃಷ್ಣಪಕ್ಷ ೧೪ ತಿಥಿ ಸೋಮವಾರ (9-2 1948) ಮಹೋದಯದ ಪುಣ್ಯ ದಿನ ಪ್ರಾತಃಕಾಲ ಸೂರ್ಯೋದಯ 6 80 ಘಂಟೆಯಲ್ಲಿ ಮಂಗಳೂರು ಬೋಳಾರ ಕಿಟ್ಟುಶೆಟ್ಟಿಯವರ ಬ್ರಹ್ಮೀಭೂತರಾದ ಸುಪುತ್ರ ಪರಮೇಶ್ವರ ಶೆಟ್ಟಿಯವರ ಸ್ಮಾರಕವಾಗಿಯೂ ಮತ್ತು ಸಾರ್ವಜನಿಕರ ಪ್ರಯೋಜನಕ್ಕಾಗಿಯೂ ಅವರ ಶ್ರೀ ಗುರುಗಳಾದ-ಶ್ರೀ ಶಿದ್ಧಾರೂಢರ ಮಠವನ್ನು ಅವರ ಧರ್ಮಪತ್ನಿಯವರಾದ ಪಿ ರಾಧಾಬಾಯಿಯವರು ಮತ್ತು ಅವರ ಸುಪುತ್ರರಾದ ಶ್ರೀಮಾನ್ ಅನಂತರಾಮ ಶೆಟ್ಟಿಯವರ ಶ್ರೀ ರಾಮದಾಸ ಶೆಟ್ಟಿಯವರು, ಶ್ರೀ ವಾಸುದೇವ ಶೆಟ್ಟಿಯವರು ಮತ್ತು ಶ್ರೀ ಬಾಲಕೃಷ್ಣ ಶೆಟ್ಟಿಯವರು, ಶ್ರೀಮತಿ ವಿ ರಾಧಾಬಾಯಿಯವರ ಕ್ರಯಕ್ಕೆ ತೆಗೆದುಕೊಂಡ ರೂರಲ್ ಎಲಿಮೆಂಟರೀ ಶಾಲೆ (ಗದ್ದೆ ಶಾಲೆ) ಎದುರ, ಉರುವದ ಮನೆಯನ್ನು ಶ್ರೀ ಶಿದ್ಧಾಶ್ರಮ ಹೆಸರಿಟ್ಟು ಸದ್ರಿ ತಾರೀಕಿನಲ್ಲಿ ಆಶ್ರಮದ ಉದ್ಘಾಟಣ ಮಾಡಿ ೫೪ ದಿವಸಗಳ ಪರಿಯಂತ ಉತ್ಸವ ಮಾಡುವುದರಿಂದ ಸದ್ಭಕ್ತಮಂಡಳಿ ಮತ್ತು ಹಿತಚಿಂತಕರಾದ ತಾವುಗಳು ತಮ್ಮ ಇಷ್ಟಮಿತ್ರರ ಸಮೇತ ಬಂದು ಸತ್ಸಂಗದ ಲಾಭಗಳನ್ನು ಹೊಂದಿಕೊಂಡು ತೀರ್ಥ ಪ್ರಸಾದಗಳನ್ನು ಸ್ವೀಕಾರ ಮಾಡಬೇಕಾಗಿ ವಿನಂತಿ ಎಂದು ಶ್ರೀ ಸ್ವಾಮಿ ಗಣೇಶಾನಂದ ಭಾರತಿ, ಶ್ರೀ ಶಿದ್ಧಾಶ್ರಮ, ಇವರು ತಿಳಿಸುತ್ತಾರೆ

ದ. ಕ ಜಿಲ್ಲೆಯ ಆಹಾರ ಪರಿಸ್ಥಿತಿ

ಜಿಲ್ಲಾ ಆಹಾರ ಸಮಿತಿಯ ಸದಸ್ಯ, ಶ್ರೀ ಬಿ ಸುಬ್ಬಣ್ಣ ಶೆಟ್ಟರು ಮದ್ರಾಸ್ ಸರಕಾರದ ಮಾನ್ಯ ಆಹಾರ ಮಂತ್ರಿಗಳಿಗೊಂದು ಪತ್ರ ಕಳುಹಿಸಿ—"ಕುಂದಾಪುರ ತಾಲೂಕಿನ ಒಟ್ಟು ಅಕ್ಕಿ ಉತ್ಪತ್ತಿಯ ಶೇಕಡಾ ಐವತ್ತು "ಪ್ರೊಕ್ಯೂರ್" ಆಗಿ ಆಯಿತು, ಈ ತಾಲೂಕಿನಲ್ಲಿ ಎರಡೂ ಮೂರನೇ ಬೆಳೆ ಇಲ್ಲ ಈಗಾಗಲೇ ೩೨ ಸಾವಿರ ಮುಡಿ ಅಕ್ಕಿ ಸಾಗಿದ್ದಾಯಿತು, ಇನ್ನು ಉಳಿದ ಅಕ್ಕಿ ಬತ್ತ ಸಾಗಬಾರದು; ಈಗಿರುವ ರೇಶನ್ ಅಂಗಡಿಗಳ ಮೂಲಕ ಇವುಗಳ ಹಂಚೋಣವಾಗಬೇಕು" ಎಂದು ಅದರಲ್ಲಿ ಒತ್ತಾಯಪಡಿಸಿದ್ದಾರೆ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T. O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು. 23—12—1947.

ಜ್ಯೊಂಟ್ ಮ್ಯೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

SEASON DEPOSITS

For Rs 5,000/- and over are now accepted at all Offices of the Bank at the following rates:

3 & 4 months	2¼% p. a.
5 & 6 months	2¾% p. a.

BANKING BUSINESS OF EVERY DESCRIPTION TRANSACTED

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಕುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } About 54 lakhs

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office Udipi.
Branches at:
MANGALORE, CALICUT, TRIVANDRUM MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra' 'ಭುವನೇಂದ್ರ'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.
Factory & Head Office
KATAPADI S. Kanara

ದಶಮೂಲಾರಿಷ್ಟ

ಹಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು ಸೂತಿಕಾ ರೋಗಗಳನ್ನು ಹೊಡೆದಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 6—2—1948 [ಸಂಚಿಕೆ 5]

ಗತವರ್ಷದ ಪ್ರಪಂಚ ಪರಿಚಯ

ಶಕ್ತಿ ರಾಷ್ಟ್ರಗಳ ಸ್ಪರ್ಧೆಯ ಇತಿಹಾಸ

ಜಗತ್ತಿನ ಮುಂದಿರುವ ಒಂದೇ ಹಾರೈಕೆ

1947ನೇ ಫೆಬ್ರವರಿಯಲ್ಲಿ ಇಟಲಿ, ಫಿನ್ ಲೆಂಡ್, ರುಮೇನಿಯಾ, ಬಲ್ಗೇರಿಯಾ, ಮತ್ತು ಯುಗಸ್ಲೇವಿಯಾಗಳೊಡನೆ [illegible]ಡಿಕೊಂಡ ಒಪ್ಪಂದಗಳ ಸಂಗತಿಯನ್ನು ಬಿಟ್ಟರೆ ಕಳೆದ ವರ್ಷದಲ್ಲಿ ಗಣನೀಯವಾದ ಯಾವ ರಚನಾತ್ಮಕ ಶಾಂತಿ ಕಾರ್ಯ ನಡೆಯಲಿಲ್ಲವೆನ್ನಬಹುದು 1947ರ ರಾಜಕೀಯ ದೃಶ್ಯವು ದೊಡ್ಡ ರಾಷ್ಟ್ರಗಳ ಶಕ್ತಿ ಸ್ಪರ್ಧೆಯ ಸನ್ನಿವೇಶಗಳಿಂದಲೇ ಕೂಡಿದೆ ಅದರಲ್ಲೂ ರಸ್ಯಾ ಮತ್ತು ಅಮೇರಿಕಾಗಳು ಜಾಗತ್ತಿಕ ರಾಜಕಾರಣದಲ್ಲಿ ಅನುಕೂಲ ಸ್ಥಾನ ಪಡೆಯಲು ಅವ್ಯಾಹತವಾದ ಪೈಪೋಟಿ ನಡೆಸಿದವು. ಯುರೋಪಿನ ಸ್ವಾಮಿತ್ವಕ್ಕೆಷ್ಟೋ ಅಷ್ಟೇ ತೀವ್ರತೆಯಿಂದ ಏಸ್ಯದ ಒಡೆತನಕ್ಕಾಗಿ ಯತ್ನಗಳು ನಡೆದಿವೆ, ನಡೆಯುತ್ತಾ ಇವೆ ಪಾಶ್ಚಾತ್ಯ ಪ್ರಜಾ ಪ್ರಭುತ್ವ ಮತ್ತು ಕಮ್ಯೂನಿಸ್ಟ್ ತತ್ವಗಳೊಗಣ ತತ್ವಾತ್ಮಕವಾದ ಅಭಿಪ್ರಾಯ ವ್ಯತ್ಯಾಸದಿಂದಾಗಿ ಪರಿಸ್ಥಿತಿ ಇನ್ನಷ್ಟು ವಿಷಮುಗೊಂಡಿದೆ

ಮೌನ ಯುದ್ಧ

ರಸ್ಯಾ ಅಮೇರಿಕಾಗಳೊಳಗಿನ ಈ ನಿಶಬ್ದ ಘರ್ಷಣೆಯನ್ನು ಒಂದು ಮೌನ ಯುದ್ಧವೆಂದು ಕರೆಯಬಹುದು ಯುರೋಪಿನಲ್ಲಿ ಜರ್ಮನಿಯ ದೇಹಾತ್ಮಗಳನ್ನೂ, ಏಸ್ಯದಲ್ಲಿ ಚೀನದ ದೇಹಾತ್ಮಗಳನ್ನೂ ವಶಪಡಿಸಿಕೊಳ್ಳುವುದು ಈ ಯುದ್ಧದ ಮುಖ್ಯ ಗುರಿಯೆನ್ನಬಹುದು. ಮೌನ ಯುದ್ಧಕ್ಕೆ ರಸ್ಯವೇ ಪ್ರಾರಂಭದ ಪೀಠಿಕೆಯನ್ನು ಹಾಕಿತು ಅಂತರಾಷ್ಟ್ರೀಯ ರಾಜಕಾರಣದಲ್ಲಿ ಪ್ರತಿಯೊಂದು ದೇಶದಲ್ಲಿ ತನ್ನದೊಂದು ಪಕ್ಷಪಾತದ ಪಂಗಡವನ್ನಿಟ್ಟುಕೊಂಡು ಪ್ರಬಲ ಅಸ್ತ್ರವನ್ನಾಗಿ ರಸ್ಯವದನ್ನು ಇತರರ ಮೇಲೆ ಪ್ರಯೋಗಿಸುವುದು ಪ್ರತಿ ದೇಶವಲ್ಲೆಂಬಂತೆ ರಸ್ಯಕ್ಕೊಂದು ಗುಪ್ತಕಾರಸ್ಥಾನ ನಡೆಸುವ ಪಂಚಮ ದಳವು ಇದ್ದೇ ಇರುತ್ತದೆ ರಸ್ಯವು ಪ್ರಾಪಂಚಿಕ ಸಾರ್ವಜನಿಕ ಅಭಿಪ್ರಾಯಕ್ಕೂ ಮನ್ನಣೆ ಕೊಡುವುದಿಲ್ಲ ತನ್ನ ಜನರಿಗೆ ಹೊರಗಿನಿಂದ ಯಾವ ಸತ್ಯಸ್ಥಿತಿಯೂ ತಿಳಿಯದಂತೆ ಬಂದೋಬಸ್ತು ಇಟ್ಟಿರುತ್ತದೆ

ಸಂಯುಕ್ತ ಅಮೇರಿಕಕ್ಕೆ ಈ ಯಾವ ತರದ ಅನುಕೂಲತೆಗಳಿಲ್ಲ. ಈ ದೇಶದ ರಾಜ್ಯ ಘಟನೆಯು ಒಡಗೊಂಡಿರುವ ತೊಡಕು ತೊಂದರೆಗಳಿಂದ ಪರ ರಾಷ್ಟ್ರೀಯರಿಗೆ ಇಲ್ಲಿಂದ ತಲಪುವ ಸಹಾಯವು ಅತ್ಯಲ್ಪವಾಗುತ್ತದೆ ಆದೂ ಸಕಾಲ್ಪದಲ್ಲಿ ಮುಟ್ಟುವಂತಿಲ್ಲ ಸದ್ಯದ ಪರಿಸ್ಥಿತಿಯಿಂದ ಶಾಂತಿಯೇ ಧ್ಯೇಯವಾಗಿರುವ ಈ ದೇಶ ರಸ್ಯನ್ ತತ್ವ ವಿರೋಧಿಯಾಗಿ ಕಂಗೊಳಿಸುತ್ತದಾದರೂ ಜಗತ್ತಿನಲ್ಲಿ ದಬ್ಬಾಳಿಕೆಯನ್ನು ನಿರ್ಮೂಲ ಮಾಡಿ ಆಯಾ ದೇಶದ ಜನತೆ ಇಟ್ಟಿರುವ ರಾಜ್ಯಭಾರ ಕ್ರಮವು ಸ್ಥಾಪಿಸಲ್ಪಡುವ ಮಾನವನ ಮೂಲ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಅಮೇರಿಕವು ಕಳೆದ ಯುದ್ಧವನ್ನು ಪ್ರವೇಶಿಸಿತು ಇಂದೂ ರಸ್ಯದ ನಿಜವಾದ ಉದ್ದೇಶಗಳೇನೆಂಬ ತಿಳಿಯದೆ ಅದು ಗಲಿಬಿಲಿಗೀಡಾಗಿದೆ

ರಸ್ಯದ ಉದ್ದೇಶಗಳು

ರಸ್ಯಕ್ಕೆ ಹೊರ ರಾಷ್ಟ್ರಗಳ ಹೆದರಿಕೆಯಿರುವುದೆಂದು ಅಥು ಸಾರುತ್ತವೆ ಇದು ಅದೆಷ್ಟು ಸತ್ಯವೊ ಹೇಳಬರುವುದಿಲ್ಲವಾದರೂ ಇಂದಿನ ರಸ್ಯದ ರಕ್ಷಣೋಪಾಯಗಳು ಹೊರಗಿನವರ ಅಧಿಕ್ರಮಣ ತಡೆಯುವುದಕ್ಕೆ ಮಾತ್ರವಲ್ಲ ಬೇರೆ ಉದ್ದೇಶಗಳೂ ಅನರಲ್ಲಡಕವಾಗಿವೆಯೆಂದು ಸ್ಪಷ್ಟವಾಗುತ್ತದೆ ಇಂದೂ ತನ್ನ ಧೈರ್ಯದಲ್ಲಿ ಅತುಲ ವಿಶ್ವಾಸವುಳ್ಳ ರಸ್ಯಾ ಕೊಮ್ಯುನಿಸ್ಟ್ ತತ್ವವು ವಿಶ್ವ ವಿಜಯವಾಗುವುದೆಂದು ಹೃತ್ಪೂರ್ವಕ ನಂಬಿಕೆಯುಳ್ಳದ್ದಾಗಿದೆ ಈ ವಿಜಯವನ್ನು ಹೊಂದಲು ಅದು ಸರ್ವ ಪ್ರಯತ್ನಗಳನ್ನು ಮಾಡುವುದು ಜಗತ್ತಿನ ಈಗಿನ ಅವ್ಯವಸ್ಥೆಯನ್ನು ಕೆಲವೊಂದು ಅಸಾಧ್ಯವಾದ ಕೇಳಿಕೆಗಳಿಂದ ಮತ್ತಷ್ಟು ಗೊಂದಲಮಯವಾಗಿ ಮಾಡುವುದು ರಸ್ಯದ ಕುಹಕ ಧೋರಣೆಗಳಲ್ಲೊಂದು ಕಳೆದ ವರ್ಷವೆಲ್ಲ ರಸ್ಯವು ಇದೇ ರೀತಿಯಲ್ಲಿ ಕಳೆಯಿತು

ಅಂತರಾಷ್ಟ್ರೀಯ ಪರಿಷತ್ತುಗಳನ್ನು ರಸ್ಯವು ತನ್ನ ತತ್ವ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡು ಇತರ ಜನಾಂಗಗಳ ತಾಳ್ಮೆಯನ್ನು ಹದಗೆಡಿಸುತ್ತದೆ ಜನಾಂಗ ಸಂಘದ ವೆಟೋ ಹಕ್ಕಿನ ಕುರಿತಾಗಿ (ಯಾವೊಂದು ನಿರ್ಣಯವನ್ನು ಮೂರನೇ ಒಂದಂಶದಷ್ಟು ವಿರೋಧ ಮತಗಳಿಂದದು ರಿಸಿ ಕಾರ್ಯಭಗ್ನ ಮಾಡುವುದು) ಪ್ರತಿಪಾದಿಸಿ ಅದರ ಕಾರ್ಯ ಕಲಾಪಗಳಿಗೊಂದು ತಡೆಯನ್ನು ಹಾಕುತ್ತದೆ [illegible] ಆರ್ಥಿಕ ಸಹಾಯವನ್ನು [illegible] ಅಮೇರಿಕದ ವಿದೇಶಾಂಗ ಮಂತ್ರಿ ಮಾರ್ಶೆಲ್ಲರು [illegible] ಯೋಜನೆಯನ್ನು [illegible] ರಾಷ್ಟ್ರಗಳು ಸ್ವಾಗತಿಸಿವೆ ಆದರೆ ರಸ್ಯಾ ಮತ್ತದರ ಪಕ್ಷ [illegible] ರಾಷ್ಟ್ರಗಳು ತಾವು ಸಹಕರಿಸುವುದಿಲ್ಲವೆಂದದನ್ನು [illegible] ಸ್ಕರಿಸಿದವು [illegible] ವಾದ ಪ್ರದೇಶಗಳ [illegible] ತನ್ನ [illegible] ವನ್ನಿಟ್ಟುಕೊಳ್ಳುವುದೇ ರಸ್ಯದ [illegible] ಹೋರಾಟದ [illegible]

ರಷ್ಯನ್ [illegible] ರಣೆಯು [illegible] ತ್ವಾರ [illegible] ಅದು ಶಕ್ತಿ ಸ್ಪರ್ಧೆ [illegible] ಪ್ರದರ್ಶನವಾಗಿದೆ ಪಾಶ್ಚಾತ್ಯ ಪ್ರಜಾ ಪ್ರ[illegible] ಮೇಲೆ ಅದಕ್ಕೆ [illegible] ಕೈಲ್ಲ ಕಳೆದ ದಶಂಬರದಲ್ಲಿ [illegible] ಶಾಂಗ ಮಂತ್ರಿಗಳ [illegible] ಅಭ್ಯಂತರಗಳಿಂದ ಅಂತ್ಯ[illegible] ಯುದ್ಧ ಕಾಲದಲ್ಲಿ [illegible] ಜನಾಂಗಳಿಂದ [illegible] ಯನ್ನೂ ಗೌರವ[illegible] ಡುವ ಉದ್ದೇಶ[illegible] ಣೆಯೇ ಕಾರಣವಾಗಿದೆ

ಒಂದಾಶೆ

ಈ ಪರಿಸ್ಥಿತಿಯಲ್ಲಿ 1948ರ ಭವಿಷ್ಯವು ಬೇಕಾದಷ್ಟು ಉಜ್ವಲವಾಗಿಲ್ಲ. ರಸ್ಯಾ, ಬ್ರಿಟನ್ ಮತ್ತು ಅಮೇರಿಕಾಗಳು [illegible] ಒಪ್ಪಂದಕ್ಕೆ ಬಾರದ ಯಾವ ಅಂತರಾಷ್ಟ್ರೀಯ ಸಮಸ್ಯೆಯನ್ನೂ ಬಗೆಹರಿಸುವುದು ಅವಶ್ಯಕ ಇವುಗಳ ಒಪ್ಪಂದವಿಲ್ಲದ ಅತಿ ಕ್ಷುಲ್ಲ ಸಮಸ್ಯೆಯಾದರೂ ಘನ ತೊಡಕುಗಳುಳ್ಳವಾಗುವುದು

ಸದ್ಯಕ್ಕೆ ಜರ್ಮನಿಯು ವಿಭಾಗಿತವಾಗಿದೆ ದುರ್ದೈವಿ ಆಸ್ಟ್ರೀಯವು ಯಾವ ಒಪ್ಪಂದಕ್ಕೂ ಒಳಪಟ್ಟಿಲ್ಲ. ಏಸ್ಯದಲ್ಲಿ ಶಾಂತಿಯಿಲ್ಲ. ಇತರ ಪ್ರತಿಯೊಂದು ಕಡೆಯಲ್ಲೂ ಆಂತರೀಕ ಗೊಂದಲಗಳಿವೆ

3ನೇ ಪುಟ ನೋಡಿ

THE

UNITED INDIA LIFE ASSURANCE CO., LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಯಲು ಸಭೆ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಇಂದು ಗಾಂಧಿಯವರು ದಿಲ್ಲಿಯ ಹಾರ್ಡಿಂಜ್ ಲೈಬ್ರೆರಿಯಲ್ಲಿ ನಡೆದ ವ್ಯಾಪಾರಸ್ಥರ ಸಭೆಯೊಂದಕ್ಕೆ ತಾವು ಹೋಗಿದ್ದೇವೆಂದರು. ಕಟ್ಟಡದ ಸುತ್ತ ಒಂದು ದೊಡ್ಡ ಜನಸಂದಣಿಯಿತ್ತು. ಒಳ ನುಗ್ಗುತ್ತಿರುವ ಜನಜಂಗುಳಿಗೆ ಅದರ ಒಳವು ತೀರ ಸಣ್ಣದಾಗಿತ್ತು. ಪ್ರಸಿದ್ಧ ಪುರುಷರು ಸಭೆಗಳಲ್ಲಿ ಮಾತಾಡಲಿರುವಾಗ ಆಕಾಶಛತ್ರದ ಕೆಳಗೆ ವಿಶಾಲವಾದ ಮೈದಾನಿನಲ್ಲಿ ಅಂತಹ ಸಭೆಗಳನ್ನು ಏರ್ಪಡಿಸಬೇಕೆಂಬುದು ತಮ್ಮ ಬುದ್ಧಿವಾದ ಎಂದು ಅವರು ನುಡಿದರು. ಹಾಗೆ ಮಾಡಿದರೆ ಬೇಕಾದವರೆಲ್ಲ ಸಭೆಗೆ ಹೋಗಲು ಅನುಕೂಲ ವೊದಗುವುದು. ಸಭಿಕರೇನಾದರೂ ಗದ್ದಲ ಹಾಕಿ ಸಭೆಯ ಕಾರ್ಯ ನಡೆಯದಂತೆ ಮಾಡಿದರೆ ಅನಾವೃತ ಪ್ರದೇಶದಲ್ಲಿ ತನ್ನ ಕಾರ್ಯವನ್ನು ಸಾಗಿಸುವುದನ್ನು ಬಿಟ್ಟು ಸಭೆ ಚದರುತ್ತದೆ. ಹೊರಗಣ ಚಟುವಟಿಕೆಗಳು ಜನರಿಗೆ ಸರಿ ಹೊಂದಿಕೊಂಡರೆ ಸಾವಿರಾರು ಜನರಿಗಾಗಿ ಮನೆಗಳನ್ನು ಹುಡುಕುವ ಕೆಲಸ ಅವರಿಗೆ ತಪ್ಪುತ್ತದೆ. ಹೆಚ್ಚು ಕಾಲ ಅವರು ಮನೆಹೊರಗಿರ ಬಲ್ಲರು, ಮತ್ತು ಬಯಲುಗಳಲ್ಲಿ ತಮಗಾಗಿ ಅವರು ಗುಡಿಸಲುಗಳನ್ನು ಕಟ್ಟಿಕೊಳ್ಳಬಲ್ಲರು.

ವಿನಿಯಂತ್ರಣ

ವಿನಿಯಂತ್ರಣವನ್ನು ಕಾರ್ಯ ರೂಪಕ್ಕೆ ತಂದುದಕ್ಕಾಗಿ ಗಾಂಧಿಯವರಿಗೆ ಅಭಿನಂದನವರ ತಂತಿಗಳು ದಿನಾಲೂ ಬರುತ್ತಿವೆ. ಸುತ್ತುಮುತ್ತಲೂ ಅದರಿಂದೊಂದು ಪವಾಡಪ್ರತಿಮ ಪರಿಣಾಮ ಉಂಟಾಯಿತು. ಬೆಲೆಗಳು ಇಳಿದು ಹೋದುವು. ವಸ್ತ್ರ ನಿಯಂತ್ರಣವಿದ್ದರೂ ಕೂಡಾ ಚೌಕ ಅಂಗವಸ್ತ್ರ ಮುಂತಾದುವುಗಳ ಬೆಲೆ ಇಳಿದಿದೆಯೆಂದು ಗಾಂಧಿಜಿಯವರಿಗೆ ವರದಿ ಬಂದಿದೆ. ನಿಯಂತ್ರಣ ಹೋಗಬೇಕೆಂದು ಹೇಳಿದಾಗ ಅವರು ಹಿಂದಿ ಮೂಕ ಕೋಟಿಯ ಆಶೆಯನ್ನು ಪ್ರತಿಧ್ವನಿಸುತ್ತಿದ್ದರೆಂಬುದನ್ನು ವ್ಯಾಪಾರಿಗಳು ಬಲ್ಲರು. ಆದುದರಿಂದ ಕಳ್ಳ ಪೇಟೆಯಲ್ಲಿಯ ಸಾಮಾನು ಬಯಲಿಗೆ ಎಂದು ನ್ಯಾಯವಾದ ಬೆಲೆಗೆ ಮಾರಾಟವಾಗಹತ್ತಿದೆ. ಬೇಕಾದಷ್ಟು ಸಕ್ಕರೆ ಇದೆಯೆಂದು ಗಾಂಧಿಯವರಿಗೆ ಸುದ್ದಿ ಮುಟ್ಟಿದೆ. ಬೆಲೆ ಸೇರಿಗೆ ೧ರಿಂದ ೧೫–೧೪ ಆಣೆಗಳ ವರೆಗೂ ಇಳಿದಿದೆ. ನಿಯಂತ್ರಣ ಜನರಿಗೆ ಎಷ್ಟೋ ಅನುಕೂಲ ಮಾಡಿಕೊಟ್ಟಿತೆಂದೂ ಅವರು ಹೇಳಿದರು. ನಿಯಂತ್ರಣಗಳಲ್ಲಿ ಆಗುತ್ತಿರುವ ಬದಲಾವಣೆಗೆ ಶಹಭಾಸಗಿರಿಯನ್ನು ತೆಗೆದುಕೊಳ್ಳಲೊಲ್ಲೆವೆಂದರು ಗಾಂಧಿಜಿ. ತಾವು ಯಾರ ಬಯಕೆಯನ್ನು ಪ್ರಕಾಶಪಡಿಸುತ್ತಿರುವರೋ ಆ ಜನತೆಗೇ ಮೆಚ್ಚುಗೆ ಸಲ್ಲತಕ್ಕದೆಂದರು. ವೈಯಕ್ತಿಕ ಕೀಳಿಕೆಗೇನಾದರೂ ಬೆಲೆಯಿದ್ದರೆ, ಅಶ್ಲೀಲವಾದ ಜಾತೀಯ ಸಂಕಟವೆಂದೊ ಮಾಯವಾಗಿ ಬಿಡುತ್ತಿತ್ತು. ಈ ವಿಷಯದಲ್ಲಿ ತಮ್ಮನ್ನು ಕಲ್ಪನಾ ಜೀವಿಯೆಂದೂ ಹುಚ್ಚನೆಂದೂ ಕರೆದರೆಂದು ಹೇಳಿದರವರು. ಅವರಿಗೇನೋ ಜನರಮ ತಪ್ಪು ತಮ್ಮದೇ ನಿಜವೆಂಬುದು ಗೊತ್ತಿತ್ತು. ಹಿಂದೆ ಎಷ್ಟೋ ಸಂದರ್ಭಗಳಲ್ಲಿ ತಾವು ಹೇಳಿದ್ದು ನಿಜವಾಗಿ ಪರಿಣಮಿಸಿದ್ದೂ ಹೇಳಿದನ್ನೆ ಮಾಡಿದ್ದು ಸತ್ಯವೇ. ಆದರೆ, ಈ ಆಪತ್ಕಾಲದಲ್ಲಿ ತಾವೇಕೆ ಅನಾಸ್ಥನವಾಗಿಯೂ ಆಗಬೇಕು? ಎಂದು ದಯೆ ಕ್ಷಮೆಗಳೇ ಧರ್ಮಸಾರವೆಂದು ತುಳಸೀದಾಸರು ಹೇಳಿದ್ದಾರೆ. ತಾವು ಹೇಳಿದ್ದು ಅದಕ್ಕಿಂತ ಬೇರೆಯಲ್ಲವೆಂದು ಗಾಂಧಿಜಿಯವರು ಹೇಳಿದರು.

ನಿಯಂತ್ರಣಗಳತ್ತ ಪುನಃ ಹೊರಳಿ, ಗಾಂಧಿಯವರು - ವಸ್ತ್ರ, ಸೌದೆ, ಪೆಟ್ರೋಲುಗಳ ಮೇಲಿನ ನಿಯಂತ್ರಣವನ್ನು ಈಗಿಂದೀಗ ತೆಗೆದುಹಾಕಿ ಬಿಡಬೇಕು ಎಂದರು. ವ್ಯಾಪಾರಿಗಳ ಸಭೆಯಲ್ಲಿ ತಾವು ವಸ್ತ್ರ ನಿಯಂತ್ರಣದ ಬಗ್ಗೆ ಮಾತಾಡಿದ್ದಾಗಿ ಹೇಳಿದರು. ಸೌದೆಯ ಮಾತನ್ನೆತ್ತಿದರೆ, ಜನರು ನಿಯಂತ್ರಣ ತೆಗೆದರೆ ಅಗತ್ಯವಿರುದಕ್ಕಿಂತ ಸೌದೆಯನ್ನೆಂದೂ ಬಳಸುವುದಿಲ್ಲ. ಸೌದೆಯ ವಿಷಯದಲ್ಲಿ ವಿನಿಯಂತ್ರಣವೆಂದೂ ಬಡವರಿಗೆ ತೊಂದರೆಯನ್ನು ತಂದೊಡ್ಡದು. ಪೆಟ್ರೋಲಿನ ನಿಯಂತ್ರಣವೇ ಸುತ್ತಮುತ್ತ ಅವರಿಗೆ ಕಷ್ಟವನ್ನು ಸುತ್ತ ಹಾಕಿದ್ದು. ಏಕೆಂದರೆ ಅದರಿಂದ ರಸ್ತೆ ಸಾರಿಗೆಗೆ ಬಹಳ ಅಡಚಣೆಯುಂಟಾಯಿತು. ಅವರಿಗೆ ಸಾಕಷ್ಟು ರೇಲ್ವೆ ಸಾರಿಗೆಯ ಅನುಕೂಲವಿಲ್ಲ. ರೇಲ್ವೆ ಮತ್ತು ಡಬ್ಬಿಗಳನ್ನು ತಯಾರಿಸುವುದು ದೀರ್ಘಕಾಲಿಕ ಯೋಜನೆಯಾಯಿತು. ಅವರಿಗೆ ಹೊಸ ರೇಲ್ವೆ ಬೇಡ. ಪೆಟ್ರೋಲಿನ ಮೇಲಿನ ನಿಯಂತ್ರಣವನ್ನು ತೆಗೆದರೆ, ಅದು ಅದನ್ನು ಸಂಪೂರ್ಣವಾಗಿ ಅನವಶ್ಯಕವನ್ನಾಗಿ ಮಾಡುತ್ತಿದೆ. ಆಹಾರ ಧಾನ್ಯ, ವಸ್ತ್ರ ಮತ್ತು ಉಪ್ಪುಗಳನ್ನು ಬೇಗ ಸಾಗಿಸುವ ರಸ್ತೆ ಸಾರಿಗೆ ಪ್ರಾರಂಭವಾದರೆ, ವಸ್ತ್ರಗಳ ಬೆಲೆಯನ್ನದು ಕೆಳಗಿಳಿಸುವದು. ಉಪ್ಪಿನ ತೆರಿಗೆ ಹೋಗಿದೆ, ಆದರೂ ಮೊದಲಿಗಿಂತ ಉಪ್ಪಿನ ಧಾರಣೆ ಹೆಚ್ಚಾಗಿದ್ದರೆ ಅದಕ್ಕೆ ಅರ್ಧ ಸಾರಿಗೆಯ ತೊಂದರೆ, ಅರ್ಧ ಕಂತ್ರಾಟಿನ ಕಪಟ- ಈ ಎರಡೂ ಕಾರಣ. ಕೆಲವು ಕಂಟ್ರಾಕ್ಟುದಾರರು ಗಿರಾಕಿಗಳಿಗೆ ನಷ್ಟ ಕೊಟ್ಟು ಕುಬೇರರಾಗುತ್ತಿರುವರೆಂದು ಹೇಳಲಾಗುತ್ತಿದೆ. ಈ ಕೇಡನ್ನು ಸರಿಪಡಿಸಬೇಕಾಗಿದೆ. ಅದಲ್ಲದೆ ಉಪ್ಪನ್ನು ತಯಾರಿಸಲು ಜನರಿಗೆ ಹೇಳಿ ಕೊಡಬೇಕಾಗಿದೆ. ತೆರಿಗೆ ಇಲ್ಲದ ಈ ಕಾಲದಲ್ಲಿ ಅದು ಅತಿ ಸುಲಭದ ಕೆಲಸ ವೆಂದು ಗಾಂಧಿಯವರು ನುಡಿದರು.

—ಕರ್ಮವೀರ ೧೨ ೧—೪೮

ಚಕ್ರವರ್ತಿಯನ್ನೋಡಿಸಿದ ಮಲೇರಿಯಾ ಜ್ವರ

ಮೊಗಲ್ ವಂಶದಲ್ಲಿ ಅತೀ ಪ್ರತಿಭಾಶಾಲಿಯೆನಿಸಿದ ಅಕ್ಬರ್ ಮಹಾಶಯನಿಗೆ ಮಗನೊಬ್ಬನು ಹುಟ್ಟಿದಾಗ ರಾಜಪುತಾನದ ಮರುಭೂಮಿ ಮಧ್ಯದಲ್ಲಿ ಫತೇಪುರ್ ಸಿಕ್ರಿ ಎಂಬ ನಗರವನ್ನು ಇವನು ಸ್ಥಾಪಿಸಿದನು. ಇಡೀ ನಗರವನ್ನೀಕ್ಷಿಸುವಾಗ ಅದರಲ್ಲಿ ಜನ ವಸತಿಯು ಬಹುಕಾಲ ಬಾಳಲಿಲ್ಲವೆಂದು ಸ್ಪಷ್ಟ ತಿಳಿದು ಬರುತ್ತದೆ. ನಿದರ್ಶನವಾಗಿ ಹೇಳುವುದೆಂದರೆ ಅದರಲ್ಲಿ ಒಂದೇ ಒಂದು ಸಮಾಧಿ ಸ್ಥಳವೂ ಕಂಡು ಬರುವುದಿಲ್ಲ. ಹೆಸರಿಗೆ ಒಂದೆಂಬಂತೆ ಏಕಮಾತ್ರ ಘೋರಿಯೊಂದು ಅಲ್ಲಿನ ಚಂದ್ರ ಶಿಲಾ ಮಸೀದಿಯೊಂದರ ಬಳಿ ಕಾಣುವುದು. ಆ ಘೋರಿಯೊಳಗೆ ಯಾರ ಹೆಸರಿನಲ್ಲಿ ಆ ನಗರ ಕಟ್ಟಲ್ಪಟ್ಟಿತೋ ಆ ರಾಜಕುಮಾರನ ಮೃತ ಶರೀರವೂ ಅದರಲ್ಲಿಡಲಾಗಿದೆ. ಅವನ ಮರಣದೊಡನೆ ಆ ನಗರವೂ ನಾಶ ಹೊಂದಿತು. ಅಕ್ಬರನ ಮಗನು ಮಲೇರಿಯಾ ಜ್ವರದಿಂದ ಮಡಿದನೆಂದು ನಂಬಲಾಗಿದೆ. ಕಾರಣ ಆ ನಗರ ಪ್ರದೇಶದಲ್ಲಿ ಮಲೇರಿಯಾ ಜ್ವರವು ಭೀಕರವಾಗಿ ಹಬ್ಬಿತ್ತು. ಅಕ್ಬರನು ಮಗನ ಮರಣಕ್ಕೆ ಆ ನಗರವೇ ಕಾರಣವೆಂದು ಶಪಿಸಿ ಅದನ್ನು ಬಿಟ್ಟು ಬಿಡಲು ಆಜ್ಞೆಯಿತ್ತನು. ಅಕ್ಬರನು ಸಕುಟುಂಬ ಪರಿವಾರ ಸಮೇತನಾಗಿ ಆಗ್ರಾ ಪಟ್ಟಣಕ್ಕೆ ಬಂದು ನೆಲಸಿದನು. ರಾಜವೈಭೋಗದೆಲ್ಲಾ ವಸ್ತು ವಿಶೇಷಗಳನ್ನೆಲ್ಲ ಭಾರವಾದ ಆನೆಗಳು ಹೊತ್ತು ಆ ಮೋಹವಾದ ನಗರ ದ್ವಾರಗಳಿಂದ ಹಿಂದಕ್ಕೆ ಬಂದುವು.

ಅಕ್ಬರನು ೫೦ ನೇ ಶತಮಾನ ನಂತರ ಬಾಳಿದ್ದರೆ ಅವನು ತನ್ನ ಮಗನಿಗೆ ಕ್ವಿನೀನನ್ನು ಕೊಟ್ಟು ರಕ್ಷಿಸುತ್ತಿದ್ದನು.

ಮಲೇರಿಯಾ ತಜ್ಞರಿಂದ ಕೂಡಿದ ಜನಾಂಗದ ಸಂಘದ ಮಲೇರಿಯಾ ಕಮಿಶನವರ ವರದಿಯಲ್ಲಿ "ಮಲೇರಿಯಾ ನಿರೋಧಕ ಔಷಧಿಗಳಲ್ಲಿ ಕ್ವಿನೀನು ಈಗ ಪ್ರಥಮ ಸ್ಥಾನ ಪಡೆಯುತ್ತದೆ. ಇದು ನಿರ್ಬಲತ್ವದ ಧಾತುರಹಿತವಾಗಿದ್ದು ಸಂಪೂರ್ಣ ಪರಿಣಾಮಕಾರಿ, ಹಾಗೂ ಅದರ ಕಾಯ್ದಿಟ್ಟ ಪ್ರತಿಯ ಮತ್ತು ಉಪಯೋಗಗಳು ವಿಶಾಲ ಪ್ರಮಾಣದವುಗಳೂ ಆಗಿವೆ" ಹೀಗೆಂದು ಒತ್ತಿ ಹೇಳಲಾಗಿದೆ.

ವ್ಯಾಧಿ ಶುಶ್ರೂಷೆಗೆ ಈ ಕೆಳಗಿನ ಪ್ರಮಾಣಗಳು ಕೊಡಲ್ಪಡುತ್ತವೆ 5ರಿಂದ 7 ದಿನಗಳ ತನಕ ದಿನಂಪ್ರತಿ ಕ್ವಿನೀನ 15ರಿಂದ 20 ಕಾಳುಗಳಷ್ಟು. ಜ್ವರಾನಂತರದ ಸೇವನೆ ಅವಶ್ಯವಿಲ್ಲ. ಆದರೆ ಜ್ವರ ಪುನಃ ಪ್ರಾಪ್ತವಾದಲ್ಲಿ ಮೊದಲಿನಂತೆ ಮತ್ತೊಮ್ಮೆ ಪ್ರಾರಂಭಿಸುವುದು. ಜ್ವರ ಹಾವಳಿ ಇರುವ ಋತುವಿನಲ್ಲಿ ದಿನಂಪ್ರತಿ 6 ಕಾಳುಗಳಷ್ಟು ಕ್ವಿನೀನನ್ನು ಸೇವಿಸಿದರೆ ಯೋಗ್ಯ ಪ್ರತಿಬಂಧಕವಾಗಿದ್ದು, ಉತ್ತಮ ಸಂರಕ್ಷಣೆಯ ವಿಧಾನವಾಗಿದೆ. ಇದನ್ನೂ ಮೇಲ್ಕಂಡ ತಜ್ಞ ಸಮಿತಿ ಶಿಫಾರಸು ಮಾಡಿದೆ.

ಪ್ರಾಚೀನ ಕಾಲದಲ್ಲಿ ಈ ಪರಿಹಾರ ವಿಧಾನವು ತಿಳಿದಿದ್ದರೆ ಫತೇಪುರ ಸಿಕ್ರಿಯಂತಹ ಚಂದ್ರ ಶಿಲೆಯ ಭವ್ಯ ಭವನಗಳ ನಗರವು ಎಂದೂ ಕೇವಲ ಒಂದು 'ಮೃತ ನಗರ'ವಾಗುತ್ತಿರಲಿಲ್ಲ.

(೧ನೇ ಪುಟದಿಂದ)

ಮೇಲೆ ಹೇಳಿದ ಮೌನ ಯುದ್ಧವು ಈ ವರ್ಷ ಖಂಡಿತ ಮತ್ತಷ್ಟು ತೀವ್ರಗೊಳ್ಳುವುದೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಯುರೋಪಿನ ಪುನರ್ಚೇತನವೇ ಒಂದೇ ಒಂದು ಕೊನೆಯ ಆಶೆ. ಪಾಶ್ಚಿಮಾತ್ಯ ಯುರೋಪನ್ನು ಪುನರ್ರಚಿಸುವುದರೊಂದಿಗೆ ಪೂರ್ವಾತ್ಯ ಯುರೋಪಿನೊಡನೆ ವಾಣಿಜ್ಯ ವ್ಯವಹಾರದ ಸಂಪರ್ಕವನ್ನು ಬೆಳೆಸಬೇಕು. ಬ್ರಿಟಿಷ್ ಸರಕಾರವು ಈ ಧೋರಣೆಯ ಮೂಲಕ 1948ರಲ್ಲಿ ಐರೋಪ್ಯದ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುವುದೆಂದು ಸಾರಿದೆ.

ಅಮೇರಿಕದ ಸಹಾಯ

ಅಮೇರಿಕವು ಆದಷ್ಟು ಶೀಘ್ರವಾಗಿ ಸಹಾಯವನ್ನು ತೆರುತ್ತದೆಂಬುದರ ಮೇಲೂ ಹೆಚ್ಚಿನ ಭವಿಷ್ಯದ ಶ್ರೇಯಸ್ಸು ಹೊಂದಿಕೊಂಡಿದೆ. ಸಾಕಷ್ಟು ಬಲಿಷ್ಠವಾಗಿದ್ದರೂ ಬ್ರಿಟನ್ನು ತನ್ನ ಆರ್ಥಿಕ ಮುಗ್ಗಟ್ಟಿನಿಂದ ಸಂಪೂರ್ಣ ಪಾರಾಗಿಲ್ಲ. ಯುರೋಪಿನ ಸಣ್ಣ ಸಣ್ಣ ರಾಷ್ಟ್ರಗಳು ರಷ್ಯದ ಬೆದರಿಕೆಗೊಳಗಾಗಿವೆ. ಮಾತ್ರವಲ್ಲ ಅಮೇರಿಕದ ಮೇಲೂ ಅವಕ್ಕೆ ಸಂಪೂರ್ಣ ವಿಶ್ವಾಸವಿಲ್ಲವಾಗಿದೆ. ಬ್ರಿಟನ್ನು ಶಕ್ತಿಯುಕ್ತವಾಗಬೇಕೆಂದು ಈ ರಾಷ್ಟ್ರಗಳು ಹೃತ್ಪೂರ್ವಕ ಹಾರೈಸುತ್ತವೆ. ಅಮೇರಿಕವು ತ್ವರೆಯಾಗಿಯೂ ಹೆಚ್ಚು ಚಟುವಟಿಕೆಯಿಂದಲೂ ಸಹಾಯವನ್ನು ಕಳುಹಿಸಿದರೆ ಈ ರಾಷ್ಟ್ರಗಳಲ್ಲಿ ವಿಶ್ವಾಸ ವರ್ಧಿಸುವುದು. ಅಧ್ಯಕ್ಷ ಚುನಾವಣೆಯ ಈ ವರ್ಷದಲ್ಲಿ ಅಮೇರಿಕವು ತನ್ನ ಉದ್ದೇಶಗಳನ್ನೆಲ್ಲ ಕಾರ್ಯರೂಪಕ್ಕಿಳಿಸಿ ಬರೀ ಬಾಯಿ ಮಾತಿನ ಆಡಂಬರವನ್ನು ಕಡಿಮೆ ಮಾಡುವುದರಲ್ಲಿ ಎಲ್ಲವೂ ಹೊಂದಿಕೊಂಡಿದೆ.

(ಸರ್ ಬ್ರೂಸ್ ಲೊಕಾರ್ಟರ ಲೇಖನದಿಂದ)

✽ ಮಹಾತ್ಮಾಜಿಯವರ ನಿಧನದಿಂದಾಗಿ ✽

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ಮಂಗಳೂರಲ್ಲಿ ತಾ. 8-2-1948 ರಲ್ಲಿ ನಡೆಯಲಿಕ್ಕಿದ್ದ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇವರ

ಸಂಗೀತ ಕಚೇರಿಯನ್ನು ಮುಂದರಿಸಿಡಲಾಗಿದೆ

ಮಹಾಜನರು ಇದನ್ನು ಗಮನಿಸಬೇಕಾಗಿ ವಿನಂತಿ.

ಮುಂದೆ ನಡೆಯುವ ದಿನ ಯಾವುದೆಂಬುದನ್ನು ಪ್ರತ್ಯೇಕ ಪ್ರಕಟಿಸಲಾಗುವುದು

ಗಾಂಧೀ ತತ್ವಜ್ಞಾನ ಶಾಂತಿಯ ದಿವ್ಯ ಮಾರ್ಗ

ಅಜರಾಮರ ಕರ್ಮಯೋಗದ ತಪಸ್ಸಿದ್ಧಿ

ಹುತಾತ್ಮನಾದ ಮಹಾತ್ಮನ ಭವ್ಯ ಸಂದೇಶ

"ಅಸತ್ಯದ ಕಾರ್ಗತ್ತಲಲ್ಲಿ ಸತ್ಯ ಪ್ರಭೆಯು ಶೋಭಿಸುತ್ತಿರುವುದು. ಮರಣದ ಕ್ರೌರ್ಯದಲ್ಲಿ ಜೀವನದ ಶಾಂತಿಯು ಮಿಡಿಯುವುದು" ಎಂಬ ಗಾಂಧಿಜೀಯ ಅಮೃತ ವಾಣಿಯು ದಿಗ್ದಿಂತಗಳಲ್ಲಿಂದು ಪ್ರತಿಧ್ವನಿಸುತ್ತಿದೆ. ಏನು ಗಾಂಧಿಜೀ ನಿಧನಹೊಂದಿದರೆ? ಏನು ಮಹಾತ್ಮರು ಹುತಾತ್ಮರಾದರೆ? ಇಲ್ಲ ಗಾಂಧಿ ಮಹಾತ್ಮನು ಅಮರನು ಗಾಂಧೀ ತತ್ವ ಜ್ಞಾನವು ಪ್ರಳಯ ಪರ್ಯಂತ ಬಾಳುವುದು ಗಾಂಧೀ ಮಹಾತ್ಮೆಯು ಮಾನವಕೋಟಿಯ ಹೃದಯದಲ್ಲಿ ನಿತ್ಯ ನಿರಂತರ ಧ್ವನಿಗೊಡುವುದು

ಇಂದು ಲೋಕದಲ್ಲಿ ಕೆಲವರು ಮಹಾತ್ಮರ ಜೀವನದ ರಹಸ್ಯವೇನೆಂದರಿಯುತ್ತಿರುವಾಗ ಮತ್ತೆ ಕೆಲವರು ಅವರ ಮರಣದ ಮರ್ಮವು ಹೇಗಾಯಿತೆಂದು ಪರಿಶೋಧಿಸುತ್ತಿವರು ಕರ್ಮಬದ್ಧನಾದ ಯೋಗಿಗೆ ಜೀವನವು ಅದೆಷ್ಟು ಕರ್ತವ್ಯ ಪರಿಪೂರ್ಣತೆಯದೊ ಮರಣವಾದರೊ ಅಷ್ಟೇ ಮೋಕ್ಷ ಸಾಧನೆಯುಳ್ಳಗಿದ ಮಹಾತ್ಮರ ಜೀವನವು ಅದಷ್ಟು ಶಾಂತ್ಯೈಕ್ಯ ಸಾಧಕವಾಗಿತ್ತೊ ಅವರ ನಿಧನಾವರೆ ಅಷ್ಟೇ ಉದಾತ್ತ ಧ್ಯೇಯ ಸಾಧಕವಾಗಿರುವುದು ಅವರು ಉಪವಾಸ ವ್ರತ ಕೈಕೊಂಡಾಗ ದಿಲ್ಲಿ ಕಲ್ಕತ್ತಗಳಲ್ಲಿ ಅದೆಷ್ಟು ಶಾಂತಿ ಪರ್ವಗಳು ಹೊರಟಿದವು, ಹಿಂದೂ ಮುಸಲ್ಮಾನ ಸಿಖರಲ್ಲಿ ಅದೆಷ್ಟು ಶಾಂತಿ ಸೌಹಾರ್ದದ ಪ್ರದರ್ಶನಗಳಾದುವು! ಅಂತೆ ಅವರ ಅಂತ್ಯ ಸಂಸ್ಕಾರದಂದು ದೇಶಕ್ಕೆ ದೇಶವೇ ಲೇಶವಾದರೂ ಜಾತಿ ಮತ ವರ್ಗಗಳ ವ್ಯತ್ಯಾಸಗಳನ್ನು ಸರ್ವತವೂ ಸಂಪೂರ್ಣವಾಗಿಯೂ ಮರೆತು ಶೋಕ ಪ್ರದರ್ಶಿಸಿತು.

ಇದೆಂತಹ ಅಗಾಧ ತತ್ವ?

ಇದು ಅವರ ವ್ಯಕ್ತಿತ್ವದ ಅವರ್ಣನೀಯ ಪ್ರಭಾವದ ಪರಿಣಾಮ ಈ ಅಗಾಧ ವ್ಯಕ್ತಿತ್ವ ಓರ್ವ ಸಿರ್ಬಲ ಮನುಷ್ಯನಲ್ಲಿ ಮೂರ್ತಿ ಮತ್ತಾಗಿ ಮೆರೆಯಲು ಕಾರಣವಾದರೂ ಯೇನಿರಬಹುದು? ಜೀವಂತವಿರುವಾಗೊಂದು ಅಪ್ರತಿಮ ಉತ್ಕ್ರಾಂತಿಯನ್ನುಂಟು ಮಾಡಿ, ಮರಣಾನಂತರ ಅದ್ವಿತೀಯವಾದಿನ್ನೊಂದು ಸತ್ಕ್ರಾಂತಿಯನ್ನುಂಟುಮಾಡಿದ ಈ ಮಹಾ ಜೀವ ಜ್ಯೋತಿಯು ದೇವಾಂಶ ಸಂಭೂತನೇ ಆಗಿರಬೇಕೆಂದು ತಿಳಕೊಳ್ಳುವುದಕ್ಕಿಂತ ಹೆಚ್ಚಿನದನ್ನು ನಮ್ಮಂತ ಸಾಮಾನ್ಯರೇನು ಅರಿತುಕೊಂಡಾರು?

ಇಷ್ಟಾದರೂ ಮಹಾತ್ಮರ ನಮ್ಮೆಲ್ಲರಂತೆ ಓರ್ವ ಮೃತ್ಯುಲೋಕದ ಮಾನವರು ಆದರೆ ಅವರ ಜೀವನಾದರ್ಶವು ಅತ್ಯಭೂತಪೂರ್ವವಾದ ಧ್ಯೇಯಬದ್ಧವಾದುದು. ಆ ಧ್ಯೇಯವು ಅವರನ್ನು ತಿ ಸಂಕಟದಲ್ಲಿ ತೊಳಲುವ ಮಾನವಕೋಟಿಯ ಉದ್ಧಾರಕ್ಕೆ ಟೊಂಕ ಕಟ್ಟಿಸಿತು ಮಾನವನು ಸಹಮಾನವನಿಗೆ ಮಾಡುವ ಅನ್ಯಾಯಕ್ಕೆ ಅವರ ನೀತಿ ಪ್ರಿಯವಾದ ದೈವೀಕ ವರಪ್ರಧಾನವೆಂಬಂತೆ ಕಾಣಿಸಿಕೊಂಡಿತು ಮಾನವನು ಪಾಶವೀತನ ಪ್ರದರ್ಶಿಸಿದರೂ ಪಶುವಲ್ಲ, ರಾಕ್ಷಸೀ ಕೃತ್ಯಗಳನ್ನೆಸಗಿದರೂ ರಕ್ಕಸನಲ್ಲ, ವಿಚಾರ ಹೀನನಾದರೂ ನಿಕೃಷ್ಟಮತಿಯಲ್ಲ, ಅವನಲ್ಲಿ ಮನುಷ್ಯತ್ವವು ಸುಸೂಪ್ತವಾಗಿದೆ ಮೋಹದ ಮಾಯೆಯಿಂದ ಲೌಕಿಕ ಸ್ವಾರ್ಥದಿಂದ, ಮುಚ್ಚುಗೊಂಡ ಮಾನವ ಹೃದಯದಲ್ಲಿ ಇನ್ನೂ ಸಾಂಸ್ಕೃತಿಕ ಪ್ರಭೆಯನ್ನು ಪ್ರತಿಬಿಂಬಿಸುವ ಶಕ್ತಿಯಿದೆ. ಆ

ವನ ಅಂತಃಕರಣವು ಪರಿವರ್ತನಕ್ಕೆ ಯೋಗ್ಯವಾಗಿದೆ ಎಂದು ಮಹಾತ್ಮರು ದಕ್ಷಿಣ ಆಫ್ರಿಕದ ತಮ್ಮ ಅನುಭವದಿಂದ ಕಂಡುಕೊಂಡರು

ಕೊಳೆಯನ್ನು ಶುದ್ಧೋದಕದಿಂದಲೂ, ದುಷ್ಕೃತಿಯನ್ನು ಸತ್ಕೃತಿಗಳಿಂದಲೂ, ದ್ವೇಷವನ್ನು ಪ್ರೀತಿಯಿಂದಲೂ, ಪರಿಹಾರಗೆಯ್ಯಲು ಸಾಧ್ಯವಿದೆಯೆಂದು ಮಹಾತ್ಮರು ತಮ್ಮ ಜೀವನದಲ್ಲಿ ತೋರಿಸಿ ಕೊಟ್ಟರು ತಾಳ್ಮೆ ಸಹಿಷ್ಣುತೆಯಿಂದ ಜನಾಂಗವನ್ನು ಬಂಧವಿಮೋಚನೆಗೊಳಿಸಬಹುದು. ಮಾತ್ರವಲ್ಲ ಸ್ವಾದರ್ಶದಿಂದ ಮಹೋನ್ನತ ಜೀವನ ಸೌರಭವನ್ನು ಬೀರಬಹುದೆಂದವರು ತೋರಿಸಿಕೊಟ್ಟರು ಆತ್ಮಾರ್ಪಣೆಯಿಂದ ಹೃತ್ಪರಿವರ್ತನವನ್ನು, ತ್ಯಾಗ ಬಲಿಧಾನಗಳಿಂದ ಪ್ರೀತ್ಯಾದರಗಳನ್ನು ಹೇಗೆ ಹೊಂದಬಹುದೆಂದವರು ತೋರಿಸಿಕೊಟ್ಟರು

ಸತ್ಯದ ಹಾದಿಯು ಸಂಕಷ್ಟದ ಹಾದಿ ಗಾಂಧೀಜಿ ಅದನ್ನೇ ತುಳಿದರು ಆದರೆ ಸತ್ಯವು ನಿತ್ಯ ಬಾಳ್ವಿಕೆಯದು ಸತ್ಯವು ಅಹಿಂಸೆ ಪ್ರೀತಿಗಳ ಪ್ರತಿರೂಪ. ಸತ್ಯವಿದ್ದಲ್ಲಿ ಮನುಷ್ಯ ಸ್ವಾರ್ಥಿಯಾಗಲಾರ, ನಿಸ್ವಾರ್ಥಿಯು ನಿಷ್ಪಕ್ಷಪಾತಿಯಾಗುವನು ಪಕ್ಷರಹಿತನು ಜನತಾ ವಿಶ್ವಾಸಿಯಾಗುವನು ಅಂತೇ ಮಹಾತ್ಮರು ದೇಶ ವಿದೇಶಿಯರ ವಿಶ್ವಾಸ ಗೌರವಕ್ಕೆ ಪಾತ್ರರಾದರು

ನಮ್ಮ ಕಾಲದ ಗಾಂಧೀ ಕಾಲದ ಕೂಡ ರಾಜಕೀಯವು ವಿವೇಕ ರಹಿತ ವಂಚನೆಯಿಂದಲೂ, ವಿಚಾರ ಶೂನ್ಯ ಪಾಶವೀಯತೆಯಿಂದಲೂ ಕೂಡಿತ್ತು ಅಪ್ರಾಮಾಣಿಕ ಕುಯುಕ್ತಿಯ ರಾಜನೀತಿಜ್ಞತೆಯೇ ಜಗತ್ತಿನ ರಾಜಕಾರಣದಲ್ಲಿ ಮೇಲ್ಗೈ ಪಡೆಯುತಿತ್ತು ಗಾಂಧೀಜಿಯವರು ಇಂತಹ ರಾಜ್ಯ ಧೋರಣೆಗೆ ಅತೀವ ತಾತ್ಸಾರವನ್ನು ವ್ಯಕ್ತಪಡಿಸಿ ತಮ್ಮ ಸಂಕಷ್ಟದ ಹಾದಿಯನ್ನೇ ತಾಳಿದರು

ಮಹಾತ್ಮರ ರಾಜಕಾರಣದಲ್ಲಿ ಗೌಪ್ಯಕ್ಕೆ ಎಡೆಯಿಲ್ಲ ಅವರ ಜೀವನದಂತೆ ಅವರ ರಾಜಕಾರಣವೂ ಬಹಿರಂಗವಾದುದು ಅವರ ಮಾತುಗಳಲ್ಲಿ ದ್ವಂದ್ವಾರ್ಥವಿಲ್ಲ ಅವರ ನಿರೂಪಣೆಯು ಸರಳ ಶೈಲಿಯದೂ ಹೃತ್ಪರ್ಶಿಯಾದುದೂ ಆಗಿದೆ ಅನ್ಯಾಯ ಪಕ್ಷದ ರಿಪುವಾಗ ಸರ್ವತ ಸಮಾನವಾದ ಅತಿಬಲತೆಯನ್ನುಳ್ಳ ... ಸತ್ಯ ... ಶಕ್ತಿಗಳ ... ಸತ್ಯ ಕವಚವನ್ನು ಧರಿಸುವೆ.

ಇಂದು ನಾವು ಪೂರ್ವೇತಿಹಾಸದ ಸಿಂಹಾವಲೋಕನ ಮಾಡಿದರೆ ಮಹಾತ್ಮರು ತಮ್ಮ ಸತ್ಯಾಗ್ರಹದ ಹಳವಳಗಳಲ್ಲಿ ಮರೆಸಿದ ತೆಡಕು ತೊಂದರೆಗಳ ಅಷ್ಟು ಅಗಾಧತೆ ... ಈ ತೊಂದರೆಗಳು ... ಆಫ್ರಿಕದಲ್ಲಿನ ಜನಾಂಗದ್ವೇಷದ ಬಿಳಿಯರನ್ನು, ಚಂಪಾರಣ್ಯದ ಬಿಳಿಯ ತೋಟದ ವಸ್ತಾಳಿಕರನ್ನು, ವೈಸರಾಯ್ ವಿಲಿಂಗ್ಡನ್ನರ ... ದಬ್ಬಾಳಿಕೆಯನ್ನು, ಚರ್ಚಿಲ್ಲರ ರಾಕ್ಷಸೀ ಕ್ರೌರ್ಯವನ್ನು, ... ಉದ್ವೇಗದ ... ದಿಲ್ಲಿಯಲ್ಲಿನ ಪ್ರತೀಕಾರಕ್ಕಾಗಿ ಪರಿತಪ್ತರಾದ ಹಿಂದೂ ಸಿಖರನ್ನು ಶತಮಾನಗಳ ಸಮಾಜ ... ಬ್ರಿಟಿಷ್ ... ದಳಿತವರ್ಗದ ... ಅಂಥ ... ಬ್ರಾಹ್ಮಣ ವರ್ಗವನ್ನು ಎದುರಿಸಿ ನಡಸಿದ ಅಂತರಾತ್ಮನ ಹೋರಾಟದ ಪ್ರತಿಯೊಂದು ಸಂದರ್ಭದಲ್ಲಿ ... ಹೃದಯ ಪರಿವರ್ತನ ಹೇಗಾಯಿತು? ಮಹಾತ್ಮರ ಸತ್ಯ, ಅಹಿಂಸ ಪ್ರೀತಿಯ ಸಂದೇಶವು ಲೋಕವು ಎಂದೆಂದಿಗೂ ಮರೆಯಲು ಶಕ್ಯವೆ?

ರಾಜಕುಮಾರಿಗೆ ಮಹಾತ್ಮರ ಉಡುಗೊರೆ



ತಾವು ಸ್ವಂತ ತೆಗೆದ ನೂಲಿನಿಂದ ತಯಾರಿಸಿದ ಕಸೂತಿ ಕೆಲಸದಿಂದ ಹೆಣೆಸಲ್ಪಟ್ಟ ಈ ಮೇಜ ವಸ್ತ್ರವನ್ನು ಎಲಿಜಬೇತಳ ಲಗ್ನದ ಉಡುಗೊರೆಯಾಗಿ ಕಳುಹಿಸಿದ್ದರು

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕ್ಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨ ೧/೪
೪ರಿಂದ ೫ ತಿಂಗಳು	,,	,,	೨ ೧/೨
೬ರಿಂದ ೯ ತಿಂಗಳು	,,	,,	೨ ೩/೪

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಸ್ವೀಕಾರ

ವನಿತಾ

ಮುಖ್ಯವಾಗಿ ಸ್ತ್ರೀ ವಾಚಕರಿಗೆ ಅಭಿರುಚಿದಾಯಕವಾಗಿರುವಂತೆ ಸಿದ್ಧಪಡಿಸಿದ್ದು ಸ್ತ್ರೀ ಸಮಸ್ಯೆ, ವಿನೋದ, ವಿಮರ್ಶೆ, ಪುಟ್ಟ ಕತೆಗಳಿಂದೊಡಗೂಡಿದ ಕ್ರೌನ್ ೪ ಆಕೃತಿಯ ಸುಮಾರು 20 ಪುಟಗಳ ಸಾರಸ್ಯ ವಿಷಯಗಳಿಂದೊಡಗೂಡಿದ ಮಾಸ ಪತ್ರಿಕೆ ಇದನ್ನು ಓದಿದ ಪ್ರತಿಯೊಬ್ಬರೂ ಕೊನೆಯ ತನಕ ಈ ಪುಟ್ಟ ಪತ್ರಿಕೆಯ ಸಾರಸ್ಯ ವಿಷಯರಸವನ್ನುಣ್ಣುವರೆಂದು ವಿಶ್ವಾಸನೀಯವಾಗಿ ಹೇಳಬಹುದು ಶ್ರೀ ಟಿ. ಎಸ್. ಅಯ್ಯಂಗಾರರು ಇದರ ಸಂಪಾದಕರು.

ಸ್ವದೇಶಾಭಿಮಾನಿ

ತಾರೀಕು 6-2-1948

ಜಗದ್ವಂದ್ಯ ಮಹಾತ್ಮಾ ಗಾಂಧಿ

ಮಹಾತ್ಮಾ ಗಾಂಧಿಯವರ ನಿಧನಕ್ಕಾಗಿ ಸಂತಾಪ ಸೂಚಿಸದೆ ಇರುವ ರಾಷ್ಟ್ರವೇ ಇಂದು ಜಗತ್ತಿನಲ್ಲಿ ಇಲ್ಲವೆಂಬುದನ್ನು ಈಗಿನ ದೈನಿಕ ಪತ್ರಿಕೆಗಳನ್ನು ಓದುವವರು ಅಥವಾ ದಿನನಿತ್ಯದ ರೇಡಿಯೋ ವಾರ್ತೆಗಳನ್ನು ಕೇಳುವವರೆಲ್ಲರೂ ಬಲ್ಲರು. ಇಡೀ ಜಗತ್ತನ್ನು ಈ ರೀತಿ ದುಃಖದಲ್ಲಿ ಮುಳುಗಿಸಿದ ಅಥವಾ ಇಡೀ ಜಗತ್ತಿನ ಆದರ ಮತ್ತು ವಿಶ್ವಾಸಕ್ಕೆ ಪಾತ್ರರೆಂದೆನಿಸಿಕೊಂಡ ಇನ್ನೊಂದು ವ್ಯಕ್ತಿಯು 'ಆಧುನಿಕ ಯುಗದಲ್ಲಿ ಪ್ರಾಯಶಃ ಇನ್ನಾರೂ ಇಲ್ಲ ಇದರ ಅರ್ಥವೇನು?

ಮಹಾತ್ಮಾಜಿಯವರಲ್ಲಿಯ ಯಾವ ಗುಣವು ಹೀಗೆ ಇಡೀ ಜಗತ್ತಿನ ಲಕ್ಷ್ಯವನ್ನು ಆಕರ್ಷಿಸಿತೆಂಬುದನ್ನು ಸ್ವಲ್ಪ ವಿಚಾರಿಸುವುದು ಅಗತ್ಯವಿರುತ್ತದೆ ಪರಿಶೀಲಿಸಿ ನೋಡಿದರೆ ಅವರು ತಮ್ಮ ಜೀವನದಲ್ಲಿ ಸಾರಿದ ಶಾಂತಿ ಸಂದೇಶವೇ ಹೀಗೆ ಅವರನ್ನು ಜಗದ್ವಂದ್ಯರನ್ನಾಗಿ ಮಾಡಿರುತ್ತದೆಂಬುದು ಸ್ಪಷ್ಟವಾಗುತ್ತದೆ

1914ರಿಂದ 1918ರ ವರೆಗೆ ನಡೆದ ಪ್ರಥಮ ಯುದ್ಧ, ಅದರ ಬೆನ್ನಿನಲ್ಲೇ ಎಂಬಂತೆ ನಡೆದ ದ್ವಿತೀಯ ಮಹಾ ಯುದ್ಧ, ಇವು ಇಡೀ ಲೋಕದ ಜನರಿಗೆ ಯುದ್ಧವೆಂದರೆ ಬೇಡವೆಂಬ ಭಾವನೆಗೆ ಕಾರಣವಾಗಿವೆ ಈ ಯುದ್ಧಗಳಿಂದ ಅಖಿಲ ಜಗತ್ತು ಕಂಗೆಟ್ಟು ಹೋಗಿರುತ್ತದೆ ಈ ಯುದ್ಧಗಳಿಂದ ಹೇಗೆ ತಪ್ಪಿಸಿಕೊಳ್ಳಬಹುದೆಂಬುದರ ಅರಿವು ಯಾರಿಗೂ ಇಲ್ಲ ಪ್ರಥಮ ಯುದ್ಧಾನಂತರ ಲೀಗ್ ಆಫ್ ನೇಶನ್ಸ್ ಸಂಸ್ಥೆ ಸ್ಥಾಪಿಸಿ ಇದರಿಂದ ಜಗತ್ತಿನ ಶಾಂತಿ ಕಾಪಾಡಬಹುದೆಂಬ ಆಸೆ ಜನರಲ್ಲಿತ್ತು ಅದು ಸ್ವಲ್ಪ ಸಮಯದಲ್ಲೆ ವ್ಯರ್ಥವಾಯಿತು ದ್ವಿತೀಯ ಮಹಾಯುದ್ಧದ ಬಳಿಕ ಸ್ಥಾಪಿತವಾದ ಸಂಯುಕ್ತ ರಾಷ್ಟ್ರ ಸಭೆಯೂ ಇದೇ ಹಾದಿ ಹಿಡಿಯುತ್ತದೆಂದು ಹೆಚ್ಚಿನವರಿಗೆ ಅನ್ನಿಸುತ್ತಿದೆ ವಸ್ತುತಃ ಮೂರನೆ ಎಟಮ್ ಬಾಂಬುಗಳ ಯುದ್ಧಕ್ಕೆ ಸನ್ನಾಹಗಳು ನಡೆಯುತ್ತಿವೆಯೆಂಬುದು ಜಗತ್ತಿಗೆ ಗೊತ್ತಿದೆ ಇಂಥ ಪರಿಸ್ಥಿತಿಯಲ್ಲಿ ಶಾಂತಿ ಸಂದೇಶವನ್ನು ಸಾರಿ ಅಹಿಂಸೆಯಿಂದ ಮಾನವ ಜಾತಿಯ ಪ್ರಶ್ನೆಗಳನ್ನು ತೀರ್ಮಾನಗೊಳಿಸುವುದು ಸಾಧ್ಯವೆಂದು ಕಾರ್ಯತಃ ತೋರಿಸಿದ ಮಹಾತ್ಮಾ ಗಾಂಧಿಯವರ ಮೇಲೆ ಜಗತ್ತಿನ ಮೇಲೆ ಆದರ ವುಂಟಾದುದು ಸಹಜವೇ ಇರುತ್ತದೆ.

ಅಂತೂ ಗಾಂಧೀಜಿಯವರ ಜೀವನದ ಸಂದೇಶವು ಈ ರೀತಿ ಜಗದ್ವ್ಯಾಪಿಯಾಗಿರುತ್ತದೆಂಬುದು ಜಗತ್ತಿನ ಭಾವೀ ಕಲ್ಯಾಣದ ದೃಷ್ಟಿಯಿಂದ ಒಂದು ಮಹತ್ವದ ವಿಷಯವಿರುತ್ತದೆ.

ಗಾಂಧೀಜಿಯವರ ಈ ಸಂದೇಶವು ಜಗತ್ತಿನ ಎಲ್ಲಾ ಭಾಗಗಳಿಗೆ ಎಷ್ಟರ ಮಟ್ಟಿಗೆ ಹೋಗಿ ಮುಟ್ಟಿರುತ್ತದೆಂಬುದು ಅವರು ಜೀವಂತ ಇರುವಾಗ ಸ್ಪಷ್ಟವಾಗಲಿಲ್ಲ. ಅವರ ನಿಧನವು ಇದನ್ನು ಅತ್ಯಂತ ಸ್ಪಷ್ಟವಾಗಿ ವ್ಯಕ್ತಗೊಳಿಸಿರುತ್ತದೆ. ಗಾಂಧೀ ನಿಧನವು ಅವರ ವಿಜಯವನ್ನೇ ಸಾರುತ್ತಿದೆ:

ಗಾಂಧೀಜಿಯವರಿಗೆ ತನ್ನ ಶಾಂತಿ ಸಂದೇಶವು ಜಗತ್ತಿಗೆ ಎಷ್ಟು ಅಗತ್ಯವಿದೆಯೆಂಬುದು ಚೆನ್ನಾಗಿ ಗೊತ್ತಿತ್ತು ಮಾತ್ರವಲ್ಲ ಅದನ್ನು ಜಗತ್ತಿಗೆ ಹೇಗೆ ಕೊಡಬೇಕೆಂಬ ವಿಧಾನವೂ ಚೆನ್ನಾಗಿ ಗೊತ್ತಿತ್ತು. ಕೇವಲ ಪ್ರಚಾರ ಕಾರ್ಯದಿಂದ ಇದು ಸಾಧಿಸಲ್ಪಡುವ ವಿಷಯವಿದ್ದಿಲ್ಲ. ಅಮೇರಿಕಕ್ಕೆ ಬರಬೇಕೆಂದು ಎಷ್ಟೊಂದು ಮಂದಿ ಗಾಂಧೀಜೀಯವರನ್ನು ಒತ್ತಾಯ ಮಾಡಲಿಲ್ಲ? ಅವರು ಯಾವ ಪರದೇಶಕ್ಕೂ ಹೋಗಿ ಅಲ್ಲಿ ಲೇಖನ ಭಾಷಣಗಳ ಮೂಲಕ ಪ್ರಚಾರ ಮಾಡಲು ಯತ್ನಿಸಲಿಲ್ಲ ಹಿಂದುಸ್ಥಾನದಲ್ಲಿ ಅಹಿಂಸೆಯ ಶಕ್ತಿಯನ್ನು ಕಾರ್ಯತಃ ತೋರಿದರೆ ಮಾತ್ರ ಜಗತ್ತಿಗೆ ತನ್ನ ಸಂದೇಶವು ಅರ್ಥವಾಗುವ ಸಂಭವವಿರುತ್ತದೆಂಬುದು ಅವರ ಖಂಡಿತ ಅಭಿಮತವಿತ್ತು.

ಅಹಿಂಸೆಯ ದಾರಿಯಿಂದಲೇ ಅವರು ಈ ದೇಶದ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿ ಜಗತ್ತಿಗೆ ತೋರಿಸಿದರು ಅವರ ತತ್ವವು ಕೇವಲ ತಾತ್ವಿಕ ವಿಚಾರ ಮಾತ್ರವಿರದೆ ವ್ಯವಹಾರದಲ್ಲಿ ಕಾರ್ಯರೂಪದಲ್ಲಿ ಪರಿಣಮಿಸುವಂತಹದೆಂಬುದನ್ನು ಜಗತ್ತು ಕಂಡಿರುತ್ತದೆ ಇದೇ ಇಡೀ ಜಗತ್ತಿಗೆ ಅವರ ಜೀವನವು ಆಶಾದಾಯಕವಾಗಲು ಮುಖ್ಯ ಕಾರಣವಿರುತ್ತದೆ

ಹಿಂದೂಸ್ಥಾನವು ಅವರ ಸಂದೇಶವನ್ನು ಅವರು ಆಶಿಸಿದಷ್ಟರ ಮಟ್ಟಿಗೆ ಅನುಸರಿಸಲಿಲ್ಲವೆಂಬುದು ಅತ್ಯಂತ ಖೇದಜನಕ ವಿಚಾರವಿರುತ್ತದೆ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯೊಡನೆಯೇ ಇದು ಗಾಂಧೀಜೀಯವರಿಗೆ ಇನ್ನಷ್ಟು ಸ್ಪಷ್ಟವಾಯಿತು ಇಲ್ಲಿ ನಡೆದ ಹಿಂದೂ ಮುಸ್ಲೀಮ ಅನಾಹುತವು ಅವರ ಕಣ್ತೆರೆಯಿತು ಸಾಮಾನ್ಯ ವ್ಯಕ್ತಿಯಾಗಿದ್ದರೆ ಪೂರ್ಣ ನಿರಾಶೆಗೆ ಒಳಪಡುವಂಥ ಪರಿಸ್ಥಿತಿಯೆನ್ನಲು ಅಡ್ಡಿಯಿಲ್ಲ ಈ ದ್ವೇಷಾಗ್ನಿಯನ್ನು ತನ್ನ ಅಹಿಂಸಾಧರ್ಮದಿಂದ ಅಡಗಿಸಲು ಯತ್ನಿಸಿದ ಗಾಂಧೀಯವರ ವಿಶ್ವಾಸವು ಅಚಲವಾಗಿತ್ತು ಜೀವದಲ್ಲಿ ಬದುಕಬೇಕೆಂಬುದರ ಗೊಡವೆಯನ್ನು ಲಕ್ಷಿಸದೆ ಅವರು ನೌಕಾಲಿಯಲ್ಲಿ ಕಲ್ಕತ್ತೆಯಲ್ಲಿ ಮತ್ತೆ ಕೊನೆಗೆ ಡಿಲ್ಲಿಯಲ್ಲಿ ಈ ದ್ವೇಷಾಗ್ನಿಯನ್ನು ಅಡಗಿಸಲು ಪಣಗಾಡಿದರು ಮಾತ್ರವಲ್ಲ ಬಹಳ ಮಟ್ಟಿಗೆ ಯಶಸ್ವಿಯೂ ಆದರು ಇದನ್ನೂ ಇಡೀ ಜಗತ್ತು ನೋಡಿತು

ಕೊನೆಯಲ್ಲಿ ತನ್ನ ದೇಹವನ್ನೇ ಈ ಜಾತೀಯತೆಯ ದ್ವೇಷಾಗ್ನಿಗೆ ಬಲಿಯಾಗಿ ಅರ್ಪಿಸಿದರು

ಈ ರೀತಿ ತನ್ನ ಶಾಂತಿ ಸಂದೇಶದಲ್ಲಿ ತನ್ನ ಅಖಂಡ ವಿಶ್ವಾಸವನ್ನು ಜಗತ್ತಿನ ಎದುರು ತೋರಿಸಿದ ಈ ಮಹಾತ್ಮರ ಸಂದೇಶವು ಜಗತ್ತನ್ನು ಈ ರೀತಿ ಆಕರ್ಷಿಸಿರುವುದು ಅತ್ಯಂತ ಸಹಜ ಸಂಗತಿ ಇರುತ್ತದೆ

ಮಹಾತ್ಮಾ ಗಾಂಧೀಜಿಯವರು. ಈ ರೀತಿ ತನ್ನ ಜೀವನದಿಂದ ಜಗತ್ತಿಗೆ ಕೊಟ್ಟಿರುವ ಈ ಸಂದೇಶವು ಜಗತ್ತಿನಲ್ಲಿ ಸ್ಥಿರವಾಗಿ ನಿಂತು ಮುಂದೆ ಲೋಕ ಕಲ್ಯಾಣವು ಸಾಧಿಸಲ್ಪಡುವಂತೆ ಕಾರ್ಯರೂಪದಲ್ಲಿ ಸಾಧಿಸುವ ಪವಿತ್ರ ಜವಾಬ್ದಾರಿಯು ಹಿಂದುಸ್ಥಾನಕ್ಕೆ ಸೇರಿರುತ್ತದೆಂಬುದನ್ನು ನಮ್ಮಲ್ಲಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾಗಿರುತ್ತದೆ.

ಭಾರತದಲ್ಲಿ ಶಾಂತಿಸ್ಥಾಪನೆ ಸಾಧಿಸುವುದು ನಮ್ಮ ಪ್ರಥಮ ಕರ್ತವ್ಯ. ಮುಂದೆ ಗಾಂಧೀಜಿಯವರು ಚಿತ್ರಿಸಿಕೊಟ್ಟಿರುವ ನಿಜವಾದ ಸ್ವರಾಜ್ಯವನ್ನು ನಾವು ಶಾಂತರೀತಿಯಿಂದ ಜಗತ್ತಿಗೆ ಸಾಧಿಸಿ ತೋರಿಸಬೇಕಾಗಿದೆ. ಆಗ ಮಾತ್ರ ಜಗತ್ತು ಈ ಮಾರ್ಗವನ್ನು ಅನುಸರಿಸುವುದೆಂಬ ಬಗ್ಗೆ ಯಾವ ಸಂಶಯವೂ ಬೇಡ. ಆಗ ಜಗತ್ತು ಶಾಂತವಾಗುವುದು ಮತ್ತು ಲೋಕಕಲ್ಯಾಣವು ನಿಜವಾಗಿಯೂ ಸಾಧಿಸಲ್ಪಡುವುದು.

ಗಾಂಧೀಜಿಯೆಂದರೆ ಭಾರತೀಯ ನಾಗರಿಕತೆಯ ಮೂರ್ತಿಸ್ವರೂಪರೆಂದು ಸರ್. ಸಿ ಪಿ ರಾಮಸ್ವಾಮಿ ಅಯ್ಯರರು ಹೇಳಿದ ಮಾತು ಅಕ್ಷರಶಃ ಸತ್ಯವಿರುತ್ತದೆ ಗಾಂಧೀಜಿ ಭಾರತದ ಆತ್ಮ ಎಂದು ಅವರು ಹೇಳಿದರು ಗಾಂಧೀಜೀ ನಿಜವಾಗಿಯೂ ನಿಧನ ಹೊಂದಿಲ್ಲ ಅವರ ದೇಹ ಮಾತ್ರ ನಷ್ಟವಾಗಿರುತ್ತದೆ ಭಾರತದ ಆತ್ಮ ನಷ್ಟವಾಗಲಾರದು ಭಾರತೀಯ ನಾಗರಿಕತೆಯು ನಿಜವಾಗಿಯೂ ಅವಿನಾಶಿಯಿದ್ದು ಅದು ಎಂದೆಂದೂ ಜೀವಂತ ಶಕ್ತಿಯೆಂಬುದರಲ್ಲಿ ಮಹಾತ್ಮಾ ಗಾಂಧಿಯವರು ಚೆನ್ನಾಗಿ ವಿಶ್ವಾಸವಿಟ್ಟಿದ್ದರು ಅದು ಆಗಾಗ ಸುಪ್ತಾವಸ್ಥೆಯಲ್ಲಿರುವುದುಂಟು ಆದರೆ ಈಗ ಗಾಂಧೀಜಿಯವರು ಅದನ್ನು ಜಾಗತಗೊಳಿಸಿರುವರು ಎಚ್ಚೆತ್ತ ಭಾರತ ಪುನಃ ಒಡನೆಯೇ ನಿದ್ರಿಸುವುದು ಅಶಕ್ಯ ಗಾಂಧೀ ಶಕ್ತಿಯು ನಮ್ಮನ್ನು ಜಾಗ್ರತೆಯಲ್ಲಿರಿಸುತ್ತಿದೆಯೆಂಬ ಬಗ್ಗೆ ಸಂಶಯಬೇಡ

ಭಾರತದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಇಲ್ಲಿ ಗಾಂಧಿಯವರು ಸಾರಿದ ರೀತಿಯ ನೈಜ ಸ್ವರಾಜ್ಯ ಸ್ಥಾಪನೆಯಾಗಬೇಕು ಈ ಮಾತುಗಳು ಇಂದು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಕೆತ್ತಲ್ಪಡಬೇಕು ಗಾಂಧೀಜೀಯವರು ಕಳೆದ ಮೂವತ್ತು ವರ್ಷಗಳಿಂದ ಅವಿಶ್ರಾಂತವಾಗಿ ನಮಗಾಗಿ ದುಡಿದು ನಮಗಾಗಿ ಕೊನೆಯಲ್ಲಿ ಮಡಿದು ಈ ದೇಶಕ್ಕೆ ಸಲ್ಲಿಸಿದ ಸೇವೆಯ ಋಣವನ್ನು ನಾವು ಸ್ವಲ್ಪವಾದರೂ ತೀರಿಸಲು ಇದೊಂದೇ ದಾರಿ

ಗಾಂಧೀ ನಿಧನದಿಂದ ಭಾರತ ಧೃತಿಗೆಟ್ಟು ಕೆಡುವುದ ಏನೂ ಮಾತ್ರಕ್ಕೂ ತರವಲ್ಲ ಮುಂದೆ ಕಟ್ಟಲಿರುವ ಸ್ವರಾಜ್ಯದ ಸ್ಮಾರಕವನ್ನು ಅವರಿಗೆ ಅರ್ಪಿಸುವುದೇ ನಮ್ಮ ಕರ್ತವ್ಯವೆಂಬುದನ್ನು ಮನಗಾಣಬೇಕು ಈ ಸ್ಮಾರಕ ರಚಿಸುವುದರಲ್ಲಿ ಪ್ರತಿಯೊಬ್ಬನೂ ಭಾಗಿಯಾಗಬೇಕು. ಹೇಗೆ ಭಾಗಿಯಾಗಬಹುದೆಂಬುದನ್ನು ಗಾಂಧೀಜಿಯವರು ಕಳೆದ ಮೂವತ್ತು ವರ್ಷಗಳಿಂದ ನಮಗೆ ತಿಳಿಸಿದ್ದಾರೆ ಭದ್ರವಾದ ಅಡಿಗಟ್ಟನ್ನು ಅವರು ಹಾಕಿಕೊಟ್ಟಿದ್ದಾರೆ ಮುಂದೆ ಕಟ್ಟಡ ಕಟ್ಟುವುದು ನಮ್ಮ ಪಾಲಿನ ಕೆಲಸ. ಈ ಕಾರ್ಯ ಸಾಧನೆಯು ನಮ್ಮ ಉದ್ಧಾರಕ್ಕೆ ಮಾತ್ರವಲ್ಲ ಲೋಕ ಕಲ್ಯಾಣಕ್ಕಾಗಿಯೂ ಮಾಡಬೇಕಾಗಿದೆ ಲೋಕದಲ್ಲಿ ಶಾಂತಿ ಸ್ಥಾಪನೆಯು ಅತ್ಯಾವಶ್ಯಕವಾಗಿರುತ್ತದೆ ಜಗತ್ತಿನಲ್ಲಿ ಇಂದು ಧರ್ಮ ಸಂಸ್ಥಾಪನೆಗಾಗಿ ಜನ್ಮವೆತ್ತಿದ ಮಹಾತ್ಮರ ಕಾರ್ಯ ಪೂರ್ಣವಾಗಬೇಕು ಈ ಕಾರ್ಯದಲ್ಲಿ ಸಹಭಾಗಿಗಳಾಗುವವರು ಮಹಾಭಾಗ್ಯವಂತರೆಂಬುದನ್ನು ಎಲ್ಲರೂ ತಿಳಿಯುವಂತಾಗಲಿ

ಟೀಕೆ-ಟಿಪ್ಪಣಿಗಳು

ಆರ್ಥಿಕ ಯೋಜನಾ ಸಮಿತಿಯ ವರದಿ

ಭಾರತದ ಮುಂದಿನ ಆರ್ಥಿಕ ಬೆಳವಣಿಗೆಯನ್ನು ಯಾವ ರೀತಿ ಸಾಧಿಸಬೇಕೆಂಬುದರ ಬಗ್ಗೆ ಯೋಜನೆ ತಯಾರಿಸಲು ಕಾಂಗ್ರೆಸಿನಿಂದ ನೇಮಿಸಲ್ಪಟ್ಟಿರುವ ಸಮಿತಿಯವರು ತಮ್ಮ ವರದಿಯನ್ನು ಕಾಂಗ್ರೆಸಿಗೆ ಒಪ್ಪಿಸಿರುತ್ತಾರೆ ಮುಂದಿನ ಆರ್ಥಿಕ ಬೆಳವಣಿಗೆಯ ರೂಪರೇಖೆಗಳನ್ನು ಮಾತ್ರ ಇದು ಕೊಟ್ಟಿರುತ್ತದೆ ಕೂಲಂಕುಶವಿಚಾರಗಳನ್ನು ಅಗತ್ಯವಿದ್ದಂತೆ ನಡೆಸಲು ಒಂದು ಕಾಯಂ ಸಮಿತಿಯನ್ನು ಏರ್ಪಡಿಸುವುದು ಅಗತ್ಯವೆಂದು ಸೂಚಿಸಲಾಗಿದೆ.

ಭಾರತದ ಪ್ರಜೆಗಳ ಬಡತನ ನಿವಾರಣೆಯನ್ನೇ ಮುಖ್ಯ ಉದ್ದೇಶವಾಗಿ ಇಟ್ಟುಕೊಳ್ಳಲಾಗಿದೆ ಇಲ್ಲಿಯ ಸಹಜ ಸಂಪತ್ತನ್ನೂ ಮಾನವ ಶಕ್ತಿಯನ್ನೂ ಪೂರ್ಣವಾಗಿ ಉಪಯೋಗಿಸುವುದೇ ಇದಕ್ಕೆ ದಾರಿಯೆನಲಾಗಿದೆ ಇದಕ್ಕ ಮೂಲ ಕೈಗಾರಿಗಳೆನ್ನಿಸುವ ದೊಡ್ಡ ಕೈಕಾರಿಕೆಗಳು ಹಾಗೂ ಆವಶ್ಯಕ ವಸ್ತುಗಳ ಬಗ್ಗೆ ವಿಕೇಂದ್ರೀಕೃತ ಸಹಕಾರೀ ಕ್ರಮದ ಗುಡಿಕೈಗಾರಿಕೆಗಳು ಇವೆರಡನ್ನೂ ಬೆಳೆಸುವ ಆವಶ್ಯಕತೆ ತೋರಿಸಲಾಗಿದೆ ದೊಡ್ಡ ಕೈಗಾರಿಕೆಗಳು ರಾಷ್ಟ್ರದ ಮೂಲಕವೇ ನಡೆಸಲ್ಪಟ್ಟು ಭಂಡವಲಶಾಹಿಯ ಕೆಡುಕುಗಳನ್ನು ನಿವಾರಿಸುವುದರ ಆವಶ್ಯಕತೆ ಹೇಳಲಾಗಿದೆ ಕೃಷಿ ಕೈಗಾರಿಕೆಗಳೆರಡರ ಬೆಳವಣಿಗೆಯ ಕಡೆಗೂ ಗಮನಕೊಡಲಾಗಿದೆ ಕೆಲಸಗಾರರ ಹಾಗೂ ಒಕ್ಕಲಿಗಳ ಶ್ರೇಯಸ್ಸಿನ ಕಡೆಗೂ ಪೂರ್ಣ ಲಕ್ಷ ಕೊಡಲಾಗಿದೆ

ಕಾಂಗ್ರೆಸ್ ಸಂಸ್ಥೆಯು ಇದುವರೆಗೆ ಸಾರುತ್ತ ಬಂದಿರುವ ತತ್ವಗಳಿಗೆ ಅನುಸಾರವಾಗಿಯೆ ಈ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ

ಶ್ರೀಮಂತ ಭಂಡವಲಗಾರರು ಕೆಲವರು ಮಾತ್ರ ಈ ಯೋಜನೆಯಿಂದ ದಿಗಿಲುಗೊಂಡಂತೆ ಕಾಣುತ್ತದೆ ಈಗ ಉತ್ಪತ್ತಿ ಹೆಚ್ಚಿಸುವ ಒಂದೇ ಆವಶ್ಯಕತೆ ಮುಂದಿಟ್ಟುಕೊಂಡು ಭಂಡವಲಗಾರರ ಸ್ವಾತಂತ್ರ್ಯಕ್ಕೆ ಧಕ್ಕೆಬಾರದಂತೆ ವರ್ತಿಸುವುದು ಅಗತ್ಯವೆಂದು ಅವರ ತರ್ಕವಿರುತ್ತದೆ ಇದು ತಾತ್ಕಾಲಿಕ ಪಕ್ಷಪಾತವೆಂದೂ ದೇಶದ ಮುಂದಿನ ಯೋಜನೆ ಈ ವರದಿಯು ಸೂಚಿಸುವ ದಾರಿಯನ್ನು ಹಿಡಿಯುವುದು ಅನಿವಾರ್ಯವೆಂದೂ ಅವರು ತಿಳಿದುಕೊಳ್ಳಬೇಕು

ಕಾಂಗ್ರೆಸ್ ಸಂಸ್ಥೆಯ ಸುಧಾರಣೆ

ಈ ಪ್ರಶ್ನೆಯನ್ನು ಮಹಾತ್ಮಾಗಾಂಧಿಯವರು ಕೊನೆಯ ದಿನಗಳಲ್ಲಿ ವಿಚಾರಿಸುತ್ತಿದ್ದು ಈ ಕುರಿತು ಅವರು ಮಾಡಿರುವ ಸೂಚನೆಗಳು ಈಗ ಪ್ರಕಟವಾಗಿರುತ್ತವೆ

ಕಾಂಗ್ರೆಸ್ ಸಂಸ್ಥೆಯು ಈಗ ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರ ಸಾಧಿಸಿರುತ್ತದೆ. ಮುಂದೆ ಆರ್ಥಿಕ ಹಾಗೂ ನೈತಿಕ ಸ್ವಾತಂತ್ರ್ಯ ಅದು ಸಾಧಿಸಬೇಕು ಅದು ಚಿರಸ್ಥಾಯಿಯಾದ ಸಂಸ್ಥೆಯಾಗಬೇಕಲ್ಲದೆ ಅದನ್ನು ಅಂತ್ಯಪಡಿಸಲಾಗದು ಮುಂದಿನ ಕಾರ್ಯ ಇಷ್ಟರ ತನಕದ ಕಾರ್ಯಕ್ಕಿಂತ ಕಷ್ಟತರದ್ದು. ಯಾಕೆಂದರೆ ಅದು ಪೂರ್ಣ ವಿಧಾಯಕವಿರುತ್ತದೆ. ಸಂಸ್ಥೆಯ ಈಗಿನ

ಮಹಾತ್ಮಾ ಗಾಂಧೀಜಿಯವರ ನಿಧನಕ್ಕೆ ಕಾರಣನಾದವನು ಪೂಣೆಯ ಹಿಂದೂ ಮಹಾಸಭೆಯ ಕಾರ್ಯದರ್ಶಿಯೆಂದು ಪ್ರಕಟವಾದಂದಿನಿಂದ ದೇಶದ ಅನೇಕ ಭಾಗಗಳಲ್ಲಿ ಹಿಂದೂ ಮಹಾಸಭೆ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಮೇಲೆ ಜನರು ಆಕ್ರಮಣ ಮಾಡಿದ ವಾರ್ತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇವೆ. ಈ ರೀತಿ ಜನರು ಶಾಂತತಾ ಭಂಗ ಮಾಡುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಗಾಂಧೀಜಿಯವರ ಮೇಲಿದ್ದ ಪ್ರೀತಿಯನ್ನು ತೋರಿಸಲು ಹಿಂಸೆಯನ್ನು ಕೈಕೊಳ್ಳುವುದು ದಾರಿಯಲ್ಲವೆಂದು ಎಲ್ಲಾ ಜನರೂ ತಿಳಿದುಕೊಳ್ಳಬೇಕು ಮತ್ತು ದೇಶದಲ್ಲಿ ಶಾಂತಿಯು ನೆಲೆಗೊಳ್ಳುವಂತೆ ಪ್ರತಿಯೊಬ್ಬರೂ ಸಹಕರಿಸಬೇಕು.

ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷ ಶ್ರೀ ಭೋಪಟಕರರು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜವಾಬ್ದಾರಿಯುಳ್ಳ ಸಂಚಾಲಕರು ಗಾಂಧಿಜೀಯವರ ನಿಧನದಲ್ಲಿ ತಮಗೆ ಯಾವ ಭಾಗವೂ ಇಲ್ಲ ಮಾತ್ರವಲ್ಲ, ಇದನ್ನು ಮಾಡಿದವನ ದುಷ್ಕೃತ್ಯವನ್ನು ನಾವು ಖಂಡಿತವಾಗಿ ಖಂಡಿಸುತ್ತೇವೆ ಎಂಬುದಾಗಿ ಕಟಾಕ್ಷವಾಗಿ ಹೇಳುತ್ತಿದ್ದಾರೆ.

ಬೊಂಬಾಯಿಯಲ್ಲಿ ಕೆಲವರು ಗಾಂಧಿಜೀಯವರ ನಿಧನದಿಂದುಂಟಾದ ಸಂತೋಷ ವ್ಯಕ್ತಪಡಿಸಲು ಮಿಠಾಯಿ ಹಂಚಿದರೆಂದೂ ಇದೇ ರೀತಿ ಬೆಳಗಾಂವಿಯಲ್ಲಿ [illegible] ನಡೆಯಿತೆಂದೂ ವಾರ್ತೆಗಳಿವೆ. ಆದರೆ ಇದೆಲ್ಲ ಬೇಜವಾಬ್ದಾರಿ ಕೆಲವರ ವರ್ತನವಲ್ಲದೆ ಇದನ್ನೆಲ್ಲ ನಾವು ಖಂಡಿಸುತ್ತೇವೆಂದು ಮೇಲೆ ಹೆಸರಿಸಿದ ಇವರ ಮುಖಂಡರು ಪ್ರಕಟಿಸುತ್ತಿದ್ದಾರೆ. ಈ [illegible] ಜನರ [illegible] ನಾವು [illegible] ಆವಶ್ಯಕತೆ ಇಲ್ಲ [illegible] ಇಂಥ [illegible] ಜನರನ್ನು ಅನಾವಶ್ಯಕವಾಗಿ [illegible] ಹಿಂಸಿಸಬಾರದೆಂದು ಇವರೆಲ್ಲರಲ್ಲಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ. [illegible] ವರ್ತನದಿಂದ ಉದ್ರೇಕಗೊಳ್ಳುವುದು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ನಾವು [illegible] ಜನರನ್ನು ಎಚ್ಚರಿಸಬೇಕಾಗಿದೆ.

ನಡೆದಿರುವ ಘಟನೆಗಳಿಂದ ಒಂದು ವಿಚಾರವು ಮಾತ್ರ ಸ್ಪಷ್ಟವಾಗುತ್ತದೆ. [illegible]

ಸ್ವರೂಪ ಬಿಟ್ಟು ಕೊಡುವುದೇ ಸರಿ. ಇದನ್ನು ಕೇವಲ ಕೆಲಸಗಾರರ ಸಂಸ್ಥೆಯನ್ನಾಗಿ ಮಾರ್ಪಡಿಸಬೇಕು. ಸೈನ್ಯದ ರಚನೆಯಂತೆ ಅದರ ಘಟನೆಯನ್ನಿರಿಸಬಹುದು. ಕೆಲಸಗಾರರು ತಮ್ಮ ತಂಡವನ್ನೇರ್ಪಡಿಸಿ ತಮ್ಮ ಮುಂದಾಳುವನ್ನು ತಾವೇ ಆರಿಸಬೇಕು. ಇಂಥ ತಂಡಗಳು ಸೇರಿ ತಮ್ಮ ಮುಂದಾಳನ್ನು ನೇಮಿಸಬೇಕು. ಇದೇ ರೀತಿ ಅಖಿಲ ಭಾರತಕ್ಕೆ ಮುಂದಾಳುವನ್ನು ಆರಿಸಬೇಕು. ಈ ಸೈನ್ಯವು ಅಹಿಂಸಾತ್ಮಕವಿದ್ದು ಸೇವೆ ಸಲ್ಲಿಸುತ್ತಿರಬೇಕು. ಮುಂದೆ ಕೆಲಸಗಾರರೆನ್ನಿಸುವವರ ಲಕ್ಷಣಗಳು ಹೇಗಿರಬೇಕೆಂಬುದನ್ನು ವಿವರಿಸಲಾಗಿದೆ. ಹಿಂದೆ ಮಹಾತ್ಮಾಗಾಂಧಿಯವರು ಸ್ವಯಂ ಸೇವಕರಿಗೆ ಬೇಕೆಂದು ಹೇಳಿದ ಲಕ್ಷಣಗಳನ್ನೇ ಇಲ್ಲಿ ಹೇಳಲಾಗಿದೆಯೆಂದರೆ ಸಾಕು.

ಇದರಲ್ಲಿ ಮಾಡಲ್ಪಟ್ಟಿರುವ ಸೂಚನೆಯು ಬಹಳ ಮಹತ್ವದ ಸೂಚನೆಯಿದ್ದು ಕಾಂಗ್ರೆಸ್ ಸಂಸ್ಥೆಯ ಈಗಿನ ಮುಂದಾಳುಗಳು ಇದನ್ನು ಚೆನ್ನಾಗಿ ವಿಚಾರಿಸುವರೆಂದು ಆಶಿಸುತ್ತೇವೆ.

ರಾಜಕೀಯ ರಂಗದಲ್ಲಿ ಜಾತೀಯ ಸಂಸ್ಥೆಗಳು ಬೇಡ.

ಜಾತೀಯತೆಯ ಸಂಸ್ಥೆಗಳನ್ನು ರಾಜಕೀಯ ರಂಗದಲ್ಲಿ ನಡೆಯಲು ಆಸ್ಪದ ಕೊಡಬಾರದೆಂಬುದು ಹಿಂದುಸ್ಥಾನ ಸರಕಾರವು ಇಂಥ ಎಲ್ಲಾ ಜಾತೀಯ ಸಂಸ್ಥೆಗಳನ್ನು ಕಾನೂನು ಬಾಹಿರ ಸಂಸ್ಥೆಗಳೆಂದು ಸಾರಿ ಇವನ್ನು ಮುಕ್ತಾಯಗೊಳಿಸುವುದು ಅತ್ಯಗತ್ಯವಿರುತ್ತದೆ. ಮಾತ್ರವಲ್ಲ ಇಂಥ ಸಂಸ್ಥೆಗಳಿಗೆ ಸೇರಿದವರಿಗೆ ಈಗಲಾದರೂ ಜ್ಞಾನೋದಯವಾಗಿ ಇವರು ತಮ್ಮ ಸಂಸ್ಥೆಗಳನ್ನು ಮುಕ್ತಾಯಗೊಳಿಸುವುದರ ಆವಶ್ಯಕತೆ ತಿಳಿದು ಇವನ್ನು ಸರಕಾರದವರು ಮುಚ್ಚುವುದಿಲ್ಲವಾದರೆ ತಾವಾಗಿಯೇ ಆದರೂ ಮುಚ್ಚಬೇಕೆಂದು ನಾವು ಆತ್ಯಾಗ್ರಹದಿಂದ ಕೇಳಿಕೊಳ್ಳುತ್ತೇವೆ. ಹಿಂದೂ ಮಹಾಸಭೆ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಮುಸ್ಲಿಮ್ ಲೀಗ್ ಇವಿಷ್ಟು ಸಂಸ್ಥೆಗಳನ್ನು ಮುಖ್ಯವಾಗಿ ಕೂಡಲೇ ಮುಚ್ಚಬೇಕು.

ಇವಕ್ಕೆ ಈಗ ಸೇರಿರುವ ಕೆಲಸಗಾರರು ರಾಜಕೀಯ ಹಾಗೂ ಆರ್ಥಿಕ ಕಾರ್ಯಕ್ರಮಗಳ ಮೇಲೆ ತಮ್ಮ ಪಕ್ಷಗಳನ್ನು ರಚಿಸಿಕೊಂಡು ಬಹಿರಂಗವಾಗಿ ದೇಶಸೇವೆ ಸಲ್ಲಿಸುತ್ತಿರುವುದೇ ನ್ಯಾಯವಾದ ದಾರಿಯಾಗುತ್ತದೆ.

ಜಾತೀಯತಾ ಸಂಸ್ಥೆಗಳಿಂದ ಜಾತಿದ್ವೇಷವು ಬೆಳೆದ ದೇಶದಲ್ಲಿ ಶಾಂತಿಭಂಗವಾಗಿ ಅರಾಜಕತೆಯನ್ನುಂಟು ಮಾಡಬಹುದು. ಇದರಿಂದ ಯಾರಿಗೂ ಯಾವ ಪ್ರಯೋಜನವೂ ಇರುವುದಿಲ್ಲ.

ರಾಜಕೀಯ ಸ್ವಾತಂತ್ರ್ಯ ಪ್ರಾಪ್ತವಾಗಿರುವ ಈಗಿನ ಕಾಲದಲ್ಲಿ ದೇಶದ ಪ್ರಗತಿಯನ್ನು ಸಾಧಿಸಲು ಅದನ್ನು ಉಪಯೋಗಿಸುವುದರ ಬದಲು ತಮ್ಮೊಳಗೆ ಹೊಡೆದಾಡಿ ಕೊಳ್ಳುತ್ತಿರುವುದು ಸರಿಯಲ್ಲವೆಂದು ಸ್ವಲ್ಪ ವಿಚಾರಿಸಿದರೆ ಯಾರೂ ತಿಳಿದುಕೊಳ್ಳಬಹುದು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ಅನೇಕ ಮಂದಿ ತರುಣರಿಗೆ ಒಳ್ಳೆಯ ಶಿಸ್ತು ಸಂಘಟನೆಗಳನ್ನು ಕಲಿಸಿರುತ್ತದೆಂದು ಒಪ್ಪಬೇಕು. ಇದರಲ್ಲಿ ಅವರು ಪಡೆದ ಅನುಭವವನ್ನು ನ್ಯಾಯವಾದ ದಾರಿಯಲ್ಲಿ ಸದುಪಯೋಗಪಡಿಸಲು ಅವರು ಆಸ್ಪದ ಕಲ್ಪಿಸಿಕೊಳ್ಳಬೇಕು. ಜಾತೀಯತೆಯ ಮೇಲೆ ಕಟ್ಟಿದ ಅದರ ತತ್ವಗಳು ಪೂರ್ಣ ದೋಷಯುಕ್ತವಾಗಿವೆಯೆಂಬುದನ್ನು ಇದಕ್ಕೆ ಸೇರಿದ ತರುಣರೂ ಇದರ ಸಂಚಾಲಕರಾದ ಇದರ ಹಿರಿಯರೂ ಮನಗಂಡು ಈ ಸಂಸ್ಥೆಯನ್ನು ಮುಚ್ಚಿ ಈ ತರುಣರನ್ನು ನಿಜವಾದ ದೇಶಸೇವೆಗೆ ಹಚ್ಚಬೇಕು.

ನಮ್ಮ ಮುಸ್ಲಿಂ ಬಂಧುಗಳಲ್ಲಿಯೂ ನಾವು ಪ್ರತ್ಯೇಕವಾಗಿ ವಿನಂತಿ ಮಾಡಿಕೊಳ್ಳುತ್ತೇವೆ. ಮುಸ್ಲಿಂ ಲೀಗಿನ ತತ್ವಗಳ ಪರಿಣಾಮವೇನಾಗಿದೆಯೆಂದು ಕಣ್ಣಾರೆ ಕಂಡ ಬಳಿಕವೂ ತಮ್ಮ ಜಾತೀಯ ಸಂಸ್ಥೆ ತಮಗೆ ಬೇಕೆಂಬ ಭಾವನೆಯನ್ನು ಕಟ್ಟಿಕೊಳ್ಳಬಾರದು. ರಾಜಕೀಯ ರಂಗದಲ್ಲಿ ಜಾತೀಯತೆಗೆ ಸ್ಥಾನವಿಲ್ಲವೆಂಬುದನ್ನು ಅವರು ಖಂಡಿತವಾಗಿ ತಿಳಿದುಕೊಂಡು ತಮ್ಮ ಸಂಸ್ಥೆಯನ್ನೂ ಸಂತೋಷದಿಂದ ಮುಚ್ಚುವುದೇ ಶ್ರೇಯಸ್ಸಿನ ದಾರಿಯಾಗುತ್ತದೆ.

ಈ ಜಾತೀಯ ಸಂಸ್ಥೆಗಳು ತಾವಾಗಿ ಮುಕ್ತಾಯಗೊಳ್ಳುವುದಿಲ್ಲವೆಂದಾದರೆ ಸರಕಾರದವರಾದರೂ ಅವನ್ನು ಮುಚ್ಚುವುದು ಅತ್ಯಾವಶ್ಯಕವೆಂದು ನಾವು ಆತ್ಯಾಗ್ರಹದಿಂದ ಸೂಚಿಸಬಯಸುತ್ತೇವೆ.

ಭಾರತೀಯ ಸರಕಾರವು ಜಾತೀಯ ಸರಕಾರವಾಗುವುದು ಎಂದಿಗೂ ಶಕ್ಯವಲ್ಲ ಮಾತ್ರವಲ್ಲ ಅದು ಅಪೇಕ್ಷಣೀಯವೂ ಅಲ್ಲ. ಇದು ಜಾತೀಯ ಸರಕಾರವಾಗಬೇಕೆಂದು ಅಪೇಕ್ಷಿಸುವಂತೆ ಮಾಡುವ ಭಾವನೆಯು ಕೇವಲ ಸಂಕುಚಿತ ಹಾಗೂ ಅಂಧ ಅಭಿಮಾನ ಜನ್ಯವಿರುತ್ತದೆ. ತನ್ನ ತಮ್ಮ ಧರ್ಮ ಸಂಸ್ಕೃತಿಗಳಲ್ಲಿ ನ್ಯಾಯವಾದ ಅಭಿಮಾನವಿರುವುದು ಸರಿ. ಆದರೆ ಎಲ್ಲ ಧರ್ಮ ಸಂಸ್ಕೃತಿಗಳ ಉದ್ದೇಶವೂ ಮಾನವನ ಉನ್ನತಿ ಸಾಧನೆಯೆಂಬ ಅಂಶವನ್ನು ಯಾರೂ ಮರೆಯಬಾರದು. ಒಣ ಅಭಿಮಾನ ಹಾನಿಕಾರಕವಿರುತ್ತದೆ.

ಕೊನೆಯದಾಗಿ ಇಂಥ ಜಾತೀಯತೆಯ ಸಂಸ್ಥೆಗಳಿಗೆ ಸಹಾಯ ಸ[illegible]ರಗಳನ್ನು ನೀಡುತ್ತ ಬಂದವರೆಲ್ಲರಲ್ಲಿ ನಾವು ಒಂದು ಮಾತು ವಿನಂತಿಸಿಕೊಳ್ಳುವ[illegible] ಹತ್ತು ಮಂದಿ ಸೇರಿದ ಸಂಸ್ಥೆಯೊಂದರ ಜನೆ ಅವಕ್ಕೆ ಸಾಧ್ಯವಿದ್ದ ಸಹಾಯ ನೀಡುವುದು ಕೆಲವರ ಅಭ್ಯಾಸ. ಈ ಅಭ್ಯಾಸವನ್ನು ನಾವು ತಿದ್ದಿಕೊಳ್ಳುವುದು ಅತಿ ಅಗತ್ಯವು. ಯಾವ ದಾನವನ್ನಾದರೂ ಸಂತ್ಪಾತ್ರತೆಯ ವಿಚಾರವಿಲ್ಲದೆ ಕೊಡಲಾಗದು. ನ್ಯಾಯವಾದ ಧ್ಯೇಯಗಳಿದ್ದು ಸತ್ಪಾತ್ರರಿದ್ದವರಿಗೆ ಮಾತ್ರ ಸಹಾಯ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಿರುತ್ತದೆ. ಇಲ್ಲದಿದ್ದರೆ ಒಳ್ಳೆಯ ಕೆಲಸ ಮಾಡುವ ಭಾವನೆಯಿಂದ ಕೆಟ್ಟ ಕೆಲಸಕ್ಕೆ ಪ್ರೋತ್ಸಾಹ ಕೊಟ್ಟಂತಾಗುವುದು. ಇದನ್ನು ಪ್ರತಿಯೊಬ್ಬರೂ ತಿಳಿದು ಜಾತೀಯ ದ್ವೇಷಾಗ್ನಿಯನ್ನು ಹೆಚ್ಚಿಸುವ ಸಂಸ್ಥೆಗಳಿಗೆ ಯಾರೂ ಸಹಾಯ ಸಹಕಾರಗಳನ್ನು ನೀಡಬಾರದೆಂದೂ ವಿನಂತಿ ಮಾಡಿಕೊಳ್ಳುತ್ತೇವೆ.

ಈ ಮೇಲೆ ನಾವು ಕಾಣಿಸಿದ ವಿಚಾರಗಳಲ್ಲಿ ದೋಷವಿದೆಯೆಂದು ಈ ಯಾವದೇ ಜಾತೀಯ ಸಂಸ್ಥೆಗಳ ಕೆಲಸಗಾರರಾಗಲೀ ಸಂಚಾಲಕರಾಗಲೀ ಸಹಾಯಕರಾಗಲೀ ಭಾವಿಸುವುದಿದ್ದರೆ ಅಂಥವರು ತಮ್ಮ ವಿಚಾರಗಳನ್ನು ಬಹಿರಂಗವಾಗಿ ಪ್ರಕಟಿಸಿ ಸಾರ್ವಜನಿಕರ ಮುಂದಿರಿಸಬೇಕಾಗಿ ಅವರೆಲ್ಲರನ್ನು ನಾವು ಕೇಳಿಕೊಳ್ಳುತ್ತೇವೆ.

ಸಾದರ ಸ್ವೀಕಾರ

ಯುಗ ಪುರುಷ

ಸಂಪಾದಕ ವರ್ಗ ಶ್ರೀಗಳಾದ ಬಿ ರಾಮಾಚಾರ್, ಅನಂತ ಪದ್ಮನಾಭ ಉಡುಪ, ಎಸ್ ಎಲ್ ನಾರಾಯಣ ಭಟ್ ಉಡುಪಿಯಿಂದ ಹೊರಡುವ ಮಾಸ ಪತ್ರಿಕೆ. ಸುಮಾರು ೩೦ ಪುಟದ ಕ್ರೌನ್ ¼ ಆಕೃತಿಯದು. ಬೆಲೆ ನಾಲ್ಕಾಣೆ, ವಾ. ಚಂದಾ ರೂ 2. ಆಕರ್ಷಕ ಹೊರ ಕವಚ, ಉತ್ತಮ ಲೇಖನ, ಕವಿತೆ, ಸಣ್ಣ ಕತೆ. ಪ್ರಚಲಿತ ಸಮಾಚಾರ ವಿಮರ್ಶೆಗಳಿಂದೊಡಗೂಡಿದೆ. ವಿಷಯ ವಿಭಾಗವನ್ನಾರಿಸುವಾಗ ಸಂಪಾದಕರು ಶ್ರೇಷ್ಠತೆಯ ಕಡೆಗೆ ಹೆಚ್ಚು ಗಮನ ಕೊಟ್ಟಿರುವರು. ಸಾರಸ್ಯ ವಿಷಯಗಳನ್ನೊಳಗೊಂಡಿರುವುದರಿಂದ ಪತ್ರಿಕೆ ಅತ್ಯಂತ ವಾಚನೀಯವಾಗಿದ್ದು ಎಲ್ಲಾ ವರ್ಗದ ಕನ್ನಡಿಗರಿಂದ ಪ್ರೋತ್ಸಾಹಿಸಲರ್ಹವಾಗಿದೆ.

ವಿಹಾರಿ

ಬೆಂಗಳೂರಿನಿಂದ ಶ್ರೀ ಟಿ ಎಸ್ ಅಯ್ಯಂಗಾರರ ಸಂಪಾದಕತ್ವದಲ್ಲಿ ಹೊರಡುವ ಕ್ರೌನ್ ⅛ನೇ ಆಕೃತಿಯ ವಾರ ಪತ್ರಿಕೆ. ಬೆಲೆ ಎರಡಾಣೆ. ಬಿಡುವಿನ ಸಮಯದ ಸಂಪೂರ್ಣವೂ ಮನೋರಂಜಕವೂ ಆದ ಉಪಯೋಗವನ್ನು ಮಾಡಲು ಅನುಕೂಲವಾದ ವಿನೋದ ವಿಮರ್ಶೆ, ಕಿರುಕತೆ, ಸ್ವಾರಸ್ಯ ವಿಷಯಗಳನ್ನೊಳಗೊಂಡಿದ್ದು ಸುಮಾರು 20 ಪುಟಗಳ ತುಂಬ ಅಭಿರುಚಿದಾಯಕವಾದ ವಿಷಯ ವಿಭಾಗಗಳಿಂದ ಕೂಡಿದ್ದು ಎಲ್ಲರ ಮೆಚ್ಚುಗೆಗೂ ಪಾತ್ರವಾಗುವಂತಹ ಪತ್ರಿಕೆ.

ಕರ್ನಾಟಕ ಸೇವಾ ಸಂಘ, ಮದರಾಸು

ಇದರ ದ್ವಿತೀಯ ವಾರ್ಷಿಕ ವರದಿ (೧೯೪೬ - ೪೭). ಕನ್ನಡಿಗರ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಅಭಿವೃದ್ಧಿಗೆ ಯತ್ನಿಸುವುದು. ಇತರ ಕನ್ನಡ ಸಂಘಗಳೊಡನೆ ಸಹಕರಿಸಿ ಕನ್ನಡ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಸಹಾಯ ಮಾಡುವುದು. ಮದರಾಸಿನ ಕನ್ನಡಿಗರ ಈ ಸಂಘದ ಉದ್ದೇಶ. ಈ ವರದಿಯಲ್ಲಿ ನಿರೂಪಿಸಲ್ಪಟ್ಟ ಸಂಘದ ಭಾಷಣ ಸಂಗೀತ ನಾಟಕ, ಕಲಾ ಸ್ಪರ್ಧೆ ಭಾಷಣ ಸ್ಪರ್ಧೆ ಚಟುವಟಿಕೆಗಳು ಸಂಘವು ಯೋಗ್ಯ ರೀತಿಯಲ್ಲಿ ತನ್ನ ಉದ್ದೇಶ ದತ್ತ ಸಾಗುವುದರ ನಿದರ್ಶನಗಳಾಗಿವೆ. ಸಂಘಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸುವೆವು.

ಸಂಪಿಗೆ

ಲೇಖಕರು ಶ್ರೀ ಕುಲಕರ್ಣಿ ಶ್ರೀನಿವಾಸ, ಬಿ ಎ, ಪುಟ ೪೫. ಬೆಲೆ ೧೦ ೦. ದ್ವಿತೀಯ ಮುದ್ರಣ

ಈ ಸಂಗ್ರಹದಲ್ಲಿ ಸಂಪಿಗೆ, ಹೊಸಬಾಯಿ ಮೊದಲಾದ ಆರು ಪ್ರಣಯದ ಹಾಸ್ಯನಾಟಕಗಳಿವೆ. ಪ್ರೊ ಜಾಗೀರದಾರರ ಶ್ರೇಷ್ಠವಾದ ಮುನ್ನುಡಿಯನ್ನು ಬರೆದಿದ್ದಾರೆ.

ಅವಳ ಕಾಗದ ವಂತೂ ನಗೆಯನ್ನು ಹೊತ್ತೆ ದೆಬ್ಬಿಸುತ್ತದೆ. ಅಶಿಕ್ಷಿತ ಹೆಂಡತಿಯ ಪತ್ರದಿಂದಲೂ ನಗೆಯನ್ನು ಎಬ್ಬಿಸುವಂತಹ ಜಾಣ್ಮೆಯನ್ನು ಲೇಖಕರಿಲ್ಲಿ ತೋರಿದ್ದಾರೆ. 'ಮಹಾರಾಜೇಶ್ರೀ ಪ್ರಾಣಪ್ರಿಯರಿಗೆ' ಎಂದು ಗಂಡನನ್ನು ಸಂಭೋಧಿಸಿದರೆ ಯಾರಿಗೆ ತಾನೇ ನಗು ಬರಲಿಕ್ಕಿಲ್ಲ? 'ತಲೆಸೂಳಿ' ವಾಚಕರ ತಲೆಶೂಲೆಯನ್ನು ನಾಶಮಾಡುವಂತಿವೆ. 'ಒಂದೇ ಬಿಲ್ಲಿ' ಯಲ್ಲಿ ಕಿಸೆ ಬರಿದಾದ ಗಂಡನಿಗೆ ತನ್ನ ತಿಜೋರಿಯಾದ ಮಸಾಲೆಪುಡಿ ಡಬ್ಬಿಯಿಂದ ಹೆಂಡತಿಯು ಒಂದು ಬಿಲ್ಲಿಯನ್ನು ಕೊಡುವಂತಹ ಸನ್ನಿವೇಶ ರಚನೆಯಲ್ಲಿ ಸಾಹಿತಿಯ ಬಡತನದ ಚಿತ್ರವನ್ನು ಚೆನ್ನಾಗಿ ಚಿತ್ರಿಸಿದೆ. ಹೀಗೆಯೇ ಸ್ತ್ರೀ ಶಿಕ್ಷಣ, ಧರ್ಮದ ಅನಾಚಾರ ಮೊದಲಾದ ವಿಷಯಗಳನ್ನು ಮನೋರಂಜಕವಾದ ರೀತಿಯಲ್ಲಿ ನಿರೂಪಿಸಿದ ಕುಲಕರ್ಣಿಯವರು ಅಭಿನಂದನೀಯರಾಗಿದ್ದಾರೆ.

ಮಹಾತ್ಮರ ನಿಧನದ ಸಂಬಂಧ ಮಂಗಳೂರು ನಗರದ ಕಾರ್ಯಕಲಾಪಗಳು

ಕಳೆದ ಶುಕ್ರವಾರ, ಮಹಾತ್ಮರ ನಿಧನದ ವಾರ್ತೆ ಕೇಳಿದೊಡನೆ ನಗರದ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟವು. ನಾಗರೀಕರು ಜಾತಿಮತ ಭೇದವಿಲ್ಲದೆ ಮೌನ ಮೆರವಣಿಗೆ ಮಾಡುತ್ತ ಮೈದಾನಿನ. ರೇಡಿಯೋ ಬಳಿ ನೆರೆದು ಅಂದು ರಾತ್ರಿ ನೆಹರೂ, ಪಟೇಲರ ಆಕಾಶವಾಣಿ ಭಾಷಣಗಳನ್ನು ಕೇಳಿದರು.

ಮರುದಿನ ನಗರವಿಡೀ ಸಂಪೂರ್ಣ ಹರತಾಳವನ್ನಾಚರಿಸಿತು. ಇಂತಹ ದುಃಖ ಸೂಚಕ ಪ್ರದರ್ಶನ ನಗರದ ಇತಿಹಾಸದಲ್ಲೆಂದೂ ಜರಗಲಿಲ್ಲವೆನ್ನಬಹುದು. ಅಂದು ೧೦॥ ಗಂಟೆಗೆ ಪೊಯ್ಯೆ ಬಳಿಯ ದೀಪಸ್ತಂಭದ ಬಳಿಯ ನದಿ ಕಿನಾರೆಯಲ್ಲಿ ನಾಗರೀಕರ ಮೆರವಣಿಗೆ ಬಂದು ಸೇರಿ ಮೌನ ಪ್ರಾರ್ಥನೆಯಿಂದ ಶ್ರದ್ಧಾಂಜಲಿಯನ್ನರ್ಪಿಸಿತು. ಅಂದು ಸಂಜೆ ಸಾರ್ವಜನಿಕ ಮೈದಾನಿನಲ್ಲಿ ಪ್ರಚಂಡ ಸಭೆ ಸೇರಿದ್ದು ಗೀತಾ ಶ್ಲೋಕ, ಕೊರಾನ್, ಪಠಣ, ಬೈಬಲ್, ಪ್ರವಚನಗಳೂ, ರಾಮಧ್ಯಾನ, ವೈಷ್ಣವ ಗೀತಗಳೂ ಹಾಡಲ್ಪಟ್ಟವು. ಅಂದು ಮಿಲಾಗ್ರಿಸ್ ಇಗರ್ಜೆ ವಠಾರದಲ್ಲಿ ಮಂಗಳೂರಿನ ಲಾರ್ಡ್ ಬಿಶೋಪರ ನೇತೃತ್ವದಲ್ಲಿ ಸಂತಾಪ ಸೂಚಕ ಸಭೆಯೂ ಸೇರಿತ್ತು.

ಸೋಮವಾರವೂ ನಗರದಲ್ಲಿ ಹರತಾಳವಾಚರಿಸಲ್ಪಟ್ಟಿತ್ತು. ಶಾಲಾ ಕೋಲೇಜುಗಳಿಗೆಲ್ಲದಕ್ಕೂ ರಜೆ ಕೊಡಲಾಗಿತ್ತು. ಅಂದು ಸಂಜೆ ಮೈದಾನಿನಲ್ಲಿ ಎಲ್ಲಾ ಪಾರ್ಟಿಗಳ ಸಮಾವೇಶದೊಡನೆ ಒಂದು ಸಾರ್ವಜನಿಕ ಸಭೆ ಡಾ ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರುಗಿ ಮಹಾತ್ಮರ ಜೀವನದ ಗುಣ ಕಥನ ಮಾಡುವ, ಅವರ ನಿಧನಕ್ಕೆ ದುಃಖ ಸೂಚಿಸುವ ಮತ್ತು ಜಾತೀಯ ದ್ವೇಷವನ್ನು ಪ್ರಚಾರಿಸುವ ಸಂಸ್ಥೆಗಳನ್ನು ಖಂಡಿಸುವ ಭಾಷಣಗಳಾದುವು.

ಮಂಗಳವಾರದಂದು ಸೈಂಟ್ ಎಲೋಸಿಯಸ್ ಕೋಲೇಜಿನ ವಿದ್ಯಾರ್ಥಿಗಳ ಮತ್ತಿತರ ಕೆಲವು ಮೌನ ಮೆರವಣಿಗೆಗಳಿದ್ದುವು.

ಬುಧವಾರದಂದು ಉರ್ವ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ ಉಪಾಧ್ಯಾಯರು ಪೆಂಟ್ಲಂಡಿನ ಮುಖ್ಯ ಮಾರ್ಗದಿಂದ ಮೆರವಣಿಗೆ ಹೊರಟು ತಮ್ಮ ಹೊಸ ಕಟ್ಟಡದಲ್ಲಿ ಸೇರಿ ಸಂತಾಪ ಸೂಚಕ ಠರಾವನ್ನು ಮಾಡಿ ಮೌನ ಪ್ರಾರ್ಥನೆಯನ್ನು ನೆರವೇರಿಸಿದರು.

ಕೆನರಾ ಹೈಸ್ಕೂಲಿನ ಮೈನ್ ಶಾಲೆಯಲ್ಲಿ ಅಂದು ಬೆಳಗ್ಗೆ ವಿದ್ಯಾರ್ಥಿಗಳ ಮತ್ತು ಸಾಯಂಕಾಲ ಉಪಾಧ್ಯಾಯ ಸಂಘದ ಸಂತಾಪ ಸೂಚಕ ಠರಾವುಗಳಾಗಿ ಮೌನ ಪ್ರಾರ್ಥನೆಗಳು ನೆರವೇರಿಸಲಾದುವು.

ಹೊಸ ಕಲೆಕ್ಟರರು:—ನಮ್ಮ ಜಿಲ್ಲಾ ಕಲೆಕ್ಟರರಾಗಿದ್ದ ಮಿ ಸಾಂಡರ್ಸ್ ಅವರು ಹೊರಟುಹೋಗಿ ಅವರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟ ಶ್ರೀ. ಕೈವಾರ್, ಐ ಸಿ ಎಸ್ ಅವರು ಕಳೆದ ಶುಕ್ರವಾರ ಚಾರ್ಜು ವಹಿಸಿರುವರು.

CHIT TENDER NOTICE

Sealed tenders will be received by the Executive Engineer, Special Division, Presidency Port Office, Old High Court Buildings, 1st Line Beach, Madras, for the work of "CONSTRUCTING A PORT OFFICE AT THE PORT OF HANGARKATTA" upto 3 P M. on the 20th February 1948. Intending tenderers may apply to this office for detailed tender notice and other connected tender documents on payment of Rs. 5/- per set. The earnest money and security deposits for the work will be Rupees (160/-) One hundred and sixty only each.

M. Ramabrahmam,
Executive Engineer,
(Special Division).

ಜಿಲ್ಲಾ ಸಮಾಚಾರ

ಆರ್. ಎಸ್. ಎಸ್. ಕಾರ್ಯಕರ್ತರ ಬಂಧನ

ಭಾರತ ಸರಕಾರದವರು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಕಾಯಿದೆ ಬಾಹಿರವಾಗಿ ಸಾರಿದರ ಪರಿಣಾಮವಾಗಿ ಮದ್ರಾಸ್ ಪ್ರಾಂತ್ಯದಲ್ಲೂ ಅನೇಕ ಜಿಲ್ಲೆಗಳಲ್ಲಿ ಈ ಸಂಘದ ಕಾರ್ಯಕರ್ತರನ್ನು ಅಧಿಕಾರಿಗಳು ಬಂಧಿಸಿರುವರು.

ಮಂಗಳೂರಲ್ಲಿ ನಿನ್ನೆ ಅನೇಕ ಆರ್ ಎಸ್ ಎಸ್. ಕಾರ್ಯಕರ್ತರು ಬಂಧಿಸಲ್ಪಟ್ಟಿರುವರು. ಶ್ರೀಗಳಾದ, ಎಮ್. ಜನಾರ್ದನ ಮಲ್ಯ, ಮಿಜಾರು ಗೋವಿಂದ ಪೈ, ಎಮ್ ಜಿ ಅನಂತ ಪೈ, ಬಸ್ತಿ ದಾಸಪ್ಪ ಶೆಣೈ, ಯು ಮೋಹನ ಶೆಣೈ, ಎಂ. ರಾಘವೇಂದ್ರ ಶೆಣೈ, ಮನೇಲ್ ವಿಟ್ಟಲ್ ನಾಯಕ್, ಎಮ್ ಗೋಪಾಲಕೃಷ್ಣ ಕಾಮತ್, ಪಂಚ್ಮಾಲ್ ವಾಸುದೇವ ಕಾಮತ್ ಇವರುಗಳು ಬಂದಿತರಾದವರಲ್ಲಿ ಕೆಲವರೆಂದು ತಿಳಿದು ಬರುತ್ತದೆ, ಇವರನ್ನು ಇಂದು ಬೆಳಗ್ಗೆ ವೆಲೂರಿನ ಸೆಂಟ್ರಲ್ ಜೈಲಿಗೆ ಒಯ್ದಿರುವರು.

ಆಸವ, ಅರಿಷ್ಟ ಲೈಸೆನ್ಸು:—ರಿಜಿಸ್ಟರ್ ಆಗದ ವೈದ್ಯರಿಗೆ ಆಸವಾರಿಷ್ಟ ಲೈಸೆನ್ಸು ಕೊಡುವುದಿಲ್ಲವಾಗಿಯೂ ಅಂತಹರು ಆಸವಾರಿಷ್ಟಗಳನ್ನು ಲೈಸೆನ್ಸುಳ್ಳವರ ವಶಪಡಿಸದೆ ತಮ್ಮಲ್ಲಿಯೇ ಇಟ್ಟುಕೊಂಡಲ್ಲಿ ಪ್ರೊಹಿಬಿಶನ್ ಡಿಪಾರ್ಟ್‌ಮೆಂಟಿನವರು ವಶಪಡಿಸಿಕೊಳ್ಳುವರಾಗಿಯೂ ತಿಳಿಸಲ್ಪಟ್ಟಿದೆ.

ಹರಿಜನ ಸುಧಾರಕ ಸಂಘ:—ಸುರತ್ಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹರಿಜನರ ಒಂದು ಸಂಘವನ್ನು ಕಳೆದ ತಿಂಗಳ ತಾ ೨೫ರಂದು "ಶ್ರೀ ಈಶ್ವರಾನಂದ ಸುಧಾರಕ ಸಂಘ"ವೆಂಬ ಸಂಸ್ಥೆಯನ್ನು ಸ್ಥಾಪಿಸಿರುವರು. ಹರಿಜನರ ಇಲ್ಲಿಯ ಪ್ರಮುಖ ಮುಖಂಡರಾದ ಶ್ರೀ ಕೊರಗು ಗುರಿಕಾರರು ಸದರಿ ಸಂಘದ ಕಟ್ಟಡದ ಬಗ್ಗೆ ಕೊಟ್ಟ ಸ್ಥಳದಲ್ಲಿ ಸದರಿಯವರ ಹಸ್ತದಿಂದಲೇ ಸಂಘದ ಕಟ್ಟಡದ ಬಗ್ಗೆ ಶಂಕು ಸ್ಥಾಪನೆಯೂ ನಡೆಯಿತು.

ದುರ್ಮರಣ:—ಇಲ್ಲಿಂದ ಗದ್ದೆಕೇರಿಗೆ ಹೋಗುವ ಪುತ್ತು ಪ್ರಭು ಒಣಿಯ ರಸ್ತೆಯಲ್ಲಿನ ಒಂದು ವಿದ್ಯುತ್ ಕಂಭವನ್ನೇರಿ ಒರ್ವ ತಿರಸ್ಸ್ರಮಣಗೊಂಡ ಮನುಷ್ಯನು ವಿದ್ಯುತ್ ಸರಿಗೆಗಳನ್ನು ಮುಟ್ಟಿದ ಪರಿಣಾಮವಾಗಿ ಧಕ್ಕೆ ಬಡಿದು ಕೆಳಗೆ ಉರುಳಿದನೆಂದೂ ಅವನ ಮೃತ ಶರೀರವು ಅಲ್ಲಿಯೇ ಮಾರ್ಗದಲ್ಲಿ ಬಿದ್ದಿತೆಂದೂ ತಿಳಿದುಬರುತ್ತದೆ.

ಕೊಂಕಣಿ ನಾಟಕ

ಇಲ್ಲಿಯ ಕಥೋಲಿಕ್ ಬಂಧುಗಳ ಕೊಂಕಣಿ ನಾಟಕ ಸಭಾ ಅವರು ಇತ್ತೀಚೆಗೆ ಮಿಲಾಗ್ರಿಸ್ ಹೈಸ್ಕೂಲಿನ ವಠಾರದಲ್ಲಿ "ಪ್ರೊಹಿಬೀಶನ್" (ಮಧ್ಯ ನಿಷೇಧ) ಎಂಬ ನಾಟಕವನ್ನು ಅತ್ಯಂತ ಜನಮನ ರಂಜನೆಯಾಗಿ ಅಭಿನಯಿಸಿದರು. ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ ಸರ್ವೋತ್ತಮ ರಾವ್, ಅವರು ಅಧ್ಯಕ್ಷತೆ ವಹಿಸಿದರು. ಈ ನಾಟಕ ಸಭೆಯವರು ತಮ್ಮದೇ ಆದ ನಾಟಕ ಭವನವೊಂದನ್ನು ಕಟ್ಟಿಸಲಿರುವರು.

ಉಚ್ಚ ಶಿಕ್ಷಣ

ಬನಾರಸ್ ವಿಶ್ವ ವಿದ್ಯಾಲಯದ ಬಿ ಎ ಪದವೀಧರರಾಗಿದ್ದು, ಚಿತ್ರಕಲಾ ಕೋವಿದೆಯಾದ ಮಂಗೂರಿನವರಾದ ಶ್ರೀಮತಿ ಸುಮತಿ ಬೋಳಾರ ಅವರು ಚಿತ್ರಕಲೆ ಮತ್ತು ಫೋಟೋಗ್ರಾಫಿಯಲ್ಲಿ ಉಚ್ಚ ಶಿಕ್ಷಣ ಪಡೆಯಲು ಅಮೇರಿಕಕ್ಕೆ ಹೋಗುವವರಿದ್ದಾರೆಂದು ತಿಳಿದುಬರುತ್ತದೆ.

ಶ್ರೀಮಾನ್ ನಾರಾಯಣ ಎಸ್. ಕಿಲ್ಲೆಯವರ ಭಾಷಣ

ಇದೇ ತಾರೀಕು ೧೫-೨-೪೮ರ ಸಾಯಂಕಾಲ ೮ ಘಂಟೆಯಿಂದ ೯ ಘಂಟೆಯ ವರೆಗೆ ಅದರ ಓಪನ್ ಭಾಷಣವು ಬೋಳೂರು ಗ್ರಾಮ ಶ್ರೀ ಸಿದ್ಧಾಶ್ರಮದಲ್ಲಿ ನಡಿಯಲಿರುವುದು.

ಸ್ವಾಮಿ ಗಣೇಶಾನಂದ ಭಾರತಿ
ಶ್ರೀ ಸಿದ್ಧಾಶ್ರಮ.

ಮುಡಂತ್ಯಾರು

ಇಂದ ಇಲ್ಲಿ ಗ್ರಾಮ ಸೇವಾಸಮಿತಿಯ ಆಶ್ರಯದಲ್ಲಿ ಬಾಪೂಜಿಯ ನಿಧನದ ಕುರಿತು ದುಃಖ ಸೂಚಕ ಸಭೆಯು ಶ್ರೀ ನಾಗರಾಜ ಜೈನಿಯವರ ಅಧ್ಯಕ್ಷತೆಯಲ್ಲಿ ಜರಗಿ ಗೀತಾ ಪ್ರವಚನ, ಕುರಾಣಗಳು ಓದಲ್ಪಟ್ಟು ಮೌನ ಪ್ರಾರ್ಥನೆಯೊಂದಿಗೆ ಕೊನೆಗೊಂಡಿತು. ಶ್ರೀ ಜಿ ಯಂ ರೊಡ್ರಿಗ್ಸ್ ಉಪೇಂದ್ರ ಪೈಗಳು ಗಾಂಧೀಜಿಯವರ ಗುಣಕಥನ ಮಾಡಿದರು. ಊರು ಎರಡು ದಿನಗಳ ತನಕ ವ್ಯಾಪಾರ ವಹಿವಾಟ ನಿಲ್ಲಿಸಿ ನಾಡಿನ ದುಃಖದಲ್ಲಿ ಭಾಗಿಯಾಗಿದೆ.

ಕಡಿತ, ಗಾಯ, ಚರ್ಮ ಘಾತಗಳಿಗೆ ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



556

ಕುಟಿಕೂರಾ ಮುಲಾಮು
CUTICURA OINTMENT



ನಿತ್ಯಲೂ ಬೈಲ್ ಬೀನ್ಸ್‌ಗಳನ್ನು ಸೇವಿಸಿ, ಅಂತರ್ಯಾರೋಗ್ಯವನ್ನು ಪಡೆಯುವುದರ ಮೇಲೆ ಹೊಂದಿಕೊಂಡಿದೆ ನಿಮ್ಮ ಮನೋಹರತೆಯು ದೇಹ ಕೈಹುರುಪುಕೊಟ್ಟು, ರಕ್ತಶುದ್ಧಗೊಳಿಸಿ, ಮತ್ತು ಜೀರ್ಣ ಕೋಶದಲ್ಲಿರುವ ಕಲ್ಮಶಗಳನ್ನು ಹೊರಡಿಸಿ, ಈ ವನಸ್ಪತೀ ಔಷದಿಯು, ನಿಮ್ಮ ಕಾಂತಿ ಮತ್ತು ಕಾಯಗಳನ್ನು ವೃದ್ಧಿಗೊಳಿಸುತ್ತದೆ ಮತ್ತು ನಿಮಗೆ ಹರ್ಷಯುಕ್ತ ಆರೋಗ್ಯವನ್ನೂ, ಶಕ್ತಿಯನ್ನೂ, ಒದಗಿಸುತ್ತದೆ ಶಯನಕ್ಕೆ ಹೋಗುವ ಸಮಯ ಇದರ ಸೇವನೆಯಾದರೆ ಉತ್ತಮ.

ಪಿತ್ತ, ಮಲಬದ್ಧತೆ, ಮತ್ತು ತಲೆನೋವು, ಅಜೀರ್ಣ, ಪ್ಲೀಹ ಸಂಬಂಧ ಪೀಡೆ, ವಾತ, ಇತ್ಯಾದಿಗಳಿಗೆ ಬೈಲ್ ಬೀನ್ಸ್ ಅತ್ಯುತ್ತಮ.

ಟೋನಿಕ್ ಮತ್ತು ದೋಷ ನಿವಾರಣೀ

BILE BEANS

ಬೈಲ್‌ಬೀನ್ಸ್‌ಗಳನ್ನು ಸೇವಿಸಿರಿ.

CANARA BANK, LTD.

(Incorporated in India – Liability of Members limited)

NOTICE

is hereby given that under Section 37 of the Indian Companies Act VII of 1913, the Register of Members and the transfer books of the Bank will be closed from Monday the 1st March, 1948 to Monday the 15th March, 1948 (both days inclusive)

ಕೆನರಾ ಬೇಂಕ್, ಲಿಮಿಟೆಡ್

ನೋಟೀಸು

1913ನೇ ಇಸವಿಯ ನಂಬ್ರ VIIನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗನುಗುಣವಾಗಿ ಈ ಬೇಂಕಿನ ಮೆಂಬರರ ರಿಜಿಸ್ಟರು ಮತ್ತು ಶೇರು ಟ್ರಾನ್ಸಫರ ಪುಸ್ತಕಗಳು 1948ನೇ ಇಸವಿ ಮಾರ್ಚ ತಾ 1ನೇ ಸೋಮವಾರದಿಂದ 1948ನೇ ಮಾರ್ಚ ತಾ 15ನೇ ಸೋಮವಾರದ ವರೆಗೆ (ಉಭಯ ದಿವಸಗಳೂ ಕೂಡಿ) ಮುಚ್ಚಲ್ಪಡುವವು

(By Order)

P. Sarvothum Nayak,
General Manager.

Office of the Bank,
Mangalore, 2-2-'48.

ಪಾಕಿಸ್ಥಾನದಲ್ಲಿ ಜಿನ್ನರ ವಿರೋಧ ದಂಗೆ

ತಿಂಗಳುಗಟ್ಲೆ ಸಂಬಳವಿಲ್ಲವಂತೆ

• ಯುಕ್ತಪ್ರಾಂತ್ಯ ಮಂತ್ರಿಗಳ ಪ್ರಕಟಣೆ

ಕಳೆದ ಮೂರು ತಿಂಗಳಲ್ಲಿ ಪಾಕಿಸ್ತಾನ ಗವರ್ನರ್ ಜನರಲ್‌ರಾಗಿರುವ ಮಿ। ಜಿನ್ನರ ಮೇಲೆ ಪ್ರಾಣಾಪಹಾರದ ಮೂರು ಯತ್ನಗಳು ಮಾಡಲಾದುವಂತೆ. ಅಲ್ಲಿನ ಪ್ರಗತಿಶೀಲ ಮುಸ್ಲಿಮರಿಗೆ ಹೊಸ ಸ್ಥಾನದ ಆಡಳಿತದ ಮೇಲೆ ತೃಪ್ತಿಯುಂಟಾಗಲಿಲ್ಲ.

ಈ ಸಂಗತಿಯನ್ನು ಸಂಯುಕ್ತ ಪ್ರಾಂತ್ಯದ ಕೃಷಿ ಮಂತ್ರಿಗಳಾದ ನಿಸ್ಸಾರ್ ಅಹಮ್ಮದ್ ಶೆರ್ವಾನಿಯವರು ಒಂದು ಪತ್ರಿಕಾ ಪ್ರತಿನಿಧಿ ಭೇಟಿಯಲ್ಲಿ ತಿಳಿಸಿದರೆಂದು ನೇಶನಲ್ ಹೆರಾಲ್ಡ್ ಪತ್ರಿಕೆಯು ಪ್ರಕಟಿಸಿದೆ.

ಪಾಕಿಸ್ತಾನ ಹಿಂದೂಸ್ಥಾನಗಳೊಳಗೆ ಯುದ್ಧವು ಅನಿವಾರ್ಯವೊ ಎಂಬ ಪ್ರಶ್ನೆಗೆ ಉತ್ತರವಾಗಿ ಅವರೀ ವಿವರಣೆಯನ್ನು ತಿಳಿಸಿದರಂತೆ. ಅವರು ತಿಳಿಸಿದ ಸಂಗತಿಗಳ ಸಾರಾಂಶ ಹೀಗಿದೆ

ಇಂದು ಪಾಕಿಸ್ತಾನವು ಆರ್ಥಿಕವಾಗಿಯೂ, ರಾಜಕೀಯವಾಗಿಯೂ, ನೈತಿಕವಾಗಿಯೂ ದಿವಾಳಿಗಿರುವ ಸ್ಥಿತಿ ಹೊಂದಿದೆ. ಅಲ್ಲಿ ಎಲ್ಲೆಲ್ಲೂ ಅತೃಪ್ತಿ ಮತ್ತು ಅರಾಜಕತೆಗಳು ನೆಲಸಿವೆ. ಅಲ್ಲಿನ ಮುಸ್ಲಿಮರು ಜಿನ್ನರ ವಿರೋಧವಾಗಿ ಬಹಿರಂಗ ದಂಗೆ ಎದ್ದಿರುವರು ಕರಾಚಿಯ ಮಾರ್ಗಗಳಲ್ಲಿ ಜಿನ್ನಾ ವಿರೋಧ ಪ್ರದರ್ಶನಗಳು ಬಹಿರಂಗವಾಗಿ ನೆರವೇರಿಸಲ್ಪಟ್ಟಿವೆ.

ಅಗಾಧ ಖರ್ಚು

ಪಾಕಿಸ್ತಾನದ ವಾರ್ಷಿಕ ಉತ್ಪನ್ನವು 35 ಕೋಟಿಗಳಷ್ಟು ಕೂಡಾ ಇಲ್ಲ. ಆದರೆ ಅದು ತನ್ನ ಸೈನ್ಯ ಖಾತೆಗೇ ಸುಮಾರು 50 ಕೋಟಿಯಷ್ಟು ವ್ಯಯಿಸುತ್ತದೆ ಹೊಸ ಕೇಂದ್ರ ಸರಕಾರ ಕಛೇರಿಯನ್ನು ವ್ಯವಸ್ಥಾಪಿಸಲು ಅದು ಈಗಾಗಲೇ ನಾಲ್ಕು ಕೋಟಿಯಷ್ಟು ಖರ್ಚು ಮಾಡಿದೆ ಜನರು ಅಲ್ಲಿ ಟಿಕೇಟು ಇಲ್ಲದೆ ಪ್ರಯಾಣ ಮಾಡುವುದರಿಂದ ರೈಲುಗಳ ಆದಾಯಕ್ಕೆ ಸೊನ್ನೆ ಸುತ್ತಿದೆ ಇಡೀ ಡೊಮಿನಿಯನಿನಲ್ಲಿ ಸಂಪೂರ್ಣ ಅರಾಜಕತೆ ತಾಂಡವವಾಡುತ್ತಿದೆ ಮುಸ್ಲಿಮರು ಮುಸ್ಲಿಮರನ್ನೇ ಸುಲಿಗೆ ಮಾಡುತ್ತಿದ್ದಾರೆ ತಮ್ಮ ಸಹಧರ್ಮೀಯ ಸ್ತ್ರೀಯರ ಮೇಲೆ ಅನಾಚಾರ ಅತ್ಯಾಚಾರವನ್ನು ಮಾಡುತ್ತಿದ್ದಾರೆ ಮುಸ್ಲಿಮರ ಮನೆಗಳಿಗೇ ಮುಸ್ಲಿಮ ದರೋಡೆಖೋರರೇ ಬೆಂಕಿಕೊಡುತ್ತಿದ್ದಾರೆ.

ಪಾಕಿಸ್ತಾನದ ಸರಕಾರಿ ಕೆಲಸಗಾರರಿಗೆ ಕೆಲವು ತಿಂಗಳಿಂದ ಸಂಬಳವೇ ಸಿಕ್ಕಿಲ್ಲ. ಈ ಕೆಲಸಗಾರರು ಸದ್ಯದಲ್ಲೇ ಡೊಂಬಿಯನ್ನೆಬ್ಬಿಸಿದರೆ ಕೌತುಕವಲ್ಲ. ಇಂತಹ ಅವ್ಯವಸ್ಥೆಯ ಪರಿಸ್ಥಿತಿಯಲ್ಲಿ ನರಳುವ ದೇಶವು ಹಿಂದೂ ದೇಶದ ಮೇಲೆಂದೂ ಅಭಿಕ್ರಮಣ ಮಾಡಲಾರದು ಒಂದು ವೇಳೆ ಹಾಗೆ ಮಾಡಿದರೆ ಅದು ತನ್ನ ಸಮಾಧಿಯನ್ನು ತಾನೇ ತೋಡಿಕೊಂಡಂತಾಗುವುದು.

ಪ್ರತಿಗಾಮಿಗಳ ಕೈವಾಡ

ಪಾಕಿಸ್ತಾನದಿಂದ ಬಂದ ವಿಶ್ವಸನೀಯ ವರದಿಗಳಿಂದ ಮುಖಂಡರಿಗೆ ಮುಸಿಮಗ ಮೇಲೆ ಇರುವ ಹಿಡಿತವು ಸಂಪೂರ್ಣ ಸಡಿಲಾಗಿದೆಯೆಂದು ತಿಳಿದು ಬರುತ್ತದೆ. ಪರಿಣಾಮವಾಗಿ ಈಗ ಪಾಕಿಸ್ತಾನಿ ಮುಸ್ಲಿಮರ ನಾಯಕತ್ವ ಪ್ರತಿಗಾಮಿಗಳಾದ ಫಿರೋಜಖಾನ ನೂನ್, ಮಮ್‌ದೂತಿನ ನವಾಬರು, ನಿಜಾಮುದ್ದೀನ ಇವರ ಕೈಗೆ ಹೋಗಿದೆ. ಇದನ್ನು ಕಂಡು ಮಿ। ಜಿನ್ನರು ಇತ್ತೀಚೆಗಿನ ತಮ್ಮ ಕರಾಚಿ ಭಾಷಣದಲ್ಲಿ ಮುಸ್ಲಿಂ ಲೀಗನ್ನು ಸರ್ವ ಪಕ್ಷೀಯ ಜಾತೀತರ ಪಕ್ಷವಾಗಿ ಮಾಡುವ ಸೂಚನೆಯನ್ನು ಕೊಟ್ಟರು. ಆದರೆ ಅವರ ವಿರೋಧ ಈ ಪ್ರತಿಗಾಮಿಗಳ ಪ್ರತಿಭಟನೆಯೇ ಮೇಲ್ಕೈ ಪಡೆಯುವಂತಾಗಿದೆ

ಮಹಾತ್ಮರನ್ನು ಬದುಕಿಸಲು ಸನ್ಯಾಸಿಯ ಪ್ರಯತ್ನ

ಗಾಂಧೀಜಿಯ ನಿಧನದ ವರ್ತಮಾನವನ್ನು ಕೇಳಿದೊಡನೆ ಮದ್ರಾಸಿನೊಬ್ಬ ಸನ್ಯಾಸಿಯು ಕಳವಳಕೊಂಡನು ಕೂಡಲೇ ಮುಖ್ಯ ಮಂತ್ರಿ ರಾಮಸ್ವಾಮಿ ರೆಡ್ಡಿಯವರ ಬಳಿ ಹೋಗಿ ತನ್ನನ್ನೂ ಹೇಗಾದರೂ ದಿಲ್ಲಿಗೆ ಕೊಂಡು ಹೋಗಬೇಕೆಂದು ಅವರ ಬಳಿ ವಿನಂತಿಸಿಕೊಂಡನು. ರೆಡ್ಡಿಯವರು ಅವನನ್ನು ಅಲಕ್ಷಿಸಿದಾಗ ಸನ್ಯಾಸಿ ಆ ಕಾಲದಲ್ಲಿ ಮದ್ರಾಸಿನಲ್ಲಿದ್ದ ಲೇಡಿ ಮೌಂಟ್ ಬೇಟನ್ನರ ಬಂಗಲೆಗೆ ಹೋಗಿ ತನ್ನನ್ನು ಕರೆದೊಯ್ಯುವಂತೆ ಬೇಡಿಕೊಂಡನು. ಅಲ್ಲಿಯೂ ಅವನ ವಿನಂತಿ ಕಿವುಡು ಕಿವಿಯ ಮೇಲೆ ಬಿದ್ದಂತಾಯಿತು ಕೊನೆಗೆ ಸನ್ಯಾಸಿಯು ಉದಾರ ಧಾರ್ಮಿಕ ಮನೋವೃತ್ತಿಯ ಮಿಲಿಯಾಧೀಶ ಅಲಗಪ್ಪ ಚೆಟ್ಟಿಯಾರರನ್ನು ಹಿಡಿದನು ಮಹಾತ್ಮರಂತಹ ವಿಭೂತಿ ಪುರುಷರ ಪ್ರಾಣವನ್ನು ಹಿಂದಕ್ಕೆ ತರಿಸುವಂತಾದರೆ ಆ ಸಂದರ್ಭವನ್ನು ಏಕೆ ಕಳಕೊಳ್ಳಬೇಕೆಂದು ಶ್ರೀ ಚೆಟ್ಟಿಯಾರರು ಸನ್ಯಾಸಿಯನ್ನು ತಮ್ಮ ಸ್ಪೆಶಲ್ ವಿಮಾನದಲ್ಲಿ ಒಯ್ದರು.

ದಿಲ್ಲಿಯನ್ನು ತಲ್ಪುತಲೆ ಸನ್ಯಾಸಿಯು ಬಿರ್ಲಾ ಭವನಕ್ಕೆ ಧಾವಿಸಿ ಮಹಾತ್ಮಾಜಿಯ ಕಾಲುಗಳನ್ನು ಮುಟ್ಟಿ ಅನೇಕ ಅಂಗವಿನ್ಯಾಸಗಳನ್ನು ಮಾಡಿದನು. ಆದರೆ ಅವನ ಯತ್ನಗಳು ನಿಷ್ಫಲವಾದುವು. ಹತಾಶನಾಗಿ ಅವನು ಕೊನೆಗೆ ಬಾಪೂಜಿಯ ಕುತ್ತಿಗೆಯಲ್ಲೊಂದು ಗಾಯವನ್ನು ಹಾಕಬೇಕೆಂದು ಸೂಚನೆ ಕೊಟ್ಟನು. ಆದರೆ ಯಾರೂ ಇದನ್ನು ಅನುಮೋದಿಸಿದಂತೆ ಕಾಣಲಿಲ್ಲ. ಈಗ ಆ ಸನ್ಯಾಸಿಯು ದಿಲ್ಲಿಯಲ್ಲೇ ತಿರುಗಾಡುತ್ತಿರುವನು. ಶ್ರೀ ಅಲಗಪ್ಪ ಚೆಟ್ಟಿಯಾರರು ಅಂತ್ಯ ಸಂಸ್ಕಾರದ ನಂತರ ಹಿಂತೆರಳಿರುವರು.



ರಾತ್ರೆ ಹವೆಯು ಅಪಾಯಕರವಿರಬಹುದು. ರಕ್ಷಣೋಪಾಯವಿಲ್ಲವಿದರೆ ಶೀತದಿಂದ ಗೂರಲು ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೆ ಹೋಗುವುವು ಅಲ್ಲಿ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನು ಶಮನಗೊಳಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣುನಾಶಮಾಡಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲುನೋವು ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧ

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುವು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಆರಭ್ಯತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0-1-0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ, ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ವಾಯಿಂಟ್ ಮೆನೇಜರ್ಸ್,

ಮಂಗಳೂರು,
23-12-1947.

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SCASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months . . . . . $2\frac{1}{4}\%$ p. a.

5 & 6 months . . . . . $2\frac{1}{2}\%$ p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ರೋ. ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of 37 years avialable to you for arranging Insurance Investment.
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. ~~A specific for the puerperal~~ diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 20—2—1948 [ಸಂಚಿಕೆ 7]

ಅವರು ಅಮರರು

"ಸುಶೀಲಾ ನಯ್ಯರ"

'ಗಾಂಧೀಜಿ ನಮ್ಮೆಡೆಗೆ ಬರುವರೆಂದು'' ಎಂಬುದಾಗಿ ಮುಲ್ತಾನದ ಡೆಪ್ಯೂಟಿ ಕಮೀಶನರರ ಹೆಂಡತಿ ಕಳೆದ ೩೦ನೇ ತಾರೀಕು ಸಾಯಂಕಾಲ ೪ ಗಂಟೆಗೆ ನಾನು ಅವರನ್ನು ನೋಡಿದಾಗ ಕೇಳಿದಳು ಅವಳು ಮತ್ತು ಇನ್ನೂ ಅನೇಕರು ಗಾಂಧೀಜಿಯ ಆರೋಗ್ಯದ ಬಗೆಗೆ ಒಳ್ಳೆ ಆತುರತೆಯಿಂದ ಕೇಳಿದ್ದುಂಟು ಕಲಕತ್ತೆ ಮತ್ತು ದಿಲ್ಲಿಯಲ್ಲಿ ಅವರ ಇತ್ತೀಚಿನ ಉಪವಾಸಗಳು ಹಾಗು ಪವಾಡಗಳು ಪಾಕಿಸ್ಥಾನದಲ್ಲಿಯೂ ಮತ್ತು ಉಳಿದ ಕಡೆಗಳಲ್ಲಿಯೂ ಮುಸಲ್ಮಾನರ ಹೃದಯಗಳನ್ನು ಮುಟ್ಟಿದ್ದವು ಕೆಲದಿನಗಳ ಹಿಂದೆ ಇಸ್ಲಾಮದ '೧'ನೇ ನಂಬರ ಶತ್ರು ಆಗಿದ್ದವನು ಹಿಂದುಸ್ಥಾನದಲ್ಲಿ ಮತ್ತು ಪಾಕಿಸ್ಥಾನದಲ್ಲಿ ಮುಸಲ್ಮಾನರ ಮಿತ್ರನೆಂದು ತಿಳಿಯಲ್ಪಡುವುದನ್ನು ನೋಡುವದು ಒಳ್ಳೆ ಸಂತೋಷದ ಸಂಗತಿಯಾಗಿತ್ತು ನನ್ನ ವರದಿಯನ್ನು ಕೇಳಿ ಬಾಪು ಎಷ್ಟೊಂದು ಸಂತೋಷ ಹೊಂದಬಹುದೆಂದು ನಾನು ಎಣಿಸಿದೆ ಆದರೆ ಒಮ್ಮೆಲೆ ಸುಮಾರು ೬-೧೫ಕ್ಕೆ ಕಮೀಶನರರ ಹೆಂಡತಿಯು ಒಳ್ಳೆ ಕಾತರಳಾಗಿ ಒಳನುಗ್ಗಿದಳು

"ಜಗತ್ತು ಎಂಥ ದುರ್ಗತಿಗಿಳಿಯುವದು!" ಎಂದು ಅವಳು ಕೂಗಿದಳು, 'ಗಾಂಧೀಜಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆ' ನಾನು ಅತ್ಯಂತ ಬೆಚ್ಚಿಬಿದ್ದೆ ಮತ್ತು ನಡುಗಹತ್ತಿದೆ. 'ಇಲ್ಲ, ಇಲ್ಲ, ಅದೊಂದು ಹಾರಿಕೆಯ ಸುದ್ದಿ' ಎಂದು ಯಾರೋ ಒಬ್ಬರು ನುಡಿದರು. "ದಿಲ್ಲಿಗೆ ಫೋನ ಮಾಡಿ ಸತ್ಯವನ್ನು ತಿಳಿದುಕೊಳ್ಳುವಾ" ಆದರೆ ದೂರಿ ಕಾಯಲು ನನ್ನ ಮನಸ್ಸು ಒಪ್ಪಲಿಲ್ಲ ಸತ್ಯವಾಗಿರಲಿ ಇಲ್ಲದಿರಲಿ ಲಾಹೋರಿಗೆ ಮರಳಿ ಹೋಗಿ ಅಲ್ಲಿಂದ ದಿಲ್ಲಿಗೆ ಶಕ್ಯವಿದ್ದಷ್ಟು ಬೇಗ ಹೋಗಬಯಸಿದೆ ಡೆಪ್ಯುಟಿ ಕಮೀಶನರರು ತಮ್ಮ ಮೋಟರನ್ನು ಕೊಟ್ಟರು ನಾವು ರಾತ್ರಿಯಲ್ಲಿಯೇ ಲಾಹೋರಿಗೆ ಹೊರಟೆವು ಶುಭ್ರವಾದ ಬೆಳದಿಂಗಳು ಬಿದ್ದಿತ್ತು ಮತ್ತು ಎಲ್ಲೆಡೆ ಶಾಂತತೆ ಪಸರಿಸಿತ್ತು. ಗಾಡಿಯು ಒಳ್ಳೇ ವೇಗದಿಂದ ಓಡಹತ್ತಿತು. ಮನಸ್ಸಿನಲ್ಲಿಯೇ ನಾನು ವಿಚಾರ ಮಾಡಹತ್ತಿದೆ.

"ಇಲ್ಲ, ಸುದ್ದಿಯು ಸುಳ್ಳಿರಬಹುದು. ಬಾಪು ಸತ್ತಿರುವದಿಲ್ಲ. ಅವರು ಬದುಕಿರುವರು" ಅಂತರಾತ್ಮದಿಂದಲೂ ಬಾಪು ಬದುಕಿರುವರು ಎಂಬ ಪ್ರತಿಧ್ವನಿ ಬರಹತ್ತಿತು. ಆದರಿಂದ ನನಗೆ ಮತ್ತಷ್ಟು ಮುಂದಟ್ಟಾಯಿತು.

ಮುಂಜಾನೆ ೬ ಗಂಟೆಗೆ ನಾವು ಲಾಹೋರ ಮುಟ್ಟಿದೆವು. ಕೂಡಲೆ ರಾತ್ರಿಯೆಲ್ಲ ಮನಸ್ಸಿನಲ್ಲಿ ಹಾಕಿದ ಎಣಿಕೆ ಕುಪ್ಪಳಿಸಿ ಬಿದ್ದಿತು. ಮಿತ್ರರೊಬ್ಬರು ಸಮಾಧಾನ ಮಾಡಲು ಬಂದರು ಆದರೆ ಅವರ ಶಬ್ದಗಳಿಂದ ಸ್ವಲ್ಪು ಸಮಾಧಾನವಾಗಲಾರದೆಂಬುದು ಅವರಿಗಂತು ಗೊತ್ತಾಗತಕ್ಕದ್ದು' ಸ್ವಲ್ಪ ಹೊತ್ತಿನಲ್ಲಿಯೇ ಪಂಡಿತ್‌ಜಿಯವರ ಪಂಚಿತ ಧ್ವನಿಯು ಆಕಾಶವಾಣಿಯಲ್ಲಿ ಕೇಳಹತ್ತಿತು. ಅತ್ಯಂತ ದುಃಖಿತರಾಗಿ ಅವರು ಮಾಡಿದ ಭಾಷಣವನ್ನು ಕೇಳಿ ಆಕೆಯೆಲ್ಲ "ದರ್ಶಕವಾಯಿತ ನಾವೆಲ್ಲ ಪರದೇಶಿಯಾದೆವು" ಕೂಡಲೆ ನಾನು ಗಡಿಬಿಡಿಯಿಂದ ಸಾಮಾನುಗಳನ್ನೆಲ್ಲ ಕಟ್ಟಿಕೊಂಡು ದಿಲ್ಲಿಗೆ ಹೊರಡುವ ವಿಮಾನದಿಂದ ಹೋಗುವ ಸಿದ್ಧತೆ ಮಾಡಿದೆ ... ೬ ಗಂಟೆಗೆ ಅದು ಬರುವದಿದ್ದಿತು ... ಮುಸಲ್ಮಾನ ಹಿಂದುಗಳು ವಿಮಾನದ ಅಧಿಕಾರಿಗಳ ಸಹಿತ ಎಲ್ಲ ಜನರ ಮೋರೆಯ ಮೇಲೆಯೂ ದುಃಖದ ಛಾಯೆ ಪಸರಿಸಿತ್ತು ವಿಮಾನಾಧಿಕಾರಿಗಳು ಪಾಕಿಸ್ತಾನದಿಂದ ಸ್ಪೆಶಲ್ ವಿಮಾನವನ್ನು ತರಿಸುವುದಾಗಿಯೂ ಹೇಳಿದರು ಆದರೆ ಅದು ... ವೇಳೆ ... ಕಾಯುತ್ತಿರಲಿಲ್ಲ ವಿಮಾನ ಬಂದ ಕೂಡಲೆ ಅವರು ಒಳ್ಳೆ ಅವಸರವಸರದಿಂದ ಅದನ್ನು ಬಿಡುವ ಸಿದ್ಧತೆಯನ್ನು ಮಾಡಿದರು ವೈಮಾನಿಕನಾದರೂ ಲಾಹೋರದಿಂದ ದಿಲ್ಲಿಗೆ ಒಂದು ಗಂಟೆ ೫೦ ನಿಮಿಷಗಳಲ್ಲಿಯೆ ವಿಮಾನವನ್ನು ತಂದನು

ನನ್ನ ... ಗಡಿಗಳಲ್ಲಿ ... ಇವರ ವಶಕ್ಕೆ ಬಿಟ್ಟುಕೊಟ್ಟು ನಾನು ಕೂಡಲೆ ಮೋಟಾರಿನಲ್ಲಿ ಬಿರ್ಲಾ ಭವನಕ್ಕೆ ಧಾವಿಸಿದೆನು ಈ ... ಜತೆಯಲ್ಲಿಯೇ ... ನನ್ನನ್ನು ಭವನಕ್ಕೆ ... ಕಳಿಸಿದರು ... ಸ್ಥಿತಿಯಲ್ಲಿಯೆ ... ಗಡಿಬಿಡಿಯಲ್ಲಿ ... "ನಾವು ... ಗಾಂಧೀಜಿ ... ಹೇಳಿದರು" ... ಅವರ ಕಣ್ಣೀರು ಸುರಿಸುತ್ತ ... ... ಒಮ್ಮೆ ... ...

ಕಿಗೆ ಅವಕಾಶ ಕೊಟ್ಟಿರಲಿಲ್ಲವೆ' ನಾನು ಆತ್ಮಪರೀಕ್ಷಣ ಮಾಡಿಕೊಳ್ಳಹತ್ತಿದೆ "ಕೆಲವರು ಹೊಣೆಗೆಟ್ಟು ಮಾತಾಡುವರು ಉಳಿದವರು ಕೃತಿ ಮಾಡುವರು" ನಾನು ಮನಸ್ಸಿನಲ್ಲಿಯೆ ನುಡಿದುಕೊಂಡೆನು-"ನಮ್ಮಲ್ಲಿ ಬಹುಶಃ ಎಲ್ಲರೂ ಪಾಪ ಅಪರಾಧದ ಆರೋಪಕ್ಕೆ ಒಳಗಾಗಿರುವರೆ. ಆದರ ಸ್ವಭಾವಿಕ ಪರಿಣಾಮವೆ ಈ ಹುಚ್ಚ ಮನುಷ್ಯ ಎಸಗಿದ ಕೃತ್ಯವು ಅವನ ಆ ಕೃತ್ಯದಿಂದ ಹಿಂದುಸ್ಥಾನವೇ ನಾಚಿಕೆಯಿಂದ ಮೋರೆ ಕೆಳಗೆ ಹಾಕಬೇಕಾಗಿದೆ" ನನ್ನ ಹೆಣ್ಣುಮಕ್ಕಳ ಬಗ್ಗೆಯೂ ನಾನು ವಿಚಾರ ಮಾಡಿದೆ ಅವರೂ ಈ ದೋಷದಿಂದ ಮುಕ್ತವಾಗಿರುವದಿಲ್ಲ ಈ ಬಗೆಯ ಮತುಪಿನೊಳಗಿಂದ ಗಾಂಧೀಜಿ ... ಪಾರಾಗತಕ್ಕದ್ದು' ಅವರ ... ಉಪವಾಸ ಮಾಡಿದರು ಆದರೀಗ ... ... ಅವರ ಕೊಲೆಯಾಯಿತು, ಅದು ಅವರ ಒಬ್ಬ ಬಂಧುವಿನಿಂದ!

ನಾವು ಬಿರ್ಲಾ ಭವನವನ್ನು ಮುಟ್ಟಿದೆವು ಹಿಂಬಾಗಿಲಿನಿಂದ ... ಒಳಗ ಪ್ರವೇಶ ಮಾಡಿತು ... ಬಾಗಿಲಿನಲ್ಲಿಯೂ ... ಜನಸಮುದಾಯವಿದ್ದಿತು. ... ... ನನಗೆ ... ಮಾಡಿದರು ಸತ್ತ ... ... ಕಾಲುಗಳಿಂದಲ್ಲಿ ... ... ಅತ್ಯಂತ ದುಃಖಿತರಾಗಿ ... ... ಅಲ್ಲಿ ನಮ್ಮ ಅತ್ಯಂತ ಪ್ರೀತಿಯ ಬಾಪು ಒರಗಿದ್ದ ಮೋರೆಯೊಂದೇ ತೆರೆದಿತ್ತು ... ಜೀವಂತ ಇದ್ದಾಗಿನಂತೆ ಮರಣದಲ್ಲಿಯೂ ಶಾಂತತೆ ಸ್ಫುರಿಸುತ್ತಿತ್ತು ಮರಣದ ಪಾಂಡು ಛಾಯೆಯನ್ನು ನಾನು ನೋಡಲಿಲ್ಲ. ಆದರೆ ಅದೇ ಹಿಂದಿನ ಸ್ವಾಗತದ ಮುಗುಳ್ನಗೆ ಇದ್ದಿರಬೇಕೆಂದು ನಾನು ಎಣಿಸಿದೆ ಅತ್ಯಂತ ದುಃಖಿತಳಾಗಿ ನಾನು ನನ್ನ ಹಣೆಯನ್ನು ಅವರ ಎದೆಯ ಮೇಲೆ ಇಟ್ಟೆನು ಹಿಂದಿನಂತೆ ಅವರ ಆ ಪ್ರೀತಿಯ ಕೈ ನನ್ನ ಬೆನ್ನ ಮೇಲೆ ಮತ್ತು ಗಲ್ಲದ ಮೇಲೆ ಬರಬಹುದೆಂದು ನಾನು ಎಣಿಸಿದ್ದೆ ನನ್ನ ಹತ್ತರ ಅಭಾ ಮತ್ತು ಮನು ನಿಂತುಕೊಂಡಿದ್ದರು. "ಇದೀಗ ನೀವು ಕೆಳಗಿಳಿಯತಕ್ಕದ್ದು" ಎಂದು ಯಾರೋ ಒಬ್ಬರು ಕೂಗಿದರು. ಪಂಡಿತ ನೆಹರು ಅವರು ನಮ್ಮ

ಆನೇ ಪುಟ ನೋಡಿ

THE

UNITED INDIA LIFE ASSURANCE CO., LTD.

ESTD 1906 H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to:—

INSPECTORATE OFFICE

K. S. Rao Road, Mangalore.

(೧ನೇ ಪುಟದಿಂದ)

ನ್ನೆಲ್ಲ ಕೆಳಗಿಳಿಸಿಕೊಂಡರು. ಅವರು ಅತ್ಯಂತ ದುಃಖಿತವದನರಾಗಿ ಬಾಪುವಿನ ತಲೆದಿಂಬಿಗೆ ನಿಂತುಕೊಂಡರು. ಮೆರವಣಿಗೆ ಹೊರಟಿತು.

ನಾವು ಸ್ಮಶಾನ ಮುಟ್ಟಿದೆವು. ಸ್ವಲ್ಪ ಪ್ರಾರ್ಥನೆ ಮಾಡಿದೆವು. ಅನಂತರ ಅವರ ಶವದ ಮೇಲೆ ಗಂಧದ ಕಟ್ಟಿಗೆಗಳನ್ನು ಒಟ್ಟಲು ಪ್ರಾರಂಭಿಸಿದರು. ನಾವೆಲ್ಲ ನಮ್ಮ ಕೊನೆಯ ಪ್ರಣಾಮ ಮಾಡಿದೆವು. ನಾನು ಬಿಕ್ಕಿ ಬಿಕ್ಕಿ ಅಳಹತ್ತಿದೆನು. ಬಾಪು ಕ್ಷಮಿಸಿ, ನಮ್ಮ ದೋಷಗಳನ್ನೆಲ್ಲ ಕ್ಷಮಿಸಿರಿ. ತಪ್ಪು ತಡಿಗಳನ್ನೆಲ್ಲ ಹೊಟ್ಟೆಯೊಳಗೆ ಹಾಕಿಕೊಳ್ಳಿ ಎಂದೆಂದೆ. ನಾನು ಆ ಸ್ಥಾನದಿಂದ ದೂರ ಹೋಗಿ ಕೆಳಗೆ ಕುಳಿತುಕೊಂಡೆನು ನನಗೆ ಏನೂ ಕಾಣದಂತಾಯಿತು. ಗೀತೆಯಲ್ಲಿಯ ೧೧ನೇ ಅಧ್ಯಾಯದಲ್ಲಿಯ ಕೆಳಗಿನ ಶ್ಲೋಕಗಳನ್ನು ಪುನಃ ಪುನಃ ಪಠಿಸುತ್ತ ಕುಳಿತೆನು.

ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥
ಯಚ್ಚಾವಹಾಸಾರ್ಥಮಸತ್ಕೃತೋಽಸಿ
ವಿಹಾರ ಶಯ್ಯಾಸನ ಭೋಜನೇಷು ।
ಏಕೋಽಥ ವಾಪ್ಯಚ್ಯುತ ತತ್ಸಮಕ್ಷಂ
ತತ್ ಕ್ಷಾಮಯೇ ತ್ವಾಮಹಮ
ಪ್ರಮೇಯಂ ।

ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನತ್ವತ್ಸಮೋಽಸ್ತ್ಯಭ್ಯಧಿಕಃಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮ ಪ್ರಭಾವಃ ॥

ಜನಸಮ್ಮರ್ದ ನಮ್ಮ ಮೇಲೆ ಮುಕರಿ ಬೀಳಹತ್ತಿತು ಸರದಾರರು ಅಭಾ ಮತ್ತು ಮನು ಇವರನ್ನು ಹಾಗೇ ಜನಸಮ್ಮರ್ದದೊಳಗಿಂದ ಹೊರದೆಗೆದರು ಸೈನಿಕರ ಟ್ರಕ್ಕೊಂದನ್ನೇರಿ ದೂರಿನಿಂದ ಅಗ್ನಿಜ್ವಾಲೆಗಳನ್ನು ನಾವು ನೋಡಿದೆವು

ರಾತ್ರಿಯಲ್ಲಿ ಗಾಂಧೀಯ ಚಿತ್ರದೆದುರಿಗೆ ಕುಳಿತು ಅಂತರ್ಮುಖಳಾಗಿ ಧ್ಯಾನಮಗ್ನಳಾದೆ

"ಜ್ಯೋತಿ ನಂದಿತು, ಸುತ್ತಲೆಲ್ಲ ಕತ್ತಲೆ ಕವಿದಿದೆ," ಎಂದು ಪಂಡಿತ ನೆಹರು ಇವರು ಆಕಾಶವಾಣಿ ಭಾಷಣದಲ್ಲಿ ಹೇಳಿದ್ದರು ಆದರೆ ಕೂಡಲೆ ಅವರು ತಪ್ಪು ತಿದ್ದಿಕೊಳ್ಳುತ್ತ "ಇಲ್ಲ, ಜ್ಯೋತಿ ಬೆಳಗುತಿದೆ ಮತ್ತು ಇನ್ನು ಮುಂದೆಯೂ ಸಾವಿರಾರು ವರ್ಷಗಳ ವರೆಗೆ ಹಾಗೆಯೇ ಪ್ರಜ್ವಲಿಸುವದು" ಎಂದು ಅದಕ್ಕೆ ಜೋಡಿಸಿದರು, ಬಾಪೂಜಿ ಬದುಕಿರುವರು ಮತ್ತು ಕ್ರಿಸ್ತ ಬುದ್ಧರಂತೆ ಎಂದೆಂದಿಗೂ ಅಮರರಾಗಿ ಉಳಿಯುವರು. ಅವರೆಲ್ಲ ಪ್ರೇಮ ಸಂದೇಶವನ್ನು ಕಲಿಸಿರುವರು. ಆದರೆ ಅಹಿಂಸೆ ಯಾರೊಬ್ಬರಿಗೆ ಮೀಸಲಾಗಿರದೆ ಸಮಾಜದ ನಿಯಮವೆ ಆಗಿರುವದೆಂಬುದನ್ನು ಅವರು ಜಗತ್ತಿಗೆಲ್ಲ ತೋರಿಸಿಕೊಟ್ಟರು

ಆಗಾಖಾನ ಅರಮನೆಯಲ್ಲಿ ನಿಮ್ಮ ಅನುಯಾಯಿಗಳಲ್ಲಿ ವಿಶೇಷತಃ ವಿಧಾಯಕ ಕಾರ್ಯಕರ್ತರಲ್ಲಿ ಜನಸಾಮಾನ್ಯಕ್ಕೆಲ್ಲ ನಿಮ್ಮ ಸಂದೇಶವನ್ನು ಮುಟ್ಟಿಸುವಂತಹ ತೇಜಸ್ಸು ಇಲ್ಲವೆ ವ್ಯಕ್ತಿತ್ವ ಯಾವುದೂ ಇರುವದಿಲ್ಲ ಎಂದು ಯಾರೋ ಒಬ್ಬರು ನುಡಿದರು, ಅದಕ್ಕೆ ಅವರು "ಅಹುದು ಅವರೀಗ ಸ್ವಲ್ಪ ನಿಂಪ್ರಭರಾಗಿರುವಂತೆ ತೋರುತ್ತದೆ. ಆದರೆ ಅದರ ತಪ್ಪು ನನ್ನದು. ಪ್ರತಿಯೊಂದು ವಿಷಯದಲ್ಲಿ ಅವರು ನನ್ನ ನೇತೃತ್ವವನ್ನೇ ಬಯಸುವರು. ನಾನು ಜೀವಂತ ಇರುವ ವರೆಗೆ ಹೀಗಾಗದೆ ಬೇರೆ ಉಪಾಯವಿಲ್ಲೆಂದು ನನಗನಿಸುತ್ತದೆ ಆದರೆ ನಾನು ಸತ್ತ ಬಳಿಕ ಅವರು ವಿಕಸಿತರಾಗಿ ಈ ವರೆಗೆ ಮೌನವಾಗಿ ಸಂಪಾದಿಸಿದ್ದರ ಸುಫಲವಾಗಿ ಅನಂತರ ಅವರಿಗೆ ಸಿಕ್ಕಬಲ್ಲವೆಂದು ನಾನು ಆಶಿಸುತ್ತೇನೆ."

"ಕ್ರಿಸ್ತನು ಜೀವಂತ ಇರುವಾಗ ಅವನ ಅನುಯಾಯಿಗಳಲ್ಲಿ ಯಾವನು ಅಷ್ಟೊಂದು ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಿದ್ದನು? ಕ್ರಿಸ್ತನ ಮರಣಾನಂತರವೇ ಪರಮಾತ್ಮನು ಅವನ ಸಂದೇಶವನ್ನು ಜನಕ್ಕೆಲ್ಲ ಬೀರುವ ಶಕ್ತಿಯನ್ನು ಅವನ ಶಿಷ್ಯನಿಗೆ ದಯಪಾಲಿಸಿದನು" ಎಂದು ಸ್ವಲ್ಪ ಸಮಯದ ನಂತರ ಗಾಂಧೀಜಿ ಜೋಡಿಸಿದರು. ಗಾಂಧಿಜಿಯ ಭಾವಚಿತ್ರದೆದುರಿಗೆ ಕುಳಿತು ವಿಚಾರ ಮಾಡುತ್ತಿದ್ದಂತೆ ನನಗೆ ಇವೆಲ್ಲ ವಿಚಾರಗಳು ಸುಳಿಯಹತ್ತಿದವು ಗಾಂಧಿಯವರು ಕುಳಿತು ಕಾರ್ಯ ಮಾಡುತ್ತಿದ್ದ ಸ್ಥಳದಲ್ಲಿಯೇ ಈ ಭಾವಚಿತ್ರವನ್ನಿರಿಸಲಾಗಿದೆ ಪ್ರಾಚೀನ ಪುಣ್ಯ ಪ್ರಭಾವದಿಂದ ಗಾಂಧೀಜಿಯ ಪಾದ ಕಮಲಗಳ ಅಡಿಯಲ್ಲಿ ಕುಳಿತು ಅವರ ಸನ್ನಿಧಿಯಲ್ಲಿ ಕೆಲಸ ಮಾಡುವ ಭಾಗ್ಯ ಒದಗಿದ್ದ ನಮ್ಮೆಲ್ಲರಿಗೆ ಆ ಶ್ರೇಷ್ಠ ಗುರುವಿನ ಉಪದೇಶದಂತೆ ನಡೆಯುವ ಶಕ್ತಿ ಸಾಮರ್ಥ್ಯಗಳನ್ನು ಪರಮಾತ್ಮ ಕರುಣೆಯಿಂದ ದಯಪಾಲಿಸಲಿ ಈ ಪ್ರೇಮವಾಯು ಸಮಾಧಾನದ ನುಡಿಗಳನ್ನು ಇನ್ನು ಮುಂದೆ ಕೇಳಲಾರೆನೆಂಬ ವಿಚಾರ ಸುಳಿದ ಕೂಡಲೇ ಕಣ್ಣೀರು ಸುರಿಯಹತ್ತುವವು ಯಾವನ ಕೈ ಬೆನ್ನ ಮೇಲೆ ಬೀಳುವುದರಿಂದ ಹೆಚ್ಚಿನ ಶಕ್ತಿ ಬರದಂತಾಗಿ ಭಾರವೆಲ್ಲ ಇಳಿದಂತಾಗುತ್ತಿದ್ದಿತೊ ಅಂಥ ಕೈ ಇನ್ನು ಮುಂದೆ ನಮ್ಮ ಮೇಲೆ ಬೀಳಲಾರದು ಆ ಭಾರವು ಶಾರೀರಕವಾಗಲಿ ಇಲ್ಲವೆ ಮಾನಸಿಕವಾಗಿರಲಿ ಎಲ್ಲವೂ ಹಗುರಾದಂತೆನಿಸುವವದು. ಆದರೆ ನಾವು ನಮ್ಮ ಭಾವನೆಗಳನ್ನೆಲ್ಲ ಅವುಗಳಿಂದ ಉದ್ರೇಕಿಸಿಕೊಳ್ಳಬಾರದು. ನಮಗಾದ ಹಾನಿಯಿಂದುಂಟಾದ ದುಃಖವು ಕಾರ್ಯರೂಪದಲ್ಲೆ ಪರ್ಯವಸಾನ ಹೊಂದಲಿಕ್ಕೆ ಬೇಕು. ಅವರು ಜೀವಂತ ಇರುವಾಗ ನಾವು ತಡವರಿಸುತ್ತ ಹೆಜ್ಜೆ ಇಡುತ್ತಿದ್ದೆವು. ಆದರೆ ಇನ್ನು ಮುಂದೆ ಅತ್ಯಂತ ದಾರ್ಢ್ಯದಿಂದ ಮತ್ತು ನಿರ್ಧಾರದಿಂದ ಹೆಜ್ಜೆ ಇಡುವ ಸಾಮರ್ಥ್ಯ ನಮ್ಮಲ್ಲಿ ಬರಲಿ ಎಂದು ನಾವೆಲ್ಲ ಪ್ರಾರ್ಥಿಸುವಾ ಗೆಳೆಯನೊಬ್ಬ ನಿನ್ನೆ ದಿನ ತಾನು ಮಾಡಿದ ಕೆಲ ಪದ್ಯಗಳನ್ನು ಕಳಿಸಿಕೊಟ್ಟಿರುವನು ಅವುಗಳೊಳಗಿಂದ ಕೆಳಗಿನವನ್ನು ನಾನು ಕೊಡುತ್ತೇನೆ

"ಉತ್ಸವದಿನಿದನೋದು
ವಂಥ ನಿಮ್ಮನ್ನು ಮೋಹ
ಮಿತ್ರರೆಂದಾತಕರೆ-
ದಿರುವಂಥ ನಿಮ್ಮನ್ನು-
ಹೃತ್ಕಮಲದಲ್ಲಂಜಿ
ಹಿಡಿದಿರ್ದನೊಲಿದವರೆ,
ಜೀವಜೀವಾಳವೆಂದು !
ಮತ್ತಾತಗುಳಿದ ಸಾ
ಧನ ನಿಮ್ಮ ಕೈ ಕಾಲ್ಗ-
ಳತ್ತ ದೇನಿಸಬೇಕು-
ದಲ್ಲಿ ನೀವ್ ನಡೆವಾಗ
ಳೆತ್ತಲೆತ್ತಿಡುವಿರೋ
ಪದವನಾವುದನಾಗ
ಮುಟ್ಟುವಿರೋಯೆಂದು ಬಿಡದೆ!"

ನನ್ನೆದೆಯೊಳಗೇ ನಾನೊಂದು ಪಡಿನುಡಿಯನ್ನು ಕೇಳುತ್ತೇನೆ, "ಇಲ್ಲ, ಆತ ಸತ್ತಿಲ್ಲ. ಆತ ಬದುಕಿದ್ದಾನೆ ಮತ್ತು ಅದೇ ಹಳೆಯ, ಮಧುರ, ಚಿನ್ನ ಮುಗುಳ್ನಗೆಯಿಂದ ನಮ್ಮ ನಮ್ಮ ಸ್ಖಲಿತ್ಯ ಕೃತ್ಯವನ್ನು ಕಾದು ನೋಡುತ್ತಿದ್ದಾನೆ

೩-೨-೪೮ [ಕರ್ಮವೀರದಿಂದ]

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾದಲ್ಲಿ ಸಂಘಟಿತರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨%
೪ರಿಂದ ೫ ತಿಂಗಳು	,, ,,	೨¼
೬ರಿಂದ ೯ ತಿಂಗಳು	,, ,,	೨½

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಬೂದಿಯಿಂದ

ರಾಜೇಂದ್ರ ಪ್ರಸಾದ–

ನಮಗೆ ದಾರಿದೋರಲು, ಧೈರ್ಯಕೊಡಲು ಸಾಂತ್ವನ ಹೇಳಲು, ಮಾತಾಡಿಸಲು ಗಾಂಧಿಯವರಿಂದು ರಕ್ತ ಮಾಂಸಮಯ 'ಶರೀರದಲ್ಲಿಲ್ಲ. ಆದರೆ ದೇಹವು ಮರ್ತ್ಯ ಮತ್ತು ಅಶಾಶ್ವತ, ಆತ್ಮವೊಂದೇ ಅವ್ಯಕ್ತ ಮತ್ತು ಅವಿನಾಶಿ ಎಂದು ಇವರು ನಮಗೆ ಪದೇ ಪದೇ ಹೇಳಿಲ್ಲವೆ? ತನಗೆ ಉಪಯೋಗಕ್ಕೆಬೀಳುವ ವರೆಗೆ ತಮ್ಮ ದೇಹವನ್ನು ದೇವರು ಉಳಿಸುವನೆಂದು ಅವರು ಹೇಳಿಲ್ಲವೆ? ಅವರ ಆತ್ಮವು ಬಹುಶಃ ಶರೀರಬಂಧನದಿಂದ ಮುಕ್ತನಾಗಿ ಇನ್ನೂ ಹೆಚ್ಚು ಸ್ವತಂತ್ರವಾಗಿ ಕೆಲಸಮಾಡಿ ಸಿದ್ಧಿಸದೆ ಉಳಿದುದನ್ನು ಸಂಪೂರ್ಣವಾಗಿ ಸಾಧಿಸುವ ಸಾಧನಗಳನ್ನು ಸೃಜಿಸಬಹುದು ಬಹುಶಃ ಯಮುನಾ ತೀರದಲ್ಲಿರುವ ಬೂದಿಯಿಂದ ಪರಸ್ಪರರಲ್ಲಿರುವ ತಪ್ಪು ತಿಳುವಳಿಕೆ ಮತ್ತು ಅಪನಂಬಿಗೆಗಳನ್ನು ಹೊಡೆದು ಹಾರಿಸಿ ತಾವು ಬದುಕಿ ಕೆಲಸಮಾಡಿ ಸಾಧಿಸಬಯಸಿದ ಮತ್ತು ಆ ಕಾರ್ಯದಲ್ಲೇ ಕೊಲೆಗಡುಕನ ಗುಂಡಿಗೆ ತುತ್ತಾಗಿಹೋದ ಶಾಂತಿ ಸಮಾಧಾನಗಳನ್ನು ಸ್ಥಾಪಿಸುವಂಥ ಶಕ್ತಿಗಳು ಎದ್ದು ಹೊರಟರೂ ಹೊರಟಾವು

ಹಿಂದು ಧರ್ಮದಲ್ಲಿ ಏಳೆ-ಇಡೀ ಮಾನವ ಕುಲದಲ್ಲಿ ಇರುವ ಎಲ್ಲಾ ಉದಾತ್ತ ಮತ್ತು ಉಚ್ಚ ಭಾವಗಳ ಸಾರಸರ್ವಸ್ವವಾಗಿರಲಿಲ್ಲವೆ ಅವರು? ಆದರೂ ಆ ದೇಶ, ಧರ್ಮ, ಕುಲಗಳ ಇತಿಮಿತಿಗಳನ್ನರಿಯದ ಹೃದಯದಲ್ಲಿ ಗುರಿಯಿಟ್ಟು ಗುಂಡಿಕ್ಕಿದ್ದು ಒಬ್ಬ ಹಿಂದು ಹಸ್ತವೇ ಅಲ್ಲವೆ? ಈ ಅಪರಾಧದ ಉದ್ದೇಶವೇನಿರಬಲ್ಲದು? ಅದು ಹಿಂದು ಧರ್ಮವನ್ನು ಉಳಿಸಲೆಂದೋ? ಹಿಂದು ಸಮಾಜವನ್ನು ಸೇವಿಸಲೆಂದೋ? ಹಾಗೆ ಹಿಂದು ಧರ್ಮದ ರಕ್ಷಣೆಯಾಯಿತೆ? ಹಿಂದು ಸಮಾಜ ಅದರಿಂದ ಸೇವೆ ಹೊಂದಿತೆ? ಹಿಂದು ಧರ್ಮದ ಸ್ವಲಕ್ಷತಿಯ ಚರಿತ್ರೆಯನ್ನು ಹುಡುಕಿರಿ-ಇಂತಹ ಕೆಟ್ಟ ವಿಶ್ವಾಸಘಾತಕ ಕಾರ್ಯ ನಿಮಗೆಲ್ಲೂ ಸಿಗದು ಇದು ಅದರ ಚರಿತ್ರೆಯಲ್ಲಿಯ ತೊಳೆಯಬರದ, ಕಿತ್ತಿ ತೆಗೆಯಬರದ ಕಗುರುತು

ನಾವು ಭಿನ್ನರಾಗಿದ್ದೇವೆ ನಾವು ದಿಙ್ಮೂಢರಾಗಿದ್ದೇವೆ ನಾವು ನಿರಾಶರಾಗಬೇಕೆ? ದೇಹ ಕಾಣಲಾರದು ಆದರೆ ಆದರೆ ಅವರು ನಮಗೊಂದು ಅಮೂಲ್ಯವಾದ ಪಿತ್ರಾರ್ಜಿತಸ್ವತ್ತನ್ನು ಬಿಟ್ಟುಹೋಗಿಲ್ಲವೆ? ನಮ್ಮ ಪ್ರಗತಿಯಲ್ಲಿ ನಮ್ಮನ್ನು ಆಧರಿಸುವ ಮತ್ತು ಮುಂದಕ್ಕೊಯ್ಯುವ ಸ್ಫೂರ್ತಿ ಮತ್ತು ಉಪದೇಶಗಳನ್ನು ಸಾಕಷ್ಟು ಕೊಟ್ಟುಹೋಗಿಲ್ಲವೆ? ಈ ವಿಕಟ ದುರಂತದೆದುರಲ್ಲಿ ಅವರ ಕುಕ್ಕುಟಧ್ಯಾನ ನಮ್ಮಲ್ಲಿ ಕರ್ತವ್ಯ ಬುದ್ಧಿಯನ್ನೆಬ್ಬಿಸಲಿ ಅವರು ಮಣ್ಣಿನಿಂದ ಮಹಾ ವೀರರನ್ನು ತಯಾರಿಸಿದರು ದಾಸ್ಯದ ವಿರುದ್ಧ, ಅಧರ್ಮದ ವಿರುದ್ಧ, ಅನ್ಯಾಯದ ವಿರುದ್ಧ ಜೀವಾವಧಿ ಹೂಡಿದ ಹೋರಾಟದಲ್ಲಿ ಅವರು, ಅಲಕ್ಷಿತ ಸಾಧನಗಳನ್ನು ಬಳಸಿದರು ಧರ್ಮವನ್ನು ಪ್ರತಿಷ್ಠಾಪಿಸಲು ಭಾರತಕ್ಕೆ ಅದೇ ಧೈರ್ಯ, ಅಪಾಯಾಲಕ್ಷ್ಯ, ಫಲ ತಿರಸ್ಕಾರಗಳು ಬೇಕು ಅದಕ್ಕಾಗಿ ಗಾಂಧೀಯವರು ತಮ್ಮ ಜೀವನವನ್ನೇ ಕೊಟ್ಟುಬಿಟ್ಟಿದ್ದಾರೆ. ಅವರು ಈ ನೆಲದ ಮೇಲೆ ನಡೆಯುತ್ತಿದ್ದಾಗ ಹೇಗೋ ಹಾಗೇ ನಾವು

(೭ನೇ ಪುಟ ನೋಡಿ)

ಜಗತ್ತಿನ ಸರ್ವಶ್ರೇಷ್ಠ ಸಾಮ್ಯವಾದಿ - ಬಾಪೂ

ಗಾಂಧೀಜಿಯ ರಾಮರಾಜ್ಯವೆಂತಹುದು?

ನೈತಿಕ ಅಡಿಗಟ್ಟಿನ ಮೇಲೆ ಆರ್ಥಿಕ ಸ್ವಾತಂತ್ರ್ಯ

ಮಹಾತ್ಮಾ ಗಾಂಧಿಯವರ ರಾಜಕೀಯ ತತ್ವಜ್ಞಾನವು ಶ್ರೀಮಂತರ ಮೇಲಿನ ಸಹಾನುಭೂತಿಯಿಂದ ಪರಿವೇಷ್ಟಿತವಾಗಿದೆಯೆಂದು ಅವರನ್ನು ಟೀಕಿಸಿದವರಿದ್ದಾರೆ. ಆದರೆ ಅವರ ಜೀವಮಾನ ಕಾಲದಲ್ಲವರು ಈ ಕುರಿತು ನಿರೂಪಿಸಿದ ತಾತ್ವಿಕ ವಿವರಣೆಗಳನ್ನಭ್ಯಸಿದವರು ಮೊನ್ನೆ ಮೊನ್ನೆಯೆಂಬಂತೆ ಅವರು ನಾನು ನಿಮಗಿಂತ ಎಷ್ಟೋ ಮೊದಲಿನ "ಸಾಮ್ಯವಾದಿ" ಎಂದು ಹೇಳಿದುದರ ಅರ್ಥವನ್ನೂ, ಅವರ ರಾಮರಾಜ್ಯದ ತಾತ್ವಿಕ ರಹಸ್ಯವನ್ನೂ ಮನಗಾಣದಿರಲಾರರು. ಅಂದ ಮೇಲೆ ಅವರ ಸಮತಾವಾದವೆಂತಹುದು?

ಖಂಡಿತವಾಗಿಯೂ ಹಿಂಸಾತ್ಮಕ ಕ್ರಾಂತಿಯಿಂದ ರಕ್ತಮಯವಾಗುವ ಮಾರ್ಕ್ಸನ ಸಿದ್ಧಾಂತವನ್ನವರೆಂದಿಗೂ ಒಪ್ಪರು ಕಾರಣ, ಅಹಿಂಸಾ ತತ್ವವು ಅವರ ಜೀವನದ ಜೀವಾಳ ಹಿಂಸೆಯು ಅಸತ್ಯವಾದುದು ಅದು ಚಿರಕಾಲವೆಂದಿಗೂ ಬಾಳದು ಹಿಂಸೆಯಿಂದ ಗಳಿಸಿದುದನ್ನು, ಹಿಂಸೆಯಿಂದ ಕೂಡಿಸಿದುದನ್ನು ಹಿಂಸೆಯಿಂದಲೇ ಕಳಕೊಳ್ಳಬೇಕಾಗುವುದೆಂಬುದು ಪ್ರಕೃತಿಯ [illegible] ಸಮಂಜಸವಾದ ಸಿದ್ಧಾಂತ ಜೀಸು ಕ್ರಿಸ್ತನು "ನನ್ನ ರಾಜ್ಯವು ಈ ಲೋಕದಲ್ಲ"ವೆಂಬಂತೆ ಮಹಾತ್ಮರ "ನನ್ನ ಸಮತಾವಾದವು ಈ [illegible] ವೆನ್ನುತ್ತಿದ್ದರು. ವರ್ಗ ವ್ಯತ್ಯಾಸವನ್ನು ಸಮಾನತೆಯ [illegible] ಬೇಕಾದರೆ ಒಂದೊ ಹೃದಯ ಪರಿವರ್ತನ ಹೊಂದಬೇಕು. ಇಲ್ಲವೆ ಸ್ವದಮನೋಧಕವಾದ ಹಿಂಸಾ [illegible] ನುಸರಿಸಬೇಕು ಗಾಂಧೀಜಿ ಮೊದಲನೆ ವಿಧಾನದಲ್ಲಿ ಅಚಲ ವಿಶ್ವಾಸ [illegible]

ಅಂತಿಮ ವಿಜಯ

ಕಟ್ಟಕಡೆಯಲ್ಲಿ ಗಾಂಧೀಜಿಯ ಸಮತಾವಾದವೇ ಲೋಕಾದರ್ಶವಾಗುವುದೆಂತೆ ಮೇರೆ [illegible] ಅವರ [illegible] ಪರಿಶ್ರಮಗಳಿಂದ ವ್ಯವಸ್ಥಿತ ರಚನಾತ್ಮಕ ಕಾರ್ಯಕ್ರಮವೇ [illegible] ತತ್ವಾನು [illegible] ಕಾದರೆ ಮಾನವನು ಪ್ರಥಮತಃ ಸ್ವಾವ-

ಲಂಬನದ ವಿಧಾನದಲ್ಲಿ ನಿಷ್ಣಾತನಾಗಿರಬೇಕು ತನ್ನ ಸ್ವಂತ ಜೀವನಾಧಾರ ಕಲ್ಪಿಸಬಲ್ಲ ವ್ಯಕ್ತಿ ಯಾವ ದೇಶದಲ್ಲೂ, ಯಾವ ಸಮಾಜದಲ್ಲೂ ಮತ್ಯಾವ ಪರಿಸ್ಥಿತಿಯಲ್ಲೂ ಪರಾವಲಂಬಿಯಾಗಲಿ, ಪರಪೀಡಕನಾಗಲಿ ಆಗಲಾರ ಈ ಸ್ವಾವಲಂಬನವಾದರೂ ಸತ್ಯ, ಅಹಿಂಸೆ, ಪ್ರಾಮಾಣಿಕತನದ ಬುನಾದಿಯ ಮೇಲೇ ರಚಿತವಾಗಿದ್ದಿರಬೇಕು.

ರಚನಾತ್ಮಕ ಕಾರ್ಯಕ್ರಮದ ಪ್ರತಿಯೊಂದು ಅಂಗವೂ ಸರಳ ಜೀವನದ ಪ್ರತೀಕವಾಗಿದೆ ಅದರಲ್ಲಿ ತರಬೇತು ಹೊಂದುವ ವ್ಯಕ್ತಿಯು ಪ್ರಾಚೀನ ಆಶ್ರಮವಾಸಿಗಳ ಉದಾತ್ತ ಜೀವನ ಮಾರ್ಗಗಳನ್ನು ಅರಿತುಕೊಳ್ಳುವನು [illegible] ದುಷ್ಟ ವಿಚಾರ [illegible] ಸಹಜವಾಗಿ [illegible] ಮಾನವಮಾತ್ರ [illegible] ಶ್ರೇಷ್ಠ ತತ್ವಾದರ್ಶಗಳಿಂದ ಸ್ಫೂರ್ತಿ [illegible]

ಅಮೃತಬಿಂಧು

[illegible]

ಅದಕ್ಕೊಂದು ಅಖಂಡಸಿದರ್ಶನವಾಗಿದೆ ಇಂದು ಕ್ರೈಸ್ತ ಜನಾಂಗಗಳು ಕ್ರಿಸ್ತನ ತತ್ವಕ್ಕೆ ತದ್ವಿರುದ್ಧವಾಗಿ, ಬೌಧ ಜನಾಂಗಗಳಾದ ಚೀನಾ ಜಪಾನ್ ಸಮೂಹಗಳು ಬುದ್ಧನ [illegible] ತತ್ವಕ್ಕೆ ವಿರೋಧವಾಗಿಯೂ ವರ್ತಿಸುವುದಕ್ಕೆ ಮಾನವ ಸ್ವಭಾವದಲ್ಲಿ ಆಗಿಂದಾಗ್ಗೆ ತೋರಿ ಬರುವ ಕಲವೊಂದು ನಿರ್ಬಲತೆಗಳೇ ಕಾರಣ. ಈ ನಿರ್ಬಲತೆಗಳು [illegible] ಅಂತ್ಯದಲ್ಲಿ ಮಾನವ ಅಂತಃಕರಣವು [illegible] ಖಂಡಿತ [illegible] ಶಕ್ತಿ [illegible] ವಿಶ್ವಶಾಂತಿಗಾಗಿ [illegible] ತತ್ವ [illegible]

ಶಾಂತಿಯ ಸಾಮ್ಯವಾದ

[illegible]

ಭೇದ ರಹಿತರೂ, ಸ್ವಾವಲಂಬಿಗಳಾಗಿರುವುದರಿಂದ ವರ್ಗ ದ್ವೇಷ ರಹಿತರೂ, ಸರಳ ಜೀವನಸ್ಥರೂ ಉಚ್ಚ ವಿಚಾರಿಗಳೂ ಆಗಿರುವುದರಿಂದ ಲೋಕ ಶಾಂತಿ ಪ್ರಿಯರೂ ಆಗುವರು

ಮಾನವನು ಲೌಕಿಕ ಸುಖ ಸಾಧನೆಗೆ ಅಸಹಜವಾದ ಪ್ರಾಮುಖ್ಯತೆ ಕೊಟ್ಟಿರುವುದರಿಂದಲೇ ಇಂದಿನ ಲೋಕ ದುರಂತಗಳು ತಲೆಯೆತ್ತುವಂತಾಗಿದೆಂದೂ, ಆತ್ಮರಹಿತ ಯಂತ್ರಗಳೂ, ವಿನಾಶುಕ ವಿಜ್ಞಾನಗಳೂ ಅಧ್ಯಾತ್ಮಭಾವಪೂರಿತನಾದ ಮಾನವನನ್ನು ನಾಶವಿಂಡಿಳಿಗೊಯ್ದಿವೆ [illegible] ಶಾಂತಿಸಾಧಕವಾದ ಅಧ್ಯಾತ್ಮ ವಿಕಾಸದ ಉಚ್ಚ ಪದದಿಂದ ಹೊರಳಿ ಆತ್ಮ ವಿನಾಶಕವಾದ [illegible] ನರಕದೆಡೆ ಹೊರಳಿತು. [illegible]

ಪೌರ್ವಾತ್ಯ ಪ್ರತಿಕ್ರಿಯೆ

[illegible]

ನೀವು ಅಮೋಘವಾದ ಆರೋಗ್ಯ ಬಿಗಿಚೆತನ್ಯಗಳನ್ನು ಪಡೆಯಬಹುದು

ಬ್ಯಾಲ ಬೀನ್ಸನ್ನು ತಪ್ಪ ತೆಗೆದೆಂದು ಕೊಳ್ಳುವುದರಿಂದ ಹೊಟ್ಟೆಯೊಳಗಿನ ದಿನದಿನದ ತ್ಯಾಜ್ಯವಾದ ಕಲ್ಮಶವೆಲ್ಲವೂ ಕಡಿಮೆ ಮಾಡಿದಂತಾಗುವುದು ಜೀರ್ಣ ಕ್ರಿಯೆ ವ್ಯವಸ್ಥಿತವಾಗಿ ರಕ್ತ ಧ್ಯುತಿಗಳು ಶುದ್ಧವಾಗುವವು

ಹೀಗೆ ವಾತಕರಿಕೆ, ಅಗ್ನಿಮಾಂದ್ಯ, ತಲೆನೋವು, ಅಜೀರ್ಣ, ಪಿತ್ತ ವಿಕಾರ, ದೇಹಾಲಸ್ಯ, ವಾತಬಾಧೆ, ಮುಂತಾದ ವ್ಯಾಧಿಗಳು ಈ ವನಸ್ಪತಿ ಔಷಧಿಯಿಂದ ಪರಿಹರಿಸಲ್ಪಡುತ್ತವೆ

ಆ ತಾರುಣ್ಯಮಯ ಚೈತನ್ಯ ಚಟುವಟಿಕೆಗಳನ್ನು ಪುನಃ ಸಂಪಾದಿಸಿರಿ.

ಶುದ್ಧ ವನಸ್ಪತೀಯವೂ

BILE BEANS

ಪ್ರಾಕೃತಿಕ ಮತ್ತು ಸರಿಗೊಳಿಸುವಂತಹದಾದ ಸಂಜೀವಿನಿ

ಕೂಸಿನ ಮೈ ತಂಪಗಿಡುವ ದಗ್ಗನ್ನು ನಿವಾರಿಸುವ

ತಾಯಂದಿರೂ ಕೂಡ ಉಪಯೋಗಿಸುತ್ತಾರೆ.

[illegible]

558

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಮಾರಾಟಕ್ಕಿದೆ

ನಮ್ಮ ಚಲೋ ದೊಡ್ಡ ಕುದುರೆ ಜಟಕಾಗಾಡಿ ಮತ್ತು ಅದಕ್ಕೆ ಆಗುವ ಒಳ್ಳೇ ಜಾತಿಯ, ದೊಡ್ಡ ಕುದುರೆ ಮತ್ತು ಅದರ ಸಾಮಾನು ಸಮೇತ ಬಹು ಸುಲಭಸಾಧ್ಯವಾದ ಬೆಲೆಗೆ ಸಿಕ್ಕುತ್ತದೆ. ಈ ಸುಸಂದರ್ಭವನ್ನು ಕಳೆಕೊಳ್ಳಬೇಡಿರಿ.

ಕಟ್ಟಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ, ವ ವೈಕ್ತಾ ಬಂದು ಮುಖತಃ ಬಹುದು. ಸದ್ರಿ ಗಾಡಿ, ಕುದುರೆ ನೋಡಲಿಚ್ಛಿಸುವವರು ಆಫೀಸು ಸಮಯದಲ್ಲಿ ಬಂದು ನೋಡಬಹುದು.

KOCHIKAR BROTHERS LTD., UDIPI.

ಸ್ವದೇಶಾಭಿಮಾನಿ

ತಾರೀಕು 20-2-1948

ಭಸ್ಮ ಮತ್ತು ಅಸ್ತಿಗಳ ನಿಮಜ್ಜನ

ಮಹಾತ್ಮಾ ಗಾಂಧಿಯವರ ಭಸ್ಮ ಮತ್ತು ಅಸ್ತಿಗಳನ್ನು ಜಲದಲ್ಲಿ ನಿಮಜ್ಜನ ಮಾಡುವ ಕೊನೆಯ ಕಾರ್ಯವು ಇದೇ ಫೆಬ್ರವರಿ ತಾರೀಕು ೧೨ನೇ ಗುರುವಾರ ದಿನ ನಡೆಯಿತು.

ಮುಖ್ಯ ಕಾರ್ಯಕ್ರಮವನ್ನು ಅಲ್ಲಹಾಬಾದಿನಲ್ಲಿ ಗಂಗಾ ಯಮುನಾ ಸಂಗಮವಾಗುವ ಪ್ರಯಾಗ ಕ್ಷೇತ್ರದಲ್ಲಿ ರಾಮದಾಸ ಗಾಂಧಿ ಮತ್ತು ದೇವದಾಸ ಗಾಂಧಿಯವರಿಂದ ಪಂಡಿತ ನೆಹರು ಮೊದಲಾದ ದೇಶದ ಮುಂದಾಳುಗಳ ಸಮಕ್ಷಮದಲ್ಲಿ ನೆರವೇರಿಸಲಾಯಿತು. ಡೆಲ್ಲಿಯಿಂದ ಅಲ್ಲಹಾಬಾದಿಗೆ ಅಸ್ತಿಗಳನ್ನು ಒಂದು ಸ್ಪೆಶ್ಯಲ್ ಟ್ರೈನಿನಲ್ಲಿ ಕೊಂಡೊಯ್ಯಲಾಗಿತ್ತು. ಈ ಕಾರ್ಯಕ್ರಮವು ದಹನ ಕ್ರಿಯೆಯ ಕಾರ್ಯದಷ್ಟೆ ವಿಜೃಂಭಣೆಯಿಂದ ನಡೆಯಿತು.

ಮಹಾತ್ಮಾ ಗಾಂಧಿಯವರ ಭಸ್ಮ ಮತ್ತು ಅಸ್ತಿಗಳ ಸ್ವಲ್ಪ ಸ್ವಲ್ಪ ಅಂಶಗಳನ್ನು ಪ್ರತಿಯೊಂದು ಪ್ರಾಂತ್ಯ ಹಾಗೂ ಅನೇಕ ಸಂಸ್ಥಾನಗಳಿಗೂ ಕೊಡಲಾಯಿತು. ದಹನ ಕ್ರಿಯೆಯ ಸಂದರ್ಭದಲ್ಲಿ ಡೆಲ್ಲಿಗೆ ಹೋದ ಆಯಾ ಪ್ರಾಂತ್ಯಗಳ ಗವರ್ನರುಗಳು ಇದನ್ನು ತಮ್ಮ ತಮ್ಮ ಪ್ರಾಂತಕ್ಕೆ ಒಯ್ದರು. ಆಯಾ ಪ್ರಾಂತ ಮತ್ತು ಸಂಸ್ಥಾನಗಳಲ್ಲಿ ಪವಿತ್ರ ತೀರ್ಥ ಕ್ಷೇತ್ರಗಳಿಗೆಲ್ಲ ಇವುಗಳ ಅಂಶವನ್ನು ಕೊಂಡು ಹೋಗಿ ಅಲ್ಲಿಯೂ ಈ ಭಸ್ಮಾವಶೇಷಗಳ ವಿಸರ್ಜನ ಕಾರ್ಯವನ್ನು ವಿಜೃಂಭಣೆಯಿಂದ ನಡೆಸಲಾಯಿತು. ಹೀಗೆ ಅಲ್ಲಹಾಬಾದಿನ ಮುಖ್ಯ ಕಾರ್ಯಕ್ರಮದ ದಿನವೇ ಅಖಿಲ ಭಾರತದಲ್ಲಿಯೂ ಈ ಕಾರ್ಯ ನಡೆಯಿತು. ಹಿಂದುಸ್ಥಾನದ ಎಲ್ಲ ತೀರ್ಥ ಕ್ಷೇತ್ರಗಳಲ್ಲಿಯೂ ಮಹಾತ್ಮಾ ಗಾಂಧಿಯವರ ಭಸ್ಮ ಮತ್ತು ಅಸ್ತಿಗಳನ್ನು ಜಲಕ್ಕೆ ಅರ್ಪಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಗೂ ಇಂಥ ಕಾರ್ಯಕ್ರಮವನ್ನು ನೆರವೇರಿಸುವ ಸುಯೋಗವು ದೊರೆತಿತ್ತು. ಮದ್ರಾಸಿನಿಂದ ಹಾಗೂ ಹುಬ್ಬಳ್ಳಿಯಿಂದ ಎರಡು ಕಡೆಗಳಿಂದ ಇಲ್ಲಿಗೆ ಮಹಾತ್ಮಾ ಗಾಂಧಿಯವರ ಪವಿತ್ರ ಭಸ್ಮವು ದೊರೆಯಿತು. ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳಿಗೂ ಇದರ ಅಂಶವನ್ನು ಕೊಡಲು ಸಾಧ್ಯವಾಯಿತು. ಮಂಗಳೂರಲ್ಲಿ ನೇತ್ರಾವತಿ ಮತ್ತು ಫಲ್ಗುಣಿ ನದಿಗಳು ಸಂಗಮವಾಗಿ ಸಮುದ್ರವನ್ನು ಸೇರುವಲ್ಲಿ ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಲಾಯಿತು. ಇದೇ ರೀತಿ ಉಡುಪಿಯ ವಡಭಾಂಡೇಶ್ವರ, ಉಪ್ಪಿನಂಗಡಿಯ ನೇತ್ರಾವತಿ ಮತ್ತು ಕುಮಾರಧಾರೀ ಸಂಗಮ ಮೊದಲಾದ ಹಲವು ಪವಿತ್ರ ಸ್ಥಳಗಳಲ್ಲಿ ಈ ಕಾರ್ಯ ನಡೆದು ನಮ್ಮ ಜಿಲ್ಲೆಯೂ ಮಹಾತ್ಮಾ ಗಾಂಧಿಯವರ ಭಸ್ಮಾವಶೇಷ ಸ್ಪರ್ಶದಿಂದ ಪಾವನವಾಯಿತು.

ದಹನ ಕ್ರಿಯೆಯಾದ ಬಳಿಕ ಭಸ್ಮ ಮತ್ತು ಅಸ್ತಿಗಳನ್ನು ತೀರ್ಥ ಕ್ಷೇತ್ರಗಳಲ್ಲಿ ಜಲಕ್ಕೆ ಅರ್ಪಿಸುವುದು ಸನಾತನ ಹಿಂದುಗಳು ಆಚರಿಸಿ ಬಂದ ರೂಢಿಯ ಸಂಪ್ರದಾಯವಿರುತ್ತದೆ. ಮರಣದ ನಂತರ ಉಳಿಯುವ ಜಡದೇಹವನ್ನು ಅಗ್ನಿಗೆ ಅರ್ಪಿಸಿ ದಹಿಸಿ ಮತ್ತೆಯೂ ಉಳಿಯುವ ಅವಶೇಷಗಳನ್ನು ಜಲದಲ್ಲಿ ನಿಮಜ್ಜಿಸುವ ಈ ಕಾರ್ಯಕ್ರಮವು ದೇಹವು ರಚಿತವಾಗಿರುವ ಪಂಚಭೂತಗಳನ್ನು ವಿಂಗಡಿಸಿ ಆಯಾ ಪಂಚಭೂತದ ಅಂಶವು ಅದಕ್ಕೇನೆ ಮರಳಿ ಸೇರುವಂತೆ ಅತ್ಯಂತ ಕ್ಷಿಪ್ರದಲ್ಲಿ ಸಾಧಿಸುವ ಉತ್ತಮ ರೀತಿಯ ಕಾರ್ಯಕ್ರಮವಿರುತ್ತದೆ.

ದೇಹದ ಮೇಲೆ ಸಕಲ ಪ್ರಾಣಿಗಳಿಗೂ ಇರುವ ಮಮತೆ ಅಥವಾ ಅಭಿಮಾನವನ್ನು ಕಿತ್ತೊಗೆಯಲು ಈ ಬಗೆಯ ಅಂತ್ಯಕ್ರಿಯೆಯ ಕಾರ್ಯಕ್ರಮವು ಬಹಳ ಸಹಕಾರಿಯಾಗಿರುತ್ತದೆಂಬುದರಿಂದಲೇ ಸನಾತನ ಹಿಂದುಗಳು ಇದನ್ನು ಆಚರಿಸುತ್ತ ಬಂದಿದ್ದಾರೆ. ದೇಹದ ಅಭಿಮಾನವನ್ನು ಬಿಟ್ಟು ತಾನು ಆತ್ಮ ಸ್ವರೂಪಿಯೆಂದು ತಿಳಿದುಕೊಳ್ಳುವುದು ಸನಾತನ ಹಿಂದೂ ಧರ್ಮದ ಮೂಲ ಸೂತ್ರವೆನ್ನಬಹುದು. ಮಾತ್ರವಲ್ಲ ಎಲ್ಲ ಧರ್ಮಗಳಿಗೂ ಇದೇ ಮೂಲ ಭಾವನೆಯೆಂದರೆ ತಪ್ಪಲ್ಲ.

ಬೆಳಗಿನ ಜಾವದಲ್ಲಿ ಪ್ರಾತಃಕಾಲದ ಪ್ರಾರ್ಥನೆಯನ್ನು ನಡೆಸುವಾಗ ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದ ಶ್ಲೋಕಗಳಲ್ಲಿ ಮೊದಲಿನ ಶ್ಲೋಕದ ಅರ್ಥವು ತಾನು ಪಂಚಭೂತ ಸಮೂಹವಾದ ಜಡದೇಹವಿರದೆ ಸಚ್ಚಿದಾನಂದ ಸ್ವರೂಪಿಯಾದ ಆತ್ಮನಿದ್ದೇನೆಂದು ಸ್ಮರಿಸುತ್ತೇನೆ ಎಂಬುದಾಗಿ ಇರುತ್ತದೆ. ಇದನ್ನು ಪ್ರತಿ ದಿನ ಪ್ರಾತಃಕಾಲ ಸ್ಮರಿಸುತ್ತಾ ಬಂದ ಮಹಾತ್ಮಾ ಗಾಂಧಿಯವರು ದೇಹಾಭಿಮಾನವನ್ನು ತೊರೆದವರಾದುದರಿಂದಲೇ ಅವರು ಧರ್ಮವನ್ನು ಚೆನ್ನಾಗಿ ಆಚರಿಸಿ ಮಹಾತ್ಮರಾಗಲು ಸಾಧ್ಯವಾಯಿತೆನ್ನಲು ಅಡ್ಡಿಯಿಲ್ಲ.

ದೇಹಾಭಿಮಾನವನ್ನು ತೊರೆಯುವುದೆಂದರೆ ಇದು ಕೇವಲ ಇಂಥ ಸ್ಮರಣೆ ಮಾಡುವುದರಿಂದ ಮಾತ್ರ ಸಾಧ್ಯವಾಗುವುದಲ್ಲ. ಆದುದರಿಂದಲೇ ಮಹಾತ್ಮಾ ಗಾಂಧಿಯವರು ಇದನ್ನು ಸಾಧಿಸುವ ಕ್ರಮವನ್ನು ಅತ್ಯಂತ ಶಾಸ್ತ್ರೀಯ ರೀತಿಯಿಂದ ವಿವರಿಸುವ ಗೀತೆಯನ್ನು ಆಶ್ರಯಿಸಿದರು. ಗೀತೆಯಲ್ಲಿಯ ಸ್ಥಿತಪ್ರಜ್ಞವರ್ಣನೆಯ ಹದಿನೆಂಟು ಶ್ಲೋಕಗಳು ಗಾಂಧೀಜಿಯವರ ನಿತ್ಯ ಪ್ರಾರ್ಥನೆಯ ಒಂದು ಮುಖ್ಯ ಅಂಶವಿದ್ದಿತು. ಎಲ್ಲ ಕಾಮಗಳನ್ನು ಬಿಟ್ಟು ಆತ್ಮಾನಂದದಲ್ಲಿರುವವನೇ ಸ್ಥಿತಪ್ರಜ್ಞನೆಂದು ಇದರಲ್ಲಿ ಹೇಳಿ ಎಲ್ಲ ಕಾರ್ಯಗಳನ್ನು ಬಿಡಲು ಇಂದ್ರಿಯಗಳನ್ನು ಹೇಗೆ ವಶಪಡಿಸಬೇಕೆಂಬುದನ್ನು ಇದರಲ್ಲಿ ವಿವರಿಸಲಾಗಿದೆ.

ಈ ಸ್ಥಿತಪ್ರಜ್ಞನಾಗಿ ಯಾರು ದೇಹವನ್ನು ತ್ಯಜಿಸುವರೋ ಅವರು "ಬ್ರಹ್ಮನಿರ್ವಾಣ"ವನ್ನೈದುತ್ತಾರೆಂದು ಇದರ ಕೊನೆಯ ಮಾತು ಇರುತ್ತದೆ. ಪ್ರತಿನಿತ್ಯದ ಪ್ರಾರ್ಥನೆಯಲ್ಲಿ ಈ ಸ್ಥಿತಪ್ರಜ್ಞದರ್ಶನವನ್ನು ಸೇರಿಸಿ ಅದರಂತೆ ಆಚರಿಸಲು ಯತ್ನಿಸಿದ ಮಹಾತ್ಮಾ ಗಾಂಧಿಯವರು ಗುಂಡಿನೇಟು ಬಿದ್ದೊಡನೆ ರಾಮನಾಮವನ್ನು ಉಚ್ಚರಿಸುತ್ತ ದೇಹವನ್ನು ತ್ಯಜಿಸಿದರು. ಗೀತೆಯು ಹೇಳುವ ಬ್ರಹ್ಮನಿರ್ವಾಣ ಅಥವಾ ಪುನಃ ಜನ್ಮವಿಲ್ಲದಿರುವ ಮೋಕ್ಷವನ್ನು ಮಹಾತ್ಮಾ ಗಾಂಧಿಯವರು ಸಾಧಿಸಿರುವರೆ?

ಮಹಾತ್ಮಾ ಗಾಂಧೀಯವರು ಇಂಥ ತನ್ನ ಸ್ವಂತದ ಮೋಕ್ಷವನ್ನು ಕೂಡ ಬಯಸುವವರಲ್ಲವೆಂಬುದನ್ನು ಅವರು ಪ್ರತಿನಿತ್ಯದ ಬೆಳಗಿನ ಪ್ರಾರ್ಥನೆಯಲ್ಲಿ ಹೇಳುತ್ತಿದ್ದ ಇನ್ನೊಂದು ಶ್ಲೋಕವು ಸಾರಿ ಹೇಳುತ್ತಿದೆ. ಈ ಶ್ಲೋಕದ ಅರ್ಥವು ತನಗೆ ರಾಜ್ಯ ಬೇಡ, ಸ್ವರ್ಗ ಬೇಡ, ಮೋಕ್ಷವೂ ಬೇಡ, ದುಃಖಿತರ ದುಃಖ ನಿವಾರಣೆಯೇ ತನಗೆ ಬೇಕಾದುದು ಎಂಬುದಾಗಿ ಇರುತ್ತದೆ. ಇದೇ ಗಾಂಧೀ ಜೀವನದ ಮೂಲ ಸೂತ್ರವಿದ್ದಿತು. ಗಾಂಧಿಜಿಯವರು ಸ್ವಂತ ಮೋಕ್ಷಾರ್ಥಿಗಳಲ್ಲ. ಇವರು ನಿತ್ಯಮುಕ್ತರೇ ಇದ್ದು ಲೋಕದ ದುಃಖ ಪರಿಹಾರಕ್ಕಾಗಿ ಅವತರಿಸಿದ ಮಹಾತ್ಮರೆಂದರೆ ಸತ್ಯವೇ ಇರುತ್ತದೆನ್ನಬಹುದು.

ಇನ್ನೊಮ್ಮೆ ತಾನು ಜನ್ಮಕ್ಕೆ ಬರುವುದಿದ್ದರೆ ಹರಿಜನರಲ್ಲಿ ಜನ್ಮ ತಾಳಲು ಆಶಿಸುತ್ತೇನೆ ಎಂದು ಇವರು ಒಮ್ಮೆ ಹೇಳಿದ್ದರು. ಅವರು ಬರೆದ ಕೊನೆಯ ಹರಿಜನ ಪತ್ರಿಕೆಯ ಸಂಚಿಕೆಯಲ್ಲಿ ದೇವಸ್ಥಾನ ಪ್ರವೇಶವನ್ನು ಕುರಿತು ಬರೆಯುತ್ತ ಹರಿಜನರಲ್ಲಿ ಅಥವಾ ಅವರೊಡನೆ ಸ್ವೇಚ್ಛೆಯಿಂದ ಆತ್ಮೀಯತೆ ಬೆಳೆಸಿದವರಲ್ಲಿ ಭಕ್ತ ನಂದನಾರನಂಥವನೊಬ್ಬನ ಬರವನ್ನು ತಾನು ಇದಿರು ನೋಡುತ್ತಿದ್ದೇನೆಂದು ಬರೆದಿದ್ದಾರೆ.

ಮಹಾತ್ಮಾ ಗಾಂಧಿಯವರು ಪುನಃ ಜನ್ಮಕ್ಕೆ ಬಂದು ಶ್ರಮಪಡದಂತೆ ಮಾಡುವುದು ನಾವು ಅವರ ಕಡೆಗೆ ಸಲ್ಲಿಸಬೇಕಾದ ನಮ್ಮ ಕರ್ತವ್ಯವಿರುತ್ತದೆ. ಅಸ್ಪೃಶ್ಯತೆಯನ್ನು ಸಂಪೂರ್ಣ ಹೋಗಲಾಡಿಸಿ ಮನಃಪೂರ್ವಕ ಹರಿಜನರಿಗೆ ದೇವಸ್ಥಾನ ಪ್ರವೇಶದ ಅಸ್ಪದ ಕೊಟ್ಟು ಈ ದೀನ ಜನರನ್ನು ಸುಖಿಗಳನ್ನಾಗಿ ಮಾಡುವುದು ಪ್ರತಿಯೊಬ್ಬ ಸನಾತನೀ ಹಿಂದುವೆನಿಸುವವನ ಕರ್ತವ್ಯವಿರುತ್ತದೆ.

ಮಹಾತ್ಮಾ ಗಾಂಧಿಯವರ ಜೀವನ, ಅವರ ಅಂತ್ಯ ಹಾಗೂ ಅಂತ್ಯ ಕ್ರಿಯೆಗಳು ಇಷ್ಟನ್ನು ಕಣ್ಣಾರೆ ಕಂಡವರು ಇವರು ಶುದ್ಧ ಸನಾತನ ಹಿಂದೂ ಧರ್ಮದ ಮೂರ್ತಿಸ್ವರೂಪರೆಂದು ತಿಳಿಯುವರೆಂದು ಆಶಿಸಬಹುದು. ಇಂಥವರಿಗೆ ಜನ್ಮವಿತ್ತ ಸನಾತನ ಹಿಂದೂ ಧರ್ಮವನ್ನು ಕುರಿತು ನ್ಯಾಯವಾದ ಅಭಿಮಾನ ತಾಳುವರು. ಮಾತ್ರವಲ್ಲ ಈಗ ಹಿಂದೂ ಸಮಾಜದಲ್ಲಿ ಸೇರಿಕೊಂಡಿರುವ ದೋಷಗಳನ್ನು ನಿವಾರಿಸಿ ಗಾಂಧೀಜಿಯವರು ಸೂಚಿಸಿದ ಅವಶ್ಯ ಸುಧಾರಣೆಗಳನ್ನು ತಂದೊಡ್ಡಿ ಹಿಂದೂ ಸಮಾಜವನ್ನು ಪುನಃ ಸಚೇತನಗೊಳಿಸಲು ದುಡಿಯುವರು ಎಂದು ಆಶಿಸೋಣ.

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಪ್ರಕರಣ

ಕಾಶ್ಮೀರದ ಪ್ರಕರಣದ ಕುರಿತು ಭಾರತ ಸರಕಾರವು ಭದ್ರತಾ ಸಮಿತಿಗೆ ಕೊಟ್ಟ ದೂರು ಹೆಚ್ಚು ಫಲಕಾರಿಯಾದಂತೆ ಕಾಣುವುದಿಲ್ಲ. ಈ ಪ್ರಕರಣವನ್ನು ವ್ಯಾದಿ ಇಡದೆ ಮುಂದುವರಿಸುವಂತೆ ಕೇಳಿಕೊಂಡು ಭಾರತ ಸರಕಾರದ ಪ್ರತಿನಿಧಿಗಳು ಮರಳಿ ಬಂದಿರುತ್ತಾರೆ.

ಸಂಯುಕ್ತ ರಾಷ್ಟ್ರ ಸಭೆಯು ಲೋಕ ಶಾಂತಿಯನ್ನು ಸಾಧಿಸುವಂಥ ಸಂಸ್ಥೆಯಾಗಲು ಸಮರ್ಥವಿನ್ನೂ ಆಗಿಲ್ಲವೆಂಬುದೇ ಇದರ ಸ್ಪಷ್ಟವಾದ ಅರ್ಥವಿರುತ್ತದೆ.

ಇದರಿಂದ ಲೋಕ ಶಾಂತಿಯನ್ನು ಅಪೇಕ್ಷಿಸುವ ಭಾರತದ ಜವಾಬ್ದಾರಿ ಇನ್ನೂ ಹೆಚ್ಚಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಕಾಶ್ಮೀರ ಪ್ರಕರಣವನ್ನು ಭಾರತ ಸರಕಾರವೇ ಪಾಕಿಸ್ಥಾನದೊಡನೆ ಸಂಧಿ ಸಾಧಿಸಿ ತೀರ್ಮಾನಿಸಿಕೊಳ್ಳಬೇಕು.

ಪಾಕಿಸ್ಥಾನದವರು ಈಗಲಾದರೂ ನ್ಯಾಯಕ್ಕೆ ಒಪ್ಪುವರೇ?

ಭಾರತದಲ್ಲಿ ಕಡಿಮೆ ಸಂಖ್ಯಾಕರಿರುವ ಮುಸ್ಲಿಂ ಬಂಧುಗಳ ರಕ್ಷಣೆಗಾಗಿ ಹಣ್ಣಾದ ಮಹಾತ್ಮಾ ಗಾಂಧಿಯವರು ತನ್ನ ಪ್ರಾಣವನ್ನೇ ಕೊಟ್ಟರು. ಇಲ್ಲಿಯ ಮುಸ್ಲಿಮರು ಮುಂದೆ ಹಿಂದು ಮುಸ್ಲಿಮರು ಐಕ್ಯ ಭಾವದಿಂದ ವರ್ತಿಸುವರೆಂದು ನಾವು ಆಶಿಸುವುದು ಹೆಚ್ಚಲ್ಲ. ಪಾಕಿಸ್ಥಾನದ ಮೇಲೆ ಇದರ ಪರಿಣಾಮವಾಗದೆ ಇದ್ದೀತೆ? ಅಲ್ಲಿಯ ಮುಸ್ಲಿಮರೂ ಇನ್ನು ಎಚ್ಚರೆಯುವರೆಂದು ನಾವು ನಂಬುತ್ತೇವೆ. ಪಾಕಿಸ್ಥಾನದ ಮುಸ್ಲಿಮರಲ್ಲಿಯೂ ಜಾಗ್ರತಿ ಹುಟ್ಟಿದರೆ ಪಾಕಿಸ್ಥಾನ ಸರಕಾರದವರು ಒಂದೇ ಭಾರತದೊಡನೆ ನ್ಯಾಯವಾದ ಸಂಧಿಗೆ ಒಪ್ಪುವರು ಇಲ್ಲವೆ ಅಲ್ಲಿಯ ಸರಕಾರ ಬದಲಾವಣೆಯಾಗುವುದು.

ಅಂತೂ ಕಾಶ್ಮೀರ ಪ್ರಕರಣ ನ್ಯಾಯವಾಗಿ ಇತ್ಯರ್ಥ ಹೊಂದುವಂತೆ ಮಾಡುವ ನಿಜವಾದ ಸೂತ್ರವು ನಮ್ಮ ಕೈಯಲ್ಲಿ ಇರುತ್ತದೆ. ಮಹಾತ್ಮಾ ಗಾಂಧಿಯವರು ಅದನ್ನು ಕಾರ್ಯತಃ ಸೂಚಿಸಿದ್ದಾರೆ. ಅದರಂತೆ ಎಲ್ಲರೂ ಇಲ್ಲಿಯ ಮುಸ್ಲಿಮರ ಪೂರ್ಣ ವಿಶ್ವಾಸವನ್ನು ಗಳಿಸುವುದೇ ಭಾರತ ಮತ್ತು ಪಾಕಿಸ್ಥಾನಗಳ ಮೈತ್ರಿಯನ್ನು ಸಾಧಿಸಲು ಇರುವ ಏಕಮಾತ್ರ ದಾರಿಯೆನ್ನಬಹುದು. ಭಾರತದಲ್ಲಿಯ ಹಿಂದೂ ಸಮಾಜವು ಇದನ್ನು ತಿಳಿದುಕೊಳ್ಳುವಂತಾಗಲಿ.

ಜಾತೀಯ ಸಂಸ್ಥೆಗಳ ಮುಕ್ತಾಯ

ರಾಷ್ಟ್ರೀಯ ಸ್ವಯಂಸೇವಕ ಸಂಘ, ಮುಸ್ಲಿಮ್ ನೇಶನಲ್ ಗಾರ್ಡ್ಸ್ ಮತ್ತು ಖಾಕ್ಸರ್ ಸಂಸ್ಥೆಗಳನ್ನು ಭಾರತ ಸರಕಾರವು ಕಾನೂನು ಬಾಹಿರ ಸಂಸ್ಥೆಗಳೆಂದು ಸಾರಿ ಇದರಲ್ಲಿಯ ಮುಖ್ಯ ಕೆಲಸಗಾರರನ್ನು ಬಂಧಿಸುವ ಏರ್ಪಾಡು ನಡೆದಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ತನಕ ಸುಮಾರು ೫೩ ಮಂದಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲಸಗಾರರ ದಸ್ತಗಿರಿ ನಡೆದಿರುತ್ತದೆ. ಮುಂದೆ ಈ ಸಂಘದ ಬಗ್ಗೆ ಯಾವ ಕಾರ್ಯವನ್ನು ಮಾಡುವುದಿಲ್ಲವೆಂದು ಮುಚ್ಚಳಿಗೆ ಬರೆದುಕೊಡುವವರನ್ನು ಬಿಡುಗಡೆ ಮಾಡುವರೆಂದು ತಿಳಿದು ಬರುತ್ತದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ ಅಥವಾ ಆರ್. ಎಸ್. ಎಸ್. ಎಂದು ಕರೆಯಲ್ಪಡುವ ಈ ಸಂಸ್ಥೆಯು ಹಿಂದೂ ಸಮಾಜದ ಮೇಲಿನ ಅಂಧ ಅಭಿಮಾನ ಹಾಗೂ ಮುಸ್ಲಿಮರ ದ್ವೇಷದ ಮೇಲೆ ಕಟ್ಟಿರುವ ಸಂಸ್ಥೆಯೆಂಬುದು ಈಗ ಸ್ಪಷ್ಟವಾಗಿರುತ್ತದೆ. ಈ ಸಂಸ್ಥೆಗೆ ಸೇರಿದವರು ಇದರಿಂದಾದ ಅನಾಹುತವನ್ನು ತಿಳಿದುಕೊಂಡು ಸಂತೋಷದಿಂದ ಇದನ್ನು ಮುಚ್ಚಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ.

ಕಾಂಗ್ರೆಸ್ ಕೆಲಸಗಾರರಾದರೂ ಆರ್ ಎಸ್. ಎಸ್. ಕೆಲಸಕ್ಕೆ ಸೇರಿದ ತರುಣ ಒಲಿಸಿಕೊಳ್ಳುವುದು ತಮ್ಮ ಕರ್ತವ್ಯವೆಂದು ತಿಳಿದುಕೊಳ್ಳಬೇಕಾಗಿದೆ. ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ರಮವು ಶಿಥಿಲವಾದುದೇ ಆರ್. ಎಸ್. ಎಸ್ ಬೆಳವಣಿಗೆಗೆ ಮೂಲ ಕಾರಣವೆಂಬ ಮಾತನ್ನು ಮರೆಯಲಾಗದು. ತರುಣರ ಉತ್ಸಾಹ, ದೇಶಾಭಿಮಾನ, ಸೇವಾಶಕ್ತಿ ಮೊದಲಾದವುಗಳಿಗೆ ಕಾಂಗ್ರೆಸ್ ಸಂಸ್ಥೆಯು ಅವಶ್ಯವುಳ್ಳ ಆಸ್ಪದವನ್ನು ಕಲ್ಪಿಸಿಕೊಟ್ಟಿದ್ದರೆ ನಮ್ಮ ತರುಣರು ಈ ಜಾತೀಯತಾ ಭಾವನೆಗೆ ಬಲಿಬೀಳುತ್ತಿರಲಿಲ್ಲ. ತರುಣರಲ್ಲಿಯ ಉತ್ಸಾಹ ಬರಿದಾದ ತಾಟಸ್ಥ್ಯವನ್ನನುಸರಿಸಿ ಇರುವುದು ಶಕ್ಯವಿಲ್ಲ. ಅದುದರಿಂದ ಅದು ಆರ್ ಎಸ್ ಎಸ್ ದಾರಿ ಹಿಡಿಯಿತು. ಇದರಲ್ಲಿ ಸೇರಿಕೊಂಡ ತರುಣರನ್ನು ನಿಂದಿಸುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಆರ್ ಎಸ್ ಎಸ್ ಸಂಸ್ಥೆಯ ಧ್ಯೇಯಗಳ ದೋಷ ಈಗ ಇವರೆಲ್ಲರಿಗೆ ಸಹಜವಾಗಿ ಸ್ಪಷ್ಟವಾಗಿರಬೇಕು. ಇಂಥ ಪರಿಸ್ಥಿತಿಯಲ್ಲಿ ವ್ಯರ್ಥವಾಗಿ ಅವರ ಮನಸ್ಸು ನೋಯಿಸದೆ ಅವರಿಗೆ ಉತ್ತಮವಾದ ನಿಜವಾದ ರಾಷ್ಟ್ರೀಯ ಕೆಲಸದ ಆಸ್ಪದ ಕಲ್ಪಿಸಿಕೊಟ್ಟು ಇದಕ್ಕೆ ಒಲಿಸಿಕೊಳ್ಳಬೇಕಾಗಿರುತ್ತದೆ.

ಆರ್ ಎಸ್ ಎಸ್ ತರುಣರಾದರೂ ಹಟಸಾಧನೆಗೆ ಇಳಿಯದೆ ಜಾತೀಯತಾ ಅಭಿಮಾನವು ಅನಾಹುತಕಾರಿಯೆಂದು ಮನಗಂಡು ತಮ್ಮ ಈಗ ಕಾನೂನು ಬಾಹಿರವೆಂದು ಜನತಾ ಸರಕಾರದಿಂದಲೇ ಸಾರಲ್ಪಟ್ಟ ಸಂಸ್ಥೆಯನ್ನು ತ್ಯಜಿಸಿ ನ್ಯಾಯವಾದ ದಾರಿಯಲ್ಲಿ ದೇಶ ಸೇವೆಯನ್ನು ಸಲ್ಲಿಸುವ ಆತುರತೆಯನ್ನು ಕೈಕೊಳ್ಳಬೇಕಾಗಿ ಸೂಚಿಸುತ್ತೇವೆ.

ಲೋಕ ಸೇವಾ ಸಂಘ

ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ ಸಂಸ್ಥೆಯನ್ನು ಸುಧಾರಿಸುವ ಕುರಿತು ತಮ್ಮ ಸೂಚನೆಗಳನ್ನು ಬರೆದಿಟ್ಟಿದನ್ನು ಭಾರತ ರಾಷ್ಟ್ರ ಸಭೆಯ ಕಾರ್ಯದರ್ಶಿಯವರು ಈಗ ಪ್ರಕಟಿಸಿರುತ್ತಾರೆ. ರಾಜಕೀಯ ಸ್ವಾತಂತ್ರ್ಯ ಪಡೆಯುವುದು ಕಾಂಗ್ರೆಸಿನ ಧ್ಯೇಯವಿತ್ತು. ಅದು ಈಗ ಸಾಧಿಸಲ್ಪಟ್ಟಿರುತ್ತದೆ. ಆದ್ದರಿಂದ ಈ ತನಕದ ಕಾಂಗ್ರೆಸ್ ಸಂಸ್ಥೆಯ ಸ್ವರೂಪವನ್ನು ಈಗ ಅಂತ್ಯಗೊಳಿಸಬಹುದು. ಮುಂದೆ ಅದಕ್ಕೆ ಲೋಕ ಸೇವಾ ಸಂಘವೆಂದು ಕರೆದು ಜನರ ಸೇವೆಯನ್ನು ಕೈಕೊಳ್ಳುವವರ ಸಂಸ್ಥೆಯನ್ನಾಗಿ ಮಾರ್ಪಡಿಸುವುದೇ ಸರಿಯಾದ ದಾರಿ. ಇದರ ಸಂಘಟನೆ ಸೈನ್ಯದ ಕ್ರಮದಲ್ಲಿದಬಹುದು. ಇದರ ಸೈನಿಕರು ಮಾತ್ರ ಅಹಿಂಸಾ ಮಾರ್ಗವನ್ನು ಕೈಕೊಂಡು ನಡೆಯಬೇಕು. ಐದೈದು ಮಂದಿ ಪಂಚಾಯತ ತಂಡಗಳನ್ನು ಕಟ್ಟಿ ಅವರೆಲ್ಲ ತಮ್ಮ ಮುಂದಾಳುಗಳನ್ನು ಆರಿಸಿ ಬುಡದಿಂದ ಈ ಸಂಸ್ಥೆಯನ್ನು ಕಟ್ಟಿಕೊಂಡು ಬರಬೇಕು. ಅಖಿಲ ಭಾರತ ಚರಖಾ ಸಂಘ, ಗ್ರಾಮ ಉದ್ಯೋಗ ಸಂಘ ಮೊದಲಾದ ಸಂಸ್ಥೆಗಳು ಇವರ ಆಶ್ರಯದಲ್ಲಿ ಕೆಲಸ ಮಾಡಬೇಕು. ಈ ಲೋಕ ಸೇವಾ ಸಂಘವು ಭಾರತದಲ್ಲಿ ನಿಜವಾದ ಆರ್ಥಿಕ ಹಾಗೂ ನೈತಿಕ ಸ್ವಾತಂತ್ರ್ಯವುಳ್ಳ ಸ್ವರಾಜ್ಯ ಸ್ಥಾಪನೆಯ ಧ್ಯೇಯವಿಟ್ಟುಕೊಂಡು ದುಡಿಯಬೇಕು. ಇದಕ್ಕೆ ಸೇರುವವರೆಲ್ಲರೂ ಖಾದೀ ಧಾರಣೆ ಅಸ್ಪೃಶ್ಯತಾ ನಿವಾರಣೆ ಮೊದಲಾದುವನ್ನು ಸ್ವತಃ ಆಚರಿಸುವವರೇ ಇರಬೇಕು.

ಈ ರೀತಿಯಲ್ಲಿ ಕೊಟ್ಟಿರುವ ಈ ಸೂಚನೆಗಳು ಮಹತ್ವದ ಸೂಚನೆಗಳಾಗಿದ್ದು ಕುಂಬಾ ಪರಿಣಾಮಕಾರಿಯಾಗುವಂತಿರುವುದರಿಂದ ರಾಷ್ಟ್ರ ಸಭೆಯ ಅಖಿಲ ಭಾರತ ಸಮಿತಿಯು ಇವನ್ನು ಅಂಗೀಕರಿಸಬೇಕೆಂದು ನಾವು ಆಗ್ರಹಪೂರ್ವಕ ವಿನಂತಿ ಮಾಡಿಕೊಳ್ಳುತ್ತೇವೆ.

ಮಹಾತ್ಮಾ ಗಾಂಧಿ ಸ್ಮಾರಕ ನಿಧಿ

ಭಾರತರಾಷ್ಟ್ರ ಸಭೆಯು ವರ್ಕಿಂಗ್ ಕಮಿಟಿಯವರು ಮಹಾತ್ಮಾ ಗಾಂಧಿಯವರ ಕೊಲೆಗಾಗಿ ದುಃಖ ಹಾಗೂ ನಾಚಿಕೆಗಳನ್ನು ವ್ಯಕ್ತಪಡಿಸಿ ನಿರ್ಣಯ ಮಾಡಿದ್ದಲ್ಲದೆ ಇವರ ಸ್ಮಾರಕ ನಿಧಿಯೊಂದನ್ನು ಶೇಖರಿಸುವ ನಿರ್ಣಯವನ್ನು ಮಾಡಿರುತ್ತಾರೆ. ಮಹಾತ್ಮಾ ಗಾಂಧಿಯವರು ಹಾಕಿಕೊಟ್ಟಿರುವ ವಿಧಾಯಕ ಕಾರ್ಯಕ್ರಮವನ್ನು ಇಡೀ ಭಾರತದಲ್ಲಿ ನಡೆಸುವುದಕ್ಕಾಗಿ ಈ ನಿಧಿಯನ್ನು ಉಪಯೋಗಿಸಲಾಗುತ್ತದೆ. ಪ್ರತಿಯೊಬ್ಬ ಭಾರತೀಯನೂ ತನ್ನ ಹತ್ತು ದಿನಗಳ ಸಂಪಾದನೆಯಷ್ಟನ್ನು ಈ ನಿಧಿಗೆ ಕೊಡಬೇಕಾಗಿ ವರ್ಕಿಂಗ್ ಕಮಿಟಿಯವರು ವಿನಂತಿ ಮಾಡಿಕೊಂಡಿದ್ದಾರೆ. ಹೀಗೆ ಎಲ್ಲರೂ ಕೊಟ್ಟಲ್ಲಿ ಸುಮಾರು ಐವತ್ತು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಸಂಗ್ರಹವಾಗಬಹುದೆಂದು ಅಂದಾಜು ಮಾಡಲಾಗಿದೆ.

ಮಹಾತ್ಮಾಗಾಂಧಿಯವರು ಹಾಕಿಕೊಟ್ಟಿರುವ ಬಲವಾದ ಅಡಿಗಟ್ಟಿನ ಮೇಲೆ ಅವರು ಚಿತ್ರಿಸುವಂಥ ನಿಜವಾದ ಸ್ವರಾಜ್ಯದ ಕಟ್ಟಡ ಕಟ್ಟುವುದೇ ಅವರಿಗೆ ತಕ್ಕುದಾದ ಸ್ಮಾರಕವಾಗಬಲ್ಲದೆಂದು ನಾವು ಕಳೆದ ಬಾರಿಯೇ ಸೂಚಿಸಿದ್ದೇವೆ. ಅವರು ತನ್ನ ಇಡೀ ಜೀವಮಾನವನ್ನರ್ಪಿಸಿ ಯಾವ ಉದ್ದೇಶಕ್ಕಾಗಿ ದುಡಿದರೋ ಆ ಉದ್ದೇಶವನ್ನು ಸಫಲಗೊಳಿಸಿದರೆ ಮಾತ್ರ ಅವರಿಗೆ ತೃಪ್ತಿಯಾಗಬಲ್ಲದು.

ದೇಶದ ಪ್ರಜೆಗಳೆಲ್ಲರೂ ಸುಖದಲ್ಲಿ ಬಾಳುವಂತಾಗಬೇಕೆಂಬುದೇ ಅವರ ಉದ್ದೇಶವಿತ್ತು. ಇದು ಸಾಧ್ಯವಾಗಬೇಕಾದರೆ ನಮ್ಮ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬನ ಮತ್ತು ಸ್ವಾತಂತ್ರ್ಯಗಳನ್ನು ಹೊಂದುವಂತಾಗಬೇಕೆಂದು ಅವರ ವಿಶ್ವಾಸವಿತ್ತು. ಈ ಧ್ಯೇಯ ಸಾಧನೆಗಾಗಿಯೇ ಅವರು ತಮ್ಮ ವಿಧಾಯಕ ಕಾರ್ಯಕ್ರಮವನ್ನು ಕಲ್ಪಿಸಿ ದೇಶದ ಮುಂದೆ ಇಟ್ಟಿದ್ದರು. ಕಳೆದ ಮೂವತ್ತು ವರ್ಷಗಳಲ್ಲಿ ಈ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಲು ಅವರು ಸತತವಾಗಿ ದುಡಿದಿದ್ದಾರೆ. ಆದರೂ ಅದು ಸಾಕಷ್ಟು ಮುಂದರಿದಿದೆ ಎಂದು ಹೇಳುವಂತಿಲ್ಲವೆಂಬುದು ಖೇದಜನಕವಿರುತ್ತದೆ.

ವಿಧಾಯಕ ಕಾರ್ಯಕ್ರಮಗಳಲ್ಲಿ ಮುಖ್ಯವಾದುದು ಖಾದೀ ಕಾರ್ಯಕ್ರಮ. ಹರಿಜನಸೇವೆ ಹಾಗೂ ಅಸ್ಪೃಶ್ಯತಾನಿವಾರಣೆ ದೇಶೀಯ ವಿದ್ಯಾಭ್ಯಾಸ ಹಿಂದೀ ಪ್ರಚಾರ ಇವೇ ಮೊದಲಾದವು ಉಳಿದ ಕೆಲಸಗಳು. ಇದೆಲ್ಲವನ್ನೂ ಗಾಂಧೀಜಿಯವರು ಮೇಲಿಂದ ಮೇಲೆ ಕಳೆದ ಮೂವತ್ತು ವರ್ಷಗಳಿಂದ ಹೇಳುತ್ತ ಬಂದಿರುವರೆಂಬುದರಿಂದ ಈ ಕಾರ್ಯಕ್ರಮವು ಈಗ ಎಲ್ಲರಿಗೂ ಪರಿಚಯವುಳ್ಳ ವಿಷಯ. ಇದನ್ನು ಪೂರ್ಣವಾಗಿ ಆಚರಿಸಿದರೆ ಗಾಂಧೀಜಿಯವರು ಕಲ್ಪಿಸಿದಂಥ ನಿಜವಾದ ಸ್ವರಾಜ್ಯದ ಸ್ಥಾಪನೆಯಾಗುತ್ತದೆ. ದೇಶದ ಪ್ರಜೆಗಳೆಲ್ಲರೂ ಸುಖದಲ್ಲಿ ಬಾಳುವಂತಾಗುತ್ತದೆ.

ಈ ಕಾರ್ಯಕ್ರಮವನ್ನು ಸಾಧಿಸುವ ಕೆಲಸಗಾರರ ಸಂಘವನ್ನಾಗಿ ಕಾಂಗ್ರೆಸ್ ಸಂಸ್ಥೆಯನ್ನು ರೂಪಾಂತರಗೊಳಿಸಬೇಕೆಂಬುದೇ ಮೇಲೆಯೇ ಹೇಳಿದ ಗಾಂಧೀಜಿಯವರ ಸೂಚನೆಯ ಅರ್ಥವಿರುತ್ತದೆ.

ಅಂತೂ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವುದು ಅತ್ಯಂತ ಮಹತ್ವದ ಸಂಗತಿ. ಗಾಂಧೀಯವರ ಜೀವಿತಕಾಲದಲ್ಲಿ ಇದನ್ನು ಸಾಧಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ದೇಶದ ರಾಜಕೀಯ ಆಡಳಿತವು ಪರಕೀಯರ ಅಧೀನದಲ್ಲಿತ್ತು. ಆಗಿನ ಸರಕಾರದ ದಾರಿಯೇ ಬೇರೆ ಇತ್ತು. ಇಂಥ ಕಷ್ಟದ ಪರಿಸ್ಥಿತಿಯಲ್ಲಿ ಕೂಡಾ ಗಾಂಧೀಜಿಯವರು ಇದಕ್ಕಾಗಿ ಸತತವಾಗಿ ಶ್ರಮಪಟ್ಟುದರಿಂದ ಇವೆಲ್ಲ ಕಾರ್ಯಗಳ ಅಸ್ತಿವಾರವನ್ನು ಹಾಕಿಕೊಡಲು ಅವರು ಸಮರ್ಥರಾದರು.

ಈಗ ಪರಿಸ್ಥಿತಿಯು ತೀರ ಭಿನ್ನವಿರುತ್ತದೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವು ದೊರೆತು ಪ್ರಜೆಗಳ ಪ್ರತಿನಿಧಿಗಳೇ ರಾಜ್ಯಾಡಳಿತದ ಸೂತ್ರವನ್ನು ನಡೆಸುತ್ತಿದ್ದಾರೆ. ಯಾವ ಉದ್ದೇಶದಿಂದ ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿದರೋ ಆ ಉದ್ದೇಶವನ್ನು ಇನ್ನು ಸಾಧಿಸುವುದು ನಿಜವಾಗಿಯೂ ಕಷ್ಟವಾಗಲಾರದು. ಗಾಂಧೀಯವರ ವಿಧಾಯಕ ಕಾರ್ಯವನ್ನು ಇನ್ನು ಮುಂದೊತ್ತಲು ಯಾವ ಅಡಚಣೆಯೂ ಬರುವುದು ಅಸಂಭವ. ದೇಶದ ಪ್ರಜೆಗಳು ತಾವಾಗಿ ಅದನ್ನು ತ್ಯಜಿಸಬೇಕಲ್ಲದೆ ಇತರರ ಅಡ್ಡಿ ಬರುವಂತಿಲ್ಲವೆಂಬುದು ಸ್ಪಷ್ಟವಷ್ಟೆ?

ಅಂದ ಮೇಲೆ ಮಹಾತ್ಮಾಗಾಂಧಿಯವರು ಇನ್ನೂ ಸ್ವಲ್ಪ ಸಮಯ ಬದುಕುವಂತಿದ್ದರೆ ಈ ಕಾರ್ಯವನ್ನು ಅವರು ಅನತಿದೂರದಲ್ಲಿಯೇ ಸಾಧಿಸುತ್ತಿದ್ದರು. ಆದರೆ ದೈವೇಚ್ಛೆಯು ಅದನ್ನು ಮಹಾತ್ಮಾಗಾಂಧಿಯವರಿಲ್ಲದೆ ನಾವೇ ಸಾಧಿಸುವರಾಗಬೇಕೆಂದು ಇದ್ದಂತೆ ಅನ್ನಿಸುತ್ತದೆ. ಭಾರತೀಯ ಪ್ರಜೆಗಳು ಗಾಂಧೀಜಿಯವರು ಸದಾ ಸ್ಮರಿಸಿ ಅವರ ಈ ಕಾರ್ಯವನ್ನು ಪೂರ್ಣ ಮಾಡಬೇಕೆಂದು ಆಶಿಸಿದರೆ ಹೆಚ್ಚಾಗುವುದೆ.

ಅಖಿಲಭಾರತದಲ್ಲಿ ಗಾಂಧೀಜಿಯವರ ಕಾರ್ಯಕ್ರಮಕ್ಕಾಗಿ ಉಪಯೋಗಿಸಲ್ಪಡುವ ನಿಧಿಯೇ ಮಹಾತ್ಮಾಗಾಂಧೀ ಸ್ಮಾರಕ ನಿಧಿಯೆಂದು 'ವರ್ಕಿಂಗ್ 'ಕಮಿಟಿಯವರು ನಿರ್ಣಯ ಮಾಡಿದ್ದಾರೆ. ಈ ನಿಧಿಯ ಸಂಗ್ರಹವು ಈ ಕಾರ್ಯವನ್ನು ಮುಂದೊತ್ತಲು ಮೊದಲ ಮೆಟ್ಟಿಲು ಮಾತ್ರವಲ್ಲ ಪ್ರತಿಯೊಬ್ಬರೂ ಕೈಕೊಳ್ಳಬೇಕಾದ ಪ್ರಥಮ ಕರ್ತವ್ಯ. ಮಹಾತ್ಮಾಗಾಂಧಿಯವರ ಮೇಲೆ ಆ ಪ್ರತಿಮ ಭಕ್ತಿಯನ್ನು ತೋರಿಸಿರುವ ದೇಶದ ಜನರು ಈ ನಿಧಿ ಸಂಗ್ರಹವನ್ನು ಪೂರ್ಣ ಯಶಸ್ವಿಗೊಳಿಸಿ ಅವರ ಕಾರ್ಯ ಸಫಲವಾಗುವಂತೆ ಮಾಡುವರೆಂದು ನಂಬಲು ಅಡ್ಡಿಯಿಲ್ಲ.

ಈ ದೇಶದ ಪ್ರಜೆಗಳಲ್ಲಿ ಪ್ರತಿಯೊಬ್ಬರು ತನ್ನ ಹತ್ತು ದಿನದ ಸಂಪಾದನೆ ಈ ಸ್ಮಾರಕ ನಿಧಿಗೆ ಕಾಣಿಕೆಯಾಗಿ ಅರ್ಪಿಸಬೇಕೆಂದು ವರ್ಕಿಂಗ್ ಕಮಿಟಿಯು ಸೂಚಿಸಿರುತ್ತದೆ. ಮಹಾತ್ಮಾಗಾಂಧಿಯವರು ತನ್ನ ಇಡೀ ಜೀವಮಾನವನ್ನೇ ಅರ್ಪಿಸಿ ಶ್ರಮಿಸಿದ ಕೆಲಸಕ್ಕೆ ನಮ್ಮ ಹತ್ತು ದಿನಗಳ ಸಂಪಾದನೆಯನ್ನಾದರೂ ಧಾರೆ ಯೆರೆಲು ಯಾರೂ ಹಿಂದೆ ಹೋಗಬಾರದು.

ಪ್ರತಿಯೊಬ್ಬರೂ ಸಾರ್ವಜನಿಕ ಸೇವೆಯನ್ನೇ ಕೈಕೊಳ್ಳಲು ಸಾಧ್ಯವಿಲ್ಲ. ಆದರೆ ಸ್ಮಾರಕ ನಿಧಿಗೆ ಪ್ರತಿಯೊಬ್ಬರೂ ಹತ್ತು ದಿನಗಳ ಸಂಪಾದನೆ ಕೊಡಬಹುದು. ಈಗಿನ ದಿನಗಳು ಆರ್ಥಿಕ ದೃಷ್ಟಿಯಿಂದ ಕೆಲವರಿಗೆ ಸುಗಮವಾಗಿಯೂ ಕೆಲವರಿಗೆ ಕಷ್ಟತರವಾಗಿಯೂ ಇವೆಯೆಂಬುದು ನಿಜ. ಆದರೂ ಇಷ್ಟನ್ನು ಮನಸ್ಸಿದ್ದರೆ ಪ್ರತಿಯೊಬ್ಬನೂ ಮಾಡಬಹುದು.

ಸ್ಮಾರಕ ನಿಧಿಗೆ ವಂತಿಗೆ ಕೊಡುವುದರ ಜೊತೆಗೆ ವಿಧಾಯಕ ಕಾರ್ಯಕ್ರಮದಲ್ಲಿ ಸೂಚಿತವಾದ ಕಾರ್ಯದಂತೆ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಂತದ ಮಟ್ಟಿಗಾದರೂ ಆಚರಿಸಿದರೆ ತಾವು ಕೊಟ್ಟ ವಂತಿಗೆಗೆ ಒಂದು ಅರ್ಥವೂ ಬರುತ್ತದೆಂದು ಮರೆಯಲಾಗದು. ಅಂದರೆ ಸ್ವತಃ ನೂಲುವುದು, ಖಾದಿ ಧರಿಸುವುದು, ಅಸ್ಪೃಶ್ಯತೆ ಆಚರಿಸದಿರುವುದು, ಹಿಂದೀ ಕಲಿಯುವುದು ಇದನ್ನೆಲ್ಲ ಪ್ರಜೆಗಳೆಲ್ಲರೂ ತಮ್ಮ ತಮ್ಮ ಮಟ್ಟಿಗೆ ಸಾಧಿಸಲು ಯತ್ನಿಸಬೇಕಾಗಿದೆ. ಆಗ ಸಾರ್ವಜನಿಕ ಕೆಲಸಗಾರರಾಗುವವರ ಕಾರ್ಯವೂ ಸುಲಭವಾಗುತ್ತದೆ. ಜನರೇ ಈ ಕಾರ್ಯಕ್ರಮದಂತೆ ಆಚರಿಸಲುಬೇಕಾಗುವ ಅನುಕೂಲತೆಗಳನ್ನು ಏರ್ಪಡಿಸುವ ಕೆಲಸ ಮಾತ್ರ ಕೆಲಸಗಾರರ ಪಾಲಿಗೆ ಉಳಿಯುತ್ತದೆ. ಇದಕ್ಕೆ ಬೇಕಾದ ಹಣದ ಅನುಕೂಲತೆ ಒದಗಿಸುವುದರಿಂದ ಕೆಲಸಗಾರರಾದರೂ ತಮ್ಮ ಕಾರ್ಯವನ್ನು ಚೆನ್ನಾಗಿ ನೆರವೇರಿಸಲು ಅನುಕೂಲವೇ ಆಗುತ್ತದೆ.

ಈ ರೀತಿ ಪ್ರಜೆಗಳಲ್ಲಿ ಎಲ್ಲರೂ ಸಹಕರಿಸದೆ ಮುಂದೆ ಕೆಲಸವು ಸಾಗುವಂತಿಲ್ಲವೆಂಬುದರಿಂದ ಮಹಾತ್ಮಾಗಾಂಧಿಯವರ ಮೇಲೆ ಭಕ್ತಿ ವಿಶ್ವಾಸಗಳನ್ನು ಹೀಗೆ ಕಾರ್ಯತಃ ತೋರಿಸಿ ಅವರ ಸ್ಮರಣೆಯು ಚಿರಸ್ಥಾಯಿಯಾಗುವಂತೆ ಎಲ್ಲರೂ ಮಾಡಬೇಕೆಂಬ ಭಾರತ ರಾಷ್ಟ್ರ ಸಭೆಯ ವಿನಂತಿಯನ್ನು ನಾವು ಆಗ್ರಹಪೂರ್ವಕ ಸಮರ್ಥಿಸುತ್ತೇವೆ.

ಶಾಲಾ ವರ್ಧಂತಿ

ನೆಲ್ಲಿಕಾರು ಬೋರ್ಡು ಶಾಲೆಯ ವರ್ಧಂತ್ಯುತ್ಸವವು ಇದೇ ತಾ ೧೪-೨-೪೮ರಲ್ಲು ಶ್ರೀಮಾನ್ ಎಂ. ಕೆ. ಅನಂತರಾಜ್ ಬಿ ಎ ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಮಕ್ಕಳ ಪಂದ್ಯಾಟ ಶಾಲೆಯ ವಿದ್ಯಾರ್ಥಿಗಳ ವಿವಿಧ ವಿನೋದಾವಳಿ, ಯಕ್ಷಗಾನ ನಾಟಕ ಇತ್ಯಾದಿ ಕಾರ್ಯಗಳೊಡನೆ ಸಂಭ್ರಮದಿಂದ ಜರಗಿತು.

ಮಹಾತ್ಮರ ಭಸ್ಮ ವಿಸರ್ಜನೆ

ಕಳೆದ ತಾ. ೧೨ರಂದು, ಮಂಗಳೂರಲ್ಲಿ ಮಹಾತ್ಮರ ಅಸ್ತಿ ಭಸ್ಮದ ವಿಸರ್ಜನಾ ಸಮಾರಂಭವು ದೇಶದ ಇತರ ಕಡೆಗಳಲ್ಲಿ ಜರಗಿದಂತೆ ಜರಗಿತು. ಜನವರಿ ತಾ. ೩೧ರಂದು ಆಚರಿಸಲ್ಪಟ್ಟಂತೆ ಸಂಪೂರ್ಣ ನಗರವೇ ಹರತಾಳವನ್ನಾಚರಿಸಿತ್ತು. ಅಂದು ಬೆಳಗಿನಿಂದ ಸಾಯಂಕಾಲ ತನಕ ಇಡೀ ನಗರವು ರಾಮನಾಮದ ಭಜನೆಯಿಂದ ಪ್ರತಿಧ್ವನಿಸಿತು. ಶೃಂಗರಿಸಲ್ಪಟ್ಟ ಗವರ್ನಮೆಂಟ ಕೋಲೇಜಿನ ಸಭಾಸದನವು ದರ್ಶನಾಪೇಕ್ಷಿ ಯಾತ್ರಿಕರಿಂದ ತುಂಬಿ ತುಳುಕಿದ್ದು ಪವಿತ್ರ ಕ್ಷೇತ್ರ ಸ್ಥಳದಂತೆ ಭಾಸವಾಗಿತ್ತು. ಚಿತಾ ಭಸ್ಮದ ಮೆರವಣಿಗೆಯು ಪವಿತ್ರ ಬ್ರಹ್ಮ ರಥೋತ್ಸವದ ವಿಜೃಂಭಣೆಯನ್ನು ನೆನಪಿಸುತಿತ್ತಾದರೂ ಜನಮನವು ಅಗಲಿದ ಮಹಾ ಪುರುಷರಿಗಾಗಿ ಮರಗುವುದನ್ನು ಸ್ಪಷ್ಟ ಪಡಿಸುವ ಭಾವ ತಾಳಿತ್ತು. ಉಚ್ಚ ಅಧಿಕಾರಿಗಳೂ ನಾಗರೀಕ ಪ್ರಮುಖರೂ ಜನಸಾಮಾನ್ಯರೊಡನೆ ಬೆರೆತು ಸಾಮ್ಯವಾದದ ಪೂರ್ಣ ಪೀಠಿಕೆ ಹಾಕಿದಂತೆ ತೋರುತಿತ್ತು. ಎಲೋಸಿಯಸ್ ಕೋಲೇಜಿನ ಮತ್ತು ಸಿಮ್ಮೇರಿಯೆಂಡು ವಾದ್ಯಗಳು ಶೋಕ ಸಂಗೀತವನ್ನು ಬಾರಿಸುತಿದ್ದವು. ಓವರ್ ಇಟೀಲಿಯನ್ ಪಾದ್ರಿಯು ಶ್ರದ್ಧೆಯಿಂದ ರಾಗ ನಿರ್ದೇಶ ಮಾಡುತಿದ್ದನು. ಉರಿಯುವ ಬಿಸಿಲನ್ನು ಅಲಕ್ಷಿಸಿ ಏರಿ ಕಳೆಯು ಪ್ರಚಂಡ ಜನ ಸಮುದಾಯವು ಶಿಸ್ತು ಸಹಿಷ್ಣುತೆಯ ಮಾದರಿಯನ್ನು ಕಲ್ಪಿಸಿದಂತೆ ಭಾಸವಾಗುತಿತ್ತು. ಒಂದು ಕಾಲದಲ್ಲಿ ರಾಷ್ಟ್ರೀಯತ್ವವನ್ನು ಮುರಿದಿಕ್ಕುವ ದಿಗಿಲಿನ ವಾಹನಗಳಾದ ಪೋಲಿಸ್ ವ್ಯಾನುಗಳಿಂದಲೂ ರಾಮನಾಮ ಮತ್ತು ಗಾಂಧಿ ಜೈಕಾರಗಳು ಕೇಳಿ ಬರುತಿದ್ದುದು ಸ್ಫೂರ್ತಿದಾಯಕವಾಗಿತ್ತು. ಇಷ್ಟೊಂದು ಪ್ರಚಂಡ ಜನಸ್ತೋಮವು ತನ್ನ ವರ್ತನೆಯಲ್ಲಿ ಅಂದು ತೋರಿಸಿದ ನಮ್ರಭಾವವು ಅಮರ ಮಹಾತ್ಮನ ವ್ಯಕ್ತಿತ್ವವು ಪ್ರತಿಯೊಬ್ಬನಲ್ಲೂ ಚಿತ್ರವೊತ್ತಾಗಿ ಪ್ರಭಾವಿಸಿದ ಅಮೋಘ ನಿದರ್ಶನವಾಗಿತ್ತು. ಅವರು ಜನಾಂಗ ಜನಕರು ಮಾತ್ರವಲ್ಲ ಜನಾಂಗವೇ ಅವರಾಗಿದ್ದರು ಎಂದು ನಿರೂಪಿಸಿದ ಪಂಡಿತ್ ನೆಹರುರವರ ಹೇಳಿಕೆ ಅಕ್ಷರಶಃ ಸತ್ಯವೇ ಆಗಿದೆ

ರಥೋತ್ಸವ

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವ ಸಮಾರಂಭಗಳು ತಾ ೧೮ರಂದು ಅವಭೃತ ಸ್ನಾನದೊಂದಿಗೆ ಕೊನೆಗೊಂಡವು ಈ ಕಲ ಮೂರು ದಿನಗಳಲ್ಲಿ ಭೂರಿ ಸಮಾರಾಧನೆಗಳಿದ್ದವು ಶ್ರೀ ಕಾಶೀ ಮಠದ ಸ್ವಾಮಿಜಿಗಳವರು ಶಿಷ್ಯ ಸಮೇತರಾಗಿ ಚಿತ್ತೈಸಿದ್ದರಲ್ಲದೆ ಇಲ್ಲಿಯೇ ಆರೋಗ್ಯ ಶುಶ್ರೂಷೆಗಾಗಿ ಉಳಕೊಂಡಿರುವ ಶ್ರೀ ಗೋಕರ್ಣ ಮಠಾಧೀಶರೂ ಉತ್ಸಹಗಳಲ್ಲಿ ಭಾಗವಹಿಸಲು ದಯಮಾಡಿಸಿದ್ದರು

ಜಿಲ್ಲಾ ಸಮಾಚಾರ

ವಾರ್ಷಿಕೋತ್ಸವ

ಇಲ್ಲಿಯ ವೈಶ್ಯ ಎಜುಕೇಶನ್ ಸೊಸೈಟಿಯ ವಾರ್ಷಿಕೋತ್ಸವವು ಪ್ರೊಹಿಬೀಶನ್ ಆಫೀಸರರಾದ ಶ್ರೀ ಲಕ್ಷ್ಮಣ್ ಶೇಟರ ಅಧ್ಯಕ್ಷತೆಯಲ್ಲಿ ತಾ ೧೫ರಂದು ಶೇಡಿಗುಡ್ಡೆಯ ಸಂಘದ ಕಟ್ಟಡದಲ್ಲಿ ಜರಗಿತು

ಆಹಾರ ಪರಿಸ್ಥಿತಿ

ಜಿಲ್ಲೆಯ ನಿಯಂತ್ರಣ ರದ್ದಾದ ಭಾಗಗಳಲ್ಲಿ ಅಕ್ಕಿಯ ಬೆಲೆಯು ಒಂದೇ ಸವನೆ ಏರಿದೆ ಯೆಂದು ತಿಳಿದುಬರುತ್ತದೆ ಇದು ತನಕ ಜಿಲ್ಲೆಯಿಂದ ಹೊರ ಹೋಗುತ್ತಿದ್ದ ಅಕ್ಕಿಯನ್ನು ಹಾಗಾಗದಂತೆ ನಿಷೇಧ ಹಾಕಲಾಗಿದೆ

ಪ್ರದರ್ಶನ

ಜಿಲ್ಲಾ ಕ್ಷೇಮ ನಿಧಿಯ ಸಹಾಯಕ್ಕಾಗಿ ಕೇಂದ್ರ ಮೈದಾನಿನ ವಿಶಾಲ ಸ್ಥಳದಲ್ಲಿ ವಿವಿಧ ವಿನೋದಾವಳಿಗಳೂ ವ್ಯಾಪಾರ ವಸ್ತು ಸಂಗ್ರಹಗಳೂ ಒಳಗೊಂಡಿರುವ ಪ್ರದರ್ಶನವೊಂದು ಪ್ರಾರಂಭವಾಗಿವೆ

ಕೆನರಾ ಚೇಂಬರ್ ಓಫ್ ಕೊಮರ್ಸ್

ಗಾಂಧೀಜಿಯವರ ಬಗ್ಗೆ ಯೋಗ್ಯ ಸ್ಮಾರಕವೊಂದನ್ನು ರಚಿಸಲು ಕೆನರಾ ಚೇಂಬರ್ ಓಫ್ ಕೊಮರ್ಸಿನವರು ಒಂದು ನಿಧಿಯನ್ನು ತೆರೆದಿರುವರು ಚೇಂಬರಿನ ಎಲ್ಲ ಸದಸ್ಯರು ಇದಕ್ಕೆ ಉದಾರವಾದ ವಂತಿಗೆಯನ್ನು ಕೊಡಬೇಕಾಗಿ ವಿನಂತಿಸಲಾಗಿದೆ

ಮಂಗಳೂರು ತರುಣ ಸಮಾಜವಾದೀ ಸಂಘ

ಮಂಗಳೂರು ತರುಣ ಸಮಾಜವಾದಿ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ತಾ ೧೫-೨-೪೮ನೇ ಆದಿತ್ಯವಾರ ಘಂಟೆ 10ಕ್ಕೆ ಸಮಾಜವಾದಿ ಪಕ್ಷ (ದ ಕ)ದ ಕಾರ್ಯಾಲಯದಲ್ಲಿ ಸಂಗಾತಿ ಧರ್ಮಪಾಲ ಜೈನ್ ಇವರ ಅಧ್ಯಕ್ಷತೆಯಲ್ಲಿ ಕೂಡಿತು. ಸಭೆಯಲ್ಲಿ ಸಂಘದ ಆರ್ಥಿಕ ಪರಿಸ್ಥಿತಿ, ಮುಂದೆ ಮಾಡಬಹುದಾದ ಕಾರ್ಯಕ್ರಮ ಇವೇ ಮುಂತಾದ ಮುಗಳ ವಿಷಯ ಚರ್ಚಿಸಲಾಯಿತು ಸಂಘದ ಸದಸ್ಯರಿಗಾಗಿ ಪ್ರತೀ ಬುಧವಾರ ಮತ್ತು ಆದಿತ್ಯವಾರಗಳಲ್ಲಿ ಅಭ್ಯಾಸ ಕೂಟಗಳನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು

ಇತ್ತೀಚೆಗೆ ನೆಹರೂ ಸರಕಾರವು ಜಾತೀಯತೆಯ ನಿರ್ಮೂಲನೆಗೆ ಕೈಕೊಂಡ ಕಾರ್ಯಕ್ರಮಗಳಿಗೆ ಸಂಘವು ಸಂಪೂರ್ಣ ಸಹಕಾರವನ್ನು ಕೊಡಬೇಕೆಂದು ನಿರ್ಧರಿಸಬೇಕೆಂದು ನಿರ್ಧರಿಸಿದಲ್ಲದೇ ಮೂರೆಂಟು ಜನ ಸದಸ್ಯರುಳ್ಳ ಎಂಟಿ ಕಮ್ಯುನಲ್ ಫ್ರಂಟ್ ಸಮಿತಿ (Anti Communual Front Action Committee) ಯೊಂದನ್ನು ನಿರ್ಮಿಸಲಾಯಿತು

ಶ್ರೀ ಸಿದ್ಧಾಶ್ರಮ

೮-೨-೪೮ ಸಾಯಂಕಾಲ ೪ ಘಂಟೆಗೆ ಬೋಳೂರು ಮಂಗಳಾದೇವಿ ರೋಡಿನ ವಿರಲ ನಿವಾಸದಿಂದ ಕಿಕ್ಕಿರಿದ ಭಕ್ತಸಂದಣಿಯಿಂದ ಮೆರವಣಿಗೆ ಹೊರಟು ರಾತ್ರೆ ೯ ಘಂಟೆಗೆ ಮಠದ ಭವ್ಯ ಚಪ್ಪರದಲ್ಲಿ ಆರತಿ ಗುರು ಪ್ರಸಾದವು ಶಾಂತಿಪೂರ್ವಕ ನಡೆಯಿತು

೯-೨-೪೮ ಪ್ರಾತಃಕಾಲ ಮಹಾ ವೈಭವದಿಂದ ಮಠದ ಉದ್ಘಾಟನೆ ನಡೆದು ಅಂದಿನಿಂದ ಅಖಂಡ ಶಿವ ಪಂಚಾಕ್ಷರಿ ನಾಮ ಭಜನ ೭ದಿನ ಪರಿಯಂತೆ ನಡೆಯಲಾರಂಭವಾಗಿದೆ ಅಲ್ಲದೆ ಬೆಳಿಗ್ಗೆ ೭ರಿಂದ ೯ರ ವರೆಗೆ ಶ್ರೀ ಸಿದ್ಧರೂಢ ಚರಿತೆ ಸಪ್ತಾಹ ಪಾರಣವನ್ನು ೭ದಿನ ಅಖಂಡವಾಗಿ ನಡೆಯಲ್ಪಡುತ್ತಿದೆ

೯-೨-೪೮ರಲ್ಲಿ ಸಾಯಂಕಾಲ ೬ ಘಂಟೆಯಿಂದ ೯ ಘಂಟೆ ವರೆಗೆ ಹರಿಕಥಾ ಧುರೀಣ ರಾಮಸ್ವಾಮಿ ನಾಯಿಡು ಇವರಿಂದ ಹರಿಕಥೆ ನಡೆಯಿತು ಆ ಮೇಲೆ ಹರಿಕಥಾ ಶ್ರೇಷ್ಠರಾದ ಕೊಡಗಿನ ಶ್ರೀಮಾನ್ ಗೋಪಾಲ ದಾಸರಿಂದ ಹರಿಕೀರ್ತನೆಯೂ ನಡೆಯಿತು

೧೦-೨-೪೮ರಿಂದ ೧೫-೨ ೧೯೪೮ರ ವರೆಗೆ ಶ್ರೀಮಾನ್ ಗೋಪಾಲದಾಸರಿಂದ ಹೃದ್ಯವಾಗ ವಂತ ಹರಿಕೀರ್ತನೆ ನಡೆಯಿತು

೧೩-೨-೪೮ರ ೬ ಘಂಟೆಗೆ ವೈದ್ಯಗುರು ಯಂ ಆರ್ ಭಟ್ ಇವರಿಂದ ಭಕ್ತಿಯ ವಿಷಯ ವ್ಯಾಖ್ಯಾನ ಓಜಸ್ವಿಯಾಗಿ ನಡೆಯಿತು

೧೪-೨-೪೮ಕ್ಕೆ ಶ್ರೀ ಹರಿಕೀರ್ತನೆ ನಡೆಯಿತ

೧೫-೨-೪೮ಕ್ಕೆ ದೇಶಭಕ್ತ ಶ್ರೀಮಾನ್ ಎನ್ ಎಸ್ ನಾರಾಯಣ ಕಿಲ್ಲೆಯವರ ಭಾಷಣವು ಜನರ ಮನೋರಂಜನವಾಗ ವಂತ ಅತ್ಯದ್ಭುತ ವ್ಯಾಖ್ಯಾನವಾಯಿತ

(ಶ್ರೀ ಸಿದ್ಧಾಶ್ರಮ ಭಾರತಿ)

ಮದ್ರಾಸು ಯುನಿವರ್ಸಿಟಿ ಸೆನೇಟು ಚುನಾವಣೆ

ನಮ್ಮ ಜಿಲ್ಲೆಯ ಮಂಗಳೂರು ಮತ್ತು ಉಡ್ಪಿಯಿಂದ ಮದ್ರಾಸು ಯುನಿವರ್ಸಿಟಿಗೆಯ ಸೆನೆಟಿಗೆ ನಡೆದ ಚುನಾವಣೆಯಲ್ಲಿ ಶ್ರೀ. ಲೀಲಾ ಬಾಯಿ ಕಾಮತರಿಗೆ 24 ಓಟುಗಳೂ, ಪ್ರತಿಸ್ಪರ್ಧಿಯಾದ ಡಾ। ಬಿ ಆರ್. ಹೆಗ್ಡೆಯವರಿಗೆ 29 ಓಟುಗಳು ದೊರಕಿ ಶ್ರೀಮತಿ ಲೀಲಾ ಬಾಯಿ ಕಾಮತರು ಚುನಾಯಿತರಾಗಿರುವರು.

ಉಚ್ಚಿಲ

ಹಳ್ಳಿಗಳಲ್ಲಿ ಹಸುಗೆ ಪದ್ಧತಿ ರದ್ದಾದ ಅನಂತರ ಜನರಿಗೆ ಆಹಾರ ಧಾನ್ಯಗಳನ್ನು ಕೊಂಡು ಕೊಳ್ಳಲು ಕಷ್ಟವಾಗದಂತೆ ಸರಕಾರದವರು ಅಲ್ಲಿ ರಿಲೀಫ್ ಅಂಗಡಿಗಳನ್ನು ತೆರೆಯಬೇಕೆಂದು ತೀರ್ಮಾನಿಸಿ ಹಾಗೆ ಜನರ ಸಂಕಷ್ಟಗಳನ್ನು ತಿಳಿದು ಅಗತ್ಯವಿದ್ದಲ್ಲಿ ರಿಲೀಫ್ ಅಂಗಡಿಗಳನ್ನು ತೆರೆಯುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುತ್ತಾರೆ ನಮ್ಮ ಸೋಮೇಶ್ವರ ಮತ್ತು ಕೋಟೆಕಾರು ಗ್ರಾಮಗಳಿಗೆ ಕೋಟೆಕಾರಿನಲ್ಲಿಯೇ ಒಂದು ರಿಲೀಫ್ ಅಂಗಡಿ ತೆರೆದಿದ್ದರೂ ಇಲ್ಲಿ ಅಕ್ಕಿ ಪಡೆಯುತ್ತಿರುವವರ ಸಂಖ್ಯೆ ಹೆಚ್ಚಾಗಿ ಜನರು ಪಡುತ್ತಿರುವ ಕಷ್ಟ ಹೇಳ ತೀರದು ಬೆಳಿಗ್ಗೆ ಅಕ್ಕಿಗೆ ಹೋದವರು ಸಾಯಂಕಾಲ ಮನೆಗೆ ಹಿಂತಿರುಗುತ್ತಾರೆ ಇದರಿಂದ ದಿನದ ದುಡಿತ ಸಂಪಾದಿಸುವವರಿಗೂ ಇಲ್ಲದಂತಾಗಿ ವಿದ್ಯಾರ್ಥಿಗಳೂ ಅಕ್ಕಿಗೆ ಹೋಗಿ, ಶಾಲು ಕುರಿತು ವಿದ್ಯಾಭ್ಯಾಸವೂ ಸರಿಯಾಗಿ ಇಲ್ಲದೆ ಹೋಗಿದೆ ಎರಡು ಗ್ರಾಮದವರಿಗೋಸ್ಕರ ಒಂದೇ ಅಂಗಡಿಯನ್ನು ತೆರೆದ ಉದ್ದೇಶವಾದರೂ ತಿಳಿಯದಾಗಿದೆ ಸೋಮೇಶ್ವರ ಗ್ರಾಮದಲ್ಲಿಯೇ ಸುಮಾರು ೬೦೦ಕ್ಕೂ ಮಿಕ್ಕಿ A ಕಾರ್ಡುದಾರರು ಇರುತ್ತಾರೆ ಬಡ ಜನರ ಸಂಕಷ್ಟವನ್ನು ನೀಗಿಸುವುದೇ ಉದ್ದೇಶವಾಗಿದ್ದರೆ ಅಕ್ಕಿಯನ್ನು ಕೊಟ್ಟೇ ತೀರಬೇಕು ಒಂದೇ ಅಂಗಡಿಯನ್ನು ತೆರೆದರೂ ಕೆಲವು ಅಂಗಡಿಗಳನ್ನು ತೆರೆದರೂ ಅಕ್ಕಿಯ ಖರ್ಚು ಅಷ್ಟೇ ಖರ್ಚಾಗುತ್ತದೆ ಸೋಮೇಶ್ವರ ಗ್ರಾಮದಲ್ಲಿ ಪ್ರತ್ಯೇಕ ರಿಲೀಫ್ ಅಂಗಡಿಯನ್ನು ತೆರೆಯುವುದರಿಂದ ಜನರಿಗೆ ತುಂಬಾ ಸುಲಭವಾಗುವುದು ಸರಕಾರಕ್ಕೂ ತೊಂದರೆ ಇರದು ಅಧಿಕಾರಿಗಳು ಇತ್ತ ದಯಮಾಡಿ ಗಮನಿಸುವರೇ?

ಮಂಗಲಪೇಟೆ

ತಾರೀಕು ೧೨ರಂದು ರಾಷ್ಟ್ರಪಿತ ಬಾಪೂಜೀಯವರ ಚಿತಾ ಭಸ್ಮ ವಿಸರ್ಜನಾ ದಿನಾಚರಣೆಯ ಸಲುವಾಗಿ ಬಾಳ ಮತ್ತು ಕುತ್ತೆತ್ತೂರು ಗ್ರಾಮಸ್ಥರಾದ ಸರ್ವಮತ ಬಾಂಧವರೊಟ್ಟಾಗಿ ಭಕ್ತಿ ಪೂರ್ವಕ ಮೆರವಣಿಗೆ, ಪ್ರಾರ್ಥನಾದಿಗಳನ್ನು ನೆರವೇರಿಸಿದರು ಮರುದಿನ ಬೆಳಿಗ್ಗೆ ಗಂಟೆ ೬-೩೦ರಿಂದ ಸಾಯಂಕಾಲ ಗಂಟೆ ೪-೩೦ರ ವರೆಗೆ ಸುಮಾರು ೨ಸಾವಿರಕ್ಕೂ ಮಿಕ್ಕಿದ ಹರಿಜನರೇ ಮೊದಲುಗೊಂಡು ಸರ್ವಮತೀಯರಿಗೂ ಪಾಯಸ ಲಾಡುಗಳೇ ಮುಂತಾದ ಫಲಾಹಾರಗಳನ್ನೀಯಲಾಯಿತು ಅಲ್ಲದೆ ಕುತ್ತೆತ್ತೂರು ಪಂಚಾಯತ ಕಾಡಿಗೆ ಮೇವಿಗಾಗಿ ಬಂದ ನೂರಾರು ದನಕರುಗಳಿಗೆ ಬೈಹುಲ್ಲು ನೀರುಗಳ ಏರ್ಪಾಡನ್ನೂ ಮಾಡಲಾಗಿದ್ದಿತು ಸಾಯಂ ಗಂಟೆ ೪-೩೦ಕ್ಕೆ ಕೂಡಿದ ಸಭೆಯಲ್ಲಿ ಶ್ರೀ ಬಾಳ ಮಂಜಣ್ಣ ಭಂಡಾರಿಯವರಿಂದ "ಸಂತಾಪ ಸೂಚಕ" ಭಾಷಣವೂ ಶ್ರೀ ಎಮ್ ಸುಂದರ ಕುದ್ವರಿಂದ "ಸ್ಥಿರ ಪ್ರತಿಜ್ಞಾ ಪೂರ್ವಕ ಶ್ರದ್ಧಾಂಜಲಿ" ಯನ್ನರ್ಪಿಸುವ ಭಾಷಣವೂ ನೆರವೇರಿದುವು ಕೊನೆಗೆ ಶ್ರೀ ಸುರತ್ಕಲ್ ಎಸ್ ಆರ್ ಹೆಬ್ಬಾರರು "ದೇವತ್ವವನ್ನೈದಿದ ಮಹಾತ್ಮಾ ಗಾಂಧೀಜೀ ದೇವಾಂಶ ಸಂಭೂತರು' ಎಂಬುದನ್ನು ಸಮರ್ಥಿಸಿ ವ್ಯಕ್ತಪಡಿಸುವ ಅವರ ಗುಣ ಕಥನ ಹಾಗೂ ನಮ್ಮ ಕರ್ತವ್ಯಗಳನ್ನು ನೆರೆದ ಆಬಾಲವೃದ್ಧರಿಗೂ ತಿಳಿಯುವಂತೆ ಹೃದಯಂಗಮವಾಗಿ ವಿವರಿಸಿ "ಸಬ್ ಕೋ ಸನ್ಮತಿದೇ ಭಗವಾನ್!" ಎಂಬ ಮಹಾತ್ಮರ ಅನುದಿನದ ಪ್ರಾರ್ಥನಾ ಗೀತವನ್ನು ಎಲ್ಲರಿಂದಲೂ ನುಡಿಸಿ ಹಾಡುವುದರೊಂದಿಗೆ ಜಯಘೋಷದಿಂದ ಸಭೆಯು ಕೊನೆಗೊಂಡಿತು.

ತಾ. *7-3-1948*ನೇ ಆದಿತ್ಯವಾರ ಸಾಯಂಕಾಲ ಘಂಟೆ 6ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ

ಸುಶ್ರಾವ್ಯ ಸಂಗೀತ ಕಚೇರಿ

ಶ್ರೀಮತಿ ಯಂ ಎಸ್. ಸುಬ್ಬುಲಕ್ಷ್ಮಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ- ಇವರ ಪಿಟೀಲು

ಶ್ರೀ ಕಲ್ಪಾತಿ ರಮಾನಾಥನ್-ಇವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರನ್-ಇವರ ಘಟವಾದ್ಯ

ಟಿಕೇಟು ದರ ಪೋಷಕ ವರ್ಗ ರೂ 100

I ರೂ 25, II ರೂ 10, III ರೂ 5, IV ರೂ 2

ಧ್ವನಿವರ್ಧಕಗಳ ಏರ್ಪಾಡು ರೇಡಿಯೋ ಸೇಲ್ಸ್ ಮತ್ತು ಸರ್ವಿಸ್ ತ್ರಿಚಿನಾಪಳ್ಳಿ ಇವರಿಂದ

ಈ ಮೊದಲು ಸಂಗೀತ ಕಚೇರಿಯು ನಡೆಯುವದೆಂದಿದ್ದ ತಾ 8-2-1948ನೇ ತಾರೀಕಿನ ಟಿಕೇಟುಗಳೇ ಈ ಸಂಗೀತ ಕಚೇರಿಗೂ ಅನ್ವಯಿಸುವವು ಜನರ ಸೌಕರ್ಯಕ್ಕಾಗಿ ಈ ಸಮಾರಂಭಕ್ಕೆ ಮಂಗಳೂರಿಗೆ ಬರಲಿಕ್ಕೂ ಹಿಂದೆ ಹೋಗಲಿಕ್ಕೂ ಎಲ್ಲ ಲೈನುಗಳಲ್ಲಿಯೂ ಬಸ್ ಸರ್ವಿಸ್‌ಗಳ ವ್ಯವಸ್ಥೆ ಮಾಡಲಾಗುವುದು.

೩ನೇ ಪುಟದಿಂದ

ಗಾಂಧೀಜಿಯ ರಾಮರಾಜ್ಯವೆಂತಹುದು?

ಮಕ್ರೊರ್ವ ಖಲೀಫನೂ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಿರುವನು.

ಬುದ್ಧನು ಸಮಸ್ತ ಜೀವರಾಶಿಯಲ್ಲಿ ದೈವೀಕ ಬಾಂಧವ್ಯವನ್ನೂ, ಕ್ರಿಸ್ತನು ವಿಶ್ವದ ಬಡವಬಲ್ಲಿದರ ಸಮಾನತೆಯನ್ನೂ, ಮಹಮ್ಮದನು ಲೋಕದ ಮಾನವರ ಭ್ರಾತೃತ್ವವನ್ನು ಸಾರಿ ಜಗತ್ತಿನ ಅತೀ ಶ್ರೇಷ್ಠ ಸಾಮ್ಯವಾದವನ್ನು ಸಾರಿದರು ಈ ನೀತಿ ಪ್ರವರ್ತಕರೆಲ್ಲರ ತತ್ವ ಮಹತ್ವವನ್ನು ಮಹಾತ್ಮಾ ಗಾಂಧಿಯವರು ಅಮೋಘ ಐಕ್ಯತೆಯಲ್ಲೊಡಗೂಡಿಸಿ ಆಧುನಿಕ ಜಗತ್ತಿನಲ್ಲಿ ಅಜರಾಮರವಾದ ರಾಮರಾಜ್ಯದ ಸಾಮ್ಯವಾದವನ್ನು ಪ್ರತಿಪಾದಿಸಿದರು.

ರಾಮರಾಜ್ಯದ ರಹಸ್ಯ

ಮಹಾತ್ಮರದು ನೀತಿ ಪ್ರಧಾನವಾದ, ಶಾಂತಿ ಪ್ರಧಾನವಾದ, ಸತ್ಯ ಪ್ರಧಾನವಾದ, ಅಹಿಂಸಾ ಪ್ರಧಾನವಾದ ಸಾಮ್ಯವಾದ ಶ್ರೀಮಂತರನ್ನುದ್ದೇಶಿಸಿ ಅವರು "ನ್ಯಾಯ ಪ್ರಮಾಣಿಕತೆಗಳಿಲ್ಲದೆ ಸಂಪಾದಿಸಿದ ಲಾಭದ ಮೇಲೆ ನಿಮಗೆ ಯಾವ ನೈತಿಕ ಹಕ್ಕಿಲ್ಲ. ಸ್ವಶ್ರಮದಿಂದ ಸಂಪಾದಿಸಲಾರದೆ ತಿನ್ನುವವನು ಚೌರ್ಯದ ದೋಷಕ್ಕೆ ಗುರಿಯಾಗುವನು." ಎಂದಿದ್ದರು ಹೀಗೆಂದ ಮಾತ್ರಕ್ಕೆ ಶ್ರೀಮಂತರು ತಮ್ಮ ಮಿಲಿಯಾವಧಿ ಹಣವನ್ನು ಕೋಟ್ಯಾವಧಿ ಬಡ ಜನರಿಗೆ ಹಂಚಬೇಕೆಂದರ್ಥವಲ್ಲ ಅವರು ತಮ್ಮ ಧನ ಸಂಚಯದ ಧರ್ಮದರ್ಶಿಗಳಾಗಿ ಸಂಪತ್ತನ್ನು ದೀನ ದಳಿತರುದ್ಧಾರಕ್ಕೆ ವಿನಿಯೋಗಿಸಿ ದೇಶದ ಸರ್ವತೋಮುಖ ಶಾಂತಿಗಾಗಿ ಯತ್ನಿಸತಕ್ಕದ್ದು ಈ ತತ್ವವನ್ನು ಮನ್ನಿಸಿ ಅದೆಷ್ಟೋ ಮಿಲಿಯಾಧೀಶರು ತಮ್ಮ ಸರ್ವಸ್ವವನ್ನು ಜನಾಂಗೋದ್ಧಾರಕ್ಕಾಗಿ ಗಾಂಧೀಜಿಯ ಪಾದಾರ್ಪಣ ಮಾಡಿದ್ದರು ಇಂದು ಟಾಟಾರವರು ಬಿರ್ಲಾಗಳವರು ಸಂಪೂರ್ಣ ಪರಿವರ್ತನ ಹೊಂದದಿರುವುದಕ್ಕೆ ಮಹಾತ್ಮರು ತಮ್ಮ ನಿರ್ಬಲತೆಯನ್ನೇ ಹಳಿಯುತ್ತಿದ್ದರು ಕಾಲ ಕ್ರಮದಲ್ಲಿ ಅವರಿಗೆ ವಿಜಯವು ಸಿದ್ಧವಿತು

(೨ನೇ ಪುಟದಿಂದ)

ಅವರ ಮರಣಾನಂತರವೂ ಅವರನ್ನು ಅನುಸರಿಸಬೇಡವೆ?

ಇದು ಸಿಟ್ಟಿಗಾಗಲಿ, ಪ್ರತಿಕಾರಕ್ಕಾಗಲಿ ಸಮಯವಲ್ಲ ಗಾಂಧೀಯವರ ಉಪದೇಶದಲ್ಲಿ ಅವೊಂದಕ್ಕೂ ಕಾಲವಿಲ್ಲ, ಸ್ಥಳವಿಲ್ಲ ನಮಗೆ ಅಗತ್ಯವಾದುದೆಂದರೆ, ಈ ಅಪಘಾತಕ್ಕೆ ಕಾರಣವಾದ ಅತ್ಯಘಾತಕವಾದ ಸಂಕುಚಿತ ಜಾತೀಯತೆಯನ್ನು ಧ್ವಂಸ ಮಾಡುವ ದೃಢನಿಶ್ಚಯ ಗಾಂಧಿಯವರ ರಾಜಕೀಯ, ಸಾಮಾಜಿಕ ಇಲ್ಲವೆ ಆರ್ಥಿಕ ಕಾರ್ಯಗಳಲ್ಲಿ ಯಾವಾಗಲೂ ಎರಡು ಮುಖಗಳಿದ್ದವು—ನಿಷೇಧಾತ್ಮಕ ಮತ್ತು ಅನುರೋಧಾತ್ಮಕ ಇಲ್ಲವೆ ರಚನಾತ್ಮಕ ಸದಾಶಯ ಉದಯಿಸುವಂತೆ ದುರಾಶಯವನ್ನು ನಾಶಗೊಳಿಸಬೇಕು ಜಾತೀಯ ಅಪನಂಬಿಗೆ ಮತ್ತು ಅಸಮಾಧಾನಗಳು ಅದೃಶ್ಯವಾಗಬೇಕು. ವಿಶ್ವಾಸ ಮತ್ತು ಸಮಾಧಾನಗಳು ಸ್ಥಾಪಿತವಾಗಬೇಕು. ಇದೇ ಅವರ ಕಡೆಯ ಬಯಕೆಯಾಗಿತು ನಾವು ಖಂಡಿತವಾಗಿ ಅದನ್ನು ನೆರವೇರಿಸಬೇಕು.

ನಮ್ಮ ಜಿಲ್ಲೆಗೆ ಮೋಟಾರು ಟ್ರಿಕ್ಟರ್

ಆಹಾರದ ಅಭಾವವನ್ನು ಹೋಗಲಾಡಿಸಲು ಮದರಾಸು ಸರಕಾರವು ಕೈಕೊಂಡ ಕಾರ್ಯಕ್ರಮಗಳಲ್ಲಿ ಮೋಟಾರು-ಟ್ರಿಕ್ಟರ್ (ಮೋಟಾರು ನೇಗಿಲು)ಗಳನ್ನು ಕೃಷಿಕರಿಗೆ ಒದಗಿಸುವುದೂ ಒಂದಾಗಿದೆ. ಸದ್ಯಃ ತರಿಸಲ್ಪಟ್ಟ ಮೋಟಾರು ಟ್ರಿಕ್ಟರ್‌ಗಳಲ್ಲಿ ಒಂದನ್ನು ಇತ್ತೀಚೆಗೆ ಮಂಗಳೂರಿಗೆ ಕಳಿಸಿರುವರು. ಹಂಪನಕಟ್ಟೆಯಲ್ಲಿರುವ ಕೃಷಿ ಇಲಾಖಾ ಕಚೇರಿಯಲ್ಲಿ ಇದನ್ನಿರಿಸಿರುವರು ಈ ಮೋಟಾರ್ ಟ್ರಿಕ್ಟರಿನಿಂದ ದಿನಕ್ಕೆ ಆರರಿಂದ ಎಂಟು ಎಕ್ರೆಯ ವರೆಗೆ ಉಳಬಹುದು. ಆವಶ್ಯವಿದ್ದವರು ಇದನ್ನು ಬಾಡಿಗೆಗೆ ಪಡೆಯಬಹುದಾಗಿ (ಬಾಡಿಗೆಯು, ಎಕ್ರೆಗೆ ರೂ ೫ರಂತೆ ಮತ್ತು ಟ್ರಿಕ್ಟರನ್ನು ಆಯಾ ಸ್ಥಳಕ್ಕೊಯ್ದು ಕೊಟ್ಟ ಖರ್ಚು, ಎಂದು ತಿಳಿಯಲಾಗಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಎಗ್ರಿಕಲ್ಚರಲ್ ಆಫೀಸಿಗೆ ಬರೆದು ತಿಳಕೊಳ್ಳಬಹುದು, ಅಥವಾ ಅಲ್ಲಿಗೆ ಹೋಗಿ ವಿಚಾರಿಸಿ ತಿಳಿಯಬಹುದು



ರಾತ್ರಿ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗಂಟಲು, ಕೆಮ್ಮು ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಭಾಗಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯ್ಯಲ್ಪಡುವುವು ಅಲ್ಲಿ ಊದಿಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶನದಿಂದ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ರೋಗ ಜಡಿಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧ

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಂಗಡಿಗಳಲ್ಲಿ ಸದಾ ಸಿಗುವುದು

ಹೊಸ ಚಿತ್ರಮಂದಿರ

ರೂಪವಾಣಿ ಎಂಬ ಹೆಸರಿನ ನೂತನ ಚಲಚಿತ್ರ ಮಂದಿರವೊಂದು ಇಲ್ಲಿಯ ವೆಬ್‌ಸ್ಟರ್ ಮಾರ್ಕೆಟ್ ಬಳಿ ಪ್ರಾರಂಭಿಸಲ್ಪಟ್ಟಿದೆ.

ಫಸ್ಟ್ ಗ್ರೇಡ್ ಕಾಲೇಜ್

ಇದೇ ಬರುವ ೧೯೪೮ನೇ ಜೂನ್‌ನಿಂದ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜನ್ನಾಗಿ ಮಾಡಿ ಬಿ. ಎ ಕ್ಲಾಸನ್ನು ತೆರೆಯುವರಾಗಿ ತಿಳಿದುಬರುತ್ತದೆ

ನೋಟೀಸು ನಿಜವಲ್ಲ

ಕಾಸರಗೋಡು ಕೊಯ್ಪಾಡಿ ಗ್ರಾಮದಲ್ಲಿರುವ ಎಂ ಮಮ್ಮುಂಞಿ ತಿಳಿಸುವುದು

ನನ್ನ ಸಹೋದರರು ಹಸನ್ ಕುಟ್ಟಿ ಅಬ್ದುಲ್ ಖಾದ್ರಿ ತಾ 31 12 1947ರಲ್ಲಿ ರಾಷ್ಟ್ರಬಂಧು ಪತ್ರಿಕೆಯಲ್ಲಿ ಸತ್ಯಕ್ಕೆ ವಿರುದ್ಧವಾಗಿ ಅಕ್ರಮ ಲಭ್ಯ ಪಡೆಯುವ ಇರಾದೆಯಿಂದ ಪ್ರಕಟಿಸಿದ ನೋಟೀಸು ನ್ಯಾಯಪೂರ್ವಕವಾಗಿ ನಾನು ನಿರಾಕರಿಸುತ್ತೇನೆ

ನಮ್ಮ ತಂದೆ ಸಾಹುಕಾರ್ ಮಾಗ್ರಾಲ್ ಕುಂಞ ಮಾಯಿಕುಟ್ಟಿ ಬ್ಯಾರಿಗಳ ಜೀವನ ಕಾಲದಲ್ಲಿ ಮತದನಂತರ ನಮ್ಮೆಲ್ಲರ ಖಾಸ್ತು ಆಸ್ತಿಗಳ ಕೆಲವು ಭಾಗ ಅರೂಪಪಟ್ಟದ್ದನ್ನು ನನ್ನ ಸ್ವಂತ ಹಣದಿಂದ ಅವುಗಳನ್ನು ರೂಪಪಡಿಸಿದ್ದು ಗೇಣಿದಾಲರಿಗೆ ಮುಂಗಡವಾಗಿ ಹಣ ಕೊಟ್ಟು ಕೃಷಿ ವಿವರಣ ನಡೆಸಿದು ಮತ್ತು ಇನ್ನಿತರ ಕಾರಣಗಳಿಂದ ನನ್ನ ತಂದೆಯ ವರೆ ಆಸ್ತಿ ಜಮಾಬ್ದಾರಿಯಿಂದ ನನಗೆ ಬರತಕ್ಕ ಹಣ ಮೊದಲಾದುವುಗಳನ್ನೆಲ್ಲಾ ಗತಕ್ಕರ ಮುಂದಿಟ್ಟು ನೀವು ಕಟ್ಟಳೆ ಮಾಡಿದ ಸ್ವತ್ತುಗಳನ್ನು ಮರೆಮಾಡಿಸಿ ನನ್ನ ಹಣ ದಕ್ಕಿಸುವ ಕೊಡೋಣದ ಈ ನೋಟೀಸು ನಿಜವಲ್ಲ ಆ ಕಾರಣ ನಮ್ಮ ಕುಟುಂಬದ ಆಸ್ತಿ ವಗೈರೆ ಕುರಿತು ನಾನು ನ್ಯಾಯವಾದ ನೆಲೆಯಲ್ಲಿ ಮುಖ್ಯ ಹಕ್ಕುದಾರನೆಂತ ಈ ಮೂಲಕ ಸರ್ವರಿಗೂ ತಿಳಿಯಪಡಿಸಿಕೊಳ್ಳುತ್ತೇನೆ ಪ್ರಸ್ತುತ ಆ ನೋಟೀಸಿನಿಂದ ಯಾವ ತರದ ಯಾದರೂ ಒಪ್ಪನ್ನಾದರೂ ನನಗೆ ನಷ್ಟ ಮಾನಹಾನಿ ಸಂಭವಿಸಿದರೆ ನೋಟೀಸು ಕರ್ತೃಗಳಾದ ನೀವು ಎರಡು ಜನರ ಮೇಲೆ ಅಗತ್ಯವಿರುವ ಕ್ರಿಮಿನಲ್ ಸಿವಿಲ್ ಮ ಮಕದ್ದಮೆ ನಡೆಸುವುದು

ಕೊಯ್ಪಾಡಿ
ತಾ 13 1 48

ಎಂ. ಮಮ್ಮುಂಞಿ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಚಾಳೆ ಬರೆ, ತಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ~~ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು~~ ರೇಟಿಗಿಂತ 50% ಅಂದ್ರೆ ಪ್ರಸ್ತುತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು-ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜ್ಯೊಂಟ್ ಮೆನ್ಲೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . . 2¼% p. a.

5 & 6 months . . . . 2½% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of 37 years avialable to you for arranging Insurance Investment

It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಫುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ಕಾರ್ಕಳ 27—2—1948 [ಸಂಚಿಕೆ 8]

ಶಾಂತಿಯ ಸೇವಾಗ್ರಾಮ ಸೇವೆಯ ಶಾಂತಿನಿಕೇತನ

ಆಧುನಿಕ ಭಾರತದ ಸಾಂಸ್ಕೃತಿಕ ಕೇಂದ್ರಗಳು

ಲೋಕೋದ್ಧಾರಕ ರೈತ ಗಾಂಧೀಜಿ

ಸಂಕ್ಷೇಪವಾಗಿ ನಿರೂಪಿಸುವುದಾದರೆ ಆಧುನಿಕ ಭಾರತದ ಧ್ಯೇಯಾದರ್ಶಗಳು ಎರಡು ಗಣನೀಯ ಸಂಕೇತಗಳಲ್ಲಿ ಪ್ರತಿಬಿಂಬಿತವಾಗಿವೆ ಅವೆಂದರೆ ಸೇವಾಗ್ರಾಮ ಮತ್ತು ಶಾಂತಿನಿಕೇತನಗಳು ಹತ್ತೊಂಬತ್ತನೇ ಶತಮಾನದ ಪಾಶ್ಚಾತ್ಯರ ತತ್ವಜ್ಞಾನದ ವಿರೋಧವಾಗಿ ಎದ್ದ ಸಾಂಸ್ಕೃತಿಕ ದಂಗೆಯ ಪರಿಣಾಮವಾಗಿ ಈ ಎರಡು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು. ಪಾಶ್ಚಾತ್ಯರ ವ್ಯಕ್ತಿ ಸಾಹಸವನ್ನು ಉದಾತ್ತೀಕರಿಸುವ ವಾದ, ಮಾನವಾತ್ಮವನ್ನು ನಾಶಕ್ಕೀಡಿಸುವ ಯಂತ್ರವಾದ, ಜನಾಂಗಗಳನ್ನು ಶೋಷಿಸಿ ದಾಸ್ಯದಲ್ಲಿಡುವ ಸಾಮ್ರಾಜ್ಯಶಾಹಿ ವಾದ ಇವುಗಳು ನಮ್ಮ ದೇಶದ ಆಡಳಿತದಲ್ಲಿ ಹಾಸುಹೊಕ್ಕಾಗಿ ಸೇರಿಸಲ್ಪಟ್ಟಿದ್ದವು.

ನೂತನ ದಾರಿ

ಶಾಂತಿನಿಕೇತನವು ಓರ್ವ ಕವಿಯ ವಿಚಾರಧುರೀಯಿಂದುತ್ಪನ್ನವಾಯಿತು. ಪ್ರಕೃತಿ ಸೌಂದರ್ಯದ ಆವರಣದಲ್ಲಿ [illegible]ವತ್ತು ಅವರು ಇತರ ಮೂರು ಬಾಲಕರೊಂದಿಗೆ ಆ ಸಾಲು ಮರಗಳ ನೆರಳಲ್ಲಾಡುತ್ತಾ ಬೆಳೆಯುತ್ತಿರುವಾಗಲೇ ಅವರ ಚಿತ್ತಭಿತ್ತಿಯ ಮೇಲೆ ನಿಸರ್ಗದ ಗೂಢ ಶಕ್ತಿಯು ಒತ್ತಿದ ಕಲಾಲಾವಣ್ಯದ ಅಮರ ಭಾವ, ವ್ಯಕ್ತಿತ್ವ ವಿಕಾಸಗೊಳಿಸುವ ಹೊಸ ವಿಧಾನವೊಂದನ್ನು ಶಿಕ್ಷಣ ಪ್ರಪಂಚಕ್ಕೆ ತೋರಿಸಿಕೊಟ್ಟಿತು.

ಅಂದು ದಕ್ಷಿಣ ಆಫ್ರಿಕದಲ್ಲಿ ವರ್ಣದ್ವೇಷಕ್ಕೆದುರು ಪ್ರತಿಭಟನೆ ಹೂಡಿದ ಕರ್ಮಯೋಗಿ ಗಾಂಧಿಯಿಂದ ಸ್ಥಾಪಿಸಲ್ಪಟ್ಟ ಫೀನಿಕ್ಸ್ ಹಿಂದೀ ವಸಾಹತು, ಅಂದು ಅಹಮದಾಬಾದಿನ ಬಳಿ ಸಬರಮತಿ ಸೆರೆಮನೆ ಸೇರಲು ಸುಲಭವೆಂದು ಶಾಸನ ಭಂಗ ಮಾಡುವ ಸತ್ಯಾಗ್ರಹಿಗಳ ನಾಯಕರಾದ ಮಹಾತ್ಮಾಗಾಂಧಿಯವರು ಸ್ಥಾಪಿಸಿದ ಸಬರಮತಿ ಆಶ್ರಮವೂ, ಇಂದಿನ ವಾರ್ಧಾ ಬಳಿಯ ರಚನಾತ್ಮಕ ಸೇವಾದರ್ಶದ ಸೇವಾಗ್ರಾಮವಾಯಿತು. ಈ ಮೂರು ಕೇಂದ್ರಗಳೂ ಶಾರೀರಿಕ ಪರಿಶ್ರಮದ ಭವ್ಯತೆಯನ್ನೂ, ಆಧ್ಯಾತ್ಮಿಕ ಸಮತಾವಾದದ ಅಮೋಘತೆಯನ್ನೂ ಜಗತ್ತಿಗೆ ಸಾರಿದುವು.

ನನಸಾದ ಕವಿ ಕನಸು

ಕವಿವರ್ಯನಿಗೆ ಸೃಷ್ಟಿ ಜೀವದ ಮಹದೈಕ್ಯತೆಯ ದಿಗ್ದರ್ಶನವಾಗಿತ್ತು. ಅದನ್ನವರು ತಮ್ಮ ವನಾಶ್ರಯದಲ್ಲಿ ರೂಪುಗೊಳಿಸಿದರು. ದಿನೇ ದಿನೇ ರೂಪಾಂತರಗೊಳ್ಳುತಿದ್ದ ವಿಶ್ವಪರಿಸ್ಥಿತಿಯನ್ನನುಲಕ್ಷಿಸಿ ಈ ನಿಕೇತನವು ಮಾರ್ಪಾಟುಗೊಳಿಸಲ್ಪಟ್ಟಿತು. ಪ್ರತಿ ಮಾನವನ ಹೃದ್ಮಂದಿರದಲ್ಲಿ ಸುಸುಪ್ತವಾಗಿ ಅಡಗಿಕೊಂಡಿರುವ ಐಕ್ಯತಾ ಮನೋಭಾವವನ್ನು ವಿಕಾಸಗೊಳಿಸುವುದಕ್ಕೆ ತೊಡಕಿಸುವ ಅಭ್ಯಂತರಗಳನ್ನು ಆಳ ಅಧ್ಯಯನದಿಂದಲೂ, ಶ್ರದ್ಧಾಪೂರ್ವಕವಾದ ಶಿಸ್ತಿನಿಂದಲೂ ಸತತ ಸೇವೆಯಿಂದಲೂ ಮತ್ತು ಪ್ರೇಮಪುರಸ್ಸರವಾದ ಪ್ರಾರ್ಥನೆಯಿಂದಲೂ ಪರಿಹರಿಸಿಕೊಳ್ಳುವ ವಿಧಾನಗಳನ್ನು ಕಲ್ಪಿಸಲಾಯಿತು.

ಗಾಂಧೀ ರೈತನ ತತ್ವ ಭಿತ್ತಿ

ಒಂದೊಂದು ಸಲ ಮುಂದಿಟ್ಟ ಪ್ರತಿಯೊಂದು ಹೆಜ್ಜೆಯನ್ನು ಹಿಂದೆ ಸರಿಸದೆ ಪ್ರತಿಸಲವೂ ತನ್ನನ್ನು ಸಾಮಾನ್ಯ ಮಾನವನ ಸಮಾನ ಸ್ಥಾನಕ್ಕೆ ಇಳಿಸುತ್ತ ಭಾರತ ಸ್ವಾತಂತ್ರ್ಯದ ಕೃಷಿಕನೆಂದು ಅಲಂಕಾರಿಕವಾಗಿ ಕರೆಯಲ್ಪಡಬಹುದಾದ ಮಹಾತ್ಮಾ ಗಾಂಧಿಯವರು ತಮ್ಮ ಮಹೋನ್ನತವಾದ ತತ್ವ ಸಾಧನೆಯಿಂದ ಆತ್ಮಶಕ್ತಿಯ ಅಪಿಂತ ಸಾಮರ್ಥ್ಯವನ್ನು ಪ್ರಾದುರ್ಭವಿಸಿಕೊಂಡರು.

ಸಂಕ್ಷೇಪವಾಗಿ ಹೇಳುವುದಾದರೆ ಕವಿಯಾದ ರವೀಂದ್ರರ ಧ್ಯೇಯವು ಅಂತರಾತ್ಮ ಸಂಬಂಧವಾದ ರಹಸ್ಯಾತ್ಮಕ ತತ್ವಜ್ಞಾನದ ಸಾಕ್ಷಾತ್ಕಾರವಾಗಿತ್ತು. ಸೇವಾಗ್ರಾಮದ ಸಂತನದಾದರೋ ಕರ್ಮಬದ್ಧ ಸನ್ಯಾಸದ ಸಾಹಸವೇ ಜೀವನದ ಗುರಿಯಾಗಿತ್ತು.

ಇವರ ಧ್ಯೇಯ ಸಾಧಿಸಿದುವೆ?

ಮಾನವೋದ್ಧಾರದ ಸಂಕಲ್ಪಮಯ ಶ್ರಮಕ್ಕೆ ಈ ಎರಡು ವಿಧಾನದ ಜೀವನಾದರ್ಶಗಳೂ ವ್ಯಕ್ತಿಕವಾಗಿಯಾಗಲಿ ಇಲ್ಲವೆ ಸಾಮೂಹಿಕವಾಗಿಯೂ ಅತ್ಯಾವಶ್ಯಕವಾದವುಗಳು. ಕಾರಣ ನಮಗೆ ಸ್ವಾತಂತ್ರ್ಯದೊಡನೆ ಉತ್ತಮ ಶಾಸನಗಳೂ, ಸ್ವಚ್ಛ ವಿವೇಕದೊಡನೆ ಉಚ್ಚ ಶೀಲಗಳೂ, ಕೋಟೆ ಕೊತ್ತಳಗಳೊಡನೆ ಕೈಗಾರಿಕೆ ಕಾರ್ಖಾನೆಗಳೂ ಅತ್ಯಾವಶ್ಯಕವಿರುವವು

ರವೀಂದ್ರರ ರಹಸ್ಯಾತ್ಮಕ ತತ್ವಜ್ಞಾನ ಮೆಂತಹುದು? ಆ ತತ್ವಜ್ಞಾನಿಯು ದರಿ ಮಳೆ ಬಿಸಿಲುಗಳೆಲ್ಲಾ ಬಿಡಿಬಿಡದೆ ಬೆಳೆಯುವ ಒಂದು ಹೂವಿದ್ದಂತೆ. ಆದುದರಿಂದ ಅವನೆಲ್ಲವನ್ನು ಸ್ವೀಕರಿಸುತ್ತಾನೆ. ಯಾವುದನ್ನೂ ತಿರಸ್ಕರಿಸುವುದಿಲ್ಲ. ನಿರಂತರ [illegible] ತಂಕವಾಗಿ ಸಾಗುವ ಜೀವನೋತ್ಸವವ ನಿರೀಕ್ಷಿಸುವಂತಹ ನಿಷ್ಪಕ್ಷಪಾತಿ ಸಾಕ್ಷಿಯು ಅವನಾಗಿರುತ್ತಾನೆ.

ಸನ್ಯಾಸಿಯ ಕರ್ಮಮಾರ್ಗವಾದರೋ ತೀರ ಭಿನ್ನವಾದುದು. ಅವನೊಬ್ಬ ಅವಿಶ್ರಾಂತ ಸೇವೆ ಮಾಡುವ ಶೂರ. ಜನಜೀವನವೆಂಬ ಅಡವಿ ಮುಳ್ಳು [illegible] ಕಲ್ಲಂಗಳಿಂದಾವೃತವಾದ [illegible] ವನು ತುಕ್ಕಿ ಹೊರಗೆ [illegible] ನೊಬ್ಬ ಶೂರ ಸಾಹಸಿಗನಾದ ಯೋಧ ತನ್ನ ಆತ್ಮೋಚ್ಛೇದ [illegible] ಸಾಧನಗಳಿಗ ಅವನು ಪ್ರತಿ ಹೆಜ್ಜೆಗೂ ದಿಕ್ಕು [illegible] ಹೋರಾಟವನ್ನೆಸಗಿ ಮುಂದೆ ಸಾಗುತ್ತಾನೆ.

ಪಾಶ್ಚಾತ್ಯೀಕರಣದ ನಂಜು

ಆಂಗ್ಲ ಜನರ ವಿಚಾರ ಪ್ರಚಾರದ ಸಂಪರ್ಕಕ್ಕೆ ಸಿಕ್ಕಿದ ಅತ್ಯಲ್ಪ ಸಂಖ್ಯೆಯ ನಮ್ಮ ದೇಶ ಬಾಂಧವರಲ್ಲಿ ಕೆಲವರು ತಮ್ಮ ವರ್ತನೆಯಿಂದ ಒಂದು ತರದ ಶುಷ್ಕ ತರ್ಕ ಸರಣಿಯನ್ನೂ, ನಮ್ರವಾದ ಕರ್ತವ್ಯ ಭಾವನೆಯನ್ನೂ, ಮತ್ತು ಕೃತ್ರಿಮವಾದ ಶ್ರೀಮಂತಗಿರಿಯ ದರ್ಪವನ್ನೂ ಅಳವಡಿಸಿಕೊಂಡರು ಹೀಗಾಗಿ ಒಂದು ನವೀನ ತರದ ನೀತಿ ಆದರ್ಶಗಳ ಗುಂಪೊಂದು ನಮ್ಮ ದೇಶದಲ್ಲಿ ಉಂಟಾಯಿತು. ಇವರು ತಮ್ಮ ಪ್ರಾಚೀನ ಸಂಸ್ಕೃತಿಯನ್ನೇ ಮರೆತುಬಿಟ್ಟರು. ಒಂದು ದೇಶದ ಸಂಘಟನೆಗೂ ಗುಣ ಶಕ್ತಿಗೂ ಸಾಧಕವಾದುದು ಅವರ ಪ್ರಾಚೀನರ ಸಂಸ್ಕೃತಿಯೇ ಆಗಿದೆ. ಈ ತರದ ಪರಿಸ್ಥಿತಿಯು ತಲೆಯೆತ್ತಲಾರಂಭಿಸಿದೊಡನೆ ಕೆಲವು ದೇಶಾಭಿಮಾನಿಗಳು ಇದರ ವಿರುದ್ಧ ಪ್ರತಿಭಟನೆ ಮಾಡಿದ್ದರು. ಇವರೇ ನಮ್ಮ ಸಾಂಸ್ಕೃತಿಕ ಪುನರುದ್ಧಾರದ ಮೂಲ ಪುರುಷರು.

ಇವರ ಆದರ್ಶದಿಂದ ಸ್ಫೂರ್ತಿಗೊಂಡ ಶಾಂತಿನಿಕೇತನದ ಸಂಗೀತಗಾರರೂ, ಸೇವಾಗ್ರಾಮದ ಸೂತ್ರಧಾರರೂ ದಂಗೆಯ ಧ್ವಜವನ್ನು [illegible] ದೇದೀಪ್ಯಮಾನವಾಗಿ ಹಾರಿಸಿದರು. ಧನವೇ [illegible] ಸಾಗರದಾಚೆಯವರ ಸಂಸ್ಕೃತಿಯು [illegible] ನಮ್ಮ ತರುಣ ಜನಾಂಗದ ಮನಸ್ಸನ್ನು ಮತಾಂತರಗೊಳಿಸ[illegible] ಪ್ರಯತ್ನವನ್ನು ಆಕ್ಷೇಪಿಸಿದರು. ಅವರ ವಿರುದ್ಧ ಹೋರಾಟವನ್ನೇ ಆರಂಭಿಸಲ್ಪಟ್ಟಿತು. ಈ ಕರ್ತವ್ಯ [illegible] ಅವರು ತಮ್ಮ [illegible] ಗಳನ್ನು, [illegible] ಸಂಪತ್ತಿಗೂ ಹುದ್ದೆ ಉದ್ಯಮಗಳಿಗೆ ಸಂಪೂರ್ಣ ವಿರೋಧಕ [illegible]

ತತ್ಪರಿಣಾಮವಾಗಿ ಕವಿಯು ತನ್ನ ಸುಖ [illegible] ಬಿಟ್ಟು [illegible] ಹಿಡಿದನು [illegible] ದೇಶಸೇವೆ ತ್ಯಾಗ [illegible] ಬುದ್ಧ ಕಿಸ್ತನಂತೆ ಅವರ [illegible] ಮಾನವಕೋಟಿಗಾಗಿ [illegible] ಹೀಗೆ ಪುನರಪಿ [illegible] ಮತ್ತು ಸಾಧು ಸಂತರ [illegible] ಗೊಂಡಿತು. "ತ್ಯಾಗವು ಎಲ್ಲಾ ಕ್ರಾಂತಿಗಳ ಮೂಲ ಮಂತ್ರ. ಅದರಿಂದಲೇ ಮಾನವಕೋಟಿಯ ಮುನ್ನಡೆಯಾಗುವಿದು ಮಾತ್ರವಲ್ಲ ಸಕಲ ಸೃಷ್ಟಿಯ ಪ್ರಗತಿಯೂ ಅದರಲ್ಲೇ ಅಡಕವಾಗಿದೆ."

ಗಾಂಧಿ ರವೀಂದ್ರರ ಮಂತ್ರ

ಕವಿ ತಿಲಕನು ಹೀಗೆ ಹಾಡಿದನು "ನಿನ್ನನ್ನೊಬ್ಬನು ತಿಳಿಕೊಂಡಾಗ ಪರಕೀಯರಾರೂ ಇರುವುದಿಲ್ಲ, ಯಾವ ದ್ವಾರವೂ ನಿನ್ನೆದುರು ಮುಚ್ಚಲ್ಪಡುವದಿಲ್ಲ. ಓ ದೇವ ನಿನ್ನ ಸಂಪರ್ಕದ ಆನಂದವು ಸದಾ ದೊರಕಿಸಬೇಕೆಂಬ ನನ್ನ ಪ್ರಾರ್ಥನೆಯನ್ನು ಅನುಗ್ರಹಿಸು. ಸಕಲರೊಡನೆ ಆಡುವ ಈ ಆಟದಲ್ಲಿ ಆ ನಿನ್ನದೊಂದು ಸಂಪರ್ಕವಿರಲಿ."

೨ನೇ ಪುಟ ನೋಡಿ

(ಗತ ಸಂಚಿಕೆಯಿಂದ)

ಈ "ಸಂಪರ್ಕ"ದ ಮಹಿಮೆಯನ್ನವರು ಕಲೆ, ಸಾಹಿತ್ಯ, ಶಿಕ್ಷಣ ಮತ್ತು ಗ್ರಾಮೋದ್ಧಾರದೆಲ್ಲಾ ಕ್ಷೇತ್ರಗಳಲ್ಲೂ ಪ್ರತಿಬಿಂಬಿಸಿದರು. ಮತ್ತು "ಹಲವರ ಈ ಲೀಲೆಯಲ್ಲಿ ಆ ಒಬ್ಬನ ಸಂಪರ್ಕ"ದ ಪ್ರಭಾವವನ್ನು ಸೇವಾಗ್ರಾಮದ ರೈತ ಸೂತ್ರಧಾರಿಯು ಪ್ರದರ್ಶಿಸಿದ. ಅದನೆಂದ:

"ಉಳುವವನು ಘಟ್ಟಿ ನೆಲವನ್ನುಳುವಲ್ಲಿ, ದಾರಿ ಕೊರೆಯುವವನು ಕಲ್ಲುಗಳನ್ನೊಡೆವಲ್ಲಿ ಅವನು ಇರುವನು. ಮಳೆ ಬಿಸಿಲ್ಗಳಲ್ಲಿಯೂ ಅವನು ಅವರೊಡನಿರುವನು. ಅವನ ಉಡುಪುಗಳು ಧೂಳಿನಿಂದ ಕೆಸರಾಗಿವೆ. ನಿನ್ನ ಮಡಿ ಬಟ್ಟೆಯನ್ನು ಬಿಟ್ಟು ಅವನ ಹಾಗೆ ಕೆಸರು ಧೂಳಿರುವಲ್ಲಿಗೆ ಇಳಿದು ಬಾ."

ಈರ್ವರು ಸುಖದ ಕಿರೀಟವನ್ನು ತ್ಯಜಿಸಿ ಕಠೋರ ಕಷ್ಟದ ದಾರಿಯನ್ನು ಅನುಸರಿಸಿದರು. ಜಗತ್ತನ್ನು ತಾವು ಕಂಡದ್ದಕ್ಕಿಂತ ಉತ್ತಮವಾಗಿ ಮಾಡಿ ಅವರು ಹೊರಟು ಹೋದರು.

"ಮೋಕ್ಷವೇ! ಈ ಮೋಕ್ಷವನ್ನೆಲ್ಲಿ ಕಾಣಬಹುದು! ನಮ್ಮ ಒಡೆಯನು ಸ್ವಸಂತೋಷದಿಂದ ಸೃಷ್ಟಿಯ ಹೊಣೆಯನ್ನೂ ಹೊತ್ತಿರುವನು. ಅವನು ನಮ್ಮೆಲ್ಲರೊಡನೆ ಅನುನಿತ್ಯವೂ ಒಡಗೂಡಿರುವನು."

ಮಹಾತ್ಮರ ಮಹಾತ್ಮ್ಯಯ

ಸೇವಾ ಗ್ರಾಮ ಶಾಂತಿನಿಕೇತನಗಳೆಡೂ ಪರಿಪೂರ್ಣತೆಯನ್ನು ಪಡೆಯಬೇಕೆಂಬ ಮಾನವ ಮಹತ್ವಾಕಾಂಕ್ಷೆಯನ್ನು ಮತ್ತಷ್ಟು ಪ್ರೇರೇಪಿಸಿದವು. ಸರಳತೆಯೇ ಈ ಪರಿಪೂರ್ಣತೆಯ ಅತೀ ಶ್ರೇಷ್ಟವಾದ ನೈಜ ನಿರೂಪಣೆಯಾಗಿದೆ. ಓರ್ವ ಕವಿಯು ಹಾಡಿದಂತೆ "ಸರಳತೆಯೇ ಪರಿಪೂರ್ಣತೆಯ ಶರೀರ ಸರ್ವಸ್ವವಾಗಿದೆ." ಗಾಂಧೀಜಿಯಂತೂ ಸರಳತೆಯ ಸನ್ಯಾಸವನ್ನೇ ದೀಕ್ಷೆಯಾಗಿ ಕೈಕೊಂಡಿದ್ದರು."

ಕವಿ, ಸಂತ ಸಮಾಗಮ

ಇತಿಹಾಸದ ಪಾರಾಂಗಣವನ್ನು ದಾಟುವಾಗ ನುಡಿಗಾರನೂ ನಡೆಗಾರನೂ ಕವಿಯೂ ಕೃಷಿಕನೂ ಭುಜಕ್ಕೆ ಭುಜಕೊಟ್ಟು ನಡೆವರು. ನಮ್ಮ ಕಾಲದಲ್ಲಿ ಪೂಜಾರಿಯು ತನ್ನ ಪವಿತ್ರ ಕಾರ್ಯ ನಿರ್ವಹಣೆಯಲ್ಲಿ ಯಶಸ್ವಿಯಾದನು. ಪ್ರವಾದಿಯು ಇನ್ನೂ ಬರಲಿದ್ದಾನೆ. ಅವನ ಸ್ಥಾನದಲ್ಲಿಂದು ನಾವು ಕವಿ ಕೃಷಿಕರಿರ್ವರೂ ಚಿತ್ತಾಕರ್ಷಕ ಸಮಾಗಮದಿಂದ ಸತ್ಯ ಮಂದಿರದತ್ತ ಸಾಗುವುದನ್ನು ಕಂಡೆವು. ಸತ್ಯವೂ ನಿತ್ಯಾನಂದ ಮಾರ್ಗದಲ್ಲೇ ಪದಕ್ರಮಿಸುವುದು. ಸರಳತ್ವದಲ್ಲಿ, ಸನ್ಯಾಸತ್ವದಲ್ಲಿ ಆತ್ಮಾನಂದದ ಸುಗ್ಗಿಯು ಸದಾ ಕೂಡಿಕೊಂಡಿದೆ. ರವೀಂದ್ರರು ತಮ್ಮ ಮತ್ತು ಮಹಾತ್ಮರ ಆಶ್ರಮಗಳನ್ನು ಹೋಲಿಸುತ್ತ ಒಂದು ಸಲ ಹೀಗೆಂದಿದ್ದರು:-"ಶಾಂತಿನಿಕೇತವು ಸತ್ಯದಾನಂದವನ್ನೂ, ಸೇವಾ ಗ್ರಾಮವು ಸತ್ಯದ ತಪಸ್ಸನ್ನೂ ಪ್ರತಿಬಿಂಬಿಸುತ್ತವೆ."

ಬಾಪೂಜಿಯ ಅಮರ ಸಂದೇಶ

[ಅಸ್ಪೃಶ್ಯತಾ ನಿವಾರಣೆ, ಅಹಿಂಸಾ ತತ್ವಾಚಾರ, ಮತ್ತು ಹಿಂದೂ ಮುಸ್ಲಿಂ ಐಕ್ಯತೆಗಳು ಮಹಾತ್ಮಾ ಗಾಂಧಿಯವರ ಜೀವನದ ಅತ್ಯಂತ ನೆಚ್ಚಿನ ತತ್ವಗಳಾಗಿದ್ದವು. ಈ ಕೆಳಗೆ ಅವರ ದಿವ್ಯ ಸಂದೇಶದ ಕೆಲವು ಅಮೂಲ್ಯ ನೀತಿ ರತ್ನಗಳನ್ನು ಕೊಡಲಾಗಿದೆ.]

ಅಸ್ಪೃಶ್ಯತೆ

ಹಿಂದೂ ಸಮಾಜದ ಮೇಲಿರುವ ಅತ್ಯಂತ ಅಸಹ್ಯವಾದ ಕಳಂಕವಿದು. ದಕ್ಷಿಣ ಆಫ್ರಿಕದಲ್ಲಿನ ಕಠೋರ ಹೋರಾಟದ ಅನುಭವದಿಂದಲೂ ಈ ಸಂಗತಿಯು ನನ್ನ ಮನಸ್ಸಿಗೆ ನಾಟಿರಲಿಲ್ಲ. ನಾನು ಈ ಹಿಂದೆ ಮತಾಚಾರ ಸಾಂಪ್ರದಾಯ ಪ್ರಿಯನಾಗಿದ್ದುದರಿಂದ ಹೀಗಾಯಿತೆಂಬುದೂ ಸಮಂಜಸವಲ್ಲ. ಇಲ್ಲವೆ ನಾನು ಕ್ರೈಸ್ತ ಮತೀಯ ಸಾಹಿತ್ಯಾಭ್ಯಾಸದಿಂದ ನನ್ನ ಅಭಿಪ್ರಾಯಗಳನ್ನು ರೂಪುಗೊಳಿಸಿರುವೆನೆಂಬ ಕೆಲವರ ವಿವರಣೆಯೂ ತಪ್ಪಾದುದು. ನನ್ನೀ ಅಭಿಪ್ರಾಯಗಳು ನನಗೆ ಬ್ಯಾಬಲ್ ಗ್ರಂಥದ ಇಲ್ಲವೆ ಅದರ ಅನುಯಾಯಿಗಳ ಸಂಪರ್ಕ ಪರಿಚಯಗಳಾಗುವ ಮೊದಲೇ ನನ್ನಲ್ಲಿ ಮೊಳೆತಿದ್ದುವು.

✠

ನಮ್ಮ ಕುಟುಂಬದಲ್ಲಿ ರಾಮಾಯಣ ಪಠಣವು ದಿನಂಪ್ರತಿ ಎಂಬಂತೆ ನಡೆಯುತ್ತಿತ್ತು. ಲಾಧಾ ಮಹಾರಾಜ್ ಎಂಬ ಬ್ರಾಹ್ಮಣರೋರ್ವರು ತಮಗೆ ಹಿಡಿದ ಅಸಹ್ಯವೂ ಭೀಕರವೂ ಆದ ಕುಷ್ಠರೋಗವು ನಿವಾರಣೆಯಾಗುತ್ತದೆಂಬ ಖಚಿತ ಶ್ರದ್ಧೆಯಿಂದದನ್ನು ಓದುತ್ತಿದ್ದರು. ಅವರ ವಿಶ್ವಾಸದಂತೆ ಅವರ ಭೀಕರ ವ್ಯಾಧಿಯು ಪರಿಹಾರವಾದದ್ದೊಂದು ಚಮತ್ಕೃತಿಯೇ ಸರಿ. ಇಂದು ಅಸ್ಪೃಶ್ಯರೆಂದು ತಿಳಕೊಳ್ಳಲ್ಪಡುವವನೊಬ್ಬನು ಶ್ರೀ ರಾಮಚಂದ್ರನನ್ನು ಹೇಗೆ ಗಂಗಾ ನದಿಯಾಚೆ ತನ್ನ ದೋಣಿಯಲ್ಲಿ ಒಯ್ದನು? ರಾಮಾಯಣವಾದರೊ ಈ ಮಾನವ ಜೀವಿಗಳನ್ನು ಹೇಗೆ ಕಳಂಕಿತ ಆತ್ಮಗಳೆಂದು ನಿರೂಪಿಸಬಲ್ಲದು? ಈ ವಿಚಾರಗಳು ನನ್ನ ಮನಸ್ಸನ್ನು ಕದಡಿದುವು.

ದೇವರನ್ನು ನಾವು "ಕಳಂಕಿತರನ್ನು ಪರಿಶುದ್ಧಿಸುವವ"ನೆಂದು ಸ್ತುತಿಸುತ್ತಿರುವಾಗ ಹಿಂದೂ ಮತದಲ್ಲಿ ಜನಿಸಿದನೊಬ್ಬನನ್ನು ಕಳಂಕಿತನೆಂದು ತಿಳಕೊಳ್ಳುವುದು ಶುದ್ಧ ಪಾಪವೇ ಎಂಬ ಸಂಗತಿಯು ಅರಿವನ್ನು ನಮಗುಂಟು ಮಾಡುತ್ತದೆ.

ಆದುದರಿಂದ ಅಸ್ಪೃಶ್ಯತೆಯು ಒಂದು ದೊಡ್ಡ ಪಾಪವೆಂದು ಹೇಳಲು ನಾನು ಆಗಿಂದಲೂ ಪರಿಶ್ರಮಿಸಿದ್ದೇನೆ. ನನ್ನ ಹದಿನೆರಡನೇ ವಯಸ್ಸಿನಲ್ಲಿ ಈ ಭಾವನೆಯು ನನ್ನಲ್ಲಿ ಮೂರ್ತಿಮತ್ತಾಗಿತೆಂದು ನಾನು ನಟನೆ ಮಾಡುವುದಿಲ್ಲ. ಆದರೆ ಆಗ ನಾನದನ್ನೊಂದು ಪಾಪವೆಂದು ತಿಳಕೊಂಡಿದ್ದೆ. ಈ ಕಥೆಯನ್ನು ನಾನು ಆಚಾರವಂತ ಹಿಂದುಗಳ ಮತ್ತು ವೈಷ್ಣವರ ಗಮನಕ್ಕೆ ತರಲು ನಿರೂಪಿಸಿದ್ದೇನೆ.

✠

ನಾನೋರ್ವ ಅಚ್ಚ ಸನಾತನೀ ಹಿಂದುವೆಂದು ನಾನು ಯಾವಾಗಿನಿಂದಲೂ ಪ್ರತಿಪಾದಿಸುತ್ತಿದ್ದೇನೆ. ಅಂದ ಮಾತ್ರಕ್ಕೆ ನಾನು ಶಾಸ್ತ್ರಗಳ ಅರಿವಿಲ್ಲದವನೆಂದರ್ಥವಲ್ಲ. ನಾನು ಸಂಸ್ಕೃತ ವಿದ್ವಾಂಸನೂ ಅಲ್ಲ. ವೇದೋಪನಿಷತ್ತುಗಳ ಭಾಷಾಂತರಗಳನ್ನು ನಾನು ಓದಿದ್ದೇನೆ. ಆದುದರಿಂದ ಸಹಜವಾಗಿ ನನ್ನದೊಂದು ವಿದ್ವತ್ಪೂರ್ಣ ಪರಿಶೋಧನೆಯ ಅಭ್ಯಾಸವಲ್ಲ. ಆದರೆ ಹಿಂದು ಒಬ್ಬನು ಹೇಗೆ ಅಭ್ಯಸಿಸಬೇಕೋ ಹಾಗೆ ನಾನದನ್ನು ಅಭ್ಯಸಿಸಿದ್ದೇನೆ. ಮಾತ್ರವಲ್ಲ ನಾನದರ ಅರ್ಥ ಸಾರವನ್ನು ಗ್ರಹಿಸಿಕೊಂಡಿರುವೆನೆಂದು ವಿಶ್ವಾಸವುಳ್ಳವನಾಗಿದ್ದೇನೆ. ನನ್ನ ಇಪ್ಪತ್ತೊಂದನೆ ವಯಸ್ಸಿನ ಸುಮಾರಿಗೆ ನಾನು ಇತರ ಮತ ತತ್ವಗಳನ್ನೂ ಅಭ್ಯಾಸ ಮಾಡಿದೆ.

ನಾನು ಹಿಂದೂ ಮತ ಮತ್ತು ಕ್ರೈಸ್ತ ಮತಗಳ ನಡುವೆ ಜೋಲಾಡಿದ ಒಂದು ಕಾಲವಿತ್ತು. ಆದರೆ ಮತ್ತೆ ನಾನು ನನ್ನ ಅಸ್ಥಿರತೆಯಿಂದ ದೃಢಭಾವ ಹೊಂದಿದಾಗ ಹಿಂದೂ ಮತದ ಮುಖಾಂತರವೇ ಮೋಕ್ಷ ಪಡೆಯಲು ಸಾಧ್ಯವಿದೆಯೆಂದು ನಾನು ಖಚಿತಗೊಂಡೆ. ಅಂದಿನಿಂದ ಹಿಂದೂ ಧರ್ಮದಲ್ಲಿನ ನನ್ನ ವಿಶ್ವಾಸವು ಆಳವೂ ಪ್ರಸನ್ನತೆಯುಳ್ಳದೂ ಆಗಿ ಪರಿಣಮಿಸಿತು.

ಆಗಲಾದರೂ ನಾನು ಈ ಅಸ್ಪೃಶ್ಯತೆಯು ಹಿಂದೂ ಧರ್ಮದ ಭಾಗವಲ್ಲವೆಂದು ನಾನು ನಂಬಿಕೆಯುಳ್ಳವನಾಗಿದ್ದೆ. ಹಾಗಿದ್ದರೆ ಅಂಥಹ ಹಿಂದೂ ಧರ್ಮವು ನನಗೆ ಹೇಳಿದಲ್ಲದೆಂತಲೂ ನನ್ನಭಿಪ್ರಾಯವಾಯಿತು.

✠

ನಿಜ, ಹಿಂದೂ ಧರ್ಮವು ಅಸ್ಪೃಶ್ಯತೆಯು ಒಂದು ಪಾಪವೆಂದು ತಿಳಿಯುವುದಿಲ್ಲ. ಶಾಸ್ತ್ರ ವಿವರಣೆಗಳ ಕುರಿತು ಚರ್ಚಿಸುವುದಕ್ಕೆ ನಾನಿಚ್ಛಿಸುವುದಿಲ್ಲ. ಭಾಗವತ ಮತ್ತು ಮನುಸ್ಮೃತಿಗಳಿಂದುದ್ಧರಿಸಿದ ಉಲ್ಲೇಖ ಉಧಾರಣೆಗಳನ್ನು ಎತ್ತಿ ತೋರಿಸುವುದು ನನ್ನ ಮಟ್ಟಿಗೆ ಕಷ್ಟಕಾರಕವೇ ಸರಿ. ಆದರೆ ಹಿಂದೂ ಧರ್ಮ ತತ್ವಗಳ ಸಾರವನ್ನು ನಾನು ಅರಿತುಕೊಂಡಿರುವೆನೆಂದು ಪ್ರತಿಪಾದಿಸುವೆ. ಅಸ್ಪೃಶ್ಯತೆಗೆ ಅನುಮೋದನೆಯನ್ನು ಕೊಟ್ಟು ಹಿಂದೂತ್ವವು ಪಾಪಗೈದಿದೆ. ಅದರಿಂದ ನಾವಿಂದು ನಿಕೃಷ್ಟ ಮಟ್ಟಕ್ಕಿಳಿದು ಸಾಮ್ರಾಜ್ಯದ ಹೊಲೆಯರೆಂದೆನಿಸಿಕೊಳ್ಳುವಂತಾಗಿದೆ. ಮುಸುಲ್ಮಾನರು ಕೂಡಾ ಈ ಪಾಪಿಷ್ಟ ಸಾಂಕ್ರಾಮಿಕವನ್ನು ಪರಿಗ್ರಹಿಸಿಕೊಳ್ಳುವವರಾದರು. ದಕ್ಷಿಣ, ಪೂರ್ವ ಆಫ್ರಿಕಗಳಲ್ಲೂ ಕೆನಡಾದಲ್ಲೂ ಹಿಂದೂ ಮುಸುಲ್ಮಾನರೀರ್ವರೂ ಹೊಲೆಯರಂತೆ ದೃಷ್ಟಿಸಲ್ಪಡುವರು. ಇವೆಲ್ಲ ಕೇಡುಗಳು ಅಸ್ಪೃಶ್ಯತೆಯ ಈ ಪಾಪದ ಫಲಗಳಾಗಿವೆ.

ಅಹಿಂಸಾಚರಣೆ

ಹಿಂಸೆಗಿಂತ ಅಹಿಂಸೆಯು ಅದೆಷ್ಟೋ ಶ್ರೇಷ್ಟವಾಗಿದೆಂದೂ, ಕ್ಷಮೆಯು ಶಿಕ್ಷೆಗಿಂತ ಹೆಚ್ಚಿನ ಪುರುಷಾರ್ಥದೆಂದೂ ನಾನು ವಿಶ್ವಾಸ ಪಡುತ್ತೇನೆ. ಕ್ಷಮಾಗುಣವು ಓರ್ವ ಯೋಧನ ವ್ಯಕ್ತಿತ್ವಕ್ಕೆ ಭೂಷಣಪ್ರಾಯವಾದುದು. ಶಿಕ್ಷೆ ಕೊಡುವ ಶಕ್ತಿಯಿದ್ದೂ ಕ್ಷಮಾಗುಣ ತೋರಿಸುವವರೇ ಶ್ರೇಷ್ಠರಲ್ಲದೆ, ನಿರ್ಬಲನಿಗೂ ಅಸಹಾಯಕನೂ ಆದೋರ್ವನಿಂದ ಪ್ರದರ್ಶಿತವಾದ ಪಾ ಶೋಭಿಸದು. ಬೆಕ್ಕಿನಿಂದ ಹರಿಯಲ್ಪಡುವ ಇಲಿ ತನ್ನ ವೈರಿಯನ್ನು ಕ್ಷಮಿಸುತ್ತದೆಂದು ಹೇಳಬರುವುದಿಲ್ಲ. ಭಾರತವು ಅಸಾಯಕವಾಗಿದೆಂದು ನಾನು ನಂಬುವುದಿಲ್ಲ. ನಾನೂ ಓರ್ವ ಅಸಾಯಕನೆಂದೂ ನಾನು ನಂಬುವುದಿಲ್ಲ. ಭಾರತದ ಮತ್ತೂ ನನ್ನ ಶಕ್ತಿಗಳನ್ನು ನಾನು ಉತ್ತಮ ಧ್ಯೇಯ ಸಾಧನೆಗೆ ಉಪಯೋಗಿಸಲಿಚ್ಛಿಸುತ್ತೇನೆ.

ತಾ. **7-3-1948**ನೇ ಆದಿತ್ಯವಾರ ಸಾಯಂಕಾಲ ಘಂಟೆ **6**ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ

ಶ್ರೀಮತಿ ಯಂ. ಎಸ್. ಸುಬ್ಬುಲಕ್ಷ್ಮಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ

ಶ್ರೀಮತಿ ಯೆಂ. ಯೆಸ್. ಸುಬ್ಬುಲಕ್ಷ್ಮಿ ಇವರ

ಸುಶ್ರಾವ್ಯ ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ। ಚೌಡಯ್ಯ - ಇವರ ಪಿಟೀಲು

ಶ್ರೀ। ಕಲ್ಪಾತಿ ರಮಾನಾಥನ್ - ಇವರ ಮೃದಂಗ

ಶ್ರೀ। ಆಲಂಗುಡಿ ರಾಮಚಂದ್ರನ್ - ಇವರ ಘಟವಾದ್ಯ

ಟಿಕೇಟು ದರ: ಪೋಷಕ ವರ್ಗ: ರೂ. 100

I ರೂ. 25, II ರೂ. 10, III ರೂ. 5, IV ರೂ. 2.

ಧ್ವನಿವರ್ಧಕಗಳ ಏರ್ಪಾಡು: ರೇಡಿಯೋ ಸೇಲ್ಸ್ ಮತ್ತು ಸರ್ವಿಸ್ ತ್ರಿಚಿನಾಪಳ್ಳಿ, ಇವರಿಂದ.

ಈ ಮೊದಲು ಸಂಗೀತ ಕಚೇರಿಯು ನಡೆಯುವದೆಂದಿದ್ದ ತಾ. 8-2-1948ನೇ ತಾರೀಕಿನ ಟಿಕೇಟುಗಳೇ ಈ ಸಂಗೀತ ಕಚೇರಿಗೂ ಅನ್ವಯಿಸುವವು. ಜನರ ಸೌಕರ್ಯಕ್ಕಾಗಿ ಈ ಸಮಾರಂಭಕ್ಕೆ ಮಂಗಳೂರಿಗೆ ಬರಲಿಕ್ಕೂ ಹಿಂದೆ ಹೋಗಲಿಕ್ಕೂ ಎಲ್ಲ ಲೈನುಗಳಲ್ಲಿಯೂ ಬಸ್ ಸರ್ವಿಸ್‌ಗಳ ವ್ಯವಸ್ಥೆ ಮಾಡಲಾಗುವುದು.

ಗಾಂಧೀ ವಿಚಾರ ದರ್ಶನ

ಅಗಾಧ ಕಾರ್ಯ

ಮಹಾತ್ಮಾಜಿಯವರ ಜೀವನೇತಿಹಾಸವನ್ನು ಅವಲೋಕಿಸುವಾಗ ಅವರು ತಮ್ಮ ಅರ್ಧ ಶತಮಾನದ ಸಾರ್ವಜನಿಕ ಜೀವನದಲ್ಲಿ ಮಾಡಿದ ಕಾರ್ಯ ಸಾಧನೆಯು ಅದೆಷ್ಟು ಅಗಾಧ ಪ್ರಮಾಣದ್ದೆಂದೂ, ಆ ಕಾರ್ಯಕ್ಷೇತ್ರವು ಅದೆಷ್ಟು ವಿಶಾಲವಾಗಿ ಆವರಿಸಿಕೊಂಡಿತ್ತೆಂದೂ ತಿಳಿಯುತ್ತದೆ. ಓರ್ವ ವ್ಯಕ್ತಿಯು ಇಷ್ಟೊಂದು ಬೃಹದ್ಕಾರ್ಯ ವ್ಯಾಪ್ತಿಯವನಾಗಿರಬಹುದೇ ಎಂಬ ವಿಷಯವು ಕಲ್ಪನಾತೀತವಾಗಿದೆ. ಇಂದು ಭಾರತದ ಅಂತರೀಕ ಮತ್ತು ಅಂತರಾಷ್ಟ್ರೀಯ ಧ್ಯೇಯ ಧೋರಣೆಗಳು ಬಹು ಮಟ್ಟಿಗೆ ಗಾಂಧೀ ವಿಚಾರ ಪರಿಪೂರಿತವಾಗಿವೆ. ಅವರು ನಮ್ಮ ರಾಯಭಾರಿಗಳ ಕರ್ತವ್ಯ ನಿರ್ವಹಣದ ಮಾದರಿಯಿಂದ ಸಾಮಾನ್ಯ ವ್ಯಯಕ್ತೀಕ ರೈತನೊಬ್ಬನ ಜೀವನದ ಆದರ್ಶದ ವರೇಗೆ ತಮ್ಮ ನಿರ್ದೇಶವನ್ನು ನಿರೂಪಿಸುತ್ತಿದ್ದರು

ಇತಿಹಾಸದ ನಿರ್ದಶನಗಳು

ಅಲೆಕ್ಸಾಂಡರನು ಕೇವಲ ಅತ್ಯಲ್ಪ ಅವಧಿಯಲ್ಲಿ ಭೂಮಧ್ಯ ಸಮುದ್ರದಿಂದ ಪಂಜಾಬದ ತನಕದ ಲೋಕ ದಿಗ್ವಿಜಯವನ್ನೂ ಸಾಧಿಸಿದುದು ಒಂದು ಮಹತ್ತರವಾದ ಸಾಹಸವಾಗಿದೆ. ಜಗತ್ತಿನ ಬಹು ಸಂಖ್ಯಾಕ ಜನತೆಯಲ್ಲಿ ಬೌಧ ಧರ್ಮ ಪ್ರಚಾರಗೊಳಿಸಿದ್ದು ಇನ್ನೊಂದು ದೊಡ್ಡ ದರ್ಶನ. ಕ್ರಿಸ್ತ ಧರ್ಮ, ಇಸ್ಲಾಮ್ ಧರ್ಮ ವಿಕಾಸದ ಚಟುವಟಿಕೆಗಳೂ ಭಾರೀ ಚೈತನ್ಯ ಚಟುವಟಿಕೆಯ ಪರಿಣಾಮಗಳಾಗಿವೆ. ನೆಪೋಲಿಯನನು ಓರ್ವ ಸಾಮಾನ್ಯ ಸೈನಿಕನಿಂದ ಚಕ್ರವರ್ತಿಯಾಗಿ ವಿಶ್ವಭಕ್ಷಣೆಗಾಗಿ ಹಾತೊರೆದುದು ಆಧುನಿಕ ಇತಿಹಾಸದಲ್ಲಿ ಗಣನೀಯವಾದ ಅಂಶ. ಹಿಟ್ಲರನಂತಹ ಸಾಮಾನ್ಯ ಬಣ್ಣಗಾರನೊಬ್ಬನು ಜಗತ್ತಿನ ಶಕ್ತಿ ರಾಷ್ಟ್ರಗಳೊಂದಿಗೆ ಆರು ವರ್ಷ ಹೋರಾಡಿದ್ದೂ, ಅದ್ವಿತೀಯವಾದ ಚಮತ್ಕಾರವೇ ಆಗಿದೆ. ಎರಡು ಶತಮಾನಗಳಲ್ಲಿ ಚರಿತ್ರೆಯಲ್ಲಿನ ಅತಿ ಬಲಿಷ್ಟ ಸಾಮ್ರಾಜ್ಯಶಾಹಿಯೊಡನೆ ಹೋರಾಡಿ ಅದನ್ನು ಸೋಲಿಸಿ ಸುಣ್ಣ ಮಾಡಿದ ಕೀರ್ತಿ ಭಾರತದ ಈ ಮಹಾತ್ಮನಿಗೇ ಸಲ್ಲುವುದು. ಪಾಶವೀ ಶಕ್ತಿಯೊಡನೆ ಕೇವಲ ನೈತಿಕ ಅಸ್ತ್ರಗಳಿಂದ ಸೆಣಸಿದ ಅಪ್ರತಿಮ ಸಾಹಸ ಯಾವ ಇತಿಹಾಸದಲ್ಲೂ ಕಾಣುವುದಿಲ್ಲ. ಒಂದು ಸಾಮ್ರಾಜ್ಯವನ್ನುರುಳಿಸಿ ಅವರು ಎರಡು ಪ್ರಜಾಪ್ರಭುತ್ವಗಳನ್ನು ಗಳಿಸಿದರು. ಶ್ರೀ ಜೈ ಪ್ರಕಾಶ ನಾರಾಯಣರೆಂದಂತೆ "ಇಂತಹ ನಮ್ಮ ನೀತಿ ಪ್ರಕಾಶಕ ಬುದ್ಧನೂ, ನಮ್ಮ ಪ್ರಜಾ ಸಾಮ್ರಾಜ್ಯ ಕಟ್ಟಿದ ಅಶೋಕನೂ ಕಣ್ಮರೆಯಾದನು"

ಸ್ತ್ರೀಯೋದ್ಧಾರ

ರಾಜಕೀಯ ಚಳವಳವನ್ನು ನಿರ್ವಹಿಸುವಾಗ ಗಾಂಧೀಜಿ ನಮ್ಮ ಜನಾಂಗ ಜೀವನದ ಪ್ರತಿಯೊಂದು ಅಂಗವನ್ನೂ ಶುದ್ಧೀಕರಿಸಲು ಯತ್ನಿಸಿ ಬಹು ಮಟ್ಟಿಗೆ ಯಶಸ್ವಿಯಾಗಿದ್ದಾರೆ. ನಮ್ಮ ಸಮಾಜದಲ್ಲಿ ಪುರುಷರ ದಬ್ಬಾಳಿಕೆಗೊಳಗಾಗಿ ಅಂಧ ಆಚಾರ ವಿವೇಕ ರಹಿತ ಸಾಂಪ್ರದಾಯದಿಂದ ಪಶು ಸಮಾನರಾಗಿ ಕಾಣಲ್ಪಡುತ್ತಿದ್ದ ಸ್ತ್ರೀ ಸಮಾಜವನ್ನವರು ಸಮಾನತೆ ಸ್ವಾತಂತ್ರ್ಯಗಳ ಧ್ಯೇಯಗಳಿಂದ ಪ್ರೋತ್ಸಾಹಿಸಿ ಉದ್ಧರಿಸಿ ಅವರ ಬಾಳಿಗೇ ನವ ರೂಪವನ್ನು ಕೊಟ್ಟರೆಂದರೆ ಅತಿಶಯವಲ್ಲ. ಅದೇ ಸಮಯಕ್ಕೆ ಸ್ತ್ರೀಯರು ದೇಶೋದ್ಧಾರಕ ಚಟುವಟಿಕೆಗಳನ್ನು ನೈತಿಕ ಪರಿಶುದ್ಧತೆಯ ಶಕ್ತಿಯಿಂದ ಸಾಧಿಸಿದ ಮಾರ್ಗದರ್ಶನ ಮಾಡಿದರು. ವಿವಾಹ, ಸಂತಾನ ಸಂಯಮ, ಬ್ರಹ್ಮಚರ್ಯ, ಗೃಹ ವಿಜ್ಞಾನ ಇವುಗಳ ಕುರಿತೂ ಅವರು ವಿಶಿಷ್ಟವೂ ಸರಳವೂ ಆದ ಉಪದೇಶಗಳನ್ನು ಕೊಟ್ಟಿರುವರು

ಆರ್ಥಿಕ ಅಭಿವೃದ್ಧಿ

ಸಾಮ್ರಾಜ್ಯಶಾಹಿಯಿಂದ ಶೋಷಣೆಗೊಳಗಾದ ಜನತೆಯು ತಮ್ಮ ಬಂಧ ವಿಮೋಚನೆ ಗೈಯ್ಯಲು ಸ್ವಾವಲಂಬಿಗಳಾಗಿರಬೇಕೆಂಬ ತತ್ವಾನುಸಾರವಾಗಿ ಮಹಾತ್ಮರು ಗುಡಿ ಕೈಗಾರಿಕೆಗಳ ಪುನರುದ್ಧಾರ, ಮದ್ಯಪಾನ ನಿಷೇಧದ ಅವಶ್ಯಕತೆಗಳನ್ನು ಒತ್ತಿ ಹೇಳಿದರು. ಮಾತ್ರವಲ್ಲ ಕೊಂಗ್ರೆಸಿನಂತಹ ಮಹಾ ಶಕ್ತಿವಂತ ರಾಜಕೀಯ ಪಕ್ಷದಷ್ಟೇ ಪ್ರಬಲವಾದ ರಚನಾತ್ಮಕ ಕಾರ್ಯಕ್ರಮಸಾಧಕ ಸಂಸ್ಥೆಗಳನ್ನು ಸ್ಥಾಪಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರಚಂಡವಾದ ಬೆಂಬಲವನ್ನು ಕೊಟ್ಟರು

ದೀನೋದ್ಧಾರ

ಸಮಾಜದ ಅತೀ ಕೆಳ ಮಟ್ಟದಲ್ಲಿ ಸಂಪೂರ್ಣ ಸಹಾಯ ಶೂನ್ಯರಾಗಿ ನರಳುವ ಅಸ್ಪೃಶ್ಯರನ್ನು ದಳಿತ ವರ್ಗದವರನ್ನೂ ಗಾಂಧೀಜಿ ತಮ್ಮದೇ ಆದ ಅಮೋಘ ನೈತಿಕ ವಿಧಾನದಲ್ಲಿ ಉದ್ಧರಿಸುವ ಕಾರ್ಯ ಧೋರಣವನ್ನು ಹಾಕಿಕೊಟ್ಟರು. ಇದರಿಂದ ಹಿಂದೂ ಸಮಾಜವು ತನ್ನ ಕಲಂಕವನ್ನು ತೊಳೆದು ಹಾಕಲು ಸಮರ್ಥವಾಯಿತು ಮಾತ್ರವಲ್ಲ ಮುಂದೆ ಅದು ಪ್ರಜಾಪ್ರಭುತ್ವ ಮಾದರಿಯಲ್ಲಿ ಸುಸಂಘಟಿತವಾಗಲೂ ಅತ್ಯಂತ ಸಹಾಯವಾಯಿತು. ಅಸ್ಪೃಶ್ಯರ ರಾಜಕೀಯ ಹಕ್ಕುಬಾಧ್ಯತೆಗಳಾಗಿಯೂ, ಅವರ ಸಾಮಾಜಿಕ ಉನ್ನತಿಗಾಗಿಯೂ ಅವರು ತಮ್ಮ ಜೀವನವನ್ನೇ ಮೀಸಲಾಗಿರಿಸಿದ್ದರೆಂದರೆ ಉತ್ಪ್ರೇಕ್ಷೆಯಲ್ಲ

ಮಜೂರ ಸಂಘಟನೆ

ತಮ್ಮ ಉಚ್ಚ ಪರಿಶ್ರಮದ ಆದರ್ಶದಿಂದ ಗಾಂಧೀಜಿ ಮಜೂರ ವರ್ಗಕ್ಕೊಂದು ದಿವ್ಯ ಮಾರ್ಗದರ್ಶಕರಾಗಿದ್ದರು. ಸತ್ಯ ಅಹಿಂಸೆಯ ಮಹೋನ್ನತ ನೈತಿಕ ವಿಧಾನಗಳಿಂದ ಬಂಡವಾಳಶಾಹಿಯ ದುಷ್ಟಟಗಳನ್ನು ನೀಗಿಸುವ ರೀತಿ ನೀತಿಗಳನ್ನವರು ತೋರಿಸಿ ಕೊಟ್ಟರು. ಶ್ರಮಾಳು ಮಜೂರನು ಶ್ರಮ ಸಹಿಷ್ಣುವೂ, ಸರಳ ಜೀವನ ಪ್ರಿಯನೂ ಆಗಿದ್ದರೆ ಅವನು ಸ್ವಾವಲಂಬಿಯಾಗಬಹುದು, ಸ್ವಾವಲಂಬನೆಯಿಂದ ಅವನು ಸ್ವತಂತ್ರನೂ ಶಾಂತಿ ಪ್ರಿಯನೂ ಆಗಬಹುದು. ಇಂಥಹ ಸಂಘಟಿತ ಶಕ್ತಿಯಿಂದ ಮಜೂರರು ಮೂಲ ವರ್ಗದ ಸ್ಥಿತ್ಯಂತರಿವರ್ತನೆಯನ್ನು ಸುಲಭವಾಗಿಯೂ ಪರಿಣಾಮಕಾರಿಯೂ ಮಾಡಲು ಸಾಧ್ಯವಿದೆ. ಆದರೆ ನಮ್ಮ ದೇಶದಲ್ಲಿನ ಮಜೂರ ಮುಖಂಡರು ನಮ್ಮ ಸಂಸ್ಕೃತಿಗೊಪ್ಪದ ಪಾಶ್ಚಾತ್ಯ ರೀತಿ ನೀತಿಗಳನ್ನು ತಮ್ಮ ಸಂಘದ ಧೋರಣೆಯಾಗಿ ಅಪ್ಪಿಕೊಂಡು ತಮ್ಮ ಮತ್ತು ತಮ್ಮನುಯಾಯಿಗಳ ಹಿತಕ್ಕೆ ಧಕ್ಕೆಯನ್ನು ತರಿಸಿಕೊಂಡರು. ಇಷ್ಟಾದರೂ ಮಹಾತ್ಮರಿರುವಾಗ ಎಲ್ಲಾ ಮಜೂರ ಚಳವಳಗಳಿಗೂ ನಿರ್ಬಂಧಿತವಾದ ವಾಕ್ ಸ್ವಾತಂತ್ರ್ಯವಿತ್ತು

ಪ್ರಜಾಪ್ರಭುತ್ವ ಪ್ರಿಯತೆ

ಮಹಾತ್ಮರನ್ನು ವಿರೋಧಿಗಳು ಸರ್ವಾಧಿಕಾರಿಯೆಂದು ಟೀಕಿಸುತ್ತಿದ್ದರು. ಅವರು ಹೆಚ್ಚಿನ ಜನತೆಯ ಹೃತ್ಸ್ಪರ್ಶಿಯಾಗುವಂತಹ ಆಶೆ ಆಕಾಂಕ್ಷೆಗಳನ್ನೇ ಪ್ರತಿಬಿಂಬಿಸುತ್ತಿದ್ದುದರಿಂದ ಜನತೆಯಾದರೋ ಅವರ ನಿರ್ದೇಶಗಳನ್ನು ಸ್ವಸಂತೋಷದಿಂದಲೂ ಶೀಘ್ರವಾಗಿಯೂ ಒಪ್ಪಿಕೊಳ್ಳುತಿತ್ತು. ಇಷ್ಟಾದರೂ ನಮ್ಮ ರಾಷ್ಟ್ರದ ರಾಜಕೀಯ ಜೀವನದಲ್ಲಿ ಪಾಶ್ಚಾತ್ಯ ಕ್ರಾಂತಿಕಾರಿಕ ಅನುಕರಣೆಯ ವಿಧ್ವಂಸಕ ವಿಧಾನಗಳನ್ನು ಕಟ್ಟಿಕೊಂಡ ಕೈಮುಷ್ಟಿಯಷ್ಟು ಮುಖಂಡರು ಅವರ ತತ್ವಗಳನ್ನು ಒಪ್ಪುತ್ತಿರಲಿಲ್ಲ. ಬಹು ಸಂಖ್ಯಾಕರ ಬೆಂಬಲವಿರುವ ಸರಕಾರವು ಇಂತಹದನ್ನು ಸುಲಭವಾಗಿ ತಡೆಗಟ್ಟಬಹುದಿತ್ತಾದರೂ ಮಹಾತ್ಮರ ಪ್ರಭಾವಿ ಹಸ್ತವು ಅಂತಹ ಧೋರಣೆಗಳನ್ನು ತಡೆಗಟ್ಟುತ್ತಿದ್ದ ಪರಿಣಾಮವಾಗಿ ನಮ್ಮ ದೇಶದಲ್ಲಿ ಬಹಿರಂಗವಾಗಿ ವರ್ಗ ದ್ವೇಷವನ್ನೂ, ಜಾತೀ ವೈಷಮ್ಯವನ್ನೂ ಸಾರುವವರಿಗೆ ಅನಿರ್ಬಂಧಿತವಾದ ಸ್ವಾತಂತ್ರ್ಯ ಸಿಕ್ಕಿತ್ತು. ಮಹಾತ್ಮರ ಕಾಲದಲ್ಲಿ ಸಾರ್ವಜನಿಕ ಸಂಸ್ಥೆಗಳು ಅನುಭವಿಸುತ್ತಿದ್ದ ಸ್ವೇಚ್ಛಾರವು ಪ್ರಜಾಪ್ರಭುತ್ವದ ಮಾದರಿ ದೇಶವೆನ್ನುವ ಸಂಯುಕ್ತ ಅಮೇರಿಕದಲ್ಲೂ ಇಲ್ಲವೆನ್ನಬಹುದಿತ್ತು.

ಗಾಂಧೀ ವಿಚಾರ ವೇದಿಕೆ

ಪ್ರಜಾ ರಾಜ್ಯವೆತ್ತ

ಗಾಂಧಿಜೀಯವರು ಇತ್ತೀಚೆಗಿನ ಹರಿಜನದಲ್ಲಿ ಹೀಗೆ ಬರೆಯುತ್ತಾರೆ:—

ನಮ್ಮ ದಾಸ್ಯ ದೂರವಾಗಿದ್ದರೂ ದಾಸ್ಯ ಮನೋವೃತ್ತಿ ನಮ್ಮನ್ನು ಬಿಟ್ಟಿಲ್ಲವೆಂದು ತೋರುತ್ತದೆ. ವಿನಿಯಂತ್ರಣದಿಂದ ಬೆಲೆಗಳು ಹೆಚ್ಚಿದ್ದರೆ ಒಬ್ಬರೇ ಆದರೂ ಆ ಕುರಿತು ಕೂಗೆಬ್ಬಿಸುವುದು ಕರ್ತವ್ಯವಾಗಿರುತ್ತದೆ. ಈ ಕೂಗು ಯಥಾರ್ಥವಿದ್ದರೆ ಅವರಿಗೆ ಸಹಕಾರವೂ ಸಹಾನುಭೂತಿಯೂ ಸಿಗುವುದು. ವೈಯುಕ್ತಿಕವಾಗಿ ಹೇಳುವುದಾದರೆ ನಾವು ಇಂತಹ ಕೂಗಿಗೆ ಬೆದರುವುದಿಲ್ಲ. ಜಲಚರ ಪ್ರಾಣಿಗಳ ಮಧ್ಯದಲ್ಲಿದ್ದು ಅವುಗಳೊಡನೆ ಹೋರಾಡುವ ಪ್ರಸಂಗವಿಲ್ಲದಿದ್ದರೆ ಅವುಗಳಿಂದ ತಿನ್ನಲ್ಪಡಲು ನಾವು ಯೋಗ್ಯವೇ ಸರಿ. ಕಷ್ಟಕಾರಕ ಪರಿಸ್ಥಿತಿಯನ್ನೆದುರಿಸುವ ದಾರಿ ನಮಗಾಗಲೇ ತೋರುವುದು.

ನಿಜವಾದ ಪ್ರಜಾ ರಾಜ್ಯ ತತ್ವವನು ಜನರು ಪುಸ್ತಕಗಳಿಂದ ಕಲಿಯುವುದಿಲ್ಲ. ಸರಕಾರದಿಂದಲೂ ಅದರದನ್ನು ಕಲಿಯುವುದಿಲ್ಲ. ಸರಕಾರವೆಂಬುದು ಒಂದು ನೌಕರರ ಕೂಟ. ಅದು ಹೆಸರಿಗೆ ಮಾತ್ರ ಇರುವುದು. ತೀಕ್ಷ್ಣ ಅನುಭವವೇ ಪ್ರಜಾ ರಾಜ್ಯದ ಉತ್ತಮ ಶಿಕ್ಷಕ. ಜನರು ನನ್ನನ್ನು ವಿನ್ನಪಿಸಿಕೊಳ್ಳುವ ದಿನಗಳು ಕಳೆದು ಹೋದವು. ಬ್ರಿಟಿಷರಾಳ್ವಿಕೆಯ ಕಾಲದ ತಾತ್ಕಾಲಿಕ ಅಹಿಂಸೆ ಇನ್ನು ಮುಂದೆ ಅವಶ್ಯವಿಲ್ಲ. ಈಗ ಭೀಕರ ಹಿಂಸೆಯು ನಮ್ಮನ್ನೆದುರಿಸಿದೆ. ನಾವಿದಕ್ಕೆ ಆಹುತಿಯಾಗಬಾರದು.

ಹಿಂದೂ ಮುಸಲ್ಮಾನರ ಐಕ್ಯತೆಯನ್ನು ಇಲ್ಲದಂತೆ ಮಾಡಲು ನಾನು ಶಕ್ತಿಯಿದ್ದ ತನಕ ಪ್ರಯತ್ನಿಸುವೆ. ನನ್ನ ಶಕ್ತಿ ಸಾಮರ್ಥ್ಯಗಳ ಮಿತಿ ನನಗೇ ಗೊತ್ತಿದೆ. ಮೊದಲು ಸತ್ಯಾಗ್ರಹದ ಪ್ರದೇಶದ ಒಡೆಯನಾಗಲು ನನಗೆ ಶಕ್ಯವಿತ್ತು. ಈಗ ನಾನೊಬ್ಬ ಅರಸನೆಂದು ತಿಳಿದುಕೊಂಡಿದ್ದರೆ ನನ್ನಂತಹ ಅರಸರು ಅನೇಕರಿರುವರು. ಅವರಲ್ಲಿ ನಾನೂ ಒಬ್ಬನು. ಪ್ರಜಾ ರಾಜ್ಯದ ಪ್ರಾರಂಭ ದಿನಗಳು ಅತಿ ಭಯಾನಕವಾಗಿ ಕೇಳಿಸದಂತಹ ವಿಷಮ ಘಟನೆಗಳಿಂದ ತುಂಬಿದಂತಹದು. ಈ ಎಲ್ಲ ವಿಷಮ ಪರಿಸ್ಥಿತಿ ಹೋಗಲಾಡಿಸಿ ಪ್ರಜಾ ರಾಜ್ಯ ಬಾಳಬೇಕಾದರೆ ತೀವ್ರಿಕೆಯ ಈ ಅನಿವಾರ್ಯ ವೈಮನಸ್ಯದೊಳಗಿಂದಲೇ ಮಧುರ ಸಂಬಂಧವನ್ನು ಹೊರಹೊಮ್ಮಿಸಬೇಕು. ಇದರಲ್ಲಿ ಜನತೆಯಲ್ಲವೂ ಸಹಕರಿಸಬೇಕು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨ ೧/೪
೪ರಿಂದ ೫ ತಿಂಗಳು	,, ,,	೨ ೧/೨
೬ರಿಂದ ೯ ತಿಂಗಳು	,, ,,	೨ ೩/೪

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ದ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಸ್ವದೇಶಾಭಿಮಾನಿ

ತಾರೀಕು 27-2-1948

ಕಾಂಗ್ರೆಸ್ ಸಂಸ್ಥೆಯ ಹೊಸ ಘಟನೆ

ಕಾಂಗ್ರೆಸ್ ಸಂಸ್ಥೆಯ ಸುಧಾರಣೆಯ ಬಗ್ಗೆ ಲೋಕ ಸೇವಾ ಸಂಘವನ್ನಾಗಿ ಅದನ್ನು ಮಾರ್ಪಡಿಸಬೇಕೆಂದು ಮಹಾತ್ಮಾಗಾಂಧಿಯವರು ಕೆಲವು ಸೂಚನೆಗಳನ್ನು ಬರೆದಿಟ್ಟಿದ್ದರಷ್ಟೆ ಅವನ್ನು ವರ್ಕಿಂಗ್ ಕಮಿಟಿಯವರು ಪರಿಶೀಲಿಸಿ ಮಾಡಿರುವ ಸೂಚನೆಗಳನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಮಂಜೂರುಮಾಡಿರುತ್ತದೆ ಹೀಗೆ ಮಂಜೂರು ಮಾಡಿದ ಸೂಚನೆಗಳು ಗಾಂಧೀಜಿಯವರ ಸೂಚನೆಗಳಿಗಿಂತ ಸ್ವಲ್ಪ ಭಿನ್ನವಿರುತ್ತವೆ

ಮುಖ್ಯ ಬದಲಾವಣೆಯೆಂದರೆ ಗಾಂಧೀಯವರ ಸೂಚನೆಯಲ್ಲಿ ನಿರ್ದಿಷ್ಟ ಕೆಲಸ ಮಾಡುವವರ ಪಂಚಾಯತುಗಳಿಂದ ಸಂಸ್ಥೆಯು ಆರಂಭವಾಗಿ ಇಂಥ ಸೇವಕರದೇ ಸಂಸ್ಥೆಯಾಗಿ ಇದನ್ನು ಮಾರ್ಪಡಿಸಬೇಕೆಂಬುದೇ ಅವರ ಅಭಿಪ್ರಾಯವಿತ್ತು ಈಗ ಮಂಜೂರಾಗಿರುವ ಸೂಚನೆಗಳಂತೆ ಕಾಂಗ್ರೆಸಿನ ಈಗಿನ ಸ್ವರೂಪವನ್ನು ಬಿಟ್ಟು ಕೊಡದೇನೆ ಇದನ್ನು ಸಾಧಿಸುವ ಯತ್ನ ಮಾಡಲಾಗಿದೆ

ನಾಲ್ಕಾಣೆ ಸದಸ್ಯರ ಅಗತ್ಯವಿಲ್ಲವೆಂದು ಮಹಾತ್ಮಾಜಿ ಹೇಳಿದ್ದಾರೆ ಅದಕ್ಕೆ ಬದಲು ೨೧ ವರ್ಷ ಪ್ರಾಯಕ್ಕೆ ಬಂದ ಕಾಂಗ್ರೆಸ್ ಧ್ಯೇಯ ಒಪ್ಪುವವರೆಲ್ಲ ಸದಸ್ಯರೆಂದು ಈಗಿನ ಸೂಚನೆ ಹೇಳುತ್ತಿದೆ ಕೆಲಸ ಮಾಡುವವರು ಮಾತ್ರ ಕಾಂಗ್ರೆಸ್ ಸದಸ್ಯರೆಂಬುದನ್ನು ಕಾಂಗ್ರೆಸ್ ಸಂಸ್ಥೆಯಲ್ಲಿ ಅಧಿಕಾರಿಗಳಾಗುವವರೆಲ್ಲ ಕೆಲಸಗಾರರಿರಬೇಕೆಂದು ಬದಲಾವಣೆ ಮಾಡಲಾಗಿದೆ

ಇದರ ಅರ್ಥ ಇಷ್ಟು ಇರುತ್ತದೆ ವಿಧಾಯಕ ಕಾರ್ಯಕ್ರಮಕ್ಕೆ ಗಾಂಧೀಜಿಯವರು ಪ್ರಾಧಾನ್ಯತೆ ಕೊಟ್ಟಿದ್ದಾರೆ ಆದರೆ ರಾಜಕೀಯ ವಿಚಾರ ಬೇಡವೆಂಬುದು ಅವರ ಅಭಿಪ್ರಾಯವಲ್ಲ ರಾಜಕೀಯ ಇಡಳಿತೆ ಅವರ ದೃಷ್ಟಿಯಲ್ಲಿ ಗೌಣ ವಿಚಾರ ವರ್ಕಿಂಗ್ ಕಮಿಟಿಯಲ್ಲಿರುವವರು ರಾಜಕೀಯ ವಿಚಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದಾರೆ ಆದರೆ ವಿಧಾಯಕ ಕಾರ್ಯದ ಮಹತ್ವ ಮರೆತಿಲ್ಲ ಇದು ಎರಡು ದೃಷ್ಟಿಕೋನಗಳ ಭೇದ ಮಾತ್ರವಲ್ಲದೆ ನಿಜವಾಗಿ ಮಹಾತ್ಮಾಜಿಯವರ ಸೂಚನೆಯನ್ನು ವರ್ಕಿಂಗ್ ಕಮಿಟಿ ಒಪ್ಪಿಕೊಂಡೇ ಮುಂದರಿಸಿರುತ್ತದೆನ್ನಲು ಅಡ್ಡಿಯಿಲ್ಲ

ಮುಂದೆ ಕಾಂಗ್ರೆಸ್ ಸಂಸ್ಥೆಯು ಸರ್ವಪಕ್ಷಗಳ ಪ್ರತಿನಿಧಿಯಾಗಿ ಇದುವರೆಗೆ ಇದ್ದಂತೆ ಇರುವುದು ಸಾಧ್ಯವಿಲ್ಲ ದೇಶದಲ್ಲಿ ಭಿನ್ನ ರಾಜಕೀಯ ಪಂಗಡಗಳು ಮುಂದೆ ಬರುವುದು ಸ್ವಾಭಾವಿಕ ಇವೆಲ್ಲ ಪಂಗಡಗಳು ಪ್ರಜೆಗಳನ್ನು ತಮ್ಮೆಡೆಗೆ ಒಲಿಸಿಕೊಳ್ಳಲು ಯತ್ನಿಸುವವು. ಪರಸ್ಪರ ಸ್ಪರ್ಧೆ ಅನಿವಾರ್ಯ. ಇದನ್ನು ಕಂಡೇ ಮಹಾತ್ಮಾಜಿಯವರು ತಮ್ಮ ಸೂಚನೆಗಳನ್ನು ಮುಂದಿಟ್ಟಿರುವರು ಈ ಸ್ಪರ್ಧೆ ತಪ್ಪು ದಾರಿ ಹಿಡಿದು ಅಧಿಕಾರ ಲಾಲಸೆಯಿಂದ ನಡೆಯುವ ಬದಲು ಪ್ರಜಾ ಸೇವೆಯ ಸ್ಪರ್ಧೆಯಾಗಲೆಂಬುದೇ ಅವರ ಉದ್ದೇಶ. ಎಲ್ಲ ಪಂಗಡಗಳೂ ಪ್ರಜೆಗಳ ಸೇವೆಯನ್ನು ತಮ್ಮ ದೃಷ್ಟಿಯಂತೆ ಸಲ್ಲಿಸಲು ಯತ್ನಿಸಲಿ. ಅತ್ಯುತ್ತಮ ಸೇವೆ ಸಲ್ಲಿಸುವವರೇ ವಿಜಯಿಗಳಾಗಲಿ ಎಂಬುದೇ ಅವರ ಅಭಿಪ್ರಾಯವೆಂಬುದನ್ನು ಅವರೇ ಸೂಚಿಸಿದ್ದಾರೆ.

ಈಗ ರಾಜಕೀಯ ರಂಗದಲ್ಲಿ ಪ್ರಧಾನ ಸ್ಥಾನದಲ್ಲಿರುವ ಕಾಂಗ್ರೆಸ್ ಸಂಸ್ಥೆಯೇ ಮಾರ್ಗ ದರ್ಶಕವಾಗಬೇಕು. ಕಾಂಗ್ರೆಸು ಸರಿಯಾದ ಹಾದಿ ಹಿಡಿದರೆ ಇತರರು ಭಿನ್ನ ದಾರಿಯಲ್ಲಿ ಹೋಗುವುದು ಅಸಾಧ್ಯವಾಗುವುದು ಆಧುದರಿಂದ ಕಾಂಗ್ರೆಸು ಲೋಕ ಸೇವಾ ಸಂಘವಾಗಬೇಕಾಗಿದೆ.

ವರ್ಕಿಂಗ್ ಕಮಿಟಿಯವರು ಲೋಕ ಸೇವಾ ಸಂಘವೆಂಬ ಹೆಸರನ್ನು ಇಟ್ಟುಕೊಂಡಿಲ್ಲವಾದರೂ ಮೂಲ ಪಂಚಾಯತರಿಂದ ಮೊದಲ್ಗೊಂಡು ಮುಂದಿನ ಎಲ್ಲ ಸದಸ್ಯರೂ ನಿಜವಾಗಿಯೂ ಸೇವಾ ನಿರತರಿರಬೇಕೆಂಬ ಗಾಂಧೀ ಸೂಚನೆಯ ಮುಖ್ಯ ಅಂಶವನ್ನು ಸಂಪೂರ್ಣ ಒಪ್ಪಿಕೊಂಡು ಅದನ್ನೀಗ ಮಂಜೂರು ಮಾಡಿದ್ದಾರೆ

ಮೂಲ ಪಂಚಾಯತಿನವರನ್ನು ಪ್ರಜಾಜನರಲ್ಲಿ ಪ್ರಾಯಕ್ಕೆ ಬಂದ ಕಾಂಗ್ರೆಸ್ ಧ್ಯೇಯ ಒಪ್ಪುವವರೆಲ್ಲರೂ ಆರಿಸಬೇಕೆಂದು ಮಾಡಿದ ಏರ್ಪಾಡಿನಲ್ಲಿ ದೋಷವಿಲ್ಲ ರಾಜಕೀಯ ದೃಷ್ಟಿಯಿಂದ ಇದು ಅಗತ್ಯವೆಂದರೂ ತಪ್ಪಲ್ಲ ತಮ್ಮ ಕಾರ್ಯಕ್ಕೆ ಪ್ರಜಾಜನರ ಸಮ್ಮತಿ ಇದೆಯೆಂಬುದನ್ನು ವ್ಯಕ್ತಗೊಳಿಸಲು ಇದೊಂದೇ ಈಗಿನ ಕ್ರಮವೆಂಬುದು ಸರ್ವ ವಿದಿತವಷ್ಟೆ

ಕಾಂಗ್ರೆಸ್ ಸಂಸ್ಥೆಯ ಮುಂದಾಳುಗಳು ಅದರ ಹೆಸರನ್ನು ಬಿಟ್ಟು ಕೊಡಲು ಸಿದ್ಧರಿಲ್ಲ ಅದು ಗಳಿಸಿರುವ ಕೀರ್ತಿಯ ಪ್ರಯೋಜನ ಕಳೆದುಕೊಳ್ಳುವುದು ಸರಿಯಲ್ಲವೆಂಬುದು ಅವರ ಅಭಿಪ್ರಾಯವಿರುವಂತೆ ಕಾಣುತ್ತದೆ ಈ ಕೀರ್ತಿ ಮತ್ತು ಪ್ರಜಾ ವಿಶ್ವಾಸಗಳನ್ನು ಸದುಪಯೋಗ ಮಾಡಿಕೊಳ್ಳುವುದು ಆಕ್ಷೇಪಕರವಲ್ಲ ಹಿಂದಿನ ಕೀರ್ತಿಯ ಭಂಡವಲದ ಮೇಲೆ ಮಾತ್ರ ಜೀವಿಸುವುದ ಅಸಾಧ್ಯವೆಂಬುದು ವರ್ಕಿಂಗ್ ಕಮಿಟಿಯವರಿಗೆ ಗೊತ್ತಿಲ್ಲದೆ ಇಲ್ಲ

ಮಹಾತ್ಮಾಗಾಂಧೀಯವರು ಜೀವಂತ ಇದ್ದು ಅವರ ಸೂಚನೆಗಳನ್ನು ವರ್ಕಿಂಗ ಕಮಿಟಿಯ ಮುಂದ ಇಟ್ಟರೂ ಆ ಕಮಿಟಿಯವರು ಈಗ ಮುಂದೆ ಇಟ್ಟ ಸೂಚನೆಗಳನ್ನೇ ಮಂಜೂರು ಮಾಡುತ್ತಿದ್ದರು ಗಾಂಧೀಜಿಯವರು ಈ ತಿದ್ದುಪಡಿಗಳನ್ನು ಒಪ್ಪುತ್ತಿದ್ದರು ಒಂದು ವೇಳೆ ಅವರಿಗೆ ಪೂರ್ಣ ಒಪ್ಪಿಗೆಯಾಗದಿದ್ದರೂ ವರ್ಕಿಂಗ್ ಕಮಿಟಿಯು ತನ್ನ ಅಭಿಪ್ರಾಯದಂತೆಯೇ ವರ್ತಿಸುವುದೇ ಯುಕ್ತವೆನ್ನುತ್ತಿದ್ದರು

ಮುಂದಿನ ಘಟನೆಗೆ ನ್ಯಾಯವಾದ ಸ್ವರೂಪವನ್ನು ವರ್ಕಿಂಗ್ ಕಮಿಟಿಯಲ್ಲಿಯ ಮುಂದಾಳುಗಳು ಹಾಕಿ ಕೊಟ್ಟಿದ್ದಾರೆಂಬುದನ್ನು ಒಪ್ಪಲೇಬೇಕು ಇದನ್ನು ಸರಿಯಾಗಿ ಜಾರಿಗೆ ತರುವ ಕಾರ್ಯ ಮಾತ್ರ ಕೇವಲ ಮುಂದಾಳುಗಳಿಂದಲೇ ನಡೆಯುವ ಅಂಶವಲ್ಲ ಅದು ಪ್ರಜೆಗಳ ಹಾಗೂ ಎಲ್ಲ ಕೆಲಸಗಾರರ ಮೇಲೆ ಹೊಂದಿಕೊಂಡಿದೆ

ಕಾಂಗ್ರೆಸ್ ಸಂಸ್ಥೆಯ ಹಾಗೂ ಭಾರತದ ಮಾತ್ರವಲ್ಲ ಇಡೀ ಪ್ರಪಂಗದ ಭವಿತವ್ಯ ತನ್ನ ನಡತೆಯ ಮೇಲೆ ಹೊಂದಿದೆಯೆಂಬುದನ್ನು ಪ್ರತಿಯೊಬ್ಬ ಕಾಂಗ್ರೆಸ್ ಕೆಲಸಗಾರನು ತಿಳಿದು ನಡೆಯಬೇಕು.

ಟೀಕೆ-ಟಿಪ್ಪಣಿಗಳು

ಆಹಾರ ಪರಿಸ್ಥಿತಿ

ನಮ್ಮ ಜಿಲ್ಲೆಯ ಹಳ್ಳಿ ಭಾಗಗಳಲ್ಲಿ ಆಹಾರ ಪರಿಸ್ಥಿತಿ ದಿನದಿಂದ ದಿನಕ್ಕೆ ಕಠಿಣವಾಗುತ್ತ ಬರುತ್ತಿದೆ ಅಲ್ಲಲ್ಲಿ ಕೆಲವೆಡೆ ರೀಲೀಫ್ ಅಂಗಡಿಗಳನ್ನು ಏರ್ಪಡಿಸಿದಲ್ಲಿ ಮಾತ್ರ ಹೆಚ್ಚಿನ ತೊಂದರೆಯಾಗುತ್ತ ಇಲ್ಲ ಈ ಏರ್ಪಾಡು ಇಲ್ಲದ್ದಲ್ಲಿ ಬಡ ಜನರು ಕಂಗಾಲಾಗುವ ಸ್ಥಿತಿ ಪ್ರಾಪ್ತವಾಗುತ್ತ ಬರುತ್ತಿದೆ ಅಕ್ಕಿ ಮುಡಿಗೆ ಹಳ್ಳಿಗಳಲ್ಲಿ ಕೂಡಾ ರೂ ೨೦ರಿಂದ ರೂ ೨೫ರ ವರೆಗೆ ಕೇಳುತ್ತಿದ್ದಾರೆ ಮಾತ್ರವಲ್ಲ ಇಡೀ ಮುಡಿಯನ್ನೇ ಕೊಂಡು ಹೋಗಬೇಕು ಇದು ಸಾಧ್ಯವಿಲ್ಲದವರ ಗತಿಯೇನೆಂದು ನಮ್ಮ ಹಳ್ಳಿಗಳಲ್ಲಿಯ ಶ್ರೀಮಂತರೈತರೂ ವ್ಯಾಪಾರಿಗಳೂ ಯೋಚಿಸುವ ಲಕ್ಷಣಗಳು ಕಾಣುವುದಿಲ್ಲ ನಮ್ಮಲ್ಲಿಯ ಶ್ರೀಮಂತರು ಧನಪಿಶಾಚಿ ಹಿಡಿದವರಂತೆ ವರ್ತಿಸಿದರೆ ಕೆಲಸವು ಕೆಡುವ ಸಂಭವಿದೆ ಎಲ್ಲ ಕಡೆಗಳಲ್ಲಿಯೂ ಸರಕಾರವೇ ಅಗತ್ಯವುಳ್ಳ ಏರ್ಪಾಡು ಮಾಡುವುದು ಕಷ್ಟವಾಗುವುದು ಅವರು ಸಾಧ್ಯವಿದ್ದುದನ್ನು ಮಾಡಲೇ ಬೇಕು ಆದಷ್ಟು ಅಕ್ಕಿಯನ್ನು ಪರ ಜಿಲ್ಲೆಗಳಿಂದ ತರಿಸಿ ಆದಷ್ಟು ಹೆಚ್ಚಿನ ಡಿಪೋಗಳ ವ್ಯವಸ್ಥೆ ಮಾಡಬೇಕು ಆದರೆ ನಮ್ಮವರು ಹಣ ಮಾಡುತ್ತ ಹೋಗಬಹುದೆಂದು ಭಾವಿಸಿದರೆ ಅನ್ಯಾಯವಾಗುವುದು ಕಳೆದ ಬಾರಿ ತನಕ ನಡೆದ ಯುದ್ಧ ಕಾಲದಲ್ಲಿ ಅಕ್ಕಿಯ ಕ್ರಯ ವಿಪರೀತವಿದ್ದಾಗ ಹೆಚ್ಚಿನ ಹಳ್ಳಿಗಳಲ್ಲಿ ತಾವೇ ಸೇರಿ ಅಕ್ಕಿ ಸಂಗ್ರಹಿಸಿ ಬಡವರಿಗೆ ಕೊಡಲು ಸಾಧ್ಯವಿರುವ ದರಗಳಲ್ಲಿ ಚಿಲ್ಲರೆ ಮಾರಾಟದ ಏರ್ಪಾಡನ್ನು ಮಾಡಿಲ್ಲವೆ? ಅದೇ ರೀತಿ ಈಗಲೂ ಆಯಾ ಗ್ರಾಮಗಳ ಮುಂದಾಳುಗಳು ... ಸಲು ಮುಂದ ಬರಬೇಕು ... ಅಕ್ಕಿಯೇ ಇಲ್ಲವೆಂದಾದರೆ ಸರಕಾರದವರು ಒದಗಿಸಬೇಕು ಇದ್ದ ಅಕ್ಕಿ ಎಲ್ಲರಿಗೂ ಸಿಕ್ಕುವಂತೆ ಗ್ರಾಮಸ್ಥರೇ ಏರ್ಪಡಿಸಿಕೊಳ್ಳಬೇಕು ಇಲ್ಲದಿದ್ದರೆ ಯಾರಿಗ ಬೇಡವೆನ್ನಿಸುವ ಕಂಟ್ರೋಲನ್ನು ಪುನಃ ಜಾರಿಗೆ ತರುವ ಪ್ರಸಂಗ ಬರುತ್ತದೆಂಬುದನ್ನು ನಮ್ಮ ರೈತರೇ ಮೊದಲಾದವರು ಚೆನ್ನಾಗಿ ತಿಳಿದುಕೊಳ್ಳಬೇಕು

ಬಂಗಾಳದ ಬರಗಾಲ ಈಗ ನಡೆಯುವಂತಿಲ್ಲ ಜನರು ಸುಮ್ಮನೆ ಉಪವಾಸ ಬಿದ್ದು ಸಾಯುಲು ಈಗ ಖಂಡಿತವಾಗಿಯೂ ಸಿದ್ಧರಿಲ್ಲ. ಮಾತ್ರವಲ್ಲ ಸರಕಾರವಾದರೂ ಅದನ್ನು ಬಿಡುವಂಥ ಪರಿಸ್ಥಿತಿ ಇಲ್ಲ. ರೇಶನಿಂಗ್ ಪುನಃ ಬರುವುದು ಬೇಡವೆಂಬ ರೈತಜನರು ದುರಾಲೋಚನೆಯಿಂದ ತಮ್ಮ ಸ್ವಂತ ಹಿತದ ದೃಷ್ಟಿಯಿಂದವಾದರೂ ಉದಾರತೆಯಿಂದ ವರ್ತಿಸಬೇಕೆಂದು ನಾವು ಎಚ್ಚರಿಸುವುದು ಅಗತ್ಯವಿರುತ್ತದೆ

ಕಾಂಗ್ರೆಸ್ ಸಂಸ್ಥೆಯ ದುರುಪಯೋಗ ಅಂದರೆ ತಮ್ಮ ಸ್ವಂತ ಅಧಿಕಾರ ಲಾಲಸೆಯ ತೃಪ್ತಿಗಾಗಿ ಉಪಯೋಗ ಮಾಡಲು ಯಾರಿಗೂ ಆಸ್ಪದ ದೊರೆಯದ ಹಾಗೆ ಪ್ರತಿಯೊಬ್ಬ ಕೆಲಸಗಾರನೂ ಯಥಾರ್ಥತೆಯಿಂದ ವರ್ತಿಸುವುದು ಅತ್ಯಗತ್ಯವಿರುತ್ತದೆ

ಕಾಂಗ್ರೆಸ್ ಸಂಸ್ಥೆಯು ಅಧಿಕಾರ ಲಾಲಸೆಗೊಳಗಾದರೆ ಇತರ ಪಂಗಡಗಳೂ ಇದೇ ಮಾರ್ಗ ಹಿಡಿದು ಸ್ಪರ್ಧಿಸುವವು ಇದರಿಂದ ಕಾಂಗ್ರೆಸಿನ ಹಾಗೂ ದೇಶದ ಅವನತಿಯಾಗುವುದು

ಮಹಾತ್ಮಾಗಾಂಧಿಯವರಿಂದ ಶಿಕ್ಷಣ ಹೊಂದಿದ ಮುಂದಾಳುಗಳಿರುವುದರಿಂದ ಇಂಥ ದುರವಸ್ಥೆ ಬರುವ ಸಂಭವವಿಲ್ಲವೆಂದು ನಂಬಬಹುದು. ದೇಶದ ಸ್ವಾತಂತ್ರ್ಯ ಸಂಪಾದಿಸಿದ ಕಾಂಗ್ರೆಸ್ಸು ಆ ಸ್ವಾತಂತ್ರ್ಯ ಫಲಕಾರಿಯಾಗುವಂತೆ ಸಾಧಿಸುವುದರಲ್ಲಿ ಕೃತಕೃತ್ಯವಾಗಲಿ.

ಭಾರತ ಸರಕಾರದ ಕುರಿತು ಅಪಪ್ರಚಾರ

ಅಧಿಕಾರ ಲಾಲಸೆಯಿಂದ ಸ್ಪರ್ಧಿಸುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೆಲವು ಭಾರತದ ಮೇಲೆ ಇದೇ ಬಗೆಯ ಆರೋಪ ಹೊರಿಸಿ ಅಪಪ್ರಚಾರಕ್ಕೆ ಹೊರಟಿವೆ ಆಸ್ಯಾಖಂಡದ ಮುಂದಾಳ್ತನಕ್ಕೆ ಭಾರತವು ಹವಣಿಸುತ್ತಿರುವುದು ನಮ್ಮ ಸಾಮ್ರಾಜ್ಯ ಲಾಲಸೆಯಿಂದು ಸಾರಲು ಆರಂಭವಾಗಿದೆ ಈ ದೇಶಗಳಲ್ಲಿ ನಮ್ಮ ವ್ಯಾಪಾರ ಇತ್ಯಾದಿ ಬೆಳಸಿ ಸ್ವಾರ್ಥ ಸಾಧಿಸುವುದೇ ನಮ್ಮ ಉದ್ದೇಶವಂತೆ ಭಾರತೀಯ ವಿದೇಶಾಂಗ ನೀತಿಯಲ್ಲಿ ಇಂಥ ಸ್ವಾರ್ಥವಿಲ್ಲವೆಂದು ಇಲ್ಲಿ ನಾವು ವಾದಿಸುವ ಅಗತ್ಯವಿಲ್ಲ

ಭಾರತವಿಂದು ಆಸ್ಯಾ ದೇಶಗಳ ಮುಂದಾಳ್ತನ ವಹಿಸಲು ಹವಣಿಸುವುದೇನೋ ನಿಜ ಆದರೆ ಇದು ಆಸ್ಯಾ ದೇಶಗಳ ಕಲ್ಯಾಣಕ್ಕೆ ವಿರೋಧವಾದ ರೀತಿಯಲ್ಲಿ ಅಲ್ಲ ಇದನ್ನು ನಾವು ಮುಂದರಿದಂತೆ ಇತರ ರಾಷ್ಟ್ರಗಳು ಚೆನ್ನಾಗಿ ತಿಳಿಯುವಂತಾಗವುದೆಂದು ಆಶಿಸಬೇಕಾಗಿದೆ

ಭಾರತದ ಮುಂದಾಳ್ತನವು ಶಸ್ತ್ರಗಳ ಬಲಾತ್ಕಾರದಿಂದ ಸಾಧಿಸಲ್ಪಡುತ್ತ ಇಲ್ಲ ಸೌಹಾರ್ದದಿಂದ ಸಾಧಿಸಲ್ಪಡುತ್ತಿದೆಯೆಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳು ಮರೆಯಬಾರದು ಪರಸ್ಪರ ಹಿತ ಸಾಧನೆ ಸಹಕಾರಗಳೇ ನಮ್ಮ ವಿದೇಶಾಂಗ ನೀತಿಯ ಮೂಲ ಸೂತ್ರಗಳೆಂಬದರಿಂದ ಇಂಥ ಅಪಪ್ರಚಾರ ಹೆಚ್ಚಿನ ಪರಿಣಾಮಕಾರಿಯಾಗಲಾರದು

ಭಾರತವು ಈ ಮೊದಲು ಇತರ ರಾಷ್ಟ್ರಗಳ ಮೇಲೆ ತನ್ನ ವರ್ಚಸ್ಸನ್ನು ಶಾಂತಿಯಿಂದಲೇ ಬೀರಲು ಸಮರ್ಥವಾಗಿದೆ ಅದೇ ರೀತಿ ಈ ಬಾರಿಯೂ ಆಗುವುದೆಂದು ಆಶಿಸಿದರ ತಪ್ಪೇನು?

ಜುನಾಗಡ ಭಾರತಕ್ಕೆ ಸೇರಿತು

ಭಾರತ ಸರಕಾರದವರು ಮೊದಲೇ ಹೇಳಿದಂತೆ ಜುನಾಗಡದಲ್ಲಿ ಪ್ರಜಾಭಿಪ್ರಾಯ ನಿರ್ಣಯವನ್ನು ಅದು ನ್ಯಾಯವಾದ ಕ್ರಮದಲ್ಲಿ ನಡೆಸಿತು ಸುಮಾರು ಎರಡು ಲಕ್ಷದಷ್ಟು ಮತಗಳು ಭಾರತಕ್ಕೆ ಸೇರಬೇಕೆ ದೂ 91 ಮತಗಳು ಪಾಕಿಸ್ಥಾನಕೆ ಸೇರಬೇಕೆಂದೂ ಕೊಡಲ್ಪಟ್ಟವು ಜುನಾಗಡ ಪ್ರಜೆಗಳ ಅಭಿಪ್ರಾಯದ ಕುರಿತು ಇನ್ನು ಯಾರೂ ಯಾವ ಸಂಶಯವನ್ನು ವ್ಯಕ್ತಗೊಳಿಸಲು ಸಾಧ್ಯವಿಲ್ಲದಂತಾಯಿತು

ಕಾಶ್ಮೀರದಲ್ಲಿ ಕೂಡಾ ಪ್ರಜಾಭಿಪ್ರಾಯದಂತೆ ಮುಂದೆ ನಡೆಯುವೆವೆಂದು ಭಾರತ ಸರಕಾರದವರು ಹೇಳಿದ್ದಾರೆ ಶಾಂತ ಪರಿಸ್ಥಿತಿಯನ್ನು ಮೊದಲಾಗಿ ಸಾಧಿಸುವುದು ಅಗತ್ಯವೆನ್ನುವುದು ತಪ್ಪಲ್ಲ ಈಗಿನ ಕಾಲದಲ್ಲಿ ಪ್ರಜೆಗಳ ಅಭಿಪ್ರಾಯದಂತೆ ನಡೆಯುವುದೇ ಯುಕ್ತವಿರುತ್ತದೆ. ಮುಸ್ಲಿಮರ ಸಂಖ್ಯೆಯೇ ಪ್ರಧಾನವಿರುವ ಕಾಶ್ಮೀರವು ಪಾಕಿಸ್ಥಾನಕ್ಕೆ ಹೆಚ್ಚಿನ ಮತ ಕೊಟ್ಟರೆ ಭಾರತ ಸರಕಾರವು ಅದನ್ನು ಪಾಕಿಸ್ಥಾನಕ್ಕೆ ಖಂಡಿತವಾಗಿ ಬಿಟ್ಟುಕೊಡುವುದು.

ಗೀತೆ ಮತ್ತು ಗಾಂಧೀಜಿ

ಸನಾತನ ಹಿಂದೂ ಧರ್ಮ ಗ್ರಂಥಗಳಲ್ಲಿ ಗೀತೆಯು ಮಹಾತ್ಮಾಗಾಂಧೀಯವರ ಜೀವನವನ್ನು ರೂಪಿಸಿದ ಗ್ರಂಥ. ಧಾರ್ಮಿಕ ಪ್ರಶ್ನೆಗಳ ಕುರಿತು ಸಂಶಯ ಬಂದರೆ ಗೀತೆ ತನ್ನ ಪ್ರಮಾಣ ಗ್ರಂಥವೆಂದು ಇವರೇ ಹೇಳಿದ್ದಾರೆ. 'ತಾವೇ ಅನಾಸಕ್ತಿ ಯೋಗ'ವೆಂಬ ಹೆಸರಲ್ಲಿ ಗೀತೆಗೆ ಒಂದು ಅನುವಾದವನ್ನು ಬರೆದಿದ್ದಾರೆ. ಗೀತಾಧ್ಯಾಯಗಳ ಕುರಿತು ಮಂಗಳಪ್ರಭಾತವೆಂಬ ಇವರ ಜೈಲಿನಿಂದ ಬರೆದ ಪತ್ರಗಳೂ ಪ್ರಕಟವಾಗಿರುತ್ತವೆ. ಎಡ್ವಿನ್ ಆರ್ನೋಲ್ಡ ಎಂಬ ಆಂಗ್ಲ ಕವಿಯ ಗೀತೆಯ ಆಂಗ್ಲ ಭಾಷಾನುವಾದವೇ ಇವರಿಗೆ ಗೀತೆಯ ಪರಿಚಯ ಮಾಡಿ ಕೊಟ್ಟುದೆಂದು ಇವರು ಹೇಳಿದ್ದಾರೆ

ಅನಾಸಕ್ತಿಯೋಗದ ಪ್ರಸ್ತಾವನೆಯಲ್ಲಿ ಗೀತೆಯ ಕುರಿತು ಗಾಂಧೀಜಿಯವರು ಎರಡು ಮಾತು ಬರೆದಿದ್ದಾರೆ ಇದು ಮಹಾಭಾರತದಲ್ಲಿರುವ ಒಂದು ದಿವ್ಯ ರತ್ನ ಮಹಾಭಾರತದ ವ್ಯಕ್ತಿಗಳು ಐತಿಹಾಸಿಕ ವ್ಯಕ್ತಿಗಳಿರಬಹುದು ಆದರೆ ಕವಿಯ ಉದ್ದೇಶವು ಇತಿಹಾಸ ಹೇಳುವುದು ಮಾತ್ರವಲ್ಲ, ಧರ್ಮ ಪ್ರತಿಪಾದನೆಯೇ ಆತನ ಧ್ಯೇಯ. ತಾನು ಲೌಕಿಕ ಮನುಷ್ಯರ ಕುರಿತು ಬರೆಯುತ್ತ ಇಲ್ಲವೆಂಬುದನ್ನು ಕವಿಯು ತನ್ನ ಪಾತ್ರಗಳ ಉತ್ಪತ್ತಿಯನ್ನು ಅತಿಮಾನುಷವಾಗಿ ವರ್ಣಿಸಿ ಸೂಚಿಸಿದ್ದಾನೆ ಮಹಾಭಾರತಕಾರನು ಯುದ್ಧದ ಮೇಲ್ಮೆಯನ್ನು ವರ್ಣಿಸಿಲ್ಲ ಯುದ್ಧದ ಅನಾಹುತಗಳನ್ನು ವರ್ಣಿಸಿದ್ದಾರೆ ಕೊನೆಯಲ್ಲಿ ವಿಜಯಿಗಳಾದ ಪಾಂಡವರ ಸ್ಥಿತಿಯನ್ನು ಶೋಚನೀಯವಾಗಿ ವರ್ಣಿಸಿ ಇವರಿಗೆ ಕಣ್ಣೀರನ್ನು ಮಾತ್ರ ಇಟ್ಟಿದ್ದಾನೆ ಇಂಥ ಗ್ರಂಥದ ಮಧ್ಯದಲ್ಲಿರುವ ಗೀತೆಯಾದರೂ ಯುದ್ಧಕ್ಕೆ ಪ್ರೋತ್ಸಾಹ ಕೊಡುತ್ತಿದೆಯೆಂದರೆ ಅರ್ಥವಿಲ್ಲ

ಗೀತೆಯಲ್ಲಿ ವರ್ಣಿತವಾದ ಕುರುಕ್ಷೇತ್ರ, ಪಾಂಡವರು, ಕೌರವರು ಇವೆಲ್ಲ ಐತಿಹಾಸಿಕ ವಿಚಾರದ ವರ್ಣನೆಯಲ್ಲಿ ಪ್ರತಿಯೊಬ್ಬ ಮನುಷ್ಯನ ದೇಹವೇ ಕುರುಕ್ಷೇತ್ರ ಅದು ಧರ್ಮ ಸಾಧಕವೆಂಬುದರಿಂದ ಧರ್ಮಕ್ಷೇತ್ರವೂ ಅಹುದು. ಒಳ್ಳೆಯ ಮತ್ತು ಕೆಟ್ಟ ಗುಣಗಳೊಳಗಿನ ಯುದ್ಧವು ಸದಾಕಾಲವೂ ಈ ಕ್ಷೇತ್ರದಲ್ಲಿ ನಡೆಯುತ್ತಲಿದೆ ಈ ಯುದ್ಧದ ವಿಚಾರವೇ ಗೀತೆಗೆ ಮುಖ್ಯ ವಿಷಯವಲ್ಲದೆ ಭೌತಿಕ ಯುದ್ಧವಲ್ಲ ಭೌತಿಕ ಯುದ್ಧದ ಒಂದು ಉದಾಹರಣೆ ಮಾತ್ರ ತೆಗೆದುಕೊಳ್ಳಲಾಗಿದೆ •

ಅಹಿಂಸೆಯು ಗೀತೆಯು ಚರ್ಚಿಸಿದ ಮುಖ್ಯ ವಿಷಯವಲ್ಲ ಅಹಿಂಸೆಯು ಧರ್ಮವೆಂಬ ಭಾವನೆ ಆಗ ಚೆನ್ನಾಗಿ ಗೊತ್ತಿದ್ದಿತು ಯುದ್ಧಗಳೂ ನಡೆಯುತ್ತಿದ್ದವು ಗೀತೆಯು ಬೋಧಿಸಲು ಹೊರಟ ವಿಷಯವು ಅನಾಸಕ್ತಿಯ ವಿಚಾರ ಅನಾಸಕ್ತ ಜೀವನವನ್ನು ನಡಸಲು ತಾನು ಕಳೆದ ೪೦ ವರ್ಷಗಳಲ್ಲಿ ಯತ್ನಿಸಿದ್ದೇನೆ ಅನಾಸಕ್ತನಾಗಿ ಹಿಂಸೆ ಇತ್ಯಾದಿ ಕೆಟ್ಟ ಕೆಲಸ ಮಾಡುವುದು ಅಸಾಧ್ಯವೇ ಇದೆ ಎಂಬುದನ್ನು ಅನುಭವದಿಂದ ಕಂಡಿದ್ದೇನೆ ಆದುದರಿಂದ ಗೀತೆಯಲ್ಲಿ ಹೇಳಿದಂತೆ ನಡೆಯುವವನಿಗೆ ಅಹಿಂಸಾ ಧರ್ಮ ಅನಿವಾರ್ಯವೆಂಬುದು ಗಾಂಧೀಜಿಯವರ ಅಭಿಪ್ರಾಯ

ಗೀತೆಯನ್ನು ಅಕ್ಷರಶಃ ತಿಳಿದುಕೊಂಡಲ್ಲಿ ಅದು ಹಿಂಸೆಗೂ ಸ್ಥಾನಕೊಡುತ್ತಿದೆಯೆಂಬ ಅರ್ಥಕೊಡಬಹುದು ಆದರೆ ಧರ್ಮಗ್ರಂಥಗಳನ್ನು ಈ ರೀತಿ ಅಕ್ಷರಶಃ ತಿಳಿಯುವುದು ಸರಿಯಲ್ಲ

ಗೀತೆಗೆ ಅಹಿಂಸೆ ಹೇಗೆ ಮಾನ್ಯವಿದೆ ಎಂಬುದನ್ನು ಗಾಂಧೀಜಿಯವರ ಶಿಷ್ಯರಲ್ಲಿ ಶ್ರೇಷ್ಠರಿರುವ ವಿನೋಬಾ ಭಾವೆಯವರು ಇನ್ನಷ್ಟು ಸ್ಪಷ್ಟೀಕರಿಸಿದ್ದಾರೆ ಅರ್ಜುನನು ಯುದ್ಧದ ಅನಾಹುತಗಳನ್ನು ಚೆನ್ನಾಗಿ ವಿವರಿಸಿದ್ದಾನೆ ಇದನ್ನೆಲ್ಲ ಕೃಷ್ಣನು ಅಲ್ಲವೆಂದಿಲ್ಲ ಮಾತ್ರವಲ್ಲ ಇದು ಜ್ಞಾನಿಗಳ ಮಾತೆಂದು ಒಪ್ಪಿಕೊಂಡಿದ್ದಾನೆ ಆ ಮಾತುಗಳು ಅರ್ಜುನನಿಗೆ ಒಪ್ಪುವುದಿಲ್ಲವೆಂಬುದು ಕೃಷ್ಣನ ಅಂಬೋಣ ಅನೇಕರಿಗೆ ಫಾಶಿ ಶಿಕ್ಷೆಕೊಟ್ಟ ನ್ಯಾಯಾಧೀಶನು ತನ್ನ ಮಗನೇ ಆರೋಪಿಯಾದಾಗ ಮರಣದಂಡನೆ ನ್ಯಾಯವಲ್ಲವೆಂಬ ತರ್ಕ ತಂದರೆ ಹೇಗೋ ಹಾಗೆಂದು ಶ್ರೀ ವಿನೋಬಾರವರು ವಿವರಿಸಿದ್ದಾರೆ

ಗೀತೆಯು ಬೌದ್ಧಿಕ ರೀತಿಯಿಂದ ತಿಳಿಯಬಹುದಾದ ಗ್ರಂಥವಲ್ಲವೆಂದೂ ಅದು ಹೃದಯಗಮ್ಯವೆಂದೂ ಗಾಂಧೀಜಿ ಹೇಳಿದ್ದಾರೆ. ಲೋಕಮಾನ್ಯ ತಿಲಕರು ತಮ್ಮ ಗೀತಾ ರಹಸ್ಯದ ಪ್ರತಿಗಳನ್ನು ಗಾಂಧಿಜೀಯವರಿಗೆ ಕಳುಹಿಸಿ ಕೊಟ್ಟಾಗ ಅವರು ಇದೇ ರೀತಿ ಹೇಳಿದ್ದರು.

ಗೀತೆಯ ಕುರಿತು ಗಾಂಧೀಜಿಯವರ ಅಭಿಪ್ರಾಯ ಸರಿಯೇ? ಈಗಿನ ಕಾಲಕ್ಕೆ ಅದು ಅತ್ಯಂತ ಸರಿಯಾದ ಗೀತಾ ಸಂದೇಶವೆಂಬ ಬಗ್ಗೆ ಯಾವ ಸಂಶಯವೂ ಇರಲಾರದು.

ನಮ್ಮ ಧರ್ಮ ಗ್ರಂಥಗಳ ಮಹತ್ವವು ಬಹಳ ಹೆಚ್ಚಿನದು ಅದಕ್ಕೆ ಆಯಾ ಕಾಲಕ್ಕೆ ಸರಿಯಾದ ಅರ್ಥಕೊಡುವ ಸಾಮರ್ಥ್ಯವಿರುತ್ತದೆ. ಅವರವರ ಸ್ವಭಾವಕ್ಕೆ ಸರಿಯಾದ ಅರ್ಥಕೊಡುವ ಸಾಮರ್ಥ್ಯವಿರುತ್ತದೆ ಧರ್ಮದ ಅನುಷ್ಠಾನವೇ ಅದಕ್ಕೆ ಅರ್ಥ ಮಾಡುವ ನ್ಯಾಯವಾದ ರೀತಿ ಇರುತ್ತದೆ ಅನುಷ್ಠಾನದಿಂದ ಮಾಡಿಕೊಂಡ ಅರ್ಥಗಳೆಲ್ಲವೂ ಸರಿಯೇ ಇರುತ್ತವೆ

ಕೇವಲ ಬುದ್ಧಿಶಕ್ತಿ ಮತ್ತು ತರ್ಕಗಳನ್ನು ಮಾತ್ರ ಫಲಕಾರಿಯಾಗಲಾರವು ಅಕ್ಷರಶಃ ಅರ್ಥ ಮಾಡುವುದೂ ಸರಿಯಲ್ಲ ಧರ್ಮಗ್ರಂಥಗಳಿಗೆ ಅರ್ಥಮಾಡುವ ಕುರಿತು ಉಪನಿಷತ್ತಿನ ಒಂದು ಕಥೆ ಹೇಳಿ ಈ ಲೇಖನ ಮುಗಿಸಬಹುದು

ಒಮ್ಮೆ ದೇವತೆಗಳು ಮನುಷ್ಯರು ಮತ್ತು ರಾಕ್ಷಸರು ಬ್ರಹ್ಮನ ಬಳಿ ಗೈದಿ ಬ್ರಹ್ಮೋಪದೇಶದ ಮಂತ್ರ ಬೇಡಿದರಂತೆ ಆಗ ಅವರು ಗುಡುಗಿನ ಧ್ವನಿಯನ್ನು ತೋರಿಸಿ 'ದ' 'ದ' 'ದ' ಎಂಬ ಮಂತ್ರವನ್ನು ದ್ಯಾನಿಸಿ ಅರ್ಥಮಾಡಿರೆಂದರಂತೆ ದೇವತೆಗಳು ಭೋಗಪ್ರಿಯರು ಇವರು ತಪಸ್ಸು ಮಾಡಿದಾಗ ದ ಅಂದರೆ ದಮನ ಎಂಬ ಅರ್ಥ ಮಾಡಿ ಬ್ರಹ್ಮನಿಗೆ ತಿಳಿಸಿದರಂತೆ ಅವರು ಅದು ಸರಿಯೆಂದರು ಮನುಷ್ಯರಿಗೆ ಲೋಭ ಜಾಸ್ತಿ ಇದ್ದ ಇವರು 'ದ' ಎಂಬುದು ದಾನವನ್ನು ಸೂಚಿಸುತ್ತದೆ ಎಂದರು ಇದೂ ಸರಿಯೆಂದರು ಕ್ರೌರ್ಯವೇ ಜಾಸ್ತಿ ಇರುವ ರಾಕ್ಷಸರು ದ ಎಂದರೆ ದಯೆಯೆಂದು ಅರ್ಥ ಸಾಧಿಸಿದರಂತೆ ಇದನ್ನು ಸರಿಯೆಂದೇ ಹೇಳಿದರು

ಹೀಗೆ ಈಗಿನ ಕಾಲಕ್ಕೆ ಗಾಂಧೀಜಿಯವರು ಕಂಡುಕೊಂಡ ಅಹಿಂಸಾ ಧರ್ಮವೇ ಗೀತಾಸಂದೇಶವೆಂದರೆ ನ್ಯಾಯವಾದ ಅರ್ಥವೆನ್ನಬಹುದು

ಇಂಥ ನ್ಯಾಯರೀತಿಯಿಂದ ವರ್ತಿಸುವುದಾಗಿ ಹೇಳಿದರೂ ಪಾಕಿಸ್ಥಾನದವರು ಕುತಂತ್ರಕ್ಕೆ ಇಳಿಯುವುದಾದರೂ ಏತಕ್ಕೆ? ಪಾಕಿಸ್ಥಾನಕ್ಕೆ ಇಲ್ಲಿಯಾದರೂ ಬಹುಮತ ದೊರೆವ ವಿಶ್ವಾಸವಿಲ್ಲವೆಂಬುದರಿಂದಲೇ?

ಆಂಗ್ಲ ಪತ್ರಿಕಾ ಪ್ರತಿನಿಧಿಯೊಬ್ಬರು ಪಾಕಿಸ್ತಾನವು ಕಾಶ್ಮೀರ ಪ್ರಕರಣದಲ್ಲಿ ಹೇಗೆ ವರ್ತಿಸುತ್ತಿದ್ದೆಯೆಂಬುದನ್ನು ಕಣ್ಣಾರೆ ಕಂಡು ಬಣ್ಣಿಸಿದ್ದಾರೆ ಸಂಯುಕ್ತ ರಾಷ್ಟ್ರಸಭೆ ನ್ಯಾಯವಾಗಿ ವರ್ತಿಸಿಲ್ಲವೆಂದೂ ಇದರಿಂದ ಬ್ರಿಟನಿನ ಮೇಲೆ ಭಾರತದ ವಿಶ್ವಾಸಕ್ಕೆ ಧಕ್ಕೆ ಬರುತ್ತಿದೆಯೆಂದೂ ತಮ್ಮವರಿಗೆ ಇವರು ಎಚ್ಚರಿಸಿದ್ದಾರೆ ಈ ಲೇಖನದಿಂದ ಇವರು ಭಾರತಕ್ಕೆ ಉಪಕಾರ ಮಾಡಿದ್ದಾರೆ

ನಮ್ಮ ಹೈದರಾಬಾದಿನ ಅಧಿಕಾರಿಗಳಾದರೂ ನ್ಯಾಯವಾದ ದಾರಿಯಲ್ಲಿ ತಮ್ಮಲ್ಲಿಯ ಪ್ರಜಾಭಿಪ್ರಾಯವನ್ನು ನಿರ್ಣಯಿಸಿ ವರ್ತಿಸುವುದು ಹಿತಕರವೆಂದು ಒಂದು ಮಾತನ್ನು ಈ ಸಂದರ್ಭದಲ್ಲಿ . ಹೇಳಬಹುದು.

ಸೌರಾಷ್ಟ್ರ ನಿರ್ಮಾಣ

ಕಾಥಿಯಾವಾಡಿನ ದೇಶೀಯ ಸಂಸ್ಥಾನಗಳೆಲ್ಲ ಒಟ್ಟು ಸೇರಿ ಸೌರಾಷ್ಟ್ರದ ಪುನರ್ನಿರ್ಮಾಣವಾದುದು ಸಂತೋಷದ ಸಂಗತಿ ಇವು ಒಟ್ಟು ಸೇರಿದ್ದು ಮಾತ್ರವಲ್ಲ, ಇಲ್ಲಿಯ ಹೊಸ ಘಟನೆಯಲ್ಲಿ ಪ್ರಜಾಧಿಕಾರ ಸ್ಥಾಪನೆಯಾದುದು ಇನ್ನು ಸಂತೋಷದ ಸಂಗತಿ. ಇದನ್ನು ಸಾಧಿಸಿದ ಬಗ್ಗೆ ಸಂಸ್ಥಾನ ಖಾತೆಯ ಮಂತ್ರಿ ಶ್ರೀ ವಲ್ಲಭಭಾಯಿ ಪಟೇಲರನ್ನು ಅಭಿನಂದಿಸಲೇಬೇಕು. ದೇಶೀಯ ಸಂಸ್ಥಾನಗಳ ಅತ್ಯಂತ ಕಠಿಣ ಪ್ರಶ್ನೆಯನ್ನು ಇವರು ಅತ್ಯಂತ ದಕ್ಷತೆಯಿಂದ ಬಿಡಿಸುತ್ತಿದ್ದಾರೆ. ಹೈದರಾಬಾದಿನ ಪ್ರಶ್ನೆಯಲ್ಲಿಯೂ ಇವರು ಇದೇ ರೀತಿ ಯಶಸ್ಸನ್ನು ಪಡೆಯಲೆಂದು ಆಶಿಸೋಣ.

ಸಾದರ ಸ್ವೀಕಾರ

ಸರ್ವಧಾರೀ ಸಂವತ್ಸರದ ಉಡುಪಿ ಪಂಚಾಂಗ

ಈ ಪಂಚಾಂಗವು ಅತ್ತೂರು ವಾಸುದೇವ ಉಡುಪರ ಪುತ್ರ ಲಕ್ಷ್ಮೀನಾರಾಯಣ ಉಡುಪರಿಂದಲೂ ಬಡಾನಿಡಿಯೂರು ವೆಂಕಟಸುಬ್ಬಾಭಟ್ಟರ ಪುತ್ರ ಕೃಷ್ಣದಾಸ ಭಟ್ಟರಿಂದಲೂ ಗುಣಿಸಿ, ಉಡುಪಿ ಅಗ್ನಿಹೋತ್ರಿ ಅಲೆವೂರು ಸೀತಾರಾಮಾಚಾರ್ಯ ಶಿರೋಮಣಿ ಮತ್ತು ಅತ್ತೂರು ವಾಸುದೇವ ಉಡುಪರಿಂದ ಸಹ ಪರಿಶೋಧಿಸಿ, ಕೊಡವೂರಿನ ರವಿ ಪ್ರಸಾದ ಜ್ಯೋತಿಷಾಲಯದಿಂದ ಪ್ರಕಟವಾಗಿದೆ ಬೆಲೆ ೦-೬-೦

ಸರ್ವಧಾರಿ ಸಂ॥ದ ನವಯುಗ ಪಂಚಾಂಗ

ಲೇಖಕರು ಉಡುಪಿ ಶ್ರೀ ಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯ— ಪ್ರಕಟಣಗಾರರು —ನವಯುಗ ಪ್ರೆಸ್, ಉಡುಪಿ. ಬೆಲೆ.— ೦-೫-೦

ಪುಸ್ತಕ ವಿಮರ್ಶೆ

ತೆಂಕನಾಡು:- ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯವರು ಕಾಸರಗೋಡು ಸಮ್ಮೇಳನದ ಕಾಲದಲ್ಲಿ ಪ್ರಕಟಿಸಿದ ದಕ್ಷಿಣ ಕನ್ನಡ ಜಿಲ್ಲೆ ಎನಿಸುವ ತುಳು ನಾಡಿನ ಇತಿಹಾಸ, ಸಂಸ್ಕೃತಿ, ಕಲೆಗಳ ಪರಿಚಯಾತ್ಮಕವಾದ ಪುಸ್ತಕ ವಿಚಾರ ಪರಿಷ್ಕೃತ ವಿಷಯ ವೈವಿಧ್ಯತೆಯಿಂದೊಡಗೂಡಿದ ಇದರಲ್ಲಿನ ಲೇಖನಗಳು ಅತ್ಯಂತ ವಾಚನೀಯವೂ ಶೈಕ್ಷಣೀಕವೂ ಆಗಿವೆ ಬಿ| ಮುಳಿಯ ಶಂಕರ ಭಟ್ಟರ ಕನ್ನಡ ಸ್ತುತಿ ಹಳೆಯ ಗೀತೆಯಾದರೂ ಹೊಸ ಸ್ಫೂರ್ತಿಯನ್ನುಂಟುಮಾಡುವಂತಹುದು ಕನ್ನಡ ನಾಡಿನ ಇತಿಹಾಸದ ಪ್ರಾಚೀನತೆಯನ್ನೂ, ಸಂಸ್ಕೃತಿಯ ಶ್ರೇಷ್ಠತೆಯನ್ನೂ ಸಾಹಿತ್ಯದ ಪ್ರೌಢಿಮೆಯನ್ನೂ, ಕಲಾ ಶಿಲ್ಪಗಳ ಭವ್ಯತೆಯನ್ನೂ ಎತ್ತಿ ತೋರಿಸಲು ಹಲವು ವರ್ಷಗಳಿಂದ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಶ್ರೀಮಾನ್ ಗೋವಿಂದ ಪೈ ಅವರ ತುಳು ನಾಡಿನ ಪೂರ್ವ ಸ್ಮೃತಿಯು ಅವರ ಪರಿಶೋಧನಾ ಪಾಂಡಿತ್ಯದ ಭವ್ಯಕೃತಿಯಾಗಿದೆ ಇತಿಹಾಸ ಪ್ರಧ್ಯಾಪಕರಾದ ಡಾ| ಸಾಲೆತ್ತೂರು ಅವರು ಅಳಿಯ ಸಂತಾನ ಕಟ್ಟು ನಮ್ಮ ಜಿಲ್ಲೆಯಲ್ಲಿ ಹೇಗೆ ರಾಜಶಾಸನದಾಯಿತೆಂಬುದರ ಐತಿಹಾಸಿಕ ವಿವರಣೆಯೂ ಆಳ ಪರಿಶೋಧನೆಯ ಫಲವೇ ಆಗಿದ್ದು ಅಭಿರುಚಿಯ ವಾಚನಕ್ಕೆ ಯೋಗ್ಯವಾಗಿದೆ ಪೂನದ ಫೆರ್ಗುಸನ್ ಕಾಲೇಜಿನ ಪ್ರೊಫೆಸರ್ ಶ್ರೀಪಾದ ರಾಮಶರ್ಮರ ದಕ್ಷಿಣ ಕನ್ನಡದಲ್ಲಿನ ಜೈನ ಧರ್ಮದ ಕುರುಹುಗಳು ಎಂಬ ಸಂಶೋಧನಾತ್ಮಕ ಪ್ರಬಂಧವು ಪ್ರೌಢವಾಗಿಯೂ ಸಾರಸ್ಯಪ್ರದವಾಗಿಯೂ ಇದ್ದು ನಮ್ಮ ಜಿಲ್ಲೆಯ ಪ್ರಾಚೀನರ ಕಲಾ ಹಿರಿಮೆಯಲ್ಲಿ ನಮಗೆ ಹೆಮ್ಮೆ ಹುಟ್ಟಿಸುವಂತಾಗಿದೆ ರಾ ಸಾ ರಂಗನಾಥ ಪೂಂಜರು ಭೂತಾರಾಧನೆಯ ಪೌರಾಣಿಕ ಶಾಸ್ತ್ರಾಧಾರಗಳನ್ನೂ ಅದರ ಆಧುನಿಕ ಮಾರ್ಪಾಡುಗಳನ್ನೂ ವಿವರಿಸುತ್ತ ಈ ವಿಶ್ವಾಸಗಳಿಂದ ನೀತಿ ಸತ್ಯ ಧರ್ಮಗಳಿಗನುಗುಣವಾಗಿ ವ್ಯವಹರಿಸಲು ಹೇಗೆ ಸಹಾಯವಾಗುತ್ತದೆಂದು ತಿಳಿಸಿರುವರು ಈ ಲೇಖನವೂ ಅತ್ಯಂತ ಸಾರಸ್ಯದ್ದೂ ಶೈಕ್ಷಣೀತ ಮೌಲ್ಯದ್ದೂ ಆಗಿದೆ ಶ್ರೀ ಶಿವರಾಮ ಕಾರಂತರು ದ ಕನ್ನಡದ ಯಕ್ಷಗಾನ, ಬಯಲಾಟ, ದೇಸಿಗಾನ, ನಾಡ ನೃತ್ಯಗಳು, ಶಿಲಾ ಪ್ರತಿಮೆ, ಕಟ್ಟಡ ರಚನೆ ರಂಗವಲ್ಲಿಯು ಚಿತ್ರತಂತ್ರ, ರಥಶಿಲ್ಪ ಮೊದಲಾದವುಗಳ ವಿಷಯ ಮನರಂಜಕವೂ ಅನುಭವನೀಯವೂ ಆದ ಸಂಗತಿಗಳನ್ನು ಕೊಟ್ಟಿರುವುದು ಅವರ ಕಲೋಪಾಸನೆಯ ಪ್ರತೀಕವಾಗಿದೆ ಶ್ರೀ ಬೇಕಲ ರಾಮನಾಯಕರು ತಮ್ಮ ಜಿಲ್ಲೆಯಲ್ಲಿ ಇಕ್ಕೇರಿ ನಾಯಕರ ಆಳಿಕೆಯ ರಾಜ್ಯಭಾರಕ್ರಮ, ಸೈನ್ಯ ಕ್ರಮಗಳನ್ನು ಇತರ ಐತಿಹಾಸಿಕ ವಿಷಯಗಳೊಂದಿಗೆ ವರ್ಣಿಸಿ ಬರೆದ ಲೇಖನವು ಅತ್ಯಂತ ಸಾರಸ್ಯದ್ದಾಗಿದೆ ಶ್ರೀಮಾನ್ ದಾಮೋದರ ಬಾಳಿಗರ ಅವಿಶ್ರಾಂತಿಯ ಉಜ್ವಲವಾದ ಸೂಚನೆಗಳು ಭಾವೀ ಐಕ್ಯ ಕರ್ನಾಟಕ ರಚಕರ ಅವಗಾಹನೆಗೆ ಅರ್ಹವಾಗಿವೆ ಶ್ರೀ ಶ್ರೀಧರ ಕಕ್ಕಿಲ್ಲಾಯರ ಕಾಸರಗೋಡು ತಾಲೂಕಿನ ಕನ್ನಡಿಗ-ಮಲೆಯಾಳಿಗಳ ಅಂಕೆ ಸಂಖ್ಯೆಗಳು ಆ ತಾಲೂಕು ಕನ್ನಡ ನಾಡಿಗೆ ಖಂಡಿತ ಸೇರಬೇಕೆಂಬುದನ್ನು ಖಚಿತಗೊಳಿಸುವುದು. ನಮ್ಮ ಜಿಲ್ಲೆಯ ಬರಹಗಾರರ ಪರಿಚಯವು ಸಂಪಾದಕರ ಅವಿಶ್ರಾಂತ ಶ್ರಮದ ಶ್ಲಾಘನೀಯ ಫಲವಾಗಿದೆ. ಕೆಲ ಬರಹಗಾರರ ಕುರಿತಾಗಿ ಉಪಯೋಗಿಸಿದ ವಿಶೇಷಣಗಳು ಅನಾವಶ್ಯಕವಿದ್ದು- ಅದನ್ನು ಲೋಪಗೊಳಿಸಿದ್ದರೆ ಯುಕ್ತವಾಗುತ್ತಿತ್ತು.

ಗಾಂಧೀಜಿಯು ಕ್ರಿಕೆಟ್ ಆಟದ ಪಂಥ

ಪಟೌಡಿ ನವಾಬರೊಡನೆ ಚರ್ಚೆ

ತಾವು ಗಾಂಧೀಜಿಯನ್ನು ಕೊನೆಯ ಸಲ ಸಂದರ್ಶನ ಮಾಡಿದನ್ನು ಸ್ಮರಿಸಿಕೊಳ್ಳುತ್ತ ಪ್ರಖ್ಯಾತ ಕ್ರಿಕೆಟ್ ಆಟ ಪ್ರವೀಣರಾದ ಪಟೌಡಿಯ ನವಾಬರು ಮಹಾತ್ಮರು ತಮ್ಮೊಡನೆ ಕ್ರಿಕೆಟ್ ಮೇಚ್ ಒಂದನ್ನಾಡಲು ಪಂಥಕ್ಕೆ ಕರೆದುದನ್ನು ವಿವರಿಸಿ ಒಂದು ಲೇಖನದಲ್ಲಿ ಹೀಗೆ ಬರೆಯುತ್ತಾರೆ:

ನನ್ನೊಡನೆ ಮಾತನಾಡುವಾಗ ಗಾಂಧೀಜಿಯವರು ಆ ದಿನದ ಭಾರವಾದ ರಾಜಕೀಯ ವಿಷಯವನ್ನು ಬಿಟ್ಟು ಬೇರೊಂದು ವಿಷಯದ ಕಡೆಗೆ ಮನಸ್ಸನ್ನು ವಿಹರಿಸಲು ಪ್ರಯತ್ನಿಸಿದರು. ಒಂದೇ ವಿಕೆಟನ್ನು ಇಟ್ಟು ನನ್ನೊಡನೊಂದು ಮೇಚ್ ಆಡಲು ತಾವು ಮನಸ್ಸು ಮಾಡಿರುವುದಾಗಿ ಅವರು ನನಗೆ ತಿಳಿಸಿದರು. ನಾನೀ ಪಂಥವನ್ನು ಸ್ವೀಕರಿಸಲು ಸಿದ್ಧನಿರುವನೋ ಎಂದವರು ಪ್ರಶ್ನಿಸಿದರು. ಆದರೆ ಒಂದು ಶರ್ತದ ಮೇಲೆ ನಾನು ಈ ದ್ವಂದ್ವವನ್ನು ಸ್ವೀಕರಿಸುವುದಾಗಿ ತಿಳಿಸಿದೆ. ಅದೆಂದರೆ ನಮ್ಮೊಳಗಿನ ಕ್ರಿಕೆಟ್ ಮೇಚ್ ಆದ ಕೂಡಲೇ ನನಗೆ ಅವರು ತಮ್ಮೊಡನೆ ಒಂದು ರಾಜಕೀಯ ಆಟದ ಸ್ಪರ್ಧೆಯಾಡಲು ಸಂದರ್ಭ ಕೊಡಬೇಕು.

ನನ್ನ ಸೂಚನೆಯನ್ನವರು ಕೂಡಲೇ ಸ್ವೀಕರಿಸಿದ ಮೇಲೆ ನಾನು ಹೀಗೆ ಹೇಳುವವನಾದೆ: "ಕ್ರಿಕೆಟ್ ಮೇಚಿನಲ್ಲಿ ನೀವು ಖಂಡಿತ ನನ್ನನ್ನು ಸೋಲಿಸುವಿರಿ. ಆದೇ ರೀತಿ ರಾಜಕೀಯ ಮೇಚಿನಲ್ಲೂ ನಾನು ನಿಮ್ಮನ್ನು ಸೋಲಿಸಬಲ್ಲೆನೆಂದು ನನಗೆ ಖಚಿತವಿದೆ."

ಇದಕ್ಕೆ ಗಾಂಧೀಜಿ ಚಿಕ್ಕ ಮಗುವಿನ ಸರಳತೆಯ ನಗುವನ್ನು ನಕ್ಕರು. ಮತ್ತು ಅತ್ಯಂತ ಪ್ರೀತಿಯಿಂದ ನನ್ನ ಬೆನ್ನು ತಟ್ಟುತ್ತಾ "ನವಾಬ್ ಸಾಹೇಬ್, ಸೀವು ನನ್ನನ್ನೀಗಲೇ ಬೌಲ್ಡ್ ಮಾಡಿಬಿಟ್ಟಿರಿ" ಎಂದರು

ವಾರದ ವಿಜ್ಞಾನ ವರದಿ

ಲೋಹದ ಬೂಟ್ಸುಗಳು

ಬೇಕಾದ ಫೇಶನಿನ ಚರ್ಮದ ಹೊರ ಹೊದಿಕೆಯನ್ನು ಜೋಡಿಸಲಿಕ್ಕಾಗುವ ಎಲೂಮಿನಿಯಮಿನ ಬೂಟ್ಸುಗಳನ್ನು ಓರ್ವ ಜರ್ಮನ್ ತಜ್ಞನು ತಯಾರಿಸಿದ್ದಾನೆ. ಇವುಗಳನ್ನು ಧರಿಸುವುದು ಸ್ವಲ್ಪ ತೊಂದರೆಯಲ್ಲದೆ ಇತರ ಎಲ್ಲ ವಿಷಯಗಳಲ್ಲಿ ಇದು ಅತ್ಯಂತ ಅನುಕೂಲವಾಗಿದೆ. ಇದರ ಬೆಲೆ ಕೆಲವೇ ಆಣೆಗಳಿಷ್ಟಿದೆ ೧೫—೨೦ ವರ್ಷಗಳ ತನಕ ಬಾಳ್ಕೆ ಬರುವುದು

ಅಗ್ಗದ ವಾಹನ

ಜಗತ್ತಿನ ಅತೀ ಅಗ್ಗದ ಮೋಟಾರು ಕಾರನ್ನು ತಯಾರಿಸಲು ಅಮೇರಿಕದ ಮಿಚಿಗನ್ ನಗರದ ಒಂದು ಯಂತ್ರ ಸಂಸ್ಥೆಯು ಪ್ರಯೋಗವನ್ನು ಕೈಕೊಂಡಿದೆ ಸುಮಾರು ಒಂದುವರೆ ಸಾವಿರ ರೂಪಾಯಿ ಬೆಲೆ ಬಾಳುವ ಈ ಕಾರು ಒಂದು ಗೆಲನ್ ಪೆಟ್ರೋಲಿಗೆ ೪೦ರಿಂದ ೫೦ ಮೈಲುಗಳ ತನಕ ಓಡುವುದು. ದಿವಸಕ್ಕೆ ನೂರು ಕಾರುಗಳನ್ನು ತಯಾರು ಮಾಡಲಿಕ್ಕಾಗುವಾಗ ಇದನ್ನು ಮಾರಲಿಕ್ಕೆ ಪ್ರಾರಂಭಿಸುವರು

ಉದ್ದವಾಗುವ ಔಷಧಿ

ಆಧುನಿಕ ಚಮತ್ಕೃತಿಯೆನಿಸುವ ಒಂದು ವಿಶೇಷ ತರದ ರಸಧಾತುವನ್ನು ಕೆಲವು ಬ್ರಿಟಿಷ ವೈದ್ಯ ತಜ್ಞರು ಸಿದ್ಧಗೊಳಿಸಿದ್ದಾರೆ. ಇಂಜಕ್ಷನಿನ ಮೂಲಕ ಇದನ್ನು ದೇಹದೊಳಗೆ ತೆಗೆದುಕೊಳ್ಳುವುದರ ಮೂಲಕ ಕೆಲವೇ ತಿಂಗಳಲ್ಲಿ ಗಿಡ್ಡ ವ್ಯಕ್ತಿಗಳು ಬೆಳೆಯಲಾರಂಭಿಸುತ್ತಾರೆ. ಹಲವು ವರ್ಷಗಳಿಂದ ಬೆಳವಣಿಗೆಯೇ ಇಲ್ಲದ ಓರ್ವ ೧೨ ವರ್ಷದ ಹುಡುಗನ ಮೇಲೆ ಇದನ್ನು ಪ್ರಯೋಗಿಸಿದಾಗ ಕೇವಲ ಐದು ವಾರಗಳಲ್ಲಿ ಅವನ ಎತ್ತರ ಎರಡು ಇಂಚುಗಳಷ್ಟು ಬೆಳೆಯಿತು. ದೇಹದ ಭಾರವು ವೃದ್ಧಿಯಾಗುತ್ತ ಬಂತು.

ಹಸಿವು ಪ್ರತಿಬಂಧಕ ಹಣ್ಣು

ಸೈಬೀರಿಯದ ಹಿಮವಲಯದಲ್ಲಿ ಹಳದಿ ಬಣ್ಣದ ಒಂದು ತರದ ಚಿಕ್ಕ ಹಣ್ಣುಗಳಿರುವವು. ಇವುಗಳನ್ನು ತಿನ್ನುವುದರಿಂದ ಬಹು ಕಾಲದ ತನಕ ಹಸಿವು ಉಂಟಾಗುವುದಿಲ್ಲವೆಂದು ಆ ಕಡೆ ತಿಮಿಂಗಿಲ ಭೇಟೆಗೆ ಹೋಗಿರುವವರು ತಿಳಿಸುತ್ತಿದ್ದರು. ಈಗ ರಷ್ಯದ ಕೆಲವು ಆಹಾರ ತಜ್ಞರು ಈ ಹಳದಿ ಹಣ್ಣುಗಳಿಂದ ಎಣ್ಣೆಯನ್ನು ತೆಗೆದು ಪರಿಶೋಧಿಸಿದ್ದಾರೆ ಈ ಎಣ್ಣೆಗೂ ಹಸಿವನ್ನು ತಡೆಯುವ ಶಕ್ತಿ ಉಂಟಂತೆ.

ಮಾರಾಟಕ್ಕಿದೆ

ನಮ್ಮ ಚಲೋ ದೊಡ್ಡ ಕುದುರೆ ಜಟಕಾಗಾಡಿ ಮತ್ತು ಅದಕ್ಕೆ ಆಗುವ ಒಳ್ಳೇ ಜಾತಿಯ, ದೊಡ್ಡ ಕುದುರೆ ಮತ್ತು ಅದರ ಸಾಮಾನು ಸಮೇತ ಬಹು ಸುಲಭಸಾಧ್ಯವಾದ ಬೆಲೆಗೆ ಸಿಕ್ಕುತ್ತದೆ. ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ ವ ನೊಕ್ಕಾ ಬಂದು ಮಾತನಾಡಬಹುದು ಸದ್ರಿ ಗಾಡಿ, ಕುದುರೆ ನೋಡಲಪೇಕ್ಷೆ ಉಳ್ಳವರು ಆಫೀಸು ಸಮಯದಲ್ಲಿ ಬಂದು ನೋಡಬಹುದು

KOCHIKAR BROTHERS LTD , UDIPI



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆ ತಿಪನುಸಿನೆಗ ಡಗಿಸುತ್ತದೆ. ಚರ್ಮ ಸ್ವಚ್ಛವಾಗಿ ರಿಬೆಗ್ಗಳೆರೆಸುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಅಲ್ಲಿನ ಮೂಲನಿವಾಸಿಗಳು ವನ್ಯ ಜೀವನ ವಿಧಾನಗಳಿಂದ ವಾಸಿಸುವವರಾಗಿರುತ್ತಾರೆ. ಅವರು ಹೋಗುವ ಹಲವು ಪ್ರದೇಶಗಳು ಅಪಾಯಕಾರಕ ವ್ಯಾಧಿಗಳಿಂದ ತುಂಬಿದವುಗಳಾಗಿರುತ್ತವೆ ನಿದರ್ಶನವಾಗಿ ಹೇಳುವುದಾದರೆ ಮಲೇಜ್ವರವು ಹಲವು ಶತಮಾನಗಳಿಂದ ಅವರ ಕಠಿಣ ಶತ್ರುವಿನಂತಿರುತ್ತದೆ ಆದರೆ ಮಲೇರಿಯಕ್ಕೆ ಅತ್ಯುತ್ತಮ ನಿವಾರಕವೂ ಪ್ರತಿಬಂಧಕವೂ ಆದ ಕ್ವಿನೀನ್ ಔಷಧಿಯನ್ನು ಜಗತ್ತಿನಲ್ಲಿ ಉಪಯೋಗಿಸಿದ ನಂತರ ಅವರ ಪರಿಸ್ಥಿತಿ ಬಹಳವಾಗಿ ಸುಧಾರಿಸಿತು

ಇಂಗ್ಲೆಂಡಿನ ಮಲೇರಿಯಾ ತಜ್ಞರ ಸಮಿತಿಯವರು ... ಪ್ರಕಟಿಸಿದ ತಮ್ಮ ವರದಿಯ ... ಪುಟದಲ್ಲಿ ಕ್ವಿನೀನ್ ನಿರಪಾಯಕಾರಿ ಗುಣದಿಂದಾಗಿ ಅದನ್ನು ... ವೈದ್ಯ ನಿಪುಣರ ... ಸಾಮಾನ್ಯ ಕೆಳತರಗತಿಯ ... ರೋಗಿಗಳಿಗೆ ಕೊಡಬಹುದೆಂದು ಶಿಫಾರಸು ಮಾಡಲಾಗಿದೆ. ಅದರೆ ಮಲೇರಿಯಕ್ಕೆ ಕೊಡಲ್ಪಡುವ ಇತರ ಯಾವ ತರದ ಪರಿಹಾರಕ್ಕೂ ವೈದ್ಯಕೀಯ ನಿರೀಕ್ಷಣೆಯ ಅವಶ್ಯಕತೆಯಿದೆ. ಕ್ವಿನೀನ ಈ ಉತ್ತಮ ಗುಣದಿಂದಾಗಿ ಅದನ್ನು ಮಿಶನರಿ ಜನರು ಕೆಲಸ ಮಾಡುವ ವ್ಯಾಧಿ ಪೀಡಿತ ಜನರ ಪ್ರದೇಶದಲ್ಲಿ ಅದನ್ನು ಹಂಚಲು ಬಹಳ ಅನುಕೂಲವಾಗಿದೆ.

ಮಲೇರಿಯಾ ನಿವಾರಣೆಗೆ ಮೇಲ್ಕಾಣಿಸಿದ ತಜ್ಞ ಸಮಿತಿಯವರು ಈ ಪ್ರಮಾಣವನ್ನು ನಿರ್ದೇಶಿಸಿದ್ದಾರೆ ೫ರಿಂದ ೭ದಿವಸಗಳ ತನಕ ೧೫ರಿಂದ ೨೦ ಕಾಳು (grains)ಗಳಷ್ಟು ಕ್ವಿನೀನನ್ನು ದಿನಂಪ್ರತಿ ಕೊಡಬಹುದು ಜ್ವರ ಬಾಧೆಯ ಕಾಲದಲ್ಲಿ ಪ್ರತಿಬಂಧಕ ವಿಧಾನವಾಗಿ ದಿನಂಪ್ರತಿ ೬ ಕಾಳುಗಳಷ್ಟು ಕ್ವಿನೀನನ್ನು ಸೇವಿಸಬಹುದು ಆತ್ಮೋದ್ಧಾರಕರೆನಿಸುವ ಈ ಮತ ಪ್ರಚಾರಕರು ತಮ್ಮ ಧರ್ಮ ಕಾರ್ಯದ ಜೊತೆಯಲ್ಲಿ ಆಗಿಂದಾಗ್ಗೆ ಮೂಲ ನಿವಾಸಿಗಳ ಮಧ್ಯದಲ್ಲಿ ವೈದ್ಯಕೀಯ ಕಾರ್ಯವನ್ನೂ ನಡೆಸುತ್ತಿರುವರು.

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾದಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾದಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು,
ಪ್ರಾಣಿಕೊಬ್ಬು ವಿರಹಿತವಾದ್ದು.

ಮಲೇಜ್ವರದೆದುರು ಹೋರಾಡಿದ ಮೂಲಪುರುಷರು

ಜಗತ್ತಿನ ಎಲ್ಲಾ ಕಡೆಗಳಲ್ಲೂ ಇಂದು ಅತ್ಯಂತ ಸ್ಥೈರ್ಯದ ಮತ್ತು ಲೋಕೋಪಕಾರಿಯಾದ ಕೆಲಸಗಳನ್ನು ನಿರ್ವಹಿಸುವದೊಂದು ಪಂಗಡವೇ ಇದೆ ಅವರ ಇವರ ಕುರಿತು ಸರ್ವ ಸಾಧಾರಣವಾಗಿ ಸಾರ್ವಜನಿಕರೆಲ್ಲರಿಗೂ ಪರಿಚಯವಿರುವುದಿಲ್ಲ ನಾವು ಹೇಳುತ್ತಿರುವುದು ಕ್ರೈಸ್ತ ಪ್ರಚಾರಕರ ಕುರಿತಾಗಿರುತ್ತದೆ ಜಗತ್ತಿನ ಯಾವ ಸ್ಥಳವೂ ಅವರಿಗೆ ದೂರದ್ದೆನಿಸುವದಿಲ್ಲ ಅಲ್ಲಿಯವರು ತಮ್ಮ ಪವಿತ್ರಕಾರ್ಯವನ್ನು ನಿಸ್ವಾರ್ಥದಿಂದಲೂ ಆತ್ಮ ತ್ಯಾಗದಿಂದಲೂ ನಡೆಸುತ್ತಿರುವರು ಪಾಶ್ಚಾತ್ಯ ಪದ್ಧತಿಯ ಆಚಾರ ವಿಚಾರಗಳ ನೀತಿಯನ್ನು ಪಸರಿಸುವುದೇ ಇವರ ಏಕ ಮಾತ್ರ ಧ್ಯೇಯವೆಂದು ಸಾಮಾನ್ಯ ಜನತೆ ತಿಳಿದುಕೊಂಡಿದೆ ಪರಕೀಯ ಆತ್ಮದ ಸಾಮಾನ್ಯ ಮೂಲನಿವಾಸಿಗಳಲ್ಲಿ ಇವರು ತಮ್ಮ ಮತ ಸುವಾರ್ತೆಯ ಬೀಜವನ್ನು ಬಿತ್ತಿ ಅದರ ಸತ್ಫಲವನ್ನು ನಿರೀಕ್ಷಿಸುವರು.

ಈ ಕಾರ್ಯವಾದರೂ ಅಷ್ಟೊಂದು ಸುಲಭವೂ ಅಲ್ಲ, ಅನಪಾಯಕಾರಿಯಾದುದೂ ಅಲ್ಲ. ಹಲವು ಸಲ ಅವರು ಬಿಳಿ ಜನರಿಲ್ಲದ ಪ್ರದೇಶಕ್ಕೆ ಹೋಗುತ್ತಾರೆ.

ಶಹರುಗಳಲ್ಲಿ ಮನೆಕಟ್ಟುವವರಿಗೆ ಅಪೂರ್ವ ಸಂದರ್ಭ

ಪಟ್ಟಣಗಳಲ್ಲಿ ಮನೆಯಿಲ್ಲದೆ ಕಷ್ಟಪಡುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಈ ಕಷ್ಟ ನಿವಾರಣೆಗಾಗಿ ಒಂದು ಯೋಗ್ಯ ಯೋಜನೆಯನ್ನು ಮದ್ರಾಸ್ ಸರಕಾರವು ಕೈಕೊಂಡಿತು. ಇದಕ್ಕನುಸಾರವಾಗಿ ಪ್ರಾಂತ್ಯದ ಹಲವು ಮುಖ್ಯ ಪಟ್ಟಣಗಳಲ್ಲಿ ಪ್ರತ್ಯೇಕ ಸಹಕಾರಿ ಸಂಘಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಇನ್ನೂ ಹಲವು ಪಟ್ಟಣಗಳಲ್ಲಿ ಇಂತಹ ಸಂಘಗಳ ಸ್ಥಾಪನೆಗೆ ಬೇಕಾದ ಕಾರ್ಯಕ್ರಮವನ್ನು ಸರಕಾರದವರು ಊರವರ ಸಹಕಾರದಿಂದ ಕೈಕೊಂಡಿರುತ್ತಾರೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಪ್ರತಿಯೊಂದು ತಾಲೂಕಿನ ಮುಖ್ಯ ಪಟ್ಟಣದಲ್ಲೂ ೫೦ ಮನೆಗಳನ್ನೊಳಗೊಂಡ ವಸತಿಗೃಹ ಯೋಜನೆಯನ್ನು ಕೈಕೊಳ್ಳಲಾಗಿದೆ. ಈ ಯೋಜನೆಗನುಸರಿಸಿ ಕಾಸರಗೋಡು, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರ ಈ ಐದು ಪಟ್ಟಣಗಳಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಸಮಿತಿಗಳ ಮೂಲಕ ಯೋಗ್ಯ ಪ್ರದೇಶವನ್ನು ಆರಿಸಲಾಗಿದೆ. ಪುತ್ತೂರಲ್ಲಿ ಶಿವಪೇಟೆಗೆ ತಾಗಿ ಪೆರ್ಲಡ್ಕ ರಸ್ತೆಯ ಮೂಡುದಿಕ್ಕಿನಲ್ಲಿ ಸುಮಾರು ೨೫ ಎಕ್ರೆಗಳನ್ನು ಸರಕಾರದ ಸಹಾಯದಿಂದ ಕೊಳ್ಳುವ ಪಡಕೊಳ್ಳುವ ಹಾಗೂ ಈ ಬಗ್ಗೆ ಸಹಕಾರಿ ಸಂಘವೊಂದನ್ನು ಸ್ಥಾಪಿಸುವ ಏರ್ಪಾಡನ್ನು ಮಾಡಿರುವರು. ಇದೇ ತರದ ನಡವಳಿಯನ್ನು ಉಳಿದ ನಾಲ್ಕು ಪಟ್ಟಣಗಳಲ್ಲೂ ಕೈಕೊಳ್ಳಲಾಗುವುದು. ಹಾಗೆಯೇ ಉಡುಪಿ ಮುನಿಸಿಪಾಲಿಟಿಯಲ್ಲಿ ಸುಮಾರು ೧೦೦ ಮನೆಗಳನ್ನೂ ಕಟ್ಟಿಸಲಾಗುವುದು. ಈ ಯೋಜನೆಗನುಸರಿಸಿ ಪ್ರತಿಯೊಂದು ಪಟ್ಟಣದಲ್ಲೂ A B C ಎಂತ ಮೂರು ತರಗತಿಯ ಮನೆಗಳನ್ನೂ ಕಟ್ಟಿಸಲಾಗುವುದು. ಸಾಮಾನ್ಯ ಜನರಿಗೂ ಅನುಕೂಲವಾಗುವಂತೆ ಪ್ರತಿಯೊಂದು ಕಟ್ಟಡಕ್ಕೂ ಸುಮಾರು ೩,೦೦೦/-ದಿಂದ ರೂ. ೫,೦೦೦/- ವರೆಗೆ ಖರ್ಚು ತಗಲಬಹುದು. ಈ ಯೋಜನೆಗೊಳಪಟ್ಟು ಆರಿಸಲಾದ ಸ್ಥಳಗಳಲ್ಲಿ ಕಟ್ಟಲಾಗುವ ಎಲ್ಲಾ ಮನೆಯವರಿಗೂ ಅನುಕೂಲವಾಗುವಂತೆ ಬಾವಿ, ಹೂದೋಟ, ಆಟದ ಬಯಲು ಮುಂತಾದ ಸಾಮುದಾಯಿಕ ಪ್ರಯೋಜನಕಾರಿ ವ್ಯವಸ್ಥೆಗಳನ್ನು ಕೂಡಾ ಮಾಡಲಾಗುವುದು.

ಮೇಲೆ ಹೇಳಿದಂತೆ ಸಹಕಾರಿ ಸಂಘಗಳ ಸ್ಥಾಪನೆಯಾದ ಕೂಡಲೇ ಮನೆಕಟ್ಟುವ ಕಾರ್ಯಕ್ರಮವು ಪ್ರಾರಂಭವಾಗುವುದು. ಈ ಕಟ್ಟಡಗಳಿಗೆ ಅಗತ್ಯವುಳ್ಳ ಸಿಮೆಂಟು, ಕಬ್ಬಿಣ ಇತ್ಯಾದಿ ಸಾಮಾಗ್ರಿಗಳನ್ನೂ ಸದಸ್ಯರಿಗೆ ದೀರ್ಘ ವ್ಯಾದೆಯ ಸಾಲವನ್ನೂ ಅಂದರೆ ೨೦ ವರ್ಷಗಳಲ್ಲಿ ಕಂತುಕಂತಾಗಿ ಮರುಪಾವತಿ ಮಾಡುವಂತಹ ಸುಲಭ ತರದ ಸಾಲಗಳನ್ನೂ ಒದಗಿಸುವ ವ್ಯವಸ್ಥೆಯನ್ನೂ ಸದ್ರಿ ಸಂಘದ ಮೂಲಕವೇ ಮಾಡಲಾಗುವುದು.

ಮೇಲೆ ವಿವರಿಸಲಾದ ವಸತಿಗೃಹ ಯೋಜನೆಯಲ್ಲಿ ಭಾಗವಹಿಸಿ ಸುಲಭವಾಗಿ ಮನೆಕಟ್ಟಿಸಬೇಕೆಂದು ಇಚ್ಛಿಸುವವರು ಸಹಕಾರಿ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್ ಮಂಗಳೂರು ಇವರಿಗೆ ಬರಕೊಳ್ಳತಕ್ಕದ್ದು. ಅರ್ಜಿದಾರರು ತಮ್ಮ ಸಂಪೂರ್ಣ ವಿಳಾಸವನ್ನೂ ಅಪೇಕ್ಷಿಸುವ ಮನೆಯ ತರಗತಿಯನ್ನೂ ಪಟ್ಟಣದ ಹೆಸರನ್ನೂ ಸ್ಪಷ್ಟವಾಗಿ ಸೂಚಿಸತಕ್ಕದ್ದು. ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ಸದ್ರಿಯವರಿಗೇನೇ ಬರೆದು ತಿಳಿದುಕೊಳ್ಳಬಹುದು.

ಎಂ. ಶ್ರೀನಿವಾಸ ಶಾನುಭೋಗ್,
ಡಿಪ್ಯೂಟಿ ರಿಜಿಸ್ಟ್ರಾರ್.

ವಿದ್ಯಾರ್ಥಿಗಳ ಕೂಟ

ಕೆನರಾ ಹೈಸ್ಕೂಲಿನ ಉರ್ವ ಶಾಖೆಯಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಪ್ರಥಮ ಬಾರಿ ಕೂತುಕೊಳ್ಳುವ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರ ಗೌರವಾರ್ಥವಾಗಿ ಶಾಲಾ ಮೆನೇಜರರಾದ ಶ್ರೀ ಎಂ ಅಪ್ಪುರಾಯರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು.

ಜಿಲ್ಲಾ ಸಮಾಚಾರ

ರೇಶನ್ ಕಡಿತ

ಕಳೆದ ತಾ. ೨೨ರಿಂದ ಜಿಲ್ಲೆಯ ರೇಶನ್ ಸ್ಥಳಗಳಲ್ಲಿ ಅಕ್ಕಿ ಪ್ರಮಾಣವನ್ನು ೧೦ ಔನ್ಸಿನಿಂದ ೮ ಔನ್ಸಿಗೆ ಇಳಿಸಲಾಗಿದೆ. ಕಡಿಮೆ ಮಾಡಲ್ಪಟ್ಟ ಅಂಶದ ಬದಲಿಗೆ ಇತರ ದವಸಗಳು ಕೊಡಲ್ಪಡುತ್ತಿದೆ.

ಪ್ರೊಹಿಬಿಷನ್ ಅಪರಾಧಗಳು

ಮದ್ಯ ನಿಷೇಧ ಕಾಯ್ದೆ ಮೀರಿದ ಆರೋಪಗಳಿಗೆ ಈ ಕೆಳಗಿನವರಿಗೆ ದಂಡನೆಯಾಗಿದೆ. ಕುಳಾಯಿಯ ಮಾರ್ಸೆಲ್ ಕರ್ರೊ ಎಂಬವನ ಬಳಿ ಬೆಲ್ಲದ ಸರಾಯಿ ಇತ್ಯಾದಿ ಸಿಕ್ಕಿದೆ ಎಂದೂ ಅವನಿಗೆ ಅದೇ ಸ್ವಭಾವದ ಆರೋಪಿ ಎಂದೂ ಬೊಳ್ಳೂರಿನ ಸುಬ್ಬ ಎಂಬಾತನಿಗೂ ಕಲಾ ೪ ತಿಂಗಳ ಶಿಕ್ಷೆ. ದೇರೆಬೈಲಿನ ಲೂವಿಸ್ ಡಿಸೋಜಾ ಕುಡುಪಿನ ಬ್ಯಾಪ್ಟಿಸ್ಟ್ ಲೋಬೊ ಇವರ ಬಳಿ ಅಕ್ರಮ ಮದ್ಯ ಬಾಟ್ಲಿಗಳು ಸಿಕ್ಕಿದಕ್ಕೆ ಕ್ರಮವಾಗಿ ೩೦ ಮತ್ತು ೫ ರೂಪಾಯಿಗಳ ದಂಡನೆಯಾಗಿದೆ.

ಗೋಖಲೆ ಪುಣ್ಯತಿಥಿ

ಈಚೆಗೆ ಸ್ವಾಮಿ ರಮಾನಂದ ತೀರ್ಥರ ಅಧ್ಯಕ್ಷತೆಯಲ್ಲಿ ಡಿ ಸಿ ಎಂ ಶಾಲೆಯಲ್ಲಿ ದಿ. ಗೋಪಾಲಕೃಷ್ಣ ಗೋಖಲೆಯವರ ಪುಣ್ಯತಿಥಿಯು ಆಚರಿಸಲ್ಪಟ್ಟಿತು. ಗೋಖಲೆಯವರ ಜೀವನಾದರ್ಶ ಸೇವಾ ಮಾರ್ಗಗಳ ಕುರಿತ ಶ್ರೀ ಬಿ ಡಿ ಬಾಳಿಗರು ಭಾಷಣ ಮಾಡಿದರು.

ಆರ್. ಎಸ್. ಎಸ್. ಸಂಚಾಲಕರ ಕೈದು

ದ ಕ ಜಿಲ್ಲೆಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಚಾಲಕರಾಗಿದ್ದ ಶ್ರೀ ಕೆ ಸದಾಶಿವ ರಾವ್ ಎಡ್ವೋಕೇಟ್ ಅವರನ್ನು ಕಳೆದ ತಾ. ೨೪ನೇ ಸಾಯಂಕಾಲ ದಸ್ತಗಿರಿ ಮಾಡಿ ಒಯ್ದಿರುವರೆಂದು ತಿಳಿದು ಬರುತ್ತದೆ.

ಹೆಂಗಸಿನ ಕೊಲೆ

ಇಲ್ಲಿಯ ಅವಲಕ್ಕಿಕೇರಿಯ ಹಿಂಬದಿಯ ರಸ್ತೆಯಲ್ಲಿನ ಒಂದು ಮನೆಯ ಜಗಲಿಯಲ್ಲಿ ಈಚೆಗೆ ಚೂರಿ ಗಾಯಗಳಾಗಿದ್ದ ಒಂದು ಹೆಂಗಸಿನ ಶವವು ಕಾಣಬಂದಿದೆ. ಮೃತಳ ವಯಸ್ಸು ಸುಮಾರು ೪೫. ಪೋಲೀಸರು ಇದನ್ನು ಇ ಪಿ ಕಾಸನದ ೩೦೨ನೇ ಪ್ರಕರಣದ ಕೊಲೆ ಮೊಕದ್ದಮೆಯಾಗಿ ದಾಖಲ್ಮಾಡಿಕೊಂಡು ಶೋಧಕ್ಕೆ ಹೊರಟಿದ್ದಾರೆ.

ಸತ್ಕಾರ

ದ ಕ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನವರು ತಾ. ೨೦ರಂದು ಸಂಜೆ ಇಲ್ಲಿಯ ಸೆಂಟ್ರಲ್ ಹೌಸಿನ ಮಹಡಿಯ ಮೇಲೆ ಸರ್ಜನ್ ಜನರಲ್ಲರಿಗೆ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಡಾ ಯು ಪಿ ಮಲ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಪ್ರಾರಂಭದಲ್ಲಿ ಮಹಾತ್ಮರ ನಿಧನದ ಕುರಿತು ಸಂತಾಪ ಸೂಚಿಸಲಾಯಿತು. ನಂತರ ಪ್ರಾಂತ್ಯದ ಮೆಡಿಕಲ್ ಎಸೋಸಿಯೇಶನಿನ ಅಧ್ಯಕ್ಷ ಡಾ ವಿ ರಾಮಕಾಮತ್ ಅವರು "ರಾಷ್ಟ್ರೀಯ ಚಿಕಿತ್ಸಾ ಸೇವೆ" ಎಂಬ ವಿಷಯದ ಕುರಿತು ವಿಚಾರಪರವಾದ ಭಾಷಣಕೊಟ್ಟರು. ಡಾ ಕೆ ಆರ್ ಕಿಣಿಯವರು ವೈದ್ಯವೃತ್ತಿಯ ಸಂಬಂಧವಾದ ಅನೇಕ ಸಮಸ್ಯೆಗಳನ್ನು ಸರ್ಜನ್ ಜನರಲರ ಅವಗಾಹನೆಗಾಗಿ ಮುಂದಿಟ್ಟರು. ಡಾ ಅಡಪರು ಇಲ್ಲಿಯ ಹೊಸ ಆಸ್ಪತ್ರೆಯ ಕುರಿತು ಪ್ರಸ್ತಾಪಿಸಿದರು. ಸರ್ಜನ್ ಜನರಲ್ಲರು ಬೋಧಪ್ರದವಾದೊಂದು ಭಾಷಣದಲ್ಲಿ "ದಕ್ಷಿಣ ಕನ್ನಡದ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಕಡಿಮೆ ಇವೆ. ಅದನ್ನು ಹೆಚ್ಚಿಸಬೇಕು" ಎಂದೂ ರಾಷ್ಟ್ರೀಯ ಶಾಮತೆಯ ದೃಷ್ಟಿಯಿಂದ "ತಾಯಿ ಮಕ್ಕಳ ಕ್ಷೇಮಚಿಂತನೆಗೂ ಏರ್ಪಾಡು ಬಹುಮುಖ್ಯವೆಂದೂ ಶಿಫಾರಸು ಮಾಡಿ ಮಂಗಳೂರಿನ ಹೊಸ ಆಸ್ಪತ್ರೆಯ ವಿಚಾರದಲ್ಲಿ ಮುಂದೆ ಚೆನ್ನಾಗಿ ಪರ್ಯಾಲೋಚಿಸಿ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಬೋಳ ಹಾಕಿದಕ್ಕೆ ವಿಷಾದ

ಶ್ರೀ ಕೆ ಆರ್ ಕಾರಂತರವರು ಮದ್ರಾಸ್ ಶಾಸನ ಸಭೆಯಲ್ಲಿ ಗಲಭೆ ನಿಯಂತ್ರಣ ಮಸೂದೆಯ ಚರ್ಚೆಯ ಕಾಲದಲ್ಲಿ ಮಂಗಳೂರಿನ ಆರ್ ಎಸ್ ಎಸ್ ಗೆ ಸೇರಿದ್ದು ಕೈದಿಗಳಾದ ಹಲವು ಮಂದಿ ಗೃಹಸ್ಥರ ಕೈಗೆ ಬೋಳ ತೊಡಿಸಿದ ಸಂಗತಿಯನ್ನು ಗೃಹ ಮಂತ್ರಿಗಳ ತಿಳುವಳಿಕೆಗೆ ತಂದಾಗ ಮಂತ್ರಿಗಳು ಇದಕ್ಕೆ ವಿಷಾದ ಸೂಚಿಸಿ ಆ ಗೃಹಸ್ಥರ ಕ್ಷಮೆ ಕೇಳಿ ಆ ಕುರಿತು ವಿಚಾರಣೆ ನಡೆಸುವುದಾಗಿ ಭರವಸೆಯಿತ್ತರು.

ಸರ್ಜನ್ ಜನರಲ್ಲರ ಸಂಚಾರ

ನಮ್ಮ ಪ್ರಾಂತ್ಯದ ಸರ್ಜನ್ ಜನರಲ್ ಶ್ರೀಯುತ ಎಸ್. ಎನ್ ಭಾಟ್ಯಾ ಅವರು ಕಳೆದ ತಾ. ೨೦ರಂದು ಇಲ್ಲಿಯ ಹೊಸ ಆಸ್ಪತ್ರೆಗೆಂದು ಸೂಚಿಸಲಾದ ಕದ್ರಿಯ ಪ್ರದೇಶ, ದೇವಸ್ಥಾನ, ಕಂಕನಾಡಿ, ವೆನ್‌ಲಕ್, ಲೇಡಿಗೋಶನ್ ಆಸ್ಪತ್ರೆಗಳು, ಕೋಮನ್‌ವೆಲ್ತ್ ಹಂಚು ಕಾರ್ಖಾನೆಗಳನ್ನಲ್ಲದೆ ಈ ನಗರದ ಅನಾರೋಗ್ಯಕರವಾದ ಕೆಲವು ಭಾಗಗಳನ್ನು ಸಂದರ್ಶಿಸಿದರು.

ಕಾರ್ಕಳ ಜೂಗಾರಿ ಕೂಟದ ಪತ್ತೆ

ಮೂಡಬಿದ್ರೆ ಪೊ ಸ ಇನ್ಸ್‌ಪೆಕ್ಟರ್ ಶ್ರೀ ಬಿ ಪಿ ಶಿವ ಅವರ ಕಾರ್ಕಳ ಪೋಲೀಸರ ಸಹಾಯ ಪಡೆದು ಆ ಒಂದು ಗುಂಪಿನವರನ್ನು ಹಿಡಿದು ಅವರ ಮೇಲೆ "ಗೇಮಿಂಗ್ ಕಾಯ್ದೆ" ೮ ಮತ್ತು ೯ ಕಲಮಿನ ಮೇರೆಗೆ ಆರೋಪ ಹೊರಿಸಿ ವಿಚಾರಣೆಗೆ ಗುರಿಮಾಡಿರುವರು. ಈ ಗುಂಪಿನವರಲ್ಲಿ ಕಾರ್ಕಳ, ವಾರಂಗ, ನಿಟ್ಟೆ, ಬೋಳ, ಪಡುಬಿದ್ರೆ, ಆಗುಂಬೆ, ಶೃಂಗೇರಿ ಮೊದಲಾದ ಸ್ಥಳಗಳ ಸುಮಾರು ೧೪ ಮಂದಿ ಇದ್ದರೆಂದೂ ಜೂಜಾಡಿದರೆ ಒ ಸ್ಥಳದಿಂದ ನಗದಿ ಸುಮಾರು ೬೪೪೩ ರೂಪಾ ನಗದಿ ಹಣವೂ ಸಮಾರ ೧೦ ಸಾವಿರ ರೂಪಾಯಿ ಬೆಲೆ ಬಾಳುವ ವಜ್ರ ಬಂಗಾರದ ಆಭರಣಗಳನ್ನೂ ಪೋಲೀಸರು ವಶಪಡಿಸಿಕೊಂಡರೆಂದೂ ತಿಳಿದು ಬಂದಿದೆ. ಕೈದಾದವರನ್ನು ಜಮಾನಿನ ಮೇಲೆ ಬಿಟ್ಟಿದಾರೆ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0-1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪತ್ತಿಷ್ಠ ಹುಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲ್ ಸರ್ವಿಸುಗಳಿಗ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50%. ಅಂದ್ರೆ ಪ್ರಕೃತ ಚ್ಯಾರಿಯಲ್ಲಿರುವ ಟಕೇಟು ಚಾರ್ಜಿನ ಒಂದುವರ ಪಾಲಷ್ಟು ಜಾಸ್ತಿ ರೇಟಿನ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಮಂಗಳೂರು
23-12-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . . 2½% p. a.

5 & 6 months . . . . 2¾% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯುಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment

It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building.

Central Office. Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂಧ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 42] ತಾರೀಕು 5—3—1948 [ಸಂಚಿಕೆ 9]

ಆಹಾರ ಕೊರತೆ ನೀಗಲು ಸೂಚನೆಗಳು

ತೆಂಗಿನ ಕಾಯಿ, ತಾಳೆ ಕಾಯಿಗಳ ಉಪಯೋಗ

ಮದ್ರಾಸ್ ಪ್ರಾಂತ್ಯದ ಆಹಾರ ಸಂಪತ್ತು

"ನೌಖಾಲಿಯ ಸುತ್ತುಮುತ್ತಲಿನ ಪ್ರದೇಶದ ಜನರು ಬರಗಾಲ ಬರಬಹುದೆಂಬಂಜಿಕೆಯುಳ್ಳವರಿರುವಾಗ ನಾನವರಿಗೆ ಹತ್ತಿರ ಕರೆದು ಕೆಲವೊಂದು ಸೂಚನೆಗಳನ್ನನುಸರಿಸಿದರೆ ಯಾರೂ ಉಪವಾಸದಿಂದ ಸಾಯಬೇಕಾಗಿಲ್ಲವೆಂದು ತಿಳಿಸಿದೆ" ಹೀಗೆಂದು ಮಹಾತ್ಮರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಪ್ಯಾರೆಲಾಲರು ಹರಿಜನದಲ್ಲಿ ಬರೆಯುತ್ತಾರೆ. ಅವರ ಸೂಚನೆಗಳು ಹೀಗಿವೆ-

ಬಂಗಾಲದಲ್ಲಿ ನನ್ನ ಯೋಜನೆಗಳು ಯಶಸ್ವಿಯಾದವು. ಆ ಪ್ರಾಂತದಂತೇ ಮದ್ರಾಸಿನಲ್ಲಾದರೂ, ತೆಂಗು ತಾಳೆಗಳು ವಿಪುಲವಾಗಿವೆ ಎಂದ ಮೇಲೆ ಆ ಪ್ರಾಂತ್ಯದಲ್ಲೂ ಇಂದು ಎದುರಿಸಿರುವ ಆಹಾರ ಕೊರತೆಯ ಭೀತಿಯು ಅದೇ ತರದ ಯೋಜನೆಗಳಿಂದ ನೀಗಬಹುದು. ನಮ್ಮ ದೇಶದ ಕರಾವಳಿಯ ಪ್ರದೇಶಗಳು ನಾಲ್ವತ್ತು ಮೈಲು ಅಗಲದ ತನಕ ಈ ಕಲ್ಪವೃಕ್ಷಗಳಿಂದ ಕಿಕ್ಕಿರಿದಿವೆ. ತಾಳೆ, ತೆಂಗು ಮತ್ತು ಬಾಳೆ ಮರಗಳ ಕಾಡುಗಳೇ ಅಲ್ಲಿವೆಯೆಂದರೆ ಅತಿಶಯವಲ್ಲ.

ಈಚಲಿನ ಉಪಯೋಗ

ಬಿಹಾರಿನಲ್ಲಿ ಸುಮಾರು ಒಂದು ಕೋಟಿ ~~ಈಚಲಿನ ಮರಗಳಿವೆ ತಾಳೆ ಮತ್ತು~~ ಈಚಲು ಮರಗಳ ರಸವು ಅಮೃತ ಸಮಾನ ಆರೋಗ್ಯಕಾರಕವಿದ್ದು ಬೆರಿಬೆರಿ ಎಂಬ ನರ ದುರ್ಬಲತೆಯನ್ನು ಹೋಗಲಾಡಿಸುವ ವಿಟಮಿನ್ ಬಿ ಜೀವಾತು ಸತ್ವದಿಂದೊಡಗೂಡಿದೆ. ಇದನ್ನು ಬಿಸಿ ಮಾಡಿದರೆ ಸಕ್ಕರೆಯಾಗುವುದು. ಬಿಹಾರಿನಲ್ಲಿರುವ ೧ ಕೋಟಿ ಮರಗಳಲ್ಲಿ ಕಾಲಂಶದಷ್ಟನ್ನು ಮಾತ್ರ ಶೇಂದಿ ತಯಾರಿಸಲು ಉಪಯೋಗಿಸುವರು. ಉಳಿದವುಗಳನ್ನು ಯಾವ ಉಪಯೋಗಕ್ಕೂ ಬಳಸುವುದಿಲ್ಲ. ಇವುಗಳನ್ನು ಯೋಗ್ಯ ರೀತಿಯಲ್ಲುಪಯೋಗಿಸಿಕೊಂಡರೆ ಬಡ ನಿರುದ್ಯೋಗಿಗಳಿಗೆ ಅದರಿಂದೆಷ್ಟು ಕೆಲಸವನ್ನು ಕೊಡಬಹುದು, ಮತ್ತು ಸಕ್ಕರೆಗಾಗಿ ಬೆಳೆಸುವ ಕಬ್ಬಿನ ಅದೆಷ್ಟು ವಿಶಾಲ ಪ್ರಮಾಣದ ಸ್ಥಳಗಳನ್ನು ಅಕ್ಕಿ ಬೆಳೆಸಲು ಉಪಯೋಗಿಸಬಹುದೆಂಬುದನ್ನು ವಾಚಕರೇ ಕಲ್ಪಿಸಿಕೊಳ್ಳಲಿ.

ತೆಂಗಿನ ಸಂಗತಿ

ತೆಂಗಿನಕಾಯಿಯ ವಿಷಯ ಪರಿಶೀಲಿಸೋಣ. ಇದು ಪ್ರಕೃತಿಯ ಪರಿಪೂರ್ಣ ಆಹಾರ. ಪಂಜಾಬಿನ ಓರ್ವ ಉಚ್ಚ ಬ್ರಿಟಿಷ್ ಅಧಿಕಾರಿಯ ಪತ್ನಿಯು ಗಾಂಧೀಜಿಯವರಿಗೆ ತಾನು ದಿವಸಕ್ಕೆರಡು ತೆಂಗಿನ ಕಾಯಿಗಳನ್ನು ತಿಂದು ಹೇಗೆ ಆರೋಗ್ಯವಂತಳಾಗಿರುತ್ತಿದ್ದಳೆಂಬ ಸಂಗತಿಯನ್ನು ಆಗಾಗ್ಗೆ ತಿಳಿಸುತ್ತಿದ್ದಳು.

ನೌಖಾಲಿಯಲ್ಲಿನ ಕೆಲ ಸ್ನೇಹಿತರು ಅದೇ ಸಂಗತಿಯನ್ನು ತಿಳಿಸುತ್ತಿದ್ದರು. ೧೯೪೩ರ ಬರಗಾಲದ ಅತಿ ಸಂಕಷ್ಟದ ಕಾಲದಲ್ಲಿ ಅಲ್ಲಿನ ಜನರು ಒಂದು ಮುಷ್ಟಿ ಅನ್ನದೊಡನೆ ಎರಡು ತೆಂಗಿನಕಾಯಿಗಳನ್ನು ಬೆರಸಿ, ಸ್ವಲ್ಪ ತರಕಾರಿಗಳನ್ನು ಮಿಶ್ರ ಮಾಡಿ ತೃಪ್ತಿಕರವಾಗಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ನಾವು ಇನ್ನೂ ಬೇರೆ ಪ್ರಯೋಗಗಳನ್ನು ಮಾಡಿ ನೋಡಿದೆವು. ನೌಖಾಲಿಯಲ್ಲಿ ರೂಪಾಯಿಗೆ ೭ರಿಂದ ೧೨ರ ತನಕ ತೆಂಗಿನ ಕಾಯಿಗಳು ಸಿಗುತ್ತವೆ. ಕೆಲವನ್ನು ಸೀಯಾಳವಾಗಿ ಮರಸ್ಥಳದವರಿಗೆ ಕುಡಿಯಲಿಕ್ಕಾಗಿ ಉಪಯೋಗಿಸಲ್ಪಡುತ್ತವೆ. ತೆಂಗಿನ ಕಾಯಿ ಒಣಗಿಸದೇ, ಅದು ಕಾಯಿ ಇರುವಾಗಲೇ ಅದರಿಂದ ಎಣ್ಣೆಯನ್ನು ತೆಗೆಯಬಹುದು. ಅದು ಹೇಗೆಂದರೆ:

ತೆಂಗಿನ ತಿರುಳನ್ನು ಸೂಕ್ಷ್ಮವಾಗಿ ಚೂರುಮಾಡುವುದು. ಇದರೊಡನೆ ಸ್ವಲ್ಪ ನೀರನ್ನು ಬೆರಸಿ ಅರೆದಾಗಲಿ, ಒಟ್ಟಿಯ ಮೂಲಕ ಹಿಂಡಿಯಾಗಲಿ ಅದರ ಹಾಲನ್ನು ತೆಗೆಯುವುದು. ಉಳಿದದ್ದು ಒಂದು ತರದ ಹಿಂಡಿ. ಅದಕ್ಕೆ ಫೋಬಾ ಎನ್ನುತ್ತಾರೆ. ಇದನ್ನು ಬಿಸಿಲಿನಲ್ಲಿ ಒಣಗಿಸಿಡುವರು. ಮುಂಚೆ ಇದನ್ನು ನಿಷ್ಪ್ರಯೋಜನವೆಂದು ಬಿಸಾಡುತ್ತಿದ್ದರು. ತೆಂಗಿನ ಕಾಯಿಯ ಮೊದಲು ತೆಗೆದ ಹಾಲನ್ನು ಕುದಿಸಿ ತಣಿಸಿದರೆ ಎಣ್ಣೆ ಮತ್ತು ನೀರಿನ ಅಂಶಗಳು ಪ್ರತ್ಯೇಕವಾಗುವವು. ಎಣ್ಣೆಯನ್ನು ಪ್ರತ್ಯೇಕಿಸಿ ಉಳಿದುದನ್ನು ಮತ್ತೊಂದು ಸಲ ಬೇಯಿಸಿದರೆ ಮಚ್ಚಾ ಎಂಬ [illegible]ಯಂತಹ ಪದಾರ್ಥ ಉಂಟಾಗುತ್ತದೆ. ಇದು ತಿನ್ನಲು ಸಿಹಿಯೂ, ರುಚಿಕರವೂ ಆಗಿದ್ದು ಪುಷ್ಟಿಕರ ಆಹಾರವಾಗಿರುತ್ತದೆ.

ಫೋಬಾ ಮತ್ತು ಮಚ್ಚಾ

ಎಣ್ಣೆ ತೆಗೆದು ಸಿಕ್ಕುವ ಉಪ ಪದಾರ್ಥಗಳಾದ ಫೋಬಾ ಮತ್ತು ಮಚ್ಚಾ ಎಂಬೆರಡು ವಸ್ತುಗಳೇ ತೆಂಗಿನ ತಿರುಳಿಗಿಂತಲೂ ಹೆಚ್ಚು ಪುಷ್ಟಿಕರವಾದ ಆಹಾರ ವಸ್ತುಗಳಾಗಿವೆ. ಇವರ ಒಂದು ಔನ್ಸಿನ ಪ್ರಮಾಣವು ಅಕ್ಕಿಯ ಎರಡು ಔನ್ಸಿನಷ್ಟು ಪುಷ್ಟಿಕರ. ಚೆನ್ನಾಗಿ ಪಸೆ ಆರುವಷ್ಟು ಒಣಗಿಸಿದರೆ ಮಚ್ಚಾ ಮತ್ತು ಫೋಬಾಗಳನ್ನು ಬಹಳ ಕಾಲದ ವರೆಗೆ ಇಡಬಹುದು. ಸ್ವಲ್ಪ ಸಕ್ಕರೆ ಇಲ್ಲವೆ ಬೆಲ್ಲ ಬೆರಸಿ ಇಟ್ಟರೆ ಅದು ಬಹಳ ರುಚಿಕರವಾಗಿರುತ್ತದೆ.

ಗೆರಟೆಯ ವಸ್ತುಗಳು

ತೆಂಗಿನಕಾಯಿಯ ಗೆರಟೆಯನ್ನು ನಾಜೂಕಾಗಿ ಪಾಲಿಶ್ ಮಾಡಬರುತ್ತದೆ. ಹೀಗೆ ಪಾಲಿಶ್ ಮಾಡಿದ್ದು ಆಮೆಯ ಚಿಪ್ಪಿನ ಶ್ರೇಷ್ಠತೆಗೆ ಸರಿಗಟ್ಟುತ್ತದೆ. ಅನೇಕ ಉಪಯುಕ್ತ ವಸ್ತುಗಳನ್ನದರಿಂದ ತಯಾರಿಸಬಹುದು. ಗುಬ್ಬಿಗಳು, ಕರಡಿಗಳು ಇತ್ಯಾದಿ. ತೆಂಗಿನಕಾಯಿ ಸಿಪ್ಪೆಯ ನಾರಿನ ಹುರಿಹಗ್ಗಗಳಿಗಂತೂ ನೂರಾರು ಉಪಯೋಗಗಳಿವೆ. ಹಸುರು ತೆಂಗಿನ ಕಾಯಿಯಿಂದ ಹಾಲು ತೆಗೆದು ಮಾಡಿದ ಎಣ್ಣೆಯು ಒಂದು ಉಪಯುಕ್ತವೂ ಜೀರ್ಣಕರವೂ ಆದ ಆಹಾರ ಪದಾರ್ಥ.

ಮದ್ರಾಸ್ ಪ್ರಾಂತ್ಯದಲ್ಲಿ ವರ್ಷಕ್ಕೆ ಸುಮಾರು ೧೨೨೫ ಮಿಲಿಯ ಕಾಯಿಗಳಾಗುತ್ತವೆ. ಇದರಿಂದ ಒಂದು ಲಕ್ಷ ಟನ್ ಮಚ್ಚಾವನ್ನು (ಬೆಣ್ಣೆ), ಫೋಬಾವನ್ನು (ಹಿಂಡಿ) ತಯಾರಿಸಬಹುದು. ಇದು ಸುಮಾರು ಒಂದು ಕೋಟಿ ಜನರಿಗೆ (ಪ್ರಾಂತ್ಯದ ಸುಮಾರು ಕಾಲು ಅಂಶ ಜನರಿಗೆ) ಆಹಾರವಾಗಿ ಪೂರೈಸುವಷ್ಟಾಗುತ್ತದೆ. ಇದರಿಂದಾದ ಎಳೆಕಾಯಿಯ ಎಣ್ಣೆ (ರಸ ತೆಗೆದು ಕುದಿಸಿ ತೆಗೆದಂತಹದ್ದು) ಆಹಾರವಾಗಿಯೂ, ಮತ್ತಿದರ ಉಪ ವಸ್ತುಗಳಾದ ನಾರು, ಗೆರಟೆಗಳ ವಸ್ತುಗಳನ್ನು ಕೈಗಾರಿಕೆ ಉದ್ಯೋಗವಾಗಿಯೂ, ಪರಿವರ್ತಿಸಬಹುದು. ಈ ಎಣ್ಣೆಯು ಸಕ್ಕರೆ, ಪಿಷ್ಟ, ಮತ್ತು ಖನಿಜ ಲವಣಗಳುಳ್ಳ ಉತ್ತಮ ಆಹಾರವಾಗಿದ್ದು ಅತೀ ಬಡವರಲ್ಲಿ ಬಡವರಾದವರು ಇದನ್ನು ಉಪಯೋಗಿಸಬಹುದು.

THE

UNITED INDIA LIFE ASSURANCE

ESTD 1906 | CO., LTD. | H O MADRAS

SECURITY

Greater than any conferred by legislative enactments is ~~guaranteed~~

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE.

K. S. Rao Road, Mangalore.

ಮಾನವ ಶರೀರದ ಅದ್ಭುತ ಪರಿಚಯ

ಪಂಚೇಂದ್ರಿಯಗಳ ಪರಿಪೂರ್ಣ ಕಾರ್ಯ

ಉಕ್ಕಿಗಿಂತಲೂ ಬಲಿಷ್ಠವಾದ ಅಂಗಗಳು

ನಮ್ಮ ಶರೀರವು ಅದ್ಭುತವಾದೊಂದು ಯಂತ್ರವೆಂಬುದನ್ನು ನೀವು ಬಲ್ಲಿರಿ. ಅದರಲ್ಲಿನ ಕೆಲವೊಂದು ಭಾಗಗಳ ಪರಿಚಯವನ್ನು ಇಲ್ಲಿ ಕೊಡಲಾಗುತ್ತದೆ.

ಇದು ಇತರ ಯಾವ ಯಂತ್ರಕ್ಕೂ ಕೀಳು ತರಗತಿಯದಲ್ಲ. ತೊಡೆಯು ಸೊಂಟದ ಭಾಗಕ್ಕೆ ಕೂಡುವಲ್ಲಿರುವ ಕೆಲವೊಂದು ಮಾಂಸಖಂಡ ಇಲ್ಲವೆ ಸ್ನಾಯುಗಳು ಅದೆಷ್ಟು ಶಕ್ತಿಯುಕ್ತವಾಗಿವೆಯೆಂದರೆ ಅವುಗಳು ಒಂದು ಸಾವಿರ ರಾತ್ತಲುಗಳ ಭಾರವನ್ನೂ ತಡೆದಿಡಬಲ್ಲವು. ಮೊಣಕಾಲಿನ ಗಂಟು ಇತರ ಗಂಟುಗಳಿಗಿಂತ ಬಲಿಷ್ಠವಾದುದು. - ಮೊಣಕೈ ಗಂಟು ಯಾವ ರೀತಿ ಬೇಕಾದರೂ ತಿರುಗಿಸಲಾಗುವಂತಹುದು.

ಎಲುಬಿನ ಶಕ್ತಿ

ನಮ್ಮ ದೇಹದಲ್ಲಿ ಸರ್ವ ಸಾಧಾರಣವಾಗಿ ೨೨೨ ಎಲುಬುಗಳಿವೆ ಇದರಲ್ಲಿ ಹೆಗಲೆಲುಬುಗಳು ಅತೀ ಬಲಿಷ್ಠವಾದುವು-೩೬೦೧ ರಾತ್ತಲು ಭಾರವನ್ನಿವು ಹೊರಬಲ್ಲವು. ಮರಿಯಿಡುವ ಎಲ್ಲಾ ಪ್ರಾಣಿಗಳಿಗೆ (ಒಂದೆರಡು ಬಿಟ್ಟು) ಏಳು ಬೆನ್ನೆಲುಬುಗಳಿವೆ ಅತೀ ಚಿಕ್ಕ ಇಲಿಯಿಂದ ಹಿಡಿದು ಅತೀ ದೊಡ್ಡ ಜಿರಾಫೆ (೨೦ಅಡಿ)ಗೆ ಕೂಡ ಕೊರಳಿನ ಎಲುಬುಗಳು ಸಮಾನ ಸಂಖ್ಯೆಯವು. ಎಲುಬು ರಚನೆಯ ವಿಧಾನವು ಕೂಡಾ ಒಂದೇ ತೆರನಾಗಿದೆ .

ಮಣ್ಣಿನ ಪಾತ್ರೆಗಳಂತೆ ಎಲುಬುಗಳು ಪಕ್ಕನೆ ಒಡೆದು ಚೂರು ಆಗುವಂತಹುಗಳಲ್ಲ ಅವು ಒಡೆಯುವ ಮೊದಲು ಲೋಹಗಳಂತೆ ಜಜ್ಜಿಹೋಗುವ ಗುಣವುಳ್ಳವೂ ಆಗಿವೆ ಉದಾ ತಲೆ ಬುರುಡೆಯ ಎಲುಬು ಒಡೆಯುವ ಮೊದಲು ತನ್ನ ದಪ್ಪದ $\frac{1}{6}$ ದಷ್ಟು ಚಪ್ಪಟೆಯಾಗಿ ಜಜ್ಜಲ್ಪಡುತ್ತದೆ

ಚಲನಶಕ್ತಿ

ತಲೆ ಮಿದುಳಿನಲ್ಲಿರುವ ಒಂದು ತರದ ಕೆಂಪು ಗ್ರಂಥಿಗಳು ಮಾಂಸಖಂಡಗಳ ಚಲನವಲನಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತವೆ ನಿದ್ರಿಸುವಾಗ ಇಲ್ಲವೆ ವಿಶ್ರಾಂತಿ ಪಡೆಯುವಾಗ ಮಾಂಸಖಂಡಗಳು ಕುಂದುತ್ತವೆಂಬ ಅಭಿಪ್ರಾಯವು ತಪ್ಪು ಅದರ ಬದಲಿಗೆ ವಿಶ್ರಾಂತಿ ತೆಗೆದುಕೊಳ್ಳುವ ವೇಳೆಯಲ್ಲಿ ಸ್ನಾಯುಗಳ ಶಕ್ತಿ ಹೆಚ್ಚಾಗುತ್ತದೆ ಆಯಾಸವಾದಾಗ ಮಾತ್ರ ಮಾಂಸಖಂಡಗಳು ಕುಂದುತ್ತವೆ ಆದ್ದರಿಂದಲೆ ಪರಿಶ್ರಮದ ದುಡಿಮೆಯ ನಂತರ ನಮ್ಮ ಮೋರೆಗಳು ಸಪ್ಪೆಯಾಗಿ ಶರೀರವು ಬಗ್ಗುತ್ತದೆ.

ಸ್ನಾಯುಗಳ ಸಂಖ್ಯೆ

ಒಂದು ಎಲುಬನ್ನು ಇಲ್ಲವೆ ಒಂದು ಪರಿಯನ್ನು ಚಲಿಸಲು ಒಂದು ಮಾಂಸಖಂಡವು ಕೆಲಸಗೆಯ್ಯುತ್ತದೆ ಹೀಗೆ ಕೈಯ್ಯ ತೋಳನ್ನು, ಕಣ್ಣುರೆಪ್ಪೆಯನ್ನು ಚಲಿಸುವಂತಹುಗಳು ಸ್ಥೂಲ ಇಲ್ಲವೆ ಸೂಕ್ಷ್ಮವಾದ ಸ್ನಾಯುಗಳು

ಹೀಗೆ ಕೆಲಸ ಮಾಡುವ ೬೩೯ ಮಾಂಸಖಂಡಗಳು ಇಲ್ಲವೆ ಸ್ನಾಯುಗಳು ಮಾನವ ಶರೀರದೊಳಗಿವೆ ಉತ್ತಮ ವ್ಯಾಯಾಮ ಮಾಡಿದ ಪ್ರತಿಯೊಂದು ಚದರ ಇಂಚಿನ ಮಾಂಸಖಂಡಗಳು ೫೬ರಿಂದ ೧೪೦ ರಾತ್ತಲು ವರೆಗಿನ ಭಾರವನ್ನೆತ್ತಲು ಶಕ್ತನಾಗಿವೆ

ಮಾಂಸಖಂಡಗಳಲ್ಲಿ ಅತ್ಯಂತ ಶಕ್ತಿಯುಕ್ತವಾದವು ಬಾಯೊಳಗಿನ ವಸಡುಗಳ ಸ್ನಾಯುಗಳು ಇವು ಎರಡು ವ್ಯಕ್ತಿಗಳ ಭಾರವನ್ನೆತ್ತಬಲ್ಲವು ಸ್ತ್ರೀಯರ ಗರ್ಭಾಶಯದ ಬಳಿಯಲ್ಲಿರುವ ಮಾಂಸಖಂಡಗಳು ಹೆಚ್ಚು ಶಕ್ತಿವಂತವಾದವು

ಮನುಷ್ಯನ ಶರೀರದಲ್ಲಿ ಅತೀ ಹೆಚ್ಚು ಕೆಲಸಮಾಡುವಂತವು ಕೆಳ ಹೊಟ್ಟೆಯ ಸ್ನಾಯುಗಳು ಇವು ಅನುಸತ್ಯ ಶ್ರಮಗೈಯುವುದರಿಂದ ನಮಗೆ ಶ್ವಾಸ ತೆಗೆಯಲೂ ಬಿಡಲೂ ಸಾಧ್ಯವಾಗುತ್ತದೆ ' ಸುಮಾರು ೭೦ ವರ್ಷಗಳ ಅವಧಿಯಲ್ಲಿವು ಹತ್ತು ಸಾವಿರ ಲಕ್ಷ ಸಾರಿ ಕೆಳಗೆ ಮೇಲೆ ಹೋಗುತ್ತದೆ

ಕೆಳಹೊಟ್ಟೆಯ ಸ್ನಾಯುಗಳನ್ನು ನಿಯಂತ್ರಣದಲ್ಲಿರಿಸುವ ಅಭ್ಯಾಸವನ್ನು ಮಾಡಿದ ಈಜು ತಜ್ಞರು ಹಲವು ನಿಮಿಷಗಳ ತನಕ ನೀರಡಿಯಲ್ಲಿರಲು ಶಕ್ತರಾಗುತ್ತಾರೆ

ಮೂಗಿನ ಕಾರ್ಯ

ಹೊಟ್ಟೆಗೆ ಹೋಗಿ ಶರೀರದಲ್ಲಿ ಅನಾರೋಗ್ಯವಂಟುಮಾಡುವ ವಿಷಯಾವಧಿ ಕ್ರಿಮಿ ಮತ್ತು ಕೊಳೆ ಕಣಗಳನ್ನು ತಡೆದು ಹಿಡಿಯುವ ಕಾರ್ಯ ಮಾಡುವ ಮೂಗೆಂಬ ಉಪಕರಣಕ್ಕೆ ನಾವು ತುಂಬಾ ಋಣಿಯಾಗಿರತಕ್ಕದ್ದು ಪರಿಣಾಮವಾಗಿ ನಾವು ಸ್ವಲ್ಪ ಕಾಲ ಹೆಚ್ಚು ಬದುಕುವಂತಾಗುತ್ತದೆ

ನಾವು ತೆಗೆದುಕೊಳ್ಳುವ ಪ್ರತಿ ಉಸಿರಿನಲ್ಲಿ ೧೨೫ ಮಿಲಿಯ ಧೂಳಿನ ಕಣಗಳಿವೆ ಜನನಿಬಿಡ ಪಟ್ಟಣದಲ್ಲಂತೂ ಇದರ ಪ್ರಮಾಣ ಇನ್ನೂ ಹೆಚ್ಚು ನಗರಗಳಲ್ಲಿನ ವಾತಾವರಣದಲ್ಲಿ ಆಳಿನೆತ್ತರದ ಗಾಳಿಯ ಪ್ರತಿ ಉಸಿರಿನಲ್ಲಿ ೫೦೦ ಲಕ್ಷ ಧೂಳಿನ ಕಣಗಳಿವೆ ಒಂದು ಮಿನಾರಿನೆತ್ತರದಲ್ಲಿ ಇವುಗಳ ಸಂಖ್ಯೆ ೫೦೦೦ ಲಕ್ಷದಷ್ಟಿರುತ್ತದೆ- ಇದು ಪ್ರತಿ ಉಸಿರಿನಷ್ಟು ಗಾಳಿಯಲ್ಲಿ''

ವಾಚನಾಲಯದ ಒಂದರ ಕೋಣೆಯಲ್ಲಿ ಒರ್ವನು ಸಿಗರೇಟು ಸೇದಿದರೆ ಅದರೊಳಗಿನ ವಾತಾವರಣದ ಗಾಳಿಯಲ್ಲಿ ೪೦೦೦೦ ಲಕ್ಷ ಮಸಿಯ ಕಣಗಳು ಬೆರೆಯುತ್ತವೆ

ಮೂಗಿನಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಒಬ್ಬ ಮನುಷ್ಯನ ಜೀವಮಾನದಲ್ಲಿ ಅವನ ಶ್ವಾಸಕೋಶಕ್ಕೆ ಹೋಗುವ ಸುಮಾರು ೪೫ ರಾತ್ತಲು ಧೂಳಿಯು ತಡೆಯಲ್ಪಡುತ್ತದೆ ನಸ್ಯದ, ಹಿಟ್ಟಿನ ಇಲ್ಲವೆ ಇದ್ದಲಿನ ಕಾರ್ಖಾನೆಗಳಲ್ಲಿ ಕೆಲಸಮಾಡುವವರ ದೇಹದೊಳಗೆ ಒಂದು ಜೀವಮಾನಾವಧಿಯಲ್ಲಿ ಸುಮಾರು ೧.. ರಾತ್ತಲುಗಳಷ್ಟು ಆ ವಸ್ತುಗಳ ಸೂಕ್ಷ್ಮ ಕಣಗಳು ಸೇರುತ್ತವೆ''

ರಕ್ತದ ಕಣಗಳು

ನಮ್ಮ ಶರೀರದಲ್ಲಿ ರಕ್ತಚಲನೆಯ ಕಾರ್ಯ ಭಾಗವನ್ನು ವಹಿಸುವ ರಕ್ತನಾಳಗಳಂತೆ ಸೂಕ್ಷ್ಮವಾದ ರಕ್ತ ಚೀಲಗಳಿವೆ ಒಂದು ಸೂಜಿಯಷ್ಟು ಉದ್ದದಲ್ಲಿ ಇವು ಸುಮಾರು ಒಂದು ಸಾವಿರದಷ್ಟಿವೆ ಇವು ನಮ್ಮ ಕೂದಲಿನ ಐವತ್ತನೆ ಒಂದಂಶದಷ್ಟು ತೆಳ್ಳಗಾಗಿವೆ ಐವತ್ತನೇ ಒಂದು ಇಂಚಿನಷ್ಟು ಉದ್ದವಾಗಿವೆ. ಒಂದು ದೇಹದೊಳಗಿನ ಈ ಸೂಕ್ಷ್ಮ ರಕ್ತ ಪೊಟ್ಟೆಗಳನ್ನು ಒಂದರ ಹತ್ತರ ಒಂದನ್ನಿರಿಸಿದರೆ ಭೂಲೋಕದ ಅತೀ ವಿಶಾಲ ಭಾಗದ ೫೦ ಸುತ್ತುಗಳಷ್ಟನ್ನು ಇಡಬಹುದು

'ಶರೀರದೊಳಗಿನ ೯೦ ಕುಡ್ತೆ ರಕ್ತವು ಈ ಸೂಕ್ಷ್ಮ ಚೀಲ, ನರ ಮತ್ತು ನಾಡಿಗಳಲ್ಲಿ ಸುತ್ತಲಿರುತ್ತದೆ ಈ ರಕ್ತದಲ್ಲಿ ೨೫,೦೦೦ ಲಕ್ಷ ರಕ್ತದ ಕಣಗಳಿವೆ. ಇವುಗಳನ್ನು ಒಟ್ಟುಮಾಡಿ ದಾರವನ್ನು ತೆಗೆದು ಒಂದು ಕಂಬಳಿಯನ್ನು ಹೆಣೆದರೆ ಅದರ ವಿಶಾಲತೆ ೫೦೦೦ ಚಚೌಕ ಗಜಗಳಷ್ಟಾಗುತ್ತದೆ ಸಮುದ್ರ ಮಟ್ಟಕ್ಕಿಂತ ೧೩ ಸಾವಿರ ಅಡಿ ಎತ್ತರದ ಪ್ರದೇಶದಲ್ಲಿರುವವರ ರಕ್ತದಲ್ಲಿ ಈ ಕಣಗಳ ಸಂಖ್ಯೆ ಇಮ್ಮಡಿಯಾಗಿರುತ್ತದೆ

ಈ ಮಾಂಸಖಂಡಗಳ, ಎಲುಬುಗಳ, ರಕ್ತದ ನಾಡಿಗಳ ಸಹಾಯದಿಂದ ನಾವು ದಿವಸಕ್ಕೆ ಸುಮಾರು ೨೦ ಸಾವಿರ ಹೆಜ್ಜೆಗಳಷ್ಟು ನಡೆಯಲು ಶಕ್ತರಾಗುತ್ತೇವೆ ಸುಮಾರು ೨ ವರ್ಷಗಳಲ್ಲಿ ನಾವು ೫,೦೦೦ ಲಕ್ಷ ಹೆಜ್ಜೆಗೂ ಮಿಕ್ಕಿ ಚಲಿಸುತ್ತೇವೆ ಇಷ್ಟು ಹೆಜ್ಜೆಗಳಿಂದ ಭೂಲೋಕದ ೬ ಸುತ್ತುಗಳನ್ನು ತೆಗೆಯಬಹುದು-ಇದಕ್ಕೆ ಬಲಿಷ್ಠವೂ ಆರೋಗ್ಯಪೂರ್ಣವೂ ಆದ ಶರೀರವು ಅತ್ಯಾವಶ್ಯಕ

ಮಂಗಳೂರು ಪ್ರಧಾನ ಬಂದರಾಗಬೇಕು-ವಾಣಿಜ್ಯ ಸಂಘದ ಕಾರ್ಯಕಲಾಪ

ಮಂಗಳೂರನ್ನು ಪ್ರಧಾನ ಬಂದರವಾಗಿ ಮಾಡ ಬೇಕೆಂಬ ಪ್ರಚಾರ ಮತ್ತು ಪ್ರಭಾವೀ ಕಾರ್ಯಗಳನ್ನು ನಿರ್ವಹಿಸಲು ವಾಣಿಜ್ಯ ಸಂಘದ ಆಶಯದಲ್ಲಿ ನೇಮಕವಾದ ಸಮಿತಿಯು ಕಳೆದ ತಿಂಗಳ ತಾ ೨೪ರಂದು ಸೇರಿತ್ತು ಪೋರ್ಟ್ ಆಫೀಸರರಲ್ಲದೆ ಆಮಂತ್ರಿತರಾದ ಕಾಲೇಜಿನ ಪ್ರಮುಖ ವ್ಯಾಪಾರಿ ಪ್ರತಿನಿಧಿಗಳೂ ಹಾಜರಿದ್ದರು ಅಧ್ಯಕ್ಷ ಶ್ರೀ ವಿ ಎಸ್ ಕುದ್ವರು ಬಂದರದ ಕುರಿತು ಈ ವರೆಗೆ ನಡೆಸಲ್ಪಟ್ಟ ಪ್ರಯತ್ನಗಳ ಸಂಕ್ಷೇಪ ವರದಿಯನ್ನು ತಿಳಿಸಿದರು ಈ ಕೆಳಗಿನ ಠರಾವುಗಳು ಮಂಜೂರಾದುವು ಸಭೆಯು ಮುಂದೆ ಇಡಲ್ಪಟ್ಟ ಮೆಮೊರಿಂಡಮ್ III ಮಂಜೂರು ಮಾಡುವುದು ಅದನ್ನು ಈ ಮೊದಲಿನಂತೆ ಅಚ್ಚು ಹಾಕಿಸಿ ಬಂದರದ ಕುರಿತಾದ ನಕಾಶೆಯೊಂದಿಗೆ ಹಂಚುವುದು ಪೋರ್ಟ್ ಟ್ರಸ್ಟನ್ನು ಮಂಗಳೂರಿಗೆ ರಚಿಸುವ ಬಗ್ಗೆ ಸರಕಾರದೊಡನೆ ಪರ್ಯಾಲೋಚಿಸುವುದು ಮದ್ರಾಸ್ ಸಾರ್ವಜನಿಕ ಕಾರ್ಯಕಲಾಪ ಮಂತ್ರಿಗಳೊಡನೆ ಡಾ ಯು ಪಿ ಮಲ್ಯ ಎಂ ಎಲ್ ಎ ಇವರು ಮಾತುಕತೆ ನಡೆಸಬೇಕೆಂದು ವಿನಂತಿಸಿಕೊಳ್ಳುವುದು ಮೈಸೂರು ಸರಕಾರ ಮತ್ತು ಸಾರ್ವಜನಿಕರು ಮಂಗಳೂರಿಗೆ ಆಸಕ್ತಿ ತೆಗೆದುಕೊಡುವಂತೆ ಮಾಡಿಸಲು ಒಂದು ಪ್ರಚಾರ ಸಮಿತಿ ಮಡಿಕೇರಿ ಬೆಂಗಳೂರುಗಳನ್ನು ಸಂದರ್ಶಿಸಲು ನಿರ್ಣಯವಾಯಿತು ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯದ ಮತ್ತು ಜಿಲ್ಲೆಯ ವೃತ್ತ ಪತ್ರಿಕೆಗಳಲ್ಲಿ ಪ್ರಚಾರ ಲೇಖನಗಳನ್ನೂ ಪ್ರಕಟಿಸುವ ಯತ್ನಗಳಾಗಬೇಕು ಈ ಸಂಬಂಧ ಒಂದು ಸಮಿತಿ ಮಂಗಳೂರಿಗೆ ಬರುವಾಗ ಅವರ ಮುಂದಿಡಲು ಸವಿಸ್ತಾರವಾದ ವರದಿಯೊಂದನ್ನು ವಾಣಿಜ್ಯ ಸಂಘ ತಯಾರಿಸಬೇಕು ಈ ಕುರಿತು ಎಂತಹ ಕಾರ್ಯಚರಣೆ ಅವಶ್ಯವೆಂಬುದನ್ನು ತಿಳಿಯುವ ಬಗ್ಗೆ ಸಾರ್ವಜನಿಕ ಮಂತ್ರಿಗಳೊಡನೆ ಪತ್ರವ್ಯವಹಾರ ನಡೆಸುವುದು

ತಾ. **7-3-1948**ನೇ ಆದಿತ್ಯವಾರ ಸಾಯಂಕಾಲ ಘಂಟೆ **6**ಕ್ಕೆ
ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ
ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ
ಸುಶ್ರಾವ್ಯ ಸಂಗೀತ ಕಚೇರಿ
ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ-ಇವರ ಪಿಟೀಲು
ಶ್ರೀ ಕಲ್ಪಾತಿ ರಮಾನಾಥನ್-ಇವರ ಮೃದಂಗ
ಶ್ರೀ ಆಲಂಗುಡಿ ರಾಮಚಂದ್ರನ್-ಇವರ ಘಟವಾದ್ಯ
ಟಿಕೇಟು ದರ ಪೋಷಕ ವರ್ಗ ರೂ 100
I ರೂ 25, II ರೂ 10, III ರೂ 5, IV ರೂ 2
ಧ್ವನಿವರ್ಧಕಗಳ ಏರ್ಪಾಡು ರೇಡಿಯೋ ಸೇಲ್ಸ್ ಮತ್ತು ಸರ್ವಿಸ್
ತ್ರಿಚಿನಾಪಳ್ಳಿ ಇವರಿಂದ.
ಈ ಮೊದಲು ಸಂಗೀತ ಕಚೇರಿಯು ನಡೆಯುವದೆಂದಿದ್ದ ತಾ. 8-2-1948ನೇ ತಾರೀಕಿನ ಟಿಕೇಟುಗಳೇ ಈ ಸಂಗೀತ ಕಚೇರಿಗೂ ಅನ್ವಯಿಸುವವು ಜನರ ಸೌಕರ್ಯಕ್ಕಾಗಿ ಈ ಸಮಾರಂಭಕ್ಕೆ ಮಂಗಳೂರಿಗೆ ಬರಲಿಕ್ಕೂ ಹಿಂದೆ ಹೋಗಲಿಕ್ಕೂ ಎಲ್ಲ ಲೈನುಗಳಲ್ಲಿಯೂ ಬಸ್ ಸರ್ವಿಸ್‌ಗಳ ವ್ಯವಸ್ಥೆ ಮಾಡಲಾಗುವುದು.

ಶ್ರೀಮತಿ ಯಂ. ಎಸ್. ಸುಬ್ಬುಲಕ್ಷ್ಮಿ

ಶೂರ ಸೀಖರ ಗುರು ನಾನಕನ ಜೀವನಾದರ್ಶ

"ಹಿಂದೂವಿಗಾಗಲಿ, ಮುಸಲ್ಮಾನನಿಗಾಗಲಿ ನಿಜದಾರಿಯು ಸಿಗಲಿಲ್ಲ. ಅವರು ರಾಮರಹೀಮರ ಹೆಸರಲ್ಲಿ ಹೊಡೆದಾಡುವರು. ನಾವು ಹಿಂದುಗಳೂ ಅಲ್ಲ, ಮುಸಲ್ಮಾನರೂ ಅಲ್ಲ. ನಿಜ ವಿಶ್ವಾಸಿಗಳು ಹೆಸರಿಗಾಗಿ ಕಚ್ಚಾಡುವುದಿಲ್ಲ. ದಾರಿ ಎರಡಾದರೂ ದೇವರೊಬ್ಬನಲ್ಲಿಗೇ ಹೋಗುವವು."

ಇವು ಗುರುನಾನಕನ ಅರ್ಥಗರ್ಭಿತವಾದ ಉಪದೇಶ ವಾಕ್ಯಗಳು. ಹಿಂದೂ ಮುಸಲ್ಮಾನರೊಳಗಿನ ವೈಷಮ್ಯವನ್ನು ಹೋಗಲಾಡಿಸುವ ಉದ್ದೇಶದಿಂದ ನಾನಕನು ಸೀಖ್ ಮತವನ್ನು ಸ್ಥಾಪಿಸಿದನಾದರೂ ಇಂದು ಅದೇ ಸೀಖ್ ಮತ್ತು ಮುಸಲ್ಮಾನರೊಳಗೆ ಬದ್ಧ ವೈಷಮ್ಯ ಉಂಟಾಗಿರುವುದು ಇದು ಕಳೆದ ಕೆಲವು ತಿಂಗಳುಗಳ ಪಂಜಾಬ ಘಟನೆಯಿಂದ ವಿಧಿತವಾಗುತ್ತದೆ

ಇದಕ್ಕೆ ಐತಿಹಾಸಿಕ ಕಾರಣವೂ ಇದೆ ಸೀಖ್ ಮತವು ಪರಮತಸ್ಥರನ್ನು ಮತಾಂತರ ಮಾಡಿಕೊಳ್ಳುವ ಕಾರ್ಯವನ್ನು ಮಾಡಿದೆ ಮೊದಮೊದಲು ಆ ಮತದ ಉದಾರ ತತ್ವಗಳಿಗಾಕರ್ಷಿತರಾಗಿ ಹಿಂದುಗಳೂ ಮುಸಲ್ಮಾನರೂ ಅದನ್ನು ಸೇರಿದ್ದರು ಎರಡೂ ಮತಗಳ ಧರ್ಮ ತತ್ವಗಳನ್ನು ಸಂಸ್ಕೃತಿ, ಜೀವನಾಚಾರ ವಿಚಾರಗಳನ್ನೂ ಒಳಗೊಂಡ ವಿಷಯಗಳು ಅದರಲ್ಲಿರುವುದು ಒಂದು ಮಹತ್ವದ ಸಂಗತಿ ಇದರಿಂದ ಈ ಮತಕ್ಕೆ ಸೇರಿದ ಹಿಂದೂ ಮುಸಲ್ಮಾನರು ತಮ್ಮ ತಮ್ಮ ಮೂಲ ಮತಗಳ ಮೂಲ ಭಾವನೆಗೆ ವಿರೋಧಕ್ಕೆ ತಗಲುವದಿಲ್ಲವೆಂದು ಒಲವನ್ನುಳ್ಳವರಾಗಿದ್ದರು ನಾನಕನ ನಂತರದವರು ತಮ್ಮ ಅನುಯಾಯಿಗಳನ್ನು ಸಂಘಟಿಸಿ ವಿಶಿಷ್ಟ ಜನಾಂಗಿಕ ರೂಪವನ್ನದಕ್ಕೆ ಕೊಡಲೆತ್ನಿಸಿದಾಗ ಮತ ಪರಮತಗಳಲ್ಲಿನ ವ್ಯತ್ಯಾಸವು ಹೆಚ್ಚಿತು. ನಂತರ ಸೀಖ್ ಜನರು ಸುವ್ಯವಸ್ಥಿತರಾಗಿ ರಾಜ್ಯವನ್ನಾಳಲಾರಂಭಿಸಿದಾಗ ಬಲಾತ್ಕಾರದ ಮತಾಂತರಕ್ಕೆ ಕೈಯಿಕ್ಕಿದರು ಇದು ಶಾಶ್ವತ ವೈಮನಸ್ಸನ್ನುಂಟುಮಾಡುವಂತಾಯಿತು

ನಾನಕನ ಜೀವನ

ಆದರೆ ನಾನಕನು ಇಂಥಹ ಯಾವದೊಂದು ವಿಚಾರ ವಿಕಾರಕ್ಕೆಡೆಯಾಗದಂತೆ ತನ್ನ ಮತವನ್ನು ಪ್ರಚಾರಿಸಿದನು. ಅವನು ಲಾಹೋರದ ಹತ್ತಿರವಿರುವ ಈಗ ನಾನ್‌ಕಾನಾ ಸಾಹೇಬ್ ಎಂದೆನಿಸಿಕೊಳ್ಳುವ ತಾಲ್ವಂಡಿಯೆಂಬಲ್ಲಿ ೧೪೬೯ರಲ್ಲಿ ಜನಿಸಿದನು ಬಾಲ್ಯದಿಂದ ಶಿವಧ್ಯಾನಾಸಕ್ತನಾಗಿದ್ದ ಇವನಿಗೆ ಈ ಲೋಕದಲ್ಲಿ ಹೊಟ್ಟೆ ಹೊರೆದುಕೊಳ್ಳಲು ಸಹಾಯಕವಾಗುವ ಲೌಕಿಕ ವಿದ್ಯೆಯು ಹತ್ತಲಿಲ್ಲ ಶಾಲೆಗೆ ಹೋಗುವ ಬದಲಿಗೆ ಅವನು ಸಾಧು ಸಂತರ ಮತ್ತು ಫಕೀರರ ಕೂಟದಲ್ಲಿ ಕಾಲಕಳೆಯುತ್ತಿದ್ದನು. ನಾನಕನಿಗೆ ತಲೆ ಕೆಟ್ಟಿದೆಯೆಂದು ತಿಳಿದುಕೊಂಡ ಸ್ನೇಹಿತರೂ ಸಂಬಂಧಿಕರೂ ಅವನಿಗೆ ಮದುವೆಮಾಡಬೇಕೆಂದು ಹೆತ್ತವರಿಗೆ ಸೂಚನೆಕೊಟ್ಟರು ಕೂಡಲೇ ಮದುವೆಯನ್ನು ಮಾಡಲಾಯಿತು, ಆದರೆ ಧ್ಯಾನಪ್ರಿಯನಾದ ನಾನಕನ ಮೇಲೆ ಇದರಿಂದ ಯಾವ ಪರಿಣಾಮವೂ ಆಗಲಿಲ್ಲ.

ದೈವಿಕಾಜ್ಞೆ

ಒಂದು ದಿನ ಸ್ನಾನಮಾಡುತ್ತಿರುವಾಗ ಜಗತ್ತಿನಲ್ಲಿ ಸತ್ಯ ಸುವಾರ್ತೆಯನ್ನು ಹಬ್ಬಿಸಲು ಹೊರಡಬೇಕೆಂಬ ಅಶರೀರ ವಾಣಿಯೊಂದು ನಾನಕನಿಗೆ ಕೇಳಿಸಿತಾಯಿತು ಕೂಡಲೇ ಅವನು ದೇಶ ಸಂಚಾರಕ್ಕೆ ಹೊರಟನು, ಕಾಶ್ಮೀರದಿಂದ ಕಾಶಿಗಾಗಿ ಕನ್ಯಾಕುಮಾರಿ ತನಕ ತನ್ನ ಧರ್ಮ ತತ್ವವನ್ನು ಸಾರುತ್ತಾ ಹೊರಟನು ಮತ್ತೆ ಮುಸಲ್ಮಾನರ ಮಕ್ಕಾ ಪಟ್ಟಣಕ್ಕೂ ಅವನು ಹೋಗಿದ್ದನು

ಹಿಂದೂ ಮುಸ್ಲಿಂ ಐಕ್ಯತೆಯು ಸಾಧಿಸಿತೆ?

ಅವರ ಪಂಚಮಹಾ ಪ್ರತಿಜ್ಞೆಗಳು

ಮಕ್ಕಾದಲ್ಲೊಂದು ವಿಶೇಷ ಸಂಗತಿ ನಡೆಯಿತೆಂದು ಹೇಳಲಾಗಿದೆ ಅಲ್ಲಿನ ಪವಿತ್ರ ಮಸೀದಿಯೊಂದರಲ್ಲಿ ಪ್ರಾರ್ಥನೆ ಮಾಡುತ್ತಿರುವಾಗ ನಾನಕನ ಕಾಲುಗಳು ಮಸೀದಿಗೆದುರಾಗಿ ಇರಿಸಲ್ಪಟ್ಟಿದ್ದವು. ಅಲ್ಲಿನ ಮುಖ್ಯ ಖಾಜಿಯು ಕಣ್ಣಿಗೆ ಬಿತ್ತು ಈ ಅಕೃತ್ಯಕ್ಕಾಗಿ ನಾನಕನನ್ನು ಛೀಮಾರಿಯನ್ನಾಗಿ ಗದರಿಸಿದನು. ದೇವರಿರುವ ದಿಸೆಯ ಕಡೆ ಕಾಲು ಮಾಡುವುದೇ?" ಎಂದವನು ಪ್ರಶ್ನಿಸಿದನು ಕೂಡಲೇ ದೈವೀಕ ಭಾವನೆಯ ನಾನಕನು "ಹಾಗಾದರೆ ದಯಮಾಡಿ ಈ ಕಾಲುಗಳನ್ನು ದೇವರಿಲ್ಲದ ಮನೆಯ ಕಡೆ ಎತ್ತಿ ಇಡಿರಿ" ಎಂದವನನ್ನು ಭಿನ್ನವಿಸಿಕೊಂಡನು. ಕುಪಿತನಾದ ಖಾಜಿಯು ಅಂತೆಯೇ ಅವನ ಕಾಲುಗಳನ್ನು ಎತ್ತಿ ಬೇರಾವ ಕಡೆ ತಿರುಗಿಸಿಟ್ಟರೂ ಅಲ್ಲಿ ಮಸೀದಿಯೊಂದನ್ನು ಕಾಣುವವನಾದನು.

ಈ ಘಟನೆಯ ದೈವೀಕ ಚಮತ್ಕಾರದ ಸಂಗತಿ ಹಾಗಿರಲಿ ನಾನಕನು ಅಂಧನ ತಂತ್ರಾರದವನಲ್ಲವೆಂಬೊಂದು ವಿಷಯವು ಇದರಿಂದ ಸ್ಪಷ್ಟವಾಗುತ್ತದೆ ನಿಜವಾಗಿಯೂ ಮತ ಶಾಸ್ತ್ರಗಳಲ್ಲಿನ ಅಂಧ ಆಚಾರಗಳಲ್ಲಿ ಅವನಿಗೆ ಶ್ರದ್ಧೆಯಿರಲಿಲ್ಲ ಮಾನವ ಭ್ರಾತೃತ್ವ ಮತ್ತು ಧರ್ಮಪ್ರೇಮ ಕರುಣೆ ಕ್ಷಮೆ ಇವುಗಳ ಪ್ರತ್ಯಕ್ಷಾಚರಣೆಯಿಂದಲೇ ಅವನು ಧರ್ಮ ತತ್ವಗಳ ಸಾರವನ್ನನುಸರಿಸುತ್ತಿದ್ದನು ಹೀಗೆ ನಾನಕನು ಕರ್ತಾರ್‌ಪುರ್ ಎಂಬಲ್ಲಿ ಸೀಖ್ ಮತದ ಮುಖ್ಯ ಪೀಠವನ್ನು ಸ್ಥಾಪಿಸಿ ೧೫೩೯ರಲ್ಲಿ ಸ್ವರ್ಗಸ್ಥನಾದನು

ಪಂಚ ಪ್ರತಿಜ್ಞೆಗಳು

ಗುರು ನಾನಕನ ನಂತರ ಒಂಭತ್ತು ಗುರುಗಳು ಆ ಪೀಠದಲ್ಲಿ ಉಪಸ್ಥಿತರಾಗಿ ಸೀಖ್ ಮತ ಸಂಘಟನೆಯನ್ನು ಮಾಡಿದರು ಅರ್ಜುನ್ ಸಿಂಗ್ ಎಂಬವನು ಇವರಲ್ಲಿ ಅಗ್ರಗಣ್ಯನಾಗಿದ್ದು, ಅವನು ನಾನಕನ ಮತ್ತು ಕಬೀರ್, ನಾಮದೇವನ ಮತೋಪದೇಶದ ನೀತಿ ಸೂತ್ರಗಳನ್ನು ಸಂಗ್ರಹಿಸಿ ಒಂದು ಧರ್ಮ ಗ್ರಂಥವನ್ನು ರಚಿಸಿದನು ಅದೇ ಇಂದಿನ ಸೀಖರ ಪವಿತ್ರ "ಗ್ರಂಥಸಾಹೇಬ"ವಾಗಿದೆ ಸೀಖ್ ಮತದವೇದವಿದು -

ಗುರು ಅರ್ಜುನನು ಗುರು ಪೀಠವನ್ನು ರದ್ದುಗೊಳಿಸಿ ಖಾಲ್ಸಾ ಎಂಬ ಸೀಖ್ ಜನರ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದನು ಇಂದು ಖಾಲ್ಸಾವು ಸೀಖ್ ಜನರ ಎಲ್ಲಾ ಮತೀಯ ಆಚಾರ ವಿಚಾರಗಳನ್ನು ನಿರ್ದೇಶಿಸುತ್ತದೆ ಸೀಖ್ ಮತಕ್ಕೆ ಸೇರುವವರು ಖಾಲ್ಸಾದ ಮೂಲಕ "ಸಿಡ್ಡೋಪದೇಶ"ವನ್ನು ಪಡೆದು ಪುನೀತರಾಗಬೇಕು. ಬ್ರಾಹ್ಮಣರಿಗೆ ಬ್ರಹ್ಮೋಪದೇಶ ಹೇಗೊ ಹಾಗೆ "ಸಿಡ್ಡ ದೀಕ್ಷೆ"ಯಾಗದೆ ಸೀಖನು ಸಿಂಗ (ಸಿಂಹ)ನಾಗಲಾರ

ಅದೇ ರೀತಿ ಸೀಖರು ಆತ್ಮಶೀಲದ ಐದು ಬಾಹ್ಯ ಸಂಕೇತಗಳನ್ನೂ ಧರಿಸಿಕೊಳ್ಳತಕ್ಕ ಪಂಚ ಪ್ರತಿಜ್ಞಾಬದ್ಧರಾಗುತ್ತಾರೆ ಇವು ಕಕಾರ ಮೊದಲ ಐದು ವಿಧಿಗಳು. ಸೀಖನು ಕಾಂಗಾ (ಬಾಚಣಿಗೆ)ಯನ್ನು ಸದಾವಾಗಲೂ ತನ್ನ ಬಳಿ ಇಟ್ಟುಕೊಳ್ಳತಕ್ಕದ್ದು ಕಡಾ (ಕಂಕಣ) ಎಂಬ ಕಬ್ಬಿಣದ ಬಳೆಯೊಂದನ್ನು ಒಂದು ಕೈಯಲ್ಲಿ ಹಾಕಿಕೊಳ್ಳಬೇಕು ಕಚ್(ಕಚ್ಚೆ)ಯನ್ನೂ ಸದಾ ಸಿದ್ಧ ಯೋಧನಂತೆ ಬಿಗಿಯಾಗಿಯೂ, ಗಿಡ್ಡವಾಗಿಯೂ ಧರಿಸತಕ್ಕದ್ದು ಕೇಸಾ (ಕೂದಲು) ಎಂದರೆ ಆಜನ್ಮ ಮರಣ ಪರ್ಯಂತ ಸೀಖನಾದವನು ಕ್ಷೌರ ಕತ್ತಿಯನ್ನು ಮುಟ್ಟಿಸದೆ ತಲೆ ಮತ್ತು ಮುಖದ ಕೂದಲನ್ನು ಬೆಳೆಸಬೇಕು. ಕರ್ಪಾಣ (ಸಿಡ್ಡ)ವೊಂದನ್ನು ಧರಿಸಬೇಕು.

ಸಂಕೇತಾರ್ಥ

ಕೂದಲನ್ನು ಬಾಚಣಿಗೆ ಶುದ್ಧಗೊಳಿಸಿ ಸುವ್ಯವಸ್ಥಿತವಾಗಿರಿಸುವುದರಿಂದದು ಆತ್ಮವಿಶುದ್ಧತೆಯ ಚಿಹ್ನೆ ಲೋಹದ ಬಳೆಯು ಪ್ರಾಮಾಣಿಕತೆ ಮತ್ತು ಸತ್ಯನಿಷ್ಠೆಯ ಸಂಕೇತ ಸಿಡ್ಡವು ಆತ್ಮರಕ್ಷಣೆಯ ದೈವೀಕ ಶಕ್ತಿಯ ಕುರುಹು ವೀರಕಚ್ಚೆಯು ಶೂರ ಸರಳತನದ ಪ್ರತೀಕ, ಏಕಪತ್ನಿವ್ರತದ ಸಂಕೇತವೂ ಅದಾಗಿದೆ. ಕೂದಲು ಬಿಡುವುದು ಸೀಖ್ ಮತಾನುಯಾಯಿಗಳು ಲೌಕಿಕ ಪರಿತ್ಯಕ್ತತೆಯ ಸರಳ ಸನ್ಯಾಸಿ ಜೀವನಾದರ್ಶಿಗಳೆಂದೂ, ಆಡಂಬರರಹಿತರೆಂಬುದನ್ನೂ ಸೂಚಿಸುತ್ತದೆ.

ಮಗುವಿನ ಮೃದು ಚರ್ಮಕ್ಕೆ
ಹೆಚ್ಚು ರಕ್ಷಣೆ ಬೇಕು

ಕುಟಿಕೂರಾ ಸಾಬೂನ ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡ ತ್ತದೆ ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ

554

ಕುಟಿಕೂರಾ ಸಾಬೂನು
CUTICURA SOAP

ನಿಮಗೆ ಬೇಕಾದುದು ಅಂತರ್ಯ ಶುದ್ಧಿ ಮತ್ತು ಬ್ಯಾಲ್ ಬೀನ್ಸ್ ನಿಮಗೆ ಅವಶ್ಯವಿದೆ ಅವನ್ನು ನಿತ್ಯಲೂ ಕ್ರಮವಾಗಿ ಸೇವಿಸಿದಲ್ಲಿ ನಿಮ್ಮ ರಕ್ತದ ಶುದ್ಧಿಕರಣವಾಗಿ, ಕಶ್ಮಲಗಳ ವಿಸರ್ಜನೆಯಾ ನಡೆದು ನಿಮ್ಮಲ್ಲಿ ನವ ಚೇತನವು ಬರುವುದು.

ಆರೋಗ್ಯದಿಂದಲೂ, ದೃಢಕಾಯರಾಗಿಯೂ ಸಂತೋಷ ಚಿತ್ತರಾಗಿಯೂ, ಬಾಳಿರಿ ಇಂದಿನ ರಾತ್ರೆಯಿಂದ ಬ್ಯಾಲ್ ಬೀನ್ಸ್‌ಗಳನ್ನು ಸೇವಿಸಿರಿ, ನಾಳೆಗೆ ನೀವು ಉತ್ತಮ ಸ್ಥಿತಿಯನ್ನು ಪಡೆಯುವಿರಿ

ಮಲಬದ್ಧತೆ, ಪಿತ್ತವಿಕಾರ, ತಲೆನೋವು, ಪ್ಲೀಹ ಸಂಬಂಧ ಪೀಡೆಗಳು ಜೀರ್ಣಕೋಶದ ವಿಕಾರಗಳು ಮತ್ತಿತರ ಇದೇ ಸಂಬಂಧದ ಸಂಕಟಗಳಿಗೆ ಬ್ಯಾಲ್ ಬೀನ್ಸ್ ದಿವ್ಯ ಔಷಧಿಯು

ಶುದ್ಧ ವನಸ್ಪತಿಗಳಿಂದ ಸಿದ್ಧವಾದ
BILE BEANS
ನೈಸರ್ಗಿಕ ಟಾನಿಕ್ ಮತ್ತು ದೋಷ ನಾಶಕ

ಸ್ವದೇಶಾಭಿಮಾನಿ

ತಾರೀಕು 5—3—1948

ಕೇಂದ್ರ ಸರಕಾರದ ಆಯುವ್ಯಯ

ಕೇಂದ್ರ ಸರಕಾರದ ಅರ್ಥಸಚಿವರಾದ ಮಾನ್ಯ ಶ್ರೀ ಕೆ. ಆರ್. ಷಣ್ಮುಗಂ ಚೆಟ್ಟಿಯಾರರು ೧೯೪೮–೪೯ನೇ ವರ್ಷದ ಭಾರತ ಸರಕಾರದ ಆಯುವ್ಯಯದ ಅಂದಾಜಿನ ತಖ್ತೆಯನ್ನು ಕೇಂದ್ರ ಶಾಸನ ಸಭೆಯ ಮುಂದಿಟ್ಟು ಆಯುವ್ಯಯಗಳ ತಮ್ಮ ಸೂಚನೆಗಳನ್ನು ವಿವರಿಸಿ ಅವೆಲ್ಲವನ್ನು ಜಾರಿಗೆ ತಂದರೆ ರೂ. ೨೫೭.೨೮ ಕೋಟಿ ಆಯ ಮತ್ತು ರೂ. ೨೫೮-೩೭ ಕೋಟಿ ವ್ಯಯ ಅಂದರೆ ರೂ. ೧.೦೯ ಕೋಟಿ ಕಡಮೆ ಬೀಳುವ ಅಂಕೆ ಸಂಖ್ಯೆಗಳನ್ನು ಕೊಟ್ಟರು.

ಕೈಗಾರಿಕೆಗಳ ಉತ್ಪತ್ತಿ ಹೆಚ್ಚಿಸುವುದು ಈಗಿನ ಪ್ರಧಾನ ಆವಶ್ಯಕತೆ ಎಂಬುದರಿಂದ ವ್ಯಾಪಾರೀ ಲಾಭಾಂಶ ತೆರಿಗೆಯ ದರವನ್ನು ಶೇಕಡಾ 16⅔ರಿಂದ ಶೇಕಡಾ ೧೦ಕ್ಕೆ ಇಳಿಸಿರುವದೂ ಮಾತ್ರವಲ್ಲ ತೆರಿಗೆ ಹೊರಿಸುವ ಲಾಭಾಂಶದ ಮಿತಿಯನ್ನೂ ಏರಿಸಲಾಗಿದೆ. ಇದೇ ರೀತಿ ಸುಪರ್‌ಟೇಕ್ಸ್ ಹೊರಿಸುವ ಮಿತಿಯನ್ನು ಕೂಡಾ ಏರಿಸಲಾಗಿದೆ. ಅಂದರೆ 3½ ಲಕ್ಷದ ತನಕ ತೆರಿಗೆ ಹೊರಿಸುವುದಿಲ್ಲ.

ಕಂಪೆನಿಗಳಲ್ಲಿ ವಿಭಜಿಸದ ಲಾಭಾಂಶಗಳಿಗೆ ರೂಪಾಯಿಗೆ ಒಂದಾಣೆಯಂತೆ ತೆರಿಗೆ ಕಡಮೆಮಾಡಲಾಗಿದೆ. ರೂ. ೨೫,೦೦೦ಕ್ಕೆ ಕಡಿಮೆ ಆದಾಯದ ಕಂಪೆನಿಗಳಿಗೆ ಆದಾಯ ತೆರಿಗೆಯ ದರ ಈಗ ಇದ್ದುದಕ್ಕಿಂತ ಅರೆವಾಸಿಗೆ ಇಳಿಸಲಾಗಿದೆ.

ಈ ರೀತಿ ಕೈಗಾರಿಕೆಗಳಲ್ಲಿ ಅಥವಾ ದೊಡ್ಡ ವ್ಯಾಪಾರಿ ವಹಿವಾಟುಗಳಲ್ಲಿ ಆದಷ್ಟು ಕಡಮೆಮಾಡಿ ಹೆಚ್ಚಿನ ಪ್ರೋತ್ಸಾಹ ಸಿಕ್ಕುವಂತೆ ಯತ್ನಿಸಲಾಗಿದೆ.

ಗಿರಣಿ ಬಟ್ಟೆ ಮತ್ತು ನೂಲುಗಳನ್ನು ರಫ್ತುಮಾಡುವಾಗ ಹೊರಿಸುವ ಸುಂಕ ಶೇಕಡಾ ೨೫ಕ್ಕೆ ಇರಿಸಲಾಗಿದೆ. ಕೈಮಗ್ಗದ ಬಟ್ಟೆ ನೂಲುಗಳ ಮೇಲೆ ಇದನ್ನು ಹೊರಿಸುವುದಿಲ್ಲ.

ಅಡಿಕೆ ಮೇಲಿನ ಸುಂಕ ತೆಗೆದುಹಾಕಲಾಗಿದೆ.

ಎಣ್ಣೆ ತೆಗೆಯಬಹುದಾದ ಬೀಜಗಳನ್ನು ರಫ್ತುಮಾಡುವಾಗ ಟನ್ನಿಗೆ ರೂಪಾಯಿ ೮೦ ಸುಂಕ, ವನಸ್ಪತಿ ಎಣ್ಣೆಗಳ ಮೇಲೆ ಟನ್ನಿಗೆ ರೂಪಾಯಿ ೨೦೦ ಸುಂಕ ಮತ್ತು ಮೇಂಗನೀಸ್ ಎಂಬುದರ ಮೇಲೆ ಟನ್ನಿಗೆ ರೂ. ೨೦ ಹೀಗೆ ರಫ್ತುಗಳ ಮೇಲೆ ಸುಂಕ ಹೆಚ್ಚಿಸಲಾಗಿದೆ.

ಚಾ ಮತ್ತು ಕಾಫಿಗಳ ಮೇಲಿನ ಎಕ್ಸೈಜ್ ಸುಂಕವನ್ನು ರಾತ್ತಲಿಗೆ ಎರಡು ಆಣೆಗಳಿಂದ ನಾಲ್ಕು ಆಣೆಗೆ ಏರಿಸಲಾಗಿದೆ. ವನಸ್ಪತಿಗಳ ಮೇಲಿನ ಸುಂಕ ಶೇಕಡಾ ೫೦ರಂತೆ ಹೆಚ್ಚಿಸಿ ಹಂಡ್ರೆಡ್‌ವೈಟಿಗೆ ರೂ. ೭–೮-೦ರಂತೆ ಹೊರಿಸಲಾಗುವುದು.

ಹುರಿಹಗ್ಗಗಳ ಮೇಲಿನ ಸುಂಕ ಶೇಕಡಾ ೫೦ರಷ್ಟು ಏರಿಸಲಾಗಿದೆ. ಬೆಂಕಿ ಪೆಟ್ಟಿಗೆಗಳ ಮೇಲೆ ಪುನಃ ಹಿಂದಿನ ದರದ ಅಂದರೆ ಗ್ರೋಸಿಗೆ ರೂ. ೨-೮–೦ರಷ್ಟು ಸುಂಕ ಹಾಕಲಾಗುತ್ತದೆ.

ಟ್ರಂಕ್ ಟೆಲಿಫೋನಿನ ಉಪಯೋಗದ ಮೇಲೆ ಶೇಕಡಾ ೪೦ರಿಂದ ೬೦ರ ತನಕ ಸುಂಕ ಹಾಕಿ ಇದನ್ನು ದರಗಳಿಗೇನೆ ಸೇರಿಸಲಾಗುತ್ತದೆ.

ಆಮದುಗಳ ಪೈಕಿ ಮೋಟರು ಕಾರುಗಳ ಮೇಲೆ ಸುಂಕವನ್ನು ಶೇಕಡಾ ೪೫ರಿಂದ ೫೦ಕ್ಕೆ ಹೆಚ್ಚಿಸಲಾಗಿದೆ. ಯುನೈಟೆಡ್‌ಕಿಂಗ್ಡಮ್ ಅಂದರೆ ಇಂಗ್ಲೆಂಡು ಮೊದಲಾದ ಪ್ರಾಂತ್ಯಗಳಿಂದ ತರಿಸುವವರಿಗೆ ಶೇಕಡಾ 7½ಯಷ್ಟು ರಿಯಾಯತಿ ಇಡಲಾಗಿದೆ.

ಸಿಗರೇಟುಗಳ ಮೇಲೆ ಕಾರಖಾನೆ ಕ್ರಯದ ಶೇಕಡಾ ೨೫೦ರಷ್ಟು ಸುಂಕ ಹಾಕಲಾಗುತ್ತದೆ. ಆಮದು ಸುಂಕನ್ನು ಕ್ರಯ ಇಷ್ಟಕ್ಕೇ ನಿಲ್ಲುವಂತೆ ಏರಿಸಲಾಗಿದೆ. ಹೊಗೆಸೊಪ್ಪಿನ ಮೇಲಿನ ಸುಂಕವನ್ನು ಕೆಲವು ಮಾದರಿಗಳ ಮೇಲೆ ರಾತ್ತಲಿಗೆ ೯ ಆಣೆಯಿಂದ ೧೨ಆಣೆಗಳಿಗೂ ಅಗ್ಗದ ಇತರ ಕೆಲವು ಮಾದರಿಗಳ ಮೇಲೆ ೩ ಆಣೆಗಳಿಂದ ೪ ಆಣೆಗಳಿಗೂ ಏರಿಸಲಾಗಿದೆ.

ಟಪ್ಪಾಲು ರಿಜಿಸ್ಟ್ರೀ ಫೀಸನ್ನು ೩ ಆಣೆಗಳಿಂದ ನಾಲ್ಕು ಆಣೆಗಳಿಗೆ ಏರಿಸಲಾಗಿದೆ.

ಕೊನೆಯದಾಗಿ ಆಸ್ತಿಗಳ ಮೇಲೆ ಒಂದು ಸುಂಕ ಹಾಕುವ ಕುರಿತು ಒಂದು ಮಸೂದೆಯನ್ನು ಶಾಸನ ಸಭೆಯ ಇದೇ ಅಧಿವೇಶನದಲ್ಲಿ ಮುಂದೆ ತರುವುದಾಗಿ ಹೇಳಲಾಗಿದೆ.

ಇಷ್ಟೆಲ್ಲ ಬದಲಾವಣೆಗಳನ್ನು ಜಾರಿಗೆ ತಂದ ಮೇಲೆ ಬರೇ ಒಂದು ಕೋಟಿ ರೂಪಾಯಿಗಳ ಮಟ್ಟಿಗೆ ಆಯಕ್ಕಿಂತ ವ್ಯಯವು ಅಧಿಕ ನಿಲ್ಲುತ್ತದೆ. ಪಾಕಿಸ್ತಾನಕ್ಕೆ ನಾವು ಕೊಟ್ಟಿರುವ ಸಾಲಕ್ಕೆ ಬಡ್ಡಿ ವಸೂಲಾದರೆ ಈ ಕಡಿಮೆಯಾಗುವ ಅಂಶ ಅಲ್ಲಿಂದಲ್ಲಿಗೆ ಭರ್ತಿಯಾಗುತ್ತದಂತೆ.

ಉತ್ತರ ಹಿಂದುಸ್ಥಾನದ ನಿರಾಶ್ರಿತರ ಬಗ್ಗೆ ಖರ್ಚು, ಆಹಾರಗಳನ್ನು ಪರದೇಶಗಳಿಂದ ತರಿಸಿ ಇಲ್ಲಿ ಕಡಿಮೆ ಕ್ರಯಕ್ಕೆ ಒದಗಿಸಲು ತಗಲುವ ಖರ್ಚು ಇವೆಲ್ಲ ಮುಂದೆ ಅಗತ್ಯಬೀಳುವ ಖರ್ಚುಗಳಲ್ಲವಿದ್ದರೂ ಈಗ ಒದಗಿಸದೆ ನಿವೃತ್ತಿಯಿಲ್ಲ. ಇದೇ ರೀತಿ ಸೈನ್ಯ ಮೊದಲಾದ ರಕ್ಷಣಾಖಾತೆಯ ಬಗ್ಗೆ ಖರ್ಚನ್ನು ಸ್ವಲ್ಪ ಹೆಚ್ಚಿಸಿ ರೂಪಾಯಿ ೧೨೧ ಕೋಟಿಯಷ್ಟು ಇಡಲಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿ ಬಂದಿದೆ ಎಂಬುದೇ ಸರಕಾರದ ಅಭಿಪ್ರಾಯ.

ಇವೆಲ್ಲ ತೊಂದರೆಗಳಿದ್ದರೂ ಯುದ್ಧಾನಂತರದ ಅಭಿವೃದ್ಧಿ ಯೋಜನೆಗಳನ್ನು ಬಿಟ್ಟುಬಿಡಲಿಲ್ಲ. ಇವುಗಳಿಗೆ ಅಗತ್ಯಬೀಳುವ ಹಣ ಒದಗಿಸಲಾಗಿದೆ.

ಕೇಂದ್ರ ಸರಕಾರದಿಂದ ಪ್ರಾಂತಿಕ ಸರಕಾರಗಳಿಗೆ ಸಹಾಯಧನ ಒದಗಿಸಲು ರೂಪಾಯಿ ೩೦ ಕೋಟಿಗಳನ್ನು ಪ್ರತ್ಯೇಕಿಸಿಡಲಾಗಿದೆ.

ಈ ಆಯುವ್ಯಯದ ಅಂದಾಜಿನಲ್ಲಿ ಶ್ರೀಮಂತರ ಮೇಲಿನ ತೆರಿಗೆ ಸ್ವಲ್ಪ ಕಡಿಮೆ ಮಾಡಿರುವುದರಿಂದ ಈ ಧೋರಣೆ ಭಂಡವಾಳಗಾರರ ಹಿತಧೋರಣೆಯೆಂದು ದೂರುವುದು ಸರಿಯಲ್ಲ. ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟು ಅವುಗಳ ಉತ್ಪತ್ತಿ ಹೆಚ್ಚಾಗುವಂತೆ ಈಗ ಪ್ರಯತ್ನಿಸುವುದು ಇಡೀ ಜನಾಂಗದ ಹಿತಕ್ಕಾಗಿ ಅತ್ಯಾವಶ್ಯಕ ವಿಷಯವಿರುತ್ತದೆ.

ಕಾಫಿ, ಚಾ, ಸಿಗರೇಟು, ಹೊಗೆಸೊಪ್ಪು ಹಾಗೂ ಬೆಂಕಿಪೆಟ್ಟಿಗೆಗಳ ಕ್ರಯ ಜಾಸ್ತಿಯಾಗುತ್ತದೆಂಬುದು ನಿಜ. ಇವು ಅತ್ಯಾವಶ್ಯಕ ವಸ್ತುಗಳೇನೂ ಅಲ್ಲ. ಇವುಗಳ ಉಪಯೋಗ ಕಡಿಮೆಯಾದರೆ ಯಾರಿಗೂ ಹಾನಿಯಿಲ್ಲ. ಹಣ ಕೊಟ್ಟು ಉಪಯೋಗಿಸುವವರು ಸರಕಾರಕ್ಕೂ ಒಂದಂಶ ಹೆಚ್ಚಿಗೆ ಕೊಟ್ಟರೆ ಅದರಲ್ಲಿ ದೋಷವಿಲ್ಲ.

ರಾಷ್ಟ್ರಹಿತದ ದೃಷ್ಟಿಯಿಂದ ಈಗಿನ ಸ್ಥಿತಿಗತಿಗೆ ಸರಿಯಾಗಿ ಅರ್ಥಸಚಿವರು ತಮ್ಮ ಆಯವ್ಯಯಗಳನ್ನು ರೂಪಿಸಿದ್ದಾರೆಂದರೆ ತಪ್ಪೇನೂ ಇರುವುದಿಲ್ಲ.

ಸ್ವರಾಜ್ಯ ಸಿಕ್ಕಿತು. ಮುಂದಿನ ಜೀವನ ಸ್ವತಂತ್ರವಾಗಿ ರೂಪಿಸಿಕೊಳ್ಳುವ ಹಕ್ಕು ನಮ್ಮ ಕೈಗೇನೇ ಬಂದಿದೆ. ಆದರೆ ಸರ್ವಜನರ ಜೀವನದ ಮಟ್ಟವನ್ನು ಏರಿಸಿ ಎಲ್ಲರೂ ಸುಖದಲ್ಲಿ ಬಾಳಬೇಕೆಂಬ ಸ್ವರಾಜ್ಯದ ಉದ್ದೇಶ ಸಾಧಿಸುವುದು ಅಷ್ಟು ಸುಲಭವಲ್ಲ. ಪರ್ವತವನ್ನು ಏರುವವನು ತುದಿಗೆ ಮುಟ್ಟಿದಾಗ ಇನ್ನು ಏರಬೇಕಾದ ಉನ್ನತ ಶ್ರೇಣಿ ಅವನ ಕಣ್ಣೆದುರು ಕಾಣುವಂತೆ ಸ್ವರಾಜ್ಯ ಸಿಕ್ಕಿತು ಆದರೆ ಮುಂದೆಯೂ ಸಾಧಿಸತಕ್ಕ ಕಾರ್ಯ ಇನ್ನೂ ಕಠಿಣವಿದ್ದು ಇರುತ್ತದೆ ಎಂದು ಮಾನ್ಯ ಚೆಟ್ಟಿಯಾರರು ಚೆನ್ನಾಗಿ ವರ್ಣಿಸಿದ್ದಾರೆ. ಕೊನೆಗೆ ಮುಂದಿನ ಇಡೀ ಹಾದಿ ನಾವು ಈಗಲೇ ಕಾಣುವುದಿಲ್ಲ. ಒಂದು ಹೆಜ್ಜೆ ಸರಿಯಾಗಿ ಇಡಲು ದಾರಿ ಕಂಡರೆ ಸಾಕು. ಮುಂದಿನ ದಾರಿಯಲ್ಲಿ ದೇವರೇ ನಮ್ಮನ್ನು ನಡೆಸಲೆಂದು ಮಹಾತ್ಮಾಗಾಂಧಿಯವರು ಹಾಡುತ್ತಿದ್ದ ಆಂಗ್ಲ ಪ್ರಾರ್ಥನಾ ಗೀತೆಯೊಡನೆ ಶ್ರೀ ಚೆಟ್ಟಿಯಾರರು ತಮ್ಮ ಎರಡು ಗಂಟೆಗಳ ಭಾಷಣ ಮುಗಿಸಿದ್ದಾರೆ.

ಇಷ್ಟು ದಕ್ಷತೆಯಿಂದ ಈ ಕಾರ್ಯವನ್ನು ಪೂರೈಸಿದಬಗ್ಗೆ ಮಾನ್ಯ ಶ್ರೀ ಚೆಟ್ಟಿಯಾರರನ್ನು ಅಖಿಲ ಭಾರತವು ಅಭಿನಂದಿಸುವುದು ಮಾತ್ರವಲ್ಲ ಇವರ ಕುರಿತು ದಕ್ಷಿಣ ಭಾರತವು ವಿಶೇಷ ಅಭಿಮಾನ ತಾಳುವುದೆಂಬ ಬಗ್ಗೆ ಸಂಶಯವಿಲ್ಲ.

ಆಸವ, ಅರಿಷ್ಟಗಳು

ಇವನ್ನು ಮದ್ಯನಿಷೇಧಾಜ್ಞೆಯಿಂದ ಹೊರಪಡಿಸುವ ಕುರಿತು ಮದ್ರಾಸ್ ಸರಕಾರದವರು ಪರ್ಯಾಲೋಚಿಸುತ್ತಿರುವುದಾಗಿ ದಕ್ಷಿಣಕನ್ನಡ ಜಿಲ್ಲಾ ದೇಶೀ ವೈದ್ಯ ಸಂಘದವರಿಗೆ ತಿಳಿಸಲ್ಪಟ್ಟಿದೆ.

ಟೀಕೆ–ಟಿಪ್ಪಣಿಗಳು

ಭಾವೀ ರಾಷ್ಟ್ರ ಘಟನೆ

ಭಾರತ ಸರಕಾರದ ರಾಷ್ಟ್ರೀಯ ಘಟನೆಯನ್ನು ಬರೆಯುವುದಕ್ಕಾಗಿ ಘಟನಾಸಮಿತಿಯವರು ಡಾಕ್ಟರ್ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ನೇಮಿಸಿದ್ದರು. ಈ ಸಮಿತಿಯವರು ಘಟನೆಯನ್ನು ಬರೆದು ಘಟನಾಸಮಿಯ ಅಧ್ಯಕ್ಷರ ಕೈಗೆ ಒಪ್ಪಿಸಿದ್ದು ಅದು ಪ್ರಕಟವಾಗಿರುತ್ತದೆ.

ಘಟನಾಸಮಿತಿಯವರು ಮಂಜೂರು ಮಾಡಿದ ನಿರ್ಣಯಗಳನ್ನೆಲ್ಲ ಅನುಸರಿಸಿ ಇದನ್ನು ತಯಾರಿಸಲಾಗಿದೆಯೆಂಬುದರಿಂದ ಇದರಲ್ಲಿ ಹೊಸ ವಿಷಯವೇನೂ ಬಂದಿಲ್ಲ.

ಪ್ರಾಂತಿಕ ಗವರ್ನರರನ್ನು ಇಡೀ ಪ್ರಾಂತ್ಯದ ಮತದಾನದಿಂದ ಚುನಾಯಿಸುವ ಬದಲು ಶಾಸನ ಸಭಾಸದರು ಆರಿಸುವ ಕೆಲವರೊಳಗಿಂದ ಕೇಂದ್ರ ಸರಕಾರದ ಪ್ರೆಸಿಡೆಂಟರೇ ಇವರನ್ನು ನೇಮಿಸುವುದು ಯುಕ್ತವೆಂದು ಸೂಚಿಸಲಾಗಿದೆ. ಪ್ರಾಂತ್ಯದ ಮುಖ್ಯಮಂತ್ರಿ ಮೊದಲಾದ ಮಂತ್ರಿಮಂಡಲ ಪ್ರಜೆಗಳೆಲ್ಲರ ಮತದಾನದಿಂದ ಚುನಾವಣೆಯಾಗುವುದರಿಂದ ಅವರೇ ಚುನಾಯಿಸುವ ಗವರ್ನರರು ಕೂಡಾ ಇರುವುದು ಉಚಿತವಲ್ಲವೆಂಬುದು ನಿಜ. ಮಾತ್ರವಲ್ಲ ಪ್ರಾಂತ್ಯದ ಗವರ್ನರರಿಗೆ ಇರುವ ವಿಶೇಷಾಧಿಗಳ ಜವಾಬ್ದಾರಿ ಕೇಂದ್ರ ಸರಕಾರ ಹೊರುವುದೇ ಯುಕ್ತವೆಂಬುದರಿಂದ ಇಂಥ ಗವರ್ನರರನ್ನು ನೇಮಿಸುವುದರಲ್ಲಿ ಕೇಂದ್ರ ಸರಕಾರಕ್ಕೂ ಒಂದು ಭಾಗ ಸಲ್ಲಬೇಕೆಂಬುದು ನಿರ್ವಿವಾದ. ಉಪಸಮಿತಿಯ ಈ ಸೂಚನೆಯನ್ನೇ ಮಂಜೂರು ಮಾಡಬಹುದಾಗಿ ಹಾರೈಸುತ್ತೇವೆ.

ಘಟನಾ ಸಮಿತಿಗೆ ಒಪ್ಪಿಸಿದ ಈ ವರದಿಯಲ್ಲಿ ಆಂಧ್ರ ಪ್ರಾಂತ್ಯ ರಚನೆಯ ಮಾತು ಕೂಡಾ ಬಂದಿದೆ. ಘಟನೆಯ ಶೆಡ್ಯೂಲಿನಲ್ಲಿ ಕಾಣಿಸುವ ಪ್ರಾಂತ್ಯಗಳ ಪಟ್ಟಿಯಲ್ಲಿ ಆಂಧ್ರ ಪ್ರಾಂತ್ಯದ ಹೆಸರು ಹಾಕಿದರೆ ಸಾಲದು. ೧೯೩೬ರಲ್ಲಿ ಒರಿಸ್ಸದ ವಿಚಾರ ನಡೆಸಿದಂತೆ ಪ್ರಾಂತವನ್ನು ಮೊದಲೇ ಸ್ಥಾಪಿಸುವುದರಿಂದ ಮಾತ್ರ ಹೊಸ ಘಟನೆಯಲ್ಲಿ ಪ್ರಾಂತ್ಯವನ್ನು ಸೇರಿಸಲು ಸಾಧ್ಯ. ಆದುದರಿಂದ ಇದಕ್ಕೆ ಬೇಕಾಗುವ ಗಡಿ ನಿರ್ಣಯ ಸಮಿತಿಯನ್ನು ಸರಕಾರದವರು ಈಗಲೇ ನೇಮಿಸಬೇಕೆಂದು ಸೂಚಿಸಲಾಗಿದೆ.

ಹೊಸ ಘಟನೆಯೊಡನೆಯೇ ಆಂಧ್ರ ಪ್ರಾಂತ್ಯವೂ ಜಾರಿಗೆ ಬರುತ್ತದೆಂಬ ಶ್ರೀ ಟಿ. ಪ್ರಕಾಶಮರ ಮಾತಿಗೆ ಇದರಿಂದ ಪುಷ್ಟಿ ದೊರೆತಿದೆ.

ಉಳಿದ ಭಾಷಾವಾರು ಪ್ರಾಂತ್ಯಗಳು ಯಾವಾಗ ಬರುವವು? ಇವೆಲ್ಲವುಗಳ ಬಗ್ಗೆ ಗಡಿ ನಿರ್ಣಯ ಕಮಿಟಿ ನೇಮಿಸಲು ಈಗ ಸಾಧ್ಯವಿದೆಯೇ? ಈ ಪ್ರಶ್ನೆಗಳನ್ನು ಕೇಂದ್ರ ಸರಕಾರವು ಸರಿಯಾಗಿ ವಿಚಾರಿಸುತ್ತದೆಂದು ಹಾರೈಸಲು ಅಡ್ಡಿಯಿಲ್ಲ.

ಮಹಾತ್ಮಾಗಾಂಧಿಯವರು ಹೇಳಿದಂತೆ ನಮ್ಮ ಮುಂದಾಳುಗಳು ಸೇರಿ ಗಡಿ ನಿರ್ಣ

ಯಗಳನ್ನು ತಾವೇ ಮಾಡಿದ್ದಲ್ಲಿ ಈ ಪ್ರಶ್ನೆಯು ಯಾವ ತೊಂದರೆಯೂ ಇಲ್ಲದೆ ನಿವೃತ್ತಿಯಾಗುತ್ತಿತ್ತು.

ಈಗ ರೂಪಿಸಲಾದ ಘಟನೆಯು ಪೂರ್ಣ ಪ್ರಜಾಸತ್ತಾತ್ಮಕವಿರುತ್ತದೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ.

ಇಡೀ ಪ್ರಾಂತ್ಯದಲ್ಲಿ ಪಾನನಿರೋಧ

ಮದ್ರಾಸು ಸರಕಾರದ ಆಯವ್ಯಯ ಅಂದಾಜನ್ನು ಇಲ್ಲಿಯ ಶಾಸನ ಸಭೆಯ ಮುಂದೆ ನಮ್ಮ ಅರ್ಥ ಸಚಿವ ಮಾನ್ಯ ಶ್ರೀ ಬಿ. ಗೋಪಾಲ ರೆಡ್ಡಿಯವರು ಇಟ್ಟಿದ್ದು ಈಗ ಅದರ ವಿಚಾರ ನಡೆಯುತ್ತಿದೆ.

ಇದರಲ್ಲಿಯ ಮುಖ್ಯ ವಿಚಾರವೆಂದರೆ ಬರುವ ಅಕ್ಟೋಬರ ತಾ ೧ರಿಂದ ಇಡೀ ಪ್ರಾಂತ್ಯದಲ್ಲಿ ಮದ್ಯಪಾನ ನಿರೋಧವನ್ನು ಜಾರಿಗೆ ತರಲು ಸರಕಾರದವರು ನಿರ್ಧರಿಸಿದ್ದೇ ಇರುತ್ತದೆ. ಈಗ ೧೮ ಜಿಲ್ಲೆಗಳಲ್ಲಿ ಪಾನನಿರೋಧ ಜಾರಿಗೆಬಂದಿದೆ. ಅಕ್ಟೋಬರದಿಂದ ಉಳಿದ ೮ ಜಿಲ್ಲೆಗಳಲ್ಲಿಯೂ ಮದ್ರಾಸ್ ಪಟ್ಟಣದಲ್ಲಿಯೂ ಇದು ಜಾರಿಗೆ ಬರುವುದು.

ಹೀಗೆ ಇಡೀ ಪ್ರಾಂತ್ಯದಲ್ಲಿ ಇದನ್ನು ಧೈರ್ಯದಿಂದ ಮುಂದೊತ್ತುವ ಸಾಹಸವನ್ನು ಕೈಕೊಂಡ ಒಗ್ಗ [illegible] ಸರಕಾರಕ್ಕೆ ನ್ಯಾಯವಾದ ಅಭಿನಂದನೆಗಳನ್ನು ಅರ್ಪಿಸಬೇಕು. ಈ ಕಾರ್ಯಕ್ರಮದಿಂದ ೧೮ ಕೋಟಿಯಷ್ಟು ಹಣ ಸರಕಾರಕ್ಕೆ ನಷ್ಟವಾಗುತ್ತದೆ. ಆದರೂ ಈಗಿನ ಆಯವ್ಯಯದ ಕಂಡು ಬರುವಂತೆ ನಮ್ಮ ಸರಕಾರವಾದರೂ ದಿವಾಳಿ ಸ್ಥಿತಿಗೆ ಬಂದಿಲ್ಲ ಎಂಬುದು ಅತ್ಯಂತ ಸಮಾಧಾನದ ವಿಷಯ.

ಬಂಗಾಳದ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿಯವರು ಈ ಕುರಿತು ಮದ್ರಾಸು ಸರಕಾರವನ್ನು ಅಭಿನಂದಿಸಿ ಕಳುಹಿಸಿದ ಸಂದೇಶದಲ್ಲಿ ಇದೇ ಸ್ವಾತಂತ್ರ್ಯದಲ್ಲಿ ಮದ್ಯನಿರೋಧವನ್ನು ಸಾಧಿಸುವ ಸುಧಾರಣೆಯೊಂದೇ ಮಹಾತ್ಮಾ ಗಾಂಧಿಯವರಿಗೆ ಯೋಗ್ಯವಾದ ಸ್ಮಾರಕವೆಂದು ತಿಳಿಯಲ್ಪಡಲೆಂದಿದ್ದಾರೆ.

ಸರಕಾರಕ್ಕೆ ೧೮ ಕೋಟಿ ರೂಪಾಯಿ ನಷ್ಟವಾದರೆ ಪ್ರಜೆಗಳಿಗೆ ಅದರಲ್ಲಿ ಬಡವರ್ಗಗಳಿಗೆ ಇದಕ್ಕೆ ಸಾಮಾನ್ಯ ನಾಲ್ಕುಪಾಲಷ್ಟು ಅಂದರೆ ಸುಮಾರು ಎಪ್ಪತ್ತೆರಡು ಕೋಟಿ ರೂಪಾಯಿಗಳಷ್ಟು ಉಳಿತಾಯವೆನ್ನಲು ಅಡ್ಡಿಯಿಲ್ಲ. ಸರಕಾರವು ಇನ್ನಾವ ಅಭಿವೃದ್ಧಿಯ ಕಾರ್ಯಕ್ರಮದಿಂದಲೂ ಪ್ರಜೆಗಳಿಗೆ ಇಷ್ಟೊಂದು ಉಪಕಾರ ಮಾಡುವುದು ಸಾಧ್ಯವಿಲ್ಲ. ಇದರಲ್ಲಿ ಕೋಟಿಗಟ್ಟಲೆ ರೂ.ಗಳನ್ನು ಬಡಜನರಿಗೆ ಉಳಿಸಿ ಕೊಡುವುದು ಮಾತ್ರವಲ್ಲ ಅವರ ನೈತಿಕ ಸಾಮಾಜಿಕ ಮೊದಲಾದ ಸರ್ವತೋಮುಖವಾದ ಹಿತವನ್ನು ಸಾಧಿಸಿದಂತಾಗುತ್ತದೆ. ಇಷ್ಟು ಮಹತ್ವದ ಈ ಸುಧಾರಣೆಯನ್ನು ಧೈರ್ಯದಿಂದ ಮುಂದೊತ್ತಿ ಸಾಧಿಸಿದ ಪ್ರಾಂತ್ಯವೆಂದರೆ ಅಖಿಲಭಾರತದಲ್ಲಿ ಮದ್ರಾಸು ಎಂಬುದು ಈ ಪ್ರಾಂತ್ಯದ ಎಲ್ಲ ಪ್ರಜೆಗಳಿಗೂ ತುಂಬಾ ಅಭಿಮಾನದ ವಿಷಯವಿರುತ್ತದೆ.

ಜೆಕೋಸ್ಲೋವೋಕಿಯಾದಲ್ಲಿ ಹೊಸ ಸರಕಾರ

ಜೆಕೋಸ್ಲೋವೋಕಿಯಾದಲ್ಲಿ ಕಮ್ಯೂನಿಸ್ಟ ಪಂಗಡದವರು ಸರಕಾರದ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡಿರುವರು. ಈ ಕುರಿತು ಅಮೇರಿಕ ಬ್ರಿಟನು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಕಟುವಾದ ರೀತಿಯಲ್ಲಿ ಖಂಡಿಸುತ್ತಲಿವೆ. ಆದರೆ ಜೆಕ್ಕರ ಅಧ್ಯಕ್ಷ ಡಾ|| ಬೆನೆಸರು ಹೊಸ ಸರಕಾರಕ್ಕೆ ತಮ್ಮ ಅನುಮತಿ ಕೊಟ್ಟಿದ್ದಾರೆ. ಇಲ್ಲಿಯ ಕೈಗಾರಿಕೆಗಳನ್ನು ರಾಷ್ಟ್ರೀಕರಣಕ್ಕೆ ಒಳಪಡಿಸುವುದು ಹೊಸ ಸರಕಾರದವರ ಧೋರಣೆ. ಇದು ತಮ್ಮ ರಾಷ್ಟ್ರದ ಅಭ್ಯುದಯಕ್ಕೆ ಅಗತ್ಯವಿರುವುದಾಗಿ ಅವರ ವಾದವಿದೆ. ಅಮೇರಿಕ ಬ್ರಿಟನುಗಳ ಬಂಡವಾಳಗಾರರು ಇಲ್ಲಿಯ ಕೈಗಾರಿಕೆಗಳಲ್ಲಿ ಹೆಚ್ಚು ಹಣ ಹಾಕಿಟ್ಟು ಸಂಯುಕ್ತ ನಷ್ಟಕ್ಕೆ ಕಾರಣವಾಗಿದೆ. ಆದಕಾರಣ ಈ ಒಗ್ಗಟ್ಟು ಟೀಕೆಗಳು ಬರಲು ಕಾರಣವೆನ್ನಲಾಗಿದೆ. ಹೊಸ ಸರಕಾರವು ಅಮೇರಿಕ ರಷ್ಯಾಗಳ ಎರಡು ತಂಡಗಳೊಳಗೆ ರಷ್ಯವನ್ನೇ ಕಟ್ಟಿಕೊಂಡಿತೆಂಬುದು ಸ್ಪಷ್ಟವಾಗಿರುತ್ತದೆ. ಟ್ರೂಮನರ ಯುರೋಪಿಯನ್ ಧೋರಣೆಯಿಂದಲೇ ಹೀಗಾಗಿದೆಯೆಂದು ಮೂರನೇ ಪಂಗಡದ ಮುಂದಾಳು ವಾಲೇಸರು ಹೇಳುತ್ತಿದ್ದಾರೆ.

ಅಮೇರಿಕನ್ ಸರಕಾರದ ವಿಮಾನ ಪಡೆ

ಅಮೇರಿಕನ್ ಸಂಯುಕ್ತ ರಾಷ್ಟ್ರ ಸರಕಾರದ ವಿಮಾನ ಪಡೆ ಹೆಚ್ಚಿಸಬೇಕೆಂದು ಇಲ್ಲಿಯ ಜೊಯಿಂಟ್ ಬೋರ್ಡಿನವರು ಶಿಫಾರಸು ಮಾಡಿದ್ದಾರೆ. ೩೫,೨೦೦ ವಿಮಾನಗಳನ್ನಾದರೂ ಇಟ್ಟುಕೊಳ್ಳುವುದು ಅಗತ್ಯವಂತೆ. ಮೂರನೆ ಮಹಾ ಯುದ್ಧವು ಎಟಮ್ ಬಾಂಬು ಮತ್ತು ರೋಗಾಣುಗಳ ಯುದ್ಧವಷ್ಟೆ? ವೈರಿ ವಿಮಾನಗಳು ತಮ್ಮ ರಾಷ್ಟ್ರದ ಹತ್ತಿರಕ್ಕೆ ಬಾರದಂತೆ ಮಾಡಲುಬೇಕಾದ ವಿಮಾನ ಬಲಬೇಕು. ಒಂದು ವೇಳೆ ವೈರಿ ವಿಮಾನ ಬಂದು ಹಾವಳಿ ಮಾಡಿದರ ಅದಕ್ಕೆ ನೂರ್ಮಡಿ ಹೆಚ್ಚಿನ ಹಾವಳಿಯನ್ನು ಅವರ ದೇಶದಲ್ಲಿ ಮಾಡುವ ಸಾಮರ್ಥ್ಯಬೇಕು. ಇದೆಲ್ಲದರಿಂದ ಮೂರನೆ ಯುದ್ಧವು ನಾವು ಎಣಿಸುವುದಕ್ಕಿಂತಲೂ ಬೇಗನೆ ಬಂದೊದಗಬಹುದೆಂದು ಕಾಣುತ್ತದೆ. ಹಾಗಾಗದಂತೆ ಯತ್ನಿಸುವುದಾದರೂ ಎಷ್ಟು ಅಗತ್ಯವೆಂದು ಪ್ರತ್ಯೇಕ ವಿವರಿಸಬೇಕಾಗಿಲ್ಲ.

ಜಿಲ್ಲೆಯಲ್ಲಿಯ ಆಹಾರ ಪರಿಸ್ಥಿತಿ

ಮದ್ರಾಸ್ ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿ ಕಷ್ಟವಾಗಿದೆ ಎಂಬುದು ಇತ್ತೀಚೆಗೆ ಸ್ಪಷ್ಟವಾಗುತ್ತಿದೆ. ಮಹಾತ್ಮಾ ಗಾಂಧಿಯವರು ನಿಧನಹೊಂದಿದ ಮೊದಲ ದಿನ ಈ ಕುರಿತು ಯೋಜನೆಮಾಡುತ್ತಿದ್ದರೆಂದೂ ತಮ್ಮ ಕಾರ್ಯದರ್ಶಿ ಪ್ಯಾರೇಲಾಲರಿಗೆ ನೌಕಾಲಿಯ ಕಾರ್ಯಕ್ರಮದಂತೆ ಮದ್ರಾಸಿನವರಿಗೆ ಅಗತ್ಯವುಳ್ಳ ಸೂಚನೆಗಳನ್ನು ಬರೆಯುವಂತೆ ಹೇಳಿದರೆಂದೂ ತಿಳಿದು ಬರುತ್ತದೆ. ಹೀಗೆ ತಯಾರಿಸಿದ ಸೂಚನೆಗಳು ಹರಿಜನ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಆಹಾರವೆಂದರೆ ಅಕ್ಕಿಯೊಂದೇ ಇಟ್ಟುಕೊಳ್ಳದೆ ಸಾಧ್ಯವಿರುವ ಆಹಾರವಸ್ತುಗಳನ್ನು ತಯಾರಿಸಿಕೊಂಡು ಉಪಯೋಗಿಸಿ ಸ್ವಾವಲಂಬನದಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕೆಂಬುದೇ ಈ ಸೂಚನೆಯ ಅಭಿಪ್ರಾಯವಿರುತ್ತದೆ.

ಕೇಂದ್ರ ಸರಕಾರದ ಆಹಾರ ಮಂತ್ರಿ ಮಾನ್ಯ ಶ್ರೀ ಜಯರಾಮದಾಸ ದೌಲತ್‌ರಾಮ್ ಇವರು ಮದ್ರಾಸನ್ನು ಇಲ್ಲಿಯ ಇತರ ಕೆಲವು ಪ್ರದೇಶಗಳನ್ನು ಸಂದರ್ಶಿಸಿ ಈಗಿನ ಕಠಿಣ ಪರಿಸ್ಥಿತಿಯನ್ನು ಚೆನ್ನಾಗಿ ನೋಡಿದ್ದು ಹೊರಗಿನಿಂದ ಸಾಧ್ಯವಿದ್ದ ಸಹಾಯ ಮಾಡುವುದಾಗಿ ಹೇಳಿಹೋಗಿದ್ದಾರೆ.

ಹೀಗೆ ಹೊರಗಿನವರು ನಮಗೆ ಸಾಧ್ಯವಿದ್ದ ಸಹಾಯವನ್ನೆಲ್ಲ ಒದಗಿಸುವ ವಿಷಯದಲ್ಲಿ ಸಂಶಯವಿಲ್ಲ. ಆದರೆ ಅವರು ಮಾಡಬಹುದಾದ ಸಹಾಯವು ಬಹಳ ಮಿತವಾದುದೆಂಬ ಬಗ್ಗೆಯೂ ಸಂಶಯವಿಲ್ಲ. ಆದುದರಿಂದಲೇ ಮದ್ರಾಸು ಸರಕಾರದವರು ರೇಶನಿಂಗ್ ಜಾರಿ ಇದ್ದಲ್ಲಿ ಆಹಾರದ ಮಿತಿಯನ್ನು ೧೨ ಔನ್ಸಿನಿಂದ ೮ ಔನ್ಸ್‌ಗಳಿಗೆ ತಗ್ಗಿಸಿದ್ದಾರೆ. ಸರಕಾರದವರು ಮಾಡಲು ಸಾಧ್ಯವಿದ್ದುದನ್ನೆಲ್ಲ ಮಾಡುವರೆಂಬ ಬಗ್ಗೆ ಕೂಡಾ ಅನುಮಾನಪಡಬೇಕಾಗಿಲ್ಲ.

ಆದರೆ ಈಗಿನ ಪರಿಸ್ಥಿತಿಯನ್ನು ಹೊರಗಿನ ಸಹಾಯದಿಂದ ಅಥವಾ ಸರಕಾರದವರ ಏರ್ಪಾಡಿನಿಂದ ಮಾತ್ರ ಸುಧಾರಿಸುವುದು ಕಷ್ಟಕಾಣುತ್ತದೆ. ನಮ್ಮ ಜನರ ವರ್ತನದ ಮೇಲೆ ನಮ್ಮ ಈ ಮಳೆಗಾಲದ ಭವಿಷ್ಯ ಬಹಳಮಟ್ಟಿಗೆ ಹೊಂದಿಕೊಂಡಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಮೊದಲನೆಯದಾಗಿ ನಮ್ಮಲ್ಲಿ ಶ್ರೀಮಂತರು ಆಹಾರ ಧಾನ್ಯಗಳಿಂದ ಹಣಮಾಡುವ ಹುಚ್ಚುತನ ಖಂಡಿತವಾಗಿಯೂ ಬಿಡಬೇಕು. ಕಾಸರಗೋಡು ತಾಲೂಕಿಗೆಂದು ಏರ್ಪಾಟು ಮಾಡಿಸಿ ಅಕ್ಕಿಯನ್ನು ಈ ಜಿಲ್ಲೆಯಿಂದ ಕಳ್ಳಾಟಿಕೆಯಲ್ಲಿ ಕೆಲವರು ಮಲಬಾರಿಗೆ ಕಳುಹಿಸಿ ಹಣಮಾಡಿರುವರೆಂದು ವದಂತಿ ಹಬ್ಬಿರುತ್ತದೆ. ಇದು ನಿಜವಾದರೆ ಅಂಥ ಕೆಲಸವು ಅಕ್ಷಮ್ಯ ಅಪರಾಧವೆಂದು ಹೇಳಲು ಅಡ್ಡಿಯಿಲ್ಲ.

ಹಳ್ಳಿಗಳಲ್ಲಿ ಈಗ ರೂ. ೨೫ಕ್ಕೆ ಕಡಿಮೆ ಕ್ರಯದಲ್ಲಿ ಅಕ್ಕಿ ಸಿಗುವುದಿಲ್ಲ. ಅದು ಸಹ ಇಡೀ ಮುಡಿಗಳನ್ನೇ ಕೊಂಡುಹೋಗಬೇಕು. ಸ್ವಂತ ಸಾಗುವಳಿ ಇಲ್ಲದ ಬಡಜನರು ನೋಡುವ ಕಾಲದ ಸೇರೆ ಹೊರೆಯುವರನ್ನು ಉಪವಾಸಹಾಕಿ ಹಣ ಮಾಡುವ ಈ ದುರ್ಬುದ್ಧಿ ನಮ್ಮ ಹಳ್ಳಿಗಳಲ್ಲಿ ಈಗ ಹೆಚ್ಚಾಗುತ್ತ ಬರುತ್ತಿರುವುದು ಹಿತಕಾರಿಯಲ್ಲ.

ಈಗಲೇ ಈ ಪರಿಸ್ಥಿತಿ ಬಂದಿರುವಾಗ ಮಳೆಗಾಲದಲ್ಲಿ ಏನಾದೀತೆಂದು ಯೋಚಿಸಿದರೆ ಭಯಾನಕವೆನಿಸುತ್ತದೆ. ಜಿಲ್ಲಾ ಅಧಿಕಾರಿಗಳು ಲೆವಿ ಪದ್ಧತಿ ಏರ್ಪಡಿಸಿ ಅಕ್ಕಿ ಸಂಗ್ರಹಿಸಿ ಅಲ್ಲಲ್ಲಿ ರಿಲೀಫ್ ಡಿಪೋಗಳನ್ನು ಮಾಡಿ ಅಕ್ಕಿ ಒದಗಿಸುವ ಏರ್ಪಾಡು ಮಾಡುತ್ತಿದ್ದಾರೆ. ಅಂದರೆ ಹಿಂದಿನ ರೇಶನ್ ಪದ್ಧತಿ ಹೊಸ ರೂಪದಲ್ಲಿ ಹಿಂದೆ ಬರುವಂತೆ ಕಾಣುತ್ತಿದೆ. ವರ್ಗದಾರರಿಗೆ ಇದು ಇಷ್ಟವೆ?

ತಮ್ಮ ತಮ್ಮ ಹಳ್ಳಿಗಳಲ್ಲಿ ಬಡವರಿಗೆ ಬೇಕಾಗುವಷ್ಟು ಅಕ್ಕಿಯನ್ನಾದರೂ ವರ್ಗದಾರರೂ ಸಾಹುಕಾರರೂ ಸೇರಿ ಸಂಗ್ರಹಿಸಿ ಕಡಮೆ ಕ್ರಯದಲ್ಲಿ ಒದಗಿಸುವ ಏರ್ಪಾಡನ್ನು ತಾವೇ ಮಾಡಬಾರದೇಕೆ? ಈ ಮೊದಲು ಇಂಥ ಏರ್ಪಾಡುಗಳು ನಮ್ಮ ಜಿಲ್ಲೆಯಲ್ಲಿ ನಡೆದಿವೆ. ಈ ಬಾರಿ ಮಾತ್ರ ಹೀಗೆ ಅಸಡ್ಡೆ ತೋರಿಸಲು ಕಾರಣವೇನು? ಬಡಜನರಿಗೆ ಬೇಕಾದರೆ ಸರಕಾರದವರೇ ಏರ್ಪಾಡು ಮಾಡಲೆಂಬ ಭಾವನೆ ಎಷ್ಟು ಮಾತ್ರಕ್ಕೂ ಸರಿಯಲ್ಲ. ಸರಕಾರದವರಾದರೂ ಎಲ್ಲಿಂದ ಅಕ್ಕಿ ತರಬೇಕು? ಅಕ್ಕಿ ಇದ್ದವರಿಂದ ಅವರು ಸಂಗ್ರಹಿಸಬೇಕಾಗುತ್ತದಷ್ಟೆ. ಇದಕ್ಕೆ ಬದಲು ತಾವಾಗಿ ಮುಂದೆ ಬಂದು ಈ ಕಾರ್ಯ ನಡೆಸಿದರೆ ಎಷ್ಟೋ ಹೆಚ್ಚಿನ ದಕ್ಷತೆಯಿಂದ ನಡೆಸಬಹುದು.

ಅಕ್ಕಿಯ ಕ್ರಯದ ಮೇಲೆ ಕಂಟ್ರೋಲ್ ಇದೆ. ಅಕ್ಕಿಯನ್ನು ಚಿಲ್ಲರೆ ಮಾರುವುದಕ್ಕೆ ಲೈಸೆನ್ಸ್ ಪಡೆಯಬೇಕು. ಅಂದರೆ ಕಂಟ್ರೋಲ್ ದರದಲ್ಲೆ ಒದಗಿಸಬೇಕಾಗುತ್ತದೆ. ಮುಡಿ ಒಂದರ ರೂ. ೨೫ರಂತೆ ಕ್ರಯ ಇರುವಾಗ ಕಂಟ್ರೋಲ್ ದರದಲ್ಲಿ ಚಿಲ್ಲರೆ ಮಾರಾಟ ಏರ್ಪಡಿಸುವುದು ಹೇಗೆ ಸಾಧ್ಯವೆಂಬುದೊಂದು ಪ್ರಶ್ನೆ ಮುಂದೆ ಬಂದಿದೆ.

ಇದರ ಅರ್ಥವೆಂದರೆ ರೂ ೨೫ರಲ್ಲಿ ಅಕ್ಕಿ ಪಡೆದು ರೂ ೨೬ ಕ್ರಯ ಸಿಕ್ಕುವಂತೆ ಅಂದರೆ ಲಾಗವಾಡು ಖರ್ಚಿಲ್ಲದೆ ಇತರ ಲಾಭ ಇಲ್ಲದೆ ಈ ಕಾರ್ಯ ಮಾಡಲು ಸಿದ್ಧರಿದ್ದವರು ಇದ್ದಾರೆ. ಆದರೆ ನಷ್ಟ ಹಾಕಿಕೊಂಡು ಕಂಟ್ರೋಲ್ ದರಕ್ಕೆ ಯಾರು ಕೊಟ್ಟಾರು? ಎಂಬುದೇ ಇರುತ್ತದೆ.

ಸರಕಾರದವರು ನಡುವೆ ಪ್ರವೇಶಿಸಿ ಲೆವ್ಹೀ ಮಾಡಿದರೆ ಅಕ್ಕಿ ಮುಡಿಗೆ ರೂ ೨೫ರಂತೆ ಕೊಡುತ್ತಾರೆಯೇ? ಅಕ್ಕಿ ಇದ್ದ ಶ್ರೀಮಂತರು ತಾವೇ ಸೇರಿ ತಮ್ಮ ಹಳ್ಳಿಯ ಬಡವರಿಗೆ ಎಷ್ಟು ಬೇಕಾಗುತ್ತದೆಂದು ನೋಡಿ ತಮ್ಮ ಅಕ್ಕಿಯನ್ನು ತಾವೇ ಕಡಮೆ ಕ್ರಯದಲ್ಲಿ ಒದಗಿಸಿ ಬಡ ಜನರ ಪ್ರೇಮ ವಿಶ್ವಾಸಗಳಿಗೆ ಪಾತ್ರರಾಗಬಾರದು.

ವಸ್ತುತಃ ಪ್ರತಿಯೊಬ್ಬ ಸಾಗುವಳಿದಾರನು ತನ್ನ ಸ್ವಂತ ಊಟದ ಮಟ್ಟಿಗೆ ಮಾತ್ರ ಅಕ್ಕಿ ಇಟ್ಟುಕೊಂಡು ಉಳಿದುದನ್ನು ಇತರರ ಊಟಕ್ಕಾಗಿ ಕಂಟ್ರೋಲ್ ದರದಲ್ಲಿ ಕೊಡಲು ಸಿದ್ಧನಿರಲೇ ಬೇಕು. ಇದರಲ್ಲಿ ಕಳ್ಳ ಸಂತೆ ಮಾಡಿ ಹಣ ಮಾಡಲು ಆಶಿಸುವುದು ಸರಿಯಲ್ಲ. ಇದನ್ನು ಸರಕಾರದವರು ಜಾರಿ ಮಾಡುವ ಬದಲು ತಾವೇ ಮಾಡಬೇಕೆಂಬುದು. ಮಾತ್ರ ಕಂಟ್ರೋಲು ತೆಗೆಯಬೇಕೆಂದು ಮಹಾತ್ಮಾ ಗಾಂಧಿಯವರು ವಾದಿಸಿದುದರ ಅರ್ಥವಲ್ಲದೆ ಕಂಟ್ರೋಲು ತೆಗೆಯುವುದರಿಂದ ವರ್ಗದಾರರಿಗಾಗಲಿ ಸಾಹುಕಾರರಿಗಾಗಲಿ ಹಣ ಮಾಡಲು ಹೆಚ್ಚಿನ ಅನುಕೂಲತೆ ಸಿಗಬೇಕೆಂಬುದು ಅವರ ಉದ್ದೇಶವಿರಲಿಲ್ಲವೆಂದು ಬೇರೆ ಹೇಳಬೇಕೆ?

ಕಂಟ್ರೋಲು ತೆಗೆದರೆ ನಮ್ಮ ಜನರು ನ್ಯಾಯದಲ್ಲಿಯೇ ವರ್ತಿಸದೆ ಇರಲಿಕ್ಕಿಲ್ಲವೆಂಬ ವಿಶ್ವಾಸದಿಂದ ಗಾಂಧೀಜಿಯವರು ಕಂಟ್ರೋಲುಗಳನ್ನು ತೆಗೆಸಿದರು. ಅವರ ವಿಶ್ವಾಸ ನಿರರ್ಥಕವಾಗುವಂತೆ ನಮ್ಮ ನಮ್ಮ ಜನರು ವರ್ತಿಸುವುದು ನ್ಯಾಯವೇ?

ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲಿಯೂ ಬಡಜನರಿಗೆ ಅಕ್ಕಿಯನ್ನು ಕಂಟ್ರೋಲ್ ದರದಲ್ಲಿ ಜನರೇ ಒದಗಿಸುವ ಏರ್ಪಾಡನ್ನು ಕೂಡಲೇ ಕೈಕೊಳ್ಳಬೇಕಾಗಿದೆ.

ಧರ್ಮ ವೈದ್ಯಾಶ್ರಮದ ವರ್ಧಂತಿ

ಗುರುಪುರದ ಶ್ರೀ ಪರಮೇಶ್ವರಿ ಧರ್ಮ ವೈದ್ಯಾಶ್ರಮದ ವಾರ್ಷಿಕೋತ್ಸವವು ನಮ್ಮ ಮುನ್ಸಿಪಲ್ ಕೌನ್ಸಿಲ್ ಉಪಾಧ್ಯಕ್ಷ ಶ್ರೀ|| ಗಂಗಾಧರದಾಸ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಆಸುಪಾಸಿನ ಗ್ರಾಮಸ್ಥರು ನೆರೆದಿದ್ದರು. ನಮ್ಮ ಜಿಲ್ಲಾ [illegible] ಅಧ್ಯಕ್ಷರಾದ ಕೃಷ್ಣಮೂಸೆ ಅವರು ಧ್ವಜಾರೋಹಣ ಮಾಡಿದರು. ಆಶ್ರಮದ ಸ್ಥಾಪಕ ಡಾ|| ಆತ್ಮಾರಾಮರವರು ವರದಿಯೋದಿದರು. ಇವರ ಚಿಕಿತ್ಸೆಯಿಂದ ಗುಣಪಡೆದ ಶ್ರೀ|| ಎಸ್. ಬಿ. ಬಂಟ್ವಾಳ್ ಅವರು ಡಾಕ್ಟರರ ಪಾಂಡಿತ್ಯದ ಮೆಚ್ಚುಗೆಯಾಗಿ ಕೊಟ್ಟ ಚಿನ್ನದ ಪದಕವನ್ನು ಅಧ್ಯಕ್ಷರು ಅವರಿಗೆ ಕೊಟ್ಟು ಗೌರವಿಸಿದರು. ಈ ವೈದ್ಯಾಶ್ರಮದ ಆದರ್ಶವನ್ನು ಎಲ್ಲರೂ ಅನುಸರಿಸಬೇಕೆಂದು ಅಧ್ಯಕ್ಷರು ಭಿನ್ನವಿಸಿದರು.

ಸ್ವದೇಶಾಭಿಮಾನಿ

ತಾರೀಕು 5—3—1948

ಕೇಂದ್ರ ಸರಕಾರದ ಆಯುವ್ಯಯ

ಕೇಂದ್ರ ಸರಕಾರದ ಅರ್ಥಸಚಿವರಾದ ಮಾನ್ಯ ಶ್ರೀ ಕೆ.ಆರ್. ಶಣ್ಮುಗಂ ಚೆಟ್ಟಿಯಾರರು ೧೯೪೮–೪೯ನೇ ವರ್ಷದ ಭಾರತ ಸರಕಾರದ ಆಯುವ್ಯಯದ ಅಂದಾಜಿನ ತಖ್ತೆಯನ್ನು ಕೇಂದ್ರ ಶಾಸನ ಸಭೆಯ ಮುಂದಿಟ್ಟು, ಆಯುವ್ಯಯಗಳ ತಮ್ಮ ಸೂಚನೆಗಳನ್ನು ವಿವರಿಸಿ ಅವೆಲ್ಲವನ್ನು ಜಾರಿಗೆ ತಂದರೆ ರೂ. ೨೩೬.೨೮ ಕೋಟಿ ಆಯ ಮತ್ತು ರೂ. ೨೫೭-೩೭ ಕೋಟಿ ವ್ಯಯ ಅಂದರೆ ರೂ. ೧.೦೯ ಕೋಟಿ ಕಡಮೆ ಬೀಳುವ ಅಂಕೆ ಸಂಖ್ಯೆಗಳನ್ನು ಕೊಟ್ಟರು

ಕೈಗಾರಿಕೆಗಳ ಉತ್ಪತ್ತಿ ಹೆಚ್ಚಿಸುವುದು ಈಗಿನ ಪ್ರಧಾನ ಆವಶ್ಯಕತೆ ಎಂಬುದರಿಂದ ವ್ಯಾಪಾರೀ ಲಾಭಾಂಶ ತೆರಿಗೆಯ ದರವನ್ನು ಶೇಕಡಾ 16⅔ರಿಂದ ಶೇಕಡಾ ೧೦ಕ್ಕೆ ಇಳಿಸಿರುವದು ಮಾತ್ರವಲ್ಲ ತೆರಿಗೆ ಹೊರಿಸುವ ಲಾಭಾಂಶದ ಮಿತಿಯನ್ನೂ ಏರಿಸಲಾಗಿದೆ. ಇದೇ ರೀತಿ ಸುಪರ್‌ಟೇಕ್ಸ್ ಹೊರಿಸುವ ಮಿತಿಯನ್ನು ಕೂಡಾ ಏರಿಸಲಾಗಿದೆ ಅಂದರೆ 3½ ಲಕ್ಷದ ತನಕ ತೆರಿಗೆ ಹೊರಿಸುವುದಿಲ್ಲ.

ಕಂಪೆನಿಗಳಲ್ಲಿ ವಿಭಜಿಸದ ಲಾಭಾಂಶಗಳಿಗೆ ರೂಪಾಯಿಗೆ ಒಂದಾಣೆಯಂತೆ ತೆರಿಗೆ ಕಡಮೆಮಾಡಲಾಗಿದೆ ರೂ ೨೫,೦೦೦ಕ್ಕೆ ಕಡಿಮೆ ಆದಾಯದ ಕಂಪೆನಿಗಳಿಗೆ ಆದಾಯ ತೆರಿಗೆಯ ದರ ಈಗ ಇದ್ದುದಕ್ಕಿಂತ ಅರೆವಾಸಿಗೆ ಇಳಿಸಲಾಗಿದೆ

ಈ ರೀತಿ ಕೈಗಾರಿಕಗಳಲ್ಲಿ ಅಥವಾ ದೊಡ್ಡ ವ್ಯಾಪಾರ ವಹಿವಾಟುಗಳಲ್ಲಿ ಆದಷ್ಟು ಕಡಮೆಮಾಡಿ ಹೆಚ್ಚಿನ ಪ್ರೋತ್ಸಾಹ ಸಿಕ್ಕುವಂತೆ ಯತ್ನಿಸಲಾಗಿದೆ.

ಗಿರಣಿ ಬಟ್ಟೆ ಮತ್ತು ನೂಲುಗಳನ್ನು ರಫ್ತುಮಾಡುವಾಗ ಹೊರಿಸುವ ಸುಂಕ ಶೇಕಡಾ ೨೫ಕ್ಕೆ ಇರಿಸಲಾಗಿದೆ ಕೈಮಗ್ಗದ ಬಟ್ಟೆ ನೂಲುಗಳ ಮೇಲೆ ಇದನ್ನು ಹೊರಿಸುವುದಿಲ್ಲ.

ಅಡಿಕೆ ಮೇಲಿನ ಸುಂಕ ತೆಗೆದುಹಾಕಲಾಗಿದೆ

ಎಣ್ಣೆ ತೆಗೆಯಬಹುದಾದ ಬೀಜಗಳನ್ನು ರಫ್ತುಮಾಡುವಾಗ ಟನ್ನಿಗೆ ರೂಪಾಯಿ ೮೦ ಸುಂಕ, ವನಸ್ಪತಿ ಎಣ್ಣೆಗಳ ಮೇಲೆ ಟನ್ನಿಗೆ ರೂಪಾಯಿ ೨೦೦ ಸುಂಕ ಮತ್ತು ಮೆಂಗನೀಸ್ ಎಂಬುದರ ಮೇಲೆ ಟನ್ನಿಗೆ ರೂ. ೨೦ ಹೀಗೆ ರಫ್ತುಗಳ ಮೇಲೆ ಸುಂಕ ಹೆಚ್ಚಿಸಲಾಗಿದೆ.

ಚಾ ಮತ್ತು ಕಾಫಿಗಳ ಮೇಲಿನ ಎಕ್ಸೈಜ್ ಸುಂಕವನ್ನು ರಾತ್ಲಿಗೆ ಎರಡು ಆಣೆಗಳಿಂದ ನಾಲ್ಕು ಆಣೆಗೆ ಏರಿಸಲಾಗಿದೆ.

ವನಸ್ಪತಿಗಳ ಮೇಲಿನ ಸುಂಕ ಶೇಕಡಾ ೫೦ರಂತೆ ಹೆಚ್ಚಿಸಿ ಹಂಡ್ರೆಡ್‌ವೈಟಿಗೆ ರೂ. ೭-೮-೦ರಂತೆ ಹೊರಿಸಲಾಗುವುದು.

ಹುರಿಹಗ್ಗಗಳ ಮೇಲಿನ ಸುಂಕ ಶೇಕಡಾ ೫೦ರಷ್ಟು ಏರಿಸಲಾಗಿದೆ. ಬೆಂಕಿ ಪೆಟ್ಟಿಗೆಗಳ ಮೇಲೆ ಪುನಃ ಹಿಂದಿನ ದರದ ಅಂದರೆ ಗ್ರೋಸಿಗೆ ರೂ. ೨-೮-೦ರಷ್ಟು ಸುಂಕ ಹಾಕಲಾಗುತ್ತದೆ.

ಟ್ರಂಕ್ ಟೆಲಿಫೋನಿನ ಉಪಯೋಗದ ಮೇಲೆ ಶೇಕಡಾ ೪೦ರಿಂದ ೭೦ರ ತನಕ ಸುಂಕ ಹಾಕಿ ಇದನ್ನು ದರಗಳಿಗೇನೆ ಸೇರಿಸಲಾಗುತ್ತದೆ.

ಆಮದುಗಳ ಪೈಕಿ ಮೋಟರು ಕಾರುಗಳ ಮೇಲೆ ಸುಂಕವನ್ನು ಶೇಕಡಾ ೪೫ರಿಂದ ೫೦ರಕ್ಕೆ ಹೆಚ್ಚಿಸಲಾಗಿದೆ. ಯುನೈಟೆಡ್‌ಕಿಂಗ್ಡಮ್ ಅಂದರೆ ಇಂಗ್ಲಾಂಡು ಮೊದಲಾದ ಪ್ರಾಂತ್ಯಗಳಿಂದ ತರಿಸುವವರಿಗೆ ಶೇಕಡಾ 7½ಯಷ್ಟು ರಿಯಾಯತಿ ಇಡಲಾಗಿದೆ.

ಸಿಗರೇಟುಗಳ ಮೇಲೆ ಕಾರಖಾನೆ ಕ್ರಯದ ಶೇಕಡಾ ೨೫ರಷ್ಟು ಸುಂಕ ಹಾಕಲಾಗುತ್ತದೆ. ಆಮದು ಸುಂಕನ್ನು ಕ್ರಯ ಇಷ್ಟಕ್ಕೇ ನಿಲ್ಲುವಂತೆ ಏರಿಸಲಾಗಿದೆ ಹೊಗೆಸೊಪ್ಪಿನ ಮೇಲಿನ ಸುಂಕವನ್ನು ಕೆಲವು ಮಾದರಿಗಳ ಮೇಲೆ ರಾತ್ಲಿಗೆ ೯ ಆಣೆಯಿಂದ ೧೨ಆಣೆಗಳಿಗೂ ಅಗ್ಗದ ಇತರ ಕೆಲವು ಮಾದರಿಗಳ ಮೇಲೆ ೩ ಆಣೆಗಳಿಂದ ೪ ಆಣೆಗಳಿಗೂ ಏರಿಸಲಾಗಿದೆ.

ಟಪ್ಪಾಲು ರಿಜಿಸ್ಟ್ರೀ ಫೀಸನ್ನು ೩ ಆಣೆಗಳಿಂದ ನಾಲ್ಕು ಆಣೆಗಳಿಗೆ ಏರಿಸಲಾಗಿದೆ.

ಕೊನೆಯದಾಗಿ ಆಸ್ತಿಗಳ ಮೇಲೆ ಒಂದು ಸುಂಕ ಹಾಕುವ ಕುರಿತು ಒಂದು ಮಸೂದೆಯನ್ನು ಶಾಸನ ಸಭೆಯ ಇದೇ ಅಧಿವೇಶನದಲ್ಲಿ ಮುಂದೆ ತರುವುದಾಗಿ ಹೇಳಲಾಗಿದೆ

ಇಷ್ಟೆಲ್ಲ ಬದಲಾವಣೆಗಳನ್ನು ಜಾರಿಗೆ ತಂದ ಮೇಲೆ ಬರೇ ಒಂದು ಕೋಟಿ ರೂಪಾಯಿಗಳ ಮಟ್ಟಿಗೆ ಆಯಕ್ಕಿಂತ ವ್ಯಯವು ಅಧಿಕ ನಿಲ್ಲುತ್ತದೆ ಪಾಕಿಸ್ತಾನಕ್ಕೆ ನಾವು ಕೊಟ್ಟಿರುವ ಸಾಲಕ್ಕೆ ಬಡ್ಡಿ ವಸೂಲಾದರೆ ಈ ಕಮಿಮೆಯಾಗುವ ಅಂಶ ಅಲ್ಲಿಂದಲ್ಲಿಗೆ ಭರ್ತಿಯಾಗುತ್ತದಂತೆ.

ಉತ್ತರ ಹಿಂದುಸ್ಥಾನದ ನಿರಾಶ್ರಿತರ ಬಗ್ಗೆ ಖರ್ಚು, ಆಹಾರಗಳನ್ನು ಪರದೇಶಗಳಿಂದ ತರಿಸಿ ಇಲ್ಲಿ ಕಡಿಮೆ ಕ್ರಯಕ್ಕೆ ಒದಗಿಸಲು ತಗಲುವ ಖರ್ಚು ಇವೆಲ್ಲ ಮುಂದೆ ಅಗತ್ಯಬೀಳುವ ಖರ್ಚುಗಳಲ್ಲದಿದ್ದರೂ ಈಗ ಒದಗಿಸದೆ ನಿವೃತ್ತಿಯಿಲ್ಲ ಇದೇ ರೀತಿ ಸೈನ್ಯ ಮೊದಲಾದ ರಕ್ಷಣಾಖಾತೆಯ ಬಗ್ಗೆ ಖರ್ಚನ್ನು ಸ್ವಲ್ಪ ಹೆಚ್ಚಿಸಿ ರೂಪಾಯಿ ೧೨೧ ಕೋಟಿಯಷ್ಟು ಇಡಲಾಗಿದೆ ಈಗಿನ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿ ಬಂದಿದೆ ಎಂಬುದೇ ಸರಕಾರದ ಅಭಿಪ್ರಾಯ.

ಇವೆಲ್ಲ ತೊಂದರೆಗಳಿದ್ದರೂ ಯುದ್ಧಾನಂತರದ ಅಭಿವೃದ್ಧಿ ಯೋಜನೆಗಳನ್ನು ಬಿಟ್ಟು ಬಿಡಲಿಲ್ಲ. ಇವುಗಳಿಗೆ ಅಗತ್ಯಬೀಳುವ ಹಣ ಒದಗಿಸಲಾಗಿದೆ.

ಕೇಂದ್ರ ಸರಕಾರದಿಂದ ಪ್ರಾಂತಿಕ ಸರಕಾರಗಳಿಗೆ ಸಹಾಯಧನ ಒದಗಿಸಲು ರೂಪಾಯಿ ೩೧ ಕೋಟಿಗಳನ್ನು ಪ್ರತ್ಯೇಕಿಸಿಡಲ್ಪಾಗಿದೆ.

ಈ ಆಯುವ್ಯಯದ ಅಂದಾಜಿನಲ್ಲಿ ಶ್ರೀಮಂತರ ಮೇಲಿನ ತೆರಿಗೆ ಸ್ವಲ್ಪ ಕಡಿಮೆ ಮಾಡಿರುವುದರಿಂದ ಈ ಧೋರಣೆ ಬಂಡವಾಳಗಾರರ ಹಿತಧೋರಣೆಯೆಂದು ದೂರುವುದು ಸರಿಯಲ್ಲ. ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟು ಅವುಗಳ ಉತ್ಪತ್ತಿ ಹೆಚ್ಚಾಗುವಂತೆ ಈಗ ಪ್ರಯತ್ನಿಸುವುದು ಇಡೀ ಜನಾಂಗದ ಹಿತಕ್ಕಾಗಿ ಅತ್ಯಾವಶ್ಯಕ ವಿಷಯವಿರುತ್ತದೆ

ಕಾಫಿ, ಚಾ, ಸಿಗರೇಟು, ಹೊಗೆಸೊಪ್ಪು ಹಾಗೂ ಬಂಕಿಪೆಟ್ಟಿಗೆಗಳ ಕ್ರಯ ಜಾಸ್ತಿಯಾಗುತ್ತದೆಂಬುದು ನಿಜ ಇವು ಅತ್ಯಾವಶ್ಯಕ ವಸ್ತುಗಳೇನೂ ಅಲ್ಲ. ಇವುಗಳ ಉಪಯೋಗ ಕಡಿಮೆಯಾದರೆ ಯಾರಿಗೂ ಹಾನಿಯಿಲ್ಲ ಹಣ ಕೊಟ್ಟು ಉಪಯೋಗಿಸುವವರು ಸರಕಾರಕ್ಕೂ ಒಂದಂಶ ಹೆಚ್ಚಿಗೆ ಕೊಟ್ಟರೆ ಅದರಲ್ಲಿ ದೋಷವಿಲ್ಲ.

ರಾಷ್ಟ್ರಹಿತದ ದೃಷ್ಟಿಯಿಂದ ಈಗಿನ ಸ್ಥಿತಿಗತಿಗೆ ಸರಿಯಾಗಿ ಅರ್ಥಸಚಿವರು ತಮ್ಮ ಆಯುವ್ಯಯಗಳನ್ನು ರೂಪಿಸಿದ್ದಾರೆಂದರೆ ತಪ್ಪೇನೂ ಇರುವುದಿಲ್ಲ

ಸ್ವರಾಜ್ಯ ಸಿಕ್ಕಿತು ಮುಂದಿನ ಜೀವನ ಸ್ವತಂತ್ರವಾಗಿ ರೂಪಿಸಿಕೊಳ್ಳುವ ಹಕ್ಕು ನಮ್ಮ ಕೈಗೇನೇ ಬಂದಿದೆ. ಆದರೆ ಸರ್ವಜನರ ಜೀವನದ ಮಟ್ಟವನ್ನು ಏರಿಸಿ ಎಲ್ಲರೂ ಸುಖದಲ್ಲಿ ಬಾಳಬೇಕೆಂಬ ಸ್ವರಾಜ್ಯದ ಉದ್ದೇಶ ಸಾಧಿಸುವುದು ಅಷ್ಟು ಸುಲಭವಲ್ಲ ಪರ್ವತವನ್ನು ಏರುವವನು ತುದಿಗೆ ಮುಟ್ಟಿದಾಗ ಇನ್ನು ಏರಬೇಕಾದ ಉನ್ನತ ಶ್ರೇಣಿ ಅವನ ಕಣ್ಣೆದುರು ಕಾಣುವಂತೆ ಸ್ವರಾಜ್ಯ ಸಿಕ್ಕಿತು ಆದರೆ ಮುಂದೆಯೂ ಸಾಧಿಸತಕ್ಕ ಕಾರ್ಯ ಇನ್ನೂ ಕಠಿಣದ್ದು ಇರುತ್ತದೆ ಎಂದು ಮಾನ್ಯ ಚೆಟ್ಟಿಯಾರರು ಚೆನ್ನಾಗಿ ವರ್ಣಿಸಿದ್ದಾರೆ ಕೊನೆಗೆ ಮುಂದಿನ ಇಡೀ ಹಾದಿ ನಾವು ಈಗಲೇ ಕಾಣುವುದಿಲ್ಲ. ಒಂದು ಹೆಜ್ಜೆ ಸರಿಯಾಗಿ ಇಡಲು ದಾರಿ ಕಂಡರೆ ಸಾಕು ಮುಂದಿನ ದಾರಿಯಲ್ಲಿ ದೇವರೇ ನಮ್ಮನ್ನು ನಡೆಸಲೆಂದು ಮಹಾತ್ಮಾಗಾಂಧಿಯವರು ಹಾಡುತ್ತಿದ್ದ ಆಂಗ್ಲ ಪ್ರಾರ್ಥನಾ ಗೀತೆಯೊಡನೆ ಶ್ರೀ ಚೆಟ್ಟಿಯಾರರು ತಮ್ಮ ಎರಡು ಗಂಟೆಗಳ ಭಾಷಣ ಮುಗಿಸಿದ್ದಾರೆ

ಇಷ್ಟು ದಕ್ಷತೆಯಿಂದ ಈ ಕಾರ್ಯವನ್ನು ಪೂರೈಸಿದಬಗ್ಗೆ ಮಾನ್ಯ ಶ್ರೀ ಚೆಟ್ಟಿಯಾರರನ್ನು ಅಖಿಲ ಭಾರತವು ಅಭಿನಂದಿಸುವುದು ಮಾತ್ರವಲ್ಲ ಇವರ ಕುರಿತು ದಕ್ಷಿಣ ಭಾರತವು ವಿಶೇಷ ಅಭಿಮಾನ ತಾಳುವುದೆಂಬ ಬಗ್ಗೆ ಸಂಶಯವಿಲ್ಲ

ಆಸವ, ಅರಿಷ್ಟಗಳು

ಇವನ್ನು ಮದ್ಯನಿಷೇಧಾಜ್ಞೆಯಿಂದ ಹೊರಪಡಿಸುವ ಕುರಿತು ಮದ್ರಾಸ್ ಸರಕಾರದವರು ಪರ್ಯಾಲೋಚಿಸುತ್ತಿರುವುದಾಗಿ ದಕ್ಷಿಣಕನ್ನಡ ಜಿಲ್ಲಾ ದೇಶೀ ವೈದ್ಯ ಸಂಘದವರಿಗೆ ತಿಳಿಸಲ್ಪಟ್ಟಿದೆ.

ಟೀಕೆ-ಟಿಪ್ಪಣಿಗಳು

ಭಾವೀ ರಾಷ್ಟ್ರ ಘಟನೆ

ಭಾರತ ಸರಕಾರದ ರಾಷ್ಟ್ರೀಯ ಘಟನೆಯನ್ನು ಬರೆಯುವುದಕ್ಕಾಗಿ ಘಟನಾಸಮಿತಿಯವರು ಡಾಕ್ಟರ್ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ನೇಮಿಸಿದ್ದರು. ಈ ಸಮಿತಿಯವರು ಘಟನೆಯನ್ನು ಬರೆದು ಘಟನಾಸಮಿಯ ಅಧ್ಯಕ್ಷರ ಕೈಗೆ ಒಪ್ಪಿಸಿದ್ದು ಅದು ಪ್ರಕಟವಾಗಿರುತ್ತದೆ.

ಘಟನಾಸಮಿತಿಯವರು ಮಂಜೂರು ಮಾಡಿದ ನಿರ್ಣಯಗಳನ್ನೆಲ್ಲ ಅನುಸರಿಸಿ ಇದನ್ನು ತಯಾರಿಸಲಾಗಿದೆಯೆಂಬುದರಿಂದ ಇದರಲ್ಲಿ ಹೊಸ ವಿಷಯವೇನೂ ಬಂದಿಲ್ಲ

ಪ್ರಾಂತಿಕ ಗವರ್ನರರನ್ನು ಇಡೀ ಪ್ರಾಂತ್ಯದ ಮತದಾನದಿಂದ ಚುನಾಯಿಸುವ ಬದಲು ಶಾಸನ ಸಭಾಸದರು ಆರಿಸುವ ಕೆಲವರೊಳಗಿಂದ ಕೇಂದ್ರ ಸರಕಾರದ ಪ್ರಸಿಡೆಂಟರೇ ಇವರನ್ನು ನೇಮಿಸುವುದು ಯುಕ್ತವೆಂದು ಸೂಚಿಸಲಾಗಿದೆ ಪ್ರಾಂತ್ಯದ ಮುಖ್ಯಮಂತ್ರಿ ಮೊದಲಾದ ಮಂತ್ರಿಮಂಡಲ ಪ್ರಜೆಗಳೆಲ್ಲರ ಮತದಾನದಿಂದ ಚುನಾವಣೆಯಾಗುವುದರಿಂದ ಅವರೇ ಚುನಾಯಿಸುವ ಗವರ್ನರರು ಕೂಡಾ ಇರುವುದು ಉಚಿತವಲ್ಲವೆಂಬುದು ನಿಜ ಮಾತ್ರವಲ್ಲ ಪ್ರಾಂತ್ಯದ ಗವರ್ನರರಿಗೆ ಇರುವ ವಿಶೇಷಾಧಿಗಳ ಜವಾಬ್ದಾರಿ ಕೇಂದ್ರ ಸರಕಾರ ಹೊರುವುದೇ ಯುಕ್ತವೆಂಬುದರಿಂದ ಇಂಥ ಗವರ್ನರರನ್ನು ನೇಮಿಸುವುದರಲ್ಲಿ ಕೇಂದ್ರ ಸರಕಾರಕ್ಕೂ ಒಂದು ಬಗೆ ಸಲ್ಲಬೇಕೆಂಬುದು ನಿರ್ವಿವಾದ ಈ ಉಪಸಮಿತಿಯ ಈ ಸೂಚನೆಯನ್ನೇ ಮಂಜೂರು ಮಾಡಬಹುದಾಗಿ ಹಾರೈಸುತ್ತೇವೆ

ಘಟನಾ ಸಮಿತಿಗೆ ಒಪ್ಪಿಸಿದ ಈ ವರದಿಯಲ್ಲಿ ಆಂಧ್ರ ಪ್ರಾಂತ್ಯ ರಚನೆಯ ಮಾತು ಕೂಡಾ ಬಂದಿದೆ ಘಟನೆಯ ಶೆಡ್ಯೂಲಿನಲ್ಲಿ ಕಾಣಿಸುವ ಪ್ರಾಂತ್ಯಗಳ ಪಟ್ಟಿಯಲ್ಲಿ ಆಂಧ್ರ ಪ್ರಾಂತ್ಯದ ಹೆಸರು ಹಾಕಿದರೆ ಸಾಲದು ೧೯೩೬ರಲ್ಲಿ ಒರಿಸ್ಸದ ವಿಚಾರ ನಡೆಸಿದಂತೆ ಪ್ರಾಂತವನ್ನು ಮೊದಲೇ ಸ್ಥಾಪಿಸುವುದರಿಂದ ಮಾತ್ರ ಹೊಸ ಘಟನೆಯಲ್ಲಿ ಪ್ರಾಂತ್ಯವನ್ನು ಸೇರಿಸಲು ಸಾಧ್ಯ. ಆದುದರಿಂದ ಇದಕ್ಕೆ ಬೇಕಾಗುವ ಗಡಿ ನಿರ್ಣಯ ಸಮಿತಿಯನ್ನು ಸರಕಾರದವರು ಈಗಲೇ ನೇಮಿಸಬೇಕೆಂದು ಸೂಚಿಸಲಾಗಿದೆ

ಹೊಸ ಘಟನೆಯೊಡನೆಯೇ ಆಂಧ್ರ ಪ್ರಾಂತ್ಯವೂ ಜಾರಿಗೆ ಬರುತ್ತದೆಂಬ ಶ್ರೀ ಟಿ. ಪ್ರಕಾಶಮಾರ ಮಾತಿಗೆ ಇದರಿಂದ ಪುಷ್ಟಿ ದೊರೆತಿದೆ

ಉಳಿದ ಭಾಷಾವಾರು ಪ್ರಾಂತ್ಯಗಳು ಯಾವಾಗ ಬರುವವು? ಇವೆಲ್ಲವುಗಳ ಬಗ್ಗೆ ಗಡಿ ನಿರ್ಣಯ ಕಮಿಟಿ ನೇಮಿಸಲು ಈಗ ಸಾಧ್ಯವಿದೆಯೇ? ಈ ಪ್ರಶ್ನೆಗಳನ್ನು ಕೇಂದ್ರ ಸರಕಾರವು ಸರಿಯಾಗಿ ವಿಚಾರಿಸುತ್ತದೆಂದು ಹಾರೈಸಲು ಅಡ್ಡಿಯಿಲ್ಲ.

ಮಹಾತ್ಮಾಗಾಂಧಿಯವರು ಹೇಳಿದಂತೆ ನಮ್ಮ ಮುಂದಾಳುಗಳು ಸೇರಿ ಗಡಿ ನಿರ್ಣ

ಯಗಳನ್ನು ತಾವೇ ಮಾಡಿದ್ದಲ್ಲಿ ಈ ಪ್ರಶ್ನೆಯು ಯಾವ ತೊಂದರೆಯೂ ಇಲ್ಲದೆ ನಿವೃತ್ತಿಯಾಗುತ್ತಿತ್ತು.

ಈಗ ರೂಪಿಸಲಾದ ಘಟನೆಯು ಪೂರ್ಣ ಪ್ರಜಾಸತ್ತಾತ್ಮಕವಿರುತ್ತದೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ.

ಇಡೀ ಪ್ರಾಂತ್ಯದಲ್ಲಿ ಪಾನನಿರೋಧ

ಮದ್ರಾಸು ಸರಕಾರದ ಆಯವ್ಯಯ ಅಂದಾಜನ್ನು ಇಲ್ಲಿಯ ಶಾಸನ ಸಭೆಯ ಮುಂದೆ ನಮ್ಮ ಅರ್ಥ ಸಚಿವ ಮಾನ್ಯ ಶ್ರೀ ಬಿ. ಗೋಪಾಲ ರೆಡ್ಡಿಯವರು ಇಟ್ಟಿದ್ದು ಈಗ ಅದರ ವಿಚಾರ ನಡೆಯುತ್ತಿದೆ.

ಇದರಲ್ಲಿಯ ಮುಖ್ಯ ವಿಚಾರವೆಂದರೆ ಬರುವ ಅಕ್ಟೋಬರ ತಾ ೧ರಿಂದ ಇಡೀ ಪ್ರಾಂತ್ಯದಲ್ಲಿ ಮದ್ಯಪಾನ ನಿರೋಧವನ್ನು ಜಾರಿಗೆ ತರಲು ಸರಕಾರದವರು ನಿರ್ಧರಿಸಿದ್ದೇ ಇರುತ್ತದೆ. ಈಗ ೧೬ ಜಿಲ್ಲೆಗಳಲ್ಲಿ ಪಾನನಿರೋಧ ಜಾರಿಗೆಬಂದಿದೆ. ಅಕ್ಟೋಬರದಿಂದ ಉಳಿದ ೮ ಜಿಲ್ಲೆಗಳಲ್ಲಿಯೂ ಮದ್ರಾಸ್ ಪಟ್ಟಣದಲ್ಲಿಯೂ ಇದು ಜಾರಿಗೆ ಬರುವುದು.

ಹೀಗೆ ಇಡೀ ಪ್ರಾಂತ್ಯದಲ್ಲಿ ಇದನ್ನು ಧೈರ್ಯದಿಂದ ಮುಂದೊತ್ತುವ ಸಾಹಸವನ್ನು ಕೈಕೊಂಡ ಬಗ್ಗೆ ಮದ್ರಾಸ್ ಸರಕಾರಕ್ಕೆ ನ್ಯಾಯವಾದ ಅಭಿನಂದನಗಳನ್ನು ಅರ್ಪಿಸಬೇಕು. ಈ ಕಾರ್ಯಕ್ರಮದಿಂದ ೧೮ ಕೋಟಿಯಷ್ಟು ಹಣ ಸರಕಾರಕ್ಕೆ ನಷ್ಟವಾಗುತ್ತದೆ. ಆದರೂ ಈಗಿನ ಆಯವ್ಯಯದಿಂದ ಕಂಡು ಬರುವಂತೆ ನಮ್ಮ ಸರಕಾರವಾದರೂ ದಿವಾಳಿ ಪರಿಸ್ಥಿತಿಗೆ ಬಂದಿಲ್ಲವೆಂಬುದು ಅತ್ಯಂತ ಸಮಾಧಾನದ ವಿಷಯ.

ಬಂಗಾಳದ ಗವರ್ನರರಾಗಿರುವ ಚಕ್ರವರ್ತಿ ರಾಜಗೋಪಾಲಾಚಾರ್ಯರು ಈ ಕುರಿತು ಮದ್ರಾಸು ಸರಕಾರವನ್ನು ಅಭಿನಂದಿಸಿ ಕಳುಹಿಸಿದ ಸಂದೇಶದಲ್ಲಿ ಇಡೀ ಪ್ರಾಂತ್ಯದಲ್ಲಿ ಮದ್ಯನಿರೋಧವನ್ನು ಸಾಧಿಸುವ ಸುಧಾರಣೆಯೆಂಬುದು ಮಹಾತ್ಮಾ ಗಾಂಧಿಯವರಿಗೆ ಯೋಗ್ಯವಾದ ಸ್ಮಾರಕವೆಂದು ತಿಳಿಯಲ್ಪಡಲೆಂದಿದ್ದಾರೆ.

ಸರಕಾರಕ್ಕೆ ೧೮ ಕೋಟಿ ರೂಪಾಯಿ ನಷ್ಟವಾದರೆ ಪ್ರಜೆಗಳಿಗೆ ಅದರಲ್ಲೂ ಬಡವರುಗಳಿಗೆ ಇದಕ್ಕೆ ಸಾಮಾನ್ಯ ನಾಲ್ಕು ಪಾಲಷ್ಟು ಅಂದರೆ ಸುಮಾರು ಎಪ್ಪತ್ತೆರಡು ಕೋಟಿ ರೂಪಾಯಿಗಳಷ್ಟು ಉಳಿತಾಯವೆನ್ನಲು ಅಡ್ಡಿಯಿಲ್ಲ. ಸರಕಾರವು ಇನ್ನಾವ ಅಭಿವೃದ್ಧಿಯ ಕಾರ್ಯಕ್ರಮದಿಂದಲೂ ಪ್ರಜೆಗಳಿಗೆ ಇಷ್ಟೊಂದು ಉಪಕಾರ ಮಾಡುವುದು ಸಾಧ್ಯವಿಲ್ಲ. ಇದರಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ಬಡಜನರಿಗೆ ಉಳಿಸಿ ಕೊಡುವುದು ಮಾತ್ರವಲ್ಲ ಅವರ ನೈತಿಕ ಸಾಮಾಜಿಕ ಮೊದಲಾದ ಸರ್ವತೋಮುಖವಾದ ಹಿತವನ್ನು ಸಾಧಿಸಿದಂತಾಗುತ್ತದೆ. ಇಷ್ಟು ಮಹತ್ವದ ಈ ಸುಧಾರಣೆಯನ್ನು ಧೈರ್ಯದಿಂದ ಮುಂದೊತ್ತಿ ಸಾಧಿಸಿದ ಪ್ರಾಂತ್ಯವೆಂದರೆ ಅಖಿಲಭಾರತದಲ್ಲಿ ಮದ್ರಾಸು ಎಂಬುದು ಈ ಪ್ರಾಂತ್ಯದ ಎಲ್ಲ ಪ್ರಜೆಗಳಿಗೂ ತುಂಬಾ ಅಭಿಮಾನದ ವಿಷಯವಿರುತ್ತದೆ.

ಜೆಕೊಸ್ಲೊವೊಕಿಯಾದಲ್ಲಿ ಹೊಸ ಸರಕಾರ

ಜೆಕೊಸ್ಲೊವೊಕಿಯಾದಲ್ಲಿ ಕಮ್ಯೂನಿಸ್ಟ ಪಂಗಡದವರು ಸರಕಾರದ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡಿರುವರು. ಈ ಕುರಿತು ಅಮೇರಿಕ ಬ್ರಿಟನು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಕಟುವಾದ ರೀತಿಯಲ್ಲಿ ಖಂಡಿಸುತ್ತಲಿವೆ. ಆದರೆ ಜೆಕ್ಕರ ಅಧ್ಯಕ್ಷ ಡಾ| ಬೆನೆಸ್‌ರ ಹೊಸ ಸರಕಾರಕ್ಕೆ ತಮ್ಮ ಸಹಿ ಹಾಕಿಕೊಟ್ಟಿದ್ದಾರೆ. ಅಲ್ಲಿಯ ಕೈಗಾರಿಕೆಗಳನ್ನು ರಾಷ್ಟ್ರೀಕರಣಕ್ಕೆ ಒಳಪಡಿಸುವುದು ಹೊಸ ಸರಕಾರದ ಮುಖ್ಯ ಧೋರಣೆ. ಇದು ಆ ರಾಷ್ಟ್ರದ ಅಭ್ಯುದಯಕ್ಕೆ ಅಗತ್ಯವಿರಬೇಕು. ಆದರೆ ಇದರಿಂದ ಅಮೇರಿಕ ಬ್ರಿಟನಗಳವರು ಅಲ್ಲಿಯ ಕೈಗಾರಿಕೆಗಳಲ್ಲಿ ಹೆಚ್ಚು ಹಣ ಹಾಕಿದ ಪ್ರಯುಕ್ತ ನಷ್ಟಕ್ಕೆ ಕಾರಣವಾಗಿದೆ. ಆದುದರಿಂದ ಈ ಬಗೆಯ ಟೀಕೆಗಳು ಬರಲು ಕಾರಣವೆನ್ನುತ್ತಾರೆ. ಹೊಸ ಸರಕಾರವು ಅಮೇರಿಕ ರಷ್ಯಗಳ ಎರಡು ತಂಡಗಳೊಳಗೆ ರಷ್ಯವನ್ನೇ ಕಟ್ಟಿಕೊಂಡಿತೆಂಬುದು ಸ್ಪಷ್ಟವಾಗಿರುತ್ತದೆ. ಟ್ರೂಮನರ ಯೂರೋಪಿಯನ್ ಯೋಜನೆಯಿಂದಲೇ ಹೀಗಾಗಿದೆಯೆಂದು ಮಜೂರ ಪಂಗಡದ ಮುಂದಾಳು ವಾಲೇಸರು ಹೇಳುತ್ತಿದ್ದಾರೆ.

ಅಮೇರಿಕನ್ ಸರಕಾರದ ವಿಮಾನ ಪಡೆ

ಅಮೇರಿಕನ್ ಸಂಯುಕ್ತ ರಾಷ್ಟ್ರ ಸರಕಾರದ ವಿಮಾನ ಪಡೆ ಹೆಚ್ಚಿಸಬೇಕೆಂದು ಇಲ್ಲಿಯ ಜೊಯಿಂಟ್ ಬೋರ್ಡಿನವರು ಶಿಫಾರಸು ಮಾಡಿದ್ದಾರೆ. ೩೫,೦೦೦ ವಿಮಾನಗಳನ್ನಾದರೂ ಇಟ್ಟುಕೊಳ್ಳುವುದು ಅಗತ್ಯವಂತೆ. ಮೂರನೆ ಮಹಾ ಯುದ್ಧವು ಎಟಮ್ ಬಾಂಬು ಮತ್ತು ರೋಗಾಣುಗಳ ಯುದ್ಧವಷ್ಟೆ? ವೈರಿ ವಿಮಾನಗಳು ತಮ್ಮ ರಾಷ್ಟ್ರದ ಹತ್ತಿರಕ್ಕೆ ಬಾರದಂತೆ ಮಾಡಲು ಬೇಕಾದ ವಿಮಾನ ಬಲಬೇಕು. ಒಂದು ವೇಳೆ ವೈರಿ ವಿಮಾನ ಬಂದು ಹಾವಳಿ ಮಾಡಿದರೆ ಅದಕ್ಕೆ ನೂರ್ಮಡಿ ಹೆಚ್ಚಿನ ಹಾವಳಿಯನ್ನು ಅವರ ದೇಶದಲ್ಲಿ ಮಾಡುವ ಸಾಮರ್ಥ್ಯಬೇಕು. ಇದಿಲ್ಲದರಿಂದ ಮೂರನೆ ಯುದ್ಧವು ನಾವು ಎಣಿಸುವುದಕ್ಕಿಂತಲೂ ಬೇಗನೆ ಬಂದೊದಗಬಹುದೆಂದು ಕಾಣುತ್ತದೆ. ಹಾಗಾಗದಂತೆ ಯತ್ನಿಸುವುದಾದರೂ ಎಷ್ಟು ಅಗತ್ಯವೆಂದು ಪ್ರತ್ಯೇಕ ವಿವರಿಸಬೇಕಾಗಿಲ್ಲ.

ಜಿಲ್ಲೆಯಲ್ಲಿಯ ಆಹಾರ ಪರಿಸ್ಥಿತಿ

ಮದ್ರಾಸ್ ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿ ಕಷ್ಟವಾಗಿದೆ ಎಂಬುದು ಇತ್ತೀಚೆಗೆ ಸ್ಪಷ್ಟವಾಗುತ್ತಿದೆ. ಮಹಾತ್ಮಾ ಗಾಂಧಿಯವರು ನಿಧನಹೊಂದುವ ಮೊದಲ ದಿನ ಈ ಕುರಿತು ಯೋಜನೆಮಾಡುತ್ತಿದ್ದರೆಂದೂ ತಮ್ಮ ಕಾರ್ಯದರ್ಶಿ ಪ್ಯಾರೇಲಾಲರಿಗೆ ನಾಳಿನ ಕಾರ್ಯಕ್ರಮದಂತೆ ಮದ್ರಾಸಿನವರಿಗೆ ಅಗತ್ಯವುಳ್ಳ ಸೂಚನೆಗಳನ್ನು ಬರೆಯುವಂತೆ ಹೇಳಿದರೆಂದೂ ತಿಳಿದು ಬರುತ್ತದೆ. ಹೀಗೆ ತಯಾರಿಸಿದ ಸೂಚನೆಗಳು ಹರಿಜನ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಆಹಾರವೆಂದರೆ ಅಕ್ಕಿಯೊಂದೇ ಇಟ್ಟುಕೊಳ್ಳದೆ ಸಾಧ್ಯವಿರುವ ಆಹಾರವಸ್ತುಗಳನ್ನು ತಯಾರಿಸಿಕೊಂಡು ಉಪಯೋಗಿಸಿ ಸ್ವಾವಲಂಬನದಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕೆಂಬುದೇ ಈ ಸೂಚನೆಯ ಅಭಿಪ್ರಾಯವಿರುತ್ತದೆ.

ಕೇಂದ್ರ ಸರಕಾರದ ಆಹಾರ ಮಂತ್ರಿ ಮಾನ್ಯ ಶ್ರೀ| ಜಯರಾಮದಾಸ ದೌಲತ್‌ರಾಮ್ ಇವರೂ ಮದ್ರಾಸನ್ನೂ ಇಲ್ಲಿಯ ಇತರ ಕೆಲವು ಪ್ರದೇಶಗಳನ್ನೂ ಸಂದರ್ಶಿಸಿ ಈಗಿನ ಕಠಿಣ ಪರಿಸ್ಥಿತಿಯನ್ನು ಚೆನ್ನಾಗಿ ಮನಗಂಡು ಹೊರಗಿನಿಂದ ಸಾಧ್ಯವಿದ್ದ ಸಹಾಯ ಮಾಡುವುದಾಗಿ ಹೇಳಿ ಹೊರಟಿದ್ದಾರೆ.

ಹೀಗೆ ಹೊರಗಿನವರು ನಮಗೆ ಸಾಧ್ಯವಿದ್ದ ಸಹಾಯವನ್ನೆಲ್ಲ ಒದಗಿಸುವ ವಿಷಯದಲ್ಲಿ ಸಂಶಯವಿಲ್ಲ. ಆದರೆ ಅವರು ಮಾಡಬಹುದಾದ ಸಹಾಯವು ಬಹಳ ಮಿತವಾದುದೆಂಬ ಬಗ್ಗೆಯೂ ಸಂಶಯವಿಲ್ಲ. ಆದುದರಿಂದಲೇ ಮದ್ರಾಸು ಸರಕಾರದವರು ರೇಶನಿಂಗ್ ಜಾರಿ ಇದ್ದಲ್ಲಿ ಆಹಾರದ ಮಿತಿಯನ್ನು ೧೨ ಔನ್ಸಿನಿಂದ ೮ ಔನ್ಸ್‌ಗಳಿಗೆ ತಗ್ಗಿಸಿದ್ದಾರೆ. ಸರಕಾರದವರು ಮಾಡಲು ಸಾಧ್ಯವಿದ್ದುದನ್ನೆಲ್ಲ ಮಾಡುವರೆಂಬ ಬಗ್ಗೆ ಕೂಡಾ ಅನುಮಾನಪಡಬೇಕಾಗಿಲ್ಲ.

ಆದರೆ ಈಗಿನ ಪರಿಸ್ಥಿತಿಯನ್ನು ಹೊರಗಿನ ಸಹಾಯದಿಂದ ಅಥವಾ ಸರಕಾರದವರ ಏರ್ಪಾಡಿನಿಂದ ಮಾತ್ರ ಸುಧಾರಿಸುವುದು ಕಷ್ಟಕಾಣುತ್ತದೆ. ನಮ್ಮ ಜನರ ವರ್ತನದ ಮೇಲೆ ನಮ್ಮ ಈ ಮಳೆಗಾಲದ ಭವಿಷ್ಯ ಬಹಳಮಟ್ಟಿಗೆ ಹೊಂದಿಕೊಂಡಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಮೊದಲನೆಯದಾಗಿ ನಮ್ಮಲ್ಲಿ ಶ್ರೀಮಂತರು ಆಹಾರ ಧಾನ್ಯಗಳಿಂದ ಹಣಮಾಡುವ ಹುಚ್ಚುತನ ಖಂಡಿತವಾಗಿಯೂ ಬಿಡಬೇಕು. ಕಾಸರಗೋಡು ತಾಲೂಕಿಗೆಂದು ಏರ್ಪಾಟು ಮಾಡಿಸಿ ಅಕ್ಕಿಯನ್ನು ಈ ಜಿಲ್ಲೆಯಿಂದ ಕಳ್ಳಾಟಿಕೆಯಲ್ಲಿ ಕಲವರು ಮಲಬಾರಿಗೆ ಕಳುಹಿಸಿ ಹಣಮಾಡಿರುವರೆಂದು ವದಂತಿ ಹಬ್ಬಿರುತ್ತದೆ. ಇದು ನಿಜವಾದರೆ ಅಂಥ ಕೆಲಸವು ಅಕ್ಷಮ್ಯ ಅಪರಾಧವೆಂದು ಹೇಳಲು ಅಡ್ಡಿಯಿಲ್ಲ.

ಹಳ್ಳಿಗಳಲ್ಲಿ ಈಗ ರೂ ೨೫ಕ್ಕೆ ಕಡಿಮೆ ಕ್ರಯದಲ್ಲಿ ಅಕ್ಕಿ ಸಿಗುವುದಿಲ್ಲ. ಅದು ಸಹ ಇಡೀ ಮುಡಿಗಳನ್ನೇ ಕೊಂಡುಹೋಗಬೇಕು. ಸ್ವಂತ ಸಾಗುವಳಿ ಇಲ್ಲದ ಬಡಜನರು ನೋಡುವಂತಾಗಿದೆ. [illegible] ಹೊರೆಯುವರನ್ನು ಉಪವಾಸಹಾಕಿ ಹಣಮಾಡುವ ಈ ದುರ್ಬುದ್ಧಿ ನಮ್ಮ ಹಳ್ಳಿಗಳಲ್ಲಿ ಈಗ ಹೆಚ್ಚಾಗುತ್ತ ಬಂದಿರುವುದು ಹಿತಕಾರಿಯಲ್ಲ.

ಈಗಲೇ ಈ ಪರಿಸ್ಥಿತಿ ಬಂದಿರುವಾಗ ಮಳೆಗಾಲದಲ್ಲಿ ಯಾವ ರೀತಿಯಾದೀತೆಂದು ಯೋಚಿಸಿದರೆ ಭಯಾನಕವೆನಿಸುತ್ತದೆ. ಜಿಲ್ಲಾ ಅಧಿಕಾರಿಗಳು ಲೆವ್ವೀ ಪದ್ಧತಿಯನ್ನು ಸರಿಸಿ ಅಕ್ಕಿ ಸಂಗ್ರಹಮಾಡಿ ಅಲ್ಲಲ್ಲಿ ರಿಲೀಫ್ ಡಿಪೋಗಳನ್ನು ಮಾಡಿ ಅಕ್ಕಿ ಒದಗಿಸುವ ಏರ್ಪಾಡು ಮಾಡುತ್ತಿದ್ದಾರೆ. ಅಂದರೆ ಹಿಂದಿನ ರೇಶನ್ ಪದ್ಧತಿ ಹೊಸ ರೂಪದಲ್ಲಿ ಹಿಂದೆ ಬರುವಂತೆ ಕಾಣುತ್ತಿದೆ. ವರ್ಗದಾರರಿಗೆ ಇದು ಇಷ್ಟವೆ?

ತಮ್ಮ ತಮ್ಮ ಹಳ್ಳಿಗಳಲ್ಲಿ ಬಡವರಿಗೆ ಬೇಕಾಗುವಷ್ಟು ಅಕ್ಕಿಯನ್ನಾದರೂ ವರ್ಗದಾರರೂ ಸಾಹುಕಾರರೂ ಸೇರಿ ಸಂಗ್ರಹಿಸಿ ಕಡಮೆ ಕ್ರಯದಲ್ಲಿ ಒದಗಿಸುವ ಏರ್ಪಾಡನ್ನು ತಾವೇ ಮಾಡಬಾರದೇಕೆ? ಈ ಮೊದಲು ಇಂಥ ಏರ್ಪಾಡುಗಳು ನಮ್ಮ ಜಿಲ್ಲೆಯಲ್ಲಿ ನಡೆದಿವೆ. ಈ ಬಾರಿ ಮಾತ್ರ ಹೀಗೆ ಅಸಡ್ಡೆ ತೋರಿಸಲು ಕಾರಣವೇನು? ಬಡಜನರಿಗೆ ಬೇಕಾದರೆ ಸರಕಾರದವರೇ ಏರ್ಪಾಡು ಮಾಡಲೆಂಬ ಭಾವನೆ ಎಷ್ಟು ಮಾತ್ರಕ್ಕೂ ಸರಿಯಲ್ಲ. ಸರಕಾರದವರಾದರೂ ಎಲ್ಲಿಂದ ಅಕ್ಕಿ ತರಬೇಕು? ಅಕ್ಕಿ ಇದ್ದವರಿಂದ ಅವರು ಸಂಗ್ರಹಿಸಬೇಕಾಗುತ್ತದಷ್ಟೆ. ಇದಕ್ಕೆ ಬದಲು ತಾವಾಗಿ ಮುಂದೆ ಬಂದು ಈ ಕಾರ್ಯ ನಡೆಸಿದರೆ ಎಷ್ಟೋ ಹೆಚ್ಚಿನ ದಕ್ಷತೆಯಿಂದ ನಡೆಸಬಹುದು.

ಅಕ್ಕಿಯ ಕ್ರಯದ ಮೇಲೆ ಕಂಟ್ರೋಲ್ ಇದೆ. ಅಕ್ಕಿಯನ್ನು ಚಿಲ್ಲರೆ ಮಾರುವುದಕ್ಕೆ ಲೈಸೆನ್ಸ್ ಪಡೆಯಬೇಕು. ಅಂದರೆ ಕಂಟ್ರೋಲ್ ದರದಲ್ಲಿ ಒದಗಿಸಬೇಕಾಗುತ್ತದೆ. ಮುಡಿ ಒಂದರ ರೂ. ೨೫ರಂತೆ ಕ್ರಯ ಇರುವಾಗ ಕಂಟ್ರೋಲ್ ದರದಲ್ಲಿ ಚಿಲ್ಲರೆ ಮಾರಾಟ ಏರ್ಪಡಿಸುವುದು ಹೇಗೆ ಸಾಧ್ಯವೆಂಬುದೊಂದು ಪ್ರಶ್ನೆ ಮುಂದೆ ಬಂದಿದೆ.

ಇದರ ಅರ್ಥವೆಂದರೆ ರೂ ೨೫ರಲ್ಲಿ ಅಕ್ಕಿ ಪಡೆದು ರೂ ೨೨ ಕ್ರಯ ಸಿಕ್ಕುವಂತೆ ಅಂದರೆ ಲಾಗವಾಡು ಖರ್ಚಿಲ್ಲದೆ ಇತರ ಲಾಭ ಇಲ್ಲದೆ ಈ ಕಾರ್ಯ ಮಾಡಲು ಸಿದ್ಧರಿದ್ದವರು ಇದ್ದಾರೆ. ಆದರೆ ನಷ್ಟ ಹಾಕಿಕೊಂಡು ಕಂಟ್ರೋಲ್ ದರಕ್ಕೆ ಯಾರು ಕೊಟ್ಟಾರು? ಎಂಬುದೇ ಇರುತ್ತದೆ.

ಸರಕಾರದವರು ನಡುವೆ ಪ್ರವೇಶಿಸಿ ಲೆವ್ವೀ ಮಾಡಿದರೆ ಅಕ್ಕಿ ಮುಡಿಗೆ ರೂ ೨೫ರಂತೆ ಕೊಡುತ್ತಾರೆಯೇ? ಅಕ್ಕಿ ಇದ್ದ ಶ್ರೀಮಂತರು ತಾವೇ ಸೇರಿ ತಮ್ಮ ಹಳ್ಳಿಯ ಬಡವರಿಗೆ ಎಷ್ಟು ಬೇಕಾಗುತ್ತದೆಂದು ನೋಡಿ ತಮ್ಮ ಅಕ್ಕಿಯನ್ನು ತಾವೇ ಕಡಮೆ ಕ್ರಯದಲ್ಲಿ ಒದಗಿಸಿ ಬಡ ಜನರ ಪ್ರೇಮ ವಿಶ್ವಾಸಗಳಿಗೆ ಯಾಕೆ ಪಾತ್ರರಾಗಬಾರದು.

ವಸ್ತುತಃ ಪ್ರತಿಯೊಬ್ಬ ಸಾಗುವಳಿದಾರನು ತನ್ನ ಸ್ವಂತ ಊಟದ ಮಟ್ಟಿಗೆ ಮಾತ್ರ ಅಕ್ಕಿ ಇಟ್ಟುಕೊಂಡು ಉಳಿದುದನ್ನೆಲ್ಲ ಇತರರ ಊಟಕ್ಕಾಗಿ ಕಂಟ್ರೋಲ್ ದರದಲ್ಲಿ ಕೊಡಲು ಸಿದ್ಧನಿರಲೇಬೇಕು. ಇದರಲ್ಲಿ ಕಳ್ಳ ಸಂತೆ ಮಾಡಿ ಹಣ ಮಾಡಲು ಆಶಿಸುವುದು ಸರಿಯಲ್ಲ. ಇದನ್ನು ಸರಕಾರದವರು ಜಾರಿ ಮಾಡುವ ಬದಲು ತಾವೇ ಮಾಡಬೇಕೆಂಬುದು ಮಾತ್ರ ಕಂಟ್ರೋಲು ಹೋಗಬೇಕೆಂದು ಮಹಾತ್ಮಾ ಗಾಂಧಿಯವರು ವಾದಿಸಿದುದರ ಅರ್ಥವಲ್ಲದೆ ಕಂಟ್ರೋಲು ತೆಗೆಯುವುದರಿಂದ ವರ್ಗದಾರರಿಗಾಗಲಿ ಸಾಹುಕಾರರಿಗಾಗಲಿ ಹಣ ಮಾಡಲು ಹೆಚ್ಚಿನ ಅನುಕೂಲತೆ ಸಿಗಬೇಕೆಂಬುದು ಅವರ ಉದ್ದೇಶವಿರಲಿಲ್ಲವೆಂದು ಬೇರೆ ಹೇಳಬೇಕೆ?

ಕಂಟ್ರೋಲು ತೆಗೆದರೆ ನಮ್ಮ ಜನರು ನ್ಯಾಯದಲ್ಲಿಯೇ ವರ್ತಿಸದೆ ಇರಲಿಕ್ಕಿಲ್ಲವೆಂಬ ವಿಶ್ವಾಸದಿಂದ ಗಾಂಧೀಜಿಯವರು ಕಂಟ್ರೋಲುಗಳನ್ನು ತೆಗೆಸಿದರು. ಅವರ ವಿಶ್ವಾಸ ನಿರರ್ಥಕವಾಗುವಂತೆ ನಮ್ಮ ನಮ್ಮ ಜನರು ವರ್ತಿಸುವುದು ನ್ಯಾಯವೆ?

ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲಿಯೂ ಬಡಜನರಿಗೆ ಅಕ್ಕಿಯನ್ನು ಕಂಟ್ರೋಲ್ ದರದಲ್ಲಿ ಜನರೇ ಒದಗಿಸುವ ಏರ್ಪಾಡನ್ನು ಕೂಡಲೇ ಕೈಕೊಳ್ಳಬೇಕಾಗಿದೆ.

ಧರ್ಮ ವೈದ್ಯಾಶ್ರಮದ ವರ್ಧಂತಿ

ಗುರುಪುರದ ಶ್ರೀ ಪರಮೇಶ್ವರಿ ಧರ್ಮ ವೈದ್ಯಾಶ್ರಮದ ವಾರ್ಷಿಕೋತ್ಸವವು ನಮ್ಮ ಮುನ್ಸಿಪಲ್ ಕೌನ್ಸಿಲ್ ಉಪಾಧ್ಯಕ್ಷ ಶ್ರೀ| ಬಿ. ಗಂಗಾಧರದಾಸ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಆಸುಪಾಸಿನ ಗ್ರಾಮಸ್ಥರು ನೆರೆದಿದ್ದರು. ನಮ್ಮ ಜಿಲ್ಲಾ ಸೆಶ್ಯನ್ ಜಡ್ಜರಾದ ಕೃಷ್ಣಮೂರ್ತಿ ಅವರು ಧ್ವಜಾರೋಹಣ ಮಾಡಿದರು. ಆಶ್ರಮದ ಸ್ಥಾಪಕ ಡಾ| ಅತ್ತಾವರರವರು ವರದಿಯೋದಿದರು. ಇವರ ಚಿಕಿತ್ಸೆಯಿಂದ ಗುಣಪಡೆದ ಶ್ರೀ| ಎಸ್. ಬಿ. ಬಂಟ್ವಾಳ್ ಅವರು ಡಾಕ್ಟರರ ಪಾಂಡಿತ್ಯದ ಮೆಚ್ಚಿಗೆಯಾಗಿ ಕೊಟ್ಟ ಚಿನ್ನದ ಪದಕವನ್ನು ಅಧ್ಯಕ್ಷರು ಅವರಿಗೆ ಕೊಟ್ಟು ಗೌರವಿಸಿದರು. ಈ ವೈದ್ಯಾಶ್ರಮದ ಆದರ್ಶವನ್ನು ಎಲ್ಲರೂ ಅನುಸರಿಸಬೇಕೆಂದು ಅಧ್ಯಕ್ಷರು ಧ್ವನಿಸಿದರು.

ಧನಸಂಪತ್ತಿ ಅಡಚಣೆಯು ಪಾಕಿಸ್ತಾನದ ದುಸ್ಥಿತಿ

ಅಮೇರಿಕನ್ ದೃಷ್ಟಿಯಲ್ಲಿ ಜಿನ್ನಾರ ಆಡಳಿತ

ಚಾಣಾಕ್ಷ ರಾಜಕೀಯ ಧುರೀಣರಾದ ಮುಹಮ್ಮದ್ ಆಲಿ ಜಿನ್ನರು ಹಣದ ಅಡಚಣೆಯ ಕುರಿತು ಲಕ್ಷಿಸುವವರಲ್ಲ. ಕಲ್ಲಿದ್ದಲು ಮೊದಲಾದ ಕೈಗಾರಿಕೆ ವಸ್ತುಗಳೂ, ಇತರ ಆರ್ಥಿಕ ಲಾಭದ ವಿಷಯಗಳಿಗೆ ಪಾಕಿಸ್ತಾನದಲ್ಲಿ ಕೊರತೆಯಿದೆ ಎಂದಾಗ ಪಾಕಿಸ್ತಾನ ಸೃಷ್ಟಿಯಾಗುವ ಮೊದಲೊಮ್ಮೆ ಅವರು "ನಾವು ಉಪವಾಸ ಬಿದ್ದರೆ ನಿಮಗೇನು ಬಂದ ಸಂಕಷ್ಟ, ನಮ್ಮ ವಿಷಯ ಯಾರಿಗೇತಕ ಆಸಕ್ತಿ?" ಎಂದು ಓರ್ವ ಹಿಂದೂ ಪತ್ರಿಕಾ ಪ್ರತಿನಿಧಿಗೆ ತಿಳಿಸಿದರಂತೆ.

ಹೀಗೆಂದು ಪ್ರಕಟಿಸುತ್ತಾ ಅಮೇರಿಕದ ಟ್ರ್ಯಾಮ್ಸ್ ಪತ್ರಿಕೆ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿಯ ಕುರಿತು ಈ ರೀತಿ ಬರೆಯುತ್ತದೆ:

ಪಾಕಿಸ್ತಾನ ಜನ್ಮಕ್ಕೆ ಬಂದ ನಾಲ್ಕು ತಿಂಗಳಲ್ಲೇ ಅದೊಂದು ಜರ್ಝರಿತ ಆರ್ಥಿಕಸ್ಥಿತಿಯ ರಾಜ್ಯವಾಗಿದೆ. ಪರಿಣಾಮವಾಗಿ ಗಂಭೀರ ಸ್ವರೂಪದ ಸಾಮಾಜಿಕ ಅಶಾಂತಿ, ಅರಾಜಕತೆಗಳು ಅಲ್ಲಿ ತಲೆದೋರಹತ್ತಿವೆ.

ಪಾಕಿಸ್ತಾನವು ಒಂದು ಆಯವ್ಯಯ ಪಟ್ಟಿಯನ್ನು ತಯಾರಿಸಿದರೆ ಅದೇನೆಂಬುದು ಯಾರಿಗೂ ತಿಳಿಯುವುದಿಲ್ಲ (ಇತ್ತೀಚಿನ ಲೆಕ್ಕ ಪ್ರಕಾರ ಪಾಕಿಸ್ತಾನಕ್ಕೆ ೧೦ ಕೋಟಿಯ ಕೊರತೆಯುಂಟಾಗಿದೆ) ೨೪ ಕೋಟಿ ರೂಪಾಯಿಯಿಂದ ಈ ಹೊಸ ರಾಜ್ಯ ಕಾರ್ಯಾರಂಭ ಮಾಡಿತು ಆದರೆ ಕ್ಷಣ ಮಾತ್ರದಲ್ಲೆಂಬಂತೆ ಆ ಹಣ ಆರಿಹೋಯಿತು

ಕೆಲವು ವಾರಗಳ ಹಿಂದೆ ದಿಲ್ಲಿಯಿಂದ ಕರಾಚಿಗೆ ೩೦ ಸಾವಿರ ಮುಸ್ಲಿಂ ಸರಕಾರಿ ಕೆಲಸಗಾರರನ್ನು ಒಯ್ದ ಬ್ರಿಟಿಷ್ ಓವರ್ ಸೀಸ್ ಎಯರ್ ಕೊರ್ಪೊರೇಶನ್‌ನವರಿಗೆ ಪಾಕಿಸ್ತಾನ ಸರಕಾರ ಬೇಂಕ್ ಆಫ್ ಇಂಡಿಯದಲ್ಲಿ 'ಕೇಶ್' ಮಾಡಲು ಒಂದು ಚೆಕ್ಕನ್ನು ಕೊಟ್ಟಿತು ಆದರೆ ಪಾಕಿಸ್ತಾನದ ಖಜಾನೆ ಖಾಲಿಯಾಗಿರುವುದರಿಂದ ಚೆಕ್ಕು ಮಾನ್ಯವಾಗಲಿಲ್ಲ ಕೊನೆಗೆ ಹೇಗೊ ಅದಕ್ಕೆ ರೂಪಾಯಿ ಸಿಕ್ಕಿತು ಆದರೂ ಇದೇ ರೀತಿ ಇನ್ನೆಷ್ಟೋ ಸಾಲಗಾರರು ಕಾಯುತಿದ್ದಾರೆ ಕರಾಚಿಯ ಮೇಲಧಿಕಾರಿಗಳ ಸಂಬಳ ಕಡಿತಮಾಡಿದೆ. ಅವರ ಮನೆಬಾಡಿಗೆ ಭತ್ತೆಯನ್ನು ನಿಲ್ಲಿಸಿದೆ.

ನಿಜವಾದ ಬೆಲೆಯ ಮೂರುಪಾಲಷ್ಟು ಕೊಟ್ಟರೆ ಮಾತ್ರ ಪಾಕಿಸ್ತಾನಕ್ಕೆ ಕಲ್ಲಿದ್ದಲ್ಲು ಸಿಕ್ಕುತ್ತದೆ. ಒಂದು ಸಲ ಪಾಕಿಸ್ತಾನ ರೈಲುಗಳ ಬಳಿ ಕೇವಲ ೨೦ ದಿನಕ್ಕೆ ಬೇಕಾದಷ್ಟು ಕಲ್ಲಿದ್ದಲ್ಲು ಮಾತ್ರ ದಾಸ್ತಾನು ಇತ್ತು. ಅಲ್ಲಿನ ರೈಲುಗಳು ಸರಕುಗಳನ್ನೊಯ್ಯುವುದಿಲ್ಲ-ಕೇವಲ ಪ್ರಯಾಣಿಕರನ್ನಷ್ಟೇ ಒಯ್ಯುತ್ತದೆ. ಪಾಕಿಸ್ತಾನಕ್ಕೆ ಹೋಗುವ ಬಟ್ಟೆಬರೆಯ ಸರಕು ಮೂಟೆಗಳು ಭಾರತ ಬಂದರುಗಳಲ್ಲಿ ರಾಶಿಯಾಗಿವೆ. ಅವನ್ನು ಸಾಗಿಸಲು ಸೌಕರ್ಯವೂ ಇಲ್ಲ, ಸಾಗಿಸಿದ್ದುದಕ್ಕೆ ಕೊಡಲು ಹಣವೂ ಪಾಕಿಸ್ತಾನದ ಖಜಾನೆಯಲ್ಲಿಲ್ಲ.

ಜಿನ್ನರ ಸರಕಾರ ಕೆಲವೊಂದು ನಿರಾಶೆಯ ಸಾಹಸಗಳನ್ನು ಮಾಡಿ ದಿನ ದಿನದ ಸರಕಾರ ಸೂತ್ರ ಸಾಗಿಸಲು ಪ್ರಯತ್ನಿಸಿತು: ಪೂರ್ವಪಾಕಿಸ್ತಾನದಿಂದ ಕಲ್ಕತ್ತೆಕ್ಕೆ ಹೋಗುವ ಕಚ್ಚಾ ನಾರಿನ ಮೇಲೆ ಮೂಟೆಗೆ ೨೦ ರೂಪಾಯಿ ಸುಂಕ ಹಾಕಿದೆ. ಇದರಿಂದ ಎರಡು ವಸಾಹತುಗಳೊಗೆ ಸುಂಕರಹಿತ ಸ್ವತಂತ್ರ ವ್ಯಾಪಾರ ಚಲಾವಣೆಯ ತಾತ್ಕಾಲಿಕ ಒಪ್ಪಂದಕ್ಕೆ ಧಕ್ಕೆ ಬಂತು. ಹಿಂದೂಸ್ಥಾನವೂ ಇದೇ ರೀತಿ ಮುಯ್ಯಿಗೆ ಮುಯ್ಯಿಯ ಧೋರಣೆ ಅನುಸರಿಸಿ ಪಾಕಿಸ್ತಾನಕ್ಕೆ ಕಲ್ಲಿದ್ದಲ್ಲು ಕಳುಹಿಸುವುದನ್ನು ನಿಲ್ಲಿಸಬಹುದು.

ನಿರಾಶ್ರಿತರಿಗೆ ಖರ್ಚು

ಭಾರತವು ನಿರಾಶ್ರಿತರಿಗಾಗಿ ದಿವಸಕ್ಕೆ ೨ ಲಕ್ಷ ರೂಪಾಯಿ ವ್ಯಯಿಸುತ್ತದೆ ಇಷ್ಟು ಖರ್ಚು ಮಾಡಲು ಪಾಕಿಸ್ತಾನಕ್ಕೆ ಬೆನ್ನಲುಬಿಲ್ಲ. ಪರಿಣಾಮವಾಗಿ ಪಾಕಿಸ್ತಾನದಲ್ಲಿನ ಮುಸ್ಲಿಂ ನಿರಾಶ್ರಿತರಲ್ಲಿ ಅಶಾಂತಿಯುಂಟಾಗಿ ಅಲ್ಲಿನ ಸಮತಾವಾದಿಗಳಿಗೆ ಪ್ರೋತ್ಸಾಹ ಸಿಕ್ಕಿದಂತಾಗಿ ಅವರು ಹಳೆ ರಾಜಕಾರಣಿಗಳಾದ ಜಿನ್ನರ ವಿರುದ್ಧ ಚಳವಳವನ್ನೆಬ್ಬಿಸುತ್ತಿರುವರು.

ಪಶ್ಚಿಮ ಪಂಜಾಬದಲ್ಲಿ ಕಮ್ಯೂನಿಸ್ಟ್ ಒಲುಮೆಯ ಇಫ್ತಿಕಾರುದ್ದಿನರನ್ನು ನಿರಾಶ್ರಿತರ ಮಂತ್ರಿಯನ್ನಾಗಿ ನೇಮಿಸಿದ್ದಾರೆ ಆದರೆ ಅವರು ನಿರಾಶ್ರಿತರಿಗೆ ಸಮತಾವಾದದ ಬೋಧನೆಯಿತ್ತಿರುವರು ಈ ಉಗ್ರ ಸಮತಾವಾದ ಪ್ರೇರಿತ ನಿರಾಶ್ರಿತರ ಮೆರವಣಿಗೆಯೊಂದು ಪಶ್ಚಿಮ ಪಂಜಾಬದ ಪ್ರಧಾನರಾದ ದೊಡ್ಡ ಹೊಟ್ಟೆಯ ಮಮದೂತಿನ ನವಾಬರ ಆಡಿಗೆ ಮನೆಯನ್ನು ಪ್ರವೇಶಿಸಿ ಅವರುಣ್ಣುವ ಆಹಾರ ಪದಾರ್ಥಗಳ ಹರಿವಾಣಗಳನ್ನು ತಮಗೆ ಕೊಡಲ್ಪಡುವ ತೆಳ್ಳಗಿನ ನಾಲ್ಕು ಚಪಾತಿಯೊಡನೆ ಬಹಿರಂಗವಾಗಿ ಪ್ರದರ್ಶಿಸಿ ಮೆರವಣಿಗೆ ಮಾಡಿದರು

ಸ್ವಲ್ಪ ಕಾಲ ನಂತರ ಇಫ್ತಿಕಾರುದ್ದೀನ (ಮುಂಚೆ ಇವರು ಕಾಂಗ್ರೆಸಿಗರು) ಜಿನ್ನರ ಸಹಾನುಭೂತಿಯ ಪ್ರತಿನಿಧಿಯನ್ನು ಸೋಲಿಸಿ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಲ್ಪಟ್ಟರು "ಇದರಿಂದ ಮುಸ್ಲಿಂ ಲೀಗಿಗೂ ಪಾಕಿಸ್ತಾನಕ್ಕೂ ದೊಡ್ಡ ಗಂಡಾಂತರ ಉಂಟಾಗಿದೆ" ಎಂದೋರ್ವ ಅಲ್ಲಿನ ಧುರೀಣರು ಉದ್ಗರಿಸಿದರು

ರಶ್ಯಕ್ಕೆ ಮೊರೆ

ಇಸ್ಲಾಮಿಗೂ ಬೇರೆ ಯಾವ ಜಗತ್ತಿನ ತತ್ವ ಜ್ಞಾನಕ್ಕೂ ಮೇಳಾಮೇಳಿ ಬೀಳಲಾರದು ಇಷ್ಟಾದರೂ ಪಾಕಿಸ್ತಾನವು ಆರ್ಥಿಕ ಸಹಾಯಕ್ಕಾಗಿ ರಶ್ಯದ ಕಡೆ ತಿರುಗಬಹುದೆಂದು ಹೇಳಲಾಗಿದೆ ಅಮೇರಿಕದೊಡನೆಯೂ ಅದು ಸಾಲಕೇಳಬಹುದೆಂದೂ ಸುದ್ದಿಯಿದೆ

ತನ್ಮಧ್ಯೆ ಮೂರು ವಾರಗಳ ತನಕ ಜಿನ್ನರು ಹಾಸಿಗೆ ಹಿಡಿದಿದ್ದರು ಆದರೆ ತೀಕ್ಷ್ಣ ರೋಗಗ್ರಸ್ತರಾಗಿರುವರೆಂಬ ಊಹಾಪೋಹ ಸುದ್ದಿ ಕೇಳಿ ಪಾಕಿಸ್ತಾನ ಸರಕಾರ ಕುಪಿತವಾಗಿ ಹೀಗೆ ಪ್ರಕಟಿಸಿತು "ಜಿನ್ನರು ಕಠಿಣ ರೋಗಗ್ರಸ್ತರಾಗಿರುದೆಂಬ ಸುದ್ದಿಯಲ್ಲಿ ಸತ್ಯಾಂಶವಿಲ್ಲ." ಆದರೆ ಪಾಕಿಸ್ತಾನ ರಾಜ್ಯಕ್ಕೆ ತಗಲಿದ ರೋಗದ ಕುರಿತು ಅದರಲ್ಲಿ ಏನೂ ಹೇಳಲಾಗಲಿಲ್ಲ.

ರಬ್ಬರಿನ ಸಿಮೆಂಟು

ಲಿಟೆಕ್ಸ್ ಎಂಬೊಂದು ಹೊಸ ತರದ ಮನೆ ಕಟ್ಟಲುಪಯೋಗಿಸುವ ಸಾಮಾಗ್ರಿಯು ತಯಾರಿಸಲ್ಪಟ್ಟಿದೆ. ಇದನ್ನು ಸಿಮೆಂಟಿನಲ್ಲಿ ರಬ್ಬರಿನ ರಸವನ್ನು ಮಿಶ್ರಣ ಮಾಡುವುದರ ಮೂಲಕ ಸಿದ್ಧಗೊಳಿಸಿದ್ದಾಗಿರುತ್ತದೆ. ಕಲ್ಲುಗಳನ್ನು ಜೋಡಿಸಲಿಕ್ಕೂ, ಇಟ್ಟಿಗೆಗಳನ್ನಂಟಿಸಲಿಕ್ಕೂ ಇದನ್ನು ಉಪಯೋಗಿಸಬಹುದು ಸಾಮಾನ್ಯ ಸಿಮೆಂಟಿಗಿಂತ ಇದು ಹೆಚ್ಚು ಶಕ್ತಿಯುಕ್ತವಾಗಿದೆಂದು ತಿಳಿದು ಬಂದಿದೆ.

ಸಸ್ಯ ಶೋಧನೆ

ಬ್ರಿಟನಿನ ಜನರು ಈಗ ಹೆಚ್ಚೆಚ್ಚಾಗಿ ಸಸ್ಯಾಹಾರಿಗಳಾಗಿರುವುದರಿಂದ ಅತೀ ಅಗ್ಗದಲ್ಲಿ, ಹೆಚ್ಚು ಪೌಷ್ಟಿಕ ಜೀವ ಧಾತುಗಳುಳ್ಳ ಮತ್ತು ಗಾತ್ರದಲ್ಲಿಯೂ ದೊಡ್ಡದಾಗಿರುವ ಕಾಯಿಪಲ್ಯಗಳನ್ನು ಬೆಳೆಸಲು ಅಲ್ಲಿ ಪ್ರಯತ್ನಗಳು ನಡೆಯುತ್ತಲಿವೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦ರಿಂದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦ ೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE

CANARA BANK, LIMITED.

ESTD: 1906



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ಚಿನ್ನದ ಹಬ್ಬ

ಕಳೆದ ತಾ. ೨೮ರಲ್ಲಿ ಇಲ್ಲಿಯ ಡಿ. ಸಿ. ಮಿಶನಿನ ಚಿನ್ನದ ಹಬ್ಬವನ್ನು ಸದ್ರಿ ಸಂಸ್ಥೆಯ ಭವನದಲ್ಲಿ ರಾಮಕೃಷ್ಣ ಮಿಶನಿನ ಸ್ವಾಮಿ ವಿಮಲಾನಂದಜೀ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಕುದ್ಮುಲ್ ರಂಗರಾಯರ ಜೀವನಾದರ್ಶದ ಕುರಿತು ಪ್ರಶಂಸನೀಯ ಭಾಷಣಗಳಾದುವು. ಅಧ್ಯಕ್ಷರು ಅಸ್ಪೃಶ್ಯತಾ ನಿವಾರಣೆಯ ಉಪಾಯಗಳನ್ನು ತಮ್ಮ ಭಾಷಣದಲ್ಲಿ ಸೂಚಿಸಿದರು.

ಜಿಲ್ಲಾ ರಜಕ ಸಂಘ

ಇದರ ವಾರ್ಷಿಕೋತ್ಸವವು ತಾ ೨೮ರಲ್ಲಿ ಕದ್ರಿ ವಿದ್ಯಾದಾಯಿನಿ ಶಾಲೆಯಲ್ಲಿ ನಡೆಯಿತು. ಸಂಘದ ಕಾರ್ಯಕಲಾಪಗಳ ಕುರಿತು ಕಾರ್ಯದರ್ಶಿ ಶ್ರೀ ಪಿ. ಕೆ. ನಾರಾಯಣ ಅವರು ವರದಿಯೋದಿದರು. ಶ್ರಮಜೀವಿಗಳಿಗೆ ಲೇಬರ್ ಸಾಲದೆಂಟ ಕುರಿತೊಂದು, ದೋಬಿಖಾನೆ, ನೀರಿನ ಸರಬರಾಯಿ ಇತ್ಯಾದಿಗಳಿಗಾಗಿ ಒಂದು ಹೀಗೆ ಕೆಲವು ಠರಾವುಗಳು ಮಂಜೂರಾದುವು. ಈ ಸಭೆಯಲ್ಲಿ ಹೊಸ ವರ್ಷದ ಕಾರ್ಯಕಾರಿ ಮಂಡಳಿಯೂ ಆರಿಸಲ್ಪಟ್ಟಿತು

ನಗರಸಭಾಧಿವೇಶನ

ಕಳೆದ ತಾ ೨೮ರಂದು ಮು॥ ಕೌನ್ಸಿಲ್ ಸಭೆ ಶ್ರೀ॥ ಎಲ್ ಪ್ಯಾಸರ ಅಧ್ಯಕ್ಷತೆಯಲ್ಲಿ ಜರಗಿತು. ವೆಬ್‌ಸ್ಟರ್ ಮಾರ್ಕೆಟಿಗೆ ಸಂಬಂಧಿಸಿದ ಆ ಹದಿನೆಂಟು ಅಂಗಡಿಗಳಿಗೆ ಬಾಡಿಗೆ ನಿರ್ದಿಷ್ಟಿಸಿ ಬರೆದ ಆ ಸಂಬಂಧ ಸಮಿತಿಯ ಅಭಿಪ್ರಾಯವನ್ನು ಈ ಕೌನ್ಸಿಲು ಎತ್ತಿ ಹಿಡಿದು ಅದನ್ನು ೧ ವರ್ಷದ ಬಾಡಿಗೆ ಕೊಡಬೇಕೆಂದು ನಿರ್ಧರಿಸಿ ಏಲಂ ಬೇಡವೆಂದೇ ತೀರ್ಮಾನಿಸಿದೆ

ಕ್ರೀಡಾ ಪಂದ್ಯಾಟ

ಕಳೆದ ತಾ ೨೬ ೨೭ರಂದು ಇಲ್ಲಿನ ರಿಜರ್ವ್ ಪೋಲಿಸ್ ಮೈದಾನಿನಲ್ಲಿ ಶಾಲಾ ಸ್ಪೋರ್ಟ್ಸ್ ಪಂದ್ಯಾಟಗಳು ಜರಗಿ ಎಲೋಸಿಯಸ್ ಕೊಲೇಜ್ ಪ್ರಿನ್ಸಿಪಾಲ್ ರೆ ಫಾ ಕೊಯಿಲೊ ಅವರಿಂದ ಬಹುಮಾನ ವಿತರಣೆಯಾಯಿತು

ಗ್ರಾಮೋನ್ನತಿ ಶಾಲೆ

ಮುಲ್ಕಿಯಲ್ಲಿ ಈಚೆಗೆ ಒಂದು ಗ್ರಾಮೋನ್ನತಿ ಶಾಲೆ ತೆರೆಯಲ್ಪಟ್ಟಿದೆ ಶ್ರೀ ಎಂ ಆರ್ ಪೂಂಜರವರು ಅದರ ಆರಂಭೋತ್ಸವ ನಡೆಸಿದರು ಈ ಶಾಲೆ ಅಲ್ಲಿನ ಮೊಗವೀರ ಸಮಾಜದ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ

ಜಿಲ್ಲಾ ಸಮಾಚಾರ

ಇಲೆಕ್ಟ್ರಿಕ್ ಚಾರ್ಜು

ಇದು ತನಕ ಇಲೆಕ್ಟ್ರಿಕ್ ದೀಪಗಳ–ಮನೆ ಉಪಯೋಗದಕ್ಕೆ–ಚಾರ್ಜು ಯೂನಿಟಿಗೆ ೬ ಆಣೆ ಇದ್ದದ್ದು, ಬರುವ ಎಪ್ರಿಲ್ ತಿಂಗಳಿಂದ ೭ ಆಣೆಯಷ್ಟಾಗುವುದೆಂದು ಪ್ರಕಟಿಸಲಾಗಿದೆ

ವಿದ್ಯಾದಾಯಿನಿ ಶಾಲೆ

ತಾ ೧–೬–೧೯೪೪ರಲ್ಲು ಸ್ಥಾಪಿತವಾದ ಈ ವಿದ್ಯಾದಾಯಿನೀ ಹೈಸ್ಕೂಲ್, ಇದೇ ಕಳೆದ ಜೂನ್ ತಿಂಗಳಿನಿಂದ ಸಂಪೂರ್ಣ ಹೈಸ್ಕೂಲಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ ಉದಾರಿಗಳೂ ವಿದ್ಯಾಭಿಮಾನಿಗಳು ಆದ ಮಹನೀಯರ ಸಂಪೂರ್ಣ ಸಹಾಯ ಸಹಕಾರಗಳನ್ನು ಪಡೆದು, ಇದು ತನಕ ರೂಪಾಯಿ ಒಂದು ಲಕ್ಷಕ್ಕೂ ಮಿಕ್ಕಿ ವೆಚ್ಚಮಾಡಿ ಈ ಸಂಸ್ಥೆಗೆ ಬೇಕಾದ ಭವ್ಯವಾದ ಕಟ್ಟಡಗಳು, ಸ್ಥಳಸನ್ನಿವೇಶನಗಳು, ಮತ್ತು ಸಾಹಿತ್ಯ ಉಪಕರಣಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗಿರುತ್ತದೆ ಈ ರೀತಿ ನೆರವಾದ ಮಹನೀಯರೆಲ್ಲರಿಗೂ ಈ ಸಂಸ್ಥೆಯು ಚಿರಋಣಿಯಾಗಿರುತ್ತದೆ ಆದರೆ ಈ ಸಂಸ್ಥೆಯು ತನ್ನ ಉದ್ದೇಶವಾದ ವಿದ್ಯಾಪ್ರಚಾರ ಮತ್ತು ಸಮಾಜಸೇವಾ ಕಾರ್ಯವನ್ನು ಮುಂದರಿಸಲು ಸಾಧ್ಯವಾಗುವಂತೆ ಅಗತ್ಯವಿರುವ ಶಾಶ್ವತನಿಧಿ, ವೇತನನಿಧಿ, ಕಟ್ಟಡಗಳೇ ಮೊದಲಾದವುಗಳಿಗೆ, ಇನ್ನೂ ಹೆಚ್ಚಿನ ಧನಸಂಗ್ರಹವಾಗಬೇಕಾಗಿದೆ ಈ ಕುರಿತು ಈ ಶಾಲಾ ಸಹಾಯಾರ್ಥವಾಗಿ ಅಖಿಲಭಾರತ ಖ್ಯಾತಿಯನ್ನು ಪಡೆದ ಸುಪ್ರಸಿದ್ಧ ಗಾಯಕಿ ಶ್ರೀಮತಿ ಎಮ್ ಎಸ್ ಸುಬ್ಬಲಕ್ಷ್ಮಿಯವರ ಗಾಯನಕಛೇರಿಯನ್ನು ಇದೇ ತಾ ೭ ೩–೪೮ನೇ ಆದಿತ್ಯವಾರ ಮಂಗಳೂರಿನಲ್ಲಿ ನಡಿಸುವುದಾಗಿ ಏರ್ಪಡಿಸಿಯದೆ ಇತಿ ಅಪೂರ್ವವೂ ಸತ್ಕಾರ್ಯ ಸಹಾಯಕವೂ, ಆದ ಈ ಸಂಗೀತ ಸಮಾರಂಭಕ್ಕೆ ವಿದ್ಯಾಭಿಮಾನಿಗಳೆಲ್ಲರೂ, ಸ್ವಪರಹಸ್ತಗಳಿಂದ ಪ್ರೋತ್ಸಾಹಿಸಿ, ಸುಶ್ರಾವ್ಯ ಗಾಯನವನ್ನು ಕೇಳಿ ವಿದ್ಯಾಸಂಸ್ಥೆಗೆ ನೆರವನ್ನೀಯಬೇಕಾಗಿ ಶಾಲಾ ಆಡಳಿತೆ ಸಮಿತಿಯ ವಿನಂತಿ

ಉಪ್ಪಿನಂಗಡಿ

ದಳಿತವರ್ಗಪರಿಷತ್ತು

ತಾ ೨–೩ ೪೮ರಂದು ರಾತ್ರೆ ೧೦ ಘಂಟೆ ಸಮಯಕ್ಕೆ ಪುತ್ತೂರು ಉಪ್ಪಿನಂಗಡಿ ಆಸುಪಾಸುಗಳ ಹರಿಜನರ ಪರಿಷತ್ತು ಉಪ್ಪಿನಂಗಡಿಯ ನೇತ್ರಾವತಿ ಹೊಳೆಯ ಕಿನಾರೆಯಲ್ಲಿ ಶ್ರೀ॥ ಕೆ ಕೃಷ್ಣಮಲ್ಯ ವಕೀಲ, ಪುತ್ತೂರು ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು ಹಲವು ಉಪಯುಕ್ತ ಠರಾವುಗಳು ಪಾಸುಮಾಡಿಕೊಂಡು ಮುಂದಿನ ಪರಿಷತ್ತು ಪುತ್ತೂರಲ್ಲಿ ಜರಗಿಸಲು ನಿಶ್ಚಯವಾಯಿತು

ಕನ್ಯಾನ

ವರ್ಧಂತಿ

ಇಲ್ಲಿಯ ಸಹಕಾರಿ ಸ್ಟೋರಿನ ವರ್ಧಂತಿ ಉತ್ಸವವು ಕಳೆದ ತಿಂಗಳ ತಾ ೨೯ರಂದು ಶ್ರೀ ತಲಚೇರಿ ರಂಗರಾಗವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು

ಮೂಡಬಿದಿರೆ

ಯಕ್ಷಗಾನ

೨೦–೩–೪೮ನೇ ಶನಿವಾರ ರಾತ್ರಿ ~ ಗಂಟೆಗೆ ಮೂಡುಬಿದಿರೆಯಲ್ಲಿ ಅಖಿಲಕರ್ನಾಟಕದ ಸುಪ್ರಸಿದ್ಧ ಯಕ್ಷಗಾನ ಅರ್ಥದಾರಿಗಳ ಸಮ್ಮೇಲನದಿಂದ ಭೀಷ್ಮಾರ್ಜುನ ಎಂಬ ಯಕ್ಷಗಾನ ಕೂಟವು ಜರಗಲಿದೆ

ಶತಮಾನೋತ್ಸವ

ಕರ್ನಾಟಕ ರಂಗಭೂಮಿ

ಇದರ ಶತಮಾನೋತ್ಸವ ಮತ್ತು ಅದರೊಂದಿಗೆ ಗ್ರ್ಯಾ ಥಿಯೇಟ್ರಿಕಲ್ ಕಾಂಫರೆನ್ಸ್ ವಜ ಮಹೋತವವನ್ನು ಶೀಘ್ರದಲ್ಲಿಯೇ ಅತೀ ವಿಜೃಂಭಣೆಯಿಂದ ನೆರವೇರಿಸ ಮಾರ್ಡು ನಡೆಯುತ್ತದೆ.

ಸ್ವಾತಂತ್ರ್ಯ ಸಂಪಾದಿಸೋಣ ಇಲ್ಲವೆ ಮಡಿದಾಡಿ ವೀರಸ್ವರ್ಗ ಸೇರೋಣ

ನೇತಾಜಿಯವರ ಅಮರವಾಣಿ

ಈ ದಾಸ್ಯವನ್ನು ಇನ್ನು ಅರಘಳಿಗೆಯೂ ಸಹಿಸಲು ಸಾಧ್ಯವಿಲ್ಲ ನಮ್ಮ ಮಾತೃಭೂಮಿಯ ದಾಸ್ಯ ವಿಮೋಚನೆಗೆ ನೀವು ಪಣತೊಡಬೇಕು. ಈ ಹೋರಾಟದಲ್ಲಿ ನಾವು ಜಯಗಳಿಸಿ ಸ್ವಾತಂತ್ರ್ಯ ಬಾವುಟವನ್ನು ಹಾರಿಸಬೇಕು ಇಲ್ಲವೇ ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನು ಸೇರಬೇಕು ... ಬದಾಗಿ ನೇತಾಜಿ ಸುಭಾಷ್ ಚಂದ್ರಬೋಸರ ... ರಣರಂಗದಲ್ಲಿ ಭಾರತೀಯ ಯೋಧರನ್ನು ಹುರಿದುಂಬಿಸಿದ ವೀರವಾಣಿಯನ್ನು ಸಹಸಾರ ಜನರು ನೇತಾಜಿ ಸುಭಾಷ್ ಚಲನಚಿತ್ರದಲ್ಲಿ ಲಂಬಿಸಿರುತ್ತಾರೆ ... ರೋಮಾಂಚಕ ಕಾರ್ಯಗಳ ದರ್ಶನ ಪಡೆದು ಜನರು ಹಿಗ್ಗುತ್ತಿದ್ದಾರೆ ನೇತಾಜಿಯ ... ಜೀವನವನ್ನು ಕೊಂಡಾಡುತ್ತಿದ್ದಾರೆ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯ ... ಆ ಜಗತ್ಸಾಮ್ರಾಜ್ಯಕ್ಕೆ ... ಮಂಗಳೂರಿನ ... ರೂಪವಾಣಿ ಚಿತ್ರ ಮಂದಿರದಲ್ಲಿ ... ಕರೆಲ್ಲರ ದರ್ಶನಲಾಭ ಪಡೆದು ಕೃತಕೃತ್ಯರಾಗಬೇಕು ಆಗಸ್ಟ್ ... ರಲ್ಲಿ ... ಸ್ವಾತಂತ್ರೋತ್ಸವದ ದೃಶ್ಯವನ್ನು ನೋಡಿ ಹೆಮ್ಮೆಪಡುವ ಭಾಗ್ಯವನ್ನು ಯಾರೂ ಕಳೆದುಕೊಳ್ಳಬಾರದು

★

ಪ್ರೊಹಿಬಿಶನ್ ಮತ್ತಿತರ ಕಟ್ಲೆಗಳು

ಕಡುಬಿನ ಮಾಮಯ್ಯ ಪೂಜಾರಿ ಹಾಲಿಗೆ ಸೇಕಡಾ ೧೧ರಷ್ಟು ನೀರು ಬೆರೆಸಿದಕ್ಕೆ ರೂ ೧೫ ಜುಲ್ಮಾನೆ ಉರ್ವದ ಕೃಷ್ಣ ಸೆಟ್ಟಿಗಾರ ಹಾಲಿಗೆ ಸೇಕಡಾ ೭೧ರಷ್ಟು ನೀರು ಬೆರೆಸಿದಕ್ಕೆ ರೂ ೭೫ ಜುಲ್ಮಾನೆ ಕುಲಶೇಕರದ ಬೋಜ ಹಾಲಿಗೆ ಸೇಕಡಾ ೨೧ರಷ್ಟು ನೀರು ಬೆರೆಸಿದಕ್ಕೆ ರೂ ೨೫ ಜುಲ್ಮಾನೆ ವಿಧಿಸಲ್ಪಟ್ಟಿರುವದು

ಅಕ್ರಮ ಶರಾಬನ್ನು ವಶಪಡಿಸಿಕೊಂಡಿದ್ದರೆಂಬುದಕ್ಕೆ ಪಡವಿನ ಪರ್ನಾ ಬಾಯಿಗೆ ರೂ ೫೦ ಅತ್ತಾವರ ಪುತ್ತನ ವಶ ಕಬ್ಬಿನ ಸರಾಯಿ ಇದ್ದುದಕ್ಕೆ ರೂ ೩೦ ದೇರಿಬೈಲಿನ ಫೋನ್ಸ್ ಪಿಕೇರನಿಗೆ ಅದೇ ಆರೋಪಕ್ಕಾಗಿ ರೂ ೪೦, ಹೀಗೆ ಜುಲ್ಮಾನೆಗಳು ವಿಧಿಸಲ್ಪಟ್ಟಿವೆ

ಸಂಗೀತ ಕಛೇರಿ

ದಾರವಾಡದ ಪ್ರಖ್ಯಾತ್ ರೇಡಿಯೊ ಸಂಗೀತಗಾರರಾದ ಶ್ರೀ॥ ಭೀಮಸೇನ್ ಜೋಶಿಯವರು ನಗರದ ಕೆಲವು ಕಡೆಗಳಲ್ಲಿ ಕಛೇರಿ ನಡೆಸಿದರು ತಾ ೪ರಂದು ರಥಬೀದಿ–ಭವಂತಿ ರಸ್ತೆಯ ಶ್ರೀ॥ ಶಿವಾನಂದ ಭಟ್‌ಜಿಯವರ ರಾಮಮಂದಿರದಲ್ಲಾದ ದಾಸ ನವಮಿ ಉತ್ಸವದಂದು ಶ್ರೀ ಜೋಶಿಯವರ ಸಂಗೀತ ನಡೆಯಿತು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮುತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ವೊಂಟ್ ಮೆನೇಜರ್ಸ್,

ಮಂಗಳೂರು,
23-12-1947

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)

Estd: 1906.

Head Office: UDIPI, South India.

SEASON DEPOSITS

for Rs 5,000/- and over are now accepted at all Offices of the Bank at the following rates:

3 & 4 months . . . 2½% p. a.
5 & 6 months . . . 2¾% p a

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office· Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products - Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಋಂಜಕನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 12—3—1948 [ಸಂಚಿಕೆ 10]

ಭಾರತದಲ್ಲಿ ಕೋಮುವಾರು ಕಲಹದ ಕಾರಣ

ಸ್ವಾರ್ಥ ಸಾಧಕ ಪಕ್ಷಗಳ ಕುತಂತ್ರ

ಕಲ್ಕತ್ತದ ಚಮತ್ಕೃತಿ ಮತ್ತದರ ಒಡ್ಡುವಾದ

ಹೊರೆಸ್ ಅಲೆಕ್ಸಾಂಡರ್ ಎಂಬ ಬ್ರಿಟಿಷ್ ರಾಜಕೀಯ ಪರೀಕ್ಷಕರು ಒಂದು ಇಂಗ್ಲ ಪತ್ರಿಕೆಯಲ್ಲಿ ಹಿಂದೂ ಮುಸ್ಲಿಂ ಕಚ್ಚಾಟದ ಕುರಿತು ಹೀಗೆ ಬರೆದಿರುವರು.

"ಹಿಂದೂ ಮುಸ್ಲಿಮರು ಸರ್ವಸಾಮಾನ್ಯವಾಗಿ ಶಾಂತರೀತಿಯಲ್ಲಿ ಒತ್ತಟ್ಟಿಗೆ ವಾಸಿಸುತ್ತಾರೆ. ಆದರೆ ತಮ್ಮ ಸ್ವಂತ ಸ್ವಾರ್ಥ ಸಾಧನೆಮಾಡುವ ದೊಡ್ಡ ತರಗತಿಯ ಚಿಕ್ಕ ಗುಂಪೊಂದು ಇವರೊಳಗೆ ವೈರತ್ವವನ್ನು ಹುಟ್ಟಿಸಿ ನಿರಂತರ ಗಲಭೆಯನ್ನುಂಟುಮಾಡುತ್ತಾರೆ.

ಪಂಜಾಬದ ಗಲಭೆಗಳು ವಿಭಾಗೀಕರಣದಿಂದುಂಟಾದುವೆಂದು ಹೆಚ್ಚಾಗಿ ಹೇಳಲ್ಪಡುತ್ತದೆ. ಆದರೆ ಇದು ಸರಿಯಾದ ಕಾರಣವಲ್ಲ. ಏಕೆಂದರೆ ವಿಭಾಗೀಕರಣವಾಗದಿರುತ್ತಿದ್ದರೆ ಈ ಗಲಭೆಗಳು ಕಡಿಮೆಯಾಗಿರುತ್ತಿದ್ದುವೆಂದು ಹೇಳಬರುವುದಿಲ್ಲ. ಬಂಗಾಲದಲ್ಲಿ ವಿಭಾಗೀಕರಣವಾಗಿಯಾದ ಮೇಲೆ ಅಲ್ಲಿ ಯಾವ ತರದ ಕೋಮು ಕಲಹವು ನಡೆದಿಲ್ಲ. ಅಲ್ಲಿ ಪರಸ್ಪರ ಪ್ರದೇಶಗಳಿಂದ ಜನರ ಸ್ಥಾನಾಂತರ ಹೋಗುವುದೂ ನಡೆಯಲಿಲ್ಲ."

✠

೧೯೪೬ರ ಆಗೋಸ್ತು ೧೬ರಂದು ಕಲ್ಕತ್ತಾದಲ್ಲಿ ಭೀಕರ ಹತ್ಯಾಕಾಂಡವೊಂದು ಪ್ರಾರಂಭವಾಯಿತು. ಅನಂತರ ಮತ್ತೆ ೧೫ನೇ ಆಗಸ್ಟ್ ೧೯೪೭ರ ತನಕ ಬಂಗಾಳದಲ್ಲಿ ಅದರಲ್ಲೂ ಕಲ್ಕತ್ತದಲ್ಲಿ ಶಾಂತಿಯೇ ಇರಲಿಲ್ಲ. ೧೯೪೭ರ ಪ್ರಾರಂಭ ಭಾಗದಲ್ಲಿ ಗಾಂಧಿಯವರ ಪಶ್ಚಿಮ ಬಂಗಾಳದ ಹಳ್ಳಿಗಳ ಸಂಚಾರದಿಂದ ತುಂಬಾ ಸತ್ಪರಿಣಾಮವಾಗಿದೆ. ಅವರು ಆ ಕಡೆಯ ಅನೇಕ ಗಂಡಾಂತರದ ಪ್ರದೇಶಗಳನ್ನೂ ಸುತ್ತಿಬಂದು ತಮ್ಮ ಶಾಂತಿಪ್ರಚಾರದ ಕಾರ್ಯವನ್ನು ಯಶಸ್ವಿಯಾಗಿ ಮುಂದೊತ್ತಿದರು.

ಆದರೆ ಕಲ್ಕತ್ತಾ, ಡಾಕ್ಕಾ ಮೊದಲಾದ ಕಡೆಗಳಲ್ಲಿ ಆಗಿಂದಾಗ್ಗೆ ಕೆಲವು ವಿಕಾರಗಳೇಳುತ್ತಲೇ ಇದ್ದವು. ಅಲ್ಲಿ ಈ ಅನಿಷ್ಟವು ಬೂದಿಮುಚ್ಚಿದ ಕೆಂಡದಂತಿದ್ದು ಕೆಲವೊಂದು ಪುಂಡರ ಗಾಳಿಹಾಕುವಿಕೆಯಿಂದ ಧಗ್ಗ ಉರಿದುಕೊಳ್ಳುತಿತ್ತು. ಕಲ್ಕತ್ತದಲ್ಲಿ ಇತ್ತಂಡದ ಮತದವರು ತಮ್ಮ ತಮ್ಮ ವಾಸಪ್ರದೇಶಗಳನ್ನು ಬಿಟ್ಟು ಮತ್ತೊಬ್ಬರ ಪ್ರದೇಶಕ್ಕೆ [illegible] ಪರಿಸ್ಥಿತಿ [illegible] ಸ್ಥಾನದಿಂದ [illegible] ಗುತ್ತದೆ [illegible] ಸ್ಥಿಲ್ಲಾ [illegible] ಅವರ ಸಮ್ಮತಿಸಿ [illegible]

✠

ಬಂಗಾಳದ ವಿಭಾಗೀಕರಣವಾಗಿ ಗಡಿ ಮೇರೆಗಳ [illegible] ರಾಜ್ಯಗಳ [illegible] ದುಗುಡುಗುಡುವುದೆಂದು ಜನರು ಸಾರಿದ್ದರು. ಆದರೆ ಅವರ ಭವಿಷ್ಯವಾಣಿ ತೀರ ಸುಳ್ಳಾಯಿತು. [illegible] ಗಾಂಧಿಯವರ [illegible] ಸುಹ್ರವರ್ದಿ [illegible] ಸ್ಥಿವರು ಮಣಿಸಿದ್ದರು. ಮಾತವಲ್ಲ ಆ ಹಿಂದಿನ ಬಂಗಾಳದ ಮುಖ್ಯ ಮಂತ್ರಿಯಾಗಿದ್ದ ಸುಹ್ರವರ್ದಿಯವರು ಈ ಶಾಂತತಾ ಕಾರ್ಯದಲ್ಲಿ ತಮ್ಮ ಅಪಾರವಾದ ವರ್ಚಸ್ಸನ್ನು ಹಾಕಿರುವರೆಂಬ ಸಂಗತಿಯನ್ನೂ ಅದರ ಪ್ರಭಾವಿತ ಪರಿಣಾಮವನ್ನೂ ಅವರು ಕಡೆಗಣಿಸಿದರು. ೧೯೪೭ನೆಯ ೧೫ರ ಚಮತ್ಕೃತಿ ಹೇಗೆ ನಡೆಯಿತೆಂದು ಯಾರೂ ಹೇಳಲಾರರು. ಗಾಂಧಿಯವರ ನಾಟಕೀಯ ಮನಸ್ಥಿತಿಯ ಪರಿಣಾಮದಿಂದ ಉಂಟಾಯಿತೆಂಬುದೂ ಯಾರೂ ಅಲ್ಲಗಳೆಯುವಂತಿಲ್ಲ. ಗಾಂಧಿ ಸುಹ್ರವರ್ದಿ ಸಂಯುಕ್ತೀಕರಣವೂ ಒಂದು ಪ್ರಬಲವಾದ ಪ್ರತಿಬಂಧಕವೇ ಆಗಿತ್ತು.

ಆ ದಿವಸ ನಾನು ಕಲ್ಕತ್ತದಲ್ಲಿದ್ದೆ. ಮತ್ತಾ ದಿವಸನನ್ನೆಂದಿಗೂ ಮರೆಯುವಂತಹದಲ್ಲ. ಆ ದಿನ ಜನರು ಸಂತೋಷಾತಿರೇಕದಿಂದ ಶಿರಭ್ರಮಣಗೊಂಡರೆಂದು ಹೇಳುವುದೂ ಸರಿಯಲ್ಲ. ಆದರೆ ಬಹುಕಾಲದ ತನಕ ಭೀತಿ ವೈಷಮ್ಯದ ಕಾರ್ಗತ್ತಲಲ್ಲಿ ವಾಸಿಸಿ ಕೊನೆಗೊಂದು ದಿನ ಜಾತೀಯ ಭ್ರಾತೃತ್ವ ಸ್ವಚ್ಛಂದ ಸೂರ್ಯಪ್ರಕಾಶದಡಿಗೆ ಬಂದಂತೆ ಅದು ಸಂಭವಿಸಿತು. ಅಂದಿನ ಆ ಸೂರ್ಯ ಪ್ರಕಾಶದ ಉತ್ಸಾಹವನ್ನು [illegible] ಪತ್ರಗಳಿಗೆ [illegible] ಕಠಿಣ [illegible]

✠

[illegible] ಸ್ವಾತಂತ್ರ್ಯ [illegible] ದೇಶದ [illegible] ತೋರಿದ ತಾತ್ಕಾಲಿಕ ಚಿಹ್ನೆಯದು [illegible] ಕೆಲವರು. ಆದರೆ ತಮ್ಮ ಕೆಲಸವು ಕಲ್ಕತ್ತದಲ್ಲಿ ಇನ್ನೂ ಮುಗಿದಿಲ್ಲವೆಂದು [illegible] ಗೊತ್ತಿತ್ತು. ಎರಡು ವಾರಗಳ ನಂತರ ಕಲ್ಕತ್ತದಲ್ಲಿ ಪುನಃ ಒಮ್ಮೆ ಗಲಭೆ [illegible] ದಿಂದ ನಡೆಸಲ್ಪಟ್ಟಿತೆಂಬುದಕ್ಕೆ ಆ ಗಲಭೆಯು ಬಹಳ ವೇಗದಲ್ಲಿ ನಿಲ್ಲಿಸಿದ ಸಂಗತಿಯೇ ಉತ್ತಮ ನಿದರ್ಶನವಾಗಿದೆ. ಇದೊಂದು ನಿದರ್ಶನ ಮಾತ್ರವಲ್ಲ. ಈಚೆಗೆ ನಡೆದ ಹಲವು ಇಂತಹ ಗಲಭೆಗಳ ಮೂಲವನ್ನು ಪರಿಶೀಲಿಸಿ ನೋಡಿದರೆ ಅವು ಕೆಲವೇ ಹೊಣೆಗಾರಿಕೆ ಇಲ್ಲದ ಪುಂಡರಿಂದ ಪ್ರಾರಂಭಿಸಲ್ಪಟ್ಟವೆಂಬ ಸಂಗತಿಯು ಸ್ಪಷ್ಟವಾಗುವುದು.

ಹಿಂದೂ ಮುಸ್ಲಿಮರಲ್ಲಿ ಸಹಜ ಸ್ವಭಾವದ ವೈಮನಸ್ಸು ಇದೆಯೆಂಬ ಸಂಗತಿಯು ಮೂರ್ಖಮತಿಯದು. ಸರ್ವಸಾಮಾನ್ಯವಾಗಿ ಅವರು ಒತ್ತೊತ್ತಿಗೆ ವಾಸಿಸಿಕೊಂಡಿರುವರು. ಆದರೆ ಅವರೊಳಗೆ ಅಂತರ್ವಿವಾಹವಿಲ್ಲ. ಅವರ ಸಮಾಜ ಸಾಂಪ್ರದಾಯಗಳು ಬೇರೆ ಬೇರೆಯಾಗಿವೆ, ಮಾತ್ರವಲ್ಲ ಅವರ ವೇಷಭೂಷಣಗಳಲ್ಲಿ ನೋಡಿದೊಡನೆ ತಿಳಿಯುವ ಸ್ಪಷ್ಟ ವ್ಯತ್ಯಾಸಗಳು ಇವೆ. ಈ ಬಾಹ್ಯ ವ್ಯತ್ಯಾಸಗಳಿಗೆ ಬೆಟ್ಟು ತೋರಿಸುತ್ತ ಚಾಣಾಕ್ಷ ನೀಚಾಧಮರು ಹಿಂದೂ ಮುಸ್ಲಿಮರು ಶತ್ರುಗಳೆಂಬ ಭಾವನೆಯಲ್ಲಿ ವಿಶ್ವಾಸವಿಡುವಂತೆ ಪುಸಲಾಯಿಸುತ್ತಾರೆ. ಬ್ರಿಟಿಷ್ ಸಾಮ್ರಾಜ್ಯವಿರುವಾಗ ಇಂತಹ ನರಾಧಮರನ್ನು ಪೋಲಿಸರೇ ಸ್ವತಃ ಬಲ್ಲವರಾಗಿದ್ದರೂ ಅಂಥವರನ್ನು ಯೋಗ್ಯದಾಂಗೆ ಹಚ್ಚುತ್ತಿರಲಿಲ್ಲದ್ದು ಒಂದು ದೌರ್ಭಾಗ್ಯವೆನ್ನಬೇಕು.

✠

ಗಡಿನಾಡ ವಾಯುವ್ಯದ ಸಂಕಷ್ಟಮಯ ವಾತಾವರಣಗಳಲ್ಲಿ ಮೂರು ತಿಂಗಳ ಕಾಲ ಸಂಚಾರ ಮಾಡಿ ಕಲ್ಕತ್ತಕ್ಕೆ ಬಂದಾಗ ಅಲ್ಲಿನ [illegible] ಶಾಂತಿ ಸೌಹಾರ್ದದ ವಾತಾವರಣವು [illegible] ಆಶ್ಚರ್ಯಕಾರಿಯಾಯಿತು. ಎಲ್ಲ ಜಾತಿ ಮತದವರು ಮಾರ್ಗಗಳಲ್ಲಿ [illegible] ಅಂಜಿಕೆಗಳಿಲ್ಲದೆ ವ್ಯವಹರಿಸುವ ದೃಶ್ಯವು [illegible] ತಿತ್ತು. ಕಲ್ಕತ್ತದ ಸೆಂಟ್ರಲ್ ಎವೆನ್ಯೂ ಬಳಿ [illegible] ಹಿಂದೂಸ್ಥಾನ-ಪಾಕಿಸ್ತಾನ ಮಧ್ಯದೊಳಗಿನ ಪೋಲಿಸ್ ಬಂದೋಬಸ್ತು, ಸರಿಗೆ ಬೇಲಿಗಳ ಭೀಕರ ಸರಂಜಾಮು ಜನರ ಸ್ಮೃತಿಯಲ್ಲಿರಲಿಲ್ಲ. ಇಂದು ಕಲ್ಕತ್ತದಲ್ಲಿ ಕೋಮು [illegible] ಘಟಿಸಲಿರುವ ಪರಿಸ್ಥಿತಿಯೆಂದರೆ [illegible] ಕಲ್ಕತದಲ್ಲಿ ವಾಸವಾಗಿರುವ ಓರ್ವ ಪ್ರತಿಷ್ಠಿತ ದಕ್ಷಿಣ ಭಾರತೀಯನು ಹೀಗೆ ತಿಳಿಸಿದ— "ಶಾಂತಿ ಇಂದು ಬಂಗಾಳದಲ್ಲಿ [illegible] ಅದು ನಿರಂತರವಾಗಿಯೂ ಬಾಳುವುದು."

ಮೇಲಿನ ಮಹಾಶಯನ ಮಾತುಗಳು ಯಥಾರ್ಥವಾದುವೆಂದು ನಾನು ವಿಶ್ವಾಸಿಸುತ್ತೇನೆ. ಇಷ್ಟಾದರೂ ಪೂರ್ವ ಪಶ್ಚಿಮ ಬಂಗಾಳಗಳೊಳಗೆ ಅಷ್ಟೊಂದು ತೃಪ್ತಿಕರ ಪರಿಸ್ಥಿತಿ ಉಂಟಾಗಿಲ್ಲ. ಸರಕಾರಿ ಅಧಿಕಾರಿಗಳನ್ನು ಕೋಮುವಾರು ವಿಧಾನದನ್ವಯ ಬದಲಾಯಿಸಿಕೊಳ್ಳುವ ಈ ಧೋರಣೆಯು ಅನೇಕ ವೇಳೆ ಕಠಿಣ ಪ್ರಸಂಗಗಳನ್ನು ತಂದೊಡ್ಡುವುದು. ಎರಡೂ ಕಡೆಯ ಮಂತ್ರಿಮಂಡಲಗಳೂ ಜಾತೀಯತೆಯ ರಚನೆಹೊಂದಿದ್ದು ಮುಂದರಿಯುತ್ತವೆ. ಆದರೆ ದಿಲ್ಲಿ ಕರಾಚಿಗಳೊಳಗೆ ಶಾಂತಿಯು ಸ್ಥಾಪಿಸಲ್ಪಟ್ಟರೆ ಮತ್ತೆ ಕಲ್ಕತ್ತಾ ಡಾಕ್ಕಾಗಳಲ್ಲಿ ಹೆಚ್ಚಿನ ಗಲಭೆಗಳಾಗಲಾರವೆಂದು ಭಾವಿಸಬಹುದು.

ಗತವಾರದ ಗಣನೀಯ ಭಾಷಣಗಳು

ಮಹಾತ್ಮರ ಮಾರ್ಗದರ್ಶನ

ಕಲ್ಕತ್ತಾದಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್ನರು ಹೀಗೆಂದರು: "ಹಿಂದೂಸ್ಥಾನದ ಜನರ ಪ್ರೇಮ ಸೌಹಾರ್ದಗಳ ನೆರವಿನಿಂದಲೇ ನಾನು ಏನಾದರೂ ಅಲ್ಪಸ್ವಲ್ಪ ಕಾರ್ಯ ಮಾಡಿರಬಹುದು. ಜಾತೀಯ ಸೌಹಾರ್ದ ಸ್ಥಾಪಿಸಲು ಪ್ರಯತ್ನ ಮಾಡಿ ಸಂಪೂರ್ಣ ಯಶಸ್ಸು ಸಂಪಾದಿಸಿದ ಶ್ರೇಯಸ್ಸು ಗಾಂಧೀಜೀಯವರಿಗೇ ಸಲ್ಲುವುದು. ಈಗ ಅವರು ಕಣ್ಮರೆಯಾದುದರಿಂದ ನಮಗೆ ದಿನಗಳು ಉರುಳಿದಂತೆ ನಮಗೆ ಅವರ ಮಾರ್ಗದರ್ಶನ ತಪ್ಪಿತಲ್ಲಾ ಎಂದು ಸ್ವಾಭಾವಿಕವಾಗಿಯೇ ಅನಿಸುವುದು. ಆದರೆ ಅವರು ತೋರಿದ ತತ್ತ್ವಗಳೂ ನಮ್ಮೊಡನೆ ಇರುವುವೆಂಬ ಭರವಸೆ ನಮಗಿದೆ. ಆದುದರಿಂದ ಅವರು ಮಾಡಿದ ಪ್ರಯತ್ನಗಳು ನಿಷ್ಫಲವಾಗಲಾರವು."

"ಪಂಡಿತ ನೆಹರುರವರು ಜಗತ್ತಿನ ಆಧ್ಯ ರಾಜಕೀಯ ಮುತ್ಸದ್ದಿಗಳು. ಸರ್ದಾರ್ ಪಟೇಲರು ಹೊರ ತೋರಿಕೆಗೆ ಕಠಿಣರಾಗಿದ್ದರೂ ಅವರ ಅಂತರ್ಯವು ಅತಿ ಮೃದುವಾಗಿದೆ. ಇವರೆಲ್ಲರ ಸ್ನೇಹ ಸಂಪರ್ಕವನ್ನು ನಾನೆಂದೂ ಮರೆಯುವಂತಿಲ್ಲ."

ವಿಭಜನೆಯಿಂದ ಸಮಸ್ಯೆ ತೀರಲಿಲ್ಲ

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ಕೆನಡಾ ದೇಶದಲ್ಲಿನ ಒಂದು ಭಾಷಣದಲ್ಲಿ ಹೀಗೆಂದರು:

"ಇತಿಹಾಸದಲ್ಲಿ ವಿಭಜನೆಯಿಂದ ಯಾವ ಸಮಸ್ಯೆಯೂ ಬಗೆಹರಿದಿಲ್ಲ. ಆಯರ್ಲೆಂಡ್ ನೋಡಿರಿ, ಪೆಲೆಸ್ಟೈನನ್ನು ನೋಡಿರಿ, ಏನು ಕಾಣುವುದು?"

"ರೂಪಾಯಿ ನಾಣ್ಯದ ಸ್ಥೈರ್ಯವನ್ನು ಕಾಯಲು ಹಿಂದೂಸ್ಥಾನದ ಭೂಸಂಪತ್ತು ಸಾಕಷ್ಟಿದೆ. ಸ್ವತಂತ್ರ ಹಿಂದೂಸ್ಥಾನದಲ್ಲಿ ಪ್ರತಿಯೊಬ್ಬ ಆಂಗ್ಲನ ಕುತ್ತಿಗೆಯನ್ನು ಕೊಯ್ಯಲಾಗುವುದೆಂದು ಮೊದಲು ಮೊದಲು ಕೆಲವರು ದಿಗಿಲುಗೊಂಡು ತಮ್ಮ ಚಹಾ ಮತ್ತು ರಬ್ಬರ ತೋಟಗಳನ್ನು ಮಾರಿಕೊಂಡು ಹೊರಟರು. ಇದು ಹುಚ್ಚುತನ. ಈಗ ಹಿಂದೂಸ್ಥಾನದಲ್ಲಿ ಆಂಗ್ಲರ ಮತ್ತು ಹಿಂದೀಯರ ನಡುವೆ ಹೆಚ್ಚಿನ ಸ್ನೇಹವುಂಟಾಗಿದೆ.

ಕತ್ತೆಯ ಶ್ರಮ, ಒಂಟೆಯ ತಿನಸು, ನಾಯಿಯ ನಿದ್ರೆ

ನ್ಯಾಯಾಧೀಶ ರಾಜಾಧ್ಯಕ್ಷರು ರೆಲ್ವೇ ಕೆಲಸಗಾರರ ಕುರಿತು ಮಾಡಿದ ವರದಿಯಲ್ಲಿ ಈ ಕೆಳಗಿನ ವಿಷಯವನ್ನು ಹೇಳಲಾಗಿದೆ:

"ರೆಲ್ವೇ ಕೆಲಸಗಾರರ ಪರವಾಗಿ ಸಾಕ್ಷಿ ಕೊಟ್ಟವರ ಪುರಾವೆಗಳು ಮನರಂಜಕವಾಗಿವೆ. ಎನ್. ಡಬ್ಲ್ಯು. ರೆಲ್ವೆಯ ಓರ್ವ ಗಾರ್ಡನು ತನ್ನ ಕೆಲಸದ ಪರಿತಾಪವನ್ನು ಬಣ್ಣಿಸುತ್ತ ಹೀಗೆ ಉತ್ಪ್ರೇಕ್ಷೆ ಮಾಡಿದ: 'ನಾನು ಕತ್ತೆಯಂತೆ ದುಡಿಯುತ್ತೇನೆ, ಒಂಟೆಯಂತೆ ತಿನ್ನುತ್ತೇನೆ, ನಾಯಿಯಂತೆ ನಿದ್ರಿಸುತ್ತೇನೆ.'"

ಎಸ್. ಆಯ್. ಆರ್. ರೈಲ್ವೆಯ ಸ್ಟೇಶನ್ ಮಾಸ್ತರನು ತಾನಿದ್ದ ಸ್ಟೇಶನ್‌ನಲ್ಲಿ ಮೂರರ ಬದಲು ಹದಿನಾರು ಸ್ಟೇಶನ್ ಮಾಸ್ತರರು ಬೇಕೆಂದು ಸೂಚಿಸಿದನು!

ಮೊದಲು ತಾಸು ರಾತ್ರಿ ಕೆಲಸಮಾಡುವ ರೋಡ್ ವ್ಯಾನ್ ಕ್ಲಾರ್ಕನಿಗೆ ಪುನಃ ಅಷ್ಟೇ ಅವಧಿಯ ರಾತ್ರಿ ಪಾಳಿ ಕೆಲಸಮಾಡಲು ಬರುವ ಮೊದಲು ೩೬ ತಾಸು ವಿಶ್ರಾಂತಿ ಬೇಕೆಂದು ಅಂಥ ಓರ್ವ ಕಾರಕೂನನು ತಿಳಿಸಿದನು.

ಇದು ಹೈದರಾಬಾದ್ ರಾಜಕೀಯ

ಇತ್ತೆಹಾದುಲ್ ಮುಸಲೀಮೀನದ ಅಧ್ಯಕ್ಷ ರಜವಿಯವರು ಒಂದು ಹೇಳಿಕೆಯಲ್ಲಿ ಹೀಗೆಂದರು:

"ಹೈದರಾಬಾದನ್ನು ಹಿಂದೂಸ್ಥಾನಕ್ಕೆ ಸೇರಿಸುವ ವಿಷಯದಲ್ಲಿ ಸದ್ಯದ ಜಾತೀಯ ದ್ವೇಷದ ಪರಿಸ್ಥಿತಿಯಲ್ಲಿ, ಮತಗಣನೆ ನಡೆದರೆ ಅನರ್ಥವು ಕಟ್ಟಿಟ್ಟದ್ದು.

"ಬಹುಸಂಖ್ಯಾಕ ಮತ್ತು ಅಲ್ಪಸಂಖ್ಯಾಕ ಎಂಬ ಭೇದಭಾವಗಳಲ್ಲಿ ನನಗೆ ವಿಶ್ವಾಸವಿಲ್ಲ. ೭೦೦ ವರ್ಷಗಳಿಂದ ನಡೆದು ಬಂದ ಸಾಮಾಜಿಕ ರಚನೆ ಒಂದು ದಿವಸದಲ್ಲಿ ಹೋಗಬಲ್ಲುದೆ? ಕ್ರಾಂತಿಯು ಹಿಂದೀಯರ ಸ್ವಭಾವಕ್ಕನುಗುಣವಾದುದಲ್ಲ. ಆದರೂ ಹೈದರಾಬಾದದಲ್ಲಿ ಕ್ರಾಂತಿಯ ಪ್ರಯೋಗ ಮಾಡಿದರೆ ಈ ಉಪಖಂಡದ ಶಾಂತತೆಗೆ ಭಂಗ ಬರುವುದು.

ಹಳೇ ಹೆಂಡತಿ, ಹೊಸ ಶೀರೆ

ಈ ಸಲದ ಮುಂಗಡ ಪತ್ರಿಕೆಯ ಸ್ವರೂಪವು ಹೊಸ ಸೀರೆಯನ್ನುಟ್ಟ ಹಳೆ ಹೆಂಡತಿಯಂತಿದೆ ಎಂದು ಕೆಲ ಸದಸ್ಯರು ಟೀಕಿಸಿದರು. ಅದಕ್ಕುತ್ತರವಾಗಿ ಅರ್ಥ ಸಚಿವ ಸರ್ ಷಣ್ಮುಗಂ ಚೆಟ್ಟಿಯವರು ಇಂತೆಂದರು:

"ಅವರ ಈ ಮಾತಿನ ಬಗ್ಗೆ ನನಗೆ ಹೆಮ್ಮೆಯೆನಿಸುತ್ತದೆ. ಮನುಷ್ಯನಿಗೆ ವಯಸ್ಸು ಆಗುತ್ತ ಹೋದಹಾಗೆ ಹಳೆಯ ಹೆಂಡತಿಯ ಯೋಗ್ಯತೆ ತಿಳಿಯುತ್ತ ಹೋಗುತ್ತದೆ. ಇಂದಿನ ಹೊಸ ಚದುರೆಗಿಂತ ಹಳೇ ಹೆಂಡತಿಯನ್ನೇ ಮೆಚ್ಚುವ ಪ್ರಾಯ ನನ್ನದು. ಆದ್ದರಿಂದ ಹೊಸ ಸೀರೆಯನ್ನುಟ್ಟ ಹಳೆಯ ಹೆಂಡತಿಯನ್ನು ಕಂಡರೆ ನನಗೆ ಬಹಳ ಸಂತೋಷ."

ವಿವಾಹ ತೆರಿಗೆ!

ಕೇಂದ್ರ ಶಾಸನ ಸಭೆಯಲ್ಲಿ ಬೇಗಂ ಅಜೀಜ ರಸೂಲರು ಮುಂಗಡ ಪತ್ರಿಕೆಯ ಕುರಿತು ಹೀಗೆಂದರು:

"ಈ ಮುಂಗಡ ಪತ್ರಿಕೆ ಶ್ರೀಮಂತರದಾಗಿದೆ, ಜಮೀನ್ದಾರರದಾಗಿಲ್ಲ. ಅವರು ಕಳ್ಳ ಪೇಟೆಯಲ್ಲಿ ಲಾಭಮಾಡಿಕೊಂಡಿಲ್ಲವಾದ್ದರಿಂದ ಅವರಿಗೆ ಆದಾಯಕರದ ಭಾರ ಹೆಚ್ಚಾಗಿದೆ. ಕಾಫಿ, ಚಹಾ, ತಂಬಾಕುಗಳ ಮೇಲಿನ ಕರದಿಂದ ಬಡವರಿಗೆ ಹಾನಿಯಾಗಿದೆ.

"ಸರಕಾರವು ವಿವಾಹಗಳ ಮತ್ತು ಜನನಗಳ ಮೇಲೂ ಕರ ಹೇರಬೇಕು. (ಈಗಾಗಲೇ ವಿವಾಹಿತರಾದವರ ವಿಚಾರವೇನೆಂದು ಈ ಮಧ್ಯೆ ಒಂದು ಧ್ವನಿ ಕೇಳಿಬಂತು.) ಈ ಸೂಚನೆಯಿಂದಲೂ ಇಮ್ಮಡಿ ಲಾಭವಿದೆ. ಮದುವೆಯಾದಾಗ ಮಗು ಜನಿಸಿದಾಗ ಕರಕೊಡಲು ಜನಗಳಿಗೆ ಭಾರವೆನಿಸುವುದಿಲ್ಲ. ದೇಶದ ಜನರ ಆರೋಗ್ಯ ಹಾಳಾಗುತ್ತಿರುವಾಗ ಸರಕಾರವು ಹೆಚ್ಚು ಪೌಷ್ಟಿಕ ಆಹಾರವನ್ನು ಒದಗಿಸಲು ಪ್ರಯತ್ನಿಸಬೇಕು.

ಸ್ವದೇಶ ಸುದ್ದಿಗಳು

ಜಾತೀಯತೆಯ ನಿರ್ಮೂಲ

ಅ. ಭಾ. ಕಾಂಗ್ರೆಸ್ ಕಮಿಟಿಯು ದೇಶದ ರಾಜಕೀಯ ಶರೀರದಲ್ಲಿ ವಿಷವನ್ನು ತುಂಬಲು ಪ್ರಯತ್ನ ಮಾಡುತ್ತಿರುವ ಜಾತೀಯತೆ ದ್ವೇಷ ಪ್ರಚಾರದ ಸಂಸ್ಥೆಗಳನ್ನು ನಿರ್ಮೂಲಿಸಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿರುವುದು.

ತಪ್ಪು ಯಾರದು?

ಶ್ರೀ ಜಯಪ್ರಕಾಶ ನಾರಾಯಣರು ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಮಹಾತ್ಮರ ಕೊಲೆಯ ತಪ್ಪಿಗೆ ಸರಕಾರವೂ ಹೊಣೆಯಾಗಿದೆ ಎಂದರು. ಜಾತೀಯ ಸಂಸ್ಥೆಗಳನ್ನು ಮೊದಲೇ ಏಕೆ ಪ್ರತಿಬಂಧಿಸಲಿಲ್ಲವೆಂದವರು ಪ್ರಶ್ನಿಸಿದರು. ಕೆಲವು ಹೊಣೆಗಾರ ಮಂತ್ರಿಗಳು ಕೂಡಾ ಆರ್. ಎಸ್. ಎಸ್. ಕವಾತು ಪ್ರದರ್ಶನಗಳಿಗೆ ಹೋಗಿದ್ದರೆಂಬ ಸಂಗತಿಯನ್ನೂ ಅವರು ಪ್ರಕಟಪಡಿಸಿದರು.

ಸರ್ದಾರರ ಪಟೇಲರ ಉತ್ತರ–ರೋಗಕ್ಕೆ ತಕ್ಕ ಔಷಧಿ

"ಎಲ್ಲಾ ಜಾತೀಯ ಸಂಘ ಸಂಸ್ಥೆಗಳನ್ನು ಪ್ರತಿಬಂಧಿಸುವ ಬಗ್ಗೆ ಹೇಳುವದಾದರೆ–ಅವಸರದಿಂದ ಕಾರ್ಯ ಮಾಡಬಾರದು. ಶಾಂತ ರೀತಿಯಿಂದ ವಿಚಾರ ಮಾಡಬೇಕು. ಔಷಧವು ರೋಗಕ್ಕಿಂತ ಕೆಟ್ಟದಿರಬಾರದು. ಸರಕಾರ ಈ ಸಂಬಂಧ ಧೋರಣೆ ಮಹಾತ್ಮರಿಗೆ ತಿಳಿದಿತ್ತು. ಆರ್. ಎಸ್. ಎಸ್. ನವರ ಕವಾತು ಪ್ರದರ್ಶನಕ್ಕೆ ಓರ್ವ ಮಂತ್ರಿಯನ್ನು ಟೀಕಿಸಿದವನಿಗೆ ಆ ಮಂತ್ರಿ ಅಲ್ಲಿ ಏಕೆ ಹೋದನೆಂಬುದು ಗೊತ್ತಿಲ್ಲ" ವೆಂದು ಸರ್ದಾರ್ ಪಟೇಲರು ಜೈಪ್ರಕಾಶರಿಗೆ ಉತ್ತರವಿತ್ತರು.

ಪಾಪಕ್ಕೆ ಪ್ರಾಯಶ್ಚಿತ

ಮಹಾತ್ಮರನ್ನು ಓರ್ವ ಮಹಾರಾಷ್ಟ್ರೀಯನು ಕೊಲೆಮಾಡಿದರಿಂದುಂಟಾದ ಅಪಕೀರ್ತಿಯ ಪ್ರಾಯಶ್ಚಿತಕ್ಕೆ ೨೧ ದಿವಸ ಕೈಕೊಂಡ ಸಾನೆ ಗುರೂಜಿಯವರು ತಮ್ಮ ವ್ರತವನ್ನು ಯಶಸ್ವಿಯಾಗಿ ಕೊನೆಗೊಳಿಸಿದರು.

ಭಾರತ-ಬ್ರಿಟನ್ ಮನಸ್ತಾಪ

ಪುಂಡರಿಗೆ ಪಾಕಿಸ್ತಾನವು ಪ್ರೋತ್ಸಾಹ ಕೊಟ್ಟದ್ದು ತಪ್ಪೆಂದು ಲಂಡನಿನ 'ಇಕೊನೊಮಿಸ್ಟ್' ಪತ್ರಿಕೆ ತಿಳಿಸುತ್ತಾ, ಸದ್ಯದ ಪರಿಸ್ಥಿತಿ ಸುಧಾರಿಸಬೇಕಾದರೆ ದಾಳಿಗಾರರನ್ನು ಪುನಃ ತಮ್ಮ ವಾಸಸ್ಥಾನಕ್ಕೆ ಹೋಗುವಂತೆ ಮಾಡಬೇಕೆಂದು ಸೂಚಿಸಿದೆ. "ಬ್ರಿಟಿಷ್ ಪತ್ರಿಕೆ ಮತ್ತು ಪ್ರತಿನಿಧಿಗಳಿಗೆ ಕಾಶ್ಮೀರ ಸಮಸ್ಯೆ ಚೆನ್ನಾಗಿ ತಿಳಿದಿಲ್ಲವಾದುದರಿಂದ ಮುಂದೆ ಈ ಸಂಬಂಧ ಭಾರತ ಬ್ರಿಟನ್‌ಗಳೊಳಗೆ ಮನಸ್ತಾಪ ಬರಬಹುದು."

ನಿಜವಾದ ಪಕ್ಷಪಾತ ರಾಜ್ಯದಲ್ಲಿ ಜಾತೀಯ ಸಂಸ್ಥೆಗೆ ಪ್ರೋತ್ಸಾಹ

ಹೈದರಾಬಾದಿನ ಹಿಂದುಗಳ ಮೇಲೆ ಪುಂಡತನ ನಡೆಸುವ ಅಲ್ಲಿನ ಮಜ್ಲಿಸ್ ಇತ್ತೆಹಾದುಲ್ ಸಂಸ್ಥೆಯನ್ನು ಅಕ್ರಮ ಕೂಟವಾಗಿ ಸಾರಬೇಕೆಂದು ಮುಖ್ಯ ಮಂತ್ರಿಗಳಿಗೂ, ನಿಜಾಮರಿಗೂ ಸೂಚನೆ ಕೊಟ್ಟ ಇತ್ತೀಚೆಗೆ ರಚಿತವಾದ ಅಲ್ಲಿನ ಹೊಸ ಮಂತ್ರಿಮಂಡಲದ ಸದಸ್ಯರಾಗಿದ್ದ ಶ್ರೀ ರಾಮಾಚಾರರು ತಮ್ಮ ಪ್ರಯತ್ನದಲ್ಲಿ ಅಯಶಸ್ವಿಯಾಗಿ ರಾಜಿನಾಮೆ ಕೊಟ್ಟರು. ಮುಖ್ಯ ಮಂತ್ರಿಗಳು ಅಲ್ಲಿನ ಮಜ್ಲಿಸ್ ಸಂಸ್ಥೆಯನ್ನು ಅಕ್ರಮ ಕೂಟವನ್ನಾಗಿ ಸುದ್ದಿಯನ್ನೇ ಎತ್ತಿಲ್ಲ. ನಿಜಾಮರಾದರೊ ರಾಮಾಚಾರರ ಪತ್ರಕ್ಕೆ ಉತ್ತರವನ್ನೇ ಕಳುಹಿಸದೆ ಮೌನ ತಾಳಿದ್ದಾರೆ.

ರೈಲ್ವೇ ಸೌಕರ್ಯ

ಇನ್ನು ಸ್ವಲ್ಪ ಸಮಯದಲ್ಲಿ ರೈಲುಗಳಲ್ಲಿ ಮೂರನೆ ತರಗತಿಯ ಪ್ರಯಾಣಕ್ಕೆ ಹೆಚ್ಚಿನ ಸುಖದ ಸೌಕರ್ಯಗಳನ್ನು ಮಾಡುವುದಾಗಿ ಕೇಂದ್ರ ಸರಕಾರ ಯೋಚಿಸಿದೆ. ಈ ವರ್ಷ ರೈಲು ಖಾತೆಗೆ ೯ ಕೋಟಿ ರೂಪಾಯಿ ಲಾಭವಿದೆ. ಇದರಲ್ಲಿ ಅರ್ಧವನ್ನು ಕೇಂದ್ರ ಖಜಾನೆಗೂ ಮತ್ತೊಂದರ್ಧವನ್ನು ಪ್ರಯಾಣಿಕರ ಸೌಕರ್ಯಕ್ಕೂ ವಿನಿಯೋಗಿಸುವದೆಂಬ ಸಂಗತಿ ಸಂತೋಷದ್ದು.

ಪೋಲಿಸರಿಗೆ ಗುಂಡಿನ ಅಧಿಕಾರ–ಮದ್ರಾಸ್‌ದಲ್ಲಿ ಗಲಭೆ ನಿಯಂತ್ರಣ ಶಾಸನ

ಮದರಾಸ್ ಶಾಸನ ಸಭೆಯು ಗಲಭೆ ನಿಯಂತ್ರಣ ಮಸೂದೆಯನ್ನು ಸ್ವೀಕರಿಸಿತು. ಓರ್ವ ಪೋಲಿಸ್ ಹೆಡ್ ಕಾನ್ಸ್ಟೇಬಲನಿಗೆ ಅಶಾಂತಿಯ ಸಂದರ್ಭದಲ್ಲಿ ಗುಂಡು ಹಾರಿಸುವ ಅಧಿಕಾರ ಕೊಡಲಿಬೇಕೆಂದಿತ್ತು. ಶ್ರೀ ಕೆ. ಆರ್. ಕಾರಂತರು ಈ ಅಧಿಕಾರ ಸಬ್ ಇನ್‌ಸ್ಪೆಕ್ಟರರಿಗೆ ಮಾತ್ರ ಇರಬೇಕೆಂಬ ತಿದ್ದುಪಡಿ ತಂದಿದ್ದು ಸ್ವೀಕೃತವಾಯಿತು. ಈ ಶಾಸನವನ್ನು ಉಪಯೋಗಿಸುವ ಸಂದರ್ಭ ಬರದಿರಲೆಂದು ಗೃಹ ಮಂತ್ರಿ ಸುಬ್ಬರಾಯನ್ನರು ಹಾರೈಸಿದರು. ವಿರೋಧ ಪಕ್ಷದ ಲೀಗ್ ಸದಸ್ಯರು ಇದು ಸಂಪೂರ್ಣ ಅನಾವಶ್ಯಕವೆಂದು ಪ್ರತಿಭಟಿಸಿದರು.

Property for Sale

"Auburn Villa" Falneer Main Road, at Vaz Lane Junction. Big House with Five Shops on Road Side with Cocoanut & Fruit trees.

Please apply to:

Mrs. Pauline Saldanha,
"Auburn Villa"
Falneer, Mangalore.

ಮನೆ ಹಿತ್ಲು ಮಾರಾಟಕ್ಕಿದೆ

ಫಳ್ನೀರು ಮೆಯಿನ್ ರಸ್ತೆಯ ಬದಿ 5 ಅಂಗಡಿಗಳಿದ್ದು, ಒಂದು ದೊಡ್ಡ ಮನೆಯಿದ್ದು, ತೆಂಗಿನ ಮರಗಳು ಮತ್ತು ಇತರ ಹಣ್ಣುಹಂಪಲುಗಳ ಮರವಿರುವ ಒಂದು ಹಿತ್ತಲು (ಆಬರ್ನ್ ವಿಲ್ಲಾ) ಮಾರಾಟಕ್ಕಿದೆ. ಹೆಚ್ಚಿನ ವಿವರಗಳನ್ನು ಈ ಕೆಳಗಿನ ವರಲ್ಲಿ ವಿಚಾರಿಸಿರಿ.

ಮಿಸೆಸ್ ಪೌಲಿನ್ ಸಲ್ಡಾನ್ಹಾ,
ಆಬರ್ನ್ ವಿಲ್ಲಾ
ಫಳ್ನೀರ್, ಮಂಗಳೂರು.

ಶಬ್ದ ಕಂಪನದಿಂದ ಶಸ್ತ್ರಚಿಕಿತ್ಸೆ

ಆಧುನಿಕ ವಿಜ್ಞಾನದ ನೂತನ ಕ್ಷೇತ್ರ

ಶಬ್ದವು ರೋಗಾಣುಗಳನ್ನು ನಾಶಪಡಿಸುತ್ತದೆ

ಶಬ್ದ ಇಲ್ಲವೆ ನಾದದಿಂದ ನಿಮ್ಮ ಬೆರಳುಗಳನ್ನು ಸುಡಬಹುದೆಂಬ ಸಂಗತಿಯನ್ನು ಬಲ್ಲಿರಾ? ಶಬ್ದದಿಂಥ ವಾತಾವರಣದಲ್ಲುಂಟಾಗುವ ಕಂಪನದ ಅಲೆಗಳು ಅಗಾಧವೂ ಸೂಕ್ಷ್ಮವೂ ಆದ ಶಕ್ತಿಯುಳ್ಳವುಗಳಾಗಿವೆಯೆಂದು ತಿಳಿದ ವಿಜ್ಞಾನಿಗಳೀಗ ಅವುಗಳನ್ನು ವಿವಿಧ ಉಪಯುಕ್ತ ಕಾರ್ಯಗಳಿಗಾಗಿ ಉಪಯೋಗಿಸಲು ಪ್ರಯೋಗಗಳನ್ನು ನಡೆಸುತ್ತಿರುವರು.

ಬಲವಾಗಿ ಬಡೆಯಲ್ಪಡುವ ಬೇಂಡ್ ವಾದ್ಯದ ಡೋಲಿನ ಶಬ್ದ ಕಂಪನದಿಂದ ಬಹಳ ದೂರದ ಮನೆಯೊಂದರ ಮಾಳಿಗೆಯ ಕಿಟಕಿಯ ಗಾಜಿನ ಬಾಗಿಲುಗಳು ಕಂಪಿಸುವುದನ್ನು ನಾವು ಕಂಡಿರಬಹುದು ಒಂದೇ ಬಿಗಿಯಲ್ಲಿ ತಂಗುವಮಾಡಿಟ್ಟ ತಂತಿವಾದ್ಯವೊಂದು ಬಾರಿಸಲ್ಪಡುವ ಮತ್ತೊಂದರ ಕಂಪನಕ್ಕೆ ತನ್ನಷ್ಟಕ್ಕೆ ಮಿಡಿಯುವುದು ಯೆಹೂದ್ಯರ ಇತಿಹಾಸದಲ್ಲಿ ಅಸಂಖ್ಯಾತ ಜನತೆಯ ಜಯಜಯಕಾರದ ಘೋಷಕ್ಕೆ ಜೆರಿಕೊ ಎಂಬ ಪಟ್ಟಣದ ಕೋಟೆಕೊತ್ತಲಗಳು ಕುಸಿದಿದ್ದ ನಿದರ್ಶನವಿದೆ ಇದು ಶಬ್ದ ಸಂಶಕ್ತಿಯ ಪ್ರಭಾವದ ವಿವರಣಕೊಟ್ಟಿದ್ದಾರೆ

ಷಿಕಾಗೋದ ಒಂದು ಪ್ರಯೋಗ ಶಾಲೆಯಲ್ಲಿ ಒಂದು ಪ್ರಯೋಗ ನಡೆಯಿತು ಒಂದು ಗಾಜಿನ ನಳಿಗೆಯ ತುದಿಯಲ್ಲಿ ಒಂದು ಚಿಕ್ಕ ಮೀನನ್ನು ಹಾಕಿ ... ತಾರಕ ಸ್ವರಕ್ಕಿಂತಲೂ ಮಿಗಿಲಾದ ಶಬ್ದಕಂಪನಗಳ ದಾರಿಯಲ್ಲಿ ... ದಾಗ ಮೀನು ತಕ್ಷಣ ಮಡಿಯಿತು. ಸೆಕುಂಡಿಗೆ ೪೫ ಸಾವಿರಕ್ಕೂ ಹೆಚ್ಚಿನ ಆ ಬೃಹತ್ಕ್ಷುದ್ರ ಕಂಪನಕ್ಕೆ ಮೀನಿನ ದೇಹದೊಳಗಿನ ರಕ್ತಾಣುಗಳು ಕಡೆಯಲ್ಪಟ್ಟು ಸ್ಫೋಟಿತವಾದುದೇ ಅದರ ಶೀಘ್ರ ಮೃತ್ಯುವಿಗೆ ಕಾರಣವಾಯಿತು.

ಅಸ್ತ್ರರಹಿತ ಶಸ್ತ್ರಚಿಕಿತ್ಸೆ

ಅಮೇರಿಕದ ಕನೆಕ್ಟಿಕಟ್ ಪ್ರಾಂತದಲ್ಲಿ ಓರ್ವ ಪ್ರಯೋಗಕರ್ತನು ಒಂದು ಗಾಜಿನ ನಳಿಗೆಯಲ್ಲಿ ಸ್ವಲ್ಪ ಪಾದರಸವನ್ನು ಹಾಕಿ ಅದಕ್ಕೆ ಸ್ವಲ್ಪ ನೀರನ್ನು ಸೇರಿಸಿದನು. ಇವೆರಡು ಬೇಗನೆ ಮಿಶ್ರವಾಗುವಂತಹುಗಳಲ್ಲ ಆದರೆ ಪ್ರಚಂಡ ಮೌನ ಶಬ್ದಕಂಪನಕ್ಕೆ ಕ್ಷಣಮಾತ್ರದಲ್ಲಿ ಅವು ಬೆರೆತುಕೊಂಡು ಬಿಳಿದಾದ ಮಿಶ್ರಣವಾಯಿತು (ಮೌನಶಬ್ದವೆಂದರೆ ಮಾನವ ಶ್ರವಣೇಂದ್ರಿಯದ ಶಕ್ತಿಗೆ ಮಿಕ್ಕಿದ ಶಬ್ದ ಸಾಮಾನ್ಯವಾಗಿ ಅದು ನಮಗೆ ಕೇಳಿಸುವುದಿಲ್ಲ)

ರಶ್ಯಾದಲ್ಲಿನ ಕೃಷಿಪ್ರಯೋಗ ಶಾಲೆಗಳಲ್ಲಿ ಶಬ್ದಕಂಪನಗಳ ಪ್ರಭಾವಕ್ಕೊಳಪಡಿಸಲ್ಪಟ್ಟ ಬೀಜಗಳು ಹೆಚ್ಚೆಚ್ಚು ಸಮೃದ್ಧ ಫಲವನ್ನು ಕೊಟ್ಟಿವೆ. ಕೊಲಂಬಿಯಾ ವಿಶ್ವವಿದ್ಯಾಲಯದ ವಿಜ್ಞಾನಿಗಳು ಪ್ರಚಂಡ ಶಬ್ದದ ಅಲೆಗಳನ್ನು ಕೆಲವು ಪ್ರಾಣಿಗಳ ಕಪಾಲದೆದುರು ಕೇಂದ್ರೀಕರಿಸಿ ಅವು ಮಿದುಳನ್ನು ಹೊಗುವಂತೆ ಮಾಡಿ ಒಳಗಿನ ವ್ಯಾಧಿಗ್ರಸ್ತವಾದ ಅವಯವಗಳನ್ನು ಗುಣಪಡಿಸಿ ಕತ್ತಿಯಿಲ್ಲದ ಶಸ್ತ್ರಚಿಕಿತ್ಸೆಯ ಅದ್ಭುತ ಪ್ರಯೋಗವನ್ನು ಪರಿಪೂರ್ಣಗೊಳಿಸಿದ್ದಾರೆ.

ಬೇರೆ ಬೇರೆ ಕಂಪನದಲೆಗಳು ನಿಮ್ಮ ಬೆರಳುಗಳನ್ನು ಸುಡಬಲ್ಲವು, ಆಹಾರದೊಳಗಿನ ಸಸ್ಯಜೀವಾತುಗಳನ್ನು ಕೊಲ್ಲಬಲ್ಲವು, ಶರೀರದೊಳಗಿನ ಸೂಕ್ಷ್ಮಗ್ರಂಥಿಗಳನ್ನು ನಾಶಮಾಡಬಲ್ಲವು, ಹಾಲು ನೀರನ್ನು ಸಂಸಮಾನವಾಗಿ ಮಿಶ್ರಮಾಡಬಲ್ಲವು, ರಾಸಾಯನಿಕ ಕ್ರಿಯೆಯನ್ನು ಶೀಘ್ರಗೊಳಿಸಬಲ್ಲವು, ಮಾತ್ರವಲ್ಲ ಪೈಂಟ್ ಮೊದಲಾದ ಬಣ್ಣ ಮಿಶ್ರಣಗಳನ್ನು ಬೆರಸಬಲ್ಲವು ಮತ್ತು ಹೊಗೆಯಲ್ಲಿನ ಸೂಕ್ಷ್ಮ ಧೂಳಿನ ಕಣಗಳನ್ನು ಬೇರ್ಪಡಿಸಬಲ್ಲವು

ಈ ಶಬ್ದ ತರಂಗಗಳು ತಮ್ಮ ಈ ಪರಿಣಾಮಗಳನ್ನು ಕೇವಲ ಶಕ್ತಿಯಿಂದಲೇ ಮಾಡುವುದಿಲ್ಲ. ಶಬ್ದಕಂಪನಗಳಿಗೆ ಒತ್ತಿ ಒತ್ತಿ ಮುಂದುವರಿಯುವ ಅಗಾಧ ಒತ್ತಡಶಕ್ತಿಯಿದೆ ನಿಯುಕ್ತಿಕವಾದ ಕಾಲಮಾನದ ಉತ್ಪತ್ತಿಯಿಂದವು ಮೇಲಿಂದ ಮೇಲೆ ತಮ್ಮ "ಕೊಳ್ಳೆಯ ಮೇಲೆ ಆಗುವ ಒತ್ತಡದಿಂದ ಪರಿಣಾಮಗೊಳ್ಳುತ್ತವೆ

ಕುರುಡರಿಗೆ ಸಹಾಯ

ಸ್ವರಕಂಪನಗಳನ್ನು ಬಳಿವ ಪರಿಶೋಧಾತ್ಮಕ ಮತ್ತು ವ್ಯಾವಹಾರಿಕ ಕಾರ್ಯಗಳಿಗೆ ಉಪಯೋಗಿಸಲು ಪ್ರಯತ್ನಗಳಾಗುತ್ತಿವೆ ಅತೀ ಸೂಕ್ಷ್ಮ ಪ್ರತಿಧ್ವನಿಸಿದ ಸ್ವರವನ್ನು ಸ್ವೀಕರಿಸಲು ಸಾಮರ್ಥ್ಯವುಳ್ಳ ಚಿಕ್ಕ ಉಪಕರಣದಿಂದ ಕುರುಡರು ತಮ್ಮ ದಾರಿಯಲ್ಲಿರುವ ಯಾವುದೇತರದ ಆತಂಕಗಳನ್ನು ಅರಿತುಕೊಳ್ಳಬಹುದು

ಒಂದು ನೂತನ ಮೋಟಾರು ಗೃಹ. ಅದರ ಮುಂದಿನ ದಾರಿಯಲ್ಲಿರುವ ಒಂದು ಗುಂಡಿಯು ಒಳಬರಲಿದ್ದ ಮೋಟಾರಿನ ಚಕ್ರದಿಂದ ಒತ್ತಲ್ಪಟ್ಟಾಗ ಒಂದು ತಿರುಗುಯಂತ್ರವು ಒಂದು ಮೌನ ನಾದವನ್ನು ಮಾಡುವುದು ಅದರ ಕಂಪನದಿಂದುಂಟಾದ ಅಲೆಗಳನ್ನು ಎದುರಿನಲ್ಲಿರುವ ಸೂಕ್ಷ್ಮಗ್ರಾಹಕವೊಂದು ಸ್ವೀಕರಿಸಿ ಒಂದು ಸಣ್ಣ ಡ್ಯಾಸಮೊ ಮೋಟಾರನ್ನು ತಿರುಗಿಸುವುದು. ಇದು ಕ್ರಮವಾಗಿ ಮೋಟಾರು ಗೇರೇಜಿನ ಬಾಗಿಲುಗಳನ್ನು ತೆರೆದು, ವಿದ್ಯುತ್ ದೀಪಗಳನ್ನು ಉರಿಸುವುದು ಇದೊಂದು ಪರೀಕ್ಷಾರ್ಥ ಪ್ರಯೋಗ

ಲೋಹ ಪರೀಕ್ಷಕ

ಇದೇ ಸಮಯಕ್ಕೆ ಶಬ್ದವು ಅನೇಕ ಖರ್ಚು ಉಳಿಸುವ ಸಾಧನಗಳನ್ನು ನಿರ್ಮಿಸುವುದು ಅನೇಕ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಸೆಕುಂಡಿಗೆ ಮಿಲಿಯಾಂತರ ಕಂಪನಗಳನ್ನುಂಟುಮಾಡುವ ಸ್ವರಗಳು ಹತ್ತಡಿಯಷ್ಟು ದಪ್ಪವಾದ ಕಬ್ಬಿಣ ಮತ್ತು ಉಕ್ಕಿನ ಹಲಗೆಗಳೊಳಗಿರುವ ಯಾವುದಾದರೂ ಬಿರುಕು ಬಿಕ್ಕಟ್ಟುಗಳನ್ನು ಹುಡುಕಿ ತೆಗೆಯುವುದು. ಎಕ್ಸರೇ ವಿಧಾನದಿಂದಲೂ ಇದನ್ನು ಕಂಡುಹಿಡಿಯಲಿಕ್ಕಾಗುವದಿಲ್ಲ ಬಿರುಕಿರುವ ಮತ್ತು ಇಲ್ಲದಿರುವ ಲೋಹಗಳ ಶಬ್ದಕಂಪನದ ಪರಿಣಾಮದಿಂದುಂಟಾದ ಪ್ರತಿಧ್ವನಿಗಳಲ್ಲಿ ಸ್ಪಷ್ಟವಾದ ವ್ಯತ್ಯಾಸವಿದೆಯೆಂದು ಮಿಚಿಗನ ವಿಶ್ವವಿದ್ಯಾಲಯದ ಡಾ। ಫಾಯರ್ಸ್ಟನ್ ಅವರು ಹೇಳುತ್ತಾರೆ ಶಬ್ದವು ಸಪ್ಪಗಾಗಿದ್ದರೆ ಎರಕಹೊಯ್ದ ಲೋಹದಲ್ಲಿರುವ ದೋಷಸೂಚಕವಾಗಿದೆ.

ಲೋಹೋಪಕರಣಗಳಲ್ಲಿರುವ ದೋಷವನ್ನು ಕಂಡುಹಿಡಿಯಲು ಎಕ್ಸರೇ ಯಂತ್ರಗಳು ಕಂಡುಹಿಡಿಯಲ್ಪಟ್ಟಿವೆ ನಿಜ ಆದರೆ ಅವಕ್ಕೆ ಹೆಚ್ಚು ಸಮಯವು ಹಿಡಿಯುವುದು. ಶಬ್ದಕಂಪನ ವಿಧಾನದಿಂದಾದರೆ ಕ್ಷಣಮಾತ್ರದಲ್ಲಿ ಇದನ್ನು ಕಂಡುಹಿಡಿಯಬಹುದು.

ಶಬ್ದದಿಂದ ಬಟ್ಟೆ ಒಗೆತ

ಬ್ರಿಟನ ವೈಜ್ಞಾನಿಕ ಮತ್ತು ಕೈಗಾರಿಕಾ ಪರಿಶೋಧನಾಲಯದವರು "ಶಬ್ದಕಂಪನಗಳು ಬಟ್ಟೆಯ ಮೇಲಿನ ಕೊಳೆಯನ್ನು ತೆಗೆಯಬಲ್ಲವು" ಎಂದು ಕಂಡುಹಿಡಿದಿದ್ದಾರೆ ಇದೇ ವಿಧಾನವನ್ನನುಸರಿಸಿ ಓರ್ವ ಅಮೇರಿಕನ್ ಯಂತ್ರಜ್ಞನು ಸ್ವರಕಂಪನಗಳಿಂದ ದಪ್ಪವಾದ ಕಂಬಳಿಯ ಕ್ಲಿಷ್ಟ ಕಲೆಗಳನ್ನು ತೆಗೆಯಬಲ್ಲ ಯಂತ್ರವನ್ನು ಕಂಡುಹಿಡಿದು ಪೇಟೆಂಟ್ ಪಡೆದು ರಿಜಿಸ್ಟರ್ ಮಾಡಿರುವರು

ಆಹಾರವನ್ನು ಕಲ್ಮಶರಹಿತವಾಗಿ ಮಾಡುವ ಸ್ವರಶಕ್ತಿಯ ವಿಧಾನಗಳನ್ನು ಕಂಡುಹಿಡಿಯಲು ಕೆಲ ತರುಣ ಅಮೇರಿಕನ್ ವಿಜ್ಞಾನಿಗಳು ಪರಿಶ್ರಮಪಡುತ್ತಿರುವರು. ಶಬ್ದಕಂಪನಗಳಿಂದ ಪ್ರಭಾವಿಸಲ್ಪಟ್ಟ ಹಾಲಿನೊಳಗಿನ ರೋಗಜೀವಾತುಗಳು ನಾಶವಾಗಿ ಹಾಲು ಬಹಳ ಸಮಯದ ವರೆಗೆ ಕೆಡದೆ ಉಳಿಯುವದಂತೆ

ಅದೃಶ್ಯ ಶಕ್ತಿ

ನೂರಾರು ಗಜಗಳ ದೂರದ ತನಕ ಕಂಪನಶಕ್ತಿಯ ಪ್ರಭಾವವನ್ನು ಬೀರುವ ಬೃಹತ್ಸ್ವರೋತ್ಪಾದಕ ಯಂತ್ರಗಳನ್ನು ಮೆಸೆಚುಸೆಟ್ಸಿನಲ್ಲಿ ತಯಾರಿಸಲಾಗಿದೆ. ಪ್ರಚಂಡ ಒತ್ತಡದ ಗಾಳಿಯನ್ನು ತಿರುಗುಬೀಸಣಿಗೆಗಳಿಂದ ಕತ್ತರಿಸಿ ಹಿಡಿದು ಸಮಾನದ ಶಬ್ದವನ್ನು ಹೊರಪಡಿಸಿ ಅದನ್ನು ಸಮುದ್ರದಲ್ಲಿನ ಮುಸುಕು ಮಂಜನ್ನು ಹರಿದೊಗೆಯಲುಪಯೋಗಿಸಲಾಗುವುದು. ಇದೇ ರೀತಿ ಮುಗಿಲು ಸಮುದಾಯವನ್ನು ಶಬ್ದತರಂಗಗಳಿಂದ 'ಮೋಹ'ಗೊಳಿಸಿ ಮಳೆಯಾಗಿ ಸುರಿಸುವ ಪ್ರಯೋಗವೂ ನಡೆದಿದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಜೋಖಿಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨½
೪ರಿಂದ ೫ ತಿಂಗಳು	,,	,,	೨¾
೬ರಿಂದ ೯ ತಿಂಗಳು	,,	,,	೨¼

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಯ ತಿಪನುಸಿನೆಗ ದಗಿಸುತ್ತದೆ. ಚರ್ಮ ಸ್ವಚ್ಛವಾಗಿ ರಚಿಸ್ಪಳರಿಸುತ್ತದೆ.

557

ಕುಟಿಕೂರಾ ಮುಲಾಮು
CUTICURA OINTMENT

ಸ್ವದೇಶಾಭಿಮಾನಿ

ತಾರೀಖು 12—3—1948

ಭದ್ರತಾ ಸಮಿತಿ

ಸಂಯುಕ್ತ ರಾಷ್ಟ್ರಗಳ ಭದ್ರತಾ ಸಮಿತಿಯ ಮುಂದೆ ಪುನಃ ಕಾಶ್ಮೀರದ ಪ್ರಶ್ನೆ ಬರುತ್ತಿದೆ. ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ಮುಂದಾಳ್ತನದ ಭಾರತೀಯ ಪ್ರತಿನಿಧಿ ಮಂಡಲವು ಪುನಃ ಲೇಕ್ ಸಕ್ಸೆಸ್ಸಿಗೆ ತೆರಳಿರುತ್ತದೆ.

ಇತ್ತ ಕಾಶ್ಮೀರದಲ್ಲಿ ಮಹಾರಾಜರು ಪೂರ್ಣ ಪ್ರಜಾ ಪ್ರತಿನಿಧಿ ಸರಕಾರದ ಸುಧಾರಣೆ ಜಾಹೀರು ಮಾಡಿರುತ್ತಾರೆ. ಹಿಂದುಸ್ಥಾನ ಸರಕಾರದವರಾದರೋ ಕಾಶ್ಮೀರ ಪ್ರಶ್ನೆಯ ಆದ್ಯಂತಗಳನ್ನು ಕೂಲಂಕುಶವಾಗಿ ವಿವರಿಸುವ ಶ್ವೇತ ಪತ್ರವೊಂದನ್ನು ಪ್ರಕಟಿಸಿದ್ದಾರೆ. ಇವು ಭದ್ರತಾ ಸಮಿತಿಯು ಕಾಶ್ಮೀರ ಪ್ರಶ್ನೆಯನ್ನು ಕುರಿತು ನ್ಯಾಯವಾದ ತೀರ್ಮಾನಕ್ಕೆ ಬರಲು ಸಹಾಯಕಗಳಾಗಿರುತ್ತವೆ.

ಜಫರುಲ್ಲಾ ಖಾನರು ಈ ತನ್ಮಧ್ಯೆ ಲೇಕ್ ಸಕ್ಸೆಸ್ಸಿನಿಂದ ಇಂಗ್ಲಾಂಡಿಗೆ ಬಂದು ಸ್ವಲ್ಪ ಪ್ರಚಾರ ಕಾರ್ಯ ಮಾಡಿರುತ್ತಾರೆ. ಕಾಶ್ಮೀರದಲ್ಲಿ ಮಹಾರಾಜರಿಗೂ ಪ್ರಜೆಗಳಿಗೂ ಜಗಳವಾಗುತ್ತಿದೆ. ಮಹಾರಾಜರು ತಮ್ಮ ಅಧಿಕಾರ ಮೆರೆಸಬೇಕೆಂದೂ ಪ್ರಜೆಗಳು ಪ್ರಜಾಧಿಪತ್ಯ ಸಾಧಿಸಲಿಕ್ಕೂ ಹೆಣಗಾಡುತ್ತಿದ್ದಾರೆ. ಭಾರತ ಸರಕಾರವು ಮಹಾರಾಜರ ಪಕ್ಷವನ್ನು ಕಟ್ಟಿಕೊಂಡು ಕಾಶ್ಮೀರದ ಪ್ರಜೆಗಳನ್ನು ಬಲಾತ್ಕಾರದಿಂದ ಬಗ್ಗಿಸಲು ಸೈನ್ಯಗಳನ್ನು ಉಪಯೋಗಿಸುತ್ತಿದೆ. ಗಡಿನಾಡಿನ ಜನರು ಪ್ರಜೆಗಳ ಸಹಾಯಕ್ಕೆ ಬಂದವರಿದ್ದು ಇವರ ಪ್ರಶ್ನೆಯು ನಿಜವಾಗಿ ಇಲ್ಲಿಯು ಗೌಣ ಪ್ರಶ್ನೆಯಾಗಿರುತ್ತದೆ ಮುಖ್ಯ ಪ್ರಶ್ನೆಯೆಂದರೆ ಭಾರತ ಸರಕಾರದ ಸೈನ್ಯಗಳು ಹಿಂತೆಗೆಯಲ್ಪಡುವುದೇ ಇರುತ್ತದೆ. ಈ ಸೈನ್ಯಗಳು ಅಲ್ಲಿರುವ ತನಕ ಪ್ರಜಾಭಿಪ್ರಾಯ ನಿರ್ಣಯವು ನ್ಯಾಯವಾಗಿ ನಡೆಯುವುದು ಸಾಧ್ಯವೇ ಇಲ್ಲ. ಕಾಶ್ಮೀರವು ಭಾರತಕ್ಕೆ ಸೇರಲು ಬಹುಮತವನ್ನು ಬಲಾತ್ಕಾರದಿಂದ ಪಡೆಯುವುದೇ ಭಾರತ ಸರಕಾರದ ಹಂಚಿಕೆ. ಈ ರೀತಿ ಜಫರುಲ್ಲಾ ಖಾನರ ಪ್ರಚಾರ ~~ಕಾರ್ಯ ನಡೆದಿರುತ್ತದೆ. ಇದು ಪೂರ್ಣ~~ ಅಪಪ್ರಚಾರವೆಂದು ಇಲ್ಲಿ ಓದುಗರಿಗೆ ವಿವರಿಸಬೇಕಾಗಿಲ್ಲ.

ಕಳೆದ ಮೂವತ್ತು ವರ್ಷಗಳಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ ಸಂಸ್ಥೆಯು ಸಂಸ್ಥಾನಗಳಲ್ಲಿ ಪ್ರಜಾಪ್ರತಿನಿಧಿ ಸರಕಾರಗಳನ್ನು ಸ್ಥಾಪಿಸಲು ಕೂಡಾ ಹೇಗೆ ಹೆಣಗಾಡಿರುತ್ತದೆಂಬುದನ್ನು ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರು ವಿವರಿಸಿ ಈಗಿನ ಭಾರತದ ಕಾಂಗ್ರೆಸ್ ಮುಂದಾಳ್ತನದ ಸರಕಾರದ ಧೋರಣೆಯೂ ಅದೇ ಇರುತ್ತದೆಂದೂ ಭಾರತ ಸರಕಾರದವರು ಮಹಾರಾಜರ ಆಮಂತ್ರಣದಿಂದ ಮಾತ್ರ ಕಾಶ್ಮೀರ ಪ್ರವೇಶ ಮಾಡದೆ ಜೊತೆಯಲ್ಲಿ ಪ್ರಜಾಧಿಕಾರಕ್ಕಾಗಿ ಕಳೆದ ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು ಕಾಶ್ಮೀರದಲ್ಲಿ ಹೆಣಗಾಡಿದ ಪ್ರಜೆಗಳ ನಿಜವಾದ ಮುಂದಾಳುವಾದ ಶ್ರೀ ಶೇಕ್ ಅಬ್ದುಲ್ಲಾರವರು ಕೂಡಾ ಕರೆದುದರಿಂದ ಮಾತ್ರ ಭಾರತ ಸರಕಾರವು ಸಹಾಯಕ್ಕೆ ಹೋಗಿದೆಯೆಂಬುದನ್ನು ಸ್ಪಷ್ಟಗೊಳಿಸಿದ್ದಾರೆ. ಈ ಮಾತುಗಳನ್ನು ಮಹಾರಾಜರು ಈಗ ಪ್ರಜಾಪ್ರತಿನಿಧಿ ಸರಕಾರದ ಸುಧಾರಣೆಗಳನ್ನು ಪ್ರಕಟಿಸಿರುವುದರಿಂದ ಇನ್ನೂ ಅಲ್ಲಗಳೆಯಲು ಸಾಧ್ಯವಿಲ್ಲ.

ಪಾಕಿಸ್ಥಾನ ಹಿಂದುಸ್ಥಾನಗಳೊಳಗೆ ಸೇರುವ ಕುರಿತು ಪ್ರಜಾಭಿಪ್ರಾಯ ನಿರ್ಣಯವನ್ನು ಅಂತರ್‌ರಾಷ್ಟ್ರೀಯ ಪ್ರತಿನಿಧಿಗಳ ಸಮಕ್ಷಮದಲ್ಲಿ ಯಾವ ಬಲಾತ್ಕಾರವು ನಡೆಯದಂತೆ ಜರಗಿಸುವುದಾಗಿ ಭಾರತ ಸರಕಾರವು ತಾನಾಗಿ ಆರಂಭದಿಂದಲೂ ಒಪ್ಪಿಕೊಂಡು ಹೇಳುತ್ತದೆಯೆಂದ ಮೇಲೆ ಇದರಲ್ಲಿ ಬಲಾತ್ಕಾರ ನಡೆಸುವ ಹಂಚಿಕೆಯಿದೆ ಎಂಬ ಮಾತಿನಲ್ಲಿ ಹುರುಳಿಲ್ಲವೆಂಬುದು ಸ್ಪಷ್ಟವಷ್ಟೆ?

ಕಾಶ್ಮೀರದಲ್ಲಿಯ ನಿಜವಾದ ಪ್ರಶ್ನೆ ಗಡಿನಾಡಿನ ಜನರು ದಂಡೆತ್ತಿ ಬಂದುದೇ ಇದ್ದು ಇವರನ್ನು ಹೊರಗೆ ಓಡಿಸದೆ ಭಾರತದ ಸೈನ್ಯಗಳು ಹಿಂದೆ ಬರಲಾರವು. ಈ ಗಡಿನಾಡಿನ ಜನರಿಗೆ ಪಾಕಿಸ್ಥಾನವು ಸಹಾಯ ಮಾಡುವುದು ಶುದ್ಧ ಅನ್ಯಾಯವಿದ್ದು ಇದನ್ನು ಭದ್ರತಾ ಸಮಿತಿಯು ವಿಚಾರಿಸಿ ನಿಜವೆಂದಾದರೆ ಪಾಕಿಸ್ಥಾನವನ್ನು ಈ ಅನ್ಯಾಯ ನಡೆಸದಂತೆ ತಡಗಟ್ಟಬೇಕೆಂದು ಭಾರತ ಸರಕಾರವು ಭದ್ರತಾ ಸಮಿತಿಯನ್ನು ಕೇಳಿಕೊಂಡಿರುತ್ತದೆ. ಪಾಕಿಸ್ಥಾನವು ಗಡಿನಾಡಿನ ಈ ಜನರಿಗೆ ಸಹಾಯ ಮಾಡುವುದು ನಿಜವೆ ಎಂಬುದನ್ನು ವಿಚಾರಿಸಿ ಕಂಡುಕೊಳ್ಳಲು ಬೇಕಾದ ಶಿಷ್ಟಮಂಡಲವನ್ನು ಆ ಸಮಿತಿಯು ನೇಮಿಸಿದಲ್ಲಿ ಇದು ನಡೆಸುವ ~~ವಿಚಾರಣೆಗಳಿಗೆ ಅಗತ್ಯವುಳ್ಳ~~ ಸಹಾಯ ಸಹಕಾರಗಳನ್ನು ಕೊಡಲು ಭಾರತ ಸರಕಾರವು ಸಿದ್ಧವಿರುತ್ತದೆ. ಹೀಗೆ ಭದ್ರತಾ ಸಮಿತಿಯು ಈ ಪ್ರಶ್ನೆಯ ಕುರಿತು ಈಗ ನ್ಯಾಯವಾದ ತೀರ್ಮಾನಕ್ಕೆ ಬರಲು ಬೇಕಾದ ಎಲ್ಲ ಮಾಹಿತಿಯನ್ನು ಅದರ ಮುಂದಿರಿಸಲಾಗಿದೆ.

ಆದರೆ ಭದ್ರತಾ ಸಮಿತಿಯು ನ್ಯಾಯವನ್ನೇ ಪ್ರಧಾನವಾಗಿ ಇಟ್ಟುಕೊಳ್ಳುವುದೇ ~~ಅಥವಾ ಇದಕ್ಕೆ ಸೇರಿದ ರಾಷ್ಟ್ರಗಳ~~ ಸ್ವಾರ್ಥದ ವಿದೇಶ ಧೋರಣೆಗಳಿಗೆ ಬಲಿಬೀಳುವುದೇ ಎಂಬುದನ್ನು ಈಗ ನೋಡಲಿಕ್ಕಿದೆ. ಪಾಕಿಸ್ಥಾನದೊಡನೆ ಸ್ನೇಹ ಬೆಳೆಸುವುದು ಮುಸ್ಲಿಮ್ ರಾಜ್ಯಗಳ ಸ್ನೇಹಕ್ಕಾಗಿ ಆತುರದಿಂದಿರುವ ಕೆಲವು ರಾಷ್ಟ್ರಗಳಿಗೆ ಅಗತ್ಯ ಕಾಣುತ್ತಿದೆಯೆಂಬುದು ನಿಜ. ಆದರೆ ತಮ್ಮ ಈ ವಿದೇಶಾಂಗ ಧೋರಣೆಯಿಂದಾಗಿ ನ್ಯಾಯವನ್ನು ಬಿಟ್ಟು ಭದ್ರತಾ ಸಮಿತಿಯು ವರ್ತಿಸುವಂತೆ ಮಾಡಿದರೆ ಜಗತ್ತಿನಲ್ಲಿ ಭದ್ರತಾ ಸಮಿತಿಯು ಬೆಲೆಯೇ ಹೋಗುತ್ತದೆಯೆಂಬುದನ್ನು ಈ ರಾಷ್ಟ್ರಗಳು ತಿಳಿದುಕೊಳ್ಳಬೇಕು. ಸಂಯುಕ್ತ ರಾಷ್ಟ್ರಗಳು ಜಾಹೀರು ಮಾಡಿರುವ ಮಾನವ ಹಕ್ಕುಗಳ ಅಧಿಕಾರ ಪತ್ರದಲ್ಲಿ ವಿಶ್ವಾಸವಿಟ್ಟು ಭಾರತ ಸರಕಾರವು ಭದ್ರತಾ ಸಮಿತಿಗೆ ತನ್ನ ದೂರು ಕೊಟ್ಟಿರುತ್ತದೆ. ಇಂಥ ವಿಶ್ವಾಸ ನಿರರ್ಥಕವಾಗುವಂತೆ ಭದ್ರತಾ ಸಮಿತಿ ವರ್ತಿಸುವುದೇ?

ಭದ್ರತಾ ಸಮಿತಿ ನ್ಯಾಯ ಬಿಟ್ಟು ವರ್ತಿಸಿದರೆ ಅದು ತನ್ನ ಬೆಲೆ ಕಳೆದುಕೊಳ್ಳುವುದು ಮಾತ್ರವಲ್ಲ ತನ್ನ ತೀರ್ಮಾನಗಳನ್ನು ಅದು ಬಲಾತ್ಕಾರದಿಂದ ಜಾರಿ ಮಾಡಲು ಅದಕ್ಕೆ ಶಕ್ತಿ ಇಲ್ಲವೆಂಬುದನ್ನು ಮನಗಾಣಬೇಕಾಗಿದೆ. ಅನ್ಯಾಯದ ತೀರ್ಮಾನಕ್ಕೆ ಭಾರತ ಸರಕಾರ ಇಂದು ತಲೆ ಬಾಗುವಂತಿಲ್ಲ. ಪೆಲೆಸ್ಟೈನ್ ಪ್ರಶ್ನೆಯಲ್ಲಿ ಭದ್ರತಾ ಸಮಿತಿ ಈಗ ಅವಸ್ಥೆಗೆ ಬಿದ್ದಿರುವಂತೆ ಭಾರತದ ಪ್ರಶ್ನೆಯಲ್ಲಿಯೂ ಹಾಸ್ಯಾಸ್ಪದವಾಗುವಂತೆ ಇದು ವರ್ತಿಸಿದರೆ ಮುಂದೆ ಸಂಯುಕ್ತ ರಾಷ್ಟ್ರ ಸಂಘ ಹಾಗೂ ಭದ್ರತಾ ಸಮಿತಿಗಳೆಂದು ಮಾಡಿರುವ ಈ ಅಂತರ್‌ರಾಷ್ಟ್ರೀಯ ಶಾಂತಿ ಸ್ಥಾಪನೆಯ ವ್ಯವಸ್ಥೆಯು ನಿರರ್ಥಕವೇ ಆಗುವುದು.

ಈ ರೀತಿ ಪರಿಣಮಿಸದಂತೆ ಲೇಕ್ ಸಕ್ಸೆಸ್ಸಿನಲ್ಲಿ ಪುನಃ ಸೇರುತ್ತಿರುವ ಭದ್ರತಾ ಸಮಿತಿಯ ಸದಸ್ಯ ರಾಷ್ಟ್ರಗಳು ಜಾಣ್ಮೆಯಿಂದಲೂ ನ್ಯಾಯದಿಂದಲೂ ವರ್ತಿಸುವಂತಾಗುತ್ತದೆಂದೇ ಹಾರೈಸೋಣ.

ಟೀಕೆ-ಟಿಪ್ಪಣಿಗಳು

ರಜ್ವೀಯವರ ಉದ್ಗಾರ

ಹೈದರಾಬಾದಿನಲ್ಲಿ ಇತ್ತೆಹಾದ ಮುಸಲ್ಮೀನರೆಂಬ ಮುಸ್ಲಿಮ್ ಲೀಗಿನ ಸಂಗಡವೊಂದಿದೆಯೆಂಬ ಪರಿಚಯವನ್ನು ಈ ಮೊದಲೇ ಓದುಗರಿಗೆ ನಾವು ಮಾಡಿಕೊಟ್ಟದ್ದುಂಟು. ಇದರ ಮುಂದಾಳು ರಜ್ವೀಯೆಂಬ ಮಹನೀಯರು ಇತ್ತೀಚೆಗೆ ಒಂದು ಭಾಷಣದಲ್ಲಿ ತಮ್ಮ ಧೋರಣೆ ಸ್ಪಷ್ಟಪಡಿಸಿದ್ದಾರೆ. ಹೈದರಾಬಾದಿನ ಪರವಾಗಿ ಮಾತನಾಡುವ ಅಧಿಕಾರ ಪೂರ್ಣ ಇವರಿಗೆ ಎಂಬಂತೆ ಮಾತನಾಡಿದ್ದಾರೆ. ಹೈದರಾಬಾದು ಎಂದಿಗೂ ಭಾರತ ಸರಕಾರಕ್ಕೆ ಸಂಯೋಜಿಸಲ್ಪಡುವಂತಿಲ್ಲವೆಂಬುದು ಇವರ ಪ್ರಥಮ ಸಿದ್ಧಾಂತ. ಎರಡನೆಯದಾಗಿ ಇಲ್ಲಿ ಪ್ರಜಾಪ್ರತಿನಿಧಿ ಸರಕಾರ ಎಂದಿಗೂ ಸ್ಥಾಪಿಸಲ್ಪಡುವಂತಿಲ್ಲವೆಂಬುದು ಇನ್ನೊಂದು ಇವರ ಸಿದ್ಧಾಂತ. ಈ ಮಹನೀಯ ಇಂಥ ಎಷ್ಟು ಭಾಷಣಗಳನ್ನು ಮಾಡುತ್ತ ಇದ್ದರೂ ತೊಂದರೆ ಇದ್ದಿಲ್ಲ. ಆದರೆ ಇಷ್ಟರಲ್ಲೆ ಕೃಷ್ಣರಾಗದೆ ಜನರ ಮೇಲೆ ಅತ್ಯಾಚಾರ ಬಲಾತ್ಕಾರಗಳನ್ನು ನಡೆಸಿ ಅವರನ್ನು ಭಯದ ಮೂಲಕ ಹತೋಟಿಗೆ ತರುವುದೂ ಇವರ ಕಾರ್ಯಕ್ರಮವೆಂಬುದು ಖೇದಜನಕ ಸಂಗತಿ ಇರುತ್ತದೆ.

ಮದ್ರಾಸ್ ಅಧಿಪತ್ಯದ ಗಡಿಯಲ್ಲಿರುವ ವಾರಂಗಲ್ಲು ಮೊದಲಾದ ಕೆಲವು ಜಿಲ್ಲೆಗಳಲ್ಲಿ ಇತ್ತೆಹಾದರದವರ ಉಪಟಳ ವಿಪರೀತ ಬೆಳೆದಿರುತ್ತದೆ. ಇಲ್ಲಿ ಹೈದರಾಬಾದು ಸರಕಾರವೇ ಇಲ್ಲವೆಂಬ ಪರಿಸ್ಥಿತಿ ಒದಗಿರುತ್ತದೆ. ಮಾತ್ರವಲ್ಲ ಸರಕಾರದ ಪೋಲೀಸು ಅಧಿಕಾರಿಗಳು ಇತ್ತೆಹಾದರದವರ ಬಲಾತ್ಕಾರ ತಡೆಗಟ್ಟುವ ಬದಲು ಅದಕ್ಕೇನೆ ಸೇರಿಕೊಳ್ಳುತ್ತಿದ್ದಾರೆಂದೂ ತಿಳಿದು ಬರುತ್ತದೆ. ಸಂಸ್ಥಾನದ ಗಡಿಯೊಳಗೆ ಮಾತ್ರವಲ್ಲ ಮದ್ರಾಸ್ ಗಡಿಯೊಳಕ್ಕೆ ಕೂಡಾ ಇವರು ಆಗಾಗ್ಗೆ ಬಂದು ಉಪಟಳ ನಡೆಸುತ್ತಿದ್ದಾರೆಂಬುದು ಇನ್ನಷ್ಟು ಶೋಚನೀಯವಿರುತ್ತದೆ.

ಹೈದರಾಬಾದಿನಂಥ ಪ್ರಥಮ ಶ್ರೇಣಿಯ ಸಂಸ್ಥಾನದ ಸರಕಾರವು ಈ ಇತ್ತೆಹಾದರನ್ನು ಅಡಗಿಸದಿದ್ದರೆ ಇದು ಆ ಸರಕಾರದ ಕೀರ್ತಿಗೆ ಅತಿ ದೊಡ್ಡ ಕಲಂಕವಾಗುವುದು ಮಾತ್ರವಲ್ಲ ಇದರಿಂದ ಸಂಸ್ಥಾನವೇ ತೊಂದರೆಗೆ ಬೀಳುವ ಸಂಭವವಿದೆಯೆಂಬುದನ್ನು ಹೈದರಾಬಾದು ಸರಕಾರವು ಚೆನ್ನಾಗಿ ತಿಳಿದು ವರ್ತಿಸಲೆಂದು ಆಶಿಸುತ್ತೇವೆ.

ಎಂಟಾರ್ಟಿಕ ಪ್ರದೇಶಗಳಲ್ಲಿ ಬ್ರಿಟಿಷ್ ವಸಾಹತುಗಳು

ದಕ್ಷಿಣ ಧ್ರುವದ ಸುತ್ತ ಒಂದು ದೊಡ್ಡ ಭೂಖಂಡವಿರುತ್ತದೆ. ಇದು ಆಸ್ಟ್ರೇಲಿಯ ಯುರೋಪುಗಳನ್ನು ಕೂಡಿಸಿದಷ್ಟು ದೊಡ್ಡ ಪ್ರದೇಶವಾದರೂ ಇದರ ಹೆಚ್ಚಿನ ಭಾಗ ಹಿಮದಿಂದಾವೃತವಿದ್ದು ಇಲ್ಲಿ ಜನವಸತಿ ಇಲ್ಲ. ಆದರೆ ಆಗಿಂದಾಗ ಇಲ್ಲಿಗೂ ಹೋಗಿ ವಾಸ ಮಾಡಲು ಸಾಧ್ಯವಾದ ಕೆಲವೆಡೆ ಪಾಶ್ಚಾತ್ಯ ರಾಷ್ಟ್ರಗಳ ಪ್ರತಿನಿಧಿಗಳು ಇಲ್ಲಿಯೂ ವಸಾಹತುಗಳನ್ನು ಸ್ಥಾಪಿಸಿದ್ದುಂಟು. ಬ್ರಿಟಿಷ್ ಹೊಂಡೋರಸ್ ಮತ್ತು ಫಾಕ್‌ಲೆಂಡ್ ದ್ವೀಪಗಳು ಇಂಥ ಬ್ರಿಟಿಷರ ವಸಾಹತುಗಳು. ಇಲ್ಲಿಯ ಸಮುದ್ರಗಳಲ್ಲಿ ವ್ಹೇಲೆ ಎಂಬ ದೊಡ್ಡ ಮೀನು ತುಂಬಾ ಸಿಕ್ಕುತ್ತಿದ್ದು ಇದರ ಎಣ್ಣೆ ಈಗ ಜಗತ್ತಿನಲ್ಲಿ ಒಂದು ಪ್ರಾಮುಖ್ಯ ವಸ್ತುವಾಗಿ ಬಂದಿರುವ ಪ್ರಯುಕ್ತ ಈ ವಸಾಹತುಗಳ ಬೆಲೆ ಏರಿದಂತೆ ಕಾಣುತ್ತಿದೆ.

ದಕ್ಷಿಣ ಅಮೇರಿಕದ ಅರ್ಜೆಂಟೀನ್ ಮತ್ತು ಗೋಟಮಾಲಾ ಎಂಬ ರಾಷ್ಟ್ರಗಳು ಈ ವಸಾಹತುಗಳಿಗೆ ಸಮೀಪವಿರುವುದರಿಂದ ಇವುಗಳನ್ನು ಸ್ವಾಧೀನಪಡೆಸಿಕೊಳ್ಳುವ ಕಾರ್ಯಕ್ರಮಕ್ಕೆ ಕೈಹಾಕಿರುತ್ತವೆ.

ಬ್ರಿಟಿಷ್ ಸಿಂಹದ ಬಾಲ ತಿರುಪಲು ಈ ನರಿಗಳು ಹೊರಟಿವೆಯೆಂದೂ ಮೂರನೆ ನರಿಯೊಂದು ಅಂದರೆ ಅಮೇರಿಕದ ಸಂಯುಕ್ತ ಸಂಸ್ಥಾನ ಸರಕಾರವು ಇದಕ್ಕೆ ಉತ್ತೇಜನ ಕೊಡುತ್ತಿದೆಯೆಂದೂ ರಷ್ಯದ ಪತ್ರಿಕೆಯೊಂದು ಬರೆದಿರುತ್ತದೆ.

ಅಂತೂ ಬ್ರಿಟಿಷ ಸಿಂಹವು ಗರ್ಜಿಸುತ್ತಿದೆ. ಗೋಟಮಾಲದಲ್ಲಿ ಬ್ರಿಟಿಷ್ ರಾಯಭಾರಿಯ ವಸತಿಯ ಮೇಲೆ ಅತ್ಯಾಚಾರ ನಡೆಯಿತು. ಅಲ್ಲಿಯ ರೂಟರ್ ಮೊದಲಾದ ಪತ್ರಿಕಾ ಪ್ರತಿನಿಧಿಗಳು ದೂರಕ್ಕೆ ಓಡಿಹೋಗಿ ವಾರ್ತೆ ಕಳುಹಿಸಬೇಕಾಯಿತು.

ನಮ್ಮ ವಸಾಹತುಗಳನ್ನು ರಕ್ಷಿಸಲು ನಮ್ಮಲ್ಲಿ ಸಾಕಷ್ಟು ಸಾಮರ್ಥ್ಯವಿದೆಯೆಂದು ಬ್ರಿಟನು ಸಾರುತ್ತಿದೆ. ವಸ್ತುಸ್ಥಿತಿ ಇನ್ನು

ಮುಂದೆ ಸ್ಪಷ್ಟವಾಗಲಿದೆಯೆಂದು ಹೇಳಿದರೆ ಸದ್ಯಕ್ಕೆ ಸಾಕು.

ಆಫ್ರಿಕದ ಗೋಲ್ಡ್ ಕೋಸ್ಟಿನಲ್ಲಿ ದಂಗೆ

ಗೋಲ್ಡ್ ಕೋಸ್ಟು ಎಂದರೆ ಚಿನ್ನದ ಕರಾವಳಿ ಎಂದರ್ಥ. ಇದು ಆಫ್ರಿಕದಲ್ಲಿರುವ ಒಂದು ಬ್ರಿಟನಿನ ಅಧೀನ ಇರುವ ಒಂದು ಪ್ರದೇಶ. ಇಲ್ಲಿಯ ಪ್ರಜೆಗಳು ದಂಗೆ ಎದ್ದಿದ್ದಾರೆ ಎಂಬ ವಾರ್ತೆ ಪ್ರಕಟವಾಗಿರುತ್ತದೆ

ಯುದ್ಧ ಕಾಲದಲ್ಲಿ ಯುದ್ಧಕ್ಕೆ ಬೇಕಾದ ಸಾಮಾನುಗಳನ್ನು ಭಾರತದಿಂದ ಪಡೆದಂತೆ ಇಲ್ಲಿಂದಲೂ ಪಡೆಯಲಾಯಿತು. ನಮಗೆ ಸ್ಟರ್ಲಿಂಗ್ ಸಾಲವನ್ನಾದರೂ ಬೆಳೆಸಿಟ್ಟರು ಅಲ್ಲಿಯವರಿಗೆ ಅದೂ ಇಲ್ಲವಂತೆ ಯುದ್ಧಾನಂತರ ಅಗ್ಗದಲ್ಲಿ ವಸ್ತುಗಳನ್ನು ಒದಗಿಸುವುದಾಗಿ ವಾಗ್ದಾನ ಕೊಟ್ಟಿರಂತೆ ಈಗ ವಸ್ತುಗಳೂ ಇಲ್ಲದಿರುವುದರಿಂದ ಜನರು ರೇಗಿದಂತಿದೆ

ತಮ್ಮ ರಾಜ್ಯ ನಡೆಸಲು ತಮಗೇನೇ ಬಿಟ್ಟುಬಿಡಿರೆಂಬ ಸ್ವರಾಜ್ಯದ ಕೇಳಿಕೆಯನ್ನೇ ಇಲ್ಲಿಯ ಜನರೂ ಮುಂದಿಟ್ಟುಕೊಂಡು ಚಳವಳ ಹೂಡಿರುವರೆಂದು ತಿಳಿದುಬರುತ್ತದೆ. ಬಲಾತ್ಕಾರಕ್ಕೆ ಮನಸ್ಸು ಕೊಡುವ್ವ ದಕ್ಕಿಂತ ಜನರ ನ್ಯಾಯವಾದ ಕೇಳಿಕೆಗೆ ಸಮ್ಮತಿ ಕೊಡುವುದೇ ಹಿತಕರವೆಂದು ಬ್ರಿಟನು ತಿಳಿದು ವರ್ತಿಸಲೆಂದು ಆಶಿಸುತ್ತೇವೆ

ಚರ್ಚಿಲರು ಮೂರನೆ ಮಹಾಯುದ್ಧ ಇದಿರುನೋಡುತ್ತಾರೆ

ಜೆಕೊಸ್ಲೊವೋಕಿಯದಲ್ಲಿ ಕಮ್ಯೂನಿಸ್ಟ್ ಪ್ರಧಾನ ಸರಕಾರ ಸ್ಥಾಪನೆಯಾದುದನ್ನು ಕಳೆದ ಬಾರಿ ಹೇಳಿತ್ತಷ್ಟೆ ಈ ಕುರಿತು ರಶ್ಯಾದವರ ಮೇಲೆ ರೇಗಿಬೀಳುತ್ತಿರುವುದು ಬ್ರಿಟನಿನಲ್ಲಿ ಇನ್ನೂ ನಿಂತಿಲ್ಲ ಹಿಟ್ಲರ್ ನಾಜಿಗಳು ಜಗತ್ತನ್ನು ಸ್ವಾಧೀನ ಪಡೆಸಲು ಹೋಗಿ ದ್ವಿತೀಯ ಮಹಾಯುದ್ಧವಾದ ಕೆ ಈಗ ರಶ್ಯಾ ಸರಕಾರ ಜಗತ್ತಿನ ಸ್ವಾಧೀನತೆಗೆ ಹೊರಟಿದೆಯೆಂದೂ ಇವರನ್ನು ಸಕಾಲದಲ್ಲಿ ತಡೆಗಟ್ಟದಿದ್ದರೆ ಮೂರನೆ ಮಹಾಯುದ್ಧ ಅನಿವಾರ್ಯವೆಂದೂ ಇದಕ್ಕೆ ತಕ್ಕ ಸಿದ್ಧತೆ ಕೈಕೊಳ್ಳಬೇಕೆಂದೂ ದ್ವಿತೀಯ ಯುದ್ಧಕಾಲದ ಪ್ರಧಾನ ಮಂತ್ರಿ ಚರ್ಚಿಲರು ಹೇಳುತ್ತಿದ್ದಾರೆ.

ಜೆಕ್ ಸರಕಾರದ ಅಧ್ಯಕ್ಷ ಡಾಕ್ಟರ್ ಬೆನ್ಸರು ಹೊಸ ಸರಕಾರಕ್ಕೆ ತಮ್ಮ ಒಪ್ಪಿಗೆ ಇತ್ತುದು ಕೇವಲ ಬಲಾತ್ಕಾರದಿಂದ ಎಂದೂ ಇವರು ಹೊಸ ಸರಕಾರದಲ್ಲಿ ಕೈದಿಯಂತೆಯೇ ಇದ್ದಾರೆಂದೂ ಪ್ರಕಟವಾಗಿರುತ್ತದೆ ಇಲ್ಲಿಯ ವಿದೇಶಾಂಗ ಮಂತ್ರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡರೆಂದೂ ವಾರ್ತೆ ಬಂದಿದೆ.

ಅಂತೂ ಜೆಕ್ಕರ ಹೊಸ ಸರಕಾರಕ್ಕೆ ಅಲ್ಲಿಯ ಪ್ರಜೆಗಳ ಬೆಂಬಲವಿರುತ್ತದೆಯೇ ರಶ್ಯಾದ ಸಹಾಯದ ಬಲಾತ್ಕಾರದಿಂದಲೇ ಇದು ನಡೆಯಬೇಕಾಗಿದೆಯೋ ಎಂಬುದು ಈ ಪ್ರಚಾರ ಅಪಪ್ರಚಾರಗಳ ನಡುವೆ ಸ್ಪಷ್ಟವಾಗುವಂತಿಲ್ಲ. ಕಾಲವೇ ಇದನ್ನು ಸ್ಪಷ್ಟಗೊಳಿಸಬೇಕಾಗಿದೆಯೆಂದು ಮಾತ್ರ ಈಗ ಹೇಳಬಹುದಾಗಿದೆ.

ಮುಂಡ್ಕೂರು ಕೃಷಿ ಕೈಗಾರಿಕೆಗಳ ಪ್ರದರ್ಶನ

ದಕ್ಷಿಣ ಕನ್ನಡ ಜಿಲ್ಲೆಯ ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ಮೂಲ್ಕಿ ಕೇಂದ್ರದಲ್ಲಿ ಈ ಫಿರ್ಕಾಕ್ಕೆ ಸೇರಿದ 38 ಗ್ರಾಮಗಳಲ್ಲಿ ಗ್ರಾಮೋದ್ಧಾರ ಕಮಿಟಿಯೊಂದು ಸ್ಥಾಪಿಸಲ್ಪಟ್ಟು ಈಗ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದೆ. ಈ ಕಮಿಟಿಯ ಕಾರ್ಯಕ್ರಮಗಳಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಪ್ರದರ್ಶನಗಳನ್ನು ವರ್ಷಕ್ಕೊಮ್ಮೆ ಜರಗಿಸುವುದು ಒಂದು ಕಾರ್ಯವಿದ್ದು ಇದು ಜಿಲ್ಲೆಯ ಜಿಲ್ಲಾಭಿವೃದ್ಧಿ ಎಸೋಸಿಯೇಶನಿನ ಆಶ್ರಯದಲ್ಲಿ ನಡೆಯುತ್ತಿದೆ ಮೂರನೆ ಬಾರಿಯ ಇಂಥ ಪ್ರದರ್ಶನವು ಇದೇ ಫಬ್ರವರಿ ತಾ 27 ರಿಂದ 29ರ ತನಕ ಮುಂಡ್ಕೂರಿನಲ್ಲಿ ಜರಗಿತು.

ತಾ 27ನೇ ದಿನ ಜಿಲ್ಲಾಭಿವೃದ್ಧಿ ಎಸೋಸಿಯೇಶನಿನ ಉಪಾಧ್ಯಕ್ಷ ಮಿ। ಎ ಬಿ ಎಚ್ ಡಿಕ್ಸನರ ಅಧ್ಯಕ್ಷತೆಯಲ್ಲಿ ಇವರ ಪತ್ನಿಯವರು ಪ್ರದರ್ಶನದ ಉದ್ಘಾಟನೆಯನ್ನು ಜರಗಿಸಿದರು

ಮುಂಡ್ಕೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಎದುರು ರಚಿತವಾದ ವಿಶಾಲ ಮಂಟಪದಲ್ಲಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇದನ್ನು ನೋಡಲು ಬೆಳಿಗ್ಗೆ 10 ಗಂಟೆಯ ಮೊದಲೇ ಹಳ್ಳಿಗರು ತಂಡತಂಡವಾಗಿ ಬಂದು ನೆರೆದಿದ್ದರು

ಪ್ರದರ್ಶನದಲ್ಲಿ ಕೃಷಿ ಇಲಾಖೆಯವರ ದೊಡ್ಡ ಸ್ಟಾಲು ಇತ್ತು ಇಲ್ಲಿ ಕೊಡೂರು ಹಣ್ಣುಹಂಪಲು ಪರಿಶೋಧನಾ ಕ್ಷೇತ್ರದಲ್ಲಿ ಬೆಳೆದ ಹಣ್ಣು ಹಂಪಲುಗಳನ್ನು ನೋಡುವಂತಿತ್ತು ಕಂಕನಾಡಿಯ ಭತ್ತ ಪರಿಶೋಧನಾ ಕ್ಷೇತ್ರದ ವಿವಿಧ ಭತ್ತದ ಮಾದರಿಗಳನ್ನು ತೋರಿಸುವ ಏರ್ಪಾಡಿತ್ತು ಕೃಷಿಯ ಹೊಸ ಉಪಕರಣಗಳು, ವಿವಿಧ ಬಗೆಯ ಗೊಬ್ಬರಕ್ಕಾಗಿ ಉಪಯೋಗಿಸುವ ಗಿಡಗಳು ಇವನ್ನೂ ಪ್ರದರ್ಶಿಸಲಾಗಿತ್ತು ಕೈಗಾರಿಕೆ ಇಲಾಖೆಯವರ ಇನ್ನೊಂದು ದೊಡ್ಡ ಸ್ಟಾಲು ಇತ್ತು ಮಂಗಳೂರಲ್ಲಿಯ ಪೊಲಿಟೆಕ್ನಿಕ್ ಸಂಸ್ಥೆಯಲ್ಲಿ ತಯಾರಾದ ವಸ್ತುಗಳು, ಕೇರಳ ಸಾಬೂನು ಕಾರಖಾನೆ, ಕಲ್ಲಿಕೋಟೆಯ ಸರಕಾರೀ ಎಣ್ಣೆ ಕಾರ್ಖಾನೆ, ಬೇಯ್ಪುರದ ಕತ್ತದ ಕೆಲಸ ಇವನ್ನೆಲ್ಲ ತೋರಿಸಲಾಗಿತ್ತು ಆರೋಗ್ಯ ಇಲಾಖೆಯವರ ಇನ್ನೊಂದು ಸ್ಟಾಲು ಇತ್ತು ಇದಲ್ಲದೆ ಜಿಲ್ಲೆಯಲ್ಲಿ ಸಸಿಗಳನ್ನು ತಯಾರಿಸಿ ಒದಗಿಸುವ ವಿವಿಧ ನರ್ಸರಿಯವರ ಸ್ಟಾಲುಗಳೂ ಇದ್ದವು ಪಡುಬಿದ್ರೆ ಖಾದೀಕೇಂದ್ರ, ಸುರತ್ಕಲ್ಲಿನವರ ದೇಶ ವಿದೇಶದ ತರಕಾರಿಗಳ ಪ್ರದರ್ಶನ, ಕೋಡಿಯ ಕತ್ತದ ಕೆಲಸ, ಶ್ರೀ ಎಮ್. ಕೆ. ಬಸಪ್ಪನವರ ಮೂಲ್ಕಿ ವಿಮಾನು ಕೈಗಾರಿಕೆಯ ಪ್ರದರ್ಶನ, ಸ್ತ್ರೀಯರ ಕೈ ಕೆಲಸಗಳನ್ನು ತೋರಿಸುವ ಸ್ಟಾಲುಗಳು ಹಾಗೂ ಇತರ ಗ್ರಾಮ ಕೈಗಾರಿಕೆಗಳ ಸ್ಟಾಲುಗಳೂ ಇದ್ದವು.

ಆರಂಭದಲ್ಲಿ ಗ್ರಾಮೋದ್ಧಾರ ಕಮಿಟಿಯ ಕಾರ್ಯದರ್ಶಿಯರಾದ ಶ್ರೀ ಎಮ್. ಆರ್. ಪೂಂಜರು ಈ ಕೇಂದ್ರದಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳ ವರದಿಯೊಂದನ್ನು ಓದಿದರು. ಈ ವರದಿಯಂತೆ ಇವರು ನಡೆಸಿದ ಕಾರ್ಯಕ್ರಮವೆಂದರೆ (1) 10 ಕೇಂದ್ರಗಳಲ್ಲಿ ಜರಗಿದ ಸಸಿನೆಡುವ ದಿನಾಚರಣೆ (2) ಸರಕಾರೀ ಕೃಷಿಕ್ಷೇತ್ರಗಳಿಗೆ ರೈತರ ಸಂದರ್ಶನಗಳ ವ್ಯವಸ್ಥೆ (3) ವಿವಿಧ ಮಾದರಿಯ ಭತ್ತ ಉಪಯೋಗಿಸಿ ಕೃಷಿ ಮಾಡಿ ಮಾದರಿಯಾಗಿ ತೋರಿಸುವುದು ಪಡು ಪಣಂಬೂರು ಮತ್ತು ಮುಂಡ್ಕೂರಲ್ಲಿ ಇದನ್ನು ತೋರಿಸಲಾಗಿತ್ತು (4) ನೀರಾವರಿ ಅನುಕೂಲತೆ ಹೆಚ್ಚಿಸುವುದು (5) ಮದ್ಯಪಾನ ನಿರೋಧ ಯಶಸ್ವಿಗೊಳಿಸಲು ಕೆಲಸ (6) ಹರಿಜನ ದೇವಸ್ಥಾನ ಪ್ರವೇಶಕ್ಕಾಗಿ ಯತ್ನ ನಡೆಸುವುದು (7) ಜನರ ಆವಶ್ಯಕತೆಗಳನ್ನು ಸರಕಾರಕ್ಕೆ ತಿಳಿಸುವುದು ಇತ್ಯಾದಿ.

ಸಮಾರಂಭದ ಅಧ್ಯಕ್ಷರಾದ ಮಿ। ಎ ಬಿ. ಎಚ್ ಡಿಕ್ಸನರು ಇಲ್ಲಿ ಜರಗುವ ಉತ್ತಮ ಕಾರ್ಯಕ್ಕಾಗಿ ಕಮಿಟಿಯವರನ್ನು ಅಭಿನಂದಿಸಿದರು ಹಿಂದುಸ್ಥಾನದಲ್ಲಿ ಕೈಗಾರಿಕೆಗಳು ಬೆಳೆಯುವುದು ಅತ್ಯಗತ್ಯ ಆದರೆ ಕೃಷಿಯನ್ನು ಕೂಡಾ ಅದೇ ರೀತಿ ಅಭಿವೃದ್ಧಿಗೊಳಿಸುವುದೂ ಅಗತ್ಯ ಈ ಗ್ರಾಮೋದ್ಧಾರ ಕಮಿಟಿಯವರು ಕೈಕೊಂಡ ಕಾರ್ಯಕ್ರಮ ನಿಜವಾಗಿಯೂ ದೇಶದ ಅಭ್ಯುದಯದ ದಾರಿ ಮಹಾತ್ಮಾ ಗಾಂಧಿಯವರ ಉಪದೇಶಗಳನ್ನು ಇಲ್ಲಿ ಪ್ರತ್ಯಕ್ಷ ಆಚರಣೆ ತರಲಾಗುತ್ತಿದೆಯೆಂಬುದು ಆನಂದದ ಸಂಗತಿ ಎಂದು ಹೇಳಿದರು

ಆ ಬಳಿಕ ಮಿಸಸ್ ಡಿಕ್ಸನರು ಪ್ರದರ್ಶನದ ಉದ್ಘಾಟನೆ ನಡೆಸಿದರು

ದೂರದಿಂದ ಬಂದ ಹಳ್ಳಿಗರಿಗೆ ಊಟ ಉಪಾಹಾರಗಳ ಏರ್ಪಾಡ ವ ಗಳೂರಿನ 'ಆಕಾಶವಾಣಿ' ರೇಡಿಯೋದವರ ಸಂಗೀತದ ಏರ್ಪಾಡೂ ಇದ್ದವು

ಶ್ರೀ. ಎನ್ ಎಸ್ ಕಿಲ್ಲೆಯವರು ಮಹಾತ್ಮಾಗಾಂಧಿಯವರ ಉಪದೇಶಗಳು ಎಂಬ ವಿಷಯದಲ್ಲಿಯೂ ಶ್ರೀ ಪಿ ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಹರಿಜನ ದೇವಸ್ಥಾನ ಪ್ರವೇಶದ ವಿಷಯದಲ್ಲಿಯೂ ಉಪನ್ಯಾಸವಿತ್ತರು

ತಾ 29ನೇ ದಿನ ಪ್ರದರ್ಶನದ ಬಹುಮಾನ ವಿತರಣಾ ಸಮಾರಂಭವು ನಡೆಯಿತು. ಶ್ರೀ ಎಸ್ ಆರ್ ಕೈವಾರ್ ಆಯ್. ಸಿ ಎಸ್ ಜಿಲ್ಲಾ ಕಲೆಕ್ಟರರು ಅಂದಿನ ಸಭಾಧ್ಯಕ್ಷರಿದ್ದರು ಇವರು ಮುಂಡ್ಕೂರಿಗೆ ಬಂದೊಡನೆ ಇವರನ್ನು ಕಮಿಟಿಯ ಮೆಂಬರರು ವಾಲಗದಿಂದ ಸ್ವಾಗತ ಮಾಡಿದರು. ಅವರು ಪ್ರದರ್ಶನವನ್ನೆಲ್ಲ ಸಂದರ್ಶಿಸಿದರು ಆ ಬಳಿಕ ಮಧ್ಯಾಹ್ನ 3 ಗಂಟೆಗೆ ಪ್ರದರ್ಶನದ ಜೊತೆಯಲ್ಲಿ ಏರ್ಪಡಿಸಲಾದ ಜಾನುವಾರು ಪ್ರದರ್ಶನದ ಉದ್ಘಾಟನೆ ಇವರಿಂದ ನೆರವೇರಿಸಲ್ಪಟ್ಟಿತು.

ಗ್ರಾಮೋದ್ಧಾರ ಕಮಿಟಿಯ ಕಾರ್ಯದರ್ಶಿ ಶ್ರೀ ಎಮ್. ಆರ್. ಪೂಂಜರ ಸ್ವಾಗತ ಭಾಷಣದೊಡನೆ . ಬಹುಮಾನ ವಿತರಣಾ ಸಭೆಯ ಕಾರ್ಯಾರಂಭವಾಯಿತು. ಕಮಿಟಿಯ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ಕೈಕೊಂಡ ಗ್ರಾಮಸ್ಥರಿಗೆ ಬಹುಮಾನಗಳನ್ನು ಯೋಗ್ಯತಾಪತ್ರಗಳನ್ನೂ ಕೊಡಲಾಯಿತು. ಪ್ರದರ್ಶನದಲ್ಲಿ ಭಾಗವಹಿಸಿದವರಿಗೂ ಇದೇ ಬಗೆಯ ಬಹುಮಾನಗಳನ್ನೂ, ಮಾನ್ಯತಾಪತ್ರಗಳನ್ನೂ ಕೊಡಲಾಯಿತು. ತಮ್ಮ ದೇಹ ಹಾಗೂ ವಸತಿಗಳ ಶುಚಿತ್ವಕ್ಕಾಗಿ ಹರಿಜನರಿಗೆ ಬಹುಮಾನ ಹಂಚಲಾಯಿತು. ಜಾನುವಾರು ಮತ್ತು ಕೋಳಿಗಳಲ್ಲಿ ಉತ್ತಮವಿದ್ದುವಕ್ಕೆ ಜಾನುವಾರು ಇಲಾಖೆಯವರು ಒದಗಿಸಿದರೂ 100ರ ಬಹುಮಾನಗಳನ್ನು ಕೊಡಲಾಯಿತು ಮಿ। ಡಿಕ್ಸನರು ಕೊಟ್ಟ ಮೂರು ಬೆಳ್ಳಿಯ ಲೋಟಗಳಲ್ಲಿ ಒಂದನ್ನು ಕೃಷಿ ಇಲಾಖೆಯವರಿಗೂ ಒಂದನ್ನು ಕೈಗಾರಿಕೆ ಖಾತೆಯವರಿಗೂ ಕೊಡಲಾಯಿತು. ಇವೆರಡು ಇಲಾಖೆಯವರೂ ಕಮಿಟಿಯ ಕಾರ್ಯದಲ್ಲಿ ಆರಂಭದಿಂದಲೂ ಸಹಕರಿಸಿದ್ದಾರೆ ಒಟ್ಟಿಗೆ 21 ಯೋಗ್ಯತಾಪತ್ರಗಳು, 54 ಬಹುಮಾನ ಕಾರ್ಡುಗಳು, 24 ಪದಕಗಳು, 4 ಕಪ್ಪುಗಳು, ಮೆಡಲೀನ್ ಹ್ಯಾಸ್ಕಲಿಗೆ ಒಂದು ರೋಲಿಂಗ್ ಕಪ್ಪು ಮತ್ತು ಕಿನ್ನಿಗೋಳಿ ಪಂಚಾಯತು ಬೋರ್ಡಿಗೆ ಒಂದು ರೋಲಿಂಗ್ ಶೀಲ್ಡು ಮತ್ತು ನಗದು ರೂ 390 ಇಷ್ಟನ್ನು ವಿತರಣೆ ಮಾಡಲಾಯಿತು

ಜಿಲ್ಲಾ ಕಲೆಕ್ಟರರು ಕನ್ನಡ ಭಾಷೆಯಲ್ಲಿಯೇ ಮಾತನಾಡಿದರು ಕಮಿಟಿಯವರು ಮಾಡುತ್ತಿರುವ ಒಳ್ಳೆಯ ಕೆಲಸದಲ್ಲಿ ಭಾಗವಹಿಸಲು ಸಂತೋಷ ಪ್ರಕಟಿಸಿದರು. ಭಾರತದ ದೊಡ್ಡಸ್ತಿಕೆ ಮತ್ತು ಹೊಸತಾಗಿ ಪಡೆದ ಸ್ವಾತಂತ್ರ್ಯ ಇವು ಪ್ರಜೆಗಳ ಸ್ವಾವಲಂಬನದ ಮೇಲೆಯೇ ಹೊಂದಿಕೊಂಡಿವೆಯೆಂದು ವಿವರಿಸಿದರು ಈ ಕಮಿಟಿಯವರು ಇದೇ ಧ್ಯೇಯವಿಟ್ಟು ದುಡಿಯುತ್ತಿರುವುದರಿಂದ ಇದರ ಕೆಲಸದಲ್ಲಿ ಸಹಭಾಗಿಯಾಗಲು ತನಗೆ ಆನಂದವೆನ್ನಿಸುತ್ತಿದೆಯೆಂದರು

ಕಾರ್ಯಕ್ರಮವು ವಿವಿಧ ವಿನೋದಾವಳಿಯೊಂದಿಗೆ ಮುಕ್ತಾಯವಾಯಿತು. ಇದರಲ್ಲಿ ಮೆಡಲೀನ್ ಗರ್ಲ್ಸ್ ಹೈಸ್ಕೂಲು ಮೂಲ್ಕಿ, ಪಡುಬಿದ್ರೆ ಬೋರ್ಡು ಹ್ಯಾಯರ್ ಎಲಿಮೆಂಟರಿ ಶಾಲೆ, ಗ್ರಾಮಾಭಿವೃದ್ಧಿ ಶಾಲೆಯವರು ಭಾಗವಹಿಸಿದರು

ಮುಂದಿನ ಪ್ರದರ್ಶನವು 1949ನೇ ದಶಂಬರದಲ್ಲಿ ಕಟೀಲು ಕೇಂದ್ರದಲ್ಲಿ ಜರಗುವುದೆಂದು ಜಾಹೀರು ಪಡಿಸಲಾಯಿತು

ಗಾಯನ ಕಛೇರಿ

ಪ್ರಖ್ಯಾತ ಸಂಗೀತಗಾರಳಾದ ಶ್ರೀ ಎಂ. ಎಸ್. ಸುಬ್ಬುಲಕ್ಷ್ಮಿಯ ಗಾಯನ ಕಛೇರಿಯೊಂದು ಕಳೆದ ತಾ. ೭ರಂದು ಇಲ್ಲಿಯ ಪ್ಲಾನ್ ಮೈದಾನಿನಲ್ಲಿ ಕಟ್ಟಿಸಿದ ಥಿಯೇಟರಿನಲ್ಲಿ ಜರಗಿತು ಸುರತ್ಕಲದ ವಿದ್ಯಾದಾಯಿನಿ ಹೈಸ್ಕೂಲಿನ ಸಹಾಯಾರ್ಥವಾಗಿ ನಡೆದ ಈ ಕಛೇರಿಗೆ ಸುಮಾರು ಹದಿನಾರು ಸಾವಿರ ರೂಪಾಯಿ ಸಂಗ್ರಹವಾಗಿದೆಯೆಂದು ತಿಳಿದುಬರುತ್ತದೆ.

ಜಿಲ್ಲಾ ಸಮಾಚಾರ

ಅಪಘಾತದ ಮರಣ

೪ನೇ ತಾ. ೯ರಂದು ಸಾಯಂಕಾಲ ಸುಮಾರು ೫ ಗಂಟೆ ಸಮಯಕ್ಕೆ ಕರಿಕನಾಡಿ ಬಳಿ ಸರಕು ತುಂಬಿದ ಒಂದು ಲಾರಿಯಲ್ಲಿ ಓರ್ವ ಸುಮಾರು ೧೬ ವರ್ಷದ ಹುಡುಗನು ಬಿದ್ದು ತಕ್ಷಣ ಮೃತಪಟ್ಟನೆಂದು ತಿಳಿದು ಬರುತ್ತದೆ. ಹುಡುಗನು ಸೈಕಲಿನಲ್ಲಿ ಹೋಗುತ್ತಿದ್ದನೆಂದೂ ಕಾರಣಾಂತರದಿಂದ ಅವನು ತನ್ನ ವಾಹನದಿಂದ ಅಡ್ಡಕ್ಕೆ ಬಿದ್ದುದರ ಪರಿಣಾಮವಾಗಿ ಅವನ ತಲೆ ಹಾದು ಹೋಗುವ ಲಾರಿಯ ಹಿಂದಿನ ಚಕ್ರದಡಿಯಲ್ಲಿ ಬಿದ್ದು ಜಜ್ಜಿ ಹೋದುದರಿಂದ ಮರಣವುಂಟಾಯಿತೆಂದೂ ಹೇಳಲಾಗಿದೆ. ಪೋಲಿಸ್ ತನಿಖೆಯೂ ನಡೆದಿದೆ. ಹುಡುಗನು ಸ್ಥಳೀಕ ಹೋಟೆಲೊಂದರ ಕೆಲಸಗಾರನೆಂದು ತಿಳಿದಿದೆ.

ಮಾಸ್ತಿಯವರ ಭಾಷಣ

ಪ್ರಖ್ಯಾತ ಕನ್ನಡ ಸಾಹಿತ್ಯ ಸೇವಕರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರವರು ಇಲ್ಲಿಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ನಿನ್ನೆ ತಾ. ೧೧ರಂದು "ಶೀಘ್ರದಲ್ಲಿ ಏಕೀಕೃತ ಕರ್ನಾಟಕವಾಗಬೇಕಾದ ಅವಶ್ಯಕತೆ" ಎಂಬ ವಿಷಯದ ಕುರಿತು ಬೋಧಪ್ರದ ಭಾಷಣವನ್ನಿತ್ತರು. ಕರ್ನಾಟಕ ಪ್ರಾಂತ್ಯ ನಿರ್ಮಾಣವಾದರೆ ಯಾವ ಅಲ್ಪ ಸಂಖ್ಯಾಕರೂ ತಮ್ಮ ಹಕ್ಕುಗಳಿಗೆ ಧಕ್ಕೆ ತಗಲುವುದೆಂಬಂಜಿಕೆ ಪಟ್ಟುಕೊಳ್ಳಬೇಕಾಗಿಲ್ಲವೆಂದೂ, ಮಹಾರಾಜರನ್ನು ರಾಜ್ಯ ಘಟನಾ ಮುಖ್ಯಸ್ಥರನ್ನಾಗಿ ಸ್ವೀಕರಿಸುವುದರಿಂದ ಯಾವ ಬಾಧಕವಿಲ್ಲವೆಂದೂ ಅವರು ಒತ್ತಿ ಹೇಳಿದರು. ಇದೇ ಸಭೆಯಲ್ಲಿ ಶ್ರೀಯುತರಾದ ಜೀನರಾಜ ಹೆಗ್ಡೆ, ಕೆ. ಆರ್. ಕಾರಂತರವರೂ ಭಾಷಣ ಮಾಡುತ್ತ ಅಲ್ಪಸಂಖ್ಯಾಕರೆಂಬ ಸಮಸ್ಯೆಯು ಬ್ರಿಟಿಷ್ ರಚನೆಯದೆಂದೂ ಸ್ವತಂತ್ರ ಭಾರತದಲ್ಲಿ ಅದಕ್ಕೆ ಪ್ರಾಧಾನ್ಯತೆಯಿಲ್ಲವೆಂದೂ ತಿಳಿಸಿದರು.

ಹವಾಮಾನ

ಬೇಸಗೆಯ ಉಗ್ರತೆಯು ಪರಮಾವಧಿ ಕಡೆ ಧಾವಿಸುತ್ತಿದೆಂಬಂತೆ ಬಿಸಿಲಿನ ಮತ್ತು ಉಷ್ಣತೆಯ ಅನುಭವವು ಕಠಿಣವಾಗುತ್ತಿದೆ. ನಗರದ ಅನೇಕ ಕಡೆಗಳ ಬಾವಿಗಳಲ್ಲಿನ ನೀರು ಆರಿ ಹೋಗಿರುವುದರಿಂದ ನಾಗರೀಕರಿಗೆ ನಳ್ಳಿ ನೀರಿನ ಆವಶ್ಯಕತೆಯು ಎಷ್ಟಿದೆಯೆಂಬುದು ಮನಗಾಣುವಂತಾಗಿದೆ.

ಖೂನಿ

ಕೆಲವು ದಿನಗಳ ಹಿಂದೆ ಕುಲಶೇಖರನ ಬಳಿಯ ಒಂದು ಮನೆಯಲ್ಲಿ ಓರ್ವ ಕೆಥೋಲಿಕ್ ಕ್ರೈಸ್ತನು ಚೂರಿ ಇರಿತಗಳಿಂದ ಮೃತಪಟ್ಟು ಬಿದ್ದಿರುವುದು ಕಂಡು ಬಂದಿತು. ಕಾರಣಗಳು ತಿಳಿದು ಬಂದಿಲ್ಲ. ಮೃತನ ಮನೆ ನುಗ್ಗಿದ ಹಗಲು ಕಳ್ಳನೊಬ್ಬನ ಕೃತ್ಯವಿದಿರಬೇಕೆಂದು ಆಸುಪಾಸಿನ ಜನರಾಡಿಕೊಳ್ಳುತ್ತಿರುವರೆಂದು ತಿಳಿಯುತ್ತದೆ.

ಉಪಾಧ್ಯಾಯ ಸಂಘ

ಇಲ್ಲಿಯ ಕೆನರಾ ಶಾಲೆಗಳ ಉಪಾಧ್ಯಾಯರ ಸಂಘದ ವಾರ್ಷಿಕ ಕೂಟವು ಕಳೆದ ತಾ. ೧೦ರಂದು ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಶಾಲೆಗಳಲ್ಲಿ ಪಾಳಿ ಪದ್ಧತಿಯನ್ನು ಪ್ರಯೋಗಾರ್ಥ ಪ್ರಾರಂಭಿಸಬೇಕೆಂಬ ಸೂಚನೆಗಳಾದುವು.

ಫಸ್ಟ್ ಗ್ರೇಡ್ ಕೋಲೇಜು

ಬರುವ ಶಾಲಾ ವರುಷದಿಂದ ಇಲ್ಲಿಯ ಇಲ್ಲಿಯ ಗವರ್ನಮೆಂಟ್ ಕೋಲೇಜಿನಲ್ಲಿ ಬಿ.ಎ. ತರಗತಿಗಳು ಪ್ರಾರಂಭಿಸಲ್ಪಡುವುವೆಂದು ತಿಳಿದು ಬರುತ್ತದೆ. ಅಲ್ಲಿಯ ಹೈಸ್ಕೂಲ್ ಶಾಖೆಯನ್ನು ಈ ಸಂಬಂಧದಲ್ಲಿ ರದ್ದು ಮಾಡುವ ಯೋಜನೆಯೂ ಇದೆಯಾಗಿ ಗೊತ್ತಾಗಿದೆ.

ನೇತಾಜಿ ಸುಭಾಸ್

ಇಲ್ಲಿಯ ರೂಪವಾಣಿ ಟಾಕೀಸ್‌ನಲ್ಲಿ ಪ್ರದರ್ಶಿಸಲಾಗುವ ನೇತಾಜಿ ಸುಭಾಸ್ ಚಲಚ್ಚಿತ್ರವು ಅತ್ಯಂತ ಹೃದಯಂಗಮವಾಗಿದೆ. ಸತ್ತರೂ ಬದುಕಿದ್ದರೂ ಅಮರನೆಂದೆನಿಸಿರುವ ಆ ಭಾರತ ವೀರನು ಪ್ರಚಂಡ ಸಾಮ್ರಾಜ್ಯಶಾಹಿಯ ವಿರೋಧವಾಗಿ ದೂರ ಪ್ರಾಚ್ಯದ ಹಲವು ಕೇಂದ್ರ ಸ್ಥಾನಗಳಲ್ಲಿ ನಡೆಸಿದ ಕಾರ್ಯ ಕಲಾಪಗಳ ನಿರೂಪಣವು ಈ ಚಿತ್ರದ ವಿಹಂಗಮ ನೋಟಗಳಾಗಿವೆ. ಅಂಡಮಾನ, ಚೀನಾ, ಸೈಗನ್, ಟೋಕಿಯೊ ಮಾತ್ರವಲ್ಲ ಜರ್ಮನಿಯಲ್ಲೂ ಸುಭಾಸ್ ಭೋಸರು ನಡೆಸಿದ ಚಟುವಟಿಕೆಗಳ ಛಾಯಾಗ್ರಹಣದ ತುಂತುರುಗಳನ್ನು ಅದೆಷ್ಟು ಶ್ರಮ ಪೂರ್ವಕವಾಗಿ ಸೇರಿಸಿರುವರು! ಮತ್ತು ಅವು ಭಾರತೀಯರ ಸೌಭಾಗ್ಯದಿಂದಲೇ ನಾಶವಾಗದೆ ಉಳಿದುವೆನ್ನಬೇಕು. ಡಿಲ್ಲಿಯ ಕೆಂಪು ಕೋಟೆಯೊಳಗೆ ನಡೆದ ಐ. ಎನ್. ಎ. ವಿಚಾರಣೆ ರೋಮಾಂಚವನ್ನುಂಟು ಮಾಡುತ್ತದೆ. ಒಟ್ಟಿನಲ್ಲಿ ಈ ಚಿತ್ರವು ಇಂದಿನ ಮತ್ತು ಮುಂದಿನ ತಲಾಂತರಗಳಲ್ಲಿ ದೇಶಭಕ್ತಿ ಪ್ರಚೋದಕವೂ ಭ್ರಾತೃತ್ವದ ಸಂದೇಶವನ್ನು ಬೀರುವ ಐಕ್ಯ ಸಾಧಕವೂ ಆಗಿದೆ. ಸುಭಾಸರ ಪುಣ್ಯಸ್ಮರಣೆಯು ಇದರಲ್ಲಿ ಚಿರಂಜೀವಿಯಾಗಿದೆ. ಕಲ್ಪನಾತೀತವಾದ ಆ ಮಹಾಮಹಿಮ ಕ್ರಾಂತಿ ವೀರನ ದೇಶ ವಿಮೋಚನೆಯ ಅವ್ಯಾಹತ ಸಾಹಸವನ್ನು ಹಿಂದೆ ರೇಡಿಯೊದಲ್ಲಿ ಕೇಳಿದವರೂ, ಗ್ರಂಥಗಳಲ್ಲಿ ಓದಿದವರೂ ಇಂದು ಕಣ್ಣಿನಿಂದಲೂ ಕಾಣುವಂತಾಯಿತು. ಈ ಚಿತ್ರ ಸಂಯೋಜಕರೂ ಶ್ಲಾಘನೀಯರೇ ಸರಿ.

ಜುಗಾರಿಯಾಟಗಳ ಪತ್ತೆ

ಆರ್ಕುಳದಲ್ಲಿ ಒಂದು ನೇಮ ನಡೆಯುತ್ತಿದ್ದ ಕಾಲದಲ್ಲಿ ಜುಗಾರಾಡುತ್ತಿದ್ದ ೧೪ ಮಂದಿಯು ಕೈದಾಗಿ ಅವರ ವಿಚಾರಣೆ ಮಂಗಳೂರು ಬೆಂಚ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದು ಅವರಲ್ಲಿ ಪ್ರತಿಯೊಬ್ಬರಿಗೂ ೬-೬ ರೂ.ಗಳ ಜುಲ್ಮಾನೆಯನ್ನು ಈಚೆಗೆ ವಿಧಿಸಲಾಯಿತು.

ಕೂಳೂರಿನ ಸಮೀಪದ ಪಂಜಿಮೊಗರಿನಲ್ಲಿ ಒಂದು ದಶಾವತಾರ ಆಟ ಕಳೆದ ತಾ. ೬ರಲ್ಲಿ ನಡೆಯುತ್ತಿದ್ದಾಗ ಜುಗಾರಾಡಿದ ಆರೋಪದ ಮೇಲೆ ೧೦ ಮಂದಿಯನ್ನು ಕೈದು ಮಾಡಿ, ಮುಂಡದಲ್ಲಿದ್ದ ರೂ. ೨೦೩-೧೦-೭ನ್ನು ವಶಪಡಿಸಿಕೊಳ್ಳಲಾಗಿದೆ. ಇವೆರಡು ಮೊಕದ್ದಮೆಗಳನ್ನೂ ಹಿಡಿದವರು 'ಮಂಗಳೂರು ಈಸ್ಟ್ ಕಚೇರಿಯ' ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಚ್. ನಾಗಪ್ಪ ಅವರು.

ಅನಾವರಣ

ಇಲ್ಲಿಯ ಮುನಿಸಿಪಲ್ ಮುಸ್ಲಿಂ ಹಾ। ಪ್ರಿ। ಶಾಲೆಯಲ್ಲಿ ಮು। ಕೌನ್ಸಿಲರ್ ಶ್ರೀ ಹುಂಡಿ ಗಣಪತಿ ಕಾಮತರು ಉಚಿತವಾಗಿ ಕೊಟ್ಟ ಗಾಂಧೀಜಿ ಮತ್ತು ಪಂಡಿತ್ ನೆಹರು ಅವರ ಚಿತ್ರಪಟಗಳನ್ನು ಅನಾವರಣ ಮಾಡುವ ಕಾರ್ಯವು ಈಚೆಗೆ ಹಾಜಿ ಗುಲ್ ಮಹಮ್ಮದ್ ಸಾಹೇಬರಿಂದ ನೆರವೇರಿಸಲ್ಪಟ್ಟಿತು.

ಸುರತ್ಕಲ್

ಇದೇ ೧೭-೩-೪೮ನೇ ಬುಧವಾರ ಸಂಜೆ ಘಂಟೆ ೪-೩೦ಕ್ಕೆ ಸುರತ್ಕಲ್ ಸಂತೆಕಟ್ಟೆಯ ಬಳಿಯಲ್ಲಿ ಸಾರ್ವಜನಿಕ ಸಭೆಯು ಪ್ರಾಣಿಬಲಿ ನಿಷೇಧದ ಕುರಿತು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ನಡೆಯಲಿರುವುದು. ಪ್ರಮುಖರು ಭಾಷಣಮಾಡಲಿರುವರು.

ಆರೋಗ್ಯ ಪರಿಷತ್ತು

ಜಿಲ್ಲೆಯ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವುದರಲ್ಲಿರುವ ಜನರ ಸಂಕಷ್ಟಗಳನ್ನು ಸರಕಾರದ ಅವಗಾಹನೆಗೆ ತಂದು ತಕ್ಕ ಪರಿಹಾರೋಪಾಯಗಳನ್ನು ಕೈಕೊಳ್ಳುವುದಕ್ಕೋಸ್ಕರ ಸದ್ಯದಲ್ಲಿಯೇ ಇಲ್ಲೊಂದು "ಜಿಲ್ಲಾ ಆರೋಗ್ಯ ಪರಿಷತ್ತು" ಒಂದನ್ನು ಕರೆಯುವ ವ್ಯವಸ್ಥೆ ಆಗುತ್ತಲಿದೆ.

ಪೆರಡಾಲ

ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನ ಎಂಟ್ರಾನ್ಸ್ ಮತ್ತು ಕಾಲೇಜ್ ತರಗತಿಯ ವಿದ್ಯಾರ್ಥಿಗಳು ಇದೇ ತಾರೀಕು ೩-೩-೪೮ರಂದು ತಮ್ಮ ಉಪಾಧ್ಯಾಯರಿಗೊಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಸಂಸ್ಕೃತಾಭ್ಯಾಸದ ಮಹತ್ವದ, ಗಾಂಧಿತತ್ವಾದರ್ಶ, ಗ್ರಾಮೋದ್ಧಾರ ಚಟುವಟಿಕೆಗಳ ಕುರಿತು ಭಾಷಣಗಳಾಗಿ ಅವುಗಳನ್ನನುಸರಿಸಲು ಸೂಚನೆಗಳಾದುವು.

ಕಾರ್ಕಳ

ಈ ವಾರದಿಂದ ರಿಲೀಫ್ ಶೋಪುಗಳಿಂದ ಬಡಜನರಿಗೆ ದೊರೆಯುವ ರೇಶನ್ ಅಕ್ಕಿಯಲ್ಲಿ ಪುನಃ ಕಡಿತವಾಗಿ ಪ್ರಾಯಸ್ಥರಿಗೆ ದಿನಕ್ಕೆ ೬ ಔನ್ಸಿನಂತೆ ಅದನ್ನು ಕೊಡಲಾರಂಭಿಸಿದೆ. ಅಕ್ಕಿಯ ದರವು ಒಂದೇ ಸವನೆ ಏರುತ್ತಲಿದ್ದು ಹಳ್ಳಿಗಳಲ್ಲಿಯೋ ಮುಡಿ ಒಂದರ ೨೦ರಿಂದ ೨೫ರ ತನಕ ವ್ಯಾಪಾರವಾಗುತ್ತಿದೆಯಂತೆ. ಆದ್ದರಿಂದ ಅಕ್ಕಿ ಪೇಟೆಗೆ ಬರುವುದೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಮಧ್ಯಮವರ್ಗದ ಬಡವರು ಉಪವಾಸಬೀಳುವ ದಿನಗಳು ಬರುವಂತಾಗಿದೆ.

ಉಡುಪಿ ಕಾಂಗ್ರೆಸಿನ ಮಹತ್ವದ ನಿರ್ಣಯಗಳು

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ

ಇದರ ಸಭೆಯು ಇದೇ ತಾ. ೯ನೇ ಅಪರಾಹ್ಣ ಕಾಂಗ್ರೆಸ್ ಕಚೇರಿಯಲ್ಲಿ ಅಧ್ಯಕ್ಷ ಶ್ರೀ ಬಾಳ್ಕಟ್ಟುಬೀಡು ಕೃಷ್ಣಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಃ ಮಹಾತ್ಮಾಜಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಹಳ್ಳೀ ಹಸುಗೆಯನ್ನು ರದ್ದುಪಡಿಸಿದುದರಿಂದ ಆಹಾರಪದಾರ್ಥಗಳ, ಮುಖ್ಯತಃ ಭತ್ತದ ಬೆಳೆಯ ಸಾಗುವಳಿಗೆ ಪ್ರೋತ್ಸಾಹ ಕೊಟ್ಟಂತಾಗಿದೆಯೆಂದೂ, ಇದರ ಸತ್ಪರಿಣಾಮವು ಕೊಳಕೆ ಬೆಳೆಯಲ್ಲಿ ತೋರಿಬರಬಹುದೆಂದೂ ಅಭಿಪ್ರಾಯ ಸೂಚಿಸಿ ಈಗ ಏರಿರುವ ಬೆಲೆಯನ್ನು ಒಂದು ನ್ಯಾಯವಾದ ಮಟ್ಟಕ್ಕೆ ತಗ್ಗಿಸಲು ಧಾನ್ಯವಿದ್ದ ಉತ್ಪಾದಕರೂ ವ್ಯಾಪಾರಿಗಳೂ ಉದಾರ ಮನಸ್ಸಿನಿಂದ ಪ್ರಯತ್ನಿಸಬೇಕೆಂದು ವಿನಂತಿಸುವ ನಿರ್ಣಯವಾಯಿತು. ಕಾಂಗ್ರೆಸ್ ಸರಕಾರಗಳ ಪಾಲಿಗೆ ಬಿಕ್ಕಟ್ಟಿನದಾಗಿರುವ ಈ ಕಾಲದಲ್ಲಿ ಉಡುಪಿ ತಾಲೂಕಿನ ತಹಶಿಲ್ದಾರರು ಸತ್ಕಾರ ಕೂಟವೊಂದರಲ್ಲಿ ಮದ್ರಾಸಿನ ಕಾಂಗ್ರೆಸ್ ಸರಕಾರದ ರೀತಿ ನೀತಿಗಳನ್ನು ಟೀಕಿಸಿದುದನ್ನು ಖಂಡಿಸುವ ಹಾಗೂ ಜನರು ಕೂಡಾ ಸಹನೆ ವಹಿಸಬೇಕಾಗಿ ಈ ವಿಷಮಾವಧಿಯಲ್ಲಿ ಸರಕಾರದೊಂದು ಅಂಗವಾಗಿರುವ ಜವಾಬ್ದಾರಿಯುಳ್ಳ ತಹಶಿಲ್ದಾರರೇ ಸರಕಾರವನ್ನು ಟೀಕಿಸಿದರೆ ಆಗುವ ದುಷ್ಪರಿಣಾಮಗಳನ್ನು ಗಮನಿಸಿ, ತಕ್ಕ ಕಾರ್ಯ ಕೈಕೊಳ್ಳಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಧಾರವಾಯಿತು. ಸರಕಾರೀ ಅಧಿಕಾರಿಗಳು ಸಂಚಾರಕ್ಕೆ ಬಂದಲ್ಲಿ ಖಾಸಗೀ ಮಹನೀಯರ 'ಅತಿಥಿಗೃಹ'ಗಳಲ್ಲಿ ನಿಂತು ಸಂಬಂಧಪಟ್ಟವರ ವರ್ಚಸ್ಸಿಗೊಳಗಾಗುವ ಅಪಾಯವಿರುವುದನ್ನು ಸರಕಾರದ ಲಕ್ಷ್ಯಕ್ಕೆ ತಂದು ಅಂಥ ಆತಿಥ್ಯವು ಸರಕಾರೀ ನೌಕರರ ಪಾಲಿಗೆ ನಿಷೇಧನೀಯವೆಂಬ ಆಜ್ಞೆ ಕೊಡಲು ಸರಕಾರವನ್ನು ಕೇಳಿಕೊಳ್ಳುವ ಮತ್ತೊಂದು ನಿರ್ಣಯವಾಯಿತು. ಬಲಿದಾನೀ ಮಹಾತ್ಮರಿಗೆ ಉಡುಪಿಯ ಯೋಗ್ಯ ಸ್ಮಾರಕವೆನ್ನಿಸುವಂತೆ, ಸುಶಿಕ್ಷಿತರೂ ಸುಧಾರಿತ ಮನೋವೃತ್ತಿಯವರೂ ಆಗಿರುವ ಇಂದಿನ ಪರ್ಯಾಯ ಮಠದ ಜನರಲ್ ಏಜಂಟರು ಔದಾರ್ಯ ವಹಿಸಿ ಸ್ವೇಚ್ಛೆಯಿಂದ ಶ್ರೀ ಕೃಷ್ಣ ದೇವಾಲಯದೊಳಗೆ ಹರಿಜನರಿಗೆ ಪ್ರವೇಶ ಕೊಡಬೇಕೆಂದು ವಿನಂತಿಸಿಕೊಳ್ಳಲಾಯಿತು.

ನೋವಿನ ಎದೆ ಗಂಡಾಂತರದ ಅಣುಗಳನ್ನು ತೋರಿಸುತ್ತದೆ. ಪೆಪ್ಸ್ ವಿಷಹಾರಿ ಮಾತ್ರೆ ಸೇವಿಸಿ ಈ ಗಂಡಾಂತರವನ್ನು ಪಾರುಗೊಳಿಸಿರಿ.

ಬಾಯಲ್ಲಿ ಕರಗುತ್ತಲೆ ಪೆಪ್ಸಿನ ಅನುಕೂಲ ಔಷಧೀಯ ಸತ್ವಗಳು ಶ್ವಾಸಕೋಶಕ್ಕೊಯ್ಯಲ್ಪಟ್ಟು ಅಣು ನಾಶ, ಶಮನ, ಪರಿಹಾರಗಳನ್ನು ಗೆಯ್ಯುತ್ತದೆ. ಕಫ ಸಡಿಲಾಗಿ ಎದೆ ಒತ್ತಾಟ ಕಮ್ಮಿಯಾಗುತ್ತದೆ. ಶ್ವಾಸ ಸುಲಭವಾಗುತ್ತದೆ. ಕೆಮ್ಮು, ಗೂರಲು, ಶೀಘ್ರ ಕಮ್ಮಿಯಾಗಿ ಅವನ್ನು ತಡೆಯುವ ಶರೀರ ಶಕ್ತಿ ಹೆಚ್ಚುತ್ತದೆ. ಕೆಮ್ಮು, ಶೀತ, ನೆಗಡಿ, ಗಂಟಲು ಬೇನೆ, ವಿಷಮ ಜ್ವರ, ಗೂರಲು ಮತ್ತಿತರ ಎದೆ ಶ್ವಾಸಕೋಶ ಬಾಧೆಗಳಿಗೆ ಪೆಪ್ಸ್ ವಿಶ್ವ ವಿಖ್ಯಾತವಾದುದು.

ಈಗಲೇ ಪೆಪ್ಸ್

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು.

ನೋಟೀಸು

ಮಂಗಳೂರು ಮುನ್ಸಿಪಾಲಿಟಿ.

ಇದೇ ಮುನ್ಸಿಪಾಲಿಟಿಯ 1948-49ನೇ ಮಾರ್ಗದ ಬಚಾವಣೆ ವ ದುರಸ್ತಿ ಬಗ್ಗೆ ಟೆಂಡರುಗಳನ್ನು ಮುನ್ಸಿಪಲ್ ಆಫೀಸಿನಲ್ಲಿ ತಾರೀಕು 26-8-48ರ ವರೆಗೆ ಪಡೆಯಲಾಗುವದು. ಕೆಲಸದ ಜುಮ್ಲಾ ರೂಪಾಯಿ 48,000/- ಹೆಚ್ಚಿನ ಮಾಹಿತಿಯನ್ನು ಕಮಿಶನರವರಿಂದ ತಿಳಕೊಳ್ಳಬಹುದು.

Sd. ಕಮಿಶನರ್.

ಕಾಶ್ಮೀರ ಪ್ರಶ್ನೆಯನ್ನು ಜನಾಂಗ ಮಂಡಲದೆದುರು ಒಯ್ದುದರ ಕುರಿತು ಮಹಾತ್ಮಾ ಗಾಂಧಿಯವರು ತಮ್ಮ ಆಕ್ಷೇಪವನ್ನು ಸುಸ್ಪಷ್ಟ ರೀತಿಯಲ್ಲಿ ವ್ಯಕ್ತಪಡಿಸಿದ್ದರು. "ಮೂರನೆಯವರ ಮಧ್ಯಸ್ಥಿಕೆಯು ಹಿತಕರವಲ್ಲ" ವೆಂದವರು ಉಪದೇಶಿಸಿದ್ದರು. ಹಾಗೆನ್ನುವಾಗ ಅವರ ಮನಸ್ಸಿನಲ್ಲಿ ಭಾರತಕ್ಕೆ ಅಂತರಾಷ್ಟ್ರೀಯರ ಸಹಾನುಭೂತಿ ದೊರೆಯಲಾರದೆಂಬ ನಿರ್ದಿಷ್ಟ ವಿಶ್ವಾಸವೂ ಇದ್ದಿರಬಹುದು. ಇಂದು ಅವರ ಎಣಿಕೆಯಂತೇ ನಡೆದದ್ದು ಗಣನೀಯ ಸಂಗತಿ.

ಮುಖ್ಯ ಮಂತ್ರಿ ನೆಹರುಗಳೇನೊ ಅಂತರಾಷ್ಟ್ರೀಯ ಶಿಷ್ಟಸಾಂಪ್ರದಾಯಕ್ಕನುಗುಣವಾಗಿ ತಾವೀ ಧೋರಣೆ ಕೈಕೊಂಡದ್ದೆಂದೂ, ಜನಾಂಗ ಮಂಡಲದ ವ್ಯತಿರಿಕ್ತವಾದ ತೀರ್ಪಿನಿಂದ ತಮಗೆ ಹಾನಿಯಿಲ್ಲವೆಂದೂ ತಿಳಿಸಿರುವರು. ಭದ್ರತಾಮಂಡಲದೆದುರು ಪಾಕಿಸ್ತಾನ ಪ್ರತಿನಿಧಿಗಳು ತಮ್ಮ ಭೌಗೋಳಿಕ ಅಜ್ಞಾನವನ್ನೂ, ರಾಜನೀತಿಯ ನೈತಿಕ ಗೌರವವನ್ನೂ ಪ್ರದರ್ಶಿದ್ದರೂ ಬ್ರಿಟಿಷರ ಪ್ರತಿನಿಧಿಗಳ ಪಕ್ಷಪಾತದ ಧೋರಣೆಯಿಂದ ಇಡೀ ಮಂಡಲವು ಪ್ರಭಾವಿತವಾದಂತೆ ತೋರುವುದು

ಹಿಂತೆಗೆಯಿರಿ

ಈ ಕುರಿತು ಒಂದು ಅಗ್ರಲೇಖನದಲ್ಲಿ ಲಾಹೋರಿನ ಟ್ರಿಬ್ಯೂನ್ ಪತ್ರಿಕೆಯು "ಭಾರತವು ಕಾಶ್ಮೀರ ಪ್ರಶ್ನೆಯನ್ನು ಜನಾಂಗ ಮಂಡಳದಿಂದ ಕೂಡಲೇ ಹಿಂತೆಗೆಯಬೇಕು" ಎಂದು ಸೂಚಿಸುತ್ತಾ ಆ ಕುರಿತಾದ ಕಾರಣಗಳನ್ನು ಈ ರೀತಿಯಾಗಿ ಕೊಡುತ್ತದೆ

ಜನಾಂಗ ಮಂಡಲದ ಕೇಂದ್ರವಾದ ಲೇಕ್‌ಸಕ್ಸೆಸ್ಸಿನಿಂದ ಹಿಂದಿರುಗಿದ ಭಾರತ ಪ್ರತಿನಿಧಿಗಳು ಇಲ್ಲಿ ನಿರೂಪಿಸಿದ ಹೇಳಿಕೆಗಳಿಂದ ಅವರನ್ನೂ ಆ ಅಂತರಾಷ್ಟ್ರೀಯ ಕೂಟದ ನ್ಯಾಯಬುದ್ಧಿಯ ಮೇಲೆ ವಿಶ್ವಾಸವಿದ್ದವರಾಗಿರುತ್ತಾರೆಂದು ತಿಳಿದು ಬರುತ್ತದೆ ಆದರೆ ಇವರ ಆಶೆ ಹಾರೈಕೆಗಳು ಸತ್ಯಸ್ಥಿತಿಯ ಬಿಸಿಲಿನೆದುರು ಆವಿಯಾಗಿ ಹೋಗುವ ಮಂಜಿನಂತಾಗುವುದರಲ್ಲಿ ಸಂದೇಹವಿಲ್ಲ ಭಾರತೀಯ ಸಾಧುವೊಬ್ಬನಿಂದು ಜನಾಂಗ ಮಂಡಲದ ನ್ಯಾಯಬುದ್ಧಿಯ ಬೆಚ್ಚನೆಂದ ಹೊದಿಕೆಯೊಳಗೆ ಸೇರುವ ಬದಲು ಜನಾಂಗ ಮಂಡಲವೆಂಬ ಕ್ರೂರ ಕರಡಿಯೊಂದರ ಮೃತ್ಯುಕಾರಕ ಮುಷ್ಟಿಯಲ್ಲಿ ಸಿಲುಕಿದಂತಾಗಿದೆ.

ಬೊಂಬಾಯಿಗೆ ಬಂದಿಳಿದಾಗ ಸರ್ ಗೋಪಾಲ ಸ್ವಾಮಿ ಅಯ್ಯಂಗಾರ್ ಮತ್ತು ಶೇಕ್ ಅಬ್ದುಲ್ಲರು ತಮ್ಮ ಭಾಷಣಗಳಲ್ಲಿ "ಜನಾಂಗ ಮಂಡಲದಲ್ಲಿ ನಮಗೆ ಸಮಸ್ಯೆಯದ ನ್ಯಾಯತೀರ್ಪು ದೊರಕುವ ಬದಲಿಗೆ ಅಂತರಾಷ್ಟ್ರೀಯ ರಾಜಕೀಯ ಕಾರಸ್ಥಾನವೊಂದರಲ್ಲಿ ನಮ್ಮನ್ನು ಸೇರಿಸಲಾಯಿತು. ಭಾರತವು ಶಕ್ತಿರಾಜಕೀಯದ ಬಿಗಿಹಿಡಿತದಲ್ಲಿ ಅದುಮಲ್ಪಟ್ಟಿತ್ತು" ಎಂದು ತಿಳಿಸಿದ್ದರು.

ಅನಿಷ್ಟ ಭಾಷಾಸರಣಿ

ದಾಳಿಗಾರರ ದೂರ್ತ ದರೋಡೆಕ್ಷೇತ್ರವಾಗಿದ್ದ ಕಾಶ್ಮೀರದ ಕೆಲವು ಭಾಗಗಳಲ್ಲಿ ಪಾಕಿಸ್ತಾನದ ಕ್ವಾಯದೆಆಜಾಮ್ ಜಿನ್ನರು ಶೇಖ್ ಅಬ್ದುಲ್ಲರ ಪ್ರತಿಸ್ಪರ್ಧಿಯಾಗಿ ಇಬ್ರಾಹಿಮ್ ಖಾನ್ ಎಂಬವನನ್ನು ಮುಂದೆ ಮಾಡಿ "ಅಜಾದ್ ಕಾಶ್ಮೀರ"ದ ಮುಖಂಡನನ್ನಾಗಿ ಮಾಡಿದರು. ಇವನೊಬ್ಬ ಆಟದ ಗೊಂಬೆ. ಇಂಥವನಿಗೆ ಭದ್ರತಾ ಮಂಡಲದ ಸಭೆಗೆ ಹಾಜರಾಗುವ ಆಮಂತ್ರಣದ ಗೌರವ ದೊರಕಿತೆಂದ

ಜನಾಂಗಮಂಡಳದ ದೂರನ್ನು ಹಿಂತೆಗೆಯಬೇಕು

ಅದು ಅಂತರ್ರಾಷ್ಟ್ರೀಯ ಕಚ್ಚಾಟದ ಕೇಂದ್ರ

ಅಲ್ಲಿ ನ್ಯಾಯ ದೊರಕುವಂತಿಲ್ಲ

ಮೇಲ್ಮೈ ಹೆಚ್ಚಿನ ವಿವರಣೆ ಅನಾವಶ್ಯಕ ಇವನಿಗಾದರೊ ಸುಳ್ಳು ಸಾಕ್ಷ ಹೇಳುವುದರಲ್ಲಿ ತನ್ನ ಪ್ರಥಮ ವಾರವು ಈ ಅಂತರಾಷ್ಟ್ರೀಯ ನ್ಯಾಯಪೀಠದಲ್ಲೇ ಅಭ್ಯಾಸಿಸುವ ಸುಸಂಧಿ ದೊರೆಯಿತು.

ಮಾತ್ರವಲ್ಲ ಜನಾಂಗ ಮಂಡಲದ ಸರೋವರ (ಲೇಕ್ ಸಕ್ಸೆಸ್) ಪ್ರದೇಶವು ಪಾಕಿಸ್ತಾನಿಗಳು ಸುಳ್ಳಿನ ತೊರೆಗಳಿಂದ ತುಂಬಿ ತುಳುಕಿತೆಂದರೆ ಅತಿಶಯವಾಗಲಾರದು. ಎಂಗ್ಲೋ ಅಮೇರಿಕನ್ನರು ತಮ್ಮ ಕುತಂತ್ರದ ಯಂತ್ರಗಾರಿಕೆಯನ್ನು ಇವರ ಪರವಾಗಿ ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಿದರು ಭದ್ರತಾಮಂಡಲವು ಸರ್ ಜಫರುಲ್ಲಾರ ಅಸಪ್ರಲಾಪ, ಅಧಿಕಪ್ರಸಂಗ ಮತ್ತು ಅಸಂಬದ್ಧವಾದ ತರ್ಕವನ್ನು ಅತೀ ಆಸಕ್ತಿಯಿಂದ ಕೇಳಿ ಖುಶಿಗೊಂಡಿತು

ಇಸ್ಲಾಮಿನ 'ಸಿರಂಕುಶ'ತೆಯ ಪರಿಣಾಮವಾಗಿ ನೇರವಾಗಿ ನೊಂದ ಪಂಜಾಬಿನ ಸಿಖ್ ಮತ್ತು ಹಿಂದೂಗಳ ಪ್ರತಿನಿಧಿಗಳನ್ನು ಜನಾಂಗಮಂಡಲಕ್ಕೆ ಕಳುಹಿಸಿದರೆ ಮಾತ್ರ ಕರಾಚಿಯ ಗುಪ್ತಕಾರಸ್ಥಾನದ, ಕಪ್ಪು ಕೊಲೆಪಾತದ ವಿಜಸ್ವರೂಪವನ್ನು ಆ ಮಂಡಲದ ಮುಂದೆ ಪ್ರದರ್ಶಿಸಬಹುದಲ್ಲದೆ ಬೇರೆ ಅದೆ ತರ ಚಾಣಾಕ್ಷ ವಕೀಲರಿಂದಲೂ ಆ ಕಾರ್ಯವನ್ನು ಸಗಬರುವುದಿಲ್ಲ

ಒಂದೇ ದಾರಿ

ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಡೆಯಬಹುದಾದ ಮತಗಣನೆಯಲ್ಲಿ ಶೇಖ್ ಮಹಮ್ಮದ್ ಅಬ್ದುಲ್ಲರಿಗೇ ಖಂಡಿತ ಯಶಸ್ಸು ಸಿಗುವುದೆಂದು ನಮಗೂ ವಿಶ್ವಾಸವಿದೆ ಆ ಕುರಿತು ಸ್ಪಷ್ಟೀಕರಿಸುವಾಗ ಆ ಪ್ರಚಂಡ ಶೇರೆ ಕಾಶ್ಮೀರನ ತನ್ನ ಪ್ರೊಳ್ಳು ಜಂಬವನ್ನೂ ಕೊಚ್ಚಿಕೊಂಡಿಲ್ಲ ಖಂಡಿತವಾಗಿಯೂ ಅವರು ಇಂತಹ ಅನೇಕ ಮತಗಣನೆಗಳಲ್ಲೂ ಜಯಹೊಂದುವರು. ಆದರೆ ಒಂದು ಶರ್ತದಲ್ಲಿ ಮಾತ್ರ ಅವರಿಗೆ ಈ ಯಶಸ್ಸು ನಿಶ್ಚಯವಾಗಬಲ್ಲುದು. ಪಾಕಿಸ್ತಾನದೊಡನೆ ಪ್ರೇಮದ ವ್ಯವಹಾರವನ್ನಿಟ್ಟುಕೊಂಡು ಪರಕೀಯ ಕೈವಾಡದ ಮೂಲಕ ಈ ಮತಗಣನೆ ನಡೆದರೆ ಮಾತ್ರ ಅದು ಸಾಧ್ಯವಾಗಲಾರದೆಂಬ ಸಂಗತಿಯನ್ನು ನಾವು ಗಮನಿಸತಕ್ಕದ್ದು.

ಕಾಶ್ಮೀರವು ಭಾರತ ಒಕ್ಕೂಟಕ್ಕೆ ಸೇರಿಕೊಂಡಿದೆ ಕಾಶ್ಮೀರಿಗಳ ಅಪ್ರತಿಹತನಾದ ಮುಖಂಡ ಶೇಕ್ ಅಬ್ದುಲ್ಲರು ಆಡಳಿತ ಸೂತ್ರಗಳನ್ನು ನಿರ್ವಹಿಸಿರುವರು ಭಾರತ ಸೈನ್ಯಪಡೆಯೂ ಅಲ್ಲಿದೆ ಇನ್ನು ಮುಂದಾದರೂ ಅಲ್ಲಿನ ಹಾನಿಕಾರಕ ಚಟುವಟಿಕೆಗಳನ್ನು ತಡೆಯಲು ಇನ್ನೂ ಅವು ಅಲ್ಲಿರಬೇಕಾಗುವುದು. ಕಾಶ್ಮೀರ ಪ್ರದೇಶಗಳಲ್ಲಿ ಕಾಲಿರಿಸುವ ದಾಳಿಗಾರರ ಹೆಜ್ಜೆಗಳನ್ನು ಹತ್ತಿಕ್ಕಲು ಅವರು ನಿರತ ಶ್ರದ್ಧಾವಂತರಾಗಿರಬೇಕು

ಇತ್ತ ಲೇಕ್‌ಸಕ್ಸೆಸಿನಲ್ಲಿ ಜನಾಂಗ ಮಂಡಳದ ರಾಷ್ಟ್ರೀಯ ಶಕ್ತಿಗಳು ನ್ಯಾಯ ನಿರ್ಣಯದ ಮೂಲತತ್ವಗಳನ್ನು ತಲೆಕೆಳ ಮಾಡಲು ಪ್ರಯತ್ನಿಸುವುದನ್ನು ಭಿಲ್ಲಿ ಸರಕಾರವು ಪ್ರತಿಭಟಿಸಬೇಕು ಇಲ್ಲಿಯ ಅಂತರೀಕ್ಷ ರಾಜ್ಯದೊಳಗೆ ಅವರ ಪಕ್ಷಪಾತದ ಕೈವಾಡವಿರಲಾರದು. ಇವರ ಮೊದಲ ಹೆಜ್ಜೆಯಾಗಿ ನಹರು ಸರ್ಕಾರವು ಕಾಶ್ಮೀರ ಪ್ರಶ್ನೆಯನ್ನು ಭದ್ರತಾಮಂಡಳದಿಂದ ಹಿಂತೆಗೆಯಬೇಕು. ಈ ಒಂದು ವಿಧಾನದಿಂದಲೇ ಭಾರತೀಯ ಸಾಧುವು ಪರಕೀಯ ಅಂತರಾಷ್ಟ್ರೀಯ ವ್ಯಾಘ್ರರ ಮುಷ್ಟಿಯಿಂದ ಸಂರಕ್ಷಣೆ ಹೊಂದಬಹುದಾಗಿದೆ

ಉರಿಯುವ ಬಲೆ

ಬೆಳಕಿನ ಪ್ರಕಾಶದಿಂದ ಹೆಚ್ಚೆಚ್ಚು ಮೀನುಗಳನ್ನು ಹಿಡಿಯುವ ಪ್ರಯುಕ್ತಗಳನ್ನು ಜಪಾನಿನ ಡಾ॥ ಟೊಟ್ಟಾಡಾಯೊಶಿಸಾಸಾಕಿ ಎಂಬ ರಾಯನಿಕ ಶಾಸ್ತ್ರಜ್ಞರು ಮಾಡುತ್ತಿವರು. ನೀರಿನಲ್ಲಿ ಹಾಕಲ್ಪಡುವ ಬಲೆಯೊಳಗೆ ವಿದ್ಯುತ್ ಸಹಾಯದಿಂದ ಮೇಲ್ಮುಖವಾಗಿ ಉರಿಯುವ ವಿದ್ಯುತ್ ದೀಪವೊಂದನ್ನು ಜೋಡಿಸುವರು. ಅಲ್ಲದೆ ಇತರ ಸಣ್ಣ ಪುಟ್ಟ ವಿದ್ಯುತ್ ದೀಪಗಳು ಮಸುಕುಮಸುಕಾಗಿ ನೀರಿನ ಭಾಗವನು ಪ್ರಕಾಶಿಸುವುವು ಮೀನುಗಳಿಗೆ ಬೆಳಕೆಂದರೆ ಪ್ರೀತಿ ಅವು ಹೆಚ್ಚು ಸಂಖ್ಯೆಯಲ್ಲಿ ಬಲೆಯೊಳಗೆ ವಿಹರಿಸಲು ಸೇರುವವು. ತೀರದಿಂದ ಸಮುದ್ರದ ಬಹು ದೂರದ ವರೆಗೆ ಈ ಬಲೆಯು ಬಿಡಲ್ಪಟ್ಟಿದ್ದು ಅದರ ಪ್ರತಿ ಕೆಲವು ನೂರುಗಳ ಅಂತರದಲ್ಲಿ ಈ ಪ್ರಕಾಶದ ಏರ್ಪಾಡಿರುವುದು ದೂರದ ತುದಿಯಲ್ಲಿ ಮೀನುಗಳು ಸೇರಿದ ಕೂಡಲೇ ಅಲ್ಲಿಯ ಪ್ರಕಾಶವನ್ನು ತೆಗೆದು ಮುಂದಿನ ಹಂತದಲ್ಲಿ ಬಲೆಯು ಪ್ರಕಾಶಿಸಲ್ಪಡುವುದು ಆಗ ಮೀನುಗಳು ಆ ಕಡೆ ಧಾವಿಸುವುವು ಹೀಗೆ ತೀರದ ತನಕ ಮತ್ಸ್ಯಗಳನ್ನು ಆಕರ್ಷಿಸಲಾಗುವುದು ಕೊನೆಗ ಅತೀ ಹೆಚ್ಚು ಜಲಚರಗಳು ಒಟ್ಟುಗೂಡಿದಾಗ ಬಲೆಯು ಮೇಲಕ್ಕೆಳೆಯಲ್ಪಡುವುದು.

ಲೋಹದ ಗಂಟಲು

ಅಮೇರಿಕದ ಹತ್ತು ವರ್ಷದ ಹುಡುಗಿಯೊಬ್ಬಳ ಗಂಟಲು ಒಂದು ರೋಗಾಣುವಿನಿಂದ ಮುಚ್ಚಿ ಹೋದಾಗ ವೈದ್ಯ ತಜ್ಞರು ಒಂದು ವಿಶೇಷ ಲೋಹ ಮಿಶ್ರಣದ ನಳಿಗೆಯನ್ನು ತಯಾರಿಸಿ ಚತುರ ಶಸ್ತ್ರ ಚಿಕಿತ್ಸೆಯಿಂದದನ್ನು ಜೋಡಿಸಿರುವರು ಈ ನಳಿಗೆಯ ಮೇಲೆ ಗಂಟಲಿನ ಇತರ ಭಾಗದ ಚರ್ಮದ ಹೊದಿಕೆಯನ್ನು ಕೃಷಿ ಮಾಡಿ ಮುಚ್ಚಿರುವರು. ಹುಡುಗಿಯು ಎಂದಿನಂತೆ ಹಾಡಬಲ್ಲಳು ಅವಳಿಗೆ ಒಂದು ಸಂಗೀತ ಸ್ಪರ್ಧೆಯಲ್ಲಿ ಬಹುಮಾನವೂ ದೊರಕಿರುವುದು.

ಪೆಸೆಂಜರರ ಅವಗಾಹನೆ ಬಗ್ಗೆ

G. O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದ್ದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಚ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು,
23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

SEASON DEPOSITS
for Rs. 5,000/- and over are now accepted at all Offices of the Bank at the following rates:

3 & 4 months	$2\frac{1}{2}$% p. a.
5 & 6 months	$2\frac{3}{4}$% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯುಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಬಹಳ ಸಮಯದ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ತೊಂದರೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 19—3—1948 [ಸಂಚಿಕೆ 11]

ಆಹಾರದ ಸಮಸ್ಯೆಯನ್ನು ಹೇಗೆ ನೀಗಿಸಬಹುದು

ಹಳ್ಳಿಗಳಲ್ಲಿ ಆಹಾರ ಸ್ವಾವಲಂಬನ

ಡಾ| ಕುಮಾರಪ್ಪನವರ ಅಮೂಲ್ಯ ಸೂಚನೆಗಳು

"ಇದು ತನಕ ಆಹಾರಸಮಸ್ಯೆಗಳನ್ನು [illegible] ಮಾಡಿದ ಪರಿಶೋಧನೆಗಳೆಲ್ಲ ಶ್ರೀಮಂತವರ್ಗಕ್ಕೆ ಮಾತ್ರ ಉಪಕಾರಿಯಾದಂತಹುಗಳಾಗಿವೆ. ಈಗ ನಾವಿದನ್ನು ಬದಲಿಸಬೇಕು. ಬಡಕೃಷಿಕರಿಗೆ ಸಹಾಯವಾಗುವ ಪರಿಶೋಧನೆಯ ಏರ್ಪಾಡುಗಳನ್ನು ನಾವು ಕೈಕೊಳ್ಳಬೇಕು" ಹೀಗೆಂದು ಡಾ| ಕುಮಾರಪ್ಪಾ ಅವರು ಕೇಂದ್ರಸರಕಾರದ ಕೃಷಿಶಾಖೆಯ ಅಧಿಕಾರವರ್ಗಕ್ಕೆ ಕೊಟ್ಟ ಸಲಹೆಯಲ್ಲಿ ತಿಳಿಸಿರುವರು. ಅವರ ಅಮೂಲ್ಯ ಸಲಹೆಗಳ ಸಾರಾಂಶ ಹೀಗಿದೆ.

ಸಾಮಾನ್ಯ ಜನತೆಯೇ ನಮ್ಮ ಒಡೆಯರೆಂದು ನಾವು ತಿಳಕೊಳ್ಳುವ ತನಕ ನಮ್ಮ ಸ್ವರಾಜ್ಯಕ್ಕೆ ಯಾವ ಅರ್ಥವೂ ಇಲ್ಲ. ಅವರ ಆವಶ್ಯಕತೆಗಳಿಗೇ ಪ್ರಾಧಾನ್ಯತೆ ದೊರಕಬೇಕು. ಕೃಷಿದೇಶವಾದ ಭಾರತದಲ್ಲಿ ಇದೆಂತಹ ಭೀಕರ ಆಹಾರದ ಕೊರತೆಯೋ! ಆಗಲಿ ಅದು ಆರು ತಿಂಗಳು ಇಲ್ಲವೆ ಒಂದು ವರ್ಷಕ್ಕೆ ಮಿಕ್ಕಿದ ಅವಧಿ ತನಕ ಸಂಕಷ್ಟದಾಯಕವಾಗಲಾರದು. ಸರಕಾರದ ಕೃಷಿ ಇಲಾಖೆಯು ಆಹಾರಕೊರತೆಯನ್ನು ನೀಗಿಸುವ ಒಂದು ಸಂಸ್ಥೆಯಾಗಬೇಕು. ಬರಗಾಲಬಾರದಂತೆ ನೋಡಿಕೊಳ್ಳುವ ಹೊಣೆ ಅದರದಾಗಿರಬೇಕು.

ಆಹಾರಕೊರತೆಯ ಸಮಸ್ಯೆಯನ್ನು ನಾವು ಹಲವು ವಿಧಾನಗಳಿಂದ ಪರಿಹರಿಸಲು ಪ್ರಯತ್ನಿಸಬೇಕು. ಉತ್ಪತ್ತಿ ಹೆಚ್ಚಿಸುವುದು, ಸಮಾನಾಂತರವಾಗಿ ಹಂಚುವುದು, ಹೆಚ್ಚುಳಿದುದನ್ನು ಹಾಳಾಗದಂತೆ ಇರಿಸುವುದು, ಮತ್ತು ಆಹಾರ ಖರ್ಚಿನಲ್ಲಿ ಅನಾವ್ಯಯವಾಗದಂತೆ ನೋಡುವುದು ಇವುಗಳ ಕಡೆಗೆ ಹೆಚ್ಚಿನ ಗಮನಕೊಡಬೇಕು.

ಇಷ್ಟಲ್ಲದೆ ಜನತೆಯ ಆಹಾರಾಭ್ಯಾಸದಲ್ಲಿ ಯೋಗ್ಯ ಸುಧಾರಣೆಗಳನ್ನು ಬದಲಾವಣೆಗಳನ್ನು ಮಾಡುವ ಸಾಧ್ಯಾಸಾಧ್ಯತೆಗಳನ್ನು ಪರ್ಯಾಲೋಚಿಸಿ ಆಹಾರ ಧಾನ್ಯಗಳ ಖರ್ಚನ್ನು ಕಡಿಮೆಮಾಡಲು ಪ್ರಯತ್ನಿಸಬೇಕು. ಕೃಷಿಇಲಾಖೆಯು ಕೃಷಿ ಉತ್ಪನ್ನಗಾರರಿಗೆ ಮುಖ್ಯತಃ ಹೆಚ್ಚಿನ ಸಹಾಯ ನೀಡುವ ಸಂಸ್ಥೆಯಾಗಬೇಕು.

ಉತ್ಪತ್ತಿಗೆ ಪ್ರಾಧಾನ್ಯತೆ

ಆಹಾರಬೆಳೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದು ಈ ಸಮಸ್ಯೆಪರಿಹಾರದ ಒಂದು ವಿಧಾನ. ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಫಲವಸ್ತುಗಳು, ಕಾಯಿಪಲ್ಯಗಳು ಇವಕ್ಕೇನೇ ಇತರ ಎಲ್ಲಾ ವ್ಯಾಪಾರಿ ಬೆಳೆಗಳಿಗಿಂತ ಹೆಚ್ಚಿನ ಸೌಕರ್ಯಗಳನ್ನು ಸ್ವಾವಲಂಬನೆಯ ತಳಹದಿಯ ಮೇಲೆ ರಚಿಸುವ ಯೋಜನೆಗಳನ್ನು ಮಾಡಬೇಕು.

ಉದಾಹರಣೆಗಾಗಿ ಸುಮಾರು ೫೦ ಸಾವಿರ ಜನಸಂಖ್ಯೆಯುಳ್ಳ ೩೦—೪೦ ಹಳ್ಳಿಗಳನ್ನು ಈ ಉದ್ದೇಶಕ್ಕಾಗಿ ಒಂದು ಗುಂಪಾಗಿ ತೆಗೆದುಕೊಳ್ಳಬೇಕು. ಇಂತಹ ಕ್ಷೇತ್ರದ ಜನರು ಸಮತೋಲ ಆಹಾರ ವಸ್ತುಗಳನ್ನು ಉಪಯೋಗಿಸುವಂತಹ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಶಾಸನದ ಒತ್ತಾಯದಿಂದ ಬೆಳೆಯ ಯೋಜನೆಯೊಂದನ್ನು ರಚಿಸುವುದು ಅತ್ಯಾವಶ್ಯಕ. ಇದರಲ್ಲಿ ಶಾಸ್ತ್ರೀಯ ವಿಧಾನದಿಂದ ಆಹಾರ ಬೆಳೆಯನ್ನೇ ಬೆಳೆಸುವ ಯೋಜನೆಯಾಗಬೇಕು.

ಹಂಚುವಿಕೆ

ಆಹಾರ ಹಂಚುವ ಪ್ರಕ್ರಿಯೆಯಲ್ಲಿ ಸ್ಥಳೀಕ ಹಳ್ಳಿಜನತೆಯನ್ನು ಪೋಷಿಸುವುದರ ಕಡೆಗೆ ಪ್ರಥಮ ಲಕ್ಷ್ಯವನ್ನು ಕೊಡಬೇಕು. ಹೀಗೆ ಮಾಡಿದರೆ ದೂರದ ಪ್ರದೇಶಗಳಿಗೆ ಆಹಾರವನ್ನು ಸಾಗಿಸುವ ಸಮಸ್ಯೆಯು ನೀಗುತ್ತದೆ. ಕೇವಲ ಆಹಾರಕೊರತೆಯ ಕ್ಷೇತ್ರಗಳಿಗೆ ಮಾತ್ರ ಸಾಂಘಿಕ ವ್ಯವಸ್ಥೆಮಾಡಿದರೆ ಸಾಕು. ಇದರಿಂದ ವಾಹನಸೌಕರ್ಯ ಸಾಗಣೆ ಕಷ್ಟಗಳು ತಕ್ಕಮಟ್ಟಿಗೆ ನೀಗುವವು. ಹೀಗೆ ಹಳ್ಳಿಗಳ ಗುಂಪುಗಳನ್ನು ಅವುಗಳ ಆಹಾರ ಆವಶ್ಯಕತೆಗಳ ಮಟ್ಟಿಗೆ ಸ್ವಾವಲಂಬಿಗಳಾಗಿ ಮಾಡಿದರೆ ಒಟ್ಟಿನಮಟ್ಟಿಗೆ [illegible] ರದ ಪರಿಸ್ಥಿತಿ [illegible] ಯನ್ನು ಬಿಡಿಸಿದಂತಾಗುತ್ತದೆ.

ಸರಕಾರವು ಹಲವು ವಿಧದುದ್ದೇಶಗಳ ಸಹಕಾರಿ ಸಂಘಗಳನ್ನು ರಚಿಸಿದರೆ ಈಗಿನ ಅಕಾಲ ಬೀಜಬಿತ್ತುವಿಕೆಯ ಅವ್ಯವಸ್ಥೆಯನ್ನು ತಪ್ಪಿಸಬಹುದು. ಈ ಸಂಘಗಳು ಹಳ್ಳಿಗರ ಕೃಷಿಬೀಜ, ಕೃಷಿಉಪಕರಣ ಮತ್ತು ಗೊಬ್ಬರಗಳ ಆವಶ್ಯಕತೆಗಳನ್ನು ಪೂರೈಸಲು ಪ್ರಯತ್ನಮಾಡಬಹುದು. ರೈತರ ಹಲವು ಸಂಕಷ್ಟಗಳನ್ನು ನಿವಾರಿಸಲು ಸಹಾಯಮಾಡುವುದೇ ಇದರ ಮುಖ್ಯೋದ್ದೇಶವಾಗಿದೆ.

ಕೃಷಿಪ್ರಧಾನ ಭಾರತ

ನಮ್ಮ ದೇಶವು ಆಹಾರಉತ್ಪತ್ತಿಯ ಭೂಮಿಯಾಗಿದೆ. ಆದುದರಿಂದ ಹೊರಗಿನಿಂದ ತರಿಸುವ ಆವಶ್ಯಕತೆ ನಮಗಿರುವುದಿಲ್ಲ. ಈಗೀಗ ಆಹಾರಬೆಳೆಸುವ ಹೊಲಗಳನ್ನು ಹಣಗಳಿಸುವ ಬೆಳೆಗಳ ಉತ್ಪತ್ತಿಗಾಗಿ ಉಪಯೋಗಿಸುವ ಅಭ್ಯಾಸ ಹೆಚ್ಚಿದೆ. ಅಕ್ಕಿ ಪ್ರದೇಶಗಳನ್ನು ಬೇರೆ ಯಾವ ಬೆಳೆ ಬೆಳೆಸಲೂ [illegible] ನಿರ್ಬಂಧ ಹಾಕಬೇಕು.

ಗೊಬ್ಬರದ ಆವಶ್ಯಕತೆಗಳನ್ನು ಪೂರೈಸಲು ಸಹಕಾರಿ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. [illegible] ಕ್ಷೇತ್ರಗಳಿಗೆ [illegible] ಯೋಗ್ಯವಾದ ಗೊಬ್ಬರವನ್ನು ತಯಾರಿಸಲು ಈ ಸಂಘಗಳಿಗೆ ಸರಕಾರವು ಧನಸಹಾಯವನ್ನು ಮಾಡಬೇಕು. ಪ್ರಕೃತಿದತ್ತವಾದ ಗೊಬ್ಬರದ ಬದಲಿಗೆ ಕೃತಕಗೊಬ್ಬರವನ್ನು ಎಂದಿಗೂ ಉಪಯೋಗಿಸಲು ಸಂದರ್ಭಕೊಡಬಾರದು. ಆದರೆ ರೈತನು ತನ್ನ ಮನೆಯಲ್ಲಿ ತಯಾರಿಸುವ ಎಲೆಗೊಬ್ಬರದ ಪ್ರಮಾಣವು ಸಾಕಷ್ಟಿಲ್ಲದಿರುವಲ್ಲಿ ಮಾತ್ರ ಕೃತಕಗೊಬ್ಬರದ ಸರಬರಾಯಿಯಾಗಬೇಕು.

ಇಂಗ್ಲೆಂಡಿನ ಆದರ್ಶ

ಯುದ್ಧಾನಂತರ ಬ್ರಿಟನಿನಲ್ಲಿ ದ್ವಿದಳ ಧಾನ್ಯಗಳ ಕೊರತೆಯುಂಟಾಯಿತು. ಕೂಡಲೇ ಯೋಗ್ಯ ಪ್ರಚಾರದ ಮೂಲಕ ಸರಕಾರವು ಅಲ್ಲಿನ ತರುಣವರ್ಗವು ಹೆಚ್ಚಿನ ಫಲವಸ್ತುಗಳನ್ನೂ ಕಾಯಿಪಲ್ಯಗಳನ್ನೂ ಹಾಲನ್ನೂ ಆಹಾರಾಂಶವಾಗಿ ಅಧಿಕ ಪ್ರಮಾಣದಲ್ಲಿ ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲ್ಪಟ್ಟಿತು. ಪರಿಣಾಮವಾಗಿ ಅಲ್ಲಿನ ತರುಣರು ಯುದ್ಧಪೂರ್ವಕ್ಕಿಂತ ಹೆಚ್ಚು ಆರೋಗ್ಯವಂತರಾಗಿದ್ದಾರೆ. ನಮ್ಮ ದೇಶದಲ್ಲೂ ಜನರು ಹೆಚ್ಚು ತರಕಾರಿಗಳನ್ನುಪಯೋಗಿಸಬಹುದು. ಆಹಾರಧಾನ್ಯಗಳ ಖರ್ಚು ಈಗಿನಷ್ಟು ಇರಬೇಕೆಂದಿಲ್ಲ.

THE
UNITED INDIA LIFE ASSURANCE CO., LTD.
ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to.—

INSPECTORATE OFFICE
K. S. Rao Road, Mangalore

ಗತವಾರದ ಗಣನೀಯ ಭಾಷಣಗಳು

ರಾಷ್ಟ್ರನೌಕೆ ಸುಗಮ ಸಾಗಲಿ

ಪಂಡಿತ ನೆಹರುರವರು ವಿಶಾಖಪಟ್ಟಣದಲ್ಲಿ ಸಾಗರಾಂತರ ಪ್ರಯಾಣ ಯೋಗ್ಯವಾದ ಭಾರತದಲ್ಲಿ ಕಟ್ಟಿದ ಪ್ರಥಮ ನೌಕೆ 'ಜಲಉಷಾ'ವನ್ನು ತೇಲಿಸುತ್ತ ಹೀಗೆಂದರು

ಈ ಚಿಕ್ಕ ಹಡಗು ನಮ್ಮ ರಾಷ್ಟ್ರ ನೌಕೆಯ ಪೂರ್ವಪೀಠಿಕೆಯಾಗಲಿ. ನಾವೀ ಹಡಗದ ಮೂಲಕ ಹಿಂದೂ ಸ್ವಾತಂತ್ರ್ಯದ ಸಂದೇಶವನ್ನು ಜಗತ್ತಿನ ಮೂಲೆ ಮೂಲೆಗೆ ಮುಟ್ಟಿಸುವಂತಾಗಲಿ. "ದೇಶದ ತರುಣರು ನೌಕಾಪಡೆಯಲ್ಲಿ ಹೆಚ್ಚೆಚ್ಚಾಗಿ ಸೇರಬೇಕು. ನಾನು ತರುಣನಾಗಿದ್ದರೆ ವಿಮಾನ ಅಥವಾ ನೌಕಾಪಡೆಯಲ್ಲಿ ಸೇರಲು ನನಗೆ ಅತ್ಯಾನಂದವಾಗುತ್ತಿತ್ತು. ಇದು ತನಕ ನನಗೆ ಅಂತಹ ಸಂದರ್ಭ ಒದಗದಿದ್ದದ್ದು ದುರ್ದೈವ. ಕಛೇರಿಯಲ್ಲಿ ಕುಳಿತೇ ನನ್ನ ಕಾಲಕಳೆವಂತಾಗಿದೆ"

ಈಗ ಮುಷ್ಕರ ಬೇಡ

ಪಂಡಿತ್ ನೆಹರುರವರು ಮೇಲ್ಕಂಡ ಸಂದರ್ಭದಲ್ಲಿ ಕೊಟ್ಟ ಭಾಷಣದ ಇನ್ನೊಂದೆಡೆ ಹೀಗೆಂದರು

"ಔದ್ಯೋಗಿಕ ಕ್ಷೇತ್ರದಲ್ಲಿ ಕೂಲಿಕಾರರೂ ಬಂಡವಾಳದಾರರೂ ಶಾಂತಿಯನ್ನು ಕಾಯ್ದುಕೊಳ್ಳುವುದು ಅಗತ್ಯವಿದೆ ಎಲ್ಲರೂ ಉತ್ಪತ್ತಿಯನ್ನು ಹೆಚ್ಚಿಸುವ ಗುರಿಯಿಟ್ಟುಕೊಳ್ಳಬೇಕು.

"ದೇಶದ ಕಲ್ಯಾಣ ಸಾಧಿಸಲು ಹಾಗೂ ಬಹುಸಂಖ್ಯಾಕರ ಹಿತಕ್ಕಾಗಿ ಇರುವ ಎಲ್ಲಾ ಔದ್ಯೋಗಿಕ ಚಟುವಟಿಕೆಗಳಿಗೆ ನಾವು ಉತ್ತೇಜನ ಕೊಡುವೆವು. ಇಂದು ಮುಷ್ಕರಹೂಡುವ ಸಮಯವಲ್ಲ. ನೌಕೆಯನ್ನು ನಡೆಸುವ ನಾವಿಕರು ಮುಷ್ಕರಹೂಡಿದರೆ ರಾಷ್ಟ್ರನೌಕೆ ಮುಂದರಿಯುವ ಬಗೆಯೆಂತು? ಔದ್ಯೋಗಿಕ ಕ್ಷೇತ್ರದಲ್ಲಿ ಅಶಾಂತಿ ಉದ್ಭವಿಸಿದರೆ ರಾಷ್ಟ್ರದ ಶಕ್ತಿ ಹ್ರಾಸವಾಗುವುದೆಂಬುದನ್ನು ಲಕ್ಷ್ಯದಲ್ಲಿಡಬೇಕು"

ಭಾಷಾವಾರು ಭಾತೃಕಲಹ

ಶ್ರೀ ಕೆ. ಈಶ್ವರ, ಮಂಗಳೂರಿನ ಮದ್ರಾಸ್ ಶಾಸನಸಭೆಯ ಸದಸ್ಯರು ಒಂದು ಹೇಳಿಕೆಯಲ್ಲಿ ಪ್ರಾಂತ್ಯದ ರಾಜಕೀಯದ ಕುರಿತು ಹೀಗೆಂದಿರುವರು

"ಆಂಧ್ರ ತಮಿಳರ ರಾಜಕೀಯ ತಿಕ್ಕಾಟದಿಂದ ಪ್ರಾಂತ್ಯದ ಆಡಳಿತ ಕುಂಠಿತವಾಗಿದೆ ಜನತೆಯ ಕಾರ್ಯಕಲಾಪಗಳು ಸಮಯಕ್ಕೆ ಸರಿಯಾಗಿ ಜರಗದೆ ಜನರಲ್ಲಿ ಸರಕಾರದ ಕಡೆ ಅನಾದಾರ ಹುಟ್ಟುತ್ತಿದೆ ಅದರಲ್ಲೂ ದೂರದ ಬಳ್ಳಾರಿ, ದ ಕನ್ನಡ ಹಾಗೂ ಮಲಬಾರ ಜಿಲ್ಲೆಗಳ ಬಗ್ಗೆ ಹೆಚ್ಚಿನ ಅಸಡ್ಡೆ ತೋರಿಸಲ್ಪಟ್ಟಿದೆ. ಈ ಜಿಲ್ಲಾ ಪ್ರತಿನಿಧಿಗಳ ಕೂಗು ಅರಣ್ಯರೋಧನವಾಗಿದೆ. ಇದರಿಂದ ಜನತೆಯ ಹಿತಕ್ಕಾಗಿ ಪ್ರಬಲವಾದ ಪ್ರಪೋಟಿಯುಳ್ಳ ಆಂಧ್ರ ತಮಿಳರ ಪಕ್ಷಗಳಿಗೆ ಸೇರದ ನಾಯಕರನ್ನು ಈ ಮೂರು ಜಿಲ್ಲೆಗಳ ಪ್ರತಿನಿಧಿಗಳಲ್ಲಿ ಅಸಮರ್ಥರಾದವರನ್ನು ಆರಿಸಬೇಕಾಗುವುದು ಅತ್ಯಾವಶ್ಯಕ. ಇದರಿಂದ ಯಾರಿಗೂ ಅಸಮಾಧಾನವಾಗದೆ ಜನತೆಗೆ ಹೆಚ್ಚಿನ ಒಳಿತಾಗಬಹುದು"

ಕರ್ಣಾಟಕಕ್ಕೆ ಮಹಾರಾಜರು

ಶ್ರೀ ಕೆ. ಎಂ ಮುನ್ಶಿಯವರು ಬೆಂಗಳೂರಿನ ತಮ್ಮ ಭಾಷಣದಲ್ಲಿ ಹೀಗೆಂದರು

"ಕರ್ಣಾಟಕವು ಪ್ರತ್ಯೇಕ ಪ್ರಾಂತವಾದರೆ ಒಂದೇ ಭಾಷೆಯನ್ನಾಡುವ ಒಂದೂವರೆ ಕೋಟಿ ಜನರು ಒಂದೆಡೆ ಬರುವರು— ಮುಂಬಯಿಯಲ್ಲಿ ೫೦ ಲಕ್ಷ, ಮೈಸೂರಲ್ಲಿ ೭೫ ಲಕ್ಷ, ಮದ್ರಾಸಿನಲ್ಲಿ ೧೫ ಲಕ್ಷ ಕನ್ನಡಿಗರಿರುವರು. ಈ ಎಲ್ಲಾ ಜನರೂ ಕೂಡಿ ಮೈಸೂರು ಮಹಾರಾಜರ ನೇತೃತ್ವದಲ್ಲಿ ಒಂದು ಪ್ರಾಂತ್ಯವನ್ನು ರಚಿಸಬಲ್ಲರೆಂಬುದಕ್ಕೆ ನಾನು ಒಪ್ಪುತ್ತೇನೆ,

"ಆದರೆ ಬಲಿಷ್ಠ ಕೇಂದ್ರ, ಮತ್ತು ಬಲಾಢ್ಯ ಸೈನ್ಯವಿಲ್ಲದೆ ಸ್ವಾತಂತ್ರ್ಯಭದ್ರವಲ್ಲ. ಪ್ರಾಂತಿಯತೆ ನಮ್ಮ ಧ್ಯೇಯಸಾಧನೆಗೆ ಅಡ್ಡಿಬರಬಾರದು"

ಮೌಂಟ್ ಬೇಟನ್ನರ ನೃತ್ಯ

ಲಾರ್ಡ್ ಮೌಂಟ್ ಬೇಟನ್ನರು ೨೬ ವರ್ಷಗಳ ಹಿಂದೆ ಬ್ರಿಟಿಷರು ಬರ್ಮಾದಿಂದ ಕಸಿದುಕೊಂಡ ಸಿಂಹಾಸನವನ್ನು ಆದೇಶಕ್ಕೊಪ್ಪಿಸಿದರು. ಆ ಸಂದರ್ಭದಲ್ಲಿ ಹೀಗೆಂದರವರು:

"ಈ ಭವನದಲ್ಲಿ ನಾನು ತರುಣನಿದ್ದಾಗ ೨೬ ವರ್ಷಗಳ ಹಿಂದೆ ನೃತ್ಯಮಾಡಿದ್ದೆ ಮೂರು ವರ್ಷಗಳ ಹಿಂದೆ ಇಲ್ಲಿಯೇ ಯುದ್ಧಪದಕಗಳನ್ನು ನಾನು ಹಂಚಿದ್ದೆ. ಅಂದು ಆಂಗಸಾನರೂ ಹಾಜರಿದ್ದರು. ಅವರ ನಿಧನದಿಂದ ಆಘಾತವುಂಟಾಗಿದೆ ಸ್ವಲ್ಪಕಾಲವೆಂಬಂತೆ ಭಾರತದ ಮಹಾತ್ಮಾ ಗಾಂಧಿಯವರ ಕೊಲೆ ನಮ್ಮ ಮೇಲೆ ಸಿಡಿಲಿನಂತೆರಗಿದೆ

"ಬ್ರಹ್ಮದೇಶವು ಮೂರು ವರ್ಷಗಳಲ್ಲಿ ಎರಡು ಸಲ ಯುದ್ಧರಂಗವಾಯಿತು ಎಲ್ಲವೂ ಹರಿದುಬಿಟ್ಟಿದೆ. ಬರ್ಮಾವು ಮೊದಲಿನ ಶಕ್ತಿಯನ್ನು ಪಡೆಯಲೆಂದು ಆಶಿಸುತ್ತೇನೆ."

ದಕ್ಷಿಣದಲ್ಲೂ ಜಾತೀಯತೆ

ಶ್ರೀಮತಿ ದುರ್ಗಾಬಾಯಿಯವರು ಕೇಂದ್ರ ಶಾಸನಸಭೆಯಲ್ಲಿ ಜಾತಿಪದ್ಧತಿ ಮೇಲೆ ಶಿಕ್ಷಣ ಸಂಸ್ಥೆಗಳ ವ್ಯವಹಾರ ನಡೆಸುವುದರ ಕುರಿತು ಹೀಗೆಂದರು

"ನಮ್ಮ ಪ್ರಾಂತ್ಯದಲ್ಲಿ ಹಿಂದೂ ಮುಸ್ಲಿಂ ದ್ವೇಷಕಿಂತಲೂ ತೀವ್ರವಾದ ಪೆಡಂಭೂತವೊಂದಿದೆ. ಅದೆಂದರೆ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆ. ಕೇವಲ ಕೆಲ ನೌಕರಿಗಳನ್ನು ಹಂಚುವಾಗ ಮಾತ್ರ ಈ ಪ್ರಶ್ನೆಯೆದ್ದಿದ್ದರೆ, ಇಲ್ಲವೆ ಒಂದು ಜಾತಿಯವರು ಇನ್ನೊಬ್ಬರಿಗಿಂತ ಹೆಚ್ಚು ಧಾನ್ಯ ಪಡೆದರೆ ನನಗೇನು ಅನಿಸುತ್ತಿದ್ದಿಲ್ಲ. ಆದರೆ ಮದ್ರಾಸದಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗಲೂ ಈ ಪ್ರಶ್ನೆ ಅಡ್ಡಬರುತ್ತದೆ. ಹಿಂದುಳಿದವರಿಗೆ ಪ್ರೋತ್ಸಾಹಕೊಡುವ ನೆವದಿಂದ ಯೋಗ್ಯತೆಯುಳ್ಳವರ ಹಕ್ಕುಗಳನ್ನು ಕಳೆಗೊತ್ತುವುದು ಸರಿಯಲ್ಲ"

ಕೂಸಿನ ಮೈ ತಂಪಗಿಡುವ
ದಗ್ಗನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ಠಿಕ್ಕಿ ನುಣ್ಣಗಿರುವ ಈ ಪೌಡರು ಎಳ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ
558
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

IF IT IS

INSURANCE

Remember

NEW INDIA

Largest Composite Indian Insurance Office

Highlights of Progress in 1946

New Business (LIFE) exceeds	Rs 12 Crores
Policy in Force exceeds	Rs 3[illegible]
Total Assets exceed	Rs 10
Total claims paid since inception exceed	Rs 1[illegible]

TRANSACTS

LIFE, FIRE, MARINE, MOTOR VEHICLES,
AERIAL RISKS, WORKMEN'S COMPENSATION
FIDELITY GUARANTEE, ALL RISKS ETC

NEW INDIA ASSURANCE CO., LTD.

(H. O. : BOMBAY.)

Madras Branch: 4 & 5, FIRST LINE BEACH.

NOTICE

In the Court of the District Munsif of Mangalore

R E P 1 /1948 X E A 1948
Ma ach ae D Souza Petitioner
Chathrina Souza Ba Respt

To the Respondent Chathrina Souza Ba Widow of Marcel D Souza residing at Bajpe Mangalore Taluk

Take notice that the Petitioner has applied for sale of Respondent s immoveable property and also has filed E A 9 1948 praying that permission may be granted to bid & set off at the time of sale So 25th March 1948 at 11 A M has been fixed for settling the terms of the sale proclamation or passing orders on the above E A 9 1948 in the above court

Mangalore K L Shankar Rao
18 3 1948 Vakil for Petitioner

WANTED

Applications are invited for the post of one clerk from candidates with the following qualifications

Minimum education qualifications Completed S S L C

Knowledge of typewriting essential

Training in Book keeping and account will be additional qualifications.

Pay Rs 45/ per month with the usual Dearness Allowance admissable under the rules

Applications addressed to the undersigned by official designation only should reach by 31 3-1948 Selected candidate will be on probation for six months If called for an interview mofussil candidates will have to come at their own expense Candidate selected will have to join within a week from date of order Canvassing will disqualify a candidate from consideration of his application

MANAGING DIRECTOR
Canara Medical Supplies Ltd ,
P O Box No 77
MANGALORE (S Kanara)

ಅಂತರ್ರಾಷ್ಟ್ರೀಯ ಪರಿಚಯ

ಇಂದು ಪೂರ್ವ ಯುರೋಪಿನ ರಾಜಕೀಯದ ಕೆಲಸುಮೆಲೋಗರ ಅಷ್ಟು ಕೆಡುಕಾಗಿದೆ. ಅದರ ವಿಘಾತುಕ ಶಕ್ತಿ ಸ್ಪರ್ಧೆಯ ಝಂಜಾವಾತದಲ್ಲಿ, ಸಿಕ್ಕಿದ ಅದೆಂತಹ ವಿವೇಕಪರ ವಿಚಾರಿಯು ತಾಳ್ಮೆಯಾದರೂ ಸ್ಥಿಮಿತ ತಪ್ಪುವುದರಲ್ಲಿ ಕೌತುಕವಿಲ್ಲ. ರಶ್ಯದ ವಿದೇಶಾಂಗ ಧೋರಣೆಯು ನಿರಂತರ ಕುತಂತ್ರದ ಕಾರಸ್ಥಾನ ಪರಮಾವಧಿಗೆ ಮುಟ್ಟಿದಾಗ ಚೆಕೋಸ್ಲೊವೆಕಿಯದ ವಿದೇಶಾಂಗ ಮಂತ್ರಿ ಜಾನ್‌ಗೆರಿಗ್ ಮುಸಾರಿಕರು ಚಿತ್ತಭ್ರಮಣಗೊಂಡು ತಾವು ವಾಸಿಸಿದ್ದ ಅರಮನೆಯ ಬಚ್ಚಲುಮನೆಯ ಕಿಟಿಕಿಯಿಂದ ಎರಡುಮಹಡಿ ಕೆಳಗೆ ಹಾರಿ ಪ್ರಾಣ ಕಳಕೊಂಡರು.

ಜಾನ್‌ಗೆರಿಗೆ ಮುಸಾರಿಕ್ ಅವರು ಯುರೋಪಿನ ಆಧುನಿಕ ಇತಿಹಾಸದಲ್ಲಿ ಮಾತ್ರವಲ್ಲ ಅಂತರ್‌ರಾಷ್ಟ್ರೀಯದ ರಾಜಕಾರಣದಲ್ಲಿ ಓರ್ವ ಅವ್ಯಕ್ತಿನು ಜೀವನಾದರ್ಶದ ಮಹಾವ್ಯಕ್ತಿಯಾಗಿ ಮೆರೆಯುತಿದ್ದರು. ತಮ್ಮ ತಂದೆಯಿಂದ ಮೊದಲ ಜಾಗತ್ತಿಕ ಯುದ್ಧಾನಂತರ ನಿರ್ಮಿಸಲ್ಪಟ್ಟ ಜೆಕ್ ಜನಾಂಗದ ಅಭ್ಯುದಯಕ್ಕಾಗಿ ಇವರು ತಮ್ಮ ತನು ಮನ ಧನಗಳನರ್ಪಿಸಿ ಅದೇ ಸಮಯಕ್ಕೆ ಜಗತ್ತಿನಲ್ಲಿ ಪ್ರಜಾಪ್ರಭುತ್ವದ [illegible]ಗಾಗಿ ಅವರು ಅವಿಶ್ರಾಂತವಾಗಿ ಶ್ರಮಿಸಿದರ

ಜೀವನೇತಿಹಾಸ

ಜಾನ್‌ಮುಸಾರಿಕರ [illegible] ನಗರದಲ್ಲಿ ಜನಿಸಿದರು. ಅವರ ತಂದೆ ಥೋಮಸ್ ಮುಸಾರಿಕರ ತಾಯಿ ಓರ್ವ ಅಮೇರಿಕನ್ ಮಹಿಳೆ [illegible] ಜಾನನು [illegible] ವಹಿಸುವುದರಲ್ಲಿ ಅಸಾಮಾನ್ಯ ಪ್ರತಿಭೆಯನ್ನು ಪ್ರದರ್ಶಿಸಿದ. ಆದರೆ [illegible] ವಿದ್ಯೆಯ [illegible] ಪರಿಪೂರ್ಣತೆಗೆ [illegible] ಅವರಲ್ಲಿ ಸಾಕಷ್ಟು [illegible] ಧೈರ್ಯವಿರಲಿಲ್ಲ. ಹುಡುಗನಿರುವ ಹಿಂದೆ ಓಡಾಡುವ ಕೆಲಸದಿಂದಾಗಿ ನನಗ [illegible] ಸೊತ್ತೇ ಇರಲಿಲ್ಲ ಎಂದವರು ತಿಳಿಸಿದ್ದರು.

ತಂದೆ ಥೋಮಸ್ ಮುಸಾರಿಕರು ಜೆಕೋಸ್ಲೊವೇಕಿಯದ ಈಗಿನ ರಾಜಧಾನಿ (೧೯೧೮ಕ್ಕೆ ಮುಂಚೆ ಇದು ಜರ್ಮನ್ ಚಕ್ರಾಧಿಪತ್ಯಕ್ಕೆ ಸೇರಿತ್ತು) ಪ್ರೇಗ್ ನಗರದಲ್ಲಿ ತತ್ವಜ್ಞಾನದ ಪ್ರೊಫೆಸರರಾಗಿದ್ದರು. ೧೯೦೨ರ ಸುಮಾರಿಗೆ ಚಾರ್ಲ್ಸ್ ಕ್ರೇನ್ ಎಂಬ ಅಮೇರಿಕದ ಮಿಲಿಯಾಧೀಶರು (ಇವರಿಗೆ ಕಬ್ಬಿಣ ಕಾರ್ಖಾನೆ ಇತ್ತು) ಅವರನ್ನು ಚಿಕಾಗೋ ವಿಶ್ವವಿದ್ಯಾಲಯಕ್ಕೆ ಭಾಷಣಕೊಡಲು ಕಳುಹಿಸಿದರು. ಈ ಕ್ರೇನ್ ಮಹಾಶಯರು ಮುಂದೆ ಜೆಕೋಸ್ಲೊವೇಕಿಯವನ್ನು ಪ್ರತ್ಯೇಕ ದೇಶವಾಗಿ ರಚಿಸುವುದಕ್ಕೆ ಅಮೇರಿಕನ್ ಅಧ್ಯಕ್ಷ ವುಡ್ರೋವಿಲ್ಸನ್ನರನ್ನು ಒತ್ತಾಯಪಡಿಸಲು ತಮ್ಮ ವರ್ಚಸ್ಸನ್ನು ಉಪಯೋಗಿಸಿದರು.

ಆದರ ಜಾನ್ ಮುಸಾರಿಕರು ಸಂಯುಕ್ತ ಅಮೇರಿಕಕ್ಕೆ ಹೋದದ್ದು ೧೯೦೭ರಲ್ಲಿ ತಮ್ಮ ೨೧ನೇ ವಯಸ್ಸಿನಲ್ಲಿ. ತಂದೆಯು ಮಗನಿಗೆ ಕೊಟ್ಟದ್ದು ಒಂದು ಆಶೀರ್ವಾದ ಮತ್ತೆ ಖರ್ಚಿಗೆ ಕೇವಲ ಮುನ್ನೂರು ರೂಪಾಯಿ. "ಮುಂದೆ ನೀನು ನಿನ್ನ ಹೊಟ್ಟೆ ಪಾಡು ನೋಡು" ಎಂದೂ ತಂದೆ ಉಪದೇಶಿಸಿದ. ಆಗ ಜಾನನಿಗೆ ಜುಗಾರಿ ಆಡುವ ಹವ್ಯಾಸವಿದ್ದುದರಿಂದ ಮೋಸದ ಜೂಜಿನಲ್ಲಿ ಇದ್ದುದನ್ನು ಕಳಕೊಂಡು ಖಾಲಿಜೇಬಿನವನಾಗಿ ತರುಣ, ಜಾನನು ನ್ಯೂಯಾರ್ಕಿನಲ್ಲಿದ್ದಾಗ ಅವನಿಗೆ ಜನರ ಧನ ಸಹಾಯವಿರಲಿಲ್ಲ. ಅಮೇರಿಕನ್ ನಡೆನುಡಿಗಳಂತೂ ಅಪರಿಚಿತದವು. ಅಂತೂ ಇನ್ಸೂರ್ ಕಂಪೆನಿಯೊಂದರಲ್ಲಿ ಮುಂದಿನ ಜೆಕ್ ರಾಜಪಟು ಆಫೀಸಿನ ಜವಾನನಾದ.

ಕೆಲವು ತಿಂಗಳ ನಂತರ ಜಾನನು ತನ್ನ ತಂದೆಗೆ ಸಹಾಯಮಾಡಿದ ಕ್ರೇನನ ಕಾರ್ಖಾನೆಗೆ ಸೇರಿ ಕಬ್ಬಿಣ ಗುದ್ದಿದ. ಅಲ್ಲಿ ಯುರೋಪಿನ ಹಲವು ಜನಾಂಗದ ಕೆಲಸಗಾರರಿದ್ದರು. "ವಾರಕ್ಕೆ ನಾಲ್ಕಾವರ್ತಿ ನಾನು ಅವರಿಗೆಲ್ಲ ಒಂದೇ ಕರಿಹಲಗೆಯ ಮೇಲೆ ಸ್ಲೊವೆಕ್, ಸ್ವಿಡಿಷ್, ಪೋಲಿಶ್, ಮತ್ತು ನೊರ್ವೆ ಭಾಷೆಗಳನ್ನು ಓದಲೂ ಬರೆಯಲೂ ಕಲಿಸುತಿದ್ದೆ. ಈ ಚಾತುರ್ಯವೇ ಮುಂದಿನ ರಾಜತಂತ್ರದ ಪ್ರಥಮ ಪಾಠ. ಆದರೆ ಜಾನನಿಗೆ ಕಬ್ಬಿಣ ಕೆಲಸದಲ್ಲಿ ಜಿಗುಪ್ಸೆ ಬಂತು. "ಸರಪಳಿ ಎಳೆಯುವ ಕೆಲಸ ಯಾರೂ ಮಾಡಬಲ್ಲರು" ಎಂದು ಅವರು ತಮ್ಮ ಆತ್ಮಕಥೆಯಲ್ಲಿ ತಿಳಿಸಿದ್ದಾರೆ.

೧೯೧೪ರಲ್ಲಿ ಜಾನ್ ಮುಸಾರಿಕರು ಸ್ವದೇಶಕ್ಕೆ ಮರಳಿ ತಮ್ಮಿಚ್ಛೆಗೆ ವಿರೋಧವಾಗಿ ಜರ್ಮನ್ ಸೈನ್ಯಕ್ಕೆ ಸೇರಿದರು. ಕ್ರಾಂತಿಕಾರಕ ಚಳವಳಿಯ ತಂದೆಯು ಮಗನಾದ್ದರಿಂದ ಸೈನ್ಯದಲ್ಲಿ ಇವರ ಮೇಲೆ ಗುಪ್ತಚಾರರ ಕಣ್ಣಿತ್ತು. ಪುಣ್ಯಕ್ಕೆ ಜರ್ಮನಿಯು ಸೋತುಹೋಯಿತು. ತಂದೆ ಥೋಮಸ್ ಮುಸಾರಿಕರು ಜೆಕ್ಕರ ಜಾರ್ಜ್ ವಾಶಿಂಗ್ಟನ್ನೆಂದು ಖ್ಯಾತಿಪಡೆದು ಜೆಕೋಸ್ಲೊವೇಕಿಯದ ಪ್ರಥಮ ಅಧ್ಯಕ್ಷನಾದರು. ಅಂದಿನ [illegible] ಬಹುಭಾಷಾ ವಿಶಾರದನಾದ ಮಗ ಜಾನ್ ಮುಸಾರಿಕನಿಗೆ ಅಮೇರಿಕದ ರಾಯಭಾರಿ ಪಟ್ಟವೂ ದೊರೆಯಿತು. "ಹಲವು ಮಾತು (ಭಾಷೆ) ಮಾತಾಡಬಲ್ಲನಾದ್ದರಿಂದ ನನಗೆ ಇದು ಕೆಲಸ ಮಾತ್ರವಲ್ಲ ಸಿತ್ಯಕ್ಷಾರವನ್ನು ಹುಡುಗಿಯರನ್ನು ಮೆಚ್ಚಿಸುವ ಸಾಮರ್ಥ್ಯವೂ ನನ್ನಲ್ಲಿತ್ತು" ಎಂದವರು ಬರೆದಿದ್ದಾರೆ.

ಆ ಮೇಲೆ ತಮ್ಮ ದೇಶದ ರಾಜಕೀಯದ ಸಂಬಂಧವಾದ ಅನೇಕ ಹುದ್ದೆಗಳನ್ನವರು ನೋಡಿಕೊಂಡು ಅನುಭವಸ್ಥರಾದರು. "ನಾನೀಗಲೂ ಜೆಕ್ ಸರಕಾರದ ನಾಜೂಕು ಪೋಷಾಕಿನ ಪೇದೆ ಹುಡುಗ" ಎಂದೂ, "ನಾನು ಜೆಕ್ ಸರಕಾರದ ಹಾಸ್ಯಗಾರ" ಎಂದೂ ಅವರು ನಮ್ಮ ಪಾತ್ರವನ್ನು ವರ್ಣಿಸಿಕೊಂಡಿದ್ದಾರೆ.

ಇದರಲ್ಲಿ ತುಂಬಾ ತ್ಯದ್ಯಾಂಶವಿದೆ. ಜಾನ್ ಮುಸಾರಿಕರು ಯಾವ ರಾಜಕೀಯ ಪಕ್ಷ ಪಂಥವನ್ನು ಸೇರುವವರಲ್ಲ. ರಾಜಕೀಯದ ಸಡಗರವಿಲ್ಲದಿರುವಾಗ ಅವರು ಚಂದದ ಹೆಂಗಳೆಯರೊಡನೆ ಆಡ್ಡಾಡುತಿದ್ದರು. ಇವರ ರಾಜಕೀಯ ಚಾಣಕ್ಯ ಇವರ ಸ್ನೇಹಿತರಿಗೆ ತಿಳಿಯುತ್ತಿರಲಿಲ್ಲ. ಲಂಡನ್ನಲ್ಲಿವರು ಅಲ್ಲಿನ ಪ್ರಧಾನರ ಮನೆಯಿಂದ ಹೊರಟುಬರುತ್ತಿದ್ದಾಗ ಓರ್ವಳು ವಿಶೇಷವೇನೆಂದು ಕೇಳಿದಾಗ "ಪ್ರಿಯಳೆ ಜೆಕೋಸ್ಲೊವೇಕಿಯ (ಹಿಸ್ಪಿರಿಯ [illegible]) ಎಂಬುದೊಂದು ಅಂಟುವ್ಯಾಧಿಯಲ್ಲವೆಂದು ಬ್ರಿಟಿಷ್ ಸರಕಾರಕ್ಕೆ ಮನಗಾಣಿಸಲು ನಾನು ಕೈಕಾಲು ಬಡಿಯುತ್ತಿದ್ದೇನೆ" ಎಂದರಂತೆ.

ಜಾನ್ ಮುಸಾರಿಕರು ಯಾವ ರಾಜಕೀಯ ಪಕ್ಷಕ್ಕೂ ಸೇರುವವರಲ್ಲ. ಆದುದರಿಂದ ಜೆಕ್ ರಾಷ್ಟ್ರನಿರ್ಮಾಣಕಾಲದಲ್ಲಿ ತಮ್ಮ ದುರಂತಮಯ ಅಂತ್ಯದ ತನಕವೂ ಅವರು ತಮ್ಮ ಸರಕಾರದ ಪರವಾಗಿ ಒಂದಲ್ಲ ಒಂದು ಹುದ್ದೆಯನ್ನು ನೋಡಿಕೊಂಡಿದ್ದರು. ಪ್ರಜಾಪ್ರಭುತ್ವ ಸರಕಾರದಿಂದ ಪ್ರಾರಂಭಿಸಿ ಕಮ್ಯೂನಿಸ್ಟ್ ಪ್ರಭಾವದ ಮಂತ್ರಿಮಂಡಲದಲ್ಲೂ ಅವರಿಗೆ ಒಂದು ಸ್ಥಾನವಿತ್ತು. [illegible] ರಾಜಕೀಯದ ಪಟ್ಟಿಗೆ [illegible] ಯಾವ ಪಕ್ಷವನ್ನು ಪಿರಿಸುವವನಲ್ಲ [illegible] ಹಾಸ್ಯದ ನುಡಿ.

ಕಳೆದ ಯುದ್ಧದ ಸಮಯದಲ್ಲಿ ಮುಸಾರಿಕರು ದೇಶಭ್ರಷ್ಟರಾಗಿ ಅಲೆಯುತಿದ್ದರು. ೧೯೪೧ರಲ್ಲಿ ತಮ್ಮ ಜರ್ಮನ್ ಆಕ್ರಮಿತ ದೇಶಕ್ಕೆ ಅಮೇರಿಕದ ಸಹಾನುಭೂತಿ ಸಂಗ್ರಹಿಸಲು ಸಂಯುಕ್ತ ಅಮೇರಿಕಕ್ಕೆ ಹೋದಾಗ ಅಲ್ಲಿನ ವಿದೇಶಿಖಾತೆಯ ಅಧಿಕಾರಿಗಳು ತಮ್ಮ ಅನುಕ್ರಮದ ಪ್ರಶ್ನೆ ಕೇಳಿದರು. ನಿಮ್ಮ ಜನನ ತಾರೀಕು, ವೃತ್ತಿ, ಜನಾಂಗ ಯಾವುದು" ಕೊನೆಯ ಪ್ರಶ್ನೆಗೆ ಮುಸಾರಿಕರು "ಮಾನವ ಜನಾಂಗ" ವೆಂದು ಒತ್ತಿ ಬರೆದರು.

ಇಂದು ಜೆಕ್ ಜನಾಂಗದ ಮುಂದೆ ಎರಡು ಪ್ರಬಲ ಸಮಸ್ಯೆಗಳು ಕೋಡುಬಿಟ್ಟಿವೆ. ಹರಿತವಾಗಿರುವ ಇವುಗಳ ಮೇಲೆ ಮುಸಾರಿಕರು [illegible] ಒಂದು ಕಾಲು [illegible] ರಾಜಕೀಯ ಶರೀರದೊಳಗೆ [illegible] ಇನ್ನೊಂದು [illegible] ಅಡಚಣೆಯ ಸ್ವಾತಂತ್ರ್ಯದ ಸಂಕಷ್ಟದ ವಿಷವನ್ನು ಕಾರುವ ತಹುದು.

ಪರಿಣಾಮವಾಗಿ ಜೆಕೋಸ್ಲೊವೇಕಿಯವು [illegible] ಒಂದು ಕಡೆಯಿಂದ ರಶ್ಯದೊಡನೆ ಪರಸ್ಪರ ಸಹಾಯದ ಒಪ್ಪಂದವಾದಿತು. [illegible] ಪಶ್ಚಿಮ [illegible] ಜನಾಂಗ [illegible] ಪರವಾಗಿ [illegible] ಸಾಮಾಜಿಕ ಮತ್ತು ಸಾಂಸ್ಕೃತಿಕ [illegible] ಜೆಕ್ [illegible] ಸ್ವಾತಂತ್ರ್ಯ ಪ ಸಂಪ್ರದಾಯವನ್ನು [illegible] ಸುತ್ತಿದೆ.

[illegible] ಜೆಕೋಸ್ಲೊವೇಕಿ [illegible] ಒಪ್ಪಂದದ [illegible] ಅಮೇರಿಕನ [illegible] ಆದನ್ನು [illegible] ಪ್ರಶ್ನಿಸಿದರು [illegible] ಅವರಲ್ಲಿ [illegible] ಪ್ರಧಾನಿ [illegible] ಮತ್ತು ರಶ್ಯದ [illegible] ಮತ್ತು ರಾಜಕೀಯ ಸಂಬಂಧವನ್ನು [illegible] ಪಡಿಸಿದರು.

ಮುಸಾರಿಕರು [illegible] ಭಾಷೆಗಳನ್ನು [illegible] ತಿಳಿದ [illegible] ಸ್ತ್ರೀ [illegible] ಅವರನ್ನು [illegible] ಭವ್ಯಾಕೃತಿಗೆ [illegible]

ಜನಾಂಗ [illegible] ಕುರಿತು ಪ್ರಶ್ನಿಸಿದಾಗ ಅವರು "ಅದು [illegible] ವನ್ನು ಕಾಯ [illegible] ಒಳ್ಳೆಯಿತ್ತು. ಇಲ್ಲದಿದ್ದರೆ ನಮಗೆಲ್ಲರಿಗೂ ನರಕವೇ ಗತಿ" ಎಂದರು. ತಮ್ಮ ಜನಾಂಗದ ಕುರಿತು ಅವರು "ನಮ್ಮದು ಚಿಕ್ಕ ಜನಾಂಗ. ಚಿಕ್ಕವರ ಕುರಿತು ಕೇಳುವುದಲ್ಲ, ಅವರನ್ನು ನೋಡಬೇಕು" ಎಂದವರು ಭದ್ರತಾಮಂಡಳಿಕ್ಕೆ ಉಪದೇಶಿಸಿದ್ದರು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾದಲ್ಲಿ ಸಾಂಘಿಕಗೊಳಿಸಿದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸೆಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨ [illegible]
೪ರಿಂದ ೫ ತಿಂಗಳು	,,	,,	೨ [illegible]
೬ರಿಂದ ೯ ತಿಂಗಳು	,,	,,	೨ [illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE CANARA BANK, LIMITED.

ESTD: 1906

ಸ್ವದೇಶಾಭಿಮಾನಿ

ತಾರೀಕು 19—8—1948

ಮುಸ್ಲೀಮ್ ಲೀಗಿನ ನಿರ್ಣಯ

ಭಾರತೀಯ ರಾಷ್ಟ್ರದಲ್ಲಿಯ ಮುಸ್ಲೀಮ್ ಲೀಗಿನ ಸಭೆಯೆಂಬುದಾಗಿ ಮದ್ರಾಸಿನಲ್ಲಿ ಮುವತ್ತು ಮಂದಿ ಲೀಗಿನವರು ಒಂದು ಸಭೆ ಜರಗಿಸಿದರು. ಲೀಗಿನ ಭವಿಷ್ಯದ ಕುರಿತು ಯಾರಿಗೂ ಉತ್ಸಾಹವಿದ್ದಿಲ್ಲವೆಂಬುದು ಈ ಸಭೆಗೆ ಬರೇ ಮುವತ್ತು ಮಂದಿ ಮಾತ್ರ ಬಂದಿದ್ದರೆಂಬುದರಿಂದ ಸ್ಪಷ್ಟವಾಯಿತು.

ಈ ಸಭೆಯಲ್ಲಿ ಮುಸ್ಲೀಮ್ ಲೀಗನ್ನು ಮುಂದರಿಸಬೇಕೆಂದೂ ಇದು ಪ್ರಧಾನವಾಗಿ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಪ್ರಶ್ನೆಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದೂ ಶಾಸನ ಸಭೆಗಳಲ್ಲಿ ಮುಸ್ಲೀಮ್ ಲೀಗ್ ಪಂಗಡಗಳು ಇತರ ಪಂಗಡಗಳ ಜೊತೆ ಸೇರಿ ಬೇಕಾದ ಹೆಸರಿಟ್ಟುಕೊಂಡು ದುಡಿಯಬೇಕೆಂದೂ ಇತ್ಯಾದಿ ನಿರ್ಣಯವಾಯಿತು. ಅಂದರೆ ಮುಸ್ಲೀಮ ಲೀಗಿನ ರಾಜಕೀಯ ಕಾರ್ಯಕ್ರಮ ಬಿಟ್ಟು ಬಿಡಲಾರದೆಂಬುದೇ ಇದರ ಅಭಿಪ್ರಾಯವೆಂದರೆ ತಪ್ಪಿಲ್ಲ.

ಈ ನಿರ್ಣಯಕ್ಕೆ ಏಳು ಮಂದಿ ವಿರೋಧವಿದ್ದು ಇದು ಬಹುಮತದಿಂದ ಮಂಜೂರು ಮಾಡಲ್ಪಟ್ಟಿತು. ಮದ್ರಾಸಿನ ಶಾಸನ ಸಭೆಯಲ್ಲಿ ಲೀಗಿನ ಪಂಗಡದಲ್ಲಿದ್ದವರಲ್ಲಿ ಒಂಭತ್ತು ಮಂದಿ ಈ ಪಕ್ಷಕ್ಕೆ ರಾಜಿನಾಮೆ ಕೊಟ್ಟು "ಪ್ರಗತಿಶೀಲ ಸಮತಾವಾದಿ"ಗಳೆಂಬ ಹೊಸ ಪಕ್ಷವನ್ನು ಸ್ಥಾಪಿಸಿಕೊಂಡರು. ~~ಈ ಒಂಭತ್ತು ಮಂದಿಯಲ್ಲಿ~~ ನಮ್ಮ ~~ದಕ್ಷಿಣ ಕನ್ನಡದ ಜನಾಬ್ ಎಚ್. ಎಸ್.~~ ಹುಸ್ಸೇನ ಸಾಹೇಬರೂ ಒಬ್ಬರು.

ಮಂಜೂರು ಮಾಡಲ್ಪಟ್ಟಿರುವ ನಿರ್ಣಯದಲ್ಲಿ ಲೀಗಿನ ಮುಂದಿನ ಕಾರ್ಯಕ್ರಮವನ್ನು ರೂಪಿಸುತ್ತ ಮುಸ್ಲೀಮ ಮತ್ತಿತರ ಕಡಮೆ ಸಂಖ್ಯಾಕರ ಹಿತ ಸಾಧಿಸುವುದು ತಮ್ಮ ಧ್ಯೇಯವೆಂದು ಹೇಳಲ್ಪಟ್ಟಿರುತ್ತದೆ. ಈ ಸಭೆಯ ಬಹುಮತದವರು ಜಿನ್ನಾ ಸಾಹೇಬರ ಉಪದೇಶಗಳು ಈಗಿನ ಭಾರತದಲ್ಲಿಯೂ ಪ್ರಯೋಜನಕಾರಿಯಾಗುವುವೆಂದು ಅಖಂಡ ವಿಶ್ವಾಸದಿಂದ ವರ್ತಿಸುತ್ತಿರುವರೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಜಿನ್ನಾ ಸಾಹೇಬರನ್ನು ಮೇಲೆತ್ತಿ ಹಿಡಿಯುವುದು ಬ್ರಿಟಿಷ ಧೋರಣೆಗೆ ಅಗತ್ಯವಿದ್ದುದರಿಂದ ಜಿನ್ನಾ ಸಾಹೇಬರು ಮುಸ್ಲಿಮರ ಪರವಾಗಿ ಮಾತ್ರವಲ್ಲ ಎಲ್ಲಾ ಕಡಮೆ ಸಂಖ್ಯಾಕರ ಪ್ರತಿನಿಧಿಯಾಗಿ ಬ್ರಿಟಿಷರಿಂದ ಸಾರಲ್ಪಟ್ಟಿರಬಹುದು. ಈಗ ಕಾಲ ಬದಲಾವಣೆಯಾಗಿದ್ದೆ. ಭಾರತೀಯ ಸರಕಾರದಡಿಯಲ್ಲಿ ಮುಸ್ಲೀಮ ಲೀಗು ಮುಸ್ಲಿಮೇತರ ಕಡಮೆ ಸಂಖ್ಯಾಕರ ಪ್ರತಿನಿಧಿಯಾಗಲು ಹವಣಿಸುವುದು ಕೇವಲ ಹಾಸ್ಯಾಸ್ಪದವೆಂದು ಇವರಿಗೆ ಹೊಳೆಯದಿದ್ದುದು ಆಶ್ಚರ್ಯ.

ಭಾರತೀಯ ಸರಕಾರವು ಸಾರ್ವಜನಿಕ ಪ್ರಜಾಧಿಪತ್ಯದ ಕ್ರಮದಲ್ಲಿ ನಡೆಯಲು ನಿರ್ಧಾರವಾಗಿಡೆಯೆಂದ ಮೇಲೆ ಮುಂದಿನ ರಾಜಕೀಯ ರಂಗದಲ್ಲಿ ಜಾತೀಯ ಸಂಸ್ಥೆಗಳಿಗೆ ಎಳ್ಳಷ್ಟೂ ಸ್ಥಾನ ದೊರೆಯುವಂತಿಲ್ಲವೆಂಬುದು ಸ್ವಲ್ಪ ವಿಚಾರ ಮಾಡಿದರೆ ಸ್ಪಷ್ಟವಾಗುತ್ತದೆ. ಮುಂದೆ ಪ್ರಾಯಸ್ಥರೆಲ್ಲರಿಗೆ ಮತದಾನದ ಹಕ್ಕು ಬರಲಿದೆ. ಮುಸ್ಲಿಮ ಉಮೇದ್ವಾರರನ್ನು ಮುಸ್ಲಿಮ ಮತದಾರರೇ ಆರಿಸುವ ಪದ್ಧತಿ ಖಂಡಿತವಾಗಿಯೂ ಜಾರಿಯಲ್ಲಿರುವಂತಿಲ್ಲ. ಅಂದ ಮೇಲೆ ಮುಸ್ಲಿಮ ಉಮೇದ್ವಾರರು ಕೂಡಾ ಸಾರ್ವಜನಿಕ ಮತದಾರರಿಂದಲೇ ಆರಿಸಲ್ಪಡಬೇಕಾಗುತ್ತದೆ. ಹೀಗಿರುವಾಗ ಈ ಜಾತೀಯ ರಾಜಕೀಯ ಪಂಗಡ ಕಟ್ಟಿಕೊಂಡವರಿಗೆ ಮುಂದೆ ಯಾವ ಆಸೆಯೂ ಇಲ್ಲವೆಂಬುದು ಸ್ಪಷ್ಟ. ಇದನ್ನು ಚೆನ್ನಾಗಿ ಅರಿತವರು ಮುಂದೆ ಲೀಗು ರಾಜಕೀಯ ರಂಗವನ್ನು ಬಿಟ್ಟುಕೊಟ್ಟು ಕೇವಲ ಸಾಮಾಜಿಕ ಇತ್ಯಾದಿ ಕೆಲಸಗಳಲ್ಲಿ ಮಗ್ನವಾಗಿರುವುದು ಹಿತಕರವೆಂದು ಹೇಳುತ್ತಿರುವರು.

ಹಿಂದೂ ಮಹಾಸಭೆಯವರು ಇದನ್ನು ಚೆನ್ನಾಗಿ ತಿಳಿದ ಕಾರಣವೇ ಅವರು ರಾಜಕೀಯ ಕಾರ್ಯಕ್ರಮಗಳನ್ನು ಬಿಟ್ಟರು. ಬಹುಸಂಖ್ಯಾಕರಾದ ಹಿಂದುಗಳ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ಹಿಂದೂ ಮಹಾಸಭೆಯವರೇ ಈ ರೀತಿ ವರ್ತಿಸಿದ ಮೇಲೆ ಮುಸ್ಲಿಮ್ ಲೀಗಿನವರು ಅವರ ಮಾದರಿಯನ್ನೇ ಅನುಸರಿಸಬಹುದಿತ್ತು.

ಮುಸ್ಲೀಮ್ ಲೀಗಿನ ಈ ನಿರ್ಣಯದಲ್ಲಿ ಶಾಸನ ಸಭೆಗಳಲ್ಲಿ ಲೀಗಿನವರು ಇತರ ಪಂಗಡಗಳೊಡನೆ ಸೇರಿ ಬೇಕಾದ ಹೆಸರಿಟ್ಟುಕೊಳ್ಳಬಹುದೆಂಬ ಮಾತಿಗೆ ಅರ್ಥವೇ ಇಲ್ಲ. ಬೇಕಾದವರೊಡನೆ ಸೇರಿ ಬೇಕಾದಂತೆ ವರ್ತಿಸಬಹುದೆಂದಾದರೆ ಇವರನ್ನು ಲೀಗು ಪ್ರತಿನಿಧಿಗಳೆಂದು ಹೇಳುವುದಾದರೂ ಹೇಗೆಂಬುದನ್ನು ಯಾರೂ ಊಹಿಸುವುದು ಅಸದಳವಿರುತ್ತದೆ.

ಲೀಗಿನ ನಿರ್ಣಯದಲ್ಲಿ ವಿಧಾಯಕ ಕಾರ್ಯಕ್ರಮವೆಂದು ಇಟ್ಟುಕೊಂಡ ಅಂಶದಲ್ಲಾದರೂ ಹೆಚ್ಚಿನ ಅರ್ಥವಿಲ್ಲ. ವಿವಿಧ ಪಂಗಡಗಳ ಕಾರ್ಯಕ್ರಮಗಳಿಂದ ಕೆಲವೊಂದು ಅಂಶಗಳನ್ನು ಇದರಲ್ಲಿ ಸೇರಿಸಿಕೊಂಡು ಆಯಾ ಅಭಿಪ್ರಾಯದವರನ್ನು ಒಲಿಸುವ ಯತ್ನವಲ್ಲದೆ ಇದರಲ್ಲಿ ಬೇರಾವ ವಿಚಾರವಿದ್ದಂತೆ ಕಾಣುವುದಿಲ್ಲ.

ವಿವಿಧ ಜಾತಿಗಳೊಳಗೆ ಐಕ್ಯ ಸಾಧಿಸುವುದು ತಮ್ಮ ಧ್ಯೇಯವೆಂಬ ಮಾತು ಕೇವಲ ಔಪಚಾರಿಕವಿದ್ದಂತೆ ಕಾಣುತ್ತದೆ. ಹಳೆಯ ಲೀಗು ಧೋರಣೆಯನ್ನು ಮುಂದರಿಸುವ ಈ ನಿರ್ಣಯ ಐಕ್ಯ ಸಾಧಿಸುವ ದಾರಿ ಇರದೆ ಜಿನ್ನಾ ಸಾಹೇಬರ ದಾರಿಯೇ ಇರುತ್ತದೆಂಬುದು ಸ್ಪಷ್ಟವಿರುತ್ತದೆ.

ಟೀಕೆ-ಟಿಪ್ಪಣಿಗಳು

ಮಜ್ಲೀಸ್ ಇತ್ತೆಹಾದ್ ಉಲ್ ಮುಸಲ್ಮೀನರ ಪುಂಡಾಟಿಕೆ

ಜಿನ್ನಾ ಸಾಹೇಬರ ಅನುವರ್ತಿಗಳಾದ ಈ ಮಜ್ಲೀಸ್ ಇತ್ತೆಹಾದ್‌ಉಲ್ ಮುಸಲ್ಮೀನರು ಹೈದರಾಬಾದಿನಲ್ಲಿ ಬಲಾತ್ಕಾರದ ಹಾದಿ ಹಿಡಿದಿರುವರು. ಹೈದರಾಬಾದಿನ ಭಾರತದ ಗಡಿಗಳಲ್ಲಿ ಇವರು ಪುಂಡಾಟಿಕೆ ಕೈಕೊಂಡಿದ್ದಾರೆ. ಭಾರತದ ಗಡಿಯೊಳಗೆ ಕೂಡಾ ಬಂದು ಅಲ್ಲಲ್ಲಿ ಅತ್ಯಾಚಾರ ನಡೆಸುತ್ತಿದ್ದಾರೆಂದು ತಿಳಿದುಬರುತ್ತದೆ. ಆಂಧ್ರ ಜಿಲ್ಲೆಗಳಲ್ಲಿ ಇವರ ಹಾವಳಿ ನಡೆಯುತ್ತಿದ್ದಂತೆ ಈಗ ಧಾರವಾಡ ಜಿಲ್ಲೆಯ ಕರ್ನಾಟಕದಲ್ಲಿಯೂ ನಡೆಯಿತೆಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಹೇಳಿಕೆಯಿಂದ ತಿಳಿದುಬರುತ್ತದೆ.

ಭಾರತ ಸರಕಾರ ಹಾಗೂ ನಮ್ಮ ಪ್ರಾಂತಿಕ ಸರಕಾರಗಳು ಈ ಕುರಿತು ಹೈದರಾಬಾದು ಸರಕಾರದೊಡನೆ ವ್ಯವಹರಿಸುತ್ತಿವೆಯೆಂದು ತಿಳಿದುಬರುತ್ತದೆ. ಈ ಇತ್ತೆಹಾದರ ಪುಂಡಾಟಿಕೆ ನಿಲ್ಲಿಸುವುದು ಹೈದರಾಬಾದು ಸರಕಾರದ ಕರ್ತವ್ಯವಿರುತ್ತದೆ.

ಹೈದರಾಬಾದು ಸಂಸ್ಥಾನಗಳಲ್ಲಿ ಒಂದು ಪ್ರಮುಖ ಸಂಸ್ಥಾನವೆಂಬುದರಿಂದ ಮಾತ್ರ ಭಾರತ ಸರಕಾರವು ಇವರಿಗೆ ಸ್ವಲ್ಪ ರಿಯಾಯತಿಯಲ್ಲಿ ನಡೆಸುತ್ತಿದೆ. ಈ ರಿಯಾಯತಿ ಹೀಗೆ ಪುಂಡಾಟಿಕೆಯಲ್ಲಿ ಪರಿಣಮಿಸುವಂತಾದರೆ ಹೈದರಾದನ್ನು ಬಗ್ಗಿಸುವುದು ಭಾರತ ಸರಕಾರಕ್ಕೆ ಏನೇನೂ ಕಷ್ಟವಿಲ್ಲ. ಹೈದರಾಬಾದಿನ ಹೆಚ್ಚಿನ ಪ್ರಜೆಗಳು ಇಂಥ — — —

ಮುಸ್ಲಿಮ್ ಲೀಗು ಇನ್ನೂ ಪಾಕಿಸ್ಥಾನದಲ್ಲಿರುವ ತಮ್ಮ ಹಳೆಯ ಮುಂದಾಳುಗಳಿಗೆ ಈ ರೀತಿ ವಿಧೇಯತೆಯನ್ನು ತೋರಿಸುವುದು ಸರಿಯಲ್ಲ ಮಾತ್ರವಲ್ಲ, ಮುಂದೆ ಇದರಿಂದ ಅನರ್ಥವಾಗುವ ಸಂಭವವಿಲ್ಲವೆಂದು ಯಾರು ಹೇಳಬಲ್ಲರು?

ಈ ನಿರ್ಣಯದಿಂದ ಮುಸ್ಲೀಮ್ ಸಮಾಜದ ಹಿತ ಸಾಧಿಸುವ ಬದಲು ಅವರಿಗೆ ಅಹಿತವಾಗುವ ಸಂದರ್ಭವೇ ಹೆಚ್ಚೆಂದು ಮುಸ್ಲಿಮರೇ ಸ್ವಲ್ಪ ವಿಚಾರಿಸಿದರೆ ತಿಳಿಯಬಲ್ಲರು.

ಮುಸ್ಲೀಮ ಸಮಾಜದವರು ಈ ಲೀಗು ಮುಂದಾಳುಗಳನ್ನು ದೂರದಲ್ಲಿ ಬಿಟ್ಟುಬಿಡುವುದೇ ಉತ್ತಮವೆಂದು ಸೂಚಿಸ ಬಯಸುತ್ತೇವೆ. ನಮ್ಮ ಜಿಲ್ಲೆಯ ಮುಸ್ಲಿಮ ಲೀಗಿನ ಮುಂದಾಳುಗಳಲ್ಲಿ ಒಬ್ಬರಾದ ಜನಾಬ್ ಹುಸ್ಸೇನ ಸಾಹೇಬರು ಇಲ್ಲಿಯ ಮುಸ್ಲೀಮರಿಗೆ ಉತ್ತಮ ಮಾದರಿಯನ್ನು ತೋರಿಸಿಕೊಟ್ಟ ಬಗ್ಗೆ ಅವರನ್ನು ನಾವು ಅಭಿನಂದಿಸುತ್ತೇವೆ. ಜಿಲ್ಲೆಯ ಮುಸ್ಲೀಮರು ಲೀಗನ್ನು ಮುಚ್ಚಿ ಹುಸ್ಸೇನ ಸಾಹೇಬರನ್ನು ಅನುಸರಿಸುವುದು ಹಿತಕರವೆಂದು ನಿರ್ಣಯಿಸಬೇಕಾಗಿ ಆಗ್ರಹದಿಂದ ಕೇಳಿಕೊಳ್ಳುತ್ತೇವೆ.

ಸಂದರ್ಭದಲ್ಲಿ ಭಾರತೀಯ ಸರಕಾರಕ್ಕೆ ಬೆಂಬಲ ಕೊಡುವರೆಂಬ ಬಗ್ಗೆ ಯಾವ ಸಂಶಯವೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಆ ಸಂಸ್ಥಾನ ಸರಕಾರದವರು ವಿವೇಕದಿಂದ ವರ್ತಿಸುವುದು ಹಿತಕರ.

ಇತ್ತೆಹಾದ್‌ಉಲ್ ಮುಸಲ್ಮೀನರು ಹೈದರಾಬಾದಿನ ಮುಸಲ್ಮಾನರಿಗಾಗಲಿ ಇಲ್ಲಿಯ ನೈಜಾಮ ಸರಕಾರಕ್ಕಾಗಲಿ ಉಪಕಾರ ಮಾಡುವ ಬದಲು ತಮ್ಮ ಪುಂಡಾಟಿಕೆಯಿಂದ ಅಹಿತವನ್ನೇ ಮಾಡುತ್ತಿದ್ದಾರೆ. ಇದನ್ನವರು ತಿಳಿಯುವ ಸಂಭವ ಕಾಣುವುದಿಲ್ಲ. ಆದರೆ ಇಂಥ ದೊಡ್ಡ ಸಂಸ್ಥಾನದ ಆಡಳಿತೆ ನಡೆಸುವ ನೈಜಾಮ ಸರಕಾರವಾದರೂ ತಿಳಿಯಬೇಡವೆ? ಇವರು ಇದನ್ನು ತಿಳಿದರೆ ಈ ಪಂಗಡದ ಪುಂಡಾಟಿಕೆಯನ್ನು ಕೂಡಲೆ ನಿಲ್ಲಿಸುವುದು ಅಗತ್ಯವಿರುತ್ತದೆ.

"ಜಲ ಉಷಾ" ಭಾರತದಲ್ಲಿ ತಯಾರಾದ ಮೊದಲ ಸ್ಟೀಮರು

ಸಿಂಧಿಯಾ ಸ್ಟೀಮ್ ನೆವಿಗೇಶನ್ ಕಂಪೆನಿಯವರು ವಿಶಾಖಪಟ್ಟಣದಲ್ಲಿ ತಯಾರಿಸಿ ಕಟ್ಟಿಸಿದ ಈ "ಜಲ ಉಷಾ" ಎಂಬ ಸ್ಟೀಮರನ್ನು ಸಮುದ್ರದಲ್ಲಿ ತೇಲಿಸುವ ಸಮಾರಂಭವು ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರ ಹಸ್ತದಿಂದ ಜರಗಿಸಲ್ಪಟ್ಟಿತು.

ಇದುವರೆಗೆ ನಮ್ಮಲ್ಲಿಯವರು ಪರದೇಶಗಳಿಂದ ಇಂಥ ಹಡಗುಗಳನ್ನು ಕ್ರಯಕ್ಕೆ ಪಡೆಯುವುದೇ ವಾಡಿಕೆಯಾಗಿತ್ತು. ಈ ಹಡಗುಗಳನ್ನು ಕಟ್ಟುವ ಕೈಗಾರಿಕೆಯ ಅಭಿವೃದ್ಧಿ ಭಾರತದ ದೃಷ್ಟಿಯಿಂದ ಅತ್ಯಗತ್ಯದ ಕೈಗಾರಿಕೆಯೆನ್ನಲು ಅಡ್ಡಿಯಿಲ್ಲ.

ಹಿಂದುಸ್ಥಾನದ ಮೂರು ಬದಿಗಳಲ್ಲಿ ಸಮುದ್ರವೇ ನಮ್ಮ ಮೇರೆ ಎಂಬುದರಿಂದ ನಮ್ಮ ವ್ಯಾಪಾರ ವಹಿವಾಟುಗಳಿಗಾಗಲಿ ನಮ್ಮ ರಕ್ಷಣೆಯ ದೃಷ್ಟಿಯಿಂದಾಗಲಿ ಬಲವಾದ ನೌಕಾ ಸನ್ನಾಹವು ನಮಗೆ ಅತ್ಯಗತ್ಯವಿರುತ್ತದೆ.

ಬ್ರಿಟಿಷರು ತಮ್ಮ ನೌಕೆಯಿಂದಲೇ ಜೀವಿಸುವವರಾದುದರಿಂದ ಇವರು ನಮ್ಮಲ್ಲಿ ಈ ಕೈಗಾರಿಕೆ ಇದುವರೆಗೆ ಬೆಳೆಯಲು ಬಿಡದಿದ್ದುದು ಸಹಜವೇ ಇರುತ್ತದೆ. ಈಗ ಭಾರತವು ಸ್ವತಂತ್ರವಾಗಿರುವುದರಿಂದ ಈ ಕೈಗಾರಿಕೆ ಬೆಳೆಯಲು ಪೂರ್ಣ ಅವಕಾಶವಿರುತ್ತದೆ.

ಬೇಕಾದಷ್ಟು ನೌಕಾ ಸನ್ನಾಹವನ್ನು ಇಲ್ಲಿಯೇ ತಯಾರಿಸಿಕೊಳ್ಳಲು ನಮಗೆ ನಿಜವಾಗಿ ಯಾವ ತೊಡಕೂ ಇರುವುದಿಲ್ಲ. ಅಂತೂ ಈ ಕೈಗಾರಿಕೆಯ ಭಾವೀ ಉಜ್ವಲತೆಯನ್ನು ಈ ಸಮಾರಂಭವು ಸೂಚಿಸಲೆಂಬುದರಿಂದಲೇ ಪಂಡಿತ ಜವಾಹರಲಾಲರು ಇದಕ್ಕಾಗಿ ತಮ್ಮ ಇತರ ಕಾರ್ಯಭಾರಗಳನ್ನೆಲ್ಲ ಒಂದು ದಿನದ ಮಟ್ಟಿಗೆ ಬಿಟ್ಟು ಬಂದರೆನ್ನಲು ಅಡ್ಡಿಯಿಲ್ಲ.

ಪ್ರಾಚೀನ ಭಾರತದಲ್ಲಿ ಜಲಯಾನವು ಸಾಕಷ್ಟು ಅಭಿವೃದ್ಧಿ ಸ್ಥಿತಿಯಲ್ಲಿತ್ತೆಂಬ ಬಗ್ಗೆ ಸಂಶಯವಿಲ್ಲ. ಆಧುನಿಕ ಪರಿಸ್ಥಿತಿಯಲ್ಲಿಯೂ ಭಾರತವು ಈ ದಿಸೆಯಲ್ಲಿ ನ್ಯಾಯವಾದ ಪ್ರಗತಿ ಹೊಂದಲೆಂದು ನಾವೂ ಹಾರೈಸೋಣ.

ಉಡುಪಿ ಸರ್ಕಲ್‌ಕಾಂಗ್ರೆಸ್ ಕಮಿಟಿಯ ಮಹತ್ವದ ನಿರ್ಣಯಗಳೆಂಬ ಒಂದು ವಾರ್ತೆಯನ್ನು ನಮ್ಮ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತಷ್ಟೆ. ಈಗ ನಿರ್ಣಯಗಳಿಗೆ ಮಹತ್ವದ ನಿರ್ಣಯಗಳೆಂಬ ಶಿರೋನಾಮೆ ಬಂದುದೇಕೆಂದು ಈ ಸ್ಪಷ್ಟವಾಗಿರುತ್ತದೆಂಬುದರಿಂದ ಈ ಕುರಿತು ಸ್ವಲ್ಪ ಪರಿಶೀಲನೆ ನಡೆಸಬೇಕಾಗಿದೆ.

ಇವುಗಳಲ್ಲಿಯ ಮೊದಲ ನಿರ್ಣಯ ಗಾಂಧೀಜಿಯವರ ನಿಧನಕ್ಕಾಗಿ ಸಂತಾಪ ಸೂಚನೆ. ಇಷ್ಟು ವಿಳಂಬವಾಗಿಯಾದರೂ ಈ ಸಂತಾಪ ಸೂಚಿಸಿದ್ದೇನೋ ಉಚಿತವೇ ಇದ್ದರೂ ಇದರಲ್ಲಿ ಮಹತ್ವವೇನೂ ಇಲ್ಲ

ಹಳ್ಳೀ ಹಸುಗೆ ರದ್ದತಿಯಿಂದ ಸಾಗ್ಗಳಿಗೆ ಪ್ರೋತ್ಸಾಹ ಸಿಕ್ಕಿದೆಯೆಂಬ ಅಭಿಪ್ರಾಯ ಹೇಳಿ ಈಗ ಏರಿರುವ ಬೆಲೆ ತಗ್ಗಿಸುವಂತೆ ಧಾನ್ಯವಿದ್ದ ಉತ್ಪಾದಕರೂ ವ್ಯಾಪಾರಿಗಳೂ ಉದಾರಮನಸ್ಸಿನಿಂದ ಪ್ರಯತ್ನಿಸಬೇಕೆಂದು ವಿನಂತಿಸುವ ನಿರ್ಣಯವು ಎರಡನೆಯ ನಿರ್ಣಯ

ಸರ್ವೋದಯ ಸಮಾಜ

ಆಂಗ್ಲಕವಿ ರಸ್ಕಿನ್ ಇವರ "ಅನ್ ಟು ದಿಸ್ ಲಾಸ್ಟ್" ಎಂಬ ಗ್ರಂಥವು ಮಹಾತ್ಮಾ ಗಾಂಧಿಯವರ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿದ ಗ್ರಂಥಗಳಲ್ಲಿ ಒಂದು ಈ ಗ್ರಂಥವನ್ನು ಅವರು 'ಸರ್ವೋದಯ'ವೆಂಬ ಹೆಸರಲ್ಲಿ ಅನುವಾದಿಸಿದ್ದರು ಗಾಂಧೀಜೀಯವರ ಜೀವನದ ತತ್ವಗಳನ್ನು ಸಾರುವ ಉದ್ದೇಶದಿಂದ ಶ್ರೀ ಕಾಕಾ ಕಾಲೇಲಕರ ಮೊದಲಾದ ಇವರ ಅನುಯಾಯಿಗಳು ಸರ್ವೋದಯವೆಂಬ ಒಂದು ಪತ್ರಿಕೆಯನ್ನು ನಡೆಸ ತ್ತಿದ್ದಾರೆ

ಈಗ ವಾರ್ಧಾದಲ್ಲಿ ಸಭ ಸೇರಿದ ಗಾಂಧೀ ಅನುಯಾಯಿಗಳ ಸಭೆಯಲ್ಲಿ "ಸರ್ವೋದಯ ಸಮಾಜ'ವೆಂಬ ಹೆಸರಿಟ್ಟುಕೊಂಡು ಇವು ಮುಂದೆ ಪರಸ್ಪರ ಸಹಕರಿಸಿ ದುಡಿಯಲು ಏರ್ಪಡಿಸಿಕೊಳ್ಳಬೇಕೆಂಬ ನಿರ್ಣಯವಾಗಿದೆಯೆಂದು ತಿಳಿದುಬರುತ್ತದೆ

ಇವರು ಯಾವದೇ ಬಗೆಯ ಸಂಕುಚಿತ ಭಾವನೆಗಳಿಗೆ ಬಲಿಬೀಳದೆ ನಿಜವಾದ ಸರ್ವೋದಯವನ್ನು ಸಾಧಿಸುವಂತಾಗಲೆಂದು ಆಶಿಸುತ್ತೇವೆ.

ಬ್ರಿಟಿಷ್ ಹೊಂಡುರೋಸ್

ಕಳೆದ ಸಂಚಿಕೆಯಲ್ಲಿ ಎಂಟಾರ್ಕಟೀಕದಲ್ಲಿಯ ಬ್ರಿಟಿಷ ವಸಾಹತುಗಳ ವಿಚಾರ ತಿಳಿಸಲಾಗಿತ್ತಷ್ಟೆ ಫಾಕ್‌ಲೆಂಡ್ ದ್ವೀಪಗಳು ಮಾತ್ರ ಇಂಥ ವಸಾಹತೆಂದೂ ಬ್ರಿಟಿಷ್ ಹೊಂಡು ರೋಸ್ ಎಂಬುದು ದಕ್ಷಿಣ ಅಮೇರಿಕದ ಉತ್ತರ ಪ್ರದೇಶದಲ್ಲಿರುವಾಥದೆಂದೂ ತಿಳಿದುಬರುತ್ತದೆ ಫಾಕ್‌ಲೆಂಡ್ ದ್ವೀಪಗಳ ಮೇಲೆ ಅರ್ಜೆಂಟೀನ ಮತ್ತು ಚೀಲೀ ರಾಷ್ಟ್ರಗಳು ಕಣ್ಣು ಹಾಕಿವೆ. ಗೊಟಮಾಲಾ ರಾಷ್ಟ್ರವು ಹೊಂಡು ರೋಸನ್ನು ಸ್ವಾಧೀನಪಡಿಸುವ ಯತ್ನದಲ್ಲಿದೆ. ಈ ಕುರಿತು ಬ್ರಿಟನು ತನ್ನ ಹಕ್ಕುಗಳನ್ನು ಕಾಪಾಡಲು ತನಗೆ ಸಾಕಷ್ಟು ಶಕ್ತಿ ಇದೆಯೆಂದು ಇನ್ನೂ ಗರ್ಜಿಸುತ್ತಲೇ ಇದೆಯೆಂದರೆ ಸಾಕು.

ಕಾಂಗ್ರೆಸ್ ಸಂಸ್ಥೆಯು ದುರುಪಯೋಗ

ಉಡುಪಿ ಸರ್ಕಲ್ ಕಾಂಗ್ರೆಸಿನ ಮಹತ್ವದ ನಿರ್ಣಯಗಳ ಪರಿಶೀಲನ

ಹಳ್ಳಿಗಳಲ್ಲಿ ಈಗ ಅಕ್ಕಿ ಮುಡಿ ಒಂದಕ್ಕೆ ಸುಮಾರು ರೂಪಾಯಿ ೨೫ರಂತೆ ಕೊಡದೆ ಅಕ್ಕಿ ಸಿಕ್ಕುವುದಿಲ್ಲ. ಅದು ಕೂಡಾ ಚಿಲ್ಲರೆಯಾಗಿ ಸಿಗುವುದು ಇನ್ನೂ ಕಠಿಣ ಅಕ್ಕಿ ಸ್ವಂತಕ್ಕೆ ಇಲ್ಲದ ಬಡಜನರು–ಇಂಥವರ ಸಂಖ್ಯೆ ಹಳ್ಳಿಗಳಲ್ಲಿ ಏನೂ ಕಡಿಮೆ ಇಲ್ಲ–ಹೆಚ್ಚಿನ ಹಳ್ಳಿಗಳಲ್ಲಿ ಕಂಗಾಲು ಪರಿಸ್ಥಿತಿಗೆ ಬಂದಿದ್ದಾರೆ ಜಿಲ್ಲಾ ಅಧಿಕಾರಿಗಳು ಅಲ್ಲಲ್ಲಿ ಕೆಲವು ರಿಲೀಫ್ ಡಿಪೋಗಳನ್ನು ನಡೆಸುತ್ತಿದ್ದಾರೆ ಆದರೆ ಇವುಗಳು ಎಲ್ಲ ಗ್ರಾಮದವರಿಗೆ ಇಲ್ಲ ಮಾತ್ರವಲ್ಲ ಇಲ್ಲಿ ಕೇವಲ ೬ ಔನ್ಸ್ ಅಂದರೆ ಮುಕ್ಕಾಲು ಪಾವು ಅಕ್ಕಿ ಸಿಕ್ಕುತ್ತದೆ ಇದರಲ್ಲಿಯೂ ಇನ್ನು ಮುಂದೆ ಅರೆವಾಸಿ ಜೋಳವನ್ನು ಕಡ್ಡಾಯವಾಗಿ ಕೊಡುವಂತೆ ಆಜ್ಞೆಯಾಗಿದೆ ಅಂದರೆ ಎರಡು ದಿನಗಳಿಗೆ ಮುಕ್ಕಾಲುಪಾವು ಅಕ್ಕಿ ಬರುತ್ತದ ಇಂಥ ಪರಿಸ್ಥಿತಿಯಲ್ಲಿ ಮುಡಿ ಒಂದರ ರೂಪಾಯಿ ೨೫ರಂತೆ ಮಾರಿ ಹಣಮಾಡಲು ಅಕ್ಕಿಯ ಉತ್ಪಾದಕರೂ ವ್ಯಾಪಾರಿಗಳೂ ಹೊರಟಿದ್ದಾರೆ

ಈ ಪರಿಸ್ಥಿತಿಯಲ್ಲಿ ನಮ್ಮ ಉಡುಪಿಯ ಕಾಂಗ್ರೆಸ್ ಕಮಿಟಿಯವರಿಗೆ ಸ್ವಲ್ಪವಾದರೂ ತಿಳಿದಿದ್ದರೆ, ಬಡಜನರಿಗೋಸ್ಕರ ಇವರಿಗೆ ಕಿಂಚಿತ್ತಾದರೂ ಮನಸ್ಸಿಗೆ ಹೋಗಿದ್ದರೆ ಈ ಉತ್ಪಾದಕ ಮತ್ತು ವ್ಯಾಪಾರಿಗಳು **ಉದಾರಮನಸ್ಸಿನಿಂದ ಬೆಲೆತಗ್ಗಿಸಲು ಪ್ರಯತ್ನಿಸಬೇಕೆಂದು** ವಿನಂತಿ ಮಾಡಿ ತಾವು ಕೃತಕೃತ್ಯರಾದಂತೆ ಭಾವಿಸುತ್ತಿರಲಿಕ್ಕಿಲ್ಲವೆಂದರೆ ಕ್ಷಮಿಸಬೇಕು ಉಡುಪಿ ತಾಲೂಕಿನ ಪ್ರತಿ ಗ್ರಾಮದಲ್ಲಿಯೂ ಬಡಜನರಿಗೆ ನ್ಯಾಯವಾದ ಕ್ರಮದಲ್ಲಿ ಅಕ್ಕಿ ದೊರೆಯುವಂತೆ ಏರ್ಪಾಡುಮಾಡಲು ಕಾಂಗ್ರೆಸ್ ಕಮಿಟಿಯವರಾದರೂ ಪ್ರಯತ್ನಿಸಬೇಡವೇ? ಇದಕ್ಕೆ ಸರಕಾರೀ ರಿಲೀಫ್ ಡಿಪೋಗಳೇ ಬೇಕೆ? ಸರಕಾರಿ ರಿಲೀಫ್ ಡಿಪೋಗಳ ಮೂಲಕವೇ ಈ ಕಾರ್ಯ ಸಾಧಿಸಲ್ಪಡಬೇಕಾದರೆ ಅದು ಹಸುಗೆಪದ್ಧತಿಗೆ ಬೇರೆ ಹೆಸರು ಕೊಟ್ಟಂತೆ ಮಾತ್ರ ಆಗುತ್ತದಷ್ಟೆ ಮಹಾ ಜನರೇ ಈ ಕಾರ್ಯ ನೆರವೇರಿಸುವಂತೆ ಕಾಂಗ್ರೆಸ್ ಸಂಸ್ಥೆಯಾದರೂ ಯತ್ನಿಸಬೇಕು

ಕಾಂಗ್ರೆಸ್ ಕಮಿಟಿಯ ಈ ನಿರ್ಣಯ ಕಮಿಟಿಯ ನಿಸ್ಸಹಾಯತೆಯನ್ನು ಮಾತ್ರ ತೋರಿಸುತ್ತಿದೆಯೆಂಬುದರಿಂದ ಇದನ್ನು ಮಹತ್ವದ ನಿರ್ಣಯ ವೆಂದು ಕರೆದದ್ದಲ್ಲ.

ಕಮಿಟಿಯ ಕೊನೆಯ ನಿರ್ಣಯವು ಸುಶಿಕ್ಷಿತರೂ ಸುಧಾರಿತ ಮನೋವೃತ್ತಿಯವರೂ ಆಗಿರುವ ಇಂದಿನ ಪರ್ಯಾಯ ಮಠದ ಜನರಲ್ ಏಜಂಟರು ಔದಾರ್ಯ ವಹಿಸಿ ಸ್ವೇಚ್ಛೆಯಿಂದ ಶ್ರೀಕೃಷ್ಣ ದೇವಾಲಯದೊಳಗೆ ಹರಿಜನರಿಗೆ ಪ್ರವೇಶಕೊಡಬೇಕೆಂದು ವಿನಂತಿಸಿಕೊಳ್ಳುವ ನಿರ್ಣಯ. ಕಾಂಗ್ರೆಸ್ ಕಮಿಟಿಯೊಂದು ಈ ಬಗೆಯ ನಿರ್ಣಯಮಾಡುವುದನ್ನು ನೋಡುವಾಗ ಖೇದವೆನ್ನಿಸುತ್ತದೆ ಏಜಂಟರು ಔದಾರ್ಯ ವಹಿಸುವ ಮಾತು ಯಾವ ಕಾಂಗ್ರೆಸಿಗರಿಗೂ ಲಾಂಛನಾಸ್ಪದವೆಂದು ಕಂಠೋಕ್ತವಾಗಿ ಹೇಳದೆ ನಿವೃತ್ತಿ ಇಲ್ಲ ಇದರಲ್ಲಿ ಔದಾರ್ಯದ ಪ್ರಶ್ನೆ ಇಲ್ಲ ಹರಿಜನರಿಗೆ ದೇವಸ್ಥಾನ ಪ್ರವೇಶಕೊಡುವುದು ಸವರ್ಣೀಯರೆನಿಸುವವರು ತೋರಿಸತಕ್ಕ ಔದಾರ್ಯವಲ್ಲ ಅದು ಸವರ್ಣೀಯರು ಇದುತನಕ ಹರಿಜನರಿಗೆ ಮಾಡಿದ ಪಾಪದ ಪ್ರಾಯಶ್ಚಿತ್ತ ಹರಿಜನರದೃಷ್ಟಿಯಲ್ಲಿ ಅದು ಅವರ ಜನ್ಮಸಿದ್ಧಹಕ್ಕು ಇಷ್ಟು ಸರಳ ವಿಚಾರ ಒಂದು ಕಾಂಗ್ರೆಸ್ ಸಂಸ್ಥೆಗೆ ತಿಳಿಸಬೇಕಾಗಿದೆಯೆಂದರೆ ಕಾಂಗ್ರೆಸ್ ಸಂಸ್ಥೆಯ ಅವನತಿಯನ್ನು ಇದಕ್ಕೂ ಹೆಚ್ಚು ಬಣ್ಣಿಸಬೇಕೆ?

ಮಾತ್ರವಲ್ಲ ಈಗ ಸ್ವೇಚ್ಛೆಯ ಪ್ರಶ್ನೆಯೂ ಇಲ್ಲ ಹರಿಜನ ದೇವಸ್ಥಾನ ಪ್ರವೇಶ ಕಾನೂನು ಮಂಜೂರುಮಾಡಿರುವುದರಿಂದ ಏಜಂಟರ ಸ್ವೇಚ್ಛೆಯ ಮೇಲೆ ಈ ಪ್ರಶ್ನೆ ಇರಬಾರದೆಂಬುದರಿಂದಲೇ ಅಲ್ಲವೇ? ಈ ಕಾನೂನು ಪುಸ್ತಕದಲ್ಲಿಯೇ ಉಳಿಯದ ಜಾರಿಗೆಬರುವಂತೆ ಸಾಧಿಸಬೇಕಾದುದು ಕಾಂಗ್ರೆಸಿನ ಪವಿತ್ರ ಕರ್ತವ್ಯಗಳಲ್ಲಿ ಒಂದು ಹರಿಜನರನ್ನು ಕರೆದು ಶ್ರೀಕೃಷ್ಣ ದೇವಾಲಯದೊಳಗೆ ಉಡುಪಿಯ ಕಾಂಗ್ರೆಸಿಗರು ಸಂಘಟಿತವಾಗಿಯೂ ಪ್ರವೇಶಿಸ ಬೇಕಾದುದು ಅವರ ನಿಶ್ಚಿತ ಕರ್ತವ್ಯವಿರುತ್ತದೆ ಇದನ್ನು ಅವರು ಬಂಕಿಸಾಕುವಲ್ಲಿಯ ತನಕ ಅವರು ಕರ್ತವ್ಯಭಾಹಿರರೆಂದೇ ತಿಳಿಯಲ್ಪಡುವರು

ತನ್ನ ಅತ್ಯಾನ ಮತ್ತು ಕರ್ತವ್ಯ ಭ್ರಷ್ಟತೆಯನ್ನು ಸಾರುವ ಕಮಿಟಿಯ ಈ ನಿರ್ಣಯವನ್ನು ಮಹತ್ವದ ನಿರ್ಣಯವೆಂದು ಕರೆದದ್ದಲ್ಲವೆಂಬುದು ಸ್ಪಷ್ಟ

ಉಳಿದ ನಿರ್ಣಯಗಳೆಂದರೆ ಉಡುಪಿಯ ತಹಶಿಲ್ದಾರರು ಸತ್ಕಾರಕೂಟವೊಂದರಲ್ಲಿ ಮಾಡಿದ ಭಾಷಣದ ವಿಚಾರ ಮತ್ತು ಸರಕಾರೀ ನೌಕರರು ಖಾಸಗೀ "ಅತಿಥಿಗೃಹಗಳಲ್ಲಿ ನಿಲ್ಲುವ ವಿಚಾರದ ನಿರ್ಣಯಗಳು. ಈ ನಿರ್ಣಯಗಳ ಕಡೆಗೆ ಸಾಕಷ್ಟು ಗಮನ ಸೆಳೆಯುವುದೇ ಈ ನಿರ್ಣಯಗಳನ್ನೆಲ್ಲ ಮಹತ್ವದ ನಿರ್ಣಯಗಳೆಂದು ಕರೆಯಲು ಕಾರಣವೆಂದು ಕಾಣುತ್ತದೆ

ಉಡುಪಿಯ ಮುನಿಸಿಪಲ್ ಕೌನ್ಸಿಲಿನಲ್ಲಿ ಒಬ್ಬರಾದ ಶ್ರೀ ಟಿ. ರಮೇಶ ಪೈಯವರು ಮದ್ರಾಸು ಸೆನೇಟಿಗೆ ಶ್ರೀ ಬಿ. ಆರ್ ಹೆಗ್ಡೆಯವರನ್ನು ಸೋಲಿಸಿ ಗೆದ್ದು ಆರಿಸಿಬಂದ ಶ್ರೀಮತಿ ಲೀಲಾಬಾಯಿ ಕಾಮತರಿಗೆ ಒಂದು ಸತ್ಕಾರಕೂಟ ಏರ್ಪಡಿಸಿದರು ಉಡುಪಿಯ ತಹಶಿಲ್ದಾರರಾದ (ಕೆಲವು ಸಮಯ ಕುಂದಾಪುರ ಅಸಿಸ್ಟೆಂಟ್ ಕಲೆಕ್ಟರರ ಪದವಿಯಲ್ಲಿದ್ದ) ಶ್ರೀ ಎ. ಸದಾನಂದ ಪೈಯವರು ಈ ಸಮಾರಂಭದ ಅಧ್ಯಕ್ಷರಿದ್ದರು; ಈ ಸಭೆಯಲ್ಲಿ ಉಡುಪಿಯ ಅಧ್ಯಮಹನೀಯರೆಲ್ಲರೂ ಹಾಜರಿದ್ದರೆಂದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಅಧ್ಯಕ್ಷ ಪದವಿಯಿಂದ ಶ್ರೀ ಸದಾನಂದ ಪೈಯವರು ಮಾಡಿದ ಭಾಷಣದ ವಿಚಿತ್ರ ವಾರ್ತೆಯೊಂದು ಉಡುಪಿಯ "ನವಯುಗ" ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ವಾರ್ತೆಯ ಪ್ರಕಟನೆ ವಿಚಿತ್ರವೆಂದು ಹೇಳಲು ಕಾರಣವೆಂದರೆ ಶ್ರೀ ಸದಾನಂದ ಪೈಯವರನ್ನು ತೊಂದರೆಗೆ ಗುರಿಪಡಿಸಬೇಕೆಂದು ಉದ್ದೇಶಪೂರ್ವಕವಾಗಿ ಇದು ಪ್ರಕಟಪಡಿಸಿದಂತಿತ್ತೆಂಬುದನ್ನು ಇದನ್ನು ಓದಿದರೆ ಯಾರಿಗೂ ಸ್ಪಷ್ಟವಾಗದಿರದು

ಈ ಕುರಿತು ಈ ಸತ್ಕಾರ ಕೂಟದ ವ್ಯವಸ್ಥಾಪಕರಾದ ಶ್ರೀ ಟಿ ರಮೇಶ ಪೈ ಮತ್ತು ಸಭೆಯಲ್ಲಿ ಹಾಜರಿದ್ದ ಇತರ ಹಲವು ಮಹನೀಯರೊಡನೆ ವಿಚಾರಿಸಿದಲ್ಲಿ ಶ್ರೀ ಸದಾನಂದ ಪೈಯವರ ಭಾಷಣವನ್ನು ಉಡುಪಿಯ "ನವಯುಗ"ವು ಬೇಕೆಂತಲೇ ಆಕ್ಷೇಪಾರ್ಹವಾಗುವಂತೆ ಮಾರ್ಪಡಿಸಿರುವುದಾಗಿ ತಿಳಿದುಬರುತ್ತದೆ ಶ್ರೀ ಸದಾನಂದ ಪೈಯವರು ಮಾಡಿದ ಭಾಷಣವನ್ನು ಶ್ರೀ ಟಿ ರಮೇಶ ಪೈ ಮೊದಲಾದವರು ನಮಗೆ ಒದಗಿಸಿರುವಂತೆ ಇನ್ನೊಂದೆಡೆ ಕೊಡಲಾಗಿದೆ ಇದರಲ್ಲಿ ಆಕ್ಷೇಪಾರ್ಹವೇನೂ ಕಂಡುಬರುವುದಿಲ್ಲ

ಅಂತೂ ಈ ಪತ್ರಿಕೆಯ ವರ್ತನವನ್ನು ವಿಮರ್ಶಿಸುವುದು ನಮ್ಮ ಪ್ರಕೃತ ಉದ್ದೇಶವಲ್ಲ ಈ ಕುರಿತು ಇದೇ ಧೋರಣ ವಹಿಸಿ ಉಡುಪಿಯ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಮಹತ್ವದ ನಿರ್ಣಯಗಳನ್ನು ಮಾಡಿ ಪ್ರಕಟಿಸಿದ್ದಕ್ಕೆ ಏನೆನ್ನಬೇಕೆಂದು ತೋಚುವುದಿಲ್ಲ ಸ್ಪಷ್ಟವಾದ ಶಬ್ದಗಳಲ್ಲಿ ಹೇಳುವುದಿದ್ದರೆ ಇದು ಕಾಂಗ್ರೆಸ್ ಸಂಸ್ಥೆಯ ದುರುಪಯೋಗವೆಂದಲ್ಲದೆ ಬೇರೆ ಮಾತುಗಳಲ್ಲಿ ಕರೆಯಲ್ಪಡತಕ್ಕುದಲ್ಲ

ಉಡುಪಿ ಸರ್ಕಲ್ಲಿ ಜವಾಬ್ದಾರಿಯುಳ್ಳ ಕಾಂಗ್ರೆಸಿಗರಿಗೆ ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ಕಾಂಗ್ರೆಸ್ ಕಮಿಟಿಯನ್ನು ನಡೆಸಲು ಸಾಕಷ್ಟು ಗಮನ ಕೊಡಲು ಅವಕಾಶವಿಲ್ಲವೆಂದಾದರೆ ಇಂಥ ಸಂಸ್ಥೆಯನ್ನು ಆದಷ್ಟು ತ್ವರೆಯಲ್ಲಿ ಮುಕ್ತಾಯಪಡಿಸುವುದು ಸಾರ್ವಜನಿಕ ದೃಷ್ಟಿಯಿಂದ ಶ್ರೇಯಸ್ಕರವೆಂದು ಸೂಚಿಸಬಯಸುತ್ತೇವೆ

ಆಸ್ಪತ್ರೆ ನಿಧಿಗೆ ೪೦ ಸಾವಿರ

ಈ ನಿಧಿಯ ಸಂಬಂಧ ಒಂದು ತಿಂಗಳ ತನಕ ಮೈದಾನಿನಲ್ಲಿ ನಡೆಸಿದ "ವಸ್ತು ಪ್ರದರ್ಶನ ಮತ್ತು ವಿವಿಧ ವಿನೋದಾವಳಿ"ಗಳು ಕಳೆದ ತಾ. ೧೪ರಂದು "ಬಹುಮಾನ ವಿತರಣೆ ಸಮಾರಂಭದೊಡನೆ ಕೊನೆಗೊಂಡವು" – "ಎಲ್ಲಾ ಖರ್ಚು ಕಳೆದು ೪೦ ಸಾವಿರ ರೂಪಾಯಿಗಳು ಈ ಪ್ರದರ್ಶನದಿಂದ ಆಸ್ಪತ್ರೆ ನಿಧಿಗೆ ಜಮೆಯಾಗಿದೆ, ಒಟ್ಟು ೬೦ ಸಾವಿರ ಮಂದಿ ಪ್ರೇಕ್ಷಕರು ಬಂದಿದ್ದರು" ಎಂದು ತಿಳಿಸಲಾಗಿದೆ

೪ ಸಾವಿರ ರೂಪಾಯಿ ಅಕ್ಕಿ ಕಾಣೆ

ಪಡೀಲ್ ಅಕ್ಕಿ ಡಿಪೋದಲ್ಲಿ ಕಳೆದ ತಾ. ೧೦ರಲ್ಲಿ ರಾತ್ರಿ ಬೀಗ ಮುರಿದು ರೂ. ೩೩೧೪ ಬೆಲೆ ಬಾಳುವ ಅಕ್ಕಿ ಕಳವಾಗಿದೆ ಎಂದು ಡಿಪೋ ಕೀಪರ್ ಮಿ| ಬೆಂಜಮಿನ್ ಪಿಂಟೊ ಅವರು ಮಾಡಿದ ಫಿರ್ಯಾದಿಯ ಕುರಿತು ಪೋಲಿಸ್ ತನ್ನಿ ನಡೆಯುತ್ತಿದೆ.

ಶ್ರೀಮತಿ ಲೀಲಾಬಾಯಿ ಕಾಮತರಿಗೆ ಸತ್ಕಾರಕೂಟ

ಉಡುಪಿ ಮತ್ತು ಮಂಗಳೂರು ಮುನಿಸಿಪಾಲಿಟಿಗಳ ಪರವಾಗಿ ಮದ್ರಾಸು ಯುನಿವರ್ಸಿಟಿ ಸೆನೇಟಿಗೆ ಆರಿಸಲ್ಪಟ್ಟ ಶ್ರೀಮತಿ ಲೀಲಾಬಾಯಿ ಕಾಮತರಿಗೆ ಉಡುಪಿ ಕೌನ್ಸಿಲಿನ ಸಭಾಸದರಾದ ಶ್ರೀ ಟಿ. ರಮೇಶ ಪೈಯವರು ಒಂದು ಸತ್ಕಾರಕೂಟವೇರ್ಪಡಿಸಿದರು. ಈ ಸಮಾರಂಭದ ಅಧಿಕೃತ ವರದಿಯು ಶ್ರೀ ಟಿ. ರಮೇಶ ಪೈಯವರೇ ತಿಳಿಸುವಂತೆ ಈ ರೀತಿ ಇರುತ್ತದೆ.

ಸಮಾರಂಭದಲ್ಲಿ ಉಡುಪಿಯ ಅಧ್ಯಜನರೆಲ್ಲ ಹಾಜರಿದ್ದರು. ಆರಂಭದಲ್ಲಿ ಶ್ರೀ ರಮೇಶ ಪೈಯವರು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು.

ಆ ಬಳಿಕ ಶ್ರೀ ಟಿ. ಎ. ಪೈ, ಉಡುಪಿ ಮುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕ, ಡಾಕ್ಟರ್ ಸುಂದರ ರಾಮ ಪೈ, ಶ್ರೀ ಯು. ಎ. ಪೈ, ಡಾಕ್ಟರ್ ಕೆ. ಎಲ್. ಐತಾಳ, ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ ಇವರಿಷ್ಟು ಮಂದಿ ಮಾತನಾಡಿದರು. ಇವರೆಲ್ಲ ತಮ್ಮ ಭಾಷಣಗಳಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರನ್ನು ಅಭಿನಂದಿಸಿದ್ದಲ್ಲದೆ ಉಡುಪಿಗೊಂದು ಕಾಲೇಜಿನ ಆವಶ್ಯಕತೆ ಮೊದಲಾದ ಉಡುಪಿಯ ಆವಶ್ಯಕತೆಗಳನ್ನೂ ಎತ್ತಿ ಹೇಳಿದರು.

ಶ್ರೀಮತಿ ಲೀಲಾಬಾಯಿಯವರು ತನ್ನನ್ನು ಈ ರೀತಿ ಗೌರವಿಸಿದ ಬಗ್ಗೆ ಆಭಾರ ಮನ್ನಿಸಿ ಸಂದರ್ಭೋಚಿತ ಉತ್ತರವಿತ್ತರು.

ಈ ಸಮಾರಂಭದ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡ ಉಡುಪಿಯ ತಹಸೀಲ್ದಾರರಾದ ಶ್ರೀ ಎ. ಸದಾನಂದ ಪೈಯವರು ಕೊನೆಯದಾಗಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಶ್ರೀಮತಿಯವರು ಆರಿಸಿ ಬಂದ ಬಗ್ಗೆ ಅವರನ್ನು ಅಭಿನಂದಿಸಿದರು.

ಮುಂದುವರಿಸುತ್ತ ಅವರು ಈ ರೀತಿ ಹೇಳಿದರು. ಶ್ರೀ ಕೊಚ್ಚಿಕಾರ ಪದ್ಮನಾಭ ಪೈಯವರು ಉಡುಪಿಯಲ್ಲಿ ಕಾಲೇಜು ತೆರೆಯಬೇಕಾದರೆ ಯುನಿವರ್ಸಿಟಿಯವರು 2½ ಲಕ್ಷ ಡಿಪೊಜಿಟ್ ಕೇಳುತ್ತಾರೆ; 2½ ಲಕ್ಷ ನಾವು ಕೊಡಿಸುವಾಗ 5 ಲಕ್ಷ ಕೇಳಬಹುದು, ಜನತಾ ಸರಕಾರದ ಈ ಕಾಲದಲ್ಲಿ ಹೀಗೆ ನಡೆಯುವುದು ಆಶ್ಚರ್ಯ ಎಂಬುದಾಗಿ ಹೇಳಿದರು. ಈ ರೀತಿ ತಿಳಿಯುವುದು ಸರಿಯಲ್ಲ. ಸರಕಾರವು ಅತ್ಯಗತ್ಯದ ಹಲವು ಕಾರ್ಯಗಳಲ್ಲಿ ಈಗ ಮಗ್ನರಿದ್ದಾರೆ. ಸಾಮಾನ್ಯ ಜನರ ಸ್ಥಿತಿಯನ್ನು ಸುಧಾರಿಸುವುದರ ಕಡೆಗೇನೆ ಅದರ ಗಮನವಿದೆ. ಯುನಿವರ್ಸಿಟಿ ಕಾನೂನಿಗೆ ಅಗತ್ಯವುಳ್ಳ ತಿದ್ದುಪಡಿಯನ್ನು ಅವರು ಇನ್ನೂ ತಂದಿಲ್ಲವಾದರೆ ಅದು ಸಮಯಾವಕಾಶವಿಲ್ಲದಿರುವುದರಿಂದ ಮಾತ್ರವಿದೆ. ಈ ಕಾನೂನು ತಿದ್ದುಪಡಿಯಾಗದೆ ಉಡುಪಿಯ ಕಾಲೇಜಿನ ಆಸೆ ನಿರರ್ಥಕವಾಗಬಹುದು. ಉಡುಪಿಗೆ ಕಾಲೇಜು ಸಿಕ್ಕುವಂತೆ ಶ್ರೀಮತಿಯವರು ಯತ್ನಿಸಬೇಕಾಗಿ ಹಲವು ಭಾಷಣಕರ್ತರು ಹೇಳಿದರು. ಅವರಿಂದಾಗುವ ಯತ್ನ ಅವರು ಮಾಡುವರೆಂಬ ಬಗ್ಗೆ ಸಂಶಯವಿಲ್ಲ. ಆದರೆ ಅದಕ್ಕೆ ಇತರರ ಬೆಂಬಲವೂ ಬೇಕು. ನಮ್ಮ ಜಿಲ್ಲೆಯಿಂದ ಶಾಸನ ಸಭೆಯಲ್ಲಿ ಸದಸ್ಯರಾಗಿರುವವರೂ ಸಹಕರಿಸಿದರೆ ಈ ಕಾರ್ಯವು ಯಶಸ್ವಿಯಾದೀತು. ಹೀಗಾದರೆ ಇಡೀ ಕುಂದಾಪುರ ಡಿವಿಜನಿನ ವಿದ್ಯಾರ್ಥಿಗಳಿಗೆ ಅನುಕೂಲ.

ನಾನು ಇಲ್ಲಿ ತಹಸೀಲ್ದಾರನಿರುವುದರಿಂದ ಕಾಲೇಜಿಗೆ ಬೇಕಾದ ಸ್ಥಳ ಕೊಡುವ ಅಧಿಕಾರ ನನಗಿದೆ ಎಂದು ಶ್ರೀ ಟಿ. ಎಮ್. ಎ. ಪೈಯವರು ಹೇಳಿದರು. ಇದು ನಿಜವಲ್ಲ. 1945ನೇ ಇಸವಿಯಲ್ಲಿ ಇಲ್ಲಿಯ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಯವರು ಆಗಿನ ಕಲೆಕ್ಟರರಾಗಿದ್ದ ರಾವ್ ಬಹದ್ದೂರ್ ಶ್ರೀ ಪಿ. ರಾಮದಾಸರೊಡನೆ ವಿನಂತಿ ಮಾಡಿದಾಗ ಅವರಿಗೆ ಈ ಕುರಿತು ಸಹಾನುಭೂತಿ ಇದ್ದರೂ ಫಲಕಾರಿಯಾಗದೆ ಮತ್ತೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರೊಡನೆ ಪತ್ರವ್ಯವಹಾರ ನಡೆಸಲಾಯಿತೆಂಬುದನ್ನು ನಾನು ನಿಮ್ಮ ಸ್ಮರಣೆಗೆ ತರಬಹುದು. ನನ್ನಿಂದಾಗಬಹುದಾದ ಸಹಾಯ ನಿಮಗೆ ನಾನು ಮಾಡುವೆನು. ಆದರೆ ಇದು ಹೆಚ್ಚೇನೂ ಇರುವಂತಿಲ್ಲ.

ಡಾಕ್ಟರ್ ಟಿ. ಎಮ್. ಎ. ಪೈಯವರು ಉಡುಪಿಯನ್ನು ವಿಸ್ತರಿಸುವ ಹಾಗೂ ಇಲ್ಲಿ ಆರ್ಟ್ಸ್ ಕಾಲೇಜು ಮಾತ್ರವಲ್ಲ ಮೆಡಿಕಲ್ ಕಾಲೇಜೂ ಬೇಕೆಂಬ ಕುರಿತು ಹೇಳಿದರು. ಶ್ರೀ ಟಿ. ಎ. ಪೈಯವರು 100 ಹಾಸಿಗೆಗಳುಳ್ಳ ಆಸ್ಪತ್ರೆ ಮಾತ್ರ ನಮಗೆ ಸಾಲದು, ಮಲ್ಪೆ ದೊಡ್ಡ ಬಂದರವಾಗುವಂತೆ ಮಾಡಬೇಕೆಂದರು. ಉಡುಪಿಯನ್ನು ಮಲ್ಪೆ, ಉದ್ಯಾವರ, ಕಲ್ಯಾಣಪುರ ಹಾಗೂ ಮಣಿಪಾಲಗಳ ತನಕ ವಿಸ್ತರಿಸುವುದು ಸಾಧ್ಯವುಂಟು. ಹೀಗೆ ಇಲ್ಲಿಯ ಮುನಿಸಿಪಾಲಿಟಿಯನ್ನು ವಿಸ್ತರಿಸಿದರೆ ಇದು ಮಂಗಳೂರಿಗಿಂತ ದೊಡ್ಡದಾಗುವುದು. ದೊಡ್ಡದೊಂದು ಆಸ್ಪತ್ರೆ, ಮಲ್ಪೆಯಲ್ಲಿ ದೊಡ್ಡ ಬಂದರು, ಮಂಗಳೂರಿನಿಂದ ಇಲ್ಲಿಗೆ ರೈಲು ಇದೇ ರೀತಿ ಇಲ್ಲಿ ಆರ್ಟ್ಸ್ ಕಾಲೇಜು, ಮೆಡಿಕಲ್ ಕಾಲೇಜು ಹಾಗೂ ಇಂಜಿನಿಯರಿಂಗ್ ಕಾಲೇಜು ಇವೆಲ್ಲ ನ್ಯಾಯವಾದ ಆಸೆಗಳೇ ಇರುತ್ತವೆ.

ಆದರೆ ಆಂಧ್ರ, ತಮಿಳು, ಕೇರಳ, ಕರ್ನಾಟಕ ಪ್ರಾಂತ್ಯ ರಚನೆಯಂಥ ದೊಡ್ಡ ಬದಲಾವಣೆಗಳಾಗಲಿವೆಯೆಂಬುದನ್ನು ಮರೆಯಬಾರದು. ಈ ಭಾಷಾವಾರು ಪ್ರಾಂತ್ಯ ರಚನೆಯಲ್ಲಿ ನಮ್ಮ ಸ್ಥಿತಿ ಏನಾಗಬಹುದೆಂದು ಈಗಲೇ ಹೇಳುವುದು ಕಷ್ಟ. ಅಂತು ಹಲವು ಆವಶ್ಯಕತೆಗಳ ಆತುರ ಇಟ್ಟುಕೊಳ್ಳುವುದರಲ್ಲಿ ದೋಷವಿಲ್ಲ. ಇವುಗಳಲ್ಲಿ ಸಂದರ್ಭಕ್ಕನುಸಾರ ಒಂದೊಂದನ್ನಾಗಿ ಸಾಧಿಸುತ್ತ ಬರಬೇಕು. ಉಡುಪಿಗೆ ಕಾಲೇಜು ಬೇಕೆಂಬ ಯತ್ನ ಮುಂದುವರಿಸುವುದರಲ್ಲಿ ತಪ್ಪಿಲ್ಲ. ಈ ಕಾರ್ಯದಲ್ಲಿ ಶ್ರೀಮತಿ ಲೀಲಾಬಾಯಿಯವರಿಂದ ತುಂಬ ಉಪಕಾರವಾದೀತು. ಇವರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ಕೊಡಲಿ.

ಈ ರೀತಿ ಅಧ್ಯಕ್ಷ ಭಾಷಣವಾದ ಬಳಿಕ ಶ್ರೀ ಟಿ. ರಮೇಶ ಪೈಯವರ ಧನ್ಯವಾದಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕಿರುಸುದ್ದಿ ಸಂಗ್ರಹ

ಗಾಂಧಿ ಸ್ಮಾರಕನಿಧಿಗೆ ಅಲಹಾಬಾದದ ಓರ್ವ ಭಿಕ್ಷುಕನು ೨೦ ತಾಮ್ರದ ನಾಣ್ಯಗಳನ್ನು ಕೊಟ್ಟನು. ಅವನ್ನು ಹರಾಜು ಹಾಕಿದಾಗ ಓರ್ವ ಮುಸಲ್ಮಾನ ಬೂಟ್ಸು ವ್ಯಾಪಾರಿಯು ಅವನ್ನು ೩೫೦ ರೂಪಾಯಿಗೆ ಕೊಂಡುಕೊಂಡನು.

✠

ಇದುವರೆಗಿನ ತನಕ ಹಾಲಿನ ದಾಖಲೆ ಮಾಡಿದ ದನವು ಅಮೇರಿಕದ್ದು. ಅದು ಒಂದು ವರ್ಷಕ್ಕೆ ೪೧,೯೪೩ ರಾತ್ತಲ್ ಹಾಲು ಕೊಟ್ಟಿತ್ತು. ಈಗ ಇಂಗ್ಲೆಂಡಿನ ಒಂದು ದನವು ಕಳೆದ ವರ್ಷಕ್ಕೆ ೪೧,೯೫೨ ರಾತ್ತಲ್ ಹಾಲು ಕೊಟ್ಟು ಆ ದಾಖಲೆಯನ್ನು ಮುರಿದಿದೆ.

✠

ಇಂಗ್ಲೆಂಡಿನ ಕೇಂಬ್ರಿಜ್ ಪಟ್ಟಣದ ಬಳಿ ಒಬ್ಬನು ಗಾಳ ಇಕ್ಕಿದ್ದ. ಗಾಳವು ನೀರ್ಕೋಳಿಯೊಂದರ ಗಂಟಲಲ್ಲಿ ಸಿಕ್ಕಿದಾಗ ದಯಾಭಾವದವನಾದ ಅವನು ಆ ಪಕ್ಷಿಯನ್ನು ಆಸ್ಪತ್ರೆಗೆ ಒಯ್ದು, ಅದಕ್ಕೆ ಮೂರ್ಛೆ ಬೀಳುವ ಔಷಧಿಕೊಡಿಸಿ, ಗಾಳ ಗಂಟಲಿಂದ ತೆಗೆಸಿದ.

✠

ಸ್ಟಾಕ್‌ಹೋಮ್‌ದಲ್ಲಿ ಕಟ್ಟಿಗೆಯ ಕೊರತೆಯಿದೆ. ಅಲ್ಲಿನ ಒಂದು ಇಗರ್ಜಿಯ ಅಂಗಳದಲ್ಲಿದ್ದ ಸಮಾಧಿಗಳ ಮೇಲೆ ಇಟ್ಟಿದ್ದ ಮರದ ಶಿಲುಬೆಗಳು ಒಂದೊಂದಾಗಿ ಕಾಣೆಯಾದವು. ಇಗರ್ಜಿಯ ಪಾದ್ರಿಗಳು "ಇಂತಹ ಪಾಪಕ್ಕೆ ಪರಲೋಕದ ಶಿಕ್ಷೆಯಿದೆ" ಎಂದು ಒಂದು ಹಲಿಗೆ ಬೋರ್ಡು ಬರೆದಿಟ್ಟರು. ಮರುದಿನ ಆ ಬೋರ್ಡು ಯಾರೊಬ್ಬರ ಅಡಿಗೆಮನೆ ಒಲೆ ಸೇರಿತ್ತು.

✠

ಶೀತವನ್ನುಂಟುಮಾಡುವ ಕ್ರಿಮಿಗಳು ಗಾತ್ರದಲ್ಲಿ ಹೊಲಿಯುವ ನೂಲಿನ ಹತ್ತು ಸಾವಿರದಲ್ಲಿ ಒಂದಂಶದಷ್ಟು ದಪ್ಪವಾಗಿವೆಯೆಂದು ಕಂಡುಹಿಡಿಯಲಾಗಿದೆ.

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು. ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ.

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ನೀವು ಅಮೋಘವಾದ ಆರೋಗ್ಯ ಬಿಗಿಚೈತನ್ಯಗಳನ್ನು ಪಡೆಯಬಹುದು



ಬೈಲ ಬೀನ್ಸನ್ನು ತಪ್ಪದೆ ತೆಗೆದುಕೊಳ್ಳುವುದರಿಂದ ಹೊಟ್ಟೆಯೊಳಗಿನ ದಿನದಿನದ ತ್ಯಾಜ್ಯವಾದ ಕಲ್ಮಶವೆಲ್ಲವೂ ಕಡಿಮೆ ಮಾಡಿದಂತಾಗುವುದು. ಜೀರ್ಣಕ್ರಿಯೆ ವ್ಯವಸ್ಥಿತವಾಗಿ ರಕ್ತ ಝರಿಗಳು ಶುದ್ಧವಾಗುವವು.

ಹೀಗೆ ವಾಕರಿಕೆ, ಅಗ್ನಿಮಾಂದ್ಯ, ತಲೆನೋವು, ಅಜೀರ್ಣ, ಪಿತ್ತ ವಿಕಾರ, ದೇಹಾಲಸ್ಯ, ವಾತಬಾಧೆ, ಮುಂತಾದ ವ್ಯಾಧಿಗಳು ಈ ವನಸ್ಪತಿ ಔಷಧಿಯಿಂದ ಪರಿಹರಿಸಲ್ಪಡುತ್ತವೆ.

ಆ ತಾರುಣ್ಯಮಯ ಚೈತನ್ಯ ಚಟುವಟಿಕೆಗಳನ್ನು ಪುನಃ ಸಂಪಾದಿಸಿರಿ.

ಶುದ್ಧ ವನಸ್ಪತೀಯವೂ

BILE BEANS

ಪ್ರಾಕೃತಿಕ ಮತ್ತು ಸರಿಗೊಳಿಸುವಂತಹದಾದ ಸಂಜೀವಿನಿ

ಸಂಕದಿಂದ ಹೊಳೆಗೆ ನೂಕಿದರು

ಚಿನ್ನಯ್ಯ ಗೌಡ ಎಂಬ ಮೈಸೂರಿನವ ಈಚೆಗೆ ಬೊಂಬಾಯಿಗೆ ತೆರಳುವ ಉದ್ದೇಶದಿಂದ ಮಂಗಳೂರಿಗೆ ಬಂದಿದ್ದ ಉಳ್ಳಾಲದಲ್ಲಿ ರಾತ್ರೆ ೧೦ ಗಂಟೆಗೆ ಊಟ ಮುಗಿಸಿ ಅಲ್ಲಿನ ಸಂಕದ ಮೇಲೆ ಬರುತ್ತಿದ್ದ ಹಾಗೆ ದಾರಿಯಲ್ಲಿ ಇಬ್ಬರು ಅಪರಿಚಿತ ವ್ಯಕ್ತಿಗಳು ಅವನನ್ನು ಹಿಡಿದು ನಿಲ್ಲಿಸಿ ಅವನಲ್ಲಿದ್ದ ೨೫೦ ರೂಪಾಯಿಗಳನ್ನು ಸುಲಿಗೆ ಮಾಡಿ ಅನಂತರ ಸಂಕದಿಂದ ಹೊಳೆಗೆ ದೂಡಿಬಿಟ್ಟರೆಂದೂ, ಆತ ಬಿದ್ದಲ್ಲಿ ಹೆಚ್ಚು ನೀರು ಇಲ್ಲದಿದ್ದರೂ ಬಿದ್ದಪೆಟ್ಟಿಗೆ ಅವನು ಮೂರ್ಛೆ ಹೊಂದಿ ಮತ್ತೆ ನೀರು ಇಳಿದಾಗ ಪ್ರಜ್ಞೆ ತಳೆದನೆಂದೂ, ಬೆಳಗಾದ ಮೇಲೆ ನಿಶ್ಶಕ್ತನಾಗಿದ್ದ ಈತನಿಗೆ ಯಾರೊ ಕೆಲವರು ಮಾಡಿದ ಸಹಾಯದಿಂದ ಮಂಗಳೂರು ಆಸ್ಪತ್ರೆ ಸೇರಿದನೆಂದೂ, ಇಲ್ಲಿಯ ಸ್ಟೇ। ಸ ಮೆಜಿಸ್ಟ್ರೇಟರು ತಾ ೧೨ರಲ್ಲಿ ಅವನಿಂದ ಮರಣ ವಾಗ್ಮೂಲ ಮಾಡಿದರೆಂದೂ, ಪೋಲಿಸರು ಪ್ರಾಣಾಪಹಾರದ ಯತ್ನ ಮೊದಲಾದ ಪ್ರಕರಣಗಳ ಮೇಲೆ ಮೊಕದ್ದಮೆ ದಾಖಲು ಮಾಡಿರುವರೆಂದೂ ಅವನೀಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವನೆಂದೂ ತಿಳಿದುಬಂದಿದೆ

ಜಿಲ್ಲಾ ಆಹಾರ ಸಮಿತಿ

ಇದರ ಸಭೆಯೊಂದು ಕಲೆಕ್ಟರರ ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು ಜಿಲ್ಲಾ ಸರಬರಾಯಿ ಆಫೀಸರ್ ಶ್ರೀ ಶಂಕರರಾಯರು ಆಹಾರ ಧಾನ್ಯಗಳ ಸ್ಟೋಕನ್ನೂ, ಅಲ್ಲಲ್ಲಿ ರಿಲೀಫ್ ಅಂಗಡಿಗಳನ್ನು ತೆರೆದ ವಿಚಾರವನ್ನೂ ತಿಳಿಸಿದರು ಲೆವಿಕ್ತಮದ ಕುರಿತು ಅವರು ವಿವರಿಸಿದರು ಕೂಪನ್ ಇರುವವರಿಗೂ ಹಂಚೋಣಕ್ಕೆ ತಕ್ಕಷ್ಟು ಗೊಬ್ಬರವಿಲ್ಲವೆಂದು ಜಿ। ಕೃಷಿ ಇಲಾಖೆಯ ಆಫೀಸರರು ತಿಳಿಸಿದ ಕಾರಣ ಕೂಪನುಗಳು ಇಲ್ಲದವರಿಗೆ ಹೇಗೂ ಗೊಬ್ಬರ ಸಿಕ್ಕಲಾರದೆಂಬ ಅಂಶ ಸ್ಪಷ್ಟವಾಯಿತು ಬಹುಶ್ಯ ಜಿಲ್ಲಾ ಆಹಾರ ಸಮಿತಿಯ ಸಭೆ ಇದೇ ಕೊನೆದೆಂದು ಹೇಳಲಾಗಿದೆ

ಆರು ರಿಕ್ರಿಯೇಶನ್ ಆಫೀಸರರು

ಇದುವರೆಗೆ ನಮ್ಮ ಜಿಲ್ಲೆಯ ಡಿವಿಜನುಗಳಿಗೆ ಒಟ್ಟು ಮೂರು ಮಂದಿ ರಿಕ್ರಿಯೇಶನ್ ಆಫೀಸರರಿದ್ದರು ಇನ್ನು ಅವರ ಸಂಖ್ಯೆ ೬ ತಾಲೂಕಿಗೊಬ್ಬರಂತೆ ಅವರ ಹುದ್ದೆ ಹೆಸರೂ "ರೂರಲ್ ವೆಲ್ಫೇರ್ ಆಫೀಸರ್" ಎಂದೂ ಬದಲಾಯಿಸಲಾಗಿದೆ

ಜಿಲ್ಲಾ ಸಮಾಚಾರ

ಮದ್ಯ ನಿಷೇಧ ಮೊಕದ್ದಮೆ

ಬೆಪ್ಪುವಿನ ಸುಬ್ಬಣ್ಣನೆಂಬಾತನಿಗೆ ಕುಡಿದಿದ್ದನೆಂಬ ಆರೋಪದ ಮೇಲೆ ೫೦ ರೂಪಾಯಿ, ಎಲ್ ಜೆ ಲೊಬೊ ಎಂಬಾತನಿಗೆ ೧ ಬಾಟಲಿ ಸಾರಾಯಿ ಇಟ್ಟುಕೊಂಡದ್ದಕ್ಕೆ ೫೦ ರೂಪಾಯಿ ಜುಲ್ಮಾನೆಗಳಾಗಿವೆ

ಕುಲಶೇಖರದ ಲಿಯೊ ಮಿರಾಂದ ಎಂಬವನ ಬಳಿ ಸರಾಯಿ ಮತ್ತು ಹುಳಿ ರಸ ದೊರಕಿತೆಂಬದಕ್ಕೆ ಅವನಿಗೆ ೪ ತಿಂಗಳ ಕಠಿಣ ಶಿಕ್ಷೆಯಾಗಿದೆ

ಬೈಯ್ದುದಕ್ಕೆ ಜುಲ್ಮಾನೆ

ಕಳೆದ ನವೆಂಬರದಲ್ಲಿ ಕುಲಶೇಖರದ ಗೇರು ಬೀಜ ಕಾರ್ಖಾನೆಯಲ್ಲಿ ಮುಷ್ಕರ ನಡೆಯುತ್ತಿದ್ದಾಗ ಅಲ್ಲಿನ ಕೆಲಸಗಾರರಲ್ಲಿ ಮೂರು ಮಂದಿ ಹೆಂಗಸರನ್ನು ಅವಾಚ್ಯ ಶಬ್ದಗಳಿಂದ ಬೈದನೆಂಬ ಆರೋಪದ ಮೊಕದ್ದಮೆಯನ್ನು ಇಲ್ಲಿಯ ಬೆಂಚ್ ಕೋರ್ಟಿನವರು ವಿಚಾರಿಸಿ ಆರೋಪಿಯಾದ ಕಮ್ಯುನಿಸ್ಟ್ ಶೀನ ಮ್ಯೋಲಿ ಎಂಬಾತನಿಗೆ ರೂ ೭೫ರ ಜುಲ್ಮಾನೆ ತಪ್ಪಿದರೆ ೩ ದಿನಗಳ ಸಜೆ ಎಂದ ವಿಧಿಸಲಾಗಿದೆ

ಕಾಂಗ್ರೆಸ್ ಸೇವಾದಳದ ಜಪ್ತಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಮದ್ರಾಸ್ ಸರಕಾರದ ಗೃಹಮಂತ್ರಿಗಳಿಗೆ ಈ ರೀತಿ ಬರೆದಿದ್ದಾರೆ

ಮಂಗಳೂರು ಜಿಲ್ಲೆಯಲ್ಲಿಯ ಸೇವಾದಳದ ಕೆಲ ಕೇಂದ್ರಗಳನ್ನು ಪೋಲಿಸರು ಶೋಧಿಸಿ ಅಲ್ಲಿಯ ಲಾ ಮತ್ತು ಇನ್ನಿತರ ಕಾಗದ ಪತ್ರಗಳನ್ನು ವಶಮಾಡಿಕೊಂಡಿರುವರೆಂಬುದನ್ನು ಕೇಳಿ ವಿಷಾದವಾಯಿತು ಪೂರ್ಣ ವಿಚಾರಿಸದೆ ಇವೆಲ್ಲವುಗಳೂ ರಾಷ್ಟ್ರಸೇವಾದಳಗಳೆಂದೇ ತಿಳಿದ ಪೋಲಿಸರ ಈ ಕ್ರಮವನ್ನು ಕೈಕೊಂಡಂತಿದೆ ಅವರು ದ ಕ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ವಿಚಾರಿಸಿದಲ್ಲಿ ಈ ಅಪರಾಧವಾಗುತ್ತಿರಲಿಲ್ಲ ಈ ಸಂಗತಿಯನ್ನು ಬೇಗನೆ ಸರಿಪಡಿಸುವಿರೆಂಗಿ ಬಿನ್ನಹ

ವಾಣಿಜ್ಯ ನೌಕರರ ದಿನಾಚರಣೆ

ಕಳೆದ ನವಂಬರ ತಿಂಗಳಲ್ಲಿ ಶಾಸನವಾದ ವಾಣಿಜ್ಯನೌಕರರ ಮಸೂದೆ ಇನ್ನು ಜಾರಿಗೆ ಬರದಿದ್ದದ್ದು ಶೋಚನೀಯ, ಇನ್ನಾದರೂ ಅದು ಮಂಜೂರಾದ ತಾರೀಕಿನಿಂದ ಜ್ಯಾರಿಗೆ ತರುವಂತೆ ಸರಕಾರವನ್ನು ಕೇಳಿಕೊಳ್ಳುವ ಮತ್ತದರಲ್ಲಿ ಕೆಲವು ಆವಶ್ಯಕ ತಿದ್ದುವಪಡಿಗಳನ್ನು ಮಾಡಬೇಕೆನ್ನುವ ಠರಾವು ಕಳೆದ ತಾ ೧೪ರಂದು ಶ್ರೀ ಸುಮಿತ್ರ ಭಟ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾಡಲಾಯಿತು ಈ ಮಸೂದೆ ಜಾರಿಗೆ ಬಾರದ್ದರಿಂದ ನೌಕರರಿಗೆ ಆದ ಹಾನಿಗಳ ಕುರಿತು ಭಾಷಣಗಳಾದುವು.

ವಿಚಿತ್ರ ಶಿಶು

ಹತ್ತು ಬೆರಳಿನ ಒಂದು ಕಾಲು, ಹಿಂದೆ ಬಾಲ

ಕದ್ರಿಯ ಬಳಿ ಓರ್ವ ಕ್ರೈಸ್ತ ಹೆಂಗಸು ಕಳೆದ ತಾ ೧೩ರಂದು ಒಂದು ವಿಚಿತ್ರ ಕೂಸನ್ನು ಹೆತ್ತಿದ್ದಳು ಅದಕ್ಕೆ ಎರಡು ಕೈಗಳು, ಒಂದು ಕಾಲು ಆ ಕಾಲಿಗೆ ಹತ್ತು ಬೆರಳುಗಳು ಹಿಂದಿನಿಂದ ಒಂದ ಬಾಲವೂ ಇತ್ತೆಂದು ಹೇಳಲಾಗಿದೆ ಹುಟ್ಟುವಾಗಲೇ ಮಗು ಮೃತಪಟ್ಟಿತ್ತು ಈ ಸೃಷ್ಟಿ ವಿಚಿತ್ರದ ಭಾವಚಿತ್ರ ಎತ್ತಲಾಗಿದೆ

ಮೂಲ್ಕಿ

ಗ್ರಾಮ ವಸ್ತುಪ್ರದರ್ಶನ

ಈ ಪ್ರದರ್ಶನವು ಇದೇ ಬರುವ ತಾ ೨೪ ೨೫ಕ್ಕೆ ನಡೆಯುವುದು ಕೃಷಿಗಾರಿಕೆ, ಪಶುಪಾಲನೆ ಸಾರ್ವಜನಿಕ ಆರೋಗ್ಯ ಗುಡಿಕೈಗಾರಿಕೆ ಕಲಾಕೃತಿಗಳ ವಿಜ್ಞಾನುಗಾರಿಕೆ ಗೃಹಕೃತ್ಯಪಾಕಸಂಗ್ರಹ ವ್ಯಾಯಾಮಚಟುವಟಿಕೆಗಳು ಇವೇ ಮೊದಲಾದುವುಗಳ ಪ್ರದರ್ಶನವಿರುವುದು

ಪಡುಬಿದ್ರೆ

ಪಡುಬಿದ್ರೆ ಕೇಂದ್ರದಲ್ಲಿ ನಿತ್ಯವೂ ಸಟ್ಟಾಪಾಲಿನಂಥ ಮತ್ತು ಜೂಜಾಟಗಳು ನಡೆಯುತ್ತಿದ್ದು ಈ ಬಗೆಯ ದುರಾಚಾರಗಳಿಂದ ಜನತೆಯ ಆರ್ಥಿಕ ಮತ್ತು ನೈತಿಕ ಪರಿಸ್ಥಿತಿಗಳು ಕೆಡುತ್ತಿರುವುದರಿಂದ ಇಲ್ಲಿಯ ಕೃಷಿಕರ ಆಡಳಿತ ಸಭೆಯವರು ಇಂಥಹ ದುಶ್ಚಟಗಳನ್ನು ಬಗೆಹರಿಸಲು ಪ್ರಯತ್ನಿಸಬೇಕೆಂದೂ ಪ್ರತಿಯೊಬ್ಬ ಸಮಿತಿಯ ಸದಸ್ಯರು ಅದಕ್ಕಾಗಿ ಸಾಧಿಸತಕ್ಕದ್ದೆಂದೂ ಯೋಚಿಸಿದ ಅಭಿಪ್ರಾಯವನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದೂ ನಿರ್ಣಯಿಸಲಾಗಿದೆ

ಕಾರ್ಕಳ

ನಾಗಪುರದ ಯುವಕನೊರ್ವನು ಇಲ್ಲಿ ಸಂಶಯಾಸ್ಪದ ಚಲನವಲನಗಳನ್ನು ಮಾಡಿದ್ದನೆಂಬುದಕ್ಕೆ ಬಂಧಿತನಾಗಿರುವನು

ನೋಟೀಸು

ದ ಕ. ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

O P ನಂಬ್ರ 27/1948

(1) ಪಿ ಎಫ್ ಹಡಿಲ್‌ಸ್ಟನ್
(2) ಎಡೊಲ್ಫ್ ಹಡಿಲ್‌ಸ್ಟನ್
(3) ಬೆನಿಟ್ಟೊ ಹಡಿಲ್‌ಸ್ಟನ್ } ಅರ್ಜಿದಾರರು

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದರೆ

ಮಂಗಳೂರು ತಾಲೂಕು ಕೊಡಿಯಾಲಬೈಲಲ್ಲಿ ಮೃತಪಟ್ಟ ಡೆಸ್ಪಿನಾ ವಾತರ್ಸ ಹಡಿಲ್‌ಸ್ಟಾನ್ ಇವರ ಸೊತ್ತಿನ ಕುರಿತು ತಮಗೆ ಲೆಟರ್ಸ್ ಒಫ್ ಎಡ್ಮಿನಿಸ್ಟ್ರೇಶನ್ ಕೊಡಬೇಕಾಗಿ ಮೇಲೆ ಹೆಸರು ಕಾಣಿಸಿದ ಅರ್ಜಿದಾರರು ಈ ಕೋರ್ಟಿನಲ್ಲಿ ಅರ್ಜಿದಾಖಲು ಮಾಡಿರುತ್ತಾರೆ ಸದ್ರಿ ಅರ್ಜಿಯು ತಾ 9-4-1948ರಲ್ಲು ತನಿಖೆಗೆ ಇಟ್ಟಿದೆ ಈ ಕುರಿತು ಯಾರಿಗಾದರೂ ಆಕ್ಷೇಪವಿದ್ದರೆ ಆ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ದಾಖಲು ಮಾಡತಕ್ಕದ್ದು ತಪ್ಪಿದಲ್ಲಿ ಸದ್ರಿ ಅರ್ಜಿಯನ್ನು ಆ ದಿನ ತೀರ್ಮಾನ ಮಾಡಲಾದೀತು ತಿಳಿದಿರಲಿ

S S Achar
Vakil for Petitioners

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸ್‌ಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯೂಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0-1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ಯೊಯಿಂಟ್ ಮೆನೇಜರ್ಸ್,
ಮಂಗಳೂರು, 23-12-1947 } ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

NOTICE

In the District Court of South Kanara

O P No 40 of 1948

In the matter of the debts due to Vodiappa son of Pak ra deceased

(1) B Monappa Amman
(2) Sheshamma (3) Maniappu
(4) Laxmi (5) Krishnamma
(6) Padmavathi

To

Whomsoever it may concern

Petitioners

Notice is hereby given that on 8-3-1948 application was made to this court for the grant to the 1st Petitioner a certificate under the Indian succession act with respect to certain debts and securities of the deceased B Vodiappa who died intestate on 29-4-1934 at Mylar gardens — Bokkapatna, Mangalore and that 6-4-1948 at 11 A M, has been appointed for the hearing thereof when you are at liberty to appear & oppose the same (B O)

Mangalore, 16-3-1948 — M P. Kini, Vakil for Petitioner.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

SEASON DEPOSITS
for Rs. 5,000/- and over are now accepted at all Offices of the Bank at the following rates:-

3 & 4 months . . . . . $2\frac{1}{4}$% p. a.
5 & 6 months . . . . . $2\frac{3}{4}$% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

The 1946 Record Business Proves the Popularity

The Bombay Life Assurance Co., Ltd.
(ESTD. 1908)

Company's New Business in 1946 - 3.28 Crores.

Our Chief Agency New Business in 1946 { About 54 lakhs.

Our experience of 37 years avialable to you for arranging Insurance Investment.
It therefore pays you to consult us to insure or to represent.

Kochikar Brothers, Limited.
(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ಕುಂಟಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯವಾಗುವುದು. ಕೆಮ್ಮು, ಕ್ಷಯ, ಶ್ವಾಸಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 26—3—1948 [ಸಂಚಿಕೆ 12]

ಜನತೆಯ ಮೇಲೆ ಮಹಾತ್ಮರ ನೈತಿಕ ಪ್ರಭಾವ

ಮಹಾತ್ಮರು ತಮ್ಮ ಉದಾತ್ತ ಆದರ್ಶದ ಜೀವನ ವೈಶಿಷ್ಟದಿಂದ ಜನಾಂಗದ ಜನಜೀವನವನ್ನು ಹೇಗೆ ಸತ್ವಭಾವಕ್ಕೆಳವಾಡಿದ ಎಂದು ಪ್ರಖ್ಯಾತ ಗಾಂಧಿ ಭಕ್ತರಾದ (ಈಗ ಹೈದರಾಬಾದಿನಲ್ಲಿ ಏಜಂಟರಾಗಿರುವ) ಕನ್ಹೈಲಾಲ್ ಎಂ ಮುನ್ಶಿಯವರು ಒಂದು ಲೇಖನದಲ್ಲಿ ಹೀಗೆ ತಿಳಿಸುತ್ತಾರೆ

ಅಖಿಲ ಜನಾಂಗಿಕರ ಪರಿಷತ್ತು ದಿಲ್ಲಿಯಲ್ಲಿ ಕೂಡಿದ್ದಾಗ ಮಹಾತ್ಮರು ಒಂದು ದಿನ ಅದರ ಅಧಿವೇಶನಕ್ಕೆ ಚಿತ್ತೈಸಿ ಪರಿಷತ್ತಿಗೆ ಕಳೆಕೊಟ್ಟರು. ಅಂದು ನಾನು ಫಿಲಿಪ್ಪೈನಿನ ಪ್ರತಿನಿಧಿಯ ಹತ್ತಿರ ಕೂತಿದ್ದೆ. ಗಾಂಧೀಜಿಯವರು ಬರುವ ವೇಳೆ ಸಮೀಪಿಸುತ್ತಿರುವಾಗ ಆತ ತನ್ನ ಕುತೂಹಲ ಆಸಕ್ತಿಗಳಿಂದ ಕೂಡಿದ್ದು ಭಾವನಾಪರವಶ

ಗಾಂಧೀಜಿ ಒಂದು ... ಭಾರತದ ಈ ಕೃಶ ಶರೀರದ ಮಹಾವ್ಯಕ್ತಿಯನ್ನು ವೀಕ್ಷಿಸುತ್ತ ಫಿಲಿಪ್ಪೈನ್ ಪ್ರತಿನಿಧಿ ಒಂದು ಹೆಜ್ಜೆ ಮುಂದರಿದು ಅವರಿದ್ದ ಕಡೆ ಧಾವಿಸಲು ಆತುರನಾದ. ಮತ್ತೆ ಕೆಲವು ಕ್ಷಣಗಳ ನಂತರ ಮಹಾತ್ಮರು ಕೂತಿದ್ದ ಭಾಷಣವೇದಿಕೆಯ ಬಳಿ ಹೋಗಿ ಅವರೊಡನೆ ಕೈಕುಲುಕಿ ಬರುವ ಸುಸಂದರ್ಭ ಆತನಿಗೆ ದೊರೆಯಿತು. ಹಿಂದೆ ತನ್ನ ಆಸನಕ್ಕೆ ಬರುವಾಗ ಆತ ಸಂತೋಷಾತಿರೇಕದಿಂದ ತುಂಬಿ ತುಳುಕುತ್ತಿದ್ದ. ಅವರೊಡನೆ ಕೈಕುಲುಕುವುದಕ್ಕಾಗಿ ಆರು ಸಾವಿರ ಮೈಲು ದೂರದಿಂದ ಬಂದದ್ದು ಸಾರ್ಥಕವಾಯಿತು ಹೀಗೆಂದವನು ಉದ್ಗರಿಸಿದ. ಮಾನವ ವ್ಯಕ್ತಿತ್ವದ ಅಮೋಘ ನಿದರ್ಶನವನ್ನು ಆ ದಿವಸ ಕಂಡು ಮುಗ್ಧನಾಗಿದ್ದನವ.

★

ಮಹಾತ್ಮರೊಡನೆ ಸದಾ ಸಂಚರಿಸುವ ಒಂದು ಪರಿವಾರವಿದೆ. ಅದು ಅವರ ಕುಟುಂಬವೇ ಎಂದು ಭಾವಿಸಲ್ಪಡುತ್ತದೆ. ಒಂದು ದಿನ ಈ ಪರಿವಾರದ ಇರ್ವ ಹುಡುಗಿಯರು ಅಳುತ್ತಿದ್ದರು. ಪ್ರಾರ್ಥನಾದಲ್ಲಿ ನಾನು ಕಾರಣ ವಿಚಾರಿಸಿದೆ. "ಬಾಪೂ ಇವತ್ತು ನಮ್ಮನ್ನು ಬಿಟ್ಟು ಬೊಂಬಾಯಿಗೆ ಹೋಗುತ್ತಾರೆ. ನಾವು ಬರುವುದುಬೇಡವೆಂದು ಅವರು ನಿರ್ಧರಿಸಿದ್ದಾರೆ" ಎಂದವರು ಬಿಕ್ಕಿ ಬಿಕ್ಕಿ ಅತ್ತರು.

ನನ್ನ ಚಿಕ್ಕ ಮಗಳು ಒಂದೆರಡು ವರ್ಷ ಗಾಂಧೀಜಿಯ ಬಳಿ ಇದ್ದಳು. ಮೂರು ನಾಲ್ಕು ತಿಂಗಳಿಗೊಂದಾವರ್ತಿ ಅವಳು

ಒಬ್ಬನಿಂದ ಹಲವು ಮಹಾತ್ಮರು ಹುಟ್ಟಿದರು

ಕೆ. ಎಂ ಮುನ್ಶಿಯವರ ಪೂರ್ವ ಸ್ಮೃತಿಗಳು

ಬೊಂಬಾಯಿಯ ನಮ್ಮ ಮನೆಗೆ ಬರುತ್ತಿದ್ದಳು. ಆಗ ಅವಳು ಬಾಪೂವಿನ ಕುರಿತೇ ಮಾತನಾಡುತ್ತಿದ್ದಳು. ಗಾಂಧೀಜಿಯ ಚಿತ್ರವನ್ನು ಎದುರಿಗಿಟ್ಟುಕೊಂಡು ಗೋಪಿಗಳು ಶ್ರೀ ಕೃಷ್ಣನನ್ನು ಧ್ಯಾನಿಸುವಂತೆ ಅವಳು ಆತನನ್ನು ಪೂಜಿಸುತ್ತಿದ್ದಳು. ತನ್ನನ್ನು ಹಿಂಬಾಲಿಸಿದವರಿಗೆ ಕಠಿಣ ಜೀವನ ಕಲಿಸಿ, ಕಟ್ಟುಕಟ್ಟಿನ ಶಿಸ್ತಿನ ಜೀವನ ಒದಗಿಸಿ ಮತ್ತು ಜ್ವಾಲೆಗಳನ್ನೇ ಬಹುಮಾನವಾಗಿ ಕೊಡುವ ಹಳ್ಳಿಯ ಆಧುನಿಕ ಕೃಷ್ಣನವ.

★

ಈತನ ಹೆಸರು ಕೇಳಿಯೇ ಶ್ರದ್ಧಾವಂತ ಭಕ್ತರಾದ ಅಸಂಖ್ಯಾತ ಜನರಿದ್ದಾರೆ. ನಾನು ಬಿಜಾಪುರ ಜೈಲಿನಲ್ಲಿದ್ದಾಗ ಅಲ್ಲಿನ ೨೦೦ ರಾಜಕೀಯ ಕೈದಿಗಳ ಮೇಲ್ವಿಚಾರಣೆ ಮಾಡುತ್ತಿದ್ದೆ. ಅಲ್ಲೊಬ್ಬ ೨೫ ವರ್ಷದ ಹುಡುಗಾಟದ ತರುಣನಿದ್ದ. ತನ್ನ ಸಹವಾಸಿಗಳ ಮೇಲೆ ಇವನು ಕೆಲವು ಸಲ ಅಪಾಯಕಾರಕ ವಿನೋದ ಚೇಷ್ಟೆಗಳನ್ನಾಡುತ್ತಿದ್ದ. ಯಾರಾದರೂ ನಿಂತಿದ್ದರೆ ಹಿಂದಿನಿಂದ ಬಂದು ಅವರ ಕಾಲಮಧ್ಯದಲ್ಲಿ ತಲೆ ಹಾಕಿ ಎತ್ತಿ ಬಿಸಾಡುವುದು ಇವನ ಪ್ರೀತಿಯ ಆಟ. ಹಲವು ಸಲ ಇವನ ಆಟ ನೋಡಿ ನನಗೆ ಅಂಜಿಕೆಯಾಗುತ್ತಿತ್ತು. ಒಂದು ದಿನ ನಾನವನನ್ನು ಕರೆದು "ನಿನ್ನ ಈ ಮಕ್ಕಳಾಟಿಕೆಯ ವರ್ತನೆಯನ್ನು ಬದಲಾಯಿಸದಿದ್ದರೆ ನಿನ್ನ ಕುರಿತು ಬಾಪೂಜಿಗೆ ಬರೆಯುತ್ತೇನೆ" ಎಂದೆ. "ಬಾಪೂಜಿ ನನಗೇನು ಮಾಡುವರು?" ಎಂದವನು ಪ್ರಶ್ನಿಸಿದ.

"ಉಪವಾಸ ಮಾಡುವರು"

"ಎಷ್ಟು ದಿನಕ್ಕೆ?"

"ನೀನು ನಿನ್ನ ವರ್ತನೆ ಬದಲಾಯಿಸುವವರೆಗೆ"

"ನಾನು ಬದಲಾಗದಿದ್ದರೆ?"

"ಅವರು ಅಮರಣ ಉಪವಾಸ ಹಿಡಿಯಬಹುದು" ಎಂದು ನಾನು ಕಟುವಾಗಿ ಒತ್ತಿ ತಿಳಿಸಿದೆ.

ಈ ಸಂಗತಿ ಆ ತರುಣನಲ್ಲಿ ಹೃದಯ ಪರಿವರ್ತನವನ್ನುಂಟುಮಾಡಿತು. ಮರುದಿನ ಪ್ರಾತಃಕಾಲ ಆತ ನನ್ನ ಬಳಿಗೆ ಬಂದು "ದಯಮಾಡಿ ಗಾಂಧೀಜಿಗೆ ನನ್ನ ಕುರಿತು ಬರೆಯಬೇಡಿರಿ. ನಾನು ಇನ್ನು ಮುಂದೆ ಹಾಗೆ ಮಾಡುವುದಿಲ್ಲ" ಹೀಗೆಂದವನು ಬಿನ್ನವಿಸಿದ.

ಆ ತರುಣನಿಗೆ ಗಾಂಧೀಜಿಯವರೇ ದೇವರಂತೆ. ಅವನು ಮುಂದೆ ಅಂತಹ ಚೇಷ್ಟೆಗಳನ್ನು ಮಾಡಲಿಲ್ಲ.

★

ಭಾರತದಲ್ಲಿ ಮಹಾತ್ಮರ ಆದರ್ಶದ ಮೇಲೆ ಜೀವನವನ್ನು ತಿದ್ದಿಕೊಂಡ ಅದೆಷ್ಟೋ ಮಹಾತ್ಮರಿಂದು ಇರುವರು. ಅವರು ಬಹಳ ಗಂಭೀರತೆಯಿಂದ ಗಾಂಧಿತತ್ವಗಳನ್ನು ಆಚರಿಸುತ್ತಿರುವರು. ಯಾವ ವಿನೋದಕ್ಕೂ ಅವರಲ್ಲಿ ಎಡೆಯಿರುವುದಿಲ್ಲ.

ಬಿಜಾಪುರ ಜೈಲಿನಲ್ಲಿ ಒಬ್ಬ ಸತ್ಯಾಗ್ರಹಿ ಇದ್ದ. ಸತ್ಯಾಚರಣೆಗೆ ಅವನು ಭೀಷ್ಮ ಪ್ರತಿಜ್ಞೆ ಮಾಡಿದ್ದ. ಒಂದುಸಲ ತನಗೆ ಎದೆಹಿಡಿತವುಂಟಾಗುತ್ತಿದೆಯೆಂದವನು ಜೈಲಿನ ಮುಖ್ಯಾಧಿಕಾರಿಯಿಂದ ಒಂದು ಬಾಟಲಿ ಕೂದಲೆಣ್ಣೆ ಪಡೆದ. ಈ ಎಣ್ಣೆಬಾಟ್ಲಿನ ತಟುಕುಗಳನ್ನವನು ಕಿರಿಕಿರಿ ಶಬ್ದಮಾಡುವ ತನ್ನ ಚರಕಕ್ಕೆ ಬಿಟ್ಟ. ಕೊನೆಗೆ ತಾನು ಮಾಡಿದ ಕೃತ್ಯ ಅಸತ್ಯವೆಂದವನಿಗೆ ಮನಖಚಿತವಾಯಿತು. ಕೂಡಲೇ ಜೈಲಾಧಿಕಾರಿ ಬಳಿಗೆ ಹೋಗಿ ಶಿರಕ್ಕೆಂದು ಪಡೆದ ಎಣ್ಣೆಯನ್ನು ಚರಕಕ್ಕುಪಯೋಗಿಸಿದ ತನ್ನ ಅಸತ್ಯಕಾರ್ಯಕ್ಕೆ ಜೈಲುಶಿಸ್ತುಪಕ್ರಮದ ಮೇರೆಗೆ ತನಗೆ ಶಿಕ್ಷೆಯನ್ನು ವಿಧಿಸಬೇಕೆಂದು ಯಾಚಿಸಿದ. ಬಂಧಿಯೋರ್ವ ಶಿಕ್ಷೆಯ ಅಪೇಕ್ಷೆ ಮಾಡಿದುದನ್ನು ಕೇಳಿ ಜೈಲಾಧಿಕಾರಿಗೆ ಕೌತುಕವಾಯಿತು.

★

ಬಿಜಾಪುರ ಜೈಲಿನಲ್ಲಿ ನಾನು ಅಲ್ಲಿನ ಸತ್ಯಾಗ್ರಹಿ ಕೈದಿಗಳ ಮುಖ್ಯಮೇಲ್ವಿಚಾರಣೆಯ ಕರ್ತವ್ಯವನ್ನು ಸ್ವಯಂ ಇಚ್ಛೆಯಿಂದ ವಹಿಸಿಕೊಂಡಿದ್ದೆ. ಅಲ್ಲಿ ಮತ್ತೊಬ್ಬ ಕಡು ಸತ್ಯಾಗ್ರಹಿ ಇದ್ದ. ಮಹಾತ್ಮರ ದಿನಚರಿಗಳನ್ನವಲವಲೇಶ ತಪ್ಪದಂತೆ ಅನುಸರಿಸುತ್ತಿದ್ದ. ಪ್ರಾತಃಕಾಲ ೪ ಗಂಟೆಗೆ ಮತ್ತು ಸಾಯಂಕಾಲ ೬ ಗಂಟೆಗೆ ಪ್ರಾರ್ಥನೆಮಾಡುತ್ತಿದ್ದ. ಸಾಂಬಾರ ಜೀನಸುಗಳನ್ನು ಹಾಕದೆ ಆಹಾರ ಸೇವನೆಮಾಡುತ್ತಿದ್ದ. ನಿಜವಾಗಿಯೂ ಆತ ಉದಾತ್ತ ಸನ್ಯಾಸಿ ಜೀವನಭ್ಯಾಸವನ್ನು ಮಾಡುತ್ತಿದ್ದ.

ಆದರೆ ಇತರ ಕೆಲ ಸತ್ಯಾಗ್ರಹಿಗಳ ವರ್ತನೆಯು ಅವನಿಗೆ ಸಹಿಸುತ್ತಿರಲಿಲ್ಲ. ಕೆಲವರು ಗುಟ್ಟಿನಲ್ಲಿ ಸಿಗರೇಟು ತರಿಸಿ ಸೇದುತ್ತಿದ್ದರು. ಕೆಲವರು ಜೈಲುಶಿಸ್ತು ತಪ್ಪಿ ನಡೆಯುತ್ತಿದ್ದರು. ಮತ್ತೆ ಕೆಳ ತರಗತಿಯವರು ಮೇಲಿನ ತರಗತಿಯವರಿಂದ ಆಹಾರವಸ್ತುಗಳನ್ನು ಪಡೆದು ಸುಖವನ್ನನುಭೋಗಿಸುತ್ತಿದ್ದರು. ಇದೆಲ್ಲ ಅಸತ್ಯವೂ, ಅಶಿಸ್ತಿನದೂ ಎಂದು ಮನಗಂಡ ಆ ಸತ್ಯಾಗ್ರಹಿ ಒಂದು ದಿನ ಉಪವಾಸ ಹೂಡಿದ.

ಮೇಲ್ವಿಚಾರಕನಾದ ನಾನು ಅವನ ಸಂಗಡ ತರ್ಕಿಸಿದೆ. "ನಿನ್ನ ಧೋರಣೆಯಿಂದ ಇಲ್ಲಿನ ಇತರ ಇನ್ನೂರು ಜನರಿಗೆ ಇದು ತನಕ ಕೊಡಲ್ಪಟ್ಟ ಅಲ್ಪಸ್ವಲ್ಪ ಸ್ವಾತಂತ್ರ್ಯಕ್ಕೂ ಲೋಪಬರುತ್ತದೆ" ಎಂದು ಅವನಿಗೆ ತಿಳಿಸಿದೆ. ತನ್ನ ಆತ್ಮವನ್ನು ಶುದ್ಧೀಕರಿಸಿ ಜೈಲಿನಲ್ಲೂ ಸತ್ಯಕ್ಕೇ ಜಯವನ್ನುಂಟುಮಾಡುವ ತನ್ನ ಆಶಯವನ್ನವ ಒತ್ತಿ ಹೇಳಿದ.

ಉಪವಾಸದ ಮೂರು ದಿನಗಳು ಕಳೆದುವು. ಅವನನ್ನು ಜೈಲಾಧಿಕಾರಿಗಳು ಪ್ರತ್ಯೇಕ ಒಂದು ಕೋಣೆಗೆ ರವಾನಿಸಿದರು. ನಾನು ದಿನಂಪ್ರತಿ ಅವನನ್ನು ಕಂಡು ಅವನ ಭೀಷಣ ಕಾರ್ಯಕ್ರಮವನ್ನು ಬಿಟ್ಟುಬಿಡಲು ಬಿನ್ನವಿಸುತ್ತಿದ್ದೆ. ನಾಲ್ಕನೇ ದಿನ ಅವನಿಗೆ ತನ್ನ ಸತ್ಯಾಚರಣೆಯ ಕುರಿತೇ ಸಂದೇಹವುಂಟಾಯಿತು. "ಕೊಟ್ಟ ಮಾತು ಮುರಿಯುವುದಕ್ಕಿಂತ ಮರಣವೇ ಲೇಸು" ಎಂಬುವ ಮಹಾತ್ಮರ ಪ್ರೀತಿವಾಕ್ಯವನ್ನವನ್ನು ಉದಹರಿಸಿ 'ನೀವು ನಮ್ಮ ಮೇಲ್ವಿಚಾರಕರು ಅಂದ ಮೇಲೆ ನಮ್ಮ ಮುಖಂಡರೇ ಆಗಿರುವಿರಿ. ಹಿಂಬಾಲಕನಾದ ನಾನು ನಾಯಕರಾದ ನಿಮ್ಮ ಮಾತು ತೆಗೆದುಹಾಕಬಾರದೆಂದೇ ಪ್ರತಿಜ್ಞಾಬದ್ಧನಾಗಿದ್ದೇನೆ' ಎಂದ.

ಇದೇ ಸಮಯವೆಂದು ತಿಳಿದು "ಹೌದು ಅದಕ್ಕಾಗಿಯೇ ನಾನು ನಿನಗೆ ಉಪವಾಸ ಮುಗಿಸಲು ಬಿನ್ನವಿಸಿದ್ದು" ಎಂದೆ.

ಆದರೆ ಸತ್ಯಾಗ್ರಹಿಯ ಹೃದಯ ನಿಶ್ಚಲವಾಗಿತ್ತು. ಕೂಡಲೇ ಅವನೆಂದ, "ನಾಯ

೩ನೇ ಪುಟ ನೋಡಿ

ಅಂತರ್ರಾಷ್ಟ್ರೀಯ ಅವಲೋಕನ

ವಿಶ್ವ ರಾಜಕಾರಣದಲ್ಲಿ ತತ್ವ ಘೋಷಣೆ

ದೇಶ ವಿದೇಶಗಳಲ್ಲಿನ ತಾತ್ವಿಕ ಭೇದಗಳು

[illegible] ಭಿನ್ನ ರುಚಿಃ ಎಂದು ನಮ್ಮ ಪ್ರಾಚೀನ ಶಾಸ್ತ್ರಕಾರರು ಸಾರಿದಾಗ ಅವರು ಅದೆಂತಹ ಅವಲೋಕನದ ಅಮರವಾಗಿದ್ದ ಸತ್ಯವನ್ನು ನಿರೂಪಿಸಿದ್ದರು! ಲೋಕದಲ್ಲಿ ಒಂದೇ ಅಭಿಪ್ರಾಯವುಳ್ಳ ಎರಡು ವ್ಯಕ್ತಿಗಳು ಸಿಗಲಾರರೆಂಬುದು ಈ ಲೋಕೋಕ್ತಿಯ ತಿರುಳು. ಅದು ಮಾನವ ಸ್ವಭಾವ ಸಹಜವಾದುದು. ಮನೋಶಾಸ್ತ್ರ ಪಂಡಿತರಾದ ನಮ್ಮ ಹಿರಿಯರು ವಿಶ್ವ ಜೀವನವೇ ಈ ಸ್ವಭಾವ ವ್ಯತ್ಯಾಸದ ಮೇಲೆ ತಾಂಡವಾಡುತ್ತಿದೆಯೆಂದು ಮನಗಂಡಿದ್ದರು.

ಇದರ ಸತ್ಯಸ್ಥಿತಿಯನ್ನು ಮನಗಾಣಲು ನಾವು ಮೊದಲು ನಮ್ಮ ಸಮಾಜದಿಂದಾರಂಭಿಸಬಹುದು ನಮ್ಮಲ್ಲಿನ ಬ್ರಾಹ್ಮಣ ಅಬ್ರಾಹ್ಮಣ, ಸ್ಪೃಶ್ಯಾಸ್ಪೃಶ್ಯ ವರ್ಣಾವರ್ಣ ಭೇದಗಳೇ ವಿಶಾಲವಾಗಿ ವಿಶ್ವ ಜೀವನದಲ್ಲಿ ವು ಬೃಹದಾಕಾರವನ್ನು ತಾಳುವವು. ಮತ್ತೆ ಮಜೂರ, ಮಾಲೀಕ, ಆಳು, ಒಡೆಯ, ಧನಿಕ, ಧರಿದ್ರ ಈ ಮೊದಲಾದ ಮೂಲ ತಾರತಮ್ಯಗಳೂ ವಿಶ್ವ ಕಾರಣದಲ್ಲಿ, ಸಮತಾವಾದ, ಸಾಮ್ರಾಜ್ಯವಾದ, ಮಜೂರಶಾಹಿ, ಬಂಡವಾಳಶಾಹಿ, ಪ್ರಜಾಪ್ರಭುತ್ವ, ಸರ್ವಾಧಿಕಾರಗಳಾಗಿ' ಕರಾಳಾಕೃತಿಯಾಗಿವೆ ಲೌಕಿಕದೃಷ್ಟಿಯಿಂದ ಸಾಂಪತ್ತಿಕ ವ್ಯತ್ಯಾಸವೇ ಇಂದಿನ ಅಂತರ್ರಾಷ್ಟ್ರೀಯ ಅಶಾಂತತೆಗೆ ಕಾರಣವಾಗಿದೆ. ಕೆಲವೇ ಶಕ್ತ ರಾಷ್ಟ್ರಗಳು ಇತಿಹಾಸದ ಕೆಲವೊಂದು ಸಾಂದರ್ಭಿಕ ಅನುಕೂಲತೆಗಳಿಂದ ಜಗತ್ತಿನ ಅತೀ ಹೆಚ್ಚಿನ ಸಂಪತ್ತಿನ ಒಡೆಯರಾದರು. ಜಗತ್ತಿನ ಅನೇಕ ದೇಶಗಳು ರಾಜಕೀಯವಾಗಿಯೂ, ಆರ್ಥಿಕವಾಗಿಯೂ ಅವರ ಪಾದಾಕ್ರಾಂತವಾದುವು ·ಅಲ್ಲಿ ದಾಸ್ಯ ಸುಲಿಗೆ, ಸಾಮ್ರಾಜ್ಯಶಾಹಿಗಳೆಂಬ ಶಬ್ದ ಘೋಷಗಳು ಉತ್ಪತ್ತಿಯಾದವು ಮತ್ತೀಗ ಎಲ್ಲಾ ರಾಷ್ಟ್ರಗಳನ್ನೂ ಸಂಪತ್ ಶಕ್ತಿಯಿಂದ ಮಿಗಿಸಿರುವ ಅಮೇರಿಕದ ನೂತನ 'ಡೊಲರ್ ಸಾಮ್ರಾಜ್ಯಶಾಹಿ'ಯೇ ಎಲ್ಲರ ಕಣ್ಣನ್ನೂ ಕುಕ್ಕುತ್ತಿದೆ

ಇದಕ್ಕೆ ವಿರುದ್ಧವಾಗಿ ರಶ್ಯವು ಬಂಡವಾಳಶಾಹಿ ಪ್ರಧಾನದ ಸಮಾಜ ರಚನೆಯನ್ನು ನಾಶಮಾಡಿ ಮಜೂರ ಮೂಲತತ್ವದ ಹೊಸ ವಿಶ್ವ ಭಾತೃತ್ವವನ್ನು ಸಾರಿತು ಅದರ ಪ್ರಾಯೋಗಿಕ ಅಭ್ಯಾಸಗಳೂ ಆ ದೇಶದಲ್ಲಿ ಹೊರ ತೋರಿಕೆಗೆ ಅತ್ಯಂತ ಯಶಸ್ವಿಯಾಗಿ ಕಂಡುವು ಇಂದು ಇಡೀ ಜಗತ್ತಿಗೆ ಜಗತ್ತೇ ಎಂಬಂತೆ ಈ ಕೆಂಪು ತತ್ವದಿಂದ ವ್ಯಾಮೋಹಗೊಂಡಂತಿದೆಯೆನ್ನುವಾಗ ಅಮೇರಿಕವು ಅದನ್ನು ಕೊನೆಗಾಣಿಸುವ ನಿರ್ಧಾರದಿಂದೆಂಬಂತೆ ರಶ್ಯದ ವಿಸ್ತರಣವನ್ನು ತಡೆಯುವ ತನ್ನ ಧೋರಣೆಯನ್ನು ಘೋಷಿಸಿತು ರಶ್ಯದ ದೃಷ್ಟಿಯಲ್ಲಿ ಅಮೇರಿಕವು ಬಂಡವಾಳಶಾಹಿ ರಾಷ್ಟ್ರ ಅಮೇರಿಕದ ದೃಷ್ಟಿಯಲ್ಲಿ ರಶ್ಯದ ರಾಜ್ಯಪದ್ಧತಿಯು ತೋರಿಕೆಗೆ ಮಜೂರ ಮೂಲದ್ದಾದರೂ ನಿಜವಾಗಿ ಅದು ನಿರಂಕುಶ ಸರ್ವಾಧಿಕಾರದ್ದಾಗಿದೆ ಸರ್ವಾಧಿಕಾರವು ವ್ಯಕ್ತಿವಿಕಾಸಕ್ಕೆ ವಿಘಾತುಕವಾದುದೆಂಬಭಿಪ್ರಾಯವು ಪ್ರಜಾಪ್ರಭುತ್ವ ಪ್ರಿಯರಲ್ಲಿದೆ. ಬಂಡವಾಳಶಾಹಿಯು ಪ್ರಜಾಪ್ರಭುತ್ವ ಮಾದರಿಯಲ್ಲಿ ಮುನ್ನಡೆಯುವ ತನಕ ಅದೊಂದು ಆವಶ್ಯಕ ಅನಿಷ್ಟ (neccessary evil) ಎಂದೆನಿಸುತ್ತದೆಯೆ ಹೊರತು ಅದು ಸರ್ವತ್ಯಾಜ್ಯವಲ್ಲ.

ಕಾರಣ ವ್ಯಕ್ತಿಗಳು ಒಬ್ಬರಿಂದೊಬ್ಬರು ಪರಸ್ಪರ ಭಿನ್ನಾಭಿಪ್ರಾಯವುಳ್ಳವರೇ ಆಗಿದ್ದರೂ ಅವರಲ್ಲಿ ಅತೀ ಹೆಚ್ಚಿನ ಮಂದಿಗಳು ಸರ್ವಸಾಮಾನ್ಯ ವಿಷಯಗಳಲ್ಲಿ ಒಂದು ತರದ ಒಮ್ಮತ ತೋರಿಸಿದರೆ ಅದು ಶಾಸನಮಾನ್ಯವಾಗುವಂತೆ ಸಾಂಪ್ರದಾಯಗಳನ್ನಿಟ್ಟುಕೊಂಡಿರುವುದು, ಪ್ರಜಾಪ್ರಭುತ್ವದ ಮೂಲ ತತ್ವ ಸರ್ವಾಧಿಕಾರ ಹಾಗಲ್ಲ. ಒಂದು ಸಲ ಜನ ಧುರೀಣರಾದವರು ಅಧಿಕಾರರೂಢರಾದೊಡನೆ ಮತ್ತೆ ಸ್ವೇಚ್ಛಾಚಾರದಿಂದ ವರ್ತಿಸತೊಡಗುವರು. ಹಿಂದೆ ತಮಗೆ ಬೆಂಬಲಕೊಟ್ಟು ಮುಂದೆತಂದವರನ್ನು ಈ ಸರ್ವಾಧಿಕಾರಿಗಳು ದಬ್ಬಾಳಲು ಯತ್ನಿಸುವರು. ಇದನ್ನು ಸದುದ್ದೇಶದ ಸರ್ವಾಧಿಕಾರ (Benevolent Dectatorship) ಎಂದೂ ಕರೆಯಲಿಚ್ಛಿಸುವುದುಂಟು. ಹೀಗೆನ್ನುವಾಗ ವ್ಯಕ್ತಿ ಮತ್ತು ರಾಜ್ಯದ ಸಂಬಂಧಗಳ ಮಹತ್ವವು ಸ್ಪಷ್ಟೀಕರಿಸಬೇಕಾಗುತ್ತದೆ 'ರಾಜ್ಯಕ್ಕಾಗಿ ವ್ಯಕ್ತಿ' ಎಂಬುದು ಸಮತಾವಾದಿಗಳೆಲ್ಲರ ಮತ 'ವ್ಯಕ್ತಿ ವಿಕಾಸಕ್ಕಾಗಿ ರಾಜ್ಯ' ಎಂಬುದು ಪ್ರಜಾಪ್ರಭುತ್ವದ ನೀತಿ ಈ ಮೂಲ ತತ್ವಭೇದವೇ ಇಂದಿನ ಎಲ್ಲಾ ಅಂತರಾಷ್ಟ್ರೀಯ ಘರ್ಷಣೆಗಳ ಮೂಲ ಒಂದು ದೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯವಿದ್ದು ಇನ್ನೊಂದರಲ್ಲಿ ಅದಕ್ಕೆ ನಿರ್ಬಂಧವಿದ್ದರೆ ಆ ಎರಡು ದೇಶಗಳಲ್ಲಿ ಅಂತರಾಷ್ಟ್ರೀಯ ಸಾಮರಸ್ಯವಿರಲಾರದು ಇದೇ ಕಲಹಕ್ಕೆ ಕಾರಣವಾಗುವುದು

ಮಾನವನು ಸಮಾಜಜೀವಿಯಾದರೂ ವ್ಯಕ್ತಿಸ್ವಾತಂತ್ರ್ಯ ಪ್ರಿಯನು. ಸ್ವಸಾಮರ್ಥ್ಯದಿಂದ ಜೀವಿಸಿಕೊಂಡಿರಲು ಅವನು ಹೆಚ್ಚು ಆನಂದಪಡುವನು ಸಮತಾವಾದ ಪದ್ಧತಿಯಲ್ಲಿ ಮನುಷ್ಯರ ಉದರ ಪೋಷಣೆ ಮತ್ತಿತರ ಲೌಕಿಕ ಸುಖಸೌಕರ್ಯಗಳು ದೊರೆಯುವುದಾದರೂ ವ್ಯಕ್ತಿ ವಿಕಾಸಕ್ಕದರಲ್ಲಿ ಎಡೆಯಿಲ್ಲವಾದ್ದರಿಂದ ಮನುಷ್ಯನು 'ಬದುಕುವುದು ತಿನ್ನುವುದಕ್ಕಲ್ಲ, ತಿನ್ನುವುದು ಬದುಕುವುದಕ್ಕೆ' ಎಂಬ ತತ್ವಜ್ಞಾನದ ಕಡೆಗೆ ಆಕರ್ಷಿತನಾಗುವನು ಅವನ ರಚನಾತ್ಮಕ ಕ್ರಿಯಾಶಕ್ತಿಗೆ ಆತಂಕವನ್ನುಂಟುಮಾಡುವ ಯಾವ ವ್ಯವಸ್ಥೆಯನ್ನೂ ಅವನು ಮಾನ್ಯಮಾಡಲಾರ.

ಹೀಗಿರುವಾಗ ಇಂದು ರಶ್ಯದಲ್ಲಿ ನಡೆಯುತ್ತಿರುವುದೇನೆಂದು ನಾವು ತಿಳಕೊಂಡರೆ ಅಲ್ಲಿನ ಆಡಳಿತವು ಪ್ರಜೆಗಳ ಅತೃಪ್ತಿಯನ್ನು ಹೇಗೆ ದಬ್ಬಿ ಹಿಡಿದಿದೆಯೆಂಬ ಸಂಗತಿಯು ಮನಗಾಣುವುದು ರಶ್ಯನ್ ಆಡಳಿತವನ್ನು ಸ್ಥೂಲವಾಗಿ ಎರಡು ವಿಭಾಗವಾಗಿ ಮಾಡಿಕೊಂಡಿರುತ್ತಾರೆ ಆಡಳಿತ ವರ್ಗ ಮತ್ತು ಸೈನ್ಯ ವರ್ಗ. ಆಳಲ್ಪಡುವವರನ್ನು ನಿರಂತರ ವಿಧೇಯರನ್ನಾಗಿಟ್ಟುಕೊಳ್ಳಲು ಆಡಳಿತವು ಸೈನ್ಯ ವರ್ಗವನ್ನುಪಯೋಗಿಸುವುದು. ಈ ಸೈನ್ಯ ವರ್ಗವು ಅಷ್ಟ ಸನಾತನವಾದ ಮಾದರಿಯಲ್ಲಿ ರಚಿಸಲ್ಪಟ್ಟಿಲ್ಲ. ಹಾಗೆ ರಚಿಸಲೂ ಸಾಧ್ಯವಿಲ್ಲ. ಕಾರಣ ಯೋಧರನ್ನು ಸುಖಸಂತೃಪ್ತಿಯಲ್ಲಿರಿಸದಿದ್ದರೆ ಅವರು ದಂಗೆಯೇಳುವುದು ಖಂಡಿತ. ಆದುದರಿಂದ ಸಾಮ್ರಾಜ್ಯ ಶಾಹಿಗಾಗಲಿ, ಸಮತಾವಾದ ಶಾಹಿಗಾಗಲಿ ಸೈನ್ಯ ವ್ಯವಸ್ಥೆಯ ವಿಧಾನಗಳಲ್ಲಿ ಯಾವ ತಾತ್ವಿಕ ಭೇದವಿರುವುದಿಲ್ಲ.

ಕೊನೆಯದಾಗಿ ಪ್ರಜಾಪ್ರಭುತ್ವ ಪದ್ಧತಿಯು ಒಂದೇ ಒಂದು ಪ್ರತ್ಯೇಕ ವಿಶ್ವ ಭಾಗದಲ್ಲಿ ಅಂತರೀಕ ಮತ್ತು ವಿದೇಶಾಂಗ ನೆಮ್ಮದಿಗಳನ್ನು ಕಾಪಾಡಿಕೊಂಡಿರಬಲ್ಲುದು. ಆದರೆ ಸಮತಾವಾದ ಕಮ್ಯೂನಿಸಮುಗಳು ಈ ಪತ್ಯೇಕತೆಯಿಂದ ಬಾಳಲಾರವು ಆದುದರಿಂದಲೇ ರಶ್ಯದಲ್ಲಿ ಕಮ್ಯೂನಿಸಂ ಪದ್ಧತಿಯನ್ನು ಸ್ಥಾಪಿಸುವಾಗಲೇ ಅವನ್ನು ವಿಶ್ವ ವ್ಯಾಪಿಗೊಳಿಸುವ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯೂ (Commitern) ಸ್ಥಾಪಿಸಲ್ಪಟ್ಟಿತು ಕಳೆದ ಯುದ್ಧ ಕಾಲದಲ್ಲಿ ಸಮರ ತಂತ್ರಕ್ಕಾಗಿ ಮಾತ್ರ ಅದನ್ನು ರದ್ದುಗೊಳಿಸಲಾಯಿತು ಸರಿಯೊಂದು ಬಾಲ ಕಳೆದು ಕೊಂಡರೆ ಇತರರೆಲ್ಲರೂ ತಮ್ಮದನ್ನು ಕಳೆದು ಕೊಂಡದ್ದನು ನೋಡುವ ತನಕ ಅದಕ್ಕೆ ತೃಪ್ತಿಯಾಗಲಾರದು. ಇಂದು ಜಗತ್ತಿನ ಹೆಚ್ಚಿನ ದೇಶಗಳು ಕಮ್ಯುನಿಸಮನ್ನು ಜಿಗುಪ್ಸೆಯಿಂದ ಕಾಣುವುದಕ್ಕೆ ಆ ತತ್ವದಲ್ಲಿ ವ್ಯಕ್ತಿ ವಿಕಾಸಕ್ಕೆಡೆಯಿಲ್ಲದಿರುವುದೇ ಕಾರಣವಾಗಿರುತ್ತದೆ ಆದುದರಿಂದ ಸಹಜವಾಗಿ ಪ್ರಜಾಪ್ರಭುತ್ವಪ್ರಿಯವಾದ ದೇಶಗಳು ಸಹಜವಾಗಿ ರಶ್ಯರ ವಿಸ್ತರೀಕರಣದ ಧೋರಣೆ ವಿರೋಧವನ್ನು ಸೂಚಿಸುತ್ತವೆ

IF IT IS

INSURANCE

Remember

NEW INDIA

Largest Composite Indian Insurance Office

Highlights of Progress in 1946

New Business (LIFE) exceeds	Rs 12 Crores
Policy in Force exceeds	Rs 88
Total Assets exceed	Rs 10
Total claims paid since inception exceed	Rs 13 ,

TRANSACTS

LIFE, FIRE, MARINE, MOTOR VEHICLES, AERIAL RISKS, WORKMEN'S COMPENSATION, FIDELITY GUARANTEE, ALL RISKS ETC

NEW INDIA ASSURANCE CO., LTD.

(H. O : BOMBAY)

Madras Branch: 4 & 5, FIRST LINE BEACH.

(೧ನೇ ಪುಟದಿಂದ)

ಕರಾಗಿ ನೀವು ನನಗೆ ಅಪ್ಪಣೆಕೊಡಬೇಕಿತ್ತು ಬಿನ್ನವಿಸಿಕೊಂಡರೆ ಸಾಕೆ!" ಎಂದನವ.

"ಹಾಗಾದರೆ ಇದೊ" ನೀನು ಈ ಉಪವಾಸ ಮುಗಿಸಬೇಕೆಂದು ನಾನು ಅಜ್ಞೆ ಈಯುತ್ತೇನೆ "

ಆ ಮೇಲೆ ಆತ ಉಪವಾಸ ಮುಕ್ತಾಯಗೊಳಿಸಿದ ಲೌಕಿಕ ದೃಷ್ಟಿಯ ಜನರಿಗೆ ಈ ಘಟನೆಗಳಲ್ಲಿ ಮಹತ್ವಕಾಣಲಿಕ್ಕಿಲ್ಲ ಆದರೂ ಇದಕ್ಕೆ ಬೇರೆ ದೃಷ್ಟಿಗಳೂ ಇವೆ "ಜೀವವು ನಶಿಸಬಹುದು ಆದರೆ ಕೊಟ್ಟ ಮಾತು ಎಂದಿಗೂ ಹೋಗದು" ಎಂಬುದು ರಘುವಂಶದ ರೀತಿ ಗಾಂಧೀಜಿಯ ನೈತಿಕ ಸ್ವಭಾವವು ಸರ್ವ ಸಾಮಾನ್ಯರಂತೆ ಕಾಣುವ ವ್ಯಕ್ತಿಗಳ ಮೇಲೂ ಅದೆಷ್ಟು ಬಲವತ್ತರವಾಗಿ ಪರಿಣಾಮಗೊಂಡಿತ್ತೆಂದೂ, ಅವರ ಜೀವನಾದರ್ಶವು ಅಸಂಖ್ಯಾತರಿಗೊಂದು ಅದೆಂತಹ ಉದಾತ್ತ ಜೀವನ ಧ್ಯೇಯವನ್ನು ಕಲ್ಪಿಸಿತ್ತೆಂದೂ ಈ ಘಟನೆಗಳಿಂದ ತಿಳಿಯಬಹುದಾಗಿದೆ

ಅಶೋಕ ಚಕ್ರದ ಸಾಂಕೇತೀಕ ತತ್ವಜ್ಞಾನ

ಅಮರ ಆರ್ಯ ವೃತ್ತದ ಸಾಂಸ್ಕೃತಿಕ ಕುರುಹು

ಮಹಾತ್ಮರ ಚರಕ, ಮತ್ತು ಬುದ್ಧನ ಜೀವನ ಚಕ್ರ

ಮಹಾತ್ಮರು ಲಾಹೋರಿನಲ್ಲೊಂದು ಸಲ ಭಾರತ ಒಕ್ಕೂಟದ ರಾಷ್ಟ್ರಧ್ವಜವು ಚರಕದ ಸಂಕೇತವನ್ನೊಳಗೊಂಡಿರದಿದ್ದರೆ ಅದನ್ನು ವಂದಿಸಲು ತಿರಸ್ಕರಿಸುವೆ ಎಂದಿದ್ದರು. ಹೊಸ ರಾಷ್ಟ್ರಧ್ವಜವನ್ನು ಘಟನಾಸಮಿತಿಯು ಮುಂದರಿಸಿ ಪಂಡಿತ್ ನೆಹರುರವರು "ಆ ಅನೋಘ ಮಹಿಮೆಯ ಚರಕದ ಸಂಕೇತವು ನಮ್ಮ ಧ್ವಜದಲ್ಲಿರಲೇಬೇಕೆಂಬುದರ ಕುರಿತು ನಾವು ಮನಗಂಡಿದ್ದೆವು. ಆದುದರಿಂದ ಬೇರೆ ಯಾವ ಚಕ್ರಕಿಂತಲೂ ಚರಕದ ಚಿಹ್ನವಾಗಿ ಅಶೋಕನ ಚಕ್ರವೇ ಇರಲೆಂದು ನಾವು ಯೋಚಿಸಿದೆವು" ಹೀಗೆಂದು ನಿರೂಪಿಸಿದರು ಈ ಕುರಿತು ಅಶೋಕನ ಚಕ್ರದ ನಿಜವಾದ ಸಾಂಕೇತಿಕ ಅರ್ಥವೇನೆಂದು ಪ್ರೊ। ಎ ಎಸ್ ವಾಡಿಯಾರವರು ಒಂದು ಲೇಖನದಲ್ಲಿ ಹೀಗೆ ಬರೆಯುತ್ತಾರೆ

ಸಾರನಾಥದಲ್ಲಿ ಸಿಕ್ಕಿದ ಅಶೋಕನ ಸಿಂಹಶಿಲ್ಪಿತ ಸ್ಮಾನಸ್ತಂಭದ ಮೇಲೆ ಕೆತ್ತಲ್ಪಟ್ಟಿರುವ ಉರುಟಾಕೃತಿಯು ಗಾಂಧಿಜೀಯ ಚರಕದ ಸಂಕೇತವೂ ಅಲ್ಲ, ಇಲ್ಲವೆ ಪಂಡಿತ ನೆಹರುಗಳು ನಿರೂಪಿಸಿದ ಬುದ್ಧನ ಹದಿನೆರಡು ಜೀವನ 'ನಿಧಾನ'ಗಳನ್ನು ಸೂಚಿಸುವ ಹದಿನೆರಡು ಕಿರಣಗಳನ್ನೊಳಗೊಂಡ ಜೀವನಚಕ್ರವೂ ಅದಾಗಿರುವುದಿಲ್ಲ ಅದು ಭಾರತದ ಅತೀ ಪ್ರಾಚೀನವಾದ ರಹಸ್ಯಮಯ ತತ್ವಜ್ಞಾನದ ಸೀಲಕವಿರುವ ಸಾಂಕೇತಿಕ ನಿರೂಪಣವಾಗಿದೆ

ಸಸ್ಯ ಶಾಸ್ತ್ರಭ್ಯಾಸಿಗಳಿಗೆ ಈ ಸಂಗತಿಯು ಮತ್ತಷ್ಟು ಸ್ಪಷ್ಟವಾಗಿ ತಿಳಿದೀತು ಕಮಲದ ಹೂವಿನ ಬೀಜಪುಂಜವು ಇತರ ಹೂವುಗಳ ಬೀಜೋತ್ಪತ್ತಿ ಭಾಗಗಳಿಗಿಂತ ಪ್ರತ್ಯೇಕತರದ್ದಾಗಿದೆ ಕಮಲದ ಹೂವಿನ ಈ ಅಂಡಾಶಯವನ್ನು ಅಡ್ಡವಾಗಿ ಕಡಿದರೆ ಕಿರಣದಾಕೃತಿಯ ಸನಿಗೆಗಳನ್ನೊಳಗೊಂಡ (ಲಿಂಬೆಹಣ್ಣಿನದು ಹಾಗೆಯೆ) ವೃತ್ತಾಕಾರದ [illegible]ವಾಗುವುದು ಇದೇ ಆಕೃತಿಯು [illegible]ನಾಥದ ಅಶೋಕನ ಕಂಭದ ಮೇಲೆ [illegible]ತ್ತಿರುವ ವೃತ್ತದ ರೂಪು ಅದು ನಾವು ವ್ಯವಹಾರದಲ್ಲಿ ಉಪಯೋಗಿಸಬಹುದಾದ ಯಾವ ತರದ ಚರಕವಲ್ಲ ಚಕ್ರದಂತೆ ಕಾಣುವ ಹೊರಭಾಗವು ನಿಜವಾಗಿ ಕಮಲದ ಹೂವಿನ ಅಂಡಾಶಯದ ವೃತ್ತಪರಿಧಿಯಾಗಿದೆ ಅದರ ಸುತ್ತಲೂ ಒಳಗಡೆಯಿಂದ ಕಾಣುವ ಸಣ್ಣ ಸಣ್ಣ ಮಣಿಗಳಂತಿರುವ ಚುಕ್ಕೆಗಳು ಬೀಜದ ಕಣಗಳಾಗಿರುತ್ತವೆ ಚಕ್ರದ ನಡುವಿನಲ್ಲಿ ಕೇಂದ್ರದಿಂದ ಪರಿಧಿಯ ಕಡೆ ಕಿರಣಗಳಂತೆ ಪಸರಿಸಿದವುಗಳು ಕಮಲದ ಇಪ್ಪತ್ತನಾಲ್ಕು ಎಸಳುಗಳು ಭಾರತದಲ್ಲಿನ ಎಲ್ಲಾ ಬುದ್ಧ ಚೈತ್ಯಾಲಯಗಳಲ್ಲಿ ಬಿಡಿಸಲ್ಪಟ್ಟ ಚಿತ್ರವಿಧಾನಗಳಲ್ಲಿವನ್ನು ಬೇರೆ ಬೇರೆ ಶೈಲಿಯಲ್ಲಿ ಬಿಡಿಸಲಾಗಿದೆ

ಚಕ್ರದ ಮಧ್ಯದಲ್ಲಿ ಸ್ವಲ್ಪ ಮೇಲಕ್ಕೆ ಬಂದಂತೆ ಕಾಣಿಸುವ ಚಿಕ್ಕ ವೃತ್ತಾಕೃತಿಯು ಹೂವಿನ ಶಲಾಕೆಯಾಗಿದೆ ಹಿಂದೂ ಪುರಾಣ ನಿರೂಪಣೆಗಳ ಪ್ರಕಾರ ಇದು ಅನಂತ ಚೈತನ್ಯಶಕ್ತಿಯಾದ ಶ್ರೀಮನ್ನಾರಾಯಣನ ಹೊಕ್ಕುಳಿಂದ ಹೊರಟಿರುವುದೆಂದು ಹೇಳಿರುವ ಹೂವಿನ ಶಲಾಕೆ ಇಲ್ಲವೆ ದಂಟಾಗಿರುತ್ತದೆ ಇದರ ಮೇಲೆ ಸೃಷ್ಟಿಕರ್ತನಾದ ಬ್ರಹ್ಮದೇವನು ನಿರಂತರ ಧ್ಯಾನ ಮಗ್ನನಾಗಿ ಆಸನರೂಢನಾಗಿರುವನೆಂದು ಹೇಳಲಾಗಿದೆ

ತಂತ್ರತತ್ವ ಎಂಬ ಪುರಾಣ ಗ್ರಂಥದಲ್ಲಿ ಶ್ರೇಷ್ಟ ವಿವೇಕನಾದ ಷಣ್ಮುಖರ ಮಿತವು ಒಂದು ಕಮಲದ ಹೂವಿಗೆ ಸರಿಹೋಲಿಸುವುದನ್ನು ಕಾಣುತ್ತೇವೆ. ತಂತ್ರತತ್ವವೆಂಬ ಪವಿತ್ರ ಶಾಸ್ತ್ರಗ್ರಂಥದಲ್ಲಿ ನಿರೂಪಿಸಿದ ಕಮಲ ಪುಷ್ಪದ ಭವ್ಯ ಸಂಕೇತಾರ್ಥ ವ್ಯಾಖ್ಯಾನವು ಹೀಗಿದೆ

"ಮೂಲದಲ್ಲಿ ಅವಳು (ಕಮಲವು) ಸರ್ವ ಬ್ರಹ್ಮ ಸ್ವರೂಪಿಯು ದಂಟಿನಲ್ಲಿ ಅವಳು ಸಂಪೂರ್ಣ ಮಾಯಾ ಸ್ವರೂಪಿಯು. ಹೂವಿನಲ್ಲವಳು ಸಂಪೂರ್ಣ ವಿಶ್ವರೂಪಿಯು, ಫಲದಲ್ಲವಳು ಸಂಪೂರ್ಣ ಮೋಕ್ಷದಾಯಕಳಾಗಿದ್ದಾಳೆ."

ಪ್ರಾರಂಭದ ಕಾಲದ ಶಿಲ್ಪಿಗಳು ವೇದ ಕಾಲದಿಂದ ರೂಢವಾಗಿ ಬಂದ ಸಾಂಕೇತಿಕ ಸಾಂಪ್ರದಾಯಗಳನ್ನೇ ಅನುಸರಿಸುತ್ತಿದ್ದರಾದ್ದರಿಂದ ಅವರು ತಮ್ಮ ಕಂಭಗಳಲ್ಲೆಲ್ಲ ಈ ಸಂಕೇತವನ್ನು ಕೆತ್ತಿದರು ಆದುದರಿಂದ ಅವರು ನಿರೂಪಿಸ ಬಯಸಿದ ಉನ್ನತ ವಿಚಾರಗಳನ್ನು ನಾವು ತಿಳಕೊಳ್ಳಬಲ್ಲೆವು ಸಾರನಾಥದ ಸಿಂಹಕಂಭದ ತಳಭಾಗವು ಒಂದು ಕಲಶದಾಕೃತಿಯಲ್ಲಿದೆ. ಇದು ಸರ್ವ ಬ್ರಹ್ಮ ಚೈತನ್ಯಶಕ್ತಿಯ ಪವಿತ್ರೋದಕವುಕ್ಕಿ ಬರುತ್ತಿರುವ ಸಂಕೇತ ಅದರ ನಸಿ[illegible] ರಹಸ್ಯ ಹೂವಿನ ದಂಟಾಗಿದೆ ಜಗಜ್ಜೀವನವು ಆ ನೈಜವಾದ ಮಾಯೆಯ ಮೇಲ ಹೇಗೆ ನಿಂತಿರುತ್ತದೆ ಎಂದನ್ನು ಇದು ಸೂಚಿಸುತ್ತದೆ ಇನ್ನು ಅಶೋಕ ಚಕ್ರದಡಿಯಲ್ಲಿನ ಗಂಟೆಯಾಕೃತಿಯ ಕಂಭಭಾಗವು ಪ್ರತ್ಯಕ್ಷ ಜಗತ್ತೇ ಆಗಿದೆ ಅದರಲ್ಲಿ ಆಕಾಶ ಸಂಕೇತದ ಎಸಳುಗಳಿವೆ. ಇದರ ಮೇಲಿನ ಅಂಕಣದಲ್ಲಿರುವ ಫಲವು (ಅಶೋಕಚಕ್ರವೆನಿಸುವಂತಹುದು) ಮೋಕ್ಷ ಅಥವಾ ವಿಮೋಚನೆ ಇಲ್ಲವೆ ನಿರ್ವಾಣಸೂಚಕವಾಗಿದೆ ಇದು ಜೀವನದ ಅಂತಿಮ ಧ್ಯೇಯವೂ ಆಗಿದೆ

ಈ ಕಮಲ ಹೂವಿನ ಅರ್ಥಗರ್ಭಿತ ತತ್ವಜ್ಞಾನವು ರಹಸ್ಯ ತತ್ವಜ್ಞಾನದ ಪೌರ್ವಾತ್ಯ ದೇಶದಲ್ಲೆಲ್ಲ ಹಲವಾರು ಉದಾತ್ತ ಧ್ಯೇಯ ಸಂಕೇತಗಳಲ್ಲಿ ಅನುವರ್ತಿಸಿಕೊಳ್ಳಲಾಗಿದೆ ಇಂತಹ ಮಹತ್ವದ ಹೂವನ್ನು ರಾಷ್ಟ್ರಧ್ವಜ ಕೇಂದ್ರ ಚಿಹ್ನವಾಗಿ ಸ್ವೀಕರಿಸಿದ್ದು ಕೇವಲ ಒಂದು ಸಂತೋಷದಾಯಕವಾದ ಆಕಸ್ಮಿಕ ಘಟನೆ ಮಾತ್ರವಲ್ಲ ಅದು ಅಪ್ರತಿಮ ಪ್ರತಿಭಾ ಸಂಪನ್ನತೆಯ ಫಲವೆಂಗಿದನ್ನಬೇಕು

ಶ್ರೇಷ್ಟ ವ್ಯಕ್ತಿಗಳ ವಾಕ್ಯನಿರೂಪಣೆಗಳಲ್ಲಿ ಅದೊಂದು ಪಗಲ್ಭ ಶಕ್ತಿಯು ಅಡಕವಾಗಿದೆ ಇದರಿಂದಾಗಿ ಅವರೆನ್ನುವ ಮಾತುಗಳಿಗೆ ಅವರು ಭಾವಿಸಿಕೊಂಡದ್ದಕ್ಕಿಂತ ಹೆಚ್ಚಿನ ಅವೇಕ್ಷತೆಯ ಅರ್ಥವು ಕೆಲವು ಸಾರಿ ಸಹಜವಾಗಿ ಉಂಟಾಗುವುದೆಂಬುದಕ್ಕೆ ಇದನ್ನೊಂದು ನಿದರ್ಶನ ಪಂಡಿತ್ ನೆಹರುಗಳು ತಮ್ಮ ಅನುಕರಣೀಯ ಶೈಲಿಯಲ್ಲಿ ಅಶೋಕಚಕ್ರದ ಕುರಿತು ಮಾಡಿದ ಉದ್ಗಾರಗಳು 'ಜನರಿಗೆ ಭಾರತದ ಮೋಕ್ಷವನ್ನು ಸೂಚಿಸುವ ಆ ಪವಿತ್ರವಾದ ಕಮಲದ ಹೂವಿನ ಫಲದ ಅಡ್ಡವಾಗಿ ಕಡಿದ ಆಕೃತಿಯ ಕುರಿತಾಗಿದೆ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨%
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಸಿಹಿಸುದ್ದಿ ಸಂಗ್ರಹ

ಮನುಷ್ಯನ ಮುಖಭಾಗದ ಚರ್ಮದ ದಪ್ಪವು ಸುಮಾರು 1¼ ಮಿಲಿಮೀಟರ್ ಗಳಷ್ಟಿದೆ

✠

ಸಂಯುಕ್ತ ಅಮೇರಿಕೆದಲ್ಲಿ ಹತ್ತುಲಕ್ಷ ಸ್ತ್ರೀಯರು ತಮ್ಮ ಸ್ವಂತವ್ಯಾಪಾರ, ಉದ್ಯಮ ಇಲ್ಲವೆ ಕೈಗಾರಿಕೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾರೆ ಸುಮಾರು ೩ ಲಕ್ಷ ಸ್ತ್ರೀಯರು ಸ್ವಂತ ಸಾಗುವಳಿ ಮಾಡುವರು. ಸ್ವತಂತ್ರ ವೃತ್ತಿಮಾಡುವ ಸ್ತ್ರೀಯರ ಸಂಖ್ಯೆ ಅಲ್ಲಿನ ಉದ್ಯೋಗಸ್ತ ಸ್ತ್ರೀಯರ ಶೇಕಡಾ ಎಂಟರಷ್ಟಿದೆ

✠

ಲಂಡನಿನಲ್ಲಿ ೬೦೦ಕ್ಕೂ ಮಿಕ್ಕಿದ ಗ್ರಂಥಾಲಯಗಳಿವೆ

✠

ಬಾಯಿಯಿಂದ ಊದಿ ಬಾರಿಸುವ ಪುಟ್ಟ ಹಾರ್ಮೋನಿಯಮ್ ಉಪಕರಣವನ್ನು ೧೮೨೭ರಲ್ಲಿ ಜರ್ಮನಿಯಲ್ಲಿ ತಯಾರಿಸಲಾಯಿತು

✠

ಪಾರ್ಲಿಮೆಂಟಿನಲ್ಲಿ ವೋಟುಗಳನ್ನು ಲೆಕ್ಕಮಾಡುವ ಒಂದು ವಿದ್ಯುತ್ ಯಂತ್ರ ವನ್ನಿರಿಸಲಾಗುವುದು

✠

ಅವ "ರಿಕನ್ ಆಕಮಿತ ಜರ್ಮನ್ ಪ್ರದೇಶದಲ್ಲಿ ಓರ್ವನು ತನ್ನ ಮಗನಿಗಾಗಿ ೨೦ ಪವನಿನ ಕಪ್ಪುಸಂತೆ ಬೆಲೆಕೊಟ್ಟು ಒಂದು ಜೋಡು ಬೂಟ್ಸನ್ನು ಪಡೆಕೊಂಡನು ಮಗನಿಗೆ ಒಂದೇ ಜೋಡಿತ್ತು ಅದರಿಂದ ಅವನ ಕಾಲಿನ ರಕ್ತವು ವಿಷವಾಗ ತೆತ್ತೆಂದು ಜರ್ಮನನು ಕೋರ್ಟಿನಲ್ಲಿ ಫಿರ್ಯಾದು ನಡೆಸಿದಾಗ ನ್ಯಾಯಾಧೀಶರು "ವ್ಯಾಣಹೋಗುವ ಸಂದರ್ಭದಲ್ಲಿ ಕಪ್ಪುಸಂತೆ ವ್ಯಾಪಾರ ಮಾಡಿದರೆ ದೋಷವಿಲ್ಲ"ವೆಂದು ತೀರ್ಮಾನಿಸಿದನು

✠

ಎಟಂ ಬಾಂಬುಗಳ ತಯಾರಿ ಪ್ರಮಾಣವನ್ನು ಮೂರುಪಟ್ಟು ಹೆಚ್ಚುಮಾಡುವ ಒಂದು ತರದ ಯುರೇನಿಯಂ ಧಾತುವನ್ನು ಸಂಯುಕ್ತ ಅಮೇರಿಕದಲ್ಲಿ ಸಿದ್ಧಮಾಡಲಾಗಿದೆ

✠

ಹೀಗಿಯ ನಾಲಗೆಯ ಕೆಳಭಾಗವನ್ನು ನೋಡಿದರೆ ಕೆಲವೊಂದು ತರದ ಹೃದಯ ಸ್ತಂಭನದ ವ್ಯಾಧಿಯ ಲಕ್ಷಣವನ್ನು ಮುದಾಗ್ರಿ ಕಂಡುಹಿಡಿಯಬಹುದೆಂದು ಅಮೇರಿಕದ ಮಿನೆಸೋಟಾ ವಿಶ್ವವಿದ್ಯಾಲಯದ ಡಾ। ವಿಲಿಯಂಸ್ಥಾವನ್ ಎಂಬ ವೈದ್ಯತಜ್ಞರು ತಿಳಿಸುತ್ತಾರೆ

✠

ಒಂದು ಉತ್ತಮ ಕೋಟಿನಲ್ಲಿ ೨೯,೫೦೦ ಸೂಜಿದಾರದೆಳೆಗಳಿವೆಯೆಂದೂ, ಒಂದು ಚಲ್ಲಣದಲ್ಲಿ ೯೫೬೧ ಎಳೆಗಳಿವೆಯೆಂದೂ ಓರ್ವ ಪ್ರಖ್ಯಾತ ದರ್ಜಿಯು ಪ್ರಕಟಿಸಿದನು.

✠

ಮೈಸೂರಿನ ಸಂಯುಕ್ತ ರಾಷ್ಟ್ರೀಯ ಕ್ರೈಸ್ತ ಸಂಘದವರು ಗಾಂಧೀಜಿಯ ಮರಣದಿನವಾದ ಶುಕ್ರವಾರವನ್ನು ಆದಿತ್ಯವಾರದ ಬದಲಿಗೆ ರಜಾದಿನವಾಗಿ ಸಾರಬೇಕೆಂದು ಸೂಚಿಸಿರುವರು.

✠

ಸ್ವದೇಶಾಭಿಮಾನಿ

ತಾರೀಕು 26—3—1948

ಪೆಲೆಸ್ಟ್ಯಾನು ವಿಭಜನಾ ಯೋಜನೆಯ ಮುಕ್ತಾಯ

ಸಂಯುಕ್ತ ರಾಷ್ಟ್ರ ಸಭೆಯು ಪೆಲೆಸ್ಟ್ಯಾನನ್ನು ಯೆಹೂದಿ ಮತ್ತು ಅರಬ ಜನರೊಳಗೆ ಹಂಚಿ ವಿಭಾಗ ಮಾಡುವ ಯೋಜನೆಯನ್ನು ಮಂಜೂರು ಮಾಡಿತ್ತಷ್ಟೆ. ಈ ಯೋಜನೆಯನ್ನು ಮುಂದೆ ತಂದು ಮಂಜೂರು ಮಾಡಿಸಿದವರು ಯುನೈಟೆಡ್ ಸ್ಟೇಟ್ಸ್ ಸರಕಾರದವರು ಈಗ ಇವರೇ ಈ ಯೋಜನೆಯನ್ನು ತೆಗೆದು ಈ ಭೂಪ್ರದೇಶಕ್ಕೆ ಸಂಯುಕ್ತ ರಾಷ್ಟ್ರಗಳ ಟ್ರಸ್ಟ್ ನೇಮಕ ಮಾಡುವ ಸೂಚನೆ ಮುಂದೆ ತಂದಿದ್ದಾರೆ

ಯುನೈಟೆಡ್ ಸ್ಟೇಟ್ಸನಂಥ ಪ್ರಬಲ ರಾಷ್ಟ್ರವು ತನ್ನ ಧೋರಣೆಯನ್ನು ಹೀಗೆ ಕೆಲವೇ ತಿಂಗಳೊಳಗೆ ಬಿಟ್ಟು ಕೊಟ್ಟುದಕ್ಕೆ ಸಾಕಷ್ಟು ಕಾರಣಗಳಿಲ್ಲದೆ ಇಲ್ಲ ಮೊದಲನೆಯದಾಗಿ ಅರಬರು ಒಗ್ಗಟ್ಟಾಗಿ ಈ ವಿಭಜನೆಯ ವಿರುದ್ಧ ಯುದ್ಧಕ್ಕೆ ತಯಾರಾಗಿ ಇದನ್ನು ಎದುರಿಸಿದರು ಇವರನ್ನು ಅಡಗಿಸಿ ಬಲಾತ್ಕಾರದಿಂದ ಸಂಯುಕ್ತ ರಾಷ್ಟ್ರ ಸಭೆಯು ತನ್ನ ಯೋಜನೆಯನ್ನು ಜಾರಿಗೆ ತರಬೇಕಾದ ಪರಿಸ್ಥಿತಿಯೆಂಬುದು ಸ್ಪಷ್ಟವಾಯಿತು. ಎರಡನೆಯದಾಗಿ ಇಲ್ಲಿ ಪ್ರಥಮ ಮಹಾಯುದ್ಧ ಕಾಲದಿಂದ ಮೆಂಡೇಟ್ ಅಧಿಕಾರದಲ್ಲಿದ್ದ ಬ್ರಿಟನು ಈಗ ಇಲ್ಲಿಂದ ಹೊರಳಲು ಮಾಡಿರುವ ನಿರ್ಧಾರ ಇದರಲ್ಲಿ ಬ್ರಿಟನು ತನ್ನ ಧೋರಣೆಯನ್ನು ಯಾವ ವಿಧದಿಂದಲೂ ಬದಲಾಯಿಸಲು ಸಿದ್ಧವಿಲ್ಲವೆಂಬುದನ್ನು ಸ್ಪಷ್ಟಗೊಳಿಸಿತು

ವಿಭಜನಾ ಯೋಜನೆ ಜಾರಿಗೆ ಒರುವಂತೆ ಸಾಕಷ್ಟು ಬಲಾತ್ಕಾರ ನಡೆಸಲು ಸಂಯುಕ್ತ ರಾಷ್ಟ್ರ ಸಭಯು ಪರವಾಗಿ ಸೈನ್ಯ ಸನ್ನಾಹ ಕೊಡಲು ಬ್ರಿಟನು ಸಿದ್ಧವಿಲ್ಲವೆಂದಾದ ಮೇಲೆ ಮತ್ತಾರು ಈ ಕಾರ್ಯ ಮಾಡಬೇಕು? ಚಿಕ್ಕ ಚಿಕ್ಕ ರಾಷ್ಟ್ರಗಳು ಈ ಕಾರ್ಯಕ್ಕೆ ಸೈನ್ಯ ಒದಗಿಸುವುದು ಸಾಧ್ಯವಿಲ್ಲದ ಮಾತು ಅಂದ ಬಳಿಕ ಇಲ್ಲಿ ಒಂದೇ ಯುನೈಟೆಡ್ ಸ್ಟೇಟ್ಸಿನವರು ತಮ್ಮ ಸೈನ್ಯ ಬಲ ಉಪಯೋಗಿಸಬೇಕು ಅಥವಾ ಈ ಕಾರ್ಯ ರಷ್ಯಾ ಸರಕಾರಕ್ಕೆ ಬಿಡಬೇಕು ಇವೆರಡೂ ಯುನೈಟೆಡ್ ಸ್ಟೇಟ್ಸ್ ಸರಕಾರಕ್ಕೆ ಸರಿ ಬರಲಿಲ್ಲ

ಮಧ್ಯ ಆಸಿಯವೆನ್ನಿಸುವ ಈ ಪ್ರದೇಶವು ಭಾವೀ ಯುದ್ಧದ ದೃಷ್ಟಿಯಿಂದ ಪ್ರಾಮುಖ್ಯ ಪ್ರದೇಶವಷ್ಟೆ? ಇಲ್ಲಿ ರಷ್ಯಾದವರನ್ನು ಪ್ರವೇಶಿಸಲು ಬಿಟ್ಟರೆ ಹೇಗೆ? ಸಂಯುಕ್ತ ರಾಷ್ಟ್ರಗಳ ನಿರ್ಣಯ ಜಾರಿಗೆ ಸೈನ್ಯ ತಂದು ಸ್ವಾಧೀನಪಡಿಸಿದ ಮೇಲೆ ರಷ್ಯಾದಿಂದ ಈ ಪ್ರದೇಶ ಪುನಃ ಬಿಡಿಸಿಕೊಳ್ಳಲಾದೀತೆ? ಯುನೈಟೆಡ್ ಸ್ಟೇಟ್ಸಿನವರು ಸ್ವಂತ ಸೈನ್ಯ ತಂದು ಇಲ್ಲಿ ಅರಬರೊಡನೆ ಯುದ್ಧ ಕಟ್ಟಿಕೊಳ್ಳುವುದೂ ಅಸಾಧ್ಯ ಅರಬ ಜಗತ್ತನ್ನು ಇಂಥ ಸಂದರ್ಭದಲ್ಲಿ ರಷ್ಯಾದವರು ಒಲಿಸಿಕೊಳ್ಳದೆ ಬಿಡುವರೆ?

ಅಂದರೆ ಯುನೈಟೆಡ್ ಸರಕಾರ ಮತ್ತು ರಷ್ಯಾಗಳೊಳಗೆ ಬೆಳೆಯುತ್ತಿರುವ ವೈಮನಸ್ಸು ಪೆಲೆಸ್ಟ್ಯಾನು ವಿಭಜನೆಯ ರದ್ದತೆಗೆ ಮೂಲ ಕಾರಣವಾಯಿತೆಂಬ ಬಗ್ಗೆ ಸಂಶಯವಿಲ್ಲ

ಈ ಪ್ರದೇಶಕ್ಕೆ ಟ್ರಸ್ಟ್ ನೇಮಕ ಮಾಡುವ ಯೋಜನೆಗೆ ಹೆಚ್ಚಿನ ವಿರೋಧ ಒರುವಂತಿಲ್ಲ ಅಂದರೆ ಈ ಪ್ರದೇಶವು ಸ್ವತಂತ್ರ ರಾಷ್ಟ್ರವಾಗುವ ತನಕ ಇಲ್ಲಿಯ ಆಡಳಿತೆ ಜವಾಬ್ದಾರಿಯನ್ನು ಸಂಯುಕ್ತ ರಾಷ್ಟ್ರ ಸಭೆ ಹೊರಬೇಕೆಂಬುದೇ ಇದರ ಅಭಿಪ್ರಾಯ ಈ ಟ್ರಸ್ಟ್ ಎಲ್ಲಿಯ ತನಕ ಎಂಬ ಬಗ್ಗೆ ನಿರ್ದಿಷ್ಟ ಅವಧಿ ಹಾಕಿದರೆ ತಮ್ಮ ಒಪ್ಪಿಗೆಯೆಂದು ಅರಬರು ಹೇಳುತ್ತಿದ್ದಾರೆ ಇದಕ್ಕೆ ಹೆಚ್ಚಿನ ಬಲಾತ್ಕಾರದ ಆವಶ್ಯಕತೆ ಬೀಳದೆಂಬುದರಿಂದ ಬ್ರಿಟನು ಕೂಡ ಈ ಯೋಜನೆಯಂತೆ ವರ್ತಿಸಲು ಒಪ್ಪುವ ಸಂಭವವಿರುತ್ತದೆ.

ಯೆಹೂದಿಯರಿಗೆ ಮಾತ್ರ ತಮಗೆ ಸಿಕ್ಕುತ್ತಿದ್ದ ಸ್ವತಂತ್ರ ರಾಷ್ಟ್ರ ಇದರಿಂದ ಹೋಗುತ್ತದೆಂಬುದರಿಂದ ಈ ಹೊಸ ಯೋಜನೆ ಮಾನ್ಯವಿಲ್ಲ ರಷ್ಯಾದವರಿಗೆ ವಿಭಜನೆಯಿಂದ ಯುನೈಟೆಡ್ ಸ್ಟೇಟ್ಸಿಗೆ ತೊಂದರೆಯಲ್ಲಿ ಸಿಕ್ಕಿಸುವ ಸಂದರ್ಭ ತಪ್ಪಿದ್ದು ಪ್ರಿಯವಾದ ವಿಷಯವಲ್ಲ

ಆದರೆ ತತ್ಕಾಲಕ್ಕೆ ಟ್ರಸ್ಟ್ ನೇಮಿಸಿ ಮುಂದೆ ಯೆಹೂದಿ ಮತ್ತು ಅರಬ ಜನರಿಗೆ ನ್ಯಾಯವಾದ ಅಧಿಕಾರವಿರುವಂಥ ಸಂಯುಕ್ತ ಸರಕಾರವೊಂದನ್ನು ಇಲ್ಲಿ ಸ್ಥಾಪಿಸಲೆತ್ನಿಸುವ ಹೊಸ ಯೋಜನೆ ನಿಜವಾಗಿಯೂ ಈ ಪ್ರಶ್ನೆಯನ್ನು ಬಿಡಿಸಲು ಇರುವ ನ್ಯಾಯವಾದ ದಾರಿ

ಯುನೈಟೆಡ್ ಸ್ಟೇಟ್ಸನಂಥ ಪ್ರಬಲ ರಾಷ್ಟ್ರ ಕೂಡಾ ಇದನ್ನು ಮನಗಂಡು ಕೆಲವೇ ತಿಂಗಳೊಳಗೆ ತಾನೇ ಮುಂದೊತ್ತಿದ ಈ ವಿಭಜನಾ ಯೋಜನೆ ಹಿಂತೆಗೆದದ್ದು ಜಗತ್ತಿನ ಶಾಂತಿ ರಕ್ಷಣೆಯ ದೃಷ್ಟಿಯಿಂದ ಹಿತಕರವೆಂಬ ಬಗ್ಗೆ ಸಂಶಯವಿಲ್ಲ.

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಪ್ರಕರಣ

ಸಂಯುಕ್ತ ರಾಷ್ಟ್ರ ಸಭೆಯ ಭದ್ರತಾ ಸಮಿತಿಯಲ್ಲಿ ಪುನಃ ಕಾಶ್ಮೀರ ಪ್ರಕರಣದ ಪರಿಶೀಲನೆಗೆ ಆರಂಭವಾಗಿದೆ ಈ ಭಾರಿ ಈ ಸಮಿತಿಯ ಅಧ್ಯಕ್ಷತೆಯನ್ನು ಚೀನಾ ರಾಷ್ಟ್ರದ ಪ್ರತಿನಿಧಿ ವಹಿಸಿಕೊಂಡು ಇವರು ಸಭೆಯ ಮುಂದೆ ತಮ್ಮ ಸೂಚನೆ ಇಟ್ಟಿದ್ದಾರೆ

ಈ ಹೊಸ ಸೂಚನೆಯಲ್ಲಿ ಮುಖ್ಯ ಮೂರು ಅಂಶಗಳಿವೆ ಮೊದಲನೆಯದಾಗಿ ಪಾಕಿಸ್ಥಾನ ಸರಕಾರವು ಕಾಶ್ಮೀರದಲ್ಲಿ ಧಾಳಿ ನಡೆಸುತ್ತಿರುವ ಗಡಿ ಪ್ರದೇಶದ ಜನರು ಹಿಂತೆರಳುವಂತೆ ಯತ್ನಿಸಬೇಕು ಇವರಿಗೆ ಪಾಕಿಸ್ಥಾನದೊಳಗೆ ಯಾವ ಸಹಾಯವನ್ನು ಒದಗಿಸಬಾರದು ಎರಡನೆಯದಾಗಿ ಭಾರತ ಸರಕಾರದವರು ಕಾಶ್ಮೀರದಲ್ಲಿ ಶಾಂತಿ ರಕ್ಷಣೆಗೆ ಬೇಕಾದಷ್ಟೇ ಸೈನ್ಯಗಳನ್ನು ಇಲ್ಲಿಟ್ಟು ಉಳಿದ ಸೈನ್ಯಗಳನ್ನು ಹಿಂದೆ ಕೊಂಡೊಯ್ಯಬೇಕು ನಿಲ್ಲಿಸುವ ಸೈನ್ಯವನ್ನಾದರೂ ಕಾಶ್ಮೀರದ ಪ್ರಜೆಗಳ ಮೇಲೆ ಯಾವದೇ ಬಲಾತ್ಕಾರ ನಡೆಸಲು ಆಸ್ಪದವಿಲ್ಲದಂತೆ ಅಲ್ಲಲ್ಲಿ ಶಾಂತ ರೀತಿಯಿಂದ ನಿಲ್ಲಿಸಬೇಕು ಮತ್ತು ಕೊನೆಯದಾಗಿ ಇಲ್ಲಿ ಜನರ ಅಭಿಪ್ರಾಯ ನಿರ್ಣಯಿಸಲು ಮತ ತೆಗೆಯುವ ಕಾರ್ಯಕ್ರಮ ಸಂಯುಕ್ತ ರಾಷ್ಟ್ರ ಸಭೆಯ ಅಧೀನದಲ್ಲಿ ನಡೆಯಬೇಕು ಈ ಕಾರ್ಯಕ್ಕೆ ಕಾಶ್ಮೀರ ಸರಕಾರ ಪೂರ್ಣ ಬೆಂಬಲ ಮತ್ತು ಸಹಕಾರಗಳನ್ನು ಕೊಡಬೇಕು

ಹೀಗೆ ಮುಂದೆ ಬಂದಿರುವ ಈ ಸೂಚನೆಗೆ ಭಾರತ ಪ್ರತಿನಿಧಿಗಳು ಸಾಮಾನ್ಯ ಸಮ್ಮತಿ ಕೊಟ್ಟಿದ್ದಾರೆ ಧಾಳಿಗಾರರು ಪೂರ್ಣ ಹಿಂತಳ್ಳಲ್ಪಡುವ ತನಕ ಸೈನ್ಯಗಳನ್ನು ಸ್ವಲ್ಪ ಮಟ್ಟಿಗೆ ಕೂಡಾ ಹಿಂದೆ ಕರೆಯುವುದು ಭಾರತ ಸರಕಾರಕ್ಕೆ ಇಷ್ಟವುಳ್ಳ ವಿಚಾರವಲ್ಲದಿದ್ದರೂ ರಾಜಿಯಾಗುವ ಸಂದರ್ಭ ಬಿಡಬಾರದೆಂಬುದರಿಂದ ಭಾರತ ಪ್ರತಿನಿಧಿಗಳು ಇದಕ್ಕೆ ಒಪ್ಪಿದಂತೆ ಕಾಣುತ್ತದೆ

ಪಾಕಿಸ್ಥಾನದ ಪ್ರತಿನಿಧಿ ಮಾತ್ರ ಇದನ್ನು ಒಪ್ಪಿಕೊಂಡಿಲ್ಲ ತನ್ನ ಸರಕಾರಕ್ಕೆ ಈ ನಿರ್ಣಯ ತಿಳಿಸಿ ಅಭಿಪ್ರಾಯ ಕೇಳಿದ್ದಾರೆ ಭದ್ರತಾಸಮಿತಿಯಲ್ಲಿ ಹೆಚ್ಚಿನವರು ಈ ಹೊಸ ಯೋಜನೆ ಒಪ್ಪಿಕೊಳ್ಳುವ ಸಂಭವ ಕಾಣುತ್ತಿದೆ

ಈಗಿನ ಈ ಠರಾವು ನ್ಯಾಯವಾದದ್ದೇ ಇದ್ದು ಇದನ್ನು ಪಾಕಿಸ್ಥಾನವು ಬೇಡದ ಕುತರ್ಕದಿಂದ ಮಾತ್ರ ವಿರೋಧಿಸಲು ಸಾಧ್ಯವಿರುತ್ತದೆ ತಮ್ಮ ಅಪಪ್ರಚಾರ ಕೊನೆಯ ತನಕ ಫಲಪ್ರದವಾಗಲಿಲ್ಲವೆಂಬುದು ಪಾಕಿಸ್ಥಾನಕ್ಕೆ ಬೇಸರದ ಸಂಗತಿ ಇರಬಹುದು ಮಾತವಲ್ಲ ತಾವೇ ಒಪ್ಪಿಸಿದ ಈ ಗಡಿ ಪ್ರದೇಶದ ಜನರನ್ನು ಈಗ ಹಿಂದೆ ಹೋಗುವಂತೆ ಯತ್ನಿಸುವುದು ಪಾಕಿಸ್ಥಾನಕ್ಕೆ ಅಸಾಧ್ಯವಿರುವ ಸಂಗತಿಯೂ ಇರಬಹುದು

ಭದ್ರತಾಸಮಿತಿಯು ಈ ನಿರ್ಣಯ ಮಂಜೂರು ಮಾಡಿದರೆ ಮುಂದಿನ ಪರಿಣಾಮ ಪಾಕಿಸ್ಥಾನದ ಮೇಲೆ ಹೇಗೆ ಇರುತ್ತದೆಂಬುದು ಮುಂದೆ ನೋಡತಕ್ಕ ವಿಷಯ

ಹೈದರಾಬಾದಿನಲ್ಲಿ ಜವಾಬ್ದಾರೀ ಸರಕಾರ

ಹೈದರಾಬಾದಿನ ಗೊಂದಲ ತೀರ್ಮಾನವಾಗಬೇಕಾದರೆ ಇಲ್ಲಿ ಪ್ರಜಾ ಸರಕಾರ ಸ್ಥಾಪಿಸುವುದು ಒಂದೇ ದಾರಿಯೆಂಬುದು ಈಗ ಸ್ಪಷ್ಟವಾಗಹತ್ತಿದೆ

ಇತ್ತೆಹಾದ ಮುಸಲ್ಮೀನರ ಕಡೆಯಿಂದ ನಡೆಯುತ್ತಿರುವ ಪುಂಡಾಟಿಕೆಯ ಕುರಿತು ಭಾರತ ಸರಕಾರಕ್ಕೂ ಹೈದರಾಬಾದ್ ಸರಕಾರಕ್ಕೂ ಮಾತುಕತೆಗಳು ನಡೆಯುತ್ತಿವೆ. ಈ ಸಂಸ್ಥಾನದಲ್ಲಿಯ ಎಲ್ಲ ತೊಂದರೆಗಳಿಗೂ ಈ ಪಂಗಡವೇ ಮುಖ್ಯ ಕಾರಣ ಸರಕಾರವು ಈಗಿನಂತೆ ನಡೆಯುವ ತನಕ ಈ ಪಂಗಡದ ಉಪಟಳ ನಿಲ್ಲುವ ಸಂಭವವೂ ಕಾಣುವುದಿಲ್ಲ. ಪ್ರಜಾ ಸರಕಾರ ಸ್ಥಾಪನೆಯೇ ಇದಕ್ಕೆ ನಿಜವಾದ ದಾರಿ. ಇದನ್ನೇ ಭಾರತ ಸರಕಾರವೂ ಹೈದರಾಬಾದಿಗೆ ಹೇಳಲು ತೊಡಗಿದೆ ಎಂದು ಕಾಣುತ್ತದೆ.

ನೈಜಾಮ ಸರಕಾರವು ಬೇಗನೆ ಈ ನ್ಯಾಯವಾದ ಹಾದಿಗೆ ಬರುವುದೆಂದು ಆಶಿಸಬೇಕಾಗಿದೆ

ಸಾಮ್ಯವಾದಿಗಳು ಕಾಂಗ್ರೆಸ್ ಬಿಟ್ಟರು

ಸಾಮ್ಯವಾದಿಗಳ ಅಖಿಲ ಭಾರತ ಪರಿಷತ್ತು ಸೇರಿ ತಮ್ಮ ಪಂಗಡದವರು ಕಾಂಗ್ರೆಸ್ ಸಂಸ್ಥೆಯನ್ನು ಬಿಟ್ಟು ಹೊರಗೆ ಬರಬೇಕೆಂದು ನಿರ್ಣಯ ಮಾಡಿರುತ್ತದೆ ಕಾಂಗ್ರೆಸಿನ ಹೊಸ ಘಟನೆಯಂತೆ ಇದರಲ್ಲಿ ಭಿನ್ನ ಪಂಗಡಗಳಿಗೆ ಸ್ಥಾನವಿಲ್ಲವೆಂದು ಸ್ಪಷ್ಟಪಡಿಸಿದ ಬಳಿಕ ಸಾಮ್ಯವಾದಿಗಳಿಗೆ ಈ ಸಂಸ್ಥೆಯಿಂದ ಹೊರಗೆ ಬರುವುದೊಂದೇ ದಾರಿ ಇತ್ತು

ಕಾಂಗ್ರೆಸ್ ಸಂಸ್ಥೆಯು ಭಾರತ ಸ್ವಾತಂತ್ರ್ಯ ಪೂರ್ವದಲ್ಲಿದ್ದಂತೆ ಸರ್ವ ರಾಷ್ಟ್ರೀಯ ಪಂಗಡಗಳ ಸಂಸ್ಥೆಯಾಗಿ ಮುಂದೆಯೂ ನಡೆಯುವ ಕಾರಣವಿಲ್ಲ ಆದರೆ ಕಾಂಗ್ರೆಸು ಸಾಮ್ಯವಾದಿಗಳು ಆಶಿಸುವಂತೆ ಕೇವಲ ಕೆಲಸಗಾರರ ವರ್ಗದ ಸಂಸ್ಥೆಯಾಗಿ ವರ್ಗ ಕಲಹವನ್ನು ಕಟ್ಟಿಕೊಳ್ಳುವುದೂ ಸಾಧ್ಯವಿಲ್ಲದ ಮಾತು ಹೀಗಿರುವಾಗ ಶುದ್ಧ ಸಾಮ್ಯವಾದಿಗಳೆನ್ನಿಸಿ ಕೆಲಸಗಾರರ ವರ್ಗದ ಪ್ರತಿನಿಧಿಗಳೆನ್ನಿಸುವ ಸಾಮ್ಯವಾದಿಗಳಿಗೆ ಇದರಲ್ಲಿ ಸ್ಥಾನವಿಲ್ಲ ಇವರು ಹೊರ ಬಂದು ಸ್ವತಂತ್ರ ಪಂಗಡವಾಗಿ ದುಡಿಯುವುದೇ ಯುಕ್ತವಿರುತ್ತದೆ

ಕಾಂಗ್ರೆಸು ಕೂಡಾ ಬಡ ಜನರ ಸುಧಾರಿಸುವ ಧ್ಯೇಯವನ್ನು ಇಟ್ಟುಕೊಂಡ ಸಂಸ್ಥೆ ಆದರೆ ವರ್ಗ ಕಲಹವು ಅನಿವಾರ್ಯವೆಂದು ಇದು ಒಪ್ಪುವುದಿಲ್ಲ ತತ್ಕಾಲಕ್ಕೆ ಆದಷ್ಟು ಹೆಚ್ಚಿನ ಉತ್ಪತ್ತಿ ಸಾಧಿಸುವುದೇ ಸಾಮಾನ್ಯ ಜನರ ಸ್ಥಿತಿ ಸುಧಾರಣೆಗೆ ಅತ್ಯಗತ್ಯವೆಂಬ ಧೋರಣೆಯಿಂದ ಇದು ಮುಂದೆ ಸಾಗುತ್ತಿದೆ

ಈಗ ಸ್ವತಂತ್ರ ಪಂಗಡವಾಗಿ ಮುಂದೆ ಬಂದಿರುವ ಸಾಮ್ಯವಾದಿಗಳಾದರೂ ಇನ್ನು ಮುಂದೆ ಕಾಂಗ್ರೆಸಿಗರನ್ನು ದೂರುತ್ತ ಕಾಲಹರಣ ಮಾಡುವಂತಿಲ್ಲ ತಮ್ಮ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು ಅದಕ್ಕೆ ಜನಬಲವನ್ನು ಒಲಿಸುವ ಪ್ರಯತ್ನ ನಡೆಸುವುದೇ ಇವರ ಕೆಲಸವಿರುತ್ತದೆ

ಹೀಗೆ ನ್ಯಾಯವಾದ ಕ್ರಮದಲ್ಲಿ ಇವರು ಮುಂದರಿದರೆ ಮುಂದೆ ಬರುವ ಚುನಾವಣೆಗಳಲ್ಲಿ ಕಾಂಗ್ರೆಸಿಗಿಂತ ಹೆಚ್ಚಿನ ಬೆಂಬಲ ಪಡೆಯುವುದು ಸದ್ಯಕ್ಕೆ ಕಷ್ಟವಾದರೂ ಕಾಂಗ್ರೆಸ್ ಸರಕಾರದಲ್ಲಿ ವಿರುದ್ಧ ಪಕ್ಷವಾಗಿ ವರ್ತಿಸಲು ಸಾಕಷ್ಟು ಬೆಂಬಲ ಪಡೆಯಬಹುದು

ಪ್ರಜಾಸತ್ತಾತ್ಮಕ ರಾಜ್ಯಭಾರ ಪದ್ಧತಿಯಲ್ಲಿ ಇಂಥ ಪ್ರಬಲ ವಿರುದ್ಧ ಪಂಗಡದ ಆವಶ್ಯಕತೆ ಇದೆ ಎಂಬುದು ನಿರ್ವಿವಾದವಿರುತ್ತದೆ

ರಾಜಕೀಯರಂಗದಲ್ಲಿ ಜಾತೀಯತೆ

ರಾಜಕೀಯರಂಗದಲ್ಲಿ ಜಾತೀಯತೆಗೆ ಎಳ್ಳಷ್ಟೂ ಸ್ಥಾನವಿಲ್ಲ ಮಾತ್ರವಲ್ಲ ಇರಕೂಡದು. ಇದನ್ನು ಹೇಗೆ ನಿವಾರಿಸಬಹುದೆಂದು ವಿಚಾರಿಸುವುದು ಈ ಲೇಖನದ ಉದ್ದೇಶ.

ಹಿಂದೂ ಮಹಾಸಭೆ ಮತ್ತು ಮುಸ್ಲಿಮ್ ಲೀಗು ಈ ಬಗೆಯ ಜಾತೀಯ ಸಂಸ್ಥೆಗಳು ಭಾರತದ ರಾಜಕೀಯರಂಗದಲ್ಲಿ ಎಷ್ಟು ಅನಾಹುತಗಳಿಗೆ ಕಾರಣವಾದವೆಂಬ ಬಗ್ಗೆ ಈಗ ವಿವರಿಸುವ ಕಾರಣವಿಲ್ಲ. ಈ ಅಖಿಲ ಭಾರತ ಜಾತೀಯ ಪಂಗಡಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಮಟ್ಟಿಗೆ ಬೆಳೆದಿಲ್ಲವೆಂಬುದರಿಂದ ಅಖಿಲಭಾರತದಲ್ಲಿ ಇವು ಮಾಯವಾಗುವಂಥ ಈಗಿನ ಪರಿಸ್ಥಿತಿಯಲ್ಲಿ ಇವು ಈ ಜಿಲ್ಲೆಯಲ್ಲಿ ಹೆಚ್ಚಿನ ಹಾವಳಿ ಮಾಡಲಾರವು.

ಅಂದರೆ ದಕ್ಷಿಣ ಕನ್ನಡದಲ್ಲಿ ರಾಜಕೀಯ ರಂಗದಲ್ಲಿ ಜಾತೀಯತೆಗೆ ಪ್ರಾಧಾನ್ಯತೆ ಇಲ್ಲವೆಂಬ ಅಭಿಪ್ರಾಯವಲ್ಲ. ನಮ್ಮಲ್ಲಿಯೂ ಇನ್ನೂ ಜಾತಿಯತೆ ಸಂಕುಚಿತವಾಗಿ ಬಹಳ ಪ್ರಾಮುಖ್ಯತೆ ವಹಿಸುತ್ತ ಇದೆ. ಇದು ಭಾರತದ ಸ್ವಾತಂತ್ರ್ಯದ ಮುಂದಿನ ದಿನಗಳಲ್ಲಿ ಇನ್ನೂ ಸ್ಪಷ್ಟವಾಗಿ ಕಂಡುಬರಲಿದೆಯೆಂದೇ ಅನ್ನಿಸುತ್ತದೆ.

ರಾಜಕೀಯರಂಗವೆಂದರೆ ಮುಂದೆ ಚುನಾವಣೆಗಳ ಕ್ಷೇತ್ರ. ನಮ್ಮಲ್ಲಿ ಯಾವ ಚುನಾವಣೆಗಳು ಬಂದರೂ ಅದರಲ್ಲಿ ಮುಖ್ಯ ಶಕ್ತಿ ಜಾತೀಯತೆಯೆಂಬುದನ್ನು ಸ್ವಲ್ಪ ಪರಿಶೀಲಿಸಿದರೆ ಸ್ಪಷ್ಟವಾಗುತ್ತದೆ.

ಕಾಂಗ್ರೆಸ್ ಸಂಸ್ಥೆಯಲ್ಲಿ ಜಾತೀಯತೆಗೆ ಸ್ಥಾನವಿಲ್ಲ. ಆದರೆ ಕಾಂಗ್ರೆಸ್ ಸಂಸ್ಥೆಯ ಹೆಸರಿನಲ್ಲಿ ನಡೆದ ಚುನಾವಣೆಗಳಲ್ಲಿ ಕೂಡಾ ... ಜಾತೀಯ ಪ್ರಶ್ನೆಗೆ ಪ್ರಾಧಾನ್ಯ ಕೊಟ್ಟಿಲ್ಲದೆ ಇದ್ದಿಲ್ಲ.

ಕಮ್ಯೂನಿಸ್ಟರ ಭವಿಷ್ಯ

ಕಮ್ಯೂನಿಸ್ಟ ಪಂಗಡದವರು ಹಲವೆಡೆ ಬಲಾತ್ಕಾರದ ಹಾದಿ ಹಿಡಿದಂತೆ ಕಾಣುತ್ತದೆ. ಆಂಧ್ರದ ಕೆಲವು ಪ್ರದೇಶಗಳಲ್ಲಿ ಇವರು ತಮ್ಮ ರಾಜ್ಯವನ್ನೇ ಸ್ಥಾಪಿಸಿದಂತೆಯೂ ಈ ಬಗ್ಗೆ ಇವರ ಅಖಿಲಭಾರತ ಸಭೆ ಇವರನ್ನು ಅಭಿನಂದಿಸಿದಂತೆಯೂ ತಿಳಿದುಬರುತ್ತದೆ.

ಭಾರತದ ರಾಜಕೀಯರಂಗದಲ್ಲಿ ಬಲಾತ್ಕಾರಕ್ಕೆ ಎಡೆಯಿಲ್ಲವೆಂಬುದನ್ನು ಕಮ್ಯೂನಿಸ್ಟರು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯ. ತಮ್ಮದೇ ವಿಶಿಷ್ಟ ಧೋರಣೆ ಏನಾದರೂ ಇದ್ದರೆ ಅವನ್ನು ಶಾಂತರೀತಿಯಿಂದ ಪ್ರಚಾರಮಾಡಿ ಜನರ ಒಲವನ್ನು ಇವರೂ ಪಡೆಯಲೆತ್ನಿಸಿದರೆ ಇದಕ್ಕೆ ಯಾರೂ ತಡೆ ಮಾಡಲಾರರು. ಇದಕ್ಕೆ ಬದಲು ಬಲಾತ್ಕಾರಕ್ಕೆ ಮನಸ್ಸು ಕೊಟ್ಟು ಕಾರ್ಯ ಸಾಧನೆಗೆ ಹೊರಟರೆ ಇದಕ್ಕೆ ಯಾವ ಬೆಂಬಲವೂ ದೊರೆಯುವಂತಿಲ್ಲ. ಪುಂಡಾಟಿಕೆಯನ್ನಡಗಿಸುವುದು ಸ್ವತಂತ್ರ ಭಾರತದ ಸರಕಾರಕ್ಕೆ ಒಂದು ಕಷ್ಟದ ವಿಷಯವಾಗಲಾರದು. ಇಷ್ಟು ಸರಳ ವಿಷಯವನ್ನವರು ಚೆನ್ನಾಗಿ ಮನಗಾಣುವರೆಂದು ನಾವು ಆಶಿಸಬೇಕಾಗಿದೆ.

ಮುನಿಸಿಪಲ್ ಚುನಾವಣೆಗಳಿರಲಿ ಜಿಲ್ಲಾ ಬೋರ್ಡು ಚುನಾವಣೆಗಳಿರಲಿ ಅಥವಾ ಇನ್ನಿತರ ಚಿಕ್ಕ ಚಿಕ್ಕ ಪಂಚಾಯತ ಬೋರ್ಡುಗಳ ಚುನಾವಣೆಯೇ ಬೇಕಿದ್ದರೆ ಇರಲಿ ಜಾತಿ ಪ್ರಶ್ನೆ ಬಾರದೆ ಇಲ್ಲ. ಮೇಲಿನ ಶಾಸನ ಸಭೆಗಳ ಚುನಾವಣೆಗಳಲ್ಲಂತೂ ಹೇಳಬೇಕಾಗಿಲ್ಲ. ಉಮೇದ್ವಾರರ ಜಾತಿ ಮುಖ್ಯ ವಿಚಾರವಾಗಿ ಇದ್ದು ತನಕ ನಡೆದಿದೆ.

ಮಂಗಳೂರಲ್ಲಿ ಹೊಸ ಮುನ್ಸಿಪಲ್ ಕೌನ್ಸಿಲ್ ಒಂದು ಚುನಾವಣೆ ನಡೆದರೆ ಇದರಲ್ಲಿ ಬಂಟರೆಷ್ಟು ಬಿಲ್ಲವರೆಷ್ಟು, ಗೌಡಸಾರಸ್ವತರೆಷ್ಟು ದ್ರಾವಿಡ ಬ್ರಾಹ್ಮಣರೆಷ್ಟು ಕ್ರೈಸ್ತರೆಷ್ಟು ಮಂದಿ ಚುನಾಯಿತರಾದರೆಂದು ಪರಿಶೀಲಿಸುವುದೇ ವಾಡಿಕೆ. ಬ್ರಾಹ್ಮಣರು ಬ್ರಾಹ್ಮಣ ಉಮೇದ್ವಾರರಿಗೂ ಬ್ರಾಹ್ಮಣೇತರರ ತಮ್ಮ ಪಂಗಡದವರಿಗೂ ಮತಕೊಡುವುದು ತಮ್ಮಲ್ಲಿಯ ಚುನಾವಣೆಯ ಕ್ರಮ.

ಚುನಾವಣೆಗಳಲ್ಲಿ ಈ ಜಾತೀಯತಾ ಭಾವನೆ ಇರದಿಲ್ಲವೆಂದಾದರೆ ನಾವು ಸಾಧಿಸಬೇಕಾದ್ದಿಲ್ಲ. ಹಣ ಅಥವಾ ಈ ಬಗೆಯ ಇತರ ಶಕ್ತಿಗಳ ಮೂಲಕ ಆಯಾ ಜಾತೀಯ ಮತಗಳನ್ನು ಭಿನ್ನಜಾತಿಯವರು ಪಡೆದ ಉದಾಹರಣೆಗಳ ಕೆಲವಿರಬಹುದು. ಇಂಥ ಘಟನೆಗಳು ಸಾಮಾನ್ಯವಲ್ಲ. ಜಾತೀಯತಾ ಭಾವನೆಗಳೇ ನಮ್ಮ ಸಾರ್ವಜನಿಕ ಜೀವನದಲ್ಲಿ ಸಹಜವಾಗಿ ಮುಂದೆ ಬರುತ್ತಿವೆಯೆಂಬುದು ನಿರ್ವಿವಾದ.

ನ್ಯಾಯವಾಗಿ ವಿವೇಚಿಸಿದರೆ ಸಾರ್ವಜನಿಕ ಜೀವನದಲ್ಲಿ ಈ ಭಾವನೆಗೆ ಆಸ್ಪದವಿರುವುದು ಯೋಗ್ಯವಲ್ಲ. ಹಿಂದೂ ಮುಸ್ಲಿಮ್ ಜಾತೀಯತೆಯ ಅನಾಹುತ ದೊಡ್ಡ ಪ್ರಮಾಣದಲ್ಲಿ ನಡೆದ ಕಾರಣ ಎಲ್ಲರ ಮನಸ್ಸಿಗೂ ನಾಟಿರುತ್ತದೆ. ಈ ಸಂಕುಚಿತ ಜಾತೀಯತೆ ಕೂಡಾ ಹಿತಕರವಲ್ಲವೆಂಬುದನ್ನು ಇದರಿಂದಾದರೂ ನಾವು ತಿಳಿದುಕೊಳ್ಳುವುದು ಯುಕ್ತವಿರುತ್ತದೆ.

ಒಂದು ಮುನಿಸಿಪಲ್ ಕೌನ್ಸಿಲಾಗಲಿ ಜಿಲ್ಲಾ ಬೋರ್ಡಾಗಲಿ ಅಥವಾ ಶಾಸನಸಭೆಯಾಗಲಿ ಇವು ಸಾರ್ವಜನಿಕ ಸಂಸ್ಥೆಗಳು. ಇದಕ್ಕೆ ಆರಿಸಿಬರುವ ಪ್ರತಿನಿಧಿ ಜಾತೀಯ ಬಗ್ಗೆ ಕೆಲಸಮಾಡುವುದು ಯುಕ್ತವಲ್ಲ. ಯಾವದಾದರೊಂದು ಜಾತಿಯ ಮೇಲ್ಮೆಗಾಗಿ ಇಂಥ ಸಂಸ್ಥೆಯಲ್ಲಿ ದುಡಿಯಲೆತ್ನಿಸುವವನು ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸುತ್ತಿಲ್ಲವೆಂದೇ ಹೇಳಬೇಕು. ಅಂದ ಮೇಲೆ ಅಲ್ಲಿ ಇವರು ಜಾತಿಯಪರ ಹಿತಸಾಧಿಸುವುದು ನ್ಯಾಯವಾಗಿ ಅಸಾಧ್ಯ. ಹೀಗಿರುತ್ತ ಚುನಾವಣೆಗಳಲ್ಲಿ ಜಾತೀಯ ಭಾವ ಏತಕ್ಕಾಗಿ ಬರಬೇಕು?

ಉದಾಹರಣೆಗಾಗಿ ಒಂದು ಜಿಲ್ಲಾ ಬೋರ್ಡನ್ನು ತೆಗೆದುಕೊಳ್ಳೋಣ. ಸಾಮಾನ್ಯವಾಗಿ ಬಂಟರ ಜಾತಿಯ ಪ್ರತಿನಿಧಿಗಳೇ ಇದರಲ್ಲಿ ಹೆಚ್ಚಿನ ಮಂದಿ ಸದಸ್ಯರಾಗುವರೆಂದು ಇಟ್ಟುಕೊಳ್ಳಬಹುದು. ಇವರೆಲ್ಲ ಸೇರಿ ಒಬ್ಬ ಬಂಟಜಾತಿಯವರನ್ನೇ ಅಧ್ಯಕ್ಷರನ್ನಾಗಿಯೂ ಆರಿಸುವರೆನ್ನೋಣ. ಇದರಿಂದ ಬಂಟರ ಜಾತಿಯವರಿಗೆ ಯಾವ ಬಗೆಯ ಪ್ರಯೋಜನ ಸಿಕ್ಕುತ್ತದೆಂಬುದನ್ನು ಪರಿಶೀಲಿಸಬೇಕು.

ಬಂಟರ ಜಾತಿಯ ಜಿಲ್ಲಾ ಬೋರ್ಡು ಅಧ್ಯಕ್ಷರಿದ್ದರೆ ಜಿಲ್ಲಾ ಬೋರ್ಡಿನ ನೌಕರಿಗಳಿಗೆ ನೇಮಕಗಳನ್ನು ಮಾಡುವಾಗ ಇವರ ಜಾತಿಯವರಿಗೆ ಹೆಚ್ಚಿನ ಕೆಲಸಗಳನ್ನು ಕೊಡಬಹುದು. ಅಥವಾ ರಸ್ತೆ ದುರಸ್ತಿ ಕಂಟ್ರಾಕ್ಟುಗಳನ್ನು ಕೊಡುವಾಗ ಇವರ ಜಾತಿ ಕಂಟ್ರಾಕ್ಟುದಾರರಿಗೆ ಹೆಚ್ಚಿನ ಅನುಕೂಲತೆ ಕೊಡಬಹುದು ಎಂಬಿತ್ಯಾದಿ ತಮ್ಮ ಜಾತಿಯವರಿಗೆ ಸಿಕ್ಕುವ ಲಾಭಗಳನ್ನು ಸಾಮಾನ್ಯವಾಗಿ ಎಣಿಸುವುದು ವಾಡಿಕೆಯಷ್ಟೆ?

ಬೋರ್ಡಿನ ನೌಕರಿಯಾಗಲಿ ಕಂಟ್ರಾಕ್ಟಾಗಲಿ ಆಯಾ ಕೆಲಸಗಳನ್ನು ಮಾಡುವವರ ದಕ್ಷತೆಯನ್ನು ಪರಿಶೀಲಿಸಿ ಕೆಲಸವು ಅತ್ಯುತ್ತಮ ರೀತಿಯಲ್ಲಿ ನಡೆಯುವಂತೆ ಸಾಧಿಸಬೇಕಾದದ್ದು ಬೋರ್ಡಿನ ಅಧ್ಯಕ್ಷರ ಕರ್ತವ್ಯ. ಇದಕ್ಕೆ ಬದಲು ಅವರು ತಮ್ಮ ಜಾತಿಯವರೆಂಬುದರಿಂದ ಈ ಕೆಲಸಗಳನ್ನು ವಹಿಸಿಕೊಟ್ಟರೆ ನ್ಯಾಯವಾಗುವುದೆ? ಅಥವಾ ಸಾರ್ವಜನಿಕ ಹಿತಕ್ಕೆ ಭಂಗ ಬಾರದೆ? ಜಾತೀಯತೆಯಿಂದ ಸಾರ್ವಜನಿಕ ಹಿತಕ್ಕೆ ಭಂಗಬರುತ್ತದೆಂಬ ಬಗ್ಗೆ ಇಂಥ ಅನೇಕ ಉದಾಹರಣೆಗಳಿಂದ ತಿಳಿಯಬಹುದು.

ಜಾತೀಯತಾ ಭಾವನೆಗೆ ಪ್ರಾಧಾನ್ಯತೆ ಕೊಡುವುದರಿಂದ ಕಡಮೆ ಸಂಖ್ಯಾಕ ಜಾತಿಯಲ್ಲಿರಬಹುದಾದ ಅತ್ಯುತ್ತಮ ಕೆಲಸಗಾರರಿಗೆ ಕೂಡಾ ಸಾರ್ವಜನಿಕ ಸೇವೆ ಸಲ್ಲಿಸುವ ನ್ಯಾಯವಾದ ಆಸ್ಪದ ಸಿಕ್ಕದೆ ಸಾರ್ವಜನಿಕ ಅಹಿತವಾಗುತ್ತದೆ. ಇತ್ಯಾದಿ ಜಾತಿ ಪರತೆಯ ಹಾವಳಿ ನಿಂದಿಸಿ ವಿವರಿಸಬೇಕಾಗಿಲ್ಲ.

ನಮ್ಮ ಸಾರ್ವಜನಿಕ ಜೀವನದಲ್ಲಿ ಈ ಜಾತೀಯತಾ ಭಾವನೆ ಹೇಗೆ ಹೋಗಲಾಡಿಸಬಹುದೆಂಬುದೇ ಮುಖ್ಯ ಪ್ರಶ್ನೆ ಇರುತ್ತದೆ.

ಮಿಶ್ರ ಭೋಜನಗಳು ಅಂತರ್ಜಾತೀಯ ವಿವಾಹಗಳು ಇತ್ಯಾದಿಗಳ ಮೂಲಕ ಜಾತಿಗಳನ್ನು ತೆಗೆದರೆ ಈ ಪ್ರಶ್ನೆ ತಾನಾಗಿ ಹೋಗುತ್ತದೆನ್ನುತ್ತಾರೆ. ಈ ಬಗೆಯ ಯತ್ನಗಳು ಬೇಡವೆನ್ನುವುದಿಲ್ಲ. ಆದರೆ ಜಾತಿಗಳನ್ನು ಒಮ್ಮೆಗೇ ಅಷ್ಟು ಸುಲಭದಲ್ಲಿ ನಿರ್ನಾಮಗೊಳಿಸುವುದು ಅಸಾಧ್ಯ. ಇದು ಕ್ರಮೇಣ ಸಾಧಿಸಬಹುದಾದ ವಿಚಾರ. ಜಾತಿಗಳೇ ಹೋಗುವ ತನಕ ಸಾರ್ವಜನಿಕ ಜೀವನ ಈಗಿನಂತೆಯೇ ನಡೆಸುತ್ತ ಹೋಗುವುದು ಸರಿಯಲ್ಲ. ಸದ್ಯಕ್ಕೆ ಸಾರ್ವಜನಿಕ ರಾಜಕೀಯರಂಗದಲ್ಲಿ ಅಂದರೆ ಈ ಚುನಾವಣೆಗಳಲ್ಲಿ ಈ ಜಾತಿ ಪ್ರಶ್ನೆ ಬಾರದಂತೆ ಹೇಗೆ ಸಾಧಿಸಬಹುದು?

ಇದುವರೆಗೆ ಜಾತೀಯ ಭಾವನೆಗಳನ್ನು ಸ್ವಲ್ಪ ಮಟ್ಟಿಗಾದರೂ ತಡೆಗಟ್ಟಲು ಸಮರ್ಥವಾದ ಸಂಸ್ಥೆಯೆಂದರೆ ಕಾಂಗ್ರೆಸು. ಕಾಂಗ್ರೆಸಿನವರು ನಡೆಸಿದ ಚುನಾವಣೆಗಳಲ್ಲಿ ಕೂಡಾ ಜಾತೀಯತೆ ಇತ್ತೆಂದಾದರೆ ಅದು ಅಡಗಿ ಕೊಂಡಿತ್ತಲ್ಲದೆ ಬಹಿರಂಗವಾಗಿ ಇಲ್ಲ. ಇದರಿಂದ ನಾವು ಪಾಠಕಲಿಯತಕ್ಕದ್ದಿದೆ. ಕಳೆದ ಮಂಗಳೂರು ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸ್ಥೆ ಭಾಗವಹಿಸಲಿಲ್ಲ. ಜಾತೀಯತೆ ಬಹಿರಂಗವಾಗಿ ತಲೆಯೆತ್ತಿತು. ಇದು ಏನು ಸೂಚಿಸುತ್ತದೆ?

ನಿರ್ದಿಷ್ಟ ಕಾರ್ಯಕ್ರಮಗಳುಳ್ಳ ಸಾರ್ವಜನಿಕ ಪಂಗಡಗಳ ಆವಶ್ಯಕತೆಯನ್ನಿದು ತೋರಿಸುತ್ತದೆ. ಜಾತಿಯನ್ನವಲಂಬಿಸದೆ ಸಾರ್ವಜನಿಕರ ಬಗ್ಗೆ ಇಂಥ ಕಾರ್ಯಕ್ರಮ ಜ್ಯಾರಿಗೆ ತರುತ್ತೇವೆಂಬ ಪಂಗಡಗಳು ಪ್ರಬಲವಾದಂತೆ ಜಾತೀಯತೆ ಈ ಚುನಾವಣಾರಂಗದಿಂದ ಮಾಯವಾಗಬಹುದು. ಪ್ರಾಯಶಃ ಜಾತೀಯತೆಯ ಹಾವಳಿ ತಗ್ಗೆಯಲೂ ಈಗ ಇದೊಂದೇ ದಾರಿ.

ಕಾಂಗ್ರೆಸಿಗರು, ಸಾಮ್ಯವಾದಿಗಳು, ಕಮ್ಯೂನಿಸ್ಟರು ಮೊದಲಾದ ರೀತಿಯ ವಿವಿಧ ಪಂಗಡಗಳು ನಮ್ಮಲ್ಲಿ ಬಲಹೊಂದಬೇಕು. ಅವರವರು ತಮ್ಮ ತಮ್ಮ ಕಾರ್ಯಕ್ರಮಗಳ ಕುರಿತು ಬಲವಾದ ಪ್ರಚಾರ ಮಾಡಬೇಕು. ಮತದಾರರಿಗೆ ಅವಶ್ಯವುಳ್ಳ ಶಿಕ್ಷಣ ಸಿಕ್ಕುವಂತೆ ಮಾಡಬೇಕು. ಮತದಾರರು ಭಿನ್ನ ಕಾರ್ಯಕ್ರಮಗಳನ್ನು ತೂಗಿ ನೋಡಿ ತಮ್ಮ ತಮ್ಮ ಒಲವಿನಂತೆ ಮತದಾನ ಮಾಡುವಂತಾಗಬೇಕು. ಕಾರ್ಯಕ್ರಮಗಳನ್ನು ನೋಡಿ ಮತಕೊಡುವ ರೂಢಿ ಬಂದಂತೆ ಜಾತಿ ನೋಡಿ ಮತಕೊಡುವ ಅಭ್ಯಾಸ ಹೋಗಬಹುದು.

ಮುಂದೆ ಪ್ರಾಯಕ್ಕೆ ಬಂದ ಎಲ್ಲರಿಗೂ ಮತದಾನದ ಹಕ್ಕು ಬರಲಿದೆ. ಮತದಾನವು ಸರಿಯಾಗಿ ನಡೆಯುವಂತಾದರೆ ಮಾತ್ರ ರಾಷ್ಟ್ರದ ಹಿತರಕ್ಷಣೆಯಾದೀತು. ಎಂಬುದರಿಂದ ಈ ಪ್ರಶ್ನೆಯ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದ ಸಮಯವು ಈಗ ಒದಗಿದೆ.

ಮಂಗಳೂರು

ಕಳೆದ ತಾ ೨೨ರಂದು ಸಂಜೆ ಸೇರಿದ ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ವಯಸ್ಕರ ಶಿಕ್ಷಣ ಏರ್ಪಾಡೊಂದು ಸ್ವೀಕೃತವಾಯಿತು. ಶ್ರೀ ದಾಮೋದರ ಬಾಳಿಗರಿಂದ ಸೂಚಿಸಲ್ಪಟ್ಟ ಅದನ್ನಾಲೋಚಿಸುವ ಬಗ್ಗೆ ನಿಯೋಜಿತವಾದ ವಿದ್ಯಾಂಗದ ಸಮಿತಿಯು ವಯಸ್ಕರ ಶಿಕ್ಷಣಕೊಡಲು ಸದ್ಯಕ್ಕೆ ೨ ಕೇಂದ್ರಗಳನ್ನು ತೆರೆಯಬೇಕೆಂದೂ ಇದರ ಖರ್ಚು ತಿಂಗಳಿಗೆ ೨೫೦ ರೂಪಾಯಿಗೆ ಮೀರಬಾರದೆಂದೂ ಶಿಫಾರಸುಮಾಡಿತ್ತು. ಮುನ್ಸಿಪಾಲಿಟಿ ಕೆಳತರಗತಿಯ ನೌಕರರಿಗೆ ಇದೇ ಏಪ್ರಿಲ್ ತಾರೀಕಿನಿಂದ ಸರಕಾರಿ ನೌಕರರ ಸ್ಕೇಲಿನಂತೆಯೇ ಮನೆಬಾಡಿಗೆ ಕೊಡುವುದಲ್ಲದೆ ಅವರ ಸಂಬಳ ಹೆಚ್ಚಿಸುವಂತೆ ಸರಕಾರಕ್ಕೆ ಕೇಳಿಕೊಳ್ಳಬೇಕಾಗಿಯೂ ನಿರ್ಧರಿಸಲಾಯಿತು.

ಮುನ್ಸಿಪಲ್ 'ವರ್ಕರ್ಸ್ ಯೂನಿಯನ್' ಸರಕಾರದ ಕ್ರಮ ನಿಬಂಧನೆಗಳಿಗೆ ಅನುಸಾರವಾಗಿ ಇಲ್ಲದಿರುವುದರಿಂದ ಈಗಿರುವಂತೆ ಅದರ ಅಂಗೀಕಾರಕ್ಕಾಗಿ ಬರೆದುಕೊಳ್ಳಲು ಸಾಧ್ಯವಿಲ್ಲ. ಈ ಯೂನಿಯನಿನವರ ಕೇಳಿಕೆಗಳನ್ನು ಈ ಕೌನ್ಸಿಲಿನ ಮುಂದಿಡುವಂತೆ ಮಾಡಿದ ಆಡಳಿತದ ಭಾವೆ ಬಹಳ ದರ್ಪದಷ್ಟು, ಮೋರಿನದ್ದಾಗಿತ್ತೆಂದೂ ಕೌನ್ಸಿಲು ಅಸಂತೋಷ ಸೂಚಿಸಿ ತಮ್ಮ ಕೆಲಸಗಾರರ ಹಿತ ತಾವೇ ನೋಡಿಕೊಳ್ಳುವ ಆಶ್ವಾಸನವನ್ನು ಕೊಟ್ಟಿರುತ್ತಾರೆ.

ಸಂಶೋಧನಾ ವಿಭಾಗ

ಆತ್ಮಹತ್ಯದ ಮನೋಧರ್ಮವೆಂತಹುದು?

ಕೆಲವು ಶಾಸ್ತ್ರೀಯ ವಿವರಣೆಗಳು

ಜೆಕೊಸ್ಲೊವೇಕಿಯದ ವಿದೇಶಾಂಗ ಮಂತ್ರಿ ಜಾನ್ ಮಸಾರಿಕರವರು ಮೇಲ್ಮಹಡಿಯಿಂದ ಕೆಳಗೆ ಹಾರಿ ಪ್ರಾಣಕಳಕೊಂಡರು. ಪೂರ್ವ ಯುರೋಪಿನ ಕಮ್ಯುನಿಸ್ಟ್ ಕುತಂತ್ರದ ರಾಜಕಾರಣದಿಂದ ಶಿರಭ್ರಮಣಗೊಂಡ ಜೆಕ್ ರಾಜಪಟುವಿನ ಜೀವನಾಂತ್ಯವು ಈ ದುರಂತಮಯ ಘಟನೆಯಿಂದ ಅಂತ್ಯವಾಯಿತು

ಯುದ್ಧಕೊಲೆಪಾತಕಿಯಾಗಿ ವಿಚಾರಣೆಗಳೊಳಗಾದ ಅನೇಕ ಜರ್ಮನ್ ಜಪಾನಿ ರಾಜಕಾರಣಿಗಳು ಜೀವನಶಾಂತಿಯನ್ನು ಪಡೆಯಲು ಆತ್ಮಹತ್ಯೆವೇ ಸುಲಭ ಮಾರ್ಗವೆಂದು ಅವನ್ನೇ ನಿರ್ವಹಿಸಲು ಪ್ರಯತ್ನಪಟ್ಟರು. ಪ್ರಖ್ಯಾತ ನಾಜಿ ಧುರೀಣ ಗೋರಿಂಗನು ವಿಷನುಂಗಿ ಆತ್ಮಹತ್ಯೆಮಾಡಿಕೊಂಡನು. ಜಪಾನಿನ ಯುದ್ಧಕಾಲ ಮುಖ್ಯ ಪ್ರಧಾನ ಟೊಜೊ ಅವನು ಕೊರಳನ್ನು ಕತ್ತರಿಸಿ ಸಾಯಲು ಪ್ರಯತ್ನಪಟ್ಟಾಗ ತಡೆಯಲ್ಪಟ್ಟನು

ಈ ಆತ್ಮಹತ್ಯದ ಮರ್ಮವೇನೆಂದು ಫ್ರಾನ್ಸಿನ ಪ್ರಖ್ಯಾತ ಮನೋಶಾಸ್ತ್ರಜ್ಞರಾದ ಗೆಬ್ರಿಯಲ್‌ಡೆಶ್‌ಗೆಲ್ಲರು ಹಲವು ವರ್ಷಗಳಿಂದ ಸಂಶೋಧನೆ ನಡೆಸಿ ಅನೇಕ ದೇಶಗಳಲ್ಲಿನ ಆತ್ಮಹತ್ಯಾ ಪ್ರಕರಣಗಳನ್ನು ಸಂಗ್ರಹಿಸಿ ಅವುಗಳನ್ನು ಮನೋಶಾಸ್ತ್ರದ ಪ್ರಕಾರ ವರ್ಗೀಕರಿಸಿರುವರು. ಅವರು ಸಂಗ್ರಹಿಸಿದ ಕೆಲವು ಸಂಗತಿ ಸ್ವಾರಸ್ಯದ್ದಾಗಿವೆ

ಹೆಚ್ಚಿನ ಜನರು ಸೆಕೆಗಾಲಕ್ಕಿಂತ ಚಳಿಗಾಲದಲ್ಲೇ ತಮ್ಮ ಜೀವವನ್ನು ಕೊಲ್ಲಲು ಬಯಸುತ್ತಾರಂತೆ ಆತ್ಮಹತ್ಯದ ಆಕರ್ಷಣೆಯಾಗುವ ಪ್ರಾಯ ಸುಮಾರು ನಾಲ್ವತ್ತೈದರ ನಂತರದ್ದು ಈ ವಯಸ್ಸಿನಲ್ಲಾಗುವ ಆಶೆ ಹಾರೈಕೆಗಳ ನಾಶ, ತಾರುಣ್ಯ ಕಳಕೊಳ್ಳುವಿಕೆ, ಭವಿಷ್ಯದ ಕುರಿತು ಅತೀವ ನಿರಾಶೆ ಅಲ್ಲದೆ ಶಾರೀರಿಕ ಮತ್ತು ಲೈಂಗಿಕ ಶಕ್ತಿಗಳ ಅಧಃಪತನಗಳೇ ಆತ್ಮಹತ್ಯದ ಪ್ರೇರಣೆಗಳಿಗೆ ಕಾರಣಗಳಾಗಿರುತ್ತವೆ

ಧನಸಂಪತ್ತಿನ ಇಲ್ಲವೆ ಮತೀಯ ಭಾವನೆಗಳ ದೃಷ್ಟಿಯಿಂದ ಆತ್ಮಹತ್ಯದ ಘಟನೆಗಳನ್ನು ವರ್ಗೀಕರಿಸಲಾಗುವದು ೧೮೪೪ರಿಂದ ೧೮೯೦ರೊಳಗಿನ ಅವಧಿಯಲ್ಲಿ ಯೆಹೂದಿ ಜನರಲ್ಲಿ ಇತರ ಮತದವರಿಗಿಂತ ಕಮ್ಮಿ ಪ್ರಮಾಣದ ಆತ್ಮಹತ್ಯಗಳಾದುವು ಆದರೆ ೧೮೯೦ರಿಂದ ೧೯೨೮ರ ತನಕದ ಅವಧಿಯಲ್ಲಿ ಯೆಹೂದ್ಯರೇ ಹೆಚ್ಚಾಗಿ ಆತ್ಮಹತ್ಯಮಾಡಿಕೊಂಡ ಮತವರ್ಗವರೆಂದು ತಿಳಿದುಬಂದಿದೆ ಪೇರಿಸಿನಲ್ಲಿ ಆತ್ಮಹತ್ಯೆಗಳು ಹೆಚ್ಚಾಗಿ ಶ್ರೀಮಂತವರ್ಗದ ಜನರಿಂದಲೇ ಮಾಡಲ್ಪಡುತ್ತವೆ ಜೀವನದ ಖರ್ಚು ಹೆಚ್ಚಾಗುವುದು ಆತ್ಮಹತ್ಯಕ್ಕೊಂದು ಕಾರಣವಾಗುವುದಿಲ್ಲ ಆದರ ಬದಲಿಗೆ ಆವಶ್ಯಕ ವಸ್ತುಗಳ ಬೆಲೆ ಹೆಚ್ಚಿದಂತೆ ಆತ್ಮಹತ್ಯೆಗಳ ಸಂಖ್ಯೆಯೂ ಕಡಿಮೆಯಾಗುತ್ತದೆ ಅದೇ ರೀತಿ ಬೆಲೆಗಳು ಕಮ್ಮಿಯಾದಾಗಲೇ ಹೆಚ್ಚು ಆತ್ಮಹತ್ಯೆಗಳು ನಡೆದಿವೆಯೆಂದು ಗೊತ್ತಾಗಿದೆ

ವಿವಿಧ ವಿಧಾನಗಳು

ಸ್ಪೈನ್ ದೇಶದವರು ಹೆಚ್ಚಾಗಿ ವಿಷತಿಂದು ಸಾಯುವುದರಲ್ಲೇ ಇಷ್ಟಪಡುತ್ತಾರೆ. ಜರ್ಮನರಿಗೆ ನೇಣುಹಾಕಿ ಜೀವಬಿಡುವುದರಲ್ಲಿ ಹೆಚ್ಚು ಪ್ರೀತಿ. ನಾವಿಕ ಜನಾಂಗದವರಾದ ಬ್ರಿಟಿಷರು ನೀರಲ್ಲಿಯೇ ಮುಳುಗಿ ಜೀವಕಳಕೊಳ್ಳುವುದರಲ್ಲಿ ಆಶಿಪಡುವರು ಸ್ಪೈನಿನವರಂತೆ ಅಮೇರಿಕದವರಾದರೂ ವಿಷಪಾನಕ್ಕೆ ಹೆಚ್ಚು ಮನಸೋಲುತ್ತಾರೆ. ಈಜಿಪ್ತದ ಜನರು ಪ್ರಾಣಬಿಡುವ ಮೊದಲು ಹೆಚ್ಚು ಉಸಿರುಕಟ್ಟುವುದರಲ್ಲಿ ಪ್ರವೀಣರೆಂದು ತಿಳಿದುಬಂದಿದೆ

ಆತ್ಮಹತ್ಯೆಮಾಡಿಕೊಳ್ಳುವುದರಲ್ಲಿ ಮತೀಯ ಭಾವನೆಯವರೂ ಇದ್ದಾರೆ ಇವರು ಹಿಂದಿನ ತಮ್ಮ ಮೆಚ್ಚಿಗೆಯ ಸಂತಪುರುಷರಂತೆ ಸಾಯಲಿಚ್ಛಿಸುತ್ತಾರೆ ಭಾರತದೇಶದಲ್ಲಿ ಜೀವಂತ ಸಮಾಧಿಮಾಡುವ ಕ್ರಮವು ಹೆಚ್ಚು ಕಡಿಮೆ ಈ ಮನೋಭಾವದ ವರ್ಗಕ್ಕೆ ಸೇರಿದ್ದು ಇಟಲಿಯ ವೇನಿಸ್ ನಗರದ ಓರ್ವ ಬೂಟ್ಸು ವ್ಯಾಪಾರಿಯು ಯೇಸುಕ್ರಿಸ್ತನಂತೆ ಸಾಯಲು ಇಚ್ಛಿಸಿದ ಒಂದು ಶಿಲುಬೆಯನ್ನು ತಯಾರಿಸಿ ಅವನು ತನ್ನೆರಡು ಕಾಲುಗಳಿಗೆ ಮತ್ತೊಂದು ಕೈಗೆ ಮೊಳೆ ಹೊಡೆದು ಸತ್ತನು ಅಲ್ಲದೆ ಆತನು ಕ್ರಿಸ್ತನಂತೆ ತಲೆಗೊಂದು ಮುಳ್ಳಿನ ಕಿರೀಟವನ್ನು ಇಟ್ಟುಕೊಂಡು, ಗೇಣುದ್ದ ಬಟ್ಟೆಯನ್ನುಟ್ಟುಕೊಂಡಿದ್ದ

ಮಾನವಕೋಟಿಯಲ್ಲಿ ಆತ್ಮಹತ್ಯೆಮಾಡಿಕೊಳ್ಳುವ ಒಂದು ಜನಾಂಗವೇ ಇದೆಯೆಂದು ಪ್ರತ್ಯೇಕ ಹೇಳಬರುವುದಿಲ್ಲ ಆತ್ಮಹತ್ಯದ ಮನೋಭಾವವು ಮನುಷ್ಯರಿಗೆಲ್ಲ ಸರ್ವಸಾಮಾನ್ಯವಾದದ್ದು ಆಯಾ ಪರಿಸ್ಥಿತಿ ಉದ್ಭವಿಸಿದಾಗ ಯಾರು ಯಾವಾಗ ಮತ್ತು ಯಾವ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವರೆಂದು ಹೇಳಬರುವುದಿಲ್ಲ ಆಸ್ತಿಕರೂ, ನಾಸ್ತಿಕರೂ ಸಂತೋಷಚಿತ್ತರೂ, ದುಃಖಮನಸ್ಕರೂ, ವಿಚಾರಿಗಳೂ, ಕಲಾವಂತರೇ ಇತ್ಯಾದಿ ಯಾವ ಮನೋಭಾವನೆಯವರೇ ಇರಲಿ ಆತ್ಮಹತ್ಯಕ್ಕೆ ಒಳಗಾಗದವರಿಲ್ಲ

ಇಷ್ಟಾದರೂ ಸ್ವಜೀವನಾಶಮಾಡಿಕೊಳ್ಳುವವರನ್ನು ನಾಲ್ಕು ಮುಖ್ಯ ವರ್ಗವಾಗಿ ವಿಂಗಡಿಸಬಹುದು

ಸ್ವಾಭಾವಿಕವಾಗಿ ಆತ್ಮಹತ್ಯಾಪ್ರೇಮಿಗಳು ಪ್ರೇಮಪ್ರಣಯಗಳಿಂದ ಭಾವನಾಪರವಶರಾಗಿ ಸಾಯುವವರು ಶೀಘ್ರಕೋಪಿಗಳು (ಇವರು ತಮ್ಮ ಉದ್ದೇಶ ಸಾಧನೆಯು ಅಯಶಸ್ವಿಯಾದಾಗ ಆತ್ಮಹತ್ಯಕ್ಕೆ ಕೈಯಿಕ್ಕುವರು,) ಮತ್ತು ವಿಚಾರಪರರು–ಇವರು ಮರಣವೇ ಸಂಕಷ್ಟಮಯ ಲೌಕಿಕ ಜೀವನದಿಂದ ತಪ್ಪಿಸುವ ಉತ್ತಮ ದಾರಿಯೆಂದು ಮನಗಾಣುವವರು ಗೋರಿಂಗ್ ಟೊಜೊ ಅವರನ್ನು ಈ ವರ್ಗದಲ್ಲಿ ಸೇರಿಸಬಹುದು

ಟೆಂಡರ್ ನೋಟೀಸು

ಗೆಲ್ವನೈಸ್ ತಗಡಿನ ಮಲದಾಸ್ತಾನು ಮಾಡುವ ಡಬ್ಬಿಗಳನ್ನು ಒದಗಿಸುವ ಬಗ್ಗೆ ಮಂಗಳೂರು ಮುನ್ಸಿಪಾಲಿಟಿಯ ಎಕ್ಸಿಕ್ಯೂಟಿವ್ ಅಧಿಕಾರಿಯು ತಾ 8–4 48ನೇ ಸಂಜೆ 5 ಗಂಟೆ ವರೆಗೆ ಟೆಂಡರುಗಳನ್ನು ಸ್ವೀಕರಿಸುವರು ಇದರ ವಿವರ ಮತ್ತು ತಪಶೀಲುಗಳು ಮುನ್ಸಿಪಲ್ ಆಫೀಸಿನಲ್ಲಿ ದೊರೆಯುವುದು.

ಕಮಿಶನರ್.

ವಾರದ ವಿಜ್ಞಾನ ವರದಿ

ರಶ್ಯನರ ಶರೀರಕೃಷಿ

ಒಂದು ಶರೀರದಿಂದ ತೆಗೆದ ಚರ್ಮದ ಪದರು ಇಲ್ಲವೆ ರಸಗ್ರಂಥಿಗಳನ್ನು ಅದೇ ಶರೀರದ ಇಲ್ಲವೆ ಬೇರೊಂದು ಶರೀರದ ವ್ಯಾಧಿಗ್ರಸ್ತ ಭಾಗಕ್ಕೆ ಅಂಟಿಸಿ ಗುಣಪಡಿಸುವ ವಿಧಾನದಲ್ಲಿ ಮೊಸ್ಕೋ ವೈದ್ಯ ವಿಜ್ಞಾನಿಗಳು ಕೆಲವರು ಅಪೂರ್ವ ಯಶಸ್ಸನ್ನು ಪಡೆದಿರುವರು

ಯುದ್ಧಕಾಲದಲ್ಲಿ ಓರ್ವ ಸೈನಿಕನ ನಾಲಿಗೆಯು ಒಂದು ವ್ಯಾಧಿಯಿಂದ ಕೊಳೆತುಹೋಗಿತ್ತು ಅದನ್ನು ಕತ್ತರಿಸಿ ತೆಗೆದು ಅವನ ಶರೀರದ ಬೇರೊಂದು ಚರ್ಮದ ಪದರನ್ನು ಅದರ ಸ್ಥಾನದಲ್ಲಿ ಜೋಡಿಸಿದಾಗ ಅದು ಸಂಪೂರ್ಣ ಯಶಸ್ವಿಯಾಗಿ ಕೂಡಿಕೊಂಡಿದುದರ ಪರಿಣಾಮವಾಗಿ ಆ ಸೈನಿಕನು ಈಗ ಮಾತನಾಡಬಲ್ಲವನಾಗಿದ್ದಾನೆ

ಇದೇ ರೀತಿ ಹಲ್ಲುಗಳನ್ನು ಜೋಡಿಸಲೂ, ಕೈಕಾಲಿನ ಬೆರಳಗಳನ್ನು ಜೋಡಿಸಲೂ ಆಗುತ್ತದೆಂದು ಅವರು ಯಶಸ್ವಿ ಪ್ರಯೋಗಗಳನ್ನು ಮಾಡಿರುವರು

ಹೊಸ ಎಲುಮಿನಿಯಂ ಲೋಹ ಉಕ್ಕಿಗಿಂತ ಗಟ್ಟಿಯಾಗಿದೆ

ಎಲ್ಯೂಮಿನಿಯಂ ಸತು ಮತ್ತು ಮೆಗ್ನೇಶಿಯಂ ಲೋಹಧಾತುಗಳ ದ ಮಿಶ್ರಮಾಡಲ್ಪಟ್ಟು ತಯಾರಿಸಿದ ತಹ ಹೊಸ ಮಿಶ್ರಲೋಹವೊಂದು ಉಕ್ಕಿಗಿಂತಲೂ ಗಟ್ಟಿಯಾಗಿರುತ್ತದೆಂದು ಅಮೇರಿಕದ ಲೋಹವಿಜ್ಞಾನಿಗಳು [illegible] ತಿಳಿಸುತ್ತಾರೆ

[illegible] ಡುವ ಈ ನೂತನ ಲೋಹವು ಕಬ್ಬಿಣದಂತೆ ಬಿಸಿಮಾಡಿದಾಗ ಮೆದುವಾಗುವುದೆಂದೂ, ಬೇಕಾದ ರೂಪಾಕೃತಿಯನ್ನು ಇದಕ್ಕೆ ಕೊಡಲು ಬರುವುದೆಂದೂ ಹೇಳಲಾಗಿದೆ. ಈಗಿನ ಉಕ್ಕು ಕಬ್ಬಿಣಗಳ ಕೊರತೆಯ ಕಾಲದಲ್ಲಿ ಈ ಹೊಸ ಲೋಹವು ಅತ್ಯಂತ ಉಪಕಾರಿಯಾಗಬಲ್ಲುದೆಂದು ತಿಳಿಯಲಾಗಿದೆ.

ಅತಿ ನಿದ್ರೆಯಿಂದ ಆರೋಗ್ಯ ಹಾನಿ ವೈದ್ಯವಿಜ್ಞಾನಿಗಳ ಎಚ್ಚರಿಕೆ

ರೋಗಿಗಳು ಹೆಚ್ಚು ಸಮಯ ತನಕ ಹಾಸಿಗೆಯಲ್ಲೇ ಬಿದ್ದುಕೊಂಡಿರುವುದರಿಂದ ಹಾನಿಯುಂಟೆಂದು ಬ್ರಿಟಿಷ್ ಮೆಡಿಕಲ್ ಪತ್ರಿಕೆಯಲ್ಲಿ ಓರ್ವ ವೈದ್ಯರು ಎಚ್ಚರಿಸಿದ್ದಾರೆ

ಮೆದುಹಾಸಿಗೆಯ ಸುಖಾನುಭವದಡಿಯಲ್ಲಿ ಗಂಡಾಂತರಗಳ ರಾಶಿಯೊಂದ ಅಡಗಿದೆಯಾಗಿ ಅವರು ತಿಳಿಸುತ್ತಾರೆ.

ದೀರ್ಘಕಾಲ ಒರಗಿರುವುದರಿಂದ ಶರೀರದ ಪ್ರತಿಯೊಂದು ಭಾಗವೂ ಅಪಾಯಕ್ಕೊಳಗಾಗಬಲ್ಲುದು

ಮೊದಲಾಗಿ ಆಲಸ್ಯ ಮಾನಸಿಕ ಸಂಕೋಚ ಮತ್ತು ಬೇಸರಗಳುಂಟಾಗುತ್ತವೆ

ಮನೆಗಳಲ್ಲಿ ಗೃಹಚಿಕಿತ್ಸೆ ಅಧಿಕಕೋಣೆಯ ಅಲಂಕಾರಕ್ಕಾಗಿ ಒಂದ ಪಾತ್ರೆಗಳನ್ನು ಕಪಾಟಿನಲ್ಲಿಡುವಂತೆ ಆಸ್ಪತ್ರೆಯಲ್ಲಿನ ಶುಶ್ರೂಷಕರು ರೋಗಿಗಳನ್ನು ಹೆಚ್ಚಾಗಿ ಮಂಚಗಳಲ್ಲಿ ಒರಗಿಸುವುದರಲ್ಲಿ ಇಷ್ಟಪಡುತ್ತಾರೆ ಇದು ಹಾನಿಕರ ರೋಗಿಗಳಿಗೆ ನಡೆದಾಡಲು ಆ ಕಡೆ ಈ ಕಡೆ ಹೋಗಲು ಸಂದರ್ಭಕೊಡಬೇಕು.

ರಾತ್ರೆ ಹವೆಯು ಅಪಾಯಕರವಿರಬಹುದು ಗಳ್ಳಕೆ ಉಪಾಯವಿಲ್ಲದಿದ್ದರೆ ಶೀತದಿಂದ ಗೂರಲು, ಕೆಮ್ಮು ವಿಷಮ ಜ್ವರಗಳ ಒಟ್ಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯ್ಯಲ್ಪಡುವುವು ಅಲ್ಪ ಊದಿಕೊಂಡಿರುವ ಶ್ವಾಸನಾಳ [illegible] ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಯಂಗಡಿಗಳಲ್ಲಿ ಸದಾ ಸಿಗುವುದು.

ಜಿಲ್ಲಾ ಸಮಾಚಾರ

ತೆರಿಗೆ ಪರಿಶೋಧನ ಅಧಿಕಾರಿ

ಜಮೀನ್ದಾರಿ ತೆರಿಗೆ ಇಳಿಸುವ ಶಾಖೆಯ ಮದ್ರಾಸಿನ ಸ್ಪೆಶಲ್ ಆಫೀಸರರಾದ ಶ್ರೀ ಎಸ್ ಚೆಟ್ಟೂರ್ ಐ. ಸಿ. ಎಸ್ ಅವರು ಮದ್ರಾಸಿನಿಂದ ಮಂಗಳೂರಿಗೆ ಬಂದಿದ್ದು ಇಲ್ಲಿಯ ಆ ಕಛೇರಿಯ ಕಾರ್ಯಭಾರಗಳನ್ನು ನೋಡಿಕೊಂಡು ತಾ ೨೫ರಂದು ಹಿಂತಿರುಗಿದರು

ಮುಸ್ಲಿಂ ಹೆಣ್ಣುಮಕ್ಕಳ ಶಾಲೆ

ಈ ಶಾಲಾ ವಿದ್ಯಾರ್ಥಿಗಳ ಮತ್ತು ಹೆತ್ತವರ ಮತ್ತು ಹಿತೈಷಿಗಳ ಸಭೆಯೊಂದು ನಗರಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕೆಲದಿನಗಳ ಹಿಂದೆ ಸೇರಿದಾಗ ಶ್ರೀ ದಾಮೋದರ ಬಾಳಿಗರು "ಈ ಶಾಲೆಯನ್ನು ಜನರಲ್ ಹೈಸ್ಕೂಲಾಗಿ ಮಾರ್ಪಡಿಸಿ ಅಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿಯೂ, ಉರ್ದುವನ್ನು ಎರಡನೇ ಭಾಷೆಯನ್ನಾಗಿಯೂ ಪ್ರವೇಶಗೊಳಿಸಬೇಕು ಮತ್ತು ಈ ಶಾಲೆಯನ್ನು ಊರ್ಜಿತಗೊಳಿಸಬೇಕು ಎಂದು ಸೂಚಿಸಿದ ಠರಾವು ಸಭೆಯಲ್ಲಿ ಅವಿರೋಧವಾಗಿ ಮಂಜೂರಾಯಿತು

ಹೊಸ ಪೋಲಿಸ್ ಜಿಲ್ಲಾಧಿಕಾರಿ

ನಮ್ಮ ಜಿಲ್ಲೆಯಲ್ಲಿ ಪೋಲಿಸ್ ಸುಪರಿಂಟೆಂಡೆಂಟರಾಗಿದ್ದ ಮಿ ಸ್ಮೈಲಿಯವರಿಗೆ ಬೇರೆ ಕಡೆಗೆ ವರ್ಗವಾಗಿ ಅವರ ಬದಲಿಗೆ ಡಿ ಎಸ್ ಪಿ ಗಳಾಗಿ ಮಿ ಎ ವುಡ್‌ಹೌಸ್‌ರವರು ಬಂದಿರುವರು

ಜುಗರಾಡಿದವರ ಕೈದು

ಜೆಪ್ಪು ಬಜಾರಿನಲ್ಲಿ ಈಚೆಗೆ ದಶಾವತಾರದ ಆಟದ ಕಾಲದಲ್ಲಿ ಜುಗಾರಾಡುತ್ತಿದ್ದರೆಂಬ ಆರೋಪದ ಮೇರೆಗೆ ೧೯ ಮಂದಿಯನ್ನು ಪೋಲಿಸ್ ಸಬ್ ಇನ್ಸ್‌ಪೆಕ್ಟರ್ (ತಾಲೂಕು ಸ್ಟೇಶನು) ಶ್ರೀ ಎಚ್ ನಾಗಪ್ಪನವರು ಕೈದು ಮಾಡಿದ್ದಾರೆ ಕೈದಾದವರಲ್ಲಿ ಮೂವರು ಮಾದಕ ಪದಾರ್ಥ ಸೇವನೆಯ ಅಪರಾಧಕ್ಕೂ ಒಳಗಾಗಿರುವರು

ಅಕ್ಕಿ ಪರಿಸ್ಥಿತಿ

ನಮ್ಮ ಜಿಲ್ಲೆಯ ಹಳ್ಳಿ ಪ್ರದೇಶದಲ್ಲಿನ ಪರಿಸ್ಥಿತಿಯನ್ನು ಓರ್ವ ಪತ್ರವ್ಯವಹಾರಕರು ಸ್ಥಳೀಯ ಪತ್ರಿಕೆಯೊಂದರಲ್ಲಿ ಹೀಗೆ ತಿಳಿಸುತ್ತಾರೆ

ಹಣದ ಲೋಭದಿಂದ ಕೆಲವರು ದಲ್ಲಾಳಿಗಳ ಮುಖಾಂತರ ನಾನಾ ರೀತಿಯಲ್ಲಿ ಅಕ್ಕಿಯನ್ನು ಸುಲಭ ಕ್ರಯದಲ್ಲಿ ಸಂಗ್ರಹಿಸಿ ಗುಟ್ಟಿನಲ್ಲಿ ಒಂದೇ ಸಮನೆ ರವಾನಿಸುತ್ತಿದ್ದಾರೆ ಇದೇ ರೀತಿಯಾದರೆ ಮಳೆಗಾಲದಲ್ಲಿ ಬೇಸಾಯವಾಗುವಂತೆ ತೋರುವುದಿಲ್ಲ ಬಡ ಜನರು ಉಪವಾಸ ಬೀಳಬೇಕಾಗುವುದು ಕೆಲವರು ರಾತ್ರಿ ಗಟ್ಟಿ ಅಕ್ಕಿ ಮುಡಿ ಸಂಗ್ರಹಿಸಿ ಬಡವರಿಗೆ ಒಂದೊಂದಾಗಿ ರೂ ೩೦–೪೦ರಂತೆ ಮಾರುತ್ತಲೂ ಗುಟ್ಟಾಗಿ ರವಾನಿಸುತ್ತಲೂ ಇದ್ದಾರೆ ಸಮುದ್ರ ಮಾರ್ಗವಾಗಿ ಬೇರೆ ಕಡೆಗೂ ಸಾಗುತ್ತಿದೆ ಎಂದು ತಿಳಿದುಬರುತ್ತದೆ ಸರಕಾರವು ಶೀಘ್ರದಲ್ಲೇ ಉಗ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದವರು ಸೂಚಿಸುತ್ತಾರೆ.

ಮದ್ಯ ನಿಷೇಧ ಮತ್ತು ಆಹಾರ ಬೆರಿಕೆಯ ಮೊಕದ್ದಮೆಗಳು

ಎ ಎಫ್ ಗೊನ್ಸಾಲ್ವಿಸ್, ೧೦ ಡ್ರಾಮ್ ಬ್ರೇಂಡಿ ಮತ್ತು ೨೧ ಬಾಟ್ಲಿ ವೈನ್ ಲೈಸನ್ಸ್ ಇಲ್ಲದೆ ಇದ್ದುದಕ್ಕೆ ರೂ ೧೦೦ ಜುಲ್ಮಾನೆ, ಬೈಕಂಪಾಡಿ ಬಾಗಿ ಮೊಗೆರತಿ ಎಂಬಳ ಬಳಿ ೨೧ ಡ್ರಾಮ್ ಶರಾಬು ಇದ್ದುದಕ್ಕೆ ರೂ ೬೦ ಜುಲ್ಮಾನೆ, ಮುಚ್ಚೂರಿನ ತೆರೆಜಾ ಕೋಸ್ತ ಇವಳ ಬಳಿ ೪ ಡ್ರಾಮ್ ಬೆಲ್ಲದ ಶರಾಬು ಇದ್ದುದಕ್ಕೆ ರೂ ೫೦, ಕಂಕನಾಡಿ ಕಿಟ್ಟಪ್ಪ ದಾಸ ಎಂಬುವನು ಸಾರ್ವಜನಿಕ ಸ್ಥಳದಲ್ಲಿ ಅಮಲು ಸೇವಿಸಿದನೆಂಬುದಕ್ಕೆ ರೂ. ೫೦, ಜಪ್ಪುವಿನ ಅನಂತ ಶೆಟ್ಟಿ ಎಂಬವನು ಅಮಲು ಮತ್ತನಾಗಿದ್ದಕ್ಕೆ ರೂ ೫೦, ಹೀಗೆ ಜುಲ್ಮಾನೆಗಳಾಗಿವೆ ನೀರುಮಾರ್ಗ ಪಿರೇರಾನ ಬಳಿ ೪ ಗೆಲನ್ ಹುಳಿರಸ ಇದ್ದದಕ್ಕೆ ರೂ ೧೦೦, ಪಂಜದ ನಾರಾಯಣ ಶೆಟ್ಟಿ ಬಳಿ ೧೫ ಗೆಲನ್ ಹುಳಿ ಬಂದ ನೀರಾ ಸಿಕ್ಕಿದಕ್ಕೆ ರೂ ೭೫, ಕುಡ್ಪಿಯ ರಾಮ ಮೊಲಿಯನ ೨ ಡ್ರಾಮ್ ಗೇರು ಶರಾಬು ಇದ್ದುದಕ್ಕೆ ರೂ ೫೦, ಹೀಗೆ ಜುಲ್ಮಾನೆಗಳಾಗಿವೆ

ಕಾವೂರಿನ ರುಕ್ಮಿಣಿ ಎಂಬಾಕೆ ಶೇಕಡಾ ೧೦ರಷ್ಟು ನೀರು ಬೆರಸಿದ ಹಾಲು ಮಾರಿದ ಆರೋಪಕ್ಕಾಗಿ ರೂ ೧೫ ಜುಲ್ಮಾನೆ ವಿಧಿಸಲ್ಪಟ್ಟಿದ್ದಾಳೆ

ಉತ್ತರ ಕನ್ನಡ ಜಿಲ್ಲಾಭಿವೃದ್ಧಿಗಾಗಿ

ಭಟ್ಕಲ್ ಇಲೆಕ್ಟ್ರಿಕ್ ಸಪ್ಲೈ ಮತ್ತು ಇಂಡಸ್ಟ್ರೀಸ್ ಲಿಮಿಟೆಡ್ ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ ಹೇರಳ ಪ್ರಕೃತಿ ಸಂಪತ್ತಿರುವ ಭಟ್ಕಳ ಮತ್ತು ಈ ಜಿಲ್ಲೆಯ ಇತರ ಭಾಗಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದು ಮತ್ತು ಸಾಧ್ಯವಿದ್ದ ಕೈಗಾರಿಕೆಗಳನ್ನು ಪ್ರಾರಂಭಿಸುವುದು ಇದರ ಉದ್ದೇಶ ಕೇಂದ್ರ ಕಛೇರಿ ಭಟ್ಕಳದಲ್ಲಿರುವ ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಪ್ರಭಾವಿತರನೇಕರಿರುವರು

ಗಂಗೊಳ್ಳಿ

ಇದೇ ಆದಿತ್ಯವಾರ ತಾ ೨೮ರಲ್ಲು ಗಂಗೊಳ್ಳಿಯ ಎಸ್ ವಿ ಹೈಸ್ಕೂಲಿನ ವರ್ಧಂತ್ಯುತ್ಸವವು ಡಾ ಟಿ ಮಾಧವ ಪೈ, (ಮೆನೇಜಿಂಗ್ ಡೈರೆಕ್ಟರ್ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ) ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಸಾಯಂಕಾಲ ೫-೩೦ಕ್ಕೆ ಬಹುಮಾನ ವಿತರಣೆಯ ಸಮಯದಲ್ಲಿ ಅಧ್ಯಕ್ಷರು ಶಾಲೆಯ ಕೆಲಸವನ್ನು ಪ್ರಶಂಸಿಸಿ ಭಾಷಣವಿತ್ತರು ಶ್ರೀ ಎನ್ ನಾಗೇಶ ನಾಯಕ್ ಬಿ ಎಸ್ ಸಿ ಯವರು ಜ್ಯೂನಿಯರ್ ಎಲಿಮೆಂಟರಿ ಶಾಲೆಯ ಸ್ಥಿತಿ ವಾಚನವನ್ನು ಮಾಡಿದರು ಶ್ರೀ ಪಿ ದೇವದಾಸ ನಾಯಕ್ ಎಲ್ ಎಲ್ ಬಿ. ಯವರು ಸ್ಕೂಲ್‌ಕಮಿಟಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು ರಾತ್ರಿ ೯-೩೦ಕ್ಕೆ ವಿದ್ಯಾರ್ಥಿಗಳ ವಿನೋದಾವಳಿಗಳು ಯಶಸ್ವಿಯಾಗಿ ನಡೆದವು ಅವುಗಳಲ್ಲಿ ಒಂದು ಮದ್ಯಪಾನ ನಿಷೇಧದ ಕುರಿತು ಬಯಲಾಟ.

ಮೇಲ್ಕಂಡ ಸಮಾರಂಭದಲ್ಲಿ ಅಧ್ಯಕ್ಷ ಟಿ ಎಂ ಎ ಪೈಯವರು ಕೊಟ್ಟ ಭಾಷಣದ ಉಲ್ಲೇಖಗಳು

ಈ ಶಾಲೆಯ ಆಡಳಿತೆಯು ಚೆನ್ನಾಗಿರುವುದನ್ನು ಕಂಡು ನಾನು ಸಂತೋಷಪಡುತ್ತೇನೆ ಇಂದಿನ ವಿದ್ಯಾಪ್ರಸಾರದ ರೀತಿನೀತಿಗಳನ್ನೆತ್ತಿ ಹೇಳುವುದಾದರೆ, ಈಗ ಇರುವ ಶಾಲೆಗಳು ನಮಗೆ ಸಾಲದೆಂದೇ ನನ್ನ ಅಭಿಪ್ರಾಯ ಹತ್ತು ಸಾವಿರ ಜನಸಂಖ್ಯೆಗೆ ಒಂದು ಹೈಸ್ಕೂಲಿನಂತೆ ನಮಗೆ ಬೇಕು ಈ ಲೆಕ್ಕ ಪ್ರಕಾರ ನಮ್ಮ ಜಿಲ್ಲೆಯ ಈ ಬಡಗಣ ಭಾಗಕ್ಕೆ ಇನ್ನು ನಾಲ್ವತ್ತು ಹೈಸ್ಕೂಲ್‌ಗಳಾಗಬೇಕು ಅವುಗಳಾದರೆ ಅವುಗಳ ಬೆನ್ನಹಿಂದೆಯೇ ಜನಜೀವನದ ಇತರ ಎಷ್ಟೋ ಸಮಸ್ಯೆಗಳು ತಾವಾಗಿ ಬಗೆಹರಿಯುತ್ತವೆ ಇದನ್ನು ನೆರವೇರಿಸಿಕೊಡುವುದು ಸರಕಾರಕ್ಕೆ ಮಾತ್ರ ಸಾಧ್ಯ ಆದರೆ ಸರಕಾರಕ್ಕೆ ಎಷ್ಟರ ತನಕ ಇದು ಸಾಧ್ಯವಾಗುವುದಿಲ್ಲವೋ ಆ ವರೆಗೆ, ಸರಕಾರವು ಆಕ್ಷೇಪಿಸುವುದಿಲ್ಲವಾದಲ್ಲಿ ಇದರ ಪ್ರಯೋಜನಕತೆಯನ್ನು ತಿಳಿದ ಜನರಾದರೂ ತಮ್ಮ ಹಣಕಾಸುಗಳನ್ನು ಕೂಡ ಹಾಕಿ ಈ ಕೆಲಸಕ್ಕೆ ಕೈಹಚ್ಚಬೇಕಾಗಿದೆ ನೀವೂ ಈ ತರದ ಅಭಿಪ್ರಾಯವುಳ್ಳವರಾಗಿ ಕಾರ್ಯೋನ್ಮುಖರಾಗಿರುವುದನ್ನು ಕಂಡು ನನಗೆ ಸಂತೋಷ ಈ ಶಾಲಾನಿಧಿಗೆ ಎಲ್ಲರೂ ತಮ್ಮ ತಮ್ಮ ಶಕ್ತ್ಯನುಸಾರ ಧನಸಹಾಯವಿತ್ತು ಸಹಕರಿಸಿ ಶೀಘ್ರದಲ್ಲೇ ಜಿಲ್ಲೆಯ ಈ ಕಡೆಯಲ್ಲಿ ಇದೊಂದು ಜನಪ್ರಿಯವಾದ ವಿದ್ಯಾರ್ಥಿ ಸಮೃದ್ಧಿಯುಳ್ಳ ಪ್ರಸಿದ್ಧ ಸರಸ್ವತೀ ಮಂದಿರವೆಂದೆನಿಸುವಂತೆ ಮಾಡಿಯಾರೆಂದು ನನಗೆ ನಂಬುಗೆ ಇದೆ ಜಿಲ್ಲೆಯ ಅಭಿವೃದ್ಧಿ ಕಡೆ ವಿದ್ಯಾರ್ಥಿಗಳ ಮನಸ್ಸು ಹರಿಯಬೇಕು ಇಲ್ಲೊಂದು ಮುದ್ರಣಾಲಯವನ್ನು ಸಂಸ್ಥಾಪಿಸಬೇಕೆಂಬ ಅವರ ಯೋಚನೆಯು ಸ್ತುತ್ಯವಿದೆ ಈ ವಿಚಾರದಲ್ಲಿ ವಿಳಂಬ ಮಾಡದೆ ಸ್ಪಷ್ಟ ನಿರ್ದಿಷ್ಟವಾದ ವ್ಯವಹಾರ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಿರಿ. ನಿಮ್ಮ ಸಕಲ ಚಟುವಟಿಕೆಗಳಲ್ಲಿ ನನ್ನ ಪರಿಪೂರ್ಣ ಸಹಕಾರವಿದ್ದೇ ಇದೆ

ಉಡುಪಿ

ಉಡುಪಿ ತಾಲೂಕಿನ ಮಜೂರು ಹೆರೂರು ಇಲ್ಲಿ ಮಾರಿಗೆ ಕೋಳಿಗಳನ್ನು ಕೊಯ್ಯುವುದನ್ನು ನಿಲ್ಲಿಸಲಾಯಿತು ಕಳೆದ ತಾ ೧೩ನೇ ಶನಿವಾರ ನಡೆದ ಮಾರಿಪೂಜೆಗೆ ಕೋಳಿಯ ಬದಲು ಬೂದು ಕುಂಬಳಕಾಯಿ ಮತ್ತು ನೈವೇದ್ಯ ಸಮರ್ಪಿಸಲಾಯಿತು ಭೂತದ ಕೋಲಕ್ಕೂ ಇನ್ನು ಮುಂದೆ ಕೋಳಿ ಆಹುತಿ ಕೊಡುವುದನ್ನು ನಿಲ್ಲಿಸಲಾಯಿತು.

ಚರ್ಮ ವ್ಯಾಧಿಗಳಿಂದ
ಶೀಘ್ರ ಗುಣಹೊಂದಲಿಕ್ಕೆ
ತ್ವರಯ ಮುಲಾಮು

ವಿಷಹಾರಕ ಕ್ಯುಟಿಕ್ಯೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪ್ರಸರಿಸಿ ಚಿಕ್ಕಪುಟ್ಟ ಎಲ್ಲಾ ಚರ್ಮ ತೊಂದರೆ ದಿವಸದೊಳಗೆ ತಗಿಸುತ್ತದೆ ಚರ್ಮ ಸ್ವಚ್ಛಗೊಳಿಸಿ [illegible]ಸುತ್ತದೆ

ಕ್ಯುಟಿಕೂರಾ ಮುಲಾಮು

CUTICURA OINTMENT

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸ್ಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25–12–1947ರ ಆರಭ್ಯ ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟ್ಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ವೊಯಿಂಟ್ ಮೆನೇಜರ್ಸ್,

ಮಂಗಳೂರು.
23–12–1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD

(Incorporated in British India

Estd: 1906.

Head Office: UDIPI, South India.

SEASON DEPOSITS

for Rs 5,000/- and over are now accepted at all Offices of the Bank at the following rates:

3 & 4 months . . . . 2½% p a.

5 & 6 months . . . 2¾% p a

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:-

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 2—4—1948 [ಸಂಚಿಕೆ 13]

ದೇಶದ ರಾಜಕೀಯ

ಸಮತಾವಾದ ಮತ್ತು ಕೊಂಗ್ರೆಸ್ ಸರಕಾರ

ವಿರೋಧ ಪಕ್ಷದ ಆವಶ್ಯಕತೆ ಇದೆಯೆ?

ಜೈ ಪ್ರಕಾಶ ನಾರಾಯಣರ ವಿವರಣೆ

ಸಮತಾವಾದಿಗಳು ಕೊಂಗ್ರೆಸ್ ಪಿಡಿಯಿಂದ ಹೊರ ಬಂದುದರ ಕುರಿತು ಅವರ ಅಗ್ರಗಣ್ಯ ದುರೀಣರಾದ ಶ್ರೀ ಜೈ ಪ್ರಕಾಶ ನಾರಾಯಣರು ಒಂದು ಲೇಖನದಲ್ಲಿ ಹೀಗೆ ಬರೆಯುತ್ತಾರೆ

ಬ್ರಿಟಿಷ್ ರಾಜ್ಯದ ಕಾಲದಲ್ಲಿ ಕೊಂಗ್ರೆಸ್ ಜನತೆಯ ಆತ್ಮವಾಗಿದ್ದು ಅವರ ಆಶೆ ಹಾರೈಕೆಗಳ ಪ್ರತಿಬಿಂಬ ರೂಪವಾಗಿತ್ತು ಇಂದು ಆಡಳಿತ ನಿರ್ವಹಿಸುವ ಈ ದೇ ಕೊಂಗ್ರೆಸು ತನ್ನ ಧೋರಣೆಗಳು ತಪ್ಪಿರಲಿ, ಒಪ್ಪಿರಲಿ ಅವನ್ನು ಸಮರ್ಥಿಸಬೇಕಾದ ಪ್ರಸಂಗಕ್ಕೆ ಸಿಲುಕಿದುದರಿಂದ ಸಾಮಾನ್ಯ ಜನತೆಯನ್ನು ರಕ್ಷಿಸುವ ಶಕ್ತಿಯನ್ನು ಕಳ ಕೊಂಡಿದೆ

ಇದೊಂದು ಭೀಕರ ಪರಿಸ್ಥಿತಿ ರಚನಾತ್ಮಕ ಸಲಹೆಗಳೂ ಈಗ ಕೊಂಗ್ರೆಸ್ ಸರಕಾರಗಳಿಗೆ ಅಸಹ್ಯವಾಗಿ ತೋರ ತೊಡಗಿದ್ದು ಅವನ್ನು ದಬ್ಬಿಕ್ಕಲು ... ಗಳಿಗುತ್ತಿವೆ ಸತ್ಯಸಂಗತಿಗಳನ್ನು ಪ್ರಕಟಿಸುವ ವೃತ್ತಪತ್ರಿಕಾಕರ್ತರನ್ನು ಕೋರ್ಟಿಗೆಳೆಯಲಾಗುತ್ತದೆ ರೇಡಿಯೊ ಮೊದಲಾದ ರಾಷ್ಟ್ರಪ್ರಚಾರ ಸಂಸ್ಥೆಗಳನ್ನು ಪಕ್ಷ ರಾಜಕೀಯ ಪ್ರಚಾರಕ್ಕಾಗಿ ಉಪಯೋಗಿಸಲ್ಪಡುತ್ತವೆ ಇತರ ರಾಜಕೀಯ ಪಕ್ಷಗಳು ಅವರ ದಾರಿಯಲ್ಲಿನ ಮುಳ್ಳುಗಳಾಗಿವೆ

ಆರೋಪಣೆಗಳು

ದೇಶದೆಲ್ಲಾ ಕಡೆಗಳಲ್ಲಿ ... ಸೆಕ್ಷನುಗಳೂ, ಸಾರ್ವಜನಿಕ ಭದ್ರತಾ ಶಾಸನಗಳೂ ಜಾರಿಯಲ್ಲಿದ್ದು ವಿರೋಧ ಪಕ್ಷದವರ ಚಟುವಟಿಕೆಗಳನ್ನು ಹಿಡಿದಿಕ್ಕಲು ಶತಪ್ರಯತ್ನಗಳಾಗುತ್ತಿವೆ ಸಮತಾವಾದಿ ಪಕ್ಷಕ್ಕೆ ಸಹಾನುಭೂತಿ ತೋರಿಸುವವರನ್ನು ಬೆದರಿಕೆಗಳೊಳಪಡಿಸಲಾಗುತ್ತಿದೆ

ಸರಕಾರದ ಆಡಳಿತ ವರ್ಗಕ್ಕೆ ಸೇರಿದವರು ಸಕ್ರಿಯ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಬಾರದೆನ್ನೊ ನ್ಯಾಯವಾದುದು ಆದರೆ ತಮ್ಮಿಚ್ಛೆಯ ಪಕ್ಷಕ್ಕೆ ಮತವೀಯುವ ಹಕ್ಕು ಅವರಿಗಿರಬೇಕು (ಅಂತಹ ರಾಜಕೀಯ ಪಕ್ಷವು ನ್ಯಾಯಬದ್ಧವಾಗಿದ್ದು ಬಹಿರಂಗ ಚಟುವಟಿಕೆಗಳನ್ನು ಮಾಡುವಂತಹದ್ದಿರಬೇಕಾದುದೂ ನ್ಯಾಯವೆ.) ಆದರೆ ಈ ಹಕ್ಕು ಇಂದು ತಿರಸ್ಕರಿಸಲ್ಪಟ್ಟಿದೆ

ನಾವು ಸಮತಾವಾದದ ಕಡೆ ಮುನ್ನಡೆಯುತ್ತಿರುವಾಗ ಹೆಚ್ಚೆಚ್ಚು ಜನರು ಸರಕಾರ (ಎಂದರೆ ಕೈಗಾರಿಕೆಗಳೆಲ್ಲ ರಾಷ್ಟ್ರೀಕರಣಗೊಳಿಸಲ್ಪಡುತ್ತಿರುವಾಗ) ದ ಅಂಕಿತದೊಳಗೆ ಬರುವರು. ಇವರಿಗೆಲ್ಲ ರಾಜಕೀಯದಲ್ಲಿ ಭಾಗವಹಿಸುವ ಹಕ್ಕಿಲ್ಲವೆಂದಾದರೆ ಒಂದು ಭೀಕರ ಸರ್ವಾಧಿಕಾರ ಪದ್ಧತಿಗೆ ಅಸ್ತಿವಾರ ಹಾಕಿದಂತಾಗುವುದು ಈ ಸಂದರ್ಭದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕಲ್ಲದೆ ಇತರ ಯಾವ ರಾಜಕೀಯ ಪಕ್ಷಕ್ಕೂ ಅಸ್ತಿತ್ವದ ನಿರೀಕ್ಷೆಯಿರಲಾರದು

ಈಗ ಬೇರೆ ಪರಿಸ್ಥಿತಿಯಲ್ಲಿ ದೇಶದಲ್ಲಿ ಒಂದು ... ಪ್ರಜಾಸತ್ತಾತ್ಮಕ ... ರಾಜ ಪ್ರಭುತ್ವ ... ಸಾರವಾಗಿದ್ದು ರಾಷ್ಟ್ರಹಿತದ ದ್ಯೇಯಗಳಿರುವ ಒಂದು ಜನಪ್ರಿಯ ವಿರೋಧಪಕ್ಷವಿಲ್ಲದಿದ್ದರೆ ರಾಜ್ಯಶ ಸರ್ವಾಧಿಕಾರವನ್ನು ಪ್ರೋತ್ಸಾಹಿಸಿದಂತಾಗುವುದು

ದೇಶದ ಇಂದಿನ ಪರಿಸ್ಥಿತಿಯಲ್ಲಿ ಸಮತಾವಾದಿ ಪಕ್ಷವು ಜನಪ್ರಿಯ ವಿರೋಧ ಪಕ್ಷದ ಸ್ಥಾನವನ್ನು ವಹಿಸಬಲ್ಲದು ... ಜಂಬದ ಹೇಳಿಕೆಯಾಗಿರದೆ ನಿಜ ... ನಿರೂಪಣೆಯಾಗಿದೆ

ಬ್ರಿಟಿಷರ ಕಾಲದಲ್ಲಿ ಕೊಂಗ್ರೆಸ್ ... ವಿಗಳೆಂದರೆ ದೇಶವಿರೋಧಿಗಳೆಂದೆನಿಸಲ್ಪಡುತ್ತಿದ್ದರು ಕಾರಣ ಆಗ ಕೊಂಗ್ರೆಸು ಜನಾಂಗೋದ್ಧಾರ ... ಪರಕೀಯರ ವಿರುದ್ಧ ಹೋರಾಟ ನಡೆಸಿತ್ತು ಆದರೆ ಸ್ವತಂತ್ರ ರಾಷ್ಟ್ರವಾದ ಭಾರತದಲ್ಲೀಗ ಕೊಂಗ್ರೆಸನ್ನು ವಿರೋಧಿಸುವುದೆಂದರೆ ದೇಶಹಿತವನ್ನು ವಿರೋಧಿಸುವದಲ್ಲ ಈ ವಿರೋಧವು ಸರಕಾರದ ಧೋರಣೆ ವಿಧಾನಗಳನ್ನು ಬದಲಾಯಿಸಲೂ, ಅದರ ಸ್ಥಾನದಲ್ಲಿ ಬೇರೆ ಧೋರಣೆಗಳನ್ನು ಅನುಸರಿಸುವಂತೆ ಮಾಡುವ ಉದ್ದೇಶದಿಂದೂ ಜನತೆಗೆ ತಿಳಿಸುವುದವಶ್ಯವಿದೆ ಪ್ರಜಾತಂತ್ರ ರೀತಿನೀತಿಗಳಿಂದ ಅಧಿಕಾರದಲ್ಲಿದ್ದ ಪಕ್ಷವನ್ನು ಸ್ಥಾನಚ್ಯುತವಾಗಿಸುವುದು ಈ ವಿರೋಧ ಪಕ್ಷದ ಧ್ಯೇಯವಾಗಿದೆ

ದೇಶವು ಇಂದು ಆಂತರಿಕ ಮತ್ತು ಬಾಹ್ಯ ಗಂಡಾಂತರಗಳಿಗೊಳಗಾಗುವ ಪರಿಸ್ಥಿತಿಯಲ್ಲಿದೆ ಈ ಸಂದರ್ಭದಲ್ಲಿ ಅತೀ ಹೆಚ್ಚಿನ ಧ್ಯೇಯ ಧೋರಣೆಗಳು ಸಾಮಾನ್ಯವಾಗಿರುವ ಪಕ್ಷಗಳೆಲ್ಲ ಒಟ್ಟುಗೂಡಿ ಕೋಮುವಾದ ಮತ್ತಿತರ ಪ್ರತಿಗಾಮಿ ದುಶ್ಶಕ್ತಿಗಳನ್ನು ತಡೆಗಟ್ಟುವುದಕ್ಕೆ ಒಟ್ಟುಗೂಡಬೇಕಾದದು ಅತ್ಯಾವಶ್ಯಕ ಕೊಂಗ್ರೆಸು ಮತ್ತು ಸಮತಾವಾದಿ ಪಕ್ಷದ ಧ್ಯೇಯ ಧೋರಣೆಗಳು ಬಹುಮಟ್ಟಿಗೆ ಒಂದೇಯಾಗಿದ್ದು ಅದು ಕೊಂಗ್ರೆಸಿನೊಡನೆ ಸಹಕರಿಸಿ ... ಸಂತೋಷಿಸುತ್ತದೆ

ಧ್ಯೇಯ ಮತ್ತು ಧೋರಣೆ

... ಸಮತಾವಾದ ತತ್ವದಲ್ಲಿ ನೈತಿಕ ಮೌಲ್ಯಗಳಿಗೆ ಆಸ್ಪದವಿಲ್ಲವೆಂದು ... ತಿಳಿದುಬರುತ್ತದೆ ಅಲ್ಲಿ ಸೋಶಲಿಸ್ಟ ಸಮತಾವಾದಿ (ಇವರು ರಾಜಕೀಯದಲ್ಲಿ ನ್ಯಾಯ ನೀತಿಗಳನ್ನು ಸಾರುತ್ತಾರೆ)ಗಳಿಗೆ ಸ್ಥಾನವಿಲ್ಲ

ಸೋಶಲಿಸ್ಟ ಸಮತಾವಾದದ ಪ್ರಕಾರ ವ್ಯಕ್ತಿಯ ಎಲ್ಲಾ ಲೌಕಿಕ ಆವಶ್ಯಕತೆಗಳು ಪೂರೈಸಲ್ಪಡಬೇಕು ಮಾತ್ರವಲ್ಲ ವ್ಯಕ್ತಿಯು ಸುಸಂಸ್ಕೃತ ನಾಗರಿಕನಾಗಿರುವುದರಿಂದ ಅವನು ಸ್ವತಂತ್ರನೂ ಧೀರನೂ, ದಯಾವಂತನೂ, ಉದಾರಿಯೂ, ಆಗಿದ್ದು ಮಾನವನೀತಿಗನುಸಾರವಾಗಿಯೇ ಅವನು ವರ್ತಿಸುವನು ಎಲ್ಲರಿಗೂ ಬೇಕಾದಷ್ಟು ಹೊಟ್ಟೆ, ಬಟ್ಟೆಯ ಸೌಕರ್ಯ ಸಿಗುವಂತಾಗಿ, ಸುಲಿಗೆ ಶೋಷಣೆಗಳಿಲ್ಲದ ಸಮಾಜ ರಚನೆಯಾದರೆ ಮಾತ್ರ ಎಲ್ಲವೂ ಪರಿಪೂರ್ಣವಾದಂತೇ ಎಂದು ಭಾವಿಸುವರೂ (ಕೊಮ್ಯುನಿಸ್ಟರು)ಇದ್ದಾರೆ. ಸೋಶಲಿಸ್ಟ ಸಮತಾವಾದದ ದೃಷ್ಟಿಯಲ್ಲಿ ಹೀಗೆ ಹೊಟ್ಟೆ ಬಟ್ಟೆಗೆ ಬೇಕಾದಷ್ಟನ್ನು ಕೊಟ್ಟು ಕೆಲವು ಮನೆಗಳಲ್ಲಿರಿಸಲ್ಪಡುವ ವ್ಯಕ್ತಿಗಳು ಕೇವಲ ವನ್ಯಜಂತುಗಳೆಂದೆನಿಸಲ್ಪಡುತ್ತದೆ.

೨ನೇ ಪುಟನೋಡಿ

THE
UNITED INDIA LIFE ASSURANCE CO., LTD.
ESTD 1906
H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to —
INSPECTORATE OFFICE
K. S. Rao Road, Mangalore

...ಜನಾಂಗಸಂಘದೊಂದು ಅಂಗವಾದ ಆಹಾರ ಮತ್ತು ಕೃಷಿ ಸಂಸ್ಥೆಯ ಅಂತರಾಷ್ಟ್ರೀಯ ಪರಿಷತ್ತೊಂದು ಕೆಲ ಸಮಯದ ಹಿಂದೆ ಫಿಲಿಪ್ಪೈನಿನ ಬಾಗಿಯೊ ಎಂಬಲ್ಲಿ ಸೇರಿತ್ತು. ಭಾರತ ಮತ್ತು ದೂರ ಪ್ರಾಂತ್ಯದ ದೇಶಗಳಲ್ಲಿ ಆಹಾರಕೊರತೆಯು ಇನ್ನೂ ತೀವ್ರವಾಗಿದೆಂಬ ಸಂಗತಿಯು ಇದರಲ್ಲಿ ಮತ್ತೊಮ್ಮೆ ಒತ್ತಿಹೇಳಲಾಯಿತು

ಈ ಪ್ರದೇಶಗಳ ಜನಸಂಖ್ಯೆಯು ಯುದ್ಧಪೂರ್ವದಲ್ಲೇ ಸುಮಾರು ೧೧೨೫ ಮಿಲಿಯಗಳಷ್ಟಿತ್ತು. ಪಾಶ್ಚಿಮಾತ್ಯ ಜನರ ಜೀವನಮಟ್ಟದ ದೃಷ್ಟಿಯಿಂದ ಅವಲೋಕಿಸುವಾಗ ಈ ಪ್ರದೇಶಗಳ ಜನರು ತೀರ ದರಿದ್ರಾವಸ್ಥೆಯಲ್ಲೇ ಹೆಚ್ಚಾಗಿ ಮುಳುಗಿರುವರೆಂಬ ಸಂಗತಿಯು ಸಾಧ್ಯಕ್ಷವಾಗುತ್ತದೆ. ಈ ಜನಾಂಗಗಳಲ್ಲಿ ಕುಟುಂಬ ಒಂದರ ಅತೀ ಹೆಚ್ಚಿನ ಆದಾಯಾಂಶವು ಹೊಟ್ಟೆತುಂಬಿಸುವುದಕ್ಕೇ ವ್ಯಯಿಸಲ್ಪಡುವುದು ಮಿಕ್ಕುಳಿದ ಅಲ್ಪ ಅಂಶವು ಬಟ್ಟೆ ಮತ್ತಿತರ ಜೀವನ ಸೌಕರ್ಯಗಳಿಗೆ ಸರಿದೂಗಿಸಲು ಹೋರಾಟನಡೆಸಲ್ಪಡುವುದು ಆಹಾರಕ್ಕಾಗಿ ಹೆಚ್ಚು ವ್ಯಯಿಸುತ್ತಾರೆಂದ ಮಾತ್ರಕ್ಕೆ ಅಲ್ಲಿಯ ಜನರು ಶ್ರೇಷ್ಠ ತರಗತಿಯ ಮತ್ತು ಹೆಚ್ಚು ಪ್ರಮಾಣದ ಆಹಾರವನ್ನು ಸೇವಿಸುತ್ತಿರುವರೆಂದರ್ಥವಲ್ಲ ಹೆಚ್ಚಿನ ಹಣವು ಅಗ್ಗದ ನಿರ್ಬಲ ಆಹಾರಸತ್ವಗಳಿರುವ ದವಸಧಾನ್ಯಗಳ ಮೇಲೆ ವ್ಯಯಿಸಲಾಗುವುದು ಪುಷ್ಟಿಕರ ಆಹಾರಪ್ರಮಾಣ ಸೇವನೆಯು ಇದರಲ್ಲಿ ಬಹಳ ಕಮ್ಮಿಯಲ್ಲದೆ ಸತ್ವಭರಿತ ಆಹಾರಗಳ ಪ್ರಮಾಣ ಸಾಮರಸ್ಯವೂ ಅನುಸರಿಸಲ್ಪಡುವುದಿಲ್ಲ

ಜನಸಂಖ್ಯೆ ಗಣನೆ

ಪೌರ್ವಾತ್ಯ ದೇಶಗಳಲ್ಲಿ ತಲೆಯೊಂದರ ಉತ್ಪತ್ತಿಪ್ರಮಾಣವು ಕಡಿಮೆಯಾಗಿರುವುದೇ ಈ ಕಡೆಯ ಜನರ ನಿಕೃಷ್ಟ ಆರ್ಥಿಕ ಪರಿಸ್ಥಿತಿಗೆ ಮುಖ್ಯವಾದ ಕಾರಣ ಬಡತನದಿಂದ ಕಂಗಾಲಾದ ಜನತೆ ಹೊಸ ವಿಧಾನ ಮತ್ತು ಆಧುನಿಕ ರೀತಿಗಳನ್ನು ಅನ್ವಯಿಸಿಕೊಳ್ಳಲು ಸಮರ್ಥವಾಗದು ಅಲ್ಲದೆ ದೂರ ಪ್ರಾಂತ್ಯದ ಈ ಪ್ರದೇಶಗಳಲ್ಲಿ ನೂತನ ವಿಧಾನಗಳಿಂದಲೂ ಅತೀ ಹೆಚ್ಚಿನ ನಿಸರ್ಗ ಸಂಪತ್ತನ್ನೂ ಪಡೆಯಲಾಗುವುದಿಲ್ಲ ಯುದ್ಧಾನಂತರ ಅಲ್ಲಿನ ಹಲವು ದೇಶಗಳಲ್ಲಿ ಜನಸಂಖ್ಯೆಯೂ ಹದಮೀರಿ ಬೆಳೆದಿರುವುದರಿಂದಲೂ ಆಹಾರ ಸಂಗ್ರಹವನ್ನು ತೃಪ್ತಿಕರವಾಗಿ ಹಂಚಲಿಕ್ಕಾಗುವುದಿಲ್ಲ

ಭಾರತ ಮತ್ತು ದೂರಪೂರ್ವದ ದೇಶಗಳಲ್ಲಿ ವರ್ಷಕ್ಕೆ ಸುಮಾರು ೮೦ ಲಕ್ಷ ಜನಸಂಖ್ಯೆ ಹೆಚ್ಚುತ್ತದೆ ಇದರಿಂದ ಆಹಾರ ಸಮಸ್ಯೆಯು ಹೇಗೆ ಗಂಭೀರಾಕೃತಿ ತಾಳುತ್ತದೆಂಬುದರ ಸ್ವಲ್ಪ ಅಂದಾಜು ಸಿಗುತ್ತದೆ ಏಷ್ಯ ಮತ್ತು ದೂರ ಪೂರ್ವ ದೇಶಗಳ ಆರ್ಥಿಕ ದುರ್ದಶೆ ಪರಿಶೋಧನಾ ಸಮಿತಿಯವರು ಈ ಸಂಗತಿಯನ್ನು ತಮ್ಮ ವರದಿಯಲ್ಲಿ ತಿಳಿಸಿರುವರು

ಕನಿಷ್ಟಉತ್ಪತ್ತಿ ಪ್ರಮಾಣ

ಈ ದೇಶಗಳಲ್ಲಿನ ತಲಾ ಒಂದರ ಸರಾಸರಿ ಉತ್ಪತ್ತಿ ಪ್ರಮಾಣವೂ ಅತೀ ಕನಿಷ್ಠ ಮಟ್ಟದ್ದಾಗಿದೆ. ಕೃಷೇತರ ವಸ್ತುಗಳನ್ನು ಕೊಂಡುಕೊಳ್ಳಲು ಇತರ ಸಂಪಾದನೆಯು ಅತ್ಯಲ್ಪವಾಗಿರುತ್ತದೆ. ಆದುದರಿಂದಲೇ ಈ ಕಡೆಯ ದೇಶಗಳಲ್ಲಿ ಶೇಕಡಾ ೬೦ರಿಂದ ೮೦ರಷ್ಟು ಜನರು ಕೃಷಿಗಾರಿಕೆಯನ್ನೇ ಅವಲಂಬಿಸಿದವರಾಗಿದ್ದಾರೆ. ಜಪಾನು,

ಏಷ್ಯದಲ್ಲಿ ಆಹಾರ ಕೊರತೆಯುಂಟಾದ ಕಾರಣ

ಅಕ್ಕಿಯಲ್ಲಿ ಕಲ್ಲು, ಸಕ್ಕರೆಯಲ್ಲಿ ಮರಳು

ಜನತೆಯ ಆರ್ಥಿಕ ದುರ್ದಶೆಯ ಪರಿಣಾಮ

ಮತ್ತು ಚೀನ ಭಾರತಗಳ ಕೆಲವು ಭಾಗಗಳಲ್ಲದೆ ಕೈಗಾರಿಕೆಯು ಯಾವ ಕಡೆಯಲ್ಲೂ ಅಭಿವೃದ್ಧಿ ಹೊಂದಿಲ್ಲ.

ಏಷ್ಯಾಖಂಡದಲ್ಲಿ ಜಗತ್ತಿನ ಅಕ್ಕಿ ಉತ್ಪತ್ತಿಯು ಶೇಕಡಾ ೯೦ರಷ್ಟು ಬೆಳೆಸಲ್ಪಟ್ಟು ಆಹಾರಕ್ಕಾಗಿ ಉಪಯೋಗಿಸಲ್ಪಡುತ್ತದೆ ಯುದ್ಧದ ಮುಂಚೆ ಜಗತ್ತಿನ ಒಟ್ಟು ಅಕ್ಕಿ ಉತ್ಪತ್ತಿ ೧೧೦,೬೦೦,೦೦೦ ಟನ್ನುಗಳಷ್ಟು ಇದರಲ್ಲಿ ೧೦೨,೫೦೦,೦೦೦ ಟನ್ನುಗಳು ಏಷ್ಯದಲ್ಲೇ ಬೆಳೆಸಲ್ಪಟ್ಟಿತ್ತು ಅಕ್ಕಿಯ ಅಂತರಾಷ್ಟ್ರೀಯ ವ್ಯವಹಾರವೂ ಏಷ್ಯದಲ್ಲೇ ಹೆಚ್ಚಾಗಿ ಸಾಗುವುದು. ಜಗತ್ತಿನ ಎಲ್ಲಾ ದೇಶಗಳು ಯುದ್ಧಪೂರ್ವದಲ್ಲಿ ಆಮದು ಮಾಡಿಕೊಂಡ ಅಕ್ಕಿ ೭,೩೦೦,೦೦೦ ಟನುಗಳು ಅದರಲ್ಲಿ ಏಷ್ಯದ ದೇಶಗಳು ೫,೩೦೦,೦೦೦ ಟನ್ನುಗಳಷ್ಟನ್ನು ತರಿಸಿದವು ಅಕ್ಕಿ ತರಿಸಿಕೊಳ್ಳುವ ಮುಖ್ಯ ದೇಶಗಳು, ಭಾರತ, ಚೀನಾ ಮತ್ತು ಮಲಯಾಗಳು

ಹಂಚಾಟದ ತೊಂದರೆ

ಕಳೆದ ಯುದ್ಧದ ಯುದ್ಧಕ್ಷೇತ್ರಗಳಾದ ಈ ಕಡೆಯ ಹಲವು ಅಕ್ಕಿ ಪ್ರಧಾನ ದೇಶಗಳ ಉತ್ಪತ್ತಿಯು ಬಹಳ ಕಡಿಮೆಯಾದಂತಾಯಿತು ಹಾಳುಗೆಡವಲ್ಪಟ್ಟ ನೀರಾವರಿ ಕೆಲಸಗಳಿಂದ ದಾಸ್ತಾನಿರಿಸುವ ಏರ್ಪಾಡುಗಳಿಲ್ಲದಿರುವುದರಿಂದ, ಹೊಲಗಳಲ್ಲಿ ಕೆಲಸಮಾಡಲು ಸಾಕಷ್ಟು ಪ್ರಾಣಿಗಳಿಲ್ಲದೆ, ಬೇಕಾದಷ್ಟು ಕೃಷಿಉಪಕರಣಗಳಿಲ್ಲದೆ, ಗೊಬ್ಬರಗಳಿಲ್ಲದೆ, ಹೊಲಗೆಲಸದ ಕೂಲಿಗಳ ಸಂಖ್ಯೆ ಕಡಿಮೆಯಾಗಿ, ಸಾಕಷ್ಟು ವಾಹನ ಸೌಕರ್ಯಗಳಿಲ್ಲದೆ,-ಈ ಕಾರಣಗಳಿಂದ ಉತ್ಪತ್ತಿ ಕಡಿಮೆಯಾಗುವಂತಾಯಿತು ಅದೇ ಸಮಯಕ್ಕೆ ಬೇರೆ ಆಹಾರವಸ್ತುಗಳನ್ನು ಸರಿಯಾದ ದಿಮಾಂಶದಲ್ಲಿ ಹಂಚಲೂ ಬಹಳ ಕಷ್ಟಗಳುಂಟಾದುವು

ಕೆಲವು ದೇಶಗಳಲ್ಲಿನ ರಾಜಕೀಯ ಚಳವಳಿಗಳೂ, ಯಾದವೀಕಲಹಗಳೂ ಈ ಸಂಬಂಧದ ದುಷ್ಪರಿಣಾಮವನ್ನು ಹೆಚ್ಚಿಸಿದುವು ಮಾತ್ರವಲ್ಲ ಅಲ್ಲಿ ಉತ್ಪತ್ತಿಯಾಗುವ ಆಹಾರವಸ್ತುಗಳನ್ನೂ ಯೋಗ್ಯ ಪ್ರಮಾಣದಲ್ಲಿ ಸಂಗ್ರಹಿಸಲೂ ಕಷ್ಟಕಾರಕವೇ ಆಯಿತು

ಹೊರಕಳಿಸುವ ವಸ್ತುಗಳು

ಈ ಸಂಗತಿಗಳಿಂದ ಈ ವರ್ಷ ಕೂಡಾ ಅಕ್ಕಿ ಉತ್ಪತ್ತಿ ದೇಶಗಳಿಂದ ಯುದ್ಧಪೂರ್ವದ ಅರ್ಧದಷ್ಟು ಪ್ರಮಾಣವನ್ನು ಕೂಡಾ ಹೊರಕಳಿಸಲು ಸಾಧ್ಯವಿಲ್ಲವಾಗಿದೆ ಅಕ್ಕಿ ತರಿಸಿಕೊಳ್ಳುವ ದೇಶಗಳಿಗಾದರೂ ಮುಂಚಿನ ಮೂರನೇ ಒಂದಂಶದಷ್ಟು ಅಕ್ಕಿಯನ್ನು ತರಿಸಿಕೊಳ್ಳಲೂ ಸಾಧ್ಯವಿಲ್ಲದಾಗಿದೆ ಅಕ್ಕಿಯನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಮಾಡಿಕೊಳ್ಳಲೂ ಕೆಲವು ದೇಶಗಳ ಆರ್ಥಿಕ ದುರ್ದಶೆಯಿಂದಾಗಿ ಕಠಿಣ ಸಾಧ್ಯವಾಗಿದೆ ಇತರ ಕಡೆಗಳಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಘರ್ಷಣೆಯಿಂದುಂಟಾದ ತೊಂದರೆಗಳೂ ಆತಂಕವಾಗಿ ನಿಂತಿವೆ

ಸಿಂಹಳ ಮತ್ತು ಮಲಯಗಳಲ್ಲಿ ಅಕ್ಕಿ ಉತ್ಪತ್ತಿಯು ಹೆಚ್ಚುತ್ತಿದೆ ಬರ್ಮಾವೂ ಅಕ್ಕಿ ಉತ್ಪಾದನೆಯ ಕಾರ್ಯವೂ ಪ್ರಗತಿಪರವಾಗಿ ಸಾಗುತ್ತಿದೆ ೧೯೪೮ರಲ್ಲಿ ಈ ದೇಶಗಳಿಂದ ಸುಮಾರು ೧,೨೦೦,೦೦೦ ಟನ್ನುಗಳಷ್ಟು ರಫ್ತು ಆಗಬಹುದೆಂದೂ (೧೯೪೭ರಲ್ಲಿ ರಫ್ತು ೬೩೫,೦೦೦ ಟನ್ನು) ನಿರೀಕ್ಷಿಸಿದೆ ಯುದ್ಧಕ್ಕೆ ಮುಂಚೆ ಈ ದೇಶಗಳಿಂದ ೨,೯೫೦,೦೦೦ ಟನ್ನುಗಳಷ್ಟು ಅಕ್ಕಿ ರಫ್ತಾಗುತ್ತಿತ್ತೆಂಬ ಸಂಗತಿ ಗಣನೀಯ.

ಹಿಂದೂಸ್ಥಾನ ಪಾಕಿಸ್ಥಾನಗಳಲ್ಲಿ ೧೯೪೬-೪೭ರಲ್ಲಿ ೨೮,೦೦೦,೦೦೦ ಟನ್ನುಗಳಷ್ಟು ಬೆಳೆದಿತ್ತು ಈ ವರ್ಷ ಎರಡು ವಸಾಹತುಗಳಲ್ಲಿನ ಅಶಾಂತಿಮಯ ವಾತಾವರಣಗಳಿಂದ ಕಳೆದ ವರ್ಷಕ್ಕಿಂತಲೂ ಅಕ್ಕಿ ಕಡಿಮೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಗೊಬ್ಬರಗಳ ಆವಶ್ಯಕತೆ

ಏಷ್ಯಾದಲ್ಲುಂಟಾದ ಅಕ್ಕಿಯ ಕೊರತೆಯಿಂದ ಜಗತ್ತಿನ ಇತರ ದವಸಧಾನ್ಯಗಳ ಮೇಲೆ ಹೆಚ್ಚು ಒತ್ತಡಬಿದ್ದಿದೆ ಹಿಂದೂಸ್ಥಾನ ಪಾಕಿಸ್ಥಾನಗಳಿಗೆ ೧೯೪೭-೪೮ರಲ್ಲಿ ೨,೦೦೦,೦೦೦ ಟನ್ನುಗಳಷ್ಟು ಆಹಾರಧಾನ್ಯಗಳು ಹೊರದೇಶಗಳಿಂದ ಸರಬರಾಯಿಯಾಗಿದೆ ಯುದ್ಧಪೂರ್ವದಲ್ಲಿ ಭಾರತ ದೇಶವು ಪರದೇಶಗಳಿಗೆ ಅಲ್ಪಪ್ರಮಾಣದಲ್ಲಾದರೂ ಧಾನ್ಯಗಳನ್ನು ರಫ್ತು ಮಾಡುವ ಸುಸ್ಥಿತಿಯಲ್ಲಿತ್ತೆನ್ನುವಾಗ ಅಲ್ಲಿನ ಆಹಾರ ಕೊರತೆಯ ಗಂಭೀರತೆಯೆಷ್ಟೆಂದು ಮುಂದಟ್ಟಾಗುತ್ತದೆ

ಏಷ್ಯಾಖಂಡದಲ್ಲುಂಟಾದ ಈ ಕೃಷಿ ಉತ್ಪತ್ತಿಯ ಅವ್ಯವಸ್ಥೆಯಿಂದ ಜಗತ್ತಿನ ಎಣ್ಣೆ ಕೊಬ್ಬುಗಳ ಸರಬರಾಯಿಗೆ ತುಂಬಾ ಧಕ್ಕೆಯಿದೆ. ಹಿಂದೂಸ್ಥಾನ ಪಾಕಿಸ್ಥಾನಗಳ ಆಹಾರ ದುರ್ದಶೆಯಿಂದಾಗಿ ಈ ವಸಾಹತುಗಳಿಂದ ಹೊರಕಳಿಸಲು ಸಾಧ್ಯವಾಗುವ ಕೆಲವೇ ವಸ್ತುಗಳ ಪ್ರಮಾಣಗಳಿಗಿಂತ ಈ ವಸಾಹತುಗಳಿಗೆ ಬೇಕಾಗುವ ಎಣ್ಣೆ ಕೊಬ್ಬುಗಳ ಪ್ರಮಾಣವೇ ಹೆಚ್ಚಾದೀತು. ಚೀನಾ ಮಂಚೂರಿಯಾಗಳಿಂದ ಯಾವುದಾದರೂ ಎಣ್ಣೆಕಾಳುಗಳು ಸಿಗುವುದು ಈ ವರ್ಷದ ಮಟ್ಟಿಗೆ ಕಷ್ಟಕಾರಕವೇ ಯೆನ್ನಬಹುದು ಫಿಲಿಫ್ಪೈನ್ ಮತ್ತು ಸಿಂಹಳ ದ್ವೀಪಗಳಲ್ಲಿ ಮಾತ್ರ ತೆಂಗಿನ ಉತ್ಪತ್ತಿಯು ತಕ್ಕಮಟ್ಟಿಗೆ ಸ್ಥಿಮಿತಕ್ಕೆ ಬಂದಿದೆ

ಏಷ್ಯಾಖಂಡದ ಬೆಳೆಗಳನ್ನು ಅಭಿವೃದ್ಧಿಪಡಿಸಲು ಮುಖ್ಯವಾಗಿ ಹೆಚ್ಚೆಚ್ಚು ಗೊಬ್ಬರಗಳ ಸರಬರಾಯಿಯಾಗಬೇಕು—ವಿಶೇಷವಾಗಿ ನ್ಯಾಟ್ರೋಜನ್ನು ಜಗತ್ತಿನಲ್ಲೇ ಈ ಕೃಷಿಆಹಾರ ಧಾತುವಿನ ಪ್ರಮಾಣವು ಕಡಿಮೆಯಾಗಿರುವಾಗ ಸದ್ಯಕ್ಕೆ ಅದನ್ನಲ್ಲಿಂದ ಪೂರೈಸಿಕೊಳ್ಳಬಹುದೆಂಬುದೇ ಗಡುತರವಾದ ಸಮಸ್ಯೆಯಾಗಿದೆ



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆ ಡಿಪನುಸಿನೆಗಡಗಿಸುತ್ತದೆ ಚರ್ಮ ಸ್ವಚ್ಛವಾಗಿ ರಿಟೆಗ್ಗಿಳಿಸುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಅಮೇರಿಕದಲ್ಲಿ ನಮ್ಮ ದೇಶದ ಮಂಗಗಳಿಗೆ ಮತ್ತು ಹೆಬ್ಬಾವುಗಳಿಗೆ ತುಂಬ [illegible] ಬರುತ್ತದೆ ಮಂಗಗಳನ್ನು ಮನೆಯಲ್ಲಿ ಸಾಕಲೂ ೧೫೦೦ ದ ೨೦೦೦ರ ತನಕ [illegible] ಸಮಯದ ಹಿಂದೆ ಅಮೇರಿಕಕ್ಕೆ ಹೋಗುವ ಒಂದು ಹಡಗದಲ್ಲಿ ವಿಶೇಷ ವ್ಯವಸ್ಥೆಮಾಡಿ ೩೦೦ ವಾನರಗಳನ್ನು ಹತ್ತು ಹೆಬ್ಬಾವುಗಳನ್ನು ಕೊಂಡೊಯ್ಯಲಾಗಿದೆ

(೧ನೇ ಪುಟದಿಂದ)

ಗಾಂಧೀ ಶಿಕ್ಷಣ

ಮಹಾತ್ಮಾ ಗಾಂಧಿಯವರು ನಮಗೆ ಅನೇಕ ವಿಷಯಗಳನ್ನು ಕಲಿಸಿದ್ದಾರೆ ಕೆಟ್ಟ ಮಾರ್ಗದಿಂದ ಒಳ್ಳೆ ಧ್ಯೇಯಕ್ಕೆ ಮುಟ್ಟಲು ಸಾಧ್ಯವಿಲ್ಲವೆಂದವರ ಉಪದೇಶವು ಗಮನೀಯವಾದುದು ಇತ್ತೀಚಿನ ಜಾಗತಿಕ ಆಂತರಿಕ ವಿಪ್ಲವಗಳಿಂದದು ನಮಗೆ ಸ್ಪಷ್ಟವಾಗುತ್ತದೆ ಸತ್ಯಧರ್ಮಗಳಿಲ್ಲದ [illegible] ಸಮಾಜವೊಂದರ ರಚನೆ ಸಾಧ್ಯವಿಲ್ಲ

ಪ್ರಜಾಪ್ರಭುತ್ವದಲ್ಲಿ ಜನತೆ ಸರಕಾರದ ಮೇಲೆ ಹೊಂದಿಕೊಂಡಿರಬಾರದು. ಎಲ್ಲವನ್ನು ಸರಕಾರವೇ ಮಾಡುವಂತಾದರೆ ಆಗ ಕಟ್ಟುನಿಟ್ಟಿನ ಶಿಸ್ತಿನ ಸಮಾಜವನ್ನುಂಟುಮಾಡುವುದು ಆಗ ವ್ಯಕ್ತಿ ಸ್ವಾತಂತ್ರ್ಯಕ್ಕೆ (ನಾಜೀ ಜರ್ಮನಿಯಲ್ಲಿ, ಕಮ್ಯೂನಿಸ್ಟ್ ರಶ್ಯದಲ್ಲಿ ಹೀಗಿದೆ) ಕೊಡಲಿಬೀಳುವಂತಾಗಿ ವ್ಯಕ್ತಿಯು ದೊಡ್ಡದೊಂದು ಮಾನವಯಂತ್ರದ ಮೊಳೆಯಾಗುತ್ತಾನೆ ಸೋಶಲಿಸ್ಟರ ಧ್ಯೇಯ ಇಂತಹದೆಂದಿಗೂ ಇರುವುದಿಲ್ಲ

ಪ್ರಜಾಪ್ರಭುತ್ವವು ಉನ್ನತ ಪರಿಪೂರ್ಣತೆಗೆ ಮುಟ್ಟಿದಾಗ ಆಡಳಿತಾಂಗವು ಸಂಪೂರ್ಣ ಮಾಯವಾಗುತ್ತದೆ ಸರ್ವಾಧಿಕಾರವು ಯಾವ ರೂಪದಲ್ಲೂ ಪ್ರಜಾಪ್ರಭುತ್ವದೆಡೆ ಸಾಗಲಾರದು ಇದು ರಶ್ಯದ ಈಗಿನ ಆಡಳಿತಗಾರರ ವಿವರಣೆ ಇದನ್ನು ಸೋಶಲಿಸ್ಟರೆಂದಿಗೂ ಒಪ್ಪಲಾರರು ಪರಿಪೂರ್ಣ ಮಾದರಿಯ ಪ್ರಜಾಪ್ರಭುತ್ವವನ್ನೇ ಸೋಶಲಿಸ್ಟ್ ಸಮತಾವಾದಿಗಳ ಹೆಗ್ಗುರಿಯಾಗಿದೆ.

ಒಂದು ಭಾಷೆಯಿಂದ ಒಂದು ದೇಶ ಹಾಳಾಯಿತು

ಆಂಗ್ಲ ಮಾಧ್ಯಮದಿಂದ ಹಿಂದೀ ಸಂಸ್ಕೃತಿಗೆ ಧಕ್ಕೆ

ರಾಜಾರಾಮ ಮೋಹನ ರಾಯರು ಇದಕ್ಕೆ ಒಪ್ಪಿದರೆ?

ನಮ್ಮ ದೇಶದಲ್ಲೀಗ ಪ್ರಾಂತಿಕ ಭಾಷೆಗಳು ಶಿಕ್ಷಣಮಾಧ್ಯಮವಾಗಿ ಅಳವಡಿಸದೇಕೆಂಬ ಚಳವಳ ಬಿರುಸಾಗಿ ಸಾಗುತ್ತಿದೆ. ಪ್ರಾಂತ್ಯ ಭಾಷೆ, ಭಾಷಾ ಪ್ರಾಂತ್ಯ ಇವೇ ಇಂದಿನ ಸ್ವಾತಂತ್ರ್ಯಾನಂತರದ ಘೋಷಣೆಗಳಾಗಿವೆ. ಆದರೆ ಈ ಕೆಲಸವು ಅನೇಕರು ಕಲ್ಪಿಸಿಕೊಂಡಷ್ಟು ಸುಲಭವಲ್ಲ. ಕಾರಣ ಇಂದಿಗೆ ಸುಮಾರು ಒಂದು ಶತಮಾನದಿಂದ ಪರಕೀಯ ಆಡಳಿತ ಬಲಾತ್ಕಾರದಿಂದ ನಮ್ಮ ಜನಜೀವನದಲ್ಲಿ ಬಿಗಿಯಾಗಿ ಬೇರೂರಿದ ಆಂಗ್ಲ ಭಾಷೆಯ ವಿಷವೃಕ್ಷವನ್ನು ಕಿತ್ತೊಗೆಯುವುದು ಸುಲಭ ಸಾಧ್ಯವಲ್ಲ. ವಿಶಾಲವಾಗಿ ಆವರಿಸಿಕೊಂಡ ಇದರ ಎಲೆ ಕೊಂಬೆಗಳ, ಆಶ್ರಯದಲ್ಲಿ ನಮ್ಮ ಇಂದಿನ ದೇಶ ಶಿಕ್ಷಣವು ತನ್ನ ದುಷ್ಪರಿಣಾಮಕಾರಿ ಹುಲು ಕಳೆಗಳನ್ನು ಬೆಳೆಸಿ ಬೆಳೆದಿರುವುದು. ಜಗತ್ತಿನಲ್ಲಿಯೂ ಆಂಗ್ಲ ಭಾಷೆ ವಿಶಾಲವಾಗಿ ಬಳಕೆಯಲ್ಲಿರುವುದು. ನಮ್ಮ ದೇಶದಲ್ಲಿನ ಪರಿಶೋಧನಾತ್ಮಕ ವಿಜ್ಞಾನ ಗ್ರಂಥಗಳೂ, ಶಾಸನ ಸೂತ್ರಗಳೂ, ಅದೇ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಇವುಗಳನ್ನು ಪ್ರಾಂತೀಯ ಭಾಷೆಗಳಿಗೆ ತರ್ಜುಮೆಮಾಡಲು ಅಂತರ್ವಾಣೀಯ ಪಾರಿಭಾಷಿಕ ಶಬ್ದಗಳು (Technical Terms) ರಚಿಸಲ್ಪಡಬೇಕಾಗಿವೆ. ಪಠ್ಯ ಪುಸ್ತಕಗಳ ಪ್ರಾಂತೀಯ ಭಾಷೆಗಳಲ್ಲಿ ಆಧುನಿಕ ಶಿಕ್ಷಣ ಪದ್ಧತಿಗನುಸಾರವಾಗಿ ಬರೆಯಲ್ಪಡಬೇಕಾಗಿವೆ.

ನಮ್ಮ ದೇಶದಲ್ಲಿ ಆಂಗ್ಲ ಭಾಷೆಯ ಮೂಲಕ ಪಾಶ್ಚಾತ್ಯ ಮನೋಭಾವವನ್ನುಂಟುಮಾಡಿ ರಾಷ್ಟ್ರೀಯತೆಯ ಎಲೆಗೊಂದು ಗುಂಡುಗಲ್ಲನ್ನೆಸೆದು ಒಹುಪಟ್ಟಿಗೆ ಯಶಸ್ವಿಯಾದ ಪುಣ್ಯಾತ್ಮನೆಂದರೆ ಲೋರ್ಡ್ ಮೆಕೋಲೆ. ಆಂಗ್ಲ ಶಿಕ್ಷಣದಿಂದ ಚಿತ್ತಭ್ರಮೆಗೊಂಡ ಕೆಲ ಶಿಕ್ಷಿತ ಹಿಂದಿಯರ ಕಣ್ಣಿಗೆ ಆಂಗ್ಲ ಶಿಕ್ಷಣಕ್ರಮವು ಬ್ರಿಟಿಷರು ಭಾರತಕ್ಕಿತ್ತ ದೊಡ್ಡ ಪಾರಿತೋಷಕವೆಂದೆನಿಸಿದೆ. ಶ್ರೀ ಪಿ. ಹೆಚ್. ದ್ಗರಿಸಿದ್ದಾರೆ. ಲಂಡನ್ನಿನಲ್ಲಿರುವ ಡಾ. ರಂಜೀತಾಹಾಸಿ ಅವರು ಈ ಕುರಿತು ಒಂದು ಲೇಖನದಲ್ಲಿ ಹೀಗೆ ತಿಳಿಸುತ್ತಾರೆ.

ಲೋರ್ಡ್ ಮೆಕೋಲೆಯವರಿಗೆ ಪೌರ್ವಾತ್ಯ ಸಾಹಿತ್ಯ ಸಂಸ್ಕೃತಿಗಳ ಮೇಲೆ ತುಚ್ಛೀಕಾರದ ದೃಷ್ಟಿಯಿತ್ತು. ಪೌರ್ವಾತ್ಯರ ಎಲ್ಲಾ ಸಾಹಿತ್ಯವು ಪಾಶ್ಚಾತ್ಯರ ಒಂದು ಕಪಾಟಿನಲ್ಲಿರುವಷ್ಟು ಸಾಹಿತ್ಯಕೃತಿಗಳ ತೂಕಕ್ಕೆ ಸಮತೂಕವೆಂದವರು ಚೀತರಿಸಿದರು. ಈ ಮಹತ್ ಸಂಶೋಧನೆಯು ಕೂಡಲೇ ವಿಶ್ವಕ್ಕೆಲ್ಲ ಪ್ರಚಾರಿಸಲ್ಪಟ್ಟಿತು. ಹೀಗೆ ಮಾಡಿದ್ದು ಅವಿವೇಕದ ಪರಮಾವಧಿ. ಕಾರಣ, ಅಂದಿನಿಂದಿನವರೆಗೆ ಮೆಕೋಲೆಯವರು ಪೌರ್ವಾತ್ಯರ ಕಟುವಿಮರ್ಶೆಯ ಹೆಗ್ಗುರಿಯಾಗಿದ್ದಾರೆ. ಪ್ರಖ್ಯಾತ ಸಾಹಿತ್ಯಾಚಾರ್ಯರಾದ ಪ್ರೊ| ಆರ್ಬೆರಿಯವರು "ಮೆಕೋಲೆಯವರ ವಿವೇಚನೆಯು ದ್ವೇಷಭಾವನೆಯದು ಮಾತ್ರವಲ್ಲ ಅಜ್ಞಾನಭರಿತ ಅಸತ್ಯಸಂಗತಿ ನಿರೂಪಣಾ ವಿಧಾನದ ಮಾದರಿಯೂ ಅವರದಾಗಿದೆ" ಎಂದು ಟೀಕಿಸಿರುವರು.

ಮೆಕೋಲೆಯ ಮೇಲ್ಗೈ

ಮೊದಮೊದಲು ಆಂಗ್ಲ ಸಾಂಪ್ರದಾಯ ಸಂಪರ್ಕಕ್ಕೆ ಬಂದ ಕೆಲ ಸುಶಿಕ್ಷಿತ ಭಾರತೀಯ ಧುರೀಣರು ಮೆಕೋಲೆಯವರ ಅಭಿಪ್ರಾಯಕ್ಕೆ ಮಗುಳ್ನಗೆ ಬೀರಿದರು. "ಕುರುಡನ ಕಣ್ಣಿಗೆ ಕಾಮನಬಿಲ್ಲು ಕಪ್ಪಾಗಿ ಕಾಣುವುದು ಸಹಜ"ವೆಂದವರು ತಾತ್ವಿಕ ತರ್ಕದಿಂದ ನುಡಿದರು. ಆದರೆ ಅವರ ಈ ಅಲಕ್ಷ್ಯತೆಯ ದಲ್ಲಿ ಗಾಬರಿಗೆಡೆಗೊಟ್ಟು ಕಡೆಗೆ ಕ್ರೋಧದ ಅಂತ್ಯವಾಯಿತು. ಕೆಲವೇ ಸಮಯದೊಳಗೆ ಮೆಕೋಲೆಯು ಭಾರತಕ್ಕೆ ಉನ್ನತಾಧಿಕಾರಿಯಾಗಿ ಬಂದು ತನ್ನ ಕಲ್ಪನೆಗಳನ್ನು ಕಾರ್ಯರೂಪಕ್ಕಿಳಿಸಲು ಟೊಂಕ ಬಿಗಿದ!

ಅವನಿಗೆ ಬೇಕಾದುದಾದರೂ ಏನು? ಭಾರತದ ಸಂಪೂರ್ಣ ಪಾಶ್ಚಾತ್ತೀಕರಣ. ಇದು ವಿಪರೀತದ ಯೋಜನೆ. ಅನೇಕರಿಗಿದು ಅತ್ಯಾಚಾರವೆಂದು ಮಂದಟ್ಟಾಯಿತು. ಅಂತೆಯೇ ಅವರು ಇದಕ್ಕೆ ಪ್ರತಿಭಟನೆಯನ್ನೊಡ್ಡಲೂ ಶ್ರಮಿಸಿದರು. ಅಲ್ಲಿಂದ ಪೌರ್ವಾತ್ಯ ಪಾಶ್ಚಾತ್ಯ ಶ್ರೇಷ್ಠತೆಯ ವಿಷಯು ಅನಂತ್ಯವಾದ ತರ್ಕವಿತರ್ಕಗಳಿಗಾರಂಭವಾಯಿತು. ಸೌಭಾಗ್ಯವೆಂಬಂತೆ ಹತ್ತೊಂಬತ್ತನೇ ಶತಮಾನದಲ್ಲಿ ಭಾರತೀಯ ಮತಭಾವನಗಳಲ್ಲಿ ಕ್ರಾಂತಿಕಾರಕ ಭಾವನೆಗಳನ್ನು ತಂದೊಡ್ಡಿದ ರಾಜಾರಾಮಮೋಹನ ರಾಯ್ ಅವರ ಪ್ರಭಾವಿತ ವ್ಯಕ್ತಿತ್ವದ ಬೆಂಬಲ ಮೆಕೋಲೆಯವರಿಗೆ ಸಿಕ್ಕಿತು. ಅಂದಿನಿಂದ ಭಾರತೀಯ ಮನವರ ಪಶ್ಚಿಮದ ಕಡೆ ನೋಡತೊಡಗಿತು.

ಯುರೋಪಿನ ದೌರ್ಬಲ್ಯಗಳನ್ನರಿತಿದ್ದರೂ ಭಾರತಕ್ಕೆ ಮೋಕ್ಷ ದೊರೆಕೀತೆಂಬ ಹೃತ್ಪೂರ್ವ ಮನೋಪಿಚಿತ ಮೆಕೋಲೆಗಿದ್ದಿತು. ಅವರ ಶುದ್ಧ ಇಂಗ್ಲಿತನದ ಯೋಚನೆಯೊಂದು ರುಜುವಾತುಮಾಡಿ ತೋರಿಸುವುದು ಸ್ವಲ್ಪ ಕಷ್ಟದ ಕೆಲಸ. ಒಂದು ಪಾಶ್ಚಾತ್ಯೀಕರಣಾರಂಭ ಕಾಲದ ಭಾರತ ಜನಜೀವನವು ಹರಿಯದೆ ನಿಂತಿರುವ ನೀರಿನ ಕೊಳದಂತಿದ್ದು ಅದನ್ನು ಕದಡಿ ಹರಿಸಲು ಒಂದು ಆಘಾತದ ಕಂಪನವು ಅತ್ಯಾವಶ್ಯಕವಿತ್ತು. ಭಾರತದ ಭೌತಿಕ ಚೇತನವು ಉಕ್ಕಿಹರಿಯುವ ಬದಲಿಗೆ ತಗ್ಗಿನ ಸುಲಭ ಕಾಲುವೆಗಳಲ್ಲಿ ಮಾತ್ರ ಬಿಡಿಬಿಡಿಯಾಗಿ ಹರಿಯುತಿತ್ತು. ಭಾರತವು ಸಿದ್ಧಾಂತಗಳ ಆತ್ಮಗಳ ಭೂಮಿಯಾಗಿತ್ತು. ಪಾಶ್ಚಿಮಾತ್ಯದ ಘಟುವಟಿಕೆಯನ್ನು ಪ್ರಚೋದಿಸುವ ಸಾಂಸ್ಕೃತಿಕ ತಂಗಾಳಿ ಮಾತ್ರ ಭಾರತದ ಸ್ತಬ್ಧ ಪರಿಸ್ಥಿತಿಯನ್ನು ಬದಲಿಸಲು ಶಕ್ಯವಿತ್ತು.

ಆಶ್ಚರ್ಯವೆಂಬಂತೆ ಮೆಕೋಲೆಯ ಯೋಜನೆಯೂ ಅವನೆಣಿಸಿದಂತೆಯೇ ನಡೆಯದಾಯಿತು. ಭಾರತದಲ್ಲವನು ಪಸರಿಸಲು ಪ್ರಯತ್ನಿಸಿದ ಪಾಶ್ಚಾತ್ತೀಕರಣದ ಸ್ಫೂರ್ತಿಯು ಅವನಿಗೇ ವಿರೋಧವಾಗಿ ಉರಿದುಬೀಳುವಂತಾಯಿತು. ಶಿಕ್ಷಣ ಹೊಂದಿದ ಭಾರತೀಯರು ಪ್ರತಿಯೊಂದು ವಿಷಯದ ಕುರಿತು ವಿಚಾರಮಗ್ನರಾದರು. ಯುರೋಪಿನ, ಮುಖ್ಯವಾಗಿ ಇಂಗ್ಲೆಂಡಿನ ಧ್ಯೇಯ ಧೋರಣೆಗಳ ಸತ್ಪರಿಣಾಮಗಳೇನೆಂದವರು ಸಹಜವಾಗಿ ವಿಮರ್ಶೆಮಾಡತೊಡಗಿದರು. ಪಾಶ್ಚಾತ್ತೀಕರಣದ ಕಾರ್ಯವಾರಂಭವಾದಾಗ ಆಂಗ್ಲರು ಸ್ವಯಂಸ್ಫೂರ್ತಿಯಿಂದೆಂಬಂತೆ ತಮ್ಮಲ್ಲಿ ಒಪ್ಪಿನ ಭಂಡಾರವನ್ನು ಭಾರತೀಯರ ಮುಂದೆ ತೆರವಾಗಿಟ್ಟರು.

ಧರ್ಮತತ್ವ ಮತ್ತು ವಿಜ್ಞಾನ

ಹೊರನೋಟಕ್ಕೆ ಈಗಲೂ ಭಾರತವು ಇತರ ಪೌರ್ವಾತ್ಯ ದೇಶಗಳಷ್ಟು ಪಾಶ್ಚಾತ್ತೀಕರಣದ ದೀಕ್ಷೆ ಹೊಂದಿಲ್ಲ. ಲಿಂಗಗಳ ಹೇತುಗಳೂ ನಮ್ಮಲ್ಲಿ ಶಾಶ್ವತ ನೆಲೆ ನಿಲ್ಲಲಿಲ್ಲ. ಈ ವಿಷಯದಲ್ಲಿ ತುರ್ಕಿಯರೂ, ಇರಾನಿಗಳೂ, ಮತ್ತು ನಿಗ್ರೋಗಳೂ ನಮಗಿಂತಷ್ಟು ಮುಂದಿದ್ದಾರೆ. ಆದರೆ ನಾವದನ್ನು ಕಂಡು ಮತ್ಸರ ತಾಳುತ್ತಿಲ್ಲ. ಜಪಾನಿನ ಅನುಕರಣವನ್ನೂ ನಾವು ಮಾಡಿಲ್ಲ. ವಿಶಾಲ ಕೈಕಾರಿಕೆಗಳೂ, ಯುದ್ಧಾಸ್ತ್ರ ಕಾರ್ಖಾನೆಗಳೂ ಪಾಶ್ಚಾತ್ಯರ ನಿಜವಾದ ಅಂತರ್ಭಾವವೆಂದೂ ನಾವು ನಂಬುವುದಿಲ್ಲ.

ಪಾಶ್ಚಾತ್ಯರ ಜೀವನವು ಒಂದು ದೈವೀಕ ಪಾರಿತೋಷಕವೆಂದು ತಿಳಕೊಂಡು ಅದನ್ನು ಆದಷ್ಟು ಶೀಘ್ರದಲ್ಲಿ ಪರಿಪೂರ್ಣತೆಗೆಯ್ಯಲು ಕುತೂಹಲಪಡುವರು. ಜೀವನವು ಪ್ರಗತಿಹೊಂದಬೇಕಾದರೆ ತಾಳ್ಮೆ, ಸ್ವತಂತ್ರ ವಿಚಾರ, ಸತ್ಯಪ್ರಿಯತೆಗಳು ಅತ್ಯಾವಶ್ಯಕವೆಂದವರು ತಿಳಿಯುತ್ತಾರೆ. ಇಲ್ಲಿ ಪಾಶ್ಚಿಮಾತ್ಯರ ಧರ್ಮೀಯ ಮತ್ತು ವೈಜ್ಞಾನಿಕ ಚಳವಳಿಗಳು ಸಮ್ಮೇಳನ ಹೊಂದಿ ಒಂದು ಸಂಪೂರ್ಣ ರೂಪ ತಾಳುತ್ತವೆ. ಈ ಸಂಗತಿಯನ್ನು ಇತರ ಎಲ್ಲಾ ಪೌರ್ವಾತ್ಯರಿಗಿಂತ ಭಾರತೀಯರಾದ ನಾವು ಹೆಚ್ಚು ಸ್ಪಷ್ಟವಾಗಿ ಮನಗಂಡಿದ್ದೇವೆ. ವಿವೇಕಾನಂದ, ಟಾಗೂರ, ಇಕ್ಬಾಲ್ ಅರವಿಂದರುಗಳು ವಿಚಾರ ನಿರೂಪಣೆಗಳನ್ನೋದುವಾಗ ನಮಗೀ ವಿಷಯದ ಸತ್ಯಸ್ಥಿತಿ ಅರಿವಾಗುತ್ತದೆ.

ಪಾಶ್ಚಾತ್ಯರ ವಿಜ್ಞಾನ ದೃಷ್ಟಿಯ ಮೂಲಕವೇ ನಾವು ನಮ್ಮನ್ನೂ ಇತರರನ್ನೂ ತಿಳಕೊಂಡವು. ಬಿಟನ್ನು ಭಾರತಕ್ಕೇನಾದರೂ ಪಾರಿತೋಷಕ ಸಲ್ಲಿಸುವದಾದರೆ ಅದು ಈ ಸ್ವತಂತ್ರ ವಿಚಾರ ಮನೋಭಾವವೇ ಆಗಿದೆ. ಇಂದು ಶಿಕ್ಷಾಂತಿತ ಭಾರತೀಯರು—ಇವರ ಸಂಖ್ಯೆ ವರ್ಷಂಪ್ರತಿ ಹೆಚ್ಚಾಗುತ್ತದೆ ಯಾವ ಸಂಖ್ಯೆಯನ್ನೂ ವಿಮರ್ಶೆಮಾಡದೆ ಸ್ವೀಕರಿಸುವುದಿಲ್ಲ. ಅಂಧ ವಿಶ್ವಾಸದ ಸಂಚಿಕಗಳ ಆ ಕಾಲಕ್ಕೆ ನಾವೆಂದೂ ಶರಣಾಹೊಡೆದಿರುತ್ತೇವೆ.

ವಿಶ್ವಮಾನ್ಯ ವ್ಯಕ್ತಿಗಳು

ವಿಜ್ಞಾನವನ್ನು ನಮ್ಮವರು ಇತ್ತಳವಾಗಿ ಅಭ್ಯಾಸಮಾಡಿದರು. ನಾವು ಅದರಲ್ಲಿ ಪ್ರವೀಣತೆಯನ್ನು ಹೊಂದಲು ಪ್ರಯತ್ನಿಸಲಿಲ್ಲ. ಜಗದೀಶ್ ಚಂದ್ರ ಬೋಸ್, ಸಿ. ವಿ. ರಾಮನ್ ಇವರು ನಮ್ಮಲ್ಲಿನ ವಿಶ್ವವಿಖ್ಯಾತ ವ್ಯಕ್ತಿಗಳ ಒಂಗಾಳ, ಬಂಗಳೂರು ಮತ್ತಿತರ ಕಡೆಗಳಲ್ಲಿ ವಿಜ್ಞಾನಾಭ್ಯಾಸದ ಪರಿಶೋಧನಾಲಯಗಳೂ ಇವೆ. ವೈಜ್ಞಾನಿಕ ಪ್ರಪಂಚದಲ್ಲಿ ಈ ಸಂಸ್ಥೆಗಳಿಗೆ ಗಣ್ಯಸ್ಥಾನವೂ ದೊರೆತಿದೆ. ಕಳೆದ ಯುದ್ಧದಲ್ಲಿ ನಮ್ಮವರು ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದ ಯಂತ್ರ ಮಹಿಮೆಯು ಇಲ್ಲವೇ ಯಂತ್ರ ಮನೋಭಾವದ ಅರಿವನ್ನೂ ನಾವು ಮಾಡಿಕೊಂಡಂತಾಗಿದೆ.

ಹೀಗೆ ನಮ್ಮನ್ನು ಅಧೋಗತಿಗಿಳಿಸಲು ಇಚ್ಛಿಸಿದ ಮೆಕೋಲೆಯ ವಿಷ ನಮ್ಮ ಸತ್ಪರಿಣಾಮ ಅಮೃತವಾಯಿತು. ಅವನ ದುರುದ್ದೇಶಗಳೇನೇ ಇರಲಿ, ಭಾರತೀಯರ ಸೃಷ್ಟಿ ಸಹಜ ನಿಪುಣತೆಯು ಅದನ್ನು ಸತ್ಕಾರ್ಯ ಪವಿತ್ರವಾಗಿ ಮಾಡಿತು. ಚೇತರಿಸಿಕೊಳ್ಳಲು ನಮಗೆ ಪಾಶ್ಚಿಮಾತ್ಯಕರಣದ ಕ್ಷುಲ್ಲುಗು ಆವಶ್ಯಕವಿತ್ತು. ಇಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳು ನಮ್ಮೀ ಈ ಪರಿವರ್ತನೆಯಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿವೆ. ಇಂದಿನ ಕೈಗಾರಿಕೆಗಳು, ಶಸ್ತ್ರಾಸ್ತ್ರ ಸರಂಜಾಮುಗಳೂ ನಾಶವಾಗಬಹುದು. ಆದರೆ ನಮ್ಮಲ್ಲಾದ ವೈಜ್ಞಾನಿಕ ಮನೋಭಾವವೆಂದಿಗೂ ಅಳಿಯದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨[illegible]
೪ರಿಂದ ೫ ತಿಂಗಳು	,,	,,	೨[illegible]
೬ರಿಂದ ೯ ತಿಂಗಳು	,,	,,	೨[illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಜನಾಂಗಸಂಘದೊಂದು ಅಂಗವಾದ 'ಆಹಾರ ಮತ್ತು ಕೃಷಿ ಸಂಸ್ಥೆ'ಯು ಅಂತರಾಷ್ಟ್ರೀಯ ಪರಿಷತ್ತೊಂದು ಕೆಲ ಸಮಯದ ಹಿಂದೆ ಫಿಲಿಪ್ಪಾಯಿನ ಬಾಗ್ಯೊ ಎಂಬಲ್ಲಿ ಸೇರಿತ್ತು. ಭಾರತ ಮತ್ತು ದೂರ ಪ್ರಾಂತ್ಯದ ದೇಶಗಳಲ್ಲಿ ಆಹಾರಕೊರತೆಯು ಇನ್ನೂ ತೀವ್ರವಾಗಿದೆಂಬ ಸಂಗತಿಯು ಇದರಲ್ಲಿ ಮತ್ತೊಮ್ಮೆ ಒತ್ತಿಹೇಳಲಾಯಿತು

ಈ ಪ ದೇಶಗಳ ಜನಸಂಖ್ಯೆಯು ಯುದ್ಧ ಪೂರ್ವದಲ್ಲೇ ಸುಮಾರು ೧೧೨೫ ಮಿಲಿಯಗಳಷ್ಟಿತ್ತು. ಪಾಶ್ಚಿಮಾತ್ಯ ಜನರ ಜೀವನ ಮಟ್ಟದ ದೃಷ್ಟಿಯಿಂದ ಅವಲೋಕಿಸುವಾಗ ಈ ಪ್ರದೇಶಗಳ ಜನರು ತೀರ ದರಿದ್ರಾವಸ್ಥೆಯಲ್ಲೇ ಹೆಚ್ಚಾಗಿ ಮುಳುಗಿರುವರೆಂಬ ಸಂಗತಿಯು ಸಾದೃಶ್ಯವಾಗುತ್ತದೆ. ಈ ಜನಾಂಗಗಳಲ್ಲಿ ಕುಟುಂಬ ಒಂದರ ಅತೀ ಹೆಚ್ಚಿನ ಆದಾಯಾಂಶವು ಹೊಟ್ಟೆತುಂಬಿಸುವುದಕ್ಕೇ ವ್ಯಯಿಸಲ್ಪಡುವುದು ಮಿಕ್ಕುಳಿದ ಅಲ್ಪ ಅಂಶವು ಬಟ್ಟೆ ಮತ್ತಿತರ ಜೀವನ ಸೌಕರ್ಯಗಳಿಗೆ ಸರಿದೂಗಿಸಲು ಹೋರಾಟನಡೆಸಲ್ಪಡುವುದು ಆಹಾರಕ್ಕಾಗಿ ಹೆಚ್ಚು ವ್ಯಯಿಸುತ್ತಾರೆಂದ ಮಾತ್ರಕ್ಕೆ ಅಲ್ಲಿಯ ಜನರು ಶ್ರೇಷ್ಠ ತರಗತಿಯ ಮತ್ತು ಹೆಚ್ಚು ಪ್ರಮಾಣದ ಆಹಾರವನ್ನು ಸೇವಿಸುತ್ತಿರುವರೆಂದರ್ಥವಲ್ಲ ಹೆಚ್ಚಿನ ಹಣವು ಅಗ್ಗದ ನಿರ್ಬಲ ಆಹಾರಸತ್ವಗಳಿರುವ ಧವಸಧಾನ್ಯಗಳ ಮೇಲೆ ವ್ಯಯಿಸಲಾಗುವುದು. ಪುಷ್ಟಿಕರ ಆಹಾರಪ್ರಮಾಣ ಸೇವನೆಯು ಇದರಲ್ಲಿ ಬಹಳ ಕಮ್ಮಿಯಲ್ಲದೆ ಸತ್ವಭರಿತ ಆಹಾರಗಳ ಪ್ರಮಾಣ ಸಾಮರಸ್ಯವೂ ಅನುಸರಿಸಲ್ಪಡುವುದಿಲ್ಲ

ಜನಸಂಖ್ಯೆ ಗಣನೆ

ಪೌರ್ವಾತ್ಯ ದೇಶಗಳಲ್ಲಿ ತಲೆಯೊಂದರ ಉತ್ಪತ್ತಿ ಪ್ರಮಾಣವು ಕಡಿಮೆಯಾಗಿರುವುದೇ ಈ ಕಡೆಯ ಜನರ ನಿಕೃಷ್ಟ ಆರ್ಥಿಕ ಪರಿಸ್ಥಿತಿಗೆ ಮುಖ್ಯವಾದ ಕಾರಣ ಬಡತನದಿಂದ ಕಂಗಾಲಾದ ಜನತೆ ಹೊಸ ವಿಧಾನ ಮತ್ತು ಆಧುನಿಕ ರೀತಿಗಳನ್ನು ಅನ್ವಯಿಸಿಕೊಳ್ಳಲು, ಸಮರ್ಥವಾಗದು ಅಲ್ಲದೆ ದೂರ ಪ್ರಾಂತ್ಯದ ಈ ಪ್ರದೇಶಗಳಲ್ಲಿ ನೂತನ ವಿಧಾನಗಳಿಂದಲೂ ಅತೀ ಹೆಚ್ಚಿನ ನಿಸರ್ಗ ಸಂಪತ್ತನ್ನೂ ಪಡೆಯಲಾಗುವುದಿಲ್ಲ ಯುದ್ಧಾನಂತರ ಅಲ್ಲಿನ ಹಲವು ದೇಶಗಳಲ್ಲಿ ಜನಸಂಖ್ಯೆಯೂ ಹದಮಿಕ್ಕಿ ಬೆಳೆದಿರುವುದರಿಂದಲೂ ಆಹಾರ ಸಂಗ್ರಹವನ್ನು ತೃಪ್ತಿಕರವಾಗಿ ಹಂಚಲಿಕ್ಕಾಗುವುದಿಲ್ಲ

ಭಾರತ ಮತ್ತು ದೂರಪೂರ್ವದ ದೇಶಗಳಲ್ಲಿ ವರ್ಷಕ್ಕೆ ಸುಮಾರು ೮೦ ಲಕ್ಷ ಜನಸಂಖ್ಯೆ ಹೆಚ್ಚುತ್ತದೆ ಇದರಿಂದ ಆಹಾರ ಸಮಸ್ಯೆಯು ಹೇಗೆ ಗಂಭೀರಾಕೃತಿ ತಾಳುತ್ತದೆಂಬುದರ ಸ್ವಲ್ಪ ಅಂದಾಜು ಸಿಗುತ್ತದೆ. ಆಸ್ಯ ಮತ್ತು ದೂರ ಪೂರ್ವ ದೇಶಗಳ ಆರ್ಥಿಕ ದುರ್ದೆಶೆ ಪರಿಶೋಧನಾ ಸಮಿತಿಯವರು ಈ ಸಂಗತಿಯನ್ನು ತಮ್ಮ ವರದಿಯಲ್ಲಿ ತಿಳಿಸಿರುವರು.

ಕನಿಷ್ಠ ಉತ್ಪತ್ತಿ ಪ್ರಮಾಣ

ಈ ದೇಶಗಳಲ್ಲಿನ ತಲಾ ಒಂದರ ಸರಾಸರಿ ಉತ್ಪತ್ತಿ ಪ್ರಮಾಣವೂ ಅತೀ ಕಮ್ಮಿ ಮಟ್ಟದ್ದಾಗಿದೆ. ಕೃಷೇತರ ವಸ್ತುಗಳನ್ನು ಕೊಂಡುಕೊಳ್ಳಲು ಇವರ ಸಂಪಾದನೆಯು ಅತ್ಯಲ್ಪವಾಗಿರುತ್ತದೆ. ಆದುದರಿಂದಲೇ ಈ ಕಡೆಯ ದೇಶಗಳಲ್ಲಿ ಶೇಕಡಾ ೬೦ರಿಂದ ೮೦ರಷ್ಟು ಜನರು ಕೃಷಿಗಾರಿಕೆಯನ್ನೇ ಅವಲಂಬಿಸಿದವರಾಗಿದ್ದಾರೆ. ಜಪಾನು,

ಆಸ್ಯದಲ್ಲಿ ಆಹಾರ ಕೊರತೆಯುಂಟಾದ ಕಾರಣ

ಅಕ್ಕಿಯಲ್ಲಿ ಕಲ್ಲು, ಸಕ್ಕರೆಯಲ್ಲಿ ಮರಳು

ಜನತೆಯ ಆರ್ಥಿಕ ದುರ್ದಶೆಯ ಪರಿಣಾಮ

ಮತ್ತು ಚೀನ ಭಾರತಗಳ ಕೆಲವು ಭಾಗಗಳಲ್ಲದೆ ಕೈಗಾರಿಕೆಯು ಯಾವ ಕಡೆಯಲ್ಲೂ ಅಭಿವೃದ್ಧಿ ಹೊಂದಿಲ್ಲ.

ಆಸ್ಯಾಖಂಡದಲ್ಲಿ ಜಗತ್ತಿನ ಅಕ್ಕಿ ಉತ್ಪತ್ತಿಯು ಶೇಕಡಾ ೯೦ರಷ್ಟು ಬೆಳೆಸಲ್ಪಟ್ಟು ಆಹಾರಕ್ಕಾಗಿ ಉಪಯೋಗಿಸಲ್ಪಡುತ್ತದೆ. ಯುದ್ಧದ ಮುಂಚೆ ಜಗತ್ತಿನ ಒಟ್ಟು ಅಕ್ಕಿ ಉತ್ಪತ್ತಿ ೧೦೦,೬೦೪,೦೦೦ ಟನ್ನುಗಳಷ್ಟು ಅದರಲ್ಲಿ ೧೦೨,೫೦೦,೦೦೦ ಟನ್ನುಗಳ, ಆಸ್ಯದಲ್ಲೇ ಬೆಳೆಸಲ್ಪಟ್ಟಿತ್ತು. ಅಕ್ಕಿಯ ಅಂತರಾಷ್ಟ್ರೀಯ ವ್ಯವಹಾರವೂ ಆಸ್ಯದಲ್ಲೇ ಹೆಚ್ಚಾಗಿ ಸಾಗುವುದು ಜಗತ್ತಿನ ಎಲ್ಲಾ ದೇಶಗಳು ಯುದ್ಧಪೂರ್ವದಲ್ಲಿ ಆಮದು ಮಾಡಿಕೊಂಡ ಅಕ್ಕಿ ೭,೩೦೦,೦೦೦ ಟನುಗಳು ಅದರಲ್ಲಿ ಆಸ್ಯದ ದೇಶಗಳು ೫,೩೦೦,೦೦೦ ಟನ್ನುಗಳಷ್ಟನ್ನು ತರಿಸಿದವು ಅಕ್ಕಿ ತರಿಸಿಕೊಳ್ಳುವ ಮುಖ್ಯ ದೇಶಗಳು, ಭಾರತ, ಚೀನಾ ಮತ್ತು ಮಲಯಾಗಳು

ಹಂಚಾಟದ ತೊಂದರೆ

ಕಳೆದ ಯುದ್ಧದ ಯುದ್ಧಕ್ಷೇತ್ರಗಳಾದ ಈ ಕಡೆಯ ಹಲವು ಅಕ್ಕಿ ಪ್ರಧಾನ ದೇಶಗಳ ಉತ್ಪತ್ತಿಯು ಬಹಳ ಕಡಿಮೆಯಾಗುವಂತಾಯಿತು ಹಾಳುಗೆಡವಲ್ಪಟ್ಟ ನೀರಾವರಿ ಕೆಲಸಗಳಿಂದ ದಾಸ್ತಾನಿರಿಸುವ ಏರ್ಪಾಡುಗಳಿಲ್ಲದಿರುವುದರಿಂದ, ಹೊಲಗಳಲ್ಲಿ ಕೆಲಸಮಾಡಲು ಸಾಕಷ್ಟು ಪ್ರಾಣಿಗಳಿಲ್ಲದೆ, ಬೇಕಾದಷ್ಟು ಕೃಷಿಉಪಕರಣಗಳಿಲ್ಲದೆ, ಗೊಬ್ಬರಗಳಿಲ್ಲದೆ, ಹೊಲಗೇಸದ ಕೂಲಿಗಳ ಸಂಖ್ಯೆ ಕಡಿಮೆಯಾಗಿ, ಸಾಕಷ್ಟು ವಾಹನ ಸೌಕರ್ಯಗಳಿಲ್ಲದೆ,-ಈ ಕಾರಣಗಳಿಂದ ಉತ್ಪತ್ತಿ ಕಡಿಮೆಯಾಗುವಂತಾಯಿತು ಅದೇ ಸಮಯಕ್ಕೆ ಬೇರೆ ಆಹಾರವಸ್ತುಗಳನ್ನು ಸರಿಯಾದ ದಾಮಾಶಯದಲ್ಲಿ ಹಂಚಲೂ ಬಹಳ ಕಷ್ಟಗಳುಂಟಾದುವು

ಕೆಲವು ದೇಶಗಳಲ್ಲಿನ ರಾಜಕೀಯ ಚಳವಳಗಳೂ, ಯಾದವೀಕಲಹಗಳೂ ಈ ಸಂಬಂಧದ ದುಷ್ಪರಿಣಾಮವನ್ನು ಹೆಚ್ಚಿಸಿದುವು. ಮಾತ್ರವಲ್ಲ ಅಲ್ಲಿ ಉತ್ಪತ್ತಿಯಾಗುವ ಆಹಾರವಸ್ತುಗಳನ್ನೂ ಯೋಗ್ಯ ಪ್ರಮಾಣದಲ್ಲಿ ಸಂಗ್ರಹಿಸಲೂ ಕಷ್ಟಕಾರಕವೇ ಆಯಿತು

ಹೊರಕಳಿಸುವ ವಸ್ತುಗಳು

ಈ ಸಂಗತಿಗಳಿಂದ ಈ ವರ್ಷ ಕೂಡಾ ಅಕ್ಕಿ ಉತ್ಪತ್ತಿ ದೇಶಗಳಿಂದ ಯುದ್ಧಪೂರ್ವದ ಅರ್ಧದಷ್ಟು ಪ್ರಮಾಣವನ್ನು ಕೂಡಾ ಹೊರಕಳಿಸಲು ಸಾಧ್ಯವಿಲ್ಲವಾಗಿದೆ ಅಕ್ಕಿ ತರಿಸಿಕೊಳ್ಳುವ ದೇಶಗಳಿಗಾದರೊ ಮುಂಚಿನ ಮೂರನೇ ಒಂದಂಶದಷ್ಟು ಅಕ್ಕಿಯನ್ನು ತರಿಸಿಕೊಳ್ಳಲೂ ಸಾಧ್ಯವಿಲ್ಲದಾಗಿದೆ ಅಕ್ಕಿಯನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಮಾಡಿಕೊಳ್ಳಲೂ ಕೆಲವು ದೇಶಗಳ ಆರ್ಥಿಕ ದುರ್ದೆಶೆಯಿಂದಾಗಿ ಕಠಿಣ ಸಾಧ್ಯವಾಗಿದೆ ಇತರ ಕಡೆಗಳಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಘರ್ಷಣೆಯಿಂದುಂಟಾದ ತೊಂದರೆಗಳೂ ಆತಂಕವಾಗಿ ನಿಂತಿವೆ

ಸಿಂಹಳ ಮತ್ತು ಮಲಯಗಳಲ್ಲಿ ಅಕ್ಕಿ ಉತ್ಪತ್ತಿಯು ಹೆಚ್ಚುತ್ತಿದೆ ಬರ್ಮವೂ ಅಕ್ಕಿ ಉತ್ಪಾದನೆಯ ಕಾರ್ಯವೂ ಪ್ರಗತಿಪರವಾಗಿ ಸಾಗುತ್ತಿದೆ ೧೯೪೮ರಲ್ಲಿ ಈ ದೇಶಗಳಿಂದ ಸುಮಾರು ೧ ೨೦೦,೦೦೦ ಟನ್ನುಗಳಷ್ಟು ರಫ್ತು ಆಗಬಹುದೆಂದೂ (೧೯೪೭ರಲ್ಲಿ ರಫ್ತು ೮೬೫,೦೦೦ ಟನ್ನು) ನಿರೀಕ್ಷೆಯಿದೆ ಯುದ್ಧಕ್ಕೆ ಮುಂಚೆ ಈ ದೇಶಗಳಿಂದ ೨,೯೫೦ ೦೦೦ ಟನ್ನುಗಳಷ್ಟು ಅಕ್ಕಿ ರಫ್ತಾಗುತ್ತಿತ್ತೆಂಬ ಸಂಗತಿ ಗಣನೀಯ

ಹಿಂದೂಸ್ಥಾನ ಪಾಕಿಸ್ಥಾನಗಳಲ್ಲಿ ೧೯೪೬-೪೭ರಲ್ಲಿ ೨೮,೦೦೦ ೦೦೦ ಟನ್ನುಗಳಷ್ಟು ಬೆಳೆದಿತ್ತು ಈ ವರ್ಷ ಎರಡು ವಸಾಹತುಗಳಲ್ಲಿನ ಅಶಾಂತಿಮಯ ವಾತಾವರಣಗಳಿಂದ ಕಳೆದ ವರ್ಷಕ್ಕಿಂತಲೂ ಅಕ್ಕಿ ಕಡಿಮೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಗೊಬ್ಬರಗಳ ಆವಶ್ಯಕತೆ

ಆಸ್ಯಾದಲ್ಲುಂಟಾದ ಅಕ್ಕಿಯ ಕೊರತೆಯಿಂದ ಜಗತ್ತಿನ ಇತರ ದವಸಧಾನ್ಯಗಳ ಮೇಲೆ ಹೆಚ್ಚು ಒತ್ತಡಬಿದ್ದಿದೆ ಹೀಗೆ ಹಿಂದೂಸ್ಥಾನ ಪಾಕಿಸ್ಥಾನಗಳಿಗೆ ೧೯೪೭-೪೮ರಲ್ಲಿ ೨೦೦೦ ೦೦೦ ಟನ್ನುಗಳಷ್ಟು ಆಹಾರಧಾನ್ಯಗಳು ಹೊರದೇಶಗಳಿಂದ ಸರಬರಾಯಿಯಾಗಿವೆ ಯುದ್ಧಪೂರ್ವದಲ್ಲಿ ಭಾರತ ದೇಶವು ಪರದೇಶಗಳಿಗೆ ಅಲ್ಪ ಪ್ರಮಾಣದಲ್ಲಾದರೂ ಧಾನ್ಯಗಳನ್ನು ರಫ್ತುಮಾಡುವ ಸುಸ್ಥಿತಿಯಲ್ಲಿತ್ತೆನ್ನುವಾಗ ಅಲ್ಲಿನ ಆಹಾರ ಕೊರತೆಯ ಗಂಭೀರತೆಯೆಷ್ಟೆಂದು ಮುಂದಟ್ಟಾಗುತ್ತದೆ

ಆಸ್ಯಾಖಂಡದಲ್ಲುಂಟಾದ ಈ ಕೃಷಿ ಉತ್ಪತ್ತಿಯ ಅವ್ಯವಸ್ಥೆಯಿಂದ ಜಗತ್ತಿನ ಎಣ್ಣೆ ಕೊಬ್ಬುಗಳ ಸರಬರಾಯಿಗೆ ತುಂಬಾ ಧಕ್ಕೆಯಿದೆ. ಹಿಂದೂಸ್ಥಾನ ಪಾಕಿಸ್ಥಾನಗಳ ಆಹಾರ ದುರ್ದೆಶೆಯಿಂದಾಗಿ ಈ ವಸಾಹತುಗಳಿಂದ ಹೊರಕಳಿಸಲು ಸಾಧ್ಯವಾಗುವ ಕೆಲವೇ ವಸ್ತುಗಳ ಪ್ರಮಾಣಗಳಿಗಿಂತ ಈ ವಸಾಹತುಗಳಿಗೆ ಬೇಕಾಗುವ ಎಣ್ಣೆ ಕೊಬ್ಬುಗಳ ಪ್ರಮಾಣವೇ ಹೆಚ್ಚಾದೀತು. ಚೀನಾ ಮಂಚೂರಿಯಾಗಳಿಂದ ಯಾವದಾದರೂ ಎಣ್ಣೆಕಾಳುಗಳು ಸಿಗುವುದು ಈ ವರ್ಷದ ಮಟ್ಟಿಗೆ ಕಷ್ಟಕಾರಕವೇ ಯೆನ್ನಬಹುದು ಫಿಲಿಫ್ಫಾಯ್ನ್ ಮತ್ತು ಸಿಂಹಳ ದ್ವೀಪಗಳಲ್ಲಿ ಮಾತ್ರ ತೆಂಗಿನ ಉತ್ಪತ್ತಿಯು ತಕ್ಕಮಟ್ಟಿಗೆ ಸ್ಥಿಮಿತಕ್ಕೆ ಬಂದಿದೆ

ಆಸ್ಯಾಖಂಡದ ಬೆಳೆಗಳನ್ನು ಅಭಿವೃದ್ಧಿಪಡಿಸಲು ಮುಖ್ಯವಾಗಿ ಹೆಚ್ಚೆಚ್ಚು ಗೊಬ್ಬರಗಳ ಸರಬರಾಯಿಯಾಗಬೇಕು—ವಿಶೇಷವಾಗಿ ನ್ಯಾಟ್ರೋಜನ್ನು ಜಗತ್ತಿನಲ್ಲೇ ಈ ಕೃಷಿಆಹಾರ ಧಾತುವಿನ ಪ್ರಮಾಣವು ಕಡಿಮೆಯಾಗಿರುವಾಗ ಸದ್ಯಕ್ಕೆ ಅದನ್ನೆಲ್ಲಿಂದ ಪೂರೈಸಿಕೊಳ್ಳಬಹುದೆಂಬುದೇ ಗಡುತರವಾದ ಸಮಸ್ಯೆಯಾಗಿದೆ

ಅಮೇರಿಕದಲ್ಲಿ ನಮ್ಮ ದೇಶದ ಮಂಗಗಳಿಗೆ ಮತ್ತು ಹೆಬ್ಬಾವುಗಳಿಗೆ ತುಂಬ ಕುತೂಹಲದ ತ್ರಿವೆ ನಾ ನಗರಗಳ ವ್ಯನಸಿಯಲ್ಲಿ ಸಾಕಲು ೧೫ ೧೫೦೦ ದ ೨೦೦೦ರ ತನಕ ಕಮಕೊಟ್ಟುಕೊಳ್ಳುವರು ಕೆಲ ಸಮಯದ ಹಿಂದೆ ಅಮೇರಿಕಕ್ಕೆ ಹೋಗುವ ಒಂದು ಹಡಗದಲ್ಲಿ ವಿಶೇಷ ವ್ಯವಸ್ಥೆಮಾಡಿ ೩೦೦ ವಾನರಗಳನ್ನು ಹತ್ತು ಹೆಬ್ಬಾವುಗಳನ್ನು ಕೊಂಡೊಯ್ಯಲಾಗಿದೆ

(೧ನೇ ಪುಟದಿಂದ)

ಗಾಂಧೀ ಶಿಕ್ಷಣ

ಮಹಾತ್ಮಾ ಗಾಂಧಿಯವರು ನಮಗೆ ಅನೇಕ ವಿಷಯಗಳನ್ನು ಕಲಿಸಿಕೊಟ್ಟಿದ್ದಾರೆ ಕೆಟ್ಟ ದಾರಿಯಿಂದ ಒಳ್ಳೇ ಧ್ಯೇಯ ಮುಟ್ಟಲು ಸಾಧ್ಯವಿಲ್ಲವೆಂದವರ ಉಪದೇಶವು ಗಣನೀಯವಾದುದು ಇತ್ತೀಚಿನ ಜಾಗತಿಕ ಆ ತರ್ಕ ವ ವಹಾರಗಳಿಂದದು ನಮಗೆ ಸ್ಪಷ್ಟವಾಗ ತ್ತಿ ಸತ್ತಿಧಾನಗಳಿಂದಲೇ ಸತ್ಸಮಾಜವೊಂದರ ರಚನೆ ಸಾಧ್ಯವಿಲ್ಲದು

ಪ್ರಜಾಪ್ರಭುತ್ವದಲ್ಲಿ ಜನತೆ ಸರಕಾರದ ಮೇಲೆ ಹೊಂದಿಕೊಂಡಿರುವಾರದು ಎಲ್ಲವನ್ನು ಸರಕಾರವೇ ಮಾಡುವಂತಾದರೆ ಅದು ಕುರುಡು ಶಿಸ್ತಿನ ಸಮಾಜವನ್ನುಂಟುಮಾಡುವುದು ಆಗ ವ್ಯಕ್ತಿ ಸ್ವಾತಂತ್ರ್ಯಕ್ಕೆ (ನಾಜಿ ಜರ್ಮನಿಯಲ್ಲಿ, ಕೊಮ್ಯುನಿಸ್ಟ್ ರಷ್ಯದಲ್ಲಿ ಹೀಗಿದೆ) ಕೊಡಲಿಬೀಳುವಂತಾಗಿ ವ್ಯಕ್ತಿಯು ದೊಡ್ಡದೊಂದು ಮಾನವ ಯಂತ್ರದ ಮೊಳೆಯಾಗುತ್ತಾನೆ ಸೋಶಲಿಸ್ಟರ ಧ್ಯೇಯ ಇಂತಹದೆಂದಿಗೂ ಇರುವುದಿಲ್ಲ

ಪ್ರಜಾಪ್ರಭುತ್ವವು ಉನ್ನತ ಪರಿಪೂರ್ಣತೆಗೆ ಮುಟ್ಟಿದಾಗ ಆ ಡಳಿತಾಂಗವು ಸಂಪೂರ್ಣ ಮಾಯವಾಗುತ್ತದೆ ಸರ್ವಾಧಿಕಾರವು ಯಾವ ರೂಪದಲ್ಲೂ ಪ್ರಜಾಪ್ರಭುತ್ವದೆಡೆ ಸಾಗಲಾರದು ಇದು ರಶ್ಯದ ಈಗಿನ ಆಡಳಿತಗಾರರ ವಿವರಣೆ. ಇದನ್ನು ಸೋಶಲಿಸ್ಟರೆಂದಿಗೂ ಒಪ್ಪಲಾರರು ಪರಿಪೂರ್ಣ ಮಾದರಿಯ ಪ್ರಜಾಪ್ರಭುತ್ವವನ್ನೇ ಸೋಶಲಿಸ್ಟ್ ಸಮತಾವಾದಿಗಳ ಹೆಗ್ಗುರಿಯಾಗಿದೆ.

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕಪುಟ್ಟ ಎಲ್ಲಾ ಚರ್ಮ ತೊಂದರೆಯ ದಿವಸನುಸಿನೆಗದಗಿಸುತ್ತದೆ. ಚರ್ಮ ಸ್ವಚ್ಛಮಾಡಿ ರಿಬೆಗ್ಗಳರಿಸುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ನಮ್ಮ ದೇಶದಲ್ಲೀಗ ಪ್ರಾಂತಿಕ ಭಾಷೆಗಳು ಶಿಕ್ಷಣಮಾಧ್ಯಮವಾಗಿ ಉಳಿಸಬೇಕೆಂಬ ಚಳವಳಿ ಬಿರುಸಾಗಿ ಸಾಗುತ್ತಿದೆ. ಪ್ರಾಂತ್ಯ ಭಾಷೆ, ಭಾಷಾ ಪ್ರಾಂತ್ಯ ಇವೇ ಇಂದಿನ ಸ್ವಾತಂತ್ರ್ಯಾನಂತರದ ಘೋಷಣೆಗಳಾಗಿವೆ. ಆದರೆ ಈ ಕೆಲಸವು ಅನೇಕರು ಕಲ್ಪಿಸಿಕೊಂಡಷ್ಟು ಸುಲಭವಲ್ಲ. ಕಾರಣ ಇಂದಿಗೆ ಸುಮಾರು ಒಂದು ಶತಮಾನದಿಂದ ಪರಕೀಯ ಆಡಳಿತ ಬಲಾತ್ಕಾರದಿಂದ ನಮ್ಮ ಜನಜೀವನದಲ್ಲಿ ಬಿಗಿಯಾಗಿ ಬೇರೂರಿದ ಆಂಗ್ಲ ಭಾಷೆಯ ವಿಷವೃಕ್ಷವನ್ನು ಕಿತ್ತೊಗೆಯುವುದು ಸುಲಭ ಸಾಧ್ಯವಲ್ಲ. ವಿಶಾಲವಾಗಿ ಆವರಿಸಿಕೊಂಡ ಇದರ ಎಲೆ ಕೊಂಬೆಗಳ ಆಶ್ರಯದಲ್ಲಿ ನಮ್ಮ ಇಂದಿನ ದೇಶ ಶಿಕ್ಷಣವು ತನ್ನ ದುಷ್ಪರಿಣಾಮಕಾರಿ ಹುಲ್ಲು ಕಳೆಗಳನ್ನು ಬೆಳೆಸಿ ಬೆಳೆದಿರುವುದು. ಜಗತ್ತಿನಲ್ಲಿಯೂ ಆಂಗ್ಲ ಭಾಷೆ ವಿಶಾಲವಾಗಿ ಬಳಕೆಯಲ್ಲಿರುವುದು. ನಮ್ಮ ದೇಶದಲ್ಲಿನ ಪರಿಶೋಧನಾತ್ಮಕ ವಿಜ್ಞಾನ ಗ್ರಂಥಗಳೂ, ಶಾಸನ ಸೂತ್ರಗಳೂ, ಅದೇ ಭಾಷೆಯಲ್ಲ ಬರೆಯಲ್ಪಟ್ಟಿವೆ ಇವುಗಳನ್ನು ಪ್ರಾಂತೀಯ ಭಾಷೆಗಳಿಗೆ ತರ್ಜುಮೆಮಾಡಲು ಅಂತರ್ಪ್ರಾಂತೀಯ ಪಾರಿಭಾಷಿಕ ಶಬ್ದಗಳು (Technical Terms) ರಚಿಸಲ್ಪಡಬೇಕಾಗಿವೆ. ಪಠ್ಯ ಪುಸ್ತಕಗಳು ಪ್ರಾಂತೀಯ ಭಾಷೆಗಳಲ್ಲಿ ಆಧುನಿಕ ಶಿಕ್ಷಣ ಪದ್ಧತಿಗನುಸಾರವಾಗಿ ಬರೆಯಲ್ಪಡಬೇಕಾಗಿವೆ.

ನಮ್ಮ ದೇಶದಲ್ಲಿ ಆಂಗ್ಲ ಭಾಷೆಯ ಮೂಲಕ ಪಾಶ್ಚಾತ್ಯ ಮನೋಭಾವವನ್ನುಂಟುಮಾಡಿ ರಾಷ್ಟ್ರೀಯತೆಯ ಎಳ್ಳಿಗೊಂದು ಗುಂಡುಕಲ್ಲನ್ನಸೆದು ಒಡೆದುಬಿಟ್ಟಿಗೆ ಯಶಸ್ವಿಯಾದ ಪುಣ್ಯಾತ್ಮನೆಂದರೆ ಲೋರ್ಡ್ ಮೆಕಾಲೆ. ಆಂಗ್ಲ ಶಿಕ್ಷಣದಿಂದ ಚಿತ್ತಭ್ರಮೆಗೊಂಡ ಕೆಲ ಶಿಕ್ಷಿತ ಹಿಂದಿಯರು ಕೂಡಾ 'ಆಂಗ್ಲ ಶಿಕ್ಷಣ ಕ್ರಮವು ಬ್ರಿಟಿಷರು ಭಾರತಕ್ಕಿತ್ತ ದೊಡ್ಡ ಪಾರಿತೋಷಕ ಎಂದು' ಸ್ಫೂರ್ತಿಯಿಂದ ಉದ್ಗರಿಸಿದ್ದಾರೆ. ಉದಯಿನಲ್ಲಿರುವ ಡಾ। ರಂಜಿಶಾಹಾನಿ ಅವರು ಈ ಕುರಿತು ಒಂದು ಲೇಖನದಲ್ಲಿ ಹೀಗೆ ತಿಳಿಸುತ್ತಾರೆ

ಲೋರ್ಡ್ ಮೆಕಾಲೆಯವರಿಗೆ ಪೌರ್ವಾತ್ಯ ಸಾಹಿತ್ಯ ಸಂಸ್ಕೃತಿಗಳ ಮೇಲೆ ತುಚ್ಛೀಕಾರದ ದೃಷ್ಟಿಯಿತ್ತು. ಪೌರ್ವಾತ್ಯರ ಎಲ್ಲಾ ಸಾಹಿತ್ಯವು ಪಾಶ್ಚಾತ್ಯರ ಒಂದು ಕಪಾಟಿನಲ್ಲಿರುವಷ್ಟು ಸಾಹಿತ್ಯಕೃತಿಗಳ ತೂಕಕ್ಕೆ ಸಮತೂಕವೆಂದವರು ಚಿತ್ರಿಸಿದರು. ಈ ಮಹತ್ ಸಂಶೋಧನೆಯು ಕೂಡಲೇ ವಿಶ್ವಕ್ಕೆಲ್ಲ ಪ್ರಚಾರಿಸಲ್ಪಟ್ಟಿತು ಹೀಗೆಮಾಡಿದ್ದು ಅವಿವೇಕದ ಪರಮಾವಧಿ ಕಾರಣ, ಅಂದಿನಿಂದಿನವರೆಗೆ ಮೆಕಾಲೆಯವರು ಪೌರ್ವಾತ್ಯರ ಕಟುವಿಮರ್ಶೆಯ ಹೆಗ್ಗುರಿಯಾಗಿದ್ದಾರೆ ಪ್ರಖ್ಯಾತ ಸಾಹಿತ್ಯಾಚಾರ್ಯರಾದ ಪ್ರೊ। ಅರ್ಬ್ಬರಿಯವರು "ಮೆಕಾಲೆಯವರ ವಿವೇಚನೆಯು ದ್ವೇಷಭಾವನೆಯದು ಮಾತ್ರವಲ್ಲ ಅಜ್ಞಾನಭರಿತ ಅಸತ್ಯಸಂಗತಿ ನಿರೂಪಣಾ ವಿಧಾನದ ಮಾದರಿಯೂ ಅವರದಾಗಿದೆ" ಎಂದು ಟೀಕಿಸಿರುವರು.

ಮೆಕಾಲೆಯ ಮೇಲ್ಮೈ

ಮೊದಮೊದಲು ಆಂಗ್ಲ ಸಾಂಪ್ರದಾಯ ಸಂಪರ್ಕಕ್ಕೆ ಬಂದ ಕೆಲ ಸುಶಿಕ್ಷಿತ ಭಾರತೀಯ ಧುರೀಣರು ಮೆಕಾಲೆಯವರ ಅಭಿಪ್ರಾಯಕ್ಕೆ ಮುಗುಳ್ನಗೆ ಬೀರಿದರು. "ಕುರುಡನ ಕಣ್ಣಿಗೆ ಕಾಮನಬಿಲ್ಲು ಕಪ್ಪಾಗಿ ಕಾಣುವುದು ಸಹಜ"ವೆಂದವರು ತಾತ್ವಿಕ ತರ್ಕದಿಂದ ನುಡಿದರು. ಆದರೆ ಅವರ

ಒಂದು ಭಾಷೆಯಿಂದ ಒಂದು ದೇಶ ಹಾಳಾಯಿತು

ಆಂಗ್ಲ ಮಾಧ್ಯಮದಿಂದ ಹಿಂದೀ ಸಂಸ್ಕೃತಿಗೆ ಧಕ್ಕೆ

ರಾಜಾರಾಮ ಮೋಹನ ರಾಯರು ಇದಕ್ಕೆ ಒಪ್ಪಿದರೆ?

ಈ ಅಲಕ್ಷ್ಯ ಶೀಘ್ರದಲ್ಲಿ ಗಾಬರಿಗೆಡೆಗೊಟ್ಟು ಕಡೆಗೆ ಕ್ರೋಧದ ಅಂತ್ಯವಾಯಿತು ಕೆಲವೇ ಸಮಯದೊಳಗೆ ಮೆಕಾಲೆಯು ಭಾರತಕ್ಕೆ ಉನ್ನತಾಧಿಕಾರಿಯಾಗಿ ಬಂದು ತನ್ನ ಕಲ್ಪನೆಗಳನ್ನು ಕಾರ್ಯರೂಪಕ್ಕಿಳಿಸಲು ಟೊಂಕ ಬಿಗಿದ!

'ಅವನಿಗೆ' ಬೇಕಾದುದಾವುದರೂ ಏನು? ಭಾರತದ ಸಂಪೂರ್ಣ ಪಾಶ್ಚಾತ್ಯೀಕರಣ. ಇದು ವಿಪರೀತದ ಯೋಜನೆ. ಅನೇಕರಿಗಿದು ಅತ್ಯಾಚಾರವೆಂದು ಮುಂದಟ್ಟಾಯಿತು ಅಂತೆಯೇ ಅವರು ಇದಕ್ಕೆ ಪ್ರತಿಭಟನೆಯನ್ನೊಡ್ಡಲೂ ಶ್ರಮಿಸಿದರು. ಅಲ್ಲಿಂದ ಪೌರ್ವಾತ್ಯ ಪಾಶ್ಚಾತ್ಯ ಶ್ರೇಷ್ಠತೆಯ ವಿಷಯ ಅನಂತ್ಯವಾದ ತರ್ಕವಿತರ್ಕಗಳಿಗಾರಂಭವಾಯಿತು. ಸೌಭಾಗ್ಯವೆಂಬಂತೆ ಹತ್ತೊಂಬತ್ತನೇ ಶತಮಾನದಲ್ಲಿ ಭಾರತೀಯ ಮತಭಾವನಗಳಲ್ಲಿ ಕ್ರಾಂತಿಕಾರಕ ಭಾವನೆಗಳನ್ನು ತಂದೊಡ್ಡಿದ ರಾಜಾರಾಮಮೋಹನ ರಾಯ್ ಅವರ ಪ್ರಭಾವಿತ ವ್ಯಕ್ತಿತ್ವದ ಬೆಂಬಲ ಮೆಕಾಲೆಯವರಿಗೆ ಸಿಕ್ಕಿತು. ಅಂದಿನಿಂದ ಭಾರತೀಯ ಯುವಕರು ಪಶ್ಚಿಮದ ಕಡೆ ಮೋರೆತಿರುವ ಹತ್ತಿದರು.

ಯುರೋಪಿನ ದ್ವಾರಿಹಿಡಿದರೇನೇ ಭಾರತಕ್ಕೆ ಮೋಕ್ಷ ದೊರೆತೀತೆಂಬ ಧ್ಯೇಯವಾದ ಮನೋವಿಚಿತ ಮೆಕಾಲೆಗಿದ್ದಿತು. ಅವನ ಶುಷ್ಕ ತಿಳಿಗೇಡಿತನದ ಯೋಚನೆಯೊಂದು ರುಜುವಾತುಮಾಡಿ ತೋರಿಸುವುದು ಸ್ವಲ್ಪ ಕಷ್ಟದ ಕೆಲಸ. ಬ್ರಿಟಿಷರಾಳ್ವಿಕೆಯಾರಂಭ ಕಾಲದ ಭಾರತ ಜನಜೀವನವು ಹರಿಯುತ್ತಿರುವ ನೀರಿನ ಕೊಳದಂತಿದ್ದು ಅದನ್ನು ಕದಡಿ ಹರಿಸಲು ಒಂದು ರಭಸದ ಕಾಲುವೆಯೊಂದರ ಅತ್ಯಾವಶ್ಯಕವಿತ್ತು.

ಭಾರತದ ಭೌತಿಕ ಚೇತನವು ಉಕ್ಕಿಹರಿಯುವ ಬದಲಿಗೆ ತಗ್ಗಿನ ಸುಲಭ ಕಾಲುವೆಗಳಲ್ಲಿ ಮಾತ್ರ ಬಿಡಿಬಿಡಿಯಾಗಿ ಹರಿಯುತ್ತಿತ್ತು. ಭಾರತವು ನಿದ್ರಾಮಗ್ನ ಆತ್ಮಗಳ ಭೂಮಿಯಾಗಿತ್ತು. ಪಾಶ್ಚಿಮಾತ್ಯದ ಚಟುವಟಿಕೆಯನ್ನು ಪ್ರಚೋದಿಸುವ ಸಾಂಸ್ಕೃತಿಕ ತಂಗಾಳಿ ಮಾತ್ರ ಭಾರತದ ಸ್ತಬ್ಧ ಪರಿಸ್ಥಿತಿಯನ್ನು ಬದಲಿಸಲು ಶಕ್ಯವಿತ್ತು.

ಆಶ್ಚರ್ಯವೆಂಬಂತೆ ಮೆಕಾಲೆಯ ಯೋಜನೆಯೂ ಅವನೆಣಿಸಿದಂತೆಯೇ ನಡೆಯದಾಯಿತು. ಭಾರತದಲ್ಲವನು ಪಸರಿಸಲು ಪ್ರಯತ್ನಿಸಿದ ಪಾಶ್ಚಾತ್ಯೀಕರಣದ ಸ್ಫೂರ್ತಿಯು ಅವನಿಗೇ ವಿರೋಧವಾಗಿ ಉರಿದುಬೀಳುವಂತಾಯಿತು. ಶಿಕ್ಷಣ ಹೊಂದಿದ ಭಾರತೀಯರು ಪ್ರತಿಯೊಂದು ವಿಷಯದ ಕುರಿತು ವಿಚಾರಮಗ್ನರಾದರು ಯುರೋಪಿನ, ಮುಖ್ಯವಾಗಿ ಇಂಗ್ಲೆಂಡಿನ ಧ್ಯೇಯ ಧೋರಣೆಗಳ ಸತ್ಪರಿಣಾಮಗಳೇ ನೆಂದವರು ಸಹಜವಾಗಿ ವಿಮರ್ಶಿಸಮಾಡತೊಡಗಿದರು. ಪಾಶ್ಚಾತ್ಯೀಕರಣದ ಕಾರ್ಯವಾರಂಭವಾದಾಗ ಆಂಗ್ಲರು ಸ್ವಯಂ ಸ್ಫೂರ್ತಿಯಿಂದಂತೆ ತಮ್ಮಲ್ಲಿ ಜ್ಞಾನ ಭಂಡಾರವನ್ನು ಭಾರತೀಯರ ಮುಂದೆ ತೆರವಾಗಿಟ್ಟರು.

ಧರ್ಮತತ್ವ ಮತ್ತು ವಿಜ್ಞಾನ

ಹೊರನೋಟಕ್ಕೆ ಈಗಲೂ ಭಾರತವು ಇತರ ಪೌರ್ವಾತ್ಯ ದೇಶಗಳಷ್ಟು ಪಾಶ್ಚಾತ್ಯೀಕರಣದ ದೀಕ್ಷೆ ಹೊಂದಿಲ್ಲ. ಅಂಗಗಳೂ ಹೇಟುಗಳೂ ನಮ್ಮಲ್ಲಿ ಶಾಶ್ವತ ನೆಲೆ ನಿಲ್ಲಲಿಲ್ಲ ಈ ವಿಷಯದಲ್ಲಿ ತುರ್ಕಿಯರೂ, ಇರಾನಿಗಳೂ, ಮತ್ತು ನಿಗ್ರೋಗಳೂ ನಮಗಿಂತೆಷ್ಟೂ ಮುಂದಿದ್ದಾರೆ ಆದರೆ ನಾವದನ್ನು ಕುರಿತು ಮತ್ಸರ ತಾಳಲಿಲ್ಲ.

ಜವಾಸಿನ ಅನುಕರಣವನ್ನೂ ನಾವು ಮಾಡಿಲ್ಲ ವಿಶಾಲಕೈಕಾರಿಕೆಗಳೂ, ಯುದ್ಧಾಸ್ತ್ರ ಕಾರ್ಖಾನೆಗಳೂ ಪಾಶ್ಚಾತ್ಯರ-ನಿಜವಾದ ಅಂತರ್ಭಾವವೆಂದೂ ನಾವು ನಂಬುವುದಿಲ್ಲ

ಪಾಶ್ಚಾತ್ಯರ ಜೀವನವು ಒಂದು ದೈವೀಕ ಪಾರಿತೋಷಕವೆಂದು ತಿಳಿಕೊಂಡು ಇದನ್ನು ಆದಷ್ಟು ಶೀಘ್ರದಲ್ಲಿ ಪರಿಪೂರ್ಣತೆಯೆಯಲು ಕುತೂಹಲಪಡುವರು. 'ಜೀವನವು ಪ್ರಗತಿಹೊಂದಬೇಕಾದರೆ ತಾಳ್ಮೆ, ಸ್ವತಂತ್ರ ವಿಚಾರ, ಸತ್ಯಪ್ರಿಯತೆಗಳು ಅತ್ಯಾವಶ್ಯಕವೆಂದವರು ತಿಳಿಯುತ್ತಾರೆ ಇಲ್ಲಿ ಪಾಶ್ಚಿಮಾತ್ಯರ ಧರ್ಮೀಯ ಮತ್ತು ವೈಜ್ಞಾನಿಕ ಚಳವಳಗಳು ಸಮ್ಮೇಳನ ಹೊಂದಿ ಒಂದು ಸಂಪೂರ್ಣ ರೂಪ ತಾಳುತ್ತವೆ. ಈ ಸಂಗತಿಯನ್ನು ಇತರ ಎಲ್ಲಾ ಪೌರ್ವಾತ್ಯರಿಗಿಂತ ಭಾರತೀಯರಾದ ನಾವು ಹೆಚ್ಚು ಸ್ಪಷ್ಟವಾಗಿ ಮನಗಂಡಿದ್ದೇವೆ ವಿವೇಕಾನಂದ, ಟಾಗೂರ, ಇಕ್ಬಾಲ್ ಅರವಿಂದರುಗಳು ವಿಚಾರ ನಿರೂಪಣೆಗಳನ್ನೋದುವಾಗ ನಮಗೀ ವಿಷಯದ ಸತ್ಯಸ್ಥಿತಿ ಅರಿವಾಗುತ್ತದೆ

ಪಾಶ್ಚಾತ್ಯರ ವಿಜ್ಞಾನ ದೃಷ್ಟಿಯು ಮೂಲತಃವೇ ನಾವು ನಮ್ಮನ್ನೂ ಇತರರನ್ನೂ ತಿಳಕೊಂಡವು ಬಗೆಯನ್ನು ಭಾರತಕ್ಕೇನಾದರೂ ಪಾರಿತೋಷಕ ಸಲ್ಲಿಸುವದಾದರೆ ಅದು ಈ ಸ್ವತಂತ್ರ ವಿಚಾರ ಮನೋಭಾವವೇ ಆಗಿದೆ ಇಂದು ಆಕ್ರಾಂತತ ಭಾರತೀಯರು—ಇವರ ಸಂಖ್ಯೆ ವರ್ಷಂಪ್ರತಿ ಹೆಚ್ಚುಗುತ್ತದೆ ಯಾವ ಸಂಖ್ಯೆಯನ್ನೂ ವಿಮರ್ಶಿಸಮಾಡದೆ ಸ್ವೀಕರಿಸುವುದಿಲ್ಲ. ಅಂಧ ವಿಶ್ವಾಸದ ನಂಬಿಕೆಗಳ ಆ ಕಾಲಕ್ಕೆ ನಾವೆಂದೂ ಶರಣುಹೊಡೆದಿರುತ್ತೇವೆ.

ವಿಶ್ವಮಾನ್ಯ ವ್ಯಕ್ತಿಗಳು

ವಿಜ್ಞಾನವನ್ನು ನಮ್ಮವರು ಆಳವಾಗಿ ಅಭ್ಯಾಸಮಾಡಿದರು. ನಾವು ಅದರಲ್ಲಿ ನಿಪುಣತೆಯನ್ನು ಹೊಂದಲು ಪ್ರಯತ್ನಿಸಲಿಲ್ಲ. ಜಗದೀಶ್‌ಚಂದ್ರ ಬೋಸ್, ರಾಯ್, ಸಿ. ವಿ. ರಾಮನ್ ಇವರು ನಮ್ಮಲ್ಲಿನ ವಿಶ್ವವಿಖ್ಯಾತ ವ್ಯಕ್ತಿಗಳು. ಬಂಗಾಳ, ಬೆಂಗಳೂರು ಮತ್ತಿತರ ಕಡೆಗಳಲ್ಲಿ ವಿಜ್ಞಾನಾಭ್ಯಾಸದ ಪರಿಶೋಧನಾಲಯಗಳೂ ಇವೆ ವೈಜ್ಞಾನಿಕ ಪ್ರಪಂಚದಲ್ಲಿ ಈ ಸಂಸ್ಥೆಗಳಿಗೆ ಗಣ್ಯಸ್ಥಾನವೂ ಒಂದಿತವಿದೆ. ಕಳೆದ ಯುದ್ಧದಲ್ಲಿ ನಮ್ಮವರು ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದ ಯಂತ್ರ ಮಹಿಮೆಯು ಇಲ್ಲವೇ ಯಂತ್ರ ಮನೋಭಾವದ ಅರಿವನ್ನೂ ನಾವು ಮಾಡಿಕೊಂಡಂತಾಗಿದೆ

ಹೀಗೆ ನಮ್ಮನ್ನು ಅಧೋಗತಿಗಿಳಿಸಲು ಇಚ್ಛಿಸಿದ ಮೆಕಾಲೆಯ ವಿಷ ನಮ್ಮ ಸತ್ಪರಿಣಾಮ ಅಮೃತವಾಯಿತು ಅವನ ದುರುದ್ದೇಶಗಳೇನೇ ಇರಲಿ, ಭಾರತೀಯರ ಸೃಷ್ಟಿ ಸಹಜ ನಿಪುಣತೆಯು ಅದನ್ನು ಸತ್ಕಾರ್ಯಪರವಾಗಿ ಮಾಡಿತು ಚೇತರಿಸಿಕೊಳ್ಳಲು ನಮಗೆ ಪಾಶ್ಚಿಮಾತ್ಯಕರಣದ ಅಲುಗು ಆವಶ್ಯಕವಿತ್ತು ಇಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳು ನಮ್ಮೀ ಈ ಪರಿವರ್ತನೆಯಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿವೆ. ಇಂದಿನ ಕೈಗಾರಿಕೆಗಳು, ಶಸ್ತ್ರಾಸ್ತ್ರ ಸರಂಜಾಮುಗಳೂ ನಾಶವಾಗಬಹುದು ಆದರೆ ನಮ್ಮಲ್ಲಿನ್ನಾದ ವೈಜ್ಞಾನಿಕ ಮನೋಭಾವವೆಂದಿಗೂ ಅಳಿಯದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯು ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಸ್ವದೇಶಾಭಿಮಾನಿ

ತಾರೀಕು 2—4—1948

ಭಾರತೀಯ ಕೈಗಾರಿಕೆಗಳ ರಾಷ್ಟ್ರೀಯಕರಣ

ಭಾರತರಾಷ್ಟ್ರ ಸಭೆಯವರಿಂದ ನಿಯೋಜಿಸಲ್ಪಟ್ಟ ದೇಶದ ಆರ್ಥಿಕ ಅಭಿವೃದ್ಧಿ ಯೋಜನಾ ಸಮಿತಿಯವರು ತಯಾರಿಸಿದ ವರದಿಯನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಕಳೆದ ಅಧಿವೇಶನದಲ್ಲಿ ಮಂಜೂರುಮಾಡಲಾಗಿತಷ್ಟೆ. ಈ ಸಮಿತಿಯ ಅಧ್ಯಕ್ಷರು ಪಂಡಿತ ಜವಾಹರಲಾಲರೇ ಇದ್ದುದರಿಂದ ಇದರಲ್ಲಿಯ ಹೆಚ್ಚಿನ ಅಂಶಗಳನ್ನು ಇಂದಿನ ನೆಹರು ಸರಕಾರವು ಜಾರಿಮಾಡಬಹುದೆಂದು ನಮ್ಮ ಭಂಡವಾಳಗಾರರು ಅಭಿಪ್ರಾಯಪಡುವುದರಿಂದ ಈ ವರದಿ ಪ್ರಕಟವಾದಂದಿನಿಂದ ಭಂಡವಲಗಾರರು ಈ ಕುರಿತು ತಮ್ಮ ಟೀಕೆಗಳನ್ನು ಪದೇ ಪದೇ ಮಾಡುತ್ತಲೇ ಇರುವರು.

ವಸ್ತುತಃ ಭಾರತೀಯ ಸರಕಾರವು ಈ ಕುರಿತು ತಮ್ಮ ಧೋರಣೆಯನ್ನು ಇನ್ನೂ ಸ್ಪಷ್ಟವಾಗಿ ಹೇಳಿಲ್ಲ. ಸದ್ಯದಲ್ಲೇ ಈ ಕುರಿತು ಒಂದು ಹೇಳಿಕೆಯನ್ನು ಕೊಡುವುದಾಗಿ ಪಂಡಿತ ಜವಾಹರಲಾಲರು ವಾಗ್ದಾನವಿತ್ತಿದ್ದಾರೆ.

ಕೇಂದ್ರ ಸರಕಾರದ ಆರ್ಥಿಕ ಮಂತ್ರಿಯವರು ಈ ತನ್ಮಧ್ಯೆ ನಮ್ಮ ರಿಜರ್ವ್ ಬೇಂಕನ್ನು ರಾಷ್ಟ್ರೀಯಕರಣಕ್ಕೊಳಪಡಿಸಲಾಗುವುದೆಂದೂ ಈ ಧೋರಣೆಯು ಇಂಪೀರಿಯಲ್ ಬೇಂಕಿಗೂ ಅನ್ವಯಿಸಲಾಗುವುದೆಂದೂ ಆದರೆ ಇತರ ವ್ಯಾಪಾರೀ ಬೇಂಕುಗಳ ಗೋಜಿಗೆ ಸರಕಾರವು ಕೈಹಾಕುವುದಿಲ್ಲವೆಂದೂ ಕೇಂದ್ರ ಸರಕಾರದ ಧೋರಣೆಯನ್ನು ಸ್ಪಷ್ಟಪಡಿಸಿದರು. ಈ ಕುರಿತು ನಮ್ಮ ಭಂಡವಲಗಾರರು ತಮ್ಮ ಟೀಕೆಯನ್ನು ಪ್ರಕಟಿಸಿರುತ್ತಾರೆ.

ರಾಷ್ಟ್ರೀಕರಣವು ನಮ್ಮ ಶ್ರೀಮಂತರಿಗೆ ಪ್ರಿಯವಾದ ವಿಷಯವಲ್ಲ. ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಪ್ರತಿಯೊಂದು ಬಗೆಯ ಕೈಗಾರಿಕೆಗೂ ಪ್ರತಿಯೊಂದು ಬಗೆಯ ಬೇಂಕಿಂಗ್ ಇತ್ಯಾದಿ ಆರ್ಥಿಕ ವಹಿವಾಟಿಗೂ ಪೂರ್ಣ ಸ್ವಾತಂತ್ರ್ಯವಿರುವುದರಿಂದಲೇ ಆ ದೇಶದ ಆರ್ಥಿಕ ಪರಿಸ್ಥಿತಿ ಇಷ್ಟು ಉನ್ನತವಾಗಿರುತ್ತದೆಂದೂ ಅದೇ ಬಗೆಯ ಸ್ವಾತಂತ್ರ್ಯ ಇಲ್ಲಿಯೂ ಬೇಕೆಂದೂ ನಮ್ಮ ಭಂಡವಲಗಾರರು ವಾದಿಸುತ್ತಾರೆ.

ಈಗ ದೇಶದ ಕೈಗಾರಿಕೆಗಳು ಬೆಳೆಯಬೇಕಾದದು ಎಲ್ಲಕ್ಕೂ ಮುಖ್ಯ ವಿಭಾಗವೆಂದು ನಮ್ಮ ಕೇಂದ್ರ ಸರಕಾರ ಮಾತ್ರವಲ್ಲ ಎಲ್ಲರೂ ಒಪ್ಪುತ್ತಾರೆ. ಖಾಸಗಿ ಭಂಡವಲಗಾರರಿಗೆ ಕೊನೆಯ ತನಕ ಸ್ವಾತಂತ್ರ್ಯ ದೊರಕೀತೆಂಬ ಭರವಸೆ ಸಿಕ್ಕದೆ ಇವರು ಈ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಹೇಗೆ ತಾನೇ ಉತ್ಸಾಹದಿಂದ ಮುಂದೆ ಬರಲು ಶಕ್ಯವೆಂದು ಭಂಡವಲಗಾರರ ಪ್ರಶ್ನೆ. ಕೈಗಾರಿಗೆಗಳ ಬೆಳವಣಿಗೆಗೆ ಬೇಂಕಿಂಗ್ ಸಂಸ್ಥೆಗಳು ಅತೀ ಅಗತ್ಯವೆಂಬುದರಿಂದ ರಿಜರ್ವ್ ಬೇಂಕನ್ನು ಕೂಡಾ ರಾಷ್ಟ್ರೀಯಕರಣಕ್ಕೊಳಪಡಿಸುವ ಇತ್ಯರ್ಥವನ್ನು ಪುನರಾಲೋಚಿಸಬೇಕೆಂದು ಇವರ ಆಗ್ರಹಪೂರ್ವಕ ವಿನಂತಿಇರುತ್ತದೆ.

ಪ್ರಜೆಗಳಿಗೆ ಬೇಕಾಗುವ ಮಾಲುಗಳ ಅಭಾವದ ಕಾಲದಲ್ಲಿ ದೇಶದ ಕೈಗಾರಿಕೆಗಳನ್ನು ಆದಷ್ಟು ವೇಗದಿಂದ ಬೆಳೆಸಿ ದೇಶದ ಉತ್ಪತ್ತಿಯನ್ನು ಹೆಚ್ಚಿಸುವ ಆವಶ್ಯಕತೆಯನ್ನು ಕೇಂದ್ರ ಸರಕಾರ ಪುನಃಪುನಃ ಒತ್ತಿ ಹೇಳುತ್ತಿದೆ. ಸರಕಾರವು ರಾಷ್ಟ್ರೀಯಕರಣದ ಹುಚ್ಚು ಕಟ್ಟಿಕೊಂಡರೆ ಈ ಆವಶ್ಯಕ ಕಾರ್ಯಕ್ಕೆ ವಿಘ್ನಬಂದೀತು. ಅಂದರೆ ಭಂಡವಲಗಾರರು ಸಹಕರಿಸುವಂತಿಲ್ಲವೆಂಬ ಒಂದು ಸರಕಾರವನ್ನು ಒಂದು ಬೆದರಿಕೆಗೆ ಒಳಪಡಿಸುವ ಧೋರಣೆಯು ಭಂಡವಲಗಾರರ ಹೇಳಿಕೆಗಗಳಲ್ಲಿ ಧ್ವನಿತವಾಗುತ್ತಿದೆ.

ಒಮ್ಮೆಯೇ ನಮ್ಮ ದೊಡ್ಡ ಕೈಗಾರಿಕೆಗಳನ್ನೆಲ್ಲ ರಾಷ್ಟ್ರೀಯಕರಣಕ್ಕೊಳಪಡಿಸುವುದು ಅಪೇಕ್ಷಣೀಯವಿದ್ದರೂ ಕೂಡಾ ಇದು ಅವ್ಯವಹಾರ್ಯವೆಂಬುದನ್ನು ಒಪ್ಪಲೇಬೇಕು. ಸರಕಾರವೇ ಈ ಕೈಗಾರಿಕೆಗಳನ್ನು ನಡೆಸುವುದೆಂಬುದೇ ರಾಷ್ಟ್ರೀಯಕರಣವೆಂಬುದರ ಅರ್ಥ. ನಮ್ಮ ಸರಕಾರವು ಪೂರ್ಣ ವ್ಯವಸ್ಥೆಗೆ ಬಂದು ನಮ್ಮಲ್ಲಿಯ ಜಾತೀಯ ಕಲಹಗಳು, ಆಹಾರದ ಪ್ರಶ್ನೆ ಇತ್ಯಾದಿ ಕಠಿಣ ಮತ್ತು ಅತ್ಯಪಸರದ ಪ್ರಶ್ನೆಗಳ ತೀರ್ಮಾನವಾಗುವ ತನಕವಾದರೂ ಸರಕಾರವು ಸ್ವತಃ ಹೆಚ್ಚಿನ ಕೈಗಾರಿಕೆಗಳನ್ನು ವಹಿಸಿಕೊಂಡು ನಡೆಸುವಂತಿಲ್ಲವೆಂಬುದು ನಿಜವಿರುತ್ತದೆ. ಕೇವಲ ಧ್ಯೇಯವಾದವನ್ನೇ ಕಟ್ಟಿಕೊಂಡು ಅವ್ಯವಹಾರ್ಯ ಧೋರಣೆಯನ್ನು ಕಟ್ಟಿಕೊಂಡರೆ ಅನರ್ಥಕ್ಕೆ ಕಾರಣವಾದೀತೆಂಬ ಮಾತು ನಿಜವಾಗಿರುತ್ತದೆ.

ಇದೆಲ್ಲ ನಿಜವಿದ್ದರೂ ಭಂಡವಲಗಾರರ ಬೆದರಿಕೆಗಳಿಗೆ ಕೇಂದ್ರ ಸರಕಾರವು ತಲೆತಗ್ಗಿಸಬೇಕಾದ ಪ್ರಸಂಗ ಈಗ ಇಲ್ಲವೆಂಬುದನ್ನು ನಮ್ಮ ಶ್ರೀಮಂತರು ತಿಳಿದುಕೊಂಡಂತೆ ಕಾಣುವುದಿಲ್ಲ. ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿದ್ದ ಕೈಗಾರಿಕೆಗಳ ಸ್ವಾತಂತ್ರ್ಯ ನಮ್ಮ ದೇಶಕ್ಕೆ ಬೇಡವೆಂಬ ಕಾಂಗ್ರೆಸ್ ಆರ್ಥಿಕಾ ಯೋಜನಾ ಸಮಿತಿಯ ನಿರ್ಣಯಕ್ಕೆ ದೇಶದಲ್ಲಿ ಭಂಡವಲಗಾರರಲ್ಲದೆ ಮಿಕ್ಕುಳಿದೆಲ್ಲರ ಬೆಂಬಲವಿರುತ್ತದೆಂಬ ಬಗ್ಗೆ ಸಂಶಯಬೇಡ. ಶ್ರೀಮಂತರು ಶ್ರೀಮಂತಿಕೆಯನ್ನು ಬೆಳೆಸುತ್ತ ಹೋಗಿ ಬಡವರು ಇನ್ನೂ ಬಡತನಕ್ಕಿಳಿಯುವ ಆ ಭಂಡವಲದಾರೀ ಧೋರಣೆಯ ಹಾವಳಿಯನ್ನು ಅಮೇರಿಕದಲ್ಲಿ ಕಂಡುದೇ ಸಾಕು. ಆ ಧೋರಣೆಯಿಂದಲ್ಲವೆ ಎರಡು ಜಾಗತಿಕ ಮಹಾ ಯುದ್ಧಕ್ಕೆ ಸನ್ನಾಹಗಳು ನಡೆಯುತ್ತಿರುವುದು!

ಪಂಡಿತ ಜವಾಹರಲಾಲರು ಸದ್ಯಕ್ಕೆ ದೊಡ್ಡ ಕೈಗಾರಿಕೆಗಳನ್ನು ಮೂರು ವಿಚಾರಗಳನ್ನಾಗಿ ಮಾಡಬಹುದೆಂದು ಸೂಚಿಸಿದ್ದಾರೆ. ಮೂಲಕೈಗಾರಿಕೆಗಳನ್ನು ಸರಕಾರವೇ ನಡೆಸುವುದು ಅಗತ್ಯವೆಂದೂ ಇವನ್ನು ಪ್ರಥಮವರ್ಗವೆಂದೂ ಇಟ್ಟಿದ್ದಾರೆ. ಎರಡನೇ ಗುಂಪಿನ ಕೈಗಾರಿಕೆಗಳನ್ನು ಕ್ರಮೇಣ ರಾಷ್ಟ್ರೀಯಕರಣಕ್ಕೆ ಒಳಪಡಿಸಿದರೆ ಸಾಕೆಂದು ಹೇಳಿದ್ದಾರೆ. ಇನ್ನು ಕೆಲವು ಮೂರನೆ ವರ್ಗದ ಕೈಗಾರಿಕೆಗಳನ್ನು ಖಾಸಗಿಯಾಗಿ ನಡೆಸಲು ಕೊನೆಯ ತನಕ ಬಿಡಬಹುದೆಂದು ಹೇಳಲಾಗಿದೆ. ಈ ದೊಡ್ಡ ಕೈಗಾರಿಕೆಗಳ ಬೆಳವಣಿಗೆಯಾಗುವ ತನಕ ಕಾಯದೆ ಗುಡಿಕೈಗಾರಿಕೆಗಳ ಮೂಲಕ ಸಾಧ್ಯವಿದ್ದಷ್ಟು ಉತ್ಪತ್ತಿಯನ್ನು ಹೆಚ್ಚಿಸಬೇಕೆಂದೂ ಗುಡಿಕೈಗಾರಿಕೆಗಳಿಗೂ ಕೊನೆಯ ತನಕ ಒಂದು ಪ್ರಧಾನವಾದ ಸ್ವತಂತ್ರಸ್ಥಾನವಿದೆಯೆಂದೂ ಹೇಳಿದ್ದಾರೆ.

ಅಂತೂ ಪಂಡಿತ ನೆಹರೂರವರು ವಾಗ್ದಾನಕೊಟ್ಟಂತೆ ಈ ಪ್ರಶ್ನೆಯ ಕುರಿತು ಕೇಂದ್ರ ಸರಕಾರದ ಧೋರಣೆಯನ್ನು ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಬೇಗನೆ ಪ್ರಕಟಿಸುವುದು ಅಗತ್ಯವಿರುತ್ತದೆ. ಈ ಕುರಿತು ಭಂಡವಲಗಾರರಿಗೆ ಯಾವ ಸಂಶಯಗಳಿಗೆ ಆಸ್ಪದವಿಲ್ಲದಂತೆ ಮಾಡಬೇಕು ಮಾತ್ರವಲ್ಲ ಭಂಡವಲಗಾರರಲ್ಲದವರಿಗೆ ಕೂಡಾ ಸರಕಾರದ ಧೋರಣೆ ಸ್ಪಷ್ಟವಾಗಬೇಕಾಗಿದೆ.

ಕೇಂದ್ರ ಸರಕಾರವು ಕಾಂಗ್ರೆಸ್ ಆರ್ಥಿಕ ಯೋಜನಾ ಸಮಿತಿಯವರ ಧೋರಣೆಯನ್ನು ಮೂಲಆಧಾರವಾಗಿಟ್ಟುಕೊಂಡು ಮುಂದುವರಿಸುವುದೇ ರಾಷ್ಟ್ರಹಿತದ ದೃಷ್ಟಿಯಿಂದ ಅತ್ಯಾಗತ್ಯವೆಂದು ನಮ್ಮ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರೆ ಅನುಚಿತವಲ್ಲ. ಪ್ರಜೆಗಳೆಲ್ಲರೂ ಈ ಪ್ರಶ್ನೆಯನ್ನು ತಿಳಿದುಕೊಂಡು ತಮ್ಮ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಬೇಕಾಗಿಯದೆ.

ಟೀಕೆ-ಟಿಪ್ಪಣಿಗಳು

ಮದ್ರಾಸ್ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷ

ಮದ್ರಾಸ್ ಶಾಸನ ಸಭೆಗಳಲ್ಲಿಯ ಕಾಂಗ್ರೆಸ್ ಪಕ್ಷವು ಅಖಿಲ ಭಾರತದಲ್ಲಿ ಹಾಸ್ಯಾಸ್ಪದವಾಗುತ್ತಿದೆಯೆಂಬುದು ಅತ್ಯಂತ ಶೋಚನೀಯ ವಿಷಯ. ಇದು ಅಲ್ಲಿ ಬಹುಮತದ ಪಕ್ಷವಿರುವುದರಿಂದ ಈ ಪಕ್ಷದ ಮುಂದಾಳು ಮದ್ರಾಸಿನ ಮುಖ್ಯ ಮಂತ್ರಿಯ ಪದವಿಗೆ ಬಂದು ಮಂತ್ರಿಮಂಡಳ ನೇಮಿಸುವ ಅಧಿಕಾರ ಇವರಿಗೆ ಬರುತ್ತದಷ್ಟೆ. ಈ ಮುಂದಾಳುವಿನ ಚುನಾವಣೆ ವರ್ಷಕ್ಕೊಮ್ಮೆ ನಡೆಯಬೇಕೆಂಬ ಒಂದು ನಿಯಮವು ಈ ಪಕ್ಷದ ಘಟನೆಯಲ್ಲಿರುತ್ತದೆ. ಈ ಬಾರಿ ಈ ಪ್ರಶ್ನೆ ಬಂದಾಗ ಮುಂದಾಳಾಗಲು ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ಉಮೇದ್ವಾರಿಕೆಯನ್ನು ಶ್ರೀ ಪ್ರಕಾಶಮ್‌ರು ಎದುರಿಸಿ ತಾನೂ ಈ ಚುನಾವಣೆಯಲ್ಲಿ ಪುನಃ ಸ್ಪರ್ಧಿಸಿ ಪುನಃ ಬಹುಮತ ಸಿಕ್ಕದೆ ಸೋತುಹೋದರು. ಇಷ್ಟೇ ಇದ್ದರೆ ಇದರಲ್ಲಿ ಶೋಚನೀಯವೇನೂ ಇಲ್ಲ. ಚುನಾವಣೆಗಳಲ್ಲಿ ಸ್ಪರ್ಧಿಸುವುದು ಮತ್ತು ಬಹುಮತದಿಂದ ಈ ಪ್ರಶ್ನೆ ತೀರ್ಮಾನಿಸುವುದು ಇವು ಸಹಜವಾದ ವಿಷಯಗಳೇ ಇರುತ್ತವೆ.

ಆದರೆ ಈ ಸಂದರ್ಭದಲ್ಲಿ ನಡೆದ ವಿದ್ಯಮಾನಗಳ ವಿವರವೊಂದನ್ನು ಈ ಕಾಂಗ್ರೆಸ್ ಪಕ್ಷದವರಲ್ಲಿಯ ಇನ್ನೊಬ್ಬ ಮುಂದಾಳು ಶ್ರೀ ವೈದ್ಯನಾಥ ಅಯ್ಯರರು ಒಂದು ಹೇಳಿಕೆಯಲ್ಲಿ ವಿವರಿಸಿದ್ದಾರೆ. ಮಂತ್ರಿಮಂಡಳದ ಅಧಿಕಾರಕ್ಕಾಗಿ ಹಲವರು ಹಾತೊರೆಯುತ್ತಲಿದ್ದಾರೆಂಬುದು ಇದರಿಂದ ಸ್ಪಷ್ಟವಾಗುತ್ತಿದೆಯೆಂಬುದರಿಂದ ಈ ಪರಿಸ್ಥಿತಿ ಖೇದಜನಕವೆನ್ನದೆ ನಿವೃತ್ತಿ ಇಲ್ಲ. ಮಾತ್ರವಲ್ಲ ಈ ಪ್ರಶ್ನೆಯ ತೀರ್ಮಾನದಲ್ಲಿ ಜಾತೀಯತೆಯನ್ನೂ ಉದ್ರೇಕಿಸಲಾಗಿತ್ತೆಂಬ ಮಾತು ಇನ್ನೂ ದುಃಖದಾಯಕವಿರುತ್ತದೆ.

ಕಾಂಗ್ರೆಸಿನಂಥ ಪವಿತ್ರ ಸಂಸ್ಥೆಯ ಹೆಸರಲ್ಲಿ ಚುನಾವಣೆಗೆ ನಿಂತು ಜನರಿಗೆ ಕಾಂಗ್ರೆಸಿನ ಮೇಲಿರುವ ಅಭಿಮಾನದಿಂದ ಚುನಾಯಿತರಾಗಿ ಹೋದ ಈ ಪಕ್ಷದ ಸದಸ್ಯರು ಈ ರೀತಿ ಕಾಂಗ್ರೆಸಿನ ಧ್ಯೇಯಗಳನ್ನು ಮರೆತು ಅಧಿಕಾರಲಾಲಸೆಯಿಂದ ವರ್ತಿಸುವುದು ಲಾಂಛನಾಸ್ಪದವಿರುತ್ತದೆ. ಕಾಂಗ್ರೆಸಿನ ಶುಭ್ರ ಕೀರ್ತಿಗೆ ಕಳಂಕ ತಂದು ಈ ಸಂಸ್ಥೆಯನ್ನು ಹಾಳುಮಾಡಿದ ದ್ರೋಹ ಈ ಸದಸ್ಯರ ಪಾಲಿಗೆ ಬರುವುದರಲ್ಲಿ ಸಂದೇಹಬೇಡ.

ಇದೇ ರೀತಿ ಮುಂದರಿಸುತ್ತ ಹೋದರೆ ಮುಂದಿನ ಚುನಾವಣೆಯಲ್ಲಿ ಇದರ ಪರಿಣಾಮ ಕಂಡು ಬಾರದೆ ಇರಲಿಕ್ಕಿಲ್ಲವೆಂದು ಈ ಕಾಂಗ್ರೆಸ್ ಪಕ್ಷದವರಿಗೆ ಸ್ಪಷ್ಟವಾದ ಎಚ್ಚರಿಕೆ ಕೊಡಬೇಕಾಗಿದೆ.

ಪಶ್ಚಿಮ ಬಂಗಾಲದಲ್ಲಿ ಕಮ್ಯೂನಿಸ್ಟ್ ಬಹಿಷ್ಕಾರ

ಮಾನ್ಯ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ಗವರ್ನರಿಕೆಯಲ್ಲಿ ನಡೆಯುತ್ತಿರುವ ಪಶ್ಚಿಮ ಬಂಗಾಲ ಸರಕಾರದವರು ಆ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಸಂಗಡದ ಮೇಲೆ ಬಹಿಷ್ಕಾರದ ಆಜ್ಞೆ ಹೊರಡಿಸಿದ್ದಾರೆ.

ಕಲಿಕತ್ತೆಯಲ್ಲಿ ಸೇರಿದ ಕಮ್ಯೂನಿಸ್ಟರ ಕಾಂಗ್ರೆಸಿನಲ್ಲಿ ಕಮ್ಯೂನಿಸ್ಟ ಜನರಿಗೆ ಮದ್ದುಗುಂಡುಗಳನ್ನು ಒದಗಿಸಬೇಕೆಂಬುದಾಗಿ ನಿರ್ಣಯವಾಗಿದೆಯೆಂದು ಈ ಸರಕಾರದವರು ಪ್ರಕಟಿಸಿದ್ದಾರೆ.

ಕಮ್ಯೂನಿಸ್ಟ್ ಬಂಧುಗಳು ಬಲಾತ್ಕಾರದ ಹಾದಿಯನ್ನು ಹಿಡಿದು ಮದ್ದುಗುಂಡುಗಳ ಸಹಾಯದಿಂದ ದೇಶವನ್ನು ಸ್ವಾಧೀನಪಡಿಸಲು ಹೊರಟರೆ ಇದನ್ನು ಯಾವ ಸರಕಾರವೂ ಸಹಿಸಿಕೊಂಡಿರುವಂತಿಲ್ಲವೆಂಬುದು ಸ್ಪಷ್ಟವಾದ ವಿಷಯ.

ದೇಶದಲ್ಲಿ ಮಜೂರ ವರ್ಗಗಳ ಸಂಕಷ್ಟಗಳ ಉಪಯೋಗ ಮಾಡಿಕೊಂಡು ಈ ಜನರ ಬುದ್ಧಿಗೆಡಿಸಿ ಮುಷ್ಕರಗಳ ಮೇಲೆ ಮುಷ್ಕರಗಳನ್ನು ಹೂಡಿ ದೇಶದಲ್ಲಿ ಆದಷ್ಟು ಗೊಂದಲ ಎಬ್ಬಿಸಬೇಕು. ಈ ಮುಷ್ಕರಗಳಿಂದ ಉತ್ಪತ್ತಿ ಕಡಮೆಯಾಗಿ ಜನರಲ್ಲಿ ಕ್ಷೋಭೆಯುಂಟಾಗಿ ಅವರು ಸಂಕಷ್ಟಕ್ಕೀಡಾದರೆ ಗೊಂದಲ ಎಬ್ಬಿಸುವ ಕೆಲಸಕ್ಕೆ

ಇನ್ನೂ ಅನುಕೂಲ. ಹೀಗೆ ಅರಾಜಕತೆಯೇ ಬಂದೊದಗಿದರೆ ಇಂಥ ಪರಿಸ್ಥಿತಿಯಲ್ಲಿ ಬಲಾತ್ಕಾರ ಪ್ರಯೋಗವನ್ನು ಮಾಡಿಬಿಟ್ಟರೆ ರಾಜ್ಯದ ಆಡಳಿತವೇ ತಮ್ಮ ಪಂಗಡದ ಕೈ ಸೇರುವುದು ಇದೇ ಕಮ್ಯೂನಿಸ್ಟ ಧೋರಣೆಯೆಂಬುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಿದೆ

ಈ ಧೋರಣೆ ಈ ದೇಶದ ಈಗಿನ ಪರಿಸ್ಥಿತಿಯಲ್ಲಿ ಕೇವಲ ಅವ್ಯವಹಾರ್ಯವೆಂಬುದು ಈ ಕಮ್ಯೂನಿಸ್ಟರ ತಲೆಗೆ ಹೋಗದಿರುವುದು ಒಂದು ಆಶ್ಚರ್ಯ ಕೆಲವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದು ಯಶಸ್ವಿಯಾಗಿರಬಹುದು ಆದರೆ ಇಲ್ಲಿಯ ಪರಿಸ್ಥಿತಿ ತೀರ ಭಿನ್ನವಿರುತ್ತದೆ

ಮೊದಲನೆಯದಾಗಿ ಇದು ಕೈಗಾರಿಕೆ ಪ್ರಧಾನ ದೇಶವಾಗಿ ಇನ್ನೂ ಬೆಳೆದಿಲ್ಲ ಇಲ್ಲಿಯ ಮಜೂರ ವರ್ಗ ಅತ್ಯಲ್ಪ ಕೃಷಿಕ ವರ್ಗವನ್ನು ಇಷ್ಟೇ ಸರಳವಾಗಿ ವಂಚಿಸುವುದು ಸುಲಭಸಾಧ್ಯವಲ್ಲ ಇವೆಲ್ಲಕ್ಕಿಂತ ಮುಖ್ಯ ಸಂಗತಿಯೆಂದರೆ ಮಜೂರ ಹಾಗೂ ಕೃಷಿಕ ವರ್ಗಗಳ ಸಂಕಷ್ಟಗಳನ್ನು ದೂರಪಡಿಸಲು ಬದ್ಧಕಂಕಣರಾದ ಅವರ ಹಿತಚಿಂತಕರ ಸರಕಾರವೇ ಇಲ್ಲಿ ಜಾರಿಯಲ್ಲಿದೆ [illegible]ಲ್ಲದೆ ಈ ರಾಜ್ಯ ಭಂಡವಲದಾರೀ ಸರಕಾರದ ಆಡಳಿತದಲ್ಲಿಲ್ಲ ಕೊನೆಗೆ ಇಲ್ಲಿ ಅಹಿಂಸಾತತ್ವ ನೆಲೆನಿಂತಿದೆಯೆಂಬುದರಿಂದ ಬಲಾತ್ಕಾರದ ಹಾದಿ ಹಿಡಿಯುವವರಿಗೆ ಯಾವ ಬಗೆಯ ಸಹಾನುಭೂತಿಯೂ ದೊರೆಯುವಂತಿಲ್ಲ ಇಷ್ಟೆಲ್ಲ ಇದ್ದೂ ಈ ಪಂಗಡದವರು ಕು[illegible]ಬುದ್ಧಿಯಿಂದ ಬಲಾತ್ಕಾರದ ಹಾದಿಯನ್ನೇ ಕಟ್ಟಿಕೊಂಡಲ್ಲಿ ಈ ಪಕ್ಷವು ಬೇಗನೆ ನಿರ್ನಾಮವಾಗುವುದೆಂಬ ಬಗ್ಗೆ ಸಂಶಯ ಬೇಡ ನಮ್ಮ ಜಿಲ್ಲೆಯ ಕಮ್ಯೂನಿಸ್ಟ ಬಂಧುಗಳಾದರೂ ಇವನ್ನು ಚೆನ್ನಾಗಿ ವಿಚಾರಿಸುವರೆಂದ ನಾವು ಆಶಿಸುತ್ತೇವೆ

ಪೂರ್ವ ಬಂಗಾಲದಲ್ಲಿ ಕ್ವಾದೇ ಅಜಾಮ ಜಿನ್ನಾರವರ ಪ್ರವಾಸ

ಪಾಕಿಸ್ತಾನದ ಗವರ್ನರ್ ಜನರಲ್ [illegible]ದೇ ಆಜಾಮ ಜಿನ್ನಾ ಸಾಹೇಬರು ಪೂರ್ವ ಬಂಗಾಲ ಪ್ರಾಂತ್ಯದಲ್ಲಿ ಒಂದು ಪ್ರವಾಸ ನಡೆಸಿ ಹಲವು ಭಾಷಣಗಳನ್ನಿತ್ತರು

ಪಾಕಿಸ್ತಾನದ ಕಡಿಮೆ ಸಂಖ್ಯಾಕರ ಸಂಕಷ್ಟಗಳನ್ನು ಕುರಿತು ಮಾತನಾಡುತ್ತ ಹಿಂದುಸ್ಥಾನದಲ್ಲಿ ಕಡಮೆ ಸಂಖ್ಯಾಕರನ್ನು ನಡೆಸುವದಕ್ಕಿಂತಲೂ ಉತ್ತಮ ರೀತಿಯಲ್ಲಿ ತಾವು ನಡೆಸುತ್ತಿದ್ದೇವೆಂದು ಜಾಹೀರುಮಾಡಿದರು ಇದಕ್ಕಿಂತ ಆ ತಮ್ಮ ಕಡಿಮೆ ಸಂಖ್ಯಾಕರ ಸಂಕಷ್ಟಗಳನ್ನು ವಿಚಾರಿಸಿ ಆ ಬಗ್ಗೆ ತಾವು ಮಾಡುವುದಾದರೂ ಏನೆಂಬುದನ್ನು ಸ್ಪಷ್ಟಪಡಿಸಿ ಆ ಜನರಿಗೆ ಭರವಸ ಕೊಡುವುದೇ ಉತ್ತಮವಿತ್ತಲ್ಲವೆ?

ಪೂರ್ವ ಬಂಗಾಲದಲ್ಲಿ ಬಂಗಾಲಿ ಭಾಷೆ ಅಲ್ಲಿಯ ಪ್ರಾಂತಿಕ ಭಾಷೆಯನ್ನಾಗಿ ಸರಕಾರ ಸ್ವೀಕರಿಸಬೇಕೆಂಬ ಬಗ್ಗೆ ಒಂದು ಚಳವಳ ನಡೆಯುತ್ತಿದೆ. ಈ ಕುರಿತು ಸರಕಾರಕ್ಕೂ ಪ್ರಜೆಗಳಿಗೂ ತಿಕ್ಕಾಟ ನಡೆಯುತ್ತಿದೆ ಈ ಚಳವಳಗಳನ್ನೆಲ್ಲ ಎಬ್ಬಿಸುವುದು ಪಾಕಿಸ್ತಾನದ ವೈರಿಗಳೆಂದು ಜಿನ್ನಾ ಸಾಹೇಬರ ಹೇಳಿಕೆ

ಪಾಕಿಸ್ತಾನದಲ್ಲಿ ಸರಕಾರದ ಯಾವ ಧೋರಣೆಯ ವಿರುದ್ಧ ಯಾವ ಚಳವಳ ನಡೆದರೂ ಅದು ಪಾಕಿಸ್ತಾನದ ವೈರಿಗಳ ಹಂಚಿಕೆಯಿಂದ ನಡೆಯುವ ಚಳವಳವೆಂದು ಹೇಳಿಬಿಟ್ಟರೆ ಸುಲಭದಲ್ಲಿ ತೀರ್ಮಾನವಾಗುತ್ತದೆಂದು ಇವರಿಗೆ ಅನ್ನಿಸಿರಬೇಕು.

ಪಾಕಿಸ್ತಾನದಲ್ಲಿ ಮುಸ್ಲಿಮರೆಲ್ಲರೂ ಮುಸ್ಲೀಮ್ ಲೀಗ್ ಪಂಗಡಕ್ಕೇನೇ ಸೇರಬೇಕೆಂದು ಇತರ ಪಂಗಡಗಳ್ಯಾವವೂ ಬೇಡವೆಂದು ಜಿನ್ನಾ ಸಾಹೇಬರು ಅಲ್ಲಿಯವರಿಗೆ ಉಪದೇಶ ಕೊಟ್ಟಿದ್ದಾರೆ. ಒಂದು ವೇಳೆ ಯಾರಾದರೂ ಬೇರೆ ಒಂದು ಪಂಗಡ ಆರಂಭಿಸಿದರೆ ಅದು ವೈರಿ ಪ್ರೇರಿತವೆಂದು ಬಹಿಷ್ಕರಿಸಿಬಿಟ್ಟರೆ ತೀರಿತು

ಮಿ| ಜಿನ್ನಾ ಸಾಹೇಬರು ಹಿಟ್ಲರರ ಶಿಷ್ಯರೆಂಬುದನ್ನು ದಿನದಿಂದ ದಿನಕ್ಕೆ ಸ್ಪಷ್ಟಮಾಡುತ್ತಲಿದ್ದಾರೆ. ಇದರ ಪರಿಣಾಮವೇನಾಗುವುದೆಂದು ಈಗ ಯಾರು ಊಹಿಸಬಲ್ಲರು?

ಜಿಲ್ಲೆಯಲ್ಲಿಯ ಮಜೂರ ಚಳವಳ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಮಜೂರ ಚಳವಳವನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸುವುದು ಅಗತ್ಯವಿರುತ್ತದೆ

ಈ ಜಿಲ್ಲೆಯಲ್ಲಿ ಮಜೂರ ಚಳವಳವು ಬಲುಮಟ್ಟಿಗೆ ಮಂಗಳೂರು ಪಟ್ಟಣದಲ್ಲಿ ಕೇಂದ್ರೀಕೃತವಾಗಿರುತ್ತದೆ. ಕಾಸರಗೋಡು ತಾಲೂಕಿನ ಹೊಸದುರ್ಗ ವಿಭಾಗದಲ್ಲಿ ಮಲಬಾರಿನ ಸಂಪರ್ಕದಿಂದ ಅಲ್ಲಿಯ ಕೃಷಿಕವರ್ಗಗಳ ಮೇಲಾದ ಪರಿಣಾಮವನ್ನು ಬಿಟ್ಟರೆ ಈ ಜಿಲ್ಲೆಯಲ್ಲಿ ಕೃಷಿಕವರ್ಗವು ಈ ಚಳವಳದಲ್ಲಿ ಇನ್ನೂ ಸಮಾವೇಶವಾಗಿಲ್ಲವೆಂದು ಹೇಳಲು ಅಡ್ಡಿಯಿಲ್ಲ ಮಂಗಳೂರು ಬಿಟ್ಟು ಉಳಿದ ಜಿಲ್ಲೆಯ ಭಾಗಗಳಲ್ಲಿ ವ್ಯವಸ್ಥಿತ ಕೈಗಾರಿಕೆಗಳ ಸಂಖ್ಯೆ ಕಡಮೆಯೆಂಬುದರಿಂದ ಈ ಚಳವಳ ಮುಖ್ಯವಾಗಿ ಮಂಗಳೂರಲ್ಲೇ ನಡೆಯುತ್ತದೆಯೆಂದರೆ ತಪ್ಪಲ್ಲ ಉಡುಪಿಯಲ್ಲಿ ಈ ಚಳವಳವನ್ನೆಬ್ಬಿಸಲು ಆಗಿಂದಾಗ ಯತ್ನಗಳು ನಡದಿರುತ್ತವೆ ಆದರೆ ಅವು ವಿಶೇಷ ಯಶಸ್ವಿಯಾದಂತೆ ಕಂಡು ಬರುವುದಿಲ್ಲ

ಮಜೂರರ ಮುಂದಾಳ್ತನಕ್ಕಾಗಲು ಹವಣಿಸುವವರ ಹಲವು ಮಂದಿ ಇದ್ದಾರೆ ಇದರಲ್ಲಿ [illegible] ಕಮ್ಯೂನಿಸ್ಟ ಬಂಧುಗಳಿಗೆ [illegible] [illegible] ಕೈಗಾರಿಕೆಗಳಲ್ಲಿ [illegible] [illegible] [illegible] ರಲ್ಲಿ ಹೆಚ್ಚಿನವರು ಕಮ್ಯೂನಿಸ್ಟ ಪ್ರಚಾರದ [illegible] ಸಿರ್ಪವಾದ

ಮಂಗಳೂರಲ್ಲಿ ಒಂದು ಸಾಮ್ಯವಾದೀ ಪಂಗಡವೂ ಇತ್ತೀಚೆಗೆ ತಲೆಯೆತ್ತಿದೆ ಇವರೂ ಕೆಲಸಗಾರರ [illegible] ಮಜೂರರ [illegible] ಮಜೂರರ ಚಿಕ್ಕಚಿಕ್ಕ ಕೆಲವು ಪಂಗಡಗಳನ್ನು ಇವರೂ ಕಟ್ಟಿಕೊಂಡಿದ್ದಾರೆ

ಕಾಂಗ್ರೆಸ್ ಸಂಸ್ಥೆ ಕೂಡಾ ರಾಷ್ಟ್ರೀಯ ಮಜದೂರ ಸಂಸ್ಥೆಯೊಂದನ್ನು ಸ್ಥಾಪಿಸಿ ಮಜೂರ ಚಳವಳದಲ್ಲಿ ಕಾಂಗ್ರೆಸಿಗರೂ ಸೇರಬೇಕೆಂದು ಹೇಳಿದಂತೆ ಸ್ಥಳೀಕ ಕಾಂಗ್ರೆಸ್ ಕಾರ್ಯಕರ್ತರೂ ನಮ್ಮಲ್ಲಿಯ ಮಜೂರ ಚಳವಳದಲ್ಲಿ ಸೇರಲು ಹವಣಿಸುತ್ತಿದ್ದಾರೆ ಇವರಲ್ಲಿ ಕೆಲವರು ಹಳ್ಳಿಗಳಲ್ಲಿ ಪ್ರವೇಶಿಸಿ ಕೃಷಿಕರನ್ನು ವ್ಯವಸ್ಥೆಗೊಳಿಸುವುದರಲ್ಲಿಯಾದರೂ ತಾವು ಮುಂದಾಗಬೇಕೆಂದು ಯತ್ನಿಸುವಂತೆ ಕಾಣುತ್ತದೆ ಇವರು ತಯಾರಿಸುತ್ತ ಬರುವ ಕೃಷಿಕರ ಸಂಘಗಳಾದರೂ ಕೇವಲ ಕಾಗದದ ಮೇಲಿನ ಸಂಘಗಳು ಮಾತ್ರವೋ ಎಂಬುದನ್ನು ನೋಡಲಿಕ್ಕಿದೆ

ಅಂತು ಈಗ ನಮ್ಮಲ್ಲಿಯ ಮಜೂರ ಚಳವಳದ ಮುಖ್ಯ ಮುಂದಾಳ್ತನ ಕಮ್ಯೂನಿಸ್ಟ ಬಂಧುಗಳಲ್ಲಿದೆಯೆಂಬುದನ್ನು ಒಪ್ಪಲೇಬೇಕು ಶ್ರೀಮಾನ್ ಎಸ್ ಎನ್ ಹೊಳ್ಳ, ಬಿ ವಿ ಕಕ್ಕಿಲ್ಲಾಯ, ಶಾಂತಾರಾಮಪೈ, ಶಿವಶಂಕರರಾವ್, ಮೊದಲಾದ ಅವಿಶ್ರಾಂತವಾಗಿ ದುಡಿಯುವ ಉತ್ತಮ ತೆರನಾದ ಕೆಲಸಗಾರರು ಈ ಪಂಗಡದಲ್ಲಿರುವುದರಿಂದಲೂ ಇವರು ದೀರ್ಘಕಾಲದಿಂದ ದುಡಿಯುತ್ತಿರುವರೆಂಬುದರಿಂದಲೂ ಈ ಕಮ್ಯೂನಿಸ್ಟ ಪಂಗಡಕ್ಕೆ ಮಜೂರ ಚಳವಳದಲ್ಲಿಂದು ಪ್ರಧಾನಸ್ಥಾನ ಸಿಕ್ಕಿರುತ್ತದೆ.

ನಮ್ಮಲ್ಲಿಯ ಮಜೂರವರ್ಗಕ್ಕೆ ಇವರ ಮುಂದಾಳ್ತನದಿಂದ ನಿಜವಾದ ಪ್ರಯೋಜನವಾಗಿದೆಯೆಂಬುದನ್ನು ಒಪ್ಪಬೇಕು ಇಂದು ಮಜೂರವರ್ಗದಲ್ಲಿ [illegible] ಇವರಲ್ಲಿ [illegible] ಕೆಲಸಗಾರರ [illegible] [illegible] [illegible] [illegible] [illegible] ಕರ [illegible]

ಕಮ್ಯೂನಿಸ್ಟ [illegible] ಮಜೂರ ವರ್ಗಕ್ಕೆ [illegible] ಅಹಿತವಾದದ್ದು [illegible] [illegible] [illegible] [illegible] ಕುಟುಂಬಗಳು [illegible] [illegible] ತ್ತಲಿವೆ

[illegible] ನಮ್ಮ ಮಜೂರ[illegible] ಮಟ್ಟಿಗೆ ಕಲಿತಿದ[illegible] ನಮ್ಮಲ್ಲಿಯ ಮಜೂರ ಚಳವಳ [illegible] [illegible]

ಮೂರನೆಯದಾಗಿ ತಾವು ಯಾವ ಕಾರ್ಖಾನೆಗಳಲ್ಲಿ ದುಡಿಯುತ್ತಿರುವರೋ ಆ ಕಾರ್ಖಾನೆಗಳ ಹಿತ ಮತ್ತು ಶ್ರೇಯಸ್ಸುಗಳ ಮೇಲೆಯೇ ತಮ್ಮ ಭಾವೀ ಜೀವನ ಹೊಂದಿಕೊಂಡಿದೆಯೆಂಬ ಸರಳ ಸಂಗತಿಯನ್ನು ನಮ್ಮ ಮಜೂರರಿಗೆ ಕಲಿಸಿಲ್ಲ ಮೇಲಿಂದ ಮೇಲೆ ನಡೆಸುತ್ತಿರುವ ಮುಷ್ಕರಗಳಿಂದ ಈ ಕಾರ್ಖಾನೆ ಕೈಗಾರಿಕೆಗಳಿಗೆ ನಿಜವಾಗಿ ಧಕ್ಕೆ ಬಂದಲ್ಲಿ ಮುಂದೆ ಮಜೂರ ವರ್ಗದ ಗತಿಯೇನು? ಉಡುಪಿಯಲ್ಲಿ ಒಂದು ಮುಷ್ಕರದ ಪರಿಣಾಮವಾಗಿ ಒಂದು ಬೀಡಿಕಾರ್ಖಾನೆ ಮುಚ್ಚಿ ಮಜೂರರ ನಿರುದ್ಯೋಗಕ್ಕೆ ಕಾರಣವಾದ ಒಂದು ಚಿಕ್ಕ ಘಟನೆಯ ಪಾಠ ನಮ್ಮ ಮಜೂರರು ತಿಳಿದುಕೊಳ್ಳುವುದು ಅಗತ್ಯ

ನಮ್ಮ ಕಮ್ಯೂನಿಸ್ಟ್ ಬಂಧುಗಳು ಮಜೂರರ ಹಿತದ ಕಡೆಗೆ ಮಾತ್ರ ಗಮನಕೊಟ್ಟು ಮಜೂರವರ್ಗಕ್ಕೆ ಸೇವೆ ಸಲ್ಲಿಸಿದರೆ ಇವರಷ್ಟು ಉತ್ತಮ ಸೇವೆ ಯಾರೂ ಸಲ್ಲಿಸಲು ಸಮರ್ಥರಾಗುವಂತಿಲ್ಲ. ಆದರೆ ಇದಕ್ಕೆ ಬದಲು ಅವರು ಕಮ್ಯೂನಿಸ್ಟ್ ರಾಜಕೀಯ ತತ್ವಗಳನ್ನು ಕಟ್ಟಿಕೊಂಡು ಕೆಲಸಗಾರರ ರಾಜ್ಯಸ್ಥಾಪನೆಗೆ ಹೊರಟಿರುತ್ತಾರೆ ಅದು ಕೂಡ ಸಲ್ಲದ ಹಾದಿಯಲ್ಲಿ ಮುಂದರಿಯುತ್ತಿದ್ದಾರೆ. ಇದರ ಪರಿಣಾಮ ಸ್ವಲ್ಪ ವಿಚಾರವಿದ್ದವರಿಗೆ ಸ್ಪಷ್ಟವಾಗಿ ತಿಳಿಯಲು ಕಷ್ಟವಿಲ್ಲ ಕಮ್ಯೂನಿಸ್ಟ್ ಚಳವಳಕ್ಕೆ ಈ ದೇಶದಲ್ಲಿ ಭವಿಷ್ಯವಿಲ್ಲ

ನಮ್ಮಲ್ಲಿಯ ಕಮ್ಯೂನಿಸ್ಟ್ ಕೆಲಸಗಾರರು ಈ ಹುಚ್ಚು ಧೋರಣೆ ಬಿಟ್ಟುಕೊಟ್ಟು ಮಜೂರರ ನಿಜವಾದ ಸೇವೆಯಲ್ಲಿ ನಿರತರಾಗಬೇಕೆಂದೂ ಹೀಗೆ ಮಾಡಿದ್ದಲ್ಲಿ ಇವರು ಮಜೂರವರ್ಗಕ್ಕೆ ಮಾತ್ರವಲ್ಲ ನಮ್ಮ ಜಿಲ್ಲೆಗೇ ನಿಜವಾದ ಶ್ರೇಯಸ್ಸನ್ನುಂಟುಮಾಡಬಹುದೆಂದೂ ನಾವು ಈ ಕೆಲಸಗಾರರೊಡನೆ ನಮ್ರತೆಯಿಂದ ವಿನಂತಿಮಾಡಿಕೊಳ್ಳುತ್ತೇವೆ ಆದರೆ ನಮ್ಮ ಈ ವಿನಂತಿಗೆ ಸ್ವಲ್ಪವಾದರೂ ಮನ್ನಣೆ ದೊರೆಯುವ ಸಂಭವವಿದೆಯೆಂದು ನಮಗೆ ನಂಬಿಗೆ ಇಲ್ಲವೆಂದೂ ನಾವು ಯಥಾರ್ಥತೆಯಿಂದ ಒಪ್ಪಬೇಕು

ಕಮ್ಯೂನಿಸ್ಟ್ ಬಂಧುಗಳ ಹಿಡಿತದಿಂದ ಮಜೂರ ವರ್ಗಗಳನ್ನು ಮುಕ್ತಗೊಳಿಸಬೇಕೆಂದು ನಮ್ಮಲ್ಲಿಯ ಒಂದು ಮುಖ್ಯ [illegible] ಪ್ರಶ್ನೆಯಾಗಿ [illegible] ಹೇಳಬೇಕು ಇದನ್ನು ಹೇಗೆ ಸಾಧಿಸಬಹುದು? ನಮ್ಮಲ್ಲಿಯ [illegible] ಮಜೂರ ವರ್ಗವನ್ನು ಪೂರ್ಣ [illegible]ದಿಂದ ನಡೆಸುವ [illegible] ಚೆನ್ನಾಗಿ ತಿಳಿ[illegible] ಒಂದು ಅವಶ್ಯಕ[illegible] ಚೆನ್ನಾಗಿ ತಿಳಿದುಕೊಳ್ಳಬೇಕು, ಇದು ಒಂದ ಅವಶ್ಯಕತೆ ಎರಡನೆಯದಾಗಿ ಕಾಂಗ್ರೆಸ್ ಕೆಲಸಗಾರರಾಗಲಿ [illegible] ಕೆಲಸಗಾರರಾಗಲಿ ಕಮ್ಯೂನಿಸ್ಟರೊಡನೆ ಅವರ ವಿಧಾನಗಳಿಂದಲೇ ಸ್ಪರ್ಧಿಸ [illegible]ಗುವುದು ಮೂರ್ಖತನವೆಂದು ತಿಳಿ[illegible] ಇವೆರಡು ಪಂಗಡಗಳು ತಮ್ಮದೇ [illegible]ಗಳನ್ನು [illegible] [illegible] [illegible] [illegible] [illegible]

ಮಜೂರ [illegible] [illegible] [illegible] [illegible] [illegible] ಪ್ರತಿ[illegible] [illegible] [illegible] ವಾಸಿಸುವ ಮಜೂರರ ಪರಿಚಯ [illegible] ಅವರ [illegible] ಜೀವನದ ಸುಖಕಷ್ಟದಲ್ಲಿ [illegible] ಈ ಕುಟುಂಬಗಳಿಗೆ ಅಗತ್ಯವುಳ್ಳ ಸೇವೆ ಸಲ್ಲಿಸುವಂತೆ ಅನುಕೂಲ ಮಾಡಿಕೊಡಬೇಕು. ಮಜೂರರ ನಿಜವಾದ ಹಿತಕ್ಕಾಗಿಯೇ ಇವರು ದುಡಿಯಬೇಕಲ್ಲದೆ ತಮ್ಮದೇ ಆದ ಬೇರೆ ರಾಜಕೀಯ ಉದ್ದೇಶಗಳನ್ನು ಇದರಲ್ಲಿ ಬೆರೆಸಬಾರದು. ಈ ರೀತಿ ನಿರತವಾಗಿ ಮಜೂರ ಕುಟುಂಬಗಳಿಗೆ ಸೇವೆ ಸಲ್ಲಿಸುವ ಸಚ್ಚಾರಿತ್ರ್ಯವುಳ್ಳ ಕೆಲಸಗಾರರ ತಂಡವು ಸಾಕಷ್ಟು ದುಡಿದರೆ ನಮ್ಮಲ್ಲಿಯ ಮಜೂರ ವರ್ಗಗಳ ಕಣ್ತೆರೆದು ಕಮ್ಯೂನಿಸ್ಟ್ ಉಪಟಳದಿಂದ ಇವರನ್ನು ರಕ್ಷಿಸಲು ಸಾಧ್ಯವಾದೀತು. ಕಾಂಗ್ರೆಸ್ ಕೆಲಸಗಾರರಾಗಲಿ ಸಾಮ್ಯವಾದೀ ಕಾರ್ಯಕರ್ತರಾಗಲಿ ಇಂಥದೊಂದು ಕಾರ್ಯಕ್ರಮ ಕೈಕೊಳ್ಳುವರೆ?

ಜಿಲ್ಲಾ ಸಮಾಚಾರ

ರಂಗಭೂಮಿ ಶತಮಾನೋತ್ಸವ

ಕರ್ನಾಟಕ ರಂಗಭೂಮಿಯ ಶತಮಾನೋತ್ಸವವನ್ನು ವಿಜೃಂಭಣೆಯಿಂದ ನಡೆಸಬೇಕೆಂದು ನಿರ್ಧರಿಸಿ ಅದರ ಅಂಗವಾಗಿ ನಾಟಕಗಳೂ, ಆಟಗಳೂ, ಯಕ್ಷಗಾನಗಳೂ, ತಾಳಮೇಳಗಳೂ ಏರ್ಪಡಿಸಿದೆ. ಪ್ರತಿಯೊಂದರಲ್ಲೂ ಉತ್ತಮವೆಂದು ತೀರ್ಮಾನಿಸಲ್ಪಟ್ಟವುಗಳಿಗೆ ಬಹುಮಾನಗಳನ್ನು ಸಹ ಕೊಡಲು ಏರ್ಪಡಿಸಿರುವದಲ್ಲದೆ ಸಂಘಗಳಿಗೆ ಖರ್ಚುಗಳನ್ನು ಸಹ ಕೊಡಲು ತೀರ್ಮಾನವಾಗಿರುವದರಿಂದ ದಕ್ಷಿಣ ಕನ್ನಡದಲ್ಲಿರುವ ಸಮಸ್ತ ಕಲಾವಿದರೂ ಮೇಳದ ಗುಂಪಿನವರೂ, ತಾಳಮದ್ದಳೆ ಸಂಘದವರೂ ಬೊಂಬೆಯಾಟದವರೂ ಈ ಉತ್ಸವದಲ್ಲಿ ಸಹಕರಿಸಬೇಕಾಗಿ ಕೋರಿದೆ. ಈ ಉತ್ಸವ ಮೈಸೂರಲ್ಲಿ ಜರಗುವುದು. ಹೆಚ್ಚಿನ ವಿವರಗಳನ್ನು ಶ್ರೀ ಹುಣಸೂರ್, ಭಾರತ ಲಲಿತ ಕಲಾ ಸಂಘದವರಿಂದಾಗಲಿ, ಅಥವಾ ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಂಗಭೂಮಿಯ ಶತಮಾನೋತ್ಸವ ಸಮಿತಿ ತ್ಯಾಗರಾಜರೋಡ್ ಮೈಸೂರಿನಿಂದಾಗಲಿ ಪಡೆಯಬಹುದು. ಸರ್ವರ ಸಹಕಾರವನ್ನು ಕೋರಲಾಗಿದೆ.

ಪ್ರಾಣಿಬಲಿ ನಿಲ್ಲಿಸಲಿಕ್ಕೆ

ಈ ಕುರಿತು ಮಂಗಳೂರು ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಮತ್ತು ದ. ಕ. ಜಿಲ್ಲಾ ಕಾಂ. ಕಮಿಟಿ ಕಾರ್ಯದರ್ಶಿಗಳ ಸಹಿಗಳಿಂದ ಒಂದು ವಿನಂತಿ ಹೊರಟಿದೆ:— ಸುರತ್ಕಲ್ಲಿನ ಊರ ಮಾರಿಗುಡಿಯಲ್ಲಿ ಜನಮತಾನುಸಾರ ಪ್ರಾಣಿಬಲಿ ನಿಲ್ಲಿಸಲಾಗಿದೆ. ಆದರೆ ಅಲ್ಲಿಯ ಪದ್ಮಸಾಲಿಗ ಗುಡಿಯವರು ಇದನ್ನಲಕ್ಷಿಸಿ ಈ ಸಲ ಕೋಣಬಲಿ ನಿರ್ವಹಿಸಲು ನಿರ್ಧರಿಸಿರುವರು. ಇದು ಹೇಯವೂ, ಅಸಹನೀಯವೂ ಆದ್ದರಿಂದ ಇದನ್ನು ಸಾರ್ವಜನಿಕರು ಪ್ರತಿಭಟಿಸಿ ನಡೆಯದಂತೆ ಮಾಡಬೇಕು. ಅದಕ್ಕೆ ಪಣತೊಟ್ಟು ಸತ್ಯಾಗ್ರಹಿಗಳಾಗಿ ಕೆಲಸಮಾಡುವವರು ಬೇಕಾಗಿದ್ದಾರೆ. ಈ ಚಳವಳದಲ್ಲಿ ಭಾಗವಹಿಸುವವರು ಕಳೆದ ತಾ. ೨೮ರೊಳಗೆ ತಮ್ಮ ಹೆಸರುಗಳನ್ನು ಮೇಲ್ಕಂಡ ವಿನಂತಿಗಾರರಿಗೆ ತಿಳಿಸಬೇಕೆಂದು ಪ್ರಕಟವಾಗಿತ್ತು. ಸುರತ್ಕಲ್ ಪ್ರಾಣಿಬಲಿ ನಿಷೇಧ ಸಮಿತಿಗೂ ಹೊರಗಿನವರು ತಮ್ಮ ಹೆಸರುಗಳನ್ನು ತಿಳಿಸಬಹುದು.

ಕಲ್ಯಾಣೋತ್ಸವ

ಸ್ಥಳೀಯ ಮಣ್ಣಗುಡ್ಡೆ ಪಳನೀ ಶ್ರೀ ಸುಬ್ರಹ್ಮಣ್ಯ ಮಹೋತ್ಸವವು ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಬ್ರಹ್ಮಶ್ರೀ ವಾಸುದೇವ ರಾವ್ ಕತ್ತಾಡಿ ಅವರು ಸರ್ವರಿಗೂ ಸುಲಭ ಗ್ರಾಹ್ಯವಾಗುವಂತೆ ವಿವರಿಸಿ ಹೇಳಿದರು.

ಹವಾಮಾನ

ಈ ವಾರ ಸೆಖೆಯ ಪರಿಸ್ಥಿತಿಯು ಪರಮಾವಧಿಗೆ ಮುಟ್ಟಿ ಒಂದೆರಡು ಬಿರುಸು ಮಳೆಗಳೂ ಬಂದಿದ್ದವು. ಅನಂತರ ಸ್ವಲ್ಪ ಮಟ್ಟಿಗೆ ವಾತಾವರಣವು ತಂಪಾಗಿದ್ದು, ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಮೋಡಗಳು ಕವಿಯುತ್ತವೆ.

ಕೈಮಗ್ಗ ಮ್ಹಾಲಿಕರ ಸಂಘ

ಈ ಸಂಘದ ವಾರ್ಷಿಕ ಮಹಾಸಭೆ ಜರಗಿದಾಗ ಸಂಘದ ಮಾಲಕ ನೇಕಾರರಿಗೆ ನೂಲು ಸರಬರಾಯಿ ವ್ಯವಸ್ಥೆಯಾಗಬೇಕು, ಕೈಮಗ್ಗದ ಬಟ್ಟೆಗಳು ದೇಶದಲ್ಲೆಲ್ಲ ಚಲಾವಣೆ ಮಾಡಲು ಸರಕಾರ ಸೌಕರ್ಯ ಕಲ್ಪಿಸಬೇಕು, ಎಂಬೆರಡು ಮುಖ್ಯ ವಿಷಯಗಳ ನಿರ್ಣಯಗಳಾಗಿವೆ.

ದುರ್ಮರಣ

ಇಲ್ಲಿಯ ವಿದ್ಯಾರ್ಥಿಭವನದ ಹತ್ತಿರದ ಹಿತ್ತಿಲಿನ ಯೋತ ನೀರು ಎಳೆಯುವ ಒಂದು ಭಾವಿಯಲ್ಲಿ ಗೌಡಸಾರಸ್ವತ ಬ್ರಾಹ್ಮಣ ಕುಲೀನ ಮನೆತನದ ಓರ್ವ ತರುಣಿಯ ಶವವು ಕಳೆದ ತಾ. 21ರಂದು ಕಂಡು ಬಂದಿತು. ಮೃತಳು ಪೂರ್ಣ ಗರ್ಭಿಣಿಯ ಅವಸ್ಥೆಯಲ್ಲಿದ್ದಳೆಂಬ ಸಂಗತಿಯು ವಿಷಾದವನ್ನುಂಟುಮಾಡುವಂತಹದು. ಪೋಲಿಸ್ ತನಿಖೆಯಾಗಿರುವುದೆಂದು ತಿಳಿದು ಬರುತ್ತದೆ.

ಮಂತ್ರಿಗಳು

ಮದ್ರಾಸಿನಿಂದಿದು ಮಾನ್ಯ ಕೃಷಿಇಲಾಖಾ ಮಂತ್ರಿ ಶ್ರೀ ಮಾಧವಮೆನನ್ ಅವರು ಅಳಿಯ ಸಂತಾನ ಮಸೂದೆಯ ಕರಡನ್ನು ಪರಿಶೀಲಿಸಿ ಆ ಕುರಿತು ಸಾಕ್ಷ್ಯಗಳನ್ನು ಸಂಗ್ರಹಿಸಲಿಕ್ಕಾಗಿ ಚಿತ್ತೈಸುವರೆಂದು ತಿಳಿದು ಬರುತ್ತದೆ.

ಅನಾಥಮಕ್ಕಳ ಆಶ್ರಮ

ಕಂದಿಕಾಯಿಗಳಿಲ್ಲದೆ, ಗತಿ—ವಿಹೀನರಾದ ಅನಾಥ-ಹಿಂದೂಮಕ್ಕಳನ್ನು, ಅನ್ನ, ಬಟ್ಟೆ, ವಿದ್ಯೆಯನ್ನು ಕೊಟ್ಟು ರಕ್ಷಿಸುವುದೇ ಈ ಅನಾಥಾಶ್ರಮದ ಮುಖ್ಯ ಉದ್ದೇಶವಾಗಿರುವುದು; ಯೋಗ್ಯ ನಾಗರಿಕರನ್ನಾಗಿ ಮಾಡಲು ಯಾವ ಸಾಮಾಜಿಕ, ಶಾಸ್ತ್ರೀಯ ಮತ್ತು ಧಾರ್ಮಿಕ ಶಿಕ್ಷಣದ ಅವಶ್ಯಕತೆಯಿದೆಯೋ ಅದಕ್ಕಾಗಿ ಶಾರೀರಿಕ, ಮಾನಸಿಕ ಮತ್ತು ಆತ್ಮಿಕ ಜ್ಞಾನದ ಏರ್ಪಾಡನ್ನೂ ಮಾಡಿರುತ್ತದೆ. ಇದೇ ಬರುವ ಎಪ್ರಿಲ್ ತಿಂಗಳ ೩೦ರ ವರೆಗೆ ೧೧ ಅನಾಥ ಮಕ್ಕಳನ್ನು ಜಾತಿಭೇದವಿಲ್ಲದೆ, ಹೊಸದಾಗಿ ಸೇರಿಸಿಕೊಳ್ಳಲು ನಿರ್ಧರಿಸಿರುತ್ತೇವೆ. ಆದುದರಿಂದ ಅಂತಹ ಅನಾಥ ಮಕ್ಕಳನ್ನು ಮೇಲೆ ಉಲ್ಲೇಖಿಸಿರುವ ಆಶ್ರಮಕ್ಕೆ ಆ ಮಕ್ಕಳ ಹಿತ ದೃಷ್ಟಿಯಿಂದ ಎಪ್ರಿಲ್ ತಿಂಗಳ ೩೦ರ ಒಳಗೆ ಕಳುಹಿಸಿಕೊಡಬೇಕಾಗಿ ವಿನಂತಿ. ಹೀಗೆಂದು ಮಂಗಳೂರಿನ ಸನ್ಯಾಸಿಗುಡ್ಡೆಯ ಸ್ವಾಮಿ ಸದಾನಂದ ಸರಸ್ವತಿ, ಸ್ಥಾಪಕ, ಶ್ರೀ ಸದಾನಂದ ಅನಾಥಾಶ್ರಮ ಇವರು ವಿನಂತಿಸಿಕೊಳ್ಳುತ್ತಾರೆ.

ಮುದ್ದಣ ಜಯಂತಿ

ಕಳೆದ ತಾ. ೨೮ರಂದು ಆದಿತ್ಯವಾರ ಸಾಯಂಕಾಲ ಇಲ್ಲಿಯ ಥಿಯೋಸೋಫಿಕಲ್ ಲೋಜಿನಲ್ಲಿ ಮುದ್ದಣಜಯಂತ್ಯುತ್ಸವವು ಶ್ರೀ ಮಾನ್ ಕಡಂಗೋಡ್ಲು ಶಂಕರಭಟ್ಟರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ರಾಮಪ್ಪ ಉಡುಪರು ಮುದ್ದಣನ ಕಾವ್ಯಗಳ ವಾಚನಮಾಡಿದರು. ಶ್ರೀ ಯದುಕುರ್ಳ ಶಂಕರಭಟ್ಟರು 'ಮುದ್ದಣನ ಶೀಲ' ಎಂಬ ವಿಷಯದ ಕುರಿತು ಭಾಷಣಮಿತ್ತರು. ಕೊನೆಯಲ್ಲಿ ಅಧ್ಯಕ್ಷರು ನಮ್ಮ ಜಿಲ್ಲೆಯ ಈ ಮಹಾಕವಿಯ ಕಾವ್ಯ ಪ್ರೌಢಿಮೆಯ ಕುರಿತು ವಿವರಿಸಿದರು.

ಅಡಮಾನ ಬೇಂಕುಗಳ ಪರಿಷತ್ತು

ಪ್ರಾಂತ್ಯ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ರಾ॥ ಬ॥ ಜಿ. ಸಿ. ರಾಯನ್ ಅವರು ಕೇಂದ್ರ ಜಮೀನ್ ಅಡಮಾನದ ಬೇಂಕಿನ ಉಪಾಧ್ಯಕ್ಷ ಶ್ರೀ ವಿ. ರಾಮಮೂರ್ತಿ ಪಂತಲು ಇವರೊಡಗೂಡಿ ಕಳೆದವಾರ ಇಲ್ಲಿಗೆ ಚಿತ್ತೈಸಿದ್ದರು. ತಾ. ೨೪ರಂದು ಇಲ್ಲಿ ಜರಗಿದ ಮಂಗಳೂರು, ಉಡುಪಿ, ಪುತ್ತೂರು ಅಡಮಾನದ ಬೇಂಕುಗಳ ಪ್ರತಿನಿಧಿಗಳ ಪರಿಷತ್ತೊಂದು ಜರಗಿದಾಗ ಮೇಲ್ಕಂಡ ಮಹನೀಯರು ಅದರಲ್ಲಿ ಭಾಗವಹಿಸಿದರು. ಈ ಬೇಂಕುಗಳಿಗೆ ಮದ್ರಾಸಿನ ಅಡಮಾನ ಬೇಂಕುಗಳು ಸಾಲಕೊಡುವ ಧೋರಣೆಯು ದೂರವಾಗಬೇಕೆಂದೂ, ಸಾಲ ಪಡೆದವರಿಗೆ ದರತಗ್ಗಿಸಬೇಕೆಂದೂ, ಭೂಮಿಯನ್ನು ಬೇಂಕಿನ ವಶವಿರಿಸುವ ವರ್ಗದಾರರಿಗೆ ಸಾಲದೊರೆಯಬೇಕೆಂದೂ, ಮುನಿಸಿಪಾಲಿಟಿ ಮತ್ತು ಮೇಜರ್ ಪಂಚಾಯತಿಗಳಲ್ಲಿ ಕೊಡುವ ಸಾಲಗಳಿಗೆ ಭದ್ರತೆಯಾಗಿ ತೋಟಗಳ ಸಹಿತವಾದ ಮನೆಗಳನ್ನು ಸ್ವೀಕರಿಸಬೇಕೆಂದೂ ಸೂಚನೆಗಳಾದುವು. ಈ ಜಿಲ್ಲೆಯ 2 ಅಡಮಾನ ಬೇಂಕುಗಳು ನಷ್ಟದಲ್ಲಿ ನಡೆಸಲ್ಪಡುವುದೆಂದೂ, ಈ ವಿದ್ಯಮಾನಗಳನ್ನು ಸಂಪಾದಿಸಬೇಕೆಂದೂ ಮೇಲಾಧಿಕಾರಿಗಳಿಗೆ ವಿನಂತಿಸಲಾಯಿತು.

ಕಡಂದಲೆ

ಮಂಗಳೂರು ಕೃಷ್ಣಭವನದ ಮಾಲಿಕರಾದ ಶ್ರೀ ಕಡಂದಲೆ ಕೃಷ್ಣರಾಯರವರು ಸದ್ರಿ ಗ್ರಾಮದ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹೊಸಕಟ್ಟಡದ ಬಗ್ಗೆ ರೂ ೧೦೦೦/— (ಒಂದು ಸಾವಿರ ರೂಪಾಯಿ) ಉದಾರಮನಸ್ಸಿನಿಂದ ದಾನ ಮಾಡಿರುವರು. ಶಾಲಾ ವಿಸ್ತರಣ ಕಮಿಟಿಯ ಅಧ್ಯಕ್ಷರು ಈ ದಾನಿಗಳಿಗೆ ಉತ್ತರೋತ್ತರ ಶ್ರೇಯಸ್ಸೌಖ್ಯಗಳನ್ನು ಬಯಸುತ್ತಾರೆ.

ಪೊಳಲಿ ಜಾತ್ರೆ

ಪೊಳಲಿ ಶ್ರೀರಾಜರಾಜೇಶ್ವರಿ ಅಮ್ಮನ ಕಾಲಾವಧಿ ಜಾತ್ರೆ ಆಗಲೇ ಆರಂಭವಾಗಿದ್ದು ಇದೇ ತಾ. 3ರಂದು ಚೆಂಡಿನ ಉತ್ಸವ, ತಾ. 7ರಲ್ಲಿ ಚಂದ್ರಮಂಡಲ ತೇರನ್ನು ಎಳೆಯುವ ಮಹೋತ್ಸವ, ತಾ. 8ಕ್ಕೆ ರಥೋತ್ಸವ, ತಾ. 9ಕ್ಕೆ ಅವಭೃತ ಮಂಗಳಸ್ನಾನವೂ ನೆರವೇರುವವು.

ಫರಂಗಿಪೇಟೆ—ನಿಧನ

ಇಲ್ಲಿಯ ಶ್ರೀ ರಾಮಾ ಹಾ. ಎ. ಶಾಲೆಯ ಸ್ಥಾಪಕರೂ, ಅದರ ನಿವೃತ್ತ ಹೆಡ್ಮಾಸ್ತರರೂ, ಮತ್ತು ಮೆನೇಜರರೂ ಆಗಿದ್ದ ಮತ್ತು ಇತರ ಕೆಲ ಜನೋಪಕಾರಿ ಸಂಸ್ಥೆಗಳ ಸ್ಥಾಪಕರೂ ಚಾಲಕರೂ ಆಗಿದ್ದ ಫರಂಗಿಪೇಟೆಯ ಜನಪ್ರಿಯ ಶ್ರೀ ಪಿ. ರಾಮಚಂದ್ರ ಹೆಗ್ಡೆಯವರು ಕೆಲ ದಿನಗಳ ಹಿಂದೆ ತಮ್ಮ ೬೮ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬಕ್ಕೆ ಶಾಂತಿ ಕೋರುವೆವು.

ಬಪ್ಪನಾಡು ಜಾತ್ರೆ

ಇಲ್ಲಿಯ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಉತ್ಸವಗಳು ಕಳೆದ 24ರಿಂದ 31ರ ವರೆಗೆ ಯಥಾಸಾಂಗ ಜರಗಿದವು.

ಪುತ್ತೂರು

ಇಲ್ಲಿಯ ಸ್ಮಶಾನ ಹತ್ತಿರದ ತೋಡಿಗೆ ಒಂದು ಮರದ ಸಂಕವನ್ನು ಸ್ಥಳೀಯ ಪಂಚಾಯತ ಬೋರ್ಡಿನವರು ಹಾಕಿಸಿರುವರು.

ಇಲ್ಲಿಯ ಬಸ್ಸು ಸ್ಟಾಂಡಿನ ಕಟ್ಟೋಣ ಪೂರ್ತಿಯಾಗುತ್ತ ಬರುತ್ತದೆ.

ಬೆಂಗಳೂರು ಸೈನ್ಯ ಕೇಂದ್ರ ಭರತಿಮಾಡುವ ಅಧಿಕಾರಿಗಳು ಇಲ್ಲಿ ಮೊಕ್ಕಾಂ ಮಾಡಿದ್ದು ಸೈನ್ಯಕ್ಕೆ ಸೇರುವವರ ಅರ್ಜಿಗಳನ್ನು ಸ್ವೀಕರಿಸಿ ಅದರ ಅವಶ್ಯಕತೆ ಕುರಿತು ಭಾಷಣಗಳನ್ನು ಮಾಡಿರುವರು.

ಹುಲಿಶಿಕಾರಿ

ಕಾಸರಗೋಡು ತಾಲೂಕು ಕೊಳ್ಯೂರು ಗ್ರಾಮದ ಹರೋಡಿ ಎಂಬಲ್ಲಿ ವಾರಣಾಶಿ ನಾರಾಯಣಭಟ್ಟರು ಮತ್ತು ಇಡಿಯಾಳ ಗಣಪತಿ ಭಟ್ಟರು ಜೊತೆಯಲ್ಲಿ ಹೋಗಿ ತಮ್ಮ ಸ್ವಂತ ಕೋವಿಗಳಿಂದ ಹಲವು ಸಮಯದಿಂದ ಬಾಧೆ ಕೊಡುತ್ತಿದ್ದ ದೊಡ್ಡ ಹುಲಿಯನ್ನು ತಾ. 27ರಂದು ಸಾಯಂಕಾಲ ಸುಮಾರು 4½ ಗಂಟೆಗೆ ಕೊಂದಿರುತ್ತಾರೆಂದು ತಿಳಿದು ಬರುತ್ತದೆ.

ಪೆರಡಾಲ

ಉಪವಾಸ ಸಂಕಟ; ಸರಕಾರಕ್ಕೆ ದೂರು!

ಪೆರಡಾಲ ಮತ್ತು ಆಸುಪಾಸಿನ ಗ್ರಾಮಗಳಲ್ಲಿ ಆಹಾರ ಅಭಾವದಿಂದಾಗಿ ಈಗಾಗಲೇ ಜನರು ಉಪವಾಸಬಿದ್ದಿರುವುದರಿಂದ, ಇದೇ ಪರಿಸ್ಥಿತಿ ಇನ್ನೂ ಮುಂದುವರಿದರೆ ಬೇಗನೆ ಗಂಡಾಂತರ ಒದಗುವುದು ಖಂಡಿತವಾಗಿರುವುದರಿಂದ ಈ ಬಗ್ಗೆ ಇಲ್ಲಿನ ಊರವರ ಸಂಕಷ್ಟದ ಪರಿಸ್ಥಿತಿಯನ್ನು ಸರಕಾರಕ್ಕೆ ಭಿನ್ನವಿಸಿ ತಕ್ಕ ಪರಿಹಾರಕಾರ್ಯ ಕೈಕೊಳ್ಳುವ ಬಗ್ಗೆ ಒಂದು ಸಾರ್ವಜನಿಕ ಸಭೆಯು ಇದೇ ತಾ. ೩೦ರಲ್ಲಿ ಡಾ। ಪಿ. ಯಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನೆರವೇರಿ, ಅದರಲ್ಲಿ ಊರಲ್ಲಿನ ಆಹಾರ ಅಭಾವ, ಉಪವಾಸ ಪರಿಸ್ಥಿತಿ, ಸರಕಾರದ ಅಲಕ್ಷತೆ, ಬೇಗನೆ ಬರಲಿರುವ ಗಂಡಾಂತರ, ಆ ಕುರಿತು ಜನತೆ ಹಾಗೂ ಸರಕಾರದವರು ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಶ್ರೀಗಳಾದ ಕೆ. ಕೃಷ್ಣ ರಾವ್, ಕಯ್ಯಾರ ಕಿಂಞಣ್ಣ ರೈ, ಮುಳಿಯ ಶಂಕರಭಟ್ಟ, ಸರ್ಪಂಗಳ ಸುಬ್ಬಣ್ಣ ಭಟ್ಟ, ಈಳಂತೋಡಿ ಕೃಷ್ಣಭಟ್ಟರು ವಿವರಿಸಿ ಮಾತನಾಡಿದ ನಂತರ, ಸರಕಾರದಕ್ಕೆ ಈ ಊರಿನ ಮೊರೆಯನ್ನು ತಿಳಿಸಬೇಕೆಂದೂ ಅಂತೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕೆಂದೂ, ನಿರ್ಣಯಿಸಲಾಯಿತು.

ಇದೇ ದಿನ ರಾತ್ರಿ ಬದಿಯಡ್ಕ ಮಾರ್ಗವಾಗಿ ಮಲಬಾರಿಗೆ ಪುತ್ತೂರು ಮಾರ್ಗದಿಂದ ಬರುವ ಮೂರು ಗಾಡಿ ಅಕ್ಕಿಯನ್ನು ಇಲ್ಲಿನ ಗ್ರಾಮಾಧಿಕಾರಿಗಳು ಪತ್ತೆಹಿಡಿದಿದ್ದಾರೆ. ಇದುವರೆಗೆ ಈ ಮಾರ್ಗವಾಗಿ ಮಲಬಾರಿಗೆ ಲೋರಿಗಳಲ್ಲಿ ದಿನರಾತ್ರಿ ತುಂಬಾ ಅಕ್ಕಿ ಸಾಗುತ್ತಾ ಇತ್ತು. ಈಗಲೂ ಕಳ್ಳಮಾರ್ಗದಿಂದ ಸಾಗುತ್ತಿದೆಯಾಗಿ ತಿಳಿದುಬಂದಿದೆ. ಜನರು ಇಲ್ಲಿ ಉಪವಾಸಬಿದ್ದು ನರಳುತ್ತಿರುವಾಗ ಹೀಗೆ ಜಿಲ್ಲೆಯ ಹೊರಗಿನ ಬೇರೆ ಕಡೆಗೆ ಕೆಲವು ವರ್ಗದಾರರೂ, ದಲಾಲಿಗಳೂ, ವ್ಯಾಪಾರಿಗಳೂ ಅಧಿಕಾರಿಗಳೂ ಒಟ್ಟುಸೇರಿ, ಅಕ್ಕಿ ಭತ್ತಗಳನ್ನು ಕಳುಹಿಸುತ್ತಿರುವುದು ತುಂಬಾ ಶೋಚನೀಯವಿದೆ.

ಈಗ ಇಲ್ಲಿ ಅಕ್ಕಿ ಸೇರು ಒಂದರ ರೂಪಾಯಿ ೧—೪—೦ರಷ್ಟು ಕ್ರಯವಾಗಿದ್ದು, ಅದರೂ ಅಕ್ಕಿ ಸಿಗುವುದಿಲ್ಲ. ಇಲ್ಲಿನ ಕೆಲವು ಗ್ರಾಮಗಳಿಗೆ ಒಂದು ರಿಲೀಫ್ ಅಂಗಡಿಯಿದ್ದು, ಅದರಲ್ಲಿ ದಿನ ಒಂದರ ಒಬ್ಬನಿಗೆ ಮೂರು ಔನ್ಸ್ ಅಕ್ಕಿ ಮಾತ್ರ ಸಿಕ್ಕುತ್ತದೆ. ಅದೂ ಎಲ್ಲರಿಗೂ ಸಿಗುವುದು ಅಸಾಧ್ಯವಾಗಿರುವುದು.

ಶಾಶ್ವತಬೆಂಕಿಕಡ್ಡಿ

ಸುಮಾರು ೨೨೦ ಸಲಕ್ಕೂ ಮಿಕ್ಕಿ ಹಚ್ಚಲಿಕ್ಕಾಗುವ 'ಶಾಶ್ವತ' ಬೆಂಕಿಕಡ್ಡಿಯ ತಯಾರಿಯು ಸ್ವೀಡನಿನಲ್ಲಿ ತಯಾರಿಸುವ ಏರ್ಪಾಡುಗಳಾಗಿವೆ.

ಈ ಸಲದ ಬೆಂಕಿಕಡ್ಡಿಯ ತಯಾರಿಯು ಸಂಪೂರ್ಣ ಹೊಸ ತತ್ವಗಳ ಮೇಲೆ ರಚಿಸಲ್ಪಡುತ್ತದೆಂದು ಅದರ ಸಂಶೋಧಕರಾದ ಸಟ್ಸನ್ ಹಾಲ್ ಎಂಬ ಇಂಜಿನಿಯರರು ತಿಳಿಸುತ್ತಾರೆ. ಸುಮಾರು ೫೨ ದೇಶಗಳಲ್ಲಿ ಇದನ್ನು ಮಾರುವ ಹಕ್ಕನ್ನು ಈಗಾಗಲೇ ಪಡೆಯಲಾಗಿದೆ. ಈ ವರ್ಷವೇ ೪೦ ದೇಶಗಳಿಗಿದನ್ನು ಕಳುಹಿಸಲಾಗುವುದು.

"ಅಗ್ನಿಕೋಲು" ಎಂದೆನಿಸಲ್ಪಡುವ ಈ ಬೆಂಕಿಕಡ್ಡಿಗಳು ೧೨ ಇಂಚು ಉದ್ದವೂ ಕಾಲು ಇಂಚು ದಪ್ಪವೂ ಆಗಿವೆ.

ಭಾರತವು ಆರ್ಥಿಕಮುಗ್ಗಟ್ಟಿಗೊಳಗಾಗುವುದು

ಸೇಟ್ ದಾಲ್ಮಿಯರ ಭವಿಷ್ಯದೃಷ್ಟಿ

ಕೃಷಿ ಮತ್ತು ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು

ಪ್ರಖ್ಯಾತ ಕೈಗಾರಿಕಾ ದುರೀಣರಾದ ಸೇಟ್ ರಾಮಕೃಷ್ಣ ದಾಲ್ಮಿಯಾ ಅವರು ಶೀಘ್ರ ಭವಿಷ್ಯದಲ್ಲಿ ಭಾರತವು ಭೀಕರ ಆರ್ಥಿಕ ಮುಗ್ಗಟ್ಟಿಗೊಳಗಾಗುವುದೆಂದು ನಿರೂಪಿಸಿರುವರು ಅವರ ಹೇಳಿಕೆಯ ಸಾರಾಂಶ ಹೀಗಿದೆ:

ಭಾರತವು ಆರ್ಥಿಕ ದ್ವಂತದ ಕಡೆ ಸಾಗುತ್ತಿದೆ. ಉತ್ಪತ್ತಿ ಪ್ರಮಾಣವು ಈಗಾಗಲೇ ಕನಿಷ್ಠಮಟ್ಟಕ್ಕಿಳಿದಿದೆ ಸರಕಾರವು ಆಗಲೇ ಕೈಗಾರಿಕಾ ಮಾಲಕರಿಗೂ ಮಜೂರರಿಗೂ ಎಚ್ಚರಿಕೆಯನ್ನು ಕೊಟ್ಟಿದೆ ಆದರೆ ಅದರಿಂದ ಸಮಸ್ಯೆಯು ಪರಿಹಾರವಾಗಲಾರದು ಅಧಿಕಾರಿಗಳು ನಿಜಪರಿಸ್ಥಿತಿಯ ಪರಿಶೀಲನೆ ಮಾಡುವುದರ ಕಡೆಗೆ ಹೆಚ್ಚು ಗಮನಕೊಟ್ಟು ವಿಷಮಗೊಳ್ಳುತ್ತಿರುವ ಪರಿಸ್ಥಿತಿಯಿಂದ ತಪ್ಪಿಸುವ ವಿಧಾನಗಳನ್ನು ಕಂಡುಹಿಡಿಯಬೇಕು. ಮತ್ತು ಈ ಸಂಬಂಧದಲ್ಲಿ ಆತಂಕಗಳನ್ನು ಒಡ್ಡುವ ಮಜೂರರಿಗಾಗಲೀ ಕೈಗಾರಿಕೆಯ ಮಾಲಕರಿಗಾಗಲಿ ಬಿಗಿಯಾದ ಕೈಯನ್ನೇ ತೋರಿಸಬೇಕು

ಈಗ ಅನೇಕ ಕೈಗಾರಿಕೆಗಳ [illegible] ಹಣದ [illegible] ಧೋರಣೆ [illegible] ವ್ಯವಸ್ಥೆಯ ತೀವ್ರ [illegible] ಕಚ್ಚಾ ಮತ್ತು ಉತ್ಪತ್ತಿ [illegible] ಸಾಗಿಸ [illegible] ಕಷ್ಟಕರವಾಗಿರುವುದು [illegible] ಕಾರಣವೇ ಆಗಿದೆ

ಸತ್ಪರಿಣಾಮ

[illegible] ಸರಿಪಡಿಸುವುದರಿಂದ ವ್ಯಾಪಾರ ವಹಿವಾಟುಗಳ ಮತ್ತು ಕೈಗಾರಿಕೆಯ ಮೇಲೆ ಉತ್ತಮ ಪರಿಣಾಮವೇ ಆಗಿದೆ ಈ ಧೋರಣೆಯಲ್ಲೂ ಸರಕಾರವು ಮುಂದಗತಿಯಿಂದಲೇ ಸಾಗುತ್ತಿರುವುದರ ಪರಿಣಾಮವಾಗಿ ಅನೇಕ ಕೈಗಾರಿಕೆಗಳು ನಷ್ಟದ ದೆಶೆಯಿಂದಲೇ ಸಾಗುತ್ತಿವೆ. ಸಾಮಾನ್ಯ ಪ್ರಜೆಗಳಿಗೆ ವಸ್ತುಗಳು ಹೆಚ್ಚು ಬೆಲೆಯಲ್ಲಿ ಮಾರಲ್ಪಡುತ್ತಿವೆಯಾದರೂ ಇದರಿಂದ ದೊರೆತ ವಿಪುಲ ಲಾಭವು ಕಾರ್ಖಾನೆಗಳಿಗೆ ಹೋಗದೆ ಮಧ್ಯಸ್ಥಿಕೆಯನ್ನು ವಹಿಸುವ ಚಿಲ್ಲರೆ ವ್ಯಾಪಾರಿಯ ಚೀಲವನ್ನೇ ಸೇರುವುದು

ಹೊಸ ಆಯುವ್ಯಯ ಪಟ್ಟಿಯಲ್ಲಿ ಮಧ್ಯಮ ತರಗತಿಯವರಿಗಿಂತ ಬಂಡವಾಳವರ್ಗದವರಿಗೇ ಹೆಚ್ಚಿನ ಪ್ರೋತ್ಸಾಹ ಕೊಡಲ್ಪಟ್ಟಿದೆಯೆಂದೆನ್ನಲಾಗಿದೆ ಕಳೆದ ವರ್ಷ ಸರಕಾರವು ಕೈಗಾರಿಕಾ ಮಾಲಕರಿಗೆ ವಚನವನ್ನು ಕೊಟ್ಟಿದ್ದರೂ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ [illegible] ಕೈಗಾರಿಕೆಯವರಿಗೆ [illegible] ಲಾಭವು ಆಗಿಲ್ಲ [illegible] ಅಲ್ಪ ಸ್ವಲ್ಪ [illegible] ಮಧ್ಯಮವರ್ಗಕ್ಕೆ [illegible]

ಹೆಚ್ಚಿನ ಸೌಕರ್ಯಗಳು

ದೇಶದ ಆರ್ಥಿಕ [illegible] ಕೂಡಾ ಈ ಹೊಸ [illegible] ಇದನ್ನು ಸರಕಾರವು [illegible] ಪ್ರೋತ್ಸಾಹಿಸದಿದ್ದರೆ [illegible] ಪರಿಸ್ಥಿತಿಯನ್ನು [illegible] ಕಷ್ಟವಾಗಿ ದೇಶವು ಆರ್ಥಿಕ [illegible] ಕಾಣುವುದು ಕೈಗಾರಿಕೆಗಳಿಗೆ ಹೆಚ್ಚಿನ ಸವಲತ್ತುಗಳು ಸಲ್ಲಿಸಬೇಕಾಗಿದೆ ಶೀಘ್ರದಲ್ಲೇ ನಮ್ಮ ಸರಕಾರವಾದರೂ ತನ್ನ ತಪ್ಪನ್ನು ತಿಳಕೊಂಡು ತಾನನುಸರಿಸಿದ ಧೋರಣೆಯು ಅವಿವೇಕದ್ದೆಂದು ಮನಗಾಣುವುದು ಎಲ್ಲಾ ನಿಯಂತ್ರಣಗಳನ್ನು ರದ್ದು ಮಾಡಿ ಸಾಗಿಸುವಿಕೆಗೆ ಎಲ್ಲಾ ತರದ ಸೌಕರ್ಯಗಳನ್ನು ಕಲ್ಪಿಸಬೇಕು ಪೆಟ್ರೋಲ್ ಪೂರೈಸಲ್ಪಡದೆ ಮಾರಾಟಕ್ಕಾಗಿ ದಾರಿ ಕಾಯುತ್ತಿರುವ ಸಾವಿರಾರು ಮೋಟಾರು ವಾಹನಗಳಿಗೆ ಪೆಟ್ರೋಲು ಸರಬರಾಯಿಯ ವ್ಯವಸ್ಥೆಯನ್ನು ಮಾಡಿ ರೈಲುಗಾಡಿಗಳನ್ನು ಆದಷ್ಟು ಹೆಚ್ಚು ತಯಾರಿಸಿ ಸಾಗಿಸುವಿಕೆಯ ತೊಂದರೆಗಳನ್ನು ನೀಗಬೇಕು

ಆಹಾರ ಉತ್ಪತ್ತಿ

ಹಿಂದೂಸ್ಥಾನ [illegible] ಆಹಾರ ಬೆಳೆಗಳು [illegible] ಬೆಳೆಯುತ್ತಿರುವ [illegible] ಸಂಖ್ಯೆಗಳನ್ನು ತೆಗೆದು ಇವನ್ನು ಪರಸ್ಪರ ಅದಲು ಬದಲು ಮಾಡುವ ಉಪಾಯಗಳನ್ನು ಯೋಜಿಸಬೇಕು ದೇಶದ ಅನೇಕ ಕಡೆಗಳಲ್ಲಿ ಬೆಲೆಗಳು ಬಹಳ ಇಳಿದಿವೆ ಇದೇ ರೀತಿ ಇತರ ಆಹಾರವಸ್ತುಗಳಿಗೆ ಬೆಲೆಗಳೂ [illegible] ಇದರಿಂದ ಜನತೆಗೆ [illegible] ಆಹಾರ ಸಿಕ್ಕಿದಂತಾಗುವುದು

ವಾರದ ವಿಜ್ಞಾನ ವರದಿ

—o—

ಆನೆಕಾಲಿಗೆ ರೇಡಿಯೊಕಿರಣ ಪರಿಹಾರ

ಕೆಲವೊಂದು ರೇಡಿಯೊ ಪ್ರಭಾವಿತ ಕಿರಣಗಳ ಶುಶ್ರೂಷೆಯಿಂದ ಅನೇಕ ಭೀಕರ ಉಷ್ಣವಲಯದ ವ್ಯಾಧಿಗಳನ್ನು ಗುಣಮಾಡಬಹುದೆಂದು ವೊಶಿಂಗ್ಟನ್ನಿನ ಕಾರ್ನಿಜಿ ವೈದ್ಯಕೀಯ ಪರಿಶೋಧನಾಲಯದವರು ಕಂಡುಹಿಡಿದಿರುವರು. ಅಂಜನಕಲ್ಲು ಮತ್ತು ಮನಶಿಲೆಯೆಂಬ ಪಾಷಾಣದ ಮೂಲಧಾತುಗಳ ರೇಡಿಯೊ ಪ್ರಭಾವಿತ ಚೂರ್ಣದಿಂದ ಒಂದು ತರದ ಔಷಧಿಯು ಕಂಡುಹಿಡಿಯಲ್ಪಟ್ಟಿದೆ.

ಆನೆಕಾಲು ಇಲ್ಲವೆ ಫೈಲೇರಿಯಾ ವ್ಯಾಧಿಯನ್ನು ಮನುಷ್ಯನಿಗೆ ಮತ್ತು ಇತರ ಕೆಲ ಪ್ರಾಣಿಗಳಿಗೆ ಉಂಟುಮಾಡುವ ವಾಹಕ ಜೀವಿಗಳು (ಸೊಳ್ಳೆ) ಬೇರೆ ಬೇರೆಯಾಗಿವೆ. ಕೆಲ ಪ್ರಾಣಿಗಳಿಗೆ ಈ ವ್ಯಾಧಿಯೇ ತಗಲುವುದಿಲ್ಲ ಆದರೆ ನಾಯಿಗೆ ಇದು ಅಂಟುತ್ತದೆ ಮೇಲೆ ಹೇಳಿದ ಧಾತುಗಳ ಈ ಮಿಶ್ರಣಗಳನ್ನು ನಾಯಿಗಳ ಮೇಲೆ ಪ್ರಯೋಗಿಸಿದಾಗ ಆನೆಕಾಲನ್ನುಂಟುಮಾಡುವ ಒಂದು ತರದ ಲಂಬಾಕೃತಿಯ ಕ್ರಿಮಿಗಳು ನಾಶಹೊಂದಿದವು ಮಧ್ಯ ಅಮೇರಿಕಾ, ಪನಾಮಾ ಮೊದಲಾದ ಕಡೆಗಳಲ್ಲಿ ಆನೆಕಾಲಿನ ವ್ಯಾಧಿಯು ಮನುಷ್ಯನನ್ನು ಕುರುಡನನ್ನಾಗಿಯೂ ಮಾಡುವಷ್ಟು ಭೀಕರತೆಯದಾಗಿದೆ ವಿಜ್ಞಾನಿಗಳ ಹೊಸ ಶೋಧನೆಯು ಸಂಪೂರ್ಣ ಫಲಕಾರಿಯಾದ ಕೂಡಲೇ ಜಗತ್ತಿನ ಅನೇಕ ಭಾಗಗಳಲ್ಲಿ ಆನೆಕಾಲಿನ ರೋಗದಿಂದ ನರಳುವವರಿಗೊಂದು ಶುಭಕಾಲವುಂಟಾಗುವುದು.

ಗಾಜಿನ ಬಟ್ಟೆ

ಈ ವರ್ಷದ ಬ್ರಿಟಿಷ್ ಕೈಗಾರಿಕಾ ಪ್ರದರ್ಶನದಲ್ಲಿಡಲ್ಪಡುವ ಅನೇಕ ಸ್ವಾರಸ್ಯ ವಸ್ತುಗಳಲ್ಲಿ ಹೊಸತೊಂದು ವಿಧಾನದ ಗಾಜಿನ ಬಟ್ಟೆಗಳು ವಿಶೇಷ ಆಕರ್ಷಣೆಯನ್ನು [illegible] ನಿರೀಕ್ಷಿಸಲ್ಪಟ್ಟಿದೆ ಇದಕ್ಕೆ ನೀರು ಬೆಂಕಿಗಳು ತಗಲುವುದಿಲ್ಲ ಮಾತ್ರವಲ್ಲ ಎಂದೆಂದಿಗೂ ಹಾಳಾಗದೆ ಉಳಿಯುತ್ತವೆ

ಸಾಮಾನ್ಯ ಕಣ್ಣಿಗೆ ಕಾಣದಂತಿರುವಷ್ಟು ಸೂಕ್ಷ್ಮ ಗಾಜಿನ ಎಳೆಗಳಿಂದ ಈ ಬಟ್ಟೆಯನ್ನು ತಯಾರಿಸಲ್ಪಟ್ಟಿದೆ ಸುಮಾರು ಅರ್ಧ ಇಂಚಿನ ಗಾತ್ರದ ಒಂದು ಗಾಜಿನ ಗೋಲಿಯಿಂದ [illegible] ಇಂತಹ ಎಳೆಗಳನ್ನು [illegible] ಇಂತಹ ಸೂಕ್ಷ್ಮವಾದ ನೂರು ಎಳೆಗಳನ್ನು ಪೋಣಿಸಿ ಒಂದು ದಾರವನ್ನಾಗಿಯೂ, ಇಂತಹ ಕೆಲವು ದಾರಗಳನ್ನು ತಿರುಪಿ ಒಂದು ನೂಲನ್ನಾಗಿಯೂ ಮಾಡುತ್ತಾರೆ

ಗಾಜುವಸ್ತ್ರವನ್ನು ಅನೇಕ ರೀತಿಯಲ್ಲಿ ಉಪಯೋಗಿಸಬಹುದು ಒಂದು ವಿಧದಲ್ಲಿ ಇದು ಸರ್ಜ್ ಬಟ್ಟೆಯಂತೆ ಮಾಡಲಿಕ್ಕಾಗುತ್ತದೆ ಹೀಗೆ ಇದನ್ನು ಬಟ್ಟೆಗಳಿಗೆ ಮುಚ್ಚಲು ಉಪಯೋಗಿಸಬಹುದು ಇನ್ನೊಂದು ವಿಧದಲ್ಲಿದು ಕೃತಕ ಚರ್ಮದಂತೆ ಕಾಣುವುದು ಹಾಗೆ ಇದನ್ನು ಬಟ್ಟೆಯ [illegible] ಗಳಾಗಿ ಮಾಡಬಹುದು. ತಿಳಿ [illegible] ವರ್ಣಗಳಲ್ಲಿದನ್ನು ತಯಾರಿಸುವುದರಿಂದ [illegible], ಕಿಟಿಕಿ ಪರದೆಗಳಾಗಿಯೂ, ವೇಷಭೂಷಣವಾಗಿಯೂ ಉಪಯೋಗಿಸಬಹುದು

ಗೋವಳರಿಗೆ ವಿದ್ಯುತ್ ಗೋಲು

ದನಗಳನ್ನಟ್ಟಿಕೊಂಡು ಹೋಗುವಾಗ ಗೋವಳರ ಹುಡುಗರು ಬೆತ್ತಗಳನ್ನುಪಯೋಗಿಸುವರಷ್ಟೆ? ಇಂಗ್ಲೆಂಡಿನ ಪ್ರಾಣಿದಯಾ ಸಂಘದವರು ಬೆತ್ತದ ಬದಲಿಗೆ ಬ್ಯಾಟರಿಯಿಂದ ವಿದ್ಯುತ್ ಧಕ್ಕೆಯೊಂದನ್ನುಂಟುಮಾಡುವ ಒಂದು ಕೋಲನ್ನು ತಯಾರಿಸಿರುವರು. ಇದರಿಂದ ದನಗಳನ್ನು ಹೊಡೆಯುವ ಆವಶ್ಯಕತೆಯಿಲ್ಲ. ಅದನ್ನು ಗೋವುಗಳ ಬೆನ್ನಿಗೆ ಮುಟ್ಟಿಸಿದಾಕ್ಷಣ ಒಂದು ವಿದ್ಯುತ್ ಧಕ್ಕೆ (Shock) ವುಂಟಾಗಿ ದನಗಳು ಓಡುವವು. ಇದರಿಂದ ಹಾನಿಯೇನೂ ಆಗುವುದಿಲ್ಲ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸ್‌ಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 . ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು }
23-12-1947. }

ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ಜಿಲ್ಲಾ ಸಮಾಚಾರ

ರಂಗಭೂಮಿ ಶತಮಾನೋತ್ಸವ

ಕರ್ನಾಟಕ ರಂಗಭೂಮಿಯ ಶತಮಾನೋತ್ಸವವನ್ನು ವಿಜೃಂಭಣೆಯಿಂದ ನಡೆಸಬೇಕೆಂದು ನಿರ್ಧರಿಸಿ ಅದರ ಅಂಗವಾಗಿ ನಾಟಕಗಳೂ, ಆಟಗಳೂ, ಯಕ್ಷಗಾನಗಳೂ, ತಾಳಮೇಳಗಳೂ ಏರ್ಪಡಿಸಿದೆ. ಪ್ರತಿಯೊಂದರಲ್ಲೂ ಉತ್ತಮವೆಂದು ತೀರ್ಮಾನಿಸಲ್ಪಟ್ಟವುಗಳಿಗೆ ಬಹುಮಾನಗಳನ್ನು ಸಹ ಕೊಡಲು ಏರ್ಪಡಿಸಿರುವದಲ್ಲದೆ ಸಂಘಗಳಿಗೆ ಖರ್ಚುಗಳನ್ನು ಸಹ ಕೊಡಲು ತೀರ್ಮಾನವಾಗಿರುವದರಿಂದ ದಕ್ಷಿಣ ಕನ್ನಡದಲ್ಲಿರುವ ಸಮಸ್ತ ಕಲಾವಿದರೂ ಮೇಳದ ಗುಂಪಿನವರೂ, ತಾಳಮದ್ದಳೆ ಸಂಘದವರೂ ಬೊಂಬೆಯಾಟದವರೂ ಈ ಉತ್ಸವದಲ್ಲಿ ಸಹಕರಿಸಬೇಕಾಗಿ ಕೋರಿದೆ. ಈ ಉತ್ಸವ ಮೈಸೂರಲ್ಲಿ ಜರಗುವುದು. ಹೆಚ್ಚಿನ ವಿವರಗಳನ್ನು ಶ್ರೀ ಹುಣಸೂರ್, ಭಾರತ ಲಲಿತ ಕಲಾ ಸಂಘದವರಿಂದಾಗಲಿ, ಅಥವಾ ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಂಗಭೂಮಿಯ ಶತಮಾನೋತ್ಸವ ಸಮಿತಿ ತ್ಯಾಗರಾಜರೋಡ್ ಮೈಸೂರಿನಿಂದಾಗಲಿ ಪಡೆಯಬಹುದು. ಸರ್ವರ ಸಹಕಾರವನ್ನು ಕೋರಲಾಗಿದೆ

ಪ್ರಾಣಿಬಲಿ ನಿಲ್ಲಿಸಲಿಕ್ಕೆ

ಈ ಕುರಿತು ಮಂಗಳೂರು ಕೊಂಗ್ರೆಸ್ ಕಮಿಟಿ ಅಧ್ಯಕ್ಷ ಮತ್ತು ದ. ಕ. ಜಿಲ್ಲಾ ಕೊಂ. ಕಮಿಟಿ ಕಾರ್ಯದರ್ಶಿಗಳ ಸಹಿಗಳಿಂದ ಒಂದು ವಿನಂತಿ ಹೊರಟಿದೆ – ಸುರತ್ಕಲ್ಲಿನ ಊರ ಮಾರಿಗುಡಿಯಲ್ಲಿ ಜನಮತಾನುಸಾರ ಪ್ರಾಣಿಬಲಿ ನಿಲ್ಲಿಸಲಾಗಿದೆ ಆದರೆ ಅಲ್ಲಿಯ ಪದ್ಮಶಾಲಿಗ ಗುಡಿಯವರು ಇದನ್ನಲಕ್ಷಿಸಿ ಈ ಸಲ ಕೋಣಬಲಿ ನಿರ್ವಹಿಸಲು ನಿರ್ಧರಿಸಿರುವರು ಇದು ಹೇಯವೂ, ಅಸಹನೀಯವೂ ಆದಕಾರಣ ಇದನ್ನು ಸಾರ್ವಜನಿಕರು ಪ್ರತಿಭಟಿಸಿ ನಡೆಯದಂತೆ ಮಾಡಬೇಕು. ಅದಕ್ಕೆ ಪಣತೊಟ್ಟು ಸತ್ಯಾಗ್ರಹಿಗಳಾಗಿ ಕೆಲಸಮಾಡುವವರು ಬೇಕಾಗಿದ್ದಾರೆ. ಈ ಚಳವಳದಲ್ಲಿ ಭಾಗವಹಿಸುವವರು ಕಳೆದ ತಾ ೨೯ರೊಳಗೆ ತಮ್ಮ ಹೆಸರುಗಳನ್ನು ಮೇಲ್ಕಂಡ ವಿನಂತಿಗಾರರಿಗೆ ತಿಳಿಸಬೇಕೆಂದು ಪ್ರಕಟವಾಗಿತ್ತು ಸುರತ್ಕಲ್ ಪ್ರಾಣಿಬಲಿ ನಿಷೇಧ ಸಮಿತಿಗೂ ಹೊರಗಿನವರು ತಮ್ಮ ಹೆಸರುಗಳನ್ನು ತಿಳಿಸಬಹುದು.

ಕಲ್ಯಾಣೋತ್ಸವ

ಸ್ಥಳೀಯ ಮಣ್ಣಗುಡ್ಡೆ ಪಳನೀ ಶ್ರೀ ಸುಬ್ರಹ್ಮಣ್ಯ ಮಹೋತ್ಸವವು ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಬ್ರಹ್ಮಶ್ರೀ ವಾಸುದೇವ ರಾವ್ ಶತ್ತಾಡಿ ಅವರು ಸರ್ವರಿಗೂ ಸುಲಭ ಗ್ರಾಹ್ಯವಾಗುವಂತೆ ವಿವರಿಸಿ ಹೇಳಿದರು

ಹವಾಮಾನ

ಈ ವಾರ ಸೆಖೆಯ ಪರಿಸ್ಥಿತಿಯು ಪರಮಾವಧಿಗೆ ಮುಟ್ಟಿ ಒಂದೆರಡು ಬಿರುಸು ಮಳೆಗಳೂ ಬಂದಿದ್ದವು ಆನಂತರ ಸ್ವಲ್ಪ ಮಟ್ಟಿಗೆ ವಾತಾವರಣವು ತಂಪಾಗಿದ್ದು, ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಮೋಡಗಳು ಕವಿಯುತ್ತವೆ.

ಕೈಮಗ್ಗ ಮ್ಹಾಲಿಕರ ಸಂಘ

ಈ ಸಂಘದ ವಾರ್ಷಿಕ ಮಹಾಸಭೆ ಜರಗಿದಾಗ ಸಂಘದ ಮ್ಹಾಲಕ ನೇಕಾರರಿಗೆ ನೂಲು ಸರಬರಾಯಿ ವ್ಯವಸ್ಥೆಯಾಗಬೇಕು, ಕೈಮಗ್ಗದ ಬಟ್ಟೆಗಳು ದೇಶದಲ್ಲೆಲ್ಲ ಚಲಾವಣೆ ಮಾಡಲು ಸರಕಾರ ಸೌಕರ್ಯ ಕಲ್ಪಿಸಬೇಕು, ಎಂಬೆರಡು ಮುಖ್ಯ ವಿಷಯಗಳ ನಿರ್ಣಯಗಳಾಗಿವೆ.

ದುರ್ಮರಣ

ಇಲ್ಲಿಯ ವಿದ್ಯಾರ್ಥಿಭವನದ ಹತ್ತಿರದ ಹಿತ್ತಿಲಿನ ಯಾತ ನೀರು ಎಳೆಯುವ ಒಂದು ಬಾವಿಯಲ್ಲಿ ಗೌಡಸಾರಸ್ವತ ಬ್ರಾಹ್ಮಣ ಕುಲೀನ ಮನೆತನದ ಓರ್ವ ತರುಣಿಯ ಶವವು ಕಳೆದ ತಾ. 21ರೆಂದು ಕಂಡು ಬಂದಿತು. ಮೃತಳು ಪೂರ್ಣ ಗರ್ಭಿಣಿಯ ಅವಸ್ಥೆಯಲ್ಲಿದ್ದಳೆಂಬ ಸಂಗತಿಯು ವಿಷಾದವನ್ನುಂಟುಮಾಡುವಂತಹದು. ಪೋಲಿಸ್ ತನಿಖೆಯಾಗಿರುವುದೆಂದು ತಿಳಿದು ಬರುತ್ತದೆ.

ಮಂತ್ರಿಗಳು

ಮದ್ರಾಸಿನಿಂದಿದು ಮಾನ್ಯ ಕೃಷಿಇಲಾಖಾ ಮಂತ್ರಿ ಶ್ರೀ ಮಾಧವಮೆನನ್ ಅವರು ಅಳಿಯ ಸಂತಾನ ಮಸೂದೆಯ ಕರಡನ್ನು ಪರಿಶೀಲಿಸಿ ಆ ಕುರಿತು ಸಾಕ್ಷ್ಯಗಳನ್ನು ಸಂಗ್ರಹಿಸಲಿಕ್ಕಾಗಿ ಚಿತ್ತೈಸುವರೆಂದು ತಿಳಿದು ಬರುತ್ತದೆ

ಅನಾಥಮಕ್ಕಳ ಆಶ್ರಮ

ತಂದೆತಾಯಿಗಳಿಲ್ಲದೆ, ಗತಿ–ವಿಹೀನರಾದ ಅನಾಥ–ಹಿಂದೂಮಕ್ಕಳನ್ನು, ಅನ್ನ, ಬಟ್ಟೆ, ವಿದ್ಯೆಯನ್ನು ಕೊಟ್ಟು ರಕ್ಷಿಸುವುದೇ ಈ ಅನಾಥಾಶ್ರಮದ ಮುಖ್ಯ ಉದ್ದೇಶವಾಗಿರುವುದು, ಯೋಗ್ಯ ನಾಗರಿಕರನ್ನಾಗಿ ಮಾಡಲು ಯಾವ ಸಾಮಾಜಿಕ, ರಾಷ್ಟ್ರೀಯ ಮತ್ತು ಧಾರ್ಮಿಕ ಶಿಕ್ಷಣದ ಆವಶ್ಯಕತೆಯಿದೆಯೋ ಅದಕ್ಕಾಗಿ ಶಾರೀರಿಕ, ಮಾನಸಿಕ ಮತ್ತು ಆತ್ಮಿಕ ಜ್ಞಾನದ ಏರ್ಪಾಡನ್ನೂ ಮಾಡಿರುತ್ತದೆ ಇದೇ ಬರುವ ಎಪ್ರಿಲ್ ತಿಂಗಳ ೨೦ರ ವರೆಗೆ ೧೧ ಅನಾಥ ಮಕ್ಕಳನ್ನು ಜಾತಿಭೇದವಿಲ್ಲದೆ, ಹೊಸದಾಗಿ ಸೇರಿಸಿಕೊಳ್ಳಲು ನಿರ್ಧರಿಸಿರುತ್ತೇವೆ ಆದುದರಿಂದ ಅಂತಹ ಅನಾಥ ಮಕ್ಕಳನ್ನು ಮೇಲೆ ಉಲ್ಲೇಖಿಸಿರುವ ಆಶ್ರಮಕ್ಕೆ ಆ ಮಕ್ಕಳ ಹಿತ ದೃಷ್ಟಿಯಿಂದ ಎಪ್ರಿಲ್ ತಿಂಗಳ ೨೦ರ ಒಳಗೆ ಕಳುಹಿಸಿಕೊಡಬೇಕಾಗಿ ವಿನಂತಿ ಹೀಗೆಂದು ಮಂಗಳೂರಿನ ಸನ್ಯಾಸಿಗುಡ್ಡೆಯ ಸ್ವಾಮಿ ಸದಾನಂದ ಸರಸ್ವತಿ, ವ್ಯವಸ್ಥಾಪಕ, ಶ್ರೀ ಸದಾನಂದ ಅನಾಥಾಶ್ರಮ ಇವರು ವಿನಂತಿಸಿಕೊಳ್ಳುತ್ತಾರೆ

ಮುದ್ದಣ ಜಯಂತಿ

ಕಳೆದ ತಾ ೨೮ರೆಂದು ಆದಿತ್ಯವಾರ ಸಾಯಂಕಾಲ ಇಲ್ಲಿಯ ಥಿಯೋಸೋಫಿಕಲ್ ಲೋಜಿನಲ್ಲಿ ಮುದ್ದಣಜಯಂತ್ಯುತ್ಸವವು ಶ್ರೀಮಾನ್ ಕಡಂಗೋಡ್ಲು ಶಂಕರಭಟ್ಟರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಶ್ರೀ ರಾಮಪ್ಪ ಉಡುಪರು ಮುದ್ದಣನ ಕಾವ್ಯಗಳ ವಾಚನಮಾಡಿದರು ಶ್ರೀ ಯದುಕುಳ ಶಂಕರಭಟ್ಟರು ‘ಮುದ್ದಣನ ಶೀಲ ಎಂಬ ವಿಷಯದ ಕುರಿತು ಭಾಷಣವಿತ್ತರು ಕೊನೆಯಲ್ಲಿ ಅಧ್ಯಕ್ಷರು ನಮ್ಮ ಜಿಲ್ಲೆಯ ಈ ಮಹಾಕವಿಯ ಕಾವ್ಯ ಪ್ರೌಢಿಮೆಯ ಕುರಿತು ವಿವರಿಸಿದರು

ಅಡಮಾನ ಬೇಂಕುಗಳ ಪರಿಷತ್ತು

ಪ್ರಾಂತ್ಯ ಸಹಕಾರಿ ಸಂಘಗಳ ರಿಜಿಸ್ಟ್ರಾರ ರಾವ ರಾ. ಬ। ಜೆ ಸಿ ರಾಯನ್ ಅವರು ಕೇಂದ್ರ ಜಮಿನ್ ಅಡಮಾನದ ಬೇಂಕಿನ ಉಪಾಧ್ಯಕ್ಷ ಶ್ರೀ ವಿ ರಾಮಮೂರ್ತಿ ಪಂತಲು ಇವರೊಡಗೂಡಿ ಕಳೆದವಾರ ಇಲ್ಲಿಗೆ ಚಿತ್ತೈಸಿದ್ದರು ತಾ ೨೩ರೆಂದು ಇಲ್ಲಿ ಜರಗಿದ. ಮಂಗಳೂರು, ಉಡುಪಿ, ಪುತ್ತೂರು ಅಡಮಾನದ ಬೇಂಕುಗಳ ಪ್ರತಿನಿಧಿಗಳ ಪರಿಷತ್ತೊಂದು ಜರಗಿದಾಗ ಮೇಲ್ಕಂಡ ಮಹನೀಯರು ಅದರಲ್ಲಿ ಭಾಗವಹಿಸಿದರು. ಈಬೇಂಕುಗಳಿಗೆ ಮದ್ರಾಸಿನ ಅಡಮಾನ ಬೇಂಕುಗಳು ಸಾಲಕೊಡುವ ಧೋರಣೆಯು ದೂರವಾಗಬೇಕೆಂದೂ, ಸಾಲ ಪಡೆದವರಿಗೆ ದರತಗ್ಗಿಸಬೇಕೆಂದೂ, ಭೂಮಿಯನ್ನು ಬೇಂಕಿನ ವಶವಿರಿಸುವ ವರ್ಗದಾರರಿಗೆ ಸಾಲಧೊರೆಯುಬೇಕೆಂದೂ, ಮುನಿಸಿಪಾಲಿಟಿ ಮತ್ತು ಮೇಜರ್ ಪಂಚಾಯತಿಗಳಲ್ಲಿ ಕೊಡುವ ಸಾಲಗಳಿಗೆ ಭದ್ರತೆಯಾಗಿ ತೋಟಗಳ ಸಹಿತವಾದ ಮನೆಗಳನ್ನು ಸ್ವೀಕರಿಸಬೇಕೆಂದೂ ಸೂಚನೆಗಳಾದುವು. ಈ ಜಿಲ್ಲೆಯ 2 ಅಡಮಾನ ಬೇಂಕುಗಳು ನಷ್ಟದಲ್ಲಿ ನಡೆಸಲ್ಪಡುವುದೆಂದೂ, ಈ ವಿದ್ಯಮಾನಗಳನ್ನು ಸಂಪಾದಿಸಬೇಕೆಂದೂ ಮೇಲಾಧಿಕಾರಿಗಳಿಗೆ ವಿನಂತಿಸಲಾಯಿತು.

ಕಡಂದಲೆ

ಮಂಗಳೂರು ಕೃಷ್ಣಭವನದ ಮಾಲಿಕರಾದ ಶ್ರೀ ಕಡಂದಲೆ ಕೃಷ್ಣರಾಯರವರು ಸದ್ರಿ ಗ್ರಾಮದ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಹೊಸಕಟ್ಟಡದ ಬಗ್ಗೆ ರೂ ೧೦೦೦/– (ಒಂದು ಸಾವಿರ ರೂಪಾಯಿ) ಉದಾರಮನಸ್ಸಿನಿಂದ ದಾನ ಮಾಡಿರುವರು ಶಾಲಾ ವಿಸ್ತರಣ ಕಮಿಟಿಯ ಅಧ್ಯಕ್ಷರು ಈ ದಾನಿಗಳಿಗೆ ಉತ್ತರೋತ್ತರ ಶ್ರೇಯಸ್ಸೌಖ್ಯಗಳನ್ನು ಬಯಸುತ್ತಾರೆ.

ಪೊಳಲಿ ಜಾತ್ರೆ

ಪೊಳಲಿ ಶ್ರೀರಾಜರಾಜೇಶ್ವರಿ ಅಮ್ಮನ ಕಾಲಾವಧಿ ಜಾತ್ರೆ ಆಗಲೇ ಆರಂಭವಾಗಿದ್ದು ಇದೇ ತಾ 3ರೆಂದು ಚೆಂಡಿನ ಉತ್ಸವ, ತಾ 7ರಲ್ಲಿ ಚೆಂಡಮಾಂಚರ ತಿರವನ್ನು ಚೆಂಡಾಡುವ ಮಹೋತ್ಸವ, ತಾ. 8ಕ್ಕೆ ರಥೋತ್ಸವ, ತಾ 9ಕ್ಕೆ ಅವಭೃತ ಮಂಗಳಸ್ನಾನವೂ ನೆರವೇರುವವು

ಫರಂಗಿಪೇಟೆ–ನಿಧನ

ಇಲ್ಲಿಯ ಶ್ರೀ ರಾಮಾ ಹಾ ಎ ಶಾಲೆಯ ಸ್ಥಾಪಕರೂ, ಅಧುನಿ ನಿವೃತ್ತ ಹೆಡ್ಮಾಸ್ತರರೂ ಮತ್ತು ಮೆನೇಜರರೂ ಆಗಿದ್ದ ಮತ್ತು ಇತರ ಕೆಲ ಜನೋಪಕಾರಿ ಸಂಸ್ಥೆಗಳ ಸ್ಥಾಪಕರೂ ಚಾಲಕರೂ ಆಗಿದ್ದ ಫರಂಗಿಪೇಟೆಯ ಜನಪ್ರಿಯ ಶ್ರೀ ಏ ರಾಮಚಂದ ಹೆಗ್ಡೆಯವರು ಕೆಲದಿನಗಳ ಹಿಂದೆ ತಮ್ಮ ೬೬ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಆತ್ಮಕ್ಕೆ ಕುಟುಂಬಕ್ಕೆ ಶಾಂತಿ ಕೋರುವೆವು

ಬಪ್ಪನಾಡು ಜಾತ್ರೆ

ಇಲ್ಲಿಯ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಉತ್ಸವಗಳು ಕಳೆದ 24ರಿಂದ 31ರ ವರೆಗೆ ಯಥಾಸಾಂಗ ಜರಗಿದವು

ಪುತ್ತೂರು

ಇಲ್ಲಿಯ ಸ್ಮಶಾನ ಹತ್ತಿರದ ತೋಡಿಗೆ ಒಂದು ಮರದ ಸಂಕವನ್ನು ಸ್ಥಳೀಯ ಪಂಚಾಯತ ಬೋರ್ಡಿನವರು ಹಾಕಿಸಿರುವರು

ಇಲ್ಲಿಯ ಬಸ್ಸು ಸ್ಟೆಂಡಿನ ಕಟ್ಟೋಣ ಪೂರ್ತಿಯಾಗುತ್ತ ಬರುತ್ತದೆ

ಬೆಂಗಳೂರು ಸೈನ್ಯ ಕೇಂದ್ರ ಭರತಿಮಾಡುವ ಅಧಿಕಾರಿಗಳು ಇಲ್ಲಿ ಮೊಕ್ಕಾಂ ಮಾಡಿದ್ದು ಸೈನ್ಯಕ್ಕೆ ಸೇರುವವರ ಅರ್ಜಿಗಳನ್ನು ಸ್ವೀಕರಿಸಿ ಅದರ ಅವಶ್ಯಕತೆ ಕುರಿತು ಭಾಷಣಗಳನ್ನು ಮಾಡಿರುವರು

ಹುಲಿಶಿಕಾರಿ

ಕಾಸರಗೋಡು ತಾಲೂಕು ಕೊಳ್ಯೂರು ಗ್ರಾಮದ ಹರೋಡಿ ಎಂಬಲ್ಲಿ ವಾರಣಾಶಿ ನಾರಾಯಣಭಟ್ಟರು ಮತ್ತು ಇಡಿಯಾಳ ಗಣಪತಿ ಭಟ್ಟರು ಜೊತೆಯಲ್ಲಿ ಹೋಗಿ ತಮ್ಮ ಸ್ವಂತ ಕೋವಿಗಳಿಂದ ಹಲವು ಸಮಯದಿಂದ ಬಾಧೆ ಕೊಡುತ್ತಿದ್ದ ದೊಡ್ಡ ಹುಲಿಯನ್ನು ತಾ. 27ರಂದು ಸಾಯಂಕಾಲ ಸುಮಾರು 4½ ಗಂಟೆಗೆ ಕೊಂದಿರುತ್ತಾರೆಂದು ತಿಳಿದು ಬರುತ್ತದೆ.

ಪೆರಡಾಲ
ಉಪವಾಸ ಸಂಕಟ; ಸರಕಾರಕ್ಕೆ ದೂರು!

ಪೆರಡಾಲ ಮತ್ತು ಆಸುಪಾಸಿನ ಗ್ರಾಮಗಳಲ್ಲಿ ಆಹಾರ ಅಭಾವದಿಂದಾಗಿ ಈಗಾಗಲೇ ಜನರು ಉಪವಾಸಬಿದ್ದಿರುವುದರಿಂದ, ಇದೇ ಪರಿಸ್ಥಿತಿ ಇನ್ನೂ ಮುಂದುವರಿದರೆ ಬೇಗನೆ ಗಂಡಾಂತರ ಒದಗುವುದು ಖಂಡಿತವಾಗಿರುವುದರಿಂದ ಈ ಬಗ್ಗೆ ಇಲ್ಲಿನ ಊರವರ ಸಂಕಷ್ಟದ ಪರಿಸ್ಥಿತಿಯನ್ನು ಸರಕಾರಕ್ಕೆ ಭಿನ್ನವಿಸಿ ತಕ್ಕ ಪರಿಹಾರಕಾರ್ಯ ಕೈಕೊಳ್ಳುವ ಬಗ್ಗೆ ಒಂದು ಸಾರ್ವಜನಿಕ ಸಭೆಯು ಇದೇ ತಾ॥ ೩೦ರಲ್ಲಿ ಡಾ॥ ಪಿ. ಯಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನೆರವೇರಿ, ಅದರಲ್ಲಿ ಊರಲ್ಲಿನ ಆಹಾರ ಅಭಾವ, ಉಪವಾಸ ಪರಿಸ್ಥಿತಿ, ಸರಕಾರದ ಅಲಕ್ಷ್ಯತೆ, ಬೇಗನೆ ಬರಲಿರುವ ಗಂಡಾಂತರ, ಆ ಕುರಿತು ಜನತೆ ಹಾಗೂ ಸರಕಾರದವರು ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಶ್ರೀಗಳಾದ ಕೆ ಕೃಷ್ಣ ರಾವ್, ಕಯ್ಯಾರ ಕಿಂಞ್ಞಣ್ಣ ರೈ, ಮುಳಿಯ ಶಂಕರಭಟ್ಟ, ಸರ್ಪಂಗಳ ಸುಬ್ಬಣ್ಣ ಭಟ್ಟ, ಕುಳಂತೋಡಿ ಕೃಷ್ಣಭಟ್ಟರು ವಿವರಿಸಿ ಮಾತನಾಡಿದ ನಂತರ, ಸರಕಾರಕ್ಕೆ ಈ ಊರಿನ ಮೊರೆಯನ್ನು ತಿಳಿಸಬೇಕೆಂದೂ ಅದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕೆಂದೂ, ನಿರ್ಣಯಿಸಲಾಯಿತು

ಇದೇ ದಿನ ರಾತ್ರಿ ಜಡಿಯಡ್ಕ ಮಾರ್ಗವಾಗಿ ಮಲಬಾರಿಗೆ ಪುತ್ತೂರು ಮಾರ್ಗದಿಂದ ಬರುವ ಮೂರು ಗಾಡಿ ಅಕ್ಕಿಯನ್ನು ಇಲ್ಲಿನ ಗ್ರಾಮಾಧಿಕಾರಿಗಳು ತಡೆಹಿಡಿದಿದ್ದಾರೆ ಇದುವರೆಗೆ ಈ ಮಾರ್ಗವಾಗಿ ಮಲಬಾರಿಗೆ ಲೋರಿಗಳಲ್ಲಿ ದಿನರಾತ್ರಿ ತುಂಬಾ ಅಕ್ಕಿ ಸಾಗುತ್ತಾ ಇತ್ತು ಈಗಲೂ ಕಳ್ಳಮಾರ್ಗದಿಂದ ಸಾಗುತ್ತಿದೆಯಾಗಿ ತಿಳಿದುಬಂದಿದೆ ಜನರು ಇಲ್ಲಿ ಉಪವಾಸಬಿದ್ದು ನರಳುತ್ತಿರುವಾಗ ಹೀಗೆ ಜಿಲ್ಲೆಯ ಹೊರಗಿನ ಬೇರೆ ಕಡೆಗೆ ಕೆಲವು ವರ್ಗದಾರರೂ ದಲಾಲಿಗಳೂ ವ್ಯಾಪಾರಿಗಳೂ ಅಧಿಕಾರಿಗಳೂ ಒಟ್ಟುಸೇರಿ, ಅಕ್ಕಿ ಭತ್ತಗಳನ್ನು ಕಳುಹಿಸುತ್ತಿರುವುದು ತುಂಬಾ ಶೋಚನೀಯವಿದೆ

ಈಗ ಇಲ್ಲಿ ಅಕ್ಕಿ ಸೇರು ಒಂದರ ರೂಪಾಯಿ ೧–೪–೦ರಷ್ಟು ಕ್ರಯವಾಗಿದ್ದು, ಅದರೂ ಅಕ್ಕಿ ಸಿಗುವುದಿಲ್ಲ ಇಲ್ಲಿನ ಕೆಲವು ಗ್ರಾಮಗಳಿಗೆ ಒಂದು ರಿಲೀಫ್ ಅಂಗಡಿಯಿದ್ದು, ಅದರಲ್ಲಿ ದಿನ ಒಂದರ ಒಬ್ಬನಿಗೆ ಮೂರು ಔನ್ಸ್ ಅಕ್ಕಿ ಮಾತ್ರ ಸಿಕ್ಕುತ್ತದೆ ಅದೂ ಎಲ್ಲರಿಗೂ ಸಿಗುವುದು ಅಸಾಧ್ಯವಾಗಿರುವುದು

ಶಾಶ್ವತಬೆಂಕಿಕಡ್ಡಿ

ಸುಮಾರು ೨೨೦ ಸಲಕ್ಕೂ ಮಿಕ್ಕಿ ಹೊತ್ತಿಸಲಿಕ್ಕಾಗುವ ‘ಶಾಶ್ವತ’ ಬೆಂಕಿಕಡ್ಡಿಯ ತಯಾರಿಯು ಸ್ವೀಡನಿನಲ್ಲಿ ತಯಾರಿಸುವ ಏರ್ಪಾಡುಗಳಾಗಿವೆ

ಈ ಸಲದ ಬೆಂಕಿಕಡ್ಡಿಯ ತಯಾರಿಯು ಸಂಪೂರ್ಣ ಹೊಸ ತತ್ವಗಳ ಮೇಲೆ ರಚಿಸಲ್ಪಡುತ್ತದೆಂದು ಅದರ ಸಂಶೋಧಕರಾದ ಸಟ್ಸನ್ ಹಾಲ್ ಎಂಬ ಇಂಜಿನಿಯರರು ತಿಳಿಸುತ್ತಾರೆ ಸುಮಾರು ೫೨ ದೇಶಗಳಲ್ಲಿ ಇದನ್ನು ಮಾರುವ ಹಕ್ಕನ್ನು ಈಗಾಗಲೇ ಪಡೆಯಲಾಗಿದೆ ಈ ವರ್ಷವೇ ೪೦ ದೇಶಗಳಿಗಿದನ್ನು ಕಳುಹಿಸಲಾಗುವುದು.

“ಅಗ್ನಿಕೋಲು ಎಂದೆನಿಸಲ್ಪಡುವ ಈ ಬೆಂಕಿಕಡ್ಡಿಗಳು ೧೨ ಇಂಚು ಉದ್ದವೂ ಕಾಲು ಇಂಚು ದಪ್ಪವೂ ಆಗಿವೆ.

ಭಾರತವು ಆರ್ಥಿಕಮುಗ್ಗಟ್ಟಿಗೊಳಗಾಗುವುದು

ಸೇಟ್ ದಾಲ್ಮಿಯರ ಭವಿಷ್ಯದೃಷ್ಟಿ

ಕೃಷಿ ಮತ್ತು ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು

ಪ್ರಖ್ಯಾತ ಕೈಗಾರಿಕಾ ಧುರೀಣರಾದ ಸೇಟ್ ರಾಮಕೃಷ್ಣ ದಾಲ್ಮಿಯಾ ಅವರು ಶೀಘ್ರ ಭವಿಷ್ಯದಲ್ಲಿ ಭಾರತವು ಭೀಕರ ಆರ್ಥಿಕ ಮುಗ್ಗಟ್ಟಿಗೊಳಗಾಗುವುದೆಂದು ನಿರೂಪಿಸಿರುವರು ಅವರ ಹೇಳಿಕೆಯ ಸಾರಾಂಶ ಹೀಗಿದೆ

ಭಾರತವು ಆರ್ಥಿಕ ದುರಂತದ ಕಡೆ ಸಾಗುತ್ತಿದೆ ಉತ್ಪತ್ತಿ ಪ್ರಮಾಣವು ಈಗಾಗಲೇ ಕನಿಷ್ಟಮಟ್ಟಕ್ಕಿಳಿದಿದೆ ಸರಕಾರವು ಆಗಲೇ ಕೈಗಾರಿಕಾ ಮಾಲಕರಿಗೂ ಮಜೂರರಿಗೂ ಎಚ್ಚರಿಕೆಯನ್ನು ಕೊಟ್ಟಿದೆ ಆದರೆ ಅದರಿಂದ ಸಮಸ್ಯೆಯು ಪರಿಹಾರವಾಗಲಾರದು ಅಧಿಕಾರಿಗಳು ನಿಜಪರಿಸ್ಥಿತಿಯ ಪರಿಶೀಲನೆ ಮಾಡುವುದರ ಕಡೆಗೆ ಹೆಚ್ಚು ಗಮನಕೊಟ್ಟು ವಿಷಮಗೊಳ್ಳುತ್ತಿರುವ ಪರಿಸ್ಥಿತಿಯಿಂದ ತಪ್ಪಿಸುವ ವಿಧಾನಗಳನ್ನು ಕಂಡುಹಿಡಿಯಬೇಕು ಮತ್ತು ಈ ಸಂಬಂಧದಲ್ಲಿ ಆತಂಕಗಳನ್ನು ದೊಡ್ಡ ಮಜೂರರಿಗಾಗಲೀ ಕೈಗಾರಿಕೆಯ ಮಾಲಕರಿಗಾಗಲಿ ಬಿಗಿಯಾದ ಕ್ರಮವನ್ನೇ [illegible] ಬೇಕು

ಈಗ ಅನೇಕ ಕೈಗಾರಿಕಾ ಸಂಸ್ಥೆಗಳು ನಷ್ಟದಲ್ಲೇ ಕೆಲಸಗೈಯುತ್ತಿವೆ [illegible] ಅಡಚಣೆಯೂ, ಮಜೂರರ ಪರವಾಗಿ [illegible] ಧೋರಣವೂ ಇದಕ್ಕೆ ಕಾರಣವಾಗಿದೆ ಸಾರಿಗೆ ವ್ಯವಸ್ಥೆಯ ತೀವ್ರ ಕೊರತೆಯಿಂದಾಗಿ ಕಚ್ಚಾ ವಸ್ತು ಉತ್ಪತ್ತಿ ವಸ್ತುಗಳ [illegible] ಸಾಗಿಸುವಿಕೆಗಳು ಬಹಳ ಕಷ್ಟಕರವಾಗಿರುವುದೂ ಇನ್ನೊಂದು ಮುಖ್ಯದ ಕಾರಣವೇ ಆಗಿದೆ

ಸತ್ಪರಿಣಾಮ

ನಿಯಂತ್ರಣಗಳನ್ನು ಸಡಿಲಿಸಿದ್ದರಿಂದ ವ್ಯಾಪಾರ ವಹಿವಾಟುಗಳ ಮತ್ತು ಕೈಗಾರಿಕೆಯ ಮೇಲೆ ಉತ್ತಮ ಪರಿಣಾಮವೇ ಆಗಿದೆ ಈ ಧೋರಣೆಯಲ್ಲೂ ಸರಕಾರವು ಮಂದಗತಿಯಿಂದಲೇ ಸಾಗುತ್ತಿರುವುದರ ಪರಿಣಾಮವಾಗಿ ಅನೇಕ ಕೈಗಾರಿಕೆಗಳು ನಷ್ಟದ ದೆಶೆಯಿಂದಲೇ ಸಾಗುತ್ತಿವೆ ಸಾಮಾನ್ಯ ಪ್ರಜೆಗಳಿಗೆ ವಸ್ತುಗಳು ಹೆಚ್ಚು ಬೆಲೆಯಲ್ಲೆ ಮಾರಲ್ಪಡುತ್ತಿವೆಯಾದರೂ ಇದರಿಂದ ದೊರೆತ ವಿಪುಲ ಲಾಭವು ಕಾರ್ಖಾನೆಗಳಿಗೆ ಹೋಗದೆ ಮಧ್ಯಸ್ತಿಕೆಯನ್ನು ವಹಿಸುವ ಚಿಲ್ಲರೆ ವ್ಯಾಪಾರಿಯ ಜೇಬನ್ನೇ ಸೇರುವುದು

ಹೊಸ ಆಯವ್ಯಯ ಪಟ್ಟಿಯಲ್ಲಿ ಮಧ್ಯಮ ತರಗತಿಯವರಿಗಿಂತ ಬಂಡವಾಳವರ್ಗದವರಿಗೆ ಹೆಚ್ಚಿನ ಸೌಲತ್ತು ಕೊಡಲ್ಪಟ್ಟಿವೆಯೆಂದನ್ನಲಾಗಿದೆ ಕಳೆದ ವರ್ಷ ಸರಕಾರವು ಕೈಗಾರಿಕಾ ಮಾಲಕರಿಗೆ [illegible] ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ [illegible] ಲಾಭವು [illegible] ಕೈಗಾರಿಕಗಳಿಗೆ [illegible] ಸಿ [illegible] ವರ್ಗಕ್ಕೆ [illegible] ಗಾರರಿಗೇ [illegible]

ಹೆಚ್ಚಿನ ಸೌಕರ್ಯಗಳು

ದೇಶದ ಆರ್ಥಿಕ [illegible] ಕೂಡಲೆ ಈ ಹೊಸ [illegible] ಇದನ್ನು ಸರಕಾರದಲ್ಲಿ ಪ್ರೋತ್ಸಾಹಿಸದಿದ್ದರೆ ಮುಂದೆ ಇದರಿಂದ [illegible] ಪರಿಸ್ಥಿತಿಯನ್ನು ಸುಧಾರಿಸುವುದು ಕಷ್ಟವಾಗಿ ದೇಶವು ಆರ್ಥಿಕ ದುರಂತವನ್ನು [illegible] ವುದು ಕೈಗಾರಿಕೆಗಳಿಗೆ ಹೆಚ್ಚಿನ ಸವ [illegible]

ವಾರದ ವಿಜ್ಞಾನ ವರದಿ

—o—

ಆನೆಕಾಲಿಗೆ ರೇಡಿಯೊಕಿರಣ ಪರಿಹಾರ

ಕೆಲವೊಂದು ರೇಡಿಯೊ ಪ್ರಭಾವಿತ ಕಿರಣಗಳ ಶುಶ್ರೂಷೆಯಿಂದ ಅನೇಕ ಭೀಕರ ಉಷ್ಣವಲಯದ ವ್ಯಾಧಿಗಳನ್ನು ಗುಣಮಾಡಬಹುದೆಂದು ವಾಶಿಂಗ್ಟನ್ನಿನ ಕಾರ್ನೆಜಿ ವೈದ್ಯಕೀಯ ಪರಿಶೋಧನಾಲಯದವರು ಕಂಡುಹಿಡಿದಿರುವರು ಅಂಜನಕಲ್ಲು ಮತ್ತು ಮನಶಿಲೆಯೆಂಬ ಪಾಷಾಣದ ಮೂಲಧಾತುಗಳ ರೇಡಿಯೊ ಪ್ರಭಾವಿತ ಚೂರ್ಣದಿಂದ ಒಂದು ತರದ ಔಷಧಿಯು ಕಂಡುಹಿಡಿಯಲ್ಪಟ್ಟಿದೆ.

ಆನೆಕಾಲು ಇಲ್ಲವೆ ಫೈಲಿರಿಯಾ ವ್ಯಾಧಿಯನ್ನು ಮನುಷ್ಯನಿಗೆ ಮತ್ತು ಇತರ ಕೆಲ ಪ್ರಾಣಿಗಳಿಗೆ ಉಂಟುಮಾಡುವ ವಾಹಕ ಜೀವಿಗಳು (ಸೊಳ್ಳೆ) ಬೇರೆ ಬೇರೆಯಾಗಿವೆ. ಕೆಲ ಪ್ರಾಣಿಗಳಿಗೆ ಈ ವ್ಯಾಧಿಯೇ ತಗಲುವುದಿಲ್ಲ ಆದರೆ ನಾಯಿಗೆ ಇದು ಅಂಟುತ್ತದೆ ಮೇಲೆ ಹೇಳಿದ ಧಾತುಗಳ ಔಷಧ ಮಿಶ್ರಣಗಳನ್ನು ನಾಯಿಗಳ ಮೇಲೆ ಪ್ರಯೋಗಿಸಿದಾಗ ಆನೆ ಕಾಲನ್ನುಂಟುಮಾಡುವ ಒಂದು ತರದ ಲಂಬಾಕೃತಿಯ ಕ್ರಿಮಿಗಳು ನಾಶಹೊಂದಿದವು ಮಧ್ಯ ಅಮೇರಿಕಾ, ಪನಾಮಾ ಮೊದಲಾದ ಕಡೆಗಳಲ್ಲಿ ಆನೆಕಾಲಿನ ವ್ಯಾಧಿಯು ಮನುಷ್ಯನನ್ನು ಕುರೂಪನನ್ನಾಗಿಯೂ ಮಾಡುವಷ್ಟು ಬೀಕರವಾದುದಾಗಿದೆ ವಿಜ್ಞಾನಿಗಳ ಹೊಸ ಶೋಧನೆಯು ಸಂಪೂರ್ಣ ಫಲಕಾರಿಯಾದ ಕೂಡಲೇ ಜಗತ್ತಿನ ಅನೇಕ ಭಾಗಗಳಲ್ಲಿ ಆನೆಕಾಲಿನ ರೋಗದಿಂದ ನರಳುವವರಿಗೊಂದು ಶುಭಕಾಲವುಂಟಾಗುವುದು.

ಗಾಜಿನ ಬಟ್ಟೆ

ಈ ವರ್ಷದ [illegible] ಕೈಗಾರಿಕಾ ಪ್ರದರ್ಶನದಲ್ಲಿಡಲ್ಪಡುವ ಅನೇಕ ಸಾರಸ್ಯ ವಸ್ತುಗಳಲ್ಲಿ [illegible] ವಿಧಾನದ ಗಾಜಿನ [illegible] ವಿಶೇಷ ಆಕರ್ಷಣೆಯ [illegible] ನಿರೀಕ್ಷಿಸಲ್ಪಟ್ಟಿದೆ [illegible] ತಗಲು [illegible] ಎಂದೆಂದಿಗೂ ಹಾಳಾಗದೆ ಉಳಿಯುತ್ತವೆ

ಸಾಮಾನ್ಯ ಕಣ್ಣಿಗೆ ಕಾಣದಷ್ಟು ಸೂಕ್ಷ್ಮ ಗಾಜಿನ [illegible] ಈ ಬಟ್ಟೆ [illegible] ತಯಾರಿಸಲ್ಪಟ್ಟಿದೆ ಸುಮಾರು ಅರ್ಧ ಇಂಚಿನ [illegible] ಗಾಜಿನ [illegible] ಇಂತಹ [illegible] ಇಂತಹ [illegible] ಪ್ರೋ [illegible] ಇಂತಹ [illegible]

ಗಾಜಿನ [illegible] ಅನೇಕ ರೀತಿಯಲ್ಲಿ ಉಪಯೋಗಿಸಬಹುದು [illegible] ಇದನ್ನು [illegible] ಉಪಯೋಗಿಸಬಹುದು [illegible] ಇದನ್ನು [illegible] ಮಾಡಬಹುದು [illegible] ವರ್ಣಗಳಲ್ಲಿದನ್ನು ತಯಾರಿಸ [illegible] ಕಿಟಿಕಿ ಪರದೆಗಳಾಗಿಯೂ, ವೇಷಭೂಷಣವಾಗಿಯೂ ಉಪಯೋಗಿಸಬಹುದು

ಗೋವಳರಿಗೆ ವಿದ್ಯುತ್ ಗೋಲು

ದನಗಳನ್ನಟ್ಟಿಕೊಂಡು ಹೋಗುವಾಗ ಗೋವಳರ ಹುಡುಗರು ಬೆತ್ತಗಳನ್ನುಪಯೋಗಿಸುವರಷ್ಟೆ? ನ್ಯೂಜಿಲೆಂಡಿನ ಪ್ರಾಣಿದಯಾ ಸಂಪನ್ನರು ಬೆತ್ತದ ಬದಲಿಗೆ ಬೆಟ್ರಿಯಿಂದ ವಿದ್ಯುತ್ ಧಕ್ಕೆಯೊಂದನ್ನುಂಟುಮಾಡುವ ಒಂದು ಕೋಲನ್ನು ತಯಾರಿಸಿರುವರು. ಇದರಿಂದ ದನಗಳನ್ನು ಹೊಡೆಯುವ ಅವಶ್ಯಕತೆಯಿಲ್ಲ. ಅದನ್ನು ಗೋವುಗಳ ಬೆನ್ನಿಗೆ ಮುಟ್ಟಿಸಿದಾಕ್ಷಣ ಒಂದು ವಿದ್ಯುತ್ ಧಕ್ಕೆ (Shock) ವುಂಟಾಗಿ—ದನಗಳು ಓಡುವವು. ಇದರಿಂದ ಹಾನಿಯೇನೂ ಆಗುವುದಿಲ್ಲ.

ಆಹಾರ ಉತ್ಪತ್ತಿ

ಹಿಂದುಸ್ಥಾನ [illegible] ಆಹಾರ ಪೀಕೆಗಳ [illegible] ಇವನ್ನು [illegible] ಯೋಜನೆಗಳನ್ನು [illegible] ದೇಶದ ಅನೇಕ ಕಡೆಗಳಲ್ಲಿ [illegible] ಇದೇ ರೀತಿ [illegible] ಇದರಿಂದ ಜನ [illegible] ವುದು.

ಲತ್ತುಗಳು ಸಲ್ಲಿಸಬೇಕಾಗಿದೆ ಶೀಘ್ರದಲ್ಲೇ ನಮ್ಮ ಸರಕಾರವಾದರೂ ತನ್ನ ತಪ್ಪನ್ನು ತಿಳಕೊಂಡು ತಾನನುಸರಿಸಿದ ಧೋರಣೆಯು ಅವಿವೇಕದ್ದೆಂದು ಮನಗಾಣುವುದು ಎಲ್ಲಾ ನಿಯಂತ್ರಣಗಳನ್ನು ರದ್ದು ಮಾಡಿ ಸಾಗಿಸುವಿಕೆಗೆ ಎಲ್ಲಾ ತರದ ಸೌಕರ್ಯಗಳನ್ನು ಕಲ್ಪಿಸಬೇಕು ಪೆಟ್ರೋಲ್ ಪೂರೈಸಲ್ಪಡದೆ ಮಾರಾಟಕ್ಕಾಗಿ ದಾರಿ ಕಾಯುತ್ತಿರುವ ಸಾವಿರಾರು ಮೋಟಾರು ವಾಹನಗಳಿಗೆ ಪೆಟ್ರೋಲು ಸರಬರಾಯಿ ವ್ಯವಸ್ಥೆಯನ್ನು ಮಾಡಿ ರೈಲು ಗಾಡಿಗಳನ್ನು ಆದಷ್ಟು ಹೆಚ್ಚು ತಯಾರಿಸಿ ಸಾಗಿಸುವಿಕೆಯ ತೊಂದರೆಗಳ [illegible] ಬೇಕು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜೊಯಿಂಟ್ ಮೆನೇಜರ್ಸ್,

ಮಂಗಳೂರು
23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months . . . . 2½% p. a.

5 & 6 months . . . . 2¾% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment. It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases, and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪ್ಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 9—4—1948 [ಸಂಚಿಕೆ 14]

ಪೌರ್ವಾತ್ಯ ದೇಶಗಳಿಗೆ ಜಪಾನಿನ ಸಹಾಯ

ಪರಸ್ಪರ ಸಹಕಾರದಿಂದ ಹೆಚ್ಚಿಸಬೇಕು

ಕೈಗಾರಿಕೆಗಳನ್ನು ಅವಶ್ಯ ಅಭಿವೃದ್ಧಿಸಬೇಕು

ಪೂರ್ವದ ದೇಶಗಳಲ್ಲಿ ವಿಪುಲ ಕೃಷಿ ಮತ್ತು ಖನಿಜ ಸಂಪತ್ತುಗಳಿದ್ದೂ ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಲಾಗದ ಒಂದೇ ಕಾರಣದಿಂದ ನಿಕೃಷ್ಟವಾದ ಆರ್ಥಿಕ ದುರ್ದೆಶೆಯಿಂದ ನರಳುವ ದೇಶಗಳೆಂದರೆ ಆಗ್ನೇಯ ಏಷ್ಯದವುಗಳು. ಈ ದೇಶಗಳಲ್ಲಿನ ಖನಿಜ ಸಂಪತ್ತನ್ನು ಸಂಪೂರ್ಣ ಉಪಯೋಗಿಸಿಕೊಂಡರೆ ಮುಂದೆ ಜಗತ್ತಿನಲ್ಲಿ ಇವು ಅಸಮಾನ ಶಕ್ತಿಯುದಾಗಿ ಬಾಳಿ ವಿಶ್ವಶಾಂತಿಗೆ ಅತ್ಯಂತ ಪ್ರಭಾವದ ಸಹಾಯವನ್ನು ನೀಡಬಲ್ಲವು. ಭಾರತ, ಬರ್ಮಾ, ಮಲಯಾಗಳು ಇವುಗಳಲ್ಲಿ ಪ್ರಮುಖವಾದವು.

ಇಂದು ಈ ದೇಶಗಳ ಔದ್ಯೋಗಿಕ ಅಭಿವೃದ್ಧಿಗೆ ಕಲ್ಪನಾತೀತವಾದ ಆತಂಕಗಳೂ ಇವೆಯೆಂಬ ಸಂಗತಿಯೂ ನಿರ್ವಿವಾದವಾದುದು. ಕಳೆದ ಯುದ್ಧದಲ್ಲಿ ಈ ದೇಶಗಳ ಅನೇಕ ಭಾಗಗಳು ಯುದ್ಧ ಕ್ಷೇತ್ರಗಳಾಗಿ ಯುರೋಪಿನ ಹಲವು ದೇಶಗಳಷ್ಟೇ ಜರ್ಝರಿತವಾದ ಹಾನಿಗೊಳಗಾಗಿವೆ. ಕೆಲವು ದೇಶಗಳಲ್ಲಿ ಅಪ್ರತ್ಯಕ್ಷವಾದ ದುಷ್ಪರಿಣಾಮಗಳೂ ಆಗಿವೆ. ಈ ದೇಶಗಳ ಆರ್ಥಿಕ ಪರಿಸ್ಥಿತಿಯಾದರೋ ಅಷ್ಟೇ ಕಂಗಾಲಾಗಿರುವುದು. ಮತ್ತೆ ಯುರೋಪಿನ ಮತ್ತು ಏಷ್ಯದ ದೇಶಗಳಲ್ಲಿ ಕೆಲವೊಂದು ವ್ಯತ್ಯಾಸಗಳಿವೆ. ಯುರೋಪಿನ ದೇಶಗಳು ಆದಾಗಲೇ ಕೈಗಾರಿಕೆಗಳಲ್ಲಿ ತುಂಬಾ ಮುಂದರಿದವುಗಳು. ಆದುದರಿಂದ ಯುದ್ಧಾನಂತರದ ಸ್ವಲ್ಪ ಸಮಯದ ನಂತರವಾದರೂ ಅವು ತಲೆಯೆತ್ತಲು ಶಕ್ತವಾಗಿವೆ. ಅಲ್ಲದೆ ಅಮೇರಿಕವು ಆ ದೇಶಗಳ ಶೀಘ್ರ ಪುನರ್ಜೀವನಕ್ಕೆ ತನ್ನ ವಿಪುಲ ಡೊಲರ್ ಸಂಪತ್ತನ್ನು ತೆರಲು ಯೋಜಿಸಿದೆ.

ಆಗ್ನೇಯ ಏಷ್ಯದ ಪರಿಸ್ಥಿತಿ

ಆದರೆ ಆಗ್ನೇಯ ಏಷ್ಯದ ದೇಶಗಳಿಗೆ ಈ ಯಾವೊಂದು ತರದ ಅನುಕೂಲತೆಗಳ ಸೌಭಾಗ್ಯ ದೊರಕಿಲ್ಲ. ಈ ದೇಶಗಳು ತಮ್ಮ ಬಳಿಯುದ್ದ ಹಳೆಯ ಯಂತ್ರಗಳನ್ನೇ ದುರುಸ್ತಿಪಡಿಸಿ ಕೆಲಸಗೈಯ್ಯಬೇಕಾಗಿದೆ. ಯುದ್ಧ ಚಟುವಟಿಕೆಯಿಂದ ಅವ್ಯವಸ್ಥೆಗೊಳಗಾದ ಈ ದೇಶಗಳ ಸಾಗಾಟದ ಮಾರ್ಗ ವ್ಯವಸ್ಥೆಯನ್ನು ದುರುಸ್ತಿಪಡಿಸಲೂ ಇದುವರೆಗೆ ಸಾಧ್ಯವಾಗಿಲ್ಲ. ಈ ದೇಶಗಳು ತಮ್ಮ ಅಭಿವೃದ್ಧಿಯ ದಾರಿಯನ್ನು ತಾವೇ ನೋಡಿಕೊಳ್ಳಬೇಕಾಗಿ ಬಂದಾಗ ಖಂಡಿತವಾಗಿ ಹೇಳಲ್ಪಟ್ಟಿವೆ. ಯುರೋಪ್ ಇಲ್ಲವೆ ಅಮೇರಿಕಗಳಿಂದ ಇದಕ್ಕೆ ಯಾವ ಸಹಾಯವೂ ದೊರಕಲಾರದೆಂದು ಇದಕ್ಕೆ ಸೂಚನೆಯನ್ನು ಕೊಡಲಾಗಿದೆ.

ನೆಹರು ಯೋಜನೆ

ಯುರೋಪಿಗೆ ಸಹಾಯ ಕೊಡುವ ಮಾರ್ಶಲ್ ಯೋಜನೆಯ ಸೌಕರ್ಯವನ್ನು ಭಾರತಕ್ಕೂ ಕೊಡಬಾರದೇಕೆ ಎಂಬ ಸೂಚನೆಗೆ ಉತ್ತರವಾಗಿ ಡಾ। ಗ್ರೇಡಿಯವರು ಆಗ್ನೇಯ ಏಷ್ಯಕ್ಕೆಂದು ನೆಹರು ಯೋಜನೆಯನ್ನು ಸಿದ್ಧಗೊಳಿಸಬಹುದು ಎಂದು ತಿಳಿಸಿದ್ದರು. ಆದರೆ ಭಾರತ ಪ್ರಧಾನರು ತಮ್ಮ ಡಿಲ್ಲಿ ವಣಿಕ ಸಂಘದ ಭಾಷಣದಲ್ಲಿ "ನಮಗೆ ಸಹಾಯ ಕೊಡಲು ಮನಸ್ಸಿಲ್ಲದವರ ಬಳಿ ನಾವು ಸಹಾಯ ಕೋರುವುದು ಸರಿಯಲ್ಲ"ವೆಂದು ಆ ಸೂಚನೆಯನ್ನು ನಿರುತ್ಸಾಹಗೊಳಿಸಿದರು. ಆದುದರಿಂದ ಈ ಕಡೆಯ ದೇಶಗಳು ತಮ್ಮ ಸ್ವಂತ ಸಂಪತ್ತಿನ ಮೇಲೆ ಹೊಂದಿಕೊಂಡು ತಮ್ಮ ವಿಮೋಚನೆ ಮಾಡಿಕೊಳ್ಳಲು ಪರಮಾವಧಿಯ ಶ್ರಮ ಚೈತನ್ಯಗಳನ್ನು ಸಂಘಟಿಸಬೇಕೆಂದೂ ಅವರು ನಿರ್ಧಾರಯುಕ್ತವಾಗಿ ತಿಳಿಸಿದರು.

ಹೀಗೆ ತಿಳಿಸುಗಾಗ ಅವರ ವಿಶಾಲ ಭಾವನೆಯಲ್ಲಿ ಯಾವೊಂದು ತರದ ಪ್ರತ್ಯೇಕತೆಯ ಸಂಕುಚಿತ ಉದ್ದೇಶವಿರಲಿಲ್ಲ. ಭಾರತವು ತನ್ನ ನೆರೆಯ ದೇಶಗಳಿಗೆ ಸಹಾಯ ಮಾಡಲು ಸಿದ್ಧವಿದೆಯೆಂದೂ ಇದೇ ರೀತಿ ಈ ಪ್ರಾದೇಶಿಕ ಗುಂಪಿನ ದೇಶಗಳು (ಇದರಲ್ಲಿ ನ್ಯೂಜೀಲೆಂಡ್ ಆಸ್ಟ್ರೇಲಿಯಗಳನ್ನೂ ಅವರು ಸೇರಿಸಿರುವರು) ಮರುಸಹಾಯವನ್ನಿತ್ತು 'ಇವರೆ ಪರಸ್ಪರ ಶ್ರೇಯೋಭಿವೃದ್ಧಿಯನ್ನು ಹೊಂದಬಹುದೆಂದೂ ಅವರು ತಿಳಿಸಿದರು. ಪಾಶ್ಚಿಮಾತ್ಯದ ಶ್ರೇಷ್ಠ ಕೈಗಾರಿಕಾ ದೇಶಗಳಿಂದ [illegible]ಸಲ್ಪಟ್ಟಿರುವುದಾದರೂ ನಾವು ಸಂಪೂರ್ಣ ಸಹಾಯಶೂನ್ಯರಾಗುತ್ತೇವೆಂದು ಹೇಳಲು ಬರುವುದಿಲ್ಲ. ನಮಗೆ ಸಾಕಷ್ಟು ಯಂತ್ರೋಪಕರಣಗಳನ್ನು ದೊರಕಿಸಿಕೊಳ್ಳಲು ಸಾಧ್ಯವಿದೆ. ಈ ನಮ್ಮ ಪ್ರಾದೇಶಿಕ ಗುಂಪಿನಲ್ಲಿ ಜಗತ್ತಿನ ಹೆಚ್ಚಿನ ಯಾವ ದೇಶಗಳಿಗೂ ನಿಕೃಷ್ಟ ಪ್ರಮಾಣದಾಗಿರದ ಜಪಾನಿನಲ್ಲಿ ನಮ್ಮ ಔದ್ಯೋಗೀಕರಣಕ್ಕೆ ಸಾಕಾಗುವಷ್ಟು ಯಂತ್ರ ಸಾಂಪ್ರದಾಯವಿದೆ.

ಆಗ್ನೇಯ ಏಷ್ಯದ ದೇಶಗಳು ಜಪಾನಿನ ಸಹಾಯವನ್ನು ಕೇಳಿಕೊಂಡರೆ ಬಹಳ ಮಟ್ಟಿಗೆ ಅವು ಸುಧಾರಿಸಿಕೊಳ್ಳಬಹುದಾಗಿದೆ. ಆದರೆ ಇಂದು ಜಪಾನಿನ ತಲೆಯ ಮೇಲೆ ಕೂತ ಪರಕೀಯ ಒಡೆತನದ ಭಾರವನ್ನೂ ಇಳಿಸಬೇಕಾದುದೂ ಈ ಸಂದರ್ಭದಲ್ಲಿ ಅತ್ಯಾವಶ್ಯಕ. ಆಗ ಮಾತ್ರ ಜಪಾನು ತನ್ನ ನೆರೆಯ ರಾಷ್ಟ್ರಗಳೊಂದಿಗೆ ಪರಸ್ಪರ ಸಹಾಯ ಮಾಡುವ ಶಾಂತಿಪ್ರಿಯ ದೇಶವಾಗುವುದು. ಈ ಕುರಿತು ನಿರ್ದಿಷ್ಟ ಯೋಜನೆಗಳನ್ನು ನಿರ್ಧರಿಸಲು ಜನಾಂಗದ ಸಂಘದ ಆರ್ಥಿಕ ಸಮಿತಿಯು ಔದ್ಯೋಗಿಕ ಕಾರ್ಯ ನಿರ್ವಹಣ ಪಕ್ಷವು ಈಗ ತಾನೆ ಶಾಂಘಾಯ್ ನಗರದಲ್ಲಿ ಪರ್ಯಾಲೋಚಿಸುತ್ತಿರುವುದು. ಇದರ ಕಾರ್ಯಕಲಾಪಗಳ ಫಲಿತಾಂಶವನ್ನು ಆಗ್ನೇಯ ಏಷ್ಯದ ದೇಶಗಳು ಶ್ರದ್ಧಾಪೂರ್ವಕ ಪರೀಕ್ಷೆಯಿಂದ ಕಾಯುತ್ತಿವೆ.

ಪ್ರಥಮ ಸಲ

ಪೌರ್ವಾತ್ಯದ ದೇಶಗಳ ಔದ್ಯೋಗೀಕರಣದ ಕುರಿತು ಆಸ್ಥೆ ವಹಿಸಿ ಒಂದು ಸಾಂಘಿಕ ಯೋಚನೆ ನಡೆಸಲ್ಪಡುವುದು ಇದೇ ಮೊದಲಿನ ಸಲವೆಂದು ಮೇಲ್ಕಂಡ ಸಮಿತಿಯ ಕಾರ್ಯದರ್ಶಿಗಳಾದ ಡಾ। ಲೋಕನಾಥನ್ ಅವರು ತಿಳಿಸುತ್ತಾರೆ. ಇಂದು ಈ ಸಮಿತಿಯು ಒಂದು ತರದ ವೈಪೋಟಿಯ ಆಹ್ವಾನವನ್ನೆದುರಿಸಿ ತನ್ನ ಕಾರ್ಯ ಸಾಧಿಸಬೇಕಾಗಿದೆಯೆಂದೂ ಡಾ। ನಾಥನ್ ಅವರು ಎಚ್ಚರಿಸಿದ್ದಾರೆ.

ದೆಹಲಿ[illegible] ಸಾಮ್ರಾಜ್ಯಶಾಹಿಯನ್ನು ಸ್ಥಾಪಿಸಲು ಅಮೇರಿಕವು ಇಂದು ಮೊದಲು ತನ್ನ ಜನಾಂಗಿಕ ಅಪ್ರಿಯವಾದ ಪರೋಕ್ಷ ದೇಶಗಳನ್ನು ಮೊದಲು ತನ್ನ ವಶಪಡಿಸಿಕೊಳ್ಳಲು ಆ ದೇಶದ ಬಿಕ್ಕಟ್ಟಿನ ಸಂದರ್ಭದ ಅನುಕೂಲತೆಯನ್ನು ತೆಗೆದುಕೊಂಡಿದೆ. ತನ್ನ ಭಾವೀ ವಿಶ್ವ ಭಕ್ಷಣದ ಯೋಜನೆಯಲ್ಲಿ ಜಪಾನಿನ ಔದ್ಯೋಗೀಕರಣದ ಪುನರುಜ್ಜೀವನ ಮಾರ್ಗಕ್ಕೆ ನಿಲ್ಲಬಹುದೆಂದೂ ಅಮೇರಿಕದ ಆಳ ವಿಶ್ವಾಸವಿದ್ದಂತೆ ತೋರುತ್ತದೆ. ಪೌರ್ವಾತ್ಯ ದೇಶಗಳನ್ನು ಮುಂದೆ ತಂದರೆ ಬಿಳಿ ದೇಶಗಳ ದರ್ಪದ ದೌಲತ್ತಿಗೆ ಧಕ್ಕೆಯುಂಟಾಗಬಹುದೆಂಬ ಸಂಕುಚಿತವೂ ಅಪ್ರತ್ಯಕ್ಷವೂ ಆದ ಜನಾಂಗಿಕ ಶ್ರೇಷ್ಠತೆಯ ದುರುದ್ದೇಶವೂ ಇದರಲ್ಲಿ ಅಡಕವಾಗಿದೆಯೆಂದೂಹಿಸಿಕೊಳ್ಳಲು ಎಡೆಯಿದೆ. ಇದು ಪ್ರಜಾಸ್ವಭಾವದ ಮಾದರಿ ದೇಶವು ಅನುಸರಿಸಿದ ಆತ್ಮ ವಿಘಾತುಕವಾದ ಧೋರಣೆ. ಇದೇ ಏಷ್ಯದ ದೇಶಗಳ ಜೀವನ್ಮರಣದ ಹೋರಾಟಕ್ಕೆ ಆಹ್ವಾನಿಸಿರುವ ಸ್ಪರ್ಧೆ ಪೈಪೋಟಿಯ ಕರೆ. ಆಗ್ನೇಯ ಏಷ್ಯದ ದೇಶಗಳು ಇದನ್ನು ಸ್ವೀಕರಿಸಿ ಸಂಘಟನೆ ಸಹಕಾರದಿಂದ ಅಮೇರಿಕದ ಈ ಯುದ್ಧ ಪ್ರಚೋದಕ ಧೋರಣೆಯನ್ನು ತಡೆಗಟ್ಟಲು ಪ್ರಯತ್ನಿಸುವವೆ?

ಬೃಹತ್ಮಾನವ ವ್ಯಕ್ತಿಗಳ ಜನ್ಮಭೂಮಿ ಭಾರತ

ಮಹಾತ್ಮಾಗಾಂಧೀಜಿ ಇತ್ತೀಚೆಗಿನವರು

ಭಾರತೀಯರ ವಿಶ್ವ ಸಂದೇಶ

ತನ್ನ ದೀರ್ಘಕಾಲದ, ರಕ್ತರಂಜಿತ ಮತ್ತು ಸಂಕಷ್ಟಮಯ ಇತಿಹಾಸದಲ್ಲಿ ಹಿಮಾವತ್ಪರ್ವತದಿಂದ ವಿಶಾಲ ಸಾಗರದ ತನಕ ಪಸರಿಸಿರುವ ಆ ಪುಟ್ಟ ದೇಶ-ಹಿಂದ್, ಭಾರತವರ್ಷ, ಹಿಂದೂಸ್ಥಾನ, ಇಂಡಿಯಾ ಮೊದಲಾದ ನಾಮಧೇಯಗಳಿಂದ ಮೆರೆಯುವಂತಹುದು—ಜಗತ್ತಿನ ಬೃಹತ್ಮಾನವ ಮೂರ್ತಿಗಳಿಗೆ ಜನ್ಮವಿತ್ತಿದೆ. ಈ ವ್ಯಕ್ತಿಗಳ ವಿಚಾರಕ್ಷೇತ್ರವು ಯಾವುದಾದರೊಂದೇ ಪಥದಲ್ಲಿರದೆ ಜ್ಞಾನಸಾಗರದ ಎಲ್ಲೆಡೆಗಳಲ್ಲೂ ಪಸರಿಸಿತ್ತು. ವಿಶ್ವದ ಮೂರರಲ್ಲೊಂದಂಶ ಜನತೆ ಪವಿತ್ರವೆಂದೆನಿಸುವ ಈ ಪರಮಪಾವನ ಪ್ರದೇಶವು ನಾಗರಿಕತೆಯ ತೊಟ್ಟಿಲಾಗಿತ್ತು ಮಾತ್ರವಲ್ಲ ಕೃಷ್ಣ ಗೌತಮರೇ ಮೊದಲಾದ ಮಾನವ ನೀತಿಬೋಧಕರ ತಾಯ್ನಾಡಾಗಿದೆ. ಆಧುನಿಕ ಜಗತ್ತಿನ ಯಾವ ದೇಶವಾದರೂ ಹೆಮ್ಮೆಪಡುವಂತಹ ಸರ್ವಶ್ರೇಷ್ಠ ಗಣಿತ ತಜ್ಞರನ್ನು ಖಗೋಳಜ್ಞರನ್ನು, ಭೌತಿಕ ಶಾಸ್ತ್ರಜ್ಞರನ್ನು, ತರ್ಕನಿಪುಣರನ್ನೂ ಅರ್ಥಶಾಸ್ತ್ರಿಗಳನ್ನೂ ರಾಜತಂತ್ರಜ್ಞರನ್ನು ಮಾತ್ರವಲ್ಲ ಅದ್ವಿತೀಯ ಸಮರ ಯೋಧರನ್ನು, ಅಸಾಮಾನ್ಯ ಸೇನಾಪತಿಗಳನ್ನು, ಅನುಪಮ ಕಲಾಗಾರರನ್ನು, ವಿಶ್ವ ಸಾಹಿತಿಗಳನ್ನು ಉಂಟುಮಾಡಿದ ಈ ಪುಣ್ಯಭೂಮಿ ಜಗತ್ತಿನ ಮತ್ತು ಮಾನವ ಕೋಟಿಯ ಪ್ರಗತಿಗೆ ಮಹತ್ತರವಾದ ಸಾಂಸ್ಕೃತಿಕ ರೂಪವನ್ನು ಕೊಟ್ಟಿದೆ.

ಆದರೆ ಭಾರತದ ವಿಶ್ವಶ್ರೇಷ್ಠತೆಯು ಹರಪ್ಪಾ ಮೊಹೆಂಜೆದಾರೊಗಳ ಭವ್ಯ ಭಗ್ನಾವಶೇಷತೆಯು ಸಾರಿ ತೋರುವ ಯಂತ್ರನಿಪುಣತೆಯಿಂದುಂಟಾದುದಲ್ಲ. ಆರ್ಯಭಟ್ಟನ ಗಣಿತಜ್ಞತೆಯಾಗಲಿ, ಭಾಸ್ಕರಾಚಾರ್ಯನ ಖಗೋಳಪಾಂಡಿತ್ಯವಾಗಲಿ, ಆರ್ಯಾವೃತ್ತದ ಕೀರ್ತಿಯನ್ನು ಕಳಶಪ್ರಾಯ ಮಾಡಿದ್ದಲ್ಲ. ಚರಕ ಸುಶ್ರುತರ ವೈದ್ಯವಿಜ್ಞಾನಗಳು ಇಂದಿನ ಜಗತ್ತಿನಲ್ಲೂ ಪ್ರತಿಭಾವಂತ ಸಾಮರ್ಥ್ಯದ ಪ್ರದರ್ಶನಗಳಾಗಿವೆ ನಿಜ. ಇದಲ್ಲದೆ ಮಾನವ ಜ್ಞಾನಶಕ್ತಿಯ ಅಮೋಘ ನಿದರ್ಶನಗಳಂತಿರುವ ಅದೆಷ್ಟೋ ಶ್ರುತಿ ಸ್ಮೃತಿ ಶಾಸ್ತ್ರಗಳೂ, ಕಾವ್ಯ ಕವನಗಳು ನಮ್ಮೀ ಭೂಮಿಯಲ್ಲಿ ಉದ್ಭವಿಸಿವೆ. ಭೂಲೋಕದಲ್ಲಿ ಸ್ವರ್ಗ ದರ್ಶನದಂತಿರುವ ಕಾವ್ಯ ಕಟ್ಟಿದ ಕಾಳಿದಾಸನೂ ನಮ್ಮವನೆ.

ಆದರೆ ವಿಶ್ವದಲ್ಲಿಂದು ಭಾರತದ ಪ್ರತಿಭೆಯು ಇಲ್ಲಿ ಅವತರಿಸಿದ ಮಹಾ ಧರ್ಮೋಪದೇಶಕರ ಸತ್ಕೀರ್ತಿಯಿಂದ ಬೆಳಗುವಂತಾಗಿದೆ. ವೇದಗಳನ್ನು ಬರೆದ ಋಷಿವರ್ಯರು, ನೀತಿ ಸೂತ್ರಗಳನ್ನೊರೆದ ಮನುವೂ, ಗೀತೆಯನ್ನು ಸುರಿದ ಶ್ರೀಕೃಷ್ಣನು ನಮ್ಮೀ ಭಾರತ ಭೂಮಿಯನ್ನು ವಿಶ್ವಮಾನ್ಯ ಮಾಡಿದೆ. ಬುದ್ಧನೂ ಮತ್ತವನ ಉದಾತ್ತ ಜೀವನ ಸಾಧನವೂ, ಅಶೋಕನೂ, ಮತ್ತವನ ಅಪ್ರತಿಮ ಆದರ್ಶನವೂ, ಶಂಕರಾಚಾರ್ಯನೂ ಮತ್ತವನ ವೇದಾಂತ ತತ್ವಜ್ಞಾನವೂ, ಕಬೀರನೂ ಮತ್ತವನ ಮತಸಾಮ್ಯವಾದವೂ, ನಾನಕನು ಮತ್ತವನ ಧರ್ಮ ಸಾಮರಸ್ಯವೂ, ರಾಮಕೃಷ್ಣನೂ ಮತ್ತವನ ವಿಶ್ವವಾತ್ಸಲ್ಯದ ಸ್ನೇಹ ಜೀವನವೂ, ಮೋಹನದಾಸ್ ಕರಮಚಂದ ಗಾಂಧಿಯೂ ಮತ್ತವನ ಸತ್ಯ ಅಹಿಂಸಾ ತತ್ವಾಚರಣೆಗಳೂ ಇಂದು ಭಾರತವನ್ನು ವಿಶ್ವ ದೃಷ್ಟಿಯಲ್ಲಿ ಶೋಭಿಸಿವೆ.

ಈ ತೆರನಾದ ಮಹಾ ವ್ಯಕ್ತಿಗಳ ಜೀವನ ರಣಗಳೆಂದಿಗೂ ವಿಶ್ವ ಕ್ರಾಂತಿಗಳನ್ನುಂಟು ಮಾಡಿಲ್ಲ. ಅವರು ಅದೃಷ್ಯವಾಗೆಂಬಂತೆ ಕಾಣಿಸಿಕೊಂಡರು. ಪರಿಪೂರ್ಣ ಶಾಂತಿಯಲ್ಲೇ ಅವರು ಈ ಲೋಕವನ್ನು ತ್ಯಜಿಸಿದರು. ಶ್ರೀ ಕೃಷ್ಣನ ಯೇಸುವಿನ, ಬುದ್ಧನ, ಮಹಮ್ಮದನ ಇಲ್ಲವೆ ಕನ್‌ಫ್ಯೂಸಿಯ, ಅಥವಾ ಜೊರಾಸ್ಟರನ ಜನನ ಇಲ್ಲವೆ ಮರಣಗಳಾದಾಗ ಹೊರಗಿನ ಪ್ರಪಂಚವು ಅವರ ಕುರಿತಾಗಿ ಏನನ್ನೂ ತಿಳಕೊಂಡಿರಲಿಲ್ಲ. ಅವರ ಧರ್ಮೋಪದೇಶವು ವಿಶ್ವಕ್ಕೆ ತಲುಪಲು ಕೆಲವು ಶತಮಾನಗಳು ತಗಲಿದುವು. ಇಷ್ಟಾದರೂ ಅವು ಜಗತ್ತಿನ ಮೂಲೆಗಳನ್ನು ತಲುಪಿದುವು. ಆಧುನಿಕ ವಿಜ್ಞಾನದ ಪ್ರಗತಿಯಿಂದಾಗಿ ಗಾಂಧೀಜಿಯ ತತ್ವೋಪದೇಶಗಳು ಅವರ ಜೀವಮಾನದಲ್ಲೇ ವಿಶ್ವಕ್ಕೆ ತಲುಪಿದವು. ಗಾಂಧಿಜಿಗೆ ತಮ್ಮ ಪ್ರಾಚೀನರಿಗಿದ್ದುದಕ್ಕಿಂತ ಹೆಚ್ಚಿನ ಸೌಕರ್ಯಗಳೇನೊ ದೊರಕ್ಕಿದುವು.

✠

ಕ್ರಿಸ್ತನ ಕಾಲದಲ್ಲಿ ರೇಡಿಯೋ ಪ್ರಸರಣದ ಯಂತ್ರಗಾರಿಕೆಯಿರಲಿಲ್ಲ. ಆದರೆ ಮಹಾತ್ಮಾಜಿಯವರ ಕಾಲದಲ್ಲಿ ಅದು ಹೇರಳವಾಗಿದೆ. ವಾರ್ಧಾದಲ್ಲಿನ ಮಣ್ಣಿನ ಗುಡಿಸಲಿಗೆ ವಿಶ್ವವೇ ಬಂದು ಅವರ ಅಮೃತವಾಣಿಯನ್ನು ಆಲಿಸುತಿತ್ತು. ಅವರುಚ್ಚರಿಸಿದ ಯಾವದೇ ಶಬ್ದವಾದರೂ ಕ್ಷಣ ಮಾತ್ರದಲ್ಲಿ ವಿಶ್ವದೆಂಟು ದಿಕ್ಕುಗಳಲ್ಲೂ ಪಸರುತಿತ್ತು. ಕ್ರಿಸ್ತನ ಕಾಲಕ್ಕಿಂತ ಅದೆಷ್ಟೊ ಸುಶಿಕ್ಷಿತವಾದ ಶ್ರೋತೃ ವರ್ಗವೂ ಮಹಾತ್ಮರ ಕಾಲದಲ್ಲಿತ್ತು.

ಆದರೆ ಗಾಂಧೀಜಿಯ ಕಾಲದ ಜನರು ಪಾರಮಾರ್ಥಿಕದಲ್ಲಿ ವಿಶ್ವಾಸವುಳ್ಳವರಾಗಿದ್ದರೂ ಕಾರ್ಯದಲ್ಲಿ ಲೌಕಿಕರೇ ಹೆಚ್ಚಾಗಿದ್ದಾರೆ. ಜನತೆ ಅಹಿಂಸಾತತ್ವವನ್ನು ಕೇವಲ ಮಾನಸಿಕ ಸ್ಥಿತಿಯಾಗಿ ಒಪ್ಪಿ ಕಾರ್ಯತಃ ಹಿಂಸಾಚರಣೆಯನ್ನನುಸರಿಸುತ್ತದೆ.

ಮಹಾತ್ಮರ ತತ್ವೋಪದೇಶಗಳ ಕುರಿತು ವ್ಯಾಖ್ಯಾನವನ್ನು ಮಾಡುವುದು ಈ ಲೇಖನದ ಉದ್ದೇಶವಲ್ಲ. ಮುಂಬರುವ ಶತಮಾನಗಳಲ್ಲಿ ಜನರು ಉಚಿತ ಅವರ ನೀತಿಮಾರ್ಗದಲ್ಲೇ ನಡೆಯಲಿಚ್ಛಿಸುವರು. ಅವರು ವಿಶ್ವ ನಾಗರಿಕರು. ಆದರೂ ಅವರ ದೇಶ ಬಾಂಧವರಾದ ನಾವು ಅವರ ತತ್ವಗಳನ್ನು ವೈಯುಕ್ತಿಕವಾಗಿಯೂ ರಾಷ್ಟ್ರೀಯವಾಗಿಯೂ ಮತ್ತು ಅಂತರಾಷ್ಟ್ರೀಯವಾಗಿಯೂ ಆಚರಣೆಗೆ ತರಲು ಶ್ರಮಿಸಬೇಕಾದುದು ಕರ್ತವ್ಯವಾಗಿದೆ. ನಮ್ಮ ಕಾಲದ ಮಹೋನ್ನತ ವ್ಯಕ್ತಿಯೆಂದು ವಿಶ್ವವೇ ಘಂಟಾ ಘೋಷವಾಗಿ ಸಾರಿದ ವ್ಯಕ್ತಿಯನ್ನು ಮರೆಯಲು ಸಾಧ್ಯವೆ?

ಇಂದು ನಾವವರನ್ನು ವಿಶ್ರಾಂತಿಗಿಳಿಸಿದ್ದೇವೆ. ಇಡೀ ಜನಾಂಗವು ದುಃಖ ಸಾಗರದಲ್ಲಿ ಮುಳುಗಿದೆ. ಜಗತ್ತು ಈ ದುಃಖದಲ್ಲಿ ಭಾಗವಹಿಸಿದೆ. ಇನ್ನಾವ ವ್ಯಕ್ತಿಯ ಮರಣವೂ ಜಗತ್ತನ್ನು ಇಷ್ಟೊಂದು ಆಳವಾಗಿ ಕದಡಿಲ್ಲ. ಈ ಕಾಲದ ಪ್ರವಾದಿಯು ಮಾಯವಾದನು. ಲೋಕವನ್ನು ಬಹುಕಾಲ ಬೆಳಗಿದ ತಾರೆಯೊಂದು ಕಣ್ಮರೆಯಾಯಿತು. ಆದರೆ ಅದರ ಶಾಂತಿದಾಯಕ ಕಿರಣಗಳು ಸದಾಕಾಲ ಶೋಭಿಸುವವು. ಆ ಕಿರಣ ಪ್ರಕಾಶವು ನಮ್ಮೊಡನೆ ಸದಾ ಇದ್ದೇ ಇರುವುದು.

ಜಗತ್ತಿನ ವಿಚಿತ್ರ ಸಂಘಗಳು

ಸುಳ್ಳು ಹೇಳುವವರ ಕ್ಲಬ್ಬು

ಮಾನವನು ಸಮಾಜಜೀವಿ. ಒಂದು ಸಮಾಜದಲ್ಲಿನ ಒಂದೇ ಮನೋಭಾವನೆ, ಉದ್ದೇಶಗಳುಳ್ಳ ಜನರು ಒಟ್ಟುಸೇರಿ ತಮ್ಮ ಧ್ಯೇಯಸಾಧನೆಗಾಗಿ ಪರಿಶ್ರಮಿಸುವರು. ಇವರು ತಮ್ಮ ವಿಚಿತ್ರ ಸಂಘಗಳನ್ನು ಕಟ್ಟುವರು. ಇಂಗ್ಲಿಷಿನಲ್ಲಿ ಇದಕ್ಕೆ ಕ್ಲಬ್ಬುಗಳೆಂದೆನ್ನುವರು. ಹೀಗೆ ಕ್ರಿಕೆಟ್ ಕ್ಲಬ್ಬುಗಳು, ತರುಣರ ಕ್ಲಬ್ಬುಗಳು, ಸಾಹಿತಿಗಳ ಕ್ಲಬ್ಬುಗಳು–ಇವುಗಳ ಕುರಿತು ನಾವು ಆಗಾಗ್ಗೆ ಓದಿರುತ್ತೇವೆ.

ಯುರೋಪ್, ಅಮೇರಿಕಾ ದೇಶಗಳಲ್ಲಿ ಗಿಳಿಗಳನ್ನು ಸಾಕುವುದು ಒಂದು ಪ್ರೀತಿಯ ಕಸಬು. ಕೆಲವು ಗಿಳಿಗಳಿಗೆ ಅವಾಚ್ಯ ಶಬ್ದಗಳನ್ನು ಕಲಿಸುವರು. ಉದಾ: ಒಂದು ಗಿಳಿ "ಇವತ್ತಿನ ಹವೆ ಅದೆಷ್ಟು ಅನಿಷ್ಟದ್ದು" ಎಂದರೆ ಅದು ಅವಾಚ್ಯವಾಯಿತು. ಇಟಲಿಯ ಒಳಿ ಸಿಸಿಲಿ ದ್ವೀಪದಲ್ಲಿ ಓರ್ವ ನೌಕಾ ಕಪ್ತಾನನ ಮಗಳ ಮನೋಭಾವಕ್ಕೆ "ಗಿಳಿಗಳಿಗೆ ಕೆಟ್ಟಭಾಷೆಯನ್ನು ಕಲಿಸುವ ವಿಧಾನ" ಸರಿದೋರಲಿಲ್ಲ. ಅವಳು ತನ್ನದೊಂದು ಕ್ಲಬ್ಬನ್ನು ಪ್ರಾರಂಭಿಸಿದಳು. ಅವಳ ಸದುದ್ದೇಶವನ್ನು ಮನಗಂಡ ಮತ್ತೆ ಇನ್ನೂರು ಮಂದಿಗಳು ಅದಕ್ಕೆ ಸದಸ್ಯರಾಗಿ ಸೇರಿದರು. ಇಂದಿಗೆ ಹದಿನೈದು ವರ್ಷಗಳಿಂದ ಈ ಕ್ಲಬ್ಬು ಗಿಳಿಗಳಿಗೆ ಸ್ತೋತ್ರನುತಿಗಳನ್ನು ಕಲಿಸಲು ಶ್ರಮಪಡುತ್ತಿದೆ. ಇದೆಂತಹ ಕ್ಲಬ್ಬು ಎಂದು ನೀವು ಕೌತುಕಪಡುವಾಗ ಅಷ್ಟೇ ವಿಚಿತ್ರದ ಬೇರೆ ಕೆಲವುಗಳ ಕುರಿತೂ ಹೇಳಬೇಕಾಗುತ್ತದೆ.

ಇಂಗ್ಲೆಂಡಿನ ಬ್ರೊಯ್ಟನ್ ಎಂಬಲ್ಲಿ ನಸ್ಯ ಸೇದುವವರದೊಂದು ಪುರಾತನ ಕ್ಲಬ್ಬು ಇದೆ. ಇದರ ಸದಸ್ಯರು 'ನಸ್ಯದಾನಂ ಮಹಾದಾನಂ' ಎಂಬ ಲೋಕೋಕ್ತಿಯ ನೈತಿಕತೆಯ ಕುರಿತು ಮಾತ್ರವಲ್ಲ ಆ ಹೊಗೆಸೊಪ್ಪಿನ ಚೂರ್ಣದ ಸತ್ಪರಿಣಾಮಕಾರಿ ಗುಣಗಳ ಕುರಿತು ತುಂಬಾ ಮನಮುಚಿತರಾಗಿರುವರು!

ಲಂಡನಿನಲ್ಲಿ 'ನೊ ಕೊಲರ್ ಕ್ಲಬ್' ಎಂಬೊಂದಿದೆ. ಆಂಗ್ಲಶೈಲಿಯ ವೇಷಭೂಷಣ ಹಾಕುವವರು ನೆಕ್‌ಟೈ ಎಂಬ ಕೊರಳುಪಟ್ಟಿಯನ್ನು ಧರಿಸುವರಷ್ಟೆ. ಆದರೆ ಮೇಲ್ಕಂಡ ಕ್ಲಬ್ಬಿನವರ ಅಭಿಪ್ರಾಯದಲ್ಲಿ ಇದು ಹಾನಿಕರವೆಂದೂ ಎಲ್ಲರೂ ಸಡಿಲಾದ ವೇಷಭೂಷಣಗಳನ್ನೇ ಧರಿಸಬೇಕೆಂದೂ ಪ್ರಚಾರಮಾಡುತ್ತಿರುವರು. ಅದರ ಸದಸ್ಯರು ಕೊರಳಪಟ್ಟಿಗಳನ್ನು ಧರಿಸುವುದಿಲ್ಲ!

ಯುರೋಪ್, ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಲ್ಲಿ ಗುಪ್ತಕಾರಸ್ಥಾನದ ಹಲವು ವಿಶಿಷ್ಟ ಕ್ಲಬ್ಬುಗಳಿವೆ. ಹೆಂಡತಿಗೆ ಹೆದರುವವರೆಲ್ಲರೂ ಇದರ ಸ್ವಯಂ ಸದಸ್ಯರು. ಇವರಿಗೆ ಬಹಿರಂಗದಲ್ಲಿ ಸಭೆಸೇರಲು ಧೈರ್ಯವಿಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇವರು ತಮ್ಮ ಅರ್ಧಾಂಗಿಯರ ಸರ್ವಾಧಿಕಾರವನ್ನು ಸಡಿಲಿಸಲು ಉಪಾಯಗಳೇನನ್ನೆಲ್ಲ ಮಾಡಬಹುದೆಂದು ಆಗಿಂದಾಗ್ಗೆ 'ನೆಲದಡಿ'ಯಲ್ಲಿ ಒಟ್ಟುಸೇರಿ ಪರ್ಯಾಲೋಚಿಸುವರು.

ಹೋಪ್ ಶೈಯರ್ ಎಂಬಲ್ಲಿ ಶತಮಾನಿಗಳ ಒಂದು ಕ್ಲಬ್ಬು ಇದೆ. ಇದರ ಸದಸ್ಯರೆಲ್ಲರೂ ನೂರು ವರ್ಷ ಬದುಕುವವರೇ ಆಗಬೇಕೆಂದಿಲ್ಲ. ಆದರೆ ಆ ಅವಧಿಯ ತನಕ ಜೀವಿಸುವ ಮಹತ್ವಾಕಾಂಕ್ಷೆ ಅವರಲ್ಲಿ ಖಂಡಿತವಾಗಿರಬೇಕು.

ನಕ್ಕರೆ ಜುಲ್ಮಾನೆ

ಲಂಡನಿನಲ್ಲಿ ಗಂಭೀರ ಬ್ರಹ್ಮಚರ್ಯೆಯವರ ಕ್ಲಬ್ಬೊಂದಿದೆ. ಇದರ ಸದಸ್ಯರು ಎಂತಹ ವಿನೋದಕರ ಪ್ರಸಂಗದಲ್ಲೂ ನಗಲಾರದ. ಇದರ ಸದಸ್ಯತ್ವ ಸಂಪಾದನೆ ಕರೆಲ್ಲರಿಗೂ ತೆರೆದಿಲ್ಲ. ಈ ಕ್ಲಬ್ಬಿನ ಸಭೆಗಳು ಆಗಾಗ್ಗ ಸೇರುತ್ತವೆ. ಅವುಗಳಲ್ಲಿ ಅತ್ಯಂತ ಹಾಸ್ಯ ಪ್ರಹಸನಗಳ ಕತೆ ಕಾವ್ಯಗಳು ಓದಲ್ಪಡುವವು. ಆದರೆ ಸ್ವಲ್ಪವಾದರೂ ತುಟಿ ಮೀರಿ ಸದಸ್ಯನಾದವನು ನಗಾಡಿಬಿಟ್ಟರೆ ಕೂಡಲೆ ಅವನು ಒಂದು ನಿರ್ದಿಷ್ಟ ಜುಲ್ಮಾನೆಯನ್ನು ತೆರಬೇಕಾಗುವುದು.

ಇವೆಲ್ಲವುಗಳಿಗಿಂತ ಜೀವಂತ ಹೂಳುವವರನ್ನು ರಕ್ಷಿಸುವ ಒಂದು ಕ್ಲಬ್ಬು ಅಲ್ಲಿ ಇದೆ. ಇದರ ಅಭಿಪ್ರಾಯದಲ್ಲಿ ಹೆಚ್ಚಿನ ಜನರು ಸಂಪೂರ್ಣ ಸಾಯುವ ಮೊದಲೇ ಹೂಳಲ್ಪಡುವರೆಂದಿದೆ. ಒಬ್ಬ ಮನುಷ್ಯನು ಖಂಡಿತವಾಗಿ ಸತ್ತಿರುವನೊ, ಇಲ್ಲವೆ ಅವನಲ್ಲಿ ಇನ್ನು ಕೆಲವು ಪ್ರಾಣಗಳು ಉಳಿದಿವೆಯೊ ಎಂಬುದನ್ನು ಪರಿಶೀಲಿಸುವ ಹನ್ನೊಂದು ವಿಧಾನಗಳಿವೆ. ಸಂಪೂರ್ಣ ಸಾಯುವ ಮೊದಲು ಹೂಳಲ್ಪಟ್ಟ ಅದೆಷ್ಟೊ ಜನರ ಅಂಕಸಂಖ್ಯೆಗಳನ್ನೂ, ಅವರಲ್ಲಿ ಪ್ರಾಣಾಂಶ ಇದ್ದುದಕ್ಕೆ ಸಾಧಾರವಾದ ಸಾಕ್ಷ್ಯಗಳನ್ನು ಅವರು ಕೊಡಲು ಸಿದ್ಧರಿದ್ದಾರೆ. ಇಂತಹ ದುರಂತವನ್ನು ಈ ಸಮಾಜದಲ್ಲಿ ತಪ್ಪಿಸುವುದೇ ಇವರ ಕ್ಲಬ್ಬಿನ ಧ್ಯೇಯ.

ಕೊನೆಯಲ್ಲಿ ಈ ಮಾಯಾಪ್ರಪಂಚದಲ್ಲಿ ಸುಳ್ಳು ಹೇಳುವುದರಲ್ಲಿ ಪ್ರವೀಣರಾದವರದೂ ಒಂದು ಕ್ಲಬ್ಬಿದೆಯೆಂದರೆ ಮಾನವನ ಸಾಂಘಿಕ ಪ್ರವೃತ್ತಿಯ ಪರಮಾವಧಿಯೆಂದೆನ್ನಬೇಕು.

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆ ದಿಹನುಸಿನೆಗದಗಿಸುತ್ತದೆ. ಚರ್ಮ ಸ್ವಚ್ಛವಾಗಿ ರಿಬೆಗ್ಗಳರಿಸುತ್ತದೆ.

557

ಕುಟಿಕೂರಾ ಮುಲಾಮು

CUTICURA OINTMENT

ನೆಲಗಡಲೆ: ಸಮೃದ್ಧಿಯ ಸಸ್ಯಾಹಾರ

ಕೃಷಿಕರಿಗಿನ್ನೊಂದು ಯುಕ್ತ ಸೂಚನೆ

ಗಾಂಧೀಜಿಯವರು ನೆಲಗಡಲೆಯನ್ನು ಹೆಚ್ಚಿನ ಪ್ರಮಾಣದಲ್ಲುಪಯೋಗಿಸುವಂತೆ ಪ್ರಚಾರಮಾಡಲು ತಮ್ಮೊರ್ವ ಅಮೇರಿಕನ್ ಅನುಯಾಯಿಗಳನ್ನು ನೆಲಗಡಲೆಯ ಕುರಿತು ಮಹತ್ವಮವಾದ ಸಂಶೋಧನಗಳನ್ನು ನಡೆಸಿ ಆ ಕುರಿತು ಜಗತ್ತಿನ ದೊಡ್ಡ ತಜ್ಞರೆಂದೆನಿಸಲ್ಪಡುವ ಪ್ರಖ್ಯಾತ ನಿಗ್ರೋ ಪ್ರೊಫೆಸರರಾದ ಡಾ| ಜೋರ್ಜ್ ವಾಶಿಂಗ್ಟನ್ ಕಾರ್ವರರ ಬಳಿಗೆ ಕಳುಹಿಸಿದ್ದರು. ಇದರಿಂದ ಭಾರತದ ಬಡತನ ಉಪವಾಸಗಳನ್ನು ನೀಗಿಸುವುದು ಮಹಾತ್ಮರ ಉದ್ದೇಶವಾಗಿತ್ತು.

ನೆಲಗಡಲೆಯ ಪ್ರಾಶಸ್ತ್ಯದ ಕುರಿತು ಡಾ| ಕಾರ್ವರರು ಈ ಅಭಿಪ್ರಾಯವುಳ್ಳವರಾಗಿದ್ದಾರೆ - "ಜಗತ್ತಿನಲ್ಲಿ ಇತರ ಎಲ್ಲಾ ಸಸ್ಯಗಳು ನಾಶವಾದರೂ, ನೆಲಗಡಲೆ ಮತ್ತು ದರ ಬಂಧುವರ್ಗಕ್ಕೆ ಸೇರಿದ ಸಿಹಿ ಗೆಣಸುಗಳೆರಡು ಉಳಿದರೆ ಮಾನವವರ್ಗಕ್ಕೆ ಯಾವ ಹೆದರಿಕೆಯೂ ಇರುವುದಿಲ್ಲ."

ತಮ್ಮೀ ಅಭಿಪ್ರಾಯಕ್ಕೆ ಡಾ| ಕಾರ್ವರರು ಅನುಭವದ ಆಧಾರಗಳನ್ನು ಕೊಡುತ್ತಾರೆ. ನೆಲಗಡಲೆಯಿಂದ [illegible] ವಿವಿಧ ಉಪವಸ್ತುಗಳನ್ನು ತಯಾರಿಸಲಿಕ್ಕಾಗುತದೆ. ಇವು [illegible] ಹಿಡಿದು [illegible] ತನಕ [illegible] ನಿಕವು [illegible] ಅವರ ಉಪಯೋಗ [illegible] ಕೊಂಡಿದ ಡಾ| ಕಾರ್ವರರ [illegible] ಯಿಂದ [illegible] ದಲ್ಲಿ [illegible] ತಯಾರಿಸಿ [illegible] ವ ಅಫ್ರಿಕದಲ್ಲಿ [illegible] ಯಿರುವ [illegible] ಈ [illegible] ಲಾಗಿದೆ [illegible] ಸಿದ್ಧವಾದ [illegible] ರುವ ಮತ್ತು [illegible] ಳನ್ನವರು ತಯಾರಿಸಿದ್ದಾರೆ. ನೆಲಗಡಲೆಯ [illegible] ಯಿಂದ ಕಾಗದ ಮತ್ತು [illegible] ಹಲಗೆಗಳನ್ನು [illegible].

ನೆಲಗಡಲೆಯ ಮೂಲ

ಈ ಕಾಯಿಯು ಎಲ್ಲಿ ಮೊದಲು ಸೃಷ್ಟಿಯಾಯಿತೆಂದು ಹೇಳಬರುವುದಿಲ್ಲ. ಬಹುಶ್ಯ ದಕ್ಷಿಣ ಅಮೇರಿಕದಲ್ಲೆಂದು ಊಹಿಸಿ ಮಾಡಲಾಗಿದೆ. ಈಗ ಇದು ಉಷ್ಣ ಮತ್ತು ಸಮಶೀತೋಷ್ಣವಲಯದ ಎಲ್ಲಾ ದೇಶಗಳಲ್ಲೂ ಧಾರಾಳ ಬೆಳೆಸಲ್ಪಡುತ್ತದೆ. ಭಾರತದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಾಗುವುದೆಂದು ಲೆಕ್ಕಹಾಕಲಾಗಿದೆ. ಆದರೆ ಚೀನದಲ್ಲೂ ಅಷ್ಟೇ ಪ್ರಮಾಣದಲ್ಲಿದು ಬೆಳೆಯುತ್ತದೆ.

ನೆಲಗಡಲೆಯ ಗಿಡವು ಒಂದು ಅತೀ ವಿಚಿತ್ರ ತರದ ಸಸ್ಯ. ಹೂಗಳಾಗಿ ಬಾಡಿದ ಮೇಲೆ ಇದರ ಗೆಲ್ಲುಗಳು ನೆಲದ ಕಡೆ ಬಗ್ಗಿ ಫಲಗಳನ್ನು ನೆಲದೊಳಗೆ ಬೆಳೆಯಬಿಡುತ್ತವೆ. ಆದ್ದರಿಂದಲೇ ಇದು ನೆಲಗಡಲೆ ಯೆನಿಸುತ್ತದೆ. ಬೇರೊಂದು ವಿಷಯದಲ್ಲೂ ಇದು ಕೌತುಕದ್ದಾಗಿದೆ - ಇತರ ಗಿಡಗಳಂತೆ ತಾವು ಬೆಳೆವ ಸ್ಥಳದ ಸಾರವನ್ನು ಹೀರುವ ಬದಲಿಗೆ ಇವು ಅದನ್ನು ಹೆಚ್ಚಿಸುತ್ತವೆ. ಹೀಗಾಗಿ ನೆಲಗಡಲೆ ನಟ್ಟ ಹೊಲದಲ್ಲಿ ಇನ್ನೊಂದನ್ನು ಬೆಳೆಸುವಾಗ ಹೆಚ್ಚಿನ ಗೊಬ್ಬರದ ಆವಶ್ಯಕತೆ ಇರುವುದಿಲ್ಲ. ಇದು ನ್ಯಾಟ್ರೋಜನ್ ಸಾರದಿಂದ ತುಂಬಿ ತುಳುಕುವುದು.

ಬರೀ ನಿಕೃಷ್ಟವಾದ ಮರಳು ಮಣ್ಣಿನಲ್ಲೂ ನೆಲಗಡಲೆ ಬೆಳೆಯುತ್ತದೆ. ಹೆಚ್ಚಿನ ಮಳೆಯೂ ಅದಕ್ಕೆ ಆವಶ್ಯವಿರುವುದಿಲ್ಲ. ಸಾಧಾರಣ ೩೦-೪೦ ವರ್ಷಾವಧಿ ವೃಷ್ಟಿ ಬೀಳುವಲ್ಲೂ ಅದನ್ನು ಬೆಳೆಸಬಹುದು. ಒಂದು ವೇಳೆ ಮಳೆಯೇ ಬೀಳದಿದ್ದರೂ ಈ ಕಾಯಿಯ ಗಿಡಕ್ಕೇನೂ ಆಗುವುದಿಲ್ಲ. ನಮ್ಮ ದೇಶದ ಹೆಚ್ಚಿನ ಒಣಪ್ರದೇಶಗಳಲ್ಲಿ ಅಲಕ್ಷದಿಂದ ನಿರ್ಬಲಸಾರವುಳ್ಳ ಮಣ್ಣನ್ನು ಸತ್ವಭರಿತವಾಗಿ ಮಾಡಬೇಕಾದರೆ ನೆಲಗಡಲೆಯನ್ನು ನಟ್ಟರಾಯಿತು.

ಉಪಯೋಗಗಳು

ಸದ್ಯಕ್ಕೆ ನೆಲಗಡಲೆಯು ಎಣ್ಣೆಗಾಗಿಯೇ ಉಪಯೋಗಿಸಲ್ಪಡುತ್ತದೆ. [illegible] ಅದರಲ್ಲಿ ಎಣ್ಣೆಯು [illegible] ಈ ಎಣ್ಣೆಗೆ ಅನೇಕ ಉಪಯೋಗಗಳಿವೆ.

[illegible] ಇದರ ಎಣ್ಣೆಯನ್ನು [illegible] ಉಪಯೋಗಿಸುವರ [illegible] ಕೊಬ್ಬನ್ನು ಇದರ [illegible] ಉತ್ತಮ [illegible] ಈ ಹಿಂಡಿಯನ್ನು ಅನೇಕ [illegible] ಉಪಯೋಗಿಸುತ್ತಾರೆ.

[illegible] ದಲ್ಲಿ ನೆಲಗಡಲೆ [illegible] ಹೇರಳವಾಗಿದ್ದರೂ ಇದನ್ನು ಆಧುನಿಕ ಕೃಷಿ ವಿಧಾನಗಳನ್ನನುಸರಿಸಿದರೆ [illegible] ಪ್ರಮಾಣವನ್ನು ಉತ್ಪತ್ತಿಸಬಹುದು. ಇಲ್ಲಿ ಉಪಯೋಗಿಸಲ್ಪಡುವ [illegible] ಬೀಜ [illegible] ಅಲ್ಲದೆ ಕ್ರಮಬದ್ಧವಾದ ಯೋಜನೆಗನುಸಾರವಾಗಿಯೂ ಇದು ಬೆಳೆಸಲ್ಪಡುವುದಿಲ್ಲ.

ಆಂಗ್ಲಪದ್ಧತಿಯ ಆವಶ್ಯಕತೆ

ಪೂರ್ವ ಆಫ್ರಿಕದಲ್ಲಿ ಇಂಗ್ಲಿಷ್ ಜಮೀನ್ದಾರರು ಅನುಸರಿಸುವ ಯೋಜನೆಯೇ ಉತ್ತಮವಾದದ್ದು. ಇದರಿಂದ ಬೆಳೆಯ ಪ್ರಮಾಣವು ವಿಪುಲವಾಗುತ್ತದೆ. ಮೊದಲು ಸುಮಾರು ೫ ಸಾವಿರ ಚದರ ಮೈಲು ವಿಸ್ತೀರ್ಣದ ಸ್ಥಳವು ಬರಿದುಮಾಡಲ್ಪಟ್ಟು ಕೃಷಿಗೊಳಪಡುತ್ತದೆ. ಈ ವಿಶಾಲ ಕೃಷಿ ಕ್ಷೇತ್ರವನ್ನು ೩೦ ಸಾವಿರ ಎಕ್ರೆಗಳ ೧೦೭ ಗುಂಪುಗಳಾಗಿ ವಿಭಾಗಿಸುತ್ತಾರೆ.

ಈ ಹೊಲಗಳಲ್ಲಿ ಮನುಷ್ಯಶ್ರಮ ಕಡಿಮೆಮಾಡಲು ಹೆಚ್ಚಾಗಿ ಯಂತ್ರಗಳನ್ನೇ ಎಲ್ಲಾ ಕೆಲಸಗಳಿಗೂ ಉಪಯೋಗಿಸಲಾಗುವುದು. ಕಾರಣ ಈ ಪ್ರದೇಶಗಳು ನಿವಾಸರಹಿತವಾಗಿರುತ್ತದೆ. ಕೂಲಿಜನಗಳು ಸಿಗುವುದು ವಿರಳ. ಈ ಯೋಜನೆಯು ೧೯೫೩ರಷ್ಟಕ್ಕೆ ಸಂಪೂರ್ಣವಾಗುತ್ತದೆ.

ಸಾಂಪತ್ತಿಕ ಮೌಲ್ಯ

[illegible] ಹಣದ ಬೆಳೆಗಳಿಗಿಂತ ನೆಲಗಡಲೆಯ [illegible] ಅತ್ಯುತ್ತಮವಾದುದು. ಅನೇಕ [illegible] ಮೌಲ್ಯವು [illegible] ಇರುತ್ತದೆ. [illegible] ಜಗತ್ತಿನಲ್ಲಿ [illegible] ಕೊಬ್ಬುಗಳ ಕೊರತೆ [illegible] ತನಕ ನೆಲಗಡಲೆಯು [illegible] ಕಡಿಮೆ ಮಾಡಬಹುದು [illegible].

[illegible] ಭಾರತದ [illegible] ಜೆಗಳ [illegible] ವರ್ಷಕ್ಕೆ [illegible] ಎಣ್ಣೆಗಳನ್ನು ಉಪಯೋಗಿಸಿದರು. ಈಗ ಅದು [illegible] ವನಸ್ಪತಿಯ ಉಪಯೋಗವನ್ನು ಅಲಕ್ಷಿಸಿದಂತಾಗುತ್ತದೆ, ನವ ವರ್ಷಕ್ಕೆ ಸರಾಸರಿ ೭೨ ರಾತುಗಳೆಷ್ಟು ಕೊಬ್ಬುಗಳನ್ನುಪಯೋಗಿಸುವನೆಂಬದರಿಂದ ನಾವು ಇದೆಷ್ಟು ನಿಕೃಷ್ಟ ಆಹಾರ ವಸ್ತುಗಳನ್ನು ಸೇವಿಸುತ್ತಿದ್ದೇವೆಂಬ ಸಂಗತಿಯು ಗೊತ್ತಾಗುತ್ತದೆ.

ನೆಲಗಡಲೆಯ ಉಪವಸ್ತುಗಳನ್ನು ತಯಾರಿಸುವ ನಮ್ಮ ದೇಶದ ಅನೇಕ ಕಾರ್ಖಾನೆಗಳಿಗೆ ಸಾಕಷ್ಟು ನೆಲಗಡಲೆಯು ಸರಬರಾಯಿ ಸಿಗುವುದಿಲ್ಲ. ನಾವು ಶಕ್ತಿವಂತಜನಾಂಗವಾಗಬೇಕಾದರೆ ಆಹಾರ ವಸ್ತುಗಳನ್ನು ಆದಷ್ಟು ಹೆಚ್ಚು ಬೆಳೆಸಬೇಕು. ನೆಲಗಡಲೆಯನ್ನು ನಾವು ಅಲಕ್ಷಿಸಿದರೆ ನಾವೊಂದು ಅತೀ ಮಹತ್ವದ ವಸ್ತುವನ್ನು ಅಲಕ್ಷಿಸಿದಂತಾಗುತ್ತದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨[illegible]
೪ರಿಂದ ೫ ತಿಂಗಳು	,, ,,	೨[illegible]
೬ರಿಂದ ೯ ತಿಂಗಳು	,, ,,	೨[illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ವಾರದ ವಿಜ್ಞಾನ ವರದಿ

ತಲೆನೋವುಂಟುಮಾಡುವ ತಲೆಗಿಂಬು

[illegible] ಭಾಗದ ಒಂದು ತರದ [illegible] ತಲೆನೋವಿನ ಹಲವು ಕಾರಣಗಳಲ್ಲಿ ಒಂದು [illegible] ಕೋಣೆಯ ಬಾಗಿಲು [illegible] ತೆರೆದಿಡದಿರುವುದರಿಂದ [illegible] ತಲೆನೋವುಂಟಾಗುವುದು. ಇಲ್ಲವೆ ತಲೆಗಿಂಬುಗಳನ್ನು ಸರಿಯಾಗಿ [illegible] ಇಡುವುದರಿಂದ [illegible] ತಲೆಗೆ [illegible] ತಲೆನೋವುಂಟಾಗುವುದು. [illegible] ತಲೆನೋವು [illegible] ನಿವಾರಣೆಯಾಗುವುದು [illegible] ವಿರುದ್ಧ ವಿಪರೀತ [illegible] ಮಾನಸಿಕ [illegible] ದೃಷ್ಟಿ ದೋಷ [illegible] ತಲೆನೋವುಂಟಾಗುವುದು.

ರಾಸಾಯನಿಕ ಸಹಾಯದಿಂದ ಹೆಚ್ಚು ಬೆಳೆ ಬೆಳೆಸಬಹುದು

[illegible] ಕೃಷಿ ಸಂಬಂಧ [illegible] ಹೆಚ್ಚು [illegible] ಕಳೆಗಳನ್ನು [illegible] ನಾಶಮಾಡುವ ಒಂದು ರಾಸಾಯನಿಕ [illegible] ಮಿಶ್ರಣವನ್ನು ಕಂಡುಹಿಡಿಯಲಾಗಿದೆ.

ಸಾಧಾರಣ ನಮ್ಮ ಕಡೆಗಳಲ್ಲಿ ಕಳೆಗಳ ಕೈಯಿಂದಲೇ ಕೀಳಲ್ಪಡುತ್ತವೆ. ಇದಕ್ಕೆ ಹೆಚ್ಚಿನ ಶ್ರಮವೂ ಜನ ಸಹಾಯವೂ ಬೇಕು. ಮಾತ್ರವಲ್ಲದೆ ಕಳೆಗಳನ್ನು ಕೀಳವಾಗ ಕೀಳುವವರು ಬೆಳೆ ಪೈರುಗಳನ್ನು ತುಳಿದು ಅದನ್ನು ಹಾನಿಗೊಳಮಾಡುವ ಸಂಭವವೂ ಇದೆ. ಕಳೆಕೀಳುವ ಕಾರ್ಯದಿಂದ ಬೆಳೆಯ ಭಿಂದಂಶ ನಷ್ಟವಾಗುವುದೂ ಉಂಟು. ಈಗ ಕಂಡುಹಿಡಿಯಲ್ಪಟ್ಟ ರಾಸಾಯನಿಕ ಮಿಶ್ರಣವು ಪೈರಿಗೆ ಹಾನಿಮಾಡದೆ ಕೇವಲ ಹಾನಿಕಾರಕ ಕಳೆಗಳನ್ನು ಮಾತ್ರ ನಾಶಮಾಡುತ್ತದೆ. ಆಹಾರ ಹೆಚ್ಚು ಬೆಳೆಸಬೇಕಾದ ಈ ಕಾಲದಲ್ಲಿ ಇಂತಹ ಶೋಧನೆಯಿಂದ ರೈತರಿಗೆ ತುಂಬಾ ಉಪಕಾರವಾಗುವುದು.

ಸ್ವದೇಶಾಭಿಮಾನಿ

ತಾರೀಕು 9—4—1948

ರಾಷ್ಟ್ರೀಯ ಸಪ್ತಾಹ

ಏಪ್ರಿಲ್ ತಾರೀಕು 6 ಭಾರತದ ಇತಿಹಾಸದಲ್ಲಿ ಅತ್ಯಂತ ಪವಿತ್ರವಾದ ಒಂದು ದಿನವಿರುತ್ತದೆ.

ಪ್ರಥಮ ಜಾಗತಿಕ ಮಹಾಯುದ್ಧ ಮುಗಿದಾಗ ಆ ಯುದ್ಧಕಾಲದಲ್ಲಿ ಬ್ರಿಟಿಷರು ಕೊಟ್ಟ ಮಾತುಗಳನ್ನೆಲ್ಲ ಮುರಿದು ಹಿಂದುಸ್ಥಾನವು ಮಾಡಿದ ಉಪಕಾರಕ್ಕಾಗಿ ಈ ದೇಶಕ್ಕೆ ಸ್ವರಾಜ್ಯ ಕೊಡುವ ಬದಲು ರೌಲಟ್ ಕಾನೂನೆಂಬ ಒಂದು ದಬ್ಬಾಳಿಕೆಯ ಕಾನೂನನ್ನು ಜಾರಿಮಾಡಲಾಗಿತ್ತು. ಆ ಯುದ್ಧದಲ್ಲಿ ಬ್ರಿಟಿಷರ ವಿರುದ್ಧ ಪಕ್ಷವನ್ನು ಟರ್ಕಿದೇಶವು ಕಟ್ಟಿಕೊಂಡಿತ್ತು. ಬ್ರಿಟಿಷರಿಗೆ ಉಳಿದೆಡೆಗಳಲ್ಲಿಯು ಮುಖ್ಯವಾಗಿ ಹಿಂದುಸ್ಥಾನದಲ್ಲಿಯ ಮುಸ್ಲಿಮರ ಸ್ನೇಹ ಅಗತ್ಯವಿತ್ತು. ಇದಕ್ಕಾಗಿ ಯುದ್ಧ ಮುಗಿದ ಬಳಿಕ ಟರ್ಕಿಗೆ ಸೇರಿದ ಪ್ರದೇಶಗಳನ್ನು ಆ ದೇಶದಿಂದ ಕಿತ್ತುಕೊಳ್ಳಲಾಗುವುದಿಲ್ಲವೆಂದೂ ಜಾಹೀರು ಮಾಡಲಾಗಿತ್ತು. ಈ ಮಾತನ್ನೂ ಮುರಿದು ಮುಸ್ಲಿಮ್ ಜನರಿಗೂ ಅನ್ಯಾಯ ಮಾಡಲಾಗಿತ್ತು. ಇದಕ್ಕೇನೆ ಖಿಲಾಫತ್ ಪ್ರಶ್ನೆ ಎನ್ನುತ್ತಿದ್ದರು

ಇವೆರಡು ಅನ್ಯಾಯಗಳನ್ನು ವಿರೋಧಿಸುವ ಬಗ್ಗೆ ಮಹಾತ್ಮಾಗಾಂಧಿಯವರು ಅಖಿಲ ಭಾರತದಲ್ಲಿ ಸತ್ಯಾಗ್ರಹ ಹೂಡಿದ ದಿನವೆಂದರೆ ಏಪ್ರಿಲ್ ತಾ 6ನೇ ದಿನ ಇದು ಸತ್ಯಾಗ್ರಹವೆಂಬ ಹೊಸಶಕ್ತಿ ಭಾರತದಲ್ಲಿ ಉದಯಕ್ಕೆ ಬಂದ ದಿನವೆಂಬುದರಿಂದ ಇದು ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ದಿನ

ಈ ಸತ್ಯಾಗ್ರಹಕ್ಕೆ ಉತ್ತರವಾಗಿ ಬ್ರಿಟಿಷ ಸರಕಾರವು ಭಯಂಕರ ದಬ್ಬಾಳಿಕೆಯನ್ನು ಕೈಕೊಂಡಿತು ಏಪ್ರಿಲ್ ತಾ 13ರಲ್ಲಿ ಜಾಲಿಯಾನ್ ವಾಲಾಬಾಗನಲ್ಲಿ ದಬ್ಬಾಳಿಕೆಯು ಪರಮಾವಧಿಗೆ ಮುಟ್ಟಿ ಸಾವಿರಾರು ಜನ ಸ್ತ್ರೀಪುರುಷರ ಕೊಲೆ ನಡೆಯಿತು ಹಿಂದು ಮುಸ್ಲೀಮರೆಂಬ ಭೇದವಿಲ್ಲದೆ ರಕ್ತವು ಹರಿಯಿತು

ಎಪ್ರಿಲ್ ತಾರೀಕು 6ರಿಂದ ಎಪ್ರಿಲ್ ತಾರೀಕು 13ರ ತನಕ ರಾಷ್ಟ್ರೀಯ ಸಪ್ತಾಹವೆಂದು ಭಾರತವು ಆಚರಿಸುತ್ತ ಬಂದಿರುತ್ತದೆ. 1919ನೇ ಇಸ್ವಿಯಲ್ಲಿ ನಡೆದ ಆ ಘಟನೆಗಳ ಸ್ಮರಣೆಯನ್ನು ದೇಶವು ಪ್ರತಿ ವರ್ಷ ಕಣ್ಣೆದುರು ತಂದುಕೊಳ್ಳುವುದೇ ಈ ಸಪ್ತಾಹದ ಉದ್ದೇಶವಿತ್ತು. ಭಾರತ ಸ್ವಾತಂತ್ರ್ಯವನ್ನು ಸಾಧಿಸಲು ಮಹಾತ್ಮಾಗಾಂಧಿಯವರು ಅತ್ಯಾವಶ್ಯಕವೆಂದು ಹೇಳುತ್ತಲಿದ್ದ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವ ಕಾರ್ಯವನ್ನು ಈ ಸಪ್ತಾಹದಲ್ಲಿ ವಿಶೇಷ ಉತ್ಸಾಹದಿಂದ ನಡೆಸಲಾಗುತ್ತಿತ್ತು.

ಆಗ ಜನ್ಮಕ್ಕೆ ಬಂದ ಸತ್ಯಾಗ್ರಹವೆಂಬ ಆ ಹೊಸಶಕ್ತಿಯು ಇಂದು ಭಾರತವನ್ನು ಬಂಧವಿಮುಕ್ತ ಮಾಡಿರುತ್ತದೆ. ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ಬಳಿಕ ಪುನಃ ಆ ಏಪ್ರಿಲ್ ತಾ. 6ರಿಂದ ತಾ. 13ರ ವರೆಗಿನ ರಾಷ್ಟ್ರೀಯ ಸಪ್ತಾಹವನ್ನು ಇಂದು ಪ್ರಥಮಬಾರಿ ದೇಶದಲ್ಲಿ ಆಚರಿಸಲಾಗುತ್ತಿದೆ. 1919ರಲ್ಲಿಯ ಆ ಸಪ್ತಾಹ ಸತ್ಯಾಗ್ರಹದ ಉದಯದ ದಿನಗಳಾದರೆ ಇಂದಿನ 1948ರಲ್ಲಿಯ ಈ ಸಪ್ತಾಹವು ಆ ಸತ್ಯಾಗ್ರಹದ ವಿಜಯದ ಸಪ್ತಾಹವೆಂಬುದರಿಂದ ಈ ವರ್ಷದ ಸಪ್ತಾಹಕ್ಕೆ ಹೆಚ್ಚಿನ ಮಹತ್ವವಿರುತ್ತದೆ

ಆದರೆ ಇಂದು ಆ ಸತ್ಯಾಗ್ರಹವೆಂಬ ಹೊಸ ಶಕ್ತಿಯನ್ನು ಕಂಡುಹಿಡಿದು ಭಾರತ ಕೈದಾನನಮಾಡಿದ ಮಹಾತ್ಮಾಗಾಂಧಿಯವರು ನಮ್ಮ ನಡುವೆ ಇಲ್ಲ ಸತ್ಯಾಗ್ರಹದ ಪೂರ್ಣ ತತ್ವವನ್ನು ಜಗತ್ತಿಗೆ ಕೊಡುವುದಕ್ಕಾಗಿ ಅವರು ಆತ್ಮಬಲಿದಾನ ಕೊಟ್ಟು ಹೋದ ಬಳಿಕ ಈ ಪವಿತ್ರ ಸಪ್ತಾಹವನ್ನು ಭಾರತವು ಆಚರಿಸುವುದು ಇದೇ ಮೊದಲಬಾರಿಯೆಂಬುದರಿಂದ ಕೂಡಾ ಈ ವರ್ಷದ ಸಪ್ತಾಹಕ್ಕೆ ಹೆಚ್ಚಿನ ಮಹತ್ವವಿರುತ್ತದೆ

ಆಗಿನ ಆ ಹಿಂದೂ ಮುಸ್ಲೀಮರೊಳಗಿನ ಐಕ್ಯ ಈಗ ಊಹಿಸುವುದು ಕೂಡಾ ಕಷ್ಟವೆಂಬ ಪರಿಸ್ಥಿತಿ ಬಂದಿದೆ ಹಿಂದೂ ಮುಸ್ಲೀಮರೊಳಗಿನ ದ್ವೇಷಾಗ್ನಿ ಬೆಳೆಯುತ್ತ ಬಂದು ಭಾರತವು ಇಬ್ಭಾಗವಾಗುವಂತಾಯಿತು ಜಗತ್ತೇ ಕಾಣದಂತಹ ಅತ್ಯಾಚಾರಗಳು ಇಲ್ಲಿ ನಡೆಯುವಂತಾಯಿತು ಜಾಲಿಯನ್‌ವಾಲಾಬಾಗನಲ್ಲಿ ಹಿಂದೂ ಮುಸ್ಲೀಮ ರಕ್ತವು ಒಟ್ಟಿಗೆ ಹರಿಯಿತು ಆದರೆ ಈಗ ಹಿಂದೂ ರಕ್ತವನ್ನು ಮುಸ್ಲೀಮರೂ, ಮುಸ್ಲೀಮ್ ರಕ್ತವನ್ನು ಹಿಂದುಗಳೂ ಚೆಲ್ಲಿ ಭಾರತವು ಎಷ್ಟು ಮೂರ್ಖ ಜನಾಂಗವೆಂಬ ಕಲಂಕವು ಈ ಪವಿತ್ರ ದೇಶಕ್ಕೆ ತಗಲುವಂತಾಯಿತು. ಈ ಪ್ರಕರಣದ ಬಳಿಕ ಇದೇ ಮೊದಲಾಗಿ ಆ ಪವಿತ್ರ ಸ್ಮರಣೆಯ ಸಪ್ತಾಹ ನಮ್ಮೆದುರು ಬಂದಿದೆ

ಈ ವರ್ಷದ ಈ ರಾಷ್ಟ್ರೀಯ ಸಪ್ತಾಹದ ಮುಖ್ಯ ಕಾರ್ಯಕ್ರಮಗಳು ಎರಡು ಎಂಬುದಾಗಿ ರಾಷ್ಟ್ರದ ಮುಂದಾಳುಗಳು ಹೇಳಿದ್ದಾರೆ ಗಾಂಧೀ ರಾಷ್ಟ್ರೀಯ ಸ್ಮಾರಕನಿಧಿಗೆ ಧನ ಸಂಗ್ರಹಿಸುವುದು ಮತ್ತು ಹಿಂದೂ ಮುಸ್ಲಿಮ ಮೊದಲಾದ ಜಾತಿಗಳೊಳಗೆ ಐಕ್ಯಸಾಧನೆಗಾಗಿ ದುಡಿಯುವುದು ಇವೇ ಆ ಎರಡು ಕಾರ್ಯಕ್ರಮಗಳೆಂದು ಸಾರಲಾಗಿದೆ.

ಭಾರತದಲ್ಲಿಯ ಮುಸ್ಲಿಮರು ಹಿಂದುಗಳೊಡನೆ ಸೇರಿ ಈ ಬಾರಿಯ ಸಪ್ತಾಹವನ್ನು ಉತ್ಸಾಹದಿಂದ ಆಚರಿಸುವುದರಲ್ಲಿ ಸಹಕರಿಸುವರೆಂದು ಆಶಿಸುತ್ತೇವೆ

ಭಾರತೀಯರೆಲ್ಲರೂ ಈ ಸಪ್ತಾಹದ ಅಂತ್ಯದೊಳಗೆ ತಮತಮಗೆ ಸಾಧ್ಯವಿದ್ದಷ್ಟು ಧನವನ್ನು ಆ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಕೊಡುವರೆಂದೂ ಆಶಿಸುತ್ತೇವೆ.

ಟೀಕೆ—ಟಿಪ್ಪಣಿಗಳು

ಡಾಕ್ಟರ್ ಸುಬ್ಬರಾಯನವರ ರಾಜಿನಾಮೆ

ಮದ್ರಾಸು ಸರಕಾರದಲ್ಲಿ ಗೃಹ ಮತ್ತು ಕಾನೂನು ಶಾಖೆಗಳ ಮಂತ್ರಿಗಳಾಗಿಯೂ ಶಾಸನ ಸಭೆಯ ಸರಕಾರೀ ಪಕ್ಷದ ಮುಂದಾಳಾಗಿಯೂ ಇದ್ದ ಡಾಕ್ಟರ್ ಸುಬ್ಬರಾಯನರು ತಮ್ಮ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟು ಅದೀಗ ಸ್ವೀಕೃತವಾಗಿರುತ್ತದೆ ತನಗೊಪ್ಪಿಸಿದ ಖಾತೆಗಳ ಕಾರ್ಯಗಳಲ್ಲಿ ಮುಖ್ಯ ಮಂತ್ರಿಯವರು ಕೈಹಾಕುತ್ತಿದ್ದರೆಂದೂ ತನ್ನಾಧೀನ ಕೆಲಸಮಾಡುವ ಇಲಾಖೆಗಳ ಅಧಿಕಾರಿಗಳನ್ನು ಸ್ವತಃ ಕಂಡು ಸೀದಾ ಆಜ್ಞೆಗಳನ್ನು ಕೊಡುತ್ತಿದ್ದರೆಂದೂ ಮೊದಲಾಗಿ ಡಾ। ಸುಬ್ಬರಾಯನರು ಮುಖ್ಯ ಮಂತ್ರಿಯವರ ಮೇಲೆ ಆರೋಪ ಹೊರಿಸಿದ್ದಾರೆ ಇದು ಸತ್ಯವಲ್ಲವೆಂದು ಮಾನ್ಯ ಮುಖ್ಯ ಮಂತ್ರಿ ಶ್ರೀ ಓಮಂಡೂರು ರಾಮಸ್ವಾಮಿ ರೆಡ್ಡಿಯಾರರು ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ ಇದರ ಅರ್ಥವೆಂದರೆ ಇವರೀರ್ವರ ಒಳಗೆ ಒಬ್ಬರು ಅಸತ್ಯವನ್ನು ಹೇಳಿದ್ದಾರೆಂಬುದೇ ಇರುತ್ತದಷ್ಟೆ?

ಪ್ರಾಂತ್ಯದ ಆಡಳಿತೆಯ ಜವಾಬ್ದಾರಿಯನ್ನು ನಡೆಸುವ ಅಧಿಕಾರಿಗಳು ಅದರಲ್ಲೂ ಕಾಂಗ್ರೆಸಿನಂಥ ಪವಿತ್ರ ಸಂಸ್ಥೆಯ ಹೆಸರಲ್ಲಿ ಆಡಳಿತೆಗೆ ಕೈಕೊಟ್ಟವರು ಈ ರೀತಿ ಸಾರ್ವಜನಿಕ ವರ್ತನೆಯನ್ನು ಇಟ್ಟುಕೊಂಡರೆ ದೇಶದಲ್ಲಿ ಗಾಂಧೀಜೀಯವರು ಆಶಿಸುತ್ತಿದ್ದ ಆ ರಾಮರಾಜ್ಯ ಸ್ಥಾಪನೆ ನಮ್ಮಿಂದ ಎಷ್ಟು ದೂರವಿರುತ್ತದೆಂದು ಸ್ಪಷ್ಟವಾಗುತ್ತವೆ ಇದಕ್ಕಾಗಿ ವಿಷಾದ ಗೊಂಡು ಫಲವಿಲ್ಲ ಧ್ಯೇಯ ಸಾಧನೆಯನ್ನು ಇಂಥ ಪರಿಸ್ಥಿತಿಯಲ್ಲಿ ಹೇಗೆ ಮುಂದೊತ್ತಬಹುದೆಂದು ಪ್ರತಿಯೊಬ್ಬರುಯೋಚಿಸುವುದೇ ನಿಜವಾದ ಆವಶ್ಯಕತೆ ಇರುತ್ತದೆ

ದಕ್ಷಿಣ ಕನ್ನಡಕ್ಕೆ ಅಕ್ಕಿ ಬೇಕು

ಈ ಜಿಲ್ಲೆಗೆ ಹೊರಗಿನಿಂದ ಅಕ್ಕಿ ಒದಗಿಸದೆ ನಿವೃತ್ತಿ ಇಲ್ಲ ಮತ್ತು ಅದನ್ನು ಕೂಡಲೇ ಒದಗಿಸುವುದು ಅಗತ್ಯವೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಈ ಜಿಲ್ಲೆಗೆ ಬಂದ ಮಂತ್ರಿಗಳೀರ್ವರಿಗೆ ಒಂದು ಮನವಿ ಒಪ್ಪಿಸಲಾಯಿತು

ಈ ಜಿಲ್ಲೆಯಲ್ಲಿ ಬೆಳೆಯುವ ಅಕ್ಕಿ ಇಲ್ಲಿಯ ಜನರಿಗೆ ಸಾಕಾಗುವುದಿಲ್ಲ ಇಲ್ಲಿ ಬೇಕಾಗುವುದಕ್ಕಿಂತ ಹೆಚ್ಚಿನ ಅಕ್ಕಿ ಬೆಳೆಯುತ್ತದೆಂದು ಸರಕಾರದವರ ಅಂಕೆಸಂಖ್ಯೆಗಳು ಹೇಳುತ್ತ ಬಂದಿವೆಯಾದರೂ ಇತ್ತೀಚೆಗೆ ಹಲವು ವರ್ಷಗಳಿಂದ ಅಂದರೆ ಕಂಟ್ರೋಲ್ ಆರಂಭವಾದಂದಿನಿಂದ ಈ ಜಿಲ್ಲೆಗೆ ಸರಕಾರದವರು ಅಕ್ಕಿ ಹೊರಗಿನಿಂದ ಒದಗಿಸುತ್ತ ಬಂದಿದ್ದಾರೆ ಈ ರೀತಿ ಒದಗಿಸಿದ ಅಂಕೆಸಂಖ್ಯೆಗಳನ್ನು ಪರಿಶೀಲಿಸಿದರ ಪ್ರತಿ ವರ್ಷ ನಮ್ಮಲ್ಲಿಂದ ಹೊರಗೆ ಅಕ್ಕಿ ಕೂಡು ಹೋದುದನ್ನು ಮರುಪಾವತಿ ಮಾಡಿದ ಅಕ್ಕಿಯಲ್ಲದೆ ನಮಗೆ ವರ್ಷಕ್ಕೆ ಸಾಮಾನ್ಯ ಹತ್ತು ಸಾವಿರ ಟನ್ ಅಕ್ಕಿಯನ್ನು ಹೊರಗಿನಿಂದ ಒದಗಿಸುತ್ತ ಬಂದಿದ್ದಾರೆಂದು ತಿಳಿದು ಬರುತ್ತದೆ

ಜಿಲ್ಲೆಯಲ್ಲಿ ಅಕ್ಕಿ ವಿತರಣೆಯ ಜವಾಬ್ದಾರಿ ಬಿಟ್ಟುಕೊಡುವಾಗ ಇಷ್ಟು ವರ್ಷಗಳಲ್ಲಿ ಕೊಟ್ಟಷ್ಟೇ ಅಕ್ಕಿ ಈ ವರ್ಷವೂ ಕೂಡಾ ಕೊಡುತ್ತೇವೆಂದು ಸರಕಾರದವರು ಹೇಳಿದ್ದರು. ಅಂದರೆ ಈ ವರ್ಷ ಕೂಡಾ ಈ ಹತ್ತು ಸಾವಿರ ಟನ್ ಅಕ್ಕಿ ನಮಗೆ ಬರಬೇಕು.

ಇದರ ಜೊತೆಯಲ್ಲಿ ಇಷ್ಟು ವರ್ಷಗಳಲ್ಲಿ ಮಾಡಿದಂತೆ ನಮ್ಮಲ್ಲಿಂದ ಕೊಂಡುಹೋದ ಅಕ್ಕಿಯನ್ನು ಮರುಪಾವತಿ ಮಾಡುವುದೂ ಅಗತ್ಯವಿರುತ್ತದೆ. ಈ ವರ್ಷ ಇಲ್ಲಿಂದ 6,800 ಟನ್ ಅಕ್ಕಿ ಇಲ್ಲಿಂದ ಮಲಬಾರಿಗೆ ಒಯ್ದಿದ್ದಾರೆ. ಅದನ್ನೂ ಸೇರಿಸಿ 16,800 ಟನ್ ಅಕ್ಕಿಯನ್ನಾದರೂ ಇಲ್ಲಿಗೆ ಒದಗಿಸಬೇಕು ಈ ವರ್ಷ ಮಳೆಯ ಅಭಾವದಿಂದ ಎರಡನೆ ಬೆಳೆ ಹಾಳಾಗಿದೆ. ಎಂಬುದರಿಂದ ಇದಕ್ಕೂ ಹೆಚ್ಚಿಗೆಯಾಗಿಯೇ ಕಳುಹಿಸಬೇಕಾದರೂ ಕೊನೆಯ ಪಕ್ಷ ಇಷ್ಟನ್ನಾದರೂ ಒದಗಿಸದಿದ್ದರೆ ಈ ವರ್ಷದ ಮಳೆಗಾಲದಲ್ಲಿ ಕಠಿಣ ಪರಿಸ್ಥಿತಿಯೊದಗುವ ಸಂಭವ ಅನಿವಾರ್ಯವೆಂಬುದೇ ಕಾಂಗ್ರೆಸ್ ಕಮಿಟಿಯ ಈ ಮನವಿಯ ಸಾರಾಂಶವಿರುತ್ತದೆ

ಹೀಗೆ ಅಕ್ಕಿಯನ್ನು ಒದಗಿಸುವುದಿದ್ದರೆ ಅದನ್ನು ಮಳೆಯಾರಂಭವಾಗುವ ಮೊದಲೇ ಒದಗಿಸಬೇಕು ಮತ್ತೆ ಇಲ್ಲಿಯ ಹಳ್ಳಿಗಳಲ್ಲಿ ಪ್ರಯಾಣ ಸೌಕರ್ಯವಿಲ್ಲವೆಂಬುದರಿಂದ ಹಲವೆಡೆಗಳಿಗೆ ಅಕ್ಕಿಯನ್ನು ಕಳುಹಿಸಲು ಕಷ್ಟವಾಗುತ್ತದೆ ಕೆಲವೆಡೆ ಅಸಾಧ್ಯ ಕೂಡಾ ಇದೆ

ಮಾನ್ಯ ಮಂತ್ರಿಗಳಿಬ್ಬರೂ ಈ ಬಗ್ಗೆ ಅಗತ್ಯವುಳ್ಳ ಕೆಲಸ ಮಾಡುವುದಾಗಿ ಹೇಳಿದ್ದಾರೆ ಅಗತ್ಯವುಳ್ಳ ಅಕ್ಕಿ ಸಕಾಲದಲ್ಲಿ ಒದಗಿಸಲ್ಪಡುವುದೆಂದು ಆಶಿಸುತ್ತೇವೆ

ಅಳಿಯ ಸಂತಾನ ಮಸೂದೆ

ಮದ್ರಾಸ್ ಶಾಸನಸಭೆಯ ಮುಂದೆ ಬಂದಿರುವ ಈ ಮಸೂದೆಯ ಕುರಿತು ಈ ಪದ್ಧತಿಪನ್ನು ಆಚರಿಸುವ ಜನರ ಅಭಿಪ್ರಾಯ ಸಂಗ್ರಹಿಸಲು ನೇಮಕವಾದ ಕಮಿಟಿ ಮಂಗಳೂರು ಮತ್ತು ಉಡುಪಿಗಳಲ್ಲಿ ಸಭೆ ಸೇರಿ ಅನೇಕ ಮಂದಿ ಪ್ರಮುಖ ಅಳಿಯ ಸಂತಾನಿಗಳ ಅಭಿಪ್ರಾಯ ಸಂಗ್ರಹಿಸುವ ಕಾರ್ಯ ಈ ವಾರ ನಡೆಯಿತು ಕಮಿಟಿಯ ಅಧ್ಯಕ್ಷರಾದ ಮಾನ್ಯ ಶ್ರೀ ಮಾಧವ ಮೆನೊನರು ಸದಸ್ಯರಾದ ಮಾನ್ಯ ಶ್ರೀ ಎ. ಬಿ ಶೆಟ್ಟರೂ ಇದಕ್ಕಾಗಿಯೇ ಈ ಬಾರಿ ಜಿಲ್ಲೆಯನ್ನು ಸಂದರ್ಶಿಸಿದ್ದರು ಜಿಲ್ಲೆಯ ಹೊರಗಿನ ಸದಸ್ಯರಲ್ಲಿ ಎಮ್ ಎಲ್ ಸಿ. ಗಳಾದ ಶ್ರೀ ಜೆ ಸೂರ್ಯನಾರಾಯಣ ರಾವ್ರೂ ನಾರಾಯಣ ಮೆನೊನರೂ ಬಂದಿದ್ದರು ಶಿವಾನ್ನಾದರನ್ನು ಬಿಟ್ಟು ಜಿಲ್ಲೆಯ ಇತರ ಎಮ್ ಎಲ್ ಎ ಗಳೆಲ್ಲರೂ ಈ ಕಮಿಟಿಯ ಸದಸ್ಯರಿದ್ದು ಅವರೆಲ್ಲ ಕಮಿಟಿಯ ಸಭೆಯಲ್ಲಿ ಭಾಗವಹಿಸಿದ್ದರು

ಅಂತೂ ಅಳಿಯ ಸಂತಾನ ಪದ್ಧತಿಯನ್ನು ಆಚರಿಸುವ ಜನರೆಲ್ಲರಿಗೆ ಸರ್ವಸಮ್ಮತವಾಗುವ ರೀತಿಯಲ್ಲಿ ಈ ಅವಶ್ಯ ಸುಧಾರಣೆಯ ಕಾನೂನು ರೂಪಿಸಲ್ಪಡುವುದೆಂದು ಆಶಿಸುತ್ತೇವೆ

ಜಿಲ್ಲೆಗೆ ಸಿಕ್ಕುವ ಹೊಸ ಅನುಕೂಲತೆಗಳು

ಮಾನ್ಯ ಮಂತ್ರಿ ಶ್ರೀ ಎ ಬಿ ಶೆಟ್ಟರು ಪತ್ರಿಕೋದ್ಯೋಗಿಗಳನ್ನು ಕಂಡು ಜಿಲ್ಲೆಗೆ ಇತ್ತೀಚೆಗೆ ಮಂಜೂರಾಗಿರುವ ಕೆಲವು ಹೊಸ ಅನುಕೂಲತೆಗಳನ್ನು ವಿವರಿಸಿದರು

ಕೇಪ್‌ಕೊಮೊರಿನದಿಂದ ಬೊಂಬಾಯಿ ವರೆಗೆ ಹ್ಯಾವೇ ರಸ್ತೆ ಮಾಡಲು ಕೇಂ

ಷ್ಟ ಸರಕಾರ ಒಪ್ಪಿಗೆ ಕೊಟ್ಟಿರುತ್ತದೆ. ಆದುದರಿಂದ ಪ್ರಾಂತಿಕ ಹ್ಯೈವೇಗಾಗಿ ಪ್ರಾಂತಿಕ ಸರಕಾರ ಹಣ ಖರ್ಚು ಮಾಡುವ ಅಗತ್ಯವಿಲ್ಲ. ಈ ಹಣವನ್ನು ಇತರ ಸಂಕ ಮತ್ತು ರಸ್ತೆಗಳಿಗಾಗಿ ಖರ್ಚುಮಾಡಲಾಗುತ್ತದೆ. ಕೂಳೂರು ಸಂಕದ ಕೆಲಸ ಬೇಗನೇ ಕೈಕೊಳ್ಳಲಾಗುತ್ತದೆ. ಚಿಕ್ಕ-ಚಿಕ್ಕ ಸಂಕ ಮತ್ತು ಕಲ್ವರ್ಟುಗಳು ಒಟ್ಟಿಗೆ 16 ಈಗ ಕೈಕೊಳ್ಳಲ್ಪಡುತ್ತವೆ ಮಾತ್ರವಲ್ಲ 12 ಹೊಸ ರಸ್ತೆಗಳ ಕೆಲಸವೂ ಮಂಜೂರಾಗಿರುತ್ತದೆ.

ನೀರಾವರಿ ಯೋಜನೆಗಳ ಪೈಕಿ ಶೀರಿಯಾ, ಗುರ್ಪುರ ಮತ್ತು ಚಾಂತಾರು ವದಗಾದ ಕೆಲಸಗಳು ಮಂಜೂರಾಗಿವೆ ಇವುಗಳ ಕೆಲಸ ಸದ್ಯದಲ್ಲೇ ಕೈಕೊಳ್ಳಲಾಗುವುದು

ಜಿಲ್ಲೆಗೆ ಬೇಕಾದ ವಿದ್ಯುತ್ ಶಕ್ತಿಯನ್ನು ಜೋಗ ಪ್ರಪಾತದಿಂದ ಒದಗಿಸಲು ಮೈಸೂರು ಸರಕಾರದವರು ಒಪ್ಪಿಗೆ ಕೊಟ್ಟಿದ್ದಾರೆಂಬುದು ಸಂತೋಷದ ವಾರ್ತೆ

ಆರೋಗ್ಯಖಾತೆಯ ಮಟ್ಟಿಗೆ ಮಂಗಳೂರಿಗೆ ನಳ್ಳಿನೀರು ಒದಗಿಸುವ ಯೋಜನ ಮಂಜೂರಾಗಿರುತ್ತದೆ ಎಷ್ಟೋ ವರ್ಷಗಳಿಂದ ಹಿಂದೆ ತಳ್ಳಲ್ಪಟ್ಟ ಈ ಯೋಜನ ಈಗಲಾದರೂ ಮಂಜೂರಾದುದ ಮಹತ್ವದ ವಿಷಯ ಪುತ್ತೂರು ತಾಲೂಕಿಗೆ ಮಲೇರಿಯಾ ನಿವಾರಣೆ ಯೋಜನೆಯೊಂದ ಮಂಜೂರಾಗಿರುತ್ತದೆ ಕಂಕನಾಡಿ ಆಸ್ಪತ್ರೆಯಲ್ಲಿರುವ ಕುಷ್ಠರೋಗಿ ಚಿಕಿತ್ಸಾಲಯಕ್ಕೆ ಕಟ್ಟಡಗಳ ಬಗ್ಗೆ ಅರ್ಧ ಲಕ್ಷ ರೂಪಾಯಿ ಮಂಜೂರಾಗಿರುತ್ತದೆ

ಮಂಗಳೂರಿನ ಗವರ್ನಮೆಂಟು ಕಾಲೇಜನ್ನು ಪ್ರಥಮ ಶ್ರೇಣಿಗೆ ಏರಿಸುವ ಸೂಚನೆಯೂ ಮಂಜೂರಾಗಿರುತ್ತದೆ

ಹೀಗೆ ಜಿಲ್ಲೆಯ ಹಲವು ಆವಶ್ಯಕತೆಗಳು ಈಗ ಪೂರೈಸಲ್ಪಡುತ್ತಿರುವುದು ಸಂತೋಷದ ವಿಷಯ. ಇವುಗಳನ್ನೆಲ್ಲ ಸಾಧ್ಯವಾಗುವಂತೆ ಮಾಡಿದ ಮಾನ್ಯ ಮಂತ್ರಿ ಎ ಬಿ ಶೆಟ್ಟಿ ಹಾಗೂ ನಮ್ಮಲ್ಲಿಯ ಇತರ ಶಾಸನಸಭಾ ಪ್ರತಿನಿಧಿಗಳಿಗೂ ನಾವು ಇದೆಲ್ಲಕ್ಕಾಗಿ ಅಭಿನಂದಿಸುತ್ತೇವೆ

ಇನ್ನೂ ಕೆಲವು ಆವಶ್ಯಕತೆಗಳು

ನಮ್ಮ ಜಿಲ್ಲೆಯಲ್ಲಿ ಅಕ್ಕಿ ಹಾಕುವಾಗ ತಡವಾದ ಬಗ್ಗೆ ರೈತರಿಂದ ವಸೂಲು ಮಾಡಿದ 2½ ಲಕ್ಷ ರೂಪಾಯಿ ಈ ಜಿಲ್ಲೆಗೆ ಸಿಕ್ಕುವುದೆಂಬ ನಿರೀಕ್ಷಣೆ ವ್ಯರ್ಥವಾಗುವುದೆಂಬ ವಾರ್ತೆ ಕೇಳಿ ಬರುತ್ತಿದೆ ಇಷ್ಟು ಹಣ ರೈತರಿಂದ ಮತ್ತೆಲ್ಲಿಯೂ ವಸೂಲು ಮಾಡಿಲ್ಲವೆಂಬುದರಿಂದ ಈ ಹಣ ನ್ಯಾಯವಾಗಿ ಈ ಜಿಲ್ಲೆಗೇನೆ ಸಲ್ಲಬೇಕು

ಕ್ಷಯರೋಗ ಚಿಕಿತ್ಸೆಗಾಗಿ ಒಂದು ಆಸ್ಪತ್ರೆ, ಇದಕ್ಕೆ ಸುಮಾರು 1½ ಲಕ್ಷ ರೂಪಾಯಿ ಬೇಕಾಗುವುದು, ಒಂದು ಜಾನುವಾರು ಸಂರಕ್ಷಣಾ ಕೇಂದ್ರ (ರೂ 75 ಸಾವಿರ) ಮತ್ತು ಉಳಿಯುವ ರೂ. 25 ಸಾವಿರ ಬೀಜ ಗೊಬ್ಬರ ಒದಗಿಸಲಿಕ್ಕೆ ಎಂಬ ಈ ಜಿಲ್ಲೆಯವರು ಮುಂದಿಟ್ಟ ಯೋಜನೆಯಂತೆ ಈ ಹಣದ ವಿನಿಯೋಗವಾಗುವುದು ಅಗತ್ಯವಿರುತ್ತದೆ

ಅಕ್ಕಿ ಮೇಲೆ ವಸೂಲಾದ ಹಣ ಮರಳಿ ಕೊಡುವುದು ತತ್ವಶಃ ಸರಿಯಲ್ಲವೆಂಬ ತರ್ಕ ಸರಿಯಾದುದಲ್ಲ. ನಮ್ಮ ರೈತರಿಂದ ವಸೂಲಾದ ಹಣದ ಪ್ರಯೋಜನ ನಮ್ಮ ಜಿಲ್ಲೆಗೆ ಕೊಡುವುದೇ ಸರಕಾರದ ನಿಜವಾದ ಧರ್ಮಪ್ರವೃತ್ತಿ. ಇದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿ ವಸೂಲು ಮಾಡಿದ್ದರೆ ಆ ಮಾತು ಬೇರೆ ಆದರೆ ಈ ಹಣ ನಮ್ಮಲ್ಲಿ ಶೇಖರಿಸಿದಂತೆ ಇನ್ನೆಲ್ಲಿಯೂ ವಸೂಲು ಮಾಡಿಲ್ಲವೆಂಬುದರಿಂದ ಇದಕ್ಕೆ ತತ್ವ ಅನ್ವಯಿಸುವದರಲ್ಲಿ ಅರ್ಥವಿಲ್ಲ

ಇನ್ನೊಂದು ವಿಚಾರವೆಂದರೆ ಉಡುಪಿಗೊಂದು ಕಾಲೇಜಿನ ಆವಶ್ಯಕತೆ ಮಂಗಳೂರಿನ ಸರಕಾರೀ ಕಾಲೇಜು ಪ್ರಥಮ ಶ್ರೇಣಿಗೆ ಏರಿಸುವ ಕೆಲಸ ಕೈಗೂಡಿತೆಂದು ಸುಮ್ಮಗಿರುವುದು ಸರಿಯಲ್ಲ ಉಡುಪಿಗೆ ಕಾಲೇಜಿನ ಆವಶ್ಯಕತೆ ಇದೆಯೆಂಬ ಮಾತು ನಿಜವಿರುವದರಿಂದ ಇದನ್ನು ಬೇಗನೆ ಸಾಧಿಸುವಂತಾಗಲೆಂದು ಹಾರೈಸುತ್ತೇವೆ.

ಕೊನೆಯದಾಗಿ ಮಂಗಳೂರು ಬಂದರವನ್ನು ದೊಡ್ಡ ಬಂದರವನ್ನಾಗಿ ಮಾರ್ಪಡಿಸುವ ಆವಶ್ಯಕತೆಯನ್ನು ಪುನಃ ಹೇಳಬೇಕಾಗಿದೆ ಈ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಸಮಿತಿ ಸದ್ಯದಲ್ಲೇ ಈ ಜಿಲ್ಲೆಯನ್ನು ಸಂದರ್ಶಿಸುವರೆಂದು ತಿಳಿದುಬರುತ್ತದೆ. ಈ ಕಾರ್ಯವೂ ಕೈಗೂಡಿ ಬರಲೆಂದು ಹಾರೈಸುತ್ತೇವೆ

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನಸಂಗ್ರಹ ಮಾಡಲು ಅಗತ್ಯವುಳ್ಳ ಕಮಿಟಿಯನ್ನು ಏರ್ಪಡಿಸಲು ಕರ್ನಾಟಕ ಪ್ರಾಂತಿಕ ಸ್ಮಾರಕನಿಧಿ ಕಮಿಟಿಯವರು ಶ್ರೀ ಕೆ. ಆರ್. ಕಾರಂತರನ್ನು ನೇಮಿಸಿದಂತೆ ಅವರು ಈ ಬಗ್ಗೆ ಒಂದು ಸಭೆ ಸೇರಿಸಿದರು. ಡಾ। ಯು ಪಿ ಮಲ್ಯರನ್ನು ಅಂದಿನ ಸಭಾಧ್ಯಕ್ಷರನ್ನಾಗಿ ಮಾಡಲಾಯಿತು. ಸಭೆಯಲ್ಲಿ ಇಪ್ಪತ್ತು ಮಂದಿ ಹಾಜರಿದ್ದರು. ಇವರೆಲ್ಲರನ್ನೊಳಗೊಂಡ ಹೆಚ್ಚಿನವರನ್ನು ಸೇರಿಸುವ ಅಧಿಕಾರವುಳ್ಳ ಒಂದು ಜಿಲ್ಲಾ ಕಮಿಟಿಯನ್ನು ಏರ್ಪಡಿಸಲಾಯಿತು

ಜಿಲ್ಲಾ ಕಮಿಟಿಯಲ್ಲದೆ ಮಂಗಳೂರು ಪಟ್ಟಣ ಮತ್ತು ಆರು ತಾಲೂಕುಗಳಿಗೆ ಪ್ರತ್ಯೇಕ ಕಮಿಟಿಗಳನ್ನು ಮಾಡಬೇಕೆಂದು ನಿರ್ಣಯಿಸಲಾಯಿತು ಮಂಗಳೂರಲ್ಲಿ ಈ ಮೊದಲು ಗವರ್ನಮೆಂಟು ಕಾಲೇಜಿನಲ್ಲಿ ಸೇರಿದ ಸಭೆಯಲ್ಲಿ ನೇಮಕ ಮಾಡಿದ ಕಮಿಟಿಯನ್ನು ಶ್ರೀ ಎಲ್. ಸಿ ಪ್ಯಾಸರೇ ಕರೆದು ಇಲ್ಲಿಯ ಕಮಿಟಿಯ ವ್ಯವಸ್ಥೆ ಮಾಡಬೇಕೆಂದಾಯಿತು. ಆರು ತಾಲೂಕುಗಳ ಕಮಿಟಿಗಳ ವ್ಯವಸ್ಥೆ ಮಾಡುವರೆ ಮಂಗಳೂರು ತಾಲೂಕಿಗೆ ಶ್ರೀ ಪಣಂಬೂರು ಶ್ರೀನಿವಾಸ ರಾಯರನ್ನೂ, ಉಡುಪಿಗೆ ಅಲ್ಲಿಯ ಮುನಿಸಿಪಲ್ ಚೆಯರ್ಮೆನರಾದ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರನ್ನೂ ಕುಂದಾಪುರಕ್ಕೆ ಶ್ರೀ ಮದ್ದರೆ ಮಂಜಯ್ಯ ಶೆಟ್ಟರನ್ನೂ ಕಾರ್ಕಳಕ್ಕೆ ಶ್ರೀ ಕೆ ಪಿ. ಮುಕುಂದ ಪ್ರಭುಗಳನ್ನೂ ಪುತ್ತೂರಿಗೆ ಶ್ರೀ ಉರಿಮಜಲು ವೆಂಕಪ್ಪಯ್ಯ ಮತ್ತು ಎಮ್ ಸದಾಶಿವರಾಯರನ್ನೂ ಕಾಸರಗೋಡಿಗೆ ಡಾಕ್ಟರ್ ಪಿ ಸುಬ್ರಹ್ಮಣ್ಯ ಶಾಸ್ತ್ರಿಗಳನ್ನೂ ನೇಮಿಸಲಾಯಿತು

ಜಿಲ್ಲಾ ಕಮಿಟಿಗೆ ಕಾರ್ಯಕಾರೀ ಮಂಡಲಿಯೊಂದನ್ನು ನೇಮಿಸಲಾಯಿತು ಈ ಕೆಳಗಿನವರನ್ನು ಅದಕ್ಕೆ ಆರಿಸಲಾಯಿತು ಪ್ರಾಂತಿಕ ಕಮಿಟಿಗೆ ಈ ಜಿಲ್ಲೆಯಿಂದ ಸದಸ್ಯರಿರುವ ಶ್ರೀ ಯು ಶ್ರೀನಿವಾಸ ಮಲ್ಯ, ಬಿ ವೈಕುಂಠ ಬಾಳಿಗ ಮತ್ತು ಕೆ ಆರ್ ಕಾರಂತ ಮತ್ತು ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಕೆ ಈಶ್ವರ, ಹುಸ್ಸೇನ್ ಸಾಹೇಬ, ರಮ್ಜಾನು ಸಾಹೇಬ, ಡಾ। ಯು ಪಿ ಮಲ್ಯ, ಎಲ್ ಸಿ ಪ್ಯಾಸ್, ವಿ ಮೋಹನರಾವ್, ಎಸ್ ಶಂಕರ ಆಳ್ವ, ಎ ಶಂಕರ ಆಳ್ವ, ಮುಕ್ಕೋಲ ಶ್ರೀನಿವಾಸ ನಾಯ್ಕ, ಮಿಜಾರು ಗೋವಿಂದ ಪೈ, ಎಸ್ ನರ್ಸಪ್ಪಯ್ಯ, ಎಮ್ ಮಾಧವರಾವ್ ಬಿ ದಾಮೋದರ [illegible], ಗ್ರೀವಾಲಿ ಸಾಲಿವನ್, ಎಚ್ ಕೆ ತಿಂಗಳಾಯ, ಕೆ ಆರ್ ಆಚಾರ್, ಸಿ ಕಲ್ಸಿನ್, ಎಮ್ ವೆಂಕಟೇಶ ಪೈ, ಕೆ ಬಿ ಜಿನರಾಜ ಹೆಗ್ಡೆ ಮತ್ತು ಹಿರಿಯಡ್ಕ ನಾರಾಯಣ ರಾವ್

ಸಭೆಯಲ್ಲಿ ಸ್ಮಾರಕ ನಿಧಿಗೆ ಕೂಡಿಸುವ ಹಣ ಖರ್ಚು ಮಾಡುವುದಕ್ಕಾಗಿ ಮಾಡಲಾಗುವುದೆಂಬ ಸ್ಪಷ್ಟವಾದ ವಿವರ ಹೇಳುವುದೂ ಕೂಡಿದ ಹಣದಲ್ಲಿ ಹೆಚ್ಚಿನ ಅಂಶ ಇಲ್ಲಿಯೇ ಖರ್ಚು ಮಾಡಲ್ಪಡುವುದೆಂಬ ಬಗ್ಗೆ ಭರವಸೆ ಹೇಳುವುದೂ ಅಗತ್ಯವೆಂಬ ಅಭಿಪ್ರಾಯ ಹೇಳಲಾಯಿತು ಇವನ್ನು ಸಂಬಂಧಪಟ್ಟವರಿಗೆ ತಿಳಿಸುವುದಾಗಿ ಶ್ರೀ ಕೆ ಆರ್ ಕಾರಂತರು ಹೇಳಿದರು

ಆಯಾ ಕಮಿಟಿಗಳ ಕಾರ್ಯದರ್ಶಿಯರಾಗುವವರು, ಈ ಬಗ್ಗೆ ಕೆಲಸ ಮಾಡಲು ಸಾಕಷ್ಟು ಸಮಯಾವಕಾಶವಿದ್ದವರೇ ಇರಬೇಕೆಂದೂ ಅವರನ್ನು ಆಯಾ ಕಮಿಟಿಯವರೇ ನೇಮಿಸಬೇಕೆಂದೂ ನಿರ್ಣಯವಾಯಿತು

ಧನ ಸಂಗ್ರಹಕ್ಕೆ ಬೇಕಾಗುವ ರಶೀದಿ ಪುಸ್ತಕಗಳು ಪ್ರಾಂತಿಕ ಕಮಿಟಿಯಿಂದ ಒಂದ ಬಳಿಕ ಅವನ್ನು ಉಪಯೋಗಿಸಿಯೇ ಈ ಕಾರ್ಯ ಆರಂಭಿಸಬೇಕೆಂಬುದಾಗಿಯೂ ನಿರ್ಣಯವಾಯಿತು

ಗಾಂಧೀರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಂಗ್ರಹಿಸಲು ಜಿಲ್ಲೆಯಲ್ಲಿ ಆಗಿರುವ ಈ ಯೋಗ್ಯ ವ್ಯವಸ್ಥೆಯ ವಾರ್ತೆಯೊಡನೆ ಈ ನಿಧಿಯ ಕುರಿತು ಒಂದೆರಡು ಮಾತುಗಳನ್ನು ಹೇಳಿದರೆ ಉಚಿತವೇ ಇರುತ್ತದೆ.

ಈ ನಿಧಿಯನ್ನು ವಿನಿಯೋಗಿಸುವ ಉದ್ದೇಶಗಳನ್ನು ಕಾಂಗ್ರೆಸ್ ಸಂಸ್ಥೆಯವರು ಮೊದಲೇ ಸ್ಪಷ್ಟವಾಗಿ ಹೇಳಿದ್ದಾರೆ. ಮಹಾತ್ಮಾಗಾಂಧಿಯವರು ದೇಶದ ಮುಂದೆ ಇಟ್ಟ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಲಿಕ್ಕಾಗಿಯೇ ಈ ನಿಧಿಯು ಸಂಗ್ರಹಿಸಲ್ಪಡುತ್ತಿದೆ ಈ ಕಾರ್ಯಕ್ರಮದಲ್ಲಿಯ ಹದಿನೆಂಟು ಅಂಗಗಳನ್ನು ಈಗ ಪುನಃ ವಿವರಿಸುವ ಅಗತ್ಯವಿಲ್ಲ. ಇವೆಲ್ಲ ಕಾರ್ಯಗಳಿಗೆ ಹಣದ ಆವಶ್ಯಕತೆ ಇದೆಯೆಂಬುದರಿಂದ ಇಡೀ ದೇಶದಲ್ಲಿ ಈ ಕಾರ್ಯಕ್ರಮಕ್ಕಾಗಿ ಈ ಹಣ ಉಪಯೋಗಿಸಲ್ಪಡುತ್ತದೆ. ಗಾಂಧೀಜಿಯವರ ಬರವಣಿಗೆ ಇತ್ಯಾದಿ ಪ್ರಚಾರಕ್ಕೂ ಒಂದು ಚಿಕ್ಕ ಅಂಶ ವಿನಿಯೋಗಿಸಲ್ಪಡಬಹುದು

ಈ ಜಿಲ್ಲೆಯಲ್ಲಿ ಸಂಗ್ರಹವಾದ ಹಣದಲ್ಲಿ ಹೆಚ್ಚಿನ ಅಂಶ ಇಲ್ಲಿಯೇ ಉಪಯೋಗಿಸಲ್ಪಡಬೇಕೆಂಬುದು ತತ್ವಶಃ ಸರಿಯಲ್ಲ. ಎಲ್ಲಿ ಅಗತ್ಯವಿದ್ದು ಅದರಿಂದ ಉಪಯೋಗವಾಗುವುದೋ ಅಲ್ಲಿ ಅದನ್ನು ಉಪಯೋಗಿಸಬೇಕೆಂಬುದೇ ನ್ಯಾಯವಿರುತ್ತದೆ ಇಲ್ಲಿ ಕೆಲಸ ಮಾಡುವುದಿದ್ದರೆ ಇಲ್ಲಿ ಸಂಗ್ರಹ ಮಾಡಿದ ಹಣ ಮಾತ್ರವಲ್ಲ ಅದಕ್ಕೂ ಹೆಚ್ಚಿನ ಹಣ ಈ ಜಿಲ್ಲೆಯಲ್ಲಿ ವಿನಿಯೋಗ ಬಾರದೆಂದಿಲ್ಲ ಕಾರ್ಯಕರ್ಮಗಳನ್ನು ಮುಂದೊತ್ತುವ ಕೆಲಸಗಾರರ ಮೇಲೆ ಈ ಹಣದ ವಿನಿಯೋಗದ ಪ್ರಶ್ನೆ ಹೊಂದಿಕೊಂಡಿದೆ ಬೇಕಾದ ಕೆಲಸಗಾರರಿಲ್ಲದೆ ಹಣವನ್ನು ವಿನಿಯೋಗಿಸುವುದು ಕಷ್ಟವಾದರೆ ಹಣವನ್ನು ಹಾಗೆಯೇ ಇಡಬೇಕೆಂಬುದಕ್ಕೆ ಅರ್ಥವಿಲ್ಲ

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ ಅಲ್ಲಲ್ಲಿ ಸ್ಥಳೀಕ ಸ್ಮಾರಕ ನಿಧಿಗಳನ್ನು ವ್ಯವಸ್ಥೆಗೊಳಿಸುವ ಹವ್ಯಾಸ ಬಿಟ್ಟು ಕೊಡುವುದು ಅಗತ್ಯವಿರುತ್ತದೆ ಇಂಥ ಯತ್ನಗಳಿಂದ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಶೇಖರಿಸಲು ಕಷ್ಟವಾಗುತ್ತದೆ ವಿಧಾಯಕ ಕಾರ್ಯಕ್ರಮ ಮುಂದೊತ್ತುವ ಕಾರ್ಯಕ್ಕಿಂತ ಹೆಚ್ಚಿನ ಸ್ಮಾರಕ ಗಾಂಧೀಜಿಯವರಿಗೆ ಮತ್ತೊಂದಿಲ್ಲ ಮಾತ್ರವಲ್ಲ ಇದನ್ನು ಇಡೀ ರಾಷ್ಟ್ರದ ದೃಷ್ಟಿಯಿಂದ ಯೋಗ್ಯ ವ್ಯವಸ್ಥೆಯಿಂದ ನಡೆಸುವುದೇ ಶ್ರೇಯಸ್ಕರ ಹೀಗಿರುವುದರಿಂದ ಜಿಲ್ಲೆಯ ಹಲವೆಡೆಗಳಲ್ಲಿ ಅಲ್ಲಲ್ಲಿ ಪ್ರತ್ಯೇಕ ಸ್ಮಾರಕ ನಿಧಿಗಳ ಯೋಜನೆ ಮಾಡಿ ಮಾಡುವುದು ಯೋಗ್ಯವಲ್ಲ ಇಷ್ಟರೊಳಗೆ ಇಂಥ ಯೋಜನೆಗಳನ್ನು ಮಾಡಿ ಧನ ಸಂಗ್ರಹ ಮಾಡಿದ್ದರೆ ಹಣ ಕೊಟ್ಟವರನ್ನು ಸೇರಿಸಿ ಅವರಿಗೆ ಈ ವಿಷಯ ತಿಳಿಸಿ ಅವರ ಅನುಮತಿಯಿಂದ ಆ ಕೂಡಿದ ಹಣವನ್ನೆಲ್ಲ ರಾಷ್ಟ್ರೀಯ ಸ್ಮಾರಕ ನಿಧಿಗೆ ಒಪ್ಪಿಸುವದೇ ಯುಕ್ತವಿರುತ್ತದೆ

ತಿಲಕ ಸ್ವರಾಜ್ಯ ನಿಧಿಗೆ ಒಂದು ಕೋಟಿ ರೂಪಾಯಿಗಳ ಮಿತಿ ಇಟ್ಟಂತೆ ಈ ನಿಧಿಗೆ ಮಿತಿ ಇಟ್ಟಿಲ್ಲ ಸಾಧ್ಯವಿದ್ದಷ್ಟು ಹೆಚ್ಚಿನ ಹಣವನ್ನು ಪ್ರತಿಯೊಬ್ಬರೂ ಕೊಡುವುದು ಅಗತ್ಯವೆಂಬುದೇ ಇದರ ಅಭಿಪ್ರಾಯ. ಈ ನಿಧಿಗೆ ಧನ ಸಂಗ್ರಹ ಮಾಡುವ ಕಾರ್ಯದಲ್ಲಿ ಈಗ ಏರ್ಪಾಡಾಗಿರುವ ಕಮಿಟಿಗಳಿಗೆ ಪ್ರತಿಯೊಬ್ಬರೂ ಸಹಕಾರ ನೀಡುವುದು ಅಗತ್ಯ. ಈ ಕಾರ್ಯವು ಜಿಲ್ಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರಗುವಂತಾಗಲೆಂದು ಹಾರೈಸುತ್ತೇವೆ.

ಜಿಲ್ಲಾ ಸಮಾಚಾರ

ದ. ಕ. ಜಿಲ್ಲೆಗೆ ವಿದ್ಯುತ್ಪೂರೈಕೆ

ಮೈಸೂರು ಮತ್ತು ಮದರಾಸ ಸರಕಾರಗಳ ಪ್ರತಿನಿಧಿಗಳ ನಡುವೆ ನಡೆದ ಮಾತುಕತೆಗಳ ಪರಿಣಾಮವಾಗಿ ಮದ್ರಾಸ್ ಪ್ರಾಂತ್ಯದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ದತ್ತಮಂಡಲ ಜಿಲ್ಲೆಗಳಿಗೆ ವಿದ್ಯುತ್‌ಶಕ್ತಿ ಪೂರೈಸುವ ನಿರ್ಣಯವಾಗಿದೆ. ಜೋಗ್ ಜಲಪಾತವನ್ನು ಸ್ಥಾಪಿಸಬಿಟ್ಟ ಮಹಾತ್ಮಾ ಗಾಂಧಿ ವಿದ್ಯುತುತ್ಪಾದನೆ ಕಾರ್ಖಾನೆಯಿಂದ ತುಂಗಭದ್ರಾ ಅಣೆಕಟ್ಟಿನ ಯೋಜನೆಗಾಗಿ ೩೫೦೦ ಕಿಲೊವಾಟ್ ಶಕ್ತಿಯನ್ನು ಸರಬರಾಯಿ ಮಾಡಲು ಮೈಸೂರ ಸರಕಾರ ಒಪ್ಪಿದೆ ಮದ್ರಾಸ್ ಪ್ರಾಂತ್ಯದ ಜಿಲ್ಲೆಗಳಿಗೆ ಒಟ್ಟು ೧ ಸಾವಿರ ಕಿಲೊವ್ಯಾಟ್ ವಿದ್ಯುತ್‌ಶಕ್ತಿ ದೊರೆಯುತ್ತದೆ

ಬಂದರು ಪರಿಶೀಲನಾ ಸಮಿತಿ

ಹಿಂದುಸ್ತಾನ ಸರಕಾರದಿಂದ ಇತ್ತೀಚೆಗೆ ನೇಮಿಸಲ್ಪಟ್ಟ ಪಶ್ಚಿಮ ಕರಾವಳಿಯ ದೊಡ್ಡ ಬಂದರುಗಳ ಬೆಳವಣಿಗೆ ಸಮಿತಿಯು ಶೀಘ್ರದಲ್ಲಿಯೇ ಮಲ್ಪೆ ಬಂದರವನ್ನು ಸಂದರ್ಶಿಸಲಿದೆ ಮಲ್ಪೆಗೆ ದೊಡ್ಡ ಬಂದರಾಗುವ ಅನೇಕ ನೈಸರ್ಗಿಕ ಸೌಕರ್ಯಗಳಿದ್ದು ಕಾರವಾರ, ಬಟ್ಕಳ, ಮಂಗಳೂರು ಮತ್ತು ಮಲ್ಪೆಗಳಲ್ಲಿ ತೀಕ್ಷ್ಣ ಸ್ಪರ್ಧೆಯಿದೆ

ಅಳಿಯಸಂತಾನ ಮಸೂದೆ ವಿಚಾರ

ಈ ಕುರಿತಾಗಿ ನೇಮಿಸಲ್ಪಟ್ಟ ಸಮಿತಿಯವರು ಮಂಗಳೂರಿಗೆ ಬಂದು ಇಲ್ಲಿಯ ಜಿಲ್ಲಾ ಕಲೆಕ್ಟರರ ಕಛೇರಿಯಲ್ಲಿ ಕಳೆದ ತಾ ೨ರಂದು ರಾ। ಬ। ಕೆ ಟಿ ಆಳ್ವ, ರಾ। ಬ ಎನ್ ಎಸ್ ಸುವರ್ಣ, ರಾ। ಬ ಪಿ ಆರ್ ಪೂಂಜ, ಶ್ರೀಗಳಾದ ಎಂ ರಾಮಪ್ಪ, ಎ ಡಿ ಬಂಗೇರ, ಲಕ್ಷ್ಮಣ ಸಾಲಿಯಾನ್, ಬಿ ಗಂಗಾಧರದಾಸ್ ಮೊದಲಾದವರ ಅಭಿಪ್ರಾಯಗಳನ್ನು ಪಡೆದರು ಈ ಸಮಿತಿಯಲಿ ಸಚಿವರುಗಳಾದ ಮಾನ್ಯರು ಎ ಬಿ ಸೆಟ್ಟಿ, ಕೆ ಮಾಧವಮೆನನ್ ಅವರು, ಎಂ ಎಲ್ ಎ. ಗಳಾದ ಕೆ ಆರ್ ಕಾರಂತ, ಕೆ ಈಶ್ವರ, ಎಲ್ ಸಿ ಪ್ರಾಯಿಸ್, ಎಚ್ ಹುಸೇನ್ ಸಾಹೇಬ, ಡಾ ಯು ಪಿ ಮಲ್ಯ, ನಾರಾಯಣ ಮೆನನ್ ಮತ್ತು ಸೂರ್ಯನಾರಾಯಣ ಇವರು ಸದಸ್ಯರಾಗಿರುವರು

ಸದ್ಯ ರೇಶನ್ ಹೋಗುವುದಿಲ್ಲ

ಕಳೆದ ತಾ ೨ರ ಸಂಜೆ ಇಲ್ಲಿಯ ಎಸ್ ಆರ್ ಎಸ್ ಹೋಮಿನಲ್ಲಿ ಮಾನ್ಯ ಸಚಿವರುಗಳಾದ ಎ ಬಿ ಶೆಟ್ಟಿ ಮತ್ತು ಮಾಧವ ಮೆನನ್ ಇವರುಗಳಿಗೆ ಜಿಲ್ಲೆಯ ಆಹಾರ ಪರಿಸ್ಥಿತಿಯ ಹಾಲುಹವಾಲೆಗಳನ್ನೊಳಗೊಂಡ ಒಂದು ಭಿನ್ನವತ್ತಳೆಯನ್ನರ್ಪಿಸಲಾಯಿತು ಮಾನ್ಯ ಮಾಧವ ಮೆನನ್ನರು ತಮ್ಮ ಭಾಷಣದಲ್ಲಿ ಇತ್ತ ಕಡೆಯ ಅಕ್ಕಿ ಪರಿಸ್ಥಿತಿಯ ಕುರಿತು ಆಹಾರ ಮಂತ್ರಿಗಳಲ್ಲಿ ತಿಳಿಸಲಾಗುತ್ತದೆ, ಜೋಳವನ್ನು ಹೆಚ್ಚಾಗಿ ಒದಗಿಸಬೇಕಾದೀತು, ಜೋಳದ ಕುರಿತು ಪ್ರಚಾರ ಕಾರ್ಯ ನಡೆಸಬೇಕು ಮಂಗಳೂರಿನ ರೇಶನ್ ಸದ್ಯ ಹೋಗುವುದಿಲ್ಲ ಅಕ್ಕಿಯ ಮೇಲೆ ತಿರುಗಿ ಕಂಟ್ರೋಲ್ ಹಾಕುವುದಿಲ್ಲ ಎಂದು ತಿಳಿಸಿದರು

ಅಂದು ಮಂತ್ರಿವರ್ಯರೀರ್ವರೂ ಕಂಕನಾಡಿಯ ಕೃಷಿ (ಬತ್ತ ಬೆಳೆಸುವ) ಕ್ಷೇತ್ರವನ್ನು ಸಂದರ್ಶಿಸಿದರು ತಾ ೩ರಂದು ಮಾನ್ಯ ಮೆನನ್ನರು ಇಲ್ಲಿನ ಸಬ್ ಜೈಲನ್ನು ಸಂದರ್ಶಿಸಿದರು

ಜಿಲ್ಲಾ ಕುಲಾಲರ ಸಭೆ

ದ ಕ. ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ 2ನೇ ವರ್ಷಾಧಿವೇಶನವು ಇಲ್ಲಿಯ ಸೆಂಟ್ರಲ್ ಮಾರ್ಕೆಟ್ ಶಾಲೆಯಲ್ಲಿ ಜರಗಿದ್ದಾಗಿ ಅಳಿಯ ಸಂತಾನ ಪದ್ಧತಿಯ ಹಾನಿ ನ್ಯೂನತೆಗಳ ಕುರಿತು ಭಾಷಣಗಳಾದವು ಬೆಳಗ್ಗಿನ ಅಧಿವೇಶನಕ್ಕೆ ಡಾ. ಎ. ಬಿ ಅತ್ತಾವರ ಅವರು ಅಧ್ಯಕ್ಷರಾಗಿದ್ದು ೨೧ ಸದಸ್ಯರಿರುವ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರನ್ನಾಗಿ ಡಾ। ಅತ್ತಾವರರನ್ನೇ ಚುನಾಯಿಸಲಾಯಿತು ಸಾಯಂಕಾಲದ ಅಧಿವೇಶನದ ಕಾರ್ಯಕ್ರಮಗಳು ಶ್ರೀ ಬಿ. ಗಂಗಾಧರದಾಸ್ ಇವರ ಅಧ್ಯಕ್ಷತೆಯಲ್ಲಿ ಜರಗಿದುವು ಅನೇಕ ಮಹನೀಯರ ಭಾಷಣಗಳಿದ್ದವು

ನಗರ ಸಭೆಯ ಶಿಷ್ಟಮಂಡಳ

ಮದ್ರಾಸಿನ ಪಬ್ಲಿಕ್ ವರ್ಕ್ಸ್ ಇಲಾಖಾ ಸಚಿವರಾದ ಶ್ರೀ ಭಕ್ತವತ್ಸಲಂ ಅವರೂ ಮೈಸೂರಿನ ಪ್ರಧಾನ ಶ್ರೀ ಕೆ ಸಿ ರೆಡ್ಡಿಯವರು ಬೆಂಗಳೂರಲ್ಲಿ ಒಟ್ಟಾಗುವ ಕಾಲಕ್ಕೆ ಸರಿಯಾಗಿ ಜೋಗಿನಿಂದಿಲ್ಲಿಗೆ ವಿದ್ಯುತ್ ಶಕ್ತಿಯನ್ನು ಕೊಡುವಂತೆ ವಿನಂತಿಸಿಕೊಳ್ಳುವ ಮಂಗಳೂರು ಮುನ್ಸಿಪಾಲಿಟಿಯ ಪರವಾದ ಒಂದು ಶಿಷ್ಟಮಂಡಳ ಕೌನ್ಸಿಲರ್ ಶ್ರೀ ನರಸಪ್ಪಯ್ಯ, ಚೆಯರ್‌ಮೇನ್ ಶ್ರೀ ಎಲ್ ಸಿ ಪ್ರಾಯಿಸ್ ಇವರಿಂದ ಕೂಡಿ ಅತ್ತ ತೆರಳಬೇಕೆಂದೂ, ಇದೇ ತಾ 1-4 48ರಿಂದ ಮುನ್ಸಿಪಲ್ ಕೆಲಸಗಾರರಿಗೆ ಮನೆ ಬಾಡಿಗೆ ಭತ್ತೆಯನ್ನು ಕೊಡಬೇಕೆಂದೂ ಈಚೆಗೆ ಜರಗಿದ ನಗರಸಭಾಧಿವೇಶನದಲ್ಲಿ ನಿರ್ಧರಿಸಲಾಗಿದೆ

ಮದ್ಯನಿಷೇಧ ಮೊಕದ್ದಮೆ

ಮಂಗಳೂರಿನ ಇದಿನಬ್ಬ ಕುಞಿ ಸಾಹೇಬ ಮತ್ತು ಹಸನ್ ಎಂಬ ಮೂವರು ಗಾಂಜಾ ಸೇವಿಸಿದ್ದ ಆರೋಪದ ಮೇಲೆ ಪ್ರತಿಯೊಬ್ಬರಿಗೆ ೫೦ ರೂಪಾಯಿಗಳಂತೆಯೂ, ಕಾವೂರಿನ ರುಕ್ಮಿಣಿ ಎಂಬಾಕೆ ನೀರು ಹಾಲಿಗೆ ಬೆರಸಿ ಮಾರಿದ್ದಳೆಂದು ೧೫ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿರುವುವು

ರೇಶನ್ ಆಫೀಸರರಲ್ಲಿಗೆ ಅಕ್ಕಿ ಮಾರಾಟ

ಕೊಡಿಯಾಲ್‌ಬೈಲಿನ ಬಾಬುಶೆಟ್ಟಿ ಎಂಬಾತನು ಇಲ್ಲಿಯ ಸೆಂಟ್ರಲ್ ರೇಶನ್ ಆಫೀಸರರಾದ ವಿ। ಆರ್ ಎ ಪಿಂಟೋರ ಮನೆಗೆ ಒಂದು ಮುಡಿ ಅಕ್ಕಿ ಮಾರತಂದಿದ್ದನೆಂಬ ಆರೋಪದ ಮೇಲೆ ೫ ರೂಪಾಯಿ ಜುಲ್ಮಾನೆಗೊಳಗಾಗಿರುವನು ತಾನು ಅಕ್ಕಿ ಮಾರಾಟಕ್ಕೆ ಗಿರಾಕಿ ನೋಡಲು ಬಂದ ಮನೆ ರೇಶನ್ ಮುಖ್ಯಾಧಿಕಾರಿಯದೆಂದು ತಿಳಿಯದೆ ಬಾಬುಶೆಟ್ಟಿಯು ಸಿಕ್ಕಿಬಿದ್ದ

ಪೋಪ್ ಗುರುಗಳ ದಿನಾಚರಣೆ

ಕಳೆದ ತಾ ೪ರಂದು ಆದಿತ್ಯವಾರ ಸಂಜೆ ಇಲ್ಲಿಯ ಮಿಲಾಗ್ರಿಸ್ ಇಗರ್ಜಿ ವಠಾರದಲ್ಲಿ ಪೋಪರವರ ದಿನಾಚರಣೆ ಮಂಗಳೂರು ಬಿಶಪರ ಅಧ್ಯಕ್ಷತೆಯಲ್ಲಿ ಜರಗಿತು ಪೋಪರ ಇತಿಹಾಸದ ಕುರಿತೂ, ಮುಷ್ಕರ ಶಾಸ್ತ್ರದ ಕುರಿತೂ ಭಾಷಣಗಳಾದುವು ಪೋಪ ಗುರುಗಳಲ್ಲಿ ಭಕ್ತಿ ವಿಶ್ವಾಸ ಸೂಚಿಸಿ ಇಲ್ಲಿಯ ಕಥೋಲಿಕ್ ಸಮಾಜದವರು ತಮ್ಮ ಮುಖ್ಯ ಗುರುವಿಗೆ ಒಂದು ಸಂದೇಶವನ್ನು ಕೇಬಲ್ ಮೂಲಕ ಕಳುಹಿಸಿರುವರು

ಮುನ್ಸಿಪಲ್ ತೆರಿಗೆ ಸಂಪೂರ್ಣ ವಸೂಲಿ

ನಗರದೊಳಗಿನ ಕಟ್ಟಡ, ಆಸ್ತಿ, ವಾಹನಾದಿ ಎಲ್ಲ ತೆರಿಗೆಗಳೂ ಈ ಮುನ್ಸಿಪಾಲಿಟಿಗೆ ಇದೇ ಮಾರ್ಚ ೩೧ಕ್ಕೆ ಸಲ್ಲಬೇಕಾದುದು ನೂರಕ್ಕೆ ನೂರು ವಸೂಲಾಗಿದೆ ಎಂದು ತಿಳಿದುಬರುತ್ತದೆ ಹೀಗೆ ಮುನ್ಸಿಪಾಲಿಟಿಯ ತೆರಿಗೆ ಸಂಪೂರ್ಣ ವಸೂಲಾದುದು ಇದೇ ಮೊದಲನೇಬಾರಿ

ಮಾರಿಪೂಜೆ ನಿಂತಿತು

ಸುರತ್ಕಲಿನಲ್ಲಿ ತಾ. ೩೦-೩-೪೮ ರಲ್ಲಿ ಮಾರಿಪೂಜೆ ನಡೆವುದಿತ್ತು. ಕೋಣ, ಕುರಿ, ಕೋಳಿ ಮೊದಲಾದುದು ಬಲಿಯಾಗಬಾರದೆಂದು ಜಿಲ್ಲಾ ಕೊಂಗ್ರೆಸ್ ಕಮಿಟಿಯ ಪ್ರಕಟಣೆಯಿತ್ತು, ಆದರೂ ಪ್ರಾಣಿಬಲಿ ಸಂಭವಿಸಲು ಕೊಂಗ್ರೆಸ್ ಕಮಿಟಿಯು ಅಲ್ಲಿ ಸತ್ಯಾಗ್ರಹ ನಡೆಸುವ ನಿರ್ಧಾರವಾಡಿತು ಮಾರಿಪೂಜೆ ಸಮಯದಲ್ಲಿ ಶಾಂತಿಭಂಗವಾದೀತೆಂದು ಅಧಿಕಾರಿಗಳು ೧೪೪ನೇ ಸೆಕ್ಷನ್ ಆಕಡೆಗಳಲ್ಲಿ ಜಾರಿಮಾಡಿದ್ದರು ಹೀಗೆ ಈ ಸಲದ ಮಾರಿಪೂಜೆ ಮುಂದೆ ಹಾಕಲ್ಪಟ್ಟಿದೆ

ಹ್ಯಾಸ್ಕೂಲು ವಾರ್ಷಿಕೋತ್ಸವ

ಇಲ್ಲಿಯ ರುಜಾರಿಯೋ ಹ್ಯಾಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ ೫ರಂದು ಅವರ ವಠಾರದಲ್ಲಿ ಜರಗಿತು ಡಿ। ಮತ್ತು ಸೆಶನ್ ಜಡ್ಜರಾದ ಶ್ರೀ॥ ಸಿ. ಕೃಷ್ಣಮೂಸೆ, ಬಿ ಎ ಬಿ ಎಲ್ ಅವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಕೃಷ್ಣಮೂಸೆಯವರು ಬಹುಮಾನ ವಿತರಣೆ ಮಾಡಿದರು ಅಧ್ಯಕ್ಷರು ಸಂಸ್ಕೃತದ ಪುನರ್ಘಟನೆಯ ಕುರಿತು ಸೂಚನೆಕೊಟ್ಟರು ವಿವಿಧ ವಿನೋದಾವಳಿಗಳಿದ್ದವು

ವಿಕ್ಟೋರಿಯಾ ಜ್ಯುಬಲಿ ವಿದ್ಯಾವೇತನಗಳು

1948 49ನೇ ವರ್ಷಕ್ಕೆ ಕೆಳಗಿನ ವಿಷಯಗಳನ್ನು ಕಲಿಯುವ ನಮ್ಮ ದ ಕ ಜಿಲ್ಲೆಯ ಬ್ರಾಹ್ಮಣ, ಅಬ್ರಾಹ್ಮಣ ಹಿಂದೂ ಮತ್ತು ಇತರ ಮುಸ್ಲಿಂ ಹೀಗೆ ಮೂರು ವಿದ್ಯಾರ್ಥಿಗಳಿಗೆ ಮೂರು ಮಾಸಿಕ ವೇತನಗಳು ವಿಕ್ಟೋರಿಯಾ ಜುಬಿಲಿ ಸ್ಕಾಲರ್‌ಶಿಪ್ ಎಂಡೋಮೆಂಟ್ ಫಂಡಿನಿಂದ ಕೊಡಲಾಗುವುದು ವಿಷಯಗಳು ಸಿವಿಲ್ ಮುನಿಸಿಪಲ್ ಇಲೆಕ್ಟ್ರಿಕಲ್ ಮೆಕೆನಿಕಲ್, ಸೆನಿಟರಿ ಇಲ್ಲವೆ ಮೈರೈನ್ ಇಂಜಿನಿಯರಿಂಗ್ ಕಾಡುಗಾರಿಕೆ ಶಾಸ್ತ್ರ, ಕೃಷಿಶಾಸ್ತ್ರ ಖನಿಜ ಮತ್ತು ಲೋಹಶಾಸ್ತ್ರ ಈ ಕುರಿತು ತಾ 25 6 48 ಮತ್ತು ತಾ 26-6-48 ಈ ಎರಡು ದಿನಗಳಲ್ಲಿ ಸ್ಪರ್ಧಾ ಪರೀಕ್ಷೆಯೊಂದು ನಡೆಯುವುದು ವೇತನಾಪೇಕ್ಷಿಗಳು ಅರ್ಜಿಗಳನ್ನು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಪಡೆಯಬಹುದು ಅರ್ಜಿ ಕಳುಹಿಸುವ ಕೊನೆ ತಾರೀಖು 15-6-1948 ಹೀಗೆಂದು ಮೇಲ್ಕಂಡ ಫಂಡಿನ ಅಧ್ಯಕ್ಷರಾದ ದ ಕ ಜಿಲ್ಲಾ ಡಿಸ್ಟ್ರಿಕ್ಟ್ ಜಡ್ಜರು ತಿಳಿಸುತ್ತಾರೆ

ಸಿಹಿಸುದ್ದಿ ಸಂಗ್ರಹ

ಮೆಸೆಚುಸೆಟ್ಸಿನ ಪ್ರೊಲ್ಕ್ ಎಂಬ ಮಹಿಳೆಯು ತಾಯ್ತನದ ಹೊಸ ದಾಖಲೆಯನ್ನು ನಿರ್ಮಿಸಿದ್ದಾಳೆ ಕಳೆದ ಮೂರು ವರ್ಷದ ಪ್ರತಿ ಒಕ್ಟೋಬರ ತಿಂಗಳಲ್ಲಿ ಅವಳಿಗೆ ಅವಳಿಜವಳಿ ಮಕ್ಕಳು ಹುಟ್ಟಿದ್ದಾರೆ ಈ ವರ್ಷವೂ ಆ ದಾಖಲೆಯನ್ನಿಟ್ಟುಕೊಳ್ಳಲು ನಿರೀಕ್ಷಿಸಲಾಗಿದೆ.

✠

ಫ್ರಾನ್ಸಿನ ಪೊಯಿಟಿಯರ್‍ಸ್ ಗ್ರಾಮದ ಬಳಿ ವಾಸಿಸುವ ಡುಬೊಯಿಸ್ ಎಂಬ ಮಹಿಳೆ 41ನೇ ವರ್ಷದಲ್ಲಿ ತನ್ನ 20ನೇ ಮಗುವಿಗೆ ಜನ್ಮಕೊಟ್ಟಿರುವರು ಅವಳ ಹಿರೇ ಮಗನಿಗೆ 26 ವರ್ಷ ವಯಸ್ಸು

✠

ಅಮೇರಿಕದ ಮೂರು ಮಿಲಿಯ ಸಸ್ಯಹಾರಿಗಳು ಬ್ರಿಟಿಷ್ ಮಂತ್ರಿಮಂಡಳದ ಸದಸ್ಯರಾದ ಸರ್ ಸ್ಟಾಫರ್ಡ್ ಕ್ರಿಪ್ಸರಿಗೆ ಒಂದು ಪತ್ರ ಬರೆದು "ನೀವೂ ಸಸ್ಯಹಾರಿಗಳಾಗಿರುವುದರಿಂದ ಬ್ರಿಟನಿನ ಮುಂದಿನ ಪ್ರಧಾನರಾಗಲು ಅರ್ಹರಿರುವಿರಿ ಬುದ್ಧ, ಗಾಂಧಿ ಪ್ಲಾಟೊ ಸೊಕ್ರೆಟಿಸ್ ಮೊದಲಾದ ಜಗತ್ಪ್ರಸಿದ್ಧ ಶಾಖಾಹಾರಿ ತತ್ವಜ್ಞಾನಿಗಳ ಶ್ರೇಣಿಯಲ್ಲಿ ನಿಮ್ಮನ್ನು ಸರಿಗಣಿಸಲಾಗುವುದ[illegible]ಎಂದು ಬರೆದಿರುವರು.

✠

ಜನಾಂಗಸಂಘಕ್ಕೆ ನೈತಿಕ ಮತ್ತು ಆಧ್ಯಾತ್ಮಿಕ ಪ[illegible]ಬಲವನ್ನು ಕೊಡಲು ನ್ಯೂಯೋರ್ಕಿನಲ್ಲಿ ಬರುವ ತಿಂಗಳಲ್ಲಿ ನಡೆಯುವ ವಿಶ್ವ ಪರಿಷತ್ತಿನಲ್ಲಿ ಭಾಗವಹಿಸಲು ಪ್ರಖ್ಯಾತ ಭಾರತೀಯ ಶಿಕ್ಷಣತಜ್ಞರೂ ತತ್ವಶಾಸ್ತ್ರಜ್ಞರೂ ಆದ ಸರ್ ಸರ್ವಪಲ್ಲಿ ರಾಧಾಕೃಷ್ಣನ[illegible] ಆಹ್ವಾನಿಸಲಾಗಿದೆ ರೋಮನ್ ಕಥೋಲಿಕ್ ಪ್ರಾಟೆಸ್ಟೆಂಟ್ ಬೌದ್ಧ, ಹಿಂದೂ ಮತ್ತು ಯಹೂದಿ ಮತಗಳ ಪ್ರತಿನಿಧಿಗಳೂ ಇದರಲ್ಲಿ ಭಾಗವಹಿಸುವರು.

NOTICE

In the Court of the Subordinate Judge of South Kanara

R E P No 30 of 1948
O S No 84 of 1948

Between

The Canara Commercial Corporation Limited, Mangalore by its managing Director M Srinivasa Nayak — *Petitioner*

and

D Mohana Pai — *Respondent*

To

D Mohana Pai son of D Vittal Annappa Pai Dongerkery Mangalore

Take notice that the above petition will come on for hearing on 24-6-1948 at 11 A M to settle the terms of the sale proclamation You may appear either in person or by a pleader on the said date, failing which it will be decided in your absence

By order of the court

M A Kamath,

Vakil for petitioner

Mangalore 3-4-1948

✠

NOTICE

In the District Court of South Kanara

O P No 44/1948

In the matter of Debt due to Sada Mohamad Meeran Saheb the deceased

(1) Sada Mahamad Areef, (2) Bibi Fatima (3) Bibi Khatija, (4) Bibi Khairunnisa (5) Bibi Rukhia Petitioners.

To

Whomsoever it may concern

Notice is hereby given that on 11-3-1948 application was made to this Court for the grant to the 1st Petitioner a certificate under the succession act with respect to certain debts of Sada Mohamad Meeran Saheb who died intestate in Bhatkal on 27-8-1947 and that 17-6-1948 at 11 A M has been appointed for the hearing thereof when you are at liberty to appear and oppose the same

K B Shanker Rao.

Vakil for Petitioners.

Mangalore. 31-3-1948

✠

ಸ್ವೀಕಾರ ಮತ್ತು ವಿಮರ್ಶೆ

ಭಾರತೀಯ ಸಂಸ್ಕೃತಿ- ಲೇಖಕ ಸಾನೇ ಗುರೂಜಿ—ಅನುವಾದಕ ಭಾಸ್ಕರ ಗೋವಿಂದ ಗೋಖಲೆ, ವಕೀಲ ಧಾರವಾಡ, ಪ್ರಕಾಶಕರು—ಶ್ರೀ ಬಸವಣ್ಣೆಪ್ಪ ಸಂಕೇಶ್ವರ, ಹುಬ್ಬಳ್ಳಿ. ಬೆಲೆ ರೂ. ೪.

ಶ್ರೀ ಪಾಂಡುರಂಗ ಸದಾಶಿವ ಸಾನೆ ಅಥವಾ ಸಾನೇ ಗುರೂಜಿಯೆಂಬ ಮಹಾರಾಷ್ಟ್ರದ ಸಾಹಿತಿ ಹಾಗೂ ದೇಶಸೇವಕರು ಮರಾಠಿಯಲ್ಲಿ ಬರೆದು ಗ್ರಂಥದ ಅನುವಾದವಿದು.

ಸಾನೆ ಗುರೂಜಿಯವರು ಎಮ್ ಎ ಮುಗಿಯುವಲ್ಲಿ ತನಕ ವಿದ್ಯಾಭ್ಯಾಸ ಮಾಡಿ ಅಮಳನೇರ ತತ್ವಜ್ಞಾನ ಮಂದಿರದಲ್ಲಿ ಧರ್ಮಗಳ ಅಭ್ಯಾಸ ಮಾಡಿ ಅಮಳನೇರ ಶಾಲೆಯಲ್ಲಿ ಶಿಕ್ಷಕರಿದ್ದು ಕೊನೆಗೆ 1930ರಲ್ಲಿ ರಾಜಕೀಯ ಆಂದೋಲನಕ್ಕೆ ಸೇರಿ ಹಲವು ಬಾರಿ ಕಾರಾಗೃಹ ಕಂಡವರೆಂದು ಅನುವಾದಕರ ಮಾತಿನಿಂದ ತಿಳಿದುಬರುತ್ತದೆ. ಇವರು ಇತ್ತೀಚೆಗೆ ಪಂಢರಾಪುರ ವಿಠೋಬ ದೇವಸ್ಥಾನದಲ್ಲಿ ಹರಿಜನ ಪ್ರವೇಶ ಸಾಧಿಸುವ ಬಗ್ಗೆ ಉಪವಾಸ ಕೈಕೊಂಡು ಯಶಸ್ವಿಯಾದದ್ದು ಹಾಗೂ ಮರಾಠಿಗರೊಬ್ಬನಿಂದ ಗಾಂಧೀಜಿಯವರ ಕೊಲೆಯಾದ ಪ್ರಾಯಶ್ಚಿತ್ತಕ್ಕಾಗಿ 21 ದಿನಗಳ ಉಪವಾಸ ಪೂರ್ಣ ಮಾಡಿದ್ದು ಇತ್ತೀಚೆಗಿನ ಪತ್ರಿಕೆಗಳನ್ನು ಓದುವವರೆಲ್ಲ ತಿಳಿದ ವಿಷಯ.

ಈ ಗ್ರಂಥದಲ್ಲಿ ಭಾರತೀಯ ಸಂಸ್ಕೃತಿಯನ್ನು ಅತ್ಯುತ್ತಮ ರೀತಿಯಲ್ಲಿ ಚಿತ್ರಿಸಲಾಗಿದೆಯೆಂಬ ಮಾತು ನಿರ್ವಿವಾದ. ಇಲ್ಲಿ ಕಂಡುಬರುವಂತಹದು ಪಾಂಡಿತ್ಯ ಪ್ರದರ್ಶನವಲ್ಲ.

"ನೀವು ಈ ಪುಸ್ತಕದಲ್ಲಿ ಭಾರತೀಯ ಸಂಸ್ಕೃತಿಯ ಅತ್ಮವನ್ನು ಕಾಣುವಿರಿ. ಅದರ ಒಳದರ್ಶನವನ್ನು ಪಡೆಯುವಿರಿ. ಭಾರತೀಯ ಸಂಸ್ಕೃತಿಯ ಗರ್ಭಗುಡಿಯಲ್ಲಿಯೇ ಪ್ರವೇಶಿಸುವಿರಿ" ಎಂಬುದಾಗಿ ಗ್ರಂಥಕರ್ತರು ತನ್ನ ಮುನ್ನುಡಿಯಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ.

"ಭಾರತೀಯ ಸಂಸ್ಕೃತಿ"ಯಲ್ಲಿ ಗುರುಜಿಯವರು ತಮ್ಮ ಹೃದಯ ಸಾಗರವನ್ನೆ ಬರಿದು ಮಾಡಿದ್ದಾರೆ. ಇದರ ಭಾಷೆ ಸರಳವಾದದ್ದು, ಭಾವನೆ ತುಂಬಿ ಸೂಸಿದೆ. ಮನಸ್ಸಿನ ಮೇಲೆ ಪರಿಣಾಮ ಮಾಡುವ ಗ್ರಂಥ ಇದು ಎಂಬುದಾಗಿ ಅನುವಾದಕರು ಹೇಳಿದ್ದಾರೆ.

ಇವರಿಬ್ಬರ ಮೇಲಿನ ಮಾತುಗಳೂ ಸತ್ಯವಿರುತ್ತವೆಂದು ಈ ಗ್ರಂಥವನ್ನು ಓದಿದವರೆಲ್ಲರೂ ಒಪ್ಪುವರು. ಅಮೂಲ್ಯವಾದ ಈ ಗ್ರಂಥವನ್ನು ಕನ್ನಡಿಗರಿಗೆ ಕೊಟ್ಟ ಬಗ್ಗೆ ಅನುವಾದಕ ಹಾಗೂ ಪ್ರಕಾಶಕರನ್ನು ನಾವು ಅಭಿನಂದಿಸುತ್ತೇವೆ.

ಈ ಗ್ರಂಥದಲ್ಲಿ ಭಾರತೀಯ ಸಂಸ್ಕೃತಿಯ ಜೀವಂತ ಚಿತ್ರವಿದೆ. ಈಗಿನ ಜೀವನಕ್ಕೆ ಭಾರತೀಯ ಸಂಸ್ಕೃತಿಯ ಸಂದೇಶವನ್ನು ಅನ್ವಯಿಸಿ ತೋರಿಸುವ ಯತ್ನವನ್ನು ಇಲ್ಲಿ ಯಶಸ್ವಿಯಾಗಿ ಮಾಡಲಾಗಿದೆ. ಈ ಲೇಖಕರಿಗೆ ಭಾರತೀಯ ಸಂಸ್ಕೃತಿಯ ಮೇಲೆ ಅಸೀಮ ಭಕ್ತಿ ಮತ್ತು ಆದರಗಳಿರುತ್ತವೆಂಬುದು ಗ್ರಂಥದಲ್ಲಿಯ ಪ್ರತಿಯೊಂದು ವಾಕ್ಯವು ತೋರಿಸುತ್ತಿದೆ.

ಈ ಲೇಖಕರು ಎಮ್ ಎ ಪದವೀಧರರೆಂದು ಆದಿಯಲ್ಲಿಯೇ ಹೇಳಿದೆವು. ಇವರಿಗೆ ಆಧುನಿಕ ಜಗತ್ತಿನ ಕುರಿತು ತುಂಬಾ ಮಾಹಿತಿಯೂ ಇರುತದೆ. ಹೇಗೆ ಭಾರತೀಯ ಸಂಸ್ಕೃತಿಯ ಭಕ್ತರೋ ಅಷ್ಟೇ ಇವರು ಸಾಮ್ಯವಾದಿಗಳೂ ಇದ್ದಾರೆ.

ಈ ಲೇಖಕರ ಸಾಮ್ಯವಾದವು ಆಧುನಿಕ ಸಾಮ್ಯವಾದವೆಂಬ ಬಗ್ಗೆ ಸಂಶಯವಿಲ್ಲ. ಇದವರು ಭಾರತೀಯ ಸಂಸ್ಕೃತಿಯಿಂದ ಕಂಡುಕೊಂಡುದಲ್ಲ. ಆದರೆ ಭಾರತೀಯ ಸಂಸ್ಕೃತಿಯ ಸಂದೇಶವೂ ಆಧುನಿಕ ಸಾಮ್ಯವಾದದ ಸಂದೇಶವೂ ಒಂದೇ ಇರುತ್ತದೆಂಬ ಇತ್ಯರ್ಥಕ್ಕೆ ಈ ಲೇಖಕರು ಬಂದಿದ್ದು ಇದನ್ನು ಸ್ಪಷ್ಟಗೊಳಿಸುವುದೇ ಈ ಗ್ರಂಥದ ಉದ್ದೇಶವೆಂಬಂತಿದೆ.

ಹೀಗೆ ಎರಡು ಕಡೆಗಳಿಂದ ಲೇಖಕರು ಕಂಡ ಅಭಿಪ್ರಾಯಗಳ ಸಮನ್ವಯ ಸಾಧಿಸುವ ಯತ್ನವೆಂಬುದರಿಂದಲೇ ಭಾರತೀಯ ಸಂಸ್ಕೃತಿಯ ಇಷ್ಟು ಸುಂದರ ಚಿತ್ರದ ನಡುವೆ ಕೃತ್ರಿಮೋಪಾಯಗಳಿಂದ ಸಾಧಿಸುವ ಸಂತತಿ ನಿಯಮನವನ್ನು ಲೇಖಕರು ಸಮರ್ಥಿಸುವಂತಾಗಿದೆ. ವರ್ಗ ಕಲಹದ ತತ್ವವನ್ನು ಪ್ರತಿಪಾದಿಸಿದ ಕಾರ್ಲ ಮಾರ್ಕ್ಸನು ಒಬ್ಬ ಋಷಿಯಾಗಿದ್ದಾನೆ. ಲೆನಿನನಲ್ಲಿ ಲೇಖಕರು ಶ್ರೀ ಕೃಷ್ಣನನ್ನು ಕಾಣುತ್ತಿದ್ದಾರೆ.

ಇದನ್ನೆಲ್ಲ ಲೇಖಕರ ದೋಷವೆಂದು ಇಲ್ಲಿ ಹೇಳಿದ್ದಲ್ಲ. ಒಂದು ಬಗೆಯಿಂದ ಇವು ಅವರ ಔದಾರ್ಯ ಮತ್ತು ದೊಡ್ಡ ಮನಸ್ಸುಗಳನ್ನೇ ಸೂಚಿಸುತ್ತವೆ. ಕವಿವರ್ಯ ರವೀಂದ್ರರು ಸಂತತಿ ನಿಯಮನವನ್ನು ಸಮರ್ಥಿಸಿಲ್ಲವೆ? ಎಲ್ಲೆಲ್ಲಿ ವಿಭೂತಿ ಕಂಡುಬರುವುದೊ ಅದೆಲ್ಲ ತನ್ನ ಅಂಶವೇ ಎಂದು ಶ್ರೀ ಕೃಷ್ಣನೇ ಉಪದೇಶಿಸಿರುವಾಗ ಮಾರ್ಕ್ಸ ಮತ್ತು ಲೆನಿನರಲ್ಲಿ ಇವರಿಗೆ ಗೌರವವೆನ್ನಿಸಿದ್ದರಲ್ಲಿ ದೋಷವಿಲ್ಲ.

ಸಮ ದೃಷ್ಟಿಯನ್ನು ಸಾರಿದ ಭಾರತೀಯ ಸಂಸ್ಕೃತಿಯು ಸಾಮ್ಯವಾದವನ್ನೇ ಪ್ರತಿಪಾದಿಸುತ್ತಿದೆಯೆಂದು ಲೇಖಕರು ಭಾವಿಸಿದುದರಲ್ಲಿಯೂ ದೋಷವಿಲ್ಲ.

ಸ್ಥೂಲಮಾನದಿಂದ ನೋಡಿದರೆ ಲೇಖಕರು ಹೇಳಿದ ಮಾತುಗಳೆಲ್ಲವೂ ನಿಜವೇ ಇರುತ್ತವೆ. ಆದರೆ ಇಂಥ ಗ್ರಂಥದಲ್ಲಿ ಕೇವಲ ಸ್ಥೂಲದೃಷ್ಟಿ ಮಾತ್ರ ಸಾಲದು. ಧರ್ಮದ ಸೂಕ್ಷ್ಮ ಪರಿಶೀಲನವೂ ಅಗತ್ಯ. ಈ ದೃಷ್ಟಿಯಿಂದ ಹೇಳುವುದಿದ್ದರೆ ಸಂತತಿ ಸಂಯಮನವು ಧಾರ್ಮಿಕ ದೃಷ್ಟಿಗೆ ಸಮ್ಮತವೆಂದು ಭಾರತೀಯ ಸಂಸ್ಕೃತಿಯು ಎಂದಿಗೂ ಹೇಳುವಂತಿಲ್ಲವೆಂಬುದು ಖಂಡಿತ ಮಾತು.

ಲೇಖಕರು ಅಹಿಂಸಾ ಧರ್ಮಕ್ಕೆ ಒಂದು ಅಧ್ಯಾಯವನ್ನು ಕೊಟ್ಟಿದ್ದಾರೆ. ಇದು ಇಂದಿನ ಯುಗಧರ್ಮವೆಂಬ ಮಹತ್ವದ ಸತ್ಯ ಇವರ ಮನಸ್ಸಿಗೆ ಪೂರ್ಣ ನಾಟಿದಂತೆ ಕಾಣುವುದಿಲ್ಲ. ಹಾಗಾಗಿದ್ದರೆ ಮಾರ್ಕ್ಸ ಮತ್ತು ಲೆನಿನರ ಪ್ರಶಂಸೆಗೆ ಇವರು ಹೋಗುತ್ತಿರಲಿಲ್ಲ. ಇವರಿಬ್ಬರು ಮಹಾಶುಭಾವರಲ್ಲವೆಂದು ನಾವು ಪ್ರತಿಪಾದಿಸುತ್ತಿಲ್ಲ. ಆದರೂ ಭಾರತೀಯ ಸಂಸ್ಕೃತಿಯು ಇವರನ್ನು ಇಂದು ಹೊಗಳುವಂಥ ಪರಿಸ್ಥಿತಿ ಈಗಿನ ಯುಗಕ್ಕೆ ಸಲ್ಲದೆಂದೇ ಅನ್ನಿಸುತ್ತದೆ.

ಅಂತೂ ಈ ಗ್ರಂಥವು ಅತ್ಯಮೂಲ್ಯ ಗ್ರಂಥವೆಂಬ ಮಾತು ಸತ್ಯ. ನಮ್ಮ ಆಧುನಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಆಧುನಿಕ ಶಿಕ್ಷಿತ ಜನರು ಇವರೆಲ್ಲರಿಗೆ ಭಾರತೀಯ ಸಂಸ್ಕೃತಿಯ ಮಹತ ಹಾಗೂ ಸೌಂದರ್ಯದ ಪರಿಚಯ ಮಾಡಿಕೊಡಲು ಇದಕ್ಕೂ ಅನುಕೂಲವಾಗಿ ಗ್ರಂಥವಿಲ್ಲವೆಂದರೆ ಅತಿಶಯೋಕ್ತಿಯಲ್ಲ.

ಈ ಗ್ರಂಥವನ್ನು ಎಲ್ಲ ಕನ್ನಡಿಗರೂ ಅತ್ಯಾದರದಿಂದ ಓದಬೇಕಾಗಿ ಸೂಚಿಸುತ್ತೇವೆ.

—o—

ವಿಜ್ಞಾನದ ವಿಚಿತ್ರಗಳು

ಲೇಖಕ—ಕೆ ವಿಟ್ಠಲಶೆಣೈ, ಬಿ.ಎ ಎಲ್ ಟಿ ಪ್ರಕಾಶಕರು ಕೆ ಆರ್ ಶೆಣೈ, ಕೋರ್ಟ ರೋಡು, ಉಡುಪಿ. ಬೆಲೆ ರೂ 2—4 0

"ಕನ್ನಡದಲ್ಲಿ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳೇ ಕಡಿಮೆ. ಇದುವರೆಗೆ ಪ್ರಕಟವಾಗಿರುವ ಕೆಲವು ಪುಸ್ತಕಗಳು ಯಾವುದಾದರೂ ಒಂದೇ ವಿಷಯವನ್ನೆತ್ತಿ ಸವಿಸ್ತಾರವಾಗಿ ಬರೆದವುಗಳಾಗಿವೆ. ಆದರೆ ಜನತೆಗೆ ಬೇಕಾಗಿರುವುದು ತಾವಿರುವ ವೈಜ್ಞಾನಿಕ ಆವರಣವೆಲ್ಲದರ ಸಾಧಾರಣ ಪರಿಚಯವೇ ಹೊರತು ಒಂದೆರಡು ಉಪಕರಣಗಳ ವಿಶೇಷ ಜ್ಞಾನವಲ್ಲ. ಈ ತತ್ವವನ್ನಿಟ್ಟುಕೊಂಡು ಇಂಗ್ಲಿಷಿನಲ್ಲಿ ಬರೆಯಲ್ಪಟ್ಟ ಹಲವು ಹೊಸ ಗ್ರಂಥಗಳ ಮಾದರಿಯಲ್ಲಿ ಈ ಪ್ರಯತ್ನವು ನಡೆದಿದೆ. ವಿದ್ಯಾರ್ಥಿಗಳ ಮತ್ತು ಪ್ರಾಥಮಿಕ ಶಿಕ್ಷಕರ ಜ್ಞಾನವಿಸ್ತಾರಕ್ಕೆ ಇದು ನೆರವಾದೀತೆಂಬ ನಿರೀಕ್ಷೆಯೂ ಇದೆ.

ಈ ರೀತಿ ಗ್ರಂಥಕರ್ತರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ.

"ಜನತೆಗಾಗಿ ಬರೆಯುತ್ತಿರುವ ಇಂತಹ ಬರಹಗಳು ವೇದಶಾಸ್ತ್ರೀಯವಾಗಿಯೂ ಗಡುಸಾಗಿಯೂ ಇರಬಾರದು. ತಿಳಿಯುವ ಭಾಷೆ, ಸ್ಪಷ್ಟವಾದ ವಿಚಾರಸರಣಿ ಚಿತ್ರ, ಬಾಹ್ಯರೂಪುಗಳೆಲ್ಲ ಸೇರಿ ಮನವೊಲಿಸುವಂತಿರಬೇಕು. ಶ್ರೀ ಕಾರಂತರ ಈ ಮಾತುಗಳನ್ನೇ ಆದರ್ಶವಾಗಿಟ್ಟು ಆ ಗುರಿಯನ್ನು ಮುಟ್ಟುವಂತೆ ಪ್ರಯತ್ನ ಮಾಡಿರುವುದಾಗಿಯೂ ಲೇಖಕರು ಹೇಳುತ್ತಾರೆ.

ಶ್ರೀ ವಿಟ್ಠಲ ಶೆಣೈಯವರ ಈ ಪ್ರಯತ್ನಗಳು ಅತ್ಯಂತ ಯಶಸ್ವಿಯಾಗಿವೆಯೆಂದು ನಾವು ಇವರಿಗೆ ಭರವಸೆ ಹೇಳಬಯಸುತ್ತೇವೆ.

ಇಷ್ಟು ಸರಸವಾಗಿ ಸುಂದರವಾಗಿ ಬರೆಯಲ್ಪಟ್ಟ ಈ ಬಗೆಯ ಗ್ರಂಥ ಹಾಗೂ ಇಷ್ಟು ಚಿತ್ರಗಳಿಂದ ಕೂಡಿ ಅಂದವಾಗಿ ಪ್ರಕಟವಾದ ಗ್ರಂಥ ಕನ್ನಡದಲ್ಲಿ ಇದು ತನಕ ಬೇರೊಂದು ಬಂದಿಲ್ಲವೆಂದ ಅನುಮಾನವಿಲ್ಲದೆ ಹೇಳಬಹುದು. ಇಂಥ ಗ್ರಂಥಗಳು ಕನ್ನಡಕ್ಕೆ ತುಂಬಾ ಬೇಕು. ಈ ಲೇಖಕರು ಇನ್ನೂ ಇಂತಹ ಅನೇಕ ಗ್ರಂಥಗಳನ್ನು ಒದಗಿಸಿ ಕನ್ನಡದ ಆಧುನಿಕ ಸಾಹಿತ್ಯ ಬೆಳೆಯುವಂತಾಗಲೆಂದು ಹಾರೈಸುತ್ತೇವೆ. ಮಾತ್ರವಲ್ಲ ಈ ಗ್ರಂಥವನ್ನು ಇಷ್ಟು ಸುಂದರವಾಗಿ ಮುದ್ರಿಸಿದ ಮುದ್ರಣಾಲಯದವರಿಗೂ ಅಭಿನಂದಿಸುತ್ತೇವೆ.

ಗಂಟಲು ಬೇನೆ
ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಪೆಪ್ಸು ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವವು ಶ್ವಾಸದೊಡನೆ ಕೂಡಿ ನಿಮ್ಮ ಶ್ವಾಸಕೋಶವನ್ನು ಸೇರುವುದು.

ಪೆಪ್ಸು, ನೆಗಡಿ ಕೆಮ್ಮು, ಬ್ರೊಂಕೈಟಿಸ್, ಇನಫ್ಲುಯೆಂಜಾ ಮತ್ತಿನ್ನಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

No 4 ಅದಿಲ್ಲದೆ ಎಂದೂ ಇರದಿರಿ

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಆರಭ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು
23—12—1947

ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . 2½% p. a.
5 & 6 months . . . 2¾% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷದುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 16—4—1948 [ಸಂಚಿಕೆ 15]

ರಶ್ಯಕ್ಕೆ ತಡೆಹಾಕದಿದ್ದರೆ ಉಳಿಗಾಲವಿಲ್ಲ

ಈ ಸಂಕ್ಷೇಪ ವಾರ್ತೆಗಳನ್ನು ಗಮನಿಸಿರಿ. ಚೀನದಲ್ಲಿ ಕಮ್ಯುನಿಸ್ಟ್ ದಳಗಳು ಮುನ್ನುಗ್ಗುತ್ತಿವೆ.

ಚೆಕೋಸ್ಲೊವೇಕಿಯದಲ್ಲಿ ಕಮ್ಯುನಿಸ್ಟ್ ಮಂತ್ರಿ ಮಂಡಳ ಸ್ಥಾಪನೆ

ಇಂಡೋಚೀನದಲ್ಲಿ ಕಮ್ಯುನಿಸ್ಟ್ ಒಳಸಂಚು

ಅರಬರಿಗೆ ರಶ್ಯನ್ ಶಸ್ತ್ರಾಸ್ತ್ರ ಪೂರೈಕೆ

ಪಾಕಿಸ್ತಾನವು ರಶ್ಯದ ಸಹಾಯ ಕೋರಬೇಕಾಗುವುದೆಂದು ಲೀಗ್ ದುರೀಣ ಫಿರೋಜ್ ಖಾನನೂನರು ತಿಳಿಸಿದರು

ಬ್ರಿಟಿಷ್ ಕಮ್ಯುನಿಸ್ಟರು ನೆಹರು ಸರಕಾರ ಉರುಳಿಸಲು ತಮ್ಮ ಭಾರತ ಬಂಧುಗಳಿಗೆ ಸಹಾಯ ಮಾಡುತ್ತಾರೆ

ಇಟಲಿ ಚುನಾವಣೆಗಳಲ್ಲಿ ಅಲ್ಲಿನ ಸೋಶಲಿಸ್ಟರು ಕಮ್ಯುನಿಸ್ಟರನ್ನು ಸೇರಿಕೊಂಡರು.

ಚಾರ್ಲಿಚಾಪ್ಲಿನನು ರಶ್ಯಾ ಸಹಾನುಭೂತಿಯುಳ್ಳವನಿದ್ದು ಅಮೇರಿಕಾ ವಿರುದ್ಧ ಚಟುವಟಿಕೆಗಳನ್ನು ಮಾಡುತ್ತಾನೆ.

ಇದರಿಂದೇನು ತಿಳಿಯುತ್ತದೆ? ಜಗತ್ತಿನ ಬಹುಸಂಖ್ಯಾಕ ಜನತೆ ಕಮ್ಯುನಿಸ್ಟ್ ತತ್ವಕ್ಕೆ ವ್ಯಾಮೋಹಗೊಳ್ಳುತ್ತಿದೆ. ಪ್ರೆಜ್ಜಿನ ದೇಶಗಳಲ್ಲಿ ಪ್ರಜಾಪ್ರಭುತ್ವ ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿದೆ. ಸಾಮಾನ್ಯ ಜನತೆಯ, ಶ್ರಮಜೀವಿಗಳ ಅಭಿವೃದ್ಧಿಯ ಕಡೆ ಅಲಕ್ಷ್ಯವೇ ತೋರಿಸಲ್ಪಡುತ್ತದೆ. ಸಂತೃಪ್ತ ಶ್ರಮಜೀವಿಗಳಿರುವ ಇಂಗ್ಲೆಂಡ್, ಅಮೇರಿಕಾಗಳಲ್ಲಿಂದು ಈ ಕೆಂಪು ತತ್ವ ತಲೆಯೆತ್ತಲಿಲ್ಲದಿರುವುದು ಇನ್ನೊಂದು ಗಣನೀಯ ಸಂಗತಿ.

ಇಟಲಿಯ ಸ್ಥಾನ ಮಹತ್ವ

ಯುರೋಪು ಮತ್ತು ಮಧ್ಯ ಪೂರ್ವದ ದೇಶಗಳೊಡನೆ ಪ್ರಭಾವಿತ ಸಂಬಂಧವನ್ನಿರಿಸಿಕೊಳ್ಳಲು ಇಟಲಿಯು ಮಹತ್ವದ ಕೇಂದ್ರವೆನಿಸಲ್ಪಡುತ್ತದೆ. ಅಮೇರಿಕಕ್ಕೆ ಆಫ್ರಿಕದಲ್ಲಿ ಬಲವಾದ ವಿಮಾನ ಠಾಣ್ಯಗಳನ್ನಿರಿಸಿಕೊಳ್ಳಲು ಮತ್ತು ಅತ್ಯುಪಯುಕ್ತವಾದ ಅರಬ ದೇಶಗಳ ಎಣ್ಣೆ ಸೌಕರ್ಯದ ಸಂಪೂರ್ಣ ಲಾಭ ಪಡೆಯಲು ಇಟಲಿಯು ಅಮೇರಿಕನ್ ಪ್ರಭಾವದೊಳಗಿರಬೇಕಾ

ವಿಶ್ವರಾಷ್ಟ್ರಗಳ ಜೀವನ್ಮರಣ ಹೋರಾಟ

ಅಮೇರಿಕವು ಅಸಡ್ಡೆ ಮಾಡಿದರೆ ಕಾರ್ಯ ಕೆಟ್ಟೀತು

ಟ್ರಿಬ್ಯೂನ್ ಪತ್ರಿಕೆಯ ಸಕಾಲ ಎಚ್ಚರಿಕೆ

ದುದು ಅತ್ಯಾವಶ್ಯಕ. ರಶ್ಯದೊಡನೆ ಯುದ್ಧ ಪ್ರಾರಂಭವಾದ ಸಂದರ್ಭದಲ್ಲಿ ಇಟಲಿಯ ಸ್ಥಾನ ಮಹತ್ವವು ಅಪರಿಮಿತವಾದುದು

ರಶ್ಯವಾದರೋ ಹಿಂದಿನ ಜರ್ಮನ್ ಜಪಾನಿ ಯೋಧ್ಧ ರಾಷ್ಟ್ರಗಳಂತೆ ತನ್ನ ಶಕ್ತಿ ವಿಸ್ತಾರಕ್ಕಾಗಿ ಸಂಪೂರ್ಣ ಸೈನ್ಯ ಸಂಖ್ಯೆಯ ಮೇಲೆ ಹೊಂದಿಕೊಂಡಿಲ್ಲ. ರಾಜತಂತ್ರ, ಪ್ರಚಾರ, ಅಪ್ರತ್ಯಕ್ಷ ಗುಪ್ತಕಾರಸ್ಥಾನ ಮತ್ತು ಬಲಾತ್ಕಾರದ ಬೆದರಿಕೆಗಳಿಂದಲೇ ಆ ಉಗ್ರ ಸಮತಾವಾದಿ ದೇಶವು ತನ್ನ ಕಾರ್ಯ ಸಾಧಿಸಿಕೊಳ್ಳಬಯಸುತ್ತದೆ

ಅಮೇರಿಕನ್ ಶಕ್ತಿ

ಅಮೇರಿಕವು ಅದ್ವಿತೀಯ ಶಕ್ತಿ ಸಂಪನ್ನತೆಯ ರಾಷ್ಟ್ರವೆಂಬುದು ನಿರ್ವಿವಾದ. ಆದರೆ ಅಸಂಖ್ಯಾತ ಅಭ್ಯಂತರಗಳೂ ಅದನ್ನು ಅಸ್ಪಷ್ಟಕಾರಕ ಧರ್ಮ ಸಂಕಟದಲ್ಲಿ ಹಾಕಿವೆಯೆಂಬುದೂ ಒಪ್ಪಲೇ ಬೇಕು. ಆದರೆ ಮುಂದಿನ ಮೂರನೇ ಮಹಾಯುದ್ಧವನ್ನು ಈವೊಂದು ರಾಷ್ಟ್ರ ಮಾತ್ರ ತಡೆಯಬಲ್ಲದಲ್ಲದೆ ಬೇರೆ ಯಾವದಕ್ಕೂ ಆ ಚೈತನ್ಯವಿಲ್ಲವೆಂಬ ಸಂಗತಿಯಿಂದ ಭಾವೀ ಗಂಡಾಂತರದ ಕಡೆಗೆ ಅದರ ಗಮನವನ್ನು ಸೆಳೆಯದೆ ಗತ್ಯಂತರವಿಲ್ಲ

ಜಗತ್ತಿನಲ್ಲೆಲ್ಲಾ ಕಡೆಗಳಲ್ಲಿ ತಲೆಯೆತ್ತಿರುವ ಕಮ್ಯುನಿಸ್ಟ್ ಉತ್ಕ್ರಾಂತಿಗೆ ರಶ್ಯವೇ ಮೂಲ ಸ್ಫೂರ್ತಿ ಇಲ್ಲವೆ ತಾಯಿಬೇರು ಎಂಬ ಸಂಗತಿಯೂ ನಿರ್ವಿವಾದವಾದುದು. ಆದುದರಿಂದ ಆ ಪ್ರಭಾವವು ವಿಶ್ವವ್ಯಾಪಿಯಾಗಿ ಬೃಹದಾಕೃತಿ ತಾಳುವ ಮೊದಲೇ ಅದನ್ನು ತಡೆಗಟ್ಟುವ ಕಾರ್ಯವು ನಡೆಯಬೇಕಾದುದು ಅನಿವಾರ್ಯ

ಆಗಲೇ ಟ್ರುಮನ್ನರು ಅಮೇರಿಕನ್ ಜನಾಂಗವನ್ನು ಸಿದ್ಧತೆಯಲ್ಲಿರಿಸಲು ಎಚ್ಚರಿಕೆಯನ್ನು ಕೊಟ್ಟಿರುವುದು ಶ್ಲಾಘನೀಯ. ಆದರೆ ಇಷ್ಟು ಮಾತ್ರಕ್ಕೆ ಕಾರ್ಯವು ಸಂಪೂರ್ಣವಾಗಲಾರದು. ಇತರ ದೇಶಗಳು ನಿಷ್ಕ್ರಿಯವಾಗಿ ಕುಳಿತುಕೊಳ್ಳುವಾಗ ರಶ್ಯವು ತನ್ನ ಕಾರ್ಯಸಿದ್ಧಿಯ ಚಟುವಟಿಕೆಗಳನ್ನು ಅವ್ಯಾಹತವಾಗಿ ಮುಂದೆ ಸಾಗಿಸುವುದು. ಇದರಿಂದ ದಿನ ದಿನವೆಂಬಂತೆ ಗಂಡಾಂತರದ ಆಗಾಧತೆ ಹೆಚ್ಚುತ್ತಲಿದೆ

ರಶ್ಯದ ರೂಪಾಂತರ

ಯುರೋಪಿನಲ್ಲಿ ರಶ್ಯವು ತನ್ನ ಆಸುಪಾಸಿನ ದೇಶಗಳನ್ನೆಲ್ಲಾ ಎಗಲಿಗ ಶಾಕಿಕೊಂಡಿರುವುದು ಸರ್ವವಿಧಿತ. ಆ ದೇಶಗಳಲ್ಲಿನ ಇತರ ಎಲ್ಲಾ ರಾಜಕೀಯ ಪಕ್ಷಗಳು ಕಮ್ಯುನಿಸ್ಟರ ಪ್ರಬಲ ಶಕ್ತಿಯೆದುರಲ್ಲಿ ಹತಾಶರಾಗಿ ಸುಸ್ತಾಗಿ ಕೈಕಟ್ಟಿ ತೆಪ್ಪಗೆ ಕುಳಿತುಕೊಂಡಿರುವವು. ಇಟಲಿಯಲ್ಲಿ ಈಗಾಗಲೇ ಸೋಶಲಿಸ್ಟರು ಕಮ್ಯುನಿಸ್ಟರಿಗೇ ಯಶವು ಖಂಡಿತವೆಂದು ತಾವೂ ಅವರೊಡನೆ ಸೇರಿರುವರು. ಫ್ರಾನ್ಸಿನಲ್ಲಂತೂ ಮೂರನೇ ಒಂದಂಶದಷ್ಟು ಪ್ರಜಾಪ್ರತಿನಿಧಿಗಳು ಕಮ್ಯುನಿಸ್ಟ ಪ್ರೇರಣೆಯುವರು. ಯಾವ ಕಾಲದಲ್ಲೂ ಇವರು ಪಾಶ್ಚಿಮಾತ್ಯ ಯುರೋಪಿನ ದೇಶಗಳಲ್ಲಿ ಅನಾಹುತವನ್ನುಂಟು ಮಾಡಲು ಸಮರ್ಥರಿರುವರು

ಇತ್ತ ಪೆಲೆಸ್ಟೀನಿನ ಪ್ರಕರಣವು ತೃಪ್ತಿಕರವಾಗಿ ಸಮಾಪ್ತಿಗೊಳ್ಳದಿದ್ದರೆ ಅರಬ ರಾಷ್ಟ್ರಗಳು ಸಮತಾವಾದಿಗಳಿಗೇ ಸಲಾಂ ಹೊಡೆಯುವರೆಂಬುದು ಸ್ವತಃ ಸಿದ್ಧ. ಚೀನದಲ್ಲಿ ಮಂಚೂರಿಯಾ ಮತ್ತಿತರ ಕರಾವಳಿ ಪ್ರದೇಶಗಳು ಕಮ್ಯೂನಿಸ್ಟ್ ಪ್ರಭಾವದೊಳಗೆ ಬಂದರೆ ಭಾರತ, ಮಲಯಾ ಮತ್ತಿತರ ಆಗ್ನೇಯ ಏಸ್ಯದ ದೇಶಗಳು ಅದರ ಇಕ್ಕುಳದಲ್ಲಿ ಸಿಕ್ಕಿದಂತೆ ಸರಿ. ಮಾತ್ರವಲ್ಲ ಅತ್ತ ಅಮೇರಿಕಕ್ಕೆ ಅತೀ ಹತ್ತಿರವಾದ ಅಲಾಸ್ಕವನ್ನು (ರಶ್ಯದ ಈಶಾನ್ಯ ತುದಿ ಇದರ ಅತೀ ಹತ್ತಿರ ಚಾಚಿದೆ) ರಶ್ಯವು ವಶೀಕರಿಸಿಕೊಂಡರೆ ಈಶಾನ್ಯ ಸಂಯುಕ್ತ ಅಮೇರಿಕದ ಕೈಗಾ

೨ನೇ ಪುಟ ನೋಡಿ

THE

UNITED INDIA LIFE ASSURANCE CO., LTD.

ESTD 1906 | H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore

(ಗನೇ ಪುಟದಿಂದ)

ಕೇಂದ್ರಗಳಿಗಲ್ಲಿಂದ ವಿಮಾನ, ಚಟುವಟಿಕೆಯನ್ನು ವಿಸ್ತರಿಸಲು ಸುಲಭ ಸಾಧ್ಯವಾಗುವುದು. ಅಮೇರಿಕದ ಏಟಂ ಬೊಂಬಿನ ಕೇಂದ್ರವನ್ನು ಅಲ್ಲಿಂದ ಸುಲಭವಾಗಿ ಬಾಂಬು ದಾಳಿಗೆ ಗುರಿಮಾಡಬಹುದು.

ಕಾರ್ಯ ಶೀಘ್ರತೆ

ಪೂರ್ವ ಜರ್ಮನಿಯು ಅತ್ಯುಪಯುಕ್ತವೂ, ಅನೋಘ ಪರಿಪೂರ್ಣತೆಯುಳ್ಳದೂ ಆದ ಕೈಗಾರಿಕಾ ಕೇಂದ್ರಗಳು ರಶ್ಯದ ವಶವಾಗದಂತೆ ಶೀಘ್ರದಲ್ಲಿ ಆ ದೇಶವನ್ನು ಸಂಪೂರ್ಣ ಸ್ವತಂತ್ರವಾಗಿ ಮಾಡಲು ಅಮೇರಿಕವು ತನ್ನ ವರ್ಚಸ್ಸನ್ನು ಉಪಯೋಗಿಸಬೇಕು. ಈಗಾಗಲೇ ಐಕ್ಯಗೊಂಡಿರುವ ಪಶ್ಚಿಮ ಯುರೋಪಿನ ಪಂಚ ರಾಷ್ಟ್ರ ಒಕ್ಕೂಟಕ್ಕೆ ಸರ್ವ ಸಹಾಯ (ಮಾರ್ಶಲ್ ಪ್ಲೇನಿನ ಮಹಾತುಗಾರಿಕೆ ಸಾಲದು) ವನ್ನು ಕೊಡಬೇಕು. ಅಲ್ಲಿ ಶಸ್ತ್ರಾಸ್ತ್ರಗಳನ್ನು, ವಿಮಾನ ಹಡಗು ಕಟ್ಟುವಿಕೆಯನ್ನು ವೃದ್ಧಿಗೊಳಿಸಬೇಕು. ಅಮೇರಿಕದಲ್ಲಿ ರಚಿಸಲ್ಪಡುವ ಶಸ್ತ್ರಾಸ್ತ್ರಗಳೂ ವಿಮಾನಗಳೂ ಇಲ್ಲಿ ತಯಾರಾಗುವಂತೆ ಏರ್ಪಡಿಸುವುದು ಮುಂದೆ ಅವ್ಯವಸ್ಥೆ ಆಗದಂತೆ ಮಾಡಲು ಒಂದು ಉತ್ತಮ ಉಪಾಯ. ರಶ್ಯವು ಯಾವದೇ ವಿಧದಲ್ಲಿ ಇತರ ದೇಶಗಳ ಆಂತರೀಕ ವ್ಯವಹಾರದಲ್ಲಿ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷವಾಗಿ ಕೈಯಾಡಿಸದಂತೆ ಅದಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಇಟಲಿಯಲ್ಲಿ ಕಮ್ಯುನಿಸ್ಟರು ಬಹುಸಂಖ್ಯಾಕರಾಗದಂತೆ ಸಕಲ ಪ್ರಯತ್ನಗಳನ್ನು ಮಾಡಬೇಕು. ಜೆಕೋಸ್ಲೊವೇಕಿಯದ ತಿಳಿಗೇಡಿ ಜನತಾ ಮುಖಂಡರಿಗೆ ಬುದ್ಧಿಗಲಿಸಲು ಆ ದೇಶಕ್ಕೆ ಪಶ್ಚಿಮ ಯುರೋಪಿನಿಂದ ಸರಬರಾಯಿ ಮಾಡಲ್ಪಡುವ ಆಹಾರ ವಸ್ತುಗಳ ಪೂರೈಕೆಯನ್ನು ನಿಲ್ಲಿಸಿಬಿಡುವ ಬೆದರಿಕೆಯನ್ನು ಹಾಕಬೇಕು.

ಇದೇ ರೀತಿ ಗ್ರೀಸ್ ತುರ್ಕಿಗಳ ಕಮ್ಯುನಿಸ್ಟರ ಉಪಟಳದಿಂದ ಅಲ್ಲಿನ ಜನತೆಯನ್ನು ರಕ್ಷಿಸುವ ಆಶ್ವಾಸನವನ್ನು ಅಮೇರಿಕವು ಕೊಡಬೇಕು. ಪಲೇಸ್ತೀನದ ಪ್ರಶ್ನೆಯನ್ನು ಅರಬ ರಾಷ್ಟ್ರಗಳಿಗೆ ಸಂತೃಪ್ತಿಯನ್ನುಂಟುಮಾಡುವ ರೀತಿಯಲ್ಲಿ ಇತ್ಯರ್ಥಿಸಿ ಅರಬ ರಾಷ್ಟ್ರಗಳ ಸಹಾನುಭೂತಿಯನ್ನು ಗಳಿಸಬೇಕು. ಇತ್ತ ಚೀನ, ಇಂಡೋ ಚೀನಗಳ ಪ್ರಜಾಪ್ರಭುತ್ವ ಪ್ರಿಯ ಪಕ್ಷಗಳಿಗೆ ಬೆಂಬಲ ಕೊಟ್ಟು ಕಮ್ಯುನಿಸ್ಟರು ಅಲ್ಲಿ ಮೇಲ್ಗೈ ಪಡೆಯದಂತೆ ಎಚ್ಚರಿಕೆ ವಹಿಸಬೇಕು. ಇಂಡೋ ನೇಶ್ಯಾ ಮತ್ತು ಆಫ್ರಿಕದ ವಸಾಹತು ಜನತೆಗೆ ಅವರ ಐರೋಪ್ಯ ಆಳೊಡೆಯರ ಬಿಗಿಹಿಡಿತದಿಂದ ವಿಮೋಚಿಸಿಕೊಳ್ಳಲು ಸಹಾಯ ಮಾಡಬೇಕಾದುದು ಅತ್ಯಾವಶ್ಯಕ.

ಒಂದು ಪಾಠ

ಜರ್ಮನಿಯಲ್ಲಿ 1933 ಮತ್ತು 1936

ಮೂರನೇ ಯುದ್ಧದ ಚಿಹ್ನೆ ತೋರುತ್ತಿದೆ

ನಿವಾರಿಸಲು ಶಕ್ತಿಗಿಂತ ಯುಕ್ತಿ ಬೇಕು

ಬ್ರಿಟಿಷ್ ಲೇಖಕರ ಸೂಚನೆ

ವಿಶ್ವದಿಗಂತದಲ್ಲಿ ಇನ್ನೊಂದು ಶಸ್ತ್ರಸಮರದ ದೃಶ್ಯ, ಮೂರನೇಯ ಮಹಾಯುದ್ಧದ್ದು, ನೋಡುತ್ತಿದ್ದೇವೆಯೋ? ಈ ಪ್ರಶ್ನೆಯನ್ನುತ್ತರಿಸುತ್ತಾ ಪ್ರಖ್ಯಾತ ಬ್ರಿಟಿಷ್ ಪತ್ರಿಕೊದ್ಯೋಮಿಗಳೂ ರಾಜಕೀಯ ನಿರೀಕ್ಷಕರೂ ಆದ ವಿಕ್ಕ್ಯಾಮ್ ಸ್ಟೀಡರು ಹೀಗೆನ್ನುತ್ತಾರೆ.

ವಿಶ್ವರಾಜಕಾರಣವನ್ನಭ್ಯಸಿಸುವ ಯಾವ ವಿಚಾರಪರ ವಿದ್ಯಾರ್ಥಿಯೂ ಅಸಾಯದ ಸಂಭವನ್ನು ಅಲ್ಲಗಳೆಯಲಾರ. ಅಪಾಯವನ್ನು ನಿವಾರಿಸಲಿಕ್ಕಾಗುವುದಿಲ್ಲವೆಂಬುದನ್ನು ಅವನು ಒಪ್ಪಲಾರ.

ಮೇಲಿನ ಪ್ರಶ್ನೆಗೆ ಸೋವಿಯಟ್ ರಶ್ಯವು ಮಾತ್ರ ನಿರ್ಣಯಾತ್ಮಕ ಉತ್ತರವನ್ನು ಹೇಳಬಲ್ಲದು. ಆದರೆ ಇದುತನಕ ಅದರ ಉತ್ತರವೇನೆಂದು ಪರಿಶೀಲಿಸುವ ಯಾವ ಸಾಧನಗಳೂ ಇರಲಿಲ್ಲವೆಂಬುದೂ ನಿಜ.

ಅಮೇರಿಕನ್ ಅಧ್ಯಕ್ಷರ ಆರೋಪ

ಅಧ್ಯಕ್ಷ ಟ್ರೂಮನ್ನರು ತಮ್ಮ ಪ್ರಜಾಪ್ರತಿನಿಧಿ ಸಭೆಯಲ್ಲಿ ರಶ್ಯದ ಮೇಲೆ ಕ್ರಮಬದ್ಧವಾದ ಆರೋಪಗಳನ್ನು ಹೊರಿಸಿ ಭಾಷಣ ಕೊಟ್ಟದ್ದು ಗಣನೀಯ ಸಂಗತಿ. ರಶ್ಯದ ಕುತಂತ್ರದ ಧೋರಣೆಯ ಸತ್ಯರೂಪ ನಿರೂಪಣೆಯದು. ಆದರೆ ಆ ಭಾಷಣದಲ್ಲಿ ಪಾಶ್ಚಿಮಾತ್ಯ ಯುರೋಪು ರಾಷ್ಟ್ರಗಳ ಸ್ವಾತಂತ್ರ್ಯವನ್ನು ರಕ್ಷಿಸುವ ಮತ್ತು ವಿಶ್ವಶಾಂತಿಯನ್ನು ಕಾಪಾಡಿಕೊಳ್ಳುವ ಉದ್ದೇಶಗಳು ನಿರೂಪಿಸಲಾಗಿದ್ದು ಆ ಕುರಿತು ಈ ರಾಷ್ಟ್ರಗಳು ರಶ್ಯದೊಡನೆ ಒಂದು ಪರಸ್ಪರ ತಿಳುವಳಿಕೆಯ ಒಪ್ಪಂದಕ್ಕೆ ಬರಲೂ ಸಿದ್ಧರಿರುವರಾಗಿ ತಿಳಿಸಲ್ಪಟ್ಟಿವೆ.

...ರಲ್ಲೇ ಅದರ ಆಕ್ರಮಣ ಧೋರಣೆಗೆ ತಡ ಮಾಡಿದ್ದರೆ ಎರಡನೇಯ ಮಹಾಯುದ್ಧದ ದುರಂತವು ತಪ್ಪುತ್ತಿದ್ದಿತು. ಜಪಾನನ್ನು 1931 ರಲ್ಲಿ ಅದು ಚೀನದ ಮೇಲೇರಿ ಹೋದಾಗಲೇ ಪ್ರತಿಭಟಿಸಿ ಚೀನಕ್ಕೆ ಯೋಗ್ಯ ಸಹಾಯವನ್ನು ಕೊಟ್ಟು ನಿರುತ್ಸಾಹಗೊಳಿಸುತ್ತಿದ್ದರೆ ಕಳೆದ ಯುದ್ಧದಲ್ಲಿನ ಭೀಕರ ಅಮಾನುಷಿಕ ಪ್ರಕರಣದ ಒಂದಂಶವು ಕಡಿಮೆಯಾಗುತ್ತಿತ್ತು.

ಈ ಸಲವಾದರೂ ಮೂರನೇ ವಿಶ್ವಮೇಧವನ್ನು ತಡೆಯುವ ಹೊಣೆಗಾರಿಕೆ ಅಮೇರಿಕದ ಮೇಲೇ ಇದೆ. ರಶ್ಯದ ಯಾವೊಂದು ಕುತಂತ್ರಕ್ಕೆ ಬಲಿಬೀಳದೆ ನಿರ್ಧಾರಯುಕ್ತವಾಗಿ ಅಮೇರಿಕವು ತನ್ನ ಕರ್ತವ್ಯವನ್ನು ನಿರ್ವಹಿಸಿದರೆ ಮುಂದೆ ಪಶ್ಚಾತ್ತಾಪಪಡಬೇಕಾದ ಪ್ರಸಂಗವು ಮುಂದೆ ಖಂಡಿತ ಬರಲಿಕ್ಕಿಲ್ಲ.

ಗಣನೀಯ ಸೂಚನೆಗಳು

ಆಫ್ರಿಕದ ಜನರಲ್ ಸ್ಮಟ್ಸರು 'ರಶ್ಯಾ ಮತ್ತು ಅಮೇರಿಕೆಗಳೊಳಗೆ ಹೃತ್ಪೂರ್ವಕ ಸೌಹಾರ್ದದ ಮಾತುಕತೆಗಳು ನಡೆಯಬೇಕಾದದು' ಅವಶ್ಯಕವೆಂದು ಸೂಚಿಸಿರುವರು.

ಆಸ್ಟ್ರೇಲಿಯದ ಮುಖ್ಯ ಮಂತ್ರಿ ಡಾ। ಇವಾಟರು "ಈಗಿನ ಶಕ್ತಿ ರಾಜಕೀಯಗಳಿಂದ ಯಾವ ಉಪಯೋಗವಿಲ್ಲ, ಸಂಯುಕ್ತರಾಷ್ಟ್ರ ಸಂಘವನ್ನೆ ಒಪ್ಪಂದದ ಮಾಧ್ಯಮವಾಗಿ ಮಾಡಲು ಪ್ರಯತ್ನಿಸಬೇಕು" ಎಂದಿರುವರು.

ಕಾರ್ಯದ ಕಠಿಣತೆ

ಈ ಗಣನೀಯ ಮತ್ತು ಹೊಣೆಗಾರಿಕೆಯ ವ್ಯಕ್ತಿಗಳ ಈ ಸಕಾರಣ ತರ್ಕವನ್ನು ಶಾಂತಿಪ್ರಿಯರೆಲ್ಲರೂ ಒಪ್ಪಲೇ ಬೇಕು. ಆದರೆ ಜನರಲ್ ಸ್ಮಟ್ಸರ ಸೂಚನೆಗೆ ನನ್ನದೊಂದೇ ಆಕ್ಷೇಪವೆಂದರೆ ಇದು. ಇವರ್ರೊಳಗೆ ಹೃತ್ಪೂರ್ವಕ ಸೌಹಾರ್ದದ ಮಾತುಕತೆಗಳು ಸಫಲವಾಗಬೇಕಾದರೆ ಆ ಇವರ್ರೂ ಒಂದೇ ಭಾಷೆ ಮಾತನಾಡುವರಾಗಿರಬೇಕು. ಇಲ್ಲವೆ ಅವರ ಭಾಷೆಗಳು ಸುಸ್ಪಷ್ಟವಾಗಿ ಭಾಷಾಂತರಿಸಲಾದರೂ ಸಾಧ್ಯವಾಗಬೇಕು.

ಸೋವಿಯಟ್ ರಶ್ಯದೊಡನೆ ವ್ಯವಹಾರ ... ಇದೊಂದು ಸಕಷ್ಟದ ಕೆಲಸ. ರಶ್ಯದ ಆಳಿಕೆಯರು ಮತ್ತು ಪ್ರತಿನಿಧಿಗಳು ಯೋಚಿಸುವುದೂ ಭಾಷಿಸುವದೂ ಕೇವಲ ಕಮ್ಯುನಿಸ್ಟ ತತ್ವ ಧೋರಣೆಯ ದೃಷ್ಟಿಯಿಂದ. ಈ ಭಾಷೆ ಮತ್ತು ವಿಚಾರಗಳನ್ನು ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ಸ್ವಾತಂತ್ರ್ಯದ ... ಶೈಲಿಯಲ್ಲಿ ಭಾಷಾಂತರಿಸಲು ಇದುವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ.

ಸಂಯುಕ್ತರಾಷ್ಟ್ರ ಸಂಘದ ಮೂಲಕವೇ ಪರಸ್ಪರ ತಿಳುವಳಿಕೆಯ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಬೇಕೆಂದು ಡಾ। ಇವಾಟರ ಸೂಚನೆಗೆ ಅಧ್ಯಕ್ಷ ಟ್ರೂಮನ್ನರ ಭಾಷಣವಲ್ಲೇ ಉತ್ತರವಿದೆ. ಅದೆಂದರೆ ಕಳೆದೆರಡು ವರ್ಷಗಳಲ್ಲಿ ಜನಾಂಗ ಸಂಘವು ರಶ್ಯಾ ಅಮೇರಿಕಗಳೊಳಗೊಂದು ಒಪ್ಪಂದವನ್ನುಂಟುಮಾಡಲು 21 ಸಲ ಯತ್ನ ಮಾಡಿತ್ತಾದರೂ ಪ್ರತಿಸಲ ರಶ್ಯವು ಇದಕ್ಕೆ ಒಂದಲ್ಲೊಂದು ಅಭ್ಯಂತರವನ್ನು ತಂದೊಡ್ಡಿದೆ.

ಪರಿಹಾರೋಪಾಯ

ಈಗ ಮೂರನೇ ಮಹಾಯುದ್ಧವು ಖಂಡಿತ ಸಂಭವಿಸುತ್ತದೊ ಇಲ್ಲವೊ ಎಂಬ ಸಂಗತಿಯು ಕೆಲವೊಂದು ಶರ್ತಗಳ ಮೇಲೆ ಹೊಂದಿಕೊಂಡಿದೆ. ಈ ಶರ್ತಗಳು ಪರಿಪೂರ್ಣವಾದರೆ ಯುದ್ಧ ಸಂಭವಿಸಲಾರದು. ಇವು ಪರಿಪೂರ್ಣವಾಗದಿದ್ದರೆ ಶಾಂತಿಯು ಚಿರಬಾಳಲಿಕ್ಕಿಲ್ಲವೆಂಬುದೂ ನಿಸ್ಸಂದೇಹ.

ಮೊದಲನೆ ಶರ್ತವೆಂದರೆ ಪಾಶ್ಚಿಮಾತ್ಯ ರಾಷ್ಟ್ರಗಳೂ ಮತ್ತು ಅಮೇರಿಕವೂ ಯುದ್ಧ ಖಂಡಿತವೆಂದಾಗುವ ಸಂದರ್ಭದಲ್ಲಿ ಅದಕ್ಕೆ ಸಿದ್ಧವಿರುವುದಾಗಿ ನಿರ್ಧಾರಬದ್ಧವಾಗಿ ತಿಳಿಸಬೇಕು. ಮಾನವ ಸ್ವಾತಂತ್ರ್ಯದ ತತ್ವಗಳನ್ನು "ನಾಶಪಡಿಸುವ ಯಾವ ಧೋರಣೆಯನ್ನು ತಾವು ಸಹಿಸುವುದಿಲ್ಲವಾಗಿ ಈ ರಾಷ್ಟ್ರಗಳು ಸಾರಬೇಕು.

ಎರಡನೇ ಶರ್ತವೆಂದರೆ ಈ ರಾಷ್ಟ್ರಗಳ ಧೋರಣೆಯು ಅತ್ಯಂತ ಜಾಗರೂಕತೆ, ಪರಿಶೀಲನೆಗಳಿಂದ ನಿರ್ವಹಿಸಲ್ಪಡಬೇಕು. ಯಾವದಾದರೂ ಕೆಲವು ಅಲ್ಪಸಲ್ಪದ ರಾಜತಾಂತ್ರಿಕ ಲಾಭದಿಂದ ಇವು ತೃಪ್ತಿಪಟ್ಟುಕೊಂಡಿರಬಾರದು.

ದೇವರಿಗೂ ಭಕ್ತರಿಗೂ ಭೇದವಿಲ್ಲ

ಪ್ರಾರ್ಥನೆಯ ಅದ್ವಿತೀಯ ಪ್ರಭಾವ

ವಿನೋಬಾಭಾವೆಯರ ನಿರೂಪಣೆ

ಗಾಂಧೀಜಿಯ ಶವಸಂಸ್ಕಾರವಾದ ಜಮುನಾನದೀ ತೀರದ ರಾಜಘಾಟದಲ್ಲಿ ಪ್ರತೀ ಶುಕ್ರವಾರ ಸಾರ್ವಜನಿಕ ಪ್ರಾರ್ಥನೆಗಳಾಗುತ್ತವೆ. ಕಳೆದ ವಾರದ ಪ್ರಾರ್ಥನೆಯಲ್ಲಿ ಮಹಾತ್ಮರ ಪಟ್ಟಶಿಷ್ಯರೆನಿಸಿಕೊಂಡ ಶ್ರೀ ವಿನೋಬಾಭಾವೆಯವರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಅವರು ಪ್ರಾರ್ಥನೆಯ ಮಹತ್ವದ ಕುರಿತು ಹೀಗೆ ತಿಳಿಸಿದರು.

ನಮ್ಮ ಅಧ್ಯಾತ್ಮಿಕ ಜೀವನಕ್ಕೆ ಅನುನಿತ್ಯದ ಪ್ರಾರ್ಥನೆಯ ಅವಶ್ಯಕತೆಯಿದೆ. ವಾರಕ್ಕೊಂದು ಸಲವಾದರೂ ಪ್ರಾರ್ಥನೆ ಮಾಡಿದರೆ ನಾವು ನಮ್ಮ ಹೃದಯಗಳನ್ನಷ್ಟೇ ಅಲ್ಲ ಇಡೀ ಭಾರತದ ಹೃದಯವನ್ನೇ ಪರಿವರ್ತಿಸಬಹುದು. ಕಾರಣ ಪ್ರಾರ್ಥನೆಯಿಂದ ನಾವು ಎಲ್ಲಾ ತರದ ಭೇದಾಭೇದಗಳನ್ನು ಮರೆತು ಬಿಡಬಹುದು.

ದೇವರೂ ಭಕ್ತನೂ

ಈ ಪವಿತ್ರ ಸ್ಥಳದಲ್ಲಿ ಪ್ರತಿ ಶುಕ್ರವಾರ ಪ್ರಾರ್ಥನೆಗಳನ್ನೇರ್ಪಡಿಸಿದ್ದು ಅತ್ಯಂತ ಸಂತೋಷದ ಸಂಗತಿ. ಪ್ರಾರ್ಥನೆಗೆ ಅಗಾಧ ಶಕ್ತಿಯಿದೆ. ಅದರ ಮೂಲಕ ನಾವು ಜೀವನಾತ್ಮನೊಡನೆ ... ಮಾಡುತ್ತೇವೆ. ಇಂತಹ ಸ್ಥಳದಲ್ಲಂತೂ ಅದರ ಶಕ್ತಿ ಇಮ್ಮಡಿಯಾಗುತ್ತದೆ. ಇಲ್ಲಿ ನಾವು ದೇವರ ಮಾತ್ರವಲ್ಲ ಅವನ ಭಕ್ತರ ಸಾನ್ನಿಧ್ಯದಲ್ಲಿಯೂ ಇರುವಂತಾಗುತ್ತದೆ. ಗೀತೆಯಲ್ಲಿ ಹೇಳಿದಂತೆ ಭಕ್ತನ ದೇವರಪ ... ತತ್ವವುಳ್ಳವನಾಗಿದ್ದಾನೆ. ದೇವರೂ ಭಕ್ತರೂ ಒಟ್ಟುಗೂಡುವಲ್ಲಿ ಸದಾ ಸಂತೋಷವು ತುಂಬಿಕೊಂಡಿರುತ್ತದೆ.

ಅಧ್ಯಾತ್ಮಿಕ ಆಹಾರ

ಪ್ರಾರ್ಥನೆಯೆ ನಮ್ಮ ಅಧ್ಯಾತ್ಮಿಕ ಆಹಾರ. ಇದು ಮಾತ್ರ ಅನುನಿತ್ಯ ಕೇವಲವೂ ಸೇವಿಸಬೇಕಾಗುತ್ತದೆ. ಪ್ರತಿಯೊಬ್ಬರೂ ದಿನ ನಿತ್ಯ ಪ್ರಾರ್ಥನೆಮಾಡಲು ಸಾಧ್ಯವಿಲ್ಲವಾದರೆ ವಾರಕ್ಕೊಂದು ಸಲವಾದರೂ ಪ್ರಾರ್ಥಿಸಿದರೆ, ಅದ್ಭುತ ಶಕ್ತಿಯನ್ನುಂಟುಮಾಡಬಹುದು. ಪ್ರಾರ್ಥನೆಯಿಂದ ಹೃದಯ ಶುದ್ಧಿಯಾಗುತ್ತದೆ.

ಪ್ರಾರ್ಥನಾ ವಿಧಾನಗಳ ಕುರಿತು ಅನೇಕ ತರ್ಕವಿತರ್ಕಗಳಿವೆ. ಬೇರೆ ಬೇರೆ ಮತಪಂಥದವರ ತಮ್ಮ ಶಾಸ್ತ್ರ ಪ್ರಕಾರವೇ ಪ್ರಾರ್ಥಿಸಲಿಚ್ಛಿಸುತ್ತಾರೆ. ಇದು ಅಹಂಭಾವದ ಸ್ವಾರ್ಥ ವಿಚಾರ. ಸ್ವಾರ್ಥವು ಅನೇಕ ಉತ್ತಮ ವಿಷಯಗಳನ್ನು ಹಾಳುಗೆಡಹುತ್ತದೆ. ಇದನ್ನು ಪ್ರಾರ್ಥನೆಯಿಂದಲೇ ನಿರ್ಮೂಲಿಸಲು ಸಾಧ್ಯ. ಸೂರ್ಯನ ಪ್ರಚಂಡ ಪ್ರಕಾಶವಿಲ್ಲದಾಗ ಮಾತ್ರ ಚಂದ್ರ ನಕ್ಷತ್ರಗಳು ಕಾಣಿಸಕೊಳ್ಳುತ್ತವೆ. ಇವು ಕತ್ತಲೆಯಲ್ಲಿ ಮಾತ್ರ ಶೋಭಿಸುವಂತಹುಗಳು. ಪ್ರಾರ್ಥನೆಯ ಪ್ರಚಂಡ ಪ್ರಕಾಶದಲ್ಲಿವು ಮಾಯವಾಗುತ್ತವೆ.

ಸಮಾನತೆ

ಈ ಪವಿತ್ರ ಸ್ಥಳದಿಂದ ಅಧ್ಯಾತ್ಮಿಕ ಪ್ರಭಾವವನ್ನು ಹೀರಿಕೊಳ್ಳಬೇಕಾದರೆ ಪ್ರತಿಯೊಬ್ಬರೂ ನಮ್ರತೆಯಿಂದ, ಧನಿಕ ದರಿದ್ರರೆಂಬ, ಸಬಲ ನಿರ್ಬಲರೆಂಬ, ಅಜ್ಞ ಅನಜ್ಞರೆಂಬ ಭೇದಭಾವಗಳನ್ನು ಮರೆತು ಪ್ರಾರ್ಥಿಸಬೇಕು. ಇದು ದೇವರೂ ಅವನ ಭಕ್ತರೂ ಒಟ್ಟುಸೇರುವಂತ ಸ್ಥಳವಾಗಿದೆ.

ಮಗುವಿನ ಮೃದು ಚರ್ಮಕ್ಕೆ ಹೆಚ್ಚು ರಕ್ಷಣೆಬೇಕು.

ಕುಟಿಕುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ. ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ. ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ.

554

ಕುಟಿಕೂರಾ ಸಾಬೂನು

CUTICURA SOAP

ಭಾರತವನ್ನು ವಿಚ್ಛೇಧಿಸಿದ ಅತ್ಯಾಚಾರ

ಪಾಕಿಸ್ತಾನ ಖಂಡಿತವಾಗಿ ಅಯಶಸ್ವಿಯಾಗುವುದು

ಚೌದರಿ ಅಕ್ಬರ್‌ಖಾನರ ಭವಿಷ್ಯವಾಣಿ

ಕಲಾತ ಸಂಸ್ಥಾನವು ಇತ್ತೀಚೆಗೆ ಪಾಕಿಸ್ತಾನಕ್ಕೆ ಸೇರಿತು. ಬಹುಸಂಖ್ಯಾಕ ಮುಸಲ್ಮಾನರಿಂದೊಡಗೂಡಿದ ಈ ಸಂಸ್ಥಾನದ ಹೆಚ್ಚಿನ ಪ್ರಜೆಗಳಿಗೆ ಇದರಿಂದ ತೃಪ್ತಿಯಾಗಿಲ್ಲ. ಅವರು ತಮ್ಮದೇ ಆದೊಂದು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿ ಪಾಕಿಸ್ತಾನಕ್ಕೆ ಕಲಾತವನ್ನು ಸೇರಿಸುವುದರ ಕುರಿತು ವಿರೋಧವನ್ನು ಸೂಚಿಸಿರುವರು. "ಪಾಕಿಸ್ತಾನದಲ್ಲಿ ಕುಡಿಕತನ ಲಂಚಗುಳಿತನ ಮತ್ತು ಅತ್ಯಾಚಾರಗಳು ತುಂಬಿರುವುದರಿಂದ ಅದೆಂದಿಗೂ ಇಸ್ಲಾಂ ರಾಜ್ಯವಾಗಲಾರದು" ಎಂದೀ ಪಕ್ಷದವರು ಘೋಷಿಸಿರುವರು

ಈಗ ಬ್ರಿಟನಿನಲ್ಲಿರುವ ಹಿಂದೀ ಕೆಲಸಗಾರರ ಸಂಘದ ಅಧ್ಯಕ್ಷರಾಗಿರುವ ಚೌದರಿ ಅಕ್ಬರ್ ಖಾನರು "ಹಿಂದೀ ಅವಳಿಜವಳಿಗಳು" ಎಂಬ ಗ್ರಂಥವನ್ನೂ ಬರೆದಿದ್ದು ಅದರಲ್ಲಿ "ಪಾಕಿಸ್ತಾನವು ತನ್ನ ತಾಯಿನಾಡಾದ ಭಾರತದ ಮೇಲೆ ನಿರ್ವಹಿಸಿದ ಅತ್ಯಾಚಾರವು ನಷ್ಟಕಾರಕವೆಂದು ಮನಗಂಡು ಭಾರತದೊಡನೆ ಪುನರ್ಮಿಲನವಾಗಲು ಖಂಡಿತ ಮುಂದೆ ಬರುವುದು ಎಂದು ತಿಳಿಸುತ್ತಾರೆ ಮತ್ತೆ ಅವರು ಈ "ಜಗತ್ತಿನ ಅತೀ ದೊಡ್ಡ ಇಸ್ಲಾಂ ರಾಜ್ಯದ ಜಂಬದ ಹೇಳಿಕೆಗಳ ಪೊಳ್ಳುತನವನ್ನು ಹೀಗೆ ಹೊರಗೆಳೆದಿದ್ದಾರೆ

ಇಂಗ್ಲಿಷರು ಹೋದಲ್ಲಿ ವಿಭಾಗೀಕರಣದ ವಿಷಯವು ದುರಂತ ಸಂಭವಿಸಿಯೇ ತೀರಿದೆ ಉತ್ತರ ಅಮೇರಿಕದಿಂದ ಹೊರಡುವಾಗ ಅವರು ಕೆನಡವನ್ನು ಪ್ರತ್ಯೇಕಿಸಿ ತಮ್ಮ ಪ್ರಭಾವದೊಳಗಿರಿಸಿದರು ದೀರ್ಘಕಾಲದ ಐರಿಷ್ ಕಲಹದಲ್ಲಿ ಅಲ್‌ಸ್ಟರ್ ಪ್ರಾಂತ್ಯವನ್ನು ವಿಂಗಡಿಸಿ ಆ ದೇಶಕ್ಕೆ ದ್ರೋಹ ಬಗೆದರು ಪಲೆಸ್ತೀನದ ಆಡಳಿತ ವಹಿಸಿದ ಬ್ರಿಟಿಷರು ಈಗಲ್ಲಿಂದ ಹೊರಬರುವಾಗ ಇಬ್ಭಾಗವಾಗದನ್ನು ಯಾವಾಗಲೂ ಕಲಹದ ರಂಗವಾಗಿ ನಿರ್ಮಾಣಗೊಳಿಸಿರುವರು. ಇದೇ ರೀತಿ ಈಜಿಪ್ತನ್ನು ವಶವಿರಿಸಿಕೊಂಡ ಬ್ರಿಟಿಷರು ಸುಡಾನನ್ನು ಆ ದೇಶದಿಂದ ಪ್ರತ್ಯೇಕಿಸುವ ಸಿಕಬಾಟಕ್ಕೆ ಪ್ರಾರಂಭ ಮಾಡಿರುವರು ಸಿಪ್ರಸ್ ದ್ವೀಪದಲ್ಲಿನ ತುರ್ಕಿ ಪ್ರಜೆಗಳೊಡನೆ ಸೇರಿ ಅಲ್ಲಿನ ಗ್ರೀಕ್ ಬಹುಸಂಖ್ಯಾಕರಲ್ಲಿ ಮನಸ್ತಾಪವನ್ನುಂಟು ಮಾಡಿದವರು ಚಾಣಾಕ್ಷರಾದ ಬ್ರಿಟಿಷ್ ಆಡಳಿತಗಾರರೇ ಇರುವರು

★

ಭಾರತದೊಳಗೆ ಐಕ್ಯತೆಯನ್ನು ಇರಿಸಿಕೊಳ್ಳುವುದೇ ತಮ್ಮ ಕರ್ತವ್ಯವೆಂದ ಬ್ರಿಟಿಷರು ಪ್ರಚಾರ ಮಾಡುತ್ತಿದ್ದರು ಇಲ್ಲಿನ ತಮ್ಮ ಅನಪೇಕ್ಷಿತ ಆಳ್ವಿಕೆಯಲ್ಲಿ ಅವರು ಸಾಧ್ಯವಿದ್ದೆಲ್ಲಾ ಭೇದೋಪಾಯಗಳಿಂದ ಇಲ್ಲಿಯ ಮುಖ್ಯ ಕೋಮುಗಳಲ್ಲಿನ ವ್ಯತ್ಯಾಸಗಳನ್ನು ಕಟ್ಟುಗೊಳಿಸಿ ಮತ್ತೆ ಇಲ್ಲಿಂದ ಹೊರಡುವಾಗ ದೇಶವನ್ನು ತುಂಡರಿಸಿದರು

ದೀರ್ಘಕಾಲದ ಸಂಕಷ್ಟದಿಂದೆಂಬಂತೆ ಎರಡು ಅವಳಿಜವಳಿ ವಸಾಹತುಗಳು ಜನ್ಮವೆತ್ತಿದುವು ಇದು ಭಾರತಮಾತೆಯ ದೌರ್ಭಾಗ್ಯವೇ ಸರಿ! ಈ ಎರಡು ವಸಾಹತುಗಳ ಧ್ಯೇಯ ಧೋರಣೆಗಳಾದರೊ ಪರಸ್ಪರ ವಿರೋಧ ವಿಧಾನದವುಗಳಾಗಿವೆ ಅದರಲ್ಲಿಯೂ ಚಿಕ್ಕದಾದ ಪಾಕಿಸ್ತಾನದ ವರ್ತನೆಯಂತೂ ನಿತ್ಯ ದ್ವೇಷಸಾಧಕದ್ದಾಗಿದೆ

ಭೀಕರ ಕೊಲೆಪಾತಕಗಳಲ್ಲಂತ್ಯವಾದ ದ್ವೇಷದ ಬಿರುಗಾಳಿಯನ್ನು ಬಿತ್ತಿದ ಮುಸ್ಲಿಂ ಲೀಗು ಈಗ ತನ್ನ ಸ್ವಂತ ಪ್ರದೇಶದಲ್ಲೇ ಅದಕ್ಕಿಂತಲೂ ಬಿರುಸಾದ ಜಂಝಾಪಾತವನ್ನೇ ಎದುರಿಸುತ್ತಿದೆ ಲೀಗ್ ಧುರೀಣರು ಪ್ರೋತ್ಸಾಹಿಸಿದ ನ್ಯಾಯ ಶಿಸ್ತುಲ್ಲಂಘನೆಗಳ ಧೋರಣೆಯು ಈಗ ಅವರ ಮೇಲೆ ಹೆಚ್ಚಿನ ರಭಸದಿಂದ ಉರಿದುಬಿದ್ದಿದೆ ದರ್ಪದಿಂದ ಘೋಷಿಸಿದ ಅವರ ಇಸ್ಲಾಮಿ ತತ್ತ್ವೋಪದೇಶವು ಈಗ ಅವರ ಆತ್ಮಗಳನ್ನೇ ಕೊರೆಯುಹತ್ತಿದೆ ಮಾನವ ಸ್ವಭಾವದ ಉದಾತ್ತತೆಯನ್ನು ಅಪಹಾಸ್ಯಕ್ಕೀಡುಮಾಡಿದವರ ಮೇಲೇ ಅದರ ಭೀಕರ ದುಷ್ಪರಿಣಾಮವುಂಟಾಗಹತ್ತಿದೆ

★

ಪ್ರಕೃತಿಯಿಂದ ಅವಿಭಾಗಿತವೆಂದು ಸೃಷ್ಟಿಸಲ್ಪಟ್ಟ ಅಖಂಡ ನಾಡಿನಿಂದ ಪಾಕಿಸ್ತಾನವು ಕಿತ್ತಿತೆಗೆಯಲ್ಪಟ್ಟಿದೆ ಆದರಿಂದೊಂದು ಅವರ್ಣನೀಯ ಅತ್ಯಾಚಾರವೊಂದು ಮಾಡಿದಂತಾಯಿತು 40 ಕೋಟಿ ಜನಸಂಖ್ಯೆಯ ವಿಶಾಲ ದೇಶದ ಕುರಿತು ಹೆಮ್ಮೆ ತಾಳುವ ಬದಲಿಗೆ ಕೇವಲ 6½ ಕೋಟಿ ಜನಸಂಖ್ಯೆಯು ಕನಿಷ್ಠ ಪ್ರಾಂತ್ಯದ ಕುರಿತು ಅವರು ಉದ್ಬುದ್ಧದ ಹೊಗಳಿಕೆಯ ಮಾತುಗಳನ್ನು ಹೊರಡಿಸುವರು ಇದು ಕೇವಲ ಹುಚ್ಚನ ಕಲ್ಪನೆಯ ಸ್ವರ್ಗಸುಖದ ಭ್ರಾಂತ ಕಲ್ಪನೆ ಈಜಿಪ್ತು ಮತ್ತು ತುರ್ಕಿಗಳು ತಮ್ಮ ಅತಿ ಸಮೀಪದ ಪುಟ್ಟಪುಟ್ಟ ಇಸ್ಲಾಮಿ ದೇಶಗಳನ್ನು ನೋಡಿ ತಾವೇ ಶಕ್ತಿವಂತರೆಂದು ತಿಳಿಯುವದರ ಅದೆಷ್ಟು ತಿಳಿಗೇಡಿತನವಾಗುವುದೋ ಅದೇ ರೀತಿ ಪಾಕಿಸ್ತಾನವಾದರೊ ತಾನು ದೊಡ್ಡ ಇಸ್ಲಾಮಿ ರಾಜ್ಯವೆಂದು ಹೇಳಿಕೊಳ್ಳುತ್ತಿದೆ

ಹಿಂದೂದೇಶದ ನಕಾಶೆಯತ್ತ ಸ್ವಲ್ಪ ಲಕ್ಷ್ಯ ಹರಿಸಿದರೆ ಪಾಕಿಸ್ತಾನದ ದುರ್ಬಲತೆಯು ಸ್ಪಷ್ಟವಾಗುತ್ತದೆ. ಈ ಹೊಸ ರಾಜ್ಯದ ಎರಡು ಅಂಗಗಳು ಸಾವಿರ ಮೈಲು ಅಂತರದಿಂದ ವಿಂಗಡಿಸಲ್ಪಟ್ಟಿವೆ ಭಾರತದ ಸಹಾಯ ಸಹಕಾರದಿಂದಲೇ ಅವು ಬಾಳಿ ಅಭಿವೃದ್ಧಿ ಪಡೆಯಬಲ್ಲವು ಭಾರತದೊಡನೆ ಹೋಲಿಸಿದರಂತೂ ಈ ಭಾಗಗಳು ಮೊಸಳೆಯೊಡನೆ ಹಲ್ಲಿಯನ್ನಿಟ್ಟಂತೆ ಕಾಣುವವು ಎರಡು ವಸಾಹತುಗಳಲ್ಲೇನಾದರೂ ಘರ್ಷಣೆಯಾರಂಭವಾದಲ್ಲಿ ಪೂರ್ವಬಂಗಾಲವು ಹೋಮಾಗ್ನಿಯಲ್ಲಿ ಬೀಳುವ ಹವ್ಯಕವ್ಯದಂತೆ ಕಾಣೆಯಾಗುತ್ತದೆ ಮಾತ್ರವಲ್ಲ ಪಶ್ಚಿಮ ಪಾಕಿಸ್ತಾನಕ್ಕೆ ಆತ್ಮಹತ್ಯವೇ ಗತಿ ಪೂರ್ವ ಪಾಕಿಸ್ತಾನದ ಅವಸ್ಥೆ ತಿಳಿಯುವ ಮೊದಲೇ ಕರಾಚಿಯು ಪಾದಾಕ್ರಾಂತವಾಗುವುದರಲ್ಲಿ ಸಂಶಯವಿಲ್ಲ.

★

ತಮ್ಮ ದುರುದ್ದೇಶ ಸಾಧನೆಯಾದ ಕೂಡಲೇ ಪಾಕಿಸ್ತಾನದ ಧುರೀಣರು ಧರ್ಮಕ್ಕೆ ಸಿಕ್ಕಿದ ತಮ್ಮ ಕರ್ಮಫಲದ ಪ್ರದೇಶವನ್ನು ಬಲಗೆತ್ತಿಸಲು ಯತ್ನಿಸಿದರು ಆದರೆ ದೇಶವೊಂದನ್ನು ಸಂಘಟಿಸುವ ರಾಜಕೀಯ ದೂರದರ್ಶಿತ್ವವಾಗಲಿ, ಮುತ್ಸದ್ದೀತನವಾಗಲೀ ಅವರೊಬ್ಬರಲ್ಲೂ ಅನಲೇಶ ಕಂಡುಬರುವುದಿಲ್ಲ ತಮ್ಮ ಕುತಲ್ಪನೆಯ ದುರ್ವಿವೇಕದ ಮತ್ತು ದುರಾಲೋಚನೆಯ ಫಲವಾಗಿ ಪೂರ್ವ ಪಂಜಾಬದ ಮುಸಲ್ಮಾನರಿಗೂ ಇತರ ನಿರಾಶ್ರಿತರಿಗೂ ಅದೆಷ್ಟು ಗಂಡಾಂತರ ಸಂಭವಿಸಿದೆಯೆಂದು ಇವರಿಗೆ ಲವಷ್ಟಾದರೂ ಕಲ್ಪನೆಯಿಲ್ಲ

ಒಂದು ಸಾಮಾನ್ಯ ಶಕ್ತಿಯ ರಾಷ್ಟ್ರವೆಂದಾದರೂ ಪರಿಗಣಿಸಲ್ಪಡುವಷ್ಟು ಸಂಪತ್ ಸಾಮರ್ಥ್ಯವು ಪಾಕಿಸ್ತಾನಕ್ಕಿಲ್ಲ ನಿತ್ಯ ದೌರ್ಭಾಗ್ಯವನ್ನು ಬೆಳೆಸಿಕೊಳ್ಳುವ, ಈ ಶಿಶು ಸಂಸ್ಥಾನವು ಮುಂದೆ ಬೆಳೆಯುವ ಸಂಗತಿ ಒತ್ತೊಟ್ಟಿಗಿರಲಿ, ಇದು ಬಾಳುವುದೂ ಸಂದೇಹಾಸ್ಪದವಾಗಿದೆ. ಎತ್ತೆತ್ತಲ್ಲೂ ಉದ್ಬುದ್ಧದ ಗಡಿಗಳಿಂದಲೇ ಸುತ್ತುವರಿದಿರುವ ಪಾಕಿಸ್ತಾನದ ರಕ್ಷಣೆಗೆ ವಿಪುಲ ಧನವ್ಯಯದ ಅವಶ್ಯಕತೆಯಿದೆ.

★

ವಿಭಾಗೀಕರಣದ ಮೊದಲು ಗಡಿನಾಡು, ಸಿಂಧ, ಸರ್ವತ್ರ ಪಂಜಾಬ ಮತ್ತು ಪೂರ್ಣ ಬಂಗಾಲಗಳಲ್ಲಿ ಮುಸ್ಲಿಂ ಮಂತ್ರಿ ಮಂಡಳಗಳೇ ಇದ್ದುವು ವಿಭಜನೆಯ ನಂತರ ಅತೀ ದೊಡ್ಡದಾದ ಪಂಜಾಬ ಮತ್ತು ಬಂಗಾಲಗಳ ಅರ್ಧಾಂಶಗಳು ಮುಸ್ಲಿಂ ಅಧಿಕಾರದಿಂದ ನಷ್ಟವಾದವು ಪಾಕಿಸ್ತಾನವಾಗಬೇಕೆಂದಿದ್ದ ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿ ಈಗಿನದಕ್ಕಿಂತಲೂ ಹೆಚ್ಚಿನ ಸೌಕರ್ಯಗಳು ಮುಸ್ಲಿಮರಿಗೆ ಸಿಗುತಿತ್ತವಲ್ಲದೆ ಭಾರತ ಕೇಂದ್ರಕ್ಕೆ ಸೇರುವುದರಿಂದ ಬೇರೆ ಕೆಲವು ಸೌಕರ್ಯಗಳು ಅವರಿಗೆ ದೊರಕುತಿದ್ದವು

ಮಿತಿಮೀರಿದ ಆರ್ಥಿಕ ಅಡಚಣಿ, ದಬ್ಬಾಳುವ ಆಡಳಿತ ವರ್ಗ ಸರ್ವಾಧಿಕಾರದ ಮುಖಂಡತ್ವ, ನಿರಂಕುಶ ಭಾವದ ಬೆಳವಣಿಗೆ ಪ್ರಚಾರ, ಮತಾಂಧತೆಯ ಅವಿವೇಕದ ಧೋರಣೆ ಇವುಗಳೆಲ್ಲದರಿಂದ ಪಾಕಿಸ್ತಾನವು ಎಂದಿಗೂ ಜಗತ್ತಿನ ಪ್ರಭಾವಿತ ಶಕ್ತಿರಾಷ್ಟ್ರವಾಗಲಾರದು ಈಗಲೇ ಅದು ಅಭಿವೃದ್ಧಿಯ ಕಡೆ ಸಾಗುತ್ತಿರುವ ಬದಲಿಗೆ ವಿನಾಶದ ಸಾಧನಗಳನ್ನು ಪೋಷಿಸುತ್ತಿದೆ

✠

ಭಾರತ ಒಕ್ಕೂಟದಲ್ಲಿದ್ದು ಪಾಕಿಸ್ತಾನಕ್ಕಾಗಿ ದುಡಿದವರ ಗತಿಯೇನು? ಅವರಿಗೆ ಸಿಕ್ಕಿದ ಲಾಭವಾದರೂ ಎಂತಹುದು? ಗೇಣ ಪ್ರದ ದೂರದರ್ಶಿತ್ವವಿಲ್ಲದೆ ಇವರು ಮೊದಲಿಂದಲೂ ಪಾಕಿಸ್ತಾನಕ್ಕೆ ಬೆಂಬಲಿಸುತ್ತ ಬಂದಿದ್ದರು ಆದರೆ ನಿಜ ಸ್ಥಿತಿಯನ್ನರಿದಾಗ ಇವರಿಗೆ ಎಲ್ಲಿಲ್ಲದ ಕಳವಳವಾಯಿತು ಈಗಿನವರು ತಾವು ಪ್ರಥಮದ ಹಿಂದೀಯರೆಂದೂ ನಂತರ ಮುಸಲ್ಮಾನರೆಂದೂ ಹೇಳಹತ್ತಿದ್ದಾರೆ ಭಾರತಕ್ಕಾಗಿ ತಮ್ಮ ರಕ್ತವನ್ನು ಸುರಿಸಲೂ ಸಿದ್ಧರಿರುವರೆಂದೂ ಸಾರಲಾರಂಭಿಸಿದ್ದಾರೆ ಈಗವರಿಗೆ ಸಂಪೂರ್ಣ ನಿರಾಶೆಯುಂಟಾಗಿದೆ

ಒಂದು ಕಾಲದಲ್ಲಿ ಲೀಗಿನವರು ವಕ್ರದೃಷ್ಟಿಯಿಂದ ನೋಡಿದ ಶ್ರದ್ಧಾವಂತ ರಾಷ್ಟ್ರೀಯ ಮುಸಲ್ಮಾನ ಧುರೀಣರಾದ ಮೌಲಾನಾ ಅಜಾದ್ ಮೊದಲಾದವರ ಆಶ್ರಯವನ್ನು ಪಡೆಯುವುದೇ ಭಾರತದಲ್ಲಿನ ಲೀಗ್ ಮುಸಲ್ಮಾನರಿಗಿರುವ ಒಂದೇ ದಾರಿ. ಇಲ್ಲವೆ ಸಮುತವಾದ ಪಕ್ಷವನ್ನಾದರೂ ಸೇರಿ ಅವರು ತಮಗೊದಗಬಹುದಾದ ವಿಪತ್ತಿನಿಂದ ಪಾರುಗೊಳ್ಳಬಹುದು

ಬ್ರಿಟಿಷ್ ಚಲಚಿತ್ರ ಸಂಗ್ರಹಾಲಯದಲ್ಲಿ ಜಗತ್ತಿನ ಅತ್ಯುತ್ತಮ ಚಿತ್ರಗಳ ಒಂದೊಂದು ಪ್ರತಿಯನ್ನು ಇಟ್ಟುಕೊಳ್ಳಲಾಗಿದೆ. ಇವುಗಳ ಉದ್ದ 90 ಮಿಲಿಯ ಅಡಿಗಳಾಗುತ್ತದೆ. ಒಂದು ಸಿನೇಮಾ ಮಂದಿರದಲ್ಲಿ ಇದನ್ನು ಮೂರು ತಿಂಗಳ ತನಕ ರಾತ್ರೆ ಹಗಲು ನಿಲ್ಲಿಸದೆ ತೋರಿಸಬಹುದಂತೆ.

✠

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	½
೪ರಿಂದ ೫ ತಿಂಗಳು	,,	,,	¾
೬ರಿಂದ ೯ ತಿಂಗಳು	,,	,,	1

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಸ್ವದೇಶಾಭಿಮಾನಿ

ತಾರೀಖು 16—4—1948

ಹಿಂದೂ ಕಾಯಿದೆ ಸುಧಾರಣೆ

ಕೇಂದ್ರ ಶಾಸನಸಭೆಯಲ್ಲಿ ಕೇಂದ್ರ ಸರಕಾರದ ಶಾಸನ ಖಾತೆಯ ಸಚಿವ ಡಾ|| ಅಂಬೇಡಕರರು ಹಿಂದೂ ಕಾಯಿದೆ ಸುಧಾರಣೆಗಳ ಬಗ್ಗೆ ಒಂದು ಮುಸೂದೆಯನ್ನು ತಯಾರಿಸಿ ಮುಂದಿಟ್ಟು ಅದನ್ನೀಗ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ.

ಈ ಮುಸೂದೆಯಲ್ಲಿಯ ಹೊಸ ಅಂಶಗಳನ್ನು ಡಾ॥ ಅಂಬೇಡಕರರೇ ವಿವರಿಸಿದ್ದಾರೆ. ಹಿಂದೂ ಕಾಯಿದೆಯ ಪ್ರಕಾರ ಯಾವದೊಂದು ಗಂಡುಮಗು ಹುಟ್ಟಿದ ಕೂಡಲೆ ಆಸ್ತಿಯಲ್ಲಿ ಪಾಲನ್ನು ಪಡೆಯಲು ಹಕ್ಕುದಾರನಾಗುತ್ತದೆಂದಿದ್ದುದನ್ನು ರದ್ದುಗೊಳಿಸಲಾಗುತ್ತಿದೆ ಏಕತ್ರ ಕುಟುಂಬದಲ್ಲಿ ಮೃತನ ಆಸ್ತಿಯು ದಾಯಾದತನವು ಜೀವಂತವಿರುವ ಇತರ ಅಣ್ಣ ತಮ್ಮಂದಿರರಿಗೆ ಹೋಗುವುದನ್ನು ತೆಗೆದುಹಾಕಲಾಗುತ್ತಿದೆ. ತಂದೆಯ ಆಸ್ತಿಯಲ್ಲಿ ಮಗಳಿಗೆ ಮಗನ ಪಾಲಿನ ಅರ್ಧದಷ್ಟು ದೊರೆಯಬೇಕೆಂದಿದೆ ಹೆಂಗಸಿಗಿದ್ದ ಆಸ್ತಿಯ ಒಡೆತನ ಅನಿರ್ಬಂಧ ಪೂರ್ಣ ಒಡೆತನಕ್ಕೆ ರೂಪಾಂತರಿಸುವ ಸೂಚನೆ ಇರುತ್ತದೆ. ವಿವಾಹ ಮತ್ತು ದತ್ತಕಗಳಿಗೆ ಸಂಬಂಧಪಟ್ಟ ಕಾಯಿದೆಗಳಲ್ಲಿ ಜಾತಿಗೋತ್ರಗಳ ನಿರ್ಬಂಧ ತೆಗೆದುಹಾಕುವ ಸೂಚನೆ ಇದೆ ಮುಸೂದೆಯಲ್ಲಿ ಏಕಪತ್ನಿತ್ವ ಹಾಗೂ ದಾಂಪತ್ಯ ವಿಚ್ಛೇದಗಳಿಗೂ ಪ್ರೋತ್ಸಾಹ ದೊರೆತಿದೆ.

ಈ ಸುಧಾರಣೆಗಳು ಹಿಂದೂಸಮಾಜವನ್ನೇ ಸ್ವಲ್ಪಮಟ್ಟಿಗೆ ಬದಲಾಯಿಸಬಹುದಾದ ಮಹತ್ವದ ಸುಧಾರಣೆಗಳೆಂಬುದನ್ನು ಪರಿಶೀಲಿಸಿದರೆ ಗೋಚರವಾಗದಿರದು. ಮಾತ್ರವಲ್ಲ ಇವೆಲ್ಲ ಅತ್ಯಾವಶ್ಯಕವಾದ ಸುಧಾರಣೆಗಳೆಂದೂ ಹೆಚ್ಚಿನವರು ಒಪ್ಪದಿರರು.

ಹಿಂದೂಸಮಾಜದಲ್ಲಿ ಸ್ತ್ರೀಯರ ವರ್ಗವು ದಳಿತವರ್ಗವಾಗಿಯೇ ಇದುವರೆಗೆ ನಡೆದು ಬಂದಿದೆ. ಅವರನ್ನು ಗೌರವಿಸುತ್ತ ಇಲ್ಲವೆಂದು ನಮ್ಮ ಹೇಳಿಕೆಯಲ್ಲ ಆದರೆ ಅವರಿಗೆ ಯಾವ ಬಗೆಯ ಆರ್ಥಿಕ ಸ್ವಾತಂತ್ರ್ಯವೂ ಇಲ್ಲದ್ದರಿಂದ ಅವರು ಗಂಡಸರ ಅಧೀನತೆಯನ್ನು ಒಪ್ಪಿಕೊಂಡೇ ಇರುವಂತೆ ಮಾಡಲಾಗಿದೆ.

ಭಾರತ ರಾಷ್ಟ್ರವು ಸ್ವಾತಂತ್ರ್ಯ ಪಡೆದ ಈಗಿನ ಕಾಲದಲ್ಲಿ ಸ್ತ್ರೀಯರಿಗೂ ಸ್ವಾತಂತ್ರ್ಯ ಕೊಡಲೆಳಸುವ ಇಂಥ ಮುಸೂದೆ ಮುಂದೆ ಬಂದಿರುವುದು ಯುಕ್ತವೇ ಇರುತ್ತದೆ

ವಿವಾಹ ಮತ್ತು ದತ್ತಕಗಳಲ್ಲಿ ಜಾತಿಗೋತ್ರಗಳ ನಿರ್ಬಂಧ ತೆಗೆದು ಹಾಕುವ ಸುಧಾರಣೆಯಾದರೂ ಅಗತ್ಯದ ವಿಷಯವೆಂದೇ ಹೇಳಬೇಕು. ನಮ್ಮ ಸಮಾಜದಲ್ಲಿ ಅಂತರ್ಜಾತಿಗಳು ವಿಪರೀತ ಬೆಳೆದು ಆಯಾ ಜಾತಿಗಳು ಬಹಳ ಸಂಕುಚಿತವಾಗಿವೆ ಮಾತ್ರವಲ್ಲ ಈ ಜಾತಿಗಳೊಳಗೇನೆ ವಿವಾಹ ಸಂಬಂಧಗಳನ್ನು ಬೆಳೆಸುತ್ತಲಿರುವುದು ಅನ್ನೊಂದು ಹಿತಕರವಲ್ಲವೆಂಬುದು ತಜ್ಞರ ಅಭಿಪ್ರಾಯವಿರುವುದರಿಂದ ಈ ಜಾತಿಗೋತ್ರಗಳ ನಿಯಮ ಸಡಿಲಿಸುವುದು ಅಗತ್ಯವಿರುತ್ತದೆ. ಅದರಂತೆ ಏಕಪತ್ನಿತ್ವ ಹಾಗೂ ದಾಂಪತ್ಯ ವಿಚ್ಛೇದದ ಅನುಕೂಲತೆಗಳು ಕೂಡ ಅತ್ಯಾವಶ್ಯಕ ವಿಷಯಗಳಿರುತ್ತವೆ. ಏಕಪತ್ನಿತ್ವದ ವಿಷಯ ಹೆಚ್ಚಿನವರು ಒಪ್ಪುವರು. ಅಂದಮೇಲೆ ಅಗತ್ಯವಿರುವ ಕೆಲ ಸಂದರ್ಭಗಳಲ್ಲಿ ದಾಂಪತ್ಯ ವಿಚ್ಛೇದದ ಅನುಕೂಲತೆಯ ಅವಶ್ಯಕತೆಯನ್ನು ಒಪ್ಪಲೇಬೇಕಾಗುತ್ತದೆ.

ಸಾಮಾಜಿಕ ವಿಚಾರಗಳಲ್ಲಿ ಶಾಸನಸಭೆ ಕೈಹಾಕುವುದೇ ಸರಿಯಲ್ಲವೆಂದು ವಾದಿಸುವವರ ಮಾತಿಗೆ ಫಲವಿಲ್ಲ. ಸಮಾಜದಲ್ಲಿ ಅಗತ್ಯವುಳ್ಳ ಸುಧಾರಣೆಗಳನ್ನು ಸಮಾಜವೇ ಮಾಡಲು ಇದ್ದ ಏರ್ಪಾಡುಗಳೆಲ್ಲ ಶಿಥಿಲವಾಗಿರುವ ಈಗಿನ ಕಾಲದಲ್ಲಿ ಇಂಥ ಆವಶ್ಯಕ ಸುಧಾರಣೆಗಳನ್ನು ಶಾಸನ ಸಭೆಗಳ ಮೂಲಕವೇ ಜಾರಿಗೆ ತಾರದೆ ಬೇರೆ ದಾರಿ ಇಲ್ಲ ಶಾರದಾಕಾನೂನು ಮೊದಲಾದುವನ್ನು ಶಾಸನಸಭೆಯ ಮೂಲಕ ಜಾರಿ ಮಾಡಿರುವುದನ್ನು ಕಂಡಮೇಲೆ ಪುನಃ ಆ ಹಳೆಯ ಮಾದರಿ ಚಳವಳಿಮಾಡಿ ಏನೂ ಫಲವಿಲ್ಲವೆಂದು ಇಂಥ ಜನರು ತಿಳಿದುಕೊಳ್ಳುವುದು ಅಗತ್ಯ

ನಿಜವಾದ ದಾರಿಯೆಂದರೆ ಮುಂದೆ ಬಂದಿರುವ ಸೂಚನೆಗಳನ್ನು ಕುರಿತು ಸಂಬಂಧಪಟ್ಟವರೆಲ್ಲರೂ ಕೂಲಂಕುಶವಾಗಿ ಪರಿಶೀಲನೆ ನಡೆಸಿ ಆಯಾ ಸೂಚನೆಗಳ ಸಾಧಕ ಬಾಧಕಗಳನ್ನು ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವುದು. ಯಾವ ಶಾಸನಸಭೆಯಾದರೂ ಜನಮತಕ್ಕೆ ವಿರುದ್ಧ ವರ್ತಿಸಲಾರದೆಂಬುದನ್ನು ತಿಳಿದುಕೊಳ್ಳುವುದು.

ಜನಮತದ ನಿಜವಾದ ಬೆಂಬಲವಿಲ್ಲದೆ ಇಂಥ ಸೂಚನೆಗಳು ಕಾನೂನಾಗಿ ಪರಿಣಮಿಸಿದರೂ ಫಲವಿಲ್ಲ ಅವು ಸರಿಯಾಗಿ ಜಾರಿಗೆ ಬರುವುದಿಲ್ಲ ಆದುದರಿಂದ ಈ ವಿಚಾರಗಳ ಕುರಿತು ಜನಮತದ ಬೆಂಬಲ ಅಗತ್ಯದ ಸಂಗತಿಯೆಂಬುದನ್ನು ಸರಕಾರವಾದರೂ ತಿಳಿಯದೆ ಇಲ್ಲ

ಈಗಿನ ಸರಕಾರ ಜಾತಿಮತಗಳಿಗೆ ಸಂಬಂಧವಿಲ್ಲದ ಲೌಕಿಕ ಸರಕಾರವೆಂದು ಸಾರುತ್ತಿರುವಾಗ ಇಂಥ ಕಾಯಿದೆಗಳನ್ನು ಒಂದು ಜಾತಿಯ ಸಮಾಜದ ಬಗ್ಗೆ ಮಾತ್ರ ಜಾರಿಗೆ ತರುವುದು ಸರಿಯೆ? ಎಂಬೊಂದು ಪ್ರಶ್ನೆ ಕೇಳಲಾಗುತ್ತಿದೆ. ಸಾಮಾಜಿಕ ವಿಷಯಗಳಲ್ಲಿ ಸರಕಾರ ಕೈಹಾಕಬಾರದೆಂಬ ಆ ಹಳೆಯ ಕೂಗಿನ ಹೊಸ ರೂಪವೇ ಈ ಪ್ರಶ್ನೆ ಎಂದು ಹೇಳಿದರೆ ಸಾಕು ಸರಕಾರ ಜಾತಿಮತಗಳಿಗೆ ಮಿಕ್ಕಿ ನಡೆಯುವ ಕ್ರಮದ್ದೆಂದ ಮಾತ್ರಕ್ಕೆ ಭಿನ್ನ ಸಮಾಜಗಳ ಅಸ್ತಿತ್ವ ಹೋಗಿಲ್ಲವೆಂಬುದನ್ನು ಮರೆಯಲಾಗದು ಹಿಂದೂ ಸಮಾಜವೇನೊ ಇದೆಯೆಂದ ಮೇಲೆ ಇದರಲ್ಲಿ ಅವಶ್ಯ ಸುಧಾರಣೆಗಳನ್ನು ಹೇಗೆ ಜಾರಿಗೆ ತರಬೇಕು?

ಮುಂದೆ ಬಂದಿರುವ ಮಸೂದೆಯನ್ನು ಯಾರೂ ಪೂರ್ಣವಾಗಿ ಸಮರ್ಥಿಸಲೇಬೇಕೆಂಬುದು ನಮ್ಮ ವಾದವಲ್ಲ. ಶಾಸನ ಸಭೆ ಇಂಥ ಕಾನೂನು ಮಾಡುವುದರಲ್ಲಿ ಅನೌಚಿತ್ಯವೇನೂ ಇಲ್ಲವೆಂಬುದನ್ನು ನಾವು ಮನಗಾಣಲೇ ಬೇಕು

ನಮ್ಮಲ್ಲಿಯ ಹಿಂದೂಜನರು ಈಗ ಮುಂದೆ ಬಂದಿರುವ ಸೂಚನೆಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡು ಈ ಕುರಿತು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವುದರ ಆವಶ್ಯಕತೆಯನ್ನು ತೋರಿಸಿಕೊಡುವುದು ಮಾತ್ರ ನಮ್ಮ ಉದ್ದೇಶವಿರುತ್ತದೆ.

ಟೀಕೆ-ಟಿಪ್ಪಣಿಗಳು

ಬರ್ಲಿನ್ ಪ್ರಕರಣ

ಜರ್ಮನಿಯ ಮುಖ್ಯ ಪಟ್ಟಣವಾದ ಬರ್ಲಿನ್ ಪ್ರದೇಶವನ್ನು ಯುದ್ಧಾನಂತರ ಅಮೇರಿಕ, ಬ್ರಿಟನು, ಫ್ರಾನ್ಸು ಮತ್ತು ರಸ್ಯಾ ಸರಕಾರಗಳ ಅಧೀನದಲ್ಲಿರುವ ನಾಲ್ಕು ಪಾಲುಗಳನ್ನಾಗಿ ವಿಭಾಗಿಸಲಾಗಿತ್ತು. ಈದರಲ್ಲಿ ಬರ್ಲಿನ್ ಸಿಟಿ ಪ್ರದೇಶ ರಸ್ಯದ ಆಡಳಿತೆಗೆ ಬಂದ ವಿಭಾಗದಲ್ಲಿದೆ ಅಮೇರಿಕ, ಬ್ರಿಟನು ಮತ್ತು ಫ್ರಾನ್ಸಗಳ ಅಧೀನದಲ್ಲಿರುವ ಪಾಲುಗಳು ಒಕ್ಕಟ್ಟಿನ ಆಡಳಿತೆಗೊಳಗಾಗಿವೆ ಇಲ್ಲಿಯ ಭಾಗಗಳನ್ನು ತಮಗೆ ಅನುಕೂಲವಾಗುವಂತೆ ಈ ಸರಕಾರಗಳು ವ್ಯವಸ್ಥೆಗೊಳಿಸುತ್ತಿವೆ ರಸ್ಯಾ ತದ್ವಿರುದ್ಧ ಆಚರಿಸುತ್ತಿದೆ. ಇತ್ತಂಡಗಳೊಳಗಿನ ಭೇದವು ಪ್ರಬಲವಾದಂತೆ ಈಗ ಇದು ಬರ್ಲಿನ್ ನಗರದಲ್ಲಿ ಬಲವಾದ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ

ರಸ್ಯದ ಅಧೀನವಿದ್ದ ಭಾಗದಲ್ಲಿ ಬರ್ಲಿನ್ ಸಿಟಿಯ ಪ್ರದೇಶವಿದ್ದು ಬರ್ಲಿನಿನ ರೈಲು ಮುಂತಾದವುಗಳ ಕೇಂದ್ರ ಇದರಲ್ಲಿದೆ ಈಗ ರಸ್ಯ ಸರಕಾರವು ಈ ರೈಲುಗಳ ಉಪಯೋಗವನ್ನು ವಿರುದ್ಧ ಪಕ್ಷಕ್ಕೆ ಕೊಡಲು ನಿರಾಕರಿಸಿದೆ ಹೀಗಾಗಿ ತಮ್ಮ ಬರ್ಲಿನಿಗೆ ಬೇಕಾದ ಆಹಾರ ಇತ್ಯಾದಿಗಳನ್ನು ಇವರು ವಿಮಾನ ದಾರಿಯಿಂದ ಮಾತ್ರ ಒದಗಿಸಬೇಕಾದ ಪರಿಸ್ಥಿತಿ ಬಂದಿದೆ

ಟೆಲಿಫೋನ್ ಟೆಲಿಗ್ರಾಮು ಇತ್ಯಾದಿ ವ್ಯವಸ್ಥೆಗಳ ವಿರುದ್ಧ ಪಕ್ಷದ ಕೆಲಸಗಾರರಿಗೆ ಇಲ್ಲಿ ಪ್ರವೇಶಿಸಲು ಬಿಡುವುದಿಲ್ಲವೆಂದೂ ತಿಳಿದು ಬಂದಿದೆ

ಇತ್ತಂಡದವರೂ ತಮ್ಮ ತಮ್ಮ ಪ್ರದೇಶಗಳಲ್ಲಿ ಜನತಾಸರಕಾರಗಳನ್ನು ರೂಪಿಸುತ್ತಿದ್ದಾರೆ ಜರ್ಮನಿಯ ಮುಂದಾಳ್ತನಕ್ಕೆ ಈ ರೀತಿ ಎರಡು ಪಂಗಡಗಳು ಸಿದ್ಧವಾಗುತ್ತಿವೆ ಇಡೀ ಯುರೋಪೇ ಎರಡು ಪಂಗಡವಾಗುತ್ತಿರುವಾಗ ಜರ್ಮನಿಯೂ ಎರಡು ಭಾಗವಾಗಿ ವ್ಯವಸ್ಥೆ ಹೊಂದುವುದರಲ್ಲಿ ಆಶ್ಚರ್ಯವೇನೂ ಇಲ್ಲ ಏಕೆಂದರೆ ಮುಂದೆ ನಡೆಯಬಹುದಾದ ಯುದ್ಧಕ್ಕೆ ಈ ಪ್ರದೇಶವು ಮಹತ್ವದ ಪ್ರದೇಶವೆಂಬುದನ್ನು ಇತ್ತಂಡದವರೂ ಚೆನ್ನಾಗಿ ತಿಳಿದಿದ್ದಾರೆ

ಹೈದರಾಬಾದಿಗೆ ಮೌಲಾನಾ ಅಜಾದರ ಹಿತೋಕ್ತಿ

ಮೌಲಾನ್ ಅಬ್ದುಲ್‌ಕಲಮ್ ಅಜಾದರು ಹೈದರಾಬಾದು ಸರಕಾರವು ಕಾಲಸ್ಥಿತಿಗಳನ್ನು ವಿಚಾರಿಸಿ ವರ್ತಿಸಬೇಕೆಂದು ಹಿತೋಕ್ತಿ ಹೇಳಿರುತ್ತಾರೆ ಪ್ರಜಾಧಿಪತ್ಯ ಸ್ಥಾಪನೆಯ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ ಇದೇ ಹೈದರಾಬಾದು ಪ್ರಶ್ನೆಯ ತೀರ್ಮಾನದ ಏಕಮಾತ್ರ ದಾರಿಯೆಂಬುದು ಈಗ ಸ್ಪಷ್ಟವಾಗುತ್ತಿದೆ

ರಜಾಕಾರ ಮುಖಂಡರು ಮನಸ್ವೀ ಮಾತಾಡುತ್ತಿದ್ದಾರೆ. ಇವರ ಖಾಸಗಿ ಸೈನ್ಯದ ಉಪಟಳ ನಿಯಂತ್ರಣಗೊಳಿಸಲು ಹೈದರಾಬಾದು ಸರಕಾರ ಅನುಮಾನಿಸುತ್ತಿದೆ. ಪ್ರಾಯಶಃ ಈಗಿನ ಅಲ್ಲಿಯ ಸರಕಾರಕ್ಕೆ ಇದು ಅಸಾಧ್ಯವೂ ಇರಬಹುದು. ರಜಾಕಾರರ ಗುಪ್ತಚಾರರು ಅಖಿಲಭಾರತದಲ್ಲಿ ಹಿಟ್ಲರ್ ಮಾದರಿ ದುಡಿಯುತ್ತಿರುವರೆಂಬ ಒಂದು ವಾರ್ತೆಯೂ ಪ್ರಕಟವಾಗಿದೆ.

ಭಾರತ ಸರಕಾರವು ಈ ರಜಾಕಾರ ಪಂಗಡ ಬಹಿಷ್ಕರಿಸಿ ಸಂಸ್ಥಾನದಲ್ಲಿ ಪ್ರಜಾ ಸರಕಾರ ಸ್ಥಾಪಿಸುವಂತೆ ಸೂಚಿಸಿದ್ದಕ್ಕೆ ಹೈದರಾಬಾದು ಸರಕಾರ ಹೆಚ್ಚಿನ ಮದ್ದುಗುಂಡುಗಳನ್ನು ಒದಗಿಸಬೇಕೆಂದು ಪ್ರತ್ಯುತ್ತರ ಕಳುಹಿಸಿಯದೆ. ಹೈದರಾಬಾದಿನಲ್ಲಿ ಪ್ರಜಾ ಸರಕಾರ ಸ್ಥಾಪನೆಯಾಗುವ ತನಕ ಅವರಿಗೆ ಮದ್ದು ಗುಂಡುಗಳನ್ನು ಒದಗಿಸಿದರೆ ಅವು ರಜಾಕಾರರಿ ಒದಗಿಸಲ್ಪಟ್ಟು ಇನ್ನಷ್ಟು ಅತ್ಯಾಚಾರಕ್ಕೆ ಸಹಾಯಕವಾಗಬಹುದೆಂಬುದ್ದರಿಂದ ಇದಕ್ಕೆ ಭಾರತ ಸರಕಾರವಂತೂ ಕೇಳುವಂತಿಲ್ಲ

ಅಂತೂ ಹೈದರಾಬಾದಿನ ಪ್ರಶ್ನೆ ಶಾಂತ ರೀತಿಯಲ್ಲಿ ತೀರ್ಮಾನವಾಗುವ ಲಕ್ಷಣಗಳು ಕಾಣುವುದಿಲ್ಲ ಈ ಕುರಿತು ಅಗತ್ಯವುಳ್ಳ ಕಾರ್ಯಕ್ರಮವನ್ನು ಭಾರತ ಸರಕಾರವು ಕೂಡಲೇ ಕೈಕೊಳ್ಳದಿದ್ದಲ್ಲಿ ಹೈದರಾಬಾದಿನ ಪ್ರಜೆಗಳಿಗೆ ಮದ್ದು ಗುಂಡುಗಳನ್ನು ಒದಗಿಸಿ ಉಗ್ರ ಕಾರ್ಯಕ್ರಮವನ್ನು ತಾವು ಕೈಕೊಳ್ಳುವುದಾಗಿ ಸಾಮ್ಯವಾದೀ ಪಂಗಡಿಗರೂ ಹೇಳತೊಡಗಿದ್ದಾರೆ ಈ ಪ್ರಶ್ನೆಯನ್ನು ಉದ್ದಕ್ಕೆ ಬೆಳೆಯಬಿಡದೆ ಶೀಘ್ರದಲ್ಲಿ ತೀರ್ಮಾನಿಸುವ ಆವಶ್ಯಕತೆಯನ್ನು ಎಲ್ಲರೂ ಒಪ್ಪಲೇ ಬೇಕು

ನೈಜಾಮು ಸರಕಾರವು ಮೌಲಾನಾ ಅಜಾದರ ಹಿತೋಕ್ತಿಗಳಿಗೆ ಲಕ್ಷ್ಯ ಕೊಡುವುದು ಒಳ್ಳೆಯದೆಂದ ಹೇಳಬಹುದು

ಹಿರಾಕುಡ ಆಣೆಕಟ್ಟು

ಒರಿಸ್ಸಾ ಪ್ರಾಂತ್ಯದ ಮಹಾ ನದಿಗೆ ಹಾಕಲಾಗುವ ಈ ಆಣೆಕಟ್ಟಿನಿಂದ ಭಾರತದಲ್ಲಿ ಆರ್ಥಿಕ ದೃಷ್ಟಿಯಿಂದ ಎಲ್ಲಕ್ಕೂ ಹಿಂದುಳಿದಿರುವ ಆ ಪ್ರಾಂತ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಬಹಳ ಸಹಾಯಕವಾಗುತ್ತದೆಂದು ತಿಳಿದುಬರುತ್ತದೆ ಇದರ ಶಂಕುಸ್ಥಾಪನಾಕಾರ್ಯ ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರಿಂದ ನಡೆಸಲ್ಪಡುತ್ತಿದೆ.

13 ಲಕ್ಷ ಎಕರೆ ಭೂಮಿಗೆ ನೀರಾವರಿ ಮತ್ತು 350 ಸಾವಿರ ಕಿಲೊವ್ಯಾಟ ವಿದ್ಯುತ್ ಶಕ್ತಿಗಳನ್ನು ಒದಗಿಸುವ ಈ ಆಣೆಕಟ್ಟಿನಿಂದ ಆ ಬಡಪ್ರಾಂತ್ಯದ ಜನರ ಸ್ಥಿತಿಯು ಸುಧಾರಿಸುವಂತಾಗಲೆಂದು ಹಾರೈಸುತ್ತೇವೆ.

ಕಲ್ಕತ್ತಾದಲ್ಲಿ ಕೇಂದ್ರ ಸರಕಾರೀ ನೌಕರರ ಮುಷ್ಕರ

ಕಲ್ಕತ್ತಾದಲ್ಲಿ ಕೇಂದ್ರ ಸರಕಾರೀ ನೌಕರರ ಮುಷ್ಕರವೊಂದು ನಡೆಯಿತು. ಯುದ್ಧ ಕಾಲದಲ್ಲಿ ಸೈನ್ಯಗಳನ್ನು ಹೆಚ್ಚಿಸಿದಾಗ ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರ ಇತ್ಯಾದಿಗಳ ಸಿಬಂದಿಯನ್ನು ಹೆಚ್ಚಿಸಬೇಕಾಯಿತು. ಈಗ ಸೈನ್ಯಗಳನ್ನು ಕಡಮೆ ಮಾಡಿರುವುದರಿಂದ ಈ ಸಿಬಂದಿಯನ್ನು ಸಹಜವಾಗಿ

ಕೆಡಮೆ ಮಾಡಬೇಕಾಗಿ ಬಂದು ಹಂಗಾಮಿ-ಯಾಗಿ ನೇಮಿಸಲಾದ ನೌಕರರನ್ನು ಕೆಲಸದಿಂದ ನಿವೃತ್ತ ಮಾಡಬೇಕಾಯಿತು ಇದಕೆ ಮುಷ್ಕರದ ನೋಟೀಸು ಹೊರಟಿತು. ಪಂಡಿತ ನೆಹರುರವರು ಮುಷ್ಕರ ಮಾಡುವುದಕ್ಕೆ ಅರ್ಥವಿಲ್ಲವೆಂದೂ ಸಾಧ್ಯವಿದ್ದಲ್ಲ ರಿಯಾಯಿತಿ ಕೊಡುವುದಾಗಿಯೂ ಹೇಳಿದರು. ಇದಕ್ಕೆ ಕಿವಿಗೊಡದೆ ಮುಷ್ಕರ ಹೂಡಲಾಯಿತು.

ಈಗ ಮುಷ್ಕರ ತಾನಾಗಿ ಅಂತ್ಯವಾಯಿತು, ಕೆಲಸಗಾರರೆಲ್ಲರೂ ಕೆಲಸಕ್ಕೆ ಹೋದರು ಕೆಲವರು ಉಪವಾಸ ಹಿಡಿದಿದ್ದಾರಂತೆ. ಉಪವಾಸವನ್ನು ಬೇಗನೆ ನಿಲ್ಲಿಸುವರೆಂದು ನಿರೀಕ್ಷಿಸಬಹುದು

ಈ ಮುಷ್ಕರದ ಪ್ರಕರಣ ಕಮ್ಯೂನಿಸ್ಟರ ಉಪಟಳವೆಂಬ ಬಗ್ಗೆ ಏನೇನೂ ಸಂಶಯವಿಲ್ಲ. ಇವರ ಮಾತುಗಳನ್ನು ಕೇಳಿ ನ್ಯಾಯವಿಲ್ಲದ ಮುಷ್ಕರಗಳನ್ನ ಕಟ್ಟಿಕೊಂಡಲ್ಲಿ ಯಾವ ಪರಿಸ್ಥಿತಿ ಬರುತ್ತದೆಂಬುದನ್ನು ಇದರಿಂದ ಕಲಿತು ಕೆಲಸಗಾರರು ಕಮ್ಯೂನಿಸ್ಟರ ಹಿಂದೆ ಹೋಗುವುದನ್ನು ಬಿಡುವುದು ಹಿತಕರವೆಂದು ಸೂಚಿಸ ಬಯಸುತ್ತೇವೆ

ಪ್ರೊಫೆಸರ್ ಎನ್. ಜಿ ರಂಗರ ಹೇಳಿಕೆ

ನಮ್ಮ ಕಾಂಗ್ರೆಸ್ ಸರಕಾರದ ಮುಂದಾಳುಗಳು ದೇಶದ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಬಹಳ ಆತುರ ತೋರಿಸುತ್ತಿದ್ದಾರೆ ಕೈಗಾರಿಕೆಗಳ ಭಂಡವಲಗಾರರ ಹಿಂದೆ ಓಡುತ್ತಾರೆ ಅವರಿಗ ಬಹಳ ಭರವಸೆ ಹೇಳುತ್ತಾರೆ ತೆರಿಗೆ ರಿಯಾಯತಿ ಕೊಡುತ್ತಾರೆ ಪರಕೀಯ ಸ್ಪರ್ಧೆಯಿಂದ ರಕ್ಷಣೆಯ ವಾಗ್ದಾನ ಕೊಡುತ್ತಾರೆ ಸಾಕಷ್ಟು ಲಾಭಾಂಶದ ಆಶ್ವಾಸನ ಕೊಡುತ್ತಾರೆ ಕೈಗಾರಿಕೆಗಳಲ್ಲಿ ದುಡಿಯುವ ಮಜೂರರನ್ನು ಒಲಿಸುವ ಯತ್ನಗಳಿಗೂ ಕಡಿಮೆಯಿಲ್ಲ. ಕನಿಷ್ಟ ಕೂಲಿ ನಿರ್ಣಯವಾಗುತ್ತಿದೆ. ಲಾಭದ ಪಾಲು ಇವರಿಗೆ ಕೊಡಿಸುವ ವ್ಯವಸ್ಥೆ ನಡೆಯುತ್ತಿದೆ ಕೈಗಾರಿಕೆಗಳ ಉದ್ಯಮಕ್ಕೆ ಅವಶ್ಯವುಳ್ಳ ಶಾಸ್ತ್ರೀಯ ಶೋಧನೆಗಳನ್ನು ನಡೆಸುವ ಏರ್ಪಾಡೂ ನಡೆಯುತ್ತಿದೆ ಕೈಗಾರಿಕೆಗಳ ಅಭಿವೃದ್ಧಿಗೆ ಈ ರೀತಿ ಹಲವು ಬಗೆಯ ಯತ್ನಗಳು ನಡೆಯುತ್ತಿವೆ.

ಇದೇ ರೀತಿ ಕೃಷಿಕ ಹಾಗೂ ಹಳ್ಳಿ ಕೈಗಾರಿಕೆಯವರಿಗೆ ಅವಶ್ಯವುಳ್ಳ ಪ್ರೋತ್ಸಾಹ ಕೊಡಲು ಈ ಮುಂದಾಳುಗಳು ಏಕೆ ಆತುರತೆ ತೋರಿಸುತ್ತ ಇಲ್ಲವೆಂಬುದು ಪ್ರೊಫೆಸರ್ ರಂಗರವರು ಕೇಳುವ ಪ್ರಶ್ನೆ. ಭಾರತದಲ್ಲಿ ಹಳ್ಳಿ ವಿಭಾಗಗಳ ಬೆಳವಣಿಗೆಯ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂಬುದೇ ಇವರ ಹೇಳಿಕೆಯ ಸಾರಾಂಶ ಇವರ ಅಭಿಪ್ರಾಯವನ್ನು ನಾವು ಸಮರ್ಥಿಸುತ್ತೇವೆ. ಕೃಷಿ ಕೈಗಾರಿಕೆಗಳೆರಡೂ ನಮ್ಮಲ್ಲಿ ಅಭಿವೃದ್ಧಿಯನ್ನಹೊಂದುವಂತಾಗಬೇಕು.

ಮೈಸೂರು ಅರಸರಿಗೆ ಅಖಿಲ ಕರ್ನಾಟಕದ ಗವರ್ನರರ ಪದವಿ

ಕರ್ನಾಟಕ ಏಕೀಕರಣ ಮಹಾ ಸಮಿತಿಯ ಸಭೆಯೊಂದರಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಸಿದ್ಧವನ ಹಳ್ಳಿ ನಿಜಲಿಂಗಪ್ಪನವರು ಮೈಸೂರು ಅರಸರನ್ನು ಅಖಿಲ ಕರ್ನಾಟಕದ ಗವರ್ನರರನ್ನಾಗಿ ಹತ್ತು ವರ್ಷಗಳ ತನಕವಾದರೂ ನೇಮಿಸಬೇಕೆಂದು ವಿವರಿಸಿದರೆಂದು ತಿಳಿದುಬರುತ್ತದೆ

ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ಇತರ ಜಿಲ್ಲೆಗಳು ಇವುಗಳು ಒಟ್ಟು ಸೇರಿ ಅಖಂಡ ಕರ್ನಾಟಕ ಪ್ರಾಂತ್ಯ ನಿರ್ಮಿಸಬೇಕೆಂಬ ಭಾವನೆ ಈ ಸೂಚನೆಯಲ್ಲಿ ಅಡಕವಾಗಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ

ಮುಂದಿನ ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರು ಸಂಸ್ಥಾನವನ್ನು ಸೇರಿಸಿಕೊಳ್ಳುವುದು ಅತೀ ಅಗತ್ಯವೆಂಬದು ನಮ್ಮ ಅಭಿಪ್ರಾಯವೂ ಇರುತ್ತದೆ ದಕ್ಷಿಣ ಕನ್ನಡ ಜಿಲ್ಲೆಯವರಿಗ ಮೈಸೂರಿನವರೊಡನಿದ್ದಷ್ಟು ನಿಕಟ ಸಂಬಂಧ ಇತರ ಕರ್ನಾಟಕ ಜಿಲ್ಲೆಗಳೊಡನಿಲ್ಲವೆಂಬುದು ಸರ್ವವಿದಿತವಿರುತ್ತದೆ

ಮೈಸೂರು ಸಂಸ್ಥಾನದವರಾದರೂ ಅಖಿಲ ಕರ್ನಾಟಕಕ್ಕೆ ಸೇರುವುದರಲ್ಲಿ ಆಕ್ಷೇಪ ಕಾಣಲಿಕ್ಕಿಲ್ಲವೆಂದು ನಾವು ಆಶಿಸುತ್ತೇವೆ ಬೇಕಿದ್ದರೆ ಇತರ ಕರ್ನಾಟಕ ಜಿಲ್ಲೆಗಳು ಮೈಸೂರು ಸಂಸ್ಥಾನವನ್ನು ಸೇರಬಯಸುತ್ತಿವೆಯೆಂದೇ ತಿಳಿದುಕೊಂಡು ಇವರು ಈ ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಒಪ್ಪಿಗೆ ಕೊಡಬೇಕಾಗಿ ಸೂಚಿಸುತ್ತೇವೆ

ಮೈಸೂರು ಮಹಾರಾಜರನ್ನು ಹತ್ತು ವರ್ಷಗಳ ತನಕವಾದರೂ ಅಖಿಲ ಕರ್ನಾಟಕದ ಗವರ್ನರರ ಪದವಿಗೆ ನೇಮಿಸಬೇಕೆಂದು ನಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಹಾಗೂ ಮೈಸೂರವರೇ ಆದ ನಿಜಲಿಂಗಪ್ಪನವರ ಸೂಚನೆ ನಮಗೆ ಮಾನ್ಯವಿರುತ್ತದೆ ಮೈಸೂರಿನ ಪ್ರಜೆಗಳು ಇದಕ್ಕೊಪ್ಪಿದರೆ ಮಹಾರಾಜರು ಆಕ್ಷೇಪಿಸಲಿಕ್ಕಿಲ್ಲವೆಂದೂ ಆಶಿಸಬಹುದು

ಬೇರೆ ಗವರ್ನರರ ನೇಮಕದಿಂದ ನಮ್ಮ ಮುಂದಿನ ಪ್ರಾಂತ್ಯಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ವರ್ಷಕ್ಕೆ ಖರ್ಚು ತಗಲುವುದರ ಬದಲು ಹತ್ತು ಲಕ್ಷ ರೂಪಾಯಿ ಖರ್ಚು ತಗಲಬಹುದೆಂದೂ ಅಖಂಡ ಕರ್ನಾಟಕ ನಿರ್ಮಾಣದಿಂದಾಗುವ ಪ್ರಯೋಜನಗಳನ್ನು ಎಣಿಸಿದರೆ, ಈ ಅಧಿಕ ಖರ್ಚನ್ನು ಹೊರುವುದು ಅಷ್ಟೊಂದು ದೊಡ್ಡ ವಿಷಯವಲ್ಲವೆಂದೂ ನಿಜಲಿಂಗಪ್ಪನವರು ಹೇಳಿದ ಮಾತು ಸರಿ ಇರುತ್ತದೆ.

ಈಗ ಚಿಕ್ಕ ಚಿಕ್ಕ ಸಂಸ್ಥಾನಗಳಲ್ಲಿ ಹೆಚ್ಚಿನವು ಭಾರತದ ಪ್ರಾಂತ್ಯಗಳೊಡನೆ ಆಕ್ಷೇಪ ಹೇಳದೆ ಸಮ್ಮಿಶ್ರವಾಗಿರುತ್ತದೆ. ಕೆಲಕೆಲವು ಚಿಕ್ಕ ಸಂಸ್ಥಾನಗಳು ತಮ್ಮೊಳಗೆ ಸೇರಿ ದೊಡ್ಡ ಸಂಸ್ಥಾನಗಳನ್ನು ಕಟ್ಟಿಕೊಂಡಿರುತ್ತವೆ. ಈ ಪರಿಸ್ಥಿತಿಯಲ್ಲಿ ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ಇತರ ಭಾಗಗಳು ಸಮ್ಮಿಶ್ರವಾಗುವುದು ಕಾಲೋಚಿತವೇ ಇರುತ್ತದೆ

ಕನ್ನಡಿಗರದೇ ಪ್ರಾಂತ್ಯ ನಿರ್ಮಾಣವಾಗುವ ಈ ಸಂದರ್ಭದಲ್ಲಿ ಅಚ್ಚ ಕನ್ನಡಿಗರಾದ ಮೈಸೂರವರು ಪ್ರತ್ಯೇಕ ನಿಲ್ಲುವುದು ಉಚಿತವೆನ್ನಿಸುವುದಿಲ್ಲ ಎಲ್ಲ ಕನ್ನಡಿಗರೂ ಒಟ್ಟು ಸೇರಿ ಅಖಂಡ ಕರ್ನಾಟಕ ಪ್ರಾಂತ್ಯ ಕಟ್ಟಿಕೊಳ್ಳುವುದರಿಂದ ಅಖಿಲ ಭಾರತದಲ್ಲಿ ಕನ್ನಡಿಗರಿಗೆ ಒಂದು ಪ್ರಧಾನ ಸ್ಥಾನ ದೊರೆಯುವಂತಾಗುವುದು ಬರೇ ಮೈಸೂರು ಸಂಸ್ಥಾನಕ್ಕೆ ಮಾತ್ರ ಅಥವಾ ಮೈಸೂರನ್ನುಳಿದ ಕರ್ನಾಟಕಕ್ಕೆ ಅಷ್ಟೇ ಪ್ರಧಾನ ಸ್ಥಾನ ಭಾರತದಲ್ಲಿ ಎಂದಿಗೂ ದೊರೆಯುವುದು ಶಕ್ಯವಿಲ್ಲ

ಮೈಸೂರವರು ತಮ್ಮ ಮಹಾರಾಜರನ್ನು ಬಿಟ್ಟು ಬಿಡುವಂತಿಲ್ಲವೆಂಬ ಮಾತು ಸರಿಯಾದುದೇ ಇರುತ್ತದೆ ಮೈಸೂರಿನ ಪ್ರಜೆಗಳಿಗೆ ಅಲ್ಲಿಯ ಮಹಾರಾಜರ ಮೇಲೆ ವಿಶೇಷ ಭಕ್ತಿ, ಆದರ, ವಿಶ್ವಾಸಗಳಿವೆಯೆಂಬುದರಿಂದ ಮಹಾರಾಜರಿಗೆ ಈ ಸಂಯುಕ್ತ ಕರ್ನಾಟಕದಲ್ಲಿ ಯೋಗ್ಯ ಸ್ಥಾನ ಕೊಡದೆ ಮೈಸೂರವರು ಈ ಯೋಜನೆಗೆ ಒಪ್ಪಲಾರರು ಆದುದರಿಂದಲೇ ನಿಜಲಿಂಗಪ್ಪನವರ ಸೂಚನೆ ಮುಂದೆ ಬಂದಿದೆ

ನಮಗೆ ಈಗೊಬ್ಬ ಮಹಾರಾಜರನ್ನು ಕಟ್ಟಿಕೊಳ್ಳುವ ಈ ಪ್ರಸಂಗವೇಕೆ ಬೇಕೆಂದು ಇಲ್ಲಿ ಕೇಳುವ ಮಂದಿ ಇದ್ದಾರೆ ಆದರೆ ಮಹಾರಾಜರನ್ನು ಸಮೇತವಲ್ಲದೆ ಮೈಸೂರನ್ನು ನಾವು ಪಡೆಯುವುದು ಅಸಾಧ್ಯವೆಂಬುದರಿಂದ ನಾವು ಮಹಾರಾಜರನ್ನು ಆ ಸಂಸ್ಥಾನದೊಡನೆ ಸ್ವೀಕರಿಸಲು ಹಿಂಜರಿಯಬಾರದು ಹಾಗಾದರೆ ನಾವು ಮೈಸೂರನ್ನು ಬಿಟ್ಟೇ ಪ್ರಾಂತ್ಯ ನಿರ್ಮಾಣ ಮಾಡೋಣವೆಂಬ ಸೂಚನೆಗೆ ಹೆಚ್ಚಿನ ಅರ್ಥವಿಲ್ಲ ಕಳೆದ ಇನ್ನೂರು ವರ್ಷಗಳಿಂದ ಬೆಳೆದು ಬಂದ ಮೈಸೂರವರ ರಾಜನಿಷ್ಠೆಯನ್ನು ನಿರಾಕರಿಸುವುದು ಸಮಂಜಸವಲ್ಲ

ಮೈಸೂರಿನ ಮಹಾರಾಜರಾದರೂ ತಮ್ಮ ಸಂಸ್ಥಾನದಲ್ಲಿ ಪ್ರಜಾಧಿಕಾರವನ್ನು ಮನಃಪೂರ್ವಕ ಸ್ಥಾಪಿಸಿರುತ್ತಾರೆ ಪ್ರಜಾಹಿತವೇ ತನ್ನ ಹಿತವೆಂದು ನಡೆಯುತ್ತ ಬಂದಿದ್ದಾರೆ ಭಾರತ ಸರಕಾರಕ್ಕೆ ಸೇರಿಕೊಳ್ಳಲು ಹಿಂದೆ ಮುಂದೆ ನೋಡದೆ ಮೊದಲಾಗಿ ಸೇರಿಕೊಂಡ ದೊಡ್ಡ ಸಂಸ್ಥಾನಗಳಲ್ಲಿ ಮೈಸೂರು ಮಹಾರಾಜರ ಸರಕಾರವು ಒಂದೆಂಬುದನ್ನು ಮರೆಯಲಾಗದು ಇಂಥ ಮಹಾರಾಜರಾದರೂ ಅಖಂಡ ಕರ್ನಾಟಕ ಸ್ಥಾಪನೆಯಿಂದ ಮೈಸೂರಿಗೆ ಕೂಡಾ ದೊರೆಯಲಿರುವ ಕೀರ್ತಿ ಗೌರವಗಳನ್ನು ಮನಗಂಡು ಈ ಸಂಯುಕ್ತ ಕರ್ನಾಟಕ ಯೋಜನೆಗೆ ತಮ್ಮ ಬೆಂಬಲ ಕೊಟ್ಟೇ ಕೊಡುವರೆಂದು ಆಶಿಸಲು ಅಡ್ಡಿಯಿಲ್ಲ

ದೇಶ ಕಾಲ ಪರಿಸ್ಥಿತಿಗಳನ್ನು ಮನಗಂಡು ಮೈಸೂರಿನ ಮಹಾರಾಜರೂ ಅಲ್ಲಿಯ ಪ್ರಜಾವರ್ಗವೂ ಈ ಯೋಜನೆಗೆ ಒಪ್ಪಿಗೆ ಕೊಟ್ಟಲ್ಲಿ ಇಂಥ ಮಹಾರಾಜರನ್ನು ಅಖಿಲ ಕರ್ನಾಟಕದ ಗವರ್ನರರನ್ನಾಗಿ ಇಟ್ಟುಕೊಳ್ಳುವುದು ಕರ್ನಾಟಕಕ್ಕೆ ಒಂದು ನಿಜವಾದ ಭೂಷಣವೆಂದೇ ತಿಳಿಯಬಹುದು

ಮೈಸೂರು ಸಮೇತವಾದ ಅಖಂಡ ಕರ್ನಾಟಕ ಪ್ರಾಂತ್ಯವು ಬೇಗನೇ ಅಸ್ತಿತ್ವಕ್ಕೆ ಬಂದು ಅಖಿಲಭಾರತದಲ್ಲಿ ಯೋಗ್ಯ ಸ್ಥಾನವನ್ನು ಅಲಂಕರಿಸುವಂತಾಗಲೆಂದು ಹಾರೈಸುತ್ತೇವೆ.

ನಿಜಲಿಂಗಪ್ಪನವರ ಸೂಚನೆಯನ್ನು ದಕ್ಷಿಣ ಕನ್ನಡದ ಎಲ್ಲ ಮಹಾಜನರೂ ಮುಕ್ತಕಂಠದಿಂದ ಸಮರ್ಥಿಸಬೇಕಾಗಿಯೂ ಕೇಳಿಕೊಳ್ಳುತ್ತೇವೆ.

ಸ್ವೀಕಾರ ಮತ್ತು ವಿಮರ್ಶೆ

ಕರ್ಮಯೋಗಿ–ಬರೆದವ ತಿರುಕ,
ಪ್ರಕಾಶಕರು' ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲ್ಕೆರೆ ತಾಲೂಕು–ಚಿತ್ರದುರ್ಗ ಜಿಲ್ಲೆ. ಪುಟ ೧. ಬೆಲೆ ರೂ. 1–8–0

ಇದೊಂದು ನಾಟಕ ಈ ಕೃತಿಯನ್ನು ಲೇಖಕರು "ನನ್ನ ಮತ್ತು ಜಗತ್ತಿನ ಹಸಿದ ಕರುಳಿನ ಕೂಗಿಗೆ ಓಗೊಟ್ಟು ಉಣಿಸಿ ತಣಿಸಿದ ಪ್ರತ್ಯಕ್ಷ ದೈವಸ್ವರೂಪೀ ಅನ್ನದೇವ ಕೃಷಕನ ಪಾದದಡಿಯಲ್ಲಿ ಭಕ್ತಿಪೂರ್ವಕವಾಗಿ" ಸಮರ್ಪಿಸಿದ್ದಾರೆ

ಸಂಕಪ್ಪನೆಂಬೊಬ್ಬ ಸಾಲದಲ್ಲಿ ಬಿದ್ದ ರೈತ ಗಂಗವ್ವ ಆತನ ಮಗಳು, ಈಕೆಯನ್ನು ಚನ್ನನೆಂಬ ತನ್ನ ಅಳಿಯನಿಗೆ ಲಗ್ನಮಾಡಿಕೊಡಬೇಕೆಂಬುದಾಗಿ ಚನ್ನನನ್ನು ಸಂಕಪ್ಪ ತನ್ನಲ್ಲಿಯೇ ಇಟ್ಟುಕೊಂಡಿದ್ದಾನೆ ಗಿರಿಯಪ್ಪನೆಂಬ ಊರ ಸಾಹುಕಾರ ಗಂಗವ್ವಳನ್ನು ಪಡೆಯಬೇಕೆಂಬ ಆತುರದಿಂದ ಸಂಕಪ್ಪನನ್ನು ಸಾಲದ ಬಲೆಯಲ್ಲಿ ಕೆಡವುತ್ತಾನೆ

ಕಲ್ಲಪ್ಪನೆಂಬ ಊರಿನ ಗೌಡ ಸಾಹುಕಾರನಿಗೆ ಸಹಾಯ ಮಾಡಿ ಆತನಿಂದ ಹಣಪಡೆದು ತನ್ನ ಮಗ ರಾಮಯ್ಯನ ಕಾಲೇಜು ವಿದ್ಯಾಭ್ಯಾಸದ ಖರ್ಚು ನಿರ್ವಹಿಸುತ್ತಾನೆ ಸರ್ವಮಂಗಳೆ ಸಾಹುಕಾರನ ಹೆಂಡತಿ ಮಕ್ಕಳಿಲ್ಲವೆಂದು ಹಂಬಲಿಸುತ್ತ ಇದ್ದಾಳೆ ಸಂಗಯ್ಯನೆಂಬ ಊರ ಗುರುಗಳು ಎಲ್ಲರಿಗೂ ಜಾತಕ ಪ್ರಶ್ನೆ ಇತ್ಯಾದಿ ಹೇಳುತ್ತಾರೆ ಮುದ್ದಜ್ಜನೆಂಬ ಸಾಹುಕಾರನ ಮನೆಯ ಆಳು, ತಿಮ್ಮನೆಂಬ ಊರ ತಳವಾರ, ಸಿದ್ದಪ್ಪ, ಲಿಂಗಪ್ಪರೆಂಬ ಊರ ರೈತರು ಹಾಗೂ ಇತರ ಹಳ್ಳಿಯ ಹೆಣ್ಣು ಮಕ್ಕಳು ಇದರಲ್ಲಿಯ ಪಾತ್ರವರ್ಗ

ಹಳ್ಳಿಯ ರೈತಜೀವನದ ಚಿತ್ರವನ್ನು ಈ ನಾಟಕದಲ್ಲಿ ಚಿತ್ರಿಸಲಾಗಿದೆ ಸರಳವಾದ ರೀತಿಯಲ್ಲಿ ಬರೆಯಲಾದ ಉತ್ತಮ ನಾಟಕವೆನ್ನಲು ಅಡ್ಡಿಯಿಲ್ಲ ಪಾತ್ರವರ್ಗವೆಲ್ಲ ಜೀವಂತವಿರುತ್ತದೆ ನಾಟಕದ ಆದ್ಯಂತವಾಗಿ ರೈತಜೀವನದ ಮಹತ್ವವನು ತೋರಿಸಲಾಗಿದೆ ನೆಗಿಲಯೋಗಿಯಾದ ರೈತನನ್ನೇ ಕರ್ಮಯೋಗಿಯೆಂದು ಕರೆಯಲಾಗಿದೆ

ಕಥೆ ಬೇಸರಬರುವಂತಹುದಲ್ಲ ರಂಗಭೂಮಿಯಲ್ಲಿ ನಾಟಕವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ

ಈ ನಾಟಕದಲ್ಲಿಯ ಹಾಡುಗಳು ಸರಳವಾಗಿಯೂ ರಸವತ್ತಾಗಿಯೂ ಇರುತ್ತವೆ

ಸಂಕೇತನಾಮದಿಂದ ಮುಂದೆ ಬಂದಿರುವ ಈ ತಿರುಕನು ಕನ್ನಡದ ಉತ್ತಮ ಲೇಖಕರ ಶ್ರೇಣಿಯಲ್ಲಿರತಕ್ಕವನು ಇವನ ಇನ್ನೂ ಒಂಭತ್ತು ಕೃತಿಗಳು ಅಚ್ಚಿನಲ್ಲಿವೆಯೆಂದು ತಿಳಿದುಬರುತ್ತವೆ ಇವೂ ಬೇಗನೆ ಪ್ರಕಟವಾಗಿ ಕನ್ನಡಿಗರ ಮನರಂಜಿಸಲೆಂದು ಹಾರೈಸುತ್ತೇವೆ

ನಾರದ ವಿಜ್ಞಾನ ವರದಿಗಳು

ಮುಂದಿನ ಯುದ್ಧದಲ್ಲಿ ಅಣು ಬೊಂಬಿನ ಹಾನಿ

ಅಣು ಶಕ್ತಿ ಸಂಶೋಧಕ ವಿಜ್ಞಾನಿಗಳಾದ ಡಾ| ಲೆಸ್ ಅವರು ಮುಂದಿನ ಯುದ್ಧದಲ್ಲಿ ಇಂತಹ ಸ್ಫೋಟಗಳಿಂದಾಗುವ ಹಾನಿಯ ಒಂದು ಭೀಕರ ಕಾಲ್ಪನಿಕ ಚಿತ್ರವನ್ನು ವರ್ಣಿಸಿದ್ದಾರೆ:

ಒಂದು ನಗರದ ಮೇಲೆ ಸುಮಾರು 2500 ಅಡಿ ಎತ್ತರದಲ್ಲಿ ಇದನ್ನು ಸ್ಫೋಟಗೊಳಿಸಿದರೆ ಕೆಳಗಿನ ಜನರು ಅದರ ಪ್ರಕಾಶಕ್ಕೇ ಕುರುಡರಾಗುವರು. ಅದರ ಅವರ್ಣನೀಯ ಉಷ್ಣಕ್ಕೆ ಅವರ ದೇಹಗಳು ಬೆಂದು ಹೋಗುವವು ಮೊದಲಿನ ಸ್ಫೋಟದ ಶಬ್ದಕ್ಕೇ ಒಂದು ಮೈಲು ವಿಸ್ತೀರ್ಣದಲ್ಲಿನ ಕಟ್ಟಡಗಳುರುಳುವವು ನಂತರದ ಶಬ್ದವು ಮಾನವ ಶ್ರವಣೇಂದ್ರಿಗಳ ಶಕ್ತಿಗೆ ಮಿಕ್ಕಿರುವುದರಿಂದ ಅದರ ಅಪ್ರತ್ಯಕ್ಷ ಕಂಪನಕ್ಕೆ ಉಳಿದೆಲ್ಲಾ ಕಟ್ಟಡಗಳೂ ನೆಲಸಮವಾಗುವುದು ಆ ಮೇಲೆ ಒಂದು 'ಅಗ್ನಿವಾಯು' ವುಂಟಾಗುವುದು ಇದು ಕೆಲವು ಗಂಟೆಗಳ ತನಕ ಆ ನಗರವನ್ನು ಭಯಂಕರ ಉಷ್ಣಕ್ಕೀಡು ಮಾಡುವುದು

ಶೇಕಡಾ ಒಂದರಷ್ಟು ಜೀವಿಗಳು ಆ ಪ್ರದೇಶದಲ್ಲಿ ಉಳಿಯುವುದು ಕಷ್ಟ ನಗಸಾಕಿಯಲ್ಲಿ ಹಾಕಿದ ಅಣು ಬಾಂಬಿನ ಇಮ್ಮಡಿ ಗಾತ್ರದ್ದು ಒಂದು ಲಕ್ಷ ಜನರನ್ನು ಸುಲಭವಾಗಿ ನಾಶ ಮಾಡಬಲ್ಲುದು

ಅಣು ಬೊಂಬಿನಿಂದ ರಕ್ಷಣೆ

ಕೆಲವು ಫ್ರೆಂಚ್ ವಿಜ್ಞಾನಿಗಳು ಭೂತಳದಲ್ಲಿರುವ ಶಿಲಾ ಪರ್ವತ ಭಾಗಗಳು ಅಣು ಬಾಂಬಿನಿಂದ ರಕ್ಷಿಸಿಕೊಳ್ಳಲು ಉತ್ತಮ ಆಶ್ರಯಗಳೆಂದು ಅಭಿಪ್ರಾಯ ಪಡುತ್ತಾರೆ ಇತ್ತೀಚೆಗೆ ಇವರಲ್ಲಿ ಕೆಲವು ಸುಮಾರು 1200 ಅಡಿ ಆಳದಲ್ಲಿನ ಆಲ್ಪ್ಸ್ ಪರ್ವತ ತಳವನ್ನು ಸಂಶೋಧಿಸಿದರು ಅಣು ಬೊಂಬಿನ ಸ್ಫೋಟವು ಇಷ್ಟು ಕೆಳಗಿನ ಆಳದಲ್ಲಿ ಅತೀ ಕನಿಷ್ಠ ಪ್ರಮಾಣದ ದುಷ್ಪರಿಣಾಮ ಮಾಡಬಲ್ಲುದಂತೆ

ಕೈಗಡಿಯಾರದ ಬೆಂಕಿ ಪೆಟ್ಟಿಗೆ

ಯುಸೊ ಅವರು ತಮ್ಮ ಕೈಗಡಿಯಾರದಲ್ಲಿ ವಿಷ ಪದಾರ್ಥಗಳನ್ನಿಟ್ಟು ಕೊಂಡಿದ್ದರಂತೆ ಈಗ ಬ್ರಿಟಿಷ್ ಯಂತ್ರ ಶಿಲ್ಪಿಗಳು ಸಿಗರೇಟು ಹೊತ್ತಿಸುವ ಪುಟ್ಟ ಬೀರಗಳನ್ನು ತಯಾರಿಸಿ ಸೊಗಸಿಗಾಗಿ ಅವನ್ನು ಗಡಿಯಾರದಂತೆ ಕೈಗೆ ಕಟ್ಟಿಕೊಳ್ಳಲೂ ಸುಲಭವಾಗುವಂತೆ ರಚಿಸಿರುವರು ಇಂತಹ ಕೈಗೆ ಕಟ್ಟಲಿಕ್ಕಾಗುವ ಬೆಂಕಿ ಪೆಟ್ಟಿಗೆಗಳು (ಸಿಗರೇಟ್ ಲ್ಯಾಟರ್ಸ್) ಸದ್ಯದಲ್ಲೇ ಬ್ರಿಟಿಷ್ ಕೈಗಾರಿಕಾ ಪ್ರದರ್ಶನದಲ್ಲಿ ಇಡಲಾಗುವವು

ಹಾರುವ ಟಪ್ಪಾಲು ಪೇದೆಗಳು

ಶೀಘ್ರದಲ್ಲೇ ಇಂಗ್ಲೆಂಡಿನಲ್ಲಿ ಹಾರುವ ಟಪ್ಪಾಲು ಪೇದೆಗಳು ಕಾಗದಪತ್ರ ಬಟ್ವಾಡೆ ಮಾಡಲಿರುವರು ಊರಿನಿಂದೂರಿಗೆ ನೇರವಾಗಿ ವಿಮಾನಗಳ ಮೂಲಕವೇ ಟಪ್ಪಾಲುಗಳನ್ನು ಕಳುಹಿಸುವ ಒಂದು ವ್ಯವಸ್ಥೆಯನ್ನು ಅಲ್ಲಿನ ಕೇಂದ್ರ ಟಪ್ಪಾಲು ಕಚೇರಿಯವರು ಪರಿಶೀಲಿಸುತ್ತಿರುವರು ಇದಕ್ಕಾಗಿ ಕೇವಲ ಅರ್ಧ ಮಿನಿಟಿನೊಳಗೆ ಕೆಳಗಿಳಿದು ಟಪ್ಪಾಲು ಚೀಲಗಳನ್ನು ಕಾಯುವ ಮೋಟಾರಿನಲ್ಲಿ ಚೆಲ್ಲಿ ಹಾರಿಹೋಗುವ ವಿಶೇಷ ತರದ ವಿಮಾನಗಳನ್ನು ರಚಿಸಲಿರುವರು

ಹೆರಿಗೆಗೆ ಇಂದ್ರಜಾಲದ ಸಹಾಯ

ಹೆರಿಗೆಯು ಕಷ್ಟಕರವಾದಾಗ ನೋವನ್ನು ತಡೆಯುವ ಔಷಧಿಗಳನ್ನು ಇಂಜೆಕ್ಷನ್ನಿನ ಮೂಲಕ ಘುರ್ಭಾನಿಲಗಳ ಮೂಲಕ ಗರ್ಭಿಣಿಯರಿಗೆ ಕೊಡುವುದು ಹೆರಿಗೆವೈದ್ಯರ ಸಾಮಾನ್ಯ ಕ್ರಮ: ಆದರೆ ಲಂಡನಿನ ಒಂದು ಆಸ್ಪತ್ರೆಯ ಓರ್ವ ಚತುರ ಕೆನೆಡಿಯನ್ ವೈದ್ಯನು ಇಂದ್ರಜಾಲಶಕ್ತಿಯಿಂದ ಓರ್ವ ಗರ್ಭಿಣಿಯನ್ನು ಮೂರ್ಛೆಗೊಳಿಸಿ ಯಶಸ್ವಿಯಾಗಿ ಹೆರಿಗೆಯನ್ನು ಸಾಂಗಗೊಳಿಸಿದನು ಆ ಆಸ್ಪತ್ರೆಯಲ್ಲಿನ ಹೆಚ್ಚಿನ ಗರ್ಭಿಣಿಯರು ತಮ್ಮ ಮೇಲೂ ಅದನ್ನು ಪ್ರಯೋಗಿಸುವಂತೆ ಅವನನ್ನು ಕೇಳಿಕೊಂಡಿರುವರಂತೆ.

ಹೊಸ ರೇಡಿಯೊಗ್ರಾಹಕಗಳು

ರೇಡಿಯೊ ಉಪಕರಣದ ಪೆಟ್ಟಿಗೆಗಳು ಹಲವು ವಿಧದಲ್ಲಿ ಹಾಳಾಗುತ್ತಿದ್ದವು ಗೆದ್ದಲು ಹಿಡಿಯುವುದು, ತುಕ್ಕು ತಿನ್ನುವುದು ನೀರಿನ ಪಸೆಯಿಂದ ಪಾಚಿ ಅಂಟಿಕೊಳ್ಳುವುದು ಮೊದಲಾದುವು ಈಗ ಬ್ರಿಟನ್ನಿನಲ್ಲಿ ಈ ಯಾವೊಂದು ತರದಲ್ಲಿಯೂ ಹಾಳಾಗದಂತಹ ರೇಡಿಯೊ ಸೆಟ್ಟುಗಳನ್ನು ತಯಾರಿಸುವ ವಿಧಾನಗಳನ್ನು ಕಂಡುಹಿಡಿದಿದ್ದಾರೆ ಮುಂಬರುವ ಬ್ರಿಟಿಷ್ ಕೈಗಾರಿಕಾ ಪ್ರದರ್ಶನದಲ್ಲಿ ಇಂತಹ ರೇಡಿಯೊ ಮತ್ತು ಟೆಲಿವಿಜನ್ ಗ್ರಾಹಕೋಪಕರಣಗಳು ಪ್ರದರ್ಶಿಸಲ್ಪಡುತ್ತವೆ ಇದಲ್ಲದೆ ಇವುಗಳಲ್ಲಿ ಇತರ ಅನೇಕ ಅತ್ಯಾಧುನಿಕ ಸುಧಾರಣೆಗಳು ಮಾಡಲ್ಪಟ್ಟಿರುತ್ತವೆ

ರಬ್ಬರ್ ಗಾಳಿಗೋಲಗಳು

ಮಕ್ಕಳು ಸಾಬೂನು ನೀರಿನಲ್ಲಿ ಒಂದು ಹುಲ್ಲುಕಡ್ಡಿಯ ಕೊಳವೆ ಮುಳುಗಿಸಿ ಚಂದದ ನೀರುಗೋಲಗಳನ್ನು ಮಾಡುವುದನ್ನು ನಾವು ನೋಡುತ್ತಿರುತ್ತೇವೆ ಈಗ ಬ್ರಿಟಿಷ್ ವಿಜ್ಞಾನಿಗಳು ಒಂದು ತರದ ರಬ್ಬರ್ ರಾಸಾಯನಿಕವನ್ನು ತಯಾರಿಸಿರುವರು ಅದನ್ನು ಕೆಲವು ಕೊಳವೆಗಳ ಮೂಲಕ ಊದುವುದರಿಂದ ಚಂದದ ಬೆಲೂನು (ಬುಗ್ಗೆ)ಗಳನ್ನು ಮಾಡಬಹುದು ಮನೆ ಶೃಂಗಾರಕ್ಕೆ ಇತರ ಉಪಯುಕ್ತ ಕಲಸಗಳಿಗೂ ಬೇಕಾದ ಆಕೃತಿಯಲ್ಲಿ ಇದರಿಂದ ಅನೇಕ ವಸ್ತುಗಳನ್ನು ತಯಾರಿಸಬಹುದು

ನೀರುಳ್ಳಿ ಔಷಧಿ

ರೋಮನ್ ನಾಗರೀಕತೆಯ ಕಾಲದ ಪ್ರಖ್ಯಾತ ತತ್ವಜ್ಞಾನಿಯಾದ ಪ್ಲಿನಿಯು ನೀರುಳ್ಳಿಗೆ ಸುಮಾರು ೩೮ ರೋಗಗಳನ್ನು ಗುಣಮಾಡುವ ಶಕ್ತಿಯಿದೆಯೆಂದು ಬರೆದಿದ್ದನು ಯುರೋಪಿನಲ್ಲಿ ಇಂದಿಗೂ ನೀರುಳ್ಳಿ ಬೆಳ್ಳುಳ್ಳಿಗಳನ್ನು ಹಲವೊಂದು ವ್ಯಾಧಿಗಳ ಪರಿಹಾರವಾಗಿ ಉಪಯೋಗಿಸುತ್ತಾರೆ. ಉದಾ. ಶೀತದಿಂದ ಗಂಟಲು ನೋವಾದರೆ ಒಂದು ಹಸಿ ನೀರುಳ್ಳಿ ತಿಂದರೆ ಗುಣವಾಗುವುದು ನೀರುಳ್ಳಿಯನ್ನು ಕತ್ತರಿಸುವಾಗ ಕಣ್ಣಿನಲ್ಲಿ ನೀರು ಬರುತ್ತದೆ. ಇದಕ್ಕೆ ಆ ಗೆಡ್ಡೆಯಿಂದ ಹೊರಸೂಸುವ ಒಂದು ಅದೃಶ್ಯ ಆವಿಯೇ ಕಾರಣ ಈಗ ಕೆಲ ರಷ್ಯನ್ ವಿಜ್ಞಾನಿಗಳು ನೀರುಳ್ಳಿಯ ಈ ಕಣ್ಣೀರು ತರಿಸುವ ಆವಿಯನ್ನು ಮಾನವ ಶರೀರದ ಕೆಲವೊಂದು ಘಾಯಗಳನ್ನು ಗುಣಪಡಿಸಲು ಪ್ರಯೋಗಗಳನ್ನು ಮಾಡುತ್ತಾರೆ ಘಾಯಗಳಿಗೆ ಈ ಆವಿಯು ತಗಲುವಂತೆ ಮಾಡಿದರೆ ಅದು ಬೇಗನೆ ಒಣಗುತ್ತದೆ ಮಾತ್ರವಲ್ಲ ಘಾಯದಲ್ಲಿ ಕೀವು ಉಂಟಾಗುವುದಿಲ್ಲ

ವಿಮಾನ ಪ್ರಯಾಣದಿಂದ ಕೆಮ್ಮು ಗುಣ

ವಿಮಾನದಲ್ಲಿ ಕುಳಿತು ಸುಮಾರು 9೦೦೦ದ 12 ಸಾವಿರ ಅಡಿ ಎತ್ತರದಲ್ಲಿ ಒಂದೆರಡು ಗಂಟೆಗಳ ತನಕ ಹಾರಿದರೆ ಮಕ್ಕಳಿಗಾಗುವ ಕೆಮ್ಮು ಗುಣವಾಗುತ್ತದೆಂದು ಫ್ರಾನ್ಸಿನ ವಿಜ್ಞಾನ ಪ್ರಯೋಗ ಖಾತೆಯವರು ತಿಳಿಸುತ್ತಾರೆ ಈ ರೀತಿ ಹಾರಾಟಕ್ಕೊಳಪಡಿಸಿದ ಶೇಕಡಾ ಎಂಭತ್ತು ಮಕ್ಕಳಿಗೆ ಕೆಮ್ಮು ಗುಣವಾಗಿದೆಯಂತೆ

ಭೂಸ್ವರ್ಗ ನಿರ್ಮಾಣ

ಎಟಂ ಶಕ್ತಿಗೆ ಕ್ಷೇಮ ಹೋಮವನ್ನು ಮಾಡುವ ದೊಂದೇ ಉಪಯೋಗವಲ್ಲ ಮಾನವನ ಸಂಕಷ್ಟಗಳನ್ನು ನಾಶಗೊಳಿಸುವ ಅನೇಕ ಉಪಯೋಗಗಳು ಈಗ ಅದರಿಂದ ಕಂಡುಹಿಡಿಯಲಾಗಿದೆ ಮಾನವ ಕೋಟಿಯನ್ನು ವಿಧ್ವಂಸಗೊಳಿಸುವಷ್ಟು ಎಟಂ ಶಕ್ತಿ ತಯಾರಿಕ ವಸ್ತುಗಳು ಅವೇ ರೀತಿ ದೊಡ್ಡನಿವೆಯಂತೆ ಅಲ್ಲಿನ ಬ್ರಿಟಿಷ್ ಮೆಕ್ ಮೋಹನ್ ಎಂಬ ಪ್ರಜಾಪ್ರತಿನಿಧಿಗಳು ಈ ಕುರಿತು "ಮನುಷ್ಯನು ತನ್ನ ಜಾಣ್ಮೆಯಿಂದಲೇ ನಾಶವಾಗುವ ಕಾಲ ಬಂದಿದೆ, ನಾವೀ ಎಟಂ ಶಕ್ತಿಯನ್ನು ಈ ಜಗತ್ತಿನ ಒಳಿತಿಗೂ ಕೆಡುಕಿಗೂ ಉಪಯೋಗಿಸಿಕೊಳ್ಳಬಹುದು ಅದರಿಂದ ಈ ಭೂಮಿಯನ್ನು ಸಕಲ ಸುಖಸಂಪತ್ತಿನ ಸ್ವರ್ಗವನ್ನಾಗಿ ಮಾಡಬಹುದು ಕ್ಷಣದಲ್ಲಿ ದನ್ನು ನಾಶಮಾಡಲಸಾಧ್ಯವಿದೆ"

ಸಿಹಿಸುದ್ದಿ ಸಂಗ್ರಹ

ವಧೂವರರ ವಯಸ್ಸುಗಳಲ್ಲಿ ವಿಪರೀತ ಅಸಮಾನತೆಯಿರುವಂತಹ ವಿವಾಹಗಳನ್ನು ತಡೆಯುವ ಒಂದು ಮಸೂದೆಯು ಜೈಪುರ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ತರಲಾಗಿದೆ

✠

ಪ್ರಖ್ಯಾತ ಬ್ರಿಟಿಷ್ ಶ್ರೀಮಂತರಾದ ಲಾರ್ಡ್ ಬಿವರ್ ಬ್ರೂಕರು ಲಂಡನಿನ ಸ್ಟೆಂಟ್ ಮೇರಿ ಆಸ್ಪತ್ರೆಗೆ ಸಾಮಾನ್ಯ ರೋಗಿಗಳಂತೆ ಯಾವುದೋ ಒಂದು ಔಷಧಿ ಪಡೆಯಲು ಹೋಗಿದ್ದರ ಔಷಧಿ ಪಡೆಯುವಾಗಲೂ ಸಾಲಿನಲ್ಲಿ ಕಾದು ನಿಂತರು ಹೀಗೆ ಬಹಳ ಹೊತ್ತು ಕಾದಾಗ ಒಬ್ಬ ದಾದಿ ಒಂದು ಕಪ್ ಚಹಾವನ್ನು ಸರಬರಾಯಿ ಮಾಡಲಾಗುವುದು ಬಿವರ್ ಬ್ರೂಕರಬಳಿ ಬಂದಳು ಇರಲಿಲ್ಲ "ನನಗೆ ಚಹಾ ಬೇಡ ಎಂದರವರು ಆದರೂ 'ವುಕ ದಿಯಲೇ ಬೇಕು'' ಎಂದು ಹಂಚಲು ಒತ್ತಾಯಮಾಡಿ ಕೊಟ್ಟಳು ಕೆಲವು ದಿವಸಗಳ ನಂತರ 70 ಸಾವಿರ ಪವನ ಒಂದ ಚೆಕ್ಕನ್ನು ಆಸ್ಪತ್ರೆಯ ಅಧಿಕಾರಿಗಳು ಸ್ವೀಕರಿಸಿದರು

✠

ಮುಂದಿನ ಬ್ರಿಟಿಷ್ ಕೈಗಾರಿಕಾ ಪ್ರದರ್ಶನದಲ್ಲಿ ಒಂದು ಹೊಸ ವಿಧದ ಬೂಟ್ಸುಗಳು ಪ್ರದರ್ಶನಕ್ಕಿಡಲಾಗುವುದು ಇವುಗಳ ಬಾಳಿಕೆಯನ್ನು ಪರೀಕ್ಷಿಸಲು ಓರ್ವ ಟಪ್ಪಾಲು ಪೇದೆಯ ಕಾಲಿಗೆ ಇವನ್ನು ತೊಡಿಸಲಾಯಿತು ಇದುವರೆಗೆ ಆತನು ಆ ಬೂಟ್ಸುಗಳನ್ನು ಹಾಕಿ ಇದುವರೆಗೆ 1500 ಮೈಲು ನಡೆದಿರುವನು ಆದರೆ ಬೂಟ್ಸುಗಳ ಕೆಳಭಾಗ ಒಂದಿಷ್ಟು ಸವೆದಿಲ್ಲ!

✠

ಒಂದು ಪೈಸೆ ಯಾವ ಲಾಭ ಪಡೆಯದೆ ಎಳೆ ಮಕ್ಕಳ, ಚಿಕ್ಕ ವಿದ್ಯಾರ್ಥಿಗಳಿಗೆ ಚಲನಚಿತ್ರಗಳನ್ನು ತೋರಿಸುವ 250 ಸಿನೇಮಾ ಮಂದಿರಗಳಿವೆ ಪ್ರತಿ ಶನಿವಾರ 3 ಲಕ್ಷ ಬ್ರಿಟಿಷ ಮಕ್ಕಳು ಇವಕ್ಕೆ ಹಾಜರಾಗುತ್ತಾರೆ

✠

ಇಂಗ್ಲೆಂಡಿನ ಜನರಿಗೆ ತೆಂಗಿನಕಾಯಿಯ ಆವಶ್ಯಕತೆಯಿಲ್ಲ ಅದನ್ನು ಅಲ್ಲಿನ ಯಾವ ವ್ಯಾಪಾರಿ ಸಂಸ್ಥೆಯವರೂ ತರಿಸುವುದಿಲ್ಲ. ಆದರೆ ಕೆಲವು ಹಡಗು ಕಲಾಸಿಗಳದನ್ನು ತರುತ್ತಾರೆ ಇವನ್ನು ಲಂಡನಿನ ಕೆಲ ಅಂಗಡಿಗಳಲ್ಲಿ ರೂಪಾಯಿ ನಾಲ್ಕರಂತೆ ಮಾರಲಿಕ್ಕಿಡುತ್ತಾರೆ

✠

ಮೋಟಾರು ಚಲಿಸುವಾಗ ಮುಂದೆಯೇ ನೋಡಬೇಕು ಹೀಗಿದ್ದರೂ ಏಕಕಾಲದಲ್ಲಿ ಹಿಂದಿನ ಮತ್ತು ಬದಿಗಳ ನೋಟಗಳನ್ನು ಕಾಣಿಸುವ ಒಂದು ತರದ ಕನ್ನಡಕವನ್ನು ಓರ್ವ ಅರ್ಜೆಂಟಿನದ ವಿಜ್ಞಾನಿಯು ಕಂಡು ಹಿಡಿದಿದ್ದಾನೆ



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಟಿರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟೆ ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ಜಿಲ್ಲಾ ಸಮಾಚಾರ

ಗಾಂಧಿ ಸ್ಮಾರಕ ಸಮಿತಿ

ಶ್ರೀ ಕೆ. ಆರ್ ಕಾರಂತರು ಕನ್ವೀನರಾಗಿ ಜಿಲ್ಲಾ ಗಾಂಧಿ ಸ್ಮಾರಕ ಸಮಿತಿಯು ಕಳೆದ ೩ರಂದು ರಚಿಸಲ್ಪಟ್ಟಿತು ನಮ್ಮ ಜಿಲ್ಲೆಯ ಎಲ್ಲಾ ಎಂ ಎಲ್. ಎ ಗಳೂ, ಎಂ ಎಲ್ ಸಿ.ಗಳೂ, ಶ್ರೀಗಳಾದ ಎಚ್. ನಾರಾಯಣ ರಾವ್, ಕೆ. ಕೆ ಶೆಟ್ಟಿ, ಬಿ ವೈಕುಂಠ ಬಾಳಿಗ ಬಿ. ಶಂಕರ ಆಳ್ವ, ಡಿ ಮೋಹನರಾವ್, ಕೆ ಜಿನರಾಜ ಹೆಗ್ಡೆ, ಕೆ. ರಾಮಕೃಷ್ಣಾಚಾರ್ ಇವರು ಸಮಿತಿಯಲ್ಲಿರುವರು ಮಿ ಕಾರ್ಲ್ಮನ್ ಮತ್ತು ಶ್ರೀ ಎಂ ವೆಂಕಟೇಶ ಪೈ ಇವರು ಕೋಶಾಧ್ಯಕ್ಷರಾಗಿರುವರು

ರಾಮನವಮಿ ಉತ್ಸವ

ನರವ್ರ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಪ್ರತಿವರುಷ ನಡೆಯುತಕ್ಕ ಜಾತ್ರೆ ತಾ ೧೦ರಂದ ಪ್ರಾರಂಭವಾಗಿದ್ದು ೧೬ಕ್ಕೆ ಬ್ರಹ್ಮ ರಥೋತ್ಸವ, ೧೮ಕ್ಕೆ ಅವಭೃತಸ್ನಾನ, ಬೇಡಿಕಂಬದ ಕಾರ್ಯಕ್ರಮದೊಂದಿಗೆ ಸಮಾಪ್ತಿಯಾಗುತ್ತದೆ

ಇಲ್ಲಿ ಟೆಂಪಲ್ ಸ್ಕ್ವಾಯರಿನ ಬಳಿ ಹೊಸಬಾಗಿ ಕಟ್ಟಿಸಿರುವ ಶ್ರೀ ಶಿವಾನಂದ ಭಟಜಿಯ ರಾಮಮಂದಿರದಲ್ಲೂ ರಾಮನವಮಿ ಕಾರ್ಯಕ್ರಮಗಳು ಭಜನೆ ಭಾಷಣ, ಹರಿಕಥೆ ಉತ್ಸವಗಳಿಂದ ದಿನಸಿತ್ಯ ಜರಗುವುದ

ಆತ್ಮಹತ್ಯೆ

ಸಿಂಗಾಪುರದ ಯುದ್ಧಕಾಲದಲ್ಲ ಸುಭಾಸರ ಐ ಎನ್ ಏ ಗೆ ಸೇರಿ ಕೆಲಸ ಮಾಡಿದ ಪಿ ಮಹಮ್ಮದ್ ಎಂಬವನು ಕೆಲದಿನಗಳ ಹಿಂದೆ ಚಿಕಿತ್ಸೆಗೆಂದು ಮಂಗಳೂರಿಗೆ ಬಂದಿದ್ದ ಅವನಿಗೆ ತಡೆಯಲಾಗದಷ್ಟು ಕಠಿಣ ಹೊಟ್ಟೆಕೆನ್ಸರ್ ರೋಗವಿತ್ತೆಂದು ಹೇಳಲಾಗಿದೆ ಇಲ್ಲಿಯ ಹೊಟೆಲ್ ಬಜಾರ್‌ನಲ್ಲಿ ಈತ ಚೂರಿಗೆ ತನ್ನನ್ನು ತಾನೆ ತಿವಿದುಕೊಳ್ಳುವುದರ ಮೂಲಕ ಆತ್ಮಹತ್ಯೆ ಮಾಡಿಕೊಂಡಿರುವನೆಂದು ತಿಳಿದು ಬರುತ್ತದೆ

ಪಿಕೆಟಿಂಗಿಗಾಗಿ ಕೈದು

ಹೊಯ್ಗೆ ಬಜಾರಿನ ಎಸ್ ಎಸ್ ನೊರೊನ್ನರ ತಾಜ್ ಹಂಚು ಕಾರ್ಖಾನೆಯೆದುರು ಪಿಕೆಟಿಂಗ್ ಮಾಡಿದ ೯ ಕಮ್ಯುನಿಸ್ಟರನ್ನು ಕೈದುಮಾಡಲಾಗಿದೆ.

ಸ್ಕೌಟು ದಿನಾಚರಣೆ

...ಹೈಸ್ಕೂಲಿನ ಉರ್ವ ಶಾಖೆಯ ಕಾಮಧೇನು ಸ್ಕೌಟ್ ದಿನಾಚರಣೆ ಜಿಲ್ಲಾ ಸ್ಕೌಟ್ ಕಮಿಶನರ್ ಶ್ರೀ ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು

ದ. ಕ. ತರುಣ ಸಮಾಜವಾದೀ ಸಂಘದ ಪ್ರಥಮ ಸಮ್ಮೇಳನ

೧೯೪೭ನೇ ಇಸವಿ ನವಂಬರ ತಿಂಗಳಲ್ಲಿ ದ. ಕ. ತರುಣ ಸಮಾಜವಾದೀ ಸಂಘದ ಸ್ಥಾಪನೆಯಾಯಿತು ಈ ಸಂಘವು ಒಂದು ತಾತ್ಕಾಲಿಕ ಕಾರ್ಯಕಾರಿ ಸಮಿತಿಯ ನಾಯಕತ್ವದಲ್ಲಿ ನಡೆಯುತ್ತಿತ್ತು ಸಂಘವನ್ನು ಸಂಘಟಿಸುವುದೇ ಈ ಸಮಿತಿಯ ಕೆಲಸ ಈಗ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಂಘಟನಾ ಕೆಲಸವು ಭರದಿಂದ ಸಾಗಿದೆ. ಇದರ ಪ್ರಥಮ ಸಮ್ಮೇಳನವು ಇದೇ ಮೇ ತಿಂಗಳ ಪ್ರಥಮ ವಾರದಲ್ಲಿ ಕುಂದಾಪುರದಲ್ಲಿ ನಡೆಯಬೇಕೆಂದೂ ಪರಿಷತ್ತಿನ ಉದ್ಘಾಟನೆಗೆ ಸಮಾಜವಾದೀ ಪಕ್ಷದ ಮುಖಂಡರೊಬ್ಬರನ್ನೂ ಕರೆಯಬೇಕೆಂದೂ, ತಾ ೧೧-೪-೪೮ನೇ ಆದಿತ್ಯವಾರ ಘಂಟೆ ೫ಕ್ಕೆ ಕುಂದಾಪುರದಲ್ಲಿ ಶ್ರೀ ಎಂ. ಮುತ್ತಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಡೆದ ಸಂಘದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನಿಶ್ಚಯಿಸಿದೆ. ಮಹಾಜನರೆಲ್ಲರೂ ಸಮ್ಮೇಳನಕ್ಕೆ ಸಹಾಯವನ್ನೀಯಬೇಕಾಗಿ ವಿನಂತಿ

ಹೊಸ ವಾಚನಾಲಯ

ಭಾಪೂಜಿ ವಾಚನಾಲಯ ಎಂಬ ಹೆಸರಿನ ವಾಚನ ಮಂದಿರವೊಂದು ಮಂಗಳೂರಿನ ಪೋಸ್ಟ್‌ಮೇನ್ ಮತ್ತು ಕೆಳತರಗತಿಯ ನೌಕರರ ಸಂಘದ ಆಶ್ರಯದಲ್ಲಿ ತೆರೆಯಲ್ಪಟ್ಟಿದೆ ಶ್ರೀ ಭಾಸ್ಕರ ರೈ ಅವರು ಇದರ ಅಧ್ಯಕ್ಷರು, ಜೋನ್‌ವಾಸ್ ಇವರು ಕಾರ್ಯದರ್ಶಿಗಳು

ವಿಚಿತ್ರ ಅನುಭವ

ಇಲ್ಲಿಯ ಪಿಯರ್ಸ್‌ಲೆಸ್ಲಿ ಗೇರುಬೀಜ ಕಾರ್ಖಾನೆಯ ರಾತ್ರಿ ಪಹರೆಯವನಾದ ಡೇನಿಯಲ್ ಡಿ'ಸೋಜ ಎಂಬವನು ಕಳೆದ ತಾ ೧೧ರಂದು ಮಧ್ಯರಾತ್ರಿಯ ಸುಮಾರು ೧ ಗಂಟೆಯ ಸಮಯಕ್ಕೆ ತನ್ನ ಪಹರೆ ಡ್ಯೂಟಿಯಲ್ಲಿರುವಾಗ ಆಕಾಶದಲ್ಲಿ ಒಂದು ಪ್ರಚಂಡ ಪ್ರಕಾಶವನ್ನು ಕಂಡನಂತೆ, ಅದೇ ಸಮಯಕ್ಕೆ ಮಹಾತ್ಮಾ ಗಾಂಧಿಯವರು ಇನ್ನಿರ್ವ ವ್ಯಕ್ತಿಗಳೊಡನೆ ಗಗನಪಥದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನಡೆದು ಹೋಗುವುದನ್ನೂ ಅವರ ಮುಂದೆ ಓರ್ವ ತೇಜೋವಂತ ಬಾಲಕನು ಧ್ವಜ ಹಿಡಿದು ಹೋಗುವುದನ್ನೂ ಕಂಡನಂತೆ ಅಸಂಖ್ಯಾತ ಮೃಗಪಕ್ಷಿಗಳು ಮಹಾತ್ಮರ ಹಿಂದಿನಿಂದ ಬರುತ್ತಿರುವುದೂ ಅವನಿಗೆ ಕಾಣಿಸಿತು. ೫ ಮಿನಿಟುಗಳ ತನಕ ಈ ವಿಚಿತ್ರ ದೃಶ್ಯ ಕಂಗೊಳಿಸಿ ಮತ್ತೆ ಕಪ್ಪು ಮೋಡವೊಂದು ಅದನ್ನು ಆವರಿಸಿತು. ಈ ಅನುಭವವು ಸ್ಥಳೀಯ ದಿನಪತ್ರಿಕೆಯಲ್ಲಿ ಕಂಡವನು ಸ್ವತಃ ತಿಳಿಸಿದಂತೆ ಪ್ರಕಟವಾಗಿದೆ

ವಿನೋಬಾ ಭಾವೆಯವರು ಬರಲಿರುವರು

ಗಾಂಧೀಜಿಯ ಪಟ್ಟಶಿಷ್ಯರೆನಿಸಿದ್ದು ೧೯೪೦ರ ಪ್ರಥಮ ವೈಯಕ್ತಿಕ ಸತ್ಯಾಗ್ರಹಿಗಳಾಗಿದ್ದ ಶ್ರೀ ವಿನೋಬಾ ಭಾವೆಯವರು ಮೇ ತಿಂಗಳು ಮಂಗಳೂರಿಗೆ ಬರಬಹುದೆಂದು ನಿರೀಕ್ಷೆಯಿದೆ ಶ್ರೀ ಭಾವೆಯವರು ಅ. ಭಾ. ಚರಖಾ ಸಂಘದ ಕಾರ್ಯದರ್ಶಿ, ಶ್ರೀ ಕೃಷ್ಣದಾಸ ಗಾಂಧಿ ಇವರೊಡನೆ ಮೇ ತಿಂಗಳ ೧ರಿಂದ ೧೫ರ ತನಕ ಕರ್ನಾಟಕ ಪ್ರವಾಸವನ್ನು ಕೈಕೊಳ್ಳಲಿರುವರಾಗಿ ತಿಳಿದುಬಂದಿದೆ. ಆ ಸಂದರ್ಭದಲ್ಲಿ ದ. ಕ. ಜಿಲ್ಲಾ ಗ್ರಾಮೋದ್ಯೋಗ ಸಂಘದವರು ಅವರನ್ನು ನಮ್ಮ ಜಿಲ್ಲೆಗೂ ಆಹ್ವಾನಿಸಿರುವರು. ಆ ವೇಳೆ ಜಿಲ್ಲಾ ರಚನಾತ್ಮಕ ಕಾರ್ಯಕರ್ತರ ಪ್ರಥಮ ಸಮ್ಮೇಳನ ಜರಗಿಸಲು ನಿರ್ಧರಿಸಲಾಗಿದೆ.

ಭಾವಚಿತ್ರ ಅನಾವರಣ

ಜಿಲ್ಲೆಯ ನಿಪುಣ ಚಿತ್ರಗಾರರೆನಿಸಲ್ಪಡುವ ಶ್ರೀ ಕೆ ಎಲ್ ಶಿವಗೂರ್ ಇವರಿಂದ ಬಿಡಿಸಲ್ಪಟ್ಟ ಶ್ರೀ ಗೋಕರ್ಣ ಮಠಾಧೀಶರ ಮತ್ತು ಕಾಶೀ ಮಠಾಧೀಶರ ತೈಲ್ಯ ಚಿತ್ರಗಳನ್ನೂ ಕಳೆದ ಮಧ್ವನವಮಿ ದಿನ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಅನಾವರಣಮಾಡಿ, ಇರಿಸಲಾಯಿತು ಇವನ್ನು ನೋಡಿ ಸಂತೋಷಪಟ್ಟ ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕನಾಥ ಶ್ರೀಪಾದಂಗಳವರು ಪದವಿಧ ತಮ್ಮ ನಿವಾಸದಲ್ಲಿ ಚಿತ್ರಗಾರ ಶಿವಗೂರರನ್ನು ಸ್ವರ್ಣ ಪದಕ ಕೊಟ್ಟು ಹರಸಿದರು

ಶಂಖುಸ್ಥಾಪನೆ

ಶ್ರೀ ವೆಂಕಟ್ರಮಣ ದೇವಸ್ಥಾನದ ಮುಂಭಾಗದ ಪೌಳಿಯ ಶಂಖುಸ್ಥಾಪನಾ ಸಮಾರಂಭವು ಕಳೆದ ತಾ ೧೦ರಂದು (ಯುಗಾದಿದಿನ) ಸಾಯಂಕಾಲ ೫ಕ್ಕೆ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರಿಂದ ನೆರವೇರಿಸಲ್ಪಟ್ಟಿತು. ಹೊಸದಾಗಿ ಕಟ್ಟಿಸಲಿರುವ ಈ ಪೌಳಿಗೆ ಎರಡು ಮಹಡಿಗಳು ಬರುವವು ಅದರ ಮೇಲೊಂದು ಗೋಪುರವೂ ಕಟ್ಟಲಾಗುವುದೆಂದು ತಿಳಿದು ಬರುತ್ತದೆ.

ವಾಣಿಜ್ಯ ನೌಕರರ ಮಹಾಸಭೆ

ದ ಕ ಜಿಲ್ಲಾ ವಾಣಿಜ್ಯ ನೌಕರರ ಸಂಘದ ಮಹಾಸಭೆಯನ್ನು ಇದೇ ಬರುವ ಏಪ್ರಿಲ್ ೨೫ರಂದು ರವಿವಾರ ಬೆಳಿಗ್ಗೆ ೮ ಘಂಟೆಗೆ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಜರಗಿಸುವುದೆಂದು ನಿರ್ಧರಿಸಲಾಗಿದೆ

ವಾರ್ಷಿಕ ಸಭೆ

ದ ಕ ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಶ್ರೀರಾಮ ಸೇವಾ ಜಾತ್ಯಾಭ್ಯುದಯ ಸಂಘದ ೨೪ನೇ ವಾರ್ಷಿಕ ಮಹಾಸಭೆ ಇದೇ ತಾ ೧೮ರಲ್ಲಿ ಬೆಳಿಗ್ಗೆ ೯ಕ್ಕೆ ಜಿಲ್ಲಾ ಬೋರ್ಡ್ ಆಫೀಸು ಬಳಿ ಇರುವ ಶ್ರೀ ದೇವಿಯ ದೇವಸ್ಥಾನದಲ್ಲಿ ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗುವುದು.

ಜಿಲ್ಲೆಯ ಇತರ ಕಡೆಗಳಿಂದ

ಪಣಂಬೂರು —ಶ್ರೀ ಚಿತ್ರಾಪುರ ಪಾಳದ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಮಹೋತ್ಸವವು ಇದೇ ತಿಂಗಳ ದಿನ ತಾ। ೨೨ರಂದು ಜರಗಲಿರುವುದು.

ಮುಂಡಸ್ಕೂರು. — ಪೊಸ್ರಾಲ್ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಬ್ರಹ್ಮಕಲಶಾಭಿಷೇಕವು ಇದೇ ತಿಂಗಳ ದಿನಾಂಕ ೧೬ರಂದು ಜರಗಿತು.

ಪುತ್ತೂರಲ್ಲಿ — ಮಂಗಳೂರಿನ ಶ್ರೀ. ಬಿ. ಎಲ್ ಪುತ್ರನ್ ಅವರು ತಮ್ಮ ಪಾರ್ಟಿಯವರ ಶಕ್ತಿಪ್ರದರ್ಶನವೊಂದನ್ನು ಕಳೆದ ತಾ ೪ರಂದು ತೋರಿಸಿದರು ಇಲ್ಲಿಯ ಹಿಂದುಸ್ಥಾನ ಟಾಕೀಸ್‌ನವರು ಸ್ಥಳೀಯ ಇಗರ್ಜಿ ಹೈಸ್ಕೂಲಿನ ಕಟ್ಟಡದ ಬಗ್ಗೆ ಎರಡು ಪ್ರದರ್ಶನಗಳ ಧನಸಂಗ್ರಹವನ್ನು ಕೊಟ್ಟರು

ಉಳ್ಳಾಲದ —ಥೊಟಾ ಮಂಗಳೂರು ಗ್ರಾಮ ಸಂಘದವರ ವಾಚನಾಲಯ ಪುಸ್ತಕಾಲಯ ರೇಡಿಯೋಗಳ ಆರಂಭೋತ್ಸವವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಸ್ ಆರ್. ಕೈವಾರ್ ಅವರು ನೆರವೇರಿಸಿದರು

ಪ್ಲಾಸ್ಟಿಕ್ ಚರ್ಮದ ಹೊದಿಕೆ

ವಸ್ತುಗಳು ಹಾಳಾಗದಂತೆ ಇಡಲು ಪ್ಲಾಸ್ಟಿಕ್‌ನಿಂದ ಮಾಡಲ್ಪಟ್ಟ ತೆಳ್ಳಗಿನ ಚರ್ಮದ ಹೊದಿಕೆಗಳು ತಯಾರಿಸಲ್ಪಟ್ಟಿವೆ ಇದರಲ್ಲಿ ಸುತ್ತಲ್ಪಡುವ ವಸ್ತುಗಳು, ಗಾಳಿ ತೇವ ಮತ್ತು ಉಷ್ಣತೆ ಹಾಳಾಗುವುದಿಲ್ಲ ಅಂಗಡಿಗಳನ್ನು ಇದನ್ನು ಒಂದು ಸಲ ಬಿಡಿಸಬೇಕಾದರೆ ಕತ್ತರಿಸಿಯೇ ತೆಗೆಯಬೇಕಾಗುವುದು ಆದುದರಿಂದ ದುಷ್ಕರ್ಮಿಗಳು ಒಂದು ಹೊದಿಕೆಯಲ್ಲಿನ ಉತ್ತಮ ವಸ್ತುಗಳನ್ನು ತೆಗೆದು ಅವುಗಳ ಸ್ಥಾನದಲ್ಲಿ ಕೀಳ್ದರ್ಜೆಯ ವಸ್ತುಗಳನ್ನಿಡಲೂ ಸಾಧ್ಯವಿಲ್ಲವಾಗುತ್ತದೆ ಈ ಹೊಸ ಚರ್ಮವು ಪಾರದರ್ಶಕವಿರುವುದರಿಂದ ಒಳಗಿನ ವಸ್ತುಗಳನ್ನು ಸರಿಯಾಗಿ ಪರೀಕ್ಷಿಸಬಹುದು.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1-0 ಪ್ರಕಾರವೂ, ಎಕ್ಸ್‌ಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಲಾಗ್ಯಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0-1-0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

—ಜ್ವೊಯಿಂಟ್ ಮೇನೇಜರ್ಸ್,

ಮಂಗಳೂರು.
23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

SEASON DEPOSITS
for Rs. 5,000/- and over are now accepted at all Offices of the Bank at the following rates:-

3 & 4 months . . . . $2\frac{1}{4}\%$ p. a.
5 & 6 months . . . . $2\frac{1}{2}\%$ p. a

BANKING BUSINESS OF EVERY DESCRIPTION TRANSACTED.

ಸುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದ್ರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.
(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.
(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

—*Depot:* Maharata-Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ಸುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಹಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸು ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೊಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 23—4—1948 [ಸಂಚಿಕೆ 16]

ಸಾಮಾಜಿಕ ಕ್ರಾಂತಿ

ಹಿಂದೂ ಕಾಯಿದೆಯಲ್ಲಿ ಕ್ರಾಂತಿಕಾರಕ ಸುಧಾರಣೆ

ಹೆಣ್ಣುಮಕ್ಕಳಿಗೆ ಸಾಮಾಜಿಕ ದಾಸ್ಯವಿಮೋಚನೆ

"ವಿವಾಹವಿಚ್ಛೇದದ ಹಕ್ಕನ್ನು ದುರುಪಯೋಗಪಡಿಸದಿರಿ"

"ನಾನು ಆಗಾಗ್ಗೆ ನನ್ನ ಮಹಿಳಾ ಮಿತ್ರರೊಂದಿಗೆ ಕೇಳುತ್ತಿದ್ದೆ " ಪಿತ್ರಾರ್ಜಿತದಲ್ಲಿ ನಿಮಗೇಕೆ ಒಂದು ಪಾಲು? ನೀವು ಹ್ಯಾಗಾದರೂ ಇನ್ನೊಂದು ಮನೆಯ ರಾಣಿಯರೇ. ಆಗುವಿರಿ ಆಗ ಅಲ್ಲಿನ ಹಣದ ಪೆಟ್ಟಿಗೆ ಸಮೇತವಾದ ಎಲ್ಲಾ ವಸ್ತು ಒಡವೆಗಳ ಮೇಲೆ ಸ್ವಾಮಿತ್ವ ಉಂಟಾಗುವುದು ಹೀಗೆಂದು ಇಷ್ಟಾದರೂ ಸ್ತ್ರೀಯರು ತಮ್ಮ ಗಂಡಂದಿರ ಮೇಲೆ ಹೊಂದಿಕೊಂಡಿರುವುದು ಹಿತಕರವಲ್ಲವೆಂದು ನಾನು ಒಪ್ಪುತ್ತೇನೆ ಸ್ತ್ರೀಯರಿಗೆ ಅವಳ ಸ್ವಂತ ಹಕ್ಕು ಬಾಧ್ಯತೆಗಳಿದ್ದರೆ ಅವಳು ಖಂಡಿತ ತನ್ನ ಗಂಡನಿಂದ ಗೌರವಿಸಲ್ಪಡುವಳು ಹೀಗೆಂದು ಪಟ್ಟಾಭಿ ಸೀತಾರಾಮಯ್ಯನವರು ಹಿಂದೂ ಕಾಯದೆ ಸುಧಾರಣೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು

ಮಸೂದೆಯ ಮುಖ್ಯಾಂಶ

ಕಳೆದ ತಾ ೯ರಂದು ಭಾರತ ಶಾಸನ ಸಭೆಯಲ್ಲಿ ಡಾ। ಅಂಬೇಡ್ಕರರು ಹಿಂದೂ ಕಾಯದೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡುವ ಮಸೂದೆಯನ್ನು ಮಂಡಿಸಿದರು ಅದನ್ನು ಡಾ। ಅಂಬೇಡ್ಕರರು ಹೀಗೆ ವಿವರಿಸಿ ಹೇಳಿದರು.

ಜನ್ಮ ಹೊಂದಿದಾಕ್ಷಣ ಪ್ರಾಪ್ತವಾಗುವ ವಾರಸುದಾರ ಹಕ್ಕು ಅದರಂತೆ ಒಬ್ಬರ ಮರಣಾನಂತರ ಬದುಕಿ ಉಳಿದ ಕಾರಣದಿಂದ ಇನ್ನೊಬ್ಬರಿಗೆ ಪ್ರಾಪ್ತವಾಗುವ ವಾರಸುದಾರ ಹಕ್ಕುಗಳ ಬಗ್ಗೆ ಈಗಿದ್ದ ಕಾನೂನು ರದ್ದು ಪಡಿಸುವುದು

ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಅರ್ಧ ಪಾಲು ಸಲ್ಲತಕ್ಕದ್ದೆಂದೂ, ಈಗ ನಿರ್ದಿಷ್ಟ ಹಕ್ಕುಗಳಿಂದ ಸ್ತ್ರೀಯರು ಉಪಭೋಗಿಸುವ ಆಸ್ತಿಯ ಬಗ್ಗೆ ಅವರಿಗೆ ಸಂಪೂರ್ಣ ಹಕ್ಕು ಪ್ರಾಪ್ತಿ ಮಾಡಿ ಕೊಡುವುದು

ಜಾತಿಭೇದವಿಲ್ಲದೆ ಬೇಕಾದ ಜಾತಿಯ ಕನ್ಯೆಯನ್ನು ಲಗ್ನವಾಗುವ ಹಕ್ಕು ಏಕಪತ್ನಿತ್ವಕ್ಕೆ ಮನ್ನಣೆ, ವಿವಾಹ ವಿಚ್ಛೇದಕ್ಕೆ ಅಧಿಕಾರ, ಇವು ಮುಖ್ಯಾಂಶಗಳು

ಆಸ್ತಿ ಹಕ್ಕು ವರದಕ್ಷಿಣೆ

ಮಗಳಿಗೆ ತಂದೆಯ ಆಸ್ತಿಯಲ್ಲಿ ಅರ್ಧ ಪಾಲು ಸಿಗುವಂತೆ ಮಾಡಿರುತ್ತದೆ ಅದೇ ರೀತಿ ಮಗನಿಗೆ ತಾಯಿಯ ಆಸ್ತಿಯ ಅರ್ಧಾಂಶ ಪಡೆಯುವ ಹಕ್ಕು ಕೊಡಲಾಗುತ್ತದೆ ಹೀಗೆ ಮಗ, ಮಗಳೊಳಗೆ ಒಂದು ತರದ ಸಮಾನತೆಯನ್ನುಂಟುಮಾಡಲಾಗಿದೆ

ನಮ್ಮ ಸಮಾಜಗಳಲ್ಲಿ ವರದಕ್ಷಿಣೆಯಿಂದೆಷ್ಟು ಹಾನಿಯಾಗುತ್ತದೆಂದೆಲ್ಲರೂ ಬಲ್ಲರು. ಈ ಮಸೂದೆಯ ಪ್ರಕಾರ: ವರದಕ್ಷಿಣೆ ಹಣ ಹಾಗೂ ಸ್ತ್ರೀಧನ ಇವನ್ನು ಸ್ತ್ರೀಯು ಪ್ರಾಪ್ತವಯಸ್ಕಳಾದ ನಂತರ ಕೇಳಿ ಪಡೆಯುವ ಹಕ್ಕುಳ್ಳವಳಾಗುವಳು ಇದು ತನಕ ತಂದೆಯಂದಿರು ಮಗಳಿಗಾಗಿ ವರದಕ್ಷಿಣೆ ಕೊಡುತ್ತಿದ್ದರು. ಅದನ್ನು ವರನೂ ಗಂಡಿನ ಕಡೆಯವರ ಹೆಣ್ಣುಮಕ್ಕಳನ್ನು ಅಸಹ್ಯವಾದ ಕ್ರೂರ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ

ವೇಶ್ಯೆ ಮತ್ತು ವಿವಾಹ ವಿಚ್ಛೇದ

ಪುರುಷನ ಮೇಲೆ ಅವಲಂಬಿತರಾಗಿರುವವರಲ್ಲಿ ಅವನ ವೇಶ್ಯೆಯೂ ಓರ್ವಳಾಗಿರುವಳೆಂದು ಇದರಲ್ಲಿ ಹೇಳಲಾಗಿದೆ ಆದರೆ ಪತಿವ್ರತ ಸ್ತ್ರೀಯರು ಈ ದುರ್ದೈವದ ಸಂಗತಿಯ ಕುರಿತು ಆಳ ವಿಚಾರ ಮಾಡಬೇಕಾಗಿದೆ

ಗಂಡನಿಂದ ಬೇರೆ ಇರುವ ಹೆಂಡತಿಗೆ ಅಶನಾರ್ಥ ಕೇಳುವ ಹಕ್ಕು ಕೊಡಲಾಗುವುದು (ಪ್ರಸ್ತುತದ ಕಾಯದೆ ಪ್ರಕಾರ ಆ ಹಕ್ಕಿಲ್ಲ) ಗಂಡನೊಡನೆ ಒಟ್ಟಿಕ ಬಾಳಿಕೆ ಎಂದಿಗೂ ಸಾಧ್ಯವಾಗದಂತಹ ಸಂದರ್ಭಗಳೂ ಉತ್ಪನ್ನವಾಗುವುದಿಲ್ಲವೆಂದು ಹೇಳಬರುವುದಿಲ್ಲ ಇವನ್ನು ವಿಚಾರ ಮಾಡಬೇಕಾಗಿದೆ

ಹಿಂದೂ ಕಾಯದೆ ಪ್ರಕಾರ ಬಹು ಪತ್ನಿತ್ವವು ಸಮ್ಮತವೆನಿಸುತ್ತದೆ ಆದರೆ ಹೊಸ ಮಸೂದೆಯು ಏಕಪತ್ನಿತ್ವವನ್ನೇ ಬೆಂಬಲಿಸುತ್ತದೆ

ಪಟ್ಟಾಭಿಯವರ ಸಮರ್ಥನೆ

ಮಸೂದೆ ಮಂಡಿಸಲಾದ ನಂತರ ಡಾ। ಪಟ್ಟಾಭಿ ಸೀತಾರಾಮಯ್ಯರು ಅತ್ಯಂತ ವಿನೋದ ಧಾಟಿಯಲ್ಲಿ ತಮ್ಮ ಅಭಿಪ್ರಾಯವನ್ನು ಹೀಗೆ ನಿರೂಪಿಸಿದರು

"ನಮ್ಮ ಸ್ತ್ರೀಯರಿಗೆ ಎಷ್ಟೋ ಹಿಂದೆ ಸಿಗಬೇಕಾದ ಈ ಸಾಮಾಜಿಕ ಹಕ್ಕು ಬಾಧ್ಯತೆಗಳು ಈಗಲಾದರೂ ಕೊಡಲುದ್ದೇಶಿಸಿದುದು ಸಂತೋಷಕರ ಆದರೆ ಈ ಮಸೂದೆ ಯಾವ ಅವಧಿಯಿಂದ ಶಾಸನವೆಂದು ತಿಳಿಯಲ್ಪಡುತ್ತದೆಂಬುದು ಸ್ಪಷ್ಟವಾಗಬೇಕು ಉದಾ ಓರ್ವ ವಿಧವೆ ಇದು ತನಕ ನಿರ್ದಿಷ್ಟ ಅವಧಿಯ ಹಕ್ಕನ್ನು ಉಪಭೋಗಿಸುತ್ತಿದ್ದಳೆ ಈ ಹಕ್ಕು ಸಂಪೂರ್ಣ ಶಾಶ್ವತವಾಗಬಹುದು ಇದರಿಂದ ಸಾಧ್ಯವಿದೆಯೆ?"

ಪ್ರೇಮ ಪುರಸ್ಕಾರ

"ಪಾರತಂತ್ರದ ಹಾಗೂ ಬಂಧನ ಕಟ್ಟುಕಟ್ಟಳೆಗಳಿಗೆ ಸಿಲುಕಿ ಅದೆಷ್ಟು ನರಳಿದ್ದಾರೆ ಇದು ತನಕ ನಮ್ಮ ಸ್ತ್ರೀಯರು ಗಂಡನ ದಬ್ಬಾಳಿಕೆಯನ್ನು 'ಪ್ರೇಮ ಪುರಸ್ಕಾರ' ಹೂಡುವುದರಿಂದಲೇ ಪ್ರತಿಭಟಿಸುತ್ತಿದ್ದರು.

ವಿವಾಹ ವಿಚ್ಛೇದದ ಹಕ್ಕು ಸ್ವಾಗತನೀಯ ಗಂಡನಲ್ಲಿ ಕಾಮುಕತನದ ಅಭ್ಯಾಸ, ಕುಷ್ಟವ್ಯಾಧಿ, ಕ್ರೂರಸ್ವಭಾವ, ಅನೈತಿಕ ವರ್ತನ ಇವುಗಳಿದ್ದರೆ ಅದು ಸಹಿಸಲಸಾಧ್ಯವೆ ಸರಿ ಗಂಡಸೊಬ್ಬನಿಗೆ ಎರಡನೆ ಮದುವೆ ಮಾಡಿಕೊಳ್ಳುವುದು ಸಾಧ್ಯವೆಂದಾದರೆ ಹೆಂಡತಿಗೆ ಅದು ಅಸಾಧ್ಯವಾಗಬೇಕೇಕೆ? ಆದರೆ ನಮ್ಮ ಮಹಿಳೆಯರು ನಿಮಗೀಯಲ್ಪಡುವ ಈ ಉದಾರ ಹಕ್ಕನ್ನು ಸಿಕ್ಕಾಬಟ್ಟೆ ಉಪಯೋಗಿಸುವುದಿಲ್ಲವೆಂದು ನನಗೆ ಭರವಸೆಯಿದೆ ಇದೊಂದು ಆಪತ್ಕಾಲದ ವಿತ್ತವೆಂದು (Reserve fund) ತಿಳಿಯಬೇಕು ದಿನನಿತ್ಯದ ಖರ್ಚಿಗೆ ಇದನ್ನು ಉಪಯೋಗಿಸಿ ಕೊಳ್ಳುವದಲ್ಲವೆಂದವರು ತಿಳಿಯಬೇಕು."

"ದತ್ತ ತೆಗೆದುಕೊಳ್ಳುವ ಹಕ್ಕನ್ನು ಪುರುಷರೊಂದಿಗೆ ಸ್ತ್ರೀಯರೂ ಅದನ್ನು ಕೊಡಬೇಕು."

ಹಂಸಾಮೇಥರ ಸೂಚನೆ

ಮಹಿಳೆಯರ ಮನೋಗತವನ್ನು ಶ್ರೀಮತಿ ಹಂಸಾಮೇಥಾರವರು ನಿರೂಪಿಸಿದರು.

೨ನೇ ಪುಟ ನೋಡಿ

THE
UNITED INDIA LIFE ASSURANCE CO., LTD.
ESTD 1906
H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE
K. S. Rao Road, Mangalore

ಗಣನೀಯ ಉದ್ಗಾರಗಳು

ಯುದ್ಧ ಬೇಡ

"ಶೀಘ್ರಗತಿಯಿಂದ ಜಗತ್ತು ಯುದ್ಧದತ್ತ ಸಾಗಹತ್ತಿದೆ. ಜಗತ್ತಿನ ಶಾಂತಿಗೆ ಗಂಡಾಂತರ ಬಂದಿದೆ. ಜಾತಿ, ಮತ, ಪಂಥ, ವರ್ಣಭೇದ, ಸಾಂಸ್ಕೃತಿಕ ಅಸಮತೆ ಈ ಭೇದಗಳಿಗೆ ಆಸ್ಪದವಿಲ್ಲದೆ ಎಲ್ಲಾ ರಾಷ್ಟ್ರಗಳಿಗೆ ನ್ಯಾಯದೊರಕುವ ಒಂದು ರಾಷ್ಟ್ರಕೂಟ ರಚಿಸುವ ಕಾಲ ಬಂದೀತೆಂಬರುವುದು. ಯುದ್ಧವನ್ನು ತಪ್ಪಿಸುವ ಪ್ರಭಾವಶಾಲಿ ವ್ಯಕ್ತಿ ಇಂದು ಜಗತ್ತಿಗೆ ಬೇಕಾಗಿದೆ." —ರಾಜಾಜಿ

ದಾಳಿಗಾರರನ್ನು ಮೊದಲು ಓಡಿಸಬೇಕು

"ಕಾಶ್ಮೀರವು ಯಾವ ವಸಾಹತಿಗೆ ಸೇರಬೇಕೆಂಬ ಬಗ್ಗೆ ಕಾಶ್ಮೀರಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಸಾರ್ವತ್ರಿಕ ಮತಗಣನೆಯನ್ನು ನಡೆಸಲಾಗುವುದೆಂದು ಪಂಡಿತ್ ನೆಹರೂ ಅವರು ಕೊಟ್ಟ ಆಶ್ವಾಸನವನ್ನು ಖಂಡಿತ ಗೌರವಿಸಲಾಗುವುದು. ಆದರೆ ಇದಕ್ಕೆ ಮುನ್ನ ದಾಳಿಗಾರರನ್ನು ಇಲ್ಲಿಂದ ಸಂಪೂರ್ಣ ಹೊರಗೆ ಹಾಕದಿದ್ದರೆ ಮತಗಣನೆಯಲ್ಲಿ ಅನಪೇಕ್ಷಿತ ಕೈವಾಡ, ಬೆದರಿಕೆ, ಪಕ್ಷಪಾತಗಳಾಗುವುದು ಖಂಡಿತ" —ಶೇಕ್ ಅಬ್ದುಲ್ಲಾ

ನಮ್ಮ ಧ್ಯೇಯ

"ಶಾಂತಿ ರಕ್ಷಣೆಯೇ ನಮ್ಮ ಧ್ಯೇಯ. ನಮ್ಮ ಸೈನ್ಯಗಳ ಧ್ಯೇಯವೂ ಅದೇ. ಇತರ ದೇಶಗಳನ್ನು ಆಕ್ರಮಿಸುವ ಇಚ್ಛೆ ನಮಗಿಲ್ಲ. ನಾವು ಸ್ವಾತಂತ್ರ್ಯವನ್ನು ರಕ್ಷಿಸಲು ನಿರ್ಧರಿಸಿದ್ದೇವೆ." —ಪಂಡಿತ್ ನೆಹರೂ

ಹೆಚ್ಚು ಕಾಯಿಪಲ್ಯ

"ಕಾಯಿಪಲ್ಯಗಳ ಬೀಜದ ಉದ್ದಿಮೆಯನ್ನೂ ಒಳ್ಳೇ ರೀತಿಯಲ್ಲಿ ಸಂಘಟಿಸಬೇಕು. ಕಾಯಿಪಲ್ಯಗಳನ್ನು ನಾವು ಹೆಚ್ಚಾಗಿ ಬೆಳೆದರೆ ದವಸಧಾನ್ಯಗಳ ಪರಿಸ್ಥಿತಿಯು ಸುಧಾರಿಸುವುದು. ನಮ್ಮ ನಿತ್ಯದ ಆಹಾರದಲ್ಲಿ ಅವನ್ನು ಉಪಯೋಗಿಸುವುದರಿಂದ ಆರೋಗ್ಯಕ್ಕೆ ಉತ್ತಮ." —ದೌಲತ್‌ರಾವ್

ಹೋದದ್ದು ಒಳ್ಳೇದು

"ಸಾಮ್ಯವಾದಿಗಳು ಕಾಂಗ್ರೆಸನ್ನು ಬಿಟ್ಟುಹೋಗಬೇಕೆಂದು ನಿರ್ಧರಿಸಿದನ್ನು ಕೇಳಿ ನನಗೆ ಸಂತೋಷವಾಗಿದೆ. ಕಾಂಗ್ರೆಸಿಗರನ್ನು ಅಪಮಾರ್ಗಕ್ಕೆಳೆಯುತ್ತಿದ್ದ ಇವರು ತೊಲಗುವುದರಿಂದ ಕಾಂಗ್ರೆಸು ಇನ್ನೂ ಜನತೆಯ ಸೇವೆಯನ್ನು ಹೆಚ್ಚು ಉತ್ತಮ ರೀತಿಯಿಂದ ಸಲ್ಲಿಸಬಹುದು." —ಮುರಾರಜಿ ದೇಸಾಯಿ

ಸಕಾಲದಲ್ಲಿ ಕಾರ್ಯ

"ಜಗತ್ತಿನ ಇತಿಹಾಸದಲ್ಲಿ ಎಷ್ಟೋ ಸಲ ಹಿಂದೆ ಮುಂದೆ ನೋಡುತ್ತ ಕೂಡ್ರುವದಕ್ಕಿಂತ ಧೈರ್ಯದಿಂದ ಕೃತಿಗಿಳಿಯುವುದೇ ಹೆಚ್ಚು ಜಾಣತನದ್ದೆಂದು ಕಂಡುಬಂದಿರದು. ಕೃತಿಗಿಳಿಯುವುದರಲ್ಲಿ ಗಂಡಾಂತರವನ್ನೆದುರಿಸಬೇಕಾದುದೇನೊ ನಿಜ. ಆದರೆ ಯಾವ ನಿರ್ಧಾರಕ್ಕೂ ಬಾರದೆ ಹಿಂದೆ ನೋಡುತ್ತ ಕೂಡ್ರುವುದರಲ್ಲಿ ಹೆಚ್ಚಿನ ಹಾನಿಯಿದೆ." —ಅಧ್ಯಕ್ಷ ಟ್ರೂಮನ್

ನಿಜಾಮರನ್ನು ಸೋಲಿಸುವೆವು

"ಹಿಂದೀ ಸೈನಿಕರು ಶೌರ್ಯ, ಬುದ್ಧಿವಂತಿಕೆ ಚಾತುರ್ಯ ಮೊದಲಾದುವುಗಳಲ್ಲಿ ನಿಜಾಮ ಸೈನಿಕರಿಗಿಂತ ಎಷ್ಟೊ ಪಟ್ಟು ಶ್ರೇಷ್ಠರಿರುವರು. ನಿಜಾಮರು ಹಿಂದೂಸ್ಥಾನ ವಿರುದ್ಧ ಯುದ್ಧಸಾರಿದರೆ ಸುಲಭವಾಗಿ ಸೋಲಿಸುವೆವು."

—ಬ್ರಿಗೇಡಿಯರ್ ಠಾಕೂರ ಶಿವದತ್ತಸಿಂಗ್

ಮಜೂರ ಅಭಿವೃದ್ಧಿ

"ಉತ್ಪಾದನೆ ಹೆಚ್ಚಿಸಬೇಕಾದರೆ ಕೆಲಸಗಾರರಲ್ಲಿಯೂ ನಿರಕ್ಷರತೆಯನ್ನು ಹೋಗಲಾಡಿಸಿ ಅವರ ಕಾರ್ಯಕ್ಷಮ್ಯತೆಯನ್ನು ಹೆಚ್ಚಿಸಬೇಕು." —ಸರ್. ವಿಶ್ವೇಶ್ವರಯ್ಯ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨ ೧/೪
೪ರಿಂದ ೫ ತಿಂಗಳು	,, ,,	೨ ೧/೨
೬ರಿಂದ ೯ ತಿಂಗಳು	,, ,,	೨ ೩/೪

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಸ್ತ್ರೀ ಅಪಹಾರದ ಪಾತಕವನ್ನು ತೊಳೆಯಿರಿ

ಅಪಹೃತ ಸ್ತ್ರೀಯರ ಪುನರುದ್ಧಾರ

"ದುಃಖಿತ ಹೃದಯಿಗಳಾದ ಸ್ತ್ರೀವರ್ಗಕ್ಕೆ ಸಹಾನುಭೂತಿಯ ಸಂದೇಶವನ್ನು ಕಳುಹಿಸಲಿಚ್ಛಿಸುತ್ತೇನೆ. ಅವರ ಗೋಳು ನಮ್ಮ ಹೃದಯಗಳನ್ನು ಕೊರೆದು ಕರಗಿಸಿವೆ." ಹೀಗೆಂದು ಸರ್ದಾರ್ ವಲ್ಲಭಭಾಯಿ ಪಟೇಲರು ಜನಾಂಗವನ್ನುದ್ದೇಶಿಸಿ ಕಳೆದ ಫೆಬ್ರುವರಿ 18ರಂದು ಕೊಟ್ಟ ರೇಡಿಯೊ ಸಂದೇಶದಲ್ಲಿ ತಿಳಿಸಿದ್ದರು. ನಿರಾಶ್ರಿತ ಸ್ತ್ರೀಯರ ಪುನರ್ವಸತಿಯ ಮೇಲ್ವಿಚಾರ ನೋಡಿಕೊಳ್ಳುವ ಶ್ರೀಮತಿ ರಾಮೇಶ್ವರಿ ನೆಹರು ಅವರು ಒಂದು ರೇಡಿಯೊ ಭಾಷಣದಲ್ಲಿ ಹೀಗೆಂದಿದ್ದಾರೆ:

ಒಂದು ಕಾಲದಲ್ಲಿ ಇಂಗ್ಲೆಂಡಿನಲ್ಲಿ ಜಾನುವಾರುಗಳನ್ನು ಕದಿಯುವುದೊಂದು ಪ್ರಖ್ಯಾತ ಉದ್ಯಮವಾಗಿತ್ತು. ಉತ್ತಮ ದನಕರುಗಳು ಅಲ್ಲಿ ಅಪಹರಿಸಲ್ಪಡುತ್ತಿದ್ದವು. ನಮ್ಮ ದೇಶದಲ್ಲಿ ಈಚೆಗೆ ಕೆಲ ತಿಂಗಳುಗಳಿಂದ ದುಷ್ಟ ಜನರು ಉತ್ತಮ ಸ್ತ್ರೀಯರನ್ನು 'ಕದ್ದು' ಇಚ್ಛೆಪಟ್ಟಲ್ಲಿಗೆ ಒಯ್ದು ಸ್ವೇಚ್ಛೆಯಾಗಿ ಅವರೊಡನೆ ವರ್ತಿಸುತ್ತಿರುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ಬಹಿರಂಗವಾಗಿ ಈ ಸ್ತ್ರೀಯರ ಮೇಲೆ ಅತ್ಯಾಚಾರಗಳು ನಡೆಸಲ್ಪಡುತಿದ್ದವು ಮಾತ್ರವಲ್ಲ ಜಾನುವಾರುಗಳಂತೆ ಇವರನ್ನು ಬಹಿರಂಗ ಸಂತೆಯಲ್ಲಿ ಮಾರಾಟವನ್ನು ಮಾಡುತಿದ್ದಾರೆ.

ಇಂತಹ ಕ್ರೂರ ಪಾತಕಿ ವ್ಯಾಪಾರಿಗಳನ್ನು ಹಿಡಿಯಲು ಆ ಪ್ರದೇಶಗಳಲ್ಲಿ ಯಾವ ನ್ಯಾಯಸ್ಥಾನವೂ ಇಲ್ಲ. ಕೊಳ್ಳುವವನಂತೂ ಕೇಳುವವರಿಲ್ಲ. ಪೋಲಿಸರು ತಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದರೆ ಸರಕಾರವಾದರೂ ಏನನ್ನು ಮಾಡಲಾರದು. ಇವು ಸ್ವತಂತ್ರ ಭಾರತದಲ್ಲಿ, ಮತ್ತು ಸ್ವತಂತ್ರ ಪಾಕಿಸ್ತಾನದಲ್ಲಿ ನಡೆದ ಸಂಗತಿಗಳು.

ಅವರ್ಣನೀಯ ಗೋಳು

ಮುದಿ ತಾಯಿಗಳು ಆರ್ತನಾದ ಹೊರಡಿಸಿದರು. ತಂದೆಯರು ಹೃದಯ ವೇದನೆಯಿಂದ ಸಂಕಷ್ಟಿತರಾದರು, ಬಂಧುಗಳು ತಮ್ಮ ಕಣ್ಣು ಮುಂದಾಗುವ ಅಮಾನುಷಿಕ ಕೃತ್ಯಗಳನ್ನು ನೋಡುತ್ತ ಏನನ್ನೂ ಮಾಡಲಾಗದೆ ತೆಪ್ಪಗಿದ್ದರು. ಇವರ ರಕ್ಷಣೆಗೆ ಯಾವ ಸೈನ್ಯವೂ ಇಲ್ಲ. ಇವರನ್ನು ಸಾಗಿಸಲು ಯಾವ ಸಾಗಾಟದ ವ್ಯವಸ್ಥೆಯೂ ಇಲ್ಲ; ನಮ್ಮ ಸಾವಿರಾರು ಭಗಿನಿಯರು ಪಶುಗಳಂತೆ ಉಪಯೋಗಿಸಲ್ಪಟ್ಟಾಗ ಅವರಿಗೆ ಸಕಾಲದ ಸಹಾಯವನ್ನು ತೆರಲು ಯಾವ ಸೌಕರ್ಯವೂ ನಮ್ಮ ಬಳಿ ಇಲ್ಲದಾಯಿತು.

ಈ ಅಪಹರಣ ಕಾಲದಲ್ಲಿ ನಾವವರಿಗೆ ಯಾವ ಸಹಾಯವನ್ನು ಮಾಡಲಾಗಲಿಲ್ಲ; ಈ ಸ್ತ್ರೀಯರ ಮನೆಗಳು ಅವರಿಲ್ಲದಾಗ ಮಸಣ ಭೂಮಿಗಂತಾದವು. ಈ ಸ್ತ್ರೀಯರನ್ನು ಅವರ ಮನೆಗಳಿಗೆ ಪುನಃ ತರಿಸದಿದ್ದರೆ ದೇಶದಲ್ಲಿ ಶಾಂತಿಯು ಬಾಳಲಾರದು. ಅದರ ಪ್ರಯುಕ್ತ ಒಂದು ಯೋಜನೆಯನ್ನು ಸಿದ್ಧಗೊಳಿಸಲಾಯಿತು. ಪೂರ್ವ ಪಶ್ಚಿಮ ಪಂಜಾಬಗಳಿಗೆ ನಾವು ಸ್ವಯಂ ಸೇವಕರನ್ನು ಪೋಲಿಸ್ ಉಸ್ತುವಾರಿಯೊಡನೆ ಕಳುಹಿದೆವು. ಅಪಹೃತ ಸ್ತ್ರೀಯರ ಶೋಧ ಮಾಡಿ ಅವರನ್ನು ಸುರಕ್ಷಿತವಾಗಿ ಅವರವರ ಮನೆಗಳಿಗೆ ಕಳುಹಿಸುವುದಕ್ಕೆ ಈ ಸ್ವಯಂ ಸೇವಕರು ಕರ್ತವ್ಯ ಬದ್ಧರಾಗಿದ್ದರು.

5 ಸಾವಿರಕ್ಕೆ ಮಿಕ್ಕಿದ ಶೋಧ

ನಮ್ಮ ಸ್ವಯಂ ಸೇವಕಿಯರು ಜನವರಿ ತಿಂಗಳಲ್ಲಿ ಲಾಹೋರಿಗೆ ಹೋಗಿದ್ದರು. ಪಾಕಿಸ್ತಾನದಿಂದಲೂ ಕೆಲ ಸ್ವಯಂ ಸೇವಕಿಯರು ಪೂರ್ವ ಪಂಜಾಬಿಗೆ ಬಂದಿದ್ದರು. ಎರಡೂ ವಸಾಹತುಗಳಲ್ಲಿ ಇದುತನಕ 5 ಸಾವಿರಕ್ಕೂ ಮಿಕ್ಕಿ ಸ್ತ್ರೀಯರ ಶೋಧವಾಗಿದೆ. ನಮ್ಮ ಪಾಪದ ಪಾತ್ರೆ ಅದಾಗಲೇ ತುಂಬಿ ತುಳುಕುತ್ತಿದೆ. ಮುಂದಾದರೂ ನಾವು ಈ ಪಾತಕದಿಂದ ನಮ್ಮ ಕೈಗಳನ್ನು ತೊಳೆಯೋಣ.

(೧ನೇ ಪುಟದಿಂದ)

"ಮಗನಿಗೆ ಬಂದುದರ ಅರ್ಧವನ್ನು ಮಗಳಿಗೆ ಕೊಡಬೇಕೆಂದು ಹೇಳಲಾಗಿದೆ. ಇದು ಸರಿಯಲ್ಲ. ಮಗಳಿಗೂ ಮಗನಷ್ಟೇ ಪಾಲು ಸಿಗಬೇಕು."

"ಸಪಿಂಡ ವಿವಾಹದ ವ್ಯಾಖ್ಯೆ ನನಗೆ ಸಮ್ಮತವಲ್ಲ. ಅದರಂತೆ ವಿವಾಹ ವಯಸ್ಸನ್ನು ಹುಡುಗಿಯರಿಗೆ ೧೮ ಎಂದು ನಿರ್ಬಂಧಿಸಬೇಕು. ಶಾರದಾ ಶಾಸನದಲ್ಲಿ ಈ ಕುರಿತು ತಿದ್ದುಪಡಿಮಾಡಬೇಕು."

'ವಿವಾಹ ವಿಚ್ಛೇದಮಾಡಿಕೊಂಡವರು ೫ ವರ್ಷಗಳ ವರೆಗೆ ಪುನರ್ವಿವಾಹವಾಗಕೂಡದೆಂದು ಹೇಳಿದ ವಿಷಯ ಯೋಗ್ಯವಿದೆ. ಆದರೆ ಮಕ್ಕಳಿಲ್ಲದ ಸ್ತ್ರೀಯರು ಪುನರ್ವಿವಾಹವಾಗಲು ಈ ಅವಧಿಯನ್ನು ೩ ವರ್ಷಕ್ಕಿಳಿಸಬೇಕು.'

'ಮಕ್ಕಳಿಗೆ ತಂದೆಯಂತೆ ತಾಯಿಯೂ ಪಾಲಿನಕರ್ತಳೆಂದು ಸಾರಬೇಕು. ಕೇವಲ ಧಾರ್ಮಿಕ ಭಾವನೆಯಿಂದ ದತ್ತ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬಾರದು.'

ಗುಡ್ಡಗಾಡು ಜನರು ಹಿಂದುಗಳೇ?

'ಗುಡ್ಡಗಾಡು ಜನರಲ್ಲಿಯ ಒಂದು ಪಂಗಡದಲ್ಲಿ ಕುಟುಂಬದ ಆಸ್ತಿಯನ್ನು ಕೊನೆಗೆ ಹುಟ್ಟಿದ ಹೆಣ್ಣುಮಗಳು ಪಡೆವ ರೂಢಿಯಿದೆ. ಹುಡುಗಿಯರನ್ನು ಬಲಾತ್ಕಾರದಿಂದ ಹಿಡಿದು ಲಗ್ನವಾಗುವ ರೂಢಿಯು ಕೆಲ ಗುಡ್ಡಗಾಡು ಜನರಲ್ಲಿದೆ. ಮಾತ್ರವಲ್ಲ ಕೆಲ ಗುಡ್ಡಗಾಡು ಜನರು ಯಾವ ಜಾತಿ ಮತಪಂಥದವರೆಂದು ಸ್ಪಷ್ಟವಾಗದ ಸಂದರ್ಭದಲ್ಲಿ ಈ ಮಸೂದೆಯನ್ನು ಹೇಗೆ ಅನ್ವಯಿಸಬೇಕು?' ಹೀಗೆಂದು ಶ್ರೀ ರೋಹಿಣಿ ಕುಮಾರ ಚೌಧರಿಯವರು ಪ್ರಶ್ನಿಸಿದರು.

'ಇದನ್ನು ಹಿಂದೂ ಕಾಯದೆ ಸುಧಾರಣೆ ಮಸೂದೆ ಎನ್ನುವುದಕ್ಕಿಂತ ಹಿಂದೂಸ್ತ್ರೀ ಕಾಯದೆ ಸುಧಾರಣೆ (ನಗು) ಎನ್ನಬೇಕು' ಎಂದೂ ಶ್ರೀ ಚೌಧರಿಯವರು ತಿಳಿಸಿದರು.

ಡಾ॥ ಅಂಬೇಡ್ಕರರ ಉತ್ತರ

'ಹಿಂದೂಸ್ಥಾನದಲ್ಲಿ ಅನೇಕ ಸಮಾಜಗಳಿಂದು ಅವರವರ ರೂಢಿಸಾಂಪ್ರದಾಯಗಳೂ ಭಿನ್ನವಿವೆ. ಆದರೆ ಎಲ್ಲಾ ಸಮಾಜಗಳಿಗೆ ಒಂದೇ ಕಾನೂನು ಇರಬೇಕೆಂದೇ ಈ ಮಸೂದೆಯ ಉದ್ದೇಶ. 'ಈ ಮಸೂದೆಯಲ್ಲಿ ಮುಸಲ್ಮಾನ, ಯಹೂದಿ, ಪಾರಸಿ, ಕ್ರಿಶ್ಚಿಯನ್ನರಲ್ಲದ ಜನರು ಹಿಂದುಗಳೆಂದು ಗ್ರಹಿಸಲಾಗುವದು. ಆದುದರಿಂದ ಈ ಮಸೂದೆ ತಮಗೆ ಅನ್ವಯಿಸುವುದಿಲ್ಲವೆಂದು ಹೇಳುವವರು ತಾವು ಹಿಂದೂಗಳಲ್ಲವೆಂದು ರುಜುವಾತುಪಡಿಸಿದರಾಯಿತು.'

ಬ್ರಿಟಿಷ್-ಮುಸ್ಲಿಂ ಸಹಾನುಭೂತಿಯ ರಹಸ್ಯವೇನು?

ಇಸ್ಲಾಮಿನ ಮತ್ತು ಎಣ್ಣೆಗಣಿಗಳ ಪ್ರಭಾವ

ಕಿಂಗ್‌ಸ್ಲೆ ಮಾರ್ಟಿನ್ ಎಂಬ ಪ್ರಖ್ಯಾತ ರಾಜಕೀಯ ವಿಚಾರಿಗಳು ಒಂದು ಲೇಖನದಲ್ಲಿ ಬ್ರಿಟಿಷರಿಗೆ ಮುಸ್ಲಿಮರ ಮೇಲೆ ಹೆಚ್ಚಿನ ಮಮತೆಯೇಕೆ ಎಂಬ ವಿಷಯವನ್ನು ಹೀಗೆ ವಿವರಿಸಿದ್ದಾರೆ.

ನನಗೆ ಅನೇಕ ಕಾರಣಗಳು ಹೊಳೆಯುತ್ತವೆ. ಮೊದಲನೇದು ಧರ್ಮಭಾವನೆಗೆ ಸಂಬಂಧಿಸಿದ್ದು. ಬ್ರಿಟಿಷ್ ಅಧಿಕಾರಿ ಮತ್ತು ಅಧಿಕಾರವರ್ಗದ ಮತಧರ್ಮವು ಕ್ರೈಸ್ತೀಯವಲ್ಲ. ಬ್ರಿಟಿಷ್ ಸಾರ್ವಜನಿಕ ಶಾಲೆಗಳಲ್ಲಿ ಕಲಿಸಲ್ಪಡುವ (ದರ್ಪದ ಜಗಳಗಂಟತನದ ಕ್ರೂರವರ್ತನೆಯು?) ಶಿಸ್ತೇ ಅವರ ಧರ್ಮ. ಸರ್ವಸಾಧಾರಣವಾಗಿ ಕ್ರೈಸ್ತನ ಧರ್ಮವನ್ನು ಪಾಶ್ಚಿಮಾತ್ಯ ಜಗತ್ತು ಎಂದಿಗೂ ಸ್ವೀಕರಿಸದು. ಕ್ರೈಸ್ತಮತವು ಬುದ್ಧನ ಧರ್ಮದಂತೆ–ಶಾರೀರಿಕ ಮತ್ತು ಮಾನಸಿಕ ಶಿಸ್ತು ಸಂಸ್ಕಾರಗಳಿಂದ ಆಧ್ಯಾತ್ಮಿಕ ಮೇಲ್ಮೆಯನ್ನು ಪಡೆಯುವಂತೆ ನೀತಿವಿಧಾನಗಳನ್ನು ಬೋಧಿಸುತ್ತದೆ. ಪಾಶ್ಚಿಮಾತ್ಯ ಸಮಾಜವು ಬಾಹ್ಯಾಡಂಬರದ ಮತ್ತು ಕೃತಕ ಕಾಂಕ್ಷೆಗಳ ತೃಪ್ತಿಯ ತಳಹದಿಯ ಮೇಲೆ ರಚಿತವಾಗಿದೆ. 'ನಾಳೆಗಾಗಿ ಚಿಂತಿಸದಿರಿ, ಈ ಭೂಮಿಯ ಮೇಲೆ ಸಂಪತ್ತನ್ನು ಶೇಖರಿಸಬೇಡಿರಿ' ಎಂದು ಕ್ರಿಸ್ತನು ಉಪದೇಶಿಸಿದ್ದಾನೆ. ಈ ಕರಾಳ ತತ್ವವನ್ನು ಪಾಶ್ಚಾತ್ಯರೆಂದಿಗೂ ಒಪ್ಪಿದವರಲ್ಲ. ನಾವು ಈ ಲೋಕದಲ್ಲೇ ಲೌಕಿಕ ಪ್ರಗತಿಯನ್ನು ಪಡೆಯುವುದರಲ್ಲೇ ವಿಶ್ವಾಸ ತಾಳುತ್ತೇವೆ. ಬೇಂಕಿನಲ್ಲಿ ಚೊಕ್ಕವಾದೊಂದು ಲೆಕ್ಕವನ್ನಿಡುವುದರಲ್ಲೂ, ಮೃತ್ತದರ ಒಂದ ಶವನ್ನು ಮರಣಾನಂತರ ಹಿಂದಿನವರಿಗೆ ಸಿಗದಂತೆ ಮಾಡುವುದರಲ್ಲೂ ನಾವು ಸಂತೃಪ್ತಿಪಡುತ್ತೇವೆ. ಹೊಟ್ಟೆಗಾಗಿಯೂ ಕಷ್ಟಪಡಬೇಡಿರೆಂದು ಕ್ರಿಸ್ತನು ಅದಷ್ಟು ಸೌಖ್ಯಗಳನ್ನುಪದೇಶಿಸಿದ್ದರೂ ನಾವೇನೊ [illegible] ಬಡಾಯಿಸಲು ತುಂಬಾ ಶ್ರಮಿಸುತ್ತೇವೆ. ಲಂಕಶಾಯರಿನಲ್ಲಿ ನೂಲುವವರೇ ಸಿಗುವುದಿಲ್ಲವೆಂಬುದೇ ನಮ್ಮ ಚಿತ್ತದ ಕಳಕಳಿ.

ಕ್ರೈಸ್ತಮತದ ಉದಾರ ಸದ್ಗುಣಗಳನ್ನು ಸಾರುವಂತಹುದು: '[illegible]ರನ್ನು ಪ್ರೀತಿಸು' 'ಪುತ್ರರಲ್ಲಿ ಬಂಧನವೂ ಇಲ್ಲ, ವಿಮೋಚನೆಯೂ ಇಲ್ಲ' 'ಕ್ಷಮೆ ಮತ್ತು ದಯೆಯ ಕ್ಷೇತ್ರವು ವಿಶ್ವವಿಶಾಲವಾದುದು' 'ಒಂದು ಕೆನ್ನೆಗೆ ಹೊಡೆದರೆ ಇನ್ನೊಂದನ್ನು ತೋರಿಸು' 'ಕೆಡುಕಿಗೆ ಒಳಿತನ್ನೇ ಮಾಡು' 'ಸಂಕಷ್ಟಗಳನ್ನು ಕೊಟ್ಟರೆ ಸಂತೋಷಪಡು' ಇವು ಕೆಲವು ಕ್ರೈಸ್ತತತ್ವಗಳು. ಆದರೆ ಆಂಗ್ಲನಿಗೆ ಇದು ಅಂಜುಬುರುಕುತನದ ಹರಟೆಯಾಗಿ ಕಾಣಿಸುತ್ತದೆ. ರವಿವಾರಗಳಲ್ಲಿ ಕಾಲಹರಣಮಾಡಲು ಯೋಗ್ಯವಾದುದು. ದಿನನಿತ್ಯದ ವ್ಯವಹಾರದಲ್ಲಾಗಲಿ ಇಂತಹ ನಮ್ರತತ್ವವು ಕಾರ್ಯರೂಪಕ್ಕೆ ತರಲು ಯೋಗ್ಯವಲ್ಲ. ತನ್ನ ದೇಶ ಮತ್ತು ಸಾಮ್ರಾಜ್ಯವು ಜಗತ್ತಿನ ಇತರರಿಗಿಂತ ಉತ್ತಮವಾದದೆಂಬ ಭಾವನೆಯು ಆಂಗ್ಲಮಕ್ಕಳಿಗೆ ದಿನನಿತ್ಯ ಕಲಿಸಲ್ಪಡುವ ವಿಷಯ. ಅದನ್ನು ವಶಪಡಿಸಿಕೊಳ್ಳುವವರನ್ನು ಪ್ರತಿಭಟಿಸುವುದು ಅವನ ಕರ್ತವ್ಯವೆಂದೂ ಅವನಿಗೆ ಪ್ರೋತ್ಸಾಹವೆಂದೂ ಅವನಿಗೆ ಪ್ರೋತ್ಸಾಹಿಸಲಾಗುತ್ತದೆ. ಒಂದಕ್ಕೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸುವ ವಿಚಾರದಲ್ಲಿ ಓರ್ವ ಆಂಗ್ಲನ ಅಭಿಪ್ರಾಯವನ್ನು ಕೇಳಿದರೆ 'ಒಂದಕ್ಕೆ ಎರಡೇಟುಗಳೆಂದೇ ತಿಳಿಸುತ್ತಾನೆ.

ಇಸ್ಲಾಮಿ ರೀತಿ

ತಾನು ಯಾವುದನ್ನು ಗೌರವಿಸಬೇಕೆಂದು ಕಲಿಸಲ್ಪಟ್ಟನೊ ಅದನ್ನೇ ಆಂಗ್ಲನೋರ್ವನು ಇಸ್ಲಾಮಿನ ಧರ್ಮದಲ್ಲಿ ಕಾಣುವನು. ಮುಸ್ಲಿಮನೊಬ್ಬ ಖಡಾಖಡಿ ಮನುಷ್ಯನೆಂದೂ, ಮುಸ್ಲಿಮರು ತಮ್ಮ ಜಗಳದ ನ್ಯಾಯಾನ್ಯಾಯ ಸೂಕ್ಷ್ಮತೆಯನ್ನು ಪರಿಶೀಲಿಸುವ ಸಂಕುಚಿತ ಮನೋಭಾವವಿಲ್ಲದ ಸುಶಿಕ್ಷಿತ ಧೀರ ಜನರೆಂದೂ ಆಂಗ್ಲರಿಗೆ ತಕ್ಷಣ ಮುಂದಟ್ಟಾಗುತ್ತದೆ. ಅವರು (ಮುಸ್ಲಿಮರು) ಮಹಾ ಮೇಧಾವಿಗಳಲ್ಲದಿದ್ದರೂ ನಿಪುಣ ಬುದ್ಧಿಶಕ್ತಿಯಿರುವವರು ಎಂದ ಮೇಲೆ ಆಂಗ್ಲರಿಗೆ ಒಳ್ಳೇ ಅನುಕೂಲವೆಂದೇ ತೋರುತ್ತದೆ. ಮಾನವ ಕೋಟಿಗೆ ಹಿತವಾಗುವ ಸೌಜನ್ಯವನ್ನು ತೋರಬೇಕೆಂಬ ಅವ್ಯವಹಾರ್ಯವಾದುದೇನನ್ನೂ ಇಸ್ಲಾಂ ಧರ್ಮವು ಬೋಧಿಸುವುದಿಲ್ಲ. ಮುಸ್ಲಿಮರು ತಮ್ಮ ಹಿತಕ್ಕಾಗಿ ಕಾದಾಡಲು ಸದಾ ಸಿದ್ಧರೆ ಇರುತ್ತಾರೆ, ತಮ್ಮ ಧರ್ಮವನ್ನು ಇತರ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವಾದುದೆಂದು ಭಾವಿಸುತ್ತಾರೆ. ಆಂಗ್ಲರಂತೆ ಅವರೂ ತುಂಬಾ ಉದಾರಶೀಲರು. ಅವರ ಅತಿಥಿ ಸತ್ಕಾರ [illegible] ಖ್ಯಾತಿಯದು. ನೆರೆಯವರೊಡನೆ [illegible] ಒಂದು ಸಾಮಾನ್ಯ ನೀತಿಯನ್ನವರು ಅನುಸರಿಸುತ್ತಾರೆ. ಅದರೆ ಒಂದು ವ್ಯವಹಾರದ ಸೌಲಭ್ಯವಾಗಿ ಅವರು ವಿಶ್ವಾಸಿಗ (believers)ರನ್ನು ಮತ್ತು ಅವಿಶ್ವಾಸಿ (infidels)ಗಳನ್ನು ಹೇಗೆ ನಡೆಸಿಕೊಳ್ಳಬೇಕೆಂದೂ ಬಲ್ಲರು.

ಅವರ ಮತವೂ ಸುಲಭ ಗ್ರಾಹ್ಯವಾದುದು. ಒಂದು ಸಿದ್ಧಾಂತದಲ್ಲಿ ಮಾತ್ರ [illegible] ಮಾಡಿದರೆ ಸಾಕೆಂದು ತೃಪ್ತಿಪಡುವ ಒಬ್ಬ ದೇವರನ್ನು [illegible] ಅದು ಒಪ್ಪುತ್ತದೆ. ಅವನನ್ನು (ದೇವರನ್ನು) ತಿಳಿದುಕೊಳ್ಳಬೇಕಾದರೆ ಯಾವ ಆಧ್ಯಾತ್ಮ ವಿದ್ಯೆಯ ಆವಶ್ಯಕತೆಯೂ ಇಲ್ಲ. ಮಾತ್ರವಲ್ಲ ಆ ದೇವರು ಅಸಾಧ್ಯವಾದ ದೇನನ್ನು ತನ್ನ ಭಕ್ತರಿಂದ ಅಪೇಕ್ಷಿಸುವುದಿಲ್ಲ. ಧರ್ಮವೆಂದರೆ ಇದೇ ರೀತಿ ಇರಬೇಕೆಂದು ಸರ್ವಸಾಮಾನ್ಯ ಬ್ರಿಟಿಷನ ಅಭಿಪ್ರಾಯ. ಮನುಷ್ಯನು ಒಂದು ಒಳ್ಳೇ ವಿಧದಲ್ಲಿ ಒಂದು ದಿನದ ಕೆಲಸ [illegible] ವ್ಯವಹಾರ ಸುಗಮ ಸಾಗಿದರೆ ಅದರಿಂದ ಸಾಧ್ಯವಿದ್ದಷ್ಟು ಹೆಚ್ಚಿನ ಲಾಭವನ್ನು ಪಡೆಯಬಹುದು. ಮತ್ತೆ ಸಾಕಷ್ಟು ಗಳಿಸಿಟ್ಟ ಮೇಲೆ ಶ್ರಮಪಡುವ ಆವಶ್ಯಕತೆಯಿಲ್ಲ, ಆ ಮೇಲೆ ನಿವೃತ್ತಿ ಹೊಂದಿ ಸರಿದೋರುವ, ಮಿತಿಯಿರುವ ಯಾವ ಸುಖೋಪಭೋಗವನ್ನಾದರೂ ಅನುಭವಿಸಬಹುದು. ಲೈಂಗೀಕ ವಿಷಯದಲ್ಲಿ ಸ್ತ್ರೀಯರು ಮಾತ್ರ ಕಠಿಣ ತರಹದ ಪರಿಶುದ್ಧತೆಯನ್ನು ಕಾಪಾಡಿ ಕೊಂಡರೆ ಸಾಕು. ಪುರುಷರು ಮಾತ್ರ ಅಷ್ಟೊಂದು ಕಠಿಣ ಶಿಸ್ತನು ಅನುಸರಿಸದಿರಬಹುದು. ಬ್ರಿಟಿಷನಿಗೆ ಇದಕ್ಕಿಂತಲೂ ಅನುಕೂಲವಾದುದು ಬೇರೊಂದಿಲ್ಲ.

ಹೀಗಾಗಿ ಓರ್ವ ಆಂಗ್ಲೇಯನು ಮುಸ್ಲಿಂ ದೇಶದಲ್ಲಿ ಅತ್ಯಂತ ಸಂತೃಪ್ತಿಯನ್ನು ಕಾಣುತ್ತಾನೆ. ಈ ದೇಶಗಳಲ್ಲಿ ವಾಸಿಸುವ ಅನೇಕ ಬ್ರಿಟಿಷ್ ಕೆಲಸಗಾರರು ಪ್ರತ್ಯಕ್ಷವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡುತ್ತಾರೆ. ಆದರೆ ಅವರಿಗೆ ಬೌದ್ಧ ಧರ್ಮವೆಂದರೆ ಒಂದು ತರದ ಭಿನ್ನ ಮನೋಭಾವದ್ದೆಂದೂ, ಜಗತ್ತಿನ ಅತೀ ಸಂತೋಷ ಚಿತ್ತರು (ಚೀನಿಯರು?) ಇದನ್ನು ಅನುಸರಿಸುವುದು ಅತೀ ಕೌತುಕದ ಸಂಗತಿಯೆಂದೂ ಕಾಣುತ್ತದೆ. ಮತ್ತೆ ಹಿಂದೂ ಧರ್ಮವಂತೂ ಸಂಪೂರ್ಣ ವ್ಯಗೀ[illegible] ಅಶ್ಲೀಲ ಕಲಾರಚನೆಯ ಮೂರ್ತಿ ಪೂಜನೆಯೆಂದೂ, ಕ್ರೈಸ್ತ ಧರ್ಮದಂತೆ (ತಾವೆಂದೂ ಅನುಸರಿಸದ) ಇದೂ ಇನ್ನೊಂದು ಲೋಕ ಮತ್ತು ಇನ್ನೊಂದು ಜನ್ಮದ ಕುರಿತು ಬೋಧಿಸುವ ರಹಸ್ಯ ಆಧ್ಯಾತ್ಮ [illegible] ತರ್ಕವೆಂದೂ ಅವರು ತಿಳಿಯುವರು. ಇದನ್ನು ಅನುಸರಿಸಿದರೆ ಸಂತನಾಗಿಯೊ ಸನ್ಯಾಸಿಯಾಗಿಯೊ [illegible]ವೆಂದವರಿಗೆ ಭಯ. ಅದುದರಿಂದಲೇ ಅವರು "ನಮಗೆ [illegible] ಮುಸ್ಲಿಮನನ್ನೇ ಕೊಡಿ" ಎಂದು ಕೇಳುವರು.

ಪಾಕಿಸ್ಥಾನದಲ್ಲಿ ಎಣ್ಣೆ ಶೋಧ

ಬ್ರಿಟಿಷರ ಮುಸ್ಲಿಂ ಪರವಾದ ಈ ಸಹಾನುಭೂತಿಗೆ ಆರ್ಥಿಕ ಮತ್ತು ಔದ್ಯೋಗಿಕ ಕಾರಣಗಳೂ ಇವೆ. ಇಂಗ್ಲಿಷ್ ಅಧಿಕಾರಿಯೋರ್ವನ ಅಭಿಪ್ರಾಯದಲ್ಲಿ ಹಿಂದೂಗಳು, ಯಹೂದಿಗಳು ಮತ್ತು ಪಾರ್ಸಿಕರು (ರಶ್ಯನ್ನರು) ಅಪಾಯಕಾರಕ ವಿಚಾರ ಪರಿಪೂರ್ಣತೆಯವರೆಂದಿದೆ. ಇವರನ್ನು ಯಾವಾಗಲೂ ಒಟ್ಟುಗೂಡಬಿಡಬಾರದೆಂದೇನೊ ಪುಣ್ಯಕ್ಕೆ ಈ ಮೂರು ಜನಾಂಗದ ಜನರಿರುವ ದೇಶಗಳು ಮಧ್ಯಮಧ್ಯದಲ್ಲಿ ಮುಸ್ಲಿಮರು ಕಾಡು ರಾಜ್ಯಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. ಈ ಜನರು ಮಾನವ ಕೋಟಿಯೊಳಗಿನ 'ಅವಾಂತರಗೇಡಿಗಳೆಂದೂ ಅವರು ತಿಳಕೊಂಡಿದ್ದಾರೆ. ಇನ್ನೊಂದು ಸೌಭಾಗ್ಯವೆಂದರೆ ಈ ಜನರನ್ನು ಪ್ರತ್ಯೇಕಿಸಿದ ಮರುಭೂಮಿ ಪ್ರದೇಶಗಳಲ್ಲಿ ಕೈಗಾರಿಕೆ ಮದ್ಯಮಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಎಣ್ಣೆ ಸಂಪತ್ತಿದೆ. ಆದರೆ ಇದ ಕ್ಕೊಂದು ತೊಂದರೆ. ಎಲ್ಲಿ ಎಣ್ಣೆಯಿದೆಯೋ ಅಲ್ಲಿ ಅಮೇರಿಕನರಿದ್ದಾರೆ. ಬ್ರಿಟಿಷರಿಗೆ ಇದೊಂದು ದೊಡ್ಡ ಅಭ್ಯಂತರ. ಆದುದರಿಂದ ಅವರಿಗೀಗ ಎಣ್ಣೆ ದೊರೆಯಬಹುದಾದ ಪ್ರದೇಶಗಳೆಂದರೆ ಪಾಕಿಸ್ಥಾನ ಮತ್ತು ದರೊಳಗಿನ ಬಲೂಚಿಸ್ಥಾನಗಳು. ಇಡೀ ಸಾಮ್ರಾಜ್ಯವಿರುವುದಕ್ಕಿಂತ ಎಣ್ಣೆಯಿರುವ ಸಣ್ಣ ದೇಶ ಸಿಕ್ಕಿದರೆ ಸಾಕು!

ಈ ಉಷ್ಣ ಪ್ರದೇಶಗಳಲ್ಲಿರುವ ಮುಸ್ಲಿಮರಿಗಾದರೂ ಶಕ್ತಿವಂತ ರಾಷ್ಟ್ರವಾಗಿರಬೇಕಾದರೆ ಶಸ್ತ್ರಾಸ್ತ್ರಗಳನ್ನು ನಾವೇ ಸರಬರಾಯಿ ಮಾಡಬೇಕು. ಬ್ರಿಟಿಷ್ ಸೈನ್ಯಾಧಿಕಾರಿಗಳ ಕೈಕೆಳಗೆ ಅವರು ಉತ್ತಮ ಯೋಧರೆನಿಸಿಕೊಂಡಿದ್ದಾರೆ. ಯಹೂದಿ, ಹಿಂದೂಗಳಂತೆ ಇವರು ಕ್ರಾಂತಿ ವಿಚಾರಪೂರಿತರಲ್ಲವಾದ್ದರಿಂದ ಶಿಸ್ತಿಗೆ ಸುಲಭರು. ಇದಕ್ಕಾಗಿಯೇ ಹೆಚ್ಚಿನ ಬ್ರಿಟಿಷ್ ಅಧಿಕಾರಿಗಳು ಪಾಕಿಸ್ಥಾನಕ್ಕೇ ಸೇವೆ ಸಲ್ಲಿಸುವುದಕ್ಕೆ ಒಪ್ಪಿಕೊಂಡರು. ಬ್ರಿಟಿಷರು ಅರಬರಿಗೂ ಪಾಕಿಸ್ಥಾನಕ್ಕೂ ತುಂಬಾ ಸಹಾನುಭೂತಿ ತೋರಲೂ ಇದೇ ಕಾರಣ, ಅಮೇರಿಕನ್ನರು ಅಫಗಾನಿಸ್ಥಾನ ಮತ್ತು ಪರ್ಶಿಯದಲ್ಲಿ ತಳವೂರಲೂ (ಆ ದೇಶಗಳು ರಶ್ಯದೊಡನೆ ಯುದ್ಧವಾಗುವ ಸಂದರ್ಭದಲ್ಲಿ ಒಳ್ಳೇ ಸಮೀಪದ ಸ್ಥಳಗಳೂ ಆಗಿವೆ) ಇದೇ ಕಾರಣ. ಜಿನ್ನರಿಗೂ ಇಡೀ ಮುಸ್ಲಿಂ ಪ್ರಪಂಚದ ನಾಯಕರಾಗಬೇಕೆಂಬ ಮಹತ್ವಾಕಾಂಕ್ಷೆ ಇದೆ. ಈಗ ಪಾಕಿಸ್ಥಾನದ ಸೈನ್ಯವನ್ನು ಬಲಪಡಿಸಿದರೆ ತಮ್ಮೊಡನೆ ಹೋರಾಡಿದ ಕೊಂಗ್ರೆಸಿಗೆ ಒಂದಲ್ಲೊಂದು ದಿವಸ ಬುದ್ಧಿಕಲಿಸಬಹುದು, ಅತ್ತ ಎಟ್ಲಿಯವರ ಮಜೂರ ಸರಕಾರದ ಮೇಲೂ ಸೇಡು ತೀರಿಸಿಕೊಳ್ಳಬಹುದು (ಹಿಂದೂಸ್ಥಾನವನ್ನು ಗದ್ದು, ಚರ್ಚಿಲ್ ಸರಕಾರವನ್ನು ಸ್ಥಾಪಿಸುವ ಉದ್ದೇಶವೆಂದೂ ಹೇಳಬಹುದು.) ಅಂತೂ ಅರಬರು, ಪಾಕಿಸ್ಥಾನ ಮತ್ತು ಎಣ್ಣೆ ಎಂಬೀ ಮೂರು ವಿಷಯಗಳು ಒಂದರೊಡನೊಂದು ಚಂದವಾಗಿ ಮೇಳಾಮೇಳಿಯಾಗುವ ವಿಷಯಗಳು.

ತಪ್ಪು ದಾರಿ

ಇಷ್ಟಾದರೂ ಬ್ರಿಟಿಷರ ಎಣಿಕೆಯು ಒಂದು ದಿನ ಕನಸಿಗಂಟಾಗುವುದು. ಇಸ್ಲಾಂ ರಾಜ್ಯಗಳು ಬಹುಕಾಲ ಪಾಶ್ಚಾತ್ಯರ ಕೈಗೊಂಬೆಗಳಾಗಿರುವುವೆಂದು ಹೇಳಬರುವುದಿಲ್ಲ. ಸಂದರ್ಭದ ಅನುಕೂಲತೆಯನ್ನು ಹೊಂದುವ ತನಕ ಬ್ರಿಟಿಷ್ ಅಮೇರಿಕನ್ನರ ತಾಳಕ್ಕವರು ಕುಣಿಯುವರು. ಆದರೆ ಪರಕೀಯ ಶೋಷಣೆಯಿಂದ ಈಗಾಗಲೇ ಬೆಂದು ಬೆಂಡಾದ ಈ ಕಡೆಗಳ ಜನತೆ ತಮ್ಮದೇ ಆದ ಧರ್ಮಪ್ರಧಾನ ರಾಷ್ಟ್ರೀಯತೆಯಿಂದ ದೊಂಬಿಯೆದ್ದು ಕಂಟಕಪ್ರಾಯವಾಗುವುದು. ರಕ್ತದ ಕೆಂಪು ತತ್ವ ಆದಾಗಲೇ ಈ ಕಡೆಗಳಲ್ಲಿ ಮನೆಮಾಡಿದೆ. ಮುಂದೆ ಈ ದೇಶಗಳ ಜನರು ಬ್ರಿಟಿಷ್ ಅಮೇರಿಕರೆಲ್ಲರನ್ನು ಹೊರ ಅಟ್ಟದಿರರು.

ಕಡಿತ, ಘಾಯ, ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ.



ಕುಟಿಕೂರಾ ಮುಲಾಮು
CUTICURA OINTMENT

ಗಣನೀಯ ಉದ್ಗಾರಗಳು

ಯುದ್ಧ ಬೇಡ

"ಶೀಘ್ರಗತಿಯಿಂದ ಜಗತ್ತು ಯುದ್ಧದತ್ತ ಸಾಗಹತ್ತಿದೆ. ಜಗತ್ತಿನ ಶಾಂತಿಗೆ ಗಂಡಾಂತರ ಬಂದಿದೆ. ಜಾತಿ, ಮತ, ಪಂಥ, ವರ್ಣಭೇದ, ಸಾಂಸ್ಕೃತಿಕ ಅಸಮತೆ ಈ ಭೇದಗಳಿಗೆ ಆಸ್ಪದವಿಲ್ಲದೆ ಎಲ್ಲಾ ರಾಷ್ಟ್ರಗಳಿಗೆ ನ್ಯಾಯದೊರಕುವ ಒಂದು ರಾಷ್ಟ್ರಕೂಟ ರಚಿಸುವ ಕಾಲ ಬಂದೇಬರುವುದು. ಯುದ್ಧವನ್ನು ತಪ್ಪಿಸುವ ಪ್ರಭಾವಶಾಲಿ ವ್ಯಕ್ತಿ ಇಂದು ಜಗತ್ತಿಗೆ ಬೇಕಾಗಿದೆ." —ರಾಜಾಜಿ

ದಾಳಿಗಾರರನ್ನು ಮೊದಲು ಓಡಿಸಬೇಕು

"ಕಾಶ್ಮೀರವು ಯಾವ ವಸಾಹತಿಗೆ ಸೇರಬೇಕೆಂಬ ಬಗ್ಗೆ ಕಾಶ್ಮೀರಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಸಾರ್ವತ್ರಿಕ ಮತಗಣನೆಯನ್ನು ನಡೆಸಲಾಗುವುದೆಂದು ಪಂಡಿತ್ ನೆಹರೂ ಅವರು ಕೊಟ್ಟ ಆಶ್ವಾಸನವನ್ನು ಖಂಡಿತ ಗೌರವಿಸಲಾಗುವುದು. ಆದರೆ ಇದಕ್ಕೆ ಮುನ್ನ ದಾಳಿಗಾರರನ್ನು ಇಲ್ಲಿಂದ ಸಂಪೂರ್ಣ ಹೊರಗೆ ಹಾಕದಿದ್ದರೆ ಮತಗಣನೆಯಲ್ಲಿ ಅನಪೇಕ್ಷಿತ ಕೈವಾಡ, ಬೆದರಿಕೆ, ಪಕ್ಷಪಾತಗಳಾಗುವುದು ಖಂಡಿತ" —ಶೇಕ್ ಅಬ್ದುಲ್ಲಾ

ನಮ್ಮ ಧ್ಯೇಯ

"ಶಾಂತಿ ರಕ್ಷಣೆಯೇ ನಮ್ಮ ಧ್ಯೇಯ. ನಮ್ಮ ಸೈನ್ಯಗಳ ಧ್ಯೇಯವೂ ಅದೇ. ಇತರ ದೇಶಗಳನ್ನು ಆಕ್ರಮಿಸುವ ಇಚ್ಛೆ ನಮಗಿಲ್ಲ. ನಾವು ಸ್ವಾತಂತ್ರ್ಯವನ್ನು ರಕ್ಷಿಸಲು ನಿರ್ಧರಿಸಿದ್ದೇವೆ." —ಪಂಡಿತ್ ನೆಹರೂ

ಹೆಚ್ಚು ಕಾಯಿಪಲ್ಯ

"ಕಾಯಿಪಲ್ಯಗಳ ಬೀಜದ ಉದ್ಯಮೆಯನ್ನು ಒಳ್ಳೇ ರೀತಿಯಲ್ಲಿ ಸಂಘಟಿಸಬೇಕು. ಕಾಯಿಪಲ್ಯಗಳನ್ನು ನಾವು ಹೆಚ್ಚಾಗಿ ಬೆಳೆದರೆ ದವಸಧಾನ್ಯಗಳ ಪರಿಸ್ಥಿತಿಯು ಸುಧಾರಿಸುವುದು. ನಮ್ಮ ನಿತ್ಯದ ಆಹಾರದಲ್ಲಿ ಅವನ್ನು ಉಪಯೋಗಿಸುವುದರಿಂದ ಆರೋಗ್ಯಕ್ಕೆ ಉತ್ತಮ." —ದೌಲತ್‌ರಾವ್

ಹೋದದ್ದು ಒಳ್ಳೇದು

"ಸಾಮ್ಯವಾದಿಗಳು ಕಾಂಗ್ರೆಸನ್ನು ಬಿಟ್ಟುಹೋಗಬೇಕೆಂದು ನಿರ್ಧರಿಸಿದನ್ನು ಕೇಳಿ ನನಗೆ ಸಂತೋಷವಾಗಿದೆ. ಕಾಂಗ್ರೆಸಿಗರನ್ನು ಅಪರಾರ್ಗಕ್ಕೆಳೆಯುತ್ತಿದ್ದ ಇವರು ತೊಲಗುವುದರಿಂದ ಕಾಂಗ್ರೆಸು ಇನ್ನೂ ಜನತೆಯ ಸೇವೆಯನ್ನು ಹೆಚ್ಚು ಉತ್ತಮ ರೀತಿಯಿಂದ ಸಲ್ಲಿಸಬಹುದು." —ಮುರಾರಜಿ ದೇಸಾಯಿ

ಸಕಾಲದಲ್ಲಿ ಕಾರ್ಯ

"ಜಗತ್ತಿನ ಇತಿಹಾಸದಲ್ಲಿ ಎಷ್ಟೋ ಸಲ ಹಿಂದೆ ಮುಂದೆ ನೋಡುತ್ತ ಕೂಡ್ರುವದಕ್ಕಿಂತ ಧೈರ್ಯದಿಂದ ಕೃತಿಗಿಳಿಯುವುದೇ ಹೆಚ್ಚು ಜಾಣತನದ್ದೆಂದು ಕಂಡುಬಾರದಿರದು. ಕೃತಿಗಿಳಿಯುವುದರಲ್ಲಿ ಗಂಡಾಂತರವನ್ನೆದುರಿಸಬೇಕಾದುದೇನೊ ನಿಜ. ಆದರೆ ಯಾವ ನಿರ್ಧಾರಕ್ಕೂ ಬಾರದೆ ಹಿಂದೆ ನೋಡುತ್ತ ಕೂಡ್ರುವುದರಲ್ಲಿ ಹೆಚ್ಚಿನ ಹಾನಿಯಿದೆ." —ಅಧ್ಯಕ್ಷ ಟ್ರೂಮನ್

ನಿಜಾಮರನ್ನು ಸೋಲಿಸುವೆವು

"ಹಿಂದೀ ಸೈನಿಕರು ಶೌರ್ಯ, ಬುದ್ಧಿವಂತಿಕೆ ಚಾತುರ್ಯ ಮೊದಲಾದ್ದುವುಗಳಲ್ಲಿ ನಿಜಾಮ ಸೈನಿಕರಿಗಿಂತ ಎಷ್ಟೊ ಪಟ್ಟು ಶ್ರೇಷ್ಠರಿರುವರು. ನಿಜಾಮರು ಹಿಂದೂಸ್ಥಾನ ವಿರುದ್ಧ ಯುದ್ಧಸಾರಿದರೆ ಸುಲಭವಾಗಿ ಸೋಲಿಸುವೆವು."

—ಬ್ರಿಗೇಡಿಯರ್ ಟಾಕೂರ ಶಿವದತ್ತಸಿಂಗ್

ಮಜೂರ ಅಭಿವೃದ್ಧಿ

"ಉತ್ಪಾದನೆ ಹೆಚ್ಚಿಸಬೇಕಾದರೆ ಕೆಲಸಗಾರರಲ್ಲಿಯೂ ನಿರಕ್ಷರತೆಯನ್ನು ಹೋಗಲಾಡಿಸಿ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು." —ಸರ್ ವಿಶ್ವೇಶ್ವರಯ್ಯ

ಸ್ತ್ರೀ ಅಪಹಾರದ ಪಾತಕವನ್ನು ತೊಳೆಯಿರಿ

ಅಪಹೃತ ಸ್ತ್ರೀಯರ ಪುನರುದ್ಧಾರ

"ದುಃಖಿತ ಹೃದಯಿಗಳಾದ ಸ್ತ್ರೀವರ್ಗಕ್ಕೆ ಸಹಾನುಭೂತಿಯ ಸಂದೇಶವನ್ನು ಕಳುಹಿಸಲಿಚ್ಛಿಸುತ್ತೇನೆ. ಅವರ ಗೋಳು ನಮ್ಮ ಹೃದಯಗಳನ್ನು ಕೊರೆದು ಕರಗಿಸಿವೆ." ಹೀಗೆಂದು ಸರ್ದಾರ್ ವಲ್ಲಭಭಾಯಿ ಪಟೇಲರು ಜನಾಂಗವನ್ನುದ್ದೇಶಿಸಿ ಕಳೆದ ಫೆಬ್ರುವರಿ 18ರಂದು ಕೊಟ್ಟ ರೇಡಿಯೊ ಸಂದೇಶದಲ್ಲಿ ತಿಳಿಸಿದ್ದರು. ನಿರಾಶ್ರಿತ ಸ್ತ್ರೀಯರ ಪುನರ್ವಸತಿಯ ಮೇಲ್ವಿಚಾರ ನೋಡಿಕೊಳ್ಳುವ ಶ್ರೀಮತಿ ರಾಮೇಶ್ವರಿ ನೆಹರು ಅವರು ಒಂದು ರೇಡಿಯೊ ಭಾಷಣದಲ್ಲಿ ಹೀಗೆಂದಿದ್ದಾರೆ:

ಒಂದು ಕಾಲದಲ್ಲಿ ಇಂಗ್ಲೆಂಡಿನಲ್ಲಿ ಜಾನುವಾರುಗಳನ್ನು ಕದಿಯುವುದೊಂದು ಪ್ರಖ್ಯಾತ ಉದ್ಯಮವಾಗಿತ್ತು. ಉತ್ತಮ ದನಕರುಗಳು ಅಲ್ಲಿ ಅಪಹರಿಸಲ್ಪಡುತ್ತಿದ್ದವು. ನಮ್ಮ ದೇಶದಲ್ಲಿ ಈಚೆಗೆ ಕೆಲ ತಿಂಗಳುಗಳಿಂದ ದುಷ್ಟ ಜನರು ಉತ್ತಮ ಸ್ತ್ರೀಯರನ್ನು 'ಕದ್ದು' ಇಚ್ಛೆಪಟ್ಟಲ್ಲಿಗೆ ಒಯ್ದು ಸ್ವೇಚ್ಛೆಯಾಗಿ ಅವರೊಡನೆ ವರ್ತಿಸುತ್ತಿರುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ಬಹಿರಂಗವಾಗಿ ಈ ಸ್ತ್ರೀಯರ ಮೇಲೆ ಅತ್ಯಾಚಾರಗಳು ನಡೆಸಲ್ಪಡುತಿದ್ದವು ಮಾತ್ರವಲ್ಲ ಜಾನುವಾರುಗಳಂತೆ ಇವರನ್ನು ಬಹಿರಂಗ ಸಂತೆಯಲ್ಲಿ ಮಾರಾಟವನ್ನು ಮಾಡುತ್ತಿದ್ದಾರೆ.

ಇಂತಹ ಕೊಲೆಪಾತಕಿ ವ್ಯಾಪಾರಿಗಳನ್ನು ಹಿಡಿಯಲು ಆ ಪ್ರದೇಶಗಳಲ್ಲಿ ಯಾವ ನ್ಯಾಯಸ್ಥಾನವೂ ಇಲ್ಲ. ಕೊಳ್ಳುವವನಂತೂ ಕೇಳುವವರಿಲ್ಲ. ಪೋಲಿಸರು ತಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದರೆ ಸರಕಾರವಾದರೂ ಏನನ್ನು ಮಾಡಲ್ಲಾರದು. ಇವು ಸ್ವತಂತ್ರ ಭಾರತದಲ್ಲಿ, ಮತ್ತು ಸ್ವತಂತ್ರ ಪಾಕಿಸ್ತಾನದಲ್ಲಿ ನಡೆದ ಸಂಗತಿಗಳು

ಅವರ್ಣನೀಯ ಗೋಳು

ಮುದಿ ತಾಯಿಗಳು ಆರ್ತನಾದ ಹೊರಡಿಸಿದರು. ತಂದೆಯರು ಹೃದಯ ವೇದನೆಯಿಂದ ಸಂಕಷ್ಟಿತರಾದರು, ಬಂಧುಗಳು ತಮ್ಮ ಕಣ್ಣ ಮುಂದಾಗುವ ಅಮಾನುಷಿಕ ಕೃತ್ಯಗಳನ್ನು ನೋಡುತ್ತ, ಏನನ್ನೂ ಮಾಡಲಾಗದೆ ತೆಪ್ಪಗಿದ್ದರು. ಇವರ ರಕ್ಷಣೆಗೆ ಯಾವ ಸೈನ್ಯವೂ ಇಲ್ಲ. ಇವರನ್ನು ಸಾಗಿಸಲು ಯಾವ ಸಾಗಾಟದ ವ್ಯವಸ್ಥೆಯೂ ಇಲ್ಲ; ನಮ್ಮ ಸಾವಿರಾರು ಭಗಿನಿಯರು ಪಶುಗಳಂತೆ ಉಪಯೋಗಿಸಲ್ಪಟ್ಟಾಗ ಅವರಿಗೆ ಸಕಾಲದ ಸಹಾಯವನ್ನು ತೆರಲು ಯಾವ ಸೌಕರ್ಯವೂ ನಮ್ಮ ಬಳಿ ಇಲ್ಲದಾಯಿತು.

ಈ ಅಪಹರಣ ಕಾಲದಲ್ಲಿ ನಾವವರಿಗೆ ಯಾವ ಸಹಾಯವನ್ನು ಮಾಡಲಾಗಲಿಲ್ಲ; ಈ ಸ್ತ್ರೀಯರ ಮನೆಗಳು ಅವರಿಲ್ಲದಾಗ ಮಸಣ ಭೂಮಿಗಂತಾದವು. ಈ ಸ್ತ್ರೀಯರನ್ನು ಅವರ ಮನೆಗಳಿಗೆ ಪುನಃ ತರಿಸದಿದ್ದರೆ ದೇಶದಲ್ಲಿ ಶಾಂತಿಯು ಬಾಳಲಾರದು. ಅದರ ಪ್ರಯುಕ್ತ ಒಂದು ಯೋಜನೆಯನ್ನು ಸಿದ್ಧಗೊಳಿಸಲಾಯಿತು. ಪೂರ್ವ ಪಶ್ಚಿಮ ಪಂಜಾಬಗಳಿಗೆ ನಾವು ಸ್ವಯಂ ಸೇವಕರನ್ನು ಪೋಲಿಸ್ ಉಸ್ತುವಾರಿಯೊಡನೆ ಕಳುಹಿದೆವು. ಅಪಹೃತ ಸ್ತ್ರೀಯರ ಶೋಧ ಮಾಡಿ ಅವರನ್ನು ಸುರಕ್ಷಿತವಾಗಿ ಅವರವರ ಮನೆಗಳಿಗೆ ಕಳುಹಿಸುವುದಕ್ಕೆ ಈ ಸ್ವಯಂ ಸೇವಕರು ಕರ್ತವ್ಯ ಬದ್ಧರಾಗಿದ್ದರು.

5 ಸಾವಿರಕ್ಕೆ ಮಿಕ್ಕಿದ ಶೋಧ

ನಮ್ಮ ಸ್ವಯಂ ಸೇವಕಿಯರು ಜನವರಿ ತಿಂಗಳಲ್ಲಿ ಲಾಹೋರಿಗೆ ಹೋಗಿದ್ದರು. ಪಾಕಿಸ್ತಾನದಿಂದಲೂ ಕೆಲ ಸ್ವಯಂ ಸೇವಕಿಯರು ಪೂರ್ವ ಪಂಜಾಬಿಗೆ ಬಂದಿದ್ದರು. ಎರಡೂ ವಸಾಹತುಗಳಲ್ಲಿ ಇದುತನಕ 5 ಸಾವಿರಕ್ಕೂ ಮಿಕ್ಕಿ ಸ್ತ್ರೀಯರ ಶೋಧವಾಗಿದೆ. ನಮ್ಮ ಪಾಪದ ಪಾತ್ರೆ ಅದಾಗಲೇ ತುಂಬಿ ತುಳುಕುತ್ತಿದೆ. ಮುಂದಾದರೂ ನಾವು ಈ ಪಾತಕದಿಂದ ನಮ್ಮ ಕೈಗಳನ್ನು ತೊಳೆಯೋಣ.

(೧ನೇ ಪುಟದಿಂದ)

"ಮಗನಿಗೆ ಬಂದುದರ ಅರ್ಧವನ್ನು ಮಗಳಿಗೆ ಕೊಡಬೇಕೆಂದು ಹೇಳಲಾಗಿದೆ. ಇದು ಸರಿಯಲ್ಲ. ಮಗಳಿಗೂ ಮಗನಷ್ಟೇ ಪಾಲು ಸಿಗಬೇಕು."

"ಸಪಿಂಡ ವಿವಾಹದ ವ್ಯಾಖ್ಯೆ ನನಗೆ ಸಮ್ಮತವಲ್ಲ. ಅದರಂತೆ ವಿವಾಹ ವಯಸ್ಸನ್ನು ಹುಡುಗಿಯರಿಗೆ ೧೮ ಎಂದು ನಿರ್ಬಂಧಿಸಬೇಕು. ಶಾರದಾ ಶಾಸನದಲ್ಲಿ ಈ ಕುರಿತು ತಿದ್ದುಪಡಿಮಾಡಬೇಕು."

'ವಿವಾಹ ವಿಚ್ಛೇದಮಾಡಿಕೊಂಡವರು ೫ ವರ್ಷಗಳ ವರೆಗೆ ಪುನರ್ವಿವಾಹವಾಗಕೂಡದೆಂದು ಹೇಳಿದ ವಿಷಯ ಯೋಗ್ಯವಿದೆ. ಆದರೆ ಮಕ್ಕಳಿಲ್ಲದ ಸ್ತ್ರೀಯರು ಪುನರ್ವಿವಾಹವಾಗಲು ಈ ಅವಧಿಯನ್ನು ೩ ವರ್ಷಕ್ಕಿಳಿಸಬೇಕು.'

'ಮಕ್ಕಳಿಗೆ ತಂದೆಯಂತೆ ತಾಯಿಯೂ ಪಾಲಿನಕರ್ತಳೆಂದು ಸಾರಬೇಕು. ಕೇವಲ ಧಾರ್ಮಿಕ ಭಾವನೆಯಿಂದ ದತ್ತ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬಾರದು.'

ಗುಡ್ಡಗಾಡು ಜನರು ಹಿಂದುಗಳೇ?

'ಗುಡ್ಡಗಾಡು ಜನರಲ್ಲಿಯ ಒಂದು ಪಂಗಡದಲ್ಲಿ ಕುಟುಂಬದ ಆಸ್ತಿಯನ್ನು ಕೊನೆಗೆ ಹುಟ್ಟಿದ ಹೆಣ್ಣುಮಗಳು ಪಡೆವ ರೂಢಿಯಿದೆ. ಹುಡುಗಿಯರನ್ನು ಬಲಾತ್ಕಾರದಿಂದ ಹಿಡಿದು ಲಗ್ನವಾಗುವ ರೂಢಿಯೂ ಕೆಲ ಗುಡ್ಡಗಾಡು ಜನರಲ್ಲಿದೆ. ಮಾತ್ರವಲ್ಲ ಕೆಲ ಗುಡ್ಡಗಾಡು ಜನರು ಯಾವ ಜಾತಿ ಮತಪಂಥದವರೆಂದು ಸ್ಪಷ್ಟವಾಗದ ಸಂದರ್ಭದಲ್ಲಿ ಈ ಮಸೂದೆಯನ್ನು ಹೇಗೆ ಅನ್ವಯಿಸಬೇಕು!' ಹೀಗೆಂದು ಶ್ರೀ ರೋಹಿಣಿ ಕುಮಾರ ಚೌಧರಿಯರು ಪ್ರಶ್ನಿಸಿದರು.

'ಇದನ್ನು ಹಿಂದೂ ಕಾಯದೆ ಸುಧಾರಣೆ ಮಸೂದೆ ಎನ್ನುವುದಕ್ಕಿಂತ ಹಿಂದೂಸ್ತ್ರೀ ಕಾಯದೆ ಸುಧಾರಣೆ (ನಗು) ಎನ್ನಬೇಕು ಎಂದೂ ಶ್ರೀ ಚೌಧರಿಯವರು ತಿಳಿಸಿದರು

ಡಾ॥ ಅಂಬೇಡ್ಕರರ ಉತ್ತರ

'ಹಿಂದೂಸ್ಥಾನದಲ್ಲಿ ಅನೇಕ ಸಮಾಜಗಳಿಂದು ಅವರವರ ರೂಢಿಸಾಂಪ್ರದಾಯಗಳೂ ಭಿನ್ನವಿವೆ. ಆದರೆ ಎಲ್ಲಾ ಸಮಾಜಗಳಿಗೆ ಒಂದೇ ಕಾನೂನು ಇರಬೇಕೆಂದೆ ಈ ಮಸೂದೆಯ ಉದ್ದೇಶ. 'ಈ ಮಸೂದೆಯಲ್ಲಿ ಮುಸಲ್ಮಾನ, ಯಹೂದಿ, ಪಾರಸಿ ಕ್ರಿಶ್ಚಿಯನ್ನರಲ್ಲದ ಜನರು ಹಿಂದುಗಳೆಂದ ಗ್ರಹಿಸಲಾಗುವದು. ಆದುದರಿಂದ ಈ ಮಸೂದೆ ತಮಗೆ ಅನ್ವಯಿಸುವುದಿಲ್ಲವೆಂದ ಹೇಳುವವರು ತಾವು ಹಿಂದೂಗಳಲ್ಲವೆಂದ ರುಜುವಾತುಪಡಿಸಿದರಾಯಿತು.'

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಬ್ರಿಟಿಷ್ - ಮುಸ್ಲಿಂ ಸಹಾನುಭೂತಿಯ ರಹಸ್ಯವೇನು?

ಇಸ್ಲಾಮಿನ ಮತ್ತು ಎಣ್ಣೆಗನಿಗಳ ಪ್ರಭಾವ

ಕಿಂಗ್‌ಸ್ಲೆ ಮಾರ್ಟಿನ್ ಎಂಬ ಪ್ರಖ್ಯಾತ ರಾಜಕೀಯ ವಿಚಾರಿಗಳು ಒಂದು ಲೇಖನದಲ್ಲಿ ಬ್ರಿಟಿಷರಿಗೆ ಮುಸ್ಲಿಮರ ಮೇಲೆ ಹೆಚ್ಚಿನ ಮಮತೆಯೇಕೆ ಎಂಬ ವಿಷಯವನ್ನು ಹೀಗೆ ವಿವರಿಸಿದ್ದಾರೆ.

ನನಗೆ ಅನೇಕ ಕಾರಣಗಳು ಹೊಳೆಯುತ್ತವೆ. ಮೊದಲನೇದು ಧರ್ಮಭಾವನೆಗೆ ಸಂಬಂಧಿಸಿದ್ದು. ಬ್ರಿಟಿಷ್ ಅಧಿಕಾರಿ ಮತ್ತು ಅಧಿಕಾರವರ್ಗದ ಮತಧರ್ಮವು ಕ್ರೈಸ್ತೀಯವಲ್ಲ. ಬ್ರಿಟಿಷ್ ಸಾರ್ವಜನಿಕ ಶಾಲೆಗಳಲ್ಲಿ ಕಲಿಸಲ್ಪಡುವ (ದರ್ಪದ ಜಗಳಗಂಟತನದ ಕ್ರೂರವರ್ತನೆಯು?) ಶಿಸ್ತೇ ಅವರ ಧರ್ಮ. ಸರ್ವಸಾಧಾರಣವಾಗಿ ಕ್ರೈಸ್ತನ ಧರ್ಮವನ್ನು ಪಾಶ್ಚಿಮಾತ್ಯ ಜಗತ್ತು ಎಂದಿಗೂ ಸ್ವೀಕರಿಸದು. ಕ್ರೈಸ್ತಮತವು ಬುದ್ಧನ ಧರ್ಮದಂತೆ ಶಾರೀರಿಕ ಮತ್ತು ಮಾನಸಿಕ ಶಿಸ್ತು ಸಂಸ್ಕಾರಗಳಿಂದ ಆಧ್ಯಾತ್ಮಿಕ ಮೇಲ್ಮೆಯನ್ನು ಪಡೆಯುವಂತೆ ನೀತಿವಿಧಾನಗಳನ್ನು ಬೋಧಿಸುತ್ತದೆ. ಪಾಶ್ಚಿಮಾತ್ಯ ಸಮಾಜವು ಬಾಹ್ಯಾಡಂಬರದ ಮತ್ತು ಕೃತಕ ಕಾಂಕ್ಷೆಗಳ ತೃಪ್ತಿಯ ತಳಹದಿಯ ಮೇಲೆ ರಚಿತವಾಗಿದೆ. 'ನಾಳೆಗಾಗಿ ಚಿಂತಿಸದಿರಿ, ಈ ಭೂಮಿಯ ಮೇಲೆ ಸಂಪತ್ತನ್ನು ಶೇಖರಿಸಬೇಡಿರಿ' ಎಂದು ಕ್ರಿಸ್ತನು ಉಪದೇಶಿಸಿದ್ದಾನೆ. ಈ ಕಠಿಣ ತತ್ವವನ್ನು ಪಾಶ್ಚಾತ್ಯರೆಂದಿಗೂ ಒಪ್ಪಿದವರಲ್ಲ. ನಾವು ಈ ಲೋಕದಲ್ಲೇ ಲೌಕಿಕ ಪ್ರಗತಿಯನ್ನು ಪಡೆಯುವುದರಲ್ಲೇ ವಿಶ್ವಾಸ ತಾಳುತ್ತೇವೆ. ಬೇಂಕಿನಲ್ಲಿ ಚೊಕ್ಕವಾದೊಂದ ಲೆಕ್ಕವನ್ನಿಡುವುದರಲ್ಲೂ, ಮತ್ತದರ ಒಂದ ಶವನ್ನು ಮರಣಾನಂತರ ಹಿಂದಿನವರಿಗೆ ಸಿಗುವಂತೆ ಮಾಡುವುದರಲ್ಲೂ ನಾವು ಸಂತೃಪ್ತಿಪಡುತ್ತೇವೆ. ಹೊಟ್ಟೆಗಾಗಿಯೇ ಕಷ್ಟಪಡಬೇಡಿರೆಂದು ಕ್ರಿಸ್ತನು ಅದೆಷ್ಟು ಸೌಖ್ಯಗಳನ್ನುಪದೇಶಿಸಿದ್ದರೂ ನಾವೇನೂ ಗಿರಣಿಗಳನ್ನು ಬಡಾಯಿಸಲು ತುಂಬಾ ಶ್ರಮಿಸುತ್ತೇವೆ. ಲಂಕೆಶಾಯರಿನಲ್ಲಿ ನೂಲುವವರೇ ಸಿಗುವುದಿಲ್ಲವೆಂಬುವೆ ನಮ್ಮ ಸ್ವಂತದ ಕಳಕಳಿ.

ಕ್ರೈಸ್ತಮತವು ಉದಾರ ಸದ್ಗುಣಗಳನ್ನು ಸಾರುತ್ತಿಂತಹುದು. 'ನಿನ್ನ ನೆರೆಕರೆಯವರನ್ನು ಪ್ರೀತಿಸು' 'ಜೀವರಲ್ಲಿ ಬಂಧನವೂ ಇಲ್ಲ, ವಿಮೋಚನೆಯೂ ಇಲ್ಲ' 'ಕ್ಷಮೆ ಸತತ ದಯೆಯ ಕ್ಷೇತ್ರವು ವಿಶ್ವವಿಶಾಲವಾದುದು' 'ಒಂದು ಕೆನ್ನೆಗೆ ಹೊಡೆದರೆ ಇನ್ನೊಂದನ್ನು ತೋರಿಸು' 'ಕಡುಕಿಗ ಒಳಿತನ್ನೇ ಮಾಡು' 'ಸಂಕಷ್ಟಗಳನ್ನು ಕೊಟ್ಟರೆ ಸಂತೋಷಪಡು' ಇವು ಕೆಲವು ಕ್ರೈಸ್ತತತ್ವಗಳು. ಆದರೆ ಆಂಗ್ಲನಿಗೆ ಇದು ಅಂಜುಬುರುಕುತನದ ಹರಟೆಯಾಗಿ ಕಾಣಿಸುತ್ತದೆ. ರವಿವಾರಗಳಲ್ಲಿ ಕಾಲಹರಣಮಾಡಲು ಯೋಗ್ಯವಾದುದು. ದಿನನಿತ್ಯದ ವ್ಯವಹಾರದಲ್ಲಾಗಲಿ ಇಂತಹ ನಮ್ರತತ್ವವು ಕಾರ್ಯರೂಪಕ್ಕೆ ತರಲು ಯೋಗ್ಯವಲ್ಲ. ತನ್ನ ದೇಶ ಮತ್ತು ಸಾಮ್ರಾಜ್ಯವು ಜಗತ್ತಿನ ಇತರರಿಗಿಂತ ಉತ್ತಮವಾದದೆಂಬ ಭಾವನೆಯು ಆಂಗ್ಲಮಕ್ಕಳಿಗೆ ದಿನನಿತ್ಯ ಕಲಿಸಲ್ಪಡುವ ವಿಷಯ. ಅದನ್ನು ವಶಪಡಿಸಿಕೊಳ್ಳುವವರನ್ನು ಪ್ರತಿಭಟಿಸುವುದು ಅವನ ಕರ್ತವ್ಯವೆಂದೂ ಅವನಿಗೆ ಪ್ರೋತ್ಸಾಹವೆಂದೂ ಅವನಿಗೆ ಪ್ರೋತ್ಸಾಹಿಸಲಾಗುತ್ತದೆ. ಒಂದಕ್ಕೆ ಹೊಡೆದರೆ ಇನ್ನೊಂದು ಕೆನ್ನೆಯನ್ನೂ ತೋರಿಸುವ ವಿಚಾರದಲ್ಲಿ ಓರ್ವ ಆಂಗ್ಲನ ಅಭಿಪ್ರಾಯವನ್ನು ಕೇಳಿದರೆ 'ಒಂದಕ್ಕೆ ಎರಡೇಟುಗಳಿಂದಲೇ ತಿಳಿಸುತ್ತಾನೆ.

ಇಸ್ಲಾಮಿ ರೀತಿ

ತಾನು ಯಾವುದನ್ನು ಗೌರವಿಸಬೇಕೆಂದು ಕಲಿಸಲ್ಪಟ್ಟನೋ ಅದನ್ನೇ ಆಂಗ್ಲನೋರ್ವನು ಇಸ್ಲಾಮಿನ ಧರ್ಮದಲ್ಲಿ ಕಾಣುವನು. ಮುಸ್ಲಿಮನೊಬ್ಬ ಖಡಾಖಡಿ ಮನುಷ್ಯನೆಂದೂ, ಮುಸ್ಲಿಮರು ತಮ್ಮ ಜಗಳದ ನ್ಯಾಯಾನ್ಯಾಯ ಸೂಕ್ಷ್ಮತೆಯನ್ನು ಪರಿಶೀಲಿಸುವ ಸಂಕುಚಿತ ಮನೋಭಾವವಿಲ್ಲದ ಸುಶಿಸ್ತಿನ ಧೀರ ಜನರೆಂದೂ ಆಂಗ್ಲರಿಗೆ ತಕ್ಷಣ ಮಂದಟ್ಟಾಗುತ್ತದೆ. ಅವರು (ಮುಸ್ಲಿಮರು) ಮಹಾ ಮೇಧಾವಿಗಳಲ್ಲದಿದ್ದರೂ ನಿಪುಣ ಬುದ್ಧಿ ಶಕ್ತಿಯಿರುವವರು ಎಂದ ಮೇಲೆ ಆಂಗ್ಲರಿಗೆ ಒಳ್ಳೆ ಅನುಕೂಲವೆಂದೇ ತೋರುತ್ತದೆ. ಮಾನವ ಕೋಟಿಗೇ ಹಿತವಾಗುವ ಸೌಜನ್ಯವನ್ನು ತೋರಬೇಕೆಂಬ ಅವ್ಯವಹಾರ್ಯವಾದುದೇನನ್ನೂ ಇಸ್ಲಾಂ ಧರ್ಮವು ಬೋಧಿಸುವುದಿಲ್ಲ. ಮುಸ್ಲಿಮರು ತಮ್ಮ ಹಿತಕ್ಕಾಗಿ ಕಾದಾಡಲು ಸದಾ ಸಿದ್ಧರಿರುತ್ತಾರೆ. ತಮ್ಮ ಧರ್ಮವನ್ನು ಇತರ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವೆಂದು ದೃಢವಾಗಿ ಭಾವಿಸುತ್ತಾರೆ. ಆಂಗ್ಲರಂತೆ ಅವರೂ ಉದಾರಶೀಲರು. ಅವರ ಆತಿಥ್ಯ ಪ್ರಸಿದ್ಧವಾದುದು. ಪಶ್ಚಿಮ ಖ್ಯಾತಿಯುಳ್ಳ ನೆರೆಯವರೊಡನೆ ವರ್ತಿಸಬೇಕಾದ ಒಂದು ಸಾಮಾನ್ಯ ನೀತಿಯನ್ನವರು ಅನುಸರಿಸುತ್ತಾರೆ. ಆದರೆ ಒಂದ ವ್ಯವಹಾರದ ಸೌಲಭ್ಯವಾಗಿ ಅವರು ವಿಶ್ವಾಸಿಗ (believers) ರನ್ನು ಮತ್ತು ಅವಿಶ್ವಾಸಿ (infidels) ಗಳನ್ನು ಹೇಗೆ ನಡೆಸಿಕೊಳ್ಳಬೇಕೆಂದೂ ಬಲ್ಲರು.

ಅವರ ಮತವೂ ಸುಲಭ ಗ್ರಾಹ್ಯವಾದುದು. ಒಂದು ನಿರ್ದಿಷ್ಟ ಕಾಲದಲ್ಲಿ ಮಾತ್ರ ಪ್ರಾರ್ಥನೆ ಮಾಡಿದರೆ ಸಾಕೆಂದು ತೃಪ್ತಿಪಡುವ ಒಬ್ಬ ದೇವರನ್ನು ಇಸ್ಲಾಂ ಅದು ಒಪ್ಪುತ್ತದೆ. ಆತನನ್ನು (ದೇವರನ್ನು) ತಿಳಿದುಕೊಳ್ಳಬೇಕಾದರೆ ಯಾವ ಆಧ್ಯಾತ್ಮ ವಿದ್ಯೆಯ ಆವಶ್ಯಕತೆಯೂ ಇಲ್ಲ. ಮಾತ್ರವಲ್ಲ ಆ ದೇವರು ಅಸಾಧ್ಯವಾದುದೇನನ್ನೂ ತನ್ನ ಭಕ್ತರಿಂದ ಅಪೇಕ್ಷಿಸುವುದಿಲ್ಲ. ಧರ್ಮವೆಂದರೆ ಇದೇ ರೀತಿ ಇರಬೇಕೆಂದು ಸರ್ವಸಾಮಾನ್ಯ ಬ್ರಿಟಿಷನ ಅಭಿಪ್ರಾಯ. ಮನುಷ್ಯನು ಒಂದು ಒಳ್ಳೇ ವಿಧದಲ್ಲಿ ಒಂದು ದಿನದ ಕೆಲಸ ಗ್ರಾಮ್ಯಲೌಕಿಕ ವ್ಯವಹಾರ ಸುಗಮವಾಗಿದರೆ ಅದರಿಂದ ಸಾಧ್ಯವಿದ್ದಷ್ಟು ಹೆಚ್ಚಿನ ಲಾಭವನ್ನು ಪಡೆಯಬಹುದು. ಮತ್ತೆ ಸಾಕಷ್ಟು ಗಳಿಸಿಟ್ಟ ಮೇಲೆ ಶ್ರಮಪಡುವ ಆವಶ್ಯಕತೆಯಿಲ್ಲ, ಆ ಮೇಲೆ ನಿವೃತ್ತಿ ಹೊಂದಿ ಸಂದೋರುವ, ಮಿತಿಯಿರುವ ಯಾವ ಸುಖೋಪಭೋಗವನ್ನಾದರೂ ಅನುಭವಿಸಬಹುದು. ಲೈಂಗಿಕ ವಿಷಯದಲ್ಲಿ ಸ್ತ್ರೀಯರು ಮಾತ್ರ ಕಠಿಣ ತರದ ಪರಿಶುದ್ಧತೆಯನ್ನು ಕಾಪಾಡಿಕೊಂಡರೆ ಸಾಕು. ಪುರುಷರು ಮಾತ್ರ ಅಷ್ಟೊಂದು ಕಠಿಣ ಶಿಸ್ತನ್ನು ಅನುಸರಿಸದಿರಬಹುದು. ಬ್ರಿಟಿಷನಿಗೆ ಇದಕ್ಕಿಂತಲೂ ಅನುಕೂಲವಾದುದು ಬೇರೊಂದಿಲ್ಲ.

ಹೀಗಾಗಿ ಓರ್ವ ಆಂಗ್ಲೇಯನು ಮುಸ್ಲಿಂ ದೇಶದಲ್ಲಿ ಅತ್ಯಂತ ಸಂತೃಪ್ತಿಯನ್ನು ಕಾಣುತ್ತಾನೆ. ಈ ದೇಶಗಳಲ್ಲಿ ವಾಸಿಸುವ ಅನೇಕ ಬ್ರಿಟಿಷ್ ವಲಸಗಾರರು ಪ್ರತ್ಯಕ್ಷವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡುತ್ತಾರೆ. ಆದರೆ ಅವರಿಗೆ ಬೌದ್ಧ ಧರ್ಮವೆಂದರೆ ಒಂದು ತರದ ಭಿನ್ನ ಮನೋಭಾವದ್ದೆಂದೂ, ಜಗತ್ತಿನ ಅತೀ ಸಂತೋಷ ಚಿತ್ತರು (ಚೀನೀಯರು?) ಇದನ್ನು ಅನುಸರಿಸುವುದು ಅತೀ ಕೌತುಕದ ಸಂಗತಿಯೆಂದೂ ಕಾಣುತ್ತದೆ. ಮತ್ತೆ ಹಿಂದೂ ಧರ್ಮವಂತೂ ಸಂಪೂರ್ಣ ಮೃಗೀಯ ಅಶ್ಲೀಲ ಕಲಾರಚನೆಯ ಮೂರ್ತಿ ಪೂಜನೆಯೆಂದೂ ಕ್ರೈಸ್ತ ಧರ್ಮದಂತೆ (ತಾವೆಂದೂ ಅನುಸರಿಸದ) ಇದೂ ಇನ್ನೊಂದು ಲೋಕ ಮತ್ತು ಇನ್ನೊಂದು ಜನ್ಮದ ಕುರಿತು ಬೋಧಿಸುವ ರಹಸ್ಯ ಅದೃಶ್ಯ ಜ್ಞಾನದ ತಿರುಳಿಲ್ಲದ ತರ್ಕವೆಂದೂ ಅವರು ತಿಳಿಯುವರು. ಇದನ್ನನುಸರಿಸಿದರೆ ಸಂತನಾಗಿಯೋ ಸನ್ಯಾಸಿಯಾಗಿಯೋ ತ್ಯಾಗಮೂರ್ತಿಯಾಗುವುದೆಂದವರಿಗೆ ಭಯ. "ಆಪಾದಿಂಬಿಲೆ" ಅವರು "ನಮಗೆ ಎಷ್ಟೆಂತ ಕಾಣುವುದು ಮುಸ್ಲಿಮರನ್ನೇ ಕೊಡಿ" ಎನ್ನುವರು.

ಪಾಕಿಸ್ತಾನದಲ್ಲಿ ಎಣ್ಣೆ ಶೋಧ

ಬ್ರಿಟಿಷರ ಮುಸ್ಲಿಂ ಪರವಾದ ಈ ಸಹಾನುಭೂತಿಗೆ ಭೌಗೋಳಿಕ ಮತ್ತು ಔದ್ಯೋಗಿಕ ಕಾರಣಗಳೂ ಇವೆ. ಇಂಗ್ಲಿಷ್ ಅಧಿಕಾರಿಯೋರ್ವನ ಅಭಿಪ್ರಾಯದಲ್ಲಿ ಹಿಂದೂಗಳು, ಮುಸಲ್ಮಾನರುಗಳು ಮತ್ತು ಪಂಚಮರು (ರಕ್ಷಿಸ್ಸರ) ಅನಾಯಕಾರಕ ವಿಚಾರ ಪರಿಪೂರ್ಣತೆಯುಳ್ಳವರೆಂದಿದೆ. ಇವರನ್ನು ಯಾವಾಗಲೂ ಒಟ್ಟುಗೂಡಿಸಬಾರದೆಂದೇನೂ ಪುಣ್ಯಕ್ಕೆ ಈ ಮೂರು ಜನಾಂಗದ ಜನರಿರುವ ದೇಶಗಳು ಮಧ್ಯಮಧ್ಯದಲ್ಲಿ ಮುಸ್ಲಿಮರು ಕಾಡು ರಾಜ್ಯಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. ಈ ಜನರು ಮಾನವ ಕೋಟಿಯೊಳಗಿನ ಅವಾಂತರಗೇಡಿಗಳೆಂದೂ ಅವರು ತಿಳಕೊಂಡಿದ್ದಾರೆ. ಇನ್ನೊಂದು ಸೌಭಾಗ್ಯವೆಂದರೆ ಈ ಜನರನ್ನು ಪ್ರತ್ಯೇಕಿಸಿದ ಮರುಭೂಮಿ ಪ್ರದೇಶಗಳಲ್ಲಿ ಕೈಗಾರಿಕೆ ಮಾಧ್ಯಮಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಎಣ್ಣೆ ಸಂಪತ್ತಿದೆ. ಆದರೆ ಇದಕ್ಕೊಂದು ತೊಂದರೆ. ಎಲ್ಲಿ ಎಣ್ಣೆಯಿದೆಯೋ ಅಲ್ಲಿ ಅಮೇರಿಕನರಿದ್ದಾರೆ. ಬ್ರಿಟಿಷರಿಗೆ ಇದೊಂದು ದೊಡ್ಡ ಆಭ್ಯಾಂತರ. ಆದುದರಿಂದ ಅವರಿಗೀಗ ಎಣ್ಣೆ ದೊರೆಯಬಹುದಾದ ಪ್ರದೇಶಗಳೆಂದರೆ ಪಾಕಿಸ್ತಾನ ಮತ್ತು ದರೊಳಗಿನ ಬಲೂಚಿಸ್ತಾನಗಳು. ಇಡೀ ಸಾಮ್ರಾಜ್ಯವಿರುವುದಕ್ಕಿಂತ ಎಣ್ಣೆಯಿರುವ ಸಣ್ಣ ದೇಶ ಸಿಕ್ಕಿದರೆ ಸಾಕು!

ಈ ಉಷ್ಣ ಪ್ರದೇಶಗಳಲ್ಲಿರುವ ಮುಸ್ಲಿಮರಿಗಾದರೂ ಶಕ್ತಿವಂತ ರಾಷ್ಟ್ರವಾಗಿರಬೇಕಾದರೆ ಶಸ್ತ್ರಾಸ್ತ್ರಗಳನ್ನು ನಾವೇ ಸರಬರಾಯಿ ಮಾಡಬೇಕು. ಬ್ರಿಟಿಷ್ ಸೈನ್ಯಾಧಿಕಾರಿಗಳ ಕೈಕೆಳಗೆ ಅವರು ಉತ್ತಮ ಯೋಧರೆನಿಸಿಕೊಂಡಿದ್ದಾರೆ. ಯಹೂದಿ, ಹಿಂದೂಗಳಂತೆ ಇವರು ಕ್ರಾಂತಿ ವಿಚಾರ ಪೂರಿತರಲ್ಲವಾದ್ದರಿಂದ ಶಿಸ್ತಿಗೆ ಸುಲಭರು. ಇದಕ್ಕಾಗಿಯೇ ಹೆಚ್ಚಿನ ಬ್ರಿಟಿಷ್ ಅಧಿಕಾರಿಗಳು ಪಾಕಿಸ್ತಾನಕ್ಕೇ ಸೇವೆ ಸಲ್ಲಿಸುವುದಕ್ಕೆ ಒಪ್ಪಿಕೊಂಡರು. ಬ್ರಿಟಿಷರು ಅರಬರಿಗೂ ಪಾಕಿಸ್ತಾನಕ್ಕೂ ತುಂಬಾ ಸಹಾನುಭೂತಿ ತೋರಲೂ ಇದೇ ಕಾರಣ. ಅಮೇರಿಕನ್ನರು ಅಫಗಾನಿಸ್ತಾನ ಮತ್ತು ಪರ್ಶಿಯದಲ್ಲಿ ತಳವೂರಲೂ (ಆ ದೇಶಗಳು ರಶ್ಯದೊಡನೆ ಯುದ್ಧವಾಗುವ ಸಂದರ್ಭದಲ್ಲಿ ಒಳ್ಳೇ ಸಂದುಕಟ್ಟಿನ ಸ್ಥಳಗಳೂ ಆಗಿವೆ) ಇದೇ ಕಾರಣ. ಜಿನ್ನರಿಗೂ ಇಡೀ ಮುಸ್ಲಿಂ ಪ್ರಪಂಚದ ಮುಖಂಡರಾಗಬೇಕೆಂಬ ಮಹತ್ವಾಕಾಂಕ್ಷೆ ಇದೆ. ಈಗ ಪಾಕಿಸ್ತಾನದ ಸೈನ್ಯವನ್ನು ಬಲಪಡಿಸಿದರೆ ತಮ್ಮೊಡನೆ ಹೋರಾಡಿದ ಕಾಂಗ್ರೆಸಿಗ ಒಂದಲ್ಲೊಂದು ದಿವಸ ಬುದ್ಧಿ ಕಲಿಸಬಹುದು, ಅತ್ತ ಎಟ್ಲಿಯವರ ಮಜೂರ ಸರಕಾರದ ಮೇಲೂ ಸೇಡು ತೀರಿಸಿಕೊಳ್ಳಬಹುದು (ಹಿಂದೂಸ್ಥಾನವನ್ನು ಗೆದ್ದು, ಚರ್ಚಿಲ್ ಸರಕಾರವನ್ನು ಸ್ಥಾಪಿಸುವ ಉದ್ದೇಶವೆಂದೂ ಹೇಳಬಹುದು) ಅಂತೂ ಅರಬರು, ಪಾಕಿಸ್ತಾನ ಮತ್ತು ಎಣ್ಣೆ ಎಂಬೀ ಮೂರು ವಿಷಯಗಳು ಒಂದನ್ನೊಂದು ಚಂದವಾಗಿ ಹೊಂದಿಕೊಳ್ಳುವ ವಿಷಯಗಳು.

ತಪ್ಪು ದಾರಿ

ಏನಾದರೂ ಬ್ರಿಟಿಷರ ಎಣಿಕೆಯು ಒಂದು ದಿನ ಕನಸಿಗಂಟಾಗುವುದು. ಇಸ್ಲಾಂ ರಾಜ್ಯಗಳು ಬಹುಕಾಲ ಪಾಶ್ಚಾತ್ಯರ ಕೈಗೊಂಬೆಗಳಾಗಿರುವುವೆಂದು ಹೇಳಬರುವುದಿಲ್ಲ. ಸಂದರ್ಭದ ಅನುಕೂಲತೆಯನ್ನು ಹೊಂದುವ ತನಕ ಬ್ರಿಟಿಷ್ ಅಮೇರಿಕನ್ನರ ತಾಳಕ್ಕವರು ಕುಣಿಯುವರು. ಆದರೆ ಪರಕೀಯ ಶೋಷಣೆಯಿಂದ ಈಗಾಗಲೇ ಬೆಂದು ಬೆಂಡಾದ ಈ ಕಡೆಗಳ ಜನತೆ ತಮ್ಮದೇ ಆದ ಧರ್ಮಪ್ರಧಾನ ರಾಷ್ಟ್ರೀಯತೆಯಿಂದ ದೊಂಬಿಯೆದ್ದು ಕಂಟಕಪ್ರಾಯವಾಗುವುದು. ರಶ್ಯದ ಕೆಂಪು ತತ್ವ ಆದಾಗಲೇ ಈ ಕಡೆಗಳಲ್ಲಿ ಮನೆಮಾಡಿದೆ. ಮುಂದೆ ಈ ದೇಶಗಳ ಜನರು ಬ್ರಿಟಿಷ್ ಅಮೇರಿಕರೆಲ್ಲರನ್ನು ಹೊರ ಅಟ್ಟದಿರರು.

ಕಡಿತ, ಘಾಯ, ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಉರಿಯುವಿಕೆ ನೋವನ್ನು ಕಡಿಮೆ ಮಾಡುತ್ತದೆ



550

ಕುಟಿಕೂರಾ ಮುಲಾಮು
CUTICURA OINTMENT

ಸ್ವದೇಶಾಭಿಮಾನಿ

ತಾರೀಕು 23—4—1948

ತಾಳೆಬೆಲ್ಲ

ತಾಳೆಬೆಲ್ಲದ ಕೈಗಾರಿಕೆಯು ನಮ್ಮ ದೇಶದ ಪ್ರಧಾನ ಗ್ರಾಮೋದ್ಯೋಗಗಳಲ್ಲಿ ಒಂದು. ಈ ಕೈಗಾರಿಕೆಯ ಬಗ್ಗೆ ಭಾರತ ಸರಕಾರಕ್ಕೆ ಮುಖ್ಯ ಎಡ್ವೈಜರ್ ಪದವಿಯಲ್ಲಿರುವ ಅಖಿಲಭಾರತ ಗ್ರಾಮೋದ್ಯೋಗ ಸಂಘದ ಕಾರ್ಯಕರ್ತರಲ್ಲಿ ಒಬ್ಬರಾದ ಶ್ರೀ ಗಜಾನನರಾವ್ ನ್ಯಾಕರೂ ಡಿಪ್ಯೂಟಿ ಎಡ್ವೈಜರರಾದ ಹಾಗೂ ಇವರ ಸಹ ಕಾರ್ಯಕರ್ತರಾದ ಶ್ರೀ ಎಸ್. ವಿ. ಕಾಮತರೂ ಇತ್ತೀಚೆಗೆ ಈ ಜಿಲ್ಲೆಯನ್ನು ಸಂದರ್ಶಿಸಿದರು.

ತಾಳೆಬೆಲ್ಲದ ತಯಾರಿಯಲ್ಲಿ ಖರ್ಚು ಕಡಮೆ ಮಾಡುವ ಮತ್ತು ಉತ್ತಮ ತರದ ಬೆಲ್ಲ ತಯಾರಿಸುವ ಹಲವು ಸುಧಾರಣೆಗಳನ್ನು ಈ ಮಹನೀಯರು ಕಂಡುಹಿಡಿದಿದ್ದಾರೆ. ಈ ಸುಧಾರಿತ ಕ್ರಮಗಳನ್ನು ಗ್ರಾಮಾಂತರಗಳಲ್ಲಿ ಈ ಉದ್ಯೋಗದಲ್ಲಿ ನಿರತರಿರುವವರಿಗೆ ಕಲಿಸಿ ಈ ಕೈಗಾರಿಕೆಯ ಅಭಿವೃದ್ಧಿಯನ್ನು ವ್ಯವಸ್ಥೆಗೊಳಿಸಲು ಬೇಕಾಗುವ ಕೆಲಸಗಾರರನ್ನು ಅವಶ್ಯ ಶಿಕ್ಷಣಕೊಟ್ಟು ತರ್ಬೇತಿಗೊಳಿಸುವ ಎರಡು ಶಿಕ್ಷಣ ಕೇಂದ್ರಗಳನ್ನು ತೆರೆಯಲು ಭಾರತ ಸರಕಾರವು ನಿರ್ಣಯಿಸಿರುತ್ತದೆ. ಇವುಗಳ ಪೈಕಿ ಒಂದು ಕೇಂದ್ರವು ಬಂಗಾಳದಲ್ಲಿ ತೆರೆಯಲಾಗುತ್ತದೆ. ಇನ್ನೊಂದು ಕೇಂದ್ರವನ್ನು ದಕ್ಷಿಣ ಕನ್ನಡದಲ್ಲಿ ತೆರೆಯಲು ಇರುವ ಅನುಕೂಲತೆಗಳನ್ನು ಪರಿಶೀಲಿಸಲು ಇವರೀರ್ವರು ಮಹನೀಯರು ಈ ಜಿಲ್ಲೆಯನ್ನು ಸಂದರ್ಶಿಸಿದ್ದರು.

ತಾಳೆಬೆಲ್ಲ ಸುಧಾರಣಾ ಶಿಕ್ಷಣ ಕೇಂದ್ರವನ್ನು ಪ್ರಾಯಶಃ ನಮ್ಮ ಜಿಲ್ಲೆಯ ಮೂಡಬಿದರೆಯಲ್ಲಿ ತೆರೆಯಬಹುದೆಂಬ ಅಭಿಪ್ರಾಯಕ್ಕೆ ಇವರು ಬಂದಂತೆ ತಿಳಿದುಬರುತ್ತದೆ. ಇದು ಇಡೀ ದಕ್ಷಿಣ ಭಾರತಕ್ಕಾಗಿ ನಡೆಸಲ್ಪಡುವ ಕೇಂದ್ರವಿದ್ದು ಇಲ್ಲಿ ದಕ್ಷಿಣ ಭಾರತದ ಹಲವು ಪ್ರಾಂತ್ಯಗಳ ಕೆಲಸಗಾರರು ಶಿಕ್ಷಣ ಪಡೆಯುವ ಸಂಭವವಿರುತ್ತದೆ.

ಮದ್ಯ ನಿರೋಧದ ಸಂಬಂಧದಲ್ಲಿ ನೇಮಿಸಲ್ಪಟ್ಟಿರುವ ಸ್ಪೆಶ್ಯಲ್ ಡೆವಲಪ್‌ಮೆಂಟ್ ಆಫೀಸರರಾದ ರಾವ್ ಸಾಹೇಬ ಶ್ರೀ ಕೆ. ಸರ್ವೋತ್ತಮರಾಯರಿಂದ ಸೇರಿಸಲ್ಪಟ್ಟ ಇದೇ ಎಪ್ರಿಲ್ ತಾ. ೧೭ಕ್ಕೆ ಜಿಲ್ಲಾಬೋರ್ಡು ಆಫೀಸಿನಲ್ಲಿ ನಡೆದ ಒಂದು ಚಿಕ್ಕ ಸಭೆಯಲ್ಲಿ ಶ್ರೀ ಗಜಾನನ ನ್ಯಾಕರು ತಾಳೆಬೆಲ್ಲ ಕೈಗಾರಿಕೆಯ ಮಹತ್ವವನ್ನು ಬಹಳ ಚೆನ್ನಾಗಿ ವಿವರಿಸಿದರು.

ಮದ್ಯ ನಿರೋಧವು ಜಾರಿಗೆ ಬಂದ ಪ್ರದೇಶಗಳಲ್ಲೆಲ್ಲ ಮುರ್ತೆಯವರು ತಮ್ಮ ಕಸಬನ್ನು ಕಳೆದುಕೊಂಡಿದ್ದಾರೆ. ಇವರಿಗೆ ಈ ಬೆಲ್ಲ ತಯಾರಿಯ ಕಸಬು ಒದಗಿಸುವುದು ಬಹಳ ಅನುಕೂಲವೆಂಬುದರಿಂದ ನಮ್ಮ ಜಿಲ್ಲೆಯಲ್ಲಿ ಇಂಥ ಬೆಲ್ಲ ತಯಾರಿಸುವವರ ಹಲವು ಸಹಕಾರೀ ಸಂಘಗಳನ್ನು ಈಗಾಗಲೇ ತೆರೆಯಲಾಗಿದೆ. ಈ ಸಂಘಗಳ ಸದಸ್ಯರಾಗುವವರಿಗೆ ಬೆಲ್ಲ ತಯಾರಿಯ ಬಗ್ಗೆ ಮುರ್ತೆ ಮಾಡಲು ಲ್ಯಾಸೆನ್ಸುಗಳನ್ನು ಕೊಡಲಾಗುತ್ತದೆ. ಉದ್ಯೋಗ ಕಳೆದುಕೊಂಡ ಮುರ್ತೆಯವರಿಗೆ ಉದ್ಯೋಗ ಕೊಡುತ್ತದೆಂಬ ದೃಷ್ಟಿಯಿಂದ ಈ ಕೈಗಾರಿಕೆಗೆ ಇರುವ ಮಹತ್ವ ವಿವರಿಸಬೇಕಾದ ಆಗತ್ಯವಿಲ್ಲ.

ಆಹಾರ ಪ್ರಶ್ನೆಯ ದೃಷ್ಟಿಯಿಂದ ಕೂಡಾ ಈ ಕೈಗಾರಿಕೆಗೆ ವಿಶೇಷ ಮಹತ್ವವಿರುತ್ತದೆ. ಈಗ ನಮಗೆ ಬೇಕಾಗುವ ಸಕ್ಕರೆ ಹಾಗೂ ಬೆಲ್ಲ ಒದಗಿಸಲಿಕ್ಕೆ ಭಾರತದಲ್ಲಿ ಸುಮಾರು ೪೦ ಲಕ್ಷ ಎಕರೆ ಸಾಗು ಭೂಮಿಯಲ್ಲಿ ಕಬ್ಬನ್ನು ಬೆಳೆಸಲಾಗುತ್ತಿದೆ. ದೇಶಕ್ಕೆ ಬೇಕಾಗುವ ಎಲ್ಲ ಸಕ್ಕರೆ ಹಾಗೂ ಬೆಲ್ಲವನ್ನು ಈ ತಾಳೆ ಮತ್ತು ತೆಂಗುಗಳಿಂದಲೇ ಒದಗಿಸಲಿಕ್ಕೆ ಸಾಧ್ಯವಿರುತ್ತದೆ. ಅಂದರೆ ಹೀಗೆ ಸಾಧಿಸಿದರೆ ಅಷ್ಟು ಎಕರೆ ಭೂಮಿಯಲ್ಲಿಯೂ ಕಬ್ಬಿನ ಬದಲು ಅಕ್ಕಿ ಗೋದಿ ವಗೈರೆ ಆಹಾರ ಧಾನ್ಯಗಳನ್ನು ಒದಗಿಸಬಹುದು. ಈಗ ನಮ್ಮ ದೇಶದಲ್ಲಿ ಬೆಳೆಯುವ ಆಹಾರ ಧಾನ್ಯಗಳು ನಮಗೆ ಸಾಕಾಗದೆ ಪರಊರುಗಳಿಂದ ಆಮದು ಮಾಡದೆ ನಿವೃತ್ತಿ ಇಲ್ಲದ ಪರಿಸ್ಥಿತಿ ಇರುವುದನ್ನು ಜ್ಞಾಪಿಸಿಕೊಂಡರೆ ಈ ದೃಷ್ಟಿಯಿಂದ ಈ ಕೈಗಾರಿಕೆಗೆ ಎಂಥ ಮಹತ್ವವಿದೆಯೆಂಬುದು ಗೊತ್ತಾಗುತ್ತದೆ. ತೆಂಗು ತಾಳೆಗಳಿಗೆ ಅಂಥ ಕೃಷಿ ಭೂಮಿಯ ಆವಶ್ಯಕತೆ ಇಲ್ಲ. ಇವು ಗದ್ದೆಗಳ ಅಂಚುಗಳಲ್ಲಿಯೂ ಬೆಟ್ಟು ಸ್ಥಳಗಳಲ್ಲಿಯೂ ಬೆಳೆಯುತ್ತವೆಂಬುದು ಸರ್ವವಿದಿತವಿರುತ್ತದೆ. ಮಾತ್ರವಲ್ಲ ದೇಶದ ಕೆಲವೆಡೆಗಳಲ್ಲಿ ತಾಳೆಮರಗಳ ತೋಟಗಳಲ್ಲಿ ನಡುವೆ ಆಹಾರ ಧಾನ್ಯಗಳನ್ನು ಬೆಳೆಸುವ ರೂಢಿ ಇದೆಯೆಂದೂ ತಿಳಿದುಬರುತ್ತದೆ.

ನಮ್ಮ ದೇಶದ ಭಾವೀ ಸ್ವಾತಂತ್ರ್ಯ ಹಾಗೂ ಸಂಪದಭಿವೃದ್ಧಿಗಳಿಗೆ ನಮ್ಮಲ್ಲಿಯ ಗ್ರಾಮಗಳು ಅನ್ನ ಬಟ್ಟೆ ಮೊದಲಾದ ಅತ್ಯಾವಶ್ಯಕ ಮಾಲುಗಳ ಮಟ್ಟಿಗಾದರೂ ಸ್ವಾವಲಂಬಿಯಾಗಿರುವುದು ಎಷ್ಟು ಅಗತ್ಯವೆಂಬುದನ್ನು ನಾವು ಹಲವು ಬಾರಿ ವಿವರಿಸಿದ್ದೇವೆ. ಈ ದೃಷ್ಟಿಯಿಂದ ಪರಿಶೀಲಿಸಿದರೂ ಈ ತಾಳೆಬೆಲ್ಲ ತಯಾರಿಯ ಉದ್ಯೋಗಕ್ಕೆ ಹೆಚ್ಚಿನ ಮಹತ್ವವಿರುತ್ತದೆ. ಬೆಲ್ಲ ಅಥವಾ ಸಕ್ಕರೆ ನಮ್ಮ ಜನರ ಆವಶ್ಯಕ ಆಹಾರ ಪದಾರ್ಥಗಳಲ್ಲಿ ಒಂದು. ಇದನ್ನು ಕಬ್ಬಿನಿಂದಲೇ ತಯಾರಿಸುವುದಿದ್ದರೆ ಈ ಮಟ್ಟಿಗೆ ಭಾರತದ ಎಲ್ಲ ಹಳ್ಳಿಗಳೂ ಸ್ವಾವಲಂಬಿಯಾಗುವುದು ಸಾಧ್ಯವಿಲ್ಲ. ಸಕ್ಕರೆ ಗಿರಣಿ ಕೈಗಾರಿಕೆಯೆಂಬುದರಿಂದ ಅದಕ್ಕಾಗಿ ದೊಡ್ಡ ಕಾರ್ಖಾನೆಗಳ ಮುಖ ನೋಡಿರಬೇಕಾಗುತ್ತದೆಂಬ ಅಂಶ ಸ್ಪಷ್ಟವಾದದ್ದು. ಕಬ್ಬಿನ ಪೈರು ನಮ್ಮ ದೇಶದ ಎಲ್ಲ ಗ್ರಾಮಗಳಲ್ಲಿಯ ಬೆಳೆಸಬಹುದಾದ ಪೈರಲ್ಲವೆಂಬುದನ್ನು ತಿಳಿದರೆ ಬೆಲ್ಲದ ದೃಷ್ಟಿಯಿಂದ ಕೂಡಾ ಸಾವಿರಾರು ಹಳ್ಳಿಗಳು ಇತರರ ಮೋರೆ ನೋಡಬೇಕಾಗುತ್ತದೆ. ತಾಳೆ ಮರಗಳಾದರೋ ಅಖಿಲಭಾರತದಲ್ಲಿ ಯಾವ ಗ್ರಾಮಗಳಲ್ಲಾದರೂ ಬೆಳೆಸಲು ತೊಂದರೆ ಇಲ್ಲ.

ಕೇವಲ ಆಹಾರದ ಪೌಷ್ಟಿಕತೆಯ ದೃಷ್ಟಿಯಿಂದ ಕೂಡಾ ಈ ತಾಳೆ ಬೆಲ್ಲವು ಅತ್ಯುತ್ತಮ ಆಹಾರ ಪದಾರ್ಥವೆಂದು ತಜ್ಞರ ಅಭಿಪ್ರಾಯವಿರುತ್ತದೆ. ತೆಂಗು ತಾಳೆಗಳಿಂದ ಮುರ್ತೆ ಮಾಡಿ ತೆಗೆಯುವ ಸವಿರಸವಾದ 'ನೀರಾ' ಎಂಬ ಪಾನೀಯವು ಆರೋಗ್ಯವನ್ನು ಬಹಳ ಮಟ್ಟಿಗೆ ಸುಧಾರಿಸುತ್ತದೆಂದು ತಿಳಿದು ಬರುತ್ತದೆ. ಇದರಿಂದಲೇ ಈ ಬೆಲ್ಲ ತಯಾರಾಗುತ್ತದೆ.

ಮದ್ಯನಿರೋಧ ಖಾತೆಯ ಅಧಿಕಾರಿಗಳೂ ಈ ಚಳವಳದಲ್ಲಿ ವಿಶೇಷ ಉತ್ಸಾಹದಿಂದ ಕೆಲಸಮಾಡುವ ಕೆಲವು ಮಂದಿ ಕಾಂಗ್ರೆಸಿಗರೂ ಈ ಕೈಗಾರಿಕೆಯನ್ನು ವಿಸ್ತೃತಪ್ರಮಾಣದಿಂದ ಬೆಳೆಸಲು ಸ್ವಲ್ಪ ಮಟ್ಟಿಗೆ ಹಿಂಜರಿಯುತ್ತಾರೆ. ಏಕೆಂದರೆ ಬೆಲ್ಲಕ್ಕಾಗಿ ಮುರ್ತೆಮಾಡಲು ವಿಸ್ತೃತ ಪ್ರಮಾಣದಲ್ಲಿ ಬಿಟ್ಟರೆ ಮುರ್ತೆ ಮಾಡಿದವರು ಮದ್ಯ ತಯಾರಿಸಿ ಈ ಅನುಕೂಲತೆಯನ್ನು ದುರುಪಯೋಗಪಡಿಸಿದರೆ ಮದ್ಯ ನಿರೋಧ ಕಾರ್ಯಕ್ರಮವೇ ಕೆಟ್ಟುಹೋದೀತೆಂಬುದು ಇವರಿಗೆ ಅಂಜಿಕೆಯನ್ನುಂಟುಮಾಡುತ್ತದೆ. ಒಂದು ಕೆಲಸದಲ್ಲಿ ಅಪಾಯದ ಸಂಭವವಿದೆಯೆಂಬುದರಿಂದ ಆ ಕೆಲಸವನ್ನೇ ಬಿಟ್ಟುಬಿಡುವುದು ಜಾಣತನವಲ್ಲ. ಬೆಂಕಿಯಿಂದ ಅನಾಹುತಗಳಾಗುತ್ತವೆಂದು ಬೆಂಕಿಮಾಡದೆ ಕುಳಿತುಕೊಳ್ಳುವರೆ? ರಸ್ತೆಯಲ್ಲಿ ನಡೆಯುವಾಗ ಮೋಟಾರ್ ಅಪಘಾತಗಳಾಗುವ ಸಂಭವವಿದೆಯೆಂದು ರಸ್ತೆಗಳಲ್ಲಿ ನಡೆಯುವುದನ್ನೇ ಬಿಡುತ್ತಾರೆಯೆ? ಮದ್ಯ ತಯಾರಿಸಬಹುದೆಂಬ ಅಂಜಿಕೆಯಿಂದ ಬೆಲ್ಲ ತಯಾರಿಯ ಕಾರ್ಯಕ್ರಮವನ್ನೇ ನಿಲ್ಲಿಸಿದರೆ ಅಷ್ಟೆ ಮೂರ್ಖತನವಾದೀತೆಂದು ಶ್ರೀ ಗಜಾನನನ್ಯಾಕರು ಹೇಳಿದ ಮಾತು ಸತ್ಯವಿರುತ್ತದೆ.

ಇನ್ನು ದೇಶದಲ್ಲಿ ಮೇಲ್ಪರಗತಿಯವರೆನ್ನಿಸುವ ಕೆಲವು ಸಂಪ್ರದಾಯಪ್ರಿಯರು ಈ ತಾಳೆಬೆಲ್ಲ ನಿಷಿದ್ಧ ಪದಾರ್ಥಗಳಲ್ಲಿ ಒಂದೆಂದು ಭಾವಿಸುತ್ತಾರೆ. ಈ ಬೆಲ್ಲವು ಮದ್ಯದಿಂದ ತಯಾರಾಗುತ್ತಿದೆಯೆಂಬ ತಪ್ಪು ಅಭಿಪ್ರಾಯ ವಿಭಾವನೆಯ ಮೂಲವೆನ್ನಬಹುದು. ಈ ಬೆಲ್ಲ ತಯಾರಿಸುವ ತಾಳೆಯ ಸವಿರಸವು ಮದ್ಯವೆಂದಿಗೂ ಅಲ್ಲವೆಂಬುದನ್ನು ಇವರಿಗೆ ತಿಳಿಯಹೇಳಿ ಇವರ ಅಭಿಪ್ರಾಯಗಳನ್ನು ತಿದ್ದಬೇಕಾಗಿದೆ. ಸುಧಾರಿತ ಕ್ರಮಗಳಿಂದ ತಯಾರಿಸಿದರೆ ಈ ಬೆಲ್ಲದ ಸ್ವರೂಪವನ್ನು ಬಹಳ ಉತ್ತಮಗೊಳಿಸಬಹುದು ಮಾತ್ರವಲ್ಲ ಅಗತ್ಯವಿದ್ದರೆ ಇದರಿಂದ ಸಕ್ಕರೆ ಕೂಡ ತಯಾರಿಸಲು ಬರುತ್ತದೆ.

ಶ್ರೀ ಗಜಾನನನ್ಯಾಕರು ಈ ರೀತಿ ವಿವರಿಸಿದ ಬಳಿಕ ಆ ಸಭೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಈ ಬೆಲ್ಲ ತಯಾರಿಯ ಬಗ್ಗೆ ಸ್ಥಾಪಿತವಾದ ಸಹಕಾರೀ ಸಂಘಗಳ ಪ್ರಶ್ನೆಯನ್ನು ಚರ್ಚಿಸಲಾಯಿತು. ಇದರ ಸದಸ್ಯರು ತಾವು ತಯಾರಿಸಿದ ಬೆಲ್ಲವನ್ನು ಸಂಘಕ್ಕೇನೇ ಮಾರದಿದ್ದರೆ ಸಂಘಗಳು ಅಭಿವೃದ್ಧಿಗೆ ಬರುವಂತಿಲ್ಲವಾಗಿ ಹೀಗೆ ಅವರು ಸಂಘಕ್ಕೇನೆ ಕೊಡುವಂತೆ ಒತ್ತಾಯ ಕಾನೂನುಬೇಕೆಂದು ಹಲವರು ವಾದಿಸಿದರು. ಈ ಕಾರ್ಯವನ್ನು ಬೆಲ್ಲ ತಯಾರಿಸುವವರಿಗೆ ತಿಳಿಯಹೇಳಿ ಜನಜಾಗೃತಿಯಿಂದಲೇ ಸಾಧಿಸಬೇಕಲ್ಲದೆ ಇಂಥ ಪ್ರತಿಯೊಂದು ವಿಷಯಕ್ಕೂ ಸರಕಾರೀ ಕಾನೂನು ಮತ್ತು ನಿಯಂತ್ರಣಗಳನ್ನು ಅಪೇಕ್ಷಿಸುವುದು ಸ್ವತಂತ್ರ ಭಾರತದ ಪ್ರಜೆಗಳಿಗೆ ಒಪ್ಪುವುದಿಲ್ಲವೆಂಬುದನ್ನು ಶ್ರೀ ಗಜಾನನ ನ್ಯಾಕರು ಸ್ಪಷ್ಟಪಡಿಸಿದರು. ಇವರ ಈ ಅಭಿಪ್ರಾಯವೂ ಸತ್ಯವಿರುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಟೀಕೆ-ಟಿಪ್ಪಣಿಗಳು

ಇಟೆಲಿಯಲ್ಲಿಯ ಚುನಾವಣೆಗಳು

ಇಟೆಲಿಯಲ್ಲಿ ಈ ಬಾರಿ ನಡೆದ ಚುನಾವಣೆಗಳಲ್ಲಿ ಬಹಳ ಸ್ಪರ್ಧೆ ಇದ್ದಿತು. ಕ್ರಿಶ್ಚಿಯನ್ ಡೆಮೊಕ್ರೆಟಿಕ್ ಪಕ್ಷ ಮತ್ತು ಕಮ್ಯೂನಿಸ್ಟ್ ಮೊದಲಾದ ಜನತೆಯ ಕಡೆಯವೆನ್ನಿಸುವ ಪಕ್ಷಗಳೊಳಗೆ ನಡೆದ ಈ ಸ್ಪರ್ಧೆಯೂ ಕೇವಲ ಆ ದೇಶದ ಆಡಳಿತೆಯ ಪ್ರಶ್ನೆ ಮಾತ್ರವಿರದೆ ಇಟೆಲಿಯು ಮುಂದೆ ಅಮೇರಿಕದ ಪಕ್ಷ ಕಟ್ಟಿಕೊಳ್ಳುವುದೊ ಅಥವಾ ರಶ್ಯದ ಪಕ್ಷ ಕಟ್ಟಿಕೊಳ್ಳುವುದೊ ಎಂಬುದು ಈ ಚುನಾವಣೆಗಳಿಂದ ನಿರ್ಣಯಿಸಲ್ಪಡತಕ್ಕ ಪ್ರಶ್ನೆ ಇದ್ದಿತು.

ಕಮ್ಯೂನಿಸ್ಟ್ ಮೊದಲಾದ ಪಂಗಡಗಳು ಚುನಾವಣೆಯಲ್ಲಿ ಗೆಲ್ಲುವ ಸಂಭವವಿಲ್ಲದ್ದನ್ನು ಕಂಡು ಬಲಾತ್ಕಾರದಿಂದ ಆಡಳಿತೆಯನ್ನು ಸ್ವಾಧೀನಪಡಿಸಿಕೊಳ್ಳಬಹುದೆಂಬ ಹೆದರಿಕೆ ಇದ್ದುದರಿಂದ ಇದಕ್ಕೆ ತಡೆಹಾಕಲು ಅಲ್ಲಲ್ಲಿ ಸೈನ್ಯಸನ್ನಾಹವೂ ಸಿದ್ಧವಿದ್ದಿತು.

ಅಂತೂ ಇದನ್ನು ಬರೆವಾಗ ಬಂದ ವಾರ್ತೆಗಳಂತೆ ಯಾವ ಗಲಾಟೆಯೂ ಇಲ್ಲದೆ ಚುನಾವಣೆಗಳು ತೀರಿವೆಯೆಂದೂ ಕ್ರಿಶ್ಚಿಯನ್ ಡೆಮೊಕ್ರೆಟಿಕ್ ಪಂಗಡಕ್ಕೇನೆ ಹೆಚ್ಚಿ ಸಂಖ್ಯಾಕರು ಆರಿಸಲ್ಪಟ್ಟಿರುವರೆಂದೂ ತಿಳಿದುಬರುತ್ತದೆ.

ಅಮೇರಿಕೆ, ಬ್ರಿಟನು ಮತ್ತು ಫ್ರಾನ್ಸುಗಳು ಈ ಚುನಾವಣೆಯಲ್ಲಿ ತಮ್ಮ ಬಲಾತ್ಕಾರ ಪ್ರದರ್ಶನ ಮಾಡಿವೆಯೆಂದು ರಶ್ಯವು ಈಗಾಗಲೇ ಮೊರಲಿಕ್ಕೆ ಆರಂಭಮಾಡಿರುತ್ತದೆ. ಅಂತೂ ಸದ್ಯಕ್ಕೆ ಇಟೆಲಿಯು ರಶ್ಯನ್ ಪಂಗಡಕ್ಕೆ ಸಿಕ್ಕಲಿಲ್ಲವೆಂದು ಕಾಣುತ್ತದೆ.

ನಮ್ಮ ಪ್ರಜಾಸತ್ತೆಯ ಅನಾವರಣ

ಮದ್ರಾಸು ಪ್ರಾಂತದ ಮುಖ್ಯಮಂತ್ರಿ ಮಾನ್ಯ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರರ ಭಾವ ಚಿತ್ರವೊಂದನ್ನು ಅನಾವರಣ ಮಾಡುತ್ತ ಶ್ರೀ ಸಿ. ಆರ್. ರೆಡ್ಡಿಯವರು ಮೊದಲಾಗಿ ನಮ್ಮಲ್ಲಿ ಈಗ ಪ್ರಚಾರದಲ್ಲಿರುವ ಪ್ರಜಾಸತ್ತೆಯ ಅನಾವರಣ ಮಾಡುವೆನೆಂದು ಹೇಳಿ ಪ್ರಜಾಸತ್ತೆಯ ಕುರಿತು ಕೆಲವು ಮನನೀಯ ಅಭಿಪ್ರಾಯಗಳನ್ನು ಮುಂದಿಟ್ಟರು.

ಒಂದು ರಾಜಕೀಯ ಪಕ್ಷದವರು ಒಬ್ಬರನ್ನು ತಮ್ಮ ಮುಂದಾಳುವೆಂದು ಆರಿಸಿದರೆ

ಮುಂದೆ ಈ ಮುಂದಾಳು ಪಕ್ಷದ ಧೋರಣೆಗನುಸರಿಸಿ ಸಂದರ್ಭೋಚಿತ ಕಾರ್ಯಕ್ರಮಗಳನ್ನು ಸ್ವತಂತ್ರವಾಗಿ ರೂಪಿಸಲು ಅಧಿಕಾರವುಳ್ಳವನಾಗುತ್ತಾನೆ. ಪ್ರತಿಯೊಂದು ಸಂದರ್ಭದಲ್ಲಿ ತನ್ನ ಪಕ್ಷದವರೊಡನೆ ವಿಚಾರಿಸಿಯೇ ಇವನು ವರ್ತಿಸತಕ್ಕದ್ದೆಂಬ ಅಭಿಪ್ರಾಯ ಸರಿಯಲ್ಲ ಇವನು ರೂಪಿಸುವ ಕಾರ್ಯಕ್ರಮ ತಮಗೆ ಸರಿಬಾರದಿದ್ದಲ್ಲಿ ಹೊಸ ಮುಂದಾಳುವನ್ನು ಆರಿಸಿಕೊಳ್ಳುವುದೇ ನಿಜವಾದ ಕ್ರಮ.

ಇಂಥ ಪಕ್ಷವು ಶಾಸನಸಭೆಯಲ್ಲಿ ಬಹುಮತದಲ್ಲಿದ್ದಾಗ ಈತನು ಮುಖ್ಯ ಮಂತ್ರಿಯಾಗುತ್ತಾನೆ. ಮುಖ್ಯ ಮಂತ್ರಿಯೆಂದರೆ ಮಂತ್ರಿಮಂಡಲದ ಅಧ್ಯಕ್ಷ ಮಾತ್ರನೆಂಬ ಅಭಿಪ್ರಾಯ ತಪ್ಪು ಇತರ ಮಂತ್ರಿಗಳನ್ನು ನೇಮಿಸುವುದು ಅವರಿಗೆ ಬೇಕಾದ ಕೆಲಸ ಹಂಚಿಕೊಡುವುದು, ಬೇಡದ ಮಂತ್ರಿಯನ್ನು ತೆಗೆಯುವುದು ಇತ್ಯಾದಿ ಮುಖ್ಯ ಮಂತ್ರಿಯ ಸ್ವತಂತ್ರ ಅಧಿಕಾರವಿರುತ್ತದೆ ಮಂತ್ರಿಮಂಡಲದ ಪೂರ್ಣ ಜವಾಬ್ದಾರಿ ಮುಖ್ಯ ಮಂತ್ರಿಯದ್ದೇ ಇರುತ್ತದೆ ಮಂತ್ರಿಮಂಡಲದ ಸಭೆ ಸೇರಿಸಿ ಬಹುಮತವಿದ್ದಂತೆ ಮುಖ್ಯ ಮಂತ್ರಿ ವರ್ತಿಸಬೇಕೆಂಬ ಅಭಿಪ್ರಾಯ ಸರಿಯಲ್ಲ ಮುಖ್ಯಮಂತ್ರಿಯ ಅಭಿಪ್ರಾಯದಂತೆ ಇತರ ಮಂತ್ರಿಗಳೆಲ್ಲ ವರ್ತಿಸಬೇಕೆಂಬುದೇ ಸರಿಯಾದ ದಾರಿ ಮಂತ್ರಿಮಂಡಲದ ಅಭಿಪ್ರಾಯವನ್ನು ತಾನು ಮಾಡುವ ತೀರ್ಮಾನಕ್ಕೆ ಸಹಕಾರಿಯಾಗುವಂತೆ ಮಾತ್ರ ಆತನು ವಿಚಾರಿಸುವುದು ಸರಿಯಾದ ಪದ್ಧತಿ

ಶಾಸನಸಭೆಯ ಸದಸ್ಯರನ್ನು ಅವರಿಗೆ ಬೇಕಾದಾಗವೆಲ್ಲ ಮುಖ್ಯ ಮಂತ್ರಿಯು ಮಾತುಕತೆ ಬೆಳೆಸಬೇಕೆಂಬ ಪ್ರಚಲಿತ ಅಭಿಪ್ರಾಯ ಹಾಸ್ಯಾಸ್ಪದವಿರುತ್ತದೆ ಮಾತ್ರವಲ್ಲ ಈ ಸದಸ್ಯರಿಗೆ ವ್ಯಕ್ತಿಗತವಾಗಿ ಸಭೆಗೆ ಇರುವ ಅಧಿಕಾರಗಳಿಲ್ಲವೆಂಬುದನ್ನು ಇವರು ತಿಳಿದುಕೊಳ್ಳಬೇಕು ಶಾಸನಸಭೆಯ ಸದಸ್ಯರು ಆಡಳಿತದ ವಿಚಾರಗಳಲ್ಲಿ ಕೈಹಾಕಲು ಯಾವ ನ್ಯಾಯವೂ ಇಲ್ಲ

ನಮ್ಮ ಮಂತ್ರಿಗಳು ಆಗಿಂದಾಗ ಪ್ರಾಂತ್ಯದಲ್ಲಿ ಬೆಳೆಸುವ ಪ್ರವಾಸಗಳಿಗೆ ಅರ್ಥವೇ ಇಲ್ಲ ಮಾತ್ರವಲ್ಲ ಇವುಗಳಿಂದ ಯಾವ ಪ್ರಯೋಜನವೂ ಆಗತ್ತ ಇಲ್ಲ

ಶ್ರೀ ಸಿ ಆರ್ ರೆಡ್ಡಿಯವರು ಪ್ರಜಾಸತ್ತೆಯ ತೌರೂರೆನ್ನಿಸುವ ಬ್ರಿಟನ್ನಲ್ಲಿ ನಡೆಯುವ ಕ್ರಮಗಳನ್ನು ಎತ್ತಿ ತೋರಿಸಿ ತಮ್ಮ ಈ ಅಭಿಪ್ರಾಯಗಳನ್ನು ಸಮರ್ಥಿಸಿರುತ್ತಾರೆ

ಇವರ ಈ ಅಭಿಪ್ರಾಯಗಳೆಲ್ಲ ಸರಿ ಇದ್ದು ಇವನ್ನು ನಮ್ಮ ಮಂತ್ರಿಗಳೂ ಶಾಸನಸಭಾ ಸದಸ್ಯರೂ ಕಾಂಗ್ರೆಸ್ ಪಕ್ಷದವರೂ ಮನಸ್ಸಿಗೆ ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

ಭದ್ರತಾ ಸಮಿತಿಯಲ್ಲಿ
ಪುನಃ ಕಾಶ್ಮೀರದ ಪ್ರಶ್ನೆ

ಕಾಶ್ಮೀರ ಪ್ರಶ್ನೆಯ ತೀರ್ಮಾನಕ್ಕೆಂದು ಪುನಃ ಭದ್ರತಾ ಸಮಿತಿಯಲ್ಲಿ ಹೊಸತೊಂದು ನಿರ್ಣಯವು ಮುಂದಿಡಲ್ಪಡುತ್ತಿದೆ ಈ ಬಾರಿಯ ನಿರ್ಣಯಕ್ಕೆ ಯಾವ ಅರ್ಥವೂ ಇಲ್ಲ ಜನಮತ ಸಂಗ್ರಹವು ನಿಷ್ಪಕ್ಷವಾಗಿ ನಡೆಯುತ್ತ ಶೇಕ್ ಅಬ್ದುಲ್ಲಾ ಸರಕಾರದ ಅಧಿಕಾರ ಬದಲಾಯಿಸುವುದು ಅಗತ್ಯವೆಂಬ ಅಭಿಪ್ರಾಯ ಪುನಃ ಮುಂದೆ ತರಲಾಗಿದೆ ಮಾತ್ರವಲ್ಲ ಆ ಸಮಯದಲ್ಲಿ ಭಾರತದ ಸೈನ್ಯಗಳನ್ನು ಅಲ್ಲಿ ಇರಗೊಡಿಸಬಹುದೆಂದು ಒಪ್ಪಿಕೊಂಡಂತೆ ಪಾಕಿಸ್ಥಾನದ ಸೈನ್ಯಗಳನ್ನು ಇರಿಸಬಹುದೆಂದು ಸೂಚಿಸಲಾಗಿದೆ ಪಾಕಿಸ್ಥಾನದ ವರ್ತನೆಯ ಕುರಿತು ಭಾರತ ಸರಕಾರವು ದೂರು ಕೊಟ್ಟಿತ್ತೆಂಬುದರ ವಿಚಾರಣೆ ಅವರ ಮುಂದಿರುವ ವಿಷಯವೆಂಬುದನ್ನೇ ಈ ಸಮಿತಿಯವರು ಮರೆತುಬಿಟ್ಟು ಕೇವಲ ಅಧಿಕ ಪ್ರಸಂಗವನ್ನೇ ಕಟ್ಟಿಕೊಂಡಿರುವರೆಂಬುದು ಸ್ಪಷ್ಟ

ಈ ಬಗೆಯ ನಿರ್ಣಯಕ್ಕೆ ಭಾರತ ಸರಕಾರವು ಎಂದೂ ಸಮ್ಮತಿಸುವಂತಿಲ್ಲವೆಂದು ಪ್ರತ್ಯೇಕ ಹೇಳುವ ಅಗತ್ಯವಿರುವುದಿಲ್ಲ

ಸುರತ್ಕಲ್ಲ ಮಾರಿಗುಡಿಗಳಲ್ಲಿ ಪ್ರಾಣಿಬಲಿ ನಿಷೇಧ ಚಳವಳ

ನಮ್ಮ ಜಿಲ್ಲೆಯ ಮಾರಿಗುಡಿಗಳಲ್ಲಿ ನಡೆಯುವ ಕೋಳಿ, ಕುರಿ, ಕೋಣ ಮೊದಲಾದ ಪ್ರಾಣಿಗಳ ಬಲಿಕೊಡುವ ಪದ್ಧತಿಯನ್ನು ನಿಲ್ಲಿಸಬೇಕೆಂಬ ಚಳವಳವು ಇದೀಗ ಹೊಸತಾಗಿ ಆರಂಭವಾದುದಲ್ಲ ಅನೇಕ ವರ್ಷಗಳಿಂದ ಇಂಥ ಪ್ರಚಾರವು ಅಲ್ಲಲ್ಲಿ ನಡೆಯುತ್ತಲೇ ಇದ್ದಿತು

ಈ ಬಾರಿ ಸುರತ್ಕಲ್ಲಿನಲ್ಲಿ ಇದು ವಿಶೇಷ ಸ್ವರೂಪವನ್ನು ತಾಳಿರುತ್ತದೆ ಈ ಬಾರಿ ಕೆಲವು ಸಮಯದ ಹಿಂದೆ ಪೂಜೆಗೆ ದಿನ ಇಟ್ಟಾಗ ಇಲ್ಲಿ ಪ್ರಾಣಿಬಲಿ ನಿಷೇಧ ಚಳವಳಿಯನ್ನು ನಮ್ಮಲ್ಲಿಯ ಕೆಲವು ಮಂದಿ ಕಾಂಗ್ರೆಸು ಮುಂದಾಳುಗಳು ಪ್ರಬಲವಾಗಿ ನಡೆಸಿ ಈ ಕುರಿತು ಬಲವಾದ ವಿರುದ್ಧ ಪಕ್ಷವೊಂದು ಸ್ಥಾಪಿಸಲ್ಪಡುವ [illegible] ಪ್ರಾಣಿಬಲಿ [illegible] ಈ ಪಕ್ಷವು ಇಷ್ಟು ಪ್ರಬಲವಿರುವಾಗ ಇದನ್ನು [illegible] ಹೊರಟರೆ ಗಲಾಟೆಯಾಗಿ ಶಾಂತಿಭಂಗವಾಗುವ ಸಂಭವಕಂಡು ಮಂಗಳೂರಿನ ಸ್ಟೇಶನರಿ ಸಬ್ ಮೆಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ್ ಕೋಡಿನ 144ನೇ ಸೆಕ್ಷನನ್ವಯ ಒಂದು ನಿರ್ದಿಷ್ಟ ಅವಧಿಯ ತನಕ ಪ್ರಾಣಿಬಲಿ ಒಪ್ಪಿಸಬಾರದೆಂದು ಈ ಮಾರಿಗುಡಿಗಳ ಮೊಕ್ತೇಸರರ ಮೇಲೆ ಆಜ್ಞೆಯೊಂದನ್ನು ಜಾರಿಮಾಡಿದರು ಆ ಬಾರಿ ಪೂಜೆ ನಿಲ್ಲಿಸಲ್ಪಟ್ಟಿತು

ಮುಂದೆ ಈ ಮೊಕ್ತೇಸರರು ಸಿವಿಲ್ ಕೋರ್ಟಿಗೆ ಹೋಗಿ [illegible] ಬಲಿ ಕೊಡುವ ತಮ್ಮ ಹಕ್ಕು ಸ್ಥಾಪಿಸಲು ವ್ಯಾಜ್ಯಹೂಡಿ ಇದಕ್ಕೆ ಯಾರೂ ಅಡ್ಡಿಮಾಡದಂತೆ ವ್ಯಾಜ್ಯ ತೀರ್ಮಾನದ ತನಕ ಇಂಜಂಕ್ಷನ್ ಕೊಡಬೇಕೆಂದು ಬೇಡಿದರು ಕೋರ್ಟಿನವರು ಈ ರೀತಿ ಇಂಜಂಕ್ಷನ್ ಆಜ್ಞೆ ಕೊಟ್ಟರು ಮಾರಿಗುಡಿಯವರು ಇದರ ಬಲದ ಮೇಲೆ ಪುನಃ ಪೂಜೆಗೆ ದಿನವಿಟ್ಟರು

ವಿರುದ್ಧಪಕ್ಷದವರು ಈ ಬಾರಿ ಪ್ರಾಣಿಬಲಿ ನಡೆಯದಂತೆ ಸಾಧಿಸಲು ಸತ್ಯಾಗ್ರಹವನ್ನೇ ಕೈಕೊಳ್ಳಲು ಸಿದ್ಧತೆ ನಡೆಸಿದರೆಂದು ಕೇಳಿಬರುತ್ತದೆ ಅಲ್ಲಿಯ ಜನತೆಯಲ್ಲಿ ಇದೆಲ್ಲದರಿಂದ ಈ ಕುರಿತು ತೀವ್ರಭಾವನೆಗಳು ಉಂಟಾದರೆ ಆಶ್ಚರ್ಯವಿಲ್ಲ ಈ ಪರಿಸ್ಥಿತಿಯನ್ನು ಈ ಬಾರಿ ಸ್ಟೇಶನರಿ ಸಬ್ ಮೆಜಿಸ್ಟ್ರೇಟರು ಸ್ವತಃ ಹೋಗಿ ಪರಿಶೀಲಿಸಿದರು ಸಾಕಷ್ಟು ಪೋಲಿಸ್ ದಳಗಳನ್ನು ಅಲ್ಲಿ ಇರಿಸಲಾಗಿತ್ತು ತಮ್ಮ ಪರಿಶೀಲನೆಯ ಪರಿಣಾಮವಾಗಿ ಪೂಜೆ ಪ್ರಾಣಿಬಲಿ ಸಹಿತವಾಗಿ ನಡೆಸಲ್ಪಟ್ಟರೆ ಶಾಂತಿಭಂಗವುಂಟಾಗುವ ಸಂಭವಕಂಡು ಮೆಜಿಸ್ಟ್ರೇಟರು ಪುನಃ 144ನೇ ಸೆಕ್ಷನಿನನ್ವಯ ಎರಡು ದಿನಗಳ ತನಕ ಪ್ರಾಣಿಬಲಿ ನಡೆಸಲಾಗದ [illegible] ಇನ್ನು 15 ದಿನಗಳ ತನಕ ಆ ಸರಹದ್ದಿನಲ್ಲಿ ಸಭೆ ಮೆರವಣಿಗೆ ನಡೆಸಬಾರದೆ [illegible] ಒಟ್ಟು ಸೇರಬಾರದೆಂದು ಆಜ್ಞೆ [illegible] ಜಿಲ್ಲಾ [illegible] ಇವರ [illegible] ಈ ಆಜ್ಞೆ [illegible] ಪೂಜೆಯನ್ನು [illegible] 5 ಜನರಿಗಿಂತ ಹೆಚ್ಚು ಜನ ಸೇರದೆ ಪ್ರಾಣಿಬಲಿ ಸಹಿತ ಪೂಜೆ ನಡೆಸುವುದು ಅಸಾಧ್ಯವೆಂಬುದರಿಂದ ಈ ಆಜ್ಞೆ ಜಾರಿಯಲ್ಲಿರುವ ತನಕ ಪೂಜೆ ನಡೆಸುವುದು [illegible] ಕಾಣುತ್ತದೆ

ಇವಿಷ್ಟು ಈ ಬಾರಿ ಸುರತ್ಕಲ್ಲಿನಲ್ಲಿ ನಡೆದ [illegible] ಈ [illegible] ನಾವು ಈಗ ಟೀಕಿಸುವುದು ಉಚಿತವಲ್ಲ [illegible]

ಆದರೆ ದೇವರಿಗೆ ಪ್ರಾಣಿಬಲಿ ಕೊಡುವ ಪದ್ಧತಿಯ ಕುರಿತು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿದರೆ ಅನುಚಿತವೇನೂ ಇಲ್ಲ ಇದು ಅನೇಕ ವರ್ಷಗಳಿಂದ ನಡೆದು ಬಂದ ಪದ್ಧತಿ ಇರಬಹುದು ಆದರೆ ಅನೇಕ ವರ್ಷಗಳಿಂದ ನಡೆದು ಬಂದದ್ದೆಲ್ಲ ನ್ಯಾಯವಾದುದೆಂದು ಯಾರೂ ವಾದಿಸುವುದು ಸರಿಯಲ್ಲ ನಮ್ಮಲ್ಲಿ ಅನೇಕ ಬಗೆಯ ದುರಾಚಾರಗಳು ಪೂರ್ವಕಾಲದಿಂದ ನಡೆದು ಬಂದರೂ ಅವು ದುರಾಚಾರಗಳೆಂದು ನಮ್ಮ ಮನಸ್ಸಿಗೆ ಅನ್ನಿಸುವಾಗ ಅವನ್ನು ಬಿಟ್ಟು ಬಿಡುವುದೇ ಸರಿಯಾದ ಮಾರ್ಗ

ಕೋಳಿ ಕುರಿ ಮೊದಲಾದ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುವವರು ತಾವು ತಿನ್ನುವ ಆಹಾರವನ್ನು ತಮ್ಮ ದೇವರಿಗೆ ಅರ್ಪಿಸಿ ತಾವು ತಿನ್ನುವುದದಲ್ಲಿ ದೋಷವೇನು? ಎಂದು ಸಾಮಾನ್ಯವಾಗಿ ತರ್ಕಿಸುತ್ತಾರೆ ಇಂಥ ಭಾವನೆಯೇ ಈ ಪ್ರಾಣಿಬಲಿಯ ಮೂಲದಲ್ಲಿರಬಹುದು ಒಮ್ಮೆ ಆ ಭಾವನೆಯ ಪ್ರಚಾರವು ನ್ಯಾಯವಾದದ್ದೂ ಇರಬಹುದು

ಆದರೆ ಕಾಲವು ಒಂದೇ ರೀತಿ ಇರುವುದಿಲ್ಲ. ಕಾಲ ಹೋದಂತೆ ಮನುಷ್ಯನ ಅಭಿಪ್ರಾಯಗಳಲ್ಲಿಯೂ ಪ್ರಗತಿಯುಂಟಾಗುತ್ತದೆ ವೇದಕಾಲದಲ್ಲಿ ನಡೆಯುತ್ತಿದ್ದ ಪಶು ಯಜ್ಞಗಳು ಬುದ್ಧನ ನಂತರ ನಿಲ್ಲಿಸಲ್ಪಟ್ಟವು ಇದೇ ರೀತಿ ಈಗ ಕಳೆದ ಮೂವತ್ತು ವರ್ಷಗಳಿಂದ ಮಹಾತ್ಮಾಗಾಂಧಿಯವರು ಬೋಧಿಸುತ್ತಿದ್ದ ಅಹಿಂಸಾ ಧರ್ಮದಿಂದ ಜನರ ಅಭಿಪ್ರಾಯಗಳಲ್ಲಿ ವಿಶೇಷ ಬದಲಾವಣೆಗಳಾಗಿರುತ್ತವೆ ಪ್ರಾಣಿಗಳನ್ನು ಕೊಂದು ತಿನ್ನುವ ಮಾಂಸಾಹಾರವು ಸಾತ್ವಿಕ ಆಹಾರವಲ್ಲವೆಂಬುದನ್ನು ಎಲ್ಲರೂ ಒಪ್ಪುವರು ಇಂಥ ಆಹಾರವನ್ನು ಒಂದು ವೇಳೆ ತಾವು ಉಪಯೋಗಿಸಿದರೂ ಇದನ್ನು ದೇವರಿಗೆ ಅರ್ಪಿಸುವುದು ಯುಕ್ತವಲ್ಲವೆಂಬ ಅಭಿಪ್ರಾಯವೇ ಇಂದು ಸಮಾಜದಲ್ಲಿ ಪ್ರಬಲವಾಗುತ್ತಿದೆ ದೇಶದ ಎಷ್ಟೋ ಕಡೆಗಳಲ್ಲಿ ಈ ಪ್ರಾಣಿಬಲಿ ಕೊಡುವ ಪದ್ಧತಿಯನ್ನು ಜನಾಭಿಪ್ರಾಯದಿಂದಾಗಿ ಈಗ ನಿಲ್ಲಿಸಲಾಗಿದೆ [illegible] ಇಂದ ಪದ್ಧತಿಗಳ [illegible] ಬಗ್ಗೆ [illegible]

ನಮ್ಮ ಮಾರಿಗುಡಿಗಳಲ್ಲಿ ಮದ್ಯದ ಉಪಯೋಗವು [illegible] ನಡೆಯುತ್ತಿತ್ತು ಈಗ [illegible] ಬಳಿಕ ಅದೇ ರೀತಿ ನಡೆಯುತ್ತಿದೆಯೆ?

[illegible] ದೇವರಿಗೆ ಹಣ್ಣುಕಾಯಿ ಹೂ ಮುಂತಾದ ಸಾತ್ವಿಕ ವಸ್ತುಗಳನ್ನು [illegible] ಉತ್ಪತ್ತಿ [illegible] ನ್ಯಾಯವಾದ ಕಾರಣವಿಲ್ಲ [illegible] ಮಾರಿಗುಡಿಗಳ ಮೊಕ್ತೇಸರರು [illegible] ಗಲಾಟೆಗಳಿಗೆ ಆಸ್ಪದ ಕೊಡದೆ ತಾವಾಗಿ ಈ ಉತ್ತಮ ಸುಧಾರಣೆಯನ್ನು ಕೈಕೊಳ್ಳಬೇಕಾಗಿ ಸೂಚಿಸುತ್ತೇವೆ

ಈ ಕುರಿತು ಈಗ ಸರಕಾರದವರು ಒಂದು ಕಾನೂನನ್ನು ಮಾಡಿದರೂ ತಪ್ಪಾಗಲಾರದು ಪ್ರಾಣಿಬಲಿಯನ್ನೊಪ್ಪಿಸುವುದನ್ನು ಕಾನೂನಿನಂತೆ ನಿಷೇಧಿಸಿದರೆ ಈ ಪದ್ಧತಿಯು ಪೂರ್ಣ ನಿಂತು ಹೋಗುವುದೆಂಬುದರಲ್ಲಿ ಸಂಶಯವಿಲ್ಲ ಜನಾಭಿಪ್ರಾಯವು ಈ ಸುಧಾರಣೆ ಬೇಕೆಂದು ಆತುರದಲ್ಲಿರುವಾಗ ಈ ಬಗೆಯ ಕಾನೂನು ಮಾಡಿದರೆ ಅದರಲ್ಲಿ ಅನೌಚಿತ್ಯವೇನೂ ಇರುವುದಿಲ್ಲ

ಸುರತ್ಕಲ್ಲಿನಲ್ಲಿ ನಡೆದಿರುವ ಈ ಪ್ರಕರಣದ ಪರಿಣಾಮವಾಗಿ ಇಂಥದೊಂದು ಕಾನೂನು ಜಾರಿಗೆ ಬರುವಂತಾಗಲೆಂದು ನಾವು ಆಶಿಸುತ್ತೇವೆ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ಶಾಸನ ಸಭಾ ಸದಸ್ಯರಾಗಿರುವವರು ಈ ಕುರಿತು ಅವಶ್ಯವುಳ್ಳ ಕಾರ್ಯ ಕೈಕೊಳ್ಳಬೇಕಾಗಿಯೂ ಸೂಚಿಸುತ್ತೇವೆ

ಜಿಲ್ಲಾ ಸಮಾಚಾರ

ಮುನ್ಸಿಪಲ್ ಶಾಲೆಗಳ ಸ್ಪರ್ಧೆ

ಮಂಗಳೂರು ಮುನಿಸಿಪಾಲಿಟಿಯ ೨೧ ಎಲಿಮೆಂಟರಿ ಶಾಲೆಗಳೊಳಗೆ ಏರ್ಪಡಿಸಲಾಗಿದ್ದ ಗಾಂಧೀಜಿಯವರ ಜೀವನ ಸಂಬಂಧದ ನಾಟಕ ಪದ, ಭಾಷಣ, ಸಂಭಾಷಣೆ ಇತ್ಯಾದಿಗಳ ಕೊನೆಯ ಸ್ಪರ್ಧೆಯಲ್ಲಿ ಇಲ್ಲಿಯ ಸೆಂಟ್ರಲ್ ವಾರ್ಡ್ ಹುಡುಗರ ಶಾಲೆಗೆ ಪ್ರಥಮ ಬಹುಮಾನವೂ, ರಥಬೀದಿ ಬಾಲಿಕಾ ಪಾಠಶಾಲೆಗೆ ಎರಡನೆ ಬಹುಮಾನವೂ ದೊರೆತವು. ಮಣ್ಣಗುಡ್ಡೆ, ಅತ್ತಾವರ ಮತ್ತು ಪೆಂಟ್ಲೆಂಡ್‌ಪೇಟೆ ಶಾಲೆಗಳಿಗೆ 'ಕೊನ್ಸೊಲೇಶನ್' ಬಹುಮಾನಗಳೂ ದೊರೆತವು. ಈ ಸ್ಪರ್ಧೆಗಳಲ್ಲಿ ವಿಶೇಷ ಚಾತುರ್ಯ ಪ್ರದರ್ಶಿಸಿದ ಬಾಲಕ ಬಾಲಕಿಯರಿಗೆ ಮುನಿಸಿಪಲ್ ವೈಸ್ ಚೇಯರ್‌ಮೇನ್ ಶ್ರೀ ಬಿ. ಗಂಗಾಧರ ದಾಸರು ಯೋಗ್ಯತಾಪತ್ರಗಳನ್ನು ಕೊಟ್ಟರು.

ಅಡವು ವಹಿವಾಟಿನ ಮೊಕದ್ದಮೆ

ಪಾಂಡೇಶ್ವರ ದೇವಯ್ಯ ಎಂಬವರು ಲೈಸನ್ಸ್ ಪಡೆಯದೆ ಚಿನ್ನ ಬೆಳ್ಳಿ ಇತ್ಯಾದಿ ಪದಾರ್ಥಗಳನ್ನು ಈಡು ಇಟ್ಟುಕೊಂಡು ಹಣ ಬಡ್ಡಿಗೆ ಕೊಡುತ್ತಿದ್ದರೆಂಬ ಕಾರಣದಿಂದ ರೂ. ೪೦ರ ಜುಲ್ಮಾನೆಗೊಳಗಾದರು. ಇಂಥ ಮೊಕದ್ದಮೆ ಈ ಜಿಲ್ಲೆಯಲ್ಲಿ ಪ್ರಥಮವೆನ್ನಲಾಗಿದೆ.

ಶುದ್ಧಿ ಸಂಸ್ಕಾರ

ಹಂಪನಕಟ್ಟೆ ಪಿಟಿಶನ್ ರೈಟರ್ ಆಫೀಸಿನ ಸಂಚಾಲಕ ರೋಮನ್ ಕೆಥೋಲಿಕ್ ಕ್ರೈಸ್ತ ಶ್ರೀ ಎ. ಎ. ಡಿ'ಸೋಜಾರವರು ಕೆಲ ದಿನಗಳ ಹಿಂದೆ ಶುದ್ಧಿ ಸಂಸ್ಕಾರದ ಮೂಲಕ ಆರ್ಯಧರ್ಮದೀಕ್ಷೆಯನ್ನು ಪಡೆದರು. ಸ್ವಾಮಿ ದಯಾನಂದ ಸನ್ಯಾಸಿಯವರು ಅವರಿಗೆ ಯಜ್ಞೋಪವೀತ ಮತ್ತು ಗಾಯತ್ರಿ ಮಂತ್ರೋಪದೇಶ ಮಾಡಿದರು. ಅವರಿಗೆ ಸುಂದರ್‌ಸಿಂಗ್ ಎಂಬ ಹೆಸರನ್ನಿಡಲಾಯಿತು.

ದ. ಕ. ಉಪಾಧ್ಯಾಯರ ಗಿಲ್ಡ್ ಸಭೆ

ಇದರ ವರ್ಷಾವಧಿ ಮಹಾ ಸಭೆ ಈ ಸಲ ಕಟಪಾಡಿಯಲ್ಲಿ ಶ್ರೀಯುರು ಎಸ್. ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. 'ಪೆ ಕಮಿಶನಿನ ವೇತನ ಪ್ರಮಾಣದಂತೆ ಉಪಾಧ್ಯಾಯರಿಗೆಲ್ಲರಿಗೂ ಸಂಬಳ ದೊರಕಬೇಕು. ಸೆಕೆಂಡರಿ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರು ಖಾಸಗಿಯಾಗಿ ಓದಿ ಗ್ರೇಜುವೇಟುಗಳಾದಲ್ಲಿ ಅವರಿಗೆ ಮತ್ತೆ ಬಿ. ಟಿ. ಟ್ರೈನಿಂಗ್ ಇಲ್ಲವೇ ಹೈಸ್ಕೂಲು ತರಗತಿಗಳಲ್ಲಿ ಕಲಿಸಲು ಅರ್ಹತೆ ಕೊಟ್ಟ ಎಲ್. ಟಿ. ಸ್ಕೇಲನ್ನೇ ಕೊಡಬೇಕು' ಇವೇ ಮೊದಲಾದ ನಿರ್ಣಯಗಳಾದುವು

ಕೋರ್ಟು ರಜೆ

ಜಿಲ್ಲಾ ಮತ್ತು ಸಬ್ ಕೋರ್ಟುಗಳು ಕಳೆದ ಎಪ್ರಿಲ್ ತಾ. ೧೯ರಲ್ಲಿ ಬೇಸಿಗೆಯ ರಜೆ ನಿಮಿತ್ತ ಮುಚ್ಚಲ್ಪಟ್ಟಿದ್ದು ಜೂನ್ ೧೯ಕ್ಕೆ ಪುನಃ ತೆರೆಯಲ್ಪಡುತ್ತವೆ. ಜಿಲ್ಲಾ ಮುನ್ಸಿಫ್ ಕೋರ್ಟು ಇದೇ ಎಪ್ರಿಲ್ ೧೯ರಲ್ಲಿ ಮುಚ್ಚಿದ್ದು ಮೇ ೨೪ಕ್ಕೆ ತೆರೆಯುವುದು.

ಬಾವಿಯಲ್ಲಿ ಶವ

ಜೇಡಿಗುಡ್ಡೆಯ ಜಟ್ಕಾ ಸ್ಟೇಂಡಿನ ಬಳಿ ಇರುವ ಸರಕಾರಿ ಬಾವಿಯಲ್ಲಿ ಕಳೆದ ತಾ. ೧೬ರಂದು ಓರ್ವ ಗಂಡಸಿನ ಶವವು ಕಂಡು ಬಂದಿತು. ಮೃತನು ಪ್ರೊಟೆಸ್ಟೆಂಟ್ ಕ್ರೈಸ್ತನೆಂದು ಹೇಳಲಾಗುತ್ತದೆ. ಹಲವು ದಿವಸಗಳಿಂದ ಇದ್ದುದರಿಂದೇನೊ ಬಾವಿಯಿಂದ ದುರ್ವಾಸನೆ ಹೊರಡುತ್ತಿತ್ತು. ಪೋಲೀಸ್ ಪಂಚನಾಮೆ ನಡೆದಿದೆ.

ಸರಬರಾಯಿ ಶಾಖಾಧಿಕಾರಿ

ನಮ್ಮ ಅಧಿಪತ್ಯದ ಸರಬರಾಯಿ ಶಾಖಾ ಕಮಿಶನರ್ ಶ್ರೀ ಹೆಜ್ಮಾಡಿ ಐ. ಸಿ. ಎಸ್. ಅವರು ಈಚೆಗೆ ಮಂಗಳೂರಿಗೆ ಬಂದು ಇಲ್ಲಿ ಕಲೆಕ್ಟರರ ಕಚೇರಿಯಲ್ಲಿ ಕರೆದ ಎಂ. ಎಲ್. ಎ. ಮತ್ತು ಇತರ ಅಧ್ಯಕ್ಷರ ಒಂದು ಸಭೆಯಲ್ಲಿ "ಜೋಳವನ್ನು ಉಪಯೋಗಿಸುವ" ಕುರಿತು ಪ್ರೋತ್ಸಾಹ ಕೊಟ್ಟು ಅಲ್ಲಿಂದ ಕಾಸರಗೋಡಿಗೆ ತೆರಳಿ ಅಲ್ಲಿಯೂ ಒಂದು ಸಭೆ ಜರುಗಿಸಿ ಮುಂದಕ್ಕೆ ಪ್ರಯಾಣ ಬೆಳೆಸಿದರು.

ಹವಾಮಾನ

ಕಳೆದ ವಾರದಲ್ಲಿ ಮತ್ತು ಈ ವಾರದಲ್ಲಿ ಕೆಲವು ದಿನ ರಾತೆ ಮಳೆ ಮಿಂಚುಗಳ ಪ್ರತಾಪ ಕಂಡುಬಂದಿದೆ. ಜಿಲ್ಲೆಯಲ್ಲೀ ಸರ್ವಸಾಧಾರಣ ಈಗಲೇ ಅಲ್ಪಸ್ವಲ್ಪ ಮಳೆ ಬಿದ್ದಿರುವುದರಿಂದ ಕೃಷಿ ಕೆಲಸವು ಹಲವು ಕಡೆಗಳಲ್ಲಿ ಪ್ರಾರಂಭವಾಗಿರುವುದೆಂದು ತಿಳಿದು ಬರುತ್ತದೆ. ಬಂಟ್ವಾಳದ ಬಳಿ ವಗ್ಗ ಎಂಬಲ್ಲಿ ಮಿಂಚಿನ ಒಂದು ಅವಘಡದಿಂದ ಓರ್ವನು ಮೃತಪಟ್ಟಿರುವನಾಗಿ ಸುದ್ದಿಯಿದೆ.

ಅಕ್ಕಿ ಪರಿಸ್ಥಿತಿ

ರೇಶನ್ ರದ್ದಾದ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಅಕ್ಕಿ ಬೆಲೆಯು ಮುಡಿಗೆ ೨೫ರಿಂದ ೩೦ ರೂಪಾಯಿಗಳಿಗೆ ಏರಿರುವುದೆಂದು ವದಂತಿಯಿದೆ. ಕಾಸರಗೋಡು ಆಸುಪಾಸುಗಳಲ್ಲಿ ಅಕ್ಕಿ ಹುಟ್ಟಿಯು ವಿಪರೀತವಿದೆಯೆಂದೂ, ಸರಕಾರದವರು ತಾಲೂಕಿನಿಂದ ತಾಲೂಕಿಗೆ ಅಕ್ಕಿ ಸಾಗಿಸುವಿಕೆಯ ಮೇಲೆ ಗೇಟುಗಳನ್ನು ಹಾಕಿರುವುದರ ಮೂಲಕ ನಿರ್ಬಂಧ ಪಡಿಸಿರುವುದಾದರೂ ಈ ವಿಷಯದಲ್ಲಿ ಹೆಚ್ಚಿನ ಬಂದೋಬಸ್ತು ಮಾಡುವುದು ಅವಶ್ಯವಿದೆಂದು ನಿರೀಕ್ಷಿಸಲಾಗಿದೆ.

ಪ್ರಾಣಿ ಬಲಿ ನಿಷೇಧ

ಸುರತ್ಕಲಿನ ಒಂದು ಮಾರಿಗುಡಿಯಲ್ಲಿ ಕೋಣ ಬಲಿಕೊಡುವರೆ ಕೆಲವು ಮಾರಿ ಭಕ್ತರು ಮಾಡುತ್ತಿರುವ ಪ್ರಯತ್ನಗಳಿಗೆ ವಿರೋಧವಾಗಿ ಚಳವಳ ನಡೆಯುತ್ತಿದ್ದು ಕೆಲದಿನಗಳ ಹಿಂದೆ ಈ ಸಂಬಂಧವಾದ ಪರಿಸ್ಥಿತಿಯು ಸ್ವಲ್ಪ ವಿಪರೀತಕ್ಕೆ ಮುಟ್ಟಿತೆಂದೂ ಶಾಂತತಾ ಭಂಗವಾಗದಂತೆ ಅಧಿಕಾರಿಗಳು ಯೋಗ್ಯ ಎಚ್ಚರಿಕೆಯನ್ನು ವಹಿಸಿರುವರೆಂದೂ ತಿಳಿದುಬಂದಿದೆ.

ಜುಗಾರಿ ಕೂಟದ ಪತ್ತೆ

ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಂ. ವಾಸುದೇವ ಇವರು ಅವಲಕ್ಕಿ ಕೇರಿಯಲ್ಲಿ ಒಂದು ಜುಗಾರಿ ಆಟದ ಕೂಟವನ್ನು ಹಿಡಿದಿದ್ದು ಅದರಲ್ಲಿ ಸಿಕ್ಕಿಬಿದ್ದ ೮ ಮಂದಿಗೆ ಜುಲ್ಮಾನೆಗೊಳಪಡಿಸಿದ್ದಾರೆ. ಈ ಕುರಿತು ಅಲ್ಲಿ ಸಿಕ್ಕಿದ ಜುಗಾರಿ ಹಣದ ಕೆಳಡಾ ೨೫ರಷ್ಟು ಪಾಲು ಇನ್ಸ್‌ಪೆಕ್ಟರರಿಗೂ ಮತ್ತವರ ಜೊತೆಯ ಪೋಲೀಸರಿಗೂ ಕೊಡುವಂತೆ ನ್ಯಾಯಾಲಯದಿಂದ ನಿರ್ದೇಶವಾಗಿದೆ.

ಕಾಸರಗೋಡು ಸಮ್ಮೇಳನದ ಲೆಕ್ಕಪತ್ರ

ಕಳೆದ ದಶಂಬರದಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯನ್ನು ಲೆಕ್ಕಪತ್ರ ಮಂಜೂರಾತಿಯ ಪಟ್ಟಿಯಲ್ಲಿ ಕಾರ್ಯದರ್ಶಿ ಶ್ರೀ. ವಿ. ಶಂಕರ ಭಟ್ಟರು ಹಾಜರು ಮಾಡಿದರು. ಇದರ ಪ್ರಕಾರ ರೂ. ೨೨೧೩೯-೪-೫ ಗಳಷ್ಟು ಹಣ ಶೇಖರಿತವಾಗಿದೆಂದೂ, ರೂ. ೧೬೪೯೬-೭-೮ಗಳಷ್ಟು ವೆಚ್ಚವಾಗಿದೆಯೆಂದೂ, ರೂ ೪೬೪೨-೧೨-೯ಗಳಷ್ಟು ಉಳಿದಿದೆಯೆಂದೂ ತಿಳಿದುಬಂತು. ಇನ್ನು ಏನೂ ಆಗಲಿರುವ ಹಣವನ್ನು ಲೆಕ್ಕ ಹಿಡಿದರೆ ಸುಮಾರು ೬ ಸಾವಿರ ರೂಪಾಯಿಗಳಷ್ಟಾದರೂ ಉಳಿದೀತೆಂದೂ ಕಾರ್ಯದರ್ಶಿಗಳು ತಿಳಿಸಿದರು. ಮುಂದಿನ ಸಭೆಯಲ್ಲಿ ಈ ಉಳಿತಾಯದ ಹಣವನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂಬುದನ್ನು ಚರ್ಚಿಸಲಾಗುವುದೆಂದೂ ತೀರ್ಮಾನಗಳಾದುವು.

ಗಮಕ ಅಧ್ಯಾಪಕರ ತರಬೇತಿ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಬರುವ ಮೇ ೧೫ಕ್ಕೆ ಬೆಂಗಳೂರಲ್ಲಿ ಗಮಕ ಅಧ್ಯಾಪಕರ ಶಿಕ್ಷಣ ತರಗತಿಗಳು ಆರಂಭವಾಗಿ ೪ ತಿಂಗಳು ನಡೆಯುವುವು. ಇದಕ್ಕೆ ಸೇರುವವರು ಶಿಕ್ಷಣದ ಕಾಲಕ್ಕೆ ರೂ. ಹತ್ತನ್ನು ತೆರಬೇಕು. ಹೊರಗಿಂದ ಆರು ವಿದ್ಯಾರ್ಥಿಗಳನ್ನು ಚುನಾಯಿಸಲಾಗುವುದು. ಹೀಗೆ ಹಣಕೊಟ್ಟು ಸೇರಬಿಚ್ಛಿಸುವವರು ತಮ್ಮ ಹೆಸರು, ವಿಳಾಸ, ವಯಸ್ಸು, ಉದ್ಯೋಗ, ಪಡೆದಿರುವ ಸಂಗೀತ ಜ್ಞಾನದ ಮಟ್ಟ, ಸಾಮಾನ್ಯ ಶಿಕ್ಷಣ, ಆಗಲೇ ಗಮಕ ಕಲೆಯಲ್ಲಿ ಏನಾದರೂ ಶಿಕ್ಷಣ ಪಡೆದಿದ್ದರೆ ವಿವರಗಳು ಇವನ್ನು ತಿಳಿಸಿ ಎಪ್ರಿಲ್ ತಾ. ೩೦ರೊಳಗೆ ಅರ್ಜಿ ಮಾಡತಕ್ಕದ್ದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಆಹಾರ ವಸ್ತು

ಸದ್ಯದಲ್ಲೇ ಮಂಗಳೂರಿಗೆ ಆಹಾರ ವಸ್ತುಗಳಿಂದ ತುಂಬಿದ ಒಂದು ಹಡಗು ಬರಲಿದೆಯೆಂದು ವದಂತಿಯಿದೆ. ಇದರಲ್ಲಿ ಹೆಚ್ಚಿನ ಅಂಶ ಅಕ್ಕಿಯೆಂದೂ, ಅಲ್ಲದೆ ಜೋಳ ಗೋಧಿ ಇವುಗಳೂ ಕೆಲವು ಪ್ರಯಾಣದಲ್ಲಿರುವವೆಂದೂ ನಿರೀಕ್ಷಿಸಲಾಗಿದೆ.

ತಕ್ಷೀರುಗಳು

ಮದ್ಯನಿಷೇಧ ಕಾಯ್ದೆಯ ನಂತರ ನಡೆಸಲ್ಪಡುವ ಗುಪ್ತಪರಿಶೋಧನೆಯಲ್ಲಿ ಪ್ರತೀ ವಾರವೆಂಬಂತೆ ಸಣ್ಣ ಪುಟ್ಟ ಮದ್ಯನಿಷೇಧ ಕಾಯಿದೆ ಭಂಗದ ಕಟ್ಲೆಗಳು ನಡೆಯುತ್ತಲಿವೆ. ಪ್ರೊಹಿಬಿಶನ್ ಸಿಬಂದಿಯ ಚಟುವಟಿಕೆಗಳಿಂದ ಬಹುಮಟ್ಟಿಗೆ ಅಕ್ರಮ ವರ್ತನೆಗಳು ಕಡಿಮೆಯಾಗಿವೆಯಾಗಿ ನಂಬಲಾಗಿದೆ. ನಗರದ ಮಟ್ಟಿಗೆ ಹಾಲಿಗೆ ನೀರು ಬೆರೆಸುವ ಕೃತ್ಯಗಳನು ಪತ್ತೆ ಹಚ್ಚುವ ಕಾರ್ಯವು ಆರೋಗ್ಯ ಸಿಬಂಧಿಯಿಂದ ನಿರ್ವಹಿಸಲ್ಪಡುತ್ತದೆ. ಈ ಸಂಬಂಧವೂ ಅನೇಕರಿಗೆ ಜುಲ್ಮಾನೆಗಳಾಗಿರುವುದರಿಂದ ಇಂತಹ ಆ ಕೃತ್ಯಗಳಿಗೆ ಪರಿಣಾಮಕಾರಿ ತಡೆ ಹಾಕಿದಂತಾಗಿದೆ.

ವಸಂತೋತ್ಸವ

ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಶಾಲೆಯಲ್ಲಿ ಈ ಸಲದ ವಸಂತೋತ್ಸವಗಳು ಹಲವು ಶೈಕ್ಷಣಿಕ ಮತ್ತು ಮನೋರಂಜಕ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟವು. ಕಳೆದ ತಾ. ೧೬ರಂದು ಶ್ರೀ ರಾಮಕೃಷ್ಣ ಪರಮಹಂಸರ ೧೧೭ನೇ ಜನ್ಮದಿನೋತ್ಸವವು ಆಚರಿಸಲ್ಪಟ್ಟಿತು. ಅಂದು, ಇಲ್ಲಿಯ ರಾಮಕೃಷ್ಣ ಕೇಂದ್ರದ ಸ್ವಾಮಿ ವಿಮಲಾನಂದಜಿಯವರು ಪರಮಹಂಸರ ಜೀವನೋದ್ದೇಶ ತತ್ವ ವೈಶಿಷ್ಟ್ಯಗಳ ಕುರಿತು ಬೋಧಪರ ಭಾಷಣವಿತ್ತರು.

ಟಪ್ಪಾಲು ಪತ್ರಿಕೆ

ಉಡುಪಿಯಲ್ಲಿ ಸೇರಿದ ಪೋಸ್ಟ್‌ಮೇನ್ ಮತ್ತು ಕೆಳತರಗತಿಯ ನೌಕರರ ವಿಶೇಷ ಸಭೆಯಲ್ಲಿ ಸಂಘದ ಪತ್ರಿಕೆಯಾದ ಪೋಸ್ಟ್‌ಮೇನ್ ಹೆರಾಲ್ಡ್ (ಇದು ಇಂಗ್ಲೀಷಿನಲ್ಲಿದೆ) ಇದನ್ನು ಕನ್ನಡದಲ್ಲಿ ಛಾಪಿಸಬೇಕೆಂದು ನಿರ್ಣಯವಾಯಿತು. ಅಲ್ಲದೆ ಅಕ್ಕಿ ರೇಶನ್ ರದ್ದಾದಲ್ಲಿ ಸರಿಯಾದ ಅಕ್ಕಿ ಧಾನ್ಯಗಳನ್ನು ಟಪ್ಪಾಲು ಉದ್ಯೋಗಿಗಳಿಗೆ ಒದಗಿಸದಿದ್ದಲ್ಲಿ ಮುಷ್ಕರ ಹೂಡುವ ನೋಟೀಸು ಕೊಡಬೇಕೆಂದೂ ಇದೇ ಸಭೆಯಲ್ಲಿ ನಿರ್ಧರಿಸಲಾಗಿದೆ.

ಕರ್ನಾಟಕ ಮಲೆನಾಡು ಪರಿಷತ್ತು

ಭಾರತವು ಕೃಷಿ ಪ್ರಧಾನದೇಶವಾಗಿ ಜನತೆಯ ಪೋಷಕವಾಗುವ ರೀತಿಯಲ್ಲಿ ಪುರಾತನವಾಗಿ ನಡೆಯುತ್ತಿದ್ದ ರಾಷ್ಟ್ರೀಯ ಯೋಜನೆಯು ಪರಕೀಯರ ಅಧೀನ ಭಾರತವು ಹೋದ ತರುವಾಯ ಜನತೆಯ ಉನ್ನತಿಗೆ ಅಲಕ್ಷ್ಯ ಉಂಟಾದುದೂ, ಪರಕೀಯರ ಸ್ವಾರ್ಥ ಮಾತ್ರ ಸಾಧ್ಯವಾಗುವದಕ್ಕಾಗಿ ಸುಧಾರಣೆಗಳುಂಟಾದುದು ಆಗಿದೆ.

ದೇಶದ ಜನತೆಗೆ ದೀರ್ಘಕಾಲದ ಪರಿಸ್ಥಿತಿಯಿಂದಾಗಿ ಆ ಸುಧಾರಣೆಗಳೇ ದೇಶಕ್ಕೆ ಹಿತವೆಂದು ಈಗಲೂ ಅವರ ಹೆಜ್ಜೆಯೇ ಮುಂದರಿಯುವುದರಲ್ಲಿ ಹಿತವಲ್ಲವೆಂಬುದು ಈ ಮಲೆನಾಡು ಕೃಷಿಕ್ಷೇತ್ರಗಳ ಕೃಷಿ ಜೀವಾಳವಾಗಿಯೂ, ಮನುಷ್ಯನಿಗೆ ಕಾಮಧೇನುವಾಗಿರುವ ಗೋವುಗಳ ಸಂವರ್ಧಕ ಕ್ಷೇತ್ರವಾಗಿ ರಾಷ್ಟ್ರದಲ್ಲೀ ಜೀವಾಳವೆನಿಸುವ ನೆಲೆಯಲ್ಲಿರುವ ಈ ಕ್ಷೇತ್ರವು ಅರಣ್ಯ ಪಾಲುಮಾಡಿದುದು ಜನತೆಯ ಅಧಃಪಾತವೆಂಬ ವಿವೇಚನಾ ಆರಂಭವೇ ಈ ಪರಿಷತ್ತಿನ ಮುಖ್ಯ ಧ್ಯೇಯವಾಗಿದೆ.

ಅನೇಕ ಪಕ್ಷ ಪಂಗಡಗಳ ಮೂಲಕ ಅನೈಕ್ಯದ ಆಂದೋಲನವೇ ಭಾರತದಲ್ಲಿಂದು ತಲೆದೋರಿ, ಅಗತ್ಯವನ್ನೇ ಬಿಟ್ಟು ಅಗತ್ಯವಿಲ್ಲದ ವಿಚಾರಕ್ಕೆ ಮಹತ್ವ ಬಂದಿದೆ.

ಜನಜೀವನವಾಗಿಯೂ ಬಹ್ವಂಶದವರ ಉದ್ಯಮವೇ ರಾಷ್ಟ್ರದ ಜನತೆಯ ಜೀವನ ಮೂಲ ಸಂಶೋಧನಾ ವಿಚಾರಕ್ಕಾಗಿ ಎಲ್ಲಾ ಬಹ್ವಂಶ ಜನತೆಯ ಜ್ಞಾನವು, ವಿಚಾರವು ಕೇಂದ್ರೀಕೃತವಾಗಬೇಕಾಗ ಹೆಚ್ಚಿನ ಗುಂಪೇ ರಾಷ್ಟ್ರದ ಗುಂಪೇ ಒಂದು ಒಕ್ಕಟ್ಟಾಗಿ ಐಕ್ಯಮತ್ಯವಾಗಿ ದೇಶ ಹಿತವಾಗುವದು.

ಶ್ರೀ ಶ್ರದ್ಧಾನಂದ ಅನಾಥಾಶ್ರಮ ಸನ್ಯಾಸಿಗುಡ್ಡೆ ಮಂಗಳೂರು

ಆರ್ಯಾವರ್ತವು (ಭಾರತ) ದೇಶಗಳಿಗೆಲ್ಲಾ ಆದರ್ಶಪ್ರಾಯವಾಗಿರುವುದರಿಂದ ಅದರ ಸಂಸ್ಕೃತಿ ಮತ್ತು ಸಭ್ಯತೆಯಲ್ಲಿ ಶ್ರದ್ಧೆಯನ್ನು ಹುಟ್ಟಿಸಿ, ಪ್ರಾಚೀನ ಆಶ್ರಮ ಪದ್ಧತಿಯಂತೆಯೂ ನಾಗರೀಕ, ಮಾನಸಿಕ ಹಾಗೂ ಆತ್ಮಿಕ ವಿಕಾಸಕ್ಕನುಗುಣವಾಗಿ ಧಾರ್ಮಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಶಿಕ್ಷಣವನ್ನು ಕೊಟ್ಟ ಪ್ರತಿಯೊಬ್ಬ ಬಾಲಕ ಬಾಲಕಿಯನ್ನು ಭಾವೀ ಜೀವನಕ್ಕೆ ಸಿದ್ಧಮಾಡಲು ಅನುಕೂಲವಾದ ರೀತಿಯಲ್ಲಿ ಈ ಕಾರ್ಯಕ್ರಮವು ಏರ್ಪಡಿಸಲ್ಪಟ್ಟಿದೆ ಮತ್ತು ಅನಿವಾರ್ಯವಾಗಿ ಪಾಲಿಸಲು ಪ್ರೇರೇಪಿಸಿರುತ್ತದೆ. ಇದೇ ಆಶ್ರಮದ ಉದ್ದೇಶವು.

ತಿಳಿವಳಿಕೆ

ಈ ವರ್ಷ ಕನ್ನಡ ಸಾಹಿತ್ಯ ಪರಿಷತ್ತು ನಡೆಸಲಿರುವ ಗಮಕ ಅಧ್ಯಾಪಕರ ಶಿಕ್ಷಣದ ತರಗತಿಗಳಿಗೆ ಸೇರಬಯಸಿ ವಿದ್ಯಾರ್ಥಿವೇತನಗಳಿಗಾಗಿ ಬಂದಿದ್ದ ಅಪೇಕ್ಷಾಪತ್ರಗಳನ್ನು ಪರಿಶೀಲಿಸಿ ಗಮಕಸಮಿತಿ ಈ ಕೆಳಗೆ ಕಂಡವರಿಗೆ ವಿದ್ಯಾರ್ಥಿವೇತನವನ್ನು ಕೊಡಲು ನಿರ್ಧರಿಸಿದೆ.

೧. ಶ್ರೀ ಸಿ. ಆರ್. ಸುಂದರರಾವ್. ೨. ಶ್ರೀ ಬಿ. ಜಿ. ರಾಮನಾಥ್. ೩. ಶ್ರೀಮತಿ ಎಂ. ಇಂದಿರಾಬಾಯಿ. ೪. ಶ್ರೀಮತಿ ಎ. ಸುಬ್ಬಮ್ಮ.

ತರಗತಿ ಸುಮಾರು ಮೇ ೧೫ರಿಂದ ಆರಂಭವಾಗಿ ನಾಲ್ಕು ತಿಂಗಳಿಗೆ ಕಡಮೆಯಿಲ್ಲದೆ ಬೆಂಗಳೂರಿನಲ್ಲಿ ನಡೆಯುವುದು.

ಗಂಟಲ, ಶ್ವಾಸಕೋಶಗಳನ್ನು ಉಪಶಮನ ಮಾಡಿ ರಕ್ಷಿಸುವುದು.

ಬಾಯಲ್ಲಿ ಕರಗಿದಾಕ್ಷಣ ಪೆಪ್ಸ ಶ್ರೇಷ್ಠ ವಿಷಹಾರಿ ವನಸ್ಪತಿ ಸಾರಗಳನ್ನು ಬಿಟ್ಟುಬಿಡುತ್ತದೆ. ಶ್ವಾಸದ ಮೂಲಕ ಶ್ವಾಸಕೋಶದ ಆಳಕ್ಕೊಯ್ಯಲ್ಪಟ್ಟ ಇದು ವೇದನೆಯನ್ನು ಶಮನಿಸಿ ನಿಮ್ಮನ್ನು ರೋಗರುಜಿಗಳಿಂದ ರಕ್ಷಿಸುತ್ತದೆ.

ಗಂಟಲು ನೋವು, ಕೆಮ್ಮು, ನೆಗಡಿ, ಶೀತ, ಉಬ್ಬಸ ಶೀತಜ್ವರ, ಎದೆಶ್ವಾಸಕೋಶ ತೊಂದರೆಗಳಿಗೆ ಪೆಪ್ಸ್ ಪರಿಣಾಮಕಾರಿ ಔಷಧಿ.

ವಿಷಹಾರಿ ಮಾತ್ರೆಗಳಾದ ಪೆಪ್ಸನ್ನು ತೆಗೆದುಕೊಳ್ಳಿರಿ.

PEPS

ಇದರ ಪೂರೈಕೆಗೆ ಕೊರತೆಯಿಲ್ಲ.

ಗಾಂಧಿ ಸ್ಮಾರಕ ನಿಧಿ

ಅದರ ವಿನಿಯೋಗದ ವಿವರ

ರಾಷ್ಟ್ರಪತಿಗಳ ಪ್ರಕಟಣೆ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಜನರಿಗೆ ಅದರಲ್ಲಿಯೂ ವಿಶೇಷವಾಗಿ ಬಡವರಿಗೆ ಹಾಗೂ ಜನಸಾಮಾನ್ಯರಿಗೆ ನಿರಂತರವಾಗಿ ಹಿತಕಾರಿಯಾಗುವ ಕಾರ್ಯಗಳಿಗಾಗಿ ವಿನಿಯೋಗಿಸಲಾಗುವದೆಂದು ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು

ಅವರ ಮಾತಿನ ವಿವರವನ್ನು ಈ ಕೆಳಗೆ ಕೊಡಲಾಗಿದೆ

ಗಾಂಧಿ ನಿಧಿಯ ಬಹುಭಾಗವನ್ನು ಅಂದರೆ ಸುಮಾರು ೩/೪ ಅಂಶವನ್ನು ಅದು ಯಾವ ಪ್ರಾಂತದಲ್ಲಿ ಕೂಡಿತೋ ಅಲ್ಲಿ ವಿನಿಯೋಗಿಸಲಾಗುವದು ಉಳಿದ ಕಾಲಂಶವು ಕೇಂದ್ರ ನಿಧಿಗೆ ಹೋಗುವದು ಈ ಹಣದಿಂದ ಹಿಂದುಳಿದ ಪ್ರದೇಶಗಳಿಗೆ ಸಹಾಯ ಸಲ್ಲಿಸಲ್ಪಡುವದು

ನಿಧಿಯ ಉದ್ದೇಶವು ಎರಡು ಬಗೆಯದಿದೆ ಗಾಂಧಿಜಿಯವರ ವಿಧಾಯಕ ಕಾರ್ಯಕ್ರಮವನ್ನು ಮುಂದೆ ಸಾಗಿಸುವದು ಮೊದಲನೆಯದು ಅವರ ಬರಹ ಮತ್ತು ಭಾಷಣಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಪ್ರಸಿದ್ಧಿಸುವುದು ಎರಡನೆಯದು ಮೊದಲನೆಯದಕ್ಕೆ ವಿಶೇಷ ಹಣ ಬೇಕಾದುದರಿಂದ ವಿಧಾಯಕ ಕಾರ್ಯಕ್ರಮಗಳಿಗಾಗಿ ವ [illegible] ರು ಕೊಟ್ಟ [illegible] ಗುಣವಾಗುವಂತೆ ನಿಧಿಯ ಬಹುಭಾಗವನ್ನು ವೆಚ್ಚಮಾಡಲಾಗುವದು ವಿಧಾಯಕ ಕಾರ್ಯಕ್ರಮವನ್ನು ಕುರಿತು ಮಹಾತ್ಮರು ತಮ್ಮ ಬರವಣಿಗೆಯಲ್ಲಿ ವಿಶದೀಕರಿಸಿರುವರು ಅವರ ಯೋಜನೆ ಬಹಳ ವಿಶಾಲವಾಗಿದೆ ಅದರಲ್ಲಿ ಅವರು ೨೨ ವಿಷಯಗಳನ್ನು ಹೇಳಿದ್ದರೂ ಪಟ್ಟಿಯು ಅಷ್ಟಕ್ಕೆ ಪೂರ್ಣವಾಗುವದಿಲ್ಲ ಅದರಲ್ಲಿ ಬೇರೆ ವಿಷಯಗಳನ್ನು ಸೇರಿಸಬಹುದು ಜನಸಾಮಾನ್ಯರ ಉದ್ಧಾರವೆ ವಿಧಾಯಕ ಕಾರ್ಯಕ್ರಮದ ಗುರಿ ಶೈಕ್ಷಣಿಕ ಕಾರ್ಯ, ಹಳ್ಳಿಗಳ ಅಭಿವೃದ್ಧಿ ಗೃಹೋದ್ಯೋಗಗಳು, ಹಿಂದುಳಿದ ವರ್ಗಗಳಲ್ಲಿ ಕಾರ್ಯ, ಹಿಂದುಳಿದ ಜನಾಂಗಗಳ ಹಿರಿಜನರ ಮತ್ತು ಸ್ತ್ರೀಯರ ಉದ್ಧಾರ ಮೊದಲಾದವುಗಳು ಅದರ ಅಂಗಗಳಾಗಿವೆ ಯಾವದೇ ಸಾಮಾಜಿಕ ಕಾರ್ಯವೂ ಅದರ ಅಂಗವಾಗಬಲ್ಲದು

ಆದರೆ ಪುತ್ಥಳಿ, ಕಟ್ಟಡ, ರಸ್ತೆ ಇವುಗಳ ಮೂಲಕ ಮಹಾತ್ಮರ ಸ್ಮಾರಕ ಕಟ್ಟಬಾರದೆಂದು ನಿರ್ದಿಷ್ಟ ನಿರ್ಧಾರವಾಗಿದೆ

ನಿಧಿ ಸಂಗ್ರಹದ ಸಂಘಟನೆಗಾಗಿ ನಾನು ಈ ಪ್ರಾಂತಕ್ಕೆ ಬಂದಿದ್ದೇನೆ ಎಲ್ಲ ಪ್ರಾಂತಗಳ ಹಾಗೂ ಸಂಸ್ಥಾನಗಳ ಸಮಿತಿಗಳು ಕಾರ್ಯ ಪ್ರಾರಂಭಿಸಿದೊಡನೆ ಅವು ಒಂದು ಕೇಂದ್ರ ಸಮಿತಿಯನ್ನು ರಚಿಸಿಕೊಳ್ಳುವವು ಅದು ಎಲ್ಲರ ಪ್ರಾತಿನಿಧ್ಯವುಳ್ಳ ಒಂದು ಧರ್ಮದರ್ಶಿ ಮಂಡಳವನ್ನು ನೇಮಿಸುವದು ಈ ಮಂಡಲದಿಂದ ನೇಮಿಸಲ್ಪಟ್ಟ ವ್ಯವಸ್ಥಾಪಕ ಮಂಡಲವು ನಿಧಿಯ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುವುದು ಹೊಸ ಕೇಂದ್ರ ಸಮಿತಿಯು ರಚಿಸಲ್ಪಟ್ಟ ಬಳಿಕ ಸದ್ಯದ ಕೇಂದ್ರ ಸಮಿತಿಯ ಕಾರ್ಯಮುಗಿದಂತೆ ಆಗುವದು

ನಿಧಿಗೆ ನಾವು ಇಂತಿಷ್ಟೇ ಹಣ ಕೂಡಿಸಬೇಕೆಂಬ ಗುರಿಯಿಟ್ಟುಕೊಂಡಿಲ್ಲ ಆದರೆ ವ್ಯಕ್ತಿಗಳು ಎಷ್ಟು ಹಣಕೊಡಬೇಕೆಂಬುದನ್ನು ಮಾತ್ರ ಸೂಚಿಸಿದ್ದೇವೆ. ೧೦ ದಿನದ ಆದಾಯವನ್ನು ಪ್ರತಿಯೊಬ್ಬನು ಕೊಡಬೇಕೆಂದು ಹೇಳಿದ್ದೇವೆ. ಒಮ್ಮೆಲೆ ಹತ್ತು ದಿನದ ಆದಾಯವನ್ನು ಪ್ರತಿಯೊಬ್ಬನು ಕೊಡಬೇಕೆಂದು ಹೇಳಿದ್ದೇವೆ ಒಮ್ಮೆಲೆ ಹತ್ತು ದಿನದ ಆದಾಯವನ್ನು ಕೊಡಲು ಅಸಾಧ್ಯವೆನಿಸಿದ ಪಕ್ಷದಲ್ಲಿ ಸುಲಭವೆನಿಸಿದ ಕಂತುಗಳಲ್ಲಿ ಅದನ್ನು ಕೊಡಬಹುದು

ಮಹಾತ್ಮರ ವಾರ್ಷಿಕ ಶ್ರಾದ್ಧದ (೩೦-೧-೪೯) ವರೆಗೆ ನಿಧಿಸಂಗ್ರಹ ಕಾರ್ಯ ನಡೆಯಬೇಕೆಂದು ನನಗನಿಸುತ್ತದೆ

ಈ ಅವಧಿಯಲ್ಲಿ ಪ್ರತಿಯೊಬ್ಬರು ೧೦ ದಿನದ ತಮ್ಮ (ಕರಾರಿನ) ಆದಾಯವನ್ನು ನಿಧಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ

ನಿಧಿಗೆ ಸಹಾಯಮಾಡಬೇಕೆಂದು ನಾನು ಭಾರತದ ಹೊರಗಿನವರಿಗೆ ಬಿನ್ನವಿಸಿಕೊಂಡಿಲ್ಲ ಆದರೆ ಹೊರಗಿನವರ ಕೂಡಬಹುದು ವಿದೇಶದಲ್ಲಿದ್ದವರಿಗೆ ನಾನು ಬಿನ್ನವಿಸಿಲ್ಲವಾದರೂ ಕೆಲವು ಕಡೆ ನಿಧಿ ಸಂಗ್ರಹ ನಡೆದಿದೆಂದು ವರದಿ ಒಂದಿದೆ ಇದು ಸ್ಥಾನಿಕ ಉದ್ದೇಶಗಳಿಗಾಗಿ ಇರಬಹುದು

ಗೋವುಗಳ ಅಭಿವೃದ್ಧಿಯೇ ದೇಶೋದ್ಧಾರದ ದಾರಿ

ಕೆಲವು ಅಂಕೆಸಂಖ್ಯೆಗಳು

ನಮ್ಮ ದೇಶದಲ್ಲಿ ಜಗತ್ತಿನ ಜಾನುವಾರಗಳ ಮೂರನೇ ಒಂದಂಶದಷ್ಟಿದೆ ಶೇಕಡಾ ೮೦ರಷ್ಟು ಕೃಷಿಪ್ರಧಾನ ನಮ್ಮ ಜನತೆಯ ದರಿದ್ರತೆಯನ್ನು ನೀಗಲು ಗೋವುಗಳ ಅಭಿವೃದ್ಧಿಯು ಅತ್ಯಾವಶ್ಯಕ

ವಿಭಾಗೀಕರಣಕ್ಕೆ ಮೊದಲು ೨೧ ಕೋಟಿ ಜಾನುವಾರುಗಳು (ದನ ಎಮ್ಮೆ ಸಮೇತ) ನಮ್ಮ ದೇಶದಲ್ಲಿದ್ದುವು ಇದರಲ್ಲಿಗ ಸುಮಾರು ೩ ಕೋಟಿ ಪಾಕಿಸ್ಥಾನದ ಪಾಲಾಗಿದೆ ಇಷ್ಟೊಂದು ಗೋಸಂಪತ್ತಿದ್ದರೂ ನಮ್ಮ ಜನತೆಗೆ ಸಾಕಷ್ಟು ಹಾಲೂ ಸಿಗುವದಿಲ್ಲ ಬೇಕಾದಷ್ಟು ಎತ್ತು ಕೋಣಗಳೂ ಸಿಗುವುದಿಲ್ಲ

ನಿಕೃಷ್ಟವಾದ ಆಹಾರ ಕೊರತೆಯಿಂದ ನಮ್ಮ ಗೋವುಗಳು ನರಳುವುದೇ ಇದಕ್ಕೆ ಕಾರಣ. ಮಂದಗತಿ ಉಪವಾಸ ಪರಿಸ್ಥಿತಿಗೆ ನಮ್ಮ ಪ್ರಾಣಿಗಳು ಬಲಿಯಾಗುತ್ತಿವೆ. ಇದರ ಪರಿಣಾಮವಾಗಿ ನಮ್ಮ ಗೋವುಗಳು ಕುಂಟಿತ ಬೆಳವಣಿಗೆಯವೂ, ಕನಿಷ್ಟ ಹಾಲಿನ ಪ್ರಮಾಣದವುಗಳೂ, ನಿಕೃಷ್ಟ ಗುಣದ ಸಂತತಿಯನ್ನುಂಟುಮಾಡುವಂತಹುಗಳೂ ಆಗಿವೆ ಇವುಗಳು ಮೊದಲ ಕರು ಹಾಕಲು ಹೆಚ್ಚು ಕಾಲ ತೆಗೆಯುತ್ತವೆ, ಹಾಕುವ ಕರುಗಳ ಒಟ್ಟು ಸಂಖ್ಯೆಯೂ ಕಡಿಮೆ, ಮಾತ್ರವಲ್ಲ ಒಂದು ಕರುಹಾಕಿದ ಮೇಲೆ ಇನ್ನೊಂದು ಹಾಕುವುದಕ್ಕೆ ತಗಲುವ ಅವಧಿಯೂ ಹೆಚ್ಚು ಹಿಡಿಯುತ್ತದೆ.

ಆದರಿಂದ ಅದೆಷ್ಟೊ ಮಿಲಿಯ ಟನ್ನುಗಳಷ್ಟು ಹಾಲು ನಮಗೆ ನಷ್ಟವಾಗುತ್ತದೆ ಪರಿಣಾಮವಾಗಿ ನಮ್ಮ ಜನತೆಯ ಶಕ್ತಿ ಚೈತನ್ಯಗಳೂ ಇದೇ ದಾವನಾಶಯದಲ್ಲಿ ಅದೆಷ್ಟೊ ಕುಂದಿಹೋಗುತ್ತದೆ ಇದು ನಮ್ಮ ರಾಷ್ಟ್ರದ ಆರೋಗ್ಯಕ್ಕೂ, ಸಂಪತ್ತಿಗೂ ಅದೆಷ್ಟು ಧಕ್ಕೆಯನ್ನುಂಟುಮಾಡುತ್ತದೆಂದು ಹೇಳಲು ಸಾಧ್ಯವಿಲ್ಲ

ಈಗ ಸದ್ಯಕ್ಕೆ ನಮ್ಮಲ್ಲಿ ನಮ್ಮ ಗೋವುಗಳಿಗೆ ಬೇಕಾದ ಶೇಕಡಾ ೬೦ರಷ್ಟು ಆಹಾರ ಮಾತ್ರವಿದೆ ನಮ್ಮ ದನ ಎಮ್ಮೆಗಳು ವರ್ಷಕ್ಕೆ ಸುಮಾರು ೩೩ ಮಿಲಿಯ ಟನ್ ಹಾಲನ್ನು ಮಾತ್ರ ಕೊಡುತ್ತವೆ ನಮ್ಮ ಜನತೆಯ ಕನಿಷ್ಟ ಪೌಷ್ಟಿಕ ಪರಿಮಾಣವನ್ನು ಪೂರೈಸಲು ಸುಮಾರು ೬೫ ಮಿಲಿಯ ಟನ್ನುಗಳಷ್ಟು ಹಾಲಾದರೂ ಬೇಕು ಇಷ್ಟಲ್ಲದೆ ಕರುಗಳನ್ನು ಪೋಷಿಸಲಿಕ್ಕೆ ಮತ್ತೆ ೧೦ ಮಿಲಿಯ ಟನ್ನು ಹೆಚ್ಚು ಹಾಲು ಬೇಕಾಗುವುದು

ನಮ್ಮ ದೇಶದ ಜನರು ತಲಾ ೫ ಔನ್ಸ್ ಹಾಲನ್ನು ಸೇವಿಸುತ್ತಾರೆ ಅಮೇರಿಕದಲ್ಲಿ ೩೫ ಔನ್ಸ್ ಬ್ರಿಟನಿನಲ್ಲಿ ೪೦ ಔನ್ಸ್ ಡನ್ಮಾರ್ಕಿನಲ್ಲಿ ೪೦ ಆಸ್ಟ್ರೇಲಿಯಾದಲ್ಲಿ ೪೫ ಔನ್ಸ್

A. SUBBA RAO PAI MEMORIAL FUND

Canara High School,
MANGALORE, S K.

NOTICE

Applications for loan stipends from the above Fund should reach the Hon Secretary of the Fund on or before the 15th June 1948 While granting stipends, first preference will be given to those who are already undergoing courses with aid from this Fund. If funds are available after awarding the above said stipends, applications for TECHNICAL COURSES will be considered Applications for arts courses will be considered in cases of exceptional merit Only Gowd Saraswath Brahmins need apply

Application forms will be supplied free of cost on application to 'The Hon. Secretary, A Subba Rao Pai Memorial Fund, Canara High School, Mangalore, S K' While applying for forms please state if applications are for renewal of stipends or for fresh ones

J Vasudeva Pai,
Hon Secretary

Sri M Madhava Rao, B A, B L Vakil Mangalore having been the only candidate nominated to the vacant seat on the Canara High School Council, election to which was notified in January 1948, he has been declared duly elected to the said Council and the Canara High School Association

Canara High School, Mangalore 18 4 48 | M Appu Rao, Election Officer

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸ್‌ಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಚಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜ್ಯೋಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months . . . . 2½% p. a.
5 & 6 months . . 2¾% p. a

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಸುಟ್ಟುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 42] ತಾರೀಕು 30—4—1948 [ಸಂಚಿಕೆ 17]

ರಾಜಕೀಯ ತತ್ವವಿಚಾರ

ಅಂತರ್ರಾಷ್ಟ್ರೀಯ ಕೊಮ್ಯುನಿಸ್ಟರ ಕುತಂತ್ರ

ಭಾರತದಲ್ಲಿನ ಸರಕಾರವೆಲ್ಲ ಇಲ್ಲಿಯ ಕೊಮ್ಯುನಿಸ್ಟರ ಮೇಲೇಕೆ ಹಲ್ಲೆ ಮಾಡಿದರು? ಬಂಗಾಲದಲ್ಲಿ ಆ ಪಾರ್ಟಿಯನ್ನು ಅಕ್ರಮಗೊಳಿಸಲಾಯಿತು. ಬೊಂಬಾಯಿ, ಪೂನಾ, ಮದ್ರಾಸುಗಳಲ್ಲಿ ಕೊಮ್ಯುನಿಸ್ಟರನ್ನು ಹಿಡಿಯಲು ಸುತ್ತುಗಟ್ಟಿ ಕೈಸೆರೆಹಿಡಿದಿದ್ದಾರೆ. ಅವರ ಕೆಲ ಮುಖಂಡರು ಅಡಗಿಕೂತು ಖೋಲ ತಪ್ಪಿಸಿದ್ದಾರೆ. ಇಷ್ಟೊಂದು ಬಿರುಸಾದ ಕಾರ್ಯಕ್ರಮವೇಕೆಂದು ಪ್ರತಿಯೊಬ್ಬರು ಪ್ರಶ್ನಿಸುತ್ತಾರೆ. ಪ್ರಖ್ಯಾತ ಸೊಶಲಿಸ್ಟ್ ಧುರೀಣರಾದ ಶ್ರೀ ಅಶೋಕ ಮೇಥಾರವರು ಇದಕ್ಕುತ್ತರ ಕೊಡಲು ಪ್ರಯತ್ನಿಸಿದ್ದಾರೆ:–

ಭಾರತ ಸರಕಾರವು ಪ್ರತಿಗಾಮಿತ್ವದ ಸಂಕುಚಿತ ಧೋರಣೆಯನ್ನು ಸುವ್ಯವಸ್ಥಿತವಾಗಿ ಕೈಕೊಂಡ ಧೋರಣೆಯಿದೆಂದು ಕೊಮ್ಯುನಿಸ್ಟರು ತರ್ಕಿಸುತ್ತಾರೆ. ಹೊಟ್ಟೆಪಾಡಿನ ಕೆಲಸಗಾರರು ದಿನೇ ದಿನೇ ಪ್ರಕೋಪಗೊಳ್ಳುತ್ತಿರುವರೆಂದೂ ಪರಿಣಾಮವಾಗಿ ಅವರ ಚಳವಳದ ಭರವೂ ಹೆಚ್ಚುತ್ತಿದೆಯೆಂದೂ ವಾದಿಸುತ್ತ ಕೊಮ್ಯುನಿಸ್ಟರು "ಇದು ಭೀತಿಗೊಂಡ ಭಂಡವಾಳಶಾಹಿಯನ್ನು ಸಮಜಾಯಿಸಲು ಸರಕಾರವು ಹೀಗೆ ವರ್ತಿಸುತ್ತದೆ" ಎಂದೆನ್ನುತಿದ್ದಾರೆ.

ಆರ್ ಎಸ್ ಎಸ್ ಸಂಸ್ಥೆಯನ್ನು ಮುರಿದಿಕ್ಕುವ ತಮ್ಮ ಪ್ರಯತ್ನಗಳಾದ ನಂತರ ಕೊಮ್ಯುನಿಸ್ಟರ ಮೇಲೆ ಖಂಡಿತ ಗಧಾಪ್ರಹಾರವಾಗುವುದೆಂದು ಪ್ರಖ್ಯಾತ ಕೊಮ್ಯುನಿಸ್ಟ್ ನಿರ್ದೇಶಕ ಶ್ರೀ ಎಂ. ಎನ್ ಜೋಶಿಯವರು ನನಗೆ ತಿಳಿಸಿದ್ದರು. ನೆಹರು ಸರಕಾರವು ಸಂಪೂರ್ಣ ಪ್ರತಿಗಾಮಿಯಾಗಿದೆಯೊ, ಅಥವಾ ಅದು ಜಮೀನ್ದಾರರ ಮತ್ತು ಭಂಡವಲಗಾರರ ನಿರ್ದೇಶಕ್ಕನುಸಾರವಾಗಿ ಆಡಳಿತ ನಿರ್ವಹಿಸುವುದೊ, ಇಲ್ಲವೆ ಅಮೇರಿಕದ ಡಾಲರ್ ರಾಜಕುತಂತ್ರಿಗಳ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಕೈವಾಡವು ಇದರಲ್ಲಿದೆಯೊ?

ಗಾಳಿಬಂದಂತೆ ಹಾಯಿಹಿಡಿದರು

ಕೊಮ್ಯುನಿಸ್ಟರ ಪ್ರಸ್ತುತದ ಧೋರಣೆ ತಿಳಿಯಬೇಕಾದರೆ ಇಂದಿಗೆ ಎರಡು ವರ್ಷಗಳ ಹಿಂದಿನಿಂದ ಆ ಪಾರ್ಟಿಯ ಸಿಡುಕು ಮಿಡುಕುಗಳು ಹೇಗಿದ್ದುವೆಂಬುದನ್ನು ತಕ್ಕಮಟ್ಟಿಗೆ ತಿಳಿಯಬೇಕು. ೧೯೪೧ರಲ್ಲಿ ರಶ್ಯವು ಜರ್ಮನಿ ವಿರುದ್ಧವಾಗಿ ಮಿತ್ರರಾಷ್ಟ್ರಗಳೊಡನೆ ಸೇರಿದಾಗ ಭಾರತ ಕೊಮ್ಯುನಿಸ್ಟರು ಇದು ಜನರ ಯುದ್ಧವೆಂದು ಬೊಬ್ಬಿಟ್ಟರು. ಸುಭಾಸ್ ಬೋಸ್ ಮತ್ತು ಜಯಪ್ರಕಾಶರು ಜಪಾನಿಗಳ ಏಜಂಟರೆಂದವರು ಸಾರಿದರು. ಬಂಗಾಳದಲ್ಲಿ "ಸುಭಾಸರನ್ನು ಸಾಯಿಸುವ" ಒಂದು ಮೃತ್ಯು ಕೂಟವೇ ಸಿದ್ಧವಾಗಿತ್ತು. ೧೯೪೨ರ ಆಗಸ್ಟ್‌ನಲ್ಲಿ 'ಕ್ವಿಟ್ ಇಂಡಿಯಾ' ಚಳವಳಿಯಾದಾಗ ಕೊಮ್ಮಿಗಳು (ಕೊಮ್ಯುನಿಸ್ಟರು ಎಂಬುದರ ಸಂಕ್ಷೇಪ ರೂಪ) ರಾಷ್ಟ್ರೀಯ ಜೀವನದ ಪ್ರಮುಖ ಪ್ರವಾಹದಿಂದ ಬೇರ್ಪಟ್ಟರು. ಯುದ್ಧಾನಂತರ ರಶ್ಯದ ವಿದೇಶಾಂಗ ಧೋರಣೆಯೂ ಮಾರ್ಪಟ್ಟಿತು. ಆದರೊಡನೆ ಭಾರತೀಯ ಕೊಮ್ಮಿಗಳು (Commies) ೧೯೪೨ರಲ್ಲಿ ತಾವು ಕಳಕೊಂಡ ಸಾರ್ವಜನಿಕ ಸಹಾನುಭೂತಿಯನ್ನು ಪುನರ್ ಸಂಪಾದಿಸುವ ಉದ್ದೇಶದಿಂದ ಬ್ರಿಟಿಷ್ ವಿರೋಧಿ ಧೋರಣವನ್ನು ತಾಳಿದರು. ಅದೇ ಸಮಯಕ್ಕೆ ಮುಂಬಯಿಯಲ್ಲಾದ ನೌಕಾ ಮುಷ್ಕರ, ಕಲ್ಕತ್ತದಲ್ಲಾದ ವಿದ್ಯಾರ್ಥಿ ಮುಷ್ಕರ, ಮದ್ರಾಸದಲ್ಲಾದ ರೈಲ್ವೇ ಮುಷ್ಕರ, ಇವುಗಳಲ್ಲಿ ತಲೆಯಾಡಿಸಿ ಮುಂಬರಲು ಅವರು ಸಾಧಿಸಿದರು. ಫ್ರಾನ್ಸ್ ಇಟಲಿಗಳನ್ನು ಜರ್ಮನರು ವಶಪಡಿಸಿ ಆಳಿಕೊಂಡಿದ್ದಾಗ ಅಲ್ಲಿನ ಕೆಂಪು ಪಕ್ಷದವರು ತಮ್ಮ ಅಪ್ರತಿಹವಾದ ಪ್ರತಿಭಟನೆಯಿಂದ ಸಂಪಾದಿಸಿದ ಕೀರ್ತಿಯನ್ನು ಇಲ್ಲಿಯವರೂ ಹೊಂದಲು ಆತುರರಾದರು. ಅಂತೇ ಅವರು ಕೆಲ ನಗರಗಳಲ್ಲಿ ತಮ್ಮ ಪ್ರಭಾವದ ಕೆಲ ರಾಜ್ಯಗಳನ್ನು ಸಜ್ಜುಗೊಳಿಸಿ ಮುಂದೆ ಖಂಡಿತ ಉಂಟಾಗುವುದೆಂದು ನಿರೀಕ್ಷಿಸಲ್ಪಟ್ಟ ಗಲಭೆಗಳ ಅನುಕೂಲತೆ ಪಡೆಯಲು ಅವರು ಹೊಂಚುಹಾಕುವವರಾದರು.

ರಶ್ಯದ ಕಪಿಚೇಷ್ಟೆ

ಬ್ರಿಟಿಷ್ ಧೋರಣೆಯ ನಿಜರೂಪವನ್ನು ಬೆವಿನ್ನರು ಪ್ರಕಟಿಸಿದಾಗ ರಶ್ಯವು ಬದ್ಧ ಬ್ರಿಟಿಷ್ ವಿರೋಧತ್ವ ತಾಳಿತು. ಕೂಡಲೇ ಕೊಮ್ಯುನಿಸ್ಟರು ಇಲ್ಲಿಯ ಬ್ರಿಟಿಷ ವಿರೋಧ ಚಳವಳಕಿಡಿಗೆ ಗಾಳಿಹಾಕಿ ಉರಿಯೆಬ್ಬಿಸಲು ಪ್ರಯತ್ನಮಾಡಿದರು. ತಮ್ಮ ಕೇಂದ್ರಗಳಿಗೆ ರಾಷ್ಟ್ರೀಯಪಕ್ಷದವರನ್ನೆಳೆಯಲೂ ಅವರು ಅಲ್ಲಲ್ಲಿ ಯತ್ನಿಸಿದರು. ಈ ಕಾಲಕ್ಕೆ ಸರಿಯಾಗಿ ತಿರುವಾಂಕೂರಿನಲ್ಲಿ ಕೊಮ್ಯುನಿಸ್ಟರು ಒಂದು ಧೈರ್ಯದ ದಂಗೆಯನ್ನೆಬ್ಬಿಸಲು ಯತ್ನಿಸಿದರು. ಆ ಸಂಸ್ಥಾನವನ್ನು ವಶೀಕರಿಸಲು ಮಾಡಿದ ಸಂಯೋಜಿತ ತಂತ್ರವದು. ಆದರೆ ಅಲ್ಲಿನ ಸಂಸ್ಥಾನ ಕೊಂಗ್ರೆಸು ಕೊಮ್ಯುನಿಸ್ಟರ ಬಲೆಗೆ ಬೀಳದಷ್ಟು ವಿವೇಕ ತಾಳಿದ್ದರಿಂದ ಈ ದಂಗೆ ಚಿಂತಾಜನಕ ಪರಿಸ್ಥಿತಿಯಲ್ಲಿ ನಿರ್ನಾಮವಾಯಿತು. ಇಂತಹದೇ ಯತ್ನಗಳು ದಕ್ಷಿಣಭಾರತದ ಅನೇಕ ಮಜೂರ ಕೇಂದ್ರಗಳಲ್ಲಿ ಮಾಡಲಾದುವು. ಕೆಲವು ಕಡೆ ಕೊಲೆಪಾತಕಗಳೂ ನಿರ್ವಹಿಸಲ್ಪಟ್ಟವು. ಇದೇ ಸಮಯಕ್ಕೆ ಸಮಸ್ತ ಭಾರತ ದೇಶದ ರೈಲು ಕೆಲಸಗಾರರ ಮುಷ್ಕರವನ್ನೂ ಮಾಡಲೂ ಅವರು ಪ್ರಯತ್ನಪಟ್ಟಿದರು. ಆದರೆ ಅಖಿಲ ಭಾರತ ರೈಲ್ವೇ ಕೆಲಸಗಾರರ ಫೆಡರೇಶನ ಅಧ್ಯಕ್ಷರಾದ ಜಯಪ್ರಕಾಶ ನಾರಾಯಣರು ಆ ಯತ್ನಗಳನ್ನು ಮಣ್ಣುಗೂಡಿಸಿದರು.

ನೆಹರುಸರಕಾರಕ್ಕೆ ಬೆಂಬಲ

ತನ್ಮಧ್ಯೆ ಅತ್ತ ಯುನೈಟೆಡ್ ನೇಶನ್ಸ ಸಭೆಯಲ್ಲಿ ಭಾರತ ಪ್ರತಿನಿಧಿಯಾಗಿ ಹೋಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಬ್ರಿಟಿಷ್ ಅಮೇರಿಕನ್ನರ ಪ್ರಭಾವದಿಂದ ದೂರವಿದ್ದ ಸ್ವತಂತ್ರ ತರದ ಧೋರಣೆಯನ್ನೇ ಅನುಸರಿಸುತ್ತಿದ್ದರು. ಇದು ರಶ್ಯನ್ ಪರವಾದುದೆಂದು ನಮ್ಮ ಕೊಮ್ಯುನಿಸ್ಟರು ಅರ್ಥಮಾಡಿಕೊಂಡರು. ಪರಿಣಾಮವಾಗಿ ಅವರು ನೆಹರು ಸರಕಾರಕ್ಕೆ ಬೆಂಬಲಕೊಡತೊಡಗಿದರು. ಕಳಕಳಿಯಿಂದ ಬಿನ್ನವಿಸುತ್ತಿದ್ದರು. ನೆಹರು ಸರಕಾರಕ್ಕೆ ಬೆಂಬಲ ಕಡಿಮೆಯಾಗದಿರಲೊ ಎಂಬಂತೆ ೧೯೪೭ರಲ್ಲಿ ಸರಕಾರವು ರೈಲ್ವೇ ಕೆಲಸಗಾರರಿಗೆ ತೃಪ್ತಿಕರ ಸವಲತ್ತುಗಳನ್ನು ಕೊಟ್ಟರೆಂದು ಶ್ಲಾಘಿಸಿದರು. "ನೆಹರು ಸರಕಾರ ರೈಲ್ವೇ ಕೆಲಸಗಾರರ ಕೇಳಿಕೆಗೆ ಮಾನ್ಯವಿತ್ತಿದೆ" ಎಂದು ಅವರ "ಪೀಪಲ್ಸ್ ಏಜ್" ಪತ್ರಿಕೆ ಶಿರೋನಾಮೆ ಧರಿಸಿತು. ಆ ನಂತರ ಅವರು ತಮ್ಮದೇ ಆದ ಪತ್ರಿಕೆಗಳನ್ನು ಹೊರಡಿಸುವ ಯತ್ನದಲ್ಲಿ ತೊಡಗಿದರು. ಬೊಂಬಾಯಿಯ ಓರ್ವ ಪತ್ರಸ್ಥಾಪಕರಿಗೆ ತಮ್ಮ ಪರವಾಗಿ ಪ್ರಚಾರ ಕೈಕೊಂಡರೆ ಲಕ್ಷಾಂತರ ರೂಪಾಯಿ ಕೊಡುವುದಾಗಿಯೂ ಅವರು ಆಶೆ ಹುಟ್ಟಿಸಿದರಂತೆ. ಈ ಕೆಂಪು ಜನರು ಅದೆಷ್ಟು ಶ್ರೀಮಂತರಿರುವರು!

ಈ ದಾಂಪತ್ಯ ಬಹುಕಾಲ ಬಾಳಲಿಲ್ಲ. "ಪ್ರಥಮಾಲಿಂಗನೇ ಹಸ್ತಭಗ್ನೇ" ಎಂಬಂತೆ ಅತ್ತ ಯುರೋಪಿನಲ್ಲಿ ಅಂತರಾಷ್ಟ್ರೀಯ ಕೊಮ್ಯುನಿಸ್ಟ್ ಪಕ್ಷವು ಪುನರುಜ್ಜೀವನ (ಯುದ್ಧಕಾಲದಲ್ಲಿದರ ವಿಸರ್ಜನೆಯಾಗಿ ತಿಲಾಂಜಲಿಯೀಯಲ್ಪಟ್ಟಿತ್ತು) ಗೊಳಿಸಲ್ಪಡುವುದರೊಡನೆ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳ ಮೇಲೆ ಎಲ್ಲಾ ದೇಶಗಳ ಕೊಮ್ಯುನಿಸ್ಟರು ಲೆನಿನನ ಪ್ರಖ್ಯಾತ ಕುಯುಕ್ತಿಯ ವಿರೋಧ ಪ್ರಚಾರದ ಯುದ್ಧ ಪ್ರಾರಂಭಿಸಿದರು. ಅಂತೇ ಭಾರತದಲ್ಲೂ ಕೊಮ್ಯುನಿಸ್ಟರು ನೆಹರು ಸರಕಾರದ ಮೇಲೂ ವಿರೋಧ ಸಮರ ಸಾರಿದರು. ಇಲ್ಲಾಗ ಪ್ರತಿಯೊಂದು ಗಲಭೆಯನ್ನು ಹುರಿಗೊಳಿಸುವುದು, ಬಿಕ್ಕಟ್ಟು, ಪರ್ಷಣೆಗಳನ್ನುಂಟುಮಾಡುವುದು ಇದೇ ಹೊಸ ಧೋರಣೆಯ ಮುಖ್ಯ ತಂತ್ರ. ಒಂದು ಉದಾಹರಣೆ ಅಖಿಲಭಾರತ ರೈಲ್ವೇ ಕೆಲಸಗಾರರ [illegible] ಮುಷ್ಕರ [illegible] ಪ್ರಚೋದಿಸಲ್ಪಟ್ಟರು.

ರಶ್ಯದ ರಾಕ್ಷಸೀ ಬೆಳವಣಿಗೆ

ಈ [illegible] ರಶ್ಯದ ವಿಸ್ತಾರೀಕರಣದ ಧೋರಣೆ [illegible] ವತ್ತಿಷ್ಟು ಭರದಿಂದ ಸಾಗಹತ್ತಿತು. ಇದಕ್ಕೆ ಬಲಿಬಿದ್ದ ಕೊನೆಯ ಜನಾಂಗ ಜೆಕೊಸ್ಲೊವೇಕಿಯಾ. ಅತ್ತ ಭೂಮಧ್ಯ ಸಮುದ್ರದಲ್ಲಿ ತುರ್ಕಿ ಗ್ರೀಸ್, ಇಟಲಿಗಳಲ್ಲಿ [illegible] ನಡೆಸಲ್ಪಡುತ್ತಿವೆ [illegible] ಗತಿ[illegible] ದೇಶಗಳಲ್ಲಿ ಮೊದಲು [illegible] ಗೊಳಿಸಿಹದನ್ನಾಗಿರಿಸುವುದೇ [illegible] ಧ್ಯೇಯ. ಹೀಗೆ ಯುರೋಪಿನಲ್ಲಿ ತಮ್ಮ [illegible] ಟಕ ಚೈತನ್ಯವು ಏಶ್ಯಾದ ಕಡೆ ತಿರುಗಿಸಲ್ಪಟ್ಟಿತು. ಅತ್ತ ಚೀನ, ಇತ್ತ ಬರ್ಮಾ ಮತ್ತೀಕಡೆ ಭಾರತ, ಇವುಗಳ ಮಧ್ಯದಲ್ಲಿ ಬಂಗಾಲವಿದೆ. ಅದೇ ಬಲವಾದ ಕೇಂದ್ರವಾಗಿ ಸ್ವೀಕರಿಸಲ್ಪಟ್ಟಿತು. ಪಿ. ಸಿ. ಜೋಶಿಯವರು ನಾಯಕರಾಗಿಯೂ ಚುನಾಯಿಸಲ್ಪಟ್ಟರು. (ಸಶೇಷ)

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . . . 2¼% p. a.

5 & 6 months . . . . . 2½% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು; ಗಾಯಗಳು, ಘಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of 37 years avialable to you for arranging Insurance Investment. It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಉಂಟು ವುದು. ಸೂತಿಕಾ ರೋಗಗಳನ್ನು ಕಡೆಗಿಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 30—4—1948 [ಸಂಚಿಕೆ 17]

ರಾಜಕೀಯ ತತ್ವವಿಚಾರ

ಅಂತರ್ರಾಷ್ಟ್ರೀಯ ಕೊಮ್ಯುನಿಸ್ಟರ ಕುತಂತ್ರ

ಭಾರತದಲ್ಲಿನ ಸರಕಾರವೆಲ್ಲ ಇಲ್ಲಿಯ ಕೊಮ್ಯುನಿಸ್ಟರ ಮೇಲೇಕೆ ಹಲ್ಲೆ ಮಾಡಿದರು? ಬಂಗಾಲದಲ್ಲಿ ಆ ಪಾರ್ಟಿಯನ್ನು ಅಕ್ರಮಗೊಳಿಸಲಾಯಿತು. ಬೊಂಬಾಯಿ, ಪೂನಾ, ಮದ್ರಾಸುಗಳಲ್ಲಿ ಕೊಮ್ಯುನಿಸ್ಟರನ್ನು ಹಿಡಿಯಲು ಸುತ್ತುಗಟ್ಟಿ ಕೈಸೆರೆಹಿಡಿದಿದ್ದಾರೆ. ಅವರ ಕೆಲ ಮುಖಂಡರು ಅಡಗಿಕೊಂಡು ಬೋಲ ತಪ್ಪಿಸಿದ್ದಾರೆ. ಇಷ್ಟೊಂದು ಬಿರುಸಾದ ಕಾರ್ಯಕ್ರಮವೇಕೆಂದು ಪ್ರತಿಯೊಬ್ಬರು ಪ್ರಶ್ನಿಸುತ್ತಾರೆ. ಪ್ರಖ್ಯಾತ ಸೊಶಲಿಸ್ಟ್ ಧುರೀಣರಾದ ಶ್ರೀ ಅಶೋಕ ಮೇಹತಾರವರು ಇದಕ್ಕುತ್ತರ ಕೊಡಲು ಪ್ರಯತ್ನಿಸಿದ್ದಾರೆ:

ಭಾರತ ಸರಕಾರವು ಪ್ರತಿಗಾಮಿತ್ವದ ಸಂಕುಚಿತ ಧೋರಣೆಯನ್ನು ಸುವ್ಯವಸ್ಥಿತವಾಗಿ ಕೈಕೊಂಡ ಧೋರಣೆಯಿದೆಂದು ಕೊಮ್ಯುನಿಸ್ಟರು ತರ್ಕಿಸುತ್ತಾರೆ. ಹೊಲ ಕಾರ್ಖಾನೆಗಳ ಕೆಲಸಗಾರರು ದಿನೇ ದಿನೇ ಪ್ರಕೋಪಗೊಳ್ಳುತ್ತಿರುವರೆಂದೂ ಪರಿಣಾಮವಾಗಿ ಅವರ ಚಳವಳದ ಭರವೂ ಹೆಚ್ಚುತ್ತಿದೆಯೆಂದೂ ವಾದಿಸುತ್ತ ಕೊಮ್ಯುನಿಸ್ಟರು "ಇದು ಭೀತಿಗೊಂಡ ಭಂಡವಾಳಶಾಹಿಯನ್ನು ಸಮಜಾಯಿಸಲು ಸರಕಾರವು ಹೀಗೆ ವರ್ತಿಸುತ್ತದೆ" ಎಂದೆನ್ನುತ್ತಿದ್ದಾರೆ.

ಆರ್ ಎಸ್ ಎಸ್ ಸಂಸ್ಥೆಯನ್ನು ಮುರಿದಿಕ್ಕುವ ತಮ್ಮ ಪ್ರಯತ್ನಗಳಾದ ನಂತರ ಕೊಮ್ಯುನಿಸ್ಟರ ಮೇಲೆ ಖಂಡಿತ ಗದಾಪ್ರಹಾರವಾಗುವುದೆಂದು ಪ್ರಖ್ಯಾತ ಕೊಮ್ಯುನಿಸ್ಟ್ ನಿರ್ದೇಶಕ ಶ್ರೀ ಎಂ. ಎನ್. ಜೋಶಿಯವರು ನನಗೆ ತಿಳಿಸಿದ್ದರು. ನೆಹರು ಸರಕಾರವು ಸಂಪೂರ್ಣ ಪ್ರತಿಗಾಮಿಯಾಗಿದೆಯೊ, ಅಥವಾ ಅದು ಜಮೀನ್ದಾರರ ಮತ್ತು ಭಂಡವಲಗಾರರ ನಿರ್ದೇಶಕ್ಕನುಸಾರವಾಗಿ ಆಡಳಿತ ನಿರ್ವಹಿಸುವದೊ, ಇಲ್ಲವೆ ಅಮೇರಿಕದ ಡಾಲರ್ ರಾಜಕುತಂತ್ರಿಗಳ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಕೈವಾಡವು ಇದರಲ್ಲಿದೆಯೊ?

ಗಾಳಿಬಂದಂತೆ ಹಾಯಿಹಿಡಿದರು

ಕೊಮ್ಯುನಿಸ್ಟರ ಪ್ರಸ್ತುತದ ಧೋರಣೆ ತಿಳಿಯಬೇಕಾದರೆ ಇಂದಿಗೆ ಎರಡು ವರ್ಷಗಳ ಹಿಂದಿನಿಂದ ಆ ಪಾರ್ಟಿಯ ಸಿಡುಕು ಮಿಡುಕುಗಳು ಹೇಗಿದ್ದುವೆಂಬುದನ್ನು ತಕ್ಕಮಟ್ಟಿಗೆ ತಿಳಿಯಬೇಕು. ೧೯೪೧ರಲ್ಲಿ ರಶ್ಯವು ಜರ್ಮನಿ ವಿರುದ್ಧವಾಗಿ ಮಿತ್ರರಾಷ್ಟ್ರಗಳೊಡನೆ ಸೇರಿದಾಗ ಭಾರತ ಕೊಮ್ಯುನಿಸ್ಟರು ಇದು ಜನರ ಯುದ್ಧವೆಂದು ಬೊಬ್ಬಿಟ್ಟರು. ಸುಭಾಸ್ ಭೋಸ್ ಮತ್ತು ಜಯಪ್ರಕಾಶರು ಜಪಾನಿಗಳ ಏಜಂಟರೆಂದವರು ಸಾರಿದರು. ಬಂಗಾಳದಲ್ಲಿ "ಸುಭಾಷರನ್ನು ಸಾಯಿಸು" ಎಂದು ನೃತ್ಯ ಕೂಟವೇ ಸಿದ್ಧವಾಗಿತ್ತು. ೧೯೪೨ರ ಆಗಸ್ಟ್‌ನಲ್ಲಿ 'ಕ್ವಿಟ್ ಇಂಡಿಯಾ' ಚಳವಳಿಯಾದಾಗ ಕೊಮ್ಮಿಗಳು (ಕೊಮ್ಯುನಿಸ್ಟರು ಎಂಬುದರ ಸಂಕ್ಷೇಪರೂಪ) ರಾಷ್ಟ್ರೀಯ ಜೀವನದ ಪ್ರವಾಹದಿಂದ ಹೊರಬಿದ್ದರು. ಯುದ್ಧಾನಂತರ ರಶ್ಯದ ವಿದೇಶಾಂಗ ಧೋರಣೆಯೂ ಮಾರ್ಪಟ್ಟಿತು. ಆದರೆ ಇದನೆ ಭಾರತೀಯ ಕೊಮ್ಮಿಗಳು (Commies) ೧೯೪೬ರಲ್ಲಿ ತಾವು ಕಳಕೊಂಡ ಸಾರ್ವಜನಿಕ ಸಹಾನುಭೂತಿಯನ್ನು ಪುನರ್ ಸಂಪಾದಿಸುವ ಉದ್ದೇಶದಿಂದ ಬ್ರಿಟಿಷ್ ವಿರೋಧಿ ಧೋರಣವನ್ನು ತಾಳಿದರು. ಅದೇ ಸಮಯಕ್ಕೆ ಬೊಂಬಾಯಿಯಲ್ಲಾದ ನೌಕಾ ಮುಷ್ಕರ, ಕಲ್ಕತ್ತದಲ್ಲಾದ ವಿದ್ಯಾರ್ಥಿ ಮುಷ್ಕರ, ಮದ್ರಾಸದಲ್ಲಾದ ರೈಲ್ವೇ ಮುಷ್ಕರ, ಇವುಗಳಲ್ಲಿ ತಲೆಯಿಕ್ಕಿ ಮುಂಬರಲು ಅವರು ಸಾಧಿಸಿದರು. ಫ್ರಾನ್ಸ್ ಇಟಲಿಗಳನ್ನು ಜರ್ಮನರು ವಶಪಡಿಸಿ ಆಳಿಕೊಂಡಿದ್ದಾಗ ಅಲ್ಲಿನ ಕೆಂಪು ಪಕ್ಷದವರು ತಮ್ಮ ಅಪ್ರತಿಹವಾದ ಪ್ರತಿಭಟನೆಯಿಂದ ಸಂಪಾದಿಸಿದ ಕೀರ್ತಿಯನ್ನು ಇಲ್ಲಿಯವರೂ ಹೊಂದಲು ಆತುರಪಡುವರು. ಅಂತೇ ಅವರು ಕೆಲ ನಗರಗಳಲ್ಲಿ ತಮ್ಮ ಪ್ರಭಾವದ ಕೆಲ ರಾಣ್ಯಗಳನ್ನು ಸಜ್ಜುಗೊಳಿಸಿ ಮುಂದೆ ಖಂಡಿತ ಉಂಟಾಗುವುದೆಂದು ನಿರೀಕ್ಷಿಸಲ್ಪಟ್ಟ ಗಲಭೆಗಳ ಅನುಕೂಲತೆ ಪಡೆಯಲು ಅವರು ಹೊಂಚುಹಾಕುವವರಾದರು.

ರಶ್ಯದ ಕಪಿಚೇಷ್ಟೆ

ಬ್ರಿಟಿಷ್ ಧೋರಣೆಯ ನಿಜರೂಪವನ್ನು ಬೆವಿನ್ನರು ಪ್ರಕಟಿಸಿದಾಗ ರಶ್ಯವು ಬದ್ಧ ಬ್ರಿಟಿಷ್ ವಿರೋಧತ್ವ ತಾಳಿತು. ಕೂಡಲೇ ಕೊಮ್ಯುನಿಸ್ಟರು ಇಲ್ಲಿಯ ಬ್ರಿಟಿಷ ವಿರೋಧ ಚಳವಳಕಿಡಿಗೆ ಗಾಳಿಹಾಕಿ ಉರಿಯೆಬ್ಬಿಸಲು ಪ್ರಯತ್ನಮಾಡಿದರು. ತಮ್ಮ ಕೇಂದ್ರಗಳಿಗೆ ರಾಷ್ಟ್ರೀಯಪಕ್ಷದವರನ್ನೆಳೆಯಲೂ ಅವರು ಅಲ್ಲಲ್ಲಿ ಯತ್ನಿಸಿದರು. ಈ ಕಾಲಕ್ಕೆ ಸರಿಯಾಗಿ ತಿರುವಾಂಕೂರಿನಲ್ಲಿ ಕೊಮ್ಯುನಿಸ್ಟರು ಒಂದು ಧೈರ್ಯದ ದಂಗೆಯನ್ನೆಬ್ಬಿಸಲು ಯತ್ನಿಸಿದರು. ಆ ಸಂಸ್ಥಾನವನ್ನು ವಶೀಕರಿಸಲು ಮಾಡಿದ ಸುಯೋಜಿತ ತಂತ್ರವದು. ಆದರೆ ಅಲ್ಲಿನ ಸಂಸ್ಥಾನ ಕೊಂಗ್ರೆಸು ಕೊಮ್ಯುನಿಸ್ಟರ ಬಲೆಗೆ ಬೀಳದಷ್ಟು ವಿವೇಕ ತಾಳಿದ್ದರಿಂದ ಈ ದಂಗೆ ಚಿಂತಾಜನಕ ಪರಿಸ್ಥಿತಿಯಲ್ಲಿ ನಾಶವಾಯಿತು. ಇಂತಹದೇ ಯತ್ನಗಳು ದಕ್ಷಿಣಭಾರತದ ಅನೇಕ ಮಜೂರ ಕೇಂದ್ರಗಳಲ್ಲಿ ಮಾಡಲಾದುವು. ಕೆಲವು ಕತ ಕೊಲೆಘಾತಕಗಳೂ ನಿರ್ವಹಿಸಲ್ಪಟ್ಟುವು. ಇದೇ ಸಮಯಕ್ಕೆ ಸಮಸ್ತ ಭಾರತ ದೇಶದ ರೈಲು ಕೆಲಸಗಾರರ ಮುಷ್ಕರವನ್ನೂ ಮಾಡಲೂ ಅವರು ಪ್ರಯತ್ನಮಾಡಿದರು. ಆದರೆ ಅಖಿಲ ಭಾರತ ರೈಲ್ವೇ ಕೆಲಸಗಾರರ ಫೆಡರೇಶನ ಅಧ್ಯಕ್ಷರಾದ ಜಯಪ್ರಕಾಶ ನಾರಾಯಣರು ಆ ಯತ್ನಗಳನ್ನು ಮಣ್ಣುಗೂಡಿಸಿದರು.

ನೆಹರುಸರಕಾರಕ್ಕೆ ಬೆಂಬಲ

ತನ್ಮಧ್ಯೆ ಅತ್ತ ಯುಕ್ತರಾಷ್ಟ್ರ ಸಭೆಯಲ್ಲಿ ಭಾರತ ಪ್ರತಿನಿಧಿಯಾಗಿ ಹೋಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಬ್ರಿಟಿಷ್ ಅಮೇರಿಕನ್ನರ ಪ್ರಭಾವದಿಂದ ದೂರವಿದ್ದು ಸ್ವತಂತ್ರ ತರದ ಧೋರಣೆಯನ್ನೇ ಅನುಸರಿಸುತ್ತಿದ್ದರು. ಇದು ರಶ್ಯನ್ ಪರವಾದುದೆಂದು ನಮ್ಮ ಕೊಮ್ಯುನಿಸ್ಟರು ಅರ್ಥಮಾಡಿಕೊಂಡರು. ಪರಿಣಾಮವಾಗಿ ಅವರು ನೆಹರು ಸರಕಾರಕ್ಕೆ ಬೆಂಬಲಕೊಡಿರೆಂದು ಕಳಕಳಿಯಿಂದ ಬಿನ್ನವಿಸಹತ್ತಿದರು, ನೆಹರು ಸರಕಾರಕ್ಕೆ ಬೆಂಬಲ ಕಡಿಮೆಯಾಗಿದೆಯೊ ಎಂಬಂತೆ. ೧೯೪೭ರಲ್ಲಿ ಸರಕಾರವು ರೈಲ್ವೇ ಕೆಲಸಗಾರರಿಗೆ ತೃಪ್ತಿಕರ ಸವಲತ್ತುಗಳನ್ನು ಕೊಟ್ಟರೆಂದು ಶ್ಲಾಘಿಸಿದರು. "ನೆಹರು ಸರಕಾರ ರೈಲ್ವೇ ಕೆಲಸಗಾರರ ಕೇಳಿಕೆಗೆ ಮಾನ್ಯತೆಯಿತ್ತಿದೆ" ಎಂದು ಅವರ "ಪೀಪಲ್ಸ್ ಏಜ್" ಪತ್ರಿಕೆ ಶಿರೋನಾಮೆ ಧರಿಸಿತು. ಆ ನಂತರ ಅವರು ತಮ್ಮದೇ ಆದ ಪತ್ರಿಕೆಗಳನ್ನು ಹೊರಡಿಸುವ ಯತ್ನದಲ್ಲಿ ತೊಡಗಿದರು. ಬೊಂಬಾಯಿಯ ಓರ್ವ ಪತ್ರಿಕಾವ್ಯಾಲಕರಿಗೆ ತಮ್ಮ ಪರವಾಗಿ ಪ್ರಚಾರ ಕೈಕೊಂಡರೆ ಲಕ್ಷಾಂತರ ರೂಪಾಯಿ ಕೊಡುವುದಾಗಿಯೂ ಅವರು ಆಶೆ ಹುಟ್ಟಿಸಿದರಂತೆ. ಈ ಕೆಂಪು ಜನರು ಅದೆಷ್ಟು ಶ್ರೀಮಂತರಿರುವರು!

ಈ ದಾಂಪತ್ಯ ಬಹುಕಾಲ ಬಾಳಲಿಲ್ಲ. "ಪ್ರಥಮಾಲಿಂಗನೇ ಹಸ್ತಭಗ್ನೇ" ಎಂಬಂತೆ ಅತ್ತ ಯುರೋಪಿನಲ್ಲಿ ಅಂತರರಾಷ್ಟ್ರೀಯ ಕೊಮ್ಯುನಿಸ್ಟ್ ಪಕ್ಷವು ಪುನರುಜ್ಜೀವನ (ಯುದ್ಧಕಾಲದಲ್ಲಿದರ ವಿಸರ್ಜನೆಯಾಗಿ ತಿಲಾಂಜಲಿಯೀಯಲ್ಪಟ್ಟಿತ್ತು) ಗೊಳಿಸಲ್ಪಡುವುದರೊಡನೆ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳ ಮೇಲೆ ಎಲ್ಲಾ ದೇಶಗಳ ಕೊಮ್ಯುನಿಸ್ಟರು ಲೆನಿನನ ಪ್ರಖ್ಯಾತ ಕುಯುಕ್ತಿಯ ವಿರೋಧ ಪ್ರಚಾರದ ಯುದ್ಧ ಪ್ರಾರಂಭಿಸಿದರು. ಅಂತೇ ಭಾರತದಲ್ಲೂ ಕೊಮ್ಯುನಿಸ್ಟರು ನೆಹರು ಸರಕಾರದ ಮೇಲೂ ವಿರೋಧ ಸಮರ ಸಾರಿದರು. ಇಲ್ಲಾಗ ಪ್ರತಿಯೊಂದು ಗಲಭೆಯನ್ನು ಹಚ್ಚಿಸುವುದು, ಬಿಕ್ಕಟ್ಟು ಘರ್ಷಣೆಗಳನ್ನುಂಟುಮಾಡುವುದು, ಇದೇ ಹೊಸ ಧೋರಣೆಯ ಮುಖ್ಯ ತಂತ್ರ. ಒಂದು ಉದಾಹರಣೆ: ಅಖಿಲಭಾರತ ರೈಲ್ವೇ ಕೆಲಸಗಾರರು ಆದಷ್ಟು ಶೀಘ್ರದಲ್ಲಿ ಮುಷ್ಕರ ಹೂಡುವಂತೆ ಪ್ರಚೋದಿಸಲ್ಪಟ್ಟರು.

ರಶ್ಯದ ರಾಕ್ಷಸೀ ಬೆಳವಣಿಗೆ

ಈ ಸಲ ರಶ್ಯದ ವಿಸ್ತರೀಕರಣದ ಧೋರಣೆಯು ಮತ್ತಷ್ಟು ಭರದಿಂದ ಸಾಗಹತ್ತಿತು. ಇದಕ್ಕೆ ಬಲಿಬಿದ್ದ ಕೊನೆಯ ಜನಾಂಗ ಜೆಕೋಸ್ಲೋವೇಕಿಯಾ. ಅತ್ತ ಭೂಮಧ್ಯ ಸಮುದ್ರದಲ್ಲಿ [illegible], ಇಟಲಿಗಳಲ್ಲಿ [illegible] ನಡೆಸಲ್ಪಡುತ್ತಿವೆ. [illegible] ಡೆಮಕ್ರಸಿ [illegible] ಯನ್ನು ಗ[illegible] ದೇಶಗಳಲ್ಲಿ ಮೊದಲು ಪರಿಸ್ಥಿತಿಯನ್ನು ಹಣ್ಣುಗೊಳಿಸುವವನಾಗಿರುವುದೇ ಅವರ ಧ್ಯೇಯ. ಹೀಗೆ ಯುರೋಪಿನಲ್ಲಿ ತಮ್ಮ ರಾಜಕೀಯ ಸ್ಫೋಟಕ ಚೈತನ್ಯವು [illegible] ಏಶ್ಯದ ಕಡೆ ತಿರುಗಿಸಲ್ಪಟ್ಟಿತು. ಅತ್ತ ಚೀನ, ಇತ್ತ ಬರ್ಮಾ ಮತ್ತೀಕಡೆ ಭಾರತ, ಇವುಗಳ ಮಧ್ಯದಲ್ಲಿ ಬಂಗಾಲವಿದೆ. ಅದೇ ಬಲವಾದ ಕೇಂದ್ರವಾಗಿ ಸ್ವೀಕರಿಸಲ್ಪಟ್ಟಿತು. ಪಿ. ಸಿ. ಜೋಶಿಯವರು ನಾಯಕರಾಗಿಯೂ ಚುನಾಯಿಸಲ್ಪಟ್ಟರು. (ಸಶೇಷ)

ವಿಶ್ವ ಶಾಂತಿಸ್ಥಾಪನೆಯ ಒಂದೇ ದಾರಿ

ಮಹಾತ್ಮರ ಸಂದೇಶವನ್ನನುಸರಿಸಿರಿ

ಡಾ| ರಾಧಾಕೃಷ್ಣನ್ನರ ಬಿನ್ನಹ

"ಮಹಾತ್ಮರ ದುರಂತವಾದ ಹತ್ಯೆಯಾದಾಗ ವಿಶ್ವಕ್ಕೆ ವಿಶ್ವವೇ ದುಃಖೋದ್ಗಾರಗಳನ್ನು ಹೊರಡಿಸಿತು. ಅಧ್ಯಕ್ಷ ಟ್ರೂಮನರು 'ಬೃಹತ್ಪ್ರಾಣವನೊಬ್ಬನು ಅಂತರ್ಧಾನನಾದನು' ಎಂದು ಶೋಕವಾಡಿದರು." ಹೀಗೆಂದು ಮದ್ರಾಸಿನ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮಹಾತ್ಮರ ಭಾವಚಿತ್ರ ಅನಾವರಣ ಭಾಷಣದಲ್ಲಿ ಡಾ| ಸರ್ವಪಳ್ಳಿ ರಾಧಾಕೃಷ್ಣನ್ನರು ತಿಳಿಸುತ್ತಾ ವಿಶ್ವಶಾಂತಿಗೆ ಮಹಾತ್ಮರ ಸಂದೇಶವನ್ನನುಸರಿಸುವುದೊಂದೇ ದಾರಿ ಎಂದು ವಿವರಿಸಿದುದರ ಸಾರಾಂಶ ಹೀಗಿದೆ:-

ಖಂಡಿತವಾಗಿಯೂ ಅವರದೊಂದು ಬೃಹತ್ಪ್ರಾಣದ ವ್ಯಕ್ತಿತ್ವ. ಜಗತ್ತಿನಲ್ಲಿ ಹಲವು ಕ್ಷೇತ್ರದಲ್ಲಿ, ಹಲವು ವಿಷಯಗಳಲ್ಲಿ ಪ್ರಮುಖರೂ, ಶ್ರೇಷ್ಠರೂ, ಕೀರ್ತಿವಂತರೂ ಆದ ವ್ಯಕ್ತಿಗಳಿರುವರು. ಆದರೆ ಮಹಾತ್ಮರೊಡನೆ ಹೋಲಿಸುವಾಗ ಅವರು ಚಿಕ್ಕವರಾಗಿ ಕಾಣುವರು. ಧರ್ಮ ನೀತಿಗಳ ನೆಲೆವೀಡಾದೀ ದೇಶದ ನೈತಿಕಗುಣ ವೈಶಿಷ್ಟ್ಯಗಳೇ ಅವರಲ್ಲಿದ್ದವು. ಧರ್ಮವು ಜೀವನವನ್ನು ಬೆಳಗಿದ ಉಚ್ಚ ದರ್ಶನ ಅವರದು. ಅವರ ಸ್ವಯಂಮುವು ಅವರ ಸ್ಥೈರ್ಯ, ಅವರ ಮನೋನಿರ್ಧಾರ ಅವರ ಜೀವನಾಭ್ಯಾಸಗಳ ಸ್ಥಿರತೆ, ಆತ್ಮನಿಕೃಷ್ಟತೆಗಿಂತ ಬಲಿದಾನವೇ ಮೇಲೆಂಬವರ ಉದಾತ್ತ ಧ್ಯೇಯ ಇವು ಅವರ ಶ್ರೇಷ್ಠ ಗುಣ ವೈಶಿಷ್ಟ್ಯಗಳು.

ಮಹಾತ್ಮರು ಭಾರತಸಂಸ್ಕೃತಿಯ ಒಂದು ಉಚ್ಚ ಫಲ. ಅದೆಂತಹ ನಾಸ್ತಿಕರಾದರೂ ಅವರ ತತ್ವಗಳನ್ನೂ, ದೇವರೆಂದರೆ ಯಾರೆಂಬ ಅವರ ವಿವರಣೆಗಳನ್ನು ಒಪ್ಪದೆ ಇರಲಾರರು. ದೇವರನ್ನವರು 'ಸತ್ಯ ಮತ್ತು ಪ್ರೀತಿ' ಎಂದು ಕರೆದರು. ಸತ್ಯವೆಂಬುದು ತಾತ್ವಿಕ ವಿಚಾರ, ಪ್ರೀತಿಯೆಂಬುದು ಪ್ರತ್ಯಕ್ಷ ಕಾರ್ಯರೂಪಿ ನಿರ್ವಹಿಸಬಹುದಾದ ಸಂಗತಿ. 'ಕೆಲವರು ದೇವರೆಂದರೆ ಸತ್ಯವೆನ್ನುತ್ತಾರೆ. ಆದರೆ ನಾನು 'ಸತ್ಯವೇ ದೇವರು' ಎನ್ನುತ್ತೇನೆ ಎಂದು ತಮ್ಮ ಅಮೋಘ ತತ್ವಜ್ಞಾನದ ಸಾರಾಂಶವನ್ನನ್ನೊಂದು ಲೇಖನದಲ್ಲಿ ತಿಳಿಸಿದ್ದರು. ದೇವರ ಅಸ್ತಿತ್ವವನ್ನು ಅಲ್ಲಗಳೆಯುವವರಿದ್ದಾರೆ. ಆದರೆ ಸತ್ಯವನ್ನಲ್ಲಗಳೆಯುವವರು ಯಾರೂ ಇಲ್ಲ.

ಅಧ್ಯಾತ್ಮಿಕ ಸಾಂಪ್ರದಾಯ

ಅನಾದಿಕಾಲದಿಂದಲೂ ನಮ್ಮ ಪೂರ್ವಜರು ಧರ್ಮವರ್ತನೆಯು ಒಂದು ಸಂಕುಚಿತ ಅಂಧಶ್ರದ್ಧೆಯ ಮತಚಾರವೆಂದು ಎಂದಿಗೂ ತಿಳಕೊಂಡವರಲ್ಲ. ಧರ್ಮವು ಸತ್ಯದ ಹಲವು ರೂಪಾಂತರಗಳಲ್ಲಿ ಒಂದೆಂದವರು ಮನಗಂಡಿದ್ದರು. "ಹಿಂದು ಧರ್ಮವೆಂದರೆ ಎಲ್ಲಾ ಧರ್ಮಗಳನ್ನು ಸನ್ಮಾನಿಸಲು ಬೋಧಿಸುವ ಒಂದು ನಿರ್ದೇಶ" ಎಂಬ ಗಾಂಧೀಜಿಯ ನಿರೂಪಣೆಯಲ್ಲಿ ಅದೆಂತಹ ಉದಾತ್ತ ಧ್ಯೇಯವಡಗಿಕೊಂಡಿದೆ! ತಾಳ್ಮೆಯು ಧರ್ಮವರ್ತನೆಯ ಒಂದು ಅನಿವಾರ್ಯ ಲಕ್ಷಣ. ದ್ವೇಷಭರಿತ ಮನಸ್ಸುಳ್ಳವನೆಂದಿಗೂ ಧರ್ಮನಿಷ್ಠನಲ್ಲ.

ಈ ಜಗತ್‌ಜೀವನದ ಹೋರಾಟದಲ್ಲಿ ಸತ್ಯ, ನ್ಯಾಯ, ಪ್ರೀತಿಗಳ ಸಾಕ್ಷಾತ್ಕಾರ ಹೊಂದಲು ಅಸಾಧ್ಯವೆಂದು ಮನಗಂಡ ಕೆಲವರು ಅವನ್ನು ಹೊಂದಲು ನಾಡನ್ನು ಬಿಟ್ಟು ಕಾಡಿಗೂ, ಪಟ್ಟಣಗಳನ್ನು ತ್ಯಜಿಸಿ ಬೆಟ್ಟ ಶಿಖರಗಳಿಗೂ, ಸಮಾಜವನ್ನು ಅಲಕ್ಷಿಸಿ ನಿರ್ಜನ ಪ್ರದೇಶಕ್ಕೂ ತೆರಳುವರು. ಆದರೆ ಮಹಾತ್ಮರು ಇದಕ್ಕೆ ವಿರುದ್ಧವಾದ ದೃಷ್ಟಿಕೋನವನ್ನೇ ಅವಲಂಬಿಸಿದರು. ಮನುಷ್ಯನ ಜೀವನವನ್ನು ಸಾಮಾಜಿಕ, ನೈತಿಕ, ರಾಜಕೀಯವೇ ಮೊದಲಾಗಿ ಅನೇಕ ಪ್ರತ್ಯಪ್ರತ್ಯೇಕ ವಿಭಾಗಗಳನ್ನು ಮಾಡಲಾಗುವುದಿಲ್ಲ. ಮಾನವ ಜೀವನವು ಧರ್ಮವುನೀತವಾದ ಒಂದು ಸರ್ವಾಂಗ ಪರಿಪೂರ್ಣವಾದದು- ಹೀಗೆಂದು ಮಹಾತ್ಮರು ದೃಢವಾಗಿ ನಂಬಿದ್ದರು. ಮಾನವ ಚಟುವಟಿಕೆಗೆ ಸಂಬಂಧವಿಲ್ಲದ ಪ್ರತ್ಯೇಕ ಧರ್ಮವೊಂದಿದೆಯೆಂದರೆಂದಿಗೂ ತಿಳಕೊಂಡವರಲ್ಲ. ಪೂರ್ವ ಪರಂಪರೆಯಾಗಿ ಇಳಿದುಬಂದ ನಮ್ಮವರ ಧರ್ಮಭಾವನೆಯಾದರೂ ಇದೇಯಾಗಿದೆ. ಭಗವದ್ಗೀತೆಯಲ್ಲಿ ವರ್ಣಿಸಿದ ಧ್ಯೇಯೋದ್ಧಾರತೆಯೂ ಇದೆ. ವಿಶ್ವೋದ್ಧಾರದ ಕಾರ್ಯವನ್ನು ಅತೀವ ಅನಾಸಕ್ತತೆಯಿಂದ ನಿರ್ವಹಿಸಲು ಗೀತೆಯು ಬೋಧಿಸುತ್ತದೆ. ಲೌಕಿಕದೊಡನೆ ಯಾವ ಸ್ವಾರ್ಥ ಸಂಬಂಧವನ್ನಿಡದೆ ಅಲೌಕಿಕತೆಯ ಪರಿವರ್ತನೆ ಮಾಡಲು ಪ್ರಯತ್ನಿಸಬೇಕೆಂಬುದು ಗೀತೆಯ ಸಾರವಾಗಿದೆ.

ಇತಿಹಾಸ ನಿರ್ಮಾಪಕ ವ್ಯಕ್ತಿಗಳು ಇತಿಹಾಸದಿಂದ ದೂರವಿದ್ದೇ ಅದನ್ನು ರಚಿಸುವರು. ಅನಾಸಕ್ತಭಾವದಿಂದ ಅವರು ತಮ್ಮ ಧ್ಯೇಯ ಸಾಧನೆಗಾಗಿ ಜೀವನವನ್ನು ಸವೆಯುತ್ತಾರೆ. ಗಾಂಧೀಜಿಯವರು ಇದೇ ಉದ್ದೇಶದಿಂದ ಪರಿವ್ರತರಾಗಿದ್ದರು. ನಮಗೆ ಸಮೀಪವಿರುವುದನ್ನು ಸುಧಾರಣೆಯ ಮೂಲವಾಗಿ ಹಿಡಿದು ಕ್ರಮೇಣ ವಿಶ್ವ ಸುಧಾರಣೆಯತ್ತ ಸಾಗಬೇಕೆಂದು ಮಹಾತ್ಮರಾದರೂ ಇಚ್ಛೆಯುಳ್ಳವರಾಗಿದ್ದರು. ಇಲ್ಲೊಂದು ಜನಾಂಗವಿದೆ, ಇದು ಒಂದು ಕಡೆಯಿಂದ ದಾಸ್ಯದ ದಬ್ಬಾಳಿಕೆಯನ್ನು ಸಹಿಸುವುದರೊಂದಿಗೆ ಹಿಂಸಾಯುಕ್ತವಾದ ಸಮಾಜಕ್ರಾಂತಿಯ ಸ್ಫೂರ್ತಿಯಿಂದ ಆವೇಶಗೊಂಡಿದೆ. ಆದುದರಿಂದವರು ತಮ್ಮ ಜನಾಂಗಕ್ಕೆ ತಿಳಿಸಿದರು. **"ಸ್ವಾತಂತ್ರ್ಯವು ತನ್ನಷ್ಟಕ್ಕೆ ಲಭಿಸದು. ಜನತೆ ಆ ಉನ್ನತ ಧ್ಯೇಯಕ್ಕೆ ತನ್ನನ್ನು ಏರಿಸಿಕೊಳ್ಳಬೇಕು"** ಹೀಗೆನ್ನುವಾಗ ಅವರು ನಮ್ಮ ದೃಷ್ಟಿಯನ್ನು ಭಗವಾನ್ ಬುದ್ಧದೇವನ ಅಮರೋಪದೇಶದ ಕಡೆಗೆ ಸೆಳೆದರು:- **"ನೀವು ನರಳುತ್ತಿರಾದರೆ ಅದು ನಿಮ್ಮ ಸ್ವಂತ ದೋಷದಿಂದಲೇ ಎಂದು ತಿಳಿಯಿರಿ. ಯಾರೂ ನಿಮ್ಮನ್ನು ಒತ್ತಾಯದಿಂದ ನರಳುವಿಕೆಗೆ ಈಡುಮಾಡಲಾರರು."** ಜಗತ್ತಿನದ್ದಾವ ತಪ್ಪೂ ಇಲ್ಲ. ತಪ್ಪು ನಮ್ಮಲ್ಲೇ ಇದೆ. **ನಾವು ನಮ್ಮ ದೋಷಗಳನ್ನು ಕೊಡವಿ ಹಾಕದೆ ನಾವು ಬಂಧವಿಮೋಚನೆಗೊಳ್ಳಲಾರೆವು.** ನಮ್ಮನ್ನು ಸ್ವಾತಂತ್ರ್ಯಪಥದಲ್ಲಿ ಸಾಗಿಸುವಾಗ ಗಾಂಧೀಜಿಯವರು ಉಚ್ಚ ಧೋರಣದ ಚಳವಳದಿಂದ ನಮ್ಮನ್ನು ಸ್ಫೂರ್ತಿಸಿದರು. ನಮ್ಮ ರಾಜಕೀಯ ಚಳವಳವು ಕನಿಷ್ಠ ಚಟುವಟಿಕೆಗಿಳಿಯದಂತೆ ಅವರು ಅದರ ಆತ್ಮೋನ್ನತಿಯನ್ನು ಕಾಪಾಡಿದರು. **"ಬ್ರಿಟಿಷರಲ್ಲಿ ಮೆಶಿನುಗನ್ನುಗಳಿವೆ, ನಮ್ಮಲ್ಲಿಲ್ಲ. ಆದರೆ ನಮ್ಮ ಬಳಿ ಇರುವ ಬೇರೆ ಅಸ್ತ್ರಗಳಿಂದ ನಾವು ಹೋರಾಡಬೇಕು. ಅಂಥವು ಅವರಲ್ಲಿಲ್ಲ"** ಹೀಗೆಂದವರು ಹೋರಾಟವನ್ನಾರಂಭಿಸಿದರು.

ಸ್ವಾತಂತ್ರ್ಯಾನಂತರ

೧೯೪೭ನೇ ಆಗಸ್ಟ್ ಹದಿನೈದು ಒಂದು ಸುವರ್ಣಕಾಲ. ಅಂದಿಗೆ ನಾವು ಪರಕೀಯ ಬಂಧನದಿಂದ ಮುಕ್ತರಾದೆವು. ಆದರೆ ದೇಶದಲ್ಲಿ ನಡೆದ ಬೇರೆ ಘಟನೆಗಳಿಂದ ಗಾಂಧೀಜಿ ನೊಂದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮಿಂದ ತರಬೇತಿಹೊಂದಿದವರು ಅಧಿಕಾರಕ್ಕಾಗಿ ಹಾತೊರೆಯುವುದನ್ನವರು ಕಂಡರು. ದೇಶದ ಜನಜೀವನವು ಕಳ್ಳಸಂತೆ, ಅನೀತಿ ವ್ಯಾಪಾರ, ಲಾಭಬಡುಕತನ, ದುರ್ನೀತಿಗಳಿಂದ ತುಂಬಿರುವುದನ್ನವರು ಕಂಡರು. ತಮ್ಮ ಹೆಸರನ್ನು ಹೇಳುತ್ತ ಜನರು ಹೃದಯದಲ್ಲಿ ದ್ವೇಷದ ವಿಷಯವನ್ನು ತುಂಬಿಕೊಂಡಿರುವುದನ್ನವರು ಕಂಡರು. ಇದನ್ನೆಲ್ಲ ಕಂಡು ಅತೀವ ನಿರಾಶೆಯೊಂದು ಅವರ ಹೃದಯವನ್ನು ಹೊಕ್ಕಿತು: ಮರಣಕ್ಕೆ ನಾಲ್ಕು ದಿನದ ಮೊದಲು ಅವರೆಂದಿದ್ದರು: **"ಸ್ವಾತಂತ್ರ್ಯ ಬರುವ ಮೊದಲು ಸ್ವಾತಂತ್ರ್ಯ ದಿನವನ್ನಾಚರಿಸುವುದರಲ್ಲಿ ಒಂದು ಅರ್ಥವಿದೆ. ಆದರೆ ಈ ಸ್ವಾತಂತ್ರ್ಯ ಬಂದ ಮೇಲೆ ನಮ್ಮವರ ವರ್ತನೆಯನ್ನು ನೋಡುವಾಗ ನನಗಂತೂ ತುಂಬಾ ನಿರಾಶೆಯಾಗಿದೆ"** ಎಂದವರು ಉದ್ಗರಿಸಿದ್ದರು. ಕೊಲೆಪಾತಕಿಯ ಗುಂಡು ಅವರ ಹೃದಯವನ್ನು ಹೊಗುವ ಮೊದಲೇ ನಿರಾಶೆಯು ಅವರ 'ಮನಸ್ಸನ್ನು ಆವರಿಸಿತ್ತು. ನನ್ನ ವಿಚಾರಗಳು ಚಲನಶೀಲವಾಗಬಹುದು. ಆದರೆ ನಾನದಕ್ಕಾಗಿ ಪ್ರಾಣವನ್ನಾದರೂ ನೀಡಲು ಸಿದ್ಧನಿರಬೇಕು" ಹೀಗೆಂದವರು ಧೃಢಾಭಿಪ್ರಾಯವುಳ್ಳವರೂ ಆಗಿದ್ದರು.

ಉದಾತ್ತ ಧ್ಯೇಯಗಳು

ನಾವು ಅವರ ಸ್ಮರಣೆಮಾಡಲರ್ಹರಾಗಿರಬೇಕಾದರೆ ಅವರ ಆದರ್ಶದಲ್ಲಿ ವಿಧೇಯತ್ವಯುಳ್ಳವರಾಗಿರಬೇಕು. ಅವರು ಗುರಿಯಾಗಿಟ್ಟುಕೊಂಡ ಕ್ರಾಂತಿಯನ್ನು ತಂದೊಡ್ಡುವ ಉದ್ದೇಶ ಪರಿಶುದ್ಧತೆ, ಮನೋಸ್ಥೈರ್ಯಗಳು ನಮ್ಮಲ್ಲಿರಬೇಕು. ಯಾವ ರೀತಿಯಲ್ಲೂ ಓರ್ವ ವ್ಯಕ್ತಿಯು ಇನ್ನೋರ್ವ ವ್ಯಕ್ತಿಯನ್ನೂ, ಒಂದು ಸಮಾಜವು ಇನ್ನೊಂದನ್ನೂ, ಒಂದು ವರ್ಗವು ಮತ್ತೊಂದನ್ನೂ, ಒಂದು ಜನಾಂಗವು ಇನ್ನೊಂದನ್ನೂ ಶೋಷಣೆಗೊಳಮಾಡಬಾರದು. ಕ್ರಾಂತಿಕಾರರು ಅಧಿಕಾರ ವಹಿಸಿದಾಗ ಆ ಅಧಿಕಾರದ ದುರುಪಯೋಗ ಮಾಡದೆ ಅವರು ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಗಳನ್ನುತ್ಪನ್ನಮಾಡಬೇಕು. ಇವೇ ಅವರ ಉದಾತ್ತ ಧ್ಯೇಯಗಳಾಗಿದ್ದವು.

ಯುದ್ಧರಹಿತ ವಿಶ್ವವೇ ಅವರ ಮಹೋನ್ನತ ಉದ್ದೇಶವಾಗಿತ್ತು. ಇತರ ದೇಶಗಳಲ್ಲಿನ ಓರ್ವ ಸಾಮಾನ್ಯ ಮನುಷ್ಯ ಕೂಡಾ ಗಾಂಧೀಜಿಯ ಮರಣದಿಂದ ಕಳವಳಗೊಂಡ ಶಾಂತಿಯುಕ್ತವಾದ ವಿಶ್ವ ಸಮಾಜರಚನೆಯ ಆಶೆ ಹಾರೈಕೆಗಳ ಸಾಂಕೇತಿಕ ಮೂರ್ತಿಗಳು ಅವರಾಗಿದ್ದು ವಿಶ್ವಜನತೆಯ ಹೃದ್ಮಂದಿರದಲ್ಲಿ ಒಂದು ಪ್ರಭಾವಿತ ಸ್ಥಾನಗಳಿಸಿದ್ದರು. ಪ್ರತಿಯೊಬ್ಬರೂ ತಮ್ಮೋರ್ವ ಆಪ್ತ ಸ್ನೇಹಿತನನ್ನು ಕಳಕೊಂಡಂತೆ ಭಾಸಗೊಂಡುದಕ್ಕೆ ಇದೇ ಕಾರಣ.

ಅಹಿಂಸಾ ತತ್ವಾದರ್ಶ

ಅಹಿಂಸೆಯೆಂಬುದು ವಿವೇಕಿಗಳ ಸ್ವಪ್ನಕಲ್ಪನೆಯೆಂದೂ, ಹಿಂಸೆಯು ಮಾನವ ಸ್ವಭಾವ ಸಹಜವಾದುದೆಂದೂ ಹೇಳುವವರಿದ್ದಾರೆ. ವ್ಯಕ್ತಿಗಳು ಅಹಿಂಸಾಚರಣೆಯನ್ನು ಅಭ್ಯಸಿಸಬಹುದು. ಆದರೆ ಸಮಾಜವೊಂದಕ್ಕಿದು ದುಸ್ಸಾಧ್ಯವೆನ್ನುವವರೂ ಇದ್ದಾರೆ. ಆದರೆ ಇಲ್ಲೋರ್ವ ಮಹಾತ್ಮನಿದ್ದಾನೆ. ಆತ 'ನಿಜವಾದ ಹೋರಾಟಬಾಹ್ಯ ಪ್ರಪಂಚದಲ್ಲಿಲ್ಲ, ಅದು ಅಂತರೀಕವಾದುದು' ಎಂದು ತಿಳಿದ. ಎಲ್ಲಿ ಮನುಷ್ಯನು ತನ್ನ ನ್ಯೂನತೆಗಳನ್ನು ತ್ಯಜಿಸಿ ಚೇತರಿಸಿಕೊಳ್ಳುತ್ತಾನೊ, ಎಲ್ಲಿ ಅವನು ಮಾನವ ಶ್ರೇಷ್ಟತೆಗಾಗಿ ಹೋರಾಟ ನಡೆಸುತ್ತಾನೊ, ಅಲ್ಲಿ ಮಹಾತ್ಮರು ಆ ಹೋರಾಟದ ಮುಂದಿನ ಪಂಕ್ತಿಯಲ್ಲಿ ಕಾಣಿಸುತ್ತಾರೆ. ಇಂದು ಯುರೋಪಿನಲ್ಲಿ ಸೆಣಸಾಡುವ ಇತ್ತಂಡದ ಶಕ್ತಿರಾಷ್ಟ್ರಗಳಲ್ಲಿಯೂ ಗುಣದೋಷಗಳೆರಡೂ ಸಮ್ಮಿಶ್ರವಾಗಿವೆ. ಅವರು ತಮ್ಮ ಹೃದಯ ಸಂಶೋಧನೆ ಮಾಡಿ ಶಾಂತಿಯುಕ್ತವಾದ ಜಗತ್ತು ಪರಸ್ಪರ ಮಾನವ ದ್ವೇಷಾಸೂಯೆಗಳ ತಳಹದಿಯ ಮೇಲೆ ಕಟ್ಟಲಾಗುವುದಿಲ್ಲ, ಅದು ಮಾನವ ಸೌಹಾರ್ದದ ಮೇಲೆಯೇ ರಚಿಸಲ್ಪಡಬೇಕೆಂಬುದನ್ನು ಮನಗಾಣಲು ಪ್ರಯತ್ನಿಸಿದಾಗಲೇ ಲೋಕಕ್ಕೆ ಮಂಗಲವಾಗುವುದು.

ಇಂದು ನಮ್ಮ ಕೈಗಳು ಪರಿಶುದ್ಧವಾಗಿರುತಿದ್ದರೆ, ಇಂದು ನಮ್ಮ ಗೌರವ ಪ್ರತಿಷ್ಠೆಗಳು ಉಚ್ಚಮಟ್ಟದಲ್ಲಿರುತಿದ್ದರೆ, ಇಂದು ನಮ್ಮಲ್ಲಿ ನಡೆಯುತ್ತಿರುವ ಭೀಕರ ಅಂತಃಕಲಹವು ನಡೆಯದೆ ಇರುತಿದ್ದರೆ ನಮ್ಮ ಮುಖ್ಯ ಪ್ರಧಾನ ನೆಹರುರವರು ಸ್ಟೇಲಿನ್ ಟ್ರೂಮನ್ನರುಗಳನ್ನು ಆಹ್ವಾನಿಸಿ 'ನಿಮ್ಮ ವ್ಯತ್ಯಾಸಗಳನ್ನು ಪರಿಹರಿಸಿಕೊಳ್ಳಿರಿ' ಎನ್ನಬಹುದಿತ್ತು. ಆದರೆ ನಮಗಾ ಸೌಭಾಗ್ಯ ಇಲ್ಲದೆ ಹೋಯಿತು. ನಮ್ಮ ವರ್ತನೆಗಳು ದುರ್ಮಾರ್ಗದಲ್ಲಿ ಚಲಿಸುವಂತಾಗಿದೆ. ಪರಿಣಾಮವಾಗಿ ಭಾರತದ ಸತ್ಕೀರ್ತಿಗೆ ಕಳಂಕತಟ್ಟಿರುತ್ತದೆ. ಇಪ್ಪತ್ತನೇ ಶತಮಾನದಲ್ಲಿಯೂ ಶುದ್ಧ ಸತ್ಯ ಜೀವನದಿಂದ ಬಾಳಬಹುದೆಂದು ತಮ್ಮ ಏಕಮಾತ್ರ ಚೈತನ್ಯಗಳಿಂದ ಜಗತ್ತಿಗೆ ತೋರಿಸಿಕೊಟ್ಟ ಮಹಾತ್ಮನು ಕೊಲ್ಲಲ್ಪಟ್ಟು ಇಂದು ಭಸ್ಮೀಭೂತನಾಗಿರುವನು. ಆದರೆ ಪರಮಾತ್ಮನ ಧ್ಯೇಯ ದರ್ಶನಗಳ ಬೆಳಕು ನಿತ್ಯನಿರಂತರವಾಗಿ ವಿಶ್ವವನ್ನು ಬೆಳಗಿ ಅಸಂಖ್ಯಾತ ಮಾನವ ಕೋಟಿಗೆ ತಲತಲಾಂತರಗಳವರೆಗೆ ಮಾರ್ಗದರ್ಶಕವಾಗಿರುವುದು.

ವಿಶಿಷ್ಟ ವೈದ್ಯಸಂಘ

ದ. ಕ. ಜಿಲ್ಲಾ ವಿಶಿಷ್ಟ ಭಾರತೀಯ ವೈದ್ಯ ಸಂಘದ ಹತ್ತನೆಯ ವಾರ್ಷಿಕ ಮಹಾ ಸಭೆ ಕಳೆದ ತಾ. ೨೫ರಲ್ಲು ಜರಗಿ ವಾರ್ಷಿಕ ವರದಿ ಲೆಕ್ಕಗಳ ಕುರಿತು ಬಹಳ ಚರ್ಚೆ ನಡೆದು ಬಹುಮತದಿಂದ ಸ್ವೀಕೃತವಾದವು. ಹೊಸ ವರ್ಷದ ಆಡಳಿತಮಂಡಳಿಯು ಚುನಾಯಿಸಲಾಯಿತು.

ಮದ್ಯನಿಷೇಧ ಉಲ್ಲಂಘನೆ

ಮಲೆಯಾಳದ ಸಚ್ಚಿದಾನಂದ ಎಂಬ ಸ್ವಾಮಿಯೊಬ್ಬನಿಗೆ ಕುಡಿದ ಆರೋಪಕ್ಕಾಗಿ ೧ ತಿಂಗಳ ಶಿಕ್ಷೆಯಹಾಯಿತು. ಅಪೀಲ್ ಮಾಡುವ ಶರ್ತದ ಮೇಲೆ ಆತನನ್ನು ಬಿಡಲಾಗಿದೆ. ಇದಲ್ಲದೆ ಇತರ ಕೆಲವರಿಗೆ ಶಿಕ್ಷೆಯೂ ಜುಲ್ಮಾನೆಗಳೂ ಕುಡಿತದ ಮತ್ತು ಅಮಲುಪದಾರ್ಥಗಳನ್ನಿಟ್ಟುಕೊಂಡದಕ್ಕೆ ಆಗಿವೆ.

ಸಂತನೂ, ಸುಧಾರಕನೂ, ಸ್ವಾತಂತ್ರ್ಯ ಪಿತನೂ ಆಗಿರುವ ಮಹಾತ್ಮಾ ಗಾಂಧಿಯವರ ಮಾನವೀಯತೆಯ ಗುಣ ವೈಶಿಷ್ಟ್ಯಗಳ ಕುರಿತು ಅದೆಷ್ಟೋ ಗ್ರಂಥಗಳೂ, ಭಾಷಣಗಳೂ ಪ್ರಕಟವಾಗಿರುತ್ತವೆ. ಇನ್ನೆಷ್ಟೋ ಪ್ರಕಟವಾಗಲಿವೆ. ಆದರೆ ಈ ಬಹುಮುಖ ವ್ಯಕ್ತಿತ್ವದ ಮಹಾ ಪುರುಷನ ಒಂದು ಗುಣ ವಿಶೇಷತೆಯ ಕುರಿತು ಸಾಕಷ್ಟು ಪ್ರಚಾರವಾಗಿಲ್ಲ. ಅದೆಂದರೆ ಅವರ ವಿನೋದ ಪ್ರವೃತ್ತಿ.

ವಿನೋದವೆಂದಮಾತ್ರಕ್ಕೆ ಇನ್ನೊಬ್ಬರನ್ನು ನೋಡಿ ಹಾಸ್ಯಮಾಡುವುದೆಂದರ್ಥವಲ್ಲ. ಆದರೆ ಮಹಾತ್ಮರ ವಿನೋದವು ತಮ್ಮ ಲೋಪದೋಷಗಳನ್ನು ತಾವೇ ಕಂಡುಹಿಡಿದು ಅವುಗಳಿಗಾಗಿ ತಮ್ಮ ಮೇಲೆಯೇ ನಗುವುದು. ಇನ್ನೊಬ್ಬ ವ್ಯಕ್ತಿಯ ವರ್ತನೆಯ ಕುರಿತು ಹಾಸ್ಯ ಮಾಡುವುದು ಬಹಳ ಅಗ್ಗವಾದ, ಸುಲಭವಾದ ವಿಧಾನ. ಕ್ಲಬ್ಬುಗಳಲ್ಲಿ, ಹರಟೆ ಕೂಟಗಳಲ್ಲಿ ಮತ್ತಿತರ ಅನೇಕ ಕಡೆಗಳಲ್ಲಿ ನಾವಿದನ್ನು ಸಾಮಾನ್ಯವಾಗಿ ನೋಡುತ್ತೇವೆ. ನಾವು ಇನ್ನೊಬ್ಬರ ಕುರಿತು ತಮಾಷೆಯಾಡುವ ಹವ್ಯಾಸದಲ್ಲಿ ಬಹಳ ಸಲಿಸಾಗಿ ತಲ್ಲೀನರಾಗುತ್ತೇವೆ "ಬೇರೆಯವರು ಆ ಯಶಸ್ಸಿನಲ್ಲಿ, ನಿರಾಶೆಯಲ್ಲಿ ಮತ್ತು ಸಂಕಷ್ಟದಲ್ಲಿರುವಾಗ ನಾವೊಂದು ಶ್ರೇಷ್ಠವಾದ ಸಂತಸವನ್ನು ಅನುಭವಿಸುತ್ತೇವೆ" ಹೀಗೆಂದು ಪ್ರಖ್ಯಾತ ಅಮೇರಿಕನ್ ಗ್ರಂಥಕರ್ತರಾದ ಮಾರ್ಕ್ ಟ್ವೈನ್ನರು ಉದ್ಗರಿಸಿದ್ದಾರೆ

ಪ್ರಖ್ಯಾತ ಪುರುಷರ ಹಾಸ್ಯಶಕ್ತಿ

ಪ್ರತಿಭಾವಂತರಾದ ಅನೇಕ ಮಹಾ ಪುರುಷರಲ್ಲಿ ಈ ಹಾಸ್ಯಗುಣವಿದೆ ಮತ್ತ

ವಿನೋದ ಪಟುವಾಗಿದ್ದ ಸಂತ ಸುಧಾರಕ

ಒಂದು ಹಾಸ್ಯ ನುಡಿಯಿಂದ ಒಂದು ಪರಿವರ್ತನೆ

ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವ ವೈಶಿಷ್ಟ್ಯ

ಕರ ವಿನೋದ ಟೀಕೆಗಳಿಂದ 'ಮಹತ್ತಾದ ವಿನಾಶಕಾರಕ ದುಷ್ಪರಿಣಾಮಗಳೆಷ್ಟೋ ಸಂಭವಿಸಿಯೂ ಇವೆ. ಅವರೊಡನೆ ಈ ವಿಷಯದಲ್ಲಿ ಸ್ಪರ್ಧಿಸುವುದೆಂದರೆ ಅಪಾಯಕಾರಕವೇ ಸರಿ ಅವರು ತಮ್ಮ ವಿನೋದ ಭಾಷಣಗಳಿಂದ ಎದುರಾಳಿಯನ್ನು ತಕ್ಷಣ "ಕೊಲ್ಲು"ತ್ತಾರೆ ಇಂಥವರೆದುರಲ್ಲಿ ಸಾಮಾನ್ಯರು ಅತ್ಯಲ್ಪವಾಗಿ ಕಾಣುತ್ತಾರೆ ಮಾತ್ರವಲ್ಲ. ಅನೇಕ ಸಂದರ್ಭದಲ್ಲಿ ಇವರ ಉದ್ದೇಶವು ಪರಿಪೂರ್ಣವಾದರೂ ಅದರ ಪರಿಣಾಮದಿಂದ ಸೌಹಾರ್ದವು ಸಂಪೂರ್ಣ ನಾಶವಾಗುತ್ತದೆ

ಆದರೆ ಮಹಾತ್ಮರ ವಿನೋದ ಟೀಕೆಗಳನ್ನು ಜಾಗರೂಕತೆಯಿಂದ ಅಭ್ಯಸಿದರೆ ಅವರಲ್ಲಿ ಅಣುಮಾತ್ರವಾದರೂ ದ್ವೇಷಾನುರಾಗದ ಚಿಹ್ನವಿಲ್ಲದಿರುವುದು ಕಂಡುಬರುತ್ತದೆ ಹಾಸ್ಯವೆಂದರೆ ಶುದ್ಧವೂ, ಸಾಂಸ್ಕೃತಿಕ ಸತ್ಪರಿಣಾಮದ್ದೂ ಆದ ಪ್ರಭಾವಕಾರಿ ಹಾಸ್ಯ ಅವರದು "ನಿಮ್ಮ ಆರೋಗ್ಯ ಹೇಗಿದೆ? ಎಂದೊರ್ವ ಸಂದರ್ಶಕರು ಅವರನ್ನು ವಿಚಾರಿಸಿದರು ಅದಕ್ಕೆ ಮಹಾತ್ಮರು ಕೈಯಲ್ಲಿನ ಪೆನ್ಸಿಲನ್ನು ತೋರಿಸಿ (ಅದರಲ್ಲಿ ಹೆಚ್ಚು ಬಿರುಸೂ ಅಲ್ಲ ಹೆಚ್ಚು ಮೃದುವೂ ಅಲ್ಲವೆಂಬರ್ಥದ 'ಮಿಡ್ಲಿಂಗ್' ಮಧ್ಯವರ್ತಿ ಗುಣದ್ದೆಂಬ ಲಿಖಿತವಿತ್ತು) "ಇದರ ಹಾಗೆ 'ಮಿಡ್ಲಿಂಗ್' (ಮಧ್ಯವರ್ತಿ) ಆಗಿದೆ" ಎಂದರು.

"ಕುಡಿಯುವವರ ವಿಷಯ ನೀವು ಅಷ್ಟೊಂದು ನಿಷ್ಕರುಣಿಗಳೇಕಾಗಿರುವಿರಿ?" ಹೀಗೆಂದೊರ್ವ ಆಂಗ್ಲ ವಿದ್ಯಾರ್ಥಿಯು ಲಂಡನಿನಲ್ಲಿ ಅವರಿಗೆ ಪ್ರಶ್ನಿಸಿದ್ದ ಮಹಾತ್ಮರ ಉತ್ತರ ಹೀಗಿತ್ತು "ಯಾಕೆಂದರೆ, ನನ್ನ ಕರುಣೆಯೆಲ್ಲ ಕುಡಿತಶಾಪಕ್ಕೊಳಗಾಗಿ ನರಳುವವರಿಗಾಗಿಯೇ ವ್ಯಯವಾಗಿದೆ."

ಚಕ್ರವರ್ತಿ ಸಂದರ್ಶನದಲ್ಲಿ

ಬಕ್ಕಿಂಗ್ ಹಾಮ್ ಅರಮನೆಯಿಂದ ಐದನೇ ಜೋರ್ಜರೊಡನೆ ಸಂದರ್ಶನ ಪಡೆದು ಹೊರಗೆ ಬಂದೊಡನೆ ಯಾರೊ ಒಬ್ಬರು ಅವರ ಅರೆನಗ್ನ ಪೋಷಾಕಿನ ಕುರಿತು ಟೀಕೆಮಾಡುವುದು ಅವರಿಗೆ ಕೇಳಿಸಿತು. ಕೂಡಲೇ ಮಹಾತ್ಮರು "ನಮ್ಮಿಬ್ಬರಿಗೆ ಸಾಕಾಗುವಷ್ಟು ಜೋರ್ಜ್ ದೊರೆಗಳೇ ಧರಿಸಿದ್ದಾರೆ" ಎಂದುತ್ತರಿಸಿದರು

ಒಂದು ಸಲ ಮಹಾತ್ಮರು ಓರ್ವ ಸ್ಕಾಟ್ಲೆಂಡಿನ ರೈತನೊಡನೆ ಸಂಭಾಷಿಸುತ್ತಿದ್ದರು. ಸ್ಕಾಟ್ಸನು ಚಲ್ಲಣಗಳನ್ನು ಧರಿಸಿ ಕಾಲುಚೀಲಗಳನ್ನು ಮೊಣಕಾಲಿನ ತನಕ (ಚಲ್ಲಣದ ಕೆಳ ಭಾಗ ಇದರಲ್ಲಿ ಮುಚ್ಚಿಕೊಳ್ಳುತ್ತದ) ಧರಿಸಿದ್ದ "ಈ ಪೋಷಾಕಿಗೆ ನೀವು ಏನೆಂದು ಕರೆಯುತ್ತೀರಿ?" ಎಂದು ಮಹಾತ್ಮರು ಪ್ರಶ್ನಿಸಿದರು. "ಇದು ಪ್ಲಸ್‌ಫೋರ್' ಎಂದು ಹೇಳುತ್ತ ಸ್ಕಾಟನು "ನಿಮ್ಮ ಈ ಪೋಷಾಕಿಗೆ ಏನೆಂದು ಹೆಸರು?" ಎಂದು ಪ್ರಶ್ನಿಸಿದ. ತಕ್ಷಣ ವಿನೋದಿ ಮಹಾತ್ಮರು "ಮ್ಯಾನಸ್ ಫೋರ್" ಎಂದರು. ಸ್ಕಾಟನ ಚಲ್ಲಣ ಮೊಣಕಾಲಿನ ತನಕ ಬಂದರೆ ಪ್ಲಸ್ ಫೋರ್ (ನಾಲ್ಕು ಕೂಡಿಸು ಎಂದರ್ಥ.) ಆದರೆ ಮೊಣಕಾಲಿನ ತನಕ ಧೋತ್ರ ಧರಿಸಿದ ಮಹಾತ್ಮರದು ಮ್ಯಾನಸ್ ಫೋರ್, (ನಾಲ್ಕು ಕಳೆ!) ಆಗಬೇಕಾದುದು ಸಹಜವಷ್ಟೆ!

ಓರ್ವ ಅಮೇರಿಕನ್ ಮಹಿಳೆಯು ತಮ್ಮ ದೇಶಕ್ಕೆ ಯಾವಾಗ ಸಂಚಾರ ಬರುವಿರೆಂದು ಮಹಾತ್ಮರನ್ನು ಕೇಳಿದಳು.

"ಸದ್ಯಕ್ಕೆ ಬರಲಿಕ್ಕಾಗುವದಿಲ್ಲ" "ಆದರೆ ನಮ್ಮ ಕಡೆ ಜನರು ನಿಮ್ಮನ್ನು ನೋಡಲು ಕುತೂಹಲಿಗಳಾಗಿರುವರು."

"ಹೌದು ಅದು ನನಗೆ ತಿಳಿದಿದೆ. ಅಲ್ಲಿಯ ಜನರು ನನ್ನದೊಂದು ಪ್ರಾಣಿ ಸಂಗ್ರಹಾಲಯದಲ್ಲಿ (Zoo) ಸೇರಿಸಲು ಇಚ್ಛಿಸುತ್ತಾರೆ" ಎಲ್ಲರೂ ಸಂತಸದ ನಗಾಟದಲ್ಲಿ ಹೊರಳಿದರು

ಹಲ್ಲಿಲ್ಲದ ಜಗತ್ತು

ಒಂದು ದಿನ ಸರ್ದಾರ್ ಪಟೇಲರು "ಪ್ಯಾಸ್ ರಾಮನ್ ಲಿನ್ ಲಿಕ್ ಗೊ ಸಾಹೇಬರು ತಮ್ಮ ಭಾಷಣದ ಒಂದು ಪ್ರತಿಯನ್ನು ಮುಂಗಡವಾಗಿಯೇ ನಿಮಗೆ ಕಳುಹಿಸಿರುವರಂತೆ ಪ್ರಕಟವಾಗಿದೆ ಅದೇನು ತಿದ್ದುಪಡಿಗೂ ಇಲ್ಲದ ಸಲಹೆಗೂ" ಎಂದು ಮಹಾತ್ಮರನ್ನು ಕೇಳಿದರು "ಇದೊಂದು ರುಚಿಕರವಾದ ... ಆದುದರಿಂದ ಅದಕ್ಕೆ ತಿದ್ದುಪಡಿಯಾಗಲಿ ಸಲಹೆಯಾಗಲಿ ಅಗತ್ಯವಿಲ್ಲ ಕೇವಲ ಇದನ್ನು ತಿರಸ್ಕರಿಸಿ ದರಾಯಿತು" ಎಂದರು ಮಹಾತ್ಮರು

(೬ನೇ ಪುಟ ನೋಡಿ)

THE POPULAR INSURANCE CO., LTD., MANGALORE.

ಹದಿನೆಂಟು ವರ್ಷಗಳ ಪ್ರಗತಿ:

	1930.	*1934.*	*1938.*	*1943.*	*1947.*
ಪೂರ್ಣಗೊಳಿಸಿದ ಹೊಸವಿಮೆ	3,00,500	5,40 000	7 45,500	10 39 700	*28,66,500.*
ವಾರ್ಷಿಕ ಆದಾಯ	14,120	54,969	84,830	1,62,006	*4,70,151*
ವಿಮಾ ನಿಧಿ	3,709	50,111	1,38 915	3,76 182	*10,70,907*
ಜುಮ್ಲಾ—ಸೊತ್ತುಗಳು .	28,008.	80,164	1,73,823	4,61 708	*11,94,091.*

1947ರಲ್ಲಿ ಪುನರ್ವ್ಯಯದ ಪ್ರಮಾಣ— **12·7**%

ಈ ಮೇಲಿನ ತುಲನಾತ್ಮಕ ಸಂಖ್ಯೆಗಳು, ಬೆಳೆದುಬರುವ ಕಂಪೆನಿಯ ಜನಾದರವನ್ನೂ ಸ್ಪಷ್ಟ ಸೂಚಿಸುತ್ತಿವೆ. ನಿಮ್ಮ ನಾಡಿನ ಒಂದು ಕಂಪೆನಿಯ ಈ ಅಭಿವೃದ್ಧಿಯು ನಿಮಗೆ ನಿಜವಾದ ತೃಪ್ತಿಯನ್ನು ಕೊಡಲೇಬೇಕು. ನಿಮ್ಮಿಂದ ತಕ್ಕ ಪ್ರೋತ್ಸಾಹವನ್ನು ಪಡೆಯಲೇಬೇಕು.

ಕಂಪೆನಿಯ ಕಾರ್ಯಕ್ಷೇತ್ರ ವಿಸ್ತರಣೆಯ ಹೊಸ ಯೋಜನೆಯಲ್ಲಿ, ಒರ್ಗನೈಝರರಾಗಿಯೂ ಇನ್ಸ್‌ಪೆಕ್ಟರುಗಳಾಗಿಯೂ ಏಜಂಟರಾಗಿಯೂ ಕೆಲಸಮಾಡಬಲ್ಲ, ವರ್ಚಸ್ಸುಳ್ಳ ಹಾಗು ಸಮರ್ಥರಿರುವ ತರುಣರಿಗೆ ನೇಮಕಗಳು ಕಾದಿವೆ.

ಇಂದೇ ಬರೆಯಿರಿ ಅಥವಾ ಸ್ವತಹಾ ಬಂದು ಮೆನೇಜಿಂಗ್ ಡೈರೆಕ್ಟರರನ್ನು ಕಾಣಿರಿ

ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಮಂಗಳೂರು, ದ. ಕನ್ನಡ.

(ಸ್ಥಾಪಿತ: 1929.)

ಸ್ವದೇಶಾಭಿಮಾನಿ

ತಾರೀಕು 30—4—1948

ಸಾಮ್ಯವಾದೀ ಪಕ್ಷ

ಶ್ರೀ ಜಯಪ್ರಕಾಶನಾರಾಯಣ ಮೊದಲಾದವರ ಮುಂದಾಳ್ತನದಲ್ಲಿ ನಡೆಯುವ ಸಾಮ್ಯವಾದೀಪಕ್ಷದ ಕಾಂಗ್ರೆಸ್ ಮುಂದಾಳುಗಳು ಹಾಗೂ ಕೆಲಸಗಾರರು ಕಾಂಗ್ರೆಸ್ ಸಂಸ್ಥೆಯನ್ನು ತ್ಯಜಿಸಿ ಸ್ವತಂತ್ರ ರಾಜಕೀಯ ಸಂಗಡವನ್ನು ಇತ್ತೀಚೆಗೆ ಕಟ್ಟಿಕೊಂಡರಷ್ಟೆ. ಸಾಮ್ಯವಾದಿಗಳು ಕಾಂಗ್ರೆಸ್ಸನ್ನು ತ್ಯಜಿಸಿದರೆಂಬುದಕ್ಕಿಂತ ಕಾಂಗ್ರೆಸು ತನ್ನ ಹೊಸ ಘಟನೆಯಂತೆ ಭಿನ್ನಸಂಗಡಗಳಿಗೆ ಆಸ್ಪದ ಕೊಡದೆ ಇವರನ್ನು ಹೊರಗೆ ಹಾಕಿರುತ್ತದೆಂದರೂ ನಿಜಾಂಶವನ್ನೇ ಹೇಳಿದಂತಾಗುವುದು.

ಕೇವಲ ತಾತ್ವಿಕ ವಿಚಾರಗಳ ದೃಷ್ಟಿಯಿಂದ ಪರಿಶೀಲಿಸಿದರೆ ಮಾತ್ರ ಕಾಂಗ್ರೆಸ್ ಮತ್ತು ಸಾಮ್ಯವಾದಿಪಕ್ಷಗಳೊಳಗೆ ಸ್ವಲ್ಪ ಭೇದಕಾಣಬಹುದು. ಉದಾಹರಣೆಗೆ ಕಾಂಗ್ರೆಸು ವರ್ಗಕಲಹದಲ್ಲಿ ನಂಬುವುದಿಲ್ಲ. ಭಿನ್ನವರ್ಗಗಳ ಆಶ್ರಯಗಳೊಳಗೆ ಸಮನ್ವಯ ಸಾಧಿಸುವುದು ಸಾಧ್ಯವೆಂಬುದು ಕಾಂಗ್ರೆಸು ಮಹಾತ್ಮಾ ಗಾಂಧಿಯವರಿಂದ ಕಲಿತ ಒಂದು ಪಾಠ ಸಾಮ್ಯವಾದಿಗಳು ಮಾರ್ಕ್ಸರ ಅನುಯಾಯಿಗಳಿದ್ದು ವರ್ಗಕಲಹ ಅನಿವಾರ್ಯವೆನ್ನುವವರು ಈ ಬಗೆಯ ತಾತ್ವಿಕ ಭೇದಗಳು ಇರಬಹುದು ಆದರೆ ವ್ಯವಹಾರ ದೃಷ್ಟಿಯಿಂದ ವಿಚಾರಿಸಿದರೆ ನಿಜವಾಗಿ ಇತ್ತಂಡಗಳ ಧ್ಯೇಯಗಳೊಳಗೆ ಹೆಚ್ಚಿನ ಅಂತರವಿರುವುದಿಲ್ಲ. ಕಾಂಗ್ರೆಸು ದುಡಿಯುವುದಾದರೂ ಮುಖ್ಯವಾಗಿ ಬಡಜನರ ಉನ್ನತಿಗಾಗಿಯೇ ಇರುತ್ತದೆ ಸಾಮ್ಯವಾದಿಗಳ ಉದ್ದೇಶವಾದರೂ ಇದೇ ಇರುತ್ತದೆ ಧ್ಯೇಯ ಮಾತ್ರವಲ್ಲ ಕೆಲಸದ ವಿಧಾನಗಳಲ್ಲಿಯೂ ಕೂಡಾ ಶ್ರೀ ಜಯಪ್ರಕಾಶರಂಥ ಮುಂದಾಳುಗಳು ಮಹಾತ್ಮಾ ಗಾಂಧಿಯವರ ಅನುಯಾಯಿಗಳೇ ಇದ್ದು ಸತ್ಯ ಮತ್ತು ಅಹಿಂಸೆಯ ದಾರಿಯನ್ನೇ ಅನುಸರಿಸಬೇಕೆನ್ನುವವರಿದ್ದಾರೆ ಅಹಿಂಸೆಯು ಸತತ ಧರ್ಮವೆಂಬ ತತ್ವವಿವರಿಗೆ ಮಾನ್ಯವಿಲ್ಲದಿರಬಹುದು. ಆದರೂ ವ್ಯವಹಾರದಲ್ಲಿ ಅಹಿಂಸೆಯ ಹಾದಿಯನ್ನೇ ತುಳಿಯಬೇಕೆಂಬ ಉದ್ದೇಶವನ್ನು ಇವರು ಇಟ್ಟುಕೊಂಡಿದ್ದಾರೆ. ಶುದ್ಧ ಪ್ರಜಾಸತ್ತಾತ್ಮಕ ದಾರಿಯಲ್ಲಿ ನಡೆಯಬೇಕೆಂದು ಇವರು ನಿರ್ಧರಿಸಿದ್ದಾರೆ. ಕಾಂಗ್ರೆಸಿಗರಂತೆಯೇ ಸಾಮ್ಯವಾದಿಗಳು ರಾಷ್ಟ್ರಪ್ರೇಮಿಗಳೇ ಇದ್ದು ಕಮ್ಯೂನಿಸ್ಟರಂತೆ ರಾಷ್ಟ್ರಕ್ಕಿಂತಲೂ ಮೊಸ್ಕೊ ಪ್ರಧಾನವೆನ್ನುವವರಲ್ಲ.

ಈ ರೀತಿ ಉದ್ದೇಶ ಹಾಗೂ ಕೆಲಸದ ನಿಧಾನಗಳಲ್ಲಿ ಬಹಳ ಮಟ್ಟಿಗೆ ಕಾಂಗ್ರೆಸನ್ನೇ ಹೋಲುವ ಈ ಸಾಮ್ಯವಾದಿಪಕ್ಷದವರು ತಮ್ಮದೇ ಆದ ವಿಶಿಷ್ಟ ಕಾರ್ಯಕ್ರಮವನ್ನು ಇನ್ನೂ ಸ್ಪಷ್ಟವಾಗಿ ರೂಪುಗೊಳಿಸಿದಂತೆ ಕಾಣುವುದಿಲ್ಲ. ಕಾಂಗ್ರೆಸಿನೊಡನೆ ಸಹಕರಿಸುತ್ತೇವೆ. ಶಾಸನಸಭೆಗಳಲ್ಲಿ ಅಗತ್ಯವುಳ್ಳ ಎದುರುಸಂಗಡವಾಗುತ್ತೇವೆ. ಕಾಂಗ್ರೆಸಿಗರನ್ನೇ ದೂರ್ಕುವುದು ನಮ್ಮ ಉದ್ದೇಶವಲ್ಲವೆಂದು ಶ್ರೀ ಜಯಪ್ರಕಾಶರು ಹೇಳುತ್ತ ತಿರುಗಾಟನಾಡುತಿದ್ದರೂ ಕೂಡಾ ಸದ್ಯಕ್ಕೆ ಕಾಂಗ್ರೆಸಿನ ಚಟುವಟಿಕೆಗಳ ಮೇಲಿನ ವಿರುದ್ಧ ಟೀಕೆಯಲ್ಲದೆ ಬೇರೆ ಕಾರ್ಯಕ್ರಮ ಇವರ ಮುಂದೆ ಇದ್ದಂತೆ ಕಾಣುವುದಿಲ್ಲ

ಕಾಂಗ್ರೆಸ್ ಸಂಸ್ಥೆಯಾದರೂ ಈಗ ಟೀಕೆಗೆ ಆಸ್ಪದವಿಲ್ಲದರೀತೆ ವರ್ತಿಸುತ್ತಿದೆಯೆಂದು ನಾವಾದರೂ ಧೈರ್ಯದಿಂದ ಸಾಧಿಸುವ ಪರಿಸ್ಥಿತಿ ಈಗ ಇಲ್ಲವೆಂಬುದನ್ನು ಒಪ್ಪದೆ ನಿವೃತ್ತಿ ಇಲ್ಲ. ಕಾಂಗ್ರೆಸು ಈಗ ದೇಶದ ಆಡಳಿತೆ ನಡೆಸುವವರ ಸಂಸ್ಥೆ ಇರುವುದರಿಂದ ಇದೀಗ ಕಾಂಗ್ರೆಸಿಗರ ಅತ್ಯಂತ ಕಠಿಣವಾದ ಪರೀಕ್ಷಾಕಾಲವೆಂದರೆ ತಪ್ಪಲ್ಲ ಅಧಿಕಾರ ಲಾಲಸೆಯಿಂದ ಪ್ರೇರಿತರಾದ ಅದೆಷ್ಟೊ ಮಂದಿ ಈಗ ಕಾಂಗ್ರೆಸನ್ನು ಸೇರಿ ಈ ಸಂಸ್ಥೆಯ ಸೇವಾಭಾವವನ್ನು ಲುಪ್ತಗೊಳಿಸಿ ಇದರ ಚಟುವಟಿಕೆಗಳನ್ನು ಕಲುಷಿತಗೊಳಿಸಿರುವರೆಂಬುದು ನಿಜ ಶ್ರೀ ಕಾಮರಾಜ ನಾಡರರಂಥ ಕಾಂಗ್ರೆಸ್ ಮುಂದಾಳುಗಳೇ ಕಾಂಗ್ರೆಸಿನ ಮುಖ್ಯ ಕಾರ್ಯಕರ್ತರೆಂದಾದರೆ ಈ ಸಂಸ್ಥೆ ಬಹಳ ಕಾಲ ಬಾಳುವಂತಿಲ್ಲವೆಂಬುದು ಸ್ಪಷ್ಟವಿರುತ್ತದೆ ಆದರೆ ಈ ಬಗೆಯ ಜನರು ದೇಶದಲ್ಲಿ ಅಲ್ಲಲ್ಲಿ ಮುಂದಾಳ್ತನವನ್ನು ಕೈವಶಮಾಡಿಕೊಂಡು ಉಪಟಳ ನಡೆಸುವುದು ನಿಜವಾದರೂ ಈ ಸಂಸ್ಥೆಯ ಭವಿಷ್ಯವನ್ನು ರೂಪಿಸುವ ನಿಜವಾದ ಮುಂದಾಳ್ತನ ಇನ್ನೂ ಸಮರ್ಥ ಜನರ ಕೈಬಿಟ್ಟಿಲ್ಲ ರಾಜೇಂದ್ರ ಪ್ರಸಾದ, ಪಂಡಿತ ಜವಾಹರಲಾಲ ನೆಹರೂ, ವಲ್ಲಭಭಾಯಿ ಪಟೇಲ ಹಾಗೂ ಮೌಲಾನಾ ಅಬುಲ್‌ಕಲಮ್ ಅಜಾದರಂಥ ಮುಂದಾಳ್ತನವಿರುವಲ್ಲಿ ತನಕ ಕಾಂಗ್ರೆಸ್ ಸಂಸ್ಥೆಗೆ ನಿಜವಾದ ಧಕ್ಕೆ ಬರುವುದು ಅಸಾಧ್ಯ

ಶ್ರೀ ಜಯಪ್ರಕಾಶರಂಥವರ ಮೇಲೆ ಅನೇಕರಿಗೆ ಸಹಾನುಭೂತಿ ಇರಬಹುದು ಆದರೆ ಇವರು ಕೇವಲ ಕಾಂಗ್ರೆಸಿನ ಟೀಕೆ ಮಾತ್ರ ಮಾಡುತ್ತಿದ್ದು ತಮ್ಮದೇ ಆದ ಸ್ಪಷ್ಟಕಾರ್ಯಕ್ರಮ ರೂಪಿಸಿಕೊಳ್ಳದಿದ್ದರೆ ಇವರು ಬಹಳ ಮುಂದೊತ್ತುವುದು ಅಸಾಧ್ಯವೇ ಇರುತ್ತದೆ ಮಾತ್ರವಲ್ಲ ಈ ಸಂಗಡವು ಸ್ವಲ್ಪವಾದರೂ ಯಶಸ್ವಿಯಾಗುವುದು ಕಂಡುಬಂದೊಡನೆಯೇ ಇದರಲ್ಲಿಯೂ ಸ್ವಾರ್ಥಸಾಧಕರು ಒಳಸೇರಿದರೆ ಈ ಸಂಗಡವು ಕಾಂಗ್ರೆಸಿನಷ್ಟಾದರೂ ತನ್ನ ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಸಮರ್ಥವಾದೀತೆ ಎಂಬುದು ಸಂಶಯಾಸ್ಪದ ಪ್ರಶ್ನೆ ಇರುತ್ತದೆ.

ಈ ಪರಿಸ್ಥಿತಿಯಲ್ಲಿ ಕಾಂಗ್ರೆಸು ಎಲ್ಲೆಲ್ಲಿ ದುರ್ಬಲವಿರುತ್ತದೊ ಅಲ್ಲಲ್ಲಿ ಇವರಿಗೆ ಸ್ವಲ್ಪ ಬೆಂಬಲ ದೊರೆಯುವ ಸಂಭವವಿದೆಯಾದರೂ ಸಾಮ್ಯವಾದೀ ಸಂಗಡವು ಇದರ ಮುಖಂಡರು ಎನಿಸುವಷ್ಟು ಯಶಸ್ವಿಯಾಗುವಂತಿಲ್ಲವೆಂದೇ ಅನ್ನಿಸುತ್ತದೆ. ಆದರೂ ಈ ಸಂಗಡದ ಕಾರ್ಯದ ಪರಿಣಾಮವಾಗಿ ಕಾಂಗ್ರೆಸ್ ಸಂಸ್ಥೆಯು ತನ್ನ ದೌರ್ಬಲ್ಯವನ್ನು ಹೋಗಲಾಡಿಸಿ ಸುಧಾರಿಸುವಂತಾದರೆ ಈ ಸಂಗಡದ ಸ್ಥಾಪನೆ ನಿರರ್ಥಕವೆನ್ನಲಾಗದು. ಇಂಥ ಸತ್ಪರಿಣಾಮವು ಇದರಿಂದಾಗಿ ಆಗಲೆಂದು ಹಾರೈಸೋಣ.

ಟೀಕೆ-ಟಿಪ್ಪಣಿಗಳು

ಎ. ಐ. ಸಿ. ಸಿ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶವು ಬೊಂಬಾಯಿಯಲ್ಲಿ ಅತ್ಯಂತ ವಿಜ್ಯಂಭನೆಯಿಂದ ಜರಗಿತು. ಕಾಂಗ್ರೆಸ್ ಸಂಸ್ಥೆಯ ಘಟನೆಯ ಕೂಲಂಕುಶ ಪರಿಶೀಲನೆಯಾಗಿ ಅವಶ್ಯವುಳ್ಳ ತಿದ್ದುಪಡಿಗಳೊಡನೆ ಅದನ್ನು ಮಂಜೂರು ಮಾಡಲಾಯಿತು. ಕಾಂಗ್ರೆಸ್ ಸಂಸ್ಥೆಯು ದೇಶದ ಆರ್ಥಿಕ ಧೋರಣೆ ಹೇಗಿರಬೇಕೆಂಬ ಬಗ್ಗೆ ಅಭಿಪ್ರಾಯ ಪಡುತ್ತಿದೆಯೆಂಬುದನ್ನು ಸ್ಪಷ್ಟಪಡಿಸಲಾಯಿತು ಈ ಅಧಿವೇಶನದಲ್ಲಿಯ ಮುಖ್ಯ ವಿಚಾರಗಳು ಇವೆರಡೇ ಎನ್ನಲು ಅಡ್ಡಿ ಇಲ್ಲ

ಗುಪ್ತ ಅಧಿವೇಶನವೊಂದನ್ನು ನಡೆಸುವಂತೆ ಹಲವು ಸದಸ್ಯರು ಅಪೇಕ್ಷಿಸಟ್ಟಂತೆ ಒಂದು ಸಭೆಯನ್ನು ಗುಪ್ತವಾಗಿ ಜರಗಿಸಲಾಯಿತು ಇದರ ಉದ್ದೇಶ ಕಾಶ್ಮೀರ ಮತ್ತು ಹೈದರಾಬಾದು ಪ್ರಶ್ನೆಗಳ ಪರಿಶೀಲನ

ಈ ಪ್ರಶ್ನೆಗಳ ಕುರಿತು ಮುಖ್ಯ ಮಂತ್ರಿ ಜವಾಹರಲಾಲರು ಬಹಿರಂಗ ಅಧಿವೇಶನದಲ್ಲಿಯೂ ಒಂದು ಭಾಷಣವಿತ್ತರು ಹೈದರಾಬಾದಿನ ಕುರಿತು ಹಿಂದುಸ್ಥಾನ ಸಂಕಾರವು ಜಾಗರೂಕತೆಯಲ್ಲಿದೆಯೆಂದೂ ಜನರು ತಾಳ್ಮೆಯಲ್ಲಿರಬೇಕೆಂದೂ ಹೇಳಿದರು ಇದೇ ಅರ್ಥದ ಒಂದು ಸಂದೇಶವನ್ನು ಶ್ರೀ ವಲ್ಲಭಭಾಯಿಯವರೂ ಸಭೆಗ ಕಳುಹಿಸಿದ್ದರು

ಸಭೆಯಲ್ಲಿ ಮೊದಲಬಾರಿ ಮಹಾತ್ಮಾ ಗಾಂಧಿಯವರಿದ್ದಿಲ್ಲ ಆದರೆ ಅವರ ಸ್ಥಾನ ಸಹಜವಾಗಿ ಪಂಡಿತ ಜವಾಹರಲಾಲರಿಗೆ ಪ್ರಾಪ್ತವಾಗಿತ್ತೆಂದು ಪ್ರೇಕ್ಷಕರೊಬ್ಬರು ಒರೆದಿದ್ದಾರೆ

ಉತ್ತರ ಮಲಬಾರಿನಲ್ಲಿ ಕಮ್ಯೂನಿಸ್ಟ್ ಉಪಟಳ

ಮಲಬಾರಿನ ಚಿರಕಲ್ ಮೊದಲಾದ ಉತ್ತರ ಪ್ರದೇಶಗಳಲ್ಲಿ ಕಮ್ಯೂನಿಸ್ಟರು ಧನಿಗಳ ಮನೆ ನುಗ್ಗಿ ಧಾನ್ಯ ಒಯ್ಯುವುದು, ಮನೆ ಸುಡುವುದು, ಪೊಲೀಸರೊಡನೆ ಜೊತೆ ದಾಡುವುದು ಇತ್ಯಾದಿ ಉಪಟಳ ನಡೆಸಿದರು ಪೋಲಿಸರು ಗುಂಡು ಹಾರಿಸಿ ಕೆಲವರನ್ನು ಕೊಲ್ಲಬೇಕಾಯಿತು ನಮ್ಮ ಜಿಲ್ಲೆಯ ಗಡಿ ಸಮೀಪದಲ್ಲಿ ನಡೆದ ಈ ವಿದ್ಯಮಾನಗಳ ಪರಿಣಾಮ ಚರ್ವತ್ತೂರು ಮೊದಲಾದ ನಮ್ಮ ಜಿಲ್ಲೆಯ ಪ್ರದೇಶಗಳಲ್ಲಿಯೂ ಸ್ವಲ್ಪ ಕಂಡು ಬಂದಿತೆಂದು ತಿಳಿಯುತ್ತೇವೆ. ಅಂತೂ ವಿಶೇಷ ಹಾವಳಿಯಾಗಲು ನಮ್ಮ ಜಿಲ್ಲಾಧಿಕಾರಿಗಳು ಬಿಡಲಿಲ್ಲ.

ಕಮ್ಯೂನಿಸ್ಟರ ಈ ಹಿಂಸಾತ್ಮಕ ಚಳವಳಿ ಕಂಡು ಆ ಪ್ರದೇಶಗಳ ಕಮ್ಯೂನಿಸ್ಟರಲ್ಲಿ ಹಲವು ಮಂದಿ ಈ ಪಕ್ಷಕ್ಕೆ ರಾಜಿನಾಮೆ ಕೊಟ್ಟು ಇದರನ್ನು ಬಹಿರಂಗವಾಗಿ ಸಾರಿದ್ದಾರೆ. ಇದೇ ಬಗೆಯ ಧೋರಣೆ ಮುಂದರಿಸಿದರೆ ಕಮ್ಯೂನಿಸ್ಟ್ ಸಂಗಡ ಬೇಗನೆ ಅಂತ್ಯವಾಗುವುದೆಂಬುದನ್ನೇ ಇದು ಸೂಚಿಸುತ್ತದೆನ್ನಬಹುದು

ಕಾಶ್ಮೀರ ಕುರಿತು ನಿರ್ಣಯ ಮಂಜೂರಾಯಿತು

ಭಾರತ ಸರಕಾರದ ಪ್ರತಿನಿಧಿಗಳು ತಮ್ಮ ಒಪ್ಪಿಗೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದರೂ ಭದ್ರತಾಸಮಿತಿಯು ಈ ಬಾರಿಯ ನಿರ್ಣಯವನ್ನು ಬಹುಮತದಿಂದ ಮಂಜೂರು ಮಾಡಿತು ಹಿಂದುಸ್ಥಾನದ ಪ್ರತಿನಿಧಿ ಮಂಡಲ ಮರಳಿರುತ್ತದೆ

ಈ ನಿರ್ಣಯದಂತೆ ದಂಡೆತ್ತಿ ಬಂದವರನ್ನು ಹಿಂದೇ ಕಳುಹಿಸಲು ಪಾಕಿಸ್ಥಾನ ಸಾಧಿಸಬೇಕು ಆಗ ಭಾರತ ಸರಕಾರ ತನ್ನ ಸೈನ್ಯಗಳಲ್ಲಿ ಹೆಚ್ಚಿನ ಅಂಶ ಹಿಂತೆಗೆಯಬೇಕು ಶೇಕ್ ಅಬ್ದುಲ್ಲಾ ಸರಕಾರ ಸರ್ವ ಪಕ್ಷ ಸರಕಾರವಾಗಬೇಕು ಅಂದರೆ ದಂಗೆಕಾರರಿಗೂ ಇದರಲ್ಲಿ ಸ್ಥಾನ ದೊರೆಯಬೇಕು ಮತ್ತೆ ಜನಮತ ಗಣನೆಯ ಕಾಲದಲ್ಲಿ ಭಾರತದ ಸೈನ್ಯವಿಟ್ಟಂತೆ ಪಾಕಿಸ್ಥಾನ ಸೈನ್ಯಕ್ಕೂ ಅಲ್ಲಿ ಪ್ರವೇಶ ಕೊಡಬೇಕು

ಇದನ್ನಲ್ಲ ಭಾರತಸರಕಾರ ಒಪ್ಪುವಂತಿಲ್ಲವೆಂದ ಕಳೆದ ಬಾರಿಯೇ ಸ್ಪಷ್ಟಗೊಳಿಸಲಾಗಿದೆ. ತಾವು ಯಾವ ರೀತಿ ವರ್ತಿಸುತ್ತೇವೆಂಬುದನ್ನು ನಮ್ಮ ಪ್ರತಿನಿಧಿಗಳು ಮರಳಿ ಬಂದೊಡನೆ ಇತ್ಯರ್ಥಪಡಿಸಲಾಗುತ್ತದೆಂದು ಮುಖ್ಯ ಮಂತ್ರಿಯವರು ಹೇಳಿದ್ದಾರೆ

ದಂಡೆತ್ತಿ ಬಂದವರನ್ನು ಹಿಂದೆ ಕಳುಹಿಸಿಗಲಾಟೆ ನಿಲ್ಲುವಂತೆ ಮಾಡುವ ಕಾರ್ಯವಂತೂ ಪಾಕಿಸ್ಥಾನದವರು ಮೊದಲಾಗಿ ಸಾಧಿಸಬೇಕಷ್ಟೆ ಮುಂದಿನ ಪ್ರಶ್ನೆಗಳೆಲ್ಲ ಆ ಮೇಲೆ ಬರುವಂಥವುಗಳು ಪಾಕಿಸ್ಥಾನ ಏನು ಮಾಡುತ್ತದೆಂಬುದನ್ನು ನೋಡೋಣ

ಹೈದರಾಬಾದು ಸುಧಾರಣೆಗಳು

ಹೈದರಾಬಾದು ಸರಕಾರವು ಸುಮಾರ ಮೂರು ಸಾವಿರ ಮಂದಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿತು. ನೈಜಾಮರ ಎಲ್ಲ ಪಕ್ಷಗಳೂ ತನ್ನ ಆಡಳಿತೆಗೆ ಸಹಾಯಕರಾಗಿ ಸೇರಬೇಕೆಂಬ ಅಭಿಪ್ರಾಯದ ಒಂದು ಫರ್ಮಾನ್ ಹೊರಡಿಸಿದ್ದಾರೆ ಎಲ್ಲ ಪಕ್ಷಗಳಲ್ಲಿ ರಜಾಕರರೂ ಇದ್ದಾರೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ ಅಂತೂ ಜವಬ್ದಾರಿ ಸರಕಾರ ಸ್ಥಾಪನೆಯ ಮಾತಿಲ್ಲ ಹಳೆಮಟ್ಟಿನ ಈ ಸುಧಾರಣೆಗೆ ಯಾರೂ ಒಪ್ಪುವಂತಿಲ್ಲ ರಜಾಕರ ಸಂಗಡ ಬೀಳಿಕ್ಕೂ ಅಲ್ಲಿಯ ಸರಕಾರ ಸಿದ್ಧವಿಲ್ಲ ಅಥವಾ ಆ ಸರಕಾರಕ್ಕೆ ಸಾಮರ್ಥ್ಯವಿಲ್ಲ ಪಂಡಿತ ಜವಾಹರಲಾಲರು ಹೇಳಿದಂ

ವಿಧಾಯಕ ಕಾರ್ಯಕರ್ತರ ಪರಿಷತ್ತು

ದಕ್ಷಿಣಕನ್ನಡ ಜಿಲ್ಲೆಯ ವಿಧಾಯಕ ಕಾರ್ಯಕರ್ತರ ಪರಿಷತ್ತು ಸದ್ಯದಲ್ಲಿಯೇ ಮೂಲ್ಕಿಯಲ್ಲಿ ಜರಗಲಿಕ್ಕಿದೆಯೆಂದೂ ಈ ಸಂದರ್ಭದಲ್ಲಿ ಶ್ರೀ ವಿನೋಬಾಭಾವೆ, ಕೃಷ್ಣದಾಸಗಾಂಧಿ ಮೊದಲಾದವರು ಬರಲಿರುವರೆಂದೂ ತಿಳಿದುಬರುತ್ತದೆ.

ವಿನೋಬಾಭಾವೆಯವರೆಂದರೆ ವೈಯುಕ್ತಿಕ ಸತ್ಯಾಗ್ರಹದಲ್ಲಿ ಆರಿಸಿ ಬಲಿಕೊಡಬೇಕೆಂಬ ನಿಯಮವಿಟ್ಟು ಮಹಾತ್ಮಾ ಗಾಂಧಿಯವರು ಮುಂದರಿಯುವಾಗ ಅಖಿಲಭಾರತದಲ್ಲಿ ಅತ್ಯುತ್ತಮ ಸತ್ಯಾಗ್ರಹಿಯೆಂದು ಪ್ರಥಮ ಬಲಿಗೆ ಆರಿಸಲ್ಪಟ್ಟವರು. ಮಹಾತ್ಮಾ ಗಾಂಧಿಯವರಿಂದ ಪ್ರಥಮ ಸತ್ಯಾಗ್ರಹಿಯೆಂದು ಆರಿಸಲ್ಪಟ್ಟವರೆಂದ ಮೇಲೆ ಇವರು ಯಾವ ಬಗೆಯ ಮಹನೀಯರೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ. ಮಹಾತ್ಮಾ ಗಾಂಧಿಯವರ ನಿಧನದ ಬಳಿಕ ಇವರು ವಾರ್ಧಾದಲ್ಲಿಯ ತನ್ನ ಕಾರ್ಯಕ್ಷೇತ್ರದಿಂದ ಹೊರಗೆ ಬರಲು ಆರಂಭಿಸಿದ್ದಾರೆ. ಇವರು ಇರುವುದರಿಂದ ತನ್ನ ಆಶ್ರಮವೇ ಪಾವನವಾಗಿದೆಯೆಂದು ಗಾಂಧಿಯವರು ಇವರ ಕುರಿತು ಇನ್ನೊಮ್ಮೆ ಹೇಳಿದ್ದರು. ಇವರು ನಮ್ಮ ಜಿಲ್ಲೆಯನ್ನೂ ಸಂದರ್ಶಿಸಲಿರುವರೆಂಬುದು ಒಂದು ಸಂತೋಷದ ಸಂಗತಿ ಮಾತ್ರವಲ್ಲ ಜಿಲ್ಲೆಗೆ ಇದೊಂದು ಅಪೂರ್ವ ಸುಯೋಗವೆಂದೇ ಹೇಳಬೇಕು.

ಗೀತೆ, ಉಪನಿಷತ್ತುಗಳು ಮೊದಲಾದ ಹಿಂದೂ ಧರ್ಮಗ್ರಂಥಗಳ ಕುರಿತು ಇವರು ಬರೆದಂತೆ ಬರೆಯುವವರು ಅಖಿಲಭಾರತದಲ್ಲಿ ಈಗ ಪ್ರಾಯಶಃ ಯಾರೂ ಇಲ್ಲವೆಂದರೆ ಅತಿಶಯೋಕ್ತಿ ಇಲ್ಲ. ಇವರ ಕೆಲವು ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಇವನ್ನು ಇದುವರೆಗೆ ಓದದಿದ್ದವರು ಈಗಲಾದರೂ ಓದಬಹುದು.

ಇವರ ಸಮಕ್ಷಮದಲ್ಲಿ ಜರಗಲಿರುವ ನಮ್ಮ ಜಿಲ್ಲೆಯ ವಿಧಾಯಕ ಕಾರ್ಯಕರ್ತರ ಪರಿಷತ್ತು ಸತ್ಪರಿಣಾಮಕಾರಿಯಾಗದೆ ಇರದೆಂದು ಆಶಿಸಬಹುದು. ಅಂತೂ ಈ ಪರಿಷತ್ತಿಗೆ ಒಂದೆರಡು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡಬಹುದು.

ವಿಧಾಯಕ ಕಾರ್ಯಕ್ರಮ ಸರಿಯಾಗಿ ಮುಂದೊತ್ತುವಷ್ಟು ಕಷ್ಟದ ಕೆಲಸ ಇನ್ನೊಂದಿಲ್ಲ. ಇದು ಎಲ್ಲರೂ ತಿಳಿದ ವಿಚಾರ. ನಮ್ಮಲ್ಲಿ ಸ್ವಲ್ಪ ಮಟ್ಟಿಗೆ ಈ ಕಾರ್ಯ ಈಗ ನಡೆಯುತ್ತಾ ಇದೆಯೆಂಬುದು ನಿಜ. ದಕ್ಷಿಣಕನ್ನಡ ಜಿಲ್ಲಾ ಗ್ರಾಮೋದ್ಯೋಗ ಸಂಘವು ಖಾದಿ ಕಾರ್ಯಕ್ರಮವನ್ನು ಸಾಧ್ಯವಿದ್ದಷ್ಟು ಮುಂದೊತ್ತುತ್ತಿದೆ. ಹರಿಜನ ಸೇವಾಸಂಘವೊಂದು ಕೆಲಸಮಾಡುತ್ತಿದೆ. ಹಿಂದೀ ಪ್ರಚಾರ ಸಮಿತಿಯು ಒಂದು ಸ್ವಲ್ಪ ಮಟ್ಟಿಗೆ ಕೆಲಸ ಮಾಡುತ್ತಿದೆ. ನಮ್ಮಲ್ಲಿಯ ವಿಧಾಯಕ ಕಾರ್ಯಕ್ರಮ ಈಗ ಇರುವುದು ಇಷ್ಟೇ ಎನ್ನಬಹುದು.

ವಿಧಾಯಕ ಕಾರ್ಯಕ್ರಮ ವಿಸ್ತರಿಸಲ್ಪಟ್ಟು ಇಡೀ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ನಡೆಯುವಂತಾಗಲು ಉತ್ತಮವಾದ ವ್ಯವಸ್ಥೆಯನ್ನು ಏರ್ಪಡಿಸುವುದು ಎಲ್ಲಕ್ಕೂ ಮುಖ್ಯವಿರುತ್ತದೆ. ಅಂದರೆ ಈ ಬಗ್ಗೆ ಜಿಲ್ಲೆಗೆ ಒಂದು ಒಂದು ಕೇಂದ್ರ ಸಂಸ್ಥೆಯಾಗಬೇಕು. ಆಯಾ ವಿಶಿಷ್ಟ ಕಾರ್ಯಕ್ರಮಗಳಿಗೆ ಅವುಗಳ ಪ್ರತ್ಯೇಕ ಸಂಸ್ಥೆಗಳಿರುವುದೇ ಯೋಗ್ಯ. ಉದಾಹರಣೆಗೆ ಗ್ರಾಮೋದ್ಯೋಗ ಸಂಘ, ಹರಿಜನ ಸೇವಾ ಸಂಘ, ಹಿಂದೀ ಪ್ರಚಾರ ಸಮಿತಿ ಇತ್ಯಾದಿ ಈ ಸಂಸ್ಥೆಗಳೆಲ್ಲ ಅಗತ್ಯವಿರುತ್ತವೆ. ಇವು ಮಾತ್ರ ಸಾಲದು. ಎಲ್ಲ ವಿಧಾಯಕ ಕಾರ್ಯಗಳ ಸಂಸ್ಥೆಗಳಿಗೂ ಜಿಲ್ಲೆಯಲ್ಲಿ ಸರಿಯಾದ ಪ್ರೋತ್ಸಾಹ ಸಿಕ್ಕಿ ವಿಸ್ತೃತ ಪ್ರಮಾಣದಲ್ಲಿ ಇವು ನಡೆಯುವಂತೆ ಸಾಧಿಸಲು ಹಾಗೂ ಈ ಸಂಸ್ಥೆಗಳ ಸರಿಯಾದ ಮೇಲ್ವಿಚಾರ ನೋಡಿ ಇವುಗಳಿಗೆ ಅಗತ್ಯವುಳ್ಳ ಸಹಾಯ ಒದಗಿಸಲು ಒಂದು ಕೇಂದ್ರ ಸಂಸ್ಥೆ ಅತ್ಯಾವಶ್ಯಕವಿರುತ್ತದೆ.

ಇಂಥ ಕೇಂದ್ರ ಸಂಸ್ಥೆಯನ್ನು ಯಾವ ರೀತಿ ವ್ಯವಸ್ಥೆಗೊಳಿಸಬೇಕೆಂಬ ಬಗ್ಗೆ ವಿಚಾರಿಸುವುದು ಅಗತ್ಯ. ವಾರ್ಧಾದಲ್ಲಿ ಅಖಿಲ ಭಾರತದ ವಿಧಾಯಕ ಕಾರ್ಯಕರ್ತರ ಸಭೆ ಸೇರಿ ಒಂದು ಸರ್ವೋದಯ ಸಮಾಜವೆಂಬ ಸಂಸ್ಥೆ ಸ್ಥಾಪಿಸಲಾಯಿತೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಷ್ಟೆ. ಆ ಮೇಲೆ ಇನ್ನು ಒಂದೆರಡು ಕಡೆ ಇಂಥ ಸರ್ವೋದಯ ಸಮಾಜ ಸ್ಥಾಪಿಸಿದ್ದಾರೆ. ನಾವೂ ಒಂದು ಸರ್ವೋದಯ ಸಮಾಜ ಮಾಡೋಣವೇ? ಇಂಥ ಸಮಾಜ ನಮ್ಮ ಜಿಲ್ಲೆಗೆ ಬೇಡವೆಂದೇ ನಮ್ಮ ಅಭಿಪ್ರಾಯ. ಇಲ್ಲಿ ಇಂಥ ಒಂದು ಸಮಾಜ ತೆರೆದರೆ ನಮ್ಮಲ್ಲಿರುವ ಬ್ರಹ್ಮ ಸಮಾಜ ಮತ್ತು ಆರ್ಯ ಸಮಾಜಗಳ ಜೊತೆಗೆ ಇದೊಂದು ಇನ್ನೊಂದು ಸಮಾಜವಾಗುವ ಸಂಭವವೇ ಹೆಚ್ಚು. ಆದ್ದರಿಂದ ಈ ಸಮಾಜ ಸ್ಥಾಪನೆ ನಮ್ಮ ಜಿಲ್ಲೆಗೆ ಬೇಡ.

ಜಿಲ್ಲೆಯಲ್ಲಿ ವಿಧಾಯಕ ಕಾರ್ಯಕ್ರಮ ಮುಂದೊತ್ತುವ ಕೇಂದ್ರ ಸಂಸ್ಥೆಯಾಗಿ ಈ ಜಿಲ್ಲೆಗೊಂದು ಲೋಕಸೇವಾ ಸಂಘವನ್ನು ವ್ಯವಸ್ಥೆಗೊಳಿಸಬಹುದೆಂದು ಸೂಚಿಸಬಯಸುತ್ತೇವೆ.

ಮಹಾತ್ಮಾಗಾಂಧಿಯವರು ಕಾಂಗ್ರೆಸ್ ಸಂಸ್ಥೆಯನ್ನೇ ಲೋಕಸೇವಾ ಸಂಘವಾಗಿ ಮಾರ್ಪಡಿಸಬೇಕಾಗಿ ಸೂಚನೆಕೊಟ್ಟಿದ್ದರು. ಆದರೆ ಕಾಂಗ್ರೆಸಿನವರು ಇದನ್ನು ಒಪ್ಪಲಿಲ್ಲ. ಈಗ ಮಂಜೂರಾಗಿರುವ ಕಾಂಗ್ರೆಸ್ ಘಟನೆ ಗಾಂಧೀಜಿಯವರ ಲೋಕಸೇವಾ ಸಂಘವಲ್ಲವೆಂದು ಅತ್ಯಂತ ಸ್ಪಷ್ಟವಿರುತ್ತದೆ. ಕಾಂಗ್ರೆಸಿನ ವರಿಷ್ಠ ಕಮಿಟಿಗಳಲ್ಲಿರುವವರೆಲ್ಲ ವಿಧಾಯಕ ಕಾರ್ಯಕರ್ತರೇ ಇರಬೇಕೆಂಬ ನಿಯಮವನ್ನೇನೋ ಇರಿಸಲಾಗಿದೆ. ಇದು ಸ್ವಲ್ಪ ಸಮಯದಲ್ಲಿ ಶಿಥಿಲವಾಗಿ ಅಂತ್ಯಗೊಳಿಸಲ್ಪಡುವ ಸಂಭವವೇ ಹೆಚ್ಚೆಂದು ಹಿಂದಿನ ಅನುಭವವಿದ್ದವರೆಲ್ಲ ಊಹಿಸಲು ಕಷ್ಟವಿಲ್ಲ. ಅಂತೂ ಕಾಂಗ್ರೆಸ್ ಸಂಸ್ಥೆಯು ನಮ್ಮಲ್ಲಿಯೂ ಹೊಸ ಘಟನೆಯಂತೆ ಮಾರ್ಪಡಲಿದೆಯಷ್ಟೆ. ಅದಕ್ಕೂ ಹೊಸತಾಗಿ ಸ್ಥಾಪಿಸಲ್ಪಡಲಿರುವ ಲೋಕಸೇವಾ ಸಂಘಕ್ಕೂ ಪರಸ್ಪರ ವಿರೋಧವೇನೂ ಇಲ್ಲ. ಈ ಲೋಕಸೇವಾ ಸಂಘದ ಉದ್ದೇಶ ವಿಧಾಯಕ ಕೆಲಸ ಮುಂದೊತ್ತುವುದು ಮಾತ್ರವೆಂಬ ಮೇರೆ ಹಾಕಿಕೊಳ್ಳಲು ಈಗಿನ ಸಂದರ್ಭದಲ್ಲ ಅಡ್ಡಿ ಇಲ್ಲ. ರಾಜಕೀಯ ವಿಚಾರಗಳಲ್ಲಿ ಈ ಸಂಘ ಕೈಹಾಕಬಾರದೆಂಬ ನಿಯಮವಿಟ್ಟರೂ ಅಡ್ಡಿಯಿಲ್ಲ ಮಾತ್ರವಲ್ಲ ಅದು ಪ್ರಕೃತ ಪರಿಸ್ಥಿತಿಯಲ್ಲಿ ಅಗತ್ಯವೂ ಇರುತ್ತದೆ.

ಮಹಾತ್ಮಾಗಾಂಧಿಯವರು ಸೂಚಿಸಿದ ಘಟನೆಯಂತೆ ಈ ಸಂಸ್ಥೆಯನ್ನು ರೂಪಿಸಿದರೆ ಇದು ಕೆಲಸಗಾರರದೇ ಸಂಸ್ಥೆಯಾಗುತ್ತದೆ. ಅಹಿಂಸಾ ಧರ್ಮದ ತಳಹದಿಯಲ್ಲಿ ರಚಿತವಾದ ಒಂದು ಸೈನಿಕ ವ್ಯವಸ್ಥೆಯ ಸಂಸ್ಥೆ ಬೇಕೆಂದು ಗಾಂಧೀಜಿ ಆತುರಪಟ್ಟಿದ್ದರು. ಅಂಥ ಸಂಸ್ಥೆ ನಮ್ಮ ಜಿಲ್ಲೆಯಲ್ಲಿ ನಾವೇಕೆ ಸಾಧಿಸಬಾರದು?

ಇನ್ನು ಒಂದೆರಡು ಕಡೆ ಲೋಕಸೇವಾ ಸಂಘವೆಂಬ ಸಂಸ್ಥೆ ತೆರೆದಂತೆ ಪತ್ರಿಕೆಗಳಿಂದ ತಿಳಿದು ಬರುತ್ತದೆ. ಅವನ್ನು ಹೇಗೆ ಯಾವ ಉದ್ದೇಶ ನಡೆಸುತ್ತಿರುವರೆಂದು ಗೊತ್ತಿಲ್ಲ. ಆ ಮಾಹಿತಿಯೂ ನಮಗೆ ಅನಗತ್ಯ. ಲೋಕಸೇವಾ ಸಂಘದ ಘಟನೆ ಮತ್ತು ನಿಯಮಗಳ ರೂಪರೇಷೆಗಳನ್ನು ಗಾಂಧೀಜಿಯವರೇ ಒದಗಿಸಿದ್ದಾರೆ. ಅದನ್ನೇ ಇಟ್ಟುಕೊಂಡು ಮುಂದರಿಸಿದರೆ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಲು ಅತ್ಯಂತ ವ್ಯವಸ್ಥಿತವಾದ ಒಂದು ಉತ್ತಮ ಕೇಂದ್ರ ಸಂಸ್ಥೆಯನ್ನು ನಾವು ಮಾಡಿಕೊಂಡಂತಾಗುವುದು.

ಲೋಕಸೇವಾ ಸಂಘದಿಂದ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ದುಡಿಯುವ ಉತ್ತಮ ಕೆಲಸಗಾರರನ್ನು ಸಿದ್ಧಗೊಳಿಸಿ ಸೈನಿಕ ಶಿಸ್ತಿನಿಂದ ಈ ಕಾರ್ಯ ಮುಂದೊತ್ತಬಹುದು. ಇಂಥ ಕೆಲಸಗಳಿಗೆಲ್ಲ ಆಯಾ ವಿಶಿಷ್ಟ ಕಾರ್ಯಕ್ರಮಕ್ಕಾಗಿ ಏರ್ಪಡಿಸಿದ ಭಿನ್ನ ಸಂಸ್ಥೆಗಳು ಅವಶ್ಯವುಳ್ಳ ಸಹಕಾರ ಒದಗಿಸಬಹುದು.

ನಮ್ಮ ಜಿಲ್ಲೆ ಮಾತ್ರ ಹೀಗೆ ಮುಂದರಿದರೆ ಫಲವುಂಟೆ? ಅಖಿಲಭಾರತ ಅಥವಾ ಅಖಿಲ ಕರ್ನಾಟಕ ಹೀಗೆ ಲೋಕಸೇವಾ ಸಂಘ ಏಕೆ ಮಾಡುವುದಿಲ್ಲ! ಈ ಜಿಲ್ಲೆ ಮಾತ್ರ ತನ್ನದೇ ಹಾದಿ ಹಿಡಿಯುವುದು ಸರಿಯೋ? ಇತ್ಯಾದಿ ಪ್ರಶ್ನೆಗಳು ಸಹಜ.

ನಮ್ಮ ಜಿಲ್ಲೆಯಲ್ಲಿ ವಿಧಾಯಕ ಕಾರ್ಯ ಮುಂದೊತ್ತುವುದು ನಮ್ಮ ಉದ್ದೇಶ. ಅದಕ್ಕೆ ಈ ಬಗೆಯ ಸಂಸ್ಥೆ ಉಪಯುಕ್ತವೆಂದು ನಾವು ಭಾವಿಸಿದರೆ ಅದನ್ನು ವ್ಯವಸ್ಥೆಗೊಳಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ. ಮಾತ್ರವಲ್ಲ ಕರ್ನಾಟಕ ಅಥವಾ ಭಾರತದಲ್ಲಿ ಮಾಡಬಹುದಾದ ವ್ಯವಸ್ಥೆ ಮೇಲೆ ಈ ಸಂಸ್ಥೆ ಕಟ್ಟು ಸಂಬಂಧವಿಟ್ಟುಕೊಂಡು ಸಹಕರಿಸುವುದಕ್ಕೆ ಯಾವ ಅಡ್ಡಿ ಇದೆ?

ಆದ್ದರಿಂದ ಸದ್ಯದಲ್ಲೇ ಸೇರಲಿರುವ ವಿಧಾಯಕ ಕಾರ್ಯಕರ್ತರ ಪರಿಷತ್ತಿನಲ್ಲಿ ಈ ಪ್ರಶ್ನೆಯನ್ನು ಸರಿಯಾಗಿ ವಿವೇಚಿಸಿ ತೀರ್ಮಾನಿಸಬೇಕೆಂದು ಆತ್ಮಾಗ್ರಹದಿಂದ ಸೂಚಿಸಬಯಸುತ್ತೇವೆ.

ಅಲ್ಲಿ ನಿಜವಾಗಿ ನೈಜಾಮು ಸರಕಾರ ನಡೆಯುತ್ತಿದೆಯೋ ಅಥವಾ ಪರದೆಯ ಹಿಂದೆ ಬೇರೆಯೇ ಸರಕಾರ ಅಂದರೆ ರಜಾಕರ ಸರಕಾರ ನಡೆಯುತ್ತಿದೆಯೋ ಎಂಬ ಸಂಶಯಕ್ಕೆ ಆಸ್ಪದವಿದೆ. ಅಂತೂ ಜಗಳಕ್ಕೆ ನಾವು ಸಿದ್ಧರಿದ್ದೇವೆ, ಆದರೆ ತಾಳ್ಮೆ ವಹಿಸೋಣವೆಂಬ ಮುಖ್ಯ ಮಂತ್ರಿಯವರ ಮಾತುಗಳಿಗೆ ಬಲಿ ಕೊಟ್ಟು ಈ ಕುರಿತು ಎಲ್ಲರೂ ತಾಳ್ಮೆಯಿಂದ ವರ್ತಿಸಬೇಕಾಗಿದೆ.

ಮದ್ರಾಸು ಶಾಸನಸಭೆಯಲ್ಲಿ ನಿಲುವಳಿ ಸೂಚನೆ

ಈಗ ಮದ್ರಾಸು ಶಾಸನ ಸಭೆಯ ಅಧಿವೇಶನ ನಡೆಯುತ್ತ ಇದೆ. ಶ್ರೀ ಕೆ. ಆರ್. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಆಹಾರ ಪರಿಸ್ಥಿತಿ ಬಹಳ ಗಂಡಾಂತರದಿದ್ದು ಜನರು ಇಲ್ಲಿ ಸಾಯುವ ಪರಿಸ್ಥಿತಿ ಬರಬಹುದೆಂಬುದರಿಂದ ಈ ಕುರಿತು ಚರ್ಚಿಸಲು ಸಭೆಯ ಇತರ ಕಾರ್ಯಕ್ರಮ ಮುಂದರಿಸಬೇಕೆಂಬ ನಿಲುವಳಿ ಸೂಚನೆ ಮುಂದೆ ತಂದರು. ನಮ್ಮ ಜಿಲ್ಲೆಯ ಪ್ರತಿನಿಧಿಗಳಲ್ಲಿ ಶ್ರೀಗಳಾದ ಎಲ್. ಸಿ. ಪ್ಯಾಸರೂ ಹುಸೇನ ಸಾಹೇಬರೂ ಕಾರಂತರಿಗೆ ಬೆಂಬಲಕೊಟ್ಟರು.

ಕಾರಂತರು ತಮ್ಮ ಭಾಷಣದಲ್ಲಿ ಅನೇಕ ಅಂಕೆ ಸಂಖ್ಯೆಗಳನ್ನು ಕೊಟ್ಟು ಅಕ್ಕಿ ಕಂಟ್ರೋಲನ್ನು ತೆಗೆದು ಹಾಕಬಾರದಿತ್ತೆಂದೂ ಇದರಿಂದ ಬಹಳ ಕೆಟ್ಟ ಪರಿಣಾಮವಾಗಿದೆಯೆಂದೂ ವಾದಿಸಿದರು.

ಆಹಾರ ಮಂತ್ರಿ ಡಾ। ರಾಜನ್ನರು ಉತ್ತರ ಕೊಡುತ್ತ ಕಾರಂತರು ಬಹಳ ಬೇಜವಾಬ್ದಾರಿಯಿಂದ ಈ ನಿರ್ಣಯ ಮುಂದಿಟ್ಟು ಮಾತಾಡಿದರೆಂದು ಹೇಳಿ ತಾನೂ ಹಲವು ಅಂಕೆ ಸಂಖ್ಯೆಗಳನ್ನು ಕೊಟ್ಟು ಈ ಜಿಲ್ಲೆಯ ಮಟ್ಟಿಗೆ ಈಗಿನ ಸರಕಾರ ಎಲ್ಲ ಜಿಲ್ಲೆಗಳಿಗಿಂತ ಹೆಚ್ಚಿನ ರಿಯಾಯತಿ ತೋರಿಸಿದ್ದಾರೆಂದು ಸ್ಪಷ್ಟಪಡಿಸಿದರು.

ಸುರತ್ಕಲ್ ಪ್ರಾಣಿಬಲಿಯ ನಿರ್ಧಾರ

ಸುರತ್ಕಲ್ಲಿನ ವೀರಭದ್ರ ಕಾಳಿಕಾಂಬಾ ದೇವಾಲಯದ ಮಾರಿಪೂಜೆ ಅನೇಕ ದಿನ್ನಗಳ ತಿರಸ್ಕಾರ ನಂತರ ಕಳೆದ ತಾ. ೩೦ರಂದು ಜರಗಿಸಲು ದೇವಾಲಯ ಅಧಿಕಾರಿಗಳು ನಿರ್ಧರಿಸಿದ್ದರು. ಅಂದು ೪-೫ ಸಾವಿರ ಜನರು ಸೇರಿದ್ದು ಕಾಂಗ್ರೆಸಿನವರು ೧೦೦ ಸತ್ಯಾಗ್ರಹಿಗಳನ್ನು ಸಿದ್ಧಪಡಿಸಿದ್ದರು. ಪರಿಸ್ಥಿತಿ ಗಂಭೀರವಾದಾಗ ಸಬ್ ಮೆಜಿಸ್ಟ್ರೇಟರು ಶಾಂತಿಭಂಗವಾದೀತೆಂದು ನೋ. ೧೪೪ನೇ ಸೆಕ್ಷನ್ ಜಾರಿಮಾಡಿದರು. ದೇವಾಲಯದ ಟ್ರಸ್ಟಿಗಳು ಇನ್ನೂ ಛಲಬಿಟ್ಟಿಲ್ಲವೆಂದು ನಂಬಲಾಗಿದೆ. ಸರಕಾರವೇ ಈ ಸಂಬಂಧ ಬಿಗಿಯಾದ ಧೋರಣೆ ಅನುಸರಿಸುವಂತೆ ಇಲ್ಲಿಯ ಕಾಂಗ್ರೆಸ್ ಪ್ರತಿನಿಧಿಗಳು ಎಂ. ಎಲ್. ಎ. ಗಳಿಗೆ ತಂತಿ ಬಿಟ್ಟಿರುವರು.

(೫ನೇ ಪುಟದಿಂದ)

ಕವಿ ರವೀಂದ್ರನಾಥ ಟಾಗೂರರು ಮಹಾತ್ಮರನ್ನು ಸ್ವಾಗತಿಸುತ್ತ ಹೀಗೆಂದರು: "ನಮ್ಮ ಹೃದಯಗಳ ನಿರಂತರ ತಾರುಣ್ಯದ ರಾಣಿಯಾಗಿರುವ ಈ ಶಾಂತಿನಿಕೇತನವು ನಿಮ್ಮನ್ನು ಸ್ವಾಗತಿಸುತ್ತದೆ' "ಹಾಗಾದರೆ ಹಲ್ಲಿಲ್ಲದ ಮುದುಕನಿಗೂ ಒಂದು ಹಾರ್ಟಿಕೆ ಇದೆಯೆಂದಾಯಿತಲ್ಲ" ಎಂದು ಮಹಾತ್ಮರು ಎಲ್ಲರನ್ನು ನಗಿಸಿದರು.

ಇನ್ನೊಂದು ಸಂದರ್ಭದಲ್ಲಿ ಆಗ ತಾನೇ ಚಕ್ರವರ್ತಿಗಳ ಅತಿಥಿಗೃಹದಿಂದ (ಸೆರೆಮನೆ) ಬಿಡುಗಡೆಯಾಗಿಬಂದ ಮಹಾತ್ಮರನ್ನುದ್ದೇಶಿಸಿ ಟಾಗೂರರು ಹೀಗೆಂದರು "ನೀವು ಅನುಭೋಗಿಸಿದ ಈ ವಿರಾಮಸೌಖ್ಯವು ನನಗೂ ಸಿಗಲೆಂದು ಆಶಿಸುತ್ತೇನೆ" "ಆದರೆ ನೀವು ನನ್ನ ಹಾಗೆ ವರ್ತಿಸುತ್ತಿಲ್ಲ" ಎಂದರು ಮಹಾತ್ಮರು ಧಾರ್ಮಿಕವಾಗಿ.

ಹಾಸ್ಯದ ಕವಿತೆ

ದುಂಡುಮೇಜಿನ ಪರಿಷತ್ತಿಗೆ ಹೋಗುತಿದ್ದಾಗ ಹಡಗದಲ್ಲಿನ ಓರ್ವ ಆಂಗ್ಲ ಗೃಹಸ್ಥನು ಮಹಾತ್ಮರ ಮೇಲೆ ಹಾಸ್ಯಕವಿತೆಗಳನ್ನು ಅವರ ಕೈಗಿತ್ತ ಗಾಂಧೀಜಿ ಅದನ್ನು ಓದಿ ಕಾಗದಗಳಿಗಂಟಿಸಿದ ಗುಂಡುಸೂಜಿಯನ್ನು ತೆಗೆದು ತಮ್ಮ ತಲೆಗಿಂಬಿಗೆ ಚುಚ್ಚಿಸಿಟ್ಟು, ಕಾಗದಗಳನ್ನು ಕಸದಬುಟ್ಟಿಗೆಸೆದರು. ಕೌತುಗಗೊಂಡ ಆಂಗ್ಲನು" "ಏನು, ಇದರಲ್ಲಿ ನಿಮಗುಪಯುಕ್ತವಾದುದೇನೂ ಇಲ್ಲವೆ?" ಎಂದು ಪ್ರಶ್ನಿಸಿದರು. ಮಹಾತ್ಮರೆಂದರು "ಉಪಯುಕ್ತವಿರುವುದನ್ನು ತೆಗೆದಿಟ್ಟಿರುತ್ತೇನೆ" ಗುಂಡುಸೂಜಿಯನ್ನು ಅವರು ಅವನಿಗೆ ತೋರಿಸಿದರು

ಇತ್ತೀಚೆಗೆ ಓರ್ವ ಚೀನಿಯನು ಮಹಾತ್ಮರಿಗೆ ಒಂದು ಸುಂದರವಾದ ರೇಶ್ಮೆ ಶಾಲನ್ನು ಉಡುಗೊರೆಯರ್ಪಿಸಿದ್ದ ಅದನ್ನು ಶ್ಲಾಘಿಸುತ್ತ ಅವರು" ಚೀನದಲ್ಲಿ ಇಷ್ಟು ನಾಜೂಕು ನೂಲನ್ನು ತೆಗೆಯುವ ಹುಡುಗಿಯೋರ್ವಳಿದ್ದಾಳೆಂದುದಾದರೆ ಈ ಮುದಿ ಪ್ರಾಯದಲ್ಲೂ ನಾನವಳ ಕೈಹಿಡಿಯಲು ಬಯಸುತ್ತೇನೆ" ಎಂದರು

ಪತ್ರಿಕಾ ಪ್ರತಿನಿಧಿಗಳೊಡನೆ ನಗು

ಪ್ರಖ್ಯಾತ ಅಮೇರಿಕನ್ ಪತ್ರಿಕೋದ್ಯಮಿ ಲೂಯಿಫಿಶರರು ಸೇವಾ ಗ್ರಾಮಕ್ಕೆ ಬಂದಿದ್ದರು. ವಾರ್ಧಾ ಸ್ಟೇಶನಿನಿಂದವರು ಗಾಂಧಿ ಗುಡಿಸಲಿಗೆ ಕುದುರೆ ಟಾಂಗಾದಲ್ಲಿ ಪ್ರಯಾಣಮಾಡಿ ಬಂದರು. ಉಷ್ಣಕ್ಕೆ ಅವರ ಅವರ ಮೈಬೆವರಿತ್ತು. ಅವರನ್ನು ನೋಡಿದಾಕ್ಷಣ ಮಹಾತ್ಮರು "ನೀವು ಹವಾ ಪರಿಸ್ಥಿತಿಯನ್ನು ಸ್ತಿಮಿತಪಲ್ಲಿರಿಸಿದ ಬಂಡಿಯಲ್ಲಿ ಪ್ರಯಾಣಮಾಡಿದರೇನು?" ಎಂದು ಪ್ರಶ್ನಿಸಿದರು.

ಪ್ರಭಾತದಿಂದ ಮಧ್ಯ ರಾತ್ರಿ ಕಾಲ ತನಕಬಿಡುವಿಲ್ಲದ ಚಟುವಟಿಕೆಯಲ್ಲಿ ಮಗ್ನರಾಗಿರುವ ಮಹಾತ್ಮರು ಮಧ್ಯ ಮಧ್ಯ ಹೇಗೆ ಈ ಹಾಸ್ಯಭಾವವನ್ನು ಇಟ್ಟುಕೊಳ್ಳುವರೆಂಬುದು ಆಶ್ಚರ್ಯದ ಸಂಗತಿ ಓರ್ವ ಐರೋಪ್ಯ ಮಹಿಳೆಯೊಂದುಸಲ "ನಿಮ್ಮ ಕೆಲಸದಿಂದ ನಿಮಗೆ ನರದೌರ್ಬಲ್ಯದ ಆಪತ್ತು ತಟ್ಟುವುದುಂಟೇ?" ಎಂದು ಪ್ರಶ್ನಿಸಿದಳು "ಈ ವಿಚಾರ ನನ್ನ ಪತ್ನಿಯೊಡನೆ ಕೇಳಿರಿ ನನ್ನ ನರದೌರ್ಬಲ್ಯದ ಪರಿಣಾಮ ಅವಳ ಮೇಲಲ್ಲದೆ ಇತರ ಯಾರ ಮೇಲೂ ಆಗುವುದಿಲ್ಲವೆಂದು ಅವಳು ನಿಮಗೆ ಹೇಳಿಯಾಳು" ಎಂದು ಗಾಂಧಿಜೀ ತಿಳಿಸಿದ್ದರು. ಆಗಾಗ್ಗೆ ಮಹಾತ್ಮರು ಕಸ್ತೂರ್ ಬಾಳನ್ನು ಗದರಿಕೆಗೊಳಮಾಡುತಿದ್ದರು: ಮತ್ತೆ ಐರೋಪ್ಯ ಮಹಿಳೆಯೆಂದಳು: "ನನ್ನ ಗಂಡ ನನ್ನೊಡನೆ ಸೌಮ್ಯವಾಗಿ ವರ್ತಿಸುತ್ತಾನೆ' ಎಂದಳು. ಅದಕ್ಕೆ ಗಾಂಧಿಜಿ "ಬಹುಶ್ಯ ನಿಮ್ಮ ಗಂಡ ನಿಮಗೆ ತುಂಬಾ ಲಂಚ ತಿನ್ನಿಸಿರಬೇಕು" ಎಂದೆಲ್ಲರನ್ನೂ ನಗಾಡಿಸಿದರು.

"ನನ್ನಲ್ಲಿ ಈ ವಿನೋದಭಾವವಿಲ್ಲದಿರುತಿದ್ದರೆ ನಾನಿಷ್ಟರ ವರೇಗೆ ಬದುಕುತ್ತಲೇ ಇರಲಿಲ್ಲ" ಎಂದು ಮಹಾತ್ಮರು ತಿಳಿಸಿದ್ದರು. ಆಗಾಖಾನ್ ಅರಮನೆಯ ಬಂಧನದಲ್ಲಿದ್ದಾಗ ಸರೋಜಿನಿಯವರು ಬೆಡ್ಮಿಂಡನ್ ಆಟವನ್ನೇರ್ಪಡಿಸಿದರು "ನೀವು ನನ್ನೊಡನೆ ಮೇಚ್ ಆಡಬೇಕು' ಎಂದರವರು. ಅದಕ್ಕೆ ಮಹಾತ್ಮರು "ನಾನಿಷ್ಟರ ವರೆಗೆ ಬೇಟನ್ನು ಹಿಡಿಯದಿದ್ದರೂ ನಿಮ್ಮನ್ನು ಆಟದಲ್ಲಿ ಸೋಲಿಸುವೆ" ಎಂದರು ಅಂದು ಮಹಾತ್ಮರು ಎಡಗೈಯಲ್ಲಿ ಬೇಟನ್ನು ಹಿಡಿದ್ದರು ಸರೋಜಿನಿಯವರ ಬಲಗೈಗೆ ಸೆಳೆತದಿಂದ ನೋವಿತು ಅವರೂ ಎಡಗೈಯಲ್ಲೇ ಬೇಟನ್ನು ಹಿಡಿದಿದ್ದರು "ಇದೇನು ನೀವೂ ಎಡಗೈಯಲ್ಲಿ ಬೇಟನ್ನು ಹಿಡಿದಿದ್ದೀರಿ. ನನಗಾದರೊ ಬಲಗೈ ನೋವು. ನಿಮ್ಮ ತಪ್ಪನ್ನು ಸರಿಮಾಡಿಕೊಳ್ಳಿ" ಎಂದವರು ಮಹಾತ್ಮರಿಗೆ ಸೂಚಿಸಿದರು. ಆದರೂ ಮಹಾತ್ಮರು ಬಲಗೈಯಲ್ಲೇ ಆಟ ಮುಂದರಿಸಿದರು. "ಇನ್ನೂ ನೀವು ತಪ್ಪು ತಿದ್ದಲಿಲ್ಲನೇಕೆ" ಎಂದು ಶ್ರೀಮತಿ ನಾಯ್ಡು ಅವರು ಪ್ರಶ್ನಿಸಿದರು. "ಉದ್ದೇಶಪೂರ್ವಕ ಹಾಗೆ ಆಡುತಿದ್ದೇನೆ. ನಿಮ್ಮ ಬಲಗೈ ನಿರುಪಯುಕ್ತವಾಗಿ ನೀವು ಎಡಗೈಯಿಂದ ಆಡುವಾಗ ನಾನು ಅಂಥಾ ಸಂದರ್ಭದ ಅನುಕೂಲಪಡೆಯುವಷ್ಟು ನೀಚನೆ?" ಎಂದು ತಮ್ಮ ಕ್ರೀಡಾ ಉದಾರತ್ವವನ್ನು ಮಹಾತ್ಮರು ಪ್ರದರ್ಶಿಸಿದರು

ಮಹಾತ್ಮರು ಹಲವು ಸಲ ಹಿಮಾಲಯದಂತಹ ತಪ್ಪನ್ನು ಮಾಡಿರುವೆನಾಗಿ ಒಪ್ಪಿಕೊಂಡಿದ್ದಾರೆ ಆದರೆ ಪ್ರತಿಸಲದ ದುಃಖವನ್ನವರು ತಮ್ಮ ಹಾಸ್ಯದಿಂದ ಮೆದು ಮಾಡಿಕೊಂಡಿದ್ದಾರೆಂಬುದು ಗಣನೀಯ ಸಂಗತಿ ಕೊನೆಯ ಆ ಗುಂಡಿನೇಟಿನ ದುರಂತ ಕಾಲದಲ್ಲೂ ಅವರು ತಮ ವಿನೋದ ಬಿಡಲಿಲ್ಲ ಅಂದು ಮೃತ್ಯುವನ್ನೆದುರಿಸುತ್ತ ಪ್ರಾರ್ಥನಾ ಗದ್ದಿಗೆಯ ಕಡೆ ಬರುವಾಗ ಆಭಾ ಮತ್ತು ಮನುಗಾಂಧಿಯವರೊಡನವರು ಹಾಸ್ಯ ತಲ್ಲೀನರಾಗಿದ್ದರು ""ನೀವು ಗಡಿಯಾರ ನೋಡುವುದೆಂತಿಲ್ಲ ಅಂದನೇಲದನ್ನೇಕಿಟ್ಟುಕೊಳ್ಳುತ್ತಿದ್ದೀರಿ?" ಎಂದು ಅವರು ಪ್ರಶ್ನಿಸಿದರು "ಯಾಕೆ? ನೀವೇ ನನ್ನ ಸಮಯಸೂಚಿಗಳಾಗಿರುವಾಗ ನಾನೇಕೆ ಗಡಿಯಾರ ನೋಡಲಿ? ಎಂದರು ಗಾಂಧಿಜಿ ಅದಕ್ಕವರಿರ್ವರು "ನಮ್ಮ ಕಡೆಯಾದರೂ ನೀವು ಸರಿಯಾಗಿ ನೋಡುತ್ತಿಲ್ಲ" ಎಂದವರು ನಗಾಡಿದರು ಮಹಾತ್ಮರೂ ನಕ್ಕರು ನಗು ಅವರ ಮುಖದ ಮೇಲಿಂದ ಇನ್ನೂ ಅಡಗಿಲ್ಲ ಆಗಲೇ ಕೊಲೆಪಾತಕಿಯ ಗುಂಡು ಅವರ ಹೃದಯವನ್ನು ಹೊಕ್ಕಿತು' ಮಹಾ ಆತ್ಮನ ಮಹೋನ್ನತ ಅಂತ್ಯವದು

—೦—

ಕೂಸಿನ ಮೈ ತಂಪುಗೊಡುವ
ದಗ್ಗನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.

ಸುಗಂಧಿತ ರೇಶ್ಮೆ ನುಣ್ಣಗಿರುವ ಈ ಪೌಡರು ಎಳ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ

550

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.
ಪ್ರಾಣಿಕೊಬ್ಬು ವಿರಹಿತವಾದ್ದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨ ೧/೪
೪ರಿಂದ ೫ ತಿಂಗಳು	,,	,,	೨ ೧/೨
೬ರಿಂದ ೯ ತಿಂಗಳು	,,	,,	೨ ೩/೪

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

. THE
CANARA BANK, LIMITED.
ESTD: 1906

ದ. ಕ. ಜಿಲ್ಲೆಯ ಆಹಾರಪರಿಸ್ಥಿತಿ ಪ್ರಾಂತ್ಯ ಶಾಸನಸಭೆಯಲ್ಲಿ ಶ್ರೀ ಕಾರಂತರ ವಿವರಣೆ

ಮದ್ರಾಸ್ ಶಾಸನಸಭೆಯಲ್ಲಿ ನಮ್ಮ ಜಿಲ್ಲೆಯ ಆಹಾರಪರಿಸ್ಥಿತಿಯು ಚರ್ಚೆಗೆ ಬಂದಾಗ ಶ್ರೀಮಾನ್ ಕೆ. ಆರ್ ಕಾರಂತರು ತಾವು ಕಂಡಂತೆ ಇಲ್ಲಿನ ಆಹಾರಪರಿಸ್ಥಿತಿಯನ್ನು ಹೀಗೆ ವಿವರಿಸಿದರು –

ನಮ್ಮ ಜಿಲ್ಲೆಯ ವಿದ್ಯಮಾನಗಳೆಲ್ಲ ಸುರಕ್ಷಿತವಾಗಿವೆಯೆಂದು ಸಿವಿಲ್ ಸಪ್ಲೈ ಕಮಿಶನರು ವರ್ಣಿಸಿದ್ದು ವಿಷಾದಕರ. ದ. ಕ ಡಿಫಿಸಿಟ್ ಜಿಲ್ಲೆ, ಕಳೆದ ೩೪ ವರ್ಷಗಳಿಂದ ಇಲ್ಲಿಗೆ ಹೊರಗಡೆಯಿಂದ ೩೦ ಸಾವಿರ ಟನ್ ಆಹಾರ ಸಾಧನಗಳನ್ನು ಒದಗಿಸಲಾಗಿದೆ. ಇದು ಡಿಫಿಶಿಟ್ ಜಿಲ್ಲೆಯೆಂದೂ ಆಹಾರಶಾಖಾ ಮಂತ್ರಿಗಳು ಒಪ್ಪಿದ್ದರು. ಆದರೆ ಕಳೆದ ಫೆಬ್ರವರಿ ನಮ್ಮ ಶಿಷ್ಟಮಂಡಳವೊಂದವರನ್ನು ಕಂಡಾಗ ಈ ಜಿಲ್ಲೆ ಉಳಿತಾಯದ್ದೆಂದವರು ತಿಳಿಸಿದರು. ಫೆ. ೧೦ರಲ್ಲಿನ ಒಂದು ಸರ್ಕಲಾರಿನಲ್ಲಿ ಈ ಜಿಲ್ಲೆಯಲ್ಲಿ ಈ ವರ್ಷ ೩೪ ಸಾವಿರ ಟನ್ ಆಹಾರ ಕೊರತೆಯಿದೆಯೆಂದು ನಮೂದಿಸಲಾಗಿತ್ತು. ಆ ಒಂದು ವಾರದಲ್ಲಿ ನಮ್ಮ ಜಿಲ್ಲೆ ಅಕಸ್ಮಾತ್ ಉಳಿತಾಯದ್ದು ಹೇಗಾಯಿತೊ, ಆಶ್ಚರ್ಯದ ಸಂಗತಿ!

"ದ. ಕ ಜಿಲ್ಲೆಗೆ ಅಗತ್ಯವಿರುವ ಆಹಾರದಲ್ಲಿ ಅಷ್ಟನ್ನು ಇಲ್ಲಿಯ ಮುಖ್ಯ ಬೆಳೆ ಉತ್ಪತ್ತಿ ಮಾಡಿದ್ದು ಅದರಲ್ಲಿ ಶೇ ೮೦ರಷ್ಟು ಪ್ರೊಕ್ಯೂರ್ ಆಗಿ ಸೊಸೈಟಿಗೆ ತಲ್ಪಿಸಲಾಗುತಿತ್ತು. ಉಳಿದದ್ದು ಬಹಿರಂಗವಾಗಿ ಮಾರಾಟಕ್ಕೆ ಉಳಿದಿತ್ತು. ಇಲ್ಲಿಯ ಎರಡನೆಯ ಬೆಳೆ ಈ ಸಲ ಹಾಳಾಗಿದೆ.

"ಡಿಕಂಟ್ರೋಲ್ ಜಾರಿಗೆ ಬಂದಾಗ ಬೆಳೆಬೆಳೆದವರಲ್ಲಿ ಅವರ ಜೀವನಕ್ಕೇನೂ ಇರಲಿಲ್ಲ. ಜಿಲ್ಲೆಗೆ ವಾರದ ಖರ್ಚಿಗೆ ಸಾಮಾನ್ಯವಾಗಿ ಬೇಕಾದದ್ದು ೧೩೦೦ ಟನ್ನುಗಳು. ಪ್ರೊಕ್ಯೂರ್ ಮಾಡಿದ್ದೆಲ್ಲ ಸರಕಾರ ದಾಸ್ತಾನು ಮಾಡಿದಾಗ ಜನರ ಹೊಟ್ಟೆ ಬರಿದಾಗಿತ್ತು. ಆಗ ನನ್ನ ಅರಿಕೆಗಳಿಗೆ ಲಕ್ಷ್ಯಕೊಡಲಾಗಲಿಲ್ಲ.

"ಎರಡನೇ ಬೆಳೆ ಹಾಳಾದ್ದರಿಂದ ರೆವಿನ್ಯೂ ಬೋರ್ಡಿನವರು ೨೦ ಸಾವಿರ ಟನ್ ಮಂಜೂರು ಮಾಡಬೇಕೆಂದು ನಾನು ಸೂಚಿಸಿದೆ. ಗ್ರಾಮಾಂತರಗಳ ರೇಶನನ್ನು ಹೆಚ್ಚಿಸಬೇಕಾಗಿದೆಯೆಂದೂ ನಾನು ಅಪೇಕ್ಷಿಸಿದೆ. ಆಗಿನ ಕಲೆಕ್ಟರ್ (ಮಿ। ಸೋಂಡರ್ಸ್) ಅವರಿಗೆ ಬರೆದಾಗ ಅವರು ತನ್ನ ಧ್ವನಿ ಕೇಳಿಸುವುದೋ ಇಲ್ಲವೊ ಗೊತ್ತಿಲ್ಲವೆಂದು ತಿಳಿಸಿದ್ದರು.

"ಗಂಭೀರವಾದ ಆಹಾರಪರಿಸ್ಥಿತಿಯುಂಟಾಗುವ್ವದೆಂದು ಕಲೆಕ್ಟರರು ಸೂಚಿಸಿದ್ದರು. ಹೀಗಿರುವಾಗ ರೆವಿನ್ಯೂಬೋರ್ಡಿನವರು ಮಲಬಾರಿಗೆ ೧೦ ಸಾವಿರ ಟನ್ ಅಕ್ಕಿ ವರ್ಗಾಯಿಸಿರೆಂದು ಅಪ್ಪಣೆಮಾಡಿದರು. ಜಿಲ್ಲಿ ಅದು ವಿಪರೀತ ಬೆಲೆಗೆ ಮಾರಲ್ಪಟ್ಟಿತು. ಈ ಕುರಿತು ಕಲೆಕ್ಟರರ ಪ್ರಯತ್ನಗಳೂ ಯಶಸ್ವಿಯಾಗಲಿಲ್ಲ. ಈಗ ತೆರೆದಿರುವ ರಿಲೀಫ್ ಡೀಪುಗಳು ಒಂದು ಪ್ರಹಸನವೇ ಸರಿ.

"ಕಳೆದ ಸರ್ತಿ ವಾರಕ್ಕೆ ೧ ಸಾವಿರ ಟನ್ ರೇಶನ್ ಅಂಗಡಿಗಳ ಮೂಲಕ ಹೊರಬಂತು. ಈಗ ೩೦೦ ೪೫೦ ಟನ್ನುಗಳಷ್ಟು ಮಾತ್ರ ಹೊರಬಂದಿದೆ.

"ಸರಕಾರವು ಬೆಳೆದುದನ್ನೆಲ್ಲ ಒಯ್ದು ರೇಶನಿಂಗ್ ರದ್ದುಮಾಡಿ ೩ ಔನ್ಸ್ ಕೊಡಿಸಿದ್ದು ನ್ಯಾಯವಲ್ಲ.

"ಜಿಲ್ಲೆ ಸಂಚರಿಸಿದ ಶ್ರೀ ಮಾಧವ ಮೇನ್ನರು ಪತ್ರಿಕೆಯಲ್ಲಿ "ಇಲ್ಲಿಯ ಅಕ್ಕಿ ಪರಿಸ್ಥಿತಿ ಕೆಟ್ಟಿದೆ" ಎಂದು ಪ್ರಕಟಿಸಿದ್ದರು. ಆದರೆ ಸಿವಿಲ್ ಸಪ್ಲೈ ಕಮಿಶನರರ ಕಾರ್ಯದರ್ಶಿಗಳ ಲೆಕ್ಕಾಚಾರದಂತೆ ಮುಂದಿನ ಹೊಸ ಬೆಳೆ ತನಕ ಈ ಜಿಲ್ಲೆಯನ್ನು ಉಣಿಸಬಹುದೆಂದಿದೆ (ಈಗಿರುವ ದಾಸ್ತಾನು ೧೧ ಸಾವಿರ ಟನ್, ಇದು ೩೧ ತಿಂಗಳ ಆವಶ್ಯಕತೆಗೆ ಸಾಕು. ಹೊರಗಿನಿಂದ ೧೦ ಸಾವಿರ ಟನ್ನುಗಳು ಬರುವ ನಿರೀಕ್ಷೆಯಿದೆ. ಇದರೊಡನೆ ಮುಂದಿನ ಪ್ರೊಕ್ಯೂರ್‌ಮೆಂಟ್ ಸೇರುವುದು ಹೀಗವರ ಲೆಕ್ಕ) ಈ ದಾಸ್ತಾನನ್ನು ೩ ಮತ್ತು ೧½ ಔನ್ಸ್ ಪ್ರಕಾರ ಹಂಚುವುದಕ್ಕಿಂತ ಹಾಗೇ ಇರಿಸಿದರೆ ಒಂದೆರಡು ವರ್ಷಕ್ಕೂ ಬಾರದೆ?

ಜಿಲ್ಲಾ ಸಮಾಚಾರ

"ದ ಮಲಬಾರ್ ಜಿಲ್ಲೆಗೆ ಇಲ್ಲಿಂದ ಅಕ್ಕಿ ಕೊಂಡುಹೋಗಿ ಅಲ್ಲಿಯವರಿಗೆ ೬ ಔನ್ಸ್ ಕೊಡಲಾಗುತ್ತದೆ. ಇಲ್ಲಿಯವರಿಗೆ ೪ ಔನ್ಸ್ ಅಕ್ಕಿ, ೪ ಔನ್ಸ್ ಜೋಳವೆಂದು ಸಪ್ಲೈ ಕಮಿಶನರರು ತಿಳಿಸುತ್ತಾರೆ. ಉಡುಪಿಯಲ್ಲಿ ಅಕ್ಕಿ ಮುಡಿಗೆ ೪೦ ೫೦ ರೂಪಾಯಿ ನಿಂತಿದೆ.

"ನಂಬರಬಹುದಾದ ಉಪವಾಸದ ಸಂಕಷ್ಟ ತಪ್ಪಿಸಬೇಕಾದರೆ ಈಗಿನ ಆಡಳಿತಯಂತ್ರ ಸಂಪೂರ್ಣ ಬದಲಾಯಿಸಬೇಕು. ನಿಜವಾಗಿ ನಮ್ಮ ಜಿಲ್ಲೆಯಲ್ಲಿಂದು ಹಲವಾರು ಮಂದಿ ಹೊಟ್ಟೆಗಿಲ್ಲದೆ ಸಂಕಷ್ಟಪಡುತಿದ್ದಾರೆ. ಒಂದು ಪರಿಶೀಲನಾಮಂಡಳ ಏರ್ಪಡಿಸಿದರೆ ಸಂಗತಿಯೇನೆಂದು ನಾನವರಿಗೆ ತೋರಿಸಬಲ್ಲೆ. ಇದು ಮನಸ್ಸನೇ ಉಂಟುಮಾಡಿದ ಕ್ಷಾಮ. ಹಲವು ಮಂದಿ ದಾಸ್ತಾನು ಇಟ್ಟವರಿದ್ದಾರೆ. ನಿಜವಲ್ಲದ ಅಸಮಂಜಸವಾದ ಹೇಳಿಕೆಗಳನ್ನು ಮಾತ್ರವೇ ಹೊರಗೆ ಕಳುಹಿಸುತ್ತಿರುವ ಅಧಿಕಾರಿಗಳನ್ನೂ ಕಳುಹಿಸಿಬಿಡಬೇಕು.

"ಎರಡನೇ ಬೆಳೆ ತನಕವಾದರೂ ಹಳ್ಳಿಕಡೆಗಳಲ್ಲಿ ರೇಶನ್ ಪದ್ಧತಿ ಪುನಃ ಜಾರಿಗೆ ಬರಬೇಕು. ಪೋಲಿಸರೊಬ್ಬರಿಂದಲೇ ಸರಕಾರವಾಗಲೀ, ಕಾಂಗ್ರೆಸ್ ಆಗಲಿ ರಕ್ಷಿಸಲಾಗಲಿಲ್ಲ. ಪರಿಸ್ಥಿತಿ ಮುಖ್ಯವಾಗಿ ಆಹಾರಕ್ಕೆ ಸಂಬಂಧಿಸಿದ್ದು. ಪೋಲಿಸರೊಬ್ಬರ ಮೇಲೇ ಅದು ಆಧರಿಸದಿರಲಿ."

— —

ದಿ ಪೊಪ್ಯುಲರ್ ಇನ್ಶೂರನ್ಸ್ ಕಂಪೆನಿ, ಲಿಮಿಟೆಡ್

ಈ ಪ್ರವರ್ಧಮಾನ ವಿಮಾ ಸಂಸ್ಥೆಯು ಸ್ಥಾಪಿತವಾಗಿ ೧೨ ವರ್ಷಗಳಾದುವು. ಅಂದಿನಿಂದಿನ ತನಕ ಅದು ಜನಪ್ರಿಯವಾಗಿಯೇ ಪ್ರಗತಿಹೊಂದಿದ್ದು ವಿವೇಕಪರ ಆಡಳಿತ ನಿರ್ವಹಣದಿಂದಲೂ ಪ್ರಮಾಣಿಕತನದ ಕಾರ್ಯದಕ್ಷತೆಯಿಂದಲೂ ಅಲ್ಲದೆ ಪಾಲಿಸಿ ಹೊಂದಿದವರಿಗೆ ಪ್ರಯೋಜನಕಾರಕವಾದ ಸೇವಾದೃಷ್ಟಿಯಿಂದಲೂ ಸರ್ವಾಧರಣೀಯವಾಗಿರುವುದು ಸಂತೋಷದ ಸಂಗತಿ. ದ. ಕ ಜಿಲ್ಲೆಯ ಪ್ರಥಮದ್ದೂ ಹಿರಿಯದೂ ಆದ ಈ ವಿಮಾಸಂಸ್ಥೆ ಸುಭದ್ರವಾದ ಕಾರ್ಯವ್ಯವಹಾರದಿಂದ ಸರ್ವತೋಮುಖ ಅಭಿವೃದ್ಧಿ ಯಶಸ್ಸುಗಳನು ಹೊಂದಿರುವದು ಹೆಮ್ಮೆಯ ವಿಷಯ. ಇದರ ೧೯೪೭ನೇ ವರ್ಷಾಂತ್ಯ ವರದಿಯನ್ನು ಸಂತೋಷದಿಂದ ಸ್ವೀಕರಿಸುತ್ತೇವೆ.

ವರದಿಯಲ್ಲಿ ಈ ಸಂಸ್ಥೆ ರೂ ೩೮ ೬೬ ೮೦೦ ಮೌಲ್ಯದ ವಿಮಾಪತ್ರಗಳನ್ನು ಕೊಟ್ಟಿದೆ. ಹಿಂದಿನ ವರ್ಷಕ್ಕಿಂತ (೧೯೪೬) ಇದು ರೂ ೭,೩೩,೪೦೦ ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷ ಪ್ರೀಮಿಯಂ ಬಡ್ಡಿ ಇತ್ಯಾದಿಗಳಿಂದ ಸಂಸ್ಥೆಗೆ ರೂ ೩,೬೨ ೪೦೦ ಶೇಖರವಾಗಿದೆ. ವರದಿವರ್ಷ ೪,೭೦,೧೫೧೧ರಷ್ಟು ಹೆಚ್ಚಿದುದು ಶುಭಧಾಯಕ. ವ್ಯವಹಾರ ಹೆಚ್ಚಿದ ರೂ ಸಂಸ್ಥಾಡಳಿತ ಖರ್ಚಿನ ಪ್ರಮಾಣ ಕಳೆದ ವರ್ಷ ಶೇ ೨೩ ೪೩ರಷ್ಟಿದ್ದದ್ದು ವರದಿವರ್ಷ ಶೇ ೧೨ ೭೨ಕ್ಕೆ ಇಳಿದದ್ದು ಜಾಗರೂಕತೆಯ ಮಿತವ್ಯಯದ ಚಿಹ್ನ. ಸಂಸ್ಥೆಯ ಜೀವವಿಮಾನಿಧಿ, ಗತವರ್ಷಕ್ಕಿಂತ ರೂ ೨ ೫೦ ೩೩೯ರಷ್ಟು ವೃದ್ಧಿಗೊಂಡು ಈಗ ಅದು ರೂ ೧೦ ೭೦, ೯೦೭ರಷ್ಟು ವಿಕಾಸಗೊಂಡಿರುವುದು ಸ್ಥಿರತೆಯ ಸುಸಂಯೋಗವೇ ಸರಿ. ವ್ಯತಪಟ್ಟ ಪೊಲಿಸಿದಾರ ಸುಮಾರು ೪೭ ಸಾವಿರ ರೂಪಾಯಿಯ ಕೇಳಿಕೆಗಳು ದಾಖಲುಮಾಡಲಾಗಿದೆ. ಈ ಸಂಖ್ಯೆ ಸರೀಕ್ಷಣೆ ಮಿರಾರಿಲ್ಲದಿರುವುದು ತೃಪ್ತಿಕರ. ಸುಮಾರು ೧೯ ಸಾವಿರ ರೂಪಾಯಿ ಮೌಲ್ಯದ ಪೋಲಿಸಿ ಪತ್ರಗಳು ಅವಧಿಪಾತ್ರವಾಗಿವೆ. ಹಕ್ಕುಗಳನ್ನು ಶೀಘ್ರದಲ್ಲಿ ಕೊಟ್ಟುಬಿಡುವುದು ಸಂಸ್ಥೆಯ ಆಸಕ್ತಿಯಿರುತ್ತದೆ.

ಧನಸಂಚಯವು ಸುಭದ್ರ ಸರಕಾರಿ ಪತ್ರಗಳ ಮತ್ತಿತರ ವಿಶ್ವಸಾರ್ಹ ಸೆಕ್ಯೂರಿಟಿಗಳಲ್ಲಿ ವಿನಿಯೋಗಿಸಲ್ಪಡುವುದು ಸಂಸ್ಥೆಯ ದೂರದರ್ಶಿತ್ವಯುಕ್ತ ಧೋರಣವೇ ಆಗಿರುತ್ತದೆ.

ಸಂಸ್ಥೆಯ ವಿಕಾಸದ ಇನ್ನೊಂದು ಚಿಹ್ನೆ ಎಂಬಂತೆ ಅದರ ಸ್ವಂತ ಪ್ರಧಾನ ಕಾರ್ಯಾಲಯವನ್ನು ಮಂಗಳೂರಿನ ಪ್ರಮುಖ ವ್ಯವಹಾರಕ್ಷೇತ್ರದಲ್ಲಿ ಕಟ್ಟಲು ಯೋಜನೆಗಳಾಗಿದ್ದು ಆಗಲೇ ಸ್ಥಳವೂ ಕೊಂಡುಕೊಳ್ಳಲ್ಪಟ್ಟಿದೆ. ಸಂಸ್ಥೆಯ ಕಛೇರಿ ವ್ಯವಹಾರವನ್ನು ಸುವ್ಯವಸ್ಥಿತ ಶೀಘ್ರತೆಯಿಂದ ನಿರ್ವಹಿಸಲು ಒಂದು 'ಎಡ್ರೆಸೊ ಗ್ರೇಫ್' ಯಂತ್ರವು ಕೊಳ್ಳಲ್ಪಟ್ಟಿರುವದು ಗಣನೀಯ ಸಂಗತಿ. ಯುದ್ಧ ಮತ್ತಾನಂತರ ಸ್ವಲ್ಪ ಸಮಯದ ಅನಿಶ್ಚಿತ ವಿದ್ಯಮಾನ ಕಾಲದಲ್ಲೂ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯು ಧೈರ್ಯಗೆಡದೆ ದುಡಿದು ಮುಂದರಿದುದು ಶ್ಲಾಘನೀಯ. ಸರ್ವಸಕಲರೂ ಈ ಸಂಸ್ಥೆಗೆ ಬೆಂಬಲ ನೀಡುವರೆಂದು ನಮಗೆ ವಿಶ್ವಾಸವಿದೆ. ಅಲ್ಲದೆ ಅದು ತನ್ನ ವ್ಯವಹಾರದಲ್ಲಿ ಪರಮಾವಧಿಯ ಶ್ರೇಯೋಭಿವೃದ್ಧಿಗಳನ್ನು ಹೊಂದಲೆಂದೂ ಹಾರೈಸುವೆವು.

ಕಮ್ಯೂನಿಸ್ಟರ ದುರ್ವರ್ತನೆ

ನಮ್ಮ ಜಿಲ್ಲೆಯ ಹಲವು ಕಡೆಗಳಲ್ಲಿ ಕಮ್ಯೂನಿಸ್ಟರು ಬಲಪ್ರಯೋಗದ ಚಟುವಟಿಕೆಗಳನ್ನು ಮಾಡಿದರೆಂದು ಅವರ ಮೇಲೆ ಎಂಟು ಆರೋಪಗಳು ಹಾಕಲಾಗಿದ್ದ ಮೊಕದ್ದಮೆಯಾಗುತಿದೆ.

ನಿಲೇಶ್ವರ ಬಾಜರ ವರ್ತಕರನ್ನು ಬೆದರಿಸಿ ಅವರು ಸಾಗಿಸುತಿದ್ದ ಬತ್ತವನ್ನು ಬಲಾತ್ಕಾರದಿಂದ ಒಯ್ದರು.

ವುಲ್ಲೂರಿನಲ್ಲಿ ೨೦೦ ಜನರು ಸುಬ್ರಹ್ಮಣ್ಯ ಅಯ್ಯರ್ ಮತ್ತು ವಿಷ್ಣುಕುಂಡ ಲಾಯರ್ ಎಂಬವರಲ್ಲಿ ನುಗ್ಗಿ ೨೦ ಪಾರಾ ಭತ್ತ ಒಯ್ದರು.

ಎಳೇರಿಯಾ ಗ್ರಾಮದಲ್ಲಿ ೧೦೦ ಜನರು ಒಂದು ಕಡೆಯಿಂದ ೫೦೦ ರೂಪಾಯಿ ಬೆಲೆಬಾಳುವ ಅಕ್ಕಿ, ಕಾಳು ಮೆಣಸು ಇತ್ಯಾದಿ ಒಯ್ದರು.

ಕೊಡಕ್ಕಾಟ ಎಂಬಲ್ಲಿ ಜಮೀನ್ದಾರನ ಮನೆಯಿಂದ ೧೦೦ ಜನರು ೨೦ ಪಾರು ಬತ್ತ ಎಳೆದೊಯ್ದರು.

ನಮ್ಮ ಪೋಲಿಸ್ ಸುಪರಿಂಟೆಂಡೆಂಟರರು ತಾ ೧೮ರಿಂದ ೨೧ರ ತನಕ ಕಮ್ಯೂನಿಸ್ಟ್ ಹಾವಳಿಯ ಪ್ರದೇಶಗಳನ್ನು ಸಂಚರಿಸಿ ಬಂದಿರುವರು. ಈಗ ಡಿ ಪ್ಪೆ ಎಸ್ ಪಿ ಯವರು ಕ್ಯಾಂಪ್ ಮಾಡಿದ್ದಾರೆ. ಅನೇಕ ಕಮ್ಯೂನಿಸ್ಟರ ಬಂಧನವಾಗಿದೆ. ಇಷ್ಟಾದರೂ ದೂರದ ಹಳ್ಳಿಗಳಲ್ಲಿ ಅವರು ಸಂಚರಿಸುತ್ತ ಹಾವಳಿಮಾಡುತ್ತಿರುವರೆಂದು ವದಂತಿಯಿದೆ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆಯೂ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು
23-12-1947

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 6,000/- and over are now accepted at all Offices of the Bank at the following rates:-

3 & 4 months . . . . 2¼% p. a.

5 & 6 months . . . . 2½% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮುಲಾಮು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ಕಜಿಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of37 years avialable to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli-**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ದಶಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಳೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮುರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 7—5—1948 [ಸಂಚಿಕೆ 18

ನಿರಕ್ಷರತೆಯನ್ನು ನೀಗಿಸಲು ಶಿಕ್ಷಕರ ಸೈನ್ಯ

ಭಾವೀ ಭಾರತದ ಶೈಕ್ಷಣಿಕ ಧೋರಣೆ

ಮೌಲಾನಾ ಅಜಾದರ ಗಮನೀಯ ಸೂಚನೆಗಳು

ಮುಂದಿನೈದು ವರ್ಷಗಳಲ್ಲಿ ಕಡ್ಡಾಯದ ಸಾರ್ವತ್ರಿಕ ಶಿಕ್ಷಣಕ್ರಮವನ್ನು ಜಾರಿಗೆ ತರಲು ಉಪಾಧ್ಯಾಯರುಗಳನ್ನು 'ಶೈಕ್ಷಣಿಕ ಸೈನ್ಯ' ಭರತಿಗೆ ಉತ್ಸಾಹಪೂರ್ವಕವಾಗಿ ಸೇರುವಂತೆ ಮಾಡುವುದವಶ್ಯಕತೆಯನ್ನರಿತು ಕೇಂದ್ರ ಶಿಕ್ಷಣ ಸಚಿವ ಮೌಲಾನಾದರು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಕೆಲ ಸೂಚನೆಗಳನ್ನು ಮುಂದಿಟ್ಟರು. ಈ ಐದು ವರ್ಷಗಳಲ್ಲಿ ಶಿಕ್ಷಿತರಾದ ಪ್ರತಿಯೊಬ್ಬ ಸ್ತ್ರೀ ಪುರುಷನು ಒಂದು ನಿರ್ದಿಷ್ಟ ಅವಧಿಯ ತನಕ ಕಡ್ಡಾಯವಾದ ಶಿಕ್ಷಣ ಸೇವೆಯನ್ನು ಸಲ್ಲಿಸುವಂತೆ ಮಾಡಬೇಕು. ಜನತಾ ಪ್ರತಿನಿಧಿಗಳು ಈ ಸೂಚನೆಯನ್ನು ಸ್ವಾಗತಿಸಿದರು.

ಮೌಲಾನರ ಸೂಚನೆ ಹೊಸದೇನಲ್ಲ. ೧೯೪೧ರಷ್ಟು ಹಿಂದೆ ರಾಜಗೋಪಾಲಾಚಾರ್ಯರು ಒಂದು ಸಲ ಹೀಗೆಂದಿದ್ದರು:

"ಯುದ್ಧದ ಗಂಡಾಂತರ ಒದಗಿದಾಗ ಹೇಗೆ ಪ್ರಾಯಸ್ಥರನ್ನು ಕಡ್ಡಾಯವಾಗಿ ಸೈನ್ಯ ಸೇರುವಂತೆ ಮಾಡಲಾಗುವುದೋ ಅದೇ ಮಾದರಿಯನ್ನು ಶಿಕ್ಷಣಕ್ಷೇತ್ರದಲ್ಲಿ ಉಪಾಧ್ಯಾಯರಿಗೂ ಅನ್ವಯಿಸಬೇಕು. ಸೈನ್ಯ ಸೇ[illegible]ತ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿಫಲ ಶಿಕ್ಷಣಕ್ಕೆ ಸಿಗುವಂತೆಯೂ ಮಾಡಿ ನಿರ್ದಿಷ್ಟ ಅವಧಿಯ ತನಕ ಅವರು ಉತ್ಸಾಹಪೂರ್ವಕವಾಗಿ ಕಲಿಸುವಿಕೆಯನ್ನು ಕೈಕೊಳ್ಳುವಂತಾಗಬೇಕು."

ರಾಷ್ಟ್ರೀಯ ಶಿಕ್ಷಣ

೧೯೩೭ರಲ್ಲಿ ಈ ಸೂಚನೆಗೆ ಇನ್ನಷ್ಟು ಹೆಚ್ಚಿನ ಗಮನ ತರಲಾಯಿತು. ಆಗ ಮಹಾತ್ಮರು ಒಂದು ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಸಿದ್ಧಗೊಳಿಸಿ ವಾರ್ಧಾ ಪದ್ಧತಿಯ ತಮ್ಮ ಶಾಲೆಗಳನ್ನು ನಡೆಸಲು ಸಾವಿರಾರು ಉಪಾಧ್ಯಾಯರ ಅವಶ್ಯಕತೆಯಿದೆ ಎಂದರು. "ಹಿಟ್ಲರ್ ಮುಸ್ಸೋಲಿನಿಗಳು ದೇಶ ಸೇವೆಗಾಗಿ ತರುಣರ ಸೈನ್ಯಗಳನ್ನು ಅಪೇಕ್ಷಿಸುವುದು ನ್ಯಾಯವೆಂದಾದರೆ ನಮ್ಮ ತರುಣರು ಒಂದು ವರ್ಷದ ಅವಧಿಯನ್ನು ಕಲಿಸುವಿಕೆಗೇಕೆ ವ್ಯಯಿಸಬಾರದು?" ಎಂದಿದ್ದರು. ಆದರೆ ಶಾಸನದ್ವಾರಾ ಒತ್ತಾಯ ಮಾಡುವುದರ ಬದಲು ಸ್ವೇಚ್ಛೆಯಿಂದ ಸೇವಾಕಾಂಕ್ಷೆಯಿಂದ ತರುಣರು ಮುಂದೆ ಬರಬೇಕೆಂದು ಅವರು ಇಚ್ಛಿಸಿದ್ದರು. ಯುದ್ಧಾನಂತರದ ಶಿಕ್ಷಣ ಯೋಜನೆಯೆನ್ನಲಾದ 'ಸಾರ್ಜೆಂಟ್ ಯೋಜನ'ದಲ್ಲೂ ಈ ಕಡ್ಡಾಯದ ಉಪಾಧ್ಯಾಯ ಸೈನ್ಯ ಭರತಿಯ ತತ್ವವು ಅನುಸರಿಸಲಾಗಿದೆ.

ಇದು ಕಡ್ಡಾಯ ಶಿಕ್ಷಕರನ್ನು ಸೇರಿಸಿಕೊಳ್ಳುವ ಯೋಜನೆಯ ಸಂಕ್ಷೇಪ ಇತಿಹಾಸ. ಕಳೆದ ಕಾಲು ಶತಮಾನದಲ್ಲಿ ಈ ಯೋಜನೆಯು ಕ್ರಮೇಣ ಜನಾಂಗ ಮುಖದಿಂದ ಒಂದಲ್ಲ ಒಂದು ವಿಧಾನದಲ್ಲಿ ಸ್ವೀಕರಿಸಲ್ಪಟ್ಟಿದೆ. ಬ್ರಿಟಿಷ್ ಆಡಳಿತದಿಂದ ಅತಿ ಹೆಚ್ಚಾಗಿ ಉಳಿದಿರುವ ನಿರಕ್ಷರತೆಯ ಹಾವಳಿಯನ್ನು ನಿವಾರಿಸಲು ಭರ ತಾಳುತ್ತಿದ್ದ ಭಾರತೀಯ ರಾಷ್ಟ್ರೀಯತೆಯ ಭಾವನೆಯು ಪ್ರಯತ್ನಗಳನ್ನು ಮಾಡಿತು. ಆದುದರಿಂದ ಇಂದು ನಮ್ಮ ರಾಷ್ಟ್ರೀಯ ಸರಕಾರವು ಈ ಕಡ್ಡಾಯ ಕಲಿಸುವಿಕೆಗೆ ಪ್ರಧಾನ ಮಹತ್ವವನ್ನು ಕೊಟ್ಟದ್ದರಲ್ಲಿ ಆಶ್ಚರ್ಯವಿಲ್ಲ.

೨೧ ಲಕ್ಷ ಉಪಾಧ್ಯಾಯ ಸೈನ್ಯ

ಮೌಲಾನಾ ಅಜಾದರೆಂದರು: "ಯುದ್ಧಾನಂತರದ ಶೈಕ್ಷಣಿಕ ಯೋಜನೆಯ ಪ್ರಕಾರ (ಸಾರ್ಜೆಂಟ್ ಪ್ಲೇನ್) ದೇಶವನ್ನು ಪೂರ್ಣ ಅಕ್ಷರಸ್ಥಮಾಡಲು ೪೦ ವರ್ಷಗಳು ಬೇಕೆಂದು ನಿರ್ಣಯಿಸಲಾಗಿತ್ತು. ಆದರೆ ಸಾರ್ವತ್ರಿಕವಾದ ಕಡ್ಡಾಯದ ವಿದ್ಯಾಕ್ರಮ ಅದನ್ನು ಶೀಘ್ರದಲ್ಲಿ ಜಾರಿಗೆ ಬರಬೇಕೆಂದಿದ್ದರೆ ಒತ್ತಾಯದ ಮೂಲಕವೇ ಉಪಾಧ್ಯಾಯರನ್ನು ಸೇರಿಸಿಕೊಳ್ಳಬೇಕಾಗಿದೆ" ಮತ್ತು ಇದು ಶೀಘ್ರವಾದಷ್ಟು [illegible]. ಜನತಾ ಸರಕಾರಕ್ಕೆ ಈ ಒತ್ತಾಯವನ್ನು ಮಾಡುವ ಸಂಪೂರ್ಣ ಹಕ್ಕಿದೆ. ಇದೊಂದು ರಾಷ್ಟ್ರೀಯ ಸಮಸ್ಯೆ. ಮಹಾತ್ಮರು ತಮ್ಮ ಅಭಿಪ್ರಾಯವನ್ನು ಈ ಮೊದಲೇ ವ್ಯಕ್ತಪಡಿಸಿದ್ದರು. "ಉಪಾಧ್ಯಾಯರನ್ನು ಕೂಡಿಸುವ ಕೆಲಸವಾದರೂ ಅಷ್ಟೊಂದು ಕಷ್ಟಸಾಧ್ಯವಾದುದಲ್ಲ.

ಸಾರ್ಜೆಂಟ್ ಯೋಜನೆಯನ್ವಯ ನಮ್ಮ ತರುಣ ಜನಸಂಖ್ಯೆಯಾದ ೬೦ ಲಕ್ಷದಿಂದ ೨೧ ಲಕ್ಷ ಉಪಾಧ್ಯಾಯರನ್ನು ಒಟ್ಟುಗೂಡಿಸಬೇಕೆಂದಿದೆ. ಇದರ ಪ್ರಕಾರ ಪ್ರತಿ ೧೯ರ ತರುಣರಲ್ಲಿ ಒಬ್ಬನು ಉಪಾಧ್ಯಾಯನಾಗಬೇಕಾಗುತ್ತದೆ. ಈ ಅಂಕೆ ಸಂಖ್ಯೆ ಸರಿಯಾದರೆ (ಇದು ವಿಭಜನೆಗಿಂತ ಮೊದಲಿನ ಗಣನೆ) ತರುಣವರ್ಗದಿಂದ ಉಪಾಧ್ಯಾಯರನ್ನು ಪಡೆಯುವುದು ದೊಡ್ಡ ಸಮಸ್ಯೆಯಾಗದು. ನಮ್ಮ ಮುಂದಿರುವ ಎರಡೇ ದಾರಿಗಳೆಂದರೆ ೪೦ ವರ್ಷ ಇಲ್ಲವೆ ಒತ್ತಾಯದ ಶಿಕ್ಷಕರನ್ನು ಸೇರಿಸುವುದು.

ಇತರ ಅನುಕೂಲತೆಗಳು

ವಿದ್ಯಾವಂತ ಅಪ್ರಾಪ್ತವಯಸ್ಕ ಸ್ತ್ರೀ ಪುರುಷರನ್ನು ಅಕ್ಷರಸ್ಥರನ್ನಾಗಿ ಮಾಡುವ ಈ ಕೆಲಸಕ್ಕೆ ಕಡ್ಡಾಯವಾಗಿ ಉಪಾಧ್ಯಾಯರನ್ನು ಸೇರಿಸಿಕೊಳ್ಳುವುದರಿಂದ ಇತರ ಅನುಕೂಲಗಳೂ ಇವೆ. ಒಂದೊಂದು ಕುಟುಂಬದಲ್ಲಿ ಅಪ್ರತ್ಯಕ್ಷವಾದ ಒಂದು ತರದ ಕಡ್ಡಾಯ ಕಲಿಕೆಯನ್ನು ಸ್ವಯಂಪ್ರೇರಣೆಯಿಂದ ಅನುಸರಿಸಬಹುದೆಂದು ರಾಜಾಜಿಯವರು ಸೂಚಿಸಿದ್ದರು. ಅವರೆಂದಿದ್ದರು: "ನಮ್ಮ ಮಕ್ಕಳಿಗೆ ಬೇಕಾಗುವಷ್ಟು ಶಾಲೆಗಳು ಇರಲಿ ಇಲ್ಲದಿರಲಿ, ನಮ್ಮ ನಮ್ಮ ಮನೆಗಳಲ್ಲಿಯೇ ನಾವು ಒಂದು ತರದ ಉಪಾಧ್ಯಾಯರಾಗಿರಬೇಕಾದ ಆವಶ್ಯಕತೆ ಕಾಣುತ್ತದೆ. ಆದುದರಿಂದ ಶೈಕ್ಷಣಿಕ ಶಾಸ್ತ್ರದ ಪರಿಚಯವನ್ನು ಹೆತ್ತವರಿಗೆ ಮಾಡಿಕೊಡುವುದರಿಂದ ಬಹಳ ಲಾಭವಿದೆ."

ಮಕ್ಕಳನ್ನು ಶಿಕ್ಷಿತರಾಗಿ ಮಾಡುವ ಮತ್ತು ಅವರನ್ನು ಉತ್ತಮ ರೀತಿಯಲ್ಲಿ ಬೆಳೆಸುವುದರ ಕುರಿತು ಜ್ಞಾನವಿರಬೇಕಾದುದು ಪ್ರತಿಯೊಬ್ಬ ಕುಟುಂಬಸ್ಥನಿಗೂ ಅತ್ಯುಪಯುಕ್ತವಾದುದು. ಶೈಕ್ಷಣಿಕ ಪದ್ಧತಿಗಳ ಜ್ಞಾನವಿಲ್ಲದ ಮನೆಗಳ ಮಕ್ಕಳಿಗೆ ಕಲಿಸುವುದು ಅದೆಷ್ಟು ಕಷ್ಟತರವಾಗಿದ್ದೆಂದು ಉಪಾಧ್ಯಾಯರಾಗಿದ್ದವರೆಲ್ಲರಿಗೂ ತಿಳಿದಿದೆ. ಈ ಜ್ಞಾನವು ಕೆಲವು ಸಂದರ್ಭಗಳಲ್ಲಿ ಸುಶಿಕ್ಷಿತರೆನಿಸುವ ಹೆತ್ತವರಲ್ಲೂ ಇರುವುದಿಲ್ಲವೆಂಬ ದೂರು ಆಗಾಗ್ಗೆ ಕೇಳಬರುತ್ತಿದೆ.

(೨ನೇ ಪುಟ ನೋಡಿ)

THE
UNITED INDIA LIFE ASSURANCE CO., LTD.
ESTD 1906 [H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to,—
INSPECTORATE OFFICE
K. S. Rao Road, Mangalore.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . . 2¼% p. a.

5 & 6 months . . . . 2½% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of 37 years avialable to you for arranging Insurance Investment

It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 7—5—1948 [ಸಂಚಿಕೆ 18]

ನಿರಕ್ಷರತೆಯನ್ನು ಸೋಲಿಸಲು ಶಿಕ್ಷಕರ ಸೈನ್ಯ

ಭಾವೀ ಭಾರತದ ಶೈಕ್ಷಣಿಕ ಧೋರಣ

ಮೌಲಾನಾ ಅಜಾದರ ಗಮನೀಯ ಸೂಚನೆಗಳು

ಮುಂದಿನೈದು ವರ್ಷಗಳಲ್ಲಿ ಕಡ್ಡಾಯದ ಸಾರ್ವತ್ರಿಕ ಶಿಕ್ಷಣಕ್ರಮವನ್ನು ಜಾರಿಗೆ ತರಲು ಉಪಾಧ್ಯಾಯರುಗಳನ್ನು 'ಶೈಕ್ಷಣಿಕ ಸೈನ್ಯ' ಭರತಿಗೆ ಕ್ಷಾತ್ರಯುಪೂರ್ವಕವಾಗಿ ಸೇರುವಂತೆ ಮಾಡುವುದವಶ್ಯಕತೆಯು ಕ್ತಿತು ಕೇಂದ್ರ ಶಿಕ್ಷಣ ಸಚಿವ ಮೌ। ಆಜಾದರು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಕೆಲ ಸೂಚನೆಗಳನ್ನು ಮುಂದಿಟ್ಟರು ಈ ಐದು ವರ್ಷಗಳಲ್ಲಿ ಶಿಕ್ಷಿತನಾದ ಪ್ರತಿಯೋರ್ವ ಸ್ತ್ರೀ ಪುರುಷನು ಒಂದು ನಿರ್ದಿಷ್ಟ ಅವಧಿಯ ತನಕ ಕಡ್ಡಾಯವಾದ ಶಿಕ್ಷಣ ಸೇವೆಯನ್ನು ಸಲ್ಲಿಸುವಂತೆ ಮಾಡಬೇಕ ಜನತಾ ಪ್ರತಿನಿಧಿಗಳು ಈ ಸೂಚನೆಯನ್ನು ಸ್ವಾಗತಿಸಿದರು

ಮೌಲಾನರ ಸೂಚನೆ ಹೊಸದೇನಲ್ಲ ೧೯೧೯ರಷ್ಟು ಹಿಂದೆ ರಾಜಗೋಪಾಲಾಚಾರ್ಯರು ಒಂದು ಸಲ ಹೀಗೆಂದಿದ್ದರ

"ಯುದ್ಧದ ಗಂಡಾಂತರ ಒದಗಿದಾಗ ಹೇಗೆ ಪ್ರಾಯಸ್ಥರನ್ನು ಕಡ್ಡಾಯವಾಗಿ ಸೈನ್ಯಸೇರುವಂತೆ ಮಾಡಲಾಗುವುದೇ ಅದೇ ಮಾದರಿಯನ್ನು ಶಿಕ್ಷಣಕ್ಷೇತ್ರದಲ್ಲಿ ಉಪಾಧ್ಯಾಯರಿಗೂ ಅನ್ವಯಿಸಬೇಕು ಸೈನ್ಯಸೇವೆಗಿಂತ ಹೆಚ್ಚಿನ ಔದಾರ್ಯಹ ಪತಿಸಲ ಶಿಕ್ಷಕರಿಗೆ ಸಿಗುವಂತೆಯೂ ಮಾಡಿ ನಿರ್ದಿಷ್ಟ ಅವಧಿಯ ತನಕ ಅವರು ಒತ್ತಾಯಪೂರ್ವಕವಾಗಿ ಕಲಿಸುವಿಕೆಯನ್ನು ಕೈಕೊಳ್ಳುವಂತಾಗಬೇಕು"

ರಾಷ್ಟ್ರೀಯ ಶಿಕ್ಷಣ

೧೯೩೭ರಲ್ಲಿ ಈ ಸೂಚನೆಗೆ ಇನ್ನಷ್ಟು ಹೆಚ್ಚಿನ ಗಮನ ತರಲಾಯಿತು ಆಗ ಮಹಾತ್ಮರು ಒಂದು ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಸಿದ್ಧಗೊಳಿಸಿ ವಾರ್ಧಾ ಪದ್ಧತಿಯ ತಮ್ಮೀ ಶಾಲೆಗಳನ್ನು ನಡೆಸಲು ಸಾವಿರಾರು ಉಪಾಧ್ಯಾಯರ ಅವಶ್ಯಕತೆಯಿದೆ ಎಂದರು "ಹಿಟ್ಲರ್ ಮುಸ್ಸೋಲಿನಿಗಳು ದೇಶ ಸೇವೆಗಾಗಿ ತರುಣರ ಸೈನ್ಯಗಳನ್ನು ಅಪೇಕ್ಷಿಸುವುದು ನ್ಯಾಯವೆಂದಾದರೆ ನಮ್ಮ ತರುಣರು ಒಂದು ವರ್ಷದ ಅವಧಿಯನ್ನು ಕಲಿಸುವಿಕೆಗೇಕೆ ವ್ಯಯಿಸಬಾರದು?" ಎಂದಿದ್ದರು ಆದರೆ ಶಾಸನದ್ವಾರಾ ಒತ್ತಾಯ ಮಾಡುವುದರ ಬದಲು ಸ್ವೇಚ್ಛೆಯಿಂದ ಸೇವಾಕಾಂಕ್ಷೆಯಿಂದ ತರುಣರು ಮುಂದೆ ಬರಬೇಕೆಂದು ಅವರು ಇಚ್ಛಿಸಿದ್ದರು ಯುದ್ಧಾನಂತರದ ಶಿಕ್ಷಣ ಯೋಜನೆಯೆನ್ನಲಾದ 'ಸಾರ್ಜೆಂಟ್ ಯೋಜನೆ'ಯಲ್ಲೂ ಈ ಕಡ್ಡಾಯದ ಉಪಾಧ್ಯಾಯ ಸೈನ್ಯ ಭರತಿಯ ತತ್ವವು ಅನುಸರಿಸಲಾಗಿದೆ

ಇದು ಕಡ್ಡಾಯ ಶಿಕ್ಷಕರನ್ನು ಸೇರಿಸಿಕೊಳ್ಳುವ ಯೋಜನೆಯ ಸಂಕ್ಷೇಪ ಇತಿಹಾಸ ಕಳೆದ ಕಾಲು ಶತಮಾನದಲ್ಲಿ ಈ ಯೋಜನೆಯು ಕಮೇಣ ಜನಾಂಗ ಮುಖದರಿಂದ ಒಂದಲ್ಲ ಒಂದು ವಿಧಾನದಲ್ಲಿ ಸ್ವೀಕರಿಸಲ್ಪಟ್ಟಿದೆ ಬ್ರಿಟಿಷ್ ಆಡಳಿತದಿಂದ ಅತಿ ಹೆಚ್ಚಾಗಿ ಉಳಿದಿರುವ ನಿರಕ್ಷರತೆಯ ಹಾವಳಿಯನ್ನು ನಿವಾರಿಸಲು ಭರ ಬಾಳುತ್ತಿದ್ದ ಭಾರತೀಯ ರಾಷ್ಟ್ರೀಯತೆಯ ಭಾವನೆಯು ಪ್ರಯತ್ನಗಳನ್ನು ಮಾಡಿತು ಆದುದರಿಂದ ಇಂದು ನಮ್ಮ ರಾಷ್ಟ್ರೀಯ ಸರಕಾರವು ಈ ಕಡ್ಡಾಯ ಕಲಿಸುವಿಕೆಗೆ ಪ್ರಥಮ ಮಹತ್ವವನ್ನು ಕೊಟ್ಟದ್ದರಲ್ಲಿ ಆಶ್ಚರ್ಯವಿಲ್ಲ

೨೧ ಲಕ್ಷ ಉಪಾಧ್ಯಾಯ ಸೈನ್ಯ

ಮೌಲಾನಾ ಅಜಾದರೆಂದರು "ಯುದ್ಧಾನಂತರದ ಶೈಕ್ಷಣಿಕ ಯೋಜನೆಯ ಪ್ರಕಾರ (ಸಾರ್ಜೆಂಟ್ ಪ್ಲೇನ್) ದೇಶವನ್ನು ಪೂರ್ಣ ಅಕ್ಷರಸ್ಥ ಮಾಡಲು ೪೦ ವರ್ಷಗಳು ಬೇಕೆಂದು ನಿರ್ಣಯಿಸಲಾಗಿತ್ತು ಆದರೆ ಸಾರ್ವತ್ರಿಕವಾದ ಕಡ್ಡಾಯದ ವಿದ್ಯಾಕ್ರಮ ಅದಷ್ಟು ಶೀಘ್ರದಲ್ಲಿ ಜಾರಿಗೆ ಬರಬೇಕೆಂದಿದ್ದರೆ ಒತ್ತಾಯದ ಮೂಲಕವೇ ಉಪಾಧ್ಯಾಯರನ್ನು ಸೇರಿಸಿಕೊಳ್ಳಬೇಕಾಗಿದೆ" ಮತ್ತು ಇದು ಶಿಷ್ಟವಾದಷ್ಟು ಉತ್ತಮ ಜನತಾ ಸರಕಾರಕ್ಕೆ ಈ ಒತ್ತಾಯವನ್ನು ಮಾಡುವ ಸಂಪೂರ್ಣ ಹಕ್ಕಿದೆ ಇದೊಂದು ರಾಷ್ಟ್ರೀಯ ಸಮಸ್ಯೆ. ಮಹಾತ್ಮರು ಇನ್ನು ಅಭಿಪ್ರಾಯವನ್ನು ಈ ಸುಂದರಿಯೇ ವ್ಯಕ್ತಪಡಿಸಿದ್ದರು ಉಪಾಧ್ಯಾಯರನ್ನು ಕೂಡಿಸುವ ಕೆಲಸವಾದರೂ ಅಷ್ಟೊಂದು ಕಷ್ಟಸಾಧ್ಯವಾದುದಲ್ಲ

ಸಾರ್ಜೆಂಟ್ ಯೋಜನೆಯನ್ವಯ ನಮ್ಮ ತರಣ ಜನಸಂಖ್ಯೆಯಾದ ೩೦ಲಕ್ಷದಿಂದ ೨೧ಲಕ್ಷ ಉಪಾಧ್ಯಾಯರನ್ನು ಒಟ್ಟುಗೂಡಿಸಬೇಕಾಗಿದೆ ಇದರ ಪ್ರಕಾರ ಪ್ರತಿ ೧೦ರ ತರುಣರಲ್ಲಿ ಒಬ್ಬನು ಉಪಾಧ್ಯಾಯನಾಗಬೇಕಾಗುತ್ತದೆ ಈ ಅಂಕೆ ಸಂಖ್ಯೆ ಸರಿಯಾದರೆ (ಇದು ವಿಭಾಗೀಕರಣದ ಮೊದಲಿನ ಗಣನೆ) ತರುಣವರ್ಗದಿಂದ ಉಪಾಧ್ಯಾಯರನ್ನು ಪಡೆಯುವುದು ದೊಡ್ಡ ಸಮಸ್ಯೆಯಾಗದು. ನಮ್ಮ ಮುಂದಿರುವ ಎರಡೇ ದಾರಿಗಳೆಂದರೆ ೪೦ ವರ್ಷ ಇಲ್ಲವೆ ಒತ್ತಾಯದ ಶಿಕ್ಷಕರನ್ನು ಸೇರಿಸುವುದು

ಇತರ ಅನುಕೂಲತೆಗಳು

ಮಿಲಿಯಾವಧಿ ಅಧ್ಯಾಪನದ್ದ ಸ್ತ್ರೀಪುರುಷರನ್ನು ಅಕ್ಷರಸ್ಥರನ್ನಾಗಿ ಮಾಡುವ ಈ ಕೆಲಸಕ್ಕೆ ಕಡ್ಡಾಯವಾಗಿ ಉಪಾಧ್ಯಾಯರನ್ನು ಸೇರಿಸಿಕೊಳ್ಳುವುದರಿಂದ ಇತರ ಅನುಕೂಲಗಳೂ ಇವೆ ಒಂದೊಂದು ಕುಟುಂಬದಲ್ಲಿ ಅಪ್ರತ್ಯಕ್ಷರೂಪ ಒಂದು ತರದ ಕಡ್ಡಾಯಕ್ರಮವನ್ನು ಸ್ವಯಂಪ್ರೇರಣೆಯಿಂದನುಸರಿಸಬಹುದೆಂದು ರಾಜಾಜಿಯವರು ಸೂಚಿಸಿದ್ದರು ಅವರೆಂದಿದ್ದರು "ನಮ್ಮ ಮಕ್ಕಳಿಗೆ ಬೇಕಾಗುವಷ್ಟು ಶಾಲೆಗಳು ಇರಲಿ ಇಲ್ಲದಿರಲಿ, ನಮ್ಮ ನಮ್ಮ ಮನೆಗಳಲ್ಲಿಯೇ ನಾವು ಒಂದು ತರದ ಉಪಾಧ್ಯಾಯರಾಗಿರಬೇಕಾದ ಆವಶ್ಯಕತೆ ಕಾಣುತ್ತದೆ ಆದುದರಿಂದ ಶೈಕ್ಷಣಿಕ ಶಾಸ್ತ್ರದ ಪರಿಚಯವನ್ನು ಹೆತ್ತವರಿಗೆ ಮಾಡಿಕೊಡುವುದರಿಂದ ಬಹಳ ಲಾಭವಿದೆ"

ಮಕ್ಕಳನ್ನು ಶಿಕ್ಷಿತರಾಗಿ ಮಾಡುವ ಮತ್ತು ಅವರನ್ನು ಉತ್ತಮ ರೀತಿಯಲ್ಲಿ ಬೆಳೆಸುವುದರ ಕುರಿತು ಜ್ಞಾನವಿರಬೇಕಾದುದು ಪ್ರತಿಯೊಬ್ಬ ಕುಟುಂಬಸ್ಥನಿಗೆ ಅತ್ಯುಪಯುಕ್ತವಾದುದು ಶೈಕ್ಷಣಿಕ ಪದ್ಧತಿಗಳ ಜ್ಞಾನವಿಲ್ಲದ ಮನೆಗಳ ಮಕ್ಕಳಿಗೆ ಕಲಿಸುವುದು ಅದೆಷ್ಟು ಕಷ್ಟತರವಾದ್ದೆಂದು ಉಪಾಧ್ಯಾಯರಾಗಿದ್ದವರೆಲ್ಲರಿಗೂ ತಿಳಿದಿದೆ. ಈ ಜ್ಞಾನವು ಕೆಲವು ಸಂದರ್ಭಗಳಲ್ಲಿ ಸುಶಿಕ್ಷಿತರೆನಿಸುವ ಹೆತ್ತವರಲ್ಲೂ ಇರುವುದಿಲ್ಲವೆಂಬ ದೂರು ಆಗಾಗ್ಗೆ ಕೇಳಬರುತ್ತಿದೆ.

(೨ನೇ ಪುಟ ನೋಡಿ)

THE
UNITED INDIA LIFE ASSURANCE CO., LTD.
ESTD 1906 — H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to —
INSPECTORATE OFFICE
K. S. Rao Road, Mangalore.

(೧ನೇ ಪುಟದಿಂದ)

ಈ ಕುರಿತು ಡಾ॥ ಜಾಕೀರ ಹುಸೇನರೊಂದು ಸಲ ಮಾರ್ಮಿಕವಾಗಿ ಹೀಗೆ ನುಡಿದಿದ್ದರು. “ನನ್ನ ಮಕ್ಕಳು ಅನಾಥರಾಗಿದ್ದರೂ ನಾನು ಸಂತೋಷಪಡುವೆ. ಕಾರಣ ಹೆಚ್ಚಿನ ಸಂದರ್ಭಗಳಲ್ಲಿ ಅವರ ಯೋಗ್ಯ ಬೆಳವಣಿಗೆ ವಿಕಾಸಗಳಿಗೆ ಬೇಕಾಗುವಂತಹ ಮಾರ್ಗದರ್ಶನವು ಅವರಿಗೆ ತಮ್ಮ ಹೆತ್ತವರಿಂದ ದೊರಕುವುದಿಲ್ಲ.”

ಅಧ್ಯಾಪಕ ವೃತ್ತಿಗೆ ಭೂಷಣ

ಕಡ್ಡಾಯ ಶಿಕ್ಷಕ ಸೇರಿಸುವಿಕೆಯ ಮತ್ತೊಂದು ಮಹತ್ವದ ಅನುಕೂಲವೆಂದರೆ ಅಧ್ಯಾಪಕ ವೃತ್ತಿಗೆ ದೊರಕುವ ಹೆಚ್ಚಿನ ಗೌರವ ಘನತೆಗಳಷ್ಟು. ಜನಸಾಂಗ ನಿರ್ಮಾಪಕರೆಂದೆನಿಸಲ್ಪಡುವವರಾದರೂ ಉಪಾಧ್ಯಾಯರಿಂದು ಅಲ್ಪ ಗೌರವಿತರಾಗಿರುವರು ಮಾತ್ರವಲ್ಲ ಹೆಚ್ಚಿನ ಸಂದರ್ಭದಲ್ಲಿ ಅವರು ಟೀಕೆ ಟಿಪ್ಪಣಿಗಳಿಗೂ ಒಳಗಾಗುವರು. ಇಂದು ಇತರ ಎಲ್ಲಾ ಉದ್ಯೋಗಗಳಲ್ಲಿ ಸ್ಥಾನದೊರೆಯದೆ ನಿರಾಶೆಯಾದವರೇ ಉಪಾಧ್ಯಾಯ ವೃತ್ತಿಯನ್ನು ಕೊನೆಯ ಸಾಧನವಾಗಿ ಕೈಕೊಳ್ಳುವಂತೆಯೂ ಆದುದಕ್ಕೆ ಕಾರಣವೂ ಇದೇ. ಸಮಾಜದಲ್ಲಿ ಉಪಾಧ್ಯಾಯರಿಗೆ ಸಿಗಬೇಕಾದ ಆದರ ಮನ್ನಣೆಗಳಿಂದು ದೊರಕುತ್ತಿಲ್ಲ.

ಕಡ್ಡಾಯವಾಗಿ ಎಲ್ಲರೂ ಉಪಾಧ್ಯಾಯರಾಗಬೇಕಾದ ಪರಿಸ್ಥಿತಿ ಬಂದ ಕಾಲಕ್ಕೆ ಈ ಕಲಿಸುವ ವೃತ್ತಿಯ ಮೇಲಿರುವ ಅನಾದರವು ತನ್ನಷ್ಟಕ್ಕೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ಕೆಲವರು ಇದಕ್ಕೆ ಆಕ್ಷೇಪವೆತ್ತುತ್ತಾರೆ. ಬಲಾತ್ಕಾರದಿಂದ ಕಲಿಸುವ ಕೆಲಸ ಕೊಟ್ಟರೆ ಶಿಕ್ಷಣಕ್ಕೆ ದೋಷತಟ್ಟಬಹುದೆಂದವರ ತರ್ಕ. ಕಾರಣ ಕಲಿಸುವ ಯೋಗ್ಯತೆ, ಸಾಮರ್ಥ್ಯಗಳು ಎಲ್ಲರಲ್ಲೂ ಒಂದೇ ಪ್ರಮಾಣದಲ್ಲಿರಲಾರವು. ಆದರೆ ಈ ತರ್ಕ ಎಲ್ಲಾ ಉದ್ಯೋಗಗಳಿಗೂ ಅನ್ವಯಿಸುವುದು. ಉದಾ: ಸೈನ್ಯಕ್ಕೆ ಕಡ್ಡಾಯವಾಗಿ ಸೇರಿಸಲ್ಪಟ್ಟವರೆಲ್ಲರೂ ಉತ್ತಮ ಯೋಧರೇ ಆಗುವರೇ? ಸೈನ್ಯಕ್ಕೆ ಸೇರಿದವ ಸರ್ವ ಸಾಮಾನ್ಯ ತೃಪ್ತಿಕರವಾಗಿ ತನ್ನ ಕೆಲಸ ನಿರ್ವಹಿಸುವನೆಂದಾದರೆ ಉಪಾಧ್ಯಾಯ ವೃತ್ತಿಯಲ್ಲೂ ಅವನೇಕೆ ಅದೇ ರೀತಿ ನಿರ್ವಹಿಸಬಾರದು?

ಸೈನಿಕ ಮತ್ತು ಶಿಕ್ಷಕ

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಗಮನಕ್ಕೆ ತರಬೇಕಾಗಿದೆ. ದೇಶರಕ್ಷಣೆಗಾಗಿ ಕಾದಾಡುವ ಶಕ್ತಿ ಸಾಮರ್ಥ್ಯಗಳು ಬೇರೆ, ಮೊದಲನೇದು ವಿನಾಶಕಾರಿಯಾದುದು; ಎರಡನೇದು ರಚನಾತ್ಮಕವಾದುದು. ಒಂದರಲ್ಲಿ ಕೊಲ್ಲುವ ಧೈರ್ಯವೂ, ಇನ್ನೊಂದರಲ್ಲಿ ಸಾಯುವ ಧೈರ್ಯವೂ ಇರಬೇಕಾದುದುದತ್ಯಾವಶ್ಯಕ. ತೀರ ಅಯೋಗ್ಯರೆಂದು ಕಂಡವರನ್ನು ಬೇರೆ ರಾಷ್ಟ್ರೀಯ ಕಾರ್ಯಗಳಿಗೆ ಬಳಸಬಹುದು. ಇದಕ್ಕಾಗಿ ಒಂದು ಸಾಮರ್ಥ್ಯಮಾಪಕ ಮಟ್ಟವನ್ನು (Standard) ಇಟ್ಟುಕೊಳ್ಳಬೇಕಾದೀತು.

ಕಡ್ಡಾಯ ಉಪಾಧ್ಯಾಯನ ಅವಧಿಯ ಕುರಿತು ಸಾರ್ಜೆಂಟ್ ಯೋಜನೆಯಲ್ಲಿ ಏನೂ ತಿಳಿಸಿಲ್ಲ. ಗಾಂಧಿಜಿಯವರು ಇದು ವರ್ಷದ ಸೂಚನೆ ಕೊಟ್ಟಿದ್ದರು. ಮೌಲಾನಾ ಸಾಹೇಬರು ಈ ಪ್ರಶ್ನೆಯನ್ನು ತಜ್ಞರ ನಿಷ್ಕರ್ಷೆಗೆ ಬಿಟ್ಟಿರುತ್ತಾರೆ. ಎರಡು ವರುಷದ ಅವಧಿಯು ಸೂಕ್ತವೆಂದು ಸರ್ವ ಸಾಧಾರಣ ಅಭಿಪ್ರಾಯವಿದೆ. ಇತರ ಉದ್ಯೋಗಗಳಿಗೆ ಹೋಗಲಿಚ್ಛಿಸುವವರಿಗೆ ೫ ವರ್ಷಗಳ ತನಕ ಉಪಾಧ್ಯಾಯ ವೃತ್ತಿಯಲ್ಲಿರಿಸುವುದು ನ್ಯಾಯವಾಗಲಾರದು. ಒಂದು ವರ್ಷವೆಂದರೆ ಅದು ಅನುಭವಕ್ಕೇ ಸಾಲದು. ಹೀಗೆ ಎರಡು ವರ್ಷ ಕಡ್ಡಾಯ ಉಪಾಧ್ಯಾಯರಾಗುವವರಿಗೆ ಎರಡು-ಮೂರು ತಿಂಗಳ ತರಬೇತಿ ಸಾಕಾಗುವುದು. ಒಂದು ದೇಶವು ಯುದ್ಧದಲ್ಲಿ ತೊಡಗುವ ಪ್ರಸಂಗದಲ್ಲಾದರೂ ಸೈನ್ಯ ತರಬೇತಿಯು ಕನಿಷ್ಟ ಅವಧಿಯದಿರುತ್ತದೆ. ಈ ಶಿಕ್ಷಣ ಸಮಸ್ಯೆಯನ್ನು ನಾವು ಅನಿರೀಕ್ಷಿತ ಯುದ್ಧ ಪ್ರಸಂಗವೆಂದು ಭಾವಿಸಬೇಕು. ಆ ದೃಷ್ಟಿಯಿಂದಲೇ ಉಪಾಧ್ಯಾಯ ಸೈನ್ಯವನ್ನು ಸಜ್ಜುಗೊಳಿಸಬೇಕಾಗಿದೆ.

ಉಪಾಧ್ಯಾಯರ ಸಾಮರ್ಥ್ಯ ಮಟ್ಟ

ಕಡ್ಡಾಯವಾಗಿ ಉಪಾಧ್ಯಾಯರನ್ನು ಸೇರಿಸಿಕೊಳ್ಳುವಾಗಲೂ ಕನಿಷ್ಟ ಪ್ರಮಾಣದ ಸಾಮರ್ಥ್ಯದ ಪರಿಶೀಲನೆ ಅಗತ್ಯವಿದೆ. ಎಲ್. ಟಿ. ಬಿ. ಟಿ. ತರಬೇತಿಗ ಸೇರಿಸಿಕೊಳ್ಳುವಾಗ ಯಾವ ಮಟ್ಟವನ್ನಿಟ್ಟುಕೊಳ್ಳುವರೋ ಅದೇ ಮಾದರಿಯಲ್ಲಿದನ್ನು ಅನುವರ್ತಿಸಿಕೊಳ್ಳಬಹುದು. ನಮಗೆ ಸರ್ವ ಸಾಧಾರಣ ಮೆಟ್ರಿಕ್ ಇಲ್ಲವೆ ಎಫ್. ಎ. ಕಲಿತವರೇ ಹೆಚ್ಚಾಗಿ ಬೇಕಾಗಿರುತ್ತಾರೆ. ಇವರಿಗೆ ಶಿಕ್ಷಣ ಮುಗಿದ ತಡ ಶಿಫಾರಸು ಪತ್ರಕೊಡುವ ಮುನ್ನ ಅವರು ಎರಡು ವರ್ಷದ ಈ ಕಡ್ಡಾಯ ಸೇವೆಯನ್ನು ಸಲ್ಲಿಸಲೇಬೇಕೆಂದು ಮಾಡಬೇಕು. ಅವರು ಮಾಡಲಿರುವ ಕೆಲಸವು ಅವರ ಶಿಕ್ಷಣಪೂರ್ತಿಯ ಒಂದು ಅಂಶವೆಂದೇ ಭಾವಿಸಬೇಕು. ಇಲ್ಲವೆ ಅವರ ಶಿಕ್ಷಣ ಯೋಗ್ಯತೆಯು ಅಸಂಪೂರ್ಣವೆಂದಾಗುತ್ತದೆ.

ತರಬೇತಿಯ ವಿಷಯ ಮುಂಬರುವ ಶಾಲಾ ವರ್ಷದಿಂದ ಹೈಸ್ಕೂಲ್ ತರಗತಿಗಳಲ್ಲಿ ಶಿಕ್ಷಣಕಲೆಯ ಕುರಿತಾದ ಸರಳಜ್ಞಾನವನ್ನು ಕೊಡುವ ಕೆಲವು ಪಿರೇಡುಗಳನ್ನು ಸೇರಿಸಬೇಕು. ಮೆಟ್ರಿಕ್ ಮುಗಿಸುವುದರೊಳಗೆ ವಿದ್ಯಾರ್ಥಿಗೆ ಕಲಿಸುವ ಪದ್ಧತಿಯ ಮೂಲಜ್ಞಾನವೂ ಆದಂತಾಗುವುದು. ಆ ಮೇಲೆ ಅಲ್ಪ ಅವಧಿಯ ತರಬೇತಿ ಕೊಟ್ಟರೆ ತಕ್ಕ ಮಟ್ಟಿಗೆ ಅವನು ಉಪಾಧ್ಯಾಯ ವೃತ್ತಿಗೆ ಯೋಗ್ಯನಾಗುತ್ತಾನೆ.

ಕೊನೆಯಲ್ಲಿ ಮಹಿಳಾಧ್ಯಾಪಕರ ಸಮಸ್ಯೆಯ ಕುರಿತು ಒಂದು ಮಾತು. ಇವರನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸುವುದೊಂದು ಸಮಸ್ಯೆಯೇ ಆಗಿದೆ. ಕಡ್ಡಾಯಕ್ರಮದಿಂದ ಈ ಪ್ರಶ್ನೆ ಬಗೆಹರಿಯುವುದಾದರೂ ಇತರ ಪ್ರಶ್ನೆಗಳೂ ಏಳುವವು. ಭಾರತೀಯ ಸ್ತ್ರೀಯತ್ವದ ವಿಶೇಷ ಗುಣ ಗೌರವಗಳ ಕಡೆಗೂ ಗಮನಕೊಡುವುದತ್ಯಾವಶ್ಯಕ. ನಮ್ಮಲ್ಲಿ ಹೆಚ್ಚಿನವರು ವಿವಾಹ ಜೀವನವನ್ನೇ ಬಯಸುವವರು. ಹೆಚ್ಚಿನ ಹೆತ್ತವರು ತಮ್ಮ ಹೆಣ್ಣು ಮಕ್ಕಳು ಸಂಪಾದನೆಗಾಗಿ ಕೆಲಸಮಾಡಬೇಕೆಂದು ನಿರೀಕ್ಷಿಸುವುದಿಲ್ಲ. ಸರಕಾರವು ಈ ದೃಷ್ಟಿಕೋನವನ್ನು ಬದಲಾಯಿಸಲು ಪ್ರಚಾರ ಕೈಕೊಳ್ಳಬೇಕಾದುದು ಅವಶ್ಯವಿದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ರಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨[illegible]
೪ರಿಂದ ೫ ತಿಂಗಳು	,,	,,	೨[illegible]
೬ರಿಂದ ೯ ತಿಂಗಳು	,,	,,	೨[illegible]

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE CANARA BANK, LIMITED.

ESTD: 1906

ಕಪ್ಪು ಸಂತೆಯಲ್ಲಿ ವನ್ಯಮೃಗಗಳ ಮಾರಾಟ

ಆನೆಗೆ ಅಪಾರ ಬೆಲೆ

ಬೆಲೆಗಳ ಏರುವಿಕೆ ಕಾಡಿಗೂ ತಲುಪಿದೆ. ಮೃಗಾಲಯಗಳಲ್ಲಿಡುವ ಮತ್ತು ಸರ್ಕಸ್ ಪ್ರದರ್ಶನಗಳಲ್ಲಿ ಉಪಯೋಗಿಸಲ್ಪಡುವ ಕಾಡು ಮೃಗಗಳಿಗೆ ಹದ ಮಿಕ್ಕಿದ ಧಾರಣೆಯುಂಟಾಗಿದೆ.

ಆಫ್ರಿಕದ ಅರಣ್ಯಗಳಲ್ಲಿನ ಕೋತಿಗಳಿಗೆ ಯುದ್ಧಪೂರ್ವ ಒಂದೊಂದಕ್ಕೆ ಕೇವಲ ಹದಿನೆರಡಾಣೆ ಬೆಲೆಯಿತ್ತು. ಈಗ ಅಲ್ಲಿನ ನಿಗ್ರೊ ನಿವಾಸಿಗಳು ಅವನ್ನು 700 ಇಲ್ಲವೆ 800 ರೂಪಾಯಿಗಲ್ಲದೆ ಹಿಡಿಯುವುದಿಲ್ಲ.

ಜಗತ್ತಿನ ನಾನಾ ಕಡೆಗಳಲ್ಲಿನ ಮೃಗಾಲಯಗಳ ಸರ್ಕಸ್ ಕಂಪೆನಿಗಳ ಮತ್ತು ಪ್ರಾಣಿ ಸಂಶೋಧನಾಲಯಗಳ ಪ್ರತಿನಿಧಿಗಳು ಪಶ್ಚಿಮ ಆಫ್ರಿಕದ ಕರಾವಳಿ ಪಟ್ಟಣಗಳಲ್ಲಿ ತಿಂಗಳುಗಟ್ಲೆ ವಾಸಮಾಡಿ ಕಾಡಿನಿಂದ ಮೂಲನಿವಾಸಿಗಳು ತಂದ ಅದೆಂತಹ ಪ್ರಾಣಿಯನ್ನಾದರೂ ಕೊಂಡುಕೊಳ್ಳುವರು.

75 ಸಾವಿರ ರೂಪಾಯಿಯ ಆನೆ

ಸಹಜವಾಗಿ ಆನೆಗಳ ಬೆಲೆಗಳಂತೂ ಇನ್ನಷ್ಟು ಊದಿಕೊಂಡಿವೆ. ಯುದ್ಧಪೂರ್ವದಲ್ಲಿ ಅವುಗಳ ಬೆಲೆ 700—800 ರೂಪಾಯಿಗಳಿತ್ತು. ಈಗ ಅವುಗಳ ಮರಿಗಳ ಒಂದು ಜೊತೆಗೆ 77 ಸಾವಿರ ರೂ. ಬೆಲೆ ಇದೆ. ಇತ್ತೀಚೆಗೆ ಲಂಡನ್ ಮೃಗಾಲಯದವರು ಒಂದು ಜೊತೆ ಆಫ್ರಿಕದ ಆನೆಗಳನ್ನು ರೂಪಾಯಿ 75 ಸಾವಿರಕ್ಕೆ ಪಡೆಕೊಂಡಿರುವರು!

ಅಡಿಗೆ ಐವತ್ತು ಪವನು

ಇದು ಹಾವಿನ ಕ್ರಯ. ಮುಂಚೆ ಹಾವುಗಳನ್ನು ಅಡಿಯೊಂದಕ್ಕೆ ರೂ. 15ಕ್ಕೆ ಮಾರುತಿದ್ದರು. ಈಗ ಇದರ 50 ಪಾಲಷ್ಟು ಹೆಚ್ಚು ಬೆಲೆಯಾಗಿದೆ.

ಒಂಟೆಗಳ ಬೆನ್ನುಗಳು ಕೂಡಾ ತುಂಬಾ ಉಬ್ಬಿವೆ! ಯುದ್ಧಕ್ಕೆ ಮುಂಚೆ ಎರಡು ಡುಬ್ಬದ ಒಂದು ಬೆಕ್ಟ್ರಿಯನ್ ಒಂಟೆಗೆ ಕೇವಲ 450 ರೂಪಾಯಿ ಬೆಲೆಯಿತ್ತು. ಈಗ ಅದೇ ಎರಡು ಡುಬ್ಬಗಳಿಗೆ 12 ಸಾವಿರ ರೂಪಾಯಿಯಾಗಿದೆ.

ಆನೆ ಮಾಂಸದ ಕಳ್ಳ ಸಂತೆ

ಕೆಲ ಸಮಯದ ಹಿಂದೆ ಬರ್ಲಿನ್ ಮೃಗಾಲಯದ ‘ಸಯಾಮ್’ ಎಂಬ ಗಂಡಾನೆ ಮೃತಪಟ್ಟಿತು. ಅಧಿಕಾರಿಗಳಿಗೆ ಇದರ ದೇಹದಿಂದ ಸುಮಾರು 300 ಮಣ ಮಾಂಸ ದೊರಕಿತು! ಅಂದು ಅಲ್ಲಿನ ಎಲ್ಲಾ ಮಾಂಸಹಾರಿ ಪ್ರಾಣಿಗಳಿಗೆ ಆನೆ ಮಾಂಸದ ಫಲಹಾರ. ಮೃಗಾಲಯದಲ್ಲಿ ಕೆಲಸ ಮಾಡುವ ನರಪ್ರಾಣಿಗಳಿಗೂ ಒಂದಿಷ್ಟಿಷ್ಟು ಪಾಲು ಸಿಕ್ಕಿತು. ಈ ಮಧ್ಯ ಆನೆ ಮಾವುತನೊಬ್ಬನು ದುಸ್ವಾರ್ಥದಿಂದ 20 ರಾತ್ಲ ಮಾಂಸವನ್ನು ಕದ್ದು ಕಪ್ಪು ಸಂತೆಯಲ್ಲದನ್ನು ಸುಮಾರು 300 ರೂಪಾಯಿಗೆ ಮಾರಿದನು.

ಅವನು ಸಿಕ್ಕಿ ಬಿದ್ದ. ಆದರೆ ಜರ್ಮನಿಯಲ್ಲಿ ಆನೆ ಮಾಂಸಕ್ಕೆ ಕಂಟ್ರೋಲು ಬೆಲೆ ಇಂತಿಷ್ಟೆಂದು ಸರಕಾರಿ ಪ್ರಕಟಣೆಯಲ್ಲಿ ನಮೂದಿಸಿರಲಿಲ್ಲ. ಆದುದರಿಂದ ಅವನ ಮೇಲೆ ಲಾಭ ಬಡಕತನದ ಪುರಾವೆರದ್ದಾಯಿತು. ಆದರೆ ಕದ್ದದಕ್ಕೆ ಅವನಿಗೆ ಶಿಕ್ಷೆ ವಿಧಿಸಲ್ಪಟ್ಟಿದೆ.

ಮಾನವನ ನಂತರ ಮೂಷಿಕಗಳೇ ವಿಶ್ವದ ಒಡೆತನ ವಹಿಸುವವು

ಇಲಿಗಳಲ್ಲಿ ವಿಚಿತ್ರ ರೇಡಿಯೋ ಶಕ್ತಿಯಿದೆ

ಜನಾಂಗವನ್ನೇ ನಾಶಮಾಡಿದ ಜಂತುಗಳು

ನಮ್ಮ ಶಾಸ್ತ್ರ ಪುರಾಣಗಳಲ್ಲಿ ಮಹಾ ಗಣಪತಿಯ ವಾಹನವು ಇಲಿಯೆಂದು ಹೇಳಲಾಗಿದೆ. ಗಣಪತಿಯು ವಿಘ್ನ ವಿನಾಶಕನಾದರೆ ಅವನ ಈ ನಿಕೃಷ್ಟ ವಾಹನವು ಸಕಲ ದುರಿತಗಳಿಗೂ ಮೂಲ ಕಾರಣವಾಗಿದೆನ್ನಬಹುದು. ಅಂತಹ ಜಂತುವನ್ನು ದುರಿತ ನಿವಾರಕ ದೇವರೇ ಹತೋಟಿಯಲ್ಲಿರಿಸಬಲ್ಲನಲ್ಲದೆ ಮಾನವ ಶಕ್ತಿಯಿಂದ ಈ ಮೂಷಿಕ ವರ್ಗವನ್ನೂ, ಅದರಿಂದಾಗುವ ಅಪಾರ ಹಾನಿಯನ್ನೂ ತಡೆಗಟ್ಟಲು ಸಾಧ್ಯವಿಲ್ಲ. (ಶಾಸ್ತ್ರಾರ್ಥಕಾರರ ವಿವರಣೆಯೇ ಬೇರೆ ಇದೆ: ಇಲಿಯು ಚಂಚಲ ಮಾನವ ಮನಸ್ಸಿನ ಸಂಕೇತವೆಂದೂ, ಅದನ್ನು ಸಂಯಮದಲ್ಲಿರಿಸಲು ದೈವೀಕ ಪ್ರಾದುರ್ಭಾವವು ಅವಶ್ಯವೆಂದು ಸೂಚಿಸುವುದು ಗಣನಾಯಕನಾದ ಗಣಪತಿಯ ವೈಶಿಷ್ಟ್ಯವೆಂದೆನ್ನಲಾಗಿದೆ)

ಮನುಷ್ಯನು ಇಲಿಯ ವಿಷಯವಾಗಿ ತಿಳಿಕೊಂಡದ್ದಕ್ಕಿಂತ ಹೆಚ್ಚಾಗಿ ಇಲಿಗಳೇ ಮನುಷ್ಯನ ವಿಷಯವಾಗಿ ತಿಳಿಕೊಂಡಿವೆಯೆಂದು ಅಮೇರಿಕದ ಪ್ರಖ್ಯಾತ ಇಲಿತಜ್ಞರಾದ ಪ್ರೊ। ಜೆ. ಎಲ್. ನಿಕೊಲಸ್ ಎಂಬವರು ತಿಳಿಸುತ್ತಾರೆ. ಇವರು ತಮ್ಮ ಜೀವಮಾನವನ್ನೆಲ್ಲ ಇಲಿ ಸ್ವಭಾವ ಪರಿಶೀಲನೆಯಲ್ಲೇ ಕಳೆದಿದ್ದು ಅವುಗಳ ಮಹತ್ವರವಾದ ಭಾಷೆಯನ್ನು ತಡೆಯಲು ಇದು ತನಕ ಸುಮಾರು ... ಕೋಟಿ ಮೂಷಿಕಗಳನ್ನು ನಾಶಮಾಡಿರುವರು. ಇತ್ತೀಚೆಗೆ ಪ್ರೊ। ನಿಕೊಲಸರು "ಪಿಶಾಚರ ನಾಶಕರು" ಎಂಬ ಗ್ರಂಥವನ್ನು ಬರೆದಿದ್ದು ಅದರಲ್ಲಿ ಮೂಷಿಕ ವರ್ಗದ ಮೂಲ ಸ್ವಭಾವ ಪರಿಶೀಲನೆಯ ತಮ್ಮ ಅನುಭವಗಳನ್ನು ವಿವರಿಸಿರುವರು.

ಪೂರ್ವೇತಿಹಾಸ

ಇಲಿಗಳು ಒಂದು ಕಾಲದಲ್ಲಿ ವನ್ಯ ಜಂತುಗಳಾಗಿದ್ದವು. ನಾಡಿಗೆ ಬರುವ ಮೊದಲವು ಕಾಡಿನ ಹುಲ್ಲು ಸೊಪ್ಪು, ಬೀಜ ಧಾನ್ಯಗಳನ್ನು ತಿಂದು ಜೀವಿಸುತ್ತಿದ್ದವು. ಇತಿಹಾಸಪೂರ್ವದ ಪ್ರಾಚೀನ ಕಾಲದಲ್ಲೇ—ಅಂದರೆ ಮಾನವನು ವ್ಯವಸಾಯ ಮಾಡುವ ನಾಡಿನ ಕಡೆ ಸರಿಯಲಾರಂಭಿಸಿದಾಗ ಇಲಿಗಳೊಂದು ಮಹತ್ವದ ನಿರ್ಣಯವನ್ನು ಮಾಡಿದವು. "ಹೊಟ್ಟೆಹೊರಕೊಳ್ಳುವುದಕ್ಕಾಗಿ ನಾವೇಕಿಷ್ಟು ಶ್ರಮಪಡಬೇಕು? ತನಗೆ ಬೇಕಾಗಿರುವುದಕ್ಕಿಂತ ಹೆಚ್ಚು ಆಹಾರ ಸಂಗ್ರಹ ಮಾಡಿಟ್ಟುಕೊಳ್ಳುವ ಎರಡು ಕಾಲಿನ ನಡೆತ ಕಲಿತ ಮನುಷ್ಯ ಪ್ರಾಣಿಯ ಅನುಕೂಲತೆಯನ್ನೇಕೆ ನಾವು ಪಡೆಯಬಾರದು" ಎಂದವು ತರ್ಕಿಸಿದವು.

ನಂತರದ ಇಲಿ ತಲಾಂತರಗಳು ಇದೇ ಧೋರಣೆಯನ್ನು ಕಾರ್ಯರೂಪಕ್ಕೆ ತಂದವು. ಅವನು ತಿನ್ನುವುದನ್ನೇ ಅವೂ ತಿಂದವು. ಅವನ ಆಹಾರ, ಆಚಾರ ವಿಚಾರಗಳನ್ನವು ಸಂಪೂರ್ಣ ಕಲಿತುಕೊಂಡು ಅವನ ಭಾಗ್ಯಚಕ್ರಗತಿಗೆ ತಮ್ಮ ಭವಿಷ್ಯವಿಧಿಯನ್ನು ಸಿಕ್ಕಿಸಿಕೊಂಡು ಅಭಿವೃದ್ಧಿಹೊಂದುವಂತವುಗಳಾದುವು. ಈಗ ಕಪ್ಪು ಮತ್ತು ಕಂದು ಬಣ್ಣದ ಇಲಿಗಳು ನಾಯಿ ಕುದುರೆಗಳಿಗಿಂತ ಹೆಚ್ಚಾಗಿ ಮಾನವ ಸಹವಾಸವನ್ನು ಬಳಸಿಕೊಂಡಿವೆ. ಅವು ತಮ್ಮ ಸುತ್ತಿಗೆ ಮಾನವನಷ್ಟೇ 'ನ್ಯಾಯನಾಗರಿಕತೆ' ಹೊಂದಿವೆ. ಈಗವು ಹಿಂದಿನ ವನ್ಯಪರಿಸ್ಥಿತಿಯಲ್ಲಿಲ್ಲ. ಮಾನವ ಮೂಷಿಕಗಳ ಸಂಪರ್ಕವು ಅದೆಷ್ಟು ಬೆಳೆದುಹೋಗಿದೆಯೆಂದರೆ ಇಂದು ಅವುಗಳನ್ನು ಆಕರ್ಷಿಸಲು ಇತರ ಎಲ್ಲಾ ಸಾಧನೆಗಳಿಗಿಂತ ನರವಾಸನೆಯೇ ಅತ್ಯುತ್ತಮವಾದುದು. ಮನುಷ್ಯನು ಮನೆಮಾಡಿಕೊಂಡರೆ ಸಾಕು, ಅವು ಅನಾಹ್ವಾನಿತವಾಗಿಯೇ ವಲಸೆಬರುವವು.

ಕಪ್ಪು ಕಂದು ವೈಶಿಷ್ಟ್ಯ

ಕಪ್ಪಿಲಿಗಳು ಇತಿಹಾಸದಲ್ಲೇ ಪ್ರಸಿದ್ಧವಾದವುಗಳು. ಪ್ರಾಚೀನ ಈಜಿಪ್ತ ದೇಶದ ಆಹಾರ ಉಗ್ರಾಣಗಳ ಮೇಲವು ದಂಡೆತ್ತಿ ಸಾಗಿ ನಾಶಗೈದಿವೆ. ಯೂರೋಪಿನ ಜನಾಂಗವನ್ನು ಪ್ಲೇಗ್ ರೋಗದಿಂದವು ಸವೆಸಿ ಸಣ್ಣಮಾಡಿವೆ. ಇವುಗಳ ಅವಾಂತರವನ್ನು ತಾಳಲಾರದ ಪ್ರಾಚೀನ ರೋಮನ್ ಸಾಮ್ರಾಜ್ಯಾಧಿಪತಿಗಳ ಇವುಗಳ ನಾಶಕ್ಕಾಗಿ ವಿದೇಶದಿಂದ ವಿಶೇಷತರದ ಹಾವು ... ಗಳನ್ನು ಆಮದುಮಾಡಿಕೊಂಡಿರುವರು.

ಇಂಗ್ಲೆಂಡಿನಲ್ಲಿ ಹ್ಯಾನೋವರ್ ರಾಜವಂಶ ಆಳುತ್ತಿದ್ದಾಗಿವು ಅಲ್ಲಿ ಆಕ್ರಮಣವನ್ನು ಸಂಘಟಿಸಿದವು. ಆದರಿಂದಾಗಿ ಇವಕ್ಕೆ ಹ್ಯಾನೋವರ್ ಇಲಿಗಳೆಂದು ರಾಜಾಂಕಿತದ ಬಿರುದು ಸಿಕ್ಕಿದೆ. ಆಧುನಿಕ ಭಾರತದಲ್ಲಿ ತಂಗಾ ... ಇಲಿಗಳು ... ಅಲ್ಲಿನ ಬಡವರ್ಗದ ಜನತೆಯ ಗುಡಿಸಲುಗಳಲ್ಲಿಯೇ ಅವು ಹೆಚ್ಚಾಗಿ ವಸತಿಮಾಡಿಕೊಂಡಿವೆ. ಅಲ್ಲಿನ ಕೆಲ ಶ್ರೀಮಂತ ವ್ಯಾಪಾರಸ್ಥರು ತಮ್ಮ ಉಗ್ರಾಣಗಳಲ್ಲಿನ ಧಾನ್ಯಗಳನ್ನು ತಿನ್ನುವ ಈ ಜಂತುಗಳಿಗೆ (ಜೈನ ಬೌದ್ಧರು) ... ಪೋಷಿಸುವ ... ಸಂಯುಕ್ತ ಅಮೇರಿಕದಲ್ಲಾದರೋ ಅವು ಹೆಚ್ಚು ಶಕ್ತಿ ಬೆಳೆಯುವ ಮತ್ತು ಹೆಚ್ಚು ... ಮಿಸಿಸಿಪ್ಪಿಯ ದಕ್ಷಿಣ ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಸಿಲ್ಲ ಬಯಸುತ್ತವೆ.

ಕಂದು ಬಣ್ಣದ ಇಲಿಗಳು ಕಪ್ಪಿಗಿಂತ ಆಕೃತಿಯಲ್ಲಿ ದೊಡ್ಡವು, ಸ್ವಭಾವದಲ್ಲಿಯೂ ನೀಚತರದವು. ಇವು ತಮ್ಮ ಕಪ್ಪು ಬಾಂಧವರನ್ನು ಕೆಲವು ಸಲ ಹತ್ಯೆಗೊಳಿಸುತ್ತವೆ. ಸರ್ವಸಾಮಾನ್ಯವಾಗಿ ಅವು ಪರಸ್ಪರ 'ವೈವಾಹಿಕ' ಸಂಬಂಧವನ್ನು ಬೆಳೆಸುತ್ತವೆ. ಇವುಗಳ ಸಂಯುಕ್ತಬಾಂಧವ್ಯದಿಂದ ಮಧ್ಯಮ ಲಕ್ಷಣದೊಂದು ತರದ ಇಲಿ ವರ್ಗವೂ ಉತ್ಪನ್ನವಾಗುತ್ತದೆ. ಎರಡೂ ತರದ ಜಾತಿಯವೂ (ಇತರವು ಕೂಡಾ) ಇರುವ ಅಮೇರಿಕವು ಮೂಷಿಕಗಳ ಮಸಣಭೂಮಿಯೆನ್ನಬಹುದು. ಅಲ್ಲಿ ಈ ಹಾನಿಕಾರಕ ಜೀವಾದಿಗಳನ್ನು ನಿರ್ಮೂಲ ಮಾಡುವ ಮಹತ್ತರವಾದ ಯೋಜನೆಗಳೂ ಕೆಲಸಗೈಯ್ಯುತ್ತಿವೆ.

ರೇಡಿಯೊ ಶಕ್ತಿಸ್ವರೂಪ

ತಂದೆ ಇಲಿಗಳು ತಮ್ಮ ಮಕ್ಕಳ ಕಡೆ ಯಾವ ಗಮನವನ್ನು ಕೊಡುವುದಿಲ್ಲ (ತಮ್ಮವು ಯಾವುವೆಂದೂ ಅವಕ್ಕೆ ಗೊತ್ತಿಲ್ಲವೇನೋ). ವರ್ಷಕ್ಕಾರು ಸಲ ಮರಿಯಿಡುವ ಮೂಷಿಕ ಮಾತೆಗಳು ತಮ್ಮ ಮರಿಗಳಿಗೆ ಮೃದುವಾದ ಹಾಸಿಗೆಗಳನ್ನು ಬಿಲಗಳಲ್ಲಿ ಸಿದ್ಧಗೊಳಿಸುತ್ತವೆ. ಅಪಾಯಕಾರಕ ಸಂದರ್ಭದಲ್ಲಿ ತಾಯಿಗಳು ಸ್ವಜೀವ ರಕ್ಷಣೆಗಾಗಿ ಮರಿಗಳನ್ನು ತೊರೆದೋಡುವವು. ಆದರೆ ನವ್ಯದಿಂದೊದಗಿಬಿಟ್ಟರೆ ತಾಯಿಗಳು ಅನ್ಯೋನ್ಯ ಪ್ರೇಮಪುರಸ್ಕರವಾಗಿ ಮಕ್ಕಳ ಶಿಕ್ಷಣಾಸಕ್ತಿಯನ್ನು ವಹಿಸುತ್ತವೆ. ... ಇಲಿಮರಿಗಳು ... ಸಂಪೂರ್ಣ ... ಅವಕ್ಕೆ ... ಸ್ವಾತಂತ್ರ್ಯ ... ತಾಯಿಯೇ ... ಆಹಾರ ... ಹೇಗೆ ಚಲಿಸಬೇಕು, ಹೇಗೆ ಗೂಡಗೊತ್ತಿ ... ವಿಷಪೂರಿತ ಆಹಾರದ ... ಇಲಿಗಳು ... ಅವಕ್ಕೆ ... ಕಲಿಯುತ್ತವೆ.

ಇಲಿಗಳಲ್ಲಿ ಒಂದು ತರದ ರೇಡಿಯೊ ಸುದ್ದಿ ಪ್ರಸರಣದಂತಹ ಯಾವುದೋ ಅದೃಶ್ಯವಾದ ಮನಃಶಕ್ತಿಯಿದೆ. ಇದರ ಮೂಲಕ ಅವು ತಾವೆಲ್ಲಾದರೂ ಕಂಡ ಅಪಾಯದ ಕುರಿತು ಸುತ್ತಮುತ್ತಲಿನ ಮೂಷಿಕ ಪ್ರಪಂಚಕ್ಕೆಲ್ಲ 'ರೇಡಿಯೊ ವರದಿ'ಯನ್ನು ಕಳುಹಿಸುತ್ತವೆಂದು ತಿಳಿದುಬರುತ್ತದೆ. ಅಪಾಯಕಾರಕ, ಇಲ್ಲವೆ ವಿಷಕಾರಕ ವಸ್ತುವನ್ನು ಒಂದೇ ಒಂದು ಇಲಿಯು ಕಂಡುಕೊಂಡರೆ ಸಾಕು ನಂತರ ಬೇರಾವ ಇಲಿಯೂ ಅದರ ಹತ್ತಿರ ಸುಳಿಯಲಾರದು.

ಎಮ್ಮೆ ಹಂದಿಗಳಂತೆ ಇಲಿಗಳು ಕೊಳೆಯನ್ನು ನೆಚ್ಚುತ್ತವೆ. ಸ್ನಾನವೆಂದರೆ ಅವಕ್ಕೆ ತುಂಬಾ ಅಹಿತ. ಆದುದರಿಂದಲೇ ಅವು ಸರ್ವಸಾಧಾರಣವಾಗಿ ದುರ್ಗಂಧಿಯವೂ, ಪರಚಿಗೊಂಡ ಘಾಯವ್ರಣಗಳಿಂದ ಕೂಡಿದವುಗಳೂ ಮತ್ತು ನುಸಿ ಹೇನುಗಳಿಂದ ಮುಚ್ಚಿದವೂ ಆಗಿರುತ್ತವೆ.

ಆಹಾರ ಸ್ವಭಾವ

ಹೊಟ್ಟೆ ಹಸಿವಿನ ಆಪತ್ಕಾಲದಲ್ಲಿ ಇಲಿಗಳು ತಮ್ಮ ಮರಿಗಳನ್ನೇ ತಿಂದುಬಿಡುವುದುಂಟು. ಗೂಡಿನಲ್ಲಿ ಬಿದ್ದವುಗಳು ಒಂದನ್ನೊಂದು ಭಕ್ಷಿಸುವುದೂ ಇದೆ. ಆದರೆ ಸಾಕಷ್ಟು ಆಹಾರವಿದ್ದರೆ ಯಾವೊಂದು ಉಪಾಯದಿಂದಲಾದರೂ ಆ ಶುಭವರ್ತಮಾನವನ್ನು ತಮ್ಮ ಬಳಗಕ್ಕೆ ತಿಳಿಸುವ ಉದಾರತ್ವ ಅವರಲ್ಲಿದೆ. ಆದರ್ಶದ ಸೌಹಾರ್ದದಿಂದಲೂ ತಿನಸಿನ ಪಾಲುಮಾಡಿಕೊಳ್ಳುವವು. ಆಪತ್ಕಾಲಕ್ಕೆಂದು ಇಲಿಗಳು ... ಆಹಾರ ಸಂಗ್ರಹಿಸಿಡುವುದಿಲ್ಲ. ತಮ್ಮ ಭವಿಷ್ಯಕ್ಕಾಗಿ ಅವು ತಮ್ಮ ಸಹವಾಸಿಯಾದ ಮಾನವನ ಮೇಲೆ ದೃಢ ವಿಶ್ವಾಸವುಳ್ಳವುಗಳಾಗಿರುತ್ತವೆ.

ನಂತರ ... ಮೂಷಿಕಗಳನ್ನು ನಾಶಮಾಡುವ ಉದ್ದೇಶದಿಂದ ... ಆದರೆ ಅವನು ... ಮನುಷ್ಯ ಮಾತ್ರರಿಗೆ ಸಾಧ್ಯವಿಲ್ಲ. ಮನುಷ್ಯನ ... ಭೌತಿಕ ಸಂಸ್ಕೃತಿ ... ಪ್ರಯೋಜನ ... ವಿಷದ ವರ್ತಮಾನ ... ಪ್ರಸಾರವಾಗುತ್ತದೆ ... ಅವು ... ಮನುಷ್ಯನ ಆಹಾರಸಂಗ್ರಹವನ್ನು ... ಇಳಿದುಬರುತ್ತವೆ.

ಮಾನವಕೋಟಿಯು ನಾಶವಾದ ಮೇಲೂ ಇಲಿಗಳು ನಾಶಹೊಂದಲಾರವೆಂದು ನಂಬಲು ಆಧಾರಗಳಿವೆ. ಜಗತ್ತಿನಲ್ಲಿ ಅನೇಕ ಪ್ರಾಣಿವರ್ಗಗಳು ಬದಲಾಗುವ ಪರಿಸ್ಥಿತಿಗಳಿಗೆ ಹೊಂದಿಕೊಂಡಿರುವ ಶಕ್ತಿಯಿಲ್ಲದೆ ನಿರ್ನಾಮವಾಗಿವೆ. ಮಾನವನಾದರೋ ಒಂದು ಮಟ್ಟಿಗೆ ಪರಿಸ್ಥಿತಿಗನುಸಾರ ಜೀವಿಸಬಲ್ಲನಾದರೂ ಅವನ ಮಿದುಳು ಶೀಘ್ರತೆಯಿಂದವನೊಂದು ದಿನ ವಿನಾಶಕ್ಕೊಳಗಾಗುವನು. ಇಂತಹ ಪರಿಸ್ಥಿತಿ ಸಂಭವಿಸಿದ್ದೇ ಆದರೆ ಇಲಿಗಳು ಅವನ ಸ್ಥಾನವನ್ನಾಕ್ರಮಿಸುವುದು ಖಂಡಿತ. ಮೂಷಿಕಗಳು ಭೂಮಿಯ ಮಾಲಿಕತ್ವವನ್ನು ವಹಿಸಿ ಇತರ ಎಲ್ಲಾ ಪ್ರಾಣಿವರ್ಗಗಳ ಮೇಲೂ ಒಡೆತನ ಮಾಡುವವು.



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆ ದಿವಸನುಸರಿಸಿ ದಗಿಸುತ್ತದೆ. ಚರ್ಮ ಸ್ವಚ್ಛವನ್ನಿ ರಿಬೆಗ್ಗಳಿಸುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಸ್ವದೇಶಾಭಿಮಾನಿ

ತಾರೀಕು 7—5—1948

ಭಾರತ ಬ್ರಿಟನುಗಳ ಸಂಬಂಧ

ಬ್ರಿಟಿಷ್ ಕಾಮನ್‌ವೆಲ್ತದ ಡೊಮಿನೀಯನ್ ಆಗಿ ಈಗ ಭಾರತ ಹಾಗೂ ಪಾಕಿಸ್ಥಾನ ರಾಷ್ಟ್ರಗಳು ಇರುತ್ತವೆಯಷ್ಟೆ. ಈ ಸಂಬಂಧವನ್ನು ಇಟ್ಟುಕೊಳ್ಳುವ ಅಥವಾ ಬಿಟ್ಟುಕೊಡುವ ಹಕ್ಕು ಆಯಾ ರಾಷ್ಟ್ರಗಳಿಗೆ ಸೇರಿರುತ್ತದೆ. ಭಾರತದ ಭಾವೀ ರಾಜ್ಯ ಘಟನೆಯನ್ನು ರೂಪಿಸುತ್ತಿರುವ ಘಟನಾ ಸಮಿತಿಯೇ ಈ ಪ್ರಶ್ನೆಯನ್ನು ಸದ್ಯದಲ್ಲಿಯೇ ತೀರ್ಮಾನಿಸಲಿಕ್ಕಿದೆ.

ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಕಾಂಗ್ರೆಸಿನ ಘಟನೆಯ ಕುರಿತು ಪರಿಶೀಲಿಸುವಾಗ ಹಿಂದುಸ್ಥಾನ ಒಂದು ರಿಪಬ್ಲಿಕ್ ಎಂಬ ಶಬ್ದವನ್ನೆ ಇಟ್ಟುಕೊಳ್ಳಲಾಯಿತು. ರಿಪಬ್ಲಿಕ್ ಎಂದರೆ ಅದರಲ್ಲಿ ರಾಜನೊಬ್ಬನೆಂಬುದಿರಿಂದ ಹಾಗೂ ಬ್ರಿಟಿಷ್ ಕಾಮನ್‌ವೆಲ್ತಿಗೆ ರಾಜನಿರುವುದರಿಂದ ಇದರ ಅಭಿಪ್ರಾಯ ಭಾರತವು ಬ್ರಿಟಿಷ್ ಡೊಮಿನಿಯನ್ ಆಗಿ ಮುಂದರಿಯುವುದು ಬೇಡವೆಂದೇ ಆಗುತ್ತದೆಂಬ ಭಾವವನ್ನು ಹೇಳಲಾಯಿತು. ಪಂಡಿತ ಜವಾಹರಲಾಲರು ಹೀಗೆ ತಿಳಿಯಬಾರದೆಂದೂ ಈ ಪ್ರಶ್ನೆಯ ತೀರ್ಮಾನ ಮಾಡುವ ಸಂಸ್ಥೆ ಘಟನಾ ಸಮಿತಿಯೆಂದೂ ಸ್ಪಷ್ಟಪಡಿಸಿದರು. ಅಂದರೆ ರಿಪಬ್ಲಿಕ್ ಎಂಬ ಪದವನ್ನು ಇಟ್ಟುಕೊಂಡ ಮಾತ್ರಕ್ಕೆ ಈ ಪ್ರಶ್ನೆಯು ತೀರ್ಮಾನವಾಗಿಲ್ಲ. ಅದು ಮುಂದೆ ಘಟನಾ ಸಮಿತಿಯೇ ಮಾಡಲಿಕ್ಕಿದೆಯಲ್ಲದೆ ಅದನ್ನು ಕಾಂಗ್ರೆಸ್ ಕಮಿಟಿಯು ಪರಿಶೀಲಿಸ ಹೋಗುವುದಿಲ್ಲವೆಂಬುದನ್ನು ಜವಾಹರಲಾಲರು ಒತ್ತಿಹೇಳಿದರು.

ಘಟನಾ ಸಮಿತಿಯಲ್ಲಿ 'ರಿಪಬ್ಲಿಕ್' ಎಂಬ ಶಬ್ದದ ಬದಲು 'ಸ್ಟೇಟ್' ಎಂಬ ಪದವನ್ನು ಇಡಬೇಕೆಂದು ಡಾ। ಅಂಬೇಡ್ಕರರು ಒಂದು ತಿದ್ದುಪಡಿ ಸೂಚನೆ ಮುಂದೆ ತಂದಿದ್ದಾರೆ. ಬ್ರಿಟಿಷ್ ರಾಜರಿಂದ ಆಳಲ್ಪಡುತ್ತಿರುವ ಕಾಮನ್‌ವೆಲ್ತಿಗೆ ಸೇರಿ ಇರಲು ಇದು ಅಗತ್ಯವೆಂದು ಇವರು ಕಾನೂನು ದೃಷ್ಟಿಯಿಂದ ವಿವರಿಸಿದ್ದಾರೆ.

ಶ್ರೀ ಎಂ. ಆರ್. ಜಯಕರ್ ಮತ್ತು ಜಗತ್ ಪ್ರಸಾದರು ಜೊತೆಯಾಗಿ ಒಂದು ಹೇಳಿಕೆಯನ್ನು ಪ್ರಕಟಪಡಿಸಿ ಅದರಲ್ಲಿ ಭಾರತವು ಬ್ರಿಟಿಷ್ ಡೊಮಿನಿಯನ್ ಆಗಿಯೇ ಮುಂದರಿಸುವುದು ಏಕೆ ಅಗತ್ಯವೆಂಬ ತಮ್ಮ ಅಭಿಪ್ರಾಯವನ್ನು ವಿವರಿಸಿದ್ದಾರೆ.

ಬ್ರಿಟಿಷ್ ಡೊಮಿನಿಯನ್ ಆದ ಮಾತ್ರ ಮಾತ್ರಕ್ಕೆ ಬ್ರಿಟನು ಮುಂದೆ ಕಟ್ಟಿಕೊಳ್ಳಬಹುದಾದ ಯುದ್ಧದಲ್ಲಿ ನಾವು ಸೇರಲೇಬೇಕೆಂದಿಲ್ಲ. ದ್ವಿತೀಯ ಮಹಾಯುದ್ಧದಲ್ಲಿ ಸೇರಬೇಕೊ ಬೇಡವೊ ಎಂಬ ಪ್ರಶ್ನೆಯನ್ನು ದಕ್ಷಿಣ ಆಫ್ರಿಕ ಡೊಮಿನಿಯನ್ ಪಾರ್ಲಿಮೆಂಟು ಚರ್ಚಿಸಿ ಬಹಳ ಸ್ವಲ್ಪ ಬಹುಮತದಿಂದ ಸೇರಲು ನಿರ್ಣಯ ಮಾಡಿತ್ತು. ಐರಿಷ್ ಸ್ಟೇಟಿನವರು ಆ ಯುದ್ಧದಲ್ಲಿ ಕೊನೆಯ ತನಕ ತಾಟಸ್ಥ್ಯವನ್ನೇ ವಹಿಸಿದ್ದರು. ಅಂದ ಮೇಲೆ ಡೊಮಿನಿಯನ್ ಎಂಬ ಮಾತ್ರಕ್ಕೆ ಬ್ರಿಟನಿನ ಯುದ್ಧದಲ್ಲಿ ಸೇರಲೇಬೇಕೆಂಬ ನಿಯಮವೇನೂ ಇಲ್ಲವೆಂಬುದು ಸ್ಪಷ್ಟ. ಜಯಕರರ ಈ ವಿವರಣೆ ಸರಿಯೆಂಬುದಕ್ಕೆ ಸಂಶಯವಿಲ್ಲ.

ಪಾಕಿಸ್ಥಾನ ಮತ್ತು ಹಿಂದುಸ್ಥಾನಗಳೊಳಗಿನ ಸಂಬಂಧದ ದೃಷ್ಟಿಯಿಂದ ನಾವು ಡೊಮಿನಿಯನ್ ಆಗಿ ಮುಂದರಿಸುವುದೇ ಅಗತ್ಯವೆಂದು ಇವರು ಹೇಳುತ್ತಾರೆ. ಅಂದರೆ ನಾವು ಕಾಮನ್‌ವೆಲ್ತಿನೊಳಗಿಂದ ಬೇರೆ ಹೋಗಲು ನಿರ್ಣಯ ಮಾಡಿದರೆ ಪಾಕಿಸ್ಥಾನವು ಡೊಮಿನಿಯನ್ ಆಗಿಯೇ ಉಳಿಯಲು ನಿರ್ಣಯ ಮಾಡುವ ಸಂಭವವೇ ಹೆಚ್ಚು. ಆಗ ಬ್ರಿಟನು ಮತ್ತು ಅಮೇರಿಕ ರಾಷ್ಟ್ರಗಳು ನಮಗಿಂತ ಪಾಕಿಸ್ಥಾನಕ್ಕೆ ಹೆಚ್ಚಿನ ಬೆಂಬಲ ಕೊಡುವುದೇ ಸಹಜವಾದೀತು. ಇದರಿಂದ ನಮ್ಮ ರಾಷ್ಟ್ರಕ್ಕೆ ತೊಂದರೆಯಾದೀತು. ಎಂಬ ಅಭಿಪ್ರಾಯವನ್ನು ಜಯಕರರು ಮುಂದಿಟ್ಟಿದ್ದಾರೆ. ಇದರಲ್ಲಿ ತುಂಬಾ ಸತ್ಯಾಂಶವಿದೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಬ್ರಿಟನಿನ ಸಂಬಂಧ ಬಿಡಲು ನಾವು ನಿರ್ಧರಿಸಿದರೆ ನಾವು ರಷ್ಯಾದ ಪಕ್ಷಕ್ಕೆ ಒಲಿದಿದ್ದೇವೆ ಎಂಬ ಅಭಿಪ್ರಾಯ ಬ್ರಿಟನು ಅಮೇರಿಕಗಳಲ್ಲಿ ಪ್ರಚಾರವಾಗುವ ಸಂಭವವಿದೆಯೆಂಬ ಮಾತು ನಿಜವಿರುತ್ತದೆ.

ಆದರೆ ನಾವು ಕಾಮನ್‌ವೆಲ್ತಿನ ಒಳಗೆ ಇದ್ದರೂ ನಮಗಿಂತ ಪಾಕಿಸ್ಥಾನಕ್ಕೆ ಬ್ರಿಟನು ಅಮೇರಿಕಗಳು ಹೆಚ್ಚಿನ ಬೆಂಬಲ ಕೊಡಬಾರದೆಂದಿಲ್ಲ. ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಕಾಶ್ಮೀರ ಪ್ರಶ್ನೆ ಪರಿಶೀಲಿಸಲ್ಪಡುವಾಗ ಈ ರಾಷ್ಟ್ರಗಳು ಹೇಗೆ ವರ್ತಿಸಿರುತ್ತವೆಂಬುದನ್ನು ನಾವು ನೋಡಿದ್ದೇವೆ. ಮಾತ್ರವಲ್ಲ ಬ್ರಿಟಿಷ್ ಡೊಮಿನಿಯನ್ ಅಲ್ಲವೆಂಬ ಮಾತ್ರಕ್ಕೆ ರಷ್ಯಾದ ಪಂಗಡ ಕಟ್ಟಿಕೊಂಡಂತಾಗುವುದೆಂಬುದನ್ನು ಅಪಪ್ರಚಾರದಿಂದ ಮಾತ್ರ ಸಾಧಿಸಬಹುದಲ್ಲದೆ ಅದು ವಸ್ತುಸ್ಥಿತಿ ಎನ್ನುವಂತಿಲ್ಲ. ಆದುದರಿಂದ ಡೊಮಿನಿಯನ್ ಆಗಿಯೇ ಮುಂದರಿಸಬೇಕೆಂಬ ಬಗ್ಗೆ ಇವರು ಮುಂದಿರಿಸಿದ ಕಾರಣಗಳು ಪೂರ್ಣ ಸಮಂಜಸವೆನ್ನುವಂತಿಲ್ಲ.

ಡೊಮಿನಿಯನ್ ಪದವಿಯನ್ನು ತ್ಯಜಿಸಿದರೂ ಬ್ರಿಟನಿನೊಡನೆ ನಾವು ಸ್ನೇಹವನ್ನು ಬೆಳೆಸಿ ಇರಲು ಅಸಾಧ್ಯವೇನೂ ಇಲ್ಲ. ಅಂದ ಮೇಲೆ ಈ ಪ್ರಶ್ನೆಯನ್ನು ಹೇಗೆ ತೀರ್ಮಾನಿಸಬೇಕು?

ಬ್ರಿಟಿಷ್ ಕಾಮನ್‌ವೆಲ್ತಿನ ಒಳಗೆ ಇರುವುದರಿಂದ ಇದಕ್ಕೆ ಸೇರಿದ ಎಲ್ಲ ಡೊಮಿನಿಯನುಗಳೊಡನೆ ಸ್ನೇಹ ಸಂಬಂಧ ಹೆಚ್ಚಿಸಿಕೊಂಡಂತಾಗುತ್ತದೆಯೆಂಬ ಮಾತಾದರೂ ಪೂರ್ಣ ಸತ್ಯವಲ್ಲ. ದಕ್ಷಿಣ ಆಫ್ರಿಕ ಮೊದಲಾದ ಕಡೆಗಳಲ್ಲಿ ಭಾರತೀಯರನ್ನು ಈಗಲೂ ಯಾವ ರೀತಿ ನಡೆಸುತ್ತಿದ್ದಾರೆಂಬುದು ನಮಗೆ ಗೊತ್ತಿದೆ. ಬ್ರಿಟನಿನ ಸಂಬಂಧ ಕಡಿದರೆ ಈ ಬೇರೆ ಡೊಮಿನಿಯನುಗಳಲ್ಲಿ

ಟೀಕೆ-ಟಿಪ್ಪಣಿಗಳು

ಡಾ। ಅಂಬೇಡ್ಕರರ ಮೂರನೆ ಪಂಗಡ.

ಕೇಂದ್ರ ಸರಕಾರದಲ್ಲಿ ಮಂತ್ರಿ ಪದವಿಯಲ್ಲಿರುವ ಡಾ। ಅಂಬೇಡ್ಕರರು ಹರಿಜನರು ಕಾಂಗ್ರೆಸಿಗೆ ಸೇರುವುದರಿಂದ ಫಲವಿಲ್ಲವೆಂದೂ ಇವರು ತಮ್ಮದೇ ಒಂದು ಪಂಗಡವನ್ನು ರಚಿಸಿಕೊಳ್ಳಬೇಕೆಂದೂ ಸಾರಿದ್ದಾರೆ. ಕಾಂಗ್ರೆಸಿಗರು ಮತ್ತು ಇವರ ವಿರುದ್ಧ ಪಂಗಡಗಳು ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸುವವರಿದ್ದಾರೆ. ಇತ್ತಂಡಗಳಿಗೆ ಹೆಚ್ಚು ಕಡಮೆ ಸಮಾನ ಬೆಂಬಲ ದೊರೆತಲ್ಲಿ ಮೂರನೆ ಪಂಗಡವಾಗಿ ನಿಲ್ಲುವ ಹರಿಜನರ ಬೆಂಬಲಕ್ಕಾಗಿ ಇತ್ತಂಡಗಳೂ ಕೈನೀಡುವ ಪ್ರಸಂಗ ಬರಬಹುದು. ಆಗ ನಮಗೆ ಬೇಕಾದುದನ್ನೆಲ್ಲ ಸಾಧಿಸಲು ಹೆಚ್ಚಿನ ಅನುಕೂಲತೆ ಸಿಕ್ಕುತ್ತದೆ. ಕಾಂಗ್ರೆಸಿಗೇನೆ ಸೇರಿಕೊಂಡರೆ ನಮ್ಮನ್ನು ಯಾರು ಕೇಳುತ್ತಾರೆ ಎಂಬುದಾಗಿ ಇವರು ತರ್ಕಿಸಿದ್ದಾರೆ.

ಈಗಿನ ಕೇಂದ್ರ ಸರಕಾರದಲ್ಲಿ ಕಾಂಗ್ರೆಸೇ ಪ್ರಧಾನವಿದ್ದರೂ ಅದು ಕೇವಲ ಕಾಂಗ್ರೆಸಿಗರಿಂದ ಮಾತ್ರ ನಡೆಸಲ್ಪಡುವ ಸರಕಾರವಿರದೆ ರಾಷ್ಟ್ರೀಯ ಸರಕಾರವೆಂಬುದರಿಂದ ಡಾ। ಅಂಬೇಡ್ಕರರಿಗೆ ಅದರಲ್ಲಿ ಸ್ಥಾನ ಕೊಡಲಾಗಿದೆ. ಕಾಂಗ್ರೆಸ್ ವಿರುದ್ಧ ಅಭಿಪ್ರಾಯ ಅವರು ಪ್ರಕಟಿಸಿದ್ದೇ ಸರಿಯಲ್ಲ ಎಂಬ ವಾದವು ಸರಿಯಾದ್ದಲ್ಲ. ಅವರ ಸ್ವತಂತ್ರ ಅಭಿಪ್ರಾಯಗಳನ್ನು ಹೇಳಲು ಅವರಿಗೆ ಪೂರ್ಣ ಹಕ್ಕಿರುತ್ತದೆ.

ಭಾರತೀಯರ ಪರಿಸ್ಥಿತಿ ಇನ್ನಷ್ಟು ಕೆಡಬಹುದೆಂದು ಜಯಕರರು ಹೇಳುತ್ತಾರೆ. ಇವರ ಈ ಹೇಳಿಕೆಯಲ್ಲಿ ಸ್ವಲ್ಪ ಸತ್ಯಾಂಶವಿದ್ದರೂ ಹಾಗಾಗಲೇಬೇಕೆಂದಿಲ್ಲವೆಂದೂ ಹೇಳಬೇಕು.

ಬ್ರಿಟನು ಮತ್ತು ಅಮೇರಿಕಾ ಹಾಗೂ ರಷ್ಯಾದ ಮುಂದಾಳ್ತನಗಳಲ್ಲಿ ಜಗತ್ತಿನ ರಾಷ್ಟ್ರಗಳು ಇಬ್ಭಾಗವಾಗಿ ಮೂರನೆ ಮಹಾಯುದ್ಧದ ಸಿದ್ಧತೆ ಭರದಿಂದ ಸಾಗುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ನಾವು ಇತ್ತಂಡಕ್ಕೂ ಸೇರದೆ ಪ್ರತ್ಯೇಕ ನಿಲ್ಲುವುದೇ ನಮ್ಮ ಧೋರಣೆ ಎಂದು ಪಂಡಿತ ಜವಾಹರಲಾಲರು ಹಲವು ಬಾರಿ ಸಾರಿರುತ್ತಾರೆ. ಕಾಮನ್‌ವೆಲ್ತದೊಳಗಿದ್ದರೂ ಯುದ್ಧದಲ್ಲಿ ತಾಟಸ್ಥ್ಯ ವಹಿಸುವುದು ಸಾಧ್ಯವೆಂಬುದು ನಿಜವಾದರೂ ನಮ್ಮ ಧೋರಣೆ ಅತ್ಯಂತ ಸ್ಪಷ್ಟಪಡಿಸಲು ನಾವು ಕಾಮನ್‌ವೆಲ್ತಿನಿಂದ ದೂರ ಸರಿದು ನಿಲ್ಲುವುದೇ ಯೋಗ್ಯವೆಂದು ತೋರುತ್ತದೆ. ಹೀಗೆ ನಾವು ಪ್ರತ್ಯೇಕ ರಾಷ್ಟ್ರವಾಗುವುದರಿಂದ ಏಷ್ಯಾದೇಶದ ಇತರ ರಾಷ್ಟ್ರಗಳ ಪಂಗಡವನ್ನು ರಚಿಸಿಕೊಂಡು ಭಾವೀ ಯುದ್ಧವನ್ನು ತಡೆಗಟ್ಟಲು ಮಾಡಬಹುದಾದ ಸಾಹಸಕ್ಕೆ ಹೆಚ್ಚಿನ ಅನುಕೂಲತೆ ದೊರೆಯಬಹುದೆಂದೂ ಕಾಣುತ್ತದೆ.

ಘಟನಾ ಸಮಿತಿಯು ಈ ಪ್ರಶ್ನೆಯನ್ನು ಹೇಗೆ ತೀರ್ಮಾನಿಸುವುದೆಂದು ನೋಡಬೇಕಾಗಿದೆ.

ಅಂದಮಾತ್ರಕ್ಕೆ ಅವರು ಹೇಳಿದ ಅಭಿಪ್ರಾಯ ಸರಿಯೆಂದಾಗುವುದಿಲ್ಲ. ಜಾತೀಯತೆಯ ಪಂಗಡ ಕಟ್ಟಿಕೊಳ್ಳಲು ಎಲ್ಲರಿಗಿಂತ ಹರಿಜನರಿಗೆ ಹೆಚ್ಚಿನ ನ್ಯಾಯವಿದೆಯೆಂಬುದು ನಿಜವಾದರೂ ಅದನ್ನು ಸಂಪೂರ್ಣವಾಗಿ ಬಿಟ್ಟುಕೊಡುವುದೇ ನ್ಯಾಯವಾದ ದಾರಿಯೆನ್ನಲೇ ಬೇಕು. ಹರಿಜನರು ಈಗಿನ ಪರಿಸ್ಥಿತಿಯಲ್ಲಿಯೇ ಉಳಿಯುವಂತಿಲ್ಲವೆಂಬುದರಿಂದ ಈಗ ಜಾತೀಯತೆಯ ಬೀಜ ಬಿತ್ತಿದರೆ ಮುಂದೆ ಅದು ವಿಷದ ಫಲವನ್ನೇ ಕೊಡುವ ಸಂಭವವಿರುತ್ತದೆ.

ಮಾತ್ರವಲ್ಲ ಹರಿಜನರು ಕಾಂಗ್ರೆಸಿಗೆ ಸೇರಿ ಫಲವಿಲ್ಲವೆಂಬ ಮಾತೂ ಸರಿಯಲ್ಲ. ಕಾಂಗ್ರೆಸು ಹರಿಜನರ ಉನ್ನತಿಗಾಗಿ ಪೂರ್ಣ ಯತ್ನಿಸುವ ಸಂಸ್ಥೆ ಆದುದರಿಂದಲೇ ಇಂದು ಕಾಂಗ್ರೆಸ್ ಪ್ರಧಾನ ಸರಕಾರದಲ್ಲಿ ಡಾ। ಅಂಬೇಡ್ಕರರಿಗೆ ಸ್ಥಾನಕೊಡಲಾಗಿದೆ. ಹರಿಜನರು ಕಾಂಗ್ರೆಸಿಗೆ ಸೇರುವುದೇ ಸರ್ವ ದೃಷ್ಟಿಯಿಂದಲೂ ಶ್ರೇಯಸ್ಕರವಿರುತ್ತದೆ.

ಹೈದರಾಬಾದಿನೊಡನೆ ಯುದ್ಧವೆ?

ಕಾಶ್ಮೀರದ ಪ್ರಶ್ನೆ ಭದ್ರತಾಸಮಿತಿಯ ಮೂಲಕ ತೀರ್ಮಾನವಾಗಲಿಲ್ಲ. ಅಲ್ಲಿ ಈಗ ನಡೆಯುತ್ತಿರುವ ಯುದ್ಧವನ್ನು ಇನ್ನೂ ಬಲವತ್ತರವಾಗಿ ಮುಂದರಿಸುವುದೊಂದೇ ದಾರಿ ಉಳಿದಿರುತ್ತದೆ. ಹೈದರಾಬಾದಿನಲ್ಲಿಯೂ ರಾಜಿಯಿಂದ ಪ್ರಶ್ನೆ ತೀರ್ಮಾನವಾಗುವ ಲಕ್ಷಣಗಳು ಕಂಡುಬರುವುದಿಲ್ಲ. ಇಲ್ಲಿಯೂ ಭಾರತ ಸರಕಾರವು ಯುದ್ಧ ಹೂಡಬೇಕಾದ ಪ್ರಸಂಗ ಒದಗಲಿದೆಯೆ? ಈಗಿನ ಪರಿಸ್ಥಿತಿ ಪರಿಶೀಲಿಸುವಾಗ ಇದೂ ಅನಿವಾರ್ಯವಾಗಬಹುದೆಂದೇ ಕಾಣುತ್ತದೆ.

ನೈಜಾಮ ಸರಕಾರವು ಈಗಿನ ಪರಿಸ್ಥಿತಿಯನ್ನು ಪೂರ್ಣ ತಿಳಿದುಕೊಂಡಂತೆ ಕಾಣುವುದಿಲ್ಲ. ಜವಾಬ್ದಾರಿ ಸರಕಾರ ಕೊಡುವ ಬದಲು ಅವರು ಒಂದು ಒಂದು ಸುಧಾರಣೆಯ ಆಟಕಟ್ಟಿಕೊಂಡಿದ್ದಾರೆ. ಇದು ನಿಷ್ಫಲವೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಜೊತೆಯಲ್ಲಿ ಇತ್ತೆಹಾದ ಉಪಟಳ ಕಡಿಮೆಯಾಗುವ ಬದಲು ಹೆಚ್ಚುತ್ತಿದೆ. ಇದನ್ನು ಕಡೆಗಟ್ಟುವ ಯಾವ ಪ್ರಯತ್ನವೂ ಕಂಡುಬರುವುದಿಲ್ಲ. ಇದೆಲ್ಲ ದಕ್ಕೀತೆಂದು ನೈಜಾಮ ಸರಕಾರ ಭಾವಿಸಿದಂತಿದೆ. ಈ ಬಗೆಯ ವರ್ತನಕ್ಕೆ ಪಾಕಿಸ್ಥಾನದ ಬೆಂಬಲವಿದೆಯೆಂಬುದಂತೂ ಸ್ಪಷ್ಟವಿರುತ್ತದೆ.

ಭಾರತ ಸರಕಾರವು ಸಾಕಷ್ಟು ಬಲಿಷ್ಟವಿರುತ್ತದೆಂಬದನ್ನು ನೈಜಾಮ ಸರಕಾರ ತಿಳಿದುಕೊಂಡಿಲ್ಲ ಮಾತ್ರವಲ್ಲ ಯುದ್ಧದ ಪ್ರಸಂಗದಲ್ಲಿ ಪಾಕಿಸ್ಥಾನವು ನೈಜಾಮ ಸರಕಾರಕ್ಕೆ ಬಹಳ ಹೆಚ್ಚಿನ ಸಹಾಯ ಮಾಡುವುದಾದರೂ ಅಸಾಧ್ಯವೆಂಬುದು ಅವರಿಗಿನ್ನೂ ಸ್ಪಷ್ಟವಾಗಿಲ್ಲ.

ಅಂತೂ ಹಿಂದುಸ್ಥಾನ ಸರಕಾರದವರು ಈ ಪ್ರಶ್ನೆಯನ್ನು ಬಹಳ ಉದ್ದ ಎಳೆದುಕೊಂಡೇ ಇರುವುದು ಸಾಧ್ಯವಿಲ್ಲದ ಮಾತೆಂಬುದನ್ನು ನೈಜಾಮ ಸರಕಾರ ತಿಳಿದುಕೊಳ್ಳುವುದು ಶ್ರೇಯಸ್ಕರ.

ಹೆಚ್ಚಿನ ತರಕಾರೀ ಬೆಳೆಸುವ ಅವಶ್ಯಕತೆ.

ದಕ್ಷಿಣಕನ್ನಡ ಜಿಲ್ಲಾ ಅಭಿವೃದ್ಧಿ ಸಂಘ ಮತ್ತು ಗಿಲ್ಡ ಆಫ್ ಸರ್ವೀಸ್ ಅಥವಾ

ಮೇ ತಿಂಗಳ ಮೊದಲನೆಯ ತಾರೀಕಿನ ದಿನವನ್ನು ಕೆಲಸಗಾರರ ದಿನವೆಂದು ಜಗತ್ತಿನ ಎಲ್ಲ ರಾಷ್ಟ್ರಗಳೂ ಆಚರಿಸುತ್ತವೆ. ಈ ದಿನವನ್ನು ಮಂಗಳೂರು ಕೂಡಾ ಈಗ ಕೆಲವು ವರ್ಷಗಳಿಂದ ಆಚರಿಸುತ್ತ ಬಂದಿದೆ

ಇಷ್ಟು ವರ್ಷ ಇಲ್ಲಿ ಕಮ್ಯೂನಿಸ್ಟ್ ಸಂಘಡವೇ ಕೆಲಸಗಾರರ ನಾಯಕತ್ವದಲ್ಲಿದ್ದ ಕಾರಣ ಎಲ್ಲ ಕೆಲಸಗಾರರೂ ಸೇರಿ ಈ ದಿನವನ್ನು ಬಹಳ ವಿಜ್ರಂಭಣೆಯಿಂದ ಆಚರಿಸುತ್ತಿದ್ದರು ಅಂದಿನ ಮೆರವಣಿಗೆ ಅಂದಿನ ಸಭೆ ಬಹಳ ಯಶಸ್ವಿಯಾಗುತ್ತಿದ್ದವು

ಈ ವರ್ಷ ಮೇ ದಿನಾಚರಣೆಯಲ್ಲಿ ಕಮ್ಯೂನಿಸ್ಟ್ ಮುಂದಾಳುಗಳು ಮುಂದೆ ಬರುವ ಪರಿಸ್ಥಿತಿಯಲ್ಲಿರಲಿಲ್ಲ ಈ ಸಂಘಡ ಹಿಂಸಾತ್ಮಕ ಉಪಟಳಕ್ಕೆ ಕೈಕೊಟ್ಟು ಸರಕಾರದ ವಿರೋಧ ಕಟ್ಟಿಕೊಂಡಿದೆ ಇಂಥ ಪರಿಸ್ಥಿತಿಯಲ್ಲಿ ಈ ಬಾರಿ ಕಮ್ಯೂನಿಸ್ಟ್ ಸಂಘಡದ ಕೆಲಸಗಾರರು ಎಂದಿನ ಉತ್ಸಾಹದಿಂದ ಮೇ ದಿನವನ್ನು ಆಚರಿಸಲು ಸಮರ್ಥರಾಗಲಿಲ್ಲ

ಎರಡನೆಯದಾಗಿ ಈ ಬಾರಿ ಇಲ್ಲಿ ಸಾಮ್ಯವಾದೀ ಸಂಘಡವೂ ಬೇರೂರುತ್ತಿದೆಯಷ್ಟೆ ಕೆಲಸಗಾರರಲ್ಲಿ ಒಂದಂಶ ಈ ಸಂಘಡವನ್ನು ಕಟ್ಟಿಕೊಳ್ಳುತ್ತಲಿದೆ ಇವರೂ ಮೇ ದಿನಾಚರಣೆ ಮಾಡುವವರು.

ಸೇವಾ ಸಂಘ, ಇವುಗಳ ಆಶ್ರಯದಲ್ಲಿ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಸೇರಿದ ಮಹಾಜನರ ಸಭೆಯಲ್ಲಿ ಹೆಚ್ಚಿನ ತರಕಾರೀ ಬೆಳೆಸುವುದರ ಆವಶ್ಯಕತೆ ಒತ್ತಿಹೇಳಲಾಯಿತು ಜಿಲ್ಲಾ ಕಲೆಕ್ಟರ್ ಶ್ರೀ ಎಸ್ ಆರ್ ಕೈವಾರರು ಸಭಾಧ್ಯಕ್ಷರಿದ್ದರು

ಕೃಷಿ ಇಲಾಖೆಯ ನಿವೃತ್ತ ಡಿಪ್ಯುಟಿ ಡೈರೆಕ್ಟರ್ ರಾವ್‌ಬಹದ್ದೂರ್ ಕೆ ಟಿ ಆಳ್ವರು ತರಕಾರೀ ತೋಟ ಬೆಳೆಸುವಾಗ ಜ್ಞಾಪಕದಲ್ಲಿಡಬೇಕಾದ ಹಲವು ವಿಷಯಗಳನ್ನು ಚೆನ್ನಾಗಿ ಎಲ್ಲರಿಗೂ ತಿಳಿಯುವಂತೆ ವಿವರಿಸಿದರು

ಜಿಲ್ಲಾ ಗ್ರಾಮಾಭಿವೃದ್ಧಿ ಸಂಘ ಹಾಗೂ ಸೇವಾ ಸಂಘದ ಈ ಕಾರ್ಯಕ್ರಮ ತುಂಬಾ ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ

ಮಹಾತ್ಮಾ ಗಾಂಧೀ ಸ್ಮಾರಕ ನಿಧಿ.

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಂಗ್ರಹಮಾಡಲು ಕಮಿಟಿಗಳು ವ್ಯವಸ್ಥೆಗೊಂಡುದು ಮಾತ್ರವಲ್ಲದೆ ಈ ಭಗ್ಗೆ ಈ ಜಿಲ್ಲೆಯಲ್ಲಿ ಇನ್ನೂ ಕೆಲಸವೇ ಆರಂಭವಾಗಿಲ್ಲವೆಂದು ಕಾಣುತ್ತದೆ ದೇಶದ ಎಲ್ಲಾ ಭಾಗಗಳಲ್ಲಿ ಭರದಿಂದ ನಡೆಯುತ್ತಿರುವ ಈ ಕಾರ್ಯ ನಮ್ಮಲ್ಲಿ ಮಾತ್ರ ಹೀಗೆ ಹಿಂದೆ ಬೀಳಲು ಕಾರಣವೇ ಗೊತ್ತಾಗುವುದಿಲ್ಲ.

ಈ ನಿಧಿಯ ಪ್ರಾಂತಿಕ ಕಮಿಟಿಯು ರಶೀದಿ ಪುಸ್ತಕಗಳನ್ನು ಕಳುಹಿಸಿಕೊಡಲಿಲ್ಲವೆ? ಇಲ್ಲವೆಂದಾದರೆ ಇಷ್ಟು ವಿಳಂಬವಾಗಲು ಕಾರಣವೇನಿರಬಹುದು?

ಈ ವಿಳಂಬವು ಕರ್ನಾಟಕದ ಹಾಗೂ ನಮ್ಮ ಜಿಲ್ಲೆಯ ಈಗಿನ ಸಾರ್ವಜನಿಕ ಜೀವನದ ದುಸ್ಥಿತಿಯನ್ನು ಸೂಚಿಸುತ್ತದೆನ್ನಬೇಕೆ?

ಮೇ ದಿನಾಚರಣೆಯ ಸಂದೇಶ

— ಕೆಲಸಗಾರರಲ್ಲಿ ಒಕ್ಕಟ್ಟು

ಹೀಗಾಗಿ ಕೇಂದ್ರ ಮೈದಾನಿನಲ್ಲಿ ಮೇ ದಿನದಂದು ಹತ್ತಿರ ಹತ್ತಿರ ಕೆಲಸಗಾರರ ಎರಡು ಸಭೆಗಳು ನಡೆದವು ಸಾಮ್ಯವಾದೀ ಸಂಗಡದವರ ಮೇ ದಿನಾಚರಣೆಯ ಸಭೆ ಮತ್ತು ಜೊತೆಯಲ್ಲಿ ಕಮ್ಯೂನಿಸ್ಟ್ ಸಂಗಡದ ಕೆಲಸಗಾರರ ಮೇ ದಿನಾಚರಣೆಯ ಸಭೆ ಹೀಗೆ ಎರಡು ಸಭೆಗಳು ಏಕಕಾಲದಲ್ಲಿ ನಡೆಯುತ್ತಿದ್ದವು ಎರಡು ಸಭೆಗಳಿಗೂ ಲೌಡ್ ಸ್ಪೀಕರ್ ಏರ್ಪಾಡಿತ್ತೆಂದು ಹೇಳಿದರೆ ಆ ಸಭೆಗಳ ಸ್ವಾರಸ್ಯ ಸ್ಪಷ್ಟವಾಗುತ್ತದೆ ಕಂಡವರನೇಕರು ಇದೊಂದು ಜೋಡಾಟವೆಂದು ಹೇಳಿಕೊಳ್ಳುತ್ತಿದ್ದರು

ಕಾಂಗ್ರೆಸ್ ಸಂಸ್ಥೆಯವರ ಆಶ್ರಯದಲ್ಲಿಯೂ ಈಗ ಒಂದು ಮಜೂರ ಚಳವಳ ಆರಂಭವಾಗಿದೆಯಷ್ಟೆ? ಇದೂ ಇಲ್ಲಿ ಹೆತ್ತು ಬೇರೂರಿದರೆ ಮುಂದಿನ ವರ್ಷ ನಾವು ಮೂರು ಮೇ ದಿನಾಚರಣೆಯ ಸಭೆಗಳನ್ನು ಕಾಣಬಹುದೇ ಏನೂ!

ಕೆಲಸಗಾರರು ತಮ್ಮ ಸ್ವಂತ ಹಿತಚಿಂತನೆಗಾಗಿ [illegible] ತಮ್ಮ [illegible] ಗಳನ್ನು ವ್ಯವಸ್ಥೆಗೊಳಿಸಿಕೊಳ್ಳುವ ಬದಲು ಮಜೂರ ವರ್ಗದ ರಾಜ್ಯಸ್ಥಾಪನೆಯ ಹುಚ್ಚುತನಕ್ಕೆ ಬಲಿಬಿದ್ದು ಬೇರೆ ರಾಜಕೀಯ ಸಂಗಡಗಳ ಬೆನ್ನಹಿಂದೆ ಓಡುವುದರಿಂದ ಕೆಲಸಗಾರ ವರ್ಗದ ಪರಿಸ್ಥಿತಿ [illegible] ಹಾಳಾಗುತ್ತಿದೆ ಎಂಬುದನ್ನು ಈ ಮೇ ದಿನಾಚರಣೆಯು ಅತ್ಯಂತ ಸ್ಪಷ್ಟವಾಗಿ ತೋರಿಸಿಕೊಡುತ್ತಿದೆ

ಮೇ ದಿನವು ಕೆಲಸಗಾರರ ಒಗ್ಗಟ್ಟನ್ನು ಸಾಧಿಸಿರೆಂದು ಸಂದೇಶ ಕೊಡುವ ಅತಿ ಪ್ರಾಮುಖ್ಯ ದಿನ. ಇಂಥ ದಿನದಲ್ಲಿ ಒಟ್ಟು ಸೇರುವ ಬದಲು ಕೆಲಸಗಾರರು ಇತ್ತಂಡಗಳನ್ನು ಕಟ್ಟಿಕೊಂಡು ಪರಸ್ಪರ ಸ್ಪರ್ಧೆಯಿಂದ ಈ ಬಗೆಯ ಜೋಡಾಟ ನಡೆಸುವುದು ಎಷ್ಟು ಹಾಸ್ಯಾಸ್ಪದ ಹಾಗೂ ಎಷ್ಟು ಶೋಚನೀಯವೆಂಬುದನ್ನು ಮಂಗಳೂರಿನ ಪ್ರತಿಯೊಬ್ಬ ಕೆಲಸಗಾರನೂ ತಿಳಿದುಕೊಳ್ಳಬೇಕು.

ಕಮ್ಯೂನಿಸ್ಟ ಮತ್ತು ಸಾಮ್ಯವಾದೀ ಪಕ್ಷದವರು ಮೇ ದಿನಾಚರಣೆ ಮಟ್ಟಿಗಾದರೂ ಒಟ್ಟು ಸೇರುವುದು ಸಾಧ್ಯವಿತ್ತೆ? ಎಂಬ ಪ್ರಶ್ನೆಯನ್ನು ಪರಿಶೀಲಿಸಬೇಕು ಈ ಸಮಾರಂಭಗಳ ಮುಖ್ಯ ಉದ್ದೇಶ ಪ್ರಚಾರ ಕಾರ್ಯವೆಂಬುದು ಸ್ಪಷ್ಟ ಕಮ್ಯೂನಿಸ್ಟ್ ಹಾಗೂ ಸಾಮ್ಯವಾದೀ ಸಂಗಡಗಳ ಪ್ರಚಾರ ಧ್ಯೇಯಗಳು ಪರಸ್ಪರ ವಿರೋಧವಿರುವುದರಿಂದ ಪ್ರಚಾರದ ಉದ್ದೇಶದಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ಇತ್ತಂಡದವರು ಸೇರುವುದಾದರೂ ಅಸಾಧ್ಯವೇ ಇರುತ್ತದೆ. ಒಂದು ವೇಳೆ ಸೇರಿ ನಡೆದರೆ ಮುಖ್ಯ ಉದ್ದೇಶವಾದ ಪ್ರಚಾರವನ್ನೇ ಬದಿಗೊತ್ತಬೇಕಾಗುತ್ತದೆ.

ಅಂದ ಮೇಲೆ ಕೆಲಸಗಾರರು ಒಗ್ಗಟ್ಟಿನಲ್ಲಿರುವುದು ಅಸಾಧ್ಯವೆಂದೇ ತಿಳಿಯಬೇಕೇ? ಕೆಲಸಗಾರರು ಈ ರೀತಿ ಭಿನ್ನ ಧ್ಯೇಯಗಳ ರಾಜಕೀಯ ಸಂಗಡಗಳ ಹಿಂದೆ ಹೋಗುವಲ್ಲಿ ತನಕ ಎಲ್ಲ ಕೆಲಸಗಾರರು ಒಕ್ಕಟ್ಟಿನಲ್ಲಿರುವುದು ಅಸಾಧ್ಯವೆಂದೇ ಹೇಳಬೇಕು ಯಾವುದಾದರೂ ಒಂದೇ ಸಂಗಡ ವಿಜಯಿಯಾದರೆ ಮಾತ್ರ ಇದು ಸಾಧ್ಯವಾದೀತು ಕಮ್ಯೂನಿಸ್ಟ ಸಂಗಡವು ಪೂರ್ಣ ಬಿದ್ದು ಹೋಗಿ ಸಾಮ್ಯವಾದೀ ಸಂಗಡ ಮಾತ್ರವಿರುವಂಥ ಪರಿಸ್ಥಿತಿ ಬಂದರೆ ಎಲ್ಲ ಕೆಲಸಗಾರರೂ ಸಾಮ್ಯವಾದೀ ಸಂಗಡದ ಆಶ್ರಯದಲ್ಲಿ ಒಟ್ಟು ಸೇರಬಹುದು

ಮೊನ್ನೆ ಸಾಮ್ಯವಾದೀ ಸಂಗಡದವರ ಮೇ ದಿನಾಚರಣೆಯ ಸಭೆಗೆ ಸಾಮ್ಯವಾದೀ ಮುಂದಾಳುಗಳಾದ ಶ್ರೀಮತೀ ಕಮಲಾದೇವಿಯವರೇ ಅಧ್ಯಕ್ಷಸ್ಥಾನ ವಹಿಸಿದ್ದರು. ಆದ ಕಾರಣವೇ ಎರಡು ಸಭೆಗಳೊಳಗೆ ಇವರ ಸಭೆಯೇ ಬಲವಾಗಿದ್ದಿತು. ಅಧ್ಯಕ್ಷಸ್ಥಾನದಿಂದ ಶ್ರೀಮತಿಯವರು ಸಹಜವಾಗಿ ಕೆಲಸಗಾರರ ಒಗಟ್ಟಿನ ಮೇ ದಿನದ ಸಂದೇಶವನ್ನು ಸಾರಿದರು. ಎಲ್ಲ ಕೆಲಸಗಾರರೂ ಸಾಮ್ಯವಾದೀ ಪಕ್ಷವನ್ನೇ ಕಟ್ಟಿಕೊಂಡು ಒಗಟ್ಟಿನಲ್ಲಿ ದುಡಿಯಬೇಕೆಂಬುದೇ ಇವರ ಅಭಿಪ್ರಾಯವೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ ಕಮ್ಯೂನಿಸ್ಟ್ ಸಂಗಡದ ಕೆಲಸಗಾರರು ಇದಕ್ಕೆ ಒಪ್ಪುವರೆ?

ಕೆಲಸಗಾರರು ಒಗಟ್ಟಿನಲ್ಲಿರಬೇಕಾದರೆ ಅದಕ್ಕೆ [illegible] ಒಂದೇ ಇರುತ್ತದೆ ಕೆಲಸಗಾರರು ಈ ಬೆನ್ನ ರಾಜಕೀಯ ಸಂಗಡಗಳನ್ನೆಲ್ಲ [illegible] ಬೇಕು. ಕೆಲಸಗಾರರ ಶ್ರೇಯಸ್ಸು ತಮ್ಮ ಧ್ಯೇಯವೆಂದಿಟ್ಟುಕೊಂಡು ಅದರ ಸ್ಥಿತಿ ಸುಧಾರಿಸಲು [illegible] ಮಜೂರ ಯೂನಿಯನುಗಳು [illegible] ಮಜೂರರ ಹಿತಸಾಧನೆ ಮಾತ್ರವನ್ನು ಎಲ್ಲ ಕೆಲಸಗಾರರೂ ಚೆನ್ನಾಗಿ ತಿಳಿದುಕೊಳ್ಳಬೇಕು [illegible] ಮಾಡಿದರೆ ಎಲ್ಲ ಕೆಲಸಗಾರರೂ ಪರಸ್ಪರ ಸಹಕರಿಸಿ ಒಗ್ಗಟ್ಟಿನಿಂದ ತಮ್ಮ ಶ್ರೇಯಸ್ಸನ್ನು ಸಾಧಿಸಬಹುದು

ಭಾರತದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರ ಪದ್ಧತಿಯೇ ಉಳಿಯುವುದು ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕುಬಾಧ್ಯತೆಗಳು ಇರುತ್ತವೆ ಮಜೂರ ವರ್ಗದವರೂ ಪ್ರಜೆಗಳೇ ಇದ್ದು ಅವರಿಗೆ ಎಲ್ಲ ಪ್ರಜೆಗಳಂತೆಯೇ ಹಕ್ಕುಬಾಧ್ಯತೆಗಳು ಸಹಜವಾಗಿ ಬರುತ್ತವೆ ಇಂಥ ಹಕ್ಕುಬಾಧ್ಯತೆಗಳನ್ನು ಉಪಯೋಗಿಸಿ ಮಜೂರ ವರ್ಗದ ಹಿತ ಸಾಧಿಸಲು ಮಜೂರರದೇ ಆದ ರಾಜಕೀಯ ಸಂಗಡ ಕಟ್ಟಿಕೊಳ್ಳುವ ಆವಶ್ಯಕತೆ ಇಲ್ಲವೆನ್ನುವುದಿಲ್ಲ.

ಮಜೂರರು ತಮ್ಮ ಹಿತದ ಕಡೆಗೇನೇ ಲಕ್ಷ್ಯಕೊಡುವ ಅಭ್ಯಾಸ ಬೆಳೆಸಿಕೊಂಡು ತಮ್ಮದೇ ರಾಜಕೀಯ ಸಂಗಡ ಮುಂದೆ ವ್ಯವಸ್ಥೆಗೊಳಿಸಬಹುದು ಈಗ ಮಜೂರರು ತಮ್ಮ ಕಾಲಮೇಲೆ ನಿಲ್ಲುವ ಅಭ್ಯಾಸ ಹೊಂದುವ ಮೊದಲೇ ಕೆಲಸಗಾರರ ರಾಜ್ಯಸ್ಥಾಪನೆ ಇತ್ಯಾದಿ ಬೋಧಿಸಿ ಮುಂದೆ ಬರುವ ರಾಜಕೀಯ ಮುಂದಾಳುಗಳು ಮಜೂರರ ಹಿತಸಾಧನೆಗಿಂತ ತಮ್ಮ ಪ್ರತಿಷ್ಠೆಯನ್ನೇ ಬೆಳೆಸಲು ಹವಣಿಸುವವರೆಂಬುದನ್ನು ಮಜೂರರು ತಿಳಿದುಕೊಳ್ಳಬೇಕು

ಈ ಬಾರಿಯ ಮೇ ದಿನವು ನಮ್ಮಲ್ಲಿಯ ಮಜೂರರಿಗೆ ಕೊಡುವ ಸಂದೇಶವು ಇಷ್ಟೆ ಇರುತ್ತದೆ ಮಜೂರ ಯೂನಿಯನುಗಳು ಮಜೂರರ ಹಿತಚಿಂತನೆ ಮಾತ್ರ ಧ್ಯೇಯವಾಗಿರಿಸಿಕೊಂಡು ಪರಸ್ಪರ ಸಹಕರಿಸಿ ಒಗ್ಗಟ್ಟಿನಲ್ಲಿ ಕಾರ್ಯ ಸಾಧಿಸುವಂತಾಗಲಿ.

ವಾರದ ವಿಜ್ಞಾನ ವರದಿ

ಕೃತಕ ಚಂದ್ರಪ್ರಕಾಶ

ರೈಲುಗಾಡಿ ಜೋಡಿಸಲು

ಪ್ರಚಂಡ ವಿದ್ಯುತ್ ಪ್ರಕಾಶದಿಂದ ಕೃತಕ ಬಿಸಿಲನ್ನುಂಟುಮಾಡುವ ವಿಧಾನವು ಈಗಾಗಲೇ ಉಪಯೋಗಕ್ಕೆ ಬಂದಿರುತ್ತದೆ ಈಗ ತಿಂಗಳ ಬೆಳಕಿನಂತೆ ತಂಪಾಗಿದ್ದು ಅದರ ಇಮ್ಮಡಿ ಪ್ರಕಾಶದಿಂದ ಶೋಭಿಸುವ ಚಂದ್ರದೀಪಗಳನ್ನು ಇಂಗ್ಲೆಂಡಿನ ರೈಲ್ವೇ ಖಾತೆಯ ವಿದ್ಯುತ್ ತಜ್ಞರು ಕಂಡುಹಿಡಿದಿದ್ದಾರೆ

ಅಮಾವಾಸ್ಯೆಯ ರಾತ್ರಿಗಳಲ್ಲಿ, ಮಂಜು ಮುಸುಕಿರುವಾಗ ಲಾಗ ಣಗಳಲ್ಲಿನ ರೈಲು ಗಾಡಿಗಳನ್ನು ಒಂದಕ್ಕೊಂದು ಜೋಡಿಸಲು ಬಹಳ ತೊಂದರೆಯಾಗುತ್ತದೆ ಸಾಮಾನ್ಯ ವಿದ್ಯುತ್ ದೀಪವು ಇ ತ [illegible] ವಾತಾವರಣದಲ್ಲಿ [illegible] ಪ್ರಯೋಜನಕಾರಿಯಾಗಿಲ್ಲವಾದ [illegible] ಈ ಚಂದ್ರದೀಪಗಳ [illegible] ವಿದ್ಯುತ್ ಪ್ರಕಾಶದವುಗಳು [illegible] 150 ಅಡಿ ಎತ್ತರದಲ್ಲಿರಿಸಲಾಗುವುದು ಇವುಗಳ ವೈಶಿಷ್ಟ್ಯವೆಂದರೆ ಇಂತಹ ಒಂದು ದೀಪದ ಪ್ರಕಾಶ ಬಿದ್ದಲ್ಲಿ ಬೇರೆ ದೀಪದ ಕಿರಣಗಳು ಹಾದುಹೋಗುವದಿಲ್ಲ ಇದರಿಂದ ಗಾಡಿಗಳ ಮೇಲಿನ [illegible] ಜೋಡಿಸುವ ಉಪಕರಣ ಮೊದಲಾದವುಗಳು [illegible] ನೋಡಬಹುದು

90 ಗಂಟೆಗಳಲ್ಲಿ ವಿಶ್ವಪ್ರದಕ್ಷಿಣೆ

ಜಗತ್ತಿನ ದೊಡ್ಡ ವಿಮಾನಗಳು

ಇಂಗ್ಲೆಂಡಿನ ಬ್ರಿಸ್ಟಲ್ ಕಂಪೆನಿ ಯವರಿಂದ ಜಗತ್ತಿನ ಅತಿ ದೊಡ್ಡ ಪ್ರಯಾಣಿಕ ವಿಮಾನಗಳು ತಯಾರಾಗುತ್ತವೆ ರೆಕ್ಕೆಯ ತುದಿಯಿಂದ ತುದಿಗೆ 220 ಅಡಿ, ಮೂಗಿನಿಂದ ಬಾಲದ ತನಕ 148 ಅಡಿ ಉದ್ದವಿರುವ ಈ ಬೃಹತ್ ಯಂತ್ರಹಕ್ಕಿ ನೂರು ಪ್ರಯಾಣಿಕರನ್ನು ಹೊತ್ತು ಒಂದೇ ನೆಗೆತಕ್ಕೆ 5500 ಮೈಲುಗಳ ತನಕ ಹಾರಬಲ್ಲುದು ಇದರಲ್ಲಿ ಪ್ರಯಾಣಿಕರ ಸೌಕರ್ಯಗಳಿಗೇ ಹೆಚ್ಚಿನ ಗಮನಕೊಡಲಾಗಿದೆ ಒರಗುವ ಆಸನಗಳು, ಉಷ್ಣಶೀತ ದಲ್ಲಿರಿಸುವ 'ಏರ್ ಕಂಡಿಶನ್' ವ್ಯವಸ್ಥೆ, ಪ್ರತ್ಯೇಕ ಊಟದ, ಫಲಾಹಾರದ ಕೊಠಡಿಗಳು ಇದರಲ್ಲಿರುತ್ತವೆ ಮಾತ್ರವಲ್ಲ ಪ್ರಯಾಣಿಕರು ಎರಡು ಮಹಡಿಗಳಲ್ಲಿ ಕುಳಿತುಕೊಳ್ಳುವರು, ಒಂದರಿಂದ ಇನ್ನೊಂದಕ್ಕೆ ಏಣಿ ಇದೆ

ಸುಮಾರು 34 ಸಾವಿರ ಅಶ್ವಶಕ್ತಿಯನ್ನುಂಟುಮಾಡುವ ಯಂತ್ರಗಳು ಇದರಲ್ಲಿ ಜೋಡಿಸಲ್ಪಟ್ಟು, ಒಂದು ವೇಳೆ ಕೆಲವು ಯಂತ್ರಗಳು ಹಾಳಾದರೂ ವಿಮಾನಕ್ಕೆ ಅಪಾಯಬಾರದಂತಹ ವಿಶೇಷ ಭದ್ರತೆಯ ಏರ್ಪಾಡುಗಳು ಇದರಲ್ಲಿರುತ್ತವೆ ಇದು ಕೇವಲ 90 ಗಂಟೆಗಳಲ್ಲಿ ಹತ್ತುಕಡೆಗಳಲ್ಲಿ ಇಳಿದು-ಜಗತ್ತಿನ ಒಂದು ಸುತ್ತು ಬರಬಲ್ಲುದು-ವೇಗ ಗಂಟೆಗೆ 350 ಮೈಲು!

ಕಮ್ಯೂನಿಸ್ಟರ ಕೈದು

ರಥಬೀದಿಯ ಕೆಳಪೇಟೆಯಲ್ಲಿರುವ ಗ್ರೇಟ್ ಇಂಡಿಯಾ ಬೀಡಿ ವರ್ಕ್ಸ್ ಇದರ ಮ್ಯಾನೇಜರು ತಮ್ಮ ಕಾರ್ಖಾನೆಯನ್ನು ಮುಚ್ಚುವದಾಗಿ ಕೆಲಸಗಾರರಿಗೆ ಅರ್ಧ ತಿಂಗಳ ನೋಟೀಸು ಕೊಟ್ಟಿದ್ದರೆಂದೂ, ಈ ಅವಧಿ ನಂತರ ಅವರು ತಮ್ಮ ಸಂಸ್ಥೆಯನ್ನು ಮುಚ್ಚಿಬಿಟ್ಟರೆಂದೂ, ಇದನ್ನು ಪ್ರತಿಭಟಿಸಲು ಬೀಡಿಕೆಲಸಗಾರರು ಸದ್ರಿ ಕಾರ್ಖಾನೆ ಮುಂದೆ ಸಂಪನ್ನು ಹೂಡಿದ್ದರೆಂದೂ ತಿಳಿದುಬರುತ್ತದೆ. ಕಳೆದ ತಾರೀಕು ೧೮ರಂದು ಈ ಕೆಲಸಗಾರರ ಉಪಟಳವು ಹೆಚ್ಚಾದುದರ ಪರಿಣಾಮವಾಗಿ ಆ ಬೀಡಿ ಕಾರ್ಖಾನೆ ಹತ್ತಿರ ಶಾಂತಿ ರಕ್ಷಣೆಗಾಗಿ ಪೋಲೀಸ್ ಉಸ್ತುವಾರಿ ಇಡಲ್ಪಟ್ಟಿತು. ಅಂದು ಸುಮಾರು ೯ ಗಂಟೆ ರಾತ್ರೆಗೆ ಡ್ಯೂಟಿ ಮೇಲೆ ಇದ್ದ ಪೋಲೀಸರ ಮೇಲೆ ಅಡಗಿನಿಂತ ಕೆಲವರು ಕಲ್ಲೆಸೆದುದರ ಪರಿಣಾಮವಾಗಿ ಓರ್ವ ಕೊನ್‌ಸ್ಟೇಬಲನಿಗೆ ಹಣೆಯ ಮೇಲೆ ತೀವ್ರ ಘಾಯವಾಯಿತು. ಈ ವರದಿ ಪೋಲೀಸ್ ಸ್ಟೇಶನಿಗೆ ತಲಪಲು ಪೋಲೀಸ್ ಪೇಡೆ ಬಂದು ಲಘು ಲಾಠಿಚಾರ್ಜು ಮಾಡುವುದರ ಮೂಲಕ ಕೆಲಸಗಾರರನ್ನು ಚದರಿಸಿದರು. ಈ ಸಂಬಂಧ ಅಂದು ಏಳು ಮಂದಿ ಕಮ್ಯೂನಿಸ್ಟರ ಕೈದುಆಗಿದೆಯೆಂದೂ, ಕೆಲವರಿಗೆ ಅಲ್ಪ ಸ್ವಲ್ಪ ಘಾಯಗಳಾಗಿ ಆಸತ್ರೆ ಚಿಕಿತ್ಸೆಗೊಯ್ದಿರುವರೆಂದೂ, ಪೋಲೀಸನಿಗೆ ಕಲ್ಲು ಹೊಡೆದ ಕೆಲವರ ಕೆಲವರ ಮೇಲೆ ವಾರಂಟು ಬಿಡಲಾಗಿದೆಯೆಂದೂ ತಿಳಿದುಬರುತ್ತದೆ.

ಬಂದರುಪರಿಶೀಲನಾ ಸಮಿತಿ

ಕೇಂದ್ರ ಸರಕಾರದಿಂದ ಪಶ್ಚಿಮ ಕರಾವಳಿಯಲ್ಲಿ ಕೊಚ್ಚಿ ಮತ್ತು ಮೊರ್ಮುಗೋವಾ ಮಧ್ಯದಲ್ಲೊಂದು ದೊಡ್ಡ ಬಂದರನ್ನು ಚುನಾಯಿಸುವರೆ ಪರಿಶೀಲನೆ ನಡೆಸಲು ನೇಮಕವಾದ ಸಮಿತಿಯು ಇದೇ ತಾ ೧೦ಕ್ಕೆ ಘಟ್ಟಗಳನ್ನು ಸಂದರ್ಶಿಸುವುದು. ಆ ನಂತರ ಅದು ಮಳ್ಪೆ ಮಂಗಳೂರಿಗೂ ಬರುವುದೆಂದು ತಿಳಿದುಬಂದಿದೆ. ಈ ಸಂಬಂಧವಾಗಿ ದ ಕ ವಾಣಿಜ್ಯ ಸಂಘದಿಂದ ರಚಿತವಾದ ಮಂಗಳೂರು ಬಂದರ ಸಮಿತಿಯೊಂದು ಇತ್ತೀಚೆಗೆ ಸಭೆಸೇರಿ ಪರಿಶೀಲನಾ ಸಮಿತಿಯು ಮುಂದಿಡಲು ಬೇಕಾದ ಸಂಖ್ಯೆ ಸಂಗತಿಗಳ ವರದಿಯೊಂದನ್ನು ತಯಾರಿಸಲು ನಿರ್ಣಯಿಸಿತೆಂದು ತಿಳಿದುಬರುತ್ತದೆ.

ಶಾಲೆಗಳಲ್ಲಿ ಸರತಿಪದ್ಧತಿ

ಮಂಗಳೂರು ನಗರದ ಹೈಸ್ಕೂಲ್‌ಗಳಲ್ಲಿಯೂ, ಮುನ್ಸಿಪಲ್ ಶಾಲೆಗಳಲ್ಲಿಯೂ ಸರತಿ ಪ್ರಕಾರ (Shift System) ಶಾಲೆಗಳನ್ನು ನಡೆಸುವ ಯೋಜನೆ ನಡೆದಿದೆಯೆಂದೂ ತಿಳಿದುಬರುತ್ತದೆ. ಆಗಲೇ ಸ್ಥಳೀಯ ಕೆನರಾ ಹೈಸ್ಕೂಲಿನವರು ತಮ್ಮ ಮೈನ್ ಶಾಲೆಯಲ್ಲಿ ಇದೇ ಜೂನ್ ತಿಂಗಳಿಂದ ಪ್ರಯೋಗಾರ್ಥವಾಗಿ ಈ ಕ್ರಮವನ್ನು ಜಾರಿಗೆತರುವ ಪರ್ಯಾಲೋಚನೆಯಲ್ಲಿರುವರೆಂದು ಗೊತ್ತಾಗಿದೆ. ಇದರ ಪ್ರಕಾರ ಒಂದು ದಿನ ಬೆಳಗ್ಗೆ ೮ ರಿಂದ ೧ ಗಂಟೆಯ ತನಕ (ಮಧ್ಯದಲ್ಲಿ ಒಂದು ಗಂಟೆಯ ಬಿಡುವಿದೆ) ಲೋವರ್ ಸೆಕಂಡರಿ ತರಗತಿಗಳು (೧ರಿಂದ ೩ನೇ ಫೋರ್ಮುಗಳು) ಮತ್ತು ಮಧ್ಯಾಹ್ನ ೧॥ರಿಂದ ೬ರ ತನಕ ಹೈಸ್ಕೂಲು (೪ರಿಂದ ೬ನೇ ಫೋರ್ಮುಗಳು) ತರಗತಿಗಳು ನಡೆಸಲ್ಪಡುವವು. ಮರುದಿನ ಈ ಕ್ರಮ ಬದಲಾಗುತ್ತದೆ. ಕಟ್ಟಡ ಸಾಮಾಗ್ರಿ ಅಭಾವದ ಈ ಕಾಲದಲ್ಲಿ ಹೆಚ್ಚು ಮಂದಿಗೆ ಶಿಕ್ಷಣ ಸೌಕರ್ಯಗಳನ್ನೊದಗಿಸುವುದು ಈ ಕ್ರಮದ ಮುಖ್ಯೋದ್ದೇಶ. ಅಲ್ಲದೆ ವಿದ್ಯಾರ್ಥಿಗಳ ಚಟುವಟಿಕೆಗಳಿಗೂ ಹೆಚ್ಚಿನ ಅನುಕೂಲತೆಗಳು ದೊರಕುವವು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಯೋಜಿಸಲ್ಪಟ್ಟ ಈ ಹೊಸ ಪದ್ಧತಿಯು ಯಶಸ್ವಿಯಾಗಲು ಹೆತ್ತವರು ಹೃತ್ಪೂರ್ವಕ ಸಹಕರಿಸಬೇಕಾದ್ದುದು ಅತ್ಯಾವಶ್ಯಕ.

ಹವಾಮಾನ

ಕಳೆದ ವಾರದಲ್ಲಿ ಕೆಲವೊಂದು ಹನಿಗಳಲ್ಲದೆ ಮಳೆಯು ತೋರಿಸಿಕೊಳ್ಳಲಿಲ್ಲ. ನಗರದಲ್ಲಿ ಮತ್ತು ಜಿಲ್ಲೆಯ ಇನ್ನಿತರ ಕಡೆಗಳಲ್ಲಿ ನೀರಿನ ಅಭಾವವುಂಟಾಗಿರುವುದಾಗಿ ತಿಳಿದುಬಂದಿದೆ.

ಜಿಲ್ಲಾ ಸಮಾಚಾರ

ಸ್ಥಳೀಕ ರೈಲುಗಳಿಗೂ ಈ ವಿಷಯದಿಂದ ಕುಂಬಾ ಅನಾನುಕೂಲವಾಗಿದೆ ಎಂದು ತಿಳಿದುಬಂದಿದೆ.

ಬಡ ಶಾಲಾಮಕ್ಕಳಿಗೆ ಊಟವ್ಯವಸ್ಥೆ

ಈ ಜಿಲ್ಲೆಯ ೪೮ ಲೇಬರ್ ಶಾಲೆಗಳಲ್ಲಿ ಕೆಲವೊಂದು ಶಿಶಿಷ್ಟವರ್ಗದ ಸರಕಾರಿ ಸವಲತ್ತಿನ ಅರ್ಹತೆಯುಳ್ಳ ಮಕ್ಕಳಿಗೆ ಊಟ ಪೂರೈಸುವ ಬಗ್ಗೆ ಆಯಾ ಭಾಗದವರು— ಕಾಸರಗೋಡು, ಪುತ್ತೂರು, ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕಿನವರು—ತಮ್ಮ ಟೆಂಡರ್ ಅರ್ಜಿಯನ್ನು ೧೯೪೮ ೪೯ನೇ ವರ್ಷದ ಮಟ್ಟಿಗೆ ಕಳಿಸಬೇಕು. ಆ ಅರ್ಜಿ ಕಳುಹಿಸುವ ಲಕೋಟೆಯ ಮೇಲೆ ಹರಿಜನ ವಿದ್ಯಾರ್ಥಿಗಳ ಪೂರೈಕೆಯ ಬಗ್ಗೆ ಎಂದು ನಮೂದಿಸಿ ಅದನ್ನು ಮೇ ೧೫ರೊಳಗೆ ಕಲೆಕ್ಟರರ ಕಡೆಗೆ ಕಳುಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಅಲ್ಲಿಂದಲೇ ಪಡೆಯಬಹುದು.

ಖೋಟಾ ನೋಟುಗಳ ಸಂಬಂಧ ದಸ್ತಗಿರಿ
ಮಂಗಳೂರಿನ ಕೆಲವರ ಕೈವಾಡ

ದ ಕ ಜಿಲ್ಲೆಯ ರೇಶನ್ ರದ್ದಾದ ಭಾಗಗಳಲ್ಲಿ ಅಕ್ಕಿ ಸಾಗಾಟದ ಮೇಲೆ ನಿರ್ಬಂಧ ಹಾಕಲಾಗಿತ್ತು. ಕೆಲವು ಕಡೆ ಗುಪ್ತರೀತಿಯಲ್ಲಿ (ಹೆಚ್ಚಾಗಿ ರಾತ್ರೆ ಹೊತ್ತಿನಲ್ಲಿ) ಅಕ್ಕಿ ಸಾಗಾಟದ ಕಾರ್ಯವು ನಡೆಯುತಿತ್ತೆಂದೂ ಹೀಗೆ ಗುಪ್ತವಾಗಿ ಅಕ್ಕಿಕೊಳ್ಳುವವರು ಕೆಲವರು ನೂರು ಮತ್ತು ಹತ್ತು ರೂಪಾಯಿಯ ಖೋಟಾ ನೋಟುಗಳನ್ನೂ ಚಲಾವಣೆಗಳನ್ನು ಮಾಡಿದರೆಂದೂ ಸುದ್ದಿ ಹರಡಿತ್ತು. ಅನೀತಿ ವ್ಯವಹಾರದಿಂದ ಲಾಭಗಳಿಸ ಪ್ರಯತ್ನಮಾಡಿದವರಿಗೆ ಇದರಿಂದ ಒಳ್ಳೆ ಪುರಸ್ಕಾರ ಸಿಕ್ಕಂತಾಗಿಯೆಂದೂ ತಿಳಿಯಲಾಗಿತ್ತು.

ಕೆಲದಿನಗಳ ಹಿಂದೆ ಕೊಯಮತ್ತೂರಿನಲ್ಲಿ ಮಂಗಳೂರಿನವರೆಂದು ಊಹಿಸಲ್ಪಟ್ಟ ಮೂರು ಮಂದಿಗಳ ದಸ್ತಗಿರಿಯಾಗಿದೆ. ಇವರು ಫೋರ್ಜರಿ ನೋಟುಗಳನ್ನು ಚಲಾಯಿಸಲು ಯತ್ನಿಸಿದರೆಂದು ಹೇಳಲಾಗಿದೆ. ಅಮ್ಮದ್ ಮೋನು ಎಂಬವನು ಅಲ್ಲಿನ ಒಂದು ಹೊಟೇಲಿನಲ್ಲಿ ಇಂತಹ ನೋಟನ್ನು ಚಿಲ್ಲರೆಮಾಡುತಿದ್ದಾಗ ಹಿಡಿಯಲ್ಪಟ್ಟನು. ಅವನ ಸಹಾಯಕರೆಂದು ಹೇಳಲಾದ ನರಸಪ್ಪ ಮತ್ತು ಸಚ್ಚಿದಾನಂದ ರಾವ್ ಇವರು ಇದೇ ಕಾರ್ಯ ಸಾಧನೆಯಲ್ಲಿರುವಾಗ ಹಿಡಿಯಲ್ಪಟ್ಟಿರುವರು. ಅದರಲ್ಲಿ ನರಸಪ್ಪ ಎಂಬವರ ಒಳ ಸುಮಾರು ೭೧೦ ರೂಪಾಯಿ ಮೌಲ್ಯ ತೋರಿಸುವ ಹತ್ತು ರೂಪಾಯಿಯ ನಕಲಿ ನೋಟುಗಳ ಕಟ್ಟೊಂದು ಸಿಕ್ಕಿರುತ್ತದಂತೆ. ಇವರ ಅಲ್ಲಿನ ಕೆಲ ಅಂಗಡಿಗಳಲ್ಲಿ ವ್ಯವಹಾರಮಾಡಿ ತಮ್ಮ ನೋಟುಗಳನ್ನು ಕೊಟ್ಟದ್ದು ಅವುಗಳ ಪತ್ತೆಯೂ ಆಗಿದೆ. ಪೋಲೀಸ್ ತನಿಖೆಯು ನಡೆಯುತ್ತಲಿದೆ.

ಆಹಾರ ಹೆಚ್ಚಳಿಕ್ಕೆ ಪ್ರಚಾರ

ಕಳೆದ ಮೇ ತಾ ೧ರಲ್ಲಿ ಇಲ್ಲಿಯ ಗವರ್ನ್‌ಮೆಂಟ್ ಕೊಲೇಜಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್ ಆರ್ ಕೈವಾರ್ ಐ ಸಿ ಎಸ್ ಅವರ ಅಧ್ಯಕ್ಷತೆಯಲ್ಲಿ ದ. ಕ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘ ಮತ್ತು ಮಂಗಳೂರು ಸೇವಾ ಸಮಿತಿಯವರ ಆಶ್ರಯದಲ್ಲಿ ಆಹಾರ ಹೆಚ್ಚು ಬೆಳೆಸುವ ವಿಚಾರ ವಿನಿಮಯಕ್ಕಾಗಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಅಧ್ಯಕ್ಷ ಕಲೆಕ್ಟರರು ಈ ಸಂಘದವರ ಪ್ರಯತ್ನಗಳಿಗೆ ಸಹಾಯವಾಗುವಂತೆ ೧೪೦ ರೂಪಾಯಿಗಳ ಮುನಿಸಿಪಲ್ ಗ್ರೇಂಟನ್ನು ವಾಗ್ದಾನ ಮಾಡಿದರು. ಈ ಸಂಘದವರೀಗ ಉತ್ತಮ ತರಕಾರಿ ಬೀಜಗಳನ್ನು ತರಿಸಿದ್ದು ಅದನ್ನು ಜಿಲ್ಲಾ ಬೋರ್ಡ್ ಆಫೀಸ್, ಮುನ್ಸಿಪಲ್ ಆಫೀಸ್, ಮಹಿಳಾ ಸಭೆಗಳ ಮಂದಿರಗಳಲ್ಲಿ ಪೆಕೆಟಿಗೆ ೧—೨ ಆಣೆಗಳ ಸುಲಭ ಬೆಲೆಗೆ ಮಾರಲು ಏರ್ಪಡಿಸಿರುವರು. ಮೇಲ್ಕಂಡ ಸಭೆಯಲ್ಲಿ ಅನೇಕ ಪುರಪ್ರಮುಖರ ಭಾಷಣಗಳೂ ಆದವು.

ಮೇ ದಿನಾಚರಣೆ

ಕಳೆದ ಮೇ ತಾ ೧ರಂದು ಇಲ್ಲಿಯ ಮೈದಾನಿನಲ್ಲಿ ಸೋಶಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀಮತಿ ಕಮಲಾ ದೇವಿಯವರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆ ನಡಿಸಿದಾಗ ಶ್ರೀ ಎಂ ಡಿ ಅಧಿಕಾರಿ ಸಿ. ಗೋವಿಂಗನ್ ಡಾ। ಸಂಜೀವನಾಥ್ ಅವರು ಮಾತನಾಡಿದರು. ಶ್ರೀಮತಿಯವರು ಆ ಪಾರ್ಟಿಯ ತತ್ವಗಳನು ವಿವರಿಸಿದರು. ಅಂದೇ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿಯೂ ಅದೇ ಮೈದಾನಿನಲ್ಲಿ ಸೋಶಲಿಸ್ಟ್ ಸಭೆಯ ಸ್ವಲ್ಪ ಅಂತರದಲ್ಲಿ ಒಂದು ಮೇ ದಿನಾಚರಣೆ ಸಭೆ ಶ್ರೀ ಕೇಶವ ಕಾಮತರ ಅಧ್ಯಕ್ಷತೆಯಲ್ಲಿ ನಡೆಯಿತು.

ನಾಯಿಕಳವಿಗೆ ಜುಲ್ಮಾನ

ಮಂಗಳೂರು ಮುನ್ಸಿಪಾಲಿಟಿಯ ನಾಯಿ ಹಿಡಿಯುವ ಮುದ್ದ ಎಂಬವನ ಇಲ್ಲಿಯ ಶ್ರೀ ಗೋಪಾಲ ಪಂಡಿತರಿಂದ ಒಂದು ನಾಯಿ ಕದ್ದನೆಂದು ಬೆಂಚ್ ಕೋರ್ಟಿನಲ್ಲಿ ಆರೋಪಿಗೆ ೫ ರೂಪಾಯಿ ಜುಲ್ಮಾನೆಯಾಯಿತು.

ಪದವಿನ ವಿ ಜಾರ್ ಮುಕುಂದ ಪೈ ಇವರಿಂದ ಒಂದುವರೆ ಚೀಲ ಸಿಮೆಂಟ್ ಕದ್ದ ರಾಮಪ್ಪ ಪೂಜಾರಿ ಎಂಬವನಿಗೆ ೧ ವರ್ಷಕ್ಕೆ ೫ ರೂ ಗಳ ಜಾಮೀನು ಮುಚ್ಚಳಿಕೆಯಾಗಿದೆ.

ತೋಕೂರು ಗ್ರಾಮದ ಕೊಗ್ಗ ಪೂಜಾರಿ ಎಂಬವನು ಸಕ್ಕರೆಯ ಫೋರ್ಜರಿ ಪರ್ಮಿಟ್ ಮೂಲಕ ಒಂದರದ ಒಂದು ಅಂಗಡಿಯಿಂದ ಸಕ್ಕರೆ ಪಡೆಯಲು ಪ್ರಯತ್ನಿಸಿದಕ್ಕೆ ೬ ತಿಂಗಳ ಜಾಮೀನು ಮುಚ್ಚಳಿಕೆಗೆ ಬದ್ಧನಾಗಿದಾನೆ.

ಹೊಸ ರಿಲೀಫ್ ಅಂಗಡಿ

ಮಂಗಳೂರ ತಾಲೂಕು ಕುಂದಾವರ ಗ್ರಾಮದವರು ಕಳೆದ ತಾ ೩ರಲ್ಲಿ ಹುಜೂರು ಕಚೇರಿಗೆ ಬಂದು ಆ ಗ್ರಾಮದಲ್ಲಿ ಒಂದು ರಿಲೀಫ್ ಅಂಗಡಿಯನ್ನು ತೆರೆಯುವ ಆವಶ್ಯಕತೆಯ ಬಗ್ಗೆ ಅರಿಕೆಮಾಡಿದಾಗ ಸರಬರಾಯಿ ಆಫೀಸರರ ಆ ಕುರಿತು ಅಲ್ಲೊಂದು ರಿಲೀಫ್ ಶೋಪನ್ನು ಬೇಗನೆ ತೆರೆಯಲು ಅಪ್ಪಣೆಮಾಡಿದರು.

ಹೋಟೆಲ್ ಮ್ಹಾಲಕರ ಸಂಘ

ಈ ಸಂಘದ ಮಹಾಸಭೆ ತಾ ೨ರಂದು ಅಧ್ಯಕ್ಷ ಶ್ರೀ ಕೆ ಎಸ್ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀ ಜಿನರಾಜ ಹೆಗ್ಗಡೆಯವರು ಕರ್ನಾಟಕ ಏಕೀಕರಣ ನಿಧಿಯ ಕುರಿತು ವಿವರಿಸಿದಾಗ ಈ ಸಂಘದವರಿಂದ ರೂ ೭೦೧ ವಾಗ್ದಾನವಾಯಿತು. ಈ ವರ್ಷವೂ ತಾಜಮಹಾಲಿನ ಶ್ರೀ ಕೆ ಎಸ್ ಶೆಣೈಯವರೇ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಶ್ರೀವಿಲಾಸದ ರಾಮಚಂದ್ರರಾಯರು ಕಾರ್ಯದರ್ಶಿಗಳು.

ವರ್ಗಾವರ್ಗಿ

ಮಂಗಳೂರು ತಹಶೀಲ್ದಾರರಾಗಿದ್ದ ಶ್ರೀ ವಿ ಗಣೇಶ ಅವರು ಹುಜೂರು ಶಿರಸ್ತೆದಾರರಾಗಿಯೂ, ಕಾರ್ಕಳದ ತಹಶೀಲ್ದಾರ್ ಶ್ರೀ ನಾರಾಯಣ ಹೆಗಡೆಯವರು ಮಂಗಳೂರು ತಹಶೀಲ್ದಾರರಾಗಿಯೂ, ಉಡುಪಿ ತಹಶೀಲ್ದಾರ ಶ್ರೀ ಸದಾನಂದ ಪೈ ಅವರು ಕಾರ್ಕಳ ತಹಶೀಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಉಡುಪಿ

ರೇಶನ್ ರದ್ದಾದ ನಂತರ ಜಾರಿಯಲ್ಲಿರುವ ರಿಲೀಫ್ ರೇಶನ್ ಪ್ರಮಾಣವನ್ನು ೪ರಿಂದ ೬ ಔನ್ಸಿಗೆ ಏರಿಸಬೇಕೆಂದೂ, ಎರಡು ಔನ್ಸ್ ಜೋಳ ಖುಶಿವಾಸಿ ಪಡೆಯುವಂತೇರ್ಪಡಿಸಬೇಕೆಂದೂ ಇಲ್ಲಿಯ ನಗರ ಸಭೆಯವರು ಸರಕಾರಕ್ಕೆ ವಿನಂತಿಸಿಕೊಂಡಿರುವರು. ಅಲ್ಲದೆ ಒಂದು ಚಟ್ನಾ ಮತ್ತು ಸಿಟಿ ಬಸ್ ಸ್ಟೇಂಡುಗಳನ್ನು ಕಟ್ಟಲೂ ಪರ್ಯಾಲೋಚನೆ ನಡೆದಿದೆ.

ಮುಂಡ್ಕೂರು

ಸಾಗುವಳಿಗೆ ಬೇಕಾದ ಯಾವತ್ತೂ ಸೊತ್ತುಗಳನ್ನು/ಕಮ್ಮಿ ಬೆಲೆಗೆ ವಿಕ್ರಯಿಸುವರೆ ಇಲ್ಲಿಯ ರಥಬೀದಿಯ ವಿಚಾರದಲ್ಲಿ ಒಂದು ವಿಶೇಷ ಸಂತೆ ಇದೇ ತಾ ೭ರಿಂದ ೧೩ರ ವರೆಗೆ ನಡೆಸಲು ನಿಶ್ಚಯಿರುತ್ತದೆ. ಇದರಲ್ಲಿ ರೈತರಿಗೆ ಬೇಕಾಗುವ ಜಾನುವಾರು, ಬೀಜ ಮತ್ತು ಜವಳಿ ಇತ್ಯಾದಿಗಳನ್ನು ಸಹ ಪಡೆಕೊಳ್ಳಬಹುದು. ಮುಂದಿನ ಬೆಳೆ ಯೋಗ್ಯ ರೀತಿಯಿಂದ ಮಾಡಲು ಉದಾರಿ ಗ್ರಾಮಸ್ಥರು ಮಾಡಿದ ಏರ್ಪಾಡೆಂದು ತಿಳಿದುಬರುತ್ತದೆ.

ಜೋಗಟ್ಟೆ

ಕೆಂಜಾರು ಮತ್ತು ತೋಕೂರು ಈ ಎರಡು ಗ್ರಾಮಗಳ ಪರವಾಗಿ ಜೋಗಟ್ಟೆ ಪೇಟೆಯಲ್ಲಿ ಒಂದು ಬ್ರಾಂಚು ಟಪ್ಪಾಲು ಆಫೀಸನ್ನು ಕಳೆದ ತಾ ೩ರಲ್ಲು ಸಮ್ಮಂದಪಟ್ಟ ಇಲಾಖೆಯವರು ಸ್ಥಾಪಿಸಿರುತ್ತಾರೆ.

ಕಳವಾರು

ಇಲ್ಲಿಯ ಶ್ರೀ ವೆಂಕಿನಾಥೇಶ್ವರ ದೇವರ ಗರ್ಭಗುಡಿಗೆ ತಾವು ಹೊದಿಸುವ ಬಗ್ಗೆ ಕಳವಾರು ಒಳಚಿಲು ವೇ। ಲಕ್ಷ್ಮೀನಾರಾಯಣ ಭಟ್ಟರು ಜನರಿಂದ ಧನಸಹಾಯವನ್ನು ಎತ್ತುತಿದ್ದರೆ ಭಕ್ತಾದಿಗಳ ಭಕ್ತಿಪೂರ್ವಕ ಧನಸಹಾಯವನ್ನು ಹೆಚ್ಚಿನ ರಭಸದಿಂದ ಕೂಡ ತಿದ್ದಾರೆ.

ಕುಷ್ಠ ಚಿಕಿತ್ಸಾಲಯ

ಇತ್ತೀಚೆಗೆ ಒದಿಯಡ್ಕದಲ್ಲಿ ಶ್ರೀ ವೆಂಕಟರಮಣ ಭಟ್ಟರವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೆ ಕೆ ರೈ ಅವರು ಕುಂಜ್ಞಿಯ ಥಿಕಾರ್ ಅಭಿವೃದ್ಧಿ ಯೋಜನೆಕಾರರ ಒಡದ ಕುಷ್ಠರೋಗ ಚಿಕಿತ್ಸಾಲಯವನ್ನು ಸ್ಥಾಪಿಸುವ ಯೋಜನೆಯುಳ್ಳರುವರೆಂದು ತಿಳಿಸಿದರು. ಡಾ। ಪಿ ಎಸ್ ಶಾಸ್ತ್ರಿಗಳು ಈ ಸಂಬಂಧ ಸಾರ್ವಜನಿಕರ ಸಹಾಯ ಸಹಕಾರ ಕೇಳಿಕೊಂಡರು.

ಗಂಟಲು ಬೇನೆ
ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಪೆಪ್ಸ ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವ ಶ್ವಾಸದೊಡನೆ ಕೂಡಿ ನಿಮ್ಮ ಶ್ವಾಸಕೋಶವನ್ನು ಸೇರುವುದು.

ಪೆಪ್ಸ್ ನೆಗಡಿ ಕೆಮ್ಮು ಬ್ರೊಂಕೈಟಿಸ್, ಇನಫ್ಲುಯೆಂಜಾ ಮುಂತಾದ್ದಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ
ಮಾತ್ರೆಗಳು
ಅದಿಲ್ಲದೆ ಎಂದೂ ಇರದಿರಿ

No 4

ರೋಮನ್ ನಗರದ ರಕ್ಷಣೆ

ಅನೇಕ ಶತಮಾನಗಳ ತನಕ ಮಧ್ಯ ಯುರೋಪದ ನಾಗರೀಕತೆ ಕೇಂದ್ರವೆನಿಸಿದ ರೋಮ್ ನಗರವು ಹಲವಾರು ಸಾಂಕ್ರಾಮಿಕಗಳಿಂದ ಹಾನಿಗೀಡಾಗಿತ್ತು.

ಮೊದಲಾಗಿ ಹದಿನೈದು, ಹದಿನಾರು ಮತ್ತು ಹದಿನೇಳನೆ ಶತಮಾನಗಳಲ್ಲಿ ಪ್ಲೇಗ್, ಮಲೇರಿಯಾ ಮತ್ತು ವಿಷಮ ಜ್ವರಗಳು ಕ್ರೂರತರದಲ್ಲಿ ರೋಮ್ ನಗರವನ್ನು ಬಲಿಗೈಯ್ದವು ಪರಿಣಾಮವಾಗಿ ಬರಗಾಲವೊಂದು ಹಿಂಬಾಲಿಸಿತು.

ಇಗ್ನೇಶಿಯಸ್ ಲೊಯೊಲ್ಲಾ, ಕೆಮಿಲಸ್ ಡಿಲೆಲ್ಲಿಸ್, ಜೋಸೆಫ್ ಕಾಲಾಸುಂಜಾ ಮೊದಲಾದ ಕೆಥೋಲಿಕ್ ಧರ್ಮ ಪ್ರವರ್ತಕರು ಮತ್ತವರ ಹಿಂಬಾಲಕರು ಈ ಅನಿಷ್ಟಕಾರಕ ವ್ಯಾಧಿಗಳ ಹಾವಳಿಯನ್ನು ತಡೆದಿಕ್ಕಲು ತುಂಬಾ ಶ್ರಮಿಸಿದರು.

ರೋಮ್ ನಗರದ ಆಸುಪಾಸಿನಲ್ಲಿರುವ ಒಂದು ಪೊಂಟೈನ್ ಎಂಬ ಅಪವಿತ್ರವೆಂದೆನಿಸಲ್ಪಡುವ ಒದ್ದೆ ಪ್ರದೇಶವೊಂದರಿಂದ ಮಲೇರಿಯಾ ವ್ಯಾಧಿಯುತ್ಪನ್ನವಾಗುತ್ತಿದ್ದು ಅದು ಆ ನಗರದಲ್ಲಿ ಅತ್ಯಂತ ಹರಡಲ್ಪಡುತಿತ್ತು. ಆ ಕಾಲದಲ್ಲಿ ಸೊಳ್ಳೆ ಹಾದರು ಕಷ್ಟಗಳು ಹವಾಮಾನ ಇವುಗಳ ವಿಷಯ ಹೆಚ್ಚಾಗಿ ತಿಳಿಯಲಾಗುತ್ತಿರಲಿಲ್ಲ. ಮಲೇರಿಯಾ (Malaria) ಕೆಟ್ಟ ಗಾಳಿ (Bad Air) ಎಂಬ ಹೆಸರು ಇದಕ್ಕೆ ಕಲ್ಪಿಸಲ್ಪಟ್ಟಿದ್ದುದು.

ಆದರೆ ಯುರೋಪದಲ್ಲಿ ಸಿಂಕೋನಾ ಮರಗಳ ತೋಟಗಳನ್ನು ಬೆಳೆಸಲಾರಂಭಿಸಿದಂದಿನಿಂದ ರೋಮ್ ನಗರದ ಸಂಪೂರ್ಣ ನಾಶವು ತಡೆಯಲ್ಪಟ್ಟಿತು. ಈ ಸಮಯದಲ್ಲಿ ಸಿಂಕೋನಾ ತೋಟಗಳ ಹುಡಿಯು ಸತ್ವಪೂರ್ಣವಾಗಿ ಕಂಡುಹಿಡಿಯಲ್ಪಡದಿದ್ದರೆ ರೋಮ್ ನಗರದ ಆಸುಪಾಸು ಪ್ರದೇಶಗಳು ಸಂಪೂರ್ಣ ಮರುಭೂಮಿಯಾಗುತ್ತಿದ್ದವು. ಸಹಾರಾ ಮರಳುಕಾಡಿಗಿಂತಲೂ ಇದು ಅಪಾಯಕಾರಕವೂ ಆಗುತ್ತಿತ್ತು. ಈಗ ಇದೇ ಸ್ಥಳವು ಉತ್ತಮ ಕೃಷಿಪ್ರದೇಶವಾಗಿದೆ. ಪ್ರಾಚೀನ ನಾಗರಿಕತೆಯ ಕುರುಹುಗಳ ಮೇಲೆ ಆಧುನಿಕ ಕೈಗಾರಿಕೆಯ ಕಾರ್ಖಾನೆಗಳು ಅಲ್ಲಿ ಸ್ಥಾಪಿಸಲ್ಪಟ್ಟಿವೆ.

ಈ ಗಣನೀಯ ಬದಲಾವಣೆಯು ಕ್ವಿನಿನಿಂದಲೇ ಆದುದೆಂದು ಮರೆಯಬಾರದು. ಇದನ್ನು ಸಿಂಚೋನಾ ತೋಗಟೆಯಿಂದ ತೆಗೆಯುತ್ತಾರೆ. ಇಂದು ಇಡೀ ಜಗತ್ತಿನಲ್ಲಿ ಅತೀ ಹೆಚ್ಚಾಗಿ ಮತ್ತು ಮಲೇರಿಯಕ್ಕೆ ಅತೀ ವಿಶ್ವಾಸದ ಒಂದೇ ಪರಿಹಾರವೆಂದರೆ ಕ್ವಿನಿನೇ ಆಗಿರುತ್ತದೆ.

ಮಲೇರಿಯಾ ಜ್ವರಬಾಧೆ ತಡೆಯಲು ಆ ವ್ಯಾಧಿ ಕಾಲದಲ್ಲಿ ದಿವಸಕ್ಕೆ ೬ ಕಾಳುಗಳಷ್ಟು ಕ್ವಿನಿನನ್ನು ಸೇವಿಸಬೇಕೆಂದು ಜನಾಂಗ ಸಂಘದ ಮಲೇರಿಯಾ ವೈದ್ಯ ತಜ್ಞರ ಸಮಿತಿಯು ಶಿಫಾರಸು ಮಾಡಿದೆ. ಜ್ವರಬಂದವರಿಗೆ ದಿನಂಪ್ರತಿ ೧೫-೨೦ ಕಾಳುಗಳನ್ನು ೫-೭ ದಿನಗಳ ತನಕ ಕೊಡಬೇಕು. ಆ ನಂತರದಲ್ಲಿ ವಿಶೇಷ ಶುಶ್ರೂಷೆ ಏನಿಲ್ಲ. ಜ್ವರವು ಪುನಃ ಬಂದರೆ ಮುಂಚಿನಂತೆ ಸೇವಿಸುವುದು.

ಭಾರತ ಬ್ರಿಟನ್ನುಗಳೊಳಗಿನ ಭಾವೀ ಪ್ರಬಂಧ

ನೆಹರೂರವರ ವಿಶೇಷ ಧೋರಣೆ ನಿರೂಪ.

ಬೊಂಬಾಯಿಯ ಪತ್ರಿಕಾ ವ್ಯವಸಾಯಕ ಸಂಘದವರೇರ್ಪಡಿಸಿದ ಸತ್ಕಾರಕೂಟವೊಂದರಲ್ಲಿ ಭಾಷಣಮಾಡುತ್ತ ಪಂಡಿತ್ ನೆಹರೂರವರು ಭಾರತ ಮತ್ತು ಬ್ರಿಟಿಷ್ ವಸಾಹತು ಕೂಟದ ಸಂಬಂಧವನ್ನು ಸ್ಪಷ್ಟೀಕರಿಸಿದರು.

"ಭಾರತವು ಸರ್ವ ಸ್ವತಂತ್ರ ಸ್ವಾಧಿಕಾರದ ಪ್ರಜಾಪ್ರಭುತ್ವವಾಗಿ ಉಳಿಯಬೇಕೆಂದು ಇದು ತನಕ ನಿರ್ಧರಿಸಲಾಗಿದೆ. ಘಟನಾಸಮಿತಿಯಾದರೂ ಅದೇ ಧೋರಣೆಯನ್ನವಲಂಭಿಸಿ ಕಾರ್ಯ ಸಾಗಿಸುತ್ತಿದೆ. ಈ ಕುರಿತಾದ ಕೊನೆಯ ನಿರ್ಣಯವನ್ನು ಮಾಡುವ ಹೊಣೆಗಾರಿಕೆಯೂ ಘಟನಾ ಸಮಿತಿಯ ಮೇಲೆ ಹೊಂದಿಕೊಂಡಿದೆ.

"ವಿಶ್ವ ರಾಜಕೀಯ ವ್ಯವಹಾರದ ದೃಷ್ಟಿಕೋನದಿಂದಲೇ ಈ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಭಾರತವು ಪ್ರತ್ಯೇಕೀಕರಣದ ಒಂದು ನೀತಿಯನ್ನನುಸರಿಸಿಕೊಂಡಿರಲು ಸಾಧ್ಯವಿಲ್ಲ. ನನ್ನ ಸ್ವಂತ ಅಭಿಪ್ರಾಯದ ಪ್ರಕಾರ ನಾವು ಬ್ರಿಟಿಷ್ ವಸಾಹತು ಕೂಟದೊಡನೆ ಭಾರತವು ಅತ್ಯಂತ ನಿಕಟವಾದ ಸಂಪರ್ಕವನ್ನಿಟ್ಟುಕೊಳ್ಳುವ ದವಶ್ಯಕವಾದಿದ.

"ಬ್ರಿಟಿಷ್ ವಸಾಹತು ಕೂಟದೊಡನೆ ಸಹಕರಿಸುವುದರಲ್ಲಿ ಕೆಲವು ಶಕ್ತಿ ರಾಷ್ಟ್ರಗಳೊಡನೆ ಕೂಟ ಕಟ್ಟುವುದೆಂದರ್ಥವೆಂದರೆ ನಾನದಕ್ಕೆ ಒಬ್ಬ ವಿರೋಧಿಯಾಗಿದ್ದೇನೆ.'

'ಜನಾಂಗಗಳ ಗುಂಪು ಗುಂಪುಗಳನ್ನು ಮಾಡಿಕೊಳ್ಳುವುದು ತಪ್ಪು ಧೋರಣೆಯಾಗಿ ಕಾಣುತ್ತದೆ. ವೈಯುಕ್ತಿಕವಾಗಿ ಆಸ್ಯಾ ರಾಷ್ಟ್ರಗಳು ಆರ್ಥಿಕ ಸಾಂಸ್ಕೃತಿಕ ಪರಸ್ಪರ ಅಭಿವೃದ್ಧಿಗಾಗಿ ಒಂದು ಗುಂಪನ್ನು ಮಾಡಿಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಅದರಂತೆಯೆ ಬ್ರಿಟಿಷ್ ವಸಾಹತು ಕೂಟದೊಡನೆ ನಾವೊಂದು ತರದ ಸಂಬಂಧವುಳ್ಳ ಗುಂಪನ್ನು ರಚಿಸಿಕೊಳ್ಳಬಹುದೆಂದು ನನಗನಿಸುತ್ತದೆ. ಯಾರ ಹಸ್ತಕ್ಷೇಪವೂ ಇಲ್ಲದೆ ನಾವು ನಮ್ಮ ಧೋರಣೆಗಳನ್ನು ಅನುಸರಿಸಲು ಸಾಧ್ಯವಾಗುವುದಾದರೆ ಬ್ರಿಟಿಷ್ ವಸಾಹತು ರಾಜ್ಯಗಳೊಡನೆ ಅದೆಂತಹ ಸಂಬಂಧವನ್ನಿಟ್ಟುಕೊಳ್ಳಬೇಕೆಂಬುದರ ಕುರಿತು ನಾವು ಪರ್ಯಾಲೋಚಿಸಬಹುದು.

ರಾಷ್ಟ್ರ ಭಾಷೆ.

ದೇಶದ ರಾಜ್ಯ ಭಾಷೆ ಯಾವುದಾಗಬೇಕೆಂಬುದರ ಕುರಿತು ಮೇಲ್ಕಂಡ ಸಭೆಯಲ್ಲೇ ಪಂಡಿತ್ ನೆಹರೂರವರು ಹೀಗೆ ತಿಳಿಸಿದರು.

ಮುಂದೆ ಕ್ರಮೇಣ ಇಂಗ್ಲಿಷ್ ಭಾಷೆಯ ಉಪಯೋಗವು ಸರಕಾರಿ ಕಛೇರಿಗಳಲ್ಲಿ ಕಡಮೆ ಮಾಡಲಾಗುವುದು. ಕಾಂಗ್ರೆಸ್ಸು ಹಿಂದೀ ಇಲ್ಲವೆ ಹಿಂದುಸ್ತಾನಿ ಭಾಷೆಗೆ ಆಧಾರಬದ್ಧವಾಗಿದೆ. ಭಾಷೆಯ ಸಂಬಂಧವಾಗಲಿ ಜನರ ಸಂಬಂಧವಾಗಲಿ 'ಹಿಂದೂಸ್ಥಾನಿ' ಎಂಬ ಅಂಕಿತ ನಾಮವನ್ನುಪಯೋಗಿಸುವುದು ನನಗೆ ಸರಿತೋರುವುದಿಲ್ಲ. ಈಗ ಭಾಷೆಯೊಂದರ ಮಾತ್ರವಲ್ಲ ಲಿಪಿಯ ವಿಷಯದಲ್ಲಿ ಕೂಡ ತುಂಬಾ ತರ್ಕ ಯುದ್ಧವಿದೆ. ಹಿಂದುಸ್ತಾನಿಯೇ ಹಿಂದ ಸ್ಥಾನದ ಅಧಿಕೃತ ರಾಜ್ಯ ಭಾಷೆಯಾಗಬೇಕೆಂದು ಮಹಾತ್ಮರು ಇಚ್ಛಿಸಿಟ್ಟಿದ್ದರು. ದೇವನಾಗರಿ ಮತ್ತು ಉರ್ದು ಲಿಪಿಗಳೆರಡರ ಅಭ್ಯಾಸವೂ ಅವಶ್ಯವೆಂದವರು ಅಭಿಪ್ರಾಯಪಟ್ಟಿರುವರು. ಮಹಾತ್ಮರ ಅಭಿಪ್ರಾಯವನ್ನು ನಾನು ಸಂಪೂರ್ಣ ಅನುಮೋದಿಸುತ್ತೇನೆ.

ದೇವನಾಗರಿ ಲಿಪಿಯು ಹೆಚ್ಚು ಜನಪ್ರಿಯವಾದುದು. ಆದರೆ ಉರ್ದು ಲಿಪಿಯನ್ನು ಬಹಿಷ್ಕರಿಸುವುದು ಉಚಿತವಲ್ಲ. ಶಬ್ದಗಳ ವಿಚಾರದಲ್ಲೂ ಉರ್ದು ಶಬ್ದಗಳನ್ನು ಪ್ರತ್ಯೇಕಿಸುವುದೂ ಚೆನ್ನಾಗಿಲ್ಲ. ದೇಶದಲ್ಲೆಲ್ಲಾ ಸರ್ವ ಸಾಧಾರಣವಾಗಿ ಬಳಕೆಯಲ್ಲಿರುವ ಸರಳ ಶಬ್ದಗಳನ್ನು ಅದರಲ್ಲಿ ಸೇರಿಸಿಕೊಳ್ಳಬೇಕು. ಅವುಗಳ ಮೂಲರೂಪವು ಯಾವುದೇ ಭಾಷೆಯಲ್ಲಿರಲಿ ಇಂಗ್ಲಿಷ್ ಮೂಲದ ಶಬ್ದವಾದರೂ ಅಡ್ಡಿಯಿಲ್ಲ. ಜಗತ್ತಿನ ಶಬ್ದ ಸಂಪತ್ತುಳ್ಳ ಎಲ್ಲ ಭಾಷೆಗಳು ಸರ್ವ ಭಾಷಾ ಶಬ್ದಗಳನ್ನೊಳಗೊಂಡಂತವುಗಳು. ಇಂಗ್ಲಿಷ್ ಭಾಷೆಯು ಅಂತಹದರಲ್ಲಿ ಒಂದು. ಪ್ರತಿ ವರ್ಷ ೫ ಸಾವಿರ ಶಬ್ದಗಳು ಅದಕ್ಕೆ ಸೇರಿಸಲ್ಪಡುತ್ತವೆ."

"ಹಿಂದೀ ಉರ್ದು ಪ್ರಶ್ನೆಯೆಂದರೆ ಹಿಂದೂ ಮುಸ್ಲಿಂ ಪ್ರಶ್ನೆಯಲ್ಲ. ಅದೊಂದು ಪ್ರಾದೇಶಿಕ ಪ್ರಶ್ನೆ. ಉರ್ದು ಶಬ್ದಗಳನ್ನು ದೂರೀಕರಿಸಬೇಕೆಂದೂ, ಸಂಸ್ಕೃತ ಶಬ್ದಗಳನ್ನು ಸೇರಿಸಬೇಕೆಂದೂ ಮತ್ತು ಉರ್ದು ಲಿಪಿಯನ್ನು ತ್ಯಜಿಸಬೇಕೆಂದೂ ಮಾಡಲ್ಪಡುವ ಚಳವಳಿಗಳು ಚಿಂತಾಸ್ಪದವಾದುದು."

ಗಾಂಧೀ ಸ್ಮಾರಕನಿಧಿಯು ಜಗತ್ತಿನ ಅತೀ ದೊಡ್ಡ ಧನಸಂಚಯವಾಗುವುದೆಂದು ಅಧ್ಯಕ್ಷ ರಾಜೇಂದ್ರ ಪ್ರಸಾದರು ತಿಳಿಸಿದರು.

✠

ಜಗತ್ತಿನ ಅತೀ ಬಲಿಷ್ಠವೆಂದೆನಿಸುವ ಮಗುವೊಂದು ಸ್ಯುಸೂಕ ಅಮೇರಿಕದ ಮೈನ ಸಂಸ್ಥಾನದ ಲೋವಿಸ್ಟನ್ ಎಂಬಲ್ಲಿ ಹುಟ್ಟಿದೆ. ಜನ್ಮಕ್ಕೆ ಬಂದ ಐದೇ ದಿನಗಳಲ್ಲಿ ಮಗು ತಾಯಿಯ ಕೈಹಿಡಿದು ನಡೆಯಲಾರಂಭಿಸಿತು. ಹುಟ್ಟಿದಂದಿನಿಂದ ಇದು ತನಕ ಅದು ಅಳಲಿಲ್ಲ. ತನ್ನ ವಿಚಿತ್ರ ಮಗುವನ್ನು ಪ್ರದರ್ಶನಕ್ಕಿಟ್ಟು ಹಣ ಗಳಿಸಲು ತಾಯಿ ಪ್ರಯತ್ನ ಮಾಡಿದಳು. ಆದರೆ ಮಗುವಿನ ಆರೋಗ್ಯಕ್ಕೆ ಇದು ಕೆಡಕಾಗಬಹುದೆಂದು ಪೋಲೀಸರು ತಡೆದರು.

✠

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನೊಳ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು,
23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 & 4 months . . . . . 2¼% p. a.

5 & 6 months . . . . . 2½% p. a.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of37 years avialable to you for arranging Insurance Investment. It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 14—5—1948 [ಸಂಚಿಕೆ 19]

ಪಾಕಿಸ್ತಾನದ ಮೇಲೆ ಪಠಾಣರ ವಿಶ್ವಾಸ ಕುಂದುತ್ತಿದೆ

ಅಪೂರ್ವ ಅಯಶಸ್ಸಿಯಾದ ಜಿನ್ನಾರ ಗಡಿನಾಡ ದಿಗ್ವಿಜಯ

ಗಡಿನಾಡ ಗಾಂಧಿಯ ಪ್ರಭಾವ ಹೆಚ್ಚುತ್ತಿದೆ

ಕೆಲವೊಂದು ಸಲ ಪ್ರಕೃತಿಯು ಸಹ ಮಾನವ ವ್ಯವಹಾರದತ್ತ ಗಮನ ಕೊಡುತ್ತದೆಂದು ಸೂಚಿತವಾಗುವ ಸಂದರ್ಭಗಳಿರುತ್ತವೆ. ಗಾಬರಿಗೊಂಡ ರಾಜ್ಯ ಮುತ್ಸದ್ದಿಗಳ ನಿರಾಶಾಯುಕ್ತ ನಾಟಕಕ್ಕೆ ನಿಸರ್ಗ ದೇವಿಯು ಸುಶ್ರಾವ್ಯವೂ, ಸಾಂಕೇತಿಕವಾದುದೂ ಆದ ಹಿನ್ನೆಲೆಯನ್ನೇರ್ಪಡಿಸುತ್ತಾಳೆ. ಗಡಿನಾಡು ಪ್ರಾಂತ್ಯದ ರಾಜಧಾನಿಯಾದ ಪೇಶಾವರವು, ಖೈಬರ್ ಕಣಿವೆಯ ದೂರ ದಿಗಂತದಲ್ಲಿ ಶೋಭಿಸುವ ನಸುಕು ನೀಲ ಪರ್ವತ ಶ್ರೇಣಿಗಳೂ, ಜಲ್ಲಿ ನೆಲ್ಲಾ ಐತಿಹಾಸಿಕ ಮಹತ್ವವೂ ವಿಹಂಗಮವಾದೊಂದು ನಾಟಕಕ್ಕೆ ರಮ್ಯವಾದ ರಂಗಭೂಮಿಯನ್ನೊದಗಿಸಿವೆ. ಇದರ ಮೇಲೆ ನಟಿಸಿದ ಮುಖ್ಯ ಪಾತ್ರಧಾರಿಯೆಂದರೆ ಆ ಕಡೆ ಇತ್ತೀಚೆಗೆ ಸಂಚಾರ ಮಾಡಿ ಬಂದಿರುವ ಮಿ। ಜಿನ್ನರು. ಆಗಲೇ ಬೃಹತ್ ಪರ್ವತಗ[illegible]ಖರಗಳಿಂದ ಸುಶೋಭಿತವಾಗಿ ಅಲಂಕರಿಸಲ್ಪಟ್ಟ ರಂಗಸ್ಥಳವು ಭೀಕರವೂ ಅರಿಷ್ಟಕಾರಕವೂ ಆದ ಕಾರ್ಮೋಡಗಳಾಚ್ಛಾದಿತವೂ ಬಿರುಗಾಳಿಗಳಿಂದ ಮತ್ತಷ್ಟು ಶೋಭಾಯಮಾನವಾಯಿತು.

ಅತ್ಯಂತ ನೆಮ್ಮದಿಯ ಕಾಲದಲ್ಲಿ ಕೂಡ ಇಂತಹ ವನ್ಯಗಿರಿ ಪ್ರದೇಶದಲ್ಲಿ ವಾಸಿಸುವ ಜನರ ಮನೋಭಾವವೆಂತಹದಿದೆಯೆಂದು ಅಳೆಯುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಇಲ್ಲಿನ ಅವರು ಅದೆಷ್ಟು ಸರಳ ಜೀವಿಗಳೇ ಆಗಿರಲಿ ಅವರ ಆ ಭಾವನೆಗಳ ಹಿನ್ನೆಲೆಯಲ್ಲಿರುವ ಉದ್ದೇಶಗಳಾವುವೆಂದು ತಿಳಕೊಳ್ಳುವುದೂ ಕಷ್ಟ. ಇಷ್ಟಾದರೂ ಗಡಿನಾಡು ಪ್ರಾಂತ್ಯದ ಗುಡ್ಡಗಾಡು ಜನರ ಪಾಕಿಸ್ತಾನ ಪರವಾಗಿದ್ದ ಉತ್ಸಾಹವು ಕುಂದತೊಡಗಿದೆಂದು ಭಾವಿಸಲು ಕೆಲವೊಂದು ಗಣನೀಯ ಕಾರಣಗಳಿವೆ. ಜಿನ್ನಾಸಾಹೇಬರು ಈ ಕಡೆ ಬರುವ ಕೆಲವೇ ತಿಂಗಳುಗಳ ಮುಂಚೆ ಈ ಪ್ರದೇಶವನ್ನು ಸಂದರ್ಶಿಸಿದ ಪಾಕಿಸ್ತಾನ ಮುಖ್ಯ ಮಂತ್ರಿ ಲಿಯಾಖತ್ ಆಲಿಖಾನರಿಗೆ ಇಲ್ಲಿಯವರು ಇತ್ತ ಸ್ವಾಗತದ ಹತ್ತನೇ ಒಂದಂಶದಷ್ಟು ಸಂಭ್ರಮೋತ್ಸಾಹವು ಸ್ವತಃ ಪಾಕಿಸ್ತಾನದ ಒಡೆಯರೇ (ಜಿನ್ನರು) ಬಂದಾಗ ತೋರಿಸಲ್ಪಡಲಿಲ್ಲವೆಂದು ಪ್ರತ್ಯಕ್ಷದರ್ಶಿಗಳು ತಿಳಿಸುತ್ತಾರೆ.

ಪೇಶಾವರದೊಳಗಿನ ಪಠಾಣರಾರೂ ಜಿನ್ನಾ ಸಂಚಾರ ಕಾಲದಲ್ಲಿ ಬಂದೂಕು ಗುಂಡುಗಳನ್ನು ಧರಿಸಿ ತಿರುಗಬಾರದೆಂದು ನಿರ್ಬಂಧಿಸಲ್ಪಟ್ಟಿದ್ದರು. ಹೀಗಾಗಿ ಅವರ ಸಾಂಪ್ರದಾಯದಂತೆ ಯಾರಾದರೂ ಗಣ್ಯ ವ್ಯಕ್ತಿಗಳು ಬಂದಾಗ ಗಾಳಿಯಲ್ಲಿ ಗುಂಡು ಹಾರಿಸಿ ಸ್ವಾಗತವೀಯುವ ಅವರ ಉತ್ಸಾಹಕ್ಕೆ ಭಂಗವುಂಟಾಯಿತು. ಆದರೆ ನಗರದ ಹೊರಗೆ (ಖೈಬರ್ ಕಣಿವೆಯ ಪ್ರದೇಶದಲ್ಲಿ) ಅಂತಹ ನಿರ್ಬಂಧವಿರಲಿಲ್ಲ. ಪತ್ರಿಕಾ ಪ್ರತಿನಿಧಿಗಳು ಜಿನ್ನರೊಡನೆ ಕಣಿವೆಯ ಬಳಿಯಿರುವ ಲಾಂಡಿ ಕೋಟಾಲ್‌ದ ತನಕ ಹಿಂಬಾಲಿಸಿದ್ದರು. ಗವರ್ನರ್ ಜನರಲ್ಲರನ್ನು ಸ್ವಾಗತಿಸಲು ಈ ಪ್ರದೇಶದ ದಾರಿಯಲ್ಲಿ ಕೇವಲ ಕೈಮುಷ್ಟಿಯಷ್ಟು ಗುಡ್ಡಗಾಡದ ಜನರು ಕಾಣಿಸಿಕೊಂಡಿದ್ದರು. ಮಾತ್ರವಲ್ಲ ಸ್ವಾಗತವೂ ಅ[illegible]ಸಂಭ್ರಮದ್ದು ಆಗಿತ್ತು.

ಆ ಕಡೆಯಲ್ಲಿ ಇತ್ತೀಚಿಗೆ ಬಾದಷಾಖಾನರೆಂದು ಜನಪ್ರಿಯರಾಗಿರುವ ಖಾನ್ ಅಬ್ದುಲ್ ಗಫೂರಖಾನರಿಗೆ ಹೆಚ್ಚೆಚ್ಚಿನ ಸಹಾನುಭೂತಿ ಸಿಗತೊಡಗಿದೆ. ಅವರ ಹಿಂಬಾಲಕರ ಸಂಖ್ಯೆಯೂ ಈಚೆಗೆ ಹೆಚ್ಚಿದ್ದು ಕ್ವೈದೆ ಅಜಾಮ ಜಿನ್ನರ ಈ ಸಂಚಾರದಿಂದ ಅದನ್ನು ಕಡಿಮೆ ಮಾಡಲು ಸಾಧ್ಯವಾಗಲಿಲ್ಲ. ಮೊದಲನೆಯದಾಗಿ ಪಾಕಿಸ್ತಾನ ಸರಕಾರವು ಅಲ್ಲಿನ ಕೆಂಪಂಗಿ ದಳದವರ ಕಡೆ ಯಾವ ಉದಾರತ್ವವನ್ನು ತೋರಿಸುವಂತಹದಾಗಿಲ್ಲ. ಇವರ ಮುಖಂಡರೊಡನೆ ಸಂಭಾಷಿಸಿದಾಗ, ತಾವು ಹೊಸ ರಾಜ್ಯಕ್ಕೆ ವಿಧೇಯತೆಯನ್ನು—ಅರ್ಪಿಸಿರುವುದಾದರೂ ಸರಕಾರವು ಅವರ (ಕೆಂಪಂಗಿಯವರ) ಹಿಂದಿನ ವಿರೋಧ ಭಾವದ ಕುರಿತು ಪದೇ ಪದೇ ಎಚ್ಚರಿಕೆ ಕೊಡುವ ಹವ್ಯಾಸವನ್ನು ಬಿಟ್ಟಿಲ್ಲವೆಂಬ ಸಂಗತಿಯು ತಿಳಿದು ಬಂತು. ಸರಕಾರದ ಅಧಿಕಾರಿವರ್ಗದವರಾದರೂ ಕುದಾಯಿ ಕಿದ್ಮತ್‌ಗಾರರನ್ನು ಹಿಂಸೆಗೊಳಿ ಮಾಡುವ ಧೋರಣೆಯನ್ನು ಅನುಸರಿಸಿರುವರು. ಅವರ ಸಭೆಗಳು ಚದರಿಸಲ್ಪಡುತ್ತಿವೆ. ಮಾತ್ರವಲ್ಲ ಅವರ ಧ್ವಜವು [illegible]ಕಿತ್ತಲಿದು ಹಾಕಲ್ಪಡುತ್ತದೆ, ಜಿನ್ನರೊಡನೆ ಮಾತುಕತೆ ಮುಗಿಸಿ ಅಬ್ದುಲ್ ಗಫೂರ್[illegible] ಹೊರಬರುತ್ತಿರುವಾಗಲೇ ಇಂತಹದೊಂದು ಘಟನೆಯನ್ನು ವಿವರಿಸುವ ತಂತಿ ವರ್ತಮಾನವೊಂದು ಅವರ ಕೈಗೆ ಕೊಡಲ್ಪಟ್ಟಿತು.

ಹಿಂದಿನ ಧೋರಣೆಯ ಮುಂದರಿತ

ಬ್ರಿಟಿಷ್ ಆಳ್ವಿಕೆಯ ಕಾಲದ ತತ್ವಗಳ ಮೇಲೆ ಆಧರಿಸಿರುವ ಧೋರಣೆಯು ಈಗಲೂ ಪಾಕಿಸ್ತಾನ ಸರಕಾರದಿಂದ ಅನುಸರಿಸಲ್ಪಡುತ್ತದೆಂಬ ಗಫೂರ್ ಖಾನರ ಟೀಕೆಗೆ ಆ ಕಡೆಗಳಲ್ಲಿ ಬಲವಾದ ಬೆಂಬಲ ದೊರಕಿದೆ. ಬ್ರಿಟಿಷರು ಹೋದರೂ ಅವರ ಕೃತಿ ಚಾತುರ್ಯದ ಕಾಪ[illegible]ಕಿಸ್ತಾನ ನಡೆಸುತ್ತದೆಂದೂ ಅವರ ಹೇಳಿದ್ದಾರೆ. ಈಗಲೂ ಗಡಿನಾಡು ಮತ್ತು ಬಲೂಚಿಸ್ತಾನ ಪ್ರಾಂತ್ಯಗಳಲ್ಲಿ ಅದೆಷ್ಟೋ ಮುಖ್ಯಾಧಿಕಾರಿಯ ಹುದ್ದೆಗಳು ಬ್ರಿಟಿಷ್ ಅಧಿಕಾರಿಗಳಿಗೇ ಕೊಡಲ್ಪಟ್ಟಿರುತ್ತವೆಂಬುದನ್ನು ಪರಿಶೀಲಿಸಿದರೆ ಗಡಿನಾಡು ಗಾಂಧಿಯ ಈ ಆರೋಪದ ನಿಜಸ್ಥಿತಿ ಮನವಟ್ಟಾಗುವುದು. ಅಂತಹ ಅಧಿಕಾರ ನಡೆಸಿಕೊಳ್ಳಲು ಅನುಭವಸ್ಥರಿಲ್ಲವೆಂದು ಈ ಕುರಿತಾಗಿ ವಿವರಿಸಲ್ಪಟ್ಟದರಲ್ಲಿ ಸ್ವಲ್ಪ ಮಟ್ಟಿನ ನಿಜಾಂಶವಿರುವುದಾದರೂ ಸಂಗತಿಯು ಅಲ್ಲಿಗೇ ಅಂತ್ಯವಾಗುವುದಿಲ್ಲ. **"ಜನರನ್ನಾಳುವ ಎರಡು ವಿಧಾನಗಳಿವೆ. ಪ್ರೀತಿ ಪೂರ್ವಕವಾಗಿ ಒಂದು, ಬಲಾತ್ಕಾರದಿಂದ ಇನ್ನೊಂದು. ಬ್ರಿಟಿಷರು ಎರಡನೆಯ ವಿಧಾನವನ್ನೇ ಅನುಸರಿಸಿದ್ದರು. ಪಾಕಿಸ್ತಾನವೂ ಅವರ ಹಾಗೇ ಮಾಡಿದೆ."**

ಅದೆಂತಹ ಉಜ್ವಲ ರಾಜಕೀಯ ಶಿಕ್ಷಣವಿದ್ದರೂ ಮಿ। ಜಿನ್ನರು ಗಣನೀಯ ರಾಜತಂತ್ರ ಚತುರರೆಂದೆನಿಸಿಕೊಂಡವರಲ್ಲ. ಗಫೂರ್ ಖಾನರೊಡನೆ ಅವರು ನಡೆಸಿದ ಮಾತುಕತೆಗಳಿಂದ ಆ ಅನುಭವಸ್ಥ ಪಠಾಣ ಧುರೀಣರನ್ನು ಲವಲೇಶವಾದರೂ ಅಲುಗಾಡುವಂತೆ ಮಾಡಲು ಶಕ್ಯವಾಗಿಲ್ಲ. ಸ್ವಲ್ಪ ಸಮಯದ ತನಕ ಮಾತ್ರ ಪಠಾಣಸ್ತಾನದ ಯೋಜನೆಯನ್ನು ಬದಿಗೊತ್ತಲು ಸಾಧ್ಯವಾಗಬಹುದು. ಹೆಸರಿಗೆ ಮಾತ್ರ "ಪ್ರಜಾಪ್ರಭುತ್ವ" ಆದರ್ಶವಿಟ್ಟುಕೊಂಡ ಮುಸ್ಲಿಂ ಲೀಗಿನ ಅಥವಾ ಅದರ ಬೇರೆ ಯಾವ ಅಂಗವನ್ನೂ ತಾವು ಸೇರುವುದು ಶಕ್ಯವಿಲ್ಲವೆಂದು ಗಫೂರ್ ಖಾನರು ಸ್ಪಷ್ಟಪಡಿಸಿದರು. ಕಾರಣ ಅವರೊಳಗೆ ಮೂಲತಃ ತತ್ವ ವ್ಯತ್ಯಾಸಗಳಿವೆ. ಖಾನ ಬಂಧುಗಳು ಮತ್ತವರ ಅನುಯಾಯಿಗಳು ಪಾಕಿಸ್ತಾನದ ಸೇವೆ ಮಾಡಲು ಸಿದ್ಧರಿದ್ದಾರೆ—ಆದರೆ ಜಿನ್ನರ ಆಜ್ಞಾವರ್ತಿಗಳಾಗಲ್ಲ.

ಸದ್ಯಕ್ಕೆ ಕೆಂಪಂಗಿಯವರಿಂದ ಗಡಿನಾಡಿನ ಮುಸ್ಲಿಂಲೀಗ್ ಮಂತ್ರಿಮಂಡಳವನ್ನುರುಳಿಸಲು ಸಾಧ್ಯವಿಲ್ಲದ್ದರಿಂದ ಪರಿಸ್ಥಿತಿ ಸ್ವಲ್ಪ ಸಮಯದ ತನಕ ಹಾಗೇ ಸ್ವಚ್ಛವಿರಬೇಕಾಗುತ್ತದೆ. ಮಾಜಿ ಮುಖ್ಯ ಮಂತ್ರಿ ಖಾನ್ ಸಾಹೇಬರೂ ಸದ್ಯಕ್ಕೆ ರಾಜಕೀಯದಿಂದ ಅರೆ ನಿವೃತ್ತರಾದಂತಿದ್ದು ದೂರದ ತಮ್ಮ ವಸತಿಯೊಂದರಲ್ಲಿ ವಿಶ್ರಾಂತಿ ಪಡೆಯುತ್ತಿರುವರು. ಬಾದಷಹಖಾನರಾದರೂ ಸ್ವತಃ ಸಂತ ಪುರುಷರು. ಆದರೆ ಸಂತರು ಉತ್ತಮ ರಾಜಕೀಯ ಧುರೀಣರಾಗಲಾರರು. ಪಾಕಿಸ್ತಾನ ಸರಕಾರದ ಅವರ ಟೀಕೆಯಿಂದ ಸದ್ಯಕ್ಕೆ ಯಾವ ಪರಿಣಾಮವೂ ಆಗದು. ಕಾಶ್ಮೀರ ಸಮಸ್ಯೆಯನ್ನು ಪ್ರೀತಿ ಮತ್ತು ಅಹಿಂಸೆಯ ವಿಧಾನಗಳಿಂದ ಪರಿಹರಿಸಬಹುದೆಂಬವರ ಬಿನ್ನಹದಿಂದ ಪಠಾಣರ ಮುಸ್ಲಿಂ ಬಾಂಧವ್ಯ ಪ್ರೇಮವಾಗಲಿ ಅವರ ಉಗ್ರ ದಬ್ಬಾಳಿಕೆ ವೃತ್ತಿಯಾಗಲಿ ಕಡಿಮೆ ಮಾಡುವಂತಾಗಲಿಲ್ಲ.

ಕಳೆದ ಎಪ್ರಿಲ್ 17ರಂದು ಸುಮಾರು 25 ಲಕ್ಷ ಗುಡ್ಡಗಾಡು ಪಂಗಡ ಜನರ ಎಲ್ಲಾ ಪ್ರತಿನಿಧಿಗಳು ಜಿನ್ನರನ್ನು ಭೇಟಿಯಾಗಿ ಮಜೂರೆಸಲ್ಲಿಸಿದರು. ತಮ್ಮ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆಯಾಗಬೇಕೆಂದೂ, ತಮ್ಮ ತರುಣರಿಗೆ ಸೈನ್ಯಗಳಲ್ಲಿ ಯೋಗ್ಯ ಸಂದರ್ಭಗಳು ಸಿಗುವಂತಾಗಬೇಕೆಂದೂ ಮಾತ್ರವಲ್ಲ ಕಾಶ್ಮೀರದಲ್ಲಿನ ಡೋಗ್ರಾ ರಜಪೂತರ ದಬ್ಬಾಳಿಕೆಯನ್ನು ತಾವು ಸಹಿಸುವುದಿಲ್ಲವಾಗಿಯೂ, ಆ ಕುರಿತು ಹೆಚ್ಚಿನ ಸಹಾಯವನ್ನು ಪಾಕಿಸ್ತಾನವು ತಮಗೆ ಕೊಡಬೇಕೆಂದೂ ಅವರು ಬಿನ್ನವಿಸಿಕೊಂಡರು. ಇಂಗ್ಲಿಷಿನಲ್ಲಿ ಮಾತನಾಡುತ್ತ ಮಿ। ಜಿನ್ನರು ಅವರ ಕೇಳಿಕೆಗಳನ್ನು ಆದಷ್ಟು ಹೆಚ್ಚಾಗಿ ಸಲ್ಲಿಸಲು ಪ್ರಯತ್ನಿಸುವುದಾಗಿ ವಚನವಿತ್ತರು. ಕಾಶ್ಮೀರದ ಕುರಿತು ಏನನ್ನೂ ಹೇಳಿಲ್ಲ.

(೨ನೇ ಪುಟ ನೋಡಿ)

(೧ನೇ ಪುಟದಿಂದ)

ಪಠಾಣರ ಲಕ್ಷಣ

ಪಠಾಣರ ದರೋಡೆಖೋರತನಕ್ಕೆ ಅವರ ಬಡತನವೇ ಕಾರಣವೆಂದೆನ್ನಲಾಗಿದೆ. ಆದರೆ ಅವರು ಉದಾರಿಗಳೂ, ಸರಳ ಜೀವಿಗಳೂ ಮತ್ತು ಶೀಲವಂತ ಅತಿಥಿ ಸತ್ಕಾರಿಗಳೆಂದೂ ಪ್ರತೀತಿಯಿದೆ ಅವರು ಜಾಣಾಕ್ಷ ಕಳ್ಳರಿರುವಂತೆ ಶ್ರಮ ಸಾಧಕ ಕೃಷಿಕರೂ ಆಗಿರುವರು ಈಗ ಸದ್ಯಕ್ಕೆ ಪಾಕಿಸ್ತಾನಕ್ಕೆ ಅವರೊಂದು ಹೊರೆಯೇ ಆಗಿದ್ದಾರೆ ಬ್ರಿಟಿಷರು (ಅವರೆಷ್ಟು ಅನ್ಯಾಯಗಾರರೇ ಇರಲಿ) ಈಗ ಆ ಕಡೆಗಳಿಂದ ಕಾಲ್ತೆಗೆದಂದಿನಿಂದ ಪಶ್ಚಿಮ ಪಾಕಿಸ್ತಾನದಲ್ಲಿ ಪಠಾಣರ ಹಾವಳಿಯೇ ಹೆಚ್ಚಾಗಿದೆ. ಜಗತ್ತಿನ ಇತರ ಭಾಗಗಳಲ್ಲಿ ನಡೆಯುವ ಕೊಲೆಪಾತಕಗಳಿಗಿಂತ ಹೆಚ್ಚು ಕೊಲೆಗಳು ಈ ಕಡೆಗಳಲ್ಲಿ ನಡೆಸಲ್ಪಡುತ್ತವೆಂದು ಹೇಳಲಾಗಿದೆ ಇಷ್ಟಾದರೂ ಹಿಡಿಯಲ್ಪಟ್ಟ ಆರೋಪಿಗಳು ಅತ್ಯಲ್ಪ. ಒಂದು ಜಿಲ್ಲೆಯಲ್ಲಿ 84 ಕೊಲೆಗಳಾಗಿದ್ದರೂ ಶಿಕ್ಷೆಗೊಳಮಾಡಲ್ಪಟ್ಟವರು ಇಬ್ಬರು ಮಾತ್ರ. ಆದರಲ್ಲೂ ಅವರಿಗೆ ಮರಣ ದಂಡನೆ ವಿಧಿಸಲ್ಪಟ್ಟಿಲ್ಲ ಸಾಕ್ಷಿಗಳು ಉದಾಹರಣೆ ಕೊಡಲು ಹೆದರುತ್ತಾರೆ ಆರೋಪಿಗಳಿಗೆ ಸಾರ್ವಜನಿಕ ಬೆಂಬಲವಿದೆಯೆಂದೂ ಸರಕಾರಕ್ಕೆ ತಿಳಿದಿದೆ

ಶಸ್ತ್ರ ಕಾರ್ಖಾನೆಗಳು

ಕೊಹಾಟ್ ಕಣಿವೆಯ ಗುಡ್ಡ ಸಾಲುಗಳ ನಡವೆಯಿರುವ ಒಂದು ಪಠಾಣ ಶಸ್ತ್ರಾಸ್ತ್ರ ಕಾರ್ಖಾನೆಯನ್ನು ನಾನು ನೋಡಿದೆ ಬ್ರಿಟಿಷ್ ಮತ್ತು ಅಮೇರಿಕನ್ ಮಾದರಿಯ ಸಣ್ಣಪುಟ್ಟ ಬಂದೂಕುಗಳು ಇಲ್ಲಿ ಅದೆಷ್ಟು ಯಥಾಪ್ರತಿ ತಯಾರಿಸಲ್ಪಡುವುವೆಂದರೆ ಅವುಗಳ ವ್ಯತ್ಯಾಸವನ್ನು ತಜ್ಞರಿಂದಲ್ಲದೆ ಇತರರಿಂದ ಗುರುತಿಸಲು ಸಾಧ್ಯವಿಲ್ಲ ಸೂಕ್ಷ್ಮ ಯಂತ್ರಗಾರಿಕೆಯ ಕೆಲಸವನ್ನವರು ತಮ್ಮ ಅತೀ ಹಳೆಯ ಕೆಲವು ವಿಧಾನಗಳಿಂದ ಮಾಡುತ್ತಿರುವದು ಕೌತುಕದ ಸಂಗತಿ. ಅತ್ಯಾಧುನಿಕ ಯಂತ್ರಗಳಲ್ಲಿ ಅತ್ಯಂತ ಸೂಕ್ಷ್ಮತೆಯಿಂದ ನಿರ್ವಹಿಸಬೇಕಾದ ಕೆಲಸವನ್ನವರು ತಮ್ಮ ಕಣ್ಣು ಕೈಗಳ ಚುರುಕುತನದಿಂದಲೇ ಅತೀವ ಶ್ರಮ ತಾಳ್ಮೆಯಿಂದ ಸಿದ್ಧಗೊಳಿಸುವರು. ಅಲ್ಲಿಯ ಕೆಲಸಗಾರರು ತಿಂಗಳಿಗೆ ಸುಮಾರು 500 ರೂಪಾಯಿಗಳನ್ನು ಸಂಪಾದಿಸುವರಂತೆ. ಒಂದು ಗುಂಡಿನ ಬಂದೂಕಗಳಿಗೆ 150 ರೂಪಾಯಿ ಬೆಲೆ. ರಿವಾಲ್ವರುಗಳಿಗೆ ಸುಮಾರು 300 ರೂಪಾಯಿ. ಗುಂಡುಗಳಿಗೆ ಒಂದರಿಂದ ಎರಡು ರೂಪಾಯಿ ಬೆಲೆಯಿದೆ ಈ ಅಂಕೆ ಸಂಖ್ಯೆಗಳನ್ನು ನೋಡುವಾಗ ಈ ಜನರು ಬಡವರೆಂಬದು ಹೇಗೆಂದು ತಿಳಿಯುವುದಿಲ್ಲ ಬಂದೂಕು ಇಲ್ಲದ ಪಠಾಣನೇ ಕಾಣಸಿಗಲಾರ

ಗಡಿನಾಡು ಗುಡ್ಡ ಪಂಗಡದವರ ಸಮಸ್ಯೆಗೊಂದು ಇತ್ಯರ್ಥ ಇನ್ನೂ ಸಿಗಲಿಲ್ಲ ಬಡತನವು ಬಂದು ನೆಪವಾಗಿ ಹೇಳಲಾಗುತ್ತದೆ. ಆದರೆ ಈ ದೇಶದ ಇತರ ಭಾಗಗಳಲ್ಲಿ ಇವರಿಗಿಂತಲೂ ಹೆಚ್ಚು ಬಡತನವಿದ್ದವರಿದ್ದಾರೆ ಪಠಾಣರೆಲ್ಲರನ್ನು ಪಾಕಿಸ್ತಾನ ಸೈನ್ಯಕ್ಕೆ ಸೇರಿಸಿದರೆ ಈ ಸಮಸ್ಯೆ ಇತ್ಯರ್ಥವಾಗಬಹುದೆಂದು ಕೆಲವರ ಸೂಚನೆಯಿದೆ ಆದರೆ ಪಠಾಣರು ಸೈನ್ಯಶಿಸ್ತನ್ನು ಮೆಚ್ಚುವುದಿಲ್ಲ ತಮ್ಮ ತಂಪು ಗುಡ್ಡಗಾಡಿನ ವಲಸೆಯನ್ನು ಬಹುಕಾಲ ಬಿಟ್ಟಿರಲೂ ಅವರಿಗೆ ಇಷ್ಟವಿಲ್ಲ ಪಠಾಣ ಸಮಸ್ಯೆಯೆಂದರೆ ಓರ್ವ ತುಂಟ ತಲೆಹಾಳಾದ ಐರೋಪ್ಯ ಹುಡುಗನಂತೆಂದು ತಿಳಿಯಬೇಕಾಗುತ್ತದೆ ಯೋಗ್ಯ ಮಾನಸಿಕ ಚಿಕಿತ್ಸೆಯಿಂದಿದನ್ನು ಗುಣಪಡಿಸಬಹುದು

ಈ ಮಿಲಿಯಾವಧಿ ಗುಡ್ಡಗಾಡು ಪಂಗಡದವರ ಮಧ್ಯ ಸುಮಾರು 4 ಸಾವಿರ ಹಿಂದುಗಳು ಇನ್ನೂ ವಾಸಿಸಿಕೊಂಡಿದ್ದಾರೆ ಇದರಲ್ಲರ್ಧ ಮಂದಿ ಪಂಗಡ ಪ್ರದೇಶಗಳಲ್ಲೂ ಇನ್ನರ್ಧ ನಗರ ಪಟ್ಟಣಗಳಲ್ಲೂ ಇದ್ದಾರೆ ಆದರೆ ಇವರ ಜೀವನವು ಅಲ್ಲಿ ಸುಗಮವಾಗಿಲ್ಲ ಎಂದಾದರೂ ಆಪಾಯವು ಕಟ್ಟಿಟ್ಟದ್ದು ಈಗ ಕವೇಣ ಹಿಂದೂಗಳನ್ನಲ್ಲಿಂದ ಹೊರಕ್ಕೆ ತರುವ ಕಾರ್ಯ ನಡೆಯುತ್ತಿದೆ (ಹಿಂದೂ ಪತ್ರಿಕೆ)

ಸಪ್ಟೆಂಬರ, ೧೮೨೦

ನೆಪೋಲಿಯನನ ಶವಸಂಸ್ಕಾರ ಸಮಾರಂಭದ ಸ್ಮಾರಕಕ್ಕಾಗಿ ಫ್ರೆಂಚರು ಜಗತ್ತಿನ ಅತೀ ಭವ್ಯವಾದ ಕಟ್ಟಡವೊಂದನ್ನು ಕಟ್ಟಿಸಿರುವರು "ಈ ಸ್ಥಳದಿಂದ ಅನತಿದೂರದಲ್ಲಿ ಇನ್ನಿರ್ವ ಸಾಹಸವಂತ ವ್ಯಕ್ತಿಗಳಿಗೊಂದು ಸ್ಮಾರಕ ರಚಿಸಲಾಗಿದೆ ಈ ಕೀರ್ತಿಶಾಲಿಗಳು ನೆಪೋಲಿಯನ್ ಚಕ್ರವರ್ತಿಗಿಂತ ಜಗತ್ತಿಗೆ ಹೆಚ್ಚಿನ ಒಳಿತನ್ನು ಮಾಡಿದಂಥವರು

ಸ್ಯೆಂಟ್ ಮ್ಯಾಕೇಲ್ ಎಂಬಲ್ಲಿ ನಿರ್ಮಿಸಲ್ಪಟ್ಟಿರುವ ಈ ಸ್ಮಾರಕವು ಇರ್ವ ಫ್ರೆಂಚ್ ರಸಾಯನತಜ್ಞರ ಸ್ಮಾರಕ್ಕಾಗಿದೆ ಪೆಲ್ಲೆಟಿಯರ್ ಮತ್ತು ಕಾವೆಂಟೊ ಎಂಬಿವರು ೧೮೨೦ರ ಸೆಪ್ಟೆಂಬರದಲ್ಲಿ ಒಂದು ಅತ್ಯದ್ಭುತವಾದ ಶೋಧೆಯನ್ನು ಮಾಡಿದರು ನೆಪೋಲಿಯನನು ತನ್ನೆಲ್ಲಾ ಯುದ್ಧಗಳಲ್ಲಿ ಹತಗೊಳಿಸಿದ ಮಾನವಕೋಟಿಯು ಅದೆಷ್ಟೊ ಪಾಲಷ್ಟು ಹೆಚ್ಚಿನ ಮಾನವಜೀವಗಳನ್ನು ಈ ಶೋಧೆಯಿಂದ ರಕ್ಷಿಸಲು ಸಾಧ್ಯವಾಯಿತು

೧೮೨೦ರ ಮೊದಲು ಕ್ವಿನೈನಿನ ಉಪಯೋಗ ಜಗತ್ತಿಗೆ ತಿಳಿದಿರಲಿಲ್ಲ ಆಗ ಮಲೇರಿಯಾ ಜ್ವರವನ್ನು ಗುಣಪಡಿಸುವುದು ಕಷ್ಟಕರವೂ ಅರಾಜಕವೂ ಆದ ಕಾರ್ಯವಾಗಿತ್ತು ಸಿಂಚೋನಾ ತೊಗಟೆಯ ಪುಡಿ ರಸಾಯನವಿದ್ದರೂ ಆಗ ಮಲೇರಿಯಾ ರೋಗಿಗಳಿಗೆ ಕೊಡುತ್ತಿದ್ದರು ಅದೆಷ್ಟು ಕೊಡಬೇಕು ಆ ರಸಾಯನದಲ್ಲಿ ಪರಿಣಾಮಕಾರಿ ಔಷಧಿಸತ್ವ ಎಷ್ಟಿರಬೇಕು ಎಂಬ ನಿರ್ದಿಷ್ಟ ಜ್ಞಾನ ಯಾರಿಗೂ ಇರಲಿಲ್ಲ ಹೀಗಾಗಿ ಇದನ್ನು ಸೇವಿಸಿದವರು ಗುಣ ಹೊಂದುವುದು ಅಪರೂಪವಾಗಿತ್ತು ಆದುದರಿಂದ ಜಗತ್ತಿಗೊಂದು ಉತ್ತಮ ಪರಿಹಾರದ ಅವಶ್ಯಕತೆಯಿತ್ತು, ಕೆಲವು ಉಷ್ಣವಲಯಗಳಲ್ಲಿ ಮಿಲಿಯನಾವಧಿ ಜನರು ಮಲೇರಿಯಾ ಜ್ವರದಿಂದ ನರಳುತ್ತಿದ್ದರು ಸಂಯುಕ್ತ ಅಮೆರಿಕದ ಆಗ್ನೇಯ ಭಾಗದಲ್ಲಿನ ತೋಟ ಪ್ರದೇಶದಲ್ಲೂ ಮಲೇರಿಯವು ಅತೀವ ಹಾವಳಿಯನ್ನುಂಟುಮಾಡುತಿತ್ತು.

ಪೆಲ್ಲೆಟಿಯರ್ ಮತ್ತು ಕಾವೆಂಟೊ ಇವರು ಸಿಂಚೋನಾ ತೊಗಟೆಯ ಕುರಿತು ಪರಿಶೋಧನೆಯನ್ನು ಕೈಕೊಂಡರು ದೀರ್ಘಕಾಲದ ಪರಿಶ್ರಮದಾಯಕವಾದ ಪರಿಶೋಧನೆಯ ನಂತರ ೧೮೨೦ ಸೆಪ್ಟೆಂಬರ ೧೧ರಲ್ಲಿ ಅವರು ತಾವೊಂದು ವಸ್ತುವನ್ನು ಕಂಡು ಹಿಡಿದಿರುವುದಾಗಿಯೂ, ಅದಕ್ಕೆ ಕ್ವಿನೈನೆಂದು ನಾಮಕರಣ ಮಾಡಿರುವುದಾಗಿಯೂ ಸಾರಿದರು. ಸಿಂಚೋನಾ ತೊಗಟೆಯಿಂದ ಕ್ವಿನೈನನ್ನು ತಯಾರಿಸುವ ವಿಧಾನವನ್ನೂ ಅವರು ಜಗತ್ತಿಗೆ ಬಹಿರಂಗಪಡಿಸಿದರು

ಈ ಶೋಧನೆಯಿಂದ ಮಲೇರಿಯಾದ ಅಪಾಯಕ್ಕೊಳಗಾದ ಮಿಲಿಯಾವಧಿ ಜನರ ಜೀವನದಲ್ಲಿ ಮಹತ್ತರವಾದ ಮಾರ್ಪಾಟಾಯಿತು ಇಂದು ನಾವು ಮಲೇರಿಯಕ್ಕೆ ಖಂಡಿತ ಪರಿಹಾರವಾಗಿರುವ ಈ ಔಷಧಿಯನ್ನು ನಾವು ಯಾವ ಮದ್ದಿನಂಗಡಿಯಿಂದಲಾದರೂ ಕೆಲವೇ ಆಣೆಗಳಿಗೆ ಕೊಂಡುಕೊಳ್ಳಲು ಶಕ್ಯರಾಗಿರುವೆವಾದರೆ ಅದು ಈ ಮಹನೀಯರ ಸತ್ಪ್ರಯತ್ನದ ಫಲ ಮತ್ತು ನಾವವರಿಗೆ ತುಂಬಾ ಕೃತಜ್ಞರಾಗಿದ್ದೇವೆ

ಮಾನವೋದ್ಧಾರಕರಾದ ಪೆಲ್ಲೆಟಿಯರ್ ಮತ್ತು ಕಾವೆಂಟೊ ಮಹನೀಯರಿಗೆ ನಿಜವಾಗಿ ಯಾವ ಸ್ಮಾರಕದ ಅವಶ್ಯಕತೆಯೂ ಇಲ್ಲ ಇಷ್ಟಾದರೂ ಜಗತ್ತಿಗ ಆದನ್ನು ಇರಿಸಬೇಕೆಂದು ತೋರಿತು ಅಂತೆ ಸಾರ್ವಜನಿಕ ಧನಸಂಗ್ರಹದನ್ನು ನಿರ್ಮಿಸಲಾಯಿತು

ಮಲೇರಿಯಾ ಜ್ವರಬಾಧೆ ತಡೆಯಲು ಆ ವ್ಯಾಧಿ ಕಾಲದಲ್ಲಿ ದಿವಸಕ್ಕೆ ೬ ಕಾಳಗಳಷ್ಟು ಕ್ವಿನೈನನ್ನು ಸೇವಿಸಬೇಕೆಂದು ಜನಾಂಗ ಸಂಘದ ಮಲೇರಿಯಾ ವೈದ್ಯತಜ್ಞರ ಸಮಿತಿಯು ಶಿಫಾರಸು ಮಾಡಿದೆ ಜ್ವರ ಬಂದವರಿಗೆ ದಿನಂಪ್ರತಿ ೧೫–೨೦ ಕಾಳುಗಳಷ್ಟನ್ನು ೫ ೭ ದಿನಗಳ ತನಕ ಕೊಡಬೇಕು ಆನಂತರದಲ್ಲಿ ವಿಶೇಷ ಕಾಳಜಿಯಿಂದ ಜ್ವರವು ಪುನಃ ಬಾರದಂತೆ ಕ್ವಿನೈನ್ ಸೇವಿಸುವುದು

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ಧರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE CANARA BANK, LIMITED.

ESTD: 1906

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ನಾಗರೀಕ ಶಿಷ್ಟಾಚಾರದಲ್ಲಿ ತರಬೇತಿ

ಸಾಮಾಜಿಕ ಶಿಕ್ಷಣ ವಿಧಾನದ ಆಧುನಿಕ ರೂಪಾಂತರ

ಅನುಭವದಿಂದ ಗುಣಶೀಲಗಳ ಬೆಳವಣಿಗೆ

ಮದ್ರಾಸ್ ಸರಕಾರದ ವಿದ್ಯಾಶಾಖೆಯವರು ಈ ತಿಂಗಳಲ್ಲಿ ಪ್ರಾಂತದ ಎಲ್ಲಾ ಜಿಲ್ಲೆಗಳ ಅಧ್ಯಾಪಕರಿಗೆ 'ನಾಗರಿಕತನದ ತರಬೇತಿ' (Citizenship Training) ಯ ಪರಿಚಯವನ್ನು ಮಾಡಲು ಮದ್ರಾಸಿನಲ್ಲಿ ಒಂದು ಶಿಬಿರವನ್ನು ತೆರೆಯಲಿರುವರು ಕೇಂದ್ರ ಸರಕಾರದ ವಿದ್ಯಾಂಗ ಶಾಖೆಯವರು ಶಾಲೆಗಳಲ್ಲಿ ಸಾಮಾಜಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಬೇಕೆಂದು ನಿರ್ದೇಶಿಸಿದ್ದು ಆ ಕುರಿತು ದೇಶವಿಶಾಲದಲ್ಲೆಲ್ಲ ಈ ನಾಗರಿಕ ಶಿಷ್ಟಾಚಾರದ ತರಬೇತಿಯ ಕಾರ್ಯವು ಸಾಗಿಸಲ್ಪಡುವುದು

ಸಾಮಾನ್ಯ ಮನುಷ್ಯನಲ್ಲಿ ನಾಗರಿಕತನದ ಮತ್ತು ಸಾಮಾಜಿಕ ವ್ಯವಹಾರದ ಪರಿಜ್ಞಾನವನ್ನುಂಟುಮಾಡಿ ಅವನು ಉತ್ತಮ ನಾಗರಿಕನಾಗಿ ಬಾಳುವಂತೆ ಮಾಡುವುದು ಈ ಹೊಸ ಶಿಕ್ಷಣ ಚಳವಳದ ಉದ್ದೇಶವಾಗಿದೆ ಇತ್ತೀಚೆಗೆ ಪಂಡಿತ್ ನೆಹರು ಮೌಲಾನಾ ಅಜಾದ ಮೊದಲಾದ ಧುರೀಣರು ರಾಷ್ಟ್ರೀಯ ಐಕ್ಯತೆಯ ಭಾವನೆಯನ್ನುಂಟುಮಾಡುವ ಅವಶ್ಯಕತೆಯ ಕುರಿತು ನಿರೂಪಕೊಟ್ಟಿದ್ದರು ಅದಕ್ಕಾಗಿ ಸಾಮಾಜಿಕ ಮತ್ತು ರಾಷ್ಟ್ರೀಯ ಶಿಕ್ಷಣವನ್ನು ಕೊಡಲು ಒಂದು ಸ್ಕೂಲ ಯೋಜನೆಯು ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯ ಆವಶ್ಯಕವೆನಿಸುತ್ತದೆ

ಇದರ ಪ್ರಥಮ ಅವಶ್ಯಕತೆಯೆಂದರೆ ವ್ಯವಹಾರ ವಿಷಯಜ್ಞಾನ ಭಾರತದ ಪ್ರಾಚೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ಗತವೈಭವ ಅದರ ಬೆಳವಣಿಗೆ ಅದರ ವಿಶಿಷ್ಟ ಗುಣಲಕ್ಷಣಗಳ ಜ್ಞಾನವು ಅತ್ಯಾವಶ್ಯಕವಿದೆ ಈ ಜ್ಞಾನಿಕವಾಗಿ ವಿದ್ಯಾರ್ಥಿಗಳು ತಮ್ಮ ಭಾವೀ ಜೀವನ ರೂಪಿಸಲು ಈ ನಿಜವಾಗಿ ತಿಳಿದುಬಂದ ಗತ ಇತಿಹಾಸದಿಂದ ಸ್ಫೂರ್ತಿಪಡೆಯಬೇಕಾಗುತ್ತದೆ ದೇಶಾಭಿಮಾನ, ಸ್ವಾಭಿಮಾನ ಮತ್ತು ಪುನಸ್ಥಿತಿಗಳನ್ನು ಗಳಿಸಿಕೊಳ್ಳಲು ಇದರಿಂದ ತುಂಬಾ ಸಹಾಯವಾಗುವದು ಆ ಸಂಸ್ಕೃತಿಯ ಗುಣಾವಗುಣಗಳು ಅವರಿಗೆ ಗೊತ್ತಿರಬೇಕಾದುದು ಅತ್ಯಾವಶ್ಯಕ ಇದರಿಂದವರು ನಿಷ್ಪಕ್ಷಪಾತದ ವಿಮರ್ಶನಶಕ್ತಿಯನ್ನು ಪಡೆದು ನಿಜವಾದ ಪ್ರಗತಿಪಥದ ಆಸ್ತಿಭಾರವನ್ನು ಬೇಗ ಹಾಕಿಕೊಳ್ಳಬೇಕೆಂದು ಬಯಸಬಹುದು

ಪ್ರಸ್ತುತದ ಸಾಮಾಜಿಕ, ಆರ್ಥಿಕ ಮತ್ತು ಆಡಳಿತ ಸಂಬಂಧವಾದ ಪರಿಜ್ಞಾನವನ್ನು ಹೆಚ್ಚಾಗಿ ತಿಳಿಕೊಳ್ಳುವುದೂ ಅತ್ಯಾವಶ್ಯಕ ಇದಕ್ಕಾಗಿ ನಾಗರಿಕ ಶಾಸ್ತ್ರ ಇಲ್ಲವೆ ನಾಗರೀಕತನದ ಕಲಿಕೆಯನ್ನು ಕಡ್ಡಾಯವಾಗಿರಿಸಬೇಕು ಒಂದು ಪರ್ಯಾಯ ಖಂಡಭಾಗದಲ್ಲಿರುವ ಒಂದು ದೇಶದಲ್ಲಿ ಜನಾಂಗವೊಂದು ನಿರ್ಮಾಣಹೊಂದುವ ಅದ್ವಿತೀಯ ಸೃಷ್ಟಿವೈಚಿತ್ರದ ಕುರಿತು ಪ್ರಸ್ತಾಪಿಸಿ ಪಾಶ್ಚಾತ್ಯ ಪೌರ್ವಾತ್ಯ ಧರ್ಮಸಂಸ್ಕೃತಿಗಳಿಂದ ಕೂಡಿದ ವಿವಿಧ ಮತಪಂಥಗಳ ಗುಂಪುಗಳಿರುವ ಜನತೆಯ ಮಧ್ಯದಲ್ಲಿ ಸೇವಾದರ್ಶದ ಅಪೂರ್ವ ಸಂದರ್ಭಗಳಿವೆಯೆಂಬುದರ ಮಾರ್ಗದರ್ಶನವು ನಮ್ಮ ಎಳೆ ಜನಾಂಗಕ್ಕಾಗಬೇಕಾದುದು ಅತ್ಯಾವಶ್ಯಕ ಭಾರತದ ಭೀಕರ ಸಮಸ್ಯೆಗಳನ್ನರಿತುಕೊಳ್ಳುವ ತಿಳುವಳಿಕೆ ಅವರಲ್ಲುಂಟಾಗಬೇಕು. ಬಡತನ, ಅಜ್ಞಾನ, ರೋಗರುಜಿಗಳು, ಕೋಮುವಾರು ಪೈಪೋಟಿಗಳು ಮುಂತಾದವುಗಳನ್ನವರಿಗೆ ತಿಳಿಯಪಡಿಸಬೇಕು

ನಮ್ಮವರು ಸಂಕುಚಿತ ರಾಷ್ಟ್ರೀಯತೆಯನ್ನು ಬೆಳೆಸಿಕೊಳ್ಳದಂತೆ ವಿಶಾಲ ಜಗತ್ತಿನ ಅನುಭವ (ಈಗಿನಂತೆ ಕೇವಲ ಒಂದೆರಡು ಪರರಾಷ್ಟ್ರಗಳ ಕುರಿತು ಮಾತ್ರವೆ ಅನುಭವ ಸಾಲದು)ವನ್ನೂ ನಮ್ಮ ವಿದ್ಯಾರ್ಥಿಗಳಿಗೆ ಮಾಡಿಕೊಡಬೇಕು ಜಗತ್ತಿನ ಗಣನೀಯ ಚಳವಳಗಳ ರೂಪಲಕ್ಷಣಗಳನ್ನು ಅವರು ತಿಳಕೊಳ್ಳಬೇಕು ರಾಷ್ಟ್ರೀಯತೆಯು ವಿಶಾಲ ದೃಷ್ಟಿಕೋನವುಳ್ಳದ್ದೂ ಉದಾರ ಆಸಕ್ತಿಯದೂ ಆಗಿರುವಂತೆ ಮಾಡಬೇಕು

ಇದು ತನಕ ಭಾರತೀಯ ಶಿಕ್ಷಣವು ವಿಚಾರ ಧ್ಯೇಯ ಧೋರಣೆಗಳ ಕ್ಷೇತ್ರದಿಂದ ದೂರವಿರಿಸಲ್ಪಟ್ಟಿತ್ತು ಇದನ್ನೀಗ ಯೋಗ್ಯ ಉದ್ದೇಶದತ್ತ ಸಾಗಿಸಬೇಕು ಜನತೆಯಲ್ಲಿ ಶಾಂತಿ ಸೌಹಾರ್ದಗಳನ್ನು ಬೆಳೆಸಬೇಕು ಕೇವಲ ಬೌದ್ಧಿಕ ಪರಿಚಯವೇ ಸಾಲದು ಸರ್ವ ಸಾಮಾನ್ಯಗತ ಇತಿಹಾಸದ ಪರಿಚಯದಿಂದ ಎಳೆ ಜನಾಂಗದ ಭಾವನೆಯನ್ನು ಕೆರಳಿಸಬೇಕು ಚರಿತ್ರೆಯು ಪ್ರತಿಶಾಲೆಯಲ್ಲಿ ಹೊಸ ವಿಧಾನದಲ್ಲಿ ಕಲಿಸಲ್ಪಡುವಂತಾಗಬೇಕು ಇತಿಹಾಸ ವ್ಯಕ್ತಿಗಳ ಶ್ರೇಷ್ಠತೆಯನ್ನು ಕೇವಲ ಅವರ [illegible] ವೀರತ್ವದ ಪ್ರಮಾಣದಿಂದ [illegible] ಈ ವಿನಾದ [illegible] ಮಹತ್ವ ಪ್ರವೀಣತೆಗಳ ಕೂಡುವ ಪ್ರಾಧಾನ್ಯತೆಯನ್ನು [illegible] ಕ್ರಮದಿಂದ ತೆಗೆದುಹಾಕಬೇಕು (ಒಬ್ಬ ಇಂಥಿಂಥವರನ್ನು ಕೊಂದನು ಎಂದು ಹೇಳಿ ಆ ಕಾರ್ಯದಿಂದ ಅವನ ಶ್ರೇಷ್ಠತೆಯನ್ನು ತೋರಿಸುವುದು ತಪ್ಪು)

ಚರಿತ್ರೆಯಾಭ್ಯಾಸದಲ್ಲಿ ಸ್ವತನ ಒಳಾವೇಶವನ್ನುಂಟುಮಾಡಬೇಕು ಇದಕ್ಕಾಗಿ ಯೋಗ್ಯ ರೀತಿನೀತಿಗಳ ಅನುಸರಿಸುವಿಕೆಯಿಂದ ಪಠ್ಯಪುಸ್ತಕಗಳು [illegible]ವಂತೆ ಅವುಗಳ ಪರಿಶೀಲನೆ ಪ್ರತ್ಯೇಕ ಸಮಿತಿಗಳಿಂದಾಗಬೇಕು ತಮ್ಮ ದೇಶದ ಉಜ್ವಲ ಗತ ವೈಭವದಲ್ಲಿ ಪ್ರಮುಖರಾಗಿ [illegible] ಗಣನೀಯ ದೇಶಾಭಿಮಾನಿಗಳ ಬಾಲಕ ಬಾಲಿಕೆಯರಿಗೆ ಯೋಗ್ಯವಾದ ಚರಿತ್ರೆಯನ್ನು ಬರೆಯಲು ಯೋಗ್ಯರೆಂದು ಪಾಶ್ಚಾತ್ಯರ ಗ್ರಂಥಗಳಿಂದ ಸೂಚಿತವಾಗುತ್ತದೆ ಭಾರತದಲ್ಲಿನ ವಿವಿಧ ಜಾತಿಪಂಥಗಳು ಇಲ್ಲಿನ ಸಂಸ್ಕೃತಿ ಬೆಳವಣಿಗೆಗೆ ನೆರವಾದ ಸಂಗತಿಗಳನ್ನು ಸಹಾನುಭೂತಿಯಿಂದ ಕಲಿಸುವಂತಾಗಬೇಕು ಪ್ರತಿಯೊಂದು ಪ್ರಾಂತದ ಮತ್ತು ಮತದ ಶ್ರೇಷ್ಠ ವ್ಯಕ್ತಿಗಳ ಪರಿಚಯವನ್ನು ಮಾಡಿಕೊಡುವುದರ ಮೂಲಕ ಪರಪ್ರಾಂತ್ಯ, ಪರಮತಗಳ ಕುರಿತಾಗಿರುವ ದ್ವೇಷ ತಿರಸ್ಕಾರದ ಭಾವನೆಗಳನ್ನು ನಿರ್ಮೂಲಿಸುವಂತೆ ಮಾಡಬಹುದು ಇಲ್ಲದೆ ಪ್ರಾಂತಭಾವನೆಯ ಬದಲಿಗೆ ವಿಶಾಲ ದೇಶಭಾವನೆಯೂ ಉಂಟಾಗುವುದು ನಿಸ್ವಾರ್ಥಸೇವೆ, ತ್ಯಾಗ, ಬಲಿದಾನಗಳ ಆದರ್ಶದಿಂದ ವ್ಯಕ್ತಿಗಳು ರಾಷ್ಟ್ರಗೌರವವನ್ನು ಹೇಗೆ ಪಡೆದರು, ಒಂದು ಜನಕೂಟ ಪರಸ್ಪರ ಐಕ್ಯದಿಂದ–ಹೇಗೆ ಒಂದು ಉದಾತ್ತ ಉದ್ದೇಶ ಸಾಧನೆಮಾಡಿತು ಎಂಬವುಗಳನ್ನು ನಮ್ಮ ಬಾಲಕರ ಮುಂದೆ ಧ್ಯೇಯವಾಗಿರಿಸಬೇಕು, ಇತಿಹಾಸವು ಎಳೆಮನಸ್ಸುಗಳಲ್ಲಿ ಕೇವಲ ಭಯ, ದ್ವೇಷಾಸೂಯೆ ಮತ್ತು ಅಪಮಾನದ ಭಾವವನ್ನುಂಟುಮಾಡುವುದಾದರೆ ಅಂತಹ ಪಾಠದಿಂದ ವಿವಿಧ ಜಾತಿಪಂಥಗಳನ್ನು ಐಕ್ಯಗೊಳಿಸಿ ಅವರೆಲ್ಲರೂ ಒಮ್ಮತದಿಂದ ದೇಶಸಾಧನೆಗೆ ನೆರವಾಗುವಂತೆ ಮಾಡಲು ಸಾಧ್ಯವಿಲ್ಲ ಇದನ್ನು ಅದೆಷ್ಟು ಶೀಘ್ರವಾಗಿ ಶಾಲಾ ವಿದ್ಯಾಕ್ರಮದಿಂದ ತಳ್ಳಿಹಾಕಲಾಗುವುದೊ ಅಷ್ಟು ಶ್ರೇಯಸ್ಕರವೆನ್ನಬಹುದು.

ಹೊರೆಯಷ್ಟು ಉಪದೇಶಕ್ಕಿಂತ ವರಿಯಷ್ಟು ಕಾರ್ಯವು ಉತ್ತಮವೆಂಬ ತತ್ವವು ನಿಜವಿದ್ದರೆ ಮಕ್ಕಳಿಗೆ ನಮ್ಮ ಪ್ರಿಯ ಮಾತೃಭೂಮಿಯಲ್ಲಿ ಅಭಿಮಾನ ಹುಟ್ಟಿಸಿ ಅವರಲ್ಲಿ ಉದಾತ್ತ ನಾಗರೀಕತನ ಉಂಟಾಗುವಂತೆ ಅವರಿಗೆ ದೀನದಲಿತರ ಮಧ್ಯದಲ್ಲಿ ಸಾಧ್ಯವಿದ್ದಷ್ಟು ಸೇವೆಮಾಡುವ ಸಂದರ್ಭಗಳನ್ನು ಕಲ್ಪಿಸಿಕೊಡತಕ್ಕದ್ದು ಸುತ್ತುಮುತ್ತಲಿನ ಪ್ರತ್ಯಕ್ಷ ಅನುಭವವೇ ಭಾವಿ ನಾಗರೀಕತನಕ್ಕೆ ಭದ್ರ ತಳಹದಿಯು ಎಳೆ ವಿದ್ಯಾರ್ಥಿಗಳ ಸಹಜ ಚೈತನ್ಯ ಆಸಕ್ತಿ ಉತ್ಸಾಹಗಳು ನಿರುಪಯುಕ್ತವೂ ಕುರಿದ ಬೆಳವಣಿಗೆಯದೂ ಆಗದಂತೆ ಪಾಶ್ಚಾತ್ಯ ದೇಶಗಳ ಮಕ್ಕಳಿಗೆ ದೊರೆಯುವ ಉತ್ತಮ ಸಂದರ್ಭಗಳನ್ನೇ ನಮ್ಮವರಿಗೂ ಒದಗಿಸತಕ್ಕದ್ದು ರಾಷ್ಟ್ರಗೀತೆಗಳನ್ನು ಹಾಡುವುದು ರಾಷ್ಟ್ರೀಯ ಧುರೀಣರ ಭಾವಚಿತ್ರಗಳಿಗೆ ಗೌರವ ಸಲ್ಲಿಸುವುದು, ಧರ್ಮಪ್ರವರ್ತಕರ ಮತ್ತು ದೇಶಧುರೀಣರ ಜನ್ಮದಿನೋತ್ಸವ ಆಚರಣೆ, ರಾಷ್ಟ್ರೀಯ ಗೀತೆಗಳನ್ನು ರಚಿಸಲು ಸ್ಪರ್ಧೆಗಳನ್ನು ಏರ್ಪಡಿಸುವುದು, ರಾಷ್ಟ್ರೀಯ ಇತಿಹಾಸವನ್ನು ಬರೆಯುವುದು, ರಾಷ್ಟ್ರೀಯ ಸ್ಮಾರಕದಿನ, ಹಬ್ಬಗಳನ್ನಾಚರಿಸುವ ವಿಧಾನಗಳನ್ನು ಸಂಘಟಿಸುವುದು ಇವೇ ಕೆಲವು ವಿಧಾನಗಳು ಪಾಶ್ಚಾತ್ಯ ದೇಶಗಳಲ್ಲಿ ಅನುಕೂಲವಾದುದು ಪ್ರಯೋಗಿಸು[illegible] ದೇಶದಲ್ಲೂ [illegible]ವನ್ನು ಅನುಕರಿಸಬಹುದು. ವಿದೇಶ ಶಾಲೆಗಳಲ್ಲಿ ರಾಷ್ಟ್ರಧ್ವಜ ವಿಶಿಷ್ಟ ಸ್ಥಾನಮಾನಗಳಿವೆ ಇವೆಲ್ಲವುಗಳಿಂದ ಪ್ರಸ್ತುತದ ಉದ್ದೇಶದಿಂದ ಮಾತ್ರವಲ್ಲ ದೂರಭವಿಷ್ಯದ ರಾಷ್ಟ್ರೀಯ ಐಕ್ಯತೆ ಮತ್ತು ಶೀಲವಳಿಕೆಗಳನ್ನುಂಟುಮಾಡುವ ಜ್ಞಾನವನ್ನುಂಟುಮಾಡಲೂ ತುಂಬಾ ಸಹಾಯವಾಗತ್ತದೆ

ವಿದ್ಯಾರ್ಥಿಗಳನ್ನು ನಾಗರೀಕರನ್ನಾಗಿ ತರಬೇತುಮಾಡುವಾಗ ಇಂಗ್ಲಿಷ್ ಮತ್ತು ಅಮೇರಿಕನ್ ಶಾಲೆಗಳಲ್ಲಿ ಹೆಚ್ಚಿನ ಶುದ್ಧವಾದ ಸಾಮಾಜಿಕ ಚಟುವಟಿಕೆಗಳನ್ನೇ ಉಪಯೋಗಿಸುವುದು ಇನ್ನೊಂದು ಗಣನೀಯ ವಿಷಯ ಪ್ರತ್ಯಕ್ಷಾನುಭವದಿಂದಲೇ ಶೀಲಗಳು ಅಭಿವೃದ್ಧಿಹೊಂದುತವೆ ನಿಸ್ವಾರ್ಥ ಸೇವೆ, ಸಹಕಾರ, ತಾಳ್ಮೆ ಮತ್ತು ನಿಜವಾದ ಪ್ರಜಾಪ್ರಭುತ್ವಗಳೇ ಸಹಜವಾದ ವಾತಾವರಣದಲ್ಲಿ ಸುಗಮವಾಗಿ ಸಾಧಿಸಬಲ್ಲವಾದ ಧ್ಯೇಯಗಳು ಈಗ ಸದ್ಯಕ್ಕೆ ಶಾಲಾಚಟುವಟಿಕೆಗಳಲ್ಲಿ ಹೆಚ್ಚಾಗಿ ಪರೀಕ್ಷಾರ್ಥ ವಿಷಯಗಳೇ ಗೊಂದಲಮಯವಾಗಿ "ಬೆರೆಸಲ್ಪಟ್ಟಿರುವುದರಿಂದ ಇನ್ನು ಮುಂದೆ ಪಾಠೇತರ ಚಟುವಟಿಕೆಗಳಾದ ಶಾಲಾಸಭೆ, ಸ್ಕೌಟ್ ತರಬೇತಿ, ಆಟಗಳು, ಚರ್ಚಾಕೂಟಗಳು, ಹಸ್ತಪತ್ರಿಕೆಗಳು, ಮತ್ತು ಸಂಚಾರ, ಕಾರ್ಯಕ್ರಮಗಳೇ ಮುಂತಾದ ಆಧುನಿಕ ತರುಣನ ವಿಕಾಸಕ್ಕವಶ್ಯವಾದವುಗಳನ್ನು ಸೇರಿಸಲೇ ಬೇಕಾಗುತ್ತದೆ. ಇವುಗಳಿಂದ ಸರಕಾರ ಮತ್ತು ಆಡಳಿತ ವಿಧಾನದ ಪರಿಜ್ಞಾನವುಂಟಾಗುವುದು ಮಾತ್ರವಲ್ಲ ಉತ್ತಮ ನಾಗರೀಕನ ಹಕ್ಕುಬಾಧ್ಯತೆಗಳನ್ನು ಪಡೆದುಕೊಳ್ಳಲೂ ಇದರಲ್ಲಿ ಅವಕಾಶ ದೊರೆಯುತ್ತದೆ ಉತ್ತಮ ಫಲಗಳು ಸಂಭವಿಸುವುದು ಅಪೂರ್ವವಾಗಿ: ಅವು ಸಂಭವಿಸುವಂತೆ ಮಾಡಬೇಕು

ಭಾಷೆ ಧರ್ಮ ಸಂಸ್ಕೃತಿವೈವಿಧ್ಯತೆಯಿರುವ ಈ ದೇಶದಲ್ಲಿ ಈ ತೆರನಾದ ಶಿಕ್ಷಣದ ರಾಷ್ಟ್ರೀಕರಣ ಪ್ರಚಾರವು ಅವಶ್ಯವೇಕೆಂದು ಪ್ರತ್ಯೇಕ ವಿವರಣೆ ಅವಶ್ಯವಿಲ್ಲ, ಈ ರಾಷ್ಟ್ರೀಯತ್ವವು ಒಂದು ನಿಜವಾದ ಅಂತರಾಷ್ಟ್ರೀಯತ್ವವೇ ಆಗಿ ಪರಿಣಮಿಸುವುದು. ಯುರೋಪಿನ ವಿವಿಧ ಜನಾಂಗಗಳನ್ನು ಐಕ್ಯತೆಯಲ್ಲಿರಿಸಲು ಅದೆಷ್ಟು ಕಷ್ಟವಿದೆಯೊ ಅಷ್ಟೇ ತೊಂದರೆಗಳು ನಮ್ಮ ದೇಶದಲ್ಲಿವೆ ಕಡುವಾದ ವ್ಯಾಧಿಗೆ ಕಹಿಯಾದ ಔಷಧಿಯು ನ್ಯಾಯವೆನಿಸುತ್ತದೆ

ಉತ್ತಮ ದೇಶಾಭಿಮಾನಿ ನಾಗರೀಕರನ್ನು ಸಿದ್ಧಗೊಳಿಸುವುದೆಂದರೆ ಶ್ರೇಷ್ಠ ವಿಶ್ವನಾಗರೀಕರನ್ನುಂಟು ಮಾಡಿದಂತೇ ಎಂದು ತಿಳಕೊಳ್ಳಬೇಕು ದೇಶಪ್ರೇಮವಿಲ್ಲದಿದ್ದರೆ ವಿಶ್ವಪ್ರೇಮವು ಎಂದಿಗೂ ಇರಲಾರದು ಸ್ವದೇಶಾಭಿಮಾನವನ್ನು ಸಂಕುಚಿತವೆಂದು ಟೀಕಿಸಿ ಮಾನವಕೋಟಿಯ ಅಭಿವೃದ್ಧಿಯ ಕುರಿತು ಹಳಹಳಿಪಡುವವನು ಮಾಳಿಗೆ ಕಟ್ಟಲು ಹತ್ತಿದ ಒಂದೇ ಸಮನೆ ಕಳಸದಿಂದ ಮೇಲಕ್ಕೆ ಹೋಗುವವನಂತಿರುತ್ತಾನೆಂದು ಪ್ರಖ್ಯಾತ ಸಮಾಜಶಾಸ್ತ್ರಜ್ಞರಾದ ಪ್ರೊ। ಘೋಸ್ ಇವರು ತಿಳಿಸಿದ್ದಾರೆ. ಅಂತಹ ಪ್ರಯತ್ನಗಳು ಎಂದೂ ಸಫಲವಾಗಿಲ್ಲ ಸಂಕುಚಿತ ಮನೋಭಾವದವರು ತಮ್ಮ ಸ್ಥಳೀಕ ಸಸ್ಥಗಳಿಗಿಂತಲೂ ಹೆಚ್ಚು ವಿಸ್ತಾರಕ್ಕೆ ಇಣಿಕಲಾರರೆಂದು ಅಂತಹ ಸಂಸ್ಥೆಗಳನ್ನೇ ಕಿತ್ತೊಗೆಯಬೇಕೆನ್ನುವುದು ಸಾಧುವಲ್ಲ ಆ ಸಂಸ್ಥೆಗಳನ್ನಿಟ್ಟುಕೊಂಡು ಅವುಗಳ ದೃಷ್ಟಿಕೋನವನ್ನು ವಿಶಾಲಿಸಿರಿ

ಭಾವಿ ಭಾರತ ನಾಗರಿಕರು ಒಂದು ಜನಾಂಗವಾಗಿ ಮುಂದುವರಿಯಬೇಕಾದರೆ, ಅವರು ಜಾತೀಯ ಸೌಹಾರ್ದವನ್ನು ಬೆಳೆಸಿಕೊಳ್ಳಬೇಕಾದರೆ, ತಮಗಿಂತ ಹೆಚ್ಚು ದುರ್ಭಾಗ್ಯರೆಂದವರಿಗವರು ಸಹಾಯಹಸ್ತನೀಡುವಂತವರಾಗಬೇಕಾದರೆ ಭಾವೀ ರಾಷ್ಟ್ರ ಪುನರ್ಘಟನೆಯ ಯೋಜನೆಯನ್ನು ಹೊರಲವರು ಸಮರ್ಥರಾಗಬೇಕಾದರೆ ಅವರಲ್ಲೊಂದು ರಾಷ್ಟ್ರೀಯ ಐಕ್ಯತೆಯ ಮತ್ತು ದೇಶವಾತ್ಸಲ್ಯದ ಮನೋಭಾವವು ದೃಢವಾಗುವಂತೆ ಮಾಡಲೇಬೇಕು ಪಾಶ್ಚಾತ್ಯ ದೇಶದಲ್ಲಿ ಈ ದಿಶೆಯಲ್ಲಿ ವಹಿಸಿದ ಶ್ರಮವನ್ನೇ ದೇಶದಲ್ಲಿ ದ್ವಿಗುಣವಾಗಿ ನಿರ್ವಹಿಸಬೇಕು ನಾಗರೀಕತನ ತರಬೇತಿಯಿಂದ ಸಂಕುಚಿತ ರಾಷ್ಟ್ರೀಯತೆಯನ್ನುಂಟುಮಾಡುವುದಲ್ಲ, ವಿಶಾಲದ ತಳಹದಿಯಲ್ಲಿ ರಚಿತವಾದ ಅಂತರಾಷ್ಟ್ರೀಯತೆಯನ್ನು ಬೆಳೆಸುವುದೇ ಅದರ ಮುಖ್ಯೋದ್ದೇಶ ಹುಟ್ಟು ಪ್ರವೃತ್ತಿಗಳಿಗಿಂತ ಬೌದ್ಧಿಕ ಶ್ರೇಷ್ಠತೆಯು ಮಿಗಿಲೆಂದು ಒತ್ತಿಹೇಳುವುದು, ಭಾವನೋದ್ರೇಕದ ಕ್ಷೇತ್ರದಲ್ಲಿ ಹೆಚ್ಚಿನ ಶ್ರಮ ವಹಿಸಬೇಕೆಂದು ವಿನಂತಿಸಿಕೊಳ್ಳುವುದು ಇವೇ ಈ ಲೇಖನದ ಉದ್ದೇಶಗಳಾಗಿವೆ. ಮಾತ್ರವಲ್ಲ ಸಹಜವಾದ ಅಸ್ಪಷ್ಟಧ್ಯೇಯ ಬೆಳವಣಿಗೆಗಿಂತ ನಿರ್ದಿಷ್ಟ ನಿರ್ದೇಶದಲ್ಲಿ ಹೊಂದುವ ವಿಕಾಸವೇ ಶ್ರೇಷ್ಠವಾದುದು!

ಸ್ವದೇಶಾಭಿಮಾನಿ

ತಾರೀಕು 14—5—1948

ಪೆಲೆಸ್ತ್ಯಾನ್ ಯುದ್ಧ

ಅರಾಬರು ಯೆಹೂದಿಯವರ ಮೇಲೆ ಯುದ್ಧ ಹೂಡಿದ ವಾರ್ತೆ ಬಂದು ಈಗ ಹಲವು ದಿನಗಳಾದವು. ಆದರೆ ಬ್ರಿಟಿಷರ ಮೆಂಡೇಟ್ ಆಡಳಿತೆ ಈ ಪ್ರದೇಶದಲ್ಲಿ ಇದೇ ಮೇಲೆ ತಿಂಗಳ ತಾ. ೧೫ಕ್ಕೆ ಅಂತ್ಯವಾಗಲಿರುವುದರಿಂದ ಇತ್ತಂಡದವರೂ ಆ ದಿನವನ್ನು ನಿರೀಕ್ಷಿಸಿ ಕೊಂಡಿರುವಂತಿದೆ. ಅಂದರೆ ಈಗ ಯುದ್ಧವು ನಡೆಯುತ್ತಲೇ ಇದೆಯಾದರೂ ಇದರ ಸರಿಯಾದ ಆರಂಭ ಮೇ ತಾ. ೧೫ರ ಮಾರನೆಯ ದಿನದಿಂದ ನಡೆಯಲಿದೆ

ಯೆಹೂದಿಯರು ತಮ್ಮ ಸ್ವತಂತ್ರ ರಾಷ್ಟ್ರವನ್ನು ಮೇ ೧೬ಕ್ಕೆ ಜಾಹೀರು ಮಾಡುವರೆಂದು ಪ್ರಕಟ ಪಡಿಸಿದ್ದಾರೆ ಯುದ್ಧವನ್ನು ಆರಂಭಿಸಿದ ಟ್ರನ್ಸ್ ಜೋರ್ಡನಿನ ಅರಾಬರು ಈ ಯುದ್ಧದ ಮುಂದಾಳ್ತನವನ್ನು ವಹಿಸುವ ಉತ್ಸಾಹದಲ್ಲಿದ್ದಾರೆ ಈಜಿಪ್ಟಿನ ಸೈನ್ಯಗಳು ಈಗಾಗಲೇ ಪೆಲೆಸ್ತ್ಯಾನ್ ಗಡಿಯೊಳಕ್ಕೆ ಪ್ರವೇಶಿಸಿ ಮುನ್ನುಗ್ಗುತ್ತಿವೆ ಸೌದೀ ಅರಾಬರೂ ಯುದ್ಧಕ್ಕೆ ಸೇರುವುದಾಗಿ ಪ್ರಕಟಿಸಿದ್ದಾರೆ ಮಧ್ಯ ಆಸ್ಯದಲ್ಲಿ ಈ ಜಗಳ ದೊಡ್ಡ ಪ್ರಮಾಣದಲ್ಲಿ ಸದ್ಯದಲ್ಲಿ ಬೆಳೆಯುವುದೆಂಬುದರಲ್ಲಿ ಸಂಶಯ ಕಾಣುವುದಿಲ್ಲ

ಇದು ತನಕ ನಡೆದ ಜಗಳದಲ್ಲಿ ಯೆಹೂದಿಯರ ಕೈಯೇ ಮೇಲಾದಂತೆ ಕಂಡು ಬರುತ್ತದೆ ಅವರ ಸೈನ್ಯಗಳಷ್ಟು ಆಧುನಿಕ ಆಯುಧ ಸನ್ನಾಹ ಮತ್ತು ವ್ಯವಸ್ಥೆ ಇದಿರು ಪಕ್ಷದಲ್ಲಿದ್ದಂತೆ ಕಂಡುಬರುವುದಿಲ್ಲ.

ಜೆರುಸಲೇಮ್ ಎಂಬುದು ಕ್ರೈಸ್ತ ಜನರೆಲ್ಲರ ಪವಿತ್ರ ಯಾತ್ರಾಕ್ಷೇತ್ರವಿದ್ದು ಇದನ್ನು ರಕ್ಷಿಸಲು ಯುನೈಟೆಡ್ ನೇಶನ್ಸ್ ವ್ಯವಸ್ಥೆ ಮಾಡುತ್ತಲಿದೆ ಇದಕ್ಕೂ ಹೆಚ್ಚಿಗೆ ಈ ಸಂಯುಕ್ತರಾಷ್ಟ್ರಸಭೆ ಸಾಧಿಸುವ ಯೋಜನೆಯುಲ್ಲಿಲ್ಲವೆಂಬುದು ಶೋಚನೀಯ. ಈ ಯುದ್ಧ ಸರಿಯಾಗಿ ನಡೆಯಲು ಬಿಟ್ಟರೆ ಸಂಯುಕ್ತ ರಾಷ್ಟ್ರಸಭೆ ಅಂದಿನಿಂದ ಮುಂದೆ ಇದ್ದರೂ ಸತ್ತಂತೆಯೇ ಎಂದು ತಿಳಿಯಲು ಯಾವ ಆಕ್ಷೇಪವೂ ಇಲ್ಲ

ಪೆಲೆಸ್ತ್ಯಾನು ಯುದ್ಧವು ಜಗತ್ತಿನ ಮೂರನೆಯ ಮಹಾಯುದ್ಧದ ಪ್ರಾರಂಭವಾಗಬಹುದೆ? ಎಂಬುದು ಮುಖ್ಯ ಪ್ರಶ್ನೆ. ಈಗಿನ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಪರಿಶೀಲಿಸಿದ್ದರೆ ಇನ್ನೊಂದು ಮಹಾಯುದ್ಧವು ನಾವು ಎಣಿಸುವುದಕ್ಕಿಂತ ಬೇಗನೆ ಬರಬಹುದೆಂದೇ ಕಾಣುತ್ತದೆ.

...ದರೂ ಒಂದು ಮಹಾಯುದ್ಧವು ಈಗ ತಾನೇ ಅಂತ್ಯವಾಗಿದೆ ಮಾತ್ರವೆಂಬುದರಿಂದ ಇನ್ನೊಂದು ಮಹಾಯುದ್ಧವು ಅಷ್ಟೊಂದು ಬೇಗನೆ ಆರಂಭವಾಗುವುದು ಸಾಧ್ಯವೆ? ವಸ್ತುತಃ ಸದ್ಯಕ್ಕೆ ಯುದ್ಧವು ಯಾವ ದೊಡ್ಡ ರಾಷ್ಟ್ರಕ್ಕೂ ಬೇಡವಾಗಿದೆಯೆಂಬುದು ಸತ್ಯಸ್ಥಿತಿ. ಹೀಗಿರುವುದರಿಂದ ಪೆಲೆಸ್ತ್ಯಾನ್ ಯುದ್ಧದ ಪರಿಣಾಮವಾಗಿ ಮುಂದೆ ಮಹಾಯುದ್ಧಕ್ಕೆ ಪೀಠಿಕೆಹಾಕಿದಂತಾಗುವುದಾದರೂ ಕೂಡಲೇ ಮಹಾ ಯುದ್ಧ ನಡೆಯುವುದೆಂದು ಎಣಿಸಬೇಕಾಗಿಲ್ಲ

ಅಮೇರಿಕ ಹಾಗೂ ರಸ್ಯಾದವರು ಈ ಯುದ್ಧ ನಡೆವಾಗ ಸುಮ್ಮನೆ ನೋಡುತ್ತ ಕುಳಿತುಕೊಳ್ಳುವಂತಿಲ್ಲ. ಇತ್ತಂಡದವರಿಗೂ ಪರಸ್ಪರ ಸ್ಪರ್ಧೆಯನ್ನು ಬೆಳೆಸಲು ಇದೊಂದು ಸಂದರ್ಭವಿದ್ದು ಒಂದಲ್ಲ ಒಂದು ಪಕ್ಷಕ್ಕೆ ಇವರು ಸಹಾಯಮಾಡುವರೆಂಬುದು ಖಂಡಿತ. ಪೆಲೆಸ್ತ್ಯಾನ್ ಪ್ರದೇಶವು ಜಾಗತಿಕ ಮಹಾ ಯುದ್ಧದ ದೃಷ್ಟಿಯಿಂದ ಕೂಡಾ ಮಹತ್ವವುಳ್ಳ ಪ್ರದೇಶವೆಂಬುದರಿಂದ ಆ ಮಹಾಯುದ್ಧದ ಮುಂದಾಳುಗಳು ಈ ಪ್ರದೇಶವು ತಮ್ಮ ವಿರುದ್ಧ ಪಕ್ಷದ ಕೈವಶವಾಗದಂತಾದರೂ ಈಗಲೇ ಜಾಗರೂಕತೆ ವಹಿಸದೆ ನಿವೃತ್ತಿ ಇಲ್ಲವಷ್ಟೇ!

ಬ್ರಿಟಿಷ ಸರಕಾರವು ತನ್ನ ಮೆಂಡೇಟ್ ಅಧಿಕಾರ ಮುಗಿದೊಡನೆ ತಾವಿನ್ನು ಎಷ್ಟು ಮಾತ್ರಕ್ಕೂ ಇಲ್ಲಿ ನಿಲ್ಲುವುದಿಲ್ಲವೆಂಬ ತಮ್ಮ ದೃಢನಿಶ್ಚಯವನ್ನು ಬದಲಾಯಿಸದೆ ವರ್ತಿಸಿದ ಬಗ್ಗೆ ಈ ಜನಾಂಗನನ್ನು ನಾವು ಅಭಿನಂದಿಸಲೇಬೇಕು ಈ ವಿಷಯದಲ್ಲಿ ಬ್ರಿಟನು ತನಗೆ ಅತ್ಯಾವಶ್ಯಕ ಸ್ನೇಹಿತರೆಂದೆನಿಸುವ ಅಮೇರಿಕದ ದಾಕ್ಷಿಣ್ಯಕ್ಕೆ ಕೂಡಾ ಕಟ್ಟುಬೀಳದೆ ಸ್ವತಂತ್ರವಾಗಿ ವರ್ತಿಸಿದೆಯೆಂಬುದು ಸ್ಪಷ್ಟವಿರುತ್ತದೆ

ಅಮೇರಿಕದವರು ಪೆಲೆಸ್ತ್ಯಾನಿನಲ್ಲಿ ಯಾವ ಪಕ್ಷವನ್ನು ಕಟ್ಟಿಕೊಳ್ಳುವುದು? ಯುನೈಟೆಡ್ ಸ್ಟೇಟಿನಲ್ಲಿ ಯೆಹೂದಿ ಭಂಡವಲಗಾರರು ಸಾಕಷ್ಟು ಮಂದಿ ಇದ್ದಾರೆ ಮಾತ್ರವಲ್ಲ ಇವರ ಜನಸಂಖ್ಯೆಯೂ ಸಾಕಷ್ಟಿರುತ್ತದೆಂಬುದರಿಂದ ಇವರ ವಿರೋಧವನ್ನು ಅಲ್ಲಿಯ ಸರಕಾರವು ವಹಿಸಿಕೊಳ್ಳುವುದು ಕಷ್ಟ. ಆದರೆ ಮಧ್ಯ ಏಸಿಯದಲ್ಲಿ ಮುಸ್ಲೀಮ್ ಜನಾಂಗಗಳು ಹಲವು ಇದ್ದು ಇವರೆಲ್ಲರ ಸ್ನೇಹ ಕಳೆದುಕೊಳ್ಳುವುದೂ ಅವರಿಗೆ ಇಷ್ಟವಾದ ಸಂಗತಿ ಇರಲಾರದು ಇತ್ತಂಡದವರಿಗೂ ಯುದ್ಧ ಸಾಮಗ್ರಿಗಳನ್ನು ಒದಗಿಸಿ ಹಣಮಾಡುವ ತನ್ನ ಎಂದಿನ ಧೋರಣೆಯನ್ನು ಅದು ಆರಂಭದಲ್ಲಿ ವಹಿಸುವ ಸಂಭವವೇ ಹೆಚ್ಚು ಕೊನೆಗೆ ರಸ್ಯಾ ಯಾವ ಪಂಗಡವನ್ನು ಕಟ್ಟಿಕೊಳ್ಳುವುದೊ ಅದರ ವಿರುದ್ಧ ಪಕ್ಷಕ್ಕೆ ಸ್ವಲ್ಪ ಹೆಚ್ಚಿನ ಸಹಾಯ ಮಾಡಿದರೆ ಆಯಿತು.

ಅಂತೂ ಈ ಪೆಲೆಸ್ತ್ಯಾನಿನ ಯುದ್ಧ ಕ್ಷೇತ್ರದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದನ್ನು ಜಗತ್ತಿನ ಇತರರೆಲ್ಲರೂ ಜಾಗರೂಕತೆಯಿಂದ ಪರಿಶೀಲಿಸುತ್ತಿರುವುದು ಶ್ರೇಯಸ್ಕರವಿರುತ್ತದೆ.

ಟೀಕೆ-ಟಿಪ್ಪಣಿಗಳು

ಪಾಕಿಸ್ತಾನದಲ್ಲಿ ಅಧಿಕಾರ ಕೇಂದ್ರೀಕರಣ

ಪಾಕಿಸ್ತಾನದ ಗವರ್ನರ್ ಜನರಲ್ ಕ್ವಾದೇ ಆಜಾಮ ಜಿನ್ನಾ ಸಾಹೇಬರ ಆಜ್ಞೆ ಮೇರೆಗೆ ಸಿಂಧ ಪ್ರಾಂತ್ಯದ ಗವರ್ನರರು ಅಲ್ಲಿಯ ಮುಖ್ಯ ಮಂತ್ರಿಯವರನ್ನು ಡಿಸ್‌ಮಿಸ್ ಮಾಡಿ ಹೊಸಬರನ್ನು ನೇಮಿಸಿ ಈ ಮಾಜಿ ಮುಖ್ಯ ಮಂತ್ರಿಯವರ ನಡತೆಯ ಕುರಿತು ವಿಚಾರಣೆಯ ವ್ಯವಸ್ಥೆ ಮಾಡಿರುವರೆಂಬ ವಾರ್ತೆಯ ಸಾರವೇನು? ಪಶ್ಚಿಮ ಪಂಜಾಬದ ಮುಖ್ಯ ಮಂತ್ರಿಯವರಿಗೂ ಇದೇ ಬಗೆಯ ಬೆದರಿಕೆ ತೋರಿಸಲಾಗಿದೆ ಎಂದು ಕೇಳಿ ಬರುತ್ತದೆ. ಅನಂತರ ಗಡಿನಾಡಿನವರ ಸರ್ತಿ ಬರಬಹುದೆಂದು ಊಹಿಸಲಾಗುತ್ತಿದೆ. ಇದೆಲ್ಲದರ ಅಭಿಪ್ರಾಯವೇನು? ಪ್ರಾಂತಿಕ ಸರಕಾರಗಳ ಮೇಲೆ ವ್ಯವಸ್ಥಿತವಾದ ಒಂದು ಧಾಳಿ ನಡೆಸಿ ಅಧಿಕಾರವನ್ನು ಕೇಂದ್ರೀಕರಿಸುವ ಒಂದು ಕಾರ್ಯಕ್ರಮವಿದೆಯೆಂದು ಹೇಳಲಾಗುತ್ತಿದೆ

ಜಿನ್ನಾ ಸಾಹೇಬರಿಗೆ ಸಾಮಾನ್ಯವಾಗಿ ಪ್ರಚಾರದಲ್ಲಿರುವ ಪ್ರಜಾಸತ್ತಾತ್ಮಕ ರಾಜ್ಯಭಾರ ಪದ್ಧತಿಯುಲ್ಲಿ ವಿಶ್ವಾಸವಿದ್ದಂತೆ ಕಂಡು ಬರುವುದಿಲ್ಲ ಅವರು ಯಾವಾಗಲೂ ಇಸ್ಲಾಮ್ ಪದ್ಧತಿಯ ಡೆಮೊಕ್ರೇಸೀ ಬೇಕೆಂದು ಹೇಳುತ್ತಾರೆ. ಇದೆಲ್ಲ ಆ ಹೊಸ ಪದ್ಧತಿಯುಲ್ಲಿಯ ಕ್ರಮವಿರಬಹುದು ನಮಗಂತೂ ಇದು ಹಿಟ್ಲರ್ ಮಾದರಿಯೆಂದೇ ಕಾಣುತ್ತದೆ

ಪಾಕಿಸ್ತಾನದಲ್ಲಿ ಖಾದಿ

ಪಾಕಿಸ್ತಾನದಲ್ಲಿ ಒಂದು ಮಿಲಿಯ ಕೈರಾಟೆಗಳನ್ನು ನಡೆಸಿ ಖಾದಿ ತಯಾರಿಸಬೇಕೆಂಬ ಒಂದು ಕಾರ್ಯಕ್ರಮವನ್ನು ಅಲ್ಲಿಯ ಸರಕಾರದವರು ಕೈಕೊಂಡಿದ್ದಾರೆಂಬ ಒಂದು ವಾರ್ತೆ ಪ್ರಕಟವಾಗಿರುತ್ತದೆ

ಪಾಕಿಸ್ತಾನದಲ್ಲಿ ಬಟ್ಟೆ ಗಿರಣಿಗಳಿಲ್ಲ. ಅವನ್ನು ಕೂಡಲೇ ಒದಗಿಸಿಕೊಳ್ಳುವುದಾದರೂ ಅವ್ಯವಹಾರಿಕವಿರುತ್ತದೆ ಆದುದರಿಂದ ಬೇಕಾದ ಬಟ್ಟೆ ಒದಗಿಸಿಕೊಳ್ಳಲು ಈ ರೀತಿ ಖಾದಿಗೆ ಶರಣು ಹೋಗುವುದು ಸುಲಭ ಸಾಧ್ಯ ಮಾತವಲ್ಲ ಈ ಕಾರ್ಯಕ್ರಮದಿಂದ ಅದೆಷ್ಟೋ ಮಂದಿ ಬಡ ಜನರಿಗೂ ಉದ್ಯೋಗ ಕಲ್ಪಿಸಿಕೊಟ್ಟಂತಾಗುತ್ತದೆ.

ಈ ರೀತಿ ಖಾದಿಯ ಮಹತ್ವವನ್ನು ಪಾಕಿಸ್ತಾನ ಸರಕಾರವು ಮನಗಂಡ ಬಗ್ಗೆ ನಾವು ಇವರನ್ನು ಅಭಿನಂದಿಸಲೇಬೇಕು ಅವರು ಕೈಕೊಳ್ಳುವ ಈ ಕಾರ್ಯಕ್ರಮ ಯಶಸ್ವಿಯಾಗಲೆಂದು ಹಾರೈಸುತ್ತೇವೆ

ಪಾಕಿಸ್ತಾನದಲ್ಲಿ ಜನತಾಪಕ್ಷ

ಪಾಕಿಸ್ತಾನದಲ್ಲಿ ಜನತಾಪಕ್ಷವೊಂದನ್ನು ಸ್ಥಾಪಿಸಲು ಕರಾಚಿಯಲ್ಲಿ ಖಾನ್ ಅಬ್ದುಲ್ ಗಫರ್ ಖಾನರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿರುತ್ತದೆ. ಗಡಿನಾಡಿನಲ್ಲಿ ನಡೆಯುತ್ತಿದ್ದ ತನ್ನ ಖುದಾಯಿ ಖಿದ್‌ಮತ್‌ಗಾರ ವ್ಯವಸ್ಥೆಯನ್ನು ಪಾಕಿಸ್ತಾನದ ಇತರ ಪ್ರಾಂತಗಳಲ್ಲಿಯೂ ಆರಂಭಿಸುವ ಯೋಚನೆ ಇದೆಯೆಂದೂ ಖಾನರು ಈ ಸಭೆಯಲ್ಲಿ ಸೂಚಿಸಿದರು.

ಆದರೆ ಜಿನ್ನಾ ಸಾಹೇಬರು ಪಾಕಿಸ್ತಾನಕ್ಕೆ ಮುಸ್ಲಿಂ ಲೀಗದ ಒಂದೇ ಪಂಗಡವಿರಬೇಕೆಂದು ಮೊದಲೇ ಜಾಹೀರುಮಾಡಿದ್ದಾರೆ ಅಂದರೆ ಇಂಥ ಹೊಸ ಪಂಗಡಗಳನ್ನೆಲ್ಲ ಸ್ಥಾಪಿಸಬಹುದೆಂದು ಅವರು ಮೊದಲೇ ಊಹಿಸಿ ಇಂಥವರೆಲ್ಲ ಪಾಕಿಸ್ತಾನದ ದ್ರೋಹಿಗಳೆಂಬ ಪ್ರಚಾರ ಮುಂದಾಗಿ ಕೈಕೊಂಡಿದ್ದಾರೆ

ಆದರೆ ಖಾನ್ ಅಬ್ದುಲ್ ಗಫರ್ ಖಾನರು ಬರಬಹುದಾದ ಅನಿಷ್ಟಗಳಿಗೆಲ್ಲ ಎದೆಕೊಟ್ಟು ದುಡಿಯಬಲ್ಲ ಮುಂದಾಳುಗಳೆಂಬುದರಿಂದ ಜಿನ್ನಾ ಸಾಹೇಬರ ದಬ್ಬಾಳಿಕೆಯ ಧೋರಣೆ ಕೈಕೊಂಡರೆ ಈ ಹೊಸ ಪಂಗಡ ದಿನದಿಂದ ದಿನಕ್ಕೆ ಬೆಳೆಯುವ ಸಂಭವವೇ ಹೆಚ್ಚಾಗಿರುತ್ತದೆ

ಕಾಶ್ಮೀರ ಕಮಿಶನ್

ಭದ್ರತಾ ಸಮಿತಿಯ ಅಧ್ಯಕ್ಷರು ಕಾಶ್ಮೀರ ಕಮಿಶನಿನ ಐದನೇ ಸದಸ್ಯರಾಗಿ ಯುನೈಟೆಡ್ ಸ್ಟೇಟ್ಸ ಸರಕಾರವನ್ನು ನೇಮಿಸಿರುತ್ತಾರೆ ಈ ಕಮಿಶನ್ ಸದ್ಯದಲ್ಲೇ ಕಾಶ್ಮೀರಕ್ಕೆ ಬರಲಿದೆ ಎಂದು ತಿಳಿದುಬರುತ್ತದೆ ಅಮೇರಿಕವೂ ಇವರ ಒಬ್ಬ ಸದಸ್ಯರೆಂಬುದರಿಂದ ಇದಕ್ಕೆ ಹೆಚ್ಚಿನ ಪ್ರತಿಷ್ಠೆ ಪ್ರಾಪ್ತವಾಗಿರುತ್ತದೆಂಬುದು ನಿರ್ವಿವಾದ

ಕಾಶ್ಮೀರದಲ್ಲಿ ದಂಡೆತ್ತಿ ಬಂದವರನ್ನು ಪಾಕಿಸ್ತಾನ ಸರಕಾರದವರು ಹಿಂದೆ ಕಳುಹಿಸತಕ್ಕದ್ದೆಂಬುದು ಭದ್ರತಾ ಸಮಿತಿಯ ನಿರ್ಣಯದಂತೆ ನಡೆಯಬೇಕಾದ ಮೊದಲ ಕಾರ್ಯಕ್ರಮ ನಿರ್ಣಯವು ತಮಗೆ ತೃಪ್ತಿಕರವಿಲ್ಲವಿರುವುದರಿಂದ ತಾವು ಈ ದಂಗೆಗಾರರನ್ನು ಹಿಂದೆ ಹೋಗುವಂತೆ ಹೇಳುವುದಿಲ್ಲವಾಗಿ ಪಾಕಿಸ್ತಾನ ಸರಕಾರದವರು ಜಾಹೀರು ಮಾಡಿದ್ದಾರೆ ಹೀಗೆ ಭದ್ರತಾ ಸಮಿತಿಗೆ ಮೊದಲ ಮಂಗಳಾರತಿ ಮಾಡುವ ಕಾರ್ಯ ಪಾಕಿಸ್ತಾನದವರೇ ವಹಿಸಿರುತ್ತಾರೆ

ಒಂದವರು ಇಲ್ಲಿಯ ಪರಿಸ್ಥಿತಿ ಪ್ರತ್ಯಕ್ಷ ಪರಿಶೀಲಿಸಿ ಹೋಗಬಹುದೆಂಬುದೇನೋ ನಿಜವಿರುತ್ತದೆ

ಕಾಶ್ಮೀರ ಸ್ವಾತಂತ್ರ್ಯೋತ್ಸವ

ಈ ತನ್ಮಧ್ಯೆ ಕಾಶ್ಮೀರದಲ್ಲಿ ಸ್ವಾತಂತ್ರ್ಯೋತ್ಸವವೊಂದು ನಡೆಯುತ್ತಿದೆ. ಭಾರತ ಸರಕಾರದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮೊದಲಾದ ಮಹನೀಯರು ಇದರಲ್ಲಿ ಭಾಗವಹಿಸುತ್ತಿದ್ದಾರೆ

ಕಾಶ್ಮೀರ ಪ್ರಕರಣದಲ್ಲಿ ಭಾರತ ಸರಕಾರವು ಕೈಹಾಕಿದ್ದಲ್ಲವಾದರೆ ಕಾಶ್ಮೀರವು ಇಂದು ದಾಳಿಗಾರರ ಕೈವಶವಾಗಿ ಇದರ ಕತೆಯೇ ಮುಗಿಯುತ್ತಿತ್ತು. ಭಾರತ ಸೈನಿಕರು ದಾಳಿಗಾರರನ್ನು ಹಿಂದೆ ದೂಡಿ ಈ ಸಂಸ್ಥಾನದ ಸ್ವಾತಂತ್ರ್ಯ ಕಾಪಾಡಿರುವರೆಂಬ ಬಗ್ಗೆ ಸಂಶಯವಿಲ್ಲ.

ಕಾಶ್ಮೀರದ ಪ್ರಜೆಗಳು ಶೇಕ್ ಅಬ್ದುಲ್ಲಾರವರ ಮುಂದಾಳ್ತನದಲ್ಲಿ ಸಾಕಷ್ಟು ಪ್ರಯತ್ನ ನಡೆಸಿದ್ದಲ್ಲವಾದರೆ ಈ ಭಾರತೀಯ

ದೊಡ್ಡ ಬಂದರಾಗಲು ಮಂಗಳೂರಿನ ಯೋಗ್ಯತೆ

ಮರ್ಮಗೋವೆ ಮತ್ತು ಕೊಚ್ಚಿ ಇವುಗಳ ನಡುವೆ ಪಶ್ಚಿಮ ಕರಾವಳಿಯಲ್ಲಿ ದೊಡ್ಡ ಬಂದರನ್ನು ಸ್ಥಾಪಿಸುವುದು ಅಗತ್ಯವೇ ಅಗತ್ಯವೆಂದಾದರೆ ಅದನ್ನು ಎಲ್ಲಿ ಮಾಡಬೇಕು ಎಂಬುದನ್ನು ವಿಚಾರಿಸಲು ಭಾರತ ಸರಕಾರದವರು ಒಂದು ಕಮಿಟಿ ನೇಮಕ ಮಾಡಿರುತ್ತಾರೆ ಈ ಕಮಿಟಿಯ ಶಾಸ್ತ್ರೀಯ ಮಾಹಿತಿಯ ತಜ್ಞ ಸದಸ್ಯರಾದ ಕಲ್ಕತ್ತಾ ಪೋರ್ಟು ಕಮಿಶನರ್ಸ ಇವರ ಡಾಕ್ ಮೆನೇಜರ ಶ್ರೀ ಕೆ ಮಿತ್ತರ್ ಇವರು ಮತ್ತು ಅವರ ಮುಖ್ಯ ಇಂಜಿನಿಯರರಾದ ಮಿ। ಜೆ. ಬಿ ಮುರ್ರೀ ಇವರು ಇದೇ ತಾರೀಕು 16 ಮತ್ತು 17ರಲ್ಲಿ ಮಂಗಳೂರಲ್ಲಿದ್ದು ಇಂಥ ದೊಡ್ಡ ಬಂದರಾಗಿ ಮಾರ್ಪಡಿಸಲು ಮಂಗಳೂರಿನ ಯೋಗ್ಯತೆ ಪರಿಶೀಲಿಸುವರು

ಮಂಗಳೂರಲ್ಲಿ ಇಂಥ ದೊಡ್ಡ ಬಂದರನ್ನು ರಚಿಸಲು ಇರುವ ನೈಸರ್ಗಿಕ ಅನುಕೂಲತೆಗಳನ್ನು ನಾವಿಲ್ಲಿ ಪರಿಶೀಲಿಸುವ ಆವಶ್ಯಕತೆ ಇಲ್ಲ ಆಧುನಿಕ ಭೌತಿಕ ಯುಗದಲ್ಲಿ ಸ್ವಲ್ಪ ಮಾತ್ರ ಇರಬಹುದಾದ ನೈಸರ್ಗಿಕ ಅನುಕೂಲತೆಗಳನ್ನು ಬೇಕಾದಷ್ಟು ಬೆಳೆಸಲು ಬರುತ್ತದೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಇಂಥ ದೊಡ್ಡ ಬಂದರನ್ನು ಇಲ್ಲಿ ತೆರೆಯಬೇಕಾದ ಆವಶ್ಯಕತೆಯನ್ನು ಮಾತ್ರ ಇಲ್ಲಿ ನಾವಿಷ್ಟು ಈ ಸಂದರ್ಭದಲ್ಲಿ ವಿವೇಚಿಸಿದರೆ ಅನುಚಿತವಾಗಲಾರದು.

ಮರ್ಮಗೋವೆ ಮತ್ತು ಕೊಚ್ಚಿ ಬಂದರಗಳ ನಡುವೆ ಮಂಗಳೂರಿನಷ್ಟು ವ್ಯಾಪಾರದ ದೊಡ್ಡ ಕೇಂದ್ರ ಬೇರೊಂದಿಲ್ಲವೆಂದರೆ ಅತಿಶಯೋಕ್ತಿ ಇಲ್ಲ ಇಲ್ಲಿ ವ್ಯಾಪಾರ ಮಾತ್ರವಲ್ಲ ಕೈಗಾರಿಕೆಗಳೂ ಬೆಳೆಯುತ್ತಿವೆ.

ಈಗ ಇರುವ ಮಂಗಳೂರು ಬಂದರವು ಭಟ್ಕಳದಿಂದ ತಲಚೇರಿ ವರಗಿನ ಇಡೀ ಪಶ್ಚಿಮ ಕರಾವಳಿ ಹಾಗೂ ಶಿವಮೊಗ್ಗೆ ಕಡೂರು, ಹಾಸನ ಮಡಿಕೇರಿಗಳ ನಡುವಿನ ಪ್ರಾಂತ್ಯಕ್ಕೆ ಏಕಮಾತ್ರ ಬಂದರಾಗಿರುತ್ತದೆ

1946-47ರಲ್ಲಿ ಈ ಬಂದರದಿಂದ ರಫ್ತಾದ ವಸ್ತುಗಳ ಮೌಲ್ಯ ರೂ 3,67,87,529 ಇದೇ ವರ್ಷ ಈ ಬಂದರದ ಮೂಲಕ ಆಮದಾದ ವಸ್ತುಗಳ ಮೌಲ್ಯ ರೂ 8607,594 ಆಮದು ರಫ್ತುಗಳ ಒಟ್ಟು ಟನ್ನೇಜು 3,06,000 ಟನ್ನುಗಳು

ಬಂದರದಿಂದ ಇದನ್ನು ಉಪಯೋಗಿಸುವ ಪ್ರದೇಶಗಳಿಗೆ ವಸ್ತುಗಳು ಸಾಗಿಸಲು ಇತ್ಯಾದಿ ಇರುವ ರಹದಾರಿಗಳೆಂದರೆ ಮಂಗಳೂರಲ್ಲಿ ಅಂತ್ಯವಾಗುವ ರೈಲು ಶಿವಮೊಗ್ಗ ಕಡೂರು, ಹಾಸನ ಮತ್ತು ಮಡಿಕೇರಿಗಳಿಗೆ ಮಾರ್ಗಗಳು ಮತ್ತು ನೇತ್ರಾವತಿ ಮತ್ತು ಗುರುಪುರ ಹೊಳೆಗಳ ಮೂಲಕ ದೋಣಿ ಪ್ರಯಾಣ

ಈಗ ಈ ಬಂದರದ ಪ್ರದೇಶದಲ್ಲಿ ನಡೆಯುವ ಕೈಗಾರಿಕೆಗಳೆಂದರೆ ಮಂಗಳೂರಲ್ಲಿ 3, ಮಲ್ಪೆ ಮತ್ತು ಉಡುಪಿಯಲ್ಲಿ 2 ಹಂಚು ಕಾರ್ಖಾನೆಗಳು, ಮಂಗಳೂರಲ್ಲಿ 7 ಗೇರುಬೀಜ ಕಾರ್ಖಾನೆಗಳು ಮಂಗಳೂರಲ್ಲಿ 5 ಮತ್ತು ಮೈಸೂರು ಸಂಸ್ಥಾನದಲ್ಲಿ 2 ಹೀಗೆ 7 ಕಾಫಿ ಕ್ಯೂರಿಂಗ್ ಕಾರಖಾನೆಗಳು ಮತ್ತು 3 ದೊಡ್ಡ ಪ್ರಮಾಣದ ಉತ್ತಮ ವರ್ಕ್‌ಶಾಪುಗಳು

ಮಂಗಳೂರು ಮುನಿಸಿಪಲ್ ಪಟ್ಟಣವಿದ್ದು ಇಲ್ಲಿ 1,25,000ಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಇದು ಬಹಳ ಮುಂದರಿದ ಊರು. ಇಲ್ಲಿಯ ಶಾಲಾ ಕಾಲೇಜುಗಳ ಸಂಖ್ಯೆ ಇತ್ಯಾದಿ ಹೇಳುವ ಅಗತ್ಯವಿಲ್ಲ.

ಮಂಗಳೂರಿನ ವ್ಯಾಪಾರ ವಹಿವಾಟಿನಲ್ಲಿ ಎಂಟು ಕೋಟಿ ರೂಪಾಯಿಗಳ ಭಂಡವಳ ಹಾಕಲಾಗಿದೆಯೆಂದೂ ಇಲ್ಲಿ ನಡೆಯುವ ವರ್ಷಾವಧಿ ವಹಿವಾಟು ಸುಮಾರು 13 ಕೋಟಿಯಷ್ಟಾಗಬಹುದೆಂದೂ ತಿಳಿದು ಬರುತ್ತದೆ.

ಮೈಸೂರಲ್ಲಿಯ ಹಾಸನಕ್ಕೆ ಮಂಗಳೂರಿನಿಂದ ರೈಲು ರಹದಾರಿ ಹಾಗೂ ಮಡಿಕೇರಿಯಿಂದ ಸಾಹುಕಾರ ಪೇಟೆ ಮೂಲಕ ಸಕಲೇಶಪುರಕ್ಕೆ ಒಂದು ರೈಲು ರಹದಾರಿ ಇವು ಮುಂದಿನ ಆವಶ್ಯಕತೆಗಳು

ಮಂಗಳೂರನ್ನು ಭಟ್ಕಳದಿಂದ ತಲಚೇರಿ ವರೆಗಿನ ಕರಾವಳಿ ಪ್ರದೇಶಕ್ಕೆ ಮತ್ತು ಶಿವಮೊಗ್ಗೆಯಿಂದ ಬೆಂಗಳೂರು, ಮೈಸೂರು ಮತ್ತು ಮಡಿಕೇರಿ ಇವಿಷ್ಟರೊಳಗಿನ ಪ್ರದೇಶಕ್ಕೆ ಮುಖ್ಯ ಬಂದರನ್ನಾಗಿ ಮಾಡುವುದು ಸುಲಭ ಸಾಧ್ಯ ಮೈಸೂರು ಸಂಸ್ಥಾನದ ಇಡೀ ಪಶ್ಚಿಮ ಭಾಗದ ವ್ಯಾಪಾರ ಮಂಗಳೂರ ಮೂಲಕ ನಡೆಯುವಂತಾಗುವುದು

ಇಲ್ಲಿ ದೊಡ್ಡ ಬಂದರಾದರೆ ಇಲ್ಲಿ ಹಡಗ ಕಟ್ಟುವ ಕೈಗಾರಿಕೆ ಬೆಳೆಸಲು ಬಹಳ ಅನುಕೂಲವಿದೆ ಪಶ್ಚಿಮ ಘಟ್ಟಗಳ ಮರಗಳನ್ನು ಈ ಬಗ್ಗೆ ಉಪಯೋಗಿಸಬಹುದು ಸಕ್ಕರೆ ಕಾರ್ಖಾನೆಯೊಂದನ್ನು ಇಲ್ಲಿ ತರೆಯುವ ಯೋಜನೆ ಈಗಾಗಲೇ ಸಿದ್ಧವಾಗಿದೆ ನೂಲುವ ಮತ್ತು ನೇಯುವ ಗಿರಣಿಯನ್ನು ತೆರೆಯಲು ಬೇಕಾದ ಉದ್ದ ಎಳೆಯ ಹತ್ತಿಯನ್ನು ಸುಡಾನಿನಿಂದ ಇಲ್ಲಿಗೆ ಆಮದು ಮಾಡಬಹುದು ಗಿರಣಿಗೆ ಇಲ್ಲಿಯ ಹವಾಮಾನ ಅನುಕೂಲವೇ ಉಂಟು ಮೋಟಾರು ಸಾಮಾನುಗಳ ತಯಾರಿಕೆಯ ಒಂದು ಕಾರಖಾನೆ ತೆರೆಯಲು ಏರ್ಪಾಡುಗಳು ಈಗ ನಡೆಯುತ್ತಿವೆ ಸಮುದ್ರದಲ್ಲಿ ವಿಜ್ಞಾನ ವ್ಯವಸಾಯ ಕೇಂದ್ರವನ್ನು ಇಲ್ಲಿ ಸ್ಥಾಪಿಸಲು ಮದ್ರಾಸು ಸರಕಾರವು ಈಗಲೇ ನಿರ್ಧರಿಸಿರುತ್ತದೆ ಹಂಚು ಕಾರ್ಖಾನೆಗಳಂತೂ ಇವೆ ಈ ಮಣ್ಣಿನ ಕೆಲಸ ಅಭಿವೃದ್ಧಿ ಮಾಡಲು ಸರಕಾರದವರು ಇಲ್ಲಿ ಒಂದು ಶಾಲೆ ತೆರೆಯಲಿದ್ದಾರೆ ಪಶ್ಚಿಮ ಘಟ್ಟಗಳ ಉತ್ಪತ್ತಿ ಉಪಯೋಗಿಸಿ ಕಾಗದ ಕಾರಖಾನೆ ಬೆಂಕಿಪೆಟ್ಟಿಗೆ ಕಾರ್ಖಾನೆ ಪ್ಲೈವುಡ್ ತಯಾರಿ ಇವನ್ನಿಲ್ಲಿ ಇಲ್ಲಿ ಅಭಿವೃದ್ಧಿಗೆ ತರಬಹುದು ಗೇರುಬೀಜ ಕಾರ್ಖಾನೆಗಳನ್ನು ಇಡೀ ವರ್ಷವೂ ನಡಸಬಹುದು ಕಬ್ಬಿಣ ಇತ್ಯಾದಿ ಲೋಹಗಳ ದೊಡ್ಡ ಕೈಗಾರಿಕೆಗೂ ಇಲ್ಲಿ ಆಸ್ಪದವಿದೆ

ಮಂಗಳೂರನ್ನು ದೊಡ್ಡ ಬಂದರಾಗಿ ಮಾರ್ಪಡಿಸಿದರೆ ಇಲ್ಲಿ ಆರಂಭದಲ್ಲಿ 8 ಲಕ್ಷ ಟನ್ನು ವಹಿವಾಟು ಸಿಕ್ಕಬಹುದೆಂದು ಅಂದಾಜು ಮಾಡಲಾಗಿದೆ ಮೊದಲಿನ ಹತ್ತು ವರ್ಷಗಳ ಒಳಗೆ ಇದು 12 ಲಕ್ಷ ಟನ್ನುಗಳಷ್ಟಕ್ಕೂ ಎರಡನೆ 10 ವರ್ಷಗಳ ಅಖೈರಿಗೆ 18 ಲಕ್ಷ ಟನ್ನುಗಳಷ್ಟಕ್ಕೂ ಏರಬಹುದೆಂದು ಅಂದಾಜು ಮಾಡಲಾಗಿದೆ

ಭಾರತ ಸರಕಾರದವರು ಮಂಗಳೂರಲ್ಲಿ ಒಂದು ವಿಮಾನ ನಿಲ್ದಾಣ ತೆರೆಯಲು ನಿರ್ಧರಿಸಿದ್ದಾರೆ

ಮರ್ಮಗೋವೆಯಿಂದ ಕೊಚ್ಚಿಯ ತನಕ ದೊಡ್ಡ ಬಂದರಾಗಲು ಮಂಗಳೂರಿಗಿಂತಲೂ ಹೆಚ್ಚು ಯೋಗ್ಯತೆಯುಳ್ಳ ಸ್ಥಳವು ಬೇರೊಂದಿದೆ ಎಂದು ನಮಗನ್ನಿಸುವುದಿಲ್ಲ.

ಮೈಸೂರು ಸಂಸ್ಥಾನದ ಸರಕಾರದವರು ಭಟ್ಕಳವನ್ನೆ ದೊಡ್ಡ ಬಂದರವಾಗಿ ಮಾಡಬೇಕೆಂಬ ಯತ್ನದಲ್ಲಿದ್ದಾರೆಂದು ತಿಳಿದು ಬರುತ್ತದೆ. ಭಟ್ಕಳದಿಂದ ಹೆಚ್ಚೆಂದರೆ ಮೈಸೂರಿಗೆ ಮಾತ್ರ ಪ್ರಯೋಜನವಾದೀತು ಉಳಿದ ಉತ್ತರ ಮಲಬಾರು ಕೊಡಗುಗಳಿಗೆ ಗತಿ ಏನು?

ಅಖಿಲ ಕರ್ನಾಟಕದ ದೃಷ್ಟಿಯಿಂದ ನೋಡಿದರೆ ಭಟ್ಕಳಕ್ಕಿಂತ ಮಂಗಳೂರನ್ನಾರಿಸುವುದೇ ಶ್ರೇಯಸ್ಕರವೆಂಬು ಸುಲಭದಲ್ಲಿ ಸ್ಥಾಪಿಸಬಹುದು. ಮಾತ್ರವಲ್ಲ ಮಂಗಳೂರು ದೊಡ್ಡ ಬಂದರಾಗುವದರಿಂದ ಮೈಸೂರಿಗೆ ಅನುಕೂಲತೆ ಕಡಿಮೆ ಏನೂ ಇಲ್ಲ ಆದುದರಿಂದ ಮೈಸೂರವರೂ ಇತರ ಕನ್ನಡಿಗರೂ ಮಂಗಳೂರನ್ನು ಈ ವಿಷಯದಲ್ಲಿ ಸಮರ್ಥಿಸುವುದೇ ಯೋಗ್ಯವಿರುತ್ತದೆ.

ಸೈನಿಕರಿಂದ ಮಾತ್ರ ಈ ಕಾರ್ಯ ಸಾಧ್ಯವಾಗುತ್ತಿರಲಿಲ್ಲ ಆದುದರಿಂದ ಅಲ್ಲಿಯ ಸ್ವಾತಂತ್ರ್ಯವನ್ನು ನಿಜವಾಗಿ ಕಾಪಾಡಿದವರು ಅಲ್ಲಿಯ ಪ್ರಜಾವರ್ಗವೇ ಎಂಬ ಮಾತೂ ನಿಜವಿರುತ್ತದೆ.

ಆದುದರಿಂದ ಈ ಸ್ವಾತಂತ್ರ್ಯೋತ್ಸವವನ್ನು ಅವರು ಉತ್ಸಾಹದಿಂದ ನಡಸಲು ಸಾಕಷ್ಟು ಕಾರಣಗಳಿರುತ್ತವೆಯೆನ್ನಬಹುದು

ಸೋವಿಯಟ್ ಸರಕಾರದವರೂ ಕಾಶ್ಮೀರಕ್ಕೆ ಈ ಸಂದರ್ಭದಲ್ಲಿ ತಮ್ಮ ಅಭಿನಂದನಗಳನ್ನು ಕಳುಹಿಸಿರುವರಾಗಿ ಕೇಳಿಬರುತ್ತದೆ ಅದಕ್ಕೆ ಸ್ವಲ್ಪ ಮೊದಲು ಟ್ರಾನ್ಸ್ ಜೋರ್ಡನಿನ ಅರಬ ಮುಂದಾಳುಗಳು ಆಜಾದ ಕಾಶ್ಮೀರ ಸರಕಾರದ ಅಂದರೆ ದಂಗೆಗಾರರ ಮುಖಂಡರೊಡನೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದ ವಾರ್ತೆಯೂ ಪ್ರಕಟವಾಗಿತ್ತು

ಚಕ್ರವರ್ತಿ ರಾಜಗೋಪಾಲಾಚಾರ್ಯರು ಗವರ್ನರ್ ಜನರಲ್

ಬರುವ ಜೂನ್ ತಿಂಗಳಲ್ಲಿ ಲಾರ್ಡ್ ಮೌಂಟಬೇಟನರು ಗವರ್ನರ್ ಜನರಲ್ ಪದವಿ ತ್ಯಜಿಸುವರೆಂದೂ ಇವರ ಸ್ಥಾನಕ್ಕೆ ಶ್ರೀ ಸಿ ರಾಜಗೋಪಾಲಾಚಾರ್ಯರನ್ನು ನೇಮಿಸಲಾಗಿದೆಯೆಂದೂ ಪ್ರಕಟಿಸಲ್ಪಟ್ಟಿರುತ್ತದೆ

ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಈ ಪದವಿಯನ್ನಲಂಕರಿಸಲು ಇವರು ಅತ್ಯಂತ ದಕ್ಷತೆಯುಳ್ಳವರಿರುವುದರಿಂದ ಇವರನ್ನು ಈ ಕೆಲಸಕ್ಕೆ ಆರಿಸಿರುವುದು ಸಂತೋಷದ ಸಂಗತಿಯೆಂಬುದು ಸರ್ವಾಭಿಮತವಿರುತ್ತದೆ.

ಜಿನ್ನಾ ಸಾಹೇಬರು ಕೂಡಾ ರಾಜಗೋಪಾಲಾಚಾರ್ಯರನ್ನು ಅಭಿನಂದಿಸಿದ್ದಾರೆಂದ ಮೇಲೆ ಇವರನ್ನು ಈ ಕೆಲಸಕ್ಕೆ ನೇಮಿಸಿದ ಬಗ್ಗೆ ಇನ್ನು ಯಾರ ಆಕ್ಷೇಪವೂ ಉಳಿದಿಲ್ಲ.

ಪಂಡಿತ ಜವಾಹರಲಾಲರ ಕೇಂದ್ರ ಸರಕಾರದ ಮಂತ್ರಿಮಂಡಲಕ್ಕೆ ಇವರ ನೇಮಕದಿಂದ ಬಹಳ ಉಪಕಾರವಾಗುವ ಸಂಭವವಿರುತ್ತದೆ.

ರಾಜಗೋಪಾಲಾಚಾರ್ಯರನ್ನು ಅಖಿಲ ಭಾರತದೊಡನೆ ನಾವೂ ಅಭಿನಂದಿಸುತ್ತೇವೆ.

ಗಣನೀಯ ಸೂಚನೆಗಳು

ಖಂಡನೀಯ ಸಂಗತಿ

"ಹೈದರಾಬಾದದ ಅತ್ಯಲ್ಪ ಮಂದಿ ಮುಸಲ್ಮಾನರು ಕೆಲವರು ಧರ್ಮದ ಹೆಸರಲ್ಲಿ ಜನತೆಯನ್ನು ಪೀಡೆಗೊಳಪಡುವುದನ್ನು ಹಿಂದೂಸ್ತಾನ ಪಾಕಿಸ್ತಾನಗಳ ಮತ್ತು ಹೈದರಾಬಾದಿನ ಎಲ್ಲಾ ನ್ಯಾಯ ಪ್ರಿಯ ಮತ್ತು ಸನ್ಮಾನ್ಯ ಮುಸಲ್ಮಾನರು ಏಕಕಂಠವಾಗಿ ಮತ್ತು ಬಹಿರಂಗವಾಗಿ ಖಂಡಿಸಲೇಬೇಕು."

—ಶ್ರೀ ಮಶ್ರೂವಾಲಾ, ಸಂಪಾದಕ, 'ಹರಿಜನ'

ದೇವರ ಟ್ರೇಡ್‌ಮಾರ್ಕ್

"ಹಿಂದೂಗಳಿಗೆ ತಮ್ಮ ದೇವರೆಂದರೆ ಅದಷ್ಟು ಅಗ್ಗವೆಂದು ಕಾಣುತ್ತದೆ' ಜಾಹೀರಾತುಗಳಲ್ಲೂ, ವ್ಯಾಪಾರಿ ಗುರುತುಗಳಲ್ಲೂ ಪವಿತ್ರವಾದ ಮೂರ್ತಿಗಳ ಚಿತ್ರಗಳನ್ನು ಛಾಪಿಸುತ್ತಾರೆ ಆದರೆ ಯೇಸು ಕ್ರಿಸ್ತನ ಚಿತ್ರವಾಗಲಿ, ಮಹಮ್ಮದ ಪೈಗಂಬರರ ಚಿತ್ರವಾಗಲಿ ಈ ರೀತಿಯಲ್ಲಿ ನಾವು ನೋಡುತ್ತಿಲ್ಲ ಯೇಸುಕ್ರಿಸ್ತಾ ಟಿಂಬರ್ ವರ್ಕ್ಸ್, ಇಲ್ಲವೆ ರಸೂಲ್ ಮಹಮ್ಮದ್ ಬೀಡಿ ಕಾರ್ಖಾನೆ ಎಂದಾಗಲಿ ನಾವು ಕಂಡಿಲ್ಲ ಹಾಗೆ ಮಾಡಿದರೆ ಅವರ ಅನುಯಾಯಿಗಳು ರೊಚ್ಚಿಗೆದ್ದಾರು ನಾವು ಪವಿತ್ರರೆಂದೆನಿಸುವವರನ್ನು ಇಂತಹ ವ್ಯಾಪಾರೀ ವ್ಯವಹಾರಕ್ಕೆ ಳಿಸುವುದು ತರವಲ್ಲ ಈಚೆಗೆ ಮಹಾತ್ಮಾಗಾಂಧಿ, ಸುಭಾಸ್ ಬೋಸ್ ಮೊದಲಾದವರನ್ನು ಈ ಉದ್ಯಮಗಳಲ್ಲಿ ಎಳಸುವುದು ಬಹಳವಾಗಿದೆ ಇದು ಖೇದದ ಸಂಗತಿ ಜನತೆ ಸ್ವಲ್ಪ ತಾರತಮ್ಯ ನೋಡಿ ಕೊಳ್ಳಬೇಕು

—ಮಶ್ರೂವಾಲಾ

ಇವರು ದೇವರ ಜನರಂತೆ

ಹೈದರಾಬಾದಿನ ಕಿರೀಟ ರಹಿತ ನಿಜಾಮನೆಂದೆನಿಸುವ ಖಾಸೀಮ್ ರಜ್ವಿಯು ರಜಕಾರ ಸೇನಾಪತಿಗಳ ಸಭೆಯಲ್ಲಿ ಹಿಗ್ಗೆಂದ ಭಾರತ ಮಂತ್ರಿಗಳು ಒಂದು ಹೇಳಿದರೆ, ಅದರ ಮರುದಿನ ಅದೇ ಮಂತ್ರಿಗಳು ಇನ್ನೊಂದನೇ ತಿಳಿಸುತ್ತಾರೆ. ಇವರ ಮಾತುಗಳು ಸುಳ್ಳೆಂದು ಹೇಳುವವರಾರು! ರಜಕಾರರು ದೇವರಿಂದ ನೇಮಕವಾದವರು ಅವರನ್ನು ನಾಶಮಾಡಲಾದೀತೆ? ಹೈದರಾಬಾದನ್ನು ದಿಗ್ಬಂಧಿಸುವುದೆಂದರೆ ಒಂದು ಕನಸ್ಸು, ಅಂಥ ಪ್ರಸಂಗಬಂದರೆ ಶಸ್ತ್ರಾಸ್ತ್ರಕ್ಕೆ ಕೈಹಾಕುವೆವು.

(೬ನೇ ಪುಟ ನೋಡಿ)

ಖಾಲೀಸ್ಥಾನ

ಗೃಹರಕ್ಷಣಾ ದಳಕ್ಕೆ (Home Guards) ಸೇರಬಯಸುವ ಸುದೃಢ ಶರೀರವುಳ್ಳ ೨೦ರಿಂದ ೪೫ ವರ್ಷದೊಳಗಿನ ಕ್ಷತ್ರಿಯದ ಪುರುಷರಿಂದ ಅರ್ಜಿಗಳು ಅಪೇಕ್ಷಿಸಲಾಗುತ್ತವೆ. ಇಂಥಹ ೧೦೪೦ ಸ್ಥಾನಗಳಿವೆ. ಅರ್ಜಿದಾರರು ಕನ್ನಡ ಭಾಷೆ ಓದಲೂ ಬರೆಯಲೂ ತಿಳಿದಿರಬೇಕು.

ಅರ್ಜಿಗಳನ್ನು ದ. ಕ. ಜಿಲ್ಲಾ ಮೆಜಿಸ್ಟ್ರೇಟರ ವಿಳಾಸಕ್ಕೆ ಕಳುಹಿಸತಕ್ಕದ್ದು. ಅರ್ಜಿ ಲಕ್ಕೋಟೆಯ ಮೇಲೆ "ಗೃಹರಕ್ಷಣಾ ದಳದ ಅರ್ಜಿ" ಎಂದು ನಮೂದಿಸತಕ್ಕದ್ದು

ಇದೇ ೧೯೪೮ರ ಮೇ ಆಖೇರಿ ಸುಮಾರಿಗೆ ಸೇರುವ ಒಂದು ಸಮಿತಿಯು ಈ ಸಂಬಂಧ ಯೋಗ್ಯರನ್ನು ಆರಿಸುವುದು.

ನ್ಯಾಯಶಿಸ್ತುಗಳನ್ನು ಕಾಪಾಡಲು ಪೋಲಿಸರಿಗೆ ಸಹಾಯಕರಾಗಿರುವುದು ಗೃಹರಕ್ಷಕರ ಕರ್ತವ್ಯವಾಗಿದೆ

ಸಂಬಳ ಮತ್ತು ಭತ್ತೆ ವಿವರ

೧ ಗುಂಪಿನ ನಾಯಕರಿಗೆ ದಿನಕ್ಕೆ ರೂ ೪/
೨. ಉಪಗುಂಪಿನ ನಾಯಕರಿಗೆ " " ೩/
೩. ಉಪಗುಂಪಿನ ಸಹಾಯಕರಿಗೆ " " ೨/೮
೪ ವಿಭಾಗ ಮುಖಂಡ ಮತ್ತು ಸಹಾಯಕ ಮುಖಂಡರಿಗೆ ದಿನಕ್ಕೆ ರೂ ೨/
೫. ರಕ್ಷಕ ಪುರುಷರಿಗೆ ದಿನಕ್ಕೆ ರೂ ೧/೮

ಜಿಲ್ಲಾ ಮೆಜಿಸ್ಟ್ರೇಟರ ಹುಕುಂ

೨೦ ೫-೪೮

ಸಹಕಾರಿ ರಿಜಿಸ್ತ್ರಾರರು

ಮದ್ರಾಸ್ ಸಹಕಾರ ಸಂಘಗಳ ಸಹ ರಿಜಿಸ್ತ್ರಾರರಾದ ಶ್ರೀ ಬಿ ವಿಶ್ವನಾಥನ್ ಚೆಟ್ಟಿ ಬಿ ಎಸ್ ಸಿ, ಅವರು ೮ನೇ ತಾರೀಕಿಗೆ ಇಲ್ಲಿಗೆ ಬಂದು ಮಂಗಳೂರಿನ ಹಾಲುಪೂರೈಕೆ ಸಂಘ ಮತ್ತು ಕೃಷಿ ಸಹಕಾರ ಸೊಸೈಟಿಯ ಡೈರೆಕ್ಟರರ ಸಭೆಯಲ್ಲಿ ಭಾಗವಹಿಸಿರುವರಲ್ಲದೆ ಸೆಂಟ್ರಲ್ ಹೋಲ್‌ಸೇಲ್ ಕೋಪರೇಟಿವ್ ಸ್ಟೋರ್ಸ್ ಡೈರೆಕ್ಟರರ ಸಭೆಯಲ್ಲೂ ಹಾಜರಿದ್ದರು ಜಿಲ್ಲೆಯ ಹಲವು ಕೇಂದ್ರಗಳನ್ನು ಸಂದರ್ಶಿಸಿ ಅವರು ಇಂದು ಮದ್ರಾಸಿಗೆ ತೆರಳಿದರು

ವೀರಶೈವ ಸಭೆ

ದ ಕ ವೀರಶೈವ ಸುಧಾರಕ ಸಮಾಜದ ವಾರ್ಷಿಕ ಮಹಾಸಭೆಯು ಮಂಗಳೂರು ಒಸವನ ಗುಡಿಯಲ್ಲಿ ಶ್ರೀ ಜಿ ಕೃಷ್ಣ ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ ೯ರಂದು ಜರಗಿತು ಮುಂದಿನ ವರ್ಷದ ಆಡಳಿತ ಸಮಿತಿಗೆ ೨೧ ಸದಸ್ಯರ ಸಮಿತಿಯನ್ನು ಆರಿಸಲಾಯಿತು

ಗೃಹರಕ್ಷಕ ದಳದ ಸಮಿತಿ

ಶ್ರೀಗಳಾದ ಎಲ್ ಸಿ ಪ್ಯಾಸ್ ಎಂ ಎಲ್ ಎ, ಡಾ। ಯು ಪಿ ಮಲ್ಯ ಎಂ ಎಲ್ ಎ, ಮತ್ತು ಕೆ ಈಶ್ವರ ಎಂ ಎಲ್ ಎ ಇವರನ್ನು ದ ಕ ಜಿಲ್ಲೆಯ ಗೃಹರಕ್ಷಕ ದಳಕ್ಕೆ ಸೇರ್ಪಡೆಯ ಸಮಿತಿಯ ಸದಸ್ಯರನ್ನಾಗಿ ಗವರ್ನರರು ನೇಮಿಸಿರುವರು

ಮಂಗಳೂರು ಬಂದರದ ತಜ್ಞರ ಸಮಿತಿ

ಭಾರತ ಸರಕಾರದಿಂದ ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರೊಂದನ್ನು ಚುನಾಯಿಸಲು ನಿಯೋಜಿತವಾದ ಪರಿಶೀಲನಾ ಸಮಿತಿಯ ಟೆಕ್ನಿಕಲ್ ಮೆಂಬರುಗಳಲ್ಲಿ ಕಲ್ಕತ್ತಾ ಬಂದರದ ಡೋಕ್ಸ್ ಮೆನೇಜರರಾದ ಶ್ರೀ ಮಿತ್ತರ್ ಅಲ್ಲಿನ ಚೀಫ್ ಇಂಜಿನಿಯರರಾದ ವಿ ಜಿ ಬಿ ಮೂರ್ತಿ ಇವರೀರ್ವರು ಇದೇ ತಾ ೧೫ಕ್ಕೆ ಮಂಗಳೂರಿಗೆ ಬರಲಿರುವರು ಆ ಕುರಿತಾದ ಎಲ್ಲಾ ತನಿಖೆಗಳನ್ನವರು ಇಲ್ಲಿ ಮಾಡುವರಾಗಿ ತಿಳಿದುಬರುತ್ತದೆ ಈ ಸಂಬಂಧ ಅವರು ಸ್ಥಳೀಯ ನಗರ ಸಭಾಸದಸ್ಯರನ್ನೂ, ವಾಣಿಜ್ಯ ಸಂಘದವರನ್ನೂ ಅಲ್ಲದೆ ಕಾಫಿ, ಗೇರುಬೀಜ, ಹಂಚು ಮೊದಲಾದ ಕೈಗಾರಿಕಾ ಸಂಸ್ಥೆ ಮತ್ತದರ ಪ್ರತಿನಿಧಿಗಳನ್ನೂ ಕಾಣುವರಲ್ಲದೆ, ಕೆಲ ಶೈಕ್ಷಣಿಕ ಸಂಸ್ಥೆಗಳನ್ನು ಅವರು ಸಂದರ್ಶಿಸುವರು ಇಲ್ಲಿಯ ಕೆನರಾ ಬೇಂಕ್ ಲಿಮಿಟೆಡ್ ಅವರು ಸ್ಥಳೀಯ ಬೇಂಕುಗಳ ಪರವಾಗಿ ಈ ಮಹನೀಯರಿಗೆ ಒಂದು ಮೆಮೊರೆಂಡವನ್ನು ಸಮರ್ಪಿಸಲಿರುವರು.

ಜಿಲ್ಲಾ ಸಮಾಚಾರ

೧೪೪ನೇ ಪ್ರತಿಬಂಧಕಾಜ್ಞೆ

ಇತ್ತೀಚೆಗೆ ಸಾರ್ವಜನಿಕ ಶಿಸ್ತು ಶಾಂತಿಯನ್ನು ಕೆಡಿಸುವ ರಾಜಕೀಯ ಉದ್ದೇಶದ ಚಟುವಟಿಕೆಗಳು ಪ್ರಾರಂಭವಾಗಿವೆಯೆಂದು ನಗರದಲ್ಲಿ ಈ ಸಂಬಂಧವಾದ ಸಭೆ ಮೆರವಣಿಗೆ ಇತ್ಯಾದಿಗಳಿಗೆ ನಿರ್ಬಂಧ ಹಾಕುವ ೧೪೪ನೇ ಸೆಕ್ಷನನ್ನು ಕಳೆದ ತಾ ೧೦ರಿಂದ ಜಾರಿಗೆ ತರಲಾಗಿದೆ.

ಜಿಲ್ಲಾ ಹರಿಜನ ಪರಿಷತ್ತು

ದ ಕ ಜಿಲ್ಲಾ ಹರಿಜನ ಪರಿಷತ್ತು ಇದೇ ಮೇ ತಿಂಗಳ ತಾರೀಕು ೧೫ ಮತ್ತು ೧೬ಕ್ಕೆ ಮಂಗಳೂರು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಜರಗುವುದು ಹರಿಜನ ವಿದ್ಯಾರ್ಥಿ ಮಜೂರ, ಮಹಿಳೆಯರ ಸಮ್ಮೇಳನಗಳು ಜರುಗಲಿವೆ ತಾ ೧೬ರ ಆದಿತ್ಯವಾರ ರಾತ್ರಿ ಯಕ್ಷಗಾನದ ಕಾರ್ಯಕ್ರಮವೂ ಇದೆ

ಕಮ್ಯೂನಿಸ್ಟರ ದಸ್ತಗಿರಿ

ಶ್ರೀ ಕೋಟೆಕಾರ್ ಕೃಷ್ಣಶೆಟ್ಟಿ ಇವರನ್ನು ಕಳೆದ ತಾ ೨ರಲ್ಲಿ ಕೈದುಮಾಡಿ ತಾ ೮ರಲ್ಲಿ ಡಿಟೆನ್‌ಶನಿಗಾಗಿ ವೆಲ್ಲೂರಿಗೆ ಇಲ್ಲಿಂದ ಒಯ್ಯಲಾಯಿತಲ್ಲದೆ ಹೊಸದುರ್ಗ ಪ್ರಾಂತ್ಯದಿಂದ ಇಬ್ಬರು ಎಲಿಮೆಂಟರಿ ಶಾಲೋಪಾಧ್ಯಾಯರನ್ನೂ ಮತ್ತಿಬ್ಬರನ್ನು ಹಾಗೆ ನಾಲ್ವರನ್ನು ವೆಲ್ಲೂರಿಗೆ ದಿಗ್ಬಂಧನ ಕಾರ್ಯಕ್ಕಾಗಿ ಸಾಗಿಸಲಾಯಿತೆಂದೂ ತಿಳಿದುಬಂದಿದೆ

ಮದ್ಯನಿಷೇಧ ತಕ್ಸೀರುಗಳು

ಮಂಗಳೂರಿನ ಮಾರ್ಶಲ್ ಕುರ್ಸೆ ಎಂಬಾತನ ಬಳಿ ಬೆಲ್ಲದ ಶರಾಬು ಇತ್ತೆಂದು ರೂ ೧೦೦ ದೇಜು ಬೆಲ್ಟಡರ ವಶ ಗೇರು ಶರಾಬು ಇದ್ದುದಕ್ಕೆ ರೂ ೫ ಕೆಡ್ತೆ ಗ್ರಾಮದ ಲಕ್ಷ್ಮೀ ಭಂಡಾರ್ತಿಯ ಬಳಿ ೮ ಬಾಟ್ಲಿ ತಾಳೆ ಶರಾಬು ಇದ್ದುದಕ್ಕೆ ರೂ ೨೦೦ ಹೀಗೆ ಸ್ಪೆ ಸ ಮೆಜಿಸ್ಟ್ರೇಟರು ಜುಲ್ಮಾನೆ ವಿಧಿಸಿರುವರು

ರಾಜಕೀಯ ಸಂತ್ರಸ್ತರಿಗೆ ಪರಿಹಾರ

ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಿ ಜೈಲುವಾಸ ಮತ್ತಿತರ ಕಾರಣಗಳಿಂದ ಅನುಭವಿಸಿದವರಿಗೆ ಭೂಕ್ಷೇತ್ರಗಳನ್ನು ವಿಂಗಡಿಸಿ ಕೊಡುವಲ್ಲಿ ಜಿಲ್ಲಾ ಕಲೆಕ್ಟರರಿಗೆ ಸಹಾಯ ಮಾಡಲೇರ್ಪಟ್ಟ ಸರಕಾರದಿಂದ ನಿಯೋಜಿತವಾದ ಸಲಹಾ ಸಮಿತಿಯ ಸಭೆಯೊಂದು ಕಳೆದ ತಾ ೭ರಂದು ಹಜೂರ್ ಕಛೇರಿಯಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿತ್ತು ಮೊದಲು ಈ ರೀತಿ ಭೂದಾನ ಮಾಡಲು ಜಿಲ್ಲೆಯಲ್ಲಿ ದೊರಕಬಹುದಾದ ಭೂಮಿ ಎಷ್ಟೆಂಬ ಲೆಕ್ಕದ ವರದಿಯೊಂದು ತಯಾರಾಗುವಂತೆಯೇ ಅರ್ಜಿದಾರರು ಅದರಲ್ಲಿ ತಮಗೆ ಬೇಕಾದ ಭೂಕ್ಷೇತ್ರವನ್ನು ತಾವೇ ಆರಿಸಿಕೊಳ್ಳುವಂತೆಯೂ ದೊಡ್ಡ ತುಂಡು ಭೂಮಿಯನ್ನು ಕೆಲವು ಮಂದಿ ಅರ್ಜಿದಾರರ ಗುಂಪಿಗೆ ಕೊಟ್ಟು ಅವರು ಅಲ್ಲಿ ಸಹಕಾರಿ ಸಾಮೂಹಿಕ ಪದ್ಧತಿ ಮೇರೆಗೆ ಕೃಷಿ ಮಾಡುವ ಏರ್ಪಾಡಾಗುವಂತೆಯೂ ನಿರ್ಧರಿಸಲ್ಪಟ್ಟಿತು

ಬೆಂಕಿ ಅನಾಹುತ

ಕಳೆದ ತಾ ೬ರ ರಾತ್ರಿ ಮಂಗಳೂರಿಗೆ ಸಮೀಪದ ಕುಡ್ಪು ಎಂಬಲ್ಲಿ ರಾತ್ರಿ ಒಂದು ಮನೆಗೆ ಬೆಂಕಿಬಿದ್ದು ಒಂದು ಕೋಣ, ಒಂದು ಎಮ್ಮೆ ಇವೆರಡು ಸುಟ್ಟು ನಾಶವಾದವೆಂದು ತಿಳಿದುಬಂದಿದೆ ಈ ಅನಾಹುತದ ಕಾರಣಗಳು ತಿಳಿದಿಲ್ಲ

ಬೆಂಕಿನಾಥೇಶ್ವರನಿಗೆ ಕಾಣಿಕೆ

ಕಳವಾರು ಗ್ರಾಮದ ಶ್ರೀ ಬೆಂಕಿನಾಥೇಶ್ವರ ದೇವರ ಗರ್ಭಗುಡಿಗೆ ತಾಮ್ರ ಹೊದಿಸುವ ಬಗ್ಗೆ ಇಲ್ಲಿಯ ಶ್ರೀ ಒಳಚಿಲ ಲಕ್ಷ್ಮೀನಾರಾಯಣ ಭಟ್ಟರ ಮೂಲಕ ವಂತಿಗೆ ವಸೂಲಾಗುತ್ತಿದೆ

ನಮ್ಮದು ಹಿಂಸಾಚರಣೆಯ ಕ್ರಾಂತಿಯಲ್ಲ

ಶ್ರೀಮತಿ ಕಮಲಾ ದೇವಿಯರ ಭಾಷಣ

ಕಳೆದ ಮೇ ೧ರ ದಿನಾಚರಣೆ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರು ಸೋಶಲಿಸ್ಟ ಪಕ್ಷದ ತತ್ವದ ಗೊತ್ತುಗುರಿಗಳನ್ನು ವಿವರಿಸಿದರು. ಅವರು ತಿಳಿಸಿದ ಮುಖ್ಯ ವಿಷಯಗಳು ಇಂತಿವೆ

ಇಂದು ಸರಕಾರಗಳೆಲ್ಲ ನಮ್ಮದೇ ಆದರೂ ಜನತೆಗೆ ಬೇಕಾದಂತೆ ಆಡಳಿತೆ ನಡೆಯುತ್ತಿಲ್ಲ ಸರಕಾರದಲ್ಲಿ ಬಂಡವಾಳಶಾಹಿಗಳ ಕೈ ಬಲಿಷ್ಠವಾಗಿದೆಯೆಂದು ನಾವು ಹೇಳುತ್ತೇವೆ ಆದರೆ ಅಧಿಕಾರದಲ್ಲಿರುವವರನ್ನು ದೂರಿ ಪ್ರಯೋಜನವಿಲ್ಲ ನಾಳೆ ಸಮಾಜವಾದಿಗಳ ಅಧಿಕಾರ ವಹಿಸಿದರೆ ಮಾಡುವುದಿಷ್ಟೆ ಇದಕ್ಕೆ ಬದಲಾಗಿ ನಾವು ಚುನಾವಣೆಯಲ್ಲಿ ಮತ ಕೊಡಲು ಮಾತ್ರ ಹೋಗುತ್ತೇವೆ ಮತ್ತೆ ನಮಗೂ ಸರಕಾರಕ್ಕೂ ಸಂಪರ್ಕವಿಲ್ಲ ನಮ್ಮ ಸರಕಾರ ಎಂಬ ಅಭಿಮಾನವೇ ನಮ್ಮಲ್ಲಿರುವುದಿಲ್ಲ ಬಂಡವಾಳಶಾಹಿಗಳನ್ನು ಸರಕಾರಗಳಿಂದ ದೂರ ಸರಿಸುವ ಶಕ್ತಿ ನಮ್ಮಲ್ಲಿಲ್ಲ ಆಡಳಿತದಲ್ಲಿ ಬದಲಾವಣೆಯಾಗಬೇಕಾದರೆ ನಮ್ಮ ದೇಶದ ಅಧಿಕ ಸಂಖ್ಯಾಕರಾದ ಶ್ರಮಜೀವಿಗಳು ಒಂದಾಗಬೇಕು ಅವರಲ್ಲಿ ಒಂದು ಕ್ರಾಂತಿಯಾಗಬೇಕು ಎಂತಹ ಕ್ರಾಂತಿ? ಹಿಂಸಾಚರಣೆಯದಲ್ಲ ಆಚಾರ ವಿಚಾರದಲ್ಲಿ ಆ ಕ್ರಾಂತಿಯಾಗಬೇಕು ಶ್ರಮಜೀವಿಗಳ ಸಂಘಟಿತರಾಗಿ ನಮ್ಮ ಸರಕಾರ ನಡೆಸುವ ಶಕ್ತಿ ಪಡೆಯಬೇಕು ಹೀಗೆ ಭಾರತದಲ್ಲಿನ ಎಲ್ಲ ಸಾಮಾನ್ಯ ವರ್ಗದವರನ್ನು ಒಟ್ಟುಗೂಡಿಸಿ ಸಂಪೂರ್ಣ ಸಮತಾವಾದಿ ಆಡಳಿತೆಯನ್ನು ಸಾಧಿಸುವುದೇ ಸೋಶಲಿಸ್ಟ್ ಪಕ್ಷದ ಗುರಿ

... ಕೊಂಗ್ರೆಸು ಬಂಡವಾಳಶಾಹಿ, ಮಜೂರಶಾಹಿ ಮೊದಲಾದ ಎಲ್ಲರ ಪ್ರತಿನಿಧಿಕ ಸಂಸ್ಥೆ. ಆದುದರಿಂದ ಅದು ಎಲ್ಲರಿಗೂ ಹಿತವಾಗುವಂತೆ ವರ್ತಿಸಬೇಕಾಗಿದೆ. ಒಂದು ಪಕ್ಷಕ್ಕೆ ಹಿತವಾಗುವಾಗ ಇನ್ನೊಂದಕ್ಕೆ ಅಹಿತವಾಗುತ್ತದೆ. ಆದರೆ ಸಮಾಜವಾದಿ ಪಕ್ಷದಲ್ಲಿ ಬಂಡವಾಳಶಾಹಿಗೆ ಸ್ಥಾನವಿಲ್ಲ ಅದು ಕಾರ್ಮಿಕ, ರೈತ ಮತ್ತು ಮಧ್ಯಮವರ್ಗದವರ ಸಂಸ್ಥೆ. ಕೊಂಗ್ರೆಸಿನಲ್ಲಿದ್ದರೆ ಸಮಾಜವಾದಿಗಳಿಗೆ ತಮ್ಮ ಧ್ಯೇಯ ಸಾಧನೆ ಕಷ್ಟ, ಅದಕ್ಕೇ ಅವರು ಹೊರಬಂದರು

ಸರಬರಾಯಿ ಅಧಿಕಾರಿಗಳ ಸಂಚಾರ

ಜಿಲ್ಲಾ ಸರಬರಾಯಿ ಆಫೀಸರರಾದ ಶ್ರೀ ಎಂ ಬಿ ಶಂಕರರಾವ್ ಅವರು ಸ್ಪೆಶಲ್ ಡೆ॥ ಇನ್‌ಸ್ಪೆಕ್ಟರು ಶ್ರೀ ಎಚ್ ಎಲ್ ನಾರಾಯಣ ಭಟ್ಟರಿಂದ ಕೂಡಿ ಸ್ಯಾಕಾಫ್, ಮೊಗ್ರಾಲ್ ಗ್ರಾಮಗಳ ರಿಲೀಫ್ ಶೋಪುಗಳನ್ನು, ಮತ್ತೆ ಅದೇ ಆಫೀಸರರು ಕಾಸರಗೋಡು ತಹಶೀಲ್ದಾರ ಶ್ರೀ ಟಿ ವೆಂಕಟರಾಯರ ಜೊತೆಯಲ್ಲಿ ಕುಂಬಳೆಯ ರಿಲೀಫ್ ಶೋಪುಗಳನ್ನು ಸಂದರ್ಶಿಸಿದರು

ಕಾಸರಗೋಡು ತಾಲೂಕು ಆಫೀಸಿನಿಂದ ನೌಕರಿ ಕಡಿತದ ಸಂಬಂಧ ೩ರಿಂದ ೭ ವರ್ಷಗಳ ವರೆಗಿನ ಸರ್ವೀಸ್ ಇರುವ ೧೫ ಮಂದಿ ಬೇರೆಯವರನ್ನು ನಿವೃತ್ತಿ ಪಡಿಸಲಾಗಿದೆ ಇವರು ಸರಕಾರಕ್ಕೊಂದು ಮನವಿ ಮಾಡಿಕೊಂಡಿರುವರು

ಕಾಸರಗೋಡು ಮೈನ್ ತಾಲೂಕಿನಲ್ಲಿ ಈಚೆಗೆ ೧೨ ರಿಲೀಫ್ ಶಾಪುಗಳನ್ನು ಹೆಚ್ಚಿಸಿದೆ ಒಟ್ಟು ಅಲ್ಲೀಗ ಅಂಥ ೬೦ ಶಾಪುಗಳಿವೆ ನಿತ್ಯ ಪಡಿಯನ್ನು ಹೆಚ್ಚಿಸಬೇಕೆಂದು ಜನತೆಯ ಒತ್ತಡದ ಅಪೇಕ್ಷೆಯಿದೆಯೆಂದು ತಿಳಿದುಬರುತ್ತದೆ

೫ನೇ ಪುಟದಿಂದ

ಈ ಅಬ್ಬರ ಸಾಕು

"ರಜಪೂತ ಹೋರಾಟದ ಭಾಷಣಗಳ ಮತ್ತು ... [illegible] ... ಸರಕಾರವು ... [illegible] ... ರನ್ನು ತಡೆಯ ... [illegible] ... ಗದಿದ್ದರೆ ... [illegible] ...

... [illegible] ... ವುದ ... [illegible] ... ಅಲ್ಲಿನ ಪತ್ರಿಕೆಗಳಿಗೆ ... [illegible] ... ಸರಕಾರ ದೊರೆಯಲೇ ... [illegible] ... ವಿದ್ದಷ್ಟು ... [illegible] ... ತಿನ ... [illegible] ..."

— ನೆಹರು

ಮುರಿದದ್ದು ತಿರುಗಿ ಒಂದಾಗದು

"ಹಿಂದೂಸ್ಥಾನ ಮತ್ತೆ ಒಂದಾಗಬೇಕೆಂಬ ವಿಚಾರವನ್ನೇ ಹಿಂದೂಸ್ಥಾನ ಸರಕಾರವು ಸ್ವೀಕರಿಸದು."

"ಜನವ ... [illegible] ... ವಿಷವನ್ನು ... [illegible] ... ಶಕ್ತಿಗಳಿಗ ಸ್ಪಷ್ಟವಾಗಿವೆ ಆದರೆ ... [illegible] ... ಅವು ಯಾವಾಗ ತಲೆಯೆತ್ತಬಹುದೆಂದು ಹೇಳಬರುವುದಿಲ್ಲ ನಾವ್ ... [illegible] ... ದಕ್ಷತೆಯ ... [illegible] ...

"... [illegible] ... ಸಗಳಿಂದಲೇ ... [illegible] ... ನಾನು ... [illegible] ... ದಿಗೂ ಬಿಟ್ಟಿಲ್ಲ"

ನೆಹರು

"ದ್ವಿರಾಷ್ಟ್ರ ತತ್ತ್ವದ ಮೇಲೆ ಇನ್ನೂ ವಿಶ್ವಾಸವಿರುವ ಮುಸಲ್ಮಾನರು ಪಾಕಿಸ್ತಾನಕ್ಕೆ ಹೊರಟು ಹೋಗಲೇ ಬೇಕು ... ಚಿತ್ಯಾತೀತ ರಾಜ್ಯವಾದ ಹಿಂದೂಸ್ಥಾನದಲ್ಲವರಿಗೆ ಸ್ಥಾನವಿಲ್ಲ ಮೋಮಿನ್ ಪಂಥಿಗಳಾದರೂ ರಾಷ್ಟ್ರದ ಅದೆಂತಹ ಗಂಡಾಂತರದಲ್ಲಾದರೂ ಅಖಂಡತ್ವವನ್ನೇ ಬೆಂಬಲಿಸಿದರು

— ಅಬ್ದುಲ್ ಕಯೂಮ್ ಅನ್ಸಾರಿ

ಮಗುವಿನ ಮೃದು ಚರ್ಮಕ್ಕೆ ಹೆಚ್ಚು ರಕ್ಷಣೆಬೇಕು.

ಕ್ಯುಟಿಕುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ

554

ಕುಟಿಕೂರಾ ಸಾಬೂನು

CUTICURA SOAP

ಧ್ಯೇಯ ಉತ್ತಮವಿದ್ದರೆ ಉಚ್ಚ ಸಾಧನವೂ ಅವಶ್ಯ

ಕೊಳೆಯಿಂದ ಶುದ್ಧತ್ವವು ಸಾಧ್ಯವಿಲ್ಲ

ಶಸ್ತ್ರಾಸ್ತ್ರ ಯುದ್ಧದಿಂದ ಸರ್ವಾಧಿಕಾರತ್ವ ದುಷ್ಪರಿಣಾಮ

ಸೇವಾಗ್ರಾಮದಲ್ಲಿ ಗಾಂಧೀ ಸ್ಮಾರಕ ಸಮಿತಿಯ ಉದ್ದೇಶಪೂರ್ಣತೆಯ ಸಾಧನಗಳನ್ನು ಪರ್ಯಾಲೋಚಿಸಲು ಸೇರಿದ ಸಭೆಯಲ್ಲಿ ಗಾಂಧೀಜಿಯ ಪಟ್ಟಶಿಷ್ಯರೆಂದೆನಿಸುವ ವಿನೋಬಾಭಾವೆಯವರು ಕೆಲವು ವಿಚಾರಪರಿಷ್ಕೃತ ಸೂಚನೆಗಳನ್ನು ಕೊಟ್ಟರು. ಆ ಸಂಬಂಧದಲ್ಲಿವರು ಅನೇಕ ಸಂಗತಿಗಳನ್ನು ತಿಳಿಸಿದರು. ಅದರಲ್ಲಿ ಉತ್ತಮಧ್ಯೇಯ ಸಾಧನೆಗೆ ಉತ್ತಮ ಮಾರ್ಗಾನುಸರಣೆಯೂ ಅವಶ್ಯವೆಂಬ ಸಂಗತಿಯ ಕುರಿತು ಪ್ರಖ್ಯಾತ ಗಾಂಧೀ ವಿಚಾರ ಪ್ರಚಾರಕರಾದ ಕಿಶೋರಿಲಾಲ ಮುಶ್ರುವಾಲರು (ಈಗ ಹರಿಜನ ಪತ್ರಿಕೆಯ ಸಂಪಾದಕರು) ಹರಿಜನ ಪತ್ರಿಕೆಯ ಅಗ್ರಲೇಖವೊಂದರಲ್ಲಿ ಹೀಗ ಬರೆದಿರುವರು –

ಅದೆಂತಹ ಉಚ್ಚಧ್ಯೇಯಸಾಧನೆಗಾದರೂ ಹಿಂಸಾಧೋರಣೆಯನ್ನನುಸರಿಸಿದರೆ ದುರಂತಮಯ ದುಷ್ಪರಿಣಾಮವುಂಟಾಗುತ್ತದೆಂದು ಶ್ರೀ ವಿನೋಬಾಭಾವೆಯವರು ನಿರೂಪಿಸಿದುದು ನಿಸ್ಸಂದೇಹವಾದುದು ಗಾಂಧೀಜಿಯ ಮೂಲಕ ಒಂದು ಸರ್ವಸಾಮಾನ್ಯ ಧ್ಯೇಯಬದ್ಧರಾದವರಾದರೂ ಕನಿಷ್ಠಪಕ್ಷದಲ್ಲಿ ತಮ್ಮ ತಮ್ಮ ಸಂಸ್ಥೆಗಳ ಮೂಲಕ ತಮ್ಮ ವ್ಯವಹಾರದಲ್ಲಿ ಸತ್ಯಪಥವನ್ನನುಸರಿಸಲು ಪ್ರಯತ್ನಮಾಡುವುದು ಶ್ರೇಯಸ್ಕರ

ಜಗತ್ತಿನ ಅನಿಷ್ಟಗಳು

ಒಳಿತು ಕೆಡುಕುಗಳು ಯಾವುದೇ ಒಂದು ನಿರ್ದಿಷ್ಟ ಸಂಸ್ಥೆಗೆ ಅನ್ವಯಿಸುವ ಗುಣವಿಶೇಷಗಳಲ್ಲ. ಪತ್ರಿಯೊಂದು ಧ್ಯೇಯವಾದವನ್ನು ಸಾರುವ ಜನರಲ್ಲಿ ಈ ಉತ್ಕೃಷ್ಟ ನೀಚ ಗುಣಗಳು ಕೂಡಿಕೊಂಡಿರುತ್ತವ ಆ ದೃಷ್ಟಿಯಿಂದ ಎಲ್ಲರೂ ಸಮಾನರೇ ಆಗಿರುತ್ತಾರೆ ಜಗತ್ತು ಒಳಿತಿಂದುದನ್ನು ತ್ಯಜಿಸಿ ಮುನ್ನಡೆದರೆ ಖಂಡಿತ ಸುಗಮ ಅಭಿವೃದ್ಧಿಯನ್ನು ಪಡೆಯುವುದು. ಆದರೆ ಜಗತ್ತಿನಲ್ಲಿಯ ವ್ರತಿಯೊಂದು ಸಂಸ್ಥೆ ತನ್ನ ಧ್ಯೇಯಸಾಧನಗ ಅಸತ್ಯ ಮತ್ತು ಹಿಂಸೆಯ ಅಂಗಗಳನ್ನು ತ್ಯಜ್ಯವೆಂದು ನಿರ್ಧರಿಸಿದರೆ ಮಾತ್ರ ಇದು ಸಾಧ್ಯವಾಗುವುದು.

ಹಿಂದಿನ ಕಾಲದ ಜನರು ಲೋಕೋದ್ಧಾರದ ದಯಾಗುಣ ಪ್ರೇರಣೆಯಿಂದ ಶಸ್ತ್ರಾಸ್ತ್ರಗಳಿಗೆ ಕೈಯಿಕ್ಕುತಿದ್ದರು. ಆದರ ಈಗಿನ ಕಾಲದಲ್ಲಿ ಅದೆಂತಹ ಉನ್ನತ ಧ್ಯೇಯಕ್ಕಾದರೂ ಶಸ್ತ್ರಾಸ್ತ್ರಗಳಿಗ ಮರೆಹೋಗುವುದು ಅದೆಷ್ಟು ನಿಸ್ವಾರ್ಥಕವಾದುದೆಂದು ನಾವು ಪ್ರತ್ಯಕ್ಷವಾಗಿ ನಗಂಡಿದ್ದೇವೆ ಈಗಿನ ವಿಜ್ಞಾನ ವಿಕಾಸದಿಂದ ಶಸ್ತ್ರಾಸ್ತ್ರ ಭೀಕರತೆಯ ಮಿತಿಯು ತಪ್ಪಿಹೋಗಿದೆ ಆದುದರಿಂದ ಹಿಂಸೆಯನ್ನು ಪರಿತ್ಯಜಿಸಿ ಅಹಿಂಸೆಯನ್ನು ನಾವು ಕೈಕೊಳ್ಳಬೇಕಾದುದು ಅನಿವಾರ್ಯವೇ ಎನಿಸುತ್ತದೆ

ಹಿಂಸೆಯು ಒಂದು ನಿವಾರ್ಯವಿಲ್ಲದ ಅನಿಷ್ಟವೆಂದು ಯಾವ ಸಂಸ್ಥೆಯೂ ಅದನ್ನು ಅನುವರ್ತಿಸಿಕೊಳ್ಳುವುದು ಅವಶ್ಯವೆಂದು ತೋರುವುದಿಲ್ಲ ಅದಕ್ಕೆ ಪ್ರತಿಯಾಗಿ ಜಗತ್ತಿನಲ್ಲಿ ವಿಚಾರಶೀಲ ಜನರು ಒಟ್ಟುಗೂಡಿದರೆ ಹಿಂಸೆಯ ಅವಶ್ಯಕತೆಯು ನಿಜವಾಗಿ ಕಡಿಮೆಯಾಗುತ್ತದಲ್ಲದೆ ಹೆಚ್ಚಾಗದು. ಅಧಿಕಾರವರ್ಗಸ್ಸಿನ ಕೋರಿಕೆಯಿಂದಲೇ ಹಿಂಸೆಯ ಅವಶ್ಯಕತೆಯುಂಟಾಗುತ್ತದೆ. ಅಧಿಕಾರಮತ್ತತೆಯಾದರೋ ತನ್ನ ಸುತ್ತಮುತ್ತಲಿನವರಿಂದ ಒತ್ತಾಯದ ವಿಧೇಯತೆಯನ್ನೇ ನಿರೀಕ್ಷಿಸುತ್ತದೆ.

ಆರ್ ಎಸ್. ಎಸ್. ತತ್ವಜ್ಞಾನ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳಿಂದುಂಟಾದ ಗಲಭೆಗಳಂತೆ ಹದ್ದೆಂದು ವಿನೋಬಾಜಿಯವರು ತಿಳಿಸಿರುವರು. ಮಹಾರಾಷ್ಟ್ರದಲ್ಲಿ ಜನ್ಮಹೊಂದಿದ ಈ ಚಳವಳವು ಈಗೊಂದು ಬಲವಾದ ತತ್ವಜ್ಞಾನವಾಗಿ ರೂಪಾಂತರ ಹೊಂದಿದೆ. ಬೇರೆ ಬೇರೆ ವಿಚಾರಗಳಿರುವುದರಲ್ಲಿ ಹಲವಾರು ತತ್ವಜ್ಞಾನ ಪಂಥಗಳಿರುವುದು ಅನಿವಾರ್ಯವೇ ಸರಿ ಆದರೆ ಎಂದೆಂದಿಗೂ ಸದ್ವರ್ತನೆಯ ಮಾರ್ಗಗಮನವನ್ನೂ ತ್ಯಜಿಸೆವೆಂದವರೆಲ್ಲರೂ ನಿರ್ಧರಿಸಿದರೆ ಅಲ್ಲೊಂದು ನ್ಯತಿಕಶಕ್ತಿ ಆವರಣವುಂಟಾಗಿ ಇತರರ ಮೇಲೂ ಅದು ಸತ್ಪರಿಣಾಮವನ್ನು ಮಾಡುವುದು. ಸತ್ಯ ಅಹಿಂಸೆಗಳಿಗೆ ಪ್ರತಿಜ್ಞಾಬದ್ಧನಾದ ವ್ಯಕ್ತಿಯೋರ್ವನು ಅವನು ಯಾವ ಕ್ಷೇತ್ರದಲ್ಲೇ ಸಾಧನಗ್ಯಯಲಿ-ಖಂಡಿತವಾಗಿಯೂ ಅವನು ದೇಶಕ್ಕೆ ಶಕ್ತಿದಾತನೇ ಆಗಿರುತ್ತಾನ ಗಾಂಧೀಜಿಯವರು ನಮ್ಮ ಸಾಧನಗಳನ್ನು ಶುದ್ಧವಿರಿಸಿ ದೆಂದು ನಮ್ಮೆದುರು ಪಲ್ಲವಿಹಾಡುತಿದ್ದರು, ಆದರೆ ನಾವು ಅವರ ಸಲ್ಲಿಗೆ ಕಿವಿಕೊಡದಾದವು "ಗೋಡೆಯೊಂದು [illegible] ವಿಗ್ರನೇರವಾಗಿರಬೇಕಾದದು ಗಣಿತದ ತಾತ್ವಿಕ ನಿರೂಪ ಆದರೆ ಅದಷ್ಟು ದಕ್ಷತೆ ವಹಿಸಿದರೂ ಕಾರ್ಯರೂಪದಲ್ಲಿ ಗೋಡೆಯು ಶೇಕಡಕ್ಕೆ ಶೇಕಡಾ ನೇರವಾಗಿರಲಾರದು. ಅಂದ ಮಾತ್ರಕ್ಕೆ ಕೆಲವು ಡಿಗ್ರಿಗಳಷ್ಟು ಕೂಡಾ ವಾಲಿಕೊಂಡಿದ್ದರೆ ಹಾನಿಯಿಲ್ಲವೆನ್ನುವುದು ತಪ್ಪು. "ಹೀಗೆಂದು ವಿನೋಬಾಜಿಯವರು ಸತ್ಯ ಅಹಿಂಸೆಯನ್ನು ಗೋಡೆಕಟ್ಟುವಿಕೆಗೆ ಹೋಲಿಸಿದರು. ಅದೇ ರೀತಿ ಸಂದರ್ಭಕ್ಕೆ ತಕ್ಕಂತೆ ಸತ್ಯ ಅಹಿಂಸೆಗಳನ್ನು ಸ್ಥಿತ್ಯಂತರಗೊಳಿಸಬಹುದೆಂದು ಹೇಳುವುದೂ ಶುದ್ಧ ತಪ್ಪಾಗುತ್ತದ ಎಲ್ಲಾ ಸಂದರ್ಭಗಳಲ್ಲಿ ಸತ ಮತ್ತು ಅಹಿಂಸೆಗಳನ್ನೇ ಎತ್ತಿಹಿಡಿಯುವುದೇ ನಿರ್ಧಾರವಾಗಿರಬೇಕಾದುದು ಅವಶ್ಯ

ಸಮತಾವಾದಿ ಧೋರಣೆ

ಅದೇ ಸಭೆಯಲ್ಲಿ ಮಾತನಾಡಿದ ಶ್ರೀ ಜಯಪ್ರಕಾಶ ನಾರಾಯಣರೂ "ಈ ಹಿಂದೆ ಧ್ಯೇಯ ಮತ್ತು ಸಾಧನೆಗಳ ಕುರಿತು ನಾನು ಅದೆಂತಹ ಅಭಿಪ್ರಾಯವನ್ನಿಟ್ಟುಕೊಂಡರೂ ಈಗ ಮಾತ್ರ ಸತ್ಸಾಧನೆಯ ಅವಶ್ಯಕತೆಯಿದೆಯೆಂದು ದೃಢಾಭಿಪ್ರಾಯವುಳ್ಳವನಾಗಿರುವೆ" ಹೀಗೆಂದು ನಿರೂಪಿಸಿದರು. ನಾಸಿಕದಲ್ಲಿ ಜರಗಿದ ಸೋಶಲಿಸ್ಟ್ ಪರಿಷತ್ತಿನಲ್ಲೂ ಅವರು ಅದೇ ಅಭಿಪ್ರಾಯ ವ್ಯಕ್ತಪಡಿಸಿರುವರಾಗಿ ಪ್ರಕಟವಾಗಿದೆ

ಪಂಡಿತ ಜವಾಹರಲಾಲ ನೆಹರುಗಳಾದರೂ ಅದೇ ಧಾಟಿಯಲ್ಲಿ ಭಾಷಣವಿತ್ತರು ಚಿಕಾಗೊ ವಿಶ್ವವಿದ್ಯಾಲಯದ ದುಂಡು ಮೇಜಿನ ಶೈಕ್ಷಣಿಕ ಬಾಷಣ ಕಾರ್ಯಕ್ರಮ ಸಂಬಂಧ ನೆಹರೂಗಳು ಕೊಟ್ಟ ಭಾಷಣದ ಸಾರಾಂಶವೂ ಇದೇ ಅಭಿಪ್ರಾಯದ ಇನ್ನೊಂದು ರೂಪಾಂತರವಾಗಿದೆ. ಅದನ್ನೆಲ್ಲರೂ ಆಳವಾಗಿ ಅಭ್ಯಸಿಸುವುದು ಅವಶ್ಯ [illegible] ಪ್ರತಿಪಕ್ಷೀಯ ಸ್ವತಂತ್ರ ಸಂಸ್ಥೆಗಳ ಮುಖಂಡರಾಗಿರುವ ನೆಹರು, ನಾರಾಯಣ ಮತ್ತು ವಿನೋಬಾಜಿಯವರುಗಳು ಈ ಕಾರ್ಯಸಾಧನೆಯ ಸತ್ಶೀಲತೆಯ ಕುರಿತು ಏಕಾಭಿಪ್ರಾಯವುಳ್ಳವರಾಗಿದುವುದು ಸಂತೋಷದ ಸಂಗತಿ ಜನತೆಯು [illegible] ಸಂತಸಗಳಾದರೂ ಈ ತತ್ವಾನುಕರಣದ ಮೇಲೆ [illegible]ವಿದೆ

ಸತ್ಯ ಪ್ರಜಾಪ್ರಭುತ್ವ

"ಯುದ್ಧ ಶಾಸ್ತ್ರವು ಒಬ್ಬನನ್ನು ನೇರವಾಗಿ ಸರಳ ಶುದ್ಧ ಸರ್ವಾಧಿಕಾರತ್ವದತ್ತ ಒಯ್ಯುವುದು. ಅಹಿಂಸೆಯೊಂದು ಮಾತ್ರ ಶುದ್ಧ ಪ್ರಜಾಪ್ರಭುತ್ವಕ್ಕೊಯ್ಯಬಲ್ಲದು" ಹೀಗೆಂದು ಗಾಂಧೀಜಿಯವರು ಹರಿಜನದಲ್ಲಿ ಹಿಂದೊಮ್ಮೆ ಬರೆದಿದ್ದರು. ಮತ್ತು ಚಿರಸ್ಮರಣೀಯವಾದ ೧೯೪೨ನೇ ಆಗಸ್ಟ್ ೮ರಂದು ಅ. ಭಾ. ಕಾ. ಸಮಿತಿಯ ಸದಸ್ಯರನ್ನುದ್ದೇಶಿಸಿ ಅವರು – ಅಹಿಂಸೆಯಿಂದಲೇ ನಿಜ ಪ್ರಜಾಪ್ರಭುತ್ವ ಉತ್ಪನ್ನವಾಗಬಲ್ಲುದೆಂದು ನನ್ನ ವಿಶ್ವಾಸ. ವಿಶ್ವಸಂಘಟಿತ ಆಡಳಿತದ ಕಟ್ಟಡ ಅಹಿಂಸಾ ತತ್ವದ ತಳಹದಿಯ ಮೇಲೇ ರಚಿಸಲ್ಪಡಲು ಸಾಧ್ಯ. ವಿಶ್ವ ವ್ಯವಹಾರದಲ್ಲಿ ಹಿಂಸೆಯನ್ನು ಪೂರ್ಣ ತ್ಯಾಜ್ಯಮಾಡಬೇಕಾದುದೂ ಅತ್ಯಾವಶ್ಯಕವಿದೆ.

—

ಉಪ್ಪಿನ ಮಾರಾಟ ದರ

ಟ್ಯುಟಿಕೊರಿನಿಂದ ತರಿಸಲ್ಪಟ್ಟ ಉಪ್ಪನ್ನು ಜಿಲ್ಲೆಯ ಬೇರೆ ಬೇರೆ ಕೇಂದ್ರಗಳಲ್ಲಿ ಚಿಲ್ಲರೆ ಮಾರುವ ಬೆಲೆ ಈ ಕೆಳಗಿನಂತೆ ನಿರ್ಣಯಿಸಲಾಗಿದೆಂದು ರಿಶೆಪ್ಶನ್ ತಹಶಿಲ್ದಾರರ ಹುಕುಂ ಒಂದು ತಿಳಿದುಬರುತ್ತದೆ

ಕಾಸರಗೋಡು ಕುಂದಾಪುರ ತಾಲೂಕುಗಳಲ್ಲಿ ನೇರವಾಗಿ ತಯಾರಕರಿಂದ ತರಿಸಲ್ಪಡುವಲ್ಲಿ ಸೇರಿಗೆ ೦-೧-೨, ಇತರ ಕಡೆಗಳಲ್ಲಿ ೦-೧-೬ ಕಾರ್ಕಳ ತಾಲೂಕಿನಲೆಲ್ಲಾ ಸೇರಿಗೆ ೦-೧-೪

ಪುತ್ತೂರು, ಉಪ್ಪಿನಂಗಡಿ, ವಿಟ್ಲ, ಬೆಳ್ತಂಗಡಿ ಕೇಂದ್ರಗಳಲ್ಲಿ ಸೇರಿಗೆ ೦-೧-೪, ಬೆಳ್ಳಾರೆ ೦-೧-೮, ಸುಳ್ಯ ೦-೧-೪.

ಮಂಗಳೂರು, ಉಡ್ಪಿ ತಾಲೂಕುಗಳಲ್ಲಿ ನೇರವಾಗಿ ತಯಾರಕರಿಂದ ತರಿಸಲ್ಪಡುವಲ್ಲಿ ಸೇರಿಗೆ ೦-೧-೧ ಇತರ ಪ್ರದೇಶಗಳಲ್ಲಿ ೦-೧-೩

ಪೆಸೆಂಜರರ ಅವಗಾಹನೆ ಬಗ್ಗೆ

G. O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 – 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months	2¼% p. a.
5 & 6 months	2⅝% p. a.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of 37 years avialable to you for arranging Insurance Investment It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕುಂಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 42] ತಾರೀಕು 21—5—1948 [ಸಂಚಿಕೆ 20]

ಪಲೆಸ್ತೀನದಲ್ಲಿ ಪ್ರಕ್ಷುಬ್ಧ ವಾತಾವರಣ

೨ ಸಾವಿರ ವರ್ಷಾನಂತರ ಪುನಃ ಯಹೂದಿ ರಾಜ್ಯ

ಶಕ್ತಿ ರಾಷ್ಟ್ರಗಳಲ್ಲಿ ಮೂರನೇ ಮಹಾಯುದ್ಧದ ಸಿದ್ಧತೆ

"ನೀನು ಕಳ್ಳತನಮಾಡಬಾರದು, ಸುಳ್ಳು ಹೇಳಬಾರದು. . . ." ಇತ್ಯಾದಿ ದಶ ನೀತಿಸೂತ್ರಗಳನ್ನು ಸುಮಾರು ಎರಡು ಸಾವಿರ ವರ್ಷಕ್ಕೂ ಹಿಂದೆ ಇಸ್ರಯೇಲ್ ಜನಾಂಗದ ದರ್ಶನಂದ ಮೋಶೆಯು ಬೋಧಿಸಿದ್ದನು. ಇಸ್ರಯೇಲ್ಯರು ಐಗುಪ್ತ (ಈಜಿಪ್ತ) ಅರಸನ ದಾಸ್ಯದಲ್ಲಿದ್ದರು. ಮೋಶೆಯು ಅವರನ್ನು ವಿಮೋಚನೆ ಮಾಡಿ ಚಮತ್ಕಾರಕವಾದ ಅದ್ಭುತಗಳನ್ನು ಪ್ರದರ್ಶಿಸಿ ಪುನಃ ಪಲೆಸ್ತೀನ ದೇಶಕ್ಕೆ ತಂದನು. ದಾರಿಯಲ್ಲಿ ಕೆಂಪು ಸಮುದ್ರವು ಇಬ್ಭಾಗವಾಗಿ ಅವರಿಗೆ ದಾರಿಬಿಟ್ಟುಕೊಟ್ಟಿತು. ಈ ಇಸ್ರಯೇಲ್ಯರೇ ಯೆಹೂದಿಗಳೆನಿಸಿದರು. ದೇವರ ಮಹೋನ್ನವನ ಜನರು ಯಹೂದಿಗಳು.

ನಂತರದ ಪ್ರಖ್ಯಾತ ಯೆಹೂದಿ ಅರಸನು ವಿವೇಕಿಯಾದ ಸಾಲೊಮೋನನು. **"ಶ್ರಮವೇನೆಂದು ತಿಳಿಯಲು ಇರುವೆಯ ಬಳಿ ಹೋಗಿ ಕಲಿ"** ಎಂದ ತನ್ನ ಪ್ರಜೆ ಜನರಿಗೆ ನಿರ್ದೇಶಿಸಿದ ಮಹಾ ಪ್ರಾಜ್ಞ ವಿಜ್ಞಾನಿಯಾದ ಅರಸನವನು.

ಇಸ್ರಯೇಲ್ಯರ ಅರಸರ ಅರಸನೆಂದೆನಿಸಿಕೊಂಡವನೇ ಮಹಾತ್ಮನಾದ ಯೇಸುಕ್ರಿಸ್ತನು. ಪಲೆಸ್ತೀನದ ಯೆಹೂದಿ ಸಂಸ್ಕೃತಿಯ ವನದೊಳಗಿಂದ ಅರಳಿದ ಹೂವುಗಳೇ ಕ್ರೈಸ್ತಮತದ ಸಿದ್ಧಾಂತಗಳು. **'ಈ ಕೆನ್ನೆಗೆ ಬಡಿದರೆ ಆ ಕೆನ್ನೆಯನ್ನು ತೋರಿಸು'** ಎಂದು ಶ್ರೇಷ್ಠ ಅಹಿಂಸೆಯನ್ನು ಬೋಧಿಸಿದ 1948 ವರ್ಷಗಳ ಹಿಂದಿನ ಗಾಂಧಿಯೆಂದಿವರನ್ನು ತಿಳಿಯಬಹುದು. ಆದರೆ ದುರ್ದೈವವಶಾತ್ ಈ ಮಹಾಮಹಿಮ ಯೆಹೂದಿಯನ್ನು ಅವನ ಜನರೇ ಶಿಲುಬೆಗೇರಿಸಿದರು. "ನೀವು ಕುರುಬನಿಲ್ಲದ ಕುರಿಗಳಾಗುವಿರಿ" ಎಂದರೂ ಸಾಂಪ್ರದಾಯಿಕ ಮನೋಧರ್ಮದ ಅಂದಿನ ಯೆಹೂದಿಗಳು ಕೇಳಲಿಲ್ಲ. **"ಇವನ ರಕ್ತವು ನಮ್ಮ ಮೇಲೂ ನಮ್ಮ ಮಕ್ಕಳ ಮೇಲೂ ಇರಲಿ"** ಎಂದಾ ಮಹಾಪಾತಕದ ಘೋರ ಪರಿಣಾಮವನ್ನು ಮನಸಾಕ್ಷಿ ಒಪ್ಪಿಕೊಂಡ ಯೆಹೂದಿಗಳ ಗತಿ ಅಂದಿನಿಂದಿನ ತನಕ ಚಿಂತಾಜನಕವಿದೆ. ತಲೆಯೂರಲು ಸ್ಥಳವಿಲ್ಲದೆ, ನೆಲನಿಲ್ಲಲು ದೇಶವಿಲ್ಲದೆ ತಿರುಕರಂತೆ ಈ ಜನರು ಜಗತ್ತಿನೆಲ್ಲಾ ದೇಶಗಳಲ್ಲಿ ಅಲೆದಾಡಿಕೊಂಡಿದ್ದು ಪ್ರತಿಯೊಂದು ಕಡೆಯೂ ಹಿಂಸೆಗೊಳಗಾಗಿ ಪ್ರತಿಯೊಂದು ಕಡೆಯಿಂದಲೂ ಹೊರತಳ್ಳಲ್ಪಟ್ಟು ಪರೀಕ್ಷಣಕ್ಕೂ "ಜರೂಸಲೇಮ್ ಒಂದು ದಿನ ನಿನ್ನೆಡೆಗೆ ಒಯ್ಯುವೆ" ಹೀಗೆಂದು ಮೊರೆಯಿಡುವವರೆಂದರು. ಜರೂಸಲೇಮು ಪಲೆಸ್ತೀನದ ಮುಖ್ಯ ನಗರ. ಕ್ರಿಸ್ತನನ್ನು ಶಿಲುಬೆಗೇರಿಸಿದ್ದು ಇಲ್ಲೇ.

ಇಷ್ಟಾದರೂ ಈ ಯೆಹೂದಿ ಜನರು ತಮ್ಮ ಇದಿರಾಳಿಗಳಾದ ಅರಬರಂತೆ ಅನಾಗರಿಕರಲ್ಲ. ತಾವು ಹೋದ ದೇಶಗಳಲ್ಲಿ ಇವರು ವ್ಯಾಪಾರ ಉದ್ಯಮಗಳನ್ನು ಅಭಿವೃದ್ಧಿಪಡಿಸಿ ಜಗತ್ತಿನ ಅಪ್ರತಿಮ 'ಬ್ಯಾಂಕರ'ರೆಂದು ಎನಿಸಲ್ಪಟ್ಟರು. ಈ ಮೊದಲಿನ ಮಹಾಯುದ್ಧವು ವಿಶ್ವದ ಯೆಹೂದಿ ಶ್ರೀಮಂತರಿಂದಲೇ ಪ್ರೋತ್ಸಾಹಿಸಲ್ಪಟ್ಟಿತ್ತೆನ್ನಲಾಗಿದೆ. ಜರ್ಮನಿಯಲ್ಲಿ ಫ್ರಾನ್ಸಿನಲ್ಲಿ ಮತ್ತು ಇಂಗ್ಲೆಂಡ್ ಅಮೇರಿಕಗಳಲ್ಲಿ ಅವರ ಧನ ದೌಲತ್ತಿನ ಪ್ರಭಾವ ಅಸಾಮಾನ್ಯವಾದುದು. ಇಂದಾದರೂ ಅವರ ಝಿಯೋನಿಸ್ಟ್ ಸಂಸ್ಥೆಗೆ ವಿಪುಲ ಧನವನ್ನೊದಗಿಸುವವರು ಜಗತ್ತಿನೆಲ್ಲಾ ಕಡೆಯ ಯೆಹೂದಿಗಳೇ.

ಯಹೂದಿಗಳ ಮೇಲ್ಮೆ

ತಾವು ನೆಲೆನಿಂತ ದೇಶ ಪದ್ಧತಿಗಳನ್ನು ಯಹೂದಿಗಳು ಸ್ವಚ್ಛಂದವಾಗಿ ಅನುಕರಣೆ ಮಾಡಿದರು. ಜಗತ್ತಿನ ಪ್ರತಿಯೊಂದು ದೇಶದಲ್ಲೂ ಯಹೂದಿಗಳು ತಮ್ಮದೇ ಆದ ನೆಲೆಯನ್ನು ಮಾಡಿಕೊಂಡಿದ್ದಾರೆ. ಕೊಚಿಯಲ್ಲಿ ಅವರ ಒಂದು ವಸತಿ ಕೇಂದ್ರವಿದೆ.

ಆಧುನಿಕ ಜಗತ್ತಿನಲ್ಲಿ ಯಹೂದಿಗಳು ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಬುದ್ಧಿ ಕೌಶಲ್ಯದಿಂದ ಪ್ರಕಾಶಿಸತೊಡಗಿದರು. ಇಂದು ಜಗತ್ತಿನ ಅನೇಕ ದೊಡ್ಡ ಧನ ಸಂಚಯದ ಸಂಸ್ಥೆಗಳೂ, ಕೈಗಾರಿಕೆಗಳೂ, ವಿಜ್ಞಾನಾಲಯಗಳೂ ಅವರ ಕೈಯಲ್ಲಿವೆ. ಜರ್ಮನಿಯನ್ನು ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿಸಿದ ಕೀರ್ತಿಯು ಬಹು ಅಂಶ ಯಹೂದಿಗಳಿಗೆ ಸಲ್ಲುವುದು. ಜಗತ್ತಿನ ಅಗ್ರಗಣ್ಯ ಗಣಿತಜ್ಞನೂ ಭೌತಿಕ ಶಾಸ್ತ್ರ ನಿಪುಣನೂ ಆದ ಐನ್‌ಸ್ಟೀನನು ಯಹೂದಿಯಾಗಿದ್ದಾನೆ. ಪ್ರಖ್ಯಾತ ಹಾಸ್ಯನಟ ಶ್ರೇಷ್ಠ ಚಾರ್ಲಿ ಚಾಪ್ಲಿನನೂ ಯಹೂದಿಯೇ. ವಿಶ್ವವಿಖ್ಯಾತ ಚಲಚ್ಚಿತ್ರ ಸಂಸ್ಥೆಯ ಮಾಲೀಕರಾದ ಸಾಮುವೆಲ್ ಗೋಲ್ಡ್‌ವಿನ್ ಮತ್ತು ಮೇಯರರು ಯಹೂದಿಗಳು. ಫ್ರಾನ್ಸಿನ ಪ್ರಖ್ಯಾತ ಬೇಂಕಿಂಗ್ ವ್ಯವಹಾರದ ಮನೆತನವೆನಿಸಿದ ರೊತ್‌ಚಾಯ್ಲ್ಡ್ ಅವರು ಯಹೂದಿಗಳು, ಹಿಟ್ಲರನ ಆಪ್ತ ಸ್ನೇಹಿತರೂ ಸಲಹೆಗಾರರೂ ಯಹೂದಿ ರಕ್ತ ಸಂಭೂತರಾಗಿದ್ದು ಅವರ ಬುದ್ಧಿಯ ಶ್ರೇಷ್ಠತೆಗಾಗಿ ಆ ಕುಖ್ಯಾತ ಯಹೂದಿ ಬೇಟೆಗಾರನು ಅವರನ್ನು ಅನಿವಾರ್ಯವಾಗಿಟ್ಟುಕೊಂಡಿದ್ದ.

ಇಂದಿನ ಪರಿಸ್ಥಿತಿ

1918ರ ಯುದ್ಧಾನಂತರ ಪೆಲೆಸ್ತೀನದ ಆಡಳಿತ ಹೊಣೆಯನ್ನು ಜನಾಂಗ ಸಂಘದವರು ಬ್ರಿಟಿಷರಿಗೆ ಒಪ್ಪಿಸಿದ್ದರು. ಮೂವತ್ತು ವರ್ಷಗಳ ನಂತರ ಮೊನ್ನೆ ಕಳೆದ ತಾ. 15 ರಂದು ಅವರು ಅಲ್ಲಿಂದ ತಳಕಿತ್ತರು. ಈ ಅವಧಿಯಲ್ಲಿವರು ಒಂದುಸಲ ಅರಬರನ್ನು ಮತ್ತೊಂದು ಸಲ ಯಹೂದಿಗಳನ್ನೂ ಒಲಿಸುತ್ತ ತಮ್ಮ ಪ್ರಖ್ಯಾತ ಹಂಚಿ ಆಳುವ ವಿಧಾನವನ್ನನುಸರಿಸಿದ್ದು ಕೊನೆಗೆ ಇತ್ತಂಡದವರ ಅತೃಪ್ತಿಗೂ (ಭಾರತದಲ್ಲಿ ಹಿಂದೂ ಮುಸಲ್ಮಾನರ ಅತೃಪ್ತಿಗೊಳಗಾದಂತೆ) ಒಳಗಾಗಿ ಹಿಂದೆ ಸರಿದರು. ಮಾಜಿ ಬ್ರಿಟಿಷ್ ಪ್ರಧಾನನಾದ ಬಾಲ್ಫೋರನು ಪಲೆಸ್ತೀನದಲ್ಲಿ ಯಹೂದಿಗಳಿಗೊಂದು ತಾಯ್ನಾಡನ್ನು ಕಲ್ಪಿಸುವುದವಶ್ಯವೆಂದು ಸಾರಿದ್ದನು.

ಬ್ರಿಟಿಷ್ ಆಧಿಕಾರ ಹಿಂದಕ್ಕೆಳೆಯಲ್ಪಟ್ಟದ್ದೇ ತಡ ಅರಬರೂ ಮತ್ತು ಆಕಡೆಯ ಅರಬ ರಾಜರೂ ತಮ್ಮ ಸೈನ್ಯ ಕಟ್ಟಿ ಪಲೆಸ್ತೀನದ ಮುತ್ತಿಗೆಯನ್ನಾರಂಭಿಸಿದವು. ಯಹೂದಿಗಳು 2 ಸಾವಿರ ವರ್ಷಗಳ ನಂತರ ಪ್ರಥಮ ಸಲಕ್ಕೆ ತಮ್ಮ ಇಸ್ರಯೇಲ ರಾಜ್ಯ ಸ್ಥಾಪನೆಯನ್ನು ಘೋಷಿಸಿದ್ದು ಅಮೇರಿಕಾ ಮತ್ತು ರಶ್ಯಗಳು ಅದಕ್ಕೆ ತಮ್ಮ ಮನ್ನಣೆಯನ್ನು ಕೊಟ್ಟಿವೆ. ಈಗ ಅರಬ ಯಹೂದಿಗಳಲ್ಲಿ ಸಂಧಾನವು ಅಶಕ್ಯ. ಆದುದರಿಂದ ಅಲ್ಲಿನ ಇತ್ಯರ್ಥವು ಇತ್ತಂಡದವರು ಬಡಿದಾಡಿಯೇ ತೀರ್ಮಾನಿಸಬೇಕಾಗಿದೆ.

ಶಕ್ತಿ ಸ್ಪರ್ಧೆ

ಯುಕ್ತರಾಷ್ಟ್ರ ಸಂಘವಿಲ್ಲದಿರುತ್ತಿದ್ದರೆ ಹಾಗೇ ಆಗಬಹುದಿತ್ತು. ಆದರೆ ಪಲೆಸ್ತೀನದ ಪ್ರಕರಣ ಯುಕ್ತರಾಷ್ಟ್ರ ಕೂಟದ ಪರ್ಯಾಲೋಚನೆಗೊಳಗಾಗಿರುವಾಗಲೇ ಬೀಕರ ವಿಶ್ವ ಪರಿಣಾಮಗಳಿಂದೊಡಗೂಡಿರುವ ಪರಿಸ್ಥಿತಿಗೆ ಅಲ್ಲಿ ಪ್ರೋತ್ಸಾಹ ದೊರಕಿದ್ದು ಚಿಂತಾಜನಕವಾದದ್ದು. ಮಧ್ಯಪೂರ್ವದ ಈ ದೇಶಭಾಗದಲ್ಲಿ ಶಕ್ತಿರಾಷ್ಟ್ರಗಳು ಯಾವುದೋ ದುರುದ್ದೇಶದ ಸಾಧನೆಗೆ ಯತ್ನಿಸುವುದು ಯುಕ್ತರಾಷ್ಟ್ರ ಕೂಟದ ಈ ನಿಷ್ಕ್ರಿಯೆಯ ಒಂದು ಕಾರಣವೆಂದೆನ್ನಲಾಗಿದೆ. ಇಲ್ಲವೆ ಸಂಯುಕ್ತ ಅಮೇರಿಕವು ಈ ಕುರಿತು ಸಂಶಯದಾಯಕವಾದ ಧೋರಣೆಯನ್ನನುಸರಿಸಲು ಕಾರಣವಾದರೂ ಏನಿರಬಹುದು?

ಮೂರನೇ ಯುದ್ಧದ ಪೀಠಿಕೆ

ಪಲೆಸ್ತೀನದ ವಿಭಾಗೀಕರಣ ಮಾಡಲು ಯುಕ್ತರಾಷ್ಟ್ರ ಸಂಘ ಸಭೆಯಲ್ಲಿ ಸಂಯುಕ್ತ ಅಮೇರಿಕವು ತುಂಬಾ ಯತ್ನಿಸಿತು. ತನ್ನ ಸ್ವಂತ ಸ್ವಾರ್ಥಸಾಧನೆಗಾಗಿ ರಶ್ಯವು ಇದಕ್ಕೆ ಒಪ್ಪಿಗೆಯಿತ್ತಿತು. ಅರಬರು ವಿಭಾಗೀಕರಣವನ್ನೆದುರಿಸಲು ನಿರ್ಧರಿಸಿದಾಗ ಬಲಾತ್ಕಾರವಾಗಿ ಅದನ್ನು ನಿರ್ವಹಿಸಲು ಯೋಜಿಸಲಾಯಿತು. ಆದರೆ ಕೊನೆಯಲ್ಲಿ ಅಮೇರಿಕವು ಸ್ವಲ್ಪ ಸಂಕೋಚ ತೋರಿಸಿತು. ಮಧ್ಯಪೂರ್ವಕ್ಕೆ ರಶ್ಯವನ್ನು ನುಗ್ಗಲು ಬಿಟ್ಟಂತಾಗುವುದು ಮಾತ್ರವಲ್ಲ ಆ ಕಡೆಯ ತಮ್ಮ ಎಣ್ಣೆ ಪ್ರದೇಶಗಳಿಗೂ ಧಕ್ಕೆ ತಗಲುವುದು. ಹೀಗೆ ಅಮೇರಿಕವು ವಿಭಾಗೀಕರಣಕ್ಕೆ ತನ್ನ ಬೆಂಬಲವನ್ನು ಹಿಂತೆಗೆದು ಅದರ ಬದಲಿಗೆ ಒಂದು ಟ್ರಸ್ಟಿಶಿಪ್ ಕೌನ್ಸಿಲನ್ನೇರ್ಪಡಿಸುವಂತೆ ಸೂಚಿಸಿತು. ಇದು ಕೂಡ ಅರಬ ಯಹೂದಿಗಳ ಸಮ್ಮತಿಯಿಂದಲೇ ಸಾಧಿಸಬೇಕೆಂದೂ ಅಮೇರಿಕದ ಆಶಯವಿದೆ.

ರಾಷ್ಟ್ರಸಂಘವು ಒಂದು ಇತ್ಯರ್ಥಕಂಡು ಹಿಡಿಯಲು ಶತಪ್ರಯತ್ನಮಾಡುತ್ತಿರುವಾಗಲೇ ಮೇ ೧೫ನೇ ತಾರೀಕು ಬಂದೇ ಬಂತು. ಅಂದು ಬ್ರಿಟಿಷರು ಅಧಿಕಾರ ಮುಕ್ತಾಯಗೊಳಿಸಿದರು. ಮತ್ತು ಒಂದು ಹೊಸ ಯಹೂದಿ ರಾಜ್ಯಘಟನೆಯು ಸ್ಥಾಪಿಸಲ್ಪಟ್ಟಿತು. ಅಮೇರಿಕವು ಈ ಹೊಸ ರಾಜ್ಯಕ್ಕೆ ಮನ್ನಣೆ ಕೊಟ್ಟದ್ದು ಅರಬರಲ್ಲಿ ಸಂಶಯವನ್ನು

(೩ನೇ ಪುಟ ನೋಡಿ)

ಕ್ಷಣದಲ್ಲಿ ಗುಣಿಸುವ ಚಮತ್ಕಾರಿಕ ಮಿದುಳುಗಳು

ಕೆಲವು ಅದ್ಭುತ ಗಣನಾಶಕ್ತಿಯ ಬಾಲಕರು

ಮದ್ರಾಸಿನ ರಾಮಾನುಜಂ ಜರ್ಮನಿಯ ಕ್ರೇಗರ್

ವಿಪ್ಪತ್ತಮೂರರಿಂದ 677,923,457, 893,664ಕ್ಕೆ ಗುಣಿಸಿದರೆ ಗುಣಲಬ್ಧ ವೆಷ್ಟು? ಐದು ನಿಮಿಷಗಳಾದವು, ಇನ್ನೂ ಉತ್ತರ ಸಿಗಲಿಲ್ಲವೆ? ಶಾಲೆಯಲ್ಲಿ ಕಲಿಯುವಾಗ ಈ ಒಂದು ಚಿಕ್ಕ ಉದ್ದ ಗುಣಾಕಾರದ ಲೆಕ್ಕಮಾಡಲು ಕಡಿಮೆ ಪಕ್ಷದಲ್ಲಿ ನಮಗೆ ಅರ್ಧ ಗಂಟೆಯಾದರೂ ಬೇಕಾಗುತಿತ್ತು. ಮಧ್ಯ ಮಧ್ಯದಲ್ಲಿ ಮುಗ್ಗಿಗೊತ್ತಿಲ್ಲದೆ ಮಾಡುವ ತಪ್ಪುಗಳೆಷ್ಟೊ, ರೀತಿ ಮಾಡಲು ಖರ್ಚುಮಾಡುವ ಕಾಗದ ಹಾಳೆಗಳೆಷ್ಟೊ. ಇಷ್ಟಾದರೂ ಕೊನೆಯಲ್ಲಿ ಉತ್ತರ ಬರುವುದು ಅಪರೂಪ. ಆದರೆ ಜಗತ್ತಿನ ಗಣಿತಜ್ಞ ಬಾಲಕರಿಗೆ ಇದು ಕೇವಲ ಒಂದು ಬಾಯಿಲೆಕ್ಕ.

ನಮ್ಮ ಮದ್ರಾಸ್ ಪ್ರಾಂತ್ಯದಲ್ಲೇ ರಾಮಾನುಜಂ ಎಂಬ ಅತ್ಯದ್ಭುತ ಗಣನಾ ಶಕ್ತಿ ಸಾಮರ್ಥ್ಯದ ವ್ಯಕ್ತಿಯೊಬ್ಬನಿದ್ದ. ಎಫ್. ಎ. ಬಿ ಎ ತರಗತಿಗಳ ಲೆಕ್ಕಗಳೆಲ್ಲ ನ್ನಿವ ಮನಸ್ಸಿನಲ್ಲೇ ಗುಣಿಸಿ ಉತ್ತರ ಕಂಡು ಹಿಡಿಯುತಿದ್ದ. ಪರೀಕ್ಷೆಯ ಉತ್ತರ ಪತ್ರದಲ್ಲಿ ಇವನು ರೀತಿ ತೋರಿಸದೆ ಉತ್ತರ ಬರೆಯುತಿದ್ದುದರಿಂದ ಪರೀಕ್ಷಕರು 'ಇವನೆಲ್ಲೊ ನಕಲುಹೊಡೆದಿರಬೇಕು, ಇಲ್ಲವೆ ಅಂದಾಜಿಗೆ ಬರೆದಿರಬೇಕು' ಎಂದು ಸೊನ್ನೆ ಮಾರ್ಕು ಕೊಡುತಿದ್ದರು. ಹೀಗಾಗಿ ರಾಮಾನುಜಂ ಎಫ್ ಎ ಪರೀಕ್ಷೆಯಲ್ಲಿ ಎರಡೆರಡು ಸರ್ತಿ ಫೈಲ್ ಆದ. ಅವನು ರೈಲ್ವೆ ಕಂಪೆನಿಯ ಲೆಕ್ಕ ಪರಿಶೋಧನಾ ಖಾತೆಯಲ್ಲಿ ಕೆಲಸಕ್ಕಿದ್ದ. ಅಲ್ಲಿ ಹಲವು ಕಾರಕೂನರು ಗುಣಿಸಿ, ಭಾಗಿಸಿ, ಕೂಡಿಸಿ, ಕಳೆದು ಮಾಡುವ ಲೆಕ್ಕಗಳನ್ನಿವ ಕ್ಷಣದಲ್ಲಿ ಬಾಯಲ್ಲೇ ಮಾಡುತಿದ್ದ. ಇವನ ಅದ್ವಿತಿಯ ಸಾಮರ್ಥ್ಯವನ್ನು ಕಂಡ ಪ್ರೊಫೆಸರರು ಅವನನ್ನು ಒಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೊಯ್ದರು. ಮತ್ತೆ ಕೆಲವೇ ವರ್ಷಗಳಲ್ಲಿ ಇನ್ನೂ ತರುಣನಾಗಿರುವಾಗಲೇ ರಾಮಾನುಜಂ ಮೃತಪಟ್ಟ.

ದ. ಆಫ್ರಿಕದ ಕಾರಕೂನ

ಇತ್ತೀಚೆಗೆ ವಿಶ್ವಗಣಿತಜ್ಞರ ಗಮನವನ್ನು ಸೆಳೆದ ಇನ್ನೋರ್ವ ತರುಣನೆಂದರೆ ಜೆ. ಸ್ಮಿತ್ ಎಂಬ ದಕ್ಷಿಣ ಆಫ್ರಿಕದಲ್ಲಿನ 20 ವರ್ಷದ ಓರ್ವ ಹುಡುಗ. ಅಲ್ಲಿನ ಸ್ಟೆಲಿನ್‌ಬಾಕ್ ವಿಶ್ವವಿದ್ಯಾಲಯದ ಪ್ರೊ। ಜೆ. ಎಂ ಲೆರೆ ಅವರು "ನಾವು ಬರೆದ ಕೋಷ್ಟಕಗಳನ್ನು ನೋಡಿ ಮತ್ತು ಗಣಿಸುವ ಯಂತ್ರಗಳಿಂದ ಲೆಕ್ಕಗಳನ್ನು ಮಾಡಲು ಬೇಕಾದ ಸಮಯದ ಕಾಲಾಂಶ ಅವಧಿಯಲ್ಲಿ ಅವನು ಬಾಯಿಂದಲೇ ಉತ್ತರ ಹೇಳುತ್ತಾನೆ" ಹೀಗೆಂದು ತಿಳಿಸುತ್ತಾರೆ. ಇವನೂ ಶಾಲೆಯಲ್ಲಿರುವಾಗ ಲೆಕ್ಕಗಳನ್ನೆಲ್ಲ ರೀತಿಯಿಲ್ಲದೆ ಮಾಡುವನೆಂದು ಉಪಾಧ್ಯಾಯರು ಇವನಿಗೆ ಕಮ್ಮಿ ಮಾರ್ಕುಗಳನ್ನು ಕೊಡುತಿದ್ದರು.

ಆಸ್ಟ್ರೇಲಿಯದ ಗಣಿತಜ್ಞ

ಆಸ್ಟ್ರೇಲಿಯದ ಮೆಲ್‌ಬೋರ್ನ್ ನಗರದಲ್ಲಿ ಕೆಲ ತಿಂಗಳ ಹಿಂದೆ ಇನ್ನೋರ್ವ ಬಾಲಕನು ವಿಶ್ವ ದೃಷ್ಟಿಗೆ ಬಿದ್ದಿದ್ದಾನೆ. ಸದ್ಯಕ್ಕವನು ಅಲ್ಲಿನ ತೆರಿಗೆದಾರರ ಸಂಘದಲ್ಲಿ ಲೆಕ್ಕಮಾಡುವ ಕೆಲಸದಲ್ಲಿದ್ದಾನೆ. ಆ ಸಂಘದವರು ಅವನ ವಿಷಯವಾಗಿ "ನಮ್ಮ ದೇಶದಲ್ಲಿ ತೆರಿಗೆಗಳ ಅಂಕೆಸಂಖ್ಯೆಗಳ ಕುರಿತು ಎಲ್ಲರಿಗಿಂತ ಅತೀ ಹೆಚ್ಚಾಗಿ ಬಲ್ಲವರೆಂದರೀತನೆ" ಎಂದು ಶ್ಲಾಘಿಸುತ್ತಾರೆ. ಹತ್ತು ವರ್ಷದವನಿದ್ದಾಗ ಇವನು ತನ್ನದೇ ವರ್ತಮಾನಪತ್ರಿಕೆ ಮತ್ತು ಪುಸ್ತಕಗಳನ್ನು ಮಾರುವ ಅಂಗಡಿಯನ್ನಿಟ್ಟು ಕೊಂಡಿದ್ದ. ತನ್ನ ಅಂಗಡಿಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಗಳನ್ನು ಅವನು ಬರೆದಿಡುವುದು ತನ್ನ ತಲೆಯಲ್ಲಿಯೆ.

ಈ ಗಣಿತ ಮಿದುಳಿನ ವ್ಯಕ್ತಿಗಳ ಕುರಿತು ಸಂಭವಿಸಿದ ಒಂದು ಸರ್ವ ಸಾಮಾನ್ಯ ವಿಶೇಷ ಸಂಗತಿಯೆಂದರೆ ಅವರೆಲ್ಲರೂ ಎಳೇ ಪ್ರಾಯದಲ್ಲೇ ಸಾಯುತ್ತಾರೆ, ಮತ್ತು ಹೆಚ್ಚಿನವರಾರೂ ಜೀವನೋಪಾಯ ಸಾಧನೆಯಲ್ಲಿ ಯಶಸ್ವಿಯಾಗಲಿಲ್ಲ. ಜಗತ್ತಿನಲ್ಲಿ ಇಂಥ ಪ್ರತಿಭಾವಂತರು ಹುಟ್ಟಿದಾಗಲೆಲ್ಲ ಇವರು ತಮ್ಮ ಗಣಿತ ಸಾಮರ್ಥ್ಯ ಪ್ರದರ್ಶನದಿಂದ ಕೆಲ ಕಾಲದ ವರೆಗೆ ಜನರನ್ನು ಕೌತುಕಗೊಳಿಸಿದರು. ಆದರೆ, ಜಗತ್ತು ಅವರ ಈ ದೈವದತ್ತವಾದ ಮಿದುಳಿನ ಯಾವ ಅನುಕೂಲತೆಯನ್ನು ಪಡೆಯಲು ಪ್ರಯತ್ನಿಸಲಿಲ್ಲ. ಆದರೆ ಗಣಿತ ಪ್ರಧಾನವಾದ ಆಧುನಿಕ ಜಗತ್ತಿನಲ್ಲಿ ಇಂತಹ ಮಾನವ ಗುಣಕ ಯಂತ್ರಗಳಿಗೆ ತುಂಬಾ ಸಂದರ್ಭಗಳಿವೆ.

ಇಂತಹ ಅತ್ಯಪೂರ್ವ ಗುಣಕಶಕ್ತಿಯ ಮಿದುಳಿನವರು ಹುಟ್ಟುವುದು ಒಂದು ನಿರ್ದಿಷ್ಟವಾದ ದೇಶದಲ್ಲಿ ಎಂದಾಗಲಿ ಇಲ್ಲವೆ ಜನಾಂಗದಲ್ಲೇ ಎಂದಾಗಲಿ ನಿರ್ಬಂಧವಿಲ್ಲ. ಪರಮಾತ್ಮನ ಶಕ್ತಿಯ ಈ ಮಹಾ ವರಪ್ರದವು ಜಗತ್ತಿನ ಅಗಣಿತ ಸ್ಥಳಗಳಲ್ಲೂ ಕಾಣಿಸುವುದುಂಟು. ಈಜಿಪ್ಟಿನಲ್ಲಿ ಕೆಲ ವರ್ಷಗಳ ಹಿಂದೆ ಓರ್ವ ಗಣಿತಜ್ಞನು ಕಾಣಿಸಿಕೊಂಡ. ಅವನ ಹೆಸರು ಮಹಮ್ಮದ್ ಇಸ್ಮೈಲ್ ಎಲ್ ಅಕಾರ್ ಎಂದಾಗಿತ್ತು. ಇವನು ಎಂಟು ಸಕುಂಡುಗಳಲ್ಲಿ 894ಕ್ಕೆ 5ನಿಂದ ಗುಣಿಸಿದರೆಷ್ಟು ಎಂಬುದಕ್ಕೆ ಉತ್ತರವನ್ನು ಕೊಡುತಿದ್ದ. ಅದೇ ರೀತಿ 10 ಸ್ಥಾನಗಳ ಎರಡು ಸಂಖ್ಯೆಗಳನ್ನು ಕ್ಷಣದಲ್ಲಿ ಮನಸ್ಸಿನಲ್ಲೇ ಗುಣಿಸಿ ಉತ್ತರ ಹೇಳುತಿದ್ದ. ಇವನ ಅಸಾಮಾನ್ಯ ಶಕ್ತಿಯ ಮಿದುಳು ಕೆಟ್ಟುಹೋಗಿತ್ತು. ಕೆಲವೊಂದು ಇವನಿಗೆ ಲೆಕ್ಕ ಹೇಳಿದರೆ ಮತ್ತೆ ಅದೇ ಸಮಯಕ್ಕೇನಾದರೂ ತಿನ್ನಲಿಕ್ಕೆ ಕೊಟ್ಟರೆ ಸ್ವಲ್ಪ ಹೊತ್ತು ಮತ್ತೆ ಕೈಯಲ್ಲಿದ್ದುದನು ತಿಂದು ಮುಗಿಸಿ ನಂತರ ಅರ್ಧದಲ್ಲಿ ಬಿಟ್ಟಲ್ಲಿಂದ ಪುನಃ ಮುಂದರಿಸಿ ಉತ್ತರ ಹೇಳುವನು. ಎಲ್ಲವೂ ಕ್ಷಣಮಾತ್ರದಲ್ಲಿ.

ಬಿಕ್ಕೆಬೇಡಿದ ಗಣಿತಜ್ಞ

ಅಮೇರಿಕದ ಬೋಸ್ಟನ್ ನಗರದಲ್ಲಿ ವಿಲಿಯಂ ಸಿಡಿಸ್ ಎಂಬವನಿದ್ದ. ಒಂದು ತಲೆಮಾರಿನ ಹಿಂದೆ ಈತ ಜಗತ್ತಿನ ಅತಿ ಶ್ರೇಷ್ಠ 'ಗಣಿತಜ್ಞ ಬಾಲಕ'ನೆಂದು ಪ್ರತೀತಿ ಪಡೆದಿದ್ದ. ಆದರೆ ದೊಡ್ಡವನಾದ ಮೇಲೆ ಇವನೂ ತಲೆಕೆಟ್ಟು ಒಂದು ಹುಚ್ಚರ ಆಸ್ಪತ್ರೆಯಲ್ಲಿ ನಿರ್ಗತಿಕನಾಗಿ ಮೃತಪಟ್ಟ. ಆರು ತಿಂಗಳ ಶಿಶುವಿರುವಾಗ ಇವನು ಅಕ್ಷರಮಾಲೆಯನ್ನು ಬಾಯಿಪಾಠ ಹೇಳುತಿದ್ದ. ಎರಡು ವರ್ಷ ಪ್ರಾಯದಲ್ಲಿ ಇವನಿಗೆ ಹಲವು ವಿದೇಶಿ ಭಾಷೆಗಳು ಓದಲೂ ಬರೆಯಲೂ ಬರುತಿದ್ದವು. ಹನ್ನೊಂದನೇ ವರ್ಷದಲ್ಲಿ ಇವನು ಆಕೃತಿಗಳ ಚತುರ್ ಪ್ರಮಾಣ (ಆಕೃತಿಗಳಿಗೆ ಉದ್ದ, ಅಗಲ ಮತ್ತು ಎತ್ತರ ಇಲ್ಲವೆ ದಪ್ಪ ಎಂಬ ತ್ರಿಪ್ರಮಾಣಗಳಿವೆಂದು ಲೆಕ್ಕ) ತತ್ವವೊಂದನ್ನು ನಿರೂಪಿಸಿ ವಿಜ್ಞಾನ ಪ್ರಪಂಚವನ್ನು ಬೆರಗುಗೊಳಿಸಿದ್ದ. ಸಿಡಿಸನು 16ನೇ ಪ್ರಾಯದಲ್ಲಿ ಹರ್ವಾರ್ಡ್ ವಿಶ್ವ ವಿದ್ಯಾಲಯದ ಅತೀ ಉನ್ನತ ಪದವಿ ಪಡೆದು ಹೊರಬಂದ. ಆದರೆ ಬಾಹ್ಯ ಪ್ರಪಂಚದಲ್ಲಿ ಇವನು ತನ್ನ ಸಾಮರ್ಥ್ಯದ ಸದುಪಯೋಗ ಮಾಡದಾದ. ಎಲ್ಲಿಯೂ ಕೆಲಸಕ್ಕೆ ಸರಿಯಾಗಿ ನಿಲ್ಲಲಾರದ ಉರುಳುವ ಕಲ್ಲಿನಂತೆ ಸ್ಥಳದಿಂದ ಸ್ಥಳಕ್ಕೆ ಉದ್ದೇಶರಹಿತವಾಗಿ ಅಲೆದಾಡಿ ಕೊನೆಗೆ ಮೇಲೆ ಹೇಳಿದಂತಹ ಪರಿಸ್ಥಿತಿಯಲ್ಲಿ ಅವನ ಜೀವನಾಂತ್ಯವಾಯಿತು.

ಗಣಿತವಲ್ಲಲ್ಲದೆ ಇತರ ಯಾವ ಕ್ಷೇತ್ರದಲ್ಲೂ ಈ ಪ್ರತಿಭಾವಂತರು ಪ್ರಕಾಶಿಸದಿರುವುದು ಇನ್ನೊಂದು ವಿಶೇಷ ಸಂಗತಿ. ಕೆಲವರ ಶಕ್ತಿಯು ಬಾಲ್ಯ ಕಳೆದ ಮೇಲೆ ನಶಿಸಿ ಹೋಗುವುದೂ ಇದೆ. ಪೆರಿಸಿನಲ್ಲಿ ಪಿಕಟ್ ಎಂಬ ಬಾಲಕನು ಎಲ್ಲಾ ಗಣಿತಜ್ಞರನ್ನು ತನ್ನ ಅಪ್ರತಿಮ ಗಣನಾ ಸಾಮರ್ಥ್ಯದಿಂದ ಬೆರಗುಗೊಳಿಸಿದ್ದ. ಆದರೆ ಆ ಎಂಟು ವರ್ಷದ ಹುಡುಗನಿಗೆ ಓದಲೂ ಬರೆಯಲೂ ಗೊತ್ತಿರಲಿಲ್ಲ. ಇತರ ಸಂಗತಿಗಳಲ್ಲಿ ಹೆಡ್ಡನಂತೆಯೂ ವರ್ತಿಸುತಿದ್ದ. ಮೂರ ಸ್ಥಾನದ ಮೂರು ಸಂಖ್ಯೆಗಳ ಗುಣಲಬ್ಧವನ್ನು ಇವನು ಕೆಲವೇ ಸೆಕುಂಡುಗಳಲ್ಲಿ ಹೇಳುತ್ತಿದ್ದ.

ತಿರುವಾಂಕೂರಿನ ಅದ್ಭುತ

ತಿರುವಾಂಕೂರಿನಲ್ಲಿ ಓರ್ವ ಅಂಗಹೀನ ಹಿಂದೂ ಬಾಲಕನಿದ್ದ. ಬಿ ಎ ತರಗತಿಯ ಲೆಕ್ಕಗಳನ್ನು ಕೂಡ ಇವನು ಕ್ಷಣದಲ್ಲಿ ಬಾಯಿಲೆಕ್ಕ ಮಾಡುತಿದ್ದ. ಹೋಜ್‌ಸನ್ ಎಂಬ ಗಣಿತ ಪ್ರೊಫೆಸರರು ಬಹಳ ಕಷ್ಟಪಟ್ಟು ಒಂದು ಲೆಕ್ಕ ತಯಾರಿಸಿ ಅವನಿಗೆ ಕೇಳಿದಾಗ ಕ್ಷಣ ಮಾತ್ರದಲ್ಲಿ ಒತ್ತರ ಉತ್ತರ ನೀಡಿಯಿತ್ತ.

ಪ್ರೊ। ಇನ್‌ಸ್ಟಿನ್‌ರು ಜಗತ್ತಿನ ಅಗಗಣ್ಯ ಗಣಿತ ವಿಜ್ಞಾನಿಗಳೆಂದು ಪ್ರಖ್ಯಾತಿ ಪಡೆದಿದ್ದಾರೆ. ಆದರೆ ಅವರು ತಮ್ಮ ದೇಶದಲ್ಲಿನ (ಜರ್ಮನಿಯ) ಸಮವಲ್ ಕ್ರೇಗರ್ ಎಂಬವನ ಕುರಿತು ನಾನು ಕಂಡ ಅತಿ ಶ್ರೇಷ್ಠ ಗಣಿತ ಮನಸ್ಸು ಎಂದು ತಿಳಿಸಿದ್ದಾರೆ. ಕ್ರೇಗರನು ಓರ್ವ ಸ್ನೇಹಿತನೊಡನೆ ಮಾತನಾಡುವಾಗ "ನೀವು ಎಷ್ಟಾಗ ಹುಟ್ಟಿದ್ದು?" ಎಂದು ಪ್ರಶ್ನಿಸಿ ಹುಟ್ಟಿದ ಇಸವಿ ತಿಳಿಸಲ್ಪಟ್ಟ ಕೂಡಲೇ ನೀವು ಹುಟ್ಟಿ 975,715,200 ಸೆಕುಂಡುಗಳಾದವು ಎಂದು ಹೇಳಿ ಬಿಡುತ್ತಾನೆ. ಕ್ರೇಗರನಿಗೆ ಕೇಳಲ್ಪಟ್ಟ ಒಂದು ಪ್ರಶ್ನೆ ಎಂತಹ ಕಠಿಣದ್ದೆಂದು ಅದರ ಉತ್ತರದಿಂದ ತಿಳಿಯಬಹುದು. ಎರಡನ್ನು 2×2××2× ಹೀಗೆ 521 ಸಲ ಗುಣಿಸಿ ಒಂದು ಕಳೆದರೆ ಎಷ್ಟು? ಇದು ಬಹಳ ಸುಲಭವೆಂದು ತೋರುತ್ತದೆ. ಆದರೆ ಕೆಲವೇ ಮಿನಿಟುಗಳಲ್ಲಿ ಗುಣಿಸಿ ಕ್ರೇಗರನು ಆ ಲೆಕ್ಕದ ಸರಿಯಾದ ಉತ್ತರ ಕೊಟ್ಟ. ಆ ಉತ್ತರವು 153 ಸ್ಥಾನಗಳ ಒಂದು ಸಂಖ್ಯೆ.

ಅದ್ಭುತ ಸ್ಮರಣೆ

1878ರಲ್ಲಿ ಮೃತಪಟ್ಟ ಬಿಡ್ಡರ್ ಎಂಬ ಇಂಗ್ಲಿಷ್ ಮಹನಿಯನು ಗಣಿತರಾಕ್ಷಸನೆಂದೆನಿಸಲ್ಪಟ್ಟಿದ್ದ. ಚಿಕ್ಕವನಿರುವಾಗ ಅವನಿಗೊಂದು ಲೆಕ್ಕ ಕೇಳಲ್ಪಟ್ಟಿತ್ತು "ಒಂದು ವರ್ತಮಾನ ಪತ್ರಿಕೆಗೆ 4 ಪುಟಗಳು. ಪ್ರತಿ ಪುಟದಲ್ಲಿ 6 ಕಲಮುಗಳು. ಪ್ರತಿ ಕಲಮಿನಲ್ಲಿ 191 ಗೆರೆಗಳು. ಪ್ರತಿ ಗೆರೆಯಲ್ಲಿ 45 ಅಕ್ಷರಗಳಿದ್ದುವು. ಓರ್ವ ಛಾಪಖಾನೆ ಕೆಲಸಗಾರರನು ಪ್ರತೀ $1\frac{1}{4}$ ಮಿನಿಟಿಗೆ 33 ಅಕ್ಷರಗಳನ್ನು ಜೋಡಿಸಿದರೆ ಇಡೀ ಪತ್ರಿಕೆಯನ್ನು ಮಾಡಲು ಎಷ್ಟು ಸಮಯಬೇಕಾಗುವುದು?" ಈ ಲೆಕ್ಕವನ್ನು ಬಿಡ್ಡರನು ಕೇವಲ ಎರಡು ಮಿನಿಟಿನೊಳಗೆ ಮನಸ್ಸಿನಲ್ಲೇ ಮಾಡಿ ಉತ್ತರ ಹೇಳಿದನು.

ಬಿಡ್ಡರನ ಕಾಲದಲ್ಲೇ ಜಾರಾ ಕೆಲ್ಬರ್ನ್ ಎಂಬೋರ್ವ ಅಮೇರಿಕನ್ ಬಾಲಕನಿದ್ದ. ಈತ "48 ವರ್ಷಗಳಿಗೆಷ್ಟು ಸೆಕುಂಡುಗಳು?" ಎಂದು ಕೇಳಿದರೆ ಕ್ಷಣದಲ್ಲಿ ಉತ್ತರ ವೀಯುವನು.

(೧ನೇ ಪುಟದಿಂದ)

ಹೆಚ್ಚಿಸುವಂತಾಯಿತು. ಇದುತನಕ ಅರಬಯಹೂದಿಗಳೊಳಗೆ ಒಪ್ಪಂದವಾಗಬೇಕೆಂದು ಹಾರೈಸುತಿದ್ದ ಅಮೇರಿಕವು ಒಂದೇ ಸವನೆ ಯಹೂದಿ ಪಕ್ಷಪಾತದ ಧೋರಣೆ ಮಾತ್ರ ತಾಳಿದ್ದುದನ್ನು ಕಂಡು ಅರಬರು ಇದು ಅಹಿತದ ಚಿಹ್ನೆಎಂದಿರುವರು.

ಬಲಾಬಲಗಳು

ಶಕ್ತಿರಾಷ್ಟ್ರಗಳ ಹೊಸ ಯಹೂದಿರಾಷ್ಟ್ರಕ್ಕೆ ಮನ್ನಣೆ ಕೊಡುವುದರಿಂದ ಅದಕ್ಕೆ [illegible] ಅನುಕೂಲತೆಗಳಿವೆ. ಈಗ ಹೆಚ್ಚೆಂದರೆ [illegible] ತಮ್ಮ ಪ್ರದೇಶವೆಂದ [illegible] ಪ್ರದೇಶದಲ್ಲಿ ಜಗತ್ತಿನೆಲ್ಲಾ ಕಡೆಗಳಿಂದ ಬಂದ ಸೇರಿದ್ದರು. [illegible] ಹೂಡಿಗಳ ಪ್ರಸ್ತಿಗೆ ವಿಪುಲ ಧನ, ಜನಬಲ [illegible] ಶಸ್ತ್ರಾಸ್ತ್ರ ಸಂಗ್ರಹ [illegible] ಅರಬರಾಷ್ಟ್ರಗಳ ಅದಷ್ಟು [illegible] ಗಳಿಗ [illegible] ಸರಿ [illegible] ಕಿದ [illegible] ಅರಬರಾದರೂ ಕಟು [illegible] ಎರಡು ವರ್ಷಗಳಿಂದ ಅರಬಲೀಗಿನವರ ತಯಾರಿಗಳ ನಡೆದವು. ಈಗ [illegible] ಗಳು ಪಲಸ್ತೀನದತ್ತ [illegible] ಸಾಗಿವೆ. ಪರಿಣಾಮ [illegible] ನೋಡಲಿದೆ. ಒಂದು ವಿಷಯ ಮಧ್ಯಪೂರ್ವದಲ್ಲಿ ಹೊತ್ತಿ [illegible] ಈ ಕಿಡಿಯನ್ನು ಸಕಾಲದಲ್ಲಾರಿಸದಿದ್ದರೆ ಇದು ಇಡೀ ಪ್ರಪಂಚವನ್ನು ದಹಿಸಬಲ್ಲದಷ್ಟು ಅಲ್ಲ, ಇನ್ನೊಂದು ವಿಶ್ವ [illegible] ಸಿಡಿಕೆಯಾಗಬಹುದು.

NOTICE

THE BOMBAY LIFE ASSURANCE CO, LTD,

Notice having been given of the Loss of Policy No 87809 on the life of Mr P Thukrappa Shetty (Deceased) a duplicate policy will be issued unless objection is lodged with us within one month from this date

(Sd) K Balasubrahmanyam,
Manager & Actuary

Bombay, 21-5 1948

ಘಟನಾ ಸಮಿತಿಯು ಭಾರತ 'ರಾಷ್ಟ್ರ ಘಟನೆಯನ್ನು ಇತ್ಯರ್ಥಿಸುವ ಕಾಲಕ್ಕೆ ಧಾರ್ಮಿಕ ಶಿಕ್ಷಣ ಕುರಿತಾದ ಸಮಸ್ಯೆಗಳು ಚರ್ಚೆಗೆ ಬರುವವು ಘಟನಾ ನಿರ್ಮಾಪಕರ ಸಮಿತಿಯವರು ಈ ಕುರಿತು ಹೀಗೆ ಸೂಚಿಸಿದ್ದಾರೆ

೨೧ ಯಾವದಾದರೊಂದು ನಿರ್ದಿಷ್ಟ ಧರ್ಮದ ಇಲ್ಲವೆ ಧರ್ಮ ಸಾಂಪ್ರದಾಯದ ಖರ್ಚಿಗಾಗೆಂದು ಎಂತಹ ಕರ ತೆರಿಗೆಯನ್ನು ಕೊಡುವಂತೆ ಯಾವ ವ್ಯಕ್ತಿಯೂ ಒತ್ತಾಯಿಸಲ್ಪಡಬಾರದು

೨೨ (೧) ರಾಷ್ಟ್ರ ಖಜಾನೆಯಿಂದ ಸಂಪೂರ್ಣ ಖರ್ಚು ಹೊತ್ತು ನಡೆಸಲ್ಪಡುವ ಶಾಲೆಯಲ್ಲೂ ಧಾರ್ಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡತಕ್ಕದ್ದಲ್ಲ ಆದರೆ ಧಾರ್ಮಿಕ ಶಿಕ್ಷಣವು ಕೊಡಲ್ಪಡಬೇಕೆಂದು ಬಯಸಿ ಸ್ಥಾಪಿಸಲ್ಪಟ್ಟ ನಿಧಿ ಇಲ್ಲವೆ ಸಂಸ್ಥೆಯು ಶಾಲೆಗಳಿಗೆ ಅವು ಸರಕಾರದ ಆಡಳಿತದೊಳಗೆ ಕೊಡಲ್ಪಟ್ಟಿದ್ದರೂ- ಅಂತಹ ಶಾಲೆಗಳಿಗೆ ಈ ಶರ್ತವು ಅನ್ವಯಿಸಬಾರದು

(೨) ಸರಕಾರದಿಂದ ಮಾನ್ಯ ಮಾಡಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯತಕ್ಕವರು ಅಥವಾ ಸರಕಾರದಿಂದ ಸಹಾಯ ವೇತನ ಹೊಂದುವವರು ಈ ಬಗೆಯ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ಪಡೆಯಲೇ ಬೇಕೆಂಬ ನಿರ್ಬಂಧವಿಲ್ಲ ಕಲಿವ ಹುಡುಗನು ಚಿಕ್ಕವನಿದ್ದು ಪೋಷಕರ ಒಪ್ಪಿಗೆ ಇದ್ದರೆ ಧಾರ್ಮಿಕ ಶಿಕ್ಷಣ ಹೊಂದಬಹುದು

(೩) ಶಾಲಾ ಕಲಸದ ಅಧಿಕೃತ ವೇಳೆಯ ನಂತರ ಈ ಬಗೆಯ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಧರ್ಮ, ಪಂಥದವರು ಶಿಕ್ಷಣ ಕೊಡಲು ಮೇಲ್ಕಾಣಿಸಿದ ಕಲಮುಗಳು ಅಡ್ಡಿಯೊಡ್ಡುವುದಿಲ್ಲ

ಈ ಶರ್ತಗಳು ಸಮರ್ಪಕವೆಂದು ನನಗೆ ತೋರುವುದಿಲ್ಲ ೨೧ನೇ ಕಲಮಿನಲ್ಲಿ ಧಾರ್ಮಿಕ ಶಿಕ್ಷಣ ಪ್ರಚಾರಕ್ಕಾಗಿ ತೆಗಿಯತ್ತಬಾರದೆಂದಿದೆಯಲ್ಲದೆ ಉಳಿದ ತೆರಿಗೆ ಹಣದಿಂದ ಆ ಬಗ್ಗೆ ಖರ್ಚು ಮಾಡಬಾರದೆಂದು ನಮೂದಿತವಾಗಿಲ್ಲ

೨೨ನೇ ಕಲಮಿನ ಪ್ರಕಾರ ಸಂಪೂರ್ಣ ಸರಕಾರಿ ಚಲಾಯಿತ ಶಾಲೆಗಳಲ್ಲಿ ಮಾತ್ರ ಧಾರ್ಮಿಕ ಶಿಕ್ಷಣಕ್ಕೆ ತಡೆ ಹಾಕಿದೆ ಸರಕಾರ ಖಜಾನೆಯಿಂದ ಸಹಾಯ ಹಣ ಪಡದು ನಡೆಸಲ್ಪಡುವ ಶಾಲೆಗಳು ಈ ಕಲಮಿನಲ್ಲಿ ಬರಲಾರವು ಅಲ್ಲಿ ಇಚ್ಛೆ ಪಟ್ಟ ಧಾರ್ಮಿಕ ಶಿಕ್ಷಣ ಕೊಡಬಹುದೆಂದಾಗುತ್ತದೆ ಚಾಣಾಕ್ಷನಾದ ವಿದ್ಯಾ ಮಂತ್ರಿಯೊಬ್ಬನು ಇಚ್ಛೆಪಟ್ಟರೆ ತನ್ನ ಪ್ರಾಂತ್ಯದೊಳಗಿನ ಶಾಲೆಗಳೆಲ್ಲವೂ ಸಂಪೂರ್ಣ ಸರಕಾರಿ ಖರ್ಚಿನಿಂದ ನಡೆಸಲ್ಪಡುವಂತಹುಗಳಲ್ಲವೆಂದು ಮಾಡಿಸಿ ಮತ್ತೆ ಈ ಕಲಮಿನ ಅನುಕೂಲತೆ ಪಡೆದು ಎಲ್ಲಾ ಶಾಲೆಗಳಲ್ಲಿ ತನಗೆ ಸಹಾನುಭೂತಿ ಇರುವ ಧಾರ್ಮಿಕ ಶಿಕ್ಷಣವನ್ನು ಕೊಡಿಸುವಂತ ಮಾಡಬಹುದು ಮಾತ್ರವಲ್ಲ ನಿರ್ದಿಷ್ಟವಾದೊಂದು ಧಾರ್ಮಿಕ ಶಿಕ್ಷಣ ಕೊಡಿಸಲೇ ಬೇಕೆಂಬ ಕಡ್ಡಾಯ ಶರ್ತದಿಂದ (ಕೆಲ ನಿಧಿ ಸಂಸ್ಥೆಗಳು) ಸ್ಥಾಪಿಸಲ್ಪಟ್ಟ ಶಾಲೆಗಳನ್ನು ಸರಕಾರವೇ ಚಲಾಯಿಸುವ ಹೊಣೆ ಹೊರಲು ಈ ಕಲಮಿನಲ್ಲಿ ಆಸ್ಪದ ಮಾಡಿ ಕೊಡಲಾಗಿದೆ.

ಹೀಗೆ ಧಾರ್ಮಿಕ ಶಿಕ್ಷಣ ರಹಿತವಾದ ಶಿಕ್ಷಣವನ್ನು ಕೊಡುವ ಕೋರಿಕೆಯಿದ್ದರೂ ಪ್ರತಿಯೊಂದು ಸಂಸ್ಥೆಯಲ್ಲಿಯೂ ಧಾರ್ಮಿಕ ಶಿಕ್ಷಣ ಕೊಡಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ ಆ ಕೈಯಿಂದ ಕಸಿದುಕೊಂಡದ್ದನ್ನು ಈ ಕೈಯಿಂದ ಕೊಟ್ಟಂತಾಗುವುದು. •

ರಾಷ್ಟ್ರ ರಚನೆಯಲ್ಲಿ ಧಾರ್ಮಿಕ ಶಿಕ್ಷಣದ ಸ್ಥಾನ

ಸಂಕುಚಿತ ಧರ್ಮ ಶಿಕ್ಷಣವಿರಬಾರದು

ಗಾಂಧೀ ಶಿಷ್ಯ ಮಶ್ರುವಾಲರ ಸೂಚನೆಗಳು

ಕೇವಲ ಧಾರ್ಮಿಕವಲ್ಲದ ಲೌಕಿಕವೇ ಕೂಡಿದ್ದಂತಹ ಶಿಕ್ಷಣವನ್ನೇ ಕೊಡಿಸಬೇಕೆಂಬುದು ನನ್ನಭಿಪ್ರಾಯವಿಲ್ಲ. ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡಬೇಕು ಮಾತ್ರವಲ್ಲ, ಶಾಲೆಯ ವಾತಾವರಣವೇ ಸಂಪೂರ್ಣ ಧಾರ್ಮಿಕವೂ ನೈತಿಕವೂ ಆಗಿರಬೇಕು. ಯಾವ ಶಿಕ್ಷಣವೂ ಧಾರ್ಮಿಕ ಹಾಗೂ ನೈತಿಕ ದೃಷ್ಟಿಯಿಂದ ದೂರವಿರತಕ್ಕದ್ದಲ್ಲವೆಂದು ನನ್ನ ನಂಬಿಕೆ ಆದರೆ ಭಾರತೀಯ ಶಿಕ್ಷಣ ಸಂಸ್ಥೆಗಳು ಬೇರೆ ಬೇರೆ ಮತ, ಧರ್ಮ ನೀತಿಗಳ ಪ್ರಚಾರ ಕೇಂದ್ರಗಳೆನಿಸಬಾರದೆನ್ನುವವರಲ್ಲಿ ನಾನೊಬ್ಬ

ಇದನ್ನು ವಿವರಿಸಲು ನನ್ನ ಅಭಿಪ್ರಾಯದ ಧಾರ್ಮಿಕ ಶಿಕ್ಷಣವೆಂದರೇನೆಂದು ತಿಳಿಸುವುದು ಅವಶ್ಯ ಕಾಯಿದೆ ಕಲಮುಗಳಲ್ಲಿ ಈ ಶಬ್ದದ ವಿವರಣೆಯನ್ನು ಕೊಟ್ಟಿಲ್ಲದಿರುವುದು ಗಮನಿಸಬೇಕಾದ ಸಂಗತಿ ಮೇಲೆ ಹೇಳಿದ ೨೧ನೇ ಕಲಮಿನಲ್ಲಿ ಹೇಳಿರುವ ಮಾತುಗಳಿಂದ ಆ ಶಬ್ದಗಳಿಗೆ ಅರ್ಥ ಹಚ್ಚಬೇಕಾದರೆ "ಧಾರ್ಮಿಕ ಶಿಕ್ಷಣ ವೆಂದರೆ "ಯಾವುದಾದರೊಂದು ವಿಶಿಷ್ಟ ಧರ್ಮ ಅಥವಾ ಧಾರ್ಮಿಕ ಸಾಂಪ್ರದಾಯದ ಶಿಕ್ಷಣ"ವೆಂದು ತಿಳಿದುಕೊಳ್ಳಬೇಕಾಗುವುದು

ಆದರೆ 'ಯಾವುದೊಂದು ವಿಶಿಷ್ಟ ಧರ್ಮದಲ್ಲಿ ಇಲ್ಲವೆ ಧಾರ್ಮಿಕಸಾಂಪ್ರದಾಯದಲ್ಲಿ" ಶಿಕ್ಷಣ ಕೊಡದ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವಿರುವುದು ಅಲ್ಲಿನ ಎಲ್ಲಾ ಚಟುವಟಿಕೆಗಳಲ್ಲಿ ಧಾರ್ಮಿಕ ವಾತಾವರಣ ಹಬ್ಬಿರುವಂತೆ ಮಾಡುವುದು ಸಾಧ್ಯವೆಂದು ನಾನು ಒತ್ತಿ ಹೇಳುತ್ತೇನೆ ನಿಜವಾಗಿ ... ಅಂತಹ ಶಿಕ್ಷಣ ಕೊಡಬೇಕೆಂದು ... ಜಗತ್ತಿನ ಅನೇಕ ... ಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡದಿರುವುದು (ಕೆಲವು ಸಂದರ್ಭಗಳಲ್ಲಿ ಮಿತ ಧಾರ್ಮಿಕ ಶಿಕ್ಷಣಕ್ಕೆಡೆ ಕೊಡಲಾಗುತ್ತದೆ) ಇನ್ನೊಂದು ಯಾವದಾದರೊಂದು ನಿರ್ದಿಷ್ಟ ಧರ್ಮದ ಇಲ್ಲವೆ ಧಾರ್ಮಿಕ ಸಾಂಪ್ರದಾಯದಕ್ಕೆ ಸಂಬಂಧಪಟ್ಟ ಅವಾಸ್ತವಿಕವೂ, ಪ್ರತಿಗಾಮಿಶೀಲವುಳ್ಳದ್ದೂ ಅಂಥ ಸಾಂಪ್ರದಾಯದ್ದೂ ಆದ ಶಿಕ್ಷಣವನ್ನು ಕೊಡಲು ಅವಕಾಶ ಕೊಟ್ಟಿರುವುದು ಜನತೆಯ ನೈತಿಕ ಮಟ್ಟವನ್ನೇರಿಸುವ ಸದಿಚ್ಛೆ ನಮ್ಮಲ್ಲಿದ್ದರೆ ಭಾವಿ ಜನಾಂಗಕ್ಕೆ ನಾವು ನೈಜವಾದ ಧಾರ್ಮಿಕ ಶಿಕ್ಷಣದ ವಾತಾವರಣವನ್ನು ಕಲ್ಪಿಸಿಕೊಡಬೇಕು, ಅದೇ ಸಮಯಕ್ಕೆ ಸಂಕುಚಿತ ಪಂಥ ಪ್ರಧಾನವಾದ (sectarian) ಮನೋಭಾವವನ್ನುಂಟು ಮಾಡುವಂತಹದನ್ನು ನಿರುತ್ಸಾಹಗೊಳಿಸಲೂಬೇಕು

ಇದಕ್ಕವಕಾಶವನ್ನು ಮಾಡಿ ಕೊಡಲು ನನ್ನಭಿಪ್ರಾಯದ ಅರ್ಥವನ್ನು ಮತ್ತಷ್ಟು ಸ್ಪಷ್ಟಗೊಳಿಸಲು ಮೇಲೆ ಹೇಳಿದ ೨೧ ಮತ್ತು ೨೨ ಕಲಮುಗಳನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

೨೧. ಯಾವುದಾದರೊಂದು ವಿಶಿಷ್ಟ ಧರ್ಮ ಅಥವಾ ಧಾರ್ಮಿಕ ಸಾಂಪ್ರದಾಯದ ಉತ್ಕರ್ಷಕ್ಕಾಗಿ ಇಲ್ಲವೆ ಪ್ರೋತ್ಸಾಹಕ್ಕಾಗಿ ಸರಕಾರಿ ಹಣದ ಯಾವ ಅಂಶವನ್ನು ವಿನಿಯೋಗಿಸತಕ್ಕದ್ದಲ್ಲ. ಮತ್ತು ಯಾರನ್ನು ಆ ಬಗ್ಗೆ ಕರತೆರಿಗೆ ಕೊಡಲು ಒತ್ತಾಯಿಸಬಾರದು.

೨೨ (೧) ಯಾವ ಶಿಕ್ಷಣ ಸಂಸ್ಥೆಗಳೂ ಸಂಪೂರ್ಣವಾಗಿ ಇಲ್ಲವೆ ಅಂಶತಃ ಸರಕಾರಿ ಹಣದಿಂದ ನಡೆಯುವುವೊ ಅವುಗಳಲ್ಲಿ ಯಾವುದೇ ವಿಶಿಷ್ಟ ಧರ್ಮದ ಅಥವಾ ಧಾರ್ಮಿಕ ಸಾಂಪ್ರದಾಯದ ಶಿಕ್ಷಣವನ್ನು ಕೊಡತಕ್ಕದ್ದಲ್ಲ ಮತ್ತು ಯಾವುದಾದರೊಂದು ವಿಶಿಷ್ಟ ಧರ್ಮದ ಇಲ್ಲವೆ ಧಾರ್ಮಿಕ ಸಾಂಪ್ರದಾಯದ ಶಿಕ್ಷಣ ಕೊಡಬೇಕೆಂದು ಯಾವುದೊಂದು ಸ್ವತಂತ್ರ ಸಾರ್ವಜನಿಕ ಸಂಸ್ಥೆ ಅಥವಾ ನಿಧಿಯು ಸ್ಥಾಪಿಸಲ್ಪಟ್ಟ ವಿದ್ಯಾ ಸಂಸ್ಥೆಯನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ಸರಕಾರ ಸ್ವೀಕರಿಸಕೂಡದು

ಈ ಸೂಚನ ಆಚರಣೆಗೆ ಬರುವ ಮೊದಲು ಅಂಥ ಯಾವುದೊಂದು ಹೊಣೆ ಅಂಗೀಕರಿಸಲ್ಪಟ್ಟಿದ್ದರೆ, ಯೋಗ್ಯ ಸಂಸ್ಥೆಯೊದಕ್ಕೆ ಅಂದ ಆಡಳಿತೆಯನ್ನು ಒಪ್ಪಿಸಲು ಅವಶ್ಯ ಕ್ರಮಗಳನ್ನು ಸರಕಾರ ಕೈಕೊಳ್ಳಬೇಕು

ಆದರೆ, ಪೂರ್ತಿಯಾಗಿ ಇಲ್ಲವೆ ಅಂಶತಃ ಸರಕಾರ ಹಣದಿಂದ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಾಗಲಿ, ಯಾವೊಂದು ಸಾರ್ವಜನಿಕ ನಿಧಿ ಸಂಸ್ಥೆಯ ನಿರ್ದೇಶದನ್ವಯ ಸರಕಾರದಿಂದ ನಡೆಸಲ್ಪಡುವ (ಆ ನಿಧಿ ಸಂಸ್ಥೆಯ ಶರ್ತಗಳಲ್ಲಿ ಸಾಮಾನ್ಯ ಧಾರ್ಮಿಕ ಶಿಕ್ಷಣ ಕೊಡಬೇಕೆಂದು ಹೇಳಿರಲಿ, ಇಲ್ಲದಿರಲಿ ಅಥವಾ ವಿಶಿಷ್ಟ ಧರ್ಮ ಇಲ್ಲವೆ ಧಾರ್ಮಿಕ ಸಾಂಪ್ರದಾಯದ ಶಿಕ್ಷಣವನ್ನೇ ಕೊಡಬೇಕೆಂದ ಹೇಳಿರಲಿ) ಶಿಕ್ಷಣ ಸಂಸ್ಥೆಗಳಲ್ಲಾಗಲಿ ಯಾವ ವಿಶಿಷ್ಟ ಧರ್ಮ ಇಲ್ಲವೆ ಧಾರ್ಮಿಕ ಸಾಂಪ್ರದಾಯಕ್ಕೆ ಸಂಬಂಧಿಸಿರದ ಸಾಮಾನ್ಯ ಶಿಕ್ಷಣವನ್ನು ಕೊಡಲು ಅಡ್ಡಿಯಿರಲಾರದು

(೨) ಸರಕಾರದಿಂದ ಮನ್ನಣೆ ಪಡೆದ ಅಲ್ಲವೆ ಸರಕಾರಿ ಹಣದ ಸಹಾಯ ಪಡೆವ ಯಾವದೇ ಶಿಕ್ಷಣ ಸಂಸ್ಥೆಗೆ ಹೋಗುವ ಯಾವನೇ ವ್ಯಕ್ತಿಗೆ ಅಂಥ ಸಂಸ್ಥೆಯಲ್ಲಿ ಇಲ್ಲವೆ ಅದಕ್ಕೆ ಹೊಂದಿರುವ ಭಾಗದಲ್ಲಿ ನಡೆವ ಯಾವದೇ ವಿಶಿಷ್ಟ ಧರ್ಮ ಇಲ್ಲವೆ ಧಾರ್ಮಿಕಸಾಂಪ್ರದಾಯದ ಪೂಜೆ-ಪ್ರಾರ್ಥನಾದಿಗಳ ಕಾಲದಲ್ಲಿ ಹಾಜರಿರಲೇ ಬೇಕೆಂದಾಗಲಿ ವಿಶಿಷ್ಟ ಧಾರ್ಮಿಕ ಸಾಂಪ್ರದಾಯದ ಶಿಕ್ಷಣದಲ್ಲಿ ಭಾಗವಹಿಸಲೇ ಬೇಕೆಂದಾಗಲಿ ನಿರ್ಬಂಧವಿರತಕ್ಕದ್ದಲ್ಲ (ಇಂಥ ಕೆಲಸಗಳನ್ನು ಮಾಡಲೇ ಬೇಕೆಂದು ಯಾವನೇ ಅಲ್ಪ ವಯಸ್ಕನನ್ನು ಕೂಡ, ಅವನ ರಕ್ಷಕರ ಒಪ್ಪಿಗೆಯಿಂದ ಸಹ ಒತ್ತಾಯ ಪಡಿಸಕೂಡದೆಂದು ನನ್ನ ಮತ.)

(೩) ಮೇಲೆ ಹೇಳಿದಕ್ಕೆ ವಿರೋಧವಾಗದಂತೆ ಯಾವ ಮತ, ಧರ್ಮ, ಪಂಥದವರೂ ಶಾಲಾ ವೇಳೆಯ ನಂತರ ತಮಗಿಚ್ಛೆಯಿದ್ದ ಧರ್ಮ ಶಿಕ್ಷಣವನ್ನು ಕೊಡಲು ಯಾವ ಅಡ್ಡಿಯೂ ಇಲ್ಲ

ಈ ಲೇಖನವನ್ನು ಮುಗಿಸುವ ಮೊದಲು ಇದೇ ವಿಷಯ ಸಂಬಂಧವಾದ ೧೯ ಮತ್ತು ೨೩ನೇ ಕಲಮುಗಳ ವಿಚಾರದಲ್ಲಿ ಕೆಲ ಮಾತು ಹೇಳುವೆ.

೧೯ (೧) ಕಲಮು ಹೀಗೆ ಹೇಳುತ್ತದೆ:

"ಸಾರ್ವಜನಿಕ ಸುವ್ಯವಸ್ಥೆ, ನೀತಿ ಮತ್ತು ಆರೋಗ್ಯ ಇವುಗಳಿಗಾಗಲಿ, ಈ ಭಾಗದಲ್ಲಿ ಹೇಳಿದ ಇತರ ನಿಯಮಗಳಿಗಾಗಲಿ ವಿರುದ್ಧವಾಗದಂತೆ ಧರ್ಮವನ್ನು ಆಚರಿಸಲು ತಾನು ಇಂಥ ಧರ್ಮದವನೆಂದು ಹೇಳಿಕೊಳ್ಳಲು ಅಥವಾ ಧರ್ಮವನ್ನು ಪ್ರಚಾರಗೊಳಿಸಲು ಎಲ್ಲರಿಗೂ ಸಮಾನವಾದ ಹಕ್ಕುಂಟು.

ವಿವರಣೆ: ಕೃಪಾಣ (ಕತ್ತಿ)ಗಳನ್ನು ಧರಿಸುವುದೂ, ಹಿಡಿದುಕೊಂಡು ತಿರುಗುವುದೂ ಸೀಖ್ ಧರ್ಮದಲ್ಲಿ ಅಂತರ್ಗತವಾಗಿದೆಂದು ತಿಳಿಯತಕ್ಕದ್ದು.

ಈ ವಿವರಣೆಯ ಬದಲಿಗೆ ಮುಖ್ಯ ಕಲಮಿನಲ್ಲಿಯೇ ತುದಿಯಲ್ಲಿ ಈ ಕೆಳಗಿನ ಶಬಗಳನ್ನು ಸೇರಿಸಬೇಕೆಂದು ನನ್ನ ಸೂಚನೆ

'ಮತ್ತು ಯಾವದೇ ಬಿಲ್ಲೆ, ಸಂಕೇತ ಚಿಹ್ನೆ ಅಥವಾ ಇನ್ನಾವುದೇ ವಸ್ತುವನ್ನು ತಮ್ಮ ಧರ್ಮದ ಲಾಂಛನವೆಂದು ಧರಿಸಲು ಎಲ್ಲರಿಗೂ ಸ್ವಾತಂತ್ರ್ಯವುಂಟು" ೨೦ನೇ ಕಲಮು ಈ ಪ್ರಕಾರವಾಗಿದೆ

೨೩ (೧) ಹಿಂದೂಸ್ಥಾನದ ಪ್ರದೇಶದಲ್ಲಿ ಅಥವಾ ಅದರ ಯಾವದೇ ಭಾಗದಲ್ಲಿ ವಾಸಿಸುವ ಯಾವದೇ ಜನಾಂಗಕ್ಕ, ಯಾವುದೊಂದು ತನ್ನದೇ ಆದ ವಿಶಿಷ್ಟ ಭಾಷೆ ಲಿಪಿ ಮತ್ತು ಸಂಸ್ಕೃತಿಯಿದ್ದರೆ ಅವುಗಳನ್ನು ರಕ್ಷಿಸಲು ಅವರಿಗೆ ಹಕ್ಕಿದೆ

(೨) ಸರಕಾರದವರು ನಡೆಸುವ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ... ಧಾರ್ಮಿಕ ಜಾತೀಯ ಅಥವಾ ಭಾಷಾತ್ಮಕ ಅಲ್ಪ ಸಂಖ್ಯಾಕ ಪಂಗಡದ ವಿರುದ್ಧ ಪ್ರವೇಶ ಕೊಡುವ ವಿಷಯದಲ್ಲಿ ಪಕ್ಷಪಾತ ಮಾಡತಕ್ಕದ್ದಲ್ಲ

(೭ನೇ ಪುಟ ನೋಡಿ)

ಗಂಟಲು ಬೇನೆ
ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ ಪೆಪ್ಸು ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವವು ಶ್ವಾಸದೊಡನೆ ಕೂಡಿ ನಿಮ್ಮ ಶ್ವಾಸಕೋಶವನ್ನು ಸೇರುವುದು

ಪೆಪ್ಸು, ನೆಗಡಿ, ಕೆಮ್ಮು, ಬ್ರೊಂಕೈಟಿಸ್, ಇನಫ್ಲುಯಂಜಾ ಮತ್ತಿನ್ನಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

No 4 ಆದಿಲ್ಲದೆ ಎಂದೂ ಇರದಿರಿ

ಸ್ವದೇಶಾಭಿಮಾನಿ

ತಾರೀಕು 21—5—1948

ಪ್ರಜಾ ಸ್ವಾತಂತ್ರ್ಯ

ಪ್ರಜಾಸತ್ತಾತ್ಮಕ ರಾಜ್ಯಭಾರ ಕ್ರಮವಿದ್ದಲ್ಲೆಲ್ಲ ನಾಗರಿಕ ಹಕ್ಕುಗಳೆನ್ನಿಸುವ ಕೆಲವು ಸ್ವಾತಂತ್ರ್ಯಗಳು ಅತ್ಯಮೂಲ್ಯ ಹಕ್ಕುಗಳೆಂದು ಎಣಿಸಲ್ಪಡುತ್ತವೆ. ಬ್ರಿಟಿಷರು ಹಿಂದುಸ್ಥಾನವನ್ನು ಆಳುತ್ತಿದ್ದಾಗ ಅವರು ಈ ಸ್ವಾತಂತ್ರ್ಯಗಳನ್ನು ಅಡಗಿಸಿ ಬಲಾತ್ಕಾರದಿಂದ ರಾಜ್ಯಭಾರ ನಡೆಸುವ ಸಂದರ್ಭಗಳು ಅವರಿಗೆ ಬಹಳವಾಗಿ ಬರುತ್ತಿದ್ದವು. ಈಗ ಕಾಂಗ್ರೆಸಿನ ಅಧೀನಕ್ಕೆ ಆಡಳಿತೆ ಬಂದ ಬಳಿಕ ಇಂಥ ಹಕ್ಕುಗಳು ಪ್ರಜೆಗಳ ಪವಿತ್ರ ಹಕ್ಕುಗಳೆಂದು ಮನ್ನಿಸಲ್ಪಡುವವೆಂದು ಎಲ್ಲರೂ ಎಣಿಸಿದ್ದರು. ಆದರೆ ಪ್ರಕೃತ ಪರಿಸ್ಥಿತಿಯಲ್ಲಿ ಪಬ್ಲಿಕ್ ಸೇಫ್ಟಿ ಆಕ್ಟು ಮೊದಲಾದ ಸರಕಾರಗಳಿಗೆ ವಿಶೇಷ ಅಧಿಕಾರಗಳನ್ನು ಕೊಡುವ ಕಾನೂನುಗಳನ್ನು ಜಾರಿ ಮಾಡದ ಪ್ರಾಂತಿಕ ಸರಕಾರವೇ ದೇಶದಲ್ಲಿಲ್ಲ ಮಾತ್ರವಲ್ಲ ಇಂಥ ಕಾನೂನುಗಳ ಪೂರ್ಣ ಉಪಯೋಗವೂ ಆಗುತ್ತಿದೆ ಎಂಬುದು ಸತ್ಯಸ್ಥಿತಿ. ಈ ಬಗ್ಗೆ ಕಾಂಗ್ರೆಸ್ ಸರಕಾರಗಳ ಮೇಲೆ ಕಟುತರವಾದ ಟೀಕೆಯೂ ಅಲ್ಲಲ್ಲಿ ಕಂಡುಬರುತ್ತಿದೆ. ಈ ಪ್ರಶ್ನೆಯ ವಿವೇಚನೆ ಈಗಿನ ಸಂದರ್ಭದಲ್ಲಿ ಅತ್ಯಾವಶ್ಯಕವಾದ ಒಂದು ವಿಚಾರವಿರುತ್ತದೆ.

ದೇಶದಲ್ಲಿ ತಕ್ಸೀರುಗಳನ್ನು ತನಖಿ ಮಾಡಲು ನ್ಯಾಯವಾದ ಕೋರ್ಟುಗಳಿರುವಾಗ ಯಾವ ತನಖಿಯೂ ಇಲ್ಲದೆ ಪ್ರಜೆಗಳನ್ನು ಕೈದು ಮಾಡಿ ಜೈಲಿನೊಳಗಿಡುವುದು, ಈ ಕುರಿತು ಸಭೆ, ಮೆರವಣಿಗೆ ಇತ್ಯಾದಿ ಮಾತಲು ಬಿಡದೆ ವಾಕ್ ಸ್ವಾತಂತ್ರ್ಯವನ್ನು ಬಂದು ಮಾಡುವುದು, ಪತ್ರಿಕೆಗಳಲ್ಲಿ ಈ ಕುರಿತು ಬರೆದರೆ ಆ ಪತ್ರಿಕೆಗಳ ಮೇಲೆ ದಬ್ಬಾಳಿಕೆ ನಡೆಸುವುದು, ಇತ್ಯಾದಿ ನಾಗರಿಕ ಸ್ವಾತಂತ್ರ್ಯದ ಅಪಹಾರದ ಉದಾಹರಣೆಗಳಿರುತ್ತವೆ. ಇಂಥ ಸಂಗತಿಗಳು ನಮ್ಮ ಕಣ್ಣೆದುರಿಗೇನೇ ಈಗ ಎಷ್ಟೋ ನಡೆಯುತ್ತಿವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅಥವಾ ಆರ್. ಎಸ್. ಎಸ್. ನವರನ್ನು ಕೈದು ಮಾಡಿ ವೆಲ್ಲೂರಲ್ಲಿ ಸ್ವಲ್ಪ ಸಮಯ ಇಟ್ಟು ಮತ್ತೆ ಬಿಡುಗಡೆ ಮಾಡಲಾಯಿತು. ಹೀಗೆ ಕೊಂಡೊಯ್ಯಲ್ಪಟ್ಟವರು ಯಾವ ಅನ್ಯಾಯ ಮಾಡಿದ್ದರು? ಅನ್ಯಾಯ ಮಾಡಿದ್ದರೆ ಅವರ ಮೇಲೆ ಸೀದಾ ದಾರಿಯಲ್ಲಿ ತಕ್ಸೀರು ನಡೆಸಲಿಲ್ಲವೇಕೆ? ಇತ್ಯಾದಿ ಪ್ರಶ್ನೆಗಳು ಸಹಜವಾಗಿ ಬರುತ್ತವೆ. ಇದೇ ರೀತಿ ಈಗ ಸರಕಾರದವರು ಕಮ್ಯೂನಿಸ್ಟ್ ಸಂಗಡದ ಮೇಲೆ ಈ ಬಗೆಯ ಕಾನೂನು ಜಾರಿಗೆ ಹೊರಟಿದ್ದಾರೆ. ಕಮ್ಯೂನಿಸ್ಟ್ ಮುಂದಾಳುಗಳು ಈಗ ಎಷ್ಟೋ ಮಂದಿ ತನಖಿ ಇಲ್ಲದೆ ಜೈಲು ಸೇರಿದ್ದಾರೆ. ಇವರಿಗೆ ಸಭೆ ಇತ್ಯಾದಿ ನಡೆಸಲು ಬಿಡುವುದಿಲ್ಲ. ಇವರ "ದೇಶಾಭಿಮಾನಿ" ಪತ್ರಿಕೆಯನ್ನು ಅಡಗಿಸಲಾಗಿದೆ. ಈ ರೀತಿ ನಾಗರಿಕರಿಗೆ ತಮ್ಮ ತಮ್ಮ ದಾರಿಯಲ್ಲಿ ಚಳವಳವನ್ನು ನಡೆಸಲಿಕ್ಕೆ ಬಿಡದೆ ಪ್ರಜಾ ಸ್ವಾತಂತ್ರ್ಯವನ್ನು ಅಪಹರಿಸುವುದು ನ್ಯಾಯವೆ? ಎಂಬ ಪ್ರಶ್ನೆ ಸಹಜವಿರುತ್ತದೆ.

ಈ ಬಗೆಯ ಅಧಿಕಾರಗಳನ್ನು ನಡೆಸಲು ಅಧಿಕಾರ ಹೊಂದಿದ ಸರಕಾರವು ತನ್ನ ವಿರುದ್ಧ ಪಕ್ಷದ ರಾಜಕೀಯ ಸಂಗಡಗಳ ಮೇಲೆ ಇಂಥ ಅಧಿಕಾರಗಳನ್ನು ಚಲಾಯಿಸಿ ವಿರುದ್ಧ ಪಕ್ಷವನ್ನು ಅಡಗಿಸಲು ಯತ್ನಿಸುವುದಿಲ್ಲವೆಂದು ಹೇಗೆ ಹೇಳಬಹುದು; ಈಗ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಸಾಮ್ಯವಾದೀ ಸಂಗಡ ಸ್ಥಾಪಿಸಲಾಗಿದೆ. ಮುಂದೆ ನಡೆಯಲಿರುವ ಚುನಾವಣೆಗಳಲ್ಲಿ ಈ ಸಂಗಡದವರು ಕಾಂಗ್ರೆಸಿಗರಿಗೆ ಬಲವಾದ ಪ್ರತಿಸ್ಪರ್ಧಿಗಳಾಗುವರೆಂಬ ನಿರೀಕ್ಷೆ ಇದೆ. ಅದಕ್ಕಾಗಿ ಈ ಸಂಗಡ ಬೆಳೆಯದಂತೆ ಸರಕಾರವು ಇವರ ಮೇಲೆ ಈ ವಿಶೇಷಾಧಿಕಾರಗಳ ದಬ್ಬಾಳಿಕೆ ನಡೆಸಿದರೆ ನ್ಯಾಯವಾದೀತೆ? ಅಲ್ಲಲ್ಲಿ ಸಾಮ್ಯವಾದೀ ಸಂಗಡದವರ ಮೇಲೆ ಕೂಡ ಇಂಥ ನಿರ್ಬಂಧಗಳನ್ನು ಜಾರಿ ಮಾಡಿದ ಉದಾಹರಣೆಗಳೂ ಈಗ ಇರುತ್ತವೆ. ಸಾಮ್ಯವಾದಿಗಳೇ ಹೆಚ್ಚಾಗಿದ್ದು ನಡೆಸುತ್ತಲಿದ್ದ ರಾಷ್ಟ್ರೀಯ ಸೇವಾದಳವನ್ನು ಸರಕಾರದವರು ಅಡಗಿಸಿದ್ದಾದರೂ ಏತಕ್ಕೆಂಬ ಬಗ್ಗೆ ಇದು ವರೆಗೂ ಸರಕಾರದವರು ಸಮರ್ಪಕವಾದ ವಿವರಣೆ ಕೊಟ್ಟಂತೆ ಕಂಡು ಬರುವದಿಲ್ಲ. ಮುಸ್ಲೀಮ್ ಲೀಗನ್ನು ಮಾತ್ರ ಜಾರಿಯಲ್ಲಿಟ್ಟು ಉಳಿದ ವಿರೋಧಿಗಳನ್ನು ಅಡಗಿಸಲು ಪಾಕಿಸ್ಥಾನದಲ್ಲಿ ಯತ್ನಿಸಲ್ಪಾಗುತ್ತಿದೆ ಎಂದು ನಾವು ದೂರುತ್ತೇವೆ ಅದನ್ನು ಹಿಟ್ಲರ್ ಶಾಹೀ ಅಥವಾ 'ಫೆಸಿಸಿಜಮ್' ಅನ್ನುತ್ತೇವೆ. ಭಾರತ ಸರಕಾರವೂ ಇದೇ ಬಗೆಯ ಧೋರಣೆಗೆ ಕೈಕೊಟ್ಟಿರುತ್ತದೆಯೇ?

ಇಂಥ ವಿಶೇಷಾಧಿಕಾರಗಳನ್ನು ಜಾರಿ ಮಾಡುವವರು ಕೊನೆಯದಾಗಿ ಸರಕಾರದ ಪೋಲೀಸ್ ದಳಗಳೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ಪೋಲೀಸ್ ದಳಗಳ ವರ್ತನೆಯಲ್ಲಿ ಕಳೆದ ಆಗೋಸ್ತು ತಾ 15 ರ ಬಳಿಕ ಹೆಚ್ಚು ಬದಲಾವಣೆಯಾದಂತೆ ಕಂಡು ಬರುವುದಿಲ್ಲ. ಆರ್. ಎಸ್. ಎಸ್. ನವರನ್ನು ಕೈದು ಮಾಡಿ ತನ್ನಿರೆಂದರೆ ಕೈದು ಮಾಡಲ್ಪಟ್ಟವರ ಸ್ಥಿತಿಗತಿಗಳ ಕಡೆಗೆ ಎಳ್ಳಷ್ಟೂ ಗಮನ ಕೊಡದೆ ಅವರಿಗೆ ಕೈಕೋಳೆ ಹಾಕಿಯೇ ಇವರು ಕೊಂಡುಹೋಗುತ್ತಾರೆ. ಲಾಠಿ ಚಾರ್ಜು ಇತ್ಯಾದಿ ನಡೆಸುವ ಪ್ರಸಂಗ ಬಂದರೆ ಯಾರೆಂದಿಲ್ಲದೆ ಸಿಕ್ಕಿದವರಿಗೆ ಪೆಟ್ಟುಗಳು ಬೀಳುತ್ತವೆ. ಹೀಗೆ ಹಿಂದಿನ ಕ್ರಮಗಳೆಲ್ಲವೂ ಈಗಲೂ ನಡೆಯುತ್ತಿವೆ.

ಈಗ ಈ ಕಾಯಿದೆಗಳನ್ನೆಲ್ಲ ಶಾಸನ ಸಭೆಗಳಲ್ಲಿ ಮಂಜೂರು ಮಾಡಿಯೇ ಜಾರಿ ಮಾಡುವರೆಂಬುದು ಸಮಾಧಾನದ ಮಾತಲ್ಲ. ಶಾಸನ ಸಭೆಗಳಲ್ಲಿ ಬಹುಮತವಿದ್ದವರು ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುವುದು ಪ್ರಜಾಸತ್ತಾತ್ಮಕ ರಾಜ್ಯಭಾರ ಪದ್ಧತಿಯ ಲಕ್ಷಣವಲ್ಲ.

ಆರ್. ಎಸ್. ಎಸ್. ಅಥವಾ ಕಮ್ಯೂನಿಸ್ಟ್ ಸಂಗಡಗಳು ಹಿಂಸಾತ್ಮಕ ಕಾರ್ಯಗಳನ್ನು ನಡೆಸಲು ಹೊರಟರೆ ಪ್ರಜಾ ಸ್ವಾತಂತ್ರ್ಯವೆಂದು ಸರಕಾರದವರು ಇವರ ಮೇಲೆ ಕಠಿಣ ಧೋರಣೆ ವಹಿಸದೆ ಇದ್ದರೆ ಅಂದರೆ ಇವರ ಸದ್ದಡಗಿಸದೆ ಇದ್ದರೆ ಸರಕಾರದ ಆಡಳಿತೆಯೇ ನಡೆಯಲಿಕ್ಕಿಲ್ಲವೆಂದು ಇಂಥ ವಿಶೇಷ ಸಂದರ್ಭಗಳಲ್ಲಿ ಈ ಬಗೆಯ ಹಕ್ಕುಗಳು ಸರಕಾರಕ್ಕೆ ಅಗತ್ಯವೆಂದೂ ಹೇಳಲಾಗುತ್ತಿದೆ. ಪ್ರಜಾಸತ್ತಾತ್ಮಕ ಪದ್ಧತಿಯ ತೌರೂರೆನ್ನಿಸುವ ಬ್ರಿಟನಿನಲ್ಲಿ ಕೂಡಾ ಯುದ್ಧಕಾಲದಲ್ಲಿ ಸರಕಾರಕ್ಕೆ ಈ ಬಗೆಯ ಅಧಿಕಾರ ಕೊಡಲಿಲ್ಲವೆ? ಕಮ್ಯೂನಿಸ್ಟ್ ಸಂಗಡದವರು ಉತ್ತರ ಮಲಬಾರಿನಲ್ಲಿ ಸಿಕ್ಕಿದವರ ಮನೆ ನುಗ್ಗಿ ಸೊತ್ತುಗಳನ್ನು ಹೊತ್ತು ಮನೆ ಸುಡುವ ಇತ್ಯಾದಿ ಅತ್ಯಾಚಾರ ನಡೆಸುವಾಗ ಇಂಥವರಿಗೆ ಪ್ರಜಾ ಸ್ವಾತಂತ್ರ್ಯ ಕೊಟ್ಟರೆ ಹೇಗೆ ನಡೆದೀತು? ಈ ರೀತಿ ಸರಕಾರದ ಕಡೆಯಿಂದ ವಾದಿಸಲಾಗುತ್ತಿದೆ. ಈ ಮಾತುಗಳಲ್ಲಿ ತುಂಬಾ ಸತ್ಯಾಂಶವುಂಟು. ಹಿಂಸೆಯನ್ನು ಸ್ವತಃ ಮಾಡುವವರು ಮಾತ್ರವಲ್ಲ ಅದನ್ನು ಮಾಡಿಸುವವರು ಅದಕ್ಕೆ ಬೇಕಾದ ಚಳವಳ ನಡೆಸುವವರು ಇಂಥವರನ್ನೆಲ್ಲ ಅಡಗಿಸದೆ ನಿವೃತ್ತಿಯಿಲ್ಲವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಮಾತ್ರವಲ್ಲ ಇಂಥ ಯತ್ನಗಳು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯುವಾಗ ಕೋರ್ಟು ತನಖಿ ಇತ್ಯಾದಿ ನಿತ್ಯ ಕಾನೂನುಗಳಿಂದ ಮಾತ್ರ ಇದನ್ನು ಅಡಗಿಸುವುದು ಸಾಧ್ಯವಿಲ್ಲವೆಂಬ ಮಾತೂ ನಿಜವಿರುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಹೆಚ್ಚು ಸಮಯವಾಗಿಲ್ಲ. ನಮ್ಮ ಸರಕಾರವು ಕೇವಲ ಹೊಸ ಸರಕಾರ. ಇದರ ಮೇಲೆ ಹೊರಿಸಲ್ಪಟ್ಟಿರುವ ಜವಾಬ್ದಾರಿಯ ಭಾರವಾದರೂ ವಿಪರೀತವಿರುತ್ತದೆ: ಎಲ್ಲಿ ನೋಡಿದರೂ ದೇಶದಲ್ಲಿ ಈಗ ಎಲ್ಲ ಬಗೆಯ ತೊಂದರೆಗಳೂ ಕಂಡುಬರುತ್ತವೆ. ಇದು ವಿಶೇಷ ಸಂದರ್ಭವೆಂಬ ಬಗ್ಗೆ ಸಂಶಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರಕಾರವು ಬಲಿಷ್ಠ ರೀತಿಯಿಂದ ವರ್ತಿಸಿದರೆ ಮಾತ್ರ ಸಿಕ್ಕಿದ ಸ್ವಾತಂತ್ರ್ಯವು ನಮಗೆ ಸಿಕ್ಕೀತು. ಇಲ್ಲದಿದ್ದರೆ ದೇಶದಲ್ಲಿ ಅರಾಜಕತೆಯೇ ತಲೆದೋರಿ ನಮ್ಮ ಸ್ವಾತಂತ್ರ್ಯ ಕೆಲವೇ ದಿನದ ಬಾಳುವೆಯಾದೀತು.

ನಮ್ಮ ಪ್ರಜಾ ವರ್ಗವಿನ್ನು ಸ್ವತಂತ್ರ ದೇಶದ ಪ್ರಜೆಗಳ ಜವಾಬ್ದಾರಿಯನ್ನು ತಿಳಿದಂತೆ ಕಾಣುವುದಿಲ್ಲ. ದೇಶದ ಹಿತವೇ ಎಲ್ಲಕ್ಕೂ ಮುಖ್ಯವೆಂಬುದನ್ನು ಎಲ್ಲ ಸಂಗಡಗಳೂ ತಿಳಿಯುವ ತನಕ ಪ್ರಜಾ ಸ್ವಾತಂತ್ರ್ಯವೆನ್ನುತ್ತಾ ಕುಳಿತುಕೊಳ್ಳುವುದು ಸರಿಯಲ್ಲ. ಜವಾಬ್ದಾರಿ ವಹಿಸದೆ ಹಕ್ಕುಗಳು ಹೇಗೆ ಪ್ರಾಪ್ತವಾದುವು?

ಉತ್ತರ ಮಲಬಾರಿನಲ್ಲಿಯ ಕಮ್ಯೂನಿಸ್ಟರ ವರ್ತನೆ ಕಂಡವರು ಸರಕಾರದವರು ಈ ಸಂಗಡವನ್ನಡಗಿಸಲು ಹೊರಟರೆ ಸರಕಾರದ ಮೇಲೆ ಆಕ್ಷೇಪ ಹೇಳುವಂತಿಲ್ಲ. ಈ ಬಗೆಯ ಸರಕಾರೀ ಕಡೆಯ ವಾದವನ್ನು ನಾವಾದರೂ ಅಲ್ಲಗಳೆಯಲಿಚ್ಛಿಸುವುದಿಲ್ಲ.

ಕಾಂಗ್ರೆಸು ಮುಂದಾಳುಗಳು ದೇಶಕ್ಕಾಗಿ ಬಹಳ ಸಾಹಸ ಮಾಡಿದವರು. ಇವರ ಮೇಲೆ ಜನರಿಗೆ ಇನ್ನೂ ವಿಶ್ವಾಸವಿರುತ್ತದೆ. ವಿಶೇಷಾಧಿಕಾರಗಳನ್ನು ಇವರ ಕೈಯಲ್ಲಿ ಕೊಟ್ಟರೂ ಇವರು ದುರುಪಯೋಗಪಡಿಸಲಿಕ್ಕಿಲ್ಲವೆಂದೇ ಜನರ ವಿಶ್ವಾಸವಿರುತ್ತದೆ.

ಆದರೂ ಕೂಡ ಪ್ರಜಾ ಸ್ವಾತಂತ್ರ್ಯವೆಂದರೆ ಪ್ರಜೆಗಳ ಪವಿತ್ರ ಹಕ್ಕುಗಳೆಂಬ ಭಾವನೆ ಬೆಳೆಸಲೇ ಬೇಕು. ಸಾಧ್ಯವಿದ್ದ ಮಟ್ಟಿಗೆ ಸರಕಾರಗಳು ಈ ಪವಿತ್ರ ಹಕ್ಕುಗಳಿಗೆ ಭಂಗ ಬಾರದಂತೆ ವರ್ತಿಸಬೇಕೆಂದು ನಾವು ಆಗ್ರಹಪೂರ್ವಕ ಒತ್ತಾಯ ಮಾಡಬೇಕಾಗಿದೆ.

ಟೀಕೆ-ಟಿಪ್ಪಣಿಗಳು

ಇಸ್ರಾಯೇಲ್ ರಾಷ್ಟ್ರದ ಜನನ

ಪೆಲೆಸ್ತೈನಿನಲ್ಲಿ ವಿದ್ಯಮಾನಗಳು ವಿದ್ಯುದ್ವೇಗದಿಂದ ನಡೆಯುತ್ತಿವೆ. ಮೇ ತಾ. 15ನೇ ಮಧ್ಯರಾತ್ರಿ ಬ್ರಿಟನಿನ ಮೆಂಡೇಟ್ ಆಡಳಿತೆ ಅಂತ್ಯವಾಯಿತು. ಕೂಡಲೇ ಯೆಹೂದಿಯರು ಇಸ್ರಾಯೇಲ್ ಎಂಬ ಹೊಸ ರಾಷ್ಟ್ರವನ್ನು ಸ್ಥಾಪಿಸಿ ಅದನ್ನು ಜಾಹೀರುಮಾಡಿದರು. ಅಮೇರಿಕದ ಯುನೈಟೆಡ್ ಸ್ಟೇಟ್ಸ ಸರಕಾರವು ಮಾರನೇ ದಿನವೇ ತಾನು ಮನ್ನಿಸುವುದಾಗಿ ಜಾಹೀರುಮಾಡಿರುತ್ತದೆ. ಇಜಿಪ್ಟಿನ ಸೈನ್ಯಗಳು ಪೆಲೆಸ್ತೈನಿನಲ್ಲಿ ಒಳನುಗ್ಗಿರುತ್ತವೆ. ಟ್ರಾನ್ಸ್ ಜೋರ್ಡನ್ ಇತ್ಯಾದಿ ಇತರ ಕಡೆಯ ಅರಬರೂ ದಂಡೆತ್ತಿ ಒಳನುಗ್ಗುತ್ತಿದ್ದಾರೆ.

ಇಸ್ರಾಯೇಲ್ ರಾಷ್ಟ್ರವು ಸಂಯುಕ್ತ ರಾಷ್ಟ್ರ ಸಭೆಯ ಸದಸ್ಯತನಕ್ಕೆ ಅರ್ಜಿ ಮಾಡಿರುತ್ತದೆ ಮಾತ್ರವಲ್ಲ ಅರಬ ರಾಷ್ಟ್ರಗಳ ಯುದ್ಧ ಹೂಡದಂತೆ ಸಂಯುಕ್ತರಾಷ್ಟ್ರ ಸಭೆಯವರು ತಡೆಗಟ್ಟಬೇಕೆಂದೂ ಕೇಳಿಕೊಂಡಿದ್ದಾರೆ.

ಅಮೇರಿಕವು ಪೆಲೆಸ್ತೈನು ವಿಭಜನೆಯಿಂದ ಯೆಹೂದಿಯರ ರಾಷ್ಟ್ರ ಸ್ಥಾಪಿಸುವ ಆಲೋಚನೆಯಲ್ಲಿತ್ತು. ಅದಕ್ಕೆ ಅರಬರ ಪ್ರಬಲ ವಿರೋಧವಿದ್ದು ಈ ಯೋಜನೆ ಜಾರಿಮಾಡಬೇಕಾದರೆ ರಷ್ಯದ ಸೈನ್ಯಗಳು ಅಲ್ಲಿಗೆ ಕಳುಹಿಸುವ ಪ್ರಸಂಗ ಬರಬಹುದೆಂಬುದರಿಂದ ಈ ಯೋಜನೆ ಹಿಂತೆಗೆಯಲಾಯಿತು. ಈಗ ಇನ್ನೊಂದು ವಿಧಾನದಲ್ಲಿ ಇಸ್ರಾಯೇಲ್ ರಾಷ್ಟ್ರ ಸ್ಥಾಪನೆಯಾಯಿತೆಂದ ಮೇಲೆ ಕೂಡಲೆ ಈ ಹೊಸ ರಾಷ್ಟ್ರಕ್ಕೆ ಮನ್ನಣೆ ಕೊಡಲಾಯಿತು. ಅಮೇರಿಕದಲ್ಲಿ ಯೆಹೂದಿಯರ ಸಂಖ್ಯೆ ಸಾಕಷ್ಟು ಪ್ರಬಲವಿರುವುದರಿಂದ ಇವರ ಮತದಾನದ ಆಸೆಯಿರುವ ಸರಕಾರ ಈ ರೀತಿ ವರ್ತಿಸಿದಲ್ಲಿ ಆಶ್ಚರ್ಯವಿಲ್ಲ.

ಇತ್ತ ರಷ್ಯದ ಬೆಂಬಲವಾದರೂ ಈ ಹೊಸ ರಾಷ್ಟ್ರದ ಕಡೆಗೇನೇ ಇದ್ದಂತೆ ಕಾಣುತ್ತದೆ. ಯೆಹೂದಿ ಸೈನ್ಯಗಳಲ್ಲಿ ರಷ್ಯನ್ ಆಫೀಸರರು ಸೇರಿದ್ದಾರೆಂದೂ ಕೇಳಿಬರುತ್ತದೆ ಮಾತ್ರವಲ್ಲ ಅರಬರ ಕಡೆಗಿರುವ ಬ್ರಿಟಿಷರ ವಿರುದ್ಧ ಪ್ರಚಾರಕ್ಕೂ ರಷ್ಯದ "ಪ್ರಾವ್ಡಾ" ಪತ್ರಿಕೆ ಆರಂಭಮಾಡಿರುತ್ತದೆ.

ಹೀಗೆ ಜಗತ್ತಿನ ಇತ್ತಂಡಗಳ ಮುಂದಾಳುಗಳಿಂದಲೂ ಬೆಂಬಲಪಡೆದ ಇಸ್ರಾಯೇಲ್ ರಾಷ್ಟ್ರವು ಚಿರಸ್ಥಾಯಿಯಾಗುವುದೇ?

ಅರಬರ ವಿರೋಧವಾದರೂ ಪ್ರಬಲವಾಗಿಯೇ ಇದೆಯೆಂಬ ಬಗ್ಗೆ ಸಂಶಯಬೇಡ. ಬ್ರಿಟನು ಇವರಿಗೆ ಹೆಚ್ಚು ಸಹಾಯಮಾಡುವ ಪರಿಸ್ಥಿತಿಯಲ್ಲಿಲ್ಲದಿದ್ದರೂ ಅವರ ಸಹಾನುಭೂತಿ ಇವರ ಕಡೆಗೇನೇ ಇದ್ದಂತೆ ಕಾಣುತ್ತದೆ. ಅರಬರಿಗೆ ಇದು ತನಕ ಬ್ರಿಟಿಷು ಸಲ್ಲಿಸುತ್ತಿದ್ದ ಧನಸಹಾಯ ಇನ್ನೂ ಕೊಡಲಾಗುವುದೆಂದು ಬ್ರಿಟಿಷ್ ಸರಕಾರದ ಕಡೆಯಿಂದ ಹೇಳಲಾಗಿದೆ

ಮಧ್ಯ ಅಸ್ಯದ ಎಲ್ಲ ರಾಷ್ಟ್ರಗಳೂ ಸೇರಲಿರುವ ಈ ಯುದ್ಧಕ್ಕೆ ಪ್ರಬಲ ರಾಷ್ಟ್ರಗಳೂ ಸೇರುವ ಪ್ರಸಂಗ ಬಂದೀತೆ ಎಂಬುದು ಮುಖ್ಯ ಪ್ರಶ್ನೆ. ನಾವೆನಿಸಿದಂತೆ ಅಮೇರಿಕವು ಯೆಹೂದಿ ರಾಷ್ಟ್ರಕ್ಕೆ ಮನ್ನಣೆ ಇತ್ತರೂ ಎರಡು ಕಡೆಯವರಿಗೂ ಆಯುಧಗಳನ್ನು ದಗಿಸಿ ಹಣಮಾಡುವ ಯೋಜನೆಯಲ್ಲಿರುವಂತೆ ಕಾಣುತ್ತದೆ

ನಮ್ಮ ಸಂಯುಕ್ತ ರಾಷ್ಟ್ರಸಭೆ ಈಗ ಏನಾದರೂ ಮಾಡಲು ಸಮರ್ಥವಿರುತ್ತದೆಯೇ? ಅಥವಾ ಇಲ್ಲಿಗೇನೇ ಅದರ ಅಂತ್ಯವೋ ನೋಡಬೇಕಾಗಿದೆ.

ರಜಾಕರರ ಉಪಟಳ

ಹೈದರಾಬಾದಿನ ರಜಾಕರರ ಸಂಗಡದ ಉಪಟಳ ದಿನದಿಂದ ದಿನಕ್ಕೆ ಏರುತ್ತ ಇದ್ದು ಈಗ ವಿಪರೀತಕ್ಕೆ ಮುಟ್ಟಿರುತ್ತದೆ

ಇವರು ಹೈದರಾಬಾದು ಸರಕಾರದ ಪ್ರಚಾರಖಾತೆ, ರೇಡಿಯೋ, ಪತ್ರಿಕೆಗಳು ಇತ್ಯಾದಿ ಎಲ್ಲಾ ತಾವೇ ಉಪಯೋಗಿಸುತ್ತಿದ್ದಾರೆ. ವಿರುದ್ಧ ಮಾತನಾಡುವ ಪತ್ರಿಕೆಗಳನ್ನು ಸರಕಾರ ನಿಲ್ಲಿಸುತ್ತದೆ. ಈ ಸಂಗಡದ ಸೈನ್ಯ ಈಗ ದುಬಾರಿಯಾಗಿದೆ ಮಾತ್ರವಲ್ಲ ಇವರಿಗೆ ಬೇಕಾದ ಆಯುಧಗಳು ಒದಗಿಸಲ್ಪಡುತ್ತಿವೆ. ಹೀಗೆ ಇದು ಅಲ್ಲಿಯ ಸರಕಾರದ ಬೆಂಬಲದಿಂದಲೇ ನಡೆಯುತ್ತಿವೆಯೆಂಬ ಬಗ್ಗೆ ಈಗ ಸಾಕಷ್ಟು ರುಜುವಾತು ಇರುತ್ತದೆ

ಹೈದರಾಬಾದು ಸರಕಾರವು ಎಲ್ಲಿಯಾದರೂ ಪ್ರಜಾ ಸ್ವಾತಂತ್ರ್ಯವುಳ್ಳ ಸರಕಾರ ಸ್ಥಾಪಿಸಲು ಹೊರಟರೆ ರಜಾಕರ ಸಂಗಡದವರು ಅಲ್ಲಿಯ ಸರಕಾರವನ್ನು ತಾವೇ ಬಲಾತ್ಕಾರದಿಂದ ವಶಪಡಿಸಿ ನಡೆಸಲಿರುವರೆಂದೂ ತಿಳಿದುಬರುತ್ತದೆ

ಈ ಸಂಗಡದ ಈಗಿನ ಕಾರ್ಯಕ್ರಮವೆಂದರೆ ಹೈದರಾಬಾದಿನಲ್ಲಿ ತಮ್ಮ ವಿರೋಧಿಗಳನ್ನು ಮುಖ್ಯವಾಗಿ ಹಿಂದುಗಳನ್ನು ಓಡಿಸುವುದೇ ಇರುತ್ತದೆ. ಇದಕ್ಕಾಗಿ ಅಲ್ಲಿಯ ಹಳ್ಳಿಗಳಲ್ಲಿ ಹೋಗಿ ಜನರ ಮೇಲೆ ಎಲ್ಲಾ ಬಗೆಯ ಅತ್ಯಾಚಾರಗಳನ್ನು ನಡೆಸಿ ಹಳ್ಳಿಗಳ ಮೇಲೆ ಹಳ್ಳಿಗಳನ್ನು ಸುಟ್ಟು ಭಸ್ಮ ಮಾಡಲಾಗುತ್ತಿವೆ. ಹೈದರಾಬಾದಿನ ಗಡಿಯ ಹೊರಗಿನ ಅಂದರೆ ಭಾರತ ಸರಕಾರದ ಹಳ್ಳಿಗಳಲ್ಲಿಯೂ ನುಗ್ಗಿ ಇದೇ ಬಗೆಯ ಅತ್ಯಾಚಾರಗಳನ್ನು ನಡೆಸಲಾಗುತ್ತಿದೆ

ಕಮ್ಯೂನಿಸ್ಟರ ಹಾವಳಿ ತಡೆಯಲು ಈ ಸಂಗಡಬೇಕೆಂದು ಹೈದರಾಬಾದು ಸರಕಾರ ಹೇಳುತ್ತಿತ್ತು. ಈಗ ಕಮ್ಯೂನಿಸ್ಟರ ಮತ್ತು ರಜಾಕರ ಸಂಗಡಗಳು ಭಾರತ ಸರಕಾರಕ್ಕೆ ತೊಂದರೆಕೊಡಲು ಒಟ್ಟುಸೇರಿವೆ. ಈಗ ರಜಾಕರರು ಹೈದರಾಬಾದು ಸಂಸ್ಥಾನದ ಕಾಂಗ್ರೆಸಿಗರ ಮೇಲೆ ಬಿದ್ದಿದ್ದಾರೆ

ರಜಾಕರ ಸಂಗಡದವರು ಬೀರಾರ್ ಮೊದಲಾದ ಸ್ಥಳಗಳ ಮೇಲೆ ದಂಡೆತ್ತಿ ಬರಲು ಸಿದ್ಧತೆಯಲ್ಲಿದ್ದಾರೆಂದೂ ಕೇಳಿಬರುತ್ತಿದೆ

ಅಂತೂ ಈ ರಜಾಕರ ಸಂಗಡದ ಚಟುವಟಿಕೆಗಳನ್ನು ಭಾರತ ಸರಕಾರವು ಹೆಚ್ಚು ಸಮಯ ಸಹಿಸಿಕೊಂಡಿರಲು ಸಾಧ್ಯವಿಲ್ಲದ ಪರಿಸ್ಥಿತಿಬಂದಿದೆ

ಮಂಗಳೂರಲ್ಲೇ ದೊಡ್ಡ ಬಂದರು

ಮರ್ಮಗೋವೆ ಮತ್ತು ಕೊಚ್ಚಿಗಳ ನಡುವೆ ದೊಡ್ಡ ಬಂದರು ಮಾಡುವುದು ಅಗತ್ಯವಾದರೆ ಎಲ್ಲಿ ಎಂಬ ಪ್ರಶ್ನೆಯ ಪರಿಶೀಲನಕ್ಕಾಗಿ ಭಾರತ ಸರಕಾರದವರು ನೇಮಿಸಿದ ಆರು ಮಂದಿಯ ಕಮಿಟಿಯಲ್ಲಿ ಶ್ರೀ ಮಿತ್ತರ್ ಮತ್ತು ಮರ್ರೀ ಎಂಬೀರ್ವ ಸದಸ್ಯರು ನಮ್ಮ ಜಿಲ್ಲೆಯ ಮಲ್ಪೆ ಮಂಗಳೂರುಗಳನ್ನು ಸಂದರ್ಶಿಸಿ ಮುಂದೆ ತೆರಳಿದರು. ಇದಕ್ಕೆ ಮೊದಲು ಭಟ್ಕಳ ಮೊದಲಾದುವನ್ನು ಸಂದರ್ಶಿಸಿ ಇಲ್ಲಿಗೆ ಬಂದಿದ್ದರು.

ಉಡುಪಿಯಿಂದ ಇಲ್ಲಿಗೆ ಬಂದ ಮೊದಲ ದಿನವೇ ಇವರು ಬಂದರಕ್ಕೆ ಹೋಗಿ ಅದರ ಪರಿಶೀಲನ ನಡೆಸಿದರು. ಆ ದಿನ ಸಂಜೆ ನಮ್ಮಲ್ಲಿಯ ಜೊಯಿಂಟ್ ಸ್ಟಾಕ್ ಬೇಂಕುಗಳ ಪರವಾಗಿ ಇವರಿಗೆ ಕನರಾ ಬೇಂಕಿನ ಹೆಡ್ ಆಫೀಸ ಮಹಡಿಯಲ್ಲಿ ಒಂದು ಸತ್ಕಾರಕೂಟವಿತ್ತು. ಈ ಬೇಂಕುಗಳ ಪರವಾಗಿ ಮಂಗಳೂರಲ್ಲೇ ಏಕ ದೊಡ್ಡ ಬಂದರು ಮಾಡಬೇಕೆಂಬ ಬಗ್ಗೆ ಒಂದು ಮೆಮೋರಾಂಡಮ್ ಕೊಡಲಾಯಿತು. ಈ ಪಶ್ಚಿಮ ಕರಾವಳಿಯ ಹಾಗೂ ಹುಬ್ಬಳ್ಳಿ ತನಕದ ಘಟ್ಟದ ಮೇಲಿನ ವ್ಯಾಪಾರ ವಹಿವಾಟುಗಳ ಸಂಬಂಧ ತಮಗಿದ್ದಯಾಗಿ ಈ ಕುರಿತು ಅಭಿಪ್ರಾಯ ಕೊಡಲು ತಮಗೂ ಹಕ್ಕಿದೆಯೆಂಬುದನ್ನು ಇವರು ಸ್ಪಷ್ಟಪಡಿಸಿದರು

ಮುಂದೆ ಆ ದಿನ ಸಂಜೆ ಕಮಿಟಿಯವರು ಸೈಂಟ್ ಎಲೋಶಿಯಸ್ ಕಾಲೇಜು ಮತ್ತು ಸೈಂಟ್ ಆಗ್ನೆಸ್ ಕಾಲೇಜುಗಳನ್ನು ಸಂದರ್ಶಿಸಿ ಮಂಗಳೂರಿನ ವಿದ್ಯಾಸೌಕರ್ಯಗಳನ್ನು ಪರಿಶೀಲಿಸಿದರು

ಆಮೇಲೆ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾದ ಶ್ರೀ ಟಿ. ನಾರಾಯಣರಾಯರ ತಮ್ಮ ಕಮಿಟಿಯ ಪರವಾಗಿ ಒಂದು ಮೆಮೋರಾಂಡಮ್ ಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸಿಗರ ಅಭಿಪ್ರಾಯದಲ್ಲಿ ಮಂಗಳೂರೇ ದೊಡ್ಡ ಬಂದರಾಗುವುದು ಸರಿಯೆಂದಿದೆಯೆಂದರು

ಮರುದಿನ ಬೆಳಿಗ್ಗೆ ಕಾಫಿ ಕ್ಯೂರಿಂಗ್ ಕಾರಖಾನೆ, ಗೇರುಬೀಜ ಕಾರಖಾನೆಗಳನ್ನು ಸಂದರ್ಶಿಸಿ ಒಂದು ಹಂಚಿನ ಕಾರ್ಖಾನೆಯನ್ನು ಸಂದರ್ಶಿಸಿದರು. ಇಲ್ಲಿ ನಮ್ಮ ಹಂಚಿನ ಕಾರ್ಖಾನೆಯವರ ಸಂಘದ ಪರವಾಗಿ ಒಂದು ಮೆಮೊರಾಂಡಮ್ ಕೊಡಲಾಯಿತು. ಹಂಚಿನ ಕಾರ್ಖಾನೆಯವರಿಗೆ ಇಲ್ಲಿ ದೊಡ್ಡ ಬಂದರವಿಲ್ಲದೆ ಎಷ್ಟು ಅನಾನುಕೂಲವಾಗಿದೆಯೆಂದೂ ಮಾಡಿದರೆ ಎಷ್ಟು ಪ್ರಯೋಜನವಿದೆಯೆಂದೂ ತಮ್ಮ ಕೈಗಾರಿಕೆಯ ದೃಷ್ಟಿಯಿಂದ ಇಲ್ಲಿ ವಿವರಿಸಲಾಯಿತು.

ಆ ದಿನ ಸಂಜೆ ಮಂಗಳೂರ ನಗರಸಭೆಯಲ್ಲಿ ಇವರನ್ನು ಸತ್ಕರಿಸಿ ನಮಗ ನಳ್ಳಿನೀರು ಬರುತ್ತಿದೆ, ವಿದ್ಯುತ್‌ಶಕ್ತಿ ಒದಗಿಸಲಾಗುತ್ತಿದೆ, ವಿಮಾನ ನಿಲ್ದಾಣ ಬರುತ್ತಿದೆ, ದೊಡ್ಡ ಬಂದರಿಗೆ ಬೇಕಾಗುವ ಎಲ್ಲಾ ಸೌಕರ್ಯ ಇಲ್ಲಿದೆಯೆಂಬುದನ್ನು ವಿವರಿಸಿ ಇಲ್ಲಿಯೂ ಒಂದು ಮೆಮೋರಾಂಡಮ್ ಕೊಡಲಾಯಿತು

ಮುಂದೆ ಅಡಿಕ ಭಂಡಸಾಲೆಯೊಂದನ್ನು ಸಂದರ್ಶಿಸಿದ ಬಳಿಕ ದಕ್ಷಿಣ ಕನ್ನಡ ವಾಣಿಜ್ಯ ಸಂಘದ ಕಡೆಯಿಂದ ಒಂದು ಸತ್ಕಾರಕೂಟ ಹೊಳೆಬಾಗಿಲಲ್ಲಿ ಜರಗಿಸಲಾಯಿತು. ಇಲ್ಲಿಯೂ ಒಂದು ಮೆಮೋರಾಂಡಮ್ ಕೊಡಲಾಯಿತು.

ಭಟ್ಕಳ ದೊಡ್ಡ ಬಂದರು ಮಾಡಿ ಫಲವಿಲ್ಲ. ಅಲ್ಲಿ ಈಗ ನಡೆಯುವ ವಹಿವಾಟು ಕೇವಲ 15 ಲಕ್ಷ ರೂಪಾಯಿಗಳಷ್ಟು. ತಾಳಗುಪ್ಪಾ ರೈಲು ಹಾಕಿದರೆ ಹೆಚ್ಚೆಂದರೆ ಶಿವಮೊಗ್ಗ ಜಿಲ್ಲೆಯ ಮಾಲು ಇಲ್ಲಿ ಬಂದೀತು. ಮಲ್ಪೆಯ ಸ್ಥಿತಿಯೂ ಇಷ್ಟೆ. ಮಲ್ಪೆಗೆ ಹೊರಗಿನ ಸಂಬಂಧ ಬೇಕಾದರೆ ಮಂಗಳೂರ ಮೂಲಕವೇ ಆಗಬೇಕು

ಮಂಗಳೂರು ದೊಡ್ಡ ಬಂದರಾದರೆ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳು, ಉತ್ತರ ಮಲಬಾರು, ಕೊಡಗು ಹಾಗೂ ಇಡೀ ಪಶ್ಚಿಮ ಮೈಸೂರು ಸಂಸ್ಥಾನಗಳಿಗೆ ಪ್ರಯೋಜನವುಂಟು. ಹಾಸನ ರೈಲು ಹಾಕಿದರೆ ಈ ಲ್ಯಾನು ಅತ್ಯವಶ್ಯಕವಾಗುವುದು. ಕೊಡಗಿಗೂ ಇದಕ್ಕೆ ರೈಲು ಸಂಬಂಧ ಮಾಡಬಹುದು. ಈ ಪ್ರದೇಶಗಳ ವ್ಯಾಪಾರ ಈಗಲೇ ಮಂಗಳೂರು ಮೂಲಕ ಆಗುತ್ತಿದೆ. ರೂ 450 ಲಕ್ಷದ ವಹಿವಾಟು ಬಂದರ ಮೂಲಕ ನಡೆಯುತ್ತಿದೆ. ಇಲ್ಲಿ ಹೊಸ ಕೈಗಾರಿಕೆಗಳನ್ನು ಬೆಳೆಸಲಿಕ್ಕೂ ತುಂಬಾ ಆಸ್ಪದವಿರುತ್ತದೆ. ಮರ್ಮಗೋವೆ ಮತ್ತು ಕೊಚ್ಚಿಗಳಿಗೆ ಸರಿಮಧ್ಯದಲ್ಲಿದ್ದು ಎಲ್ಲಕ್ಕೂ ಮುಖ್ಯ ಬಂದರಾಗಿ ಈಗಲೇ ಇರುವ ಮಂಗಳೂರಲ್ಲೇ ದೊಡ್ಡ ಬಂದರು ತೆರೆಯುವುದೇ ಯುಕ್ತ

ಇದೆಲ್ಲದಕ್ಕೆ ಉತ್ತರ ಕೊಡುತ್ತ ಮರ್ರೀಯವರು ದಕ್ಷಿಣ ಕನ್ನಡದ ಆತಿಥ್ಯಕ್ಕಾಗಿ ಆಭಾರ ಹೇಳಿದರು. ಮರ್ಮಗೋವೆ ಮತ್ತು ಕೊಚ್ಚಿ ನಡುವೆ ದೊಡ್ಡ ಬಂದರು ಬೇಕೆ? ಎಂಬುದು ಮೊದಲ ಪ್ರಶ್ನೆ. ಬೇಕೆಂದಾದರೆ ಎಲ್ಲಿ ಎಂಬುದು ಆ ಮೇಲಿನ ಪ್ರಶ್ನೆ. ಈ ಪ್ರಶ್ನೆಗಳಿಗೆ ತಾನು ಈಗ ಉತ್ತರಕೊಡುವುದು ಸರಿಯಲ್ಲವೆಂದರು

ಮರ್ರೀ ಮತ್ತು ಮಿತ್ತರ್ ಇವರು ಎಲ್ಲಿ ದೊಡ್ಡ ಬಂದರಾಗಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಲಿಲ್ಲವಾದರೂ ಮಂಗಳೂರಲ್ಲೇ ದೊಡ್ಡ ಬಂದರಾಗಬೇಕೆಂದು ಇವರು ಶಿಫಾರಸುಮಾಡಲು ಸಾಕಷ್ಟು ಅಭಿಪ್ರಾಯ ಇವರಲ್ಲಿ ಉಂಟಾಗಿದೆಯೆಂಬ ಬಗ್ಗೆ ಸಂಶಯವೇನೂ ಇಲ್ಲ.

ಮರ್ಮಗೋವೆ ಮತ್ತು ಕೊಚ್ಚಿಗಳಿಗೆ ಸರಿಮಧ್ಯ ಸ್ಥಳ, ಈ ಪ್ರದೇಶದ ಒಳಗಿರುವ ಎಲ್ಲಾ ಬಂದರುಗಳಲ್ಲಿ ಹೆಚ್ಚಿನ ಆಮದು ರಫ್ತು ಇರುವ ಬಂದರು, ದೊಡ್ಡ ಪಟ್ಟಣ, ವಿದ್ಯೆಯಲ್ಲಿ ಬಹಳ ಮುಂದರಿದ ಜನರು, ವಿವಿಧ ಕೈಗಾರಿಕೆಗಳ ಊರು, ಇದ್ದುದರಲ್ಲಿ ಹೆಚ್ಚಿನ ಪ್ರದೇಶಗಳಿಗೆ ಪ್ರಯೋಜನ ಬೀಳುವ ಬಂದರು, ನಳ್ಳಿನೀರು, ವಿದ್ಯುತ್‌ಶಕ್ತಿ ಇತ್ಯಾದಿ ಎಲ್ಲಾ ಅನುಕೂಲತೆಗಳಿಗೆ ಕೊರತೆ ಇಲ್ಲದ ಊರು ಇಷ್ಟೆಲ್ಲ ಇದ್ದ ಮೇಲೆ ಮಂಗಳೂರಲ್ಲಿ ದೊಡ್ಡ ಬಂದರಾಗಬೇಕೆಂದು ಇವರು ಶಿಫಾರಸು ಮಾಡದೆ ಬೇರೆ ಇವರಿಗೆ ದಾರಿಯೇ ಇಲ್ಲವೆಂದು ಬಂದ ಇಬ್ಬರಿಗೂ ಖಚಿತವಾಗಿರುತ್ತದೆ

ಆದರೆ ಭಟ್ಕಳಕ್ಕೇನೆ ಇವರು ಒಲಿದುಬಿಡುವರೆ? ಎಂದು ಕೆಲವರಿಗೆ ಸಂಶಯವುಂಟು. ಭಟ್ಕಳದಲ್ಲಿ ಏನಿದೆ? ಮಂಗಳೂರಿಗೆ ಹೋಲಿಸಿದಲ್ಲಿ ಅದೊಂದು ಹಳ್ಳಿ. ಮೈಸೂರು ಸರಕಾರ ಭಟ್ಕಳವೇ ಬೇಕೆನ್ನುತ್ತವಲ್ಲ? ಮೈಸೂರು ಸರಕಾರ ಭಟ್ಕಳ ತಮಗೇನೇ ಕೊಡಬೇಕೆಂದು ಹಿಂದೆ ಕೇಳುತ್ತಿತ್ತು. ಮೈಸೂರು ಸಂಸ್ಥಾನಕ್ಕೆ ತನ್ನದೇ ಒಂದು ಬಂದರು ಬೇಕೆಂಬ ಆತುರ ಹಿಂದಿನಿಂದ ಇತ್ತು. ಮಂಗಳೂರನ್ನು ತಮಗೆ ಕೊಟ್ಟುಬಿಡಿ ಎಂದು ಕೇಳಿದರೆ ಯಾರಾದರೂ ಕೊಡುತ್ತಾರೆಯೆ? ಭಟ್ಕಳದಂತಹ ಹಳ್ಳಿಯಾದರೆ ಒಂದು ವೇಳೆ ಕೇಳಿದರೆ ಕೊಟ್ಟುಬಿಟ್ಟಾರೆಂಬ ಭಾವನೆಯಿಂದ ಅವರು ಭಟ್ಕಳ ಬಯಸಿದ್ದರು. ಈಗ ಭಟ್ಕಳ ಅವರಿಗೆ ಬಿಟ್ಟುಕೊಡುವ ಸಂಭವವೇನೂ ಇಲ್ಲ. ಭಾರತ ಸರಕಾರದವರು ತೆರೆಯುವ ದೊಡ್ಡ ಬಂದರು ಅದು ಭಟ್ಕಳದಲ್ಲಿರುವುದಕ್ಕಿಂತ ಮಂಗಳೂರಲ್ಲಿದ್ದರೆ ಮೈಸೂರು ಸಂಸ್ಥಾನಕ್ಕೆ ನಿಜವಾಗಿಯೂ ಹೆಚ್ಚು ಅನುಕೂಲ. ನಮ್ಮ ವಾಣಿಜ್ಯ ಸಂಘದವರು ಇದನ್ನು ರುಜು ಮಾಡಿ ಕೊಟ್ಟಿದ್ದಾರೆ. ಹಿಂದಿನ ರೀತಿಯ ಬಲವಿದ್ದ ಮೈಸೂರವರು ಭಟ್ಕಳವೇ ಆಗಬೇಕೆಂದು ಸೂಚಿಸಿದರೂ ಸರಿಯಾಗಿ ವಿವೇಚಿಸಿದ ಬಳಿಕ ಮೈಸೂರವರೂ ಮಂಗಳೂರ್ ಆಗಬಹುದೆನ್ನುತ್ತಾರೆಂಬುದು ಹಿಂದೆ ಇಷ್ಟೆಲ್ಲ ವಿವರಿಸಿದ ಬಳಿಕ ಕಮಿಟಿಯವರು ಭಟ್ಕಳ ಆರಿಸುವಂತಿಲ್ಲ

ಮಲ್ಪೆಯಲ್ಲಿ ದೊಡ್ಡ ಬಂದರು ಮಾಡಬೇಕೆಂಬ ಬಗ್ಗೆ ಉಡುಪಿಯವರ ಬೆಂಬಲ ಮಾತ್ರ. ಅದರಲ್ಲಿಯೂ ಉಡುಪಿ ಕಾಂಗ್ರೆಸಿಗರ ಬೆಂಬಲ ಇಲ್ಲ. ಜಿಲ್ಲಾ ಕಮಿಟಿ ಮಂಗಳೂರನ್ನೇ ಸಮರ್ಥಿಸಿದೆಯಷ್ಟೆ? ಇಲ್ಲಿ ಬಹಾದ್ದೂರ್‌ಗಡ ಉಂಟೆಂಬುದು ಒಂದೇ ಕಾರಣದಿಂದ ಇಲ್ಲಿ ದೊಡ್ಡ ಬಂದರು ಮಾಡಿ ಕೋಟಿಗಟ್ಟಲೆ ರೂಪಾಯಿ ಇದಕ್ಕೆ ಖರ್ಚು ಮಾಡುತ್ತಾರೆಯೆ? ಮಂಗಳೂರು ಬಂದರ ಮತ್ತು ಕೊಚ್ಚಿ ಬಂದರ ಪ್ರಾಕೃತಿಕ ಅನುಕೂಲತೆಯ ಮಟ್ಟಿಗೆ ಒಂದೇ ನಮೂನೆಯವು. ಕೊಚ್ಚಿಗಿಂತಲೂ ಇಲ್ಲಿ ಹೆಚ್ಚು ಅನುಕೂಲತೆಗಳಿವೆ ಎಂದ ಮೇಲೆ ಬಹಾದ್ದೂರ್‌ಗಡ ತೋರಿಸಿ ಫಲವಿಲ್ಲ

ಮರ್ಮಗೋವೆ ಮತ್ತು ಕೊಚ್ಚಿ ನಡುವೆ ದೊಡ್ಡ ಬಂದರಾಗುವ ಯೋಗ್ಯತೆ ಇರುವುದು ಮಂಗಳೂರಿಗೆ ಮಾತ್ರ. ಅಂದ ಮೇಲೆ ಈ ಯೋಗ್ಯತೆಯನ್ನು ಕಣ್ಣಾರೆ ಕಂಡ ಕಮಿಟಿ ಸದಸ್ಯರು ಮಂಗಳೂರನ್ನೇ ಶಿಫಾರಸು ಮಾಡಲು ನಿರ್ಧಾರ ಮಾಡಿರಬೇಕು.

ಜಿಲ್ಲಾ ಸಮಾಚಾರ

ಆಹಾರಪರಿಸ್ಥಿತಿ ಸುಧಾರಣೆ ಮತ್ತು ಮದ್ರಾಸು ಸರಕಾರದ ಯೋಜನೆಗಳು

ಆಹಾರವಸ್ತುವಿನ ಕ್ರಯವು ಇಮ್ಮಡಿಯಾಗಿರುವ ಎಲ್ಲಾ ರೇಶನ್ ರದ್ದಾದ ಪ್ರದೇಶಗಳಲ್ಲಿ ರಿಲೀಫ್ ಶೋಪುಗಳೆಂಬ ಪರಿಹಾರ ಅಂಗಡಿಗಳ ಸಂಖ್ಯೆಯನ್ನು ಮೊದಲಿದ್ದವುಗಳಿಗಿಂತ ಶೇಕಡಾ ೫೦ರಷ್ಟು ಏರಿಸಬೇಕೆಂದು ಸರಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆಜ್ಞೆಯಿತ್ತಿದೆ. ಮಿತಿಮೀರಿದ ಆಹಾರ ಬೆಲೆ ಏರಿಕವನ್ನು ಎದುರಿಸುವುದು ಈ ಯೋಜನೆಯ ಉದ್ದೇಶ.

ಇತರ ಪ್ರದೇಶಗಳಲ್ಲಿ ಸಹ ಪರಿಹಾರ ಅಂಗಡಿಗಳನ್ನು ಶೇಕಡಾ ೨೫ರಷ್ಟು ಹೆಚ್ಚಿಸಬೇಕೆಂದು ಆಜ್ಞೆಯೀಯಲಾಗಿದೆ. ಆಹಾರದ ಗಂಭೀರ ಪರಿಸ್ಥಿತಿ ಇನ್ನೂ ಬರಲಿಕ್ಕಿರುವುದರಿಂದ ಆಹಾರದ ಕ್ರಯವನ್ನು ತಗ್ಗಿಸಲು ಸರಕಾರವು ತನ್ನಲ್ಲಿ ಶೇಖರಿಸಲಾಗಿರುವ ಕಾಳುಕಡ್ಡಿಯನ್ನು ಹಂಚಲು ಸಾಧ್ಯವಿಲ್ಲ. ಇದರಿಂದಾಗಿ ಮುಂದೆ ಸಂಕಷ್ಟಕ್ಕೀಡಾಗಬೇಕಾಗುವುದು.

ಈ ವಿಷಯದ ಕುರಿತು ಆಹಾರ ಖಾತೆಯ ಕಾರ್ಯದರ್ಶಿಯವರು ಒಂದು ಪತ್ರಿಕಾ ಪ್ರತಿನಿಧಿ ಸಂದರ್ಶನದಲ್ಲಿ ಹೀಗೆ ತಿಳಿಸಿದರು:-

ಸರಕಾರವು ಪರಿಹಾರ ಅಂಗಡಿಗಳನ್ನು ತೆರೆಯುತ್ತಿರುವುದರಿಂದ ಸಾರ್ವಜನಿಕರಿಗೆ ದಾಸ್ತಾನು ಆದ ಕಾಳುಕಡ್ಡಿಯು ಸಿಗುವುದಿಲ್ಲವೆಂಬುದು ತಪ್ಪು. ಜೋಳವನ್ನು ಜನತೆ ಉಪಯೋಗಿಸಲು ಅಸಮ್ಮತಿ ತೋರುವುದೊಂದೇ ದೊಡ್ಡ ಕಷ್ಟ. ಪರಿಹಾರ ಅಂಗಡಿಗಳಲ್ಲಿ ಅದನ್ನು ಅಕ್ಕಿಯೊಂದಿಗೆ ಕಡ್ಡಾಯವಾಗಿ ಕೊಡಲಾಗುವುದು. ಆದರೆ ಆಹಾರ ಕೊರತೆಯಿರುವ ತನಕ ಈ ಧೋರಣೆಯನ್ನನುಸರಿಸಿ ಕ್ರಮೇಣ ಸೀದಾ ರದ್ದು ಮಾಡಬೇಕಾಗುವುದು.

ವಿನಿಯಂತ್ರಣವನ್ನು ಮಾಡಲು ವಿವಿಧ ಕಡೆಗಳಿಂದ ಕೇಳಿಕೆಗಳು ಬಂದಿದ್ದುದರಿಂದ ಸರಕಾರವು ಹಾಗೆ ಮಾಡಿತು. ಈಗ ಅದಕ್ಕಾಗಿ ಪುನಃ ಸರಕಾರದ ಮೇಲೇ ಹೊಣೆಯನ್ನು ಹೊರಿಸಬರುವುದಿಲ್ಲ. ಸರಕಾರವು ಬೇರೆ ಬೇರೆ ಜಿಲ್ಲೆಗಳಲ್ಲಿ ಕಾಳುಕಡ್ಡಿಯ ಕ್ರಮವನ್ನು ನಿರ್ಧರಿಸಿದ್ದು ಜನರ ಸಹಕಾರವಿಲ್ಲದೆ ಆ ಕುರಿತು ಅದು ಏನನ್ನೂ ಮಾಡಲಾರದು.

೩ ಅಥವಾ ೪ ತಿಂಗಳುಗಳಿಗೆ ಸಾಕಾಗುವಷ್ಟು ಆಹಾರವನ್ನು ಬಡವರಿಗೂ ಒದಗಿಸಬೇಕೆಂದು ಕೆಲವರ ಸೂಚನೆಯಿದೆ. ಆದರೆ ಬಡವರಲ್ಲಿ ಅಷ್ಟು ಹಣವಿಲ್ಲದಿರುವುದರಿಂದ ಇದು ಕಷ್ಟಸಾಧ್ಯವೆಂದು ತಿಳಿಯಬೇಕು.

ಕಳೆದ ವಾರದಲ್ಲಿ ಮದ್ರಾಸು ಸರಕಾರವು ೧೦ ಸಾವಿರ ಟನ್ನು ಅಕ್ಕಿಯನ್ನು ಪಡೆದಿದೆ. ಅದು ಭಾರತ ಸರಕಾರವು ಈ ಪ್ರಾಂತ್ಯಕ್ಕೆ ಮಂಜೂರುಮಾಡಿದುದರ ಒಂದು ಅಂಶ. ದಕ್ಷಿಣ ಕನ್ನಡದಲ್ಲಿ ಆಹಾರದಾಸ್ತಾನು ೧೨೧೦೦ ಟನ್ನುಗಳಷ್ಟಿದ್ದು ಅದು ಈಗಿನ ಎಣಿಕೆಯಂತೆ ೪½ ತಿಂಗಳಿಗೆ ಸಾಕಾಗುವುದೆಂದು ತಿಳಿದುಬಂದಿದೆ.

ಆಹಾರ ಮಂತ್ರಿ ಡಾ। ರಾಜನ್ ಅವರು ತಾ. ೧೫ರಂದು ರೇಡಿಯೋ ಭಾಷಣ ಮಾಡುತ್ತ ವ್ಯಾಪಾರಿಗಳೂ, ಸಾಗುವಳಿದಾರರೂ ತಮ್ಮ ಸ್ವಾರ್ಥಕ್ಕಾಗಿ ಆಹಾರಪರಿಸ್ಥಿತಿಯ ಅನುಕೂಲತೆ ಪಡೆದು ದುರುಪಯೋಗ ಮಾಡಕೂಡದೆಂದು ಭಿನ್ನವಿಸಿಕೊಂಡಿರುವರಲ್ಲದೆ ಅಂಥ ಸಮಾಜಕಂಟಕರನ್ನು ಯೋಗ್ಯದಾರಿಗೆ ಹಚ್ಚಲು ಸರಕಾರವು ತಕ್ಕ ಕ್ರಮ ತೆಗೆದುಕೊಳ್ಳಲೂ ಹಿಂಜರಿಯದೆಂದು ಎಚ್ಚರಿಸಿರುವರು.

ಬಂದರುಪರಿಶೀಲನಾ ಸಮಿತಿ

ಪಶ್ಚಿಮ ಕರಾವಳಿಯಲ್ಲಿ ದೊಡ್ಡ ಬಂದರು ಒಂದರ ಅವಶ್ಯಕತೆಯಿದೆ ಎಂಬುದನ್ನೂ, ಅವಶ್ಯಕತೆಯಿದ್ದರೆ ಅದಕ್ಕೆ ಅನುಕೂಲವಾದ ಸ್ಥಳವಾವುದೆಂಬುದನ್ನೂ ಪರಿಶೀಲಿಸಲು ಭಾರತ ಸರಕಾರದಿಂದ ನಿಯೋಜಿತವಾದ ಸಮಿತಿಯೊಂದರ ಇರ್ವ ತಜ್ಞ ಸದಸ್ಯರಾದ ಶ್ರೀ ಮಿತ್ತರ್ ಮತ್ತು ಮಿ। ಮುರ್ರೆ ಇವರು ಕಳೆದ ತಾ. ೧೫ರಂದು ಇಲ್ಲಿಗೆ ಚಿತ್ತೈಸಿದರು. ಅವರು ಪ್ರಾಂತ್ಯದ ಹಿರಿಯ ಬಂದರುಅಧಿಕಾರಿಯೊಡನೆ ಮತ್ತು ಮಂಗಳೂರು ಪೋರ್ಟ್ ಆಫೀಸರರೊಡನೆ ಇಲ್ಲಿನ ಪ್ರದೇಶವನ್ನು ನದಿ, ಅಳಿವೆ ಸಮುದ್ರ ಕರಾವಳಿಯನ್ನು ಸಂದರ್ಶಿಸಿದರು. ಅಲ್ಲದೆ ಸ್ಥಳೀಯ ವ್ಯಾಪಾರಿ, ಕೈಗಾರಿಕೆ ಉದ್ಯೋಗದ ಸಂಸ್ಥೆಗಳ ಪ್ರತಿನಿಧಿಗಳೊಡನೆ ವಿಚಾರ ವಿನಿಮಯವನ್ನು ಮಾಡಿದರು. ಇಲ್ಲಿಯ ಪ್ರಮುಖ ಕೈಗಾರಿಕೆ ಮತ್ತು ಶಿಕ್ಷಣ ಸಂಸ್ಥೆಗಳನ್ನೂ ಅವರು ಸಂದರ್ಶಿಸಿದರು. ತಾ.೧೭ರಂದು ಅತಿಥಿ ಸದಸ್ಯರಿಗೆ ನಗರ ಸಭೆಯವರು ಮತ್ತು ವಾಣಿಜ್ಯ ಸಂಘದವರು ಭಿನ್ನವತ್ತಲೆಯನ್ನರ್ಪಿಸಿದರು. ಮಂಗಳೂರು ಪ್ರಧಾನ ಬಂದರಾಗುವುದಕ್ಕೆ ಅರ್ಹವಿರುವ ಸಂಕೆ ಸಂಗತಿಗಳನ್ನೊಳಗೊಂಡ ಮೆಮೊರೆಂಡಮುಗಳು ಅವರಿಗೆ ಅರ್ಪಿಸಲಾದುವು. ತಮ್ಮ ಭಾಷಣಗಳಲ್ಲಿ ಶ್ರೀ ಮಿತ್ತರರು "ಪ್ರಧಾನ ಬಂದರನ್ನು ಚುನಾಯಿಸುವಾಗ ಇಡೀ ಭಾರತ ದೇಶದ ಹಿತವನ್ನು ದೃಷ್ಟಿಯಲ್ಲಿರಿಸಿ ಒಂದು ಇತ್ಯರ್ಥಕ್ಕೆ ಬರಲಾಗುವುದಲ್ಲದೆ ಯಾವದಾದರೊಂದು ಸಂಸ್ಥಾನ ಇಲ್ಲವೆ ಪ್ರಾಂತ್ಯದ ಒಂದೇ ಹಿತದೃಷ್ಟಿಯಿಂದ ಅದನ್ನು ಚುನಾಯಿಸಲಾಗುವುದಿಲ್ಲವೆಂಬ ಭರವಸೆಯನ್ನಷ್ಟೇ ಸೂಚಿಸಿರುವರು. ಕಾರವಾರ ಭಟ್ಕಳಗಳಿಗಿಂತ ಮಂಗಳೂರೇ ಚುನಾಯಿಸಲ್ಪಡುವ ಸಂಭವಗಳು ಇವೆಯೆಂದು ಆಶಾವಾದಿ ನಿರೀಕ್ಷಕರ ಅಭಿಪ್ರಾಯವಿದೆ.

ಪ್ರಥಮಶ್ರೇಣಿಯ ನಗರಸಭೆ

ಮಂಗಳೂರನ್ನು ಪ್ರಥಮಶ್ರೇಣಿಯನಗರ (ಫಸ್ಟ್ ಗ್ರೇಡ್)ಯಾಗಿ ಮಾಡಲ್ಪಟ್ಟಿರುವುದರಿಂದ ಇದನ್ನೊಂದು ಕೊರ್ಪೊರೇಶನ್ ಎಂದು ಪರಿಣಿಸಿ ಇಲ್ಲಿಯ ನಗರ ಸಭಾಧ್ಯಕ್ಷರನ್ನು ಚೆಯರ್ ಮೇನ್ ಎಂಬುದರ ಬದಲಿಗೆ "ಮೇಯರ್" ಎಂದು ಸಂಬೋಧಿಸಬೇಕಾಗಿ ಸರಕಾರಕ್ಕೆ ವಿನಂತಿಸುವ ಸೂಚನೆ ಕಳೆದ ಒಂದು ಮುನ್ಸಿಪಲ್ ಕೌನ್ಸಿಲ್ ಸಭೆಯಲ್ಲಿ ಸ್ವೀಕೃತವಾಗಿದೆ.

ಗಾಂಧಿ ಪ್ರತಿಮೆ

ಗಾಂಧಿಜೀಯವರ ಒಂದು ಕಂಚಿನ ಪ್ರತಿಮೆ ಮತ್ತೊಂದು ಸಾದಾ ಪ್ರತಿಮೆಯನ್ನು ಕೊಂಡುಕೊಳ್ಳಬೇಕೆಂದೂ ನನ್ನು ನಗರ ಸಭೆಯವರು ನಿರ್ಧರಿಸಿರುವರು. ಇವನ್ನು ಪ್ರಧಾನ ಸ್ಥಾನವೊಂದರಲ್ಲಿ ಇರಿಸಲಾಗುವುದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

THE
CANARA BANK, LIMITED.
ESTD: 1906

ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳ ಹೆತ್ತವರ ಅವಗಾಹನೆಗೆ

ಈಗ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದು ಬರುವ ಜೂನಿನಿಂದ ಕೆನರಾ ಹೈಸ್ಕೂಲಿಗೆ ಸೇರಬೇಕೆಂದಿರುವ ವಿದ್ಯಾರ್ಥಿಗಳು ತಾ. 24-5-48 ಸೋಮವಾರ ಪೂರ್ವಾಹ್ನ ಘಂಟೆ 9-30ಕ್ಕೆ ಬಂದರೆ ಕನ್ನಡ, ಗಣಿತ, ಇಂಗ್ಲೀಷುಗಳಲ್ಲಿ ಅವರನ್ನು ಪರೀಕ್ಷಿಸಲಾಗುವುದು ಮತ್ತೆ ಜೂನ್ 1ರಿಂದ 4ರ ಒಳಗೆ ಅವರು ತಂತಮ್ಮ ಶಾಲೆಗಳಿಂದ ಸರ್ಟಿಫಿಕೇಟನ್ನು ತಂದರೆ ಸರ್ಟಿಫಿಕೇಟನ್ನೂ ಪರೀಕ್ಷೆಯ ಫಲಿತಾಂಶವನ್ನೂ ನೋಡಿ ತಕ್ಕ ತರಗತಿಗೆ ದಾಖಲು ಮಾಡಲಾಗುವುದು. 24ನೇ ತಾರೀಕಿಗೆ ಪರೀಕ್ಷಿಸಲ್ಪಟ್ಟವರನ್ನು ದಾಖಲು ಮಾಡಿದ ನಂತರ ಸ್ಥಳಗಳು ಉಳಿದರೆ ನಂತರ ಬಂದವರನ್ನು ಪರೀಕ್ಷಿಸಿ ದಾಖಲು ಮಾಡಲಾಗುವುದು.

ಕೆನರಾ ಹೈಸ್ಕೂಲ್ (ಮೈನ್) ಶಾಲೆಯಲ್ಲಿ ವರ್ಷದಿಂದ ವರ್ಷ ವಿದ್ಯಾರ್ಥಿ ಸಂಖ್ಯೆ ಹೆಚ್ಚುತ್ತ ಬಂದದ್ದರಿಂದ ಸ್ಥಳದ ಇಕ್ಕಟ್ಟು ಹೆಚ್ಚಾಗಿದೆ; ಹೊಸ ಕಟ್ಟೋಣಗಳನ್ನು ಇನ್ನೂ ಕಟ್ಟಿಸುವುದು ಅಸಾಧ್ಯವಾಗಿದೆ. ಆದುದರಿಂದ ಇದ್ದ ಕಟ್ಟೋಣಗಳಲ್ಲೇ ಹೈಸ್ಕೂಲಿನ ಮತ್ತು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸರ್ತಿಗಳಲ್ಲಿ ಪಾಠಮಾಡಬೇಕೆಂದು ಇಲಾಖೆಯ ಅನುಮತಿ ಪಡೆದು ಏರ್ಪಾಡು ಮಾಡಲಾಗುವುದು. ಪ್ರತಿವಾರದಲ್ಲಿ ಸೋಮವಾರದಿಂದ ಶನಿವಾರದ ವರೆಗೆ ಶಾಲೆಯಿದ್ದು ಪ್ರತಿದಿನ ಮೊದಲನೇ ಸರ್ತಿ 8ರಿಂದ 10 ಮತ್ತು 11ರಿಂದ 1ರ ವರೆಗೆಂದೂ ಎರಡನೇ ಸರ್ತಿ 1-30ರಿಂದ 3-30 ಮತ್ತು ೪ರಿಂದ ೬ರ ವರೆಂದೂ ನಿಶ್ಚಯಮಾಡಿದ್ದಾರೆ. ಹೈಸ್ಕೂಲ್ ವಿದ್ಯಾರ್ಥಿಗಳು ಸೋಮವಾರ, ಬುಧವಾರ, ಶುಕ್ರವಾರಗಳಲ್ಲಿ ಮೊದಲನೆ ಸರ್ತಿಗೂ, ಮಂಗಳವಾರ ಗುರುವಾರ, ಶನಿವಾರಗಳಲ್ಲಿ ಎರಡನೆ ಸರ್ತಿಗೂ ಬರಬೇಕು; ಲೋವರ್ ಸೆಕೆಂಡರಿಯವರು ಸೋಮವಾರ, ಬುಧವಾರ, ಶುಕ್ರವಾರಗಳಲ್ಲಿ ಎರಡನೇ ಸರ್ತಿಗೂ, ಮಂಗಳವಾರ, ಗುರುವಾರ, ಶನಿವಾರಗಳಲ್ಲಿ ಮೊದಲನೆ ಸರ್ತಿಗೂ ಬರಬೇಕು. ಆಗ ಪ್ರತಿಯೊಬ್ಬರಿಗೆ ಸಂಜೆ ಹೊತ್ತಿನಲ್ಲೇ ಡ್ರಿಲ್ ಮೊದಲಾದವನ್ನ ಏರ್ಪಡಿಸಲು ಸಾಧ್ಯ. ಮೊದಲನೆ ಸರ್ತಿಯವರಿಗೆ 10 ಗಂಟೆ ಹೊತ್ತಿಗೆ ಗಂಜಿ ಊಟಮಾಡಲು 1 ತಾಸಿನ ಬಿಡುವಿದೆ. ಈ ಹೊಸ ಕ್ರಮದಂತೆ ಮೊದಲನೆ ಸರ್ತಿಗೆ ಬರುವ ವಿದ್ಯಾರ್ಥಿಗಳು 8 ಗಂಟೆಯೊಳಗೆ ಶಾಲೆಯನ್ನು ಮುಟ್ಟುವಂತೆ ಹೆತ್ತವರು ಸಹಕರಿಸಿದರೆ ಶಾಲೆಯಲ್ಲಿ ಅವರಿಗೆ ತಕ್ಕ ರೀತಿಯ ವಿದ್ಯೆಯು ಯೋಗ್ಯ ವಾತಾವರಣದಲ್ಲಿ ಸಿಕ್ಕಲಿಕ್ಕೆ ಸಹಾಯ ಮಾಡಿದಂತಾಗುವುದು.

ತರುಣ ಸಮಾಜವಾದಿ ಪರಿಷತ್ತು

ಇದೇ ತಾ. ೨೨, ೨೩ ೪-೪೮ನೇ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ದ. ಕ. ಜಿಲ್ಲಾ ತರುಣ ಸಮಾಜವಾದೀ ಸಂಘದ ಪ್ರಥಮ ಸಮ್ಮೇಳನವು ಕುಂದಾಪುರದಲ್ಲಿ ಶ್ರೀ ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀ ಎಸ್. ನಾಗಭೂಷಣ ಅವರು ಉದ್ಘಾಟನೆ ಮಾಡುವರು. ಶ್ರೀ। ಕುಂಞಿರಾಮನ್ ನಂಬಿಯಾರ್ ಇವರು ಆರಂಭಭಾಷಣ ಮಾಡುವರು. ಇದೇ ಆಹ್ವಾನವೆಂದು ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ಸ್ವಾಗತ ಸಮಿತಿಯ ವಿನಂತಿ.

ಸೊಳ್ಳೆಗಳು ಮತ್ತು ರಬ್ಬರು

ಒಂದು ಮೋಟಾರು ವಾಹನದಲ್ಲಿ ಕೊತು ಸುಂದರವಾದ ಇಲ್ಲವೆ ಹಳ್ಳಿತಿಟ್ಟಿನ ಒರಟು ಮಾರ್ಗದಿಂದ ಸವಾರಿ ಹೋಗುವಾಗ ಸೊಳ್ಳೆಗಳು ನಿಮ್ಮ ಮೋಟಾರು ಸಂಚಾರಸೌಕರ್ಯಕ್ಕೆ ಸಂಪೂರ್ಣ ತಡೆಯನ್ನು ಹಾಕಬಲ್ಲವೆಂಬ ಸಂಗತಿಯು ನಿಮಗೆ ಹೊಳೆದಿರುವುದೇ? ಅವು ನಿಮ್ಮನ್ನು ಗುಂಪು ಗುಂಪಾಗಿ ಸುತ್ತುಗಟ್ಟಿ ದಾಳಿ ಮಾಡುತ್ತವೆಂದರ್ಥವಲ್ಲ. ಆದರೆ ಮೋಟಾರು ವಾಹನದ ಗಾಲಿಗಳ ರಬ್ಬರ್ ಟಾಯರುಗಳ ಬೆಲೆಯನ್ನೂ ಅವು ಅತೀ ಹೆಚ್ಚು ಮಾಡಲು ಸಾಮರ್ಥ್ಯವುಳ್ಳವಿದ್ದು ಅದರ ಪರಿಣಾಮವಾಗಿ ಕುದುರೆ ಮತ್ತು ಎತ್ತಿನ ಗಾಡಿಗಳನ್ನೇ ನಾವು ಪುನಃ ಬಳಸುವಂತಹ ಪರಿಸ್ಥಿತಿಯನ್ನು ತಂದೊಡ್ಡಬಲ್ಲವು.

ಖಂಡಿತವಾಗಿ ಇಂತಹ ಪರಿಸ್ಥಿತಿ ಸಂಭವಿಸುವ ಅಪಾಯ ಈಗಿಲ್ಲವೆನ್ನಿ. ಆದರೆ ಜಗತ್ತಿನ ಅತೀ ಹೆಚ್ಚು ರಬ್ಬರು ಉತ್ಪತ್ತಿಯಾಗುವ ಬ್ರೆಜಿಲ್ ಮತ್ತು ದೂರಪೂರ್ವದ ದೇಶಗಳಲ್ಲಿ ಇಂತಹ ದುಃಸ್ಥಿತಿ ಹೆಚ್ಚು ಕಡಿಮೆ ಕಾಣಿಸಿಕೊಂಡಿತ್ತು. ಅಲ್ಲಿ ಮಿಲಿಯಾವಧಿ ಸೊಳ್ಳೆಗಳು ಬೀಡುಮಾಡಿಕೊಂಡಿದ್ದವು.

ಸಂಯುಕ್ತ ಅಮೇರಿಕದಲ್ಲಿ ಜಗತ್ತಿನ ಇತರ ಕಡೆಗಳಿಗಿಂತ ಹೆಚ್ಚು ಟಾಯರುಗಳು ಉಪಯೋಗಿಸಲ್ಪಡುವುದೆಂದರೆ ಅವಕ್ಕೆ ಬೇಕಾದ ರಬ್ಬರಿನ ಕಚ್ಚಾ ಪದಾರ್ಥವನ್ನು ಅಲ್ಲಿಯವರು ಬೇರೆಕಡೆಗಳಿಂದ ತರಿಸಬೇಕಾಗಿದೆ. ಆದಕ್ಕಾಗಿಯೇ ಹೆನ್ರಿ ಫೋರ್ಡನು (ಪ್ರಖ್ಯಾತ ಮೋಟಾರ ತಯಾರಕ) ಬ್ರೆಜಿಲಿನಲ್ಲೂ ಹಾರ್ವೆ ಫಾಯರ್‌ಸ್ಟನನು (ಪ್ರಖ್ಯಾತ ಟಾಯರ ತಯಾರಕ) ಲ್ಯಾಬಿರಿಯದಲ್ಲೂ ವಿಶಾಲ ರಬ್ಬರ್ ತೋಟಗಳನ್ನೂ ನಿರ್ಮಿಸಿದರು.

ಟಾಯರಿನ ಬೆಲೆಯಲ್ಲಿ ಒಂದಂಶದಷ್ಟು ಸೊಳ್ಳೆಗಳನ್ನು ನಾಶಮಾಡಲು ತಗಲುವ ಖರ್ಚನ್ನು ಒಳಗೊಂಡಿದೆ. ಈ ಅಂಶವು ಅತಿ ಚಿಕ್ಕದಾಗಿದ್ದು ಅಗಣ್ಯವಾಗಿಯೂ ಇದೆಯಾದರೂ ಕೆಲವು ಟಾಯರ್ ತಯಾರಕರು ಅದನ್ನು ತಮ್ಮ ಗಿರಾಕಿಗಳಿಂದ ಪಡೆದು ರಬ್ಬರು ಉತ್ಪತ್ತಿ ಮಾಡುವವರಿಗೆ ಕೊಡುತ್ತಾರೆ.

ರಬ್ಬರ್‌ತೋಟ ಮ್ಹಾಲಿಕನು ಅನೇಕಾನೇಕ ಕಷ್ಟಗಳನ್ನದುರಿಸಬೇಕಾಗಿದೆ. ಅವುಗಳಲ್ಲಿ ಮುಖ್ಯವಾದವು ಸೊಳ್ಳೆಗಳದ್ದು ಮತ್ತು ಮಲೇರಿಯಾ ಜ್ವರದ್ದು. ಇಂಡಿಯಾ ದೇಶದಲ್ಲಿ ವರ್ಷಂಪ್ರತಿ ಮಿಲಿಯಾವಧಿ ಜನರು ಮಲೇರಿಯಾದಿಂದ ನರಳುತ್ತಾರೆ. ಕಾರಣ ಇಲ್ಲಿನ ಹೆಚ್ಚಿನ ಜನತೆ ಕ್ವೀನಿನನ್ನು ಉಪಯೋಗಿಸಲು ಒಂದೋ ಅತೀ ಬಡವರು ಇಲ್ಲವೆ ಆ ಕುರಿತು ಏನೂ ತಿಳಿಯದ ಅಶಿಕ್ಷಿತರು.

ಆದರೆ ರಬ್ಬರ್‌ತೋಟ ಮ್ಹಾಲಿಕರು ಮತ್ತು ಟಾಯರ್ ತಯಾರಕರು ಬಡವರೂ ಅಲ್ಲ ಅನಜ್ಞರೂ ಅಲ್ಲ. ಕ್ವೀನಿನಿಗೆ ತುಂಬಾ ಖರ್ಚು ತಗಲುವುದಾದರೂ ಅದು ಉತ್ತಮ ವಿನಿಯೋಗವೆಂದವರು ಬಲ್ಲರು. ಮಾತ್ರವಲ್ಲ ಸೊಳ್ಳೆಗಳನ್ನೂ ಮಲೇರಿಯಾ ಜ್ವರ ಬಾಧೆಯನ್ನೂ ನಿರ್ಮೂಲಿಸದಿದ್ದರೆ ಅದರಿಂದ ಈ ತರದೆಲ್ಲ ಉದ್ಯಮಗಳು ನಶಿಸಿ ಹೋಗುವುವೆಂದೂ ಅವರಿಗೆ ಚೆನ್ನಾಗಿ ಅರಿತಿದೆ. ನೀವು ನಿಮ್ಮ ಟಾಯರುಗಳಿಗೆ ಕೊಡುವ ಹೆಚ್ಚಿನ ಸ್ವಲ್ಪ ಅಂಶದ ಬೆಲೆಗೆ ಇನೇಕಾರಣ. ಈ ಹೆಚ್ಚಿನ ಬೆಲೆ ಅಂಶದಿಂದ ಮಲೇರಿಯವನ್ನು ಪರಿಹಾರ ಮಾಡಲೂ ಅದನ್ನು ತಡೆಗಟ್ಟಲೂ ಅವಶ್ಯವುಳ್ಳ ವಿಧಾನಗಳನ್ನು ಏಕಪ್ರಕಾರವಾಗಿ ಪ್ರಚಾರ ಮಾಡಲು ಸಹಾಯವಾಗುತ್ತದೆ. ನಮಗೆಲ್ಲರಿಗೂ ತಿಳಿದಿರುವಂತೆ ಮಲೇರಿಯಕ್ಕೆ ಕ್ವೀನೀನೇ ಅತ್ಯುತ್ತಮ ಪರಿಹಾರವೆಂದು ಅವರಿಗೂ ತಿಳಿತಿರುತ್ತದೆ.

ಹಿಂದಿನ ಜನಾಂಗ ಸಂಘದ ಮಲೇರಿಯಾತಜ್ಞರ ಸಮಿತಿಯು ತಡೆಗಟ್ಟುವ ವಿಧಾನವಾಗಿ ಜ್ವರದ ಇಡೀ ಋತುವಿನಲ್ಲಿ ದಿನಂಪ್ರತಿ 6 ಕಾಳುಗಳಷ್ಟು ಕ್ವೀನಿನನ್ನು ಸೇವಿಸುವುದುತ್ತಮವೆಂದು ಶಿಫಾರಸು ಮಾಡಿತು. ಜ್ವರಕ್ಕಾದರೆ ದಿನಕ್ಕೆ 15–20 ಕಾಳುಗಳಷ್ಟು ಕ್ವೀನಿನನ್ನು 5ರಿಂದ 7 ದಿನಗಳ ತನಕ ಸೇವಿಸಬೇಕೆಂದೂ ಮೇಲ್ಕಂಡ ಸಮಿತಿ ಶಿಫಾರಸು ಮಾಡಿದೆ. ಜ್ವರ ನಿಂತರೆ ತೆಗೆದುಕೊಳ್ಳುವ ಆವಶ್ಯಕತೆಯಿಲ್ಲ. ಪುನಃ ಜ್ವರ ಬಂದರೆ ಮೊದಲಿನಂತೆಯೇ ಸೇವಿಸುವುದು.

೩ನೇ ಪುಟದಿಂದ

(೩) (A) ಎಲ್ಲಾ ಧಾರ್ಮಿಕ, ಜಾತೀಯ ಅಥವಾ ಭಾಷಾತ್ಮಕ ಅಲ್ಪ ಸಂಖ್ಯಾಕರಿಗೂ ತಮ್ಮ ಮನಸ್ಸಿಗೊಪ್ಪುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವ ಹಕ್ಕುಂಟು.

(B) ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಕೊಡುವಾಗ ಯಾವದೇ ಧಾರ್ಮಿಕ ಜಾತೀಯ ಅಥವಾ ಭಾಷಾತ್ಮಕ ಅಲ್ಪಸಂಖ್ಯಾಕರ ಗುಂಪಿನಿಂದ ನಡೆಸಲ್ಪಡುವದೆಂಬ ಕಾರಣದಿಂದ ಯಾವದೇ ಸಂಸ್ಥೆಯ ವಿರುದ್ಧ ಸರಕಾರ ಪಕ್ಷಪಾತ ಮಾಡತಕ್ಕದ್ದಲ್ಲ.

ಈ ಕಲಮುಗಳಲ್ಲಿ ಸೇರಿಸಬೇಕಾದ ನನ್ನ ಸೂಚನೆಗಳು ಹೀಗಿವೆ: ಉಪಕಲಮು (೧) ಮತ್ತು (೨)ಕ್ಕೆ:

"ಆದರೆ ಸರಕಾರದಿಂದ ಮನ್ನಣೆ ಪಡೆದ ಇಲ್ಲವೆ ಅದು ನಡೆಸುವ ಯಾವದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶಪಡೆಯಬೇಕಾದರೆ ಯಾವುದೇ ವಿಶಿಷ್ಟಭಾಷೆ ಅಥವಾ ಲಿಪಿಯ ಜ್ಞಾನವಿದ್ದೇ ಇರಬೇಕೆಂದು ನಿರ್ಬಂಧಿಸಬಹುದು"

ಉಪಕಲಮು (೩ಕ್ಕೆ):

"ಆದರೆ ಯಾವುದೊಂದು ಶಿಕ್ಷಣ ಸಂಸ್ಥೆ ಸರಕಾರದ ಸಹಾಯವನ್ನು ಪಡೆಯುವುದೊ ಇಲ್ಲವೊ ಎಂಬುದನ್ನು ಗಮನಿಸದೆ ಆ ಸಂಸ್ಥೆಯಲ್ಲಿ ಕಲಿಯುವ ಪ್ರತಿಯೊಬ್ಬನಿಗೆ ಒಂದು ವಿಶಿಷ್ಟಭಾಷೆಯ ಶಿಕ್ಷಣ ಕೊಟ್ಟೇತೀರಬೇಕೆಂದು ಸರಕಾರದವರು ನಿರ್ಬಂಧಿಸಬಹುದು." (ಹರಿಜನದಿಂದ)

ಚಿಕ್ಕಸುದ್ದಿ ಸಂಗ್ರಹ

ಫಿಲಿಪ್ಪೈನ್ ದ್ವೀಪದ ಕಬ್ಬಿನ ಗದ್ದೆಗಳಿಗೆ ನೀರು ಕಡಿಮೆಯಾಗಿರುವುದರಿಂದ ಅಲ್ಲಿನ ಸರಕಾರದವರು ವಿಮಾನದಿಂದ ಹಿಮಗಡ್ಡೆಯ ಚೂರನ್ನು ಚೆಲ್ಲುವುದರ ಮೂಲಕ ಮಳೆಯನ್ನುಂಟುಮಾಡಲು ಯೋಚಿಸಿದ್ದಾರೆ. ಈ ವಿಧಾನವನ್ನು ಆಸ್ಟ್ರೇಲಿಯದ ಓರ್ವ ಸಂಶೋಧಕನು ಕಂಡುಹಿಡಿದಿದ್ದನು.

✠

ಡೆನ್ಮಾರ್ಕಿನ ಅರ್ಹೂಸ್ ಎಂಬ ಪಟ್ಟಣದಲ್ಲಿ ಒಬ್ಬ ಹಳ್ಳಿಯವನು ಬೆಂಕಿ ಆರಿಸುವ ಬಂಡಿಯನ್ನು ಕರೆಯುವ ನಿಶಾನಿಯನ್ನು ಮಾಡಿದನು. ಒಂದು ಫಾಯರ್ ಇಂಜಿನು ಧಾವಿಸಿ ಬಂತು. ಕಾರಣ ಕೇಳಿದಾಗ ಅವನು ತನಗೆ ಹೊಟ್ಟೆ ಹಸಿವು ಎಂದನು. ಹೊಟ್ಟೆಗೆ ಹೋಗೆಂದರೆ ತನಗೆ ಗಡ್ಡ ಬೆಳೆದಿರುವುದರಿಂದ ಅಲ್ಲಿ ಪ್ರವೇಶ ತಿರಸ್ಕರಿಸಲ್ಪಡುತ್ತದೆಂದು ಅಂದು ಆ ಪಟ್ಟಣದಲ್ಲಿನ ಕ್ಷೌರದಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಕೊನೆಗೆ ಆಕ್ರೋಶಗೊಂಡ ಅಗ್ನಿಶಾಮಕದಳದವರು ಅವನಿಗೆ ಒಂದು ಕ್ಷೌರಕತ್ತಿಯನ್ನೊದಗಿಸಿದರು. ಮುಖಶುದ್ಧಿ ಮಾಡಿಕೊಂಡ ನಂತರ ಅವನಿಗೆ ಫಲಹಾರ ಮಂದಿರದಲ್ಲಿ ಪ್ರವೇಶ ಸಿಕ್ಕಿತು.

✠

ಸ್ವಿಜರ್‌ಲೆಂಡಿನ ಲೊಕಾರ್ನೊ ಜಿಲ್ಲೆಯ ಕುಗ್ನಾಸ್ಕೊ ಎಂಬ ಪಟ್ಟಣದ ನಗರಾಧ್ಯಕ್ಷನಾಗಿ ಓರ್ವ 20 ವರ್ಷ ಕಾಲ್ಡಾಸ್ಕಿಯ ಎಂಬ ತರುಣನು ಚುನಾಯಿಸಲ್ಪಟ್ಟಿರುವನು.

★

ಕುಡಿತ ಘಾಯ, ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಉರಿಯುವಿಕೆ ನೋವನ್ನು ಕಡಿಮೆ ಮಾಡುತ್ತದೆ.

556

ಕುಟಿಕೂರಾ ಮುಲಾಮು
CUTICURA OINTMENT

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ಯೋಂಟ್ ಮೆನೇಜರ್ಸ್,

ಮಂಗಳೂರು.
23–12–1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

SEASON DEPOSITS

for Rs. 5,000/- and over are now accepted at all Offices of the Bank at the following rates:

3 & 4 months . . .	2½% p. a.
5 & 6 months	2⅝% p. a

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೋ· ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ,

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 28—5—1948 [ಸಂಚಿಕೆ 21]

ಗೆಣಸಿನ ಸೇವಿಗೆ

ಆಹಾರವಸ್ತುವನ್ನು ಧೀರ್ಘಕಾಲ ಇಡುವುದು

ಗೆಣಸು ತಿನ್ನಲಿಕ್ಕೆ ರುಚಿಕರವಾಗಿರುವ ಒಂದು ಬಳ್ಳಿಯ ಬೇರು ಉಸುಬಾದ ಮೆತ್ತನೆಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುವುದು ಆದರೆ ಇದರ ಬೆಳೆಯನ್ನು ಮಿತಿಯಾಗಿ ಮಾಡುತ್ತಾರೆ ಕಾರಣ ಗೆಣಸನ್ನು ಹೆಚ್ಚೆಂದರೆ ಎರಡು ತಿಂಗಳಿಗೂ ಮಿಕ್ಕಿ ದಾಸ್ತಾನಿಟ್ಟರೆ ಅದು ಹಾಳಾಗುವುದು ಗೆಣಸನ್ನು ನೀರಲ್ಲಿ ಬೇಯಿಸಿ ಇಲ್ಲವೆ ಕೆಂಡದ ಮೇಲೆ ಸುಟ್ಟು ತಿನ್ನಲುಪಯೋಗಿಸಬಹುದು

ಯುದ್ಧದೆಸೆಯಿಂದ ಆಹಾರ ನಿರ್ಯಾತವನ್ನು ಮಾಡಲು ತೊಂದರೆಯಾದಾಗ ಗೆಣಸನ್ನು ಆಹಾರಧಾನ್ಯಗಳ ಬದಲಿಗೆ ಹೇಗಲ್ಲ ಉಪಯೋಗಿಸಬಹುದೆಂದು ಪ್ರಯೋಗಗಳು ನಡೆಸಲ್ಪಟ್ಟವು ಧೀರ್ಘಕಾಲ ಗೆಣಸನ್ನು ದಾಸ್ತಾನಿಡಲು ಆಗದ್ದರಿಂದ ಜನತೆಯ ರುಚಿಗೊಪ್ಪುವಂತೆ ಬೇರೆ ಬೇರೆ ವಿಧಾನಗಳಿಂದದನ್ನು ದಾಸ್ತಾನಿಡಲು ರೀತಿಗಳನ್ನು ಕಂಡುಹಿಡಿಯಲು ಸರಕಾರದ ಕೃಷಿ ಇಲಾಖೆಯ ಧಾನ್ಯ ಸಂಶೋಧನಾ ಶಾಖೆಯವರು ಶೋಧನ ನಡೆಸಿದರು. ಈ ಶೋಧಗಳ ಫಲವಾಗಿ ಗೆಣಸನ್ನು ಸುಲಭವಾಗಿ ಸೇವಿಗೆಯನ್ನಾಗಿ ಮಾಡಬಹುದೆಂದು ಅನುಭವಕ್ಕೆ ಬಂತು

ಶೇವಿಗೆ ವಿಧಾನ

ಗೆಣಸಿನ ಉತ್ತಮ ಸೇವಿಗೆಯನ್ನು ಮಾಡುವ ವಿಧಾನವು ಅತ್ಯಂತ ಸರಳವಾಗಿದೆ ಹೆಚ್ಚು ಖರ್ಚು ಅದಕ್ಕೆ ತಗಲುವುದಿಲ್ಲ ಸಾಮಾನ್ಯ ಹಳ್ಳಿಗರು ಇದನ್ನೊಂದು ಗುಡಿ ಕೈಗಾರಿಕೆಯನ್ನಾಗಿಯೂ ಅನುಕರಿಸಬಹುದು

ಮೊದಲು ಗೆಣಸನ್ನು ಶುದ್ಧವಾಗಿ, ಅದರ ಮಣ್ಣನ್ನು ತೆಗೆಯಲು ತೊಳೆಯಬೇಕು ಬಣತುದಿಗಳನ್ನೂ ಇತರ ಚಿಕ್ಕ ಪುಟ್ಟ ಬೇರುಗಳನ್ನು ತೆಗೆದು ನೀರಲ್ಲಿ ಮೆತ್ತಗಾಗುವ ತನಕ ಬೇಯಿಸಬೇಕು. ಗೆಣಸುಗಳು ನೀರಲ್ಲಿ ಮುಳುಗಿರಬೇಕು ಒಂದು ಗಂಟೆ ತನಕ ಬೇಯಿಸಿದರೆ ಸಾಕಾಗುವುದು ಈ ಅವಧಿಯಲ್ಲಿ ಅದಕ್ಕೆ ಒಂದಿಷ್ಟು ಉಪ್ಪು ಸೇರಿಸಿದರೆ ರುಚಿಗೂ ಒಳ್ಳೆದಾಗುವುದು ಮಾತ್ರವಲ್ಲ ಮಿತಿಮೀರಿ ಬೇಯುದಂತೆಯೂ ಆಗುವುದು

ಬೇಯಿಸಿದ ಗೆಣಸನ್ನು ಸಿಪ್ಪೆ ತೆಗೆದು ಕಡೆಯುವ ಕಲ್ಲಿನ ಹೊಂಡದಲ್ಲಿ ಹಾಕಿ ಕುಟ್ಟಬೇಕು ಆಗ ಅದರೊಳಗಿನ ನಾರುಗಳನ್ನು ತೆಗೆಯಲು ಸುಲಭವಾಗುವುದು ಮಾತ್ರವಲ್ಲ ಶೇವಿಗೆಯ ಒತ್ತುಯಂತ್ರದಲ್ಲಿ ಹಾಕಲೂ ಅದು ಮುದ್ದೆಯಂತಾಗಿ ಸಿದ್ಧವಾಗುವುದು. ಸಮಾನ ಗುಣದ ಶೇವಿಗೆಯಾಗಲು ಯಂತ್ರವನ್ನೊತ್ತುವಾಗ ಹಗುರವಾಗಿ, ಸಮಾನ ಮತ್ತು ನಿಲ್ಲಿಸದೆ ಒತ್ತಬೇಕು ಮಧ್ಯ ಮಧ್ಯದಲ್ಲಿ ತೊಂದರೆಯಾಗದಂತೆ ಶೇವಿಗೆಯ ತೂತಿರುವ ಅಚ್ಚು ತಗಡುಗಳನ್ನು ಎರಡೆರಡು ಇಟ್ಟುಕೊಳ್ಳಬೇಕು ಆಗ ಒಂದು ಅಚ್ಚಿನ ತೂತುಗಳು ಗೆಣಸಿನ ಪಿಷ್ಟ ಕೂತು ಸೇವಿಗೆ ದಾರಗಳು ಸರಿ ಬರದಿದ್ದಾಗ ಅದನ್ನು ತೆಗೆದು ಬೇರೆ ಅಚ್ಚನ್ನು ಇಡಬೇಕು ತೆಗೆದ ಅಚ್ಚಿನ ತೂತುಗಳನ್ನು ಬಿಡಿಸಿದ ನಂತರ ಅದನ್ನು ಪುನಃ ಸರತಿಯ ಪ್ರಕಾರ ಉಪಯೋಗಿಸಬಹುದು

ಒತ್ತಿದ ಸೇವಿಗೆಗಳನ್ನು ಒ[illegible] ಶುದ್ಧವಾದ ಬಟ್ಟೆಯ ಮೇಲೆ [illegible] ಒಂದು ಗಂಟೆಯ ತನಕ ಬಿಸಿಲಲ್ಲಿ ಒಣಗಿಸಬೇಕು ಆ ವೇಳೆ ಆ ಬಟ್ಟೆಯಿಂದ ತೆಗೆದು ಬೇರೊಂದು ಒಣಬಟ್ಟೆಯ ಮೇಲೆ ಹಾಕಿ ಒಣಗಿಸಬೇಕು ಹೀಗೆ ಮಾಡಿದ ಗೆಣಸಿನ ಸೇವಿಗೆಯನ್ನು ಬಹುಕಾಲದ ತನಕ ದಾಸ್ತಾನಿರಿಸಬಹುದು. ಮತ್ತೆ [illegible] ಇದ[illegible] ಸೇವಿಗೆ [illegible] ರುಚಿಕರವಾಗಿರುತ್ತದೆ [illegible] ಇದನ್ನು ಹುರಿದು ಇಲ್ಲವೆ ಒದ್ದೆ ಮಾಡಿ ಒಗ್ಗರಣೆ ಕೊಟ್ಟು ತಿನ್ನಬಹುದು

ತಯಾರಿಯ ಖರ್ಚಿನ ಲೆಕ್ಕ

ಹೆಚ್ಚು ಖರ್ಚಿನ ಯಾವ ಉಪಕರಣಗಳ [illegible] ಗಿಲ್ಲ [illegible] ಗೆಣಸಿನ [illegible] ಸುಮಾರು ಎಂಟು ಮಣ ಗೆಣಸಿನ ಸೇವಿಗೆ ಮಾಡಲು ಶ್ರಮದ ದೃಷ್ಟಿಯಿಂದ ಸುಮಾರು 5¼ ರೂಪಾಯಿ [illegible] ಮಜೂರಿ ಅವಧಿಯು ಹಿಡಿಯುವುದು ಅಂದರೆ ಒಂದು ಮಣಕ್ಕೆ 10½ ಆಣೆಯಷ್ಟು

ಪ್ರಾಂತ್ಯದ ಜನರು ಸಹಕರಿಸಬೇಕು

ಕೇಂದ್ರ ಆಹಾರ ಮಂತ್ರಿಗಳ ವಿನಂತಿ:

ನಮ್ಮ ದೇಶದ ಆಹಾರ ಪರಿಸ್ಥಿತಿಯು ಜನರು ಎಣಿಸಿದಷ್ಟು ಕೆಟ್ಟು ಹೋಗಿಲ್ಲ ಕೊರತೆಯ ಮತ್ತು ಆಹಾರ ಬೆಲೆ ಏರಿದ ಸ್ಥಳಗಳಿಗೆ ದಕ್ಷತೆ ವಹಿಸಿ ಪೂರೈಕೆ ಮಾಡಿದರೆ ಗಂಡಾಂತರ ಉಂಟಾಗದು

ಮೂರು ತಿಂಗಳ ಹಿಂದೆ ಮದ್ರಾಸ್ ಪ್ರಾಂತ್ಯದ ಆಹಾರಪರಿಸ್ಥಿತಿ ಭೀಕರವಾಗಿತ್ತು ಮಳೆ ಬಾರದಿದ್ದುದೇ ಇದಕ್ಕೆ ಕಾರಣ ಇತರ ಸಮೃದ್ಧ ಪ್ರಾಂತ್ಯಗಳ ಸರಕಾರದವರು ಸಹಕರಿಸಿದರಿಂದ ಪರಿಸ್ಥಿತಿ ಸುಧಾರಿಸಿತು

ಬೆಳೆಯ ಲೆಕ್ಕ

ಈಗ ಆಹಾರದ ಕುರಿತು ಗಾಬರಿಗೆ ಯಾವ ಕಾರಣವಿಲ್ಲ ಮದ್ರಾಸಿನಲ್ಲಿ ಮಳೆ ಕಮ್ಮಿಯಾಗಿ 12 ಲಕ್ಷ ಟನ್ ಕಡಿಮೆ ಆಹಾರ ಬೆಳೆಯಾದರೂ ಇತರ ಪ್ರಾಂತಗಳಲ್ಲಿ ಹೆಚ್ಚಾಗಿದ್ದುದು ಸಂತೋಷದ ಸಂಗತಿ ಇವುಗಳಲ್ಲಿ ಕಳೆದ ವರ್ಷಕ್ಕಿಂತ ಒಟ್ಟಿಗೆ 9 ಲಕ್ಷ ಟನ್ ಹೆಚ್ಚು ಬೆಳೆದದ್ದರಿಂದ ಒಟ್ಟಿನ ಮೇಲೆ ಸುಧಾರಿಸಿಕೊಳ್ಳಬಹುದಾಯಿತು

ಆಮದು

ನಮ್ಮಲ್ಲಿ [illegible] ಹೆಚ್ಚಿಸಿದರೆ ಹೊರದೇಶಗಳಿಂದ ತರಿಸಿ ಅವುಗಳ ಮೇಲೆ ಅವಲಂಬಿಸಿರುವ ಪ್ರಸಂಗವಿರುವುದಿಲ್ಲ ಪರದೇಶಕ್ಕೆ ಕೋಟಿಗಟ್ಟಲೆ ಹಣ ಸುರಿದು ಆಹಾರ ತರಿಸಬೇಕಾಗುತ್ತದೆ

ಹಿಂದೂಸ್ಥಾನದಲ್ಲಿ 183 ಜಿಲ್ಲೆಗಳಿವೆ ಇವುಗಳಲ್ಲಿ 88 ಜಿಲ್ಲೆಗಳು ಕೊರತೆಯ ಪ್ರದೇಶಗಳು ಈ ಪರಿಸ್ಥಿತಿ ಇಲ್ಲದಂತಾಗಬೇಕು. ಈಗ ಹೇಳಿದಂತೆ ನಾವು 20·25 ಲಕ್ಷ ಟನ್ ಧಾನ್ಯವನ್ನು ಹೊರಗಿಂದ ತರಿಸಬೇಕಾಗುತ್ತದೆ 17 ಲಕ್ಷ ಟನ್ ಹೊರಗಿನಿಂದ ದೊರೆಕೀತೆ ಎಂದು ಸಂಶಯವಿತ್ತು ಪುಣ್ಯಕ್ಕೆ 20 ಲಕ್ಷ ಟನ್ ದೊರಕಿತು ಪ್ರಾಂತ್ಯಗಳಿಂದ ಕೇಂದ್ರಕ್ಕೆ 5 ಲಕ್ಷ ಟನ್ ದೊರೆಯುವುದು ಹೀಗೆ ಒಟ್ಟು 36 ಲಕ್ಷ ಟನ್ನು ಧಾನ್ಯ ದೊರೆಯುವುದರಿಂದ ಕೊರತೆಯ ಪ್ರದೇಶಗಳಿಗೆ ಕೊಡಬೇಕೆಂದಿದ್ದ ಧಾನ್ಯವನ್ನು [illegible]6 ಲಕ್ಷ ಟನ್ನಿಗೇರಿಸಲಾಗಿದೆ

ಸಹಕಾರ ಬೇಕು

ಸರಕಾರ, ವ್ಯಾಪಾರಿಗಳು ಮತ್ತು ಜನರು ಈಗಿನಕ್ಕಿಂತಲೂ ಹೆಚ್ಚು ಸಹಕರಿಸಿದರೆ ಆಹಾರ ಪರಿಸ್ಥಿತಿಯನ್ನು ಸುಲಭವಾಗಿ ಎದುರಿಸಬಹುದು ಪರದೇಶದಿಂದ ತರಿಸಲಿಕ್ಕೆ, ಸಂಗ್ರಹ ಮಾಡಲಿಕ್ಕೆ, ಅದನ್ನು ಹಂಚಲಿಕ್ಕೆ ಎಲ್ಲಕ್ಕೂ ಪರಸ್ಪರ ಸಹಕಾರವು ಅತ್ಯಾವಶ್ಯಕ

ವಿನಿಯಂತ್ರಣದಿಂದ ಉತ್ತರ ಹಿಂದೂಸ್ಥಾನದಲ್ಲಿ ಆಹಾರ ಧಾನ್ಯದ ದರಗಳು ಇಳಿಯುತ್ತಿವೆಯೆಂದು ತಿಳಿದು ಬಂದಿದೆ. ಆಹಾರ ಸಾಗಾಟದ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂದು ಸೂಚನೆಗಳಾಗಿವೆ. ಈ ವಿಚಾರ ಪರ್ಯಾಲೋಚಿಸಲಾಗುವುದು ವ್ಯಾಪಾರಿ ವರ್ಗದವರಲ್ಲಿ ನನಗೆ ಅಪನಂಬಿಗೆಯಿಲ್ಲ ಅವರ ಸಹಕಾರವು ನಮಗೆ ಬೇಕೇ ಬೇಕು

THE
UNITED INDIA LIFE ASSURANCE CO., LTD.
ESTD 1906 [H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE
K S. Rao Road, Mangalore.

ಮಹಾತ್ಮಾಗಾಂಧಿಯವರು ಅಮರರೇಕೆ?

ಮಾನವ ವ್ಯಕ್ತಿತ್ವದ ಘನಗಂಭೀರ ಆದರ್ಶ

ಡಾ। ಹಫೀಜ್ ಸಯ್ಯದರ ಲೇಖನ

ತಿರುವಣ್ಣಾಮಲೆಯಲ್ಲಿರುವ ರಮಣ ಮಹರ್ಷಿಗಳ ಬಳಿ ಓರ್ವ ತೆಲುಗು ಸಾಧು ಪುರುಷರು ಬಂದು ಜಗತ್ತಿನ ಮೇಲೆ ದುಃಖಾಂಧಕಾರವನ್ನು ಚೆಲ್ಲಿರುವ ಮಹಾತ್ಮಾಗಾಂಧಿಯವರ ಮರಣದ ಕುರಿತು ಒಂದು ಪ್ರಶ್ನೆಯನ್ನು ಕೇಳಿದನು. ಅರುಣಾಚಲದ ಸಂತ ಮಹಾತ್ಮನು "ಗಾಂಧೀಜಿಯವರು ಮೃತಪಟ್ಟಿಲ್ಲ"ವೆಂದುತ್ತರಿಸಿದನು.

ಭಾರತದ ಮಹಾ ಶ್ರೇಷ್ಠ ಜೀವಂತ ಸಂತ ಪುರುಷರಲ್ಲೊಬ್ಬರಾದವರ ಮಾತುಗಳು ನೇರವಾಗಿ ನನ್ನ ಹೃದಯವನ್ನು ಪ್ರವೇಶಿಸಿದುವು. ಅದೇ ಸಮಯಕ್ಕೆ ಬಹು ಪ್ರಾಚೀನ ಕಾಲದಿಂದ ಸಾಧುಸಂತರ ದೀರ್ಘಪರ್ಯಾಲೋಚನೆಗೊಳಗಾದ ಅಗಾಧವಾದ ಈ ಜೀವನ ಮರಣಗಳ ಸಮಸ್ಯೆಯ ಕುರಿತು ಮತ್ತು ಭಾರತ ಜನಾಂಗವನ್ನು ಶೋಕ ಸಾಗರದಲ್ಲಿ ಮುಳುಗಿಸಿದ ಈ ದುಃಖ ದುರಂತದ ಘಟನೆಯ ಕುರಿತು ನಾನು ಗಂಭೀರ ಯೋಚನಾಮಗ್ನನಾದೆ ನನ್ನ ಆಳ ಯೋಚನೆಗಳು ನನ್ನಲ್ಲೊಂದು ಆಳ ವಿಶ್ವಾಸವನ್ನುಂಟುಮಾಡಿದುವು ಮಹಾತ್ಮರು ತಮ್ಮ ಭೌತಿಕ ಅಸ್ಥಿಪಂಜರದೊಳಗೆ ಜೀವಿಸಿದ್ದುದಕ್ಕಿಂತಲೂ ಈಗ ಸಮೀಪವಾಗಿ ಅವರು ನಮ್ಮ ಬಳಿ ವಾಸಿಸಿದ್ದಾರೆಂದು ನನಗೆ ಖಚಿತವಾಯಿತು.

ಹಿಂದೂ ವಿಶ್ವಾಸ

ಪ್ರಾಚೀನ ಆರ್ಯರು ಮನುಷ್ಯನೆಂದಿಗೂ ಸಾಯುವವನಲ್ಲವೆಂದೇ ತಿಳಿಯುತಿದ್ದರು. ಕೇವಲ ಈ ಶರೀರ ಮಾತ್ರ ಅಂತ್ಯಗೊಂಡಿತೆಂದವರೆನ್ನುತಿದ್ದರು ಹಿಂದಿಯಲ್ಲಿ ಈಗಲೂ ಮರಣಕ್ಕೆ ದೇಹಾಂತ (ದೇಹದ ಅಂತ್ಯ)ವೆನ್ನುತ್ತಾರೆ ಮನುಷ್ಯನ ಶರೀರ ಅಂತ್ಯವಾದ ಮಾತ್ರಕ್ಕೆ ಅವನಲ್ಲಿರುವ ಪ್ರಜ್ಞಾ ಸ್ವರೂಪಿಯಾದ ಆತ್ಮವು ಅಂತ್ಯವಾಗುವುದಿಲ್ಲವೆಂಬ ಹಿಂದೂ ವಿಶ್ವಾಸವನ್ನು ಪ್ರತಿಬಿಂಬಿಸುವ ಶಬ್ದ ನಿರೂಪಣೆಯಿದು. ಹಿಂದೂ ಶಾಸ್ತ್ರಗಳಲ್ಲೂ ಆತ್ಮವು ಅಮರವು, ಶರೀರಾಂತ್ಯದೊಡನದು ನಾಶವಾಗುವುದಿಲ್ಲವೆಂದು ಒತ್ತಿ ಹೇಳಿದೆ ಆತ್ಮವು ನಿರಂತರವಾಗಿ ಬಾಳುವುದು "ಅದು ಹುಟ್ಟಿಲ್ಲದಿದ್ದುದು, ಚಿರಂಜೀವಿಯಾದುದು, ಅನಂತವಾದುದು, ಪ್ರಾಚೀನವಾದುದು, ದೇಹವು ಕೊಲ್ಲಲ್ಪಟ್ಟೊಡನೆ ಅದು ಸಾಯುವುದಿಲ್ಲ "

"ಶಸ್ತ್ರಗಳವನನ್ನು (ಆತ್ಮ) ಘಾತಮಾಡಲಾರವು, ಅಗ್ನಿಯು ಅವನನ್ನು ಸುಡಲಾರದು; ಜೆಂಕಿಯಿಂದ ಒದ್ದೆಯಾಗಲಾರನವ, ಇಲ್ಲವೆ ಗಾಳಿಯು ಅವನನ್ನು ಒಣಗಿಸದು "

"ಕೊಲ್ಲಲಾಗದ, ಸುಡಲಾಗದ, ಒದ್ದೆಯಾಗದ, ಒಣಗದ ಅವನು ನಿರಂತರನೂ, ಸರ್ವವ್ಯಾಪಿಯೂ, ಸುಸ್ಥಿರನೂ, ಅಚಲನೂ ಪ್ರಾಚೀನನೂ ಆಗಿರುವನು."

ಇಸ್ಲಾಮಿನ ದೃಷ್ಟಿ

ಅದೇ ರೀತಿ ಮಾನವಾತ್ಮವು ಅಮರವೆಂದು ಇಸ್ಲಾಂ ಧರ್ಮವೂ ತಿಳಿಸಿದೆ ಕೊರಾನ ಧರ್ಮ ಗ್ರಂಥದಲ್ಲಿ "ದೇವರು ತನ್ನ ಸ್ವಂತ ಶ್ವಾಸವನ್ನು ಮನುಷ್ಯನ ಮೂಗಿನೊಳಗೆ ಉಸುರಿದನು" ಎಂದು ಹೇಳಿದೆ. ಅವನ ಶರೀರ ನಾಶವಾದ ಮೇಲೆಯೇ ನಿಜವಾದ ಮನುಷ್ಯನು ಬದುಕುವನು ಮರಣವನ್ನು ಸೂಚಿಸುವ ಸಾಮಾನ್ಯ ಅರಬಿ ಶಬ್ದ ಇಂತಿಕಾಲ್, ಫಿಲಾತ್ ಎಂದಿದೆ. ಒಂದು ಪರಿಸ್ಥಿತಿಯಿಂದ ಇನ್ನೊಂದಕ್ಕೆ ಬದಲಾವಣೆಯಾಗುವುದೆಂದಿದರ ಅರ್ಥ. ಸಾಧುಸಂತರ ಮರಣಕ್ಕೆ ವಿಸಾಲ್ ಎಂದರೆ ದೇವರೊಡನೆ ಅಂತರ್ಧಾನವಾಗುವುದೆಂಬರ್ಥದ ಶಬ್ದವನ್ನುಪಯೋಗಿಸಲಾಗುತ್ತದೆ.

ಇಸ್ಲಾಮಿನ ದೊಡ್ಡ ದೊಡ್ಡ ಸಂತಪುರುಷರು ಸದಾ ಜೀವಂತವಿದ್ದು ಮಾನವ ಚಟುವಟಿಕೆಗಳನ್ನು ಕಾಯುತ್ತಿರುತ್ತಾರೆಂದೂ ಅವರೊಡನೆ ಪ್ರಾರ್ಥನೆಯ ಮೂಲಕ ಸಂಬಂಧ ಕಲ್ಪಿಸಬಹುದೆಂದೂ ಮತ್ತಾ ಮೂಲಕ ಆತ್ಮೇಚ್ಛೆಯನ್ನ ಪರಿಪೂರ್ಣಗೊಳಿಸಬಹುದೆಂದೂ ಇಸ್ಲಾಂ ಧರ್ಮಾನುಯಾಯಿಗಳು ನಂಬುತ್ತಾರೆ.

ಇಂದಿಗೆ ಆರುನೂರು ವರ್ಷಗಳು ಕಳೆದರೂ ಅಜ್ಮೀರದ ಹಜ್ರತ್ ಮೊಯಿನುದ್ದಿನ್ ಚಿಸ್ತಿ ಮತ್ತು ದಿಲ್ಲಿಯ ನಿಜಾಮುದ್ದಿನ್ ಒಲಿಯಾರವರ ಸಮಾಧಿ ಕಡೆಗೆ ಎಲ್ಲಾ ಜಾತಿಮತಗಳ ಜನರು ಧಾವಿಸುತ್ತಾರೆ ಹೆಚ್ಚಿನವರಿಗೆ ಅವರ ಇಚ್ಛಿತ ಕಾರ್ಯಗಳು ಸತ್ ಪ್ರಾರ್ಥನೆಯಿಂದ ಸಿದ್ಧಿಸುತ್ತವೆ

ವಿಶ್ವ ನಿವಾಸಿ

ಓರ್ವ ಉರ್ದು ಕವಿಯು ಹೇಳುತ್ತಾನೆ 'ಜೀವನದಾಯಾಸದಂತ್ಯದಲ್ಲಿ ಮರಣವು ಒಂದು ವಿಶ್ರಾಂತಿ ಅಂದರೆ ನಾವು ತುಸು ವಿಶ್ರಮಿಸಿ ಅಲ್ಲಿಂದ ಮುಂದುರಿಯುತ್ತೇವೆ "

ಪರ್ಶಿಯದ ಶ್ರೇಷ್ಠ ತತ್ವಜ್ಞಾನಿ ಕವಿಯಾದ ಹಫೀಜ್ ಶಿರಾಜಿಯು "ದೇವರನ್ನು ನಿಜವಾಗಿ ಪ್ರೀತಿಸುವವನು ಅಮರನು" ಎಂದು ತನ್ನ ವಿಶ್ವಾಸವನ್ನು ಸಾರಿದ್ದಾನೆ. "ಪ್ರೇಮಪೂರಿತ ಹೃದಯವುಳ್ಳವನೆಂದಿಗೂ ಸಾಯಲಾರ ನನ್ನ ಅಮರತ್ವವು ವಿಶ್ವ ಪುಸ್ತಕದ ಮೇಲೆ ಬರೆದಿಟ್ಟಿದೆ "

ಶ್ರೀ ಪ್ಯಾರೆಲಾಲರು ಹರಿಜನದ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ **"ಮಹಾತ್ಮಾಜಿಯವರು ತಮ್ಮ ಕೌಟುಂಬಿಕ ಸಂಬಂಧವನ್ನೆಂದೋ ಕಡಿದು ಕೊಂಡಿದ್ದಾರೆ ಮನೆಯೆಂಬುದವರಿಗಿರಲಿಲ್ಲ. ಇಡೀ ವಿಶ್ವವೇ ಅವರ ಮನೆಯಾಗಿದ್ದು ಮಾನವಕೋಟಿಯೇ ಅವರ ಕುಟುಂಬವಾಗಿತ್ತು "**

ಹೀಗೆ ಅವರು ವಿಶ್ವ ಆತ್ಮದೊಡನೆ ಸಂಬಂಧವನ್ನು ಕಲ್ಪಿಸಿಕೊಂಡಿದ್ದ ಮಹಾಪುರುಷರು ಅವರು ಎಲ್ಲರ ಜೀವನದಲ್ಲೂ ಬಾಳಿಕೊಂಡಿದ್ದರು ಅವರ ದೃಷ್ಟಿಕೋನವು ವಿಶ್ವ ವಿಶಾಲವಾಗಿತ್ತು

ತಮ್ಮದು ನಿತ್ಯ ಜೀವನ, ಅಮರವಾದ ಆತ್ಮವಲ್ಲದೆ ಕೊಳೆತು ಕಳೆದು ಹೋಗುವ ದೇಹ ತಾವಲ್ಲವೆಂದು ತಿಳಿದ ಮಹಾತ್ಮರು ತಮ್ಮ ಶರೀರದ ವಿಷಯವಾಗಿ ಯಾವ ಆಡಂಬರಗಳನ್ನು ಮಾಡುತ್ತಿರಲಿಲ್ಲ.

ಶಂಕರನ್ ಎಂಬ ಸ್ನೇಹಿತರಿಗೆ ಮರಣದ ಮುಂಚಿನ ದಿವಸ ಮಹಾತ್ಮರು ಬರೆದೊಂದು ಪತ್ರದಲ್ಲಿ "ಮರಣವು ನಿಜವಾದ ಸ್ನೇಹಿತ. ಅಜ್ಞಾನ ಮಾತ್ರದಿಂದಲೇ ನಮಗಾ ವಿಷಯವಾಗಿ ದುಃಖವಾಗುತ್ತದೆ. ಸುಲೋಚನಳ ಆತ್ಮವು ಅಮರವಾದುದು. ಅದು ನಿನ್ನೆಯೂ ಇತ್ತು, ಇಂದೂ ಇದೆ, ನಾಳೆಯೂ ಇರುವುದು. ಶರೀರವಾದರೊ ಸಾಯಲೇ ಬೇಕು "

ಶ್ರೇಷ್ಠ ಸ್ಮಾರಕ

ಇಂತಹ ಮನುಷ್ಯನು ಸತ್ತಿರುವನೆಂದು ಹೇಳುವುದು ತೀರ ಅಸಮಂಜಸವಾದ್ದುದು. ಅವನ ಶಾಶ್ವತ ಕೀರ್ತಿ ಸಾರವು ನಮ್ಮೊಡನೆ ಸದಾ ವಾಸಿಸಿಕೊಂಡಿರುತ್ತದೆ. ಮಹಾತ್ಮರು ನಮ್ಮ ದೇಶದ ಏಕ ಮಾತ್ರ ಲೋಕ ಮಾನ್ಯರು ಅವರ ನಿರ್ಭಯತೆ, ಸರಳತೆ, ಪರಿಶುದ್ಧವಾದ ಪ್ರಾಮಾಣಿಕತೆ, ಕೃತಜ್ಞಪೂರ್ವಕತೆ, ಕೌತುಕಗೊಳಿಸುವ ಶ್ರಮಾಸಕ್ತಿ, ಮತ್ತು ಆದರ್ಶದಾಯಕವಾದ ದೇಶ ಮತ್ತು ದೇಶಬಾಂಧವ ಪ್ರೇಮಗಳ ಗುಣಗಳನ್ನು ನಮ್ಮಲ್ಲಿ ಹೊಂದಿಸಿಕೊಳ್ಳುವುದರ ಮೂಲಕ ನಾವವರಿಗೆ ಅಮೋಘವಾದ ಸ್ಮಾರಕವನ್ನು ರಚಿಸೋಣ

ವಲ್ಲಭ್ಭಾಯ್ ಪಟೇಲರೆಂದಂತೆ ಮಹಾತ್ಮರ ತತ್ವಾಚರಣೆಯಿಂದಲೇ ಮತ್ತವರ ರಚನಾತ್ಮಕ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವುದರಿಂದಲೇ ನಾವವರಿಗೆ ನಿಜವಾದ ಸ್ಮಾರಕವನ್ನು ಕಲ್ಪಿಸಬಲ್ಲೆವು ಇದೇ ರೀತಿಯೆ ನಾವವರನ್ನು ಎಲ್ಲಿ ನಿರಂತರವಾಗಿಡಬಯಸುತ್ತೇವೊ ಆ ಹೃದ್ಮಂದಿರದಲ್ಲವರೆನ್ನು ಸ್ಥಾಪಿಸುವ ನಿಜವಾದ ದಾರಿ ಇದೇ ಆಗಿದೆ

ವಲ್ಲಭ್ಭಾಯವರ ಭಾವನೆಯನ್ನೇ ಓರ್ವ ಪ್ರಾಚೀನ ಪರ್ಶಿಯನ್ ಕವಿಯು "ನನ್ನ ಮರಣಾನಂತರ ಈ ಜಗತ್ತಿನಲ್ಲಿ ನನ್ನ ಸಮಾಧಿಯನ್ನು ನಿರೀಕ್ಷಿಸಬೇಡ ನನ್ನ ವಿಶ್ರಾಂತಿ ಸ್ಥಳವು ವಿವೇಕಿ ಜನರ ಹೃದಯದೊಳಗಿದೆ" ಎಂದು ಸುಂದರವಾಗಿ ನಿರೂಪಿಸಿದ್ದಾನೆ

ನಿರಂತರ ಸಾನಿಧ್ಯ

ಮಹಾತ್ಮರ ಆಧ್ಯ ಅನುಯಾಯಿಯೆಂದೆನಿಸಲ್ಪಡುವ ಪಂಡಿತ್ ನೆಹರೂರವರು ದುಃಖದಿಂದ "ನಮ್ಮ ಮಾರ್ಗದರ್ಶನ ಮಾಡುತಿದ್ದ ಪ್ರಕಾಶವಿಂದು ಮಾಯವಾಯಿತ ನಾವು ಅನಾಥರಾಗಿದ್ದೇವೆ ' ಎಂದಿರುವರು ಇದು ಕೇವಲ ದುಃಖದ ನಿರಾಶೆಯ ಉದ್ಗಾರ ಮಹಾತ್ಮರು ತಮ್ಮ ಮರಣದಿಂದ ನಮಗೆ ಹತ್ತಿರವಾಗಿದ್ದಾರೆ "ನಮಗೆ ಬೆಳಕು ತೋರಿಸಿದ ತಾರೆ ವಿಶ್ವವನ್ನೇ ಮುಂದೆ ಸಹಸ್ರ ವರ್ಷಗಳ ತನಕ ಬೆಳಗುವುದು' ಎಂದೂ ಮತ್ತೆ ನೆಹರುಗಳು ತಮ್ಮ ಭಿನ್ನ ಪರಿಸ್ಥಿತಿಯಿಂದ ಎಚ್ಚೆತ್ತಾಗ ತಿಳಿಸಿದ್ದಾರೆ.

ಹೌದು, ಮಹಾತ್ಮರು ನಮಗೆ ಸದಾ ಮಾರ್ಗದರ್ಶಕರಾಗಿರುವರು ಅವರ ಆತ್ಮವು ನಮ್ಮ ಆತ್ಮಗಳಲ್ಲಿ ಬೆಳಗುವುದು ನಾವು ಮಾತ್ರ ರಾತ್ರಿ ಮಲಗಿದಾಗ ನಮ್ಮ ಸಂಕಷ್ಟಗಳನ್ನು ನೆನೆದು ಮಹಾತ್ಮರೊಡನೆ ಧ್ಯಾನಾಸಕ್ತರಾಗಿ ಆತ್ಮ ಸಂಬಂಧವನ್ನು ಬೆಳೆಸಿದರೆ ಖಂಡಿತವಾಗಿ ನಮಗೆ ಅವರ ಆತ್ಮ ಪ್ರಭಾವವು ದಾರಿ ತೋರುವುದು.

ಡಿಕಾಟೂರ್ ಎಂಬಲ್ಲಿ ಸೂಸೆನ್ ಎಂಬ ಮುದಿ ಮಹಿಳೆಯೊಬ್ಬಳು ಇಂದಿಗೆ 35 ವರ್ಷಗಳಿಂದ ಅಲ್ಲಿನ ಚಲಚಿತ್ರ ಮಂದಿರಕ್ಕೆ ಒಂದು ದಿನವೂ ಬಿಡದೆ ಹಾಜರಾಗಿದ್ದಾಳೆ. ಅವಳ ಈ ಅದ್ವಿತಿಯ ಸಿನೇಮಾ ಪ್ರಿಯತೆಯನ್ನು ಗೌರವಿಸಲು ಅಲ್ಲಿನ ಸಿನೇಮಾ ಕಂಪೆನಿಯವರು ಅವಳಿಗೊಂದು ಹೂವಿನ ಹಾರ ಹಾಕಿ ಜೀವಾವಧಿ ಧರ್ಮಾರ್ಥ ಸಿನೇಮಾ ನೋಡಲು ಒಂದು ಫ್ರಿಪಾಸನು ಕೊಟ್ಟರು.

ಭಾರತದಲ್ಲಿ ಇಂಗ್ಲಿಷು ಎಷ್ಟುಕಾಲ ಬದುಕುವುದು?

ವಿದ್ಯಾಲಯ ಸಲಹೆಗಾರರ ನಿರ್ಣಯ

ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಇಂಗ್ಲಿಷನ್ನು ಕಿತ್ತುಹಾಕಿ ಅದರ ಸ್ಥಾನದಲ್ಲಿ ಪ್ರಾಂತಭಾಷೆ ಮತ್ತು ರಾಷ್ಟ್ರಭಾಷೆಗಳನ್ನು ಪ್ರತಿಷ್ಠಿಸಲು ಐದು ವರ್ಷಗಳ ಅವಧಿ ಕೊಡಬೇಕು. ಈ ೫ ವರ್ಷ ಅವಧಿಯಲ್ಲಿ ಮಾತ್ರ ಇಂಗ್ಲಿಷು ಬೋಧಭಾಷೆಯಾಗಬೇಕು. ಪರೀಕ್ಷೆಗಳು ಆ ಅವಧಿಯಲ್ಲಿ ಇಂಗ್ಲಿಷಿನಲ್ಲೇ ನಡೆಯಬೇಕು.

ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದಲ್ಲಿ ರಾಷ್ಟ್ರಭಾಷೆಯ ಪರೀಕ್ಷೆ ಇರಬೇಕು. ಇದೊಂದು ವಿಷಯದ ಪರಿಣಾಮದಿಂದ ಅವನ ಶಿಕ್ಷಣಕ್ಕೆ ಆತಂಕ ಬರಬಾರದು. ಯಾವನೇ ವಿದ್ಯಾರ್ಥಿಯು ರಾಷ್ಟ್ರಭಾಷೆಯನ್ನೇ ಐಚ್ಛಿಕ ವಿಷಯವಾಗಿಟ್ಟುಕೊಂಡು ಕಲಿಯಬಯಸಿದರೆ ವಿಶ್ವವಿದ್ಯಾಲಯವು ಅನುಕೂಲಮಾಡಿಕೊಡಬೇಕು.

ರಾಷ್ಟ್ರಭಾಷೆಯ ಲಿಪಿಯ ಬಗ್ಗೆ ಘಟನಾ ಸಮಿತಿಯು ಒಪ್ಪುವ ಲಿಪಿಯನ್ನೇ ಎಲ್ಲ ವಿಶ್ವ ವಿದ್ಯಾಲಯಗಳು ಒಪ್ಪಿಕೊಳ್ಳಬೇಕು. ಭಿನ್ನ ಭಿನ್ನ ಪ್ರಾಂತಗಳಲ್ಲಿ ರಾಷ್ಟ್ರಭಾಷೆಯನ್ನು ಬರೆಯುವಾಗ ಅಲ್ಲಿಯವರು ತಮ್ಮ ಪ್ರಾಂತಭಾಷೆಯ ಲಿಪಿಯನ್ನಾಗಲಿ ರಾಷ್ಟ್ರಭಾಷೆಯ ಲಿಪಿಯನ್ನಾಗಲಿ ಉಪಯೋಗಿಸಬಹುದು ಇಂಗ್ಲಿಷಿಗೆ ಅರ್ಧಚಂದ್ರಕೊಟ್ಟು ಪ್ರಾಂತಿಕ ಇಲ್ಲವೆ ರಾಷ್ಟ್ರಭಾಷೆಯನ್ನು ಪ್ರಾರಂಭಿಸುವ ಕೆಲಸವು ಸಾವಧಾನದಿಂದ ನಡೆಯಬೇಕು

ಎಲ್ಲ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರ ಭಾಷೆಯು ಕಡ್ಡಾಯ ವಿಷಯವಾಗಿರಬೇಕು

ಈ ನಿರ್ಣಯದಂತೆ ಪಠ್ಯ ಪುಸ್ತಕಗಳನ್ನು ತಯಾರಿಸುವಾಗ ವಿಜ್ಞಾನ ಶಾಸ್ತ್ರದ ಪಠ್ಯ ಪುಸ್ತಕಗಳನ್ನೆಲ್ಲ ಸರಕಾರಕಾರದ ಮೇಲ್ವಿಚಾರಣೆಯಲ್ಲಿಯೇ ತಯಾರಿಸಬೇಕು ಇತರ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ಬೇಕಾದರೆ ಕೇಂದ್ರವು ಪ್ರಾಂತಿಕ ಸರಕಾರಗಳಿಗೆ ಅವಶ್ಯಕ ಸಹಾಯವನ್ನು ನೀಡಬಹುದು

ಹಿಂದುಸ್ತಾನದ ಭಾಷೆಗಳಿಗೆಲ್ಲ ಒಂದೇ ವಿಧದ ಪಾರಿಭಾಷಿಕ ಶಬ್ದಗಳನ್ನು ಕಂಡುಹಿಡಿಯುವುದಕ್ಕಾಗಿ ಭಾಷಾ ಶಾಸ್ತ್ರಜ್ಞರ ಹಾಗೂ ವಿಜ್ಞಾನಿಗಳ ಒಂದು ಸಮಿತಿಯನ್ನು ನೇಮಿಸಬೇಕು ಈ ಕಾರ್ಯದಲ್ಲಿ ಅಂತರಾಷ್ಟ್ರೀಯ ಪರಿ ಭಾಷಾ ಶಬ್ದಗಳ ಸಹಾಯ ಪಡೆಯಬಹುದು ಪ್ರಾಂತಗಳ ಹಾಗೂ ವಿಶ್ವ ವಿದ್ಯಾಲಯಗಳ ಸಲಹೆ ಕೇಳಿಕೊಳ್ಳಬಹುದು ಈ ಸಮಿತಿಗೆ ಬೇಕಾಗುವ ಧನ ಸಹಾಯವನ್ನೆಲ್ಲ ಕೇಂದ್ರ ಸರಕಾರವೇ ಕೊಡಬೇಕು ಈ ಸಮಿತಿಯು ೫ ವರ್ಷಗಳಲ್ಲಿ ತನ್ನ ಕೆಲಸವನ್ನು ಪೂರೈಸತಕ್ಕದ್ದು

ಬೇರೆ ಬೇರೆ ಪ್ರಾಂತಗಳಲ್ಲಿರುವ ಭಾಷಾವಾರ ಅಲ್ಪ ಸಂಖ್ಯಾಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೇಂದ್ರ ಸರಕಾರವು ಪ್ರಾಂತಗಳಿಗೆ ವಿಶೇಷ ಪ್ರಾದೇಶಿಕ ಅಧಿಕಾರಗಳನ್ನು ಕೊಡಬೇಕು

ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಶನ್ನಿನ ಪರೀಕ್ಷೆಗಳು ಆಯಾ ವಿದ್ಯಾರ್ಥಿಯ ಪ್ರಾಂತಭಾಷೆಯಲ್ಲಿ ನಡೆಯಬೇಕು. ಆದರೆ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ರಾಷ್ಟ್ರಭಾಷಾ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಬೇಕು.

ನಾವು ಅದೆಷ್ಟು ಕಾಲ ಬದುಕಬಹುದು

ಆಧುನಿಕ ವಿಜ್ಞಾನದಿಂದ ಆಯುಷ್ಯ ಹೆಚ್ಚಿದೆ

೧೦೦ ವರ್ಷ ಬದುಕಿದ ಮನುಷ್ಯ

ಇಂದು ಹುಟ್ಟಿದ ಮಗುವೊಂದು ತನ್ನ ಹೆತ್ತವರು ಹುಟ್ಟಿದಾಗ ಬಳ್ಳುವೆನೆಂದು ನಿರೀಕ್ಷಿಸಿದ ಅವಧಿಗಿಂತ ಇಪ್ಪತ್ತು ವರ್ಷಕಾಲ ಹೆಚ್ಚು ಬಾಳಬಹುದು. ೧೯೦೦ರಲ್ಲಿ ಹುಟ್ಟಿದವರ ಆಯುಷ್ಯ ನಿರೀಕ್ಷಣೆ ಸುಮಾರು ಐವತ್ತು ವರ್ಷವಾಗಿತ್ತು. ೧೯೪೫ರಲ್ಲಿ ಹುಟ್ಟಿದ ಮಗು ೬೪ ವರ್ಷಗಳ ತನಕ ಬದುಕಬಹುದು. ಕಳೆದ ಅರ್ಧ ಶತಮಾನದಲ್ಲಿ ರೋಗರುಜೆಗಳುಂಟಾಗುವ ಕಾರಣಗಳ ಕುರಿತು, ಅವುಗಳನ್ನು ನಿವಾರಣೆ ಮಾಡುವುದರ ಕುರಿತು ಅವಿಶ್ರಾಂತ ಪರಿಶೋಧನೆಗಳಾದ ಪರಿಣಾಮವಾಗಿ ಇಂಥಾ ಅನುಭವವನ್ನು ದಿನನಿತ್ಯ ಜೀವನಕ್ಕೆ ಅನ್ವಯಿಸಲು ಸಾಧ್ಯವಾಗಿದೆ. ಆ ನಂತರದ ಪ್ರತಿಯೊಂದು ದಶವರ್ಷದಲ್ಲೂ ಮಾನವ ಜೀವಾವಧಿಯು ಸರಾಸರಿ ಹೆಚ್ಚಿದೆ. ಮಾತ್ರವಲ್ಲ ಮರಣಗಳ ವರ್ಷಾವಧಿ ಸಂಖ್ಯೆಯೂ ಕಡಿಮೆಯಾಗಿದೆ.

ಈ ಶತಮಾನದ ಪ್ರಾರಂಭದಲ್ಲಿ ಗಂಟಲೊಳಗೆ ಗುಳ್ಳೆಗಳೇಳುವ ಒಂದು ವ್ಯಾಧಿಯು ಮಕ್ಕಳನ್ನು ತುಂಬಾ ಸಂಖ್ಯೆಯಲ್ಲಿ ಬಲಿತೆಗೆಯುತಿತ್ತು. ಈಗ ಅದಕ್ಕೆಲ್ಲ ಪರಿಹಾರಕ ಔಷಧಿಗಳನ್ನಲ್ಲದೆ ಅದು ಬರದಂತೆ ಮಾಡಲೂ ವಿರುದ್ಧ ವಿಧಾನಗಳೂ ಕಂಡುಹಿಡಿಯಲಾಗಿವೆ. ಹೀಗಾಗಿ ಇಂತಹ ಸ್ವಕ್ಕಳ ವ್ಯಾಧಿಯನ್ನು ತಡೆಯುವುದು ಕೇವಲ ಕೆಲವೇ ಸಮಯದ ವಿಷಯವಾಗಿದೆ. ಅದೇ ರೀತಿ ನೀರನ್ನೂ, ಹಾಲನ್ನೂ ಮತ್ತು ಆಹಾರದ ವಸ್ತುಗಳನ್ನೂ ಶುದ್ಧವಿರಿಸುವ ವಿಧಾನಗಳೂ ಕಂಡುಹಿಡಿಯಲ್ಪಟ್ಟಿರುವುದರಿಂದ ಮಾನವಕೋಟಿಯ ಆರೋಗ್ಯಕ್ಕೆ ತುಂಬಾ ಅನುಕೂಲವಾಗಿದೆ. ಇದರಿಂದ ಟ್ಯಾಫೈಡ್ ಎಂಬ ವಿಷಮ ಜ್ವರದ ಬಾಧೆಯೂ ಬಹುಮಟ್ಟಿಗೆ ತಡಹಿಡಿಯಲು ಸಾಧ್ಯವಾಗಿದೆ.

ವೈದ್ಯವಿಜ್ಞಾನದ ಸೇವೆ

ಅದೇ ರೀತಿ ಕ್ಷಯರೋಗ ವಿಷಯವಾಗಿಯೂ ಕೌತುಕದ ಶೋಧನೆಗಳು ಯಶಸ್ವಿಗೊಳಿಸಲ್ಪವೆ. ಈ ಶತಮಾನದ ಪ್ರಾರಂಭದಲ್ಲಿ ಈ ರೋಗವೇ ಹೆಚ್ಚಿನ ಮರಣಗಳ ಮುಖ್ಯ ಕಾರಣವಾಗಿತ್ತು. ಈಗ ಮರಣ ಕಾರಣ ವ್ಯಾಧಿಯ ಏಳನೇ ಸ್ಥಾನದಲ್ಲಿದೆ. ಇದರ ಪರಿಣಾಮವಾಗಿ ಕಡಿಮೆಯಾದ ಮರಣಸಂಖ್ಯೆಯ ಲೆಕ್ಕದಿಂದ ಸರಾಸರಿ ಜೀವನಾವಧಿಯ ಆಯುಷ್ಯ ಪ್ರಮಾಣವು ಹೆಚ್ಚಾಗುವಂತಾಯಿತು.

ವೈದ್ಯ ವಿಜ್ಞಾನವು ಇಷ್ಟೊಂದು ಮುಂದುವರಿದರೂ ಕೆಲವು ಜನರು ಆಧುನಿಕ ವೈದ್ಯ ವಿಜ್ಞಾನದಿಂದ ತರುಣ ಪ್ರಾಯದ ತನಕ ವ್ಯಾಧಿಗಳನ್ನು ತಡೆಗಟ್ಟಿದರೂ ವೃದ್ಧಾಪ್ಯ ತಲೆದೋರಿದೊಡನೆ ಹೃತ್ಕೋಶ ರೋಗ, ಕೆನ್ಸರ್ ವ್ಯಾಧಿ ಮತ್ತಿತರ ಶರೀರಪ್ರಯವಾಗುವ ರುಜೆಗಳು ಹೆಚ್ಚಿವೆಯೆಂದು ದೂರುತ್ತಿರುವರು. ಉದಾಹರಣೆಗಾಗಿ ಈಗ ೬೦ ಪ್ರಾಯಕ್ಕೆ ಮುಟ್ಟಿರುವ ಓರ್ವ ಮನುಷ್ಯನ ಗತಿಯೇನು? ೫೦ ವರ್ಷಗಳ ಹಿಂದೆ ಈ ಪ್ರಾಯದ ಮನುಷ್ಯನು ಜೀವಿಸಲು ನಿರೀಕ್ಷಿಸಿದಕ್ಕಿಂತ ಹೆಚ್ಚು ಅವಧಿಯ ತನಕ ಈಗಿನ ೬೦ ವರ್ಷದವರು ವಾಸಿಸಲು ನಿರೀಕ್ಷಿಸಲು ಸಾಧ್ಯವಿಲ್ಲ. ವೃದ್ಧಾಪ್ಯದಲ್ಲಿ ಸಾಯುವವರ ಸಂಖ್ಯೆ ಈಗ ಮುಂಚಿನವರಿಗಿಂತ ಹೆಚ್ಚು.

ಈಗ ಹೃತ್ಕೋಶ ಸಂಬಂಧವಾದ ವ್ಯಾಧಿಯೇ ಪ್ರಥಮ ಸ್ಥಾನಪಡೆಯುತ್ತಿದೆ. ಎರಡನೇ ಸ್ಥಾನ ಕೆನ್ಸರ್(ಮಾಂಸಾರ್ಭುತ) ವ್ಯಾಧಿ ತೆಗೆದುಕೊಳ್ಳುತ್ತಿದೆ. ಈಗಿಗೆ ಹೃತ್ಕೋಶ ವ್ಯಾಧಿಯು ಮಧ್ಯ ವಯಸ್ಕರನ್ನು ಬಲಿತೆಗೆದುಕೊಳ್ಳುತ್ತಿದೆ. ಇಂದು ಸಾವಿರಾರು ಮಧ್ಯವಯಸ್ಕರು ರಕ್ತ ಒತ್ತಡ, ಗಟ್ಟಿಯಾದ ನರಗಳು ಇವೇ ಮೊದಲಾದ ಹೃತ್ಕೋಶ ವ್ಯಾಧಿಗಳಿಂದ ಮಡಿಯುತ್ತಿದ್ದಾರೆ.

ಮಧ್ಯ ವಯಸ್ಕರಲ್ಲಿ ಹೃತ್ಕೋಶ ವ್ಯಾಧಿಗಳುಂಟಾಗದಂತೆ ತಡೆಯಲು ವೈದ್ಯ ವಿಜ್ಞಾನವು ಹಲವು ಪರಿಹಾರಗಳನ್ನು ಕಂಡುಹಿಡಿದಿದೆ. ಹೃತ್ಕೋಶದ ಮೇಲೆ ಮುಂದೆ ಮಧ್ಯ ವಯಸ್ಸಿನಲ್ಲಿ ಅಪಾಯವನ್ನುಂಟುಮಾಡುವ ಒತ್ತಡವು ಬೀಳುವದನ್ನು ಈಗಿನ ಮಧ್ಯ ವಯಸ್ಕರು ಅರಿತುಕೊಳ್ಳಲು ಪ್ರಾರಂಭಿಸಿರುವರು. ಬಾಲ್ಯದಲ್ಲಿ ಈ ಒತ್ತಡದ ಭಾವಿ ಅಪಾಯದ ಜ್ಞಾನವಿರುವುದಿಲ್ಲ. ಮುಂಚೆ ಅದು ಗೊತ್ತು ಇರಲಿಲ್ಲ. ನಾಲ್ವತ್ತು ವರ್ಷಗಳ ಹಿಂದಿನ ಮಕ್ಕಳು ಉದ್ದೇಶಪೂರ್ವಕವಾಗೆಂಬಂತೆ ಮುಂದೆ ಕಂಟಕವಾಗಿ ಪರಿಣಮಿಸುವ ವ್ಯಾಧಿಗಳಿಗೆ ಇಂಬುಮಾಡಲ್ಪಡುತ್ತಿದ್ದರು. ಆದರೆ ಈಗ ಹಾಗೆ ಮಾಡುತ್ತಿಲ್ಲವಾದ್ದರಿಂದ ಮುಂದಿನ ಇಪ್ಪತ್ತು ವರ್ಷಗಳ ನಂತರ ಮಧ್ಯ ವಯಸ್ಕರು ಹೃತ್ಕೋಶ ವ್ಯಾಧಿಯಿಂದ ಸಾಯುವುದು ಕಡಿಮೆಯಾಗುವುದು. ಹೀಗೆ ಒಂದನೇ ಸಾರ್ವಜನಿಕ ಶತ್ರುವೆಂದೆನಿಸುವ ಹೃತ್ಕೋಶ ವ್ಯಾಧಿಯು ಸೋಲಿಸಲ್ಪಡುವುದು ಖಂಡಿತ.

ಮನುಷ್ಯನ ಬಾಳೆಷ್ಟು?

ತನ್ನಷ್ಟಕ್ಕೆ ವೃದ್ಧಾಪ್ಯ ವ್ಯಾಧಿಗಳನ್ನು ತಡೆಹಿಡಿಯುವ ಕಾರ್ಯವೂ ಅವ್ಯಾಹತವಾಗಿ ನಡೆಸಲ್ಪಡುವುದು. ಸಹಜವಾಗಿ ಶರೀರವು ವೃದ್ಧವಾಗುವ ಕ್ರಿಯೆಯನ್ನು ಹೇಗೆ ಮುಂದುವರಿಸಬಹುದೆಂಬುದರ ಕುರಿತೂ ವೈದ್ಯಕೀಯ ವಿಜ್ಞಾನವು ಪ್ರಯೋಗಗಳನ್ನು ರಾತ್ರಿಹಗಲೆನ್ನದೆ ಮಾಡುತ್ತಿದೆ.

ಈಗ ಪ್ರಾಮುಖ್ಯವೂ ಪ್ರಧಾನವೂ ಆದ ಪ್ರಶ್ನೆಯೆಂದರೆ "ಮನುಷ್ಯನು ಅದೆಷ್ಟು ಕಾಲ ಬಾಳಬೇಕು?" ಎಂಬುದು. ಈ ಕುರಿತು ಅನೇಕ ಅಂಕೆಸಂಖ್ಯೆಗಳ ತಾತ್ವಿಕ ನಿರೂಪಣೆಗಳು ತಯಾರಿಸಲ್ಪಟ್ಟಿವೆ. ಇವುಗಳಲ್ಲಿ ಹೆಚ್ಚಿನವು ಸಂದೇಹಾಸ್ಪದವಾದುವು. ಧೀರ್ಘ ಬಾಳ್ವಿಕೆಯ ಕುರಿತು ತನ್ನ ಉದ್ಯೋಗ ಕಾಲದ ಹೆಚ್ಚಿನ ಅವಧಿಯನ್ನು ವಿನಿಯೋಗಿಸಿ ಪರಿಶೋಧನೆ ನಡೆಸಿದ ಒಬ್ಬ ವೈದ್ಯ ತಜ್ಞರು ಮಾನವನ ಜೀವನಾವಧಿಯು ಸರ್ವಸಾಧಾರಣವಾಗಿ ೧೫೦ ವರ್ಷಗಳ ತನಕ ಇರಬೇಕಾದುದು ನ್ಯಾಯವೆಂಬಭಿಪ್ರಾಯವನ್ನು ನಿರೂಪಿಸಿದ್ದಾರೆ. ಮನುಷ್ಯನು ೨೫ ವರ್ಷದೊಳಗೆ ಸಂಪೂರ್ಣ ಬೆಳೆತಕ್ಕೆ ಬರುತ್ತಾನೆ. ಸಂಪೂರ್ಣ ಬೆಳೆತಕ್ಕೆ ಬಂದ ಪ್ರಾಯದ ೬ ಪಾಲಷ್ಟು ಹೆಚ್ಚು ಅವಧಿ ತನಕ ಪ್ರಾಣಿಗಳು ಬಾಳುತ್ತವೆಂಬ ಲೆಕ್ಕದ ಮೇಲೆ ಮನುಷ್ಯನು ೩೦೦ ವರ್ಷವಾದರೂ ಬಾಳಬೇಕೆಂದು ಬೇರೆ ಬೇರೆ ಕೆಲ ತಜ್ಞರು ಆಶಾದಾಯಕವಾದ ಸಂಖ್ಯೆಯನ್ನು ಸೂಚಿಸಿದ್ದಾರೆ.

ಮಾನವ ಶರೀರದೊಳಗೆ ವಿಶೇಷ ಪರಿಸ್ಥಿತಿಗಳು ಕೆಲವು ಉಂಟಾದರೆ ಅವನು ೧೫೦ ವರ್ಷಕ್ಕೂ ಮಿಕ್ಕಿದ ಪ್ರಾಯದ ತನಕ ಜೀವಿಸಬಹುದೆಂದು ೧೯೩೫ರಲ್ಲಿ ತನ್ನ ೧೬೦ನೇ ವಯಸ್ಸಿನಲ್ಲಿ ಸತ್ತ ಜಾರೋ ಆಗಾ ಎಂಬ ತುರ್ಕಿನೊಬ್ಬನ ನಿದರ್ಶನದಿಂದ ಗೊತ್ತಾಗುತ್ತದೆ. ವೈದ್ಯಕೀಯ ತಜ್ಞರಿಗೆ ಅವನ ಆಯುಷ್ಯ ಸಂಖ್ಯೆಯ ವಿಷಯ ತುಂಬಾ ಸಂದೇಹವಿತ್ತಾದ್ದರೂ ಇಸ್ತಾಂಬೂಲಿನ ಒಳಿಯಿದ್ದ ಒಂದು ಜನನ ದಾಖಲೆ (Certificate) ಯಿಂದ ಅವನು ೧೭೭೪ರಲ್ಲಿ ಹುಟ್ಟಿದ್ದನೆಂಬುದರ ರುಜುವಾತಾಗಿದೆ. ಅವನ ಶರೀರದಲ್ಲಿನ ಕೆಲವು ಗ್ರಂಥಿಗಳು ವಿಶೇಷ ಬೆಳೆದಿರುವುದರಿಂದಲೇ ಅವನಿಗೆ ಯಾವ ರೋಗರುಜೆಗಳು ತಗಲುತ್ತಿರಲಿಲ್ಲವೆಂದು ಅವನನ್ನು ಪರೀಕ್ಷಿಸಿದ ವೈದ್ಯ ತಜ್ಞರು ಕಂಡುಹಿಡಿದಿದ್ದರು. ಮಾತ್ರವಲ್ಲ ಜಾರೋ ಆಗಾನು ತುಂಬಾ ವ್ಯಾಯಾಮ ಮಾಡುತಿದ್ದುದು ಇನ್ನೊಂದು ಗಣನೀಯ ಸಂಗತಿ. ಅವನ ಎತ್ತರ ಆರು ಅಡಿಗಳಷ್ಟಿದ್ದು ಸಾಯುವ ಮೊದಲು ಮೂರು ಸಲ ಅವನಿಗೆ ಹಲ್ಲುಗಳು ಬಂದಿದ್ದುವು. ಅವನ ಭಾರವೂ ೧೬೦ ಪೌಂಡುಗಳಷ್ಟಿತ್ತು. ಸಾಯುವ ಹತ್ತು ವರ್ಷಗಳ ಮೊದಲು ಅವನಿಗೆ ತಲೆಯ ಮೇಲೆ ಕೂದಲಿರಲಿಲ್ಲ. ಆದರೆ ಸಾಯುವ ಕಾಲಕ್ಕೆ ಅವನ ತಲೆಯ ಮೇಲೆ ದಪ್ಪವಾದ ಕೇಶರಾಶಿಯಿತ್ತು.

ಒಂದು ಆಯುಷ್ಯ ಲೆಕ್ಕ

ಒಬ್ಬ ವ್ಯಕ್ತಿಯು ಅದೆಷ್ಟು ವರ್ಷ ಬಾಳ್ವನು ಎಂಬೊಂದು ಅಂದಾಜು ತಿಳಿಯಲು ಅವನ ಅಜ್ಜ ಅಜ್ಜಿಯರ ಮತ್ತು ತಂದೆತಾಯಿಂದಿರ ಪ್ರಾಯಗಳನ್ನು ಕೂಡಿಸಿ ನಾಲ್ಕರಿಂದ ಭಾಗಿಸಬೇಕು. ಧೀರ್ಘ ಆಯುಷ್ಕಾಲ ಪ್ರಮಾಣಕ್ಕೆ ಆನುವಂಶಿಯತೆಯೂ ಒಂದು ಕಾರಣವಾಗಿದೆಯೆಂಬ ಲೆಕ್ಕದ ಮೇಲೆ ಈ ವಿಧಾನವು ಆಧರಿಸಲ್ಪಟ್ಟಿದೆ. ಆನುವಂಶಿಯತೆಯು ಮಾನವ ಜೀವನ ಅವಧಿಯ ಮೇಲೆ ಪರಿಣಾಮವುಳ್ಳದ್ದೆಂದು ಪ್ರತ್ಯಕ್ಷ ಪ್ರಯೋಗದಿಂದ ಗೊತ್ತಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ೬೦ ವರ್ಷ ಸತ್ತ ಹೆತ್ತವರ ಮಕ್ಕಳು ೮೦ ವರ್ಷಗಳ ತನಕ ಬದುಕುವುದೂ ಇದೆ. ೮೦ ವರ್ಷದಲ್ಲಿ ಸತ್ತ ಹೆತ್ತವರ ಮಕ್ಕಳು ೬೦ ವರ್ಷದಲ್ಲಿ ಸತ್ತದ್ದೂ ಇದೆ. ಇಂತೂ ಸ್ವಯಂ ಮತ್ತೆ ಆತ್ಮಶಿಸ್ತಿನಿಂದ ಆನುವಂಶಿಯತೆಯ ದೋಷ ಕಡಿಮೆಮಾಡಬಹುದೆಂದೂ ಪ್ರಯೋಗ ಸಿದ್ಧವಾಗಿ ಅನುಭವಕ್ಕೆ ಬಂದಿದೆ.

ಒಬ್ಬನ ಬೆನ್ನೆಲುಬು ಚಿಕ್ಕದಿದ್ದು ಅವನ ಎದೆ ಅಳತೆಯು ಸಾಮಾನ್ಯ ಸರಾಸರಿಗಿಂತ ಕಡಿಮೆಯಿದ್ದರೆ ಮತ್ತವನ ಎತ್ತರವು ಸಮ್ಮ ಸಾಮಾನ್ಯ ಮಾನವ ಎತ್ತರಗಿಂತ ಸ್ವಲ್ಪ ಹೆಚ್ಚಿದ್ದರೆ ಅಂಥವರು ಧೀರ್ಘ ವೃದ್ಧಾಪ್ಯ ತನಕ ಬಾಳುವರೆಂದು ಕೆಲ ವಿಮಾ ಸಂಸ್ಥೆಗಳ ಅಂಕೆಸಂಖ್ಯೆಗಳಿಂದ ತಿಳಿದುಬರುತ್ತದೆ. ಮಿತಿಮಿಕ್ಕಿದ ಭಾರದ ಆದರೆ ಉದ್ದ ಬೆನ್ನೆಲುಬು ಮತ್ತು ಚಿಕ್ಕ ಎದೆ ಅಳತೆಯಿರುವವರೂ ಧೀರ್ಘಕಾಲ ಬಾಳುವರಂತೆ. ಈ ಎರಡೂ ಗುಂಪುಗಳವರಲ್ಲೂ ಎದೆಗೂಡು ಚಿಕ್ಕದಿರಬೇಕೆಂಬೊಂದು ಸಂಗತಿ ಸ್ಪಷ್ಟವಾಗುತ್ತದೆ.

ಅರುವತ್ತು ವಯಸ್ಸು ತನಕ ಯಾವ ತರದ ಕಠಿಣ ವ್ಯಾಧಿ ತಟ್ಟದೆಯಿದ್ದವರು ಖಂಡಿತ ಬಹುಕಾಲ ಬಾಳುವರು. ಆದರೆ ೮೫ ಮತ್ತು ೧೦೦ ವರ್ಷದ ಆಚೆ ಜನರ ಅಂಕೆಸಂಖ್ಯೆ ತೆಗೆದಾಗ ಇವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಕಠಿಣ ವ್ಯಾಧಿಗ್ರಸ್ತರಾಗಿದ್ದರೆಂದು (೬೦ ವರ್ಷಕ್ಕೆ ಮೊದಲು) ತಿಳಿದುಬಂದಿದೆ.

ಹೀಗೆ ಈ ವಿಷಯವಾಗಿ ವಿಜ್ಞಾನಿಗಳಿಗೆ ತುಂಬಾ ಗಲಿಬಿಲಿಯುಂಟಾಗುತ್ತದೆ. ಆದರೆ ಗಲಿಬಿಲಿಯುಂಟಾದ ಪ್ರತಿಯೊಂದು ಸಲ ವಿಜ್ಞಾನ ಪ್ರಪಂಚದಲ್ಲಿ ಗಹನವಾದೊಂದೆರಡು ಶೋಧಗಳೂ ಆಗಿವೆಯೆಂಬ ಸಂಗತಿಯು ಗಣನೀಯವಾದುದು.

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಬೇಗನೆ ಗುಣಪಡಿಸುವುದು. ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯಪಡಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುಖ್ಯವಾಗಿ ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ಸ್ವದೇಶಾಭಿಮಾನಿ

ತಾರೀಕು 28—5—1948

ಹೈದರಾಬಾದು

ಹೈದರಾಬಾದಿನ ಪ್ರಕರಣ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಗೆ ಮುಟ್ಟಿರುತ್ತದೆ. ಮದ್ರಾಸಿನಿಂದ ಬೊಂಬಾಯಿಗೆ ಹೋಗುವ ರೈಲು ಭಂಡಿಯು ಈ ಸಂಸ್ಥಾನದೊಳಗಿಂದ ಹಾದುಹೋಗುವದಿದ್ದು ಈ ಪ್ರದೇಶದಲ್ಲಿಯ ಗಂಗಾಪುರ ಸ್ಟೇಶನಿನಲ್ಲಿ ಭಂಡಿ ಮುಟ್ಟಿದಾಗ ರಜಾಕರ ಸಂಗಡದವರು ಬಂದು ಅದರೊಳಗಿನ ಜನರ ಮೇಲೆ ಅತ್ಯಾಚಾರ ನಡೆಸಿದ ವಾರ್ತೆ ಈಗ ಸರ್ವವಿಧಿತವಾಗಿರಬೇಕು. ಭಂಡಿಯಲ್ಲಿದ್ದವರನ್ನು ಹೊರಗೆಳೆದು ಹೊಡೆದರು. ಅವರ ಹಣ ಕಾಸುಗಳನ್ನೆಲ್ಲ ಸೆಳೆದುಕೊಂಡರು. ಹೆಂಗಸರ ಒಡವೆಗಳನ್ನು ಮಂಗಳಸೂತ್ರ ಸಮೇತವಾಗಿ ಕಿತ್ತುಕೊಂಡರು. ಇಬ್ಬರು ಕೊಲ್ಲಲ್ಪಟ್ಟರು. ಹಲವರಿಗೆ ಗಾಯಗಳಾಗಿವೆ. ಕೆಲವರನ್ನು, ಅದರಲ್ಲಿ ಕೆಲವು ಮಂದಿ ಹೆಂಗಸರು ಮಕ್ಕಳು ಕೂಡಾ, ಸೆಳೆದೊಯ್ದಿರಬೇಕು. ಅಂತೂ ಇವರು ಕಾಣೆಯಾಗಿದ್ದಾರೆ. ಸಂಸ್ಥಾನದ ಅಧಿಕಾರಿಗಳು ಇದನ್ನೆಲ್ಲ ಸುಮ್ಮನೆ ನಿಂತು ನೋಡುತ್ತಿದ್ದರಂತೆ. ಅಂತೂ ಭಾರತ ಪ್ರಜೆಗಳ ಮೇಲೆ ಈ ಬಗೆಯ ಬಹಿರಂಗ ಅತ್ಯಾಚಾರ ನಡೆದ ಮೇಲೆ ಇನ್ನೂ ಭಾರತ ಸರಕಾರವು ಸುಮ್ಮಗಿರಲು ಸಾಧ್ಯವೇ ಇಲ್ಲದ ಪರಿಸ್ಥಿತಿ ಬಂಧಿರುತ್ತದೆ.

ಈ ಘಟನೆಯನ್ನು ಪರಿಶೀಲಿಸುವಾಗ ಹೈದರಾಬಾದು ಸಂಸ್ಥಾನವು ಭಾರತ ಸರಕಾರದೊಡನೆ ಆದಷ್ಟು ಬೇಗನೆ ಜಗಳ ಕಟ್ಟಿಕೊಳ್ಳಬೇಕೆಂಬ ಉತ್ಸಾಹದಲ್ಲಿದ್ದಂತೆ ಕಾಣುತ್ತದೆ. ಭಾರತ ಸರಕಾರವು ಈ ಪ್ರಶ್ನೆಯನ್ನು ಶಾಂತರೀತಿಯಿಂದಲೇ ಬಗೆಹರಿಸಬೇಕೆಂಬ ಧೋರಣೆಯಿಂದ ಎಷ್ಟು ಸಹನೆಯನ್ನು ಕೋರುತ್ತದೆಯೋ ಅದನ್ನೆಲ್ಲ ಭಾರತ ಸರಕಾರದ ದೌರ್ಬಲ್ಯವೆಂದೇ ಆ ಸಂಸ್ಥಾನವು ನಿಶ್ಚಯಿಸಿಕೊಂಡಂತೆ ಕಾಣುತ್ತದೆ. ಹೈದರಾಬಾದು ಇತಿಹಾಸದ ಮಧ್ಯಕಾಲೀನ ನಿದ್ರೆಯಿಂದ ಇನ್ನೂ ಎಚ್ಚತ್ತಿಲ್ಲವೆಂದೇ ಇದಕ್ಕೆ ಹೇಳಬೇಕಲ್ಲದೆ ಮತ್ತೇನು ಹೇಳಬೇಕು?

ನೈಜಾಮರೊಡನೆ ಧನಸಂಪತ್ತು ವಿಶೇಷವಾಗಿದೆ ಎನ್ನುತ್ತಾರೆ. ಆ ಹಣದಿಂದಾಗಿ ಯುರೋಪು ಮೊದಲಾದ ಕಡೆಗಳಿಂದ ಸ್ವಲ್ಪ ಯುದ್ಧ ಸಾಮಾಗ್ರಿಗಳನ್ನು ಕ್ರಯಕ್ಕೆ ಪಡೆದು ಪೋರ್ತುಗೀಸರ ಸಹಾಯದಿಂದ ಗೋವೆ ಮೂಲಕ ಕಳ್ಳಾಟಿಕೆಯಿಂದ ತರಿಸಿಕೊಂಡಿರುವರಂತೆ. ಇದರ ಜೊತೆಗೆ ರಜಾಕರ ಸಂಗಡವೆಂದು ಸುಮಾರು ಒಂದು ಲಕ್ಷದ ಮಟ್ಟಿಗೆ ಸೈನ್ಯ ಸಂಗ್ರಹವೂ ಮಾಡಿಕೊಂಡಂತಿದೆ. ಈ ಬಗೆಯ ಸನ್ನಾಹದಿಂದ ಭಾರತ ಸರಕಾರದಂತಹ ಸುಸಜ್ಜಿತ ರಾಷ್ಟ್ರದೊಡನೆ ಯುದ್ಧ ಕಟ್ಟಿಕೊಳ್ಳಲು ಹೊರಟಿರುವುದು ಕೇವಲ ಹುಚ್ಚುತನವೆಂದು ಹೈದರಾಬಾದು ಸರಕಾರವು ಬಲು ಬೇಗನೆ ಕಾಣಲಿದೆ.

ಹೈದರಾಬಾದಿಗೆ ಬೇರೆ ಬೆಂಬಲವಾದರೂ ಇದೆಯೆ? ಈ ಸಂಸ್ಥಾನದ ಪ್ರಜೆಗಳಲ್ಲಿ ಶೇಕಡಾ ೯೫ರಂತೆ ಹಿಂದೂ ಪ್ರಜೆಗಳಿದ್ದಾರೆ. ಇವರಂತೂ ಈ ಧೋರಣೆಗೆ ಸರ್ವಥಾ ಬೆಂಬಲ ಕೊಡುವಂತಿಲ್ಲ. ಭಾರತದಲ್ಲಿಯ ಮುಸ್ಲೀಮರು ಹೈದರಾಬಾದಿನ ಈಗಿನ ಧೋರಣೆಯನ್ನು ಎಂದೂ ಸಮರ್ಥಿಸುವಂತಿಲ್ಲ. ಇದರಿಂದ ತಾವೆಲ್ಲ ಸಂಕಷ್ಟಕ್ಕೆ ಬೀಳಬೇಕಾಗುವುದೊ ಎಂಬ ಅಂಜಿಕೆ ಅವರಲ್ಲಿ ಒಡೆದು ಕಾಣುತ್ತಿದೆ. ಭಾರತದಲ್ಲಿಯ ಮುಸ್ಲೀಮ ಲೀಗಿನ ಪ್ರಮುಖರು ರಜಾಕರ ಧೋರಣೆಯನ್ನು ಈಗಾಗಲೇ ಬಲವಾಗಿ ಖಂಡಿಸುತ್ತಿದ್ದಾರೆ. ಮತ್ತಾರು ಇವರ ಬೆಂಬಲಕ್ಕೆ ಬರುವರು?

ಪಾಕಿಸ್ಥಾನವು ಹೈದರಾಬಾದಿನ ಸಹಾಯಕ್ಕೆ ಬರಬಹುದೆಂಬ ಆಸೆ ಇವರಲ್ಲಿರಬಹುದು. ಆದರೆ ಪಾಕಿಸ್ಥಾನದ ಈಗಿನ ಪರಿಸ್ಥಿತಿಯಲ್ಲಿ ಅವರು ಮನಸ್ಸಿದ್ದರೂ ಹೈದರಾಬಾದಿನ ಸಹಾಯಕ್ಕೆ ಬಂದು ಭಾರತ ಸರಕಾರದೊಡನೆ ಯುದ್ಧ ಕಟ್ಟಿಕೊಳ್ಳುವಂತಿಲ್ಲ. ಬಾಯಿಮಾತಿನ ಪ್ರಚಾರದಿಂದ ಇವರಿಗೆ ಸಹಾಯಮಾಡಬಹುದಷ್ಟೆ ಅಲ್ಲದೆ ಇನ್ನಾವ ಬಗೆಯ ಸಹಾಯವನ್ನು ಇದು ಒದಗಿಸುವಂತಿಲ್ಲ.

ಇಂಗ್ಲಾಂಡು ಹೈದರಾಬಾದಿನ ಸಹಾಯಕ್ಕೆ ಬರಬಹುದೆಂಬ ಇನ್ನೊಂದು ನಿರೀಕ್ಷೆಯಿದೆಯಂತೆ, ಅಲ್ಲಿಯ ಟೋರಿ ಪಂಗಡದವರು ಇವರನ್ನು ಪ್ರೋತ್ಸಾಹಿಸುತ್ತಿರಬಹುದು. ಆದರೆ ಈಗ ಇಂಗ್ಲಾಂಡನ್ನು ಆಳುವವರು ಟೋರಿ ಪಂಗಡದವರಲ್ಲ. ಆಟ್ಲೀಯವರು ಹೈದರಾಬಾದಿನವರು ಭಾರತ ಸರಕಾರದ ಆಶ್ರಯಪಡೆಯುವುದೇ ಹಿತಕರವೆಂದು ಮೊದಲೇ ಸೂಚಿಸಿಬಿಟ್ಟಿದ್ದಾರೆ. ಇಂಥ ಸಂಸ್ಥಾನಗಳೊಡನೆ ಭಾರತ ಸರಕಾರದ ಮೂಲಕವಲ್ಲದೆ ಸೀದಾ ಸಂಬಂಧ ಕಟ್ಟಿಕೊಳ್ಳುವುದು ಅಸಾಧ್ಯವೆಂದು ಇವರು ಈ ಮೊದಲೇ ಹೇಳಿದ್ದಾರೆ.

ಹೈದರಾಬಾದು ಭಾರತ ರಾಷ್ಟ್ರದ ಮಧ್ಯದಲ್ಲಿದ್ದು ಇದಕ್ಕೆ ಬೇರೆಲ್ಲಿಂದಲೂ ಯಾವ ಸಹಾಯವೂ ದೊರೆಯುವುದು ಕೇವಲ ಭೌಗೋಲಿಕ ದೃಷ್ಟಿಯಿಂದ ಕೂಡಾ ಅಸಾಧ್ಯವಿರುತ್ತದೆ.

ಇಂಥ ಪರಿಸ್ಥಿತಿಯಲ್ಲಿ ಭಾರತ ಸರಕಾರದೊಡನೆ ಯುದ್ಧ ಕಟ್ಟಿಕೊಳ್ಳಲು ಹೊರಟ ಈ ರಾಷ್ಟ್ರಕ್ಕೆ ಹುಚ್ಚೆನ್ನಬೇಕೆ? ನಿದ್ರೆಯೆನ್ನಬೇಕೆ? ತಿಳಿಯದು.

ಅಂತೂ ನೈಜಾಮರಿಗೆ ತನ್ನ ನಿರಂಕುಶ ಅಧಿಕಾರ ಬಿಟ್ಟುಕೊಡಲು ಇಷ್ಟವಿಲ್ಲ. ಪ್ರಜಾತಂತ್ರ ಸರಕಾರ ಸ್ಥಾಪನೆ ಸರ್ವಥಾ ಸಮ್ಮತವಿಲ್ಲ. ಭಾರತ ಸರಕಾರವು ಪ್ರಜಾಧಿಕಾರ ಸ್ಥಾಪನೆಗಾಗಿ ಒತ್ತಾಯಮಾಡುತ್ತಿದೆ. ಇವರ ಮಾತುಕೇಳಿ ತನ್ನ ಅಧಿಕಾರ ಕಳೆದುಕೊಳ್ಳುವುದಕ್ಕಿಂತ ಬಲಾತ್ಕಾರದ ಹಾದಿಹಿಡಿದರೆ ಮೇಲು ಎಂಬ ಭಾವನೆಗೆ ಪ್ರೋತ್ಸಾಹಕೊಟ್ಟು, ತಾವೂ ಪ್ರಮುಖರಾಗಬೇಕೆಂಬ ರಜಾಕರರೆಂಬ ಅಜ್ಞಾನಿಗಳ ತಂಡವೊಂದು ಇವರಿಗೆ ಸಿಕ್ಕಿದೆ. ಇದರ ಪರಿಣಾಮವೆಂದರೆ ನೈಜಾಮರು ತನ್ನ ಹಾದಿಯನ್ನು ಕಳೆದುಕೊಳ್ಳುವುದೇ ಇರುತ್ತದೆ.

ತನ್ನ ಕಾಲದಲ್ಲಿ ನಿಜಾಮರಿಗೆ ಇಂಥ ಅವಸ್ಥೆ ಬರಬಾರದೆಂದು ಲಾರ್ಡ್ ಮೌಂಟ್‌ಬೇಟನ್ನರು ಆಶಿಸಿ ಕೊನೆಯ ಪ್ರಯತ್ನವನ್ನು ಮಾಡಿ ನೋಡಿದರು. ನೈಜಾಮರನ್ನು ಧಿಲ್ಲಿಗೆ ಆಮಂತ್ರಿಸಿ ಒಂದು ಪತ್ರ ಕಳುಹಿಸಿದರು. ಆದರೆ ನೈಜಾಮರು ಆಮಂತ್ರಣವನ್ನು ನಿರಾಕರಿಸಿದರು. ಲಾರ್ಡ್ ಮೌಂಟ್‌ಬೇಟನ್ನರು ನೈಜಾಮರನ್ನು ಉಳಿಸಬೇಕೆಂಬ ಸದಿಚ್ಛೆ ತೋರಿಸಿದರೂ ಅವರಿಗದು ಅರ್ಥವಾಗಲಿಲ್ಲ. ವಿನಾಶಕಾಲಕ್ಕೆ ವಿಪರೀತ ಬುದ್ಧಿಯಷ್ಟೆ?

ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಕೊನೆಯ ಬಾರಿ ಸಾರಿ ಹೇಳುವ ಉದ್ದೇಶದಿಂದ ಹೈದರಾಬಾದಿನ ಮುಖ್ಯ ಮಂತ್ರಿ ಲೈಕ ಆಲಿಖಾನರನ್ನು ಧಿಲ್ಲಿಗೆ ಆಮಂತ್ರಿಸಿದರು. ಇವರೊಡನೆ ಮಾತುಕತೆ ಮಾಡಿ ಹೆಚ್ಚಿನ ಫಲಪ್ರಾಪ್ತಿಯಾಗುವ ಲಕ್ಷಣವು ಕಾಣುವುದಿಲ್ಲ.

ಹೈದರಾಬಾದಿನ ಸೊಕ್ಕು ಮುರಿಯುವ ದಿನ ಬಹಳ ದೂರವಿಲ್ಲವೆಂಬುದು ನಿಶ್ಚಯವೆಂದೇ ಕಾಣುತ್ತದೆ.

ಟೀಕೆ-ಟಿಪ್ಪಣಿಗಳು

ಪೆಲೆಸ್ಟ್ಯಾನ್ ಯುದ್ಧ ನಿಲ್ಲಿಸಲು ಆಜ್ಞೆ

ಪೆಲೆಸ್ಟ್ಯಾನಿನಲ್ಲಿ ಆರಂಭವಾಗಿ ಭರದಿಂದ ಸಾಗುತ್ತಿರುವ ಹೊಡೆದಾಟವನ್ನು ನಿಲ್ಲಿಸಬೇಕೆಂದು ಸಂಯುಕ್ತ ರಾಷ್ಟ್ರ ಸಭೆಯವರು ಇತ್ತಂಡಗಳೊಡನೆ ಕೇಳುವ ನಿರ್ಣಯ ಮಂಜೂರು ಮಾಡಿದ್ದಾರೆ. ನಿಲ್ಲಿಸದಿದ್ದರೆ ದೊಡ್ಡ ರಾಷ್ಟ್ರಗಳು ಕೈಹಾಕಿ ನಿಲ್ಲಿಸಬಹುದಾದ ನಿರ್ಣಯಕ್ಕೆ ಬಹುಮತ ದೊರೆಯದೆ ಬಿದ್ದು ಹೋಯಿತು. ಅಮೇರಿಕ ರಸ್ಯಗಳೆರಡೂ ಇದಕ್ಕೆ ಬೆಂಬಲ ಕೊಟ್ಟರೂ ಈ ನಿರ್ಣಯ ಮಂಜೂರಾಗಲಿಲ್ಲ.

ಯೆಹೂದಿಯರು ತಮ್ಮ ಕಡೆಯವರು ಯುದ್ಧ ನಿಲ್ಲಿಸುವಂತೆ ಆಜ್ಞೆ ಹೊರಡಿಸಿರುವರಾಗಿ ಪ್ರಕಟವಾಗಿಯದೆ. ಅಂದರೆ ಆರಂಭದಲ್ಲಿ ಇವರು ಜಯಶೀಲರಾಗುವರೆಂದು ಕಂಡಿದ್ದರೂ ಇದುತನಕ ನಡೆದ ಯುದ್ಧದಲ್ಲಿ ಅರಬರ ಕೈಯೇ ಮೇಲಾಗಿದೆಯೆಂಬ ಬಗ್ಗೆ ಸಂಶಯವಿಲ್ಲ. ಇದರಿಂದಾಗಿಯೇ ಯೆಹೂದಿಯರು ಯುದ್ಧ ನಿಲ್ಲಿಸಬೇಕೆಂಬ ಆಜ್ಞೆ ಪಾಲಿಸಲು ಮುಂದೆ ಬಂದಿದ್ದಾರೆ. ಮಾತ್ರವಲ್ಲ ತಾವೊಂದು ಪ್ರತ್ಯೇಕ ರಾಷ್ಟ್ರ ಜಾಹೀರು ಮಾಡಿಯಾಯಿತು. ಅಮೇರಿಕ ಮತ್ತು ರಸ್ಯ ಇವೆರಡು ರಾಷ್ಟ್ರಗಳೂ ಈ ಇಸ್ರಾಯೇಲ್ ರಾಷ್ಟ್ರವನ್ನು ಒಪ್ಪಿಕೊಂಡಿವೆ. ಇಂಗ್ಲಾಂಡು ಮನ್ನಿಸಿಲ್ಲವಾದರೂ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಆಫ್ರಿಕ ಸರಕಾರವು ಇದಕ್ಕೆ ಮನ್ನಣೆ ಕೊಟ್ಟಂತೆ ಕೇಳಬರುತ್ತದೆ. ಅಂತೂ ಈಗ ಇದ್ದ ಪರಿಸ್ಥಿತಿ ಇರುವುದಾದರೆ ಯೆಹೂದಿಯರಿಗೆ ಲಾಭವೇ ಎನ್ನಬೇಕು.

ಆದರೆ ಅರಬರು ಯುದ್ಧ ನಿಲ್ಲಿಸಲು ಒಪ್ಪುವರೇ ಎಂಬುದು ಮುಖ್ಯ ಪ್ರಶ್ನೆ. ಇಸ್ರಾಯೇಲ್ ರಾಷ್ಟ್ರವನ್ನು ಅವರು ಎಂದೂ ಮನ್ನಿಸುವಂತಿಲ್ಲ. ಅವರು ಯುದ್ಧ ಮುಂದರಿಸಿದರೆ ಸಂಯುಕ್ತ ರಾಷ್ಟ್ರ ಸಭೆಯವರೇನು ಮಾಡುವರು. ಇದೇ ಮುಖ್ಯ ಪ್ರಶ್ನೆ ಇದ್ದು ಸಂಯುಕ್ತ ರಾಷ್ಟ್ರ ಸಭೆಯ ಮುಂದಿನ ಕಾರ್ಯಕ್ರಮವನ್ನು ಈಗ ಕುತೂಹಲದಿಂದ ಇದಿರು ನೋಡುತ್ತಿರಬೇಕಾಗಿಯದೆ.

ಏಸಿಯಾ ಮತ್ತು ಇತರ ಪೌರ್ವಾತ್ಯ ರಾಷ್ಟ್ರಗಳ ಆರ್ಥಿಕ ಪರಿಷತ್ತು

ಸಂಯುಕ್ತ ರಾಷ್ಟ್ರ ಸಭೆಯ ಆಶ್ರಯದಲ್ಲಿ ಏಸಿಯಾ ಮತ್ತು ಇತರ ಪೌರ್ವಾತ್ಯ ರಾಷ್ಟ್ರಗಳ ಅಂದರೆ ಆಸ್ಟ್ರೇಲಿಯ ಮೊದಲಾದವರೆಲ್ಲರನ್ನೊಳಗೊಳ್ಳುವ ಆರ್ಥಿಕ ಪರಿಷತ್ತೊಂದು ಇದೇ ಬರುವ ಜೂನ್ ತಾ. 1ರಲ್ಲಿ ಉದಕಮಂಡಲದಲ್ಲಿ ಜರಗಲಿಕ್ಕಿದೆ. ಇದರ ಉದ್ಘಾಟನಾಸಮಾರಂಭವನ್ನು ಜರಗಿಸಲು ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಉದಕಮಂಡಲಕ್ಕೆ ಬರಲಿರುವರು.

ಯುರೋಪಿನ ರಾಷ್ಟ್ರಗಳ ಆರ್ಥಿಕ ಉನ್ನತಿಗೆ ಅಮೇರಿಕವು ಮಾರ್ಶಲ್ ಯೋಜನೆಯನ್ನು ಕೈಕೊಂಡಿತು. ಕೋಟಿ ಗಟ್ಟಲೆಯ ಧನ ಸಹಾಯವನ್ನು ಅಮೇರಿಕವು ಈ ರಾಷ್ಟ್ರಗಳಿಗೆ ಒದಗಿಸುತ್ತದೆ. ರಸ್ಯಾದವರು ಇದರ ಉದ್ದೇಶ ರಾಜಕೀಯವೆಂದು ಹೇಳಿ ತನ್ನ ಸುಪರ್ದಿಯೊಳಗೆ ಪೂರ್ವ ಯುರೋಪಿನ ಕೆಲವು ರಾಷ್ಟ್ರಗಳು ಇದಕ್ಕೆ ಸೇರದಂತೆ ಮಾಡಿದರೂ ಇಂಥ ಯೋಜನೆಯ ಸಹಾಯ ಸಿಗದೆ ಈ ರಾಷ್ಟ್ರಗಳು ಸುಧಾರಿಸುವಂತಿಲ್ಲವೆಂಬುದು ಖಂಡಿತ. ಯುದ್ಧದ ಪರಿಣಾಮದಿಂದ ಕಂಗಾಲಾಗಿರುವ ಈ ರಾಷ್ಟ್ರಗಳ ಆರ್ಥಿಕ ಉನ್ನತಿಯಾಗದೆ ಅಮೇರಿಕವೂ ತನ್ನ ವ್ಯಾಪಾರ ವಹಿವಾಟುಗಳನ್ನು ಯಾರೊಡನೆ ನಡೆಸಬೇಕು.

ಇದೇ ರೀತಿ ಏಸಿಯ ಮತ್ತಿತರ ಪೌರ್ವಾತ್ಯ ರಾಷ್ಟ್ರಗಳ ಬಗ್ಗೆ ಕೂಡಾ ಒಂದು ಯೋಜನೆ ತಯಾರಿಸಬೇಕೆಂಬುದು ಈ ಪರಿಷತ್ತಿನ ಉದ್ದೇಶ. ಯುರೋಪಿನ ರಾಷ್ಟ್ರಗಳ ಸಹಾಯಕ್ಕೆ ಅಮೇರಿಕವು ಮುನ್ನುಗ್ಗಿದಂತೆ ಈ ಪೌರ್ವಾತ್ಯ ರಾಷ್ಟ್ರಗಳ ಸಹಾಯಕ್ಕೂ ಬರುವುದೆ? ಈ ರಾಷ್ಟ್ರಗಳಿಗೆ ಬೇಕಾದ ಸಹಾಯ ಒದಗಿಸುವ ಸಾಮರ್ಥ್ಯ ಈಗ ನಿಜವಾಗಿ ಅಮೇರಿಕಕ್ಕೆ ಮಾತ್ರವಿರುತ್ತದೆ.

ಅಂತೂ ಏಸಿಯದ ಹಾಗೂ ಇತರ ಪೌರ್ವಾತ್ಯ ರಾಷ್ಟ್ರಗಳು ತಮ್ಮ ಆರ್ಥಿಕ ಉನ್ನತಿಯ ದಾರಿ ನಿರ್ಣಯಿಸಲು ಹಿಂದುಸ್ಥಾನದಲ್ಲಿ ಪರಿಷತ್ತು ಸೇರುವಂತೆ ಏರ್ಪಾಡಿಸಿದುದು ಸಂತೋಷದ ವಿಷಯ. ಈ ರಾಷ್ಟ್ರಗಳ ಉನ್ನತಿ ಬಗ್ಗೆ ನೆಹರು ಯೋಜನೆಯೊಂದನ್ನು ತಯಾರಿಸಬೇಕಾಗಿ ಅಮೇರಿಕ ಪ್ರತಿನಿಧಿ ಮಿ। ಗ್ರೇಡಿಯವರು ಸೂಚಿಸಿರುವರು

ಮಾರ್ಶಲ್ ಯೋಜನೆಯಂತೆ ವಿಲಿಯ ಗಟ್ಟಲೆ ಧನ ಸಹಾಯ ಒದಗಿಸಲು ಭಾರತ ಸರಕಾರಕ್ಕೆ ಸಾಧ್ಯವಿಲ್ಲವೆಂಬುದು ನಿಜ ಆದರೆ ಎಷ್ಟರ ಮಟ್ಟಿಗೆ ಸ್ವಾವಲಂಬನದಿಂದ ತಮ್ಮ ಆರ್ಥಿಕ ಉನ್ನತಿ ಸಾಧಿಸಬಹುದೆಂಬ ಬಗ್ಗೆ ನೆಹರು ಯೋಜನೆ ಸೂಚಿಸುವುದು ಸಾಧ್ಯವಿರುತ್ತದೆ ನಿಜವಾಗಿ ನೋಡಿದರೆ ಸ್ವಾವಲಂಬನದ ದಾರಿಯೇ ಶ್ರೇಯಸ್ಕರ ವಿರುತ್ತದೆ

ಅಖಂಡ ಕರ್ನಾಟಕ ಸ್ಥಾಪನೆ

ಭಾರತ ರಾಷ್ಟ್ರಕ್ಕೆ ಸೇರಿದ ಕರ್ನಾಟಕದ ಪ್ರತಿನಿಧಿಗಳು ಮತ್ತು ಮೈಸೂರು ಸಂಸ್ಥಾನ ಸರಕಾರದ ಪ್ರತಿನಿಧಿಗಳು ಕರ್ನಾಟಕ ಏಕೀಕರಣದ ಕುರಿತು ಮಾತುಕತೆ ನಡೆಸಿದರೆಂದೂ ಅಖಂಡ ಕರ್ನಾಟಕಕ್ಕೆ ಅಂದರೆ ಮೈಸೂರು ಸಮೇತ ಕರ್ನಾಟಕಕ್ಕೆ ಒಂದೇ ಆಡಳಿತೆ ಇರುವಂತೆ ಸಾಧಿಸುವುದು ಹಿತಕರವೆಂದೂ ಮೈಸೂರು ಮಹಾರಾಜರು ಅಖಂಡ ಕರ್ನಾಟಕದ ಮಹಾರಾಜರಾಗಿ ಪ್ರಜಾಸತ್ತಾತ್ಮಕ ಪದ್ಧತಿಯಿಂದ ಆಳುವಂತೆ ಏರ್ಪಡಿಸಬಹುದೆಂದೂ ಈ ಸಭೆಯಲ್ಲಿ ಅಭಿಪ್ರಾಯವಾಗಿ ಈ ಕುರಿತು ಕೂಲಂಕುಶ ವಿಚಾರ ಮುಂದೆ ನಡೆಸುವಂತೆ ನಿರ್ಧಾರವಾಯಿತೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ

ಈ ಅಭಿಪ್ರಾಯವನ್ನು ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ನಾವು ಈ ಮೊದಲೇ ಸಮರ್ಥಿಸಿರುತ್ತೇವೆ

ಮೈಸೂರು ಬಿಟ್ಟು ಕರ್ನಾಟಕ ಪ್ರಾಂತ್ಯ ಸ್ಥಾಪಿಸುವುದು ವ್ಯವಹಾರ ದೃಷ್ಟಿಯಿಂದ ಸಾಧ್ಯವಿದ್ದರೂ ಕೂಡಾ ಮೈಸೂರು ಸೇರಿದರೆ ಕರ್ನಾಟಕವು ಭಾರತದಲ್ಲಿ ತನ್ನ ಯೋಗ್ಯ ಸ್ಥಾನ ಪಡೆಯಲು ಹೆಚ್ಚು ಅನುಕೂಲವೆಂದೇ ನಮಗನ್ನಿಸುತ್ತದೆ

ದಕ್ಷಿಣ ಕನ್ನಡ ಹಾಗೂ ಕೊಡಗಿಗೆ ಮೈಸೂರವರ ನಿಕಟ ಸಂಬಂಧವಿರುತ್ತದೆ ಮೈಸೂರು ಬಿಟ್ಟು ಮಾಡಬಹುದಾದ ಕರ್ನಾಟಕ ಪ್ರಾಂತ್ಯದಲ್ಲಿ ಸೇರಿಕೊಳ್ಳುವುದಕ್ಕಿಂತಲೂ ಮೈಸೂರು ಸಮೇತ ಇರುವ ಅಖಂಡ ಕರ್ನಾಟಕವೇ ನಮಗೆ ಹೆಚ್ಚು ಅನುಕೂಲ ಕೊಡಗಿನವರೂ ಇದೇ ರೀತಿ ಅಭಿಪ್ರಾಯ ಪಡುವರೆಂದು ನಾವು ಎಣಿಸುತ್ತೇವೆ

ಪ್ರಜಾಸತ್ತಾತ್ಮಕ ರಾಜ್ಯಭಾರವೆಂದ ಬಳಿಕ ಮೈಸೂರು ಮಹಾರಾಜರನ್ನು ಅಖಂಡ ಕರ್ನಾಟಕದ ಮಹಾರಾಜರನ್ನಾಗಿ ಮಾಡಲು ನಿಜವಾಗಿಯೂ ಆಕ್ಷೇಪವಿರಲಾರದು. ರಾಜರೇ ಬೇಡೆನ್ನುವವರು ಇಂಗ್ಲಾಂಡಿನಂಥ ಸ್ವತಂತ್ರ ರಾಷ್ಟ್ರದಲ್ಲಿ ಕೂಡಾ ರಾಜರನ್ನಿಟ್ಟುಕೊಂಡಿದ್ದಾರೆಂಬುದನ್ನು ಮರೆಯಲಾಗದು.

ಮೇಲೆ ಸೂಚಿಸಿದ ಮುಂದಾಳುಗಳ ಸಭೆಯ ನಿರ್ಣಯಕ್ಕೆ ಅಖಿಲ ಕರ್ನಾಟಕವು ಬೆಂಬಲ ಕೊಡಬೇಕೆಂದು ನಾವು ಆಗ್ರಹಪೂರ್ವಕ ವಿನಂತಿ ಮಾಡಿಕೊಳ್ಳುತ್ತೇವೆ

ಅಖಿಲ ಭಾರತ ರಾಷ್ಟ್ರೀಯ ಮಜೂರ ಸಂಘ

ಕಾಂಗ್ರೆಸಿನ ಆಶ್ರಯದಲ್ಲಿ ಸ್ಥಾಪಿತವಾದ ಅಖಿಲ ಭಾರತ ರಾಷ್ಟ್ರೀಯ ಮಜೂರಸಂಘದ ಪ್ರಥಮ ವಾರ್ಷಿಕಾಧಿವೇಶನವು ಬೊಂಬಾಯಿಯಲ್ಲಿ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು

ಆಯಾ ಕೈಗಾರಿಕೆಯ ಮಜೂರರ ಅಖಿಲ ಭಾರತ ಕೇಂದ್ರ ಸಂಸ್ಥೆಗಳನ್ನು ಈ ಸಂಸ್ಥೆಯ ಆಶ್ರಯದಲ್ಲಿ ವ್ಯವಸ್ಥೆಗೊಳಿಸಬೇಕೆಂಬ ಮಹತ್ವದ ನಿರ್ಣಯ ಮಂಜೂರಾಯಿತು.

ಈ ಸಂಸ್ಥೆಯು ದಿನದಿಂದ ದಿನಕ್ಕೆ ಪ್ರಗತಿಹೊಂದುತ್ತಿದ್ದು ಈಗ ಸಾಕಷ್ಟು ಪ್ರಬಲ ಸಂಸ್ಥೆಯಾಗಿ ಮುಂದೆ ನಿಂತದ್ದು ಸಂತೋಷದ ಸಂಗತಿ

ನಿಜವಾಗಿ ಮಜೂರರ ಬೆಂಬಲ ಈ ಸಂಸ್ಥೆಗೆ ಇಲ್ಲವೆಂಬ ಟೀಕೆಗೆ ಇದಕ್ಕೆ ಸೇರಿದ ಮಜೂರ ಸಂಸ್ಥೆಗಳ ಸದಸ್ಯರ ಅಂಕೆ ಸಂಖ್ಯೆಗಳೇ ಸರಿಯಾದ ಉತ್ತರವಿರುತ್ತದೆ ಈ ಅಂಕೆಸಂಖ್ಯೆಗಳು ಈ ಸಂಸ್ಥೆಯು ಬಲವಾಗುತ್ತಿದೆಯೆಂಬುದನ್ನು ಅತ್ಯಂತ ಸ್ಪಷ್ಟವಾಗಿ ಸೂಚಿಸುತ್ತಿವೆ.

ಮಹಾತ್ಮಾ ಗಾಂಧಿಯವರು ಭಾರತದ ಸಕಲ ಪ್ರಶ್ನೆಗಳಲ್ಲಿ ಕೈಹಾಕಿ ತನ್ನ ವಿಶಿಷ್ಟ ದಾರಿ ತೋರಿದಂತೆ ಮಜೂರ ಪ್ರಶ್ನೆಯಲ್ಲಿಯೂ ಇವರು ಸಹಭಾಗಿಗಳಾಗಿ ಮಾತ್ರವಲ್ಲ ಮುಂದಾಳಾಗಿ ನಿಂತು ಮಜೂರ ಚಳವಳ ನಡೆಸಿ ಅದನ್ನು ಯೋಗ್ಯ ರೀತಿಯಲ್ಲಿ ಹೇಗೆ ನಡೆಸಬೇಕೆಂಬುದನ್ನು ಕಾರ್ಯತಃ ತೋರಿಸಿದ್ದರು ಅಹಮ್ಮದಾಬಾದಿನ ಗಿರಣಿ ಕೆಲಸಗಾರರ ಸಂಘವು ಆದೆಷ್ಟೋ ವರ್ಷಗಳಿಂದ ಮಹಾತ್ಮಾ ಗಾಂಧಿಯವರ ದಾರಿಯಲ್ಲಿ ನಡೆಯುತ್ತಾ ಬಂದಿದೆ

ಈ ಕೇಂದ್ರದಲ್ಲಿ ಮಹಾತ್ಮಾ ಗಾಂಧಿಯವರು ಯಾವ ಸತ್ಯ ಮತ್ತು ಅಹಿಂಸಾ ಧರ್ಮಗಳಂತೆ ಮಜೂರ ಚಳವಳ ನಡಸಿದ್ದರೊ ಅದೇ ತತ್ವಗಳಂತೆ ಅಖಿಲಭಾರತದ ಮಜೂರ ಚಳವಳ ನಡಸಬೇಕೆಂಬುದೇ ಈಗ ಕಾಂಗ್ರೆಸಿನ ಆಶ್ರಯದಲ್ಲಿ ನಡೆಯುವ ಅಖಿಲ ಭಾರತ ರಾಷ್ಟ್ರೀಯ ಮಜೂರಸಂಘದ ಉದ್ದೇಶವಿರುತ್ತದೆ.

ಮಜೂರರನ್ನು ರಾಜಕೀಯ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವ ಹಂಚಿಕೆ ಇದರಲ್ಲಿಲ್ಲ. ಮಜೂರರ ಹಿತವೇ ಈ ಚಳವಳದ ಮುಖ್ಯ ಮತ್ತು ಏಕಮಾತ್ರ ಉದ್ದೇಶ. ಆ ಹಿತವನ್ನು ಸಾಧಿಸುವ ಸತ್ಯ ಮತ್ತು ಅಹಿಂಸೆಯ ದಾರಿಯಿಂದ ಮಾತ್ರ ಸಾಧ್ಯವೆಂಬುದು ಈ ಚಳವಳದ ತತ್ವ.

ಮ್ಹಾಲಿಕರು ಮತ್ತು ಮಜೂರರೊಳಗೆ ದ್ವೇಷ ಬೆಳೆಸಿದರೆ ಇತ್ತಂಡಕ್ಕೂ ಸುಖವಿಲ್ಲ. ರಾಷ್ಟ್ರಕ್ಕೂ ಹಿತವಿಲ್ಲ. ಮಜೂರರಿಗೆ ಅನ್ಯಾಯ ನಡೆದರೆ ಶುದ್ಧ ಸತ್ಯಾಗ್ರಹದಿಂದ ನ್ಯಾಯ ದೊರಕಿಸಲು ಸಾಧ್ಯವುಂಟು. ಇದನ್ನು ಮಾತುಗಳಲ್ಲಿ ಹೇಳಿದ್ದು ಮಾತ್ರವಲ್ಲ ಅಹಮ್ಮದಾಬಾದಿನಲ್ಲಿ ಮಹಾತ್ಮಾ ಗಾಂಧಿಯವರು ಕಾರ್ಯತಃ ತೋರಿದ್ದಾರೆ ವರ್ಗ ಕಲಹವು ಅನಿವಾರ್ಯವೆಂಬ ಕಾರ್ಲಮಾರ್ಕ್ಸನ ತತ್ವ ಎಷ್ಟಕ್ಕೂ ಸರಿಯಲ್ಲ ವರ್ಗ ಹಿತಗಳ ಸಮನ್ವಯವೇ ಸಮಾಜ ಹಿತದ ಹಾದಿಯೆಂಬ ಭಾವನೆ ಈ ಚಳವಳದ ತಳಹದಿ

ಕಮ್ಯೂನಿಸ್ಟ ಪಂಗಡಕ್ಕೆ ಸೇರಿದ ಮಜೂರ ಸಂಘಗಳು ತಮ್ಮ ತಮ್ಮ ಶ್ರೇಯಸ್ಸನ್ನು ಕುರಿತು ಸರಿಯಾಗಿ ವಿಚಾರಿಸಲೇ ಬೇಕಾದ ಸಮಯವು ಈಗ ಬಂದಿದೆ ಮ್ಹಾಲಿಕರು ಮತ್ತು ಕೆಲಸಗಾರರು ಇವರೊಳಗೆ ದ್ವೇಷ ಬೆಳೆಸಿ ವರ್ಗಕಲಹ ತೀಕ್ಷ್ಣಗೊಳಿಸುವುದೇ ಕಮ್ಯೂನಿಸ್ಟ ತತ್ವವಿರುತ್ತದೆ ಸತ್ಯ, ನ್ಯಾಯ, ನೀತಿ, ಮೊದಲಾದ ಯಾವ ಸದ್ಗುಣಗಳಿಗೂ ಇದರಲ್ಲಿ ಸ್ಥಾನವಿಲ್ಲ ಉದ್ದೇಶ ಕೈಗೂಡುವಂತಿದ್ದರೆ ಯಾವ ಅನ್ಯಾಯದ ದಾರಿಯೂ ಸರಿಯೆಂಬುದನ್ನು ಇವರು ತತ್ವವಾಗಿ ಇಟ್ಟುಕೊಂಡಿದ್ದಾರೆ

ಶಾಂತತೆಯನ್ನು ಇದುವರೆಗೆ ತೋರಿಕೆಯ ಮಟ್ಟಿಗಾದರೂ ಇಟ್ಟುಕೊಂಡಿದ್ದರು ಈಗ ಅದನ್ನು ಬಿಟ್ಟು ಕಮ್ಯೂನಿಸ್ಟರು ಬಲಾತ್ಕಾರಕ್ಕೆ ಕೈಹಚ್ಚಿರುತ್ತಾರೆಂಬುದು ಅತ್ಯಂತ ಸ್ಪಷ್ಟವಾಗಿದೆಯಷ್ಟೆ? ಇಂತಹ ಪಥವನ್ನು ಹತ್ತಿ ಹೋಗುವುದರಿಂದ ಮಜೂರ ವರ್ಗದ ನಿಜವಾದ ಶ್ರೇಯಸ್ಸನ್ನು ಸಾಧಿಸುವುದು ಸಾಧ್ಯವಿದೆಯೇ? ಈ ಪ್ರಶ್ನೆಯನ್ನು ಇಂದು ಪ್ರತಿಯೊಬ್ಬ ಮಜೂರನು ತನ್ನ ಹೃದಯದಲ್ಲಿಯೇ ವಿಚಾರಿಸಿ ನೋಡಬೇಕು ಇದು ತಪ್ಪು ಹಾದಿಯೆಂದು ಕಂಡುಕೊಂಡು ಕಮ್ಯೂನಿಸ್ಟ ಪಂಗಡ ಬಿಟ್ಟು ರಾಷ್ಟ್ರೀಯ ಮಜೂರ ಸಂಘಕ್ಕೆ ಸೇರಿಕೊಳ್ಳಬೇಕು

ಸಾಮ್ಯವಾದಿ ಪಂಗಡದ ಯೂನಿಯನ್ನುಗಳಿವೆಯಲ್ಲ? ಅದಕ್ಕೇಕೆ ಸೇರಬಾರದೆಂದು ಕೆಲವರು ಕೇಳಬಹುದು. ಸಾಮ್ಯವಾದೀ ಪಂಗಡದ ತತ್ವಗಳು ಕಾರ್ಲಮಾರ್ಕ್ಸನ ತತ್ವಗಳೇ ಎಂಬುದನ್ನು ಮರೆಯಲಾಗದು ಇಲ್ಲಿಯ ಸಾಮ್ಯವಾದಿಗಳು ಕಮ್ಯೂನಿಸ್ಟರಷ್ಟು ಕಡು ಮಾರ್ಕ್ಸವಾದಿಗಳಲ್ಲವೆಂಬುದು ನಿಜ ಅವರು ಹಿಂಸೆ ಅಥವಾ ಅಸತ್ಯಗಳನ್ನು ಪ್ರೋತ್ಸಾಹಿಸುವುದಿಲ್ಲವೆಂಬುದೂ ನಿಜವಿರುತ್ತದೆ ಆದರೂ ಕೂಡ ಮೂಲತಃ ಇವರೂ ವರ್ಗ ಕಲಹದಲ್ಲಿ ವಿಶ್ವಾಸವಿರುವವರೇ ಇರುತ್ತಾರೆ

ವರ್ಗಕಲಹವಲ್ಲ, ವರ್ಗ ಹಿತಗಳ ಸಮನ್ವಯವೆಂಬುದೇ ಸಮಾಜೋನ್ನತಿಯ ನಿಜವಾದ ದಾರಿಯೆಂಬುದು ಭಾರತೀಯ ಸಂಸ್ಕೃತಿಯ ದಿವ್ಯ ಸಂದೇಶವಿರುತ್ತದೆ ಇದನ್ನು ನಮ್ಮಲ್ಲಿಯ ಮಜೂರರು ಒಪ್ಪಿಕೊಂಡು ನಡೆದರೆ ರಾಷ್ಟ್ರವು ಬಲು ಬೇಗನೆ ಉನ್ನತಿಯನ್ನು ಪಡೆಯುವುದು ದೇಶಕ್ಕೆ ಸಿಕ್ಕಿದ ಸ್ವಾತಂತ್ರ್ಯ ಸಾರ್ಥಕವಾಗಿ ಎಲ್ಲರ ಜೀವನದ ಮಟ್ಟವೂ ಏರುವುದು. ಈ ದಿಶೆಯಲ್ಲಿ ಮಜೂರರೆಲ್ಲರೂ ಸಹಕರಿಸುವುದು ಅಗತ್ಯವಿರುತ್ತದೆ.

ನಮ್ಮ ದೇಶದ ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ದೇಶದ ಮುಂದಾಳುಗಳು ಇಲ್ಲಿಯ ಆರ್ಥಿಕ ಸ್ಥಿತಿ ಸುಧಾರಿಸಲು ಸರ್ವ ಪ್ರಯತ್ನ ಮಾಡುವ ಈಗಿನ ಕಾಲದಲ್ಲಿ ಮಜೂರ ವರ್ಗ ನಿಜವಾಗಿ ಸಹಕರಿಸಿ ದೇಶದ ಸಂಪತ್ತನ್ನು ಬೆಳೆಸುವ ಹಾದಿ ಹಿಡಿಯಬೇಕಲ್ಲದೆ ತಮಗೆ ತಿಳಿಯದ ಮಾರ್ಕ್ಸ ತತ್ವಗಳನ್ನು ಕಟ್ಟಿಕೊಂಡು ಗಿಳಿಪಾಠದಂತೆ ಅವನ್ನು ಹೇಳುತ್ತಲಿದ್ದು ಬೇಡದ ಮುಷ್ಕರ ಹೂಡಿ ಮಾತ್ರವಲ್ಲ ಸರಕಾರದ ವಿರುದ್ಧ ಹಿಂಸಾತ್ಮಕ ಚಳವಳಕ್ಕೆ ಕೂಡಾ ಸೇರಿಕೊಳ್ಳುವುದೆಂದರೆ ಇದಕ್ಕಿಂತ ದುಃಖದ ಸಂಗತಿ ಬೇರೊಂದಿಲ್ಲ

ಮಂಗಳೂರಿನ ಎಲ್ಲ ಮಜೂರ ಯೂನಿಯನುಗಳ ಸದಸ್ಯರು ಈ ವಿಚಾರಗಳನ್ನು ಸರಿಯಾಗಿ ಪರಿಶೀಲಿಸಿ ತಮ್ಮ ನಿಜವಾದ ಶ್ರೇಯಸ್ಸಿನ ಹಾದಿ ಹಿಡಿಯಬೇಕಾಗಿ ನಾವು ಅತ್ಯಾಗ್ರಹದಿಂದ ವಿನಂತಿ ಮಾಡಿಕೊಳ್ಳುತ್ತೇವೆ

ಪದವಿನಲ್ಲಿ ಉಪನಗರ

ಪದವಿನಲ್ಲಿ ೬೦೦ ಎಕ್ರೆ ಪಡೆದು ಸಹಕಾರಿ ಪದ್ಧತಿಯಲ್ಲಿ ಸ್ಥಳಗಳನ್ನು ಮನೆಕಟ್ಟಿಸುವವರಿಗೆ ಕೊಡಿಸಿ ಒಂದು ಉಪನಗರ ನಿರ್ಮಾಣ ಮಾಡುವ ಯೋಜನೆಯಾಗಿ ತಷ್ಟೆ? ಈ ಯೋಜನೆಯನ್ನು ಮದರಾಸು ಸರಕಾರವು ಮಂಜೂರು ಮಾಡಿದೆ ಕೋಓಪರೇಟಿವ್ ಸೊಸೈಟಿ ರಿಜಿಸ್ಟ್ರಾರರು ಈ ಯೋಜನೆ ಬಗ್ಗೆ ಒಂದು ಸೊಸೈಟಿಯನ್ನು ಬೇಗನೆ ರಿಜಿಸ್ಟರ್ ಮಾಡಿಸಲಿರುವರು ೬೦೦ ಎಕ್ರೆ ಸ್ಥಳ ಕೊಂಡುಕೊಂಡು ಶುದ್ಧ ನೀರಿನ ಪೂರೈಕೆ, ರಸ್ತೆಗಳು ವಿದ್ಯುಚ್ಛಕ್ತಿ ಮೊದಲಾದವುದರ ವ್ಯವಸ್ಥೆಯಾದನಂತರ ಆ ಸ್ಥಳವನ್ನು ೫೦ ಸೆಂಟ್ಸುಗಳ ೨೦೦ ತುಂಡುಗಳು, ಇಪ್ಪತ್ತೈದು ಸೆಂಟ್ಸುಗಳ ೩೦೦ ತುಂಡುಗಳು, ಮತ್ತು ೧೨ ಸೆಂಟ್ಸುಗಳ ೨೫೦೦ ತುಂಡುಗಳು ಹೀಗೆ ಮೂರು ವಂಗಡಗಳಾಗಿ ಮಾಡಿ ಮೆಂಬರರಿಗೆ ರೂಪಾಯಿ ೨೫೦೦ ರೂ ೧೨೫೦ ಮತ್ತು ರೂ ೬೨೫ ಈ ಕ್ರಯಕ್ಕೆ ವಿಕ್ರಯಿಸಲಾಗುವುದು. ಮೆಂಬರರು ಸೊಸೈಟಿಯಲ್ಲಿ ಕನಿಷ್ಟ ರೂ ೧೦ರ ಐದು ಶೇರುಗಳನ್ನು ಹೊಂದಿದವರಾಗಿರಬೇಕು ಮನೆಕಟ್ಟಿಸಲು ಸೊಸೈಟಿಯವರು ರೂ ೧೦ ಸಾವಿರದ ವರೆಗೆ ಸಾಲ ಕೊಡುವರು (ಹೀಗೆ ಸಾಲಕೊಡುವುದರಲ್ಲಿ ಮದರಾಸು ಸರಕಾರವು ಧನ ಸಹಾಯ ಮಾಡುವುದು) ಪಡದ ಸಾಲವನು ಇಪ್ಪತ್ತು ವರ್ಷಗಳೊಳಗೆ ತಿಂಗಳ ಕಂತುಗಳಲ್ಲಿ ಮರುಪಾವತಿ ಮಾಡಬೇಕು ಈ ಸೊಸೈಟಿಯು-ಶಾಲೆಗಳು ಮಾರ್ಕೆಟ್ಟುಗಳು, ಚಿಕಿತ್ಸಾಲಯಗಳು ಇವುಗಳನ್ನು ನಡೆಸುವುದಲ್ಲದೆ ಪದವಿನಿಂದ ಹಂಪನಕಟ್ಟೆ ತನಕ ಒಂದು ಬಸ್ ಸರ್ವಿಸನ್ನು ನಡೆಸುವುದು ಹೆಚ್ಚಿನ ವಿವರಗಳನ್ನು ಸೊಸೈಟಿಯ ವ್ಯವಸ್ಥಾಪಕರಾದ ಶ್ರೀಗಳಾದ. ಪಿ. ಉಮಾನಾಥ ಭಂಡಾರಿ, ಸಾಹುಕಾರ ಎಂ. ವೆಂಕಟೇಶ ಪೈ, ಜೆ ಪಿ ಪೀಗೊ, ವಿ ಎಸ್. ಕುಡ್ವ, ಧೀರಜ್‌ಲಾಲ್ ವಿರಲ್‌ಜಿ, ಡಾ| ಎಫ್. ಕೊಯಿಲೊ, ಎಸ್, ಎಂ ಅಡ್ಯಂತಾಯ, ಇವರುಗಳಿಂದ ತಿಳಿಯಬಹುದು.

ರಾಮಮಂದಿರ ಸಹಾಯಾರ್ಥ ನಾಟಕ

ಹರಿದಾಸ ಶ್ರೀ| ಶಿವಾನಂದ ಭಟ್ಟರವರು ಭವಂತಿಕೇರಿಯಲ್ಲಿ ಕಟ್ಟಿಸುತ್ತಿರುವ ಶ್ರೀ| ರಾಮಮಂದಿರ ನಿಧಿಯ ಸಹಾಯಾರ್ಥ, ಶ್ರೀ ರಾಮ ಸೇವಾ ಸಂಘದವರು, ಮಂಗಳೂರಿನ ನಿಪುಣ ಕಲಾವಿದರ ಸಹಕಾರ ಪಡೆದು "ದೇವಿ ಮಂಗಲಾ" ಎಂಬ ನಾಟಕವನ್ನು ಇದೇ ತಾ. ೨೯ರಂದು ಶನಿವಾರ ರಾತ್ರಿ ೯-೩೦ಕ್ಕೆ ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಪ್ರಯೋಗಿಸುವರು. ಈ ನಾಟಕವು ಈ ನಗರಕ್ಕೆ ಹೆಸರು ಬರಲು ಕಾರಣಳಾದ ಮಂಗಳಾದೇವಿಯ ಚರಿತ್ರೆ ಮತ್ತು ಕದಿರೆ ದೇವಸ್ಥಾನ ಮಠ ಸ್ಥಾಪನೆಗಳ ಚರಿತ್ರವನ್ನೊಳಗೊಂಡದ್ದಾಗಿದೆ. ಮಹಾಜನರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ.

ವಿವಿಧ ವಿನೋದಾವಳಿಗಳು

ಜೆಪ್ಪು ಸೈಂಟ್‌ಜಾನ್ ಶಾಲಾ ಹಳೇ ವಿದ್ಯಾರ್ಥಿಗಳ ಸಂಘದ ಸಹಾಯಾರ್ಥ ತಾ. ೩೦ರಂದು ರವಿವಾರ ಸಾಯಂಕಾಲ ಘಂಟೆ ೬ಕ್ಕೆ ಮಂಗಳೂರು ಮಿಶನ್ ಹೈಸ್ಕೂಲಿನಲ್ಲಿ ಜೈಹಿಂದ್ ಸಭಾ ಇವರು ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿರುವರು.

ಕಮ್ಯೂನಿಸ್ಟ ಬಂಡಾಯ
ಮೈಲ್ ಬಂಡಿಯ ಮೇಲೆ ಬಲಾತ್ಕಾರ

ಇಲ್ಲಿಯ ಕಮ್ಯೂನಿಸ್ಟ್ ಮುಖಂಡರ ಮೇಲೆ ಕೈದು ವಾರಂಟುಗಳಿದ್ದುವು ಅಂತೇ ಕೆಲವರು ತಲೆಮರಸಿಕೊಂಡಿದ್ದರು ಅವರಲ್ಲಿ ಶ್ರೀ| ಎಸ್. ಎನ್ ಹೊಳ್ಳರು ಒಬ್ಬರಾಗಿದ್ದರು ಈಚೆಗೆ ಇವರು ಜೆಪ್ಪು ವಿನೊಂದು ಮನೆಯಲ್ಲಿ ಅಡಗಿಕೊಂಡಿರುವುದು ಸಿ. ಐ ಡಿ ಗಳ ಗಮನಕ್ಕೆ ಬಂದು ನಾಲ್ವರು ಪೋಲಿಸರು ಹೋಗಿ ಅವರನ್ನು ದಸ್ತಗಿರಿಮಾಡಿ ಅಲ್ಲೇ ಒಂದು ಹೋಟೇಲಿನಲ್ಲಿ ಕುಳ್ಳಿರಿಸಿದ್ದರು ಕಮ್ಯೂನಿಸ್ಟರು ಒಟ್ಟಾಗಿ ಹೋಟೇಲಿನ ಕಡೆಗೆ ಕಲ್ಲು ಬಿಸಾಡಿದರು ಅಲ್ಲಿ ಪೋಲಿಸ್ ಬಂಡಿ ಬಂತು ಮತ್ತು ಕಲ್ಲೆಸೆಯುವವರನ್ನು ಲಾಠಿ ಪ್ರಯೋಗಮಾಡಿ ಚದರಿಸಲಾಯಿತು. ಹೊಳ್ಳರನ್ನು ಸ್ಟೇಶನಿಗೊಯ್ಯಲಾಯಿತು

ಮಂಜೇಶ್ವರದಲ್ಲಿ ಮೈಲ್ ಗಾಡಿಯ ಮೇಲೆ ಬಲಾತ್ಕಾರ

ಶ್ರೀ| ಹೊಳ್ಳರನ್ನು ಮರುದಿನ ಮೈಲ್ ಬಂಡಿಯಲ್ಲಿ ನಾಲ್ವರು ಪೋಲಿಸರ ವಶದಲ್ಲಿ ವೆಲ್ಲೂರಿಗೊಯ್ಯುವಾಗ ಮಂಜೇಶ್ವರದಲ್ಲಿ ಕಮ್ಯೂನಿಸ್ಟರ ಗುಂಪೊಂದು ಬಂಡಿಯೊಳಗೆ ನುಗ್ಗಿ ಹೊಳ್ಳರನ್ನು ಎತ್ತಿಕೊಂಡು ಓಡಿದರು ನಡೆದ ಚಕಮಕಿಯಲ್ಲಿ ನಾಲ್ವರು ಪೋಲಿಸರಿಗೆ ತಿವಿತಗಳಾದುವೆಂದೂ, ಅದರಲ್ಲೊರ್ವನ ಪರಿಸ್ಥಿತಿ ಕಠಿಣವಾಗಿತ್ತೆಂದೂ, ಹೇಳಲಾಗಿದೆ ಈಗ ಪೋಲಿಸನು ಮಂಗಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಗುಣಮುಖವಾಗುತ್ತಿರುವನು ಪೋಲಿಸರ ಬೆಯನೆಟ್ ಬಂದೂಕುಗಳನ್ನು ಕಿತ್ತುಕೊಂಡು ಅದರಿಂದಲೇ ತಿವಿಯಲಾಯಿತೆಂದು ಸುದ್ದಿಯಿದೆ ಅಲ್ಲದೆ ದಾಳಿಗಾರರ ಬಳಿ ಶಸ್ತ್ರಾಸ್ತ್ರಗಳೂ ಇದ್ದುವೆಂದೂ ಹೇಳಲಾಗಿದೆ. ನಂತರ ಮೈಲು ಗಾಡಿಯೂ ಅಲ್ಲಿಂದ ಘಾಯಗೊಂಡ ಪೋಲಿಸರನ್ನು (ಮಂಜೇಶ್ವರ ಸ್ಟೇಶನ್ ಮಾಸ್ಟರರು ಪ್ರಥಮ ಚಿಕಿತ್ಸೆಯನ್ನು ಮಾಡಿದ್ದಾರಂತೆ) ತೆಗೆದುಕೊಂಡು ಪುನಃ ಮಂಗಳೂರಿಗೆ ಬಂತು. ಪೋಲಿಸರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಮತ್ತೆ ಇಲ್ಲಿಂದ ಡಿಪ್ಯೂಟಿ ಪೋಲಿಸ್ ಸುಪರಿಂಟೆಂಡೆಂಟರು ರಿಜರ್ವ್ ಫೌಜೊಂದನ್ನು ತೆಗೆದು ಅದೇ ಮೈಲ್ ಗಾಡಿಯಲ್ಲಿ ಮಂಜೇಶ್ವರಕ್ಕೆ ಹೋದರೆಂದೂ, ಅಲ್ಲಿ ದಾಳಿಗಾರರನ್ನು ಮತ್ತು ಹೊತ್ತುಒಯ್ಯಲ್ಪಟ್ಟ ಹೊಳ್ಳರನ್ನೂ ಪತ್ತೆಹಚ್ಚುವ ಪ್ರಯತ್ನಗಳಾದುವೆಂದೂ ತಿಳಿದುಬಂದಿದೆ ಇದು ತನಕ ಹೊಳ್ಳರ ಪತ್ತೆಯಾಗಿಲ್ಲ.

ಜಿಲ್ಲಾ ಸಮಾಚಾರ

ಇತ್ತ ಮಂಗಳೂರಿನ ಕೆಲ ಕಮ್ಯೂನಿಸ್ಟ್ ಮಜೂರರು ತಾ ೨೧ರಂದು ತಮ್ಮ ಕಾರಖಾನೆಗಳಲ್ಲಿ ಗೈರುಹಾಜರಿದ್ದುದರಿಂದ ಇಂತಹ ಸುಮಾರು ೧೪ ಮಂದಿಯನ್ನು ಗುಮಾನಿಯ ಮೇಲೆ ಪೋಲಿಸ್ ರಿಮಾಂಡಿನಲ್ಲಿಡಲಾಗಿದೆ

೧೪೪ನೇ ಸೆಕ್ಷನ್

ಇಷ್ಟರಲ್ಲೇ ಅವಧಿ ಮುಗಿಯುವ ೧೪೪ನೇ ಪ್ರಕರಣವನ್ನು ಮಂಗಳೂರು ನಗರ ಮತ್ತು ಆಸುಪಾಸಿನಲ್ಲಿ ಇನ್ನೊಂದು ತಿಂಗಳ ವರೆಗೆ ಮುಂದರಿಸಲಾಗಿದೆಂದು ಗೊತ್ತಾಗಿದೆ

ಕಳೆದ ಆದಿತ್ಯವಾರ ತಾ ೧೩ನೇ ರಾತ್ರೆ ಪೋಲಿಸರು ಜಪ್ಪು ಪ್ರದೇಶದ ಕೆಲ ಮನೆಗಳಲ್ಲಿ ಶೋಧ ನಡೆಸಿ ಕೆಲವರ ಕೈದುಗಳನ್ನು ಮಾಡಿರುವರು

ವಿವಾಹ ಸಮಾರಂಭ

ಕಳೆದ ತಾ ೨೩ರಂದು ರವಿವಾರ ವಿಜೃಂಭಣೆಯ ವಿವಾಹ ಸಮಾರಂಭವೊಂದು ಇಲ್ಲಿಯ ಡೊಂಗರಕೇರಿಯ ಅಮ್ಮೆಂಬಳ ಕುಟುಂಬದ ಮನೆಯಲ್ಲಿ ಜರಗಿತು. ಭಾರತ ಸರಕಾರದ ಹಿರಿಯ ಹುದ್ದೆದಾರರಲ್ಲೊಬ್ಬರೂ, ಮೊಸ್ಕೊ ರಾಯಭಾರಿ ಕಛೇರಿಯ ಮುಖ್ಯ ಕಾರ್ಯದರ್ಶಿಗಳೂ ಆಗಿದ್ದ ಶ್ರೀ| ಅಮ್ಮೆಂಬಳ ವಿಟ್ಟಲ್ ಪೈ ಐ ಸಿ ಎಸ್ ಅವರ ಪ್ರಥಮ ಪುತ್ರಿ ಸೌ| ಕನಕಾಬಾಯಿಯನ್ನೂ ಮದ್ರಾಸಿನ ಮೆಡಿಕಲ್ ಕೊಲೆಜಿನಲ್ಲಿ ಶರೀರ ಶಾಸ್ತ್ರದ ಪ್ರೊಫೆಸರರಾಗಿದ್ದ ಕೆಪ್ಟನ್ ಎಂ. ಜಿ ಕಿಣಿಯವರ ಪುತ್ರ ಶ್ರೀ| ಮೋಹನ್ ಕಿಣಿ, ಇವರಿಗೆ ಪಾಣಿಗ್ರಹಣ ಮಾಡಿಕೊಡಲಾಯಿತು ವಧೂವರರಿಗೆ ಶುಭಕೋರಿ ದೇಶವಿದೇಶಗಳಿಂದ ಸಂದೇಶಗಳೂ ಉಡುಗೊರೆಗಳೂ ಬಂದಿದ್ದುವು

ಸಾರಸ್ವ ಗೌ| ಸಾರಸ್ವತ ವಿವಾಹ

ಅರ್ಕುಳದವರಾಗಿದ್ದು ಈಗ ಮಂಗಳೂರಿನಲ್ಲಿರುವ ಶ್ರೀ| ರಾಘವೇಂದ್ರ ಶೆಣೈ ಎಂಬವರು ತಮ್ಮ ಪುತ್ರಿಯನ್ನು ಕುಲೀನ ಸಾರಸ್ವತ ಸಮಾಜದ ದೇವದಾಸ ರಾವ್ ಎಂಬ ತರುಣನೊಡನೆ ವಿವಾಹ ಮಾಡಿದರು ವಧುವು ಇಲ್ಲಿಯ ಗವರ್ನ್‌ಮೆಂಟ್ ಕೊಲೇಜಿನಲ್ಲಿ ಎಫ್ ಎ ಕಲಿಯುತಿದ್ದಳು ವರನು ಬೊಂಬಾಯಿಯಲ್ಲಿ ಕೆಲಸದಲ್ಲಿದ್ದನೆಂದು ತಿಳಿದುಬರುತ್ತದೆ

ಖಾದಿ ಕಾರ್ಯಕರ್ತರು

ಅಖಿಲಭಾರತ ಚರಕಾ ಸಂಘದ ಕಾರ್ಯದರ್ಶಿಗಳಾದ ಶ್ರಿ ಕೃಷ್ಣದಾಸ ಗಾಂಧಿಯವರು ಕಳೆದ ತಾ. ೨೦ರಂದು ನಮ್ಮ ಜಿಲ್ಲೆಗೆ ಬಂದಿದ್ದು ಇಲ್ಲಿಯ ಗ್ರಾಮೋದ್ಯೋಗ ಮತ್ತು ಖಾದಿ ಕಾರ್ಯಗಳನ್ನು ಪರಿಶೀಲಿಸಿ ಮರುದಿನ ಮಂಗಳೂರಿನ ಥಿಯೋಸೋಫಿಕಲ್ ಲಾಜಿನಲ್ಲಿ ರಚನಾತ್ಮಕ ಕೆಲಸಗಾರರ ಸಭೆಯಲ್ಲಿ ಖಾದಿ ಪ್ರಚಾರ ರಚನಾತ್ಮಕ ಕಾರ್ಯಕ್ರಮಗಳ ಮುಂದೊತ್ತುವಿಕೆಗಳ ಕುರಿತು ಸಲಹೆ ಸೂಚನೆಯನ್ನು ಕೊಟ್ಟು ತಾ. ೨೨ರಂದು ಇಲ್ಲಿಂದ ಮಲಬಾರಿನತ್ತ ಪ್ರಯಾಣ ಬೆಳೆಸಿದರು

ಕಾಗದ ಕಾರ್ಖಾನೆ

ದಕ್ಷಿಣ ಕನ್ನಡ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾದ ಈ ಕಾಗದ ಮತ್ತು ರಟ್ಟುಕಾರ್ಖಾನೆಯ ಪ್ರಾರಂಭೋತ್ಸವವು ಮೂಡುಬಿದ್ರೆಯಲ್ಲಿ ಕಳೆದ ತಾ ೨೩ರಂದು ಡಾ| ಯು ಪಿ ಮಲ್ಯ ಎಮ್ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು ಪೂರ್ಣಿಮಾ ಸ್ಟ್ರೋಬೋರ್ಡ್ ಎಂಡ್ ಪೇಪರ್ ಮಿಲ್ಸ್ ಲಿಮಿಟೆಡ್ ಇದು ಈ ಹೊಸ ಸಂಸ್ಥೆಯ ಹೆಸರು

ಎರ್ಮಾಳ-ಬಿದಿರಗುಂಪಿನಲ್ಲಿ ಶಿಶು

ಇಲ್ಲಿಯ ಬಳಿಯ ಬಿದಿರ ಗುಂಪೊಂದರಲ್ಲಿ ಕೆಲ ದಿನಗಳ ಹಿಂದೆ ಒಂದು ಜೀವಂತ ಶಿಶು ಕಂಡುಬಂತೆಂದೂ, ಮುಂಚಿನ ದಿವಸವೇ ಹುಟ್ಟಿದಂತೆ ಅದು ಇದ್ದುದರಿಂದ ಗ್ರಾಮದ ಜನರು ಅದರ ರಕ್ಷಣೆಯನ್ನು ಮಾಡಲೂ ಸ್ಥಳೀಯ ಪಟೇಲರಿಗೆ ಒಪ್ಪಿಸಿಕೆಮಾಡಿದ್ದರಿಂದ ಮಗು ಪಟೇಲರಲ್ಲಿ ಆರೈಕೆಪಡೆಯುತಿದ್ದು ಈ ವಿಷಯ ತನಿಖೆಯೂ ನಡೆಯುತ್ತದೆ

ಬಿಲ್ಲವಪರಿಷತ್ತು

ದ ಕ ಜಿಲ್ಲೆಯ ಬಿಲ್ಲವರ ರಚನಾತ್ಮಕ ಉದ್ದೇಶದ ಪ್ರಥಮ ಪರಿಷತ್ತು ಕಳೆದ ತಾ ೧೬ ಮತ್ತು ೧೭ರಂದು ಕಾರ್ಕಳದಲ್ಲಿ ಜರಗಿತು ಶ್ರೀ ಎನ್ ಎಸ್ ಸುವರ್ಣರು ಅಧ್ಯಕ್ಷರಾಗಿದ್ದು ತಮ್ಮ ಭಾಷಣದಲ್ಲಿ ಜಾತಿ ವರ್ಗದವರು ಹೆಚ್ಚೆಚ್ಚು ವಿದ್ಯಾವಂತರಾಗಿ ಪ್ರಗತಿಪಡಬೇಕೆಂದು ಬಿನ್ನವಿಸಿಕೊಂಡರಲ್ಲದೆ ತಾವೆಲ್ಲರೂ ಭಾರತೀಯರೆಂಬಭಿಮಾನ ಕೊನೆತನಕ ಇಟ್ಟುಕೊಳ್ಳಬೇಕೆಂದ ವಿನಂತಿಸಿಕೊಂಡರು

✠

ನಾರದ ವಿಜ್ಞಾನ ವರದಿ

ಗಿಡಗಳಿಗೆ ವಿದ್ಯುತ್ ಔಷಧಿ

ವಿದ್ಯುತ್ ಶಕ್ತಿಯೆಂದರೆ ಸಾಮಾನ್ಯವಾಗಿ ದೀಪಉರಿಸಲಿಕ್ಕೂ, ಟ್ರೇಮು ಓಡಿಸಲಿಕ್ಕೂ ಇಲ್ಲವೆ ಪೇನು ತಿರುಗಿಸಲಿಕ್ಕೂ ಮಾತ್ರವೇ ಉಪಯೋಗಿಸಲ್ಪಡುವುದೆಂದು ಭಾವಿಸಲ್ಪಡುತ್ತದೆ ಬ್ರಿಟಿಷ್ ವಿಜ್ಞಾನಿಗಳೀಗ ವಿದ್ಯುತ್ ಶಕ್ತಿಯನ್ನು ನೆಲದೊಳಗೆ ಪಸರಿಸಿ ಗಿಡಗಳಿಗೆ ಹಾನಿಕಾರಕವಾದ ಕ್ರಿಮಿಕೀಟಗಳನ್ನು ಕೊಲ್ಲಬಹುದೆಂದು ಕಂಡುಹಿಡಿದಿದ್ದಾರೆ ಮಾತ್ರವಲ್ಲ ಗಿಡಗಳ ಬೇರುಗಳಿಗೆ ಅದನ್ನು ಸಂಪರ್ಕಗೊಳಿಸುವುದರಿಂದ ಅನೇಕ ಸಸ್ಯ ವ್ಯಾಧಿಗಳನ್ನು ಗುಣಪಡಿಸಿ ಆರೋಗ್ಯವಂತ ತೋಟಮಾಡಲು ಅಳವಡಿಸಬಹುದೆಂದೂ ಅವರು ತಿಳಿಸುತ್ತಾರೆ

ಆರಾಮ ಕುರ್ಚಿಯ ಸ್ಪ್ರಿಂಗಿನ ಗಾಡಿ

ಕೂತುಕೊಳ್ಳುವ ಸ್ಥಾನ ಆರಾಮ ಕುರ್ಚಿಯ (Easy chair) ತೆರೆದಲ್ಲಿರುವ ಸ್ಯಾಕಲ್ಲನ್ನೂ ಬ್ರಿಟಿಷ್ ಯಾಂತ್ರಿಕನೋರ್ವ ನಿರ್ಮಿಸಿದ್ದಾನೆ ಇದರಲ್ಲಿ ಕೂತು ದಣಿವಿಲ್ಲದೆ ಸ್ಯಾಕಲ್ಲನ್ನು ತುಳಿಯಬಹುದು ಮಾತ್ರವಲ್ಲ ಅದೆಂತಹ ಹಳ್ಳಿತಿಟ್ಟಿನ ಮಾರ್ಗದಲ್ಲಿ ಆಗಲಿ ಕೂತುಕೊಂಡು ಕುರ್ಚಿಗೆ ಯಾವದೇ ತರದ ಧಕ್ಕೆ ಇಲ್ಲವೆ ಕುಲುಕು ಉಂಟಾಗುವುದಿಲ್ಲವಾದ್ದರಿಂದ ನಮ್ಮ ಕಡೆಗಳಲ್ಲಿನ ಮಾರ್ಗಗಳಲ್ಲಿ ಇಂತವು ಅತ್ಯುಪಯುಕ್ತವೆನ್ನಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಮುದ್ದತಿ ರೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ, ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨$\frac{1}{4}$
೪ರಿಂದ ೫ ತಿಂಗಳು	,,	,,	೨$\frac{1}{2}$
೬ರಿಂದ ೯ ತಿಂಗಳು	,,	,,	೨$\frac{3}{4}$

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ರೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE
CANARA BANK, LIMITED.
ESTD: 1906

ಮಾಲಕ ಮಜೂರ ವಿವಾದಗಳೂ ಮತ್ತದರ ಪರಿಹಾರವೂ

ಕೈಗಾರಿಕೆಯು ಶಾಂತಿ ಸ್ಥಾಪಿಸುವುದೆಂತು?

ಇಂದು ಕೈಗಾರಿಕೆಯು ಉದ್ಯಮದಲ್ಲಿನ ಪರಿಸ್ಥಿತಿ ಸಾಕಷ್ಟು ತೃಪ್ತಿಕರವಿಲ್ಲ. ಮಾಲಕ ಮಜೂರ ವಿವಾದಗಳನ್ನು ಇತ್ಯರ್ಥಿಸುವ ವಿಧಾನಗಳನ್ನು ಕಂಡುಹಿಡಿಯಲು ಭಾರತ ಸರಕಾರವು ಕಳೆದ ದಶಂಬರದಲ್ಲೊಂದು ಪರಿಷತ್ತನ್ನು ಸೇರಿಸಿತ್ತು. ಈ ಪರಿಷತ್ತಿನಲ್ಲಿ ಕೈಗಾರಿಕೆಯಲ್ಲಿ ತಾತ್ಕಾಲಿಕವಾದೊಂದು ಒಪ್ಪಂದವು ಅವಶ್ಯವೆಂಬ ಠರಾವೊಂದು ಸ್ವೀಕೃತವಾಗಿತ್ತು. ಮಾಲಕ ಮಜೂರರೊಳಗೆ ಚಿರವಾದೊಂದು ನೆಮ್ಮದಿಯು ಸೌಹಾರ್ದವುಂಟಾಗದೆ ಕೈಗಾರಿಕೆಯ ಉತ್ಪತ್ತಿಯನ್ನು ಹೆಚ್ಚಿಸುವುದು ಅಸಾಧ್ಯವೇ ಸರಿ. "ಮುಂಬರುವ ಮೂರು ವರ್ಷಗಳ ತನಕವಾದರೂ ಮಜೂರರು ಮುಷ್ಕರಗಳನ್ನು ಮಾಡದೆ ಇರಬೇಕು, ಮಾಲಕರು ಮಳಿಗೆಗಳನ್ನು ಮುಚ್ಚುವ ಹವ್ಯಾಸವನ್ನು ನಿಲ್ಲಿಸಬೇಕು" ಹೀಗೆಂದು ಮೇಲ್ಕಂಡ ಪರಿಷತ್ತು ಬಿನ್ನವಿಸಿಕೊಂಡಿತ್ತು.

ಇಷ್ಟಾದರೂ ಕಳೆದ ತಿಂಗಳಿಂದ ಪುನಃ ಕಳವಳಾಸ್ಪದವಾದ ಕೈಗಾರಿಕೆ ಉದ್ಯಮದ ಘರ್ಷಣೆಯು ಉಂಟಾಗಿರುವುದು ರಾಷ್ಟ್ರೀಯ ಸಂಪತ್ತುತ್ಪತ್ತಿಯ ಕಾರ್ಯವು ಸುಗಮವಾಗಿ ನಡೆಯುತ್ತಿಲ್ಲ. ಮಜೂರ ಶಕ್ತಿ ಅನಾಪ್ರದವಾಗದಂತೆ ರಾಷ್ಟ್ರ ಸಂಪತ್ತು ಬೆಳೆಸಲ್ಪಡಲು ಮಜೂರ ಒಂದ ವಾಳ ಸಂಬಂಧವನ್ನು ಸುಗಮಗೊಳಿಸುವ ಹೊಸ ವಿಧಾನಗಳನ್ನು ಕಂಡುಹಿಡಿಯಬೇಕಾದರೆ ಇದು ತನಕದ ಸರಕಾರದ ಪ್ರಯತ್ನಗಳು ಹೇಗೆ ನಿಷ್ಫಲವಾದುವೆಂಬುದನ್ನು ಅರಿತುಕೊಳ್ಳಬೇಕ.

ಯುದ್ಧಾನಂತರದ ಮುಷ್ಕರಗಳು

ಯುದ್ಧಾನಂತರದ ಕಾಲವು ಘರ್ಷ ಮುಷ್ಕರ ಮತ್ತು ಮಜೂರ ಅತೃಪ್ತಿಯಿಂದ ತುಂಬಿದ್ದಾಗಿದೆ. ಯುದ್ಧ ಕಾಲದಲ್ಲಿ ಉದ್ದೇಶಪೂರ್ವಕವಾದ ಇಂತಹ ಅನತಡೆಗಳು ಕಂಡುಬರಲಿಲ್ಲ. ಆದರೆ ಮುಗಿದಾಕ್ಷಣ ಮಾಲಕ ಮಜೂರ ವಿವಾದಗಳು ಒಂದೇ ಸಮನೆ ಬೆಳೆಯಲಾರಂಭಿಸಿದವು. ಇದಕ್ಕೊಂದು ತೃಪ್ತಿಕರ ಇತ್ಯರ್ಥವು ಕಂಡ ಹಿಡಿಯುವುದು ಅದೆಷ್ಟು ಕಷ್ಟವೋ ಇವರ ಕಾರಣಗಳನ್ನು ಕಂಡುಹಿಡಿಯುವುದಾದರೂ ಅಷ್ಟೇ ಸುಲಭವಾಗಿದೆ.

ನಡೆದ ಇತಿಹಾಸ

"ಬೆಲೆ ವಿಪರೀತ, ವಸ್ತುಗಳ ಕೊರತೆ, ಇವುಗಳಿಂದ ಜೀವನ ಖರ್ಚಿನ ಮಟ್ಟವು ಸಹಜವಾಗಿ ಹೆಚ್ಚಿತು. ಯುದ್ಧಾನಂತರ ನಿಸ್ಸೈನೀಕರಣ ಮತ್ತು ಉದ್ಯೋಗ ಕಡಿತಗಳಿಂದ ನಿರುದ್ಯೋಗದ ಸಮಸ್ಯೆಯೂ ಕಠಿಣವಾಗಿ ತೋರತೊಡಗಿತು. ಯುದ್ಧ ಕಾಲದಲ್ಲಿ ಮಜೂರರು ಅತೀ ಹೆಚ್ಚಿನ ಚೈತನ್ಯವನ್ನುಪಯೋಗಿಸಿ ಉತ್ಪತ್ತಿಯನ್ನು ಹೆಚ್ಚಿಸಲು ಒತ್ತಾಯಮಾಡಲ್ಪಟ್ಟುದುದ್ದರಿಂದ ಅವರ ಶಾರೀರಿಕ ಚೈತನ್ಯವೂ ಕುಂಬಿಹೋಗಿತ್ತು. ಇದರೊಡನೆ ಅಗಾಧ ವಿಶ್ವಶಕ್ತಿಗಳಿಂದ ಚೇತರಿಸಲ್ಪಟ್ಟ ರಾಜಕೀಯ ಜಾಗೃತಿಯೂ ಕೂಡಿಕೊಂಡಿತು. ಈ ಎಲ್ಲಾ ಕಾರಣಗಳಿಂದ ಭಾರತೀಯ ಮಜೂರ ವರ್ಗವನ್ನೂ ಐಕ್ಯಗೊಳಿಸಿ ತಮ್ಮ ಹಕ್ಕು ಬಾಧ್ಯತೆಗಳ ಕಡೆ ಗಮನ ಸೆಳೆಯುವಂತೆ ಮಾಡಿಸು.

ವಿವಾದಗಳ ಅಂಕೆಸಂಖ್ಯೆಗಳು

ಕೈಗಾರಿಕೆ ಸಂಬಂಧದಲ್ಲಿ ಹಿಂದೆಂದೂ ಕಂಡುಬಾರದ ಉತ್ಕ್ರಾಂತಿಗಳು ಯುದ್ಧಾನಂತರ ತಲೆಯೆತ್ತಿದುದರಲ್ಲಿ ಆಶ್ಚರ್ಯವಿಲ್ಲ, 1945ರ ನಂತರ ಮಾಲಕ ಮಜೂರ ವಿವಾದಗಳ ಸಂಖ್ಯೆಗಳು ಏರುತ್ತ ಹೋಗಿರುವುದು ತಿಳಿದುಬರುತ್ತದೆ. 1945ರಲ್ಲಿ 820 ತರದ ಕೈಗಾರಿಕೆ ಸಂಸ್ಥೆಗಳಲ್ಲಿ ವಿವಾದಗಳುಂಟಾಗಿ, 747,530 ಕೆಲಸಗಾರರು ಮುಷ್ಕರ ಹೂಡಿದ್ದು 40ಲಕ್ಷದ 54 ಸಾವಿರದ 499 ಮಜೂರ ದಿನಗಳು ನಷ್ಟವಾಗಿವೆ.

1946ರಲ್ಲಿ ಮುಷ್ಕರದ ಪರಿಣಾಮಕ್ಕೆ 1629 ಸಂಸ್ಥೆಗಳು ಒಳಗಾಗಿ, 19 ಲಕ್ಷದ 61 ಸಾವಿರದ 848 ಕೆಲಸಗಾರರು ಕೆಲಸ ಮಾಡದೆ ಇದ್ದುದರಿಂದ 1ಕೋಟಿ, 26 ಲಕ್ಷದ 17 ಸಾವಿರದ 762 ಮಜೂರ ದಿನಗಳು ನಷ್ಟವಾದುವು.

1947ರಲ್ಲಿ (ಜನವರಿಯಿಂದ ಜುಲೈ ತನಕ) 1097 ಸಂಸ್ಥೆಗಳು ಮುಷ್ಕರಕ್ಕೊಳಗಾಗಿ, 9 ಲಕ್ಷದ 45 ಸಾವಿರದ 310 ಕೆಲಸಗಾರರು ಹತ್ಯಾರು ಕೆಲಗಿಟ್ಟದ್ದರಿಂದ 95ಲಕ್ಷದ 30 ಸಾವಿರದ 700 ಮಜೂರ ದಿನಗಳು ನಷ್ಟವಾಗಿಹೋಗಿವೆ.

ಈ ಅಂಕೆಸಂಖ್ಯೆಗಳಿಂದ ವರ್ಷಂಪ್ರತಿ ಮುಷ್ಕರಗಳು ಹೇಗೆ ಹೆಚ್ಚಿವೆಯೆಂಬ ಸಂಗತಿಯು ಸ್ಪಷ್ಟವಾಗುವುದು. ಪ್ರತಿ ವರ್ಷ ನಷ್ಟವಾದ ಮಜೂರ ದಿನಗಳನ್ನು ನೋಡಿದರೆ ದೇಶದ ಕೈಗಾರಿಕೆಗೆ ಅದೆಷ್ಟು ಕುಂದುಂಟಾಗಿದೆಂದು ಸ್ಪಷ್ಟವಾಗುವುದು.

ಮುಷ್ಕರಮಾಲೆಯ ಪರಿಶೀಲನೆ

1945ರಲ್ಲಿ ಮುಷ್ಕರಮಾಲೆಗಳಿಗೆ ಆರಂಭವಾಯಿತು. ನಂತರದ ಅವಧಿಯು ಕೈಗಾರಿಕೆ ಉದ್ಯಮಕ್ಕೆ ಶುಭಚಿಹ್ನವಾಗಿಲ್ಲ. ಯುದ್ಧಾಂತ್ಯವಾದೊಡನೆ ಮಾಲಕರು ಯುದ್ಧಪೂರ್ವದ ಮಜೂರಿದರವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಅದೇ ರೀತಿ ಮಜೂರರೂ ತಮ್ಮ ತುಟ್ಟಿಭತ್ತೆ ಮತ್ತು ಬೋನಸುಗಳು ಕಡಿಮೆಮಾಡಬಾರದೆಂದೂ ಮಾತ್ರವಲ್ಲ ತಮ್ಮ ಮೂಲ ಮಜೂರಿಯನ್ನು ಹೆಚ್ಚಿಸಬೇಕೆಂದು ಒಬಗಿಂದ ಚಳವಳ ನಡೆಸುವವರಾದರು.

1946ರಲ್ಲಿ ಪರಿಸ್ಥಿತಿಯು ಪರಮಾವಧಿಗೆ ಮುಟ್ಟಿದಾಗ ಮಜೂರರ ಅಶಾಂತಿ ಹೆಚ್ಚಿದುದರ ಪರಿಣಾಮವಾಗಿ ಮುಷ್ಕರಗಳ ಬೆಳೆಯೇ ಹಿಂಬಾಲಿಸಿತು. ಈ ವರ್ಷದಲ್ಲಿ ಇದೇ ದೇಶದಲ್ಲಿ ಮುಷ್ಕರಗಳೇ ಮುಷ್ಕರಗಳು. ಅದರ ವ್ಯಾಪಕತೆಯೂ ವಿಶಾಲವಾಗಿತ್ತು. ಈ ಮುಷ್ಕರ ದಾಹವು ತೋಟಿ ಕೆಲಸದವರಿಂದ ಹಿಡಿದು ಉಪಾಧ್ಯಾಯರ ತನಕ ಎಲ್ಲಾ ಶ್ರಮಜೀವಿಗಳ ಕ್ಷೇತ್ರದಲ್ಲೂ ವ್ಯಾಪಿಸಿತ್ತು. ಕೇವಲ ಕಾರ್ಖಾನೆಗಳಲ್ಲಿ ಮಾತ್ರವಲ್ಲ ಅದರ ಪಿಡುಗು ಶಾಲೆಗಳಿಗೂ, ಬೇಂಕುಗಳಿಗೂ, ವಿಮಾ ಸಂಸ್ಥೆಗಳಿಗೂ, ಸರಕಾರಿ ಕಛೇರಿಗಳಿಗೂ, ರೈಲು, ಮೋಟಾರು ಸಂಸ್ಥೆಗಳಿಗೂ ತಗಲಿತ್ತು. ಪೋಲೀಸ್ ದಳ, ವಿಮಾನ ಮತ್ತು ಮತ್ತು ನೌಕಾದಳಕ್ಕೂ ಅದು ಹರಡಿಕೊಂಡದ್ದು ಇನ್ನೊಂದು ಕೌತುಕದ ವಿಷಯ.

ಹೀಗೆ ಮುಷ್ಕರಗಳಿಂದ ಮಾಲಕ ವರ್ಗಕ್ಕೆ ತಮ್ಮ ಹಿಂದಿನ ಸಾಂಪ್ರದಾಯಗಳ ಮಾದರಿಯಲ್ಲಿ ಇನ್ನು ಮುಂದುವರಿಯುವುದು ಸಾಧ್ಯವಿಲ್ಲವೆಂದು ನೋಡಲಿನ ಸಲಕ್ಕೆ ತಿಳಿಯಿತು. ಹಿಂದಿನ ಘೋಷಣೆಗಳ ವಿಧಾನಗಳ ಕಾಲವು ಮುಗಿಯುವುದೆಂದೂ ಅವರಿಗೆ ಖಚಿತವಾಯಿತು. ಹಿಂದಿನ ಕಾಲದ ಮಾಲಕರು "ಮಜೂರರು ಕೆಲಸ ಕೊಟ್ಟದಕ್ಕೆ ನಮಗೆ ಋಣಿಗಳಾಗಿರಬೇಕು" ಎಂಬ ಭಾವನೆ ಇಂದಿನ ಪರಿಸ್ಥಿತಿಯಲ್ಲಿ ತೀರ ಹಾಸ್ಯಾಸ್ಪದವೆಂದು ತೋರುವಂತಾಯಿತು. ಈಗಿನ ಮಜೂರ ಮನೋಭಾವವು ಮುಂಚಿನಂತಿಲ್ಲವೆಂಬುದೂ ಮಾಲಕ ವರ್ಗಕ್ಕೆ ಖಚಿತವಾಗಿರಬೇಕು.

1947ರಲ್ಲಿ ಅದರ ಮುಂಚಿನ ವರ್ಷದಷ್ಟು ಮುಷ್ಕರದಾಹ ತೋರಲಿಲ್ಲ. ಅದರ ವಿಶಾಲತೆಯೂ ಅಷ್ಟಿರಲಿಲ್ಲ. ಕೈಗಾರಿಕೆ ಕ್ಷೇತ್ರದಲ್ಲಿ ಅನಾಯಕಾರಕ ಪರಿಸ್ಥಿತಿಯೊದಗಿದೆಯೆಂದು ಸರಕಾರವು ಮನಗಂಡಿತು. ಮುಷ್ಕರಾಸ್ತ್ರವನ್ನು ಹಿಡಿಗಿರಿಸುವಂತೆ ವಿನಂತಿಸಿಕೊಂಡಿತು. ಸರಕಾರವು ಕೈಗಾರಿಕೆ ವಿವಾದಗಳನ್ನು ತೀರ್ಮಾನಿಸುವ ಶಾಸನವೊಂದನ್ನು ಜಾರಿಗೆ ತರಲಾಯಿತು.

ಕೂಸಿನ ಮೈ ತಂಪಗಿಡುವ ದಗ್ಗನ್ನು ನಿವಾರಿಸುವ

ತಾಯಂದಿರೂ ಕೂಡ ಉಪಯೋಗಿಸುತ್ತಾರೆ.

ಸುಗಂಧಿತ ಠಿಕ್ಕೆ ನುಣ್ಣಗಿರುವ ಈ ಪೌಡರು ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ

558

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಆರಭ್ಯತು. ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ, ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಮಂಗಳೂರು.
23-12-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B
General Manager.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ತ, ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ. ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 4—6—1948 [ಸಂಚಿಕೆ 22]

ಪ್ರಜಾಪ್ರಭುತ್ವವೂ ಸಮಾಜವಾದವೂ

ಆಧುನಿಕ ಜಗತ್ತಿನ ರಾಜಕೀಯ ತತ್ವಗಳು

ಸರ್ ಹರಿಸಿಂಗ್ ಗೌರ್ ಅವರ ವ್ಯಾಖ್ಯೆ

ಇಂದಿನ ಜಗತ್ತು ಎರಡು ಪರಸ್ಪರ ವಿರೋಧಾತ್ಮಕವಾದೆರಡು ತತ್ವಾನುವರ್ತಿಗಳಾಗಿ ವಿಭಾಗಿತವಾಗಿದೆ. ಪ್ರಜಾಪ್ರಭುತ್ವ ಮತ್ತು ಸಮತಾವಾದಗಳೇ ಈ ಎರಡು ತತ್ವಗಳು. ಆದರೆ ಇವುಗಳನ್ನು ಹಿಂಬಾಲಿಸುವರೆಂದು ಹೇಳಲ್ಪಡುವ ಹೆಚ್ಚಿನವರಿಗೆ ತತ್ವಗಳ ನಿಜವಾದ ಅರ್ಥವು ಸರಿಯಾಗಿ ತಿಳಿದಿದೆಯೆಂದು ಹೇಳಬರುವುದಿಲ್ಲ. ಕಮ್ಯೂನಿಸ್ಟ್ ಸಮತಾವಾದಿಗಳು ತಾವು ಪ್ರಜಾಪ್ರಭುತ್ವವಾದಿಗಳೆಂದು ಪ್ರತಿಪಾದಿಸುತ್ತಾರೆ. ಆದರೆ ಪ್ರಜಾಪ್ರಭುತ್ವದ ಅನುಯಾಯಿಗಳು ಇದನ್ನು ಅಲ್ಲಗಳೆಯುತ್ತಾರೆ. ಈಗ ಈ ಎರಡು ತತ್ವಪ್ರೇಮಿಗಳು ಜಗತ್ತಿನ ಹಲವು ದೇಶಗಳಲ್ಲಿ ಒಡೆತನಕ್ಕಾಗಿ ಹೋರಾಡುತ್ತಿರುವುದು ಕಂಡುಬರುತ್ತದೆ. ಇವುಗಳೆರಡರಲ್ಲಿ ಯಾವುದಾದರೂ ಸರ್ವಸಾಮಾನ್ಯ ತತ್ವವು ಅಡಕವಾಗಿದೆಯೋ ಇಲ್ಲವೆ ಇವುಗಳಲ್ಲಿ ಪರಸ್ಪರ ಹೊಂದಿಕೆಯಿಲ್ಲದ ಮೂಲಭೇದಗಳಿವೆಯೆ, ಹಾಗಿದ್ದರೆ ಅವು ಅದೆಷ್ಟು ವಿಶಾಲವಾಗಿದೆಯೆಂಬುದನ್ನು ತಿಳಿದುಕೊಳ್ಳುವುದುಚಿತ.

ಪ್ರಜಾಪ್ರಭುತ್ವ

ಇಂದಿನ ಪ್ರಜಾಪ್ರಭುತ್ವವು ಸುಮಾರು ಒಂದು ಶತಮಾನದ ಹಿಂದಿನ ಪ್ರಜಾಪ್ರಭುತ್ವಕ್ಕಿಂತ ತುಂಬಾ ವ್ಯತ್ಯಾಸವುಳ್ಳದ್ದಾಗಿದೆ ಎಂದು ರಾಜಕೀಯ ತತ್ವಜ್ಞಾನಿಗಳು ತಿಳಿಸುತ್ತಾರೆ. ಈಗಿನ ಪ್ರಜಾಪ್ರಭುತ್ವವಾದಿಗಳು ಕಮ್ಯೂನಿಸಮನ್ನು ಅದೆಷ್ಟು ತೀವ್ರ ತಾತ್ಸಾರ ಮಾಡುವರೋ ಅಷ್ಟೇ ತೀವ್ರವಾಗಿ ಒಂದು ಶತಮಾನದ ಹಿಂದಿನ ಶ್ರೀಮಂತ ಮತ್ತು ಮಧ್ಯಮವರ್ಗದವರು ಪ್ರಜಾಪ್ರಭುತ್ವವನ್ನು ತಾತ್ಸಾರದಿಂದ ಕಾಣುತ್ತಿದ್ದರು. ಇಂದು ಕಮ್ಯೂನಿಸಮನ್ನು ನಿಕೃಷ್ಟ ಜನತೆಯ ಗುಂಪಿನ ತತ್ವವೆಂದೆನ್ನುವಂತೆ ಆಗಿನವರು ಪ್ರಜಾಪ್ರಭುತ್ವವನ್ನು 'ಸಂತೆಯ ಸೊಲ್ಲು' ಎನ್ನುತ್ತಿದ್ದರು. ಆದರೆ ಕಾಲಕ್ರಮೇಣದಲ್ಲಿ ಪ್ರಜಾಪ್ರಭುತ್ವದ ಮೇಲಿದ್ದ ಈ ಮನಸ್ತಾಪವು ಕಡಿಮೆಯಾಗಿ ಬಂಡವಾಳಶಾಹಿವರ್ಗದವರು ಕೂಡ ಅದನ್ನು ಅನುಮೋದಿಸತೊಡಗಿದರು. ಅಂದಿನಿಂದ ರಾಜಕೀಯ ಕೆಲವೇ ಮಂದಿ ಅಧಿಕಾರ ಸಂಪನ್ನ ಭೂಮ್ಯಾಲಕರಿಂದ ಮಧ್ಯಮವರ್ಗದ ಕೈಗೂ, ಮತ್ತವರಿಂದ ಕೆಳಮಟ್ಟದ ಮಧ್ಯಮವರ್ಗದ ಕೈಗೂ ಬರುವಂತಾಯಿತು. ಆದರೆ ಮಜೂರ ವರ್ಗವು ಸಂಪೂರ್ಣ ಅಧಿಕಾರಹೀನವಾಗಿಯೇ ಉಳಿಯಿತು.

ಸಮತಾವಾದ

ಆದರ ನಂತರದ ವರ್ಷಗಳಲ್ಲಿ ಮಜೂರ ವರ್ಗವು ರಾಜಕೀಯವಾಗಿ ಜಾಗೃತಗೊಂಡು ತಮ್ಮ ಸಂಘಗಳ ಮೂಲಕ ವ್ಯವಸ್ಥಿತವಾಯಿತು. ಕ್ರಮೇಣ ಈ ಸಂಘಗಳು ಬಲಹೊಂದಿ ಸರಕಾರದಲ್ಲಿ ಅಧಿಕಾರದ ಪಾಲನ್ನು ಕೇಳತೊಡಗಿದವು. ಯುರೋಪಿನ ಫ್ರಾನ್ಸಿನಲ್ಲಿ 1789ರಲ್ಲಿ ಉಂಟಾದ ಪ್ರಜಾಕ್ರಾಂತಿಯು ಮತ್ತೆ 1848ರಲ್ಲಿ ಆ ಖಂಡದ ಎಲ್ಲಾ ದೇಶಗಳಲ್ಲಿ ಉಂಟಾದ ಕ್ರಾಂತಿಯ ಪೂರ್ವ ಪೀಠಿಕೆಯಾಯಿತು. ಈ ಎರಡು ಕ್ರಾಂತಿಗಳ ಪರಿಣಾಮವಾಗಿ ಭೂಮಿ ಉಳುವವನು ಕೂಡ ಚೇತನ ಹೊಂದುವಂತಾಯಿತು. ಹಾಗೇ ಕಾರ್ಖಾನೆ ಕೆಲಸಗಾರನೂ ಜಾಗೃತಗೊಂಡನು. ಹೀಗೆ ಶ್ರಮಜೀವಿಗಳು ತಮ್ಮ ದಿನನಿತ್ಯದ ಕಾಯಕಷ್ಟಕ್ಷೇತ್ರದ ಹೊರಗೆ ಇಣಿಕಲಾರಂಭಿಸಿದಾಗ ಪ್ರಜಾಪ್ರಭುತ್ವ ತತ್ವವು ಬುಡದಿಂದ ಕುಲುಕಲಾರಂಭವಾಯಿತು.

ಇಂಗ್ಲೆಂಡಿನ ಪ್ರಜಾಪ್ರಭುತ್ವ ಮೇಲ್ಮಟ್ಟದ ಭೂಮ್ಯಾಲಕರಿಂದ ಮಧ್ಯಮವರ್ಗದ ಆಳುವ ವರ್ಗವೊಂದರ ಕೈಗೆ ಅವರೋಹಣ ಕ್ರಮವಾಗಿ ಇಳಿದುಬಂದದ್ದು. ಆದರೆ ಯುರೋಪಿನಲ್ಲಾದ ಕ್ರಾಂತಿಯ ಪರಿಣಾಮವಾಗಿ ಭೂಮ್ಯವಸಾಯಿಗಳಿಂದ ಆಳುವ ಶಕ್ತಿಯ ವಿಕಾಸವು ಶ್ರಮಜೀವಿಗಳ ದುರೀಣರ ಕೈಗೆ ಹೋಗುವಂತಾಯಿತು. ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾದ ಒಂದು ಶತಮಾನದ ತನಕ ಆಡಳಿತಾಧಿಕಾರವು ಸಾಂಪ್ರದಾಯಿಕವಾದಿಗಳ ಕೈಯಲ್ಲೇ ಇತ್ತು. ಆದರೆ ಈ ವರ್ಗದ ಪ್ರಜಾಪ್ರಭುತ್ವವು ಸಂಕುಚಿತ ದೃಷ್ಟಿಕೋನದ್ದಾಗಿತ್ತೆಂಬುದಕ್ಕೆ ಅದರ ದುರೀಣರಾದ ಚರ್ಚಿಲ್ಲರೂ, ಮತ್ತು ಮಜೂರಪಕ್ಷದ ನಾಯಕ ಎಟ್ಲಿಯವರೂ ಕಮ್ಯುನಿಸಂ ಸಮತಾವಾದದ ಮೇಲೆ ಹೂಡಿದ ತಾತ್ವಿಕ ಯುದ್ಧವೇ ಸಾಕ್ಷಿಯಾಗಿದೆ.

ನಿಜಸ್ವರೂಪ

ಪ್ರಜಾಪ್ರಭುತ್ವ ಮತ್ತು ಕಮ್ಯುನಿಸಂ ತತ್ವಗಳೊಳಗಿನ ನಿಜವಾದ ಅಂತರವನ್ನು ಯುರೋಪ್ ಅಮೇರಿಕಗಳ ಜನರು ತಿಳಿಕೊಂಡಷ್ಟು ಇಂಗ್ಲೆಂಡಿನವರು ತಿಳಕೊಂಡಿಲ್ಲವೆಂದುದರಿಂದ ಸ್ಪಷ್ಟವಾಗುತ್ತದೆ. ಹೇಗೆನ್ನುವಾಗ ರಶ್ಯದ ಕಮ್ಯೂನಿಸ್ಟ್ ಭಕ್ತರು ತಮ್ಮ ತತ್ವದಿಂದ ಜನತೆಗೆ ಅಪಾರವಾದ ಸುಖಸಂತೋಷಗಳು ದೊರಕಿವೆಯೆಂದು ಹೇಳುವುದು ನಿಜವೆಂದು ಒಪ್ಪಿಕೊಂಡದ್ದಾಗಿಲ್ಲ. ರಶ್ಯದ ಕಮ್ಯೂನಿಸ್ಟ್ ರಾಜ್ಯವು ಕಾರ್ಲ್‌ಮಾರ್ಕ್ಸನ ಒಂದು ವಿಚಾರಧಾರೆಯ ಸ್ಫೂರ್ತಿಯಿಂದ ಉದ್ಭವಿಸಿತು. ಮಾರ್ಕ್ಸನು ತಾತ್ವಿಕ ವಿಚಾರದಲ್ಲಿದ್ದ ಪ್ರತ್ಯಕ್ಷ ಕಾರ್ಯಸಾಧಕನಲ್ಲ. ಮನುಷ್ಯನ ಪ್ರಗತಿ ಮತ್ತು ವಿಕಾಸಕ್ಕೆ ವ್ಯಕ್ತಿಸ್ವಾತಂತ್ರ್ಯವು ಅತ್ಯಾವಶ್ಯಕವೆಂಬ ವೈಜ್ಞಾನಿಕ ಸಂಗತಿಯನ್ನು ಏನೂ ಕಡೆಗಣಿಸಿ ತನ್ನ ನಿರೂಪಣೆಯಲ್ಲಿ ಮಜೂರವರ್ಗವು ಸರ್ವಾಧಿಕಾರದಿಂದ ಆಳುವ ತತ್ವವನ್ನು ಒಪ್ಪಿಕೊಂಡನು.

ಬೊಲ್ಶೆವಿಕ್ ಕ್ರಾಂತಿ

ರಶ್ಯನ್ ಕಮ್ಯುನಿಸ್ಟರ ಅಭಿಪ್ರಾಯದಲ್ಲಿ ವಂಶಪರಂಪರಾಗತ ಆಸ್ತಿ ಮತ್ತು ಸ್ವಸಾಮರ್ಥ್ಯದಿಂದ ಗಳಿಸಿದ ಸೊತ್ತುಗಳು ಬಂಡವಾಳಶಾಹಿಯ ಅವಲಕ್ಷಣಗಳೆಂದಿದೆ. ಅವುಗಳನ್ನು ಸರಕಾರದ ವಶಪಡಿಸಲಾಯಿತು. ಮಿಲಿಯಾವಧಿಗಳನ್ನು ಸ್ಫೂರ್ತಿಗೊಳಿಸಿದ ಈ ಕೆಂಪು ತತ್ವವನ್ನು ಕಾರ್ಯರೂಪಕ್ಕೆ ತರಲು ಕೈಮುಷ್ಟಿಯಷ್ಟು ಕಾಲ ದುರೀಣರ ಒಂದು ಮಂಡಲವನ್ನು ಸ್ಥಾಪಿಸಬೇಕಾಯಿತು. ಈ ದುರೀಣರು ಮತ್ತೊರ್ವ ವ್ಯಕ್ತಿಯನ್ನು ತಮ್ಮ ಸರ್ವಾಧಿಕಾರಿಯಾಗಿ ಸ್ವೀಕರಿಸಿದರು. ಆ ವ್ಯಕ್ತಿಯು ಸರ್ವಾಧಿಕಾರಿಯಾಗಿ ಈಗಲ್ಲಿ ಮೆರೆಯುತಿದ್ದಾನೆ. ಇವನ ಅಧಿಕಾರವಾದರೂ ಜರ್ಮನಿಯ 'ನಾಜಿ' ಅಧಿಕಾರಿಗಳಿಗಿಂತ ಎಳ್ಳಷ್ಟೂ ಕಡಿಮೆಯಿಲ್ಲ.

ಇಷ್ಟಾದರೂ ಆ ಓರ್ವ ಸರ್ವಾಧಿಕಾರಿಯಿಂದ (ಸ್ಟೆಲಿನ್) ವಿಶಾಲವಾದ ದೇಶದ ಜನತೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಆದಕ್ಕವನು ಎಲ್ಲಾ ಪ್ರಾಂತಗಳಲ್ಲಿ ಸಂಪೂರ್ಣ ಸರ್ವಾಧಿಕಾರ ಕೊಟ್ಟು ಕೆಲವು ತನ್ನ ಪ್ರತಿಬಿಂಬಗಳನ್ನು ಅವನು ನೇಮಿಸಿದ್ದಾನೆ. ಇವರು ಮಧ್ಯಕಾಲದ ತುಂಡುಪಾಳಯಗಾರರಂತೆ ಆಳುತ್ತಿರುವರು. ಇಲ್ಲಿ ಯದಾಪೂರ್ವಮ ಕಲ್ಪಯೇತ್ ಎಂಬ ಯಾವ ಬಂಡವಾಳಶಾಹಿಯ ಅನಿಷ್ಟವನ್ನು ನಿವಾರಿಸಲು ಈ ತತ್ವವು ಕಂಕಣ ತೊಟ್ಟಿತೋ ಅದನ್ನೇ ಮತ್ತೆ ಅನಿವಾರ್ಯವಾಗಿ ಅನುಸರಿಸಬೇಕಾಯಿತು.

ರಶ್ಯದ ಕಮ್ಯುನಿಸ್ಟ್ ದುರೀಣರು ಜನತೆಯ ಸೇವೆಮಾಡಲು ನಿರ್ಧರಿತರಾದರು. ಆದರೆ ಸಹಜ ಮಾನವ ಸ್ವಭಾವ ಲಕ್ಷಣ ಮತ್ತು ದುರ್ಬಲತೆಗಳು ಅವರನ್ನು ಬಿಟ್ಟು ತೊಲಗಲಿಲ್ಲ. ಅಲ್ಲಿನ ಕಮ್ಯುನಿಸ್ಟ್ ದುರೀಣರು ಸ್ವಸುಖೋಪಭೋಗಗಳಲ್ಲಿಯೂ, ಸ್ವರಕ್ಷಣೆ ಸ್ವಸಂಭ್ರಮದಲ್ಲಿಯೂ ನಿರತರಾಗಿದ್ದಾರೆ. 'ಇಷ್ಟೇ' ಅಲ್ಲ. ರಶ್ಯದ ಕಮ್ಯುನಿಸ್ಟ್ ದುರೀಣರು ತಮ್ಮ ತಮ್ಮ ಪ್ರಾಂತಗಳಲ್ಲಿ ಅಬಾಧಿತ ಅಧಿಕಾರವುಳ್ಳವರಾಗಿರುವುದರಿಂದ ಸ್ವಂತ ಆಸ್ತಿಪಾಸ್ತಿ ಸೊತ್ತು ಸೌಕರ್ಯಗಳನ್ನು ಕಲ್ಪಿಸಿಕೊಂಡಿದ್ದು ಅಲ್ಲೊಂದು ಆಡಳಿತವರ್ಗವನ್ನು ಚಿರಸ್ಥಾಯಿ ಮಾಡಲು ಬಲವಾದ ಅಸ್ತಿವಾರ ಹಾಕಿರುವರು.

ಇಲ್ಲಿ ನಾವೀಗ ಪ್ರಜಾಪ್ರಭುತ್ವಕ್ಕೂ ಕಮ್ಯುನಿಸಮ್ಮಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟ ಕಾಣಬಹುದು. ಪ್ರಜಾಪ್ರಭುತ್ವದಡಿಯಲ್ಲಿ ವ್ಯಕ್ತಿಗಳು ಸ್ವಂತ ಆಸ್ತಿಪಾಸ್ತಿಗಳನ್ನು ನೇರವಾಗಿ ಸ್ವಶ್ರಮದಿಂದ ಗಳಿಸಬಹುದು, ಆದರೆ ರಶ್ಯದ ಕಮ್ಯುನಿಸಂ ರಾಜ್ಯಭಾರದಡಿಯಲ್ಲಿ ಅದನ್ನು ಅಪ್ರತ್ಯಕ್ಷವಾಗಿ ಗಳಿಸಲು ನಿರ್ವಾಹವಿಲ್ಲದೆ ಬಿಡಬೇಕಾಗಿಬಂದಿದೆ.

ಇದರಿಂದ ಕಾರ್ಲ್‌ಮಾರ್ಕ್ಸನು ತನ್ನ ತತ್ವವನ್ನು ಕಲ್ಪನೆಯಲ್ಲಿ ಮಾತ್ರ ಪರಿಪೂರ್ಣಗೊಳಿಸಿದನಲ್ಲದೆ ಮಾನವ ಮನಃಶಾಸ್ತ್ರವನ್ನು ಅವನು ಸಂಪೂರ್ಣ ಕಡೆಗಾಣಿಸಿದನೆಂದು ಸ್ಪಷ್ಟವಾಗುತ್ತದೆ. ಇತ್ತ ಪರಿಪೂರ್ಣ ಪ್ರಜಾಪ್ರಭುತ್ವ ಮಾರ್ಗವನ್ನನುಸರಿಸಿದರೂ, ಅತ್ತ ತೀವ್ರ ಸಮತಾವಾದವನ್ನನುಸರಿಸಿದರೂ ಒಂದೇ ಸರ್ವಸಾಮಾನ್ಯವಾದ ಅನಿಷ್ಟಗಳುಂಟಾಗುವುವೆಂದ ಮೇಲೆ

(೪ನೇ ಪುಟ ನೋಡಿ)

ಸಮಾಜಸೇವಾ ತರಬೇತಿಯ ಅವಶ್ಯಕತೆ

ಹಳ್ಳಿಗಳಲ್ಲಿ ಸಂತೋಷದ ಬೆಳಕನ್ನು ಬೀರಬೇಕು

ಸಂಯುಕ್ತ ಪ್ರಾಂತ್ಯದ ಉದಾತ್ತ ಆದರ್ಶ

"ಪ್ರಾಂತ್ಯದ ಪ್ರತಿಯೊರ್ವ ಹಿತೈಷಿಯು ಶ್ರೀ ಸಂಪೂರ್ಣಾನಂದರಿಗೆ ಈ ಜನಾಂಗೋದ್ಧಾರದ ಯೋಜನೆಗಾಗಿ ಕೃತಜ್ಞತೆ ಸಲ್ಲಿಸಬೇಕು"

ಹೀಗೆಂದು ಕೇಂದ್ರಸಂಪರ್ಕ ಮಂತ್ರಿ ಮಾನ್ಯ ರಫಿಅಹಮದ್ ಕಿದ್ವಾಯಿಯವರು ಸಂಯುಕ್ತ ಪ್ರಾಂತ್ಯದ ಸಮಾಜಸೇವಾ ತರಬೇತಿದಳದವರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಸಂಪೂರ್ಣಾನಂದರು ಸಂಯುಕ್ತ ಪ್ರಾಂತದ ಶಿಕ್ಷಣ ಮಂತ್ರಿಗಳು. ತರುಣರನ್ನು ಸಮಾಜ ಸೇವಾಕಾರ್ಯಗಳಲ್ಲಿ ತರಬೇತಿ ಮಾಡುವುದೇ ಕಿದ್ವಾಯಿಯವರು ಹೇಳಿದ 'ಈ ಜನಾಂಗೋದ್ಧಾರದ ಯೋಜನೆ'.

ಈ ಯೋಜನೆಯನ್ನು ಸಂಪೂರ್ಣಾನಂದರು 1938ರಲ್ಲೇ ತಯಾರಿಸಿದ್ದರು. ಆದರೆ ಕೆಲವೇ ತಿಂಗಳ ಹಿಂದೆ ಅದು ಕಾರ್ಯರೂಪಕ್ಕೆ ಬರುವಂತಾಯಿತು. ಆ ಪ್ರಾಂತ್ಯದಲ್ಲಿ 1649ನೇ ಜನವರಿ 1ರಿಂದ ಸರಕಾರಿ ಕೆಲಸಕ್ಕೆ ತೆಗೆದುಕೊಳ್ಳಲ್ಪಡುವ ಪ್ರತಿಯೊಬ್ಬರೂ ಈ ಸಮಾಜಸೇವಾ ತರಬೇತಿಯ ಪದವಿಪತ್ರವನ್ನು ಹೊಂದಿದವರಾಗಿರಬೇಕೆಂದು ಅಲ್ಲಿನ ಸರಕಾರದವರು ನಿರ್ಧರಿಸಿರುವರು.

ತರಬೇತಿಯ ಉದ್ದೇಶ

ಸಮಾಜಸೇವಾ ತರಬೇತಿಯ ಸಂಪೂರ್ಣ ಅವಧಿಯು ಹನ್ನೊಂದು ತಿಂಗಳು. ಇದರಲ್ಲಿ 2 ತಿಂಗಳು ಹಳ್ಳಿಗಳಲ್ಲಿ ಪ್ರತ್ಯಕ್ಷ ಕಾರ್ಯಮಾಡಬೇಕು. ಉಳಿದ 9 ತಿಂಗಳ ನಗರಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಈ ಸೇವೆಗೆ ಸಂಬಂಧಪಟ್ಟ ಶಾಸ್ತ್ರೀಯ ವಿಷಯ ಜ್ಞಾನವನ್ನು ತಿಳಕೊಳ್ಳುವುದಕ್ಕೆ ವ್ಯಯಿಸಲ್ಪಡುತ್ತದೆ. ಈ ಯೋಜನೆಯ ಉದ್ದೇಶಗಳು ಎರಡು ತರದ್ದಾಗಿವೆ. [illegible] ಲಧಿಕಾರಿಗಳಿಗೆ ವಿಧೇಯತೆಯನ್ನು ಸಲ್ಲಿಸುವ, ಶಿಸ್ತಿನ ಐಕ್ಯದ ಮತ್ತು ಶಕ್ತಿಯ ಭಾವನೆಗಳನ್ನು ಅಭಿವೃದ್ಧಿಪಡಿಸಲು ತರುಣರಿಗೆ ಸಂಪೂರ್ಣ ಸ್ವಾತಂತ್ರ್ಯ [illegible] ಕೊಡಲಾಗುವುದು. ಆದರೆ [illegible] ಡುವ ಸಮಾಜಸೇವಾ [illegible] ದ ಮಾಹಿತಿಯೇ ಈ ಯೋಜನೆಯ ತಿರುಳು.

ಈ ತರಬೇತಿಯಲ್ಲಿ ಮೇಲೆ ಹೇಳಿದ ಎರಡು ವಿಷಯಗಳ ತರಬೇತಿಕೊಡುವುದರಿಂದ ನಮ್ಮ ಭಾವೀ ಸಮಾಜದ ಆಧಾರಸ್ತಂಭಗಳಂತಿರುವ ತರುಣರು ವಿಶ್ವಮಾನ್ಯ ಮಹಾತ್ಮಾ ಗಾಂಧಿಯವರ ತತ್ವಗಳನ್ನು ಸರ್ವತ್ರ ದೇಶಗಳಲ್ಲಿ ಹರಡಲು ಯೋಗ್ಯರಾಗುತ್ತಾರೆ ಮಾತ್ರವಲ್ಲ ಇಡೀ ವಿಶ್ವಕ್ಕೂ ಅವರ ಈ ಮಹೋದಾತ್ತ ಸಂದೇಶವನ್ನು ಸಾರಲು ಅವರು ಸಮರ್ಥರಾಗುವರು.

ಸಮಾಜಸೇವೆಯ ಅವಶ್ಯಕತೆ

ಪ್ರತಿಯೊಂದು ಪ್ರಾಂತದವರಿಗೂ ಇಂತಹ ತರಬೇತಿಯ ಅವಶ್ಯಕತೆಯಿದೆ. ಸ್ವಾತಂತ್ರ್ಯ ನಂತರವೂ ನಮ್ಮ ಹಳ್ಳಿಗಳೂ ಹಿಂದಿನ ಸಾಮ್ರಾಜ್ಯಶಾಹಿಯ ಶೋಷಣೆಯ ಧೋರಣೆಯಿಂದಾಗಿ ನಮ್ಮ ಹಳ್ಳಿಗಳು ಅತ್ಯಂತ ಜೀರ್ಣಾವಸ್ಥೆಯಲ್ಲಿದ್ದವು. ನಮ್ಮ ಹಳ್ಳಿಗನು ನಿರಕ್ಷರ ಕುಕ್ಷಿಯೂ ಆಧುನಿಕ ಆರೋಗ್ಯ ವಿಚಾರಹೀನನೂ ಆಗಿರುವನು. ಹಳ್ಳಿಗಳಲ್ಲಿನ ಮನೆ, ಮಾರ್ಗಗಳು ಅಸಹ್ಯಕರಾಸ್ಪದವಾದ ಹೊಲಸು, ಅನಾರೋಗ್ಯ ಪರಿಸ್ಥಿತಿಯಲ್ಲಿವೆ. ನಮ್ಮ ಗುಡಿಕೈಗಾರಿಕೆಗಳು ಬಹಳ ಅವ್ಯವಸ್ಥೆಯಿಂದ ನಿರ್ವಹಿಸಲ್ಪಡುತ್ತವೆ. ಕೃಷಿ, ನೀರಾವರಿ ಕೆಲಸಗಳು ಅಶಾಸ್ತ್ರೀಯ ವಿಧಾನದಲ್ಲಿ ನಡೆಸಲ್ಪಡುತ್ತವೆ. ಜನತೆಯಲ್ಲಾದರೂ ಪರಸ್ಪರ ಸಹಕಾರದ ಭಾವನೆಗಳು ಪುಷ್ಟಿಗೊಂಡಿರುವುದಿಲ್ಲ.

ಮೇಲೆ ಹೇಳಿದ ಮತ್ತಿತರ ಅನೇಕಾನೇಕವೂ ಅಗಾಧವೂ ಆದ ಲೋಪದೋಷಗಳನ್ನು ನಿವಾರಣೆಮಾಡುವ ಬೃಹತ್ತಾದ ಹೊಣೆಗಾರಿಕೆಯು ಈ ತರಬೇತಿಯಲ್ಲಿ ಉತ್ತೀರ್ಣರಾಗಿರುವ ತರುಣರ ಮೇಲೆ ಬೀಳುವುದು. ಅವರು ನಿಸ್ವಾರ್ಥ ಸ್ವಯಂಸೇವಕರಂತೆ ಹಳ್ಳಿಗಳಿಗೆ ಹೋಗುತ್ತಾರೆ. ಸರಳ ಹಳ್ಳಿಗರನ್ನು ಶಿಕ್ಷಿತರನ್ನಾಗಿ ಮಾಡಲು ಅವರು ಅಲ್ಲಿ ರಾತ್ರಿಶಾಲೆಗಳನ್ನು ತೆರೆಯುವರು. ಅಲ್ಲವರ ಸ್ವಚ್ಛತೆ ಮತ್ತು ಆರೋಗ್ಯಕರ ವಿಧಾನಗಳ ಆದೆಷ್ಟು ಅವಶ್ಯಕವೆಂಬ ಸಂಗತಿಯನ್ನವರು ಹಳ್ಳಿಗರಿಗೆ ಚಿತ್ರಪೂರ್ವಕವಾಗಿ ತಿಳಿಸುವರು. ಅವರು ಶರೀರಪರಿಶ್ರಮದ ಸ್ವಂತ ಆದರ್ಶವನ್ನು ಕಲ್ಪಿಸಲೂ ಹಿಂಜರಿಯಲಾರರು. ಕೊಳೆಯು ಹರಿದುಹೋಗಲು ಉತ್ತಮ ಚರಂಡಿಗಳನ್ನು ಹೇಗೆ ಅಗೆಯಬೇಕು, ನೀರಾವರಿಯ ಪರಮಾವಧಿ ಉಪಯೋಗವನ್ನು ಹೇಗೆ ಹೊಂದುವುದು ಇವೇ ಮೊದಲಾದ ವಿಷಯಗಳನ್ನವರು ಪ್ರತ್ಯಕ್ಷ [illegible] ತೋರಿಸುವರು.

ಹಳ್ಳಿಗರಲ್ಲಿ [illegible] ಸಹಕಾರದ ಮತ್ತು ಶಿಸ್ತಿನ ಜೀವನ [illegible] ಮಾಡುವುದು. ಸಮಾಜಸೇವಾ [illegible] ಗಳಲ್ಲೊಂದು. ಹಿಟ್ಲರನಲ್ಲಿ [illegible] ಕೆಲಸವು [illegible] ದಿಂದ [illegible] ಅಲ್ಲಿ [illegible] ಅವರ ಮಾರ್ಗ [illegible] ಸಮಾಜ [illegible] ರದಿಂದ [illegible] ಸಮಾಜ ಸೇವಕರ ಪಡೆ [illegible] ತರಬೇತಿ ಯೋಜನೆ [illegible] ಗಾಂಧೀಜಿಯ ಸಮಾಜ ಪುನರ್ರಚನಾ ತತ್ವಗಳ [illegible] ಆಧರಿಸಿಕೊಂಡಿದೆ.

ತರಬೇತಿ ಶಿಬಿರದಲ್ಲಿ

ಸಮಾಜಸೇವಾ ತರಬೇತಿ ಶಿಬಿರದಲ್ಲಿನ ಚಟುವಟಿಕೆಗಳ ಸೂರ್ಯೋದಯಕ್ಕೆ ಮೊದಲೇ ಪ್ರಾರಂಭವಾಗುವುವು. ಎದ್ದ ಕೂಡಲೇ ಲಘುವ್ಯಾಯಾಮವಾಗಿ ತರುಣರು ಪ್ರಾತಃ ಉಪಹಾರಕ್ಕೆ ತೆರಳುತ್ತಾರೆ. ನಂತರ ಪುನಃ ಶಿಸ್ತಿನ ವ್ಯಾಯಾಮ 9 ಗಂಟೆ ತನಕ ನಡೆಯುವುದು. ನಂತರ 3 ಗಂಟೆ ಕಾಲ ಅವರಿಗೆ ತತ್ವಜ್ಞಾನ, ಸಾಮಾಜಿಕ ಅರ್ಥಶಾಸ್ತ್ರ, ಚರಿತ್ರೆಯ ಮೇಲೆ ಪ್ರಾಂತ್ಯದ ಪ್ರಖ್ಯಾತ ಪುರುಷರು ಭಾಷಣಕೊಡುವರು. ಮಧ್ಯಾಹ್ನ ಊಟಕ್ಕೆ ಹೋಗುವ ಮೊದಲು ಕೆಲಹೊತ್ತು ವಿದ್ಯಾರ್ಥಿಗಳನ್ನು ಪಂಗಡಗಳನ್ನಾಗಿ ಮಾಡಿ ಕೆಲವರಿಗೆ ಮೋಟಾರು ಚಲಾಯಿಸುವ, ಬಂದೂಕು ಉಪಯೋಗಿಸುವ ಮತ್ತು ಲಾಠಿ ಪ್ರಯೋಗಿಸುವ ತರಬೇತಿಯನ್ನು ಕೊಡಲಾಗುವುದು.

ಮಧ್ಯಾಹ್ನ ಊಟದ ನಂತರ ತುಸು ವಿರಾಮ ಕೊಡಲ್ಪಡುವುದು. ನಂತರ ಸಾಯಂಕಾಲದಲ್ಲಿ ಗುಂಪು ಆಟವನ್ನಾಡಿಸುವರು. ನಂತರ ರಾತ್ರೆ 8 ಗಂಟೆಗೆ ಊಟವಾಗಿ 10 ಗಂಟೆಗೆ ಎಲ್ಲರೂ ನಿದ್ರಿಸಬೇಕಾಗುವುದು.

ಸಮಾಜಸೇವಾ ಕಾರ್ಯ

ತರಬೇತಿಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಸಿಗುವ ಅಲ್ಪ ಬಿಡು ಸಮಯದಲ್ಲಿ ಅವರು ಹತ್ತಿರದ ಹಳ್ಳಿಗಳಿಗೆ ಹೋಗುವರು. ಅಲ್ಲವರು ಮಕ್ಕಳನ್ನು ಒಟ್ಟು ಸೇರಿಸಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಥಮ ಪಾಠಗಳನ್ನವರಿಗೆ ಕಲಿಸಲಾಗುವುದು. ಹತ್ತಿರ ಹತ್ತಿರದ ಹಳ್ಳಿಮಕ್ಕಳನ್ನು ಒಟ್ಟು ಸೇರಿಸಿ ಅವರ ಸಾಮೂಹಿಕ ಕವಾತು ಪ್ರದರ್ಶನವನ್ನು ಮಾಡಿಸಲಾಗುವುದು. ವಯಸ್ಕರಿಗೆ ಶುಚಿತ್ವ, ಆರೋಗ್ಯ ಮೊದಲಾದ ವಿಷಯಗಳ ಕುರಿತು ಕಲಿಸಲಾಗುವುದು. ಸಹಕಾರಿ ಪದ್ಧತಿಯಿಂದ ಕೃಷಿಕೆಲಸ ನಿರ್ವಹಿಸುವಿಕೆ ಪಂಚಾಯತು ಪದ್ಧತಿಯ ಅನುಕೂಲಗಳು ಈ ಕುರಿತು ಅವರಿಗೆ ಬೌದ್ಧಿಕ ಪಾಠಗಳನ್ನು ಕೊಡಲಾಗುವುದು. ಹಳ್ಳಿಯ ಚರಂಡಿಗಳನ್ನು ಸುವ್ಯವಸ್ಥಿತಗೊಳಿಸುವುದೂ ಕೆಸರುಪ್ರದೇಶಗಳನ್ನು ಶುದ್ಧಗೊಳಿಸುವ ಶಾಸ್ತ್ರೀಯ ವಿಧಾನಗಳನ್ನು ಹಳ್ಳಿಗರಿಗೆ ಪ್ರತ್ಯಕ್ಷ ಮಾಡಿತೋರಿಸಲಾಗುವುದು.

ತಮ್ಮ ಬಿಡುವಿನ ಸಮಯದಲ್ಲಿ ಹಳ್ಳಿಗರ ಸೇವೆಮಾಡಲು ಪ್ರತಿಜ್ಞಾಬದ್ಧರಾದ ತರುಣರ ಒಂದು ಗುಂಪೇ ಅಲ್ಲಿ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ [illegible] ಸದಸ್ಯರಾದವರು ಅವರು ತಾವು ಪಾಲಿಸುವ ಕರ್ತವ್ಯವನ್ನು ಸಂಪೂರ್ಣ [illegible] ಪ್ರತಿಜ್ಞಾ ಪತ್ರಕ್ಕೆ ರುಜುಮಾಡುವರು.

ಸಾಂಸ್ಕೃತಿಕ ಮೌಲ್ಯ

ಸಾಯಂಕಾಲ [illegible] ತರಬೇತಿ ಪಡೆವ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಇಚ್ಛೆಗನುಗುಣವಾದ ರುಚಿಯ ಕಲೆಗಳನ್ನು ನಿರ್ವಹಿಸಲು ಪ್ರೋತ್ಸಾಹಿಸಲಾಗುವುದು. ಅವರ ಸ್ವಂತ ವರ್ತಮಾನ ಪತ್ರಿಕಗಳು [illegible] ಚಿತ್ರಗಳನ್ನು [illegible] ಗಳನ್ನು ಒದಗಿಸಲಾಗುವುದು. [illegible] ಚಿತ್ರಗಳು [illegible] ಗಳಲ್ಲಿ [illegible] ಪ್ರದರ್ಶನ [illegible] ಗಳು [illegible] ವ್ಯವಸ್ಥೆಯನ್ನು [illegible] ತಿದ್ದಿದರ [illegible] ಇಂಥ ಶಿಬಿರಗಳಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವಿರುವುದು. [illegible] ನಮ್ಮ ದೇಶದ ಭಾವಿ [illegible] ಹುದು [illegible] ಅವರ [illegible] ಜಿಯ ತತ್ವಗಳನ್ನು ಜಗತ್ತಿಗೆ ಸಾರುವಂತಹರಾಗುವರು.

ವಯಸ್ಸು ಹೋಗುತ್ತಲೆ ಹೆಂಗಸರು ಇಲ್ಲವೆ ಅತೀ ದಪ್ಪ ಬೆಳೆಯುತ್ತಾರೆ ಇಲ್ಲವೆ ಅತಿ ತೆಳ್ಳಗಾಗುತ್ತಾರೆ. ಆದರೆ ಪುರುಷರಲ್ಲಿ ಹೆಚ್ಚಿನ ವ್ಯತ್ಯಾಸಗಳಾಗುವುದಿಲ್ಲ. ಹೆಂಗಸರ ಹಲ್ಲುಗಳ ಗಂಡಸರಿಗಿಂತ ಬೇಗ ಬೀಳುತ್ತವೆ.

✠

ಕೆಲಿಫೋರ್ನಿಯಾ ಪ್ರಾಂತದಲ್ಲಿ ಕಪ್ಪೆ ಪಂದ್ಯಾಟ ಪ್ರಿಯರು ಹತ್ತು ಸಾವಿರಕ್ಕೂ ಮಿಕ್ಕಿ ಇದ್ದಾರೆ. ಈ ವರ್ಷದ ಪಂದ್ಯಾಟದಲ್ಲಿ ಹೆಲಿಯೊಟ್ರೋಪ್ ಎಂಬ ಕಪ್ಪೆ 11 ಅಡಿ 5 ಇಂಚು ಹಾರಿ ಇತರ ಸಾವಿರಾರು ಕಪ್ಪೆಗಳನ್ನು ಸೋಲಿಸಿತು.

ಕಿರುಸುದ್ದಿ ಸಂಗ್ರಹ

ಲಂಡನಿನ ಬಿ. ಬಿ. ಸಿ. ರೇಡಿಯೋ ಇಂಜಿನಿಯರರ ಮನೆಯನ್ನು ಹೊಕ್ಕು ಓರ್ವ ಕಳ್ಳನು ಒಂದು ಕೆಮರಾವನ್ನು ಮತ್ತೊಂದು ಚಿನ್ನದುಂಗುರವನ್ನು ತೆಗೆದು ದೂರದ ರೇಡಿಯೋ ಕೇಂದ್ರದಲ್ಲಿ ಕೆಲಸ ಮಾಡುವ ಆ ಇಂಜಿನಿಯರನಿಗೆ ಟೆಲಿಫೋನಿನಲ್ಲಿ "ನಾನು ನಿನ್ನ ಮನೆಯಿಂದ ಈ ವಸ್ತುಗಳನ್ನು ತೆಗೆದಿದ್ದೇನೆ. ಈಗ ನಿನ್ನ ಮನಸ್ಸಿನಲ್ಲಾಗುವ ಕಳವಳವನ್ನು ತಿಳಿಸುವೆಯಾ?" ಎಂದು ಕೇಳಿದನಂತೆ.

✠

ಜರ್ಮನಿಯ ಲಿಂಜನ್ ಪಟ್ಟಣದಲ್ಲಿ ಕಳವಿನ ಘಟನೆಗಳು [illegible] ಮೇಲಿಂದ ಮೇಲೆ ಆದಾಗ ಗುಪ್ತ ಪೋಲಿಸರು ಪತ್ತೆ ನಡೆಸಲು ಕಳ್ಳರ ಮೂಲವು ಸ್ಥಳೀಕ ಜೈಲಿನಲ್ಲಿ ಇದೆಯೆಂದು ತಿಳಿಯಿತು. ಜೈಲಿನ ವಾರ್ಡರರು ತಮ್ಮ ಉಸ್ತುವಾರಿಯಲ್ಲಿದ್ದ ಕಳ್ಳರನ್ನು ರಾತ್ರಿಹೊತ್ತು ಹೊರಬಿಡುತಿದ್ದು ಅವರು ಕದ್ದುತಂದ ಕೊಳ್ಳೆಯನ್ನು ಹಂಚಿಕೊಳ್ಳುತಿದ್ದರು.

✠

[illegible]

✠

[illegible] 1946ರ [illegible] ವರ್ಷಗಳಲ್ಲಿ 21 ಲಕ್ಷ [illegible]

ನಮ್ಮ ದೇಶದಲ್ಲಿ [illegible] ವರ್ಷಕ್ಕೆ 21 ಲಕ್ಷ [illegible]

✠

ಗಂಟಲು, ಶ್ವಾಸಕೋಶಗಳನ್ನು ಉಪಶಮನ ಮಾಡಿ ರಕ್ಷಿಸುವುದು.

ಬಾಯಲ್ಲಿ ಕರಗಿಹೋಗುವ ಪೆಪ್ಸ್ ಶ್ರೇಷ್ಠ ವಿಷಹಾರಿ ವನಸ್ಪತಿ ಸಾರಗಳನ್ನು ಬಿಟ್ಟುಕೊಡುತ್ತದೆ. ಶ್ವಾಸದ ಮೂಲಕ ಶ್ವಾಸಕೋಶದ ಆಳಕ್ಕೊಯ್ಯಲ್ಪಟ್ಟು ಇದು ವೇದನೆಯನ್ನು ಶಮನಿಸಿ ನಿಮ್ಮನ್ನು ರೋಗದಿಂದ ರಕ್ಷಿಸುತ್ತದೆ.

ಗಂಟಲು ನೋವು, ಕೆಮ್ಮು, ನೆಗಡಿ, ಶೀತ, ಉಬ್ಬಸ, ಶೀತಜ್ವರ ಇದೇ ಶ್ವಾಸಕೋಶ ತೊಂದರೆಗಳಿಗೆ ಪೆಪ್ಸ್ ಪರಿಣಾಮಕಾರಿ ಔಷಧಿ.

ವಿಷಹಾರಿ ಮಾತ್ರೆಗಳಾದ ಪೆಪ್ಸನ್ನು ತೆಗೆದುಕೊಳ್ಳಿರಿ

PEPS

ಪರಪೂರೈಕೆಗೆ ಕೊರತೆಯಿಲ್ಲ

ಟೆಲಿವಿಜನ್ ದೂರದರ್ಶಕ

ಇಂದಂದು ಪ್ರಾಯಶ್ಯ ಬಂದಿದೆ

ಇಂದೆಲ್ಲೆಲ್ಲೂ ಟೆಲಿವಿಜನಿನ ಕುರಿತೇ ಚರ್ಚೆ ನಡೆಯುತ್ತಿದೆ. ಅದೇ ಇಂದಿನ ಮಹತ್ವದ ಮಾತಾಗಿದೆ. ರೇಡಿಯೊದಲ್ಲಾದರೆ ನಾವು ಅತಿ ದೂರದ ವ್ಯಕ್ತಿಗಳನ್ನು ಕೇಳುತ್ತೇವೆ. ಟೆಲಿವಿಜನಿನಲ್ಲಿ ಆ ವ್ಯಕ್ತಿಯನ್ನು ನೋಡಲೂಬಹುದು ಆದುದರಿಂದ ಟೆಲಿವಿಜನ್ ಭಕ್ತರು ಶೀಘ್ರದಲ್ಲಿ ರೇಡಿಯೊ ಎಂಬುದು ಮೋಟರ್‌ಕಾರಿನ ಎದುರು ಕುದುರೆಗಾಡಿಯಂತಾಗುತ್ತದೆ ಎಂದು ಉದ್ಗರಿಸುತ್ತಾರೆ.

ಮಾತ್ರವಲ್ಲ, ಟೆಲಿವಿಜನ್ ಪ್ರಚಾರಕ್ಕೆ ಬಂದ ನಂತರ ಇಂದಿನ ಸಿನೇಮಾ ಗೃಹಗಳೆಲ್ಲವೂ ಬರಿದಾಗುವುವು ಮಕ್ಕಳಿಗೆ ಟೆಲಿವಿಜನಿನ ಮೂಲಕ ಕ್ಲಪ್ತಕಾಲದಲ್ಲಿ ಪಾಠ ಹೇಳಲು ಸಾಧ್ಯವಿರುವುದರಿಂದ ಮುಂದೆ ಮನೆಯ ಕೋಣೆಗಳೇ ಶಾಲೆಗಳಾಗುವುವು ಚುನಾವಣೆಗಳನ್ನು ಟೆಲಿವಿಜನಿನ ಮೂಲಕವೇ ಜಯಿಸಲಾಗುವುದು ಗೃಹಿಣಿಯರು ತಮಗೆ ಬೇಕಾದ ವಸ್ತುಗಳ[illegible] ಅಂಗಡಿಯಲ್ಲಿ ತಮ್ಮ ಟೆಲಿವಿಜನ್ ಪಟ್ಟಿಗೆಯ[illegible] ನೋಡಿ ಬೇಕಾದುದನ್ನು ಟೆಲಿಫೋನಿನ ಮೂಲಕ ಮಾತಾಡಿ ಕುಳಿತಲ್ಲೆ ತರಿಸುವರು. ಹೀಗಾಗಿ ಅಂಗಡಿ ತಿರುಗುವ ಶ್ರಮ ಉಳಿತಾಯವಾಗುವುದು

"ಟೆಲಿವಿಜನಿನ ಭವಿಷ್ಯವು ಮಾನವ ಮನಸ್ಸು ಗ್ರಹಿಸಲು ಸಾಧ್ಯವಿರುವಷ್ಟು ವಿಶಾಲವಾಗಿದೆ ಅದರಿಂದ ಮಾನವ ಮನಸ್ಸು ಸುಪ್ರಸನ್ನವಾಗುವುದರಿಂದ ವಿಶ್ವಶಾಂತಿ ಸಮಸ್ಯೆಗಳಿಗೆ ಟೆಲಿವಿಜನು ಅತ್ಯಂತ ಸಹಾಯಕವಾಗುವುದು" ಹೀಗೆಂದು ಅಮೇರಿಕದ ಟೆಲಿವಿಜನ್ ಪ್ರಸಾರಕರ ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಬೆಳೆಯುವ ಮಗು

ಇದು ಶ್ರೇಷ್ಠ ಬುದ್ಧಿಶಕ್ತಿಯುಳ್ಳ ಬಾಲಕನಂತಿರುವ ಟೆಲಿವಿಜನಿನ ಭಾವಿ ಪರಿಣಾಮ [illegible]ವಾಗುವುದೊ ಅನಿಷ್ಟಕಾರಿ[illegible]ವುದೊ ಇಲ್ಲವೇ ಇವೆರಡರ ಮಿಶ್ರ[illegible]ಗುವುದೊ ಈಗ ಹೇಳಬರುವುದಿಲ್ಲ ಆದರೆ ಅದು ಶೀಘ್ರದಲ್ಲಿ ವಿಶ್ವವನ್ನಾವರಿಸುವುದು ಖಂಡಿತ 1927ರಲ್ಲಿ ಚಾರ್ಲ್ಸ್ ಲಿಂಡ್‌ಬರ್ಗನು ವಿಮಾನದಲ್ಲಿ ಅಟ್ಲಾಂಟಿಕ್ ಸಾಗರವನ್ನು ಒಂದೇ ಓಟಕ್ಕೆ ಹಾರುವ ಮುಂಚೆ ವಿಮಾನಗಳು ಅದೆಷ್ಟು ಅಪರಿಚಿತವಾಗಿದ್ದುವೊ ಇಂದು ಟೆಲಿವಿಜನ್ ಅದೇ ಅವಸ್ಥೆಯಲ್ಲಿದೆ ಅಂದಿನ ವಿಮಾನಗಳಷ್ಟೇ ಅದು ಅಪರಿಪೂರ್ಣವಾಗಿದೆ. ಆದರೆ ಅದು ಖಂಡಿತ ಜನಪ್ರಿಯವಾಗುವುದು ಅದು ಜಗತ್ತಿನ ಜನರ ಜೀವನದಲ್ಲಿ ಮಹತ್ತಾದ ಮಾರ್ಪಾಟನ್ನು ಮಾಡುವುದು.

ಈಗ ಸದ್ಯಕ್ಕೆ ಬಹಳ ಮುಂದುವರಿದ ದೇಶವಾದ ಸಂಯುಕ್ತ ಅಮೇರಿಕದಲ್ಲೇ ಶೇಕಡಾ ಕತ್ತರಷ್ಟು ಜನರು ಕೂಡ ಟೆಲಿವಿಜನ್ನು ಕಣ್ಣಿಂದ ನೋಡಿದವರಲ್ಲ. ಅಲ್ಲಿ ಈಗ ಕೇವಲ 27 ಟೆಲಿವಿಜನ್ ಪ್ರಸಾರಕ ಕೇಂದ್ರಗಳು ಇವೆ. (ರೇಡಿಯೊ ಪ್ರಸಾರಕ ಕೇಂದ್ರಗಳು ಅಲ್ಲಿ 1600 ಕೇಂದ್ರಗಳು ಇವೆ.) ರೇಡಿಯೊಗ್ರಾಹಕ ಉಪಕರಣಗಳು ಸಂಯುಕ್ತ ಅಮೇರಿಕದಲ್ಲಿ 66 ಮಿಲಿಯಗಳಷ್ಟಿವೆ. ಆದರೆ ಟೆಲಿವಿಜನ್ ಉಪಕರಣಗಳ ಸಂಖ್ಯೆ 3½ಲಕ್ಷ ಮಾತ್ರ. ಆದರೆ

ವಿನಿಯಂತ್ರಣದಿಂದ ಹಾನಿಯಿಲ್ಲ

ಆಹಾರಮಂತ್ರಿಗಳ ಅಂಕೆಸಂಖ್ಯೆಗಳು

ನಮ್ಮ ಪ್ರಾಂತ್ಯದ ಮಟ್ಟಿಗೆ ವಿನಿಯಂತ್ರಣದಿಂದ ಹಾನಿಯಾಗಿಲ್ಲವೆಂದು ಆಹಾರ ಮಂತ್ರಿ ಡಾ। ರಾಜನ್ ಅವರು ಒಂದು ರೇಡಿಯೊ ಭಾಷಣದಲ್ಲಿ ತಿಳಿಸಿದರು, ಕಾರಣ ಬೊಂಬಾಯಿಯಲ್ಲಿ ಬೆಲೆಗಳ ಮಟ್ಟವು ಶೇಕಡಾ 300ರಷ್ಟು ಏರಿದೆ ನಮ್ಮ ಪ್ರಾಂತ್ಯದಲ್ಲಿ ಒಂದೆರಡು ಸ್ಥಳಗಳಲ್ಲಿ ಹೊರತು ಇತರ ಎಲ್ಲಾ ಭಾಗಗಳಲ್ಲಿ ಸರಾಸರಿ ಶೇಕಡಾ 50ರಿಂದ 95ರಷ್ಟು ಮಾತ್ರ ಏರಿದೆ. ಬಡಜನರ ಸರಾಸರಿ ಸಂಪಾದನೆಯೂ ಅದೇ ಮಟ್ಟದಲ್ಲಿ ಏರಿರುತ್ತದೆ ಬೆಲೆಗಳ ಏರಿತವು ಕ್ಷಾಮವನ್ನುಂಟುಮಾಡುವಷ್ಟಾಗಿಲ್ಲ

ರಿಲೀಫ್ ಶೋಪುಗಳು

ಬೆಲೆಗಳನ್ನು ನಿಯಂತ್ರಣದಲ್ಲಿಡುವುದಕ್ಕೆ ಪರಿಹಾರದ ಅಂಗಡಿಗಳನ್ನು ತೆರೆಯಲಾಗಿದೆ ಈ ಯೋಜನೆಯು ಯಶಸ್ವಿಯಾಗಿ ನಡೆದಿದೆ ಇದರಿಂದ ಬೆಲೆಯ ಮಟ್ಟವು ಮೆಲ್ಲನೆ ತಗ್ಗುತ್ತಿರುವುದು

ಆಹಾರ ಹೆಚ್ಚು ಬೆಳೆಸುವುದರಿಂದಲೂ ಬೆಲೆಗಳನ್ನು ಹತೋಟಿಯಲ್ಲಿಡಬಹುದು

ಟೆಲಿವಿಜನ್ ಎಂಬೀ ಶಿಶು ದಿನೇ ದಿನೇ ವರ್ಧಮಾನವಾಗುತ್ತಿದೆ

ಇತಿಹಾಸ

ವಸ್ತುಗಳ ಮೇಲೆ ಬೀಳುವ ನೆರಳು ಮತ್ತು ಪ್ರಕಾಶದ (Light and Shade) ಕಿರಣಗಳನ್ನು ವಿದ್ಯುತ್ ಪ್ರವಾಹದ ಬಿಂದು (Electric impulses) ಗಳನ್ನಾಗಿ ಪರಿವರ್ತಿಸಬಹುದೆಂಬ ಒಂದು ಸೂಚನೆ [illegible] ಆಲೋಚನೆ ತರುಣ ಶಂತಿವರ್ತ[illegible] ತಿಳಿಸುವವನಿಗೆ ಆಕಸ್ಮಿಕವಾಗಿ ಹೊಳೆಯಿತು 1884ರಲ್ಲಿ ಪೋಲ್ ನಿಪ್‌ಕೊವ್ ಎಂಬ ಜರ್ಮನ್ ವಿಜ್ಞಾನಿಯು ಇಂದಿನ ಟೆಲಿವಿಜನ್ ಯಂತ್ರದ ಮೂಲ ಮಾತೃಕೆಯನ್ನು ತಯಾರಿಸಿದನು ಅವನ ಯಂತ್ರವು ಹತಗಳ [illegible] ಒಂದುಕಡೆಯಿಂದಿನ್ನೊಂದು ಕಡೆಗೆ ಒಯ್ಯುತ್ತು [illegible] ರೇಡಿಯೊವನ್ನು ಕಂಡುಹಿಡಿದ ಇಟಲಿಯ ಮಾರ್ಕೊನಿಯೂ ಚಲಚಿತ್ರಗಳನ್ನು ಕಂಡುಹಿಡಿದ ಅಮೇರಿಕದ ಎಡಿಸನನೂ ಈ ಚಿತ್ರಗಳಿಗೆ ಬಣ್ಣ, ಚಲಿಸುವ ಶಕ್ತಿಯನ್ನು ಕೊಟ್ಟನು

1906ರಲ್ಲಿ ಲಿವೊರೆಸ್ಟ್ ಎಂಬವನು ಈಗಿನ ರೇಡಿಯೊ ಮತ್ತು ಟೆಲಿವಿಜನುಗಳೆರಡಕ್ಕೂ ಉಪಯುಕ್ತವಾದ 'ವಕ್ಯುಂ ಟ್ಯೂಬ್'ಗಳನ್ನು ಕಂಡುಹಿಡಿದನು ನಂತರ 1923ರಲ್ಲಿ ವ್ಲಾಡಿಮಿರ್ ಜ್ವೊಂಕಿನ್ ಎಂಬ ರಶ್ಯನ್ ವಿಜ್ಞಾನಿಯು ಟೆಲಿವಿಜನಿನ ತಂತ್ರವನ್ನು ಕೇವಲ ಯಾಂತ್ರಿಕ ವಿಧಾನದಿಂದ ಶುದ್ಧ ವಿದ್ಯುತ್ ವಿಜ್ಞಾನವಾಗಿ ಪರಿವರ್ತಿಸಿದನು.

ಆ ನಂತರದಿಂದ ಇಂಗ್ಲೆಂಡ್ ಯುರೋಪ್ ಅಮೇರಿಕಾ ದೇಶಗಳಲ್ಲಿನ ವಿದ್ಯುತ್ ಪ್ರಯೋಗಾಲಯಗಳಲ್ಲಿ ತಜ್ಞರು ರಾತ್ರಿ ಹಗಲೆಂಬಂತೆ ಪರಿಶೋಧನೆ ನಡೆಸಿ ಇಂದದನ್ನು ಪರಿಪೂರ್ಣತೆಗೆ ಮುಟ್ಟಿಸಿರುವರು. ಇಂದು ಟೆಲಿವಿಜನಿನಲ್ಲಿ ನಾವು ದೃಶ್ಯಗಳನ್ನು ಅವರ ಪ್ರಾಕೃತಿಕ ವರ್ಣ ಸೌಂದರ್ಯದಲ್ಲಿಯೇ ನೋಡಬಹುದು.

ಪ್ರಾಂತ್ಯಾಡಳಿತೆಯ ವಿವರಗಳು.

ಶಾಸನ ಸಭೆಯಲ್ಲಿ ಮಂತ್ರಿಗಳ ಉತ್ತರ

ಬಾವಿ ತೋಡಲು ಧನ ಸಹಾಯ

ಈ ಯೋಜನೆಯ ಪ್ರಕಾರ ಕೆಲವು ಶರತ್ತುಗಳ ಮೇಲೆ ನೆಲಗಡಲೆಯನ್ನು ಮಿಶ್ರ ಪೈರಾಗಿ ಬೆಳೆಸುವಂತೆ ಬಿಡಲಾಗುವುದು. ಶರ್ತಗಳು: (1) ನೀರಾವರಿಯಿಂದ ಬೆಳೆಸುವ ರಾಗಿ ಅಥವಾ ಆಯಾಯ ಪ್ರದೇಶದಲ್ಲಿ ಅತ್ಯಾವಶ್ಯಕವಾಗಿ ಬೇಕಾಗಿರುವ ಇತರ ಧಾನ್ಯಗಳೊಡನೆ ಬತ್ತದ ಒಂದು ಮಿಶ್ರ ಬೆಳೆಯನ್ನು ಕಡ್ಡಾಯವಾಗಿ ಫಸಲಿಗೆ ಒಂದರಂತೆ ಬೆಳೆಸಬೇಕು 2) ಇತರ ಯಾವುದೇ ಯೋಗ್ಯ ಧಾನ್ಯದೊಡನೆ ಸೇರಿಸಿಕೊಂಡು ಎರಡನೆಯ ಬೆಳೆಯಾಗಿ ನೆಲಗಡಲೆ ಬೆಳೆಸಬಹುದು (3) ಬಾವಿ ತೋಡಲು ಧನ ಸಹಾಯಕೊಡುವ ಯೋಜನೆಯ ಪ್ರಕಾರ ನೆಲಗಡಲೆ ಮಾತ್ರ ಬೆಳೆಸಲು ಸಾಧ್ಯವಿಲ್ಲ ಈ ಪ್ರಾಂತ್ಯವು ಬೆಲ್ಲದ ಮಟ್ಟಿಗೆ ಉಳಿಕೆ ಪ್ರಾಂತವಾಗಿರುವುದರಿಂದ ಈ ಯೋಜನೆಯ ಪ್ರಯೋಜನಗಳನ್ನು ಕಬ್ಬಿಗೂ ಕೊಡುವುದು ಅವಶ್ಯವಿಲ್ಲ

ಹರಿಜನೋದ್ಧಾರ

ಈ ನಿಧಿಯ ಒಂದು ಕೋಟಿ ರೂಪಾಯಿಗಳಲ್ಲಿ ಪ್ರಾಂತಿಕ ಹರಿಜನಯೋಜನೆ ಈಗಾಗಲೇ ರೂ 1 80,000ರಷ್ಟು ವೆಚ್ಚವಾಗಿದೆ ಈ ಮೊಬಲಗನ್ನು ದಕ್ಕರ್ ಬಾಪಾ ವಿದ್ಯಾಲಯಕ್ಕೆ ಕೊಟ್ಟಿರುತ್ತದೆ ಈ ಶಾಲೆಯು ಹರಿಜನ ವಿದ್ಯಾರ್ಥಿಗಳಿಗಾಗಿಯೇ

ಇದರ ಕುರಿತು ಪ್ರಚಾರ ನಡೆಯುತ್ತಿದ್ದರೂ ಒಂದು ವರ್ಷದೊಳಗೆ ಸಾಕಷ್ಟು ಆಹಾರವನ್ನು ಸಿದ್ಧಪಡಿಸಲು ಸಾಧ್ಯವಿಲ್ಲ ಪರದೇಶ ಪರಪ್ರಾಂತ್ಯಗಳಿಂದದನ್ನು ತರಿಸಬೇಕಾಗುತ್ತದೆ ಹೀಗೆ ಮಾಡಿದರೆ ವಿನಿಯಂತ್ರಣದಿಂದ ಹಾನಿಯಾಗದು

ಅಧಿಕ ಆಹಾರ [illegible] ಪರದೇಶಗಳಿಂದಲೂ ಈ ವರ್ಷ ಹತ್ತು ಪ್ರಮಾಣವು [illegible] ಇದರಲ್ಲಿ ಹೆಚ್ಚಿನ ಅಂಶವು ಈಗಾಗಲೇ [illegible] ಪ್ರಮಾಣವನ್ನು 10 [illegible] ಸಾಧ್ಯವಾಗುತ್ತದೆ

ಕಷ್ಟದ ತಿಂಗಳುಗಳು

ಜೂನಿಂದ ಅಕ್ಟೋಬರ [illegible] ಕಷ್ಟದ ತಿಂಗಳುಗಳು [illegible] ನಿರಾಶೆಗೊಳಿಸದಿದ್ದರೆ ಮತ್ತು ಈಗಿನ [illegible] ಸ್ಥಾನವನ್ನು 5 ತಿಂಗಳಿಗೆ ನಾವು ಪೂರೈಸಿಕೊಂಡರೆ ನಮ್ಮ ಕಷ್ಟ ನಿವಾರಣೆಯಾಗುವುದು.

ಪ್ರಾಂತ್ಯದ ಎಲ್ಲಾ ಪ್ರದೇಶಗಳಲ್ಲಿ ರೇಶನ್ ಪದ್ಧತಿಯಿದ್ದಾಗ ವಾರಕ್ಕೆ 35 ಸಾವಿರ ಟನ್ನು ಆಹಾರವಸ್ತುಗಳು ಬೇಕಾಗಿದ್ದವು ಈಗ ಕೆಲವೇ ಪ್ರದೇಶಗಳಲ್ಲಿ ಅದನ್ನು ಇಟ್ಟಿರುವುದರಿಂದ ಮತ್ತು ರಿಲೀಫ್ ಶೋಪುಗಳನ್ನು ತೆರೆದಲ್ಲಿ ಒಟ್ಟಿಗೆ ವಾರಕ್ಕೆ 19,500 ಟನ್ನುಗಳಷ್ಟು ಆಹಾರವು ಬೇಕು ಈಗ ಪ್ರಾಂತ್ಯದಲ್ಲಿ ಒಟ್ಟು 572,443 ಟನ್ನು ಆಹಾರವಸ್ತುಗಳು ದಾಸ್ತಾನಿವೆ. ಇನ್ನೂ ಹೆಚ್ಚಿನ ಪ್ರಮಾಣ ಬರಲಿದೆ. ಈಗಿದದ್ದು ಸುಮಾರು, ನಾಲ್ಕು ತಿಂಗಳಿಗೆ ಸಾಕಾಗುವಷ್ಟಿದೆ.

ಇರುತ್ತದೆ. ಅದರ ವರದಿಯು ಈಗಷ್ಟೇ ಸರಕಾರಕ್ಕೆ ಬಂದಿರುತ್ತದೆ.

ಆಹಾರಧಾನ್ಯ ಕಳ್ಳಾಟಿಕೆ

ತಂಜಾವೂರಿನಿಂದ ಸಿಲೋನಿಗೆ ಕಳ್ಳಾಟಿಕೆಯಿಂದ ಆಹಾರಧಾನ್ಯಗಳನ್ನು ಒಯ್ಯುವುದನ್ನು ಪರಿಣಾಮಕಾರಿಯಾಗಿ ತಡೆಯುವ ಬಗ್ಗೆ ಹೆಚ್ಚು ವೇಗದ ಮೋಟರ್ ಲೋಂಚುಗಳನ್ನು ಕೊಂಡುಕೊಳ್ಳಲು ಸರಕಾರವು ಆಲೋಚಿಸಿರುತ್ತದೆ ಕಸ್ಟಮ್ ಪೋಲಿಸರು ಈಗಾಗಲೇ ತುಂಬಾ ವಸ್ತುಗಳನ್ನು ಹಿಡಿದಿರುವರು ಹೆಚ್ಚು ವೇಗದ ಮೋಟರ್ ಲೋಂಚುಗಳಿದ್ದರೆ ಇವರ ಕೆಲಸವು ಅತಿ ಪರಿಣಾಮಕಾರಿಯಾಗುವುದು.

ಆನೆಗಳಿಗೆ ರೇಶನ್

ಮಲಬಾರ್ ಜಿಲ್ಲೆಯಲ್ಲಿ—ಕೆಲಸಮಾಡುವ ಆನೆಗಳಿಗೆ—ಆನೆಗೆ ದಿನಕ್ಕೆ 24 ಪೌಂಡು 6 ಪೌಂಡು ಅಕ್ಕಿ 18 ಪೌಂಡು ಜೋಳ ಕೆಲಸಮಾಡದ ಆನೆಗಳಿಗೆ—ದಿನಕ್ಕೆ ತಲಾ 20 ಪೌಂಡು—13½ಪೌಂಡು ಅಕ್ಕಿ ಹೊರತು ಇತರ ಧಾನ್ಯ ಮತ್ತು 6⅔ ಪೌಂಡು ಜೋಳ.

ಇತರ ಜಿಲ್ಲೆಗಳಲ್ಲಿ—ಎಲ್ಲಾ ಆನೆಗಳಿಗೂ—ಆನೆಗೆ ದಿನಕ್ಕೆ 20 ಪೌಂಡು—6⅔ ಪೌಂಡು ಅಕ್ಕಿ, 6⅔ ಪೌಂಡು ಇತರ ಧಾನ್ಯ ಮತ್ತು 6⅔ ಪೌಂಡು ಜೋಳ

(೧ನೇ ಪುಟದಿಂದ)

ಇವುಗಳ ಸಮುದ್ರ ಮಾರ್ಗವನ್ನನುಸರಿಸಿ ಜಗತ್ತು ಶಾಂತಿ ಸಮೃದ್ಧಿಯಿಂದಿರಬಹುದೆ ಎಂಬ ಅಭಿಪ್ರಾಯವುಂಟಾಗುತ್ತದೆ ಲೌಕಿಕದ [illegible] ಸಂಪತ್ತನ್ನು ಸಮಾನಗೊಳಿಸಿದರೂ ವೈಯಕ್ತಿಕವಾದ ಬುದ್ಧಿಶಕ್ತಿಯು ಎಲ್ಲರಿಗೂ ಸಮಾನವಾಗಿ ಕೂಡಲ್ಪಟ್ಟಿಲ್ಲವಾದ್ದರಿಂದ ವೈಯಕ್ತಿಕ ಸಮಾನತೆ ಬೌದ್ಧಿಕ ಸಮಾನತೆಗಳನ್ನು ಸಂತೃಪ್ತಿಕರವಾಗಿ ಒತ್ತಾಯದ ಮೂಲಕ [illegible]ಕ್ರಿಸಲಾಗುವುದಿಲ್ಲ. ಮಾನವ ಸಮಾಜವು [illegible] ಮಟ್ಟಿಗೆ [illegible] ಪೂರ್ಣವಾಗಿ [illegible] ಈಗಿನ ಶತಮಾನದಲ್ಲಂತೂ ಅದನ್ನು ಪರಿಪೂರ್ಣಗೊಳಿಸಲು ಸಾಧ್ಯವಿಲ್ಲ ಆದುದರಿಂದ ಈಗಿನ [illegible] ತತ್ವಗಳನ್ನು ಮಾನವ [illegible] ಸ್ವಭಾವಕ್ಕನುಗುಣವಾಗಿ ಸಮಾ[illegible] ಸಮಾಜ [illegible] ವ್ಯವಸ್ಥೆಗೊಳಿಸಲು ಪ್ರಯತ್ನಿಸಬೇಕು

ಹಿಂದೂಸ್ಥಾನೀ ಮಜಲಿಸ್ ಸಭೆ

ಹಿಂದೂಸ್ಥಾನಿ ಮಜಲಿಸ್ ಮಂಗಳೂರು ಈ ಸಂಸ್ಥೆಯ ವಾರ್ಷಿಕ ಮಹಾಸಭೆಯು ಇದೇ ಜೂನ್ ತಿಂಗಳ ೧೩ನೇ ತಾರೀಕು ಆದಿತ್ಯವಾರ ಪೂರ್ವಾಹ್ನ ಘಂಟೆ ೯ ಕ್ಕೆ ಸರಿಯಾಗಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಕೂಡಲಿರುವುದು;

ಮಜಲಿಸಿನ ಎಲ್ಲಾ ಸದಸ್ಯರಿಗೂ ಮತ್ತು ರಾಷ್ಟ್ರಭಾಷೆಯಲ್ಲಿ ಪ್ರೇಮವುಳ್ಳವರಿಗೂ ಈ ಸಭೆಯಲ್ಲಿ ಸ್ವಾಗತವಿದೆ. ಮಜಲಿಸಿನ ಸದಸ್ಯರು ಸಭೆಯ ಮುಂದೆ ತರಲಿರುವ ಹೊಸ ಠರಾವುಗಳನ್ನು [illegible]ಕ್ಕೆ ಮುಂಚಿತವಾಗಿ ಒಪ್ಪಿಸಬೇಕು.

ಸಮಾಜಸೇವಾ ತರಬೇತಿಯ ಅವಶ್ಯಕತೆ

ಹಳ್ಳಿಗಳಲ್ಲಿ ಸಂತೋಷದ ಬೆಳಕನ್ನು ಬೀರಬೇಕು

ಯುಕ್ತ ಪ್ರಾಂತ್ಯದ ಉದಾತ್ತ ಆದರ್ಶ

"ಪ್ರಾಂತ್ಯದ ಪ್ರತಿಯೊಬ್ಬ ಹಿತೈಷಿಯು ಶ್ರೀ ಸಂಪೂರ್ಣಾನಂದರಿಗೆ ಈ ಜನಾಂಗೋದ್ಧಾರದ ಯೋಜನೆಗಾಗಿ ಕೃತಜ್ಞತೆ ಸಲ್ಲಿಸಬೇಕು"

ಹೀಗೆಂದು ಕೇಂದ್ರಸಂಪರ್ಕ ಮಂತ್ರಿ ಮಾನ್ಯ ರಫಿಅಹಮ್ಮದ್ ಕಿದ್ವಾಯಿಯವರು ಸಂಯುಕ್ತ ಪ್ರಾಂತ್ಯದ ಸಮಾಜಸೇವಾ ತರಬೇತಿದಳದವರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಸಂಪೂರ್ಣಾನಂದರು ಸಂಯುಕ್ತ ಪ್ರಾಂತದ ಶಿಕ್ಷಣ ಮಂತ್ರಿಗಳು. ತರುಣರನ್ನು ಸಮಾಜಸೇವಾಕಾರ್ಯಗಳಲ್ಲಿ ತರಬೇತಿ ಮಾಡುವುದೇ ಕಿದ್ವಾಯಿಯವರು ಹೇಳಿದ 'ಈ ಜನಾಂಗೋದ್ಧಾರದ ಯೋಜನೆ.'

ಈ ಯೋಜನೆಯನ್ನು ಸಂಪೂರ್ಣಾನಂದರು 1938ರಲ್ಲಿ ತಯಾರಿಸಿದ್ದರು. ಆದರೆ ಕೆಲವೇ ತಿಂಗಳ ಹಿಂದೆ ಅದು ಕಾರ್ಯರೂಪಕ್ಕೆ ಬರುವಂತಾಯಿತು. ಆ ಪ್ರಾಂತ್ಯದಲ್ಲಿ 1649ನೇ ಜನವರಿ 1ರಿಂದ ಸರಕಾರಿ ಕೆಲಸಕ್ಕೆ ತೆಗೆದುಕೊಳ್ಳಲ್ಪಡುವ ಪ್ರತಿಯೊಬ್ಬರೂ ಈ ಸಮಾಜಸೇವಾ ತರಬೇತಿಯ ಪದವಿಪತ್ರವನ್ನು ಹೊಂದಿದವರಾಗಿರಬೇಕೆಂದು ಅಲ್ಲಿನ ಸರಕಾರದವರು ನಿರ್ಧರಿಸಿರುವರು.

ತರಬೇತಿಯ ಉದ್ದೇಶ

ಸಮಾಜಸೇವಾ ತರಬೇತಿಯ ಸಂಪೂರ್ಣ ಅವಧಿಯು ಹನ್ನೊಂದು ತಿಂಗಳು. ಇದರಲ್ಲಿ 2ತಿಂಗಳು ಹಳ್ಳಿಗಳಲ್ಲಿ ಪ್ರತ್ಯಕ್ಷ ಕಾರ್ಯಮಾಡಬೇಕು. ಉಳಿದ 9ತಿಂಗಳು ನಗರಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಈ ಸೇವೆಗೆ ಸಂಬಂಧಪಟ್ಟ ಶಾಸ್ತ್ರೀಯ ವಿಷಯ ಜ್ಞಾನವನ್ನು ತಿಳಿಕೊಳ್ಳುವುದಕ್ಕೆ ವ್ಯಯಿಸಲ್ಪಡುತ್ತದೆ. ಈ ಯೋಜನೆಯ ಉದ್ದೇಶಗಳು ಎರಡು ತರದ್ದಾಗಿವೆ. ಮೇಲಧಿಕಾರಿಗಳಿಗೆ ವಿಧೇಯತೆಯನ್ನು ಸಲ್ಲಿಸುವ, ಶಿಸ್ತಿನ, ಐಕ್ಯದ ಮತ್ತು ಶಕ್ತಿಯ ಭಾವನೆಗಳನ್ನು ಅಭಿವೃದ್ಧಿಪಡಿಸಲು ತರುಣರಿಗೆ ಸಂಪೂರ್ಣ ಸೈನ್ಯತರಬೇತಿಯು ಕೊಡಲಾಗುವುದು. ಆದರೆ ಅವರಿಗೆ ಕೊಡಲ್ಪಡುವ ಸಮಾಜಸೇವಾ ಕಾರ್ಯದ ಮಾಹಿತಿಯೇ ಈ ಯೋಜನೆಯ ತಿರುಳು.

ಈ ತರಬೇತಿಯಲ್ಲಿ ಮೇಲೆ ಹೇಳಿದ ಎರಡು ವಿಷಯಗಳ ತರಬೇತಿಕೊಡುವುದರಿಂದ ನಮ್ಮ ಭಾವೀ ಸಮಾಜದ ಆಧಾರ ಸ್ತಂಭಗಳಂತಿರುವ ತರುಣರು ವಿಶ್ವಮಾನ್ಯ ಮಹಾತ್ಮಾ ಗಾಂಧಿಯವರ ತತ್ವಗಳನ್ನು ಸರ್ವತ್ರ ದೇಶಗಳಲ್ಲಿ ಹರಡಲು ಯೋಗ್ಯರಾಗುತ್ತಾರೆ. ಮಾತ್ರವಲ್ಲ ಇಡೀ ವಿಶ್ವಕ್ಕೂ ಅವರ ಈ ಮಹೋದಾತ್ತ ಸಂದೇಶವನ್ನು ಸಾರಲು ಅವರು ಸಮರ್ಥರಾಗುವರು.

ಸಮಾಜಸೇವೆಯ ಅವಶ್ಯಕತೆ

ಪ್ರತಿಯೊಂದು ಪ್ರಾಂತದವರಿಗೂ ಇಂತಹ ತರಬೇತಿಯ ಅವಶ್ಯಕತೆಯಿದೆ. ಸ್ವಾತಂತ್ರ್ಯ ನಂತರವೂ ನಮ್ಮ ಹಳ್ಳಿಗಳೂ ಹಿಂದಿನ ಸಾಮ್ರಾಜ್ಯಶಾಹಿಯ ಶೋಷಣೆಯ ಧೋರಣೆಯಿಂದಾಗಿ ನಮ್ಮ ಹಳ್ಳಿಗಳು ಅತ್ಯಂತ ಜೀರ್ಣಾವಸ್ಥೆಯಲ್ಲಿದ್ದವು. ನಮ್ಮ ಹಳ್ಳಿಗನು ನಿರಕ್ಷರ ಕುಕ್ಷಿಯೂ ಆಧುನಿಕ ಆರೋಗ್ಯ ವಿಚಾರಹೀನನೂ ಆಗಿರುವನು. ಹಳ್ಳಿಗಳಲ್ಲಿನ ಮನೆ, ಮಾರ್ಗಗಳು ಕನಿಕರಾಸ್ಪದವಾದ ಹೊಲಸು, ಅನಾರೋಗ್ಯ ಪರಿಸ್ಥಿಯಲ್ಲಿವೆ. ನಮ್ಮ ಗುಡಿಕೈಗಾರಿಕೆಗಳು ಬಹಳ ಅವ್ಯವಸ್ಥೆಯಿಂದ ನಿರ್ವಹಿಸಲ್ಪಡುತ್ತವೆ. ಕೃಷಿ, ನೀರಾವರಿ ಕೆಲಸಗಳು ಅಶಾಸ್ತ್ರೀಯ ವಿಧಾನದಲ್ಲಿ ನಡೆಸಲ್ಪಡುತ್ತವೆ. ಜನತೆಯಲ್ಲಾದರೊ ಪರಸ್ಪರ ಸಹಕಾರದ ಭಾವನೆಗಳು ಪುಷ್ಟಿಗೊಂಡಿರುವುದಿಲ್ಲ.

ಮೇಲೆ ಹೇಳಿದ ಮತ್ತಿತರ ಅನೇಕಾನೇಕವೂ ಅಗಾಧವೂ ಆದ ಲೋಪದೋಷಗಳನ್ನು ನಿವಾರಣೆಮಾಡುವ ಬೃಹತ್ತಾದ ಹೊಣೆಗಾರಿಕೆಯು ಈ ತರಬೇತಿಯಲ್ಲಿ ಉತ್ತೀರ್ಣರಾಗಿರುವ ತರುಣರ ಮೇಲೆ ಬೀಳುವುದು. ಅವರು ನಿಸ್ವಾರ್ಥ ಸ್ವಯಂಸೇವಕರಂತೆ ಹಳ್ಳಿಗಳಿಗೆ ಹೋಗುತ್ತಾರೆ. ಸರಳ ಹಳ್ಳಿಗರನ್ನು ಶಿಕ್ಷಿತರನ್ನಾಗಿ ಮಾಡಲು ಅವರು ಅಲ್ಲಿ ರಾತ್ರಿ ಶಾಲೆಗಳನ್ನು ತೆರೆಯುವರು. ಅಲ್ಲದೆ ಅವರು ಸ್ವಶುದ್ಧತೆ ಮತ್ತು ಆರೋಗ್ಯಕರ ವಿಧಾನಗಳು ಅದೆಷ್ಟು ಅವಶ್ಯಕವೆಂಬ ಸಂಗತಿಯನ್ನವರು ಹಳ್ಳಿಗರಿಗೆ ಚಿತ್ರಪೂರ್ತವಾಗಿ ತಿಳಿಸುವರು. ಅವರು ಶರೀರಪರಿಶ್ರಮದ ಸ್ವಂತ ಆದರ್ಶವನ್ನು ಕಲ್ಪಿಸಲೂ ಹಿಂಜರಿಯಲಾರರು. ಕೊಳೆಯು ಹರಿದುಹೋಗಲು ಉತ್ತಮ ಚರಂಡಿಗಳನ್ನು ಹೇಗೆ ಅಗೆಯಿಸಬೇಕು, ನೀರಾವರಿಯ ಪರಮಾವಧಿ ಉಪಯೋಗವನ್ನು ಹೇಗೆ ಹೊಂದುವುದು ಇವೇ ಮೊದಲಾದ ವಿಷಯಗಳನ್ನವರು ಪ್ರತ್ಯಕ್ಷ ಹಳ್ಳಿಗರಿಗೆ ತೋರಿಸುವರು.

ಹಳ್ಳಿಗರಲ್ಲಿ ಒಂದು ತರದ ಸಹಕಾರದ ಮತ್ತು ಶಿಸ್ತಿನ ಭಾವನೆಯನ್ನುಂಟುಮಾಡುವುದೂ ಸಮಾಜಸೇವಕರ ಮುಖ್ಯ ಕರ್ತವ್ಯಗಳಲ್ಲೊಂದು. ಒಟ್ಟಿನಲ್ಲಿ ಅವರ ಕೆಲಸವೂ ಕಷ್ಟತರವಾದುದಾದರೂ ಅಲ್ಲಿನ ಸರಕಾರವು ಅವರ ಮೂಲಕ ಮುಂದೆ ಉಂಟಾಗುವ ನೂತನ ಸಮಾಜರಚನೆಯನ್ನು ಆತುರದಿಂದ ನಿರೀಕ್ಷಿಸುತ್ತಿರುವುದು. ಸಮಾಜಸೇವಕರು ಪಡೆಯುವ ತರಬೇತಿಯ ಯೋಜನೆಯು ಸಂಪೂರ್ಣ ಗಾಂಧೀಜಿಯ ಸಮಾಜ ಪುನರ್ರಚನಾ ತತ್ವಗಳ ಮೇಲೆ ಆಧರಿಸಿಕೊಂಡಿದೆ.

ತರಬೇತಿ ಶಿಬಿರದಲ್ಲಿ

ಸಮಾಜಸೇವಾ ತರಬೇತಿ ಶಿಬಿರದಲ್ಲಿನ ಚಟುವಟಿಕೆಗಳು ಸೂರ್ಯೋದಯಕ್ಕೆ ಮೊದಲೇ ಪ್ರಾರಂಭವಾಗುವುವು. ಎದ್ದ ಕೂಡಲೇ ಲಘುವ್ಯಾಯಾಮವಾಗಿ ತರುಣರು ಪ್ರಾತಃ ಉಪಹಾರಕ್ಕೆ ತೆರಳುತ್ತಾರೆ. ನಂತರ ಪುನಃ ಶಿಸ್ತಿನ ವ್ಯಾಯಾಮ 9ಗಂಟೆ ತನಕ ನಡೆಯುವುದು. ನಂತರ 3ಗಂಟೆ ಕಾಲ ಅವರಿಗೆ ತತ್ವಜ್ಞಾನ, ಸಾಮಾಜಿಕ ಅರ್ಥಶಾಸ್ತ್ರ, ಚರಿತ್ರೆಯ ಮೇಲೆ ಪ್ರಾಂತ್ಯದ ಪ್ರಖ್ಯಾತ ಪುರುಷರು ಭಾಷಣಕೊಡುವರು. ಮಧ್ಯಾಹ್ನ ಊಟಕ್ಕೆ ಹೋಗುವ ಮೊದಲು ಕೆಲಹೊತ್ತು ವಿದ್ಯಾರ್ಥಿಗಳನ್ನು ಸಂಗಡಗಳನ್ನಾಗಿ ಮಾಡಿ ಕೆಲವರಿಗೆ ಮೋಟಾರು ಚಲಾಯಿಸುವ, ಬಂದೂಕು ಉಪಯೋಗಿಸುವ ಮತ್ತು ಲಾಠಿ ಪ್ರಯೋಗಿಸುವ ತರಬೇತಿಯನ್ನು ಕೊಡಲಾಗುವುದು.

ಮಧ್ಯಾಹ್ನ ಊಟದ ನಂತರ ತುಸು ವಿರಾಮ ಕೊಡಲಾಗುವುದು. ನಂತರ ಸಾಯಂಕಾಲದಲ್ಲಿ ಗುಂಪು ಆಟವನ್ನಾಡಿಸುವರು. ನಂತರ ರಾತ್ರೆ 8 ಗಂಟೆಗೆ ಊಟವಾಗಿ 10 ಗಂಟೆಗೆ ಎಲ್ಲರೂ ನಿದ್ರಿಸಬೇಕಾಗುವುದು.

ಸಮಾಜಸೇವಾ ಕಾರ್ಯ

ತರಬೇತಿಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಸಿಗುವ ಅಲ್ಪ ಬಿಡು ಸಮಯದಲ್ಲಿ ಅವರು ಹತ್ತಿರದ ಹಳ್ಳಿಗಳಿಗೆ ಹೋಗುವರು. ಅಲ್ಲವರು ಮಕ್ಕಳನ್ನು ಒಟ್ಟು ಸೇರಿಸಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಥಮ ಪಾಠಗಳನ್ನವರಿಗೆ ಕಲಿಸಲಾಗುವುದು. ಹತ್ತಿರ ಹತ್ತಿರದ ಹಳ್ಳಿಮಕ್ಕಳನ್ನು ಒಟ್ಟು ಸೇರಿಸಿ ಅವರ ಸಾಮೂಹಿಕ ಕವಾತು ಪ್ರದರ್ಶನವನ್ನು ಮಾಡಿಸಲಾಗುವುದು. ವಯಸ್ಕರಿಗೆ ಶುಚಿತ್ವ, ಆರೋಗ್ಯ ಮೊದಲಾದ ವಿಷಯಗಳ ಕುರಿತು ಕಲಿಸಲಾಗುವುದು. ಸಹಕಾರಿ ಪದ್ಧತಿಯಿಂದ ಕೃಷಿಕೆಲಸ ನಿರ್ವಹಿಸುವಿಕೆ, ಪಂಚಾಯ್ತುಪದ್ಧತಿಯ ಅನುಕೂಲಗಳು ಈ ಕುರಿತು ಅವರಿಗೆ ಬೌಧಿಕ ಪಾಠಗಳನ್ನು ಕೊಡಲಾಗುವುದು. ಹಳ್ಳಿಯ ಚರಂಡಿಗಳನ್ನು ಸುವ್ಯವಸ್ಥಿತಗೊಳಿಸುವುದೂ ಕೆಸರುಪ್ರದೇಶಗಳನ್ನು ಶುದ್ಧಗೊಳಿಸುವ ಶಾಸ್ತ್ರೀಯ ವಿಧಾನಗಳನ್ನು ಹಳ್ಳಿಗರಿಗೆ ಪ್ರತ್ಯಕ್ಷ ಮಾಡಿತೋರಿಸಲಾಗುವುದು.

ತಮ್ಮ ಬಿಡುಸಮಯದಲ್ಲಿ ಹಳ್ಳಿಗರ ಸೇವೆಮಾಡಲು ಪ್ರತಿಜ್ಞಾಬದ್ಧರಾದ ತರುಣರ ಒಂದು ಸಂಘವೂ ಅಲ್ಲಿ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ತುಂಬಾ ಸದಸ್ಯರೂ ಸೇರಿದ್ದು ಅವರು ತಮ್ಮ ಪಾಲಿಸುವ ಕರ್ತವ್ಯವನ್ನು ಪರಿಪೂರ್ಣಗೊಳಿಸಲು ಕೃತಜ್ಞವರ್ಗ ದುಡಿಯುವರು.

ಸಾಂಸ್ಕೃತಿಕ ಮೌಲ್ಯ

ಸೇವಾಕಾರ್ಯ ತರಬೇತಿಯಲ್ಲಿದೆ. ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಐಚ್ಛಿಕ ಅಭಿರುಚಿಯ ಕೆಲಸಗಳನ್ನು ನಿರ್ವಹಿಸಲೂ ಪ್ರೋತ್ಸಾಹಿಸಲಾಗುವುದು. ಅವರ ಸ್ವಂತ ವರ್ತಮಾನ ಪತ್ರಿಕೆಗಳು, ಛಾಯಾ ಚಿತ್ರಗಳನ್ನು ತೆಗೆಯುವ ಎಲ್ಲಾ ಸೌಕರ್ಯಗಳನ್ನೂ ಒದಗಿಸಲಾಗುವುದು. ತೆಗೆದ ಚಿತ್ರಗಳನ್ನು ಹಳ್ಳಿಗಳಲ್ಲಿ ಬಹಿರಂಗ ಪ್ರದರ್ಶನ ಮಾಡಲಾಗುವುದು. ಶಿಬಿರದೊಳಗಿನ ಎಲ್ಲಾ ಕೆಲಸಗಳ ವ್ಯವಸ್ಥೆಯನ್ನು ತರಬೇತಿದಾರರೇ ಮಾಡುವರು. ಇಂತಹ ಶಿಬಿರಗಳಲ್ಲಿ ತರಬೇತಾದ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವಿರುವುದು. ಇವರೇ ನಮ್ಮ ದೇಶದ ಭಾವಿ ಆಡಳಿತದಾರರೆನ್ನಬಹುದು. ಎಲ್ಲವಕಿಂತಲೂ ಅವರು ಬಾಪೂಜಿಯ ತತ್ವಗಳನ್ನು ಜಗತ್ತಿಗೆ ಸಾರುವಂತಹರಾಗುವರು.

ವಯಸ್ಸು ಹೋಗುತ್ತಲೆ ಹೆಂಗಸರು ಇಲ್ಲವೆ ಅತೀ ದಪ್ಪ ಬೆಳೆಯುತ್ತಾರೆ. ಇಲ್ಲವೆ ಅತಿ ತೆಳ್ಳಗಾಗುತ್ತಾರೆ. ಆದರೆ ಪುರುಷರಲ್ಲಿ ಹೆಚ್ಚಿನ ವ್ಯತ್ಯಾಸಗಳಾಗುವುದಿಲ್ಲ. ಹೆಂಗಸರ ಹಲ್ಲುಗಳು ಗಂಡಸರಿಗಿಂತ ಬೇಗ ಬೀಳುತ್ತವೆ.

✠

ಕೆಲಿಫೋರ್ನಿಯಾ ಪ್ರಾಂತದಲ್ಲಿ ಕಪ್ಪೆ ಪಂದ್ಯಾಟ ಪ್ರಿಯರು ಹತ್ತು ಸಾವಿರಕ್ಕೂ ಮಿಕ್ಕಿ ಇದ್ದಾರೆ. ಈ ವರ್ಷದ ಪಂದ್ಯಾಟದಲ್ಲಿ ಹೆಲಿಯೊಟ್ರೊಪ್ ಎಂಬ ಕಪ್ಪೆ 11 ಅಡಿ 5 ಇಂಚು ಹಾರಿ ಇತರ ಸಾವಿರಾರು ಕಪ್ಪೆಗಳನ್ನು ಸೋಲಿಸಿತು.

ಹಿಂಸುದ್ದಿ ಸಂಗ್ರಹ

ಲಂಡನಿನ ಬಿ. ಬಿ. ಸಿ. ರೇಡಿಯೊ ಇಂಜಿನಿಯರನ ಮನೆಯನ್ನು ಹೊಕ್ಕು ಓರ್ವ ಕಳ್ಳನು ಒಂದು ಕೆಮರಾವನ್ನು ಮತ್ತೊಂದು ಚಿನ್ನದುಂಗರವನ್ನು ತೆಗೆದು ದೂರದ ರೇಡಿಯೊ ಕೇಂದ್ರದಲ್ಲಿ ಕೆಲಸ ಮಾಡುವ ಆ ಇಂಜಿನಿಯರನಿಗೆ ಟೆಲಿಫೋನಿನಲ್ಲಿ "ನಾನು ನಿನ್ನ ಮನೆಯಿಂದ ಈ ವಸ್ತುಗಳನ್ನು ತೆಗೆದಿದ್ದೇನೆ. ಈಗ ನಿನ್ನ ಮನಸ್ಸಿನಲ್ಲಾಗುವ ಕಳವಳವನ್ನು ತಿಳಿಸುವೆಯಾ?" ಎಂದು ಕೇಳಿದನಂತೆ.

✠

ಜರ್ಮನಿಯ ಲಿಂಜನ್ ಪಟ್ಟಣದಲ್ಲಿ ಕಳವಿನ ಘಟನೆಗಳು ಮೇಲಿಂದ ಮೇಲೆ ಆದಾಗ ಗುಪ್ತ ಪೋಲಿಸರು ಪತ್ತೆ ನಡೆಸಲು ಕಳ್ಳರ ಮೂಲವು ಸ್ಥಳೀಕ ಜೈಲಿನಲ್ಲೇ ಇದೆಯೆಂದು ತಿಳಿಯಿತು. ಜೈಲಿನ ವಾರ್ಡರರು ತಮ್ಮ ಉಸ್ತುವಾರಿಯಲ್ಲಿದ್ದ ಕಳ್ಳರನ್ನು ರಾತ್ರಿಹೊತ್ತು ಹೊರಬಿಡುತಿದ್ದು ಅವರು ಕದ್ದುತಂದ ಕೊಳ್ಳೆಯನ್ನು ಹಂಚಿಕೊಳ್ಳುತಿದ್ದರು.

✠

ಬ್ರಿಟನಿನಲ್ಲಿ ಒಂದುವರೆ ಕೋಟಿ ಸ್ವಾವಾಲರು ಇದ್ದಾರೆ.

✠

ಬ್ರಿಟನಿನಲ್ಲಿ ಜನಸಂಖ್ಯೆ 1946ರ ನಂತರದೆರಡು ವರ್ಷಗಳಲ್ಲಿ 20 ಲಕ್ಷ ಹೆಚ್ಚಾಗಿದೆ.

ನಮ್ಮ ದೇಶದಲ್ಲಿ ವರ್ಷಕ್ಕೆ ಕನಿಷ್ಠ ಪಕ್ಷದಲ್ಲಿ ವರ್ಷಕ್ಕೆ 20 ಲಕ್ಷ ಟನ್ ಉಕ್ಕು ಖರ್ಚಾಗುತ್ತದೆ.

✠

ಗಂಟಲು, ಶ್ವಾಸಕೋಶಗಳನ್ನು ಉಪಶಮನ ಮಾಡಿ ರಕ್ಷಿಸುವುದು.

ಬಾಯಲ್ಲಿ ಕರಗಿದಾಕ್ಷಣ ಪೆಪ್ಸ್ ಶ್ರೇಷ್ಠ ವಿಷಹಾರಿ ವನಸ್ಪತಿ ಸಾರಗಳನ್ನು ಬಿಟ್ಟುಬಿಡುತ್ತದೆ. ಶ್ವಾಸದ ಮೂಲಕ ಶ್ವಾಸಕೋಶದ ಆಳಕ್ಕೂ ಹೊಕ್ಕು ಇದು ವೇದನೆಯನ್ನು ಶಮನಿಸಿ ನಿಮ್ಮನ್ನು ರೋಗರುಜಿಗಳಿಂದ ರಕ್ಷಿಸುತ್ತದೆ.

ಗಂಟಲು ನೋವು, ಕೆಮ್ಮು, ನೆಗಡಿ, ಶೀತ, ಉಬ್ಬಸ ಶೀತಜ್ವರ, ಎದೆಶ್ವಾಸಕೋಶ ತೊಂದರೆಗಳಿಗೆ ಪೆಪ್ಸ್ ಪರಿಣಾಮಕಾರಿ ಔಷಧಿ.

ವಿಷಹಾರಿ ಮಾತ್ರೆಗಳಾದ ಪೆಪ್ಸನ್ನು ತೆಗೆದುಕೊಳ್ಳಿರಿ.

PEPS

ದರಪೂರ್ಕೆಳಗೆ ಕೊರತೆಯಿಲ್ಲ.

ಟೆಲಿವಿಜನ್ ದೂರದರ್ಶಕ

ಇಂದಂದು ಪ್ರಾಯಕ್ಕೆ ಬಂದಿದೆ

ಇಂದೆಲ್ಲಿಲ್ಲೂ ಟೆಲಿವಿಜನಿನ ಕುರಿತೇ ಚರ್ಚೆ ನಡೆಯುತ್ತಿದೆ ಅದೇ ಇಂದಿನ ಮಹತ್ವದ ಮಾತಾಗಿದೆ. ರೇಡಿಯೊದಲ್ಲಾದರೆ ನಾವು ಅತಿ ದೂರದ ವ್ಯಕ್ತಿಗಳನ್ನು ಕೇಳುತ್ತೇವೆ ಟೆಲಿವಿಜನಿನಲ್ಲಿ ಆ ವ್ಯಕ್ತಿಯನ್ನು ನೋಡಲೂಬಹುದು ಆದುದರಿಂದ ಟೆಲಿವಿಜನ್ ಭಕ್ತರು ಶೀಘ್ರದಲ್ಲಿ ರೇಡಿಯೊ ಎಂಬುದು ಮೋಟರ್‌ಕಾರಿನ ಎದುರು ಕುದುರೆಗಾಡಿಯಂತಾಗುತ್ತದೆ ಎಂದು ಉದ್ಗರಿಸುತ್ತಾರೆ.

ಮಾತ್ರವಲ್ಲ, ಟೆಲಿವಿಜನ್ ಪ್ರಚಾರಕ್ಕೆ ಬಂದ ನಂತರ ಇಂದಿನ ಸಿನೇಮಾ ಗೃಹಗಳೆಲ್ಲವೂ ಬರಿದಾಗುವುವು ಮಕ್ಕಳಿಗೆ ಟೆಲಿವಿಜನಿನ ಮೂಲಕ ಕ್ಲಪ್ತಕಾಲದಲ್ಲಿ ಪಾಠ ಹೇಳಲು ಸಾಧ್ಯವಿರುವುದರಿಂದ ಮುಂದೆ ಮನೆಯ ಕೋಣೆಗಳೇ ಶಾಲೆಗಳಾಗುವುವು ಚುನಾವಣೆಗಳನ್ನು ಟೆಲಿವಿಜನಿನ ಮೂಲಕವೇ ಜಯಿಸಲಾಗುವುದು ಗೃಹಿಣಿಯರು ತಮಗೆ ಬೇಕಾದ ವಸ್ತುಒಡ[illegible]ಗಳೆಲ್ಲ ತಮ್ಮ ಟೆಲಿವಿಜನ್ ಪಟ್ಟಿಗೆಯ[illegible]ಡು ಬೇಕಾದುದನ್ನು ಟೆಲಿಫೋನಿನ ಮೂಲಕ ಮಾತಾಡಿ ಕ್ಷಣದಲ್ಲಿ ತರಿಸುವರು. ಹೀಗಾಗಿ ಅಂಗಡಿ ತಿರುಗುವ ಶ್ರಮ ಉಳಿತಾಯವಾಗುವುದು.

"ಟೆಲಿವಿಜನಿನ ಭವಿಷ್ಯವು ಮಾನವ ಮನಸ್ಸು ಗ್ರಹಿಸಲು ಸಾಧ್ಯವಿರುವಷ್ಟು ವಿಶಾಲವಾಗಿದೆ ಅದರಿಂದ ಮಾನವ ಮನಸ್ಸು ಸುಪ್ರಸನ್ನವಾಗ[illegible]ವುದರಿಂದ ವಿಶ್ವಶಾಂತಿ ಸನ್ನಿವಿಗೆ[illegible] ಟೆಲಿವಿಜನ ಅತ್ಯಂತ ಸಹಾಯಕವಾಗುವುದ[illegible] ಹೀಗೆಂದು ಅಮೇರಿಕದ ಟೆಲಿವಿಜನ್ ಪ್ರಸಾರಕರ ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಬೆಳೆಯುವ ಮಗು

ಇದು ಶಿಶು ಬುದ್ಧಿಶಕ್ತಿಯುಳ್ಳ ಬಾಲಕನಂತಿರುವ ಟೆಲಿವಿಜನಿನ ಭಾವಿ ಪರಿಣಾಮ[illegible]ವು ಉಜ್ವಲವಾಗುವುದೊ ಅನಿಷ್ಟಕಾರಿ[illegible]ವುದೊ ಇಲ್ಲವೇ ಇವೆರಡರ ಮಿಶ್ರ[illegible]ವಾಗುವುದೊ ಈಗ ಹೇಳಬರುವುದಿಲ್ಲ ಆದರೆ ಅದು ಶೀಘ್ರದಲ್ಲಿ ವಿಶ್ವವನ್ನಾವರಿಸುವುದು ಖಂಡಿತ 1927ರಲ್ಲಿ ಚಾರ್ಲ್ಸ್ ಲಿಂಡ್‌ಬರ್ಗನ ವಿಮಾನವಲ್ಲಿ ಅಟ್ಲಾಂಟಿಕ್ ಸಾಗರವನ್ನು ಒಂದೇ ಓಟದಲ್ಲಿ ಹಾರುವ ಮುಂಚೆ ವಿಮಾನಗಳು ಅದೆಷ್ಟು ಅಪರಿಚಿತವಾಗಿದ್ದುವೊ ಇಂದು ಟೆಲಿವಿಜನ್ ಅದೇ ಅವಸ್ಥೆಯಲ್ಲಿದೆ ಅಂದಿನ ವಿಮಾನಗಳಷ್ಟೇ ಅದು ಅಪರಿಪೂರ್ಣವಾಗಿದೆ ಆದರೆ ಅದು ಖಂಡಿತ ಜನಪ್ರಿಯವಾಗುವುದು ಅದು ಜಗತ್ತಿನ ಜನರ ಜೀವನದಲ್ಲಿ ಮಹತ್ವಾದ ಮಾರ್ಪಾಟನ್ನು ಮಾಡುವುದು

ಈಗ ಸದ್ಯಕ್ಕೆ ಬಹಳ ಮುಂದುವರಿದ ದೇಶವಾದ ಸಂಯುಕ್ತ ಅಮೇರಿಕದಲ್ಲೇ ಶೇಕಡಾ ಹತ್ತರಷ್ಟು ಜನರು ಕೂಡ ಟೆಲಿವಿಜನ್ನು ಕಣ್ಣಿಂದ ನೋಡಿದವರಲ್ಲ. ಅಲ್ಲಿ ಈಗ ಕೇವಲ 27 ಟೆಲಿವಿಜನ್ ಪ್ರಸಾರಕ ಕೇಂದ್ರಗಳು ಇವೆ (ರೇಡಿಯೊ ಪ್ರಸಾರಕ ಕೇಂದ್ರಗಳು ಅಲ್ಲಿ 1600 ಕೇಂದ್ರಗಳು ಇವೆ.) ರೇಡಿಯೊಗ್ರಾಹಕ ಉಪಕರಣಗಳು ಸಂಯುಕ್ತ ಅಮೇರಿಕದಲ್ಲಿ 66 ಮಿಲಿಯಗಳಷ್ಟಿವೆ. ಆದರೆ ಟೆಲಿವಿಜನ್ ಉಪಕರಣಗಳು ಸಂಖ್ಯೆ 3½ಲಕ್ಷ ಮಾತ್ರ. ಆದರೆ ಇದೆಕ್ಷತ್ರದೆ. ಅದರ ವರದಿಯು ಈಗತಾನೆ ಸರಕಾರಕ್ಕೆ ಬಂದಿರುತ್ತದೆ.

ವಿನಿಯಂತ್ರಣದಿಂದ ಹಾನಿಯಿಲ್ಲ

ಆಹಾರಮಂತ್ರಿಗಳ ಅಂಕೆಸಂಖ್ಯೆಗಳು

ನಮ್ಮ ಪ್ರಾಂತ್ಯದ ಮಟ್ಟಿಗೆ ವಿನಿಯಂತ್ರಣದಿಂದ ಹಾನಿಯಾಗಿಲ್ಲವೆಂದು ಆಹಾರ ಮಂತ್ರಿ ಡಾ। ರಾಜನ್ ಅವರು ಒಂದು ರೇಡಿಯೊ ಭಾಷಣದಲ್ಲಿ ತಿಳಿಸಿದರು ಕಾರಣ ಬೊಂಬಾಯಿಯಲ್ಲಿ ಬೆಲೆಗಳ ಮಟ್ಟವು ಶೇಕಡಾ 300ರಷ್ಟು ಏರಿದೆ ನಮ್ಮ ಪ್ರಾಂತ್ಯದಲ್ಲಿ ಒಂದೆರಡು ಸ್ಥಳಗಳಲ್ಲಿ ಹೊರತು ಇತರ ಎಲ್ಲಾ ಭಾಗಗಳಲ್ಲಿ ಸರಾಸರಿ ಶೇಕಡಾ 50ರಿಂದ 95ರಷ್ಟು ಮಾತ್ರ ಏರಿದೆ ಬಡಜನರ ಸರಾಸರಿ ಸಂಪಾದನೆಯೂ ಅದೇ ಮಟ್ಟದಲ್ಲಿ ಏರಿರುತ್ತದೆ ಬೆಲೆಗಳ ಏರಿತವು ಕಷ್ಟವನ್ನುಂಟುಮಾಡುವಷ್ಟಾಗಿಲ್ಲ

ರಿಲೀಫ್ ಶೋಪುಗಳು

ಬೆಲೆಗಳನ್ನು ನಿಯಂತ್ರಣದಲ್ಲಿಡುವುದಕ್ಕೆ ಪರಿಹಾರದ ಅಂಗಡಿಗಳನ್ನು ತೆರೆಯಲಾಗಿದೆ ಈ ಯೋಜನೆಯು ಯಶಸ್ವಿಯಾಗಿ ನಡೆದಿದೆ ಇದರಿಂದ ಬೆಲೆಯ ಮಟ್ಟವು ಮೆಲ್ಲನೆ ತಗ್ಗುತ್ತಿರುವುದು

ಆಹಾರ ಹೆಚ್ಚು ಬೆಳೆಸುವುದರಿಂದಲೂ ಬೆಲೆಗಳನ್ನು ಹತೋಟಿಯಲ್ಲಿಡಬಹುದು

ಟೆಲಿವಿಜನ್ ಎಂಬ ಶಿಶು ದಿನೇ ದಿನೇ ವರ್ಧಮಾನವಾಗುತ್ತಿದೆ

ಇತಿಹಾಸ

ವಸ್ತುಗಳ ಮೇಲೆ ಬೀಳುವ ನೆರಳು ಮತ್ತು ಪ್ರಕಾಶದ (Light and Shade) ಕಿರಣಗಳನ್ನು ವಿದ್ಯುತ್ ಪ್ರವಾಹದ ಬಿಂದು (Electric impulses) ಗಳನ್ನಾಗಿ ಪರಿವರ್ತಿಸಬಹುದೆಂಬ ಒಂದು ಸೂಚನೆ ಆಯರ್ಲೆಂಡಿನ ಓರ್ವ ತರುಣ ತಂತಿನರ್ತನನ ಕಳುಹಿಸುವನಿಗೆ ಆಕಸ್ಮಾತ್ತಾಗಿ ಹೊಳೆಯಿತು. 1884ರಲ್ಲಿ ಪೋಲ್‌ನಿಪ್‌ಕೋವ್ ಎಂಬ ಜರ್ಮನ್ ವಿಜ್ಞಾನಿಯು ಇಂದಿನ ಟೆಲಿವಿಜನ್ ಯಂತ್ರದ ಮೂಲ ಮಾತೃಕೆಯನ್ನು ತಯಾರಿಸಿದನು. ಅವನ ಯಂತ್ರವು ಚಿತ್ರಗಳ ಬಾಹ್ಯರೇಖೆಗಳನ್ನು ಒಂದುಕಡೆಯಿಂದಿನ್ನೊಂದು ಕಡೆಗೆ ಒಯ್ಯುತ್ತು ರೇಡಿಯೊವನ್ನು ಕಂಡುಹಿಡಿದ ಇಟಲಿಯ ಮಾರ್ಕೊನಿಯೂ ಚಲಚಿತ್ರಗಳನ್ನು ಕಂಡುಹಿಡಿದ ಅಮೇರಿಕದ ಎಡಿಸನನೂ ಈ ಚಿತ್ರಗಳಿಗೆ ಬಾಯಿ ಚಲಿಸುವ ಶಕ್ತಿಯನ್ನು ಕೊಟ್ಟನು

1906ರಲ್ಲಿ ಲಿಫೋರೆಸ್ಟ್ ಎಂಬವನು ಈಗಿನ ರೇಡಿಯೊ ಮತ್ತು ಟೆಲಿವಿಜನುಗಳಿಗೆ ಎರಡಕ್ಕೂ ಉಪಯುಕ್ತವಾದ 'ವ್ಯಾಕ್ಯುಂ ಟ್ಯೂಬ್' ಗಳನ್ನು ಕಂಡುಹಿಡಿದನು. ನಂತರ 1923ರಲ್ಲಿ ವ್ಲೊಡಿಮಿರ್ ಜ್ವೊಂಕಿನ್ ಎಂಬ ರಶ್ಯನ್ ವಿಜ್ಞಾನಿಯು ಟೆಲಿವಿಜನಿನ ತಂತ್ರವನ್ನು ಕೇವಲ ಯಾಂತ್ರಿಕ ವಿಧಾನದಿಂದ ಶುದ್ಧ ವಿದ್ಯುತ್ ವಿಜ್ಞಾನವಾಗಿ ಪರಿವರ್ತಿಸಿದನು.

ಆ ನಂತರದಿಂದ ಇಂಗ್ಲೆಂಡ್ ಯುರೋಪ್ ಅಮೇರಿಕಾ ದೇಶಗಳಲ್ಲಿನ ವಿದ್ಯುತ್‌ಪ್ರಯೋಗಾಲಯಗಳಲ್ಲಿ ತಜ್ಞರು ರಾತ್ರಿ ಹಗಲೆಂಬಂತೆ ಪರಿಶೋಧನೆ ನಡೆಸಿ ಇಂದದನ್ನು ಪರಿಪೂರ್ಣತೆಗೆ ಮುಟ್ಟಿಸಿರುವರು. ಇಂದು ಟೆಲಿವಿಜನಿನಲ್ಲಿ ನಾವು ದೃಶ್ಯಗಳನ್ನು ಅದರ ಪ್ರಾಕೃತಿಕ ವರ್ಣ ಸೌಂದರ್ಯದಲ್ಲಿಯೇ ನೋಡಬಹುದು.

ಪ್ರಾಂತ್ಯಾಡಳಿತೆಯ ವಿವರಗಳು

ಶಾಸನ ಸಭೆಯಲ್ಲಿ ಮಂತ್ರಿಗಳ ಉತ್ತರ

ಬಾವಿ ತೋಡಲು ಧನ ಸಹಾಯ

ಈ ಯೋಜನೆಯ ಪ್ರಕಾರ ಕೆಲವು ಶರತ್ತುಗಳ ಮೇಲೆ ನೆಲಗಡಲೆಯನ್ನು ಮಿಶ್ರ ಪೈರಾಗಿ ಬೆಳೆಸುವಂತೆ ಬಿಡಲಾಗುವುದು ಶರ್ತಗಳು (1) ನೀರಾವರಿಯಿಂದ ಬೆಳೆಸುವ ರಾಗಿ ಅಥವಾ ಆಯಾಯ ಪ್ರದೇಶದಲ್ಲಿ ಅತ್ಯಾವಶ್ಯಕವಾಗಿ ಬೇಕಾಗಿರುವ ಇತರ ಧಾನ್ಯಗಳೊಡನೆ ಭತ್ತದ ಒಂದು ಮಿಶ್ರ ಬೆಳೆಯನ್ನು ಕಡ್ಡಾಯವಾಗಿ ಫಸಲಿಗೆ ಒಂದರಂತೆ ಬೆಳೆಸಬೇಕು 2) ಇತರ ಯಾವುದೇ ಯೋಗ್ಯ ಧಾನ್ಯದೊಡನೆ ಸೇರಿಸಿಕೊಂಡು ಎರಡನೆಯ ಬೆಳೆಯಾಗಿ ನೆಲಗಡಲೆ ಬೆಳೆಸಬಹುದು (3) ಬಾವಿ ತೋಡಲು ಧನ ಸಹಾಯಕೊಡುವ ಯೋಜನೆಯ ಪ್ರಕಾರ ನೆಲಗಡಲೆ ಮಾತ್ರ ಬೆಳೆಸಲು ಸಾಧ್ಯವಿಲ್ಲ ಈ ಪ್ರಾಂತ್ಯವು ಬಹಳದ ಮಟ್ಟಿಗೆ ಉಳಿಕೆ ಪ್ರಾಂತವಾಗಿರುವುದರಿಂದ ಈ ಯೋಜನೆಯ ಪ್ರಯೋಜನಗಳನ್ನು ಕಪ್ಪುಗೂ ಕೊಡುವುದು ಅವಶ್ಯವಿಲ್ಲ

ಹರಿಜನೋದ್ಧಾರ

ಈ ನಿಧಿಯ ಒಂದು ಕೋಟಿ ರೂಪಾಯಲ್ಲಿ ಪ್ರಾಂತಿಕ ಸಮಿತಿಯಿಂದ ಈಗಾಗಲೇ ರೂ 1 80,000ರಷ್ಟು ವೆಚ್ಚವಾಗಿದೆ ಈ ನೊಬಲಿಗನ್ನು ಥಕ್ಕರ್ ಬಾಪಾ ವಿದ್ಯಾಲಯಕ್ಕೆ ಕೊಟ್ಟಿರುತ್ತೆವೆ ಈ ಶಾಲೆಯು ಹರಿಜನ ವಿದ್ಯಾರ್ಥಿಗಳಿಗಾಗಿಯೇ

ಇದರ ಕುರಿತು ಪ್ರಚಾರ ನಡೆಯುತ್ತಿದ್ದರೂ ಒಂದು ವರ್ಷದೊಳಗೆ ಸಾಕಷ್ಟು ಆಹಾರವನ್ನು ಸಿದ್ಧಪಡಿಸಲು ಸಾಧ್ಯವಿಲ್ಲ ಪರದೇಶ ಪರಪ್ರಾಂತ್ಯಗಳಿಂದದನ್ನು ತರಿಸಬೇಕಾಗುತ್ತದೆ ಹೀಗೆ ಮಾಡಿದ್ದರೆ ವಿನಿಯಂತ್ರಣದಿಂದ ಹಾನಿಯಾಗದು

ಅಧಿಕ ಆಹಾರ ಬೆಳೆಸುವ ಪ್ರದೇಶಗಳಿಂದ ಈ ವರ್ಷ ಹೆಚ್ಚು ಪ್ರಮಾಣವು ದೊರಕುವಂತಾಗಿದೆ ಇದರಲ್ಲಿ ಹೆಚ್ಚಿನ ಅಂಶವು ಈಗಾಗಲೇ [illegible] ತ್ತದೆ ನಮಗೀವರ್ಷ [illegible] ಆಹಾರ ದೊರಕಿದ [illegible] ರೇಶನ್ ಪ್ರಮಾಣವನ್ನು 10 [illegible] ಏರಿಸಲು ಸಾಧ್ಯವಾಗುತ್ತದೆ.

ಕಷ್ಟದ ತಿಂಗಳುಗಳು

ಜೂನಿನಿಂದ ಅಕ್ಟೋಬರ ತನಕ ನಮ್ಮ ಕಷ್ಟದ ತಿಂಗಳುಗಳು. ಮಳೆ ನಮ್ಮನ್ನು ನಿರಾಶೆಗೊಳಿಸದಿದ್ದರೆ ಮತ್ತು ಈಗಿನ ದಾಸ್ತಾನನ್ನು 5 ತಿಂಗಳಿಗೆ ನಾವು ಪೂರೈಸಿಕೊಂಡರೆ ನಮ್ಮ ಕಷ್ಟ ನಿವಾರಣೆಯಾಗುವುದು

ಪ್ರಾಂತ್ಯದ ಎಲ್ಲಾ ಪ್ರದೇಶಗಳಲ್ಲಿ ರೇಶನ್ ಪದ್ಧತಿಯಿದ್ದಾಗ ವಾರಕ್ಕೆ 35 ಸಾವಿರ ಟನ್ನು ಆಹಾರವಸ್ತುಗಳು ಬೇಕಾಗಿದ್ದವು ಈಗ ಕೆಲವೇ ಪ್ರದೇಶಗಳಲ್ಲಿ ಅದನ್ನು ಇಟ್ಟಿರುವುದರಿಂದ ಮತ್ತು ರಿಲೀಫ್ ಶೋಪುಗಳನ್ನು ತೆರೆದಲ್ಲಿ ಒಟ್ಟಿಗೆ ವಾರಕ್ಕೆ 19,500 ಟನ್ನುಗಳಷ್ಟು ಆಹಾರವು ಬೇಕು

ಈಗ ಪ್ರಾಂತ್ಯದಲ್ಲಿ ಒಟ್ಟು 572,443 ಟನ್ನು ಆಹಾರವಸ್ತುಗಳು ದಾಸ್ತಾನಿವೆ ಇನ್ನೂ ಹೆಚ್ಚಿನ ಪ್ರಮಾಣ ಬರಲಿದೆ. ಈಗಿದದ್ದು ಸುಮಾರು ನಾಲ್ಕು ತಿಂಗಳಿಗೆ ಸಾಕಾಗುವಷ್ಟಿದೆ.

ಆಹಾರಧಾನ್ಯ ಕಳ್ಳಾಟಿಕೆ

ತಂಜಾವೂರಿನಿಂದ ಸಿಲೋನಿಗೆ ಕಳ್ಳಾಟಿಕೆಯಿಂದ ಆಹಾರಧಾನ್ಯಗಳನ್ನು ಒಯ್ಯುವುದನ್ನು ಪರಿಣಾಮಕಾರಿಯಾಗಿ ತಡೆಯುವ ಬಗ್ಗೆ ಹೆಚ್ಚು ವೇಗದ ಮೋಟರ್ ಲೋಂಚುಗಳನ್ನು ಕೊಂಡುಕೊಳ್ಳಲು ಸರಕಾರವು ಆಲೋಚಿಸಿರುತ್ತದೆ ಕಸ್ಟಮ್ ಪೋಲಿಸರು ಈಗಾಗಲೇ ತುಂಬಾ ವಸ್ತುಗಳನ್ನು ಹಿಡಿದಿರುವರು ಹೆಚ್ಚು ವೇಗದ ಮೋಟರ್ ಲೋಂಚುಗಳಿದ್ದರೆ ಇವರ ಕೆಲಸವು ಅತಿ ಪರಿಣಾಮಕಾರಿಯಾಗುವುದು.

ಆನೆಗಳಿಗೆ ರೇಶನ್

ಮಲಬಾರ್ ಜಿಲ್ಲೆಯಲ್ಲಿ–ಕೆಲಸಮಾಡುವ ಆನೆಗಳಿಗೆ–ಆನೆಗೆ ದಿನಕ್ಕೆ 24 ಪೌಂಡು 6 ಪೌಂಡು ಅಕ್ಕಿ 18 ಪೌಂಡು ಜೋಳ ಕೆಲಸಮಾಡದ ಆನೆಗಳಿಗೆ–ದಿನಕ್ಕೆ ತಲಾ 20 ಪೌಂಡು–13½ಪೌಂಡು ಅಕ್ಕಿ ಹೊರತು ಇತರ ಧಾನ್ಯ ಮತ್ತು 6½ ಪೌಂಡು ಜೋಳ.

ಇತರ ಜಿಲ್ಲೆಗಳಲ್ಲಿ–ಎಲ್ಲಾ ಆನೆಗಳಿಗೂ–ಆನೆಗೆ ದಿನಕ್ಕೆ 20 ಪೌಂಡು 6½ ಪೌಂಡು ಅಕ್ಕಿ 6½ ಪೌಂಡು ಇತರ ಧಾನ್ಯ ಮತ್ತು 6½ ಪೌಂಡು ಜೋಳ

(೧ನೇ ಪುಟದಿಂದ)

ಇವುಗಳ ಸಮಮಧ್ಯ ಮಾರ್ಗವನ್ನನುಸರಿಸಿ ಜಗತ್ತು ಶಾಂತಿ ನೆಮ್ಮದಿಯಿಂದಿರಬಹುದೆಂಬ ಅಭಿಪ್ರಾಯವುಂಟಾಗುತ್ತದೆ ಲೌಕಿಕದ [illegible] ಸಮಾನಗೊಳಿಸಿದ [illegible] ಬುದ್ಧಿಶಕ್ತಿಯು [illegible] ಕೊಡಲ್ಪಟ್ಟಿಲ್ಲವಾದ್ದರಿಂದ [illegible] ಸಮಾನತೆ ಬೌಧಿಕ ಸಮಾನತೆಗಳನ್ನು ಸಂತೃಪ್ತಿಕರವಾಗಿ ಒಟ್ಟಾಗಿ [illegible] ನಿಯಂತ್ರಿಸಲಾಗುವುದಿಲ್ಲ. ಮಾನವ ಸಮಾಜವು ಬಹುಕಾಲದ ಮಟ್ಟಿಗೆ [illegible] ಈಗಿನ ಶತಮಾನದಲ್ಲಿ [illegible] ಅದನ್ನು ಪರಿಪೂರ್ಣ[illegible] ಸಾಧ್ಯವಿಲ್ಲ [illegible] ಈಗಿನ [illegible] ತತ್ವಗಳನ್ನು ಮೂಲ[illegible] ಸ್ವಾವಲಕ್ಷಣವಾಗಿ ಸಮಾವೇಶಗೊಳಿಸಿ [illegible] ಸಮಾಜಕ್ರಮವನ್ನು ವ್ಯವಸ್ಥೆಗೊಳಿಸಲು ಪ್ರಯತ್ನಿಸಬೇಕು.

ಹಿಂದೂಸ್ಥಾನೀ ಮಜಲಿಸ್ ಸಭೆ

ಹಿಂದೂಸ್ಥಾನಿ ಮಜಲಿಸ್ ಮಂಗಳೂರು ಈ ಸಂಸ್ಥೆಯ ವಾರ್ಷಿಕ ಮಹಾಸಭೆಯು ಇದೇ ಜೂನ್ ತಿಂಗಳ ೧೩ನೇ ತಾರೀಕು ಆದಿತ್ಯವಾರ ಪೂರ್ವಾಹ್ನ ಘಂಟೆ ೮ ೩೦ಕ್ಕೆ ಸರಿಯಾಗಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಕೂಡಲಿರುವುದು.

ಮಜಲಿಸಿನ ಎಲ್ಲಾ ಸದಸ್ಯರಿಗೂ ಮತ್ತು ರಾಷ್ಟ್ರಭಾಷೆಯಲ್ಲಿ ಪ್ರೇಮವುಳ್ಳವರಿಗೂ ಈ ಸಭೆಯಲ್ಲಿ ಸ್ವಾಗತವಿದೆ ಮಜಲಿಸಿನ ಸದಸ್ಯರು ಸಭೆಯ ಮುಂದೆ ತರಲಿರುವ ಹೊಸ ಠರಾವುಗಳನ್ನು ೬-೬-೪೮ಕ್ಕೆ ಮುಂಚಿತವಾಗಿ ಒಪ್ಪಿಸಬೇಕು.

ಸ್ವದೇಶಾಭಿಮಾನಿ

ತಾರೀಕು 4—6—1948

ಮದ್ರಾಸು ಸರಕಾರದ ಹೊಸ ಆರ್ಡಿನೆನ್ಸು.

ಸಾರ್ವಜನಿಕ ಶಾಂತತಾ ರಕ್ಷಣೆಯ ಕಾನೂನಿಗೆ ತಿದ್ದುಪಡಿಯಾಗಿ ಕೆಲವು ನಿಯಮಗಳನ್ನು ಮದ್ರಾಸು ಸರಕಾರವು ಆರ್ಡಿನೆನ್ಸ್ ರೂಪದಲ್ಲಿ ಜಾರಿಗೆ ತಂದಿರುತ್ತದೆ. ಕಮ್ಯೂನಿಸ್ಟರ ಉಪಟಳ ವಿಪರೀತವಾಗಿರುವುದರಿಂದ ಇದನ್ನು ಜಾರಿಮಾಡಬೇಕಾಯಿತೆಂದು ಸರಕಾರದವರು ವಿವರಿಸಿದ್ದಾರೆ.

ಈ ಆರ್ಡಿನೆನ್ಸಿನಲ್ಲಿ ಮುಖ್ಯವಾಗಿ ಮೂರು ವಿಷಯಗಳಿರುತ್ತವೆ; ಕೈದು ಮಾಡಲು ವಾರಂಟು ಇದ್ದು ಅದಕ್ಕೆ ತಪ್ಪಿಸಿಕೊಂಡಿರುವವರನ್ನು ಮನೆಯಲ್ಲಿಟ್ಟುಕೊಂಡು ಆಶ್ರಯಕೊಟ್ಟರೆ ಹೀಗೆ ಆಶ್ರಯ ಕೊಟ್ಟವರು ಶಿಕ್ಷೆಗೊಳಗಾಗುವರು. ಹೀಗೆ ಅಡಗಿಕೊಂಡಿದ್ದವರ ಹೇಳಿಕೆಗಳನ್ನು ಪ್ರಚಾರ ಪಡಿಸುವುದೂ ತಕ್ಸೀರಾಗುವುದು. ಮೂರನೆಯದಾಗಿ ತನಖಿ ಇಲ್ಲದೆ ಕೈದು ಮಾಡಿ ಡಿಟೆನ್ಯೂ ಆಗಿ ಇಡಲ್ಪಡುವವರು ತಮ್ಮನ್ನು ಕೋರ್ಟಿನ ಮುಂದೆ ಹಾಜರು ಪಡಿಸಬೇಕೆಂದು ಕೇಳಿಕೊಳ್ಳುವ ಮತ್ತು ಹಾಗೆ ಕೇಳಿದಲ್ಲಿ ಹಾಜರು ಪಡಿಸುವಂತೆ ಕೋರ್ಟಿನವರು ಆಜ್ಞೆಮಾಡಬಹುದಾದ "ಹೇಬಿಯಸ್ ಕೊರ್ಪಸ್" ಎಂಬ ಪ್ರಜಾ ಹಕ್ಕನ್ನೂ ಕೋರ್ಟಿನ ಈ ಅಧಿಕಾರವನ್ನೂ ರದ್ದುಗೊಳಿಸುವುದು. ಇವು ಮೂರು ಈ ಆರ್ಡಿನೆನ್ಸಿನ ಮುಖ್ಯ ವಿಚಾರಗಳು.

ಕಮ್ಯೂನಿಸ್ಟರ ಉಪಟಳ ಅಡಗಿಸುವುದು ಅತ್ಯಗತ್ಯವೆಂಬುದನ್ನು ಇಂದು ಎಲ್ಲರೂ ಒಪ್ಪಲೇ ಬೇಕು. ಕಮ್ಯೂನಿಸ್ಟರು ಹಿಂಸಾತ್ಮಕ ಕಾರ್ಯಕ್ರಮ ಕೈಕೊಂಡುದನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ. ಅದನ್ನು ಬೆಳೆಯಗೊಟ್ಟರೆ ಊರಲ್ಲಿ ಅರಾಜಕತೆ ಬಂದೀತು.

ಸರಕಾರದ ಕೈದಿಗೆ ತಪ್ಪಿಸಿಕೊಂಡಿರುವವರಿಗೆ ಇವರ ಚಳವಳಕ್ಕೆ ಪ್ರೋತ್ಸಾಹ ಕೊಡುವುದಕ್ಕಾಗಿ ಉದ್ದೇಶಪೂರ್ವಕ ಆಶ್ರಯವಿತ್ತು ಸಹಾಯ ಮಾಡುವುದು ತಕ್ಸೀರಾಗಿ ಮಾಡಲ್ಪಡುವುದು ಸಹಜವೇ ಇರುತ್ತದೆ. ಆದರೆ ಇಂಥ ಉದ್ದೇಶವಿಲ್ಲದೆ ಮಾನವ ದಯೆಯಿಂದಾಗಿ ಇಂಥವರಿಗೆ ಆಹಾರ ಇತ್ಯಾದಿ ಕೊಟ್ಟವರು ನಿರಾಪರಾಧಿಗಳಿದ್ದು ಇವರಮೇಲೆ ಕೂಡ ತಕ್ಸೀರು ನಡೆಸಿದರೆ ಅನ್ಯಾಯವಾಗುವುದು. ಕೈದಿನ ವಾರಂಟು ಇರುವವರ ಹೇಳಿಕೆಗಳ ಪ್ರಚಾರ ಬಹಿಷ್ಕರಿಸುವುದು ಆಕ್ಷೇಪಕರವಲ್ಲ. ಇಂಥವರ ಹೇಳಿಕೆಗೆ ಜನರು ಬೆಲೆಕೊಡುವರೆಂದು ಸರಕಾರದವರು ಈ ರೀತಿ ಭಾವಿಸುವುದು ಅನಾವಶ್ಯಕವಿದ್ದಿತಾದರೂ ಇದರಲ್ಲಿ ಆಕ್ಷೇಪಕರವೇನೂ ಇಲ್ಲ. "ಹೇಬಿಯಸ್ ಕೊರ್ಪಸ್" ಅರ್ಜಿಮಾಡಲು ಹಾಗೂ ಅಂಥ ಅರ್ಜಿ ತನಖಿ ಮಾಡಲು ಹ್ಯಾಕೋರ್ಟಿಗಿರುವ ಹಕ್ಕನ್ನು ರದ್ದುಗೊಳಿಸಲು ಈ ಆರ್ಡಿನೆನ್ಸ್ ಮೂಲಕ ಸರಕಾರದವರು ಯತ್ನಿಸಿದ್ದು ಮಾತ್ರ ಪ್ರಜಾ ಸ್ವಾತಂತ್ರ್ಯದ ದೃಷ್ಟಿಯಿಂದ ಅತ್ಯಂತ ಆಕ್ಷೇಪಕರ ವಿಷಯವಿದ್ದು ಕಾಂಗ್ರೆಸ್ ಸರಕಾರದವರು ಇದನ್ನು ಸಾಧಿಸಲು ಹೋದ ಬಗ್ಗೆ ಖೇದವೆನ್ನಿಸುತ್ತದೆ.

ಹ್ಯಾಕೋರ್ಟಿನ ಈ ಹಕ್ಕನ್ನು ತೆಗೆಯಲು ಆರ್ಡಿನೆನ್ಸ್ ಮೂಲಕ ಸಾಧ್ಯವಿಲ್ಲವೆಂದು ಕೆಲವರ ಅಭಿಪ್ರಾಯವಿರುತ್ತದೆ. ಅಂದರೆ ಆ ಹಕ್ಕು ಶಾಸನ ಸಭೆಯಿಂದ ಮಂಜೂರಾದ ಕಾನೂನಿನ ಭಾಗವಿದ್ದು ಅದನ್ನು ಶಾಸನ ಸಭೆ ಮಾತ್ರವಲ್ಲದೆ ಕೇವಲ ಸರಕಾರ ಮಾತ್ರ ತೆಗೆಯಲು ಕಾನೂನು ಪ್ರಕಾರ ಸರಕಾರಕ್ಕೆ ಅಧಿಕಾರವಿಲ್ಲವಂತೆ. ಇದು ಹೇಗಿದ್ದರೂ ಪ್ರಜಾ ಸ್ವಾತಂತ್ರ್ಯದ ಅತ್ಯಂತ ಪವಿತ್ರವಾದ ಈ ಹಕ್ಕನ್ನು ತೆಗೆಯ ಹೋಗುವುದು ಎಷ್ಟುಮಾತ್ರಕ್ಕೂ ಸರಿಯಲ್ಲ.

ಸರಕಾರವು ಕೈದುಮಾಡಿಟ್ಟವರನ್ನು ಹ್ಯಾಕೋರ್ಟು ಇತ್ತೀಚೆಗೆ ಕೆಲವು ಮಂದಿಯನ್ನು ಬಿಡುಗಡೆ ಮಾಡಿಸಿತೆಂಬುದು ನಿಜ. ಇವರನ್ನು ಒಳಗಿಡುವಾಗ ಕ್ರಮ ತಪ್ಪಿದ್ದರಿಂದ ಹೀಗೆ ಬಿಡಿಸಲಾಯಿತು. ಅಷ್ಟುಮಾತ್ರಕ್ಕೆ ಸರಕಾರೀ ನೌಕರರ ಆಡಳಿತೆಗೆ ತೊಂದರೆಯಾಗುತ್ತದೆಂಬ ಕಾರಣದಿಂದ ಪ್ರಜೆಗಳ ಹಾಗೂ ಕೋರ್ಟುಗಳ ಹಕ್ಕನ್ನೇ ತೆಗೆಯುವುದು ಸರಿಯೆನ್ನಿಸಲಾರದು.

ಶಾಸನ ಸಭೆಯನ್ನು ಸೇರಿಸುವುದು ಅಷ್ಟೊಂದು ಸುಲಭವಿರುವಾಗ ಇಂಥ ಆರ್ಡಿನೆನ್ಸುಗಳನ್ನು ತಾವೇ ಏತಕ್ಕೆ ಮಾಡಬೇಕೆಂಬುದು ಇನ್ನೊಂದು ಪ್ರಶ್ನೆ. ಶಾಸನ ಸಭೆಯಲ್ಲಿ ಸರಕಾರಕ್ಕೆ ಸಾಕಷ್ಟು ಬಹುಮತವಿದೆ ಮಾತ್ರವಲ್ಲ ಇದಕ್ಕೆ ಪ್ರಜಾ ಸ್ವಾತಂತ್ರ್ಯ ಅಪಹರಿಸುವ ಕಾನೂನು ಮಾಡುವ ಅಧಿಕಾರವೂ ಇದೆ. ಬಹುಮತವಿದೆ ಎಂಬುದರಿಂದ ಮಾತ್ರ ಇಂಥ ಕಾನೂನನ್ನೇ ಮುಂದೆ ತಂದರೂ ಅದು ನ್ಯಾಯವೆನ್ನಿಸಲಾರದೆಂಬುದನ್ನು ಮಾತ್ರ ನಾವು ಹೇಳದೆ ನಿವೃತ್ತಿ ಇಲ್ಲ.

ಬ್ರಿಟಿಷ ಸರಕಾರದವರು ದಬ್ಬಾಳಿಕೆ ಮಾಡುವಾಗ ದೂರುತ್ತಿದ್ದವರು ತಾವೇ ದಬ್ಬಾಳಿಕೆ ಮಾಡುವುದು ನ್ಯಾಯವೆ? ಕಾಂಗ್ರೆಸ್ ಸ್ವಯಂ ಸೇವಕರಿಗೆ ಅನ್ನನೀರು ಕೊಡದಂತೆ ಹಿಂದೆ ಬ್ರಿಟಿಷ ಸರಕಾರ ಆಜ್ಞೆ ಕೊಡುವಾಗ ಆಕ್ಷೇಪಿಸಿದವರು ಈಗ ತಮ್ಮ ವಿರುದ್ಧ ಪಕ್ಷದ ಮೇಲೆ ಅದೇ ಬಗೆಯ ಶಸ್ತ್ರ ಹೂಡಬಹುದೆ? ಎಂಬಿತ್ಯಾದಿ ಕೇಳುತ್ತಾರೆ?

1942ನೇ ಇಸವಿಯ ಕಾಂಗ್ರೆಸ್ ಚಳವಳದ ಸಂದರ್ಭದಲ್ಲಿ ಕಾಂಗ್ರೆಸಿನ ಹೆಸರಲ್ಲಿ ಏನೆಲ್ಲ ನಡೆಯಿತು? ಕಾಂಗ್ರೆಸ್ ಮುಂದಾಳುಗಳೆನ್ನಿಸುವವರು ಕೈದಿಗೆ ತಪ್ಪಿಸಿ ತಿರುಗಲಿಲ್ಲವೇ? ರೈಲ್ವೇ ಸ್ಟೇಶನ್ ಸುಡುವುದು ಇತ್ಯಾದಿ ಅತ್ಯಾಚಾರ ಮಾಡಿಲ್ಲವೆ? ಇಂಥವರನ್ನು ಸ್ವಾತಂತ್ರ್ಯದ ಯೋಧರೆಂದು ಕೊಂಡಾಡಿದವರಿಲ್ಲವೆ? ಆಗ ಸರಕಾರ ಕೈದಿನಿಂದ ತಪ್ಪಿಸಿಕೊಂಡವರು ವೀರರೆಂದಾದರೆ ಈಗ ವರ್ಗಗಳೆ ತನಕವಾದರೂ ಒಳಪಡಿಸಬೇಕು. ...

ಟೀಕೆ-ಟಿಪ್ಪಣಿಗಳು

ಹೈದರಾಬಾದಿನಲ್ಲಿ ಶಾಂತಿ?

ಹೈದರಾಬಾದು ವಾರ್ತೆಗಳಿಗೆ ಪತ್ರಿಕೆಗಳಲ್ಲಿ ಶಿರೋನಾಮೆಗಳು ಈಗಲೂ ಸಲ್ಲುತ್ತಿವೆ. ಭಾರತ ಮತ್ತು ಹೈದರಾಬಾದುಗಳೊಳಗೆ ಹೊಡೆದಾಟವೆ ನಿಶ್ಚಯವೆಂಬಷ್ಟಕ್ಕೆ ಬರುವಾಗ ಈಗ ಪುನಃ ಆಶಾಜನಕ ಪರಿಸ್ಥಿತಿ ಕಾಣುತ್ತಿದೆಯಂತೆ.

ಹೈದರಾಬಾದಿನ ಮುಖ್ಯ ಮಂತ್ರಿಯವರು ಭಾರತ ಸರಕಾರದ ಮುಖ್ಯ ಮಂತ್ರಿಯವರನ್ನು ಕಂಡು ಮಾತುಕತೆ ನಡೆಸಿದರಷ್ಟೆ. ಈ ಸಂದರ್ಭದಲ್ಲಿ ಭಾರತ ಸರಕಾರದ ಕನಿಷ್ಟ ಕೇಳಿಕೆಗಳನ್ನು ಅವರಿಗೆ ತಿಳಿಸಲಾಯಿತೆಂದೂ ಈ ಕೇಳಿಕೆಗಳಿಗೆ ಹೈದರಾಬಾದು ಸರಕಾರ ಒಪ್ಪುವ ಸಂದರ್ಭವಿದೆಯೆಂದೂ ಹೇಳಲಾಗುತ್ತಿದೆ.

ರಕ್ಷಣಾಖಾತೆ, ರಹದಾರಿ ಹಾಗೂ ಇತರ ಒಡನಾಟದ ಖಾತೆ ಹಾಗೂ ವಿದೇಶಾಂಗ ಖಾತೆ ಈ ಮೂರು ಖಾತೆಗಳನ್ನು ಹೈದರಾಬಾದು ಭಾರತ ಸರಕಾರಕ್ಕೆ ಬರುವ ಹತ್ತು ಏಕಲ್ಲ? ಈ ಬಗೆಯ ಟೀಕೆಗಳು ಮುಂದೆ ಬರುವುದು ಸಹಜವೇ ಇರುತ್ತದೆ.

ಇವಕ್ಕೆ ಉತ್ತರ ಈ ರೀತಿ ಇದೆ. ಬ್ರಿಟಿಷರು ದಬ್ಬಾಳಿಕೆ ನಡೆಸುತ್ತಿದ್ದದ್ದು ಅಹಿಂಸಾತತ್ವದ ಕಾಂಗ್ರೆಸ್ ಚಳವಳಗಾರರ ಮೇಲೆ. ಈಗಿನ ಸರಕಾರ ಸದ್ದಡಗಿಸಲು ಹೊರಟುದು ಹಿಂಸಾತ್ಮಕರ ಚಳವಳದ ಮೇಲೆ. ಇವೆರಡೂ ಖಂಡಿತವಾಗಿಯೂ ಒಂದೇ ಅಲ್ಲ. ಹಿಂಸಾತ್ಮಕ ಚಳವಳ ಅಡಗಿಸದೆ ಇದ್ದ ಸರಕಾರ ಆ ಹೆಸರಿಗೆ ಯೋಗ್ಯವಾಗಲಾರದು.

1942ನೇ ಇಸವಿಯಲ್ಲಿ ತಲೆತಪ್ಪಿಸಿ ತಿರುಗುತ್ತಿದ್ದ ಮುಂದಾಳುಗಳಿದ್ದುದೂ ಹಿಂಸೆಯನ್ನು ಕೈಕೊಂಡವರೂ ಇದ್ದರೆಂಬುದು ನಿಜ. ಆದರೆ ಇದು ಕಾಂಗ್ರೆಸಿನ ಕ್ರಮವನ್ನನುಸರಿಸಿ ಮಾಡಿದ್ದಲ್ಲ. ಅದನ್ನು ಅತಿಕ್ರಮಿಸಿ ಮಾಡಿರಬಹುದು. ಕಾಂಗ್ರೆಸಿನ ನಿಜವಾದ ಮುಂದಾಳುಗಳು ಇಂಥ ವರ್ತನ ಎಲ್ಲಿಯೂ ಸಮರ್ಥಿಸಿಲ್ಲ. ಮಹಾತ್ಮಾ ಗಾಂಧಿಯವರು ತಲೆತಪ್ಪಿಸಿ ತಿರುಗುವವರು ಕೈದಿಗೊಳಗಾಗುವಂತೆ ಮಾಡಿದರು. ಅತ್ಯಾಚಾರಗಳನ್ನು ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಖಂಡಿಸಿದರು.

ಕಮ್ಯೂನಿಸ್ಟ್ ಚಳವಳದ ಕಥೆ ಹೀಗಿಲ್ಲ. ಇದರ ಮುಂದಾಳುಗಳು ಅಹಿಂಸೆಯನ್ನು ಒಪ್ಪುವುದಿಲ್ಲ. ಮಾತ್ರವಲ್ಲ ಪ್ರಾಯಶಃ ಈಗ ಹಿಂಸೆಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಕಾಣುತ್ತದೆ. ಹೀಗಿರುವುದರಿಂದ ಹಿಂದಿನ ಕಾಂಗ್ರೆಸ್ ಚಳವಳ ಮತ್ತು ಈಗಿನ ಕಮ್ಯೂನಿಸ್ಟ್ ಚಳವಳ ಹೋಲಿಸಿ ಸರಕಾರವನ್ನು ದೂರುವುದು ಸರಿಯಲ್ಲ.

ಆದರೂ ಪ್ರಜಾ ಸ್ವಾತಂತ್ರ್ಯಕ್ಕೆ ಧಕ್ಕೆ ತಾರದಂತೆ ವರ್ತಿಸಬೇಕೆಂದು ಈಗಿನ ಸರಕಾರವನ್ನು ನಾವು ಮತ್ತೊಮ್ಮೆ ಕೇಳಬೇಕಾಗಿದೆ.

ಹೈದರಾಬಾದಿನಲ್ಲಿ ಪ್ರಜಾ ಸರಕಾರ ಸ್ಥಾಪಿಸಲು ನೈಜಾಮರು ಒಪ್ಪಿ ಈಗ ತಾತ್ಕಾಲಿಕ ಸರಕಾರ ನೇಮಿಸಿ ಹೊಸರಾಜ್ಯ ಘಟನೆ ನಿರ್ಣಯಿಸಲು ಘಟನಾಸಮಿತಿ ಏರ್ಪಡಿಸಬೇಕು. ಇದೆಲ್ಲದರಲ್ಲಿ ಮುಸ್ಲಿಮರಿಗೆ ಸ್ವಲ್ಪ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಅಂದರೆ ಹಿಂದುಗಳಿಗೆ 60 ಅಂಶ ಮುಸ್ಲೀಮರಿಗೆ 40 ಅಂಶ ಈ ರೀತಿ ದಾಮಾಶಿಯಿಂದ ಮುಂದರಿದರೂ ಅಡ್ಡಿಯಿಲ್ಲ, ಎಂಬಿತ್ಯಾದಿಯಾಗಿ ತಿಳಿಸಲಾಗಿದೆಯೆಂದೂ ಇದಕ್ಕೆಲ್ಲ ನೈಜಾಮ ಸರಕಾರ ಒಪ್ಪಿಕೊಳ್ಳದೆ ನಿವೃತ್ತಿ ಇಲ್ಲದ ಪರಿಸ್ಥಿತಿ ಬಂದಿದೆಯೆಂದೂ ತಿಳಿದು ಬರುತ್ತದೆ. ಅಂತೂ ಈ ಪ್ರಶ್ನೆ ಶಾಂತ ರೀತಿಯಿಂದ ತೀರ್ಮಾನವಾದರೆ ಒಳ್ಳಿತೆಂದು ಎಲ್ಲರೂ ಒಪ್ಪಲೇ ಬೇಕು.

ಪೆಲೆಸ್ತ್ಯಾನು ಪ್ರಕರಣ

ಹಿಂದುಸ್ಥಾನದ ರಾಜಕೀಯ ರಂಗದಲ್ಲಿ ಹೈದರಾಬಾದಿನ ಪ್ರಶ್ನೆ ಇದ್ದಂತೆ ಜಗತ್ತಿನ ರಂಗದಲ್ಲಿ ಇಂದು ಪೆಲೆಸ್ತ್ಯಾನ್ ಪ್ರಕರಣವೇ ಪ್ರಾಮುಖ್ಯ ವಿಷಯವಿದ್ದು ಇದನು ಕುರಿತು ಪದೇ ಪದೇ ಬರೆಯಬೇಕಾಗುತ್ತಿದೆ.

ಸಂಯುಕ್ತ ರಾಷ್ಟ್ರ ಸಭೆಯ ಯುದ್ಧ ನಿಲ್ಲಿಸಬೇಕೆಂಬ ಆಜ್ಞೆಯನ್ನು ಅರಾಬರು ಮನ್ನಿಸಲಿಲ್ಲ. ಬಲಾತ್ಕಾರದಿಂದ ಈ ಆಜ್ಞೆ ಜಾರಿಗೆ ತರಲು ಬ್ರಿಟನು ಒಪ್ಪುವುದಿಲ್ಲ. ಅಂತೂ ಒಂದು ತಿಂಗಳ ಮಟ್ಟಿಗಾದರೂ ಇತ್ತಂಡದವರಿಗೂ ಪರಕೀಯರ್ಯಾರೂ ಆಯುಧ ಇತ್ಯಾದಿ ಒದಗಿಸಿ ಸಹಾಯ ಮಾಡಬಾರದೆಂಬ ಸೂಚನೆಗೆ ಬ್ರಿಟನು ನಿವೃತ್ತಿ ಇಲ್ಲದೆ ಒಪ್ಪಿಕೊಂಡಿರುತ್ತದೆ.

ಜೆರುಸಲೇಮು ಪಟ್ಟಣ ಕ್ರೈಸ್ತರಿಗೆ ಪವಿತ್ರ ಕ್ಷೇತ್ರ. ಇದು ಯೆಹೂದಿಯ ಸ್ವಾಧೀನವಿತ್ತು. ಈ ಯೆಹೂದಿಯರನ್ನು ಅರಾಬರು ಮುತ್ತಿಗೆಗೆ ಒಳಪಡಿಸಿದ್ದರು. ಹೀಗೆ ಮುತ್ತಿದ ಅರಾಬರನ್ನು ಹೊರಗಿನ ಸುತ್ತಿನಿಂದ ಯೆಹೂದಿಯರು ಮುತ್ತಿದ್ದರು. ಆ ಹೊರಗಿನ ಸುತ್ತು ಅರಾಬರದು. ಹಳೆಯ ಜೆರುಸಲೇಮಿನಲ್ಲಿ ಸಿಕ್ಕಿ ಬಿದ್ದ ಯೆಹೂದಿಯವರಿಗೆ ಹೊರಗಿನಿಂದ ಸಹಾಯ ಒದಗಿಸಲು ಬಹಳ ಪ್ರಯತ್ನ ನಡೆದರೂ ಸಾರ್ಥಕವಾಗಲಿಲ್ಲ. ಹನ್ನೆರಡು ದಿನಗಳ ತನಕ ಹೋರಾಡಿ ಕೊನೆಗೆ ಒಳಗಿದ್ದ ಯೆಹೂದಿಯರು ಶರಣಾಗತರಾಗಿ ಅರಬರಿಗೆ ವಿಜಯವಾಯಿತು. ಯೆಹೂದಿಯರ ಮುಖ್ಯ ಪಟ್ಟಣವಾದ ಟೆಲ್ ಅವೀವ್ ಸ್ವಾಧೀನತೆಗಾಗಿ ಈಗ ಯುದ್ಧ ಸಾಗುತ್ತಲೇ ಇದೆ.

ಇಸ್ರಾಯೇಲ್ ರಾಷ್ಟ್ರಕ್ಕೆ ಮನ್ನಣೆ ಕೊಡಬೇಕಾಗಿ ಭಾರತ ಸರಕಾರವನ್ನು ಕೇಳಲಾಗಿತ್ತೆಂದೂ ರಾಷ್ಟ್ರವು ಶಾಶ್ವತವಾಗುವುದೆಂದು ಕಂಡು ಬರುವ ಮೊದಲು ಮನ್ನಣೆ ಕೊಡುವುದು ಉಚಿತವಲ್ಲವೆಂಬುದರಿಂದ ಇದಕ್ಕೆ ಭಾರತ ಸರಕಾರ ಉತ್ತರ ಕೊಟ್ಟಿಲ್ಲವೆಂದೂ ಪ್ರಕಟಿಸಲಾಗಿದೆ. ಮಾತ್ರವಲ್ಲ ಭಾರತ ಸರಕಾರ ಅರಬರ ಪಕ್ಷವೆಂಬ ಮಾತನೂ ಅಲ್ಲಗಳೆಯಲಾಗಿದೆ. ಈ ಕಲಹದಕ್ಕೆ

ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಹರಿಜನ ಪರಿಷತ್ತು

ಕೆನರಾ ಹೈಸ್ಕೂಲಿನ ಶ್ರೀ ಭುವನೇಂದ್ರ ಸಭಾಸದನದಲ್ಲಿ ನಮ್ಮ ನಗರಸಭಾಧ್ಯಕ್ಷ ಶ್ರೀ| ಎಲ್. ಸಿ. ಪ್ಯಾಸರ ಅಧ್ಯಕ್ಷತೆಯಲ್ಲಿ ಇದೇ ತಾರೀಕು 29—30ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ಹರಿಜನ ಪರಿಷತ್ತು ನಡೆಯಿತು.

ತಾ. 29ರ ಪ್ರಾತಃಕಾಲ ಧ್ವಜವಂದನಾ ಸಮಾರಂಭ ಜರಗಿತು. ನಮ್ಮ ನಗರ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ| ಡಾ| ನಾಗಪ್ಪ ಆಳ್ವರು ರಾಷ್ಟ್ರಧ್ವಜಾರೋಹಣ ಮಾಡಿದರು. ಆ ಬಳಿಕ ಹರಿಜನ ವಿದ್ಯಾರ್ಥಿಗಳ ಸಭೆಯೊಂದು ನಮ್ಮ ನಗರ ಸಭಾಸದರಾದ ಜನಾಬ್ ಎಮ್. ಸಿ ಅಹಮುದರ ಅಧ್ಯಕ್ಷತೆಯಲ್ಲಿ ನಡೆಯಿತು. ಮತ್ತೆ ಹರಿಜನರ ಉನ್ನತಿಗಾಗಿ ದುಡಿಯುವ ಹಾಗೂ ಸಹಕಾರೀ ಕಾರ್ಯಕರ್ತರ ಸಭೆಯೊಂದು ಜಿಲ್ಲಾ ಹರಿಜನ ಸೇವಾಸಂಘದ ಅಧ್ಯಕ್ಷರಿರುವ ಡಾ| ಯು. ಪಿ ಮಲ್ಯ ಎಮ್ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅದೇ ದಿನ ಮಧ್ಯಾಹ್ನ ಸೇರಿದ ಪರಿಷತ್ತಿನ ಆರಂಭ ಸಮಾರಂಭವನ್ನು ಮದ್ರಾಸು ಸರಕಾರದ ಮಾನ್ಯ ಮಂತ್ರಿ ಶ್ರೀ ಕೆ ಮಾಧವ ಮೆನೊನರು ಮಾಡಿದರು. ಈ ಸಂದರ್ಭದಲ್ಲಿ ಸುವರ್ಣ ಹಿಂದುಗಳೊಡನೆ ಅಸ್ಪೃಶ್ಯತೆಯನ್ನು ತೆಗೆದುಹಾಕುವಂತೆ ವಿನಂತಿಮಾಡಿಕೊಳ್ಳುತ್ತ ನಿಮ್ಮ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸಲು ಬಿಡಿರಿ. ಆದರೆ ಇದಕ್ಕಿಂತಲೂ ಮುಖ್ಯವಾಗಿ ನಿಮ್ಮ ಹೃದಯಮಂದಿರಗಳನ್ನು ಹರಿಜನರಿಗೆ ತೆರೆಯಿರಿ ಎಂದು ಉದ್ಗಾರವೆತ್ತಿದರು.

ಸ್ವಾಗತಾಧ್ಯಕ್ಷರಾದ ಶ್ರೀ ಎಸ್ ಗೋಪಾಲ ಸಾಲಿನ್ಸರು ಈ ಜಿಲ್ಲೆಯ ಹರಿಜನರ ಸಂಕಷ್ಟಗಳನ್ನು ವಿವರಿಸಿದರು. ಮುಖ್ಯವಾಗಿ ಪಟ್ಟಕ್ಕೆ ಕೂಲಿ ಆಳುಗಳಾಗಿ ಹೋಗುವವರ ದುರವಸ್ಥೆ, ಭೂಮಿಯೊಂದಿಗೆ ಕೈ ಒದಲಂಗುವ ಮೂಲದ ಹೊಲೆಯರ ಪಾಡು ಇತ್ಯಾದಿ ವಿವರಿಸಿದರು. ಹರಿಜನರ ಉನ್ನತಿಗಾಗಿ ಅಷ್ಟೊಂದು ದುಡಿದ ಮಹಾತ್ಮಾ ಗಾಂಧಿಯವರ ನಿಧನಕ್ಕಾಗಿ ಸಂತಾಪ ಸೂಚಿಸಿದರು. ಡಾಕ್ಟರ್ ಅಂಬೇಡ್ಕರರಂತೆ ಎಲ್ಲ ಹರಿಜನ ಯುವಕರೂ ಸ್ವಾವಲಂಬನದಿಂದ ಸಾಹಸಪಡಬೇಕೆಂದರು. ಅಂತೆಯೇ ಈ ಜಿಲ್ಲೆಯಲ್ಲಿ ಹರಿಜನರಿಗಾಗಿ ಎಷ್ಟೋ ವರ್ಷಗಳ ಹಿಂದೆ ದುಡಿದ ಶ್ರೀ ಈಶ್ವರಾನಂದರ ಪುಣ್ಯ ಸ್ಮರಣೆಯನ್ನು ಮಾಡಿದರು.

ಆ ಬಳಿಕ ಶ್ರೀ ಎಲ್ ಸಿ ಪ್ಯಾಸರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹರಿಜನರು ಒಗ್ಗಟ್ಟಾಗಿ ತಮ್ಮ ಉನ್ನತಿಗಾಗಿ ದುಡಿಯುವುದರ ಆವಶ್ಯಕತೆಯನ್ನು ಒತ್ತಿಹೇಳಿದರು.

ಮರುದಿನ ಸಭಿಕರಲ್ಲಿ ಶ್ರೀಮತಿ ಮೇರಿ ಜೆ ಬ್ರಿಟ್ಟೊ ಇವರು ಮಾತನಾಡುತ್ತ ಹರಿಜನ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಇವರ ಹೆತ್ತವರನ್ನೆಲ್ಲ ಪ್ರೋತ್ಸಾಹಿಸುವುದು ಅಗತ್ಯವೆಂದರು. ಕಮ್ಯೂನಿಸ್ಟರ ಪ್ರಚಾರಕ್ಕೆ ಬಲಿಬೀಳದಂತೆ ಜಾಗರೂಕರಿರಬೇಕೆಂದು ಎಚ್ಚರಿಸಿದರು. ಜಿಲ್ಲೆಯ ಹರಿಜನ ಸೇವಕರಾದ ಶ್ರೀಮಾನ್ ಎನ್ ಎಸ್ ಕಿಲ್ಲೆಯವರು ಎಂದಿನಂತೆ ತಮ್ಮ ಉಜ್ವಲ ಭಾಷಣ ಮಾಡಿದರು. ಉಡುಪಿ ಶ್ರೀ ಕೃಷ್ಣ ದೇವಾಲಯಕ್ಕೆ ಶ್ರೀಕೃಷ್ಣ ಮಠ ಎಂದು ಹೆಸರಿದ್ದು ಇಲ್ಲಿ ದೇವಸ್ಥಾನ ಪ್ರವೇಶ ಮಾಡಿದರೆ ಕಾನೂನಿಗೆ ವಿರೋಧವಾಗುವ ಸಂಭವವುಂಟೆಂದು ವಿವರಿಸಿದರು. ಅಲ್ಲೇ ಇರುವ ಶ್ರೀ ಚಂದ್ರಮೌಳೀಶ್ವರ ಹಾಗೂ ಶ್ರೀ ಮದನಂತೇಶ್ವರ ದೇವಸ್ಥಾನಗಳಿಗೂ ಈ ಬಗೆಯ ಇನ್ನಾವುದೊ ಅಡ್ಡಿ ಇರಬಹುದಾದರೂ ಅದನ್ನವರು ವಿವರಿಸಲಿಲ್ಲ. ಹಾಗೂ ಶ್ರೀ ಧರ್ಮಸ್ಥಳ ಮತ್ತು ಮುಲ್ಕಿ ವೆಂಕಟರಮಣ ದೇವಸ್ಥಾನಗಳಿಗೂ ಪ್ರವೇಶ ಮಾಡದಿರಲು ಏನೋ ವಿಶಿಷ್ಟ ಕಾರಣಗಳಿವೆಯಂತೆ. ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೆ ಪ್ರವೇಶವನ್ನು ಮಾನ್ಯ ಮಂತ್ರಿ ಕೂರ್ಮಯ್ಯನವರಿಗಾಗಿ ಕಾದಿರಿಸಲಾಗಿದೆಯೆಂದರು.

ಮದ್ರಾಸಿನ ಬಿ ಎಲ್ ತರಗತಿಯ ಹರಿಜನ ವಿದ್ಯಾರ್ಥಿ ಡಿ| ಕೃಷ್ಣನವರೂ ಮಾತನಾಡಿದರು. ಅನಂತರ ಪರಿಷತ್ತನ್ನು ಮಾರನೆ ದಿನಕ್ಕೆ ಮುಂದುವರಿಸಲಾಯಿತು.

ಮಾರನೆ ದಿನ ಸೇರಿದ ಪರಿಷತ್ತಿನಲ್ಲಿ ಶ್ರೀ ಎಲ್ ಸಿ ಪ್ಯಾಸರಿಗೆ ಬರಲು ಅನಾನುಕೂಲವಾಗಿ ಶ್ರೀ ಮಾಧವರಾಯರು ಅಧ್ಯಕ್ಷತೆ ವಹಿಸಿದರು. ಹರಿಜನ ಉನ್ನತಿಗೆ ಸಂಬಂಧಪಟ್ಟ ಅನೇಕ ವಿಷಯಗಳ ಕುರಿತು ನಿರ್ಣಯಗಳಾದವು. ದೇವಸ್ಥಾನ ಪ್ರವೇಶ, ಸಾರ್ವಜನಿಕ ಹೋಟೇಲು ಇತ್ಯಾದಿ ಪ್ರವೇಶದ ಈ ಕುರಿತು ಸರಕಾರದವರು ಕಾನೂನುಗಳನ್ನು ಮಾಡಿರುವರಾದರೂ ಅವು ಸರಿಯಾಗಿ ಜಾರಿಗೆ ಬರುತ್ತ ಇಲ್ಲ. ಇವುಗಳ ಬಗ್ಗೆ ಅಗತ್ಯವುಳ್ಳ ಪ್ರಚಾರಬೇಕು. ಹರಿಜನ ಉನ್ನತಿ ಬಗ್ಗೆ ನೇಮಿಸಲ್ಪಡುವ ಕಮಿಟಿಗಳಿಗೆ ಸದಸ್ಯರನ್ನು ನೇಮಿಸುವಾಗ ಹರಿಜನ ಸಂಸ್ಥೆಗಳೊಡನೆ ವಿಚಾರಿಸಬೇಕು. ಹರಿಜನ ಉನ್ನತಿಗಾಗಿ ಜಿಲ್ಲೆಗೊಬ್ಬ ಗಜೆಟೆಡ್ ಆಫೀಸರರನ್ನು ನೇಮಿಸುವುದು ಅತಿಗತ್ಯ. ತಹಸೀಲ್ದಾರ ಗ್ರೇಡಿನವರು ಸಾಕು. ತಾಲೂಕಿಗೂ ಓರ್ವರೂ ಡಿಪ್ಯೂಟಿ ತಹಸೀಲ್ದಾರ ಮತ್ತು ರೆವೆನ್ಯೂ ಇನ್ಸ್‌ಪೆಕ್ಟರ ಗ್ರೇಡಿನ ಆಫೀಸರರನ್ನೂ ನೇಮಿಸಿ ತಾಲೂಕು ಮತ್ತು ಫಿರ್ಕಾ ಕಮಿಟಿಗಳನ್ನು ವ್ಯವಸ್ಥೆಗೊಳಿಸಬೇಕು. ಯುದ್ಧಕ್ಕೆ ಹೋಗಿ ಮರಳಿದ ಹರಿಜನರಿಗೆ ಪೇಟೆಗಳಲ್ಲಿ ಮನೆ ಮಾಡಿ ನಿಲ್ಲಲಿಕ್ಕೆ ಸ್ಥಳ ಹಾಗೂ ಹಳ್ಳಿಗಳಲ್ಲಿ ಸಾಗುವಳಿಗೆ ಸ್ಥಳ ಕೊಡಬೇಕು. ಹರಿಜನ ಕಾಲೋನಿಗಳಿಗೆ ಈಗ ಕೊಟ್ಟಿರುವುದಕ್ಕಿಂತ ಉತ್ತಮ ಸ್ಥಳಗಳನ್ನು ಒದಗಿಸಬೇಕು. ಈಗ ಹಲವು ಹರಿಜನ ಕಾಲೋನಿಗಳಲ್ಲಿ ಬಾವಿಗಳಲ್ಲಿ ನೀರಿಲ್ಲ. ಈ ಕುರಿತು ಅರ್ಜಿ ಮಾಡಿದರೆ ಮಳೆಬಂದು ನೀರಾದ ಮೇಲೆ ತನಿಖೆಗೆ ಬರುತ್ತಾರೆ. ಇಂಥ ಬಾವಿಗಳನ್ನು ಕೂಡಲೇ ದುರಸ್ತಿಗೊಳಿಸಬೇಕು. ಹರಿಜನರ ಬಗ್ಗೆ ಕೈಗಾರಿಕಾ ಶಾಲೆಗಳನ್ನು ತೆರೆಯಬೇಕು. ಖಾಸಗಿಯವರು ನಡೆಸುವ ಹರಿಜನರ ಹಾಸ್ಟೆಲುಗಳ ಮೇಲ್ವಿಚಾರ ಸರಿ ಇಲ್ಲದಿರುವುದರಿಂದ ಇದರ ಆಡಳಿತೆ ಸರಕಾರವೇ ವಹಿಸಬೇಕು. ಹರಿಜನ ಸೇವಾ ಸಂಘದವರು ನಡೆಸುವ ಹಾಸ್ಟೆಲುಗಳ ಕುರಿತು ಈ ನಿರ್ಣಯವಿರುತ್ತದೆಯೋ ಎಂಬುದು ಸ್ಪಷ್ಟವಾಗಲಿಲ್ಲ. ಹರಿಜನರಿಗೆ ಕಡ್ಡಾಯ ಶಿಕ್ಷಣವಿರಬೇಕು. ಲೇಬರ್ ಶಾಲೆಗಳಲ್ಲಿ ಪಠಾಹತಿಗೆ ಆಸ್ಪದಬೇಕು. ಸರಕಾರದ ಸಹಾಯದಿಂದ ನಡೆಯುವ ಸಾಮಾನ್ಯ ಹಾಸ್ಟೆಲುಗಳಲ್ಲಿ ಹರಿಜನರಿಗೆ ಪ್ರವೇಶ ಕೊಡಬೇಕು. ಕಾಲೋನಿಗಳಲ್ಲಿ ನರ್ಸರಿ ಶಾಲೆಗಳನ್ನೇರ್ಪಡಿಸಬೇಕು. ಘಟ್ಟದ ಆಳುಗಳ ಸಂಕಷ್ಟದ ಪರಿಸ್ಥಿತಿ ವಿಚಾರಿಸಲು ಸರಕಾರದವರು ಒಂದು ಕಮಿಟಿ ನೇಮಿಸಬೇಕು. ಹರಿಜನರಿಗೆ ಮಿತಾಕ್ಷರೀ ಕಾನೂನನ್ನು ಅನ್ವಯಿಸಬೇಕು. ಹರಿಜನ ಮಕ್ಕಳಿಗೆ ಒಂದು ವರ್ಷ ಪ್ರಾಯ ಆದೊಡನೆ ರೇಶನ್ ಅಕ್ಕಿ ಸಿಕ್ಕಬೇಕು ಎಂಬಿತ್ಯಾದಿ ಅನೇಕ ನಿರ್ಣಯಗಳು ಮಂಜೂರಾದವು.

ಉತ್ಸಾಹದಿಂದ ನಿರ್ಣಯಗಳನ್ನು ಮಾಡಿದಂತೆ ಅವುಗಳನ್ನು ಜಾರಿಗೆ ತರಲು ಅಷ್ಟೇ ಉತ್ಸಾಹದಿಂದ ದುಡಿಯುವಂತೆ ಉಪದೇಶವಿತ್ತು ಶ್ರೀ ಮಾಧವರಾಯರು ಮುಕ್ತಾಯ ಭಾಷಣ ಮಾಡಿದರು. ಶ್ರೀ ಗೋಪಾಲ ಸಾಲಿನ್ಸರು ಧನ್ಯವಾದ ಅರ್ಪಿಸಿದರು.

ಅದೇ ದಿನ ಹರಿಜನ ಮಜೂರರ ಸಭೆಯೊಂದು ನಗರ ಸಭೆಯ ಉಪಾಧ್ಯಕ್ಷ ಶ್ರೀ ಬಿ ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು.

ಆ ದಿನ ಸಾಯಂಕಾಲ ವಿವಿಧ ವಿನೋದಾವಳಿ ಸ್ಪರ್ಧೆ ಇತ್ತು. ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ ಎಸ್ ಆರ್ ಕೈವಾರರು ಅಧ್ಯಕ್ಷತೆ ವಹಿಸಿ ಅಂದಿನ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣ ಮಾಡಿದರು.

ಈ ಪರಿಷತ್ತಿಗೆ ರಾವ್‌ಬಹದ್ದೂರ್ ಎನ್ ಎಸ್ ಸುವರ್ಣರು ಒಂದು ಸಂದೇಶ ಕಳುಹಿಸಿದ್ದರು. ಇವರಲ್ಲಿ ಅಡಿಗೊತ್ತಲ್ಪಟ್ಟವರಲ್ಲಿ ತಾನೂ ಒಬ್ಬನೆಂದು ಹೇಳಲಾಗಿತ್ತು.

ಪರಿಷತ್ತಿನ ಎರಡು ವೈಶಿಷ್ಟ್ಯಗಳೆಂದರೆ ಈ ಪರಿಷತ್ತನ್ನು ಹರಿಜನರೇ ವ್ಯವಸ್ಥೆಗೊಳಿಸಿ ನಡಸಿದುದು. ಎರಡನೆಯದಾಗಿ ಹರಿಜನ ಎಮ್ ಎಲ್ ಎ ಶ್ರೀ ಕೆ ಈಶ್ವರನವರು ಇದರಲ್ಲಿಗಲಿಲ್ಲವೆಂಬುದು.

ಭಾರತಕ್ಕೆ ಸಂಬಂಧಪಟ್ಟ ಪ್ರಶ್ನೆ ಇಲ್ಲವೆಂಬುದೇ ನಮ್ಮ ಸರಕಾರದ ಈಗಿನ ಧೋರಣೆ ಎಂದು ಹೇಳಲಾಗಿದೆ

ಅಂತೂ ಕರಾಚಿಯಲ್ಲಿ ಪಾಕಿಸ್ಥಾನದ ಕಡೆಯಿಂದ ಅರಬರಿಗೆ ಸಹಾಯ ಮಾಡಲು ಸಿದ್ಧತೆಗಳು ನಡೆಯುತ್ತಿವೆ

ಯೆಹೂದಿ ಜನರಿಗೆ ಸ್ವಂತ ರಾಷ್ಟ್ರ ಇರುವುದು ಅಗತ್ಯ ಮತ್ತು ಇತಿಹಾಸದಲ್ಲಿ ಅವರಿಗೆ ಸಂಬಂಧಪಟ್ಟ ಪೆಲೆಸ್ತೈನದಲ್ಲೇ ಇದು ಇರುವುದು ಸರಿಯೆಂಬ ತರ್ಕದಲ್ಲಿ ತುಂಬಾ ಸ್ವಾರಸ್ಯವುಂಟು. ಇಲ್ಲಿ ಅರಬರಿಗೂ ಅಧಿಕಾರವಿದೆಯೆಂಬ ಮಾತಿನಲ್ಲಿಯೂ ಸತ್ಯಾಂಶವುಂಟು. ಅಂತಹ ಇತ್ತಂಡದಲ್ಲಿಯೂ ಸ್ವಲ್ಪ ನ್ಯಾಯವಿದ್ದು ಅವರು ಹೊಡೆದಾಡುವಾಗ ಶಾಂತಿ ಸ್ಥಾಪನೆಗಾಗಿ ಯತ್ನಿಸುವುದು ಎಲ್ಲರ ಕರ್ತವ್ಯ. ಅಂಥ ರೀತಿಯ ಪಂಚಾಯತಿಕೆಯಿಂದ ಈ ಪ್ರಶ್ನೆ ಬಗೆಹರಿಸಿದರೆ ಉತ್ತಮವಿತ್ತು.

ಭಾರತವೂ ಜಗತ್ತಿನ ಪ್ರಶ್ನೆಗಳಲ್ಲಿ ಹೈ ಪಾಕತಕ್ಕದ್ದೆಂಬ ದೃಷ್ಟಿಯಿಂದ ಮಾತ್ರ ನಮಗೂ ಈ ಪ್ರಶ್ನೆಗೂ ಸಂಬಂಧವಲ್ಲದೆ ಹೆಚ್ಚಿನ ನೀಡಾಸ ಬಂಧವೇನೂ ಇಲ್ಲವೆಂಬ ಮಾತು "ಜಪೆ" ಇರುತ್ತದೆ. ಅಂದರೆ ಆ ಪ್ರದೇಶದ ಎಣ್ಣೆಗಾಗಿ ನಾವೂ ಪಾಲುಗಾರರಾಗಲು ಹೊಡದಾಡಲು ನಾವು ಹೋಗುವಂತಿಲ್ಲವೆಂಬುದೇ ನಮ್ಮ ಸರಕಾರದ ಧೋರಣೆಯ ಅಭಿಪ್ರಾಯ.

ಜನರಲ್ ಸ್ಮಟ್ಸರ ಅಪಜಯ

ಆಯಲೇಂಡಿನಲ್ಲಿ ಡಿವೆಲರಾ ಅಧಿಕಾರ ಕಳೆದುಕೊಂಡಂತೆ ದಕ್ಷಿಣ ಆಫ್ರಿಕದಲ್ಲಿ ಅನೇಕ ವರ್ಷಗಳಿಂದ ಅಧಿಕಾರದಲ್ಲಿದ್ದ ಜನರಲ್ ಸ್ಮಟ್ಸರು ಈ ಬಾರಿ ಚುನಾವಣೆಯಲ್ಲಿ ಸೋತು ಪದಚ್ಯುತರಾಗಿರುವರು. ಇವರ ಸ್ಥಾನಕ್ಕೆ ಡಾಕ್ಟರ್ ಮಲಾನ್ ಎಂಬವರು ಬಂದಿದ್ದಾರೆ. ಡಾಕ್ಟರ್ ಮಲಾನರ ಪಂಗಡವು ಆಫ್ರಿಕದಲ್ಲಿ ಬಿಳಿ ಜನರ ಸಾರ್ವಭೌಮತ್ವವನ್ನೇ ಸಾರುವವರಿದ್ದು ಆಫ್ರಿಕದ ಸ್ಥಳೀಕ ಜನರಿಗೆ ಹಾಗೂ ಭಾರತೀಯರಿಗೆ ಈ ಅಧಿಕಾರ ಬದಲಾವಣೆ ಇನ್ನು ಹೆಚ್ಚಿನ ತೊಂದರೆಗೆ ಕಾರಣವಾಗಬಹುದೆನ್ನುತ್ತಾರೆ.

ದಕ್ಷಿಣ ಆಫ್ರಿಕದಲ್ಲಿಯ ಭಾರತೀಯರ ಕಡೆಗೆ ಭಾರತ ಸರಕಾರವು ಇನ್ನಷ್ಟು ಹೆಚ್ಚಿನ ಗಮನ ಕೊಡುವುದು ಇದರಿಂದ ಅಗತ್ಯವಾದಂತಾಗಿದೆ.

— o —

ಬಿಸಿನೀರ ಕೊಳವೆ

ಒಂದು ಕೊಳವೆಯಾಕೃತಿಯ ವಿದ್ಯುತ್ ಉಪಕರಣವನ್ನು ಸ್ಕಾಟ್ಲೆಂಡಿನ ಇಲೆಕ್ಟ್ರಿಶಿಯನು ತಯಾರಿಸಿದ್ದಾನೆ. ಇದನ್ನು ಒಂದು ಕ್ಷಣದಲ್ಲಿ ನೀರಿನ ಕೊಳವೆಗೆ ಜೋಡಿಸಬಹುದು. ಮರುಕ್ಷಣದಲ್ಲೇ ಅದರಲ್ಲಿನ ತಣ್ಣೀರು ಬಿಸಿಯಾಗಿಯೇ ಬೀಳುವುದು. ಪ್ರತೀ ಮೂರು ಮಿನಿಟುಗಳಿಗೆ ಒಂದು ಗೆಲನ್ ಬಿಸಿನೀರನ್ನು ಇದರಿಂದ ಪಡೆಯಬಹುದೆಂದು ಹೇಳಲಾಗಿದೆ

ತಲೆಮೇಲೆ ರೈಲುಗಾಡಿ

ಲಂಡನ್ ಬಳಿಯ ವಿಮಾನ ರಾಣ್ಯದಿಂದ ನೇರವಾಗಿ ಮಧ್ಯ ನಗರಕ್ಕೆ ಹೋಗಲಿಕ್ಕಾಗುವ ರೈಲುಕಂಬಿಗಳನ್ನು ಜೋಡಿಸುವ ಯೋಜನೆ ನಡೆದಿದೆ. ಈ ಕಂಬಿಗಳ ಮೇಲೆ ಪೆಟ್ರೋಲ್ ಮೋಟರ್ ಗಾಡಿಗಳು 30-40 ಪ್ರಯಾಣಿಕರನ್ನು ಹೊತ್ತು ಚಲಿಸುವುವು. ಇವು ಓಡುವಾಗ ಶಬ್ದವಾಗಲಿ, ಕಂಪನವಾಗಲಿ ಆಗುವದಿಲ್ಲ, ಮತ್ತು ಕಟ್ಟಡಗಳಿಗೂ ಧಕ್ಕೆ ಬರುವುದಿಲ್ಲವೆಂದು ಯೋಜಕರು ತಿಳಿಸುತ್ತಾರೆ. ಇದನ್ನು ಸಂಪೂರ್ಣಗೊಳಿಸಲು 2 ವರ್ಷಗಳು ತಗಲಬಹುದು ಮತ್ತು ಸುಮಾರು 30 ಲಕ್ಷ ಪವನಿನ ಖರ್ಚು ಇದಿಯೆನ್ನಲಾಗಿದೆ.

ಅಳಿಯ ಸಂತಾನ ಮಸೂದೆಯ ಸಮಿತಿ

ಈ ಸಮಿತಿಯವರ ಮೀಟಿಂಗು ಈಚೆಗೆ ಮಂಗಳೂರಲ್ಲಿ ಜರಗಿ ಅಳಿಯಸಂತಾನ ಸುಧಾರಣೆ ಮಸೂದೆಯ ಕರಡು ಪ್ರತಿಯ ಪ್ರತಿಯೊಂದು ಅಂಶವೂ ಚರ್ಚಿಸಲ್ಪಟ್ಟಿತು ನಮ್ಮ ಕೃಷಿ ಇಲಾಖೆಯ ಮಾನ್ಯ ಮಂತ್ರಿ ಶ್ರೀ ಮಾಧವ ಮೆನನ್ನರು ಆ ಮೀಟಿಂಗಿನ ಅಧ್ಯಕ್ಷರಾಗಿದ್ದರು. ಮೆಂಬರುಗಳಾದ ಆರೋಗ್ಯಶಾಖಾ ಸಚಿವ ಮಾನ್ಯ ಶ್ರೀ ಎ. ಬಿ ಶೆಟ್ಟರೂ, ಪಾಲ್ಘಾಟಿನ ಶ್ರೀ ಎಂ। ನಾರಾಯಣ ಮೆನೊನರು, ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಎಲ್ ಸಿ. ಪ್ಯಾಯಸ್, ಜ। ಎಚ್. ಎಸ್. ಹುಸೇನ್ ಸಾಹೇಬ್ ಮತ್ತು ಶ್ರೀ ಕೆ. ಈಶ್ವರನವರೂ ಇದರಲ್ಲಿ ಭಾಗಿಗಳಾಗಿದ್ದರು ಸಮಿತಿಯ ಕಾರ್ಯದರ್ಶಿ ರಾಘವ ವರ್ಮರೂ ಜತೆಯಲ್ಲಿದ್ದರು.

ಖಾದಿಕಾರ್ಯಕರ್ತರ ಸಂಚಾರ

ಸಮಗ್ರಭಾರತ ಚರಕಾ ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣದಾಸ ಗಾಂಧಿಯವರು ಕರ್ನಾಟಕ ಎ ಐ ಎಸ್ ಎ ಶಾಖೆಯ ಶ್ರೀ ರಾಮಚಂದ್ರ ರಾವ್ ಮತ್ತು ಜಿಲ್ಲಾ ಗ್ರಾಮಕೈಗಾರಿಕಾ ಸಂಘದ ಶ್ರೀ ಎಚ್. ನಾರಾಯಣ ರಾವ್ ಇವರ ಸಹಿತ ಮೂಲ್ಕಿ, ಪಡುಬಿದ್ರೆ, ಕಟ್ಪಾಡಿಗಳಲ್ಲಿನ ಖಾದಿ ಸಂಸ್ಥೆಗಳನ್ನು ಸಂದರ್ಶಿಸಿ ಮಣಿಪಾಲದಲ್ಲೊಂದು ಖಾದಿಕೇಂದ್ರವನ್ನು ತೆರೆದು ಬಂಟ್ವಾಳದ ಖಾದಿಕೇಂದ್ರದ ಚಟುವಟಿಕೆಗಳ ವಿಚಾರದಲ್ಲಿ ತಮ್ಮ ಮೆಚ್ಚಿಗೆಯನ್ನು ಪ್ರದರ್ಶಿಸಿದಲ್ಲದೆ ಅಲ್ಲಿನ ಪಂಚಾಯತಬೋರ್ಡ ಆಫೀಸಿನಲ್ಲಿ ಪಂಡಿತ್ ನೆಹರೂರವರ ಭಾವಚಿತ್ರ ಅನಾವರಣ ಮಾಡಿದರು ಮಂಗಳೂರಿನ ಥಿಯೋಸೋಫಿಕಲ್ ಲಾಜಿನಲ್ಲಿ ನೆರೆದ ರಚನಾತ್ಮಕ ಕಾರ್ಯಕರ್ತರ ಸಭೆಯಲ್ಲಿ ಅವರು ತಮ್ಮ ಸಂಘದ ಖಾದಿ ಧೋರಣೆಯನ್ನು ವಿವರಿಸಿ ಸ್ವಯಂಭರಣ ಖಾದಿಕೇಂದ್ರಗಳ ವ್ಯವಸ್ಥೆ ಅಗತ್ಯವೆಂದರು

ಪ್ರಾಣಿವಧೆ ನಿಂತಿತು

ಬೋಳಾರ ಮಾರಿಗುಡಿಯಲ್ಲಿ ಇನ್ನು ಮುಂದೆ ಪ್ರಾಣವಧೆ, ಕೋಳಿವಧೆ ಇಲ್ಲ, ಇದರ ಬದಲಿಗೆ ಕಾಣಿಕೆ ಎಂದು (ಕಾಂಗ್ರೆಸಿನವರ ಸಲಹೆಗಳಿಗೆ ಒಡಂಬಟ್ಟು) ಆ ರೀತಿ ತೀರ್ಮಾನಿಸಿದ ಆ ಗುಡಿಯ ಮೊಕ್ತೇಸರರಾದ ಶ್ರೀ ಬಿ ತಿಮ್ಮಪ್ಪ ಸೆಟ್ಟಿ (ಪಂಚು ಕಾರ್ಖಾನೆ ವ್ಯಾಲಕರು) ಅವರ ಈ ಕಾಲೋಚಿತ ಪ್ರಶಂಸನೀಯ ಮೇಲ್ಪಂಕ್ತಿ ಜಿಲ್ಲೆಯ ಎಲ್ಲ ಮಾರಿಗುಡಿಗಳಿಗೂ ಮಾರ್ಗದರ್ಶಕವಾಗಿದೆ

ವಿದ್ಯಾದಾಯಿನಿ ಸಭಾ

ಬೊಂಬಾಯಿಯ ವಿದ್ಯಾದಾಯಿನಿ ಸಭೆಯವರು ವರ್ಷಂಪ್ರತಿ ವಿದ್ಯಾರ್ಥಿ ವೇತನವನ್ನು ಕೊಡುತ್ತ ಬರುವಂತೆ ಈ ವರ್ಷವೂ ದಾರಿದ್ರ್ಯದ ದೆಸೆಯಿಂದ ಶಿಕ್ಷಣಹೊಂದಲು ಅಶಕ್ತರಾದ ಬಿಲ್ಲವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಿರುವುದು ವಿದ್ಯಾರ್ಥಿ ವೇತನವನ್ನು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ತಮ್ಮ ಅರ್ಜಿಗಳನ್ನು ಕಳುಹಿಸಬೇಕಾಗಿ ವಿನಂತಿ ಎಂದು ಕಾರ್ಯದರ್ಶಿ ವಿದ್ಯಾದಾಯಿನಿ ಸಭಾ ೩೧, ರಘುನಾಥ ದಾದಾಜಿ ರಸ್ತೆ, ಕೋಟೆ, ಮುಂಬಯಿ ಇವರು ತಿಳಿಸುತ್ತಾರೆ.

ಜಿಲ್ಲಾ ಪ್ರಚಾರ

ಅಕ್ಕಿ ರೇಶನ್ ಹೆಚ್ಚಲಾರದು

ಕೊರತೆಯ ಜಿಲ್ಲೆಗಳಲ್ಲಿನ (ನಮ್ಮ ಜಿಲ್ಲೆ ಅಂತಹದು) ರಿಲೀಫ್ ಅಂಗಡಿಗಳ ಅಕ್ಕಿ ರೇಶನ್ ಮಾತ್ರ ಹೆಚ್ಚಿಸಲು ಸಾಧ್ಯ, ಸ್ಥಾಯಿ ರೇಶನ್ ಅಂಗಡಿಗಳಲ್ಲಿ ಅಕ್ಕಿ ಹೆಚ್ಚಿಸಲು ಸಾಧ್ಯವಿಲ್ಲವೆಂಬುದಾಗಿ ನಮ್ಮ ಪ್ರಾಂತ್ಯದ ಸಿವಿಲ್ ಸರಬರಾಯಿ ಶಾಖೆಯ ಕಮಿಶನರ್ ಶ್ರೀ ವಿ ಎಸ್ ಹೆಜ್ಮಾಡಿಯವರು ತಿಳಿಸಿದ್ದಾರೆ

ವಂಚಕನಿಗೆ ಶಿಕ್ಷೆ

ಮಂಗಳೂರು ಸಹಕಾರಿ ಸ್ಟೋರ್ಸ್ ವರ್ಕ್ಸ್ ಇದರ ಉದ್ಯೋಗಿಯಾದ ಎಸ್ ಕೆ ಹಾರೂನ್ ಆಲಿ ಎಂಬಾತನು ಆ ಸ್ಟೋರ್ಸಿನಲ್ಲಿ ಜಮೆಯಾದ ಸುಮಾರು ೫೦೦ ರೂಪಾಯಿಗಳನ್ನು ಹೆಡ್ ಆಫೀಸಿಗ ಪಾವತಿ ಮಾಡದೆ ವಿಶ್ವಾಸ ವಂಚನೆ ಮಾಡಿದನೆಂಬ ಆರೋಪದ ಮೇಲೆ ಸ್ಪೆ ಸಬ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಯಾಗಿ ೪ ತಿಂಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿರುವನು

ಸಶಸ್ತ್ರಪೋಲಿಸ್ ಪಡೆ

ವಿಶೇಷ ಸಶಸ್ತ್ರ ಪೋಲಿಸ್ ಪಡೆಯಲ್ಲಿ ಇನ್ನೂ ಖಾಲಿ ಸ್ಥಳಗಳಿರುವುದರಿಂದ ಹಾಗೂ ಸೇರ್ಪಡೆಯ ಕುರಿತು ಇರುವ ನಿರೀಕ ನಿಯಮಗಳನ್ನು ಸಡಿಲಿಸಿರುವುದರಿಂದ ಸೇರಲಿಚ್ಛಿಸುವವರು ಜೂನ್ ೩ ಮತ್ತು ೪ ರಂದು ಕಲೆಕ್ಟರರ ಕಛೇರಿಯಲ್ಲಿ ಮುಂಜಾನೆ ೯-೩೦ಕ್ಕೆ ಜಿಲ್ಲಾ ನೌಕರಿ ಅಧಿಕಾರಿಯನ್ನು ಕಾಣಬಹುದಾಗಿ ಪ್ರಕಟಿಸಲಾಗಿತ್ತು

ಬಟ್ಟೆ ಬೆಲೆ ಏರಿಕೆಯಿಂದ ವ್ಯಾಪಾರಸ್ಥರಿಗಾದ ಲಾಭ

೫ ಕೋಟಿ ರೂ ಗಳನ್ನು ಸರಕಾರವು ವಶಪಡಿಸಿಕೊಂಡಿತು

ಬಟ್ಟೆ ವ್ಯಾಪಾರಸ್ಥರು ಹಾಗು ಉದ್ದಿಮೆದಾರಗಾದ ಅಧಿಕ ಲಾಭವೆಂದು ಭಾರತ ಸರಕಾರದವರು ಇದು ವರೆಗೆ ೫ ಕೋಟಿ ರೂ ಗಳನ್ನು ವಸೂಲಿ ಮಾಡಿದ್ದಾರೆ. ಈ ಹಣವನ್ನು ಸರಕಾರಿ ಬೊಕ್ಕಸಕ್ಕೆ ಸೇರಿಸಲಾಗಿದೆ

ನಿಯಂತ್ರಣವನ್ನು ರದ್ದುಗೊಳಿಸಿದ ಮೇಲೆ ನಿಯಂತ್ರಿತ ಬೆಲೆಗೂ ಏರಿದ ಬೆಲೆಗೂ ಇದ್ದ ವ್ಯತ್ಯಾಸವನ್ನು ಇದ ತೋರಿಸ ವದು

ಹಿರಿಯೋಲಗವು ಕಳೆದ ಅಧಿವೇಶದಲ್ಲಿ ಪಾಸು ಮಾಡಿದ ಆರಳೆ ತವಕ ಸು ಕ ಕಾಯಿದೆಯನ್ವಯ ಈ ಹಣವನ್ನು ವಸೂಲಿ ಮಾಡಲಾಗಿದೆ

ಈ ವರ್ಷದ ಮೊದಲಿನೆ ಮೂರು ತಿಂಗಳಲ್ಲಿ ೯೦ ಕೋಟಿ ಗಜ ಬಟ್ಟೆ ಹಾಗು ೩೦ ಕೋಟಿ ಪೌಂಡು ನೂಲು ತಯಾರಾಗಿದೆಂದು ತಿಳಿಯುತ್ತದೆ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವದಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨¼
೪ರಿಂದ ೫ ತಿಂಗಳು	,, ,,	೨½
೬ರಿಂದ ೯ ತಿಂಗಳು	,, ,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE

CANARA BANK, LIMITED.

ESTD: 1906

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:-

೧೯೪೭ನೇ ಎಪ್ರಿಲ್ ೧ರಿಂದ ೧೯೪೮ನೇ ಮಾರ್ಚಿ ೩೧ರ ವರೆಗೆ ಜಮ್ಮರಿ ಇಲ್ಲದ ಹೊಸ ಬಾವಿ ಮತ್ತು ಹೊಸ ಕೆರೆ ತೋಡಿಸುವರೆಯೂ, ಹಳೆ ಕೆರೆ ದುರಸ್ಥಿಪಡಿಸುವರಿಯೂ ದ್ರವ್ಯ ಸಹಾಯ ಮಾಡುವ "ನೂವೆಲ್ ಸಬ್‌ಸಿಡಿ ಸ್ಕೀಮು"ನ್ನು ಮದ್ರಾಸ್ಸು ಸರಕಾರದವರು ೧೯೪೮ನೇ ಎಪ್ರಿಲ್ ೧ರಿಂದ ೧೯೪೯ನೇ ಮಾರ್ಚಿ ೩೧ರ ವರೆಗೆ ಮುಂದುವರಿಸಿರುತ್ತಾರೆ, ಸದ್ರಿ ಸ್ಕೀಮಿನ ಸಾರಾಂಶ ಈ ಕೆಳಗಿನಂತೆ ಇರುತ್ತದೆ)

ಈ ಜಿಲ್ಲೆಯಲ್ಲಿ ಈ ಕೆಳಗಿನ ದರಗಳಿಗೆ ಮಿಕ್ಕದಂತೆ ಹೊಸ ಬಾವಿ ಮತ್ತು ಹೊಸ ಯಾ ಹಳೆ ಕೆರೆಗೆ ತಗಲುವ ಖರ್ಚು ಶೇಕಡ ೫೦ರಷ್ಟು ದ್ರವ್ಯ ಸಹಾಯವನ್ನು ಸಂಬಂಧಪಟ್ಟ ತಹಶೀಲ್ದಾರರು ಕೊಡುವರು.

(೧) ಒಂದು ಹೊಸ ಬಾವಿ ತೋಡಲಿಕ್ಕೆ- ರೂ ೩೦೦ಕ್ಕೆ ಮಿಕ್ಕದಷ್ಟು

೨) ಹೊಸ ಕೆರೆ ಕಟ್ಟಲಿಕ್ಕೆ ಯಾ ಹಳೆ ಕೆರೆ ದುರಸ್ಥಿಪಡಿಸಲಿಕ್ಕೆ-ರೂ ೫೦೦ಕ್ಕೆ ಮಿಕ್ಕದಷ್ಟು

ಹಳೆ ಬಾವಿ ದುರಸ್ಥಿಗ ದ್ರವ್ಯ ಸಹಾಯವಿಲ್ಲ ಹೊಸ ಕೆರೆ ಕಟ್ಟಲಿಕ್ಕೆ ಯಾ ಹಳೆ ಕೆರೆ ದುರಸ್ಥಿಪಡಿಸಲಿಕ್ಕೆ ಖರ್ಚು ರೂಪಾ ೧೦೦೦ಕ್ಕೆ ಮಿಕ್ಕಿದಲ್ಲಿ ರೂ ೧೫೦೦ರಿಂದ ವರೆಗ ಜಿಲ್ಲಾ ಕಲೆಕ್ಟರವರು, ರೂ ೨ ... ದ ವರೆಗೆ ಮದ್ರಾಸ್ ರವೆನ್ಯೂ ಬೋರ್ಡ... ದ್ರವ್ಯ ಸಹಾಯ ಮಾಡಬಹುದು

(೩) ಸಬ್‌ಸಿಡಿ ಯಾ ದ್ರವ್ಯ ಸಹಾಯವನ್ನು ಕೊಡುವ ಮೊದಲು ಬಾವಿ ಯಾ ಕೆರೆಯ ಕೆಲಸ ಮಾಡುವ ಸ್ಥಳವನ್ನು ಸಂಬಂಧಪಟ್ಟ ತಹಶೀಲ್ದಾರರ ಯಾ ಡೆಪ್ಯುಟಿ ತಹಶೀಲ್ದಾರರು ಸ ದರ್ಶಿಸಿ ವ ... ಪಡಿಸತಕ್ಕದ್ದು

(೪) ಸಬ್‌ಸಿಡಿ ... ದ್ರವ್ಯ ಸಹಾಯವನ್ನು ಮೊತ್ತವನ್ನು ... ಕೊಡುತ್ತಾರೆ ... ಬಾವಿ ಯಾ ಕೆರೆಯ ಕೆಲಸವನ್ನು ಪೂರ್ತಿಗೊಳಿಸಿದಲ್ಲಿ ಸಬ್‌ಸಿಡಿಗಾಗಿ ವಾಪಸು ... ತ್ತಾರೆ, ಸಾಲ ... ಜವಾಬ್ದಾರಿ ... ದತಕದು ಸಬ್‌ಸಿಡಿ ... ಮಿಕ್ಕಿದ ಸಾಲ ... ದರೆ ಸರಕಾರದವರು ಕೊಡುತ್ತಾರೆ, ... ಸಾಲಿಕೆ ಮೊದಲನೇ ವಷ ಬಡ್ಡಿ ... ಮತ್ತು ... ಪಾವತಿ ಮೂರು ವರ್ಷಗಳ ನಂತರ ಆರಂಭವಾಗುತ್ತದೆ

(೫) ತಾ ... ಒಳಗೆ ಕಾಮಗಾರಿಯನ್ನು ಪೂರ್ತಿಗೊಳಿಸಿದಲ್ಲಿ ಸಬ್‌ಸಿಡಿ ಸಾಲವನ್ನು ಪಡಕೊಂಡ ರೈತನು ಕಲೆಕ್ಟರರಿಂದ ಮಂಜೂರು ಮಾಡಲ್ಪಟ್ಟ ಆಹಾರ ಬೆಳೆಗಳನ್ನು ಬೆಳೆಸುತ್ತೇವೆಂದು ಒಂದು ಕರಾರು ಬರಕೊಡತಕ್ಕದ್ದು ಅನಂತರ ಸಾಲದ ಮೊಂಡು ರದ್ದುಮಾಡುವುದು ಮತ್ತು ಸಾಲವನ್ನು ಸಬ್‌ಸಿಡಿಯಾಗಿ ಮಾರ್ಪಡಿಸಲಾಗುವುದು

(೬) ಸಬ್‌ಸಿಡಿ (ದ್ರವ್ಯ ಸಹಾಯ) ಸಿಕ್ಕಬೇಕಾದರೆ ಕೆರೆಗಳು ಕಡಿಮೆ ಪಕ್ಷ ೨೦ ಫೀಟು ಉದ್ದ ಮತ್ತು ೨೦ ಫೀಟು ಅಗಲವಿದ್ದು ೧೦ ಎಕ್ರೆಗೆ ಕಡಿಮೆಯಾಗದಷ್ಟು ವಿಸ್ತೀರ್ಣದ ಅಯಕಟ್ಟು (ಪ್ರಯೋಜನ ಹೊಂದುವ ಭೂಮಿ) ಉಳ್ಳದ್ದಾಗಿರಬೇಕು ಬಾವಿಯ ಪರಿಮಾಣಗಳನ್ನು ಕಲೆಕ್ಟರರು ನಿರ್ಣಯಿಸುವರು, ಬಾವಿಯು ಕಡಿಮೆಪಕ್ಷ ೨೪ ಫೀಟು ಆಳವಿರಬೇಕು ಮತ್ತು ಅಖೈರು ಬೇಸಿಗೆಕಾಲದಲ್ಲಿ ೯ ಫೀಟು ನೀರು ಇರಬೇಕು

ಆಸ್ಯದ ರಾಷ್ಟ್ರಗಳು ಸ್ವಂತ ಶ್ರೇಯಸ್ಸ ಸಾಧಿಸಬೇಕು

ಪರಕೀಯರ ಆರ್ಥಿಕ ಪ್ರಭುತ್ವ ಬೇಡ

ಸಂಯುಕ್ತ ರಾಷ್ಟ್ರ ಸಂಘದ ಆಸ್ಯಾ ಪ್ರಾಚ್ಯ-ಅತಿ ಪೂರ್ವ ರಾಷ್ಟ್ರಗಳ ಆರ್ಥಿಕ ಸಮಿತಿಯ ಗೇಳಲರಲ್ಲಿಯ ಅಧಿವೇಶನವು ಉದಕ ಮಂಡಳದ ಶೋಭಾಮಯ ಉನ್ನತಿಯಲ್ಲಿ ಕಳೆದ ತಾ ಗರಂದು ಜರಗಿತು. ಇದರ ಉದ್ಘಾಟನೆಯನ್ನು ನೆರವೇರಿಸುತ್ತ ಭಾರತ ಮುಖ್ಯ ಪ್ರಧಾನ ಪಂಡಿತ ನೆಹರು ರವರು ಅತ್ಯಮೋಘ ವಿಚಾರ ಸರಣಿಯ ಆರ್ಥಿಕ ಚಿತ್ರವನ್ನು ಆಸ್ಯದ ಗಲ ರಾಷ್ಟ್ರಗಳ ಮುಂದಿರಿಸಿದರು.

"ಆಸ್ಯಾ ಖಂಡದ ದೇಶಗಳ ಆರ್ಥಿಕ ಸಮಸ್ಯೆಗಳು ಜಾಗತಿಕ ಸಮಸ್ಯೆಗಳ ಒಂದು ಭಾಗ ಈ ಕಡೆಗಳಲ್ಲಿ ಜಗತ್ತಿನ ಜನಸಂಖ್ಯೆಯ ಸುಮಾರು ಅರ್ಧಾಂಶ ಮಾನವ ಕೋಟಿಯು ವಾಸಿಸುವುದು ಈ ಜನತೆಯ ಆರ್ಥಿಕ ಸಮಸ್ಯೆಯನ್ನು ಕೇವಲ ಅಂಕೆ ಸಂಖ್ಯೆಗಳ ಸಂಗ್ರಹಣದಿಂದ ಪರಿಹರಿಸಲು ಸಾಧ್ಯವಿಲ್ಲ

ಹಿಂದೂಳಿದ ಆಸ್ಯಾ

"ರಾಜಕೀಯ ಸ್ವಾತಂತ್ರ್ಯವಿಲ್ಲದೆ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಾಧ್ಯವಿಲ್ಲ ಆಸ್ಯ ರಾಷ್ಟ್ರಗಳಲ್ಲಿ ರಾಜಕೀಯ ನವ ಜಾಗೃತಿಯುಂಟಾಗಿದೆ ವಿದೇಶಿಯರ ಸಂಪರ್ಕವು ಇದಕ್ಕೆ ಕಾರಣ ಆದರೆ ವಿದೇಶಿಯರು ಈ ಕಡೆಗಳಲ್ಲಿ ಒಡತನ ವಹಿಸಿ ಲ್ಲಿಯ ಪ್ರಗತಿಯು ಅಸಾಧ್ಯವಾಗುವಂತೆ ಮಾಡಿದರು ಕಾಲಗಳಲ್ಲಿ ಈ ಪರಕೀಯ ಒಡತನ ನಿರ್ಮೂಲಿಸಲು ಪ್ರಯತ್ನ ಆದುದು

ಆಸ್ಯಾ ರಾಷ್ಟ್ರಗಳ ಧ್ಯೇಯ

"ಜಗತ್ತಿನ ಕಲ್ಯಾಣಕ್ಕಾಗಿ ಮಾಡುವ ಎಲ್ಲಾ ಯೋಜನೆಗಳಲ್ಲಿ ಸಹಕಾರ ನೀಡಲು ನಾವು ಸಿದ್ಧರಿದ್ದೇವೆ ಯುಕ್ತರಾಷ್ಟ್ರ ಸಂಪದ ಮೇಲೆ ನನಗೆ ವಿಶ್ವಾಸವಿದೆ ಇಂದಲ್ಲ ನಾಳೆಯಾದರೂ ಅದರಿಂದ ಫಲ ಪ್ರಾಪ್ತಿಯಾಗುವುದು ಇದೀಗ ಸ್ವಾತಂತ್ರ್ಯ ಪಡೆದ ಆಸ್ಯಾ ರಾಷ್ಟ್ರಗಳು ಪರಕೀಯರ ಪ್ರಭುತ್ವದ ಬಗ್ಗೆ ಬಹಳ ಜಾಗರೂಕವಾಗಿವೆ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ರೀತಿಯಲ್ಲಿ ರಾಜಕೀಯ ಇಲ್ಲವೆ ಆರ್ಥಿಕ ಪ್ರಭುತ್ವ ಸ್ಥಾಪನೆಯ ಯಾವುದೇ ಪ್ರಯತ್ನದ ಸುಳಿವು ಬಂದರೂ ಈ ರಾಷ್ಟ್ರಗಳು ಅಂಥ ಯೋಜನೆ ಸ್ವೀಕರಿಸವು ಈ ಮನೋಭಾವನೆಯನ್ನು ಲಕ್ಷದಲ್ಲಿಟ್ಟು ಆಸ್ಯಾ ರಾಷ್ಟ್ರಗಳ ಆರ್ಥಿಕ ಯೋಜನೆ ಸಿದ್ಧಗೊಳಿಸಬೇಕು. ಈ ರಾಷ್ಟ್ರಗಳ ಆರ್ಥಿಕ ಸಮಸ್ಯೆಯನ್ನು ದುರ್ಲಕ್ಷಿಸಿದರೆ ಯುಕ್ತ ರಾಷ್ಟ್ರ ಸಂಪದ ಧ್ಯೇಯವೇ ಸಾಧಿಸದು ಕೃಷಿ ಪ್ರಧಾನವಾದ ರಾಷ್ಟ್ರಗಳಲ್ಲಿ ಆಹಾರ ಕೊರತೆಯಿರುವುದು ಪ್ರಧಾನವಾದ ಸಮಸ್ಯೆ ಇದನ್ನು ಮೊದಲು ಬಿಡಿಸಬೇಕು

ಔದ್ಯೋಗಿಕ ಪ್ರಗತಿ

ಔದ್ಯೋಗಿಕ ಪ್ರಗತಿಯೂ ಒತ್ತೊತ್ತಿಗೆ ಸಾಧಿಸಲ್ಪಡಬೇಕು. ಇದಕ್ಕೆ ಯಾಂತ್ರಿಕ ಸಲಕರಣೆ, ತಜ್ಞ ತಾಂತ್ರಿಕ ಕೆಲಸಗಾರರ ಆವಶ್ಯಕತೆಯಿದೆ ಕೆಲವು ದೇಶಗಳಲ್ಲಿ ಈ ಅನುಕೂಲಗಳಿವೆ ಆರ್ಥಿಕ ಮಂಡಳದವರು ಮತ್ತು ಸಂಬಂಧಿಸಿದ ರಾಷ್ಟ್ರಗಳು ಕೂಡಿ ಯಾವ ಪ್ರಮಾಣದಲ್ಲಿ ಈ ಯಾಂತ್ರಿಕ ಸಾಧನಗಳನ್ನು ಒದಗಿಸಬಹುದೆಂದು ನಿರ್ಧರಿಸಬೇಕು. ಇದು ದೊರೆತರೆ ಔದ್ಯೋಗಿಕ ಪ್ರಗತಿ ಶೀಘ್ರ ಸಾಧಿಸುವುದು. ಒಂದು ವೇಳೆ ಆರ್ಥಿಕ ಸಹಾಯ ದೊರೆಯದಿದ್ದರೆ ಪ್ರಗತಿ ಸಾಧಿಸಲು ಕಾಲವಿಳಂಬವಾಗಬಹುದೆ ಹೊರತು ಆ ಕುರಿತು ಪ್ರಯತ್ನಗಳು ನಿಲ್ಲಿಸಲ್ಪಡಲಾರವು ಜಗತ್ತಿನ ಹಿತದ ದೃಷ್ಟಿಯಿಂದ ಹಿಂದುಸ್ಥಾನವೂ ಆದರಂತೆ ಪೌರ್ವಾತ್ಯದ ಇತರ ರಾಷ್ಟ್ರಗಳೂ ಈ ದೇಶಗಳಿಗೆ ಅವಶ್ಯವಿದ್ದ ಯಾಂತ್ರಿಕ ಸಾಧನಗಳನ್ನು ಪೂರೈಸಬೇಕು. ಆದರೆ ಇದರಲ್ಲಿ ಯಾವ ತರದ ಆರ್ಥಿಕ ಪ್ರಭುತ್ವದ ಆಶೆ ಇರಬಾರದು. ಆ ದೃಷ್ಟಿಯಿಂದ ನಮ್ಮ ಔದ್ಯೋಗಿಕ ಪ್ರಗತಿ ನಿಧಾನಿಸಿದರೂ ಚಿಂತೆಯಿಲ್ಲ ಪರಕೀಯರ ಆರ್ಥಿಕ ಪ್ರಭುತ್ವವು ಬೇಡ

ಹಿಂದೂಸ್ಥಾನದ ಪಾತ್ರ

"ನಮ್ಮ ದೇಶವು ಸಮೃದ್ಧವಾದ ನೈಸರ್ಗಿಕ ಅನುಕೂಲತೆಗಳ ಸಂಪೂರ್ಣ ಲಾಭ ಪಡೆದು ವಿದ್ಯುತ್‌ಶಕ್ತಿ ಹೆಚ್ಚಾಗಿ ಹುಟ್ಟಿಸುವ ಅನೇಕ ಧೀರ್ಘಾವಧಿ ಯೋಜನೆ ಮಾಡಿದೆ. ಆಸ್ಯದ ಇತರ ರಾಷ್ಟ್ರಗಳೂ ನೈಸರ್ಗಿಕ ಅನುಕೂಲತೆಗಳ ಲಾಭಪಡಿಯಲು ಇಂತಹ ಯೋಜನೆಗಳನ್ನು ಮಾಡಲು, ಖನಿಜ ಸಂಪತ್ತನ್ನು ಅಗೆದು ತೆಗೆಯುವ ಒಗ್ಗೆಯೂ ಅನೇಕ ಯೋಜನೆಗಳನ್ನು ಮಾಡಬೇಕಾಗುವುದು ಇದಕ್ಕಲ್ಲ ಭಂಡವಾಳದ ಅನುಕೂಲತೆಗಳು ದೊರೆತರೆ ಯೋಜನೆಗಳು ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರುವವು ಇಲ್ಲವಾದರೆ ಅನುಕೂಲ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡು ಈ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಬೇಕಾಗುವುದು."

ಕಾರ್ಯಕಲಾಪ

ಸಂಯುಕ್ತರಾಷ್ಟ್ರ ಸಂಘದ ಆರ್ಥಿಕ ಮಂಡಲದ ಮೂರನೇ ಅಧಿವೇಶನವು ಸ್ವತಂತ್ರ ಹಿಂದೂಸ್ಥಾನದಲ್ಲಿ ಪ್ರಥಮಬಾರಿ ಸೇರಿದ್ದು ಡಾ ಪಿ ಎಸ್ ಲೋಕನಾಥನ್ ಅವರು ಇದರ ಕಾರ್ಯದರ್ಶಿಗಳು ಪರಿಷತ್ತಿಗೆ ಆಸ್ಯದ ರಾಷ್ಟ್ರಗಳಿಂದ 200 ಪ್ರತಿನಿಧಿಗಳು ಹಾಜರಿದ್ದರು

ಜೋದಪುರದ ಮಹಾರಾಜರು ಬೇಸಿಗೆಯ ವಿಶ್ರಾಂತಿಗಾಗಿ ಕಟ್ಟಿಸಿದ ಉದಕ ಮಂಡಲದ ಅರಮನೆಯ ನೃತ್ಯಭವನದಲ್ಲಿ ಪರಿಷತ್ತು ತಾ. 1 ರಂದು 11 ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು ಮದ್ರಾಸ್ ಗವರ್ನರ್ ಸರ್ ಆರ್ಚಿಬಾಲ್ಡ್ ನ್ಯಾ ಅವರು ಪ್ರಧಾನ ನೆಹರೂರವರನ್ನು ಪರಿಷತ್ತಿನ ಭವನಕ್ಕೆ ಕರತಂದರು ದ್ವಾರದಲ್ಲಿ ನೆಹರೂವರ ಭಾವಚಿತ್ರ ತೆಗೆಯಲಾಯಿತು. ಚಲಚಿತ್ರಗಳೂ ತೆಗೆಯಲಾದುವು ಯುಕ್ತ ರಾಷ್ಟ್ರ ಸಂಘದ ಆರ್ಥಿಕ ಮಂಡಲದ ನಿಶ್ಯತ್ರರಾಗಲಿರುವ ಉಪಾಧ್ಯಕ್ಷ ಮಿಗೆಎಲ್ ಕಾಡೆನೋರರವರು ನೆಹರೂವರನ್ನು ಸ್ವಾಗತಿಸಿ ವೇದಿಕೆಯ ಮೇಲೆ ಕೊಂಡೊಯ್ದರು ಮದ್ರಾಸ್ ಗವರ್ನರರು ಸ್ವಾಗತ ಭಾಷಣ ಮಾಡಿದರು. ಅವರ ಭಾಷಣ ಫ್ರೆಂಚ್ ಭಾಷೆಗೆ ಭಾಷಾಂತರಿಸಿ ಹೇಳಲಾಯಿತು. ಉದ್ಘಾಟನೆಯ ಮೊದಲು ಪಂಡಿತ್ ನೆಹರುರವರು ಕೆಲ ಮಾತುಗಳನ್ನು ರಾಷ್ಟ್ರಭಾಷೆಯಾದ ಹಿಂದುಸ್ಥಾನಿಯಲ್ಲಿ ನಿರೂಪಿಸಿದರು

ತನ್ನ ಪ್ರೀತಿಯ ಇಲಿಯನ್ನು ಮನೆಯಲ್ಲಿ ಬೆಚ್ಚಗಾಗಿರಿಸಿ ಗಂಡನು ಬಿಡುವುದಿಲ್ಲವೆಂದೂ, ಇಲಿಯು ತಿನ್ನುವುದು ವಿಪರೀತವಾಗುತ್ತದೆಂದು ಅವನು ಹಂಗಿಸುವನೆಂದೂ ಕೆಲಿಫೋರ್ನಿಯದ ಜಾಕ್‌ಲೆಂಡ್ ನಗರದ ಇಡಾಕೆಲ್ಲಿ ಎಂಬ ಮಹಿಳೆ ವಿವಾಹ ವಿಚ್ಛೇದವನ್ನು ಪಡೆದಳು

★

ಕಡಿತ ಘಾಯ, ಚರ್ಮ ಘಾತಗಳಿಗೆ ಕಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



556

ಕುಟಿಕೂರಾ ಮುಲಾಮು
CUTICURA OINTMENT

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಲ್ಲಿ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED.
V. R. Kamath, B.A., L.L.B.
General Manager.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs.**

Our experience of 37 years available to you for arranging Insurance Investment.
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

Bhuvanendra Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಂಬುವುದು. ಸೂತಿಕಾ ರೋಗಗಳನ್ನು ಹಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 11—6—1948 [ಸಂಚಿಕೆ 23]

ಮಧ್ಯಪೂರ್ವದಲ್ಲಿ ಯುದ್ಧವಾಗಲೇಬೇಕು?

ಪೆಲೆಸ್ತೀನ್ ಸಮಸ್ಯೆಯ ಶಾಂತಿಯುಕ್ತ ಪರಿಹಾರ

ಶಕ್ತಿ ರಾಷ್ಟ್ರಗಳ ಸ್ವಾರ್ಥ ಸಾಧನೆ

(ಲೇಖ ೧)

ಇಂದು ಪೆಲೆಸ್ತೀನಿನ ಸಮಸ್ಯೆ ಕೇವಲ ಆ ದೇಶಕ್ಕೇ ಸಂಬಂಧಿಸಿದಾಗಿರುವುದಿಲ್ಲ. ಆ ಸಮಸ್ಯೆಯ ದುಷ್ಪರಿಣಾಮಗಳು ಎಲ್ಲಾ ಅರಬ ದೇಶಗಳ ಮೇಲೂ, ಇಡೀ ಮುಸ್ಲಿಂ ಪ್ರಪಂಚದ ಮೇಲೂ, ಪಾಶ್ಚಿಮಾತ್ಯ ಪರ್ಯಾಯ ಪುನರುದ್ಧಾರದ ಯೋಜನೆಯ ಮೇಲೂ, ಸಂಯುಕ್ತ ಅಮೇರಿಕದ ಹಿತಸಾಧನೆಗಳ ಮೇಲೂ ಮಾತ್ರವಲ್ಲ ಯುಕ್ತ ರಾಷ್ಟ್ರಸಂಘದ ವಿಶ್ವಶಾಂತಿ ಸಾಧನಾ ಯತ್ನಗಳ ಮೇಲೂ ಪರಿಣಾಮವನ್ನುಂಟು ಮಾಡಿವೆ.

ಪೆಲೆಸ್ತೀನದ ವಿಭಾಗೀಕರಣದ ಯೋಜನೆಯನ್ನು ನಿರ್ಧರಿಸಿದಾಗ ಅರಬರು ಭದ್ರವಾದ ಪ್ರತಿಭಟನೆಯನ್ನು ತೋರಿಸುವರೆಂದು ಯುಕ್ತರಾಷ್ಟ್ರಸಂಘಕ್ಕೆ ಗೊತ್ತಿತ್ತು. ಆದುದರಿಂದಲೇ ವಿಶ್ವಭದ್ರತಾ ಮಂಡಳವು ವಿಭಾಗೀಕರಣ ನಿರ್ಣಯವನ್ನು ಅವಶ್ಯಬಿದ್ದರೆ ಶಸ್ತ್ರಾಸ್ತ್ರ ಸಹಾಯದಿಂದಲಾದರೂ ಕಾರ್ಯರೂಪಕ್ಕೆ ತರಬೇಕೆಂದು ರಾಷ್ಟ್ರಸಂಘವು ನಿರ್ದೇಶಿಸಿತ್ತು. ಅದರ ಮೇಲೆ ಈಗಿನ ಅತೀ ಮುಖ್ಯವಾದ ಪ್ರಶ್ನೆಯೆಂದರೆ

ಇಂಥ ಯೋಜನೆ ಸುಗಮವಾಗಿ ಸಾಗಬಹುದೆ?

ಯೆಹೂದಿಗಳು ಅದು ಸಾಧ್ಯವೆಂದೆನ್ನುತ್ತಾರೆ. ಸ್ವಲ್ಪ ಸಮಯದ ತನಕ ಸ್ಥಳೀಕ ಅಂತಃಕಲಹಗಳೇಳಬಹುದೆಂದವರು ನಿರೀಕ್ಷಿಸುತ್ತಾರೆ. ಆದರೆ ಅಂತ್ಯದಲ್ಲಿ ಅರಬ ಪ್ರತಿಭಟನೆಯು ಅದೃಶ್ಯವಾಗುವುದೆಂದವರು ಹಾರೈಸುತ್ತಾರೆ.

ಅರಬರಾದರೊ ತಾವು ಕೊನೆಯ ತನಕ ಹೋರಾಡುವುದಾಗಿ ನಿರ್ಧಾರ ಸಾರಿದ್ದಾರೆ. ಅಸಂಖ್ಯಾತ ಯೆಹೂದಿ ನಿರಾಶ್ರಿತರನ್ನು ಯೆಹೂದಿ ರಾಜ್ಯದೊಳಗೆ ತರುವುದನ್ನು ತಾವೆಂದೂ ಸಹಿಸಲಾರೆವೆಂದವರ ಹಟ. ಓರ್ವ ಅರಬರಾಜ್ಯ ಪ್ರಮುಖರು ಇತ್ತೀಚೆಗೆ ಹೀಗೆಂದಿದ್ದರು:

"ಪೆಲೆಸ್ತೀನದಿಂದ ಯೆಹೂದಿ ರಾಜ್ಯವನ್ನು ಹೊಡೆದೋಡಿಸಲು ನಾವು ನಿರಂತರ ಹೋರಾಡುವೆವು. ನಾವು ಮಡಿದ ಮೇಲೆ ಆ ಹೋರಾಟದ ಭಾರವನ್ನು ನಮ್ಮ ಮಕ್ಕಳ ಮೇಲೆ ಹೊರಿಸುವೆವು. ನಮ್ಮ ಅರಬ ಜನಾಂಗವನ್ನು ಕಟ್ಟಲು ವಿನಿಯೋಗಿಸಬಹುದಾದ ಅವಧಿಯನ್ನು ನಾವು ಯೆಹೂದಿ ರಾಜ್ಯ ನಿರ್ಮೂಲನಕ್ಕೆ ವ್ಯಯಿಸುವೆವು."

ವಿಭಾಗೀಕರಣದ ಪಕ್ಷಿ ಅದಂತಿರಲಿ ಈಗ ಖಂಡಿತವಾದ ಭವಿಷ್ಯವೇನು?

1910ರಲ್ಲಿ ಪೆಲೆಸ್ತೀನ ಟರ್ಕಿಯ ಒಟೋಮಾನ್ ಚಕ್ರಾಧಿಪತ್ಯದ ಒಂದು ಪ್ರಾಂತ್ಯವಾಗಿತ್ತು. ಆಗಲೇ ಶ್ರೀಮಂತ ಮನೆತನದವರಾದ ರೊತ್ಸ್‌ಚ್ಯಾಲ್ಡ್ ಕುಟುಂಬದವರ ಕೃಷಿ ಅಭಿವೃದ್ಧಿಯ ಯೋಜನೆಗಳೂ ಅಲ್ಲಿ ಪ್ರಾರಂಭಿಸಲ್ಪಟ್ಟಿದ್ದವು. ಬೀರತ್‌ನಲ್ಲಿರುವ ಅಮೇರಿಕನ್ ವಿಶ್ವವಿದ್ಯಾಲಯದಲ್ಲಿ ಅನೇಕಾನೇಕ ಅರಬಿ ಮತ್ತು ಯೆಹೂದಿ ವಿದ್ಯಾರ್ಥಿಗಳು ಕಲಿಯುತಿದ್ದು ಈಗಿನ ಇತ್ತಂಡದ ಮುಖಂಡರಲ್ಲನೇಕರು ಆ ವಿದ್ಯಾಲಯದ ಹಳೇ ವಿದ್ಯಾರ್ಥಿಗಳಾಗಿರುವರು.

ಆಗ ಅರಬ ಮತ್ತು ಯೆಹೂದಿ ಅಧ್ಯಾಪಕರು ಸೌಹಾರ್ದದಿಂದ ಒತ್ತೊತ್ತಿಗಿದ್ದರು. ಅರಬ ಯೆಹೂದಿ ವಿದ್ಯಾರ್ಥಿಗಳು ಒತ್ತೊತ್ತಿಗೆ ಕಲಿಯುತ್ತಿದ್ದರು. ಇವರೇ ಈಗ ಪರಸ್ಪರ ವಿರೋಧ ಶಿಬಿರಗಳನ್ನು ಸೇರಿದ್ದಾರೆ. ಇದರ ಕಾರಣವೇನೆಂದು ತಿಳಿಯಲು 1931ರಿಂದ 1948ರ ತನಕ ಆ ದೇಶದಲ್ಲಿ ನಡೆದ ವಿಶೇಷ ಸಂಗತಿಗಳನ್ನು ತಿಳಕೊಳ್ಳುವುದು ಅವಶ್ಯ.

ಅರಬ ಚಳವಳ

ಮೊತ್ತಮೊದಲು ಅರಬ ಚಳವಳವು ಭಾವನಾ ಪ್ರಧಾನವಾದುದೆಂಬ ಸಂಗತಿಯನ್ನು ಅರಿಯಬೇಕು. ಪೆಲೆಸ್ತೀನದ ವಿಭಾಗೀಕರಣದ ವಿಷಯ, ಲೆಬೆನಾನ್, ಸಿರಿಯಾ, ಇರಾಕ್, ಇಜಿಪ್ತ್ ಮೊದಲಾದ ಅರಬ ರಾಷ್ಟ್ರಗಳಲ್ಲಿ ಬಲವಾದ ವಿರೋಧ ಭಾವನೆಯೆಡೆ ಕೆಲವು ಕಡೆಗಳಲ್ಲಿ ಪೆಲೆಸ್ತೀನದ ಅರಬರಷ್ಟೇ ಇಲ್ಲಿಯ ಪ್ರಜೆಗಳು ಈ ವಿಷಯ ಕ್ರೋಧಗೊಂಡಿರುವರು.

ಈ ಭಾವನೆಗಳು ಅರಬ ಸರಕಾರಗಳಿಂದ ಕೃತಕವಾಗಿ ಸೃಷ್ಟಿಸಲ್ಪಟ್ಟಿವಲ್ಲ. ಸ್ಥಳೀಕ ದೇಶಭಕ್ತಿಪ್ರೇರಿತ ಅರಬ ಮುಖಂಡರಿಂದಲೂ, ಸೈನಿಕ ಪ್ರಾಯಭರಿತರಾದ ಅರಬ ತರುಣರಿಂದಲೂ ಈ ಭಾವನೆಯು ಅಲ್ಲಿನ ಸರಕಾರಗಳ ಮನಸ್ಸಿನಲ್ಲಿ ಉದ್ರೇಕಿಸಿದಂತಾಗಿದೆ. ಈ ಅರಬ ತರುಣರೇ ಇಂದು ಗುಪ್ತಸಂಚಿನ ದಳಗಳಾಗಿ ಪೆಲೆಸ್ತೀನದೊಳಗೆ ನುಸುಳುತ್ತಿದ್ದಾರೆ.

ಸಿರಿಯದಲ್ಲಿನ ಒಂದು ಅಮೇರಿಕನ್ ಕೊಲೇಜಿನ ಅಧ್ಯಕ್ಷರು ಹೀಗೆ ತಿಳಿಸುತ್ತಾರೆ:

"ಪೆಲೆಸ್ತೀನದ ವಿಭಾಗೀಕರಣ ನಿರ್ಧಾರದ ವರ್ತಮಾನ ಸಾರಲ್ಪಟ್ಟ ಕೂಡಲೇ ರೋಷಗೊಂಡ ಅರಬರು ಸ್ಥಳೀಕ ಯೆಹೂದಿಗಳ ಆಸ್ತಿಪಾಸ್ತಿಗಳನ್ನು ನಾಶಗೈದರು. ಎಲೆಪ್ಪೊ ನಗರದಲ್ಲಿ 15 ಬೆಂಕಿ ಅನಾಹುತಗಳು ಗಮನಕ್ಕೆ ಬಂದುವು.

'ಅಮೇರಿಕನರಾದ ನಮ್ಮ ಮೇಲೆ ಅರಬರು ಮೌನಕೋಪವನ್ನು ತಾಳಿದ್ದರು. ನಮ್ಮ ವಿಷಯವಾಗಿ ಅವರಿಗಿರುವ ತಿರಸ್ಕಾರವನ್ನು ಸೂಚಿಸಲು ಒಂದು ಬೋಂಬು ನಮ್ಮ ಮನೆಯಂಗಳದಿಯಲ್ಲಿರಿಸಲ್ಪಟ್ಟಿತ್ತು. ಸಿರಿಯನ್ ಸರಕಾರವು ನಮಗೆ ಯೋಗ್ಯ ರಕ್ಷಣೆ ಕೊಡದೆ ಇರುತ್ತಿದ್ದರೆ ನಾವೂ ನಮ್ಮೀ ಕೊಲೇಜೂ ಧ್ವಂಸವಾಗುತಿತ್ತು. ಯೆಹೂದಿಗಳ ಗತಿಯೇ ನಮಗೂ ಸಂಭವಿಸುತಿತ್ತು.

"ಅರಬ ಪ್ರಪಂಚದ ಕ್ರೋಧವು ಆಳವೂ ಶಕ್ತಿಯುಕ್ತವಾದುದೂ ಆಗಿದೆ. ಎಲ್ಲಾ ವರ್ಗದ ಜನರಲ್ಲೂ ಅದು ವ್ಯಾಪಿಸಿದೆ. ಇಲ್ಲಿ ಯುದ್ಧ ಸನ್ನಾಹಗಳಾಗುತ್ತಿವೆ. ಅರಬರು ಈ ಕುರಿತು ಅಲ್ಪ ಅವಧಿಯ ತನಕ ಬೊಬ್ಬೆಹೊಡೆದು ಮತ್ತೆ ನಿಶಬ್ದರಾಗುವರೆಂಬಭಿಪ್ರಾಯವು ತಪ್ಪು. ಅವರು ಶೀಘ್ರವಾಗಿ ಕಾರ್ಯಸಾಧನೆಗೆ ಆತುರರಾಗಿರುವರು."

ಇದು ಪೆಲೆಸ್ತೀನದ ನಿಜ ಪರಿಸ್ಥಿತಿಯ ಚಿತ್ರಣವೆಂಬುದರಲ್ಲಿ ಸಂದೇಹವಿಲ್ಲ.

(೨ನೇ ಪುಟ ನೋಡಿ)

THE
UNITED INDIA LIFE ASSURANCE
CO., LTD.
ESTD. 1906 [H O MADRAS

SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.

For Particulars apply to—
INSPECTORATE OFFICE
K. S. Rao Road, Mangalore.

ಸಂಕಷ್ಟಮಯವಾದ ಉಬ್ಬಸ ವ್ಯಾಧಿ

ಅದಕ್ಕೊಂದು ನಿಸರ್ಗ ಚಿಕಿತ್ಸೆ

ವ್ಯಾಧಿ ಪಟ್ಟೀ ಸ್ವರ್ಗಸುಖವೆಡೆಯು ಬೇಕಂಬ ಎಂಬಕಥೆಯೊಂದು ನಾಣ್ಣುಡಿಯಿದೆ. ಅದೇ ರೀತಿ ಉಬ್ಬಸ ವ್ಯಾಧಿಯಾಗದೆ (ಅದು ಆಗದಿರಲಿ) ಯಾರಿಗೂ ಅದರ ಸಹನಾತೀತವಾದ ಸಂಕಷ್ಟವೆಷ್ಟೆಂದು ತಿಳಿಯದು. ಅದರ ಅನುಭವವಿಲ್ಲದವರು 'ಇದೊಂದು ಚಿಕ್ಕ ಕುತ್ತೆಂದು' ಭಾವಿಸುವುದು ಸಹಜ. ಆದರೆ ಉಬ್ಬಸದಿಂದ ನರಳುವವರ ಬಳಿ ರಾತ್ರೆ ಹಗಲಿದ್ದವರಿಗೆ ತಮ್ಮ ಅಭಿಪ್ರಾಯ ಶೀಘ್ರದಲ್ಲಿ ಬದಲಾಗುತ್ತದೆ. ಪ್ರತಿಯೊಬ್ಬರ ಉಬ್ಬಸಕ್ಕೆ ಕಾರಣವೇನೆಂದು ಸಂಶೋಧಿಸುವುದೂ ಸ್ವಲ್ಪ ಕಷ್ಟದ ಕೆಲಸ. ಅದರ ನಿರ್ದಿಷ್ಟ ಕಾರಣವನ್ನು ಗೊತ್ತು ಹಚ್ಚಲು ಬಹಳ ಅವಧಿ ಹಿಡಿಯುವುದು.

ಎದೆಯು ಒತ್ತಿ ಹಿಡಿದಂತಾಗುವುದು ಈ ವ್ಯಾಧಿಯ ಒಂದು ವೇದನೆ ಈ ನೋವನ್ನು ಪರಿಹರಿಸಲು ಸಾಧ್ಯವಿರುವುದು ಒಂದು ಸುದೈವದ ಸಂಗತಿ. ಔಷಧದ ಅಂಗಡಿಗಳಲ್ಲಿ ಎಡ್ರೆನೆಲಿನ್ ಮೊದಲಾದ ಕೆಲವು ಸಿದ್ಧೌಷಧಗಳು ಇವೆ. ಇವು ತಾತ್ಕಾಲಿಕವಾಗಿ ಉಬ್ಬಸದ ಕಟುತ್ವವನ್ನು ನಿವಾರಿಸುತ್ತವೆ. ಆದರೆ ಈ ಔಷಧಿಗಳು ಉಬ್ಬಸದ ಮೂಲ ಕಾರಣಗಳನ್ನು ನಿರ್ಮೂಲಿಸುವಂತವುಗಳಲ್ಲ. ಇವು ಕೇವಲ ತಾತ್ಕಾಲಿಕ ಪರಿಹಾರಗಳು.

ದುರ್ದೈವ ವಶಾತ್ ಉಬ್ಬಸವು ಒಂದು ಶಾರೀರಿಕ ಅವ್ಯವಸ್ಥೆಯಾಗಿದ್ದು ಅದರ ವಿಷಯವಾಗಿ ತುಂಬಾ ಪರಿಶೋಧನೆಗಳಾಗಿದ್ದರೂ ಇನ್ನೂ ಸಂಪೂರ್ಣ ಮಾಹಿತಿಯು ತಿಳಿದು ಬಂದಿಲ್ಲ ಸಾಮಾನ್ಯ ಶೀತ ನೆಗಡಿಗಳಂತೆ ವೈದ್ಯಕೀಯ ಪ್ರಪಂಚದ ಪ್ರತಿಭಾವಂತರು ಉಬ್ಬಸವನ್ನೊಂದು ಬೃಹತ್ ವ್ಯಾಧಿಯನ್ನಾಗಿ ಪರಿಗಣಿಸದೆ ಸಾಮಾನ್ಯವಾದೊಂದು ಅಲ್ಪ ತೀವ್ರತೆಯ ಕುತ್ತನ್ನಾಗಿ ಮಾತ್ರ ಪರಿಶೋಧಿಸಿರುವರು ವೈದ್ಯ ವೃತ್ತಿಯವರಾದ ರೋಗವನ್ನು ಸಾಕಷ್ಟು ಗಂಭೀರದ ಕುತ್ತಾಗಿ ಪರಿಗಣಿಸಿಲ್ಲ

ಆದರೆ ಇಂದು ಇಂಗ್ಲೆಂಡ್ ದೇಶದಲ್ಲಿ ಸಾಮಾನ್ಯ ಶೀತ ಬಾಧೆಯ ಕುರಿತು ಹೆಚ್ಚಿನ ಗಮನ ತೆಗೆದುಕೊಳ್ಳಲಾಗುತ್ತದೆ ಇದರಿಂದ ಮಜೂರ ಪರಿಶ್ರಮಕ್ಕೆ ಬಹಳೇ ಹಾನಿ ತಟ್ಟುವುದರಿಂದ ಅಲ್ಲಿನ ಸರಕಾರವು ಈಗೀಗ ಶೀತದ ಕುರಿತು ತುಂಬಾ ಎಚ್ಚರ ವಹಿಸಿದೆ ಇದೇ ರೀತಿ ಅನತಿದೂರದ ಭವಿಷ್ಯದಲ್ಲಿ ಉಬ್ಬಸದ ಕುರಿತೂ ವೈದ್ಯಕೀಯ ವಿಜ್ಞಾನಿಗಳು ಗಂಭೀರ ಗಮನವನ್ನು ತಳೆಯಬಹುದೆಂದು ನಿರೀಕ್ಷಿಸಲಾಗಿದೆ ಉಬ್ಬಸವು ಶೀತಕ್ಕಿಂತಲೂ ಹೆಚ್ಚಿನ ಅಪಾಯಕಾರಕವಾದುದು.

ನಿಸರ್ಗ ಚಿಕಿತ್ಸೆ

ಈ ಮಧ್ಯೆ ತಾತ್ಕಾಲಿಕವಲ್ಲದ ಬೇರೇನಾದರೂ ಪರಿಹಾರಗಳಿವೆಯೊ ಎಂಬ ಪ್ರಶ್ನೆಗ 'ನಿಸರ್ಗ ಚಿಕಿತ್ಸಾನುಯಾಯಿಗಳು' ಮಾತ್ರ ಹೌದೆಂದು ಉತ್ತರವೀಯುತ್ತಾರೆ.

ಕೆಪ್ಟನ್ ಫ್ರೆಂಚ್ ಎಂಬವನು ಕಳೆದ ಯುದ್ಧಕ್ಕೆ ಸ್ವಲ್ಪ ಮುಂಚೆ-ತಾನು 'ಕ್ಷಯ ರೋಗದಿಂದ ಹಿಡಿದು ಮೇಹ ರೋಗಗಳ ತನಕದ ಅದ್ಯಾವ ವ್ಯಾಧಿಗಳನ್ನಾದರೂ ಗುಣಪಡಿಸುವೆನು' ಎಂದು ವೈದ್ಯ ಪ್ರಪಂಚವನ್ನು ಬೆರಗುಗೊಳಿಸಿದ್ದನು. 'ಹಸಿವನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ' ಇವನ ವಿಧಾನ. ಆದರೆ ಉಬ್ಬಸ ಪರಿಹಾರವು ಅಷ್ಟು ಕಠಿಣವಲ್ಲ. ಕಾರಣ ಅದನ್ನು ನಿವಾರಿಸಲು 'ಆಹಾರ ಕ್ರಮವನ್ನು ಹತೋಟಿಯಲ್ಲಿರಿಸಬೇಕಾಗುವುದು.'

ಉಬ್ಬಸಕ್ಕೆ ಈಗ ಅನೇಕ ಶಾಸ್ತ್ರೀಯ ಕಾರಣಗಳು ಕೊಡಲ್ಪಡುತ್ತವೆ. ಮೂಗಿನೊಳಗಿನ ಪರೆಯೊಂದು ಅನಾವಶ್ಯಕ ಮಿತಿ ಮೀರಿ ಉದ್ರೇಕಿಸಲ್ಪಡುವುದರಿಂದ, ಇಲ್ಲವೆ ಕರಳುಗಳಲ್ಲಿನ ಅವ್ಯವಸ್ಥೆಯಿಂದ, ಇಲ್ಲವೆ ಬೇರೆ ಯಾವ ಕಾರಣವಿದ್ದರೂ ಆಹಾರ ಕ್ರಮವನ್ನು ಸುವ್ಯವಸ್ಥಿತಗೊಳಿಸುವುದರಿಂದ ಅದ್ಭುತಕರವಾದ ಪರಿಣಾಮಗಳನ್ನು ಹೊಂದಬಹುದು.

ಮೂಲತಃ ಮೇಲೆ ಹೇಳಿದ ಎಲ್ಲಾ ಕಾರಣಗಳಿಗೂ ಜೀರ್ಣ ಕಾರ್ಯದ ಅವ್ಯವಸ್ಥೆಯು ಹೇತುವಾಗಿದೆ ಹೊಟ್ಟೆಗೂ ಶ್ವಾಸೇಂದ್ರಿಯದ ನಾಳಗಳಿಗೂ ನಿಕಟವಾದ ಸಂಬಂಧವಿದೆಯೆಂಬ ಸಂಗತಿಯ ಮೇಲೆ ಈ ಕಾರಣವು ಆಧರಿಸಿಕೊಂಡಿದೆ. ಉಬ್ಬಸ ವ್ಯಾಧಿಯು ಕಟ್ಟಕಡೆಗೆ ಮೇಲ್ಗೈಯನ್ನು ಹೊಂದುವ ಸಂಗತಿಯಿಂದ ಜೀರ್ಣವ್ಯವಸ್ಥೆಯು ಬಹಳ ಜರ್ಝರಿತವಾಗಿರುತ್ತದೆಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ ಈ ಅವ್ಯವಸ್ಥೆಯನ್ನು ಕ್ರಮಬದ್ಧವಾದೊಂದು ಆಹಾರ ಸೇವನಾ ವಿಧಾನದಿಂದಲೂ ಯೋಗ್ಯ ವ್ಯಾಯಾಮದಿಂದಲೂ ಸರಿಪಡಿಸಬಹುದು

ಈಗ ನಾವಾಗಲೀ ನೀವಾಗಲಿ ಉಬ್ಬಸದಿಂದ ನರಳುವವರಾದರೆ ಅದೆಂತಹ ವಿಧಾನವನ್ನಾದರೂ ಒಂದು ಸಲ ಪ್ರಯೋಗ ಮಾಡಿ ನೋಡಲೇ ಬೇಕಾಗುದುದು ಹಿತಕರ ಅದರಲ್ಲಿಯೂ ಈ ವಿಧಾನದಿಂದ-ತಾತ್ಕಾಲಿಕ ಶಮನಗಳಾದ ಮದ್ದುಗಳಂತೆ ಸರ್ವ ಸಾಧಾರಣ ಆರೋಗ್ಯಕ್ಕೆ ಒಳಿತಲ್ಲದೆ ಕೆಡುಕಿಲ್ಲ ಬೇರಾವ ವ್ಯಾಧಿಗಳಿಲ್ಲದಿದ್ದರೆ ಈ ನಿಸರ್ಗ ಚಿಕಿತ್ಸೆಯನ್ನು ಯಾರೂ ತಮ್ಮ ತಮ್ಮ ಮನೆಗಳಲ್ಲಿ ಕೈಕೊಳ್ಳಬಹುದು

ಚಿಕಿತ್ಸಾ ವಿಧಾನ

ಮೊದಲು ಕೆಲವು ನಿಷೇದಾತ್ಮಕ ಸೂಚನೆಗಳು

ಮದ್ಯ ಸೇವನೆಯನ್ನು ಮಾಡಬಾರದು

ಬೀಡಿ ಸಿಗ್ರೇಟ್ ಮೊದಲಾದ ಧೂಮ್ರಪಾನ ಮಾಡುವುದನ್ನು ಬಿಡಬೇಕು.

ಉಪ್ಪಿನಕಾಯಿ, ಮಸಾಲೆ, ಸಾಂಬಾರು ಜಿನಸುಗಳ ಪದಾರ್ಥಗಳು ಇವನ್ನು ತಿನ್ನಬಾರದು

ಕಡುವಾದ ಕಾಫಿ, ಟೀಗಳನ್ನು ತೆಗೆದುಕೊಳ್ಳಬಾರದು

ಮಿತಿ ಮೀರಿ ಉಣ್ಣಬಾರದು ಜೀರ್ಣಿಸಲು ಕಠಿಣವಾದ ಪದಾರ್ಥಗಳನ್ನು ಸೇವಿಸಬಾರದು.

ಈ ಚಿಕಿತ್ಸೆಯಲ್ಲಿ ಆದಷ್ಟು ಹೆಚ್ಚಿನ ಶುದ್ಧ ಗಾಳಿ ಸೇವನೆ ಮಾಡಬೇಕು.

ಶ್ವಾಸೋಚ್ಛ್ವಾಸದ ವ್ಯಾಯಾಮಗಳನ್ನು ದಿನನಿತ್ಯ ಮಾಡಬೇಕು.

ವಾರಕ್ಕೊಂದು ಸಲ ಭೇದಿ ಉಪ್ಪಿನ (Epsom sats)ಬಿಸಿನೀರು ಸ್ನಾನ ಮಾಡಬೇಕು

ದಿನಂಪ್ರತಿ (ಚಿಕಿತ್ಸಾ ಅವಧಿಯಲ್ಲಿ) ಮಂದ ಉಷ್ಣತೆಯ ನೀರಿನ ಎನಿಮಾ (enema) ತೆಗೆದುಕೊಳ್ಳಬೇಕು

ಆಹಾರ ಕ್ರಮ

ಚಿಕಿತ್ಸೆಯ ಮೊದಲ ನಾಲ್ಕು ದಿನಗಳು ಹೆಚ್ಚು ಕಡಿಮೆ ಉಪವಾಸದಂತೇ ಕಳೆಯಬೇಕು ಆ ನಾಲ್ಕು ದಿವಸಗಳ ತನಕ ಕೇವಲ ಕಿತ್ತಳೆ ಹಣ್ಣಿನ ರಸವನ್ನು ಪ್ರತೀ ಎರಡೆರಡು ಗಂಟೆಗೊಮ್ಮೆ ತೆಗೆದುಕೊಳ್ಳಬೇಕು. ನಂತರ ಹತ್ತು ದಿನಗಳ ನಿಯಂತ್ರಿತ (restricted) ಆಹಾರ ಸೇವನೆಯ ಚಿಕಿತ್ಸೆಯು ಪ್ರಾರಂಭವಾಗುವುದು ಅದು ಹೀಗಿದೆ.

ಬೆಳಿಗ್ಗೆ-ಹಣ್ಣುಗಳು. ಮಧ್ಯಾಹ್ನ ಹಣ್ಣಿನ ಚೂರುಗಳ ಮಿಶ್ರಣ (salad) ಸಾಯಂಕಾಲ ಹಣ್ಣು ಚೂರು ಮಿಶ್ರಣ, ಮತ್ತು ತರಕಾರಿ (vegetabls)ಗಳನ್ನು ಉಗಿಯಲ್ಲಿ (steamed) ಬೇಯಿಸಿದಂತವುಗಳು

ಸಾಂಬಾರು ಜಿನಸುಗಳನ್ನು ತಿನ್ನಲೇ ಬಾರದೆಂದು ಪುನಃ ಒಮ್ಮೆ ಒತ್ತಿ ಹೇಳಬೇಕಾಗುತ್ತದೆ ಮೊದಮೊದಲು ಇದು ತುಂಬಾ ಬೇಸರಿಕೆಯದಾಗಿ ಕಾಣಬಹುದು ಆದರೆ ನಿಯೋಜಿತ ಜಾಗರೂಕತೆಯಿಂದ ಇದನ್ನು ನಿರ್ವಹಿಸಿದರೆ ಹಾಗಾಗುವುದಿಲ್ಲ ಮಾತ್ರವಲ್ಲ ಖಂಡಿತ ಸತ್ಪರಿಣಾಮವನ್ನುಂಟುಮಾಡುವುದರಿಂದ ನಿರ್ಧಾರಬದ್ಧವಾಗಿ ಈ ಕ್ರಮವನ್ನು ಅನುಸರಿಸುವುದು ಕ್ಷೇಮಕರ

ಈ ಅವಧಿಯಲ್ಲಿ ಒಂದು ತರದ ಅಶಕ್ತತೆ ನಮ್ಮದಿಯುಂಟಾಗುವುದು. ಅದನ್ನು ಪುನಃ ಹಳೇ ಅಭ್ಯಾಸಾನುಸರಣೆಯಿಂದ ನಾಶಮಾಡಿಕೊಳ್ಳಲಾರದು ಕ್ರಮೇಣ ಹಾಲು, ಬಟಾಟೆ, ಮೊಟ್ಟೆ, ಉಗಿಯಿಂದ ಬೇಯಿಸಿದ ಮೀನು, ಕೋಳಿ ಮರಿಯ ಮಾಂಸ, ಕುರಿ ಮಾಂಸ ಸಾರು, ಇವನ್ನೆಲ್ಲಾ ಅಭ್ಯಾಸವಿದ್ದರೆ ಸೇವನೆ ಮಾಡಲು ಪ್ರಾರಂಭಿಸಬಹುದು ಆದರೆ ಹಣ್ಣು ಮತ್ತು ಉಗಿಯಲ್ಲಿ ಬೇಯಿಸಿದ ತರಕಾರಿಗಳನ್ನು ಹೆಚ್ಚಾಗಿ ಸೇವಿಸಲು ಮರೆಯಬಾರದು ಬಹಳ ರಾತ್ರಿ ಮಾಡಿ ಊಟ ಮಾಡುವುದನ್ನು ತಪ್ಪಿಸಬೇಕು

ಸಾಧ್ಯವಿದ್ದರೆ ಉಬ್ಬಸ ಕಾಲದಲ್ಲಿ ಬೆನ್ನೆಲುಬಿನ ಹುರಿಯನ್ನು ಸ್ವಲ್ಪ ಮಟ್ಟಿಗೆ ಒತ್ತಿಸಿಕೊಳ್ಳುವುದೂ ಹಿತಕರ

ಆದರೆ ಉಬ್ಬಸವುಂಟಾಗುವುದಿಲ್ಲವೆಂದೇ ನಾವು ಹಾರೈಸೋಣ ಈ ಚಿಕಿತ್ಸಾ ವಿಧಾನವು ಸಾಮಾನ್ಯ ತಿಳುವಳಿಕೆಯ ತರ್ಕದ ಮೇಲೆ ಆಧರಿಸಿಕೊಂಡಿದೆಂಬುದನ್ನು ಮರೆಯಬಾರದು ಉಬ್ಬಸಕ್ಕೆ ಇದು ರಾಮಬಾಣವಲ್ಲವಾದರೂ ನಿರ್ಧರಿತ ಉದ್ದೇಶದಿಂದ ಕೈಕೊಂಡರೆ ಅದರಿಂದ ನಿಮಗೆ ಖಂಡಿತ ಉತ್ತಮ ಫಲ ಸಿಗುವುದು

ಇನ್ನೊಂದು ವಿಶೇಷ ಸಂಗತಿ. ಈ ಆಹಾರ ಕ್ರಮವನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಆಗಾಗ್ಗೆ ಅನುಸರಿಸುವುದರಿಂದ ಉಬ್ಬಸವಿರಲಿ ಇಲ್ಲದಿರಲಿ, ಒಳಿತೇ ಆಗುವುದು ಕಾರಣ ನಾವು ಅದೆಷ್ಟು ಆರೋಗ್ಯವಂತರೆಂದು ಭಾವಿಸಿಕೊಂಡಿದ್ದರೂ ನಮ್ಮ ಶರೀರವು ಅನಿವಾರ್ಯವಾಗಿ ಕೆಲವೊಂದು ವಿಷ ಧಾತುಗಳನ್ನುಂಟುಮಾಡುವುದು ಈ ಚಿಕಿತ್ಸೆಯಿಂದದನ್ನು ತೆಗೆದು ಹಾಕಬಹುದು.

(೧ನೇ ಪುಟದಿಂದ)

ರಾಷ್ಟ್ರಸಂಘದ ನಿರ್ದೇಶವನ್ನು ತಿರಸ್ಕರಿಸಿದುದು ನ್ಯಾಯವೆಂದು ಅವರಿಗೆ ಮಂದಟ್ಟಾಗಿದೆ. ಯುಕ್ತರಾಷ್ಟ್ರಸಂಘದ ಮೂಲ ಉದ್ದೇಶದ ಘಟನೆಯನ್ವಯ ವಿಭಾಗೀಕರಣದ ನಿರ್ಧಾರವು ಒಂದು ಸೂಚನೆಯಾಗಬಲ್ಲುದೇ ಹೊರತು ಅದೊಂದು ಒತ್ತಾಯದ ನಿರ್ದೇಶವಾಗಿರಬಾರದೆಂದವರ ಅಭಿಪ್ರಾಯ. ಅದರಲ್ಲಿಯೂ ಅರಬರ ಪ್ರತಿನಿಧಿಗಳ ಅಭಿಪ್ರಾಯಗಳಿಗೆ ಯೋಗ್ಯ ಮನ್ನಣೆ ಕೊಡಲ್ಪಟ್ಟಿಲ್ಲವೆಂದೂ ಅವರು ಪ್ರತಿಪಾದಿಸುತ್ತಾರೆ.

ಯಹೂದಿ ದೃಷ್ಟಿಕೋನ

ಮೊದಲ ವಿಶ್ವಯುದ್ಧಾನಂತರದ ಕಾಲದಿಂದಲೂ ಪೆಲೆಸ್ತೀನದ ಮೇಲಿನ ನಮ್ಮ ಹಕ್ಕುಬಾಧ್ಯತೆಗಳನ್ನು ಅರಬ ಯಹೂದಿಗಳಿಬ್ಬರೂ ಮುಂದೊತ್ತುತ್ತಲೆ ಬಂದಿರುವರು ಕ್ರಿಸ್ತಪೂರ್ವ ಒಂದು ಸಹಸ್ರ ವರ್ಷಗಳ ಮೊದಲು ತಮ್ಮ ಪ್ರಾಚೀನ ಅರಸನಾದ ಜೋಶುವನು ಪೆಲೆಸ್ತೀನವನ್ನು ಜಯಿಸಿದ್ದನೆಂದು ಯೆಹೂದಿಗಳೆನ್ನುತಿದ್ದಾರೆ

ತಾವು ಇಂದಿಗೆ 1800 ವರ್ಷಗಳಿಂದ ಬಹು ಸಂಖ್ಯಾಕರಾಗಿಯೇ ಉಳಿದಿರುವುದಾಗಿಯೂ, ಯೆಹೂದಿಗಳನ್ನು ಸಿರಿಯನ್ನರು, ಗ್ರೀಕರೇ ಮೊದಲಾದವರು ಪೆಲೆಸ್ತೀನದಿಂದ ಚದರಿಸಿ ಹೊಡೆದೋಡಿಸಿರುವರೆಂದೂ, ಮತ್ತೆ ಕ್ರಿ. ಶ 135ನೇ ವರ್ಷದಲ್ಲಿ ರೋಮಾಯರು ಯೆಹೂದಿಗಳನ್ನು ಅಲ್ಲಿಂದ ಸಂಪೂರ್ಣ ಹೊರ ಅಟ್ಟಿ ಆ ದೇಶವನ್ನು ಅರಬರ ವಶಕೊಟ್ಟರೆಂದೂ ಅವರ ವಾದ

ಮೊದಲ ವಿಶ್ವಯುದ್ಧದ ಕಾಲದಲ್ಲಿ ಪೆಲೆಸ್ತೀನ ತುರ್ಕಿ ಸಾಮ್ರಾಜ್ಯದ ವಶವಿದ್ದಾಗ ಅರಬ ಯೆಹೂದಿಗಳಿರ್ವರಿಗೂ ಕೊಡಲ್ಪಟ್ಟ ಭರವಸೆಯ ವಚನಗಳು ಪೂರ್ತಿಮಾಡಲ್ಪಡಬೇಕೆಂದಿರ್ವರೂ ಆಗ್ರಹತೊಟ್ಟಿರುವರು 1916ರಲ್ಲಿ ಬ್ರಿಟಿಷರು ಅರಬರಿಗೆ ವಿಶಾಲ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಕೊಡುವುದಾಗಿ ವಚನವಿತ್ತಿದ್ದರು ಪೆಲೆಸ್ತೀನವು ಆ ಪ್ರದೇಶದೊಳಗಿನದೊಂದು ಭಾಗವೆಂದು ಅರಬರೆನ್ನುತ್ತಿರುವರು ಆದರೆ ಮತ್ತೆ 1917ರಲ್ಲಿ ಬ್ರಿಟಿಷ್ ಪ್ರಧಾನ ಆರ್ಥರ್ ಬಾಲ್‌ಫೋರರು ಪೆಲೆಸ್ತೀನದಲ್ಲಿ ಯೆಹೂದಿಗಳಿಗೊಂದು 'ರಾಷ್ಟ್ರೀಯ ನಿವಾಸ'ವನ್ನು ಕಲ್ಪಿಸಿಕೊಡುವುದಾಗಿ ಸರಕಾರದ ಪರವಾಗಿ ಮಾತುಕೊಟ್ಟರು ಅದೇ ಇಂದು ಇಸ್ರಯೇಲ್ ರಾಜ್ಯವಾಗಲರ್ಹವಾದುದೆಂದು ಯೆಹೂದಿಗಳು ತರ್ಕಿಸುತ್ತಾರೆ ಈ ಎಲ್ಲಾ ಐತಿಹಾಸಿಕ ಮತ್ತು ಘಟನಾ ಬದ್ಧ ದಾಖಲೆಗಳ ಸಂದರ್ಭಗಳಲ್ಲಿ ಈ 'ವಚನ'ಗಳ ಸಾಧ್ಯಾಸಾಧ್ಯತೆಗಳೇನು?

(ಸಶೇಷ)

ಬರ್ಮಾದಿಂದ ವಿಮಾನದಲ್ಲಿ ಡಂ ಡಂ ನಿಲ್ದಾಣದಲ್ಲಿಳಿದ ಓರ್ವ ವ್ಯಾಪಾರಿಯ ಬೂಟ್ಸಿನಡಿಯಲ್ಲಿ 112 ತೊಲೆ ಅಡಗಿಸಿಟ್ಟ ಬಂಗಾರವನ್ನು ಸುಂಕದಧಿಕಾರಿಗಳು ಹಿಡಿದಿರುವರು.

★

ಮಾಂಸ ಭಕ್ಷಣೆಯನ್ನು ನಿಷೇಧಿಸಬೇಕೆ?

ಸಸ್ಯಾಹಾರ ಪ್ರಚಾರದ ಕೀರ್ತಿ ಜೈನರಿಗೆ

ಹಾಲು, ತರಕಾರಿ ಹೆಚ್ಚು ಬೆಳೆಸಿದರೆ ಸಾಧ್ಯ

ವಿನೋಬಾ ಭಾವೆಯವರ ನಿರೂಪ

ಮಾಂಸಹಾರವು ಒಳಿತೊ ಕೆಡುಕೊ? ಡಿಲ್ಲಿಯಲ್ಲಿ ಮಹಾವೀರ ಜನ್ಮದಿನೋತ್ಸವ ಸಮಾರಂಭದಲ್ಲಿ ಭಾಗವಹಿಸಿದ ವಿನೋಬಾಜಿಯವರಿಗೆ ಮೇಲಿನ ಪ್ರಶ್ನೆಯನ್ನು ಕೇಳಲಾಯಿತು. ಅವರ ಉತ್ತರದ ಸಾರಾಂಶವು ಈ ಕೆಳಗಿನಂತಿದೆ –

ಪ್ರಾಚೀನ ಕಾಲದಲ್ಲಿ ಋಷಿ ಮುನಿಗಳ ಸಮೇತ ಸಾಮಾನ್ಯ ಜನರು ಕೂಡ ಮಾಂಸಹಾರವನ್ನು ಮಾಡುತ್ತಿದ್ದರು. ಕಾಲಕ್ರಮೇಣದಲ್ಲಿ ಪ್ರಾಣಿಗಳ ಮಾಂಸಭಕ್ಷಣೆಯಿಂದ ಶರೀರಪೋಷಣೆ ಮಾಡುವುದು ಮಾನವನಿಗೆ ತರವಲ್ಲವೆಂದವರು ಗ್ರಹಿಸಿಕೊಂಡರು. ಮಾಂಸರಹಿತವಾದ ಪೋಷಣೆಸತ್ವಗಳುಳ್ಳ ಇತರ ಆಹಾರಗಳನ್ನು ಹುಡುಕುವಾಗ ಕೃಷಿಗಾರಿಕೆಯ ಶೋಧೆಯಾಯಿತು. ಮನುಷ್ಯನು ಆಹಾರ ಬೆಳೆಸಿದರೆ ಅವನು ತನ್ನ ಮಾಂಸಭಕ್ಷಣೆಯ ಪ್ರಮಾಣವನ್ನು ಕಡಿಮೆಮಾಡಬಲ್ಲನೆಂದು ನಮ್ಮ ಪ್ರಾಚೀನರು ತಿಳಕೊಂಡರು. ಹೀಗೆ ಅಹಿಂಸಾತತ್ವದೊಡನೆ ಸಸ್ಯಹಾರದ ಸಾಂಪ್ರದಾಯವು ಬೆಳೆಯಿತು. ಹಾಗೇ ಹಸುವಿನ ಹಾಲನ್ನು ಉಪಯೋಗಿಸುವುದರಿಂದ ಸಂಪೂರ್ಣ ಮಾಂಸ ತಿನ್ನುವಿಕೆಯ ಅವಶ್ಯಕತೆಯು ವಿಮುಕ್ತನಾಗಬಹುದೆಂದೂ ಅವರಿಗೆ ತಿಳಿಯಿತು.

ಜೈನರ ಕೀರ್ತಿ

ಗೋಸೇವೆಯನ್ನಾರಂಭಿಸಿದ ಮಾತ್ರದಿಂದ ಮಾಂಸಾಹಾರದ ಅನಿಷ್ಟದಿಂದ ವಿಮೋಚನೆ ಹೊಂದುವಂತಾಯಿತು" ಎಂದು ವೇದಗಳಲ್ಲಿ ಹೇಳಿದೆ. ದನವು ಎತ್ತನ್ನು ಹುಟ್ಟಿಸುತ್ತದೆ. ಎತ್ತು ನಮ್ಮ ಕೃಷಿಗಾರಿಕೆಗೆ ಅತ್ಯಂತ ಸಹಾಯಕಾರಿ. ದನವು ಹಾಲು ಕೊಡುತ್ತದೆ. ಹಾಲು ಸೇವನ ಮಾಡಿದರೆ ಮಾಂಸಭಕ್ಷಣೆಯು ಅನಾವಶ್ಯಕವೆನಿಸುತ್ತದೆ. ಜೈನಮತದ ಜನರು ಸಸ್ಯಾಹಾರವನ್ನು ವಿಶಾಲ ಪ್ರಮಾಣದಲ್ಲಿ ಪ್ರಚಾರ ಮಾಡಲು ಕಾರಣಭೂತರಾಗಿರುವರೆಂದು. ಕ್ರಮೇಣ ವೈಷ್ಣವರೂ ಬ್ರಾಹ್ಮಣರೂ ಅದನ್ನು ಅನುಸರಿಸಿದರು. ಇಂದು ಸುಮಾರು 3 ಕೋಟಿ ಸಂಪೂರ್ಣ ಸಸ್ಯಾಹಾರಿಗಳು ನಮ್ಮ ದೇಶದಲ್ಲಿದ್ದಾರೆ. ಮಾಂಸ ತಿನ್ನುವ ಇತರರಾದರೂ ಅದು ಉತ್ತಮವೆಂದು ಹೇಳುವುದಿಲ್ಲ.

ಎಲ್ಲರೂ ಮಾಂಸ ತಿನ್ನುವುದ ಬಿಡುವಂತೆ ಮಾಡಲು ಕೇವಲ ಅದರ ವಿರುದ್ಧವಾಗಿ ಪ್ರಚಾರಮಾಡಿದರೆ ಸಾಲದು. ಮೊದಲು ಹೆಚ್ಚು ಹಾಲು ಉತ್ಪತ್ತಿ ಮಾಡುವ ಸಾಧನ ಕೈಕೊಳ್ಳಬೇಕು. ಅದೇ ರೀತಿ ಹಣ್ಣುಹಂಪಲು ತರಕಾರಿ ಮತ್ತಿತರ ಸಸ್ಯ ಪದಾರ್ಥಗಳನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸಲು ಪ್ರಯತ್ನಗಳಾಗಬೇಕು. ಬಡವರಿಗೆ ಈ ವಸ್ತುಗಳು ಹೆಚ್ಚೆಚ್ಚು ಮತ್ತು ಬೇಕಾದಷ್ಟು ಸಿಗುವಂತಾದರೆ ಅವರು ತನ್ನಷ್ಟಕ್ಕೆ ಮಾಂಸಹಾರವನ್ನು ಬಿಟ್ಟುಬಿಡುವಂತಾಗುವುದು.

ಆಶ್ರಮದಲ್ಲಿ

ನನ್ನ ಪೌನಾರ್ (ವಾರ್ಧಾ ಬಳಿ) ಆಶ್ರಮದ ಬಳಿ ಒಂದು ನದಿ ಹರಿಯುತ್ತದೆ. ಅಲ್ಲಿಗೆ ಪ್ರತಿನಿತ್ಯ ಬೆಸ್ತರು ಬಂದು ದಿನವಿಡಿ ಶ್ರಮಿಸಿ ಒಂದಿಷ್ಟು ಮೀನುಗಳನ್ನು ಹಿಡಿಯುತಿದ್ದರು. ಇವನ್ನು ತಿಂದು ಕಷ್ಟದಿಂದ ಜೀವನಮಾಡುತಿದ್ದರು. ಪ್ರತಿನಿತ್ಯ ಈ ಸಂಗತಿಯನ್ನು ನೋಡುತಿದ್ದೆನಾದರೂ ಅವರು ಆ ಕೆಲಸ ಮಾಡದಂತೆ ಹೇಳಲು ನನಗೆ ಮನಸ್ಸಿಲ್ಲ. ಕಾರಣ ಬಡಜನರಿಗೆ ನಾವು ಹೇರಳವಾದ ಇತರ ಸಸ್ಯ ವಸ್ತುಗಳನ್ನು ಪೂರೈಸಲು ಸಾಧ್ಯವಿರುವ ವರೆಗೆ ಅವರಿಗೆ ಮಾಂಸಹಾರವನ್ನು ಬಿಡುವಂತೆ ಉಪದೇಶಿಸುವುದು ತರವಲ್ಲ.

ಮೀನು ಮತ್ತು ಅಕ್ಕಿ

ಈಗ ಸರ್ವಸಾಮಾನ್ಯ ಧಾನ್ಯಗಳು ಕೂಡ ಸಿಗುವುದು ಅಪರೂಪ. ಸತ್ವದ ರೇಶನ್ ಪಡಿಯೂ ಇತರ ಆಹಾರವಸ್ತುಗಳೂ ಕಡಿಮೆ ಪ್ರಮಾಣದಲ್ಲಿ ಸಿಗುತ್ತಿರುವಾಗ ಜನರು ಹೇಗಾದರೂ ಮೀನು ಹಿಡಿದಾದರೂ ಅದನ್ನು ತಿಂದು ಉದರ ಪೋಷಣೆ ನಿರ್ವಹಿಸುತ್ತಾರೆ. ಮೀನು ಹಿಡಿಯುವುದನ್ನು ನಿಲ್ಲಿಸಬೇಕಾದರೆ ಉಪನಿಷತ್ತುಗಳಲ್ಲಿ ಹೇಳಿದಂತೆ ಹೆಚ್ಚು ಆಹಾರವನ್ನು ಬೆಳೆಸಲು ನಾವೆಲ್ಲರೂ ಪ್ರತಿಜ್ಞಾಬದ್ಧರಾಗಬೇಕು.

ಬಂಗಾಳಿಗಳಿಗೆ ಆಹಾರರೂಪವಾಗಿ ಅಕ್ಕಿಯಲ್ಲದೆ ಇತರ ಯಾವ ಧಾನ್ಯವೂ ಸಿಗುವುದು ಕಷ್ಟತರ. ಅಕ್ಕಿಯ ಜೊತೆ ಪೂರಕವಾಗಿ ಅವರು ಹೆಚ್ಚು ಮೀನನ್ನು ಬಳಸಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಬಂಗಾಳಿಗಳಿಗೆ ಮೀನನ್ನು ತ್ಯಜಿಸಲು ಬೋಧಿಸಬೇಕಾದರೆ ಅದರ ಬದಲಿಗೆ ಅವರಿಗೆ ಬೇರೇನು ಸಿಗುತ್ತದೆಂಬುದನ್ನು ತಿಳಿಸಲು ನಾವು ಸಿದ್ಧರಿರಬೇಕು.

ಮಾಂಸಸತ್ವದ ಔಷಧಿಗಳು

ಸಸ್ಯಹಾರಿಗಳು ಕೆಲವು ಮಾಂಸಸತ್ವವನ್ನೊಳಗೊಂಡ ಔಷಧಿಗಳನ್ನು ಸೇವಿಸುವ ಕಾರಣವೂ ಇಲ್ಲ. ಈಗ ನಮ್ಮ ದೇಶದಲ್ಲಿರುವ ಸಸ್ಯಹಾರಿಗಳು ತಾವಾಗಿ ಮಾಂಸ ಭಕ್ಷಣವನ್ನು ಬಿಟ್ಟವರಲ್ಲ. ಅವರ ಅತಿ ಪ್ರಾಚೀನ ಪೂರ್ವಜರು ಅತಿ ಕಷ್ಟದ ಅಭ್ಯಾಸದಿಂದದನ್ನು ಬಿಟ್ಟುಬಿಟ್ಟಿದ್ದರು. ಈಗಿನ ತಲಾಂತರದವರಿಗೆ ಸಸ್ಯಹಾರದ ರೂಢಿಯು ಪರಾಂಪರಗತವಾಗಿಯೂ, ಸಮಾಜ ಸಾಂಪ್ರದಾಯವಾಗಿಯೂ ಬಂದುದು. ರೂಢಿಯು ಅಭ್ಯಾಸವು ಅವರ ಮನಸ್ಸಿನಲ್ಲಿ ಮಾಂಸದ ಮೇಲೆ ಅದೆಷ್ಟು ತಿರಸ್ಕಾರವನ್ನುಂಟುಮಾಡಿದೆಯೆಂದರೆ ಮಾಂಸವನ್ನು ನೋಡುವುದಕ್ಕೂ ಅವರು ಈಗ ಅಸಹ್ಯಪಡುವಂತಾಗಿದೆ. ಆದರ ಇದರ ಕೀರ್ತಿ ನಮ್ಮ ಪೂರ್ವಜರಿಗ ಸಲ್ಲುತ್ತದೆ. ಮಾತ್ರವಲ್ಲ ಈಗಿನ ಸಸ್ಯಹಾರಿಗಳು ಸಾಮಾನ್ಯ ವರ್ಗದ ಸಸ್ಯಹಾರಿಗಳಿಗೆ ಸಿಗಲು ಕಷ್ಟವಾದ ಮತ್ತು ಹೆಚ್ಚು ಮೌಲ್ಯದ ಸಸ್ಯ ಪದಾರ್ಥಗಳನ್ನು ತಿನ್ನುತ್ತಾರೆ. ಅಲ್ಲದೆ ಈ ಸಸ್ಯಹಾರಿಗಳೆನಿಸಿಕೊಳ್ಳುವವರು ತಾವು ಅಸ್ವಸ್ಥರಿದ್ದರೆ ಸ್ವೇಚ್ಛೆಯಾಗಿ ಪಾಶ್ಚಿಮಾತ್ಯ ವೈದ್ಯವಿಧಾನದ ಇಂಜೆಕ್ಷನುಗಳನ್ನು ತೆಗೆದುಕೊಳ್ಳುತ್ತಾರೆ. ಇವುಗಳಲ್ಲಿ ಅದೆಂತಹ ಮಾಂಸದ ಸತ್ವವಿದೆಯೆ ದವರು ಒಂದು ಕ್ಷಣವೂ ಪರ್ಯಾಲೋಚಿಸುವುದಿಲ್ಲ.

ಪ್ರಥಮ ಕರ್ತವ್ಯ

ವಾಸ್ತವವಾಗಿ ನೋಡಿದರೆ ಇಂಜೆಕ್ಷನ್ನುಗಳ ಮೂಲಕ ಮಾಂಸಸತ್ವಗಳನ್ನು ತೆಗೆದುಕೊಳ್ಳುವುದು ಮಾಂಸಭಕ್ಷಣಕಿಂತಲೂ ಹೀನವಾದುದು. ಕಾರಣ ತಿಂದ ಮಾಂಸದ ಒಂದು ಭಾಗ ಮಾತ್ರ ನಮ್ಮ ಶರೀರ ಪೋಷಣೆಗೆ ಜೀರ್ಣಗೊಂಡು ಉಳಿದುದನ್ನು ಮಲರೂಪವಾಗಿ ಹೊರಹಾಕುತ್ತೇವೆ. ಆದರೆ ಇಂಜೆಕ್ಷನ್ ಮೂಲಕ ಒಳಸೇರಿಸಲ್ಪಡುವ ಮಾಂಸದ ಸತ್ವವು ನೇರವಾಗಿ ಮತ್ತು ಸಂಪೂರ್ಣವಾಗಿ ನಮ್ಮ ರಕ್ತವನ್ನು ಸೇರುತ್ತದೆ. ಆದುದರಿಂದ ಇದು ಪರಿಪೂರ್ಣವಾದ ಮಾಂಸಭಕ್ಷಣೆಯಾಗುತ್ತದೆ. ಇಂಜೆಕ್ಷನ್ ಮೂಲಕ ಮಾಂಸಸತ್ವವನ್ನು ಸ್ವೀಕರಿಸಲೊಪ್ಪಿ ಬಾಯಿಯಿಂದ ಆಹಾರವಾಗಿ ಮಾಂಸ ತಿನ್ನದವನು ಯಾವ ಶ್ರೇಷ್ಠ ಆದರ್ಶವನ್ನು ಕಲ್ಪಿಸಿದಂತಾಗುವುದಿಲ್ಲ. ಅದೇ ರೀತಿ ಇನ್ನೊಂದು ಸಂಗತಿಯೂ ವಿಶೇಷದ್ದಾಗಿದೆ. ಮಾಂಸಹಾರವನ್ನು ಬಿಡಬೇಕೆಂದು ಹೇಳುವ ಮೊದಲು ನಾನು ಜನರಿಗೆ ತಮ್ಮೊಳಗಿನ ಕಲಹಗಳನ್ನು, ದುಸ್ವಾರ್ಥ ಸಾಧನೆಯನ್ನು ಮತ್ತು ವಂಚನೆಗಳನ್ನು ಬಿಡುವಂತೆ ಬೋಧಿಸಲಿಚ್ಛಿಸುತ್ತೇನೆ. ಅದೇ ರೀತಿ ಹೆಚ್ಚು ಹಾಲು, ಹಣ್ಣುಹಂಪಲು ಮತ್ತು ತರಕಾರಿಗಳನ್ನು ಬೆಳೆಸಲೂ ನಾನು ಮೊದಲು ಕೇಳಿಕೊಳ್ಳಲು ಬಯಸುತ್ತೇನೆ. ಆ ನಂತರವೇ ಸಸ್ಯಹಾರವನ್ನು ಪ್ರಚಾರಮಾಡಲು ಸುಸಂದರ್ಭವುಂಟಾಗುತ್ತದೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾರ್ವಜನಿಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ದ ಗುಣಕಗಳಲ್ಲಿ, ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು	ನೂರಕ್ಕೆ	ವರ್ಷಕ್ಕೆ	೨¼
೪ರಿಂದ ೫ ತಿಂಗಳು	,,	,,	೨½
೬ರಿಂದ ೯ ತಿಂಗಳು	,,	,,	೨¾

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

THE CANARA BANK, LIMITED.

ESTD: 1906

ವಾರದ ವಿಜ್ಞಾನ ವರದಿಗಳು

ಮುಂದಿನ ಅದೃಶ್ಯ ಯುದ್ಧ

ಎಟಂ ಬೊಂಬಿಗೂ ಮಿಗಿಲಾದ ಅಸ್ತ್ರ

ಅಣುಬೊಂಬಿನ ಯುದ್ಧ ವಿಧಾನವು ಹಳೆದಾಯಿತು! ಕಾರಣ ಒಂದು ಶತ್ರು ಜನಾಂಗಕ್ಕೆ ಅವರ ಮೇಲೆ ದಾಳಿ ಪ್ರಾರಂಭವಾಗಿದೆಂದು ತಿಳಿಯುವ ಮೊದಲೇ ಅದನ್ನು ಕಂಗೆಡಿಸಿ ನಾಶಮಾಡುವ ಪ್ರಗಲ್ಭ ಅಸ್ತ್ರಗಳ ಶೋಧೆಯಾಗಿದೆ.

ಈ ಕುರಿತು ಅಮೇರಿಕದ ಪೊಪ್ಯುಲರ್ ಸಾಯನ್ಸ್ ಪತ್ರಿಕೆಯ ಸಂಪಾದಕರಾದ ಪರಿಗಿನ್ಸ್ ಹೀಗನ್ನುತ್ತಾರೆ.

"ಇತಿಹಾಸದಲ್ಲಿ ಮೊದಲನೆ ಸಲಕ್ಕೆ ಹೊಸತೊಂದು ಯುದ್ಧ ವಿಧಾನವು ಸಾಧ್ಯವಾಗಿದೆ. ಅದಕ್ಕಿನ್ನೂ ನಾಮಕರಣವಾಗಿಲ್ಲ. ಅದನ್ನು ಯುದ್ಧ ರೀತಿಯಲ್ಲದ ಯುದ್ಧವೆಂದು ಕರೆಯಬಹುದು.

"ಜಗತ್ತಿನಲ್ಲಿ ಎರಡೇ ಅತ್ಯಂತ ಶಕ್ತಿವಂತವಾದ ರಾಷ್ಟ್ರಗಳಿವೆಯೆಂದ ಕಲ್ಪಿಸಿಕೊಳ್ಳಿರಿ. ಇವರಲ್ಲಿ ಮೂಲತತ್ವಗಳ ಕುರಿತು ಘರ್ಷಣೆ ಹುಟ್ಟಿದೆ ನ್ನೋಣ. ಈ ಎರಡೂ ಜನಾಂಗಗಳೂ ವಿಶ್ವ ಒಡೆತನಕ್ಕಾಗಿ ಕಾತರಿಸುತ್ತವೆ ವ ತಿಳಕೊಳ್ಳೋಣ.

ಮಾನಸಿಕ ವ್ಯಾಧಿಯ ನಿವಾರಣೆ

ವಿಶ್ವ ವೈದ್ಯ ತಜ್ಞರ ಪರ್ಯಾಲೋಚನೆ

ಬರುವ ಆಗಸ್ಟ್ ತಿಂಗಳಲ್ಲಿ ಜಗತ್ತಿನ 55 ದೇಶಗಳ ವೈದ್ಯ ತಜ್ಞರು ಲಂಡನಿನಲ್ಲಿ ಪರಿಷತ್ತು ಸೇರಿ ಮಾನಸಿಕ ವ್ಯಾಧಿಗಳ ಮೂಲ ಮತ್ತವುಗಳ ಪರಿಹಾರ ವಿಧಾನಗಳನ್ನು ಕಂಡುಹಿಡಿಯಲು ಪ್ರಯತ್ನಿಸುವರು.

ಮಾನಸಿಕ ತಜ್ಞರ ಅಭಿಪ್ರಾಯದ ಪ್ರಕಾರ ಮನೋ ವ್ಯಾಧಿಗಳು ಜಗತ್ತಿನಲ್ಲಿ ಹೆಚ್ಚುತ್ತಿವೆಯೆಂದು ತಿಳಿಯುತ್ತದೆ.

ಸೈನ್ಯಕ್ಕೆ ಸೇರಲು ಬಂದ ಪ್ರತಿ ಎಂಟು ಜನರಲ್ಲಿ ಒಬ್ಬನು ಮನೋ ವ್ಯಾಧಿ ಗ್ರಸ್ತನೆಂದು ತಿಳಿದಿದೆ. ಯುದ್ಧ ಹಾಯಾಳುಗಳ ಆಸ್ಪತ್ರೆಯಲ್ಲಿರುವ ಶೇಕಡಾ ೦2ರಷ್ಟು ಜನರು ಮನೋ ಸಮಸ್ಯೆಗಳಿಂದ ನರಳುವವರು. ಅಮೇರಿಕದ ಆಸ್ಪತ್ರೆಗಳಲ್ಲಿನ ರೋಗಿಗಳಲ್ಲಿನ ಅರ್ಧಕರ್ಧದಷ್ಟುಮಂದಿಯನ್ನು ಮನೋ ಚಿಕಿತ್ಸೆಯಿಂದ ಗುಣ ಮಾಡಬಹುದು. ಜಗತ್ತಿನಲ್ಲಿ ಅನೇಕ ವ್ಯಾಧಿಗಳಿವೆ. ಇವು ಹೇಗುಂಟಾಗುತ್ತವೆಂದು ತಿಳಿಯಲು ನಾವು ಕುತೂಹಲರಾಗಿದ್ದೇವೆ."

ಸ್ವದೇಶಾಭಿಮಾನಿ

ತಾರೀಕು 11—6—1948

ಏಸ್ಯಾ ಮತ್ತು ಇತರ ಪೌರ್ವಾತ್ಯ ದೇಶಗಳ ಆರ್ಥಿಕ ಪರಿಷತ್ತು

ಸಂಯುಕ್ತ ರಾಷ್ಟ್ರಗಳ ಸಂಘದ ಆಶ್ರಯದಲ್ಲಿ ಉದಕಮಂಡಲದಲ್ಲಿ ಏಸ್ಯಾ ಮತ್ತು ಇತರ ಪೌರ್ವಾತ್ಯ ದೇಶಗಳ ಆರ್ಥಿಕ ಪರಿಷತ್ತು ಆರಂಭವಾಗಿ ಈಗ ನಡೆಯುತ್ತಿದೆ. ಭಾರತ ಸರಕಾರದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಇವರು ಪರಿಷತ್ತಿನ ಉದ್ಘಾಟನಾ ಸಮಾರಂಭ ಜರಗಿಸಿದರು

ಪರಿಷತ್ತಿನ ಅಧ್ಯಕ್ಷರಾಗಿ ಭಾರತ ಸರಕಾರದ ಮಂತ್ರಿ ಮಾನ್ಯ ಜೊನ್ ಮತ್ತಾಯಿಯವರನ್ನು ಸರ್ವಾನುಮತದಿಂದ ಆರಿಸಲಾಯಿತು

ಏಸ್ಯಾ ಮತ್ತು ಪೌರ್ವಾತ್ಯ ದೇಶಗಳು ಕೈಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಪ್ರಪಂಚದಲ್ಲಿ ಹಿಂದುಳಿದ ಪ್ರದೇಶಗಳು ಇಲ್ಲಿಯ ಜನರ ಬಡತನದಲ್ಲಿ ಜೀವಿಸುವವರು ಇತಿಹಾಸದ ಮಧ್ಯಕಾಲೀನ ಸ್ಥಿತಿಯಲ್ಲಿ ಈ ರಾಷ್ಟ್ರಗಳು ಇನ್ನು ಜೀವಿಸುತ್ತಿವೆ. ಕಳೆದ ಮಹಾಯುದ್ಧದ ಪರಿಣಾಮದಿಂದ ಇಲ್ಲಿಯ ಪರಿಸ್ಥಿತಿ ಇನ್ನಷ್ಟು ಹಾಳಾಗಿ ಜನರು ಕಂಗಾಲಾಗಿದ್ದಾರೆ ಈ ಸ್ಥಿತಿಯನ್ನು ಸುಧಾರಿಸಲು ಒಂದೇ ದಾರಿ ಇರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆದಂತೆ ಕೈಗಾರಿಕೆಗಳ ಅಭಿವೃದ್ಧಿಯು ಈ ದೇಶಗಳಲ್ಲಿಯೂ ಸಾಧಿಸಲ್ಪಡಬೇಕು ಇದಕ್ಕೆ ಪಾಶ್ಚಾತ್ಯ ರಾಷ್ಟ್ರಗಳ ಸಹಾಯವು ಅತ್ಯಗತ್ಯ ಯುದ್ಧದಿಂದ ಕಂಗಾಲಾದ ಯುರೋಪಿಯನ್ ರಾಷ್ಟ್ರಗಳಿಗೆ ಅಮೇರಿಕವು ಸಹಾಯ ಸಲ್ಲಿಸುತ್ತಿರುವಂತೆ ಈ ದೇಶಗಳಿಗೂ ಸಹಾಯ ಮಾಡುವುದು ಅವರ ಕರ್ತವ್ಯ. ಪೌರ್ವಾತ್ಯ ದೇಶಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ಭಂಡವಲವಿಲ್ಲ ಬೇಕಾದ ಯಂತ್ರೋಪಕರಣಗಳಿಲ್ಲ. ಅದೇ ರೀತಿ ಆಯಾ ಕೈಗಾರಿಕೆಗಳ ಮಾಹಿತಿಯುಳ್ಳ ತಜ್ಞರ ಸಂಖ್ಯೆಯೂ ಸಾಕಷ್ಟಿರುವುದಿಲ್ಲ ಇವನ್ನೆಲ್ಲ ಪಾಶ್ಚಾತ್ಯ ರಾಷ್ಟ್ರಗಳು ಅದರಲ್ಲೂ ಅಮೇರಿಕದವರು ಒದಗಿಸಬಲ್ಲರು. ಅವರು ಹಾಗೆ ಒದಗಿಸುವುದು ಅವರ ಕರ್ತವ್ಯ. ಪೌರ್ವಾತ್ಯ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಯು ಸ್ಥಾಪಿಸಲ್ಪಟ್ಟರೆ ಈ ದೇಶಗಳ ಜನರೊಡನೆ ವ್ಯಾಪಾರ ವಹಿವಾಟುಗಳನ್ನು ನಡೆಸುವುದರಿಂದ ಪಾಶ್ಚಾತ್ಯ ರಾಷ್ಟ್ರಗಳಿಗೂ ಪ್ರಯೋಜನ ಸಿಕ್ಕುತ್ತದೆ. ದೂರದೃಷ್ಟಿಯಿಂದ ಪರಿಶೀಲಿಸಿ ತಮ್ಮ ಹಿತಕ್ಕಾಗಿ ಕೂಡಾ ಪಾಶ್ಚಾತ್ಯ ರಾಷ್ಟ್ರಗಳು ಅಗತ್ಯವಿರುವ ಸಹಾಯ ಸಲ್ಲಿಸಲು ಮುಂದೆ ಬರಬೇಕು.

ಈ ರೀತಿ ಪಂಡಿತ ಜವಾಹರಲಾಲರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪರಿಷತ್ತಿನ ಮುಂದಿರುವ ಮುಖ್ಯ ಪ್ರಶ್ನೆಯನ್ನು ಸ್ಪಷ್ಟಗೊಳಿಸಿದರು. ಇದಕ್ಕೆ ಉತ್ತರವಾಗಿಯೋ ಎಂಬಂತೆ ಅಮೇರಿಕನ್ ಸರಕಾರದ ಪ್ರತಿನಿಧಿ ಗ್ರೇಡಿಯವರು ತಮ್ಮ ಸರಕಾರದ ಈ ಕುರಿತಾದ ಧೋರಣೆಯನ್ನು ಸ್ಪಷ್ಟಪಡಿಸಿದರು.

ಕೈಗಾರಿಕೆಗಳಿಗೆ ಬೇಕಾಗುವ ಭಂಡವಲ ಮುಂದೆ ಬರಲು ಕಷ್ಟವಾಗುವ ಬಗೆಯ ಧೋರಣೆಯನ್ನು ಕೈಕೊಂಡು ಪರಕೀಯ ಭಂಡವಲ ಇಲ್ಲಿಗೆ ಬರಬೇಕೆಂದು ಆಶಿಸಿದರೆ ಅದು ಹೇಗೆ ಬಂದೀತು? ಎಂದು ಕೇಳಿದರು. ಅಂದರೆ ಕೈಗಾರಿಕೆಗಳ ರಾಷ್ಟ್ರೀಯಕರಣ ಇತ್ಯಾದಿ ಸರಕಾರದವರು ಆಗಾಗ ಹೇಳುತ್ತಿದ್ದು ಖಾಸಗಿ ಭಂಡವಲಗಾರರನ್ನು ಹೆದರಿಸುತ್ತಿರುವಾಗ ಭಂಡವಲ ಮುಂದೆ ಬರಲು ಹೆದರುತ್ತದೆ ಎಂಬ ಅಭಿಪ್ರಾಯ ಖಾಸಗಿ ಲಾಭಕ್ಕೆ ತಡೆ ಇಲ್ಲದಂತೆ ಸ್ವಾತಂತ್ರ್ಯ ಕೊಟ್ಟರೆ ಅಮೇರಿಕದ ಭಂಡವಲಗಾರರು ಇಲ್ಲಿಗೆ ಬಂದು ತಮ್ಮದೇ ಕಾರ್ಖಾನೆಗಳನ್ನು ನಡೆಸಬಹುದು ಎಂದು ಸೂಚಿಸಿದರು ಇಲ್ಲದಿದ್ದರೆ ಅಮೇರಿಕವು ಕೈಗಾರಿಕೆಗಳ ಅಭಿವೃದ್ಧಿ ಸ್ವಪ್ರಯತ್ನದಿಂದ ಸಾಧಿಸಿದಂತೆ ನೀವೂ ಸ್ವಂತ ಯತ್ನದಿಂದ ಸಾಧಿಸಬೇಕೆಂದು ಉಪದೇಶಿಸಿದರು

ಗ್ರೇಡಿಯವರ ಭಾಷಣದಿಂದ ಪೌರ್ವಾತ್ಯ ರಾಷ್ಟ್ರಗಳ ಮುಂದಾಳುಗಳಿಗೆ ನಿರುತ್ಸಾಹವುಂಟಾಗಿರುತ್ತದೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕೆಗಳು ಬೆಳೆದು ಒರಬು ಒಂದು ಶತಮಾನ ಹಿಡಿಯಿತು ಅದೇ ರೀತಿ ಇಲ್ಲಿಯೂ ಒಂದು ಶತಮಾನ ತೆಗಯಬೇಕೆಂದಿದ್ದರೆ ಅರ್ಥವಿಲ್ಲದ ಮಾತೆಂದು ಹೇಳಲಾಗುತ್ತಿದೆ ಪಾಶ್ಚಾತ್ಯ ರಾಷ್ಟ್ರಗಳ ಅನುಭವ ಇಲ್ಲಿ ಉಪಯೋಗಿಸಿಕೊಂಡು ಕ್ಷಿಪ್ರದಲ್ಲಿಯೇ ಇಲ್ಲಿ ಅತ್ಯಾಧುನಿಕ ಕೈಗಾರಿಕೆಗಳ ಮಟ್ಟವನ್ನು ಸಾಧಿಸಬಹುದೆಂದು ವಾದಿಸಲಾಗುತ್ತಿದೆ

ಅಮೇರಿಕದವರು ಬೇರಾವ ಬಗೆಯ ಸಹಾಯವನ್ನು ಶರ್ತಗಳಿಲ್ಲದೆ ಒದಗಿಸಲು ಒಪ್ಪದಿದ್ದರೂ ಬೇಕಾದ ಯಂತ್ರೋಪಕರಣಗಳನ್ನು ಕಾರ್ಯಕ್ಕಾದರೂ ಒದಗಿಸಬಹುದಲ್ಲ? ಇವುಗಳ ಕ್ರಯ ಒದಗಿಸಲಿಕ್ಕೆ ತಮಗೆ ಬೇಕಾದ ಮಾಲುಗಳನ್ನು ಹೆಚ್ಚಾಗಿ ಬೆಳೆಸಿ ಒದಗಿಸಿರೆಂದು ಅಮೇರಿಕದವರು ಕೇಳುತ್ತಾರೆ ಇದಾದರೂ ಅಷ್ಟು ಸುಲಭವಿಲ್ಲ. ಬೇಕಾದ ಯಂತ್ರೋಪಕರಣಗಳಿಲ್ಲದೆ ಉತ್ಪತ್ತಿಯನ್ನು ಹೆಚ್ಚಿಸಿರಿ ಎಂದು ಹೇಳಿದರೆ ಉತ್ಪತ್ತಿ ಹೆಚ್ಚಿಸುವುದು ಹೇಗೆ? ಅಮೇರಿಕದವರು ಈ ಬಗೆಯ ಯಂತ್ರೋಪಕರಣಗಳನ್ನು ಸಾಲವಾಗಿ ಒದಗಿಸಿ ತನ್ಮೂಲಕ ಹೆಚ್ಚುವ ಉತ್ಪತ್ತಿಯನ್ನು ಪಡೆದು ಸಾಲ ಸಂದಾಯ ಮಾಡಿಕೊಳ್ಳಬಹುದು ಇದಕ್ಕವರು ಮನಸ್ಸಿದ್ದರೆ ಒಪ್ಪಬಹುದು.

ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯ ಪ್ರಶ್ನೆಯನ್ನು ವಿಚಾರಿಸಬೇಕಾಗಿದೆ ಪೌರ್ವಾತ್ಯ ರಾಷ್ಟ್ರಗಳು ಆಧುನಿಕ ಕೈಗಾರಿಕೆ ಪ್ರಧಾನ ರಾಷ್ಟ್ರಗಳಾಗದೆ ಇಲ್ಲಿಯ ಆರ್ಥಿಕ ಅಭಿವೃದ್ಧಿ ಸಾಗಿಸುವುದು ಸಾಧ್ಯವಿಲ್ಲವೆಂಬ ಮೂಲ ತರ್ಕವು ಎಷ್ಟರ ಮಟ್ಟಿಗೆ ಸರಿ ಇರುತ್ತದೆಂಬುದನ್ನು ಪರಿಶೀಲಿಸುವುದು ಅಗತ್ಯ ಆಧುನಿಕ ಅರ್ಥಶಾಸ್ತ್ರಜ್ಞರೊಡನೆ ಯಾರೊಡನೆ ವಿಚಾರಿಸಿದರೂ ಈ ಮೂಲತರ್ಕವು ಸರ್ವಾನುಮತದಿಂದ ಸ್ವೀಕರಿಸಲ್ಪಡುವುದರಲ್ಲಿ ಸಂಶಯವಿಲ್ಲ ಆದುದರಿಂದ ಈ ಕುರಿತು ಉದಕಮಂಡಲದಲ್ಲಿ ಸೇರಿದ ಪರಿಷತ್ತಿನಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರುವಂತಿಲ್ಲ

ಪೌರ್ವಾತ್ಯ ರಾಷ್ಟ್ರಗಳು ಈ ರೀತಿ ಅಮೇರಿಕ ಮೊದಲಾದ ಭಂಡವಲಶಾಹೀ ರಾಷ್ಟ್ರಗಳೊಡನೆ ಸಹಾಯ ಬೇಡುವ ಈ ದೀನ ದೃಶ್ಯ ಖೇದಜನಕವಾಗುತ್ತದೆ ಮಹಾತ್ಮಾ ಗಾಂಧಿಯವರ ಮುಂದಾಳ್ತನದಲ್ಲಿ ಸ್ವಾತಂತ್ರ್ಯ ಪಡೆದ ಭಾರತವೂ ಇಂದು ಸ್ವಾವಲಂಬನದಲ್ಲಿ ವಿಶ್ವಾಸ ಕಳೆದುಕೊಂಡಿದೆಯೋ? ಈ ಆರ್ಥಿಕ ಪರಿಷತ್ತಿನ ಕುರಿತು ಗಾಂಧೀ ಅರ್ಥಶಾಸ್ತ್ರಜ್ಞರೆನಿಸುವ ಶ್ರೀ ಜ. ಸಿ. ಕುಮಾರಪ್ಪ ಮೊದಲಾದವರ ಏನೆನ್ನುತ್ತಾರೆ?

ಕೆಲವು ಮೂಲ ಕೈಗಾರಿಕೆಗಳನ್ನು ಇಲ್ಲಿಯೂ ಬೆಳೆಸದೆ ನಿವೃತ್ತಿ ಇಲ್ಲವೆಂಬ ಮಾತಿನಲ್ಲಿ ನಿಜಾಂಶವಿರಬಹುದು ಆದರೆ ಎಲ್ಲ ಆರ್ಥಿಕ ಪರಿಸ್ಥಿತಿ ಇದರ ಮೇಲೆಯೇ ಹೊಂದಿಕೊಂಡಿರುತ್ತದೆಂಬ ಮಾತು ಸರಿಯಲ್ಲ. ಪೌರ್ವಾತ್ಯ ಜನರು ಪಾಶ್ಚಾತ್ಯರ ದಾರಿಯಲ್ಲಿಯೇ ಮುಂದುವರಿಯಬೇಕೆಂಬ ಮೂಲತತ್ತ್ವ ಬಿಟ್ಟುಕೊಟ್ಟು ಸ್ವಾವಲಂಬನದಿಂದ ತಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಲೆತ್ನಿಸಿದರೆ ಎಷ್ಟೋ ಶ್ರೇಯಸ್ಸುಂಟೆಂದು ನಮಗನಿಸುತ್ತದೆ ದೊಡ್ಡ ಕೈಗಾರಿಕೆಗಳನ್ನು ನಾವೇ ಬೆಳೆಸಬಹುದು ಗ್ರೇಡಿಯವರು ವ್ಯಂಗವಾಗಿ ಮಾಡಿರುವ ಉಪದೇಶವನ್ನು ನಾವು ಸೀದಾ ಅರ್ಥದಲ್ಲಿ ತೆಗೆದುಕೊಂಡು ನಮ್ಮ ಕಾಲ ಮೇಲೆಯೇ ನಿಲ್ಲಲು ಯತ್ನಿಸಿದರೆ ಕ್ಷೇಮಕರ

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಕಮಿಶನ್

ಭದ್ರತಾ ಸಮಿತಿಯವರು ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕೆಂದು ಒಂದು ಕಮಿಶನ್ ನೇಮಿಸಿದ್ದರಷ್ಟೆ. ಇದರ ಕಾರ್ಯಕ್ರಮಕ್ಕೇನೆ ಭಾರತ ಸರಕಾರವು ಹಲವು ಆಕ್ಷೇಪಗಳನ್ನು ಹೇಳಿತ್ತು ಈಗ ಈ ಕಮಿಶನಿನ ಕಾರ್ಯಕಲಾಪಗಳನ್ನು ಇನ್ನಷ್ಟು ವಿಸ್ತರಿಸಲಾಗಿದೆ ಜುನಾಗಡ ಪ್ರಶ್ನೆ, ಹಿಂದೂ ಮುಸ್ಲಿಮ ಹತ್ಯಾಕಾಂಡ ಹಾಗೂ ಪಾಕಿಸ್ಥಾನದವರು ಹಿಂದುಸ್ಥಾನದ ಮೇಲೆ ಹೊರಿಸಿರುವ ಇತರ ಹಲವು ದೂರುಗಳ ವಿಚಾರವನ್ನು ಈ ಕಮಿಶನಿನವರು ವಿಚಾರಿಸಬೇಕೆಂದು ಭದ್ರತಾ ಸಮಿತಿ ನಿರ್ಣಯಿಸಿರುತ್ತದೆ ಕಾಶ್ಮೀರದಲ್ಲಿ ಪಾಕಿಸ್ಥಾನ ಸರಕಾರ ಧಾಳಿಗಾರರಿಗೆ ಸಹಾಯ ಮಾಡುವುದನ್ನು ನಿಲ್ಲಿಸಬೇಕೆಂದು ಭಾರತ ಸರಕಾರವು ಭದ್ರತಾಸಮಿತಿಗೆ ಕೊಟ್ಟ ದೂರಿಗೆ ಈ ರೀತಿ ಶುದ್ಧ ಅಧಿಕಪ್ರಸಂಗದ ಉತ್ತರ ಸಿಕ್ಕಿದಂತಾಯಿತು.

ಭಾರತ ಸರಕಾರದ ಕಡೆಯಿಂದ ನಮ್ಮ ಮುಖ್ಯ ಮಂತ್ರಿ ಪಂಡಿತ ಜವಾಹರ ಲಾಲರು ಭದ್ರತಾಸಮಿತಿಗೆ ಭಾರತದ ಆಕ್ಷೇಪಗಳಿಗೆ ಸರಿಯಾದ ವ್ಯವಸ್ಥೆ ಮಾಡದೆ ಕಮಿಶನ್ ಕೆಲಸ ಮುಂದರಿಸುವುದು ಸಾಧ್ಯವಿಲ್ಲವೆಂದು ಖಂಡಿತವಾಗಿ ತಿಳಿಸಿರುತ್ತಾರೆ. ಈ ಪತ್ರವನ್ನು ಕುರಿತು ಈಗ ಭದ್ರತಾಸಮಿತಿ ಆಲೋಚಿಸುತ್ತಿದೆ

ಇತ್ಯಂಡಗಳ ಒಪ್ಪಿಗೆ ಇಲ್ಲದಿದ್ದರೆ ತಾವು ಈ ಕಮಿಶನಿನಲ್ಲಿ ಕೆಲಸ ಮಾಡುವಂತಿಲ್ಲವೆಂದು ಆರ್ಜೆಂಟಿನ ಸರಕಾರದ ಪ್ರತಿನಿಧಿ ಮೊದಲೇ ಹೇಳಿರುತ್ತಾರೆ ಅಮೇರಿಕದ ಪ್ರತಿನಿಧಿಯಾದರೂ ಕಮಿಶನಿನವರು ಬಲಾತ್ಕಾರದಿಂದ ಕಾರ್ಯ ನಿರ್ವಹಿಸಲು ಹೋಗುವಂತಿಲ್ಲವೆಂದು ಹೇಳುತ್ತಿದ್ದಾರೆ. ಭಾರತ ಸರಕಾರವು ತನ್ನ ಧೋರಣೆಯನ್ನು ಬಲವತ್ತರವಾಗಿ ಮುಂದೊತ್ತಿದರೆ ಕಮಿಶನಿನಿಂದ ಹೆಚ್ಚಿನ ಹಾವಳಿ ಆಗಲಾರದು.

ಧಾಳಿಗಾರರನ್ನು ಹಿಂದೊತ್ತಿಸದೆ ಕಾಶ್ಮೀರದಿಂದ ನಮ್ಮ ಸೈನ್ಯಗಳು ಹಿಮ್ಮೆಟ್ಟುವಂತಿಲ್ಲವೆಂದು ಪಂಡಿತ ಜವಾಹರ ಲಾಲರು ಹೇಳುತ್ತಿರುವುದು ಮಾತ್ರವಲ್ಲ ಅದರಂತೆಯೇ ಈಗ ಕಾರ್ಯವೂ ನಡೆಯುತ್ತಿದೆ ಪಾಕಿಸ್ಥಾನದವರು ಧಾಳಿಕಾರರಿಗೆ ಬೇಕಾದ ಸಹಾಯ ಒದಗಿಸುವುದು ಕಡಮೆಯಾಗಿ ... ಬರುತ್ತಾಗುತ್ತಿದೆ

ಅಂತೂ ಈ ಪ್ರಶ್ನೆಯ ... ಭದ್ರತಾ ಸಮಿತಿ ತೀರ್ಮಾನ ... ಭಾರತ ಹಾಗೂ ಪಾಕಿಸ್ಥಾನ ಸರಕಾರಗಳು ತಮ್ಮೊಳಗೆ ತೀರ್ಮಾನ ಮಾಡಿಕೊಳ್ಳಬಹುದಿತ್ತು ಭದ್ರತಾಸಮಿತಿ ... ಕಷ್ಟತರವಾಗ ಮಾತ್ರ ... ದೆ

ಹೈದರಾಬಾದಿನಲ್ಲಿ ಜನಮತ ಗಣನೆಯೆ?

ಹೈದರಾಬಾದು ಸರಕಾರವು ಭಾರತ ಸರಕಾರದ ... ಸ್ವೀಕರಿಸ ... ಎಂಬ ಪ್ರಶ್ನೆ ಹೈದರಾಬಾದಿನ ಜನರ ಮತಗಣನೆಯಿಂದ ತೀರ್ಮಾನಿಸಲು ಹೈದರಾಬಾದು ಸರಕಾರವು ಒಪ್ಪಬಹುದೆಂದು ಇತೀಚಿನ ವಾರ್ತೆ ಹೇಳುತ್ತಿದೆ ಸ್ವಲ್ಪ ಸಮಯದ ಹಿಂದೆ ನೈಜಾಮ ಸರಕಾರಕ್ಕೆ ಈ ದಾರಿ ಎಷ್ಟಕ್ಕೂ ಒಪ್ಪಿಗೆ ಇರಲಿಲ್ಲ ಈಗ ಇವರು ಇದಕ್ಕೆ ಒಪ್ಪಬಹುದೆಂಬುದಕ್ಕೆ ಕಾರಣವಿರಬಹುದೆ? ರಜಾಕರರ ಬಲದಿಂದ ಜನಮತ ತಮಗೆ ಬೇಕಾದಂತೆ ತಿರುಗಿಸಲು ಸಾಧ್ಯವಾದೀತೆಂಬ ನಂಬಿಗೆ ಇದರ ಮೂಲದಲ್ಲಿರಬಹುದೆ?

ಜನಮತ ಗಣನೆಯಿಂದ ಈ ಪ್ರಶ್ನೆ ತೀರ್ಮಾನಿಸಬಹುದೆಂಬ ಸೂಚನೆ ನ್ಯಾಯವಾದದ್ದೇ ಇರುತ್ತದೆ ಆದರೆ ಈ ರೀತಿ ಜನಮತ ತೆಗೆಯುವಾಗ ಯಾವದೇ ರೀತಿಯ ಬಲಾತ್ಕಾರ ನಡೆಯದಂತೆ ಏರ್ಪಡಿಸುವುದು ಮಾತ್ರ ಅಗತ್ಯವಿರುತ್ತದೆ

ಪ್ರಾಂತ್ಯಾಭಿಮಾನ

ಪಂಡಿತ ಜವಾಹರಲಾಲರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಸಂಕುಚಿತ ಪ್ರಾಂತ್ಯಾಭಿಮಾನವು ದೇಶ

ಆಚಾರ್ಯ ಕೃಪಾಲಾನಿಯವರು ವಿಧಾಯಕ ಕಾರ್ಯಕರ್ತರ ಪರಿಷತ್ತೊಂದರಲ್ಲಿ ಭಾಷಣ ಮಾಡುತ್ತ ಇಂಥ ಕೆಲಸಗಾರರು ತಮ್ಮದೇ ಆದ ಸಂಘಟಿತ ಸಂಸ್ಥೆಯೊಂದನ್ನು ಸ್ಥಾಪಿಸಿಕೊಳ್ಳುವುದರ ಆವಶ್ಯಕತೆಯನ್ನು ಒತ್ತಿಹೇಳಿದರು. ಮಾತ್ರವಲ್ಲ ಈ ಬಗೆಯ ಸಂಸ್ಥೆಯು ರಾಜಕೀಯ ಕಾರ್ಯಕ್ಷೇತ್ರದಲ್ಲಿ ಕೈಹಾಕದೆ ದೂರ ನಿಲ್ಲಬೇಕೆಂದೂ ಹೇಳಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯಕರ್ತರ ಪರಿಷತ್ತನ್ನು ಏರ್ಪಡಿಸುವ ಸೂಚನೆಯು ಮುಂದೆ ಬಂದಾಗ ನಾವೂ ಇದೇ ಬಗೆಯ ಮಾತನ್ನು ಸಮರ್ಥಿಸಿ ಬರೆದಿದ್ದೆವು ಈ ಪ್ರಶ್ನೆಯ ಕುರಿತು ಇನ್ನಷ್ಟು ವಿವೇಚನೆ ನಡೆಯುವುದು ಅಗತ್ಯವಿರುತ್ತದೆ

ವಿಧಾಯಕ ಕಾರ್ಯದಲ್ಲಿ ಮಗ್ನರಾದ ಕೆಲಸಗಾರರು ಬಹಳ ಮಂದಿ ಇಲ್ಲ ಇದ್ದ ಕೆಲಸಗಾರರು ಒಟ್ಟು ಸೇರುವುದು ಮಾತ್ರವಲ್ಲ ತಮ್ಮ ಸಂಖ್ಯೆಯನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಸಿಕೊಳ್ಳುವುದು ಅಗತ್ಯವಿರುತ್ತದೆ ಸಾಕಷ್ಟು ಮಂದಿ ಕೆಲಸಗಾರರಿಲ್ಲದೆ ವಿಧಾಯಕ ಕಾರ್ಯಕ್ರಮ ಶಬ್ದಗಳಲ್ಲಿ ಮಾತ್ರ ಉಳಿಯುತ್ತಿದೆ ಹೀಗೆ ಕೆಲಸಗಾರರ ಸಂಖ್ಯೆ ಹೆಚ್ಚಿಸಿಕೊಂಡು ಈ ಕಾರ್ಯ ಮುಂದೊತ್ತಬೇಕಾದರೆ ಇವರದೇ

ಎಲ್ಲೆಲ್ಲ ಕಲೆಯುತ್ತಿರುವುದು ಶುಭ ಲಕ್ಷಣವಲ್ಲವೆಂದು ಸಾರಿರುತ್ತಾರೆ ಒಂದು ಪ್ರದೇಶವು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಾಯಿಸಲ್ಪಟ್ಟಾಕ್ಷಣ ಇದರ ಪರಿಸ್ಥಿತಿಯಲ್ಲಿ ಏನು ವ್ಯತ್ಯಾಸವಾಗುವುದೋ ತಾನರಿಯೆ ಎಂದರು ದೇಶದ ಮುಂದೆ ಹಲವು ಅತ್ಯವಸರದ ಪ್ರಶ್ನೆಗಳಿರುತ್ತ ಅವುಗಳ ಕಡೆಗೆ ಪೂರ್ಣ ಲಕ್ಷ್ಯಕೊಡುವುದು ಅತ್ಯಗತ್ಯವೆಂದೂ ಪ್ರಾಂತ್ಯಗಳ ಹೊಸ ರಚನೆಯ ಪ್ರಶ್ನೆಯನ್ನು ಸ್ವಲ್ಪ ಸಮಯಕ್ಕೆ ಮುಂದರಿಸಿದರೆ ಯಾವ ಬಾಧಕವೂ ಇಲ್ಲವೆಂದು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದರು

ನಮ್ಮ ಕರ್ನಾಟಕ ಪ್ರಾಂತ್ಯ ರಚನೆಯ ಧುರೀಣರು ಪಂಡಿತ ಜವಾಹರಲಾಲರ ಈ ಭಾಷಣವನ್ನು ಖಂಡಿಸಲು ಈಗಾಗಲೇ ಹಲವು ಸಾರ್ವಜನಿಕ ಸಭೆಗಳ ಏರ್ಪಾಡು ಮಾಡಿರಬೇಕು ಪ್ರಾಂತ್ಯರಚನೆಯನ್ನು ಮುಂದರಿಸಿದರೆ ಹೊಸ ಪ್ರಾಂತ್ಯಗಳಲ್ಲಿ ಮಂತ್ರಿ ಪದವಿಯ ಭಾರ ಹೊರಲು ಹೊರಟ ಹಲವರಿಗೆ ತೊಂದರೆಯಾಗುತ್ತಿದೆಯೆಂಬುದು ಪಂಡಿತ ಜವಾಹರಲಾಲರಿಗೆ ಹೇಗೆ ಗೊತ್ತಾದೀತು?

ಪ್ರಾಂತ್ಯಾಭಿಮಾನದ ಹೆಸರಲ್ಲಿ ಇತ್ತೀಚೆಗೆ ಮುಂದೆ ಬಂದವರಲ್ಲಿ ಬಂಗಾಳದ ಮುಂದಾಳು ಸತೀಶಚಂದ್ರ ಬೋಸರು ಒಬ್ಬರು. ಇವರಿಗೆ ಬಿಹಾರ ಪ್ರಾಂತ್ಯದಲ್ಲಿರುವ ಬಂಗಾಳಿ ಭಾಷೆಯಾಡುವ ಕೆಲವು ಜಿಲ್ಲೆಗಳನ್ನು ಪಶ್ಚಿಮ ಬಂಗಾಳ ಪ್ರಾಂತ್ಯಕ್ಕೆ ಸೇರಿಸುವ ವಿಷಯದಲ್ಲಿ ಹೊಸ ಹುರುಪು ಬಂದಿರುತ್ತದೆ ಇತ್ತೀಚೆಗೆ ಈ ಕುರಿತು ಒಂದು ಚಳವಳವನ್ನೇ ಇವರು ಹೂಡಿರುತ್ತಾರೆ.

ವಿಧಾಯಕ ಕಾರ್ಯಕರ್ತರು ಸಂಘಟಿತರಾಗಬೇಕು

ಒಂದು ಸಂಸ್ಥೆ ಅಗತ್ಯವೆಂಬುದರಲ್ಲಿ ಸಂಶಯವಿಲ್ಲ.

ಈ ಕೆಲಸಗಾರರ ಸಂಸ್ಥೆಯ ಸ್ವರೂಪ ಹೇಗಿರಬೇಕು? ಇದಕ್ಕೂ ರಾಜಕೀಯ ಕಾರ್ಯಕ್ಷೇತ್ರಕ್ಕೂ ಯಾವ ಸಂಬಂಧವಿರಬೇಕು? ಇವೇ ಎರಡು ಮುಖ್ಯ ಪ್ರಶ್ನೆಗಳನ್ನು ಪರಿಶೀಲಿಸಬೇಕಾಗಿದೆ

ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸ್ ಸಂಸ್ಥೆಯನ್ನು ಲೋಕಸೇವಾ ಸಂಘವನ್ನಾಗಿ ಮಾರ್ಪಡಿಸಲು ಕೆಲವು ಸೂಚನೆಗಳನ್ನು ಕೊಟ್ಟಿದ್ದರು ಕಾಂಗ್ರೆಸ್ ಸಂಸ್ಥೆಯು ಅವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಿಲ್ಲ ಕಾಂಗ್ರೆಸ್ ಸಂಸ್ಥೆಯು ಪ್ರಧಾನವಾಗಿ ರಾಜಕೀಯ ಕ್ಷೇತ್ರವನ್ನೇ ಕಟ್ಟಿಕೊಂಡಿತು ಮಹಾತ್ಮಾ ಗಾಂಧೀಯವರ ಸೂಚನೆಯನ್ನು ಪೂರ್ಣ ತೆಗೆದುಹಾಕಬಾರದೆಂಬ ದಾಕ್ಷಿಣ್ಯದ ಮೇಲೆ ಅವರ ಕೆಲವು ಸೂಚನೆಗಳನ್ನು ಇದರಲ್ಲಿ ಸೇರಿಸಿಕೊಳ್ಳಲಾಗಿದೆ ಆದರೆ ಕಾಂಗ್ರೆಸ್ ಸಂಸ್ಥೆಯಲ್ಲಿ ಈ ಸೂಚನೆಗಳಿಗೆ ಗೌಣಸ್ಥಾನ ಮಾತ್ರ ದೊರೆಯುವುದರಲ್ಲಿ ಸಂಶಯ ಕಾಣುವುದಿಲ್ಲ

ಈ ಪರಿಸ್ಥಿತಿಯಲ್ಲಿ ಗಾಂಧೀವಾದಿಗಳೆನ್ನಿಸುವ ವಿಧಾಯಕ ಕಾರ್ಯಕರ್ತರು ಏನು ಮಾಡಬಹುದು? ಮಹಾತ್ಮಾ ಗಾಂಧಿಯವರು ಸೂಚಿಸಿದಂಥ ಲೋಕಸೇವಾ ಸಂಘವೊಂದನ್ನು ತಾವೇ ಏರ್ಪಡಿಸಬಾರದೇಕೆ?

ಇಂಥ ಸಂಘವನ್ನು ತಾವು ಏರ್ಪಡಿಸಿಕೊಂಡಲ್ಲಿ ಕಾಂಗ್ರೆಸ್ ಸಂಸ್ಥೆಯೊಡನೆ ಸ್ಪರ್ಧಿಸಿದಂತಾದೀತೆ? ಎಂಬುದೊಂದು ಪಕ್ಷ ಈ ರೀತಿ ಸ್ಪರ್ಧೆಯ ಭಾವನೆಕ್ಕೆ ಎಡೆಕೊಡಬಾರದೆಂಬ ಬಗ್ಗೆ ಸಂಶಯವಿಲ್ಲ. ಇದನ್ನು ನಿವಾರಿಸಲು ಈ ಸಂಸ್ಥೆಯು ರಾಜಕೀಯ ಕಾರ್ಯಕ್ಷೇತ್ರದಲ್ಲಿ ಕೈಹಾಕಬಾರದೆಂಬ ನಿಯಮ ಇಟ್ಟುಕೊಳ್ಳದೆ ನಿವೃತ್ತಿ ಇಲ್ಲ

ಅಂದರೆ ಗಾಂಧೀವಾದಿಗಳಿಗೆ ತಮ್ಮದೇ ಆದ ರಾಜಕೀಯ ಅಭಿಪ್ರಾಯಗಳಿರಲಾಗದೆಂದು ಇದರ ಅಭಿಪ್ರಾಯವಲ್ಲ ರಾಜಕೀಯ ರಂಗದಲ್ಲಿ ಕೈಹಾಕಲಾಗದೆಂಬ ನಿಯಮ ತಾತ್ಕಾಲಿಕವಾಗಿ ಮಾತ್ರ ಇಟ್ಟುಕೊಳ್ಳಬಹುದು ಮತ್ತು ರಾಜಕೀಯ ರಂಗದ ಮಟ್ಟಿಗೆ ಈ ಸಂಸ್ಥೆ ಕಾಂಗ್ರೆಸಿಗೇನೇ ಬೆಂಬಲಕೊಡಬಹುದು ಕಾಂಗ್ರೆಸ್ ಸಂಸ್ಥೆಯು ತಮ್ಮ ಅಭಿಪ್ರಾಯಗಳಿಗೆ ತೀರ ವಿರುದ್ಧವಾಗಿ ವರ್ತಿಸುತ್ತದೆಯೆಂದು ಕಂಡುಬಂದಾಗ ಮಾತ್ರ ಇವರು ತಾವೇ ರಾಜಕೀಯರಂಗದಲ್ಲಿಯೂ ಕೈಹಾಕಬೇಕಾದ ಪ್ರಸಂಗ ಬರಬಹುದು. ಅಲ್ಲಿಯ ತನಕ ಕಾಂಗ್ರೆಸನ್ನೇ ಸಮರ್ಥಿಸಬೇಕು.

ವಿಧಾಯಕ ಕಾರ್ಯಕರ್ತರ ಸಂಘದವರು ತಾವಾಗಿ ಯಾವ ಚುನಾವಣೆಗಳಲ್ಲಿಯೂ ಸ್ಪರ್ಧಿಸಬಾರದು. ಕಾಂಗ್ರೆಸ್ ಉಮೇದ್ವಾರರನ್ನು ಸಮರ್ಥಿಸಬೇಕು. ಕಾಂಗ್ರೆಸ್ ಕಮಿಟಿಗಳ ಕಾರ್ಯಕರ್ತರಾಗಿಯೂ ಸೇರಬಾರದು. ತಮ್ಮ ಸಂಸ್ಥೆಯ ಉದ್ದೇಶಸಾಧನೆಯಲ್ಲಿಯೇ ಮಗ್ನರಾಗಿರಬೇಕು

ಇನ್ನು ಸಂಸ್ಥೆಯ ಸ್ವರೂಪ ಹೇಗಿರಬೇಕೆಂಬುದನ್ನು ನಿರ್ಣಯಿಸಲು ಹೆಚ್ಚು ಕಷ್ಟವಿಲ್ಲ ಮಹಾತ್ಮಾ ಗಾಂಧಿಯವರು ರೂಪಿಸಿಕೊಟ್ಟ ಲೋಕಸೇವಾ ಸಂಘಕ್ಕೆ ಹಾಕಿಕೊಟ್ಟ ನಿಯಮಗಳನ್ನು ಇವರು ಅನುಸರಿಸುವುದು ಅಗತ್ಯ ಮಹಾತ್ಮಾಜಿಯವರು ಈ ಘಟನೆಯನ್ನು ಒಂದು ಅಹಿಂಸಾತ್ಮಕ ಸೈನಿಕ ಘಟನೆಯನ್ನಾಗಿ ಕಲ್ಪಿಸಿದ್ದರು ದಕ್ಷತೆಯಿಂದ ಕೆಲಸ ಸಾಗಿಸಲು ಇದಕ್ಕೂ ಹೆಚ್ಚಿನ ಅಗತ್ಯವುಳ್ಳ ಘಟನೆಯನ್ನು ರೂಪಿಸುವುದು ಕಷ್ಟ

ಪ್ರತಿಯೊಂದು ಗ್ರಾಮದಲ್ಲಿ ಐದು ಮಂದಿ ಕೆಲಸಗಾರರನ್ನು ಒಟ್ಟು ಗೂಡಿಸಬೇಕು ಇಂಥ ಎರಡು ಗ್ರಾಮದ ಕೆಲಸಗಾರರು ಒಟ್ಟು ಸೇರಿ ಒಬ್ಬ ನಾಯಕನನ್ನು ಆರಿಸಬೇಕು ಆಯಾ ತಾಲೂಕಿನಲ್ಲಿ ಈ ರೀತಿ ಗ್ರಾಮಗಳ ನಾಯಕರಾಗಿ ಆರಿಸಲ್ಪಟ್ಟವರು ಸೇರಿ ತಾಲೂಕಿನ ನಾಯಕರನ್ನು ಆರಿಸಬಹುದು ಇದೇ ರೀತಿ ಜಿಲ್ಲೆಗೊಬ್ಬ ನಾಯಕರನ್ನು ಆರಿಸಬಹುದು. ಅಗತ್ಯ ಕಂಡಲ್ಲಿ ಆಯಾ ರೆವೆನ್ಯೂ ಫಿರ್ಕಾದವರು ಸೇರಿ ತಮಗೊಬ್ಬ ನಾಯಕನನ್ನು ಆರಿಸಿಕೊಳ್ಳಬಹುದು.

ಪ್ರತಿಗ್ರಾಮ, ರೆವೆನ್ಯೂ ಫಿರ್ಕಾ ಹಾಗೂ ತಾಲೂಕಿನಲ್ಲಿ ಈ ರೀತಿ ವ್ಯವಸ್ಥೆಯನ್ನು ಏರ್ಪಡಿಸಿ ಶಿಸ್ತಿನಿಂದ ಕಾರ್ಯವನ್ನು ಮುಂದೊತ್ತಲು ಪ್ರಯತ್ನಿಸಿದರೆ ಸುಂದರ ಸಾಧಿಸಲು ಈಗ ಆಸ್ಪದವಿರುತ್ತದೆ

ಕಾಂಗ್ರೆಸ್ ಸಂಸ್ಥೆಯನ್ನು ರಾಜಕೀಯರಂಗದಲ್ಲಿ ಸಮರ್ಥಿಸುವುದನ್ನು ತಮ್ಮ ಉದ್ದೇಶಗಳಲ್ಲಿಟ್ಟುಕೊಳ್ಳುವುದರಿಂದ ಇಂಥ ಸಂಸ್ಥೆಗೆ ಸಾಕಷ್ಟು ಕಾಂಗ್ರೆಸ್ ಸರಕಾರಗಳ ಬೆಂಬಲವೂ ಸಿಕ್ಕಲು ಆಸ್ಪದವುಂಟು ಮಾತ್ರವಲ್ಲ ವಿಧಾಯಕ ಕಾರ್ಯಗಳನ್ನು ಸರಿಯಾಗಿ ನಡೆಸುತ್ತ ಬಂದರೆ ಈಗ ಮಹಾತ್ಮಾ ಗಾಂಧೀ ಸ್ಮಾರಕ ನಿಧಿಯೆಂದು ಕೂಡಿಸಲಾಗುವ ನಿಧಿಯ ಉದ್ದೇಶವೇ ವಿಧಾಯಕ ಕಾರ್ಯ ಮುಂದೊತ್ತುವುದೆಂದಿರುವುದರಿಂದ ಆ ನಿಧಿಯ ಸಹಾಯವೂ ಈ ಸಂಸ್ಥೆಗೆ ಸಿಕ್ಕಬಹುದು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಧಾಯಕ ಕಾರ್ಯದಲ್ಲಿ ನಿರತರಾದವರ ಸಂಖ್ಯೆ ಬೆರಳಲ್ಲಿ ಎಣಿಸುವಷ್ಟು ಮಾತ್ರ ಇದೆಯೆಂಬುದು ನಿಜವಿರುತ್ತದೆ ಆದರೆ ಇಲ್ಲಿಯೂ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿದೆ ಇವರೆಲ್ಲ ಈಗ ಯಾವ ಸಾರ್ವಜನಿಕ ಕಾರ್ಯಗಳಲ್ಲಿಯೂ ದುಡಿಯದೆ ಚದರಿರುವ ಪರಿಸ್ಥಿತಿ ಇರುತ್ತದೆ ಇಂಥವರೆಲ್ಲ ಒಟ್ಟು ಸೇರಿ ಈ ಪ್ರಶ್ನೆಯನ್ನು ಪರಿಶೀಲಿಸಿ ಸಾಧ್ಯವಿದ್ದವರು ಈ ಹೊಸ ಸಂಸ್ಥೆಯ ರಚನೆಯ ಕಡೆಗೆ ಮನಸ್ಸು ಕೊಟ್ಟರೆ ತುಂಬಾ ಪ್ರಯೋಜನವಾಗಬಹುದು.

ಕಿರುಸುದ್ದಿ ಸಂಗ್ರಹ

ಲೆನಿನ್ ಗ್ರೇಡ್ ವೈದ್ಯಕೀಯ ಪರಿಶೋಧನಾಲಯದ ಡಾ| ನೀಮಾರ್ಕ್ ಅವರು ಹೊಟ್ಟೆಯೊಳಗಿನ ಕೆನ್ಸರ್ ವ್ಯಾಧಿಯನ್ನು ದಿನಕ್ಕೆ 22 ಗಂಟೆಗಳ ತನಕ ನಿದಿಸುವುದರ ಮೂಲಕ ಗುಣಪಡಿಸಬಹುದೆಂದು ತಿಳಿಸುತ್ತಾರೆ.

✠

ದಿಲ್ಲಿಯ ಆಸುಪಾಸಿನ ಖಾಲಿ ರೈಲ್ವೆ ಗಾಡಿಗಳನ್ನು ನಿರಾಶ್ರಿತರು ಮನೆಯಾಗಿ ಆಕ್ರಮಿಸಿದರ ಪರಿಣಾಮವಾಗಿ ಸದ್ಯಕ್ಕೆ ಹೆಚ್ಚು ರೈಲುಗಾಡಿಗಳು ಚಲಾವಣೆಗೆ ಸಿಗದಂತಾಗಿದೆ ಈಚೆಗೆ ಈ ರೈಲು ಮನೆಗಳಲ್ಲಿ ಹನ್ನೆರಡು ಶಿಶುಗಳೂ ಜನಿಸಿದ್ದು ಮೂವರು ವೃದ್ಧ ವ್ಯಕ್ತಿಗಳು ಮಡಿದಿದ್ದಾರೆಂದು ರೈಲ್ವೆ ಮಂತ್ರಿ ಡಾ| ಜಾನ್ ಮಥಾಯಿಯವರು ತಿಳಿಸಿರುವರು.

✠

ಹದಿನೇಳನೆ ಶತಮಾನದಲ್ಲಿ 25 ಲಕ್ಷ ಪವನು ಪವಿತ್ರ್ಯದ ಬಂಗಾರವನ್ನು ಒಯ್ಯುತ್ತಿದ್ದ ಒಂದು ಸ್ಪೈನ್ ದೇಶದ ಹಡಗು ಭೂಮಧ್ಯ ಸಮುದ್ರದಲ್ಲಿ ಮುಳುಗಿದ್ದು ಈಗ ದನ್ನು ಮೂವರು ಅಮೇರಿಕನ್ ಸಂಪತ್ ಶೋಧಕರು ಪತ್ತೆ ಹಚ್ಚಿರುವರು

✠

ಗಂಗಾನದೀ ತೀರದಲ್ಲೊಂದು ಕಡೆ ಓರ್ವ ಸಾಧುವು ತಪಸ್ಸು ಮಾಡುತ್ತಿರುವನು ತನ್ನ ಸುತ್ತು ಭಾರತದ ಮಾತೆಯ ಚಿತ್ರಗಳನ್ನಿರಿಸಿ ವಿಭಾಗಿತವಾದ ಭಾರತವು ಪುನಃ ಒಂದುಗೂಡುವಂತೆ ಅವನು ಈ ಸಿದ್ಧಿಯನ್ನು ಕೈಕೊಂಡಿರುವನಂತೆ ಅವನು ಬೆಳಗಿಂದ ಸಾಯಂಕಾಲ ತನಕ ಇಂದಿಗೆ ಮೂರು ತಿಂಗಳಿಂದ ಧ್ಯಾನಾಸಕ್ತನಾಗಿರುತ್ತಾನೆ

✠

ಗಂಟೆಗೆ 500 ಮೈಲು ವೇಗದಲ್ಲಿ ಓಡುವ ಯುದ್ಧ ವಿಮಾನವೊಂದ ಯುದ್ಧ ಸಂದರ್ಭದಲ್ಲಿ ಸಿದ್ಧವಿದೆಯೆಂದು ಅಮೇರಿಕದ ನೌಕಾಧಿಕಾರಿಗಳು ತಿಳಿಸುತ್ತಾರೆ ಇವುಗಳಲ್ಲಿನ ಬಂದೂಕುಗಳು ಇಷ್ಟೇ ವೇಗದಲ್ಲಿ ಓಡುವ ವಿಮಾನಗಳನ್ನು ಹೊಡೆಯುವಂತವುಗಳಾಗಿವೆಯಂತೆ

✠

ತಿಕೇಟಿಲ್ಲದೆ ಪ್ರಯಾಣ ಮಾಡುವವರಿಗೆ ಜುಲ್ಮಾನೆ ಮಾಡುವ ಬಿ ಬಿ ಸಿ ಐ ರೈಲ್ವೆಯ ಮೆಜಿಸ್ಟ್ರೇಟನ ಎದುರಿಗೆ ಅವನ ಹೆಂಡತಿಯೇ ಆರೋಪಿಯಾಗಿ ನಿಲ್ಲಿಸಲ್ಪಟ್ಟಳು ಮೆಜಿಸ್ಟ್ರೇಟನು ಪತ್ನಿಗೆ ರೂ 210 ಜುಲ್ಮಾನೆ ವಿಧಿಸಿ ಕೋರ್ಟಿನಲ್ಲದನ್ನು ತಾನೇ ಕೊಟ್ಟು ಬಿಟ್ಟನು

✠

ಬರುವ ಬೇಸಗೆಯಲ್ಲಿ 25 ಸಾವಿರ ಅಮೇರಿಕನ್ ತರುಣ ವಿದ್ಯಾರ್ಥಿಗಳು ಉತ್ತರ ಮತ್ತು ದಕ್ಷಿಣ ಅಮೇರಿಕದ ಪ್ರಮುಖ ದೇಶಗಳ ಸ್ಯಾಕಲ್ ಸಂಚಾರವನ್ನು ಮಾಡುವರು ಇಂತಹ ಸಂಚಾರದಿಂದ ಶೈಕ್ಷಣಿಕ ಅನುಭವ ಹೆಚ್ಚಾಗುತ್ತವೆಂಬ ಪ್ರಚಾರವೇ ಇದಕ್ಕೆ ಕಾರಣ

★

ಡಾಕ್ಕಾದಲ್ಲಿದ್ದ 13 ಸಿನೇಮಾ ಗೃಹಗಳೂ ಮುಚ್ಚಲ್ಪಟ್ಟವೆ ಕಾರಣ: ಫಿಲ್ಮುಗಳಿಲ್ಲ.

★

ಜಿಲ್ಲಾ ಸಮಾಚಾರ

ಮುನ್ಸಿಪಾಲ್ ಗರ್ಲ್ಸ್ ಸ್ಕೂಲಿನ ಪರಿವರ್ತನೆ

ಈ ಶಾಲೆಯನ್ನು ಮುನಿಸಿಪಾಲಿಟಿಯವರು ಮುಸ್ಲಿಂ ಬಾಲಿಕೆಯರ ಬಗ್ಗೆ (ರಥಬೀದಿಯ ಹಳೆ ತಾಲೂಕು ಕಟ್ಟಡದಲ್ಲಿ) ನಡೆಸುತಿದ್ದರು. ಆದರೆ ಹಾಜರಿಯು ಶಾಲೆಯ ಅಸ್ತಿತ್ವದ ಅರ್ಹತೆ ತೋರಲಿಲ್ಲ. ಕೊನೆಗೆ ಕೆಲ ತಿಂಗಳ ಹಿಂದೆ ಕೂಡಿದ ಒಂದು ಸಭೆಯಲ್ಲಿ ತೀರ್ಮಾನವಾದಂತೆ ಇದನ್ನೀಗ ಈ ವರ್ಷದಿಂದ ಎಲ್ಲಾ ಜಾತಿಯ ಬಾಲಿಕೆಯರಿಗಾಗಿ ತೆರೆಯಲಾಗಿದೆ. ಶಾಲಾ ಫೀ ನಾಮಮಾತ್ರವಾದುದು. ಆಟಗಳ ಬಗ್ಗೆ ಇರುವ ಫೀಯೂ ಅತಿ ಕಡಿಮೆ. ಒಂದರಿಂದ ಮೂರನೆ ಫೋರ್ಮ್ ವರೆಗೆ ಹಿಂದುಳಿದ ವಿದ್ಯಾರ್ಥಿನಿಯರಿಗೆ ಸಂಬಳವಿಲ್ಲ.

ಮಂತ್ರಿಗಳಲ್ಲಿ ಮನವಿ

ನಮ್ಮ ಆಧಿಪತ್ಯದ ಕೃಷಿ ಇಲಾಖೆಯ ಮಾನ್ಯ ಮಂತ್ರಿ ಶ್ರೀ ಮಾಧವ ಮೆನೊನರು ಈಚೆಗೆ ಮಂಗಳೂರಿಗೆ ಬಂದಿದ್ದಾಗ ಇಡ್ಯ ಮತ್ತು ಸುರತ್ಕಲ್ ಗ್ರಾಮ ವಾಸಿಗಳು 'ಪ್ರಾಣಿಬಲಿಯ ನಿಷೇದಾರ್ಥ'ವಾದ ಒಂದು ಮನವಿಯನ್ನು ಅವರ ಸಮಕ್ಷಮ ನಿರೂಪಿಸಿದರು. ಇದರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಸ್ವರ್ಗವಾಸಿ ಮಹಾತ್ಮಾಜಿಯವರ ಗೌರವಾರ್ಥವಾಗಿ ಸುರತ್ಕಲ್ ನಿವಾಸಿಗಳು ಎಷ್ಟೋ ವರ್ಷಗಳಿಂದ ಮಾರಿಗುಡಿಯಲ್ಲಿ ನಡೆದುಬರುತ್ತಿರುವ 'ಪ್ರಾಣಿಬಲಿ'ಯನ್ನು ನಿಲ್ಲಿಸಬೇಕೆಂದು ಹೇಗೆ ತವಕಗೊಂಡಿದ್ದರು, ಆ ಸಂಬಂಧ ಅಲ್ಲಿ ಜಿಲ್ಲಾ ಕೊಂಗ್ರೆಸಿನ ಆಶ್ರಯದಲ್ಲಿ ಜರಗಿದ ಒಂದು ಸಭೆಯಲ್ಲಿ ಮಹಾತ್ಮರ ಸ್ಮರಣೆಗಾಗಿ ಅವರು ಅಹಿಂಸಾವ್ರತವನ್ನು ಪಾಲಿಸಲು ಹೇಗೆ ಪ್ರತಿಜ್ಞೆಮಾಡಿದ್ದರು, ಸ್ಥಳೀಯ ಸಬ್ ಮೆಜಿಸ್ಟ್ರೇಟರು ಆಗಾಗ ಗಳಿಗನೇ ಪ್ರಕರಣವನ್ನು ಹಾಜರಿಮಾಡಿ ಕೋಣವಧೆಯಂತಹ ಕಿರಾತವಧೆ ಕಾರ್ಯಕ್ಕೆ ಹೇಗೆ ಅನ್ನಿಯೆಯೆಂಟಾಗಿತ್ತು ಎಂಬಿತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಿ ಆ ಪೂಜೆ ಇನ್ನೂ ನಡೆದಿಲ್ಲವಾದರೂ ಕೋಣಗಳನ್ನು ವಧಿಸಲು ದಿವಸ ನಿಶ್ಚೈಸಿ ಅದರಿಂದ ಸಾರ್ವಜನಿಕ ಶಾಂತಿಗೆ ಭಂಗ ತರುವುದಲ್ಲದೆ ಜನತೆಯ ಮನಸ್ಸನ್ನು ನೋಯಿಸಬಹುದೆಂದೂ ವಿಷದೀಕರಿಸಿದ ಸಂದರ್ಭದಲ್ಲಿ ಸರಕಾರದವರು ಒಂದು ಕಾನೂನು ಮೂಲಕ ಪೂಜಾಸ್ಥಳಗಳಲ್ಲಿ ಪ್ರಾಣಿವಧೆಯಾಗುವುದನ್ನು ನಿಲ್ಲಿಸುವುದೊಂದೇ ಉಪಾಯವೆಂದು ಆಗಲೇ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ಈ ಸಂಬಂಧ ಮಸೂದೆಯನ್ನು ಸರಕಾರದವರು ಆದರಿಸಿದಲ್ಲಿ ಇನ್ನೆರಡು ತಿಂಗಳಲ್ಲಿ ಅದು ಕಾನೂನಾಗಲು ಅಡ್ಡಿಯಿಲ್ಲವಾಗಿ ತಾವು ನಂಬುತ್ತೇವೆಂದು ನಮೂದಿಸಲಾಗಿದೆ. ಅಷ್ಟೇ ಅಲ್ಲ, ಕೃಷಿ ಶಾಖೆ ಮಾನ್ಯ ಮಂತ್ರಿಗಳು (ಶ್ರೀ ಮೆನೊನರೇ ಸ್ವತಃ) ಈ ಪ್ರಾಂತ್ಯದಲ್ಲಿ 'ಗೋವಧೆ' ನಿಲ್ಲಿಸಬೇಕೆಂಬ ಒಂದು ಮಸೂದೆಯನ್ನು ಮುಂದೆ ತರದಿರುವಾಗ ಕೃಷಿಗೆ ಅಗತ್ಯವಿರುವ ಕೋಣಗಳನ್ನು ವಧಿಸದಂತೆ ಇನ್ನೂ ಒಂದು ಬಿಲ್ಲನ್ನು ಇದೇ ಮಂತ್ರಿಗಳು ಎಸೆಂಬ್ಲಿಯ ಬರುವ ಅಧಿವೇಶನದಲ್ಲಿ ತಪ್ಪದೆ ಮಂಡಿಸುವಂತೆಯೂ ಅದರಲ್ಲಿ ಹಾರೈಸಲಾಗಿದೆ. (ಇದಕ್ಕೆ ಹಲವಾರು ಗ್ರಾಮಸ್ಥರ ಸಹಿಗಳಿವೆ.)

ದೊಡ್ಡ ಬಂದರಾಗಲು ಮಂಗಳೂರಿನ ಅರ್ಹತೆ

ಪಶ್ಚಿಮ ಕರಾವಳಿಯಲ್ಲೊಂದು ಪ್ರಬುದ್ಧ ಬಂದರ ನಿರ್ಮಾಣದ ಸಂಬಂಧವಾಗಿ ಇಂಡಿಯಾ ಸರಕಾರದಿಂದ ನೆಯಮಿಸಲ್ಪಟ್ಟ ಆ ಸಮಿತಿಯ ಮೆಂಬರರಾದ ಮಿ। ಮರ್ರಿ ಶ್ರೀ। ಮಿತ್ತರ್ ಮತ್ತು ಎಂ. ಎಂಡ್. ಎಸ್. ಎಮ್. ರೈಲ್ವೆಯ ಚೀಫ್ ಕಮ್ಮರ್ಶಿಯಲ್ ಮೆನೇಜರ್ ಮಿ। ಆರ್ ಜೆ ಜೆ ಪೆರಿ ಅವರು ಮದ್ರಾಸಿನಲ್ಲಿ ಮಂತ್ರಿ ಕಛೇರಿಯಲ್ಲಿ ಸಾರ್ವಜನಿಕ ಕಾಮಗಾರಿ ಖಾತೆಯ ಮಂತ್ರಿ ಶ್ರೀ ಭಕ್ತವತ್ಸಲಂ ಅವರನ್ನು ಕಂಡು ಮಾತನಾಡಿದರು. ಈ ಸದಸ್ಯರುಗಳು ಪಶ್ಚಿಮ ಕರಾವಳಿಯ ಬಂದರುಗಳನ್ನು ಸಂದರ್ಶಿಸಿ ಮದ್ರಾಸಿಗೆ ಬಂದಿದ್ದರು.

ಮೈಸೂರು ಸರಕಾರದವರು ಭಟ್ಕಳವನ್ನು ಪ್ರಬುದ್ಧ ಬಂದರವನ್ನಾಗಿ ಮಾರ್ಪಡಿಸಲು ಅಪೇಕ್ಷಿಸುತ್ತಿರುವಾಗ ಮದ್ರಾಸ್ ಸರಕಾರ ಮಲ್ಪೆ ಅಥವಾ ಅದಕ್ಕಿಂತಲೂ ಆಗಲೆ ಕೆಲ ಮಟ್ಟಿಗೆ ಪ್ರಬುದ್ಧ ಬಂದರು ಎನ್ನಿಸಿರುವ ಮಂಗಳೂರು ಮತ್ತು ಸುತ್ತುಮುತ್ತಲಿನ ಎಲ್ಲ ಪ್ರದೇಶಗಳ ಅವಶ್ಯಕತೆಗಳನ್ನು ಪೂರೈಸಬಲ್ಲ ಸರ್ವ ಪ್ರಕಾರದಿಂದಲೂ ಈ ಉದ್ದೇಶಕ್ಕೆ ಯೋಗ್ಯವೆನಿಸಿದ ಸ್ಥಳವೆಂದು ಅಭಿಪ್ರಾಯಪಟ್ಟಿರುವರೆಂದು ತಿಳಿದು ಬಂದಿದೆ.

ಸ್ಥಳೀಕ ರಾಜಕೀಯ

ನಮ್ಮ ಜಿಲ್ಲಾ ಕೊಂಗ್ರೆಸಿನಲ್ಲಿ ವಿಶೇಷ ಪ್ರಕರಣವೊಂದು ನಡೆದಿದೆಯೆಂದು ತೋರುತ್ತದೆ. ಇದರ ವಾರ್ಷಿಕ ಸಾಮಾನ್ಯ ಸಭೆಯೊಂದು ಕಳೆದ ತಾ ೩೧ ೫-೪೮ರಂದು ಸೇರಿತ್ತು. ಸುಮಾರು ೬೨ ಸದಸ್ಯರಲ್ಲಿ ಕೇವಲ ೧೮ ಮಂದಿ ಅಂದು ಹಾಜರಿದ್ದರು. ಹೊಸ ವರ್ಷದ ಕಾರ್ಯಕರ್ತರ ಚುನಾವಣೆಯೂ ಅಲ್ಲಿ ನಡದು ಶ್ರೀ ದಾಮೋದರ ಬಾಳಿಗರು ಅಧ್ಯಕ್ಷರಾಗಿ ಬಹುಮತದಿಂದ ಚುನಾಯಿಸಲ್ಪಟ್ಟರಂತೆ. ಅಲ್ಲದೆ ಶ್ರೀಗಳಾದ ಕೆ ಈಶ್ವರ ಮತ್ತು ಹಾಜೀಹಸನ್ ಹಕೀಮ್ ಇವರು ಉಪಾಧ್ಯಕ್ಷರಾಗಿಯೂ, ಪಿ ಶ್ರೀನಿವಾಸ ರಾವ್ ಮತ್ತು ಬಿ ಸುಬ್ಬಣ್ಣ ಶೆಟ್ಟಿ ಇವರು ಜತೆಕಾರ್ಯದರ್ಶಿಗಳಾದರು. ಜಿ ಮಾಧವ ಪೈ ಎಂಬವರು ಕೋಶಾಧ್ಯಕ್ಷರು. ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ೪ ಸ್ಥಾನಗಳಿಗೆ ಶ್ರೀಗಳಾದ ಕೆ ಈಶ್ವರ, ಕೆ ಪದ್ಮನಾಭ ಶೆಣ್ಯೆ, ಜಿ ಮಾಧವ ಪೈ ಮತ್ತು ಬಿ ಸುಬ್ಬಣ್ಣ ಶೆಟ್ಟಿ ಇವರು ಚುನಾಯಿತರಾದರು. ಇಷ್ಟಾದರೂ ಇವರ ನಿಯೋಜಿತ ಹುದ್ದೆಗಳ ಲೆಕ್ಕಪತ್ರವಾಗಲಿ, ಖಜಾನೆ ದಪ್ತರುಗಳಾಗಲಿ ಇವರ ಕೈಗೆ ಬರದಂತಹ ಒಂದು ಪರಿಸ್ಥಿತಿ ಉತ್ಪನ್ನವಾಯಿತು. ಮಾಜಿ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟರು ಬೇರೊಂದು ಸಭೆಗಾಗಿ ನೋಟೀಸು ಕೊಟ್ಟರಂತೆ. ಅದು ತಾರೀಕು ೭-೬ ೪೮ರಂದು ಜರಗಿತು. ಇಲ್ಲಿಗೂ ಈ ಪ್ರಕರಣ ಮುಗಿಯದೆ ಪ್ರಾಂತಿಕ ಕಮಿಟಿಗೆ ಆರೋಪ ಪ್ರತಿ ಆರೋಪಗಳು ಹೋದುವೆಂದೂ, ಅಲ್ಲಿಂದ 'ಆ ಎರಡು ಸಭೆಗಳೂ ಕ್ರಮಬದ್ಧವಲ್ಲ, ಪುನಃ ಚುನಾವಣೆಗಳು ಬೇಕು' ಎಂಬ ನಿರ್ದೇಶ ಬಂದಿರುವುದೆಂದೂ ಸುದ್ದಿಯಿದೆ. ಈ ಮಧ್ಯದಲ್ಲಿ ಕೆಲ ಸ್ಥಳೀಕ ಪತ್ರಿಕೆಗಳಲ್ಲಿ ಈ ಕುರಿತು ಹಲವು ಪತ್ರವ್ಯವಹಾರಗಳೂ ಪ್ರಕಟವಾಗಿವೆ. ಹೇಗಾದರೂ ಜಿಲ್ಲಾ ಕಾಂಗ್ರೆಸು ಚಟುವಟಿಕೆಯ ಚಿಹ್ನ ತೋರಿದ್ದು ಹಲವರಲ್ಲಿ ಅದರ ಕುರಿತು ಆಶಾದಾಯಕ ನಿರೀಕ್ಷೆಯನ್ನು ಹುಟ್ಟಿಸಿದೆಯೆಂದು ಹೇಳಲ್ಪಡುತ್ತದೆ.

ಕಮ್ಯುನಿಸ್ಟರೂ ಸೋಶಲಿಸ್ಟರೂ

ಇನ್ನೊಂದು ಪ್ರಕರಣ. ಕೆಲ ದಿನಗಳ ಶ್ರೀ ಪಿ ಉಪಾಧ್ಯಾಯ ಎಂಬವರೊಬ್ಬರನ್ನು ನಾವಂಜೆ ಬಳಿ ಮೋಟರಿನಲ್ಲಿ ಪ್ರಯಾಣ ಮಾಡುತ್ತಿರುವಾಗ ಕಮ್ಯುನಿಸ್ಟರೆಂಬ ಸಂದೇಹದ ಮೇಲೆ ಪೋಲಿಸರು ಕೈದುಮಾಡಿದರಂತೆ. ನಾನು ಕಮ್ಯುನಿಸ್ಟನಲ್ಲ, ಸೋಶಲಿಸ್ಟ್ ಕಾರ್ಯಕರ್ತ ಎಂದು ಕೈದಿ ಆಶ್ವಾಸನೆ ಕೊಟ್ಟ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು. ಇಲ್ಲಿನ ಸೋಶಲಿಸ್ಟ ವರ್ಗಗಳಲ್ಲಿ ವಿಚಾರಿಸಿದರೆ ಶ್ರೀ ಉಪಾಧ್ಯಾಯರ ಸೋಶಲಿಸ್ಟರೂ ಅಲ್ಲವೆಂದು ಹೇಳಲಾಗುತ್ತದೆಯಂತೆ. ಮುಂಬಾಯಿ ಮುತ್ತ ಹೋಗಿರುವರೆಂದು ಊಹಿಸಲಾದ ಶ್ರೀ ಉಪಾಧ್ಯಾಯರ ನಿರ್ದಿಷ್ಟ ರಾಜಕೀಯ ವರ್ಗೀಕರಣ ಇನ್ನೂ ಆಗಬೇಕಾಗಿದೆ.

ಶಾಲೆಗಳಲ್ಲಿ ಶಿಫ್ಟ್ ಪದ್ಧತಿ

ಸ್ಥಳೀಕ ಕೆನರಾ ಹೈಸ್ಕೂಲಿನ ಮೈನ್ ಶಾಲೆಯಲ್ಲಿ ಈ ಕ್ರಮವನ್ನಾರಂಭಿಸಿ ಸುಮಾರು ಎರಡು ವಾರಗಳಾದುವು. ಇದರಿಂದ ದೂರ ಪ್ರದೇಶದಲ್ಲಿ ಮನೆಯಿದ್ದು, ರೈಲಿನಲ್ಲಿ ಬರುತಿದ್ದ, ಮತ್ತು ಅತೀ ಬಡವರಿಗೆ ಸ್ವಲ್ಪ ಅನಾನುಕೂಲವಾಗಿದೆಯೆಂದು ಹೇಳಲಾಗುತ್ತಿದೆ. ಮುಖ್ಯವಾಗಿ ಈ ಅನಾನುಕೂಲ ಬೆಳಿಗ್ಗಿನ ಹೊತ್ತು ಎಂದನ್ನಲಾಗಿದೆ. ಬೆಳಿಗ್ಗಿನ ಹೊತ್ತು ಬರುವವರು ೬ ಗಂಟೆಯೊಳಗೆ ಉಪಹಾರ ಮಾಡಿ ಬಂದರೆ ಮತ್ತೆ ೧೦ರಿಂದ ೧೧ ಗಂಟೆ ತನಕ ಗಂಜಿ ಊಟಕ್ಕೆ ಬಿಡುವಿದೆ. ನಂತರ ಮಧ್ಯಾಹ್ನ ಊಟಕ್ಕೆ ಸರಿಯಾಗಿ ಶಾಲೆ ಬಿಡುತ್ತದೆ. ಹೈಸ್ಕೂಲಿಗೆ ಮಕ್ಕಳನ್ನು ಕಳುಹಿಸುವವರಲ್ಲಿ ತೀರ ಬಡವರು ಅತ್ಯಲ್ಪ ಮಂದಿ. ಉಳಿದವರು ಸ್ವಲ್ಪ ಕಾಲ ವ್ಯವಸ್ಥೀಕರಣದಿಂದ ತಮ್ಮ ಮಕ್ಕಳ ಊಟತಿಂಡಿಯ ಸಮಯವನ್ನು ಸರಿಪಡಿಸಿಕೊಳ್ಳಬಹುದು. ಅತೀ ದೂರದ ಪ್ರದೇಶದಿಂದ ಬರುವವರಿಗೆ ಶಿಫ್ಟ್ ಕ್ರಮದ ಮೊದಲೂ ಅನಾನುಕೂಲತೆಗಳಿದ್ದವೆಂಬ ಸಂಗತಿಯಿಂದ ಈ ಕುರಿತಾದ ಆಕ್ಷೇಪವು ಕೇವಲ ಕಾಲ್ಪನಿಕವೆನ್ನಬಹುದು. ರೈಲಿನಲ್ಲಿ ಬರುತ್ತಿದ್ದವರಿಗೆ ಈ ವರೆಗೆ ಅನುಕೂಲಗಳಿದ್ದವು. ಆಗ ಕೇವಲ ಏಳೆಂಟು ಮೈಲು ದೂರದಲ್ಲಿನ ಪಣಂಬೂರು, ಕೂಳೂರು ಮೊದಲಾದ ಕಡೆಯವರು ಇಲ್ಲೇ ಬಂದಿದ್ದು ಕಲಿಯುತಿದ್ದರು. ಈ ದೃಷ್ಟಿಯಿಂದ ಮರುದಿನ ಇಲ್ಲಿ ನಿಲ್ಲಬೇಕಾದ ಪ್ರಸಂಗ ಬರುವ ರೈಲಿನ ಹುಡುಗರ ಹೆತ್ತವರು ಹೆಚ್ಚು ನಿರುತ್ಸಾಹರಾಗಬೇಕಾಗಿಲ್ಲ. ಒಟ್ಟಿನಲ್ಲಿ ಶಿಫ್ಟ್ ಕ್ರಮದಿಂದ ಎಲ್ಲ ವರ್ಗದ ಮಕ್ಕಳಿಗೆ ಶಿಕ್ಷಣವನ್ನು ಹೊಂದುವ ಅನುಕೂಲತೆಗಳು ಹೆಚ್ಚು ದೊರಕುತ್ತವ, ಮತ್ತು ಅದು ಮಕ್ಕಳ ಭಾವೀ ಕಲ್ಯಾಣಕ್ಕೆ ಹಿತಕರವೆಂಬ ಮುಖ್ಯ ವಿಷಯವನ್ನು ತಿಳಕೊಂಡು ಹೆತ್ತವರು ಸಹಕರಿಸಬೇಕು. ಮಾತ್ರವಲ್ಲ ಕೆನರಾ ಹೈಸ್ಕೂಲಿನ ಆಡಳಿತದವರು ದೂರದ ಮತ್ತು ಬಡ ಮಕ್ಕಳಿಗೆ ಬೇಗ ಮಧ್ಯಾಹ್ನದ ಹೊತ್ತುಗಳಲ್ಲಿ ಅಲ್ಪ ಖರ್ಚಿನಲ್ಲೆ ಉಪಹಾರವನ್ನು ಒದಗಿಸುವ ಏರ್ಪಾಡನ್ನು ಮಾಡಿರುವರೆಂಬ ಸಂಗತಿಯೂ ಶ್ಲಾಘನೀಯ.

ಓರ್ವ ನಾಗರಿಕ

ಗಾಂಧಿ ರಾಷ್ಟ್ರೀಯ ಸ್ಮಾರಕನಿಧಿ ಸಮಿತಿ,

ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ಮಂಗಳೂರು ನಗರ ಶಾಖೆಯು ರಚಿಸಲ್ಪಟ್ಟಿದೆ. ಈ ನಿಧಿ ಸಂಗ್ರಹ ರೂಕಸಿ ಷ[illegible] ತಮ್ಮ [illegible] ಗಳ ಉತ್ಪತ್ತಿಯನ್ನು ಕೆಂಡ[illegible] ಅರ್ಪಿಸಲಾಗಿದೆ.

ಮಂಗಳೂರಿನ ಮಹಾಜನರು ಆದಷ್ಟು ಬೇಗನೇ ತಮ್ಮ [illegible] ದನ ಸಹಾಯವನ್ನು ಶ್ರೀ ವಿ ಮೋಹನ್ ರಾವ್ ಗೋಪಾಲಕೃಷ್ಣ [illegible] ರೋಡ್ ಇವರಲ್ಲಿಗೆ ಕಳುಹಿಸಿಕೊಟ್ಟು ಈ ನಿಧಿ ಸಂಗ್ರಹದ ಸತ್ಕಾರ್ಯವನ್ನು ಆದಷ್ಟು ತ್ವರಿತದಲ್ಲಿ ಪೂರೈಸಿಕೊಡಬೇಕಾಗಿಯೂ ವಿನಂತಿ. ಹಣವನ್ನು ಪಾವತಿ ಮಾಡಿದರೆ ಅಧಿಕೃತ ರಶೀದಿಗಳು ಕೊಡಲ್ಪಡುವುವು.

ಶ್ರೀ ರಜಕಸಂಘ ಮುಂಬಯಿ

ನಮ್ಮ ಸಂಘವು ರಜಕ ಜಾತಿಯ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸಿದಲ್ಲಿ ಅಂಥಹ ಅರ್ಜಿಗಳನ್ನು ಪರಿಶೀಲಿಸಿ ಒಂದನೇ ಕ್ಲಾಸಿನಿಂದ ಮೆಟ್ರಿಕ್ಯುಲೇಶನ್ ವರೆಗೆ ವಿದ್ಯಾರ್ಥಿ ವೇತನವನ್ನು ಕೊಡುವುದು. ಆದ ಪ್ರಯುಕ್ತ ವಿದ್ಯಾರ್ಥಿ ವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸುವವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ತಾ ೩೧-೭ ೪೮ರ ಮೊದಲು ಕಳುಹಿಸಿಕೊಡಬೇಕಾಗಿ ಗೌರವ ಕಾರ್ಯದರ್ಶಿಗಳು ವಿನಂತಿಸುತ್ತಾರೆ. ವಿಳಾಸ —

Hon Secretary
Shree Rajaka Sangha 2 6 2.
Frere Road, 2nd floor, Room
No 28 Fort Bombay

ಸೌಂದರ್ಯ ಸಾಧನೆ
ಪ್ರತಿ ಸಲ ಕುಟಿಕೂರಾದಿಂದ
ತಿಕ್ಕಿ ತೊಳೆದಾಗ

ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ಮೌಲ್ಯವಿದೆ. ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಆದರ ಅವಗುಣಗಳನ್ನು ಹೋಗಲಾಡಿಸುತದೆ

555

ಕುಟಿಕೂರಾ ಸಾಬೂನು
CUTICURA SOAP

ಮಾನವಕೋಟಿಯ ನಿಷ್ಕಾರುಣ್ಯ ಶತ್ರು-ಮಲೇರಿಯಾ ಜ್ವರ

ನಮ್ಮ ಬಳಿ ನಿರ್ದಿಷ್ಟವಾದ ದಾಖಲೆಗಳಿಲ್ಲವಾದರೂ ಪ್ರಾಚೀನ ಈಜಿಪ್ತದ ಜನರು ಮಲೇರಿಯಾ ಜ್ವರಬಾಧೆಯಿಂದ ಅಪರಿಮಿತ ನರಳುವಿಕೆಗೊಳಗಾಗಿದ್ದರೆಂಬ ಸಂಗತಿಯನ್ನು ಸರ್ವ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ ಇಂದೂ ಈ ದೇಶದಲ್ಲಿ ತುಂಬಾ ಜವುಗು ಸ್ಥಳಗಳಿವೆ ಎಂಬ ಸಂಗತಿ ನಮಗೆ ಗೊತ್ತಿದೆ ಕ್ರೈಸ್ತರ ಹಳೆ ಒಡಂಬಡಿಕೆಯ ಗ್ರಂಥದಲ್ಲಿ ಈಜಿಪ್ತನ್ನು ಸಂಕಷ್ಟಕ್ಕೀಡುಮಾಡಿದ ವ್ಯಾಧಿಯೊಂದನ್ನು 'ಜ್ವರ'ವೆಂದು ಕರೆಯಲ್ಪಟ್ಟಿದೆ ಇಷ್ಟಾದರೂ ಮಲೇರಿಯದ ಕುರಿತು ಆಧಾರಬದ್ಧವಾದ ವರ್ಣನೆಯನ್ನು ಸಿದ್ಧಗೊಳಿಸಿದವರು ಪ್ರಾಚೀನ ಗ್ರೀಕರು ಡಬ್ಲ್ಯು ಎಚ್ ಎಸ್ ಜೋನ್ಸ್ ಎಂಬವರು ಬರೆದ 'ಮಲೇರಿಯಾ ಮತ್ತು ಗ್ರೀಕರ ಇತಿಹಾಸ' ಎಂಬ ಗ್ರಂಥದಲ್ಲಿ ಈ ವ್ಯಾಧಿಯು ಪ್ರಾಚೀನ ಗ್ರೀಕ್ ನಾಗರಿಕತೆಯ ಅಧಃಪತನಕ್ಕೆ ಕಾರಣವಾಯಿತೆಂಬ ಅಭಿಪ್ರಾಯವನ್ನು ಪುಷ್ಟೀಕರಿಸಿರುವರು ಕ್ರಿಸ್ತಪೂರ್ವ ಐದನೆ ಶತಮಾನದಲ್ಲಿ ಅನೇಕ ಫಲವತ್ತಾದ ಪ್ರದೇಶಗಳು ಮಲೇರಿಯದಿಂದ ಹಾನಿಗೆ ಒಳಗಾಗಿದ್ದವು ಸ್ಯಟೆಕಾ ಎಂಬ ನಗರವು ಒಂದು ತರದ 'ರೋಗ' ದಿಂದ ತುಂಬಿಕೊಂಡಿತ್ತೆಂದೂ ಆದರಿಂದ ಕೆಳವರ್ಗದ ಜನರು ಪತ್ರವರು ಮೊದಲಾದ ಕೂಡಾ ಹೇಗೆ ಸಾಯುತ್ತಿದ್ದರೆಂದೂ ಎರಿಸ್ಟೋಫೆನ್ಸನ ಗ್ರಂಥದಿಂದ ದಾಖಲೆ ತೆಗೆದುಕೊಳ್ಳಲಾಗಿದೆ ಪ್ರಾಚೀನ ಗ್ರೀಕ್ ವೈದ್ಯಜ್ಞ ಹಿಪೋಕ್ರೇಟಿಸ್ ಧೀರ್ಘ ಮಲೆಜ್ವರ ಕುತ್ತದ ಕುರಿತು ಗೊತ್ತಿತ್ತು ಇಂದಿಗೂ ಇದನ್ನು ಹೋಗಲಾಡಿಸ ಪ್ರದು ತುಂಬ ಕಷ್ಟದ ಕೆಲಸವಾಗಿದೆ ಜವುಗಿನ ಕೆಸರು ಪ್ರದೇಶದ ಸಮೀಪ ವಾಸಿಸುವ ಜನರ 'ತೆಳ್ಳಗಾಗಿಯೂ ಹೊಟ್ಟೆ ಉಬ್ಬಿ ದೇಹ ಪಿತ್ತಕೆಂಪುಳ್ಳವರಾಗಿಯೂ' ಇರುವರು ಎಂದವನು ಉಲ್ಲೇಖಿಸಿದ್ದಾನೆ ಕೆಲವು ಶತಮಾನಗಳ ನಂತರ ಪೊಲಿಬಿಯಸ್ ಎಂಬ ಗ್ರೀಕ್ ಇತಿಹಾಸಕಾರನು ಗ್ರೀಕ್ ದೇಶದಲ್ಲಿ ಜನಸಂಖ್ಯೆ ಕಡಿಮೆಯಾದ್ದುದಕ್ಕೆ ಅಲ್ಲಿನ ಜನರು ಪರದೇಶಗಳಿಗೆ ವಸತಿ ಹೋದುದನ್ನೂ ಅನೇಕ ಜನರು ಮೃತಪಟ್ಟಿದ್ದನ್ನೂ ಕಾರಣವಾಗಿ ಕೊಟ್ಟಿದ್ದಾನೆ ಅನೇಕ ಜನರು ಮೃತಪಟ್ಟುದಕ್ಕೆ ಮಲೇರಿಯವೇ ಕಾರಣವಾಗಿರಬಹುದು

ಅಂತೇ ರೋಮ್ ಸಾಮ್ರಾಜ್ಯದ ಅವನತಿಗೆ 'ಜವುಗು ಪ್ರದೇಶದ ಜ್ವರ'ವೇ ಕಾರಣವೆಂದು ಕೆಲವು ಗ್ರಂಥಕಾರರು ಉಲ್ಲೇಖಿಸಿದ್ದಾರೆ ಮಿತಿಮೀರಿದ ಸುಖೋಪಭೋಗಗಳಿಂದ ರೋಮ್ ಸಾಮ್ರಾಜ್ಯದ ಜನರು ನಿರ್ಬಲರಾಗಿದ್ದುದರಿಂದ ಅವರಿಗೆ ವ್ಯಾಧಿಗಳು ಬೇಗನೆ ತಗಲುತಿದ್ದುವು ಪ್ಲೇಗ್ ಕೋಲೆರಾ ಮೊದಲಾದ ವ್ಯಾಧಿಗಳೂ ಅವರ ಸಂಖ್ಯೆಯನ್ನು ಜೀರ್ಣಿಸಿತು ರೋಮ್ ನಗರದ ಸುತ್ತುಮುತ್ತು ತಂಗಿದ ಜರ್ಮನ್ ಮತ್ತು ಫ್ರೆಂಚ್ ಸೈನ್ಯಗಳು ಜ್ವರಬಾಧೆಯಿಂದ ಸಂಕಷ್ಟಪಟ್ಟುವೆಂದು ಟೆಸಿಟಸ್ ಇತಿಹಾಸಕಾರನು ಬರೆದಿದ್ದಾನೆ ಆ ಪ್ರದೇಶದ ಹರಿಯದ ನೀರಿನ ಕೆಸರುಕೊಳ್ಳಗಳೂ ಸೈನ್ಯಗಳ ಬಹಿರ್ಶುದ್ಧಿಯಿಂದಾದ ಅಶುದ್ಧ ವಾತಾವರಣವೂ ಇದಕ್ಕೆ ಕಾರಣವಾಗಿರಬೇಕು ಇಂದು ಕೂಡ ರೋಮ್ ನಗರದ ಹೊರಗೆ 'ವೆಲ್ಲಿಡೆಲ್ ಇನ್‌ಫರ್ನೊ'(ನರಕದ ಕಣಿವೆ)ಎಂಬ ಸ್ಥಳವಿದೆ ಒಂದು ಶತಮಾನದ ಹಿಂದೆ ಈ ಪ್ರದೇಶವು ಮಲೇರಿಯಾದಿಂದ ತುಂಬಿಹೋಗಿತ್ತು. 1167ರಲ್ಲಿ ಇದೇ ಪ್ರದೇಶದಲ್ಲಿ ಫ್ರೆಡ್ರಿಕ್ ಬಾರ್ಬರೊಸೊ ಎಂಬರಸನ ಸೈನ್ಯಗಳು ಮಲೇರಿಯಾದಿಂದ ಕುಂಠಿತವಾಗಿದ್ದುವು

ಸಂಗತಿಗಳನ್ನು ನಾಟಕೀಯವಾಗಿ ನಿರೂಪಿಸಲು ಪ್ರಖ್ಯಾತರಾದ ಆಗಿನ ಕಾಲದ ಲೇಖಕರು ಹೀಗೆ ಬರೆದಿದ್ದರು ಮೊಂಟಿಮೇರಿಯಾ (ರೋಮ್ ನಗರದ ವಾಯುವ್ಯ ಭಾಗ) ಕಣಿವೆಯು ಒಂದು ಕಪ್ಪುಮೋಡದಿಂದ ಆಚ್ಛಾದಿತವಾಯಿತು ವಾತಾವರಣದ ಹವೆಯು ಕ್ರಿಮಿಕೀಟಗಳಿಂದ ಕಶ್ಮಲಗೊಂಡಿತು ಮತ್ತೆ ಮಳೆ, ಭಾರಿ ಮಳೆ ಬಿತ್ತು ಮಳೆಗಾಲಂತ್ಯಕ್ಕೆ ಈ ಪ್ರದೇಶಗಳು ನೀರುಕೊಂಪೆಗಳಾಗಿ ಪರಿವರ್ತಿಸಲ್ಪಟ್ಟವು ನಂತರ ಅನೇಕ ವಾರಗಳ ತನಕ ಕಟುವಾದ ಬಿಸಿಲು ಕಾದು ಸೈನಿಕರು ನೊಣಗಳಂತೆ ಮಡಿದರು ಈ ವ್ಯಾಧಿಯಿಂದ ರೋಮನರು 20 ಸಾವಿರ ಜನಸಂಖ್ಯೆಯನ್ನು ಕಳಕೊಂಡರು

ಹದಿನೇಳನೇ ಶತಮಾನದಲ್ಲಿ ಮಧ್ಯ ಅಮೇರಿಕದಲ್ಲಿ ವಸಾಹತು ಮಾಡಲು ಪ್ರಯತ್ನಿಸಿದ ಸ್ಕಾಟ್ ಜನರ ಸಾಹಸ ಮಲೇರಿಯಾ ಮತ್ತು ಹಳದಿ ಜ್ವರದಿಂದ ಅಯಶಸ್ವಿಯಾಯಿತು ಪನಾಮಾ ಕಾಲುವೆಯನ್ನು ತೋಡುವಾಗ ಪ್ರಖ್ಯಾತ ಇಂಜಿನಿಯರನಾದ ಡಿಲೆಸೆಪ್ಸ್‌ಗೂ ಇದೇ ವ್ಯಾಧಿಗಳು ಕೆಟ್ಟ ಪರಿಣಾಮ ಉಂಟು ಮಾಡಿದವು

ಆದರೆ ಕ್ವಿನೈನ್ ಮಲೇರಿಯಾಕ್ಕೆ ರಾಮಬಾಣವೆಂದು ಕಂಡು ಹಿಡಿಯಲಾದ ಮೇಲೆ ಆ ಜ್ವರದ ಭೀಕರತೆ ಇಲ್ಲದಾಗಿದೆ ಕ್ವಿನೈನು ಒಂದು ನಿಸರ್ಗ ವಸ್ತು ಇದರಷ್ಟು ಅನಪಾಯಕಾರಿಯೂ, ಪರಿಣಾಮಕಾರಿಯೂ ಆದ ಔಷಧಿ ಬೇರೊಂದಿಲ್ಲ

ಹಿಂದಿನ ಜನಾಂಗ ಸಂಘದ ಮಲೇರಿಯಾ ತಜ್ಞರ ಸಮಿತಿಯು ತಡೆಗಟ್ಟುವ ವಿಧಾನವಾಗಿ ಜ್ವರದ ಇಡೀ ಋತುವಿನಲ್ಲಿ ದಿನಂಪ್ರತಿ 6 ಕಾಳುಗಳಷ್ಟು ಕ್ವಿನೈನನ್ನು ಸೇವಿಸುವುದುತ್ತಮವೆಂದು ಶಿಫಾರಸು ಮಾಡಿತು ಜ್ವರಕ್ಕಾದರೆ ದಿನಕ್ಕೆ 15-20 ಕಾಳುಗಳಷ್ಟು ಕ್ವಿನೈನನ್ನು 5ರಿಂದ 7 ದಿನಗಳ ತನಕ ಸೇವಿಸಬೇಕೆಂದೂ ಮೇಲ್ಕಂಡ ಸಮಿತಿ ಶಿಫಾರಸು ಮಾಡಿದೆ. ಜ್ವರ ನಿಂತರೆ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಪುನಃ ಜ್ವರ ಬಂದರೆ ಮೊದಲಿನಂತೆಯೇ ಸೇವಿಸುವುದು.



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕ ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ಸುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ



Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25-12-1947ರ ಲಾಗ್ಯಾಯತು ಘಾಟಿ ಸೆಕ್ಸನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0-1-0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಚ್ಯಾರಿಯಲ್ಲಿರುವ ಟಿಕೇಟ್ಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ಯಾಂಟ್ ಮೆನೇಜರ್ಸ್,

ಮಂಗಳೂರು,
23-12-1947.

ದಿ. ಕಂಬ್ಯಾಂಡ್ ಬಾಕ್ಕಿಂಗ್ ಏಜೆನ್ಸಿ ಮಂಗ್ಲೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B.
General Manager.



ಹುಳುಕಡ್ಡಿ ಮುಲಾಮು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of 37 years available to you for arranging Insurance Investment.
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕುಂಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 18—6—1948 [ಸಂಚಿಕೆ 24]

ಮಧ್ಯಪೂರ್ವದಲ್ಲಿ ಯುದ್ಧವಾಗಲೇಬೇಕೇ?

ಅರಬ ಯಹೂದಿಗಳ ಹಕ್ಕು ಅರ್ಹತೆಗಳು

[ಕಳೆದ ಸಂಚಿಕೆಯಲ್ಲಿ ಬ್ರಿಟಿಷರ ಪರವಾಗಿ ಒಂದು ಸಲ ಅರಬರಿಗೂ, ಇನ್ನೊಂದು ಸಲ ಯಹೂದಿಗಳಿಗೂ ಪಲೆಸ್ತೀನದಲ್ಲಿ ಸ್ವತಂತ್ರ ಪ್ರದೇಶಗಳನ್ನು ಕೊಡುವುದಾಗಿ ವಚನಗಳು ಕೊಡಲ್ಪಟ್ಟಿದ್ದುವೆಂದು ತಿಳಿಸಲಾಗಿದೆ. ಈ ವಚನಗಳ ಸಾಧ್ಯಾಸಾಧ್ಯತೆಗಳೇನೆಂದು ಈ ಸಲದ ಲೇಖನದಲ್ಲಿ ಚರ್ಚಿಸಲಾಗಿದೆ]

(ಲೇಖ ೨)

ತಮಗೆ ಕೊಟ್ಟ ವಚನಗಳನ್ನೂ, ಪಲೆಸ್ತೀನ ತಮ್ಮ ವಶವಿರಬೇಕೆಂಬುದರ ವಿಷಯದ ಹಕ್ಕು ಅರ್ಹತೆಗಳನ್ನೂ ಪರ್ಯಾಲೋಚಿಸಿ ತೀರ್ಮಾನಿಸಲು ಈ ವಿಷಯವನ್ನು ಅಂತರಾಷ್ಟ್ರೀಯ ನಿಷ್ಪಕ್ಷಪಾತ ದೃಷ್ಟಿ ಆದ ನ್ಯಾಯಾಲಯದಲ್ಲಿ ಇತ್ಯರ್ಥವಾಗಲೆಂದು ಅರಬರ ಭದ್ರತಾ ಮಂಡಳಿಗೆ ತಿಳಿಸಿದರು ಆದರೆ ಈ ಸೂಚನೆಯು ಯುಕ್ತರಾಷ್ಟ್ರಸಂಘದ ಸಾಮಾನ್ಯ ಸಭೆಯಲ್ಲಿ ಬಹುಮತ ವಿರೋಧದಿಂದ ಬಿದ್ದು ಹೋಯಿತು. 'ನಮ್ಮ ವಿರುದ್ಧ ಭದ್ರತಾ ಮಂಡಳವು ಅಂತರಾಷ್ಟ್ರೀಯ ಕಾರ್ಯಕ್ರಮವನ್ನು ಕೈಕೊಳ್ಳುವ ಮೊದಲು ಅಂತರಾಷ್ಟ್ರೀಯ ನ್ಯಾಯಶಾಸನವನ್ನು ಪರ್ಯಾಲೋಚಿಸುವುದಕ್ಕೆ ತಿರಸ್ಕರಿಸಿತು' ಹೀಗೆಂದು ಅರಬರು ಕಹಿಮನ ವಹಿಸುತ್ತ ತಿಳಿಸುತ್ತಾರೆ

ಅಮೇರಿಕನ್ ಕುತಂತ್ರ

ಮಾತವಲ್ಲ, ತಮ್ಮ ಮೇಲೆ ಕೈಕೊಳ್ಳಲ್ಪಟ್ಟ ರಾಜಕೀಯ ಕಾರ್ಯಕ್ರಮವು ರಾಜಕೀಯದಲ್ಲಿ ಅಪೇಕ್ಷಿತವೆಂದೂ ಅರಬರು ಅವರು ಹೇಳುತ್ತಾರೆ ಮಧ್ಯಪೂರ್ವದಲ್ಲಿ ರಾಯಭಾರಿಗಳಾಗಿಯಾಗಲಿ, ವಿದೇಶಾಂಗ ನಿರೀಕ್ಷಕರಾಗಿಯಾಗಲಿ ನೆಲೆಸಿಂತ ಅಮೇರಿಕನರು ಕೂಡ ಪೆಲೆಸ್ತೀನದ ವಿಭಜನೆಗೆ ವಿರುದ್ಧವಿದ್ದಾರೆಂಬ ಸಂಗತಿಯನ್ನು ಅರಬರು ತಿಳಕೊಂಡಿದ್ದಾರೆ ಆದರೆ ಅಮೇರಿಕನ್ ಅಧ್ಯಕ್ಷವರ್ಗದ ಅವರ ಆಪ್ತ ಸಲಹೆಗಾರರು ಮಾತ್ರ ವಿಭಜನೆಗೆ ಬೆಂಬಲಕೊಟ್ಟದ್ದರಿಂದ ಅದು ಅಮೇರಿಕನ್ ಸರಕಾರದ ಧೋರಣೆಯೂ, ಆಯಿತು ಈ ಸಂಗತಿಯನ್ನು ಅರಬರು ತಿಳಕೊಂಡಿದ್ದಾರೆ. ಈ ಧೋರಣೆಯು ಅಮೇರಿಕನ್ ರಾಜಕೀಯ ತಜ್ಞರ ಸಲಹೆ ಮೇರೆಗೆ ಅನುಸರಿಸಲ್ಪಟ್ಟದ್ದಲ್ಲ, ಆದರೆ ಅಮೇರಿಕದಲ್ಲಿನ ಯೆಹೂದಿಗಳ ವೋಟುಗಳನ್ನು ಸಂಪಾದಿಸಲು ಅಲ್ಲಿನ ರಾಜಕೀಯಪಟುಗಳು ಹೂಡಿದ ತಂತ್ರವೆಂದು ಅರಬರಿಗೆ ಖಚಿತವಾಗಿದೆ.

ಇಷ್ಟೇ ಅಲ್ಲ ಯುಕ್ತರಾಷ್ಟ್ರಸಂಘದಲ್ಲಿ ಪೆಲೆಸ್ತೀನದ ವಿಭಜನೆಗೆ ಬೆಂಬಲ ಕೊಡದ ರಾಷ್ಟ್ರಗಳ ಮೇಲೆ ಆರ್ಥಿಕ ಒತ್ತಡವನ್ನು ಹಾಕಿ ಅವುಗಳಿಗೆ ಸಾಲಕೊಡುವುದಿಲ್ಲವಾಗಿ ಬೆದರಿಕೆಯನ್ನು ಹಾಕಿ ಕಷ್ಟಕೀಡು ಮಾಡುವುದಾಗಿಯೂ ಅಮೇರಿಕವು ಗದರಿಸಿದೆ ಮೊದಲು ಏಳು ರಾಷ್ಟ್ರಗಳು ಪಲೆಸ್ತೀನದ ವಿಭಜನೆಗೆ ಅಸಮ್ಮತಿ ತೋರಿಸಿದ್ದವು ಆದರೆ ಅಂತ್ಯದಲ್ಲಿ ಅವು ಬೆಂಬಲ ಕೊಡುವಂತಹ ಆಕರ್ಷಣೆಗಳನ್ನು ಅವಕ್ಕೆ ತೋರಿಸಿ ಅವುಗಳ ಸಮರ್ಥನೆಯನ್ನು ಪಡೆಯಲಾಯಿತು. ಈ ಏಳು ರಾಷ್ಟ್ರಗಳಿಲ್ಲದಿದ್ದರೆ ಪಲೆಸ್ತೀನದ ವಿಭಜನೆಯ ಯೋಜನೆ ಸೋಲುತ್ತಿತ್ತು. ಇಷ್ಟಾದರೂ, ಚೀನ, ಬ್ರಿಟಿಷರಂತಹ ಹತ್ತು ರಾಷ್ಟ್ರಗಳು ಅದಕ್ಕೆ ಪರವಾಗಿ ಮತದಾನ ಮಾಡಲು ತಿರಸ್ಕರಿಸಿವೆ

ಯುಹೂದಿಗಳ ವಾದ

ಯುರೋಪಿನಲ್ಲಿ ತಾವು ಅನುಭವಿಸಿದ ಕಷ್ಟಪರಂಪರೆಗಾಗಿ ತಮಗೇ ಸಹಾನುಭೂತಿ ತೋರಿಸಲಾಗಿದೆಯೆಂದು ಯೆಹೂದಿಗಳು ತರ್ಕಿಸುತ್ತಾರೆ ಪೆಲೆಸ್ತೀನದಲ್ಲಿ ತಮಗೊಂದು ವಸಾಹತು ಕಲ್ಪಿಸಲು ಜಗತ್ತಿನ ಜನತೆಯೇ ಸಮ್ಮತಿಸುತ್ತದೆಂದವರ ಹೇಳಿಕೆ ಆದರೆ ವಿಭಜನೆಯ ಯೋಜನೆಯು ಜಗತ್ತಿನ ಸಂಯುಕ್ತ ಜನಾಂಗಗಳ ಸ್ವತಂತ್ರವೂ ಸ್ವೇಚ್ಛೆಯದೂ ಮತ್ತು ಸತ್ಯವಾದದ್ದೂ ಆದ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಿಲ್ಲವೆಂದು ಅರಬರು ಪ್ರತಿಪಾದಿಸುತ್ತಾರೆ ಕಾರಣ ವಿಭಜನೆಗೆ ಬೆಂಬಲ ಕೊಟ್ಟ ರಾಷ್ಟ್ರಗಳ ಜನಸಂಖ್ಯೆ ೬೦೦ ಮಿಲಿಯ, ಆದರೆ ಅದಕ್ಕೆ ವಿರುದ್ಧ ಮತ ಕೊಟ್ಟ ದೇಶಗಳ ಜನಸಂಖ್ಯೆ [illegible] ಮಿಲಿಯ ಹೀಗಾಗಿ ಪೆಲೆಸ್ತೀನದ ವಿಭಜನೆಗೆ ಮಾನವಕೋಟಿಯ ಬಹುತರದ ನೈತಿಕ ಬೆಂಬಲವಿಲ್ಲೆಂದು ಅರಬರು ವಾದಿಸುತ್ತಾರೆ

ಅಲ್ಲದೆ ವಿಭಜನೆಯಲ್ಲಿ ತೋರಿಸಿದ ಅರಬ ರಾಜ್ಯದ ಗಡಿಗಳ [illegible] ಅರಬರು ಹೇಳುತ್ತಾರೆ ಅದಕ್ಕಾಗಿ ನಾವು ಪೆಲೆಸ್ತೀನದ ನಕಾಶೆ ನೋಡಬೇಕು

ವಿಭಜನೆಯ ದೃಶ್ಯ

ಈ ಚಿಕ್ಕ ದೇಶವು ಈಗ ಎಂಟು ಭಾಗಗಳಾಗಿ ಮಾಡಲ್ಪಟ್ಟಿದೆ ಅದರಲ್ಲೊಂದು ಭಾಗವು ಜೆರೂಸಲೇಮ ನಗರದ ಪ್ರದೇಶ ಇದನ್ನು ಸಂಯುಕ್ತ ರಾಷ್ಟ್ರದ ಪ್ರತಿನಿಧಿಗಳೇ ಆಳುವರು ಮೂರು ಭಾಗಗಳು ಯೆಹೂದಿ ರಾಜ್ಯವಾಗಿ ಪರಿಣಮಿಸಲ್ಪಡುತ್ತದೆ ಇದರಲ್ಲೆರಡು ಭಾಗಗಳಿಗೆ ಪರಸ್ಪರ ಹೊಂದಿಕೆ ಇಲ್ಲ—ಒಂದು ಪಶ್ಚಿಮದಲ್ಲಿ ಇನ್ನೊಂದು ದಕ್ಷಿಣದಲ್ಲಿ. ಪೂರ್ವದಲ್ಲಿದ್ದುದಕ್ಕೂ ಪಶ್ಚಿಮದಲ್ಲಿದ್ದುದಕ್ಕೂ ಹೊಂದಿಕೆಯಿದೆ. ಇನ್ನುಳಿದ ಮೂರು ಅರಬ ಭಾಗಗಳಲ್ಲಿಯೂ, ಉತ್ತರ ಮತ್ತು ದಕ್ಷಿಣದವುಗಳಿಗೆ ಹೊಂದಿಕೆ ಇಲ್ಲ ಜಾಫಾ ಬಂದರವು ಎಂಟನೇ ಭಾಗ ಇದು ಅರಬರಿಗೆ ಕೊಡಲ್ಪಟ್ಟಿದೆಯಾದರೂ ಇದರ ನೆರೆಯ ಪ್ರದೇಶವು ಸಂಪೂರ್ಣ ಯೆಹೂದಿ ರಾಷ್ಟ್ರದಿಂದ ಆವೃತವಾಗಿದೆ.

ಯೆಹೂದಿಗಳ ಮೂರು ಭಾಗಗಳಲ್ಲಿನ ಒಂದು ಭಾಗದಲ್ಲಿ ಮಾತ್ರ ಅವರು ಅರಬರಿಗಿಂತ ಬಹುಸಂಖ್ಯೆಯಲ್ಲಿರುವರೆಂದು ಅರಬರು ಹೇಳುತ್ತಾರೆ ಭೂಮಧ್ಯ ಸಮುದ್ರದ ಪಕ್ಕದ ಭಾಗವಿದು. ಯೆಹೂದಿಗಳ ರಾಜ್ಯದ ಪೂರ್ವ ಭಾಗದಲ್ಲಿ ಅರಬರ ಸಂಖ್ಯೆ ಯೆಹೂದಿಗಳಿಂದ ಮೂರರಷ್ಟು ಹೆಚ್ಚಿದೆಯಂತೆ ದಕ್ಷಿಣದಲ್ಲಿರುವ ಯೆಹೂದಿ ಭಾಗದಲ್ಲಿ [illegible] ಸಾವಿರ ಯೆಹೂದಿಗಳಿದ್ದು ಅರಬರು ಅಲ್ಲಿ [illegible] ಸಾವಿರದಷ್ಟಿದ್ದಾರಂತೆ ಯೆಹೂದಿ ರಾಜ್ಯದ ಮೂರು ಭಾಗಗಳ ಜನಸಂಖ್ಯೆಯಲ್ಲಿ ಪ್ರತಿ ೫೫ ಯೆಹೂದಿಗಳಿಗೆ ೪೫ ಅರಬರಿರುತ್ತಾರೆ ಈ ಶೇಕಡಾ ೪೫ ಅರಬರು ಯೆಹೂದಿ ಸರ್ವಾಧಿಕಾರಕ್ಕೆ ಬಲಿಬೀಳಬೇಕೆಂಬುದು ಅರಬರ ಪ್ರಶ್ನೆ

ಅರಬರಿಗೆ ಗುಡ್ಡ ಬೆಟ್ಟಗಳು

ತಮ್ಮ ವಶಕ್ಕೆ ಕೇವಲ ಗುಡ್ಡ ಬೆಟ್ಟಗಳೇ ಪ್ರಾಪ್ತಿಯಾಗಿ ಫಲವತ್ತಾದ ಪ್ರದೇಶಗಳೆಲ್ಲ ಯೆಹೂದಿಗಳ ಪಾಲಾಗುವುವೆಂಬುದು ಅರಬರ ಇನ್ನೊಂದು ತೀಕ್ಷ್ಣವಾದ ಕಳವಳ. ಚಳಿಗಾಲದಲ್ಲೂ ಸುರಕ್ಷಿತ ಹಡಗು ವ್ಯಾಪಾರಕ್ಕೆ ಅರ್ಹವಾಗಿದ್ದ ಪೆಲೆಸ್ತೀನದ ಒಂದೇ ಒಂದು ಬಂದರಾದ ಹೈಫಾ ಬಂದರು ಯೆಹೂದಿಗಳ ವಶವಾಗುತ್ತದೆ.

ಪೆಲೆಸ್ತೀನದ ಪ್ರಾಮುಖ್ಯ ರಫ್ತುಗಳೆಂದರೆ ಕಿತ್ತಳೆ ಹಣ್ಣುಗಳು. ಈ ಹಣ್ಣಿನ ತೋಟಗಳಲ್ಲಿ ಸರಿ ಅರ್ಧಕ್ಕರ್ಧ ಅರಬ ಯೆಹೂದಿಗಳ ಕೈಯಲ್ಲಿವೆ ಆದರೆ ಇವೆಲ್ಲವೂ ಹೆಚ್ಚಾಗಿ ಯೆಹೂದಿ ರಾಜ್ಯದಲ್ಲೇ ಇರುವಂತಾಗುತ್ತದೆ.

ಯೆಹೂದಿ ರಾಜ್ಯಕ್ಕೆ ಪೆಲೆಸ್ತೀನ ಅತೀ ಹೆಚ್ಚಿನ ಆರ್ಥಿಕ ಸಂಪತ್ತಿನ ವಿಭಾಗಗಳು ಸೇರುವುವು. (ಸಶೇಷ)

ಚೌರ್ಯದ ಸಂಚು

"ಈಗ ಈ ಎರಡು ಜನಾಂಗಗಳಲ್ಲಿ ಒಂವರಲ್ಲಿನ ಕೆಲವು ಜನರು ಆ ಇನ್ನೊಂದು ಜನಾಂಗವನ್ನು ನಿರ್ನಾಮ ಮಾಡಬೇಕೆಂದು ನಿರ್ಧರಿಸಿದರೆಂದು ಊಹಿಸಿರಿ. ಈ ಕೆಲಸವನ್ನು ಕಾದಾಡದೆ, ಯುದ್ಧದಿಂದ ನಿರ್ವಹಿಸಲು ಅವರು ಯೋಚಿಸುವರು ಆಗವರು ಒಂದು ವಿಶ್ವ ವಿನಾಶಕ ಸಂಚನ್ನಾರಂಭಿಸುವರು. ಇಂತಹ ಭೀಕರ ಯುದ್ಧದಲ್ಲಿ ಮಿಂಚಿನ ದಾಳಿಯಿಲ್ಲ, ಯುದ್ಧ ಸಾರುವಿಕೆಯಿಲ್ಲ, ಮಾತ್ರವಲ್ಲ ಸೈನ್ಯ ಶಸ್ತ್ರಾಸ್ತ್ರಗಳ ಸಂಗ್ರಹವೂ ಇಲ್ಲ

"ಇಂತಹ ಗುಪ್ತಯುದ್ಧಕ್ಕೆ ಬೇಕಾಗುವ ಅಸ್ತ್ರಗಳೂ ಇವೆ. ಒಂದು ಜನಾಂಗವನ್ನು ಬಾಡಿಸಿಬಿಡುವ ವಿಧಾನಗಳನ್ನು ಹೀಗೆ ಕ್ರಮೀಕರಿಸಬಹುದು· ಆ ಜನಾಂಗದ ಮಕ್ಕಳು ಬಾಲ್ಯದಲ್ಲೇ ಸಾಯುವಂತೆ ಮಾಡುವುದು, ಹೊಸ ಹೊಸ ವ್ಯಾಧಿ, ರೋಗರುಜೆಗಳನ್ನು ಅಲ್ಲಿ ಉಂಟುಮಾಡುವುದು. ಇವುಗಳ ಕ್ರಿಮಿಗಳನ್ನು ಯಾವ ಕ್ರಿಮಿನಾಶಕ ಔಷಧಿಯಿಂದಲೂ ನಿರ್ಮೂಲಿಸಲಿಕ್ಕಾಗುವುದಿಲ್ಲ. ಮಾತ್ರವಲ್ಲ ಈ ರೋಗಗಳು ಜಾನುವಾರುಗಳಿಗೂ ತಗಲುವಂತೆ ಮಾಡಬಹುದು

ನಮ್ಮ ಜಿಲ್ಲೆಯ ಸಂಪತ್ತಿನ ಅಭಿವೃದ್ಧಿ

ಸಾಹಸೋದ್ಯಮಗಳ ಆವಶ್ಯಕತೆಯಿದೆ.

ಶ್ರೀ ಶಿವರಾಮ ಕಾರಂತರ ಗಮನೀಯ ಸೂಚನೆಗಳು

"ದಕ್ಷಿಣ ಕನ್ನಡದಲ್ಲಿಯೇ ಹುಟ್ಟಿ ಬೆಳೆದವರಿಗೆ ಇದೊಂದು ಹೆಮ್ಮೆಯ ಊರೆನಿಸುವುದು ಸ್ವಾಭಾವಿಕ. ನಾಡು 'ಅಷ್ಟೊಂದು ಸುಂದರವಾದುದು. ಜನರಿಂದ ತುಂಬಿ ತುಳುಕಾಡುವುದು. ಆ ಜನರಾದರೂ ಸಾಕಷ್ಟು ಮೇಧಾವಿಗಳೂ, ವಿದ್ಯಾವಂತರೂ ಅಹುದು. ಆದರೆ ನಮ್ಮ ಪಾಲಿನ ಹೆಮ್ಮೆ ಮಾತ್ರ ಒಣ ಹೆಮ್ಮೆಯೇ ಆಗಿ ಉಳಿದಿದೆ. ನಮ್ಮ ನಾಡಿಗಾಗಿ ನಾವೇನು ಮಾಡಿದ್ದೇವೆ, ನಮ್ಮ ಸಹಾಸಗಳೇನು ಎಂಧರೆ ಮಾತ್ರ ಉತ್ತರ ಬರುವುದು ನಮ್ಮ ಹೆಮ್ಮೆಗೆ ತಳವಿಲ್ಲವಾಗುತ್ತದೆ; ಅದು 'ಬಂಡ್ವಾಳವಿಲ್ಲದ ಬಡಾಯಿ'ಯಾಗುತ್ತದೆ."

ಹೀಗೆಂದು ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರು 'ದಕ್ಷಿಣ ಕನ್ನಡದಲ್ಲಿ ಸಾಹಸೋದ್ಯಮಗಳು' ಎಂಬೊಂದು ಲೇಖನದಲ್ಲಿ ನಮ್ಮೀ ಜಿಲ್ಲೆಯಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಇಲ್ಲಿಯ ಸಂಪತ್ತನ್ನು ಹೆಚ್ಚಿಸಬಹುದೆಂಬುದರ ಕುರಿತು ವಿಚಾರಾರ್ಹ ಸೂಚನೆಗಳನ್ನು ಕೊಡುತ್ತಾರೆ ಅದರ ಸಾರಾಂಶ ಹೀಗಿದೆ

ಸಾಹಸವು ಮಾತಿನಿಂದ ಕಾರ್ಯಕ್ಕಿಳಿಯಬೇಕಾಗುತ್ತದೆ. ಜಿಲ್ಲೆಯಲ್ಲಿ ಉತ್ಪನ್ನಗೊಳಿಸಲ್ಪಡುವ ಸಾವಿರಾರು ವಿದ್ಯಾವಂತರು ಲೇಖನಿಯ ದಾಸರಾಗಿ ಅನ್ಯ ಪ್ರಾಂತ್ಯಕ್ಕೆ ರಫ್ತಾಗುತ್ತಾರೆ ನಾಡಿನ ಮಿದುಳು ನಾಡಿಗೇ ಸಿಗುತ್ತಿಲ್ಲ.

ನಮ್ಮವರ ಬುದ್ಧಿ, ಶ್ರಮಗಳೆಲ್ಲ ಹೊರಗಣ ಪ್ರಾಂತ್ಯಕ್ಕಾಗಿ ವ್ಯಯವಾಗುತ್ತಿವೆ. ವಾಣಿಜ್ಯದಲ್ಲಿ ನಮ್ಮ ಜನರು ಸಾಹಸಿಗಳಾಗಿಯೇ ಇದ್ದಾರೆ ಆದರೆ ಸಿಂಧಿ, ಗುಜರಾತಿ, ಮಾರವಾಡಿಗಳಂತೆ ಬೇರೆ ಊರಲ್ಲಿ ಆ ವ್ಯಾಪಾರದ ಬೆಳವಣಿಗೆಯಿಲ್ಲ ವಿಮೆ, ಬ್ಯಾಂಕಿಂಗುಗಳಲ್ಲಿಯೂ ನಮ್ಮವರು ಮುಂದುವರಿದಿದ್ದಾರೆ ದಕ್ಷಿಣ ಭಾರತದ ಹಲವು ಕಡೆ ಇವುಗಳ ಶಾಖೆಗಳಿರುವುವು ಇದು ಹೆಮ್ಮೆಯ ವಿಷಯವಾದರೂ ವಿಮೆ ಬ್ಯಾಂಕಿಂಗ್ ಸಂಸ್ಥೆಗಳು ಸಂಪತ್ತನ್ನು ಉತ್ಪನ್ನ ಮಾಡುವ ಸಂಸ್ಥೆಗಳಲ್ಲ ಅವು ಹಣದ ವ್ಯವಹಾರದಲ್ಲಿ ಮಧ್ಯವರ್ತಿ ಸಂಸ್ಥೆಗಳು ನಮಗೆ ಎಲ್ಲಕ್ಕೂ ಮೊದಲು ಬೇಕಾದುದು ಸಂಪತ್ತನ್ನು ಹೆಚ್ಚಿಸುವ ಏರ್ಪಾಡುಗಳು ಸರಕಾರ ತನ್ನ ಕೆಲಸ ಮಾಡಲಿ, ಮಾಡದಿರಲಿ ಜನರೂ ತಮ್ಮ ಅಸ್ತಿತ್ವಕ್ಕಾಗಿ ಮಾಡಲೇ ಬೇಕಾದ ಕೆಲಸಗಳಿವೆ

ಸಂಪತ್ಯುತ್ಪಾದನೆಗೆ ಬೇಕಾಗುವ ಕಚ್ಚಾ ವಸ್ತುಗಳು ನಮ್ಮಲ್ಲಿ ಕೆಲವಾದರೂ ಇದೆ ಶಕ್ತಿಗೆ ಬೇಕಾದ ಜಲಪಾತ ಸೌಕರ್ಯವೂ ಇದೆ ಕಲ್ಲಿದ್ದಲ್ಲನೇ ನಾವು ಕಾದಿರಬೇಕಾಗಿಲ್ಲ.

ಶತಮಾನದ ಹಿಂದೆ ಬಾಸೆಲ್ ಮಿಶನ್ ಸಂಸ್ಥೆಯವರು ಮುದ್ರಣ, ಹಂಚು, ನೇಯಿಗೆ, ಮತ್ತು ಕಬ್ಬಿಣದ ಉದ್ಯಮಗಳನ್ನು ಇಲ್ಲಿ ಪ್ರಾರಂಭಿಸಿದರು ನಂತರ ಇತರರು ಇದರ ಅನುಕರಣ ಮಾಡಿದರು ಈ ಉದ್ಯೋಗಗಳು ಈಗ ಅಲ್ಪ ಸ್ವಲ್ಪ ಬೆಳೆದಿವೆ ಕಬ್ಬಿಣದ ಉದ್ಯಮವು ಇನ್ನು 'ರಿಪೇರ್ ಶಾಪ್' ರೂಪವನ್ನು ದಾಟಿ ಸ್ವತಂತ್ರ ಯಂತ್ರೋಪಕರಣಗಳನ್ನು ನಿರ್ಮಿಸುವ ಹಾದಿ ತುಳಿದೇ ಇಲ್ಲ

ಅನಂತರ ಉಂಟಾದ ಉದ್ಯಮವೆಂದರೆ, ಗೇರುಬೀಜದಂತಹ ವಸ್ತುಗಳ ಪ್ಯಾಕಿಂಗ್ ಉದ್ಯಮವಷ್ಟೆ!

ಜಿಲ್ಲೆಯ ಜೀವನೋಪಾಯದ ಉದ್ಯಮಗಳು: ಕೃಷಿ ಮತ್ತು ಮೀನುಗಾರಿಕೆ. ಕೃಷಿಕರಿಗೆ ಸಾಕಷ್ಟು ವಿರಾಮವಿದೆ. ಆ ಕಾಲಕ್ಕೆ ಅವರು ನಿರ್ವಹಿಸಬಹುದಾದ ಬೇರೆ ಉದ್ಯಮವಿಲ್ಲ. ಜೀವನಕ್ಕಾಗಿ ಅವರು ಘಟ್ಟಪ್ರಾಂತ್ಯಕ್ಕೆ ಹೋಗಿ ತೋಟಗಳಲ್ಲಿ ಕೆಲಸ ಮಾಡುತ್ತಾರೆ. ನಮ್ಮಲ್ಲಿನ ಕೃಷಿ ವಿಧಾನವೂ ಹಳೆ ಮಾದರಿಯದು ನಮ್ಮಲ್ಲಿ ೧೩೦-೧೫೦ ಮಳೆಯಿದೆ. ಗುಡ್ಡ ಪ್ರದೇಶವಾದ್ದರಿಂದ ದೊಡ್ಡ ನೀರಾವರಿ ಯೋಜನೆ ಸಾಧ್ಯವಿಲ್ಲ ಆದರೆ ಸಣ್ಣ ನೀರಾವರಿಗೆ ಅನುಕೂಲವಿದೆ ೨೦ ಅಡಿಯೊಳಗೆ ನೀರು ದೊರೆಯುವ ಬಾವಿಗಳಿಂದ, ನದಿಗಳಿಂದ ನೀರನ್ನು ಪೂರೈಸಿ ಹೆಚ್ಚಿನ ಫಸಲು ಉಂಟು ಮಾಡಬಹುದು ಆದರೆ ಈ ಕೆಲಸ ಯಂತ್ರಶಕ್ತಿಯಿಂದಾಗಬೇಕು ನಮ್ಮ ಘಟ್ಟಗಳಲ್ಲಿ ಜಲಪಾತಗಳಿವೆ ಆದರೆ ವಿದ್ಯುದ್ಯೋಜನೆಗಳ ಕಡೆಗೆ ಸರಕಾರ ಏನೂ ಮಾಡಿಲ್ಲ ವಿದ್ಯಾವಂತ, ವರ್ಚಸ್ಸುಳ್ಳವರ ಗಮನ ಕೃಷಿ ಕಡೆಗೆ ಹರಿದರೆ ಸರಕಾರವನ್ನು ಬಲವಂತ ಪಡಿಸಲೂಬಹುದು ಬರಿಯ ರೈತ ಏನು ಮಾಡಿಯಾನು?

ವಿದ್ಯುತ್ ಪೂರೈಕೆಯಾಗುವ ಮೊದಲು ಎಂಜಿನ್‌ಗಳನ್ನು ಬಳಸಬಹುದು ನೀರೆತ್ತುವುದಕ್ಕೆ ಗಾಳಿ ಗಿರಣಿಗಳನ್ನು (wind mills) ಬಳಸುವುದು ಸುಲಭವಿದೆ ಗಾಳಿ ತುಂಬ ಬೀಸುವ ಬಯಲುಗಳಲ್ಲಿ ಇವುಗಳಿಂದ ನೀರಾವರಿ ನಡೆಸಬಹುದು ಗಾಳಿ ಗಿರಣಿಗಳನ್ನು ನಮ್ಮ ಜಿಲ್ಲೆಯಲ್ಲಿಯೇ ನಿರ್ಮಿಸುವ ಉದ್ಯಮವೂ ಸಾಧ್ಯವಾದುದೇ

ಕಡಲು ತೀರದ ಬೆಸ್ತರ ಉದ್ಯಮವೂ ಅವ್ಯವಸ್ಥಿತ ಅವಸ್ಥೆಯಲ್ಲಿದೆ ಒಣಮೀನು ಮೀನು ಗೊಬ್ಬರ ಇವೇ ಎರಡು ಈಗಿನ ಮುಖ್ಯ ಉದ್ಯೋಗಗಳು ಹಸಿ ಮೀನನ್ನು ರಿಫ್ರಿಜರೇಟರ್ ಬಸ್ಸುಗಳಲ್ಲಿ ಹಾಕಿಕೊಂಡು ಒಳನಾಡಿಗೆ ಒಯ್ದು ಮಾರಿ ಲಾಭ ಪಡೆಯಬಹುದು. ಚಳಿಮನೆ (refriegerator houses) ಗಳನ್ನು ಬೆಳೆಯಿಸಿದಲ್ಲಿ ಮೀನನ್ನು ಡಬ್ಬಿಗಳಲ್ಲಿ ಹಾಕಿ ಧೀರ್ಘ ಕಾಲದ ರಕ್ಷಣೆಗೂ ತರಲು ಸಾಧ್ಯವಿದೆ

ನಾರ್ವೆ ಸ್ವೀಡನ್‌ಗಳಲ್ಲಿ ಒಂದು ಅಡಿ ದಪ್ಪ, ೬-೮ ಅಡಿ ಎತ್ತರದ ಜಲಪಾತವನ್ನು ಜಲಶಕ್ತಿಯನ್ನಾಗಿ ಮಾಡಲು ಯಂತ್ರ ಸಲಕರಣ ಮಾಡುತಿದ್ದಾರೆ ನಮ್ಮ ಜಿಲ್ಲೆಯಲ್ಲಿ ಇಂಥವು ಅನೇಕವಿವೆ ಪಂಜಾಬಿನವರಂತೆ ನೀರು ಗಿರಣಿ (water mills)ಗಳನ್ನು ಮರದಿಂದಲೇ ಮಾಡುವುದೂ ಸಾಧ್ಯವಿದೆ

ನಮ್ಮ ಅರಣ್ಯ ಸಂಪತ್ತು ಧಾರಾಳವಾಗಿದೆ ಯುದ್ಧಕಾಲದಲ್ಲಿ ಬೆಂಕಿಪಟ್ಟಿಗೆಗಾಗಿ ನಮ್ಮಲ್ಲಿನ ಅನೇಕ ಕಾಡು ಮಗ್ಗಲುಗಳು ಸವರಿಸಲ್ಪಟ್ಟವು ಇನ್ನು ದೊಡ್ಡ ದೊಡ್ಡ ಬೆಟ್ಟ ಪಟಗಳ ಕಾಡುಗಳು ಅಲ್ಲೇ ಇವೆ ಮಲಬಾರಿನಂತೆ ನಮ್ಮಲ್ಲಿ ಮೂ... ಪ್ಲೈವುಡ್ ಕೈಗಾರಿಕೆ ಸಾಧ್ಯ ಅರಣ್ಯದಲ್ಲಿ ಹುಲ್ಲು ಉರಿದು ನಶಿಸುತ್ತಿದೆ ಇದನ್ನು ನಾಡಿನ ಜಾನುವಾರುಗಳಿಗೆ ಬಳಸಬಹುದು ಘಾಟಿಯಲ್ಲಿ [illegible] ಪ್ರೆಸ್ ಇರಿಸಿಕೊಂಡರೆ ಹುಲ್ಲಿನ [illegible] ಉಳಿಸಿ [illegible] ಮಾಡಬಹುದು

[illegible] ಹುಲ್ಲು ಮಾರಿ [illegible] ನಾಲ್ಕಾರು [illegible] ಗವಶ್ಯವಿದೆ ನಮ್ಮಲ್ಲಿ [illegible] ತೋರ್ಪದ ಸಂಗತಿ

ಇದಲ್ಲ, ಆವೆ [illegible] ಮಣ್ಣು [illegible] ಮಾಡ ನಮ್ಮ [illegible] [illegible] ಗಾಜಿನ [illegible] ಕುಟಿಲ್ಲಿ ಚೀನಿ (kalin) ಧಾರಾಳ [illegible] (price [illegible] (speculation) [illegible]

[illegible]

ನಮ್ಮ [illegible] ಕೆಟ್ಟಿಲ್ಲಿ [illegible] [illegible] ಹೆಚ್ಚಿನ [illegible] (unaerned income ಸಟ್ಟಾ (speculation) [illegible] ಗಳಲ್ಲಿ [illegible] ಶಮದೊಂದಿಗೆ [illegible] ಸಿದ್ಧರಾಗಿಲ್ಲ [illegible] ಸಂಪಾದನ ನಮಗೆ ಬೇಕು [illegible] ಅದಿಲ್ಲದವರು ಅದರ [illegible] ಯ ಗುಮಾಸ್ತಿಕೆಯ [illegible] ವಾಗಿದ್ದಾರೆ

ಹೀಗಿದ್ದು ದಕ್ಷಿಣ ಕನ್ನಡ ಜಿಲ್ಲೆ [illegible] ಒಳಗ [illegible]

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ಧನಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ ಪ್ರೋತ್ಸಾಹಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ–ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರ್ ಜಿಲ್ಲೆಯ ತೆಂಗಿನ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಿಲ್ ಕಲೆಕ್ಷನ್ ಕೆಲಸಗಳನ್ನು ವಹಿಸಿಕೊಳ್ಳುವಲ್ಲಿ ನಮ್ಮ ನಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಹಾಗೂ ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ ಆದರಿಂದ ನಿಮಗೆ ಸಮಯವೂ ಹಣವೂ ಉಳಿವುದು–ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಕಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು

CANARA BANK, LIMITED.

ESTD: 1906

ಕಡಿತ ಘಾಯ, ಚರ್ಮ ಘಾತಗಳಿಗೆ ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



556

ಕುಟಿಕೂರಾ ಮುಲಾಮು

CUTICURA OINTMENT

ರಹಸ್ಯ ಘರ್ಷಣೆಗಳು

"ಶತ್ರುಗಳ ಬಂದ [illegible] ನಗರವಿದೆ [illegible] ಗುಪ್ತ ಯುದ್ಧ [illegible] ಭವಾದ ಮೂರು ತಿಂಗಳಲ್ಲಿ ಒಂದು ತರದ ಶೀತಬಂಧೆಯು ಇಲ್ಲಿಯ ನಾಗರೀಕರನ್ನು ಗುಂಪು ಗುಂಪಾಗಿ ಆಸ್ಪತ್ರೆಗೆ ಕಳುಹಿಸುವುದು ಪರಿಣಾಮವಾಗಿ ಕೈಗಾರಿಕೆಗಳೆಲ್ಲವೂ ಸ್ತಬ್ಧವಾಗುವವು ಶೀತವು ತಿಂಗಳುಗಟ್ಲೆ ಹಾಗೇ ಉಳಿಯುವುದು

ನಿಮ್ಮ ಭವಿಷ್ಯ ನಿಮ್ಮ ಮನಸ್ಸಿನ ಮೇಲಿದೆ

ಒಳಿತಿಗೂ ಕೆಡುಕಿಗೂ ಅತ್ಯಲ್ಪ ಅಂತರ

ಡಾ| ಎಡ್ವಿನ್ನರು ಹೃತ್ಕೋಶದ ವೇದನೆಯನ್ನು ಪರಿಹರಿಸುವ ಅದ್ಭುತ ಶಕ್ತಿಯುಳ್ಳವರಾಗಿದ್ದರು. ಅವರು ಓರ್ವ ಪ್ರಸಿದ್ಧ ಮನೋಶಾಸ್ತ್ರಜ್ಞರೂ ಮನೋವ್ಯಾಧಿ ಪರಿಹಾರಕರೂ ಆಗಿದ್ದು ದೇವರಲ್ಲಿ ಅಚಲ ಶ್ರದ್ಧೆಯುಳ್ಳವರಾಗಿರುದ್ದರು. ಅವರ ಪರಿಚಿತರೂ ಅವರನ್ನು ಓರ್ವ 'ಸಂತಪುರುಷ' ನೆನ್ನುತಿದ್ದರು.

ಇತರ ವೈದ್ಯರು ತಮ್ಮ ರೋಗಿಗಳನ್ನು ಔಷಧಿ ಶುಶ್ರೂಷೆಯಿಂದಲೂ, ಶಸ್ತ್ರಕ್ರಿಯೆಯಿಂದಲೂ ಗುಣಪಡಿಸುವಾಗ ಡಾ| ಎಡ್ವಿನ್ನರು ತಮ್ಮ ರೋಗಿಗಳನ್ನು ಕೇವಲ ಬಾಯಿ ಮಾತಿನಿಂದಲೇ ಗುಣ ಪಡಿಸುತಿದ್ದರು. "ನಿಮ್ಮ ಈ ದುಸ್ಥಿತಿಗೆ ನೀವೇ ಮುಖ್ಯ ಕಾರಣರು" ಎಂದವರು ತಮ್ಮ ಬಳಿ ಪರಿಹಾರಕ್ಕೆ ಬಂದವರಿಗೆ ಮೃದುವಾಗಿ ತಿಳಿಸುತಿದ್ದರು.

ಅವರೊಂದು ಘಟನೆ ತಿಳಿಸುತ್ತಾರೆ ಬೊಸ್ಟನ್ ನಗರದ ದೊಡ್ಡ ಹೋಟೆಲೊಂದರಲ್ಲಿ ಓರ್ವ ಶ್ರೀಮಂತ ಮಹಿಳೆಯು ಕೋಣೆ ಕೊಂಡು ಕೊಂಡಿದ್ದಳು. ಒಂದು ದಿನ ಅವಳು ಹೋಟೆಲ್ ಮೆನೇಜರನ ಬಳಿಗೆ ಓಡಿ ಬಂದು. 'ನನಗೆ ಕಣ್ಣು ಕತ್ತಲೆ ಬರುತ್ತಿದೆ. ನನ್ನ ದೇಹವೆಲ್ಲ ನಡುಗುತ್ತಿದೆ ನನ್ನ ಪಕ್ಕದ ಕೋಣೆಯಲ್ಲಿ ಯಾರೋ ಓರ್ವನು ದಿನವೆಲ್ಲ ಪಿಯಾನೊ ಬಾರಿಸುತಿದ್ದಾನೆ ಅವನ್ನು ನೀವು ನಿಲ್ಲಿಸದಿದ್ದರೆ ನಾನು ಖಂಡಿತ ಬದುಕಲಾರೆ ಈ ಅನರ್ಥಕ್ಕೆ ನೀವೇ ಹೊಣೆಗಾರರಾದೀರಿ" ಎಂದು ಗದರಿಸಿದಳು.

ಈ ಕತೆ ಕೇಳಿ ಹೋಟೇಲ್ ಮೆನೇಜರನಿಗೆ ಕೌತುಕವಾಯಿತು ಅವನೆಂದ "ಅಮ್ಮನವರೆ, ನಿಮಗೆ ಸಹಾಯ ಮಾಡಲು ನಾನು ತುಂಬಾ ಆತುರನಾಗಿದ್ದೇನೆ ಆದರೆ ಆ ಸಂಗೀತಜ್ಞನ ಬಳಿಗೆ ಹೋಗಲು ನನಗೆ ಧೈರ್ಯ ಸಾಲದು ಇಂದು ರಾತ್ರೆ ಸಾರ್ವಜನಿಕ ಭವನದಲ್ಲಿ ಆತನ 'ಸಂಗೀತ ಕಛೇರಿ'ಯಿದೆ ಅದಕ್ಕವನು ಅಭ್ಯಾಸ ಮಾಡುತಿದ್ದಾನೆ ಆತ ಪ್ರಖ್ಯಾತ ಪದರುಸ್ಕಿ ಮಹಾಶಯ"

ಆ ಮಹಿಳೆಗೆ ಪೆದರುಸ್ಕಿಯು ಸಂಗೀತ ಖ್ಯಾತಿಯ ವಿಷಯ ತಿಳಿದಿತ್ತು ಕೂಡಲೇ ಅವಳ ಹಾವಭಾವಗಳು ಬದಲಾದುವು "ಖಂಡಿತವಾಗಿಯೂ ಆತ ಪದರುಸ್ಕಿಯೆ? ಹಾಗಾದರೆ ಚಿಂತೆಯಿಲ್ಲ" ಎಂದಳವಳು.

ಕೂಡಲೇ ಅವಳು ತನ್ನ ಸ್ನೇಹಿತರಿಗೆ ಆಮಂತ್ರಣ ಕೊಟ್ಟು ತನ್ನ ಕೋಣೆಗೆ ತರಿಸಿದಳು ಕೆಲವೇ ಹೊತ್ತಿನೊಳಗೆ ಪೆದರುಸ್ಕಿ ಮಹಾಶಯನ ಪಕ್ಕದ ಕೋಣೆಯಲ್ಲಿ ದೊಡ್ಡದೊಂದು ಅದೃಶ್ಯ ಶ್ರೋತವರ್ಗವೆ ಅವನ ಸಂಗೀತ ಮಾಧುರ್ಯವನ್ನು ಹೀರುತ್ತ ಮೌನವಾಗಿ ಕೂಡಿತ್ತು. ಆ ಮಹಿಳೆಯ ನಿರ್ಬಲ ಹೊಂದಿದ ನರಶಕ್ತಿಯೂ ಪುನರ್ ಚೇತನ ಹೊಂದಿತು!

"ಇಲ್ಲಿ ಪರಿಸ್ಥಿತಿ ಯಾವುದೂ ಬದಲಾಗಲಿಲ್ಲ. ಹೆಂಗಸಿನ ಮನೋಭಾವ ಮಾತ್ರ ಬದಲಾಯಿತು ಇದರಿಂದ ತನಗುಂಟಾಗಿದೆಂದು ತಿಳಕೊಂಡ ಅವಳ ಸಂಕಷ್ಟಗಳೂ ಮಾಯವಾದುವು" ಹೀಗೆಂದು ಡಾ| ಎಡ್ವಿನ್ನರು ಈ ಘಟನೆಯ ಕುರಿತು ತಿಳಿಸುತ್ತಾರೆ.

ನಾವು ವಿಷಯಗಳನ್ನು ನೋಡುವ ರೀತಿ ವಿಧಾನಗಳಲ್ಲೇ ಎಲ್ಲಾ ಒಳಿತು ಕೆಡುಕುಗಳು ಅಡಗಿಕೊಂಡಿವೆ. ಮನುಷ್ಯನ ಇಡೀ ಭವಿಷ್ಯವು ಅವನು ಮನೋಭಾವನೆಗಳನ್ನು ಸೃಜಿಸಿಕೊಳ್ಳುವ ದೃಷ್ಟಿಕೋನವನ್ನವಲಂಬಿಸಿದೆ.

ಇಂತಹ ಮನೋಭಾವನೆಗೂ ಶಾರೀರಿಕ ವ್ಯಾಧಿಗಳಿಗೂ ನಿಕಟ ಸಂಬಂಧವಿದೆ.

"ರೋಗಗಳು ಕ್ರಿಮಿಗಳಿಂದ ಉಂಟಾಗುವುದಕ್ಕಿಂತ ಕೆಟ್ಟ ಮನೋಭಿಪ್ರಾಯಗಳಿಂದ ಆಗುವುವುಗಳೇ ಹೆಚ್ಚು." ಹೀಗೆಂದು ಡಾ| ಎಡ್ವಿನ್ನರು ತಮ್ಮ ರೋಗಿಗಳಿಗೆ ತಿಳಿಸುತ್ತಾರೆ. "ನಮ್ಮ ಶರೀರದಲ್ಲಿ ರೋಗದ ಕ್ರಿಮಿಗಳನ್ನು ನಾಶ ಮಾಡುವ ಶಕ್ತಿಯಿದೆ. ಆದರೆ ಮನಸ್ಸನ್ನು ಅತ್ಯಲ್ಪ ದ್ವೇಷಾಸೂಯೆಗಳಿಗೊಳಪಡಿಸುವುದರ ಮೂಲಕ ಆ ಶಕ್ತಿಯನ್ನು ಕಳಕೊಳ್ಳುವಂತಾಗುತ್ತದೆ.

ಉದಾ ನಿಮಗೊಂದು ಅನ್ಯಾಯ (ಇದು ನಿಜವಿರಬಹುದು, ಇಲ್ಲವೆ ತಪ್ಪಿದ ಅಭಿಪ್ರಾಯ)ದ ಕುರಿತು ಗಾಢ ಚಿಂತೆಯಲ್ಲಿ ಮಗ್ನರಾದರೆ "ವಿಷಪೂರಿತ ರಕ್ತ ಕೋಟಿ ಬಾಗಿಲು ತೆರೆದುಕೊಟ್ಟಂತಾಗುವುದು ಇದರ ಪರಿಣಾಮವಾಗಿ ನೀವು ಕೆಲ ದಿನ ಹಾಸಿಗೆ ಹಿಡಿಯುತ್ತೀರಿ ಇದೆಲ್ಲ ಏತಕ್ಕೆ? ನೀವೊಂದು ಸಂಗತಿಯನ್ನು ತಪ್ಪು ರೀತಿಯಲ್ಲಿ ದೃಷ್ಟಿಸಿದ್ದೇ ಈ ಅನಾವಶ್ಯಕ ಸಂಕಷ್ಟಕ್ಕೆ ಕಾರಣವಾಯಿತು. ಕೋಪ ಮತ್ತು ಭಯ ಇವೆರಡರಿಂದ ಮನುಷ್ಯನ ರಕ್ತದಲ್ಲಿ ವಿಷಗಳುತ್ಪನ್ನವಾಗುತ್ತವೆಂದು ಪ್ರಾಚೀನ ಗ್ರೀಕರ ವೈದ್ಯ ಚತುರಾಮಹನೆನಿಸುವ ಹಿಪ್ಪೊಕ್ರೆಟ್ಸನು ಹೇಳಿದುದರಲ್ಲಿ ತುಂಬಾ ತಥ್ಯಾಂಶವಿದೆ ಪರಿಪೂರ್ಣ ಆರೋಗ್ಯವಂತನಾಗಿರುವ ಓರ್ವ ಮನುಷ್ಯ ಮನಸ್ಸಿನಲ್ಲಿ ಇಲ್ಲ ಸಲ್ಲದ ದ್ವೇಷ ಪ್ರತೀಕಾರದ ಭಾವನೆಗಳಿಗೆ ಆಶ್ರಯ ಕೊಟ್ಟು ಕೊನೆಗೆ ನರದೌರ್ಬಲ್ಯ ಇಲ್ಲವೆ ವಾತರೋಗದಿಂದ ಕುಂಠಿತನಾಗುವಲ್ಲಿ ಅವನ ಜೀವನವೇ ಹಾಳಾದಂತಾಯಿತು

ಒಂದು ನಿದರ್ಶನ

ಒಂದು ಸಲ ಡಾ| ಎಡ್ವಿನ್ನರ ಆಸ್ಪತ್ರೆಗೆ ಮಹಿಳೆಯೋರ್ವಳ ಹೊಟ್ಟೆಯೊಳಗಿನ ಹುಣ್ಣಿನ ಮೇಲೆ ಶಸ್ತ್ರ ಚಿಕಿತ್ಸೆ ಮಾಡಲ್ಪಡಲು ತರಲ್ಪಟ್ಟಳು. ಅದಳೆಂದಳು. "ನನಗೊಂದು ರೋಮದ ನಿಲುವಂಗಿ ಬೇಕೆಂದು ನನ್ನ ಗಂಡನಿಗೆ ಗೊತ್ತಿತ್ತು. ಆದರೆ ಅದನ್ನು ಕೊಳ್ಳಲು ಹಣವಿಲ್ಲವೆಂದನವ. ಅದರ ಬೆಲೆ ೬೫೦ ಡಾಲರು ಈಗ ಆ ಜಿಪುಣನಿಗೆ ಒಪರೇಶನಿಗಾಗಿ ೧೫೦೦ ಡಾಲರು ಖರ್ಚು ಮಾಡುವ ಪ್ರಸಂಗ ಬಂತು." ಅವಳ ಭಾಷಣಾತಿರೇಕದಿಂದ ಆ ಹೊಟ್ಟೆ ಹುಣ್ಣುವುಂಟಾಗಿರಬಹುದೆಂದು ಅವಳಿಗೆ ತಿಳಿದಿಲ್ಲ.

ವಿಷಯಗಳನ್ನು ಸಾಮಾನ್ಯ ತಿಳುವಳಿಕೆಯ ದೃಷ್ಟಿಯಿಂದ ನೋಡುವುದೇ ನಮಗಿರುವ ಉತ್ತಮ ರಕ್ಷಣೋಪಾಯ. ಒಂದು ಹಳೇ ಪ್ರಾರ್ಥನಾ ನುಡಿಯಲ್ಲಿ ಹೀಗೆ ಹೇಳಿದೆ:

"ನನ್ನಿಂದ ಬದಲಾಯಿಸಲು ಸಾಧ್ಯವಾಗುವ ವಿಷಯಗಳನ್ನು ಬದಲಾಯಿಸಲು ದೇವರು ನನಗೆ ಸ್ಥೈರ್ಯ ಕೊಡಲಿ. ನನ್ನಿಂದ ಬದಲಾಯಿಸಲು ಸಾಧ್ಯವಿಲ್ಲದವುಗಳನ್ನು ಗಂಭೀರ ತೃಪ್ತಿಯಿಂದ ಸ್ವೀಕರಿಸುವ ಶಕ್ತಿಯನ್ನು ಅವನು ಕೊಡಲಿ ಇವೆರಡರಲ್ಲಿರುವ ವ್ಯತ್ಯಾಸವನ್ನು ತಿಳಕೊಳ್ಳುವ ವಿವೇಕವನ್ನೂ ಅವನು ನನ್ನಲ್ಲುಂಟುಮಾಡಲಿ."

ಇಂತಹ ಸೌಹಾರ್ದ ಭಾವನೆಯುಳ್ಳ ಮನುಷ್ಯನು ಕಹಿಯಾದ ಮನಸ್ಸಿನ ದುಷ್ಪರಿಣಾಮಗಳನ್ನು ತಡೆಯಬಹುದು ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚಿನದನ್ನು ಮಾಡಬಹುದು ಅವನು ತನ್ನ ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಬಹುದು.

ನೈಜ ಜೀವನ ಘಟನೆಯೊಂದನ್ನು ಡಾ| ಎಡ್ವಿನ್ನರು ಹೀಗೆ ವರ್ಣಿಸುತ್ತಾರೆ ಓರ್ವ ಹುಡುಗಿ ಪಿಟೀಲು ಚೆನ್ನಾಗಿ ಅಭ್ಯಾಸ ಮಾಡುತಿದ್ದಳು. ಅವಳು ನ್ಯೂಯೋರ್ಕಿಗೆ ಒಂದು ಕೆಲಸ ಹುಡುಕಲಾರಂಭಿಸಿದಳು ಆದರೆ ಅಲ್ಲಿ ಪಿಟೀಲು ಬಾರಿಸಲು ಗೊತ್ತಿದ್ದ ತುಂಬಾ ತರುಣ ತರುಣಿಯರಿದ್ದಾರೆಂದೂ ಹೀಗಾಗಿ ಅಲ್ಲಿ ಕೆಲಸ ಸಿಕ್ಕುವುದು ಕಷ್ಟವೆಂದೂ ಅವಳು ಭಾವಿಸಿದಳು "ಸಂಗತಿಗಳಿಂದ ನಿರುತ್ಸಾಹಗೊಳ್ಳಬೇಡ, ಕಷ್ಟದ ಪರಿಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಿ ಏನನ್ನು ಮಾಡಬೇಕೊ ಅದನ್ನು ಮಾಡು" ಎಂದು ಅವಳ ತಂದೆ ಸಾಯುವ ಮುಂಚೆ ಅವಳಿಗೊಂದು ಉಪದೇಶ ಮಾಡಿದ್ದನು ಇದನ್ನವಳು ನೆನಪು ಮಾಡಿಕೊಂಡಳು. ತನ್ನ ಬಳಿ ಉಳಿದ ಕೇವಲ ೩೦೦ ಡಾಲರುಗಳನ್ನು ಖರ್ಚು ಮಾಡಿ ಅವಳು ಟೈಪ್‌ರೈಟಿಂಗ್ ಮತ್ತು ಶೀಘ್ರ ಲಿಪಿ (short hand) ಕಲಿತಳು ಇದನ್ನು ಕಲಿತ ಮೇಲೂ ಅವಳ ನಿರುತ್ಸಾಹ ಹೋಗಲಿಲ್ಲ ಈ ನಗರದಲ್ಲಿ ಈ ಕೆಲಸ ಕಲಿತವರು ತುಂಬ ಮಂದಿ ಇದ್ದಾರೆಂಬ ಸಂಗತಿಯು ಅವಳ ಮನಸ್ಸನ್ನು ಕಾಡಿರಿಸ ತೊಡಗಿತು

ಒಂದು ದಿನ ನ್ಯೂಯೋರ್ಕಿನ ಪತ್ರಿಕೆಯೊಂದರಲ್ಲಿ ಈ ಜಾಹೀರಾತು ಕಾಣಬಂತು

ಅನುಭವವಿಲ್ಲದೆ ನನಗೆ ಕೆಲಸ ದೊರೆಯುದು, ಕೆಲಸವಿಲ್ಲದೆ ಅನುಭವ ಸಿಗದು ಅದಕ್ಕಾಗಿ ನಾನು ೪ ವಾರಗಳ ತನಕ ಸಂಬಳವಿಲ್ಲದೆ ಯಾರಲ್ಲಾದರೂ ಕೆಲಸ ಮಾಡಲು ಸಿದ್ಧಳಿದ್ದೇನೆ ಆ ಮೇಲೆ ನಾನು ಬಿಟ್ಟು ಹೋಗುತ್ತೇನೆ ನನ್ನಿಂದ ನಿಮಗೆ ಯಾವ ತೊಂದರೆಯಿಲ್ಲ. ನಾನು ಒಳ್ಳೆಯವಳೂ ಆಗಿದ್ದೇನೆ.

ಅವಳಿಗೆ ಸಾವಿರಕ್ಕಿಂತಲೂ ಹೆಚ್ಚು ಆಹ್ವಾನಗಳು ಬಂದುವು. ಅವಳು ಅವುಗಳಲ್ಲಿ ಉತ್ತಮವಾದ ನೂರನ್ನು ಹೆಕ್ಕಿ ಆ ಸಂಸ್ಥೆಗಳೊಡನೆ ಕೆಲಸ ಮಾಡಲು ನಿರ್ಣಯಿಸಿದಳು. ಮೂರು ತಿಂಗಳ ಅಂತ್ಯದಲ್ಲಿ ಅವಳು ಮೂರು ಪ್ರಖ್ಯಾತ ಸಂಸ್ಥೆಗಳಡಿಯಲ್ಲಿ ಕೆಲಸ ಮಾಡಿದಳು. ಅವಳಿಗೆ ಪ್ರತೀ ವಾರ ಸಂಪೂರ್ಣ ಸಂಬಳವೂ ಕೊಡಲ್ಪಟ್ಟಿತು. ಕೊನೆಗೋರ್ವ ವಕೀಲನ ಬಳಿ ಅವಳು ಕೆಲಸಕ್ಕೆ ಹೋದಾಗ ಉತ್ತಮ ಶಿಫಾರಸು ಪತ್ರಗಳೂ ಅವಳಿಗೆ ಸಿಕ್ಕಿದ್ದುವು. ಅಲ್ಲಿಂದವಳು ಅಧ್ಯಕ್ಷ ರೂಸವೆಲ್ಟರ ಗುಪ್ತ ಖಾತೆ ಅಧಿಕಾರಿಯ ಕಾರ್ಯದರ್ಶಿನಿಯಾಗಿ ಈಗ ಅಲ್ಲಿನ ಕೇಂದ್ರ ಸರಕಾರ ಕಚೇರಿಯಲ್ಲಿ ದೊಡ್ಡ ಹುದ್ದೆಯಲ್ಲಿರುವಳು.

ಹೀಗೆ ನಿಜವಾದ ಮನೋಭಾವವನ್ನು ತಳೆದು ಅದರಂತೆ ನಡೆಯಲು ಪ್ರಯತ್ನಿಸುವುದು ಕಷ್ಟದ ಕೆಲಸವೇನೂ ಅಲ್ಲದು. ಹೇಗೂ ನಾವು ಹೆಚ್ಚಾಗಿ ತಪ್ಪು ವಿಷಯಗಳ ಕುರಿತು ತಪ್ಪಾಗಿ ಅಭಿಪ್ರಾಯ ಮಾಡಿಕೊಳ್ಳುತ್ತೇವೆ.

ಇನ್ನೊಂದು ಅತೀ ಸ್ವಾರಸ್ಯದ ಸಂಗತಿಯನ್ನು ಡಾ| ಎಡ್ವಿನ್ನರು ನಿವೇದಿಸುತ್ತಾರೆ: ಓರ್ವ ಅಮೇರಿಕನ್ ಸೈನಿಕನು ಯುದ್ಧ ರಂಗದಲ್ಲಿ ಘಾಯಗೊಂಡ, ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವನನ್ನು ಬದುಕಿಸಲು ಅವನ ಕಾಲೊಂದನ್ನು ಶಸ್ತ್ರ ಕ್ರಿಯೆ ಮಾಡಿ ತೆಗೆದರು. ಮುಖ್ಯ ವೈದ್ಯನೆಂದ ಮಗನೆ ನೀನು ಸೌಖ್ಯವಾಗುತ್ತಿ ಸ್ವಲ್ಪ ದುಃಖದ ಸಂಗತಿಯೆಂದರೆ ನೀನೊಂದು ಕಾಲನ್ನು ಕಳಕೊಳ್ಳಬೇಕಾಯಿತು, ಅಷ್ಟೆ."

"ಅಷ್ಟೆಯೊ! ನಾನದನ್ನು ಕಳಕೊಳ್ಳಲಿಲ್ಲ ದೇಶಕ್ಕಾಗಿ ಅದನ್ನು ಕೊಟ್ಟೆ" ಎಂದ ಸೈನಿಕ

ಅವನು ತನ್ನ ಪರಿಸ್ಥಿತಿಯನ್ನು ನೋಡಿದ ದೃಷ್ಟಿಕೋನ ಹೇಗಿದೆ! ಆದರಿಂದ ಅವನ ಭಾವೀ ಜೀವನ ರೂಪಿಸಲೂ ತುಂಬಾ ಸಹಾಯವಾಯಿತು

ಆತ್ಮ ಪರಿವರ್ತನೆ

ಈ ರೀತಿಯಲ್ಲಿ ಮನೋಭಾವನೆಯನ್ನು ಬದಲಿಸಿಕೊಳ್ಳುವುದು ಒಂದು ಮಾನಸೀಕ ಅದ್ಭುತ ಕಾರ್ಯ. ಮಾತ್ರವಲ್ಲ ಇದೊಂದು ಆತ್ಮಪರಿವರ್ತನೆಯೂ ಆಗಿದೆ ಕಳೆದು ಹೋದುದರ ಕುರಿತು ಕಿಂಚಿತ್ತಾದರೂ ವ್ಯಥೆ ಪಡದೆ, ಕಳೆದುಳಿದುದರ ಸದುಪಯೋಗ ಮಾಡುವುದೇ ಈ ಪರಿವರ್ತನೆಯ ಮೂಲ ತತ್ವ ಇದೊಂದು ಆಧ್ಯಾತ್ಮಿಕ ಮನೋವಿಧಾನ ಅನಿವಾರ್ಯ ವಿಧಿಲೀಲೆಗೆ ದುಃಖದಿಂದ ತಲೆಬಾಗುವುದಷ್ಟೇ ಅಲ್ಲ, ಸಂಪೂರ್ಣ ಶರಣಾಗತನಾಗಬೇಕು. ತಲೆಬಾಗುವುದಕ್ಕೂ ಶರಣಾಗತನಾಗುವುದಕ್ಕೂ, ಘೋರ ಸಂಕಷ್ಟಕ್ಕೂ ಪ್ರಸನ್ನ ಶಾಂತತೆಗೂ, ಇಷ್ಟನೆ ವಿಕಾರ ಬುದ್ಧಿಗೂ ವಿವೇಕ ವಿಚಾರಕ್ಕೂ ಇರುವಷ್ಟೇ ವ್ಯತ್ಯಾಸವಿದೆ ಅದುದರಿಂದ ತಲೆಬಾಗುವವನು "ನನ್ನ ಸಮಯ ಒಂದೇ ಬರುವುದು ಈಗ ಇದಾದರೂ ಸರಿಯೆ!" ಎನ್ನಬೇಕು. ಶರಣಾಗತನಾಗುವವನು ಹಳೆದನ್ನು ಸಂಪೂರ್ಣ ಮರೆತು ಹೊಸದಾಗಿ ಜೀವನ ಪಟ್ಟವನ್ನು ಹತ್ತಲಾರಂಭಿಸುವನು. ಅವನಿಗೆ ಯಶಸ್ಸು ಖಂಡಿತ ದೊರೆಯುವುದು.

NOTICE

THE BOMBAY LIFE ASSURANCE CO. Ltd.,

Notice having been given of the loss of Policy No 13707 (paid up) on the life of Mr. T. N. Appunni Tirumalpad (Deceased) a duplicate Policy will be issued unless objection is lodged with us within one month from this date.

-(Sd.) K. Balasubrahmanyam,
Manager & Actuary.

Bombay, 16-6-1948.

ಸ್ವದೇಶಾಭಿಮಾನಿ

ತಾರೀಖು 18—6—1948

ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು

ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತೊಂದು ಶ್ರೀಮಾನ್ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದ ವಾರ್ತೆ ಪ್ರಕಟವಾಗಿರುತ್ತದೆ. ಈ ಪರಿಷತ್ತಿನಲ್ಲಿ ಇಡೀ ಬಳ್ಳಾರಿಯನ್ನು ಕರ್ನಾಟಕ್ಕೇನೇ ಸೇರತಕ್ಕದೆಂದು ನಿರ್ಣಯಮಾಡಲಾಯಿತಂತೆ. ಇಲ್ಲಿಯ ಆಂಧ್ರರು ಈ ಪರಿಷತ್ತಿನ ಕಾರ್ಯಕಲಾಪಗಳನ್ನು ಖಂಡಿಸಲು ಪ್ರತ್ಯೇಕ ಸಾರ್ವಜನಿಕ ಸಭೆ ಜರಗಿಸಿದರಂತೆ. ಪರಿಷತ್ತಿನ ಕಾರ್ಯಕಲಾಪಗಳು ರಿಜರ್ವ್ ಪೋಲೀಸ್ ದಳಗಳ ಬಂದೋಬಸ್ತಿನಿಂದ ನಡೆಸಬೇಕಾಗಿ ಬಂದಿತ್ತೆಂದೂ ಹೇಳಲಾಗಿದೆ.

ಬಳ್ಳಾರಿ ಜಿಲ್ಲೆ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ಗಡಿನಾಡೆಂಬುದು ಸರ್ವವಿದಿತವಿರುತ್ತದೆ. ಇಂಥ ಪ್ರದೇಶದಲ್ಲಿಯ ಗಡಿನಿರ್ಣಯ ಕಾರ್ಯವನ್ನು ಇತ್ತಂಡದವರು ಸೇರಿ ಶಾಂತ ರೀತಿಯಿಂದ ನಿಶ್ಚೈಸಬೇಕಾದುದು ಯೋಗ್ಯವಾದ ದಾರಿ ಇತ್ತು. ಇದರ ಬದಲು ಇಲ್ಲಿಯ ಆಂಧ್ರ ಕರ್ನಾಟಕ ಪ್ರಜೆಗಳೊಳಗೆ ಶಾಂತಿಭಂಗವಾಗುವುದನ್ನು ಪೋಲೀಸರು ತಡೆಯಬೇಕಾಗುವಂಥ ಪ್ರಸಂಗ ತಂದೊಡ್ಡುವ ಈ ಬಗೆಯ ಪರಿಷತ್ತಿನ ವ್ಯವಸ್ಥಾಪಕರ ಅತೀವ ಪ್ರಾಂತ್ಯಾಭಿಮಾನಕ್ಕೆ ಏನೆಂದು ಹೇಳಬೇಕು?

ಬಳ್ಳಾರಿ ಜಿಲ್ಲೆ ಹೈದರಾಬಾದು ಸಂಸ್ಥಾನದ ಗಡಿಯಲ್ಲಿರುವ ಪ್ರದೇಶ. ಭಾರತ ಮತ್ತು ಹೈದರಾಬಾದಿನೊಳಗಣ ಸಂಬಂಧ ಈಗ ಅತ್ಯಂತ ನಾಜೂಕಿನ ಪರಿಸ್ಥಿತಿಗೆ ಮುಟ್ಟಿರುತ್ತದೆ. ಹೈದರಾಬಾದು ದುರೀಣರ ರಾಜಕೀಯ ಮಾತುಕತೆಗಳು ಭಾರತ ಸರಕಾರಕ್ಕೆ ಸಾಕಾಗಿರುತ್ತವೆ. ಭಾರತ ಸರಕಾರವು ತನ್ನ ಶರ್ತಗಳನ್ನು ನಿರ್ದಿಷ್ಟ ಶಬ್ದಗಳಲ್ಲಿ ತಯಾರಿಸಿ ಒಂದೇ ಇದಕ್ಕೆ ಒಪ್ಪಿಗೆ ಕೊಡಬೇಕು ಇಲ್ಲವೆ ನಿರಾಕರಿಸಬೇಕು. ಮುಂದಿನ ನಲ್ವತ್ತೆಂಟು ಗಂಟೆಗಳೊಳಗೆ ಉತ್ತರಕೊಡಬೇಕೆಂದು ಹೈದರಾಬಾದಿನ ಸರಕಾರಾ ಪ್ರತಿನಿಧಿಗಳಿಗೆ ತಿಳಿಸಿರುತ್ತದೆ. ಸಂಸ್ಥಾನದ ಮುಖ್ಯ ಮಂತ್ರಿ ಲೈಕ ಆಲಿಯವರು ಇನ್ನೂ ಹನ್ನೆರಡು ಗಂಟೆಗಳ ಹೆಚ್ಚಿನ ಸಮಯ ಕೇಳಿದರೆಂದೂ ಕೊನೆಗೆ ನಿಜಾಮರ ಒಪ್ಪಿಗೆಯು ದೊರಕದೆ, ಇನ್ನೂ ಮಾತುಕತೆಯಾಗುವಂತೆ ಕೇಳಲಾಗಿ, ಅದಕ್ಕೆ ಇಂಡಿಯಾ ಸರಕಾರದ ನಕಾರವು ದೊರಕಿರುತ್ತದೆ. ಅಷ್ಟು ಮಾತ್ರವಲ್ಲ, ಇನ್ನು ಯಾವತ್ತೂ ತರದ ಮಾತುಕತೆಗಳನ್ನು ನಡೆಯಿಸಲು ತಾವು ಸಿದ್ಧರಿಲ್ಲವೆಂದು ಪ್ರಧಾನ ನೆಹರೂರವರ ಹೇಳಿಕೆಯಾಗಿದೆ.

ಇಂಥ ಪರಿಸ್ಥಿತಿಯಲ್ಲಿ ಹೈದರಾಬಾದಿನ ಗಡಿಯಲ್ಲಿರುವ ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ಮತ್ತು ಆಂಧ್ರರೆಂದು ತಮ್ಮೊಳಗೆ ಜಗಳಾಡುವ ಜನರಿಗೆ ಏನು ಹೇಳಬೇಕು?

ಒಂದು ವೇಳೆ ಭಾರತ ಸರಕಾರ ಹಾಗೂ ಹೈದರಾಬಾದಿನೊಳಗೆ ಯುದ್ಧವೇ ಆಗುವ ಸಂದರ್ಭ ಬಂದರೆ? ಅಥವಾ ರಾಜವೀಯವರ ರಜಾಕರು ಬಳ್ಳಾರಿಯಲ್ಲಿ ಧಾಳಿನಡೆಸುತ್ತಲಿರುವುದು ಇನ್ನೂ ಹೆಚ್ಚಿದರೆ ಬಳ್ಳಾರಿಯವರು ಒಕ್ಕಟ್ಟಾಗಿ ಈ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆಂಬುದನ್ನು ನಮ್ಮ ಕರ್ನಾಟಕ ಪ್ರಾಂತ್ಯಾಭಿಮಾನಿಗಳು ಪೂರ್ಣ ಮರೆತು ವರ್ತಿಸುತ್ತಲಿರುವುದು ಅತ್ಯಂತ ಶೋಚನೀಯವಿರುತ್ತದೆ ಅಥವಾ ಶುದ್ಧ ಬೇಜವಾಬ್ದಾರೀ ಮುಂದಾಳ್ತನದ ಲಕ್ಷಣವೆಂದರೆ ಅತಿಶಯೋಕ್ತಿಯಾದೀತೇ?

ಪಂಡಿತ ಜವಾಹರಲಾಲ ನೆಹರುರವರು ದೇಶದಲ್ಲೆಲ್ಲ ಇಂಥ ಕುರುಡು ಪ್ರಾಂತ್ಯಾಭಿಮಾನ ತಲೆಯೆತ್ತುತ್ತಿರುವುದು ಶುಭಲಕ್ಷಣವಲ್ಲವೆಂದು ಹೇಳಿದ ಮಾತನ್ನು ನಾವು ಕಳೆದ ಬಾರಿ ಪ್ರಸ್ತಾವಿಸಿದ್ದೆವು. ಇಂಥ ಕುರುಡು ಪ್ರಾಂತ್ಯಾಭಿಮಾನವೇನೆಂಬುದನ್ನು ನಿರ್ದೇಶಿಸಲೇ ಎಂಬಂತೆ ಈ ಬಳ್ಳಾರಿ ಕರ್ನಾಟಕ ಏಕೀಕರಣ ಪರಿಷತ್ತು ಜರಗಿರುತ್ತದೆನ್ನಬಹುದು.

ಟೀಕೆ-ಟಿಪ್ಪಣಿಗಳು

ಉದಕಮಂಡಲದಲ್ಲಿಯ ಆರ್ಥಿಕ ಪರಿಷತ್ತಿನ ಮುಕ್ತಾಯ

ಪರಿಷತ್ತಿಗೆ ಬಂದ ಏಸ್ಯಾ ಮತ್ತು ಇತರ ಪೌರ್ವಾತ್ಯ ದೇಶಗಳ ಪ್ರತಿನಿಧಿಗಳೆಲ್ಲರಿಗೆ ತೃಪ್ತಿಯಾಗುವಂತೆ ಪರಿಷತ್ತು ತುಂಬಾ ಯಶಸ್ವಿಯಾಗಿ ನಡೆಯಿತೆಂದು ಹೇಳಲಾಗುತ್ತಿದೆ. ಹಿಂದಿನ ಪರಿಷತ್ತಿನಲ್ಲಿ ಕಾರ್ಯವನ್ನು ಮುಂದರಿಸಲು ಬೇಕಾಗುವ ನಿಯಮ ಮೊದಲಾದವುಗಳನ್ನೇ ಚರ್ಚಿಸಲಾಗಿತ್ತೆಂದೂ ಈ ಭಾರಿ ನಿಜವಾದ ಕಾರ್ಯ ಮುಂದರಿಸುವ ಕುರಿತು ಏರ್ಪಾಡುಗಳಾದವೆಂದು ಇದು ತುಂಬಾ ಪ್ರಗತಿ ಸಾಧಿಸಲ್ಪಟ್ಟಂತಾಯಿತೆಂದೂ ಹೇಳಲಾಗುತ್ತಿದೆ

ಅಮೇರಿಕನ್ ಪ್ರತಿನಿಧಿ ಗ್ರೇಡಿಯವರೂ ಈ ಪರಿಷತ್ತು ತುಂಬಾ ಯಶಸ್ವಿಯಾಯಿತೆಂದೂ ಅಧ್ಯಕ್ಷ ಪದವಿಯಲ್ಲಿದ್ದ ಜಾನ್ ಮತ್ತಾಯಿಯವರು ಬಹಳ ದಕ್ಷತೆಯುಳ್ಳವರೆಂದೂ ಕೊಂಡಾಡಿದರು

ಆದರೆ ಪರಿಷತ್ತಿನ ಕುರಿತು ಅಮೇರಿಕನ್ ಸರಕಾರದ ಕಡೆಯ ಧೋರಣೆ ಮಾತ್ರ ವಿಶೇಷ ತೃಪ್ತಿಕರವಿದ್ದಿಲ್ಲವೆಂಬುದು ನಿಜಸ್ಥಿತಿ ಗ್ರೇಡಿಯವರು ಪರಿಷತ್ತಿಗೆ ಮಾಡಿದ ಉಪದೇಶ ಈ ಮೊದಲೇ ಪ್ರಸ್ತಾಪಿಸಲಾಗಿದೆ

ಜಪಾನಿನ ಕೈಗಾರಿಕೆಯ ಬೆಳವಣಿಗೆಯನ್ನು ಈ ಪರಿಷತ್ತಿಗೆ ಸೇರಿದ ರಾಷ್ಟ್ರಗಳಿಗೆ ಅನುಕೂಲವಾಗುವಂತೆ ನಡೆಸಬೇಕೆಂಬ ಸಹಜ ಸೂಚನೆ ಪಾಶ್ಚಾತ್ಯ ರಾಷ್ಟ್ರಗಳ ಹಾಗೂ ಅಮೇರಿಕದ ಬೆಂಬಲ ದೊರೆಯಲಿಲ್ಲವೆಂಬುದು ಇವರ ಧೋರಣೆಯನ್ನು ಸ್ಪಷ್ಟಗೊಳಿಸಿತು.

ಅಂತೂ ಪರಿಷತ್ತು [illegible] ಮುಕ್ತಾಯ ಹೊಂದಿತೆಂದು ಹೇಳೋಣ.

ಲಿಯಾಖತ್ ಆಲೀ ಖಾನರ ಉದ್ಗಾರ

ಭದ್ರತಾಸಮಿತಿಯವರ ಕಾಶ್ಮೀರ ಕಮಿಶನಿನ ಕುರಿತು, ಪಂಡಿತ ಜವಾಹರಲಾಲರು ಭಾರತ ಸರಕಾರದ ಕಡೆಯಿಂದ ಭದ್ರತಾ ಸಮಿತಿಗೆ ತಮ್ಮ ಖಂಡಿತ ಧೋರಣೆಯನ್ನು ಕುರಿತು ಬರೆದಿದ್ದರಷ್ಟೆ? ಈ ಕುರಿತು ಪಾಕಿಸ್ಥಾನದ ಮುಖ್ಯ ಮಂತ್ರಿ ಲಿಯಾಖತ್ ಆಲೀ ಖಾನರು ತಮ್ಮ ಟೀಕೆ ಮಾಡದೆ ಬಿಡಲಿಲ್ಲ.

ಈ ಕಮಿಶನು ಜುನಾಗಡ ಹಾಗೂ ಪಾಕಿಸ್ಥಾನ ಭಾರತಗೊಳಗಿನ ಇತರ ವಿವಾದಗಳನ್ನೂ ಪರಿಶೀಲಿಸುವಂತೆ ಅದರ ಕಾರ್ಯಕ್ರಮ ವಿಸ್ತರಿಸಿದರೆ ಭಾರತ ಸರಕಾರ ಬೇಡವೆನ್ನುವುದೇಕೆ? ತಾವು ಮಾಡಿದ ಅನ್ಯಾಯ ಜಗತ್ತು ತಿಳಿದಂತೆ ಮುಚ್ಚಿಡಬೇಕೆಂಬುದೇ ಇವರ ಉದ್ದೇಶ ಎಂದು ಪಾಕಿಸ್ಥಾನದ ಮುಖ್ಯ ಮಂತ್ರಿ ಹೇಳುತ್ತಾರೆ. ಮಾತ್ರವಲ್ಲ ಭಾರತ ಸರಕಾರವು ಪಾಕಿಸ್ಥಾನಕ್ಕೆ ಕೊಡುವ ಉಪದ್ರವವನ್ನು ಅವರು ಬಹಳ ತಾಳ್ಮೆಯಿಂದ ಸಹಿಸಿ ಕೊಂಡಿರುವರಂತೆ

ಪಂಡಿತ ಜವಾಹರಲಾಲರು ಇದಕ್ಕೆ ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಉತ್ತರ ಕೊಟ್ಟಿದ್ದಾರೆ ಮತ್ತು ಕೊನೆಗೆ ಇಂಥ ಅಬದ್ಧ ಹೇಳಿಕೆಗಳಿಂದ ಲಿಯಾಖತ್ ಆಲೀ ಖಾನರು ಎರಡು ನೆರೆ ರಾಷ್ಟ್ರಗಳೊಳಗಿನ ಸ್ನೇಹ ಬೆಳೆಸಲು ಸಹಾಯ ಮಾಡುತ್ತಿಲ್ಲವೆಂದಿದ್ದಾರೆ

ಅಜಾದ್ ಕಾಶ್ಮೀರ ಸರಕಾರದ ಮುಕ್ತಾಯ?

ಕಾಶ್ಮೀರದಲ್ಲಿಯ ಧಾಳಿಕಾರರ ಪರವಾಗಿ ಸ್ಥಾಪಿಸಲಾಗಿದ್ದ ಅಜಾದ್ ಕಾಶ್ಮೀರ ಸರಕಾರ ಕೊನೆಗೊಂಡಿವೆಯೆಂದು ಪ್ರಕಟವಾಗಿರುತ್ತದೆ ಮಾತ್ರವಲ್ಲ ಈಗ ಭಾರತದ ಸರಕಾರದೊಡನೆ ಜಗಳಾಡಲು ಅಲ್ಲಿ ಧಾಳಿಕಾರರಿಲ್ಲವೆಂದೂ ಈಗ ಕಾದಾಡುತ್ತಿರುವುದು ಪಾಕಿಸ್ಥಾನದ ಸೈನಿಕರೆಂದೂ ಹೇಳಲಾಗುತ್ತದೆ. ಅಂತೂ ಭಾರತ ಸರಕಾರವು ಕಾಶ್ಮೀರ ಪ್ರಶ್ನೆಯ ಮಟ್ಟಿಗೆ ಕೇವಲ ಮಾತುಗಳಲ್ಲಿ ಕಾಲ ಕಳೆಯದೆ ಮುಂದೊತ್ತಿ ಹೋದುದರಿಂದ ಈ ಪ್ರಶ್ನೆಯ ತೀರ್ಮಾನ ಇನ್ನು ಬಹಳ ದೂರ ಹೋಗುವಂತಿಲ್ಲ

ಯುದ್ಧ ಮುಖೇನ ಪ್ರಶ್ನೆಯ ತೀರ್ಮಾನ ಮಾಡಿ ಕಾಶ್ಮೀರದ ಕುರಿತು ನೇಮಿಸಲಾಗಿರುವ ಭದ್ರತಾಸಮಿತಿಯ ಕಮಿಶನದವರು ಬರುವಾಗ ಅವರಿಗೆ ಹೆಚ್ಚಿನ ಕೆಲಸವಿಲ್ಲದಂತೆ ಮಾಡಲು ಭಾರತ ಸರಕಾರ ಯತ್ನಿಸುವುದು ಅನ್ಯಾಯವೆಂದು ಪಾಕಿಸ್ಥಾನದ ಮುಖ್ಯ ಮಂತ್ರಿ ಹೇಳಿದರೂ ಕಮಿಶನ್ ಎಂದಿತ್ಯಾದಿ ಕಾಲಹರಣ ಮಾಡಿದರೆ ಪಾಕಿಸ್ಥಾನದವರು ತನ್ಮಧ್ಯೆ ತಮ್ಮ ಕಾರ್ಯ ಮಾಡುತ್ತಿದ್ದರು. ಇದಕ್ಕೆ ಆಸ್ಪದ ಕೊಡಲಿಲ್ಲವೆಂಬುದೇ ಅವರೀಗ ದೂರುವುದರ ಅರ್ಥವೆಂಬುದು ಸ್ಪಷ್ಟವಿರುತ್ತದೆ.

ಭದ್ರತಾಸಮಿತಿಯ ಕಮಿಶನು ಜುಲ್ಯಾ ತಾರೀಖು 1ಕ್ಕೆ ಕರಾಚಿಗೆ ಹೊರಡುವುದೆಂದು ವಾರ್ತೆ ಪ್ರಕಟವಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ

ಈ ಕಮಿಟಿಯ ಮಹಾಸಭೆಯೊಂದು ಸೇರಿ ಶ್ರೀ ದಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರೀ ಮಂಡಲಿ ನೇಮಿಸಲಾಯಿತು. ಆ ಮೇಲೆ ಈ ಸಭೆಯೇ ಸರಿಯಾಗಿ ನಡೆದಿಲ್ಲವೆಂದೂ ಈ ಚುನಾವಣೆಗಳೆಲ್ಲ ರದ್ದಾಗಿರುತ್ತವೆಂದೂ ಹೊಸ ಸಭೆಗೆ ಒಂದು ನೋಟೀಸು ಕೊಡಲಾಯಿತು. ಹೊಸದಾಗಿ ಚುನಾಯಿತರಾದವರು ತಮಗೆ ಚಾರ್ಜು ಕೊಡಬೇಕೆಂದು ವಾದಿಸಿದರು. ಇವರ ಕಾರ್ಯಕಾರೀ ಸಭೆಯೊಂದು ಬೀಗ ಹಾಕಿದ ಕಾಂಗ್ರೆಸ್ ಕಚೇರಿಯ ಮೆಟ್ಟಲಿನಲ್ಲಿ ನಡೆಯಿತು. ಕಡೆಗೆ ಹೊಸ ನೋಟೀಸಿನಂತೆ ಸಭೆ ಮಾಡುವುದೂ ಯುಕ್ತವಲ್ಲವೆಂದಾಯಿತಂತೆ. ಕೊನೆಗೆ ಪ್ರಾಂತಿಕ ಕಾಂಗ್ರೆಸ್ ಕಚೇರಿಗೆ ಇತ್ತಂಡದವರೂ ಹಾಜರಾಗಲು ಆಜ್ಞೆಯಾಯಿತಂತೆ. ಅಲ್ಲಿ ಇತ್ತಂಡಗಳೊಳಗೆ ರಾಜಿಯಾಯಿತಂತೆ. ಈ ತನ್ಮಧ್ಯೆ ಶ್ರೀ ದಾಮೋದರ ಬಾಳಿಗರನ್ನು ಆರಿಸುವಾಗ ತನ್ನೊಡನೆ ವಿಚಾರಿಸದೆ ತನ್ನ ಹೆಸರು ಸೂಚಿಸಿ [illegible] ಸೋತಂತೆ ಪ್ರಕಟವಾದುದಕ್ಕೆ ಶ್ರೀ [illegible] ರಾಯರದೊಂದು ಆಕ್ಷೇಪ

ಅಂತೂ ಕೊನೆಗೆ ರಾಜಿಯಾಯಿತೆಂಬ ಒಂದು ವಾರ್ತೆ ಇದರಲ್ಲಿ ಸಂತೋಷದ ಸಂಗತಿ. ಮುಂದಾದರೂ ಈ ಕಮಿಟಿ ಚೆಲ್ಲೋ ರೀತಿಯಿಂದ ವ್ಯವಸ್ಥೆಗೊಳ್ಳಲ್ಪಟ್ಟು ಕಾಂಗ್ರೆಸ್ ಕಾರ್ಯವು ನಮ್ಮ ಜಿಲ್ಲೆಯಲ್ಲಿ ಸುಗಮವಾಗಿ ಸಾಗುವಂತಾಗಲೆಂದು

ರೇಶನ್ ಚೌಕಿಗಳು ಹೋದವು

[illegible] ರೇಶನ್ [illegible] ಕ್ಲಿಪ್ತ ಪಟ್ಟಣದ ಗಡಿಗಳಲ್ಲಿ ರೇಶನ್ ಮಾಲುಗಳನ್ನು ಅತ್ತಿತ್ತ ಕೊಂಡೊಯ್ಯದಂತೆ ತನಿಖೆ ನಡೆಸಲು ಇಟ್ಟಿದ್ದ ರೇಶನ್ ಚೌಕಿಗಳನ್ನು ತೆಗೆದು ಹಾಕಲಾಗಿದೆ

ಮುಂದೆ ಇಂಥ ಪಟ್ಟಣಗಳಿಗೆ ಹಳ್ಳಿಗಳಿಂದ ಬೇಕಾದಂತೆ ಅಕ್ಕಿ ಮೊದಲಾದುದನ್ನು ಸಾಗಿಸಬಹುದೆಂದು ಇದರಿಂದ ಯಾರೂ ತಪ್ಪು ತಿಳಿದುಕೊಳ್ಳಬಾರದು. ಪರ್ಮಿಟು ಇಲ್ಲದೆ ಹೀಗೆ ಅಕ್ಕಿ ಸಾಗಿಸಿದರೆ ತಕ್ಸೀರಾಗುತ್ತದೆ. ನಿರ್ದಿಷ್ಟ ಚೌಕಿಯಲ್ಲಿ ಈ ಬಗ್ಗೆ ತನಿಖೆ ಇಲ್ಲವೆಂದಾದ ಮಾತ್ರಕ್ಕೆ ತನಿಖೆಯೇ ಇಲ್ಲವೆಂದು ತಿಳಿಯಬಾರದು. ಸಂಬಂಧಪಟ್ಟ ಅಧಿಕಾರಿಗಳು ಎಲ್ಲಿಯೂ ಬಸ್ ಮೊದಲಾದುವನ್ನು ನಿಲ್ಲಿಸಿ ತನಿಖೆ ನಡೆಸಬಹುದೆಂಬುದನ್ನು ಮರೆಯಲಾಗದು.

ರೇಶನ್ ಪದ್ಧತಿ ಇನ್ನು ಸ್ವಲ್ಪ ಕಾಲ ಮಾತ್ರ ಜಾರಿಯಲ್ಲಿರುವ ಸಂಭವವಿರುವುದರಿಂದ ಅಲ್ಲಿಯ ತನಕ ಅದರ ಸಂಕಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಂಡಿರುವುದೇ ಯುಕ್ತವಿರುತ್ತದೆ

ಮಾನ್ಯ ಮಂತ್ರಿ ದಾನಿಯೇಲ್ ಥಾಮಸರ ನಿಧನ

ಮದ್ರಾಸ್ ಸರಕಾರದ ಮಾನ್ಯ ಮಂತ್ರಿಗಳಾಗಿದ್ದ ದಾನಿಯೇಲ್ ಥಾಮಸರ ನಿಧನ ವಾರ್ತೆಯು ಈಗ ತಾನೇ ಬಂದಿರುತ್ತದೆ.

ಪದವು ಸಹಕಾರೀ ಪಟ್ಟಣ

ಮಂಗಳೂರಿನ ಇಂಪೀರಿಯಲ್ ಬೇಂಕಿನ ಏಜಂಟರಾದ ಕಾರ್ಲ್ಸನರ ಉತ್ಸಾಹದಿಂದ ಮಂಗಳೂರು ತಾಲೂಕಿನ ಪದವು ಕುಡುಪು ಗ್ರಾಮಗಳ ಅಂಶಗಳನ್ನುಪಯೋಗಿಸಿಕೊಂಡು ಒಂದು ಸಹಕಾರೀ ಪಟ್ಟಣವನ್ನು ವ್ಯವಸ್ಥೆಗೊಳಿಸುವ ಯೋಜನೆ ಸರಕಾರದಿಂದ ಮಂಜೂರು ಮಾಡಲ್ಪಟ್ಟಿದೆ.

ಈ ಪದವು ಸಹಕಾರೀ ಪಟ್ಟಣವೆಂಬ ಸಂಸ್ಥೆಯನ್ನು ಸಹಕಾರೀ ಆಕ್ಟಿನಂತೆ ರಿಜಿಸ್ಟರು ಮಾಡಲು ಅವಶ್ಯವುಳ್ಳ ಮೊದಲು ವ್ಯವಸ್ಥಾ ಸಭೆಯೊಂದು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಭವನದಲ್ಲಿ ತಾ ೧೬ನೇ ಬುಧವಾರ ಸಂಜೆ ಕಾರ್ಲ್ಸನರ ಅಧ್ಯಕ್ಷತೆಯಲ್ಲಿ ಜರಗಿತು. ಸಹಕಾರೀ ಡಿಪ್ಯೂಟಿ ರಿಜಿಸ್ಟ್ರಾರರಾದ ಶ್ರೀ ಶ್ರೀನಿವಾಸ ಶ್ಯಾನುಭಾಗರೂ ಹಾಜರಿದ್ದರು

ಕಾರ್ಲ್ಸನರು ಯೋಜನೆಯನ್ನು ಕೂಲಂಕುಶವಾಗಿ ವಿವರಿಸಿ ತಯಾರಿಸಲ್ಪಟ್ಟ ಉಪ ನಿಬಂಧನೆಗಳನ್ನು ಓದಿ ಹೇಳಿದ ಬಳಿಕ ಇದಕ್ಕೆ ಸಭೆಗೆ ಬಂದವರಲ್ಲಿ ಹೆಚ್ಚಿನವರು ಸೇರಲು ಸಮ್ಮತಿ ಇತ್ತರು.

ಪದವು ಗ್ರಾಮದಲ್ಲಿ ಕೊಂಚಾಡಿ ಮತ್ತು ಗುರ್ಪುರ ರಸ್ತೆಗಳ ನಡುವೆ ಸುಮಾರು 9೦೦ಎಕ್ರೆ ಸ್ಥಳವನ್ನು ಈ ಸಂಘವು ಸರಕಾರದಿಂದ ಪಡೆದುಕೊಳ್ಳುವುದು ಇಲ್ಲಿ ಬೇಕಾದ ಸ್ಥಳಗಳನ್ನು ಮಾಡಿಸುವುದಲ್ಲದೆ ನಳ್ಳಿ ನೀರು ಒದಗಿಸುವುದು, ಚರಂಡಿಗಳನ್ನು ವ್ಯವಸ್ಥೆಗೊಳಿಸುವುದು, ವಿದ್ಯುತ್ ಶಕ್ತಿಯನ್ನು ಒದಗಿಸುವುದು ಶಾಲೆಗಳನ್ನು ನಡೆಸುವುದು, ಆಸ್ಪತ್ರೆಗಳನ್ನು ಏರ್ಪಡಿಸುವುದು, ಹೂದೋಟಗಳನ್ನೂ ಮಾರ್ಕೆಟುಗಳನ್ನೂ ವ್ಯವಸ್ಥೆಗೊಳಿಸುವುದು ಇವೆಲ್ಲ ಕಾರ್ಯಗಳನ್ನೂ ವ್ಯವಸ್ಥೆ ಮಾಡಲಾಗುತ್ತದೆ

ಈ ಪ್ರದೇಶವನ್ನು ಅರ್ಧ ಎಕ್ರೆ, ಕಾಲು ಎಕ್ರೆ ಮತ್ತು 12½ ಸೆಂಟ್ಸುಗಳ ತುಂಡುಗಳನ್ನಾಗಿ ವಿಭಾಗಿಸಿ ಮಾರಾಟ ಮಾಡಲಾಗುತ್ತದೆ ಇವುಗಳಿಗೆ ಕ್ರಮವಾಗಿ ಎ, ಬಿ, ಮತ್ತು ಸಿ ತುಂಡುಗಳೆಂದು ಕರೆಯಲಾಗಿದೆ ಎ ಅಂಶಕ್ಕೆ ರೂಪ್ಯಾ 2500 ಬಿ ಅಂಶಕ್ಕೆ ರೂಪ್ಯಾ 1250 ಮತ್ತು ಸಿ ಅಂಶಕ್ಕೆ ರೂಪ್ಯಾ 625 ಹೀಗೆ ಕ್ರಯ ಇರಿಸಲಾಗಿದೆ

ಸದಸ್ಯರಾಗಿ ಸೇರುವವರಿಗೆ ಮನೆಗಳನ್ನು ಕಟ್ಟಿಸುವ ಕೆಲಸವನ್ನು ಬೇಕಿದ್ದರೆ ಸಂಘದವರೇ ವಹಿಸುವರು.

ಹಂಪನಕಟ್ಟೆಯಿಂದ ಇಲ್ಲಿಗೆ ಸುಮಾರು ನಾಲ್ಕು ಮೈಲು ದೂರವಿರುವುದರಿಂದ ಸಂಘವು ಮಂಗಳೂರಿಗೆ ಬಂದುಹೋಗಲು ತನ್ನ ಸ್ವಂತ ಬಸ್ ಸರ್ವೀಸು ನಡೆಸುವುದು.

ಸದಸ್ಯರು ಮೇಲೆ ಕಾಣಿಸಿದ ಕ್ರಯ ಕೊಟ್ಟು ಪಡೆಯುವ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಲು ರೂ. 10000 ಅತ್ಯಾಧಿಕ ಮಿತಿಯ ತನಕ ಸಂಘವು ಸಾಲ ಒದಗಿಸುವುದು. ಇಪ್ಪತ್ತು ವರ್ಷಗಳ ತನಕ ತಿಂಗಳ ಸಮಾನ ಕಂತಿನಿಂದ ಈ ಸಾಲದ ಮರುಪಾವತಿ ಮಾಡಬಹುದು ಅವಧಿಗೆ ಮುಂಚಿತವಾಗಿ ಸಾಲ ಸಂದಾಯ ಮಾಡಲು ಆಕ್ಷೇಪವಿಲ್ಲ.

ಈ ಸಂಘದ ಪಾಲುಭಂಡವಲ ರೂ 10ರ ಎರಡು ಲಕ್ಷ ಪಾಲುಗಳಿಂದ ಕೂಡುವ ರೂ 20 ಲಕ್ಷ ಸದಸ್ಯರಾಗಿ ಸೇರುವವರು ಕಡಿಮೆಯೆಂದರೆ 5 ಪಾಲುಗಳನ್ನಾದರೂ ಪಡೆದುಕೊಳ್ಳಬೇಕು ಹೆಚ್ಚೆಂದರೆ 200 ಪಾಲುಗಳನ್ನು ಪಡೆಯಬಹುದು. ಎ ತರಗತಿಯ ಸ್ಥಳಬೇಕಿದ್ದವರು 200 ಪಾಲುಗಳನ್ನೂ ಬಿ ತರಗತಿಯ ಸ್ಥಳ ಬೇಕಿದ್ದವರು 100 ಪಾಲುಗಳನ್ನೂ ಪಡೆಯಬೇಕು ಉಳಿದವರು 5 ಪಾಲುಗಳಿಗೆ ಕಡಿಮೆಯಾಗದ ತಮ್ಮ ಶಕ್ತ್ಯಾನುಸಾರ ಪಡೆಯಬಹುದು

ಈ ಯೋಜನೆಯ ಖರ್ಚನ್ನು ಈ ರೀತಿ ಎಣಿಸಲಾಗಿದೆ ಸಂಘವು ಸ್ಥಳಗಳಿಗೆ ಕೊಡಬೇಕಾಗುವ ಕ್ರಯ ರೂ 67500 ಸ್ಥಳಗಳನ್ನು ಬೇರೆ ಬೇರೆ ಅಂಶಗಳಿಗೆ ಅನ್ನು ಸಮತಟ್ಟು ಮಾಡಿಸಲು ರೂಪ್ಯಾ 4 00 000 ರಸ್ತೆಗಳಿಗೆ ರೂ 8,50 000 ಶಾಲೆ ಇತ್ಯಾದಿಗಳಿಗೆ ರೂ 5,00 000 ಕೂಲಿಯವರಿಗೆ ಮನೆಗಳನ್ನು ಕಟ್ಟಿಸಲು ರೂ 3,00,000 ಇತರ ಖರ್ಚುಗಳು ರೂ 2 75,000 ಮೇಲ್ವಿಚಾರಣೆ ಖರ್ಚು ರೂ 2,00,000 ಸಾಲ ಒದಗಿಸಲು ರೂ 10 00,000 ಹೀಗೆ ಜುಮ್ಲಾ ಖರ್ಚು ರೂ 42 ಲಕ್ಷ

ಇದರಲ್ಲಿ ಸ್ಥಳಗಳ ಮಾರಾಟದಿಂದ ಸಿಕ್ಕುವ ಕ್ರಯ ರೂ. 37,50,000ವೆಂದೂ ಪಾಲುಭಂಡವಲ ರೂ 20 ಲಕ್ಷ ಕೂಡಿ ಜುಮ್ಲಾ ಜಮೆ ರೂ 57,50,000 ವೆಂದೂ ಎಣಿಸಲಾಗಿದೆ

ಜಮೆಯಾಗುವ ಹಣದಿಂದ ಖರ್ಚನ್ನು ಕಳೆದು ರೂ. 15,50,000 ಉಳಿಯುತ್ತದೆ.

ಹೀಗೆ ಉಳಿಯುವ ಹಣದಲ್ಲಿ 3 ಲಕ್ಷ ರೂಪ್ಯಾಗಳನ್ನು ಪ್ರತ್ಯೇಕ ಇಟ್ಟು ಆರಂಭದಲ್ಲಿ ಲಾಭವಿಲ್ಲದಿರುವಾಗ ಪಾಲು ಭಂಡವಲ ಹಾಕಿದವರಿಗೆ ಲಾಭಾಂಶವಾಗಿ ಹಂಚಲು ಉಪಯೋಗಿಸಲಾಗುವುದು. ರೂ 1,50,000ವನ್ನು ಉಪಯೋಗಿಸಿ ಇಲ್ಲಿ ಒಂದು ನೇಯ್ಗೆ ಕಾರ್ಖಾನೆ, ಒಂದು ಹಾಲು ಒದಗಿಸುವ ಯೂನಿಯನು ಮತ್ತೊಂದು ತರಕಾರೀ ಒದಗಿಸುವ ಯೂನಿಯನು ನಡೆಸಲಾಗುತ್ತದೆ. ದನ ಎಮ್ಮೆಗಳನ್ನು ಸಾಕಿ ಹಾಲು ಮಾರಾಟ, ತರಕಾರೀ ಬೆಳೆಸಿ ಮಾರಾಟ ಹಾಗೂ ನೂಲು ಪುದು ನೇಯುವುದು ಈ ಕಸಬುಗಳಿಂದ ಬಡವರು ತಮ್ಮ ಕಂತುಗಳನ್ನು ಕೊಡಲು ಅನುಕೂಲಮಾಡಿಕೊಡುವುದು ಇದರ ಉದ್ದೇಶವಿರುತ್ತದೆ. ಉಳಿಯುವ ರೂಪ್ಯಾ 11 ಲಕ್ಷವನ್ನು ಅಗತ್ಯಬಿದ್ದರೆ ಉಪಯೋಗಿಸಬಹುದಾದ ಕ್ಷೇಮನಿಧಿಯಾಗಿ ಇರಿಸಲಾಗುತ್ತದೆ

ಈ ಯೋಜನೆಯಂತೆ ಈ ಸಹಕಾರೀ ಪಟ್ಟಣದಲ್ಲಿ ಸುಮಾರು ನಾಲ್ಕು ಸಾವಿರ ಮನೆಗಳಾಗುತ್ತವೆ ಈ ಸಂಘದ ಡ್ಯಾರೆಕ್ಟರರೇ ಈ ಪಟ್ಟಣದ ಪಂಚಾಯತು ನಡೆಸುತ್ತಾರೆ. ಇಲ್ಲಿ ವಾಸಿಸುವವರಿಗೆ ಎಲ್ಲ ಅನುಕೂಲತೆಗಳನ್ನೂ ಒದಗಿಸುತ್ತಾರೆ ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮೇನ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಈ ಸಂಘದ ಎಕ್ಸ್ ಆಫೀಸಿಯೋ ಡ್ಯಾರೆಕ್ಟರರಾಗುವರು ಇಬ್ಬರು ಡ್ಯಾರೆಕ್ಟರರನ್ನು ಸಹಕಾರೀ ಸಂಘಗಳ ರಿಜಿಸ್ಟ್ರಾರರು ನೇಮಿಸುವರು ಎ ತರಗತಿಯ ಸ್ಥಳದವರು ಇಬ್ಬರನ್ನು ಬಿ ತರಗತಿಯವರು ಇಬ್ಬರನ್ನೂ ಸಿ ತರಗತಿಯವರು ಮೂವರನ್ನೂ ಆರಿಸಬೇಕು ಆದರೆ ಮೊದಲಿನ ಐದು ವರ್ಷಗಳ ತನಕದ ಎಲ್ಲಾ ಡ್ಯಾರೆಕ್ಟರರನ್ನು ಸರಕಾರವೇ ನೇಮಿಸುವುದು

ಒಬ್ಬ ಸದಸ್ಯನಿಗೆ ಒಂದು ಸ್ಥಳಕ್ಕಿಂತ ಹೆಚ್ಚಿಗೆ ಕೊಡಲಾಗುವುದಿಲ್ಲ ತಾನು ಪಡೆದ ಒಂದು ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಮನೆ ಕಟ್ಟಲಿಕ್ಕೂ ಬಿಡುವುದಿಲ್ಲ.

ಸದಸ್ಯರು ಪಡೆಯುವ ಪ್ರತಿಯೊಂದು ಪಾಲಿಗೆ ನಿಯಮಗಳಂತೆ ಪ್ರವೇಶ ಹಾಸಲು ಕೊಡಲಿಕ್ಕಿದೆ ಪಾಲಿನ ಹಣವನ್ನೆಲ್ಲ ಒಮ್ಮೆಗೇ ಅಥವಾ ಐದೇ ಕಂತಿನಲ್ಲಿ ವಸೂಲು ಮಾಡಲಾಗುವುದು.

ಸಾಲಪಡೆಯುವ ಅರ್ಹತೆಯು ಒಬ್ಬ ಸದಸ್ಯನು ಪಡೆಯುವ ಪಾಲು ಮತ್ತು ಆತನು ಪಡೆದ ಸ್ಥಳದ ಕ್ರಯದ ಕ್ರಿನೇ ಅಂಶ ಕೂಡಿಸಿ ನಿರ್ಣಯಿಸಲಾಗುತ್ತದೆ ಅಂದರೆ ಸುಮಾರು ಇದರ ನಾಲ್ಕರಷ್ಟು ಸಾಲ ಒದಗಿಸಲಾಗುತ್ತದೆ

ಒಬ್ಬನು ಕಾಲು ಎಕ್ರೆ ಅಂದರೆ 25 ಸೆಂಟ್ಸಿನ ಬಿ ತರಗತಿಯ ಸ್ಥಳ ಪಡೆಯುವನೆಂದು ಇಟ್ಟುಕೊಳ್ಳೋಣ ಇವನು ಸ್ಥಳದ ಕ್ರಯ ರೂ 1,250 ಪಾಲುಭಂಡವಲ ರೂ 1000 ಮತ್ತು ಪ್ರವೇಶ ಹಾಸಲು ರೂ. 25 ಹೀಗೆ ಒಟ್ಟಿಗೆ ರೂಪ್ಯಾ 2,275ನ್ನು ಕೊಡಬೇಕಾಗುತ್ತದೆ ಇಂಥವನಿಗೆ ಸ್ಥಳದ ಕ್ರಯದ ಕ್ರಿನೇ ಅಂಶ ಅಂದರೆ ರೂ 1000 ಮತ್ತು ಪಾಲು ಭಂಡವಲ ರೂ 1000 ಹೀಗೆ ರೂಪ್ಯಾ 2,000ದ 4ರಷ್ಟು ಅಂದರೆ ರೂ. 8000 ದಷ್ಟು ಮನೆಕಟ್ಟಿಸಲಿಕ್ಕೆ ಉಪಯೋಗಿಸಲು 20ವರ್ಷದವ್ಯಾದೆಯಿಂದ ಹಣ ಸಾಲವಾಗಿ ಒದಗಿಸಲಾಗುತ್ತದೆ. ಅಸಲು ಬಡ್ಡಿ ಕೊಡ ತಿಂಗಳ ಸಮಾನ ಕಂತಿನಲ್ಲಿ ಕೊಡುತ್ತ ಬಂದಲ್ಲಿ 20 ವರ್ಷದಲ್ಲಿ ಸಾಲ ಮರುಪಾವತಿಯಾಗಿ ಸ್ವಂತ ಮನೆಯುಳ್ಳವರಾಗಬಹುದು.

ಸರಕಾರದಿಂದ ಸಂಘಕ್ಕೆ ಸಿಕ್ಕುವ ಬಡ್ಡಿ ದರಕ್ಕಿಂತ ಶೇಕಡಾ 1ರಂತೆ ಕೂಡಿಸಿ ಸದಸ್ಯರಿಂದ ಬಡ್ಡಿ ವಸೂಲು ಮಾಡಲಾಗುವುದು.

ಕೊಂಚಾಡಿ ಪದವಿನಲ್ಲಿ ಸ್ಥಳಕ್ಕೆ ಇಟ್ಟ ಕ್ರಯ ಇತ್ಯಾದಿ ಕೊಡಬೇಕಾಗುವ ಹಣ ಹೆಚ್ಚೆಂದು ಕಾಣಬಹುದು. ಆದರೆ ಇದು ಸ್ಥಳದ ಕ್ರಯವಲ್ಲ. ಪಟ್ಟಣದ ಎಲ್ಲ ಸೌಕರ್ಯಗಳನ್ನು ಒದಗಿಸಲು ಬೇಕಾಗುವ ಎಲ್ಲ ಖರ್ಚು ಕೂಡಾ ಇದರಲ್ಲಿ ಕೂಡಿ ಬರುತ್ತದೆಂದು ಮರೆಯಬಾರದು.

ಮಾತ್ರವಲ್ಲ ಉತ್ತಮ ಆರೋಗ್ಯದ ಅನುಕೂಲತೆಗಳಿಂದ ಕೂಡಿದ್ದು ತಮ್ಮದೇ ಆದ ಪಟ್ಟಣವನ್ನು ತಾವೇ ಸಹಕಾರದಿಂದ ಎಲ್ಲರೊಡನೆ ಸಮಾನತೆಯಿಂದ ನಡೆಸಲು ಇಲ್ಲಿ ಸುಯೋಗವಿರುತ್ತದೆ ಇಲ್ಲಿ ಒಬ್ಬ ಸದಸ್ಯನು ಪಡೆದ ಪಾಲುಗಳಂತೆ ಓಟು ಕೊಡುವ ಪದ್ಧತಿ ಇಲ್ಲ ಪ್ರತಿಯೊಬ್ಬ ಸದಸ್ಯನಿಗೂ ಒಂದೇ ಓಟು ಬಡವರು ದೊಡ್ಡವರೆಲ್ಲ ಸಮಾನತೆಯಿಂದ ಈ ಪಟ್ಟಣದ ಆಡಳಿತೆಯಲ್ಲಿ ಭಾಗವಹಿಸುವರು.

ಈ ಸಹಕಾರೀ ಪಟ್ಟಣವು ಬೇಗನೆ ಅಸ್ತಿತ್ವದಲ್ಲಿ ಬರುವಂತೆ ಕಾರ್ಲ್ಸನರು ತೋರುವ ಉತ್ಸಾಹವನ್ನು ಎಲ್ಲರೂ ವಹಿಸಬೇಕಾಗಿರುತ್ತದೆ

ಮದ್ಯನಿರೋಧ, ವಾಹನ ಖಾತೆ, ಮನೆಗಳನ್ನು ಹೆಚ್ಚಿಸುವಿಕೆ ಮೊದಲಾದ ಹಲವು ಪ್ರಾಮುಖ್ಯ ಖಾತೆಗಳ ಆಡಳಿತೆ ಇವರ ಕೈಯಲ್ಲಿತ್ತು. ವಿಶೇಷ ಉತ್ಸಾಹ ಹಾಗೂ ಚಟುವಟಿಕೆ ಇದ್ದವರು ಸ್ವಲ್ಪ ಸಮಯದಿಂದ ಕಾಯಿಲೆಯಲ್ಲಿದ್ದು ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಹೊರಗೆ ಬಂದಿದ್ದರಷ್ಟೆ.

ಇವರ ನಿಧನಕ್ಕಾಗಿ ನಮ್ಮ ಸಂತಾಪವನ್ನು ಸೂಚಿಸಬಯಸುತ್ತೇವೆ.

ಶಾಶ್ವತ ಬೆರಳೊತ್ತುಗಳು

ಗುಪ್ತ ಪೋಲಿಸರು ಅಪರಾಧಿಗಳ ಬೆರಳೊತ್ತುಗಳಿಂದ ತಮ್ಮ ಪರಿಶೋಧನೆಯ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು. ಇದುವರೆಗೆ ಕಾಗದ, ಕೈಪೆಟ್ಟಿಗೆ, ಮೇಜು ವಸ್ತ್ರ, ಪುಸ್ತಕ ಇವೇ ಮೊದಲಾದ ಕೆಲ ವಸ್ತುಗಳ ಮೇಲೆ ಉಂಟಾದ ಬೆರಳೊತ್ತುಗಳನ್ನು ಆಯೊಡಿನ್ ರಸಾಯನವನ್ನು ಅದರ ಮೇಲೆ ಸವರುವುದರ ಮೂಲಕ ಅವು ಕಾಣಿಸುವಂತೆ ಮಾಡುತ್ತಿದ್ದರು. ಈ ವಿಧಾನದಿಂದ ಕಾಣಿಸಿಕೊಳ್ಳುವ ಬೆರಳೊತ್ತುಗಳು ತಾತ್ಕಾಲಿಕವಾಗಿ ತೋರಿ ಮತ್ತೆ ಮಾಸಿಹೋಗುತ್ತಿದ್ದವು. ಈಗ ಇಂಗ್ಲೆಂಡಿನ ಗುಪ್ತ ಪೋಲಿಸ್ ಖಾತೆಯು ಪರಿಶೋಧನೆಯಿಂದ ಬೆರಳೊತ್ತುಗಳು ಯಾವ ವಸ್ತುವಿನಲ್ಲಿದ್ದರೂ ಶಾಶ್ವತವಾಗಿ ಕಾಣಿಸುವಂತೆ ಮಾಡುವ ವಿಧಾನವೊಂದನ್ನು ಕಂಡು ಹಿಡಿದಿರುವರು.

ಬಂಜೆಯಾದವರಿಗೆ ಭವಿಷ್ಯ

ಬಂಜೆಯಾಗಿದ್ದುದರಿಂದ ಮಕ್ಕಳಾಗದಿರುವ ಮಹಿಳೆಯರ ದೇಹದೊಳಗೆ ಫಲಪ್ರಾಪ್ತಿಯನ್ನುಂಟು ಮಾಡುವಂತಹ ಧಾತುಗಳನ್ನು ಸೇರಿಸಲು ಸಾಧ್ಯವಿದೆಂದು ಓರ್ವ ಆಸ್ಟ್ರೇಲಿಯಾದ ವಿಜ್ಞಾನಿಯು ತಿಳಿಸುತ್ತಾನೆ. ಅವನು ಈ ಕುರಿತು ನಡೆಸಿದ ಅನೇಕ ಪ್ರಯೋಗಗಳು ಯಶಸ್ವಿಯಾಗಿವೆಂದು ವೈದಕೀಯ ತಜ್ಞರು ಅಭಿಪ್ರಾಯ ಪಡುತ್ತಾರೆ. ಡೆಸ್ಮೊಂಡ್ ಡೌಲಿಂಗ್ ಎಂಬ ವಿಜ್ಞಾನಿಗಳು ಮೊಲಗಳ ಮೇಲೆ ಪ್ರಯೋಗ ನಡೆಸಿ ಗರ್ಭ ಧಾರಣೆಯನ್ನುಂಟುಮಾಡುವ ಸೂಕ್ಷ್ಮ ಜೀವಧಾತುಗಳನ್ನು ಒಂದು ಪ್ರಾಣಿಯಿಂದನ್ನೊಂದು ಪ್ರಾಣಿಗೆ ವರ್ಗಾಂತರಿಸಿರುವರು. ಆದರೆ ಈ ಪರಿಸ್ಥಿತಿಯಲ್ಲಿ ಓರ್ವ ಹೆಂಗಸಿಗೆ ಮಗು ಹುಟ್ಟಿದರೆ ಅದು ಅವಳದೆಂದು ಹೇಳಲಿಕ್ಕಾಗುವುದಿಲ್ಲವೆಂದೂ ಆತ ತಿಳಿಸುತ್ತಾನೆ.

ಜಿಲ್ಲಾ ಸಮಾಚಾರ

ಮಚ್ಚೆ ಮುಳುಗಿದೆ

ಕೆಲವು ದಿನಗಳ ಹಿಂದೆ (೫-೬-೪೮ರ ಸುಮಾರಿಗೆ) ಮುಂಬಯಿಯ ಕಡೆಯಿಂದ ಪಶ್ಚಿಮ ಕರಾವಳಿಯ ದಕ್ಷಿಣದ ಕಡೆಗೆ ಸರಕುಗಳನ್ನು ಒಯ್ದು ಬರುತಿದ್ದೊಂದು ಮಚ್ಚೆಯು ಮುಳುಗಿದೆಯೆಂದು ನಂಬಲಾಗಿದೆ. ಅದರಲ್ಲಿ ೬೦೦೦೦ ಗೆಲನ್ ಪೆಟ್ರೋಲ್ ಎಣ್ಣೆ, ೫೦೦೦ ಗೆಲನ್ ಮೋಟಾರ ಎಣ್ಣೆಯೂ, ಇತ್ತೆಂದೂ ಅದು ಮುಂಬಯಿಂದ ಕಳೆದ ತಿಂಗಳ ಸುಮಾರು ೧೧ನೇ ತಾರೀಕಿಗೆ ಹೊರಟಿತ್ತು. ಅದರಲ್ಲಿ ಅರ್ಧ ಸರಕು ಕಾರವಾರದಲ್ಲಿ ಮತ್ತು ಉಳಿದ ಅರ್ಧ ಸರಕು ಕುಂದಾಪುರ ಬಂದರದಲ್ಲಿ ಇಳಿಯಬೇಕಿತ್ತು. ಮಚವೆಯವರು ಕಾರವಾರ ಬಂದರದಲ್ಲಿ ಪ್ರವೇಶ ಮಾಡದೆ ನೆಟ್ಟಗೆ ದಕ್ಷಿಣಕ್ಕೆ ಬಂದರು. ಕಾರವಾರದವರಿಗೂ, ಕುಂದಾಪುರದವರಿಗೂ ಸರಕು ಮುಟ್ಟಲಿಲ್ಲ. ಮಚ್ಚೆಯು ಮುಳುಗಿದೆಂದು ನಂಬಲಾದಲ್ಲಿ ಎಣ್ಣೆಯ ಡಬ್ಬೆ (ಕೇನುಗಳು)ಗಳಾಗಲಿ ಮೋಟಾರು ಎಣ್ಣೆಯ ಪಿಪಾಯಿಗಳಾಗಲಿ ದೃಷ್ಟಿಗೆ ಬೀಳುವುದಿಲ್ಲವಂತೆ. ಪೆಟ್ರೋಲಿಗೆ ಈಗ ಕಳ್ಳಪೇಟೆಯಲ್ಲಿ ಕಲ್ಪನಾತೀತ ಬೆಲೆ ಸಿಗುತ್ತದೆ. ಆದ್ದರಿಂದ ಮಚ್ಚೆಯ ಗುರಿಕಾರನು ಎಲ್ಲೋ ಒಂದು ಕಳ್ಳ ಬಂದರದಲ್ಲಿ ಈ ಅಮೂಲ್ಯ ಸರಕುಗಳನ್ನು ಮಾರಾಟ ಮಾಡಿ ತನ್ನ ಕಳ್ಳತನ ಮುಚ್ಚಲು ಖಾಲಿ ಮಚ್ಚೆಯನ್ನು ಮುಳುಗಿಸಿರಬೇಕೆಂದು ಜನರು ತರ್ಕಿಸುತ್ತಾರೆ. ಇದರಲ್ಲಿ ೧೨ ಮಂದಿ ಕಲಾಸಿಗಳಿದ್ದರಂತೆ. ಮಚ್ವೆ 'ಮುಳುಗಿದ' ಮೇಲೆ ಹತ್ತೆ ಮಂದಿ ಉಳಿದಿದ್ದಾರೆ! ಉಳಿದಿಬ್ಬರ ಕುರಿತು ಸಮಾಧಾನಕರ ವಿವರಣೆ ದೊರೆತಿಲ್ಲ. ಇವರು ತಲೆ ತಪ್ಪಿಸಿರಬಹುದೆಂದು ಊಹಿಸಲಾಗಿದೆ. ಗುರಿಕಾರನೂ ಕಲಾಸಿಗಳೂ ಕಾಸರಗೋಡಿನ ಮಾಪಿಳ್ಳೆಗಳಂತೆ. ಅವರೀಗ ಪೋಲಿಸರ ಕಾವಲಿನಲ್ಲಿದ್ದಾರೆ.

ಮದ್ಯವಿಧಿ ಉಲ್ಲಂಘನೆ

ಸ್ಪೆ। ಸ। ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಈ ಕೆಳಗಿನ ಆರೋಪಗಳ ತನಖಿಯಾಗಿ ದಂಡನೆಗಳಾಗಿವೆ. ಹೂ ಮಾರ್ಕೆಟಿನ ಅಚ್ಯುತ ಮೊಲಿ ಎಂಬಾತ ಕುಡಿದಿದ್ದಾನೆಂದು ೬ ವಾರಗಳ ಮತ್ತು ಒಂದು ಬಾಟ್ಲಿ ಶರಾಬು ಅವನ ವಶವಿತ್ತೆಂದು ೪ ವಾರಗಳ ಕಠಿಣ ಸಜೆ. ನೀರುಮಾರ್ಗದ ಇಂತ್ರೂಮೆನ್ಯುವೆಲ್ ಮಿಸ್ಕಿತನ ಬಳಿ ಗೇರಿನ ಶರಾಬು ಇದ್ದುದಕ್ಕೆ ರೂ. ೨೫, ಪಾಪೂರಿನ ರುಜಾರಿಯೋನ ವಶ ೧॥ ಡ್ರಾಮ್ ಶರಾಬು ಇದ್ದುದಕ್ಕೆ ರೂ. ೫೦, ಕೊಡಿಯಾಲ್ ಬೈಲಿನ ಭವಾನಿ ಹೆಂಗಸಿನ ಬಳಿ ತಾಳಿ ಶರಾಬು ಇತ್ತೆಂದು ರೂ. ೫೦ ಜುಲ್ಮಾನೆಯಾಗಿವೆ.

ಬೀಳ್ಕೊಡುವ ಸಮಾರಂಭ

ಕರ್ಣಾಟಕದ ಹಿರಿಯ ಸಾಹಿತಿಗಳಲ್ಲೊಬ್ಬರಾದ ಮತ್ತು ಸ್ಯೆಂಟ್ ಎಲೋಸಿಯಸ್ ಕೊಲೇಜಿನ ಕನ್ನಡ ಪಂಡಿತರಾಗಿದ್ದ ಶ್ರೀ ಮುಳಿಯ ತಿಮ್ಮಪ್ಪಯ್ಯ ವಿದ್ವಾನ್ ಇವರು ನಿವೃತ್ತರಾಗಿ ಪೆರ್ಲಕ್ಕೆ ಹೋಗಿ ವಾಸಿಸುವ ಸಂದರ್ಭದಲ್ಲಿ ತಾ. ೧೦ನೇ ಗುರುವಾರ ಇಲ್ಲಿಯ ಪಂಡಿತ ಸಂಘದವರು ಅವರಿಗೊಂದು ವಿದಾಯ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀ ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಅವರ ಅಧ್ಯಕ್ಷತೆಯಲ್ಲಿ ಶ್ರೀಯುತರು ಕನ್ನಡ ನಾಡಿಗೆ ಸಲ್ಲಿಸಿದ ಬಹುಮುಖ ಸಾಹಿತ್ಯ ಸೇವೆಯನ್ನು ಪ್ರಶಂಸಿಸಿ ಅವರ ಹಳೇ ವಿದ್ಯಾರ್ಥಿಗಳೂ, ಸಹೋದ್ಯೋಗಿಗಳೂ, ಸ್ನೇಹಿತರೂ ಭಾಷಣ ಮಾಡಿದರು.

ಗವರ್ನ್‌ಮೆಂಟ್ ಕೊಲೇಜಿನಲ್ಲಿ ಬಿ. ಎ., ಬಿ. ಕೊಮ್. ಕ್ಲಾಸುಗಳು

ಸ್ಥಳೀಯ ಗವರ್ನ್‌ಮೆಂಟ್ ಕೊಲೇಜಿನಲ್ಲಿ ಬಿ. ಎ. ಮತ್ತು ಬಿ. ಕೊಮ್ ತರಗತಿಗಳು ಇದೇ ಬರುವ ಜುಲಯ್ಯೆ ತಿಂಗಳಿಂದ ತೆರೆಯಲಾಗುತ್ತವೆ.

ಕುಂದಾಪುರ

ಸ್ಥಳೀಯ ವಿದ್ಯಾವರ್ಧಕ ಸಂಘದವರಿಂದ ಹೊಸತಾಗಿ ತೆರೆಯಲಾದ "ನೇತಾಜಿ ಎಲಿಮೆಂಟರಿ ಶಾಲೆ"ಯು ಕಳೆದ ತಾ. ೭ ರಿಂದ ಹಾಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತನೆ ಹೊಂದಿತು. ತತ್ಸಂಬಂಧವಾದ ಶಾಲಾ ಪ್ರಾರಂಭೋತ್ಸವವು ತಾ. ೧೨ರಂದು ಕುಂದಾಪುರ ರೇಂಜಿನ ಶಾಲಾ ಇನ್ಸ್‌ಪೆಕ್ಟರರಾದ ಶ್ರೀ ಯು. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಉಡುಪಿ ಕಮ್ಯುನಿಸ್ಟರಿಗೆ ಕಾರಾಗ್ರಹ

ಕುಂದಾಪುರ ಸಬ್ ಕಲೆಕ್ಟರರು ತಾ. ೯ರಲ್ಲು ಕೃಷ್ಣ ಮಣಿಯಾಣಿ, ದಾಸ ಸೇರಿಗಾರ, ಅನಂತ ಕೃಷ್ಣ ಐತಾಳ, ಅಬ್ದುಲ್ ರೈಮಾನ್ ಸಾಹೇಬ್, ಮುತ್ತೋಲಿ ಬ್ಯಾರಿ ಮತ್ತು ಚೀರ್ಕ ಎಂಬ ಕಮ್ಯುನಿಸ್ಟರಿಗೆ ಜಾಮೀನು ಮುಚ್ಚಳಿಕೆಯ ಶರ್ತ ಹಾಕಿ ಆ ರೀತಿ ಮಾಡಲು ತಪ್ಪಿದರೆ ಒಂದೊಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದರು. ಯೋಗ್ಯ ಜಾಮೀನುದಾರರು ಆರೋಪಿಗಳಿಗೆ ಸಿಕ್ಕದಿದ್ದರಿಂದ ತಾ. ೧೪ರಂದು ಅವರನ್ನು ಪೋಲಿಸ್ ಬಂದೋಬಸ್ತಿನೊಡನೆ ಕನ್ನಾನ್ನೂರಿಗೆ ಸಾಗಿಸಲಾಯಿತು.

ಸಾಧಾರಣ ಮೂರು ತಿಂಗಳಿಂದ ತಲೆ ತಪ್ಪಿಸಿಕೊಂಡಿದ್ದ ಕಮ್ಯುನಿಸ್ಟ್ ಶೀನ ನಾಯ್ಕ ನೆಂಬವನನ್ನು ತಾ. ೧೪ರಂದು ದಸ್ತಗಿರಿ ಮಾಡಲಾಗಿದೆ.

ತಾ. ೧೩ರಲ್ಲು ಸಂಜೆ ಬೋರ್ಡ್ ಹೈಸ್ಕೂಲಿನ ಫೀಸಲ್ಸ್ ಹೋಲಿನಲ್ಲಿ ಮದ್ರಾಸಿನ ಚೀಫ್ ಫಿಜಿಕಲ್ ಇನ್ಸ್‌ಟ್ರಕ್ಟರ್ ಶ್ರೀ ಮೋಹನ ಸುಂದರ ರಾವ್ ಅವರ ಅಧ್ಯಕ್ಷತೆಯಲ್ಲಿ ಮಕ್ಕಳ ಹಬ್ಬಗಳು ಜರಗಿದುವು.

ಇಲ್ಲಿಯ ಶ್ರೀ ಕೃಷ್ಣ ದೇವಾಲಯವು ಸಾರ್ವಜನಿಕ ಮಂದಿರವೆಂದು ಸರಕಾರದ ತೀರ್ಮಾನವಾದುದರಿಂದ. ಇದಕ್ಕೆ ಪ್ರತಿಕ್ರಿಯೆಯ ಸಾಧನಗಳಾವುವು ಎಂಬುದನ್ನು ಚರ್ಚಿಸುವರೆ ಧರ್ಮಾಧಿಕಾರಿಗಳ ಗುಪ್ತ ಸಭೆಯೊಂದು ಶ್ರೀ ಸೋಧೆ ಮಠದಲ್ಲಿ ಜರಗಿತೆಂಬ 'ವಿಶ್ವಸನೀಯ ವಾರ್ತೆ' ಸ್ಥಳೀಕ ದೈನಿಕದಲ್ಲಿ ಪ್ರಕಟವಾಗಿದೆ.

ಸರಕಾರಿ ವಯಸ್ಕರ ಶಿಕ್ಷಣ ತರಬೇತಿ ಶಾಲೆಯು ಇದೇ ತಾ. ೭-೬-೪೮ರಲ್ಲು ಉಡುಪಿಯಲ್ಲಿ ತೆರೆಯಲಾಯಿತು. ಇದರ ಉದ್ಘಾಟನಾ ಸಮಾರಂಭವು ಸರಕಾರಿ ತರಬೇತಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಸಂಜೀವ ಭಟ್ಟ, ಎಂ. ಎ. ಎಲ್. ಟಿ. ಇವರ ಸನ್ಯಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ನರಹರಿ ಕಾಮತ್ ಇವರು ಉದ್ಘಾಟನಾ ಭಾಷಣವಿತ್ತರು. ವಯಸ್ಕರ ಶಿಕ್ಷಣ ತರಬೇತಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಲಕ್ಷ್ಮೀನಾರಾಯಣ ರಾವ್, ಬಿ. ಎ. ಎಲ್. ಟಿ. ಇವರು ಸ್ವಾಗತ ಭಾಷಣವನ್ನೀಯುತ್ತ ವಯಸ್ಕರ ಶಿಕ್ಷಣದ ಆವಶ್ಯಕತೆಯನ್ನೂ ಸರಕಾರದ ಈ ಯೋಜನೆಯ ಮಹತ್ವವನ್ನೂ ವಿವರಿಸಿದರು. ಅಧ್ಯಕ್ಷರು ವಯಸ್ಕರ ಶಿಕ್ಷಕರ ಕರ್ತವ್ಯ ಬಾಧ್ಯತೆಗಳನ್ನು ಸ್ವಾರಸ್ಯವಾಗಿ ವಿವರಿಸಿ ಹೇಳಿ ಶಾಲೆಯ ಅಭ್ಯುದಯವನ್ನು ಕೋರಿದರು. ಶಾಲಾ ವಿದ್ಯಾರ್ಥ್ಯಧ್ಯಾಪಕ ಸಂಘದ ಕಾರ್ಯದರ್ಶಿಯವರ ವಂದನಾರ್ಪಣೆಯಾದ ಬಳಿಕ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯ್ತು.

ಆರ್. ಎಸ್. ಎಸ್ಸರ ಗಡಿಪಾರು

ಶ್ರೀಗಳಾದ ಬಿ. ಡಿ. ಬ್ರಾಕ್ರೆ, ಆರ್. ಬಿ. ಪಾಠಕ್, ವಿ. ಎ. ಮಾರೂಕರ್ಾರ್ ಮತ್ತು ಜಿ. ಕೆ. ರಂಗರಾವ್ ಮಂಗ್ಳೂರ್‌ಕಾರರವರನ್ನು ಕಳೆದ ಫೆಬ್ರುವರಿಯಲ್ಲಿ ಬಂಧಿಸಲಾಗಿತ್ತು. ಅವರು ರಾಷ್ಟ್ರೀಯ ಸೇವಕ ಸಂಘದ ಪ್ರಸಿದ್ಧ ಕಾರ್ಯಕರ್ತರಾಗಿದ್ದು ಮೊದಲಿನವರು ನಾಗಪುರದವರೂ, ಮತ್ತಿನವರು ದ. ಕ. ಜಿಲ್ಲೆಯವರೂ ಆಗಿದ್ದು ಅವರನ್ನು ತಕ್ಷಣವೇ ಮುಂಬಯಿ ಪ್ರಾಂತ್ಯವನ್ನು ಬಿಟ್ಟು ಹೋಗಬೇಕೆಂದು ಕಟ್ಟಪ್ಪಣೆ ಮಾಡಲಾಗಿದೆ.

ಕಾಸರಗೋಡು ಬೊಂಬು ಸ್ಫೋಟದ ಅನಾಹುತ

ತಾ. ೧೧ರಂದು ಶುಕ್ರವಾರ ಇಲ್ಲಿ ಒಂದು ಬೊಂಬು ಸಿಡಿದುದರಿಂದ ಒಬ್ಬ ಕಮ್ಮಾರನು ತಕ್ಷಣವೇ ಮಡಿದಿರುವನಲ್ಲದೆ, ಮತ್ತೀರ್ವರಿಗೆ ಘಾಯಗಳಾಗಿವೆ.

ಅಂದು ಕರಾವಳಿಯಲ್ಲಿ ಒಬ್ಬನು ಹಾದು ಹೋಗುತ್ತಿರುವಾಗ ಅವನು ತೆರೆಗಳಿಂದ ಚಲಿಸಲ್ಪಡುತಿದ್ದ ಪೆಟ್ಟಿಗೆಯೊಂದನ್ನು ಕಂಡು ಅದನ್ನು ತೆರೆಯುವಾಗ ೨ ಚೆಂಡಿನಾಕೃತಿಯ ವಸ್ತುಗಳನ್ನು ನೋಡಿದನು. ಅವನು ಹಾಗೂ ಇನ್ನೊಬ್ಬನು ಅದನ್ನು ಪರಿಶೀಲನೆಗಾಗಿ ಕಮ್ಮಾರನಲ್ಲಿಗೆ ಒಯ್ದರು. ಅದರ ಲೋಹದ ಹೊದಿಕೆಯನ್ನು ತೆಗೆಯಲು ಅವನು ಪ್ರಯತ್ನಿಸುವಾಗ ಅದು ಸ್ಫೋಟಗೊಂಡು ಕಮ್ಮಾರನು ಅಲ್ಲೇ ಮಡಿದಿರುವನಲ್ಲದೆ ಬಳಿಯಲ್ಲಿ ನಿಂತುಕೊಂಡಿದ್ದ ಇಬ್ಬರಿಗೂ ಗಾಯವಾಗಿದೆ. ಪೋಲಿಸರು ತನಾಸಣೆ ನಡೆಸುತ್ತಿರುವರು.

ನೃತ್ಯಭಾರತಿ ಕಲಾಕೇಂದ್ರ

ನೃತ್ಯಭಾರತಿ ಸಂಸ್ಥೆಯು ೧೯೪೪ರಲ್ಲಿ ಮದ್ರಾಸಿನಲ್ಲಿ ಶ್ರೀಮಾನ್ ಕುಲಕರ್ಣಿ ಶ್ರೀನಿವಾಸ ಬಿ. ಎ. ಅವರಿಂದ ಸ್ಥಾಪಿತವಾಯಿತು. ಅಂದಿನಿಂದ ಇಂದಿನ ವರೆಗೆ ಅನೇಕ ಉತ್ಸಾಹಿಗಳಾದ ತರುಣ ತರುಣಿಯರಿಗೆ ನೃತ್ಯ ಶಿಕ್ಷಣವು ಕೊಡಲ್ಪಟ್ಟಿದೆ.

ಕರ್ನಾಟಕದ ವಿವಿಧ ಭಾಗದವರಿಗೆ ನರ್ತನವನ್ನು ಕಲಿಯುವ ಬಗ್ಗೆ ಸೌಕರ್ಯವನ್ನು ಮಾಡಿಕೊಡಲು ಶ್ರೀ ಶ್ರೀನಿವಾಸರು ಕೇಳಿಕೊಳ್ಳುತ್ತಲಿದ್ದಾರೆ. ಮದ್ರಾಸಿನ ವರೆಗೆ ಹೋಗಿ ನರ್ತನದ ಅಭ್ಯಾಸವನ್ನು ಮಾಡಲು ಎಲ್ಲರಿಗೂ ಸಾಧ್ಯವಿಲ್ಲದ ಕಾರಣ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೃತ್ಯಶಾಲೆಗಳನ್ನು ತೆಗೆಯುವ ಯೋಚನೆಯಿದೆ. ಸದ್ಯಕ್ಕೆ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಏಕಕಾಲಕ್ಕೆ ಜುಲೈ ಮೊದಲನೆ ವಾರದಿಂದ ಪ್ರಾಯೋಗಿಕ ನೃತ್ಯ ಶಾಲೆಗಳನ್ನು ಪ್ರಾರಂಭಿಸುವ ನಿಶ್ಚಯವನ್ನು ಮಾಡಿದೆ. ಈ ಪ್ರಾಯೋಗಿಕ ಶಾಲೆಯು ಜುಲೈ, ಆಗಸ್ಟ, ಸಪ್ಟಂಬರ ತಿಂಗಳುಗಳ ವರೆಗೆ ನಡೆಸಲ್ಪಡುವದು. ಶಾಸ್ತ್ರೀಯ ನೃತ್ಯವನ್ನೇ ಕಲಿಸಬೇಕೆಂದಿರುವುದರಿಂದ ಪ್ರಾರಂಭದಲ್ಲಿ ಈ ಮೂರು ತಿಂಗಳುಗಳ ಅವಧಿಯಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಚಾರದಲ್ಲಿರುವ ಭರತನಾಟ್ಯವೆಂಬ ನರ್ತನವು ಮಾತ್ರ ಕಲಿಸಲ್ಪಡುವದು. ಭರತ ನಾಟ್ಯಕ್ಕೆ ಸಂಬಂಧಿಸಿದ ವಿವಿಧ ಪದವಿನ್ಯಾಸ, ಹಸ್ತವಿನ್ಯಾಸಗಳ ಕಲಿಸುವುದಲ್ಲದೆ ಭರತನಾಟ್ಯದ ಪ್ರಾರಂಭಿಕ ನರ್ತನಗಳಾದ ಅಲಾರಿಪ್ಪು, ಹಾಗೂ ಜತಿಸ್ವರ ಇವೆರಡನ್ನೂ ಕಲಿಸಲಾಗುವದು. ಕೆಲವು ಪುರಂದರ ದಾಸರ ಕೃತಿಗೆ ಅಭಿನಯವು ಕೂಡ ಕಲಿಸಲ್ಪಡುವದು.

ವಿವರಗಳಿಗೆ, ನೃತ್ಯಭಾರತಿ, ೮೧, ಹ್ಯಾರಿಸ್‌ರೋಡ ರಾಯಪೇಟೆ, ಮದ್ರಾಸು. ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಗಂಟಲು ಬೇನೆ ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಪೆಪ್ಸ ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವವು ಶ್ವಾಸದೊಡನೆ ಕೂಡ ನಿಮ್ಮ ಶ್ವಾಸಕೋಶವನ್ನು ಸೇರುವುದು.

ಪೆಪ್ಸ, ನೆಗಡಿ, ಕೆಮ್ಮು, ಬ್ರೊಂಕೈಟಿಸ್, ಇನಪ್ಲುಯಂಜಾ ಮತ್ತಿನ್ನಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ.

ಪೆಪ್ಸನ್ನು ಸೇವಿಸಿರಿ



No 4.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಅದಿಲ್ಲದೆ ಎಂದೂ ಇರದಿರಿ

ವೃತ್ತ ವೈವಿಧ್ಯ

ವಿಶ್ವ ನಾಯಕ ನೆಹರು

"ಗಾಂಧಿ ನೆಹರು ಪ್ರಭೃತಿಗಳು ನಮ್ಮ ಕಾಲದ ಇರ್ವ ಮಹಾ ಇತಿಹಾಸತಜ್ಞರು. ಜೆಕೊಸ್ಲೊವೇಕಿಯದ ಮಾಜಿ ಅಧ್ಯಕ್ಷ ಮಜಾರಿಕರು ಮತ್ತಿಗಿನ ಅದರ ರಾಜ ಪಟು ಡಾ। ಬೆನೆಸರೂ ಗಾಂಧೀ ನೆಹರುಗಳ ಹತ್ತಿರ ಹತ್ತಿರ ಶ್ರೇಣಿಯವರು. ಆದರೆ ಈ ಇರ್ವ ಹಿಂದೀಯರು ಆ ಇರ್ವ ಜೆಕ್ ದುರೀಣರಿಗಿಂತ ಅದೆಷ್ಟೋ ಉನ್ನತವಾಗಿದ್ದರೆಂದ ಮಾತ್ರಕ್ಕೆ ಜೆಕ್ ಮಹಸೀಯರಿಗೆ ಅಗೌರವವೆಂದು ತಿಳಿಯಬಾರದು.

ಗಾಂಧಿಯು ಒಂದು ಭೂಖಂಡವನ್ನೇ ದಾಸದಿಂದ ಎಚ್ಚರಿಸಿದರು. ನಹರುಗಳು ಒಂದು ಅಸಾಮಾನ್ಯ ನಾಗರಿಕತೆಗಳ ಸಂಧಿಸ್ಥಾನದಲ್ಲಿ ನಿಂತು ಮಾತನಾಡುತ್ತಾರೆ. ಗಾಂಧಿಯ ವಿಷಯ ಅವರು ಗ್ರಂಥ ಬರೆದು ತಮ್ಮ ವ್ಯಕ್ತಿತ್ವವನ್ನೇ ಹೊರಗೆಡವಿದ್ದಾರೆ. ಇಂದು ವಿಶ್ವ ವಾರ್ತಾಪತ್ರಿಕೆಗಳ ಶಿರೋನಾಮೆಗಳಲ್ಲಿ ಸ್ಟಲಿನ್ ಟ್ರೂಮನ್ ಮತ್ತು ಚಿನ್ನಿನ್ನರ ಹೆಸರುಗಳು ದಪ್ಪಕ್ಷರಗಳಲ್ಲಿ ಕಾಣಿಸುವುದಾದರೂ ನಹರುಗಳು ಸನ್ನಿಕ ನಾಗರಿಕತೆಯ ಭವಿತವ್ಯ ರೂಪಣದಲ್ಲಿ ಅಗಾಧ ಪಾತ್ರವನ್ನು ಖಂಡಿತ ವಹಿಸಲಿರುವರು.

—ಪತ್ರಿಕೋದ್ಧೃತಿ ಒಯಿಸ್‌ಗೆನೆಟ್

ಲಂಡನಿನಲ್ಲಿ ಒಣ್ಣಾದ ಶ್ರೀರೆ

ನಕ್ಕೃಂಡಿನಲ್ಲಿ ಭಾರತೀಯರ ಹೆಚ್ಚಾಗಿ ನೆಲೆಸಲು ತೊಡಗಿದವರು ಅನೇಕರೂ ವಿಲ್ಲಿ ಶಿಕ್ಷಣ ಸಾಹಿತ್ಯ ನೃತ್ಯ ಮೊದಲಾದ ಕ್ಷೇತ್ರಗಳಲ್ಲಿ ವ್ಯವಹಾರ ನಡಸಲು ಹೆಚ್ಚಿನ ಭಾರತೀಯರು ಇಂಗ್ಲೆಂಡಿಗೆ ಬರುತಿದ್ದಾರೆ.

ಭಾರತ ಸ್ತ್ರೀಯರ ... ಹೆಚ್ಚಾಗಿ ಶ್ರೀರೆಗಳನ್ನು ಉಡುತ್ತಿದ್ದರೆ ನಗರದ ಮಧ್ಯದಲ್ಲಿ ಈ ... ಗಳು ಭಾರತ ... ಅನ್ಯೋನ್ಯತೆಯನ್ನು ... ಕಕ್ಕೆ ... .

ಆದರೆ ಓರ್ ಕೆ ... ವರ್ಷದ ಮಗಳಿದ್ದಳೆ. ... ಆಮದ್ ಎಂದವಳ ಹೆಸರು. ಅವಳು ಲಂಡನಿನಲ್ಲಿ ಚಿತ್ರಕಲೆ ಅಭ್ಯಾಸ ಮಾಡುತಿದ್ದಾಳೆ. ಇವಳು ಆಂಗ್ಲ ಉಡುಪ್ನ ಧರಿಸುತ್ತಾಳೆ. ಒಂದು ಸಲ ಈಕೆ ಲಂಡನಿನ ಹಿಂದೀಯರು ಏರ್ಪಡಿಸಿದ 'ಸಂತೋಷಕೂಟ'ಕ್ಕೆ ಬಂದಿದ್ದಳು. ಅವಳ ಮೈಬಣ್ಣವೂ ಅಚ್ಚ ಬಿಳಿಯರಂತಿದ್ದುದರಿಂದ ಎಲ್ಲರೂ ಅವಳನ್ನು ಐರೋಪ್ಯ ಹುಡುಗಿ ಎಂದು ತಿಳಿದಿದ್ದರು. ಆದರೆ ಅವಳು ಸಭಾಂತ್ಯದಲ್ಲಿ ಉರ್ದು ಭಾಷೆಯಲ್ಲಿ ಭಾಷಣ ಮಾಡಿ ಒಂದು ಗೀತವನ್ನು ಹಾಡಿದಾಗ ಎಲ್ಲರಿಗೂ ಅವಳ ನಿಜ ಪರಿಚಯವಾಯಿತು.

—ಬಿ ಬಿ ಸಿ ರೇಡಿಯೊ ವರದಿ

ಕಾಸು ಖರ್ಚಿಲ್ಲದ ಜೀವನ

ಡಬ್ಲಿನ್ ನಗರದ ಮ್ಯಾಕಲ್ ಬ್ರೋಸ್ನನ್ ಎಂಬವ 30 ವರ್ಷ ಊಟದ ಮತ್ತು ವಾಸದ ಖರ್ಚಿಲ್ಲದೆ ಕಳೆದಿದ್ದಾನೆ. 1916ರಿಂದ ಇದು ತನಕ ಈತನಿಗೆ 45 ಸಲ ಜೈಲು ಶಿಕ್ಷೆಯಾಗಿದೆ. ಇವನು ಒರ್ವ ಯಾಂತ್ರಿಕ ಕೆಲಸಗಾರ. ಇವನು ಎಲ್ಲಿಯಾದರೂ ಒಂದು ಹೋಟೆಲಿನಲ್ಲಿ ಉಳಕೊಳ್ಳುತ್ತಾನೆ. ಆದರೆ ಊಟದ ಹಣವಾಗಲಿ, ಕೋಣೆಯ ಬಾಡಿಗೆಯಾಗಲಿ ಕೊಡುವುದಿಲ್ಲ. ಮಾತ್ರವಲ್ಲ ಹೋಟೆಲಿನ ಯಜಮಾನನೊಡನೆ ಅಲ್ಪಸ್ವಲ್ಪ ಸಾಲವನ್ನು ತೆಗೆದುಕೊಳ್ಳುತ್ತಾನೆ. ಕಡೆಗೊಂದು ದಿನ ಯಾರಿಗೂ ಹೇಳದೆ ಪರಾರಿಯಾಗುತ್ತಾನೆ. ಪೋಲಿಸರು ಇವನನ್ನು ಹಿಡಿದು ಒಂದು ವರ್ಷ ಎರಡು ವರ್ಷದ ಅವಧಿಗೆ ಜೈಲಿಗೆ ಕಳುಹಿಸುತ್ತಾರೆ. ಮ್ಯಾಕಲನು ಒಂದು ಪುಸ್ತಕ ಬರೆಯುತಿದ್ದನಂತೆ. ಕೊನೆಯ ಸಲ ಅವನನ್ನು ವಿಚಾರಿಸಿದ ನ್ಯಾಯಾಧೀಶನೊಡನೆ ಅವನು ತನ್ನ ಪುಸ್ತಕ ಸಂಪೂರ್ಣಗೊಳಿಸಲು ಪುರುಸತ್ತು ಕೊಡಬೇಕೆಂದು ಕೇಳಿದ. ಅದು ಪ್ರಕಟವಾದರೆ ಅದರ ಹಣದಿಂದ ತನ್ನ ಇದು ವರೆಗಿನೆಲ್ಲ ಸಾಲವನ್ನು ಮುಗಿಸಬಹುದೆಂದವನಿಗೆ ಧೈರ್ಯವಿದೆ. ಆದರೆ ನ್ಯಾಯಾಧೀಶರು ಅವನಿಗೆ ಪುನಃ ಮೂರು ತಿಂಗಳ ಊಟ ವಸತಿಯ ಅನುಕೂಲಮಾಡಿ ಸೆರೆಮನೆಗೆ ಕಳುಹಿಸಿದರು.

ಜೇನು ತುಪ್ಪದ ಔಷಧೀಯ ಉಪಯುಕ್ತತೆ

ಸ್ವಾಮಿ ಆನಂದ ತೀರ್ಥರ ಅನುಭವ

ಜೇನು ತುಪ್ಪದಿಂದ ಅನೇಕ ವ್ಯಾಧಿಗಳನ್ನು ಗುಣಪಡಿಸಬಹುದು. ಕೆಲವೊಂದು ಔಷಧಗಳನ್ನು ತೆಗೆದುಕೊಳ್ಳಲು ಸುಲಭವಾಗಿಯೂ ಅವನ್ನು ಉಪಯೋಗಿಸುವ ದುಟಿ ಆಯುರ್ವೇದ ಶಾಸ್ತ್ರದಲ್ಲಿ ಜೇನಿಗೆ ಪ್ರಶಸ್ತ ಸ್ಥಾನ ಕೊಡಲಾಗಿದೆ. ಗುಪ್ತಕಾಲಂಗಳಿಂದ ಪಡೆದ ಜೇನು ತುಪ್ಪವು ಅತ್ಯಂತ ಶ್ರೇಷ್ಠವಾದುದು. ಪರಿಗಣಿಸಲಾಗುತ್ತದೆ. ಜೇನಿನ್ನ ಈ ಕೆಳಗಿನ ಕೆಲವು ವ್ಯಾಧಿಗಳನ್ನು ಗುಣಪಡಿಸಿಕೊಳ್ಳಿಯೂ.

ಕಜ್ಜಿ, ತುರಿ ಕಜ್ಜಿಗಳಿಗೆ: ... ದ ... ಪಮಾಣದಲ್ಲಿ 4 ಔನ್ಸ್ ... ಮತ್ತು ಒಂದು ಔನ್ಸ್ ಜೇನು ತುಪ್ಪ, ಮತ್ತು ¼ ಔನ್ಸ್ ನಿಂಬೆ ಹಣ್ಣಿನ ರಸವನ್ನು ಮಿಶ್ರ ಮಾಡಿ ಚನ್ನಾಗಿ ಕಲಸಿ ಕುಡಿಯಬೇಕು. ಒಂದು ತಿಂಗಳ ತನಕ ಇದನ್ನು ತೆಗೆದುಕೊಂಡರೆ ಎಲ್ಲಾ ಚರ್ಮ ವ್ಯಾಧಿಗಳೂ ಗುಣವಾಗುವವು.

ಅಗ್ನಿ ಮಾಂದ್ಯ: ಮಲಗುವ ಹೊತ್ತಿನಲ್ಲಿ ಎರಡು ಔನ್ಸ್ ನೀರಿಗೆ ಒಂದು ಔನ್ಸ್ ಜೇನು ತುಪ್ಪವನ್ನೂ, ಅರ್ಧ ಔನ್ಸ್ ಲಿಂಬೆ ರಸವನ್ನು ಸೇರಿಸಿ ಇಡಿ ರಾತ್ರೆ ಇಡಬೇಕು. ಬೆಳಿಗ್ಗೆ 6 ಗಂಟೆಗೆ ಅದನ್ನು ತೆಗೆದುಕೊಳ್ಳಬೇಕು.

ಅಜೀರ್ಣ: ಮೂರು ಔನ್ಸ್ ನೀರನ್ನು ತೆಗೆದುಕೊಂಡು ಒಂದು ಔನ್ಸ್ ಜೇನು ತುಪ್ಪ, 4 ಔನ್ಸ್ ಜೀರಿಗೆ ಹುಡಿಯನ್ನು ಮಿಶ್ರ ಮಾಡಿ ಮಲಗುವ ಹೊತ್ತಿನಲ್ಲಿ ಕುಡಿಯಬೇಕು.

ಕೆಮ್ಮು: ಲವಂಗಗಳನ್ನು ತುಪ್ಪದಲ್ಲಿ ಹುರಿದು ಚೂರ್ಣ ಮಾಡಬೇಕು. ಅನಂತರ ಎರಡು ಔನ್ಸ್ ಬಿಸಿ ನೀರು ಒಂದು ಔನ್ಸ್ ಜೇನು ತುಪ್ಪ ಮತ್ತು 4 ಕಾಳು ಭಾರದ ಲವಂಗ ಚೂರ್ಣವನ್ನು ಮಿಶ್ರ ಮಾಡಿ ಮಲಗುವ ಸಮಯದಲ್ಲಿ ಕುಡಿಯಬೇಕು.

ಗಂಟು ಗಂಟು ನೋವು: ಒಂದು ಔನ್ಸ್ ನೀರು ಅರ್ಧ ಔನ್ಸ್ ಜೇನು ತುಪ್ಪ 15 ಬಿಂದು ಲವಂಗ, ಚೂರ್ಣ ಇವನ್ನು ಮಿಶ್ರ ಮಾಡಿ ರಾತ್ರಿ ಹೊತ್ತಿನಲ್ಲಿ ನೋವಿದ್ದ ಭಾಗಕ್ಕೆ ತಿಕ್ಕಬೇಕು. ನಂತರ ಬಿಸಿ ಉಪ್ಪಿನ ಕಾವು ಕೊಡಬೇಕು.

ವಾಕರಿಕೆ: ಅರ್ಧ ಔನ್ಸ್ ಜೇನು ತುಪ್ಪ ಮತ್ತು 8 ಕಾಳು ಭಾರದ ಜೀರಿಗೆ ಚೂರ್ಣವನ್ನು ಚೆನ್ನಾಗಿ ಮಿಶ್ರ ಮಾಡಿ ಕುಡಿಯಬೇಕು.

ಆಮಶಂಕೆ (Dysentry). ಅರ್ಧ ಔನ್ಸ್ ಜೇನು ತುಪ್ಪವನ್ನು ನಾಲ್ಕು ಔನ್ಸ್ ಮಜ್ಜಿಗೆಯೊಡನೆ ಮಿಶ್ರಮಾಡಿ ಪ್ರತಿ ಎರಡು ಗಂಟೆಗೊಮ್ಮೆ ಕುಡಿಯಬೇಕು. ಮಜ್ಜಿಗೆಯು ಹುಳಿಯಾಗಿ ಉಪ್ಪು ಹಾಕಿದಂತಿರಬಾರದು.

ವಾರದ ವಿಜ್ಞಾನ ವರದಿ

ಶಬ್ದ ಕಂಪನದಿಂದ ಒಟ್ಟೆ ಒಗೆತ

ಬೃಹತ್ ಕಂಪನಗಳನ್ನು ಮಾಡುವ ಶಬ್ದಗಳಿವೆ. ಇವು ಸಾಮಾನ್ಯ ಮಾನವ ಕಿವಿಗೆ ಕೇಳಿಸುವುದಿಲ್ಲ. ಈ ಕಂಪನಗಳಿಗೆ ಅಗಾಧ ಶಕ್ತಿಯಿರುವುದರಿಂದ ವಿಜ್ಞಾನಿಗಳಿದನ್ನು ಹಲವು ಉಪಯುಕ್ತ ಕೆಲಸಗಳಿಗೆ ಬಳಸಲು ಪ್ರಯೋಗ ನಡೆಸುತ್ತಿರುವರು. ಈತ್ತೀಚೆಗೆ ಇವುಗಳಿಂದ ಬಟ್ಟೆಗಳನ್ನು ಹೇಗೆ ಒಗೆಯಬಹುದೆಂಬೊಂದು ಪ್ರದರ್ಶನವು ಯಶಸ್ವಿಯಾಗಿ ತೋರಿಸಲ್ಪಟ್ಟಿದೆ. ರೋಗದ ಕ್ರಿಮಿಗಳನ್ನು, ಸಸ್ಯ ಕೀಟಗಳನ್ನು ನಾಶ ಮಾಡಲೂ ಇವನ್ನು ಉಪಯೋಗಿಸಲು ಸಾಧ್ಯವಿದೆಯಂತೆ.

ಗಾಬರಿ ವಿಧಾನ

"ಅದೇ ನಗರದಲ್ಲಿ ಮತ್ತೆ ಅಲ್ಲಲ್ಲಿ ಅಗ್ನಿ ಸೀಡಿಯು ಕಾಣಿಸಿಕೊಳ್ಳುವುದು ಅದೆಷ್ಟೋ. ಅಗ್ನಿ ಶಾಮಕ ಯಂತ್ರಗಳಿದ್ದರೂ ಸಾಲುವುದಿಲ್ಲ. ಈ ಬೆಂಕಿ ಅನಾಹುತ ಹೇಗೆ ಉಂಟಾಯಿತೆಂದು ಕಂಡು ಹಿಡಿಯಲೂ ಸಾಧ್ಯವಿಲ್ಲ. ಪರಿಣಾಮವಾಗಿ ನ್ಯಾಯ ಶಿಸ್ತು ನಷ್ಟವಾಗಿ ನಗರದಲ್ಲಿ ಕಳ್ಳತನ, ಲೂಟಿ ದರೋಡೆ ಇವುಗಳು ತನ್ನಷ್ಟಕ್ಕೆ ಆರಂಭವಾಗುವವು. ನಗರದ ದೀಪ ವ್ಯವಸ್ಥೆಯು ಅಗಿಂದಾಗ್ಗೆ ನಂದಿ ಹೋಗುವುದು. ರೇಡಿಯೊ, ಟೆಲಿಫೋನು ವ್ಯವಸ್ಥೆಗಳು ಮೇಲಿಂದ ಮೇಲೆ ಅವ್ಯವಸ್ಥೆಗೊಳಗಾಗುವವು.

"ಭೀಕರ ಅನಾಹುತಗಳ ಗಾಳಿ ವರ್ತಮಾನಗಳು ಹರಡುವವು. ಜನರು ಗಾಬರಿಯಿಂದ ಮನೆಗಳಿಂದ ಹೊರಗೆ ಬೀಳದೆ ಅವಿತುಕೊಳ್ಳುವರು. ಹೀಗಾಗಿ ವ್ಯಾಪಾರ ವಹಿವಾಟು, ಕೈಗಾರಿಕೆಗಳ ಸ್ತಬ್ಧವಾಗುವವು. ಕ್ರಮೇಣ ರೇಡಿಯೊ ರಹಸ್ಯ ಕಿರಣಗಳ ದುಷ್ಪರಿಣಾಮದಿಂದ ಜನರು ಹೊರಗೆ ... ಗಳಲ್ಲಿ ಮನೆಗಳಲ್ಲಿ ... ಸಾಯುವರು. ಇಷ್ಟೆಲ್ಲವೂ ... ಇದು ಉಂಟಾಗುವುದೆಂದರೆ ... ಶಕವಲ್ಲವೆ."

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1-0 ಪ್ರಕಾರವೂ, ಎಕ್ಸ್‌ಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25–12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು
23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . .	Rs. 20,00,000
Capital Paid up	Rs. 19,87,300
Reserves	Rs 8,00,400

BANKING BUSINESS OF EVERY DESCRIPTION TRANSACTED.

V. R. Kamath, B A L L B
General Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ರೋ. ಬೊಂಬ್ಯಾ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದ.

The 1946 Record Business Proves the Popularity.

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.

Branches at:

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 25—6—1948 [ಸಂಚಿಕೆ 25]

ಮಧ್ಯಪೂರ್ವದಲ್ಲಿ ಯುದ್ಧವಾಗಲೇಬೇಕೆ?

ಪೆಲೆಸ್ತೀನ್ ಪ್ರಶ್ನೆಯ ಪರಿಹಾರ ವಿಧಾನಗಳು

ರಶ್ಯಾ ಅಮೇರಿಕಗಳೊಡನೆ ಪೈಪೋಟಿ

[ಕಳೆದ ಸಂಚಿಕೆಯಲ್ಲಿ ಅರಬ ಯಹೂದಿಗಳನ್ನು ಬೇರ್ಪಡಿಸಲು ಅಮೇರಿಕವು ಯುಕ್ತರಾಷ್ಟ್ರ ಸಂಘದಲ್ಲಿ ಸಣ್ಣ ಸಣ್ಣ ರಾಷ್ಟ್ರಗಳನ್ನು ಆರ್ಥಿಕ ಸಹಾಯ ಕೊಡುವ ಆಶೆ ತೋರಿಸಿ ಹೇಗೆ ಬೆಂಬಲ ಪಡೆಯಿತು ಮತ್ತು ಪೆಲೆಸ್ತೀನದ ವಿಭಜನೆಯನ್ನು ಒತ್ತಾಯ ಪಡಿಸಿತೆಂದು ಹೇಳಿದೆ. ಈ ಕೊನೆಯ ಲೇಖನದಿಂದ ಅರಬ ರಾಷ್ಟ್ರಗಳನ್ನು ನೋಯಿಸುವುದರಿಂದ ವಿಶ್ವ ನೆಮ್ಮದಿಗೆ ಹೇಗೆ ಭಂಗವುಂಟಾಗಬಹುದೆಂದು ವಿವರಿಸಲಾಗಿದೆ.]

ಪೆಲೆಸ್ತೀನದ ವಿಭಜನೆಗೆ ಅರಬರು ಬದ್ಧ ವಿರೋಧಿಗಳಾಗಿರುವುದಕ್ಕೆ ಯುಕ್ತರಾಷ್ಟ್ರ ಸಂಘವು ಯಹೂದಿಗಳಿಗೆ ಪಕ್ಷಪಾತ ತೋರಿದ್ದೆ ಕಾರಣವಾಗಿದೆ. ಒಂದು ವೇಳೆ ಯೆಹೂದಿಗಳಿಗೆ ಕೊಡಲ್ಪಟ್ಟ ಭಾಗಗಳು ಅರಬರಿಗೆ ಕೊಟ್ಟರೆ ಇತ್ತಂಡದವರ ಸಂಧಾನಕ್ಕೆ ಸಹಾಯಕಾರಿಯಾಗಬಹುದು. [illegible]ದರೆ ಯಹೂದಿಗಳು ಆ ಭಾಗಗಳಲ್ಲಿ [illegible] ಪ್ರದೇಶಗಳನ್ನು ಕೊಂಡುಕೊಂಡು ಅವುಗಳನ್ನು ಆಧುನಿಕ ವಿಧಾನಗಳಲ್ಲಿ ಅಭಿವೃದ್ಧಿ ಮಾಡಿರುವರು. ಹೀಗೆ ಪೆಲೆಸ್ತೀನದ ಸಮಸ್ಯೆ ಒಂದು ಬಿಡಿಸಲಾಗದ ಗಂಟು.

ಈಗ ಮಾತ್ರ ಅರಬರು ಹತಾಶರಾಗಿರುವರು. ತಾವು ನ್ಯಾಯಯುತ[illegible] ಯಾರನ್ನು ನಂಬಿಕೊಂಡಿದ್ದೆವೋ ಆ ಅಮೇರಿಕನ್ನರೇ ಈಗ ನಮಗೆ ಅನ್ಯಾಯವಮಾಡಿರುವರೆಂದು ಅರಬರು ದೂರುತ್ತಿರುವರು. ಅಮೇರಿಕದ ಈ ಧೋರಣೆಯು ಎಟ್ಲಾಂಟಿಕ್ ಘೋಷಣೆಗೆ ವಿರುದ್ಧವಾದುದೆಂದೂ ಅದರಿಂದ ಆ ಪ್ರಸಿದ್ಧ ಘೋಷಣೆಯು ಮುರಿಯಲ್ಪಟ್ಟಿದೆ ಮಾತ್ರವಲ್ಲ, ಅದರ ಕೊಲೆಯಾಗಿದೆಂದೂ ಅವರು ಹೇಳುತ್ತಿರುವರು.

ಎಣ್ಣೆಯ ವ್ಯಾಪಾರ

ಅಮೇರಿಕನ್ನರಿಗಾದರೋ ಅರಬರನ್ನು ಅತೃಪ್ತಪಡಿಸಿದುದರಿಂದ ಬಹಳ ಗಂಡಾಂತರವಿದೆ. ಅರಬರಾಷ್ಟ್ರಗಳಲ್ಲಿ ಆ ದೇಶವು ಎಣ್ಣೆಯ ಗಣಿಗಳನ್ನು ಅಭಿವೃದ್ಧಿಪಡಿಸಲು ವಿಪುಲ ಬಂಡವಾಳವನ್ನು ಹಾಕಿದೆ ಮಾತ್ರವಲ್ಲ ಅನೇಕ ಅಮೇರಿಕನ್ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಗಳು ಅಲ್ಲಿ ಜನೋದ್ಧಾರದ ಕಾರ್ಯವನ್ನು ಮಾಡುತ್ತಿರುವವು. ರೋಷಗೊಂಡ ಅರಬರು ರಾತ್ರೆ ಬೆಳಗಾಗಬೇಕಾದರೊಂದು ದಿನ ಅಮೇರಿಕನ್ನರ ಎಣ್ಣೆಕೊಳವಿಗಳನ್ನು ಕೆಡವಿಬಿಟ್ಟರೆ ಮತ್ತೆ ಇಡೀ ಜಗತ್ತಿಗೆ ಪೆಟ್ರೋಲಿನ ಕೊರತೆಯುಂಟಾಗುವ ಸಂಭವವಿದೆ. ಅಮೇರಿಕನ್ ನೌಕೆಗೆ ಈ ಎಣ್ಣೆಯು ಆವಶ್ಯಕವಾಗಿ ಬೇಕಾಗಿರುವುದರಿಂದ ಅದರ ನೌಕಾಶಕ್ತಿಗೂ ದೊಡ್ಡ ಧಕ್ಕೆ ತಗಲುವುದು. ಮಧ್ಯಪೂರ್ವದ ಎಣ್ಣೆಗಣಿಗಳಿಂದ ದಿನಕ್ಕೆ ೧೫ ಲಕ್ಷ ಪಿಪಾಯಿ ಎಣ್ಣೆಯು ಉತ್ಪನ್ನವಾಗುತ್ತದೆ.

ಒಂದು ವೇಳೆ ಅಮೇರಿಕವು, ಯುಕ್ತರಾಷ್ಟ್ರಸಂಘದ ಮೂಲಕ ದಂಗೆಯೇಳುವ ಅರಬರನ್ನು ಹತೋಟಿಯಲ್ಲಿರಿಸಲು ಸರ್ವಜನಾಂಗ ಸೈನ್ಯವನ್ನು ಪೆಲೆಸ್ತೀನದಲ್ಲಿರಿಸಿದರೂ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ಕಾರಣ ಒಂದು ವೇಳೆ ಯೆಹೂದಿ ರಾಷ್ಟ್ರವು ನಿರ್ಮಾಣವಾಗಿ ಅದರ ಸರಕಾರದ ಸಂಸ್ಥಾಪನೆಯಾದರೂ ಅರಬರು ಸರಕಾರವನ್ನೇ ರಚಿಸಲೊಪ್ಪುವದಿಲ್ಲ. ಹೀಗೆ ಮರುಭೂಮಿಯ ಸಂಚಾರಿ ಅರಬರು (ಅವರ ಸಂಖ್ಯೆ ೩೮ ಲಕ್ಷ, ಯೆಹೂದಿಗಳು ಕೇವಲ ೬ ಲಕ್ಷ) ನಿರಂತರವಾಗಿ ಇಸ್ರಯೇಲ್ ರಾಜ್ಯದ ಮೇಲೆ (ಗಡಿನಾಡಿನ ಪಂಗಡಗಳು ಕಾಶ್ಮೀರದ ಮೇಲೆ ಧಾಳಿಮಾಡಿದಂತೆ) ಧಾಳಿಮಾಡುವುದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವರು. 'ಹೊಡೆ, ಬಡಿ, ಓಡು' ಇದೇ ಅವರ ನಿತ್ಯದ ಕಾರ್ಯಕ್ರಮವಾಗುವುದು. ಇವರನ್ನಟ್ಟಿಸಿಕೊಂಡು ಹೋದರೆ ಯುಕ್ತರಾಷ್ಟ್ರ ಸಂಘದ ಸೈನ್ಯವು ಆಸುಪಾಸಿನ ಮಿತ್ರ ಅರಬರಾಷ್ಟ್ರಗಳ ಪ್ರದೇಶವನ್ನು ಪ್ರವೇಶಿಸಬೇಕಾಗುವುದು.

ರಶ್ಯಕ್ಕೆ ಆಶ್ರಯ

ಇದರಿಂದ ಸಹಜವಾಗಿ ಐರೋಪ್ಯ ರಾಷ್ಟ್ರಗಳ ಮೇಲೆ ಅರಬರಿಗೆ ತೀವ್ರವಾದ ದ್ವೇಷವುಂಟಾಗುವುದು. ಇದರ ಪರಿಣಾಮವಾಗಿ ಕ್ರೈಸ್ತರಾದ ಐರೋಪ್ಯರಿಗೂ ಪವಿತ್ರವಾದ ಜೆರುಸಲೇಮ್ [illegible] ಹೋಗುವುದಕ್ಕೆ [illegible] ಸಂಭವವಿದೆ. [illegible] ರಾಜ್ಯಕ್ಕೆ [illegible] ವಿದ್ಯುತ್‌ಶಕ್ತಿ [illegible] ಸಂಭವವಿದೆ.

ಇಷ್ಟೇ ಅಲ್ಲ, [illegible] ತಮ್ಮೆಲ್ಲಾ ಕಾರ್ಯಕಲಾಪಗಳು [illegible] ಸ್ಥಿರವಾದಾಗ ಅರಬರು ಸಹಜವಾಗಿ [illegible] ನೆರೆದೇಶವಾದ ಕಮ್ಯೂನಿಸ್ಟ್ ರಶ್ಯದ ಕಡೆ ತಿರುಗುವ ಗಂಡಾಂತರದ ಸಂಭವ [illegible] ಇದೆ. ಇದರಿಂದ ಅಮೇರಿಕನ್ನರ ಎಲ್ಲಾ [illegible] ಕಟ್ಟಿನ ಅನುಕೂಲತೆಗಳು [illegible] ಗಳೂ ಕುಸಿದು ಬೀಳುವವು. ಭೂಮಧ್ಯ ಸಮುದ್ರದಲ್ಲಿ ಇನ್ನೊಂದು ಉಪದ್ರವಕಾರಕ ಬಂದರು ಬೇಕೆಂದು [illegible] ರಶ್ಯವು ಕೇಳುತ್ತಬಂದಿದೆ. ಪೆಲೆಸ್ತೀನದ ವಿಭಜನೆಯ ಪರಿಣಾಮದಿಂದ ಬಾಧಿತ ಅರಬ ಪರಿವರ್ತನೆಯು ರಶ್ಯಕ್ಕೆ ಅನುಕೂಲವಾದ ಆಸ್ಪದವನ್ನು ಕಲ್ಪಿಸಿಕೊಟ್ಟಂತಾಗುತ್ತದೆ.

ಪರಿಹಾರ ವಿಧಾನ

ಅಮೇರಿಕದಲ್ಲಿರುವ ಯಹೂದಿಗಳ ಒಂದು ಪಕ್ಷದವರು ವಿಭಜನೆಯ ವಿರುದ್ಧ

(೨ನೇ ಪುಟ ನೋಡಿ)

THE
UNITED INDIA LIFE ASSURANCE
ESTD 1906 CO., LTD. H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to —
INSPECTORATE OFFICE
K. S. Rao Road, Mangalore.

ಹಿಂದೂಧರ್ಮದ ಉಜ್ವಲ ಭವಿಷ್ಯ

ಆಧುನಿಕ ಸಮಸ್ಯೆಗಳ ನಿವಾರಣೆ ಮಾಡಬಹುದು

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರ ಲೇಖ

ಇದು ತನಕ ಇತಿಹಾಸದಲ್ಲಿ ಯಾವ ಮಾರ್ಗವನ್ನು ಅನುಸರಿಸಿತೊ ಅದೇ ಪಥವನ್ನು ಮುಂದೆಯೂ ತುಳಿದರೆ ಹಿಂದೂ ಧರ್ಮದ ಭವಿತವ್ಯವು ಶ್ರೇಷ್ಠ ಬಾಳ್ವಿಕೆಯದಾಗುವುದು. ಹೆಚ್ಚಿನ ನಾಗರಿಕತೆಗಳಲ್ಲಿನ ಜೀವನದ ಅಸ್ತಿತ್ವದ ಸ್ವಭಾವ ಮತ್ತು ಉದ್ದೇಶದ ಕುರಿತಾದ ತತ್ವಜ್ಞಾನ ಇಲ್ಲವೆ ಧ್ಯಾನ ವಿಚಾರಗಳಿಗೆ ಧರ್ಮ ವಿಚಾರದ ಕೆಳಗಣ ಸ್ಥಾನ ಕೊಡಲ್ಪಟ್ಟಿದೆ. ಆದರೆ ಭಾರತದಲ್ಲಿ ತತ್ವಜ್ಞಾನವು ರಾಜಕೀಯ, ನೀತಿಶಾಸ್ತ್ರ ಇಲ್ಲವೆ ಇತರ ಯಾವ ಪಾರಮಾರ್ಥ ವಿದ್ಯೆಗಳ ಮೇಲಾಗಲಿ ಇಲ್ಲವೆ ಐತಿಹಾಸಿಕ ಸತ್ಯ ಸಂಗತಿಗಳ ಮೇಲಾಗಲಿ ಅವಲಂಬಿಸಿಕೊಂಡಿರುವುದಿಲ್ಲ. ಕಠೋಪನಿಷತ್ತುಗಳ ಕಾಲದಿಂದಲೂ, ಅಂತಿಮ ಸಮಸ್ಯೆಗಳನ್ನೆದುರಿಸಲು ಸ್ಥೈರ್ಯ ಸಾಹಸಗಳನ್ನು ಬೆಳೆಸಿಕೊಳ್ಳುವುದೇ ಅದರ ಪ್ರಥಮ ಗುಣವಾಗಿತ್ತು. "ಭಯರಹಿತವಾಗಿರುವುದೇ ಸರ್ವೋತ್ತಮ ವೆಂಬುದೊಂದು ಪ್ರಾಚೀನರ ಮುಖ್ಯ ಹೇಳಿಕೆಯಾಗಿತ್ತು.

ಎರಡನೆಯದಾಗಿ, ಆಗಿಂದಾಗ್ಗೆ ಹೇಳಲ್ಪಡುವಂತೆ ಹಿಂದೂಧರ್ಮವು ಯಾವದಾದರೊಂದು ನಿರ್ದಿಷ್ಟ ಪದ್ಧತಿಯಲ್ಲ. ಅದೊಂದು ಜೀವನ ಕ್ರಮ. ಮಾನವ ಜೀವನ ಅಸ್ತಿತ್ವದ ಎಲ್ಲಾ ಅವಲೋಕನಗಳಿಗೂ ಅದು ಪ್ರಾಮುಖ್ಯತೆಯನ್ನು ಕೊಡುತ್ತದೆ. ಶಾರೀರಿಕ ಚುರುಕುತನವನ್ನು ಸಾಧಿಸಿ ಅದನ್ನು ಕಟ್ಟುನಿಟ್ಟಿನ ಶಿಸ್ತಿನಿಂದ ಇಟ್ಟುಕೊಳ್ಳಬೇಕೆಂದೂ, ಅದೇ ರೀತಿ ಬೌದ್ಧಿಕ ಚುರುಕುತನ ಮತ್ತು ಅಧ್ಯಾತ್ಮಿಕ ವಿವಿಕ್ತತೆಯನ್ನು ನಮ್ಮ ಎಲ್ಲಾ ಹಿಂದೂ ಧರ್ಮ ಬೋಧಕರೂ ಸಮಾನರೀತಿಯಿಂದ ಉಪದೇಶಿಸಿದರು.

ಯುಕ್ತವಾಗಿ ವಿಮರ್ಶಿಸಿದಾಗ ಹಿಂದೂ ಧರ್ಮವು ಖಂಡಿತವಾಗಿ ಅಂಧವಿಶ್ವಾಸದ್ದಲ್ಲವೆಂದು ತಿಳಿಯುತ್ತದೆ. ಗೀತೆಯಲ್ಲಿ ಶ್ರೀ ಕೃಷ್ಣನು ಹೀಗೆ ಹೇಳಿದ್ದಾನೆ.

"ಎಂತಹ ಭಕ್ತಿವಿಧಾನವನ್ನನುಸರಿಸುವವನೇ ಆಗಲಿ, ಇಲ್ಲವೆ ನಿಜವಾದ ಶ್ರದ್ಧೆ ಭಕ್ತಿಯಿಂದ ಯಾವದೇ ಧ್ಯೇಯವನ್ನು ಪ್ರೀತಿಸುವವನಾದರೂ, ಕೊನೆಯಲ್ಲಿ ನನ್ನಲ್ಲಿಯೇ ಮುಟ್ಟುವನು" ಇದು ಹಿಂದೂಧರ್ಮದ ವಿಶಾಲತ್ವ ಸೂಚಕ. ಪಾರಮಾರ್ಥ ವಿಚಾರ ಪರಿಕಲ್ಪನೆಗೆ ಇತಿಮಿತಿಗಳಿಲ್ಲವೆಂದು ಮಹಾವೀರ ಬುದ್ಧರು, ಶಂಕರ ರಾಮಾನುಜಾಚಾರ್ಯರುಗಳು ಸಿದ್ಧಾಂತಪಡಿಸಿ ತೋರಿಸಿರುವರು. ಸಾಂಖ್ಯ ತತ್ವಜ್ಞಾನವು ಮಾತ್ರ ದೇವರಸ್ವಭಾವ, ಅಸ್ತಿತ್ವದ ಕುರಿತು ಮೌನವಾಗಿದೆ. ಇನ್ನೋರ್ವ ಬೋಧಕರಾದ ಜೈಮಿನಿ ಋಷಿವರ್ಯರು ಜಗತ್ತಿನ ದಿನನಿತ್ಯದ ವ್ಯವಹಾರದಲ್ಲಿ ದೇವರ ಕೈವಾಡವಿದೆಯೆಂಬ ಸಂಗತಿಯನ್ನು ಅಲ್ಲಗಳೆಯುತ್ತಾರೆ.

ಜಾತಿವಾರು ಪದ್ಧತಿಯಲ್ಲಿ ಅನೇಕ ಅಭಿವೃದ್ಧಿಗಳಾಗಿ ಸಾಮಾಜಿಕ ಜೀವನವು ಬಹುವಿಧದಲ್ಲಿ ನಿರ್ಬಂಧಿಸಲ್ಪಟ್ಟಾಗ್ಯೂ ಭಾರತದಲ್ಲಿ ವ್ಯಯುಕ್ತಿಕ ಅಭಿಪ್ರಾಯ ನಿರೂಪಣೆಗೆ ಯಾವ ಆತಂಕವೂ ಇರಲಿಲ್ಲ. ಅಷ್ಟೆ ಅಲ್ಲ, ನಮ್ಮ ಧರ್ಮತತ್ವಗಳು ಆಧುನಿಕ ವೈಜ್ಞಾನಿಕ ತತ್ವಗಳನ್ನು ಸರಿಹೋಲುತ್ತಿದ್ದವು ಮಾತ್ರವಲ್ಲ ಅವುಗಳಿಗಿಂತಲೂ ಹೆಚ್ಚು ಮುಂದುವರಿದವುಗಳಾಗಿರುವುದು ಆಶ್ಚರ್ಯದ ಸಂಗತಿ. ಕ್ರೋಸ್ ಎಂಬ ತತ್ವಜ್ಞಾನಿಗಳು "ವಿಚಾರಗಳೇ 'ನಂಬಲರ್ಹವಾದ ನಿಜಸ್ಥಿತಿಗಳು" ಎಂದು ಹೇಳುವರು. ವಿಚಾರಸರಣಿಯ ವಿಧಾನ ಮತ್ತು ವಿಚಾರಾಸ್ಪದವಾದ ವಿಷಯಗಳು ಒಂದೇ ಅನುಭವ ಮೊತ್ತದ ಭಾಗಗಳು. ರುಯ್ ಬ್ರೋಕ್ ಎಂಬ ಕ್ರೈಸ್ತ ತತ್ವ ವಿಚಾರಿಗಳು "ನಮ್ಮ ಆಳದಲ್ಲಿರುವ ದೇವರು ನಮ್ಮ ಬಳಿಗೆ ಬರುವ ದೇವರನ್ನು ಸ್ವೀಕರಿಸುತ್ತಾನೆ. ಆಗ ದೇವರು ದೇವರನ್ನು ಧ್ಯಾನಿಸಿದಂತಾಗುತ್ತದೆ" ಎಂದು ಹೇಳಿರುವನು.

ಹಿಂದೂ ಧರ್ಮದ ಪ್ರಾಮುಖ್ಯ ತತ್ವಗಳು ಭಾವನಾತ್ಮಕ ವಿಜ್ಞಾನದೊಂದಿಗೆ ಸರಿಹೋಲುತ್ತವೆ. ಪ್ರಾಚೀನ ಕಾಲದಿಂದಲೂ, ವಿಶ್ವ ವ್ಯವಹಾರವನ್ನು ನಿಯಂತ್ರಿಸುವ ಸರ್ವೋತ್ತಮ ಶಕ್ತಿಯೊಡನೆ ಐಕ್ಯ ಹೊಂದಲು, ವಿಶ್ವದ ಅಸ್ಥಿರತೆಯ ಜ್ಞಾನವನ್ನು ಹೊಂದುವುದು ಅವಶ್ಯ, ಇದರಿಂದ ಸರ್ವಸಂಗಪರಿತ್ಯಾಗದ ಅವಶ್ಯಕತೆಯುಂಟಾಗುವುದು ಎಂದು ತಿಳಿಯಲಾಗಿತ್ತು. ಇದು ವೇದಾಂತದ ಮೂಲ ಭೂತ ಸಂಗತಿಗಳು. ಈ ತತ್ವವನ್ನು ನಂಬುವ ವೇದಾಂತಿಯು ದೃಶ್ಯ ಜಾತವಾದ ಈ ಜಗತ್ತು ಮಿಥ್ಯವೆಂದು ಸ್ವೀಕರಿಸಬೇಕೆಂದೂ ಮುಕ್ತಿ ತತ್ವ ಜ್ಞಾನದಿಂದ ಪ್ರತಿಯೋರ್ವ ಮನುಷ್ಯನಿಗೆ ಉಪಯುಕ್ತತೆಯ ವಿಶಾಲ ಕ್ಷೇತ್ರವು ಕಲ್ಪಿತವಾಗುವುದೆಂದೂ ತಿಳಿಯುತ್ತಾನೆ. ಮೆಕ್ಸ್ ಮುಲ್ಲರನೆಂದಂತೆ "ಅದರಲ್ಲಿ ಎಲ್ಲಾ ಮತಧರ್ಮಗಳಿಗೂ ಸ್ಥಳವಿದೆ ಮಾತ್ರವಲ್ಲ ಅದು ಎಲ್ಲವನ್ನು ಆವರಿಸಿಕೊಂಡಿದೆ"

"ನಮ್ಮ ನೆರೆಯವರನ್ನು ನಾವು ನಮ್ಮಂತೇ ಪ್ರೀತಿಸಬೇಕು. ನಾವವರನ್ನು ಪ್ರೀತಿಸುವುದು ಅವರಲ್ಲಿ ತೋರುವ ಒಳ್ಳೇತನಕ್ಕಲ್ಲ ಸೌಂದರ್ಯಕ್ಕಲ್ಲ ಇಲ್ಲವೆ ದಯಾಭಾವಕ್ಕಲ್ಲ. ನಾವು ಪ್ರೀತಿಸಬೇಕಾದುದು ಅವರಲ್ಲಿರುವ ಆತ್ಮಕ್ಕೆ ಅವರಲ್ಲಿ ಮತ್ತು ನಮ್ಮಲ್ಲಿರುವ ದೈವಿಕ ಆತ್ಮಕ್ಕಾಗಿ" ಹೀಗೆಂದೋರ್ವ ವೇದಾಂತ ಭಾಷ್ಯಗಾರರು ವಿವರಿಸುತ್ತಾರೆ. ಈ ಸಂಗತಿಯನ್ನು ನಾವು ಪರಿಗಣಿಸಿದರೆ ರಾಮಕೃಷ್ಣ ಪರಮಹಂಸರೂ, ವಿವೇಕಾನಂದರೂ ನಮ್ಮ ಧರ್ಮದ ತಾರ್ಕಿಕ ಪ್ರಗತಿಯ ಚಿಹ್ನಗಳಂತಿರುತ್ತಾರೆಂಬ ವಿಷಯವು ತಿಳಿಯುವುದು. ತರ್ಕ ವಿಚಾರವು ವಿಜ್ಞಾನದೊಡನೆ ಪ್ರಥಮ ಶ್ರೇಯಸ್ಸನ್ನು ಪಡೆಯಬೇಕೆಂದು ವಿವೇಕಾನಂದರೆನ್ನುತಿದ್ದರು. ಲೌಕಿಕ ಮತ್ತು ಪಾರಮಾರ್ಥಿಕ ಪ್ರಗತಿಯೊಡನೆ ನಾವು ಸಹಕರಿಸಬೇಕು, ತನ್ಮೂಲಕ ಎಲ್ಲಾ ಧರ್ಮಪಂಥಗಳೊಡನೆ ಬಾಂಧವ್ಯಭಾವನೆಯನ್ನು ಕಲ್ಪಿಸಬೇಕು, ಅವುಗಳ ಸಾಮರಸ್ಯದಿಂದಲೇ ಚಿರಸ್ಥಾಯಿಯಾದ ಧರ್ಮವು ಉಂಟಾಗುವುದು, ಹೀಗೆಂದವರ ನಿರೂಪವಿದೆ.

ಇದು ತನಕ ಸಾಮಾನ್ಯ ಜನತೆಯು ಕೈಬಿಡಲ್ಪಟ್ಟಿದೆ. ಅದು ಶೋಷಣೆಗಳೊಳಗಾಗಿದೆ, ಯಾರೂ ಈ ಜನತೆಯ ಮಾರ್ಗದರ್ಶಕರೂ ಜೀವದಾತರೂ ಆಗಿರಬೇಕಿದ್ದಿತೋ ಅದೇ ಜನರು ಅವರನ್ನು ಕೀಳುಗಾಣಿಸಿದಂತಾಗಿದೆ. ಜಗತ್ತಿನ ಗತ ಇತಿಹಾಸ ಮತ್ತು ಪ್ರಸ್ತುತದ ಬಹು ವಿಧ ಸಮಸ್ಯೆಗಳಿಂದ ನಾವೀ ವಿಷಯವನ್ನು ಮನಗಾಣಬೇಕಾಗಿದೆ. [illegible] ಪ್ರತಿಯೊಂದು ಕಾಲದಲ್ಲೂ ಹೀಗೆ ಮಾಡಲ್ಪಟ್ಟಿದೆ, ಈಗಲೂ, ಈ ತರದ ಯತ್ನಗಳು ಮಾಡಲ್ಪಡುತ್ತವೆ. ಹೀಗೆ ತಿಳಕೊಂಡ ಮೇಲೆ ವಿಶ್ವಾಸಕ್ಕೂ ಕರ್ತವ್ಯಕ್ಕೂ ಅಂತರ ಬೀಳಲಾರದು. ಗೀತೆಯ ಅಭಿಪ್ರಾಯದಲ್ಲಿ "ಕರ್ತವ್ಯವೆಂದರೆ ಒಂದು ಸಿದ್ಧತೆ ಮಾತ್ರವಲ್ಲ, ಅದೊಂದು ವಿಮೋಚನೆಯ ವಿಧಾನವೂ ಆಗಿದೆ"

ತ್ಯಾಗದಿಂದ, ಮೋಹ, ಕಾಮವಿಮುಕ್ತತೆಯಿಂದ, ಜ್ಞಾನ ಅನಾಸಕ್ತಿಯಿಂದ, ಶ್ರದ್ಧೆಯಿಂದ ಕರ್ತವ್ಯವು ನಿರ್ವಹಿಸಲ್ಪಟ್ಟರೆ ಮುಂದಿನ ಕಾರ್ಯವು ಸಿದ್ಧಿಗೊಳ್ಳಬಹುದು. ವೇದಾಂತಿಯ ಅಭಿಪ್ರಾಯದಲ್ಲಿ ಇದೇ ಭಾವೀ ಧರ್ಮವಾಗಿದೆ. ಈ ಧರ್ಮವು ಕೇವಲ ಕೃಷಿಕಸಮಾಜವೊಂದಕ್ಕೆ ಮಾತ್ರ ಯೋಗ್ಯವಾದುದು ಮಾತ್ರವಲ್ಲ ಕೈಗಾರಿಕೆಯುಗದ ಸಮಸ್ಯೆಗಳನ್ನು ಅದು ನಿವಾರಿಸಬಲ್ಲದು. ಅದರಲ್ಲಿಯೂ ಸಾಮರಸ್ಯ ಮತ್ತು ವಿಶ್ವಬಾಂಧವ್ಯದ ಭಾವನೆಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ.

(೧ನೇ ಪುಟದಿಂದ)

ವಿದಾರೆ [illegible] ನಮ್ಮ ಪ ತವಾದ ಜುಡೇಯ [illegible] ರಾಜಕೀಯ ಉದ್ದೇಶದ್ದಲ್ಲ ಅದು ವಿಶ್ವವ್ಯಾಪಿ [illegible] ಬಲ್ಲ ಧರ್ಮ ಪೆಲೆಸ್ತೀನದ ಎಲ್ಲಾ ಅರಬ ಯಹೂದಿ ಪತ್ರ [illegible] ಒಂದ [illegible] ಜನಾಂಗ [illegible] ಶ್ರೇಷ್ಠ ಪರಿಹಾರ ಮಾರ್ಗ ಎಂದು ಸಂಘದವರು ಅಭಿಪ್ರಾಯ [illegible]

ಈಗಿನ ಪ್ರೋ [illegible] ಸಾಕ್‌ಬರ ಕ್ರಿಸ್ತನು [illegible] ಜೀವನ ಅನುಯಾಯಿಗಳಾದ [illegible] ಪರಿಗಣಿಸಬೇಕೆಂದು [illegible] ಅರಬ [illegible] ಯಹೂದ್ಯರ ಭಾತೃವರ್ಗದವರು. ಅಂಥ ಮೇಲೆ ಈ ಯಹೂದಿ ಮೂಲದ ಜನರನ್ನೆಲ್ಲ ಒಟ್ಟುಗೂಡಿಸುವುದೇ ಪೆಲೆಸ್ತೀನ ಸಮಸ್ಯೆಯನ್ನು ಬಿಡಿಸುವ ಒಂದೇ ಗುರಿ. ಯುಕ್ತರಾಷ್ಟ್ರ ಸಂಘದ ಘಟನೆಯ ಪ್ರಕಾರ ಪೆಲೆಸ್ತೀನವನ್ನು ವಿಭಜಿಸುವ ಅಧಿಕಾರ ಅದಕ್ಕಿಲ್ಲವೆಂದು [illegible] ಪ್ರಸಿದ್ಧ ಅಮೇರಿಕನ್ ಮಧ್ಯಪೂರ್ವತಜ್ಞ ವಕೀಲರು ಹೇಳುತ್ತಾರೆ. ಜನಾಂಗಗಳು ಸ್ವತಂತ್ರವಾಗುವಂತೆ ಯುಕ್ತರಾಷ್ಟ್ರಸಂಘ ಸಹಾಯ [illegible] ಪದಲ್ಲದೆ ವಿಭಜಿಸುವುದು ಅದರ ಕಾರ್ಯವಲ್ಲ.

ಈಗ ಪರಿಸ್ಥಿತಿಯು ಬಹಳ ವಿಷಮಗೊಂಡಿರುವುದರಿಂದ ಕೊನೆಯಸಲವಾದರೂ ಅರಬ ಯಹೂದಿಗಳನ್ನು ಒಂದು ದುಂಡುಮೇಜಿನ ಪರಿಷತ್ತಿಗೆ ಆಹ್ವಾನಿಸಿ ಇತ್ತಂಡದವರ ಆರ್ಥಿಕ ಮತ್ತು ಸಾಮಾಜಿಕ ಹಿತಗಳಿಗೆ ಧಕ್ಕೆ ಬರದಂತೆ ಒಂದು ಸಂಯುಕ್ತ ಆಡಳಿತ ಮಂಡಳವನ್ನು ರಚಿಸಿ ವಿಶ್ವರಾಜಕಾರಣದಲ್ಲಿ ಪ್ರಮುಖ ಸ್ಥಾನವಿರುವ ಮಧ್ಯಪೂರ್ವದ ದೇಶಗಳಲ್ಲಿ ಚಿರನೆಮ್ಮದಿಯನ್ನು ಸ್ಥಾಪಿಸುವುದು ಅವಶ್ಯವಿದೆ.

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು. ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ಸುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ನುರಿತ ನಾಯಕರನ್ನು ತಯಾರಿಸುವ ಸ್ಥಾನಗಳು

ಅಮೇರಿಕದಲ್ಲಿ ತರುಣರಿಗೆ ಸಿಗುವ ಸಂದರ್ಭಗಳು

ವಿದ್ಯಾರ್ಥಿಗಳಿಗೆ ಉಪಯುಕ್ತ ಚಟುವಟಿಕೆ

ನ್ಯೂಯೋರ್ಕ್ ನಗರ ಸಭಾಸದನದ ಚಂದ್ರಶಿಲೆಯ ಭವನ ಜಿಮ್ಮಿವ್ಹೋಕರ್, ಫ್ರೆಂಕ್ಲಿನ್ ರೂಸ್‌ವೆಲ್ಟರಂತಹ ಪ್ರಭೃತಿಗಳು ಕೀರ್ತಿಶಿಖರಕ್ಕೇರಿದ ಮೆಟ್ಟಿಲ ಸ್ಥಾನವದು. ಅಲ್ಲೊಂದು ದಿನ ಹದಿನಾರು ವರ್ಷದ ಹುಡುಗನೊಬ್ಬ ಸಭಾಸದರೊಡನೆ ವಿನಂತಿಪೂರ್ವಕವಾಗಿ ಬಿನ್ನವಿಸುತ್ತಿದ್ದ "ನಾನು ತರುಣಜನಾಂಗದ ಪರವಾಗಿ ಮಾತನಾಡುತಿದ್ದೇನೆ. ಈ ಮಸೂದೆಯು ಶಾಸನವಾಗಿ ಮಂಜೂರು ಮಾಡಬೇಕೆಂದು ನಾವು ಇಚ್ಛಿಸುತ್ತೇವೆ"

ಸಭಾಸದರು ಮಸೂದೆಯನ್ನೋದಿ ತಲೆಯಲ್ಲಾಡಿಸಿದರು. ಥೋಮಸ್ ಸಿ ಡೆಸ್ಮೊಂಡ್ ಎಂಬ ಸಭಾಸದರು ಇರ್ವಿಂಗ್ ಬರ್ಡ್ಸ್‌ಆಯ್ ಎಂಬಾ ಹುಡುಗನ ಸ್ವರವಾಗಿ ಆ ಮಸೂದೆಯನ್ನು ಸಿದ್ಧಪಡಿಸಿದ್ದರು. ಇತರ ಸಭಾಸದರ ಮೌನ ಸಮ್ಮತಿಯು ಆ ಮಸೂದೆಯು ಶಾಸನವಾಗುವ ಪೂರ್ವ ಸೂಚನೆಯಾಗಿತ್ತು.

ಮತ್ತೆ ಇರ್ವಿಂಗ್ ಬರ್ಡ್ಸ್‌ಆಯ್ ಹೀಗೆ ಹೇಳಿದ "ಸಭ್ಯರೆ! ಪ್ರತೀ ವರ್ಷ ಲೈಂಗೀಕ ರೋಗವ್ಯಾಧಿಯಿರುವ ಸುಮಾರು ೧೩ ಸಾವಿರ ತರುಣ ತರುಣಿಯರು ವಿವಾಹ ಲೈಸೆನ್ಸ್ ಕೊಡಲ್ಪಡುತ್ತಿರುವರು. ಇದನ್ನು ನೀವು ನಿಲ್ಲಿಸಲೇಬೇಕು"

ಇರ್ವಿಂಗ ಅಮೇರಿಕದ 'ಮಾದರಿ ಶಾಸನ ಸಭೆ'ಯ ಸದಸ್ಯನು. ಅಲ್ಲಿನ ತರುಣ ಕ್ರೈಸ್ತ ಸಂಘದವರು (Y M C A) ಇಂತಹ ತರುಣ ತರುಣಿ ಕೇಂದ್ರಗಳನ್ನು ತೆರೆದಿದ್ದಾರೆ. ಅಲ್ಲಿ ತರಬೇತಿ ಹೊಂದುತ್ತಿರುವಾಗಲೆ ಇರ್ವಿಂಗನು ಈ ಮಸೂದೆಯ ಕರಡನ್ನು ತಯಾರಿಸಿದನು. ಆಲ್ಬನಿ ನಗರಸಭೆಯಲ್ಲಿದನ್ನು ಥೋಮಸ್ ಡೆಸ್ಮೊಂಡರು ಪ್ರತಿಪಾದಿಸಿದರು. ಆದರೆ ಕೆಲ ಅವಿಚಾರವಂತ ಸದಸ್ಯರು ಅದಕ್ಕೆ ವಿರೋಧ ಸೂಚಿಸಿದರು. "ನಮ್ಮ ಮಾದರಿ ಶಾಸನಸಭೆಯಲ್ಲಿದ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿದೆ" ಎಂದ ಇರ್ವಿಂಗ. "ಇದು ಶಾಸನವಾದರೆ ಇದರ ಅನ್ವಯ ಮದುವೆಯಾಗುವವರು ನಾವು, ತರುಣರು, ನೀವಲ್ಲ!" ಎಂದೂ ಸಭಾಸದರಿಗೆ ತಿಳಿಸಿದ.

ಮಸೂದೆಯು ಸ್ವೀಕೃತವಾಯಿತು. ಇಂದು ಹತ್ತು ವರ್ಷಗಳ ನಂತರ ಅದರಿಂದ ಸಾವಿರಾರು ದಂಪತಿಗಳು ದುಃಖ ಸಂಕಟದಿಂದ ರಕ್ಷಿಸಲ್ಪಡುವಂತಾದರು. ಮದುವೆ ಮಾಡಿಕೊಳ್ಳುವವರು ವೈದ್ಯಕೀಯ ಪರೀಕ್ಷೆಗೆ ಒಳಪಟ್ಟು ಆರೋಗ್ಯವಂತ ಶಿಫಾರಸು ಪತ್ರ ಪಡೆಯಬೇಕೆಂದು ಈ ಮಸೂದೆ ನಿರ್ಬಂಧಿಸುತ್ತದೆ.

ನಾಯಕತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಂದರ್ಭಗಳನ್ನೊದಗಿಸಿ ಕೊಡಲ್ಪಡುವ ಎಳೆಪ್ರಾಯದ ನೂರಾರು ತರುಣ ತರುಣ ತರುಣಿಯರಲ್ಲಿ ಇರ್ವಿಂಗನೊಬ್ಬ. ಅಮೇರಿಕದ ೧೧ ಪ್ರಾಂತಗಳಲ್ಲಿರುವ "ಮಾದರಿ ಶಾಸನಸಭೆ"ಗಳಲ್ಲಿ ಇವರು ಕಾನೂನು ರಚಿಸುವ ಅನುಭವವನ್ನು ಪಡೆಯುತ್ತಾರೆ. ಇಂದಿಗ ೧೨ ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟ ಈ ಚಳವಳವು ಈಗ ೨ ಲಕ್ಷ ತರುಣ ಸದಸ್ಯರನ್ನೊಳಗೊಂಡಿದೆ. ಇದರಲ್ಲೆರಡು ವಿಭಾಗಗಳಿವೆ. ಹೀ ಸಂಘವು ಹುಡುಗರಿಗೂ, ಟ್ರೀ ಸಂಘವು ಹುಡುಗಿಯರಿಗೂ ಎಂದು. ಇದು ಅಲ್ಲಿನ ಹೈಸ್ಕೂಲುಗಳೊಳಗೂ ಪ್ರಾರಂಭಿಸಲ್ಪಟ್ಟಿದೆ. ಇನ್ನು ನೂರು ವರ್ಷಗಳೊಳಗ ಸಂಯುಕ್ತ ಅಮೇರಿಕದ ೩೮ ಸಂಸ್ಥಾನಗಳೊಳಗೂ ಇದು ಸ್ಥಾಪಿಸಲ್ಪಡುವುದು. ದೇಶದಲ್ಲಿ ವಿಚಾರಯುಕ್ತ ಪ್ರಜಾಪ್ರಭುತ್ವ ಸ್ಥಾಪನೆಗೆ ಇಂತಹ ಚಟುವಟಿಕೆಗಳು ಅತ್ಯಂತ ಸಹಾಯಕಾರಿಯಾಗಿವೆ.

ಬೆಳಕಿಗೆ ಬಂದ ಇನ್ನೋರ್ವ ತರುಣ ನಾಯಿಕೆ ಎಂದರೆ ನೆನ್ಸಿಹಾಲಾಸ್ ಎಂಬಾಕೆ. ಅವಳು ನ್ಯೂಯೋರ್ಕಿನ ಅನೇಕ ಶಾಲೆಗಳನ್ನು ಸಂದರ್ಶಿಸಿ ಅಲ್ಲಿ ಮಧ್ಯಾಹ್ನದ ಊಟ ಮಾಡುತ್ತಿರುವ ಮಕ್ಕಳಿಗೆ ಒಂದು ಪ್ರಶ್ನೆಯನ್ನು ಕೇಳುತಿದ್ದಳು. "ನಿಮಗೆ ಕೊಡಲ್ಪಡುವ ಈ ಊಟವು ನಿಮಗೆ ರುಚಿಸುತ್ತದೋ? ಇಲ್ಲವಾದರೆ ಯಾಕೆ ರುಚಿಸುವುದಿಲ್ಲ" ಈ ಮಕ್ಕಳಿಗೆ ಉತ್ತಮ ಊಟ ಸಿಗುತ್ತಿಲ್ಲವೆಂದವಳಿಗೆ ತಿಳಿಯಿತು. ದೋಮಸ ಡಸ್ಮೊಂಡರ ಬಳಿಗೆ ಬಂದು ಅವಳು ಕಮ್ಮಿ ವೆಚ್ಚದಲ್ಲಿ ಪುಷ್ಟಿಕರವಾದ ಊಟಗಳನ್ನು ತಯಾರಿಸುವಂತೆ ಒಂದು ಶಾಸನ ಮಾಡುವ ಮಸೂದೆ ಕರಡನ್ನು ಬರೆಸಿದಳು. ನ್ಯೂಯೋರ್ಕ್ ನಗರದಲ್ಲಿ ನೆನ್ಸಿಹಾಲಾಸಳು ಭಾಷಣಗಳ ಮೂಲಕ ಸಾರ್ವಜನಿಕ ಬೆಂಬಲವನ್ನು ಪಡೆದಳು. ಕೆಲ ಸಮಯದಲ್ಲೇ ಅಲ್ಲಿನ ನಗರಸಭೆಯಲ್ಲಿ ೩೫ ಲಕ್ಷ ಡಾಲರ ಗಳನ್ನು ಶಾಲಾ ಮಕ್ಕಳಿಗೆ ಪುಷ್ಟಿಕರ ಊಟವನ್ನು ಕೊಡಿಸಲು ಮಂಜೂರಾಯಿತು. ಇಂದು ನೆನ್ಸಿಹಾಲಾಸಳ ಪ್ರಯತ್ನದಿಂದಾಗಿ ನ್ಯೂಯೋರ್ಕಿನ ೫ ಲಕ್ಷ ಮಕ್ಕಳಿಗೆ ಹಾಲು, ಮಾಂಸ, ತರಕಾರಿಗಳ ಊಟ ಸಿಗುತ್ತಿದೆ.

ಕ್ಲಿಮೆಂಟ್ ಎ ಡ್ಯೂರನ್ ಎಂಬ ಪ್ರಖ್ಯಾತ ಕ್ರೈಸ್ತ ತರುಣ ಸಂಘದ ಕಾರ್ಯಕರ್ತರು ಈ ಶಾಲಾ ಶಾಸನಸಭೆಗಳ ಮೂಲ ಯೋಜಕರು. ಇಂಥವರು ಸಂಯುಕ್ತ ಅಮೇರಿಕದ ಎಲ್ಲಾ ಪ್ರಾಂತ್ಯಗಳನ್ನು ಸಂಚರಿಸುತ್ತ ಶಾಲಾ ಮಕ್ಕಳಲ್ಲಿ ನಾಯಕತ್ವದ ಸಾಮರ್ಥ್ಯ ಅಭಿವೃದ್ಧಿ ಪಡಿಸಲು ಉಪಾಧ್ಯಾಯರೂ, ವಿದ್ಯಾಧಿಕಾರಿಗಳೂ ಸಹಾಯಮಾಡುವಂತೆ ಪ್ರೋತ್ಸಾಹಿಸುತ್ತಾರೆ.

ಈ ಸಂಘದ ವಿದ್ಯಾರ್ಥಿಗಳು ತಮಗೆ ಸಂಬಂಧಪಟ್ಟ ಎಲ್ಲಾ ನಾಗರೀಕ ಸೌಕರ್ಯಗಳ ಕುರಿತು ಪರ್ಯಾಲೋಚಿಸುತ್ತಾರೆ. ಅವರ ಪುಟ್ಟ 'ಶಾಸನಸಭೆ'ಗಳು ಮಕ್ಕಳ ಚಟುವಟಿಕೆಗಳಲ್ಲ ಗಂಭೀರಭಾವದಿಂದದನ್ನವರು ನಿರ್ವಹಿಸುತಾರೆ. ಒಂದು ವಿಷಯವು ಮೊದಲು ಒಂದು ಶಾಲೆಯಲ್ಲಿ ಚರ್ಚಿತವಾಗಿ ನಿರ್ವಹಿಸಲ್ಪಟ್ಟರೆ ಮುತ್ತದು ಪ್ರಾಂತ್ಯದ ಕೇಂದ್ರ 'ಸಭೆ'ಯಲ್ಲಿ ಪರ್ಯಾಲೋಚಿಸಲ್ಪಡುವುದು. ಅಲ್ಲೂ ಅದು ಸ್ವೀಕೃತವಾದರೆ ತರುಣ ಮರೀಣರು ಸಂಬಂಧಪಟ್ಟ ನಗರಪಿತಾಮಹರನ್ನೂ, ಸಾಮಾಜಿಕ ಕಾರ್ಯಕರ್ತರನ್ನೂ ಕಂಡು ತಮಗೆ ಬೇಕಾದ ಶಾಸನವನ್ನು ಮಾಡಿಸಲು ಯತ್ನಿಸುವರು.

ಶಾಲೆಗಳಲ್ಲಿ ಉತ್ತಮ ತರದ ಶಿಕ್ಷಣವು ಕೊಡಲ್ಪಡಬೇಕು, ಇದಕ್ಕಾಗಿ ಉತ್ತಮ ಶೈಕ್ಷಣಿಕ ಸಲಕರಣೆಗಳನ್ನೊದಗಿಸಬೇಕು ಮಾತ್ರವಲ್ಲ ಉಪಾಧ್ಯಾಯರಿಗೆ ಯೋಗ್ಯ ಸಂಬಳವು ಸಿಗುವಂತಾಗಬೇಕು, ಈ ವಿಷಯಗಳೂ ಅವರ ಚಳವಳದ ಅಂಗಾಂಗಳಾಗುವುವು. ಶಾಲೆಗಳಲ್ಲಿ ಲೈಂಗಿಕ ವಿಷಯ ಸೂತ್ರಗಳನ್ನು ಕಲಿಸಬೇಕು, ಮೋಟಾರು ವಾಹನ ಚಲಾಯಿಸುವಿಕೆಯನ್ನು ಕಲಿಸಬೇಕು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಯೋಗ್ಯ ವಿದ್ಯಾರ್ಥಿವೇತನ ದೊರೆಯಬೇಕು, ಹೊಸ ಹೊಸ ವೈಜ್ಞಾನಿಕ ವಿಷಯಗಳನ್ನೊಳಗೊಂಡ ವಿಜ್ಞಾನ ಪಾಠ ಪುಸ್ತಕಗಳನ್ನು ಪ್ರತೀ ಎರಡು ವರ್ಷಕ್ಕೊಮ್ಮೆ ಪ್ರಕಟಿಸಬೇಕು, ಇವು ಕೆಲವು ತರುಣ ರಾಜಕೀಯ ಮುತ್ಸದ್ದಿಗಳ ಕೇಳಿಕೆಗಳು. ಅಮೇರಿಕದ ಅನೇಕ ನಗರ ಸಭೆಗಳಲ್ಲಿ ಈ ಹೀ ಸಂಘಗಳು ಮಂಜೂರು ಮಾಡಿದ ವಿಷಯಗಳು ಚರ್ಚಿಸಲ್ಪಡುತ್ತವೆ. ಒಂದು ಪ್ರಾಂತ್ಯದಲ್ಲಿ ಉತ್ತಮ ವಿದ್ಯಾರ್ಥಿ ಆಟಗಾರರಿಗೆ ಶಾಲೆಯವರು ವಿಮಾ ಭದ್ರತೆಯನ್ನು ಕೊಡಬೇಕೆಂಬ ಮಸೂದೆಯು ಅಲ್ಲಿನ ನಗರ ಸಭೆಯಲ್ಲಿ ಚರ್ಚೆಗೆ ಬಂತು. ಆಗೋರ್ವ ಸದಸ್ಯರು ಅದನ್ನು ವಿರೋಧಿಸಿದಾಗ ಮತ್ತೋರ್ವ ಸದಸ್ಯರು "ನಿಮ್ಮ ವಾರ್ಡಿನ ಶಾಲಾ ಶಾಸನಸಭೆಯಲ್ಲಿದನ್ನು ಮಂಜೂರು ಮಾಡಿದ ವಿಷಯ ನಿಮಗೆ ತಿಳಿದಿಲ್ಲವೆ?" ಎಂದಾಗ ಅವರು ತಮ್ಮ ವಿರೋಧವನ್ನು ಬದಲಾಯಿಸಿದರು.

ಈ ತರುಣ ಶಾಸನಕರ್ತೃಗಳು ತಮಗೆ ಸಂಬಂಧಿಸಿದ ವಿಷಯದ ಕುರಿತು ಗಂಭೀರ ಯೋಚನೆ ಮಾಡುವರೆಂಬುದಕ್ಕೆ ಒಂದು ನಿದರ್ಶನ. ನ್ಯೂಜೆರ್ಸಿ ನಗರದ ಸಭೆಯಲ್ಲಿ ೧೮ ವರ್ಷದವರಿಗೆ ಮತದಾನದ ಹಕ್ಕು ಕೊಡಬೇಕೆ ಬೇಡವೆ ಎಂಬುದದರ ಕುರಿತು ಚರ್ಚೆಯಾಯಿತು. ಈ ವಿಷಯವು ಸ್ಥಳೀಕ ಶಾಲಾ ಶಾಸನಸಭೆಗಳ ಪರ್ಯಾಲೋಚನೆಗೆ ಬಿಡಲ್ಪಟ್ಟಿತು. ತರುಣ ತರುಣಿಯರು ತಮ್ಮ ಸಭೆಗಳಲ್ಲಿ ಚರ್ಚೆ ನಡೆಸಿದಾಗ ಸರಿ ಅರ್ಧಕ್ಕರ್ಧ ಮತಭೇದವುಂಟಾಯಿತು. ತರುಣ ಅಧ್ಯಕ್ಷರು ತಮ್ಮ ಮತವನ್ನು ವಿರೋಧಿ ಪಕ್ಷದ ಕಡೆಗೆ ಹಾಕಿ ೧೮ ವರ್ಷದವರಿಗೆ ಮತದಾನ ಅವಶ್ಯವಿಲ್ಲವೆಂಬ ತೀರ್ಮಾನವನ್ನು ಕೊಟ್ಟರು.

ಈ ಪಕ್ಷಗಳು ವರ್ಣಭೇದವನ್ನು ತಪ್ಪಿಂದು ಹೋಡುವ, ಮಜೂರರಿಗೆ ಸೌಕರ್ಯಗಳು ದೊರಕಬೇಕೆಂದು ಒತ್ತಾಯ ಮಾಡುವ ಶಾಸನಗಳನ್ನೂ ತಯಾರಿಸಿ ಅವು ಹಲವು ಪ್ರಾಂತ್ಯಗಳ ನಗರ ಸಭೆಗಳಲ್ಲಿ ಮಂಜೂರಾಗಿವೆ. ನಿಗ್ರೋ ತರುಣರೂ ಇದರಲ್ಲಿ ಭಾಗವಹಿಸುವರು. ಈ ದೃಷ್ಟಿಯಿಂದ ಇಂಥಹ ವಿದ್ಯಾರ್ಥಿ ಚಟುವಟಿಗಳು ವ್ಯಕ್ತಿತ್ವ ವಿಕಾಸಕ್ಕೆ ಮಾತ್ರವಲ್ಲ ವ್ಯಕ್ತಿಗಳನ್ನು ವಿಶ್ವನಾಗರೀಕರನ್ನಾಗಿ ಮಾಡುವುದಕ್ಕೂ ತುಂಬಾ ಸಂದರ್ಭಗಳನ್ನುಂಟು ಮಾಡುತ್ತವೆ. ನಮ್ಮ ದೇಶದ ಶಿಕ್ಷಣಾಧಿಕಾರಿಗಳೂ ಇಂತಹ ವಿದ್ಯಾರ್ಥಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಶ್ರೇಯಸ್ಕರ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ—ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್-ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ ದೊರೆವುದು.

CANARA BANK, LIMITED.

ESTD: 1906

ಸ್ವದೇಶಾಭಿಮಾನಿ

ತಾರೀಕು 25—6—1948

ಗಡಿನಾಡು ಗಾಂಧಿಯವರ ಬಂಧನ

ಗಡಿನಾಡು ಗಾಂಧಿಯೆಂದು ಅಖಿಲ ಭಾರತದಲ್ಲಿ ಹೆಸರಾಂತ ಖಾನ್ ಅಬ್ದುಲ್ ಗಫರ್ ಖಾನರನ್ನು ಗಡಿನಾಡಿನ ಪ್ರಾಂತಿಕ ಸರಕಾರವು ಕೈದುಮಾಡಿ ಇವರಿಗೆ 3 ವರ್ಷಗಳ ಶಿಕ್ಷೆ ವಿಧಿಸಲಾಗಿದೆ. ಇವರು ಪಾಕಿಸ್ಥಾನಕ್ಕೆ ದ್ರೋಹ ಬಗೆದು ಹಿಂಸಾತ್ಮಕವಾಗಿ ದಂಗೆಯೆಬ್ಬಿಸಲು ಸನ್ನಾಹಮಾಡುತ್ತಿದ್ದರೆಂಬುದು ಇವರ ಮೇಲೆ ಹೊರಿಸಿದ ಆರೋಪ.

ಖಾನ್ ಅಬ್ದುಲ್ ಗಫರ್ ಖಾನರು ಹಿಂಸಾತ್ಮಕ ಕಾರ್ಯಕ್ರಮದ ಸಿದ್ಧತೆಯಲ್ಲಿದ್ದರೆಂದರೆ ಯಾರೂ ನಂಬುವ ಮಾತಲ್ಲ. ಪಠಾಣರಂಥ ಯೋಧರಿಗೆ ಅಹಿಂಸೆಯನ್ನು ಕಲಿಸಿದ ಇವರು ಅಹಿಂಸೆಯಲ್ಲಿ ಅಚಲ ವಿಶ್ವಾಸವಿಟ್ಟು ಆಜೀವ ದುಡಿದವರಿದ್ದು ಈ ಆರೋಪವನ್ನು ಬೇಕೆಂತಲೇ ಹೊರಿಸಿರುವರೆಂಬ ಬಗ್ಗೆ ಯಾರೂ ಅನುಮಾನಪಡುವಂತಿಲ್ಲ. ಇವರು ಪಾಕಿಸ್ಥಾನಕ್ಕಾದರೂ ದ್ರೋಹ ಬಗೆದರೆಂಬ ಮಾತು ಸರಿಯೆ? ಭಾರತದ ವಿಭಜನೆಯಾಗುವುದು ಇವರಿಗೆ ಒಪ್ಪಿಗೆ ಇರಲಿಲ್ಲವೆಂಬ ಮಾತು ಮಾತ್ರ ನಿಜ. ಆದರೆ ಇತ್ತಂಡಗಳ ಒಪ್ಪಿಗೆಯಿಂದ ಪಾಕಿಸ್ಥಾನ ಸ್ಥಾಪನೆಯಾದ ಬಳಿಕ ತಾನು ಪಾಕಿಸ್ಥಾನದ ಅಭ್ಯುದಯಕ್ಕಾಗಿ ದುಡಿಯುವುದಾಗಿ ಇವರು ಪದೇಪದೇ ಹೇಳುತ್ತ ಬಂದಿದ್ದಾರೆ. ಒಂದು ಹೇಳಿ ಇನ್ನೊಂದು ಮಾಡುವ ಸ್ವಭಾವ ಇವರದಲ್ಲವೆಂಬುದರಿಂದ ಇವರು ಪಾಕಿಸ್ಥಾನಕ್ಕೆ ದ್ರೋಹ ಬಗೆದರೆಂಬ ಮಾತು ಕೂಡಾ ನಿಜವಲ್ಲ. ಅಂದ ಮೇಲೆ ಇವರನ್ನು ಬಂಧಿಸಿದುದಾದರೂ ಏತಕ್ಕೆ?

ಅಬ್ದುಲ್ ಗಫರ್ ಖಾನರು ಈಚೆಗೆ ಒಂದು ಜನತಾ ಪಕ್ಷವೆಂದು ಪಾಕಿಸ್ಥಾನದಲ್ಲಿ ಹೊಸ ರಾಜಕೀಯ ಪಂಗಡವನ್ನು ವ್ಯವಸ್ಥೆಗೊಳಿಸಿದರು. ಮುಂದೆ ಬರಲಿರುವ ಚುನಾವಣೆಯಲ್ಲಿ ಈ ಪಕ್ಷಕ್ಕೆ ಅಲ್ಲಿ ಬಹುಮತ ದೊರೆಯುವುದು ಖಂಡಿತವೆಂಬುದನ್ನು ಅಲ್ಲಿಯ ಮುಸ್ಲಿಮ್ ಲೀಗು ಸರಕಾರವು ಕಂಡಿತು. ಈ ಪಕ್ಷವನ್ನು ಈಗ ಆರಂಭದ ದೆಸೆಯಲ್ಲಿಯೇ ಅಂತ್ಯಗೊಳಿಸಲು ಯತ್ನಿಸಿ ಇದಕ್ಕಾಗಿಯೇ ಈ ಹೊಸ ಪಕ್ಷದ ಮುಂದಾಳುಗಳನ್ನು ಬಂಧಿಸಲಾಗಿದೆಯೆಂಬುದು ಸ್ಪಷ್ಟವಿರುತ್ತದೆ.

ಸ್ವತಃ ಕ್ವೈದೇ ಅಜಾಮ ಜಿನ್ನಾರವರೇ ಪಾಕಿಸ್ಥಾನದಲ್ಲಿ ಮುಸ್ಲಿಮ್ ಲೀಗು ಪಂಗಡವೊಂದೇ ಸಾಕೆಂದೂ ವಿರುದ್ಧ ಪಂಗಡಗಳು ಬೇಡವೆಂದೂ ಹೇಳಿದ್ದರಷ್ಟೆ. ನಾಜಿ ಜರ್ಮನಿಯಲ್ಲಿ ನಾಜಿಗಳ ಪಂಗಡಕ್ಕೆ ಮಾತ್ರ ಸ್ಥಾನವಲ್ಲದೆ ವಿರುದ್ಧ ಪಂಗಡ ಬಿಡಲಾಗುತ್ತಿತ್ತೆ? ಜನಮತ ತೆಗೆಯುವ ಸಂದರ್ಭಗಳು ಬಂದಾಗಲೆಲ್ಲ ನೂರಕ್ಕೆ ನೂರು ಓಟುಗಳು ನಾಜಿಗಳಿಗೆ ದೊರೆಯುತ್ತಿದ್ದವು. ಅಂದರೆ ವಿರುದ್ಧ ಪಕ್ಷಕ್ಕೆ ಆಸ್ಪದವೇ ಇದ್ದಿಲ್ಲ. ಇದೇ ಮಾದರಿಯಲ್ಲಿ ಪಾಕಿಸ್ಥಾನ ನಡೆಯಬೇಕೆಂಬುದು ಜಿನ್ನಾರವರ ಆಸೆ. ಅಂದ ಮೇಲೆ ಜನತಾ ಪಕ್ಷವೆಂದು ಪ್ರಜೆಗಳ ಹೊಸ ಪಂಗಡದ ವ್ಯವಸ್ಥೆಯನ್ನು ಇವರು ಸಹಿಸುವುದಾದರೂ ಹೇಗೆ?

ಪ್ರಜಾತಂತ್ರ ಸರಕಾರದಲ್ಲಿ ಬಹುಮತದವರು ಆಡಳಿತೆ ವಹಿಸಿ ಕಡಿಮೆ ಸಂಖ್ಯಾಕರ ವಿರುದ್ಧ ಪಕ್ಷದ ಅಭಿಪ್ರಾಯಗಳನ್ನು ಕೂಡಾ ಪಡೆದು ಮುಖ್ಯ ಕಾರ್ಯಗಳಲ್ಲಿ ಸಾಧ್ಯವಿದ್ದಮಟ್ಟಿಗೆ ಇಂಥ ವಿರುದ್ಧ ಪಂಗಡದ ಸಮ್ಮತಿ ಪಡೆದೇ ಮುಂದರಿಸಲು ಯತ್ನಿಸಲಾಗುತ್ತದೆ. ಬ್ರಿಟನಿನಲ್ಲಂತೂ ವಿರುದ್ಧ ಪಂಗಡದ ನಾಯಕರು ಸರಕಾರೀ ಸಂಬಳಕ್ಕೆ ಅರ್ಹರೆಂದು ತಿಳಿಯಲಾಗುತ್ತದೆ.

ಜಿನ್ನಾರವರ ಪ್ರಜಾತಂತ್ರವಾದರೊ ಹಿಟ್ಲರ್ ಮಾದರಿಯದು. ವಿರುದ್ಧ ಪಂಗಡಗಳಿಗೆ ಆಸ್ಪದ ಕೊಟ್ಟರೆ ಹಿಟ್ಲರರ ಅಧಿಕಾರ ಶಾಶ್ವತವಾಗಿ ಉಳಿಯುವುದು ಹೇಗೆ? ಇಂದು ಕಡಿಮೆ ಸಂಖ್ಯಾಕರಿದ್ದವರು ನಾಳೆ ಬಹುಮತ ಪಡೆಯಬಹುದು. ಸರಕಾರದ ಆಡಳಿತೆ ಬದಲಾಯಿಸಬೇಕಾಗುತ್ತದೆ. ಇಂದು ಚರ್ಚಿಲರ ಅಧಿಕಾರ ನಡೆದರೆ ನಾಳೆ ಅಟ್ಲಿಯವರು ಮುಂದೆ ಬರಬಹುದು. ಇಂಥ ವ್ಯವಸ್ಥೆ ಜಿನ್ನರಿಗೆ ಸರಿತೋರಲಾರದು. ಅವರಿಗೆ ಜಿನ್ನಾರವರ ಅಧಿಕಾರವೇ ಶಾಶ್ವತ ಉಳಿಯಬೇಕಾಗಿದೆ.

ಸಿಂಧ ಪ್ರಾಂತ್ಯದ ಮುಖ್ಯ ಮಂತ್ರಿ ಖುಹ್ರೋರವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿ ಲಂಚ ತಿಂದರೆಂಬ ಆರೋಪಕ್ಕೆ ಗುರಿಮಾಡಲಾಗಿತ್ತಷ್ಟೆ. ಈಗ ಆ ಪ್ರಾಂತ್ಯದಲ್ಲಿ ಕಡಮೆ ಸಂಖ್ಯಾಕ ವಿರುದ್ಧ ಪಂಗಡದ ಮುಂದಾಳು ಸೈಯದರನ್ನು ಇಂಟರ್ನ್ ಮಾಡಲಾಗಿದೆಯೆಂಬ ವಾರ್ತೆ ಪ್ರಕಟವಾಗಿರುತ್ತದೆ. ಇದು ಕೂಡಾ ವಿರುದ್ಧ ಪಂಗಡ ಮುರಿಯುವ ಯತ್ನವಿರಬಹುದೆ?

ಜಿನ್ನಾ ಪಂಗಡದವರು ಪಾಕಿಸ್ಥಾನದಲ್ಲಿ ಇಸ್ಲಾಮೀ ಪದ್ಧತಿಯ ರಾಜ್ಯಭಾರ ನಡೆಸುವುದಾಗಿ ಹೇಳುತ್ತ ಬಂದಿದ್ದಾರೆ. ಇದು ಮುಸ್ಲಿಮ ಜನರನ್ನು ಧರ್ಮದ ಹೆಸರು ಹೇಳಿ ಮಂಕುಗೊಳಿಸಲು ಮಾಡಿದ ಯತ್ನ ಮಾತ್ರವಿರುತ್ತದೆ. ಮಾನವ ಸೋದರತೆಯನ್ನು ಜಗತ್ತಿನಲ್ಲಿ ಸಾರಿದ ಇಸ್ಲಾಮ್ ಧರ್ಮಕ್ಕೂ ಹಿಟ್ಲರ್ ಪದ್ಧತಿಗೂ ಅರ್ಥಾರ್ಥ ಸಂಬಂಧವಿಲ್ಲ. – ಪಾಕಿಸ್ಥಾನದಲ್ಲಿ ನಡೆಯುವ ಪ್ರಜಾತಂತ್ರ ಪದ್ಧತಿ ಇಸ್ಲಾಮೀ ಪದ್ಧತಿ ಇರದೆ ನಾಜೀ ಪದ್ಧತಿಯೆಂಬುದು ದಿನದಿಂದ ದಿನಕ್ಕೆ ಅತ್ಯಂತ ಸ್ಪಷ್ಟವಾಗುತ್ತಿದೆ. ಗಡಿನಾಡು ಗಾಂಧಿಯವರ ಬಂಧನವು ಈ ವಿಷಯವನ್ನು ಜಗತ್ತಿಗೇನೆ ಸ್ಪಷ್ಟಗೊಳಿಸುವಂತಿದೆ.

ಜಿನ್ನಾ ಪದ್ಧತಿಯು ಆಡಳಿತೆ ಯಶಸ್ವಿಯಾಗಿ ಅದರ ಅಧಿಕಾರ ಶಾಶ್ವತವಾಗುವುದೇ? ಜರ್ಮನಿಯ ನಾಜಿ ಪಂಗಡ ಅಥವಾ ಇಟಲಿಯ ಫೆಸಿಸ್ಟ ಪಂಗಡದಷ್ಟೆ ದಕ್ಷತೆಯನ್ನು ಇವರೂ ತೋರಿದರೆ ಸ್ವಲ್ಪ ಸಮು

ಟೀಕೆ-ಟಿಪ್ಪಣಿಗಳು

ಮೌಂಟ್ ಬೆಟನರಿಗೆ ವಿದಾಯ.

ಹಿಂದುಸ್ಥಾನದ ಕೊನೆಯ ಬ್ರಿಟಿಷ್ ಗವರ್ನರ ಜನರಲ್ ಲಾರ್ಡ ಮೌಂಟ್ ಬೆಟನ್ ಇವರ ಪತ್ನಿ ಲೇಡಿ ಮೌಂಟ್ ಬೆಟನ್ ಹಾಗೂ ಪುತ್ರಿ ಲೇಡಿ ಪಾಮೇಲಾ ಮೌಂಟ್ ಬೆಟನ್ ಇವರು ಇದೇ ಜೂನ್ ತಾ. 21ನೇ ದಿನ ಬ್ರಿಟನಿಗೆ ಹಿಂತೆರಳಿದರು. ಇವರಿಗೆ ಅತ್ಯಂತ ಸಂಭ್ರಮದ ವಿದಾಯ ಕೊಡಲಾಯಿತು. ಭಾರತದ ಇತಿಹಾಸದಲ್ಲಿ ಗವರ್ನರ್ ಜನರಲ್ ಆಗಿ ಬಂದವರಲ್ಲಿ ಇವರಷ್ಟು ಜನಪ್ರಿಯರಾಗಿ ಮರಳಿದವರು ಇನ್ನೊಬ್ಬರಿಲ್ಲವೆಂದರೆ ಅತಿಶಯೋಕ್ತಿಯಲ್ಲ.

ಭಾರತ ಸರಕಾರದ ಮಂತ್ರಿಮಂಡಲದವರು ಲಾರ್ಡ ಮೌಂಟ್ ಬೆಟನರ ಹದಿನೈದು ತಿಂಗಳ ಆಡಳಿತೆ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದ ಕಾಲವಿದ್ದು ಈ ಕಾಲದಲ್ಲಿ ಮೌಂಟಬೆಟನರು ಈ ದೇಶಕ್ಕೆ ಬಹಳ ಸೇವೆ ಸಲ್ಲಿಸಿದ್ದಾರೆಂದು ಒಂದು ನಿರ್ಣಯ ಮಾಡಿ ಅದನ್ನು ಪ್ರಧಾನ ಸಚಿವ ಪಂಡಿತ ಜವಾಹರಲಾಲರು ಅವರಿಗೆ ಕೊಟ್ಟರು. ಲಾರ್ಡ ಮೌಂಟ ಬೆಟನರು ಇದರಿಂದ ಸಂಪ್ರೀತರಾಗಿ ಈ ಪತ್ರವನ್ನು ತನ್ನ ಕುಟುಂಬದ ಶಾಶ್ವತ ರಿಕಾರ್ಡುಗಳೊಳಗೆ ಇರಿಸುವುದಾಗಿ ಹೇಳಿದರು.

ಭಾರತದ ಸ್ವಾತಂತ್ರ್ಯ, ಗಾಂಧೀಜಿಯವರ ನಿಧನ, ಹಿಂದೂ ಮುಸ್ಲೀಮ್ ಹತ್ಯಾಕಾಂಡ ಇಂಥ ಮಹಾಘಟನೆಗಳ ಕಾಲದಲ್ಲೆಲ್ಲ ಲಾರ್ಡ ಮೌಂಟ ಬೆಟನರು ಭಾರತ ಸರಕಾರದೊಡನೆ ವಿಶೇಷ ಸಹಾನುಭೂತಿಯಿಂದ ವರ್ತಿಸಿದ್ದು ನಮ್ಮ ಸರಕಾರ ನಡೆಸುವ ಮುಂದಾಳುಗಳ ವಿಶ್ವಾಸವನ್ನು ಗಳಿಸಿದ್ದಾರೆ. ... ಯು ಇವರೂ ಬಲಿಷ್ಠರಾಗಿ ಬೆಳೆಯುವ ಸಂಭವವಿದೆ. ಆದರೆ ಇಂಥ ಪಂಗಡ ಕೊನೆಯ ತನಕ ಶಾಶ್ವತವಾಗಿ ನಿಲ್ಲುವುದಿಲ್ಲವೆಂಬುದು ಹಿಟ್ಲರ್ ಮುಸಲೋನಿಯವರ ಗತಿಯಿಂದ ತಿಳಿಯಬಹುದು. ಪಾಕಿಸ್ಥಾನದಲ್ಲಿ ಜರ್ಮನ್ ನಾಜಿಗಳಷ್ಟು ದಕ್ಷತೆ ಕೂಡ ಇರುವಂತಿಲ್ಲವೆಂಬುದರಿಂದ ಜಿನ್ನರ ಆಡಳಿತೆ ಬಹುಕಾಲ ನಡೆಯಲಾರದು. ರಾಜಕೀಯ ರಂಗದಲ್ಲಿ ಕೇವಲ ಬಲಾತ್ಕಾರದಿಂದಲೇ ವಿರುದ್ಧ ಪಂಗಡ ಮುರಿಯುವುದು ಸಾಧ್ಯವಾಗುವುದಿಲ್ಲ.

ಭಾರತದ ರಾಜಕೀಯರಂಗದಲ್ಲಿ ಕೂಡಾ ಕಾಂಗ್ರೆಸು ಪಂಗಡ ಮಾತ್ರ ಉಳಿಯಬೇಕೆಂದಿಟ್ಟುಕೊಂಡು ಉಳಿದ ಭಿನ್ನಾಭಿಪ್ರಾಯವಿರುವವರ ಮೇಲೆ ದಬ್ಬಾಳಿಕೆ ನಡೆಸಿದರೆ ಅನ್ಯಾಯವಾಗುವುದೆಂಬುದನ್ನು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ಕಾಂಗ್ರೆಸು ಇಂದು ಬಹುಮತವುಳ್ಳ ಒಂದು ರಾಜಕೀಯ ಪಂಗಡವೆಂದು ತಿಳಿಯಬೇಕು. ಹಿಂಸಾತ್ಮಕ ಅಥವಾ ದೇಶದ್ರೋಹೀ ಪಂಗಡಗಳಿಗೆ ಮಾತ್ರ ಸ್ಥಾನವಿಲ್ಲವೆಂದು ತಿಳಿದು ಉಳಿದ ಭಿನ್ನಾಭಿಪ್ರಾಯಗಳಿಗೆಲ್ಲ ಆಸ್ಪದ ಕೊಟ್ಟೇ ತೀರಬೇಕು.

ಸಿರುವರು. ಲೇಡಿ ಮೌಂಟ ಬೆಟನರಾದರೂ ನಿರಾಶ್ರಿತರ ಸೇವೆ ಮೊದಲಾದುವುಗಳಲ್ಲಿ ಬಹಳ ಪರಿಶ್ರಮದಿಂದ ದುಡಿದಿರುವರು. ಇದರಿಂದಲೇ ಈ ದಂಪತಿಗಳು ಇಷ್ಟು ಜನಪ್ರಿಯರಾಗಿದ್ದರು.

ಬ್ರಿಟಿಷ್ ಆಡಳಿತೆಯು ಈ ರೀತಿ ಪರಸ್ಪರ ಮೈತ್ರಿಯಲ್ಲಿ ಕೊನೆಗೊಂಡುದು ಬ್ರಿಟನಿಗೂ ಭಾರತಕ್ಕೂ ಭೂಷಣವಿರುತ್ತದೆ.

ಚಕ್ರವರ್ತಿ ರಾಜಾಜಿಯವರ ಪದವಿ ಸ್ವೀಕಾರ.

ಭಾರತದ ಹೊಸ ಗವರ್ನರ್ ಜನರಲ್ ಪದವಿಯನ್ನು ಅದೇ ಜೂನ್ ತಾ. 21ನೇ ದಿನ ರಾಜಾಜಿಯವರು ವಹಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ನೆರೆದ ಸಭೆಯಲ್ಲಿ ಸಂಕುಚಿತ ಜಾತೀಯತೆ ಹಾಗೂ ಪ್ರಾಂತಿಕ ಭಾವನೆಗಳನ್ನು ತೊರೆಯುವುದು ಅಗತ್ಯವೆಂದೂ ಭಾರತದಲ್ಲಿ ಸರ್ವ ಪ್ರಜೆಗಳೂ ಸುಖಿಗಳಾಗಿ ಸಂತೋಷದಲ್ಲಿ ಅಭಿಮಾನದಿಂದ ಬಾಳುವಂತಾಗಬೇಕೆಂದೂ ಹೇಳಿದರು.

ಈ ಪರಿಸ್ಥಿತಿಯಲ್ಲಿ ಗವರ್ನರ್ ಜನರಲ್ ಪದವಿ ವಹಿಸಲು ರಾಜಾಜಿ ಅತ್ಯಂತ ಯೋಗ್ಯತೆ ಇದ್ದವರೆಂದು ನಾವು ಈ ಮೊದಲೇ ಸೂಚಿಸಿದ್ದೇವೆ. ರಾಜಾಜಿ ಗಾಂಧೀಜಿಯವರ ತತ್ವಗಳ ತಿರುಳನ್ನು ಪೂರ್ಣವಾಗಿ ತಿಳಿದವರು. ಆಧುನಿಕ ರಾಜಕೀಯ ಮುತ್ಸದಿಗಳು. ಇವೆರಡು ಲಕ್ಷಣಗಳು ಜೊತೆಯಲ್ಲಿ ಇವರಲ್ಲಿದ್ದಂತೆ ಪ್ರಾಯಶಃ ಅಖಿಲ ಭಾರತದಲ್ಲಿ ಇನ್ನಾರಲ್ಲಿಯೂ ಇಲ್ಲವೆನ್ನಬಹುದು.

ಕೇಂದ್ರ ಸರಕಾರದ ಪೂರ್ಣ ಅಧಿಕಾರವಿರುವುದು ಮಂತ್ರಿಮಂಡಲದಲ್ಲೆಂಬುದು ನಿಜವಾದರೂ ಈಗಿನ ಪರಿಸ್ಥಿತಿಯಲ್ಲಿ ಗವರ್ನರ್ ಜನರಲ್ ಪದವಿಯಲ್ಲಿರುವವರು ಪ್ರಮುಖ ಭಾಗ ವಹಿಸುವುದು ಸಹಜವಾಗಿರುತ್ತದೆ. ರಾಜಾಜಿಯವರು ಈ ಪದವಿಗೆ ಬಂದುದು ನಮ್ಮ ಕೇಂದ್ರ ಮಂತ್ರಿಮಂಡಲಕ್ಕೆ ವಿಶೇಷ ಸಹಾಯವಾಗುವುದೆಂಬ ಬಗ್ಗೆ ಸಂಶಯವಿಲ್ಲ.

ಹೈದರಾಬಾದು ಸಂಧಾನ ಮುರಿಯಿತು?

ಈಗ ಸಾಕಷ್ಟು ದೀರ್ಘಕಾಲದಿಂದ ನಡೆಯುತ್ತಿದ್ದ ಭಾರತ ಹೈದರಾಬಾದುಗಳೊಳಗಿನ ಸಂಧಾನದ ಮಾತುಕತೆಗಳು ಮುಕ್ತಾಯ ಹೊಂದಿದವು. ಭಾರತ ಸರಕಾರವು ಕೊಟ್ಟ ಶರ್ತಗಳಿಗೆ ಹೈದರಾಬಾದು ಸರಕಾರವು ಒಪ್ಪಲಿಲ್ಲ. ರಾಜಿಯಿಂದ ಈ ಪ್ರಶ್ನೆ ತೀರ್ಮಾನವಾದರೆ ಒಳ್ಳೆಯದಿತ್ತು. ಆದರೆ ಆಗಲಿಲ್ಲ.

ನೈಜಾಮ ಸರಕಾರಕ್ಕೆ ಭಾರತ ಸರಕಾರದ ಆಶ್ರಯದಲ್ಲಿರಲು ಇಷ್ಟವಿಲ್ಲ. ಭಾರತದ ನಟ್ಟನಡುವೆ ಸ್ವತಂತ್ರ ರಾಷ್ಟ್ರವೊಂದು ಇರಗೊಡಿಸುವುದು ಅಸಾಧ್ಯವೆಂದು ಅವರು ತಿಳಿಯುವುದಿಲ್ಲ. ಪ್ರಜಾತಂತ್ರ ಸರಕಾರ ಸ್ಥಾಪನೆಯೂ ಅವರಿಗೆ ಇಷ್ಟವಿಲ್ಲ. ರಜಾಕರರಂಥವರ ಉಪಟಳ ನಿಲ್ಲಿಸಲಿಕ್ಕೂ ಅವರು ತಯಾರಿಲ್ಲ. ಅಂದ ಮೇಲೆ ಸಂಧಾನವಾಗುವುದಾದರೂ ಹೇಗೆ?

ಭಾರತ ಸರಕಾರವು ಹೈದರಾಬಾದಿನ ಮೇಲೆ ಆರ್ಥಿಕ ಬಹಿಷ್ಕಾರ ಬಿಗಿ ಮಾಡುವುದಾಗಿ ಹೇಳಲಾಗಿದೆ. ರಜಾಕರರು ಬಾ

ಶ್ರೀ ಮುಳಿಯ ತಿಮ್ಮಪ್ಪಯ್ಯನವರ ವಿದಾಯ ಸತ್ಕಾರ

ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಧಾನ ಕನ್ನಡ ಅಧ್ಯಾಪಕತನದಿಂದ ಈಚೆಗೆ ನಿವೃತ್ತರಾಗಿ ಈಗ ಮಂಗಳೂರನ್ನು ಬಿಟ್ಟು ಪೆರ್ಲ ಗ್ರಾಮದಲ್ಲಿ ಹೋಗಿ ನೆಲಸಲು ಹೊರಟ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಡಿತ ಸಂಘದ ಆಶ್ರಯದಲ್ಲಿ ಅವರಿಗೊಂದು ವಿದಾಯ ಸತ್ಕಾರ ಏರ್ಪಡಿಸಲಾಗಿತ್ತು. ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಯವರು ಸಮಾರಂಭದ ಅಧ್ಯಕ್ಷರಾಗಿದ್ದರು.

ಶ್ರೀ ತಿಮ್ಮಪ್ಪಯ್ಯನವರು ಕನ್ನಡಕ್ಕೆ ಸಲ್ಲಿಸಿದ ಸೇವೆಯನ್ನು ನಾವೂ ಈ ಸಂದರ್ಭದಲ್ಲಿ ಸ್ವಲ್ಪ ನಿರೀಕ್ಷಿಸಿದರೆ ಅನುಚಿತವಾಗಲಾರದು.

ಮೊದಲು ಕೆನರಾ ಹೈಸ್ಕೂಲಿನಲ್ಲಿ ಆ ಬಳಿಕ ಅನೇಕ ವರ್ಷಗಳ ತನಕ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಇವರು ಸಲ್ಲಿಸಿದ ಸೇವೆ ಎಲ್ಲಕ್ಕೂ ಮುಖ್ಯವಾದುದು. ನೂರಾರು ವಿದ್ಯಾರ್ಥಿಗಳು ಇವರ ಬಳಿ ಕನ್ನಡದ ಅಭ್ಯಾಸ ಮಾಡಿದ್ದಾರೆ. ಇವರಲ್ಲಿ ಹೆಚ್ಚಿನವರಿಗೆ ಇವರು ಕನ್ನಡ ವಾಙ್ಮಯದ ಹುಚ್ಚು ಹಿಡಿಸಿದ್ದಾರೆಂಬ ಬಗ್ಗೆ ಸಂಶಯವಿಲ್ಲ. ಕನ್ನಡ ಕಾವ್ಯಗಳ ಸ್ವಾರಸ್ಯ ತಿಮ್ಮಪ್ಪಯ್ಯನವರು ತಿಳಿದಂತೆ ಇನ್ನಾರೂ ತಿಳಿಯಲಾರರೆಂದು ಇವರ ವಿದ್ಯಾರ್ಥಿಗಳೆಲ್ಲರ ಅಭಿಪ್ರಾಯ. ಇದಕ್ಕೆ ಎರಡು ಕಾರಣಗಳಿವೆ. ಕನ್ನಡ ಭಾಷೆಯ ಜ್ಞಾನ ತಿಮ್ಮಪ್ಪಯ್ಯನವರಿಗೆ ಇರುವಷ್ಟು ಪ್ರಾಯಶಃ ಇಂದು ಬೇರಾರಿಗೂ ಇಲ್ಲ. ಎರಡನೆಯದಾಗಿ ಇವರು ಸ್ವತಃ ಕವಿಗಳಿದ್ದು ಕವಿಹೃದಯ ಇವರಿಗೆ ತಿಳಿದಂತೆ ಹೆಚ್ಚಿನವರು ತಿಳಿಯಲಾರರು. ಅಂದವಾಗಿ ಪದ್ಯಗಳನ್ನು ಓದಿ ವಿವರಿಸತೊಡಗಿದರೆಂದರೆ ಇವರ ವಿದ್ಯಾರ್ಥಿಗಳಿಗೆ ಇವರ ಪಾಠವೆಂದರೆ ಒಂದು ರಸದೂಟವೇ ಆಗುತ್ತಿತ್ತು. ಆಯಾ ಕವಿಗಳ ಪದಪ್ರಯೋಗಗಳಲ್ಲಿ ಸ್ವತಃ ಆ ಕವಿಯೇ ಕಂಡುದಕ್ಕಿಂತಲೂ ಹೆಚ್ಚಿನ ಸ್ವಾರಸ್ಯವು ತಿಮ್ಮಪ್ಪಯ್ಯನವರಿಗೆ ಕಾಣುವುದಿತ್ತು. ಇಂಥ ಅಧ್ಯಾಪಕರಿಂದ ಕನ್ನಡಕ್ಕೆ ಯಾವ ಬಗೆಯ ಸೇವೆ ಸಲ್ಲುವುದೆಂದು ಪ್ರತ್ಯೇಕ ಹೇಳಬೇಕೆ? ಯುವಕರ ಹೃದಯದಲ್ಲಿ ಕನ್ನಡ ಕಾವ್ಯದ ಮೇಲೆ ಪ್ರೀತಿ ಹಾಗೂ ಅಭಿಮಾನ ತಲೆದೋರುವಂತೆ ಮಾಡುವ ಸೇವೆ ಕನ್ನಡಕ್ಕೆ ಅತಿ ದೊಡ್ಡ ಸೇವೆಯೆಂಬುದರಿಂದಲೇ ಇದು ಎಲ್ಲಕ್ಕೂ ಮುಖ್ಯ ಸೇವೆಯೆನ್ನಬೇಕಾಗಿದೆ.

ತಿಮ್ಮಪ್ಪಯ್ಯನವರು ಸ್ವತಃ ಬರೆದ ಅನೇಕ ಕಾವ್ಯ ಹಾಗೂ ಗ್ರಂಥಗಳ ಕೂಲಂಕುಶ ವಿಚಾರ ನಾವಿಲ್ಲಿ ಮಾಡಬೇಕಾಗಿಲ್ಲ. ಇವುಗಳ ದೆಸೆಯಿಂದ ಅವರು ಅಖಿಲ ಕರ್ನಾಟಕದ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಪದವಿಗೆ ಕೂಡಾ ಏರಿದವರೆಂದ ಮೇಲೆ ಇವರ ಬರವಣಿಗೆಗಳು ಎಲ್ಲರ ಪರಿಚಯದ ವಿಷಯವೆಂಬುದು ಸ್ಪಷ್ಟವಿರುತ್ತದೆ. ನಾಡೋಜ ಪಂಪ, ಸಮಸ್ತ ಭಾರತಸಾರ, ಆದಿಪುರಾಣ ಸಂಗ್ರಹ, ಪಾರ್ಥಿ ಸುಬ್ಬ, ನವನೀತ ರಾಮಾಯಣ, ಸೊಬಗಿನ ಬಳ್ಳಿ, ಚಂದ್ರಾವಲೀ ವಿಲಾಸ ಹಾಗೂ ಇವರ ಸಂಪಾದಕತ್ವದಲ್ಲಿ ನಡೆಯುತ್ತಲಿದ್ದ ಕೋಗಿಲೆ ಹಾಗೂ ಇತರ ಕರ್ನಾಟಕದ ಪತ್ರಿಕೆಗಳಲ್ಲಿಯ ಇವರ ಬರವಣಿಗೆಗಳು ಮತ್ತು ಇತ್ತೀಚೆಗೆ ಪ್ರಕಟವಾಗಿರುವ ನೃಪತುಂಗನ ಕಾವ್ಯಾವಲೋಕನ ಇವೆಲ್ಲ ಯಾವನೊಬ್ಬ ಲೇಖಕನಿಗೂ ಕನ್ನಡ ವಾಙ್ಮಯದಲ್ಲಿ ಶಾಶ್ವತ ಸ್ಥಾನವನ್ನು ಕಲ್ಪಿಸಿಕೊಡಲಿಕ್ಕೆ ಸಾಕೆಂಬುದನ್ನು ಮಾತ್ರ ಹೇಳಿದರೆ ಸಾಕು. ಇವುಗಳಲ್ಲಿ ಸಂಶೋಧನಾ ಭಾಗಗಳನ್ನು ಓದುವಾಗ ತಿಮ್ಮಪ್ಪಯ್ಯನವರು ಆಧುನಿಕ ಆಂಗ್ಲ ವಿದ್ಯಾಭ್ಯಾಸವನ್ನು ಬಹಳ ಮಟ್ಟಿಗೆ ಪಡೆದವರಲ್ಲವೆಂಬುದನ್ನೂ ಆಧುನಿಕ ಸಂಶೋಧನಾಕ್ರಮಗಳನ್ನು ಅಭ್ಯಾಸ ಮಾಡಿದವರಲ್ಲವೆಂಬುದನ್ನೂ ಸ್ಮರಣೆಗೆ ತಂದು ಓದಿದರೆ ಇವರ ಅಸಾಧಾರಣ ಸಾಮರ್ಥ್ಯ ಚೆನ್ನಾಗಿ ವ್ಯಕ್ತವಾಗುತ್ತದೆ.

ಇಂಥ ಗ್ರಂಥಗಳಲ್ಲಿ ಇವರು ತೋರಿಸುವ ಆಯಾ ಕವಿ ಹೃದಯ ಪರಿಚಯವು ಈ ಗ್ರಂಥಗಳ ನಿಜವಾದ ಮಹತ್ವವಿರುತ್ತದೆ. ನಾಡೋಜ ಪಂಪವನ್ನು ಈ ದೃಷ್ಟಿಯಿಂದ ಓದಿ ನೋಡಬೇಕು.

ಸೊಬಗಿನ ಬಳ್ಳಿ ಹಾಗೂ ನವನೀತ ರಾಮಾಯಣಗಳು ತಿಮ್ಮಪ್ಪಯ್ಯನವರ ಸ್ವತಂತ್ರ ಕವಿತಾ ನಿದರ್ಶನಗಳು. ಇವುಗಳಲ್ಲಿ ನವನೀತ ರಾಮಾಯಣ ಇನ್ನೂ ಪೂರ್ಣ ಪ್ರಕಟವಾಗಿಲ್ಲವೇಕೆಂದು ತಿಳಿಯುವುದಿಲ್ಲ. ಇದನ್ನು ಆದಷ್ಟು ಬೇಗನೆ ಪ್ರಕಟಿಸುವರೆಂದು ಆಶಿಸುತ್ತೇವೆ.

ಇವರ ಬಹಳ ಮೊದಲಿನ ಗ್ರಂಥವಾದ ಚಂದ್ರಾವಲೀ ವಿಲಾಸದ ವಿಷಯವಾಗಿ ಒಂದು ಮಾತನ್ನು ಪ್ರತ್ಯೇಕವಾಗಿ ಹೇಳಬೇಕು. ಮುದ್ದಣ್ಣನ ಮಾದರಿಯಲ್ಲಿ ಅದೇ ಶೈಲಿಯಲ್ಲಿ ಬರೆದ ಈ ಚಿಕ್ಕ ಗ್ರಂಥ ಬಹಳ ಮನೋಹರವಾದುದು. ಇದರ ಪ್ರತಿಗಳೆಲ್ಲ ಈಗ ಮುಗಿದುಹೋಗಿ ಇದನ್ನು ಪುನಃ ಪ್ರಕಟಿಸಿಲ್ಲ. ಉದ್ಗ್ರಂಥಗಳನ್ನು ಬರೆದ ತಿಮ್ಮಪ್ಪಯ್ಯನವರಿಗೆ ಈ ಚಿಕ್ಕ ಗ್ರಂಥ ಕೇವಲ ಹುಡುಗಾಟಿಕೆಯೆನ್ನಿಸಿ ಪುನರ್ಮುದ್ರಣಕ್ಕೆ ಇದು ಯೋಗ್ಯವಲ್ಲವೆನ್ನಿಸುತ್ತಿದೆಯೋ ಏನೋ? ಅಥವಾ ಶೃಂಗಾರ ಪ್ರಧಾನ ಗ್ರಂಥವಿದ್ದು ತನ್ನ ಶಿಷ್ಯರಲ್ಲಿ ಹೆಚ್ಚಿನವರು ಯುವಕರೆಂಬುದರಿಂದ ಇವರ ಕೈಗೆ ಇದು ಪುನಃ ಬೀಳುವುದು ಅಗತ್ಯವಿಲ್ಲವೆಂಬ ಭಾವನೆಯೋ ಏನೆಂಬುದು ಗೊತ್ತಾಗುವುದಿಲ್ಲ. ಹೇಗಿದ್ದರೂ ಈ ಚಿಕ್ಕ ಗ್ರಂಥ ಬಹಳ ಸುಂದರವಾಗಿ ಮನೋಹರವಾಗಿ ಇರುವುದರಿಂದ ಇದನ್ನು ಪುನಃ ಮುದ್ರಿಸಬೇಕೆಂದು ನಾವು ಆಗ್ರಹಪೂರ್ವಕ ಕೇಳುತ್ತೇವೆ. ತಿಮ್ಮಪ್ಪಯ್ಯನವರಿಗೆ ಸ್ವತಃ ಇದನ್ನು ಮುದ್ರಿಸುವ ಇಷ್ಟವಿಲ್ಲದಿದ್ದರೆ ಬೇರೆ ಪ್ರಕಾಶಕರಿಗಾದರೂ ಇದನ್ನು ಪ್ರಕಟಿಸಲು ಅನುಮತಿ ಕೊಡಬೇಕು.

ಪಾರ್ಥಿ ಸುಬ್ಬನ ಪ್ರಸಂಗಗಳನ್ನು ಸರಿಯಾಗಿ ಪರಿಶೋಧಿಸಿ ಪ್ರಕಟಗೊಳಿಸುವ ಆವಶ್ಯಕತೆಯನ್ನು ತಿಮ್ಮಪ್ಪಯ್ಯನವರೇ ಸೂಚಿಸಿದ್ದಾರೆ. ಈ ಕಾರ್ಯವನ್ನು ಅವರೇ ಕೈಕೊಂಡರೆ ಅತ್ಯುತ್ತಮ ರೀತಿಯಿಂದ ನೆರವೇರೀತು.

ತಿಮ್ಮಪ್ಪಯ್ಯನವರು ಮಂಗಳೂರಿನಿಂದ ಪೆರ್ಲ ಗ್ರಾಮಕ್ಕೆ ಹೋದುದು ಅವರ ಆರೋಗ್ಯದ ದೃಷ್ಟಿಯಿಂದ ಯುಕ್ತವೇ ಇದೆ. ಅಲ್ಲಿದ್ದು ಇವರು ಇನ್ನೂ ಅನೇಕ ಕಾರ್ಯಗಳನ್ನು ಸಾಹಿತ್ಯರಂಗದಲ್ಲಿ ಸಾಧಿಸುವುದು ಸಾಧ್ಯವಿದೆ. ಅಂತಾಗಲೆಂದು ನಾವು ಹಾರೈಸುತ್ತೇವೆ.

ಕೊರ್ಡಕಲ್ ಶ್ರೀನಿವಾಸರಾಯರ ನಿಧನ

ಉಡುಪಿ ಬೋರ್ಡ್ ಶಾಲಾ ಅಧ್ಯಾಪಕರಾಗಿ ಹಲವು ವರ್ಷಗಳಿಂದ ಕೆಲಸಮಾಡುತ್ತಿದ್ದು ಕನ್ನಡದಲ್ಲಿ ಉತ್ತಮ ಲೇಖಕರಾಗಿದ್ದ ಕೊರ್ಡಕಲ್ ಶ್ರೀನಿವಾಸರಾಯರು ವಿಷಮಜ್ವರದಿಂದ ತಮ್ಮ 55ನೇ ವಯಸ್ಸಿನಲ್ಲಿ ತೀರಿ ಹೋದರೆಂಬ ಶೋಚನೀಯ ವಾರ್ತೆ ಬಂದಿದೆ. ಇವರು ಕನ್ನಡದಲ್ಲಿ ಉತ್ಸಾಹೀ ಲೇಖಕರಾಗಿದ್ದು ಕತೆ, ಕವಿತೆ, ನಾಟಕ, ಹಾಡು ಇತ್ಯಾದಿ ಎಲ್ಲ ಬಗೆಯ ಬರವಣಿಗೆಗಳನ್ನು ಬರೆಯುತ್ತಿದ್ದರು. ಸರಳಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಬರೆಯುವುದು ಇವರನ್ನು ಜನಪ್ರಿಯ ಲೇಖಕರನ್ನಾಗಿ ಮಾಡಿತ್ತು. ಉಡುಪಿಯ ಕರ್ನಾಟಕ ಸಂಘದ ಸ್ಥಾಪನೆಯಲ್ಲಿ ವಿಶೇಷ ಉತ್ಸಾಹ ತೋರಿಸಿ ಆ ಸಂಘದ ಕಾರ್ಯದರ್ಶಿಗಳಾಗಿದ್ದರು. ಇತ್ತೀಚೆಗೆ ಸಹಕಾರೀ ಯೂನಿಯನಿನ ಕಾರ್ಯದರ್ಶಿಯಾಗಿಯೂ ದುಡಿಯುತ್ತಿದ್ದರು.

ಮಂಗಳೂರಿನ ಸಾಹಿತ್ಯ ಪರಿಷತ್ತಿನ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಬಿಸೆಂಟ್ ಹಾಲಿನಲ್ಲಿ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಶ್ರೀ ಕೊರ್ಡಕಲ್ಲರ ನಿಧನಕ್ಕಾಗಿ ಸಂತಾಪಸೂಚಿಸುವ ಸಭೆಯೊಂದು ನೆರವೇರಿತು.

ಇವರ ಕುಟುಂಬದವರೊಡನೆ ನಮ್ಮ ಸಹಸಂತಾಪವನ್ನು ಸೂಚಿಸುತ್ತೇವೆ.

ರತದ ಗಡಿಯೊಳಗೆ ಬಾರದಂತೆ ತಕ್ಕ ವಿವೇಚನೆ ಮಾಡಲಾಗುತ್ತದೆಂಬ ಬಗ್ಗೆ ಕೂಡ ಸಂಶಯ ಬೇಡ.

ಆರ್ಥಿಕ ಬಹಿಷ್ಕಾರ ಪರಿಣಾಮಕಾರಿಯಾಗದೆ ಇರಲಾರದು. ಈ ಸಂಸ್ಥಾನಕ್ಕೆ ಸುತ್ತಲೂ ಭಾರತದ ಪ್ರದೇಶವಿರುವುದರಿಂದ ಬೇಕಾದ ವಸ್ತುಗಳನ್ನು ಇವರಿಗೆ ಒದಗಿಸಿಕೊಳ್ಳಲು ಬೇರಾವ ದಾರಿಯೂ ಇಲ್ಲ. ಸ್ವಾವಲಂಬನದಿಂದಲೇ ಇವರು ನಿರ್ವಹಿಸಲು ಯತ್ನಿಸಿದರೆ ಅದೊಂದು ಸತ್ಪರಿಣಾಮವೆಂದೇ ತಿಳಿಯಬೇಕು.

ಬಹಿಷ್ಕಾರವು ಬಿಗಿಯಾದಂತೆ ಹೈದರಾಬಾದು ಸರಕಾರ ಕಣ್ತೆರೆಯುವುದೆಂದು ನಿರೀಕ್ಷಿಸಬಹುದು.

ಮೋಟಾರ ಸಂಚಾರವೂ ಸೊಳ್ಳೆಗಳೂ

ನಿಮ್ಮ ರಜಾದಿನಗಳಲ್ಲಿ ನೀವು ಗೆಲಸು ಕಟ್ಟೆಯಲ್ಲಿ ಪೆಟ್ರೋಲು ಖರ್ಚುಮಾಡಿ ನೂರರಗಟ್ಲೆ ಮೈಲು ಸಂಚಾರ ಮಾಡುವಾಗ ನಿಮ್ಮ ಸಮಯವು ಮನೋಹರವಾದ ಪ್ರಕೃತಿ ಸೌಂದರ್ಯದ ಸೊಬಗನ್ನು ಣ್ಣುವುದರಲ್ಲೇ ವ್ಯಯವಾಗಿ ನಿಮಗೆ ಇತರ ವಿಚಾರಗಳ ಕಡೆ ಹೊರಳಲು ಸಮಯವಿರುವುದಿಲ್ಲ. ತಮ್ಮ ವ್ಯಾಪಾರ ವ್ಯವಹಾರಕ್ಕಾಗಿ ದೀರ್ಘ ಪ್ರಯಾಣ ಮಾಡುವವರಿಗೂ ಗಂಭೀರ ಯೋಚನೆಗಳನ್ನು ಮಾಡಲು ಸಾಧ್ಯವಾಗುವುದಿಲ್ಲ.

ನಿಮ್ಮೀ ಮೋಟಾರು ಪ್ರಯಾಣವನ್ನು ಸೊಳ್ಳೆಗಳು ಸಂಪೂರ್ಣ ಸ್ತಬ್ಧಗೊಳಿಸಲು ಸಾಧ್ಯವಿದೆಯೆಂಬ ಸಂಗತಿಯು ನಿಮಗೆ ಇದು ತನಕ ಹೊಳೆದಿರಲಿಕ್ಕಿಲ್ಲ. ಅವು ಗುಂಪುಗಟ್ಟಿ ನಿಮ್ಮನ್ನು ಅಭಿಕ್ರಮಣ ಮಾಡುತ್ತವೆಂದಲ್ಲ. ಆದರೆ ಸೊಳ್ಳೆಗಳು ಮೋಟಾರು ಟಾಯರುಗಳ ಬೆಲೆಯನ್ನು ಪರಮಾವಧಿ ಮಟ್ಟಕ್ಕೇರಿಸಲು ಕಾರಣವಾಗಬಲ್ಲವು. ಆಗ ಸಾಮಾನ್ಯ ಮಾನವರಿಗೆ ಅವುಗಳನ್ನು ಕೊಂಡುಕೊಳ್ಳಲು ಅಸಾಧ್ಯವೇ ಆಗಬಹುದು.

ಇದು ಹೇಗೆ ಸಂಭವಿಸಬಹುದು? ರಬ್ಬರು ತೋಟಗಳಿರುವ ಸ್ಥಳಗಳು ಅತ್ಯುಷ್ಣತೆ ಇರುವ ಜವುಗು ಪ್ರದೇಶಗಳಲ್ಲಿವೆ. ಈ ಪ್ರದೇಶಗಳು ಸೊಳ್ಳೆಗಳ ನಿವಾಸ, ಅಭಿವೃದ್ಧಿಗೆ ಆದರ್ಶಪ್ರಾಯವಾದವುಗಳು. ಸೊಳ್ಳೆಗಳಲ್ಲಿ ಎನೊಫಿಲಿಸ್ ಎಂಬ ಜಾತಿಯದು ಮಲೇರಿಯವನ್ನು ಹಬ್ಬಿಸುವಂತಹದು. ಇದರ ಪರಿಣಾಮವಾಗಿ ರಬ್ಬರು ತೋಟಗಳ ವ್ಯವಸ್ಥಾಪಕರು ನಿರಂತರವಾಗಿ ಮಲೇರಿಯದೊಡನೆ ಹೋರಾಡಬೇಕಾಗುತ್ತದೆ. ಇಲ್ಲವಾದರೆ ಅತ್ಯಲ್ಪ ಅವಧಿಯೊಳಗೆಂತೆ ಅವರ ಉದ್ಯಮವು ಅಸ್ತಿತ್ವರಹಿತವಾಗುವುದು. ಮೋಟಾರು ತಯಾರಕರು ತಮ್ಮ ವಾಹನಗಳಿಗೆ ಸಾಕಷ್ಟು ಟಾಯರು ದೊರೆಯುವಂತಾಗಲು ತಮ್ಮ ಸ್ವಂತ ರಬ್ಬರ ತೋಟಗಳನ್ನು ಮಾಡಿಕೊಂಡಿರುವರು. ಪ್ರಖ್ಯಾತ ಹ್ಯಾರ್ವೆ ಫೈರ್‌ಸ್ಟೋನ್ (ಟಾಯರ್ ತಯಾರಕ)ರಿಗೆ ಪಶ್ಚಿಮ ಆಫ್ರಿಕದ ಲೈಬೀರಿಯಾದಲ್ಲೂ ವಿಶಾಲವಾದ ರಬ್ಬರು ತೋಟಗಳಿವೆ.

ಈ ಸಂಗತಿಗಳಿಂದ ಇತರ ಪ್ರದೇಶಗಳಲ್ಲಿ ಮಲೇರಿಯಾ ಜ್ವರದ ವಿರೋಧ ಹೂಡಲ್ಪಡಬೇಕಾದ ಹಳಹಳ ಅದೆಷ್ಟು ಉಪಯುಕ್ತವಾದುದೆಂದು ನಮಗೆ ತಿಳಿಯುತ್ತದೆ. ಅಂತೇ ಕ್ವಿನೀನನ್ನು ಕೊಳ್ಳಲು ವ್ಯಯಿಸಲ್ಪಡುವ ಹಣದ ಉತ್ತಮ ವಿನಿಯೋಗವೆಂಬುದೂ ಇದರಿಂದ ಸ್ಪಷ್ಟವಾಗುವುದು.

ತೀಕ್ಷ್ಣವಾದ ಮಲೇರಿಯಾ ಜ್ವರವನ್ನು ಪರಿಹಾರಗೊಳಿಸಲು ದಿನಂಪ್ರತಿ, ೫ರಿಂದ ೭ ದಿನಗಳ ತನಕ, ೧೫ರಿಂದ ೨೦ ಕಾಳುಗಳಷ್ಟು ಕ್ವಿನೀನನ್ನು ತೆಗೆದುಕೊಳ್ಳಬೇಕು. ರಕ್ಷಣೋಪಾಯವಾಗಿ ಮಲೇರಿಯಾ ಕಾಲದಲ್ಲಿ ದಿನಂಪ್ರತಿ ೬ ಕಾಳುಗಳಷ್ಟು ಕ್ವಿನೀನನ್ನು ತೆಗೆದುಕೊಳ್ಳಬೇಕು. ಜ್ವರನಿಂತ ಮೇಲೆ ಇದನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಜ್ವರ ಪುನಃ ಬಂದರೆ ಮುಂಚಿನಂತೆ ಸೇವಿಸುವುದು. ಹೀಗೆಂದು ಜನಾಂಗದ ಮಲೇರಿಯಾ ತಜ್ಞರ ಸಮಿತಿಯು ಶಿಫಾರಸು ಮಾಡುತ್ತದೆ.

ಜಿಲ್ಲಾ ಸಮಾಚಾರ

ಬೀಳ್ಕೊಡುವ ಸಮಾರಂಭ

ಹಿಂದುಸ್ಥಾನ್ ಸ್ಕೌಟ್ ಸಂಘದ ಹುದು ಗರ ಶಾಖೆಯ ಜಿಲ್ಲಾ ಕಮಿಶನರಾದ ಶ್ರೀ ಎಂ. ಎಸ್. ಏಕಾಂಬರ ರಾಯರು ಹುಡು ಗಿಯರ ಶಾಖೆಯ ಜಿ|| ಕಮಿಶನರಾದ ಶ್ರೀಮತಿ ಲೀಲಾಬಾಯಿ ಏಕಾಂಬರ ರಾ ಯರು ಆ ಸ್ಥಾನಗಳಿಂದ ನಿವೃತ್ತರಾಗುವ ಸಂದರ್ಭದಲ್ಲಿ ಕಳೆದ ತಾ. ೪ರಲ್ಲಿ ಬೆಸೆಂಟ್ ಬಾಲಿಕಾ ಹ್ಯಾಸ್ಕೂಲಿನಲ್ಲಿ ಪ್ರಾಂತಿಕ ಅಸಿ|| ಕಮಿಶನರಾದ ಶ್ರೀ ಎಂ ಎಸ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಆ ದಂಪತಿಗಳ ಗೌರವಾರ್ಥವಾಗಿ ಬೀಳ್ಕೊ ಡುವ ಸಮಾರಂಭವೇರ್ಪಟ್ಟಿತು. ಹೊಸ ಜಿಲ್ಲಾ ಕಮಿಶನರಾದ ಶ್ರೀ ಎಂ. ವೆಂಕ ಟೇಶ ಪೈಯವರು ಏಕಾಂಬರ ರಾವ್ ಮತ್ತು ಅವರ ಸತಿಯವರ ಸೇವೆಯನ್ನು ಮನ್ನಿಸಿ ಅಲ್ಲಹಾಬಾದ ಸಂಘದವರು ಅವರಿಗೆ ಕೊಟ್ಟ ಯೋಗ್ಯತಾ ಪದಕಗಳನ್ನು ಅರುಹಿ ನೆರೆದವರನ್ನು ವಂದಿಸಿದರು

ಸಂತೋಷ ಕೂಟ

ಕರ್ನಾಟಕ ಪ್ರಾಂತಿಕ ಹಿಂದೀ ಪ್ರಚಾರ ಪ್ರಾದೇಶಿಕ ಹಿಂದೀ ವ್ಯವಸ್ಥಾಪಕರಾದ ಶ್ರೀ ಎ. ರಾಮಕೃಷ್ಣ ನಾವಡ ವಿದ್ವಾನ್ ಇವರು ಅಲ್ಲಹಾಬಾದಿನ "ಸಾಹಿತ್ಯರತ್ನ" ಪರೀಕ್ಷೆಗೆ ಅಭ್ಯಾಸಿಸಲು ಅತ್ತ ತೆರಳುವರು ಈ ಪ್ರಸಂಗದಲ್ಲಿ ಅವರ ಸನ್ಮಾನಾರ್ಥವಾಗಿ ಒಂದು ವಿದಾಯ ಸತ್ಕಾರ ಕೂಟ ಈಚೆಗೆ ಪ್ರಾದೇಶಿಕ ಹಿಂದುಸ್ಥಾನಿ ಪ್ರಚಾರ ಸಮಿತಿ ಯ ಗಾಯನಾಲಯದಲ್ಲಿ ಸ್ಥಳೀಕ ಹಿಂದೀ ಅಭಿಮಾನಿಗಳಿಂದ ಏರ್ಪಡಿಸಲ್ಪಟ್ಟಿತು ನಮ್ಮ ಅಸಿ|| ಪ್ರೋಶಿಕ್ಯೂಟರರಾದ ಶ್ರೀ ಪಿ ರಾಮರಾವ್ ಬಿ ಎ ಎಲ್ ಎಲ್. ಬಿ. ಯವರು ಅಧ್ಯಕ್ಷರಾಗಿದ್ದು ಸ್ನೇಹಿತರು ಹಿತೈಷಿಗಳು ಅವರಿಗೆ ಯಶಸ್ಸು ಕೋರಿ ದರು. ಹೀಗೆ ಸಭೆಯು ಮುಕ್ತಾಯ ವಾಯಿತು

ಕಮ್ಯುನಿಸ್ಟ್ ಶಾಂತರಾಮ ಪೈಯವರ ಬಂಧನ

ಇಲ್ಲಿಯ ಪೋಲಿಸರಿಗೆ ಬೇಕಾಗಿದ್ದ ಕಮ್ಯುನಿಸ್ಟ ಪ್ರಭೃತಿ ಎ ಶಾಂತರಾಮ ಪೈ ಯವರನ್ನು ಚಿಕ್ಕಮಂಗಳೂರಿನ ಪೋಲಿ ಸರು ಕೈದುಮಾಡಿದ ಮೇಲೆ ಇಲ್ಲಿಂದ ಆ ಸಂಬಂಧ ಸೆಕ್ಶನ್ ಡ್ಯೂಟಿಯ ಮೇಲೆ ತೆರಳಿದ ಇಲ್ಲಿಯ ಸಬ್ ಇನ್‌ಸ್ಪೆಕ್ಟರ್ ಶ್ರೀ ಎಲ್ ನಾಗಪ್ಪನವರು ಇಷ್ಟರಲ್ಲೆ ಅವರನ್ನು ಸಾಗಿಸಲಿರುವರೆಂದು ತಿಳಿದು ಬರುತ್ತದೆ

ತಾ|| ಆ|| ಅಫೀಮು ವೆಂಡರರಿಗೆ ರಿಮಾಂಡು

ಮಂಗಳೂರು ತಾಲೂಕು। ಅಫೀಸು। ಅಫೀಮು ವೆಂಡರ್ ಗುಮಾಸ್ತ ಕ್ಲೇವ್ ಲಾರೆನ್ಸ್ ಎಂಬಾತನಲ್ಲಿದ್ದ ೨೦ ರೂಪಿ ಕ್ಯಾಣದ ಹೋದದ್ದರಿಂದ ಇಲ್ಲಿಯ ಸಬ್ ಡಿ। ಮೆಜಿಸ್ಟ್ರೇಟರಾದ ಜನಾಬ್ ಎಸ್ ಅಬ್ದುಲ್ ರಹಿಮಾನ್ ಸಾಹೇಬರವರು ೧ ವಾರ ರಿಮಾಂಡು ಕೊಟ್ಟಿರುವರು

ಅರ್ಜಿಯ ತನಿಖೆ

ಬಜ್ಪೆಯ ರೋಮನ್ ಕಥೋಲಿಕ್ ಸಮಾಜದ ಸುಮಾರು ೧೮ ವರುಷದ ಅಲೀಸ್ ಡಿಸೋಜ ಎಂಬಾಕೆ ಇದೇ ಕಳೆದ ಮೇ ತಾ. ೧೫ರಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ ಹಾಗು ಬಳಿಕ ಆಕೆಗೂ ತನಗೂ ಇಸ್ಲಾಂ ಧರ್ಮದಂತೆ ಮದುವೆಯಾಗಿ ತಾವು ಗಂಡಹೆಂಡಿರಾಗಿರು ತಿದ್ದ ಹಾಗೂ ಒಂದು ಕಳವಿನ ಅಪಾದನೆಯ ಸಂಬಂಧ ತಮ್ಮೊಬ್ಬರ ವಿಚಾರಣೆಯು ನಡೆ ಯಬೇಕಾಗಿದ್ದು ಅದಕ್ಕಾಗಿ ಬಜ್ಪೆ ಪ್ರಯಾ ಣಿಕರ ಬಂಗಲೆಗೆ ಬರಬೇಕೆಂತ ಬಜ್ಪೆ ಪೋಲಿ ಸರು ನಮಗೆ ತಾ. ೧೭-೬-೪೨ರಲ್ಲಿ ತಿಳಿ ಸಿದ ಮೇರೆಗೆ ನಾವು ಗಂಡ ಹೆಂಡಿರು ಅಲ್ಲಿಗೆ ಹೋದ ಹಾಗೂ ಅಲ್ಲಿ ಕೆಲವು ಕ್ರೈಸ್ತ ಸ್ತ್ರೀ ಪುರುಷರು ಬಜ್ಪೆ ಇಗರ್ಜಿಯ ಸಹಾಯಕ ಗುರುಗಳೂ ಇರುತಿದ್ದು ತನ್ನ ಹೆಂಡತಿಯನ್ನು ಅಲ್ಲೆ ಅವರ ವಶಕ್ಕೆ ಬಿಟ್ಟು ಬರುವ ಸಂಭವ ಬಂದ ಹಾಗೂ ಈಗ ಆಕೆ ಯನೊಬ್ಬ ಕ್ರೈಸ್ತನಿಗದು ಕೊಟ್ಟು ಮದುವೆ ಮಾಡುವ ಪ್ರಯತ್ನ ಇರುವ ಹಾಗೂ ಈಗ ಆಕೆಯನ್ನು ಕೋರ್ಟಿನ ಮುಂದೆ ಹಾಜರು ಪಡಿಸಿ ಬಿಡುಗಡೆ ಮಾಡಬೇಕಾಗಿರುವ ಹಾಗೂ ನಮೂದಿಸಿ ರೆವೆರೆಂಡ್ ಫಾದರ್ ಪಾವುಲ್ ಫರ್ನಾಂಡಿಸ್ (ಬಜ್ಪೆ ಇಗರ್ಜಿ ಅ। ಗುರುಗಳು) ಎಂ ಹೆನ್ರಿ ಮೊಂತೇರೊ, ಡುಜೆಫಿನ್ ಫೆರ್ನಾಂಡಿಸ್, ಕಾರ್ಮಿನಾ ಉಪಾಧ್ಯಾಯಿನಿಯರೂ ವಿರುದ್ಧವಾಗಿ ಮಂಗಳೂರು ತಾಲೂಕಿನ ತೆಂಕು ಎಕ್ಕಾರಿನ ಶೇಕ್ ಇಸ್ಮಾಯಿಲ್ ಎಂಬಾತನು ಕೊಟ್ಟ ಫಿರ್ಯಾದಿಯ ತನಿಖೆ ನಮ್ಮ ಸ್ಟೇ। ಸ|| ಮೆಜಿಸ್ಟ್ರೇಟ್ ಶ್ರೀನಿವಾಸ ರಾಯರ ಮುಂದೆ ನಿನ್ನೆ ಆರಂಭವಾಗಿ ಇದ ತಾ ೨೮ಕ್ಕೆ ಮುಂದರಿಸಲಾಗಿದೆ

ಅಸಭ್ಯ ವರ್ತನದ ಆರೋಪ ಜುಲ್ಮಾನೆ

ಕೆಲಕಾಲದ ಹಿಂದೆ ಕುಲಶೇಖರದ ಮೆ। ಪಿಯರ್ ಲಸ್ಸಿ ಕಂಪೆನಿಯ ಗೇರುಬೀ ಜದ ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದ ಕೆಲ ಹೆಂಗಸರನ್ನು ಆತಂಕಿಸಿ ಅಸಭ್ಯವಾಗಿ ಆಕ್ರಮದಿಂದ ವರ್ತಿಸಿದರೆಂಬ ಆರೋಪದ ಮೊಕದಮ್ಮೆಯೊಂದು ಇಲ್ಲಿಯ ೧ನೇ ಕ್ಲಾಸ್ ಜ ಬೆಂಚ್ ಮೆಜಿಸ್ಟ್ರೇಟರ ಮುಂದೆ ನಡೆದು, ಕಮ್ಯುನಿಸ್ಟರಾದ ರಾಮು, ಐವ ಶೇಷಪಟ್ಟೆ ಮೊದಲಾದ ೭ ಮಂದಿ ಆರೋ ಪಿಗಳಲ್ಲಿ ಪ್ರತಿಯೊಬ್ಬರಿಗೂ ರೂ ೧೧೦ರಂತೆ ಜುಲ್ಮಾನೆ ವಿಧಿಸಲಾಯಿತು. "ಟೌನ್ ನ್ಯೂಸೆಸ್" ಕಾಯಿದೆಯಂತೆ ಈ ಮೊಕ ದಮ್ಮೆ ಹೂಡಲಾಗಿತ್ತು

ಶ್ರೀ ಬೆನೆಗಲ್ ಶಿವರಾಯರು ಮಂಗಳೂರಲ್ಲಿ

ಉದಕಮಂಡಲದಲ್ಲಿ ಈಚೆಗೆ ನೆರೆದಿದ್ದ ಏಷ್ಯಾ ಮತ್ತು ದೂರದ ಪೂರ್ವದೇಶಗಳ ಸಮ್ಮೇಳನದ ಭಾರತ ಶಿಷ್ಟಮಂಡಲದ ಎಡ್ವೈಜರರಾದ ಶ್ರೀ ಬಿ ಶಿವರಾಯರು ಕಳೆದ ೧೮ನೇ ಮೈಲಿಗೆ ಮಂಗಳೂರಿಗೆ ಬಂದು ಹಿಂತೆರಳಿರುವರು.

ಶ್ರೀ ಶ್ರದ್ಧಾನಂದ ಅನಾಥಾಶ್ರಮ

ಮಂಗಳೂರು ಮುಂಭಿನ ಜನಾಂಗವಾದ ಇಂದಿನ ಮಕ್ಕಳಲ್ಲಿ ಸಂಸ್ಕೃತಿ ಮತ್ತು ಸಭ್ಯ ತೆಗಳಲ್ಲಿ ಶ್ರದ್ಧೆಯನ್ನು ಹುಟ್ಟಿಸಿ ಪ್ರಾಚೀನ ಆಶ್ರಮ ಪದ್ಧತಿಯಂತೆ ಶಾರೀರಿಕ ಮಾನ ಸಿಕ ಹಾಗೂ ಆತ್ಮಿಕ ವಿಕಾಸಕ್ಕನುಗುಣ ವಾಗಿ ಧಾರ್ಮಿಕ ಸಾಮಾಜಿಕ ಮತ್ತು ರಾಷ್ಟ್ರೀಯ ಶಿಕ್ಷಣವನ್ನು ಕೊಟ್ಟು ಭಾವೀ ಜೀವನಕ್ಕೆ ಸಿದ್ಧಪಡಿಸುವುದೇ ಈ ಆಶ್ರಮದ ಉದ್ದೇಶವಾಗಿ ಈ ಆಶ್ರಮದಲ್ಲಿ ಹಲವರು ಅನಾಥ-ಬಾಲಕ ಬಾಲಿಕಿಯರು ಆಶ್ರಯ ನಡೆದಿರುತ್ತಾರೆ ಆಶ್ರಮದ ದಿನನಿತ್ಯದ ಕಾರ್ಯಕ್ರಮಗಳು ಕ್ರಮಬದ್ಧವಾಗಿದ್ದು ಯೋಗ್ಯವಾಗಿ ಯಾವ ಕಾರ್ಯವನ್ನಾ ದರೂ ನೆರವೇರಿಸಲು ಧನವೇ ಮೂಲವಾ ಗಿದೆ ಆಶ್ರಮದ ಆರ್ಥಿಕ ಪರಿಸ್ಥಿತಿಯು ಹೀನಸ್ಥಿತಿಯಲ್ಲಿರುವುದರಿಂದ ಪ್ರತಿಯೊಬ್ಬ ನು ಉದಾರ ಹಸ್ತದಿಂದ ಸಹಾಯ ಮಾಡ ಬೇಕಾಗಿದೆ

ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು

ಹಿಂದೆ ನಮ್ಮ ಜಿಲ್ಲೆಯಲ್ಲಿ ಪೋಲಿಸ್ ಡಿಪ್ಯೂಟಿ ಸುಪರಿಂಟೆಂಡೆಂಟರಾದ ಶ್ರೀ ಎ. ಸಿಂಗಾರವೇಲು ಅವರು ಈಗ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರಾಗಿ ವರ್ಗಾ ಯಿಸಲ್ಪಟ್ಟು ಇದೀಗ ಚಾರ್ಜು ವಹಿಸಿ ಕೊಂಡಿದ್ದಾರೆ

ಬೆಲ್ಲದ ಸೊಸ್ಯಾಟಿಗಳು

ದ ಕ ಜಿಲ್ಲೆಯಲ್ಲಿ ಇದುವರೆಗ ೫೫ ಸಹಕಾರಿ ಬೆಲ್ಲದ ಸೊಸ್ಯಾಟಿಗಳನ್ನು ಸ್ಥಾಪಿ ಸಲಾಗಿವೆ ಅವುಗಳಲ್ಲಿ ಮುರ್ತೆದಾರ ಸದಸ್ಯರು ೪೨೭೭ ಇವುಗಳ ಮೂಲಕ ೩ ಲಕ್ಷ ಪೌಂಡು ಬೆಲ್ಲ ತಯಾರಿಸಿ ಅವು ಗಳ ಬೆಲೆ ರೂ ೧೭ ಸಾವಿರ

ನೇರಳೆಕಟ್ಟೆ

ಸ್ಥಳೀಕ ಬೋರ್ಡು ಶಾಲೆಯಲ್ಲಿ ಕಳೆದ ತಾ. ೧೮ನೇ ಗುರುವಾರ ಅಪರಾಹ್ನ ಗಂಟೆ ೫ಕ್ಕೆ ಅತಿಥಿಯಾಗಿ ಬಂದಿದ್ದ ಶ್ರೀ ಬೈಲು ಮೂಡುಗೆರೆ ಮಹಾಬಲ ಶೆಟ್ಟರ ಅಧ್ಯಕ್ಷತೆ ಯಲ್ಲಿ ಹೆತ್ತವರ ಕೂಟ ಜರಗಿತು. ಈ ಸಂದರ್ಭದಲ್ಲಿ ಶ್ರೀ ಜಿ ಕೆ. ರಾಮಚಂದ್ರ ಹೆಗ್ಗಡೆಯವರು ಶ್ರೀ ಪಿ. ಶ್ರೀನಿವಾಸ ರಾ ಯರು ಮತ್ತು ಅಧ್ಯಕ್ಷರು ಶಾಲೆಯ ಅಭಿ ವೃದ್ಧಿ ಹಾಗೂ ಮಕ್ಕಳ ಚಟುವಟಿಕೆಗಳ ಕುರಿತು ಕೊಂಡಾಡಿ ಭಾಷಣವಿತ್ತರು.

ಕಾಂಞಂಗಾಡು ಕ್ರೈಸ್ತವರ್ಗಕ್ಕೆ ಸೇರಿದ ಹರಿಜನರ ಶುದ್ಧೀಕರಣ

ಕಾಂಞಂಗಾಡು ಅನಿಕ್ಕರ ಕಾಲನಿಯ ಸುಮಾರು ೫೩ ಹೆಸರು ಅಡಗಿರುವ ಹರಿ ಜನ ಕ್ರೈಸ್ತರನ್ನು ೨೦-೬-೪೨ರಲ್ಲಿ ಕಲ್ಲಿ ಕೋಟೆಯ ಆರ್ಯಸಮಾಜ ಪ್ರೆಸಿಡೆಂಟ ರಾದ ಶ್ರೀ ಬುದ್ಧಸಿಂಗರವರು ಕಳಕಳಿ ಯಿಂದ ಶುದ್ಧಮಾಡಿ ತೆಗದರು ಮತ್ತು ಶ್ರೀಯುತರವರು ಹರಿಜನರಿಗೆ ಬೇಕಾದ ಬುದ್ಧಿವಾದಗಳು ಹೇಳಿದರು ಆ ಸಭೆ ಯಕ್ಕೆ ಶ್ರೀ ಎ ಸಿ ಕಣ್ಣನ್ ನಂಬಿಯರರು ಹಾಜರಿದ್ದು ಸಭೆಯಲ್ಲಿ ಮಾತನಾಡಿದರು

ಬೆಲ್ಲ ತಯಾರಿಕೆಯ ತರಬೇತಿ ಕೇಂದ್ರ

ದ ಕ ಜಿಲ್ಲೆಯ ಮೂಡುಬಿದ್ರೆಯ "ಬೆಲ್ಲ ತಯಾರಿಕೆ ತರಬೇತಿ ಕೇಂದ್ರ" ವನು (ಇಂಡಿಯಾ ಸರಕಾರವು ಇಂಥ ಎರಡು ಕೇಂದ್ರಗಳನ್ನು ಸ್ಥಾಪಿಸಲು ಸೂಚಿಸಿದ್ದಾರೆ) ಸ್ಥಾಪಿಸುವ ಉದ್ದೇಶಕ್ಕಾಗಿ ಪಮ್ಮಟ ಪಂ ವ್ ಗೂಡ್ ಎಡ್ವೈಸರ್ ಶ್ರೀ ಎನ್ ಎ ಕಾಮತರು ಅಗತ್ಯವಿರುವ ಏರ್ಪಾಡುಗಳ ನ್ನು ಮಾಡಿ ... ಕ್ಕೆ ಬಂದಿದ್ದಾರೆ ದೇಶದ ಲ್ಲಿರುವ ಯಾವತ್ತು ಯೋಗ್ಯ ಉಮೇದ್ವಾ ರರಿಗೂ ಇಲ್ಲ ಪ್ರವೇಶ ಅರ್ಹತೆ ಇದೆ ತಿಳಿ ತಂಗು ಮತ್ತು ಸಾಗು ಎಲ್ಲದ ತಯಾ ರಿಕೆಯನ್ನು ಈ ಶಾಲೆಯಲ್ಲಿ ಕಲಿಸಲಾಗು ವುದು ವಿದ್ಯಾರ್ಥಿಗಳಿಗೆ ಸರಕಾರದಿಂದ ಸ್ಟೈಪೆಂಡ್ ದೊರೆಯುವ ಏರ್ಪಾಡಿದೆ

★

ಸ್ವೀಕಾರ

ಹದಿನೆಂಟು ಪುರಾಣಗಳನ್ನು ಬರೆದವರು ಯಾರು?

ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ೧೫ನೇ ಪುಷ್ಪ ಲೇಖಕರು ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿ • ಕ್ರೌನ್ ಆಕೃತಿಯ ೧೩ ಪುಟಗಳ ಚಿತ್ರವಿಮರ್ಶಾ ತ್ಮಕ ಪುಸ್ತಕ ಹದಿನೆಂಟು ಪುರಾಣಗಳು ವೇದವ್ಯಾಸ ಮಹಾಋಷಿಯಿಂದ ಬರೆಯಲ್ಪ ಟ್ಟದ್ದಲ್ಲವೆಂದು ಲೇಖಕರು ತಾರ್ಕಿಕ ಆಧಾ ರಗಳಿಂದ ತೋರಿಸಲು ಇದರಲ್ಲಿ ಪ್ರಯತ್ನ ಪಟ್ಟಿರುವರು ಹೆಚ್ಚಿನವು ಮುಸಲ್ಮಾನ ಆಳ್ವಿಕೆಯಲ್ಲೇ ಬರೆಯಲ್ಪಟ್ಟವೆಂಬುದಕ್ಕೆ ಲೇಖಕರು ಯಥೇಷ್ಟ ಉಲ್ಲೇಖಗಳನ್ನು ಕೊ ಟ್ಟಿರುವರು ಈ ವಿಷಯದಲ್ಲಿ ಸಂಶೋಧನ ನಡೆಸಿದ ಇತರ ಆಧುನಿಕ ವಿದ್ವಾಂಸರ ಅಭಿ ಪ್ರಾಯಗಳನ್ನು ಕೊಟ್ಟಿದ್ದರೆ ಇನ್ನಷ್ಟು ಒಳ್ಳೆ ಯದಿತ್ತು ಧರ್ಮಾಭಿಮಾನಿಗಳೆಲ್ಲರೂ ಇದನ್ನು ಓದಿ ನಮ್ಮ ಪುರಾಣಗಳ ಕುರಿ ತಾದ ನಿಜ ಸಂಗತಿಗಳನ್ನು ಪ್ರಚಾರ ಮಾ ಡುವುದು ಕರ್ತವ್ಯವಾಗಿದೆ ಪುಸ್ತಕದ ಬೆಲೆ ೨-೮-೦ —ನಾಜ



ಕೂಸಿನ ಮೈ ತಂಪಗಿಡುವ ದಗ್ಗನ್ನು ನಿವಾರಿಸುವ ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ಕೆಟ್ಟ ನುಣ್ಣಗಿರುವ ಈ ಪೌಡರು ಎಳ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಾಲಸೆಯ ಸ್ತ್ರೀಯರೂ ಇದನ್ನು ಉಪ ಯೋಗಿಸುತ್ತಾರೆ
558
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ಇವರು ಹೇಗೆ ಗವರ್ನರ್ ಜನರಲ್ಲರಾದರು?

ರಾಜಾಜಿಯ ವ್ಯಕ್ತಿತ್ವದ ರಹಸ್ಯ

"ಯಾರಿಗೂ ಬೇಡವಾದರೂ, ಎಲ್ಲರಿಗೂ ಬೇಕಾಗಿರುವಂತಹರವರು" ಹೀಗೆಂದೋರ್ವ ರಾಜಾಜಿ ಭಕ್ತರು ಪ್ರಥಮ ಭಾರತೀಯ ಗವರ್ನರ್ ಜನರಲ್ಲರನ್ನು ವರ್ಣಿಸುತ್ತಾರೆ. ಚಿಕ್ಕಂದಿನಿಂದಲೂ ಅವರನ್ನು ಬಲ್ಲ ಆ ಮಿತ್ರರು ರಾಜಗೋಪಾಲಾಚಾರ್ಯರ ವ್ಯಕ್ತಿತ್ವದ ರಹಸ್ಯವನ್ನು ಹೀಗೆ ವಿವರಿಸುತ್ತಾರೆ

ಸೇಲಮಿನಲ್ಲಿ ಅವರು ನಗರಾಧ್ಯಕ್ಷರಾಗಿದ್ದಾಗ ಅಸ್ಪೃಶ್ಯರಿಗೆ ಸಾರ್ವಜನಿಕ ನೀರು ಕೊಳವಿಗಳ ಹಕ್ಕನ್ನು ಕಲ್ಪಿಸಿಕೊಟ್ಟರೆಂದು ತಮ್ಮ ಸ್ವಂತ ಬ್ರಾಹ್ಮಣವರ್ಗದಿಂದ ಬಹಿಷ್ಕರಿಸಲ್ಪಟ್ಟು ರಾಜಾಜಿಯವರು ತಮ್ಮ ಪ್ರಥಮ ಸಾರ್ವಜನಿಕ ಹಾಗೂ ಸಾಮಾಜಿಕ ವಿರೋಧ ಪಂಗಡವನ್ನು ಕಟ್ಟಿಕೊಂಡರು

ನಂತರ ಗಯಾ ಕೊಂಗ್ರೆಸ್ ಅಧಿವೇಶನದಲ್ಲಿ ಶಾಸನಸಭಾ ಪ್ರವೇಶ ಪಕ್ಷದವರನ್ನು ಸೋಲಿಸುವ ಪರಿಣಾಮಕಾರಿ ಭಾಷಣ ಮಾಡಿ ಮೋತಿಲಾಲ್, ಸಿ. ಆರ್ ದಾಸ್ ಮೊದಲಾದ ಪ್ರಭೃತಿಗಳ ವಿರೋಧವನ್ನು ಕಟ್ಟಿಕೊಂಡರು

ಮದ್ರಾಸ್ ಪ್ರಧಾನರಾಗಿ ಪಾನನಿರೋಧವನ್ನು ಜಾರಿಗೆತಂದರು. ಸಂಭೋಗ ಭೋಗದ ಮತ್ತು ಒಂಡವಳಶಾಹಿ ಹಿತಗಳ ಅತೃಪ್ತಿಯನ್ನು ಗಳಿಸಿಕೊಂಡಿದ್ದಲ್ಲದೆ ವ್ಯಾಪಾರ ತೆರಿಗೆಯನ್ನು ಹೊರಿಸಿ (Sales tax) ವ್ಯಾಪಾರಿವರ್ಗದ ದ್ವೇಷವನ್ನು ಗಳಿಸಿಕೊಂಡರು

ಸುಭಾಸ್‌ಚಂದ್ರಭೋಸರ ಫೊರ್ವರ್ಡ್‌ಬ್ಲೋಕ್ ಪಕ್ಷವು ತಿಂತುಳ ನಾವೆಯೊಂದು ವ್ಯಂಗಿಸಿ ಕೊಂಗ್ರೆಸಿನೊಳಗಿನ ಪ್ರಗತಿಶೀಲರೆಂದೆನಿಸಿಕೊಂಡವರ ಮುನಿಸಿಗೆ ಪಾತ್ರರಾದರು

ಜಿನ್ನರ ಪಾಕಿಸ್ತಾನ ಕೇಳಿಕೆಯನ್ನು ಸಮರ್ಥಿಸಿದರಾದರೂ ಭಾರತದ ವಿಭಜನೆಯನ್ನು "ಹಾಲುಕೊಡುವ ದನದ ಪಾಲು ಮಾಡುವಿಕೆ" ಎಂದೂ ಸಾಮ್ಯಕೊಟ್ಟು ಜಿನ್ನರ ಅತೀವ ಕ್ರೋಧಕ್ಕೊಳಗಾದವರು ರಾಜಾಜಿಯವರೇ

ಗಿಳಿ೨ರ ಆಗಸ್ಟ್ ೮ರ ನಂತರ ಕೊಂಗ್ರೆಸ್ ವರಿಷ್ಠರೊಡನೆ ಕಣ್ಣಿಗೆ ಕಣ್ಣು ನೋಡಲಾರದೆ ರಾಜಾಜಿ ರಾಜಿನಾಮೆಯಿತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರ ಅತೃಪ್ತಿಯನ್ನು ಪ್ರಾಪ್ತಿಸಿಕೊಂಡರು

ಹಿಂದೂ ಮಹಾಸಭಾವಾದಿಗಳಂತೂ ಅವರಿಗೆ ತಮ್ಮ ತೀವ್ರ ತಿರಸ್ಕಾರವನ್ನು ದಾಮರು ಮುದ್ದೆ, ಕೋಳಿತತ್ತಿ ಬಿಸಾಡುವಿಕೆಯಿಂದ ವ್ಯಕ್ತಪಡಿಸಿರುವರು

ಬ್ರಾಹ್ಮಣ ರಾಜಾಜಿ ತನ್ನ ಮಗಳನ್ನು ವೈಶ್ಯ ಮಹಾತ್ಮಾಜಿಯ ಮಗನಿಗೆ ವಿವಾಹ ಮಾಡಿಕೊಟ್ಟಾಗ ಕಟ್ಟುನಿಟ್ಟಿನ ಸನಾತನಿಗಳು ಉಗ್ರರೂಪ ತಾಳಿದರು.

ಯಾರಿಗೆ ಅವರ ರಾಜಕೀಯ ಅರ್ಥವಾದರೂ ಮದರಾಸಿನ ಕೊಂಗ್ರೆಸ್ ಶಾಸನ ಸಭಾ ಪಕ್ಷದವರಿಗೆ ಅದೊಂದು ನಿಗೂಢ ರಹಸ್ಯವಾಗಿಯೇ ಉಳಿಯಿತು "ಇವರು ನಮಗೆ ನಾಯಕರಾಗಿರುವುದು ಬೇಡ"ವೆಂದೂ ಅವರು ತೀರ್ಮಾನಿಸಿದರು

ನಾಣ್ಯದಿನ್ನೊಂದು ಬದಿ

ಮಹಾತ್ಮರು ಅಸಹಕಾರ ಚಳವಳಿವನ್ನಾರಂಭಿಸುವ ಮುನ್ನ ಮಾಡಿದ ಸಂಚಾರ ಕಾಲದಲ್ಲಿ ಸೇಲಮಿನಲ್ಲಿ ರಾಜಾಜಿಯವರ ಮನೆಯಲ್ಲೇ ಉಳಕೊಂಡಿದ್ದರು. ಕಾರ್ಯದರ್ಶಿ ಮಹದೇವ ದೇಸಾಯಿಯವರು ರಾಜಾಜಿಯು ಬೂದಿಮುಚ್ಚಿದ ಕೆಂಡವೆಂದು ಮಹಾತ್ಮರಿಗೆ ತಿಳಿಸಿದಂದಿನಿಂದ ಅವರು ಗುರು ಶಿಷ್ಯರಾದರು ರಾಜಾಜಿ ನಂತರ ದಕ್ಷಿಣದ ಗಾಂಧಿಯೂ ಆಗಿಬಿಟ್ಟರು

ಕೊಂಗ್ರೆಸು ಮಹತ್ವದ ನಿರ್ಣಯಾತ್ಮಕ ಧೋರಣೆಯನ್ನು ಕೈಕೊಂಡ ಪ್ರತಿಯೊಂದು ಸಂಧಿಗ್ಧ ಸಮಯದಲ್ಲಿ ರಾಜಾಜಿಯವರ ಅಮೂಲ್ಯ ಸಲಹೆಗಳನ್ನು ಪಡೆದಿದೆ ಕ್ರಿಪ್ಸರು ರಾಜತಂತ್ರ ಹೂಡಿದಾಗಲೂ, ಪಾರ್ಲಿಮೆಂಟರಿ ಶಿಷ್ಟಮಂಡಳ ಬಂದಾಗಲೂ, ಮತ್ತು ಕೆಬಿನೆಟ್ ಮಂತ್ರಿಯವರು ಆಗಮಿಸಿದಾಗಲೂ ರಾಜಾಜಿಯವರನ್ನು ವಿಚಾರಿಸದೆ ಸಾಧ್ಯವಾಗಲಿಲ್ಲ

ಪಾಕಿಸ್ತಾನದ ವಿಷಯ ಅವರ ಭವಿಷ್ಯವೇ ಸಂಭವಿಸಿತು ತುಸು ಕಾಲ ಬೇಡವಾದ ರಾಜಾಜಿ ನೆಹರೂರ ನಡುಗಾಲ ಸರಕಾರದಲ್ಲಿ ಸೇರಿಸಲ್ಪಟ್ಟರು ಪಾಕಿಸ್ತಾನದ ಕಠಿಣ ಸಮಸ್ಯೆಯ ಪ್ರದೇಶವಾದ ಬಂಗಾಲದಲ್ಲೇ ಅವರಿಗೆ ಗವರ್ನರಗಿರಿಯ ದೊರೆಯಿತು ಹಂಗಾಮಿ ಗವರ್ನರ್ ಜನರಲ್ ಗಿರಿಗೆ ಅವರೇ ಅರ್ಹರೆನಿಸಿದರು ನಂತರ ಈಗ ಈ ಭಾರತ ಪ್ರತರಕ್ಷ ತನ್ನ ಯೋಗ್ಯತೆಯ ಪರಮಾರಧಿ ಸ್ಥಾನಕ್ಕೆ ಸಹಜವಾಗಿ ಮುಟ್ಟಿದೆ

ವಿರೋಧಿಗಳಿಗೆ ತಮ್ಮ ತಪ್ಪನ್ನು ತಿಳಿಕೊಳ್ಳಲು ರಾಜಾಜಿ ತುಂಬಾ ಸಮಯ ಕೊಡುತ್ತಾರೆ ಆ ತಾಳ್ಮೆ ಅವರಲ್ಲಿದೆ ಅದರಿಂದಲೇ ಅವರು ತಪ್ಪು ವಿಚಾರಸರಣಿಯನ್ನು ಸ್ಪಷ್ಟಪಡಿಸಿಕೊಳ್ಳುವರು ಗಾಂಧಿಜಿಯ ತತ್ವಜ್ಞಾನವನ್ನು ಆಳವಾಗಿ ಹೀರಿಕೊಂಡಿರುವುದರಿಂದ ಅವರು ಎಂತಹ ಸ್ಥಾನದಿಂದಲೂ ಪರ್ತನ್ನನ್ನು ಬೀರಬಲ್ಲರು ಭಾರತದ ಗವರ್ನರ್ ಜನರಲ್ಲರಾಗಿ ಅವರು ಸರಳ ಜೀವನಾದರ್ಶದಿಂದ ಲೋಕ ಮುತ್ಸದ್ದಿಗಳನ್ನು ಬೆರಗುಮಾಡದಿರಲಾರರು

ಕುಟುಂಬವೇ ಆತ್ಮಹತ್ಯೆ ಮಾಡುವುದು

ಪಾಕಿಸ್ತಾನದ ಒಂದು ದುರಂತ ಕತೆ

ಲಾಹೋರಿನ ದಿನಪತ್ರಿಕೆಯೊಂದಕ್ಕೆ ಓರ್ವ ಮುಸ್ಲಿಂ ಮಹಿಳೆಯಿಂದ ಬರೆದ ಪತ್ರವು ತಲುಪಿದೆ ಅದರಲ್ಲಿ ಈ ಹೃದಯಂಗಮ ಸಂಗತಿಯು ಕಾಣಿಸಲಾಗಿದೆ

"ಇಂದಿಗೆ ನಾಲ್ಕು ದಿನಗಳಿಂದ ಉಪವಾಸ ಸಹಿಸಲಾರದೆ ನನ್ನ ಗಂಡ ಮತ್ತು ನಾನು ನಮ್ಮ ನಾಲ್ಕು ಮಕ್ಕಳೊಡನೆ ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚೈಸಿದ್ದೇವೆ ವಿಭಾಗೀಕರಣದ ಮೊದಲು ನನ್ನ ಗಂಡನಿಗೆ ಏಳು ಅಂಗಡಿಗಳು ಮತ್ತೊಂದು ಮನೆಯೂ ಇದ್ದುವು. ಈಗ ನಾವೊಂದು ಬಾಡಿಗೆ ಮನೆಯಲ್ಲಿದ್ದೇವೆ ಬಾಡಿಗೆಯನ್ನು ಕೊಡಲೂ ಸಾಧ್ಯವಿಲ್ಲ ಮನೆ ಯಜಮಾನನು ಇವತ್ತು ನಾಳೆಯೆಂಬಂತೆ ನಮ್ಮನ್ನು ಹೊರದೂಡುವುದರಲ್ಲಿದ್ದಾನೆ

"ಈ ಪತ್ರ ಬರೆಯುವಾಗ ನಾನು ಅಳುತ್ತಲಿದ್ದೆ ಇದು ಪ್ರಕಟವಾದರೆ ಪಾಕಿಸ್ತಾನ ಸರಕಾರದ ಅಧಿಕಾರಿಗಳ ಕಣ್ಣು ತೆರೆಯುವಂತಾಗಬಹುದು

"ಇಂದು ರಾತ್ರಿ ಹತ್ತಿರದ ನದಿಯಲ್ಲಿ ದುಮುಕಿ ಜೀವನಾಂತ್ಯ ಮಾಡಿಕೊಳ್ಳಲು ನಾವು ನಿರ್ಧರಿಸಿದ್ದೇವೆ

"ಪಾಕಿಸ್ತಾನ ಜನ್ಮಕ್ಕೆ ಬರುವ ಮೊದಲು ಅದರ ಧುರೀಣರು ದೊಡ್ಡ ದೊಡ್ಡ ವಚನಗಳನ್ನು ಮಾಡಿದ್ದರು ಇಂದು ಅವರೂ ಅವರ ವಚನಗಳೂ ಎಲ್ಲಿವೆ? ನಾವು ನಮ್ಮ ಅಂತಿಮ ಸ್ಥಾನಕ್ಕೆ ಹೋಗುತ್ತಿರುವಾಗ ಈ ಪತ್ರವನ್ನು ಟಪ್ಪಾಲುಪೆಟ್ಟಿಗೆಯಲ್ಲಿ ಹಾಕುತ್ತೇನೆ"

ವ್ಯಕ್ತಿ ವೈವಿಧ್ಯ

ಪಾಕಿಸ್ತಾನದ ಸ್ವರ್ಗಸುಖ ಸಾಕು

ಓರ್ವ ಮೌಲ್ವಿಯ ದುಃಖದ ಅನುಭವ

ಯುಕ್ತಪ್ರಾಂತದ ಸಸಾರಮ್ ಎಂಬ ಪಟ್ಟಣದಲ್ಲಿದ್ದ ಓರ್ವ ಮೌಲ್ವಿಯು ಪಾಕಿಸ್ತಾನವು ಸ್ವರ್ಗಸೀಮೆ ಎಂಬ ಭ್ರಾಂತಿಗೊಳಗಾಗಿ ತನಗಿದ್ದ ಅಲ್ಪಸ್ವಲ್ಪ ಸೊತ್ತುಗಳನ್ನು ಮಾರಿ ಒಂದು ದಿನ ತನ್ನ ಹೆಂಡತಿ ಮತ್ತೀರ್ವ ಹೆಣ್ಣು ಮಕ್ಕಳೊಡನೆ ಲಾಹೋರಿಗೆ ಹೋದ ಲಾಹೋರಿನಲ್ಲಿ ಅವನಿಗೆ ಒಂದು ಛತ್ರದಲ್ಲಿ ಒಂದು ಕೋಣೆಯು ಕೊಡಲ್ಪಟ್ಟಿತು ಅವನಿಗೆ ಉಪಾಧ್ಯಾಯ ಕೆಲಸವೂ ಕೊಡಲ್ಪಟ್ಟಿತು. ಒಂದೆರಡು ದಿನಗಳ ತನಕ ಅವನಿಗೆ ಲೀಗ್ ಸ್ವಯಂ ಸೇವಕರು ತುಂಬಾ ಆದರ ಆತಿಥ್ಯಗಳನ್ನು ತೋರಿಸಿದರು

ಮೂರನೇ ದಿವಸ ಮೌಲ್ವಿಯು ತನ್ನ ಶಾಲೆಯಿಂದ ಛತ್ರಕ್ಕೆ ಹಿಂತೆರಳಿದಾಗ ಅವನ ಹೆಂಡತಿ ಮಕ್ಕಳು ಕಾಣೆಯಾಗಿದ್ದರು ಅವನು ಪೋಲಿಸರಿಗೆ ದೂರಿಟ್ಟ ಪೋಲಿಸರು ಶೋಧ ನಡೆಸಿ ಮೌಲ್ವಿಗೆ ಹೀಗೆ ಉತ್ತರವಿತ್ತರು

"ನಾವು ತುಂಬಾ ಹುಡುಕಿದರೂ ನಿಮ್ಮ ಹೆಂಡತಿ ಮತ್ತು ಹೆಣ್ಣು ಮಕ್ಕಳ ಪತ್ತೆ ನಮಗೆ ಸಿಗಲಿಲ್ಲ ಕಾಶ್ಮೀರರಂಗಕ್ಕೆ ಹೋಗುವ ಪಠಾಣರಾರೊ ಅವರನ್ನೊಯ್ದಿರಬೇಕು ಅವರು ಬ್ರಹ್ಮಚಾರಿಗಳು ಇಂತಹ ಸಂದರ್ಭದಲ್ಲಿ ನಾವು ನಿಮಗೇನನ್ನು ಮಾಡಲಾದೇವು" ಈಗ ಆ ಬಡ ಮೌಲ್ವಿಯು ಕಣ್ಣೀರಿಳಿಸುತ್ತ ಪುನಃ ಹಿಂದೂಸ್ತಾನಕ್ಕೆ ಬಂದಿದ್ದಾನೆ

ಟ್ರಿಬ್ಯೂನ್ ಪತ್ರಿಕೆಯಿಂದ

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಭಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜೊಯಿಂಟ್ ಮೆನೇಜರ್ಸ್,

ಮಂಗಳೂರು. 23-12-1947.

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED.

V. R. Kamath, B A L L B
General Manager

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 – 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಟ್ಟಿಸುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore